

ಪ್ರಧಾನ ಸಂಪಾದಕರು

ಡಾ. ಬಿ.ಎಸ್. ಪ್ರಣತಾರ್ತಿಹರನ್ ತಮ್ಮ ಪಿಎಚ್.ಡಿ. ಪದವಿಯನ್ನು (ಸಂಕೇತಿ ಒಂದು ಅಧ್ಯಯನ:1993) ಪಡೆದಮೇಲೆ ಸಂಕೇತಿ ಸಮುದಾಯದ ಬಗೆಗಿನ ಅಧ್ಯಯನವನ್ನು ಮುಂದುವರೆಸಿದರು. ತಾವು ಕಲೆಹಾಕಿದ ಅಪಾರ ಮಾಹಿತಿಯನ್ನು ವಿಂಗಡಿಸಿ, ಪರಿಷ್ಕರಿಸಿ, ವಿಮರ್ಶಿಸಿ ಪ್ರಕಟಿಸಿದರು. ಅವರು ಪಿಎಚ್.ಡಿ. ಅಧ್ಯಯನಕ್ಕಾಗಿ ಪ್ರಾರಂಭಿಸಿದಾಗ ಇದ್ದ ಒಂದೆರಡು ನೂರು ಪುಟಗಳ ಆಕರ ಮಾಹಿತಿಯನ್ನು ಈ ವರೆಗೆ 10 ಸಾವಿರ ಪುಟಗಳಿಗೆ ವಿಸ್ತರಿಸಿದ್ದಾರೆ. ಈ ಯೋಜನೆಯ 12 ಸಂಪುಟಗಳು ಪ್ರಕಟವಾಗಿವೆ, 8 ಸಂಪುಟಗಳು ಮುದ್ರಣಗೊಳ್ಳುತ್ತಿವೆ. 1983ರಲ್ಲಿ ಅವರು ಪ್ರಾರಂಭಿಸಿದ ಈ ಅಧ್ಯಯನವು ಇಂದಿಗೂ ಮುಂದು-ವರಿದಿದೆ. ಆಳವಾದ ಮತ್ತು ವಿಸ್ತಾರವಾದ ಅಧ್ಯಯನ, ಅನುಭವಗಳಿಗೆ ದಕ್ಕುವ ಕಾಣ್ಕೆಯಿಂದಾಗಿ (Vision) ಸಂಕೇತಿ ಅಧ್ಯಯನಕ್ಕೆ ವೈವಿಧ್ಯಪೂರ್ಣ ಆಯಾಮ ದೊರೆತಿದೆ.



Thanks Anima shree

Anima Anandkumar is currently a principal scientist at Amazon Web Services and a Bren professor at Caltech CMS department. Her research interests are in the areas of large-scale machine learning, non-convex optimization and high-dimensional statistics. In particular, she has been spearheading the development and analysis of tensor algorithms. She is the recipient of several awards such as the Alfred. P. Sloan Fellowship, Microsoft Faculty Fellowship, Google research award, ARO and AFOSR Young Investigator Awards, NSF Career Award, Early Career Excellence in Research Award at UCI, Best Thesis Award from the ACM Sigmetrics society, IBM Fran Allen PhD fellowship, and several best paper awards. She has been featured in a number of forums such as the yourstory, Quora ML session, Huffington post, Forbes, O'Reilly media, and so on. She received her B.Tech in Electrical Engineering from IIT Madras in 2004 and her PhD from Cornell University in 2009. She was a postdoctoral researcher at MIT from 2009 to 2010, an assistant professor at U.C. Irvine between 2010 and 2016, and a visiting researcher at Microsoft Research New England in 2012 and 2014.

ಸಂಕೇತಿ ಅಧ್ಯಯನ ಮಾಲೆ
ಪ್ರಧಾನ ಸಂಪಾದಕ
ಡಾ.ಬಿ.ಎಸ್. ಪ್ರಣತಾರ್ತಿಹರನ್



ಸಂಕೇತಿ ಆತ್ಮಕಥೆಗಳು

ಸಂಪಾದಕರು
ಸುಮನಾ ವಿಶ್ವನಾಥ್

ಸಮುದಾಯ ಅಧ್ಯಯನ ಕೇಂದ್ರ ಚಾರಿಟಬಲ್ ಟ್ರಸ್ಟ್ (ರಿ.)
3059, 4ನೇ 'ಎ' ಅಡ್ಡ ರಸ್ತೆ, ಗೋಕುಲಂ ಪಾರ್ಕ್ ರಸ್ತೆ,
ಗೋಕುಲಂ, ಮೈಸೂರು – 570 002.

sanketi E-lib-6 Web : 6-6-2018

ಸಂಕೇತಿ ಆತ್ಮಕಥೆಗಳು

SANKETI : ATMA KATHEGALU

Editor
SUMANA VISWANATH
Dept. of English
Vishwamanava First Grade College, Mysore

Published by
Samudaya Adhyayana Kendra Charitable Trust (R.)
3059, 4th “A” Cross, Gokulam Park Road, Gokulam,
Mysore – 570 002.

Pages : xxxvi+454
First Edition : 2008

Research documentation
For Internal Free Circulation

ಸಂಕೇತಿ : ಆತ್ಮಕಥೆಗಳು

ಸಂಪಾದಕರು
ಸುಮನಾ ವಿಶ್ವನಾಥ್
ಪ್ರಾಧ್ಯಾಪಕರು ಮತ್ತು ವಿಭಾಗ ಮುಖ್ಯರು
ಇಂಗ್ಲಿಷ್ ವಿಭಾಗ, ವಿಶ್ವಮಾನವ ಪ್ರಥಮ ದರ್ಜೆ ಕಾಲೇಜು, ಮೈಸೂರು

ಪ್ರಕಾಶಕರು
ಸಮುದಾಯ ಅಧ್ಯಯನ ಕೇಂದ್ರ ಚಾರಿಟಬಲ್ ಟ್ರಸ್ಟ್ (ರಿ.)
3059, 4 ನೇ ‘ಎ’ ಅಡ್ಡರಸ್ತೆ, ಗೋಕುಲಂ ಪಾರ್ಕ್ ರಸ್ತೆ,
ಗೋಕುಲಂ, ಮೈಸೂರು – 570 002

ಪುಟಗಳು : xxxvi+454
ಮುದ್ರಣ : 2008

ಸಂಶೋಧನ ದಾಖಲೀಕರಣ
ಖಾಸಗಿ – ಉಚಿತ ವಿತರಣೆಗಾಗಿ
ಡಿ.ಟಿ.ಪಿ :

ಮುದ್ರಕರು :

ಅರ್ಪಣೆ

ಶ್ರೀಮತಿ ರಾಜಲಕ್ಷ್ಮೀ

ಅವರ ದಿವ್ಯಸ್ಮರಣೆಗೆ

ಸಂಕೇತಿ ಅಧ್ಯಯನ

ಸಾಧ್ವೀಮಣಿಯಾದ ಶ್ರೀನಾಚಾರಮ್ಮನ ನೇತೃತ್ವದಲ್ಲಿ ಸಂಕೇತಿ ಸಮುದಾಯದ ಮಹಾವಲಸೆ ಶಾಪತ್ತೂರಿನಿಂದ ಕರ್ನಾಟಕಕ್ಕೆ ನಡೆದುದು ೯೦೦ ವರ್ಷಗಳ ಹಿಂದೆ. ಅದರ ನೆನಪಿಗಾಗಿ ಶ್ರೀನಾಚಾರಮ್ಮ ನವಶತಮಾನೋತ್ಸವ ನಡೆಯುತ್ತಿದೆ. ಸಂಕೇತಿ ಸಮುದಾಯದ ಬಗೆಗೆ ಈವರೆಗೆ ಲಭ್ಯವಾಗಿರುವ ಅಪಾರ ಮಾಹಿತಿಯನ್ನು ಈ ಸಂದರ್ಭದಲ್ಲಿ ಪ್ರಕಟಿಸಲಾಗುತ್ತಿದೆ. ಈ ಸಂಪುಟಸರಣಿಯು ಸಂಶೋಧನೆ, ದಾಖಲೀಕರಣ, ಕ್ರೋಡೀಕರಣದ ಸ್ವರೂಪದ್ದಾಗಿದೆ. ಈ ಸರಣಿಯನ್ನು 'ಸಂಕೇತಿ ಅಧ್ಯಯನ' ಎಂದು ಕರೆಯಲಾಗಿದೆ. ಪ್ರಕೃತ ಸಂಪುಟದ ಸಂಪಟಾಧ್ಯಕ್ಷರಾಗಿ ಡಾ. ಮತ್ತೂರು ಕೃಷ್ಣಮೂರ್ತಿಯವರು ಮುನ್ನಡೆಸಿದ್ದಾರೆ. ಅವರಿಗೂ, ಪ್ರಕಟಣ ಸಮಿತಿಯ ಇತರ ಸದಸ್ಯರಿಗೂ, ಗ್ರಂಥಕರ್ತರಿಗೂ, ಸಂಬಂಧಿಸಿದ ಸಮಸ್ತರಿಗೂ ಸಮುದಾಯ ಅಧ್ಯಯನ ಕೇಂದ್ರವು ಆಭಾರಿಯಾಗಿದೆ.

ಜ್ಞಾನಗಂಗೆಗೆ ದಂಡೆಗಳಿಲ್ಲ, ಮೈಲಿಗೆಯಂತೂ ಇಲ್ಲವೇ ಇಲ್ಲ. ಅದನ್ನು ಹಿಡಿದಿಡಲು ಮಾತ್ರ ತೆರೆದ ಮನದ ಜಟಾಜೂಟಧರರು ಆಗಲೇ ಬೇಕು. ನಾವು ಪುನೀತರಾಗಲು ಇರುವ ಬೆಳಕಿನ ಮಾರ್ಗ ಅದು.

ನಮ್ಮನ್ನು ನಾವು ತಿಳಿದರೆ ವಿಕಾಸಶೀಲತೆಗೆ ಬಾಗಿಲು ತೆರೆದಂತೆ. ವಿಕಾಸವೆಂದರೆ ಮಾನವರಾಗುವುದು, ಉದಾತ್ತರಾಗುವುದು, ಆತ್ಮಗುಣಸಂಪನ್ನರಾಗುವುದು.

ನಿರ್ಗುಣಕ್ಕೆ ಅಚಲಶಾಂತಿ ಇದ್ದರೆ ಸಗುಣಕ್ಕೆ ವೈವಿಧ್ಯದ ಕಾಂತಿ ಉಂಟು. ಜಗತ್ತು ಸಂಜೀವನವೆನಿಸಿರುವುದು ಚೇತನಾಚೇತನದ ಈ ಬಹುಕಿರಣದಿಂದ. ಈ ಬಹುತ್ವದ ಗರ್ಭದಲ್ಲಿ ಏಕಾತ್ಮತೆಯ ಅಗ್ನಿಯು ಪ್ರಖರವಾದರೆ ಸಾರ್ಥಕ್ಯ.

'ಸಂಕೇತಿ' ಎಂಬುದು ಇಲ್ಲಿ ಅಧ್ಯಯನ ಘಟಕ. ಸಮಗ್ರತೆಯಲ್ಲಿ ಅದು ಮಾನವೀಯತೆಯ ಅನುಸಂಧಾನ. 'ಸಂಕೇತಿ ಅಧ್ಯಯನ'ದ ಸಂಪುಟಸರಣಿಯು ವಿವೇಕಾನುಸಂಧಾನದ ಮುಕ್ತಪಥವಾಗಿ ಬರುತ್ತಿದೆ. ಅದರ ನಡಿಗೆಯಲ್ಲಿ ವಾಸ್ತವದ ವಿವರವಿದೆ, ಅಂತರಂಗದಲ್ಲಿ ಆದರ್ಶದ ಹುಡುಕಾಟವಿದೆ.

ಒಂದು ಪುಟ್ಟಸಮುದಾಯದ ದೀರ್ಘಕಾಲೀನ ತುಡಿತಗಳನ್ನು ಮಾಧ್ಯಮವಾಗಿ ಮಾಡಿಕೊಂಡು ವಿಶ್ವಪಥವನ್ನು ಹುಡುಕಿಕೊಳ್ಳುವ ಸಾಧನವಾಗಿ ಈ ಸಂಪುಟಸರಣಿ ಪ್ರಕಾಶಗೊಳ್ಳುತ್ತಿದೆ.

***

ಈ ಮಾಲಿಕೆಯ ಆರನೆಯ ಸಂಪುಟವು ಸಂಕೇತಿ ಸಮುದಾಯದಿಂದ ಬಂದ ಐದು ಆತ್ಮಕಥೆಗಳ ಸಂಕಲನವಾಗಿದೆ. ಈಗಾಗಲೇ ಬಂದಿರುವ 'ಸಂಕೇತಿ: ಇತಿವೃತ್ತಗಳು' ಎಂಬ ಹೆಸರು ಹೊತ್ತ ಐದನೆಯ ಸಂಪುಟವೂ ಆತ್ಮಕಥೆಗಳ ಸಂಕಲನವೇ ಆಗಿದೆ. ಆದರೆ ವ್ಯಕ್ತಿಯ ಆತ್ಮಚರಿತ್ರೆಯನ್ನು ಆಧಾರವಾಗಿಟ್ಟುಕೊಂಡು ಸಮುದಾಯಜೀವನದ ವಿಸ್ತಾರವಾದ ಚಿತ್ರ ಕೊಡುವ ಕೃತಿಗಳನ್ನು 'ಇತಿವೃತ್ತಗಳು' ಎಂದು ಪ್ರತ್ಯೇಕಿಸಲಾಗಿದೆ. 'ಆತ್ಮಕಥೆ' ಎಂದು ಹೆಸರಿಸಿರುವ ಕೃತಿಗಳೂ ಸಮುದಾಯಜೀವನದ ಚಿತ್ರವನ್ನು ಅಯಾಚಿತವಾಗಿ ಕೊಟ್ಟೇಕೊಡುತ್ತವೆ. ಇತಿವೃತ್ತಗಳಲ್ಲಿಯೂ ವ್ಯಕ್ತಿಜೀವನದ ಸಾಧನಾಪಥವೊಂದು ಇದ್ದೇ ಇರುತ್ತದೆ. 'ಇತಿವೃತ್ತ' ಮತ್ತು 'ಆತ್ಮಕಥೆ'ಯ ನಡುವೆ ಇರುವ ರೇಖೆಯು ತೆಳುವಾದುದೂ ಅನಿಶ್ಚಿತವಾದುದೂ ಆಗುವ ಸಂದರ್ಭಗಳು ಇಲ್ಲದಿಲ್ಲ. ಪ್ರಕೃತ ಸಂದರ್ಭದಲ್ಲಿ ಏಕೋದ್ದೇಶದ ಪ್ರಖರ ತಪಸ್ಸು ಇಲ್ಲಿನ ಆತ್ಮಕಥೆಗಳ ನಿಚ್ಚಳ ಲಕ್ಷಣವಾಗಿದೆ.

"ಸಂಗೀತದ ಹುಚ್ಚು ಹಿಡಿದಾಗಲೇ ನಾನು ಅತ್ಯಂತ ಆನಂದವಾಗಿರುವುದು" ಇದು 'ಸಂಗೀತಗಾರನ

ಮೆಲುಕುಗಳು' ಎಂಬ ಕೃತಿಯಲ್ಲಿ ಬರುವ ಸಾರಭೂತವಾದ ಮಾತು. ಇದು ಇಡೀ ಸಂಪುಟದ ಪ್ರಾತಿನಿಧಿಕ ಮಾತೂ ಆಗಬಹುದು. ಅದು ಪಾಂಡಿತ್ಯದ ಹುಚ್ಚೋ, ಸಮಾಜಸೇವೆಯ ಹುಚ್ಚೋ, ರಾಷ್ಟ್ರಭಕ್ತಿಯ ಹುಚ್ಚೋ ಆಗಬಹುದಾದುದಷ್ಟೇ ಇಲ್ಲಿ ಕಾಣುವ ಭಿನ್ನತೆ.

******

ಭಾರತದ ಸಂಗೀತಶಾಸ್ತ್ರಜ್ಞರೂ ಸಂಗೀತಕಲಾವಿದರೂ ಬಹು ಗೌರವದಿಂದ ಪರಿಗಣಿಸುವ 'ರಾಗನಿಧಿ'ಯ ಕರ್ತೃವಿನ ನೆನಪಿನ ಬುತ್ತಿ 'Musings of a Musician'. ಲೇಖಕರಾದ ಬಿ. ಸುಬ್ಬರಾವ್ ಅವರೇ ಹೇಳಿರುವಂತೆ ಅದನ್ನು ಅವರು ವಿರಾಮದ ವೇಳೆಯಲ್ಲಿ ಮೆಲುಕು ಹಾಕಿ ಆತ್ಮಸಂತೋಷಕ್ಕಾಗಿ ಬರೆದಿಟ್ಟಿದ್ದಾರೆ. (Recollected During Leisure and Recorded for Pleasure). ಅದನ್ನು ಅವರು 'Part One' ಎಂದು ನಮೂದಿಸಿದ್ದಾರೆ. ಪ್ರಾಯಶಃ ಸುಬ್ಬರಾಯರು ಬರೆದದ್ದು ಈ ಒಂದು ಭಾಗವನ್ನು ಮಾತ್ರ, ನಮಗೆ ಲಭ್ಯವಾಗಿರುವುದು ಇದೊಂದು ಭಾಗವೇ.

ಈ ಕೃತಿಯ ಹಸ್ತಪ್ರತಿ ಸುರಕ್ಷಿತವಾಗಿ ಉಳಿದುಬಂದಿರುವುದರ ಯಶಸ್ಸು ಡಾ॥ ಮೀರಾಮೂರ್ತಿ ಅವರಿಗೆ ಸಲ್ಲಬೇಕು. ಸುಬ್ಬರಾಯರಿಗೆ ಸಂಬಂಧಿಸಿದ ಹಲವು ದಾಖಲೆಗಳನ್ನು ಅವರು ಸಂರಕ್ಷಿಸಿ ಇಟ್ಟಿದ್ದಾರೆ. ಕೇವಲ 'ರಾಗನಿಧಿ'ಯ ಕರ್ತೃವಿನ ನೆನಪಿನ ಬುತ್ತಿ ಎಂಬುದಕ್ಕಾಗಿ ಅಲ್ಲ, ಅದರಲ್ಲಿರುವ ಅಮೂಲ್ಯ ಮಾಹಿತಿಗಾಗಿಯೇ ಈ ಕೃತಿಯು ತನಗೆ ತಾನೇ ಪ್ರಾಮುಖ್ಯದ್ದಾಗಿದೆ. ನಾಜೂಕಿನ ಹಾಳೆಯಲ್ಲಿ ಸೀಸದ ಕಡ್ಡಿಯಲ್ಲಿ ಬರೆದ ಈ ಕೃತಿ ನಾಶವಾಗಿ ಹೋಗಲು ಸುಲಭ ಕಾರಣಗಳಿದ್ದುವು.

ಖ್ಯಾತ ಸಂಗೀತವಿಮರ್ಶಕ ಶ್ರೀ ಕೆ. ರಾಘವೇಂದ್ರರಾವ್ ಅವರು ಈ ಅಪೂರ್ವಕೃತಿಯ ಬಗೆಗೆ ಸಮುದಾಯ ಅಧ್ಯಯನ ಕೇಂದ್ರವನ್ನು ಎಚ್ಚರಿಸಿದ್ದು ಇಲ್ಲಿಗೆ ಹತ್ತು ವರ್ಷಗಳ ಹಿಂದೆ. ಸಮುದಾಯ ಅಧ್ಯಯನ ಕೇಂದ್ರದ ಕೋರಿಕೆಯ ಮೇರೆಗೆ ಡಾ॥ ಮೀರಾಮೂರ್ತಿಯವರು ಅದನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟೇ (ಸಂಗೀತಗಾರನ ಮೆಲುಕುಗಳು) ಎರಡು ವರ್ಷಗಳು ಕಳೆದಿವೆ. ಮೀರಾಮೂರ್ತಿಯವರು ನಾಟಕಕ್ಷೇತ್ರದಲ್ಲಿ ಪರಿಣತರು, ಸಂಗೀತಕ್ಷೇತ್ರದಲ್ಲಿಯೂ ಪರಿಶ್ರಮವಿರುವವರು ಮತ್ತು ಆಸಕ್ತರು. ಅನುವಾದಕಾರ್ಯದಲ್ಲೂ ಸಿದ್ಧಹಸ್ತರು. ಈ ಕೃತಿಯ ಅನುವಾದದಲ್ಲಿಯೂ ಸರಳವೂ ಸಹಜವೂ ಆದ ಅವರ ಭಾಷಾಂತರದ ಅಭಿವ್ಯಕ್ತಿಯನ್ನು ಕಾಣಬಹುದು.

ಸುಬ್ಬರಾಯರು ಹೊಸ ರಾಗವನ್ನು ರೂಪಿಸಿದ್ದಾರೆ, ವಾಗ್ಗೇಯ ಕೃತಿಗಳನ್ನು ರಚಿಸಿದ್ದಾರೆ, ಪ್ರಾತ್ಯಕ್ಷಿಕೆಗಳನ್ನು ನೀಡಿದ್ದಾರೆ, ವಿದ್ವದ್ಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ, ಪರಿಣತ ತೀರ್ಪುಗಾರರಾಗಿದ್ದಾರೆ, ಹೊಸ ವಾದ್ಯವನ್ನು ರೂಪಿಸಿದ್ದಾರೆ.... ಹೀಗೆ ಅವರ ಸಾಧನೆಗಳ ಪಟ್ಟಿ ಬೆಳೆಯುತ್ತದೆ. ಈ ಸಾಧನೆಗಳ ಬೇರು ಇರುವುದು ಅವರ ತಂದೆ ರಾಮಸ್ವಾಮಿಯವರ ದೂರದರ್ಶಿತ್ವದಲ್ಲಿ. ಒಬ್ಬ ವ್ಯಕ್ತಿ ಹೇಗೆ ಹಲವು ಹೂವುಗಳನ್ನು ಅರಳಿಸಬಹುದು ಎಂಬುದಕ್ಕೆ ಮಾದರಿಯಾದವರು ಅವರು. ಈ ಪೀಠಿಕಾರೂಪದ ಶ್ರಮದ ಸಾರ್ಥಕಪುಷ್ಪ ಸುಬ್ಬರಾಯರು.

ರಾಮಸ್ವಾಮಿಯವರು ಹೊತ್ತಿಸಿದ ಸಂಗೀತದಾಹದ ಕಿಡಿ ಸುಬ್ಬರಾಯರಲ್ಲಿ ಹೇಗೆ ಪ್ರಖರವಾಗಿ ಮುಂದುವರಿಯಿತು ಎಂಬುದನ್ನೇ ಈ ಕೃತಿಯಲ್ಲಿ ನಾವು ಕಾಣುವಂಥದು. ಸಂಗೀತವನ್ನು ಕಲಿಯುವ, ಆ ಸಂಬಂಧದಲ್ಲಿ ಒಡನಾಡುವ, ಚರ್ಚಿಸುವ, ಪ್ರದರ್ಶಿಸುವ, ಆಕರ್ಷಿಸುವ, ಶಿಕ್ಷಣ ನೀಡುವ, ಪ್ರೋತ್ಸಾಹಿಸುವ, ಚಿಂತಿಸುವ ಯಾವ ಅವಕಾಶವನ್ನೂ ಅವರು ಕಳೆದುಕೊಳ್ಳಲಿಲ್ಲ; ಇನ್ನೂ ಸರಿಯಾಗಿ ಹೇಳುವುದಾದರೆ, ಅಂಥ ಅವಕಾಶಗಳನ್ನು ಅವರು ಸೃಷ್ಟಿಸಿಕೊಂಡರು, ಆ ತಪಸ್ಸಿನ ಕಥೆಯೇ ಇಲ್ಲಿರುವುದು.

ಸುಮಾರು ಒಂದು ನೂರು ವರ್ಷಗಳ ಸಾಂಸ್ಕೃತಿಕ ಸಡಗರವನ್ನು ನಾವಿಲ್ಲಿ ಕಾಣುತ್ತೇವೆ. ಗುಣಗ್ರಾಹಿಯಾಗಿ ಮಾತ್ರವಲ್ಲ, ನಿಷ್ಪಕ್ಷಪಾತವಾಗಿಯೂ ನಿಷ್ಠುರವಾಗಿಯೂ ಸತ್ಯವನ್ನು ಹಿಡಿದು ಸಾಗುವ

ಪಥಸಂಚಲನ ಇಲ್ಲಿದೆ. ಸಂಗೀತದಿಗ್ಗಜಗಳ ಮೆರವಣಿಗೆ ಇದು. ಈ ದೇಶದ ಸಾಂಸ್ಕೃತಿಕ ಚರಿತ್ರೆಗೆ ಅಗತ್ಯವಾಗಿ ಸೇರಬಹುದಾದ ಭಾಗ ಇದು. ಮಾತ್ರವಲ್ಲ, ಅದರ ಇನ್ನೊಂದು ಭಾಗವೂ ಇಲ್ಲಿದೆ: "ಈ ಮುಂದಿನ ಪುಟಗಳಲ್ಲಿ ನೀವು ಕಾಣುವ ದಾಖಲಾತಿಯಲ್ಲಿ ನನ್ನ ಕನಸು ಹಾಗೂ ಹಂಬಲಗಳು ಸಾಫಲ್ಯ ಕಂಡಿವೆ" ಎಂದಿದ್ದಾರೆ ಲೇಖಕರು. ಈ ಸಾಫಲ್ಯಗಳಲ್ಲಿ ಮುಖ್ಯವಾದುದು 'ಹೀಗೆ ಸಂಗೀತದಲ್ಲಿ ತೊಡಗಿರುವಾಗ' ಅವರು ಅನುಭವಿಸುವ 'ಮೋಕ್ಷಾನಂದಸ್ಥಿತಿ'ಯೇ ಆಗಿದೆ. ಸಾಮಾನ್ಯ ಓದುಗನೂ ಕೊನೆಯಪಕ್ಷ ಈ ನೆನಪಿನ ಸಂಗೀತಯಾತ್ರೆಯಲ್ಲಿ ಒಂದು ಹೊಸ ಮೋದವನ್ನಂತೂ ಪಡೆಯುತ್ತಾನೆ. ಕೇವಲ 'ರಾಗನಿಧಿ' ಯಂಥ ಶಾಸ್ತ್ರೀಯ ಗ್ರಂಥದ ರಚನೆಯಲ್ಲಲ್ಲ, ಈ ಆತ್ಮಕಥನದಲ್ಲೂ ಸುಬ್ಬರಾಯರು ತಮ್ಮ ಲೇಖನಶಕ್ತಿಯನ್ನು ತೋರಿದ್ದಾರೆ. ಹಾಸ್ಯ, ವ್ಯಂಗ್ಯ, ಚಿತ್ರಕತೆ, ವಿಮರ್ಶೆ ಎಲ್ಲಕ್ಕೂ ಇಲ್ಲಿ ಎಡೆ ದೊರೆತಿದೆ. ಲೇಖಕರು ಸಂಗೀತವನ್ನೇ ಸ್ಥಾಯಿಯಾದ ಮನೋಧರ್ಮವಾಗಿ ಇಟ್ಟುಕೊಂಡಿದ್ದುದಕ್ಕೂ, ಅವರ ಅಭಿವ್ಯಕ್ತಿಯ ಲಕ್ಷಣಕ್ಕೂ, ಅಲ್ಲಲ್ಲಿ ಕಾಣುವ ತಾತ್ತ್ವಿಕ ಅಭಿವ್ಯಕ್ತಿಗೂ ನಿದರ್ಶನವಾಗಿ ಈ ಸಾಲುಗಳನ್ನು ನೋಡಬಹುದು. ಭಿಕಾರಿ ಎನ್ನಬಹುದಾದ ಯುವಕನೊಬ್ಬ ಸೊಗಸಾಗಿ ಹಾಡಿದ ಠುಮ್ರಿಯ ಬಗೆಗೆ ಅವರು ತೆಗೆದಿರುವ ಉದ್ಗಾರ ಇದು: "ಈ ತರುಣಕಾಬೂಲಿಯ ಸಂಗೀತದ ಬಗ್ಗೆ ನನಗೂ ತಿಳಿಯಬಾರದಾಗಿತ್ತೆ! ತಿಳಿದಿದ್ದರೆ ನಾನೂ ಪ್ರತಿರಾತ್ರಿ ಹೋಗುತ್ತಿದ್ದೆ ಇವನ ಸಂಗೀತ ಕೇಳಲು. ಅವರು ಅಲೆಮಾರಿ ಬದುಕು ಬದುಕುತ್ತಿದ್ದರಾದರೂ ಅವರೆಷ್ಟು ಆನಂದವಾಗಿದ್ದರು, ಸಂಗೀತ ಅವರೊಡನೆ ಎಷ್ಟು ಆನಂದವಾಗಿತ್ತು! ದೇವಿ ಸರಸ್ವತಿ ಐಶ್ವರ್ಯಕ್ಕಿಂತಲೂ ಕಾರ್ಪಣ್ಯವನ್ನೇ ತನ್ನ ನಿವಾಸಕ್ಕೆ ಇಷ್ಟಪಡುವಳೋ ಏನೋ!" ಇಂಥ ಆನಂದಾನುಭವದ ಯಾತ್ರೆಯೇ ಈ ಕೃತಿ.

****

'ಪಂಡಿತರೊಡನೆ' ಎಂಬುದು 'ಲಿಂಗದಹಳ್ಳಿಯ ಅವಧೂತ' ಎನಿಸಿದ ವೇ.ಬ್ರ.ಶ್ರೀ ನರಸಿಂಹಮೂರ್ತಿಶಾಸ್ತ್ರಿಗಳ ಆತ್ಮಕಥೆ. ನರಸಿಂಹಮೂರ್ತಿಶಾಸ್ತ್ರಿಗಳು ಯಜುರ್ವೇದ ಪಂಡಿತರು; ಋಗ್ವೇದ, ಯಜುರ್ವೇದಗಳೆರಡರಲ್ಲೂ ಪ್ರಯೋಗನಿಪುಣರು; ಸಾಹಿತ್ಯ, ಅಲಂಕಾರ, ವೇದಾಂತ, ತರ್ಕ, ವ್ಯಾಕರಣ, ಜ್ಯೌತಿಷ ಹೀಗೆ ಒಂದೊಂದರಲ್ಲೂ ವಿದ್ವತ್ ಪರೀಕ್ಷೆಗಳಲ್ಲಿ ಉನ್ನತೋನ್ನತ ಶ್ರೇಣಿಯಲ್ಲಿ ಜಯಭೇರಿ ಬಾರಿಸಿದವರು. ತಮ್ಮ ವಿದ್ಯಾರ್ಜನೆಯ ಪರ್ವವನ್ನು ಮುಗಿಸಿದಾಗ ಅವರಿಗೆ 40 ವರ್ಷ! ಐದು ವರ್ಷಗಳಲ್ಲಿ ಮುಗಿಸಬಹುದಾದ ವ್ಯಾಕರಣಾಧ್ಯಯನವನ್ನು ಮೂರೇ ವರ್ಷಗಳಲ್ಲಿ ಮುಗಿಸಿದವರು ಅವರು; ಇಂಥ ವೇಗದಲ್ಲಿ ಅವರು ಉನ್ನತ ಅಧ್ಯಯನ ಮಾಡಿದ್ದು ಕಾಲು ಶತಮಾನದ ಕಾಲ!

96 ವರ್ಷದ ಶಾಸ್ತ್ರಿಗಳು ಈಗಲೂ ಪಾಣಿನಿಯ ವ್ಯಾಕರಣವನ್ನು ಮೊದಲಿಂದ ಕೊನೆಯವರೆಗೆ ಸ್ಮರಣೆಯಿಂದ ಹೇಳಬಲ್ಲರು, ವಿದ್ವಾಂಸರೊಂದಿಗೆ ಚರ್ಚಿಸಬಲ್ಲರು, ಕ್ಲಿಷ್ಟ ಭಾಗಗಳ ಜಿಜ್ಞಾಸೆಯಲ್ಲಿ ತೊಡಗಬಲ್ಲರು. ಅವರಿಗೆ 95 ವರ್ಷವಾಗಿದ್ದಾಗ ಪ್ರತಿಷ್ಠಿತ ರಾಷ್ಟ್ರೀಯ ವಾಕ್ಯಾರ್ಥ ಗೋಷ್ಠಿಯಲ್ಲಿ ಭಾಗವಹಿಸಿ ಆರೂ ಶಾಸ್ತ್ರಗಳಲ್ಲೂ ಏಕಮೇವಾದ್ವಿತೀಯ ಪಂಡಿತರಾಗಿ ಪ್ರಜ್ವಲಿಸಿ ಪ್ರಶಸ್ತಿಗಳಿಸಿದ ಪ್ರಸಂಗವು ಈ ಆತ್ಮಕಥನದಲ್ಲಿ ಸೇರಿಲ್ಲ! ಅವರಿಗೆ ಆ ಕಾಲಕ್ಕಿದ್ದ ವಿದ್ವತ್ ಪರಿಸರದ ಚಿತ್ರವು ಈ ಕೃತಿಯಲ್ಲಿ ದೊರೆಯುತ್ತದೆ.

ನರಸಿಂಹಮೂರ್ತಿಶಾಸ್ತ್ರಿಗಳಂಥ ಅಂತರ್ಮುಖಿಯನ್ನು ತಮ್ಮ ಮನೆಗೆ ಕರೆದು ಆದರಿಸಿ ಅವರಿಂದ ಇಷ್ಟು ಮಾಹಿತಿಯನ್ನು ಸಂಗ್ರಹಿಸಿರುವ ಬೀ.ಚಿ. ಜಗನ್ನಾಥ ಜೋಯಿಸರು ವಾಣಿಜ್ಯಶಾಸ್ತ್ರವನ್ನು ಅಭ್ಯಾಸಮಾಡಿ ಬ್ಯಾಂಕಿನ ಅಧಿಕಾರಿಯಾಗಿ ದುಡಿಯುತ್ತಿರುವಂಥವರು. ಇಂಥ ಮಹಾಪಂಡಿತರ ಅಂತರಾಳವನ್ನು ತಿಳಿಯುವ ಅಭೀಪ್ಸೆ ಮೂಡಿತೆಂದರೆ ಜಗನ್ನಾಥ ಜೋಯಿಸರು ವಂದ್ಯರೇ ಸರಿ.

ಇದೊಂದು ಪುಟ್ಟ ಕಥನ. ಶಾಸ್ತ್ರಿಗಳು ವಿಸ್ತಾರವಾಗಿ ನಿರೂಪಿಸಬಹುದಾಗಿದ್ದರೆ ಆ ಕಾಲದ ವಿದ್ವತ್ ಪ್ರಪಂಚದ ಚಿತ್ರಣವೇ ಬಹು ರೋಚಕವಾದ ಓದಿಗೆ ಒದಗಬಹುದಾಗಿತ್ತು. ಒಟ್ಟು ಬದುಕಿನ ವ್ಯಾಪಕವಾದ ಚಿತ್ರವನ್ನೂ ಅವರು ಕೊಡಬಹುದಾಗಿತ್ತು. ಈ ಅದಮ್ಯ ಕುತೂಹಲವನ್ನು ಮೂಡಿಸಿರುವವರು ಜಗನ್ನಾಥ ಜೋಯಿಸರು.

****

'ನನ್ನ ಬದುಕು' ಎಂಬುದು ಖ್ಯಾತ ವೈಣಿಕ ಆರ್. ಎನ್. ದೊರೆಸ್ವಾಮಿ ಅವರ ಆತ್ಮಕಥನ. ಪ್ರಾಮಾಣಿಕವಾಗಿ, ಸರಳವಾಗಿ, ನೇರವಾಗಿ ತಮ್ಮ ಕಥೆಯನ್ನು ನಿರೂಪಿಸಿರುವುದು ಈ ಗ್ರಂಥದ ದೊಡ್ಡಗುಣ. ಆ ಕಾರಣಕ್ಕಾಗಿಯೇ ಸಮುದಾಯ ಅಧ್ಯಯನ ಕೇಂದ್ರವು ಅದನ್ನು ಮೆಚ್ಚಿಕೊಂಡಿತು; ಅವರನ್ನು ಕಂಡು ಪ್ರಣಾಮಗಳನ್ನರ್ಪಿಸಿತು. ಆರ್. ಎನ್. ಡಿ. ಅವರ ಬಗೆಗಿನ ಸ್ತುತ್ಯಮಾಹಿತಿಯ ಬಹುಪಾಲು ಪ್ರಕಟವಾಗದೆ ಹಾಗೆಯೇ ಉಳಿದಿದೆ ಎಂಬುದನ್ನು ಕಂಡುಕೊಂಡಿತು. ಈ ಕುತೂಹಲವು ಕಟ್ಟೆಯೊಡೆದು 'ಮಹತೀ' ಎಂಬ ಅಭಿನಂದನ ಗ್ರಂಥವಾಗಿ ಹೊರಬಂದಿತು. ಆರ್. ಎನ್. ಡಿ. ಅವರ ವಿಸ್ತೃತ ಆತ್ಮಕಥನವೂ ಅದರಲ್ಲಿ ಸೇರಿತು. ಅವರನ್ನು ಅರಿಯಬಹುದಾದ ವೈವಿಧ್ಯಪೂರ್ಣ ಮಾಹಿತಿ ಅದರಲ್ಲಿ ಸೇರಿತು. ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಬಹುಮಾನವೇ ಅವರಿಗೆ ಸಂದಿತು.

ಆರ್. ಎನ್. ಡಿ. ಅವರು ಸಂಗೀತಕಲಾಕಾರನಾಗಬೇಕೆಂದು ಸಂಕಲ್ಪಿಸಿದ್ದು ತಾವಲ್ಲ, ಅವರ ತಂದೆಯವರು. ಸಾಂಪ್ರದಾಯಿಕ ಶಿಕ್ಷಣವನ್ನು ತೊರೆದು ಆಧುನಿಕ ಶಿಕ್ಷಣದೆಡೆಗೆ ಇಡೀ ದೇಶವೇ ಮುಖಮಾಡತೊಡಗಿದ್ದ ಕಾಲ ಅದು. ಸ್ವತಃ ಅವರ ತಂದೆ ನಾರಾಯಣಸ್ವಾಮಿಯವರೂ ಇದಕ್ಕೆ ಹೊರತಾಗಿರಲಿಲ್ಲ. ಆದರೆ ಈ ಹೊಸ ಸೆಳೆತದ ಆಕರ್ಷಣೆಯನ್ನು ನಿಗ್ರಹಿಸಿ ತಮ್ಮ ಮಗನು ಸಂಗೀತಗಾರನೇ ಆಗಬೇಕೆಂದು ಅವರು ಸಂಕಲ್ಪಸಿದ್ದು ಒಂದು ವಿಶೇಷ. ರುದ್ರಪಟ್ಟಣದವರಾದ ಅವರಿಗೆ ಸಂಗೀತದ ಬಗೆಗೆ ಅಚಲಭಕ್ತಿ ಇದ್ದುದು ಸಹಜವೇ ಆಗಿತ್ತು. ಆದರೆ ದೂರದ ತಮಿಳುನಾಡಿನಲ್ಲಿ ಸಂಗೀತ ಶಿಕ್ಷಣಕ್ಕಿದ್ದ ಸೌಲಭ್ಯದ ಮಾಹಿತಿಯನ್ನು ಸಂಗ್ರಹಿಸಿದ್ದೂ, ಪುಟ್ಟ ಬಾಲಕನನ್ನು ಅಲ್ಲಿಗೆ ದಾಖಲಿಸಿದ್ದೂ ಆ ಕಾಲದ ಸೌಲಭ್ಯದ ದೃಷ್ಟಿಯಿಂದ ಹೆಚ್ಚಿನದೇ ಆಗಿತ್ತು. ಎಂಥ ಎಡರುಗಳು ಬಂದರೂ, ಮಗನು ಆಸ್ಥಾನವಿದ್ವಾಂಸನೆನಿಸುವವರೆಗೂ ಹೋರಾಡಿದ್ದು ಎಲ್ಲ ಕಾಲಕ್ಕೂ ಮಾದರಿ ಎನಿಸಬಹುದಾದ ಒಂದು ಛಲವೇ ಆಗಿತ್ತು.

ಸಂಗೀತ ವಿದ್ವಾಂಸನಾಗಬೇಕೆಂಬ ಹಿರಿದಾದ ಗುರಿ ಇಟ್ಟುಕೊಂಡು ಶಾಲಾಶಿಕ್ಷಣವನ್ನು ತ್ಯಜಿಸಿದ ಆರ್.ಎನ್.ಡಿ.ಅವರು ವಿಘ್ನಪರಂಪರೆಯನ್ನೇ ಎದುರಿಸಬೇಕಾಯಿತು. ಅವರ ಸಂಗೀತಸಾಧನೆಯ ಮಾರ್ಗದ ವಿಘ್ನಗಳೂ, ಅವರು ಆಶ್ರಯಿಸಬೇಕಾಗಿ ಬಂದ ಬಹುಆಚಾರ್ಯರೂ ವ್ಯರ್ಥಸಾಹಸಗಳಾಗಲಿಲ್ಲ. ಸಾಧಾರಣಪಥದಲ್ಲಿ ಕೇವಲ ಕಲಾಕಾರರಾಗಬಹುದಾಗಿದ್ದ ಅವರು ಸಂಗೀತಶಾಸ್ತ್ರಜ್ಞರಾದರು, ವಾಗ್ಗೇಯ ಕಾರರಾದರು, ಒಳ್ಳೆಯ ಶಿಕ್ಷಕರೂ ಆದರು, ಅವೆಲ್ಲದರ ಜತೆಗೆ ಕಲೋಪಾಸನೆಯೊಂದೇ ಧ್ಯೇಯವೆಂಬುದನ್ನು ಕರಗತ ಮಾಡಿಕೊಂಡ ಪಕ್ವಜೀವಿಯಾದರು. ಜೀವನವನ್ನು ಸಮಚಿತ್ತದಿಂದ ನಿರ್ವಹಿಸುವ ಸ್ನೇಹಜೀವಿಯಾದರು.

ಪಾರಂಪರಿಕವಾಗಿ ವೇದಾಧ್ಯಯನವನ್ನೂ ತೋಟಗಾರಿಕೆಯನ್ನೂ ತಪಸ್ಸಿನಂತೆ ನಿರ್ವಹಿಸಿಕೊಂಡು ಆಧ್ಯಾತ್ಮಿಕ ನೆಲೆಯಲ್ಲೇ ವಿಹರಿಸುತ್ತಾ ನೆಮ್ಮದಿಯಿಂದಿದ್ದುದು ಸಂಕೇತಿ ಸಮುದಾಯ; ಆಧುನಿಕ ಶಿಕ್ಷಣದೊಂದಿಗೆ ಪ್ರವೇಶಿಸಿದ ಹೊಸ ಸಾಹಸಸಾಧ್ಯತೆಗಳ ಸ್ಥಿತ್ಯಂತರದ ಬದುಕಿಗೆ ಹೊಂದಿಕೊಳ್ಳಲಾಗದೆ ಅದು ಮೊದ ಮೊದಲು ತತ್ತರಿಸಿ ಹೋದ ವಾಸ್ತವದ ಪ್ರತಿನಿಧಿಯಾಗಿ ಆರ್.ಎನ್.ಡಿ. ಅವರ ತಂದೆಯವರು ಇದ್ದಾರೆ. ಸಂಕೇತಿ ಅಧ್ಯಯನದ ಭಾಗವಾಗಿ ಬರುತ್ತಿರುವ ಈ ಎಲ್ಲ ಕಥನಗಳಲ್ಲೂ ಅಂಥ ಮಾಹಿತಿಯು ಹೇರಳವಾಗಿ ದೊರೆಯುವುದನ್ನು ಅಧ್ಯಯನಾಸಕ್ತರು ಗಮನಿಸಬಹುದಾಗಿದೆ.

ಪ್ರಕೃತ ಕಥನದಲ್ಲಿ ಆರ್. ಎನ್. ಡಿ. ಅವರ ಅಧ್ಯಯನಸಾಹಸದ ವಿವರವಿದೆ. ಆದರೆ ಕಲೆಯ ಬಗೆಗಿನ ಸೂಕ್ಷ್ಮ ವಿಶ್ಲೇಷಣೆ ಇಲ್ಲಿಲ್ಲ, ಆಗಿನ ಸಂಗೀತ ದಿಗ್ಗಜಗಳ ನಡುವೆ ತಾವು ವಿಶೇಷವಾಗಿ ನಿಲ್ಲುವ ನೆಲೆಯಮೇಲೆ ಬೆಳಕು ಚೆಲ್ಲಿಲ್ಲ. ವೀಣಾವೆಂಕಟಗಿರಿಯಪ್ಪನವರ ಪ್ರಖರ ಶಿಷ್ಯರಲ್ಲಿ ವೀಣಾ ದೊರೆಸ್ವಾಮಿ

ಅಯ್ಯಂಗಾರ್ಯರ ಜೊತೆಗೆ ಇದ್ದವರು ಆರ್. ಎನ್. ದೊರೆಸ್ವಾಮಿಯವರು. ಗುರುಗಳು ಅವರಿಬ್ಬರನ್ನೂ ತಮ್ಮ ಎರಡು ಕಣ್ಣುಗಳು ಎಂದು ಪ್ರಶಂಸಿಸುತ್ತಿದ್ದರು. ಆ ಹೆಮ್ಮೆಯ ಅನಾವರಣ ಇಲ್ಲಿ ಆಗಿಲ್ಲ. ಆರ್. ಎನ್.ಡಿ. ಮೆದುಹೃದಯಿ. ತಮ್ಮ ಗುರುಗಳನ್ನು ಸ್ಮರಿಸುತ್ತಿದ್ದಂತೆಯೇ ಕಣ್ಣುಗಳಲ್ಲಿ ನೀರು ತುಂಬಿಕೊಂಡು ಗದ್ಗದಿತರಾಗುತ್ತಿದ್ದಂಥವರು, ಅವರ ಕೊನೆಯ ದಿನಗಳವರೆಗೂ ಅವರು ಈ ಭಾವಕೋಮಲತೆಯನ್ನು ಉಳಿಸಿಕೊಂಡಿದ್ದರು. ಅದರಿಂದಾಗಿಯೇ ಅವರು ತಮ್ಮ ಆತ್ಮಕಥನದಲ್ಲಿ ತಮ್ಮ ಕಲಾ ಔನ್ನತ್ಯವನ್ನು ಸಾರುವ ವಿವರಗಳನ್ನು ಬರೆಯುವಗೊಡವೆಗೆ ಹೋಗಲಾಗಲಿಲ್ಲವೆ ಎಂಬುದು ಒಂದು ಊಹೆ ಮಾತ್ರ. ಆದರೆ ಅವರಿಗೆ ಇದ್ದ ಕಲಾಸಿದ್ಧಿ ಮತ್ತು ಔನ್ನತ್ಯದ ಪರಿಚಯದ ಆ ಭಾಗವು 'ಮಹತೀ' ಅಭಿನಂದನ ಗ್ರಂಥದ ಇತರ ಲೇಖನಗಳಲ್ಲಿ ಕಾಣಿಸುತ್ತದೆ. ತಾವೇ ಬರೆದ ವೈಚಾರಿಕ ಮತ್ತು ಶಾಸ್ತ್ರೀಯ ಲೇಖನಗಳಲ್ಲಿಯೂ, ಇತರರು ತಮ್ಮ ಬಗೆಗೆ ಬರೆದ ಲೇಖನಗಳಲ್ಲಿಯೂ ಆ ಅಂಶವು ವ್ಯಕ್ತವಾಗಿರುವುದರಿಂದಲೇ ಆರ್. ಎನ್. ಡಿ. ಆತ್ಮಕಥೆಯಲ್ಲಿ ಅದನ್ನು ಪ್ರಸ್ತಾಪಿಸಲು ಸಂಕೋಚಪಟ್ಟಿದ್ದಾರು. ಅದೂ ಒಂದು ಸಾಧ್ಯತೆ ಮಾತ್ರ.

ಆರ್.ಎನ್.ಡಿ. ಎಂಥ ದೊಡ್ಡ ವಿದ್ವಾಂಸರು, ಕಲಾಸೂಕ್ಷ್ಮವನ್ನರಿತವರು, ತಾತ್ತ್ವಿಕ ನೆಲೆಯಲ್ಲಿ ಉಪಸ್ಥಿತರಿದ್ದವರು ಎಂಬುದು ಮಾತ್ರವಲ್ಲ, ಅವರೆಂಥ ವಿನಯಶೀಲ, ಗುಣಗ್ರಾಹಿ, ವಿಶಾಲಹೃದಯಿ ಮತ್ತು ಭಾಷೆಯನ್ನು ಎಷ್ಟು ಚೆನ್ನಾಗಿ ಬಳಸಬಲ್ಲ ಲೇಖಕ ಎಂಬುದೂ ಅವರ ಲೇಖನಗಳಲ್ಲಿ ವ್ಯಕ್ತವಾಗುತ್ತದೆ.

* * * * *

ಮೇಜರ್ ಎಚ್. ಸಿ. ವೇಣುಗೋಪಾಲ್ ಅವರು ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಗಾಂಧೀಜಿಯ ಅನುಯಾಯಿಯಾಗಿಯೂ ಭೂಗತ ಹೋರಾಟಗಾರರಾಗಿಯೂ ಮಾಡಿದ ಚಳವಳಿಯ ವಿವರವು 'ಸೈನಿಕನ ನೆನಪುಗಳು' ಎಂಬ ಗ್ರಂಥದಲ್ಲಿದೆ. ಯೋಧರಾಗಿ ಭಾಗವಹಿಸಿದ ಹೋರಾಟಗಳು ಮತ್ತು ಮಾಡಿದ ಸುಧಾರಣೆಗಳ ವಿವರಗಳೂ ಇದರಲ್ಲಿ ಸೇರಿವೆ.

ಪರಮವಿಶಿಷ್ಟ ಸೇವಾ ಪದಕಕ್ಕಾಗಿ ಮಣಿಪುರ ಐ.ಜಿ.ಪಿ. ಅವರು ಮಾಡಿದ ದೀರ್ಘವಾದ ಶಿಫಾರಸುಪತ್ರದ ಕೊನೆಯ ಸಾಲುಗಳು ಇವು, "ಆತ್ಮಸಾಕ್ಷಿಯುಳ್ಳ, ಪ್ರಾಮಾಣಿಕರಾದ, ಕಾರ್ಯಶೀಲರಾದ, ಧೈರ್ಯವಂತ ಅಧಿಕಾರಿಯಾದ ಮೇಜರ್ ವೇಣುಗೋಪಾಲ್ ತಮ್ಮ ಬೆಟಾಲಿಯನ್ನಿನ ಹಲವು ವಿಭಾಗಗಳ ಕಾರ್ಯವಿಧಾನದಲ್ಲಿ ಅಪಾರವಾದ ಸುಧಾರಣೆಗಳನ್ನು ಮಾಡಿದ್ದಾರೆ. ಬಹುದೂರಸ್ಪರ್ಶಿಯಾದ ಕಾರ್ಯಾಚರಣೆಗಳನ್ನು ಸಾಧಿಸಿದ್ದಾರೆ. ತಮ್ಮ ಮಿಷನರಿ ಉತ್ಸಾಹ ಮತ್ತು ಬಹು ಉನ್ನತವರ್ಗದ ಅರ್ಪಣಾ ಮನೋಭಾವದಿಂದ ತಮ್ಮ ಯೂನಿಟ್ಟಿನ ವ್ಯಾಪ್ತಿಯಲ್ಲಿ ಬರುವ ಸ್ಥಳೀಯರ ವಿಶ್ವಾಸವನ್ನೂ ಸದ್ಭಾವನೆಯನ್ನೂ ಸಂಪಾದಿಸಿದರು". ವೇಣುಗೋಪಾಲ್ ಪಡೆದ ತರಬೇತಿಯ ಒಂದು ಮುಖ್ಯಭಾಗ 'ಮಾಡುವ ಕೆಲಸದಲ್ಲಿ ಹೆಮ್ಮೆ ಪಟ್ಟುಕೊಳ್ಳಬೇಕೆಂಬುದನ್ನು' ಕಲಿಸಿದ್ದು. ಎಂ.ಎನ್. ಜೋಯಿಸ್, ಟಿ. ಸಿದ್ಧಲಿಂಗಯ್ಯ, ಎಸ್. ನಿಜಲಿಂಗಪ್ಪ, ನಿಟ್ಟೂರು ಶ್ರೀನಿವಾಸರಾವ್ ಅಂಥವರ ನಿಕಟಸಂಪರ್ಕದಲ್ಲಿದ್ದು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು ಅವರು.

ಯುದ್ಧರಂಗವು ಸಂಕೇತಿ ಸಮುದಾಯಕ್ಕೆ ಹೊಸದಲ್ಲ. ಕತ್ತಿಹಿರಿದು ರಣರಂಗದಲ್ಲಿ ಭೀಕರವಾಗಿ ಕಾದಿದ ಕ್ಷಾತ್ರತೇಜಿಗಳ ವಿವರಗಳು ಸಂಕೇತಿ ಸಮುದಾಯದ ವಂಶಚರಿತ್ರೆಗಳಲ್ಲಿ ಧಾರಾಳವಾಗಿ ಸಿಗುತ್ತವೆ. ತಿರುವಾಂಕೂರು ಸಂಸ್ಥಾನದ ನಿರ್ಮಾತೃಗಳಲ್ಲಿ ಪ್ರಮುಖರಾಗಿದ್ದವರು ಈ ಸಮುದಾಯಕ್ಕೆ ಸೇರಿದ ದಳವಾರಾಮಯ್ಯರ್; ಮುಮ್ಮಡಿ ಕೃಷ್ಣರಾಜ ಒಡೆಯರನ್ನು ರೂಪಿಸಿ ವ್ಯಾಪಕ ಸುಧಾರಣೆಗಳನ್ನು ತಂದವರು ಬಕ್ಷಿ ತಿಪ್ಪಯ್ಯನವರು; ವಿಜಯನಗರದ ಸಾಮ್ರಾಜ್ಯಸ್ಥಾಪನೆ ಮಾಡಲು ಕಾರಣೀಭೂತರಾದವರು ವಿದ್ಯಾರಣ್ಯರು.

ಆದರೆ ಒಬ್ಬ ಯೋಧನ ವಿಸ್ತಾರವಾದ ಮತ್ತು ವಿವರವಾದ ಚರಿತ್ರೆ ಸಿಗುವುದು ಮೊದಲಬಾರಿಗೆ 'ಸೈನಿಕನ ನೆನಪುಗಳು' ಪುಸ್ತಕದಲ್ಲಿ ಮಾತ್ರ.

ವೇಣುಗೋಪಾಲ್ ಸಾಹಸಿ, ಭೂಗತ ಚಟುವಟಿಕೆಗಳ ಸಮಯದಲ್ಲಿ ಸ್ವಲ್ಪದರಲ್ಲೇ ನೇಣುಗಂಬವನ್ನು ತಪ್ಪಿಸಿಕೊಂಡ ಹೋರಾಟಗಾರ. ಇಟಗಿಯನ್ನು ಹೈದರಾಬಾದಿನ ರಜಾಕಾರರ ಉಪಟಳದಿಂದ ಪಾರುಮಾಡಿ ಆ ಭಾಗಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಸೇನಾನಿ; ಸರ್ದಾರ್ ಪಟೇಲರು ನಡೆಸಿದ ಹೈದರಾಬಾದ್ ಕಾರ್ಯಾಚರಣೆಗೆ ಪ್ರೇರಕವಾದ ವರದಿಯನ್ನೊದಗಿಸಿದ ದೂರದರ್ಶಿ. ಯುದ್ಧರಂಗದಲ್ಲಿ ರಕ್ತಹರಿಸಿದ ವಿವರಗಳಿಗೆ ಈ ಕೃತಿಯಲ್ಲಿ ಒತ್ತು ನೀಡದಿದ್ದರೂ, ವೇಣುಗೋಪಾಲರ ಕ್ಷಾತ್ರವನ್ನು ಸಾರುವ ಪ್ರಸಂಗಗಳು ಇಲ್ಲದಿಲ್ಲ.

ಆದರೆ ವೇಣುಗೋಪಾಲರಿಗೆ ವಿಶಿಷ್ಟ ಸೇವಾಪದಕವನ್ನು ತಂದುಕೊಟ್ಟುದು ಅವರ ಸುಧಾರಣಾ ಕಾರ್ಯಗಳ ಅತಿಶಯತೆ. ಮಾನವೀಯ ಮಿಡಿತಗಳೇ ಅವುಗಳ ಮೂಲದಲ್ಲಿದ್ದುದು ಮತ್ತು ಸ್ಥಾಯಿಯಾಗಿದ್ದುದು. ಬಿಯಾಸಿನ ಸಂತ ಸದ್ಗುರುವು ನೀಡಿದ ಪ್ರಸಾದವನ್ನು ಇನ್ನೇನು ಬಾಯಿಗಿಡಬೇಕು, ಭಿಕ್ಷುಕನೊಬ್ಬ ಅದಕ್ಕಾಗಿ ಕೈನೀಡಿದ. ಜತೆಗಿದ್ದ ಗೆಳೆಯ ಕೂಗುತ್ತಿದ್ದ, 'ಅದನ್ನು ನೀವೇ ತಿನ್ನಿ, ಅದರಲ್ಲಿ ಪವಾಡಸದೃಶ ಶಕ್ತಿಗಳಿವೆ' ಎಂದು. ಆದರೆ ಮರುಯೋಚನೆ ಇಲ್ಲದೆ ಅವರು ಅಷ್ಟೂ ಪ್ರಸಾದವನ್ನು ಆ ಭಿಕ್ಷುಕನಿಗೆ ಕೊಟ್ಟುಬಿಟ್ಟರು ಮತ್ತು ಉದ್ಗರಿಸಿದರು, 'ಆ ಹುಡುಗನಿಗೆ ಆ ಶಕ್ತಿಯ ಅಗತ್ಯ ನನಗಿಂತ ಹೆಚ್ಚಾಗಿದೆ' ಎಂದು. ವಾಸ್ತವವಾಗಿ ಆ ಪ್ರಸಾದಕ್ಕಾಗಿಯೇ ವೇಣುಗೋಪಾಲ್ ನೂರಾರು ಮೈಲುಗಳ ಪ್ರಯಾಣ ಮಾಡಿ ಅಲ್ಲಿಗೆ ಬಂದಿದ್ದರು. ಯೋಧನಾದ ವೇಣುಗೋಪಾಲರ ಅಂತಃಕರಣ ಮಿಡಿಯುತ್ತಿದ್ದುದು ಹಾಗೆ. 'ರಣರಂಗಗಳಿರುವುದು ಶಾಂತಿಯನ್ನು ಕಾಪಾಡುವುದಕ್ಕೆ' ಎಂಬುದು ವಿಚಿತ್ರವಾದ ಹೇಳಿಕೆ. ಆದರೆ ಅದನ್ನು ವಿಪರ್ಯಾಸರಹಿತವಾಗಿ ಸಾಧಿಸಿದವರು ಮೇಜರ್ ವೇಣುಗೋಪಾಲ್. ವಿದ್ಯಾಭ್ಯಾಸ ಮುಂದುವರಿಸದಿದ್ದರೆ ಅಂಥ ಹೆಂಡತಿಯೇ ಬೇಡ ಎಂಬ ದೃಢ ನಿರ್ಧಾರವೂ ಮೇಲುನೋಟಕ್ಕೆ ಕ್ರೂರವಾಗಿಯೇ ಕಾಣಬಹುದು. ಆದರೆ ಇಂಥ ಕಾಠಿಣ್ಯ ಕಾಣುವುದು, ಅಂತರಂಗದಲ್ಲಿ ಪ್ರೇಮ ತುಂಬಿದಾಗಲೇ.

ಕನ್ನಡ ಸಾಹಿತ್ಯದಲ್ಲಿಯೂ ಯೋಧರ ಆತ್ಮಕಥೆಗಳು ಅಪರೂಪವೇ. ಇಂಥ ವಿಶಿಷ್ಟ ಕೃತಿಯ ಇಂಗ್ಲಿಷ್ ಮೂಲದ ಹಸ್ತಪ್ರತಿಯನ್ನು ಸಮುದಾಯ ಅಧ್ಯಯನ ಕೇಂದ್ರದ ಅವಗಾಹನೆಗೆ ತಂದವರು ಕೇಂದ್ರದ ಹಿತೈಷಿಗಳಲ್ಲೊಬ್ಬರಾದ (ಕ್ಯಾಪ್ಟನ್) ಕೃಷ್ಣಪ್ರಸಾದ್ ಅವರು. ಇದು ಇಷ್ಟು ಒಳ್ಳೆಯ ಕೃತಿಯಾದರೂ ಇದನ್ನು ಓದುಗರು ಹೇಗೆ ಸ್ವೀಕರಿಸಿಯಾರೋ ಎಂಬ ಅಳುಕು ಒಬ್ಬ ಯೋಧರಾದ ಅವರಿಗೆ ಇದ್ದುದು ಸಹಜವೇ. ವೇಣುಗೋಪಾಲ್ ಅವರ ಮಕ್ಕಳಾದ ಪ್ರೊ॥ ರವೀಂದ್ರ ಮತ್ತು ಡಾ॥ ಹೇಮಾ ಅವರು ಈ ಕೃತಿಯ ಸ್ವರೂಪವನ್ನು ಹೆಚ್ಚು ಅಚ್ಚುಕಟ್ಟಾಗಿಸಲು ಶ್ರಮಿಸಿದ್ದಾರೆ.

ಸಮುದಾಯ ಅಧ್ಯಯನ ಕೇಂದ್ರಕ್ಕಾಗಿ ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟು ಉಪಕರಿಸಿದವರು ಶ್ರೀ ಆರ್. ಎಲ್. ಅನಂತರಾಮಯ್ಯ ಅವರು. ಅದನ್ನು ಅವರು ಕೇಂದ್ರದ ಮೇಲಿನ ಪ್ರೀತಿಯಿಂದಲೇ ಮಾಡಿದರು. ಮಿಲಿಟರಿ ಪರಿಭಾಷೆಗಳನ್ನು ಕನ್ನಡಕ್ಕೆ ತರುವುದು ಕಷ್ಟದ ಕೆಲಸ. ಮಿಲಿಟರಿ ಅಧಿಕಾರಿಗಳನ್ನೇ ಸಂಪರ್ಕಿಸಿ ಆ ತೊಡಕುಗಳನ್ನು ಪರಿಹರಿಸಿಕೊಂಡು ಅನಂತರಾಮಯ್ಯನವರು ಅನುವಾದವನ್ನು ಅಂದವಾಗಿ ಮಾಡಿಕೊಟ್ಟರು. ನಮ್ಮ ಆತುರಕ್ಕೆ ಮಣಿದು ಶೀಘ್ರವಾಗಿಯೂ ಮಾಡಿಕೊಟ್ಟರು. ಅವರು ಅನೇಕಾನೇಕ ಪುಸ್ತಕಗಳನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ತಂದು ಕೈ ನುರಿತಿದ್ದವರು.

ಈ ಕೃತಿಯನ್ನು ಪ್ರಕೃತ ಸಂಪುಟಕ್ಕೆ ಸೇರಿಸಿಕೊಳ್ಳುವ ಹೊತ್ತಿನಲ್ಲಿ ಇದನ್ನು ಮತ್ತಷ್ಟು ಸುಧಾರಿಸಿಕೊಟ್ಟವರು ಭಾಷಾಂತರಕ್ಷೇತ್ರದಲ್ಲೇ ದೀರ್ಘಕಾಲ ಸೇವೆಸಲ್ಲಿಸಿರುವ ಶ್ರೀ ಎನ್. ಎಸ್. ಶಾರದಾ ಪ್ರಸಾದ್ ಅವರು. ಅದಾದರೂ ಬಹು ಸೂಕ್ಷ್ಮಜ್ಞತೆಯನ್ನೂ ತಾಳ್ಮೆಯನ್ನೂ ನಿರೀಕ್ಷಿಸುವ ಕೆಲಸ. ಶ್ರೀ ಎನ್. ಎಸ್. ಎಸ್.ಪಿ. ಕೇಂದ್ರದ ಭಾಗವೂ ಆಗಿ ಅದನ್ನು ಮಮತೆಯಿಂದ ನಿರ್ವಹಿಸಿದ್ದಾರೆ.

* * * * *

'ಮತ್ತೂರಿನಿಂದ ಬ್ರಿಟನ್‌ಗೆ' ಎಂಬ ಜೀವನಕಥೆಯಲ್ಲಿರುವುದು ಕೃಷ್ಣಮೂರ್ತಿಯವರು ತಮ್ಮ ಕಾರ್ಯಕ್ಷೇತ್ರವನ್ನು ಮತ್ತೂರಿನಿಂದ ಬ್ರಿಟನ್‌ವರೆಗೆ ವಿಸ್ತರಿಸಿಕೊಂಡ ಕಥೆ, ಎಂ.ಆರ್. ಕೃಷ್ಣಮೂರ್ತಿಯಾಗಿದ್ದವರು 'ಮಾಥೂರ್‌ಜೀ' ಆಗಿ ಬೆಳೆದ 'ಕಥೆ', ಎಸ್.ಎಸ್.ಎಲ್.ಸಿ. ವರೆಗೆ ಶಿಕ್ಷಣ ಪಡೆದವರು ಲೋಕಶಿಕ್ಷಣದಲ್ಲಿ ಹಿರಿದಾಗಿ ಬೆಳೆದು 'ಡಾಕ್ಟರ್' ಎನಿಸಿದ ಕಥೆ, ತಮ್ಮ ಲೋಕಪ್ರೀತಿಯು ಹುಟ್ಟಿಸಿದ ಶುಭಹಾರೈಕೆಯಿಂದಾಗಿ 'ಗುರು'ಗಳು 'ಸ್ವಾಮಿ'ಗಳು ಎಂಬ ಪ್ರೀತಿ ಭಕ್ತಿಗಳ ಉನ್ನತ ನೆಲೆಗೆ ಏರಿದ ಕಥೆ.

ಬಡತನವು ಬೇಯಿಸುತ್ತದೆ, ಆದರೆ ಒಳ್ಳೆಯದಕ್ಕೆ. ಮತ್ತೂರರ ಮನೆಯ ದಾರುಣ ಬಡತನವು ದೀರ್ಘಕಾಲ ಅವರನ್ನು ವಿಧವಿಧವಾಗಿ ಕಾಡಿದ ಕಥೆಯು ವಿಸ್ತಾರವಾಗಿಯೇ ಈ ಕೃತಿಯಲ್ಲಿ ನಿರೂಪಣೆಗೊಂಡಿದೆ; ಓದುಗರು ಎಷ್ಟು ಬಾರಿ ಅದನ್ನು ಓದಿದರೂ ಕಣ್ಣು ಒದ್ದೆಯಾಗಿಯೇ ಆಗುತ್ತದೆ, ಸಂಕಟವಾಗಿಯೇ ತೀರುತ್ತದೆ. ಇವೆಲ್ಲದರ ಮೇಲೆ ಈ ಕೃತಿಯು ಸಾಧಿಸಿ ತೋರಿಸುವ ತತ್ತ್ವವೆಂದರೆ ಬಡತನವು ಭಾಗ್ಯವೆಂಬುದು. ಏಕೆಂದರೆ ಜೀವನಕಮಲವು ಚೆನ್ನಾಗಿ ಅರಳುವುದು ಆ ಕೆಸರಿನಲ್ಲಿಯೇ.

ಈ ಕೃತಿಯು ಸಾಧಿಸಿ ತೋರಿಸುವ ಇನ್ನೊಂದು ಹಿರಿದಾದ ತತ್ತ್ವವು ಮಾತೃಭಕ್ತಿಯದು. ಹೆತ್ತ ತಾಯಿಯನ್ನೇ ಪ್ರೀತಿಸಲು ಅರಿಯದವನು ಲೋಕಕ್ಕೆ ಏನು ಮಾಡಿಯಾನು? ಮತ್ತೂರ್‌ಜಿ ಲೋಕವನ್ನು ಪ್ರೀತಿಸಿದ್ದಾರೆ, ಲೋಕಸೇವೆ ಮಾಡಿದ್ದಾರೆ, ಲೋಕದ ಹಿತವನ್ನು ಸಾಧಿಸಿದ್ದಾರೆ. ಏಕೆಂದರೆ ಅವರು ತಾಯಿಯನ್ನು ಸಾಕ್ಷಾತ್ ದೇವತೆಯಂತೆ ನೋಡಿಕೊಂಡಿದ್ದಾರೆ. ಮಾತೃತ್ವದ ವಿಸ್ತಾರವಾದ ನಿರೂಪಣೆ ಇಲ್ಲಿದೆ. ಸೂಕ್ಷ್ಮವಾಗಿ ಸ್ಪಂದಿಸಬಲ್ಲವರಿಗೆ ಈ ಕೃತಿಯಲ್ಲಿ ಬರುವ ಬಡತನ ಮತ್ತು ಮಾತೃತ್ವದ ಬಗೆಗಿನ ಭಾಗವೇ ಒಂದು ಸುಂದರ ಕಾವ್ಯದಂತಿದೆ.

ಮತ್ತೂರ್‌ಜಿ ಒಂದು ದಿನದಲ್ಲಿ ರೂಪುಗೊಳ್ಳಲಿಲ್ಲ. ಆರೆಂಟು ವರ್ಷಗಳು ಉನ್ನತ ವ್ಯಾಸಂಗ ಮಾಡಿ ಡಾಕ್ಟರೇಟ್ ಪದವಿ ಪಡೆದಿದ್ದರೂ ಹೀಗೆ ರೂಪುಗೊಳ್ಳಲಾಗುತ್ತಿರಲಿಲ್ಲ. ಅವರು ಕಲಿಯುವ ಕಸುವೂ ಕುತೂಹಲವೂ ಛಲವೂ ಇದ್ದ ವಯಸ್ಸಿನಲ್ಲಿ ನೇರವಾಗಿ ಲೋಕಾನುಭವದ ಯಜ್ಞಕುಂಡಕ್ಕೆ ಧುಮುಕಿಬಿಟ್ಟರು. ಶ್ರೀರಾಮಕೃಷ್ಣಾಶ್ರಮದಲ್ಲಿಯೂ, ವಾರ್ಧಾ ಆಶ್ರಮದಲ್ಲಿಯೂ ಮಹಾತ್ಮಾಜಿಯವರ ಸನಿಹದಲ್ಲಿಯೂ ಅವರ ಜೀವನದೃಷ್ಟಿ ರೂಪುಗೊಂಡಿತು. ಮೊದಲು 'ಇದು ಕೀಳು ಕೆಲಸ, ಅದು ಮೇಲು ಕೆಲಸ' ಎಂಬ ತಾರತಮ್ಯ ಭಾವವು ದಗ್ಧವಾಗಿ ಹೋಯಿತು. ಲೋಕಹಿತಕ್ಕಾಗಿ ತನ್ನನ್ನು ತಾನು ಹವಿಸ್ಸಾಗಿ ಅರ್ಪಿಸುವ ಮನಃಪಾಕ ರೂಪುಗೊಂಡಿತು. ವಾರಾನ್ನ ಭಿಕ್ಷಾನ್ನಗಳ ವೇಳೆ ಅಹಂಕಾರ ನಿರಸನಗೊಂಡಿದ್ದ ವ್ಯಕ್ತಿತ್ವಕ್ಕೆ ಸಮರ್ಪಣಭಾವದ ಕಂಪೂ ಸೇರಿಕೊಂಡಿತು.

ತನ್ನ ಮಕ್ಕಳಿಗೆ ಆರಿದ ಅನ್ನ ಹಾಕಿದರೂ ಮನೆಗೆ ಊಟಕ್ಕೆಂದೇ ಬಂದ ಬಡಬಾಲಕನಿಗೆ ಬಿಸಿಯನ್ನ ಹಾಕಬಲ್ಲ ತಾಯ್ತನವನ್ನು ಅವರು ಕಂಡಿದ್ದರು, ಮಹಾಬಲೇಶ್ವರಭಟ್ಟರಂಥ ಹೃದಯಶ್ರೀಮಂತರ ಅಂತಃಕರಣದ ಆರ್ದ್ರತೆಯನ್ನು ಅನುಭವಿಸಿದ್ದರು. ಬಡತನದಿಂದ ಬಸವಳಿದವನ ಕಣ್ಣಿಗೆ ಜೀವನಸೌಂದರ್ಯ ಇರುವುದು

ಪ್ರೀತಿಯಲ್ಲಿ, ತ್ಯಾಗದಲ್ಲಿ, ಮಾನವೀಯ ತುಡಿತದಲ್ಲಿ ಎಂಬ ತತ್ತ್ವವು ರಕ್ತಕ್ಕಿಳಿಯಿತು. ಸಕಾರಾತ್ಮಕ ಚಿಂತನೆಯ ಜಾಡಿಗೆ ಸೇರಿಕೊಂಡರು. ಈ ಜೀವನಗಾಥೆ ಹರಿದಿರುವುದು ಇಂಥ ಚಕ್ರಗಳ ಮೇಲೆ.

ವಿ.ಸೀ.ಯವರ ವೈಚಾರಿಕತೆ, ಚಕ್ರವರ್ತಿಯವರ ಪಾಂಡಿತ್ಯ, ಡಿವಿಜಿಯವರ ಬಹುಮುಖ ಸಾಧನೆ, ಕೃಷ್ಣಶರ್ಮರ ಸರಳತೆ, ಶಾಮರಾಯ ಬರವಣಿಗೆ... ಹೀಗೆ ಅವರು ಹಿರಿದೆಂಬುದು ಕಂಡಕಡೆ ಕೈಮುಗಿದು ಕುಳಿತರು. ಕಂಡಕ್ಟರನ ಕೆಲಸದಿಂದ ತೊಡಗಿ ಆಕಾಶವಾಣಿಯವರೆಗೆ ನಾನಾ ರೀತಿಯ ಅನುಭವಗಳಿಗೆ ಒಡ್ಡಿಕೊಂಡರು. ಭಾಷಾಕಲಿಕೆ, ಲೇಖನ, ಅನುವಾದ, ಪ್ರವಚನ ಹೀಗೆ ಯಾವುದೇ ಸವಾಲುಗಳನ್ನೂ ಅವಕಾಶಗಳನ್ನಾಗಿ ಪರಿವರ್ತಿಸಿಕೊಂಡರು. ಭಾರತೀಯ ವಿದ್ಯಾಭವನದ ಸಾಗರಕ್ಕೆ ಮತ್ತೂರರ ಅನುಭವಸಹಸ್ರದ ತೊರೆಗಳು ಬಂದು ಸೇರಿದವು.

ಭಾರತೀಯ ವಿದ್ಯಾಭವನದ ಲಂಡನ್ ಕೇಂದ್ರದ ಹೊಣೆಹೊತ್ತು ಮತ್ತೂರ್‌ಜಿ ಬ್ರಿಟನ್‌ಗೆ ಹೊರಟದ್ದು ತಮ್ಮ 43 ನೆಯ ವಯಸ್ಸಿನಲ್ಲಿ– ಸಾಹಿತಿ, ಪತ್ರಕರ್ತ, ಪ್ರವಚನಕಾರ, ಅನುವಾದಕ, ಪಂಡಿತ, ಕಲಾವಿದ, ಅನುಭವಿ, ಉತ್ಸಾಹಿ, ಆರೋಗ್ಯವಂತ ತರುಣ– ಇಂಥ ಸಿದ್ಧಿಹೊಂದಿದ ಸ್ಥಿತಿಯಲ್ಲಿ. ಅಲ್ಲಿ ವಿದ್ಯಾಭವನದ ಅಂಕುರಾರ್ಪಣ ಮಾಡಿ ಕೆಲಸವನ್ನು ಪ್ರಾರಂಭಿಸುವ ಹೊಣೆ ಅವರ ಮೇಲಿತ್ತು. ಲಂಡನ್ನಿಗೆ ಹೋದ ಕೆಲವೇ ತಿಂಗಳಲ್ಲಿ ಅಲ್ಲಿನ ಕುಂಠಿತ ಪ್ರಗತಿಯಿಂದ ನಿರಾಶರಾಗಿ ಆತ್ಮಹತ್ಯೆಯ ಪ್ರಯತ್ನಮಾಡಿದರು ಮತ್ತೂರರು. ಆ ಪ್ರಯತ್ನವೇ ಅವರು ಲಂಡನ್ ಕೇಂದ್ರವನ್ನು ಹೆಮ್ಮರವಾಗಿ ಬೆಳೆಸಬಲ್ಲ ದಕ್ಷ ಎಂಬುದರ ಸೂಚನೆಯಾಗಿತ್ತು. ಸಾರ್ವಜನಿಕ ಸಂಸ್ಥೆಯೊಂದು ಪ್ರಗತಿಯನ್ನು ಕಾಣಲಿಲ್ಲವೆಂದು ಚಿಂತೆ ಹಚ್ಚಿಕೊಳ್ಳುವವರಾರು? ಅದನ್ನು ಸಾಧಿಸಲು ತನ್ನಿಂದಾಗದಿದ್ದರೆ ಬದುಕೇ ಬೇಡ ಎಂದು ನಾಚುವವರು ಯಾರು? ಸಾಧಕರು! 'ಮಾಡು ಇಲ್ಲವೇ ಮಡಿ' ಎಂಬ ಮಾತು ಹೊರಡಿಸುವ ಧ್ವನಿವಿಸ್ತಾರಕ್ಕೆ ಕನ್ನಡಿಯಾಗಿರುವುದು ಈ ಗ್ರಂಥದ ಇನ್ನೊಂದು ಹಿರಿಮೆ.

ಮಹಾಸಾಧನೆಯ ಇಂಥ ಆವೇಶ ತಳೆದವರು ಹೇಗೆ ಮೈಚಳಿಬಿಟ್ಟು ತ್ರಿವಿಕ್ರಮರಾಗುತ್ತಾರೆಂಬುದರ ಕಥೆಯೇ ಲಂಡನ್ನಿನ ಶ್ರೇಯೋಗಾಥೆ. ಭಾರತದಿಂದ ಬಂದ 22 ಕೆ.ಜಿ. ಭಾರದ ಪುಸ್ತಕಗಳ ಕಟ್ಟನ್ನು ತಲೆಯಮೇಲೆ ಹೊತ್ತು ಲಂಡನ್ನಿನ ಬೀದಿಯಲ್ಲಿ ನಡೆದು ಹೋಗುವ ಮತ್ತೂರರ ಚಿತ್ರ ಆ ಆವೇಶವು ಬಿಡಿಸಿದ ಕಲೆ. ಮತ್ತೂರರು ಆಡಳಿತ ನಿರ್ವಹಣೆಗೂ ಅಲ್ಲಿ ತರಬೇತಿ ಪಡೆದರು. ಊರೂರು ಸುತ್ತಿ ಭವನದ ಪರಿಚಯದ ಬೀಜಗಳನ್ನು ಪ್ರವಚನದ ಜತೆಜತೆಗೇ ಬಿತ್ತಿ ಬಂದರು. ದಲಾಲ್‌ಜಿ ಮಾತ್ರವೇ ತಮ್ಮ ಕನಸಿನ ರಥವನ್ನು ಮುನ್ನಡೆಸಿ ಸಾಕಾರಗೊಳಿಸಬಲ್ಲರೆಂದು ಅನ್ವೇಷಿಸಿದರು. ಸಂಪನ್ಮೂಲ ವ್ಯಕ್ತಿಗಳನ್ನು ಶೋಧಿಸಿದರು. ಭವನವನ್ನು ಚಟುವಟಿಕೆಯ ಕೇಂದ್ರವಾಗಿಸಿದರು. ದಲಾಲ್‌ಜಿ, ಪ್ರೊ॥ ಬರ್ಕ್, ಜಿ.ಡಿ. ಬಿರ್ಲಾ, ಲಾರ್ಡ್ ಥಾಮ್ಸನ್ ಆಫ್ ಫ್ಲೀಟ್, ಲಾರ್ಡ್ ಮೌಂಟ್ ಬ್ಯಾಟನ್, ರಾಜಕುಮಾರ ಚಾರ್ಲ್ಸ್, ಇಂಗ್ಲೆಂಡಿನ ಮಹಾರಾಣಿ, ಇಂದಿರಾಗಾಂಧಿ... ಎಲ್ಲ ಮಹಾಸಂಪರ್ಕಗಳ ಗಗನವನ್ನು ಮುಟ್ಟಿದರು. ಬಿಬಿಸಿಯಲ್ಲಿ ಹಿಂದೂಧರ್ಮದ ಬಗೆಗೆ ನೂರಕ್ಕೂ ಹೆಚ್ಚು ಕಂತುಗಳ ಪ್ರವಚನಗಳನ್ನು ನೀಡಲು ಮೊದಲ ಬಾರಿಗೆ ಆಹ್ವಾನಿತರಾಗುವ ಗೌರವಕ್ಕೆ ಪಾತ್ರರಾದರು. ಬಿಬಿಸಿ ಆಯೋಜಿಸಿದ ಸರ್ವಧರ್ಮ ಸಮ್ಮೇಳನದಲ್ಲಿ 'ಸಂಗಚ್ಛಧ್ವಂ ಸಂವದಧ್ವಮ್' ಎಂದು ಮೊಳಗಿ ಸರ್ವಧರ್ಮೀಯರ ಗೌರವಕ್ಕೆ ಪಾತ್ರರಾದರು, ಮಹಾರಾಣಿಯವರ ಆದರಕ್ಕೆ ಪಾತ್ರರಾದರು, ವಿವೇಕಾನಂದರ ಚಿಕಾಗೋ ಭಾಷಣದ ಸಂದರ್ಭವನ್ನು ನೆನಪಿಗೆ ತಂದರು. ಜನರಲ್ಲಿ ಧಾರ್ಮಿಕತೆಯನ್ನು ಜಾಗೃತಗೊಳಿಸಿ ಸಂಸ್ಕಾರಗಳನ್ನು ನಡೆಸಿಕೊಟ್ಟರು, ಅಲ್ಲಿನ ಶಿಕ್ಷಣ ಸಂಸ್ಥೆಗಳಲ್ಲೂ ಉಪನ್ಯಾಸ ನೀಡಿ ಮನಗೆದ್ದರು. ಭಾರತೀಯ ವೈದಿಕ ಮಂತ್ರಗಳ ಅರ್ಥವಂತಿಕೆಯ ಕಡೆಗೆ ಅನ್ಯಧರ್ಮೀಯರೂ ಮುಕ್ತವಾಗಿ ಕಣ್ಣು ತೆರೆಯುವಂತೆ ಮಾಡಿದರು. ವಿದೇಶದ ನೆಲದ ಎಲ್ಲ ಒಳ್ಳೆಯ ಲಕ್ಷಣಗಳಿಗೂ ಮನಸ್ಸನ್ನು ಸದಾ

ತೆರೆದಿಟ್ಟರು. ಸದಾ ಆತ್ಮಸಾಕ್ಷಿಯನ್ನೇ ಮಾರ್ಗದರ್ಶಕನನ್ನಾಗಿ ಇಟ್ಟುಕೊಂಡು ಭಾರತೀಯ ವಿದ್ಯಾಭವನದ ಲಂಡನ್ ಕೇಂದ್ರವನ್ನು ಬೃಹತ್ತಾಗಿ ಬೆಳೆಸಿದರು. ಲಂಡನ್ನಿನಲ್ಲಿರುವ ಸುಮಾರು ಕಾಲು ಶತಮಾನದಷ್ಟು ಕಾಲವೂ ವಿದ್ಯಾಭವನವೊಂದನ್ನು ಬಿಟ್ಟು ಅನ್ಯಕ್ಕೆ ಅಂಧನನ್ನಾಗಿಯೂ ಹೆಳವನನ್ನಾಗಿಯೂ ಮೂಕನನ್ನಾಗಿಯೂ ಮಾಡಿಕೊಂಡು ಇದನ್ನು ಸಾಧಿಸಿದರು. ಅದನ್ನೇ ತಪಸ್ಸು ಎನ್ನುವುದು! ಈ ಗ್ರಂಥದಲ್ಲಿರುವುದು ಆ ತಪಸ್ಸಿನ ಕಥೆ.

ತಮ್ಮ 66ನೆಯ ವಯಸ್ಸಿನಲ್ಲಿ ಭಾರತಕ್ಕೆ ಮರಳಿದ ಮತ್ತೂರರು ಭಾರತೀಯ ವಿದ್ಯಾಭವನದ ಸೇವೆಗೆ ಹೊಸದಾಗಿ ಸೇರಿಕೊಂಡ ಯುವಕನಂತೆ ಹೊಸ ಹುಮ್ಮಸ್ಸಿನಿಂದ ತೊಡಗಿಕೊಂಡರು. ತಮ್ಮ ಎಂಬತ್ತರ ಹರಯವನ್ನು ಹದಿನೆಂಟರ ಹರಯವೆಂಬಂತೆ ಮಾಡಿಕೊಂಡಿರುವ ಮತ್ತೂರರು ಅಜೇಯರಾಗಿ ಮುನ್ನುಗ್ಗುತ್ತಿರುವ ಕಥೆಯು ಈ ಕೃತಿಯ ಮೂರನೆಯ ಭಾಗದಲ್ಲಿದೆ, ಹೊಸ ಆತ್ಮಕಥೆಗೆ ವಸ್ತುವಾಗಿ ಮುಂದುವರಿಯುತ್ತಿದೆ.

'ಮತ್ತೂರಿನಿಂದ ಬ್ರಿಟನ್‌ಗೆ' ಎಂಬುದು ಸಾಧಕರ ಕೈಪಿಡಿ, ಮಹಾಪುರುಷರ ಜೀವನಪಥದ ಗಹನಕ್ಕೆ ಬೆಳಕಿಂಡಿ, ಸಾಧನೆಯ ಆಸೆ ಹೊತ್ತವರಿಗೆ ಸ್ಫೂರ್ತಿ, ಸೋತವರಿಗೆ ಆತ್ಮಸ್ಥೈರ್ಯ, ಪ್ರಪಂಚವು ತನ್ನ ತ್ಯಾಗವನ್ನು ಕಡೆಗಣಿಸಿತೆನ್ನುವವರಿಗೆ ತತ್ತ್ವಬೋಧೆ, ಕತ್ತಲಾಗಿಬಿಟ್ಟಿದೆಯೆಂದು ಅಳುವವರಿಗೆ ಬೆಳಕಾಗುವುದೆಂಬ ಆಶಾಕಿರಣ. ಮಾತಿನಲ್ಲಿಲ್ಲ ಉತ್ಪ್ರೇಕ್ಷೆ, ಮಹಾಪುರುಷರ ಸಾಧನೆಯಲ್ಲೇ ಇದೆ ಅಂಥ ಅತಿಶಯತೆ.

ಮತ್ತೂರರು ಕುಮಾರವ್ಯಾಸನ ಪರಮಭಕ್ತರು, ಮೇಲಾಗಿ ಅವನ ಕಾವ್ಯಕ್ಕೆ ವಿಸ್ತಾರವಾಗಿ ವ್ಯಾಖ್ಯಾನ ಮಾಡಿ ಜೀವನ ಕಳೆದವರು. ಹಾಗಾಗಿ ಮತ್ತೂರರ ಕಥನದ ಸಾವಧಾನಕ್ಕೆ, ವಿಸ್ತಾರಕ್ಕೆ, ರಸಪೂರ್ಣ ಹಿಂಜಿಕೆಗೆ ಕುಮಾರವ್ಯಾಸನೇ ಪ್ರೇರಣೆ ಮತ್ತು ಆದರ್ಶ. ಮತ್ತೂರರು ರಾಮಾಯಣ, ಮಹಾಭಾರತ, ಪುರಾಣ ಮತ್ತು ವೇದವಾಙ್ಮಯವನ್ನು ಅರೆದು ಕುಡಿದವರು. ಹಾಗಾಗಿ ಅವರ ಕಥನಕ್ಕೊಂದು ಪೌರಾಣಿಕತೆಯ ಸ್ಪರ್ಶವಿದೆ. ಮತ್ತೂರ್‌ಜಿ ಸಾಹಿತಿ; ರಸಸ್ಥಾನಗಳನ್ನು ಗುರುತಿಸಿ, ಅವಕ್ಕೆ ಜೀವತುಂಬಿದ್ದಾರೆ. ಮತ್ತೂರ್‌ಜಿ ಪತ್ರಕರ್ತ, ಹಾಗಾಗಿ ವಿವಿಧ ರೀತಿಯ ಓದುಗರ ನಾಡಿಯನ್ನು ಅವರು ಬಲ್ಲರು. ಇದನ್ನು ನಿರೂಪಿಸುವಾಗ ಅವರ ಮುಂದಿರುವುದು ವಿವಿಧ ಸ್ತರದ ಸಹಸ್ರ ಸಂಖ್ಯೆಯ ಶ್ರೋತೃಗಣ.

ಅವರ ಪ್ರವಚನಗಳನ್ನು ಕೇಳಿದವರಿಗಂತೂ ಮತ್ತೂರರ ಮಾತು, ಮಂದಸ್ಮಿತ, ಮಮತೆ, ಕಳಕಳಿಯೇ ಕಿವಿಗೆ ಕೇಳುತ್ತಿರುತ್ತದೆ. ಪ್ರವಚನಗಳಲ್ಲಿ ಅವರಂತೆ ರಸಸನ್ನಿವೇಶಗಳನ್ನು ಅಭಿವ್ಯಕ್ತಿಸುವವರು ಬಲುಬಲು ಅಪರೂಪ. ಅದು ಬರೆವಣಿಗೆಯಲ್ಲೂ ಅಷ್ಟೇ ಪರಿಣಾಮಕಾರಿಯಾಗಿ ಉಳಿದುಬಂದಿದೆ.

ಮಹಾಕೃತಿಯೊಂದರ ಪಾತ್ರಸೃಷ್ಟಿ ಇಲ್ಲಿದೆ. ಹೋಟೇಲಿನ ಗಲ್ಲಾ ಪೆಟ್ಟಿಗೆಯಮೇಲೆ ಕೂರುವ ಮಹಾಬಲೇಶ್ವರ ಭಟ್ಟ, ವಾರಾನ್ನವಿಕ್ಕುವ ತಾಯಿ, ಸತೀಶ್ ಧಾವರ್, ಪ್ರೇಮಾತೋತಾದ್ರಿ, ಕೌಶಲ್ಯ ಹಾರ್ವೆಲ್– ಇಲ್ಲಿರುವ ಇಂಥ ಆನುಷಂಗಿಕ ಸಣ್ಣ ಪಾತ್ರಗಳೂ ಅಮರವ್ಯಕ್ತಿತ್ವಗಳಾಗಿಬಿಟ್ಟಿವೆ. ಮತ್ತೂರ್‌ಜಿ ಈಗಲೂ ಈ ಎಂಬತ್ತರ ಇಳಿವಯಸ್ಸಿನಲ್ಲೂ(?) ದೊಡ್ಡದಾದ ಹಲವು ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಗಾಂಧಿ ಉಪನಿಷತ್ ಎಂಬ ಹೊಸ ಉಪನಿಷತ್ತಿನ ದ್ರಷ್ಟಾರರೇ ಅವರಾಗಿಬಿಟ್ಟಿದ್ದಾರೆ. ಕಾಯಕದ ಮೂಲಕವೇ ಅಮರರಾಗುವ ಹಿರಿಯ ಅನುಷ್ಠಾನ ಮಾಡುತ್ತಿದ್ದಾರೆ. ಹಾಗಾಗಿಯೇ 'ಮತ್ತೂರಿನಿಂದ ಬ್ರಿಟನ್‌ಗೆ' ಎಂಬುದು ಒಂದು ವಿಶಿಷ್ಟ ಆತ್ಮಕಥೆಯಾಗಿದೆ.

ಹಾಸನಜಿಲ್ಲೆಯ ಮುದಲಾಪುರದ ನಿತುಂದಿಲರ ವಂಶಚರಿತ್ರೆ ಉನ್ನತವಾದುದು. ಹದಿನೈದು ತಲೆಮಾರುಗಳ ಹಿಂದೆ ವಿಜಯನಗರದ ಅರಸರಿಂದ ಸನ್ಮಾನಿತರಾದವರ ಚರಿತ್ರೆ ಅದರಲ್ಲಿದೆ. ಮೂವರು ಸೋದರರು ನಾಲ್ಕು ಜೋಡಿಗ್ರಾಮಗಳನ್ನು ಪ್ರಶಸ್ತಿರೂಪದಲ್ಲಿ ಪಡೆದ ಕಥೆ ಅದು. ಜ್ಯೇಷ್ಠನಿಗೆ ಎರಡುಬಾರಿ ಆ ಮರ್ಯಾದೆ ಸಂದಿತ್ತು. ಅವರ ತೇಜಸ್ಸು ಮತ್ತು ವರ್ಚಸ್ಸಿನ ಪುನರವತಾರವಾಗಿ ಅವರ ವಂಶದಲ್ಲಿ ಮತ್ತೂರ್‌ಜಿ ಈಗ ಕಾಣಿಸಿಕೊಂಡಿದ್ದಾರೆ.

ಸುಮನಾ ವಿಶ್ವನಾಥ್ ಅವರು ಮತ್ತೂರರ ಆತ್ಮಕಥೆಯನ್ನು ನಿರೂಪಿಸ ಹೊರಟದ್ದು ಈ ಕಾರಣಗಳಿಂದಾಗಿಯೇ ಒಂದು ಕಠಿಣಸವಾಲಾಗಿದೆ. 'ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ಚ...' ಎಂದು ಹೇಳಿ ಕೊನೆಯಲ್ಲಿ ದೇವರ ಮೇಲೆ ಭಾರ ಹಾಕಬಹುದಾದ ಕೆಲಸವಲ್ಲ ಇದು. ಹಿರಿಯ ಕಥನಕ್ಕೆ ಆಗುವ ಕಿಂಚಿತ್ ಊನವೂ ದೊಡ್ಡದೇ ಅಪರಾಧವಾಗಿಬಿಡುತ್ತದೆ. ಸುಮನಾ ವಿಶ್ವನಾಥ್ ಈ ಕೆಲಸವನ್ನು ಬಹು ಯಶಸ್ವಿಯಾಗಿ ಮಾಡಿರುವುದರಿಂದಲೇ ಈ ಕೃತಿಯು ಆಸ್ವಾದ್ಯವಾಗಿದೆ.

ಸುಮನಾ ಅವರು ಮತ್ತೂರರ ಹಿರಿಮೆಯನ್ನು ಗುರುತಿಸಿದರು! ಮತ್ತೂರರ ಹಿರಿಮೆಯೇನೋ ಎಲ್ಲರಿಗೂ ಎದ್ದು ಕಾಣುವಂಥದೇ. ಆದರೆ ಅಂಥವನ್ನು ಗುರುತಿಸುವುದಕ್ಕೆ ಬೇರೆಯೇ ಕಣ್ಣುಬೇಕು. ಹಾಗೆ ಗುರುತಿಸಿದ್ದನ್ನು ಮೆಚ್ಚಿ, ಗ್ರಂಥ ರೂಪಕ್ಕಿಳಿಸಿ, ಯಶಸ್ಸು ಹೊಂದುವುದಕ್ಕೆ ದೊಡ್ಡದಾದ ಕಲ್ಪನಾ ಶಕ್ತಿ ಬೇಕು, ಆತ್ಮಸ್ಥೈರ್ಯ ಬೇಕು. ಸುಮನಾ ತಮ್ಮ ಪ್ರಥಮ ಪ್ರಯತ್ನದಲ್ಲಿಯೇ – ಇಂಥ ಹಿರಿದಾದುದೂ ಮೌಲಿಕವಾದುದೂ ಆದ ಕೆಲಸವನ್ನು ಮಾಡಿ ಗೆದ್ದಿದ್ದಾರೆ.

ಕನ್ನಡಿಗರು ಮೆಚ್ಚುವ ಮೂವರು ಹಿರಿಯರ ಆತ್ಮಕಥೆಗಳನ್ನು ಸುಮನಾ ನಿರೂಪಿಸಿದ್ದಾರೆ. ಆ ಮೂವರೂ ತಮ್ಮ ತಮ್ಮ ಕ್ಷೇತ್ರದ ರತ್ನಗಳು, ಸುಮನಾ ಅವರು ಅವರ ಬದುಕನ್ನು ನಿರೂಪಿಸಿರುವ ಈ ಕೃತಿಗಳೂ ಕನ್ನಡದ ಅಮೂಲ್ಯ ಕೃತಿಗಳಾಗಿವೆ. ಮತ್ತೂರ್‌ಜಿ, ಶ್ರೀ ಹೊಸಹಳ್ಳಿ ಕೇಶವಮೂರ್ತಿ ಮತ್ತು ವೇ.ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳ ಈ ಮೂರು ಆತ್ಮಕಥಾ ನಿರೂಪಣೆಗಳೇ ಸಂಕೇತಿ ಅಧ್ಯಯನ ಮಾಲೆಯ ಇಡೀ ಒಂದು ಬೃಹತ್ ಸಂಪುಟವನ್ನು ತುಂಬುವಷ್ಟಿವೆ. ಅದಕ್ಕಾಗಿ ಸಂಕೇತಿ ಸಮುದಾಯವೂ, ಜನಾಂಗ ಅಧ್ಯಯನದಲ್ಲಿ ಆಸಕ್ತರಾದವರೂ ಅವರಿಗೆ ವಿಶೇಷವಾಗಿ ಕೃತಜ್ಞರಾಗಿದ್ದಾರೆ.

ಮತ್ತೊಬ್ಬರು ಹೇಳುವ ತಮ್ಮ ಆತ್ಮಕಥೆಯನ್ನು ಧ್ವನಿಮುದ್ರಿಸಿಕೊಂಡು ಕೇವಲ ಬರಹಕ್ಕಿಳಿಸುವುದೂ ಕಷ್ಟದ ಕೆಲಸವೇ. ನಿರೂಪಿಸುವುದು ಮತ್ತೂ ಕಷ್ಟ. ವಕ್ತೃವಿನ ಭಾಷಾ ವಿಶೇಷ, ಶೈಲಿ, ಭಾವನೆಗಳನ್ನೆಲ್ಲ ಬರಹದಲ್ಲಿ ಜೀವಂತವಾಗಿಸಬೇಕು. ಪುನರಾವರ್ತನೆಗಳನ್ನೂ, ಹೊಂದದ ಭಾಗಗಳನ್ನೂ ಗುರುತಿಸಿ ಕೈಬಿಡಬೇಕು. ಅನುಕ್ರಮವಲ್ಲದ ಪ್ರಸಂಗಗಳನ್ನೂ ವಿವರಗಳನ್ನೂ ಕ್ರಮವರಿತು ಜೋಡಿಸಬೇಕು. ಹೀಗೆ ಜೋಡಿಸುವಾಗಲೂ ಸಾವಯವ ಸಂಬಂಧವನ್ನೂ ಅದರ ಕಲಾಸ್ವರೂಪವನ್ನೂ ಗಮನಿಸಬೇಕು. ಕಳಚಿದ ಕೊಂಡಿಗಳಿಗಾಗಿ ಮತ್ತೆ ಯತ್ನಿಸಬೇಕು. ಪದ, ವಾಕ್ಯ, ಸನ್ನಿವೇಶ, ಪ್ರಸಂಗ, ಅನುಕ್ರಮ, ಒಟ್ಟಂದ ಇವುಗಳ ಔಚಿತ್ಯವನ್ನು ಕುರಿತು ಮತ್ತೆ ಮತ್ತೆ ಧ್ಯಾನಿಸಬೇಕು, ಪರಿಶೀಲಿಸಬೇಕು, ಪರಿಷ್ಕರಿಸಬೇಕು. ಒಟ್ಟಿನಲ್ಲಿ ಇದೂ ಒಂದು ಸೃಜನಶೀಲಕಾರ್ಯ. ಸುಮನಾ ಈ ಕ್ಷೇತ್ರದಲ್ಲಿ ಪರಿಣಿತರೇ ಆಗಿದ್ದಾರೆ.

ಆತ್ಮಕಥೆಯು ಚರಿತ್ರೆಯೇ ಆದ್ದರಿಂದ ಮತ್ತು ಕಲ್ಪನೆಗಿಂತ ಬೇರೆಯದಾದ ದೊಡ್ಡ ಜವಾಬ್ದಾರಿ ಅದಕ್ಕಿರುವುದರಿಂದ ಅದರ ನಿರ್ಮಿತಿಗೆ ವಿಶೇಷವಾಗಿ ಬೇಕಾದುದು ಯುಕ್ತಾಯುಕ್ತ ವಿವೇಚನೆ. ಅದನ್ನು ಇಲ್ಲಿ ವಕ್ತೃ ಮತ್ತು ನಿರೂಪಕರಿಬ್ಬರೂ ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ಈ ಸಂಪುಟದಲ್ಲಿ ಸೇರಿರುವ ಆತ್ಮಕಥೆಗಳ ಬಗೆಗಿನ ಕೆಲ ಹೊರ ವಿವರಗಳು ಇಲ್ಲಿವೆ :

1.**ಬಿ.ಸುಬ್ಬರಾವ್** (1894–1975) Musings of a Musician(1970) ಕನ್ನಡ : 'ಸಂಗೀತಗಾರನ ಮೆಲುಕುಗಳು' ಅನು: ಡಾ॥ ಮೀರಾ ಮೂರ್ತಿ	ಬಸವಾಪಟ್ಟಣ (ಹಾಸನಜಿಲ್ಲೆ)	ಮಧ್ಯದೇಶ (ಕೌಶಿಕ ಸಂಕೇತಿ)	ಕೃಷಿ ಇಲಾಖೆಯ ಉಪ ನಿರ್ದೇಶಕರು; ಸಂಗೀತಜ್ಞ, ಶಿಕ್ಷಕ, ಲೇಖಕ
2.**ವಿದ್ವಾನ್ ನರಸಿಂಹ ಮೂರ್ತಿಶಾಸ್ತ್ರಿ** (ಜ. ಏಪ್ರಿಲ್ 1912)[a] **'ಪಂಡಿತರೊಡನೆ'** ನಿರೂಪಣೆ: ಬೀ.ಚಿ. ಜಗನ್ನಾಥ ಜೋಯಿಸ್ ರಚನೆ: 2003	ಲಿಂಗದಹಳ್ಳಿ (ಚಿಕ್ಕಮಗಳೂರು ಜಿಲ್ಲೆ)	ಮಲೆನಾಡು ಸಂಕೇತಿ (ಕೌಶಿಕ ಸಂಕೇತಿ)	ವೇದ ಶಾಸ್ತ್ರ ಪಂಡಿತ, ಪುರೋಹಿತ, ಲೇಖಕ, ಶಿಕ್ಷಕ, ಕೃಷಿಕ
೩.**ಪ್ರೊ॥ಆರ್. ಎನ್.ದೊರೆಸ್ವಾಮಿ** (೧೨.೧೨.೧೯೧೬– ೧೭.೦೮.೨೦೦೨), **'ನನ್ನ ಬದುಕು'** ಪುನರ್‌ರಚನೆ: ೨೦೦೦	ರುದ್ರಪಟ್ಟಣ, (ಹಾಸನ ಜಿಲ್ಲೆ)	ಬೆಟ್ಟದಪುರ ಸಂಕೇತಿ	ವೈಣಿಕ, ಸಂಗೀತ ಶಾಸ್ತ್ರಜ್ಞ, ಕೃಷಿಕ, ಶಿಕ್ಷಕ, ಲೇಖಕ
೪.**ಮೇಜರ್ ಎಚ್.**ಸಿ. **ವೇಣುಗೋಪಾಲ್** (೨೩.೦೯.೧೯೨೨– ೦೩.೦೯.೨೦೦೩) ಮೂಲ: A soldier Remembers: 1998 ಕನ್ನಡ: 'ಸೈನಿಕನ ನೆನಪುಗಳು' ಅನು: ಆರ್.ಎಲ್. ಅನಂತರಾಮಯ್ಯ	ಹಂದನಹಾಳು (ಹಾಸನಜಿಲ್ಲೆ)	ಹಾಸನಸೀಮೆ (ಕೌಶಿಕ ಸಂಕೇತಿ)	ಸ್ವಾತಂತ್ರ್ಯ ಹೋರಾಟಗಾರ, ಯೋಧ
೫. **ಡಾ॥ ಮತ್ತೂರು ಕೃಷ್ಣ ಮೂರ್ತಿ** (ಜ. ೦೮.೦೮.೧೯೨೮)[b] **'ಮತ್ತೂರಿನಿಂದ ಬ್ರಿಟನ್‌ಗೆ'** ನಿರೂಪಣೆ : ಶ್ರೀಮತಿ ಸುಮನಾ ವಿಶ್ವನಾಥ್ (ರಚನೆ: ೨೦೦೨)	ಮತ್ತೂರು (ಶಿವಮೊಗ್ಗ ಜಿಲ್ಲೆ)	ಮತ್ತೂರುಸೀಮೆ (ಕೌಶಿಕ ಸಂಕೇತಿ)	ಭಾರತೀಯ ವಿಧ್ಯಾಭವನದ ಲಂಡನ್ ಕೇಂದ್ರದ ರೂವಾರಿ, ಪತ್ರಕರ್ತ, ಲೇಖಕ, ಅನುವಾದಕ, ಪ್ರವಚನಕಾರ, ವ್ಯಾಖ್ಯಾನಕಾರ, ಆಡಳಿತಗಾರ, ಸಂಘಟಕ.

ನಿಧನ : (a) 10-10-2010 (b) 06-10-2011

ಇದೊಂದು ತೀರಾ ಪುಟ್ಟ ಸಮುದಾಯವಾಗಿದ್ದು ಈ ಎಲ್ಲ ಆತ್ಮಕಥಾ ವೃತ್ತಾಂತಗಳಿಗೂ ಸಮುದಾಯದ ಸಮಸ್ತರೂ ಸಾಕ್ಷಿಗಳಾಗಿರುವುದರಿಂದಲೂ, ಆತ್ಮವಿಮರ್ಶೆಯಲ್ಲಿ ಈ ಸಮುದಾಯವು ಸದಾ ಮುಂದಿರುವುದರಿಂದಲೂ ಆತ್ಮಕಥೆಗೆ ಬೇಕಾದ ಪ್ರಾಮಾಣಿಕತೆಯು ಸಹಜವಾಗಿಯೇ ಇಲ್ಲಿ ಸಿದ್ಧಿಸಿದೆ. ಈ ಆತ್ಮಕಥಾ ಸಂಕಲನವು ಸಂಕೇತಿ ಸಮುದಾಯದ ಲಕ್ಷಣೀಕರಣಕ್ಕೂ, ಈ ಸಮುದಾಯವನ್ನು ಕುರಿತ ಹೆಚ್ಚಿನ ಸಂಶೋಧನೆಗೂ, ಸತ್ಪ್ರೇರಣೆಗೂ ಆಕರವಾಗುವುದಾದರೆ ನಮ್ಮ ಶ್ರಮವು ಸಾರ್ಥಕವಾದಂತೆ.

ಈ ಸಂಪಟವು ಈ ಸ್ವರೂಪದಲ್ಲಿ ಹೊರಬರಲು ಸಹಕರಿಸಿರುವ ಸಮಸ್ತ ಸಜ್ಜನ ಬಂಧುಗಳಿಗೂ, ಈ ಸಂಪುಟವನ್ನು ಪ್ರೀತಿಯಿಂದ ಸಂಪಾದಿಸಿಕೊಟ್ಟಿರುವ ಶ್ರೀಮತಿ ಸುಮನಾ ವಿಶ್ವನಾಥ್ ಅವರಿಗೂ ಸಮುದಾಯ ಅಧ್ಯಯನ ಕೇಂದ್ರದ ಪರವಾಗಿ ಕೃತಜ್ಞತೆಗಳನ್ನರ್ಪಿಸುತ್ತೇನೆ.

06.06.2008 **ಡಾ॥ ಬಿ.ಎಸ್. ಪ್ರಣತಾರ್ತಿಹರನ್**
ಮೈಸೂರು ಪ್ರಧಾನ ಸಂಪಾದಕ

ಮೂರನೇ ಓದುಗನ ಮೂರು ಮಾತು

ಯಾವುದೇ ಗ್ರಂಥರಚನೆ ಆದರೂ ಅದರ ಮೊದಲ ಓದುಗ ಲೇಖಕನೇ (ಅಪವಾದವಾಗಿ ಕೆಲವರು ಲೇಖಕರು ತಾವೇ ಬರೆಯುತ್ತಾರೆ ಇಲ್ಲವೇ ಹೇಳಿ ಬರೆಯಿಸುತ್ತಾರೆ. ಆದರೆ ಓದುವುದಿಲ್ಲ. ಇದಕ್ಕೆ ಪ್ರತಿಯಾಗಿ ಬರೆದ ಮೇಲೆ ಹತ್ತಾರು ಬಾರಿ ಓದಿ ಓದಿ ತಿದ್ದುವವರೂ ಇದ್ದಾರೆ.) ಸಾಮಾನ್ಯವಾಗಿ ಬಹುಮಂದಿ ಲೇಖಕರು ಬರೆದ ಮೇಲೆ ಶುದ್ಧಪ್ರತಿ ಮಾಡಲೆಂದೋ ತಪ್ಪುಗಳನ್ನು ತಿದ್ದಲೆಂದೋ ಅಥವಾ ಬಿಟ್ಟು ಹೋದ ಸಂಗತಿ ಸೇರಿಸಲೆಂದೋ ಇನ್ನೊಮ್ಮೆ ಓದುತ್ತಾರೆ. ಅನಂತರ ಎರಡನೇ ಓದುಗನೆಂದರೆ ಕರಡಚ್ಚು ತಿದ್ದುಗಾರ. ಇವನು ಒಂದೇ ಬಾರಿ ಓದುವುದಿಲ್ಲ. ಹಲವಾರು ಬಾರಿ ಓದುತ್ತಾನೆ. ಅಚ್ಚಿನ ದೋಷಗಳನ್ನು ತಿದ್ದುತ್ತಾನೆ. ಅಷ್ಟೇ ಅಲ್ಲ, ಲೇಖಕನ ದೋಷಗಳನ್ನೂ ತಿದ್ದುತ್ತಾನೆ. ಎಷ್ಟೋ ವೇಳೆ ಪ್ರತಿಭಾವಂತ ಕರಡು ತಿದ್ದುಗಾರ ಲೇಖಕನ ಕೃತಿಯನ್ನು ಸರ್ವಾಂಗಸುಂದರವಾಗಿ ಮಾಡುತ್ತಾನೆ. ಭಾಷೆ, ಶೈಲಿ, ವ್ಯಾಕರಣ, ವಿಚಾರ ಪ್ರತಿಪಾದನಾ ರೀತಿ, ಸಂಗತಿಗಳು, ಆಕರ, ಆಧಾರಗಳ ಪರಿಶೀಲನೆ ಮೊದಲಾದ ಕಾರ್ಯಗಳಿಂದ ಮೂಲಕೃತಿ ವಿಗ್ರಹವನ್ನು ಅಂದಚೆಂದಗಳಿಂದ ಅಲಂಕರಿಸುತ್ತಾನೆ. ಇನ್ನು ಮೂರನೇ ಓದುಗನೆಂದರೆ ಮುನ್ನುಡಿಕಾರ. ಕೃತಿಗೆ ಹರಕೆಯ ತಿಲಕವಿಡುವವನು. ಮೂರನೇ ಓದುಗನ ಕೆಲಸ ಕೃತಿ ರಚನೆಯ ಕೆಲಸವೂ ಅಲ್ಲ, ಪರಿಷ್ಕರಣಕಾರ್ಯವೂ ಅಲ್ಲ. ಓದಿ ತನಗಾದ ಆನಂದ ಅನುಭವ ಅನಿಸಿಕೆಗಳನ್ನು ತಿಳಿಸುವುದು, ಅಬ್ಬಬ್ಬಾ ಎಂದರೆ ಸ್ವಲ್ಪ ಮಟ್ಟಿಗೆ ಸೂಚ್ಯವಾಗಿ ಸಲಹಾರೂಪವಾಗಿ ವಿಮರ್ಶಿಸುವುದು. ಈ ಕಾರ್ಯಕ್ಕೆ ಕೃತಿಗಿಂತ ಕೃತಿಕಾರನಿಗಿಂತ ಮುನ್ನುಡಿಕಾರ ಹಿರಿಯನೂ ತಜ್ಞನೂ ಆಗಿರಬೇಕು. ಆಶೀರ್ವದಿಸುವವರೂ ತಿಲಕವಿಡುವವರೂ ಹಿರಿಯರು ತಾನೆ? ಆದರೆ ನಾನು ಮೂರನೇ ಓದುಗನಾದರೂ, ಮುನ್ನುಡಿಕಾರ ಅಲ್ಲ. ಏಕೆಂದರೆ ಈ ಗ್ರಂಥದ ವ್ಯಕ್ತಿಗಳೆಲ್ಲ ನನಗೆ ಹಿರಿಯರು, ಪೂಜ್ಯರು, ವಿದ್ವಾಂಸರು, ಕಲಾವಿದರು, ಸಾಹಿತಿಗಳು, ಹಳೆಯ ತಲೆಮಾರಿನವರು, ನಾನು ಈ ಯಾವ ಗುಂಪಿಗೂ ಸೇರಿದವನಲ್ಲ. ಕೇವಲ ಒಬ್ಬ ಕನ್ನಡ ಓದುಗ. ನನ್ನ ಆತ್ಮೀಯ ಮಿತ್ರರಾದ ಹರನ್ ಇದಕ್ಕೆ ಎರಡು ಮಾತು ಬರೆದು ಕೊಡಿ ಅಂದಾಗ ಇದರ ಬಗ್ಗೆ ಬರೆಯಬೇಕಾದವನು ನಾನಲ್ಲ ಎಂದು ಎಷ್ಟು ಹೇಳಿದರೂ 'ಪರವಾಗಿಲ್ಲ, ಒಬ್ಬ ಪ್ರಾಮಾಣಿಕ ಓದುಗನ, ಒಂದಕ್ಷರವನ್ನೂ ಬಿಡದೆ ಓದುವ, ತನಗನ್ನಿಸಿದ್ದನ್ನು ಯಾವ ಮುಲಾಜೂ ಇಲ್ಲದೆ ಹೇಳುವ ವ್ಯಕ್ತಿಯ ಮಾತು ಬೇಕಾಗಿದೆ' ಎಂದು ಹೇಳಿ ಬಲವಂತದ ಪ್ರೀತಿಯಿಂದ ಅಚ್ಚಿನ ಕರಡುಪ್ರತಿ ಕೊಟ್ಟು ಹೋದರು. ನಾನು ಬರಹಗಾರ ಅಲ್ಲ, ಮಾತುಗಾರ. ಮಾತಾಡುವವನಿಗೆ ಬಿಡುವೆಲ್ಲಿ ಇರುತ್ತದೆ? ಹಾಗಾಗಿ ತಡವಾಗಿ ಮೂರನೇ ಓದುಗನಾಗಿ ಮೂರು ಮಾತು ಬರೆಯುತ್ತಿದ್ದೇನೆ ನನ್ನ ಆತ್ಮೀಯಮಿತ್ರನ ಪ್ರೀತಿಯ ಕಾಟ ತಡೆಯಲಾರದೆ. ಸಜ್ಜನರು ಕ್ಷಮಿಸಬೇಕು.

ಸಂಗೀತಗಾರನ ಮೆಲುಕುಗಳು : ಪ್ರತಿಭಾವಂತ ಸಂಗೀತಗಾರರಾದ ಬಿ.ಸುಬ್ಬರಾವ್ ಇಂಗ್ಲಿಷಿನಲ್ಲಿ ಬರೆದ ಡಾ॥ ಮೀರಾಮೂರ್ತಿ ಕನ್ನಡಕ್ಕೆ ಅನುವಾದಿಸಿರುವ 'ಸಂಗೀತಗಾರನ ಮೆಲುಕುಗಳು' ರಸಪ್ರಸಂಗಗಳ ಆತ್ಮಕಥೆಯನ್ನು ಓದಿದಾಗ ಥಟ್ಟನೆ ನೆನಪಾದುದು ಡಿವಿಜಿ ಅವರ ಈ ಮಾತುಗಳು : "ಜೀವನಚರಿತ್ರೆಯ (ಆತ್ಮಕಥೆಯ) ಮುಖ್ಯಾಂಶಗಳನ್ನು ಎರಡು ಜಾತಿಯಾಗಿ ವಿಂಗಡಿಸಬಹುದು. 1) ಬಾಹ್ಯ ಸಂಗತಿಗಳು 2) ಅಂತಃಸ್ವಭಾವ. ಬಾಹ್ಯ ಸಂಗತಿಗಳು : ಎಂದರೆ ಚರಿತ್ರನಾಯಕ ಹುಟ್ಟಿದ ತಾರೀಖು, ಸ್ಥಳ, ಕುಲ, ವಂಶಾನುಪೂರ್ವಿ, ವಿದ್ಯಾಭ್ಯಾಸದ ಸ್ಥಳ, ಅವನು ತೇರ್ಗಡೆ ಹೊಂದಿದ ಪರೀಕ್ಷೆಗಳು, ಅವನು ಸಂಪಾದಿಸಿದ ಹುದ್ದೆಗಳು, ಅವನ ವರಮಾನ, ಅವನ ಪ್ರಯಾಣಗಳು, ಅವನು ಮಾಡಿದ ಭಾಷಣಗಳು, ಅವನ ಲೇಖನಗಳು, ಅವನಿಗೆ ಬಂದ ಜಯಪತ್ರಗಳು, ಪ್ರಶಸ್ತಿಗಳು– ಇವು ಹೊರಗಣ ಸಂಗತಿಗಳು. ಈ ಸಂಗತಿಗಳು ಒಬ್ಬಾನೊಬ್ಬ ಮನುಷ್ಯನ ಛಾಯಾಚಿತ್ರಗಳಂತೆ ಅವನ ಆಕಾರ–ವಿಕಾರಗಳನ್ನು ಕೊಂಚ ಮಟ್ಟಿಗೆ ಗುರುತು ಮಾಡಿಕೊಡುತ್ತವೆ.

ಇದಕ್ಕಿಂತ ಮುಖ್ಯವಾದದ್ದು ಅವನ ಅಂತರಂಗದ ನಿರೂಪಣೆ. ಆತನು ತುಂಬ ಪ್ರೀತಿಯಿಂದ ನೋಡುತ್ತಿದ್ದುದು ಎಂಥವರನ್ನ, ಅವನ ಆಪ್ತಮಿತ್ರರು ಯಾರ್‍ಯಾರು, ಅವನ ಸಂಭಾಷಣ ವಿಷಯಗಳೇನು, ಅವನಿಗೆ ಅತ್ಯಂತ ಪ್ರಿಯವಾದ ಕಾಲಕ್ಷೇಪದ ಮಾರ್ಗ ಯಾವುದು –ಸಂಗೀತವೇ, ಸಾಹಿತ್ಯವೇ, ತತ್ತ್ವ ವಿಚಾರಗಳೇ, ಗಣಿತ ಜ್ಞಾನಾದಿ ಶಾಸ್ತ್ರಗಳೇ, ಕಾಡುಹರಟೆಯೇ? ಅವನಿಗೆ ಅತ್ಯಂತ ಪ್ರಿಯವಾಗಿದ್ದ ಗ್ರಂಥ ಯಾವುದು?

ಆಚಾರ ಸಂಪ್ರದಾಯಗಳಲ್ಲಿ, ಸಾರ್ವಜನಿಕ ವಿಷಯಗಳಲ್ಲಿ ಅವನ ಪಂಥ ಯಾವುದು, ಅವನು ಬಹಿರಂಗವಾಗಿ ಸಾರುತ್ತಿದ್ದ ಅಭಿಪ್ರಾಯಗಳಿಗೂ, ಅಂತರಂಗವಾಗಿ ನಡೆಯುತ್ತಿದ್ದ ನಡೆವಳಿಕೆಗಳಿಗೂ ಹೊಂದಿಕೆ ಎಷ್ಟು ಮಾತ್ರ ಇತ್ತು– ಜೀವನಚರಿತ್ರೆಯಿಂದ ನಮಗೆ ತಿಳಿದಿರಬೇಕಾದ ಅಂಶಗಳು ಈ ಅಂತರಂಗದ ಜಾತಿಯವು. (ಜ್ಞಾಪಕಚಿತ್ರ ಶಾಲೆ– ಸಂಪುಟ 1)

ಡಿವಿಜಿ ಅವರು ಜೀವನಚರಿತ್ರೆ ಬಗ್ಗೆ ಹೇಳಿದ ಮಾತುಗಳನ್ನು ಯಥಾವತ್ತಾಗಿ ಆತ್ಮಕಥೆಗೂ ಅನ್ವಯಿಸಬಹುದು. ಇಲ್ಲಿ ಹೇಳುವ ವ್ಯಕ್ತಿ ಚರಿತ್ರನಾಯಕನೇ ಆಗಿರುತ್ತಾನೆ. ಅಷ್ಟೆ.

ಅಂತರಂಗದ ಜಾತಿಗೆ ಸೇರಿದ ಕೃತಿಗಳಿಗೆ ಡಿವಿಜಿ ಅವರ ಜ್ಞಾಪಕ ಚಿತ್ರಶಾಲೆ ಸಂಪುಟಗಳೇ ಸಾಕ್ಷಿ. ವಾಗ್ಗೇಯಕಾರ ವಾಸುದೇವಾಚಾರ್ಯರ 'ನೆನಪುಗಳು', ನವರತ್ನ ರಾಮರಾಯರ 'ಕೆಲವು ನೆನಪುಗಳು', ಮಾಸ್ತಿಯವರ 'ಭಾವ' ಇತ್ಯಾದಿ ಗ್ರಂಥಗಳು ಈ ವರ್ಗದವು ಎನ್ನಬಹುದು. 'ಸಂಗೀತಗಾರನ ಮೆಲುಕುಗಳು' ಈ ಗುಂಪಿಗೆ ಸೇರುವ ಗ್ರಂಥವಾಗಿದೆ.

ಲೇಖಕರೇ ಹೇಳಿಕೊಂಡಂತೆ " 'ಸಂಗೀತಗಾರನ ಮೆಲುಕುಗಳು' ಎಂಬ ಹೆಸರಿನಲ್ಲಿ ನನ್ನ ಬದುಕಿನ ಕೆಲವು ಸ್ವಾರಸ್ಯಮಯ ಪ್ರಸಂಗಗಳನ್ನು ಸಂಗೀತಕ್ಕೆ ಸಂಬಂಧಿಸಿದಂತೆ ಬರೆದಿದ್ದೇನೆ." ಜೀವನಚರಿತ್ರೆಯ ಅಂಶಗಳು ಅಲ್ಲಲ್ಲಿ ಬಂದಿದ್ದರೂ ಅದು ಗೌಣವಾಗಿದೆ. ಒಂದು ರೀತಿ ವ್ಯಕ್ತಿಚಿತ್ರಗಳ ಮಾಲೆ ಎನ್ನಬಹುದು ಈ ಆತ್ಮಕಥಾಭಾಗವನ್ನು.

ಸುಬ್ಬರಾಯರು ಸಮಕಾಲೀನ ಸುಪ್ರಸಿದ್ಧ ವಾದ್ಯಕಾರರೊಡನೆ ವಾಗ್ಗೇಯಕಾರರೊಡನೆ, ಗಾಯಕರೊಡನೆ ತಾವು ಸಲ್ಲಾಪಿಸಿದ, ಸಂದರ್ಶಿಸಿದ ಸಂದರ್ಭಗಳನ್ನು ರಸವತ್ತಾಗಿ ಬಣ್ಣಿಸಿದ್ದಾರೆ. ಎಷ್ಟೋ ಸಂಗತಿಗಳು ಇತರರಿಗೆ ತಿಳಿಯದ ಸಂಗತಿಗಳಾಗಿವೆ. ಉದಾಹರಣೆಗೆ ವಾಸುದೇವಾಚಾರ್ಯರ ಬಗ್ಗೆ ಹೇಳುತ್ತಾ ಒಮ್ಮೆ ಸುಬ್ಬರಾಯರು ಅವರ ತಂಗಿಯನ್ನು ಹಾಡಿಸಿಕೇಳಿ ಆಶೀರ್ವದಿಸಿದಾಗ ಅವರು ತಂದೆಯಲ್ಲಿ ಪಿಸುಗುಟ್ಟಿದರು, ಆಚಾರ್ಯರ ಸಂಗೀತ ಕೇಳಬೇಕೆಂದು ಬಯಸಿದರು. ಆಗ ಶ್ರುತಿಮಾಡಲು ಮನೆಯಲ್ಲಿದ್ದ ತಂಬೂರಿ ತರಿಸಿದಾಗ ಅದನ್ನು ತೆಗೆದುಕೊಂಡು ಹೋದವರು ದುರವಸ್ಥೆಯಲ್ಲಿ ಮರಳಿಸಿದ್ದರು. ಆಗ ಆಚಾರ್ಯರು ವೀಣೆಯ ತಂತಿಗಳನ್ನೇ ಶ್ರುತಿಯಾಗಿ ಬಳಸುವಂತೆ ಶ್ರುತಿ ಮಾಡಲು ಸುಬ್ಬರಾಯರ ಸೋದರಿಗೆ ಹೇಳಿದರು. ಕೆಲವಾರು ಮಟ್ಟುಗಳನ್ನು ಹಾಡಿದರು. ಹಾಗೆ ಹಾಡುತ್ತಿದ್ದಾಗ 'ಈಸು ಶಾಸ್ತ್ರ' ಎಂದು ಹಾಡುತ್ತಾ ಅದನ್ನು ಶ್ಲೇಷೆಯಲ್ಲಿ 'ಈ ಸುಶಾಸ್ತ್ರ' ಎಂದು ಹಾಡಿದರು. ಈ ಪ್ರಸಂಗವನ್ನು ವಿವರಿಸುತ್ತಾ ಸುಬ್ಬರಾವ್ ಹೇಳಿದ ಮಾತು ಮೆಲುಕು ಹಾಕುವ ಮಾತಾಗಿದೆ, "ಒಂದು ಸಣ್ಣ ಪ್ರೇಕ್ಷಕವರ್ಗಕ್ಕಾಗಿ (ಮನೆಯೊಂದರಲ್ಲಿ ಕೆಲವರಿಗಾಗಿ) ಮನೆಯ ಹಾಲಿನಲ್ಲಿ ಅವರು ಹಾಡಿದಾಗ ಇಲ್ಲವೇ ಗುನುಗುನಿಸಿದಾಗ ವಾಸುದೇವಾಚಾರ್ಯರ ಸಂಗೀತ ನಿಜಕ್ಕೂ ಆಕರ್ಷಕವಾಗಿತ್ತು." ಹೀಗೆ ರಸವತ್ತಾಗಿ ಹತ್ತಾರು ಪ್ರಸಂಗಗಳನ್ನು ಬಣ್ಣಿಸಿದ್ದಾರೆ.

ಸುಬ್ಬರಾಯರು ಹಿಂದುಸ್ತಾನಿ ಮತ್ತು ಕರ್ನಾಟಕ ಸಂಗೀತದ ಅತಿರಥ ಮಹಾರಥರನ್ನು ಕಂಡಿದ್ದಾರೆ, ಅವರೊಡನೆ ತಮ್ಮ ಒಡನಾಟವನ್ನು ಬಣ್ಣಿಸಿದ್ದಾರೆ. ಹಿಂದುಸ್ತಾನಿ ಸಂಗೀತ ಕ್ಷೇತ್ರದ ಜಿ.ಎನ್.ಜೋಶಿ, ಜಿ.ಎಲ್. ರಾನಡೆ, ಲಾಲ್ ಖಾನ್, ಡಿ.ವಿ. ಪಲುಸ್ಕರ್, ಶ್ರೀಕೃಷ್ಣರತನ್ ಜಂಕರ್, ಕರ್ನಾಟಕ ಸಂಗೀತದ ಟೈಗರ್ ವರದಾಚಾರ್, ವೀಣೆಶೇಷಣ್ಣ, ಬಿ. ವಾಸುದೇವಾಚಾರ್, ಪಲ್ಲಡಂ ಸಂಜೀವರಾವ್ ಹೀಗೆ ಸಂಗೀತ, ನಾಟಕ, ಹರಿಕಥೆ ಕ್ಷೇತ್ರದ ದಿಗ್ಗಜಗಳ ಪರಿಚಯಭಾಗ್ಯ ಹೊಂದಿದ್ದವರು ಸುಬ್ಬರಾಯರು.

ಸುಬ್ಬರಾಯರು ಪ್ರಮುಖವಾಗಿ ಒಂದು ಸಂಗತಿಯನ್ನು ಎತ್ತಿ ಹಿಡಿದಿದ್ದಾರೆ. ಅದೆಂದರೆ ಹಾರ್ಮೋನಿಯಂ ವಾದ್ಯಕ್ಕೆ ಕೊಡಲೇಬೇಕಾದ ಪ್ರಾಶಸ್ತ್ಯದ ವಿಚಾರ. ಅವರು ಹೇಳುವಂತೆ ಹಿಂದುಸ್ತಾನಿ ಸಂಗೀತಕ್ಕೆ ಹಾರ್ಮೋನಿಯಂ ಅತ್ಯುತ್ತಮ ಪಕ್ಕವಾದ್ಯ. ಅದರ ಲೋಪಗಳು ಏನೇ ಇರಲಿ, ಸಾರಂಗಿ ಅಥವಾ ಪಿಟೀಲು ವಾದ್ಯಗಳು ತಮ್ಮವೇ ಆದ ಅನಿವಾರ್ಯ ತೊಂದರೆಗಳನ್ನೆದುರಿಸುವ ಸಂದರ್ಭದಲ್ಲಿ ಹಾರ್ಮೋನಿಯಂ ಉತ್ತಮ ಬೆಂಬಲ ನೀಡುತ್ತದೆ. ಈ ಮಾತಿನ ಸಮರ್ಥನೆಗೆ ಗಾಂಧೀಜಿ, ಟಿ. ಚೌಡಯ್ಯ, ಶಂಕುನ್ನಿನಾಯರ್ ಅವರು ಹಾರ್ಮೋನಿಯಂ ಮೆಚ್ಚಿದ ಹಲವು ಪ್ರಸಂಗಗಳನ್ನು ಉದಾಹರಿಸಿದ್ದಾರೆ. ಸುಬ್ಬರಾಯರು ಹೇಳುವ ಪ್ರಸಂಗಗಳನ್ನು ಓದುತ್ತಾ ಹೋದರೆ ಒಂದು ಕಾಲದಲ್ಲಿ ಸಂಗೀತ ಪ್ರಪಂಚದಲ್ಲಿ ಸುವರ್ಣಯುಗವೊಂದು ಇತ್ತೆಂದು ಭಾಸವಾಗುತ್ತದೆ. ಇದು ಸುಬ್ಬರಾಯರ ಸಮಗ್ರ ಆತ್ಮಕಥೆ ಅಲ್ಲ, ಆತ್ಮಕಥೆಯ ಕೆಲವು ತುಣುಕುಗಳು, ರಸಮಯ ಪ್ರಸಂಗಗಳ ಚಿತ್ರಣ ಎನಿಸುತ್ತದೆ.

ಪಂಡಿತರೊಡನೆ : ಪಂಡಿತರೊಡನೆ ಎಂಬ ಆತ್ಮಕಥೆ ವೇ.ಬ್ರ. ಶ್ರೀ ನರಸಿಂಹಮೂರ್ತಿ ಶಾಸ್ತ್ರೀ ಅವರು ಹೇಳಿದ್ದು ಬೀಚಿ ಜಗನ್ನಾಥ ಜೋಯಿಸರು ನಿರೂಪಿಸಿದ್ದಾರೆ. ಶಾಸ್ತ್ರಿಗಳು ಹೇಳಿದ ಮಾತಿನ ಧಾಟಿ ಇಲ್ಲಿಯ ಬರಹದ ಶೈಲಿಯಲ್ಲಿ ತಿಳಿಯುವುದಿಲ್ಲ. ಬರಹದ ಶೈಲಿಯೇ ಬೇರೆ, ಮಾತಿನ ಶೈಲಿಯೇ ಬೇರೆ. ಆದರೆ ಮಾಹಿತಿ, ಸಂಗತಿಗಳು ಲೇಖಕರದೇ ಆಗಿರುತ್ತವೆ. ಏಕೆಂದರೆ ನಿಟ್ಟೂರು ಶ್ರೀನಿವಾಸರಾಯರ ಆತ್ಮಕಥೆಯನ್ನು ಹತ್ತಾರುವಾರಗಳು ಘಂಟೆಗಟ್ಟಲೆ ನಾನು, ಎಂ.ಎಚ್. ಕೃಷ್ಣಯ್ಯ, ಎಚ್.ಕೆ. ರಂಗನಾಥ್ ಕೇಳಿದಾಗ ಆದ ಅನುಭವವೇ ಬೇರೆ, ಅದು ಬರಹದಲ್ಲಿ ಮೂಡಿದ ಮೇಲೆ ಓದಿದಾಗ ಆದ ಅನುಭವವೇ ಬೇರೆ.

ಅದೇನೇ ಇರಲಿ, ಶಾಸ್ತ್ರಿಗಳು ಹೇಳಿದ ಸಂಗತಿಗಳನ್ನೆಲ್ಲ ಓದುಗರಿಗೆ ತಿಳಿಯುವಂತೆ ಮಾಡುವಲ್ಲಿ ನಿರೂಪಕರು ಯಶಸ್ವಿಯಾಗಿದ್ದಾರೆ. ಶಾಸ್ತ್ರಿಗಳ ಆತ್ಮಕಥೆ ಓದಿದಾಗ ನಮ್ಮ ಮನ ಸೆಳೆಯುವುದು ಅವರ ಅದ್ಭುತ ಅಪರಿಮಿತ ಪಾಂಡಿತ್ಯ, ಚಿಂತನಾಶಕ್ತಿ, ಜ್ಞಾಪಕಶಕ್ತಿ. ಅವರಿಗೆ ಅಂಥ ಜ್ಞಾನಶಕ್ತಿ ದೊರೆಯಲು ಕಾರಣಕರ್ತರಾದವರು ಅವರ ಗುರುಗಳು ಮತ್ತು ಮನೆತನದ ಹಿರಿಯರು ಎಂದರೆ ತಪ್ಪಿಲ್ಲ. ಶೃಂಗೇರಿಯ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರು, ಬೇಟಗೇರಿ ನಾಗೇಶಶಾಸ್ತ್ರಿಗಳು, ರಾಮಚಂದ್ರಶಾಸ್ತ್ರಿಗಳು, ಸುಂದರಶಾಸ್ತ್ರಿಗಳು, ಸೀತಾರಾಮಾಚಾರ್ಯ ಒಬ್ಬರೇ ಇಬ್ಬರೇ? ಸಂಸ್ಕೃತ ವ್ಯಾಕರಣ, ತರ್ಕ, ವೇದಾಂತ, ಮೀಮಾಂಸಾಗಳಲ್ಲಿ ದಿಕ್‌ದಿಗಂತಿಗಳು ಇವರಿಗೆ ಬೋಧಕರಾಗಿ ಸಿಕ್ಕಿದ್ದು ಪೂರ್ವಾರ್ಜಿತ ಪುಣ್ಯವಾಗಿತ್ತು. ಶಾಸ್ತ್ರಿಗಳ ಆತ್ಮಕಥೆಯ ಕೆಲವು ಪ್ರಸಂಗಗಳು ರೋಚಕವಾಗಿವೆ. ಶೃಂಗೇರಿ ಪಾಠಶಾಲೆಯಲ್ಲಿದ್ದ ರಾಮಕೃಷ್ಣಶರ್ಮ ಸಂಸ್ಕೃತ ಶಬ್ದೋಚ್ಚಾರಣೆ ಸಹ ಮಾಡಲಾಗದವನು. ಹಠ, ಸತತ ಪರಿಶ್ರಮದಿಂದ ಸಂಸ್ಕೃತ ಕಲಿತು, ಕವಿ ವಿದ್ವಾಂಸನಾಗಿ ತಂಜಾವೂರಿನ ಪಂಡಿತರ ಮಾತಿನ ದೋಷವನ್ನು ಎತ್ತಿ ತೋರಿಸಿದ ಪ್ರಸಂಗ, ಷೋಡಶಕರ್ಮಗಳಲ್ಲಿ ಕಂದಾಚಾರದ ಪ್ರಾಬಲ್ಯವನ್ನು ತಿಳಿಸುತ್ತಾ "ನೀವು ತರ್ಕಮಾಡಿ, ವಿಚಾರಮಾಡಿ,

ನಿರ್ಣಯ ಮಾಡಿ, ಕೊನೆಗೆ ಎಲ್ಲವನ್ನೂ ಇಸ್ಪೀಟು ಎಲೆಯಂತೆ ಮಡಚಿಟ್ಟು ಮೇಲೇಳಿ, ಏಕೆಂದರೆ ಕಂದಾಚಾರದ ಪ್ರವಾಹಕ್ಕೆ ಧಕ್ಕೆಯುಂಟುಮಾಡುವ ಯಾವ ಕಾರ್ಯವನ್ನೂ ಮಾಡ ಹೋಗಬೇಡಿ, ಅದು ಜೇನುಹುಟ್ಟಿಗೆ ಕೈ ಹಾಕಿದಂತಾದೀತು" ಎಂಬ ಮಾತು ಮನನೀಯವಾಗಿದೆ. ಹೀಗೆ ಸ್ವಾರಸ್ಯಕರ ಪ್ರಸಂಗಗಳಿಂದ ಕೂಡಿದ ಆತ್ಮಕಥೆ 'ಪಂಡಿತರೊಡನೆ' ಕಾಣುತ್ತೇವೆ.

ನನ್ನ ಬದುಕು: 'ನನ್ನ ಬದುಕು' ಪ್ರೊ॥ ಆರ್. ಎನ್. ದೊರೆಸ್ವಾಮಿ ಅವರಿಂದ ಪುನರ್‌ರಚಿತ ಆತ್ಮಕಥೆ ಆಗಿದೆ. ಪ್ರಣತಾರ್ತಿಹರನ್ನರ ಪ್ರಯತ್ನದಿಂದ ಹೊರಹೊಮ್ಮಿದ ದೊರೆಸ್ವಾಮಿ ಅವರ ಆತ್ಮಕಥನ ಎಂದರೆ ತಪ್ಪಾಗದು. 'ಮಹತೀ' ಎಂಬ ಅಭಿನಂದ ಗ್ರಂಥವೊಂದನ್ನು ಪ್ರೊ॥ ಆರ್. ಎನ್. ದೊರೆಸ್ವಾಮಿ ಅವರ ಬಗ್ಗೆ ಶ್ರಮಪಟ್ಟು ಹೊರತಂದ ಕೀರ್ತಿ ಪ್ರಣತಾರ್ತಿಹರನ್‌ರಿಗೆ ಸಲ್ಲಬೇಕು. ಆದರ ಬಿಡುಗಡೆ ಸಂದರ್ಭದಲ್ಲಿ ನಾನು ಭಾಗವಹಿಸಿದ್ದೆ.

ದೊರೆಸ್ವಾಮಿ ಅವರು ವೈಣಿಕರಾಗಿ ಹೆಸರು ಮಾಡಿದವರು. ಅವರ ತಂದೆಯ ಛಲ ಶ್ರೀರಕ್ಷೆಗಳೇ ಅವರು ವೈಣಿಕರಾಗಲು ಕಾರಣವಾಯಿತು. ಈ ಕಾಲದಲ್ಲಿ ತಮ್ಮ ಮಗನನ್ನು ಇಂಜಿನಿಯರ್ ಅಥವಾ ಡಾಕ್ಟರ್ ಮಾಡಲು ಛಲ ತೊಡುವ ತಾಯಿತಂದೆಗಳ ಹಾಗೆ ಆ ಕಾಲದಲ್ಲಿ ದೊರೆಸ್ವಾಮಿ ಅವರ ತಂದೆ ಮಗನನ್ನು ಕಲಾವಿದನನ್ನಾಗಿ ಮಾಡಲು ಪಟ್ಟ ಶ್ರಮ ಮೆಚ್ಚುವಂಥದ್ದು. ಆದರೆ ದೊರೆಸ್ವಾಮಿ ಅವರ ತಂದೆಯವರ ಧ್ಯೇಯ ಇಂದಿಗೂ ಮಾದರಿ ಧ್ಯೇಯವಾಗಿದೆ. ಸಂಗೀತಾಭ್ಯಾಸಕ್ಕಾಗಿ ಮಗನನ್ನು ತಮಿಳುನಾಡಿಗೆ ಕಳಿಸಲು ನಿರ್ಧರಿಸಿದಾಗ ಅಧ್ಯಾಪಕರು, ಬಂದುಗಳು, ಮಿತ್ರರು ಉಗ್ರವಾಗಿ ಪ್ರತಿಭಟಿಸಿದಾಗ ತಂದೆ ಹೇಳಿದ ಮಾತು, "ನನ್ನ ಮಗ ಶಾಲೆಯಲ್ಲಿ ಓದಿ ಮುಂದೆ, ಅವನೂ ನಮ್ಮಂತೆಯೇ ಒಬ್ಬ ಸರ್ಕಾರಿ ಗುಲಾಮನಾಗಿ ಕೆಲಸ ಮಾಡುವುದು ನನಗೆ ಇಷ್ಟವಿಲ್ಲ. ಅವನು ಒಬ್ಬ ಶ್ರೇಷ್ಠ ಕಲಾವಿದನಾಗಿ ಸ್ವತಂತ್ರ ಜೀವನವನ್ನು ನಡೆಸಿ ಎಲ್ಲರಿಂದಲೂ ಗೌರವಿಸಲ್ಪಡುವ ಒಬ್ಬ ಪ್ರತಿಷ್ಠಿತ ವ್ಯಕ್ತಿ ಆಗಬೇಕೆಂಬುದೇ ನನ್ನ ಅಭಿಲಾಷೆ." ತಂದೆಯ ಈ ಅಭಿಲಾಷೆಯನ್ನು ಹೇಗೆ ನೆರವೇರಿಸಿದರು ಎಂಬುದೇ ವೈಣಿಕ ದೊರೆಸ್ವಾಮಿ ಅವರ ಆತ್ಮಕಥನವಾಗಿದೆ. ಮಕ್ಕಳ ಶಿಕ್ಷಣದಲ್ಲಿ ಧ್ಯೇಯ ಸಾಧನೆಗಳಲ್ಲಿ ತಾಯಿ ತಂದೆ ಮತ್ತು ಮಕ್ಕಳ ಇಬ್ಬರ ಪಾತ್ರವೂ ಮಹತ್ತರವಾದುದು ಎಂಬುದು ಇಲ್ಲಿ ತಿಳಿಯುತ್ತದೆ.

ನೆನಪು ಕೆದರಿದಾಗ : ಗಡಿರಕ್ಷಣಾದಳದ ಮೇಜರ್ ಎಚ್. ಸಿ. ವೇಣುಗೋಪಾಲ್ ಅವರ ಆತ್ಮಕಥೆಯನ್ನು ಆರ್. ಎಲ್. ಅನಂತರಾಮಯ್ಯ ಅವರು 'ಅನುವಾದದ ಗ್ರಂಥ' ಎನ್ನಿಸದ ಹಾಗೆ ಇಂಗ್ಲಿಷಿನಿಂದ ಕನ್ನಡಕ್ಕೆ ಇಳಿಸಿದ್ದಾರೆ. 1922 ರಲ್ಲಿ ಜನಿಸಿ 03.09.2003 ರಲ್ಲಿ ನಿಧನರಾದ ವೇಣುಗೋಪಾಲ್ ಅವರ ಆತ್ಮಕಥೆ ಓದುತ್ತಿದ್ದರೆ ಪರತಂತ್ರಭಾರತದಲ್ಲಿ ಸ್ವಾತಂತ್ರ್ಯ ಯೋಧನಾದ ಯುವಕ ಸ್ವತಂತ್ರ ಭಾರತದಲ್ಲಿ ವೀರಸೇನಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಣೆ ಮಾಡಿ ಯುದ್ಧರಂಗದಲ್ಲಿ ಅಂತೆಯೇ ಸಾಮಾಜಿಕ ರಂಗದಲ್ಲಿ ಅದ್ಭುತ ಸೇವೆ ಮಾಡಿದ ಕನ್ನಡಿಗನೊಬ್ಬನ ರೋಮಾಂಚಕಾರಿ ಕಥೆ ಆಗಿದೆ. 1942ರ ಚಳವಳಿಯಲ್ಲಿ ಭಾಗವಹಿಸಿದ ವೇಣುಗೋಪಾಲರ ಹೋರಾಟ ಆ ಕಾಲದ ಯುವಕರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುತ್ತಿದ್ದ ರೀತಿ ನೀತಿಗೆ ಸಾಕ್ಷಿಯಾಗಿದೆ. ಬಾಳಿನಲ್ಲಿ ಸಣ್ಣ ಘಟನೆ ಬೃಹತ್ ಪ್ರಭಾವ ಬೀರಬಲ್ಲದು, ಸಣ್ಣದೊಂದು ಹಚ್ಚಿದ ದೀಪ ದೊಡ್ಡದಾಗಿ ಪ್ರಜ್ವಲಿಸಬಹುದು. ಪಟಾಕಿ ಹಬ್ಬದ ದಿನ ಗೊರೂರಿನಲ್ಲಿದ್ದಾಗ ವೇಣುಗೋಪಾಲ್ ಅವರು ತಂದೆಯನ್ನು ಪಟಾಕಿ ಕೊಡಿಸಲು ಪೀಡಿಸುತ್ತಿದ್ದಾಗ ಅಲ್ಲೇ ಇದ್ದ ಕನ್ನಡದ ಹಿರಿಯ ಸಾಹಿತಿ ಗೊರೂರು

ರಾಮಸ್ವಾಮಿ ಅಯ್ಯಂಗಾರರು ಹೇಳಿದ ಮಾತು ಮನನೀಯವಾಗಿದೆ, "ನಿಮ್ಮ ತಂದೆ ಕಷ್ಟಪಟ್ಟು ಸಂಪಾದಿಸಿರುವ ಹಣವನ್ನು ಇಂಗ್ಲಿಷ್ ಜನರಿಗೆ ಒಪ್ಪಿಸಲು ಏಕೆ ಬಯಸುತ್ತೀಯೆ? ನಮ್ಮ ಜನಕ್ಕೇ ಸಹಾಯವಾಗುವಂತೆ ಹಣ್ಣುಗಳನ್ನು ಕೊಳ್ಳಬಾರದೇ?" ಈ ಮಾತು ವೇಣುಗೋಪಾಲರಲ್ಲಿ ಎಂಥ ಅಂತರ್ದೃಷ್ಟಿ ಮೂಡಿಸಿತು ಎಂದರೆ ಮಣಿಪುರದಲ್ಲಿ ಸೇನೆಯ ಸಬಲೀಕರಣದ ಜತೆಗೆ ಕೈಗೊಂಡ ಸಮಾಜೋದ್ಧಾರ ಕಾರ್ಯ ಕಂಡಾಗ ನಮ್ಮಲ್ಲಿ ರಾಜಕಾರಿಣಿಗಳಿಗೆ, ಸಮಾಜ ಸುಧಾರಕರಿಗೆ ಇಷ್ಟು ಮಟ್ಟಿಗೆ ಜನತೋದ್ಧಾರ ಮಾಡಲು ಶಕ್ತವೇ? ಎನ್ನಿಸುತ್ತದೆ.

ಸೇನೆಯಲ್ಲಿ ಊಟ ವಸತಿಯನ್ನು ಸುವ್ಯವಸ್ಥೆಗೊಳಿಸುವುದರ ಜತೆಗೆ ಕುಟುಂಬಗಳಿಗೆ ನಲ್ಲಿ ನೀರು ವ್ಯವಸ್ಥೆ, ಸರಳಕಕ್ಕಸು ನಿರ್ಮಾಣ, ಉತ್ತಮ ರಸ್ತೆ, ವೈದ್ಯಕೀಯ ನೆರವು ಏರ್ಪಡಿಸಿದಾಗ ಅವರು ಹೇಳಿದ ಮಾತು ಗಮನಾರ್ಹವಾಗಿದೆ, "ಕುಟುಂಬಗಳಿಗೆ ಸರಿಯಾದ ವಸತಿ ಸೌಲಭ್ಯ ಅಗತ್ಯ. ಅದನ್ನು ನಾವೇ ಕಟ್ಟಿಕೊಳ್ಳಬೇಕು. ಲೋಕೋಪಯೋಗಿ ಇಲಾಖೆಗೆ ವಹಿಸಿದರೆ ಹತ್ತು ಪಟ್ಟು ದುಬಾರಿ ಆಗುತ್ತದೆ ಮತ್ತು ಮುಗಿಯಲು ಹಲವು ವರ್ಷಗಳು ಬೇಕಾಗುತ್ತವೆ. ಮಣಿಪುರಿಗಳು ಮರ, ಬೆತ್ತ, ಮಣ್ಣು ಗಾರೆಗಳಿಂದ ಹೇಗೆ ಮನೆ ಕಟ್ಟುತ್ತಿದ್ದಾರೋ ಹಾಗೆಯೇ ಇಲ್ಲೂ ಕಟ್ಟಬಹುದು" ಎಂದು ಸ್ಥಳೀಯರಿಂದಲೇ ಮನೆಕಟ್ಟಿಸಿದರು.

ಗಡಿ ಪ್ರದೇಶದಲ್ಲಿ ಮಾರ್ಕೋಟ್ ಹಳ್ಳಿಗೆ ಸೇರುವ ರಸ್ತೆಯನ್ನು ಗ್ರಾಮಸ್ಥರಿಂದಲೇ ನಿರ್ಮಾಣ ಮಾಡಲು ಹೇಳಿ ಅದರ ಉದ್ಘಾಟನೆಗೆ ಬಂದಾಗ ಪ್ರೀತಿವಿಶ್ವಾಸದಿಂದ ಗ್ರಾಮಸ್ಥರು ರಸ್ತೆ ನಿರ್ಮಾಣ ಮಾಡಲು ಕಾರಣಕರ್ತರಾದ ವೇಣುಗೋಪಾಲ್‌ರಿಗೆ ಭವ್ಯ ಸ್ವಾಗತ ನೀಡಿದರು. ಒಂದು ಮಿಥುನವನ್ನು ಉಡುಗೊರೆಯಾಗಿ ಅರ್ಪಿಸಲು ಸಿದ್ದರಾದರು. ಉಡುಗೊರೆ ಅರ್ಪಿಸುವುದು ಎಂದರೆ ಆ ಪ್ರಾಣಿಯನ್ನು ಕೊಂದು ಅಡುಗೆ ಮಾಡಿ ಅತಿಥಿಗಳಾದ ವೇಣುಗೋಪಾಲರಿಗೆ ಬಡಿಸುವುದು. ಸಸ್ಯಾಹಾರಿಯಾದ ಇವರಿಗೆ ಪ್ರಾಣಸಂಕಟಕ್ಕೆ ಇಟ್ಟುಕೊಂಡಿತು, ಆ ಪ್ರಾಣಿಗೆ ಸಂಕಟ ಒದಗುವುದರ ಜತೆಗೆ. ಆಗ ಅವರು ಅವರ ಪ್ರೀತಿ ವಿಶ್ವಾಸದ ಉಡುಗೊರೆಯನ್ನು ತಿರಸ್ಕರಿಸುವಂತಿಲ್ಲ. ಹಾಗಂತ ಮಾಂಸಾಹಾರ ಮಾಡುವಂತಿಲ್ಲ. ಆಗೊಂದು ಉಪಾಯ ಮಾಡಿದರು. ಅವರಿಗೆ ಹೇಳಿದರು "ಈ ಪ್ರಾಣಿ ಕಮಾಂಡೆಂಟ್ 2 ನೇ ಎಂ. ಆರ್. ಗೆ ಸೇರಿದ್ದು. ಏಕೆಂದರೆ ಅದರ ನಾಯಕ ನಾನು. ನನಗೆ ಕೊಟ್ಟಿದ್ದು ಅದಕ್ಕೆ ಸೇರಿದ್ದು. ಆದ್ದರಿಂದ ಅದರ ಹಣೆ ಮೇಲೆ 'ಈ ಪ್ರಾಣಿ ಕಮಾಂಡೆಂಟ್ 2 ನೇ ಎಂ. ಆರ್. ಗೆ ಸೇರಿದ್ದು' ಎಂದು ಪಟ್ಟಿ ಬರೆದು ಅದರ ಕೊರಳಿಗೆ ಹಾಕಿ ಕಾಡಿನಲ್ಲಿ ಸ್ವತಂತ್ರವಾಗಿ ತಿರುಗಾಡಲು ಬಿಡಿ" ಎಂದರು. 'ಹೀಗೆ ಮಾಡಿದರೆ ನೀವು ಉಡುಗೊರೆ ಕೊಟ್ಟ ಹಾಗೆ, ನಾನು ಸ್ವೀಕರಿಸಿದ ಹಾಗೆ' ಎಂದು ಸಮಸ್ಯೆಯನ್ನು ಪರಿಹರಿಸಿದರು. ಎಂದರೆ ವೇಣುಗೋಪಾಲ್ ಕೇವಲ ಉನ್ನತ ಸೇನಾಧಿಕಾರಿ ಅಷ್ಟೇ ಆಗಿರಲಿಲ್ಲ. ಚಾತುರ್ಯದ ಖಣಿ. ಜನರನ್ನು ಒಲಿಸಿಕೊಳ್ಳುವ ಹಾಗೆಯೇ ಸಮಸ್ಯೆಯನ್ನು ಪರಿಹರಿಸುವ ಕುಶಲಿಗಳಾಗಿದ್ದರು. ಇವರ ಜತೆಗೆ ಕುಟುಂಬದ ಕಥೆಯನ್ನು ಹೇಳುತ್ತಾ ಹೇಳುತ್ತಾ ಹೆಜ್ಜೆಹೆಜ್ಜೆಗೆ ಸಮಸ್ಯೆಗಳನ್ನು ಪರಿಹರಿಸುತ್ತಾ ಯೋಧನೆಂದರೆ ಹೋರಾಡುವವನಷ್ಟೇ ಅಲ್ಲ ಸಮಾಜಸುಧಾರಕನೂ ಆಗಬಲ್ಲ ಎಂಬುದನ್ನು ಸಾಬೀತುಗೊಳಿಸಿದ ಅಪೂರ್ವ ವ್ಯಕ್ತಿ ವೇಣುಗೋಪಾಲ್ ಆಗಿದ್ದಾರೆ. ಮಠದ ಉದ್ಧಾರದಲ್ಲಿ ಮನೆ ಮರೆತ ವ್ಯಕ್ತಿ ಆಗಿರಲಿಲ್ಲ. ತನ್ನ ಕುಟುಂಬದ ಕಡೆಗೂ ಸಾಕಷ್ಟು ಗಮನವಿತ್ತಿದ್ದಾರೆ. ಕನ್ನಡದಲ್ಲಿ ಯೋಧಸಾಹಿತ್ಯ ಬಹಳ ಕಡಿಮೆ. ಆತ್ಮಕಥನಗಳೇ ಕಡಿಮೆ, ಅದರಲ್ಲಿ ಕನ್ನಡ ರಣವೀರರ ಆತ್ಮಕಥೆ ಎಲ್ಲಿ ಬರಬೇಕು? ಇಂಥ ಸನ್ನಿವೇಶದಲ್ಲಿ ವೇಣುಗೋಪಾಲರ ಆತ್ಮಕಥೆ ಕನ್ನಡಕ್ಕೆ

ಒಂದು ವಿಶೇಷ ಕೊಡುಗೆ ಎಂದರೆ ತಪ್ಪಿಲ್ಲ. ನೆಲಯೋಧ ಕನ್ನಡಿಗರ ಕಥೆಗಳ ಹಾಗೆ ಜಲಯೋಧ ಕನ್ನಡಿಗರ, ಗಗನಯೋಧ ಕನ್ನಡಿಗರ ಆತ್ಮಕಥೆಗಳು ಕನ್ನಡದಲ್ಲಿ ಮೂಡಿಬರಬೇಕಾಗಿದೆ. ಕೊಡಗಿನ ವೀರರು ಈ ವಿಷಯದಲ್ಲಿ ಒಂದು ಅಪವಾದವಾಗಿದ್ದಾರೆ ಎನ್ನಬಹುದು. ಜನರಲ್ ತಿಮ್ಮಯ್ಯ, ಕಾರಿಯಪ್ಪನವರಂತಹ ಸೇನಾನಿಗಳ ಕಥೆ ಆದರ್ಶಪ್ರಾಯ, ರೋಮಾಂಚಕರವಾಗಿದೆ. ವೇಣುಗೋಪಾಲರ ಕಥೆ ಪವಾಡಸದೃಶ ಘಟನೆಗಳನ್ನು ಒಳಗೊಂಡಿದ್ದರೂ ಪುರುಷಸಾಹಸದ ಆತ್ಮಕಥೆಯಾಗಿದೆ.

ಮತ್ತೂರಿನಿಂದ ಬ್ರಿಟನ್‌ಗೆ : ಜನಪ್ರಿಯ ವಾಗ್ಮಿಗಳೂ ವ್ಯಾಖ್ಯಾನಕಾರರೂ ಆದ ಮತ್ತೂರು ಕೃಷ್ಣಮೂರ್ತಿಗಳ ಆತ್ಮಕಥನವನ್ನು 13 ಕ್ಯಾಸೆಟ್ಟುಗಳಲ್ಲಿ ಧ್ವನಿಮುದ್ರಿಸಿಕೊಂಡು ಬರಹದ ರೂಪಕ್ಕೆ ಇಳಿಸಿದವರು ಸುಮನಾ ವಿಶ್ವನಾಥ್ ಅವರು. ಒಂದು ಕಾಲದಲ್ಲಿ ಆಂಡವನ್ ಸ್ವಾಮಿಗಳ ರಾಮಾಯಣವನ್ನು ಇದೇ ರೀತಿ ಕ್ಯಾಸೆಟ್‌ಗಳಿಂದ ಮತ್ತೂರರು ಕನ್ನಡಕ್ಕೆ ತಂದಿದ್ದಾರೆ. ಒಂದು ಆತ್ಮಕಥೆಯನ್ನು ಕಾರಂತ, ಮಾಸ್ತಿ, ಮೂರ್ತಿರಾಯರು ಮೊದಲಾದವರು ಬರೆದಂತೆ ತಾವೇ ಬರೆಯುವುದು ತಾಜಾಪದ್ಧತಿ. ಹೇಳಿಬರೆಯಿಸುವುದು ಇನ್ನೊಂದು ಬಗೆ. ಕ್ಯಾಸೆಟ್ಟಿನಲ್ಲಿ ಧ್ವನಿಮುದ್ರಿಸಿ ಅದನ್ನು ಸಂಪಾದಿಸುವುದು ಮತ್ತೊಂದು ಬಗೆ. ಕ್ಯಾಸೆಟ್ಟಿನಿಂದ ಬರಹಕ್ಕೆ ಬಂದಾಗ ಧ್ವನಿ, ಧಾಟಿ, ಹಾವಭಾವ, ಒತ್ತು, ಕಾಕು, ಹೇಳುವವರ ಮತ್ತು ಕೇಳುವವರ ಮನಸ್ಸಿನ ಪ್ರತಿಕ್ರಿಯೆಗಳು ಇವುಗಳೆಲ್ಲ ಧ್ವನಿಮುದ್ರಿತರೂಪ ಪುಸ್ತಕವಾದಾಗ ಬರುವುದಿಲ್ಲ. ಆದರೆ ಸಮಗ್ರ ಮಾಹಿತಿ ವಿವರಗಳು ಸಿಗುತ್ತವೆ. ಮಾತಿನ ರೂಪ ಬರಹದ ರೂಪ ಎರಡಕ್ಕೂ ವ್ಯತ್ಯಾಸವಿದೆ. ಆದ್ದರಿಂದ ಲಿಪಿಕಾರರು ಮತ್ತು ಆತ್ಮಕಥನಕಾರರ ಪ್ರತಿಭೆ ಎಷ್ಟೆಷ್ಟು ಎಂದು ಗುರುತಿಸಲಾಗದು. ಇದು ಕ್ಯಾಸೆಟ್ ಬರಹದ ಮಿತಿ. ಆದರೂ ಸುಮನಾ ಅವರು ಸಾಕಷ್ಟು ಪರಿಶ್ರಮದಿಂದ ಮತ್ತೂರರ ಆತ್ಮಕಥೆಯನ್ನು ಬರಹದಲ್ಲಿ ಸೆರೆಹಿಡಿದಿದ್ದಾರೆ.

ಇದು ಹೇಳುತ್ತಾ ಬರೆಯಿಸಿರುವುದಲ್ಲ. ಯಾರೇ ಆದರೂ ಕ್ಯಾಸೆಟ್‌ನಲ್ಲಿ ನೆನಪುಗಳನ್ನು ಹೇಳುವಾಗ ಸಮಯ ಸನ್ನಿವೇಶಗಳನ್ನು ಒಂದಾದ ನಂತರವೇ ಹಾಗೇ ಹಾಗೆಯೇ ಹೇಳುವುದು ಅಸಾಧ್ಯ. 13 ಕ್ಯಾಸೆಟ್‌ಗಳಲ್ಲಿ ಹಂಚಿಹೋಗಿರುವ ಮತ್ತೂರರ ನೆನಪುಗಳನ್ನು ಸಮಯೋಚಿತವಾಗಿ ಸೇರಿಸಿಕೊಂಡು, ಓದುಗರಿಗೆ ಓಘವು ಎಲ್ಲೂ ತಪ್ಪದಂತೆ ಸುಮನಾ ವಿಶ್ವನಾಥ್ ಅವರು ಅದನ್ನು ಸಾಕಷ್ಟು ಯಶಸ್ವಿಯಾಗಿ ಟೇಪಿನಿಂದ ಪೇಜಿಗೆ ಇಳಿಸಿದ್ದಾರೆ.

ಮತ್ತೂರರ ಕುಟುಂಬದ ಜೀವನಕಥೆ ಕೇಳಿದರೆ ಅನೇಕ ಬಡ ಸಂಕೇತಿ ಕುಟುಂಬಗಳ ಕಥೆಗಳ ಪ್ರತಿನಿಧಿಯಂತಿದೆ. ಬಡತನ, ಇಸ್ಪೀಟು ಚಟ ಸಂಕೇತಿ ಜನಾಂಗದಲ್ಲಿ ಅವಿಭಾಜ್ಯ ಸಂಗತಿ ಆಗಿರುವುದನ್ನು ಚೆನ್ನಾಗಿ ತಿಳಿಸಿದ್ದಾರೆ. ಸಂಪ್ರದಾಯದ ಕಾಠಿಣ್ಯಕ್ಕೆ ಲಂಗೋಟಿ ಪ್ರಸಂಗ ಸಾಕ್ಷಿ ಆಗಿದೆ.

ಪರದೇಶದಲ್ಲಿ ಕೆಲಸಮಾಡಿ 'ಭಲೆ' ಎನ್ನಿಸಿಕೊಳ್ಳುವುದು ಸಾಮಾನ್ಯ ಸಂಗತಿ ಅಲ್ಲ. ಯುದ್ಧದಲ್ಲಿ ಗೆದ್ದವಾರ್ತೆ ಕೇಳಲು ಆನಂದಕರವಾಗಿರುತ್ತದೆ. ಆದರೆ ಯುದ್ಧದ ಬವಣೆಯು 'ವಾರ್ತೆ ಕೇಳಿ' ಸುಖಿಸಿದವರಿಗೆ ಅರ್ಥವಾಗದು. ಮತ್ತೂರರು ಬ್ರಿಟನ್ನಿನಲ್ಲಿ ಭಾರತೀಯ ವಿದ್ಯಾ ಭವನದ ಉನ್ನತಿಯನ್ನು ಸಾಧಿಸಿದ ಕಥೆ ಕೇಳಲು ಚೆನ್ನ, ಆದರೆ ಅವರು ಪಟ್ಟ ಪಾಡು ದೇವರಿಗೇ ಪ್ರೀತಿ. ಆದರೆ ಅವರಿಗೆ ಸಜ್ಜನಸಂಗ, ದೈವಬಲ ಒದಗಿದ್ದರಿಂದ ಅವರು ಬಚಾವಾಗಿ ಯಶಸ್ಸಿನ ಶಿಖರ ಏರಿದರು. ರಾತ್ರಿ 12 ಕ್ಕೆ ಮುಹೂರ್ತ ಇಟ್ಟುಕೊಂಡು ಆತ್ಮಹತ್ಯೆಗೆ ಮತ್ತೂರರು ಸಿದ್ಧರಾಗಿದ್ದರು ಆದಿನ. ಏಕೆಂದರೆ 8–10 ತಿಂಗಳಾದರೂ ಭವನದ ಯಾವುದೇ ಚಟುವಟಿಕೆಯನ್ನು

ನಡೆಸಲು ಸಾಧ್ಯವಾಗಿರಲಿಲ್ಲ. ಚಂದ್ರಕಾಂತ ಮಾಸ್ಟರ್ ಬಳಿ ಹೇಳಿದಾಗ ಅವರು ಇಂಡಿಯಾಕ್ಕೆ ಹಿಂತಿರುಗಲು ಟಿಕೆಟ್ ಕೊಡಲು ಬಂದರು. ಇದರಿಂದ ಅವಮಾನ, ದುಃಖ, ನಿರಾಸೆ ಉಕ್ಕಿಬಂದಿತು. ಅದು ಆತ್ಮಹತ್ಯೆ ತೀರ್ಮಾನಕ್ಕೆ ಕಾರಣವಾಗಿತ್ತು. 11.40 ರ ವೇಳೆಗೆ ನಿದ್ರೆ ಮಾತ್ರೆ ತೆಗೆದುಕೊಂಡು 12 ಘಂಟೆ ಆಗಲಿ ಅಂತ ಕಾದವರು 20 ನಿಮಿಷ ಕಾಯುವ ವೇಳೆಯಲ್ಲಿ ರಾಮಾಯಣ ತಿರುವಿ ಹಾಕಿದರು. ಹನುಮಂತ ಸೀತೆಯನ್ನು ಕಾಣದೆ ಆತ್ಮಹತ್ಯೆಯ ತೀರ್ಮಾನಕ್ಕೆ ಬಂದು ಕೊನೇ ಪ್ರಯತ್ನ ಮಾಡುತ್ತೇನೆ ಎಂದು ನಿರ್ಧರಿಸಿದ ಪ್ರಸಂಗ ಓದಿ ಕೊನೇ ಪ್ರಯತ್ನ ದಲಾಲ್‌ಜೀನ ಕಾಣುವ ನಿರ್ಧಾರ ಮಾಡಿ ಆತ್ಮಹತ್ಯೆ ನಿಧಾರ ಕೈಬಿಟ್ಟರು ... ಎಂಥೆಂಥ ದುರ್ಭರ ಪ್ರಸಂಗಗಳನ್ನು ಮತ್ತೂರರು ಎದುರಿಸಿದ್ದಾರೆ ಎಂಬುದಕ್ಕೆ ಇದೊಂದು ನಿದರ್ಶನ ಅಷ್ಟೆ. ಹಾಗೆಯೇ ತಮ್ಮ ಕೈಲಿದ್ದ 60 ಪೌಂಡಿನಲ್ಲಿ 50 ಪೌಂಡನ್ನು ಖರ್ಚುಮಾಡಿ ಕೇವಲ 10 ಪೌಂಡಿನ ಖಾತೆದಾರನಾಗುವ ದುಃಸ್ಥಿತಿ ಬಂದರೂ ಆ 50 ಪೌಂಡಿನ ಆತ್ಮತ್ಯಾಗ, ನಿಃಸ್ವಾರ್ಥಕೊಡುಗೆ, ಭವನಕ್ಕೆ 10000 ಕ್ಕೂ ಮಿಗಿಲು ನೆರವನ್ನು ಕೊಟ್ಟದ್ದು ದೈವಕೃಪೆಗೆ ಸಾಕ್ಷಿ ಆಗಿದೆ. ಹೀಗೆ ರೋಮಾಂಚಕಾರಿ ಘಟನೆಗಳ ಸರಮಾಲೆಯನ್ನೇ ಭವನ್ಸ್ ಅನುಭವಗಳ ಕಥನದಲ್ಲಿ ನಿರೂಪಿಸಿದ್ದಾರೆ. ಅಪೂರ್ವ ವ್ಯಕ್ತಿಗಳ ದರ್ಶನ, ಪರಿಚಯಲಾಭ ಮತ್ತೂರರ ಪಾಲಿಗೆ ದೊರೆತ ಭಾಗ್ಯಗಳಲ್ಲಿ ಒಂದು. ಅದಕ್ಕೆ ನಿದರ್ಶನ ಪ್ರೊ॥ ಬರ್ಕ್‌ರ ಪರಿಚಯ. ಭವನದ ಪುಸ್ತಕ ಭಂಡಾರ ಬಳಸಲು ಬಂದ ಸಸ್ಯಾಹಾರಿ, ಮದ್ಯಪಾನದೂರಿ, ಸತ್ಯವ್ರತಧಾರಿ ಬರ್ಕ್ ಅವರನ್ನು ಮತ್ತೂರು ಕೇಳಿದರು, 'ಭಾರತೀಯ ವೇದಾಂತವನ್ನಲ್ಲದೆ ಪಾಶ್ಚಾತ್ಯದರ್ಶನಗಳನ್ನೆಲ್ಲಾ ಓದಿದ್ದೀರಲ್ಲಾ, ಅವುಗಳ ಒಟ್ಟು ಸಾರ ಏನು?' ಎಂದಾಗ ಅವರು ಹೇಳಿದ್ದು, "ಬಹಳ ವರ್ಷಗಳ ಕಾಲ ದೀರ್ಘಕಾಲದ ಅಧ್ಯಯನದಿಂದ, ಅದೂ ಗಂಭೀರ ಅಧ್ಯಯನದಿಂದ ಒಂದು ವಿಷಯ ಸ್ಪಷ್ಟವಾಗಿದೆ, ಅದೇನೆಂದರೆ ಪ್ರಪಂಚದ ಎಲ್ಲ ರೀತಿಯ ಸಮಸ್ಯೆಗಳಿಗೆ ಒಂದೇ ಉತ್ತರ ಅದ್ವೈತ. ಭಗವದ್ಗೀತೆಯಲ್ಲಿ ವಿವರವಾಗಿ ಹೇಳಿರುವುದೂ ಇದನ್ನೇ." ಹತ್ತಾರು ವರ್ಷ ಆಳವಾಗಿ ಜಗತ್ತಿನ ದರ್ಶನಗ್ರಂಥಗಳನ್ನೆಲ್ಲಾ ಅಧ್ಯಯನ ಮಾಡಿದ ವ್ಯಕ್ತಿ ಕಂಡುಕೊಂಡ ಸತ್ಯ ಇದು. ಇಂಥ ವ್ಯಕ್ತಿಯನ್ನು ದರ್ಶಿಸಿ ಸನ್ಮಾನಿಸಿದ ಭಾಗ್ಯ ಮತ್ತೂರರದು.

ಮಾರ್ಟಿನ್ ಸ್ಟೀವನ್ಸ್ ಎಂಬ ಮಾಂಸಾಹಾರಿ ವ್ಯಕ್ತಿ ಮತ್ತೂರರ ಜತೆ ಮೂವರು ಭಾರತದ ಗಣ್ಯ ವ್ಯಕ್ತಿಗಳನ್ನು ಔತಣಕ್ಕೆ ಆಹ್ವಾನಿಸಿದಾಗ ರಸಂ, ಕಾಯಿ ಚಟ್ನಿ, ಮಸಾಲೆದೋಸೆ, ವಡೆ, ಉಪ್ಪಿಟ್ಟು, ಪೂರಿ, ಉಪ್ಪಿನಕಾಯಿ ಎಲ್ಲವನ್ನೂ ಮಾಡಿಸಿ ಊಟಕ್ಕೆ ಟೇಬಲ್ ಮೇಲೆ ಇಡಿಸಿದ್ದರು. ಸಿಗಾರ್ ಸೇದುತ್ತಿದ್ದ, ಮದ್ಯಪಾನ ಮಾಡುತ್ತಿದ್ದ ಮಾಂಸಾಹಾರ ತಿನ್ನುತ್ತಿದ್ದ ಮಾರ್ಟಿನ್ ಬಂದ ಅತಿಥಿಗಳೊಡನೆ ಅವರ ಹಾಗೆ ಸಸ್ಯಾಹಾರ ಸ್ವೀಕರಿಸಿ ಐಸ್‌ಕ್ರೀಂ ತಿಂದಿದ್ದರು. ಆದರೆ ಇದೇ ಗಣ್ಯ ವ್ಯಕ್ತಿಗಳನ್ನು ಆಹ್ವಾನಿಸಿದ ಭಾರತೀಯರು ಬಂದವರಿಗೆ ಸ್ವಲ್ಪವೂ ಗೌರವ ತೋರಿಸಿರಲಿಲ್ಲ. ಇಂಥ ಅನೇಕ ಪ್ರಸಂಗಗಳ ಮಾಲೆಯನ್ನೇ ಮುಂದಿಡುತ್ತಾ ಹೋಗುತ್ತಾರೆ. ಈ ಎಲ್ಲ ಪ್ರಸಂಗಗಳು ಮತ್ತೂರರ ಜೀವನದ ಭಾಗವೇ ಆಗಿದ್ದರೂ ಅಲ್ಲಲ್ಲಿ ನಿರೂಪಣೆ ಜಾಸ್ತಿ ಆಯಿತು. ಕೆಲವು ಅನವಶ್ಯಕ ಸಂಗತಿಗಳು ವರ್ಣಿತವಾಗಿ ಮತ್ತೂರರ ಆತ್ಮಕಥೆ ಹಿಂದುಳಿದು ಭವನದ ಕಥೆಯೇ ಪೂರ್ಣವಾಗಿ ನಿರೂಪಿತವಾದಂತೆ ಕಾಣುತ್ತದೆ. ಈ ಲೋಪವನ್ನು ಬಿಟ್ಟರೆ ಚೆನ್ನಾಗಿ ಓದಿಸಿಕೊಂಡು ಹೋಗುವ ಅನೇಕ ಮನನೀಯ ಪ್ರಸಂಗಗಳಿಂದ ಕೂಡಿದ ದೀರ್ಘ ಆತ್ಮಕಥೆ ಮತ್ತೂರರದು.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಭಾರತೀಯ ವಿದ್ಯಾಭವನದ ಇತಿಹಾಸಕಥನಕ್ಕೆ ಹಿನ್ನೆಲೆಯಾಗಿ ಮತ್ತೂರರ ಆತ್ಮಕಥೆ ಬಂದಿದೆ. ಈ ಕೃತಿ ಓದಿದಾಗ ಮತ್ತೂರರ ಕಥೆ ಹಿಂದೆ ಸರಿದು ಭವನದ

ಕಥೆ ಕಣ್ತುಂಬಿಕೊಳ್ಳುತ್ತದೆ. ಭವನದ ಕಥೆಯನ್ನು ತಮ್ಮ ದೀರ್ಘಕಾಲದ ವೈವಿಧ್ಯಮಯ ಅನುಭವಗಳಿಂದ ರಸವತ್ತಾಗಿ ವಿವರವಾಗಿ ಚಿತ್ರಿಸಿದ್ದಾರೆ. ಎಷ್ಟರಮಟ್ಟಿಗೆ ಎಂದರೆ ಈ ಕೃತಿಗೆ ಶೀರ್ಷಿಕೆಯಾಗಿ 'ವಿದ್ಯಾಭವನದ ಪ್ರಜ್ವಲ ಇತಿಹಾಸ' ಎಂದು ಹೆಸರಿಡಬಹುದೇನೋ ಎನಿಸುವಷ್ಟರ ಮಟ್ಟಿಗೆ ಇದೆ. ಅದೇನೇ ಇರಲಿ, ನಮ್ಮ ನಾಡಿನಲ್ಲಿ ಕನ್ನಡಿಗನೊಬ್ಬ ಲಂಡನ್ನಿನಲ್ಲಿ ಅಪೂರ್ವಸಾಹಸ ಮಾಡಿದ ರಂಜಕ ಸಾಹಸದ ಕಥೆ ಆಗಿದೆ ಮತ್ತೂರರ ಕಥನ ಎಂಬುದರಲ್ಲಿ ಸಂಶಯವಿಲ್ಲ. ಭವನಕ್ಕೆ ಸ್ಥಿರನೆಲೆ, ಕೀರ್ತಿ ತರುವಲ್ಲಿ ಮತ್ತೂರರ ಪುರುಷಯತ್ನ ಮತ್ತು ಅವರಿಗೆ ದೊರೆತ ದೈವಕೃಪೆ ಮತ್ತು ವಿನಯ ಸಜ್ಜನಿಕೆಗಳ ಮೂಲಕ ಎಂಥ ಸಾಧನೆ ಮಾಡಬಹುದು ಎಂಬುದಕ್ಕೆ ಈ ಕಥನ ಶ್ರೇಷ್ಠ ನಿದರ್ಶನವಾಗಿದೆ; ಮತ್ತೂರರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಿದೆ.

ಸಂಕಲನದ ಬಗ್ಗೆ : ದೊರೆಸ್ವಾಮಿ ಅವರ ಆತ್ಮಕಥೆ ಒಬ್ಬ ಸಂಗೀತ ಕಲಾವಿದ ಲೌಕಿಕವಾಗಿ ಸಾಧನೆ ಮಾಡಿದ ಕಥೆ ಆಗಿದೆಯೇ ಹೊರತು ದೈವಿಕಾಂಶದಿಂದ ಕೂಡಿದ ಪ್ರತಿಭಾವಂತನ ಕಥೆಯಾಗಿ ಕಾಣಿಸದು. ಸ್ವತಂತ್ರ ಕಲಾವಿದನಾಗಿ ಬಾಳಬೇಕೆಂಬ ತಂದೆಯ ಧ್ಯೇಯ ಸಾರ್ಥಕವಾಗಲಿಲ್ಲ ಎನ್ನಿಸುತ್ತದೆ. ಏಕೆಂದರೆ ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಅಧ್ಯಾಪಕರಾಗಿ, ಮೈ.ವಿ.ವಿ. ಲಲಿತ ಕಲಾ ಕಾಲೇಜಿಗೆ ಅರ್ಜಿ ಹಾಕಿ ಅಧ್ಯಾಪಕರಾಗಿ ವೃತ್ತಿನಿರತರಾಗಿ ಮನೆ ಪಾಠಗಳನ್ನು ಹೇಳಿ ಬದುಕು ನಡೆಸಿದ್ದು. "ಶಾಲೆಯಲ್ಲಿ ಓದಿ ತಾನೂ ನನ್ನಂತೆಯೇ ಒಬ್ಬ ಸರ್ಕಾರಿ ಗುಲಾಮನಾಗಿ ಕೆಲಸ ಮಾಡುವುದು ಇಷ್ಟವಿಲ್ಲ. ಸ್ವತಂತ್ರ ಜೀವನ ನಡೆಸಿ ಎಲ್ಲರಿಂದ ಗೌರವಿಸಲ್ಪಡುವಂತಹ ಪ್ರತಿಷ್ಠಿತ ವ್ಯಕ್ತಿ ಆಗಬೇಕೆಂಬ" ಧ್ಯೇಯದಲ್ಲಿ ಪ್ರತಿಷ್ಠಿತ ವ್ಯಕ್ತಿ ಆಗಿ ಎಲ್ಲರಿಂದಲೂ ಗೌರವಿಸಲ್ಪಟ್ಟರೂ ತಂದೆಯವರ ಮೊದಲಿನ ಉದ್ದೇಶ ನೆರವೇರಲಿಲ್ಲ. ಅದೇನೇ ಇರಲಿ, ಶ್ರೇಷ್ಠ ವೈಣಿಕರೂ ವಾಗ್ಗೇಯಕಾರರೂ ಆದ ವೀಣಾವಿದ್ವಾಂಸರು ಅವರು ಎಂಬುದರಲ್ಲಿ ಸಂಶಯವಿಲ್ಲ.

ಪಂಚ ಆತ್ಮಕಥಾ ಸಂಕಲನದ ಔಚಿತ್ಯ ಕುರಿತು ಒಂದು ಮಾತು ಹೇಳಿದರೆ ತಪ್ಪಾಗದು. ಈ ಐದು ಆತ್ಮಕಥೆಗಳನ್ನು ಒಂದೆಡೆ ಓದಿದಾಗ, ಸಂಕೇತಿ ಸಮಾಜದಲ್ಲಿ ಪ್ರತಿಭಾವಂತ ಸಂಸ್ಕೃತ ವಿದ್ವಾಂಸರು, ಸಂಸ್ಥೆಯ ಸಂಘಟಕರು, ಪ್ರವಚನಕಾರರು, ಸಂಗೀತಗಾರರು, ವಾದ್ಯಕಾರರು, ವೀರಯೋಧರು ಇದ್ದಾರೆ ಎಂದು ತಿಳಿಯುತ್ತದೆ. ಇದು ಮೆಚ್ಚುವ ಅಂಶವೇ ಆದರೂ ಪಾಂಡಿತ್ಯದ ವಿದ್ವಾಂಸರೂ, ಪ್ರಸಿದ್ಧ ಪ್ರವಚನಕಾರರೂ ಆದ ಇಬ್ಬರು ವಿದ್ವಾಂಸರು, ಸಂಗೀತಗಾರರೂ ವಾದ್ಯಕಾರರೂ ಆದ ಇಬ್ಬರು ಗಾನಕಲಾವಿದರು, ಒಬ್ಬ ವೀರಯೋಧನ ಕಥೆ ಇವನ್ನು ಒಟ್ಟಿಗೆ ಸೇರಿಸಿದ್ದು ಮುತ್ತು ಮೆಣಸು ಪೋಣಿಸಿದಂತಾಗಿದೆ. ಕೇವಲ ಕಲಾವಿದರ, ಪಂಡಿತರ ಸಂಕಲನವನ್ನೇ ತಂದಿದ್ದರೆ ಚೆನ್ನಾಗಿತ್ತು.

ಪಂಚ ಆತ್ಮಕಥೆಗಳ ಸಂಕಲನದಲ್ಲಿ ಒಂದು ವೈಶಿಷ್ಟ್ಯವೂ ಅಡಗಿದೆ, ಆತ್ಮಕಥೆಯ ನಾಲ್ಕು ಪ್ರಕಾರಗಳನ್ನು ಇಲ್ಲಿ ಕಾಣಬಹುದು. ಆತ್ಮಕಥೆಯನ್ನು ಹೇಳಿದಾಗ ಎದುರಿಗಿದ್ದು ಬರಹರೂಪಕ್ಕಿಳಿಸುವ ನಿರೂಪಣಾವಿಧಾನ ("ಪಂಡಿತರೊಡನೆ" ಆತ್ಮಕಥೆ) ಒಂದನೆಯದು. ಇಲ್ಲಿ ನಿರೂಪಕ ಕಥನಕಾರ ಹೇಳಿದ್ದು ಸರಿಯಾಗದಿದ್ದಲ್ಲಿ, ಅರ್ಥವಾಗದಿದ್ದಲ್ಲಿ, ಹೆಚ್ಚಿನ ವಿವರ ಬೇಕಿದ್ದಲ್ಲಿ ಕೇಳಿ ತಿಳಿದುಕೊಳ್ಳಬಹುದು. ಧ್ವನಿಮುದ್ರಣ ಲಿಪೀಕರಣ ಎರಡನೇ ವಿಧಾನ. ಇದರಲ್ಲಿ ಕೇಳಿ ವಿವರ ಪಡೆಯುವ ಸೌಲಭ್ಯವಿಲ್ಲ ('ಮತ್ತೂರಿಂದ ಬ್ರಿಟನ್ನಿಗೆ' ಆತ್ಮಕಥೆ). ಇನ್ನು ಮೂರನೇ ವಿಧಾನ ಅನುವಾದವಿಧಾನ. ಲೇಖಕರು ಬರೆದುದನ್ನು ಇನ್ನೊಂದು ಭಾಷೆಯಲ್ಲಿ ಅನುವಾದಿಸುವುದು ('ನೆನಪು ಕೆದರಿದಾಗ' ಮತ್ತು 'ಸಂಗೀತಗಾರನ ಮೆಲುಕುಗಳು' ಆತ್ಮಕಥೆಗಳು). ಇಲ್ಲಿ ಲೇಖಕನ ಭಾಷಾಶೈಲಿ ಎಷ್ಟರಮಟ್ಟಿಗೆ ಬಂದಿದೆ ಎಂಬುದನ್ನು ಗಮನಿಸಬೇಕಾಗುತ್ತದೆ ಮತ್ತು ಮೂಲಲೇಖಕನ ಭಾಷಾಸಾಮರ್ಥ್ಯ

ಹಾಗೂ ಅನುವಾದಕನ ಭಾಷಾಸಾಮರ್ಥ್ಯ ಗಮನಿಸಬೇಕಾಗುತ್ತದೆ. ಇನ್ನೊಂದು ಅಂಶವೆಂದರೆ ಅಚ್ಚಾದ ಸಾಹಿತ್ಯದ ದೋಷಗಳು ಆತ್ಮಕಥನಕಾರರ ದೋಷಗಳಾಗಿರಬಹುದು ಆಗಿಲ್ಲದಿರಬಹುದು ಮತ್ತು ಆತ್ಮಕಥೆಯಲ್ಲಿ ಕಥನಕಾರ ತನ್ನ ಬಗ್ಗೆ ಏನನ್ನು ಹೇಗೆ ಹೇಳಿಕೊಳ್ಳುತ್ತಾನೆ, ಉಳಿದವರ ಬಗ್ಗೆ ಅವನ ಅನಿಸಿಕೆಗಳು ಎಷ್ಟರಮಟ್ಟಿಗೆ ಪೂರ್ವಾಗ್ರಹಪೀಡಿತ ಅಥವಾ ರಹಿತ ಎಂಬುದನ್ನು ಗಮನಿಸಬೇಕು. ಮತ್ತು ತಾವೇ ಬರೆದುಕೊಂಡ ಅಥವಾ ಬರೆಸಿದ ಆತ್ಮಕಥನ ಹಾಗೂ ಇನ್ನೊಬ್ಬರು ಆ ವ್ಯಕ್ತಿಯನ್ನು ಕುರಿತು ಬರೆದ ಜೀವನಚರಿತ್ರೆಯನ್ನು ಪರಿಶೀಲಿಸಿದಾಗ ವ್ಯಕ್ತಿನಿಷ್ಠ ಮತ್ತು ವಸ್ತುನಿಷ್ಠ ದೃಷ್ಟಿ ಹೇಗೆ ಸಾಹಿತ್ಯದಲ್ಲಿ ರೂಪಿತವಾಗಿದೆ ಎಂದು ತಿಳಿಯುತ್ತದೆ. ಈ ಎಲ್ಲ ಮಾದರಿಗಳ ಅಧ್ಯಯನಕ್ಕೆ ಇಲ್ಲಿ ಒಂದೆಡೆ ನಿದರ್ಶನಗಳು ಸಿಗುತ್ತವೆ.

'ಶ್ರಾದ್ಧ'ದಂಥ ಗ್ರಂಥ ಬರೆದ ಪ್ರೊ॥ ಶ್ರೀಕಂಠಕುಮಾರಸ್ವಾಮಿಗಳ ಶ್ರೇಷ್ಠ ಆತ್ಮಕಥೆ ಬಿಟ್ಟು ಹೋದದ್ದು ಏಕೋ ತಿಳಿಯದು.

ಕೊನೆಯಮಾತು : ಇಲ್ಲಿ ಒಬ್ಬ ಮಹಿಳಾ ಆತ್ಮಕಥೆ ಸೇರಬೇಕಿತ್ತು. ಪ್ರಕಟಿತ ಗ್ರಂಥ ಲಭ್ಯವಿಲ್ಲದಿದ್ದಲ್ಲಿ ಬರೆಸಬೇಕಿತ್ತು. ಮಹಿಳೆಯರಿಗೆ ಸಾಕಷ್ಟು ಸಿಗಬೇಕಾದ ಪ್ರಾಶಸ್ತ್ಯ ಎಲ್ಲ ರಂಗದಲ್ಲಿ ಸಿಕ್ಕಿಲ್ಲ ಎಂಬ ಮಾತು ಸಂಕೇತಿ ಸಮಾಜಕ್ಕೂ ಒಪ್ಪುತ್ತದೆ.

ಸಂಕೇತಿ ಸಮುದಾಯದ ಅಧ್ಯಯನದ ಭಾಗವಾಗಿ 'ಸಂಕೇತಿ ಅಧ್ಯಯನ ಮಾಲೆ'ಯಲ್ಲಿ ಈ ಆತ್ಮಕಥೆಗಳು ಬಂದಿವೆ. ಭಾರತದ ಒಟ್ಟು ಸಮಾಜದ ಬಗೆಗೂ 'ಸಾಧನಾ' ಪುಸ್ತಕಮಾಲೆಯಲ್ಲಿ ಇಂಥ ಗ್ರಂಥಗಳು ಬರುತ್ತಿವೆ. ಇದು ಒಳ್ಳೆಯ ಸಂಗತಿ. ಸಮಾಜದ ದಾನಿಗಳಿಂದ ನೆರವು ಪಡೆದು ಇಂಥ ಬೃಹತ್ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಪ್ರಣತಾರ್ತಿಹರನ್‌ರವರು ಇತರರಿಗೆ ಆದರ್ಶಮಾರ್ಗ ತೋರಿದ್ದಾರೆ. ಇವರ ಪ್ರಯತ್ನ ಮುಂದುವರೆಯಲಿ, ಇನ್ನೂ ಅರ್ಥವತ್ತಾದ ವಿಶಿಷ್ಟ ಕೃತಿಗಳನ್ನು ಪ್ರಕಟಿಸಲಿ ಎಂದು ಹಾರೈಸುತ್ತೇನೆ.

ತಾ 22.05.2008 **ಪ್ರೊ॥ ಜಿ. ಅಶ್ವತ್ಥನಾರಾಯಣ**
ಬೆಂಗಳೂರು ಕನ್ನಡ ಪ್ರಾಧ್ಯಾಪಕ(ನಿವೃತ್ತ)

೩. ಅರಿಕೆ

'ಆತ್ಮಕಥೆಗಳು'– ಇದೊಂದು ಮಾತಿನಲ್ಲಿ ಅದೆಷ್ಟು ಅರ್ಥ ಅಡಗಿದೆ ಎಂದರೆ ಒಬ್ಬ ವ್ಯಕ್ತಿಯ ಇಡೀ ಜೀವನವನ್ನೇ ಬಿಂಬಿಸುವ ವ್ಯಾಪಕತೆ ಆ ಪದಕ್ಕೆ ಇದೆ ಎಂದೆನಿಸುವುದಿಲ್ಲವೇ? ಪ್ರತಿಯೊಬ್ಬರ ಜೀವನದಲ್ಲೂ ಅವರವರದೇ ಆದ ಆತ್ಮಕಥೆಯೊಂದು ಇರುತ್ತದೆ. ಒಂದು ದೊಡ್ಡ ಕುಟುಂಬದಲ್ಲಿ ಹುಟ್ಟಿ ತಾಯಿತಂದೆಯರ ಸೇವೆ ಮಾಡಿ, ತಂಗಿ, ತಮ್ಮಂದಿರ ಬದುಕನ್ನು ಕಟ್ಟಿಕೊಟ್ಟು ತಾವೂ ಕ್ರಮೇಣ ಬದುಕಿನಲ್ಲಿ ನೆಲೆಯಾಗುವುದು ಸಹ ಒಂದು ಸಾಧನೆಯೇ. ಭಾರತದಂತಹ ನಮ್ಮ ದೇಶದಲ್ಲಿ, ನಮ್ಮ ಸನಾತನಸಂಸ್ಕೃತಿಯು ಇರುವುದೇ ಹಾಗೆ. ಆ ಸಾಧನೆ ನಮ್ಮಲ್ಲಿ ಸರಿಸುಮಾರು ಎಲ್ಲರ ಮನೆಯಲ್ಲಿಯೂ ದಿನನಿತ್ಯವೂ ನಡೆಯುತ್ತಲೇ ಇರುತ್ತದೆ. ಆದ್ದರಿಂದ ಅದು ಕರ್ತವ್ಯ ಎಂದೆನಿಸಿದೆಯೇ ವಿನಾ 'ಸಾಧನೆ'ಯ ಸಾಲಿಗೆ ಸೇರುವುದಿಲ್ಲ.

ಆದರೆ ಇಂದಿನ ವೇಗದ ಬದುಕಿನ ಗಡಿಬಿಡಿಯಲ್ಲಿ ದಿನಗಳು ಕಳೆದು ಹೋಗುತ್ತಿರುವ ಈ ಸಮಯದಲ್ಲಿ ಕೌಟುಂಬಿಕ ಸಂಬಂಧಗಳ ಕೊಂಡಿಯೂ ಒಂದೊಂದಾಗಿ ಕಳಚಿಹೋಗುತ್ತಿರುವಂತೆ ಭಾಸವಾಗುತ್ತಿದೆ. ಮೊದಲಿನಂತೆ ಅವಿಭಕ್ತ ಕುಟುಂಬಗಳು ಹೆಚ್ಚಿಲ್ಲ. ಇರುವ ಕುಟುಂಬಗಳಲ್ಲಿ ಮಕ್ಕಳೂ ಕಡಿಮೆ ಇದ್ದು ದ್ವೀಪಗಳಾಗಿಬಿಡುತ್ತಿರುವ ಭಯ ಎಲ್ಲರನ್ನೂ ಕಾಡುತ್ತಿದೆ. ಅದರಿಂದಲೇ ಸಂಬಂಧಗಳನ್ನು ಉಳಿಸಿ, ಬೆಳೆಸಿ, ಕಾಯ್ದುಕೊಂಡು ಮಕ್ಕಳನ್ನು ಅದಕ್ಕೆ ಸರಿಹೊಂದಿಸಿ ನಮ್ಮ ಜತೆಗಿಟ್ಟುಕೊಳ್ಳಬೇಕಿದೆ. ಆಗ ಮನೆಯಲ್ಲಿಯೇ ತಮ್ಮ ತಮ್ಮವರು ಮಾಡುವ ಕೆಲಸ ಕಾರ್ಯಗಳ ಅರಿವು ಮೂಡಿ ಅದರ ಬಗೆಗೆ ಒಂದು ರೀತಿಯ ಕಾಳಜಿಯ ಮನೋಭಾವ ಬೆಳೆಯುತ್ತದೆ. ಹೊರಪ್ರಪಂಚಕ್ಕೆ ತೆರೆದುಕೊಳ್ಳುವುದು ಸಹಜವೇ ಆದರೂ ಮನೆಗೆ ಅಂಟಿಕೊಂಡಿರುವುದು ಸಹ ವ್ಯಕ್ತಿ–ವ್ಯಕ್ತಿಗಳ ನಡುವಿನ ಸಾಮ್ಯ ವ್ಯತ್ಯಾಸಗಳನ್ನು ಗುರ್ತಿಸುವಂತೆ ಮಾಡುತ್ತದೆ. ಈ ಅವಲೋಕನವೇ ಮುಂದೆ ಸಾಧನೆಗಳ ಶಿಖರವು ಒಂದಲ್ಲ, ಅನೇಕಾನೇಕ, ಅದನ್ನು ಒಬ್ಬಿಬ್ಬರು ಮಾತ್ರ ಏರಿರುವುದಿಲ್ಲ, ಅನೇಕಾನೇಕರು ಏರಿ ಸಾಧಿಸಿ ತೋರಿಸಿರುತ್ತಾರೆ ಎನ್ನುವ ಅರಿವನ್ನೂ ಮೂಡಿಸುತ್ತದೆ. ಈ ಹಿನ್ನೆಲೆಯಲ್ಲಿಯೇ ಈಗ ಆತ್ಮಕಥೆಗಳು ಪ್ರಾಮುಖ್ಯತೆಯನ್ನು ಪಡೆಯುವುದು. ಕನ್ನಡಸಾಹಿತ್ಯದಲ್ಲಿ ಆತ್ಮಕಥೆಗಳಿಗಿರುವ ವೈಶಿಷ್ಟ್ಯ ಬೇರೆ ಯಾವುದಕ್ಕೂ ಇಲ್ಲ ಎನ್ನುವುದು ಹಲವರ ಅಭಿಪ್ರಾಯ. ಕಾರಣ, ಇಲ್ಲಿ ಯಾವುದೇ ಕಲ್ಪನೆಗೆ ಅವಕಾಶವಿರುವುದಿಲ್ಲ. ಆತ್ಮಕಥೆಗಳು ಸಾಮಾನ್ಯವಾಗಿ ಸತ್ಯಕಥೆಗಳು ಎಂದೇ ಎಲ್ಲರಲ್ಲೂ ಇರುವ ಅಭಿಪ್ರಾಯ. ಈ ಮಾತಿಗೆ ಅಪವಾದವಾಗಿರುವುದೂ ಇದ್ದೀತು. ಆದರೆ ನಿಜವಾದ ಆತ್ಮಕಥೆಯು ಒಂದು ಆದರ್ಶದ ಪಾಲನೆ, ಒಂದು ಗುರಿಸಾಧನೆಯ ನೈಜಚಿತ್ರಣವಂತೂ ಹೌದು.

ಹಲವರ ಆಸಕ್ತಿ ಹಲವು ಕ್ಷೇತ್ರಗಳಲ್ಲಿ. ಹೀಗಾಗಿ ಸಾರ್ವಜನಿಕ ಆಸಕ್ತಿ ಬರುವ ಕ್ಷೇತ್ರಗಳಲ್ಲಿ ಆಗುವ ವೈಯಕ್ತಿಕ ಸಾಧನೆಗೆ ವಿಶೇಷವಾದ ಸ್ಥಾನವುಂಟು. ಅಂತಹ ಸಾಧನೆಗಳು ಬರಹದ, ಪುಸ್ತಕದ ರೂಪದಲ್ಲಿ ಬರಲು ಅರ್ಹವೂ ಹೌದು. ಏಕೆಂದರೆ, ಆ ಕ್ಷೇತ್ರದಲ್ಲಿ ಸಾಧನೆ ಮಾಡಬಯಸುವವರಿಗೆ ಅದೊಂದು ಮಾರ್ಗದರ್ಶಿಯಾಗುತ್ತದೆ. ಈ ಕಾರಣದಿಂದಲೇ ಆತ್ಮಕಥೆಗಳು ವೈಯಕ್ತಿಕವಾಗಿ ನನಗೂ ಬಹಳ ಪ್ರಿಯವಾದ ಸಾಹಿತ್ಯದ ಪ್ರಕಾರ. ಈವರೆಗೆ ಐದಾರುಮಂದಿ ಮಹನೀಯರ ಆತ್ಮಕಥೆಗಳನ್ನು ನಾನು ಬರವಣಿಗೆಯಲ್ಲಿ ತಂದಿರುವ ಕಾರಣ ಒಂದೊಂದು ಸಾಧನೆಯ ಹಿಂದೆಯೂ ಅದೆಷ್ಟು ಪರಿಶ್ರಮವಿರುತ್ತದೆ ಎನ್ನುವುದನ್ನು ಚೆನ್ನಾಗಿ ಅರಿತಿದ್ದೇನೆ. ಆದ್ದರಿಂದಲೇ ಡಾ|| ಪ್ರಣತಾರ್ತಿಹರನ್ ಅವರು ಸಂಕೇತಿ ಆತ್ಮಕಥೆಗಳ ವಿಷಯವನ್ನು ತಿಳಿಸಿದಾಗ ನನಗೆ ಬಹಳ ಸಂತೋಷವೂ, ಕುತೂಹಲವೂ ಆಯಿತು. ಡಾ|| ಹರನ್‌ರವರ ಅಪಾರ ಶ್ರಮದ ಪ್ರತಿಫಲ ಈ ಸಂಪುಟ. ಅವರು ತಮ್ಮ ಸಂಕೇತಿ ಜನಾಂಗದ ಪ್ರತಿಭಾನ್ವಿತರ ಆತ್ಮಕಥೆಗಳನ್ನು ಸಂಗ್ರಹಿಸಿ ಈ ಸಂಪುಟದಲ್ಲಿ ತಂದಿದ್ದಾರೆ. 'ಪಹಲೆ ಘರ್ ಮೇ ದಿಯಾ ಜಲಾನಾ, ಫಿರ್ ಮಂದಿರ್ ಮೇ' ಎನ್ನುವ ಒಂದು ನುಡಿಗಟ್ಟು ಹಿಂದಿಯಲ್ಲಿದೆ. 'ಮೊದಲು ನಿನ್ನ ಮನೆಯಲ್ಲಿ ದೀಪಬೆಳಗಿಸು, ನಂತರ ಮಂದಿರದಲ್ಲಿ ಬೆಳಗಿಸುವೆಯಂತೆ' ಎಂದು ಈ ಮಾತಿನ ಅರ್ಥ. ಈ ಮಾತಿನಂತೆಯೇ ಅವರು ಮೊದಲು ತಮ್ಮ ಕುಲಕ್ಕೆ

ಸೇರಿದ ಸ್ವಜನರ, ಮಾತೃಭಾಷೆಯ ಬಂಧುಗಳ ಸಾಧನೆಯ ಸರಕನ್ನು ಸಂಗ್ರಹಿಸಿ ಓದುಗರ ಕೈಗಿಡುವ ಸಾರ್ಥಕ ಪ್ರಯತ್ನ ಮಾಡಿದ್ದಾರೆ. ಅವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ಹರನ್‌ರವರ 'ಸಂಕೇತಿ ಅಧ್ಯಯನ'ದ ಸಂಪುಟಗಳಲ್ಲಿ ಇದು ಆರನೆಯದು. ಸಂಕೇತಿಕುಲದ ಬಗೆಗೆ, ಕುಲಜರ ಬಗೆಗೆ ಅವರು ಮಾಡಿರುವ ಸಂಶೋಧನೆ, ಸಂಗ್ರಹಿಸಿರುವ ಮಾಹಿತಿಗಳು, ದಾಖಲಿಸಿರುವ ವಿಷಯಗಳು ಇವೆಲ್ಲವೂ ಅನನ್ಯ, ಅನುಕರಣೀಯ. ವೃತ್ತಿಯಲ್ಲಿ ಪ್ರಾಧ್ಯಾಪಕರಾಗಿದ್ದು ತಮ್ಮ ಕೆಲಸವನ್ನು ಸರಿದೂಗಿಸಿಕೊಂಡು, ಆರೆಂಟು ಸಂಪುಟಗಳಲ್ಲಿ ಸಮಗ್ರವಾಗಿ ಸಂಕೇತಿ ಜನಾಂಗದ ಬಗೆಗೆ ಹೊರತಂದಿರುವ ಅನೇಕಾನೇಕ ವಿಷಯಗಳು ಯಾರನ್ನೂ ಬೆರಗುಗೊಳಿಸುವಂತಿವೆ. ಅವರಂತಹ ನಿಷ್ಠಾವಂತ, ಪರಿಶ್ರಮಿ, ಸಹೃದಯಿ ಸಜ್ಜನರನ್ನು ಪಡೆದಿರುವ ಸಂಕೇತಿ ಕುಲಜರು ಪುಣ್ಯಶಾಲಿಗಳು ಎಂದು ನನ್ನ ಭಾವನೆ. ಏಕೆಂದರೆ, ಅವರ ಈ ನಿಃಸ್ಪೃಹ ಪರಿಶ್ರಮವೇ ಇಂದು ಸಂಕೇತಿ ಸಮುದಾಯದ ಬಗೆಗೆ ಆಸಕ್ತರು ವ್ಯಾಪಕವಾಗಿ ತಿಳಿದುಕೊಳ್ಳಬಹುದಾದ ಸದವಕಾಶವನ್ನು ಕಲ್ಪಿಸಿರುವುದು. ನಿಜಕ್ಕೂ ಡಾ॥ ಹರನ್‌ರು ಈ ಘನತರವಾದ ಕೆಲಸವನ್ನು ಕೈಗೊಂಡು ತಮ್ಮ ಸಮಾಜ–ಋಣವನ್ನು ಬಹುಮಟ್ಟಿಗೆ ತೀರಿಸಿಬಿಟ್ಟಿದ್ದಾರೆ ಎಂದೇ ನನ್ನ ಬಲವಾದ ಅನಿಸಿಕೆ. ಅವರಂತಹ ಒಬ್ಬ ಪುತ್ರನನ್ನಾದರೂ ಪ್ರತಿ ಸಮುದಾಯವೂ ಪಡೆದರೆ ಆ ಸಮುದಾಯಗಳ ಸಾಧಕರ ಸಾಧನೆಗಳೂ ಬೆಳಕಿಗೆ ಬಂದು ಸಾರ್ಥಕತೆಯನ್ನು ಕಂಡುಕೊಂಡಾವು.

'ಸಂಕೇತಿ ಅಧ್ಯಯನ'ದ ಆತ್ಮಕಥೆಗಳ ಸಂಪಾದಕತ್ವವನ್ನೂ ಅದರ ಅನೇಕ ಕೆಲಸಗಳನ್ನೂ ಡಾ॥ ಹರನ್‌ರೇ ಬಹುತೇಕ ಮುಗಿಸಿಬಿಟ್ಟಿದ್ದಾರೆ. ಇಲ್ಲಿ ನಾನು ಕೇವಲ ಒಬ್ಬ ಓದುಗಳಾಗಿ ಔಪಚಾರಿಕವಾಗಿ ಕೆಲವು ಮಾತುಗಳನ್ನು ಹೇಳುವುದು ಬಾಕಿ ಉಳಿದಿರುವುದಷ್ಟೆ. ಅವರ ಈ ಸಹಾಯಕ್ಕಾಗಿ ನಾನು ಅವರಿಗೆ ವಂದಿಸಿ, ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಈ ಸಂಪುಟದಲ್ಲಿರುವ ಮಹನೀಯರ ಆತ್ಮಕಥೆಗಳ ಬಗೆಗೆ ನಾನಾದರೂ ಏನನ್ನು ಹೇಳಲು ಸಾಧ್ಯ? ಶ್ರೀ ಬಿ. ಸುಬ್ಬರಾಯರ 'ಸಂಗೀತಗಾರನ ಮೆಲುಕುಗಳು', ಶ್ರೀ ನರಸಿಂಹಮೂರ್ತಿಶಾಸ್ತ್ರಿಯವರ 'ಪಂಡಿತರೊಡನೆ', ಪ್ರೊ॥ ಆರ್. ಎನ್. ದೊರೆಸ್ವಾಮಿಯವರ 'ನನ್ನ ಬದುಕು', ಮೇಜರ್ ಎಚ್. ಸಿ. ವೇಣುಗೋಪಾಲರ 'ನೆನಪುಕೆದರಿದಾಗ' (ಯೋಧನೊಬ್ಬನ ಬದುಕಿನ ನೆನಪುಗಳು) ಹಾಗೂ ಶ್ರೀ ಮತ್ತೂರು ಕೃಷ್ಣಮೂರ್ತಿಯವರ 'ಮತ್ತೂರಿನಿಂದ ಬ್ರಿಟನ್‌ಗೆ' ಈ ಎಲ್ಲ ಕೃತಿಗಳಲ್ಲಿಯೂ ಒಂದೊಂದು ವಿಭಿನ್ನ ರೀತಿಯ ಬದುಕಿಗೆ ನಾವು ಪರಿಚಿತರಾಗುತ್ತೇವೆ. ಇವು ಐದೂ ಬರಹಗಳು ಪಾರಿಜಾತ, ಜಾಜಿ, ಮಲ್ಲಿಗೆ, ಸಂಪಿಗೆ, ಕೇದಿಗೆ ಹೂಗಳಂತೆ ಐದು ಭಿನ್ನ ಪರಿಮಳಗಳನ್ನು ಸೂಸುವಂಥವಾಗಿವೆ. ಯಾವುದೋ 'ಒಂದು' ಸೊಗಸು ಎನ್ನುವಂತಿಲ್ಲ. ಇಲ್ಲಿರುವ ಎಲ್ಲರ ಸಾಧನೆಗಳೂ ಸೊಗಸೇ ಸರಿ. ಎರಡು ಕಥೆಗಳು ಸಂಗೀತ ಕ್ಷೇತ್ರವನ್ನು ಸಾಮಾನ್ಯ ಕ್ಷೇತ್ರವಾಗಿ ಹೊಂದಿದ್ದರೆ, ಎರಡನೆಯದು 'ಪಂಡಿತರೊಡನೆ' ಚಿಕ್ಕದಾದರೂ ಎಂಥ ವಿದ್ವಾಂಸರನ್ನು ಪರಿಚಯಿಸುತ್ತದೆ! ನಾಲ್ಕನೆಯದು ಯೋಧನ ಬದುಕಾದರೆ ಐದನೆಯದು ದಕ್ಷ ಆಡಳಿತ, ನಿರ್ಮಾಣಗಳ ಸಮನ್ವಯವಿರುವ ರೋಚಕ ಬದುಕು.

ಮಾನ್ಯ ಶ್ರೀ ಸುಬ್ಬರಾಯರ ಮೆಲುಕುಗಳಲ್ಲಿ ಅದೆಷ್ಟು ಸ್ವಾರಸ್ಯಕರ ಸಂಗತಿಗಳು ತುಂಬಿವೆ? ಎಳೆಯವಯಸ್ಸಿನಲ್ಲಿಯೇ ಸಂಗೀತದ ಬಗೆಗಿದ್ದ ಆಸಕ್ತಿ ನಾದಸ್ವರದ ನಾದವನ್ನು ಹೊರಡಿಸುವುದರಲ್ಲಿ ಮಾಡಿದ ಪ್ರಯತ್ನದಿಂದ ಹೊರಹೊಮ್ಮುತ್ತದೆ. ವೃತ್ತಿಯಲ್ಲಿ ಅಗ್ರಿಕಲ್ಚರಲ್ ಕಾಲೇಜಿನ ಅಧ್ಯಾಪಕರಾದರೂ ಸಂಗೀತದಮೇಲಿನ ಆಸಕ್ತಿ ಕುಂದದೆ ಇದ್ದುದು ವಿಶೇಷ. ಅವರು ಮಾಡಿಸುವ ಅವರ ಗುರುಗಳ ಪರಿಚಯ ಆ ಮಹಾನ್ ವ್ಯಕ್ತಿಗಳ ಒಂದು 'ಝಲಕ್'ನ್ನೂ ನಾವು ಕಾಣುವಂತಾಗುತ್ತದೆ. ನಾಟಕದ ವರದಾಚಾರ್‌ರ 'ಶಾಕುಂತಲ' ನಾಟಕ ನೋಡಿದ್ದು ಓದುಗರು ತಮ್ಮ ಬಾಲ್ಯದ ದಿನಗಳನ್ನು ನೆನಪಿಸಿಕೊಳ್ಳುವಂತೆ ಮಾಡುತ್ತದೆ.

ಮೈಸೂರಿನ ಸಂಗೀತ ದಿಗ್ಗಜಗಳ ಪರಿಚಯ, ವಾಸುದೇವಾಚಾರ್ಯರಿಗೆ ರೈಲಿನಲ್ಲಿ ಮದನಮೋಹನ ಮಾಳವೀಯರ ಭೇಟಿಯ ರೋಚಕ ಪ್ರಸಂಗ, ಗಾಂಧೀಜಿಯ ಭೇಟಿ, ಇನ್ನೂ ಅನೇಕ ಕುತೂಹಲಕಾರಿ ವಿಷಯಗಳನ್ನು, ವ್ಯಕ್ತಿಗಳನ್ನು ಹೇಳುವ ಕರ್ನಾಟಕ ಹಿಂದುಸ್ತಾನಿ ಎರಡೂ ಶೈಲಿಯ ಸಂಗೀತವನ್ನು ಚೆನ್ನಾಗಿ ಬಲ್ಲ ಶ್ರೀ ಸುಬ್ಬರಾಯರ 'ಮೆಲುಕುಗಳು' ಸಂಗೀತ ಪ್ರಪಂಚದ ಪ್ರತಿಭಾನ್ವಿತರನೇಕರನ್ನು ನಮಗೆ ಭೇಟಿಮಾಡಿಸುತ್ತದೆ. ಅಂಥ ಮಹನೀಯರನ್ನು ನಾವೆಲ್ಲಿ ನೋಡಲು ಸಾಧ್ಯ? ಅವರ ಬದುಕಿಗೆ ತೆರೆದುಕೊಂಡ ಸಂಗೀತದ ಕ್ಷೇತ್ರದಲ್ಲಿ ಸಾಧಕರ ವೈಶಿಷ್ಟ್ಯದ ಬಗೆಗೂ ನಮಗೊಂದು ಇಣುಕುನೋಟವನ್ನು ಕಾಣಿಸುತ್ತದೆ. ಒಟ್ಟಾರೆ ಈ ಕಥಾನಕದ ರಸವನ್ನು ಓದಿಯೇ ಸವಿಯಬೇಕು ಎಂದು ಮಾತ್ರ ಹೇಳಬಲ್ಲೆ.

ಲಿಂಗದಹಳ್ಳಿ ನರಸಿಂಹಮೂರ್ತಿಶಾಸ್ತ್ರಿಯವರು ವಿನೀತರಾಗಿ ಶ್ರೀ ಜೋಯಿಸರಲ್ಲಿ ತಮ್ಮ ಬದುಕಿನ ಬಗೆಗೆ ಹೇಳಿದ್ದರೂ, ಅವರಲ್ಲಿದ್ದ ಅಸಾಧಾರಣ ಪ್ರತಿಭೆಯನ್ನು ಗುರ್ತಿಸದೇ ಇರುವುದಂತೂ ಯಾರಿಗೂ ಸಾಧ್ಯವಿಲ್ಲ. ಸಂಸ್ಕೃತದಲ್ಲಿ ಅವರು ರಚಿಸುತ್ತಿದ್ದ ಆಶುಕವಿತೆಗಳು, ಶೃಂಗೇರಿ ಸಂಸ್ಕೃತ ಪಾಠಶಾಲೆಯ ಅನುಭವಗಳು, ನೈಷಧದ ಪರೀಕ್ಷೆಯಲ್ಲಿ ಶಾಸ್ತ್ರಿಗಳಿಗೆ ರ್‍ಯಾಂಕ್ ಬಂದದ್ದು, ಧಾರವಾಡದ ಸಂಸ್ಕೃತ ಪಾಠಶಾಲೆಯಲ್ಲಿ ಅವರ ಕಲಿಕೆ, ತರ್ಕ ಮೀಮಾಂಸಗಳ ಕಲಿಕೆಯಲ್ಲಿ ಪರಿಣತಿ, ವೇದಾಧ್ಯಯನ ಸಂಪನ್ನರು ಏನೇನನ್ನು ಕಲಿತಿರುತ್ತಾರೆ, ಏನನ್ನು ವಿಶೇಷವಾಗಿ ಕಲಿಯಬೇಕಾಗಿದೆ, ಅದರ ಕಷ್ಟವೇನು ಇತ್ಯಾದಿ ಅನೇಕ ವಿಷಯಗಳನ್ನು ತಿಳಿಸುತ್ತದೆ. ಒಟ್ಟಾರೆ ಶ್ರೀ ನರಸಿಂಹಮೂರ್ತಿಶಾಸ್ತ್ರಿಗಳು ಜೋಯಿಸರಲ್ಲಿ ತಮ್ಮ ಪೂರ್ವಿಕರ ಕೆಲವು ವಿಷಯಗಳನ್ನು ಸೇರಿಸಿ ಇಷ್ಟು ವಿಷಯಗಳನ್ನಾದರೂ ಹೇಳಿದರಲ್ಲ. ಅದು ದಾಖಲೆಯಾಗಿ ಉಳಿಯುವಂತಾಯಿತು ಎನಿಸಿ ಸಂತಸವಾಗುತ್ತದೆ. ಸಮಾಧಾನ ತರುತ್ತದೆ. ಅಂಥ ವಿದ್ವಾಂಸರುಗಳನ್ನು ನಾವು ಸುಲಭದಲ್ಲಿ ಕಾಣಲಾದೀತೆ?

ಪ್ರೊ॥ ಆರ್. ಎನ್. ದೊರೆಸ್ವಾಮಿಯವರ 'ನನ್ನ ಬದುಕು' ಬರಹವನ್ನು ನನ್ನ ತಂದೆ ಶ್ರೀ ಕೆ. ಸುಂದರರಾಜು ಅವರು ಇಂಗ್ಲಿಷಿಗೆ ಮಾಡುತ್ತಿದ್ದೇನೆ ಎಂದು ಹೇಳಿದಾಗ, ನಮ್ಮ ಜತೆ ಯಾವುದೋ ಕೆಲಸದ ನಿಮಿತ್ತವಾಗಿ ನಮ್ಮ ಮನೆಗೆ ಬಂದಿದ್ದ ಆರಡಿಕೊಪ್ಪ ವಿಶ್ವನಾಥ ಶಾಸ್ತ್ರಿಯವರ ಮಗ ಪ್ರೊ॥ ಎ.ವಿ. ನರಸಿಂಹಮೂರ್ತಿಯವರು ಮತ್ತು ಅವರ ಪತ್ನಿ ಶ್ರೀಮತಿ ಕಮಲಾಂಬ ಅವರೂ ಇದ್ದರು. ನಮ್ಮ ತಂದೆ ಹೇಳಿದುದನ್ನು ಕೇಳುತ್ತಿದ್ದ ಶ್ರೀಮತಿ ಕಮಲಾಂಬ ಅವರು ಥಟ್ಟನೆ ಎದ್ದು, "ಸರ್, ನೀವು ಪ್ರೊ॥ ಆರ್. ಎನ್. ದೊರೆಸ್ವಾಮಿಯವರ ಆತ್ಮಕಥೆಯನ್ನು ಇಂಗ್ಲಿಷಿಗೆ ಅನುವಾದಿಸುತ್ತಿದ್ದೀರಾ? ಅವರೆಂಥಾ ದೊಡ್ಡ ವಿದ್ವಾಂಸರು! ನಾನು ಅವರ ಶಿಷ್ಯೆ. ಎಂಥ ಪುಣ್ಯದ ಕೆಲಸ ಮಾಡುತ್ತಿದ್ದೀರಿ. ನಮ್ಮ ಗುರುಗಳ ಕಥೆಯನ್ನು ಅನುವಾದಿಸುತ್ತಿರುವ ನಿಮಗೇ ನಾನು ನಮಸ್ಕಾರ ಮಾಡುತ್ತೇನೆ. ಅದು ನಮ್ಮ ಗುರುಗಳಿಗೂ ಸಲ್ಲುತ್ತದೆ" ಎಂದು ಎದ್ದವರೇ ನಮ್ಮ ತಂದೆಯ ಕಾಲಿಗೆ ನಮಸ್ಕರಿಸಿದರು! ವೈಣಿಕ ವಿದ್ವಾನ್ ದೊರೆಸ್ವಾಮಿಯವರ ಬಗ್ಗೆ ಇನ್ನು ನಾನೇನು ಹೇಳುವುದು. ಶ್ರೀಮತಿ ಕಮಲಾಂಬರಂತೆ ಶ್ರೀ ದೊರೆಸ್ವಾಮಿಯವರನ್ನು ಕಂಡವರು ಅದೆಷ್ಟು ಮಂದಿ ಇರುವರೋ? ಮೈಸೂರಿನ ಮಕುಟಮಣಿಯಂತಿದ್ದ, ರಾಜಾಸ್ಥಾನದಲ್ಲಿ ಆಸ್ಥಾನ ವಿದ್ವಾಂಸರಾಗಿದ್ದ ವೀಣಾ ವೆಂಕಟಗಿರಿಯಪ್ಪನವರ ಶಿಷ್ಯರು ಇನ್ನು ಹೇಗೆ ತಾನೆ ಇರಲು ಸಾಧ್ಯ? ಸಂಗೀತವಲ್ಲದೆ ಬೇರೆ ಕಲಿಕೆ ಇಲ್ಲ ಎಂದು ಪ್ರಯತ್ನ ಪಡುತ್ತಲೇ ಇದ್ದು, ತಡವಾದರೂ ಗುರುಗಳಲ್ಲಿ ಪಾಠಕ್ಕೆ ಸೇರಿದುದು, ಕಲಿಯುತ್ತಲೇ ಅವರೊಡನೆ ಪ್ರವಾಸಗಳನ್ನು ಮಾಡಿದುದು, ರೇಡಿಯೋ ಕಾರ್ಯಕ್ರಮಕ್ಕೆ ಸಮಯಕ್ಕೆ ಸರಿಯಾಗಿ ಗುರುಗಳನ್ನು ತಲುಪಿಸಿದುದು, ಆರೋಗ್ಯ ತಪ್ಪಿದ ಗುರುಗಳನ್ನು ಸುಧಾರಿಸಿದುದು, ಗುರುಗಳು ಬಟ್ಟಬಯಲಿನಲ್ಲಿ ಕಛೇರಿ ಮಾಡಿದುದು, ದೊರೆಸ್ವಾಮಿ ಅಯ್ಯಂಗಾರ್‌ರಿಗೆ ವ್ಯಾಯಾಮ ಹೇಳಿಕೊಟ್ಟಿದ್ದು, ...ಒಂದೇ ಎರಡೇ ಸ್ವಾರಸ್ಯಕರ ಪ್ರಸಂಗಗಳು? ದುಃಖದಲ್ಲಿ ಸಾಂತ್ವನ ಹೇಳಿದ ಗುರುಗಳು ಅನಂತದಲ್ಲಿ ಲೀನವಾದದ್ದನ್ನು ಹೇಳಿದ ನಂತರವೇ ಶ್ರೀ ದೊರೆಸ್ವಾಮಿಯವರು ತಮ್ಮ ವೃತ್ತಿಜೀವನ, ಸಂಸಾರ, ಮನೆ, ಕೃತಿರಚನೆಯಂತಹಾ ಸಾಧನೆಗಳ ಬಗ್ಗೆ ವಿನೀತಭಾವದಿಂದ ಹೇಳುವುದು. ನಾವು ಈ ಆತ್ಮಕಥೆಯಲ್ಲಿ ಎಂಥ ಗುರು ಎಂಥ ಶಿಷ್ಯರನ್ನು ಕಾಣುತ್ತೇವೆ. ಎಂದರೆ ಓದಿಮುಗಿಸಿದನಂತರ ನಮಗರಿವಿಲ್ಲದಂತೆಯೇ ಧನ್ಯತಾಭಾವವೊಂದು ನಮ್ಮನ್ನು ಆವರಿಸಿರುತ್ತದೆ.

ನಾಲ್ಕನೆಯ ಆತ್ಮಕಥೆ 'ಯೋಧನ ಬದುಕು' ಇವೆಲ್ಲಕ್ಕಿಂತ ಭಿನ್ನವಾಗಿದ್ದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದು, ಅನಂತರ ಭಾರತ ಸೇನೆಯಲ್ಲಿಯೇ ಅಧಿಕಾರಿಯಾಗಿ ದೇಶಸೇವೆ ಸಲ್ಲಿಸಿದ 'ಯೋಧ' ನೊಬ್ಬನ ಸಾಹಸಮಯ ಬದುಕಿನ ಸತ್ಯದರ್ಶನವನ್ನು ಮಾಡಿಸುವಂಥದ್ದು. ಮತ್ತೂರು ಹಳ್ಳಿಯ ವಾತಾವರಣದಲ್ಲಿ ಪತ್ನಿ ಸಾವಿತ್ರಿಯನ್ನು ಶಿವಮೊಗ್ಗೆಗೆ ಸಿನೆಮಾಗೆ ಕರೆದೊಯ್ದುದು, ಕತ್ತಲಲ್ಲಿ ಈಜಿ ಹೋಗಿ ತೆಪ್ಪವನ್ನು ತಂದುದು ನಗೆ ಮೂಡಿಸಿದರೆ, ಗಾಂಧೀಜಿಯು ಹತರಾದಾಗ ಅವರ ಚಿತಾಭಸ್ಮವು ಅರೇಬಿಯನ್ ಸಮುದ್ರವನ್ನು ಬೆರೆತಾಗ ಅದರ ಸುತ್ತಲೂ ಶ್ರೀ ವೇಣುಗೋಪಾಲರು ಈಜಿ ಬಂದದ್ದು ಕಂಗಳಲ್ಲಿ ಹನಿಗೂಡಿಸುತ್ತದೆ. 'ಮರಾಠ ಲೈಟ್ ಇನ್‌ಫೆಂಟ್ರಿ', 'ವ್ಯರ್ಥ ಸಾಹಸ', 'ಮಣಿಪುರ ರೈಫಲ್ಸ್ ಪುನರ್ನಿರ್ಮಾಣ' ಇಂತಹ ಹಲವು ವಿಷಯಗಳಲ್ಲಿ ಯಾವುದು ಹೆಚ್ಚು ಚೆನ್ನಿದೆ, ಯಾವುದು ಕಡಿಮೆ ಎಂದು ಹೇಳಲು ಬರುವಂತಿಲ್ಲ. ಒಟ್ಟಾರೆ ಇಡೀ ಭಾರತದ ಒಂದು ಸಮಗ್ರ ಚಿತ್ರಣವಿದ್ದು ಅದರ ದರ್ಶನ ಮಾಡಿಸುತ್ತದೆ. ಸಾಮಾನ್ಯವಾಗಿ ಯೋಧರ ಬದುಕಿನ ನೋಟಗಳು ಎಲ್ಲರಿಗೂ ಸಿಗುವಂಥವಲ್ಲ. ಅದಕ್ಕೆ ಅದರದೇ ಆದ ವೈಶಿಷ್ಟ್ಯವಿರುತ್ತದೆ. ವ್ಯಕ್ತಿಗಳಂತೆಯೇ ಆ ಬದುಕಿನಲ್ಲಿ ಅವರ ಅನುಭವಗಳೂ ಭಿನ್ನವಾಗಿರುತ್ತವೆ. ಆದ್ದರಿಂದ ಇದೊಂದು ಹೊಸ ರೀತಿಯ ಕಥಾನಕ. ಆಸಕ್ತ ಓದುಗರ ರುಚಿಗೆ ಏನನ್ನೂ ಕಡಿಮೆ ಮಾಡದಂಥದ್ದು. ಶ್ರೀ ವೇಣುಗೋಪಾಲರ ವಿಶೇಷ ಬದುಕಿನ ಅಪರೂಪದ ಚಿತ್ರಣವು ಕಣ್ಣಿಗೆ ಕಟ್ಟಿದಂತೆ ನಮ್ಮನ್ನು ಬರಹದೊಡನೆಯೇ ತೇಲಿಸಿಕೊಂಡು ಹೋಗುತ್ತದೆ.

ಇನ್ನು 'ಮತ್ತೂರಿನಿಂದ ಬ್ರಿಟನ್‌ಗೆ' ಇದು ಡಾ॥ ಮತ್ತೂರು ಕೃಷ್ಣಮೂರ್ತಿಯವರ ಜೀವನಗಾಥೆ. ಶ್ರೀಯುತರ ಬದುಕಿನ ಚಿತ್ರಣದ ನಿರೂಪಣೆಯನ್ನು ನಾನೇ ಮಾಡಿರುವುದರಿಂದ ಇಷ್ಟನ್ನು ಮಾತ್ರ ಹೇಳಬಲ್ಲೆ. ಸಿನಿಮಾಗಳಿಗೆ ಸಂಬಂಧಿಸಿದಂತೆ ಇಂಗ್ಲಿಷಿನಲ್ಲಿ ಒಂದು ಮಾತಿದೆ, "Action packed thriller" ಎಂದು! ಈ ಮಾತು ಮಾನ್ಯ ಮತ್ತೂರ್‌ಜೀಯವರ ಜೀವನದರ್ಶನ ಮಾಡುವವರಿಗೆ ಶತಾಂಶ ನಿಜ ಎನಿಸುತ್ತದೆ. ಬಡಕುಟುಂಬವೊಂದರಲ್ಲಿ ಹುಟ್ಟಿ ಅಲ್ಲಲ್ಲಿ ವಾರಾನ್ನ ಮಾಡಿಕೊಂಡು ಕಷ್ಟಪಟ್ಟು ಹತ್ತನೇ ತರಗತಿಯವರೆಗೆ ಓದಿ, ಮುಂದೆ ಓದಲಾಗದೆ ಕ್ಯಾಂಟೀನ್ ನಡೆಸಿ, ಬಸ್ ಕಂಡಕ್ಟರನಾಗಿ, ಟಿಕೆಟ್ ಇನ್ಸ್‌ಪೆಕ್ಟರ್ ಆಗಿ, ಮಿಲ್ಲುಗಳಲ್ಲಿ ಟೈಂಕ್ಲಾರ್ಕ್ ಆಗಿ, ಪತ್ರಿಕೆಯ ವರದಿಗಾರರಾಗಿ, ಆಕಾಶವಾಣಿಯ ಕಲಾವಿದನೂ ಆಗಿ, ಕೊನೆಗೆ ಭಾರತೀಯ ವಿದ್ಯಾಭವನದ ರಿಜಿಸ್ಟ್ರಾರ್ ಆಗಿ ಸೇರಿದವರು. ಕಡಲಾಚೆಯ ಲಂಡನ್‌ನಲ್ಲಿ ಭವನವನ್ನು ನೆಲೆಗೊಳಿಸಿ ಭಾರತೀಯ ಸಂಸ್ಕೃತಿ ಪ್ರಚಾರದ ಕಂಕಣತೊಟ್ಟು ನಮ್ಮ ದೇಶದ ಕೀರ್ತಿಪತಾಕೆಯನ್ನು ಹಾರಿಸಿ, 25 ವರ್ಷಗಳ ಅನನ್ಯ ಸೇವೆಯನ್ನು ಪೂರೈಸಿ, ಸ್ವದೇಶಕ್ಕೆ ವಾಪಸಾಗಿ ಬೆಂಗಳೂರು, ಮೈಸೂರು, ಬಾಗಲಕೋಟೆ, ಮಡಿಕೇರಿ ಈಗ ಶಿವಮೊಗ್ಗ ಭವನ ಕೇಂದ್ರಗಳನ್ನು ಸ್ಥಾಪಿಸಿ, ಇಂದಿಗೂ ಅವಿಶ್ರಾಂತರಾಗಿ ಅವಿರತವಾಗಿ ದುಡಿಯುತ್ತಲೇ ಇರುವ ಬಹುಮುಖ ಪ್ರತಿಭೆಯ ಮತ್ತೂರರ ಜೀವನದ ಸರ್ವರುಚಿಯ ಕಥೆಯನ್ನು ಓದಿಯೇ ತಿಳಿಯಬೇಕು. ಇದನ್ನು ಓದಿದ ನಂತರ ನನ್ನ ಮಾತು ಸತ್ಯ ಎಂದು ತಮಗೂ ಅನ್ನಿಸೀತು ಎಂದು ಧೈರ್ಯದಿಂದ ಹೇಳಬಲ್ಲೆ.

ಒಟ್ಟಾರೆ ಇಂಥ ಮಹನೀಯರ ಜೀವನಗಾಥೆಗಳಿರುವ ಈ ಸಂಪುಟವು ಅಮೂಲ್ಯವಾದದ್ದೆಂದು ನನ್ನ ಭಾವನೆ. ನನ್ನನ್ನು ಸಂಪುಟದ ಸಂಪಾದಕಿ ಎಂದು ಹೆಸರಿಸಿರುವ ಡಾ॥ ಹರನ್ ಅವರಿಗೆ ನಾನು ಆಭಾರಿ. ಸಮಸ್ತ ಓದುಗರೊಡನೆ ನನ್ನ ನಾಲ್ಕಾರು ಮಾತುಗಳನ್ನೂ ಅಭಿಪ್ರಾಯಗಳನ್ನೂ ವಿನಯದಿಂದ ಹಂಚಿಕೊಳ್ಳಲು ಅವಕಾಶ ಮಾಡಿಕೊಟ್ಟ ಡಾ॥ ಹರನ್‌ರವರಿಗೆ ನನ್ನ ಕೃತಜ್ಞತೆಗಳನ್ನು ಸಮರ್ಪಿಸಿ ಮತ್ತೊಮ್ಮೆ ಶುಭ ಹಾರೈಸುತ್ತೇನೆ.

ಸುಮನಾ ವಿಶ್ವನಾಥ್
ಮೈಸೂರು

ಕೃತಜ್ಞತೆಗಳು

ಶ್ರೀ ಬಿ. ಸುಬ್ಬರಾವ್, ಲಿಂಗದಹಳ್ಳಿ ವಿದ್ವಾನ್ ನರಸಿಂಹಮೂರ್ತಿ ಶಾಸ್ತ್ರೀ, ಪ್ರೊ॥ ಆರ್. ಎನ್. ದೊರೆಸ್ವಾಮಿ, ಮೇಜರ್ ಎಚ್. ಸಿ.ವೇಣುಗೋಪಾಲ್, ಡಾ. ಮತ್ತೂರು ಕೃಷ್ಣಮೂರ್ತಿ ಡಿ. ಲಿಟ್. ಅವರಿಗೆ,

ಡಾ. ಮೀರಾಮೂರ್ತಿ, ಶ್ರೀ ಬಿ.ಜಿ. ಜಗನ್ನಾಥ ಜೋಯಿಸ್, ಶ್ರೀ ಆರ್. ಎಲ್. ಅನಂತರಾಮಯ್ಯ, ಶ್ರೀಮತಿ ಸುಮನಾ ವಿಶ್ವನಾಥ್ ಅವರಿಗೆ,

ಮುನ್ನಿನ ಪ್ರಕಾಶಕರಾದ ಆಸ್ತಿಕ ವಿವರ್ಧಿನಿ ಸಂಘ, ಲಿಂಗದಹಳ್ಳಿ; ಸಂಗೀತಕಲಾರತ್ನ ಪ್ರೊ. ಆರ್. ಎನ್. ದೊರೆಸ್ವಾಮಿ ಅಭಿನಂದನ ಸಮಿತಿ, ಮೈಸೂರು; ಭಾರತೀ ಪ್ರಕಾಶನ, ಮೈಸೂರು; ಗಮಕ ಕಲಾ ಪರಿಷತ್, ಹೊಸಹಳ್ಳಿ ಅವರಿಗೆ,

ಸಂಪಾದಕರಾದ ಶ್ರೀ ಎಲ್. ವಿ. ಸೀತಾರಾಮ್; ಡಾ. ಬಿ.ಎಸ್. ಪ್ರಣತಾರ್ತಿಹರನ್, ಶ್ರೀ ಎನ್. ಎಸ್. ಶಾರದಾ ಪ್ರಸಾದ್, ಶ್ರೀ ರಾಜಾರಾಮಮೂರ್ತಿ ಅವರಿಗೆ,

ಗ್ರಂಥಕ್ಕೆ ಮುನ್ನುಡಿ ಬರೆದುಕೊಟ್ಟು ಹರಸಿರುವ ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೆ,

ಗ್ರಂಥದ ಬಗೆಗೆ, ತಮ್ಮ ಅಭಿಪ್ರಾಯವನ್ನು ಬರೆದುಕೊಟ್ಟು ಹರಸಿರುವ ವಿದ್ವಾಂಸರಾದ ಡಾ. ಕೆ. ಅನಂತರಾಮು, ಪ್ರೊ. ಎಲ್. ಎಂ. ಎಲ್. ಶಾಸ್ತ್ರೀ, ಡಾ. ಬಿ.ಎಸ್. ನರಹರಿ, ಡಾ. ಎಂ.ಎಸ್. ವಿಜಯಾ ಹರನ್ ಅವರಿಗೆ ಮತ್ತು ಪ್ರತಿಕ್ರಿಯಿಸಿರುವ ಎಲ್ಲ ಸಹೃದಯರಿಗೆ,

ಕರಡು ತಿದ್ದಿಕೊಟ್ಟು ಉಪಕರಿಸಿದ ಶ್ರೀ ಎನ್. ಎಸ್. ಶಾರದಾ ಪ್ರಸಾದ್, ವಿದ್ವಾನ್ ಡಾ. ಟಿ.ವಿ. ಸತ್ಯನಾರಾಯಣ, ಪ್ರೊ. ಎನ್. ನರಸಿಂಗರಾವ್, ಶ್ರೀ ಪೂಮಗಾಮೆಗೋಪಿ, ಡಾ. ಎಂ.ಎಸ್. ವಿಜಯಾಹರನ್, ಶ್ರೀ ಎಂ.ವಿ. ಕೃಷ್ಣ ಅವರಿಗೆ,

ಈ ಪುಸ್ತಕದ ಪ್ರಕಟಣೆಗೆ ಉದಾರವಾಗಿ ಆರ್ಥಿಕ ನೆರವು ನೀಡಿ ಪ್ರೋತ್ಸಾಹಿಸಿರುವ ಡಾ. ಮತ್ತೂರು ಕೃಷ್ಣಮೂರ್ತಿ ಡಿ.ಲಿಟ್. (ಸಂಪುಟಾಧ್ಯಕ್ಷರು), ಶ್ರೀಮತಿ ಕುಮುದ ಎನ್.ಪ್ರಸಾದ್ – ಶ್ರೀ ಬಿ.ಎಸ್.ನಾಗೇಂದ್ರ ಪ್ರಸಾದ್, ಶ್ರೀಮತಿ ಎಸ್.ನಾಗಲಕ್ಷ್ಮಿ – ಶ್ರೀ ಬಿ.ವಿ.ಸುಬ್ಬರಾಮಯ್ಯ, (ಪರವಾಗಿ: ಶ್ರೀಮತಿ ಉಷಾನಾರಾಯಣ್ – ಶ್ರೀ ಬಿ.ಎಸ್.ಲಕ್ಷ್ಮೀ ನಾರಾಯಣ), ಶ್ರೀಮತಿ ಸುಮನ್ ಸುಬ್ರಹ್ಮಣ್ಯ – ಶ್ರೀ ಬಿ.ಎಸ್.ಸುಬ್ರಹ್ಮಣ್ಯ (ಫಣೀಶ್), ಶ್ರೀಮತಿ ಬಿ.ಎಸ್. ನಾಗರತ್ನ – ಶ್ರೀ ಎ.ವಿ. ಶಂಕರಮೂರ್ತಿ (ಮಹಾಪೋಷಕರು), ಸಾವಿತ್ರಮ್ಮಜ್ಜಿ / ಶ್ರೀಮತಿ ಆರ್.ಎಸ್.ಗಾಯತ್ರಮ್ಮ, ಶ್ರೀಮತಿ ಎನ್. ಎಸ್. ಸರಸ್ವತಿ – ಶ್ರೀ ಎಂ. ನಾಗರಾಜ್ (ಪೋಷಕರು) ಅವರಿಗೆ,

ಶ್ರೀಮತಿ ನಾಗರತ್ನ – ಶ್ರೀ ಎ.ವಿ. ಶಂಕರಮೂರ್ತಿ, ಶ್ರೀಮತಿ ಎನ್. ಎಸ್. ಸರಸ್ವತಿ – ಶ್ರೀ. ಎಂ. ನಾಗರಾಜ್ ಅವರಿಗೆ,

ಈ ಕಾರ್ಯದಲ್ಲಿ ಸಹಕಾರವಿತ್ತು ಪ್ರೋತ್ಸಾಹಿಸಿರುವ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಪ್ರೊ.ಕೆ. ಶ್ರೀಹರಿ ಹಾಗೂ ಪ್ರಾಂಶುಪಾಲರಾದ ಪ್ರೊ. ಟಿ.ಎನ್. ಪ್ರಭಾಕರ ಮತ್ತು ಪ್ರೊ. ಎಚ್. ಜಗದಾಂಬ ಅವರಿಗೆ,

ಸಮುದಾಯ ಅಧ್ಯಯನ ಕೇಂದ್ರದ ಎಲ್ಲ ವಿದ್ವಾಂಸರು ಮತ್ತು ಪದಾಧಿಕಾರಿಗಳಿಗೆ, ವಿಶೇಷ ಆಸಕ್ತಿಯಿಂದ ನಿರ್ವಹಣಾ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಶ್ರೀ ಬಿ.ವಿ. ವೆಂಕಟನಾರಾಯಣ ಮತ್ತು ಶ್ರೀ ಎ.ಎಸ್. ನಾಗೇಶ ಅವರಿಗೆ, ಎಲ್ಲ ಪೋಷಕ ಬಂಧುಗಳಿಗೆ,

ಅಂದವಾಗಿ ಅಕ್ಷರವಿನ್ಯಾಸ ಮಾಡಿಕೊಟ್ಟ ಮೀನಾ–ಸುರೇಶ್ ಅವರಿಗೆ,

ಅಂದವಾಗಿ ಮುದ್ರಿಸಿಕೊಟ್ಟಿರುವ ಬೆಂಗಳೂರಿನ ಲಕ್ಷ್ಮೀ ಮುದ್ರಣಾಲಯದವರಿಗೆ.

೪ ಪರಿವಿಡಿ

ಸಂಕೇತಿ : ಆತ್ಮಕಥೆಗಳು

ಅನುಬಂಧ

ಸಂಗೀತಗಾರನ ಮೆಲುಕುಗಳು

ಮೂಲ ಇಂಗ್ಲಿಷ್ ಲೇಖಕರು

ಬಿ. ಸುಬ್ಬರಾವ್

ಸಂಪಾದಕರು ಮತ್ತು ಅನುವಾದಕರು

ಡಾ. ಮೀರಾಮೂರ್ತಿ

ಸಂಗೀತಗಾರನ ಮೆಲುಕುಗಳು*

ಬೆಕ್ಕಿಗೆ ಒಂಬತ್ತು ಜನ್ಮ ಎಂದು ಹೇಳುವುದುಂಟು. ಆ ಲೆಕ್ಕಕ್ಕೆ ನಾನೂ ಒಂದು ಬೆಕ್ಕೇ ಸರಿ. ಸಾವಿನೊಡನೆ ನನ್ನ ಒಡನಾಟದ ಮೊದಲ ಬಾರಿ ಎಂದರೆ ೧೮೯೪ರಲ್ಲಿ ನನ್ನ ಜನನದ ಸಂದರ್ಭದ್ದು. ಸತ್ತು ಹುಟ್ಟಿದ ಮಗು ಎಂದು ಭಾವಿಸಿ ನನ್ನನ್ನು ಒಂದು ಕುಕ್ಕೆಯಲ್ಲಿ ಹಾಕಿದ್ದರಂತೆ. ಮಾರನೆಯ ಬೆಳಗ್ಗೆ ಕೈ ಕಾಲು ಅಲ್ಲಾಡಿಸುತ್ತಾ ಜೀವಂತವಾಗಿದ್ದ ನನ್ನನ್ನು ಕಂಡರಂತೆ. ಸಾವಿನೊಡನೆ ನನ್ನ ಎರಡನೆಯ ಒಡನಾಟ ಎಂದರೆ ೧೯೩೦ ರಲ್ಲಿ. ಅಕೋಲಾದಿಂದ ಅಕೋಟ್‌ಗೆ ಪ್ರಯಾಣ ಮಾಡಲೆಂದು ಒಂದು ಬಸ್ಸಿನ ಡ್ರೈವರ್ ಪಕ್ಕದ ಸೀಟಿನಲ್ಲಿ ಕುಳಿತಿದ್ದೆ ನಾನು. ಬಸ್ಸು ಹೊರಡಲು ಇನ್ನೂ ಸಮಯವಿದೆಯೆಂದು ಕೆಳಕ್ಕೆ ಇಳಿದಿದ್ದೆ. ಮತ್ತೆ ನಾನು ಬಸ್ಸು ಹತ್ತುವ ಹೊತ್ತಿಗೆ ಒಬ್ಬ ಪೊಲೀಸ್ ಅಧಿಕಾರಿ ಆ ಸೀಟನ್ನು ಆಕ್ರಮಿಸಿಬಿಟ್ಟಿದ್ದ. ನನಗೆ ಜಾಗ ಬಿಟ್ಟು ಕೊಡಲು ಆತ ಒಪ್ಪಲೇ ಇಲ್ಲ. ನನ್ನ ಪ್ರಯಾಣಕ್ಕೆ ಅಂತಹ ತುರ್ತು ಇಲ್ಲವಾದ್ದರಿಂದ ಪ್ರಯಾಣವನ್ನು ರದ್ದುಗೊಳಿಸಿದೆ. ಆ ಬಸ್ಸು ಎದುರುಗಡೆ ಬರುವ ಬಸ್ಸಿಗೆ ಢಿಕ್ಕಿ ಹೊಡೆದು ಪೊಲೀಸ್ ಅಧಿಕಾರಿ ಮರಣಹೊಂದಿದ. ೧೯೩೪ರಲ್ಲಿ ಬಿಹಾರದ ಭಾರಿ ಭೂಕಂಪದ ಸಂದರ್ಭದಲ್ಲಿ ಭೂಮಿಯ ಸೀಳಿನೊಳಗೆ ಸಿಕ್ಕಿಬಿದ್ದಿದ್ದೆ; ಭಗವಂತನ ದಯೆಯಿಂದ ಅದ್ಭುತ ರೀತಿಯಲ್ಲಿ ಪಾರಾದೆ. ನಾನಾಗ ಪೂಸಾದಲ್ಲಿ ಹೊಗೆಸೊಪ್ಪು ಸಂಶೋಧನೆಯಲ್ಲಿ ತೊಡಗಿದ್ದೆ. ನಾಗಪುರದ ಕಾಲೇಜ್ ಆಫ್ ಅಗ್ರಿಕಲ್ಚರ್ ಹೊರತಂದ ಒಂದು ಜರ್ನಲ್ಲಿನಲ್ಲಿ ಭೂಕಂಪದ ನನ್ನ ಅನುಭವವನ್ನು ದಾಖಲಿಸಿದ್ದೇನೆ. ನಾಗಪುರದ ಕ್ರಾಡಕ್ ಟೌನಿನಲ್ಲಿ ಡಾ|| ಖಾರೆ ಅವರ ಬಂಗಲೆಯ ಬಳಿ ಒಂದು ಮುಂಜಾನೆ ಚಿರತೆಯೊಂದಿಗೆ ಮುಖಾಮುಖಿಯಾದದ್ದು, ನಿಶ್ಚಿತ ಸಾವಿನಿಂದ ನಾನು ಪಾರಾದ ನಾಲ್ಕನೆಯ ಸಂದರ್ಭ.

ಸೇವೆಯಿಂದ ನಿವೃತ್ತನಾದ ಮೇಲೆ ನನಗೆ ಸನ್ಮಾನ ಒದಗಿ ಬರುತ್ತದೆಂದು ಜ್ಯೋತಿಷಿಯೊಬ್ಬರು ನುಡಿದಿದ್ದರು. ಸರ್ಕಾರಿ ಸೇವೆಯಲ್ಲಿ ನನ್ನ ಒಳ್ಳೆಯ ಸಾಧನೆಯಿಂದಾಗಿ 'ರಾವ್ ಸಾಹೇಬ್' ಎಂಬ ಬಿರುದಾದರೂ ನನಗೆ ಲಭಿಸಬಹುದೆಂದು ನಾನೂ ಭಾವಿಸಿದ್ದೆ. ಭಾರತಕ್ಕೆ ಸ್ವಾತಂತ್ರ್ಯ ದೊರೆತು, ಬಿರುದು ನೀಡುವುದನ್ನೇ ನಿಲ್ಲಿಸಿದಾಗ ಜ್ಯೋತಿಷಿ ನನಗೆ ಆಶ್ವಾಸನೆ ಕೊಟ್ಟಿದ್ದನ್ನೂ ಮರೆತೇ ಬಿಟ್ಟೆ.

ಸೇವೆಯಿಂದ ನಿವೃತ್ತನಾದ ಮೇಲೆ ನನ್ನ ಬಿಡುವಿನ ವೇಳೆಯನ್ನು ಸಂಗೀತಕ್ಕಾಗಿ ವಿನಿಯೋಗಿಸತೊಡಗಿದೆ. (ಲೇಖನಗಳ ಬರವಣಿಗೆ, ಆಕಾಶವಾಣಿಯ ಭಾಷಣಗಳು, 'ರಾಗನಿಧಿ' ಎನ್ನುವ ಗ್ರಂಥದ ರಚನೆ ಇತ್ಯಾದಿ) ಸರ್ಕಾರಿ ಸೇವೆಯಲ್ಲಿ ನಾಗಪುರದಲ್ಲಿದ್ದಾಗಲೇ ಪಿಟೀಲು ಹಾಗೂ ವಿಚಿತ್ರವೀಣಾವಾದಕನಾಗಿ ಮತ್ತು ಸಂಗೀತಶಾಸ್ತ್ರಜ್ಞನೆಂದು ಹೆಸರುಗಳಿಸಿದ್ದೆ. ನನ್ನ ಸೇವಾ ನಿವೃತ್ತಿಯ ಅನಂತರ ಆಕಾಶವಾಣಿಯ ದೆಹಲಿ, ನಾಗಪುರ, ಬೆಂಗಳೂರುಗಳ ಹಲವಾರು ಸಮಿತಿಗಳಿಗೆ ನೇಮಿಸಲ್ಪಟ್ಟೆ. ಪುಣೆಯ ಶ್ರೀವಿನಾಯಕರಾವ್ ಪಟವರ್ಧನ್ ಪ್ರಕಟಪಡಿಸಿದ ನನ್ನ ಗ್ರಂಥ 'ರಾಗನಿಧಿ'ಯ ಮೊದಲ ಭಾಗ ಸಂಗೀತ ಜಗತ್ತಿನಲ್ಲಿ ಮನ್ನಣೆ ಗಳಿಸಿತು. ಮುಂದಿನ ಭಾಗಗಳ ಪ್ರಕಟಣೆಯ ಭಾರವನ್ನು 'ಮದ್ರಾಸ್ ಮ್ಯೂಸಿಕ್ ಅಕಾಡೆಮಿ' ವಹಿಸಿಕೊಂಡಿತು. ದೆಹಲಿಯ ಸಂಗೀತ ನಾಟಕ ಅಕಾಡೆಮಿ ಇದಕ್ಕಾಗಿ ಧನಸಹಾಯ ನೀಡಿತು. ಮದ್ರಾಸಿನ 'ಮ್ಯೂಸಿಕ್ ಅಕಾಡೆಮಿ' ಯು ತನ್ನ ತಜ್ಞರ ಸಮಿತಿಗೆ ೧೯೬೫ ರಲ್ಲಿ ನನ್ನನ್ನು ನೇಮಿಸುವ ಕೃಪೆ ಮಾಡಿತು. 'ರಾಗನಿಧಿ'ಯ ಕೊನೆಯ ಭಾಗ (ನಾಲ್ಕನೆಯ ಭಾಗ) ೧೯೬೮ರ ಡಿಸೆಂಬರ್‌ನಲ್ಲಿ ಪ್ರಕಟವಾಯಿತು. 'ಮ್ಯೂಸಿಕ್ ಅಕಾಡೆಮಿ' ಯ ಅಧ್ಯಕ್ಷರಾದ ಜಸ್ಟಿಸ್ ಸಂಗೀತ ಕಲಾನಿಧಿ ಶ್ರೀ ಟಿ. ವೆಂಕಟರಾಮ ಅಯ್ಯರ್‌ರವರು ನಾಲ್ಕನೆಯ ಭಾಗವನ್ನು ಬಿಡುಗಡೆ ಮಾಡಿದರು. ಉತ್ತರಾದಿ ಮತ್ತು ದಕ್ಷಿಣಾದಿ ರಾಗಗಳ ಈ ಭಂಡಾರ ಇತ್ತೀಚಿನ ಕಾಲದ ಅತ್ಯಂತ ಮೌಲಿಕ ಗ್ರಂಥವೆಂದು ಅವರು ಕೊಂಡಾಡಿದರು. ಸಂಗೀತ ಕಲಾನಿಧಿ ಮುಡಿಕೊಂಡಮ್ ವೆಂಕಟರಾಮ ಅಯ್ಯರ್‌ರವರು 'ರಾಗನಿಧಿ'ಯ ಮೊದಲ ಭಾಗ ತಮ್ಮ ಮೇಲೆ ಎಂತಹ ಪರಿಣಾಮ ಬೀರಿತೆಂದು ವಿವರಿಸಿದರು. ಪ್ರಮುಖ ಭಾರತೀಯ ಭಾಷೆಗಳಿಗೆ ಈ ಗ್ರಂಥ ಅನುವಾದವಾಗಬೇಕೆಂದೂ ಅವರು ಸಲಹೆ ಮಾಡಿದರು.

೧೯೬೮ರ ಜನವರಿ ೧ರಂದು ಮದ್ರಾಸ್ ಮ್ಯೂಸಿಕ್ ಅಕಾಡೆಮಿಯ ನಲವತ್ತನೆಯ ಸಮ್ಮೇಳನದಲ್ಲಿ ನನಗೊಂದು ವಿಶೇಷ ಪ್ರಮಾಣಪತ್ರವನ್ನು ನೀಡಲಾಯಿತು. 'ಅರ್ಹತಾಪತ್ರ' ಎಂಬ ಬಿನ್ನವತ್ತಳೆಯನ್ನು ಡಾ|| ರಾಘವನ್ ಪಠಿಸಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀ ವೆಂಕಟಸ್ವಾಮಿ ನಾಯಿಡು ಅವರು ಕರ್ನಾಟಕ ಸಂಗೀತದ ತ್ರಿಮೂರ್ತಿಗಳಾದ ಶ್ರೀ ತ್ಯಾಗರಾಜ, ಶ್ರೀಮುತ್ತುಸ್ವಾಮಿ ದೀಕ್ಷಿತರ್ ಮತ್ತು ಶ್ರೀ ಶ್ಯಾಮಾಶಾಸ್ತ್ರಿಗಳ ಮೂರ್ತಿಗಳನ್ನು ಕೆತ್ತಿರುವ ಬೆಳ್ಳಿಯ ಚೌಕಟ್ಟಿನ ಅರ್ಹತಾಪತ್ರವನ್ನು ನನಗೆ ನೀಡಿ ಸನ್ಮಾನಿಸಿದರು. ಆ ಸಂದರ್ಭದಲ್ಲಿ ಪದ್ಮಶ್ರೀ ಪ್ರೊ. ಆರ್. ಎನ್. ರತನ್ ಜಂಕರ್‌ವರು ನಮ್ಮ ಮೂವತ್ತೈದು ವರ್ಷಗಳ ಪರಿಚಯವನ್ನು ಉಲ್ಲೇಖಿಸಿದರು. ಹಲವಾರು ಸಂದರ್ಭಗಳಲ್ಲಿ ನಾನು ಅವರಿಗೆ ಪಿಟೀಲು ಸಹಕಾರ ನೀಡಿದ್ದನ್ನು ನೆನೆದರು.

ನನ್ನ ೭೪ನೇ ವಯಸ್ಸಿನಲ್ಲಿ ಮದ್ರಾಸ್ ಮ್ಯೂಸಿಕ್ ಅಕಾಡೆಮಿಯಿಂದ ನನಗೆ ಸಂದ ಗೌರವವೇ ಹಸ್ತ ಸಾಮುದ್ರಿಕ ತಜ್ಞರೂ ಜ್ಯೋತಿಷಿಯೂ ಆದ ದಿವಂಗತ ಶ್ರೀ ಗೋಪಾಲ್ ಅಯ್ಯರ್ ಅವರ ಭವಿಷ್ಯವಾಣಿಯ ಸಫಲತೆ ಎಂದು ಭಾವಿಸುತ್ತೇನೆ. ೧೯೬೮ರ ಡಿಸೆಂಬರ್ ೩೦ರಂದು ಮದ್ರಾಸಿನ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಗಾಗಿ ಶ್ರೀಮತಿ ಅಮೃತ ರಂಗಸ್ವಾಮಿಯವರು ನನ್ನನ್ನು ಸಂದರ್ಶಿಸಿದರು. ನನ್ನ ಜೀವನದ ಮಹದಾಸೆಯಾಗಿದ್ದ 'ರಾಗನಿಧಿ' ಗ್ರಂಥದ ಪ್ರಕಟಣೆ ಈಗ ಕೈಗೂಡಿದ್ದರಿಂದ ಇನ್ನು ಮುಂದೆ ನಾನೇನು ಮಾಡಬಯಸುವೆ ಎಂದು ಅವರು ನನ್ನನ್ನು ಪ್ರಶ್ನಿಸಿದರು. 'ಮ್ಯೂಸಿಂಗ್ಸ್ ಆಫ್ ಎ ಮ್ಯುಸೀಶಿಯನ್' (ಸಂಗೀತಗಾರನ ಮೆಲುಕುಗಳು) ಎಂಬ ಹೆಸರಿನಲ್ಲಿ ನನ್ನ ಬದುಕಿನ ಕೆಲವು ಸ್ವಾರಸ್ಯಮಯ ಪ್ರಸಂಗಗಳನ್ನು ಸಂಕಲನವಾಗಿ ಬರೆಯಲು ತೊಡಗುವೆ ಎಂದು ನಾನವರಿಗೆ ಹೇಳಿದೆ. ಸಂಗೀತಕ್ಕೆ ಸಂಬಂಧಿಸಿದಂತೆ ನನ್ನ ಕೆಲವು ಸ್ವಾರಸ್ಯಪೂರ್ಣ ಅನುಭವಗಳನ್ನು ಕೇಳಿದ ಗೆಳೆಯರು, 'ಇವನ್ನೆಲ್ಲ ಪುಸ್ತಕ ರೂಪದಲ್ಲಿ ಪ್ರಕಟಿಸಬಾರದೇಕೆ'? ಎಂದು ಕೇಳುತ್ತಿದ್ದರು. ಅವರ ಸೂಚನೆಯಂತೆ ಆ ಪ್ರಯತ್ನವನ್ನು ಮಾಡಿದ್ದೇನೆ. ಈ ಮುಂದಿನ ಪುಟಗಳಲ್ಲಿ ನೀವು ಕಾಣುವ ದಾಖಲಾತಿಯಲ್ಲಿ ನನ್ನ ಕನಸು ಹಾಗೂ ಹಂಬಲಗಳು ಸಾಫಲ್ಯ ಕಂಡಿವೆ.

---

* *ಮೂಲ ಇಂಗ್ಲಿಷ್ : MUSINGS OF A MUSICIAN : 1970*

೧. ನಾದಸ್ವರದೊಡನೆ

ಹಿಂದಿರುಗಿ ನೋಡುವಾಗ ನೆನಪಿಗೆ ಬರುವ ಮೊದಲ ಸಂದರ್ಭ ಎಂದರೆ ವಿಧ್ಯುಕ್ತವಾಗಿ ನನಗೆ ಸಂಸ್ಕೃತ ಅಕ್ಷರ ಕಲಿಸಿದ ನನ್ನ 'ಅಕ್ಷರಾಭ್ಯಾಸ'. ೧೮೯೯ರಲ್ಲಿ ನಮ್ಮ ತಂದೆಯವರು ಕೋಲಾರದಲ್ಲಿ ಜಿಲ್ಲಾ ಅರಣ್ಯಾಧಿಕಾರಿಗಳಾಗಿದ್ದರು. ತುಂಟ ಹುಡುಗನೆನಿಸಿದ್ದ ನನ್ನ ಪಾಲಿಗೆ ಕೊಂಚ ಹೆಚ್ಚಾಗಿಯೇ ಹೊಡೆತಗಳು, ಏಟುಗಳು ಮತ್ತು ಆಗೊಮ್ಮೆ ಈಗೊಮ್ಮೆ ಗುದ್ದು ಬೀಳುತಿದ್ದವು. ನೂತನವಾಗಿ ಅಕ್ಷರಸ್ಥರ ರಾಜ್ಯಕ್ಕೆ ಪ್ರವೇಶಿಸುತ್ತಿದ್ದವನಿಗೆ ವಿಶೇಷ ರಿಯಾಯತಿ ಎಂದು, ಆ ಶುಭ ದಿನ ಯಾರೂ ನನ್ನ ಮೈ ಮುಟ್ಟಬಾರದೆಂದು ನಮ್ಮ ತಾಯಿ ಮನೆಯವರಿಗೆಲ್ಲಾ ಆದೇಶ ನೀಡಿದ್ದರು.

ಶುಭ ಸಮಾರಂಭಗಳಲ್ಲಿನ ವಾಡಿಕೆಯಂತೆ ನಾದಸ್ವರದ ತಂಡ ಆಗಮಿಸಿ, ಕೆಲವು ಕಾಲ ವಾದನ ನಡೆಸಿ, ಅವರಿಗೆ ಮೀಸಲಾಗಿದ್ದ ವರಾಂಡದ ಮೂಲೆಯಲ್ಲಿ ವಾದ್ಯಗಳನ್ನು, ಹಾಗೇ ಬಿಟ್ಟು ಹೊರಗೆ ಅಡ್ಡಾಡುತ್ತಿದ್ದರು. ನಾದಸ್ವರದ ಸಂಗೀತದ ಮೋಡಿಗೆ ಸಿಕ್ಕಿ ಬಿದ್ದಿದ್ದ ನಾನು ಆ ವಾದ್ಯವನ್ನು ನುಡಿಸಿ ನೋಡಲು ಹಾತೊರೆಯುತ್ತಿದ್ದೆ. ವಾದ್ಯಗಾರರು ಹೊರಗೆ ಹೋಗಿದ್ದಾಗ ವಾದ್ಯವನ್ನು ಕೈಗೆತ್ತಿಕೊಂಡು ಚೇಷ್ಟೆ ಮಾಡಲು ಅವಕಾಶ ಸಿಕ್ಕಿತು. ನಾದಸ್ವರವನ್ನು ಕೈಗೆತ್ತಿಕೊಂಡು ಊದತೊಡಗಿದೆ. ಯಾವುದೇ ನಾದ ಹೊರಡದೆ ಚಕಿತನಾದೆ. ತಾಳೇಗರಿಯನ್ನು ಸುತ್ತಿ ಚಪ್ಪಟೆಯಾಗಿ ಅದುಮಿ ತಯಾರಿಸಿದ ಪೀಪಿಯೇ ಈ ವಾದ್ಯದಲ್ಲಿ ನಾದವನ್ನು ಉತ್ಪಾದಿಸುವ ಭಾಗ.

ಸಾಮಾನ್ಯ ವಾಡಿಕೆಯಂತೆ ವಾದ್ಯಗಾರರು ಪೀಪಿಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಿದ್ದರು. ಅಂತೆಯೇ ನನ್ನ ನಾದೋತ್ಪತ್ತಿಯ ಪ್ರಯತ್ನ ವಿಫಲವಾಗಿ ನನಗೆ ತೀವ್ರ ನಿರಾಸೆ ಉಂಟಾಯಿತು.

ಇಷ್ಟರಲ್ಲಿ, ನಾನು ನಾದಸ್ವರದೊಡನೆ ಕಾರ್ಯಮಗ್ನನಾಗಿದ್ದನ್ನು ನಮ್ಮ ಅತ್ತೆ ಕಂಡುಬಿಟ್ಟಿದ್ದರು. ನಾದಸ್ವರ ವಾದಕರೆಲ್ಲ ಅಸ್ಪೃಶ್ಯರೆನಿಸಿದ ನಾಯಿಂದರಾಗಿದ್ದರು. ಅಂತೆಯೇ ವಾದ್ಯವನ್ನು ನಾನು ಮುಟ್ಟಿದ್ದು ಕಠಿಣ ಶಿಕ್ಷೆಗೆ ಅರ್ಹ ಅಪರಾಧವಾಗಿತ್ತು. ನನ್ನ ಅಂದಿನ ಪವಿತ್ರ ಸ್ಥಿತಿಯ ಬಗ್ಗೆ ನಮ್ಮ ತಾಯಿಯ ಆದೇಶವನ್ನು ನಮ್ಮ ತಾಯಿಯೂ ಸೇರಿದಂತೆ ಎಲ್ಲರೂ ಮರೆತಿದ್ದು , ನಾನು ಸರಿಯಾದ ಬೈಗುಳಗಳನ್ನೇ ತಿಂದೆ. ನನ್ನನ್ನು ಬಚ್ಚಲುಮನೆಗೆ ಎಳೆದೊಯ್ಯುವಂತೆ ಸೇವಕನೊಬ್ಬನಿಗೆ ಆದೇಶಿಸಿ ಶುದ್ಧೀಕರಣಕ್ಕಾಗಿ ಹಾಗೂ ಶಿಕ್ಷೆಯಾಗಿ ಬಕೆಟ್ಟುಗಟ್ಟಲೆ ಬಿಸಿನೀರನ್ನು ನನ್ನ ಮೇಲೆ ಸುರಿಯಲಾಯಿತು.

೨. ಗುರುಭಕ್ತಿ - ಆಸಕ್ತಿ - ಶಕ್ತಿ

ಯಾವುದೇ ಕಲಾಪ್ರಕಾರದಲ್ಲಾದರೂ ಯಶಸ್ಸು ಸಾಧಿಸಲು ಅತಿ ಮುಖ್ಯವಾದ ಸದ್ಗುಣಗಳು ಗುರುಭಕ್ತಿ, ಆಸಕ್ತಿ, ಹಾಗೂ ಶಕ್ತಿ (ಗುರುವಿನ ಬಗ್ಗೆ ಭಕ್ತಿ -ಗೌರವ, ಕಲೆಯ ಬಗ್ಗೆ ಶ್ರದ್ಧೆ, ಒಳ್ಳೆಯ ಆರೋಗ್ಯ) ಎಂದು ನಾನು ಭಾವಿಸುತ್ತೇನೆ. ಸಂಗೀತದ ವಿವಿಧ ಕ್ಷೇತ್ರಗಳಲ್ಲಿ ನನ್ನ ಬಿಡುವಿನ ವೇಳೆಯನ್ನು ವಿನಿಯೋಗಿಸಿ ಸಾಧಿಸಿರುವೆನೆಂದು ನಾನು ಹೇಳಿಕೊಳ್ಳ ಬಹುದಾದ ಅಲ್ಪ ಯಶಸ್ಸಿಗೆ ಈ ಮೂರು ಗುಣಗಳೂ ಗಣನೀಯ ಪ್ರಮಾಣದಲ್ಲಿ ನನ್ನಲ್ಲಿ ಇದ್ದುದೇ ಕಾರಣವಾಗಿದೆ. ನನ್ನ ಗುರುಗಳು ನನ್ನ ಬಗ್ಗೆ ತೋರಿಸಿದ ಪ್ರೀತಿ-ವಿಶ್ವಾಸ, ಬಿಚ್ಚು ಮನಸ್ಸಿನಿಂದ ಅವರು ನೀಡಿದ ಶಿಕ್ಷಣ, ನನ್ನ ಯಶಸ್ಸಿಗಾಗಿ ಅವರ ತುಂಬು ಹೃದಯದ ಆರ್ಶೀವಾದ - ಇವುಗಳನ್ನು ನಾನು ಕೃತಜ್ಞತೆಯಿಂದ ನೆನೆಯುತ್ತೇನೆ.

ಕರ್ನಾಟಕ ಹಾಗೂ ಹಿಂದೂಸ್ತಾನಿ ಪದ್ಧತಿಗಳ ಹಾಡುಗಾರಿಕೆಯನ್ನು ನನಗೆ ಕಲಿಸಿದ ಗುರುಗಳು ಅನೇಕರು. ಪಿಟೀಲು ಹಾಗೂ ವಿಚಿತ್ರವೀಣಾ (ಗೊಟ್ಟುವಾದ್ಯ) ಎರಡೂ ನಾನೇ ಸ್ವಪ್ರಯತ್ನದಿಂದ ರೂಢಿಸಿ ಕೊಂಡಂತಹವು. ವಿದ್ವಾನ್ ಗೋವಿಂದಸ್ವಾಮಿ, ವಿದ್ವಾನ್ ತಿರುಕ್ಕೋಡಿಕಾವಲ್ ಕೃಷ್ಣ ಅಯ್ಯರ್ ಮುಂತಾದ ಶ್ರೇಷ್ಠ ಪಿಟೀಲು ವಾದಕರ ಸಂಗೀತ ಕೇಳುವ ಅವಕಾಶ ನನ್ನದಾಗಿತ್ತು. ಮತ್ತೆ ಮತ್ತೆ ಕೇಳುವ ಸುಯೋಗ ನನಗೆ ನೀಡಿದ ವಾದಕರೆಂದರೆ ನಾಗಪುರಕ್ಕೆ ಆಗಿಂದಾಗ್ಗೆ ಭೇಟಿ ನೀಡುತ್ತಿದ್ದ ಮದ್ರಾಸಿನ ಖ್ಯಾತ ಪಿಟೀಲು ವಾದಕ ವಿದ್ವಾನ್ ಮಧುರ ಸುಬ್ರಮಣಿ ಅಯ್ಯರ್. ಪಿಟೀಲು ವಾದನದ ನುಡಿಸಾಣಿಕೆಯ ತಂತ್ರಗಳ ಬಗ್ಗೆ ಅವರು ನನಗೆ ನೀಡಿದ ಮಾರ್ಗದರ್ಶನ ವನ್ನು ನಾನು ಕೃತಜ್ಞತೆಯಿಂದ ನೆನೆಯಲೇಬೇಕು. ನಿಖರವಾದ ಶೈಲಿಯಲ್ಲಿ ತ್ಯಾಗರಾಜರ ಅನೇಕ ಕೃತಿಗಳನ್ನು ಅವರು ನನಗೆ ಕಲಿಸಿದರು.

ಗೊಟ್ಟುವಾದ್ಯ ವಾದನಕ್ಕೆ ನಾನು ಕೈ ಹಚ್ಚಲು ಸ್ಫೂರ್ತಿ ನೀಡಿದವ ರೆಂದರೆ ವಿದ್ವಾನ್ ಗೊಟ್ಟುವಾದ್ಯಂ ನಾರಾಯಣ ಅಯ್ಯಂಗಾರ್. ನಾವು ಒಳ್ಳೆಯ ಸ್ನೇಹಿತರಾದೆವು. ಈ ಶ್ರೇಷ್ಠ ಕಲಾವಿದರ ಬಗ್ಗೆ ದಾಖಲಿಸ ಬೇಕಾದ ಕೆಲವು ಪ್ರಸಂಗಗಳಿವೆ.

ನನ್ನ ಬಿಡುವಿನ ವೇಳೆಯ ಪ್ರತಿ ಕ್ಷಣವನ್ನೂ ಸಂಗೀತಕ್ಕಾಗಿಯೇ ವಿನಿಯೋಗಿಸಿದ್ದೇನೆಂದರೆ ಸಂಗೀತದ ಬಗ್ಗೆ ನನ್ನ ಆಸಕ್ತಿ ಏನೆಂದು ಸ್ಪಷ್ಟವಾಗುತ್ತದೆ. ಸಂಗೀತವೇ ನನಗೆ ಆಹಾರವೆನಿಸಿದೆ. ಈಗಲೂ ಹೆಚ್ಚಿನ ವೇಳೆಯನ್ನು ನನ್ನ ಸಂಗೀತದ ವಾದ್ಯಗಳೊಡನೆ, ಇಲ್ಲವೇ ರಾಗಗಳನ್ನು ಹಾಗೂ ಕೃತಿಗಳನ್ನು ರಚಿಸುತ್ತಾ, ಸಂಗೀತದ ಬಗ್ಗೆ ಲೇಖನಗಳನ್ನು ಬರೆಯುತ್ತಾ ಕಳೆಯುತ್ತಿದ್ದೇನೆ. ಈ ಬಂಡವಾಳ ಹೂಡಿಕೆ ಶ್ರೀಮಂತವಾದ ವರಮಾನವನ್ನೇ ನೀಡುತ್ತಿದ್ದು, ಅದರ ಅತ್ಯಂತ ಮುಖ್ಯ ಭಾಗವೆಂದರೆ ಹೀಗೆ ಸಂಗೀತದಲ್ಲಿ ತೊಡಗಿರುವಾಗ

ನಾನು ಅನುಭವಿಸುವ ಮೋಕ್ಷಾನಂದ ಸ್ಥಿತಿ. ನಾಗಪುರದಲ್ಲಿ ಅಕೌಂಟ್ಸ್ ಆಫೀಸರ್ ಆಗಿದ್ದ ಶ್ರೀ ಕೃಷ್ಣಸ್ವಾಮಿ ಅಯ್ಯಂಗಾರ್ಯರು ನಮ್ಮೊಡನೆ ಕೆಲವು ದಿನಗಳು ಉಳಿದುಕೊಂಡಿದ್ದರು. ನಾನು ನಿದ್ರೆಯಲ್ಲಿಯೇ ಖರಹರಪ್ರಿಯ ರಾಗದ 'ಚಕ್ಕನಿರಾಜ' ಕೃತಿಯನ್ನು ಎಷ್ಟು ನಿಖರವಾಗಿ ಹಾಡುತ್ತಿದ್ದೆನೆಂದರೆ, ನಾನು ಎಚ್ಚರವಾಗಿದ್ದು ಪ್ರಜ್ಞಾಪೂರ್ವಕವಾಗಿಯೇ ಹಾಡುತ್ತಿದ್ದೆನೆಂದು ಅವರು ಭಾವಿಸಿದರು.

ಸಣಕಲು ಬಾಲಕನಾಗಿದ್ದರೂ ಶಕ್ತಿ ಸಾಮರ್ಥ್ಯಗಳು ನನ್ನಲ್ಲಿ ಹೇರಳವಾಗಿದ್ದವು. ಮನೆಯಲ್ಲಿ ಒಳ್ಳೆಯ ತಿಂಡಿತಿನಿಸುಗಳಿಗೇನೂ ಕೊರತೆ ಇರಲಿಲ್ಲ. ನನಗೆ ಈಜುವುದು ಹಾಗೂ ಆಟಗಳೆಂದರೆ ಒಲವು. ಕ್ರಿಕೆಟ್, ಫುಟ್‌ಬಾಲ್, ಹಾಗೂ ಟೆನ್ನಿಸ್ ಚೆನ್ನಾಗಿ ಆಡುತ್ತಿದ್ದೆ. ನಾಗಪುರದ ಕಾಲೇಜ್ ಆಫ್ ಅಗ್ರಿಕಲ್ಚರ್‌ನಲ್ಲಿ ನಾನು ಟೆನ್ನಿಸ್ ಚಾಂಪಿಯನ್, ಕ್ರಿಕೆಟ್ ಕಾರ್ಯದರ್ಶಿ ಹಾಗೂ ಆಟೋಟಗಳ ಸಾಮಾನ್ಯ ಕಾರ್ಯದರ್ಶಿ ಆಗಿದ್ದೆ. ಅಪರೂಪದ ಪ್ರತಿಭೆಯ ವಿದ್ಯಾರ್ಥಿಗೆಂದು (ಪಾಠ, ಆಟ, ಸಾಮಾಜಿಕ ಚಟುವಟಿಕೆ ಮುಂತಾದವು) 'ಕಾರೋನೇಷನ್ ಮೆಡಲ್' ಎನ್ನುವ ವಿಶೇಷ ಪದಕವೊಂದನ್ನು ಇರಿಸಿದ್ದರು. ನನಗಿಂತ ಸುಮಾರು ನಾಲ್ಕು ವರ್ಷಗಳ ಹಿಂದೆ ೧೯೧೩ ರಲ್ಲಿ ಡಾ|| ಡಿ. ವಿ. ಬಾಲ್ ಆ ಪದಕ ಗೆದ್ದುಕೊಂಡಿದ್ದರು. ೧೯೧೭ ರಲ್ಲಿ ನಾನು ಆ ಪದಕ ಗಳಿಸಿದೆ. ಆನಂತರದ ವರ್ಷಗಳಲ್ಲಿ ಯಾರಿಗಾದರೂ ಈ ಪದಕ ಲಭಿಸಿದ್ದು ನನಗೆ ನೆನಪಿಲ್ಲ. ಮುಂದೆ ಆ ಪದಕ ನೀಡುವುದನ್ನೇ ನಿಲ್ಲಿಸಲಾಯಿತು. ನಾನು ಆ ಕಾಲೇಜಿನ ಅಧ್ಯಾಪಕನಾಗಿದ್ದ ಇಪ್ಪತ್ತು ವರ್ಷಗಳಲ್ಲಿ, ಹನ್ನೆರಡು ವರ್ಷ ಆಟೋಟಗಳನ್ನು ನಾನೇ ನಿರ್ವಹಿಸುತ್ತಿದ್ದೆ. ಈ ಎಲ್ಲಾ ದೈಹಿಕ ವ್ಯಾಯಾಮಗಳು, ಹಾಡಲು ಹಾಗೂ ಸಂಗೀತ ವಾದ್ಯಗಳನ್ನು ನುಡಿಸಲು ನನಗೆ ಸಾಮರ್ಥ್ಯ ನೀಡಿದವು. ನಾನು ವಿಕೆಟ್ ಕೀಪರ್ ಆದದ್ದೇ ಒಂದು ಸ್ವಾರಸ್ಯ ಕಥೆ.

ನಾನು ಒಬ್ಬ ಒಳ್ಳೆಯ ಬೌಲರ್ ಎನಿಸಿದ್ದೆನೇ ಹೊರತು ವಿಕೆಟ್ ಕೀಪಿಂಗ್ ಪ್ರಯತ್ನಿಸಿರಲಿಲ್ಲ. ಮುಖ್ಯವಾದ ಮ್ಯಾಚ್ ಒಂದರಲ್ಲಿ ಬ್ಯಾಟ್ಸ್‌ಮನ್ ಹೊಡೆದ ಚೆಂಡು ನಾನು ಫೀಲ್ಡ್ ಮಾಡುತ್ತಿದ್ದ ಲಾಂಗ್ ಆನ್ ಬೌಂಡರಿಗೆ ಬಂದಿತ್ತು. ಆಗ ಅಭ್ಯಾಸ ಮಾಡುತ್ತಿದ್ದ ಹಾಡೊಂದರಲ್ಲಿ ನಾನು ಮಗ್ನನಾಗಿದ್ದು ಚೆಂಡಿನ ಪಥವನ್ನು ಅನುಸರಿಸಿರಲಿಲ್ಲ. ಚೆಂಡನ್ನು ಹಿಡಿಯುವಂತೆ ಇತರ ಫೀಲ್ಡರ್‌ಗಳು ನನ್ನತ್ತ ಕೂಗಿದರು. ಬಿಸಿಲು ಕಣ್ಣಿಗೆ ಹೊಡೆಯುತ್ತಿದ್ದು ನನಗೆ ಚೆಂಡು ಕಾಣಿಸಲೇ ಇಲ್ಲ. ಚೆಂಡು ನನ್ನ ತಲೆಗೆ ಅಪ್ಪಳಿಸಬಹುದೆಂಬ ಭಯದಲ್ಲಿ ಪೆದ್ದು ಪೆದ್ದಾಗಿ ಹಾಗೂ ಆತುರಾತುರವಾಗಿ ನನ್ನ ಹ್ಯಾಟ್ ತೆಗೆದು ತಲೆಯ ಮೇಲೆ ಹಿಡಿದುಬಿಟ್ಟೆ. ಚೆಂಡು ಹ್ಯಾಟ್‌ನೊಳಕ್ಕೆ ಬಿತ್ತು. 'ವೆಲ್‌ಡನ್ ವೆಲ್‌ಡನ್' ಎಂಬ ಕೂಗಾಟ, ನಗುವಿನ ಅಬ್ಬರದಲ್ಲಿ ತಾನು ಔಟಾದೆನೆಂದು ಭಾವಿಸಿ ಬ್ಯಾಟ್ಸ್‌ಮನ್ ಫೀಲ್ಡಿನಿಂದ ಹೊರಹೊರಟ. ಅಂಪೈರ್ ಅವನನ್ನು ಹೋಗಗೊಡಲಿಲ್ಲ ಎನ್ನಿ.

ನನ್ನ ಮರೆಗುಳಿತನಕ್ಕೆ ಶಿಕ್ಷೆ ಎಂದು ಮಾರನೆಯ ದಿನ ಚೆನ್ನಾಗಿ ಹೊಡೆತ ಬೀಳಲೆಂದು ನನ್ನನ್ನೇ ವಿಕೆಟ್ ಹಿಂದೆ ನಿಲ್ಲಿಸಿದರು. ನಾನು ಹಿಂದೇಟು ಹಾಕಲಿಲ್ಲ. 'ಸ್ಟೇಟ್‌ಮನ್', ವಿಕೆಟ್ ಕೀಪರ್, ಗ್ಲಾಂಟ್ ಲೆಟ್ಸ್ ಹಾಗೂ ಪ್ಯಾಡ್ಸ್ ಧರಿಸಿ ವಿಕೆಟ್ ಹಿಂದೆ ನಿಂತೆ. ನಾನೊಬ್ಬ ಆಜನ್ಮ ವಿಕೆಟ್‌ಕೀಪರ್ ಎಂಬಂತೆ ಅಂದು ಗಳಿಸಿದ ಯಶಸ್ಸು ನನಗೂ ಇತರರಿಗೂ ಆಶ್ಚರ್ಯ ಉಂಟುಮಾಡಿತು. ಅಂದಿನಿಂದ ವಿಕೆಟ್ ಕೀಪರ್ ಎಂದೇ ಹೆಸರಾದೆ.

ಇತ್ತೀಚೆಗೆ ಇಂದೋರ್‌ಗೆ ಭೇಟಿ ಇತ್ತಾಗ ಹೆಸರಾಂತ ಕ್ರಿಕೆಟ್ ಆಟಗಾರ ಸಿ. ಕೆ. ನಾಯಿಡು ಅವರನ್ನು ಭೇಟಿ ಮಾಡೋಣವೆ ಎಂದು ನನ್ನ ಸೋದರಳಿಯ ನಾಗೇಂದ್ರನ್ ಕೇಳಿದ. ೧೯೧೪ ರಲ್ಲಿ ನಾವಿಬ್ಬರೂ ನಾಗಪುರದಲ್ಲಿ ವಿದ್ಯಾರ್ಥಿಗಳಾಗಿದ್ದಾಗಿನಿಂದಲೇ ನನಗೆ ನಾಯಿಡು ಅವರ ಪರಿಚಯ ಇತ್ತು. ನಾನವರೊಡನೆ ಕೊನೇ ಪಕ್ಷ ಹತ್ತು ವರ್ಷ ಕಾಲ ಕ್ರಿಕೆಟ್ ಆಡಿದ್ದೆ. ಇದು ನನ್ನ ಸೋದರಳಿಯನಿಗೆ ತಿಳಿದಿರಲಿಲ್ಲ. ನನ್ನ ಕಾರ್ಡ್ ಕಳುಹಿಸಿದೆ. ಸಿ. ಕೆ. ಹೊರಗಡೆಗೆ ಎಂದರೆ ವರಾಂಡಕ್ಕೆ ಬಂದು ನಮ್ಮನ್ನು ಒಳಕ್ಕೆ ಕರೆತರುವಂತೆ ಸೇವಕನಿಗೆ ಹೇಳಿದರು. ಆತ ನನ್ನ ಕಾರ್ಡ್ ನೋಡುತ್ತಾ ನಿಂತಿದ್ದರು. ನಾವು ಸಮೀಪಿಸಿದಾಗ ಅವರೆಂದರು, ''ನೋಡಿ, ಮಿಸ್ಟರ್ ಸುಬ್ಬರಾವ್!ನಿವೃತ್ತ ಕೃಷಿ ಡೆಪ್ಯುಟಿ ಡೈರೆಕ್ಟರ್ ...... ಇದೆಲ್ಲ ಸರಿ, ಆದರೆ ನೀವು ವಿಕೆಟ್ ಕೀಪರ್ ಸುಬ್ಬರಾವ್ ಅಲ್ಲವೇನು?'' ನನ್ನ ವಿಕೆಟ್ ಕೀಪಿಂಗ್ ಇನ್ನೂ ಅವರ ನೆನಪಿನಲ್ಲಿತ್ತು ಎಂಬುದು ಸಂತಸ ತಂದಿದೆ ಎಂದೆ ನಾನು. ಕೆಲವು ಟೆಸ್ಟ್ ಆಟಗಾರರೂ ಸೇರಿದಂತೆ ಅಲ್ಲಿದ್ದ ಗೆಳೆಯರಿಗೆ, ಸೆಂಟ್ರಲ್ ಪ್ರಾವಿನ್ಸಸ್‌ನ ಹಾಗೂ ಬೇರಾರ್‌ನ ಒಬ್ಬ ಒಳ್ಳೆಯ ವಿಕೆಟ್ ಕೀಪರ್ ಎಂದು ನನ್ನನ್ನು ಸಿ. ಕೆ. ಪರಿಚಯ ಮಾಡಿಕೊಟ್ಟರು. ನಮ್ಮೊಡನೆ ಒಂದು ತಾಸು ಹರಟಿದ ಅವರು ಸರಕ್ಕನೆ ಕೇಳಿದರು, "ಇನ್ನೂ ಇದರಲ್ಲಿ ನಿಮ್ಮ ಆಸಕ್ತಿ ಉಳಿದಿದೆಯೇ"? ಪಿಟೀಲು ವಾದನವನ್ನು ಸೂಚಿಸುವಂತೆ ತಮ್ಮ ತೋಳು ಹಾಗೂ ಬೆರಳುಗಳನ್ನು ಅವರು ಚಲಿಸುತ್ತಿದ್ದರು. ನಾನು ವಿಕೆಟ್ ಕೀಪಿಂಗ್ ಕೈ ಬಿಟ್ಟಿದ್ದೇನೆಂದೂ ಪಿಟೀಲು ವಾದನ ಇನ್ನಷ್ಟು ಹೆಚ್ಚಾಗಿದೆಯೆಂದೂ ಹೇಳಿದೆ. ಸಿ. ಕೆ.ಗೆ ಬಹಳ ಸಂತೋಷ ವಾಯಿತು.

ಇಂದು ನಮ್ಮ ಮನೆಯ ಡ್ರಾಯಿಂಗ್ ರೂಮಿನಲ್ಲಿ ಕೇವಲ ಮೂರು ನಾಲ್ಕು ಚಿತ್ರಗಳನ್ನು ತೂಗು ಹಾಕಿದ್ದೇನೆ. ಅವೆಲ್ಲಾ ನನ್ನ ಸಂಗೀತದ ಚಟುವಟಿಕೆಗಳಿಗೆ ಸಂಬಂಧಿಸಿದವು. ಆ ಪೈಕಿ ಒಂದು ಚಿತ್ರ ವಿಕೆಟ್ ಕೀಪರ್ ಭಂಗಿಯಲ್ಲಿನ ನನ್ನ ದೊಡ್ಡ ಚಿತ್ರ: ೧೯೧೩ ರಲ್ಲಿ ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜ್ ಪ್ರಾಂಶುಪಾಲರಾದ ಮೇಜರ್ ಜಿ. ಟೇಟ್ ಅವರನ್ನೂ ಒಳಗೊಂಡಂತೆ ಮೂವರು ಶ್ರೇಷ್ಠ ಆಟಗಾರರನ್ನು ನಾನು ಸೋಲಿಸಿದಂದು ತೆಗೆದ ಚಿತ್ರ. ನೂತನವಾಗಿ ಪ್ರಾರಂಭಿಸಿದ 'ಹಿಂದೂ ಜಿಮ್ಖಾನ' ಪರವಾಗಿ ನಾನು ವಿಕೆಟ್ ಕೀಪರ್

ಆಗಿ ಆಡಿದ್ದೆ. ನಮ್ಮ ಕಡೆಯ ಖ್ಯಾತ ಆಟಗಾರರಲ್ಲಿ ಶ್ರೀ ಸಿಂಗಾರಮ್, ಈಶ್ವರನ್, ಶ್ರೀ ಡಿ. ಶ್ರೀನಿವಾಸರಾವ್, ಶ್ರೀ ಕೆ. ಕೆ. ಅಯ್ಯಂಗಾರ್ ಮತ್ತು ಶ್ರೀ ಸಿದ್ಧರಾಮಪ್ಪ ಅವರೂ ಇದ್ದರು. ಆ ತಂಡದ ಅತ್ಯಂತ ಕಿರಿಯ ಆಟಗಾರ ನಾನೇ. ನನ್ನನ್ನು ವಿಕೆಟ್ ಕೀಪರ್ ಆಗಿ ಮಾಡಿದ್ದು ನನ್ನ ಸಂಗೀತದ ಹುಚ್ಚು. ವಿಕೆಟ್ ಕೀಪರ್ ಆಗಿ ಆಡುತ್ತಿದ್ದಷ್ಟು ಹೊತ್ತೂ ನಾನು ಸಂಗೀತದ ಬಗ್ಗೆ ಚಿಂತಿಸುವಂತೆಯೇ ಇರಲಿಲ್ಲ.

೩. ನನ್ನ ಗುರುಗಳು

ಅನೇಕ ಶ್ರೇಷ್ಠ ವಿದ್ವಾಂಸರಿಂದ - ಕೆಲವರಿಂದ ಅಲ್ಪ ಕಾಲ, ಕೆಲವರಿಂದ ದೀರ್ಘಾವಧಿಯಲ್ಲಿ – ಸಂಗೀತ ಕಲಿತೆ. ಇವರೆಲ್ಲರೂ ನನ್ನ ಗುರುಗಳೆಂದು ಸ್ಥಾನ ಪಡೆದಿದ್ದಾರೆ. ನಾನು ಗಳಿಸಿದ ಪರಿಶ್ರಮಕ್ಕಾಗಿ ಅವರಲ್ಲಿ ಕೆಲವರ ಬಗ್ಗೆ ಬರೆಯಲು ಆಶಿಸುತ್ತೇನೆ.

ವೈಣಿಕ ವಿದ್ವಾನ್ ವಿಶ್ವನಾಥಶಾಸ್ತ್ರಿ

೧೯೭೮-೭೯ರ ಕೋಲಾರದ ಮಾತು. ಅಲ್ಲಿನ ಜಿಲ್ಲಾ ಅರಣ್ಯಾಧಿಕಾರಿಯಾಗಿದ್ದ ನಮ್ಮ ತಂದೆಯವರು ಅಂದು ಊರಿಗೆ ಹಿಂದಿರುಗಿ ಬರುವರೆಂದು ನಿರೀಕ್ಷಿಸುತ್ತಿದ್ದೆವು. ಆ ದಿನಗಳಲ್ಲಿ ಬೌರಿಂಗ್ ಪೇಟೆಯಿಂದ (ಇಂದಿನ ಬಂಗಾರಪೇಟೆ) ಕೋಲಾರಕ್ಕೆ ರಸ್ತೆ ಮಾರ್ಗ ಮಾತ್ರ ಇತ್ತು. ಪರಸ್ಪರ ಎಂಟು ಮೈಲಿ ದೂರದಲ್ಲಿದ್ದ ಬೌರಿಂಗ್ ಪೇಟೆ ಮತ್ತು ಕೋಲಾರದ ನಡುವೆ ಜಟಕಾ ಗಾಡಿಗಳು (ಕುದುರೆ ಗಾಡಿ) ಚಲಿಸುತ್ತಿದ್ದವು. ಒಂದು ಮಧ್ಯಾಹ್ನ ನಮ್ಮ ಮನೆಯ ಮುಂದೆ ಎರಡು ಜಟಕಾಗಳು ಬಂದು ನಿಂತವು. ಒಂದು ಜಟಕಾದಿಂದ ನಮ್ಮ ತಂದೆಯವರು ಕೆಳಕ್ಕೆ ಇಳಿದರು. ಆದರೆ ರುದ್ರಾಕ್ಷಿಮಾಲೆ, ತಿಲಕಗಳಿಂದ ಅಲಂಕೃತರಾಗಿ ಕಾಶೀವಿಶ್ವನಾಥನ ಚಿತ್ರವನ್ನೇ ಯಥಾವತ್ತಾಗಿ ಹೋಲುವ ವ್ಯಕ್ತಿಯೊಬ್ಬರು ಮತ್ತೊಂದು ಜಟಕಾದಿಂದ ಹೊರ ಬಂದರು! ಬಟ್ಟೆಯ ಗೌಸಿನಿಂದ ಮುಚ್ಚಲ್ಪಟ್ಟ ದೊಡ್ಡ ವೀಣೆಯಂತೆ ಕಾಣುವ ವಸ್ತುವನ್ನು ಆತ ಕೆಳಕ್ಕೆ ಇಳಿಸಿಕೊಂಡರು. ನಮ್ಮ ತಂದೆಯವರು ಅವರನ್ನು ಒಳಕ್ಕೆ ಆಹ್ವಾನಿಸಿದರು. ಸುಮಾರು ೨೦ ಜನರಿದ್ದ ನಮ್ಮ ಕುಟುಂಬದ ಎಲ್ಲರೂ ಅತಿಥಿಯನ್ನು ನೋಡಲು ಹೊರಗಡೆಗೆ ಬಂದರು. ಆತ ಶ್ರೇಷ್ಠ ವೀಣಾವಾದಕರೆಂದೂ, ಖ್ಯಾತನಾಮರಾದ ಮಹಾವೈದ್ಯನಾಥಯ್ಯರ್ ಅವರ ಶಿಷ್ಯರೆಂದೂ, ನಮಗೆ ಸಂಗೀತ ಕಲಿಸಲೆಂದೇ ತಂಜಾವೂರಿನಿಂದ ಬಂದಿರುವರೆಂದೂ, ನಮಗೆ ತಿಳಿದುಬಂದಿತು. ಅವರು ಗದ್ವಾಲ್ ಸಂಸ್ಥಾನದ ಆಸ್ಥಾನ ವಿದ್ವಾಂಸ ರೆಂದೂ ತಿಳಿಯಿತು. ಧಾರ್ಮಿಕ ಮನೋಭಾವದ ನಮ್ಮ ಮನೆಯ ಹೆಂಗಸರಂತೂ, “ಸ್ವತಃ ಕಾಶೀವಿಶ್ವನಾಥನೇ ಪ್ರತ್ಯಕ್ಷ ನಾಗಿರುವನು” ಎಂದು ಉದ್ಗರಿಸಿದರು. ನಮ್ಮ ಭಾವೀ ಗುರುಗಳ ವಿಷಯ ಊರಿನಲ್ಲೆಲ್ಲಾ ಹರಡಿ, ಎಲ್ಲಾ ಸಂಗೀತಪ್ರಿಯರೂ ಅವರ ವೀಣಾವಾದನವನ್ನು ಕೇಳಲು ಉತ್ಸುಕರಾಗಿದ್ದರು.

ನನ್ನ ಅಣ್ಣ ಮತ್ತು ಅಕ್ಕನಿಗೆ ಒಳ್ಳೆಯ ಸಂಗೀತದ ಗುರುವನ್ನು, ಅದರಲ್ಲೂ ವೀಣೆಯ ಗುರುವನ್ನು,ಒದಗಿಸಲೆಂದೇ ಈ ವಿದ್ವಾಂಸರನ್ನು ತಂಜಾವೂರಿನಿಂದ ಕರೆತರಲಾಯಿತು. ನಮ್ಮೂರಿನ ಬಾಲಕಿಯರ ಶಾಲೆಯಲ್ಲಿ ಆತನನ್ನು ಸಂಗೀತ ಶಿಕ್ಷಕನಾಗಿ ನೇಮಕ ಮಾಡಿಸುವುದೂ ನಮ್ಮ ತಂದೆಯವರ ಉದ್ದೇಶ. ಆ ಕಾಲದಲ್ಲಿ ಕೆಲವು ಬಾಲಿಕಾ ಶಾಲೆಗಳಲ್ಲಿ ಸಂಗೀತ ಕಲಿಸಲಾಗುತ್ತಿತ್ತು. ಕೋಲಾರದಲ್ಲಿ ಸೇವೆಸಲ್ಲಿಸುತ್ತಿದ್ದ ಅಧ್ಯಾಪಕರ ಬಗ್ಗೆ ನಮ್ಮ ತಂದೆಯವರಿಗೂ ಇತರ ಕೆಲವರಿಗೂ ತೃಪ್ತಿ ಇರಲಿಲ್ಲ. ತಮ್ಮ ಹೊಸ ವ್ಯವಸ್ಥೆಗಾಗಿ ಕೋಲಾರದ ಜನತೆ ತಮಗೆ ಕೃತಜ್ಞರಾಗಿರುತ್ತಾರೆಂದು ನಮ್ಮ ತಂದೆಯವರು ನಿರೀಕ್ಷಿಸಿದ್ದರು. ಶಿಕ್ಷಣಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಹಾಗೂ ಶಿಕ್ಷಣ ಸಂಸ್ಥೆಗಳ ವಿಷಯದಲ್ಲಿ ನಮ್ಮ ತಂದೆಯವರಿಗೆ ಅತೀವ ಆಸಕ್ತಿ. ಇದಕ್ಕಾಗಿಯೂ, ಇದರಿಂದ ಅವರಿಗೆ ಲಭಿಸಿದ್ದ ಜನಪ್ರಿಯತೆ ಯಿಂದಾಗಿಯೂ, ಜಿಲ್ಲಾ ಶಿಕ್ಷಣ ಅಧಿಕಾರಿಗಳಿಗೆ ನಮ್ಮ ತಂದೆಯವರ ಬಗ್ಗೆ ಹೆಚ್ಚಿನ ವಿಶ್ವಾಸವಿರಲಿಲ್ಲ. ಈಗ ಈ ಕಾಶೀವಿಶ್ವನಾಥನ ಪ್ರತಿರೂಪಕ್ಕೆ ಅವಕಾಶ ಮಾಡಿ ಕೊಡಲೆಂದು ಹಾಲಿ ಇದ್ದ ಅಧ್ಯಾಪಕರನ್ನು ತೆಗೆದು ಹಾಕಲು ಆತ ಒಪ್ಪಲಿಲ್ಲ. ಈ ವಿಷಯದ ಬಗ್ಗೆ ಅಭಿಪ್ರಾಯಭೇದಗಳು ಬೆಳೆದು ಅಂತಿಮವಾಗಿ ಒಂದು ನಿರ್ಧಾರಕ್ಕೆ ಬರಲಾಯಿತು. ವಿಶೇಷವಾಗಿ ಆಯ್ದ ಶ್ರೋತೃಗಳ ಸಮ್ಮುಖದಲ್ಲಿ ಇಬ್ಬರು ವಿದ್ವಾಂಸರೂ ತಮ್ಮ ಗಾಯನ-ವಾದನಗಳನ್ನು ಪ್ರದರ್ಶಿಸ ಬೇಕೆಂದೂ, ಊರಿನ ಪ್ರಮುಖ ವ್ಯಕ್ತಿಗಳೂ ಅಧಿಕಾರಿಗಳೂ ಅವರಿಬ್ಬರ ಸಾಮರ್ಥ್ಯವನ್ನು ಸೂಕ್ತವಾಗಿ ಪರಿಶೀಲಿಸಬೇಕೆಂದೂ, ತೀರ್ಮಾನಿಸ ಲಾಯಿತು.

ವಾಡಿಕೆಯ ಇಸ್ಪಿಟ್ ಆಟದ ಬದಲಾಗಿ ಒಂದು ಭಾನುವಾರವನ್ನು ಈ ಆನಂದದ ಕಾರ್ಯಕ್ರಮಕ್ಕಾಗಿ ಮೀಸಲಾಗಿ ಇಡಲಾಗಿತ್ತು. ಜಿಲ್ಲಾ ಅಧಿಕಾರಿಗಳ ನಿವಾಸದಲ್ಲಿ ವೀಣಾವಾದನಗಳನ್ನು ಏರ್ಪಡಿಸಿದರು. ನಮ್ಮ ಗುರುಗಳ ಜತೆಗೆ ನಮ್ಮ ತಂದೆಯವರೂ ನಾವೆಲ್ಲರೂ ಹೋಗಿದ್ದು , ಅಲ್ಲಿ ಒಂದು ಒಳ್ಳೆಯ ಸಭೆಯೇ ಜಮಾಯಿಸಿತ್ತು. ನಮ್ಮ ಗುರುಗಳ ರೂಪದಿಂದಲೇ ಎಲ್ಲರೂ ಪ್ರಭಾವಿತರಾದರು. ಸ್ಥಳೀಯ ಅಧ್ಯಾಪಕರಿಗಾಗಿ ನಾವೆಲ್ಲ ಕಾಯುತ್ತಿದ್ದೆವು. ಆದರೆ ಆತ ಬರಲೇ ಇಲ್ಲ. ನಮ್ಮ ಗುರುಗಳು ಎರಡು ಗಂಟೆಗಳ ಕಾಲ ಅಮೋಘವಾಗಿ ಗಾಯನ ವಾದನಗಳನ್ನು ನಡೆಸಿದರು. ಮಾರನೆಯ ದಿನ ಊರಿನಲ್ಲೆಲ್ಲಾ ಅವರ ಕಛೇರಿಯ ಮಾತೇ ಮಾತು.

ಮಂಗಳ ಹಾಡಿದನಂತರ, ಕೋಲಾರದ ಸಂಗೀತಪ್ರೇಮಿಗಳ ಮೆಚ್ಚುಗೆ ಪ್ರೋತ್ಸಾಹಗಳಿಗಾಗಿ ನಮ್ಮ ಗುರುಗಳು ಅವರಿಗೆ ವಂದನೆ

ಸಲ್ಲಿಸಿದರು. ಸ್ಥಳೀಯ ಅಧ್ಯಾಪಕರ ಉದ್ಯೋಗ ಕಸಿದುಕೊಳ್ಳಲು ತಾವು ಕೋಲಾರಕ್ಕೆ ಬಂದಿಲ್ಲವೆಂದು ಅವರು ಸ್ಪಷ್ಟಪಡಿಸಿದರು. ನಮ್ಮ ಕುಟುಂಬದಲ್ಲೇ ತಾವು ತೃಪ್ತಿಯಿಂದ ಇರುವರೆಂದೂ, ಬೇರಾವ ಪಾಠಗಳನ್ನಾಗಲೀ ಬಾಲಕಿಯರ ಶಾಲೆಯ ಅಧ್ಯಾಪಕನ ಹುದ್ದೆಯನ್ನಾಗಲೀ ತಾವು ಅಪೇಕ್ಷಿಸುವುದಿಲ್ಲ ಎಂದೂ ಹೇಳಿದರು. ನಮ್ಮ ತಂದೆಯವರು ವಿಷಯವನ್ನು ಬೆಳೆಸದೆ ಅಲ್ಲಿಗೇ ಬಿಟ್ಟರು. ಅಷ್ಟರಲ್ಲೇ ಕೋಲಾರಕ್ಕೆ ಪ್ಲೇಗ್ ದಾಳಿ ಇಟ್ಟಿತು. ನಮ್ಮ ಕುಟುಂಬವನ್ನು ಮಾಲೂರಿಗೆ ಸಾಗಿಸಲು ತಂದೆಯವರು ಏರ್ಪಾಟು ಮಾಡಿದರು. ಗುರುಗಳೂ ಅವರ ಪತ್ನಿಯೂ ಮಾಲೂರು, ಚಿತ್ರದುರ್ಗ, ಬೆಂಗಳೂರುಗಳಲ್ಲಿ ನಮ್ಮೊಡನೆ ಅನೇಕ ವರ್ಷಗಳ ಕಾಲ ಇದ್ದರು.

ಕರ್ನಾಟಕ ಸಂಗೀತದ ಅಡಿಗಲ್ಲೇ ಎನಿಸುವ ಸ್ವರಜ್ಞಾನವನ್ನು ನಮ್ಮಲ್ಲಿ ನಿಖರವಾಗಿ ಬೆಳಸಿದವರು ಈ ಶ್ರೇಷ್ಠ ಗುರುಗಳೇ. ಮಹಾವೈದ್ಯನಾಥ ಅಯ್ಯರ್ ಅವರ (“**ಮಹಾವೈಧಿ**”ಎಂದು ಆಗಿಂದಾಗ್ಗೆ ಅವರನ್ನು ಉಲ್ಲೇಖಿಸುತ್ತಿದ್ದರು) ೭೨ ಮೇಳಕರ್ತ ರಾಗಮಾಲಿಕೆಯನ್ನು ನನ್ನ ಅಕ್ಕನವರಿಗೆ ಕಲಿಸಿದವರು ಇವರು. ಆ ರಾಗಮಾಲಿಕೆ ಎಂತಹ ಸುಂದರವಾದ ಸಂಗೀತ ಕೃತಿ! ವಿವಾದಿ ದೋಷಗಳಿಂದ ಕೂಡಿವೆ ಎನ್ನಲಾದ ರಾಗಗಳ ಸ್ವಾರಸ್ಯವನ್ನೂ ವೀಣೆಯಲ್ಲಿ ನುಡಿಸಿದಾಗ ಸ್ಪಷ್ಟವಾಗಿ ಗುರುತಿಸಿ ಆನಂದಿಸಬಹುದು. ಈ ರಾಗಮಾಲಿಕೆಯನ್ನು ಒಮ್ಮೆ ಸಂಪೂರ್ಣವಾಗಿ ನುಡಿಸಲು ಸುಮಾರು ನಾಲ್ಕು ಗಂಟೆಗಳ ಕಾಲ ಬೇಕಾಗುತ್ತಿತ್ತು. ಇಂದಿನ ಹೆಸರಾಂತ ವೀಣಾವಾದಕರೂ ಈ ಖ್ಯಾತ ರಾಗಮಾಲಿಕೆಯನ್ನು ಕಲಿಯದಿರುವುದು ಅನ್ಯಾಯವೇ ಸರಿ. ತೆಲುಗಿನಲ್ಲಿ ಈ ರಾಗಮಾಲಿಕೆ ಅಚ್ಚಾಯಿತೆಂದು ಪತ್ರಿಕೆಯಲ್ಲಿ ಓದಿ ನಾನು ಕೆಲವು ಪ್ರತಿಗಳನ್ನು ಖರೀದಿಸಿದೆ. ವೀಣಾವಾದಕರಾದ ಕೆಲವು ಗೆಳೆಯರಿಗೂ ಬಂಧುಗಳಿಗೂ ಅವನ್ನು ಹಂಚಿದೆ. ನನ್ನಲ್ಲಿ ಈಗಲೂ ಅದರ ಪ್ರತಿ ಇದೆ.* ನಮ್ಮ ಗುರುಗಳಾದ ವಿಶ್ವನಾಥಶಾಸ್ತ್ರಿಗಳು ನಮ್ಮ ಅಕ್ಕನವರಿಗೆ ಕಲಿಸಿದ ರಾಗಮಾಲಿಕೆಯನ್ನು ನನ್ನ ಸೋದರಿಯರು, ಅವರ ಮಕ್ಕಳು ಈಗಲೂ ನುಡಿಸುತ್ತಾರೆಂಬುದು ನನಗೆ ಅಭಿಮಾನದ ವಿಷಯವಾಗಿದೆ. ವಿಶ್ವನಾಥಶಾಸ್ತ್ರಿಗಳು ಕಲಿಸಿಕೊಟ್ಟ ತಾನ ನುಡಿಸುವಿಕೆಯ ತಂತ್ರದಲ್ಲಿ ಇಂದಿನ ವೀಣಾವಾದಕರಲ್ಲಿ ಕಾಣದ ಅನೇಕ ವೈಚಿತ್ರ್ಯಗಳೂ ಸ್ವಾರಸ್ಯಗಳೂ ಇವೆ.

ವಿದ್ವಾನ್ ವಿಶ್ವನಾಥಶಾಸ್ತ್ರಿಗಳಿಗೆ ಅವರ ಮೊದಲ ಪತ್ನಿಯಲ್ಲಿ ಮಕ್ಕಳಿರಲಿಲ್ಲ; ಎರಡನೇ ಪತ್ನಿಯಿಂದ ಆದ ಮಕ್ಕಳ ಪೈಕಿ ಒಬ್ಬರು ಬೆಂಗಳೂರಿನ ಆಕಾಶವಾಣಿಯ ಮೃದಂಗ ಕಲಾವಿದರಾದ ರಂಗನಾಥ್ ಅವರು. ನನಗೆ ಪರಿಚಯವಿರದ ಮತ್ತೊಬ್ಬ ಮಗನೂ ಸಂಗೀತ ವಿದ್ವಾಂಸನೆನ್ನುವುದು ಸಂತೋಷದ ವಿಷಯ.

* *ಜನನ ೧೮೯೪, ಮರಣ ೧೯೭೫*

ವಿದ್ವಾನ್ ಗೋಪಾಲಯ್ಯ

ಇವರೊಬ್ಬ ಪಿಟೀಲು ವಿದ್ವಾಂಸರು. ಆಗ ಈಗ, ಹೋಗಿ ಬಂದು ಮಾಡುತ್ತಾ ಸುಮಾರು ಮೂರು ನಾಲ್ಕು ವರ್ಷಗಳ ಕಾಲ ನಮ್ಮೊಡನೆ ಇದ್ದರು. ಪಕ್ಕವಾದ್ಯಕ್ಕಾಗಿ ಹಾಗೂ ನಮ್ಮ ಸಂಗೀತಾಭ್ಯಾಸದ ಮೇಲ್ವಿಚಾರಣೆಗಾಗಿ ಅವರನ್ನು ನಮ್ಮಲ್ಲಿ ಇರಿಸಿಕೊಳ್ಳಲಾಗಿತ್ತು. ೧೯೦೦ನೇ ಇಸವಿಯಲ್ಲಿ ಮದರಾಸಿಗೆ ಹೋದಾಗ ಖರೀದಿಸಿದ ಒಂದು ಸ್ಟ್ರ್ಯಾಡಿವೇರಿಯಸ್ ಪಿಟೀಲು ನನ್ನಲ್ಲಿ ಈಗಲೂ ಇದೆ. ಈ ಪಿಟೀಲನ್ನೇ ವಿದ್ವಾನ್ ಗೋಪಾಲಯ್ಯನವರು ಉಪಯೋಗಿಸುತ್ತಿದ್ದರು.

ವಿಶ್ವನಾಥಶಾಸ್ತ್ರಿಗಳು, ಗೋಪಾಲಯ್ಯ ಇಬ್ಬರಿಗೂ ಚದುರಂಗ ಎಂದರೆ ಬಹಳ ಪ್ರಿಯ. ಮಧ್ಯಾಹ್ನದ ವೇಳೆ ರಾಜರು-ಕಾಲಾಳುಗಳು-ಆನೆ-ಕುದುರೆಗಳಲ್ಲಿ ಅವರಿಬ್ಬರೂ ಮಗ್ನರಾಗಿರುತ್ತಿದ್ದರು. ತಪ್ಪು ಚಲನೆಯೆಂದು ಪರಸ್ಪರರನ್ನು ದೂಷಿಸಿ ಜಗಳವಾಡುತ್ತಿದ್ದುದೂ ಉಂಟು. ಇಂತಹ ಜಗಳಗಳಿಂದಲೇ ಹಲವಾರು ತಿಂಗಳುಗಳ ಕಾಲ ಗೋಪಾಲಯ್ಯನವರು ನಮ್ಮ ಮನೆ ಬಿಟ್ಟು ಹೋದ ಸಂದರ್ಭಗಳೂ ಇದ್ದವು.

೧೯೦೪ರಲ್ಲಿ ನಾವು ಚಿತ್ರದುರ್ಗದಿಂದ ಹೊರಟಾಗ ವಿಶ್ವನಾಥ ಶಾಸ್ತ್ರಿಗಳೂ ನಮ್ಮೊಡನೆ ಬೆಂಗಳೂರಿಗೆ ಬಂದರು. ಗೋಪಾಲಯ್ಯನವರು ಬೇರೆಲ್ಲೋ ಸಂಗೀತ ಶಿಕ್ಷಕರಾದರು. ಕೆಲವು ವರ್ಷಗಳ ಅನಂತರ ಬೆಂಗಳೂರಿನಲ್ಲಿ ನಮ್ಮಲ್ಲಿಗೆ ಬಂದಿದ್ದರು ಅವರು.

ಪೆನುಕೊಂಡ ನರಸಿಂಹಾಚಾರಿ

೧೯೧೨ರ ಬೇಸಿಗೆ ಕಾಲ. ನಮ್ಮ ತಂದೆಯವರು ಬೆಂಗಳೂರಿನ ಚಾಮರಾಜ ಪೇಟೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಒಬ್ಬ ಅಯ್ಯಂಗಾರ್ ಮಹನೀಯರು ಅವರನ್ನು ನಿಲ್ಲಿಸಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವಾಸವನ್ನು ವಿಚಾರಿಸಿದರು. ಸೂಕ್ತ ಉತ್ತರ ಕೊಟ್ಟ ತಂದೆಯವರು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರನ್ನು ಭೇಟಿ ಮಾಡುವ ಕಾರಣವೇನೆಂದು ಸಹಜವಾಗಿ ವಿಚಾರಿಸಿದರು. ಆ ವ್ಯಕ್ತಿ ಸಂಗೀತಗಾರನೆಂದು ಅದು ಹೇಗೋ ನಮ್ಮ ತಂದೆಯವರು ಸರಿಯಾಗಿಯೇ ಊಹಿಸಿದ್ದರು. ಆತ ಪೆನುಕೊಂಡದಿಂದ ಬಂದ ವಿದ್ವಾಂಸರಾಗಿದ್ದು ಸಂಗೀತಶಿಕ್ಷಕರಾಗಿ ಉದ್ಯೋಗ ಅರಸುತ್ತಿದ್ದರು. ನಮ್ಮ ತಂದೆಯವರು ತನ್ನಲ್ಲಿ ತೋರಿಸಿದ ಆಸಕ್ತಿಯಿಂದ ಉತ್ತೇಜಿತರಾಗಿ ಅವರು ತಮಗೆ ಕೆಲಸ ಗಿಟ್ಟಿಸುವುದರಲ್ಲಿ ನಮ್ಮ ತಂದೆಯವರ ಸಹಾಯವನ್ನೇ ಕೇಳಿದರು. ಈ ವಿಷಯ ಮಾತನಾಡಲೆಂದು ಅವರನ್ನು ತಂದೆಯವರು ಮನೆಗೆ ಕರೆತಂದರು.

ವಿದ್ವಾನ್ ನರಸಿಂಹಾಚಾರಿಯವರನ್ನು ನಮ್ಮ ಮನೆಗೆ ಆದರದಿಂದ ಬರಮಾಡಿಕೊಂಡು ಆತಿಥ್ಯ ನೀಡಲಾಯಿತು. ಅವರ ಹಾಡುಗಾರಿಕೆಯನ್ನು ಕೇಳಲು ತಂದೆಯವರು ಅಪೇಕ್ಷಿಸಿದರು. ಆತ ತಕ್ಷಣವೇ

ಒಪ್ಪಿಕೊಂಡರು. ನಮ್ಮಲ್ಲಿ ತಂಬೂರಿಯಾಗಲೀ, ಹಾರ್ಮೋನಿಯಂ ಆಗಲೀ ಇರಲಿಲ್ಲ. ಆದರೆ ವೀಣೆಗಳು ಇದ್ದವು. ಅವರು ಒಂದು ವೀಣೆಯನ್ನೇ ತಂಬೂರಿಯಂತೆ ತಮ್ಮ ಅನುಕೂಲಕ್ಕೆ ಸರಿಯಾಗಿ ಶ್ರುತಿ ಮಾಡಿಕೊಂಡರು. ವಿದ್ವಾನ್ ನರಸಿಂಹಾಚಾರಿಯವರು ಅದ್ಭುತವಾಗಿ ಹಾಡಿದ ಧೇನುಕ ರಾಗದ "ತೆಲಿಯಾ ಲೇದು ರಾಮ" ಕೃತಿ ನನಗಿನ್ನೂ ನೆನಪಿನಲ್ಲಿದೆ. ನಮ್ಮ ಸೋದರಿಯರಿಗೆ ಅವರು ಗಾಯನ ಕಲಿಸಬಹುದೆಂದೂ, ಅವರಂತಹ ವಿದ್ವಾಂಸರಿಗೆ ಇತರ ಪಾಠಗಳೂ ಸುಲಭವಾಗಿ ದೊರಕುತ್ತವೆಂದೂ ತಂದೆಯವರು ಆಶ್ವಾಸನೆ ಕೊಟ್ಟರು.

ನರಸಿಂಹಾಚಾರಿಯವರಿಗೆ ಬೆಂಗಳೂರಿನಲ್ಲಿ ಮೊಟ್ಟ ಮೊದಲು ಸಿಕ್ಕ ಕೆಲಸ ನಮ್ಮ ಮನೆಯಲ್ಲಿ ನಮ್ಮ ಸೋದರಿಯರಿಗೆ ಪಾಠ ಹೇಳುವುದು. ಮಟ ಮಟ ಮಧ್ಯಾಹ್ನ ಒಂದು ಗಂಟೆಯಿಂದ ಎರಡು ಗಂಟೆಯವರಿಗೆ ಪಾಠ ನಡೆಯುತ್ತಿತ್ತು. ಪ್ರತಿನಿತ್ಯದ ಸಂಗೀತ ಪಾಠಗಳನ್ನು ನಾನು ಮನಸ್ಸಿಟ್ಟು ಕೇಳುತ್ತಿದ್ದುದರಿಂದ ಸಾವೇರಿ ರಾಗದ "ರಾಮ ಬಾಣ", ದೇವಗಾಂಧಾರಿಯ "ಕ್ಷೀರಸಾಗರ ಶಯನ", ಕಾಂಭೋಜಿ ರಾಗದ "ಶ್ರೀ ಸುಬ್ರಹ್ಮಣ್ಯಾಯ ನಮಸ್ತೆ", ಷಹನ ರಾಗದ "ಗಿರಿಪೈ ನೆಲ" ಮುಂತಾದ ಕೀರ್ತನೆಗಳನ್ನು ನಾನು ಸಂಪೂರ್ಣವಾಗಿ ಕಲಿತುಬಿಟ್ಟೆ. ನನ್ನ ತಂಗಿ ತಂಗಮ್ಮನ ಶಾರೀರ ಅದ್ಭುತವಾಗಿತ್ತು. ಆಕೆ ಈ ಕ್ಲಿಷ್ಟವಾದ ಕೃತಿಗಳನ್ನು ಅಮೋಘವಾಗಿ ಹಾಡುತ್ತಿದ್ದರೆ ದಾರಿಹೋಕರು ನಿಂತು ಆಲಿಸುತ್ತಿದ್ದರು.

ಮುಂದೆ ನಾನು ನಾಗಪುರದಿಂದ ಬೆಂಗಳೂರಿಗೆ ಬಂದಾಗಲೆಲ್ಲ ಶ್ರೀನರಸಿಂಹಾಚಾರಿಯವರು ನನ್ನ ಹಿಂದೂಸ್ತಾನಿ ಸಂಗೀತವನ್ನು ಬಹಳ ವಿಶ್ವಾಸ, ಆದರಗಳಿಂದ ಕೇಳುತ್ತಿದ್ದರು.

ನರಸಿಂಹಾಚಾರಿಯವರು ಒಬ್ಬ ಶ್ರದ್ಧಾವಂತ ಗುರುವಾಗಿದ್ದು ತನ್ನ ಶಿಷ್ಯರ ಬಗ್ಗೆ ಹೆಚ್ಚಿನ ಅಭಿಮಾನವಿರಿಸಿಕೊಂಡಿದ್ದರು. ಅವರೊಬ್ಬ ಹಿರಿಯ ಭಕ್ತರಾಗಿದ್ದು ವೃದ್ಧಾಪ್ಯದಲ್ಲಿ ಸ್ವಂತ ಊರಾದ ಪೆನುಕೊಂಡಕ್ಕೆ ತೆರಳಿ ಕೊನೆಗಾಲಕ್ಕೆ ಸಂನ್ಯಾಸ ಸ್ವೀಕರಿಸಿದ್ದರು. ಅವರ ಒಬ್ಬ ಪುತ್ರ ಇಂಜಿನಿಯರ್ ಆಗಿದ್ದಾನೆಂಬುದು ಸಂತಸದ ವಿಷಯ. ಅವರ ಒಬ್ಬ ಸೋದರಳಿಯ ವಿದ್ವಾನ್ ತಾತಾಚಾರ್ ಅವರು ಎಲ್ಲರೂ ಬಲ್ಲ ಪಿಟೀಲು ವಿದ್ವಾಂಸರಾಗಿದ್ದಾರೆ.

ಇನ್ನೂ ಎಂಟು ವರ್ಷ ತುಂಬಿರದ ನನ್ನ ಕಿರಿಯ ತಂಗಿ ಲಲಿತಮ್ಮನಿಗೂ ಶ್ರೀ ನರಸಿಂಹಾಚಾರಿ ಸಂಗೀತ ಕಲಿಸಿದ್ದರು. ವಿದ್ವಾನ್ ನರಸಿಂಹಾಚಾರ್ಯರು ಸಂಗೀತ ಶಿಕ್ಷಕರಾಗಿ ಸಾಧಿಸಿದ ಯಶಸ್ಸನ್ನು ನಮ್ಮ ಕುಟುಂಬದ ಸ್ನೇಹಿತರಾದ ವಿದ್ವಾನ್ ವಾಸುದೇವಾಚಾರ್ಯರು ಮೆಚ್ಚಿಕೊಂಡರು.

ನಾಗಪುರದ ಪಂಡಿತ್ ದಿನಕರರಾವ್ ಪಟವರ್ಧನ್

ಅಪರೂಪದ ಶುದ್ಧಮಧ್ಯಮ ಪ್ರಯೋಗದೊಂದಿಗೆ, ಕಲ್ಯಾಣಿ ರಾಗವನ್ನು ಹೋಲುವ ರಾಗವೊಂದನ್ನು ಪಾಠ ಮಾಡುತ್ತಿದ್ದುದು ನನಗೆ ಕೇಳಿಸಿದ್ದೇ ಹಿಂದೂಸ್ತಾನಿ ಸಂಗೀತದಲ್ಲಿ ನನ್ನ ಆಸಕ್ತಿಯನ್ನು ಕೆರಳಿಸಿತು. ಇದು ನಡೆದದ್ದು ಕೊಲ್ಹಾಪುರದ ಹೋಟೆಲ್ ಒಂದರ ಎರಡನೆಯ ಮಹಡಿಯಲ್ಲಿ, ೧೯೧೧ ನೇ ಇಸವಿಯಲ್ಲಿ ನಡೆಯುತ್ತಿದ್ದ ಸಂಗೀತದ ತರಗತಿಯೊಂದರಲ್ಲಿ. ಮುಂದೆ ೧೯೧೪ ರಲ್ಲಿ ಅಗ್ರಿಕಲ್ಚರಲ್ ಕಾಲೇಜಿಗೆ ಸೇರಲೆಂದು ನಾಗಪುರಕ್ಕೆ ಹೋದೆ. ಸೀತಾಬಲ್ಡಿಯ ಮುಖ್ಯ ರಸ್ತೆಯೊಂದರಲ್ಲಿ ಹೋಗುತ್ತಿದ್ದಾಗ ಸಂಗೀತದ ತರಗತಿಯ ಬೋರ್ಡ್ ಕಾಣಿಸಿತು. ಆ ಸಂಸ್ಥೆ ನಮ್ಮ ಅಗ್ರಿಕಲ್ಚರಲ್ ಕಾಲೇಜ್ ಹಾಸ್ಟೆಲಿನಿಂದ ದೂರವಿರಲಿಲ್ಲವಾದ್ದರಿಂದ ನಾಗಪುರದಲ್ಲಿರುವ ಮೂರು ವರ್ಷಗಳಲ್ಲಿ ಸ್ವಲ್ಪ ಹಿಂದೂಸ್ತಾನಿ ಸಂಗೀತ ಕಲಿಯಲು ಉದ್ದೇಶಿಸಿದೆ. ಉತ್ತರ ಭಾರತದಲ್ಲಿ ಸೇವೆಸಲ್ಲಿಸುವ ಉದ್ದೇಶವೇನೂ ಆಗ ನನಗಿರಲಿಲ್ಲ. ಹಿಂದಿ ಹಾಗೂ ಮರಾಠಿ ನನಗೆ ಗೊತ್ತಿರಲಿಲ್ಲ. ಅಲ್ಲಾಡುವ ಮೆಟ್ಟಿಲುಗಳನ್ನು ಏರಿ, ಎರಡು – ಮೂರು ಹುಡುಗರಿಗೆ ಪಾಠ ಹೇಳಿಕೊಡುತ್ತಿದ್ದ ಗುರುಗಳಿಗೆ ವಂದಿಸಿದೆ. ಅವರು ಕುಳಿತುಕೊಳ್ಳಲು ಹೇಳಿದರು. ಆ ಹುಡುಗರ ಪಾಠ ಮುಗಿಯುವವರೆಗೆ ಕುಳಿತೆ. "ಕಾ ಪಾಹಿ ಜೇ" (ಏನು ಬೇಕು) ಎಂದು ನನ್ನನ್ನು ಅವರು ಮರಾಠಿಯಲ್ಲಿ ಕೇಳಿದರು. ಹಿಂದಿನ ದಿನವಷ್ಟೇ ನಾನು ಮೈಸೂರಿನಿಂದ ನಾಗಪುರಕ್ಕೆ ಬಂದಿಳಿದೆನೆಂದೂ, ಹಿಂದಿಯಾಗಲೀ ಮರಾಠಿಯಾಗಲೀ ನನಗೆ ಗೊತ್ತಿಲ್ಲವೆಂದೂ ಇಂಗ್ಲಿಷಿನಲ್ಲಿ ಉತ್ತರಿಸಿದೆ. ಆತ ಇಂಗ್ಲಿಷಿನಲ್ಲಿ ಮಾತನಾಡತೊಡಗಿದರು. ಇದೊಂದು ಶುಭ ಲಕ್ಷಣ ಎನಿಸಿತು. ಹಿಂದೂಸ್ತಾನಿ ಸಂಗೀತವನ್ನು ಕಲಿಯಬೇಕೆನ್ನುವ ನನ್ನ ಆಸೆಯನ್ನು ಅವರಿಗೆ ತಿಳಿಸಿದೆ. ಕರ್ನಾಟಕ ಸಂಗೀತವನ್ನು ಕಲಿತಿರುವೆನೇನು ಎಂದು ಅವರು ಕೇಳಿದರು. ಸ್ವಲ್ಪ ಗೊತ್ತೆಂದು ಸಂಕೋಚದಿಂದ ನುಡಿದೆ. ಅವರು ತಂಬೂರಿ ಕೈಗೆತ್ತಿಕೊಂಡು ನನಗೆ ಹಾಡಲು ಹೇಳಿದರು. ಹಂಸಧ್ವನಿಯಲ್ಲಿ ಸ್ವಲ್ಪ ಆಲಾಪನೆ ಮಾಡಿ ತಾಳ ಹಾಕುತ್ತಾ ಜನಪ್ರಿಯ ಕೃತಿ "ವಾತಾಪಿ ಗಣಪತಿಂ ಭಜೆ" ಹಾಡತೊಡಗಿದೆ. ನಾನು ಪಲ್ಲವಿ ಹಾಡಿ ಮುಗಿಸುತ್ತಿದ್ದಂತೆ ಅವರು ತಂಬೂರಿಯನ್ನು ಒಬ್ಬ ಶಿಷ್ಯನಿಗೆ ವರ್ಗಾಯಿಸಿ ತಬಲ – ಡಗ್ಗ ಹೊರತೆಗೆದರು. ಕರ್ನಾಟಕ ಶೈಲಿಯ ಅವರ ತಬಲ ಪಕ್ಕವಾದ್ಯದೊಂದಿಗೆ ನಾನು ಮತ್ತೊಮ್ಮೆ ಪಲ್ಲವಿ ಹಾಡಿ ಕೃತಿಯನ್ನು ಸಂಪೂರ್ಣಗೊಳಿಸಿದೆ. ಅವರ ಕರ್ನಾಟಕ ಶೈಲಿಯ ಪಕ್ಕವಾದ್ಯ ನನಗೆ ಅಚ್ಚರಿಯುಂಟುಮಾಡಿತು. ಸ್ವಲ್ಪ ಸಮಯದ ಹಿಂದೆ ದಕ್ಷಿಣದ ಒಬ್ಬ ಘಟವಾದಕ ಕೆಲವು ತಿಂಗಳುಗಳು ನಾಗಪುರದಲ್ಲಿದ್ದನೆಂದೂ ಆತ ತಮಗೆ ಕರ್ನಾಟಕದ ಪಕ್ಕವಾದ್ಯ ವಿಧಾನ ಕಲಿಸಿದನೆಂದೂ ಅವರು ತಿಳಿಸಿದರು. ಇನ್ನೂ ಹಲವು ಕೃತಿಗಳನ್ನು ಹಾಡಿದೆ. ನಾನು ಎದ್ದಾಗ ಅವರೆಂದರು, "ಆಗಲಿ, ನಾನು ನಿಮಗೆ ಹಿಂದೂಸ್ತಾನಿ ಸಂಗೀತ ಕಲಿಸುತ್ತೇನೆ, ನಿಮ್ಮಿಂದ ಕರ್ನಾಟಕ ಸಂಗೀತ ಕಲಿಯುತ್ತೇನೆ."

ನಾವು ಒಳ್ಳೆಯ ಗೆಳೆಯರಾದೆವು. ೧೯೨೦ರಲ್ಲಿ ನಾಗಪುರದ ಅಗ್ರಿಕಲ್ಚರಲ್ ಕಾಲೇಜಿನಲ್ಲಿ ನಾನು ಉಪನ್ಯಾಸಕನಾಗಿ ಕೆಲಸಕ್ಕೆ ಸೇರಿದ

ಮೇಲೆ ನಮ್ಮಿಬ್ಬರಿಗೂ ಪರಸ್ಪರ ಕೊಡುಕೊಳ್ಳುವಿಕೆಗೆ ಧಾರಾಳವಾದ ಅವಕಾಶವೇ ಲಭಿಸಿತು. ಅವರ ಮನೆಯಲ್ಲಿ ಏರ್ಪಡಿಸಲಾದ ಅನೇಕ ಸಂಗೀತ ಕಛೇರಿಗಳಲ್ಲಿ ಭುಜ್ ಪ್ರಾಂತ್ಯದ ಲಾಲ್‌ಖಾನ್ , ಮುಂಬೈನ ಜಿ. ಎನ್. ಜೋಶಿ, ಮುಂತಾದ ಕಲಾವಿದರೊಂದಿಗೆ ಪಕ್ಕವಾದ್ಯ ನುಡಿಸುವ ಹಿರಿದಾದ ಅವಕಾಶ ನನಗೆ ಲಭಿಸಿತು.

ಪಂಡಿತ್ ದಿನಕರರಾವ್ ಪಟವರ್ಧನ್ ಒಳ್ಳೆಯ ಸಿತಾರ್ ವಾದಕರೂ ಆಗಿದ್ದರು. ಅವರಿಗೆ ಟೆನ್ನಿಸ್ ಆಟದಲ್ಲೂ ಒಲವು. ಅವರ ಶಿಷ್ಯರ ಪೈಕಿ ಬರ್ವೆ ಸಹೋದರರು ಖ್ಯಾತಿ ಗಳಿಸಿದ್ದಾರೆ. ಅವರ ಒಬ್ಬ ಸೋದರಳಿಯ ಡಾ|| ಆರ್. ಎಸ್. ಜೋಶಿ ಎಂಬ ರಸಾಯನ ಶಾಸ್ತ್ರಜ್ಞರು ಪಿಟೀಲು ಕಲಿಯಲು ಪ್ರಯತ್ನಿಸಿದರು. ಆದರೆ ಸಪ್ತಸ್ವರಗಳನ್ನು ಸರಿಯಾಗಿ ನುಡಿಸುವುದೂ ಅವರಿಗೆ ಸಾಧ್ಯವಾಗಲಿಲ್ಲ. ಸಾರಂಗಿ ನುಡಿಸುವಂತೆ ವಾದ್ಯದ ದೇಹಭಾಗವನ್ನು ನೆಲದ ಕಡೆಗೂ, ಫಿಂಗರ್ ಬೋರ್ಡ್‌ನ್ನು ಎದೆಯ ಮೇಲೂ ಇರಿಸಿಕೊಂಡು ಪಿಟೀಲು ನುಡಿಸಲು ಅವರು ಪ್ರಯತ್ನಿಸಿದರು. ಪ್ರಯೋಗ ಸಫಲವಾಗಲಿಲ್ಲ. ಮುಂದೆ ಸಾರಂಗಿ ಕಲಿಯತೊಡಗಿ ಒಳ್ಳೆಯ ಅಭಿವೃದ್ಧಿ ಹೊಂದುತ್ತಿದ್ದಾಗಲೇ ಸಾವು ಸೆಳೆದುಕೊಂಡು ಹೋಯಿತು. ಎರಡು ಜನಪ್ರಿಯ ರಾಗಗಳಾದ ಅಲಾಯಿಯ ಬಿಲಾವಲ್, ಹಾಗೂ ಬಹಾರ್ ಇವುಗಳ ಮಿಲನವಾದ "ಅಲಾಯಿಯ ಬಹಾರ್" ಎಂಬ ರಾಗವೊಂದನ್ನು ಡಾ. ಆರ್. ಎಸ್. ಜೋಶಿ ಕಂಡುಹಿಡಿದರು.

ಅಮರಾವತಿಯ ವಾಮನರಾವ್ ಜೋಶಿ

೧೯೧೮ರಲ್ಲಿ ನಾಗಪುರದ ಅಂಚೆ ಮತ್ತು ತಂತಿ ಇಲಾಖೆಯ ಡೆಪ್ಯುಟಿ ಅಕೌಂಟೆಂಟ್ ಜನರಲ್‌ರವರ ಕಛೇರಿಯಲ್ಲಿ ಶ್ರೀವಾಮನ್‌ರಾವ್ ಜೋಶಿ ಗುಮಾಸ್ತರಾಗಿದ್ದರು. ಅದೇ ಕಾಲದಲ್ಲಿ ನಾನು ನಾಗಪುರದ 'ತೇಲಂ ಖೇಡಿ' ಸಹಕಾರಿ ಹೈನುಗಾರಿಕೆಯ ಫಾರಂನಲ್ಲಿ ಓವರ್‌ಸಿಯರ್ ಆಗಿದ್ದೆ. ಒಬ್ಬರೇ ಗುರುವಿನ ಶಿಷ್ಯರೂ ಅಮರಾವತಿಯಿಂದ ಬಂದವರೂ ಆದ ಶ್ರೀ ಶ್ರೀವಾಮನ್‌ರಾವ್ ಜೋಶಿ ಹಾಗೂ ಶ್ರೀ ನಾಥೂಬುವಾ ಇವರಿಬ್ಬರಿಗೂ ಅದ್ಭುತವಾದ ಕಂಠವಿತ್ತು. ಹಾರ್ಮೋನಿಯಂನ ಬಿಳಿ ನಾಲ್ಕರ ಶ್ರುತಿಯಲ್ಲಿ ಇವರು ಹಾಡುತ್ತಿದ್ದರು. ಹಲವು ವರ್ಷಗಳ ಅನಂತರ ಶ್ರೀನಾಥೂ ಬುವಾ ಅವರ ಧ್ವನಿ ಒಡೆದುಹೋಯಿತು. ವಾಮನರಾಯರಾದರೋ ೧೯೪೮ರಲ್ಲಿ ಅವರ ಮರಣದ ತನಕವೂ ಎತ್ತರದ ಶ್ರುತಿಯ ಆಕರ್ಷಕ ಕಂಠಸಿರಿಯನ್ನು ಹೊಂದಿದ್ದರು. ಇಬ್ಬರೂ ಒಳ್ಳೆಯ ಕಲಾವಿದರೂ ಸಂಗೀತ ಶಿಕ್ಷಕರೂ ಆಗಿದ್ದರು.

ವಾಮನರಾಯರು ನನಗೆ ಕಲಿಸಿದ ಮತ್ತು ಸ್ವರಪ್ರಸ್ತಾರದಲ್ಲಿ ಬರೆದುಕೊಟ್ಟ ಕೆಲವು ಕೃತಿಗಳು ನನ್ನಲ್ಲಿ ಉಳಿದಿವೆ. ಅವರು ಅನುಸರಿಸಿರುವುದು ಬರೋಡಾದ ಉಸ್ತಾದ್ ಮೌಲಾ ಬಕ್ಷ್ ಅವರ ಸ್ವರ ಪ್ರಸ್ತಾರ ಪದ್ಧತಿ. ವಿಷ್ಣು ದಿಗಂಬರ್ ಹಾಗೂ ಭಾತ್‌ಖಂಡೇ ಪದ್ಧತಿಗಳ ಆವಿಷ್ಕಾರವಿನ್ನೂ ಆಗಿರಲಿಲ್ಲ. ಮೌಲಾ ಬಕ್ಷ್ ಅವರ ಪುಸ್ತಕಗಳ ನಾಲ್ಕು ಭಾಗಗಳನ್ನು (೧-೪) ನಾನು ಬರೋಡಾದಿಂದ ತರಿಸಿಕೊಂಡೆ. ಅದರಲ್ಲಿರುವ ಅನೇಕ ಕೃತಿಗಳು ಮೌಲಾ ಬಕ್ಷ್‌ರ ರಚನೆಗಳೇ ಆಗಿವೆ. ಇವುಗಳ ಪೈಕಿ ಕೆಲವು ಆಗಿನ್ನೂ ಉತ್ತರ ಭಾರತದಲ್ಲಿ ಜನಪ್ರಿಯವಾಗಿರದಿದ್ದ ಕರ್ನಾಟಕ ರಾಗಗಳ ರಚನೆಗಳು. ಆ ಪುಸ್ತಕಗಳು ನನಗೆ ಬಹಳ ಪ್ರಿಯವಾಗಿದ್ದವು. ಅವುಗಳನ್ನು ಹೇಗೋ ಏನೋ ಕಳೆದುಕೊಂಡದ್ದು ನನಗೆ ಅತೀವ ವೇದನೆಯುಂಟುಮಾಡಿತು. ಪಂಡಿತ್ ಗಣಪತರಾವ್ ಬರ್ವೆ ಅವರ ಬಗ್ಗೆ ಬರೆಯುವಾಗ ಮುಂದೆ ಮೌಲಾ ಬಕ್ಷ್‌ರ ಬಗ್ಗೆಯೂ ಹೇಳಬೇಕಾದದ್ದು ಉಳಿದಿದೆ.

ವಾಮನರಾಯರು ವಾರದಲ್ಲಿ ಮೂರು ದಿವಸ ತೇಲಂಖೇಡಿಗೆ ಕಛೇರಿ ವೇಳೆಯ ಅನಂತರ ಬರುತ್ತಿದ್ದರು. ಅವರು ವಿಧಿಸಿದ್ದ ಒಂದು ಶರತ್ತು ಎಂದರೆ ಅವರು ಬಂದೊಡನೆ ಕುಡಿಯಲು ಅರ್ಧ ಸೇರು ಹಸುವಿನ ಹಾಲು ಕೊಡಬೇಕು ಎಂಬುದು. ಒಂದು ರೂಪಾಯಿಗೆ ಎಂಟು ಸೇರಿನಂತೆ ಹಸುವಿನ ಹಾಲು ಕೊಳ್ಳುತ್ತಿದ್ದುದರಿಂದ ಅವರು ಹಾಲಿನಲ್ಲೇ ಬೇಕಾದರೆ ಸ್ನಾನಮಾಡಬಹುದೆಂದು ತಮಾಷೆಯಾಗಿ ಸೂಚಿಸಿದೆ. ಆ ಕಾಲದಲ್ಲಿ ತೇಲಂಖೇಡಿ ಫಾರಂನಲ್ಲಿ ವಿದ್ಯುದ್ದೀಪಗಳಿರಲಿಲ್ಲ. ಅತ್ಯಂತ ಸಮೀಪದ ಬೀದಿ ದೀಪವು ಡೈರಿ ಫಾರಂನಿಂದ ಸುಮಾರು ಅರ್ಧ ಮೈಲಿ ದೂರದಲ್ಲಿ, ಡೈರಿ ಫಾರಂ ಇದ್ದ ಗುಡ್ಡದ ಬುಡದಲ್ಲಿ ಸಿ.ಪಿ.ಕ್ಲಬ್‌ನ ಬಳಿ ಇದ್ದಿತು ; ಹಾಗಾಗಿ ಸಿ.ಪಿ. ಕ್ಲಬ್‌ನವರೆಗೆ ಲಾಂದ್ರ ಹಿಡಿದ ಒಬ್ಬ ಜೊತೆಗಾರರನ್ನೂ ನಾನು ಗೊತ್ತು ಮಾಡಿಕೊಡಬೇಕಾಯಿತು. ಕೆಲವೊಮ್ಮೆ ನನಗೆ ಹೆಚ್ಚಿನ ಕೆಲಸವಿದ್ದು ಸಂಗೀತಕ್ಕಾಗಿ ವಿರಾಮ ಇಲ್ಲವಾದಾಗ ಗುರುಗಳು ಹಾಲು ಕುಡಿದು ನಿರ್ಗಮಿಸುತ್ತಿದ್ದರು.

ಕಲ್ಯಾಣ್, ಭೂಪ್, ಬಾಗೇಶ್ರೀ, ಶುದ್ಧ ಕಲ್ಯಾಣ್ ಮುಂತಾದ ರಾಗಗಳಲ್ಲಿ ಮಧ್ಯ ಲಯದ ಖ್ಯಾಲ್‌ಗಳನ್ನು ಪಂಡಿತ್ ವಾಮನರಾವ್ ಜೋಶಿಯವರಿಂದ ಕಲಿತುಕೊಂಡೆ. ಅವರು ನನಗೆ ಒಂದೇ ವರ್ಷ ಪಾಠ ಕಲಿಸಿದ್ದು. ಅಮರಾವತಿಯಲ್ಲಿ ಒಂದು ಸಹಕಾರಿ ಡೈರಿ ಫಾರಂ ಸ್ಥಾಪಿಸಲೆಂದು ನನ್ನನ್ನು ತೇಲಂಖೇಡಿ ಫಾರಂನಿಂದ ಅಮರಾವತಿಗೆ ವರ್ಗಾಯಿಸಲಾಯಿತು. ಅವರನ್ನು ನಾನು ಅನಂತರವೂ ಭೇಟಿ ಮಾಡಿ ರಾಗಗಳ ಬಗ್ಗೆ ಚರ್ಚೆ ನಡೆಸುತ್ತಿದ್ದೆ.

೧೯೪೭ರಲ್ಲಿ ಅಮರಾವತಿಯ ಕೃಷಿ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಆಗಿ ನಾನು ನೇಮಿಸಲ್ಪಟ್ಟೆ. ವಾಮನ್‌ರಾವ್ ಜೋಶಿಯವರು ಒಂದು ವಾರ ಕಾಲ ಅಮರಾವತಿಯಲ್ಲಿ ನನ್ನೊಡನೆ ಬಂದು ಇದ್ದರು. ೧೯೧೭ ರಲ್ಲಿ ಅವರಿಗಿದ್ದ ಎತ್ತರದ ಮೊಳಗುವ ಸುಂದರ ಕಂಠಸಿರಿ ಇನ್ನೂ ಹಾಗೆಯೇ ಉಳಿದಿತ್ತು ಎನ್ನುವುದನ್ನು ಸಂತಸದಿಂದ ಕಂಡೆ. ಅಮರಾವತಿಯಲ್ಲಿ ಆರು ತಿಂಗಳು ಕಳೆದ ಮೇಲೆ ನನ್ನನ್ನು ನಾಗಪುರಕ್ಕೆ ವರ್ಗಾಯಿಸಲಾಯಿತು. ನಾನು ಮತ್ತೆ ವಾಮನರಾವ್ ಜೋಶಿಯವರನ್ನು ಭೇಟಿಯಾಗಲಿಲ್ಲ. ಅವರು ೧೯೪೮ ರಲ್ಲಿ ನಿಧನರಾದರು.

ಪಂಡಿತ್ ಖಾಂಡ್ಕರ್

ಇವರ ಪೂರ್ಣ ಹೆಸರು ನನಗೆ ನೆನಪಿಲ್ಲ. ಸಹಕಾರಿ ಡೈರಿ ವ್ಯವಸ್ಥೆಗೆಂದು ಅಮರಾವತಿಯಲ್ಲಿ ನಾನು ಡಿಸೆಂಬರ್ ೧೯೧೮ ರಲ್ಲಿ ಸೇರಿಕೊಂಡೆ. ಉದ್ದೇಶಿತ ಡೈರಿಯ ನಿರ್ದೇಶಕರ ಸಹಕಾರದಿಂದ ಮಾರ್ಸಿ ರೋಡ್ ಜಂಕ್ಷನ್ ಸಮೀಪದ ರಾವ್ ಸಾಹೇಬ್ ಡೋಲ್ ಅವರ ಬಂಗಲೆಯ ಒಂದು ಭಾಗವನ್ನು ನನ್ನ ನಿವಾಸಕ್ಕೆಂದು ನಿಗದಿಪಡಿಸಲಾಗಿತ್ತು. ಅಮರಾವತಿಯ ಹೊರವಲಯದಲ್ಲಿ ನಾಗಪುರ, ಮಾರ್ಸಿ, ಊರಿನೊಳಗಿದ್ದ ಕಮಿಷನರ್ ಬಂಗಲೆ, ಹಾಗೂ ಬಾಲಕಿಯರ ಶಾಲೆಗಳಿಂದ ಬಂದ ನಾಲ್ಕು ರಸ್ತೆಗಳು ಇಲ್ಲಿ ಸಂಧಿಸುತ್ತವೆ. ಆಗ ನಾನಿನ್ನೂ ಅವಿವಾಹಿತನಾಗಿದ್ದು ನಮ್ಮ ಚಿಕ್ಕಮ್ಮ ನನ್ನೊಡನೆ ಇದ್ದರು.

ಒಂದು ದಿನ ಬೆಳಗ್ಗೆ ಲಾಂಗ್ ಕೋಟು, ಕಪ್ಪು ಟೋಪಿ ಧರಿಸಿ ಛತ್ರಿ ಹಿಡಿದಿದ್ದ , ತೆಳ್ಳಗೆ ಬೆಳ್ಳಗೆ ಎತ್ತರವಾಗಿದ್ದ ಸುಮಾರು ೫೦ ವರ್ಷದ ವ್ಯಕ್ತಿಯೊಬ್ಬರು ಡೋಲ್ ಅವರ ಬಂಗಲೆಯಿದ್ದ ಕಿತ್ತಳೆ ತೋಟದೊಳಕ್ಕೆ ನಿಧಾನವಾಗಿ ನಡೆದು ಬಂದರು. "ಮಿಸ್ಟರ್ ಸುಬ್ಬರಾವ್ ನೀವೇ ಏನು?'' ಎಂದು ಅವರು ಕೇಳಿದರು. ನಾನು ಹೌದೆಂದೆ. ನೆರವಿಗಾಗಿ ಬಂದಿರುವ ಸಂಗೀತಗಾರನೆಂದು ಅವರು ತಮ್ಮ ಪರಿಚಯ ಮಾಡಿಕೊಂಡರು. ಅಮರಾವತಿಯಲ್ಲಿ ಕೆಲವು ಪಾಠಗಳು ಸಿಗುವವರೆಗೆ ಉಳಿಯಲು ಸ್ಥಳಾವಕಾಶ ಅವರಿಗೆ ಅಗತ್ಯವಾಗಿತ್ತು.

ನಾಟಕ ಕಂಪೆನಿಯೊಂದರಲ್ಲಿ ಅವರು ಹಾರ್ಮೋನಿಯಂ ವಾದಕರಾಗಿದ್ದು ಆ ಕಂಪೆನಿ ಈಗ ಮುಚ್ಚಿಹೋಗಿತ್ತು. ಅವರಿಗೆ ಸಿತಾರ್ ಹಾಗೂ ತಬಲ ಕೂಡ ಗೊತ್ತಿತ್ತು. ಆತ ಗೌರವಾನ್ವಿತ ವ್ಯಕ್ತಿಯಂತೆ ಕಂಡು ಬಂದರು. ನನಗೂ ಜೊತೆಗಾರರೊಬ್ಬರ ಆವಶ್ಯಕತೆ ಇತ್ತು. ಆತನೂ ಸಂಗೀತಗಾರನಾದ್ದರಿಂದ ನನ್ನೊಡನೆ ಉಳಿಯಲು ಅವಕಾಶ ಮಾಡಿಕೊಡುವುದು ನಮ್ಮಿಬ್ಬರಿಗೂ ಲಾಭದಾಯಕ ಎನಿಸಿತು ನನಗೆ. ಆತನಿಗೆ ಬಹಳ ಸಂತೋಷವಾಯಿತು. ಅವರು ನನಗೆ ಬರೆದು ಕೊಟ್ಟ ಹಿಂದಿ ಹಾಡುಗಳು, ಮರಾಠಿಯ ನಾಟಕದ ಮಟ್ಟುಗಳು, ಖ್ಯಾಲ್‌ಗಳು, ಠುಮ್ರಿ ಮುಂತಾದವುಗಳ ಉದ್ದನೆಯ ನೋಟ್ ಪುಸ್ತಕ ಇನ್ನೂ ನನ್ನ ಬಳಿ ಇದೆ. ನನಗೆ ಒಳ್ಳೆ ನೆನಪಿನ ಶಕ್ತಿ ಹಾಗೂ ಸ್ವರಪ್ರಸ್ತಾರಗಳನ್ನು ಓದುವ ಚಾಣ್ಮೆ ಇದ್ದಿತು. ಶ್ರೀ ಖಾಂಡ್ಕರ್ ನನ್ನನ್ನು ತಿದ್ದಲು ಸದಾ ಸಿದ್ಧವಿದ್ದುದರಿಂದ ಎರಡು ವರ್ಷಗಳ ಅವರ ಒಡನಾಟದಲ್ಲಿ ಕೊನೆಯ ಪಕ್ಷ ನೂರು ಹಾಡುಗಳನ್ನು ಕಲಿತೆ. ನಮ್ಮಿಬ್ಬರಿಗೂ ಅದೊಂದು ಮರೆಯಲಾಗದ ಅನುಭವ.

೧೯೨೦ರ ಬೇಸಿಗೆಯಲ್ಲಿ ನನ್ನ ವಿವಾಹಕ್ಕೆಂದು ಬೆಂಗಳೂರಿಗೆ ಹೋದೆ. ಪಂಡಿತ್ ಖಾಂಡ್ಕರ್ ಅವರನ್ನೂ ನನ್ನೊಡನೆ ಕರೆದೊಯ್ದೆ. ಕಲ್ಯಾಣ್,ಪೂನಾ,ಮೀರಜ್‌ಗಳ ಮೂಲಕವೇ ನಾವು ಪ್ರಯಾಣ ಮಾಡುತ್ತಿದ್ದುದರಿಂದ ಮೀರಜ್‌ನಲ್ಲಿ ಕೆಳಗಿಳಿದು ೨೮ ರೂಪಾಯಿಗಳಿಗೆ ಒಂದು ಸಿತಾರ್ ಖರೀದಿಸಿದೆ.

ಬೆಂಗಳೂರಿನಲ್ಲಿ ಒಂದು ತಿಂಗಳು ಕಳೆಯುವಷ್ಟರಲ್ಲಿ ಶ್ರೀಖಾಂಡ್ಕರ್ ಬೆಂಗಳೂರಿನ ಮೋಡಿಗೆ ಸಿಕ್ಕಿಬಿಟ್ಟಿದ್ದರು. ನನ್ನೊಡನೆ ಹಿಂದಕ್ಕೆ ಬಾರದೆ ಅಲ್ಲೇ ಉಳಿಯಲು ನಿರ್ಧರಿಸಿದರು. ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಮಹಾರಾಷ್ಟ್ರದವರ ಅನೇಕ ಕುಟುಂಬಗಳಿದ್ದುದರಿಂದ ಸಿತಾರ್ ಹಾಗೂ ಗಾಯನ ಕಲಿಸಿ ಹಣ ಸಂಪಾದಿಸಬಹುದೆಂದು ಅವರು ಭಾವಿಸಿದರು.

ಒಂದು ವರ್ಷದ ಅನಂತರ ಅವರ ಮಗಳನ್ನು ನೋಡಲೆಂದು ಬಿಲಾಸ್‌ಪುರಕ್ಕೆ ಅವರು ಹೋಗಬೇಕಾಯಿತು. ಜಬ್ಬಲ್‌ಪುರದ ರೈಲು ನಿಲ್ದಾಣದಲ್ಲಿ ಜನಜಂಗುಳಿಯ ನೂಕು ನುಗ್ಗಲಿನಲ್ಲಿ ಸಿತಾರ್ ಹಿಡಿದಿದ್ದವರು ಕೆಳಕ್ಕೆ ಬಿದ್ದು , ಸಿತಾರ್ ರಿಪೇರಿಯಾಗದಂತೆ ಒಡೆದು ಹೋಯಿತು. ಅದೇ ವೇಳೆ ನನಗೆ ನಾಗಪುರಕ್ಕೆ ವರ್ಗವಾಯಿತು.

ಒಂದು ವರ್ಷದನಂತರ ಇದ್ದಕ್ಕಿದ್ದಂತೆ ಶ್ರೀ ಖಾಂಡ್ಕರ್ ಪ್ರತ್ಯಕ್ಷರಾದರು. ತಮ್ಮ ನೆಂಟರೊಬ್ಬರ ಮನೆಯಲ್ಲಿ ಅವರಾಗ ಉಳಿದುಕೊಂಡಿದ್ದರು. ಈಗ ನನ್ನ ಹೆಂಡತಿಗೆ ಅವರು ಸಿತಾರ್ ಕಲಿಸಲೆಂದು ನಾನು ಬಯಸಿದೆ. ಅವಳಿಗಾಗಿ ಒಂದು ಸಣ್ಣ ಸಿತಾರ್ ಖರೀದಿಸಿದೆ. ದುರದೃಷ್ಟವಶಾತ್ ಕೆಲವೇ ತಿಂಗಳುಗಳಲ್ಲಿ ಪಂಡಿತ್‌ಜಿ ಖಾಯಿಲೆ ಬಿದ್ದರು. ಬಿಲಾಸ್‌ಪುರಕ್ಕೆ ಹೋದವರು ಅಲ್ಲೇ ಮೃತರಾದರು. ನನ್ನ ಪತ್ನಿಗೆ ಸಿತಾರ್‌ಗಿಂತ ವೀಣೆಯಲ್ಲೇ ಹೆಚ್ಚಿನ ಆಸಕ್ತಿ ಇತ್ತು. ಮೂಲೆ ಗುಂಪಾದ ಸಿತಾರ್ ನಾಗಪುರದ ಉರಿಬಿಸಿಲಿನಲ್ಲಿ ರಿಪೇರಿಯಾಗದಂತೆ ಸೀಳಿಹೋಯಿತು.

೪. ಮೈಸೂರಿನ ಶ್ರೀ ಎ. ವಿ. ವರದಾಚಾರ್

ಇದು ನಡೆದದ್ದು ೧೯೦೭ ನೇ ಇಸವಿಯಲ್ಲಿ ಚಿತ್ರದುರ್ಗದಲ್ಲಿ. ಆಗ ನಾನು ಫೋರ್ತ್ ಫಾರಂ ವಿದ್ಯಾರ್ಥಿಯಾಗಿದ್ದೆ (ಇಂದಿನ ಹೈಸ್ಕೂಲ್ ಪ್ರಥಮ ವರ್ಷ ಅಥವಾ ಎಯ್ತ್ ಸ್ಟ್ಯಾಂಡರ್ಡ್.) ಕನ್ನಡದ ಖ್ಯಾತ ನಟ ಎ. ವಿ. ವರದಾಚಾರ್ ಅವರ ರತ್ನಾವಳಿ ಥಿಯೋಟ್ರಿಕಲ್ ಕಂಪನಿ (ಆರ್.ಟಿ.ಕಂ.) ಚಿತ್ರದುರ್ಗಕ್ಕೆ ಬರಲಿದೆಯೆಂಬ ವದಂತಿಗಳು ಕೇಳತೊಡಗಿದವು. ಎಂತಹ ಸಂಭ್ರಮದ ನಿರೀಕ್ಷೆ! ಊರಿನಲ್ಲೆಲ್ಲಾ ಅದರದ್ದೇ ಮಾತು. ಕಛೇರಿಗಳಲ್ಲಿ ಕೆಲಸ ಕಾರ್ಯಗಳ ಬಗ್ಗೆ ನಿರ್ಲಕ್ಷ್ಯ; ವಿದ್ಯಾರ್ಥಿಗಳ ವಿದ್ಯಾಭ್ಯಾಸವೂ ಹಿಂದೆ ಸರಿಯಿತು. ಗಂಡಸರು - ಹೆಂಗಸರು-ಮಕ್ಕಳು, ಅಧಿಕಾರಿಗಳು-ಗುಮಾಸ್ತರು, ಮೇಷ್ಟ್ರುಗಳು-ವಿದ್ಯಾರ್ಥಿಗಳು ಎಲ್ಲರೂ ಎ. ವಿ. ವರದಾಚಾರ್ ಹಾಗೂ ಅವರ ನಾಟಕಗಳಲ್ಲಿ ತಲ್ಲೀನರಾಗಿಬಿಟ್ಟರು.

ವರದಾಚಾರ್ ಮತ್ತು ಅವರ ತಂಡ ಬಂತು. ಟೌನ್‌ಹಾಲಿನ ಎರಡನೇ ಮಹಡಿಯ ಮೇಲಿನ ಕೋಣೆಗಳಲ್ಲಿದ್ದ ಹೈಸ್ಕೂಲ್ ಹಾಸ್ಟೆಲಿನ

ವಿದ್ಯಾರ್ಥಿಗಳನ್ನು ಊರಿನ ಒಂದು ಖಾಸಗಿ ಮನೆಗೆ ಸ್ಥಳಾಂತರಿಸಿ , ಟೌನ್ ಹಾಲಿನ ರೂಮುಗಳನ್ನು ಆರ್. ಟಿ. ಕಂಪನಿಗೆ ನೀಡಲಾಯಿತು. ಟೌನ್ ಹಾಲಿಗೆ ಇದೊಂದು ದೊಡ್ಡ ಮರ್ಯಾದೆ ಎಂದು ಭಾವಿಸಲಾಯಿತು.

ವರದಾಚಾರ್ಯರ ದರ್ಶನಕ್ಕಾಗಿ ಪ್ರತಿಯೊಬ್ಬರೂ ಹಾತೊರೆಯುತ್ತಿದ್ದರು. ಚಿತ್ರದುರ್ಗದ ಬೆಟ್ಟಗಳನ್ನು ನೋಡಲೆಂದಾಗಲೀ, ರಜೆಯಲ್ಲಿ ಮಜಾ ಮಾಡಲಾಗಲೀ ವರದಾಚಾರ್ಯರೂ ಅವರ ತಂಡದವರೂ ಚಿತ್ರದುರ್ಗಕ್ಕೆ ಬಂದಿರಲಿಲ್ಲ. ಅವರು ಬಂದಿದ್ದು ತಮ್ಮ ನಾಟಕಗಳನ್ನು ಪ್ರದರ್ಶಿಸಲು. ಟೌನ್ ಹಾಲಿನ ಸಭಾಂಗಣ ಹಾಗೂ ರಂಗಮಂಚಗಳು ಅವರಿಗೆ ಸಾಲುವಷ್ಟು ವಿಶಾಲವಾಗಿವೆಯೇ ಇಲ್ಲವೇ ಒಂದು ತಾತ್ಕಾಲಿಕ ರಂಗಮಂಚವನ್ನೂ ಪೆಂಡಾಲನ್ನೂ ಹೊಸದಾಗಿ ನಿರ್ಮಿಸಬೇಕೇ ಎಂಬುದೇ ಪ್ರಶ್ನೆಯಾಗಿತ್ತು. ಆ ಸಂಜೆ ವರದಾಚಾರ್ಯರು ಟೌನ್‌ಹಾಲ್ ಮತ್ತು ರಂಗಸ್ಥಳಗಳನ್ನು ಪರಿಶೀಲಿಸುವರೆಂದು ನಿರೀಕ್ಷಿಸಲಾಗಿತ್ತು. ನಿಗದಿಯಾದ ವೇಳೆಗೆ ಎಷ್ಟೋ ಮೊದಲೇ ನಾವೆಲ್ಲ ಅಲ್ಲಿ ಸೇರಿದ್ದೆವು. ಅವರು ಸಂಜೆ ಐದು ಗಂಟೆಗೆ ಬಂದು ರಂಗಸ್ಥಳದ ಮೇಲೆ ಹೋಗಿ ಸ್ವಾಮಿ ವಿವೇಕಾನಂದರನ್ನು ನೆನಪಿಗೆ ತರುವ ಭಂಗಿಯಲ್ಲಿ ನಿಂತರು. ಅವರು ಧಾರವಾಡ ಶೈಲಿಯ ಕೆನೆ ಬಣ್ಣದ ಸಿಲ್ಕ್ ಪೇಟಾ,ಪಂಚೆ ಮತ್ತು ಕ್ಲೋಸ್ ಕಾಲರ್ ಕೋಟು ಧರಿಸಿದ್ದರು. ಅವರ ದೊಡ್ಡ ಕಣ್ಣುಗಳು ಥಳಥಳಿಸುತ್ತಿದ್ದವು, ಮೀಸೆ ದಟ್ಟವಾಗಿತ್ತು. ದುಂಡು ಮುಖದಲ್ಲಿ ತುಂಬುಗೆನ್ನೆಗಳು; ಕಪ್ಪಗಿದ್ದರೂ ಅವರ ಆಕೃತಿ ಭವ್ಯವಾಗಿತ್ತು.

ಎ. ವಿ. ವರದಾಚಾರ್ಯರನ್ನು ನೋಡಿದ ಅನಂತರ ಬೋಧರಾಯಾಚಾರ್, ಕೃಷ್ಣಮೂರ್ತಿ,ಜಯರಾವ್,ರಾಜಯ್ಯಂಗಾರ್ ಮುಂತಾದ ಇತರ ನಟರನ್ನೂ ನೋಡುವ ಕುತೂಹಲ ನಮಗೆ. ಅಂದು ಅವರು ಯಾರೂ ತಮ್ಮ ಕೋಣೆಗಳನ್ನು ಬಿಟ್ಟು ಹೊರಬರಲೇ ಇಲ್ಲ. ಅವರು ಆ ಊರಿನಲ್ಲಿದ್ದ ಸುಮಾರು ಆರು ತಿಂಗಳುಗಳಲ್ಲೂ ಹಗಲು ಹೊತ್ತಿನಲ್ಲಿ ಅವರು ಹೊರಬರುತ್ತಿದ್ದುದೇ ಅಪರೂಪ. ತಮ್ಮ ಸಹಜ ಬಣ್ಣಗಳಲ್ಲಿ ಕಾಣಿಸಿಕೊಳ್ಳುವುದು ಒಳ್ಳೆಯದಲ್ಲವೆಂದು ಅವರು ಭಾವಿಸಿದರೋ ಏನೋ.

ಟೌನ್‌ಹಾಲಿನ ಸಭಾಂಗಣ ಮತ್ತು ರಂಗಸ್ಥಳಗಳು ತಮ್ಮ ನಾಟಕಗಳಿಗೆ ಸಾಲದೆಂದು ವರದಾಚಾರ್ಯರು ಹೇಳಿದರು. ಉಚ್ಚಂಗಮ್ಮನ ಗುಡಿ ಸಮೀಪದ ವಾರದ ಸಂತೆಮಾಳದ ಬಳಿ ರಂಗವೇದಿಕೆ ಹಾಗೂ ಪೆಂಡಾಲ್ ನಿರ್ಮಿಸಲು ನಿರ್ಧರಿಸಲಾಯಿತು. ಡೆಪ್ಯುಟಿ ಕಮಿಷನರ್, ಅಸಿಟ್ಟೆಂಟ್ ಕಮೀಷನರುಗಳು, ತಹಸೀಲ್ದಾರ್ ಹಾಗೂ ಇತರ ಅಧಿಕಾರಿಗಳ ಖುದ್ದು ಮೇಲ್ವಿಚಾರಣೆಯಲ್ಲಿ ರಂಗಮಂಚ ಹಾಗೂ ಬೊಂಬಿನ ರಂಗಮಂದಿರಗಳು ಕೆಲವೇ ದಿನಗಳಲ್ಲಿ ಸಿದ್ಧವಾದವು . ಊರಿನಲ್ಲೆಲ್ಲ ಎಂತಹ ಸಡಗರದ ನಿರೀಕ್ಷೆ! ವರದಾಚಾರ್ ಮತ್ತು ಅವರ ಕಂಪನಿಯವರ ಆಗಮನದಿಂದ ಉಂಟಾದ ಉತ್ಸಾಹದ ವಾತಾವರಣವನ್ನು ಸರಿಗಟ್ಟಬಲ್ಲ ಬೇರಾವ ಸಂದರ್ಭವೂ ನನ್ನ ನೆನಪಿನಲ್ಲಿಲ್ಲ.

ಮೊಟ್ಟ ಮೊದಲ ನಾಟಕ 'ಶಾಕುಂತಲ' ಎಂದು ಪ್ರಕಟಿಸಲಾಯಿತು. ಆ ರಾತ್ರಿಯನ್ನು ನಾವು ಎಷ್ಟು ಕಾತರದಿಂದ ಎದುರು ನೋಡುತ್ತಿದ್ದೆವು! ಹಾಡು, ಮಾತು ಚೆನ್ನಾಗಿ ಕೇಳಿಸುವಂತೆ ಮುಂದಿನ ಸಾಲಿನಲ್ಲೇ ಕುಳಿತುಕೊಳ್ಳಬೇಕೆಂದು ಎಂತಹ ಉತ್ಸಾಹ! ನಾಟಕ ಒಂಬತ್ತು ಗಂಟೆಗೆ ಪ್ರಾರಂಭವಾಗಲಿತ್ತು. ಎಂಟು ಗಂಟೆಗೇ ಅಲ್ಲಿರಬೇಕೆಂಬ ಅವಸರ ನಮಗೆ! ೮.೩೦ ಗಂಟೆಗೆ ಕರ್ಪೂರದಾರತಿಯೊಡನೆ ರಂಗಪೂಜೆ ಮಾಡುತ್ತಿದ್ದುದು ನಮಗೆ ತೆರೆಯ ಮೂಲಕವೇ ಕಾಣಿಸಿತು, ಗಂಟಾನಾದವೂ ಕೇಳಿಸಿತು. ತೆರೆ ಎಳೆಯುವವರಿಗೆ, ನಟರಿಗೆ ಮತ್ತು ಸಂಗೀತವಾದ್ಯಗಳನ್ನು ನುಡಿಸುವವರಿಗೆ ಸಿದ್ಧವಾಗಲು ಸೂಚಿಸುವ, ಮೊದಲ ಘಂಟೆ ಮೊಳಗಿತು. ಈ ಘಂಟಾನಾದ, ನಿಶ್ಶಬ್ದವಾಗಿ ತಮ್ಮ ತಮ್ಮ ಆಸನಗಳಲ್ಲಿ ಪ್ರೇಕ್ಷಕರು ಕುಳಿತುಕೊಳ್ಳಬೇಕೆಂಬ ಸೂಚನೆಯೂ ಹೌದು. ಅವು ಧ್ವನಿವರ್ಧಕಗಳು ಬಳಕೆಗೆ ಬರುವ ಮುಂಚಿನ ದಿನಗಳು; ಉಪನ್ಯಾಸವೋ, ನಾಟಕವೋ, ಹರಿಕಥೆಯೋ, ಸಂಗೀತ ಕಛೇರಿಯೋ-ಯಾವುದಕ್ಕಾದರೂ ಸಂಪೂರ್ಣ ನಿಶ್ಶಬ್ದ ಬೇಕೆ ಬೇಕಾಗಿತ್ತು.

ಎರಡನೇ ಘಂಟೆ ಬಾರಿಸಿದಾಗ ತೆರೆ ಮೇಲೇರಿತು. ರಂಗಸ್ಥಳದಲ್ಲಿ ಕಾಡಿನ ದೃಶ್ಯ; ರಟ್ಟಿನಲ್ಲಿ ಮಾಡಿ ಬಣ್ಣ ಬಳಿದಿದ್ದ , ಇಲ್ಲವೇ ಬಟ್ಟೆಯಲ್ಲಿ ಮಾಡಿ ಹತ್ತಿ ತುಂಬಿದ್ದ ಒಂದು ಜಿಂಕೆಯನ್ನು ರಂಗದ ಮೇಲೆ ವೇಗವಾಗಿ ಎಳೆದೊಯ್ಯಲಾಯಿತು. ಕೆಲವೇ ಕ್ಷಣಗಳಲ್ಲಿ ಜರಿಯ ಕೆಂಪು ವೆಲ್‌ವೆಟ್ಟಿನ ಬೇಟೆಗಾರರ ವೇಷದಲ್ಲಿ ಬಿಲ್ಲು-ಬಾಣ ಹಿಡಿದ ಎ. ವಿ. ವರದಾಚಾರ್ಯರು ದುಷ್ಯಂತನ ಪಾತ್ರದಲ್ಲಿ ರಂಗಸ್ಥಳವನ್ನು ಪ್ರವೇಶಿಸಿದರು. 'ಪಾರಿತು ಪಾರಿತು' ಗೀತೆಯನ್ನು ಹಾಡುತ್ತ ಬಂದ ದುಷ್ಯಂತನೊಡನೆ ಒಬ್ಬ ಬೇಟೆಗಾರ ಇದ್ದ. ಪ್ರೇಕ್ಷಕರಿಂದ ಎಂತಹ ಕರತಾಡನ! ರಾಜ ದುಷ್ಯಂತನ ಪಾತ್ರದಲ್ಲಿ ವರದಾಚಾರ್ಯರು ಎಷ್ಟು ಭವ್ಯವಾಗಿದ್ದರು!

ನಾಟಕ ಮುಂದುವರೆದಂತೆ, ವರದಾಚಾರ್ಯರ ದೇಹಸೌಷ್ಠವ, ಅಭಿನಯ ಮತ್ತು ಸಂಗೀತಗಳ ಬಗ್ಗೆ ಪ್ರಚಲಿತವಾಗಿದ್ದ ಪ್ರಶಂಸೆ ಎಷ್ಟು ಮಾತ್ರಕ್ಕೂ ಉತ್ಪ್ರೇಕ್ಷೆಯಲ್ಲ ಎನ್ನುವುದು ಎಲ್ಲರಿಗೂ ಮನದಟ್ಟಾಯಿತು. ಶಕುಂತಲೆಯಾಗಿ ಬೋಧರಾಯಾಚಾರ್ (ಅವರನ್ನು ಪ್ರೀತಿಯಿಂದ 'ಬೋಧ' ಎನ್ನುತ್ತಿದ್ದರು), ವಿದೂಷಕನ ಪಾತ್ರದಲ್ಲಿ ಶ್ರೀ ಕೃಷ್ಣಮೂರ್ತಿ, ಜಯರಾಯರು ಕಣ್ವ ಋಷಿಗಳ ಪಾತ್ರದಲ್ಲಿ, ಬಾಲಕ ಭರತನ ಪಾತ್ರದಲ್ಲಿ ಪುಟ್ಟ ಬಿ.ವಿ.ರಾಜಯ್ಯಂಗಾರ್ ಇವರೆಲ್ಲ ತಮ್ಮ ತಮ್ಮ ಪಾತ್ರಗಳನ್ನು ಅದ್ಭುತವಾಗಿ ನಿರ್ವಹಿಸಿದರು. ಈ ನಾಟಕ ನೀಡಿದ ಖುಷಿಯನ್ನು ನಾನು ಎಂದಿಗೂ ಮರೆಯಲಾರೆ. ಚಿತ್ರದುರ್ಗದ ಅವರ ವಾಸ್ತವ್ಯದಲ್ಲಿ ವರದಾಚಾರ್ಯರ 'ಮನ್ಮಥ ವಿಜಯ' ಹಾಗೂ 'ರಾಮಪಾಲ ಚರಿತ್ರೆ' ನಾಟಕಗಳನ್ನೂ ನೋಡುವ ಭಾಗ್ಯ ನನಗೆ ಲಭಿಸಿತು. ಅದ್ಭುತವಾಗಿದ್ದ ಈ ನಾಟಕಗಳು ನನ್ನ ನೆನಪಿನಲ್ಲಿ ಇನ್ನೂ

ಹಸಿರಾಗಿವೆ. ಅನೇಕ ವರ್ಷಗಳನಂತರ ಅವರ 'ನಿರುಪಮ' ಹಾಗೂ 'ಪ್ರಹ್ಲಾದ' ನಾಟಕಗಳನ್ನು ನಾನು ನೋಡಿದೆ. ಅಭಿನಯ, ಸಂಗೀತ ಹಾಗೂ ಒಟ್ಟು ಪರಿಣಾಮದ ದೃಷ್ಟಿಯಿಂದ ವರದಾಚಾರ್ಯರು ಇನ್ನೂ ಚಿಕ್ಕ ವಯಸ್ಸಿನವರಾಗಿದ್ದಾಗ ಆಡುತ್ತಿದ್ದ ನಾಟಕಗಳಷ್ಟೇ ಇವೂ ಉತ್ತಮವಾಗಿ ಕಂಡುಬಂದವು.

೧೯೦೭ರಲ್ಲಿ ಚಿತ್ರದುರ್ಗಕ್ಕೆ ಬಂದಾಗ ವರದಾಚಾರ್ಯರು ಪಕ್ಕವಾದ್ಯಕ್ಕೆ ಕೇವಲ ತಂಬೂರಿ, ಪಿಟೀಲು ಹಾಗೂ ತಬಲಗಳನ್ನು ಬಳಸುತ್ತಿದ್ದರು. ಪಿಟೀಲುವಾದಕ,ಒಬ್ಬ ಸ್ಥಳೀಯ ವಿದ್ವಾಂಸ. ರಂಗಸಂಗೀತಗಾರನೆನಿಸುವ ವರದಾಚಾರ್ಯರ ಮಟ್ಟಕ್ಕೆ ಬೇರಾವ ಕರ್ನಾಟಕ ಶಾಸ್ತ್ರೀಯ ಸಂಗೀತಗಾರನೂ ನನ್ನ ಮೇಲೆ ಪ್ರಭಾವ ಬೀರಿಲ್ಲ. ಅವರಿಗಿದ್ದ ರಾಗ-ಭಾಷೆ-ತಾಳ ನೈಪುಣ್ಯ ಪರಿಶುದ್ಧವಾದವು. ವರದಾಚಾರ್ಯರ ಸಂಗೀತವನ್ನು ಕೇಳಿದ ಮೇಲೆ ಉತ್ತಮೋತ್ತಮ ಶಾಸ್ತ್ರೀಯ ಸಂಗೀತಗಾರರೂ ನೀರಸವೆನಿಸುತ್ತಾರೆ. ತಮ್ಮ ಮುಂದಿನ ನಾಟಕಗಳಿಗೆ ಪಕ್ಕವಾದ್ಯವಾಗಿ ಲೆಗ್ ಹಾರ್ಮೋನಿಯಂ ನುಡಿಸಲು ಅನುಕೂಲವಾಗುವಂತೆ ವರದಾಚಾರ್ಯರು ಶೇಷಗಿರಿ ಎಂಬ ನಟನನ್ನು ಮುಂಬೈಗೆ ಕಳಿಸಿ ತರಬೇತಿ ಕೊಡಿಸಿದರು. ಈ ವಾದ್ಯ,ರಂಗದ ಮೇಲೆ ವರದಾಚಾರ್ಯರ ಹಾಗೂ ಇತರರ ಸಂಗೀತದ ಶೋಭೆಯನ್ನು ಹೆಚ್ಚಿಸಿತು. ಹಾರ್ಮೋನಿಯಂಗಳ ಬಗ್ಗೆ ಮುಂದೆ ಹೇಳುವುದು ಉಳಿದಿದೆ.

ಶಾಕುಂತಲ ನಾಟಕದ ಸಭಾದೃಶ್ಯದಲ್ಲಿ ವರದಾಚಾರ್ಯರು ಮೈಸೂರಿನ ಆಳಿದ ಮಹಾಸ್ವಾಮಿಯವರಾದ ಚಾಮರಾಜ ಒಡೆಯರ್ ಅವರಂತೆಯೇ ಕಾಣಿಸುತ್ತಿದ್ದರಂತೆ. ಈ ನಿರ್ದಿಷ್ಟ ವೇಷವನ್ನು ಧರಿಸಿ ರಂಗಕ್ಕೆ ಬರಬಾರದೆಂದು ಮೈಸೂರು ಅರಮನೆಯ ಕಡೆಯಿಂದ ವರದಾಚಾರ್ಯರಿಗೆ ತಾಕೀತು ಮಾಡಲಾಯಿತೆಂಬ ವದಂತಿ ಸುಳ್ಳಾಗಿರಲಾರದು. ಚಾಮರಾಜ ಒಡೆಯರ್ ಅವರ ಹಾಗೂ ದುಷ್ಯಂತನ ಪಾತ್ರದಲ್ಲಿ ವರದಾಚಾರ್ಯರ ಛಾಯಾಚಿತ್ರಗಳನ್ನು ಹೋಲಿಸಿ ನೋಡಿದರೆ ಈ ವದಂತಿಯ ಸಂಭಾವ್ಯತೆ ಸ್ಪಷ್ಟವಾಗುತ್ತದೆ.

೫. ಬಾಲಗಂಧರ್ವ

೧೯೧೪ರ ಜುಲೈನಲ್ಲಿ ನಾನು ನಾಗಪುರದ 'ದಿ ಅಗ್ರಿಕಲ್ಚರಲ್ ಕಾಲೇಜ್'ಗೆ ಸೇರಿಕೊಂಡೆ. ಕೆಲವೇ ತಿಂಗಳುಗಳಲ್ಲಿ ಮಹಾರಾಷ್ಟ್ರದ ಹೆಸರಾಂತ ನಟ ಸಂಗೀತಗಾರ ಬಾಲಗಂಧರ್ವ ನಾಗಪುರಕ್ಕೆ ಬರಲಿದ್ದಾರೆಂಬ ಮಹತ್ತರ ವಾರ್ತೆ ನಾಗಪುರದವರನ್ನು ಸಂತಸಗೊಳಿಸಿತು. ಕೇವಲ ಮೂರು ವರ್ಷಗಳ ವಿದ್ಯಾಭ್ಯಾಸಕ್ಕಾಗಿ ಮೈಸೂರಿನಿಂದ ನಾಗಪುರಕ್ಕೆ ಹೋಗಿದ್ದ , ಭಾರತದ ಇತರ ಭಾಗಗಳ ಸಂಗೀತ ಮತ್ತು ನಾಟಕಗಳಲ್ಲೂ ಆಸಕ್ತಿ ಹೊಂದಿದ್ದ ನನಗೆ ಇದರಿಂದ ಒಂದು ಸುವರ್ಣಾವಕಾಶ ಲಭಿಸಿದಂತೆ ಆಯಿತು. ಆ ದಿನಗಳಲ್ಲಿ ಎಲ್ಲ ನಾಟಕ ಕಂಪೆನಿಗಳಿಗೂ ಹೆಚ್ಚಿನ ಮಾನ್ಯತೆ ಇದ್ದಿತಾದರೂ ಬಾಲಗಂಧರ್ವರ ಹೆಸರು ಒಂದು ವಿಶೇಷ ಮರ್ಯಾದೆಯ ಸ್ಥಾನದಲ್ಲಿತ್ತು.

ಬಾಲಗಂಧರ್ವ ಹಾಗೂ ಅವರ ತಂಡದವರು ನಾಗಪುರಕ್ಕೆ ಬರುತ್ತಿದ್ದಂತೆಯೇ ಅವರ ಯಾವುದೇ ನಾಟಕವನ್ನು ರಂಗದ ಮೇಲೆ ತರುವ ಮೊದಲೇ, ಮೋರಿಸ್ ಕಾಲೇಜಿನ ಒಂದು ಸಂತೋಷ ಕೂಟದಲ್ಲಿ ಹಾಡಲು ಅವರನ್ನು ಆಹ್ವಾನಿಸಲಾಯಿತು. ಮೋರಿಸ್ ಕಾಲೇಜಿನ ವಿದ್ಯಾರ್ಥಿಯಾಗಿದ್ದ ನನ್ನ ಗೆಳೆಯ ಶ್ರೀ ಪೂನಾ ಅಪ್ಪಾಜಿರಾವ್ ನನ್ನನ್ನು ತಮ್ಮ ಅತಿಥಿಯಾಗಿ ಸಮಾರಂಭಕ್ಕೆ ಆಹ್ವಾನಿಸಿದ್ದರು.

ಬಿಳಿ ರೇಶ್ಮೆಯ ಲಾಂಗ್‌ಕೋಟ್, ಬಿಳಿಯ ಪಂಚೆ ಹಾಗೂ ನಸುಹಳದಿ ಮಸ್ಲಿನ್ ಟರ್ಬನ್ ಧರಿಸಿದ್ದರು ಬಾಲಗಂಧರ್ವ. ಎಂತಹ ಆಕರ್ಷಕ ಮುಖಚರ್ಯೆ! ಎಂತಹ ಸಹಜ ಗುಲಾಬಿ ಮೈಬಣ್ಣ! ರಂಗದ ಮೇಲೂ ಅವರಿಗೆ ಯಾವುದೇ ಪ್ರಸಾಧನದ ಅಗತ್ಯವಿಲ್ಲವೆಂದು ನನಗೆ ಅನಿಸಿದ್ದುಂಟು. ಮಿಶ್ರದೆನಿ ರಾಗದ 'ಕೃಷ್ಣಮುರಾರಿ ಬಿನತ ಕರಾತ'ದೊಂದಿಗೆ ಅವರ ಕಾರ್ಯಕ್ರಮ ಆರಂಭವಾಯಿತು. ಅವರ ಪಕ್ಕವಾದ್ಯ ಆರ್ಗನ್ ಹಾಗೂ ತಬಲ. ಎಂತಹ ಕಂಠ! ಸೂಜಿ ಬಿದ್ದರೂ ಕೇಳಿಸುವಂತಹ ನಿಶ್ಶಬ್ದ! ಬಾಲಗಂಧರ್ವ ಹಾಡಿದ್ದನ್ನೆಲ್ಲ ಅನುಕರಿಸುತ್ತಿದ್ದ ಆರ್ಗನ್‌ನ ನಾದ ಎಷ್ಟು ಅದ್ಭುತ ! ತಬಲ ವಾದಕನ ಕೈ ಬೆರಳುಗಳು ಎಷ್ಟು ನಯವಾಗಿ ಲಯಬದ್ಧವಾಗಿ ನುಡಿಯುತ್ತಿದ್ದವು! ಇಂತಹ ಮೈನವಿರೇಳಿಸುವ ಸಂಗೀತವನ್ನು ನಾನೆಂದೂ ಕೇಳಿರಲಿಲ್ಲ. ಬಾಲಗಂಧರ್ವರ ಅಧರಗಳಿಂದ ಹೊರಹೊಮ್ಮಿದ ಆ ಮೊದಲ ಹಾಡು ಈಗಲೂ ನನ್ನ ಕಿವಿಯಲ್ಲಿ ಮೊಳಗುತ್ತಿದೆ.

ಅಗ್ರಿಕಲ್ಚರಲ್ ಕಾಲೇಜು ಹಾಗೂ ಹಾಸ್ಟೆಲ್‌ಗಳಿದ್ದ ಮಹಾರಾಜ ಬಾಗ್‌ನಿಂದ ಗಂಧರ್ವ ನಾಟಕ ಮಂಡಳಿಯವರು ನಾಟಕವಾಡುತ್ತಿದ್ದ ವೆಂಕಟೇಶ ಥಿಯೇಟರ್ ಸುಮಾರು ಮೂರು ಮೈಲಿ ದೂರವಿತ್ತು. ನಾಟಕಗಳು ರಾತ್ರಿ ಎರಡು ಗಂಟೆಗೋ ಅಥವಾ ಇನ್ನೂ ತಡವಾಗಿಯೋ ಮುಗಿಯುತ್ತಿದ್ದವು. ಅಂದಿನ ಕಾಲದ ವಿದ್ಯಾರ್ಥಿಗಳಲ್ಲಿ ವಾಹನದ ಐಭೋಗಕ್ಕಿರಲಿ, ಅತ್ಯಂತ ಕನಿಷ್ಠ ದರ್ಜೆಯ ಟಿಕೆಟ್ ಖರೀದಿಸಲೂ ಸಾಕಷ್ಟು ಹಣ ಇರುತ್ತಿರಲಿಲ್ಲವಾದ್ದರಿಂದ ನಾವು ಕಾಲ್ನಡಿಗೆಯಲ್ಲೇ ಎರಡು ಮಾರ್ಗವನ್ನೂ ಕ್ರಮಿಸಬೇಕಾಗಿತ್ತು.

ಗಂಧರ್ವರ ಅತ್ಯಂತ ಜನಪ್ರಿಯ ನಾಟಕಗಳೆಂದರೆ 'ಮಾನಾ ಪಮಾನ್' ಹಾಗೂ 'ರುಕ್ಮಿಣೀ ಸ್ವಯಂವರ'. ಕೆಲವು ದೃಶ್ಯಗಳ ಚಿತ್ರಗಳು ಮತ್ತು ಹಾಡುಗಳನ್ನು ಒಳಗೊಂಡಂತೆ ಈ ನಾಟಕಗಳ

ಸಂಪೂರ್ಣ ಪಠ್ಯವನ್ನು ಆರಾಣೆಗೊಂದರಂತೆ ಕಂಪೆನಿಯೇ ಮಾರಾಟ ಮಾಡುತ್ತಿತ್ತು. ಹಾಡುಗಳನ್ನು ಸುಲಭವಾಗಿ ಓದಲು ಅನುಕೂಲವಾಗ ಲೆಂದು ಈ ಪುಸ್ತಕಗಳನ್ನು ನಾನು ಮೊದಲೇ ಖರೀದಿಸಿಬಿಟ್ಟಿದ್ದೆ. ಬಾಲಗಂಧರ್ವರು ಚಿರಪರಿಚಿತ ಹಾಡುಗಳನ್ನು ಜನರ ಒತ್ತಾಯದ ಮೇರೆಗೆ ಕಡೆಯ ಪಕ್ಷ ಎರಡು ಮೂರು ಬಾರಿ ಮತ್ತೆ ಮತ್ತೆ ಹಾಡುತ್ತಿದ್ದರು. ನನಗೆ ಒಳ್ಳೆಯ ಸ್ವರಜ್ಞಾನವಿದ್ದುದರಿಂದ ಹಾಡಿನ ಒಟ್ಟಾರೆ ಛಾಯೆಯನ್ನು ಚೆನ್ನಾಗಿಯೇ ಗ್ರಹಿಸಲು ಸಾಧ್ಯವಾಗುತ್ತಿತ್ತು. ಕಾಲೆಳೆದುಕೊಂಡು ಮೂರು ಮೈಲಿ ಹಿಂದಕ್ಕೆ ನಡೆದುಕೊಂಡು ಬರುವಾಗ ನನ್ನೊಡನೆ ಇರುತ್ತಿದ್ದ ಗೆಳೆಯರಾದ ಧವಳೆ, ನಿಗೂಡ್‌ಕರ್, ಗೋಲ್ವಾಳ್‌ಕರ್ ಅವರಿಗಾಗಿ ಆ ಹಾಡುಗಳನ್ನು ನಾನು ಹಾಡುತ್ತಿದ್ದೆ. ಎರಡು ತಿಂಗಳ ಕಾಲಾವಧಿಯಲ್ಲಿ 'ಮಾನಾಪಮಾನ್' ಹಾಗೂ 'ರುಕ್ಮಿಣೀ ಸ್ವಯಂವರ' ನಾಟಕಗಳ ಅನೇಕ ಹಾಡುಗಳನ್ನು ನಾನು ಚೆನ್ನಾಗಿ ಕಲಿತಿದ್ದೆ.

ಆ ಬಾರಿಯ ನಾಟಕಗಳ ಪೈಕಿ ನಾನು ನೋಡಿದ ಕಡೆಯ ನಾಟಕದಲ್ಲಿ ಯಾವುದೋ ಒಂದು ಹಾಡನ್ನು ಐದನೆಯ ಬಾರಿ ಹಾಡಬೇಕೆಂಬ ಪ್ರೇಕ್ಷಕರ ಅಪೇಕ್ಷೆಯನ್ನು ಬಾಲಗಂಧರ್ವ ತಿರಸ್ಕರಿಸಿದರು. ಕೆಲವು ಪುಂಡರು ಅವರ ಮೇಲೆ ಮೊಟ್ಟೆಗಳನ್ನು ಎಸೆದರು. ಮತ್ತೆಂದೂ ನಾಗಪುರಕ್ಕೆ ಬರಲಾರೆನೆಂದು ಬಾಲಗಂಧರ್ವರು ಶಪಥ ತೊಟ್ಟರು; ಅಂತೆಯೇ ಬರಲೇ ಇಲ್ಲ. ಅಕೋಲಾ, ಅಮರಾವತಿಗಳಿಗೆ ಬಂದರೂ ನಾಗಪುರಕ್ಕೆ ಬರುತ್ತಿರಲಿಲ್ಲ. ಇಪ್ಪತ್ತು ವರ್ಷಗಳ ಅನಂತರ ೧೯೩೫ ನೆಯ ಇಸವಿಯಲ್ಲೆಲ್ಲೋ ನಾಗಪುರದ ಜನತೆ ಕ್ಷಮಾಪಣೆ ಕೋರಿ ಕೆಲವು ಪ್ರಭಾವಶಾಲಿಗಳು ಒತ್ತಾಯಿಸಿದ ಮೇರೆಗೆ ಬಂದರು. ಹಿಂದಿನ ಬಾಲಗಂಧರ್ವರ ವೈಶಿಷ್ಟ್ಯದ ಹೆಚ್ಚಿನ ಭಾಗ ಕಾಣೆಯಾಗಿದ್ದರೂ, ಅವರ ಬಗ್ಗೆ ಜನರ ಅಭಿಮಾನ ಹಾಗೆಯೇ ಉಳಿದಿತ್ತು. ನಾನು ಕಲಿತ ಬಾಲಗಂಧರ್ವರ ಹಾಡುಗಳು ಹಲವಾರು ಸಂದರ್ಭಗಳಲ್ಲಿ ನನ್ನ ನೆರವಿಗೆ ಬಂದವು.

ಅಂದಿನ ದಿನಗಳಲ್ಲಿ ನಾಗಪುರದ ಕಾಲೇಜುಗಳಿಗೆ ಮೂರು ಬಾರಿ ರಜೆ ಕೊಡಲಾಗುತ್ತಿತ್ತು - ಬೇಸಿಗೆ ರಜೆ, ದೀಪಾವಳಿ ರಜೆ ಹಾಗೂ ಪ್ಲೇಗ್ ರಜೆ. ಪ್ಲೇಗ್ ಮಾರಿ ಪ್ರತಿ ವರ್ಷದ ಒಂದು ಖಾಯಂ ಜಾಡ್ಯವೇ ಆಗಿತ್ತು. ಸಾವಿನ ಸಂಖ್ಯೆ ದಿನವೊಂದಕ್ಕೆ ಇನ್ನೂರರವರೆಗೂ ಏರುತ್ತಿತ್ತು. ಪ್ರತಿ ದಿನ ಐವತ್ತು ಹೆಣ ಬೀಳತೊಡಗಿದಾಗ ರಜೆ ಘೋಷಿಸುತ್ತಿದ್ದರು. ಮತ್ತೆ ಸಾವಿನ ಸಂಖ್ಯೆ ದಿನವೊಂದಕ್ಕೆ ಐವತ್ತಕ್ಕೆ ಇಳಿದಾಗ ಕಾಲೇಜುಗಳು ತೆರೆಯುತ್ತಿದ್ದವು. ೧೯೧೫ ರ ಪ್ಲೇಗ್ ರಜೆಯಲ್ಲಿ ಪಶ್ಚಿಮ ಖಂಡೇಶ್‌ನ ಅಮಲ್ನೇರ್‌ಗೆ ಗೆಳೆಯರಾದ ವಿ. ಡಿ. ಕಲ್‌ವಿಟ್ ಹಾಗೂ ಡಿ.ಎಸ್.ಬಾಂಗಲೆ ಅವರೊಡನೆ ಹೋಗಿದ್ದೆ. ಈ ಇಬ್ಬರೂ ಅಮಲ್ ನೇರ್‌ನವರೇ. ಇನ್ನಿಬ್ಬರು ಸಹಪಾಠಿಗಳು ವಿ. ಎಸ್. ಪಿಳ್ಳೈ ಹಾಗೂ ಆರ್.ಡಿ.ರಾಯ್ಕರ್ ಕೂಡ ನಮ್ಮ ತಂಡದಲ್ಲಿದ್ದರು.

ಒಂದು ದಿನ ಮಧ್ಯಾಹ್ನ ಪ್ರತಾಪ್ ಮಿಲ್ಸ್ ನೋಡಲೆಂದು ಹೋಗಿದ್ದೆವು. ಮಿಲ್‌ನ ಕಾರ್ಮಿಕರು ನಮ್ಮ ಬಗ್ಗೆ ನಡೆಸಿದ ಊಹಾಪೋಹಗಳು ತಮಾಷೆಯಾಗಿದ್ದವು. ಆ ಊರಿನ ಮೈದಾನದಲ್ಲಿ ಟೆಂಟ್ ಹಾಕುತ್ತಿದ್ದ ಸರ್ಕಸ್ ಕಂಪೆನಿಗೆ ನಾವು ಸೇರಿದವರೆಂದು ಕೆಲವರು ಭಾವಿಸಿದರು. ನನ್ನ ಗೆಳೆಯ ತಿರುವಾಂಕೂರಿನ ವಿ.ಎಸ್.ಪಿಳ್ಳೈ ಒಬ್ಬ ಸರ್ಕಸ್ ಕಂಪೆನಿಯವನಂತೆಯೇ ಕಾಣುತ್ತಿದ್ದ. ಹೆಚ್ಚಿನ ಸರ್ಕಸ್ ಕಂಪೆನಿಗಳಿಗೆ ದೊಂಬರಾಟದ ಕಲಾವಿದರನ್ನು ಒದಗಿಸುವುದು ತಿರುವಾಂಕೂರ್ ಸಂಸ್ಥಾನವೇ. ಷೇಕ್ಸ್‌ಪಿಯರ್‌ನ 'ಟೇಮಿಂಗ್ ಆಫ್ ದಿ ಶ್ರೂ' ನಾಟಕದ ಮರಾಠಿ ರೂಪದಲ್ಲಿ (ತ್ರಾಟಿಕ) ಗಯ್ಯಾಳಿಯ ಪಾತ್ರವನ್ನು ನಿರ್ವಹಿಸಿ ಆರ್.ಡಿ.ರಾಯ್ಕರ್ ಕಾಲೇಜಿನಲ್ಲೆಲ್ಲಾ ಹೆಸರು ವಾಸಿಯಾಗಿದ್ದ. ಅವನು ನಾಟಕದ ಸ್ತ್ರೀಪಾತ್ರಕ್ಕೆಂದೇ ಮೀಸಲಾದವನಂತೆ ಕಾಣುತ್ತಿದ್ದ. ನನ್ನ ಬಗ್ಗೆ ಅವರಲ್ಲಿ ಅಭಿಪ್ರಾಯಭೇದವಿದ್ದಂತೆ ತೋರಿತು. ಅಮಲ್ನೇರ್‌ನವರೇ ಆದ ಕಲ್ವಿಟ್ ಮತ್ತು ಬಾಂಗಲಾ ಅವರಿಗೆ ಪರಿಚಿತರೇ ಆಗಿದ್ದರು.

ನನ್ನ ಸಂಗೀತದಿಂದಾಗಿ ನಮ್ಮ ತಂಡ ಬಹಳ ಜನಪ್ರಿಯವಾಯಿತು. ಊರಿನ ದೊಡ್ಡ ಮನುಷ್ಯರಿಂದೆಲ್ಲಾ ನಮಗೆ ಆಹ್ವಾನ. ಗಂಧರ್ವರ ರಂಗಗೀತೆಗಳನ್ನೂ ಕೆಲವು ಕರ್ನಾಟಕ ಸಂಗೀತದ ಕೃತಿಗಳನ್ನೂ ನಾನು ಹಾಡುತ್ತಿದ್ದೆ. ಮಹಾರಾಷ್ಟ್ರ ರಂಗಭೂಮಿಯ ಜನಪ್ರಿಯ ನಾಟಕಗಳಾದ ''ಯುವತಿ ಮಾನ" ಹಾಗೂ ''ತೇಜನಭ" ಗಳಲ್ಲಿ ನಮ್ಮ ಹಂಸಧ್ವನಿಯ ''ಮನಸು ಕರಗದೇನೋ" ಹಾಗೂ ಖರಹರಪ್ರಿಯದ "ಸಂಕಲ್ಪಮೇ" ಕೃತಿಗಳ ಮಟ್ಟುಗಳನ್ನು ಅನುಕರಿಸಿದ್ದು, ಆ ಕೃತಿಗಳು ಹೆಚ್ಚಿನ ಪ್ರಶಂಸೆ ಗಿಟ್ಟಿಸುತ್ತಿದ್ದವು.

ನನ್ನ ಗೆಳೆಯರಾದ ಭಿಡೆ ಸಹೋದರರೂ ನಾನೂ ಒಂದು ಮುಜುಗರದ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಾಗ ನನ್ನ ಹಿಂದೂಸ್ತಾನಿ ಸಂಗೀತದ ಪರಿಶ್ರಮ ಹಾಗೂ ಮರಾಠಿ ರಂಗಗೀತೆಗಳ ಸುಶ್ರಾವ್ಯ ಗಾಯನ ನಮ್ಮನ್ನು ಪಾರು ಮಾಡಿತು. ಒಂದು ಹಳ್ಳಿಗೆ ನಾವು ಹೋಗಿದ್ದಾಗ ಆ ಹಳ್ಳಿಯ ಜನರು ತಾವು ನಿರೀಕ್ಷಿಸುತ್ತಿದ್ದ ಹರಿಕಥಾ ತಂಡದವರೆಂದು ನಮ್ಮನ್ನು ತಪ್ಪಾಗಿ ತಿಳಿದು ಆತಿಥ್ಯ ನೀಡಿದ ಆ ವಿಚಿತ್ರ ಪ್ರಸಂಗವನ್ನು "ಋಣ ವಿಮೋಚನದ ಸಂತೆಗೆ ಭೇಟಿ" ಎಂಬ ಶಿರೋನಾಮೆಯೊಂದಿಗೆ ಮುಂದೆ ವಿವರಿಸಿದ್ದೇನೆ.

ಇಂತಹ ಬಾಲಗಂಧರ್ವ- ಮಹಾರಾಷ್ಟ್ರ ಕಣ್ಮಣಿ - ನಟ, ಸಂಗೀತಗಾರ - ಪರಮಾತ್ಮ ಕೃಪೆಯಿಟ್ಟು ಇಂತಹ ಮತ್ತೊಂದು ಕೊಡುಗೆಯನ್ನು ನೀಡಿದ ಹೊರತು ಮುಂದಿನ ತಲೆತಲೆಮಾರುಗಳಿಗೆ ನೋಡುವ ಕೇಳುವ ಸುಯೋಗ ಲಭಿಸದು ಎನ್ನಿಸುವಂತಹ ಕಲಾವಿದ – ಹಾಡಲು, ಅಭಿನಯಿಸಲು ಅಶಕ್ತನಾಗಿ ಹಾಸಿಗೆ ಹಿಡಿಯುವುದೆಂದರೆ ಎಂತಹ ಅನ್ಯಾಯ! ಪ್ರಶಂಸೆ ಗೌರವಗಳ ಪುಷ್ಪಾಂಜಲಿಯಂತೆ ಯಾರ ಮೇಲೆ ಹೊನ್ನಿನ ಮಳೆಯನ್ನೇ ಸುರಿಸಲಾಗುತ್ತಿತ್ತೋ ಅಂಥವರು

ಸರ್ಕಾರದ ಮಾಸಾಶನದ ಆಧಾರದ ಮೇಲೆ ಜೀವಿಸುವುದೆಂದರೆ? ಶ್ರೇಷ್ಠ ಸಂಗೀತಗಾರರು ಹಾಗೂ ನಟರು (ಬಹುಶಃ ಯಾವುದೇ ಕ್ಷೇತ್ರದ ಶ್ರೇಷ್ಠ ವ್ಯಕ್ತಿ) ತಮ್ಮ ಸಾಧನೆಯ ಪರಾಕಾಷ್ಠೆಯಲ್ಲಿಯೇ ಈ ಜಗತ್ತಿನಿಂದ ನಿರ್ಗಮಿಸಬೇಕು. ಓಹ್! ಕರ್ಮ ಎಂಬುದಿದೆಯಲ್ಲ!.

ಸಿನೆಮಾ ಪ್ರಚಲಿತವಾಗುವ ಹೊತ್ತಿಗಾಗಲೇ ಮಹಾರಾಷ್ಟ್ರದ ರಂಗಸಂಗೀತವು ಉತ್ತಮಿಕೆ ಹಾಗೂ ಜನಪ್ರಿಯತೆಯ ಪರಾಕಾಷ್ಠೆಯನ್ನು ತಲುಪಿತ್ತು. ವಿನಾಯಕರಾವ್ ಪಟವರ್ಧನ್, ಮಾಸ್ಟರ್ ಕೃಷ್ಣರಾವ್, ಗೋವಿಂದರಾವ್ ಟೆಂಬೆ ಪೆಂಡಾರ್ಕರ್, ಕೇಶವರಾವ್ ಭೌನ್ಸ್ಲೆ, ಮಾಸ್ಟರ್ ದೀನನಾಥ್ ಮಂಗೇಶ್ಕರ್ (ಶ್ರೀಮತಿ ಲತಾಮಂಗೇಶ್ಕರ್ ಅವರ ತಂದೆಯವರು) ಮುಂತಾದ ಖ್ಯಾತ ಶಾಸ್ತ್ರೀಯ ಸಂಗೀತಗಾರರೆಲ್ಲ ರಂಗಭೂಮಿಯಲ್ಲೂ ಇದ್ದವರೇ. ಪುರುಷರೇ ಸ್ತ್ರೀ ಪಾತ್ರಗಳನ್ನು ನಿರ್ವಹಿಸುತ್ತಿದ್ದು, ಅದರಲ್ಲಿ ಹಿರಿದಾದ ಕಲಾವಂತಿಕೆ ಇತ್ತು. ಸ್ತ್ರೀಯರು ರಂಗಭೂಮಿಗೆ ಪ್ರವೇಶಿಸಿದಾಗಲೂ ಅವರು ಹೀರಾಬಾಯಿ ಬರೋಡೇಕರ್,ಜ್ಯೋತ್ಸ್ನಾ ಭೋಲೆ ಮುಂತಾದ ಶಾಸ್ತ್ರೀಯ ಸಂಗೀತ ವಿದ್ವಾಂಸರೇ ಆಗಿದ್ದರು. ಮಹಾರಾಷ್ಟ್ರದ ರಂಗಗೀತೆಗಳು ಚಿರಪರಿಚಿತ ಶಾಸ್ತ್ರೀಯ ಹಿಂದೂಸ್ತಾನಿ ಕೃತಿಗಳ ಅನುಕರಣಗಳೇ ಆಗಿದ್ದವು. ಶಾಸ್ತ್ರೀಯ ಕರ್ನಾಟಕ ಕೃತಿಗಳ ಅನುಕರಣಗಳಾಗಿದ್ದುದೂ ಉಂಟು.

ರಂಗಸಂಗೀತದ ಸೊಬಗು ಭವ್ಯತೆಗಳನ್ನು ಹಾರ್ಮೋನಿಯಂ ಮತ್ತು ಆರ್ಗನ್ ಇನ್ನಷ್ಟು ವೃದ್ಧಿಪಡಿಸಿದವು. ಖಾದರ್ ಬಕ್ಷ್‌ರಂತಹ ಶ್ರೇಷ್ಠ ಸಾರಂಗಿ ವಾದಕರು ರಂಗದ ಎರಡು ಪಕ್ಕಗಳಲ್ಲೂ ಸೈಡ್‌ವಿಂಗ್‌ಗಳ ಹಿಂದೆ ಇರುವಂತೆ ಬಾಲಗಂಧರ್ವರು ವ್ಯವಸ್ಥೆ ಮಾಡಿಕೊಂಡಿದ್ದರು. ಆರ್ಗನ್ ಹಾಗೂ ತಬಲಾ ವಾದಕರು ರಂಗದ ಎದುರಿಗೇ ಕುಳಿತು ಕೊಳ್ಳುತ್ತಿದ್ದರು. ಅಪಾರ ಖ್ಯಾತಿವಂತ ತಬಲಾ ವಾದಕರಾದ ಉಸ್ತಾದ್ ಅಹ್ಮದ್‌ಜಾನ್ ತಿರಕ್ವ ಅವರೂ ಕೆಲಕಾಲ ಬಾಲಗಂಧರ್ವರ ನಾಟಕ ತಂಡದಲ್ಲಿದ್ದರು. ರಂಗಸಂಗೀತಕ್ಕೆ ಭವ್ಯತೆಯನ್ನು ನೀಡಿದ್ದೇ ಆರ್ಗನ್ ವಾದ್ಯದ ದೈವಿಕ ನಾದ.

ರಂಗಭೂಮಿಯ ಹೊರತಾಗಿಯೂ ಹಿಂದೂಸ್ತಾನಿ ಸಂಗೀತಗಾರರು ಒಳ್ಳೆಯ ಹಾರ್ಮೋನಿಯಂ ಇಲ್ಲವೆ ಆರ್ಗನ್ ಪಕ್ಕವಾದ್ಯವನ್ನು ಅಪೇಕ್ಷಿಸುತ್ತಿದ್ದರು. ಇಂದಿಗು ಕೂಡ ಕೆಲವು ಸಂಪ್ರದಾಯವಾದಿಗಳನ್ನು ಹೊರತಾಗಿ ಇತರರು ಹಾರ್ಮೋನಿಯಂಗೇ ಮೊದಲ ಸ್ಥಾನ ನೀಡುತ್ತಾರೆ. ಜೊತೆಗೆ ಹೆಚ್ಚುವರಿಯಾಗಿ ಸಾರಂಗಿ ಇಲ್ಲವೆ ಪಿಟೀಲು ಇರಬಹುದು. ಆಕಾಶವಾಣಿಯಲ್ಲಿ ಹಾರ್ಮೋನಿಯಮನ್ನು ತ್ಯಜಿಸಿದ್ದರಿಂದ ಹಿಂದೂಸ್ತಾನಿ ಸಂಗೀತ ಎಷ್ಟು ಬಡವಾಯಿತು ಎನ್ನುವುದು ಅತ್ಯಂತ ಆಕರ್ಷಕವಾದ ಹಾರ್ಮೋನಿಯಂ ಅಥವಾ ಆರ್ಗನ್ ಪಕ್ಕವಾದ್ಯವುಳ್ಳ ರೆಕಾರ್ಡ್‌ಗಳೊಂದಿಗೆ ಹೋಲಿಸಿದಾಗ ಸ್ಪಷ್ಟವಾಗುತ್ತದೆ. ನಾನು ಮುಂದೆ ಹೆಚ್ಚು ವಿಶದವಾಗಿ ಚರ್ಚಿಸಿರುವಂತೆ ಹಿಂದೂಸ್ತಾನಿ ಸಂಗೀತಕ್ಕೆ ಹಾರ್ಮೋನಿಯಂ ಅತ್ಯುತ್ತಮ ಪಕ್ಕವಾದ್ಯ. ಅದರ ಲೋಪಗಳು ಏನೇ ಇರಲಿ, ಸಾರಂಗಿ ಅಥವಾ ಪಿಟೀಲು ವಾದ್ಯಗಳು ತಮ್ಮವೇ ಆದ ಅನಿವಾರ್ಯ ತೊಂದರೆಗಳನ್ನೆದುರಿಸುವ ಸಂದರ್ಭದಲ್ಲಿ ಹಾರ್ಮೋನಿಯಂ ಉತ್ತಮ ಬೆಂಬಲ ನೀಡುತ್ತದೆ.

೬. ವಿದ್ವಾನ್ ಚಿಕ್ಕರಾಮರಾಯರು

ಇವರನ್ನು ಚಿಕ್ಕರಾಮರಾಯರೆಂದು ಏಕೆ ಕರೆಯುತ್ತಿದ್ದರೆಂದು ನನಗೆ ತಿಳಿಯದು. ನನಗೆ ಅವರು ವೈಯಕ್ತಿಕವಾಗಿ ಪರಿಚಿತರಾಗಿದ್ದರೂ ಈ ಅಂಶವನ್ನು ನಾನು ಸ್ಪಷ್ಟಗೊಳಿಸಿಕೊಳ್ಳಲೇ ಇಲ್ಲ. ಸಂಗೀತದ ಹಿರಿಮೆ ಇಲ್ಲವೆ ವಯಸ್ಸಿನ ಹಿರಿತನದಿಂದಾಗಿ ದೊಡ್ಡರಾಮರಾಯರೆನಿಸಿಕೊಂಡ ಯಾವ ಸಂಗೀತಗಾರರ ಬಗ್ಗೆಯೂ ನಾನು ಕೇಳಿಲ್ಲ. ''ಚಿಕ್ಕ'' ಎನ್ನುವುದು ಅವರ ಮೂಲಸ್ಥಳವನ್ನು ಸೂಚಿಸಬಹುದು. ಅದು ಎಲ್ಲಿದೆ ಎನ್ನುವುದೂ ಗೊತ್ತಿಲ್ಲ. ಅವರ ಪುಟ್ಟ ಸ್ವರೂಪದಿಂದಾಗಿಯೇ ಅವರನ್ನು ಚಿಕ್ಕರಾಮರಾಯರೆಂದು ಕರೆದಿರುವುದೂ ಸಾಧ್ಯ. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎನ್ನುವ ಗಾದೆಯೊಂದಿದೆ. ನನ್ನ ಗೆಳೆಯ ಚಿಕ್ಕರಾಮರಾಯರು ಇಂಥ ಒಬ್ಬ ಖ್ಯಾತನಾಮರು.

ನಾವಿಬ್ಬರೂ ಗೆಳೆಯರಾದ ಸಂದರ್ಭ ಹೀಗಿದೆ. ೧೯೦೭ ರಲ್ಲಿ ಜಿಲ್ಲಾಧಿಕಾರಿ ಶ್ರೀ ಚೆಂಗಯ್ಯ ಚೆಟ್ಟಿ ತಮ್ಮ ಮಗಳ ವಿವಾಹವನ್ನು ಚಿತ್ರದುರ್ಗದಲ್ಲಿ ನೆರವೇರಿಸಿದರು. ಅಧಿಕಾರಿಗಳು, ವಕೀಲರು, ಹಾಗೂ ಗಣ್ಯ ವ್ಯಕ್ತಿಗಳಿಗೆಲ್ಲಾ ಒಂದು ಭೋಜನಕೂಟ ಏರ್ಪಾಡಾಗಿತ್ತು. ಭೋಜನದ ಅನಂತರ ಮಧ್ಯಾಹ್ನ ಸುಮಾರು ಮೂರು ಗಂಟೆಗೆ ಸಂಗೀತ ಏರ್ಪಟ್ಟಿತ್ತು. ಕುಳ್ಳಗೆ ಕಪ್ಪಗೆ ಇದ್ದ ದಡೂತಿಯಾದ ಗೊಗ್ಗರು ದನಿಯ ಒಬ್ಬ ಭಾಗವತರನ್ನು ವರನ ಕಡೆಯವರು ಕರೆತಂದಿದ್ದರು. ಜಿಲ್ಲಾ ಅರಣ್ಯಾಧಿಕಾರಿಯಾಗಿದ್ದ ನಮ್ಮ ತಂದೆಯವರೂ ಆಮಂತ್ರಿತರಾಗಿದ್ದರು. ಭಾಗವತರು ಹಾಡತೊಡಗಿದೊಡನೆಯೇ ಸಂಗೀತ ಕೇಳಲೆಂದು ನಮ್ಮ ತಂದೆಯವರು ನನಗೆ ಹೇಳಿ ಕಳುಹಿಸಿದರು. ಜಿಲ್ಲಾಧಿಕಾರಿಗಳ ಮತ್ತು ಜಿಲ್ಲಾ ಅರಣ್ಯಾಧಿಕಾರಿಗಳ ಬಂಗಲೆಗಳು ಪಕ್ಕಪಕ್ಕವೇ ಇದ್ದವು. ಸಂಗೀತವನ್ನು ಸರಿಯಾಗಿ ಕೇಳುವ ಉದ್ದೇಶದಿಂದ ನಾನು ವೇದಿಕೆಯ ಎದುರಿಗೆ ಕುಳಿತುಕೊಂಡೆ. ಭಾಗವತರು ಭಾರಿ ಉಮೇದಿನಲ್ಲಿದ್ದರು. ಸಣ್ಣ ಊರಾದ ಚಿತ್ರದುರ್ಗದಲ್ಲಿ ತಮ್ಮ ಸಂಗೀತಕ್ಕೆ ಹೆಚ್ಚಿನ ಮನ್ನಣೆ ಸಿಗಬಹುದೆಂದು ಅವರು ನಿರೀಕ್ಷಿಸಿದ್ದರು. ವರನ ಕಡೆಯವರು ಕರೆತಂದಿದ್ದ ಭಾಗವತರ ಬಗ್ಗೆ ಮನ್ನಣೆ ತೋರಿಸಲೇಬೇಕಾದ ಸೌಜನ್ಯಕ್ಕಾಗಿ ಜಿಲ್ಲಾಧಿಕಾರಿಗಳು ತಲೆದೂಗುತ್ತಿದ್ದರೆ ಶ್ರೋತೃಗಳು ನಗೆ ತಡೆಹಿಡಿದು ಆಲಿಸುತ್ತಿದ್ದರು.

ನಾನು ಕುಳಿತಲ್ಲಿಂದ ಕೆಲವೇ ಗಜಗಳ ಅಂತರದಲ್ಲಿ ನನ್ನ ವಯಸ್ಸಿನವನೇ ಆದ ಒಬ್ಬ ಮುದ್ದಾದ ಹುಡುಗ ಕೇವಲ ಭಾಗವತರೇ ಅಲ್ಲದೆ ಇತರರ ಗಮನವನ್ನೂ ಆಕರ್ಷಿಸುತ್ತಿದುದ್ದನ್ನು ನಾನು ಗಮನಿಸಿದೆ. ಆತ ಜರಿಯ ಪಂಚೆ, ಕ್ಲೋಸ್ ಕಾಲರ್ ಕೋಟ್ ಹಾಗೂ ಫೆಲ್ಟ್ ಕ್ಯಾಪ್ ಧರಿಸಿದ್ದ. ಅವನು ನಿಖರವಾಗಿ ತಾಳಹಾಕುತ್ತಿದ್ದುದೇ ಅಲ್ಲದೆ ಹಾಡುತ್ತಿದ್ದ ಕೃತಿಯ ಸಂಗತಿಗಳಿಗೆ ಸೂಕ್ತವಾಗಿ ತಲೆದೂಗುತ್ತಿದ್ದ. ಆ ಬಾಲಕನನ್ನು ನೋಡಿ ನಾವೆಲ್ಲ ಅವನ ಸಂಗೀತದ ಒಲವನ್ನು ಮೆಚ್ಚಿಕೊಳ್ಳುವುದರಲ್ಲಿ ತೊಡಗಿದ್ದೆವು. “ಈ ಸುಂದರ ಬಾಲಕ ಹಾಡಲೂ ಬಲ್ಲವನಾದರೆ ಎಷ್ಟು ಚೆನ್ನ” ಎನಿಸಿತು ನನಗೆ. ಅವನು ಹಾಡಲು ಬಲ್ಲವನಾಗಿರಲಿ ಎಂದು ನಾನು ಬಹುವಾಗಿ ಬಯಸಿದ್ದೆ.

ಭಾಗವತರು ಖರಹರಪ್ರಿಯದ ತ್ಯಾಗರಾಜರ ಕೃತಿ “ರಾಮ ನೀ ಸಮಾನಮೆವರು” ಕೃತಿಯನ್ನು ಹಾಡಲು ತೊಡಗಿ ಪಲ್ಲವಿ ಮುಗಿಸುವಷ್ಟರಲ್ಲಿ ಚಹಾ ಸೇವನೆಗಾಗಿ ವಿರಾಮವನ್ನು ಘೋಷಿಸಲಾಯಿತು. ಚಹಾದ ಅನಂತರ ಕೆಲವು ಹಾಡುಗಳನ್ನು ಹಾಡಲು ತನ್ನ ಸಂಬಂಧಿಗೂ ಅವಕಾಶ ಮಾಡಿಕೊಡಲೆಂದು ಜಿಲ್ಲಾಧಿಕಾರಿಗಳ ಗುಮಾಸ್ತನು ಜಿಲ್ಲಾಧಿಕಾರಿಗಳನ್ನು ಕೋರಿದ. ಬದಲಾವಣೆಯನ್ನು ಸ್ವಾಗತಿಸಿದ ಎಲ್ಲರಿಗೂ ಮುಂದೆ ಯಾರು ಹಾಡುವರೆಂದು ಕುತೂಹಲ. ನಾವೆಲ್ಲರೂ ಗಮನಿಸಿ ಮೆಚ್ಚಿಕೊಂಡಿದ್ದ ಬಾಲಕನನ್ನು ಜಿಲ್ಲಾಧಿಕಾರಿಗಳ ಗುಮಾಸ್ತರು ಹಾಡಲು ಆಹ್ವಾನಿಸಿದಾಗ ನನಗೆ ಎಷ್ಟು ಆನಂದವಾಯಿತು! ಆ ಬಾಲಕನ ಹೆಸರು ಚಿಕ್ಕರಾಮರಾಯ ಎಂದೂ, ಅವನು ಮೈಸೂರಿನಲ್ಲಿ ಸಂಗೀತ ಕಲಿಯುತ್ತಿರುವನೆಂದೂ, ಗುಮಾಸ್ತರು ಅವನ ಪರಿಚಯ ಮಾಡಿಕೊಟ್ಟರು. ಮದರಾಸಿನ ಭಾಗವತರ ಜಾಗವನ್ನು ಅಲಂಕರಿಸಿದ ಚಿಕ್ಕರಾಮರಾಯ ಭಾಗವತರು ನಿಲ್ಲಿಸಿದ್ದ ಜಾಗದಿಂದ ಎಂದರೆ “ರಾಮ ನೀ ಸಮಾನಮೆವರು” ಕೃತಿಯ ಅನುಪಲ್ಲವಿಯಿಂದ ಹಾಡತೊಡಗಿದ. ಎಂತಹ ಒಳ್ಳೆಯ ಶಾರೀರ, ಎಂತಹ ಸುಂದರ ಮುಗುಳ್ನಗೆ, ಎಂತಹ ಸ್ಪಷ್ಟವೂ, ಪರಿಣಾಮಕಾರಿಯೂ ಆದ ಸಂಗತಿಗಳು! ಶ್ರೋತೃಗಳ ಮನ ಗೆದ್ದುಬಿಟ್ಟ! ಏಳು ಗಂಟೆಯವರೆಗೆ ಅವನ ಸಂಗೀತ ಮುಂದುವರಿಯಿತು. ಮುಂದಿನ ದಿನಗಳಲ್ಲೂ ಚಿಕ್ಕರಾಮರಾಯರ ಸಂಗೀತ ನಡೆಯುವುದೆಂದು ಘೋಷಿಸಲಾಯಿತು. ಅವನ ಸಂಗೀತದ ಔತಣವೇ ಲಭಿಸಿತು ನಮಗೆ.

೧೯೧೦ ರಲ್ಲಿ ಮೈಸೂರಿನ ವೆಸ್ಲಿಯಿನ್ ಮಿಷನ್ ಹೈಸ್ಕೂಲಿನ V ಫಾರಂನಲ್ಲಿ ಚಿಕ್ಕರಾಮರಾಯರೂ ನಾನೂ ಸಹಪಾಠಿಗಳಾದೆವು. ಅವರು ಚಾಮುಂಡೇಶ್ವರಿ ಡ್ರಮ್ಯಾಟಿಕ್ ಕಂಪೆನಿಯಲ್ಲಿ ನಟರಾಗಿದ್ದರು. ಸಂಗೀತಕ್ಕೆ ಧಾರಾಳ ಅವಕಾಶವಿದ್ದ ಗುರುಚರಿತ್ರೆಯ ಗಯನ ಪಾತ್ರ ಅವರ ಅತ್ಯುತ್ತಮ ಪಾತ್ರವೆನಿಸಿತು. ಕಿವಿಯಲ್ಲಿ ಇನ್ನೂ ಅಲ್ಪ ಸ್ವಲ್ಪ ಬಣ್ಣ ಉಳಿಸಿಕೊಂಡೇ ಅವರು ತರಗತಿಗಳಿಗೆ ಹಾಜರಾಗುತ್ತಿದ್ದರು. ಹಾಡುಗಳನ್ನು ಗೀಚಿದ ಕಾಗದದ ತುಂಡುಗಳನ್ನು ಅವರು ಇಟ್ಟುಕೊಂಡಿರುತ್ತಿದ್ದರು. ಅವರ ಮನಸ್ಸೆಲ್ಲಾ ಅವುಗಳ ಬಗ್ಗೆಯೇ. ಇದಕ್ಕಾಗಿಯೇ ಆಗಿಂದಾಗ್ಗೆ ಅವರು ತರಗತಿಯಿಂದ ಹೊರಗೆ ಹೋಗುತ್ತಿದ್ದರು. ನಾನೂ ಅವರನ್ನು ಹಿಂಬಾಲಿಸುತ್ತಿದ್ದೆ. ರಾಮರಾಯರು ಹಾಡುಗಳನ್ನು ಅಸ್ಪಷ್ಟವಾಗಿ ಗುನುಗುನಿಸುತ್ತಿದ್ದರಿಂದ ಪಾಠ ಪ್ರವಚನಗಳನ್ನು ಕಡೆಗಣಿಸಿಯೂ ನನ್ನ ಸಂಗೀತ ಜ್ಞಾನಕ್ಕೇನೂ ಲಾಭವಾಗುತ್ತಿರಲಿಲ್ಲ. ನಾನು ಆ ಆಟವನ್ನು ನಿಲ್ಲಿಸಿದೆ.

ಕೃಷಿ ವಿಜ್ಞಾನವನ್ನು ಅಭ್ಯಾಸ ಮಾಡಲೆಂದು ೧೯೧೪ರಲ್ಲಿ ನಾಗಪುರಕ್ಕೆ ತೆರಳಿದ ನಾನು ಮಧ್ಯಪ್ರದೇಶದಲ್ಲೇ (ಹಳೆಯ ಸೆಂಟ್ರಲ್ ಪ್ರಾವಿನ್ಸಸ್ ಮತ್ತು ಬೇರಾರ್) ಕೆಲಸಕ್ಕೆ ಸೇರಿಕೊಂಡಿದ್ದರಿಂದ ೧೯೨೫ ರವರೆಗೆ ನಾನು ಚಿಕ್ಕರಾಮರಾಯರನ್ನು ಭೇಟಿ ಮಾಡಲಿಲ್ಲ. ಈ ನಡುವೆ ಅವರಲ್ಲಿ ಸಂಪೂರ್ಣ ಬದಲಾವಣೆ ಕಂಡಿತು. ಗುಳಿ ಬಿದ್ದ ಕೆನ್ನೆ, ಮೂಳೆಬಿಟ್ಟುಕೊಂಡ ದವಡೆ, ದೊಡ್ಡ ಮೀಸೆ, ವಿವಿಧ ಶ್ರುತಿಗಳಲ್ಲಿ ಸ್ವರಸ್ಥಾನಗಳನ್ನು ಹಿಡಿದಾಗ ಮಾಂಸಖಂಡಗಳ ಚಲನೆ ಸ್ಪಷ್ಟವಾಗಿ ಗೋಚರಿಸುವಂತಿದ್ದ ನೀಳವಾದ ಕತ್ತು, ಈಗಲೂ ಚೆನ್ನಾಗಿದ್ದರೂ ಬಳಲಿದಂತಿದ್ದ ಶಾರೀರ:ಬಾಲಕ ನಿತ್ರಾಣನಾಗಿ ಕಂಡುಬಂದ. ಆದರೂ ಅವರ ಕಣ್ಣುಗಳ ಹೊಳಪು ಮಾಸಿರಲಿಲ್ಲ. ಬಹುದಾರಿ ರಾಗದ “ಬ್ರೋವ ಭಾರಮಾ” ಕೃತಿ ಆಗತಾನೆ ಮೈಸೂರಿಗೆ ಪರಿಚಯವಾಗಿದ್ದು ಚಿಕ್ಕರಾಮರಾಯರು ಅದನ್ನು ಹಾಡಿದರು.

ಶ್ರೀ ಕೃಷ್ಣರಾಜ ಒಡೆಯರ್ ಅವರನ್ನು ಶ್ಲಾಘಿಸುವ, ಹಿಂದಿಯಲ್ಲಿ ಹಿಂದೂಸ್ತಾನಿ ರಾಗಗಳಲ್ಲಿರುವ ನನ್ನ “ನವರತ್ನ ರಾಗಮಾಲಿಕಾ” ಕೃತಿಯನ್ನು ೧೯೩೦ರಲ್ಲಿ ಚಿಕ್ಕರಾಮರಾಯರ ಮುಂದೆ ನಾನು ಹಾಡಿದೆ. ಅವರಿಗೆ ಅದು ಬಹಳ ಮೆಚ್ಚುಗೆಯಾಯಿತು. ಅವರು ಕೆಲವು ಕೃತಿಗಳನ್ನು ರಚಿಸಿದ್ದರು; ಅವುಗಳಲ್ಲಿ ನಾಗಸ್ವರಾವಳಿ ರಾಗದ ಆದಿತಾಳದ ವರ್ಣವೂ ಒಂದು. ಸ್ವರಪ್ರಸ್ತಾರ ಸಮೇತ ಆ ಕೃತಿಯನ್ನು ಬರೆದು ನನ್ನ ನಾಗಪುರದ ವಿಳಾಸಕ್ಕೆ ಕಳುಹಿಸಲು ವಿದ್ಯಾರ್ಥಿಯೊಬ್ಬನಿಗೆ ಹೇಳಲಾಯಿತು. ಅದು ಅಷ್ಟು ಸ್ಪಷ್ಟವಾಗಿರಲಿಲ್ಲವಾದ್ದರಿಂದ ನಾನದನ್ನು ಜೀರ್ಣಿಸಿಕೊಳ್ಳಲು ಶಕ್ಯನಾಗಲಿಲ್ಲ. ಅವರ ಶಿಷ್ಯರಾಗಿದ್ದ ಸಂಗೀತಗಾರರು ತಮ್ಮ ಗುರುಗಳ ಕೃತಿಗಳನ್ನು ಹಾಡಲೆಂದು ನಾನು ಆಶಿಸುತ್ತೇನೆ. ಇಂದು ಶ್ರೇಷ್ಠ ವಿದ್ವಾಂಸರ ಕೃತಿಗಳ ವಿಶೇಷ ಆವಶ್ಯಕತೆ ಇದೆ.

ಮದರಾಸಿನ ಖ್ಯಾತ ಪಿಟೀಲು ವಿದ್ವಾಂಸರಾದ ಮಧುರ ಸುಬ್ರಮಣಿ ಅಯ್ಯರ್ ಅವರು ಚಿಕ್ಕರಾಮರಾಯರಿಗೆ ಸಂಬಂಧಿಸಿದ ಘಟನೆಯೊಂದನ್ನು ನನಗೆ ತಿಳಿಸಿದರು. ಚಿದಂಬರಂನಲ್ಲಿರುವ ಮ್ಯೂಸಿಕ್ ಕಾಲೇಜಿಗೆ ಸಂಗೀತ ಕಲಾನಿಧಿ ಟೈಗರ್ ವರದಾಚಾರ್ಯರು ಪ್ರಾಂಶುಪಾಲರಾಗಿದ್ದಾಗ ನಡೆದ ಘಟನೆ ಇದು. ದಕ್ಷಿಣ ಭಾರತದ ತೀರ್ಥಯಾತ್ರೆಯ ಅಂಗವಾಗಿ ಚಿಕ್ಕರಾಮರಾಯರು ಚಿದಂಬರಂಗೂ ಹೋಗಿದ್ದರು. ಟೈಗರ್ ವರದಾಚಾರ್ಯರು ಚಿಕ್ಕರಾಮರಾಯರ ಸಂಗೀತ

ಕಛೇರಿ ಏರ್ಪಡಿಸಿದ್ದರು. ಅವರ ಅಲ್ಪ ಆಕಾರದಿಂದಾಗಿ ಜನ ಅವರಿಂದ ಹೆಚ್ಚೇನೂ ನಿರೀಕ್ಷಿಸಿರಲಿಲ್ಲ. ಪಕ್ಕ ವಾದ್ಯದವರು, ಮುಖ್ಯವಾಗಿ ಮೃದಂಗ ವಾದಕರು, ಮೊಟ್ಟ ಮೊದಲ ಹಾಡಿನಲ್ಲೇ ಚಿಕ್ಕರಾಮ ರಾಯರನ್ನು ಮೀರಿಸುವೆನೆಂದು ಭಾವಿಸಿದರು. ಸಂಗೀತಗಾರರನ್ನು ಅನುಸರಿಸುವ ಬದಲಾಗಿ ಸ್ವತಂತ್ರವಾಗಿ ಮನಸೋ ಇಚ್ಛೆ ನುಡಿಸ ತೊಡಗಿದರು. ಎರಡು ಹಾಡುಗಳನಂತರ ಸಜ್ಜನರಾದ ಚಿಕ್ಕರಾಮ ರಾಯರು, ನನ್ನ ಗೆಳೆಯ ಮಧುರ ಸುಬ್ರಮಣಿ ಅಯ್ಯರ್ ಅವರಿಗೂ ಟೈಗರ್ ವರದಾಚಾರ್ಯರಿಗೂ ಶ್ರೋತೃಗಳಿಗೂ ಕೇಳಿಸುವಂತೆ ಮೃದಂಗವಾದಕನಿಗೆ ಹೇಳಿದರು, "ಈಗ ತಾನೆ ಕಛೇರಿ ಪ್ರಾರಂಭಿಸಿದ್ದೇವೆ. ಶ್ರೋತೃಗಳಿಗೆ ಕೆಲವು ಕಾಲ ಸ್ವಲ್ಪ ಒಳ್ಳೆಯ ಸಂಗೀತ ನೀಡೋಣ. ಕಾಳಗಕ್ಕೆ ಬೇಕಾದಷ್ಟು ಕಾಲಾವಕಾಶ ಇರುತ್ತದೆ."

ಕ್ರಮೇಣ ಚಿಕ್ಕರಾಮರಾಯರು ಹೆಚ್ಚಿನ ಹತೋಟಿ ಸಾಧಿಸಿ, ಮೃದಂಗವಾದಕರನ್ನು ಕಾಡಿಸತೊಡಗಿದರು. ಪಲ್ಲವಿ ಹಾಡಲು ಒಂದು ಚಿಕ್ಕ ತಾಳವನ್ನು ಆಯ್ದುಕೊಂಡು ಅದರಲ್ಲಿ ವಿವಿಧ ಸಂಕೀರ್ಣತೆಗಳನ್ನು ಬಿಡಿಸುತ್ತಾ ಹೋದಂತೆ ಮೃದಂಗವಾದಕ ನೆಲಕಚ್ಚಿದ. ಚಿಕ್ಕರಾಮರಾಯರು ಮೃದಂಗ ವಾದಕನಿಗೆ "ಈಗ ನಿನಗೆ ಇಚ್ಛೆಯಿದ್ದರೆ ಕಾದಾಡೋಣ" ಎಂದು ಕರೆ ಇತ್ತರು.

ಮೃದಂಗ ವಾದಕ ನಾಚಿ ತಲೆತಗ್ಗಿಸಿದ. ವಂದನಾರ್ಪಣೆ ಮಾಡುತ್ತಾ ಟೈಗರ್ ವರದಾಚಾರ್ಯರು ನುಡಿದರು, "ಪ್ರಾರಂಭದಲ್ಲಿ ಚಿಕ್ಕರಾಮರಾಯರ ಬಗ್ಗೆ ಹೆಚ್ಚಿಗೆ ಮಾತನಾಡಲು ನಾನು ಇಚ್ಛಿಸಲಿಲ್ಲ. ಈ ಚಿಕ್ಕರಾಮರಾಯರು ಎಷ್ಟು ದೊಡ್ಡವರೆಂದು ಈಗ ನೀವೇ ಕಂಡುಕೊಂಡಿರಿ."

೭. ಮೈಸೂರಿನ ವಿದ್ವಾನ್ ಬಿಡಾರಂ ಕೃಷ್ಣಪ್ಪ

೧೯೦೩ನೇ ಇಸವಿ. ಮೈಸೂರಿನ ಮರಿಮಲ್ಲಪ್ಪನವರ ಪ್ರೌಢಶಾಲೆಯಲ್ಲಿ ನಾನು ವಿದ್ಯಾರ್ಥಿಯಾಗಿದ್ದೆ. ಮೈಸೂರಿನ ಚೀಫ್ ಎಂಜನಿಯರ್ ಆದ ನಮ್ಮ ಚಿಕ್ಕಪ್ಪ ರಾಜಶಿಲ್ಪಿ ವಿಶಾರದ, ರಾವ್‌ಬಹದ್ದೂರ್ ಬಿ. ಸುಬ್ಬರಾಯರು ತಮ್ಮ ಮಗಳ ವಿವಾಹವನ್ನು ರೈಲ್ವೇ ನಿಲ್ದಾಣದ ಸಮೀಪದ ನಂಜರಾಜ ಬಹದ್ದೂರ್ ಛತ್ರದಲ್ಲಿ ನೆರವೇರಿಸಿದರು. ಅಂದಿನ ದಿನಗಳಲ್ಲಿ ವಿವಾಹ ಮಹೋತ್ಸವಗಳು ಒಂದು ವಾರಕಾಲ ನಡೆಯುತ್ತಿದ್ದು ಪ್ರತಿನಿತ್ಯವೂ ಊಟದ ವೇಳೆಯಲ್ಲಿ ಭೋಜನಕಾಲ ಶ್ಲೋಕಗಳನ್ನು ಸಂಗೀತದೊಡನೆ ಇಲ್ಲವೇ ಹಾಗೆಯೇ (ಸಂಗೀತವಿಲ್ಲದೆ) ಪಠಿಸುವ ಅವಕಾಶವಿರುತ್ತಿತ್ತು. ನಾನು ಸಂಗೀತ ಬಲ್ಲವನಾದ್ದರಿಂದ ನಮ್ಮ ಚಿಕ್ಕಪ್ಪನವರು ಪ್ರತಿನಿತ್ಯ ನನ್ನಿಂದ ಶ್ಲೋಕ ಹಾಡಿಸುತ್ತಿದ್ದರು.

ವಿವಾಹದ ದಿವಸ ಮಧ್ಯಾಹ್ನ ೪ ಗಂಟೆಗೆ ವಿದ್ವಾನ್ ಬಿಡಾರಂ ಕೃಷ್ಣಪ್ಪನವರ ಹಾಡುಗಾರಿಕೆ ಏರ್ಪಟ್ಟಿತ್ತು. ವಿವಾಹದ ಆಚರಣೆಗಳಲ್ಲಿ ಸ್ವಲ್ಪ ವಿಳಂಬವಾದ್ದರಿಂದ ಭೋಜನವೂ ತಡವಾಗಿತ್ತು. ನಾನು ಶ್ಲೋಕ ಹಾಡುತ್ತಿದ್ದಾಗಲೇ ಬಿಡಾರಂ ಕೃಷ್ಣಪ್ಪನವರೂ ಅವರ ಸಂಗಡಿಗರೂ ಆಗಮಿಸಿದರು. ತಾವು ಬಂದಾಗ ಹಾಡುತ್ತಿದ್ದ ಬಾಲಕ ಯಾರೆಂದು ಬಿಡಾರಂ ಕೃಷ್ಣಪ್ಪನವರು ನಮ್ಮ ಚಿಕ್ಕಪ್ಪನವರಲ್ಲಿ ವಿಚಾರಿಸಿದರು. ನಮ್ಮ ಚಿಕ್ಕಪ್ಪನವರು ನನ್ನ ವಿಷಯವನ್ನೆಲ್ಲ ತಿಳಿಸಿದರು. ಬಿಡಾರಂ ಕೃಷ್ಣಪ್ಪನವರಿಗೆ ನಮ್ಮ ತಂದೆಯ ಪರಿಚಯ ಸಾಕಷ್ಟು ಇತ್ತು. ಅವರು ನನ್ನನ್ನು ಕರೆದು, ಕೆಲವು ಪ್ರೋತ್ಸಾಹದ ಮಾತುಗಳನ್ನಾಡಿ ಹೇಳಿದರು, "ನನ್ನಲ್ಲಿಗೆ ಬಾ. ನಾನು ನಿನಗೆ ಸಂತೋಷವಾಗಿ ಪಾಠ ಹೇಳಿ ಕೊಡುತ್ತೇನೆ." ಅವರ ವ್ಯಕ್ತಿತ್ವಕ್ಕೆ ಮಾರುಹೋದ ನಾನು ಅವರಿಗೆ ಧನ್ಯವಾದಗಳನ್ನರ್ಪಿಸಿ ಅವರ ಕಾಲು ಮುಟ್ಟಿ ನಮಸ್ಕರಿಸಿದೆ. ಇತ್ತೀಚೆಗೆ ಹೊರಬಂದಿರುವ ಸುಧಾ ವಾರಪತ್ರಿಕೆಯ ಮುಖಪುಟದಲ್ಲಿರುವಂತೆಯೇ ಇದ್ದರು ಅವರು. ಕೆಲವು ದಿನ ಸಾಯಂಕಾಲದ ವೇಳೆಯಲ್ಲಿ ನಾನು ಕೃಷ್ಣಪ್ಪನವರ ಮನೆಗೆ ಹೋದೆ. ಅವರ ಹೆಚ್ಚಿನ ಕಾರ್ಯಗೌರವ ಗಳಿಂದಾಗಿ ಪಾಠವೇನೂ ಸಾಧ್ಯವಾಗಲಿಲ್ಲ. ಕ್ರಿಕೆಟ್ ಮತ್ತು ಫುಟ್‌ಬಾಲ್ ಗಳಿಂದ ನನ್ನನ್ನು ವಿಮುಖಗೊಳಿಸುವಷ್ಟು ಇನ್ನೂ ಸಂಗೀತದ ಆಸಕ್ತಿ ಬೆಳೆದಿರಲಿಲ್ಲವಾದ್ದರಿಂದ ನಾನು ಮತ್ತೆ ಆ ಹಿರಿಯ ಗುರುವಿನ ಬಳಿ ಹೋಗಲಿಲ್ಲ. ೧೯೧೪ ರಲ್ಲಿ ನಾಗಪುರಕ್ಕೆ ಹೊರಡುವವರೆಗೆ ಆಗಿಂದಾಗ್ಗೆ ಅವರ ಸಂಗೀತವನ್ನು ಕೇಳುತ್ತಿದ್ದೆ. ಮತ್ತೆ ಅವರ ಸಂಗೀತವನ್ನು ನಾನು ಕೇಳಿದ್ದು ಬಹುಶಃ ೧೯೨೮ರಲ್ಲಿ– ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರವು ಶಿವರಾಂಪೇಟೆಯಲ್ಲಿಯೇ ಇದ್ದಾಗ; ನಾನಾಗ ನಾಗಪುರದಿಂದ ರಜೆಯಲ್ಲಿ ಬಂದಿದ್ದೆ. ಶಾರದಾವಿಲಾಸ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಡಾ|| ಕೆ. ಆರ್. ರಾಮಸ್ವಾಮಿ ಹಾಗೂ ಇತರ ಕೆಲವು ಸಂಬಂಧಿಕರು ನನ್ನೊಡನೆ ಇದ್ದರು. ನಾವು ಭಜನ ಮಂದಿರವನ್ನು ತಲುಪಿದಾಗ ಕೃಷ್ಣಪ್ಪನವರು ಶಂಕರಾಭರಣದ ಆಲಾಪನೆಯನ್ನು ಪ್ರಾರಂಭಿಸಿದ್ದರು. ಅವರ ಶಿಷ್ಯ ಚೌಡಯ್ಯನವರು ತಮ್ಮ ಏಳು ತಂತಿಯ ಪಿಟೀಲನ್ನು ಆಗಷ್ಟೇ ಬಳಸತೊಡಗಿದ್ದರು. ಮೂರು ಜೋಡಿ ತಂತಿಗಳ ಸಹಕಾರಿ ತಂತಿಗಳು ಸೂಕ್ತ ವ್ಯಾಸದ ವಾಗಿರಲಿಲ್ಲ. ಹಾಗಾಗಿ ಅವುಗಳನ್ನು ಸರಿಯಾದ ಶ್ರುತಿ ಮಾಡುವುದಾಗಲೀ ಶ್ರುತಿಬದ್ಧವಾಗಿ ನುಡಿಸುವುದಾಗಲೀ ಸಾಧ್ಯವಿರಲಿಲ್ಲ. ಏಳು ತಂತಿಯ ಪಿಟೀಲಿನಲ್ಲಿ ನಾನು ಕೂಡ ಈ ಸಮಸ್ಯೆಯನ್ನು ಎದುರಿಸಿದ್ದೇನೆ. ಚೌಡಯ್ಯನವರು ಪದೇ ಪದೇ ತಮ್ಮ ಪಿಟೀಲನ್ನು ಶ್ರುತಿ ಮಾಡ ಬೇಕಾದ್ದರಿಂದ ಕೃಷ್ಣಪ್ಪನವರು ಆಲಾಪನೆ ಮುಂದುವರಿಸ ಲಾಗುತ್ತಿರಲಿಲ್ಲ. ಕೃಷ್ಣಪ್ಪನವರು ಬೇಸತ್ತು 'ನಿನ್ನ ಏಳು ತಂತಿಯ

ಪಿಟೀಲನ್ನು ಬಿಸ್ಹಾಕು' ಎಂದು ಚೌಡಯ್ಯನವರಿಗೆ ಹೇಳಿದರು. ಆದರೂ ಚೌಡಯ್ಯನವರು ಕೇಳುತ್ತಿರಲಿಲ್ಲ. ಸುಮಾರು ಒಂದು ಗಂಟೆಗೂ ಮಿಕ್ಕಿ ಹೇಗೋ ಮುಂದುವರೆಯಿತು. ಆಗಲೇ ಬಹಳ ತಡವಾಗಿದ್ದರಿಂದ ಚೌಡಯ್ಯನವರ, ಹಾಗೂ, ಹೊಸ ಸಂಶೋಧನೆಯಾದ ಏಳು ತಂತಿ ಪಿಟೀಲಿನ ಸಂಗೀತವನ್ನು ಕೇಳಲು ನನಗೆ ಆಸಕ್ತಿಯಿದ್ದರೂ ನಾವು ಹೊರಟುಬಿಡಬೇಕಾಯಿತು.

ಇದಾದ ಒಂದು ವರ್ಷದ ಅನಂತರ ಶಿವರಾಮಪೇಟೆಯ ಪ್ರಭಾವಶಾಲಿ ವ್ಯಕ್ತಿಯೊಬ್ಬರ ಮನೆಯ ಎರಡನೆ ಮಹಡಿಯಲ್ಲಿ ನಾನು ಕೃಷ್ಣಪ್ಪನವರ ಸಂಗೀತವನ್ನು ಕೇಳಿದೆ. ಆಗಷ್ಟೇ ದಕ್ಷಿಣ ಭಾರತದ ಪ್ರವಾಸದಿಂದ ಅವರು ಹಿಂದಿರುಗಿದ್ದರು. ಅವರಿಗೆ ಬಿ. ದೇವೇಂದ್ರಪ್ಪನವರು ಪಿಟೀಲು ಪಕ್ಕವಾದ್ಯ ನೀಡುತ್ತಿದ್ದರು. ಸಹಗಾಯಕರಾಗಿ ವಿದ್ವಾನ್ ಎ. ಕೆ. ಸುಬ್ಬರಾಯರು ಹಾಡುತ್ತಿದ್ದರು. ದುರದೃಷ್ಟವಶಾತ್ ಕೃಷ್ಣಪ್ಪನವರಿಗೆ ಕಿವಿನೋವು ಬಾಧಿಸುತ್ತಿದ್ದು ಅವರು ಹೆಚ್ಚು ಶ್ರಮ ವಹಿಸುವಂತಿರಲಿಲ್ಲ. ಆಗ ಅವರ ಶಿಷ್ಯರು ಉತ್ತಮ ಮಟ್ಟದ ಪ್ರೌಢಿಮೆ ಪ್ರದರ್ಶಿಸಿದರು.

ಆಗ ಉದ್ದೇಶಿಸಿದ್ದ ರಾಮಮಂದಿರಕ್ಕಾಗಿ ಬಿಡಾರಂ ಕೃಷ್ಣಪ್ಪನವರೂ ಅವರ ಶಿಷ್ಯರೂ ಪ್ರವಾಸ ಕೈಗೊಂಡಿದ್ದರು. ಅವರ ಮುಂಬೈನ ಕಛೇರಿಗಳ ಬಗ್ಗೆ ಪ್ರಶಂಸಾತ್ಮಕ ವರದಿಗಳನ್ನು ವರ್ತಮಾನ ಪತ್ರಿಕೆಗಳಲ್ಲಿ ನಾನು ಓದಿದೆ. ನಾನೂ ನನ್ನ ದಕ್ಷಿಣ ಭಾರತದ ಗೆಳೆಯರೂ ನಮ್ಮಿಂದ ಸಾಧ್ಯವಾದಷ್ಟು ಪ್ರಯತ್ನಿಸಿ ಒಂದು ತೃಪ್ತಿಕರ ಮೊಬಲಗನ್ನು ಸಂಗ್ರಹಿಸಿಕೊಡುವುದಾಗಿ ಆಶ್ವಾಸನೆ ನೀಡಿ ಅವರನ್ನು ನಾಗಪುರಕ್ಕೆ ಭೇಟಿ ನೀಡಲು ಆಹ್ವಾನಿಸಿದೆವು. ಅವರ ಕಾರ್ಯದರ್ಶಿಯೋ ಅಥವಾ ಏಜಂಟರೋ, ಏನಾದರೂ ಕರೆಯಿರಿ,ಅವರನ್ನೂ – ಒಬ್ಬ ಎತ್ತರದ ಕಪ್ಪಗಿನ ವ್ಯಕ್ತಿಯನ್ನೂ ನನ್ನೊಡನೆ ಮಾತುಕತೆಗೆಂದು ಅವರು ಕಳಿಸಿಕೊಟ್ಟರು. ಚೌಕಾಸಿ ನಡೆದು, ಕೃಷ್ಣಪ್ಪನವರ ಹಾಗೂ ಚೌಡಯ್ಯನವರ ಕಛೇರಿಗಳಿಗೆ, ಪ್ರತಿಯೊಂದಕ್ಕೂ ಒಂದು ಸಾವಿರ ರೂಪಾಯಿಗಳನ್ನು ನಾವು ಅವರಿಗೆ ನೀಡಬೇಕೆಂದು ತೀರ್ಮಾನ ವಾಯಿತು. ಪಟ್ಟಣದ ವಿವಿಧ ಭಾಗಗಳಲ್ಲಿ ಪ್ರದರ್ಶಿಸಲೆಂದು ಬಿಡಾರಂ ಕೃಷ್ಣಪ್ಪನವರ ಇಪ್ಪತ್ತೈದು ದೊಡ್ಡ ಪೋಸ್ಟರ್ ಚಿತ್ರಗಳನ್ನು ಕೃಷ್ಣಪ್ಪನವರ ಪ್ರತಿನಿಧಿ ನನಗೆ ಕೊಟ್ಟರು. ಆತ ಮುಂಬಯಿಗೆ ಹಿಂದಿರುಗಿ ಕೃಷ್ಣಪ್ಪನವರೊಡನೆ ಸಮಾಲೋಚಿಸಿದ ಅನಂತರ ಕಛೇರಿಗಳ ದಿನಾಂಕಗಳನ್ನು ನಿರ್ಧರಿಸಬೇಕಾಗಿತ್ತು. ಕಾಲ ಕಳೆಯದೆ, ಪೋಸ್ಟರ್ ಗಳನ್ನು ಅಂಟಿಸಲೆಂದು ಒಂದು ಏಣಿ, ಒಂದು ಬಕೆಟ್ಟು, ಬ್ರಷ್‌ಗಳು ಹಾಗೂ ಗೋಂದನ್ನು ನಾವು ಸಿದ್ಧಗೊಳಿಸಿಕೊಂಡೆವು. ಚುರುಕಾದ ಒಬ್ಬ ತರುಣ ಈ ಸಲಕರಣೆಗಳೊಂದಿಗೆ ಊರನ್ನೆಲ್ಲ ಸುತ್ತಿದ್ದರಿಂದ ಎರಡು ದಿನಗಳಲ್ಲಿ ಊರಿನ ಪ್ರತಿಯೊಂದು ಪ್ರಮುಖ ತಾಣದಲ್ಲೂ ಬಿಡಾರಂ ಕೃಷ್ಣಪ್ಪನವರು ರಾರಾಜಿಸಿದರು! ಕರಪತ್ರಗಳನ್ನು ಅಚ್ಚು ಮಾಡಲು, ಪೆಂಡಾಲ್ ನಿರ್ಮಿಸಲು ಸಿದ್ಧತೆಗಳು ನಡೆಯುತ್ತಿದ್ದವು. ಒಂದು ವಾರದ ಅನಂತರ ಒಂದು ನಿರಾಶಾದಾಯಕ ಪತ್ರ ಆಗಮಿಸಿತು. ದೇಹಾರೋಗ್ಯ ತೃಪ್ತಿಕರವಾಗಿ ಇರಲಿಲ್ಲವಾಗಿ ನಾಗಪುರಕ್ಕೆ ಬರಲು ಅಸಹಾಯಕತೆ ಯನ್ನು ತಿಳಿಸಿ, ಕೃಷ್ಣಪ್ಪನವರು ಇದಕ್ಕಾಗಿ ತಮ್ಮ ವಿಷಾದ ಸೂಚಿಸಿದ್ದರು. ಬೆಲೆಬಾಳುವ ಅವರ ಚಿತ್ರಗಳು ಅವರಿಗೆ ವಾಪಸ್ ಬೇಕಾಗಿತ್ತು. ಅವರ ಅನಿರ್ದಿಷ್ಟ ಆರೋಗ್ಯಕ್ಕಾಗಿ ಅವರಿಗೆ ಸಹಾನುಭೂತಿ ತಿಳಿಸುವ ಪತ್ರ ಬರೆದ ನಾನು, ಅವರ ಚಿತ್ರಗಳನ್ನು ಈಗಾಗಲೇ ಭದ್ರವಾಗಿ ಅಂಟಿಸಿಟ್ಟಿದ್ದು ಅವುಗಳನ್ನು ಬಿಡಿಸುವ ಯಾವುದೇ ಪ್ರಯತ್ನವೂ ಎಲ್ಲ ಬಿಡಾರಂ ಕೃಷ್ಣಪ್ಪಂದಿರನ್ನೂ ಭಿನ್ನಗೊಳಿಸುವುದರಿಂದ ಚಿತ್ರಗಳನ್ನು ಕಳಿಸಲಾಗದ ಅಶಕ್ತತೆಯನ್ನು ವಿವರಿಸಿ ನನ್ನ ವಿಷಾದ ವ್ಯಕ್ತಪಡಿಸಿದೆ.

ಬಿಡಾರಂ ಕೃಷ್ಣಪ್ಪನವರದು ಸಶಕ್ತವಾದ ಶಾರೀರ. ಅದನ್ನು ಮಧುರವೆಂದು ನಾನು ಕರೆಯಲಾರೆ. ಅವರ ದೇವರನಾಮಗಳ ಭಾಷೆ ಕನ್ನಡವಾದ್ದರಿಂದ ಅವು ಎಲ್ಲರನ್ನೂ ಮುಟ್ಟುವಂತಿರುತ್ತಿದ್ದವು. ಇವನ್ನು ಅವರು ಅತ್ಯಂತ ಭಾವಪೂರ್ಣವಾಗಿ ಹಾಡುತ್ತಿದ್ದರು. ಲೆಕ್ಕಾಚಾರದ ಸಂಗೀತವಾದ ಪಲ್ಲವಿ ಗಾಯನದಲ್ಲಿ ಅವರು ನಿಷ್ಣಾತರಾಗಿದ್ದರು.

ಎ.ವಿ.ವರದಾಚಾರ್ಯರು ತಮ್ಮ ಉತ್ತುಂಗದಲ್ಲಿದ್ದಾಗಲೇ ಇವರೂ ರಂಗಭೂಮಿಯಲ್ಲಿದ್ದರು. ವರದಾಚಾರ್ಯರ ಚೇತೋಹಾರಿ ರೂಪ-ಪದ್ಯಗಳಿಗೆ ಹೋಲಿಸಿದಾಗ ಕೃಷ್ಣಪ್ಪನವರ ರಂಗಸಂಗೀತ ನೀರಸ ವಾಗಿತ್ತು. ವರದಾಚಾರ್ಯರದ್ದು ಅವರಿಗೇ ವಿಶಿಷ್ಟವಾದ ಮಟ್ಟ ವಾಗಿದ್ದು ಯಾರೂ ಅವರನ್ನು ಸಮೀಪಿಸುವಂತೆಯೇ ಇರಲಿಲ್ಲ.

ಬಿಡಾರಂ ಕೃಷ್ಣಪ್ಪನವರ ಕೆಲವು ಗ್ರಾಮಫೋನ್ ರೆಕಾರ್ಡುಗಳು ನನ್ನಲ್ಲಿ ಇವೆ. ಹಂಸಧ್ವನಿಯ "ವಾತಾಪಿ ಗಣಪತಿಂ" ಹಾಗೂ ನೀಲಾಂಬರಿಯ "ಶೃಂಗಾರ ಲಹರಿ" ಅತ್ಯಂತ ಜನಪ್ರಿಯವಾಗಿದ್ದವು.

ಶೃಂಗಾರಲಹರಿಯು ಸ್ವಾತಿ ತಿರುನಾಳ್‌ರ ಕೃತಿ 'ನೀಲಾಂಬರಿ' ರಾಗದ 'ಆನಂದವಲ್ಲಿ' ಕೃತಿಯ ತದ್ವತ್ತಾದ ಅನುಕರಣೆಯೆಂದು ನಾನಿಲ್ಲಿ ಸೂಚಿಸಬಯಸುತ್ತೇನೆ. ಚಿಟ್ಟೇಸ್ವರವೂ ಅದರದ್ದೇ. ಮಲಯಾಳಂ ಭಾಷೆಯ ಒಂದು ಪುಸ್ತಕದಲ್ಲಿ ಸ್ವರಪ್ರಸ್ತಾರದೊಂದಿಗೆ 'ಆನಂದವಲ್ಲಿ' ಅಚ್ಚಾಗಿದ್ದು ನನಗೆ ತಿಳಿದಿತ್ತು. ಈ ವಿಷಯವನ್ನು ನಾನು ಪ್ರೊ. ಆರ್. ಶ್ರೀನಿವಾಸನ್ ಅವರ ಗಮನಕ್ಕೆ ತಂದಾಗ ಅವರು ತಮ್ಮ ಗ್ರಂಥ ಭಂಡಾರವನ್ನೆಲ್ಲ ಶೋಧಿಸಿ ಸ್ವರಪ್ರಸ್ತಾರ ಸಮೇತ ನೀಲಾಂಬರಿ ರಾಗದ 'ಆನಂದವಲ್ಲಿ' ಕೃತಿ ಅಚ್ಚಾದ ಪುಸ್ತಕವನ್ನು ಹೊರತೆಗೆದರು. ಈ ವಿಷಯಕ್ಕೆ ಮತ್ತೆ ಬರೋಣ.

ಅವರು ಶ್ರೇಷ್ಠ ವಾಗ್ಗೇಯಕಾರರೆಂದು ಹೆಚ್ಚಿನ ಖ್ಯಾತಿ ಏನೂ ಗಳಿಸಿರಲಿಲ್ಲ. ಪೂರ್ವಿಕಲ್ಯಾಣಿ ರಾಗದ ಅವರ ಒಂದು ಕೃತಿಯನ್ನು ಭಜನೆಯ ದಿನಗಳಲ್ಲಿ ಅವರ ಶಿಷ್ಯರೆಲ್ಲಾ ಗೋಷ್ಠಿಗಾನದಲ್ಲಿ ಹಾಡುತ್ತಿದ್ದರು. ಯುವರಾಜ ನರಸಿಂಹರಾಜ ಒಡೆಯರ್ ಅವರ ವಿವಾಹದ ಸಂದರ್ಭದಲ್ಲಿ ಅವರು ರಚಿಸಿದ ರಾಗಮಾಲಿಕೆಯ

"ಧರ್ಮಪತ್ನಿ ಯುವರಾಜು" ಧ್ವನಿ ಮುದ್ರಿತವಾಗಿದೆ. ನನ್ನಲ್ಲೂ ಅದರ ಒಂದು ಧ್ವನಿ ಮುದ್ರಿಕೆ ಇದೆ.

ಒಂದು ನಿರ್ದಿಷ್ಟ ಧ್ವನಿಮುದ್ರಿಕೆ -ಕೃಷ್ಣಪ್ಪನವರ ಕಲ್ಯಾಣಿ ರಾಗದ ರಾಗಾಲಾಪನೆಯದ್ದು- ಮಂದ್ರಸ್ಥಾಯಿಯ ಸಾಧಕದ ಒಳ್ಳೆಯ ಉದಾಹರಣೆ. ಹೆಚ್ಚಿನ ಉತ್ಸಾಹ, ಮೆಚ್ಚುಗೆಯಿಂದ ನಾನು ಈ ಧ್ವನಿಮುದ್ರಿಕೆಯನ್ನು ಹಾಕಿದಾಗಲೆಲ್ಲಾ ಕೇಳಿದ ಅನೇಕರು ಅದನ್ನು ಚೂರು ಚೂರಾಗಿ ಮುರಿದು ಹಾಕಬೇಕೆಂದು ಹೇಳುತ್ತಾರೆ. ಅವರ ಇತರ ಧ್ವನಿಮುದ್ರಿಕೆಗಳು ಕೂಡ ನನ್ನ ಗೌರವಕ್ಕೆ ಪಾತ್ರವಾಗಿವೆಯೇ ಹೊರತು ಮೆಚ್ಚುಗೆಗೆ ಅಲ್ಲ. ಸಂಗೀತ ಇಂದು ಬಹಳ ಮಟ್ಟಿಗೆ ಸುಧಾರಿಸಿದೆ. ಅವರು ಹಾಡಿರುವ ಎಲ್ಲಾ ಕೃತಿಗಳೂ ಇಂದಿನ ಸುಧಾರಿತ ಶೈಲಿಗೆ ಹೋಲಿಸಿದರೆ ತೀರಾ ಪ್ರಾಚೀನ ಎನಿಸುತ್ತವೆ.

ತಮ್ಮ ಸಂಗೀತದಿಂದಾಗಿ ಹಾಗೂ, ಪ್ರತಿಯೊಬ್ಬ ಖ್ಯಾತ ಸಂಗೀತಗಾರನೂ ಪಕ್ಕವಾದ್ಯಕ್ಕಾಗಿ ಅಪೇಕ್ಷಿಸುತ್ತಿದ್ದ ಪ್ರಖ್ಯಾತ ಪಿಟೀಲು ವಾದಕ ಟಿ. ಚೌಡಯ್ಯನವರ ಗುರುವೆಂದು ಬಿಡಾರಂ ಕೃಷ್ಣಪ್ಪನವರು ದಕ್ಷಿಣ ಭಾರತದಲ್ಲೆಲ್ಲಾ ಹೆಚ್ಚಿನ ಖ್ಯಾತಿ ಸಂಪಾದಿಸಿದರು. ಇತರ ಸಂಗೀತಗಾರರಿಗೆ ಹೋಲಿಸಿದಾಗ ಹೆಚ್ಚಿನ ಸಂಖ್ಯೆಯಲ್ಲಿ ಪ್ರಥಮ ದರ್ಜೆಯ ಶಿಷ್ಯರನ್ನು ತಯಾರು ಮಾಡಿರುವ ಖ್ಯಾತಿ ಕೃಷ್ಣಪ್ಪನವರದ್ದು. ದಕ್ಷಿಣ ಭಾರತದಲ್ಲಿ ಟಿ.ಚೌಡಯ್ಯನವರಷ್ಟು ಪ್ರಖ್ಯಾತರಲ್ಲದಿದ್ದರೂ ಗಾಯಕರೂ ಆಗಿದ್ದು ಅನೇಕ ಸಂಗೀತವಾದ್ಯಗಳಲ್ಲಿ ನಿಷ್ಣಾತರಾದ ವಿ|| ದೇವೇಂದ್ರಪ್ಪನವರು, ಕೊಳಲು ವಾದಕರಾದ ಎ. ಕೆ. ಸುಬ್ಬರಾವ್, ಪಿಟೀಲು ವಾದಕರಾದ ವಿ|| ಗುರುರಾಜಪ್ಪನವರು ಇವರೆಲ್ಲಾ ಕೃಷ್ಣಪ್ಪನವರ ಒಳ್ಳೆಯ ಶಿಷ್ಯರ ಪೈಕಿ ಕೆಲವರಾಗಿದ್ದಾರೆ.

ಕೃಷ್ಣಪ್ಪನವರ ಧಾರ್ಮಿಕ ಮನೋಭಾವಕ್ಕೆ ಹಾಗೂ ಸಂಗೀತಕ್ಕೆ ಮೈಸೂರಿನ ಶ್ರೀ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ ಒಂದು ಸ್ಮಾರಕವಾಗಿದೆ.

ರಾಮಮಂದಿರವನ್ನು ನಡೆಸಿಕೊಂಡು ಹೋಗುವ, ಅಲ್ಲಿ ಸಂಗೀತ ಸಮ್ಮೇಳನಗಳನ್ನು ಮತ್ತು ಕಛೇರಿಗಳನ್ನು ನಡೆಸುವ ಜವಾಬ್ದಾರಿಯನ್ನು ದಿವಂಗತ ಡಿ. ಕೆ. ಪದ್ಮನಾಭರಾಯರು ಎಷ್ಟು ಪ್ರಾಮಾಣಿಕವಾಗಿ ನಿರ್ವಹಿಸಿದರು ಎನ್ನುವುದನ್ನು ನಾನು ಮರೆಯಲಾರೆ. ದಿವಂಗತ ಟಿ. ಚೌಡಯ್ಯನವರು ಈ ಮಂದಿರವನ್ನು ವೈಯಕ್ತಿಕ ಸಾಧನೆಯೆಂದೇ ಪರಿಣಗಣಿಸಿದ್ದರು. ಈ ಇಬ್ಬರು ಘಟಾನುಘಟಿಗಳ ಸಾವಿನಿಂದಾಗಿ ಮಂದಿರದ ಸಂಗೀತದ ಚಟುವಟಿಕೆಗಳ ಭವಿಷ್ಯದ ಬಗ್ಗೆ ಅನುಮಾನಗಳು ಹುಟ್ಟಿವೆ. ಅದು ಸೂಕ್ತವಾಗಿ ನಿರ್ವಹಿಸಲ್ಪಟ್ಟು ಸ್ಥಾಪಕರ ಕನಸನ್ನು ಪೂರ್ಣಗೊಳಿಸಲು ಅವಕಾಶವಾಗುತ್ತದೆ ಎಂದು ಆಶಿಸೋಣ.

೮. ಮೈಸೂರಿನ ಬಿ. ವಾಸುದೇವಾಚಾರ್

ಬಿ. ವಾಸುದೇವಾಚಾರ್ ಅವರನ್ನು ೧೯೦೮ನೇ ಇಸವಿಯಿಂದಲೇ ನೋಡಿದ್ದು ನನ್ನ ಕಣ್ಣ ಮುಂದೆ ಇಂದೂ ಸ್ಪಷ್ಟವಾಗಿದೆ. ನಮ್ಮ ತಂದೆಯವರು ಮೈಸೂರು ಜಿಲ್ಲೆಯ ಅರಣ್ಯ ಯೋಜನಾ ಕಾರ್ಯ ನಿರ್ವಾಹಕ ಅಧಿಕಾರಿಯಾಗಿದ್ದರು. ನಾವು ಚಾಮರಾಜಪುರಂನಲ್ಲಿ ಅಡ್ವೊಕೇಟ್ ರಂಗ ಅಯ್ಯಂಗಾರ‍್ಯರ ಮನೆಯಲ್ಲಿ ವಾಸಿಸುತ್ತಿದ್ದೆವು. ಇಂದಿಗೂ ಈ ಮನೆ ೧೯೦೮ ನೇ ಇಸವಿಯಲ್ಲಿ ಇದ್ದಂತೆಯೇ ಇದೆ. ಈಗ ಅಲ್ಲಿ ವಕೀಲರಾದ ಶ್ರೀ ನಿಂಗಪ್ಪನವರು ವಾಸಿಸುತ್ತಾರೆ. ಈಗ ಆ ಮನೆಯ ಮುಂದೆ ಸಂಚರಿಸುವಾಗ ಪ್ರತಿನಿತ್ಯವೂ ನಾನು ಕಾಣುವ, ಮಹಡಿಯ ಮೇಲಿನ ಮಂಗಳೂರು ಹಂಚಿನ ಕೋಣೆಯಲ್ಲಿಯೇ ನಾವು ವರದಾಚಾರ್ಯರನ್ನು ಎದುರುಗೊಂಡಿದ್ದು ಹಾಗೂ ನಾನು ಐತಿಹಾಸಿಕ ಎಂದು ಪರಿಗಣಿಸುವ ನಮ್ಮ ಭೇಟಿ ನಡೆದದ್ದು. ಅದೊಂದು ಮೇ ತಿಂಗಳ ಸೆಖೆಯ ದಿನ. ನಮ್ಮ ತಂದೆಯವರು ಅವರ ಸ್ನೇಹಿತರಾದ ಶ್ರೀ ಲಕ್ಷ್ಮೀನರಸಿಂಹರಾವ್ ಅವರ ಮನೆಗೆ ಭೋಜನಕ್ಕಾಗಿ ಹೋಗಿದ್ದರು. ಶ್ರೀ ಲಕ್ಷ್ಮೀನರಸಿಂಹರಾಯರು ಅಕೌಂಟೆಂಟ್ ಜನರಲ್ ಆಗಿದ್ದರು. (ಭೋಜನ ಮುಗಿಸಿ ಹಿಂದಿರುಗುವಾಗ) ಶ್ರೀ ವಾಸುದೇವಾ ಚಾರ್ಯರು ನಮ್ಮ ಮನೆಯಲ್ಲಿ ಕೆಲ ಹೊತ್ತು ಇರಬೇಕು; ನಾವು ನಮ್ಮ ಸಂಗೀತದ ಪ್ರತಿಭೆಯನ್ನು ಅವರ ಮುಂದೆ ಪ್ರದರ್ಶಿಸಿ ಅವರ ಆಶೀರ್ವಾದ ಪಡೆಯಬೇಕು; ಈ ಉದ್ದೇಶದಿಂದ ಅವರನ್ನು ತಮ್ಮೊಡನೆ ನಮ್ಮ ಮನೆಗೆ ಬರುವಂತೆ ತಂದೆಯವರು ಆಹ್ವಾನಿಸಿ ಜೊತೆಗೆ ಕರೆದುಕೊಂಡು ಬಂದರು.

ಆಚಾರ್ಯರ ಬಂಗಾರದ ಜರಿ ಅಂಚಿನ ಹಸಿರು ಶಾಲು, ಅವರ ಗೋಪಿಚಂದನದ ಮುದ್ರೆಗಳು,ಕುಳ್ಳಾದ ಸದೃಢ ಶರೀರ ಇವೆಲ್ಲಾ ನನ್ನ ನೆನಪಿನಲ್ಲಿ ಇನ್ನೂ ಹಸಿರಾಗಿವೆ. ವಯಸ್ಸಿನ ಸರದಿಯ ಪ್ರಕಾರ ನಮ್ಮ ತಂದೆಯವರು ನಮ್ಮನ್ನು ಒಬ್ಬೊಬ್ಬರನ್ನಾಗಿ ಆಚಾರ್ಯರಿಗೆ ಪರಿಚಯ ಮಾಡಿಕೊಟ್ಟಂತೆ ನಾವೆಲ್ಲಾ ಅವರ ಕಾಲ್ಮುಟ್ಟಿ ನಮಸ್ಕಾರ ಮಾಡಿದೆವು.

ನೀರುಮಜ್ಜಿಗೆ ಹಾಗೂ ತಾಂಬೂಲಗಳನ್ನು ನೀಡಿ ಸತ್ಕರಿಸಿದ ಅನಂತರ,ಕೆಲವೇ ದಿನಗಳ ಹಿಂದೆ ಆಚಾರ್ಯರಿಗೆ ಶ್ರೀರಂಗಪಟ್ಟಣದಲ್ಲಿ ನೀಡಲಾಗಿದ್ದ ಬಂಗಾರದ ಪದಕವನ್ನು ನಮಗೆ ತೋರಿಸುವಂತೆ ನಮ್ಮ ತಂದೆಯವರು ಅವರನ್ನು ಕೋರಿಕೊಂಡರು. ತಮ್ಮ ಸೊಂಟದ ಸಮೀಪದಿಂದ ಆ ಪದಕವನ್ನು ಹೊರತೆಗೆದ ಆಚಾರ್ಯರು ಕಣ್ಣೀರು ತುಂಬಿ ನುಡಿದರು, "ಈ ಪದಕ ತಂದ ಸಮ್ಮಾನಕ್ಕಾಗಿ ಹೆಮ್ಮೆ ಪಡಲೋ,ಅಥವಾ ನಾನು ಈ ಪದಕ ಸ್ವೀಕರಿಸುತ್ತಿದ್ದ ವೇಳೆಯಲ್ಲೇ ಬಾವಿಯಲ್ಲಿ ಮುಳುಗಿ ಹೋದ ಮಗಳಿಗಾಗಿ ರೋದಿಸಲೋ?" ನಡೆದ ಪ್ರಸಂಗ ಇದು: ಮಳೆ ಸುರಿಯತೊಡಗಿತು. ಹೆಚ್ಚು ಎತ್ತರವಿಲ್ಲದ

ಬಿದುರಿನ ಕುಕ್ಕೆಗಳಲ್ಲಿ ಮಹಿಳೆಯರು ಕೆಲವು ಪದಾರ್ಥಗಳನ್ನು ಒಣಗಿಸಲೆಂದು ಇರಿಸಿದ್ದರು. ಸರಿಯಾದ ಕಟ್ಟೆ ಇಲ್ಲದ ಒಂದು ಬಾವಿಯ ಬಳಿ ಈ ಕುಕ್ಕೆಗಳನ್ನು ಇಡಲಾಗಿತ್ತು. ಕುಕ್ಕೆಗಳನ್ನು ತೆಗೆದುಕೊಳ್ಳಲೆಂದು ಆತುರದಲ್ಲಿ ಹೋದ ಆಚಾರ್ಯರ ಮಗಳು ಕಾಲು ಜಾರಿ ಬಾವಿಯಲ್ಲಿ ಬಿದ್ದು ಮುಳುಗಿ ಹೋದಳು. ಈ ವಿಷಯ ಕೇಳಿ ನಮಗೆಲ್ಲ ಬಹಳ ದುಃಖವಾಯಿತು. ನಮ್ಮ ತಂದೆತಾಯಿಯರು ತಮ್ಮ ಹೃತ್ಪೂರ್ವಕ ಸಾಂತ್ವನಗಳನ್ನು ತಿಳಿಸಿ ಅವರನ್ನು ಸಮಾಧಾನಪಡಿಸಿದರು.

ಮನೆಯಲ್ಲಿ ಹೇಗೋ ಹಾಗೆ ಹೊರಗೂ ಪ್ರೀತಿಯಿಂದ 'ಗುಂಡಮ್ಮ'ಎಂದು ಕರೆಯುತ್ತಿದ್ದ ನಮ್ಮಅಕ್ಕ ಶ್ರೀಮತಿ ಆರ್. ವಿ. ಲಕ್ಷಮ್ಮಾಳ್ ವೀಣಾವಾದಕಿಯಾಗಿ ಹೆಸರು ಮಾಡಿದ್ದರು. ನಮ್ಮ ಅಕ್ಕನ ವೀಣಾವಾದನದ ಜೊತೆಗೆ ನಾನು ಶಿಳ್ಳೆ ಹೊಡೆಯುತ್ತಿದ್ದೆ. ಇನ್ನೇನು ಹನ್ನೆರಡು ವರ್ಷ ತುಂಬಲಿದ್ದ ನನ್ನ ತಂಗಿ ತಂಗಮ್ಮ ಕೂಡ ಚೆನ್ನಾಗಿ ಹಾಡುತ್ತಿದ್ದಳು. ಆಚಾರ್ಯರು ನಮ್ಮ ಬಾಲ ಪ್ರತಿಭೆಯನ್ನು ಮೆಚ್ಚಿ ಆಶೀರ್ವದಿಸಿದರು. ನಾವೆಲ್ಲರೂ ಹಿರಿಯರಾದ ಆಚಾರ್ಯರ ಸಂಗೀತವನ್ನು ಕೇಳಬಯಸುತ್ತೇವೆಂದು ನಮ್ಮ ತಂದೆಯವರಲ್ಲಿ ಪಿಸು ನುಡಿದೆವು. ನಮ್ಮ ಪಿಸು ಮಾತಿನ ಸಂದರ್ಭ ಆಚಾರ್ಯರಿಗೆ ಅರಿವಾಯಿತು. ಕೆಲವು ದಿನಗಳ ಹಿಂದೆ ನೆಂಟರೊಬ್ಬರಿಗೆ ಎರವಲು ಕೊಟ್ಟಿದ್ದ ನಮ್ಮ ತಂಬೂರಿ ದುರವಸ್ಥೆಯಲ್ಲಿ ಮರಳಿ ಬಂದಿತ್ತು. ಆಚಾರ್ಯರು ವೀಣೆಯ ತಂತಿಗಳನ್ನೇ ಶ್ರುತಿಯಾಗಿ ಬಳಸುವಂತೆ ಶ್ರುತಿ ಮಾಡಲು ನನ್ನ ಸೋದರಿಗೆ ಹೇಳಿದರು. ಅವರು ಕೆಲವಾರು ಮಟ್ಟುಗಳನ್ನು ಹಾಡಿದರು ಅಥವಾ ಗುನುಗುನಿಸಿದರು ಎನ್ನಬಹುದು. ಅವೆಲ್ಲಾ ಎಷ್ಟು ಮಧುರವಾಗಿದ್ದವು! ಅವರ ''ಆಜೀವ ದಂಡ ಕಮಂಡಲ" ಹಾಗೂ "ಈಸು ಶಾಸ್ತ್ರ"– "ಈ ಸುಶಾಸ್ತ್ರ" (ಶ್ಲೇಷೆ) ನನ್ನ ಕಿವಿಯಲ್ಲಿ ಈಗಲೂ ಮೊಳಗುತ್ತಿದೆ. ಒಂದು ಸಣ್ಣ ಪ್ರೇಕ್ಷಕ ವರ್ಗಕ್ಕಾಗಿ ಮನೆಯ ಹಾಲ್‌ನಲ್ಲಿ ಅವರು ಹಾಡಿದಾಗ ಇಲ್ಲವೇ ಗುನುಗುನಿಸಿದಾಗ ವಾಸುದೇವಾಚಾರ್ಯರ ಸಂಗೀತ ನಿಜಕ್ಕೂ ಅತ್ಯಂತ ಆಕರ್ಷಕವಾಗಿತ್ತು.

ದೇಶ್, ಬೇಹಾಗ್, ಮಾಂಡ್ ಮುಂತಾದ ಹಿಂದೂಸ್ತಾನಿ ರಾಗಗಳನ್ನು ಅವರು ಬಹುವಾಗಿ ಇಷ್ಟಪಡುತ್ತಿದ್ದರು. ಏಳನೇ ಕಿಂಗ್ ಎಡ್ವರ್ಡನ ಅನಂತರ ಕಿಂಗ್ ಜಾರ್ಜನ ಪಟ್ಟಾಭಿಷೇಕಕ್ಕಾಗಿ ಅವರು ರಚಿಸಿದ ರಾಗಮಾಲಿಕೆಯನ್ನು ಅಚ್ಚಿಸಿ ಹಂಚಲಾಗಿತ್ತು. "ಶ್ರೀ ಸತ್ಕೀರ್ತಿ ವಿಭೂಷಿತ" ಎಂದು ಮೋಹನ ರಾಗದಿಂದ ಈ ರಾಗಮಾಲಿಕೆ ಆರಂಭವಾಗುತ್ತಿತ್ತು. ಅವರು ರಚಿಸಿರುವ ಎಲ್ಲಾ ರಾಗಮಾಲಿಕೆಗಳಲ್ಲೂ ಸುಂದರವಾದ ಚಿಟ್ಟೇಸ್ವರಗಳಿವೆ. ಮುಂದೆ ಅವರು ಜಾರ್ಜ್ ದೊರೆಯನ್ನು ಕಾಪಾಡೆಂದು ಭಗವಂತನನ್ನು ಪ್ರಾರ್ಥಿಸುವ ಕೃತಿಗಳನ್ನು ರಚಿಸಿದರು. ಬ್ಯಾಂಡ್‌ಗೆ ಹೊಂದಿಕೊಳ್ಳುವ ಇಂಗ್ಲಿಷ್ ಮಟ್ಟಿನಲ್ಲಿರುವ "ಶ್ರೀ ಜಾರ್ಜ್ ಪ್ರಭು" (ರಾಗ : ನಾಗಸ್ವರಾವಳಿ) ಹಾಗೂ ಮಾಂಡ್ ರಾಗದ "ರಾಮ ಪಾಹಿ ಜಾರ್ಜ್ ಪ್ರಭುಂ" ಕೃತಿಗಳು ನನ್ನ ನೆನಪಿನಲ್ಲಿವೆ.

೧೯೧೨ ರಲ್ಲಿ ಮೈಸೂರು ದೊರೆಗಳಾದ ಶ್ರೀ ಕೃಷ್ಣರಾಜ ಒಡೆಯರ್ ಅವರು ಜಲಂಧರ್‌ನಲ್ಲಿ ನಡೆಯಲಿದ್ದ ಅಖಿಲ ಭಾರತದ ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಲು ವಿದ್ವಾನ್ ವಾಸುದೇವಾಚಾರ್ಯರನ್ನು ನಿಯೋಜಿಸಿದರು. ವಾಸುದೇವಾಚಾರ್ಯರಿಗೆ ಇಂಗ್ಲಿಷ್ ಇಲ್ಲವೇ ಹಿಂದಿ ಭಾಷೆಯ ಜ್ಞಾನವಿರಲಿಲ್ಲ. ಆದರೂ ತಮ್ಮ ಮಗ, ನನ್ನ ವಾರಿಗೆಯ (ಹದಿನೇಳು ವರ್ಷದ) ಸುಬ್ರಹ್ಮಣ್ಯನೊಂದಿಗೆ ಪ್ರಯಾಣ ಮಾಡಲು ನಿರ್ಧರಿಸಿದರು. ಚಿತ್ರದುರ್ಗದ ಹೈಸ್ಕೂಲ್‌ನಲ್ಲಿ ನಮ್ಮ ಸಂಸ್ಕೃತ ಅಧ್ಯಾಪಕರಾಗಿದ್ದ ವೆಂಕಟಕೃಷ್ಣ ಅಯ್ಯಂಗಾರ್ ಎನ್ನುವವರು ವಾಸುದೇವಾಚಾರ್ಯರಿಗೆ ಹಿಂದಿ ಹಾಗೂ ಇಂಗ್ಲಿಷ್‌ಗಳಲ್ಲಿ ಸಹಾಯ ಮಾಡಬಹುದೆಂಬ ಉದ್ದೇಶದಿಂದ ಅವರೊಂದಿಗೆ ಪ್ರವಾಸ ಮಾಡಲು ಮುಂದಾದರು. ಇವೆರಡು ಭಾಷೆಗಳಲ್ಲೂ ಅಯ್ಯಂಗಾರ್ಯರಿಗಿದ್ದ ತಿಳುವಳಿಕೆಯು ಅತ್ಯಲ್ಪವಾಗಿದ್ದು ವಾಸುದೇವಾಚಾರ್ಯರಿಗೆ ಅವರು ಸಹಾಯ ಮಾಡುವ ಬದಲು ಒಂದಕ್ಕಿಂತ ಹೆಚ್ಚು ಸಂದರ್ಭಗಳಲ್ಲಿ ಅವರನ್ನು ಪೇಚಿಗೆ ಸಿಕ್ಕಿಸಿಬಿಟ್ಟರು.

ದೆಹಲಿಯನ್ನು ತಲುಪಿದ ಈ ತಂಡ ಅಲ್ಲಿಂದ ಜಲಂಧರ್‌ಗೆ ಹೋಗುವ ರೈಲಿನಲ್ಲಿ ದ್ವಿತೀಯ ದರ್ಜೆಯ ಬೋಗಿಯನ್ನು ಹತ್ತಿಕೊಂಡರು. ಕೆಲವು ನಿಮಿಷಗಳ ಅನಂತರ ಉತ್ತರ ಭಾರತದ ಮಿಠಾಯಿವಾಲಾಗಳನ್ನು ಹೋಲುತ್ತಿದ್ದ ಶ್ವೇತವಸ್ತ್ರಧಾರಿಗಳಾದ ಗಣ್ಯವ್ಯಕ್ತಿಯೊಬ್ಬರು ಅದೇ ಬೋಗಿಯನ್ನು ಪ್ರವೇಶಿಸಲು ಪ್ರಯತ್ನಿಸಿದರು. ಅವರು ಒಳಬರುವುದು ವೆಂಕಟಕೃಷ್ಣ ಅಯ್ಯಂಗಾರ್ಯರಿಗೆ ಇಷ್ಟವಾಗಲಿಲ್ಲ. ಸ್ಥಳವಿಲ್ಲವೆಂದು ಅವರು ಹಿಂದಿಯಲ್ಲಿ ಹೇಳಿದರು (ಜಗಾ ನಹಿ ಹೈ). ಆ ಗಣ್ಯ ವ್ಯಕ್ತಿ ಇವರ ಪ್ರತಿಭಟನೆಯನ್ನು ಲೆಕ್ಕಿಸದೆ ಒಳಗೆ ಪ್ರವೇಶಿಸಿ ತಮ್ಮ ಕೈಚೀಲವನ್ನು ಸೀಟಿನ ಮೇಲೆ ಇರಿಸಿದರು. ರೈಲು ಚಲಿಸತೊಡಗಿತು. ಒಳಗೆ ಪ್ರವೇಶಿಸಿದ್ದವರು ವೆಂಕಟಕೃಷ್ಣ ಅಯ್ಯಂಗಾರ್ಯರನ್ನು "ತಾವು ಯಾರು"? (ಆಪ್ ಲೋಗ್ ಕೌನ್) ಎಂದು ವಿನಯವಾಗಿ ಪ್ರಶ್ನಿಸಿದರು. "ನಾವು ಮನುಷ್ಯರು" ಎಂದು ಉತ್ತರಿಸಿದರು ಅಯ್ಯಂಗಾರ್ಯರು. ಬಹುಶಃ ಅಯ್ಯಂಗಾರ್ಯರು ನೀಡಬಯಸಿದ್ದ ಉತ್ತರಕ್ಕೆ ಸೂಕ್ತ ಪದಗಳು ಹಾಗೂ ಭಾಷೆ ಅವರಿಗೆ ಒದಗಿ ಬರಲಿಲ್ಲ. ಆ ಆಗಂತುಕ ವ್ಯಕ್ತಿ ನಗುತ್ತಾ ಹಿಂದಿಯಲ್ಲೇ ನುಡಿದರು, "ನೀವು ಮನುಷ್ಯರೆನ್ನುವುದು ಸ್ಪಷ್ಟವಾಗಿಯೇ ಕಂಡು ಬರುತ್ತಿದೆ. ಆದರೆ ನೀವು ಎಲ್ಲಿಗೆ ಪ್ರಯಾಣ ಮಾಡುತ್ತಿರುವಿರಿ, ನಿಮ್ಮ ವೃತ್ತಿ ಯಾವುದೆಂದು ನಾನು ತಿಳಿಯಬಯಸುತ್ತೇನೆ." "ನಾನು ಸಂಸ್ಕೃತ ಪ್ರೊಫೆಸರ್ ಹಾಗೂ ಇವರು ಸಂಗೀತಗಾರರು" (ಮೈ ಸಂಸ್ಕೃತ್ ವಿದ್ವಾನ್ - ಯೆ ಗಾನಾವಾಲ) ಎಂದರು ಅಯ್ಯಂಗಾರ್ಯರು. ಆಗ ಆ ವ್ಯಕ್ತಿ ಅಯ್ಯಂಗಾರ್ಯರೊಡನೆ ಸಂಸ್ಕೃತದಲ್ಲಿ ಮಾತನಾಡತೊಡಗಿದರು. ಅಯ್ಯಂಗಾರ್ಯರಿಗೆ ಸಂಸ್ಕೃತದಲ್ಲೂ ಸರಿಯಾಗಿ ಮಾತನಾಡಲು ಸಾಧ್ಯವಾಗಲಿಲ್ಲ. ಸಂಭಾಷಣೆ ಸಂಸ್ಕೃತಕ್ಕೆ ತಿರುಗುತ್ತಿದ್ದಂತೆಯೇ

ವಾಸುದೇವಾಚಾರ್ಯರ ಕಿವಿ ಚುರುಕಾಯಿತು. ಅಯ್ಯಂಗಾರ್ಯರ ಹಿಂದಿ ಕೈಕೊಟ್ಟಿತೆಂದೂ ಅವರ ಸಂಸ್ಕೃತವೂ ಅದಕ್ಕಿಂತ ಉತ್ತಮವಾಗಿರಲಿಲ್ಲ ವೆಂದೂ ಅವರು ಕಂಡುಕೊಂಡರು. ಆಗ ಸ್ವಯಂ ಸಂಸ್ಕೃತದಲ್ಲಿ ಒಳ್ಳೆಯ ಪಾಂಡಿತ್ಯಹೊಂದಿದ್ದ ಆಚಾರ್ಯರು ಅಯ್ಯಂಗಾರ್ಯರ ರಕ್ಷಣೆಗೆ ಮುಂದಾದರು. ಆಗಂತುಕ ಗಣ್ಯ ವ್ಯಕ್ತಿಯೊಡನೆ ಸಂಸ್ಕೃತ ಸಂಭಾಷಣೆಯನ್ನು ಆಚಾರ್ಯರೇ ವಹಿಸಿಕೊಂಡರು. ಜಲಂಧರ್‌ನಲ್ಲಿ ನಡೆಯಲಿರುವ ಅಖಿಲ ಭಾರತ ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಲು ಮೈಸೂರು ಮಹಾರಾಜರು ತಮ್ಮನ್ನು ನಿಯೋಜಿಸಿರುವರೆಂದೂ, ತಮಗೆ ಹಿಂದಿ ಮತ್ತು ಇಂಗ್ಲಿಷ್ ಬಾರದುದರಿಂದ ಭಾರತೀಯ ಸಂಗೀತದ ಕೆಲವು ಲಕ್ಷಣಗಳನ್ನು ಹಾಡಿ ತೋರಿಸಿ ಸಂಸ್ಕೃತದಲ್ಲಿ ಉಪನ್ಯಾಸ ನೀಡಿ ಮಹಾರಾಜರ ಆದೇಶವನ್ನು ಅನುಸರಿಸುವುದಾಗಿಯೂ ನುಡಿದರು. ವಾಸುದೇವಾಚಾರ್ಯರ ಸಂಸ್ಕೃತ ಹಾಗೂ ಅವರ ವಿನಯವಂತಿಕೆ ಇವು ಆ ವ್ಯಕ್ತಿಯನ್ನು ಸುಪ್ರೀತಗೊಳಿಸಿದವು.

ಅನಂತರ ವಾಸುದೇವಾಚಾರ್ಯರು ಆ ವ್ಯಕ್ತಿಯನ್ನು ಉದ್ದೇಶಿಸಿ ಒಳ್ಳೆಯ ಸಂಸ್ಕೃತದಲ್ಲಿ, "ಯಾರೊಡನೆ ಸಂಭಾಷಿಸುವ ಸುಯೋಗ ನನ್ನದಾಗಿದೆ ಎಂದು ತಿಳಿಯಲು ಕಾತರನಾಗಿದ್ದೇನೆ" ಎಂದರು. (ಅವರು ಉಪಯೋಗಿಸಿದ ಸಂಸ್ಕೃತ ಪದಗಳನ್ನು ಮರೆತಿದ್ದೇನೆ) ಆ ವ್ಯಕ್ತಿ ನುಡಿದರು, "ನನ್ನನ್ನು ಮಾಳವೀಯ ಎಂದು ಕರೆಯುತ್ತಾರೆ." 'ಮಾಳವೀಯ !' - ನಮ್ಮ ಅಯ್ಯಂಗಾರ್ಯರು ಬೆವರತೊಡಗಿದರು. ವಾಸುದೇವಾಚಾರ್ಯರಾದರೋ ಅತ್ಯಾನಂದದಿಂದ ಮೂಕರಾದರು. ಪಂಡಿತ ಮದನಮೋಹನ ಮಾಳವೀಯ!

ವಾಸುದೇವಾಚಾರ್ಯರು ಮೌನಿಯಾಗಿ ಆಲೋಚನಾಮಗ್ನರಾದರು. ಹತ್ತು ನಿಮಿಷಗಳ ನಿಶ್ಶಬ್ದತೆಯ ಅನಂತರ ಭಾರತದ ಇಂತಹ ರತ್ನದೊಂದಿಗೆ ಪ್ರಯಾಣ ಮಾಡುವ ಮತ್ತು ಸಂಭಾಷಣೆ ನಡೆಸುವ ಈ ಅನಿರೀಕ್ಷಿತ ಸಂತೋಷ ಒದಗಿಸಿದ ತಮ್ಮ ಸೌಭಾಗ್ಯದ ಬಗ್ಗೆ ಒಂದು ಶ್ಲೋಕ ರಚಿಸಿ ಹಾಡಿಬಿಟ್ಟರು. ಪಂಡಿತ್ ಮಾಳವೀಯರು ಬಹಳ ಸಂತೋಷಪಟ್ಟರು. ಜಲಂಧರ್‌ನಲ್ಲಿ ವಾಸುದೇವಾಚಾರ್ಯರಿಗೆ ಒಳ್ಳೆಯ ಸ್ವಾಗತ ಲಭಿಸುವಂತೆ ಅವರು ವ್ಯವಸ್ಥೆ ಮಾಡಿದರು. ವಾಸುದೇವಾಚಾರ್ಯರ ಸಂಸ್ಕೃತದ ಉಪನ್ಯಾಸಗಳಿಗೆ ಹಾಗೂ ಪ್ರಾತ್ಯಕ್ಷಿಕೆಗಳಿಗೆ ಸಂಗೀತಗಾರರು ಹಾಗೂ ಸಂಗೀತತಜ್ಞರಿಂದ ಒಳ್ಳೆಯ ಪ್ರಶಂಸೆ ಲಭಿಸಿತು.

ಮರಳಿ ಬರುವಾಗ ವಾಸುದೇವಾಚಾರ್ಯರು ಭೋಪಾಲ್‌ನಲ್ಲಿ ತಮ್ಮ ಪ್ರಯಾಣ ನಿಲ್ಲಿಸಿ ಭೋಪಾಲ್ ರಾಜ್ಯದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಾಗಿದ್ದ ನಮ್ಮ ತಂದೆಯವರೊಡನೆ ಒಂದು ತಿಂಗಳು ಉಳಿದರು. ಭೋಪಾಲಿನ ಮಹಾರಾಣಿ ಬೇಗಂ ಅವರನ್ನು ಪ್ರಶಂಸಿಸುವ ರಾಗಮಾಲಿಕೆಯೊಂದನ್ನು ಆಚಾರ್ಯರು ಸಂಸ್ಕೃತದಲ್ಲಿ ರಚಿಸಿದರು. ಅರಮನೆಯಲ್ಲಿ ಒಂದು ಕಛೇರಿ ಸೇರಿದಂತೆ ಒಟ್ಟು ಮೂರು ಸಂಗೀತ ಕಛೇರಿಗಳು ಏರ್ಪಟ್ಟವು. ಆಚಾರ್ಯರಿಗೆ ಒಳ್ಳೆಯ ಪ್ರಶಂಸೆ ಹಾಗೂ ಮನ್ನಣೆಗಳು ಲಭಿಸಿದವು. ಬೇಗಂ ಸಾಹೇಬರಿಗೆ ಶಾಸ್ತ್ರೀಯ ಹಿಂದೂಸ್ತಾನಿ ಸಂಗೀತದ ಪರಿಚಯವಿದ್ದು ತಬಲ ನುಡಿಸಬಲ್ಲವರಾಗಿದ್ದರು. ಭೋಪಾಲ್ ಲೇಡಿಸ್ ಕ್ಲಬ್‌ನಲ್ಲಿ ಹಾಗೂ ತಮ್ಮ ಅರಮನೆಯಲ್ಲಿ ನನ್ನ ಸೋದರಿಯ ವೀಣಾ ವಾದನಕ್ಕೆ ಪಕ್ಕವಾದ್ಯವಾಗಿ ಆಕೆ ತಬಲ ನುಡಿಸಿದ್ದರು.

೧೯೪೯ರಲ್ಲಿ ಮಧ್ಯಪ್ರದೇಶದ ಕೃಷಿ ಸೇವೆಯಿಂದ ನಾನು ನಿವೃತ್ತನಾಗಲಿದ್ದಾಗ ನನ್ನನ್ನು ಆ ರಾಜ್ಯದ ಕೃಷಿ ನಿರ್ದೇಶಕನಾಗಿ ನೇಮಕ ಮಾಡಬಹುದೆಂದು ಭಾರತ ಸರ್ಕಾರವು ಭೋಪಾಲ್ ರಾಜ್ಯಕ್ಕೆ ಸಲಹೆ ನೀಡಿತ್ತು. ಭೋಪಾಲಿನ ಒಬ್ಬ ಮಂತ್ರಿಗಳು, ಅಲ್ಲಿನ ಪ್ರಮುಖ ಅರಣ್ಯ ಸಂರಕ್ಷಣಾಧಿಕಾರಿಗಳಾದ ರಾವ್ ಬಹಾದ್ದೂರ್ ಪಿಳ್ಳೆಯವರು ನಾಗಪುರಕ್ಕೆ ಮಧ್ಯಪ್ರದೇಶದ ಕೃಷಿ ನಿರ್ದೇಶಕರೊಡನೆ ಸಮಾಲೋಚಿಸಲು ಬಂದಾಗ ನಮ್ಮ ಕೃಷಿ ನಿರ್ದೇಶಕರು ಮಂತ್ರಿಗಳಿಗೂ ಭೋಪಾಲಿನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೂ ನನ್ನ ಪರಿಚಯ ಮಾಡಿಕೊಟ್ಟರು. ಸಂದರ್ಶನದ ಉದ್ದೇಶವನ್ನು ವಿವರಿಸಿದ ಮಂತ್ರಿಗಳು ಮಧ್ಯಪ್ರದೇಶದಿಂದ ನಿವೃತ್ತನಾದ ಬಳಿಕ ಭೋಪಾಲಿನ ಸೇವೆಗೆ ಸೇರಿಕೊಳ್ಳಲು ನನಗೆ ಇಚ್ಛೆ ಇದೆಯೇ ಎಂದು ಕೇಳಿದರು. ಈ ಕರೆ ನನಗೆ ಅನಿರೀಕ್ಷಿತವಾಗಿದ್ದರೂ ನನಗೆ ಬಹಳ ಸಂತೋಷವಾಯಿತು. ನಮ್ಮ ತಂದೆಯವರು ಆ ರಾಜ್ಯದಲ್ಲಿ ಸೇವೆ ಸಲ್ಲಿಸಿದ್ದರಿಂದಲೂ, ನಾನು ಏಳು ವರ್ಷಗಳ ಸೇವೆ ಸಲ್ಲಿಸಿದ್ದ ಜಬ್ಬಲ್‌ಪುರ ಡಿವಿಜನ್‌ನ ಅಂಚಿನಲ್ಲೇ ಇದ್ದ ಭೋಪಾಲ್‌ನ ಕೃಷಿಯ ಬಗ್ಗೆ ನನಗೆ ಪರಿಚಯವಿದ್ದುದರಿಂದಲೂ ಈ ಆಹ್ವಾನವನ್ನು ಸಂತೋಷದಿಂದ ಒಪ್ಪಿಕೊಂಡೆ.

ನಮ್ಮ ತಂದೆಯವರ ಹೆಸರನ್ನು ನಾನು ಉಚ್ಚರಿಸಿದಾಗ ಅವರ ಆಸಕ್ತಿ ಕೆರಳಿತು. ೧೯೧೦ ರಲ್ಲಿ ನಮ್ಮ ತಂದೆಯವರು ಸೂಚಿಸಿದ್ದ ಕೆಲಸಗಳನ್ನು ಈಗ ಮಾಡಿಸುತ್ತಿರುವುದಾಗಿ ಅರಣ್ಯ ಸಂರಕ್ಷಣಾಧಿಕಾರಿಗಳು ಹೇಳಿದ್ದು ಕೇಳಿ ನನಗೆ ಬಹಳ ಸಂತೋಷವಾಯಿತು. "ನಿಮ್ಮ ತಂದೆ ರಾಮಸ್ವಾಮಿ ಅಯ್ಯರ್ ಅವರು ಭೋಪಾಲ್‌ನಲ್ಲಿದ್ದಾಗ ಮೈಸೂರಿನ ಸಂಗೀತಗಾರರೊಬ್ಬರು ಬೇಗಂ ಸಾಹಿಬ್ ಅವರನ್ನು ಕೊಂಡಾಡುವ ಸಂಸ್ಕೃತದ ಕೃತಿಗಳನ್ನು ರಚಿಸಿದ್ದರೆಂದು ಈಗಲೂ ಇರುವ ಒಬ್ಬ ಹಿರಿಯ ಮಂತ್ರಿಗಳು ಹೇಳುತ್ತಿದ್ದರು. ಆ ಸಂಗೀತಗಾರರು ಇನ್ನೂ ಇದ್ದಾರೆಯೇ?" ಎಂದು ಪಿಳ್ಳೆಯವರು ನನ್ನನ್ನು ಕೇಳಿದರು. ನನಗೆ ರೋಮಾಂಚನವಾಯಿತು. ವಾಸುದೇವಾಚಾರ್ಯರ ಕೃತಿಗಳನ್ನು ನೆನಪಿಸಿಕೊಳ್ಳುವ, ನಮ್ಮ ತಂದೆಯವರ ಕಾಲದ ಮಂತ್ರಿಗಳೊಬ್ಬರು ಭೋಪಾಲ್‌ನಲ್ಲಿ ಈಗಲೂ ಇದ್ದಾರೆ ಎಂದು ತಿಳಿದು ನನಗೆ ಎಷ್ಟೊಂದು ಸಂತೋಷವಾಯಿತು! ಅವರು ಉಲ್ಲೇಖಿಸುತ್ತಿದ್ದ ಸಂಗೀತಗಾರರು ಪ್ರಖ್ಯಾತರಾದ ವಿದ್ವಾನ್ ವಾಸುದೇವಾಚಾರ್ಯರೆಂದೂ ಅವರು ಈಗಲೂ ದೃಢಕಾಯರಾಗಿದ್ದು

ಸಂಗೀತ ಸೇವೆಗಾಗಿ ರಾಷ್ಟ್ರಾಧ್ಯಕ್ಷರ ಪ್ರಶಸ್ತಿಯ ಪಟ್ಟಿಯಲ್ಲಿದ್ದಾರೆಂದೂ ತಿಳಿಸಿದೆ. ರಾಮಸ್ವಾಮಿ ಅಯ್ಯರ್ ಅವರ ಪುತ್ರನ ಪ್ರಣಾಮಗಳನ್ನು ಆ ಹಿರಿಯ ಮಂತ್ರಿಗಳಿಗೆ ಸಲ್ಲಿಸಬೇಕೆಂದೂ, ದೇವರ ಅನುಗ್ರಹವಿದ್ದಲ್ಲಿ ನಾನು ಭೋಪಾಲ್‌ನ ಸೇವೆಗೆ ಸೇರಿದ ಮೇಲೆ ನಮ್ಮ ಹಿರಿಯ ಸಂಗೀತಗಾರರನ್ನು ಮತ್ತೆ ಭೋಪಾಲ್‌ಗೆ ಕರೆತರಲು ಪ್ರಯತ್ನಿಸುವೆ ನೆಂದು ಅವರಿಗೆ ತಿಳಿಸಬೇಕೆಂದೂ ನಾನು ಅವರಿಗೆ ಕೋರಿದೆ. ಈ ಸಂಗತಿಯನ್ನು ವಿಶೇಷ ಅಭಿಮಾನದಿಂದ ನಾನು ವಿದ್ವಾನ್ ವಾಸುದೇವಾಚಾರ್ಯರಿಗೆ ತಿಳಿಸಿದೆ. ಅವರಿಗೆ ಬಹಳ ಸಂತೋಷವಾಯಿತು. ಇದಾದ ಸ್ವಲ್ಪ ಸಮಯದಲ್ಲೇ ರಾಜ್ಯಗಳ ಸಮನ್ವಯೀಕರಣ ನಡೆದು ನಾನು ಸೇವಾ ನಿವೃತ್ತಿಯ ವಯಸ್ಸನ್ನು ಮುಟ್ಟಿದ ಮೇಲೂ ಮಧ್ಯಪ್ರದೇಶ ಸರ್ಕಾರ ನನ್ನನ್ನು ಸೇವೆಯಲ್ಲಿ ಉಳಿಸಿಕೊಂಡಿತು. ಭೋಪಾಲ್ ರಾಜ್ಯವೇ ಮಧ್ಯಪ್ರದೇಶದ ಒಂದು ಭಾಗವಾಗಿ ಬಿಟ್ಟಿದ್ದರಿಂದ ಭೋಪಾಲ್‌ನ ಸೇವೆಗೆ ಸೇರಿಕೊಳ್ಳುವ ಅವಕಾಶ ನನಗೆ ಲಭಿಸಲಿಲ್ಲ. ಅಡ್ಯಾರ್‌ನ ಕಲಾಕ್ಷೇತ್ರದಲ್ಲಿ ಆಚಾರ್ಯರ ಕೊನೆಯ ದಿನಗಳು ಬಹಳ ನೆಮ್ಮದಿಯಿಂದಿದ್ದವು. ಅಡ್ಯಾರ್‌ನಲ್ಲಿ ವಾಸುದೇವಾ ಚಾರ್ಯರನ್ನು ಅವರದೇ ಮಗಳಂತೆ ನೋಡಿಕೊಂಡ ಶ್ರೀಮತಿ ರುಕ್ಮಿಣಿ ದೇವಿಯವರಿಗೆ ಆಚಾರ್ಯರೂ ಅವರ ಎಲ್ಲ ಸ್ನೇಹಿತರೂ ಅಭಿಮಾನಿಗಳೂ ಋಣಿಯಾಗಿರಬೇಕು. ನಾನು ಮೈಸೂರಿಗೆ ಹೋದಾಗಲೆಲ್ಲ ನಮ್ಮ ಕುಟುಂಬದ ಗುರುಗಳನ್ನು ಭೇಟಿ ಮಾಡಿ ಅವರ ಆಶೀರ್ವಾದ ಸ್ವೀಕರಿಸುತ್ತಿದ್ದೆ. ನನ್ನ ನವಗ್ರಹ ರಾಗಮಾಲಿಕಾ ಹಾಗೂ ಇನ್ನಿತರ ಕೃತಿಗಳನ್ನು ಅವರು ಬಹುವಾಗಿ ಮೆಚ್ಚಿಕೊಂಡಿದ್ದರು. ಆ ಹಿರಿಯ ಚೇತನಕ್ಕೆ ಶಾಂತಿ ಲಭಿಸಲಿ.

೯. ವಿದ್ವಾನ್ ಸೋಸಲೆ ರಾಮದಾಸ್

ಬ್ರಹ್ಮರ್ಷಿ ಸೋಸಲೆ ರಾಮದಾಸರು ೧೯೦೬ ರಲ್ಲಿ ಚಿತ್ರದುರ್ಗಕ್ಕೆ ಬಂದು ಆರು ತಿಂಗಳಿಗೂ ಹೆಚ್ಚು ಕಾಲ ನಮ್ಮೊಡನೆ ಇದ್ದರು. ಬೆಳ್ಳಗಿನ, ಸುಂದರ ದೇಹಾಕೃತಿಯ, ಎತ್ತರದ ಶ್ರುತಿಯ, ಮಧುರ ಧ್ವನಿಯ, ಅವರ ಹರಿಕಥಾ ಕಾರ್ಯಕ್ರಮಗಳು ಬಹಳ ಆಕರ್ಷಕವಾಗಿದ್ದವು. ಉಪಕಥೆಗಳನ್ನು ಮಧ್ಯೆ ಮಧ್ಯೆ ಸೇರಿಸುತ್ತಾ ಅವರು ನಿರೂಪಿಸುತ್ತಿದ್ದ ರೀತಿ, ವಿವಿಧ ಭಾಷೆಗಳಿಂದ ಅವರು ಆಯ್ದುಕೊಳ್ಳುತ್ತಿದ್ದ ಉಲ್ಲೇಖಗಳು, ಅವರ ಜಾಣ್ಮೆ, ಇವೆಲ್ಲಾ ಪ್ರಶಂಸಾರ್ಹವಾಗಿದ್ದವು. ಸೋಸಲೆ ರಾಮದಾಸರು ಬಹಳ ಒಳ್ಳೆಯ ಮೃದಂಗವಾದಕರೂ ಖಂಜಿರಾ ವಾದಕರೂ ಆಗಿದ್ದರು.

ಅವರ ಸಂಗೀತದ ಮಟ್ಟಕ್ಕೆ ಸೂಕ್ತವಾದ ಒಳ್ಳೆಯ ಪಿಟೀಲು ವಾದಕರ ಆವಶ್ಯಕತೆ ಇತ್ತು. ಮದರಾಸಿನ ಯಾರೊಂದಿಗೋ ನಮ್ಮ ತಂದೆಯವರು ಪತ್ರವ್ಯವಹಾರ ನಡೆಸಿ ಚೆಲ್ಲಯ್ಯ ಎನ್ನುವ ಒಬ್ಬ ಒಳ್ಳೆಯ ಪಿಟೀಲುವಾದಕರನ್ನು ಕರೆಸಿದರು. ನಾವು ವಾಸಿಸುತ್ತಿದ್ದ ಜಿಲ್ಲಾ ಅರಣ್ಯಾಧಿಕಾರಿಗಳ ನಿವಾಸದಲ್ಲಿ ವಿಶಾಲವಾದ ಹಾಲ್ ಹಾಗೂ ವಿಸ್ತಾರವಾದ ವರಾಂಡ ಇದ್ದುದರಿಂದ ನಮ್ಮ ತಂದೆಯವರು ಊರಿನಲ್ಲಿ ಇದ್ದಾಗ ತಿಂಗಳಿಗೆ ಎರಡು ಮೂರು ಸಲ ನಮ್ಮ ಮನೆಯಲ್ಲಿ ಹರಿಕಥಾ ಕಾರ್ಯಕ್ರಮ ನಡೆಯುತ್ತಿತ್ತು.

ಚೆಲ್ಲಯ್ಯ ಒಬ್ಬ ಉತ್ತಮ ಪಿಟೀಲು ವಾದಕರಾಗಿದ್ದರು. ಪ್ರತಿನಿತ್ಯ ಬೆಳಗ್ಗೆ ಐದು ಗಂಟೆಗೆ ಎದ್ದು ಏಳು, ಎಂಟು ಗಂಟೆಯವರೆಗೆ ಪಿಟೀಲು ನುಡಿಸುತ್ತಿದ್ದರು ಅವರು. ನಮಗೆಲ್ಲಾ ಎಂತಹ ಔತಣ! ಪೂಜೆ, ಭೋಜನಗಳ ಅನಂತರ ಅವರು ಅಫೀಮು ಸೇವಿಸಿ ನಿದ್ರೆ ಹೋಗುತ್ತಿದ್ದರು. ಕೆಲವೊಮ್ಮೆ ರಾತ್ರಿ ಊಟಕ್ಕೂ ಅವರು ಏಳುತ್ತಿರಲಿಲ್ಲ. ಹರಿಕಥೆಯ ದಿನಗಳಲ್ಲಿ ಮಾತ್ರ ಅವರು ಯಾವುದೇ ಮಾದಕ ದ್ರವ್ಯ ಸ್ವೀಕರಿಸುತ್ತಿರಲಿಲ್ಲ. ಸಂಪೂರ್ಣವಾಗಿ ಮಾನಸಿಕ ಸುಸ್ಥಿತಿಯಲ್ಲಿದ್ದು ಬಹಳ ಖುಷಿಯಾಗಿರುತ್ತಿದ್ದರು. ಶುಭ್ರವಾದ ಬಿಳಿಯ ಪಂಚೆ, ಮತ್ತು ಶರಟು, ಹಾಗೂ ಮದರಾಸಿನ ಸಂಗೀತಗಾರರಂತೆ ಎಚ್ಚರಿಕೆಯಿಂದ ಇಸ್ತ್ರಿ ಮಾಡಿದ ಶಲ್ಯ ಧರಿಸುತ್ತಿದ್ದರು.

ನಮ್ಮ ತಂದೆಯವರಿಗೆ ಮೈಸೂರಿಗೆ ವರ್ಗವಾದ್ದರಿಂದ ಹರಿಕಥಾ ವಿದ್ವಾಂಸರನ್ನೂ, ಪಿಟೀಲು ವಾದಕರನ್ನೂ ಬೀಳ್ಕೊಡಲಾಯಿತು. ಚಿತ್ರದುರ್ಗದ ಜನತೆ ವಿದ್ವಾನ್ ರಾಮದಾಸ್ ಹಾಗೂ ವಿದ್ವಾನ್ ಚೆಲ್ಲಯ್ಯನವರಿಗೆ ಮುಕ್ತಹಸ್ತದ ಕೊಡುಗೆ ನೀಡಿತು.

ಸುಮಾರು ೧೯೪೦ರಲ್ಲಿ ಸೋಸಲೆ ರಾಮದಾಸರನ್ನು ನಾನು ಬಿಡಾರಂ ಕೃಷ್ಣಪ್ಪನವರ ರಾಮಮಂದಿರದಲ್ಲಿ ಭೇಟಿ ಮಾಡಿದೆ. ಬಹಳ ವಯಸ್ಸಾಗಿ ಅವರು ಸಂನ್ಯಾಸಿಯಂತಾಗಿದ್ದರು. ನನ್ನನ್ನು ನೋಡಿ ಬಹಳ ಸಂತೋಷಪಟ್ಟರು. ನಮ್ಮ ತಂದೆ ತಾಯಿಯರನ್ನೂ ಚಿತ್ರದುರ್ಗದಲ್ಲಿ ನಮ್ಮೊಡನಿದ್ದ ಇತರರನ್ನೂ ನೆನೆದುಕೊಂಡರು. ಅವರು ನಮ್ಮ ಮನೆಯಲ್ಲಿದ್ದಾಗ ನಡೆದ "ವೀಣೆಯಲ್ಲಿ ನಾಗಪ್ಪ" ಪ್ರಕರಣವನ್ನು ವಿಶೇಷವಾಗಿ ಜ್ಞಾಪಿಸಿಕೊಂಡರು. ಈ ವಿಷಯವನ್ನು ನಾನು ಮುಂದೆ ಪ್ರತ್ಯೇಕವಾಗಿ ವಿವರಿಸಿದ್ದೇನೆ.

ರಾಮದಾಸರು ಹಾಗೂ ನಮ್ಮ ಭಾವ ಶ್ರೀ ಪಿ. ವೆಂಕಟರಾಯರು ಒಮ್ಮೆ ಚಿತ್ರದುರ್ಗದ ಸಮೀಪವಿರುವ ಪ್ರಖ್ಯಾತ ಬೆಟ್ಟಗಳಲ್ಲಿಗೆ ಕುದುರೆಯ ಮೇಲೆ ಹೋಗಿದ್ದರು. ಕತ್ತಲು ಕವಿದು ಅವರಿಗೆ ಹಿಂದಿರುಗಲು ರಸ್ತೆ ತಿಳಿಯಲಿಲ್ಲ. ಹುಲಿ, ಚಿರತೆಗಳಿಂದ ತುಂಬಿದ ಕಾಡಿನ ಚಿಕ್ಕ ಒಂದು ದೇವಾಲಯದಲ್ಲಿ ಅವರು ರಾತ್ರಿ ಕಳೆಯ ಬೇಕಾಯಿತು. ರಾತ್ರಿಯೆಲ್ಲ ನಾವೆಲ್ಲರೂ ಬಹಳ ಚಿಂತೆ ಮಾಡುತ್ತಿದ್ದು ಅವರ ಯೋಗಕ್ಷೇಮಕ್ಕಾಗಿ ಭಗವಂತನಲ್ಲಿ ಪ್ರಾರ್ಥಿಸಿದೆವು.

೧೦. ವೀಣೆಯಲ್ಲಿ ನಾಗಪ್ಪ

ಒಂದು ದಿನ ಬೆಳಗ್ಗೆ ಮಹಾವೈದ್ಯನಾಥ ಅಯ್ಯರ್ ರಚಿಸಿದ ಎಪ್ಪತ್ತೆರಡು ಮೇಳಕರ್ತ ರಾಗಮಾಲಿಕೆಯನ್ನು ನಮ್ಮ ಅಕ್ಕ ವೀಣೆಯಲ್ಲಿ ನುಡಿಸುತ್ತಿದ್ದುದ್ದನ್ನು ನಮ್ಮ ತಂದೆಯವರು ಕೇಳುತ್ತಾ ಕುಳಿತಿದ್ದರು. ಮಹಾವೈದ್ಯನಾಥ ಅಯ್ಯರ್ ಅವರ ಶಿಷ್ಯರಾದ ನಮ್ಮ ಗುರು ವಿದ್ವಾನ್ ವಿಶ್ವನಾಥಶಾಸ್ತ್ರಿಗಳು ಇದನ್ನು ನಮ್ಮ ಅಕ್ಕನಿಗೆ ಪಾಠಮಾಡಿದ್ದರು. ನಾವು ಇದೊಂದು ಅಮೂಲ್ಯ ಸಂಪತ್ತೆಂದು ಭಾವಿಸಿದ್ದೆವು. ಆಗಲೇ ಹೇಳಿರುವಂತೆ ಈ ರಾಗಮಾಲಿಕೆಯನ್ನು ಸಂಪೂರ್ಣವಾಗಿ ನುಡಿಸಲು ನಾಲ್ಕು ಗಂಟೆಗಳ ಕಾಲ ಬೇಕಾಗುತ್ತಿತ್ತು. ಇಂದು ವಿದ್ವಾಂಸರು ಕೂಡ ಈ ಪ್ರಖ್ಯಾತ ರಾಗಮಾಲಿಕೆಯ ಅಭ್ಯಾಸ ಮಾಡದಿರುವುದು ಶೋಚನೀಯ. ವಿವಾದಿ ದೋಷಯುಕ್ತವೆಂದು ಪರಿಗಣಿಸಲಾದ ರಾಗಗಳ ಸೊಬಗನ್ನು ವೀಣೆಯಲ್ಲಿ ನುಡಿಸಿದಾಗ ಮಾತ್ರ ಕೇಳಿ ಆನಂದಿಸಬಹುದು. ವೀಣಾವಾದನದ ಪರಿಶ್ರಮಕ್ಕಾಗಿ ವಿದ್ವತ್ ಡಿಗ್ರಿ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳಿಗೆ ಎಪ್ಪತ್ತೆರಡು ಮೇಳಕರ್ತ ರಾಗಮಾಲಿಕೆಯನ್ನು ಕಡ್ಡಾಯ ಮಾಡಲೇಬೇಕು.

ನಮ್ಮ ಅಕ್ಕ ರಾಗಮಾಲಿಕೆಯನ್ನು ನುಡಿಸುತ್ತಿದ್ದಾಗ ಮೆತ್ತಗಿನ ಏನೋ ಎಡಗಡೆಯ ಬುರುಡೆಯ ಒಳಗೆ ತನ್ನ ತೊಡೆಯ ಮೇಲೆ ಹರಿದಂತೆ ಅವಳಿಗೆ ಭಾಸವಾಯಿತು. ಗಾಬರಿಯಾದ ಅವಳು ಇದನ್ನು ನಮ್ಮ ತಂದೆಯವರಿಗೆ ತಿಳಿಸಿದಳು. ತಂದೆ ಅವಳನ್ನು ಗದರಿ ಮುಂದುವರಿಸಲು ಹೇಳಿದರು. ಅವಳಿಗೆ ಮತ್ತೆ ಅದೇ ಅನುಭವ ಉಂಟಾಗಿ ವೀಣೆ ನುಡಿಸುವುದು ಅಸಾಧ್ಯವೆನಿಸಿ ಆತುರಾತುರವಾಗಿ ವೀಣೆಯನ್ನು ಕೆಳಕ್ಕೆ ಇಟ್ಟುಬಿಟ್ಟಳು.

ಅಷ್ಟು ಹೊತ್ತಿಗೆ ನನ್ನ ಅಕ್ಕನ ವೀಣಾವಾದನವನ್ನು ಕೇಳಲು ಪಿಟೀಲು ವಾದಕರಾದ ಚೆಲ್ಲಯ್ಯ ಆಗಮಿಸಿದ್ದರು. ಅವರೆಂದರು, "ಸ್ವಾಮಿ, ಯಾರು ಬಲ್ಲರು ! ಸುಬ್ರಹ್ಮಣ್ಯಸ್ವಾಮಿಯೇ ಸೋರೆ ಬುರುಡೆಯಲ್ಲಿ ಇರಬಹುದು!" ಅವರು ಎಲ್ಲರನ್ನೂ ಕೋಣೆಯಿಂದ ಹೊರಗೆ ಹೋಗಲು ಹೇಳಿದರು. ನಂತರ ಆತ ಮೆತ್ತಗೆ ವೀಣೆಯನ್ನು ಮೇಲಕ್ಕೆ ಎತ್ತಿದರು. ಸೋರೆಬುರುಡೆಯ ಕೆಳಗಿನಿಂದ ನಾಗರಹಾವು ಹೊರಬರಲು ಪ್ರಯತ್ನಿಸಿತು ; ಅದರ ತಲೆ ಹೊರಗೆ ಇಣುಕಿತು. ಆ ಸರೀಸೃಪ ಹೊರಗೆ ಬಾರದಂತೆ ಚೆಲ್ಲಯ್ಯ ತಕ್ಷಣ ವೀಣೆಯನ್ನು ನೆಲಕ್ಕೆ ಇಟ್ಟರು. ಫಾರೆಸ್ಟ್ ಲಾಡ್ಜ್ ಅಂತ ಕರೆಯುತ್ತಿದ್ದ ಆ ನಿವಾಸ ಊರಿನಿಂದ ದೂರದಲ್ಲಿ ಕೃಷಿ ಜಮೀನಿನ ನಡುವೆ ಇತ್ತು. ಮನೆಯ ಕಾಪೌಂಡಿನಲ್ಲೇ ಅನೇಕ ಪೊದೆಗಳು, ಹುತ್ತಗಳು ಇದ್ದವು. ಈ ಹಿಂದೆಯೂ ಬಂಗಲೆಯ ಒಳಗೆ ಹಾಗೂ ಹೊರಗೆ ಅನೇಕ ನಾಗರಹಾವುಗಳು ಕೊಲ್ಲಲ್ಪಟ್ಟಿದ್ದವು. ಹುಳ-ಹುಪ್ಪಟೆ,ಇಲಿ, ಸರೀಸೃಪಗಳು ಒಳಗೆ ಹೋಗದಿರಲೆಂದೇ ಹೊದಿಸಿ ಕಟ್ಟಬೇಕಾದ ಚೀಲವನ್ನು ಅಂದು ವೀಣೆಯ ಸೋರೆಬುರುಡೆಗೆ ಕಟ್ಟಿರಲಿಲ್ಲ. ಪಕ್ಕದ ಕೋಣೆಯಲ್ಲಿ ಎರಡು ಮೂರು ವೀಣೆಗಳನ್ನು ಮಲಗಿದ ಭಂಗಿಯಲ್ಲಿ ಇರಿಸಲಾಗಿತ್ತು. ಗೋಡೆಯಲ್ಲಿ ನೆಲದಂಚಿಗೆ ನೀರು ಹೋಗಲೆಂದು ಮಾಡಿದ ತೂತುಗಳು ಇದ್ದವು. ಗಾಢವಾದ ಸುವಾಸನೆಯಿಂದ ನಾಗರಹಾವುಗಳನ್ನು ಆಕರ್ಷಿಸುತ್ತದೆ ಎಂದು ಹೇಳಲಾದ ತಾಳೆ ಮೋತೆಯನ್ನು ಕೋಣೆಯಲ್ಲಿ ಇರಸಲಾಗಿತ್ತು. ಗೋಡೆಯ ತೂತಿನಿಂದ ಕೋಣೆಯ ಒಳಕ್ಕೆ ಬಂದ ನಾಗರಹಾವು ಸೋರೆಬುರುಡೆಯ ಕೆಳಭಾಗದಲ್ಲಿ ತೆರೆದಂತೆಯೇ ಇದ್ದ ಬಾಯಿಯಿಂದ ಒಳಹೊಕ್ಕು ಸೋರೆಬುರುಡೆಯ ಒಳಗೆ ಅವಿತುಕೊಂಡಿತ್ತು. ನಮ್ಮ ಅಕ್ಕ ವೀಣೆ ನುಡಿಸತೊಡಗಿದಾಗ ಹೆದರಿಕೆಯಿಂದಲೂ ಹಿತವಾದ ಸಂಗೀತದಿಂದಲೂ ನಾಗರಹಾವು ಹೊರಗೆ ಬರಲು ಪ್ರಯತ್ನಿಸದೆ ಒಳಗೆ ಸುತ್ತಿಕೊಂಡು ಮಲಗಿತ್ತು (ಹಾವಿಗೆ ಹೊರ ಕಿವಿ ಇಲ್ಲವೆಂಬ ನಂಬಿಕೆಯಿದೆ. ಸಂಗೀತವನ್ನಾಗಲೀ, ಇನ್ನಾವುದೇ ನಾದವನ್ನಾಗಲೀ ಅದು ಉಂಟುಮಾಡುವ ಕಂಪನಗಳಿಂದ ಹಾವು ಅನುಭವಿಸುತ್ತದಂತೆ. ಪ್ರಾಣಿಶಾಸ್ತ್ರಜ್ಞರು ಈ ವಿಷಯವನ್ನು ವಿವರಿಸಬಲ್ಲರು.) ನಮ್ಮ ಅಕ್ಕನಿಗೆ ಮೃದುವಾದ್ದೇನೋ ಸೋರೆಬುರುಡೆಯಲ್ಲಿ ಚಲಿಸುವ ಅನುಭವವಾಗಿ ಅವಳು ವೀಣೆಯನ್ನು ಕೆಳಕ್ಕೆ ಇಟ್ಟುಬಿಟ್ಟಳು; ಅವಳ ತೊಡೆಯನ್ನು ಕಚ್ಚಿ ಹೊರಬರುವ ಪ್ರಯತ್ನ ಮಾಡದೆ ನಾಗರಹಾವು ಸೋರೆಬುರುಡೆಯ ಒಳಗೇ ಸುತ್ತಿಕೊಂಡು ಇದ್ದುದು ಭಗವಂತನ ದಯೆಯೇ ಸರಿ.

ಸೋರೆಬರುಡೆಯ ಒಳಗೆ ನಾಗರಹಾವು ಅಡಗಿದ್ದುದು ತಿಳಿದೊಡನೆಯೇ ಚೆಲ್ಲಯ್ಯ ಕೂಗಿದರು, "ಸ್ವಾಮಿ, ನಾನು ಅನುಮಾನಿಸಿದಂತೆಯೇ ಸೋರೆಬುರುಡೆ ಒಳಗೆ ಸುಬ್ರಹ್ಮಣ್ಯಸ್ವಾಮಿ ಇದ್ದಾನೆ. ಈ ವಿಷಯವನ್ನು ನನಗೆ ಬಿಟ್ಟು ಬಿಡಿ. ನಾನು ಎಲ್ಲವನ್ನೂ ನೋಡಿ ಸರಿಪಡಿಸುತ್ತೇನೆ." ಕೆಲವು ಕಂಬಳಿಗಳನ್ನು ತರುವಂತೆ ಅವರು ಆಳುಗಳಿಗೆ ಕೂಗಿ ಹೇಳಿದರು. ಮೊದಲು ಅದರ ತೂತನ್ನು ಕೆಳಗಿನಿಂದ ಮುಚ್ಚುವಂತೆ ಸೋರೆಬುರುಡೆಯ ಕೆಳಗಿನಿಂದ ಒಂದು ಕಂಬಳಿಯನ್ನು ಹುಷಾರಾಗಿ ಸೋರೆಬುರುಡೆಯ ತಳಕ್ಕೆ ಸುತ್ತಲಾಯಿತು. ಅನಂತರ ಇಡೀ ಸೋರೆಬುರುಡೆಯನ್ನು ಒಂದು ಕಂಬಳಿಯಿಂದ ಸುತ್ತಿ ವೀಣೆಯನ್ನು ಎತ್ತಿದಾಗಲೂ ನಾಗರಹಾವು ಹೊರಬರಲು ಸಾಧ್ಯವಾಗದಂತೆ ಆ ಕಂಬಳಿಯನ್ನು ಭದ್ರವಾಗಿ ಕಟ್ಟಲಾಯಿತು.

ಫಾರೆಸ್ಟ್ ಲಾಡ್ಜ್‌ನಿಂದ ಸುಮಾರು ಅರ್ಧ ಮೈಲು ದೂರಕ್ಕೆ ವೀಣೆಯನ್ನು ಕೊಂಡೊಯ್ಯಲಾಯಿತು. ಸುಬ್ರಹ್ಮಣ್ಯಸ್ವಾಮಿಗೆ ಚೆಲ್ಲಯ್ಯ ಕರ್ಪೂರದಾರತಿ ಎತ್ತಿದರು. ನಾವೆಲ್ಲ ಸುರಕ್ಷಿತ ಅಂತರದಲ್ಲಿ ನಿಂತಿದ್ದೆವು. ನಾಗರಹಾವೇನಾದರೂ ನಮ್ಮೆಡೆಗೆ ಬಂದರೆ ನಮ್ಮನ್ನು ಕಾಪಾಡಲು ಸೇವಕರು ಲಾಟಿ ಹಿಡಿದು ಸಿದ್ಧವಾಗಿದ್ದರು. ಆದರೆ ನಾಗರಹಾವನ್ನು ಕೊಲ್ಲುವುದಕ್ಕೆ ಚೆಲ್ಲಯ್ಯ ಒಪ್ಪಲಿಲ್ಲ. ಹುಷಾರಾಗಿ

ಕಂಬಳಿಯನ್ನೆತ್ತಿ ಕೊಕ್ಕೆಯಿದ್ದ ಉದ್ದವಾದ ಒಂದು ಬೊಂಬಿನಿಂದ ಸೋರೆಬುರುಡೆಯ ಬಾಯನ್ನು ಮುಚ್ಚಿದ್ದ ಕಂಬಳಿಯನ್ನು ಸರಿಸಲಾಯಿತು. ತಪ್ಪಿಸಿಕೊಳ್ಳುವ ಅವಕಾಶಕ್ಕಾಗಿ ಕಾದಿದ್ದ ದೊಡ್ಡ ಸರ್ಪ ಏಕಾಏಕಿ ಸೋರೆಬುರುಡೆಯ ಒಳಗಿನಿಂದ ಹೊರಕ್ಕೆ ಚಿಮ್ಮಿತು. ನಾಗರಹಾವು ಸುಮಾರು ನೂರು ಗಜಗಳವರೆಗೆ ಸರಸರನೆ ಹೋದದ್ದನ್ನು ನಾವೆಲ್ಲ ನೋಡಿದೆವು.

ಅಂದು ಸಂಜೆ ಹರಿಕಥೆ ಇತ್ತು. "ವೀಣೆಯಲ್ಲಿ ನಾಗಪ್ಪ" ಪ್ರಸಂಗ ಆಗಲೇ ಊರಿನಲ್ಲೆಲ್ಲಾ ಹರಡಿತ್ತು. ನಮ್ಮ ಗೆಳೆಯರೆಲ್ಲಾ ಬಂದು ದೈವಕೃಪೆಯಿಂದ ನಿಶ್ಚಿತ ಸಾವಿನಿಂದ ಪಾರಾಗಿದ್ದಕ್ಕಾಗಿ ನಮ್ಮ ಅಕ್ಕನನ್ನು ಅಭಿನಂದಿಸಿದರು. ಮುನ್ನೆಚ್ಚರಿಕೆ ಕ್ರಮವಾಗಿ ಸೋರೆಬುರುಡೆಗೆ ಯಾವಾಗಲೂ ಗೌಸು ಹೊದಿಸಿರಬೇಕೆಂದೂ ನೀರು ಹೋಗಲೆಂದಿರುವ ಗೋಡೆಯ ತೂತುಗಳಿಗೆ ಬಿರಟೆ ಸಿಕ್ಕಿಸಿರಬೇಕೆಂದೂ ತಿಳಿಹೇಳಲು ಯಾರೂ ಮರೆಯಲಿಲ್ಲ.

ಭಗವಂತನಿಗೆ ಅನೇಕ ಧನ್ಯವಾದಗಳು. ಬ್ರಹ್ಮರ್ಷಿ ಸೋಸಲೆ ರಾಮದಾಸರು ತಮ್ಮ ಹರಿಕಥೆಯ ಮೊದಲ ಭಾಗದಲ್ಲಿ ಅಂದು ಮುಂಜಾವಿನ ಘಟನೆಯನ್ನು ಅತ್ಯಂತ ಕಲಾತ್ಮಕವಾಗಿ ಪರಿಚಯಿಸಿ ಅದನ್ನು ಎಷ್ಟು ಚೆನ್ನಾಗಿ ವಿವರಿಸಿದರೆಂದರೆ ಅಂದು ಈ ಕಥೆ "ಸುಬ್ರಹ್ಮಣ್ಯ ಸ್ವಾಮಿಯ ದರ್ಶನ"ವಾಗಿ ಮಾರ್ಪಟ್ಟಿತು. "ವೀಣೆಯಲ್ಲಿ ನಾಗಪ್ಪ" ಬಹುಕಾಲದವರೆಗೆ ಚಿತ್ರದುರ್ಗದ ಜನತೆಯ ನೆನಪಿನಲ್ಲಿ ಉಳಿಯಿತು. ನಾಲ್ಕು ದಶಕಗಳ ಅನಂತರ ಬಿಡಾರಂ ಕೃಷ್ಣಪ್ಪನವರ ಮಂದಿರದಲ್ಲಿ ಭೇಟಿಯಾದಾಗ ಸೋಸಲೆ ರಾಮದಾಸರೇ ನನಗಿದನ್ನು ನೆನಪು ಮಾಡಿಕೊಟ್ಟರು.

೧೧. ಮೈಸೂರಿನ ವಿದ್ವಾನ್ ವೀಣೆ ಶೇಷಣ್ಣ

ನಮ್ಮ ತಂದೆ ಬಿ. ರಾಮಸ್ವಾಮಿ ಅಯ್ಯರ್ ಅವರು ಸಂಕೇತಿ ಜನಾಂಗದಲ್ಲೇ ಮೊದಲು ಬಿ. ಎ., ಪಾಸುಮಾಡಿದವರಾದ್ದರಿಂದ ಅವರನ್ನು 'ಬಿ. ಎ. ರಾಮಸ್ವಾಮಯ್ಯ' ಎಂದೇ ಕರೆಯುವುದು ವಾಡಿಕೆಯಾಗಿತ್ತು. ಸಂಗೀತದ ಬಗ್ಗೆ ಅವರಿಗೆ ಇದ್ದ ಪ್ರೀತಿ, ಸಂಗೀತಕ್ಕೆ ಅವರು ನೀಡುತ್ತಿದ್ದ ಪ್ರೋತ್ಸಾಹಗಳಿಂದಾಗಿ ಅವರ ಕಾಲದ ಎಲ್ಲಾ ಸಂಗೀತಗಾರರಿಗೂ ಅವರ ಪರಿಚಯ ಮತ್ತು ಅವರ ಬಗ್ಗೆ ಗೌರವಾದರಗಳು ಇದ್ದವು. ಅವರು ಪಾಲ್ಗೊಳ್ಳದೆ ಯಾವ ಸಂಗೀತ ಗೋಷ್ಠಿಗಳೂ ನಡೆಯುತ್ತಿರಲಿಲ್ಲ. ಸಂಗೀತ ಕಾರ್ಯಕ್ರಮಕ್ಕಾಗಿ ಅವರು ತಮ್ಮ ಪ್ರವಾಸವನ್ನು ಮುಂದೂಡಬೇಕಾಗುತ್ತಿತ್ತು. ಇಲ್ಲವೇ ಅವರಿಗಾಗಿ ಸಂಗೀತದ ಕಾರ್ಯಕ್ರಮವೇ ಮುಂದೂಡಲ್ಪಡುತ್ತಿತ್ತು.

ವೀಣೆ ಶೇಷಣ್ಣನವರು ನಮ್ಮ ಅಕ್ಕನ ವೀಣಾವಾದನವನ್ನು ಕೇಳುತ್ತಿದ್ದರು ಹಾಗೂ ಆಶೀರ್ವದಿಸುತ್ತಿದ್ದರು. ೧೯೦೦ ರಲ್ಲಿ ನಾವು ಮಾಲೂರಿನಲ್ಲಿದ್ದಾಗ ಅವರು ಭೇಟಿ ನೀಡಿದ್ದು ನನಗೆ ನೆನಪಿನಲ್ಲಿದೆ. ನಾವು ಆಗ ರೈಲು ನಿಲ್ದಾಣದ ಸಮೀಪದ ಛತ್ರದಲ್ಲಿರುತ್ತಿದ್ದೆವು. ಕೋಲಾರದಲ್ಲಿ ಪ್ಲೇಗ್ ಇದ್ದುದರಿಂದ ನಾವು ಮಾಲೂರಿಗೆ ಬಂದಿದ್ದೆವು. ಅದೊಂದು ಸೆಖೆಗಾಲದ ಬೆಳುದಿಂಗಳ ರಾತ್ರಿ. ಆದ್ದರಿಂದ ನಾವೆಲ್ಲರೂ ಬಿಸಿಲ್ಮಚ್ಚಿನ ಮೇಲೆ ಸಂಗೀತ ಕಾರ್ಯಕ್ರಮಕ್ಕಾಗಿ ನೆರೆದಿದ್ದೆವು. ಎಂತಹ ರಸದೌತಣ! ನಮ್ಮ ಸಹೋದರಿ ನಮ್ಮ ಗುರುಗಳೊಂದಿಗೆ ನುಡಿಸಿದ ವೀಣಾವಾದನದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಅನಂತರ ಗುರುಗಳು ಒಬ್ಬರೇ ವೀಣೆ ನುಡಿಸಿದರು. ಅಂತಿಮವಾಗಿ ಎಲ್ಲರ ವಿನಯಪೂರ್ಣ ಕೋರಿಕೆ ಮೇರೆಗೆ ಶ್ರೇಷ್ಠ ವಿದ್ವಾಂಸರಾದ ಶೇಷಣ್ಣನವರು ನುಡಿಸಿದರು. ಅವರು ತಮ್ಮ ವೀಣೆಯನ್ನು ತಂದಿರಲಿಲ್ಲ. ನಮ್ಮ ಅಕ್ಕನ ವೀಣೆಯಲ್ಲೇ ನುಡಿಸಲು ಅವರು ಒಪ್ಪಿದರು. ವಾಸ್ತವವಾಗಿ ಅವರ ವೀಣೆಯಲ್ಲೇನೂ ವಿಶೇಷವಿರಲಿಲ್ಲ. ಇತರರ ಬಳಿ ಇನ್ನೂ ಉತ್ತಮ ವೀಣೆಗಳು ಇದ್ದುದುಂಟು. ಮುಖ್ಯವಾಗಿದ್ದುದು ಶೇಷಣ್ಣನವರೇ ಹೊರತು ವೀಣೆಯಲ್ಲ. ಅವರು ನಮ್ಮನ್ನು ಎರಡು ಗಂಟೆಗಳ ಕಾಲ ರಂಜಿಸಿದರು. ಎಂತಹ ರಜತ ಸ್ವರಗಳು! 'ಅವರ ಬೆರಳುಗಳನ್ನು ಗಮನಿಸು' 'ಆ ತಂತ್ರವನ್ನು ಪ್ರಯತ್ನಿಸು' ಮುಂತಾಗಿ ನಮ್ಮ ತಂದೆಯವರು ನನ್ನ ಅಕ್ಕನಿಗೆ ಪದೇ ಪದೇ ಹೇಳುತ್ತಿದ್ದರು.

೧೯೦೪ ರಲ್ಲಿ ಒಂದು ಬೇಸರದ ಸಂಗತಿ ನಡೆಯಿತು. ಬೆಂಗಳೂರಿನ ಸಂಸ್ಕೃತ ಕಾಲೇಜಿನ ಸಭಾಂಗಣದಲ್ಲಿ ಶೇಷಣ್ಣನವರ ಕಛೇರಿ ಏರ್ಪಟ್ಟಿತ್ತು. ಕೋಟೆಯ ಟಿಪ್ಪು ಸುಲ್ತಾನನ ಅರಮನೆಯ ಎದುರಿಗೆ ಸಂಸ್ಕೃತ ಕಾಲೇಜು ಇದ್ದಿತು. ಟಿಪ್ಪುಸುಲ್ತಾನನ ಅರಮನೆಯನ್ನು ಮಾಧ್ಯಮಿಕ ಶಾಲೆಯಾಗಿ ಬಳಸುತ್ತಿದ್ದು, ನಾನು ಅಲ್ಲೇ ವಿದ್ಯಾರ್ಥಿಯಾಗಿದ್ದೆ. ಕಾಲಕ್ರಮದಲ್ಲಿ ಸಂಸ್ಕೃತ ಕಾಲೇಜು ಕೆಡವಲ್ಪಟ್ಟು ಒಂದು ದೊಡ್ಡ ಪ್ರಸೂತಿ ಆಸ್ಪತ್ರೆಯ ಒಂದು ಭಾಗ ಹಳೆಯ ಸಂಸ್ಕೃತ ಕಾಲೇಜಿನ ಸ್ಥಳದಲ್ಲಿ ಕಟ್ಟಲ್ಪಟ್ಟಿದೆ.

ನಮ್ಮ ತಂದೆಯವರೂ, ನಮ್ಮ ಗುರು ವಿಶ್ವನಾಥಶಾಸ್ತ್ರಿಗಳೂ, ನಮ್ಮ ಅಕ್ಕ ಹಾಗೂ ನಮ್ಮ ಅಣ್ಣನವರೂ ಶೇಷಣ್ಣನವರ ಕಛೇರಿ ಕೇಳಲು ಹೋಗಿದ್ದರು. ಆ ಹಿರಿಯ ವಿದ್ವಾಂಸರು ಭೈರವಿ ರಾಗದ ಅಟ್ಟ ತಾಳದ ವರ್ಣ 'ವೀರಿ ಬೋಣಿ' ಯನ್ನು ನುಡಿಸಿ ಮುಗಿಸಿ ಮುಂದಿನ ವಾದನಕ್ಕಾಗಿ ಶ್ರುತಿ ಮಾಡಿಕೊಳ್ಳುತ್ತಿದ್ದರು. ಆಗ ದರಿದ್ರನಂತೆ ಕಾಣುತ್ತಿದ್ದ ಮಧ್ಯ ವಯಸ್ಸಿನ ವ್ಯಕ್ತಿಯೊಬ್ಬರು ಶೇಷಣ್ಣನವರ ಮುಂದೆ ಹೋಗಿ ನಿಂತು ತೆಲುಗಿನಲ್ಲಿ ಕೇಳಿದರು 'ನಿಮಗೆ ವೈಣಿಕ ಶಿಖಾಮಣಿ ಎಂಬ ಬಿರುದು ಕೊಟ್ಟವರು ಯಾರು ಎಂದು ಕೇಳಬಹುದೆ?' ಎಲ್ಲರೂ

ದಿಙ್ಮೂಢರಾದರು ; ಅವನೊಬ್ಬ ಹುಚ್ಚನಿರಬೇಕು ಎನಿಸಿತು. ಅಲ್ಲೇ ಕುಳಿತಿದ್ದ ಉನ್ನತಾಧಿಕಾರಿಯೊಬ್ಬರು ಎದ್ದು ನಿಂತು 'ಮೈಸೂರಿನ ಶ್ರೀಮನ್ಮಹಾರಾಜರೇ ಆ ಬಿರುದು ನೀಡಿದ್ದಾರೆ' ಎಂದರು. ಆಗಂತುಕ ಇಷ್ಟಕ್ಕೆ ತೃಪ್ತನಾಗಿ ನಿರ್ಗಮಿಸಬಹುದೆಂದು ಅವರು ಭಾವಿಸಿದ್ದರು. ಆದರೆ ಆ ವ್ಯಕ್ತಿ ಹೋಗಲಿಲ್ಲ. ಮಹಾರಾಜರು ಎಲ್ಲ ವೀಣಾವಾದಕರ ವೀಣಾವಾದನವನ್ನೂ ಕೇಳಿ ಅನಂತರ ಆ ಬಿರುದಿಗಾಗಿ ವೀಣೆ ಶೇಷಣ್ಣನವರನ್ನು ಆರಿಸಿದ್ದಾರೆಯೇ ಹೇಗೆ ಎಂದು ಆತ ತಿಳಿಯ ಬಯಸಿದರು. ಸಂದರ್ಭ ಬಿಗಡಾಯಿಸಿತು. ಕೆಲವರೆಂದರು, 'ಹೌದು, ಮಹಾರಾಜರು ಎಲ್ಲ ಅತ್ಯುತ್ತಮ ವೀಣಾವಾದಕರ ವಾದನವನ್ನೂ ಕೇಳಿದ್ದಾರೆ'. ಆಗಂತುಕ ಹೇಳಿದರು, 'ಅವರು ನನ್ನ ಸಂಗೀತವನ್ನು ಕೇಳಿಲ್ಲ,ನೀವೆಲ್ಲ ನನ್ನ ಸಂಗೀತವನ್ನು ಇಂದು ಕೇಳಬೇಕು. ನಾನು ನುಡಿಸುತ್ತೇನೆ.' ಅವನಿಗೆ ಬುದ್ಧಿಭ್ರಮಣೆಯಾಗಿರಬಹುದೆಂದು ಭಾವಿಸಿದ ಕೆಲವರು ಅವನ ಸಂಗೀತವನ್ನು ಇನ್ನೊಂದು ದಿನ ಕೇಳುವುದಾಗಿಯೂ ಇವತ್ತು ಬೇಡವೆಂದೂ ಅವನನ್ನು ಸಮಾಧಾನ ಪಡಿಸಿದರು. ಆತ ಸಭಾಂಗಣವನ್ನು ಬಿಟ್ಟು ಹೊರಟುಹೋದರು. ಅಪರಿಚಿತನೊಬ್ಬನ ಇಂತಹ ಸವಾಲು ಕಛೇರಿಯ ಕಳೆ ಕೆಡಿಸಿತು.

ಕೆಲವು ತಿಂಗಳುಗಳ ಅನಂತರ ಈ ಅಪರಿಚಿತ ವ್ಯಕ್ತಿ ಒಂದು ಸಣ್ಣ ವೀಣೆ ಹಿಡಿದುಕೊಂಡು ಮೈಸೂರಿಗೆ ಬಂದು ಪ್ರತಿ ನಿತ್ಯ ಒಂದು ದೇವಾಲಯದಲ್ಲಿ ನುಡಿಸತೊಡಗಿದರು. ಜನ ಇದರಿಂದ ಬಹಳ ಆಕರ್ಷಿತರಾದರು. ತಮ್ಮ ಪ್ರತಿಭೆಯನ್ನು ಮಹಾರಾಜರ ಮುಂದೆ ಪ್ರದರ್ಶಿಸುವ ಒಂದು ಅವಕಾಶ ಗಿಟ್ಟಿಸಲು ಆತ ಬಹಳವಾಗಿ ಪ್ರಯತ್ನಸಿದರೂ ಸಫಲವಾಗಲಿಲ್ಲ. ಅವರ ಸಂಗೀತವನ್ನು ಆಲಿಸಿದ ನಮ್ಮ ತಂದೆಯವರು ಬೆಂಗಳೂರಿಗೆ ಹಿಂದಿರುಗಿದಾಗ, ಆ ತಲೆಹರಟೆ ವ್ಯಕ್ತಿ ಕೆಲವು ತಂತ್ರಗಳಲ್ಲಿ ವೀಣೆ ಶೇಷಣ್ಣನವರನ್ನೂ ಮೀರಿಸುವ ಬಹುದೊಡ್ಡ ವೀಣಾವಾದಕನೆಂದು ಪ್ರಶಂಸಿಸಿದರು.

ವೀಣೆ ಶೇಷಣ್ಣನವರು ಒಳ್ಳೆಯ ಜಲತರಂಗ್ ವಾದಕರೂ ಆಗಿದ್ದರು. ಬಹಳ ಕಾಲದವರೆಗೆ ಅವರ ಕೃತಿಗಳಲ್ಲಿ ಜಂಜೂಟಿ ತಿಲ್ಲಾನ ಒಂದೇ ಜನಪ್ರಿಯವಾಗಿತ್ತು (ಧಿರನಾತನಧಿಂತ). ಮುಂದೆ ದರ್ಬಾರಿ ಕಾನಡದಲ್ಲಿ ಅವರು ರಚಿಸಿರುವ ಸುಂದರ ತಿಲ್ಲಾನವೂ ಬೆಳಕಿಗೆ ಬಂದಿತು. ಸಂಗೀತ ನಾಟಕ ಅಕಾಡೆಮಿಯ ಸಹಾಯದಿಂದ ಮೈಸೂರಿನ ಸಂಗೀತ ಕಲಾಭಿವರ್ಧಿನಿ ಸಭೆಯು ಅವರು ರಚಿಸಿರುವ ಸ್ವರಜತಿ, ತಿಲ್ಲಾನ ಕೃತಿಗಳನ್ನೆಲ್ಲ, ಸ್ವರಪ್ರಸ್ತಾರದೊಂದಿಗೆ ಒಳಗೊಂಡಿರುವ ಸಂಗ್ರಹವೊಂದನ್ನು ಹೊರತಂದಿದೆ. ಇದೊಂದು ಸ್ವಾಗತಾರ್ಹ ಪ್ರಕಟಣೆ. ಕೃತಿಗಳನ್ನು ಸರಿಯಾದ ಗುರುವಿನಿಂದ ಕಲಿತವರಿಗೇ ಇಂತಹ ಪುಸ್ತಕಗಳು ಹೆಚ್ಚು ಉಪಯುಕ್ತ ಎಂಬುದರಲ್ಲಿ ಸಂಶಯವಿಲ್ಲ. ಆದರೂ ಕೃತಿಗಳನ್ನು ನೆನಪಿನಲ್ಲಿ ಸ್ಪಷ್ಟವಾಗಿ ಉಳಿಸಿಕೊಳ್ಳಲು ಪುಸ್ತಕ ಸಹಕಾರಿ ಯಾಗುತ್ತದೆ. ಈ ಕೃತಿಗಳನ್ನು ಕಲಿಸುವ ಶಾಲೆಯೊಂದನ್ನು ಸಂಗೀತ ಕಲಾಭಿವರ್ಧಿನಿ ಸಭೆ ಪ್ರಾರಂಭಿಸುವುದು ಒಳ್ಳೆಯದು. ವೀಣೆ ಶೇಷಣ್ಣನವರ ಕೃತಿಗಳನ್ನು ಜನಪ್ರಿಯಗೊಳಿಸುವ ಪ್ರಯತ್ನದಲ್ಲಿ ಈ ಕೃತಿಗಳನ್ನು ಬಲ್ಲ ವಿದ್ವಾಂಸರ ಸಹಕಾರವನ್ನು ಕೋರಬೇಕು. ಇತರ ವಾಗ್ಗೇಯಕಾರರಂತೆಯೇ ವೀಣೆ ಶೇಷಣ್ಣನವರ ಕೃತಿಗಳು ತುಟಿಗಳ ಮೇಲೆ ಜೀವಿಸಬೇಕಲ್ಲದೆ ಪುಸ್ತಕಗಳಲ್ಲಲ್ಲ.

ಧ್ವನಿಮುದ್ರಿಕೆಯ ಅನುಕೂಲತೆಗಳು ಆ ಕಾಲಕ್ಕೆ ಇದ್ದವಾದರೂ ವೀಣೆ ಶೇಷಣ್ಣನವರ ವೀಣಾವಾದನವನ್ನು ಧ್ವನಿಮುದ್ರಣ ಮಾಡುವುದು ಸಾಧ್ಯವಾಗದಿರುವುದು ಅನ್ಯಾಯ. ಅಂದಿನ ದಿನಗಳಲ್ಲಿ ಅನೇಕ ಸಂಗೀತಗಾರರು ಮಹಾರಾಜರ ಆಶ್ರಯವನ್ನರಸಿ ಉತ್ತರ ಭಾರತದಿಂದ ಮೈಸೂರಿಗೆ ಬರುತ್ತಿದ್ದರು. ಪ್ರತಿಯೊಬ್ಬ ಉತ್ತರ ಭಾರತದ ಸಂಗೀತಗಾರನೂ ವೀಣೆ ಶೇಷಣ್ಣನವರ ಸಂಗೀತವನ್ನಾಗಲಿ, ವೈಣಿಕರಾಗಿ ಅವರ ಖ್ಯಾತಿಯನ್ನಾಗಲಿ ಕೇಳಿಯೇ ಇರುತ್ತಿದ್ದ.

೧೨. ಮದರಾಸಿನ ವಿದ್ವಾನ್ ಟೈಗರ್ ವರದಾಚಾರ್ಯರು

೧೯೩೦ರವರೆಗೆ ನಾನು ಟೈಗರ್ ವರದಾಚಾರ್ಯರ ಸಂಗೀತವನ್ನು ಕೇಳಿರಲಿಲ್ಲ. ಹಾಡುವಾಗ ಅವರು ಮಾಡುತ್ತಿದ್ದ ಹುಲಿಯನ್ನು ಹೋಲುವ ಅಂಗಚೇಷ್ಟೆಗಳ ಬಗ್ಗೆ ಹಾಗೂ ಹುಲಿ ತನ್ನ ಕ್ಷೇತ್ರದಲ್ಲಿ ಹೇಗೋ ಹಾಗೆ ಇವರು ಸಂಗೀತ ಕ್ಷೇತ್ರದಲ್ಲಿ ಪ್ರಶ್ನಾತೀತ ಚಕ್ರವರ್ತಿ ಎಂಬುದರ ಬಗ್ಗೆ ಕೇಳಿಬಲ್ಲವನಾಗಿದ್ದೆ. ಅವರಿಗಿದ್ದ ಅಡ್ಡ ಹೆಸರು ಇಲ್ಲವೆ ಹೋಲಿಕೆಯ ಪದವು ಒಂದು ಬಿರುದಿನ ಪ್ರಾಶಸ್ತ್ಯಗಳಿಸಿತ್ತು.

ಟೈಗರ್ ವರದಾಚಾರ್ಯರನ್ನು ನಾಗಪುರದ ಸೌತ್ ಇಂಡಿಯನ್ ಕ್ಲಬ್ ಆಹ್ವಾನಿಸಿತ್ತು. ಅವರೊಡನೆ ಪಿಟೀಲು ಪಕ್ಕವಾದ್ಯಕ್ಕಾಗಿ ವಿದ್ವಾನ್ ಸುಬ್ರಮಣಿ ಅಯ್ಯರ್ ಬಂದಿದ್ದರು. ಮೃದಂಗವಾದಕರ ಹೆಸರನ್ನು ನಾನು ಮರೆತಿದ್ದೇನೆ. ಪ್ರಚಾರಕ್ಕಾಗಿ ಕೈಚೀಟಿಗಳನ್ನು ಸಿದ್ಧಗೊಳಿಸಿ ಟಿಕೆಟ್ ಮಾರಾಟಕ್ಕಾಗಿ ಅಣಿಯಾಗಬೇಕಾಗಿತ್ತು. ಕೈಚೀಟಿಗಳಲ್ಲಿ ಅವರನ್ನು 'ಟೈಗರ್ ವರದಾಚಾರ್' ಎಂದು ಕಾಣಿಸಿದರೆ ಅವರು ಅಪಾರ್ಥ ಮಾಡಿಕೊಳ್ಳಬಹುದೇ ಎಂದು ಮಧುರ ಸುಬ್ರಮಣಿ ಅಯ್ಯರ್‌ರವರನ್ನು ವಿಚಾರಿಸಿದೆವು. ನಮ್ಮ ಪ್ರಶ್ನೆಗೆ ಅಚ್ಚರಿಗೊಂಡ ಸುಬ್ರಮಣಿ ಅಯ್ಯರ್ ನುಡಿದರು, "ನೀವು ಅವರನ್ನು ಟೈಗರ್ ವರದಾಚಾರ್ ಎಂದೇ ಕರೆಯಬೇಕು. ಇಲ್ಲವಾದಲ್ಲಿ ಅವರು ಅದನ್ನು ಅವಮಾನ ಎಂದು ಭಾವಿಸುತ್ತಾರೆ." ಅಂತೆಯೇ ನಾವು ಕೈಚೀಟಿಗಳಲ್ಲಿ ಅವರ ಹೆಸರನ್ನು 'ಟೈಗರ್ ವರದಾಚಾರ್' ಎಂದೇ ತೋರಿಸಿದೆವು. ಕಛೇರಿಯ ಅನಂತರ ಸ್ಥಳೀಯ ಜನತೆ ತಾವು ಹುಲಿಯನ್ನೇ ಕಂಡುದಾಗಿ ನಮಗೆ ತಿಳಿಸಿದರು.

ಮಧ್ಯಪ್ರದೇಶ ಹಾಗೂ ಬೇರಾರ್ ಪ್ರಾಂತ್ಯದಲ್ಲೆಲ್ಲಾ ಅತೀ ದೊಡ್ಡದೆನಿಸಿದ ತಂಬೂರಿಯನ್ನು ಈ ಕಛೇರಿಗಾಗಿ ಶ್ರೀ ದಿನಕರ ರಾವ್ ಪಟವರ್ಧನ್ ಅವರಿಂದ ಎರವಲು ತಂದಿದ್ದೆ. ದಪ್ಪನಾದ ತಂತಿಗಳು, ಒಂದರಿಂದ ಒಂದು, ಒಂದೊಂದು ಅಂಗುಲದ ಅಂತರದಲ್ಲಿದ್ದವು. ಈ ತಂಬೂರಿಯನ್ನು ಮೀಟಬಲ್ಲವರು ಬೇರೆ ಯಾರೂ ಆ ಸಭೆಯಲ್ಲಿ ಇರಲಿಲ್ಲವಾಗಿ ನಾಲ್ಕು ಗಂಟೆಗಳ ಕಾಲ ಶ್ರುತಿ ಮೀಟಲು ನಾನೇ ಕುಳಿತುಕೊಳ್ಳಬೇಕಾಯಿತು. ಪ್ರಾರಂಭದಲ್ಲಿ ವರದಾಚಾರ್ಯರು ನಿಖರವಾಗಿ ಶ್ರುತಿ ಹಿಡಿಯುತ್ತಿರಲಿಲ್ಲ. ಪ್ರತಿಯೊಂದು ಹಾಡಿನ ಅನಂತರವೂ ಟೈಗರ್‌ರವರು ಇನ್ನೇನು ಸರಿಯಾದ ಶ್ರುತಿಗೆ ಬರುವರೆಂದು ಮಧುರ ಸುಬ್ರಮಣಿ ಅಯ್ಯರ್‌ರವರು ನನ್ನನ್ನು ಸಮಾಧಾನ ಪಡಿಸುತ್ತಿದ್ದರು. ಆದರೆ ಕಛೇರಿಯ ಉದ್ದಕ್ಕೂ ಷಡ್ಜಕ್ಕಿಂತ ಸ್ವಲ್ಪ ಕೆಳಮಟ್ಟದಲ್ಲೇ ಅವರು ಉಳಿದುಬಿಟ್ಟರು.

ಮಾರನೆಯದಿನ ಸಂಜೆ ನಾವು ಟೈಗರ್ ವರದಾಚಾರ್ ಅವರನ್ನು ನೋಡಲು ಹೋದೆವು. ಟೈಗರ್ ವರದಾಚಾರ್‌ರವರು ತಮ್ಮ ಗೆಳೆಯನನ್ನು ನೋಡಲು ಮಹಾರಾಜಬಾಗ್‌ಗೆ ಹೋಗಿರುವುದಾಗಿ ಮಧುರ ಸುಬ್ರಮಣಿ ಅಯ್ಯರ್ ತಿಳಿಸಿದರು. ಹುಲಿಗಳನ್ನು ಇರಿಸಿದ ಮೃಗಾಲಯವೊಂದು ಮಹಾರಾಜಬಾಗ್‌ನಲ್ಲಿ ಇದ್ದಿತು. ವಾಸ್ತವವಾಗಿಯೂ ಅವರು ಹೋಗಿದ್ದು ಮೃಗಾಲಯದ ಮ್ಯಾನೇಜರ್ ಆದ ಒಬ್ಬ ದಕ್ಷಿಣ ಭಾರತದ ವ್ಯಕ್ತಿಯನ್ನು ನೋಡಲು. ಆತನಿಗೂ ಟೈಗರ್ ವರದಾಚಾರ್‌ರವರಿಗೂ ಹಂಚಿಕೊಳ್ಳಲೇಬೇಕಾದ ಸಮಾನ ಆಸಕ್ತಿ ಯಾವುದೋ ಇದ್ದಿತು.

ಟೈಗರ್ ಅವರು ಮದ್ರಾಸಿಗೆ ಪ್ರಯಾಣ ಮಾಡಲಿದ್ದ ದಿವಸ ಸಂಗೀತಗಾರರನ್ನು ಬೀಳ್ಕೊಡಲು ನಾನು ರೈಲು ನಿಲ್ದಾಣಕ್ಕೆ ಹೋಗಿದ್ದೆನು. ನಾವು ರೈಲು ಬೋಗಿಯನ್ನು ಪ್ರವೇಶಿಸಿದೆವು; ಸಂಗೀತ ವಿದ್ವಾಂಸರು ತಮ್ಮ ಜಾಗಗಳಲ್ಲಿ ಕುಳಿತರು. ರೈಲು ಹೊರಡಲು ಇನ್ನೂ ವೇಳೆ ಇದ್ದುದರಿಂದ ಸಂಗೀತಕ್ಕೆ ಸಂಬಂಧಿಸಿದ ಮಾತುಕತೆ ಪ್ರಾರಂಭವಾಯಿತು. ನಾವೆಲ್ಲರೂ ಅದರಲ್ಲಿ ಎಷ್ಟರ ಮಟ್ಟಿಗೆ ಮಗ್ನರಾಗಿದ್ದೆವೆಂದರೆ ರೈಲು ನಿಲ್ದಾಣದಿಂದ ಚಲಿಸಿದ್ದೇ ಅಲ್ಲದೆ ಒಳ್ಳೆಯ ವೇಗವನ್ನು ತಳೆದದ್ದೂ ನನ್ನ ಗಮನಕ್ಕೆ ಬರಲಿಲ್ಲ.

ಈಗೇನೂ ಮಾಡುವಂತಿರಲಿಲ್ಲ. ವಾರ್ಧಾ ನಿಲ್ದಾಣದಲ್ಲಿ ಇಳಿಯುವ ಯೋಚನೆ ಮಾಡಿದೆ. ಆದರೆ ವಾರ್ಧಾ ಸಮೀಪಿಸುವ ವೇಳೆಗೆ ನಮ್ಮ ಸಂಭಾಷಣೆ ಇನ್ನೂ ಹೆಚ್ಚು ಗಹನವೂ ಸ್ವಾರಸ್ಯವೂ ಆಗಿತ್ತು. ಒಬ್ಬ ಗೆಳೆಯನಿಂದ ಹಣ ಸಾಲ ಪಡೆದು ನನಗೆ ಮೂರು ದಿನಗಳ ಸಾಂದರ್ಭಿಕ ರಜೆ ಮಂಜೂರು ಮಾಡುವಂತೆ ಅಗ್ರಿಕಲ್ಚರ್ ಕಾಲೇಜಿನ ಪ್ರಾಂಶುಪಾಲರಿಗೆ ಪತ್ರ ಬರೆದು ಹಾಕಿದೆ. ಟೈಗರ್ ಅವರೊಡನೆ ಮದ್ರಾಸಿನವರೆಗೂ ಪ್ರಯಾಣಮಾಡಿ ಮಾರನೆಯ ದಿನ ನಾಗಪುರಕ್ಕೆ ಹಿಂದಿರುಗಿದೆ. ನನ್ನ ಸಂಗೀತದ ಹುಚ್ಚಿಗಾಗಿ ಗೆಳೆಯರು ನನ್ನನ್ನು ತರಾಟೆಗೆ ತೆಗೆದುಕೊಂಡರು. ಆದರೆ ಸಂಗೀತದ ಹುಚ್ಚು ಹಿಡಿದಾಗಲೇ ನಾನು ಅತ್ಯಂತ ಆನಂದವಾಗಿರುವುದು.

೧೩. ಮದರಾಸಿನ ವಿದ್ವಾನ್ ಪಲ್ಲಡಂ ಸಂಜೀವರಾವ್

ಸರಿ ಸುಮಾರು ೧೯೩೦ರಲ್ಲಿ(ವರ್ಷ ನನಗೆ ಖಚಿತವಾಗಿ ನೆನಪಿಲ್ಲ) ನಾಗಪುರದ ದಕ್ಷಿಣ ಭಾರತದ ಸಮುದಾಯವು, ಪ್ರಖ್ಯಾತ ಶರಭ ಶಾಸ್ತ್ರಿಗಳ ಶಿಷ್ಯರಾದ ಶ್ರೇಷ್ಠ ವೇಣುವಾದಕ ಪಲ್ಲಡಂ ಸಂಜೀವರಾವ್ ಅವರನ್ನು ಕಛೇರಿ ನೀಡಲೆಂದು ಆಹ್ವಾನಿಸಿತು. ಮದ್ರಾಸಿನಲ್ಲಿ ಹೆಸರು ಮಾಡಿದ್ದ ಮಧುರ ಸುಬ್ರಮಣಿ ಅಯ್ಯರ್ ಅವರನ್ನು ಪಿಟೀಲು ಪಕ್ಕವಾದ್ಯಕ್ಕಾಗಿ ಕರೆತಂದಿದ್ದರು. ಮೃದಂಗವಾದಕರು ದೊರೆರಾಜ ಅಯ್ಯಂಗಾರ್ಯರೆಂದು ನೆನಪು.

ನಾವೆಲ್ಲರೂ ಉತ್ಸಾಹದಿಂದ ಪ್ರಚಾರಕಾರ್ಯ ಕೈಗೊಂಡೆವು. ಆ ಕಾಲಕ್ಕೆ ಭರ್ಜರಿ ಮೊಬಲಗು ಎನಿಸುವ ೧೫೦೦ ರೂಪಾಯಿಗಳನ್ನು ಸಂಗ್ರಹಿಸಿದೆವು. ಭಗವಾನ್ ಕೃಷ್ಣನ ಸಾಕ್ಷಾತ್ ಅವತಾರವೇ ಸಂಜೀವರಾಯರೆಂದು ನಮ್ಮ ಗೆಳೆಯರಿಗೆಲ್ಲಾ ಹೇಳಿ ಹಣ ವಸೂಲಿ ಮಾಡಿದ್ದೆವು. ನಮ್ಮ ಗೆಳೆಯ ಪಿ. ಡಿ. ನಾಯರ್ ಅವರು ತಮ್ಮ ಅಧಿಕಾರಿಯಾದ ಒಬ್ಬ ಪಾರ್ಸಿ ಸದ್ಗೃಹಸ್ಥರಿಗೂ ಅವರ ಗೆಳೆಯರಿಗೂ ೧೦೦ ರೂಪಾಯಿ ಮೌಲ್ಯದ ಮೊದಲ ಸಾಲಿನ ಟಿಕೆಟ್‌ಗಳನ್ನು ಒತ್ತಾಯಮಾಡಿ ನೀಡಿದ್ದರು.

ಆ ದಿನಗಳಲ್ಲಿ ಎಲ್ಲಾ ವಿದ್ವಾಂಸರೂ "ಶ್ರುತಿ ಪೆಟ್ಟಿಗೆ" ಹಾರ್ಮೋನಿಯಂನ್ನು ಬಳಸುತ್ತಿದ್ದರು. ಶ್ರುತಿ ಹಿಡಿಯುವ ಕೆಲಸ ನನ್ನ ಪಾಲಿಗೆ ಬಂತು. ನಾನು ಪಿಟೀಲು ವಾದಕರ ಹಿಂದೆಯೇ ವೇದಿಕೆಯ ಮೇಲೆ ಕುಳಿತುಕೊಳ್ಳಬೇಕಾಯಿತು.

ಹೆಚ್ಚಾಗಿ ಪಾರ್ಸಿಗಳೇ ಇದ್ದ ಮೊದಲ ಸಾಲಿನವರು, ಮೊದಲ ಹಾಡಾದ ಮೇಲೆ ನಗತೊಡಗಿದರು. ವಿದ್ವಾನ್ ಸಂಜೀವರಾವ್ ಅವರು ನನ್ನತ್ತ ತಿರುಗಿ ಕನ್ನಡದಲ್ಲಿ "ಅವರೇಕೆ ನಗುತ್ತಿದ್ದಾರೆ?" ಎಂದು ಕೇಳಿದರು. ಅವರಿಗೆಲ್ಲಾ ಬಹಳ ಸಂತೋಷವಾಗಿದೆಯೆಂದೂ ಅವರು ಕೊಳಲು ವಾದನವನ್ನು ಮೆಚ್ಚಿಕೊಂಡಿದ್ದಾರೆಂದೂ ನಾನು ನುಡಿದೆನು. ಆ ದಿನಗಳಲ್ಲಿ ಪಿಟೀಲು ಮತ್ತು ಕೊಳಲು ಉತ್ತರ ಭಾರತದಲ್ಲಿ ಅಪರೂಪವಾಗಿದ್ದವು. ನನ್ನ ವಿವರಣೆಯಿಂದ ತೃಪ್ತರಾದ ಸಂಜೀವರಾಯರು ಇನ್ನಷ್ಟು ಭರಾಟೆಯಿಂದ ನುಡಿಸತೊಡಗಿದರು. ಎರಡನೆಯ ಹಾಡು ಮುಗಿಯುತ್ತಿದ್ದಂತೆ ಪಾರ್ಸಿಗಳು ಬಹಳ ಮರ್ಯಾದೆಯಿಂದ ವಂದಿಸಿ ಸಭಾಂಗಣದಿಂದ ಹೊರನಡೆದರು. "ಅದೇನು, ಎಲ್ಲರೂ ಹೊರಟುಬಿಟ್ಟರಲ್ಲ" ಎಂದು ಸಂಜೀವರಾಯರು

ನನ್ನನ್ನು ಕೇಳಿದರು. ಸರ್ಕಾರಿ ಭವನದಲ್ಲಿ ಒಂದು ಸಂತೋಷ ಸಮಾರಂಭದಲ್ಲಿ ಅವರು ಭಾಗವಹಿಸಬೇಕಾದುದರಿಂದ ಅವರೆಲ್ಲಾ ಇದ್ದಕ್ಕಿದ್ದಂತೆ ಹೊರಟುಬಿಟ್ಟರೆಂದು ನಾನು ಹೇಳಿದೆ. ಆ ಎರಡು ಹಾಡುಗಳನ್ನು ಕೇಳಿ ಆನಂದವಾಯಿತೆಂದು ಅವರು ಪಿ. ಡಿ. ನಾಯರ್‌ಗೆ ತಿಳಿಸಿದರಂತೆ.

ಕಛೇರಿ ಭರ್ಜರಿಯಾಗಿತ್ತು. ಮಾರನೆಯ ದಿನ ಪಿ. ಡಿ. ನಾಯರ್ ಅವರು ತಮ್ಮ ಅಧಿಕಾರಿ ಮಿಸ್ಟರ್ ದಸ್ತೂರ್ ಅವರನ್ನು ಭೇಟಿ ಮಾಡಿ ಅವರಿಗೂ ಅವರ ಗೆಳೆಯರಿಗೂ ಕಛೇರಿ ಹೇಗೆ ರುಚಿಸಿತು ಎಂದು ವಿಚಾರಿಸಿದರು. ಮಿಸ್ಟರ್ ದಸ್ತೂರ್ ಹೇಳಿದ್ದು ಹೀಗೆ: "ಕೊಳಲು ವಾದಕ ಜೋರಾಗಿ ಊದುತ್ತಿದ್ದುದು ಚೆನ್ನಾಗಿ ಕೇಳಿಸುತ್ತಿತ್ತು. ಪಿಟೀಲಿನವರು ಬಹಳ ಮೃದುವಾಗಿ ನುಡಿಸುತ್ತಿದ್ದುದರಿಂದ ಹಿಂದೆ ಕುಳಿತವರಿಗೆ ಪಿಟೀಲು ಸರಿಯಾಗಿ ಕೇಳಿಸಿರಲಾರದು. ಮೃದಂಗದವರು ಸಾಕಷ್ಟು ಚೆನ್ನಾಗಿಯೇ ನುಡಿಸಿದರು. ಆ ಗೋಷ್ಠಿಯಲ್ಲಿ ಅತ್ಯುತ್ತಮ ಕಲಾವಿದ ಎಂದರೆ ಹಾರ್ಮೋನಿಯಂ ನುಡಿಸಿದವರು. ಅದರ ನಾದ ಹಿತವಾಗಿಯೂ ನಿರಂತರವಾಗಿಯೂ ಇತ್ತು." ಇದನ್ನು ಕೇಳಿ ಮಿಸ್ಟರ್ ನಾಯರ್ ಅವರಿಗೆ ನಗು ತಡೆಯಲಾಗಲಿಲ್ಲ. ಅವರೆಂದರು, ''ಸ್ವಾಮಿ, ಹಾರ್ಮೋನಿಯಂ ವಾದಕರಿಗೆ ಕೆಲಸವೇ ಇರಲಿಲ್ಲ. ಅವರು ಕೇವಲ ಶ್ರುತಿ ಹಿಡಿಯುತ್ತಿದ್ದರು. ಅದನ್ನು ಮಾಡುತ್ತಿದ್ದುದು ನಮ್ಮ ಸುಬ್ಬರಾಯರು''. ದಸ್ತೂರ್ ಹೇಳಿದರು, ''ಅದು ಸುಬ್ಬರಾಯರೇ? ಅವರ ಹಾರ್ಮೋನಿಯಂ ನಮಗೆಲ್ಲಾ ಹಿಡಿಸಿತೆಂದು ಅವರಿಗೆ ತಿಳಿಸಿ.''

ಕಛೇರಿಯ ದಿನ ಅತಿಥಿಗಳನ್ನು ಎದುರುಗೊಳ್ಳುವುದರಲ್ಲಿ ನಾವು ನಿರತರಾಗಿರುತ್ತೇವೆ, ನಮಗೆ ಸಂಗೀತ ಕೇಳಲು ಸಾಧ್ಯವಾಗದು ಎಂದು ನಮಗೆಲ್ಲಾ ತಿಳಿದಿದ್ದುದರಿಂದ, ಹಿಂದಿನ ದಿನವೇ ಒಂದೆರಡು ಗಂಟೆಗಳ ಕಾಲ ನಮ್ಮನ್ನು ರಂಜಿಸಬೇಕೆಂದು ವಿದ್ವಾನ್ ಸಂಜೀವರಾವ್ ಅವರನ್ನು ಕೋರಿಕೊಂಡೆವು. ಅವರು ಏನೋ ನೆಪ ಹೇಳಿ ಕಛೇರಿಯ ಅನಂತರ ನಮಗೆಲ್ಲಾ ಅವರ ಕೊಳಲಿನ ವಿಶೇಷ ಔತಣ ನೀಡುವುದಾಗಿ ಆಶ್ವಾಸನೆ ಕೊಟ್ಟರು. ಕಛೇರಿ ಆದ ಎರಡು ದಿನಗಳನಂತರ ನಾವು ಈ ವಿಷಯವನ್ನು ಜ್ಞಾಪಿಸಿದಾಗ ಅವರೆಂದರು ''ಒಂದು ಕಛೇರಿ ಮುಗಿದೊಡನೆ ನಾನು ವಾದ್ಯವನ್ನು ಪೂಜಾ ಕೊಠಡಿಯಲ್ಲಿ ದೇವರ ಮುಂದಿಟ್ಟು ಮುಂದಿನ ಕಛೇರಿಯವರೆಗೆ ವಾದ್ಯಕ್ಕೆ ಪೂಜೆ ಸಲ್ಲಿಸುತ್ತೇನೆ. ಇನ್ನೊಂದು ಕಛೇರಿ ಏರ್ಪಡಿಸಿ; ನಿಮಗೆ ತೃಪ್ತಿಯಾಗುವವರೆಗೂ ನುಡಿಸುತ್ತೇನೆ'' ಇನ್ನೊಂದು ಕಛೇರಿಯ ಪ್ರಶ್ನೆಯೇ ಇರಲಿಲ್ಲ. ಇದನ್ನು ಅವರಿಗೆ ಸ್ಪಷ್ಟವಾಗಿ ತಿಳಿಸಲಾಯಿತು.

ಸಂಗೀತದ ಕಟ್ಟಾ ಪ್ರೇಮಿಯಾದ ದುರ್ಗಾಶಂಕರ್ (ಚೀಫ್ ಜಸ್ಟಿಸ್ ಶ್ರೀ ಭವಾನಿ ಶಂಕರ್ ನಿಯೋಗಿ ಅವರ ಸೋದರ)ಎನ್ನುವ ಸದ್ಗೃಹಸ್ಥರೊಬ್ಬರಿದ್ದರು. ಸಂಜೀವರಾಯರು ಅವರ ಮನೆಗೆ ಹೋಗಿ, ಅವರ ಮನೆಯ ಹಾಲ್ ನೋಡಿ ಮೆಚ್ಚಿಕೊಂಡು, ''ಎಂತಹ ಸುಂದರವಾದ ಹಾಲ್! ಇಲ್ಲಿ ಒಂದು ಕಛೇರಿ ನೀಡೋಣ ಎನಿಸುತ್ತದೆ'' ಎಂದರು. ದುರ್ಗಾಶಂಕರ್‌ರವರು ಇವರ ಇಂಗಿತವನ್ನು ಅರಿತರು. ಅವರು ರುಜು ಹಾಕಿದ ವಂತಿಕೆ ಪಟ್ಟಿ ನಮ್ಮಲ್ಲಿಗೆ ಬಂದಿತು. ಸುಮಾರು ೨೦೦ ರೂಪಾಯಿಗಳಷ್ಟು ಸಂಗ್ರಹವಾಗಿ, ಕೊಳಲು ಪೂಜಾ ಕೊಠಡಿಯಿಂದ ಹೊರಬಂದಿತು.

ಸಂಜೀವರಾಯರು ಇನ್ನೊಂದು ಮಾರ್ಗದಲ್ಲಿ ತಮ್ಮ ಅದೃಷ್ಟ ಪರೀಕ್ಷೆ ಮಾಡಲು ಮುಂದಾದರು. ಬಲ್ಡಿ ಸಿನಿಮಾ ಗೃಹದ ಮಾಲೀಕರಾದ ಮಿಸ್ಟರ್ ನಾಯಿಡು ಅವರಲ್ಲಿಗೆ ಹೋದರು. ಐವತ್ತು ಐವತ್ತು ಪ್ರಮಾಣದಲ್ಲಿ ಹಣ ಹಂಚಿಕೊಳ್ಳುವ ವ್ಯವಸ್ಥೆಯಲ್ಲಿ ಕಛೇರಿ ನೀಡಲು ಇಚ್ಛಿಸುವೆನೆಂದು ನಾಯಿಡು ಅವರಿಗೆ ಹೇಳಿದರು. ದಕ್ಷಿಣ ಭಾರತೀಯರೆಲ್ಲಾ ತಮ್ಮ ಕಛೇರಿಯನ್ನು ಮತ್ತೆ ಕೇಳಲು ಉತ್ಸುಕರಾಗಿರುವರೆಂದು ಸಂಜೀವರಾಯರು ನಾಯಿಡು ಅವರನ್ನು ನಂಬಿಸಿದರು. ಈ ಕೊಳಲು ವಾದಕರ ಖ್ಯಾತಿ ನಾಯಿಡು ಅವರಿಗೆ ತಿಳಿದಿತ್ತು. ಇಂಗ್ಲಿಷ್ ಚಿತ್ರವೊಂದರ ಎರಡನೆ ಷೋ ರದ್ದುಪಡಿಸಿ ರಾತ್ರಿ ೯.೩೦ಕ್ಕೆ ಪಲ್ಲಡಂ ಅವರ ಕೊಳಲು ಕಾರ್ಯಕ್ರಮ ಇರುವುದಾಗಿ ಪ್ರಚಾರ ನಡೆಸಿದರು.

ಮಿಸ್ಟರ್ ನಾಯಿಡು ಅವರು ನಮಗೆ ಒಳ್ಳೆಯ ಗೆಳೆಯರಾದ್ದರಿಂದ ನಾನು, ಮಧುರ ಸುಬ್ರಮಣಿ ಅಯ್ಯರ್ ಅವರ ಸೋದರ ಲಕ್ಷ್ಮಣ ಅಯ್ಯರ್, ಪಿ. ಡಿ. ನಾಯರ್, ವೆಂಕಟರಾಮ ಪಂತಲು, ಮತ್ತು ಎನ್. ಕೃಷ್ಣಸ್ವಾಮಿ ಅಯ್ಯಂಗಾರ‍್ಯರು ೯ ಗಂಟೆಗೆ ಚಿತ್ರಮಂದಿರಕ್ಕೆ ಹೋದೆವು. ಬೇರೆ ಯಾರೂ ಅತ್ತ ಸುಳಿಯಲಿಲ್ಲ. ಮಳೆ ಬರತೊಡಗಿತು. ಈಗಾಗಲೇ ಪಲ್ಲಡಂ ಸಂಜೀವರಾಯರ ಎರಡು ಕಛೇರಿಗಳು ನಡೆದಿದ್ದು ಜನರ ಗೋಷ್ಠಿ ನೆರೆಯುವುದಿರಲಿ, ಅಲ್ಪಸ್ವಲ್ಪ ಜನರೂ ಬರಲಾರರು ಎಂದು ನಾವು ನಾಯಿಡು ಅವರಿಗೆ ತಿಳಿಸಿದೆವು. ಮಳೆಯಿಂದಾಗಿ ಕೊಳಲು ಕಾರ್ಯಕ್ರಮ ರದ್ದಾಯಿತೆಂದು ತಕ್ಷಣ ಘೋಷಿಸಲಾಯಿತು. ಪಾಪ, ನಾಯಿಡು ಅವರು ೫೦-೫೦ ರ ಲಾಭಕ್ಕೆ ಬದಲಾಗಿ ಒಂದು ಪೂರ್ಣ ಷೋನ ನಷ್ಟ ಭರಿಸಬೇಕಾಯಿತು.

ಮಿಸ್ಟರ್ ಸಂಜೀವರಾವ್‌ರವರು ತಾವು ಒಂದು ಬ್ಯಾಂಕ್ ಸ್ಥಾಪಿಸಿರುವುದಾಗಿ ಬಹಳ ವಿನಯದಿಂದಲೇ ಹೇಳಿಕೊಂಡಿದ್ದರು. ಆದರೆ ಕೆಲವೇ ವರ್ಷಗಳಲ್ಲಿ ಆ ಬ್ಯಾಂಕ್ ಮುರಿದು ಬಿತ್ತೆಂದು ಕೇಳಿ ನಮಗೆಲ್ಲಾ ಖೇದ ಉಂಟಾಯಿತು.

ವಿದ್ವಾನ್ ಮಧುರ ಸುಬ್ರಮಣಿ ಅಯ್ಯರ್ ಅವರು ಕೇವಲ ಪಿಟೀಲು ವಾದಕರಾಗಿರಲಿಲ್ಲ, ಒಳ್ಳೆಯ ಮಧುರವಾದ ಧ್ವನಿಯಲ್ಲಿ ಹಾಡಬಲ್ಲವರಾಗಿದ್ದರು. ಅವರು ತ್ಯಾಗರಾಜರ ವಂಶಸ್ಥರಾದ್ದರಿಂದ ತ್ಯಾಗರಾಜ ಕೃತಿಗಳ ಅವರ ಗಾಯನ ಬಹಳ ಆಕರ್ಷಕವಾಗಿರುತ್ತಿತ್ತು. ಈ ಕೃತಿಗಳನ್ನು ಕೇವಲ ತಂಬೂರಿ ಶ್ರುತಿಯೊಂದಿಗೆ ಅವರು

ಹಾಡುವುದನ್ನು ನಾವು ಕೇಳಲು ಬಯಸಿದ್ದೆವು. ಅಸಿಸ್ಟೆಂಟ್ ಕಮೀಷನರ್ ಆದ ಮಿಸ್ಟರ್ ಪಣಿಕ್ಕರ್ ಅವರ ಮನೆಯಲ್ಲಿ ಒಂದು ಮಧ್ಯಾಹ್ನ ನಾವೆಲ್ಲ ಸೇರಿದ್ದೆವು. ಅವರು ಸಂಜೀವರಾಯರನ್ನು ಕರೆದಿದ್ದರು. ಮೃದಂಗವಾದಕರು ಮದ್ರಾಸಿಗೆ ಹಿಂದುರುಗಿದ್ದರು.

ಚಹಾಪಾನವಾದ ಮೇಲೆ ಮಧುರ ಸುಬ್ರಮಣಿ ಅಯ್ಯರ್ ಹಾಡತೊಡಗಿದರು. ಶ್ರೀ ಸಂಜೀವರಾಯರು ಪಣಿಕ್ಕರ್ ಅವರಲ್ಲಿ ಪಿಟೀಲು ಇದೆಯೇ ಎಂದು ವಿಚಾರಿಸಿದರು. ತಮ್ಮಲ್ಲಿ ಪಿಟೀಲು ಇರುವುದಾಗಿಯೂ ಆದರೆ ಸುಬ್ರಮಣಿ ಅಯ್ಯರ್ ಅವರ ಧ್ವನಿಗೆ ಯಾವ ಪಕ್ಕವಾದ್ಯದ ಆವಶ್ಯಕತೆಯೂ ಇಲ್ಲವೆಂದೂ ಪಣಿಕ್ಕರ್ ಹೇಳಿದರು. ಆದರೆ ಸಂಜೀವರಾಯರು ತಾವು ಪಿಟೀಲು ಪಕ್ಕವಾದ್ಯ ನುಡಿಸುವುದಾಗಿ ಒತ್ತಾಯ ಮಾಡಿದರು. ''ನಾನು ಪಿಟೀಲು ವಾದಕನಾಗಿ ಪ್ರಾರಂಭಿಸಿ ಅನಂತರ ಕೊಳಲಿಗೆ ಬಂದೆ ಎಂದು ನಿಮಗೆ ತಿಳಿಯದು''ಎಂದರು. ಪಣಿಕ್ಕರ್ ಅವರು ಪಿಟೀಲು ಹೊರತಂದರು. ಪಲ್ಲಡಂ ಅವರು ಸುಬ್ರಮಣಿ ಅಯ್ಯರ್ ಅವರ ಗಾಯನದೊಡನೆ ಪಿಟೀಲು ನುಡಿಸ ತೊಡಗಿದರು. ಬಹುಶಃ ಅನೇಕ ವರ್ಷಗಳಿಂದ ಅವರು ಪಿಟೀಲು ಹಿಡಿದಿರಲಿಲ್ಲ. ಅವರ ನುಡಿಸಾಣಿಕೆ ನಿರಾಶಾದಾಯಕವಾಗಿತ್ತು. ಆದರೆ 'ಪಿಟೀಲು ನುಡಿಸುವುದನ್ನು ನಿಲ್ಲಿಸಿ' ಎಂದು ಅವರಿಗೆ ಹೇಳಲು ಯಾರಿಗೂ ಸಾಧ್ಯವಾಗಲಿಲ್ಲ. ಅವರ ಪಕ್ಕವಾದ್ಯ ಅಡಚಣೆಯೇ ಆಯಿತು. ಮಧುರ ಸುಬ್ರಮಣಿ ಅಯ್ಯರ್ ಅವರು ತಾವು ಉದ್ದೇಶಿಸಿದಷ್ಟು ಚೆನ್ನಾಗಿ ಹಾಡಲು ಸಾಧ್ಯವಾಗಲಿಲ್ಲ.

ಸಂಜೀವರಾಯರು ಪಿಟೀಲಿನಿಂದ ಪ್ರಾರಂಭಿಸಿ ಅನಂತರ ಕೊಳಲಿಗೆ ಬದಲಿಸಿದರೆನ್ನುವುದು ನಿಜ. ವಿದ್ವಾನ್ ಗೋವಿಂದಸ್ವಾಮಿ ಅವರಾದರೋ ಮೊದಲು ಕೊಳಲಿನಿಂದ ಪ್ರಾರಂಭಿಸಿ ಅನಂತರ ಪಿಟೀಲಿಗೆ ಬಂದವರು.

ಸಂಜೀವರಾಯರ ಅತ್ಯುತ್ತಮ ಸಂಗೀತ ಕೇಳಿದವರಿಗೆ ಆಧುನಿಕ ತಂತ್ರಗಳಾಗಲೀ, ಧೋರಣೆಗಳಾಗಲೀ, ಹಿಡಿಸುವುದಿಲ್ಲ. ನಮ್ಮಲ್ಲಿ ಇನ್ನೂ ಇರುವ ಶಹನದ ''ಗಿರಿ ಪೈ ನೆಲ'' ಮುಂತಾದ ರೆಕಾರ್ಡ್‌ಗಳು ಅವರ ವಾದನದ ಭಾವ, ನಯಗಾರಿಕೆ, ಹೊಳಹುಗಳನ್ನು ತೋರಿಸುತ್ತವೆ.

೧೪. ಮುಂಬೈನ ಪಂಡಿತ್ ಶ್ರೀ ಕೃಷ್ಣ ರತನ್ ಜಂಕರ್

ಪಂಡಿತ್ ವಿಷ್ಣು ನಾರಾಯಣ ಭಾತ್ಕಂಡೆ ಅವರ ಶ್ರೇಷ್ಠ ಶಿಷ್ಯರಾದ ಶ್ರೀ ಕೃಷ್ಣ ರತನ್ ಜಂಕರ್ ಅವರ ಬಗ್ಗೆ ನಾನು ಕೇಳಿದ್ದೆ. ೧೯೩೦ - ೩೧ರಲ್ಲಿ ಅವರು ನಾಗಪುರಕ್ಕೆ ಬಂದಿದ್ದು, ಕಛೇರಿ ನೀಡಿದ್ದರು. ತಮ್ಮ ಲೇಖನಗಳಲ್ಲಿ, ಉಪನ್ಯಾಸಗಳಲ್ಲಿ, ಹಾರ್ಮೋನಿಯಂ ವಿರೋಧಿ ಗಳಾಗಿದ್ದುದೇ ಅಲ್ಲದೆ ತಮ್ಮ ಸಂಗೀತ ಕಛೇರಿಗಳಲ್ಲಿ ಪಕ್ಕವಾದ್ಯ ವಾಗಿಯೂ ಹಾರ್ಮೋನಿಯಂ ಬಳಸಲು ಅವರು ಒಪ್ಪುತ್ತಿರಲಿಲ್ಲ. ಹೀಗೆಯೇ ತಮ್ಮ ಲೇಖನ, ಭಾಷಣಗಳಲ್ಲಿ ಹಾರ್ಮೋನಿಯಂ ಖಂಡಿಸುವ, ಆದರೆ ತಮ್ಮ ಕಛೇರಿಗಳಿಗೆ ಮಾತ್ರ ಇತರ ಯಾವುದೇ ಪಕ್ಕವಾದ್ಯಕ್ಕಿಂತ ಹಾರ್ಮೋನಿಯಂ ಇಷ್ಟಪಡುವ ಶ್ರೇಷ್ಠ ಹಿಂದೂಸ್ತಾನಿ ಗಾಯಕರೂ ಇಲ್ಲದಿಲ್ಲ.

ಅಂದಿನ ದಿನಗಳಲ್ಲಿ ನಾಗಪುರದಲ್ಲಿ ಕೇವಲ ಇಬ್ಬರು ಪಿಟೀಲು ವಾದಕರಿದ್ದರು: ನಾನು ಮತ್ತು ನಮ್ಮ ನೆಂಟರೂ, ಸ್ನೇಹಿತರೂ ಆದ ಶ್ರೀ ಆರ್. ಎಸ್. ಕೃಷ್ಣಮೂರ್ತಿ. ನಮ್ಮಿಬ್ಬರಿಗೂ ಕರ್ನಾಟಕ ಸಂಗೀತ ತಿಳಿದಿತ್ತು. ಕೃಷ್ಣಮೂರ್ತಿ ಮರಾಠಿ ರಂಗಗೀತೆಗಳನ್ನು ಬಹಳ ಚೆನ್ನಾಗಿ ನುಡಿಸುತ್ತಿದ್ದರೂ ಶಾಸ್ತ್ರೀಯ ಹಿಂದೂಸ್ತಾನಿ ಸಂಗೀತದ ಅಭ್ಯಾಸ ಮಾಡಿರಲಿಲ್ಲ. ಶಾಸ್ತ್ರೀಯ ಹಿಂದೂಸ್ತಾನಿ ಸಂಗೀತವನ್ನು ನಾನು ಕಲಿತಿದ್ದೆನಾದ್ದರಿಂದ ಶಾಸ್ತ್ರೀಯ ಗಾಯಕರಿಗೆ ಪಕ್ಕವಾದ್ಯಕ್ಕಾಗಿ ನನ್ನನ್ನೇ ಆಮಂತ್ರಿಸುತ್ತಿದ್ದರು.

ಶೈಕ್ಷಣಿಕ ಪ್ರವಾಸದಲ್ಲಿದ್ದ ಅಗ್ರಿಕಲ್ಚರ್ ಕಾಲೇಜಿನ ವಿದ್ಯಾರ್ಥಿಗಳ ಮೇಲ್ವಿಚಾರಕನಾಗಿ ಬೇತಲ್‌ಗೆ ಹೋಗಿದ್ದೆ. ಪ್ರವಾಸದ ಮುಕ್ತಾಯದ ಹಂತಕ್ಕೆ ಬಂದಿದ್ದಾಗ ಮಾರನೆಯ ದಿನದ ರತನ್ ಜಂಕರ್ ಅವರ ಸಂಗೀತ ಕಛೇರಿಗೆ ನನ್ನ ಪಿಟೀಲು ಪಕ್ಕವಾದ್ಯದ ಆವಶ್ಯಕತೆ ಇದೆಯೆಂದು ನಾಗಪುರದ ಗೆಳೆಯನೊಬ್ಬನ ತಂತಿ ವರ್ತಮಾನ ಬಂದಿತು. ಇತರ ಅಧ್ಯಾಪಕರ ಮೇಲ್ವಿಚಾರಣೆಗೆ ವಿದ್ಯಾರ್ಥಿಗಳನ್ನು ಒಪ್ಪಿಸಿ ನಾಗಪುರದ ರೈಲು ಹತ್ತಿದೆ. ರತನ್ ಜಂಕರ್‌ಗೆ ನಾನು ನೀಡಿದ ಸುಲಲಿತವಾದ ಪಕ್ಕವಾದ್ಯ ಅವರ ಮೆಚ್ಚುಗೆ ಗಳಿಸಿತು.

ಕಛೇರಿಯ ಅನಂತರ ಕರ್ನಾಟಕ ಸಂಗೀತದ ಕಲ್ಯಾಣಿ ರಾಗದ ಆದಿತಾಳದಲ್ಲಿರುವ 'ವನಜಾಕ್ಷಿ' ವರ್ಣ ನನಗೆ ತಿಳಿದಿದೆಯೇ ಎಂದು ರತನ್ ಜಂಕರ್ ವಿಚಾರಿಸಿದರು. ನಾನು ಗೊತ್ತೆಂದು ಹೇಳಿದೆ. ವರ್ಣ ಹಾಡುವುದನ್ನು ಹಿಂದೂಸ್ತಾನಿ ಸಂಗೀತಕ್ಕೆ ರತನ್ ಜಂಕರ್ ಅವರು ಈಗಾಗಲೇ ಪರಿಚಯಿಸಿದ್ದರು. ಅದಕ್ಕಾಗಿಯೇ ಮೂಲದ ತೆಲುಗು ಭಾಗವನ್ನು ಸಂಸ್ಕೃತಕ್ಕೆ ಅನುವಾದಿಸಿ ಎತ್ತುಗಡೆ ಸ್ವರ, ಚಿಟ್ಟೆಸ್ವರಗಳನ್ನು ಇದ್ದಂತೆಯೇ ಉಳಿಸಿಕೊಳ್ಳುವ ಪ್ರಯೋಗ ಮಾಡಿದ್ದರು.

ಪ್ರೊ. ರತನ್ ಜಂಕರ್ ಅವರ ಶಿಷ್ಯೆ ಶ್ರೀಮತಿ ಸುಮತಿ ಮುಟಾಟ್‌ಕರ್ ಅವರು ಅಲ್ಲಿಗೆ ಬಂದಿದ್ದರು. ಲಕ್ನೋದಲ್ಲಿದ್ದ ಒಬ್ಬ ಕರ್ನಾಟಕ ಸಂಗೀತಗಾರನ ಸಹಾಯದಿಂದ ಆಕೆ ಈ ವರ್ಣದ ಸಂಸ್ಕೃತ ರೂಪವನ್ನು ಶುದ್ಧ ದಕ್ಷಿಣಾದಿ ಶೈಲಿಯಲ್ಲಿ ಹಾಡಲು ಅಭ್ಯಾಸ ಮಾಡಿದ್ದರು. ಶ್ರೀಮತಿ ಸುಮತಿ ಮುಟಾಟ್‌ಕರ್ ಅವರು ಸಂಸ್ಕೃತ ರೂಪವನ್ನು ಹಾಗೂ ನಾನು ಮೂಲ ತೆಲುಗಿನಲ್ಲಿ ಆ ವರ್ಣವನ್ನು ಒಟ್ಟಿಗೆ ಹಾಡಿದೆವು. ವರ್ಷಕಾಲ ಆ ಕೃತಿಯನ್ನು ಒಟ್ಟಿಗೆ ಅಭ್ಯಾಸ

ಮಾಡಿದ್ದೆವೋ ಎಂಬಂತೆ ನಾನು ಹಾಡಿದ್ದು ಪ್ರೇಕ್ಷಕರಿಗೆ ವಿಶೇಷವಾದ ಆಶ್ಚರ್ಯವನ್ನುಂಟುಮಾಡಿತು. ಗಾಯಕ ವಾದಕ ಇಬ್ಬರ ದೃಷ್ಟಿಯಿಂದಲೂ ಕರ್ನಾಟಕ ಸಂಗೀತದ ಗಾಯನದ ಅಭ್ಯಾಸದಲ್ಲಿ ವರ್ಣಪ್ರಕಾರದ ಪ್ರಾಮುಖ್ಯ ಏನು ಎಂಬುದನ್ನು ವಿವರಿಸಲಾಯಿತು. ಆನಂತರದಲ್ಲಿ ಶ್ರೀಮತಿ ಸುಮತಿ ಮುಟಾಟ್‌ಕರ್ ಅದನ್ನು ಹಾಡುತ್ತಿರುವಾಗ ನಾನು ಜೊತೆಯಲ್ಲೇ ಪಿಟೀಲಿನಲ್ಲಿ ನುಡಿಸಿದೆ. ಆ ಪ್ರಯತ್ನದ ನಿಖರತೆ ಪ್ರೇಕ್ಷಕರಿಗೆ ಚೆನ್ನಾಗಿ ಮನವರಿಕೆಯಾಯಿತು. ನಾಗಪುರ ಜಬ್ಬಲ್ಪುರಗಳಲ್ಲಿ ಪ್ರೊ. ರತನ್ ಜಂಕರ್ ಅವರಿಗೆ ಅನೇಕ ಬಾರಿ ಪಿಟೀಲು ನುಡಿಸುವ ಭಾಗ್ಯ ನನ್ನದಾಗಿತ್ತು.

ಪ್ರೊ. ರತನ್ ಜಂಕರ್ ಅವರು ವರ್ಣಗಳ ಒಂದು ಪುಸ್ತಕವನ್ನು ಪ್ರಕಟಿಸಿದ್ದರು. ಇವು ಈಗ ಭಾತ್ಕಂಡೆ ವಿಶ್ವವಿದ್ಯಾಲಯದ ಸಂಗೀತ ವಿಶಾರದ ಪರೀಕ್ಷೆಯ ಪಠ್ಯಕ್ರಮದಲ್ಲಿ ಸೇರಿವೆ. ಅನೇಕರು ಅವುಗಳನ್ನು ಸರಿಯಾಗಿ ಕಲಿಯುವರೆಂದಾಗಲೀ, ಶುದ್ಧವಾಗಿ ಪ್ರಯೋಗಿಸುವ ರೆಂದಾಗಲೀ ನೆಚ್ಚಿಗೆಯಿಲ್ಲ. ೧೯೫೫ ರಲ್ಲಿ ನಾನು ಜಬ್ಬಲ್ಪುರಕ್ಕೆ ಹೋದಾಗ 'ಭಾತ್ಕಂಡೆ ಕಾಲೇಜ್ ಆಫ್ ಮ್ಯೂಸಿಕ್' ನಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳಿಗೆ ಕೆಲವು ವರ್ಣಗಳನ್ನು ಹೇಳಿಕೊಟ್ಟೆ.

ಸ್ವರ ಪ್ರಸ್ತಾರದೊಡನೆ ಪ್ರೊ. ರತನ್ ಜಂಕರ್ ಅವರ ರಚನೆಗಳನ್ನು ಒಳಗೊಂಡ ''ಅಭಿನವ ರಾಗ ಮಂಜರಿ'' ಕೃತಿಯು ಹಿಂದೂಸ್ತಾನಿ ಸಂಗೀತದ ಸಾಹಿತ್ಯಕ್ಕೆ ಅವರ ಪ್ರಮುಖ ಕೊಡುಗೆಯಾಗಿದೆ. 'ಸಂಗೀತ' (ಸಂಗೀತ್ ಅಲ್ಲ) ಹಾಗೂ 'ಲಕ್ಷ್ಯ ಸಂಗೀತ್' ಎಂಬ ಎರಡು ಪತ್ರಿಕೆಗಳೊಂದಿಗೆ ರತನ್ ಜಂಕರ್ ಅವರು ಕಾರ್ಯಶೀಲರಾಗಿದ್ದರು. ದುರದೃಷ್ಟವಶಾತ್ ಆ ಪತ್ರಿಕೆಗಳು ಅಲ್ಪಾಯುಗಳಾದವು.

ಒಂದು ಸಂಜೆ ನಾಗಪುರದ ಅಂಬಾಝುರಿ ಬಡಾವಣೆಯ ನನ್ನ ಮನೆಯ ಮುಂದೆ ಕಾರಿನಿಂದ ಪ್ರೊ. ರತನ್ ಜಂಕರ್ ಕೆಳಕ್ಕೆ ಇಳಿದರು. ಕೆಲವು ದಿನಗಳ ಹಿಂದೆ ಅವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ನಿಜವಾದ ಅರ್ಹತೆ ಇದ್ದು ಲಭಿಸಿದ ಈ ಸನ್ಮಾನಕ್ಕಾಗಿ ನಾನು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದೆ. ದಕ್ಷಿಣ ಭಾರತದ ಯಾವುದೋ ಗಿರಿಧಾಮದಿಂದ (ಬಹುಶಃ ಪಶುಮಲೈ) ರೆವರೆಂಡ್ ಬ್ರೈಟ್ ಎನ್ನುವವರಿಂದ ರಾಗಗಳ ವಿಷಯವಾಗಿ ಯಾವುದಾದರೂ ಪತ್ರ ನನಗೆ ಬಂದಿದೆಯೇ ಎಂದು ಅವರು ವಿಚಾರಿಸಿದರು. ಇಲ್ಲವೆಂದು ಉತ್ತರಿಸಿದೆ. ನನ್ನ 'ರಾಗನಿಧಿ' ಯಲ್ಲಿರುವಂತೆ ನೂರು ಉತ್ತರಾದಿ ಮತ್ತು ದಕ್ಷಿಣಾದಿ ರಾಗಗಳ ಲಕ್ಷಣ, ಅವುಗಳ ಸಮಾನ ರಾಗಗಳು ಮುಂತಾದ ವಿಷಯಗಳ ಅಧ್ಯಯನದಲ್ಲಿ ರೆವರೆಂಡ್ ಬ್ರೈಟ್ ಎಂಬುವವರು ಆಸಕ್ತರಾಗಿದ್ದಾರೆಂದು ರತನ್ ಜಂಕರ್ ಅವರು ನನಗೆ ವಿವರಿಸಿದರು. ಆತ ಪ್ರೊ. ರತನ್ ಜಂಕರ್ ಅವರಿಗೂ ಪ್ರೊ. ಸಾಂಬಮೂರ್ತಿಗಳಿಗೂ ರಾಗಗಳ ಪಟ್ಟಿಗಳನ್ನು ಕಳಿಸಿದ್ದರಂತೆ. ಕೇವಲ ಹಿಂದೂಸ್ತಾನಿ ಸಂಗೀತಕ್ಕೆ ಸಂಬಂಧಿಸಿದಂತೆ ಅವರಿಗೆ ಬೇಕಿದ್ದ ಮಾಹಿತಿಗಳನ್ನು ಪ್ರೊ. ರತನ್ ಜಂಕರ್ ನೀಡಿದರು. ಪ್ರೊ. ಸಾಂಬಮೂರ್ತಿಗಳಾದರೋ ಕೇವಲ ಕರ್ನಾಟಕ ರಾಗಗಳ ಬಗ್ಗೆ ವಿವರಿಸಿದರು. ಸಮಾನಾಂತರ ರಾಗಗಳ ವಿಷಯಗಳ ಬಗ್ಗೆ ನನಗೆ ಪತ್ರ ಬರೆಯಬೇಕೆಂದು ಪ್ರೊ. ರತನ್ ಜಂಕರ್ ಅವರು ರೆವರೆಂಡ್ ಬ್ರೈಟ್ ಅವರಿಗೆ ಸೂಚಿಸಿದರು. ಈ ಎಲ್ಲಾ ಪತ್ರ ವ್ಯವಹಾರವು ಮೂರನೆಯವರ ಮೂಲಕ, ಲಕ್ನೋದ ಒಂದು ಸಂಸ್ಥೆಯ ಮೂಲಕ ನಡೆದಿದ್ದರಿಂದ ನನಗೆ ಬರೆಯಲಿಲ್ಲವೆಂದು ತೋರುತ್ತದೆ. ಆ ವೇಳೆಗೆ ರಾಗನಿಧಿಯ ಮೊದಲ ಭಾಗ ಪ್ರಕಟವಾಗಿತ್ತು. ಆಕಾಶವಾಣಿಯ ಕೇಂದ್ರೀಯ ಸಲಹಾ ಸಮಿತಿಯ ಸಭೆಗಳಲ್ಲಿ ಹಾಗೂ ಹಿಂದೂಸ್ತಾನಿ ಸಂಗೀತದ ಅಂತಿಮ ಹಂತದ ಸ್ಪರ್ಧೆಗಳ ನಿರ್ಣಾಯಕ ಸಮಿತಿಯ ಸದಸ್ಯನಾಗಿ ಪ್ರೊ. ರತನ್ ಜಂಕರ್ ಅವರನ್ನು ನಾನು ದೆಹಲಿಯಲ್ಲಿ ಭೇಟಿ ಮಾಡುತ್ತಿದ್ದೆ. ನಾನು ಸ್ವತಃ ಪಿಟೀಲು ಹಾಗೂ ವಿಚಿತ್ರವೀಣಾ ವಾದಕನಾಗಿದ್ದರೂ ಆಕಾಶವಾಣಿಯ ಕೇಂದ್ರೀಯ ಸಲಹಾ ಸಮಿತಿಯಲ್ಲಿ ಹಾರ್ಮೋನಿಯಂ, ಕ್ಲಾರಿಯೋನೆಟ್, ಹಾಗೂ ಗಿಟಾರ್‌ಗಳ ಪರವಾಗಿ ವಕೀಲಿ ವಹಿಸುತ್ತಿದ್ದ ಕೆಲವರಲ್ಲಿ ನಾನೂ ಒಬ್ಬ. ಹಾರ್ಮೋನಿಯಂ ಅನ್ನು ಮತ್ತೆ ಸ್ಥಾಪಿಸಲು ಸಾಧ್ಯವಾಗದೇ ಹೋದರೂ ಕ್ಲಾರಿಯೋನೆಟ್ ಮತ್ತು ಗಿಟಾರ್‌ಗಳ ಪದಚ್ಯುತಿಯನ್ನು ತಡೆಯಲು ಸಾಧ್ಯವಾಯಿತು.

ಮದ್ರಾಸಿನ ಮ್ಯೂಸಿಕ್ ಅಕಾಡೆಮಿಯ ಸಭಾಂಗಣದ ಪ್ರಾರಂಭೋತ್ಸವಕ್ಕೆ ಶ್ರೀ ಕೃಷ್ಣ ರತನ್ ಜಂಕರ್ ಅವರು ಅಭೋಗಿ ರಾಗ, ರೂಪಕ ತಾಳದಲ್ಲಿ ಸಂಸ್ಕೃತ ಭಾಷೆಯಲ್ಲಿದ್ದ ತಮ್ಮ ಕೃತಿಯೊಂದನ್ನು ಶುಭಾಶಯ ರೂಪವಾಗಿ ಕಳುಹಿಸಿಕೊಟ್ಟಿದ್ದರು. ತಜ್ಞರ ಸಮಿತಿಯ ಸಭೆಯ ಕೊನೆಯ ದಿನ ಈ ಕೃತಿಯನ್ನು ಸ್ವರ ಪ್ರಸ್ತಾರಕ್ಕನುಗುಣವಾಗಿ ಹಾಡಲು ಡಾ. ರಾಘವನ್ ಅವರು ನನ್ನನ್ನು ಕೋರಿದರು. ಇದಕ್ಕೆ ಶ್ರೋತೃಗಳಿಂದ ಉತ್ತಮ ಪ್ರತಿಕ್ರಿಯೆ ಲಭಿಸಿತು.

೧೯೬೭ರ ಜನವರಿ ಒಂದರಂದು ನಲವತ್ತನೆಯ ಸಂಗೀತ ಸಮ್ಮೇಳನದ ಸದಸ್‌ನ ದಿನ ಮ್ಯೂಸಿಕ್ ಅಕಾಡೆಮಿಯಿಂದ ನನಗೆ ಒಂದು ವಿಶೇಷ ಪ್ರತಿಭಾ ಪ್ರಮಾಣಪತ್ರ ನೀಡಲಾಯಿತು. ಆ ಸಂದರ್ಭದಲ್ಲಿ ಪ್ರೊ. ರತನ್ ಜಂಕರ್ ಅವರು ೨೦ ವರ್ಷಗಳಿಗೂ ಮಿಕ್ಕಿದ ನಮ್ಮ ಪರಿಚಯದ ಬಗ್ಗೆ ಹೇಳಿದರಲ್ಲದೆ ನಾನು ಅವರಿಗೆ ನೀಡಿದ ಪಿಟೀಲು ಪಕ್ಕವಾದ್ಯದ ಬಗ್ಗೆಯೂ ಉಲ್ಲೇಖಿಸಿದರು.

೧೫. ಮುಂಬೈನ ಪಂಡಿತ್ ವಿಷ್ಣು ದಿಗಂಬರ್ ಪಲುಸ್ಕರ್

ಮೊದಲ ಬಾರಿ ವಿಷ್ಣು ದಿಗಂಬರ್ ಪಲುಸ್ಕರ್ ಅವರ ಸಂಗೀತವನ್ನು ನಾನು ಕೇಳಿದ್ದು ಮುಂಬೈನ ಸ್ಯಾಂಡ್‌ಹರ್ಸ್ಟ್ ರಸ್ತೆಯಲ್ಲಿ ಅವರೇ ಸ್ಥಾಪಿಸಿದ್ದ 'ಮಹಾಗಂಧರ್ವ ವಿದ್ಯಾಲಯ'ದಲ್ಲಿ. ಈ ವಿದ್ಯಾಲಯದ ವಿದ್ಯಾರ್ಥಿಗಳು ನೀಡಿದ ಕಾರ್ಯಕ್ರಮಕ್ಕೆ ೧೯೧೫ ರಲ್ಲಿ ನಾನು ಸಹೋದರನೊಂದಿಗೆ ಹೋಗಿದ್ದೆ. ಬಾಲಕ ಬಾಲಕಿಯರಿಬ್ಬರೂ ಇದ್ದರು. ಅಂದಿನ ಸಂಗೀತದ ಕಾರ್ಯಕ್ರಮವನ್ನು ಕೇಳಲು ಬಂದವರಲ್ಲಿ ಮೂರು ಮಹಾರಾಜರು, ಯುವರಾಜರು ಉಪಸ್ಥಿತರಿದ್ದರು. ಅವರಲ್ಲಿ ಒಬ್ಬರು ಮೈಸೂರಿನ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಅವರ ಸಹೋದರರಾದ ಯುವರಾಜರು.

ಹುಡುಗರೆಲ್ಲಾ ಶ್ವೇತ ವರ್ಣದ ಶರ್ಟ್ ಪ್ಯಾಂಟ್ ಹಾಗೂ ಹಳದಿ ಪೇಟದ ಸಮವಸ್ತ್ರ ಧರಿಸಿದ್ದರು. ಪಂಡಿತ್ ವಿಷ್ಣು ದಿಗಂಬರರು ಕೂಡ ಅದೇ ಬಣ್ಣದ ಪೇಟಾ, ಬಿಳಿಯ ಪಂಚೆ ಹಾಗೂ ಕೋಟು ಧರಿಸಿದ್ದರು. ಪ್ರತಿಯೊಂದೂ ಅತ್ಯಂತ ವ್ಯವಸ್ಥಿತವಾಗಿತ್ತು. ಗಾಯನ ಹಾಗೂ ವಾದನಗಳೆರಡೂ ಬಹಳ ಚೆನ್ನಾಗಿದ್ದವು. ಪಂಡಿತ್ ಜೀ ಅವರ ತುಳಸೀ ದಾಸ್ ರಾಮಾಯಣದ ಪ್ರವಚನ ಅಥವಾ ಸಂಗೀತಾತ್ಮಕ ಪಠಣವನ್ನು ನಾನು ಕೇಳಿದೆ. ಅದೂ ಮನಮೋಹಕವಾಗಿತ್ತು. ಖ್ಯಾತ ಸಂಗೀತ ಗಾರರಿಂದ ಅಂಥ ಪ್ರವಚನಗಳು, ಹರಿಕಥೆಗಳು ಇಂದು ಇರಬಾರದೆ! ಯುವಜನತೆಯಲ್ಲಿ ಉತ್ತಮ ಮೌಲ್ಯಗಳನ್ನು ಬೆಳೆಸಲು ಖ್ಯಾತ ಸಂಗೀತ ಗಾರರ ಪ್ರವಚನ ಮತ್ತು ಹರಿಕಥೆಗಳು ಬಹಳ ಸಹಕಾರಿಯಾಗ ಬಲ್ಲವು.

೧೯೨೦ರಲ್ಲಿ ನಾಗಪುರದ ಕ್ರಾಡಕ್ ಪಾರ್ಕಿನಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸಭೆ ನಡೆಯಿತು. ಕಾಂಗ್ರೆಸ್ ಅಭ್ಯರ್ಥಿಗಳಿಗಾಗಿ ರೈಲ್ವೆ ಲೈನಿನ ಪಕ್ಕದಲ್ಲಿ ಗುಡಿಸಲುಗಳನ್ನು ನಿರ್ಮಿಸಲಾಯಿತು. ಈ ಬಡಾವಣೆಗೆ ಈಗ ಕಾಂಗ್ರೆಸ್ ನಗರ ಎಂದೇ ಹೆಸರು. ಪಂಡಿತ್ ದಿಗಂಬರ್ ಪಲುಸ್ಕರ್ ಬಂದು ಸಭೆಯಲ್ಲಿ ಭಾಗವಹಿಸುವರೆಂದೂ, ವಂದೇ ಮಾತರಂ ಹಾಡುವರೆಂದೂ ನಿರೀಕ್ಷಿಸಲಾಯಿತು. ಅಂತೆಯೇ ಅವರು ಪ್ರಾರಂಭಕ್ಕೆ ಕೆಲವು ದಿನಕ್ಕೆ ಮುಂಚೆಯೇ ಒಂದು ಗುಡಿಸಿಲಿನಲ್ಲಿ ಉಳಿದರು. ಅವರ ಸಂಗೀತವನ್ನು ಆಲಿಸಲು ಆಸಕ್ತನಾದ ನಾನು ಸಂಜೆಯ ವೇಳೆ ಅವರ ಗುಡಿಸಿಲಿನ ಸಮೀಪ ನಿಲ್ಲುತ್ತಿದ್ದೆ. ಮಂದ್ರ ಸಪ್ತಕದ (ಖರಜ್) ಸ್ವರಗಳನ್ನು ಸ್ಪಷ್ಟವಾಗಿ ಹಾಡುವುದರ ಹೊರತು ಅವರು ಬೇರಾವ ಅಭ್ಯಾಸವನ್ನೂ ಮಾಡುತ್ತಿರಲಿಲ್ಲ. ಅವರ ಅದ್ಭುತ ವಾದ ಕಂಠಸಿರಿಯ ಗುಟ್ಟು ಈ ಖರಜ್ ಅಭ್ಯಾಸವಾಗಿತ್ತು. ಕಾಂಗ್ರೆಸ್ ಪೆಂಡಾಲಿನಲ್ಲಿ ಅವರು ಹಾಡಿದ ವಂದೇ ಮಾತರಂ ಹೊರಗೆ ನಿಂತ ಜನರಿಗೆ ಸ್ಪಷ್ಟವಾಗಿ ಕೇಳಿಸುತ್ತಿತ್ತು. ಆ ದಿನಗಳಲ್ಲಿ ಧ್ವನಿವರ್ಧಕಗಳಂತೂ ಇರಲೇ ಇಲ್ಲ.

ಮುಂಬಯಿಯಲ್ಲಿದ್ದ ಗಂಧರ್ವ ಮಹಾವಿದ್ಯಾಲಯ ಅವನತಿಯತ್ತ ಸಾಗಿತು ಹಾಗೂ ಪಂಡಿತ್ ದಿಗಂಬರ್ ಪಲುಸ್ಕರ್ ಅವರು ನಾಸಿಕ್‌ಗೆ ತೆರಳಿದರು ಎಂಬುದು ತೀರಾ ವಿಷಾದನೀಯ. ಪೂನಾ, ಕಾನ್ಪುರ, ದೆಹಲಿ ಮುಂತಾದ ಕಡೆಗಳ ಗಂಧರ್ವ ಮಹಾವಿದ್ಯಾಲಯದ ಶಾಖೆಗಳು ಚೆನ್ನಾಗಿ ಕಾರ್ಯನಿರ್ವಹಿಸುತ್ತಿದ್ದು ವಿದ್ಯಾವಂತ ಸಮುದಾಯದಲ್ಲಿ ಶಾಸ್ತ್ರೀಯ ಹಿಂದೂಸ್ತಾನಿ ಸಂಗೀತವನ್ನು ಜನಪ್ರಿಯಗೊಳಿಸಲು ಅಪಾರ ಶ್ರಮವಹಿಸಿದ ವಿಷ್ಣು ದಿಗಂಬರ್ ಪಲುಸ್ಕರ್ ಅವರ ನೆನಪನ್ನು ಅವು ಉಳಿಸಿವೆ ಎನ್ನುವುದು ಪ್ರೋತ್ಸಾಹದಾಯಕವಾಗಿದೆ.

ವಿಷ್ಣು ದಿಗಂಬರ್ ಪಲುಸ್ಕರ್ ಅವರ ಪುತ್ರ ಡಿ. ವಿ. ಪಲುಸ್ಕರ್ ತಂದೆಗೆ ತಕ್ಕ ಮಗನೆಂದು ಸಾಧಿಸಿ ತೋರಿಸಿದರು. ಆದರೆ ಇನ್ನೂ ೩೦ ವರ್ಷದ ವಯಸ್ಸಿಗೆ ನಮ್ಮಿಂದ ಅವರು ಸೆಳೆದೊಯ್ಯಲ್ಪಟ್ಟದ್ದು ಸಂಗೀತ ಜಗತ್ತಿಗೆ ಒಂದು ಆಘಾತವೇ ಸರಿ. ಅವರ ಶಿಷ್ಯರ ಪೈಕಿ ಪ್ರೊ. ನಾರಾಯಣರಾವ್ ವ್ಯಾಸ್, ಪಂಡಿತ್ ವಿನಾಯಕರಾವ್ ಪಟವರ್ಧನ್, ಪಂಡಿತ್ ಓಂಕಾರನಾಥ ಠಾಕೂರ್ ಮತ್ತು ಪಂಡಿತ್ ವಾಮನರಾವ್ ಪಾಧ್ಯೆ ಇವರೆಲ್ಲಾ ಅಖಿಲ ಭಾರತ ಖ್ಯಾತಿಗಳಿಸಿದವರು. ಈ ಖ್ಯಾತ ಸಂಗೀತಗಾರರ ಹಾಗೂ ಅವರ ಶಿಷ್ಯರ ಪ್ರಯತ್ನಗಳಿಂದಾಗಿ ವಿಷ್ಣು ದಿಗಂಬರರ ಪರಂಪರೆಯ ಜ್ಯೋತಿ ಪ್ರಕಾಶಿಸುತ್ತಿದೆ.

೧೬. ಒಬ್ಬ ಅತಿಥಿ

೧೯೩೦ರಿಂದ ೪೦. ಈ ಹತ್ತು ವರ್ಷಗಳ ಕಾಲ ನಾಗಪುರದ ಅಗ್ರಿಕಲ್ಚರಲ್ ಕಾಲೇಜಿನ ವಿದ್ಯಾರ್ಥಿನಿಲಯಕ್ಕೆ ನಾನು ವಾರ್ಡನ್ ಆಗಿದ್ದೆ. ವಿದ್ಯಾರ್ಥಿನಿಲಯವು ಕಾಲೇಜಿನಿಂದ ಕೇವಲ ನೂರು ಗಜ ಅಂತರದಲ್ಲಿದೆ.

ನಮ್ಮ ನಿವಾಸದ ಮೂರು ಕೋಣೆಗಳ ಪೈಕಿ ಒಂದು ಕೋಣೆಯಲ್ಲಿ ಸಾಮಾನ್ಯವಾಗಿ ಹಿಂದೂಸ್ತಾನಿ ಹಾಗೂ ಕರ್ನಾಟಕ ಸಂಗೀತಗಾರರು ಅತಿಥಿಗಳಾಗಿರುತ್ತಿದ್ದರು. ಆಗಂತುಕರು ಸೌತ್ ಇಂಡಿಯನ್ ಹೊಟೆಲ್ ಅಥವಾ ಇತರ ಹೊಟೆಲ್‌ಗಳಿಗೆ ಹೋಗಿ ಸಂಗೀತಾಸಕ್ತರ ಬಗ್ಗೆ ವಿಚಾರಿಸುತ್ತಿದ್ದರು. ತಕ್ಷಣ ಅವರಿಗೆ ನಮ್ಮ ಮನೆಯನ್ನು ತೋರಿಸ ಲಾಗುತ್ತಿತ್ತು. ವಿದ್ಯಾರ್ಥಿನಿಲಯದ ಚೌಕೀದಾರ, ರಾಮಸಿಂಗ್, ಪಾಪ, ನಾನು ಉಪನ್ಯಾಸ ನಡೆಸುತ್ತಿದ್ದ ತರಗತಿಯ ಕಿಟಕಿಯ ಬಳಿ ಬಂದು ನಿಲ್ಲುತ್ತಿದ್ದ. ಸಾಮಾನ್ಯವಾಗಿ ಅವನು ಬಂದು ನಿಂತನೆಂದರೆ ಯಾರೋ ಸಂಗೀತಗಾರರು ಬಂದಿದ್ದಾರೆಂದೂ, ಉಪನ್ಯಾಸದ ಅನಂತರ ಮನೆಯಲ್ಲಿ ನನ್ನ ಹಾಜರಾತಿ ಅಗತ್ಯವೆಂದೂ ಅರ್ಥ. ವಿದ್ಯಾರ್ಥಿ

ನಿಲಯದ ನಿವಾಸವು 'ಆತಿಥ್ಯದ ನಿವಾಸ' (ಹಾಸ್ಪೈಲ್ ಕ್ವಾಟರ್ಸ್ – ಹಾಸ್ಪಿಟೆಬಲ್ ಕ್ವಾಟರ್ಸ್) ಎಂಬ ಪ್ರಶಂಸಾತ್ಮಕ ಹೆಸರನ್ನೂ ಗಳಿಸಿಕೊಂಡಿತು. ಒಳ್ಳೆಯ ಸಮೃದ್ಧಿಯ ದಿನಗಳು. ಆತಿಥ್ಯ ನಡೆಸುವುದು ಅತೀವ ಆನಂದವನ್ನು ಕೊಡುತ್ತಿತ್ತೇ ಹೊರತು ಹೊರೆ ಎನಿಸುತ್ತಿರಲಿಲ್ಲ.

೧೯೪೦ರಲ್ಲಿ ನನಗೆ ಹೆಚ್ಚುವರಿ ಸಹಾಯಕ ಕೃಷಿ ನಿರ್ದೇಶಕನಾಗಿ ಹೊಶಂಗಾಬಾದ್‌ಗೆ ವರ್ಗವಾಯಿತು. ಸಾಮಾನು ಸರಂಜಾಮುಗಳನ್ನೆಲ್ಲಾ ಅನಂತರ ಲಾರಿಯಲ್ಲಿ ಬರಲೆಂದು ಹಿಂದೆಯೇ ಬಿಟ್ಟು ಪ್ರಯಾಣ ಮಾಡಿದೆ. ಶ್ರೀ ಕೆ. ಎಸ್. ಅಯ್ಯರ್ ಹಾಗೂ ಎಂ. ರಾಮಸ್ವಾಮಿ ಅವರು ಅವೆಲ್ಲವನ್ನೂ ಪ್ಯಾಕ್ ಮಾಡಿಸಿ ಕಳುಹಿಸಿ ಕೊಟ್ಟರು. ಆದರೆ ಸಂಗೀತ ವಾದ್ಯಗಳು ? ಅವನ್ನೆಲ್ಲಾ – ತಂಬೂರಿ, ವೀಣೆ, ಗೊಟ್ಟುವಾದ್ಯ, ಪಿಟೀಲುಗಳು, ಹಾರ್ಮೋನಿಯಂಗಳು, ತಬಲಗಳು, ಎಲ್ಲವನ್ನು ನಾನೇ ರೈಲಿನಲ್ಲಿ ಕೊಂಡೊಯ್ಯಬೇಕಾಯಿತು. ನನ್ನ ಈ ಸಲಕರಣೆಗಳನ್ನು ಜನ ಹೇಗೆ ನೋಡಿರಬೇಕು ನೀವೇ ಊಹಿಸಿಕೊಳ್ಳಿ. ಸಂಜೆ ನಾನು ಹೊಶಂಗಾಬಾದ್‌ಗೆ ತಲುಪಿದಾಗ ಹೊಸ 'ಖಾತಿ ವಾಲಾ ಸಾಹೇಬ್' ರ (ಕೃಷಿ ಅಧಿಕಾರಿ) ನಿವಾಸಕ್ಕೆ ಈ ವಾದ್ಯಗಳ ಮೆರವಣಿಗೆಯೇ ಹೊರಟಿತು. ನನಗಿಂತ ಮುಂಚೆ ಆ ಊರಿನಲ್ಲಿದ್ದು ಈಗ ನಿವೃತ್ತಿ ಹೊಂದಿದ್ದ ಶ್ರೀ ಮಣಿರಾಮ್ ಸಿಂಗ್ ಬರ್ಕಾರ್ ಅವರಿಂದ ನನ್ನ ಸಂಗೀತದ ಚಟುವಟಿಕೆಗಳ ಬಗ್ಗೆ ಅನೇಕರು ಈಗಾಗಲೇ ಕೇಳಿ ತಿಳಿದಿದ್ದರು.

ತಿಂಗಳಲ್ಲಿ ಇಪ್ಪತ್ತು ದಿನಗಳಿಗೂ ಹೆಚ್ಚು ಕಾಲ ನಾನು ಪ್ರವಾಸ ಮಾಡಬೇಕಾಗುತ್ತಿತ್ತು. ಹೊಶಂಗಾಬಾದ್ ಚಿಕ್ಕ ಊರಾಗಿದ್ದು ಅಲ್ಲಿ ಕೇವಲ ಎರಡು ಮೂರು ದಕ್ಷಿಣ ಭಾರತೀಯ ಕುಟುಂಬಗಳು ಇದ್ದವು. ಸಂಗೀತಗಾರರು - ಅದರಲ್ಲೂ ದಕ್ಷಿಣ ಭಾರತದ ಸಂಗೀತಗಾರರು - ನನ್ನಲ್ಲಿಗೆ ಬರುವ ಸಾಧ್ಯತೆಯೇ ಇರಲಿಲ್ಲ. ಆದರೂ ಒಬ್ಬ ಅತಿಥಿ ಆಗಮಿಸಿದರು. ಬಹಳ ಸ್ವಾರಸ್ಯವಾದವರು. ಅದು ನಡೆದದ್ದು ಹೀಗೆ :

ನಾನು ಖಾಂಡ್ವಾದಿಂದ ಬರ್ಹಾಮ್‌ಪುರಕ್ಕೆ ಹೊರಡಬೇಕಾಗಿತ್ತು. ನನ್ನ ಸಾಮಾನು ಸರಂಜಾಮುಗಳನ್ನು ನನ್ನ ಸೇವಕನೊಂದಿಗೆ ರೈಲು ನಿಲ್ದಾಣಕ್ಕೆ ಕಳುಹಿಸಿಯಾಗಿತ್ತು. ವಿಶ್ರಾಂತಿಗೃಹದಿಂದ ರೈಲು ನಿಲ್ದಾಣ ಕೂಗಳತೆಯಲ್ಲಿದ್ದುದರಿಂದ, ರೈಲು ಕಾಲಕ್ಕೆ ಸರಿಯಾಗಿ ಬರುವುದೋ ಇಲ್ಲವೋ ಎಂದು ತಿಳಿದ ಮೇಲೆ ನಿಲ್ದಾಣಕ್ಕೆ ಹೋದರಾಯಿತೆಂದು ವರಾಂಡದಲ್ಲಿ ವಿಶ್ರಮಿಸುತ್ತಿದ್ದೆ. ಅಂದಿನ ದಿನಗಳಲ್ಲಿ ರೈಲುಬಂಡಿಗಳು ವೇಳಾಪಟ್ಟಿಯ ಪ್ರಕಾರ ಚಲಿಸುತ್ತಿರಲಿಲ್ಲ. ಕೆಲವೊಮ್ಮೆ ಹಲವಾರು ಗಂಟೆಗಳಷ್ಟು ತಡವಾಗುತ್ತಿತ್ತು. ಅಂದು ಕೂಡಾ ರೈಲು ತಡವಾಗಿದೆ ಎಂದು ವರ್ತಮಾನ ಬಂದಿತು.

ನನ್ನ ಬಳಿ ಓದಲು ಕಾದಂಬರಿಯಾಗಲೀ, ವರ್ತಮಾನ ಪತ್ರಿಕೆಯಾಗಲೀ ಇರಲಿಲ್ಲ. ಪೊಲೀಸ್ ಖಾತೆಗೆ ಹೊಸದಾಗಿ ಆಯ್ಕೆಯಾದ ಯುವಕರು ಇನ್ನೂ ಸಮವಸ್ತ್ರವೂ ಇಲ್ಲದೆ ತಾಳಕ್ಕೆ ಸರಿಯಾಗಿ ಹೆಜ್ಜೆ ಹಾಕಲಾರದೆ ತಮ್ಮ ಮೊದಲ ತರಗತಿಯಲ್ಲಿ ಭಾಗವಹಿಸುತ್ತಿದ್ದುದ್ದನ್ನು ನೋಡುತ್ತಾ ಇದ್ದೆ. ವಿಶ್ರಾಂತಿಗೃಹದ ಎದುರಿಗೇ ಪೊಲೀಸ್ ಪೆರೇಡ್ ಮೈದಾನ ಇದ್ದಿತು.

ಸಂಗೀತಗಾರನಂತೆ ಕಾಣುವ ಒಬ್ಬ ವ್ಯಕ್ತಿ ರಸ್ತೆಯಲ್ಲಿ ಹೋಗುತ್ತಿದ್ದುದ್ದನ್ನು ಕಂಡೆ. ನಿಲುವಂಗಿ ಧರಿಸಿ, ದೊಡ್ಡ ಪೇಟಾ ತೊಟ್ಟಿದ್ದ ಆತ ಒಂದು ದೊಡ್ಡ ತಂಬೂರಿಯನ್ನು ಹಿಡಿದಿದ್ದ. ವಿಶ್ರಾಂತಿಗೃಹದ ಮೇಟಿಗೆ ಆತನನ್ನು ಕರೆಯಲು ಹೇಳಿದೆ. ಮಹಾ ಸಂಗೀತ ಪ್ರೇಮಿಯಾದ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಲು ಅವರ ಬಂಗ್ಲೆಗೆ ಹೋಗುತ್ತಿರುವುದಾಗಿ ಸಂಗೀತಗಾರ ಹೇಳಿದ. 'ಈ ಸಾಹೇಬರೂ ದೊಡ್ಡ ಸಂಗೀತ ಪ್ರೇಮಿ' ಎಂದು ಮೇಟಿ ಉಸ್ತಾದ್‌ನಿಗೆ ತಿಳಿಸಿದ. ಸಂಗೀತಗಾರ ಹಾಡಲು ಮುಂದಾದ. ತೋಡಿಯಲ್ಲಿ ಒಂದು ಹಾಡು ಹಾಡಿದ. ಅದು ಚೆನ್ನಾಗಿತ್ತು. ನಾನು ನಿಲ್ದಾಣಕ್ಕೆ ಹೊರಡುವ ವೇಳೆಯಾಗಿತ್ತು. ರೈಲು ಆಗಲೇ ಹೊಗೆಯುಗುಳುತ್ತಾ ಒಳಬರುತ್ತಿತ್ತು. ನಾನು ನನ್ನ ವಿಸಿಟಿಂಗ್ ಕಾರ್ಡ್‌ನ್ನು ಉಸ್ತಾದ್‌ನಿಗೆ ನೀಡಿ ಒಂದು ತಿಂಗಳನಂತರ ನನ್ನನ್ನು ಹೊಶಂಗಾಬಾದ್‌ನಲ್ಲಿ ಭೇಟಿಯಾಗಲು ತಿಳಿಸಿದೆ.

ನನ್ನ ಕೇಂದ್ರಸ್ಥಾನವಾದ ಹೊಶಂಗಾಬಾದ್‌ಗೆ ಹದಿನೈದು ದಿನಗಳ ಅನಂತರ ಹಿಂದಿರುಗಿ ಬಂದೆ. ಮನೆ ತಲುಪಿದಾಗ ರೊಚ್ಚಿಗೆದ್ದಿದ್ದ ನನ್ನ ಹೆಂಡತಿ, ನಾನು ಊರಿನಲ್ಲಿಲ್ಲದಾಗ ಸಂಗೀತಗಾರನೊಬ್ಬನನ್ನು ಅತಿಥಿಯಾಗಿ ಕಳುಹಿಸಿದ್ದೆನೆಂದು ನನ್ನನ್ನು ತರಾಟೆಗೆ ತೆಗೆದುಕೊಂಡಳು. ಅತಿಥಿ ಯಾರೆಂದು ನಾನು ವಿಚಾರಿಸಿದೆ. ಖಾಂಡ್ವಾದಿಂದ ನಾನು ಕಳುಹಿಸಿದ ಸಂಗೀತಗಾರನೆಂದು ಅವಳು ಹೇಳಿದಳು. ''ನೀವು ಖಾಂಡ್ವಾಕ್ಕೆ ಹೊರಟ ಮೂರು ದಿನಗಳ ಅನಂತರ ಆತ ಬಂದ, ಹೇಳಿದ, 'ಸಾಹೇಬರು ತಾವು ಹಿಂದಿರುಗುವವರೆಗೂ ತಮ್ಮ ಮನೆಯಲ್ಲಿ ಇರಲು ನನಗೆ ಹೇಳಿದ್ದಾರೆ' ಎಂದು. ನಿಮ್ಮ ವಿಸಿಟಿಂಗ್ ಕಾರ್ಡ್ ಕೂಡಾ ತೋರಿಸಿದ." ನನ್ನ ಹೆಂಡತಿಗೆ ಏನು ಮಾಡಬೇಕೆಂದು ತೋಚಿರಲಿಲ್ಲ. ನನ್ನ ಗೈರುಹಾಜರಿಯಲ್ಲಿ ಅವಳು ಒಬ್ಬ ಅತಿಥಿಯನ್ನು ಮನೆಯಲ್ಲಿ ಇರಿಸಿಕೊಳ್ಳುವುದು ಅಸಾಧ್ಯವಾಗಿತ್ತು. ನನ್ನ ಗುಮಾಸ್ತೆ ಮಿಸ್ಟರ್ ಭಿರ್‌ಸುಲಾಗೆ ಹಾಗೂ ಆಫೀಸಿನ ಆಳು ಚುನಿಲಾಲ್‌ಗೆ ಆಕೆ ಹೇಳಿ ಕಳುಹಿಸಿ ಕಛೇರಿ ಕಟ್ಟಡದಲ್ಲೇ ಆತ ಉಳಿದುಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ಹೇಳಿದಳು. ಅಲ್ಲಿ ಅನೇಕ ಉಗ್ರಾಣದ ಕೋಣೆಗಳು ಖಾಲಿ ಇದ್ದವು. ಆತನಿಗೆ ಚಹಾ, ಒಳ್ಳೆಯ ಊಟ, ತಿಂಡಿಗಳು ಸರಬರಾಜಾಗುವಂತೆ ನನ್ನ ಹೆಂಡತಿ ನೋಡಿಕೊಂಡಳು. ಆದರೆ ತಾನೊಬ್ಬ ದೊಡ್ಡ ಮನುಷ್ಯನೆಂದು ಭಾವಿಸಿದ್ದ ಸಂಗೀತಗಾರ ತನಗಾಗಿ ಕಳುಹಿಸಿದ್ದ ಊಟ, ತಿಂಡಿಗಳಲ್ಲಿ ಲೋಪ ಹುಡುಕುತ್ತಿದ್ದನಂತೆ. ನನ್ನ

ಹೆಂಡತಿ ಬೇಸತ್ತಿದ್ದಳು. ರಾವ್ ಸಾಹೇಬರ ಅತಿಥಿಯೆಂದು ಬೀಗುತ್ತಾ ಹೊಶಂಗಾಬಾದ್‌ನ ರಸ್ತೆಗಳಲ್ಲಿ ತಿರುಗುತ್ತಿದ್ದ ನನ್ನ ಅತಿಥಿಯ ವಿಷಯ ನನ್ನ ಗೆಳೆಯರಿಗೆಲ್ಲಾ ತಿಳಿಯಿತು.

ಆತ ಆ ಕೂಡಲೇ ಹೊರಡಬೇಕೆಂದೂ ನಾನು ಅವನನ್ನು ಭೇಟಿ ಮಾಡಲು ಒಲ್ಲೆನೆಂದೂ ತಕ್ಷಣವೇ ನನ್ನ ಸೇವಕರ ಮುಖಾಂತರ ಹೇಳಿಕಳುಹಿಸಿದೆ. ಸಂಜೆ ಕ್ಲಬ್‌ಗೆ ಹೋದೆ. ನನ್ನ ಗೌರವಾನ್ವಿತ ಅತಿಥಿ ಹೇಗಿರುವನೆಂದು ನನ್ನ ಗೆಳೆಯರೆಲ್ಲಾ ವಿಚಾರಿಸತೊಡಗಿದರು. ಕೆಲಕಾಲ ಅದೊಂದು ದೊಡ್ಡ ತಮಾಷೆಯ ವಿಷಯವಾಗಿತ್ತು.

೧೭. (ಭುಜ್ ಪ್ರಾಂತ್ಯದ ಉಸ್ತಾದ್) ಲಾಲ್ ಖಾನ್

ನಾಗಪುರದ ಮನ್ವಾರ್ ಗಾಯನ ಸಮಾಜದ ಶನಿವಾರದ ಸಭೆ ರಾತ್ರಿ ಒಂಬತ್ತು ಗಂಟೆಗೆ ಮುಕ್ತಾಯವಾಗಿ ಸದಸ್ಯರು ಇನ್ನೇನು ಚದುರಿ ಹೋಗುವುದರಲ್ಲಿದ್ದರು. ಪೇಟಾ ಹಾಗೂ ನಿಲುವಂಗಿಯನ್ನು ಧರಿಸಿ ಸಂಗೀತಗಾರರಂತೆ ಕಾಣುತ್ತಿದ್ದ ಇಬ್ಬರು ವ್ಯಕ್ತಿಗಳೊಡನೆ ಡಾ. ಫನ್ಸಿಕರ್ ಪ್ರವೇಶಿಸಿದರು. ಭುಜ್ ರಾಜ್ಯದ ದರ್ಬಾರಿನ ಲಾಲ್ ಖಾನ್ ಹಾಗೂ ಗ್ವಾಲಿಯರ್ ದರ್ಬಾರಿನಲ್ಲಿ ಸೇವೆಯಲ್ಲಿದ್ದ ಅವರ ತಮ್ಮ (ಅವರ ಹೆಸರು ಮರೆತಿದ್ದೇನೆ) ಎಂದು ಡಾ. ಫನ್ಸಿಕರ್ ಅವರನ್ನು ಪರಿಚಯ ಮಾಡಿಕೊಟ್ಟರು.

ಉಸ್ತಾದ್ ಲಾಲ್ ಖಾನ್ ಹಾಗೂ ಅವರ ತಮ್ಮನ ಸಂಗೀತವನ್ನು ಅರ್ಧ ಗಂಟೆ ಕಾಲ ಆಲಿಸಬೇಕೆಂದು ಡಾ. ಫನ್ಸಿಕರ್ ಸಮಾಜದ ಸದಸ್ಯರನ್ನು ಕೋರಿದರು. ನಾಗಪುರದ ಶ್ರೇಷ್ಠ ಚಿತ್ರಕಾರರೂ ನನ್ನ ಸ್ನೇಹಿತರೂ ಆದ ಶ್ರೀ ಎಮ್. ವಿ. ಅತಾಲೇ ಉತ್ತಮ ಗಾಯಕರೂ, ಹಾರ್ಮೋನಿಯಂ ವಾದಕರೂ ಆಗಿದ್ದರು. ಲಾಲ್ ಖಾನ್ ಅವರಿಗೆ ಹಾರ್ಮೋನಿಯಂ ಸಹಕಾರ ನೀಡಲು ಅತಾಲೇ ಅವರನ್ನು ಕೋರಲಾಯಿತು. ಇಷ್ಟು ಹೊತ್ತಿಗಾಗಲೇ ನನ್ನ ಪಿಟೀಲನ್ನು ಪೆಟ್ಟಿಗೆಯಲ್ಲಿಟ್ಟು ಬೀಗ ಹಾಕಿದ್ದುದರಿಂದ ಅದನ್ನು ಮತ್ತೆ ಹೊರಕ್ಕೆ ತೆಗೆಯಲು ನನಗೆ ಆಸಕ್ತಿ ಇರಲಿಲ್ಲ. ಅಷ್ಟು ಹೊತ್ತಿಗಾಗಲೇ ನಾನು ಮೂರು ಗಂಟೆಗಳ ಪಿಟೀಲು ನುಡಿಸಿದ್ದೆ. ಆದರೂ ನನ್ನನ್ನೂ ವಾದ್ಯ ಸಹಕಾರ ನೀಡಲು ಕೋರಬೇಕೆನಿಸಿದ ಅತಾಲೇ ಅವರು ಪಿಟೀಲು ಸಹಕಾರವು ಬೇಕೆ ಎಂದು ಪ್ರೊ. ಲಾಲ್ ಖಾನ್ ಅವರನ್ನು ಕೇಳಿದರು. ಪ್ರೊ. ಲಾಲ್ ಖಾನ್ ಅವರು ಕಟುವಾಗಿ 'ನನಗೆ ಹಾರ್ಮೋನಿಯಂ ಮಾತ್ರ ಬೇಕು. ಪಿಟೀಲು ಪಕ್ಕ ವಾದ್ಯ ಬೇಡ' ಎಂದರು. ಎಲ್ಲರೂ ಚಕಿತರಾದರು; ಆದರೆ ನನಗೇನೂ ಬೇಸರವಾಗಲಿಲ್ಲ. ಲಾಲ್ ಖಾನ್ ಅವರ ಶಾರೀರ ಚೆನ್ನಾಗಿದ್ದು ಅವರು ಬಹಳ ಚೆನ್ನಾಗಿ ಹಾಡಿದರು. ಸದಸ್ಯರು ಮನೆಗೆ ಹೋಗಲು ಕಾತರರಾಗಿದ್ದರಿಂದ ಅವರು ಒಂದೇ ಒಂದು ಹಾಡು ಹಾಡಲು ಅವಕಾಶವಾಯಿತು. ಅವರ ಸಹೋದರ ಚೆನ್ನಾಗಿ ತಬಲ ನುಡಿಸಿದರು.

ಮಾರನೆಯ ದಿವಸ, ಅದೂ ಸಮಾಜದ ದಿನವಲ್ಲದಿದ್ದರೂ, ಅಕೋಲಾದ ಶ್ರೀ ರಾನಡೆ (ಅವರ ಪೂರ್ಣ ಹೆಸರು ನೆನಪಿಲ್ಲ) ಅವರ ಸಂಗೀತವನ್ನು ಕೇಳಲು ನಾವೆಲ್ಲಾ ಸೇರಿದ್ದೆವು. ಅವರಿಗೆ ಒಳ್ಳೆಯ ಎತ್ತರ ಶ್ರುತಿಯ ಶಾರೀರವಿತ್ತು. ಅವರ ಶ್ರುತಿ ಬಿಳಿ ನಾಲ್ಕು. ಒಳ್ಳೆಯ ಪರಿಣಾಮ ಬೀರುವ ಅವಕಾಶವಿರುವುದರಿಂದ ಇದು ಪಿಟೀಲಿನವರಿಗೂ ಬಹಳ ಒಳ್ಳೆಯ ಶ್ರುತಿ. ಅವರು ಕೆಲವು ಗಂಟೆಗಳ ಕಾಲ ಹಾಡಿದರು. ಅವರ ಕೊನೆಯ ಹಾಡು ರಾಗ ಬಹಾರ್‌ನಲ್ಲಿತ್ತು. ಆ ಹಾಡಿನ ಮಧ್ಯದಲ್ಲಿದ್ದಾಗ ಉಸ್ತಾದ್ ಲಾಲ್ ಖಾನ್ ಹಾಗೂ ಅವರ ಸೋದರರ ಪ್ರವೇಶ ನಮ್ಮನ್ನು ಚಕಿತಗೊಳಿಸಿತು. ಅವರು ಒಳಬಂದು ನನ್ನೆದುರು ನಿಶ್ಶಬ್ದವಾಗಿ ಕುಳಿತರು ಹಾಗೂ ನನ್ನ ಪಿಟೀಲು ವಾದನದಲ್ಲಿ ಬಹಳ ಆಸಕ್ತರಾದರು. ಪಂಡಿತ್ ರಾನಡೆ ಅವರು ತಮ್ಮ ಗಾಯನವನ್ನು ಮುಕ್ತಾಯಮಾಡಿ, ಪ್ರೊ. ಲಾಲ್‌ಖಾನ್ ಅವರನ್ನು ತಮಗಾಗಿ ಒಂದು ಹಾಡನ್ನು ಹಾಡಲು ಕೋರಿದರು. ತಕ್ಷಣ ಒಪ್ಪಿಕೊಂಡ ಲಾಲ್ ಖಾನ್‌ರು ರಾನಡೆ ಅವರ ಜಾಗಕ್ಕೆ ಬಂದರು. ನಾನು ನನ್ನ ಪಿಟೀಲನ್ನು ಅದರ ಪೆಟ್ಟಿಗೆಯಲ್ಲಿಟ್ಟು ಶ್ರೋತೃಗಳೊಡನೆ ಕುಳಿತುಕೊಳ್ಳುವುದರಲ್ಲಿದ್ದೆ. ಆಗ ಉಸ್ತಾದ್ ಲಾಲ್ ಖಾನ್ ಅವರು ಎಲ್ಲರಿಗೂ ಕೈ ಮುಗಿದು ನುಡಿದರು, ''ಗಣ್ಯರೇ, ನೆನ್ನೆಯ ದಿನ ನಾನು ಪಿಟೀಲು ಪಕ್ಕವಾದ್ಯ ಬೇಡವೆಂದಾಗ ನಿಮಗೆಲ್ಲಾ ಆಶ್ಚರ್ಯವಾಗಿರಬೇಕು. ಈಗ ಒಂದು ವಾರದ ಕೆಳಗೆ ನಾನು ಝಾನ್ಸಿಯಲ್ಲಿ ಒಂದು ಕಛೇರಿ ನೀಡಿದೆ. ಒಬ್ಬ ಗಣ್ಯ ವ್ಯಕ್ತಿ ಪಿಟೀಲು ಪಕ್ಕವಾದ್ಯ ನೀಡುವೆನೆಂದು ಮುಂದಾದರು. ಅವರು ಎಷ್ಟು ಕೆಟ್ಟದಾಗಿ ನುಡಿಸಿದರೆಂದರೆ ನನ್ನ ಕಛೇರಿ ಹಾಳಾಯಿತು. ಹಾಗಾಗಿ ನನಗೆ ಪಿಟೀಲು ಎಂದರೆ ಭಯವಾಗಿತ್ತು. ನೆನ್ನೆ ನಾನು ರಾವ್ ಸಾಹೇಬರ ಪೀಟಿಲು ವಾದನವನ್ನು ಕೇಳಿರಲಿಲ್ಲ; ಈ ದಿನ ಕೇಳಿದ್ದೇನೆ. ನೆನ್ನೆಯ ನನ್ನ ಮಾತುಗಳಿಗೆ ನಾನು ಕ್ಷಮೆ ಕೋರುತ್ತೇನೆ. ಇಂದು ಅವರ ಪಿಟೀಲು ಸಹಕಾರವಿಲ್ಲದೇ ನಾನು ಹಾಡಲಾರೆ.'' ಲಾಲ್ ಖಾನ್‌ರಂತಹ ಗಾಯಕರಿಗೆ ಪಕ್ಕವಾದ್ಯ ನುಡಿಸಲು ನಾನೂ ಕಾತರನಾಗಿದ್ದೆ. ಅಂದು ಅರ್ಧ ರಾತ್ರಿಯವರೆಗೂ ನಮ್ಮ ಸಂಗೀತ ನಡೆಯಿತು.

ನಾವು ಲಾಲ್‌ಖಾನರ ಹಲವು ಕಛೇರಿಗಳನ್ನು ಏರ್ಪಡಿಸಿದೆವು. ಅತಾಲೆಯವರ ಹಾರ್ಮೋನಿಯಂ, ಹಾಗೂ ನನ್ನ ಪಿಟೀಲು ವಾದ್ಯ ಸಹಕಾರವಿಲ್ಲದೆ ಅವರು ಹಾಡಲು ಇಚ್ಛಿಸುತ್ತಿರಲಿಲ್ಲ. ನಾವು ಒಂದು ನಿಶ್ಚಿತ ತಂಡವೇ ಆಗಿಬಿಟ್ಟಿದ್ದೆವು. ಲಾಲ್ ಖಾನರ ಸಂಗೀತ ಒಬ್ಬ ಜಮೀನ್ದಾರನ ಮನೆಯಲ್ಲಿ ಏರ್ಪಟ್ಟಾಗ ಅಂತಹ ಸ್ಥಳಗಳಲ್ಲಿ ಅವರೊಂದಿಗೆ ವಾದ್ಯ ನುಡಿಸಲು ಅತಾಲೆ ಮತ್ತು ನಾನು ಒಪ್ಪಲಿಲ್ಲ.

ಸ್ಥಳೀಯ ಸಾರಂಗೀ ವಾದಕನನ್ನು ಜಮೀನ್ದಾರರು ಗೊತ್ತು ಮಾಡಿದ್ದರು. ಝಾನ್ಸಿಯ ಪಿಟೀಲು ವಾದಕನಷ್ಟೇ ಈ ಸಾರಂಗೀ ವಾದಕನೂ ಕೆಟ್ಟದಾಗಿ ನುಡಿಸಿದನೆಂದು ಮಾರನೆಯ ದಿನ ಲಾಲ್‌ಖಾನರು ದೂರಿದರು.

ನನ್ನ ಗೆಳೆಯ, ಪ್ರಖ್ಯಾತ ಟೆನ್ನಿಸ್ ಛಾಂಪಿಯನ್, ಯು. ಡಿ. ರಂಗ ರಾವ್ ಅವರು ಭುಜ್ ರಾಜ್ಯದ ನವಾಬರ ಆಪ್ತ ಕಾರ್ಯದರ್ಶಿಯಾಗಿದ್ದರು ಎಂದು ಲಾಲ್‌ಖಾನರೊಂದಿಗಿನ ಮಾತುಕಥೆಯಲ್ಲಿ ತಿಳಿದು ನನಗೆ ಸಂತೋಷವಾಯಿತು. ಯು.ಡಿ. ಅವರಿಗೆ ಸಂಗೀತದಲ್ಲಿ ಆಸಕ್ತಿಯಿದ್ದುದು ನನಗೆ ತಿಳಿದಿತ್ತು. ಅವರು ಲಾಲ್ ಖಾನರಿಂದ ಹಿಂದೂಸ್ತಾನಿ ಸಂಗೀತದ ಶಿಕ್ಷಣ ಪಡೆದಿದ್ದರೆಂದು ಕೇಳಿ ಸಂತಸವಾಯಿತು. ಲಾಲ್ ಖಾನ್ ಬಹಳ ಸ್ನೇಹಪರ ವ್ಯಕ್ತಿ. ಅವರಿಗೆ ಹಣ ಮುಖ್ಯವೆನಿಸಿರಲಿಲ್ಲ. ಅವರಿಗೆ ಬೇಕಾದದ್ದು ಮೆಚ್ಚುಗೆ. ಅವರು ಅನೇಕ ಮರಾಠಿ ರಂಗಗೀತೆಗಳನ್ನು ಬಲ್ಲವರಾಗಿದ್ದು ಅವುಗಳನ್ನು ಬಹಳ ಆಕರ್ಷಕವಾಗಿ ಹಾಡುತ್ತಿದ್ದರು.

೧೯೫೫ರಲ್ಲಿ ನಾನು ಮೈಸೂರಿಗೆ ಬಂದಾಗ ಯು. ಡಿ. ರಂಗ ರಾಯರು ಒಂದು ಕಾಲು ಕಳೆದುಕೊಂಡು ಮೈಸೂರಿನಲ್ಲೇ ಇದ್ದಾರೆಂದು ತಿಳಿದುಬಂದಿತು. ಟೆನ್ನಿಸ್ ತಾರೆ ಒಂದೆಡೆಯಿಂದ ಮತ್ತೊಂದೆಡೆಗೆ ಗಾಲಿ ಕುರ್ಚಿಯಲ್ಲಿ ನೂಕಲ್ಪಡುವುದು ಎಷ್ಟು ವಿಷಾದನೀಯ! ಅಂತಹದ್ದರಲ್ಲೂ ಅವರು ಸಂಗೀತ ಕಛೇರಿಗಳಿಗೆ ಬರುತ್ತಿದ್ದರು. ನಾವು ಲಾಲ್ ಖಾನರ ಬಗ್ಗೆ ಮಾತನಾಡುತ್ತಿದ್ದೆವು. ಒಮ್ಮೆ ಕೇಂದ್ರೀಯ ಸಲಹಾ ಸಮಿತಿಯ ಸಭೆಗೆಂದು ನಾನು ದೆಹಲಿಗೆ ಹೋಗಿದ್ದಾಗ ನನ್ನ ಸ್ನೇಹಿತ ಯು. ಡಿ. ಮೃತರಾದರು. ಲಾಲ್ ಖಾನರೂ ಗತಿಸಿದರೆಂದು ತಿಳಿದುಬಂದಿತು.

೧೮. ಪೂನಾದ ಪಂಡಿತ್ ಡಿ. ವಿ. ಪಲುಸ್ಕರ್

ಶ್ರೇಷ್ಠ ಸಂಗೀತಗಾರ ವಿ. ಡಿ. ಪಲುಸ್ಕರ್ ಅವರಿಗೆ ತಕ್ಕವರಾದ ಅವರ ಪುತ್ರ ಡಿ. ವಿ. ಪಲುಸ್ಕರ್ ೧೯೪೬ರಲ್ಲಿ ಜಬ್ಬಲ್ಪುರಕ್ಕೆ ಬಂದಿದ್ದರು. ಅವರೊಂದು ಗಾಯನ ಕಛೇರಿ ನೀಡಿದ್ದರು. ನಾನು ಅವರಿಗೆ ಪಿಟೀಲು ಸಹಕಾರ ನೀಡಿದ್ದೆ. ಒಳ್ಳೆಯ ವಾದಕ ಲಭ್ಯವಿರಲಿಲ್ಲವಾದ್ದರಿಂದ ಹಾರ್ಮೋನಿಯಂ ಬಳಸಲಿಲ್ಲ. ಅವರು ನನ್ನ ಪಿಟೀಲು ಪಕ್ಕವಾದ್ಯವನ್ನು ಬಹಳ ಮೆಚ್ಚಿಕೊಂಡರು ಹಾಗೂ ನನ್ನ ಸೇವಾ ನಿವೃತ್ತಿಯ ಅನಂತರ ನಾವು ಹೆಚ್ಚಾಗಿ ಭೇಟಿ ಮಾಡಬಹುದೆಂದು ಆಶಿಸಿದರು. ದುರದೃಷ್ಟವಶಾತ್ ಅವರ ಅಕಾಲ ಮರಣದಿಂದಾಗಿ ಅವರನ್ನು ಭೇಟಿಯಾಗುವ ಅವಕಾಶವೇ ನನಗೆ ದೊರಕಲಿಲ್ಲ.

ಡಿ. ವಿ. ಅವರನ್ನು ನನ್ನ ಕಾರಿನಲ್ಲಿ ಮಾರ್ಬಲ್ ರಾಕ್ಸ್‌ಗೆ ಕರೆದುಕೊಂಡು ಹೋಗಿದ್ದೆ. ಹಿಂದಿರುಗುವಾಗ ಕಾರು ಕೆಟ್ಟು ಹೋಯಿತು. ಅದೇ ಮಾರ್ಗವಾಗಿ ಅನೇಕ ಕಾರುಗಳು ಜಬ್ಬಲ್ಪುರಕ್ಕೆ ಹೋಗುತ್ತಿದ್ದವು. ಜಬ್ಬಲ್ಪುರದಿಂದ ಒಬ್ಬ ಮೆಕ್ಯಾನಿಕ್ ಬಂದು ರಿಪೇರಿಗಾಗಿ ಕಾರು ತೆಗೆದುಕೊಂಡು ಹೋಗುವವರೆಗೆ ಕಾರು ನೋಡಿಕೊಳ್ಳಲು ನನ್ನ ಡ್ರೈವರ್ ಕೂಡ ಇದ್ದ. ಆದರೂ ನಮ್ಮನ್ನು ಜಬ್ಬಲ್ಪುರಕ್ಕೆ ಕರೆದೊಯ್ಯಲು ಯಾರೂ ನಿಲ್ಲಲಿಲ್ಲ. ಜಬ್ಬಲ್ಪುರದೆಡೆಗೆ ಹೋಗುತ್ತಿದ್ದ ಜೀಪ್ ಒಂದನ್ನು ನೋಡಿ ನಾನು ರಸ್ತೆ ಮಧ್ಯದಲ್ಲಿ ನಿಂತುಬಿಟ್ಟೆ. ಆ ಜೀಪ್‌ನಲ್ಲಿದ್ದವರು ಒಬ್ಬ ಯೂರೋಪಿಯನ್ ಮಿಲಿಟರಿ ಅಧಿಕಾರಿ. ಅವರು ಜೀಪ್ ನಿಲ್ಲಿಸಿದರು. ನನ್ನ ಸ್ನೇಹಿತರು ರಾತ್ರಿ ಒಂಬತ್ತು ಗಂಟೆಗೆ ಸಂಗೀತ ಕಛೇರಿ ನೀಡಬೇಕಾಗಿದೆ ಎಂದೂ, ಇನ್ನೊಂದು ಗಂಟೆಯಲ್ಲಿ ನಾವು ತುರ್ತಾಗಿ ಜಬ್ಬಲ್ಪುರವನ್ನು ತಲುಪಬೇಕಾಗಿದೆ ಎಂದೂ ನಾನು ವಿವರಿಸಿದೆ. ಆತ ದಯೆಯಿಟ್ಟು ನಮ್ಮನ್ನು ಅಲ್ಲಿಗೆ ತಲುಪಿಸಲು ಒಪ್ಪಿದರು. ಅಷ್ಟೇ ಅಲ್ಲದೆ ಇಂತಹ ತುರ್ತು ಸಂದರ್ಭಕ್ಕೆಂದೇ ನಾನು ಇಟ್ಟುಕೊಂಡಿದ್ದ ಉದ್ದನೆಯ, ದಪ್ಪನಾದ ಹಗ್ಗದಿಂದ ನನ್ನ ಕಾರನ್ನು ಅವರ ಜೀಪಿಗೆ ಕಟ್ಟುವಂತೆ ನನ್ನ ಡ್ರೈವರ್‌ಗೆ ಹೇಳಿದರು. ನಮ್ಮನ್ನು ನಮ್ಮ ಮನೆಯಲ್ಲೂ, ಕಾರನ್ನು ರಿಪೇರಿಗಾಗಿ ಫೋರ್ಡ್ ಕಂಪೆನಿಯಲ್ಲೂ ಬಿಟ್ಟರು. ಈ ಗಣ್ಯ ವ್ಯಕ್ತಿಯ ಕರುಣೆಯನ್ನು ನಾನು ಮರೆಯಲಾರೆ.

ಮಾರನೆಯ ಬೆಳಗ್ಗೆ ಡಿ. ವಿ. ಅವರನ್ನು ಮುಂಬೈ ರೈಲಿಗೆ ಹತ್ತಿಸಲೆಂದು ನನ್ನ ಸೈಕಲ್ ಮೇಲೆ ರೈಲು ನಿಲ್ದಾಣಕ್ಕೆ ಹೋದೆ. ಹಿಂದಿರುಗುವಾಗ ನನ್ನ ಸೈಕಲ್‌ನ ಚಕ್ರ ಬಿಟ್ಟುಕೊಂಡು ಬಿದ್ದು ನನ್ನ ತಲೆ ನೆಲಕ್ಕೆ ಹೊಡೆದು ಜ್ಞಾನ ತಪ್ಪಿ ಬಿದ್ದೆ. ಯಾರೋ ನನ್ನನ್ನು ಎತ್ತಿ ತಮ್ಮ ಮನೆಗೆ ಕರೆದೊಯ್ದರು. ಹತ್ತು ಹದಿನೈದು ನಿಮಿಷಗಳ ಅನಂತರ ನನಗೆ ಜ್ಞಾನ ಬಂದಿತು. ನನ್ನನ್ನು ಟಾಂಗಾದಲ್ಲಿ ನಮ್ಮ ಮನೆಗೆ ಕರೆದೊಯ್ದರು. ನನ್ನ ಕಣ್ಣುಗಳಿಗೆ ಬಹಳ ಧೂಳು ಸೇರಿದ್ದರಿಂದ ನನ್ನನ್ನು ಪರೀಕ್ಷಿಸಿದ ಸಿವಿಲ್ ಸರ್ಜನ್ ಚಾರಿ ಅವರು ನನ್ನ ಕಣ್ಣು ಹಾಳಾಗದೆ ಇರಲಾರದು ಎಂದುಬಿಟ್ಟರು. ನನ್ನ ಗಾಯಗಳಿಗಿಂತಲೂ ಮಿಗಿಲಾಗಿ ಕಣ್ಣುಗಳ ವಿಷಯವಾಗಿ ಆತಂಕದಿಂದಾಗಿ ರಾತ್ರಿಯೆಲ್ಲಾ ನಿದ್ದೆಗೆಟ್ಟೆ. ನನ್ನ ಹಸ್ತಗಳು ತರಚಿದ್ದವಲ್ಲದೆ ಮಣಿಗಂಟು ಊದಿಕೊಂಡಿತ್ತು. ಮಾರನೆಯ ಬೆಳಗ್ಗೆ ನನ್ನ ಕಣ್ಣುಗಳನ್ನು ಸ್ವಚ್ಛಗೊಳಿಸಿದ ಮೇಲೆ ನನಗೆ ಬೆಳಕು ಕಾಣಿಸುತ್ತಿದೆಯೇ ಎಂದು ಡಾ. ಚಾರಿಯವರು ಕೇಳಿದರು. ಕಾಣುತ್ತಿದೆ ಎಂದೆ. ಆಗ ಅವರು ನನ್ನ ಕಣ್ಣುಗಳು ಸುರಕ್ಷಿತವಾಗಿವೆ ಎಂದರು. ಚಿಕಿತ್ಸೆಗಾಗಿ ಹತ್ತು ದಿನಗಳ ಕಾಲ ಆಸ್ಪತ್ರೆಯಲ್ಲಿದ್ದೆ. ಈ ಆಘಾತದಿಂದ ಆದ ಶಾಶ್ವತ ಊನವೆಂದರೆ ನನ್ನ ಮಣಿಗಂಟುಗಳು ದುರ್ಬಲವಾದುದು. ಆದ್ದರಿಂದ ನನಗೆ ಪಿಟೀಲನ್ನಾಗಲೀ, ವಿಚಿತ್ರವೀಣೆಯನ್ನಾಗಲೀ, ವೇಗವಾಗಿ ನುಡಿಸಲು ಆಗದು. ಆದರೂ

ಪರವಾಗಿಲ್ಲ. ನನಗೆ ನುಡಿಸಲು, ನನ್ನ ಬಿಡುವಿನ ವೇಳೆಯಲ್ಲಿ ಆನಂದಪಡಲು ಸಾಧ್ಯವಾಗುತ್ತದಲ್ಲ ಎನ್ನುವುದೇ ಸಂತೋಷ.

ನಾಗಪುರದ ಆಕಾಶವಾಣಿ ಕೇಂದ್ರ ಪ್ರಾರಂಭವಾದಾಗ ನಿಲಯದ ನಿರ್ದೇಶಕರು ಪಿಟೀಲು ಕಛೇರಿಗಳನ್ನು ನೀಡುವಂತೆ ನನ್ನನ್ನು ಕೋರಿದರು. ಪಿಟೀಲಿನಲ್ಲಿ ಹಿಂದೂಸ್ತಾನಿ ಸಂಗೀತವನ್ನು ನುಡಿಸುವಾಗ ವೇಗವಾಗಿ, ನಿರಂತರವಾಗಿ, ಬಿಟ್ಟು ಬಿಟ್ಟು ಕಮಾನು ಹಾಕುವುದು ಆವಶ್ಯಕವಾದ್ದರಿಂದ ನಾನು ವಿಚಿತ್ರವೀಣಾ ಕಛೇರಿಗಳನ್ನೇ ನೀಡಲು ನಿರ್ಧರಿಸಿದೆ. ಏಕೆಂದರೆ ಹೆಚ್ಚು ನೋವಾಗಿದ್ದ ಬಲಗೈಗೆ ಪಿಟೀಲಿಗಿಂತಲೂ, ವಿಚಿತ್ರವೀಣಾ ನುಡಿಸಲು ಕಡಮೆ ನೋವಾಗುತ್ತದೆ.

೧೯. ಮುಂಬೈನ ಪ್ರೊಫೆಸರ್ ಜಿ. ಎನ್. ಜೋಶಿ

ಶ್ರೀ ಜಿ. ಎನ್. ಜೋಶಿಯವರು ನಾಗಪುರದ ಮಾರಿಸ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗಿನಿಂದ ನಾನು ಅವರನ್ನು ಬಲ್ಲೆ. ಅವರಿಗೆ ಪಿಟೀಲು ಪಕ್ಕವಾದ್ಯ ನುಡಿಸುವ ಸಂತೋಷ ನನಗೆ ಬೇಕಾದಷ್ಟು ಬಾರಿ ದೊರೆತಿದೆ. ಅವರು ತಾವೇ ಹಾರ್ಮೋನಿಯಂ ನುಡಿಸಿಕೊಂಡು ಹಾಡುತ್ತಾರೆ. ಅವರಿಗೆ ಬಹಳ ಒಳ್ಳೆಯ ಶಾರೀರವಿದೆ. ಮರಾಠಿಯಲ್ಲಿ ಭಾವಗೀತೆ ಗಾಯನವನ್ನು ಪ್ರಾರಂಭಿಸಿದವರೇ ಅವರು. ಜೋಶಿಯವರ ಗ್ರಾಮಫೋನ್ ರೆಕಾರ್ಡ್‌ಗಳು ಬಿಸಿದೋಸೆಯಂತೆ ಖರ್ಚಾಗಿ ಆ ವರ್ಷದಲ್ಲಿ ಎಲ್ಲಕ್ಕೂ ಮಿಗಿಲಾಗಿ ಮಾರಾಟವಾದ್ದರಿಂದ ಎಚ್. ಎಮ್. ವಿ. ಕಂಪೆನಿಯು ಅವರಿಗೆ ಒಂದು ಗ್ರಾಮಫೋನನ್ನು ಬಹುಮಾನವಾಗಿ ನೀಡಿತು.

ಆಫ್ರಿಕಾದ ಸಂಗೀತ ಪ್ರವಾಸವನ್ನು ಮುಗಿಸಿಕೊಂಡು ನಾಗಪುರಕ್ಕೆ ಬಂದಾಗ ಅವರಿಗೆ ಅನೇಕ ಕಛೇರಿಗಳು ಲಭಿಸಿದವು. ಆಫ್ರಿಕಾ ಪ್ರವಾಸ ಮುಗಿಸಿದ ಜೋಶಿಯವರನ್ನು ಭೇಟಿ ಮಾಡಲು ಜನ ಕಾತರರಾಗಿದ್ದರು. ಧ್ವನಿವರ್ಧಕ ಇಲ್ಲದಾಗಿಯೂ ಅವರ ಧ್ವನಿ ಹಾಗೂ ತಂಬೂರಿ ನಾದವನ್ನು ಜನ ಕೇಳಬಲ್ಲವರಾಗಿದ್ದರು. ಜೋಶಿ ನನ್ನೊಂದಿಗೆ ಉಳಿದುಕೊಂಡಿದ್ದರು. ಅವರನ್ನು ನೋಡಲು ಬರುತ್ತಿದ್ದ ಜನರ ಪ್ರವಾಹ! ಅವರ ಆತಿಥ್ಯಕ್ಕಾಗಿ ಕಾಫಿ,ಟೀಗಳ ಪ್ರವಾಹ! ಒಳ್ಳೆಯ ಸಮೃದ್ಧಿಯ ದಿನಗಳು, ಅದೆಲ್ಲವೂ ಆನಂದವೇ ಆಗಿತ್ತು.

ಒಂದು ಕಛೇರಿಯಲ್ಲಿ ಅದೇಕೋ ಅವರ ಗಂಟಲು ಕಟ್ಟ ತೊಡಗಿತು. ನಾನು ಪಿಟೀಲು ಪಕ್ಕವಾದ್ಯ ನೀಡುತ್ತಿದ್ದೆ. ನಾನು ಅವರೊಂದಿಗೆ ಹಾಡಬೇಕು – ಸ್ವಲ್ಪ ಆಲಾಪ, ತಾನ, ಇವುಗಳಲ್ಲಿ- ಎಂದು ಅವರು ಸೂಚಿಸಿದರು. ನಾನು ಚೆನ್ನಾಗಿ ಹಾಡಬಲ್ಲೆನೆಂದು ಅವರಿಗೆ ಗೊತ್ತಿತ್ತು. ಜನ ಮೆಚ್ಚಿಕೊಂಡರು; ಜಿ. ಎನ್. (ಹಾಗೇ ಅವರನ್ನು ಕರೆಯುತ್ತಿದ್ದುದು) ಅವರಿಗೆ ಪುಷ್ಟಿ ದೊರೆಯಿತು ಎಂದರು. ಕೆಲದಿನಗಳ ಅನಂತರ ಐ. ಟಿ. ಕಾಲೇಜ್ ಮೈದಾನದಲ್ಲಿ ಒಂದು ಕಛೇರಿ ಏರ್ಪಟ್ಟಿತು. ಒಂದು ಗಂಟೆಯ ಅನಂತರ ಯಾರೋ ಜಿ.ಎನ್.ಗೆ ಒಂದು ಚೀಟಿ ಕಳುಹಿಸಿದರು, 'ಆ ದಿನ ನಿಮ್ಮೊಂದಿಗೆ ಹಾಡಿದವರನ್ನು ದಯವಿಟ್ಟು ಹಾಡಲು ಹೇಳಿ' ಎಂದು. ದುರದೃಷ್ಟವಶಾತ್ ನನ್ನ ಗಂಟಲು ಕಟ್ಟಿತ್ತು; ನಾನು ಪಿಟೀಲು ವಾದನವನ್ನೇ ಮುಂದವರಿಸಿದೆ. ನನ್ನ ಧ್ವನಿಯನ್ನೂ ಜನ ಮೆಚ್ಚಿಕೊಂಡರಲ್ಲಾ ಎಂಬುದೇ ಒಂದು ಸಮಾಧಾನ ನೀಡಿತು.

ಅದೇ ದಿನ ಒಂದು ಘಟನೆ ನಡೆಯಿತು. ನಮ್ಮಿಬ್ಬರ ಗೆಳೆಯರೂ, ಇಂತಹ ಕಛೇರಿಗಳಲ್ಲಿ ಅನಿವಾರ್ಯ ಜೊತೆಗಾರರೂ, ಆದ ಎಸ್. ರಾಮರತ್ನಂ ಅವರು ತಲೆನೋವಿನಿಂದ ಬಳಲುತ್ತಿದ್ದು ನಮಗೆ ಸಹವಾದ್ಯ ನೀಡಲು ಇಚ್ಛಿಸಲಿಲ್ಲ. ಎಸ್. ರಾಮರತ್ನಂ ಬಾರದಿದ್ದರೆ ಕಛೇರಿ ಮಾಡುವುದಿಲ್ಲ ಎಂದು ಬಿಟ್ಟರು ಜಿ. ಎನ್. ಸರಿ , ಅವರು ಜಿ. ಎನ್. ಅವರ ಹಿಂದೆಯೇ ಕಳ್ಳರನ್ನು ಆಹ್ವಾನಿಸುವಂತೆ ತಮ್ಮ ಜುಬ್ಬಾವನ್ನು ತಮ್ಮ ಹಿಂದೆ ನೆಲದ ಮೇಲೆ ಹರಡಿ ಕುಳಿತಿದ್ದರು. ಕಛೇರಿ ಮುಕ್ತಾಯ ವಾದಮೇಲೆ ಸಿಗರೇಟ್ ಹೊರತೆಗೆಯಲು ರಾಮರತ್ನಂ ತಮ್ಮ ಜುಬ್ಬಾ ಜೇಬಿಗೆ ಕೈ ಹಾಕಿದರು. ಸಿಗರೇಟ್, ಬೆಂಕಿ ಪೊಟ್ಟಣ, ಐವತ್ತು ರೂಪಾಯಿ ಎಲ್ಲವೂ ಮಾಯವಾಗಿದ್ದವು. ರಾಮರತ್ನಂ ಅವರಿಂದ ಇವೆಲ್ಲವನ್ನೂ ಕದಿಯುವುದು ಕಳ್ಳನಿಗೆ ಬಹಳ ಸುಲಭವಾಗಿತ್ತು. ನಮ್ಮೆಲ್ಲರಿಗೂ ಬಹಳ ಬೇಸರವಾಯಿತು. ಹೊರಗೆ ಕಾಯುತ್ತಿದ್ದ ವಾಹನವನ್ನು ಹತ್ತಲೆಂದು ಶೂ ಧರಿಸತೊಡಗಿದೆವು. ಸಾಕಷ್ಟು ಹೊಸದಾಗಿದ್ದ ತಮ್ಮ ಶೂ ಕೂಡ ಮಾಯವಾಗಿದ್ದುದು ರಾಮರತ್ನಂ ಅವರಿಗೆ ತಿಳಿಯಿತು. ಈ ನಷ್ಟಗಳನ್ನು ಭರಿಸುವೆನೆಂದು ಜೋಶಿ ಇಚ್ಛೆಪಟ್ಟರೂ ರಾಮರತ್ನಂ ಅದಕ್ಕೆ ಒಪ್ಪಲಿಲ್ಲ.

ಮುಂದೆ ಜಿ. ಎನ್. ಮತ್ತು ಅವರ ಪತ್ನಿ ಮುಂಬೈಗೆ ಹೊರಟಿದ್ದರು. ಮದರಾಸಿನಲ್ಲಿ ಒಂದು ಸಿನಿಮಾ ಮಂದಿರಕ್ಕೆ ಹೋದರು. ಜಿ.ಎನ್. ತಮ್ಮ ಕೋಟು ಜೇಬಿಗೆ ಕೈ ಹಾಕಿದಾಗ ಅವರ ಪರ್ಸು ಕಳವಾಗಿದ್ದುದು ತಿಳಿಯಿತು. ಅವರ ಬಳಿ ಏನೊಂದಕ್ಕೂ ಹಣವಿರಲಿಲ್ಲ. ಸುದೈವದಿಂದ ಮಹಾರಾಷ್ಟ್ರದ ಒಬ್ಬ ಗಣ್ಯ ವ್ಯಕ್ತಿ ಅತ್ತ ಹೋಗುತ್ತಿದ್ದರು. ಕಾಶ್ಮೀರ ದಿಂದ ಕನ್ಯಾಕುಮಾರಿಯವರೆಗೆ ಪ್ರತಿಯೊಬ್ಬ ಮಹಾರಾಷ್ಟ್ರೀಯನೂ ಜಿ. ಎನ್. ಬಗ್ಗೆ ಕೇಳಿ ತಿಳಿದಿದ್ದ. ಆ ವ್ಯಕ್ತಿ ತಕ್ಷಣವೇ ಜಿ. ಎನ್. ಗೆ ಸ್ವಲ್ಪ ಹಣ ಸಾಲ ಕೊಟ್ಟ. ಮುಂದೆ ಜಿ. ಎನ್. ನಮ್ಮನ್ನು ಭೇಟಿಯಾದಾಗ ''ರಾಮರತ್ನಂ ನಾಗಪುರಕ್ಕೆ ನೀಡಿದರು, ನಾನು ಮದರಾಸಿಗೆ ನೀಡಿದ್ದೇನೆ'' ಎಂದರು.

ಈ ಗ್ರಾಮಫೋನ್ ರೆಕಾರ್ಡ್‌ಗಳು ಎಷ್ಟು ಅಲ್ಪಜೀವಿಗಳು! ಎಷ್ಟು

ಚಂಚಲವಾದ ಆಸಕ್ತಿ! ಕೆಲವು ವರ್ಷಗಳ ಕಾಲ ಅವರ ರೆಕಾರ್ಡ್‌ಗಳು ಎಲ್ಲೆಡೆ ಕೇಳಿ ಬರುತ್ತಿದ್ದವಾದರೂ ಈಗ ಯಾರೂ ಅವರ ರೆಕಾರ್ಡ್‌ಗಳನ್ನು ಕೇಳಲಿಚ್ಛಿಸುವುದಿಲ್ಲ. ಇತರ ಅನೇಕ ಸಂಗೀತಗಾರರ ರೆಕಾರ್ಡ್‌ಗಳದ್ದೂ ಇದೇ ಕಥೆ.

ಸ್ವರಪ್ರಸ್ತಾರ ಸಹಿತವಾದ 'ನನ್ನ ಹಾಡುಗಳು' ಎನ್ನುವ ಮರಾಠಿ ಪುಸ್ತಕವನ್ನು ಜಿ. ಎನ್. ಪ್ರಕಟಿಸಿದರು. ಈ ಜಾತಿಯ ಇತರ ಪುಸ್ತಕಗಳ ಪಾಡನ್ನೇ ಈ ಪುಸ್ತಕವೂ ಅನುಭವಿಸಿತು. ಈಗ ಈ ಹಾಡುಗಳನ್ನು ಕಲಿಯುವವರು ಯಾರು? ಇದು ಮನಸ್ಸಿಗೆ ಖೇದ ಉಂಟುಮಾಡುತ್ತದೆ ಯಾದರೂ ಕೃತಿಗಳನ್ನು ರಚಿಸಿರುವವರು ಅವನ್ನು ಪ್ರಕಟಿಸಬೇಕೆಂಬುದು ನನ್ನ ಭಾವನೆ. ಕಾಲಕ್ರಮದಲ್ಲಿ ಆ ಹಾಡುಗಳು ಪ್ರಚಲಿತವಾಗಬಹುದು. ಸಂಗೀತದ ಗ್ರಂಥ ಭಂಡಾರಗಳಲ್ಲಾದರೂ ಇಂತಹ ಪುಸ್ತಕಗಳನ್ನು ಸರಿಯಾಗಿ ರಕ್ಷಿಸಬೇಕು.

೨೦. ಪೂನಾದ ಪ್ರೊಫೆಸರ್ ಜೆ. ಎಲ್. ರಾನಡೆ

ಶಾಸ್ತ್ರೀಯ ಸಂಗೀತಗಾರರೂ, ಲಘುಸಂಗೀತಗಾರರೂ ಆದ ಜೆ.ಎಲ್. ರಾನಡೆ ಅವರು ಲಾ ಕಾಲೇಜಿನ ಸಂತೋಷಕೂಟದಲ್ಲಿ ಸಂಗೀತ ಕಾರ್ಯಕ್ರಮ ನಡೆಸಿಕೊಡಲು ನಾಗಪುರಕ್ಕೆ ಬಂದದ್ದು ಸುಮಾರು ೧೯೩೨ ರಲ್ಲಿ. ಅವರು ರೈಲ್ವೆ ಇಲಾಖೆಯಲ್ಲಿ, ಅಹಮದ್ ನಗರದಲ್ಲಿ ಕೆಲಸಮಾಡುತ್ತಿದ್ದರು. ಅವರ ವಯಸ್ಸು ಸುಮಾರು ಮೂವತ್ತೈದು. ತಾವೇ ಹಾರ್ಮೋನಿಯಂ ನುಡಿಸುತ್ತಾ ಹಾಡುತ್ತಿದ್ದರು ಅವರು. ನನಗೆ ಪರಿಚಿತರಾದ ಲಾ ಕಾಲೇಜಿನ ಪ್ರಾಂಶುಪಾಲರು ನಾನು ರಾನಡೆ ಅವರಿಗೆ ಪಿಟೀಲು ಸಹಕಾರ ನೀಡುವಂತೆ ಕೋರಿದರು.

ಗಲಾಟೆಮಾಡಿ ಸಂಗೀತಗಾರರನ್ನು ವೇದಿಕೆಯಿಂದ ಕೆಳಗಿಳಿಸುವುದರಲ್ಲಿ ಖ್ಯಾತರಾಗಿದ್ದರು ಲಾ ಕಾಲೇಜಿನ ವಿದ್ಯಾರ್ಥಿಗಳು. ಅನೇಕ ಸಂಗೀತಗಾರರು ಇದರಿಂದ ಬೇಸತ್ತು ಸಭಾತ್ಯಾಗ ಮಾಡಿದ್ದರು. ಶ್ರೀ ಮಲ್ಲಿಕಾರ್ಜುನ ಮನ್ಸೂರ್ ಅವರು ಬಂದಾಗಲೂ ವಿದ್ಯಾರ್ಥಿಗಳು ಹೀಗೆಯೇ ವರ್ತಿಸಿದ್ದರು. ಆದರೆ ಮನ್ಸೂರರು ಅದರಿಂದ ವಿಚಲಿತರಾಗಲಿಲ್ಲ. ಮನ್ಸೂರರಿಗೆ ಪಿಟೀಲಿನಲ್ಲಿ ನಾನು ಹಾಗೂ ಹಾರ್ಮೋನಿಯಂನಲ್ಲಿ ನನ್ನ ಗೆಳೆಯ ಅತಾವಲೆ ಪಕ್ಕವಾದ್ಯ ಸಹಕಾರ ನೀಡಿದ್ದೆವು.

ಮೊದಲ ಹಾಡಿನೊಡನೆಯೇ ಪ್ರಾರಂಭವಾದ ಕೇಕೆ ಅಟ್ಟಹಾಸಗಳಿಂದ ರಾನಡೆಯವರು ಧೈರ್ಯಗುಂದಿದರು. ತಾವು ಹಾಡಲಿದ್ದ ಹಾಡುಗಳ ಪೂರ್ಣ ಪಠ್ಯ ಹಾಗೂ ತಮ್ಮ ಫೋಟೋದೊಂದಿಗೆ ಮುದ್ರಿಸಿದ ಪ್ರತಿಗಳನ್ನು ರಾನಡೆಯವರು ಮೊದಲೇ ಹಂಚಿದ್ದರು. ಅದೊಂದು ಆಕರ್ಷಕ ಕೈಪಿಡಿಯಾಗಿತ್ತು. ಮೂರನೆಯ ಹಾಡಿನ ಹೊತ್ತಿಗೆ ಹುಡುಗರ ಗಲಾಟೆ ಜೋರಾಗಿದ್ದರಿಂದ ರಾನಡೆಯವರು ಕಛೇರಿ ನಿಲ್ಲಿಸಿ ತಮ್ಮ ಸಂಭಾವನೆಯನ್ನೂ ಮರೆತು ಸಭೆಯಿಂದ ನಿರ್ಗಮಿಸಲು ಹೊರಟರು. ಸರಿಯಾಗಿ ವರ್ತಿಸಬೇಕೆಂದು ಪ್ರಾಂಶುಪಾಲರು ವಿದ್ಯಾರ್ಥಿಗಳಲ್ಲಿ ಮಾಡಿಕೊಂಡ ಕೋರಿಕೆಯೂ ಯಾವ ಫಲವನ್ನೂ ನೀಡಲಿಲ್ಲ. ನಾನು ಒಬ್ಬನೇ 'ಸೋಲೋ' ನೀಡಬೇಕೆಂದು ಕೆಲವು ವಿದ್ಯಾರ್ಥಿಗಳು ಸೂಚಿಸಿದರು. "ಇಂದು ನನ್ನ ಉತ್ತರ ಕ್ರಿಯೆಯಲ್ಲ"ಎಂದು ನಾನು ಉತ್ತರಿಸಿದೆ. ಅದಕ್ಕೂ ನಗು. ಸಂಗೀತ ಕಾರ್ಯಕ್ರಮ ಮುಕ್ತಾಯವಾಯಿತೆಂದು ಘೋಷಿಸುವಂತೆ ನಾನು ಪ್ರಾಂಶುಪಾಲರನ್ನು ಕೋರಿದೆ. ತಾವು ವಿಜಯಿಗಳಾದೆವೆಂದು ಬೀಗುತ್ತಾ ಗಲಾಟೆಕೋರರೆಲ್ಲಾ ಕೂಗುತ್ತಾ ಚಪ್ಪಾಳೆ ತಟ್ಟುತ್ತಾ, ನಿರ್ಗಮಿಸಿದರು.

ಇಂತಹ ಘಟನೆ ನಾಗಪುರದಲ್ಲಿ ಸಾಮಾನ್ಯವೆಂದೂ ಇದರಿಂದ ಧೈರ್ಯಗೆಡಬಾರದೆಂದೂ ನಾನು ರಾನಡೆಯವರಿಗೆ ಧೈರ್ಯ ಹೇಳಿದೆ. ನಾವು ಚಹಾ ಪಾನ ಮಾಡಿ ಮತ್ತೆ 'ದರ್ಬಾರಿ ಕಾನಡ' ದೊಂದಿಗೆ ಕಛೇರಿ ಪ್ರಾರಂಭಿಸಿದೆವು. ಈಗ ಉಳಿದಿದ್ದ ಸಭಿಕರೆಲ್ಲಾ ಬಹಳ ಆಸಕ್ತರು. ಸಂಪೂರ್ಣ ನಿಶ್ಶಬ್ದದಲ್ಲಿ ಕಛೇರಿ ಅತ್ಯಂತ ಯಶಸ್ವಿಯಾಗಿ ನಡೆಯಿತು. ಅನಂತರ ರಾನಡೆ ನನಗೆ ಹೇಳಿದರು, "ಮಿಸ್ಟರ್ ರಾವ್, ನೀವು ಪ್ರೋತ್ಸಾಹ ತುಂಬುತ್ತಾ ನನ್ನೊಡನೆ ಇದ್ದಿರಿ, ಸರಿಹೋಯಿತು. ಇಲ್ಲವಾದಲ್ಲಿ ನಾನೇನು ಮಾಡುತ್ತಿದ್ದೆನೋ ತಿಳಿಯದು."

ನನ್ನ ಸ್ನೇಹಿತರಾದ ಶ್ರೀ ಫಾಧ್ಯೆ ಅವರು ಮುಖ್ಯೋಪಾಧ್ಯಾಯರೂ ಸಭಾರತ್ನಂ ಅವರು ಅಧ್ಯಾಪಕರೂ ಆಗಿದ್ದ ಮಾಡೆಲ್ ಹೈಸ್ಕೂಲ್‌ನ ಆಮಂತ್ರಣದ ಮೇರೆಗೆ ಕೆಲವು ವರ್ಷಗಳ ಅನಂತರ ರಾನಡೆಯವರು ನಾಗಪುರಕ್ಕೆ ಆಗಮಿಸಿದ್ದರು. ರಾತ್ರಿ ಸುಮಾರು ಹನ್ನೊಂದು ಗಂಟೆಯ ಹೊತ್ತಿನಲ್ಲಿ ಯಾರೋ ನನ್ನನ್ನು ಕರೆಯುತ್ತಿರುವುದು ಕೇಳಿಸಿತು. ನೋಡಿದರೆ ಸಭಾರತ್ನಂ. ನಾನು ಗಾಬರಿ, ಆಶ್ಚರ್ಯಗಳಿಂದ ನೋಡಿದಾಗ ''ಜೆ. ಎಲ್. ರಾನಡೆ ಅನ್ನುವವರು ಹೈಸ್ಕೂಲ್‌ನಲ್ಲಿ ಸಂಗೀತ ಕಛೇರಿಗಾಗಿ ಬಂದಿರುವರು. ನೀವು ಅವರಿಗೆ ಪಿಟೀಲು ಪಕ್ಕವಾದ್ಯ ನುಡಿಸಬೇಕಂತೆ. ನಿಮ್ಮ ಉತ್ತರದೊಂದಿಗೆ ನಾನು ಮರಳಿ ಹೋಗುವವರೆಗೆ ಅವರು ಕಛೇರಿ ಆರಂಭಿಸುವುದಿಲ್ಲ'' ಎಂದರು. ಅಂತೆಯೇ ನಾನು ರಾನಡೆ ಅವರೊಂದಿಗೆ ಪಿಟೀಲು ನುಡಿಸಿದೆ. ಮಾರನೆಯ ದಿನ ಬಹುಮಾನ ವಿತರಣೆಯ ಸಂದರ್ಭದಲ್ಲಿ ಜಸ್ಟಿಸ್ ಪುರಾಣಿಕ್ ಅವರು ನನ್ನ 'ಸಮರ್ಥ ಪಿಟೀಲು ಸಹಕಾರ' ಕ್ಕಾಗಿ ಪಾರಿತೋಷಕ ನೀಡಿದಾಗ ನನಗೋ ಆಶ್ಚರ್ಯ!

ಮಾರನೆಯ ವರ್ಷ ಮಾರೀಸ್ ಕಾಲೇಜ್ ಸುವರ್ಣ ಮಹೋತ್ಸವ ಆಚರಿಸುತ್ತಿದ್ದು ಆ ವೇಳೆಗೆ ಜೆ. ಎಲ್. ರಾನಡೆ ಅವರನ್ನು ಹಾಡಲು

ಕೋರಿತ್ತು. ಅವರು "ಪ್ರೊ. ರಾವ್‌ರವರು ಪಿಟೀಲು ಸಹಕಾರ ನೀಡಿದಲ್ಲಿ ತಮ್ಮ ಆಹ್ವಾನ ಸ್ವೀಕರಿಸುತ್ತೇನೆ"ಎಂದು ಮಾರೀಸ್ ಕಾಲೇಜಿನ ಪ್ರಾಂಶುಪಾಲರಿಗೆ ತಂತಿ ಕಳುಹಿಸಿದರು. ನನ್ನನ್ನು ಸಂಪರ್ಕಿಸಲೆಂದು ಪ್ರೊ. ಸೇನ್ ಗುಪ್ತ ಅವರು ಅವರ ಕಾಲೇಜಿನ ಅಧ್ಯಾಪಕರಾದ ಪ್ರೊ. ಗುಹಾ ಅವರನ್ನು ನನ್ನಲ್ಲಿಗೆ ಕಳುಹಿಸಿದರು. ಗುಹಾ ಮತ್ತು ನಾನು ಇಬ್ಬರೂ ಫುಟ್‌ಬಾಲ್ ಆಟಗಾರರಾಗಿದ್ದೆವು. ರಾನಡೆ ಅವರ ತಂತಿ ಹಿಡಿದುಕೊಂಡೇ ಗುಹಾ ನನ್ನಲ್ಲಿಗೆ ಬಂದರು. ನಾನು ಪಿಟೀಲು ಸಹಕಾರ ನೀಡಲು ಒಪ್ಪಿದೆ.

ಕಛೇರಿಯ ರಾತ್ರಿ ನನ್ನನ್ನು ನಮ್ಮ ಮನೆಯಿಂದ ಕರೆದೊಯ್ಯುವ ಹೊತ್ತಿಗೆ ಕಛೇರಿ ಆಗಲೇ ಪ್ರಾರಂಭವಾಗಿತ್ತು. ರಾನಡೆ ಅವರೊಂದಿಗೆ ತರುಣ ವಾದಕನೊಬ್ಬ ಪಿಟೀಲು ನುಡಿಸುತ್ತಿದ್ದ. ನಾನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದೆ. ಆದರೆ ರಾನಡೆ ನುಡಿದರು, ''ರಾವ್ ಸಾಹೇಬ್, ನೀವು ನುಡಿಸಲೇಬೇಕು. ನಿಮ್ಮಿಂದ ಆಶೀರ್ವಾದ ಪಡೆಯಲೆಂದೇ ಈ ಬಾಲಕನನ್ನು ಕರೆತಂದಿರುವೆವು.'' ಎರಡು ಪಿಟೀಲುಗಳು ಇದ್ದವು. ರಾನಡೆ ಅವರು ಬಹಳಷ್ಟು ಚೆನ್ನಾಗಿ ಹಾಡಿದರು. ತರುಣ ಪಿಟೀಲುವಾದಕ ಜೋಗ್ ಅತ್ಯುತ್ತಮವಾಗಿ ನುಡಿಸಿದ. ಈಗ ಆಕಾಶವಾಣಿ ಸೇವೆಯಲ್ಲಿರುವ ಜೋಗ್ ಉತ್ತರ ಭಾರತದ ಅತ್ಯುತ್ತಮ ಪಿಟೀಲು ವಿದ್ವಾಂಸರಲ್ಲಿ ಒಬ್ಬರು. ಜೋಗ್ ಎನ್ನುವ ಹೆಸರಿನ ಇಬ್ಬರು ಪಿಟೀಲು ವಾದಕರಿದ್ದಾರೆ. ಇವರು ಕಿರಿಯ ಜೋಗ್. ಮತ್ತೆ ರಾನಡೆ ಅವರನ್ನು ನಾನು ಭೇಟಿಯಾಗಿಲ್ಲ.

೨೧. ಧಾರವಾಡದ ಪಂಡಿತ್ ಗುರುರಾವ್ ದೇಶಪಾಂಡೆ

ನಾಗಪುರದ ಯೂನಿವರ್ಸಿಟಿ ಹಾಲಿನಲ್ಲಿ ಗುರುರಾವ್ ದೇಶಪಾಂಡೆ ಹಾಡಿದರು. ಸಂಗೀತ ಕೇಳಲೆಂದು ನನ್ನನ್ನು ಆಹ್ವಾನಿಸಿದರು. ಮಧ್ಯಂತರದ ಚಹಾದ ಬಿಡುವಿನ ವೇಳೆ ನನ್ನನ್ನು ಅವರಿಗೆ ಪರಿಚಯ ಮಾಡಿಕೊಟ್ಟರು. ನಾವಿಬ್ಬರೂ ಕನ್ನಡಿಗರೆಂದು ತಿಳಿದು ಇಬ್ಬರಿಗೂ ಬಹಳ ಸಂತೋಷವಾಯಿತು. ನನಗೆ ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತಗಳೆರಡೂ ಪರಿಚಿತವೆಂದೂ ನಾನು ಪಿಟೀಲು ನುಡಿಸುವೆನೆಂದೂ ನನ್ನ ಸ್ನೇಹಿತ ಅತಾಲೆಯವರು ಅವರಿಗೆ ತಿಳಿಸಿದರು. ಆ ದಿನ ನನ್ನ ಪಿಟೀಲು ರಿಪೇರಿಯಲ್ಲಿದ್ದುದರಿಂದ ನಾನು ಪಿಟೀಲು ನುಡಿಸಲಿಲ್ಲ. ಅವರು ತಮಗೂ ಕರ್ನಾಟಕ ಸಂಗೀತ ತಿಳಿದಿದೆಯೆಂದೂ ನನ್ನ ಮನೆಯಲ್ಲಿ ಹಾಡಲು ಇಷ್ಟಪಡುವುದಾಗಿಯೂ ತಿಳಿಸಿದರು. ಎರಡು ದಿನಗಳ ಅನಂತರ ಒಂದು ಕಾರ್ಯಕ್ರಮ ನಿಗದಿಪಡಿಸಿದೆವು. ಮಾರನೆಯ ಬೆಳಗ್ಗೆ ಪಿಟೀಲು ರಿಪೇರಿ ಮಾಡುವವನಲ್ಲಿಗೆ ಹೋದಾಗ ನನ್ನ ಪಿಟೀಲು ಸಿದ್ಧವಾಗಿರುವುದನ್ನು ಕಂಡು ಸಂತೋಷವಾಯಿತು. ಪಿಟೀಲು ತಂತಿಗಳನ್ನು ಬದಲಾಯಿಸಿದೆ.

ನಾಗಪುರದ ವಿಶ್ವವಿದ್ಯಾಲಯದ ಖಜಾಂಚಿಯಾಗಿದ್ದ ವಕೀಲರೊಬ್ಬರಲ್ಲಿ ಗುರುರಾವ್ ದೇಶಪಾಂಡೆ ಉಳಿದುಕೊಂಡಿದ್ದರು. ಅವರ ಆತಿಥೇಯರ ಮನೆಯ ಕಿರಿಯ ಸದಸ್ಯರೊಂದಿಗೆ ನಮ್ಮ ಮನೆಗೆ ಬೆಳಗ್ಗೆ ಒಂಬತ್ತಕ್ಕೆ ಬಂದರು. ಕರ್ನಾಟಕ ಸಂಗೀತವೆಂದಾಗ ಅವರಿಗೆ ಯಾವುದೋ ಮಿಶ್ರ ಸಂಗೀತ ತಿಳಿದಿರಬಹುದೆಂದು ಇತರರು ಭಾವಿಸಿದ್ದರು. ತಮಗೆ ಶುದ್ಧ ಕರ್ನಾಟಕ ಸಂಗೀತ ತಿಳಿದಿದೆ ಎಂದು ಅವರಿಗೂ, ನನ್ನ ವಿದ್ವತ್ತಿನ ಬಗ್ಗೆ ಅಂಥದ್ದೇ ನಂಬಿಕೆ ನನಗೂ ಇದ್ದವು.

ತಂಬೂರಿ, ಹಾಗೂ ಪಿಟೀಲುಗಳು ಶ್ರುತಿ ಮಾಡಲ್ಪಟ್ಟವು. ''ತಬಲದ ವಿಚಾರವೇನು''? ಎಂದು ದೇಶಪಾಂಡೆಯವರ ಗೆಳೆಯರು ನಮ್ಮನ್ನು ಕೇಳಿದರು. ''ಕರ್ನಾಟಕ ಸಂಗೀತ ಹಾಡುವಾಗ ತಬಲ ಅನಿವಾರ್ಯವಲ್ಲ'' ಎಂದರು ದೇಶಪಾಂಡೆ. ಅಂದೂ ತಾವು ಕೇವಲ ಕರ್ನಾಟಕ ಸಂಗೀತ ಹಾಡುವುದಾಗಿ ದೇಶಪಾಂಡೆ ಹೇಳಿದ್ದನ್ನು ಕೇಳಿ ನನಗೆ ಸಂತೋಷವಾಯಿತು.

ಅವರು ಹಂಸಧ್ವನಿ, ಕಲ್ಯಾಣಿ, ತೋಡಿ, ಮಧ್ಯಮಾವತಿ ಮುಂತಾದವುಗಳನ್ನು ಹಾಡಿದರು. ಅನೇಕ ವರ್ಷಗಳಿಂದ ಹಾಡದೇ ಇದ್ದುದರಿಂದ ಅವುಗಳ ಸಾಹಿತ್ಯ ಅವರಿಗೆ ಸಂಪೂರ್ಣವಾಗಿ ನೆನಪಿರಲಿಲ್ಲ. ಆಲಾಪನೆ, ನೆರವಲ್ಲು, ಕಲ್ಪನಾ ಸ್ವರಗಳೆಲ್ಲಾ ಸಂಪೂರ್ಣವಾಗಿ ಕರ್ನಾಟಕ ಸಂಗೀತದ್ದೇ. ಅವರಿಗೆ ಕರ್ನಾಟಕ ಸಂಗೀತದಲ್ಲಿ ಇಷ್ಟು ಒಳ್ಳೆಯ ಪರಿಶ್ರಮವಿದ್ದುದು ಅವರ ಗೆಳೆಯರಿಗೆಲ್ಲಾ ವಿಸ್ಮಯ ಉಂಟುಮಾಡಿತು. ನಮ್ಮಿಬ್ಬರ ಹಾಡುಗಾರಿಕೆ - ಪಿಟೀಲುಗಳ ಮೇಳವು ಅವರಿಗೆ ಪ್ರಿಯವಾಯಿತು. ತಾವು ಮೊದಲಲ್ಲಿ ಬೆಂಗಳೂರಿನಲ್ಲಿ ಕರ್ನಾಟಕ ಸಂಗೀತ ಕಲಿತುದಾಗಿಯೂ ಅನಂತರದಲ್ಲಿ ಹಿಂದೂಸ್ತಾನಿಗೆ ಬಂದುದಾಗಿಯೂ ಅವರು ತಿಳಿಸಿದರು.

೨೨. ಪಂಡಿತ್ ಕೃಷ್ಣಶಾಸ್ತ್ರಿ

ನಾಗಪುರದ ಧಾಂತೋಲಿಯ ಶ್ರೀ ದುರ್ಗಾಶಂಕರ್ ನಿಯೋಗಿ ಅವರು ಉತ್ತರಾದಿ ಹಾಗೂ ದಕ್ಷಿಣಾದಿ ಸಂಗೀತಗಾರರಿಬ್ಬರಿಗೂ ಪ್ರೋತ್ಸಾಹ ನೀಡುತ್ತಿದ್ದರು. ಅದು ೧೯೩೩ನೇ ಇಸವಿ. ಬೆಂಗಳೂರಿನ ಖ್ಯಾತ ಪಿಟೀಲು ವಾದಕ ತಾಯಪ್ಪನವರ ಶಿಷ್ಯರಾದ ಮುಂಬೈನ ವಿದ್ವಾನ್ ಕೃಷ್ಣಶಾಸ್ತ್ರಿಗಳ ಪಿಟೀಲು ಕಛೇರಿಗೆ ಆಹ್ವಾನಿಸುವ ಕರಪತ್ರಗಳನ್ನು ಚಂದಾಪಟ್ಟಿಯೊಂದಿಗೆ ನಿಯೋಗಿಯವರು

ಕಳುಹಿಸಿದರು. ಸೌತ್ ಇಂಡಿಯನ್ ಸ್ಕೂಲ್ ಕಟ್ಟಡದಲ್ಲಿ ಕಛೇರಿ ನಿಗದಿಯಾಗಿತ್ತು. ಗುರುಗಳ ಹಾಗೂ ಶಿಷ್ಯರ ಹೆಸರುಗಳು ಕರ್ನಾಟಕ ಸಂಗೀತವನ್ನೇ ಸೂಚಿಸುತ್ತಿದ್ದುದರಿಂದ ಸಭೆಯೂ ದಕ್ಷಿಣ ಭಾರತದವರಿಂದಲೇ ತುಂಬಿತ್ತು. ವಿದ್ವಾನ್ ತಾಯಪ್ಪನವರು ದಕ್ಷಿಣ ಭಾರತದ ಹೆಸರಾಂತ ಪಿಟೀಲು ವಾದಕರಾಗಿದ್ದರು.

ಕೃಷ್ಣಶಾಸ್ತ್ರಿಗಳು ಪಕ್ಕಾ ಹಿಂದೂಸ್ತಾನಿ ಶೈಲಿಯಲ್ಲಿ ಕಛೇರಿ ಪ್ರಾರಂಭಿಸಿದೊಡನೆ ಎಲ್ಲಾ ಚಕಿತರಾದೆವು. ಅವರು ಬಹಳ ಚೆನ್ನಾಗಿ ನುಡಿಸುತ್ತಿದ್ದರು. ಹಿಂದೂಸ್ತಾನಿ ಸಂಗೀತ ಶೈಲಿಯ ಪಿಟೀಲು ವಾದನದಲ್ಲಿ ಅವರ ಪ್ರಾವೀಣ್ಯ ಪ್ರಶಂಸನೀಯವಾಗಿತ್ತು. ಮುಂಬೈನ ಪ್ರಖ್ಯಾತರಾದ ಇಬ್ಬರು ಮೂವರು ಪಿಟೀಲು ವಾದಕರಲ್ಲಿ ಇವರೂ ಒಬ್ಬರು. ಇವರ ನಡವಳಿಕೆಯು ಕೂಡ ಮಹಾರಾಷ್ಟ್ರದ ಸಂಗೀತಗಾರರಂತೆಯೇ ಇದ್ದಿತು.

ಆ ದಿನಗಳ ವಾಡಿಕೆಯಂತೆ ಅವರು ಮತ್ತು ಅವರ ತಬಲಾಜೀ ಇಬ್ಬರೂ ಪ್ರತಿಯೊಂದು ಹಾಡಿನ ಅನಂತರವೂ ಒಂದು ಬೀಡಿ ಎಳೆಯುತ್ತಿದ್ದರು. ಉತ್ತರ ಮತ್ತು ದಕ್ಷಿಣ ಭಾರತಗಳ ಮಿಶ್ರಿತ ಸಭೆಯಾದ್ದರಿಂದ ಕೆಲವು ಕಾಲ ಹಿಂದೂಸ್ತಾನಿ ಸಂಗೀತ ನುಡಿಸಿದ ಅನಂತರ ನಮಗೆ ಕರ್ನಾಟಕ ಸಂಗೀತದ ಸವಿಯನ್ನು ಉಣಬಡಿಸುತ್ತಾರೆಂದು ಭಾವಿಸಿದೆವು. ನಾಲ್ಕನೆಯ ಬೀಡಿಯ -ಎಂದರೆ ನಾಲ್ಕನೆಯ ಹಾಡಿನ - ಅನಂತರ ನಾನು ಅವರಲ್ಲಿಗೆ ಹೋಗಿ ಸಭಿಕರಲ್ಲಿ ಹೆಚ್ಚಿನವರು ದಕ್ಷಿಣ ಭಾರತೀಯರೂ ಆಗಿದ್ದು ಕೃಷ್ಣಶಾಸ್ತ್ರಿಗಳು ತಮ್ಮ ಗುರು ತಾಯಪ್ಪನವರಿಂದ ಕಲಿತದ್ದನ್ನು ಕೇಳಲು ಉತ್ಸುಕರಾಗಿದ್ದಾರೆಂದು ತಿಳಿಸಿದೆ. ವಿದ್ವಾನ್ ತಾಯಪ್ಪನವರ ಒಳ್ಳೆಯ ಪರಿಚಯ ನನಗೆ ಇದ್ದಿತೆಂದೂ ನಾನು ಹೇಳಿದೆ. ತಾವು ಹಿಂದೂಸ್ತಾನಿ ಸಂಗೀತಕ್ಕೆ ಬದಲಾದುದರಿಂದ ಕರ್ನಾಟಕ ಸಂಗೀತ ನುಡಿಸಿ ಹಲವಾರು ವರ್ಷಗಳೇ ಸಂದಿವೆ ಎಂದು ಅವರು ವಿಷಾದದಿಂದ ತಿಳಿಸಿದರು. ಕೃತಿ ನುಡಿಸಬೇಕೆಂದೇನೂ ಇಲ್ಲ ಎಂದೂ, ಕೇವಲ ರಾಗಗಳೇ ಸಾಕು ಎಂದೂ, ನಾನು ಸೂಚಿಸಿದೆ. ಅವರು ಒಪ್ಪಿಕೊಂಡರು. ಖರಹರಪ್ರಿಯ ರಾಗ ಹಾಗೂ ತಾನ ನುಡಿಸಿ 'ರಾಮ ನೀ ಸಮಾನಮೆವರು' ಕೃತಿ ನುಡಿಸಿದರು. ಅಬ್ಬಾ ಎಂಥ ಅಮೋಘ ಸಂಗೀತ! ತೋಡಿ, ಆನಂದ ಭೈರವಿ, ಮುಂತಾದ ರಾಗಗಳನ್ನೂ ನುಡಿಸಿದರು. ಕೃಷ್ಣಶಾಸ್ತ್ರಿಗಳು ತಾಯಪ್ಪನವರ ಖೊಟ್ಟಿ ಶಿಷ್ಯರಲ್ಲವೆಂದೂ, ತಮ್ಮ ಕರ್ನಾಟಕ ಪಿಟೀಲು ಜ್ಞಾನವನ್ನು ಬಳಸಿ ಹಿಂದೂಸ್ತಾನಿ ಸಂಗೀತವನ್ನು ಶ್ರೀಮಂತಗೊಳಿಸಿದ ಅರ್ಹ ಶಿಷ್ಯರೆಂದೂ, ಎಲ್ಲರಿಗೂ ಸಮಾಧಾನವಾಯಿತು. ಶ್ರದ್ಧೆಯಿಂದ ಪ್ರಯತ್ನಿಸಿದರೆ ಕರ್ನಾಟಕ ಸಂಗೀತಗಾರರು ಹಿಂದೂಸ್ತಾನಿ ಸಂಗೀತವನ್ನು ಚೆನ್ನಾಗಿ ಕಲಿಯಲು ಸಾಧ್ಯ. ತಮ್ಮ ಹಿಂದೂಸ್ತಾನಿ ಸಂಗೀತ 'ಪಕ್ಕಾ' ಆಗಿರುವುದಿಲ್ಲವೆಂದಾಗಲೀ, ಕರ್ನಾಟಕ ಸಂಗೀತ ಕೆಟ್ಟುಹೋಗುವುದೆಂದಾಗಲೀ ಹಿಂಜರಿಯಬೇಕಿಲ್ಲ. ಅಂತಹ ಯಾವ ಭಯವೂ ಬೇಡ. ಎರಡನ್ನೂ ಕಲಿತು ಪರಿಶುದ್ಧವಾಗಿಯೇ ಪ್ರಯೋಗಿಸಬಹುದು.

೨೩. ದಿವಾನ್ ಬಹದ್ದೂರ್ ಆರ್. ವರದಾಚಾರ್

ಇದು ನಡೆದದ್ದು ೧೯೩೯ ರಲ್ಲಿ. ಹೊಶಂಗಾಬಾದ್‌ಗೆ ಪ್ರಯಾಣ ಮಾಡಲೆಂದು ನಾನು ನಾಗಪುರದಿಂದ ಗ್ರ್ಯಾಂಡ್ ಟ್ರಂಕ್ ಎಕ್ಸ್‌ಪ್ರೆಸ್ ರೈಲನ್ನು ಹತ್ತಬೇಕಾಗಿತ್ತು. ದ್ವಿತೀಯ ದರ್ಜೆಯ ಕಂಪಾರ್ಟ್‌ಮೆಂಟ್ ಪ್ರವೇಶಿಸಿದೆ. ಅಲ್ಲಿ ಮೂರು ನಾಲ್ಕು ಮಂದಿ ಪ್ರಯಾಣಿಕರು ಇದ್ದರು. ಅಲ್ಲಿ ಸ್ಥಳವಿಲ್ಲವೆಂದೂ ಬೇರಾವುದಾದರೂ ಕಂಪಾರ್ಟ್‌ಮೆಂಟಿಗೆ ಹೋಗಬೇಕೆಂದೂ ಅವರಲ್ಲೊಬ್ಬರು ಹೇಳಿದರು. ಬೇರೆ ಯಾವುದಾದರೂ ಕಂಪಾರ್ಟ್‌ಮೆಂಟಿನಲ್ಲಿ ಸೀಟಿಗೆ ಪ್ರಯತ್ನಿಸುವೆನೆಂದೂ, ಬೇರೆಲ್ಲೂ ಸ್ಥಳ ಸಿಕ್ಕದಿದ್ದಲ್ಲಿ ಅವರೊಂದಿಗೇ ಪ್ರಯಾಣ ಮಾಡಬೇಕಾಗುತ್ತದೆಂದೂ ಹೇಳಿದೆ. ಹೊಶಂಗಾಬಾದ್‌ನಲ್ಲಿ ಮುಸ್ಸಂಜೆಗೆ ಮೊದಲೇ ನಾನು ರೈಲಿನಿಂದ ಕೆಳಕ್ಕೆ ಇಳಿಯುವವನಾದ್ದರಿಂದ ಅವರಿಗೇನೂ ತೊಂದರೆಯಾಗುತ್ತಿರಲಿಲ್ಲ. ನನಗೆ ಬೇರೆಲ್ಲೂ ಸ್ಥಳ ದೊರಕಲಿಲ್ಲ.

ವೀಣೆ, ಗೊಟ್ಟುವಾದ್ಯ, ತಂಬೂರಿ, ತಬಲ, ಹಾರ್ಮೋನಿಯಂ, ಪಿಟೀಲುಗಳೇ ಮುಖ್ಯವಾಗಿದ್ದ ನನ್ನ ಸಾಮಾನು ಸರಂಜಾಮುಗಳನ್ನೆಲ್ಲಾ ರೈಲಿನೊಳಕ್ಕೆ ಸಾಗಿಸಿದೆ. ನಾಗಪುರದ ಕಾಲೇಜಿನಲ್ಲಿ ೧೯೨೦ ರಿಂದ ೩೫ ರವರೆಗೆ ಸೇವೆ ಸಲ್ಲಿಸಿದ ಮೇಲೆ ಅಲ್ಲಿಂದ ಬೇರೆಡೆಗೆ ನನಗೆ ವರ್ಗವಾದ್ದರಿಂದ ಅನೇಕ ಗೆಳೆಯರು ರೈಲುನಿಲ್ದಾಣಕ್ಕೆ ಬಂದಿದ್ದರು. ನನ್ನೊಡನೆ ಒಯ್ಯುತ್ತಿದ್ದ ಸಂಗೀತ ವಾದ್ಯಗಳು ನನ್ನ ಜನಪ್ರಿಯತೆಯ ಹಾಗೂ ಆಸಕ್ತಿಯ ಸಂಕೇತಗಳಾಗಿದ್ದವು.

ರೈಲು ಚಲಿಸಿತು. ನನ್ನ ಸಾಮಾನು ಸರಂಜಾಮುಗಳನ್ನು ಜೋಡಿಸಿಕೊಳ್ಳತೊಡಗಿದೆ. ನನ್ನ ಸಾಮಾನ್ಯ ವರ್ತನೆಯಂತೆ ಯಾವುದೋ ಸಂಗೀತವನ್ನು ಶಿಳ್ಳೆ ಹೊಡೆಯ ತೊಡಗಿದೆ. ಅದರ ರಾಗವನ್ನು ಕೇಳಿಯೋ ಏನೋ, ಸ್ವಲ್ಪ ಹೊತ್ತಿನ ಅನಂತರ, ಗಣ್ಯ ಅಯ್ಯಂಗಾರ್ಯರಂತೆ ಕಾಣುತ್ತಿದ್ದ ಆ ಸದ್ಗೃಹಸ್ಥರು ಇದ್ದಕ್ಕಿದ್ದಂತೆ ಕೇಳಿದರು ''ನೀವು ಭಾರತದ ಯಾವ ಭಾಗದವರು?'' ನಾನು ಮೈಸೂರಿನವನೆಂದೂ ಸೆಂಟ್ರೆಲ್ ಪ್ರಾವಿನ್ಸಸ್ ಮತ್ತು ಬೇರಾರ್‌ನಲ್ಲಿ ಕೃಷಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದೇನೆಂದೂ ಹೇಳಿದೆ. ಅವರು ''ಹಾಂ, ಅದಕ್ಕೇ ಕೇಳಿದೆ ನಾನು. ನೀವು ಕರ್ನಾಟಕ ಸಂಗೀತದ ಏನನ್ನೋ ಶಿಳ್ಳೆ ಹೊಡೆಯುತ್ತಿದ್ದು, ಇದ್ದಕ್ಕಿದ್ದಂತೆ ಏನೋ ವಿಚಿತ್ರವಾದದ್ದಕ್ಕೆ (ಹಿಂದೂಸ್ತಾನಿ ರಾಗಕ್ಕೆ ಸಂಬಂಧಿಸಿದಂತೆ) ಬದಲಿಸಿದಿರಿ.'' ಮಾತುಕಥೆ

ಮೊದಲಾದದ್ದು ಹೀಗೆ. ಶ್ರೀ ವರದಾಚಾರ್ಯರಿಗೂ ಸಂಗೀತದಲ್ಲಿ ಆಸಕ್ತಿ ಇತ್ತು. ನನ್ನ ವಾಡಿಕೆಯಂತೆ, ನಾನು ಈ ಅವಕಾಶವನ್ನು ಬಳಸಿಕೊಂಡು ಕರ್ನಾಟಕ ಹಾಗೂ ಹಿಂದೂಸ್ತಾನಿ ಸಂಗೀತ ಪದ್ಧತಿಗಳ ಬಗ್ಗೆ ಅನೇಕ ವಿಷಯಗಳನ್ನು ವಿವರಿಸಿದೆ. ನನ್ನ ಕೆಲವು ಕೃತಿಗಳನ್ನು ಹಾಡಿದೆ. ಬೆಳಗ್ಗೆ ಒಂಬತ್ತರಿಂದ ಸಂಜೆ ಆರರವರೆಗೆ ಕಾಲಾವಕಾಶವಿದ್ದುದರಿಂದ ನನಗೆ ತೃಪ್ತಿಯಾಗುವಂತೆ ನಿಧಾನವಾಗಿ ಇದನ್ನೆಲ್ಲಾ ನಡೆಸುವುದು ಸಾಧ್ಯವಾಯಿತು. ಅಲ್ಲಿದ್ದ ಪಂಜಾಬಿ ವ್ಯಕ್ತಿಯೂ ನಮ್ಮ ಸಂಭಾಷಣೆಯಲ್ಲಿ ಆಸಕ್ತರಾದರು. ತಮ್ಮ ಮೇಲಿನ ಬರ್ತ್‌ನಿಂದ ನಮ್ಮ ಮಾತುಕಥೆ ಕೇಳಲೆಂದು ಅವರು ಇಣುಕಿ ನೋಡುತ್ತಿದ್ದರು. ಹಿಂದೋಳ ರಾಗದ ನನ್ನ ಕೃತಿ 'ಮಾಧವ ಮಧುಸೂದನ' ಬಗ್ಗೆ ವರದಾಚಾರ್ಯರು ತಮ್ಮ ವಿಶೇಷ ಮೆಚ್ಚುಗೆ ವ್ಯಕ್ತಿಪಡಿಸಿದರು. ಆ ಕಾಲಕ್ಕೆ ನಾನು ಕೇವಲ ೨೫ 'ಕೃತಿ' ಗಳನ್ನು ರಚಿಸಿದ್ದೆ. ಮದರಾಸಿನ ಮ್ಯೂಸಿಕ್ ಅಕಾಡೆಮಿಯಲ್ಲಿ ನಾನು ಕೆಲವು ಪ್ರಾತ್ಯಕ್ಷಿಕೆಗಳನ್ನು ನೀಡಬೇಕೆಂದು ಅವರು ಸೂಚಿಸಿದರು. ಮದರಾಸಿನ ಸಂಗೀತ ಸಮ್ಮೇಳನಗಳಲ್ಲಿ ಹಾಜರಿದ್ದು ಅಲ್ಲಿನ ಚರ್ಚೆಗಳಲ್ಲಿ, ಪ್ರಾತ್ಯಕ್ಷಿಕೆಗಳಲ್ಲಿ ಪಾಲ್ಗೊಳ್ಳಲು ೧೯೫೫ರ ವರೆಗೆ ನನಗೆ ಅವಕಾಶ ದೊರೆಯಲಿಲ್ಲ. ನಾವು ಹೊಶಂಗಾಬಾದ್ ಸಮೀಪಿಸುತ್ತಿದ್ದಾಗ ಈವರೆಗೆ ಒಂದು ಶಬ್ದವೂ ಮಾಡದ, ಸಂಗೀತದಲ್ಲಿ ಯಾವುದೇ ಆಸಕ್ತಿ ತೋರದ, ನಮ್ಮ ಕಂಪಾರ್ಟ್‌ಮೆಂಟಿನ ಇನ್ನೊಬ್ಬ ವ್ಯಕ್ತಿ ಸರಕ್ಕನೆ ಎದ್ದು ನಿಂತು ''ಮಿಸ್ಟರ್ ಸುಬ್ಬರಾವ್, ನೀವು ಒಳಬಂದಾಗ ಮಿಸ್ಟರ್ ವರದಾಚಾರ್ಯರಿಗೆ ನೀವು ಬರುವುದು ಬೇಕಿರಲಿಲ್ಲ. ಆದರೂ ಹೇಗೋ ಒಳಬಂದಿರಿ. ನೀವು ಈ ಕಂಪಾರ್ಟ್‌ಮೆಂಟಿಗೆ ಪ್ರವೇಶಿಸಿದಾಗಿನಿಂದ ಸಂಗೀತದ ಬಗ್ಗೆಯೇ ಮಾತನಾಡುತ್ತಿದ್ದೀರಿ. ಈ ಮಾತುಕಥೆಯನ್ನು ಯಾವಾಗ ನಿಲ್ಲಿಸುತ್ತೀರಿ?''

ತಕ್ಷಣ ವರದಾಚಾರ್ಯರು ನುಡಿದರು, ''ಹೊಶಂಗಾಬಾದ್ ಆಗಲೇ ಕಾಣಿಸ ಹತ್ತಿದೆ. ಮಿಸ್ಟರ್ ಸುಬ್ಬರಾವ್ ಅಲ್ಲಿ ಇಳಿಯುವವರಿದ್ದಾರೆ, ಹಾಗಾಗಿ ನಮ್ಮ ಮಾತುಕಥೆ ಮುಗಿಯುತ್ತದೆ. ದೇವರ ದಯೆಯಿಂದ ಮತ್ತೆ ಭೇಟಿಯಾದಾಗ ಅದನ್ನು ಮುಂದುವರೆಸುವ ಆಸೆ ಇದೆ. ಆಗ ನೀವೂ ನಮ್ಮೊಡನಿರುತ್ತೀರಿ ಎಂದು ನನ್ನ ಹಾರೈಕೆ.'' ಆ ಗೃಹಸ್ಥ ಮಾತನಾಡಲಿಲ್ಲ. ಆದರೆ ಪಂಜಾಬಿ ಗಣ್ಯವ್ಯಕ್ತಿ ಕೂಗಿದರು, ''ಅಲ್ಲಿರಲು ನಾನು ಇಚ್ಛಿಸುತ್ತೇನೆ. ಎಂಥ ರಸದೌತಣ!'' ಮುಂದೆ ಮಿಸ್ಟರ್ ವರದಾಚಾರ್ಯರನ್ನು ಸಂಪರ್ಕಿಸಲು ನಾನು ಉದ್ದೇಶಿಸಿದೆನಾದರೂ ಅವರ ವಿಳಾಸವನ್ನು ತೆಗೆದುಕೊಳ್ಳಲು ಮರೆತಿದ್ದರಿಂದ ಅವರನ್ನು ಪತ್ತೆ ಹಚ್ಚಲು ಸಾಧ್ಯವಾಗಲಿಲ್ಲ.

೧೯೬೫ರಲ್ಲಿ ಮದರಾಸಿನ ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಿದ್ದೆ. ಬೆಳಗಿನ ಚರ್ಚೆಗಳು ಪ್ರಾತ್ಯಕ್ಷಿಕೆಗಳನ್ನು ಕೇಳುತ್ತಾ ತಜ್ಞರ ಸಮಿತಿಯ ಸದಸ್ಯನಾಗಿ ಮುಂದಿನ ಸಾಲಿನಲ್ಲಿ ಕುಳಿತಿದ್ದೆ. ಗಣ್ಯ ವ್ಯಕ್ತಿಯೊಬ್ಬರು ನನ್ನಲ್ಲಿಗೆ ಬಂದು ಹೇಳಿದರು, ''ಗುಡ್ ಮಾರ್ನಿಂಗ್! ನಾನು ವರದಾಚಾರ್. ನಾಗಪುರದಿಂದ ಹೊಶಂಗಾಬಾದ್‌ಗೆ ನಮ್ಮ ಕಂಪಾರ್ಟ್‌ಮೆಂಟಿನಲ್ಲಿ ನೀವು ಪ್ರಯಾಣ ಮಾಡಿದ್ದು ಮತ್ತು ಸಂಗೀತದ ಬಗ್ಗೆ ಬೇಕಾದಷ್ಟು ಮಾತನಾಡಿದ್ದು ನಿಮಗೆ ನೆನಪಿರಬಹುದು. ನಿಮ್ಮನ್ನಿಲ್ಲಿ ಭೇಟಿಯಾದದ್ದು, ನೀವು ಈ ಸಮ್ಮೇಳನಗಳಲ್ಲಿ ಭಾಗವಹಿಸುತ್ತಾ ಸಂಗೀತ ಅಕಾಡೆಮಿಯ ಕಾರ್ಯ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ತೊಡಗಿಕೊಂಡಿರುವುದು ಬಹಳ ಸಂತೋಷ.'' ದಿವಾನ್ ಬಹದ್ದೂರ್ ವರದಾಚಾರ್ ಅವರನ್ನು ಭೇಟಿ ಮಾಡಿದ್ದು ನನಗೆ ಎಷ್ಟು ಆನಂದವಾಯಿತು! ಅಂದು ಅವರ ಮಗಳು, ದೀಕ್ಷಿತರ ಕೆಲವು ಕೃತಿಗಳನ್ನು ಬಹಳ ಚೆನ್ನಾಗಿ ಹಾಡಿದರು .

೨೪. ಸವಾಯಿ ಗಂಧರ್ವ*

'ಸವಾಯಿ' ಎಂದರೆ ಒಂದೂ ಕಾಲು. ಮರಾಠಿ ರಂಗಮಂಚದಲ್ಲಿ ಇವರ ಸಮಕಾಲೀನರಾದ ಖ್ಯಾತ ಬಾಲಗಂಧರ್ವರಿಗಿಂತ ಶೇ. ೨೫ ರಷ್ಟು ಇವರು ಶ್ರೇಷ್ಠರೆಂಬ ಭಾವನೆಯಿಂದ ಅವರ ಅಭಿಮಾನಿಗಳು ಅವರನ್ನು ಈ ಗಣಿತದ ಹೋಲಿಕೆಯ ಪ್ರಶಂಸೆಯಿಂದ ಕರೆಯುತ್ತಿದ್ದರು. ಬಾಲಗಂಧರ್ವರ ನಿಜನಾಮ ನಾರಾಯಣ ಶ್ರೀಪಾದ ರಾಜಹಂಸ.

ಸವಾಯಿ ಗಂಧರ್ವ ಅವರು ನಟ ಎನ್ನುವುದಕ್ಕಿಂತ ಸಂಗೀತಗಾರ ಎನ್ನುವುದೇ ಸರಿ. ಅವರಿಗೆ ಕನ್ನಡ ತಕ್ಕಮಟ್ಟಿಗೆ ಗೊತ್ತಿದ್ದು ನನ್ನಲ್ಲಿಗೆ ಬಂದಾಗಲೆಲ್ಲಾ ನನ್ನೊಡನೆ ಕನ್ನಡದಲ್ಲೇ ಮಾತನಾಡುವುದು ಅವರಿಗೆ ಪ್ರಿಯವಾಗಿತ್ತು. ನಗೆ ಹುಟ್ಟಿಸುತ್ತಿದ್ದ ವಿಷಯವೆಂದರೆ ಅವರ ಗುಂಡು ಮುಖ, ಬೋಳು ತಲೆಗಳಿಂದಾಗಿ ಹಾಡುವಾಗ ಇನ್ನೇನು ಅತ್ತೇಬಿಡುತ್ತಾರೋ ಎನ್ನುವಂತೆ ಕಾಣುತ್ತಿದ್ದ ಅವರ ಮುಖಚಹರೆ. ಅನೇಕ ಸಂಗೀತಗಾರರು ಹೀಗೆಯೇ. ಅವರನ್ನು ನೋಡುವುದಕ್ಕಿಂತ ಕೇವಲ ಆಲಿಸುವುದೇ ಒಳ್ಳೆಯದು. ಸವಾಯಿ ಗಂಧರ್ವ ಬಹಳ ಒಳ್ಳೆಯ ಸಂಗೀತಗಾರರು. ಅವರ ನಾಲ್ಕೈದು ಕಛೇರಿಗಳನ್ನು ಮಾತ್ರ ನಾನು ಕೇಳಿದ್ದೇನೆ. ಮುಂಜಾವಿನ ರಾಗಗಳಾದ ಬಿಲಾವಲ್, ಬಿಭಾಸ್ ಮುಂತಾದವನ್ನು ಕೇಳಲು ನಮಗೆ ಅವಕಾಶವಾಗುವಂತೆ ಒಂದು ಕಛೇರಿಯನ್ನು ಬೆಳಗ್ಗೆ ಏರ್ಪಡಿಸಲಾಯಿತು. ಅವರ ಹಾಡುಗಾರಿಕೆ ಉತ್ಕೃಷ್ಟವಾಗಿತ್ತು.

ಒಂದು ರಾತ್ರಿ ಅವರು ಹಾಡುತ್ತಿದ್ದರು. ಕೆಲವು ಗಮಕ ತಾನಗಳನ್ನು ಹಾಡುತ್ತಿದ್ದಾಗ ನನ್ನ ಕರುಳು ಅದುರುವಂತೆ ಭಾಸವಾಯಿತು. ನನ್ನ ಪಕ್ಕ ಕುಳಿತಿದ್ದ ಗೆಳೆಯರೊಬ್ಬರನ್ನು ಕೇಳಿದೆ. ಅವರೊಬ್ಬ ವೈದ್ಯರು.

---
*ರಾಮ್ ಭಾವು ಕುಂದಗೋಳ್ಕರ್

ಅವರಿಗೂ ಹಾಗೆಯೇ ಅನುಭವವಾಯಿತಂತೆ. ಸವಾಯಿ ಗಂಧರ್ವರ ಗಮಕ ತಾನಗಳಿಂದ ಇತರ ಕೆಲವರಿಗೂ ಇದೇ ಅನುಭವವಾಯಿತು.

ನನ್ನ ಗೆಳೆಯ ಪಿಟೀಲು ವಿದ್ವಾನ್ ಮಧುರ ಸುಬ್ರಮಣಿ ಅಯ್ಯರ್ ಅವರು ನಾಗಪುರದಲ್ಲಿದ್ದಾಗಲೇ ಸವಾಯಿ ಗಂಧರ್ವ ಅವರೂ ನಾಗಪುರಕ್ಕೆ ಭೇಟಿ ನೀಡಿದ್ದರು. ಅವರ ಪಿಟೀಲು ವಾದನ ಆಲಿಸಿದ ಸವಾಯಿ ಗಂಧರ್ವ ಅವರು ಕಷ್ಟಸಾಧ್ಯವಾದ ವಾದ್ಯದಲ್ಲಿ ಅಯ್ಯರ್ ಗಳಿಸಿದ ಪರಿಶ್ರಮವನ್ನು ತುಂಬು ಹೃದಯದಿಂದ ಶ್ಲಾಘಿಸಿದರು.

೨೫. ಪಂಜಾಬಿನ ದಿಲೀಪ್ ಚಂದ್ರವೇದಿ

ಪಂಜಾಬಿನ ಈ ಉತ್ತರಾದಿ ಸಂಗೀತಗಾರನ ಬಗ್ಗೆ ಬೆಂಗಳೂರಿನ ಜನ ಬಹಳ ಗೌರವದಿಂದ ಮಾತನಾಡುತ್ತಿದ್ದರು. ಅವರು ಬೆಂಗಳೂರಿನಲ್ಲಿ ಎರಡು ಮೂರು ವರ್ಷಗಳಿದ್ದು ಅನೇಕ ಅಭಿಮಾನಿಗಳನ್ನು ಗಳಿಸಿದ್ದರು. ಅವರೊಬ್ಬ ಉತ್ಕೃಷ್ಟ ಹಾರ್ಮೋನಿಯಂ ವಾದಕರೂ ಆಗಿದ್ದರು. ಪೂನಾದ ಪಂಡಿತ್ ಭಾಸ್ಕರ್ ರಾವ್ ಬಖಲೆ ಅವರೊಂದಿಗೆ ಹಾರ್ಮೋನಿಯಂ ಪಕ್ಕವಾದ್ಯ ನೀಡುತ್ತಿದ್ದು ಹಾಡುಗಾರಿಕೆಯನ್ನು ಅಭ್ಯಾಸ ಮಾಡಿದ್ದರು.

ಮನ್ನಾರ್ ಗಾಯನ ಸಮಾಜದಿಂದ ಕಛೇರಿ ನೀಡಲೆಂದು ದಿಲೀಪ್ ಚಂದ್ರವೇದಿಯವರನ್ನು ಆಹ್ವಾನಿಸಿದ ಸಂದರ್ಭದಲ್ಲಿ ನಾನು ಅವರನ್ನು ನಾಗಪುರದಲ್ಲಿ ಭೇಟಿ ಮಾಡಿದೆ. ಸಮಾಜದ ಕಾರ್ಯದರ್ಶಿಯಾಗಿದ್ದ ನನ್ನ ಸ್ನೇಹಿತ ಅಶವಳೆ ಅವರೊಂದಿಗೆ ಅವರು ಉಳಿದುಕೊಂಡಿದ್ದರು. ಅವರ ಕಛೇರಿ ಅಮೋಘವಾಗಿತ್ತು. ಕೆಲವು ಕಾಲ ತಾವೇ ಹಾರ್ಮೋನಿಯಂ ನುಡಿಸಿಕೊಂಡು ಕೂಡ ಹಾಡಿದರು. ಎರಡು ಮೂರು ಮನೆಗಳನ್ನು ಒಟ್ಟೊಟ್ಟಿಗೆ ಅದುಮುತ್ತಿದ್ದ ಅವರ ತಂತ್ರದಲ್ಲಿ ಏನೋ ದೈವಿಕ ಅನುಭವವಿತ್ತು. ಅಂದಿನ 'ಶಂಕರ' ರಾಗ ಅದ್ವಿತೀಯವಾಗಿತ್ತು. ಕಛೇರಿಯ ಮಾರನೆಯ ದಿನ ನಾವು ಕೆಲವು ಗೆಳೆಯರು ಅಶವಳೆಯವರ ಮನೆಯಲ್ಲಿ ಸೇರಿ ಹಾಡಿದೆವು. ಆಗತಾನೆ ನಾನು ರೂಪಿಸಿದ್ದ ನನ್ನ ರಾಗ 'ದ್ವಿ ಗಾಂಧಾರ ಭೂಷಿಣಿ' ಯನ್ನು ಹಾಡಿದೆ. ಆಲಾಪನೆ ಕೇಳಿದ ದಿಲೀಪ್ ಚಂದ್ರವೇದಿಯವರು ''ಇದು ನನ್ನ ರಾಗ ರಾತ್ ಕ ಲಲಿತ್'' ಎಂದರು. ಅವರ ರಾಗವನ್ನು ನಾನು ಕೇಳಿಯೇ ಇಲ್ಲವೆಂದೆ. ಎರಡು ರಾಗಗಳನ್ನೂ ಹೋಲಿಸಿದಾಗ ಅವರ ರಾತ್ ಕ ಲಲಿತ್ 'ಪ್ರತಿ ಮಧ್ಯಮ'ವನ್ನು ಬಳಸುತ್ತದೆಂದೂ ದೈವತದ ಒಂದೇ ರೂಪವನ್ನು ಹೊಂದಿದೆಯೆಂದೂ ತಿಳಿಯಿತು. ನನ್ನ ದ್ವಿ ಗಾಂಧಾರ ಭೂಷಿಣಿಯಲ್ಲಿ ಮಧ್ಯಮದ ಬಳಕೆಯೇ ಇಲ್ಲ. ಕೋಮಲ ಮತ್ತು ತೀವ್ರ ದೈವತಗಳೆರಡು ಬರುತ್ತವೆ. ಚರ್ಚೆ ಬಹಳ ಸ್ವಾರಸ್ಯವಾಗಿತ್ತು. ಅವರಿಗೆ ನನ್ನ ರಾಗ ಹಾಗೂ ಆ ರಾಗದ ನನ್ನ ಕೃತಿ 'ಇಂತ ತಾಮಸ' ಎರಡೂ ಮೆಚ್ಚಿಗೆಯಾದವು.

ನನ್ನ ಗ್ರಂಥ 'ರಾಗ ನಿಧಿ' ಪ್ರಕಟವಾಗುವಾಗ ಅವರ ರಾತ್ ಕ ಲಲಿತ್ ರಾಗದ ಸಂಪೂರ್ಣ ವಿವರಗಳನ್ನು ನೀಡುವಂತೆ ವೇದಿಯವರಿಗೆ ಪತ್ರ ಬರೆದೆ. ವಿವರಗಳನ್ನು ನೀಡುವುದಾಗಿ ಅವರು ಆಶ್ವಾಸನೆ ನೀಡಿದರು. ಆದರೆ 'ರಾಗ ನಿಧಿ'ಯ ಕೊನೆಯ ಭಾಗ ಅಚ್ಚಾಗುತ್ತಿದ್ದಾಗಲೂ ಅದು ದೊರಕದೆ ಹೋದುದರಿಂದ ರಾತ್ ಕ ಲಲಿತ್ ರಾಗವನ್ನು ಸೇರಿಸಲು ಆಗಲಿಲ್ಲ ಎಂಬುದು ನನಗೆ ಖೇದ ಉಂಟುಮಾಡಿತು.

೨೬. ಭಜನೆಯ ಕೈ ಚಳಕ

೧೯೫೩ ರಲ್ಲಿ ಹೊಶಂಗಾಬಾದ್ ವಿಭಾಗದಲ್ಲಿ ನಾನು ಹೆಚ್ಚುವರಿ ಸಹಾಯಕ ನಿರ್ದೇಶಕನಾಗಿದ್ದೆ. ಎಲ್ಲ ಪ್ರಾಂತ್ಯಗಳಲ್ಲೂ 'ಮಿಶ್ರ ಕೃಷಿ'ಯೋಜನೆಯನ್ನು ಪ್ರಾರಂಭಿಸಬೇಕಾಗಿತ್ತು. ಇದೊಂದು ಕೇಂದ್ರ ಸರ್ಕಾರದ ಯೋಜನೆ. ಕರಾವಿನ ಜಾನುವಾರುಗಳನ್ನು ಸಾಕುವುದು ಪ್ರಯೋಜನಕಾರಿ ಎಂದು ಕೃಷಿಕರಿಗೆ ತಿಳಿಸಿಕೊಡುವುದೇ ಈ ಯೋಜನೆಯ ಉದ್ದೇಶ. ಈ ಪ್ರಯೋಗವೆಂದರೆ 'ಸಮುದ್ರಕ್ಕೆ ಬೊಗಸೆ ನೀರು ಒಯ್ದಂತೆ' ಎನ್ನಿಸಿತು ನನಗೆ. ಉಳುಮೆಗಾಗಿ ಸಾಕುವ ಎತ್ತುಗಳ ಜತೆಗೆ ಹಸು ಮತ್ತು ಎಮ್ಮೆಗಳನ್ನು ಸಾಕುವುದರ ಪ್ರಯೋಜನ ಭಾರತದ ಪ್ರತಿಯೊಬ್ಬ ಕೃಷಿಕನಿಗೂ ತಿಳಿದ ವಿಷಯವೇ. ಖಾಯಿಲೆ, ಬರ, ಮೇವಿನ ಕೊರತೆ ಹಾಗೂ ಮದುವೆ ಮಾಡಲು ಮತ್ತು ವ್ಯಾಜ್ಯಗಳಿಗಾಗಿ ಹಣದ ಆವಶ್ಯಕತೆಗಳಿಗಾಗಿ ಅವುಗಳನ್ನು ಮಾರುವ ಪರಿಸ್ಥಿತಿ ಬಂದು ಕೃಷಿಕರಿಗೆ ಎತ್ತುಗಳ ಕೊರತೆಯೇ ತಲೆದೋರುವಾಗ, ಅವರಿಗೆ ಹಸು ಮತ್ತು ಎಮ್ಮೆ ಸಾಕುವಂತೆ ಉಪದೇಶಿಸುವುದು ಎಂದರೆ ಉಪವಾಸವಿರುವ ಭಿಕ್ಷುಕನಿಗೆ ಅವನ ಬರಿದಾದ ಬಟ್ಟಲಿನಿಂದ ಚೆನ್ನಾಗಿ ಉಣ್ಣಲು ಹೇಳಿದಂತೆ. ಶೀಘ್ರ ಕ್ರಮಕ್ಕಾಗಿ ಯೋಜನೆಯ ಹಿಂದೆ ಯೋಜನೆಗಳನ್ನು ನನ್ನಲ್ಲಿಗೆ ಕಳುಹಿಸಲಾಗುತ್ತಿತ್ತು. ನಾನು ಅವುಗಳ ಪ್ರತಿ ತೆಗೆದು ಎಲ್ಲ ತಹಸೀಲುಗಳ ನನ್ನ ಅನುಯಾಯಿಗಳಿಗೂ ಅಂಥದೇ ಸೂಚನೆಯೊಂದಿಗೆ ರವಾನಿಸುತ್ತಿದ್ದೆ.

ಈ ಯೋಜನೆಯನ್ನು ಕೃಷಿಕರು ಉತ್ಸಾಹದಿಂದ ಸ್ವೀಕರಿಸಲಾರರೆಂದು ನನ್ನ ಉಪನಿರ್ದೇಶಕರಿಗೆ ಬರೆದು, ಈ ಮೇಲೆ ಹೇಳಿದ ಕಾರಣಗಳನ್ನೇ ತಿಳಿಸಿದೆ. ಈ ಇಡೀ ಪ್ರಾಂತ್ಯದಲ್ಲಿ ಈ ಪ್ರಯೋಗವನ್ನು ನನ್ನ ವಿಭಾಗದಲ್ಲಿ ಪ್ರಾರಂಭಿಸಲು ಇಷ್ಟಪಡದ ಏಕೈಕ ಹೆಚ್ಚುವರಿ ಸಹಾಯಕ ನಿರ್ದೇಶಕ ನಾನಾಗಿದ್ದೆ. ನನ್ನ ಮೇಲಧಿಕಾರಿ ಡೆಪ್ಯುಟಿ

ಡೈರೆಕ್ಟರ್‌ಗೆ ಬಹಳ ಅಸಮಾಧಾನವಾಯ್ತು. ಅವರ ಕೈಕೆಳಗಿನ ಮತ್ತೊಬ್ಬ ಹೆಚ್ಚುವರಿ ಸಹಾಯಕ ನಿರ್ದೇಶಕ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಬಹಳ ಉತ್ಸಾಹ ತೋರಿದ್ದರು. ನನ್ನ ವರದಿಯನ್ನು ಕೃಷಿ ನಿರ್ದೇಶಕರಿಗೆ ಕಳುಹಿಸಲಾಯಿತು. ಅವರು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ನನ್ನ ನಿರೀಕ್ಷೆಯಂತೆಯೇ ಈ ಯೋಜನೆಯನ್ನು ಪ್ರಾರಂಭಿಸಲು ಕೃಷಿಕರನ್ನು ಪ್ರೇರೇಪಿಸುವುದು ಸಾಧ್ಯವಾಗಲಿಲ್ಲ. ಯೋಜನೆ ಪ್ರಾರಂಭಿಸುವ ನನ್ನ ಜವಾಬ್ದಾರಿಯನ್ನು ನಾನು ನಿರ್ಲಕ್ಷಿಸುತ್ತಿದ್ದೇನೆ ಎಂದು ಉಪನಿರ್ದೇಶಕರು ಭಾವಿಸಿದರು. ಅವರೇ ನನ್ನೊಂದಿಗೆ ಪ್ರವಾಸ ಕೈಗೊಳ್ಳಲು ನಿರ್ಧರಿಸಿದರು. ಅದೇ ತಹಸೀಲಿಗೆ ಸೇರಿದ ಕೃಷಿ ಸಹಾಯಕರು ವೈಯಕ್ತಿಕ ಪ್ರಭಾವ ಬೀರಲೆಂದು ಅವರನ್ನೂ ನಮ್ಮೊಟ್ಟಿಗೆ ಕರೆದೊಯ್ಯಲು ನಿರ್ಧರಿಸಿದೆವು. ನಾವು ಹದಿನೈದು ದಿನಗಳು ಸುತ್ತಾಡಿದರೂ ಯಾವ ಪ್ರಯೋಜನವೂ ಆಗಲಿಲ್ಲ. ಇಟಾರ್ಸಿ ಮತ್ತು ಜಬ್ಬಲ್ಪುರಗಳ ನಡುವಿನ ರೈಲು ನಿಲ್ದಾಣವೂ ತಹಸೀಲಿನ ಕೇಂದ್ರ ಸ್ಥಾನವೂ ಆದ ಗದರ್ವಾರಾ ವಿಶ್ರಾಂತಿಗೃಹದಲ್ಲಿ ನಾವು ಉಳಿದಿದ್ದೆವು. ಕೃಷಿ ಸಹಾಯಕನನ್ನು ಊಟಕ್ಕೆ ಕಳುಹಿಸಲಾಗಿತ್ತು. ತೀವ್ರ ನಿರಾಶೆಯಿಂದ ಉಪನಿರ್ದೇಶಕರು ಮಾರನೇ ದಿನ ಜಬ್ಬಲ್ಪುರಕ್ಕೆ ತೆರಳಲು ನಿರ್ಧರಿಸಿದರು.

ಸಂಜೆ ನಮ್ಮ ಉಪನಿರ್ದೇಶಕರು ಆಫೀಸ್ ಫೈಲುಗಳನ್ನು ತೆಗೆದುಕೊಂಡು ಕುಳಿತರು. ನನಗೆ ಆಯಾಸವಾಗಿದ್ದು ಸ್ವಲ್ಪ ವಿಶ್ರಾಂತಿ ಮತ್ತು ಮನೋರಂಜನೆ ಬೇಕಾಗಿತ್ತು. ಪಟ್ಟಣಕ್ಕೆ ಹೋಗಿ ನನ್ನ ಒಬ್ಬ ಲಾಯರ್ ಮಿತ್ರರನ್ನು ಭೇಟಿ ಮಾಡುವೆನೆಂದೆ. ಉಪನಿರ್ದೇಶಕರು ತಮ್ಮ ಮನಸ್ಸು ಬದಲಿಸಿ ಅವರೂ ನನ್ನ ಗೆಳೆಯರನ್ನು ಭೇಟಿ ಮಾಡಲು ಇಷ್ಟ ಪಡುವುದಾಗಿ ಹೇಳಿದರು. ನಾವಿಬ್ಬರೂ ನನ್ನ ಗೆಳೆಯ ಶಿವಸತ್ಯನಾರಾಯಣರ ಮನೆಗೆ ಹೋದೆವು. ನಮ್ಮನ್ನು ಕಂಡು ಅವರಿಗೆ ಬಹಳ ಸಂತೋಷವಾಯ್ತು. ಅವರ ಮನೆಯಲ್ಲೇ ನಾವು ಊಟಕ್ಕೆ ನಿಲ್ಲಬೇಕೆಂದು ಅವರು ಸೂಚಿಸಿದರು. ನಾವು ಒಪ್ಪಿಕೊಂಡೆವು.

ಶಿವಸತ್ಯನಾರಾಯಣ ಅವರಿಗೆ ಸಂಗೀತದ ಬಗ್ಗೆ ಬಹಳ ಒಲವು. ಹೊಶಂಗಾಬಾದ್‌ನಲ್ಲಿ ಹಲವಾರು ಸಂದರ್ಭಗಳಲ್ಲಿ ನಾನು ಹಾಡುವುದನ್ನು ಅವರು ಕೇಳಿದ್ದರು. ಅವರ ಮಗ ಮತ್ತು ಮಗಳಿಗೆ ಸಂಗೀತ ಕಲಿಸಬೇಕೆಂದು ಅವರು ಉದ್ದೇಶಿಸಿದ್ದರು. ಅವರಿಗೆ ಒಳ್ಳೆಯ ಶಿಕ್ಷಕ ಬೇಕೆಂಬ ಕಾರಣಕ್ಕಾಗಿಯೇ ತಮ್ಮ ನೆಂಟನೂ ಆದ ತರುಣ ಸಂಗೀತಗಾರನೊಬ್ಬನನ್ನು ಸಂಗೀತ ತರಬೇತಿಗಾಗಿ ಮುಂಬಯಿಗೆ ಕಳುಹಿಸಿದ್ದರು. ಸಂಪೂರ್ಣ ಅಂಧನಾಗಿದ್ದ ಈ ತರುಣ - ಸಂಗೀತಗಾರ ಕೇವಲ ಒಂದು ವಾರದ ಹಿಂದೆ ಮುಂಬೈನಿಂದ ಹಿಂದಿರುಗಿದ್ದ. ಅವನು ಹಾಡುವುದನ್ನು ನಾನು ಕೇಳಬೇಕೆಂದು ಸತ್ಯನಾರಾಯಣ ಅವರು ಬಯಸಿದರು. ಅವನ ಸಂಗೀತ ತಕ್ಕ ಮಟ್ಟಿಗೆ ಚೆನ್ನಾಗಿತ್ತು. ನಮ್ಮ ಗೆಳೆಯನ ಮಕ್ಕಳು ಹಾಡುವುದನ್ನು ನಾನು ಕೇಳಬಯಸಿದೆ. ಬೇರಾವುದೋ ಗುರುವಿನಿಂದ ಅವರಿಗೆ ಶಿಕ್ಷಣವಾಗಿದ್ದರೂ ಕಲಿಕೆ ತೃಪ್ತಿಕರವಾಗಿರಲಿಲ್ಲ. ಆ ಮಕ್ಕಳಲ್ಲಿ ಪ್ರತಿಭೆ ಇರಲಿಲ್ಲ. ಒಂದು ಸಸ್ಯದ ಬೆಳವಣಿಗೆಗೆ ನೀರು ಮತ್ತು ಗೊಬ್ಬರದ ಆವಶ್ಯಕತೆ ಇರುವಂತೆ ಸಂಗೀತಕ್ಕೆ ಪ್ರತಿಭೆ ಹಾಗೂ ತರಬೇತಿಗಳೆರಡೂ ಆವಶ್ಯಕ.

ನಮಗೆ ಒಳ್ಳೆಯ ಭೋಜನ ಲಭಿಸಿತು. ಊಟವಾದ ಅನಂತರ ನಾನು ಕೆಲವು ಭಜನ್‌ಗಳನ್ನು ಹಾಡಬೇಕೆಂದು ಶಿವಸತ್ಯನಾರಾಯಣ ಸೂಚಿಸಿದರು. ನನಗೆ ಹೆಚ್ಚಿನ ಒತ್ತಾಯದ ಆವಶ್ಯಕತೆ ಇಲ್ಲ. ಆಯಾಸ, ಗಂಟಲು ಕಟ್ಟಿದೆ ಮುಂತಾಗಿ ಕಣಿ ಮಾಡುವುದೂ ಇಲ್ಲ ನಾನು. ಆ ಅಂಧ ಸಂಗೀತಗಾರ ನನ್ನೊಡನೆ ಹಾರ್ಮೋನಿಯಂ ನುಡಿಸಿದ; ನಾಲ್ಕೈದು ಭಜನ್‌ಗಳನ್ನು ಹಾಡಿದೆ.

ಮುಂದೆ ನಮ್ಮ ಆತಿಥೇಯರನ್ನು ಅಗಲಿ ನಾವು ಹೊರಟಾಗ, ನಾವು ಪದೇ ಪದೇ ಗದರ್ವಾರಾಗೆ ಬರಲೆಂದು ಅವರು ಹಾರೈಸಿದರು. ನನ್ನ ಮನಸ್ಸಿನಲ್ಲಾಗಲೇ ಒಂದು ಯೋಜನೆ ಸುಳಿದಿತ್ತು. ಆ ಊರಿನಲ್ಲಿ ನಮ್ಮ ಇರುವಿಕೆಯನ್ನು ಅಪೇಕ್ಷಿಸುವ ಯಾವುದೇ ಕೆಲಸ ಇಲ್ಲವೆಂದೂ, ನಾವು ಮತ್ತೆಂದೂ ಗದರ್ವಾರಾಗೆ ಬರದೇ ಹೋಗಬಹುದೆಂದೂ ನಾನು ಹೇಳಿದೆ. ಕೆಲವು ಹಳ್ಳಿಗಳ ಕೃಷಿಕರು ನಮ್ಮ ಅಪೇಕ್ಷೆಯಂತೆ ಭಾರತ ಸರ್ಕಾರದ ಯೋಜನೆಗೆ ಸಹಕಾರ ನೀಡಲು ಒಪ್ಪುತ್ತಿಲ್ಲವೆಂದೂ ಹೇಳಿದೆ. ನಾನು ಯಾವ ನಿರ್ದಿಷ್ಟ ಹಳ್ಳಿಯ ಬಗ್ಗೆ ಹೇಳುತ್ತಿದ್ದೇನೆಂದು ಅವರು ವಿಚಾರಿಸಿದರು. ಗದರ್ವಾರಾದಿಂದ ಆರೇಳು ಮೈಲಿ ದೂರದಲ್ಲಿದ್ದ ಹಳ್ಳಿಯ ಹೆಸರನ್ನು ಹೇಳಿದೆ. ಗದರ್ವಾರಾದ ಸುತ್ತ ಮುತ್ತಲಿನ ಎಲ್ಲ ಹಳ್ಳಿಗಳ ರೈತರೂ ಅವರ ಕಕ್ಷಿದಾರರೆಂದೂ ಅವರೆಲ್ಲರ ಮೇಲೂ ಸತ್ಯನಾರಾಯಣರ ಪ್ರಭಾವವಿದೆಯೆಂದೂ ನನಗೆ ತಿಳಿದಿತ್ತು. ಗದರ್ವಾರಾದಿಂದ ನಮ್ಮ ಮುಂದಿನ ಪ್ರಯಾಣವನ್ನು ಕೆಲವು ದಿನಗಳ ಮಟ್ಟಿಗೆ ಮುಂದೂಡಲು ಸತ್ಯನಾರಾಯಣ ಅವರು ಹೇಳಿದರು.

ಎರಡು ದಿನಗಳ ಅನಂತರ ಬೆಳಗ್ಗೆ ಎಂಟು ಗಂಟೆಯ ಹೊತ್ತಿಗೆ ಹಾಸಿಗೆ ದಿಂಬುಗಳಿಂದ ಸಜ್ಜಾದ ಹಳ್ಳಿಗಾಡಿನ ಎರಡು ಕುದುರೆ ಗಾಡಿಗಳು ವಿಶ್ರಾಂತಿಗೃಹದ ಮುಂದೆ ಬಂದು ನಿಂತವು. 'ಟಾಕಡಾ'ಗಳ ಚಾಲಕರು ಆ ಹಳ್ಳಿಯ (ನಾನು ಸತ್ಯನಾರಾಯಣರಿಗೆ ಹೇಳಿದ್ದ ಹಳ್ಳಿ) ರೈತರು ನಮ್ಮನ್ನು ಭೇಟಿಮಾಡಲು ಉತ್ಸುಕರಾಗಿದ್ದಾರೆಂದು ತಿಳಿಸಿದರು. ಇದನ್ನು ನಿರೀಕ್ಷಿಸಿಯೇ ಇದ್ದ ನಾನು ಈ ಶುಭ ಸಮಾಚಾರಕ್ಕೆ ನಮ್ಮ ಉಪನಿರ್ದೇಶಕರನ್ನು ಸಿದ್ಧಗೊಳಿಸಿದ್ದೆ.

ಹನ್ನೊಂದು ಗಂಟೆಯ ಹೊತ್ತಿಗೆ ಆ ಹಳ್ಳಿಯನ್ನು ತಲುಪಿದೆವು. ಬೇಸಿಗೆ ಕಾಲ. ಜಮೀನ್ದಾರನೂ ಇತರರೂ ನಮಗಾಗಿ ಕಾಯುತ್ತಿದ್ದರು. ಅತಿಥಿ ಗೃಹಕ್ಕೆ ನಮ್ಮನ್ನು ಕೊಂಡೊಯ್ದು ನಿಂಬೆ ಹಣ್ಣಿನ ಪಾನಕ ಕೊಟ್ಟು ಉಪಚರಿಸಿದರು. ನಮ್ಮ ಆಯಾಸ ಪರಿಹಾರವಾದ ಮೇಲೆ ಒಂದು ಹಾರ್ಮೋನಿಯಂ ತಂದು ನನ್ನ ಮುಂದಿಟ್ಟರು. ಸಂಗೀತ ಹಾಡಿ ಅವರಿಗೆ ಮನೋರಂಜನೆ ನೀಡಲೆಂದು ನಾನೇನೂ ಬಂದಿರಲಿಲ್ಲ. ಸಂಗೀತಕ್ಕೆ ಕಾಲ ವಿನಿಯೋಗಿಸಲು ಸಾಧ್ಯವಿಲ್ಲದ್ದಕ್ಕಾಗಿ ನಾನು ಅವರ ಕ್ಷಮೆ

ಕೋರಿದೆ. ಈಗ ಅವರು ಕೈಗೊಳ್ಳಲು ಸಿದ್ಧರಾಗಿದ್ದ ಯೋಜನೆಯ ವಿವರಗಳನ್ನು ನಾವು ಅವರಿಗೆ ವಿವರಿಸಬೇಕಾಗಿತ್ತು. ನಾನು ಅವರಿಗೆ ಹೇಳಿದೆ, "ಈ ಯೋಜನೆ ಆರಂಭವಾಗಲಿ, ಇಲ್ಲಿ ಬಂದು ಹಾಡುವುದಕ್ಕೆ ಧಾರಾಳವಾದ ಅವಕಾಶಗಳು ಸಿಗುತ್ತವೆ. ಈ ಯೋಜನೆಯ ಬಗ್ಗೆ ಕೃಷಿ ಇಲಾಖೆಯ ಉಪನಿರ್ದೇಶಕರು ತಿಳಿ ಹೇಳುವುದನ್ನು ದಯಮಾಡಿ ಕೇಳಿರಿ."

ಆ ಯೋಜನೆಯ ಉದ್ದೇಶವನ್ನು ಉಪನಿರ್ದೇಶಕರು ವಿವರಿಸಿದರು. ಮತ್ತೊಂದು ದೊಡ್ಡ ಲೋಟದ ತುಂಬ ಶರಬತ್ ಸೇವನೆಯಾಯಿತು. ಆ ಹಳ್ಳಿಯಲ್ಲಿ ಪ್ಲೇಗ್ ಇದೆಯೆಂದು ನಮಗೆ ಹೇಗೋ ತಿಳಿದುಬಂದಿತು. ನಾವು ಅಲ್ಲಿಂದ ಬೇಗ ಹಿಂದಿರುಗಿದೆವು. ವಾಪಸ್ ಬರುವಾಗ ನನ್ನ ಉಪನಿರ್ದೇಶಕರು ನುಡಿದರು, "ನಿಮ್ಮ ಭಜನ್ ಗಾಯನ ಕೆಲಸ ಸಾಧಿಸಿತು." ಇತರ ಹಲವಾರು ಕಾರಣಗಳಿಂದಾಗಿ ಮಿಶ್ರಕೃಷಿ ಯೋಜನೆಯನ್ನು ಹೊಶಂಗಾಬಾದ್ ವಿಭಾಗದಲ್ಲಿ ಕೈಗೆತ್ತಿಕೊಳ್ಳಲಿಲ್ಲ.

ನಾನು ವರದಿ ಸಲ್ಲಿಸಿದ್ದಂತೆ ಈ ಯೋಜನೆಗೆ ನನ್ನ ವಿಭಾಗ ಸೂಕ್ತವಲ್ಲವೆಂಬ ವಿಷಯದಲ್ಲಿ ಕೃಷಿನಿರ್ದೇಶಕರು ಯಾವ ಪ್ರತಿಕ್ರಿಯೆಯನ್ನೂ ಸೂಚಿಸಿರಲಿಲ್ಲ. ಆದರೆ ಉಪನಿರ್ದೇಶಕರೊಂದಿಗೆ ನಡೆಸಿದ ಚರ್ಚೆಯೊಂದರಲ್ಲಿ ನನ್ನ ಅಭಿಪ್ರಾಯ ಸರಿ ಇರಬಹುದೆಂದೂ ಈ ವಿಷಯ ಹೆಚ್ಚುವರಿ ನಿರ್ದೇಶಕರ (EAD) ನಿರ್ಧಾರಕ್ಕೆ ಬಿಡುವುದೇ ಸರಿಯೆಂದೂ ನುಡಿದಿದ್ದರು. EAD ಗಳಿಂದ ಈ ಯೋಜನೆಗೆ ಚಾಲನೆ ಸಿಕ್ಕಿದ್ದ ಇತರ ವಿಭಾಗಗಳೂ ತೊಂದರೆಗೆ ಸಿಲುಕಿದವಷ್ಟೇ ಅಲ್ಲದೆ ಸರ್ಕಾರದ ಒಂದಷ್ಟು ಹಣವೂ ನಷ್ಟವಾಯಿತು.

೨೭. ಕಾಬೂಲಿಗಳ ಸಹವಾಸ

೧೯೨೦ನೇ ಇಸವಿಯ ಮಾರ್ಚ್ ತಿಂಗಳು. ನಾನು ನನ್ನ ಮದುವೆಗಾಗಿ ಅಮರಾವತಿಯಿಂದ ಬೆಂಗಳೂರಿಗೆ ಬರುತ್ತಿದ್ದೆ. ಅಮರಾವತಿಯ ಪಿ. ಡಬ್ಲ್ಯು.ಡಿ.ಯಲ್ಲಿ ಗುಮಾಸ್ತನಾಗಿದ್ದ ಕುಬ್ಜನಾದ ಒಬ್ಬ ನೆಂಟನೂ ನನ್ನ ಗುರು ಪಂಡಿತ್ ಖಾಂಡ್ಕರ್ ಅವರೂ ನನ್ನೊಂದಿಗಿದ್ದರು.

ನಾವು ಮೂರನೆಯ ದರ್ಜೆಯ ಕಂಪಾರ್ಟ್‌ಮೆಂಟ್‌ನಲ್ಲಿದ್ದೆವು. ಅಯ್ಯರ್ ಅವರನ್ನೂ ಖಾಂಡ್ಕರ್ ಅವರನ್ನೂ ಸಾಮಾನುಗಳ ರಕ್ಷಣೆಗೆ ಬಿಟ್ಟು, ನಾನು ಟಿಕೆಟ್ ಖರೀದಿಸಲು ಹೋದೆ. 'ಟಿಕೆಟ್ ಮಾಸ್ಟರ್' ತಮ್ಮ ಸೀಟಿನಲ್ಲಿ ಇರಲಿಲ್ಲವಾದ್ದರಿಂದ ಸ್ವಲ್ಪ ಕಾಯಬೇಕಾಯಿತು. ನಾನು ಕಂಪಾರ್ಟ್‌ಮೆಂಟ್‌ಗೆ ಹಿಂದಿರುಗುವ ವೇಳೆಗೆ, ಅಲೆಮಾರಿ ಕಾಬೂಲಿಗಳು ತಮ್ಮೊಂದಿಗೆ ಒಯ್ಯುವ, ಹಾಸುವ - ಹೊದೆಯುವ ಸರಂಜಾಮುಗಳು ಹಾಗೂ ಇತರ ಸಾಮಾನುಗಳ ಗಂಟು ಮೂಟೆಗಳಿಂದ ಇಡೀ ಕಂಪಾರ್ಟ್‌ಮೆಂಟು ನೆಲದಿಂದ ಸೂರಿನವರೆಗೆ ತುಂಬಿಹೋಗಿತ್ತು. ಅಯ್ಯರ್ ಗೊಣಗುತ್ತಿದ್ದರು. ಕಂಪಾರ್ಟ್‌ಮೆಂಟ್‌ನಲ್ಲಿದ್ದ ೨೦ರ ಹರೆಯದ ತರುಣಿ "ಬಾಬು ಏನು ಹೇಳುತ್ತಿದ್ದೀರಾ?" ಎಂದು ಅಯ್ಯರ್ ಅವರ ಕೈಗಳನ್ನು ಹಿಡಿದುಕೊಂಡು ಬಿಟ್ಟಳು. ಗೊಣಗುತ್ತಿದ್ದ ಅಯ್ಯರಿಗೆ ತಮ್ಮ ಮಣಿಗಂಟುಗಳು ಪುಡಿಪುಡಿಯಾಗುತ್ತಿರುವಂತೆ ಭಾಸವಾಯಿತು. ಅವರ ರಕ್ಷಣೆಗೆ ಧಾವಿಸಿದ ನಾನು ಆಕೆಯ ಹಿಡಿತವನ್ನು ಸಡಿಲಿಸುವಂತೆ ನಯವಾಗಿ ಕೋರಿದಾಗ ಅವಳೆಂದಳು, "ನೀನು ಒಳ್ಳೆಯವನು, ಇವನು ಕೆಟ್ಟವನು".

ಸಾಮಾನ್ಯವಾಗಿ ರೈಲು ಪ್ರಯಾಣದಲ್ಲಿ ಸ್ನೇಹ ಪ್ರಾರಂಭವಾಗುವುದೇ ಜಗಳದಿಂದ. ಪ್ರಯಾಣದಿಂದ ಆರಂಭದಲ್ಲಿ ಸ್ಥಳಾವಕಾಶಕ್ಕಾಗಿ ಜಗಳ; ಸಹಪ್ರಯಾಣಿಕರಾಗಿದ್ದು ಇಳಿದು ಹೋಗುವಾಗ ಸ್ನೇಹ! ಮೊದಲಲ್ಲಿ ಪರಸ್ಪರರನ್ನು ಹರಿದುಹಾಕುವಂತಿರುತ್ತದೆ ಸಿಟ್ಟು. ಆದರೆ ಇಳಿದು ಹೋಗುವಾಗ ಒಬ್ಬರಿಗಾಗಿ ಮತ್ತೊಬ್ಬರು ಕಣ್ಣೀರು ಕರೆಯುವಂತಾಗುತ್ತದೆ.

ಇನ್ನಷ್ಟು ಗಂಟು ಮೂಟೆಯೊಡನೆ ಕಾಬೂಲಿ ತರುಣಿಯ ಅಣ್ಣ ಕಂಪಾರ್ಟ್‌ಮೆಂಟ್‌ನೊಳಕ್ಕೆ ಬಂದ, ಬದ್ನೇರಾ ಜಂಕ್ಷನ್ ಕಡೆಗೆ ರೈಲು ಚಲಿಸತೊಡಗಿತು. ನಾನು ಕಾಬೂಲಿಗಳೊಂದಿಗೆ ಮಾತಿಗೆ ಇಳಿದೆ. ಅವರು ಮುಖ್ಯವಾಗಿ ಕುದುರೆ ವ್ಯಾಪಾರಿಗಳೆಂದು ತಿಳಿದುಬಂದಿತು. ಭಾರತದ ಉದ್ದಗಲದಲ್ಲಿ ತಾವು ನೋಡದ ಹಳ್ಳಿ ಯಾವುದೂ ಇಲ್ಲ ಎಂದರವರು. ಚಕಿತನಾದ ನಾನು ಅವರನ್ನು ಪರೀಕ್ಷಿಸಲೆಂದು ಮೈಸೂರು ಮತ್ತು ಬೆಂಗಳೂರನ್ನು ನೋಡಿದ್ದಾರೆಯೇ ಎಂದು ಕೇಳಿದೆ. ತರುಣಿ ಹೇಳಿದಳು, "ದೊಡ್ಡ ಪಟ್ಟಣಗಳಾದ ಮೈಸೂರು-ಬೆಂಗಳೂರುಗಳ ಮಾತೇನು - ಅಲ್ಲಿಗೆ ಆಗಾಗ ಹೋಗುತ್ತಲೇ ಇರುತ್ತೇವೆ. ಆ ರಿಯಾಸತ್ತಿನ (ಪ್ರಾಂತ್ಯದ) ಎಲ್ಲ ಹಳ್ಳಿಗಳೂ ನಮಗೆ ಪರಿಚಿತ". ನಮ್ಮ ಪೂರ್ವಜರ ಬಸವಾಪಟ್ಟಣ, ರಾಮನಾಥಪುರ ಮುಂತಾದ ಹಳ್ಳಿಗಳ ಹೆಸರುಗಳನ್ನೂ ಅವರು ಹೇಳಿದರು.

ಆ ಯುವಕ ಹೇಳತೊಡಗಿದ, "ಸಾಹೇಬ್, ಕಾಲ ಚೆನ್ನಾಗಿತ್ತು. ನಾವು ಯಾವ ತೊಂದರೆ ನೀಡದಿದ್ದರೂ ಹಳ್ಳಿಯ ಜನ ಭಯದಿಂದ ನಮಗೆ ಕೋಳಿ, ಮೇಕೆ, ಮೊಟ್ಟೆ, ಹಾಲು ಎಲ್ಲ ಕೊಟ್ಟುಬಿಡುತ್ತಿದ್ದರು. ನಮಗೆ ಸಿಗುತ್ತಿದ್ದಷ್ಟು ಅನುಕೂಲ ತಹಸೀಲ್ದಾರರಿಗೂ ಇರಲಿಲ್ಲ. ಈಗ ಯಾರೂ ನಮಗೆ ಹೆದರಲ್ಲ; ಎಲ್ಲರೂ ವಿದ್ಯಾವಂತರು, ಭಯ ಇಲ್ಲದವರು".

ಇನ್ನೂ ಹೊರ ಸಿಗ್ನಲ್ ಬಿದ್ದಿರಲಿಲ್ಲ. ರೈಲು ಬದ್ನೇರಾ ಹತ್ತಿರ ನಿಲ್ಲಬೇಕಾಗಿತ್ತು. ಆ ಯುವಕ ಹಿಂದೂಸ್ತಾನಿ ರಾಗ ಭೈರವಿಯಲ್ಲಿ ಒಂದು ಠುಮ್ರಿ ಹಾಡತೊಡಗಿದ. ಏನು! ಈ ಕಾಬೂಲಿ ಅಲೆಮಾರಿಯಿಂದ ಸಂಗೀತವೇ! ಅದೂ ಇಷ್ಟು ಒಳ್ಳೆ ಸಂಗೀತ! ಅವನ ಶಾರೀರ, ಅದರ ಮಾಧುರ್ಯ, ಇಂಪಿಗೆ ನನ್ನ ಮೆಚ್ಚುಗೆಯನ್ನು ಮುಚ್ಚಿಡಲಾಗಲಿಲ್ಲ; ನನ್ನ ಮೆಚ್ಚುಗೆ ಹೇಳಿದೆ. ಅವನೆಂದ, "ಸಾಹೇಬ್, ಕಳೆದ ಎಂಟು

ದಿನದಿಂದ ಪ್ರತಿ ರಾತ್ರಿ ಬಯಲಿನಲ್ಲಿ ಹಾಡಿ ನನ್ನ ಧ್ವನಿ ಬಿರುಸಾಗಿದೆ. ಜನ ಬಂದು ಕೇಳೋವ್ರು".

ಈ ತರುಣಕಾಬೂಲಿಯ ಸಂಗೀತದ ಬಗ್ಗೆ ನನಗೂ ತಿಳಿಯಬಾರದಾಗಿತ್ತೆ! ತಿಳಿದಿದ್ದರೆ ನಾನೂ ಪ್ರತಿ ರಾತ್ರಿ ಹೋಗುತ್ತಿದ್ದೆ ಇವನ ಸಂಗೀತ ಕೇಳಲು. ಅವರು ಅಲೆಮಾರಿ ಬದುಕು ಬದುಕುತ್ತಿದ್ದರಾದರೂ ಅವರೆಷ್ಟು ಆನಂದವಾಗಿದ್ದರು, ಸಂಗೀತ ಅವರೊಡನೆ ಎಷ್ಟು ಆನಂದವಾಗಿತ್ತು! ದೇವಿ ಸರಸ್ವತಿ ಐಶ್ವರ್ಯಕ್ಕಿಂತಲೂ ಕಾರ್ಪಣ್ಯವನ್ನೇ ತನ್ನ ನಿವಾಸಕ್ಕೆ ಇಷ್ಟಪಡುವಳೋ ಏನೋ!

೨೮. ಉಸ್ತಾದ್ ಬಡೇ ಗುಲಾಂ ಅಲೀಖಾನ್

ಇದು ನಡೆದದ್ದು ಕಲ್ಕತ್ತಾದಲ್ಲಿ ೧೯೫೪ ನೇ ಇಸವಿಯಲ್ಲಿ . ನಾಲ್ಕು ತಂತಿ ಮತ್ತು ಏಳು ತಂತಿ ಪಿಟೀಲು ಹಾಗೂ ಗೊಟ್ಟುವಾದ್ಯಗಳ ತಂತಿ ಖರೀದಿಸಲೆಂದು ನಾನು 'ದ್ವಾರಕಿನ್ ಬ್ರಾಸ್'ಗೆ ಹೋಗಿದ್ದೆ. ಆ ಅಂಗಡಿಯ ಸಹಾಯಕನಿಗೆ ತಂತಿ ವಾದ್ಯಗಳ ಬಗೆ – ಅದರಲ್ಲೂ ವಿಚಿತ್ರ ವೀಣಾ ಅಥವಾ ಗೊಟ್ಟುವಾದ್ಯದ ಬಗ್ಗೆ ಆಸಕ್ತಿ. ನಾವು ಮಾತನಾಡುತ್ತಿರುವಾಗ ಖಾನ್ ಸಾಹೇಬ್ ಬಡೇ ಗುಲಾಂ ಅಲೀಖಾನ್ ಬಂದಿದ್ದಾರೆಂದು ಸುದ್ದಿಯಾಯಿತು. ಪ್ರತಿಯೊಬ್ಬರೂ ತಮ್ಮತಮ್ಮ ಕೆಲಸ ಬದಿಗಿಟ್ಟು ಅವರನ್ನು ಎದುರುಗೊಳ್ಳಲು ಹೋದರು. ಅವರು ಪ್ರವೇಶಿಸಿದರು. ಈ ಅಂಗಡಿ- ರಸ್ತೆಗೆ ಸಮಕೋನದಲ್ಲಿ ಉದ್ದವಾಗಿ, ಕೆಲವೇ ಅಡಿ ಅಗಲವಾದ ಸ್ಥಳ. ನನ್ನನ್ನು ಆ ಖ್ಯಾತ ಗಾಯಕರಿಗೆ ಪರಿಚಯ ಮಾಡಿಕೊಡಲಾಯಿತು. ಸ್ವಲ್ಪ ಹೊತ್ತು ನಾವು ಉತ್ತರಾದಿ ಹಾಗೂ ದಕ್ಷಿಣಾದಿ ಸಂಗೀತಗಳ ಬಗ್ಗೆ ಮಾತುಕತೆ ನಡೆಸಿದೆವು. ಖಾನ್ ಸಾಹೇಬರಿಗೆ ದಕ್ಷಿಣ ಭಾರತದಲ್ಲೂ ಅಪಾರ ಮೆಚ್ಚುಗೆ ಇದೆ ಎಂದು ನನಗೆ ತಿಳಿದಿತ್ತು. ಅವರು ಮದ್ರಾಸಿನಲ್ಲೇ ನೆಲೆಸಿದ್ದರೆಂಬ ವದಂತಿಯೂ ಇತ್ತು.

ಇದ್ದಕ್ಕಿದ್ದಂತೆ ಖಾನ್ ಸಾಹೇಬರು ಅಂಗಡಿಯ ಸಹಾಯಕನತ್ತ ತಿರುಗಿ ನುಡಿದರು, "ನನಗೊಂದು ಕೆಲಸ ತುರ್ತಾಗಿ ಆಗಬೇಕಾಗಿದೆ. ನಾನು ತಂದಿರುವ ಕೈಹಾರ್ಮೋನಿಯಂ ಈಗಲೇ ಶ್ರುತಿಯಾಗಬೇಕು. ನಾಳೆ 'ಹಿಸ್ ಮಾಸ್ಟರ್ಸ್ ವಾಯ್ಸ್' ಕಂಪೆನಿಯೊಂದಿಗೆ ನನ್ನ ರೆಕಾರ್ಡಿಂಗ್ ಇದೆ". ಆ ಶ್ರೇಷ್ಠ ಗಾಯಕರನ್ನು ನಾನು ವಿನಯದಿಂದ ಕೇಳಿದೆ, "ಖಾನ್ ಸಾಹೇಬ್, ನೀವು ಪಕ್ಕವಾದ್ಯವಾಗಿ ಹಾರ್ಮೋನಿಯಂ ಬಳಸುತ್ತೀರಾ"? ಚಕಿತರಾಗಿ ಅವರು ಮರು ಪ್ರಶ್ನೆ ಹಾಕಿದರು "ಯಾಕೆ ಬಳಸಬಾರದು?" "ಆಕಾಶವಾಣಿಯವರು ಅದನ್ನು ನಿಷೇಧಿಸಿದ್ದಾರಲ್ಲ, ಅದಕ್ಕೆ ಕೇಳಿದೆ". ವ್ಯಂಗ್ಯವಾಗಿ ನುಡಿದರವರು, "ರೇಡಿಯೋ ? ಅದನ್ನು ಅತ್ಲಾಗೆ ಬಿಡಿ. ನಾನು ರೆಕಾರ್ಡಿಂಗ್‌ನಲ್ಲಿ ಒಂದಲ್ಲ, ಎರಡು ಹಾರ್ಮೋನಿಯಂಗಳನ್ನು ಬಳಸುತ್ತೇನೆ". ಹಾರ್ಮೋನಿಯಂ ಬಗ್ಗೆ ಕೀಳಾಗಿ ಭಾವಿಸುವವರು ಪರಿಶೀಲಿಸಬೇಕಾದ ವಿಷಯ ಇದು.

೨೯. ಅಹಮದಾಬಾದಿನ ಪಂಡಿತ್ ಓಂಕಾರನಾಥ ಠಾಕೂರ್

ವಿಷ್ಣು ದಿಗಂಬರ ಪಲುಸ್ಕರರ ಈ ಹಿರಿಯ ಶಿಷ್ಯರ ನೆನಪು ಬಂದಾಗಲೆಲ್ಲ ಅವರ ನೀಲಾಂಬರಿ ರಾಗದ 'ಮಿತುವಾ' ಗ್ರಾಮಫೋನ್ ರೆಕಾರ್ಡ್ ನನ್ನ ಕಿವಿಗಳಲ್ಲಿ ಮೊಳಗತೊಡಗುತ್ತದೆ. ಹಿಂದೂಸ್ತಾನಿ ನೀಲಾಂಬರಿ ರಾಗವು ಕರ್ನಾಟಕ ನೀಲಾಂಬರಿಗಿಂತ ಸಂಪೂರ್ಣ ಭಿನ್ನವಾದ ರಾಗ.

ಓಂಕಾರನಾಥ ಠಾಕೂರರ ಎರಡು ರೀತಿಯ ಮುಖಗಳನ್ನೂ ನಾನು ನೋಡಿದ್ದೇನೆ - ಗಡ್ಡದೊಡನೆ, ಗಡ್ಡವಿಲ್ಲದೆ. ಕೆಲವರು ಗಡ್ಡ ಬೆಳೆಸಿಕೊಂಡರೆ ತಾವು ಇನ್ನೂ ಹೆಚ್ಚು ಗೌರವಾನ್ವಿತರಂತೆ, ದೊಡ್ಡ ಮನುಷ್ಯರಂತೆ ಕಾಣುತ್ತೇವೆ ಎಂದು ಗಡ್ಡ ಬೆಳೆಸುತ್ತಾರೋ ಅಥವಾ ಪ್ರತಿನಿತ್ಯ ಕ್ಷೌರ ಮಾಡಿಕೊಳ್ಳುವುದು ಒಂದು ಬೇಸರದ ಕೆಲಸ ಎಂದು ಭಾವಿಸುತ್ತಾರೋ - ನನಗೆ ತಿಳಿಯದು. ಅವರ ಗುರು ಪಂಡಿತ ವಿಷ್ಣು ದಿಗಂಬರರು ಗಡ್ಡ ಬೆಳೆಸಲು ನಿರ್ಧರಿಸಿದವರು ಮತ್ತೆ ಅದನ್ನು ತೆಗೆಯಲಿಲ್ಲ. ಓಂಕಾರನಾಥರಾದರೋ ಗಡ್ಡವಿಲ್ಲದೆಯೇ ಭವ್ಯವಾಗಿ ಕಾಣುತ್ತಿದ್ದರು. ಉತ್ತರಾದಿ ಮತ್ತು ದಕ್ಷಿಣಾದಿ ಕಲ್ಯಾಣಿ ರಾಗಗಳನ್ನು ಹಾಡಿ, ಚಿತ್ರವತೀ ವೀಣಾ ವಾದ್ಯ ನುಡಿಸಿ ನಾನು ನೀಡಿದ ಪ್ರಾತ್ಯಕ್ಷಿಕೆಯ ಅನಂತರ ನಾವಿಬ್ಬರೂ ಹೊರಗೆ ಹರಟುತ್ತಾ ಕುಳಿತಾಗ ತೆಗೆದ ಭಾವಚಿತ್ರವೊಂದು ನನ್ನ ಬಳಿ ಬಹಳ ದಿನ ಇತ್ತು. ಭಾರತೀಯ ಸಂಗೀತದ ಎರಡು ಪದ್ಧತಿಗಳನ್ನೂ ಒಂದುಗೂಡಿಸುವ ನನ್ನ ಪ್ರಯತ್ನಕ್ಕೆ ಠಾಕೂರರ ಅಪಾರ ಮೆಚ್ಚುಗೆಯಿತ್ತು. ನನ್ನ ಪ್ರಾತ್ಯಕ್ಷಿಕೆಯ ಅನಂತರ ಅವರು ದೀಪಕ್ ಕಲ್ಯಾಣಿಯ ಬಗ್ಗೆ ಪ್ರೇಕ್ಷಕರಿಗೆ ತಿಳಿಸಿಕೊಟ್ಟರು. ಬನಾರಸ್ ವಿಶ್ವವಿದ್ಯಾಲಯದ ಸಂಗೀತ ವಿಭಾಗದಲ್ಲಿ ಉಪನ್ಯಾಸ ನೀಡಲೆಂದು ಅವರು ನನ್ನನ್ನು ಆಹ್ವಾನಿಸಿದ್ದರು. ಅವರು ಹಾಸಿಗೆ ಹಿಡಿದಿದ್ದಾರೆಂದು ಕೇಳಿದಾಗ ನನಗೆ ಬಹಳ ಖೇದವುಂಟಾಯಿತು. ಪಂಡಿತರು ಬೇಗ ಗುಣಮುಖರಾಗಲೆಂದು ನಾನು ದೇವರನ್ನು ಪ್ರಾರ್ಥಿಸುತ್ತೇನೆ.

ಗಡ್ಡವಿದ್ದೋ ಇಲ್ಲದೆಯೋ ಅಂತೂ ಅವರದು ಒಂದು ಭವ್ಯ ವ್ಯಕ್ತಿತ್ವ. ಅವರ ಶಾರೀರವೂ ಭವ್ಯವಾಗಿತ್ತು. ಅವರ ಇಚ್ಛೆಯಂತೆ ಗಮಕತಾನಗಳನ್ನು ಗುನುಗುತ್ತಿದ್ದರು, ಇಲ್ಲವೆ ತಂಬೂರಿ ಶ್ರುತಿಯಷ್ಟೇ ನವಿರಾಗಿಯೂ ಹಾಡಬಲ್ಲವರಾಗಿದ್ದರು. ಒಳ್ಳೆಯ ವಾಗ್ಮಿ; ಹೊಸ ಆವಿಷ್ಕಾರಗಳೆಂದರೆ ಅವರಿಗೆ ಮೆಚ್ಚುಗೆ.

೩೦. ನವಾಬರ ಪತ್ನಿ

೧೯೬೨ರಲ್ಲಿ ನಾನು ಹೊಶಂಗಾಬಾದ್ ವಿಭಾಗದ ಹೆಚ್ಚುವರಿ ಸಹಾಯಕ ನಿರ್ದೇಶಕನಾಗಿ ಸೇವೆ ಸಲ್ಲಿಸುತ್ತಿದ್ದೆ. ಖಾಂಡ್ವಾದ ವಿಶ್ರಾಂತಿ ಗೃಹದಲ್ಲಿ ಬಿಡಾರ ಹೂಡಿದ್ದು ಸುತ್ತಮುತ್ತಣ ಹಳ್ಳಿಗಳ ತಪಾಸಣೆ ನಡೆಸುತ್ತಿದ್ದೆ. ಅಂತಹ ಒಂದು ಹಳ್ಳಿಯ ವಿದ್ಯಾಮಂದಿರವನ್ನು ಪರಿಶೀಲಿಸಬೇಕಾಗಿತ್ತು.

ಅಂದಿನ ದಿನಗಳಲ್ಲಿ 'ವಿದ್ಯಾಮಂದಿರ' ಎನ್ನುವ ಒಂದು ಯೋಜನೆ ಚಾಲ್ತಿಯಲ್ಲಿತ್ತು. ಸ್ಥೂಲವಾಗಿ ಹೇಳುವುದಾದರೆ ಇದು ಆ ಯೋಜನೆಯ ಸ್ವರೂಪ : ಒಂದು ಪ್ರಾಥಮಿಕ ಶಾಲೆಯ ಒಬ್ಬ ಅಧ್ಯಾಪಕನ ಜೀವನ ನಿರ್ವಹಣೆಗೆ ಸಾಲುವಷ್ಟು ಜಮೀನನ್ನು ಭಾರೀ ಜಮೀನ್ದಾರರಿಂದ ದಾನವಾಗಿ ಪಡೆಯುವುದು. ಅಧ್ಯಾಪಕರು ಕೃಷಿ ಇಲಾಖೆಯ ಸಹಾಯ ಮತ್ತು ಮಾರ್ಗದರ್ಶನದಲ್ಲಿ ಆ ಜಮೀನಿನಲ್ಲಿ ಕೃಷಿ ಕೈಗೊಳ್ಳಬೇಕು. ಸುತ್ತಮುತ್ತಣ ಹಳ್ಳಿಗಳ ಮಕ್ಕಳೇ ಆ ಶಾಲೆಯ ವಿದ್ಯಾರ್ಥಿಗಳು. ಶಾಲಾಕಟ್ಟಡ, ಅಧ್ಯಾಪಕನ ನಿವಾಸ, ಎತ್ತು ಹಾಗೂ ಉಪಕರಣಗಳಿಗಾಗಿ ಕೊಟ್ಟಿಗೆ ಇವೆಲ್ಲದರ ನಿರ್ಮಾಣ ಸರ್ಕಾರಿ ಅನುದಾನ ಹಾಗೂ ಸಾರ್ವಜನಿಕರ ಕೊಡುಗೆಯಿಂದ ಆಗಬೇಕು ಎಂದು ಯೋಜಿಸಲಾಗಿತ್ತು. ಉದ್ದೇಶವೇನೋ ಮೆಚ್ಚುವಂಥದ್ದೇ. ಈ ಯೋಜನೆಯನ್ನು ರೂಪಿಸಿದವರು ಪಂಡಿತ ರವಿಶಂಕರ್ ಶುಕ್ಲಾ. ಅನುಷ್ಠಾನಕ್ಕೆ ತರುವಲ್ಲಿ ಮಾತ್ರ ಇದು ಸಾಮಾನ್ಯವಾಗಿ ಸೋಲನ್ನೇ ಕಾಣುತ್ತಿತ್ತು. ಹಳ್ಳಿಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸುವುದೊಂದು ಕಷ್ಟ ; ಅಧ್ಯಾಪಕನಿಗಾದರೋ ಕೃಷಿ ಮತ್ತು ಶಿಕ್ಷಣ - ಇವೆರಡನ್ನೂ ಕೈಗೊಳ್ಳಲು ಸಮಯ ಸಾಲುತ್ತಿರಲಿಲ್ಲ. ವಿದ್ಯಾಮಂದಿರವು ಶೈಕ್ಷಣಿಕ ಸಂಸ್ಥೆಯಾಗಿಯೂ ಸಫಲವಾಗಲಿಲ್ಲ; ಜನತೆಗೆ ಸುಧಾರಿತ ಕೃಷಿ ಪದ್ಧತಿಯನ್ನು ಕಾರ್ಯರೂಪದಲ್ಲಿ ತೋರಿಸುವ ಉದ್ದೇಶವೂ ಕೈಗೂಡಲಿಲ್ಲ. ನಾನು ನಿವೃತ್ತಿ ಹೊಂದಿದ ಕಾಲಕ್ಕೆ ಕೆಲವೇ ವಿದ್ಯಾಮಂದಿರಗಳು ಯಶಸ್ವಿಯಾಗಿ ಕೆಲಸ ಮಾಡುತ್ತಿದ್ದವು.

ವಿದ್ಯಾಮಂದಿರವನ್ನು ಪರಿಶೀಲಿಸಿದ ಅನಂತರ ಹೊಶಂಗಾಬಾದಿಗೆ ಹೋಗುವ ರೈಲು ಹಿಡಿಯಲು ಬೀರ್ ರೈಲು ನಿಲ್ದಾಣಕ್ಕೆ ಬಂದೆ. ನನ್ನ ಸಾಮಾನುಗಳನ್ನು ಖಾಂಡ್ವಾದಲ್ಲೇ ನಮ್ಮ ಕಂಪಾರ್ಟ್‌ಮೆಂಟ್‌ಗೆ ಇರಿಸಿ, ನನ್ನನ್ನು ಬೀರ್ ನಿಲ್ದಾಣದಲ್ಲಿ ಭೇಟಿ ಮಾಡಬೇಕೆಂದು ನನ್ನ ಆಳು ನರ್ಮದಾ ಪ್ರಸಾದನಿಗೆ ಮೊದಲೇ ಸೂಚನೆ ನೀಡಿದ್ದೆ. ನನಗಾಗಿ ದಿನಪತ್ರಿಕೆಯನ್ನೂ ಅವನು ಖಾಂಡ್ವಾದಲ್ಲೇ ಖರೀದಿಸಿದ್ದ.

ಅನೇಕ ಅಧಿಕಾರಿಗಳು ಬಯಸುತ್ತಿದ್ದಂತಹ ಭವ್ಯವಾದ ಆಳು ನರ್ಮದಾ ಪ್ರಸಾದ; ಲಕ್ಷಣವಾದ,ಎತ್ತರದ, ಸದೃಢ ಮೈಕಟ್ಟಿನ ಆತ ಶುಭ್ರವಾಗಿರುತ್ತಿದ್ದ; ಹೊಳೆಯುವ ಹಿತ್ತಾಳೆಯ ಆಫೀಸ್ ಬ್ಯಾಡ್ಜ್‌ನಿಂದ ಅಲಂಕೃತವಾದ ಹಸಿರು ದಿರುಸಿನಲ್ಲಿ ಭವ್ಯವಾಗಿರುತ್ತಿದ್ದ.

ನಾನು ಅಲ್ಲಿಂದ ಪ್ರಯಾಣ ಮಾಡಬೇಕಾಗಿದ್ದ ಕಂಪಾರ್ಟ್‌ಮೆಂಟ್‌ನಲ್ಲಿ ಬೇರೆ ಮೂರು ಜನ – ಇಬ್ಬರು ಗಂಡಸರು ಹಾಗೂ ಒಬ್ಬ ಹೆಂಗಸು - ಎಲ್ಲ ಮುಸ್ಲಿಮರು - ಇದ್ದರು. ನನ್ನ ಆಳನ್ನು ನೋಡಿ ಮಾರುಹೋಗಿದ್ದ ಅವರೆಲ್ಲರೂ ಮಾಲೀಕನೂ ಭವ್ಯವಾಗಿರಬೇಕೆಂದು ನಿರೀಕ್ಷಿಸಿದ್ದರು. ಅಲ್ಲಿದ್ದ ನನ್ನ ಉದ್ದನೆಯ ಕರಿಯ ಟ್ರಂಕಿನ ಮೇಲೆ ಬಿಳಿಯ ಅಕ್ಷರಗಳಲ್ಲಿ ನನ್ನ ಹೆಸರು, ಹುದ್ದೆಗಳು ಬರೆದಿದ್ದು, ನೌಕರನ ಯೂನಿಫಾರಂ ಮತ್ತು ಬ್ಯಾಡ್ಜ್ ಮೇಲೂ ನಮೂದಿಸಿದ್ದುದನ್ನು ಅವರು ಗಮನಿಸಿದ್ದರು. ರೈಲು ಇನ್ನೇನು ಖಾಂಡ್ವಾ ನಿಲ್ದಾಣದಿಂದ ಹೊರಡುವ ವೇಳೆ ಸಮೀಪಿಸಿದರೂ ಅವರು ನಿರೀಕ್ಷಿಸಿದ್ದ ಹೆಚ್ಚುವರಿ ಸಹಾಯಕ ಕೃಷಿ ನಿರ್ದೇಶಕರ ಸುಳಿವೇ ಇಲ್ಲ! ನಿಮ್ಮ ಸಾಹೇಬರು ಎಲ್ಲಿ? ಎಂದು ಅವರು ನನ್ನ ಸೇವಕನನ್ನು ಕೇಳಿದಾಗ ನಾನು ಬೀರ್‌ನಲ್ಲಿ ಅವರ ಜೊತೆ ಸೇರಿಕೊಳ್ಳುವೆನೆಂದು ಅವನು ಅವರಿಗೆ ತಿಳಿಸಿದ್ದ.

ಬೀರ್‌ನಲ್ಲಿ ರೈಲಿಗೆ ಹತ್ತಿ ನನ್ನ ಜಾಗದಲ್ಲಿ ಕುಳಿತುಕೊಂಡೆ. ವರ್ತಮಾನ ಪತ್ರಿಕೆಯನ್ನು ಓದತೊಡಗಿದೆ. ಈಗಲೇ ಕಂಪಾರ್ಟ್‌ಮೆಂಟ್‌ನಲ್ಲಿದ್ದ ಜನರೊಂದಿಗೆ ಮಾತಾಡಬೇಕು ಎನಿಸಿರಲಿಲ್ಲ ನನಗೆ. ರೈಲಿನ ವೇಗ ಹೆಚ್ಚಿತು. ಕಿಟಕಿಯತ್ತ ನೋಡುತ್ತ ಯಾವುದೋ ರಾಗವನ್ನು ಶಿಳ್ಳೆ ಹೊಡೆಯತೊಡಗಿದೆ. ನನಗೆ ಚೆನ್ನಾಗಿ ಶಿಳ್ಳೆ ಹೊಡೆಯಲು ಬರುತ್ತಿದ್ದು ಅದರ ಸಹಾಯದಿಂದಲೇ, ಈ ಸಂದರ್ಭದಲ್ಲಿ ಆದಂತೆ ಅನೇಕ ಸ್ನೇಹಿತರನ್ನು ಗಳಿಸಿಕೊಂಡೆ. ಆ ಹೆಂಗಸಿಗೆ ನನ್ನ ಶಿಳ್ಳೆ ಗಾನದಲ್ಲಿ ಆಸಕ್ತಿ ಹುಟ್ಟಿತು. ಆಕೆಗೆ ಸಂಗೀತದಲ್ಲಿ ಒಲವಿದ್ದಂತೆ ತೋರಿತು. ತನ್ನೊಡನೆ ಇದ್ದ ಒಬ್ಬ ಗಂಡಸಿಗೆ ಆಕೆ ಹೇಳಿದ ಮಾತು ನನಗೂ ಕೇಳಿಸಿತು, ''ಈ ಗೃಹಸ್ಥರು ಬಹಳ ಚೆನ್ನಾಗಿ ಸಂಗೀತವನ್ನು ಶಿಳ್ಳೆ ಹೊಡೆಯುತ್ತಿದ್ದಾರೆ. ಅವರು ಸಂಗೀತ ಬಲ್ಲವರು ಎನಿಸುತ್ತದೆ. ದಯವಿಟ್ಟು ಅವರೊಂದಿಗೆ ಮಾತನಾಡಿ.'' ಕೆಲವು ನಿಮಿಷಗಳ ಅನಂತರ ಆತ ಬಂದು ನನ್ನ ಪಕ್ಕ ಕುಳಿತು, ''ಗುಡ್ ಮಾರ್ನಿಂಗ್ ಮಿಸ್ಟರ್ ರಾವ್'' ಎಂದ. ನಾನು ಪ್ರತಿಯಾಗಿ ವಂದಿಸಿ ಮಾತಿಗೆ ತೊಡಗಿದೆ. ನಾನು ಯಾರೆಂಬುದು ಅವನಿಗೆ ಈಗಾಗಲೇ ತಿಳಿದಿತ್ತು. ಆತ ಭೋಪಾಲಿನ ದಂತವೈದ್ಯ ಡಾ. ವಾಲಿ ಮುರಾಜ್ ಎಂದು ತನ್ನ ಪರಿಚಯ ಹೇಳಿಕೊಂಡ. ನಮ್ಮ ತಂದೆಯವರು ಮೂರು ವರ್ಷಗಳ ಕಾಲ ಭೋಪಾಲಿನಲ್ಲಿ ಪ್ರಮುಖ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದು ಅವರೊಂದಿಗೆ ನಾನು ಕೂಡಾ ರಾಜ್ಯದಲ್ಲೆಲ್ಲಾ ಸಂಚರಿಸಿದ್ದುದ್ದರಿಂದ ನಮ್ಮ ಮಾತುಕಥೆ ಸುಲಭವಾಗಿ ಮುಂದುವರಿಯಿತು. ಆಸಕ್ತಳಾದ ಆ ಹೆಂಗಸು ಕೂಡ ಮಾತುಕತೆಯಲ್ಲಿ ನಮ್ಮ ಜತೆ ಸೇರಿಕೊಂಡರು. ನನ್ನ ಒಳ್ಳೆಯ 'ಶಿಳ್ಳುಗಾರಿಕೆ'ಗೆ ಆಕೆ ಮೆಚ್ಚುಗೆ ಸೂಚಿಸಿದಳು. ತನಗೆ ಸಂಗೀತದಲ್ಲಿ ಬಹಳ ಆಸಕ್ತಿ ಎಂದೂ ತನ್ನ ಜನಾಂಗದ ಕಟ್ಟಳೆಯಿಂದಾಗಿ ಸಂಗೀತ ಕಲಿಯಲು ಸಾಧ್ಯವಾಗಲಿಲ್ಲ ಎಂದೂ ಆಕೆ ತಿಳಿಸಿದಳು. ಅಷ್ಟೇ ಅಲ್ಲದೆ ಅವರ ಹನ್ನೆರಡು

ಹದಿಮೂರು ವಯಸ್ಸಿನ ಮಗಳಿಗೆ ಒಳ್ಳೆಯ ಶಾರೀರವಿದ್ದರೂ ಜನಾಂಗದ ನಿಯಮಗಳಿಂದಾಗಿ ಅವಳಿಗೂ ಸಂಗೀತ ಕಲಿಸಲು ಸಾಧ್ಯವಾಗಿಲ್ಲವೆಂದೂ ತಿಳಿಸಿದಳು.

ನನ್ನ ಕುಟುಂಬದ ಬಗ್ಗೆ ತಿಳಿದುಕೊಳ್ಳಲು ಆಕೆ ಆಸಕ್ತಳಾಗಿದ್ದಳು. ಸಂಗೀತದ ಬಗೆಗಿನ ಉತ್ಸಾಹದಲ್ಲಿ ನನ್ನ ಪತ್ನಿಯೂ ನನ್ನೊಡನೆ ಭಾಗಿ ಎಂದೂ ಆಕೆ ವೀಣೆ,ಹಾರ್ಮೋನಿಯಂ,ತಬಲಗಳನ್ನು ನುಡಿಸುವಳೆಂದೂ ಕೇಳಿ ಆಕೆ ಬಹಳ ಸಂತೋಷಪಟ್ಟಳು. ನನ್ನ ಪತ್ನಿಯೊಂದಿಗೆ ಭೋಪಾಲಿಗೆ ಬರಬೇಕೆಂದು ಆಕೆ ನನ್ನನ್ನು ಆಹ್ವಾನಿಸಿದಳು. ''ಮಿಸ್ಟರ್ ರಾವ್, ನನ್ನನ್ನು ನಿಮ್ಮ ತಂಗಿಯೆಂದು ತಿಳಿಯಬೇಕು. ನಿಮ್ಮ ಬ್ರಾಹ್ಮಣ ಅಡುಗೆಯವರು,ಅಡುಗೆ ಮನೆ - ಮುಂತಾದ ಎಲ್ಲಾ ಸೌಕರ್ಯಗಳನ್ನೂ ನಾನು ನಿಮಗೆ ಮಾಡಿಕೊಡುತ್ತೇನೆ. ಆದರೆ ನಮಗೆ ಸಂಗೀತ ಬೇಕು. ನಿಮ್ಮಿಂದ ಸ್ವಲ್ಪ ಶಾಸ್ತ್ರೀಯ ಸಂಗೀತವನ್ನು ನನ್ನ ಮಗಳು ಕಲಿಯ ಬೇಕು.'' ಎಂದಳು. ನಾನು ಭೋಪಾಲಿಗೆ ಬರುವೆನೆಂದು ಹೇಳಿದೆ.

ಹೊಶಂಗಾಬಾದ್ ಬಂದಿತು. ನಾನು ರೈಲಿನಿಂದ ಇಳಿಯುವಾಗ ಆಕೆ ನುಡಿದಳು, ''ಸಂಗೀತದ ಬಗ್ಗೆ ಮಾತನಾಡುತ್ತಾ ಎಷ್ಟು ಚೆನ್ನಾಗಿ ಕಾಲಕಳೆದೆವು. ಭೋಪಾಲ್‌ಗೆ ಹಿಂದಿರುಗಿದ ಮೇಲೆ ಸಂಗೀತದ ಮಾತಿರಲಿ, ನನ್ನ ಮುಖವನ್ನೂ ನಾನು ತೋರಿಸುವಂತಿಲ್ಲ. ಈ ಬುರ್ಕಿ ಧರಿಸಬೇಕು.'' ಆ ಬುರ್ಕಿಯನ್ನು ಆಕೆ ಜಿಗುಪ್ಸೆಯಿಂದ ಪಕ್ಕಕ್ಕೆ ಎಸೆದಳು.

ಕೆಲವು ತಿಂಗಳುಗಳ ಅನಂತರ ಭೋಪಾಲಿನಲ್ಲಿ ಒಂದು ದನದ ಜಾತ್ರೆ ನಡೆಯಿತು. ನಾನು ಅಲ್ಲಿಗೆ ಹೋಗಬೇಕಾಗಿ ಬಂದಿತು. ನನ್ನ ನಿರೀಕ್ಷಿತ ಪ್ರಯಾಣದ ಬಗ್ಗೆ ಡಾ.ವಾಲಿ ಮುರಾಜ್ ಅವರಿಗೆ ಪತ್ರ ಬರೆಯಲು ಸಮಯವಿರಲಿಲ್ಲ. ಭೋಪಾಲ್ ರೈಲು ನಿಲ್ದಾಣದಿಂದ ದನದ ಜಾತ್ರೆಯ ತಾಣಕ್ಕೆ ನೇರವಾಗಿ ಹೋದೆ. ಭೋಪಾಲಿನ ನವಾಬರ ಆಪ್ತ ಕಾರ್ಯದರ್ಶಿ ಶ್ರೀ ವೆಂಕೋಬರಾಯರನ್ನು ನಾನು ಭೇಟಿ ಮಾಡಬೇಕಿತ್ತು. ಇವೆಲ್ಲ ಮುಗಿದ ಮೇಲೆ, ಭೋಪಾಲಿಗೆ ಬಂದಿರುವೆನೆಂದು ಡಾ.ವಾಲಿ ಮುರಾಜ್ ಅವರಿಗೆ ಟೆಲಿಫೋನ್ ಮಾಡಿದೆ. ತಕ್ಷಣ ಅವರು ಕೇಳಿದರು, ''ನಮ್ಮಲ್ಲಿಗೆ ಯಾಕೆ ಬರಲಿಲ್ಲ?'' ಯೋಚಿಸಲು ಸಮಯವಿರಲಿಲ್ಲವೆಂದು ಉತ್ತರಿಸಿದೆ. ಆ ಊರಿನ ಒಬ್ಬ ಗೆಳೆಯರೊಂದಿಗೆ ನಾನು ಉಳಿದುಕೊಂಡಿದ್ದೆ. ಮಾರನೆಯ ಬೆಳಗ್ಗೆ ಒಂಬತ್ತು ಗಂಟೆಗೆ ನಾನು ಅವರ ಮನೆಗೆ ಹೋಗುವುದು ಎಂದು ನಿಶ್ಚಯವಾಯಿತು.

ಅಂತೆಯೇ ಮಾರನೆಯ ಬೆಳಗ್ಗೆ ಒಂಬತ್ತು ಗಂಟೆಗೆ ಅವರ ಮನೆಗೆ ಹೋದೆ. ಆತ ನನಗಾಗಿ ಕಾಯುತ್ತಿದ್ದರು. ಅವರ ಆಧುನಿಕ ಶೈಲಿಯ ಮನೆ, ಸಲಕರಣೆಗಳು, ಅತ್ಯಾಧುನಿಕವಾದ ದಂತವೈದ್ಯಕೀಯ ಉಪಕರಣಗಳು ಇವೆಲ್ಲಾ ನನ್ನ ಮೆಚ್ಚುಗೆ ಗಳಿಸಿದವು. ಚಹಾಪಾನವೂ ಆಯಿತು. ನಮ್ಮೊಡನೆ ಪ್ರಯಾಣ ಮಾಡಿದ ಹೆಂಗಸು ನನಗೆ ನೆನಪಿದ್ದಳು. ಡಾ. ವಾಲಿ ಮುರಾಜ್‌ರವರ ಪತ್ನಿಯನ್ನು ಭೇಟಿಯಾಗ ಬಯಸುವೆನೆಂದು ನಾನವರಿಗೆ ಹೇಳಿದೆ. ಇನ್ನೊಂದೇ ನಿಮಿಷದಲ್ಲಿ ಆಕೆ ಬರುವಳೆಂದರು ಅವರು. ಕೆಲವೇ ನಿಮಿಷದಲ್ಲಿ ಒಂದು ಬಾಗಿಲು ತೆಗೆದು ಯೂರೋಪಿಯನ್ ಪೋಷಾಕ್ ಧರಿಸಿದ್ದ ಒಬ್ಬ ಭಾರಿ ಹೆಂಗಸು ಪ್ರವೇಶಿಸಿ ನುಡಿದರು, "ಗುಡ್ ಮಾರ್ನಿಂಗ್! ಮಕ್ಕಳಿಗೆ ಸ್ನಾನ ಮಾಡಿಸುತ್ತಿದ್ದುದರಿಂದ ನಿಮ್ಮನ್ನು ಎದುರುಗೊಳ್ಳಲು ನನಗೆ ಸಾಧ್ಯವಾಗಲಿಲ್ಲ.'' ನಾನು ಎದ್ದು ನಿಂತು ಆಕೆಗೆ 'ಗುಡ್ ಮಾರ್ನಿಂಗ್' ಅಂತ ವಂದಿಸಿದೆ. ಆಕೆಯ ಭೇಟಿಯಿಂದ ನನಗಾದ ಅಪಾರ ಸಂತೋಷವನ್ನು ಹೇಳಿದೆ. ತನ್ನ ಪತಿ ವಾಲಿ ಮುರಾಜ್‌ರವರು ನನ್ನ ಬಗ್ಗೆ ಎಲ್ಲವನ್ನೂ ಹೇಳಿರುವರೆಂದು ಆಕೆ ನುಡಿದರು.

ನಾನು ರೈಲಿನಲ್ಲಿ ಭೇಟಿಮಾಡಿದ್ದ, ನನ್ನನ್ನು ಭೋಪಾಲಿಗೆ ಆಮಂತ್ರಿಸಿದ್ದ ಹೆಂಗಸು ಖಂಡಿತವಾಗಿಯೂ ಈಕೆಯಲ್ಲ. ಮುಸಲ್ಮಾನ್ ಜನಾಂಗದಲ್ಲಿ ಬಹುಪತ್ನಿತ್ವ ಪದ್ಧತಿ ಇದ್ದು ಶ್ರೀಮಂತರಾದ ವಾಲಿ ಮುರಾಜ್‌ರವರಿಗೆ ವಿವಿಧ ದೇಶಗಳ ಪತ್ನಿಯರಿರಬಹುದೆಂದು ನನಗೆ ನಾನೇ ವಿವರಣೆ ಕೊಟ್ಟುಕೊಂಡೆ. ಆಕೆಯನ್ನು ಪರಿಚಯ ಮಾಡಿ ಕೊಡುವಾಗ ಆಕೆ ರಷ್ಯನ್ ಎಂದು ಅವರು ಹೇಳಿದ ನೆನಪು. ಆಕೆ ನಮ್ಮೊಡನೆ ಕೆಲವು ನಿಮಿಷಗಳು ಮಾತ್ರ ಇದ್ದು ಏನೋ ಕಾರಣ ಹೇಳಿ ಒಳಗೆ ಹೋದರು. ನನ್ನ ಸ್ನೇಹಿತ ಡಾ. ವಾಲಿ ಮುರಾಜ್‌ರವರನ್ನು ಕೇಳಿದೆ, ''ನಾನು ರೈಲಿನಲ್ಲಿ ಭೇಟಿ ಮಾಡಿದ, ಸಂಗೀತದಲ್ಲಿ ಅಷ್ಟೊಂದು ಆಸಕ್ತಿ ಹೊಂದಿದ ನಿಮ್ಮ ಪತ್ನಿ ಎಲ್ಲಿ?'' ಅವರೆಂದರು, ''ಓ , ಮಿಸ್ಟರ್ ರಾವ್ ಆಕೆಯನ್ನು ನಿಮಗೆ ರೈಲಿನಲ್ಲಿ ಪರಿಚಯ ಮಾಡಿಸದೇ ಇದ್ದುದಕ್ಕೆ ಕ್ಷಮೆ ಇರಲಿ. ಆಕೆ ನನ್ನ ಪತ್ನಿ ಅಲ್ಲ. ಆಕೆ ಭೋಪಾಲಿನ ಒಬ್ಬ ನವಾಬರ ಪತ್ನಿ. ನನ್ನ ಬಳಿ ಕೆಲವು ಆವಶ್ಯಕ ಉಪಕರಣಗಳು ಇಲ್ಲದೆ ಹೋದುದರಿಂದ ಆಕೆಯ ದಂತ ಚಿಕಿತ್ಸೆಗಾಗಿ ಆಕೆಯೊಂದಿಗೆ ಮುಂಬೈಗೆ ಹೋಗಿದ್ದೆ. ರೈಲಿನಲ್ಲಿ ನಿಮ್ಮನ್ನು ಭೇಟಿ ಮಾಡಿದ ಮೇಲೆ ನಾವಿಬ್ಬರೂ ಸಿತಾರ್ ಕಲಿಯತೊಡಗಿದ್ದೇವೆ.'' ಅವರ ಹಾಲಿನಲ್ಲಿ ಒಂದು ಮೂಲೆಯಲ್ಲಿಟ್ಟಿದ್ದ ಸಿತಾರನ್ನು ಅವರು ನನಗೆ ತೋರಿಸಿದರು.

ನಾನು ಭೋಪಾಲಿಗೆ ಬಂದಿರುವುದನ್ನು ಆಕೆಗೆ ತಾವು ಟೆಲಿಫೋನ್ ಮೂಲಕ ತಿಳಿಸಿರುವುದಾಗಿ ಡಾ. ವಾಲಿ ಹೇಳಿದರು. ಅಂದು ಮಧ್ಯಾಹ್ನ ಕುದುರೆ ರೇಸಿನಲ್ಲಿ ನಾವು ಭೇಟಿ ಮಾಡಬೇಕೆಂದು ಅವರು ಏರ್ಪಾಡು ಮಾಡಿದ್ದರು. ಆಕೆಯ ಜನಾಂಗದ ಪದ್ಧತಿಯಂತೆ ಆಕೆ ಬುರ್ಕಾ ಧರಿಸಿಯೇ ನನ್ನೊಂದಿಗೆ ಮಾತನಾಡುವಳೆಂದು ಅವರು ತಿಳಿಸಿದರು. ಆದರೆ ನಾನು ತುರ್ತಾಗಿ ಹೊಶಂಗಾಬಾದ್‌ಗೆ ಪ್ರಯಾಣ ಮಾಡಬೇಕಾಗಿ ಬಂದಿದ್ದರಿಂದ ಅಂದಿನ ರೇಸಿಗೆ ಹೋಗಲು ನನಗೆ ಸಾಧ್ಯವಾಗಲಿಲ್ಲ. ಜಬ್ಬಲ್ಪುರಕ್ಕೆ ನನಗೆ ವರ್ಗವಾಗಿ ಅವರೊಂದಿಗಿನ ಸಂಪರ್ಕ ಕಡಿದು ಹೋಯಿತು.

ಅವರಿಬ್ಬರೂ - ದಂತ ವೈದ್ಯ ಹಾಗೂ ನವಾಬನ ಹೆಂಡತಿ - ಇಬ್ಬರೂ ಪಾಕಿಸ್ತಾನಕ್ಕೆ ಹೊರಟು ಹೋದರೆಂದು ಅನಂತರದಲ್ಲಿ ನನಗೆ ತಿಳಿದು ಬಂದಿತು.

೩೧. ಋಣವಿಮೋಚನದ ಜಾತ್ರೆ

ಇದು ನಡೆದದ್ದು ೧೯೧೯ ರಲ್ಲಿ. ಅಮರಾವತಿಯಿಂದ ಸುಮಾರು ಹದಿನೈದು ಮೈಲಿ ದೂರದಲ್ಲಿ 'ಋಣವಿಮೋಚನ' ಎಂಬ ಒಂದು ಹಳ್ಳಿ ಇದೆ. ಆ ಹಳ್ಳಿ ಒಂದು ಸಣ್ಣ ನದಿಯ ತೀರದಲ್ಲಿದೆ. ಅಲ್ಲಿ ಒಂದು ದೇವಸ್ಥಾನವಿದ್ದು, ಪ್ರತಿ ವರ್ಷ ಅಲ್ಲಿ ಎಂಟು ದಿನಗಳ ಧಾರ್ಮಿಕ ಜಾತ್ರೆ ನಡೆಯುತ್ತದೆ. ಆಗ ನಾಟಕ ಕಂಪನಿಗಳು, ಸರ್ಕಸ್ ತಂಡಗಳು ಮುಂತಾದ ಆಕರ್ಷಣೆಗಳೆಲ್ಲಾ ಅಲ್ಲಿಗೆ ಆಗಮಿಸುತ್ತವೆ. ಚಕಡಾ (ಎತ್ತಿನ ಚಿಕ್ಕ ಬಂಡಿಗಳು) ಸ್ಪರ್ಧೆಗಳು ಕೂಡ ನಡೆಯುತ್ತವೆ. ಒಂದು ಸಹಕಾರಿ ಡೈರಿಯನ್ನು ಅಮರಾವತಿಯಲ್ಲಿ ಸ್ಥಾಪಿಸಲು ಮಧ್ಯಪ್ರದೇಶದ ಕೃಷಿ ಇಲಾಖೆ ನನ್ನನ್ನು ನಿಯೋಜಿಸಿತ್ತು. ಈ ಸಹಕಾರಿ ಡೈರಿಯ ಅಮರಾವತಿಯ ಅಧ್ಯಕ್ಷರಾದ ವಕೀಲರು ಮಿಸ್ಟರ್ ದೇಶ್‌ಪಾಂಡೆ ಈ ಚಕಡಾ ಸ್ಪರ್ಧೆಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಿದ್ದರು. ಆ ವರ್ಷದ ಸ್ಪರ್ಧೆಗಳಲ್ಲಿ ಒಂದು ಚಕಡಾದ ಒಂದು ಚಕ್ರ ಮುರಿದು ಹೋದರೂ ಒಂದು ಚಕ್ರದಲ್ಲೇ ಚಲಿಸಿ ಪ್ರಥಮ ಸ್ಥಾನ ಗಳಿಸಿತು. ಇಂತಹ ಆಕಸ್ಮಿಕಗಳು ಸಾಮಾನ್ಯವಂತೆ.

ಜಾತ್ರೆಯ ಸಂದರ್ಭದಲ್ಲಿ ಸರ್ಕಾರದ ವಿವಿಧ ವಿಭಾಗಗಳು ಉಪನ್ಯಾಸಗಳನ್ನೂ ಪ್ರಾತ್ಯಕ್ಷಿಕೆಗಳನ್ನೂ ನಡೆಸುತ್ತವೆ. ಒಂದು ಜಾನುವಾರು ಉತ್ಸವವು ನಡೆದು ಎತ್ತು , ಹಸು ಹಾಗೂ ಎಮ್ಮೆಗಳಿಗೆ ಬಹುಮಾನ ನೀಡಲಾಗುತ್ತದೆ. ಈ ಜಾನುವಾರು ಸ್ಪರ್ಧೆಯ ತೀರ್ಪುಗಾರನಾಗಿ ಋಣವಿಮೋಚನ ಜಾತ್ರೆಯಲ್ಲಿ ಪಾಲ್ಗೊಳ್ಳ ಬೇಕಾಯಿತು.

ಅಮರಾವತಿಯ 'ಭಿಡೆ' ಎನ್ನುವ ಒಂದು ಕುಟುಂಬ ನನಗೆ ಚೆನ್ನಾಗಿ ಪರಿಚಿತರಾಗಿದ್ದರು. ಆ ಕುಟುಂಬದ ಒಬ್ಬ 'ಭಿಡೆ' ಕೃಷಿ ಕಾಲೇಜಿನಲ್ಲಿ ನನ್ನ ಸಹೋದ್ಯೋಗಿ ಆಗಿದ್ದರು. ಅವರು ಕೃಷಿಕರಾಗಿದ್ದು ಅಮರಾವತಿಯ ಸಮೀಪದಲ್ಲೇ ಜಮೀನು ಹೊಂದಿದ್ದರು. ಅವರ ಚಕಡಾದಲ್ಲೇ ನಾನು ಕೂಡ ಋಣವಿಮೋಚನಕ್ಕೆ ಪ್ರಯಾಣ ಮಾಡಬೇಕೆಂದು ಭಿಡೆ ಸಹೋದರರು ಅಪೇಕ್ಷಿಸಿದರು. ಹಿತವಾದ ಪ್ರಯಾಣ ಮಾಡಿ ಸುಮಾರು ಆರು ಗಂಟೆಯ ಹೊತ್ತಿಗೆ ಋಣ ವಿಮೋಚನ ಗ್ರಾಮ ತಲುಪಿದೆವು. ಸರ್ಕಾರಿ ವಿಭಾಗಗಳಿಂದ ನಿಯೋಜಿತ ರಾದ ಎಲ್ಲರಿಗೂ ಕಂದಾಯ ಇಲಾಖೆಯವರು ಡೇರಾಗಳನ್ನು ಒದಗಿಸಿದ್ದು ಧಾರಾಳವಾಗಿ ಊಟ, ಟೀ, ತಿಂಡಿ ವ್ಯವಸ್ಥೆ ಮಾಡುತ್ತಿದ್ದರು.

ಮಾರನೆಯ ದಿವಸ ದೊಡ್ಡ ಪೆಂಡಾಲಿನಲ್ಲಿ ಉಪನ್ಯಾಸಗಳು ಏರ್ಪಟ್ಟಿದ್ದವು. ಸಹಕಾರಿ,ಪಶುಸಂಗೋಪನೆ, ಆರೋಗ್ಯ ಹಾಗೂ ಕೃಷಿ ಇಲಾಖೆಗಳ ಅಧಿಕಾರಿಗಳು ಮಾತನಾಡಿ ತಮ್ಮ ಹಿತವಚನಗಳನ್ನು ನುಡಿದರು.

ಮಧ್ಯಾಹ್ನ ಒಂದು ಗಂಟೆಯ ಸಮಯ. ಹಿರಿಯ ಕೃಷಿ ಸಹಾಯಕರು ಸುಮಾರು ಒಂದು ಗಂಟೆಯ ಕಾಲ ಭಾಷಣ ಮಾಡಿಯೂ ತಮ್ಮ ವಿಷಯವಾದ ''ಒಳ್ಳೆಯ ಬೀಜ ಬಿತ್ತನೆಯ ಆವಶ್ಯಕತೆ'' ಎಂಬುದರ ಮುಕ್ತಾಯಕ್ಕೆ ಬಂದಿರಲಿಲ್ಲ. ಜಿಲ್ಲಾಧಿಕಾರಿಯಾದಿಯಾಗಿ ಎಲ್ಲರಿಗೂ ಬೇಸರವಾಗತೊಡಗಿತು. ಜನರು ಎದ್ದು ಹೋಗದಂತೆ ಪೊಲೀಸಿನವರು ತಡೆಯುತ್ತಿದ್ದರು. ಇನ್ನೂ ಕೆಲವು ಭಾಷಣಗಳು ಉಳಿದಿದ್ದವು. ನಾನು ಹಾಡಬಲ್ಲೆನೆಂದು ಜಿಲ್ಲಾಧಿಕಾರಿಗಳಿಗೆ ತಿಳಿದಿತ್ತು. ಏಕತಾನತೆಯನ್ನು ಮುರಿಯಲು ನಾನೊಂದು ಭಜನ್ ಹಾಡಬೇಕೆಂದು ಅವರು ಸೂಚಿಸಿದರು. ಕೆಲವು ಸಂಚಾರಿ ಗಾಯಕರಿದ್ದ ಪಕ್ಕದ ಟೆಂಟಿಗೆ ತಹಸೀಲ್ದಾರರು ತಕ್ಷಣ ಹೋಗಿ ಒಂದು ಹಾರ್ಮೋನಿಯಂ ತಂದರು. ಒಂದು ಭಜನ್ ಹಾಡಿದೆ. ಪ್ರತಿಕ್ರಿಯೆ ಚೆನ್ನಾಗಿತ್ತು. ಮತ್ತೊಂದು ಹಾಡಿಗಾಗಿ ಕೋರಿಕೆ ಬಂದಿತು. ಜಿಲ್ಲಾಧಿಕಾರಿಗಳು ಮುಂದುವರೆಸಲು ಹೇಳಿದರು. ಮತ್ತೊಂದು ಹಾಡು ಹಾಡಿದೆ. ಎಲ್ಲರಿಗೂ ಸಂತೋಷ ವಾಯಿತು. (ಹಲವು ವರ್ಷಗಳ ಅನಂತರ ಇಂತಹ ಸಂದರ್ಭದಲ್ಲಿ 'ಶುದ್ಧ ಬೀಜ' ಎನ್ನುವ ನನ್ನ ಹಾಡನ್ನೇ ಹಾಡಿದೆ. ಆಗ ಸಭೆಯ ಅಧ್ಯಕ್ಷರು, ''ತಮ್ಮ ಮುಂಚಿನವರು ಯಾವುದನ್ನು ವಿವರಿಸಲು ಒಂದು ಗಂಟೆಯ ಕಾಲ ಶ್ರಮಪಟ್ಟರೋ ಅದನ್ನೇ ಮಿಸ್ಟರ್ ರಾವ್‌ರವರು ಐದು ನಿಮಿಷಗಳ ಇಂಪಾದ ಸಂಗೀತದಲ್ಲಿ ವಿವರಿಸಿದ್ದಾರೆ'' ಎಂದು ನುಡಿದರು.) ಅಂದು ಸಂಜೆ ಸಂಗೀತದಿಂದ ನನ್ನ ಸ್ನೇಹಿತರನ್ನು ರಂಜಿಸಿದೆ.

ಮಾರನೆಯ ದಿವಸ ಸಂಜೆ ಐದು ಗಂಟೆಗೆ ಅಮರಾವತಿಗೆ ಹೊರಟೆವು. ಸುಮಾರು ಅರ್ಧದಷ್ಟು ದೂರ ಕ್ರಮಿಸಿದ್ದೆವು, ಮೋಡಗಳು ದಟ್ಟವಾಗತೊಡಗಿದವು, ನೋಡುತ್ತಿದ್ದಂತೆಯೇ ಪರ್ವತಾಕಾರದ ಕಪ್ಪುಮೋಡಗಳು ಆಕಾಶವನ್ನೆಲ್ಲಾ ಮುಚ್ಚಿಬಿಟ್ಟವು. ತುಂತುರು ಮಳೆ ಪ್ರಾರಂಭವಾಯಿತು. ಅನಂತರ ಮಳೆ ಜೋರಾಗಿ ಸುರಿಯತೊಡಗಿತು. ಸರಿಯಾದ ಟಾರು ರಸ್ತೆ ಇಲ್ಲದೆ ಕೇವಲ ಮಣ್ಣಿನ ಹಾದಿಯಾದ್ದರಿಂದ ಅಲ್ಲಿಯ ಕಪ್ಪು ಮಣ್ಣು ಒದ್ದೆಯಾದಾಗ ನಮ್ಮ ಚಕಡಾದ ಚಕ್ರಗಳು ಕೆಸರಿನಲ್ಲಿ ಹೂತು ಹೋದವು. ಚಾವಟಿ ಏಟು, ಬಾಲ ತಿರುಚುವುದು, ಬೈಗುಳಗಳು, ಯಾವುದೂ ಎತ್ತುಗಳನ್ನು ಚಲಿಸುವಂತೆ ಪ್ರೇರೇಪಿಸಲಿಲ್ಲ. ಇಷ್ಟು ಹೊತ್ತಿಗೆ ಎಲ್ಲ ಎಡೆಗಳೂ ನೀರಿನಿಂದ ಆವೃತವಾಗಿದ್ದು, ಇದ್ದ ಹಾದಿ ಕೂಡ ಕಾಣುತ್ತಿರಲಿಲ್ಲ. ಮಳೆಯ ರಭಸ ಕಡಮೆಯಾಗಿದ್ದರೂ ಮಳೆ ನಿಂತಿರಲಿಲ್ಲ. ಮಳೆ ನಮ್ಮನ್ನು ಎಲ್ಲಿ ನಿಲ್ಲಿಸಿತೋ ಅಲ್ಲೇ ನಾವು ನಿಲ್ಲದೆ ಬೇರೆ ಮಾರ್ಗವೇ ಇರಲಿಲ್ಲ. ಕತ್ತಲೂ ಕವಿಯುತ್ತಿತ್ತು. ರಾತ್ರಿ ಕಳೆಯುವುದು ಹೇಗೆ? ನಾವೆಲ್ಲ ಒದ್ದೆ ಮುದ್ದೆಯಾಗಿದ್ದು ಚಳಿಯಲ್ಲಿ ನಡುಗುತ್ತಿದ್ದೆವು.

ಇಂತಹ ಅಸಹಾಯಕ ಸ್ಥಿತಿಯಲ್ಲಿದ್ದಾಗಲೇ ದೂರದಲ್ಲೊಂದು ದೀಪದ ಬೆಳಕು ಕಾಣಿಸಿತು. ಆ ಬೆಳಕು ಯಾವ ದಿಕ್ಕಿನಲ್ಲಿ

ಚಲಿಸುತ್ತದೋ ಎಂದು ನಾವೆಲ್ಲ ಕಾತರರಾಗಿ ನೋಡುತ್ತಿದ್ದೆವು. ಅದು ಚಲಿಸುತ್ತಿರಲಿಲ್ಲ. ಒಂದೆಡೆ ಸ್ಥಿರವಾಗಿತ್ತು. ಅಷ್ಟು ಹೊತ್ತಿಗೆ ಮಳೆ ನಿಂತಿತ್ತು. ಎತ್ತುಗಳು ಅಂಗುಲ ಅಂಗುಲದಂತೆ ಚಕ್ಕಡಿ ಎಳೆಯಲು ಬಿಟ್ಟು, ನಾವು ನಡೆದು ಹೋಗಲು ನಿರ್ಧರಿಸಿದೆವು. ಸುಮಾರು ಅರ್ಧ ಗಂಟೆ ಹೆಣಗಾಡಿ ಬೆಳಕನ್ನು ಸಮೀಪಿಸಿದೆವು. ಮಣ್ಣಿನ ಗೋಡೆಯಂತೆ ಭಾಸವಾಗುತ್ತಿದ್ದುದರ ಒಂದು ಗೂಡಿನಲ್ಲಿ ದೀಪ ಇರಿಸಲಾಗಿತ್ತು. ಅದು ಮಣ್ಣಿನಲ್ಲಿ ಕಟ್ಟಿದ ಕೋಟೆಯ ಗೋಡೆಯಾಗಿತ್ತು. ಆ ಗೋಡೆಯ ಸುತ್ತ ಪ್ರದಕ್ಷಿಣೆಯಾಗಿ ನಡೆದು ಹೋಗುವುದೇ ಸರಿಯೆಂದು ಯೋಚಿಸಿದೆವು. ಎಲ್ಲಿಯಾದರೂ ಒಂದು ಬಾಗಿಲು ಇರಲೇಬೇಕಲ್ಲ ಎನಿಸಿತು.

ಮಣ್ಣಿನ ಗೋಡೆಗೆ ಪ್ರದಕ್ಷಿಣೆಯಾಗಿ ಅದರ ಸಮೀಪದಲ್ಲೇ ನಡೆಯತೊಡಗಿದೆವು. ಬಹುಶಃ ದೀಪವಿದ್ದ ಭಾಗಕ್ಕೆ ವಿರುದ್ಧವಾದ ಕೋಟೆಯ ಭಾಗವನ್ನು ತಲುಪಿದಾಗ ಒಂದು ಗೇಟು ಕಾಣಿಸಿತು. ಆ ಗೇಟಿನೊಳಕ್ಕೆ ಪ್ರವೇಶಿಸಿದೆವು. ಒಂದು ಒಳಕೋಟೆಯೂ ಅದರ ಬಾಗಿಲಿನ ಮೂಲಕ ಒಂದು ಗ್ಯಾಸ್ ಲಾಟೀನಿನ (ಅದನ್ನು ಕಿಟ್ಸನ್ ದೀಪ ಎಂದು ಕರೆಯುತ್ತಿದ್ದರು) ಬೆಳಕೂ ಕಾಣಿಸುತ್ತಿತ್ತು. ಆ ಗೇಟಿನೊಳಕ್ಕೆ ಪ್ರವೇಶಿಸಿದೆವು. ಕಲ್ಲು ಹಾಸಿನ ಮಾರ್ಗದಲ್ಲಿ ನಮ್ಮ ಚಕ್ಕಡಿ ಕಟಕಟ ಸದ್ದು ಮಾಡಿತು. ರಾತ್ರಿ ಕಳೆಯಲು ಯಾವುದೋ ಹಳ್ಳಿಗೆ ಬಂದೆವಲ್ಲಾ ಎಂದು ದೇವರಿಗೆ ವಂದಿಸಿದೆವು.

ನಮ್ಮ ಗಾಡಿಯ ಸದ್ದು ಕೇಳಿ ಅಲ್ಲಿಯ ಜನ ಚುರುಕಾದರು. ಅವರು ಯಾರನ್ನೋ ನಿರೀಕ್ಷಿಸುತ್ತಿದ್ದರು. ಅವರಲ್ಲಿ ಯಾರೋ ಮರಾಠಿಯಲ್ಲಿ ಕೂಗಿದರು, "ತೇ ಆಲೇ" , ಪುನಃ "ತೇ ಆಲೇ" (ಅವರು ಬಂದರು, ಅವರು ಬಂದರು) ಕೆಲವು ಮುಖಂಡರು ನಮ್ಮನ್ನು ಎದುರುಗೊಂಡರು, ಮಳೆಯಿಂದಾಗಿ ನಾವು ಬರಲಾರೆವೆಂದು ತಿಳಿದು ನಿರಾಶರಾಗಿದ್ದುದಾಗಿ ಅವರು ತಿಳಿಸಿದರು. ನಮಗೆ ಅದ್ದೂರಿಯ ಸ್ವಾಗತವೇ ಸಿಕ್ಕಿತು. ನಮ್ಮನ್ನು ಒಂದು ಮನೆಗೆ ಕರೆದೊಯ್ದರು, ನಮ್ಮ ಒದ್ದೆ ಬಟ್ಟೆ ಕಳಚಿ ಮೈ ಕಾಯಿಸಿಕೊಳ್ಳಲು ಬೆಂಕಿ ಹಾಕಿಕೊಟ್ಟರು. ನಮ್ಮ ಹೋಲ್ಡಾಲಿನಲ್ಲಿದ್ದ ಬಟ್ಟೆಗಳ ಸ್ಥಿತಿಯೂ ಯಾವ ರೀತಿಯಲ್ಲೂ ಉತ್ತಮವಾಗಿರಲಿಲ್ಲ. ಅವನ್ನು ಬೆಂಕಿಯಲ್ಲಿ ಒಣಗಿಸಿಕೊಂಡಿದ್ದಾಯಿತು. ಅನಂತರ ನಮ್ಮನ್ನು ಊಟ ಮಾಡಹೇಳಿದರು. ಪೂರಿ, ಹಲ್ವ, ಕೇಸರಿಬಾತ್, ಲಡ್ಡುಗಳ ಪುಷ್ಕಳವಾದ ಹಬ್ಬದಡಿಗೆ ಬಡಿಸಿದರು.

ಮೆಲುದನಿಯಲ್ಲಿ ನಾನು ಭಿಡೆಯೊಂದಿಗೆ ಕೇಳಿದೆ, ''ಇದೆಲ್ಲಾ ಯಾರಿಗಾಗಿ? ಈ ಜನ ನಿಮಗೆ ಗೊತ್ತೆ?" ಅವರೆಂದರು, ''ಇದೆಲ್ಲಾ ನಿನಗಾಗಿಯೇ. ಗಾಯಕನಾಗಿ ನಿನ್ನ ಖ್ಯಾತಿ ಈ ಹಳ್ಳಿಯನ್ನು ತಲುಪಿದ್ದು ಅವರು ನಿನ್ನನ್ನು ನಿರೀಕ್ಷಿಸಿದ್ದಿರಬೇಕು'' ನನಗೆ ಹೆಮ್ಮೆ ಎನಿಸಿತು.

ಪುಷ್ಕಳವಾದ ಭೋಜನದ ಅನಂತರ ತಾಂಬೂಲ ಸೇವನೆಗಾಗಿ ನಮ್ಮನ್ನು ಮಹಡಿಯ ಮೇಲಕ್ಕೆ ಕರೆದೊಯ್ದರು. ಒಳ್ಳೆಯ ಜಮಖಾನಗಳಿಂದ ಅಲಂಕೃತವಾದ ದೊಡ್ಡ ಸಭಾಂಗಣ ಅದು. ಸಣ್ಣ ವೇದಿಕೆಯ ಮೇಲೆ ಒಂದು ಲೆಗ್ ಹಾರ್ಮೋನಿಯಂ, ಒಂದು ಜೊತೆ ತಬಲ ಮತ್ತು ಡಗ್ಗಾ ಇರಿಸಲಾಗಿತ್ತು. ಜನ ಸೇರತೊಡಗಿದರು. ನಮ್ಮ ತಾಂಬೂಲ ಸೇವನೆಯಾದ ಮೇಲೆ ನಮ್ಮ 'ಅನ್ನದಾತ' ಬಂದು ಮಿಸ್ಟರ್ ಭಿಡೆ ಅವರೆದುರು ಕೈ ಮುಗಿದು ನಿಂತು ನುಡಿದರು, ''ಈಗ ನೀವು ಕಥಾ ಪ್ರಾರಂಭಿಸಬಹುದು.'' ಚಕಿತರಾದ ಭಿಡೆ ಕೇಳಿದರು. ''ಕಥಾ? ಎಂಥಾ ಕಥಾ? ನಾನು ಕಥಾ ವಿದ್ವಾಂಸನಲ್ಲ.'' ''ಹಾಗಾದರೆ ನೀವು ಯಾರು''? ಕೇಳಿದರು ಆತ. ಸಂಭಾಷಣೆ ಎಲ್ಲಾ ಮರಾಠಿಯಲ್ಲೇ ನಡೆಯಿತು. ನಮ್ಮ ಆತಿಥೇಯರು, ''ತರ್ ಆಪಣ ಕೋಣ ಆಹೇಂ''? ಎಂದು ಕೇಳಿದ್ದು ಬಹಳ ಸ್ವಾರಸ್ಯವಾಗಿತ್ತು. ಭಿಡೆಗೆ ಮುಜುಗರವಾಗಿತ್ತು. ಆತಿಥ್ಯ ನನ್ನ ಸಲುವಾಗಿ ಅಲ್ಲ ಎಂದು ನನಗೂ ಸ್ಪಷ್ಟವಾಯಿತು. ಅಲ್ಲಿ ನೆರೆದಿದ್ದವರೆಲ್ಲಾ, ಅಪರಿಚಿತರನ್ನು ಆದರಿಸಲಾಯಿತೆಂದು ಪಿಸುಗುಟ್ಟುತ್ತಾ ನಗತೊಡಗಿದರು. ಎಲ್ಲೋ ಏನೋ ಏರುಪೇರಾಗಿತ್ತು. ಋಣವಿಮೋಚನಕ್ಕೆ ಬಂದಿದ್ದ ಹರಿಕಥಾ ವಿದ್ವಾಂಸರೊಬ್ಬರು ಈ ಹಳ್ಳಿಯಲ್ಲಿ (ಈ ಹಳ್ಳಿಯ ಹೆಸರನ್ನು ನಾನು ಸುವರ್ಣಾಕ್ಷರಗಳಲ್ಲಿ ಬರೆದು ನನ್ನ ಮನೆಯ ಗೋಡೆಯ ಮೇಲೆ ನೇತು ಹಾಕಬೇಕಾಗಿದ್ದರೂ ಅದರ ಹೆಸರನ್ನು ಮರೆತುಬಿಟ್ಟಿದ್ದೇನೆ) ಆ ರಾತ್ರಿ ಕಥೆಯ ಕಾರ್ಯಕ್ರಮವನ್ನು ನಡೆಸುವೆನೆಂದು ಹೇಳಿಕಳಿಸಿದ್ದರು. ಮುಂದಾಗಿಯೇ ತಮ್ಮ ಹಾರ್ಮೋನಿಯಂ ಹಾಗೂ ತಬಲಗಳನ್ನು ಕಳಿಸಿಕೊಟ್ಟಿದ್ದರು. ಆದರೆ ಮಳೆಯಿಂದಾಗಿ ಹರಿಕಥಾ ವಿದ್ವಾಂಸರಿಗೂ ಅವರ ಜೊತೆಗಾರರಿಗೂ ಋಣವಿಮೋಚನದಿಂದ ಹೊರಡುವುದು ಸಾಧ್ಯವೇ ಆಗಿರಲಿಲ್ಲ. ನಾವು ಆಗಮಿಸಿದ್ದುದ್ದರಿಂದಲೂ, ಭಿಡೆ ಸಹೋದರರು ಕಥಾ ಕಲಾವಿದರಂತೆ ಕಾಣಿಸುತ್ತಿದ್ದುದರಿಂದಲೂ ಅವರು ನಿರೀಕ್ಷಿಸುತ್ತಿದ್ದ ತಂಡವೇ ನಾವೆಂದು ಹಳ್ಳಿಯ ಜನ ನಂಬಿದ್ದರು.

ದೇವರ ದಯೆಯಿಂದಾಗಿ ಇಂತಹ ಆತಿಥ್ಯ ಪಡೆದ ಮೇಲೆ ನಮ್ಮ ಕೃತಜ್ಞತೆಗಳನ್ನು ಯಾವ ರೀತಿಯಲ್ಲಾದರೂ ತೋರಿಸಲೇಬೇಕು ಎನಿಸಿತು ನನಗೆ. ಆ ಹಳ್ಳಿಯಲ್ಲಿ ಒಳ್ಳೆಯ ತಬಲ ವಾದಕನೇನಾದರೂ ಇದ್ದಾನೆಯೇ ಎಂದು ವಿಚಾರಿಸಲು ಭಿಡೆಗೆ ಹೇಳಿದೆ. ಒಬ್ಬ ದೊರೆತ. ಹಾರ್ಮೋನಿಯಂ ನುಡಿಸಿಕೊಳ್ಳುತ್ತಲೇ ಹಾಡಲು ನನಗೆ ಬರುತ್ತಿದ್ದುದರಿಂದ ನಾನು ಹಾಡುವೆನೆಂದು ಮುಂದಾದೆ. ನನ್ನ ಶಾರೀರ ಚೆನ್ನಾಗಿತ್ತು. ಭಜನ್‌ಗಳನ್ನೂ , ಬಾಲಗಂಧರ್ವರ ರಂಗಗೀತೆಗಳನ್ನೂ ಹಾಡಿದೆ. ಜನಕ್ಕೆ ಅತೀವ ಸಂತೋಷವಾಯಿತು. ನಮಗೆ ತೀರಾ ಆಯಾಸವಾಗಿಬಿಟ್ಟದ್ದರಿಂದ ಎರಡು ಗಂಟೆಗಿಂತ ಹೆಚ್ಚು ಕಾಲ ಹಾಡಲು ಸಾಧ್ಯವಾಗಲಿಲ್ಲ. ನಮ್ಮ ಆತಿಥೇಯರು ಮರಾಠಿಯಲ್ಲಿ ಒಳ್ಳೆಯ ಭಾಷಣ ಮಾಡಿದರು. ಹರಿಕಥೆ ನೀಡಬಹುದಾಗಿದ್ದುದಕ್ಕಿಂತ ನನ್ನ ಸಂಗೀತ ಅವರಿಗೆ ಹೆಚ್ಚಿನ ಆನಂದ ನೀಡಿದೆ ಎಂದರು. ನಮಗೆ ಮಂಚ , ಹಾಸಿಗೆ, ಕಂಬಳಿಗಳನ್ನೆಲ್ಲಾ ಒದಗಿಸಿದರು. ನಾವು ಹಾಲಿನಲ್ಲೇ ಮಲಗಿದೆವು.

ಮಾರನೆಯ ಬೆಳಗ್ಗೆ ಒಂಬತ್ತು ಗಂಟೆಯವರೆಗೂ ನಮಗೆ ಹಾಸಿಗೆ ಬಿಟ್ಟು ಏಳಲು ಆಗಲಿಲ್ಲ. ಹಲ್ವಾ, ಹಣ್ಣುಗಳನ್ನೆಲ್ಲಾ ನೀಡಿ ಧಾರಾಳವಾಗಿ ನಮ್ಮನ್ನು ಉಪಚರಿಸಿದರು. ನಮ್ಮ ಎತ್ತುಗಳು ಬಳಲಿದ್ದುದರಿಂದ ನಮಗೆ ಬೇರೆ ಒಳ್ಳೆಯ ಎತ್ತು, ಹಾಗೂ ಗಾಡಿಗಳನ್ನು ಒದಗಿಸಿಕೊಟ್ಟರು. ಆ ಹಳ್ಳಿಯ ಜನ ನಮ್ಮೊಂದಿಗೆ ದೊಡ್ಡ ರಸ್ತೆಯವರೆಗೂ ಬಂದು ಪ್ರತಿವರ್ಷವೂ ನಾನು ಋಣವಿಮೋಚನಕ್ಕೆ ಹೋದಾಗಲೆಲ್ಲಾ ಆ ಹಳ್ಳಿಗೂ ಭೇಟಿ ನೀಡಬೇಕೆಂದು ಕೋರಿದರು. ಇದಾಗಿ ಆರು ತಿಂಗಳಲ್ಲಿ ನನಗೆ ನಾಗಪುರಕ್ಕೆ ವರ್ಗವಾಗಿ ಮತ್ತೆಂದೂ ಋಣವಿಮೋಚನಕ್ಕೆ ಹೋಗಲೇ ಇಲ್ಲಾ.

೧೯೪೭ ರಲ್ಲಿ ಬೇರಾರ್ ವಿಭಾಗದ ಕೃಷಿ ಡೆಪ್ಯುಟಿ ಡೈರೆಕ್ಟರ್ ಆಗಿ ಸೇವೆ ಸಲ್ಲಿಸುತ್ತಿದ್ದೆ. ಒಳ ಪ್ರದೇಶದಲ್ಲಿ ನಾನೊಂದು ವಿಶ್ರಾಂತಿ ಗೃಹದಲ್ಲಿ ತಂಗಿದ್ದೆ. ಒಂದು ಬೆಳಗ್ಗೆ ನನ್ನನ್ನು ನೋಡಲೆಂದು ಕೆಲವು ಕೃಷಿಕರು ಬಂದಿರುವರೆಂದು ತಿಳಿಯಿತು. ಟಕಾವಿ ಸಾಲ ಮುಂತಾದ ಯಾವುದಾದರೂ ವಿಷಯದ ಸಂಬಂಧದಲ್ಲಿ ಬಂದಿರುವರೆಂದು ಭಾವಿಸಿದ್ದೆ. ಋಣವಿಮೋಚನದ ಸಮೀಪದ ಹಳ್ಳಿಯೊಂದರಲ್ಲಿ ಮಳೆಯಿಂದಾಗಿ ನಾನು ತಂಗಬೇಕಾಗಿ ಬಂದದ್ದು , ಆ ಹಳ್ಳಿಯ ಜನರನ್ನು ಸಂಗೀತದಿಂದ ರಂಜಿಸಿದ್ದು ನೆನಪಿದೆಯೇ ಎಂದವರು ನನ್ನನ್ನು ಕೇಳಿದರು. ಇಪ್ಪತ್ತೆಂಟು ವರ್ಷಗಳ ಹಿಂದಿನ ಘಟನೆ ಖಂಡಿತ ವಾಗಿಯೂ ನನ್ನ ಸ್ಮರಣೆಯಲ್ಲಿತ್ತು. ತಾವು ಆ ಹಳ್ಳಿಯವರೆಂದೂ, ನಾನೀಗ ಅಮರಾವತಿಯ ಕೃಷಿ ಡೈಪುಟಿ ಡೈರೆಕ್ಟರ್ ಆಗಿರುವೆನೆಂದು ತಿಳಿದುಬಂದಿದ್ದರಿಂದ ನನ್ನನ್ನು ತಮ್ಮ ಹಳ್ಳಿಗೆ ಕರೆದೊಯ್ಯಲು ಬಂದಿರುವೆವೆಂದೂ ಅವರು ತಿಳಿಸಿದರು. ನನಗೆ ಎಷ್ಟು ಆನಂದ ವಾಯಿತು! ಆ ಕೂಡಲೇ ನಾನು ಅಮರಾವತಿಗೆ ಹಿಂದಿರುಗಬೇಕಾಗಿದ್ದು ದರಿಂದ ಅವರೊಂದಿಗೆ ಅವರ ಹಳ್ಳಿಗೆ ಹೋಗಲು ಸಾಧ್ಯವಿರಲಿಲ್ಲ. ಆದಷ್ಟು ಬೇಗ ಅವರ ಊರಿಗೆ ಭೇಟಿ ಕೊಡುವುದಾಗಿಯೂ, ಮತ್ತೆ ಅದೇ ಸಭಾಂಗಣದಲ್ಲಿ ಹಾಡುವುದಾಗಿಯೂ ನಾನವರಿಗೆ ಮಾತುಕೊಟ್ಟೆ.

ನಾನು ಅಮರಾವತಿಗೆ ಹಿಂದಿರುಗುತ್ತಿದ್ದಂತೆಯೇ ನಾಗಪುರಕ್ಕೆ ವರ್ಗವಾದ ಸುದ್ದಿ ತಂತಿಯಲ್ಲಿ ಬಂತು. ನನ್ನ ಮಾತು ನಡೆಸಿಕೊಡಲು ಆಗಲಿಲ್ಲ. ಆದರೆ ''ನೀವು ಯಾರು?'' ಎಂದವರು ಕೇಳಿದ್ದನ್ನು ನಾನೆಂದಿಗೂ ಮರೆಯಲಾರೆ.

೩.೨. ಮೆಚ್ಚುಗೆಯ ಇನಾಮು

ಬೇತಲ್ ಎನ್ನುವುದು ಮಧ್ಯಪ್ರದೇಶದ ಒಂದು ಜಿಲ್ಲಾ ಕೇಂದ್ರ ಸ್ಥಾನ. ನಾಗಪುರದಿಂದ ದಿಲ್ಲಿಗೆ ಹೋಗುವ ರೈಲು ಮಾರ್ಗದಲ್ಲಿ ಸುಮಾರು ಎಂಬತ್ತು ಮೈಲಿ ದೂರದಲ್ಲಿದೆ. ಅದು ಕೃಷಿ ಶಿಕ್ಷಣ ಹಾಗೂ ಸಂಶೋಧನೆಯ ಒಂದು ಕ್ಷೇತ್ರ. ಪ್ರತಿವರ್ಷ ನಾಗಪುರದ ಕೃಷಿ ಕಾಲೇಜಿನ ವಿದ್ಯಾರ್ಥಿಗಳ ತಂಡ ತಮ್ಮ ಶೈಕ್ಷಣಿಕ ಪ್ರವಾಸದ ಅಂಗವಾಗಿ ಇಲ್ಲಿಗೂ ಭೇಟಿ ಕೊಡುತ್ತದೆ.

ಅಲ್ಲಿಗೆ ಹತ್ತಿರದ ಹಳ್ಳಿಯ ಒಬ್ಬ ಜಮೀನ್ದಾರ ಸುಂದರ್ ಲಾಲ್ ಎಂಬುವವರು, ವಿದ್ಯಾರ್ಥಿಗಳನ್ನೂ ಜತೆಗೆ ಬಂದ ಉಪನ್ಯಾಸಕರನ್ನೂ ಒಂದು ಸಂಜೆಯ ಮನೋರಂಜನಾ ಕಾರ್ಯಕ್ರಮಕ್ಕೆ ಆಹ್ವಾನಿಸುವುದು ವಾಡಿಕೆಯಾಗಿತ್ತು. ಆತನಿಗೆ ಸಂಗೀತದಲ್ಲಿ ಬಹಳ ಆಸಕ್ತಿಯಿದ್ದು ಹಳ್ಳಿಯಲ್ಲಿ ಒಂದು ಭಜನ್ ಗೋಷ್ಠಿಯನ್ನು ಸ್ಥಾಪಿಸಿದ್ದರು. ತಿಂಡಿ ತೀರ್ಥಗಳ ಅನಂತರ ಹಳ್ಳಿಯವರ, ಕಾಲೇಜಿನ ವಿದ್ಯಾರ್ಥಿಗಳ, ಆತಿಥೇಯರ ಹಾಗೂ ನನ್ನ ಸಂಗೀತವಿರುತ್ತಿತ್ತು. ಒಂದು ವರ್ಷ - ತ್ರಿಪುರೀ ನ್ಯಾಷನಲ್ ಕಾಂಗ್ರೆಸ್ ವರ್ಷ - ಮೈಸೂರಿನ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಅವರನ್ನು ಶ್ಲಾಘಿಸಿ ನಾನು ರಚಿಸಿದ ''ನವರತ್ನ ರಾಗಮಾಲಿಕಾ'' ಕೃತಿಯನ್ನು ಹಾಡಿದೆ. ಸಾಹಿತ್ಯ ಹಿಂದಿಯಲ್ಲಿದ್ದು ಹಿಂದೂಸ್ತಾನಿ ಸಂಗೀತದ ರಾಗಗಳನ್ನು ಅಳವಡಿಸ ಲಾಗಿತ್ತು. ಹಾರ್ಮೋನಿಯಂ ಹಾಗೂ ತಬಲ ಪಕ್ಕವಾದ್ಯಗಾರರು ಬಹಳ ಚೆನ್ನಾಗಿ ನುಡಿಸಿದರು. ನನ್ನ ಆ ಕೃತಿ ಬಹಳ ಪ್ರಶಂಸೆಗಳಿಸಿತು.

ಮಾರನೆಯ ಬೆಳಗ್ಗೆ ಐದು ಗಂಟೆಗೆ ಕಾಫಿ ಮಾಡಿಕೊಂಡು ಕ್ಷೌರ ಮುಗಿಸಿ ರೈಲು ಹಿಡಿಯಲು ರೈಲು ನಿಲ್ದಾಣಕ್ಕೆ ಹೊರಡಲು ಸಿದ್ಧನಾಗುತ್ತಿದ್ದಾಗ ಯಾರೋ ನನ್ನನ್ನು ನೋಡಲು ಬಂದಿದ್ದಾರೆಂದು ನೌಕರ ತಿಳಿಸಿದ. ಜನವರಿ ತಿಂಗಳಲ್ಲಿ ಚಳಿ ವಿಪರೀತವಾಗಿತ್ತು. ಬಂದ ವ್ಯಕ್ತಿಯನ್ನು ಭೇಟಿ ಮಾಡಲು ಹೊರಕ್ಕೆ ವರಾಂಡಕ್ಕೆ ಬಂದೆ. ಆತ ನನಗೆ ವಂದಿಸಿ ನಾನು ಆತನನ್ನು ಗುರುತಿಸಿದೆನೇ ಎಂದು ವಿಚಾರಿಸಿದ. ಆತ ತಲೆ ಮುಚ್ಚುವಂತೆ ಶಾಲು ಸುತ್ತಿದ್ದರಿಂದ ನನಗೆ ಆತನ ಗುರುತು ಸಿಗಲಿಲ್ಲ. ಹಿಂದಿನ ಸಂಜೆ ನಾನು ಶ್ರೀ ಸುಂದರ್ ಲಾಲ್ ಅವರ ಮನೆಯಲ್ಲಿ ಹಾಡಿದಾಗ ನನಗೆ ಪಕ್ಕವಾದ್ಯ ನುಡಿಸಿದ ತಬಲ ವಾದಕ ತಾನೇ ಎಂದು ಆತ ನೆನಪು ಮಾಡಿಕೊಟ್ಟ.

ನನ್ನ ಸಂಗೀತದಿಂದ ತನಗೆ ಬಹಳ ಸಂತೋಷವಾಯಿತೆಂದೂ ತನ್ನ ಮೆಚ್ಚುಗೆ ತೋರಿಸಲೆಂದು ನನಗೆ ಸ್ವಲ್ಪ ಸೇವೆ ಮಾಡಲು ಬಂದಿರುವುದಾಗಿಯೂ ತಿಳಿಸಿದ. ನನ್ನ ಸಂಗೀತವನ್ನು ಅವನು ಮೆಚ್ಚಿಕೊಂಡಿದ್ದು ನನಗೆ ಬಹಳ ಸಂತೋಷ ನೀಡಿತಾದರೂ, ''ನನಗೆ ಸೇವೆ ಸಲ್ಲಿಸುವೆ'' ಎಂದು ಹೇಳಿದ್ದು ಮಾತ್ರ ಅರ್ಥವಾಗಲಿಲ್ಲ. ಆತ ತಾನೊಬ್ಬ ಕ್ಷೌರಿಕನೆಂದೂ ನನ್ನ ಗಡ್ಡವನ್ನು ಬೋಳಿಸುವ ಸಂತೋಷವನ್ನು ಬಯಸುವನೆಂದೂ ತಿಳಿಸಿದ. ಅಂದು ಬೆಳಗ್ಗೆ ನಾವು ಬೇತಲ್‌ನಿಂದ ಹೊರಡುವೆವೆಂದು ಅವನಿಗೆ ತಿಳಿದಿದ್ದು ನನ್ನನ್ನು ಭೇಟಿಯಾಗಲು ಮುಂಜಾವಿನಲ್ಲಿ ಬಂದಿದ್ದ. ಆತ ನನ್ನ ಸಂಗೀತವನ್ನು

ಮೆಚ್ಚುಕೊಂಡಿದ್ದ, ತನ್ನ ಮೆಚ್ಚುಗೆಯ ಕುರುಹನ್ನು ನೀಡಲು ಅಷ್ಟು ದೂರ ಚಳಿಯಲ್ಲಿ ಬಂದಿದ್ದ – ನನಗೊಂದು ಕ್ಷೌರ ಮಾಡುವೆನೆಂದು. ಈ ವಿಶ್ವಾಸಕ್ಕಾಗಿ ನಾನು ಅವನಿಗೆ ಧನ್ಯವಾದ ತಿಳಿಸಿದೆ. ದುರದೃಷ್ಟವಶಾತ್ ನನ್ನ ಬೆಳಗಿನ ಕ್ಷೌರ ಆಗಲೇ ಮುಗಿದು ಹೋಗಿದ್ದರಿಂದ ನನ್ನ ಆರಾಧಕನೊಬ್ಬನಿಂದ ಪ್ರೀತಿಪೂರ್ವಕವಾದ ಕ್ಷೌರಸೇವೆಯನ್ನು ಸ್ವೀಕರಿಸುವ ಹಿರಿದಾದ ಆನಂದವನ್ನು ನಾನು ಅನುಭವಿಸುವಂತಿರಲಿಲ್ಲ. ನನ್ನ ಮುಂದಿನ ಭೇಟಿಯಲ್ಲಿ ನಾವಿಬ್ಬರೂ ಈ ಪರಸ್ಪರ ಆನಂದವನ್ನು ಅನುಭವಿಸೋಣ ಎಂದು ಅವನಿಗೆ ಮಾತುಕೊಟ್ಟೆ.

ಆ ಕ್ಷೌರಿಕನ ಒಳ್ಳೆಯ ಸ್ವಭಾವದ ಬಗ್ಗೆ , ತಬಲ ವಾದನದಲ್ಲಿ ಅವನ ಚಾಕಚಕ್ಯತೆಯ ಬಗ್ಗೆ ನನ್ನ ಮೆಚ್ಚುಗೆಯನ್ನು ಹೇಗಾದರೂ ತೋರಿಸಬೇಕು ಎನಿಸಿತು. ಕೆಲವು ರೂಪಾಯಿಗಳನ್ನು ಅವನಿಗೆ ನೀಡಿದೆ. ನನ್ನಿಂದ ಹಣ ಪಡೆಯಲು ತಾನು ಬಂದಿಲ್ಲ ಎಂದುಬಿಟ್ಟ ಅವನು. ಕೊನೆಗೆ ನನ್ನ ಆಶೀರ್ವಾದದೊಂದಿಗೆ ಮಕ್ಕಳಿಗಾಗಿ ಮಿಠಾಯಿ ಕೊಳ್ಳುವಂತೆ ಅವನನ್ನು ಒಪ್ಪಿಸಿದೆ. ಕೆಲವೇ ತಿಂಗಳುಗಳಲ್ಲಿ ನನಗೆ ನಾಗಪುರದಿಂದ ವರ್ಗವಾಗಿದ್ದರಿಂದ ಮತ್ತೆ ಬೇತಲ್‌ಗೆ ಹೋಗಲು ಸಾಧ್ಯವಾಗಲಿಲ್ಲ. ಆ ಪ್ರೀತಿಪೂರ್ವಕ ಕ್ಷೌರದ ಅವಕಾಶ ನನಗೆ ತಪ್ಪಿಯೇ ಹೋಯಿತು.

೩೩. ಶಂಕರಾ ಮತ್ತು ಶಂಕರಾಭರಣ

ಅದು ೧೯೬೦ನೇ ಇಸವಿ. ನಾಗಪುರದಿಂದ ಮೈಸೂರಿಗೆ ಖಾಯಂ ಆಗಿ ಬಂದು ನೆಲಸಿದ್ದೆ. ನನಗೆ ಇನ್ನೂ ಹೆಚ್ಚು ಮಂದಿ ಮೈಸೂರಿನ ಸಂಗೀತಗಾರರ ಪರಿಚಯವಾಗಿರಲಿಲ್ಲ. ಬಲ್ಲಾಳ್ ಹೋಟೆಲ್ ಬಳಿ ಮೂರನೆ ನಂಬರಿನ ಬಸ್ ಹತ್ತಿದೆ. ಬಸ್ಸಿನ ಚಾಲಕ ಮತ್ತು ನಿರ್ವಾಹಕ ಇಬ್ಬರೂ ಕಾಫಿ ಕುಡಿಯಲು ಹೋಟೆಲ್ಲಿಗೆ ಹೋಗಿದ್ದರು. ಕೆಲವು ನಿಮಿಷಗಳಲ್ಲಿ , ನನಗೆ ಪರಿಚಯವಿದ್ದ ವೀಣಾ ವಿದ್ವಾಂಸರೊಬ್ಬರು ಬಸ್ ಹತ್ತಿದರು. ಸಂಗೀತ ವಿದ್ವಾಂಸರಾದ ತಮ್ಮ ಒಬ್ಬ ಸ್ನೇಹಿತರಿಗೆ ನನ್ನ ಪರಿಚಯ ಮಾಡಿಕೊಟ್ಟರು. ''ಮಿಸ್ಟರ್ ಆರ್, ಕರ್ನಾಟಕ ಹಾಗೂ ಹಿಂದೂಸ್ತಾನಿ ಸಂಗೀತಗಳೆರಡನ್ನೂ ಬಲ್ಲ ಮಿಸ್ಟರ್ ಸುಬ್ಬರಾವ್ ಅವರನ್ನು ಭೇಟಿ ಮಾಡಿ'' ಎಂದರು.

ಪರಿಚಯವಾದ ಕೆಲವೇ ಕ್ಷಣಗಳ ಅನಂತರ ಮಿಸ್ಟರ್ ಆರ್ ನುಡಿದರು, ''ನಿಮ್ಮ ಶಂಕರಾ ಹಾಗೂ ನಮ್ಮ ಶಂಕರಾಭರಣ ಎರಡೂ ಒಂದೇ ರಾಗ.'' ಅವು ಸಂಪೂರ್ಣ ವಿಭಿನ್ನ ರಾಗಗಳಾದ್ದರಿಂದ ನಾನು ಅವರ ಮಾತನ್ನು ಒಪ್ಪುವುದಾಗಲೀ, ಅವರ ಮಾತನ್ನು ಕೇಳಿಯೂ ಸುಮ್ಮನಿರುವುದಾಗಲೀ, ಅಸಾಧ್ಯವಾಗಿತ್ತು. ನನ್ನ ಹೊಸ ಗೆಳೆಯರ ಮಾತು ಈಗಾಗಲೇ ಕೆಲವು ಪ್ರಯಾಣಿಕರ ಗಮನ ಸೆಳೆದಿದ್ದುದರಿಂದ ನಾನು ಇಕ್ಕಟ್ಟಾದ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡೆ.

ಮಿಸ್ಟರ್ ಆರ್ ಒಬ್ಬರಿಗೆ ಕೇಳಿಸುವಂತೆ ಮೆಲುದನಿಯಲ್ಲಿ ಅವರೆಡೂ ತೀರಾ ಭಿನ್ನವಾದ ರಾಗಗಳೆಂದು ಹೇಳಿದೆ. ಆದರೆ ಅವೆರಡೂ ಪರಸ್ಪರ ಸಂಪೂರ್ಣ ಹೋಲಿಕೆ ಇರುವ ರಾಗಗಳೆಂದು ಮಿಸ್ಟರ್ ಆರ್ ಪಟ್ಟು ಹಿಡಿದರು. ಬಸ್ಸಿನ ಚಾಲಕ ಹಾಗೂ ನಿರ್ವಾಹಕರಿಬ್ಬರೂ ಇನ್ನೂ ಹೋಟೆಲ್‌ನಿಂದ ಬಾರದಿದ್ದುರಿಂದ ಇನ್ನಷ್ಟು ಜನ ಈ ಚರ್ಚೆಯಲ್ಲಿ ಆಸಕ್ತರಾದರು. ಎರಡು ರಾಗಗಳನ್ನೂ ಹಾಡಿ ಅವುಗಳ ವ್ಯತ್ಯಾಸವನ್ನು ತೋರಿಸದೆ ನನಗೆ ಬೇರೆ ದಾರಿಯೇ ಇರಲಿಲ್ಲ. ನನಗೆ ಉತ್ತರಾದಿ ಹಾಗೂ ದಕ್ಷಿಣಾದಿ ರಾಗಗಳ ಸಾಕಷ್ಟು ಒಳ್ಳೆಯ ಜ್ಞಾನವಿದೆ ಎಂದು ಸಾಧಿಸಿ ತೋರಿಸುವ ಈ ಅವಕಾಶ ನನಗೂ ಸ್ವಾಗತಾರ್ಹವೇ ಆಗಿತ್ತು.

ಕರ್ನಾಟಕ ರಾಗ ಶಂಕರಾಭರಣದ ಆಲಾಪನೆಯನ್ನು ಮೊದಲು ಮಾಡಿ ಅದು ಶಂಕರಾಭರಣ ಅಲ್ಲವೇ ಎಂದು ಮಿಸ್ಟರ್ ಆರ್ ಅವರನ್ನು ಕೇಳಿದೆ. ಹೌದೆಂದರು ಅವರು. ಅನಂತರ ಹಿಂದೂಸ್ತಾನಿಯ ಶಂಕರಾ ರಾಗದ ಚುಟುಕ ಆಲಾಪನೆ ಮಾಡಿ ಇದು ಶಂಕರಾಭರಣಕ್ಕಿಂತ ಭಿನ್ನವಾಗಿಲ್ಲವೇ ಎಂದು ಕೇಳಿದೆ. ಅದು ವ್ಯತ್ಯಾಸವಾಗಿ ಕೇಳಿಸಿತೆಂದು ಒಪ್ಪಿಕೊಂಡರು ಅವರು. ಅನಂತರ ಹಿಂದೂಸ್ತಾನಿಯ 'ಶಂಕರಾ ರಾಗ'ದ ಆರೋಹಣ ಮತ್ತು ಅವರೋಹಣವನ್ನು ಹಾಡಿ, 'ಶಂಕರಾ ರಾಗ' ಹೇಗೆ ನಮ್ಮ ಹಂಸಧ್ವನಿಯಿಂದ ಭಿನ್ನವೆಂದು ತೋರಿಸಿದೆ. ಶಂಕರಾ ಹಾಗೂ ಶಂಕರಾಭರಣ ಎರಡೂ ಒಂದೇ ಎಂದು ಯಾರೋ ತಮಗೆ ಹೇಳಿದ್ದರೆಂದೂ ಅದು ಸರಿಯಲ್ಲವೆಂದು ಈಗ ತಮಗೆ ಸ್ಪಷ್ಟ ವಾಯಿತೆಂದೂ ಒಪ್ಪಿಕೊಂಡರು ಮಿಸ್ಟರ್ ಆರ್. ನಾವು ಆಗಾಗ ಭೇಟಿಯಾಗಿ ಹಿಂದೂಸ್ತಾನಿ ಮತ್ತು ಕರ್ನಾಟಕ ರಾಗಗಳ ಬಗ್ಗೆ ಚರ್ಚಿಸಬೇಕೆಂಬ ಇಚ್ಛೆಯನ್ನು ಅವರು ವ್ಯಕ್ತಪಡಿಸಿದರು.

ಆ ವಿದ್ವಾಂಸರಿಬ್ಬರೂ ಟೆಲಿಫೋನ್ ಎಕ್ಸ್‌ಚೇಂಜ್ ಬಳಿ ಬಸ್ಸಿನಿಂದ ಇಳಿದರು. ಬಸ್ಸು ಮುಂದಕ್ಕೆ ಚಲಿಸಿ ಕೊನೆಯ ನಿಲ್ದಾಣದಲ್ಲಿ ನಿಂತು ಪ್ರಯಾಣಿಕರುಇಳಿಯತೊಡಗಿದರು.ಟಿಕೆಟ್‌ತನಿಖಾಧಿಕಾರಿಯೊಬ್ಬರು ಬಸ್ಸಿನಬಾಗಿಲ ಬಳಿ ನಿಂತು ಎಲ್ಲರನ್ನೂ ಟಿಕೆಟ್ ತೋರಿಸುವಂತೆ ಕೇಳುತ್ತಿದ್ದರು. ನಾನು ಜೇಬಿನಲ್ಲೆಲ್ಲಾ ಹುಡುಕಿದರೂ ಟಿಕೆಟ್ ಸಿಕ್ಕಲಿಲ್ಲ. ನನಗೆ ಗೊಂದಲವಾಯಿತು. ಶಂಕರಾ ಮತ್ತು ಶಂಕರಾಭರಣಗಳ ಚರ್ಚೆ ಆರಂಭವಾಗಿ ನಾನು ಟಿಕೆಟ್ ಖರೀದಿಸಲು ಮರೆತಿದ್ದೆ. ಇದನ್ನು ನಾನು ವಿವರಿಸಿದೆ. ನನ್ನ ಪ್ರಾತ್ಯಕ್ಷಿಕೆಗೆ ಸಾಕ್ಷಿಯಾಗಿದ್ದ ಇತರ ಪ್ರಯಾಣಿಕರು ನನ್ನ ಹೇಳಿಕೆಯನ್ನು ಬೆಂಬಲಿಸಿದರು. ಅಷ್ಟೇ ಅಲ್ಲಾ ಕಂಡೆಕ್ಟರ್ ಕೂಡಾ ನನ್ನ ಸಂಗೀತದಲ್ಲಿ ಮುಳುಗಿ ಟಿಕೆಟ್ ಕೊಡಲು ಮರೆತಿದ್ದ. ಇದನ್ನೆಲ್ಲಾ ಕೇಳಿದ ಟಿಕೆಟ್ ತನಿಖಾಧಿಕಾರಿ ಕೂಡ ನಾನು ಟಿಕೆಟ್ ಖರೀದಿಸಬೇಕೆಂದು ಒತ್ತಾಯಿಸಲು ಮರೆತೇ ಬಿಟ್ಟರು.

೩೪. ಕ್ಲಾರಿಯೋನೆಟ್‌ನೊಂದಿಗೆ

ನನಗೇನೋ ನಾಗಸ್ವರ ಎಂದರೆ ಮೊದಲಿನಿಂದಲೂ ಬಹಳ ಇಷ್ಟ. ಆದರೆ ೧೯೦೪ರಲ್ಲಿ ಕ್ಲಾರಿಯೋನೆಟ್ ಕೇಳಿದ ಅನಂತರ ಅದರ ನಾದದ ಮೃದುತ್ವದಿಂದಾಗಿ ಆ ವಾದನ ನನ್ನನ್ನು ಇನ್ನೂ ಹೆಚ್ಚು ಆಕರ್ಷಿಸಿತು.

ಆ ದಿನಗಳಲ್ಲಿ (೧೯೧೧) ಮದ್ರಾಸ್ ವಿಶ್ವವಿದ್ಯಾಲಯದ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಸುಲಭವಾಗಿರಲಿಲ್ಲ. ಚಿತ್ರದುರ್ಗ ಹೈಸ್ಕೂಲ್‌ನಿಂದ ಪರೀಕ್ಷೆಗೆ ಕಟ್ಟಿದ್ದ ಮೂವತ್ತೆರಡು ಮಂದಿಯ ಪೈಕಿ ಮೂರು ಜನ ಮಾತ್ರ ಪಾಸಾಗಿದ್ದೆವು. ಎಷ್ಟೋ ವರ್ಷಗಳು ಈ ಹೈಸ್ಕೂಲಿನಿಂದ ಯಾರೂ ತೇರ್ಗಡೆ ಯಾಗುತ್ತಿರಲಿಲ್ಲವಾದ್ದರಿಂದ ಈ ವರ್ಷವನ್ನು ಒಳ್ಳೆಯ ವರ್ಷವೆಂದು ಪರಿಗಣಿಸಿದ್ದರು. ಕೆಲವು ವರ್ಷ ಇಡೀ ಮೈಸೂರು ರಾಜ್ಯದಿಂದ ಯಾರೊಬ್ಬರೂ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗದೆ, ಕೆಲವೇ ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಪಾಸಾಗುತ್ತಿದ್ದುದೂ ಉಂಟು.

ಮಾರ್ಚ್ ೧೯೧೧ ರಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆ ಬರೆದು ಪರೀಕ್ಷೆಯ ಫಲಿತಾಂಶ ಬರುವವರೆಗೆ ಬೇಸಿಗೆ ರಜೆಯಲ್ಲಿ ಭೋಪಾಲ್‌ಗೆ ಹೋದೆ. ಆಗ ನಮ್ಮ ತಂದೆಯವರು ಭೋಪಾಲ್ ರಾಜ್ಯದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಾಗಿದ್ದರು. ಮೇ ತಿಂಗಳಲ್ಲಿ ಫಲಿತಾಂಶ ಹೊರಬಂದಿತು. ನನ್ನ ವೇಳೆಯೆಲ್ಲಾ ಸಂಗೀತ, ನಾಟಕ, ಆಟಗಳಿಗೆ ವಿನಿಯೋಗವಾಗಿದ್ದು, ಮೂರನೆ ದರ್ಜೆಯಲ್ಲಿ ತೇರ್ಗಡೆಯಾಗಿದ್ದೆ. ನಾನು ಹಾಕಿದ ಶ್ರಮ ಅತ್ಯಲ್ಪವಾದ್ದರಿಂದ ಮೂರನೆ ದರ್ಜೆ ಶಾಲೆಯಿಂದ ಮೊದಲ ಪ್ರಯತ್ನದಲ್ಲೇ ನನ್ನ ಮೂರನೆ ದರ್ಜೆಯ ತೇರ್ಗಡೆ ಶ್ಲಾಘನೀಯ ಎನಿಸದಿದ್ದರೂ ಪ್ರೋತ್ಸಾಹದಾಯಕ ಎನಿಸಿತ್ತು.

ನಾನೇ ವಿವಿಧ ರಾಗಗಳಲ್ಲಿ ಸಂಗೀತ ಸಂಯೋಜನೆ ಮಾಡಿದ 'ಉತ್ತರರಾಮ ಚರಿತೆ'ಯ ಶ್ಲೋಕಗಳನ್ನು ನಮ್ಮ ತಂದೆ ಊರಿನಲ್ಲಿದ್ದ ದಿನಗಳಲ್ಲಿ ಪ್ರತಿರಾತ್ರಿಯೂ ಹಾಡುತ್ತಿದ್ದೆ. ನಮ್ಮ ತಂದೆಯವರಿಗೆ ಇದರಿಂದ ಬಹಳ ಸಂತೋಷವಾಗುತ್ತಿತ್ತು. ಬಹುಶಃ ನಾನು ಪರೀಕ್ಷೆಯಲ್ಲಿ ಫೇಲಾಗಿದ್ದರೂ ನನ್ನನ್ನು ಕ್ಷಮಿಸಿ ಮುಂದಿನ ಪ್ರಯತ್ನಕ್ಕೆ ಶುಭ ಹಾರೈಸಿ ಸಮಾಧಾನ ಮಾಡುತ್ತಿದ್ದರೋ ಏನೋ.ಈಗ ನಾನು ಪಡೆದ ತೇರ್ಗಡೆಯಿಂದಾಗಿ ಇನ್ನೂ ಸ್ವಲ್ಪ ಶ್ರದ್ಧೆ, ಮನೋನಿಗ್ರಹ ದೊಂದಿಗೆ ನಾನು ಇನ್ನೂ ಸುಧಾರಿಸಬಲ್ಲೆನೆಂದು ಅವರಿಗೆ ನಂಬಿಕೆ ಯುಂಟಾಯಿತು. ನನ್ನ ವಿಭಿನ್ನ ಕಾರ್ಯ ಚಟುವಟಿಕೆಗಳಿಂದ ತಮಗೆ ಸಂತೋಷವಾಗಿದೆಯೆಂದೂ , ಅವೆಲ್ಲದರಲ್ಲೂ ನಾನು ಯಶಸ್ಸುಗಳಿಸು ವೆನೆಂದು ಆಶಿಸುವುದಾಗಿಯೂ ಅವರು ನುಡಿದರು. ಅವರ ನೆನಪಿಗೆ ವಂದಿಸುತ್ತಾ , ಅವರ ನಿರೀಕ್ಷೆಗೆ ನಾನು ನಿರಾಶೆಯುಂಟು ಮಾಡಲಿಲ್ಲ ಎಂದು ವಿನಯದಿಂದ ಹೇಳಬಲ್ಲೆ. ಪ್ರಾಮಾಣಿಕತೆ, ಪರಿಶ್ರಮ ಹಾಗೂ 'ಸತ್ಯಮೇವ ಜಯತೇ' ಎಂಬುದು ನಮ್ಮ ತಂದೆಯವರ ಜೀವನ ಸೂತ್ರವಾಗಿತ್ತು. ಅದು ಅಕ್ಷರಶಃ ನನ್ನ ಧ್ಯೇಯ ಕೂಡ.

ಹೆಚ್ಚಿನ ಶಿಕ್ಷಣಕ್ಕಾಗಿ ನಾನು ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರಬೇಕೆಂದು ನಿರ್ಧರಿಸಲಾಯಿತು. ಆ ದಿನಗಳಲ್ಲಿ ಮೂರನೆಯ ದರ್ಜೆಯಲ್ಲಿ ಮೆಟ್ರಿಕ್ ಪಾಸುಮಾಡಿದವನಿಗೂ ಯಾವುದೇ ಕಾಲೇಜಿನಲ್ಲಾದರೂ ಸುಲಭವಾಗಿ ಪ್ರವೇಶ ಲಭಿಸುತ್ತಿತ್ತು. ನನಗೆ ಬೇಕಾದ ಏನನ್ನಾದರೂ ಕೊಂಡುಕೊಳ್ಳಲೆಂದು ನಮ್ಮ ತಂದೆ ನನಗೆ ೫೦ ರೂಪಾಯಿಗಳನ್ನು ಬಹುಮಾನವಾಗಿ ನೀಡಿದ್ದರು. ನಾನು ನಿರ್ಧಾರ ಮಾಡಿದೆ. ನಾವು ಮುಂಬೈ ಪೂನಾ ಮಾರ್ಗವಾಗಿ ಬೆಂಗಳೂರಿಗೆ ಪ್ರಯಾಣ ಮಾಡಿದೆವು. ಸಂಗೀತವಾದ್ಯಗಳಿಗೆ ಹೆಸರಾಗಿದ್ದ ಮುಂಬೈನ 'ಮೆಸರ್ಸ್ ರೋಸ್ ಅಂಡ್ ಕಂಪನಿ' ಅವರಿಂದ ಒಂದು ಮಧ್ಯಮ ಗಾತ್ರದ ಕ್ಲಾರಿಯೋನೆಟ್ ಖರೀದಿಸಿದೆ.

೧೯೧೧ ರ ಜುಲೈನಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಜೂನಿಯರ್ ಇಂಟರ್‌ಮೀಡಿಯೆಟ್ ಕ್ಲಾಸಿಗೆ ಸೇರಿದೆ. ಅಲ್ಲಿ ನೆಲೆಸಿದ ಒಂದು ತಿಂಗಳ ಅನಂತರ ಪರೀಕ್ಷಿಸೋಣವೆಂದು ಕ್ಲಾರಿಯೋನೆಟ್ ಹೊರ ತೆಗೆದೆ. ಕ್ಲಾರಿಯೋನೆಟ್ ವಾದನದ ಸದ್ದು ಹೊರಕ್ಕೆ ಕೇಳದಿರಲೆಂದು ಹಾಸ್ಟೆಲಿನ ನನ್ನ ಕೋಣೆಯ ಕಿಟಕಿ ಬಾಗಿಲುಗಳನ್ನೆಲ್ಲಾ ಮುಚ್ಚಿದ್ದೆ. ಎಷ್ಟೇ ಪ್ರಯತ್ನಪಟ್ಟರೂ ಶಬ್ದ ಹೊರಕ್ಕೆ ಕೇಳದಿರುವಂತೆ ಮಾಡುವುದು ಅಸಾಧ್ಯವಾಯಿತು. ಅದು ಸುತ್ತಮುತ್ತಲ ಎಲ್ಲರನ್ನೂ ಆಕರ್ಷಿಸಿ ಅಕ್ಕಪಕ್ಕದ ಕೋಣೆಯವರಿಗೆ ತೊಂದರೆಯಾಗುತ್ತಿತ್ತು.

ಪ್ರಾಣಿಶಾಸ್ತ್ರದ ಪ್ರಾಧ್ಯಾಪಕರಾದ ಡಾ. ಸಿ. ಆರ್. ನಾರಾಯಣ ರಾವ್ ಅವರು ನಮ್ಮ ಹಾಸ್ಟೆಲಿನ ವಾರ್ಡನಾಗಿದ್ದರು. ಪರಿವೀಕ್ಷಣೆ ಗೆಂದು ಅವರು ಸುತ್ತಾಡುತ್ತಿದ್ದಾಗ ನನ್ನ ವಾದ್ಯದ ನಾದ (ನಾದ ಇಲ್ಲವೇ ಕೇವಲ ಶಬ್ದ, ಏಕೆಂದರೆ ನಾನು ನುಡಿಸುತ್ತಿದ್ದುದರಲ್ಲಿ ಇನ್ನೂ ಯಾವ ಸಂಗೀತವೂ ಇರಲಿಲ್ಲ) ಅವರಿಗೆ ಕೇಳಿಸಿತು. ಕೆಲವು ದಿನಗಳವರೆಗೆ ಅವರು ಈ ತೊಂದರೆಯನ್ನು ಸಹಿಸುತ್ತಾ ಸುಮ್ಮನಿದ್ದರು. ಒಂದು ಸಂಜೆ ನಾನು ವಾದ್ಯವನ್ನು ಊದುವುದರಲ್ಲಿ ನಿರತನಾಗಿದ್ದಾಗ ಅವರು ಮೃದುವಾಗಿ ಬಾಗಿಲು ತಟ್ಟಿದರು. ನಾನು ಬಾಗಿಲು ತೆರೆದು ನಾರಾಯಣರಾವ್‌ರನ್ನು ನೋಡಿ ಚಕಿತನಾದೆ. ಅವರೆಂದರು, ''ಮಿಸ್ಟರ್ ಸುಬ್ಬರಾವ್, ನೀವು ಈ ವಾದ್ಯ ಕಲಿಯಬೇಕಾದರೆ ಕೆಲವು ಮೈಲಿಗಳಷ್ಟು ದೂರ ಹೋಗಿ ನಿಮಗೆ ಬೇಕಾದಷ್ಟು ಜೋರಾಗಿ ಊದಿ. ಇತರರಿಗೆ ತೊಂದರೆಯಾಗುವುದರಿಂದ ನೀವು ಹಾಸ್ಟೆಲ್‌ನ ಒಳಗೆ ಹಾಗೆ ಮಾಡುವಂತಿಲ್ಲ.'' ತಕ್ಷಣವೇ ನನ್ನ ಕ್ಲಾರಿಯೋನೆಟ್ ಅಭ್ಯಾಸ ನಿಂತುಹೋಯಿತು.

ಬೆಂಗಳೂರಿಗೆ ಬಂದ ನೆಂಟನೊಬ್ಬ ವಾದ್ಯವನ್ನು ಲಾಭಕ್ಕೆ ಮಾರಿಸುವೆನೆಂದು ಮಾತುಕೊಟ್ಟ. ಲಾಭದ ಮಾತಿರಲಿ, ಅಸಲೂ ಹೋಯಿತು. ಅವನು ವಾದ್ಯವನ್ನು ಹಿಂದಿರುಗಿಸಲಿಲ್ಲ.

೩೫. ಬ್ಯಾಗ್ ಪೈಪ್ ಮತ್ತು ನಾಗಸ್ವರ ಮೇಳ

ಮೈಸೂರಿನಲ್ಲಿರುವ ಈಗಿನ ಅಪೇರಾ ಸಿನಿಮಾ ಮಂದಿರವನ್ನು ಹಿಂದೆ ಕೃಷ್ಣಾ ಟಾಕೀಸ್ ಎಂದು ಕರೆಯುತ್ತಿದ್ದರು. ಅಂದಿನ ದಿನಗಳಲ್ಲಿ ಸಿನಿಮಾಕ್ಕೆ ಹೋಗುವವರು ಅಥವಾ ಸಿನಿಮಾ ಪ್ರೇಮಿಗಳು ಈಗಿರುವಷ್ಟು ಇರಲಿಲ್ಲ. ಟಿಕೆಟ್ ಕೊಂಡುಕೊಳ್ಳುವ ಕ್ಯೂ ಅಂತೂ ಗೊತ್ತೇ ಇರಲಿಲ್ಲ. ಇಂದಿನ ಸಿನಿಮಾ ಗೃಹಗಳ ಸಂಖ್ಯೆಯ ಐದನೆಯ ಒಂದರಷ್ಟು ಮಾತ್ರ ಆಗ ಇದ್ದರೂ ಯಾವ ಸಿನಿಮಾ ಗೃಹವೂ ಭರ್ತಿಯಾಗುತ್ತಿರಲಿಲ್ಲ. ಆದ್ದರಿಂದಲೇ ವರ್ತಮಾನ ಪತ್ರಿಕೆಗಳ ಜಾಹಿರಾತುಗಳು, ಕರಪತ್ರ ಹಂಚಿಕೆ, ಸಣ್ಣ ಹುಡುಗರು ಹೊತ್ತ ಭಾರಿ ಪೋಸ್ಟರ್‌ಗಳನ್ನು ರಸ್ತೆ ರಸ್ತೆಗಳಲ್ಲಿ ಮೆರವಣಿಗೆ ಮಾಡಿಸುವುದು ಮುಂತಾದ ಮಾರ್ಗಗಳಿಂದ ಸಿನಿಮಾ ಗೃಹಗಳು ಜನರನ್ನು ಆಕರ್ಷಿಸಬೇಕಾಗಿತ್ತು.

ಆರು ಗಂಟೆಗೆ ಸಿನಿಮಾ ಆರಂಭವಾದರೆ ಅದಕ್ಕೆ ಅರ್ಧ ಗಂಟೆ ಮುಂಚೆ ಸಂಗೀತ ಕಾರ್ಯಕ್ರಮ ನಡೆಸಿ ಜನರನ್ನು ಆಕರ್ಷಿಸಲು ಕೃಷ್ಣಾ ಟಾಕೀಸ್ ಪ್ರಯತ್ನಿಸಿತು. ಆ ಸಂಗೀತವೆಂದರೆ ನಾದಸ್ವರ ಹಾಗೂ ಬ್ಯಾಗ್ ಪೈಪ್ – ಸಾಮಾನ್ಯವಾಗಿ ಹೈಲ್ಯಾಂಡರ್ಸ್ ಬ್ಯಾಗ್ ಪೈಪ್ ಎಂದು ಕರೆಯುವ ಬ್ಯಾಗ್ ಪೈಪ್- ಇವುಗಳ ಒಂದು ವಾದ್ಯ ಮೇಳ.

ಉತ್ತರ ಭಾರತದ ಕೆಲವು ಪಂಜಾಬಿ ಆರ್ಕೆಸ್ಟ್ರಾಗಳಲ್ಲಿ ಬ್ಯಾಗ್ ಪೈಪ್ ಬಳಸುತ್ತಿದ್ದುದನ್ನು ನಾನು ನೋಡಿದ್ದೆ. ಅದು ಕೆಲವೇ ಸ್ವರಗಳ ತಡೆಯಿಲ್ಲದ ಏಕತಾನದ ಪುನರುಚ್ಚಾರವಾಗಿದ್ದು ಅದನ್ನು ಸಂಗೀತವೆಂದು ಕರೆಯುವಂತಿರಲಿಲ್ಲ. ಆದರೆ ಕೃಷ್ಣಾ ಟಾಕೀಸಿನ ಮುಂದೆ ನುಡಿಸುತ್ತಿದ್ದ ಸಂಗೀತ ಒಂದು ಉನ್ನತ ಮಟ್ಟದ ಸಂಗೀತ ಮೇಳವಾಗಿತ್ತು. ಕರ್ನಾಟಕ ಸಂಗೀತದ ಸ್ವರಜತಿ, ವರ್ಣ, ಕೃತಿ ಮುಂತಾದ ವಿವಿಧ ಪ್ರಕಾರಗಳನ್ನು ಅವರು ಒಟ್ಟಾಗಿ ನುಡಿಸುತ್ತಿದ್ದರು. ಈ ವಾದ್ಯಮೇಳಗಳು ಎಷ್ಟು ಆಕರ್ಷಕವಾಗಿಯೂ ಇಂಪಾಗಿಯೂ ಇರುತ್ತಿದ್ದವೆಂದರೆ ಟಾಕೀಸಿನ ಎದುರಿನ ಹುಲ್ಲು ಹಾಸಿನ ಮೇಲೆ ಜನರ ಗುಂಪುಗಳನ್ನು ಅವು ನಿಜವಾಗಿಯೂ ಆಕರ್ಷಿಸುತ್ತಿದ್ದವು. ಆದರೆ ಕೆಲವೇ ಸಂಗೀತ ಪ್ರೇಮಿಗಳು ಸಿನಿಮಾಗಳನ್ನು ಪೋಷಿಸುತ್ತಿದ್ದರು. ವಾದ್ಯಗಾರರು ತಮ್ಮ ಸಂಗೀತವನ್ನು ನುಡಿಸಿ ತಮ್ಮ ಸಂಭಾವನೆ ಪಡೆದು ಕುಡಿಯಲು ಹೊರಟು ಹೋಗುತ್ತಿದ್ದರು. ಈ ಹೊಸ ಆಕರ್ಷಕ ಸಂಗೀತದ ಔತಣವನ್ನು ಬಿಟ್ಟಿಯಾಗಿ ಉಣಬಡಿಸಿದ ಕೃಷ್ಣಾ ಟಾಕೀಸಿನ ಮಾಲೀಕರಿಗೇನೂ ಫಾಯಿದೆಯಾಗಲಿಲ್ಲ. ಮೂರು ನಾಲ್ಕು ತಿಂಗಳುಗಳಲ್ಲೇ ಈ ಸಂಗೀತ ಇದ್ದಕ್ಕಿದ್ದಂತೆ ನಿಂತು ಹೋಯಿತು. ಈ ಎರಡು ಸುಶಿರ ವಾದ್ಯಗಳ ಮಧುರ ಮೇಳ ನನ್ನ ಕಿವಿಯಲ್ಲಿ ಈಗಲೂ ಕಂಪಿಸುತ್ತಿದೆ. ಈ ಸಂಗೀತವನ್ನು ಪುನರುಜ್ಜೀವನಗೊಳಿಸಬಾರದೆ!

೩೬. ತರಗತಿಯಲ್ಲಿ ಪ್ರಾರ್ಥನೆ

೧೯೧೧ ರಲ್ಲಿ ನಾನು ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರಿದಾಗ ಪ್ರತಿ ಕೊಠಡಿಯಲ್ಲೂ ಹನ್ನೊಂದು ಗಂಟೆಗೆ ಪ್ರಾರಂಭವಾಗುವ ಪ್ರಥಮ ಪೀರಿಯಡ್‌ನ ಮೊದಲ ಕೆಲವು ನಿಮಿಷಗಳನ್ನು ಪ್ರಾರ್ಥನೆಗೆ ಮೀಸಲಾಗಿಡುವುದು ವಾಡಿಕೆಯಾಗಿತ್ತು. ಪ್ರಾರ್ಥನೆಯಲ್ಲಿ ಐದಾರು ಆಯ್ದ ಸಂಸ್ಕೃತ ಶ್ಲೋಕಗಳಿರುತ್ತಿದ್ದವು. ಯಾವುದೇ ವಿದ್ಯಾರ್ಥಿ ಬಾಯಿಪಾಠ ಮಾಡದಿದ್ದರೂ ಓದಲು ಅನುಕೂಲವಾಗುವಂತೆ ಪ್ರಾರ್ಥನೆಯ ಒಂದು ಪ್ರತಿಯನ್ನು ಪ್ರತಿ ತರಗತಿಯ ಗೋಡೆಯ ಮೇಲೆ ನೇತು ಹಾಕಿರುತ್ತಿದ್ದರು. ನನ್ನ ಒಬ್ಬ ಸಹಪಾಠಿ ಅದನ್ನು ಓದಲು ಬಹಳ ಉತ್ಸುಕನಾಗಿರುತ್ತಿದ್ದ. ಅವನಿಗೆ 'ಪೂಜಾರಿ' ಎಂಬ ಅಡ್ಡ ಹೆಸರು ಅಂಟಿಕೊಂಡಿತ್ತು.

ನಾನೊಬ್ಬ ಗಾಯಕನೆಂದು ಬಲ್ಲ ನನ್ನ ಗೆಳೆಯರು ಸಾದಾ ಪಠಣದ ಏಕತಾನತೆಗೆ ಬದಲಾಗಿ ನಾನು ಪ್ರಾರ್ಥನೆಯನ್ನು ರಾಗಮಾಲಿಕೆಯಂತೆ ಹಾಡಬೇಕೆಂದು ಅಪೇಕ್ಷಿಸುತ್ತಿದ್ದರು. ಅಕಸ್ಮಾತ್ ಒಂದು ದಿನ ನಮ್ಮ ಪೂಜಾರಿ ಬರಲಿಲ್ಲ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ನನ್ನ ಗೆಳೆಯರು ನಾನು ಪ್ರಾರ್ಥನೆಯನ್ನು ಹಾಡಬೇಕೆಂದು ಸೂಚಿಸಿದರು. ನಮ್ಮ ಪ್ರಾಧ್ಯಾಪಕರಾಗಿದ್ದ ಡಾ. ಸಿ. ಆರ್. ನಾರಾಯಣರಾವ್‌ರವರು ''ಎಲ್ಲಿ ನೀನು ಹಾಡು'' ಎಂದು ನನ್ನನ್ನು ಕರೆದರು. ಮನೆಯಲ್ಲಿ ಪ್ರತಿದಿನವೂ ಹಲವಾರು ಬಾರಿ ಬೇರೆ ಬೇರೆ ರಾಗಗಳಲ್ಲಿ ಪ್ರಾರ್ಥನೆಯನ್ನು ಹಾಡಿಕೊಳ್ಳುತ್ತಿದ್ದುದರಿಂದ ಪ್ರಾರ್ಥನೆಯ ಹಾಳೆಯನ್ನು ನೋಡದೆಯೇ ಹಾಡುವುದು ನನಗೆ ಬಹಳ ಸುಲಭವಾಗಿತ್ತು. ಕೇವಲ ಎರಡು ಮೂರು ನಿಮಿಷಗಳನ್ನು ತೆಗೆದುಕೊಳ್ಳುವ ಬದಲು ಹತ್ತು ನಿಮಿಷಗಳಿಗೂ ಹೆಚ್ಚು ಕಾಲ ನಮ್ಮ ತರಗತಿಯನ್ನು ನನ್ನ ಸಂಗೀತದ 'ಒಡಗೂಡಿದ ಪಠಣದಿಂದ ರಂಜಿಸಿದೆ. ನಾನು ಹಾಡಿದ್ದು ಅಕ್ಕಪಕ್ಕದ ತರಗತಿಗಳಿಗೂ ಕೇಳಿಸಿತು. ನಾನು ಮುಗಿಸಿದ ಮೇಲೆ ವಿದ್ಯಾರ್ಥಿಗಳು ಚಪ್ಪಾಳೆ ಹೊಡೆದು ಮೆಚ್ಚುಗೆ ಸೂಚಿಸಿದರು. ನಮ್ಮ ಪ್ರಾಧ್ಯಾಪಕರೂ ಅವರೊಡನೆ ಸೇರಿದರು. ಕರತಾಡನ ನಿಂತ ಮೇಲೆ ಡಾ. ಸಿ. ಆರ್. ನಾರಾಯಣರಾವ್ ನುಡಿದರು, ''ನಾವು ಒಳ್ಳೆಯ ಸಂಗೀತ ಕೇಳಿದೆವು ಎನ್ನುವುದೇನೋ ನಿಜ, ಆದರೆ ಎರಡು ಮೂರು ನಿಮಿಷಗಳಿಗಿಂತ ಹೆಚ್ಚು ಹೊತ್ತು ಹಾಡಬಾರದು ; ಯಾವಾಗಲೂ ಇಷ್ಟು ಜೋರಾಗಿ ಹಾಡಬಾರದು.''

ಫುಟ್‌ಬಾಲ್ ಮ್ಯಾಚ್‌ನಲ್ಲಿ ಗಂಭೀರವಾದ ಗಾಯಗಳಾದುದರಿಂದ ಇದಾದನಂತರ ನಾನು ಬೇಗನೆ ಕಾಲೇಜು ಬಿಡಬೇಕಾಗಿ ಬಂದು ಮತ್ತೊಂದು ಅವಕಾಶ ಸಿಗದೇ ಹೋಯಿತು.

೩೭. ಪಂಡಿತ್ ಜೀ ಹಾಗೂ ಹಾರ್ಮೋನಿಯಂ

ಭಾರತೀಯ ಸಂಗೀತಕ್ಕೆ ಹಾರ್ಮೋನಿಯಂ ಹೊಂದಿಕೊಳ್ಳುವುದಿಲ್ಲ ಎಂದು ಪರಿಗಣಿಸುವುದು ಕೆಲವರಿಗೆ ಒಂದು ಫ್ಯಾಶನ್ ಆಗಿದೆ. ಪಂಡಿತ್ ಜವಹರಲಾಲ್ ನೆಹರು, ಮಹಾತ್ಮ ಗಾಂಧಿ ಮುಂತಾದವರು ಹಾರ್ಮೋನಿಯಂ ಅನ್ನು ಇಷ್ಟಪಡುತ್ತಿರಲಿಲ್ಲ ಎಂದು ತಮ್ಮ ಪೂರ್ವಗ್ರಹಪೀಡಿತ ಅಭಿಪ್ರಾಯಕ್ಕೆ ಪೂರಕವಾಗಿ ಅವರು ಹೇಳುವುದುಂಟು . ಬಹಳ ಜನಪ್ರಿಯವಾಗಿದ್ದು , ಆಕಾಶವಾಣಿಯ ಪ್ರಸಾರದಲ್ಲಿ ನಿಷಿದ್ಧವಾಗಿದೆ ಎಂಬ ಕಾರಣಕ್ಕೆ ಅವನತಿಗೆ ಇಳಿದಿರುವ ಈ ವಾದ್ಯವನ್ನು ವಾಸ್ತವವಾಗಿಯೂ ಅವರು ಇಷ್ಟಪಡುತ್ತಿದ್ದರು ಎಂಬುದಕ್ಕೆ ಈ ಮುಂದಿನ ಘಟನೆಗಳು ಸಾಕ್ಷಿಯಾಗಿವೆ.

ಮೂವತ್ತೈದು ವರ್ಷಗಳ ಹಿಂದೆ ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿಯ ಸಭೆ ನಾಗಪುರದಲ್ಲಿ ನಡೆಯಿತು. ಕೃಷಿ ವಿದ್ಯಾಲಯಕ್ಕೆ ರಜಾ ದಿನಗಳಾದ್ದರಿಂದ ಸಮಿತಿಯ ಸದಸ್ಯರ ವಾಸ್ತವ್ಯಕ್ಕೆ ವಿದ್ಯಾರ್ಥಿನಿಲಯವನ್ನು ಉಪಯೋಗಿಸಿಕೊಳ್ಳಲು ಸರ್ಕಾರ ಅನುಮತಿ ನೀಡಿತ್ತು. ಪಂಡಿತ್ ಜವಹರಲಾಲ್ ನೆಹರು, ಬಾಬು ರಾಜೇಂದ್ರ ಪ್ರಸಾದ್ ಮುಂತಾದವರೆಲ್ಲ ವಿದ್ಯಾರ್ಥಿನಿಲಯದ ಕೋಣೆಗಳಲ್ಲಿ ಇಳಿದುಕೊಂಡಿದ್ದರು. ನಾನು ವಿದ್ಯಾರ್ಥಿನಿಲಯದ ಕ್ಷೇಮಪಾಲಕನಾಗಿದ್ದು ಅವರಿಗೆಲ್ಲಾ ಸಾಧ್ಯವಾದಷ್ಟು ಉತ್ತಮ ಸೇವೆ ಸಲ್ಲಿಸುವುದು ನನಗೆ ಹೆಚ್ಚಿನ ಅಭಿಮಾನದ ವಿಷಯವಾಗಿತ್ತು. ಅವರೆಲ್ಲಾ ಸಂತುಷ್ಟರಾಗಿದ್ದರು.

ನಾನೇ ಅಧ್ಯಕ್ಷನಾಗಿದ್ದ ಮನ್ಹಾರ್ ಗಾಯನ ಸಮಾಜದ ಐದನೆಯ ವಾರ್ಷಿಕೋತ್ಸವವು ಸಂಭ್ರಮದಿಂದ ಆಚರಣೆಯಾಗಬೇಕಿತ್ತು. ನಾಗಪುರದಲ್ಲಿ ನೆರೆದಿದ್ದ ಭಾರತದ ಶ್ರೇಷ್ಠ ಪುತ್ರ ಪುತ್ರಿಯರು ಈ ಸಂದರ್ಭದಲ್ಲಿ ಹಾಜರಿದ್ದು ಸಮಾಜವನ್ನು ಹರಸಲೆಂದು ನನ್ನ ಅಪೇಕ್ಷೆಯಾಗಿತ್ತು. ಪಂಡಿತ್ ಜವಹರಲಾಲ್ ನೆಹರು ಹಾಗೂ ಬಾಬು ರಾಜೇಂದ್ರ ಪ್ರಸಾದ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಬೇಕೆಂದು ಅವರನ್ನು ವಿನಯಪೂರ್ವಕವಾಗಿ ಪ್ರಾರ್ಥಿಸಿದೆ. ಅವರು ಸಂತೋಷವಾಗಿ ಒಪ್ಪಿಕೊಂಡರು. ನಮ್ಮ ಮುಖ್ಯ ಅತಿಥಿಗಳ ಅನುಕೂಲಕ್ಕೆ ಅನುಗುಣವಾಗಿ ವಾರ್ಷಿಕೋತ್ಸವದ ದಿನಾಂಕವನ್ನು ನಿರ್ಧರಿಸಲಾಯಿತು. ರೀಜೆಂಟ್ ಥಿಯೇಟರ್‌ನ ಮಾಲೀಕರಾದ ಜಗದಾವ್ ನಾಯ್ಡುರವರು ಈ ವಿಶೇಷ ಕಾರ್ಯಕ್ರಮಕ್ಕೆ ತಮ್ಮ ಥಿಯೇಟರನ್ನು ಸಂತೋಷವಾಗಿ ಒದಗಿಸಿಕೊಟ್ಟರು.

ಭಾರತದ ಉದ್ದಗಲಕ್ಕೂ ಪ್ರಖ್ಯಾತನಾದ ಬಾಲ ಪ್ರತಿಭೆ ಮನ್ಹಾರ್ ಬರ್ವೆ ಈ ಸಮಾಜದ ಸಹಾಯಕ್ಕಾಗಿ ಬೆನಿಫಿಟ್ ಕಛೇರಿ ನಡೆಸಿದ ಮೇಲೆ ಸಮಾಜಕ್ಕೆ ಮನ್ಹಾರ್ ಗಾಯನ ಸಮಾಜ ಎಂದು ಹೆಸರಾಗಿತ್ತು. ವಾರ್ಷಿಕೋತ್ಸವ ಸಮಾರಂಭದ ಬಗ್ಗೆ ಆತನಿಗೂ ತಂತಿ ಕಳುಹಿಸಿ, ಆತನು ಉಪಸ್ಥಿತನಿದ್ದು ಕೆಲವು ವಾದ್ಯಗಳನ್ನೂ ನುಡಿಸಬೇಕೆಂದು ಕೋರಿದ್ದೆವು. ಅವನು ಅಭಿಮಾನದಿಂದ ಒಪ್ಪಿಗೆ ಸೂಚಿಸಿದ್ದ.

ನಾಗಪುರದ ಇತಿಹಾಸದಲ್ಲೇ ಅದೊಂದು ವಿಶೇಷ ಸಂದರ್ಭ. ನಮ್ಮ ಅತಿಥಿಗಳ ಅದ್ಭೂರಿಯ ಭಾಷಣ ಹಾಗೂ ಮನ್ಹಾರ್ ಬರ್ವೆಯ ಅಮೋಘ ಸಂಗೀತ! ಮೊದಲಿಗೆ ಬರ್ವೆ ತಾನೇ ಹಾರ್ಮೋನಿಯಂ ನುಡಿಸುತ್ತಾ ಹಾಡಿದ. ಕಛೇರಿ ಕೊನೆಯ ಭಾಗದಲ್ಲಿ ತನ್ನ ''ಮ್ಯೂಸಿಕಲ್ ಸಬ್‌ಮೆರೀನ್''ವಾದ್ಯವನ್ನು ಎಡಗೈಯಲ್ಲಿ ಹಿಡಿದು ತುಟಿಗಳಿಂದ ಊದುತ್ತಾ, ಪಕ್ಕವಾದ್ಯವಾಗಿ ಬಲಗೈಯಿಂದ ಲೆಗ್ ಹಾರ್ಮೋನಿಯಂ ನುಡಿಸಿದ. ವಾದ್ಯಗಳ ಮೇಳ ಎಷ್ಟು ದೈವಿಕವಾಗಿತ್ತು! ಹಿಂದೂಸ್ತಾನಿ ರಾಗ ತೋಡಿ ಎಷ್ಟು ಭವ್ಯವಾಗಿ ಮೂಡಿ ಬಂದಿತು!

ಬರ್ವೆಯ ಸಂಗೀತ ಮುಕ್ತಾಯವಾದ ಮೇಲೆ ಪಂಡಿತ್ ಜವಹರಲಾಲ್ ನೆಹರು, ಬಾಬು ರಾಜೇಂದ್ರ ಪ್ರಸಾದ್ ಮತ್ತಿತರು ಮನ್ಹಾರ್ ಬರ್ವೆಯನ್ನು ಶ್ಲಾಘಿಸಿದರು. ಅವನ ಶಾರೀರಕ್ಕೆ ಭವ್ಯತೆಯನ್ನು ನೀಡಿದ ಹಾರ್ಮೋನಿಯಂ ಬಗ್ಗೆಯೂ ಅವನ ಮ್ಯೂಸಿಕಲ್ ಸಬ್‌ಮೆರೀನ್ ಬಗ್ಗೆಯೂ ಮೆಚ್ಚುಗೆ ವ್ಯಕ್ತಪಡಿಸಿದರು. ಇದೇನು ಹಾರ್ಮೋನಿಯಂ ಬಗ್ಗೆ ಅನಾದರವೋ, ಮೆಚ್ಚುಗೆಯೋ?

೩೮. ಗಾಂಧೀಜಿ ಮತ್ತು ಹಾರ್ಮೋನಿಯಂ

ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸಿ ಮಹಾತ್ಮಗಾಂಧಿ ಲಂಡನ್‌ನಿಂದ ಹಿಂದಿರುಗಿದರು. ವಾರ್ಧಾ ಸಮೀಪವಿದ್ದ ಕೈಗಾರಿಕಾ ತರಬೇತಿ ಕೇಂದ್ರವನ್ನು ನೋಡಲೆಂದು ನಾಗಪುರದ ಕೃಷಿ ಕಾಲೇಜಿನ ವಿದ್ಯಾರ್ಥಿಗಳೊಂದಿಗೆ ನಾನು ವಾರ್ಧಾಕ್ಕೆ ಹೋಗಿದ್ದೆ. ಗಾಂಧೀಜಿಯವರ ದರ್ಶನ ಪಡೆಯಲು ನಾವು ಅಪೇಕ್ಷಿಸಿದೆವು. ಮಹಾತ್ಮಾಜೀಯವರು ಕೇವಲ ಮೇಕೆ ಹಾಲು ಕುಡಿಯುತ್ತೇನೆಂದು ವ್ರತ ತೊಟ್ಟಿದ್ದರಿಂದ ಅವರಿಗೆ ಹಾಲು ಒದಗಿಸಲೆಂದೇ ಅವರೊಂದಿಗೆ ಲಂಡನ್‌ಗೆ ಹೋಗಿದ್ದ ಹೆಣ್ಣು ಮೇಕೆಯನ್ನು ನಾವು ನೋಡಬಯಸಿದೆವು.

ಸಾಯಂಕಾಲ ನಾವು ಸೇವಾಗ್ರಾಮವನ್ನು ಸಮೀಪಿಸುತ್ತಿದ್ದಂತೆಯೇ ಮಹಾತ್ಮಾಜೀಯವರು ತಮ್ಮ ಸಂಜೆಯ ಸುತ್ತಾಟಕ್ಕಾಗಿ ಹೊರಬಂದಿದ್ದು, ಅವರನ್ನು ರಸ್ತೆಯಲ್ಲಿಯೇ ಭೇಟಿ ಮಾಡಿದೆವು. ನಾವೆಲ್ಲ ''ಮಹಾತ್ಮಾ ಜೀ ''ಎಂದು ಕೂಗಿದೆವು. ಅವರು ನಿಂತರು.

ನಾವು ನಾಗಪುರದ ಕೃಷಿ ಕಾಲೇಜಿನ ವಿದ್ಯಾರ್ಥಿ ಅಧ್ಯಾಪಕರ ತಂಡವೆಂದೂ, ಮಾಗನವಾಡಿಯ ಗ್ರಾಮಕೈಗಾರಿಕಾ ತರಬೇತಿ ಕೇಂದ್ರಕ್ಕೆ ಭೇಟಿ ಕೊಟ್ಟೆವೆಂದೂ, ಅವರನ್ನು ನೋಡಿ ಪ್ರಣಾಮ ಸಲ್ಲಿಸಲೆಂದೇ ಸೇವಾಗ್ರಾಮಕ್ಕೆ ಬಂದಿರುವುದಾಗಿಯೂ ನಾನವರಿಗೆ ತಿಳಿಸಿದೆ. ಅವರು ಕೆಲವು ಹಿತವಚನಗಳನ್ನಾಡಿ ರಾಷ್ಟ್ರಕ್ಕಾಗಿ ಮಾಡಬೇಕಾಗಿರುವ ಕರ್ತವ್ಯದತ್ತ ನಮ್ಮ ಗಮನ ಸೆಳೆದರು. ಹೆಗಲಿಗೆ ಹಾರ್ಮೋನಿಯಂ ನೇತುಹಾಕಿಕೊಂಡ ಒಬ್ಬ ಅಲೆಮಾರಿ ಗಾಯಕ ಅಲ್ಲಿಗೆ ಬಂದ. ನಾವು ಗಾಂಧೀಜಿಯವರನ್ನು ಬೀಳ್ಕೊಟ್ಟು ಹೊರಡಬೇಕೆಂದಿದ್ದಾಗ ಆ ಗಾಯಕ ಹಾರ್ಮೋನಿಯಂ ನುಡಿಸುತ್ತಾ ಒಂದು ಭಜನ್ ಹಾಡತೊಡಗಿದ. ಗಾಂಧೀಜಿಯವರು ಆಸಕ್ತರಾಗಿ ಕೇಳಬಯಸಿದಾಗ ನಾವು ನಿಶ್ಚಲರಾಗಿ ನಿಂತೆವು. ಗಾಯಕನು ತನ್ನ ಭಜನ್ ಹಾಡಿ ಮುಗಿಸಿ ಹಾರ್ಮೋನಿಯಂ ನೆಲದ ಮೇಲಿಟ್ಟು ಗಾಂಧೀಜಿಯವರ ಕಾಲಿಗೆ ಬಿದ್ದಾಗ ಗಾಂಧೀಜಿಯವರು ಅವನನ್ನು ಆಶೀರ್ವದಿಸಿದರು, ''ನೋಡಿ, ಭಜನ್ ಎಷ್ಟು ಉತ್ತೇಜನಕಾರಿಯಾಗಿದೆ! ಎಂತಹ ಭವ್ಯ ಶಾರೀರ! ಅವನ ಶಾರೀರ ಹಾಗೂ ಹಾರ್ಮೋನಿಯಂ ನಡುವೆ ಎಂತಹ ಹೊಂದಾಣಿಕೆ ! ನೀವೆಲ್ಲರೂ ಇದನ್ನು ಕೇಳಿ ಆನಂದಿಸಿದ್ದೀರೆಂದು ಆಶಿಸುತ್ತೇನೆ. ನೀವೂ ಇದೇ ರೀತಿ ಹಾಡಬೇಕು.''

೩೯. ವೈಣಿಕರಿಂದ ಹಾರ್ಮೋನಿಯಂಗೆ ಮೆಚ್ಚುಗೆ

ಈಗ ಕೆಲವು ವರ್ಷಗಳ ಹಿಂದೆ ಮದ್ರಾಸ್ ಮ್ಯೂಸಿಕ್ ಅಕಾಡೆಮಿಯ ಸಂಗೀತ ಸಮ್ಮೇಳನದಲ್ಲಿ ಗಾಯಕರೂ,ವೈಣಿಕರೂ ಆದ ವಿದ್ವಾನ್ ಕಲ್ಯಾಣಕೃಷ್ಣ ಭಾಗವತರ್ ಅವರು ಒಂದು ಅನಿರೀಕ್ಷಿತ ಕೋರಿಕೆಯನ್ನು ಅಕಾಡೆಮಿಯ ಕಾರ್ಯದರ್ಶಿ ಡಾ. ವಿ. ರಾಘವನ್ ಅವರ ಮುಂದಿಟ್ಟರು. ಹಾರ್ಮೋನಿಯಂ ವಾದಕರೂ ತಮ್ಮ ಗೆಳೆಯರೂ ಆದ ಟ್ರಾವಂಕೋರಿನ ವಿದ್ವಾನ್ ಶಂಕುನ್ನಿ ನಾಯರ್ ಅವರನ್ನು ಸಭೆಗೆ ಪರಿಚಯಿಸಲು ಅವರು ಅಪೇಕ್ಷಿಸಿದರು. ತಾವು ತೀರ ಆಕಸ್ಮಿಕವಾಗಿ ಭೇಟಿ ಮಾಡಿದ ತಮ್ಮ ಸ್ನೇಹಿತರು ಮಧ್ಯಾಹ್ನದ ರೈಲಿಗೆ ಮದ್ರಾಸಿಗೆ ಹೊರಡಲಿದ್ದುದರಿಂದ ಈ ಕಾರ್ಯಕ್ರಮ ಕೂಡಲೇ ನಡೆಯಬೇಕೆಂದು ಅವರು ಹೇಳಿದರು. ಹಾಂ! ಒಬ್ಬ ಹಾರ್ಮೋನಿಯಂ ವಾದಕರನ್ನು ವಿದ್ವತ್ ಸಭೆಗೆ ಪರಿಚಯಿಸುವುದು ! ಅದೂ ತುರ್ತಾಗಿ ! ಇದೆಲ್ಲಾ ಬಹಳ ವಿಚಿತ್ರವೆನಿಸಿತು. ಆದರೆ ಕಲ್ಯಾಣಕೃಷ್ಣ ಭಾಗವತರು ಬಹಳ ಗಂಭೀರವಾಗಿದ್ದರು. ಆದ್ದರಿಂದಲೇ ಡಾ. ರಾಘವನ್ ಒಪ್ಪಿಕೊಂಡರು.

ಕೂಡಲೆ ಕಲ್ಯಾಣಕೃಷ್ಣ ಭಾಗವತರು ತಮ್ಮ ಗೆಳೆಯ ಹಾರ್ಮೋನಿಯಂ ವಾದಕರಲ್ಲಿಗೆ ತೆರಳಿ ಅವರನ್ನು ತಮ್ಮ ಲೆಗ್ ಹಾರ್ಮೋನಿಯಂ ಜೊತೆಗೆ ಹನ್ನೊಂದು ಗಂಟೆಗೆ ಸಮ್ಮೇಳನಕ್ಕೆ ಕರೆತಂದರು. ತಮ್ಮ ಸ್ನೇಹಿತರನ್ನು ಪರಿಚಯ ಮಾಡಿಕೊಡುವಾಗ ತಾವು ಹೇಗೆ ವಿದ್ವಾನ್ ಶಂಕುನ್ನಿ ನಾಯರ್ ಅವರ ಹಾರ್ಮೋನಿಯಂ ಸಂಗೀತದ ಆರಾಧಕನಾದರೆಂದು ಭಾಗವತರು ವಿವರಿಸಿದರು.

ಅನೇಕ ವರ್ಷಗಳ ಹಿಂದೆ ಭಾಗವತರು ಟ್ರಿವೆಂಡ್ರಮ್‌ನಲ್ಲಿ ಒಂದು ಗಾಯನ ಕಛೇರಿ ನೀಡುವವರಿದ್ದರು. ಅಲ್ಲಿ ಲಭ್ಯವಿರುವವರ ಪೈಕಿ ಅತ್ಯಂತ ಉತ್ಕೃಷ್ಟರಾದ ಪಕ್ಕವಾದ್ಯದವರನ್ನೇ ಏರ್ಪಾಡು ಮಾಡುವುದಾಗಿ ವ್ಯವಸ್ಥಾಪಕರು ಮಾತುಕೊಟ್ಟಿದ್ದರು. ಕಛೇರಿ ಪ್ರಾರಂಭವಾಗುವ ಸಮಯದಲ್ಲಿ ಪಕ್ಕವಾದ್ಯಕ್ಕೆ ಹಾರ್ಮೋನಿಯಂ ಹಾಗೂ ಮೃದಂಗ ವಾದಕರಿರುವುದನ್ನು ಕಲ್ಯಾಣಕೃಷ್ಣ ಭಾಗವತರು ಕಂಡರು. ಅವರು ಸ್ವಲ್ಪ ಗೊಂದಲಕ್ಕೆ ಒಳಗಾದರು. ಗೊಣಗಾಡುತ್ತಾ ಪಿಟೀಲು ವಾದಕ ಲಭಿಸಲಿಲ್ಲವೇ ಎಂದು ವ್ಯವಸ್ಥಾಪಕರನ್ನು ವಿಚಾರಿಸಿದರು. ಯಾವುದೇ ಪಿಟೀಲು ವಾದಕರಿಗಿಂತ ಈ ಹಾರ್ಮೋನಿಯಂ ಕಲಾವಿದರು ಉತ್ತಮರಾಗಿರುವುದರಿಂದಲೇ ಅವರನ್ನು ವಿಶೇಷವಾಗಿ ಕರೆತಂದಿರುವುದಾಗಿ ವ್ಯವಸ್ಥಾಪಕರು ವಿವರಿಸಿದರು. ಕಲ್ಯಾಣಕೃಷ್ಣ ಭಾಗವತರಿಗೆ ಸರಿಹೋಗದಿದ್ದಲ್ಲಿ ಬದಲಿಗೆ ಪಿಟೀಲು ವಾದಕರನ್ನೇ ನೀಡುವುದಾಗಿಯೂ ಹೇಳಿದರು.

ಕಲ್ಯಾಣಕೃಷ್ಣಭಾಗವತರು ಇನ್ನೂ ಅನುಮಾನಿಸುತ್ತಲೇ ಇದ್ದರು. ಕಛೇರಿಯ ಮೊಟ್ಟ ಮೊದಲ ಹಾಡಿನಲ್ಲೇ ಅವರಿಬ್ಬರ ಜೋಡಿ ಎಷ್ಟು ಚೆನ್ನಾಗಿ ಹೊಂದಿಕೊಂಡಿತೆಂದರೆ ಪಿಟೀಲು ವಾದಕನ ಆವಶ್ಯಕತೆ ಕಂಡು ಬಾರದೆ ಕಛೇರಿ ಭರ್ಜರಿಯಾಗಿ ನಡೆಯಿತು. ಈ ಹಾರ್ಮೋನಿಯಂ ಪಕ್ಕವಾದ್ಯದೊಂದಿಗೆ ಹಾಡಬೇಕೆಂದು ಕಲ್ಯಾಣಕೃಷ್ಣಭಾಗವತರು ಎಷ್ಟೇ ಅಪೇಕ್ಷಿಸಿದರೂ ಮತ್ತೆ ಅವರನ್ನು ಭೇಟಿಯೇ ಆಗಿರಲಿಲ್ಲವಂತೆ. ಅಂದು ಬೆಳಗ್ಗೆ ವಿದ್ವಾನ್ ಶಂಕುನ್ನಿ ನಾಯರ್ ಅವರು ಕಲ್ಯಾಣ ಕೃಷ್ಣಭಾಗವತರ್ ಅವರನ್ನು ಗುರುತಿಸಿ ಸುಮಾರು ಇಪ್ಪತ್ತು ವರ್ಷಗಳ ಹಿಂದಿನ ಭೇಟಿಯ ನೆನಪು ಮಾಡಿಕೊಟ್ಟರು. ಅವರನ್ನು ಭೇಟಿ ಯಾದುದಕ್ಕೆ ಅತೀವ ಸಂತೋಷಪಟ್ಟ ಕಲ್ಯಾಣಕೃಷ್ಣ ಭಾಗವತರು ವಿದ್ವಾನ್ ಶಂಕುನ್ನಿ ನಾಯರ್ ಅವರನ್ನು ಅಕಾಡೆಮಿಗೆ ಪರಿಚಯ ಮಾಡಿಕೊಡಲು ಉತ್ಸುಕರಾಗಿದ್ದರು.

ಶಂಕುನ್ನಿ ನಾಯರ್ ಅವರು ಲೆಗ್ ಹಾರ್ಮೋನಿಯಂ ವಾದನವನ್ನೂ, ಅವರೊಂದಿಗೆ ಕಲ್ಯಾಣಕೃಷ್ಣ ಭಾಗವತರು ವೀಣೆಯನ್ನೂ ನುಡಿಸಿದರು. ಮೂಲೆಗುಂಪಾಗಿದ್ದ ಹಾರ್ಮೋನಿಯಂನ ಎಂತಹ ಭವ್ಯವಾದ ಪ್ರದರ್ಶನ! ಎಂತಹ ಭರ್ಜರಿಯ ವಾದ್ಯ ಜೋಡಿ!

೪೦. ಹಾರ್ಮೋನಿಯಂಗೆ ಮೈಸೂರು ಟಿ. ಚೌಡಯ್ಯನವರ ಮೆಚ್ಚುಗೆ

ಸುಮಾರು ಹತ್ತು ಹನ್ನೆರಡು ವರ್ಷಗಳ ಹಿಂದಿನ ಮಾತು. ಬಿಡಾರಂ ಕೃಷ್ಣಪ್ಪನವರ ರಾಮಮಂದಿರದಲ್ಲಿ ನಡೆಯುತ್ತಿದ್ದ ವಾರ್ಷಿಕ ಸಂಗೀತದ ಸಮ್ಮೇಳನದಲ್ಲಿ ಮೊದಲ ಬಾರಿಗೆ ಭಾಗವಹಿಸಿದ್ದೆ. ನಿರಂತರವಾಗಿ ಚರ್ಚೆಗೊಳಗಾಗುವ, ಯಾವಾಗಲೂ ಬಗೆಹರಿಯದ ಕರ್ನಾಟಕ ಸಂಗೀತದ ಇಪ್ಪತ್ತೆರಡು ಶ್ರುತಿಗಳ ಬಗ್ಗೆ ಒಂದು ಬೆಳಗ್ಗೆ ಡಾ. ಸೀಬಯ್ಯ, ಪಿಹೆಚ್.ಡಿ., ಅವರು ಒಂದು ಉಪನ್ಯಾಸ ನೀಡಿದರು. ಶ್ರುತಿಗಳ ಸಂಖ್ಯೆಯನ್ನು ಇಪ್ಪತ್ತೆರಡಕ್ಕೆ ನಿಗದಿಪಡಿಸದೆ ಕಿವಿಗೆ ಹಿತವಾಗುವಂತೆ ಅವುಗಳನ್ನು ಸಂಗೀತದಲ್ಲಿ ಬಳಸುವ ಸಾಧ್ಯತೆಗಳತ್ತ ನನ್ನ ಒಲವು. ಈ ವಿಷಯವಾಗಿ ಸಂಗೀತಗಾರರು ಹಾಗೂ ವಿಜ್ಞಾನಿಗಳೇ ತಮ್ಮ ಶಾಸ್ತ್ರೀಯ ಸಂಶೋಧನೆಗಳಲ್ಲಾಗಲೀ ಪ್ರಾಯೋಗಿಕ ವಿನಿಯೋಗ ದಲ್ಲಾಗಲೀ ಒಮ್ಮತಕ್ಕೆ ಬಾರದಿದ್ದಾಗ ಕೆಲವು ಶ್ರುತಿಗಳನ್ನು ಒಪ್ಪಿಕೊಂಡು ಉಳಿದವನ್ನು ತ್ಯಜಿಸುವುದರ ಲೆಕ್ಕಾಚಾರದಲ್ಲಿ ನನಗೆ ಹೆಚ್ಚು ಆಸಕ್ತಿ ಇಲ್ಲ. ತಮ್ಮ ತೀರ್ಮಾನಗಳನ್ನು ಸಾಬೀತು ಪಡಿಸಲು ಸೀಬಯ್ಯನವರು ಕರಿ ಹಲಗೆಯ ಮೇಲೆ ಅನೇಕ ಚಿತ್ರಗಳನ್ನು ಬಿಡಿಸಿದರು. ಹದಗೊಳಿಸಿದ ಶ್ರೇಣಿಯ ಬಗ್ಗೆ ಮಾತನಾಡುತ್ತಾ, ಅಪಾರ ಹಾನಿ ಉಂಟುಮಾಡಿದ ಹಾರ್ಮೋನಿಯಂ ವಾದ್ಯವನ್ನು ಪ್ರಬಲವಾಗಿ ದೂರಿದರು.

ಅವರ ಉಪನ್ಯಾಸ ಮುಗಿದ ಮೇಲೆ ಅಲ್ಲಿದ್ದ ತಜ್ಞರು ಮಾತನಾಡಬೇಕೆಂದು ಅಧ್ಯಕ್ಷರು ಅಪೇಕ್ಷಿಸಿದರು. ಯಾರೂ ಮುಂದೆ ಬರಲಿಲ್ಲ. ಬದಲಿಗೆ ಎಲ್ಲರೂ ನನ್ನತ್ತ ನೋಡತೊಡಗಿದಾಗ ಅಧ್ಯಕ್ಷರೆಂದರು, ''ಮಿಸ್ಟರ್ ಸುಬ್ಬರಾವ್, ಎಲ್ಲರೂ ನಿಮ್ಮತ್ತ ನೋಡುತ್ತಿದ್ದಾರೆ ; ಮಾತನಾಡಬಾರದೆ?'' ನಾನು ಒಪ್ಪಿದೆ.

ಇಪ್ಪತ್ತೆರಡು ಶ್ರುತಿಗಳ ಕ್ಲಿಷ್ಟವಾದ ವಿಷಯದ ಬಗ್ಗೆ ಸ್ವಾರಸ್ಯವಾಗಿ ಮಾತನಾಡಿದ ಉಪನ್ಯಾಸಕರನ್ನು ನಾನು ವಂದಿಸಿದೆ. ಆದರೆ ಹಾರ್ಮೋನಿಯಂ ಬಗ್ಗೆ ಅವರ ಅಭಿಪ್ರಾಯ ನ್ಯಾಯಸಮ್ಮತ ವಲ್ಲವೆಂದು ಹೇಳಿದೆ. ಮುಖ್ಯವಾದ್ಯವಾಗಿ ಆಗಲಿ, ಇಲ್ಲವೇ ಪಕ್ಕ ವಾದ್ಯವಾಗಿ ಆಗಲಿ, ಹಾರ್ಮೋನಿಯಂ ನೀಡುವ ಸಹಾಯವು ಅದರಿಂದ ಉಂಟಾಗುವುದೆಂದು ಹೇಳಲಾದ ತೊಂದರೆಗಿಂತ ಅಧಿಕವೆಂದು ಕರ್ನಾಟಕ ಹಾಗೂ ಹಿಂದೂಸ್ತಾನಿ ಪದ್ಧತಿಯ ಗಾಯಕನೂ,ವಾದಕನೂ ಆದ ನನ್ನ ದೃಢ ನಂಬಿಕೆ ಎಂದು ನುಡಿದೆ. ಈ ಮಾತು ವಿಶೇಷವಾಗಿ ಹಿಂದೂಸ್ತಾನಿ ಸಂಗೀತಕ್ಕೆ ಸಲ್ಲುತ್ತದೆ. ಆದರೂ ಅಧ್ಯಕ್ಷರು ತಮ್ಮ ಅಂತಿಮ ಪ್ರತಿಕ್ರಿಯೆಯಲ್ಲಿ ಡಾ. ಸೀಬಯ್ಯನವರು ಸೂಚಿಸಿದಂತೆ ಹಾರ್ಮೋನಿಯಂ ವಾದ್ಯ ಕರ್ನಾಟಕ ಸಂಗೀತಕ್ಕೆ ಹೊಂದಿಕೊಳ್ಳುವುದಿಲ್ಲ ಎಂದೇ ನುಡಿದರು.

ಮಧ್ಯಾಹ್ನ ನಾಲ್ಕರಿಂದ ಐದೂವರೆವರೆಗೆ ವಿ|| ಭುವನೇಶ್ವರಯ್ಯ ಅವರ ಪಿಟೀಲು ಹಾಗೂ ವಿ|| ಅರುಣಾಚಲಪ್ಪನವರ ಹಾರ್ಮೋನಿಯಂ ದ್ವಂದ್ವವಾದನವಿತ್ತು. ಅರುಣಾಚಲಪ್ಪನವರ ಹಾರ್ಮೋನಿಯಂ ಅಪಾರ ಮೆಚ್ಚುಗೆ ಗಳಿಸಿತು. ಡಾ. ಸೀಬಯ್ಯನವರು ನನ್ನ ಪಕ್ಕದಲ್ಲೇ ಕುಳಿತಿದ್ದರು. ನಂತರ ಸಂಜೆ ಆರರಿಂದ ಒಂಬತ್ತರವರೆಗೆ ಟಿ. ರುಕ್ಮಿಣಿ ಯವರ ಪಿಟೀಲು ಪಕ್ಕವಾದ್ಯದೊಂದಿಗೆ ಎಂ. ಡಿ. ರಾಮನಾಥನ್ ಹಾಡುವವರಿದ್ದರು. ಆದರೆ ಎಂ. ಡಿ. ರಾಮನಾಥನ್ ಬರಲೇ ಇಲ್ಲ. ರಾಮಮಂದಿರದ ಸಮಿತಿಯವರು ಟಿ. ರುಕ್ಮಿಣಿಯವರೇ ಹಾಡಲೆಂದು ನಿರ್ಧರಿಸಿದರು. ಹೇಗೂ ಪಿಟೀಲು ಪಕ್ಕವಾದ್ಯಕ್ಕೆ ಭುವನೇಶ್ವರಯ್ಯ ಅವರು ಸಿದ್ಧರಾಗಿಯೇ ಇದ್ದರು. ಬದಲಿ ಕಾರ್ಯಕ್ರಮವನ್ನು ಘೋಷಿಸಿದಾಗ ವಿದ್ವಾನ್ ಅರುಣಾಚಲಪ್ಪನವರು ವೇದಿಕೆಯಿಂದ ಕೆಳಕ್ಕೆ ಇಳಿಯಲು ಉದ್ದೇಶಿಸಿದರು. ಆದರೆ ವಿದ್ವಾನ್ ಚೌಡಯ್ಯ ನವರು, ಅರುಣಾಚಲಪ್ಪನವರು ವೇದಿಕೆಯಲ್ಲೇ ಉಳಿದು ಹಾರ್ಮೋನಿಯಂ ಪಕ್ಕವಾದ್ಯವನ್ನು ನೀಡಬೇಕೆಂದು ಹೇಳಿದರು. ರುಕ್ಮಿಣಿಯವರು ಕೂಡ ಇದನ್ನು ಸ್ವಾಗತಿಸಿದರು. ಕಛೇರಿ ಭರ್ಜರಿಯಾಗಿ ನಡೆಯಿತು. ಅರುಣಾಚಲಪ್ಪನವರ ಹಾರ್ಮೋನಿಯಂ ಪಕ್ಕವಾದ್ಯ ಅತ್ಯುತ್ತಮವಾಗಿತ್ತು. ಸೋಲೋ ಆವರ್ತನ ನುಡಿಸಿದಾಗಲೆಲ್ಲ ಕರತಾಡನ.

ಕಾರ್ಯಕ್ರಮ ಮುಕ್ತಾಯವಾದ ಮೇಲೆ ವಿದ್ವಾನ್ ಟಿ. ಚೌಡಯ್ಯನವರು ಕಲಾವಿದರನ್ನು ವಂದಿಸಿ ನುಡಿದರು, ''ನೀವೆಲ್ಲಾ ಅರುಣಾಚಲಪ್ಪನವರ ಹಾರ್ಮೋನಿಯಂ ಕೇಳಿದ್ದೀರಿ. ಅದರ ಬಗ್ಗೆ ಏನೆನ್ನುತ್ತೀರಿ? ಭಾರತೀಯ ಸಂಗೀತಕ್ಕೆ ಹಾರ್ಮೋನಿಯಂ ಹೊಂದಿ ಕೊಳ್ಳುವುದಿಲ್ಲವೆಂದು ಜರಿಯುವುದು ಪೆದ್ದುತನವಲ್ಲವೆ? ನನ್ನ ಅಭಿಪ್ರಾಯವನ್ನು ಒಪ್ಪುವವರೆಲ್ಲಾ ಆಕಾಶವಾಣಿ ಹಾರ್ಮೋನಿಯಂನ್ನು ತೆಗೆದು ಹಾಕಿರುವುದರ ವಿರುದ್ಧ ಕೈ ಎತ್ತಿ.'' ಅಲ್ಲಿದ್ದವರೆಲ್ಲಾ ಕೈ ಎತ್ತಿದರು. ಚೌಡಯ್ಯನವರು ಸಮ್ಮೇಳನಕ್ಕೆ ಬೆಳಗ್ಗೆ ಬಂದಿರಲಿಲ್ಲ. ನಾನು ಹಾರ್ಮೋನಿಯಂ ಪರವಾಗಿ ವಾದಿಸಿದ್ದು ಅವರಿಗೆ ತಿಳಿದಿರಲಿಲ್ಲ.

ಪಂಡಿತರೊಡನೆ

ವೇ|| ಬ್ರ|| ಶ್ರೀ ನರಸಿಂಹಮೂರ್ತಿ ಶಾಸ್ತ್ರೀ

ನಿರೂಪಣೆ : ಬೀ. ಚಿ. ಜಗನ್ನಾಥ ಜೋಯಿಸ್

ಪಂಡಿತರೊಡನೆ *

ತೀರ್ಥರೂಪ ಸ್ವರೂಪರಾದ 'ವೇದರತ್ನ'ರು ನಮ್ಮನೆಗೆ ಬರಬೇಕೆಂಬ ಬಹುದಿನದ ನನ್ನಾಸೆಯನ್ನು ಈಡೇರಿಸಿಕೊಳ್ಳ ಬಯಸಿ, ಸಂದರ್ಶನ ಕಾರ್ಯಕ್ರಮಕ್ಕಾಗಿ ನಮ್ಮಲ್ಲಿಗೆ ಬರುವಂತೆ ಸಂಕೋಚದಿಂದ ಬೇಡಿಕೊಂಡೆ. ನಮ್ಮ ಭಾಗ್ಯ! ವಿದ್ಯಾಸಾಗರರು ನಮ್ಮನೆಗೆ ಬಂದಿದ್ದರೆಂಬ ಅಮಿತಾನಂದ ನಮ್ಮ ಪಾಲಾಯ್ತು. ಆ ಸಂದರ್ಭದಲ್ಲಿ ಅವರೊಂದಿಗಿನ ಸಂದರ್ಶನದ ಆಯ್ದ ಭಾಗ ಇಲ್ಲಿದೆ. ಸಂದರ್ಶಿಸಲು ಬೇಕಾದ ಪ್ರಶ್ನೆಗಳ ಪೂರ್ವಸಿದ್ಧತೆಗಾಗಿ ಸಹಕರಿಸಿದ ವಿದ್ವಾನ್ ಶ್ರೀ ಎಂ. ಸುಬ್ರಹ್ಮಣ್ಯಭಟ್, ನನ್ನ ಕುಟುಂಬ ವರ್ಗದವರು ಮತ್ತಿತರ ಎಲ್ಲರನ್ನೂ ಸ್ಮರಿಸುತ್ತೇನೆ. ಪೂಜ್ಯರು ಬಹುಸಂಕೋಚದಿಂದ, ಅತ್ಯಂತ ವಿನಯದಿಂದ, ಆತ್ಮಸ್ತುತಿಯಾಗದಂತೆ ನುಡಿದ ಮಾತುಗಳು ನನ್ನ ಮರು ನುಡಿಯಲ್ಲಿ ಒರಟುತನದ್ದೂ, ಅಹಂಕಾರಯುತವೂ ಆಗಿದ್ದರೆ ಅದಕ್ಕೆ ನಾನೇ ಹೊಣೆ. ನನ್ನ ತಪ್ಪನ್ನು ಮನ್ನಿಸಿ ಸ್ವೀಕರಿಸಬೇಕೆಂದು ಕೋರುತ್ತೇನೆ.

ಪೂರ್ವಿಕರು

ನಾನು ಬ್ರಾಹ್ಮಣ ಜಾತಿಯ ಉಪಪಂಗಡವಾದ ಸಂಕೇತಿ ಸಮುದಾಯದಲ್ಲಿ ಜನಿಸಿದವನು, ನನ್ನ ಹುಟ್ಟೂರು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕು ಲಿಂಗದಹಳ್ಳಿ. ಇಲ್ಲಿರುವವರೆಲ್ಲರೂ ಸಂಕೇತಿಗಳೇ. ಸಂಕೇತಿಗಳಲ್ಲಿಯೂ ಅನೇಕ ವಿಭಾಗಗಳಿವೆ. ತಮಿಳು ನಾಡಿನಿಂದ ವಲಸೆ ಬಂದು ಮೊದಲು ಬೆಟ್ಟದಪುರದಲ್ಲಿ ನೆಲಸಿದವರು 'ಬೆಟ್ಟದಪುರದ ಸಂಕೇತಿ'ಗಳು, ಕೌಶಿಕ ಗ್ರಾಮದ ಸುತ್ತಮುತ್ತ ನೆಲೆಸಿದವರು 'ಕೌಶಿಕ ಸಂಕೇತಿ'ಗಳು. ಅಲ್ಲಿಂದ ಕೆಲವರು ವಲಸೆ ಹೊರಟು ಮಲೆನಾಡು ಪ್ರಾಂತ್ಯದಲ್ಲಿ ನೆಲಸಿದರು, ಅವರು 'ಮಲೆನಾಡು ಸಂಕೇತಿ'ಗಳೆನ್ನಲ್ಪಟ್ಟರು. ಹೊಸಹಳ್ಳಿ ಮತ್ತೂರಿನಲ್ಲಿ ನೆಲಸಿದವರೂ ಕೌಶಿಕ ಸಂಕೇತಿಗಳೆಂದು ಹೇಳಿಕೊಳ್ಳುತ್ತಾರೆ, ನಾವು ಮಲೆನಾಡು ಸಂಕೇತಿಗಳ ಗುಂಪಿಗೆ ಸೇರಿದವರು.

ನಮ್ಮ ಪೂರ್ವಜರು ಕಡೂರು ತಾಲ್ಲೂಕು ಹಿರಿಯಂಗಳದಿಂದ ಬಂದವರೆಂದು ಹಿರಿಯರು ಹೇಳುತ್ತಿದ್ದರು. ನಮ್ಮ ಸಂಕೇತಿಗಳ ಮೂಲಪುರುಷರು ಯಾವುದೋ ಬಲವತ್ತರ ಕಾರಣದಿಂದ ತಮಿಳು ನಾಡಿನ ಮಧುರೈ ಜಿಲ್ಲೆಯ ಶೆಂಕೋಟ್ಟೈ ಗ್ರಾಮದಿಂದ ಕರ್ನಾಟಕವನ್ನು ಪ್ರವೇಶಿಸಿ ನೆಲೆ ಹುಡುಕುತ್ತಾ ಕಾವೇರಿ ತೀರದಲ್ಲಿ ನೆಲೆಸುತ್ತಾ, ಹೇಮಾವತೀ ತೀರ ಇತ್ಯಾದಿಯಾಗಿ ಕೌಶಿಕದಲ್ಲೂ ನೆಲೆಸಿ, ಹಾಗೇ ತುಂಗಾತೀರದಲ್ಲೂ ನೆಲೆಸಿದರು. ಆದರೆ ಸಂಸಾರಗಳು ಇಮ್ಮಡಿ-ನಾಲ್ವಡಿ-ಏಳ್ಮಡಿಯಾಗಿ ವಿಸ್ತಾರವಾಗಲು ಬೇರೆ ಬೇರೆ ಸ್ಥಳಗಳನ್ನು ಅರಸಬೇಕಾಗಿ ಬಂತು. ಹಿರಿಯಂಗಳವೆಂಬುದು ನದೀತೀರವಲ್ಲದಿದ್ದಾಗ್ಯೂ ಭೂಮಿ ಫಲವತ್ತಾಗಿ ಮಳೆಬೆಳೆಗಳು ಚೆನ್ನಾಗಿ ಆಗುತ್ತಿದ್ದುದರಿಂದ ಅಲ್ಲಿ ಕೆಲವರು ನೆಲೆಸಿದರು.

ಆಗ ಪಂಜುಗಳ್ಳರ ಕಾಟ ಜಾಸ್ತಿ ಇರುತ್ತಿತ್ತು. ಅವರು ಹೆಚ್ಚಾಗಿ ರಾತ್ರಿ ಹೊತ್ತು ಪಂಜು ಹಿಡಿದುಕೊಂಡು ಬಂದು ಊರನ್ನು ಕೊಳ್ಳೆ ಹೊಡೆಯುತ್ತಿದ್ದರು. ಸುಂದರ ತರುಣಿಯರನ್ನು ಒಯ್ಯುತ್ತಿದ್ದರು. ಒಂದು ದಿನ ಹಿರಿಯಂಗಳದಲ್ಲಿ ಪಂಜುಗಳ್ಳರು ಬಂದರಂತೆ. ಆಗ ನಮ್ಮ ಮುತ್ತಜ್ಜಿ ಮಹಾಲಕ್ಷ್ಮಮ್ಮ ಇನ್ನೂ ತರುಣಿಯಂತೆ. ಆಗ ಅವರ ಅತ್ತೆ ಮುದುಕಿ ಇದ್ದರಂತೆ. ಗಂಡಸರ್‍ಯಾರೂ ಇರಲಿಲ್ಲವಂತೆ. ಆಗ ಆ ಪಂಜುಗಳ್ಳರು 'ಮಹಾಲಕ್ಷ್ಮಮ್ಮ ಎಲ್ಲಿ?' ಎಂದು ಕೇಳಿಕೊಂಡೇ ಬಂದರಂತೆ. ಆ ಕಾಲದಲ್ಲಿ ಕಿಟಕಿಗೆ ಬದಲಾಗಿ ಒಂದಡಿ ಅಗಲದ

* **ನಿಗಮ ಕೌಮುದಿ** (ವೇ|| ಬ್ರ|| ಶ್ರೀ ನರಸಿಂಹಮೂರ್ತಿಶಾಸ್ತ್ರಿ ಅಭಿನಂದನಾ ಗ್ರಂಥ) ; ಪ್ರಧಾನ ಸಂಪಾದಕರು : ಎಲ್.ವಿ. ಸೀತಾರಾಮ್ ; ಪ್ರ. ಮು : ೨೦೦೩ ; ಪು : 34 + 300 ; ¼ ಕ್ರೌನ್; ಪ್ರ : ಆಸ್ತಿಕ ವಿವರ್ಧಿನಿ ಸಂಘ, ಲಿಂಗದಹಳ್ಳಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ರಂಧ್ರ – ಅದೂ ಅಟ್ಟದ ಮೇಲೆ ಇತ್ತಂತೆ. "ಕಿಟಕಿಯಿಂದ ನನ್ನನ್ನು ದೂಡಿಬಿಡಿ. ನಾನು ಎಲ್ಲಾರೂ ಹೋಗಿ ತಲೆಮರೆಸಿಕೊಳ್ಳುತ್ತೇನೆ" ಎಂದು ಮಹಾಲಕ್ಷ್ಮಮ್ಮ ಅತ್ತೆ ಹತ್ತಿರ ಹೇಳಿದರಂತೆ. ಅವರು ಹಾಗೇ ಮಾಡಿದರಂತೆ. ಪಂಜುಗಳ್ಳರು ಮನೆಯನ್ನೆಲ್ಲಾ ತಡಕಿ ನಿರಾಶರಾಗಿ ಹೋದರಂತೆ. ಇವರು ರಾತ್ರಿಯೆಲ್ಲಾ ಕಾಡಿನಲ್ಲಿ ಅವಿತಿದ್ದು ಬೆಳಗ್ಗೆ ಬಂದರಂತೆ.

ಅನಂತರ ಅವರು ಲಿಂಗದಹಳ್ಳಿಗೇ ಬಂದು ಸೇರಿಕೊಂಡರು. ಇಲ್ಲಿ ನಮ್ಮವರು ಹತ್ತಾರು ಮನೆಯವರಿದ್ದರು. ಇತರೆಯವರೂ ನೂರಾರು ಜನ ಇದ್ದು ಹೆಚ್ಚು ಭಯಕ್ಕೆ ಅವಕಾಶವಿರಲಿಲ್ಲ. ಇಲ್ಲಿ ನಮ್ಮವರೊಬ್ಬರು ಭಾರದ್ವಾಜ ಗೋತ್ರದವರು ಶ್ಯಾನುಭೋಗ ರಾಗಿದ್ದರು. ಅವರಿಗೆ ಇಡೀ ಹೋಬಳಿ ಒಡೆತನವೇ ಇತ್ತೆಂದು ಕಾಣುತ್ತದೆ. ನಮ್ಮವರು ಹೊರಗಡೆ ಇದ್ದವರನ್ನು ಒಬ್ಬೊಬ್ಬರನ್ನಾಗಿ ಬರಮಾಡಿಕೊಳ್ಳುತ್ತಿದ್ದರು.

ತೀರ್ಥಹಳ್ಳಿ ತಾಲ್ಲೂಕು ಬಸವಾನಿಯಲ್ಲಿ ಶಿವಪ್ಪನಾಯಕನ ಕಾಲದಲ್ಲಿ ಇಪ್ಪತ್ತನಾಲ್ಕು ವೃತ್ತಿಗಳನ್ನು ಶ್ರೋತ್ರಿಯರಿಗೆ ಕೊಟ್ಟಿದ್ದರು. ಅವರೆಲ್ಲಾ ನಮ್ಮ ಪೂರ್ವಜರೇ ಆಗಿದ್ದರು. ಅಲ್ಲಿ ಕುಟುಂಬ ಬೆಳೆಯುತ್ತಾ ಬೆಳೆಯುತ್ತಾ ವೃತ್ತಿ ಎಲ್ಲರಿಗೂ ಸಾಲದಾಯಿತು. ಹಾಗಾಗಿ ಶ್ಯಾನುಭೋಗರು ಅವರನ್ನೆಲ್ಲಾ ಇಲ್ಲಿಗೆ ಬರಮಾಡಿ ಅವರಿಗೆ ಜಮೀನು ವಸತಿ ಕಲ್ಪಿಸುತ್ತಿದ್ದರು. ಅಂಥವರಲ್ಲಿ ಮಂಜಭಟ್ಟರೆಂಬುವರೊಬ್ಬರು - ಅವರು ನನ್ನ ಮಾತೃ ಪ್ರಪಿತಾಮಹರು. ಶ್ಯಾನುಭೋಗರು ಅವರನ್ನು ಬರಮಾಡಿ ಅವರಿಗೆ ತಾತ್ಕಾಲಿಕವಾಗಿ ತಮ್ಮ ಪಣತದ ಮನೆಯಲ್ಲಿ ವಾಸಕ್ಕೆ ಏರ್ಪಾಡು ಮಾಡಿದರಂತೆ. ಆದ್ದರಿಂದ ಅವರನ್ನು 'ಪಣತದ ಮನೆ ಅವಧಾನಿಗಳು' ಎಂದೇ ಕರೆಯುತ್ತಿದ್ದರು. ಅವರು ವೇದಾಧ್ಯಯನ ಮಾಡಿದ್ದಲ್ಲದೆ ಪೌರೋಹಿತ್ಯವನ್ನೂ ಮಾಡಿಸುತ್ತಿದ್ದರು. ಅವರ ಮಗ ವೆಂಕಟರಾಮ ಅವಧಾನಿಗಳು ಘನಾಂತ ಅಧ್ಯಯನ ಮಾಡಿದ್ದರು ಮತ್ತು ಊರವರಿಗೆಲ್ಲಾ ವೇದಪಾಠ ಮಾಡುತ್ತಿದ್ದರು. ಅವರ ಶಿಷ್ಯರುಗಳು ಅವರಿಗೆ ಅನೇಕ ವಿಧದಲ್ಲಿ ಕೈಂಕರ್ಯ ಮಾಡುತ್ತಿದ್ದರು. ಎಷ್ಟರ ಮಟ್ಟಿಗೆ ಎಂದರೆ ಅವರೇ ಸ್ವತಃ ಮಣ್ಣು ಕಲಸಿ ಗೋಡೆ ಹಾಕಿ ಒಂದು ಮನೆ ಕಟ್ಟಿಕೊಟ್ಟರು. ಆ ಮನೆ ಈಗಲೂ ಇದೆ. ಅವರ ಪ್ರಪೌತ್ರರೂ , ಅವರ ಮಕ್ಕಳೂ ಅಲ್ಲಿರುವರು.

ತಂದೆತಾಯಿ

ಆಗ ಎಂದರೆ ನನ್ನ ಚಿಕ್ಕಂದಿನಲ್ಲಿ ವೇದಾಧ್ಯಯನ ಮಾಡದೇ ಇದ್ದವರು ಯಾರೂ ಇರಲಿಲ್ಲ. ನಾನು ಹುಟ್ಟಿದ್ದು ಸಾವಿರ ದೊಂಬೈನೂರ ಹನ್ನೆರಡನೇ ಇಸವಿ ಏಪ್ರಿಲ್‌ನಲ್ಲಿ, ಲಿಂಗದಹಳ್ಳಿಯಲ್ಲಿ. ನನ್ನ ತಂದೆ ಶ್ಯಾಮಶಾಸ್ತ್ರಿಗಳು. ತಾಯಿ ಫಣಿಯಮ್ಮನವರು; ಅವರು ವೆಂಕಟರಾಮ ಅವಧಾನಿಗಳ ಮಗ ಶ್ರೀನಿವಾಸಾವಧಾನಿಗಳ ಮಗಳು.

ನಮ್ಮ ತಂದೆ ಪೂರ್ಣಾವೇದಾಧ್ಯಯನ ಮಾಡಿದ್ದರು. ಸಂಗೀತದಲ್ಲೂ ನಿಷ್ಣಾತರು. ಅವರು ಅತ್ಯಂತ ಸತ್ಯನಿಷ್ಠರು. ಎಂಥ ಸಂದರ್ಭ ಬಂದರೂ ಸುಳ್ಳು ಹೇಳಿದವರಲ್ಲ ಮತ್ತು ಪರರ ಸ್ವತ್ತೆಂಬುದನ್ನು ವಿಷವಾಗಿ ಗಣಿಸುತ್ತಿದ್ದರು. ಎಂಥಾ ಸಣ್ಣ ವಸ್ತುವಾಗಲಿ ಮತ್ತೊಬ್ಬರದನ್ನು ಮುಟ್ಟುತ್ತಿರಲಿಲ್ಲ. ಒಬ್ಬರಿಗೆ ಒಂದು ಮಾತು ಕೊಟ್ಟರೆಂದರೆ ಏನೇ ಬಂದರೂ ಅದಕ್ಕೆ ತಪ್ಪುತ್ತಿರಲಿಲ್ಲ.

ನಮ್ಮ ತಾಯಿ ಬಹಳ ಕರುಣಾಮಯಿ. ಯಾರಿಗೆ ಏನೇ ಆಪತ್ತು ಬಂದರೂ ಆತುಕೊಳ್ಳುತ್ತಿದ್ದರು. ಎಷ್ಟೋ ಅನಾಥ ಸ್ತ್ರೀಯರನ್ನು ಕರೆತಂದು ಮನೆಯಲ್ಲಿ ಬಾಣಂತಿತನ ಇತ್ಯಾದಿಗಳನ್ನೂ, ಕಾಹಿಲೆಯಾದವರಿಗೆ ಔಷಧೋಪಚಾರಗಳನ್ನೂ ಮಾಡುತ್ತಿದ್ದರು. ಪರೋಪಕಾರವೇ ಅವರ ಉಸಿರು. ಊರಿನವರಲ್ಲಿ ಕಷ್ಟಕ್ಕೆ ಗುರಿಯಾದವರು ಎಲ್ಲರೂ ಅವರ ಕಷ್ಟಗಳನ್ನು ಅವರಲ್ಲಿ ಹೇಳಿ ಕೊಳ್ಳುತ್ತಿದ್ದರು. ಅವರು ಅವರ ಕಷ್ಟಗಳಿಗೆ ಸರ್ವಾತ್ಮನಾ ನೆರವಾಗುತ್ತಿದ್ದರು. ಅವರು ಈ ಊರಿಗೆ ತಾಯಿ ಎಂದು ಖ್ಯಾತಿ ಪಡೆದಿದ್ದರು.

ನನಗೆ ರಾಜಮ್ಮ (ರಾಜಕ್ಕಯ್ಯ) ಎಂಬ ಅಕ್ಕ, ಮಹಾಲಕ್ಷ್ಮಿ ಎಂಬ ತಂಗಿ, ಶ್ರೀನಿವಾಸ-ಸೀತಾರಾಮ ಎಂಬ ತಮ್ಮಂದಿರು ಇದ್ದರು. ಅಕ್ಕ ೯೩ನೇ ವರ್ಷದಲ್ಲಿ – ಎರಡು ವರ್ಷದ ಹಿಂದೆ – ತೀರಿಕೊಂಡರು. ಈಗ ಅವರ ಮಕ್ಕಳು ಇರುವರು.

ಸುಬ್ರಹ್ಮಣ್ಯ ದೀಕ್ಷಿತರು

ನಮ್ಮ ಪೂರ್ವಜರ ಸ್ಥಿತಿಗತಿಗಳನ್ನು ಮೆಲುಕು ಹಾಕುವುದು ಉಚಿತವೆಂದು ಕಾಣುತ್ತೆ. ಬಸವಾನಿಯಲ್ಲಿ ನೆಲೆಸಿದವರೆಲ್ಲರೂ ಮುಖ್ಯವಾಗಿ ಘನಾಂತ ವೇದವನ್ನು ಕಂಠಸ್ಥ ಮಾಡಿಕೊಂಡವರಾಗಿದ್ದು, ಶಾಸ್ತ್ರಾಧ್ಯಯನವನ್ನೂ ಮಾಡಿದವರಾಗಿದ್ದರು. ಒಟ್ಟು ನಮ್ಮಲ್ಲಿ ವಾಧೂಲಸ-ಕೌಂಡಿನ್ಯ-ಆತ್ರೇಯ- ಭಾರದ್ವಾಜ-ಹರಿತ್ಸ-ಕೌಶಿಕ-ಗರ್ಗ ಈ ಏಳು ಗೋತ್ರದವರು ಮುಖ್ಯವಾಗಿ ಇರುವರು. ಶೃಂಗೇರಿ ಮಠದವರು ಕೆಲವು ವಿದ್ವಾಂಸರನ್ನು ಶೃಂಗೇರಿಗೆ ಕರೆಸಿಕೊಂಡರು. ಅವರ ಪೈಕಿ ವೆಂಕಟರಮಣದೀಕ್ಷಿತರೆಂಬುವರು ಯಜುರ್ವೇದ ಘನಪಾಠಿಗಳು. ಅವರಿಗೆ ಶೃಂಗೇರಿ ಮಠದಲ್ಲಿ ಯಜುರ್ವೇದ ಪಾರಾಯಣದ ಉಪಾಧಿಯಿತ್ತು-ರಾತ್ರಿ ದೀಪಾರಾಧನೆಯ ಅಷ್ಟಾವಧಾನ ಸೇವೆಯಲ್ಲಿ ಯಜುರ್ವೇದವನ್ನು ಹೇಳಬೇಕಾಗಿತ್ತು. ಅವರಿಗೆ ಮನೆ ಮತ್ತಿತರ ಸೌಕರ್ಯಗಳನ್ನು ಕೊಟ್ಟು ಇರಿಸಿಕೊಂಡರು. ಅವರಿಗೆ ಸುಬ್ರಹ್ಮಣ್ಯ, ಯಜ್ಞನಾರಾಯಣ ಎಂಬ ಇಬ್ಬರು ಮಕ್ಕಳು. ಅವರಲ್ಲಿ ಯಜ್ಞನಾರಾಯಣರು ಲಿಂಗದಹಳ್ಳಿಗೆ ಬಂದು ಸೇರಿದರು. ಸುಬ್ರಹ್ಮಣ್ಯ ಮನೆ ಮತ್ತು ತೋಟಗಳನ್ನು ನೋಡಿಕೊಳ್ಳುತ್ತಾ ಮನೆಯಲ್ಲೇ ಇದ್ದರು. ಅವರು ವಿದ್ಯಾಭ್ಯಾಸವನ್ನು ಲೇಶವೂ ಮಾಡಲೇ ಇಲ್ಲ. ಒಂದು ವಾಕ್ಯ

ವೇದವೂ ಬಾರದು. ಘನಪಾಠಿಗಳಾದ ತಂದೆಯೂ ಆ ಬಗ್ಗೆ ಏಕೆ ಗಮನ ಕೊಡಲಿಲ್ಲವೋ ಗೊತ್ತಿಲ್ಲ. ಅವರಿಗೆ ಬಸವಾನಿ ಪುರಾಣಿಕರ ಮಗಳನ್ನು ತಂದುಕೊಂಡು ಮದುವೆ ಮಾಡಿದ್ದರು.

ಕಾಲಾನಂತರ ಅವರ ತಂದೆ ತೀರಿಕೊಂಡರು. ಯಜುರ್ವೇದ ಉಪಾಧಿಯನ್ನು ಬೇರೆ ಯಾರೋ ನಿರ್ವಹಿಸತೊಡಗಿದರು. ಶ್ರೀಗಳವರಿಗೆ ಇವರು ನಿರಕ್ಷರಕುಕ್ಷಿಗಳು ಎಂಬ ಬೇಸರ ಇದ್ದೇ ಇತ್ತು. ಒಂದು ದಿನ ರಾತ್ರಿ ಶ್ರೀಗಳವರಿದ್ದಾಗ ಅಷ್ಟಾವಧಾನ ಸೇವೆ ಶುರುವಾಯಿತು. ಋಗ್ವೇದ ಸೇವೆ ಮುಗಿಯಿತು. ಯಜುರ್ವೇದಕ್ಕೆ ಸುಬ್ರಹ್ಮಣ್ಯದೀಕ್ಷಿತರ ಸರದಿ. ಆದರೆ ಅವರು ಮೂಕರು. ಶ್ರೀಗಳವರು ಅಲ್ಲಿದ್ದ ಸುಬ್ರಹ್ಮಣ್ಯದೀಕ್ಷಿತರ ಪತ್ನಿ ಲಕ್ಷ್ಮಮ್ಮನವರನ್ನು ಕುರಿತು, “ಅಮ್ಮಾ! ನಿಮ್ಮ ಯಜಮಾನರಿಗೆ ಏನೂ ಬರದು. ನೀವಾದರೂ ಹೇಳಿ!” ಎಂದರು. ಲಕ್ಷ್ಮಮ್ಮನವರಿಗೆ ಅವರ ತಂದೆಯವರ ಮನೆಯಲ್ಲಿ ನಿತ್ಯ ನಡೆಸುತ್ತಿದ್ದ ವೇದಪಾಠದ ನಿರಂತರ ಶ್ರವಣದಿಂದ ವೇದದ ಕೆಲವು ಭಾಗ ಕಂಠಸ್ಥವಾಗಿದ್ದದ್ದರಿಂದ ಒಂದು ಹನಸ್ಸನ್ನು ಹೇಳಿಯೇಬಿಟ್ಟರು. ಅದರಿಂದ ದೀಕ್ಷಿತರಿಗೆ ಬಹಳ ಅವಮಾನವಾದಂತಾಗಿ ‘ವೇದಾಧ್ಯಯನ ಮಾಡದೆ ಊರಿಗೆ ಬರುವುದೇ ಇಲ್ಲ’ ಎಂದು ಹಠ ತೊಟ್ಟು ಮತ್ತೂರಿಗೆ ಹೋಗಿ ನಾಲ್ಕೈದು ವರ್ಷಗಳಲ್ಲಿ ಕ್ರಮಾಂತ ವೇದಾಧ್ಯಯನ ಮಾಡಿ ಶೃಂಗೇರಿಗೆ ಹಿಂದಿರುಗಿ ಶ್ರೀಗಳ ದರ್ಶನ ಮಾಡಿದರು. ಈ ಸಂಗತಿ ಶ್ರೀಗಳವರಿಗೆ ತಿಳಿದಿತ್ತು. ಅವರಿಗೆ ಶಾಸ್ತ್ರಗಂಧವಿಲ್ಲದ ಕೇವಲ ವೇದವಿದ್ವಾಂಸರ ಬಗ್ಗೆ ಸ್ವಲ್ಪ ತಾತ್ಸಾರವಿದ್ದದ್ದರಿಂದ, “ನೀನು ಬ್ರಾಹ್ಮಣಾರ್ಥಕ್ಕೆ (ಎಂದರೆ ಭೋಜನ ಮಾಡಲು) ಯೋಗ್ಯನಾದೆ!” ಎಂದು ಹರಸಿದರು. ಇದರಿಂದ ಇವರ ಸ್ವಾಭಿಮಾನಕ್ಕೆ ಪೆಟ್ಟು ಬಿದ್ದಂತಾಗಿ, ‘ಶಾಸ್ತ್ರಾಧ್ಯಯನ ಮಾಡದೆ ಹಿಂದಿರುವುದಿಲ್ಲ’ ಎಂದು ಪಣ ತೊಟ್ಟು ಕಾಶಿಗೆ ಹೋಗಿ ಎಂಟು ವರ್ಷ ನಿರಂತರ ವ್ಯಾಸಂಗ ಮಾಡಿ ಷಟ್ಛಾಸ್ತ್ರಗಳಲ್ಲಿಯೂ ಪರಿಣತರಾಗಿ ಕಾಶಿಯ ವಿದ್ವನ್ಮಹಾ ಸಭೆಯಲ್ಲಿ ಅಗ್ರ ತಾಂಬೂಲ ಪಡೆದರು. ಪುನಃ ಶೃಂಗೇರಿಗೆ ಬಂದರು. ಈಗ ಅವರಿಗೆ ಶ್ರೀಗಳವರಿಗಿಂತ ಹೆಚ್ಚು ಪಾಂಡಿತ್ಯವಿತ್ತು. ಅವರು, ಶ್ರೀಗಳವರು ತಮ್ಮ ಬಗ್ಗೆ ತಳೆದ ತಾತ್ಸಾರದ ಪ್ರತಿಶೋಧದ ನಿಟ್ಟಿನಲ್ಲಿ ಒಂದು ಕಾರ್ಯಕ್ರಮ ಕೈಗೊಳ್ಳುವ ಉದ್ದೇಶದಿಂದ, ನೇರ ಅವರ ದರ್ಶನಕ್ಕೆ ಹೋಗಲಿಲ್ಲ. ಆ ದಿನ ಶ್ರೀಗಳವರ ಅಡ್ಡಪಲ್ಲಕ್ಕಿ ಉತ್ಸವವಿತ್ತು. ಆಗ ದೀಕ್ಷಿತರು ಒಂದು ಸ್ನಾನದ ಪಂಚೆ ಉಟ್ಟು, ವಿಭೂತಿ ಚಂಬು ಹಿಡಿದು ಪಲ್ಲಕ್ಕಿಯೊಳಗೆ ಬಗ್ಗಿ ನೋಡಿ , ‘ಯಾನಾರೂಢಂ ಯತಿಂ ದೃಷ್ಟ್ವಾ ಸಚೇಲಃ ಸ್ನಾನಮಾಚರೇತ್’ ಉಕ್ತಿಯನ್ನು ಹೇಳಿ ನದಿಗೆ ಸ್ನಾನಕ್ಕೆ ಹೋದರು. ಶ್ರೀಗಳವರು ಅವರ ಪಾಂಡಿತ್ಯದ ಬಗ್ಗೆ ಸಂತೋಷಪಟ್ಟು ಸಂಜೆ ಅವರನ್ನು ಆಸ್ಥಾನಕ್ಕೆ ಬರಮಾಡಿಕೊಂಡು ‘ಈಗ ಗುರು ಶಿಷ್ಯ ಭಾವವು ವ್ಯತ್ಯಸ್ತವಾಗಿದೆ’ ಎಂಬುದನ್ನು ವ್ಯಕ್ತಪಡಿಸಲು ‘ಗುರುಃ ಶಿಷ್ಯತ್ವ ಮಾಪನ್ನಃ ಶಿಷ್ಯಶ್ಚ ಗುರುತಾಮಯಾತ್’ ಎಂದರು. ಅದಕ್ಕೆ ದೀಕ್ಷಿತರು ‘ಶಿಷ್ಯಶಿಷ್ಯತ್ವ ಏವಾಸ್ತೇ ಗುರುರ್ಗುರುತರೋsಭವತ್’ ಎಂದರು. ಅವರ ತಾತ್ಪರ್ಯ, ‘ಎಷ್ಟೇ ಪಾಂಡಿತ್ಯ ಹೊಂದಿದರೂ ಶಿಷ್ಯನು ಶಿಷ್ಯತ್ವವನ್ನು ಮೀರಲಾಗಲೇ ಇಲ್ಲ. ಎಂದರೆ, ಗುರುಗಳು ಶಿಷ್ಯನನ್ನು ಮೂದಲಿಸಿದೆ ಇದ್ದಿದ್ದರೆ ಶಿಷ್ಯನಿಗೆ ಪಾಂಡಿತ್ಯವೇ ಬರುತ್ತಿರಲಿಲ್ಲ. ಆದ್ದರಿಂದ ಈಗ ಗುರುಗಳು ಗುರು ಮಾತ್ರ ಆಗದೆ ಶ್ರೇಷ್ಠಗುರು ದರ್ಜೆಯನ್ನೇರಿದರು’ ಎಂದರೆ ಅತಿ ಮೂಢ ಶಿಷ್ಯನನ್ನು ಅತಿ ಮಾತ್ರ ಕೋವಿದನನ್ನಾಗಿ ಮಾಡುವುದು ಸಾಮಾನ್ಯ ಗುರುವಿಂದ ಸಾಧ್ಯವೇ? ಆಗ ತುಂಬಿದ ಸಭೆಯು ಈ ಗುರುಶಿಷ್ಯರ ಮೇಳನದ ರೀತಿ ‘ನ ಭೂತೋ ನ ಭವಿಷ್ಯತಿ’ ಎಂದು ಕೊಂಡಾಡಿತು. ಅನಂತರ ಶ್ರೀಗಳವರು ತಮ್ಮೊಡನೆಯೇ ಇರಬೇಕೆಂದು ಕೇಳಿಕೊಂಡರು. ಆಗ ಅವರು ಇಂದೂರು ಸಂಸ್ಥಾನದ ರಾಜನಿಗೆ ಮಾತು ಕೊಟ್ಟದ್ದರಿಂದ ಅಲ್ಲಿಗೇ ತೆರಳಿದರು. ಅಲ್ಲಿ ಆಸ್ಥಾನ ವಿದ್ವಾಂಸರಾಗಿದ್ದರು.

ಅವರ ಮಗ ಭೈರವದೀಕ್ಷಿತರೆಂಬುವರೂ ಅವರಂತೆ ಸಕಲ ಶಾಸ್ತ್ರಪಾರೀಣರಾಗಿ ಅದೇ ಸಂಸ್ಥಾನದಲ್ಲೇ ಆಸ್ಥಾನ ವಿದ್ವಾಂಸರಾಗಿ ಉಳಿದರು. ದುರ್ದೈವದಿಂದ ಅವರಿಗೆ ಅಕಾಲ ಮರಣವುಂಟಾಗಲು ಅವರು ಪತ್ನಿ ಕಾಮಾಕ್ಷಮ್ಮ ತಮ್ಮ ಇಬ್ಬರು ಸಣ್ಣ ಮಕ್ಕಳೊಡನೆ ತಮ್ಮ ತವರೂರಾದ ಲಿಂಗದಹಳ್ಳಿಯಲ್ಲೇ ನೆಲೆಸಿದರು. ಅವರ ಕಿರಿಯ ಮಗ ವೆಂಕಟರಮಣದೀಕ್ಷಿತರೇ ನನ್ನ ಮಾವನವರು. ಆ ಪಂಡಿತದ್ವಯರನ್ನು ನೋಡುವ ಭಾಗ್ಯ ನಮಗಿಲ್ಲವಾದರೂ ಅವರು ಉಪಯೋಗಿಸಿದ ತರ್ಕವ್ಯಾಕರಣ ಗ್ರಂಥಗಳು ನನ್ನಲ್ಲಿವೆ. ಅದರಿಂದ ಪ್ರತ್ಯಕ್ಷ ಅವರನ್ನೇ ನೋಡಿದಷ್ಟು ಸಂತೋಷವಾಗಿದೆ. ಅದರಲ್ಲಿ ಕೆಲವು ಗ್ರಂಥಗಳು ಅಪರೂಪವಾಗಿದ್ದು ಎಲ್ಲೂ ಅಲಭ್ಯವಾಗಿವೆ.

ನನ್ನ ಬಾಲ್ಯದಲ್ಲಿ ಕೆಲವರು ಶತಾಯುಷಿಗಳಿದ್ದರು. ನಾಗಜ್ಜಿ ಎಂಬುವರಿಗೆ ೧೦೨ ವರ್ಷವಾಗಿತ್ತು. ಅವರಿಗೆ ಯಾವುದೇ ಕಾಹಿಲೆ ಇರಲಿಲ್ಲ; ಆರೋಗ್ಯವಾಗಿಯೇ ಇದ್ದರು. ಅವರ ಹಿರಿ ಮಗನಿಗೆ ೮೫ ವರ್ಷ. ಅವರಿಗೆ ಎಷ್ಟೋ ಮರಿಮಕ್ಕಳಿದ್ದರು. ಅವರ ತಮ್ಮ ರಾಮಮಾವ ಎಂಬುವರಿಗೆ ತೊಂಬತ್ತರ ಮೇಲಾಗಿದ್ದು, ಗ್ರಂಥಗಳನ್ನು ಓದುತ್ತಿದ್ದರು. ಎಲ್ಲರೂ ವೇದ ವಿದ್ವಾಂಸರಾಗಿದ್ದು, ನಿರಂತರ ವೇದಪಾಠ ನಡೆಯುತ್ತಲೇ ಇತ್ತು.

ನಾಗಜ್ಜಿಗೆ ೧೦೨ ವರ್ಷವಾಗಿದ್ದಾಗ ನನಗೆ ನಾಲ್ಕು ವರ್ಷ. ಅವರ ಮಗ ವೆಂಕಟನರಸಿಂಹ. ಅವರನ್ನು ‘ಮೊಮ್ಮಯ್ಯನವರು’ ಎಂದು ಕರೆಯುತ್ತಿದ್ದರು. ಅವರಿಗೆ ಎಂಬತ್ತೈದು ವರ್ಷ. ಅವರ ಮಕ್ಕಳು ಮೊಮ್ಮಕ್ಕಳೂ ಇದ್ದರು. ವೆಂಕಟೇಶದೀಕ್ಷಿತರಿಗೆ ತೊಂಬತ್ತು. ಅವರ ತಮ್ಮ ರಾಮಾದೀಕ್ಷಿತರು. ಅವರ ತಮ್ಮ ಸುಬ್ರಹ್ಮಣ್ಯದೀಕ್ಷಿತರು. ಅವರ ತಮ್ಮ ವೆಂಕಟರಮಣ ದೀಕ್ಷಿತರು. ಅವರೆಲ್ಲಾ ಕೌಂಡಿನ್ಯ ಗೋತ್ರ ದವರು; ದೀರ್ಘಾಯುಷಿಗಳು. ಹರಿತಸಗೋತ್ರದಲ್ಲಿ ವೆಂಕಟೇಶ ಘನಪಾಠಿಗಳು ಘನಾಂತ ಅಧ್ಯಯನ ಮಾಡಿದ್ದರು. ಜ್ಯೋತಿಷ್ಯ ಶಾಸ್ತ್ರ

ಪಂಡಿತರು. ವಾಧೂಲ ಗೋತ್ರದಲ್ಲಿ ಸುಬ್ಬಾವಧಾನಿಗಳು ಕ್ರಮಾಂತ ಅಧ್ಯಯನ ಮತ್ತು ಪೂರ್ವಾಪರ ಪ್ರಯೋಗ ಮಾಡಿದ್ದರು. ಶ್ರೀನಿವಾಸಾವಧಾನಿಗಳು ಕ್ರಮಾಂತ ಅಧ್ಯಯನ ಮಾಡಿ ಪೌರೋಹಿತ್ಯ ಮಾಡುತ್ತಿದ್ದರು. ಅವರಿಗೆ ಆರು ಜನ ಹೆಣ್ಣು ಮಕ್ಕಳು ; ಬಹಳ ಬಡತನ; ಅವರಿಗೆ ಏನೇನೂ ಗತಿಯಿರಲಿಲ್ಲ. ಮುಫತ್ತಾಗಿ ವೇದ ಹೇಳಿಕೊಡುವುದು, ಅದಕ್ಕೆ ಬದಲಾಗಿ 'ಅಂಜಾರ್ತಿ'ದವಸ ಭಿಕ್ಷೆ ಬೇಡುವುದು. ಹೀಗಿದ್ದಾಗ ಅವರು ಹೆಣ್ಣು ಮಕ್ಕಳಿಗೆ ವಿವಾಹ ಹೇಗೆ ಮಾಡಿದರೋ? ನನ್ನ ತಾಯಿ ಎರಡನೆಯವರು. ಅವರಿಗೆ ಏನಿಲ್ಲದಿದ್ದರೂ ದೈವಕೃಪೆಯಿತ್ತು. ಗಂಡಿನವರೇ 'ನಮಗೆ ಕೊಡಿ' 'ನಮಗೆ ಕೊಡಿ' ಎಂದು ಮೇಲಾಡಿ ಮದುವೆ ಮಾಡಿಕೊಂಡರು. ಸುಬ್ಬಾದೀಕ್ಷಿತರೆಂಬುವರು ಕ್ರಮಾಂತ ಅಧ್ಯಯನವಲ್ಲದೆ ಷಟ್‌ಶಾಸ್ತ್ರಗಳಲ್ಲೂ ಪಾರಂಗತರು. ಅವರು ವೇದಶಾಸ್ತ್ರಾಧ್ಯಯನ ಮಾಡಿದ್ದು ಕುತೂಹಲಕರ ಸಂಗತಿಯಾಗಿದೆ. ಅದನ್ನು ಮೇಲೆ ಹೇಳಿದೆ.

ನನ್ನ ವಿದ್ಯಾಭ್ಯಾಸ

ಸುಮಾರು ಇಪ್ಪತ್ತನೇ ಇಸವಿಯಲ್ಲಿ ನಾನು ಎರಡನೆಯ ತರಗತಿಯಲ್ಲಿ ಓದುತ್ತಿದ್ದೆ. ನನಗೆ ಬಾಲ್ಯದಿಂದಲೂ ಓದಿನದೇ ಧ್ಯಾನ, ಆಟಗಳಲ್ಲಿ ಆಸಕ್ತಿ ಕಡಮೆ; ಕಬಡ್ಡಿ, ಕುಸ್ತಿ ಆಡಿದ ನೆನಪು ಅಷ್ಟೆ. ಆಗ ನಮಗೆ ಪೂಮಗಾಮೆಯ ಕೇಶವ, ಎಂ.ಎಂ. ನರಸಿಂಹಾಚಾರ್, ಜಿ.ಎಂ. ನರಸಿಂಹಾಚಾರ್ ಎಂಬುವರು ಶಿಕ್ಷಕರಾಗಿದ್ದರು. ರಾಮಪ್ಪ ಎಂಬುವರು ಮುಖ್ಯೋಪಾಧ್ಯಾಯರಾಗಿದ್ದರು. ಒಂದು ದಿನ ಉಪಾಧ್ಯಾಯರು ಎರಡರಿಂದ ಐದನೆಯ ತರಗತಿಯವರೆಗಿನ ವಿದ್ಯಾರ್ಥಿಗಳನ್ನೆಲ್ಲ ಸೇರಿಸಿ ಕ್ಲಿಷ್ಟವಾದ ಒಂದು ಕನ್ನಡ ಪುಸ್ತಕದ ಪ್ಯಾರಾವನ್ನು ಉಕ್ತಲೇಖನ ಬರೆಸಿದರು. ಅದರಲ್ಲಿ ನನ್ನದು ಅತಿ ಕಡಮೆ ತಪ್ಪು ಇತ್ತು. ಆದ್ದರಿಂದ ನಾಲ್ಕನೆಯ ತರಗತಿಗೆ ಡಬಲ್ ಪ್ರೊಮೋಶನ್ ಕೊಟ್ಟರು. ಇಪ್ಪತ್ತೈದರಲ್ಲಿ ಲಿಂಗದಹಳ್ಳಿಯ ಕನ್ನಡ ಮಾಧ್ಯಮಿಕ ಶಾಲೆಯಲ್ಲಿ ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆ ಆಯಿತು. ಅನಂತರ ೧೯೨೭ರಲ್ಲಿ ಚಿಕ್ಕಮಗಳೂರು ನ್ಯಾಷನಲ್ ಸ್ಕೂಲಿನಲ್ಲಿ ಇಂಗ್ಲಿಷ್ ಲೋಯರ್ ಸೆಕೆಂಡರಿ ಪರೀಕ್ಷೆ ಆಯಿತು. ಅನಂತರ ರಜಾದಲ್ಲಿ ಊರಿಗೆ ಬಂದಾಗ ಬೀರೂರಿನಲ್ಲಿ ನಮ್ಮ ಚಿಕ್ಕಪ್ಪ ರಾಮಕೃಷ್ಣ ಜೋಯಿಸರು ತಮ್ಮ ಮಗ ಚಿದಂಬರ ಮತ್ತು ನನ್ನ ಚಿಕ್ಕತಾಯಿಯ ಮಗ ಕೃಷ್ಣಮೂರ್ತಿಗೆ ರಘುವಂಶ ಕಾವ್ಯ ಪಾಠ ಮಾಡುತ್ತಿದ್ದರು. ನಾನೂ ಅದರಲ್ಲಿ ಸೇರಿಕೊಂಡೆ.

ಅನಂತರ ನನಗೆ ಸಂಸ್ಕೃತಾಧ್ಯಯನದಲ್ಲೇ ಮನಸ್ಸು ಉಂಟಾಯಿತು. ಆಗ ನಾವು ಮೂವರೂ ಶೃಂಗೇರಿ ಪಾಠಶಾಲೆಗೆ ಸೇರಿದೆವು. ಅಲ್ಲಿ ಎರಡನೇ ತರಗತಿಗೆ ನಮ್ಮನ್ನು ಸೇರಿಸಿಕೊಂಡರು. ಅಲ್ಲಿ ಬೆಳಗ್ಗೆ ೭ರಿಂದ ೧೧ರವರೆಗೆ ವೇದ ಪಾಠ ನಡೆಯುತ್ತಿತ್ತು. ಮಧ್ಯಾಹ್ನ ೨ ರಿಂದ ೫ ರವರೆಗೆ ಸಂಸ್ಕೃತ ನಡೆಯುತ್ತಿತ್ತು. ಅದು ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ ಕಾಲ. ಅವರ ವ್ಯಕ್ತಿತ್ವವನ್ನು ಸ್ಮರಣೆ ಮಾಡುವುದು ಇಲ್ಲಿ ಉಚಿತವಾಗಿದೆ. ಅವರಿಗೆ ಸಕಲ ಶಾಸ್ತ್ರಗಳಲ್ಲಿಯೂ ನಿಷ್ಕೃಷ್ಟ ಪಾಂಡಿತ್ಯವಿತ್ತು. ಅವರಿಗೆ ಉಪಾಧ್ಯಾಯರು ದಕ್ಷಿಣ ಭಾರತದಲ್ಲೇ ಮಹಾಖ್ಯಾತಿವೆತ್ತ ವಿರೂಪಾಕ್ಷಶಾಸ್ತ್ರಿಗಳವರು. ಶ್ರೀಗಳವರದು ಅತ್ಯುದಾತ್ತ ಭಾವನೆಗೆ ತಕ್ಕ ಭವ್ಯ ಆಕೃತಿ. ಅವರು ಕನ್ನಡ-ತೆಲುಗು-ತಮಿಳು-ಸಂಸ್ಕೃತ ಈ ಭಾಷೆಗಳಲ್ಲಿ ನಿರರ್ಗಳ ಭಾಷಣ ಮಾಡುತ್ತಿದ್ದರು. ಅವರ ಅನೇಕ ಭಾಷಣಗಳನ್ನು ಕೇಳಿದ್ದೇನೆ. ಅವರ ಭಾಷಣವು ಕಿಂಚಿತ್ತಾದರೂ ಉದ್ರೇಕವಿಲ್ಲದ ಗಂಭೀರ ವಾಣಿ. ಭಾದ್ರಪದ ಮಾಸದಲ್ಲಿ ಇಪ್ಪತ್ತೊಂದು ದಿನ ನಡೆಯುವ ಗಣಪತಿ ವಿದ್ವನ್ಮಹಾಸಭೆಯಲ್ಲಿ ಕೊನೆಯಲ್ಲಿ ಅವರ ಭಾಷಣವಿರುತ್ತಿತ್ತು. ಸಂಸ್ಕೃತದಲ್ಲಿ ಅದನ್ನು ಕೇಳಲೆಂದೇ ದೂರ ದೂರದಿಂದ ಮಹಾ ಮಹಾ ಪಂಡಿತರು ಬರುತ್ತಿದ್ದರು. ಅವರ ವಾಗ್ವೈಖರಿಯನ್ನು ಕಂಡು ಸ್ತಂಭೀಭೂತರಾಗುತ್ತಿದ್ದರು. ಅವರ ವಾಚನಶೈಲಿಯ ಅನೇಕ ಭಾಗಗಳನ್ನು ನಾನೂ ಅಳವಡಿಸಿಕೊಂಡಿದ್ದೆ.

ಶೃಂಗೇರಿಯಲ್ಲಿ ನಮಗೆ ತುಂಬಾ ಕಠಿಣವಾದ ಅಭ್ಯಾಸ ಇತ್ತು. ಬೆಳಗ್ಗೆ ವೇದ, ಮಧ್ಯಾಹ್ನ ಸಂಸ್ಕೃತ. ಚಂದ್ರಶೇಖರ ಭಾರತೀ ಸ್ವಾಮಿಗಳು ಯಾವ ಕ್ಷಣದಲ್ಲಾದರೂ ಬಂದು ಪರೀಕ್ಷೆ ಮಾಡುತ್ತಿದ್ದರು. ಹಾಗಾಗಿ ವೇದ, ಸಾಹಿತ್ಯ, ಶ್ಲೋಕಗಳು ಎಲ್ಲವೂ ಬಾಯಿತುದಿಯಲ್ಲೇ ಇರಬೇಕಿತ್ತು. ಆದ್ದರಿಂದಲೇ ಇಂದಿಗೂ ನೆನಪಿನಲ್ಲಿ ಉಳಿದಿದೆ.

ಆ ಸಮಯದಲ್ಲಿ ನಾವು ಸಂಸ್ಕೃತ ಶ್ಲೋಕದಲ್ಲಿ ಅಂತ್ಯಾಕ್ಷರಿ ಆಡುತ್ತಿದ್ದೆವು. ಗುಂಪು ಮಾಡಿಕೊಂಡು ಸ್ಪರ್ಧೆ ಏರ್ಪಡಿಸುತ್ತಿದ್ದೆವು. ಬಹಳ ಚೆನ್ನಾಗಿರುತ್ತಿತ್ತು. ಆರಂಭದಲ್ಲಿ ನಮಗೆ ಗೊತ್ತಿರುವ ಶ್ಲೋಕಗಳನ್ನು ಹೇಳುತ್ತಿದ್ದೆವು. ಅನಂತರ ಆಶುಕವಿಕತೆಯಂತೆ ಅಲ್ಲಲ್ಲೇ ಶ್ಲೋಕಗಳನ್ನು ರಚಿಸುತ್ತಿದ್ದೆವು. ಆ ಸ್ಪರ್ಧೆಗಳಲ್ಲಿ ನಮ್ಮ ಸಂಸ್ಕೃತ ಕಲಿಕೆಯನ್ನು ಒರೆ ಹಚ್ಚಿ ನೋಡುತ್ತಿದ್ದೆವು. ಆ ಸ್ಪರ್ಧೆಯಲ್ಲಿ ನಾನು ರಚಿಸಿದ ಶ್ಲೋಕಗಳಲ್ಲಿ ಒಂದೆರಡು ಹೇಳುವೆ.

೧) **ಶಾರದಾಪಾದಪದ್ಮಸ್ಯ ರಜಃಪಟಲಿಕಾ ಶುಭಾ!**
ಶೋಷಯತ್ವಧಿ ಮಾತ್ರೇಣ ಮಮಾಜ್ಞಾನ ಮಹಾಹ್ರದಮ್!

(ಶಾರದಾದೇವಿಯ ಪಾದಪದ್ಮದ ರಜಸ್ಸು, ನನ್ನ ಅಜ್ಞಾನವೆಂಬ ಮಹಾಹೊಂಡವನ್ನು ಮುಚ್ಚಲಿ)

೨) **ಮಾ ತಸ್ತ್ವದೀಯ ತವನಹಿ ಮುಕುಟೇ ತನುಚಂದ್ರ ಏಷಃ**
ಶೋಭಾಕೃತೇ ಸ್ಥಿತಿಮೇತಿ ಕಿಂ ತು
ಕಾಂತೀಪ್ಸುರೇವ ವಸತಿ ಸ್ವವಿವೃದ್ಧಿಕಾಮಃ
ಸ್ವಾರ್ಥೇರಿತಸ್ಸ ಖಲು ಕಾಂತಿನೇರ್ಮುಖಾತ್ತೇ||

(ಶಿವನ ಶಿರಸ್ಸಿಗೆ ಅಲಂಕಾರಪ್ರಾಯವಾಗಿ ಚಂದ್ರ ಇರುವುದಿಲ್ಲವೇ ಅದೇ ರೀತಿ-

ದೇವಿ, ನಿನ್ನ ತಲೆಯಲ್ಲಿರುವ ಕ್ಷೀಣಚಂದ್ರನು
ನಿನ್ನ ಮುಖಕ್ಕೆ ಶೋಭೆ ತರಲೆಂದು ಕುಳಿತಿಲ್ಲ.
ತಾನು ಸಣ್ಣಗಿದ್ದು, ದೊಡ್ಡದಾಗಲು ನಿನ್ನ ಮುಖದ ಕಾಂತಿ
ಹೀರಲೆಂದು ಸ್ವಾರ್ಥಬುದ್ಧಿಯಿಂದ ಕುಳಿತಿದ್ದಾನೆ.)

ಈ ರೀತಿಯ ಶ್ಲೋಕಗಳನ್ನು ಕೇವಲ ಒಂದು ಅಥವಾ ಎರಡು ನಿಮಿಷದಲ್ಲಿ ಕಟ್ಟಿ ಹೇಳುತ್ತಿದ್ದೆವು.

ಅನೇಕ ಕವಿಗಳು ತುಂಬಾ ಸ್ವಾರಸ್ಯಕರವಾದ ಸಂಸ್ಕೃತ ಶ್ಲೋಕ ರಚಿಸಿದ್ದಾರೆ. ಸಮಯಪ್ರಜ್ಞೆ ಸೂಚಿಸುವ ಶ್ಲೋಕಗಳಂತೂ ತುಂಬಾ ಚೆನ್ನಾಗಿರುತ್ತೆ. ಒಂದೆರಡು ಶ್ಲೋಕಗಳು ನೆನಪಿಗೆ ಬರುತ್ತವೆ.

ಹಿಂದೆ ಬಡಕವಿಯೊಬ್ಬನಿದ್ದ. ಅವನು ರಾಜನ ತೋಟದಲ್ಲಿ ಕಳ್ಳತನ ಮಾಡಿ, ಸಿಕ್ಕಿಹಾಕಿಕೊಂಡ. ಪದ್ಧತಿಯಂತೆ ಕಳ್ಳತನಕ್ಕಾಗಿ ಅವನಿಗೆ ಗಲ್ಲು ಶಿಕ್ಷೆಯಾಯ್ತು. ಎಲ್ಲರಿಗೂ ಕೇಳುವಂತೆ , 'ನಿನ್ನ ಕಡೇ ಆಸೆ ಏನು?' ಎಂದು ಕೇಳಿದಾಗ ಆ ಕವಿ ಸಮಯಸ್ಫೂರ್ತಿಯಿಂದ ಹೇಳಿದ.

"ಭಟ್ಟಿರ್ನಷ್ಟೋ ಭಾರವಿಃಕೋऽಪಿ ನಷ್ಟೋ (ಭ, ಭಾ)
ಭಿಕ್ಷುರ್ನಷ್ಟೋ ಭೀಮಸೇನೋऽಪಿ ನಷ್ಟಃ (ಭಿ, ಭೀ)
ಭುಕ್ಕುಂಡೋऽಹಂ ಭೂಪತಿಸ್ತ್ವಂ ಚ ರಾಜನ್ (ಭು, ಭೂ)
ಭಭ್ಬಾವಳ್ಯಾಮ್ ಅಂತಕಃ ಸನ್ನಿವಿಷ್ಟಃ ||

"ಭಟ್ಟಿ ಎಂಬ ಕವಿ ಇದ್ದ. ಅವನು ಸತ್ತು ಹೋದ. ಭಾರವಿ ಎಂಬ ಕವಿಯೂ ಸತ್ತುಹೋದ. ಭಿಕ್ಷು ಎಂಬ ಕವಿ, ಅವನೂ ಸತ್ತು ಹೋದ. ಭೀಮಸೇನ ಎಂಬ ಪಂಡಿತನೂ ಸತ್ತ. ಭುಕ್ಕುಂಡ ಎಂಬ ಹೆಸರಿನ ನಾನು, ಈಗ ಸಾಯುತ್ತೇನೆ. ಇನ್ನು ಮುಂದಿನ ಸರದಿ (ಭ-ಭಾ-ಭಿ-ಭೀ-ಭು) ಭೂಪತಿ ಅಂದರೆ ನೀನು. ಭಭ್ಬಾವಳಿಗೇ ಯಮ ಮರಣ ವಿಧಿಸುತ್ತಿರುವುದರಿಂದ ನೀನು ಜಾಗ್ರತೆಯಿಂದಿರು" ಎಂದ. ಇದನ್ನು ಕೇಳಿ ರಾಜ ಅವನ ಸಮಯಸ್ಫೂರ್ತಿಗೆ ತಲೆ ಬಾಗಿ ಅವನ ಬಡತನವನ್ನು ದೂರಮಾಡಿ ಚೆನ್ನಾಗಿ ನೋಡಿಕೊಂಡ.

ಹೀಗೆ ಅನೇಕ ಕವಿಗಳು ಸಂಸ್ಕೃತದಲ್ಲಿ ತುಂಬಾ ಸ್ವಾರಸ್ಯಕರವಾದ ಶ್ಲೋಕಗಳನ್ನು ರಚಿಸಿದ್ದಾರೆ.

ಒಮ್ಮೆ ಸುದಾಮ ಕೃಷ್ಣನ ಮನೆಗೆ ಹೋದ. ಕೃಷ್ಣನ ಮನೆ ತುಂಬಾ ಸೊಗಸಾಗಿತ್ತು. ಭಾರೀ ಸಂಪತ್ತಿನಿಂದ ಕೂಡಿದ ಅದ್ದೂರಿ ಮನೆ. ಕೃಷ್ಣ ಸುದಾಮನನ್ನು ಕೇಳಿದ-'ನಿಮ್ಮ ಮನೆ ಹೇಗಿದೆ?' ಅದಕ್ಕೆ ಸುದಾಮ 'ನಮ್ಮ ಮನೆಯೂ ಹೀಗೇ ಇದೆ' ಎಂದು ಹೀಗೆ ಹೇಳಿದ.

ಪೃಥುಕಾರ್ತಸ್ವರಪಾತ್ರಂ ಭೂಷಿತ ನಿಶ್ಶೇಷಪರಿಜನಂ ದೇವ |
ವಿಲಸತ್ಕರೇಣುಗಹನಂ ಸಂಪ್ರತಿ ಸಮಮಾವಯೋಃ ಸದನಮ್ ||

ಶ್ರೀಕೃಷ್ಣನ ಮನೆಯಲ್ಲಿ ದೊಡ್ಡದೊಡ್ಡ ಚಿನ್ನದ ಪಾತ್ರೆಗಳಿವೆ.
(ಪೃಥು=ದೊಡ್ಡ, ಕಾರ್ತಸ್ವರ=ಚಿನ್ನ, ಪಾತ್ರಂ=ಪಾತ್ರೆ)

ಕೆಲಸ ಮಾಡುವ ಆಳುಕಾಳುಗಳೂ ವಸ್ತ್ರಾಲಂಕಾರಗಳಿಂದ ಭೂಷಿತರಾಗಿದ್ದಾರೆ. ಶೋಭಾಯಮಾನವಾದ ಆನೆಗಳನ್ನು ಸಾಲು ಸಾಲಾಗಿ ಕಟ್ಟಿದ್ದಾರೆ.

(ವಿಲಸತ್=ಶೋಭಾಯಮಾನವಾದ, ಕರೇಣು=ಹೆಣ್ಣುಆನೆ)

ಹೀಗೆ ಶೋಭಾಯಮಾನವಾಗಿದೆ ನಿಮ್ಮ ಮನೆ. ನನ್ನ ಮನೆಯೂ ಹೀಗೇ ಇದೆ. ಹಸಿವಿನಿಂದ ಅಳುವ ಮಕ್ಕಳಿದ್ದಾರೆ.

(ಪೃಥುಕ=ಮಕ್ಕಳು, ಆರ್ತಸ್ವರ=ಜೋರಾಗಿ ಅಳುವುದು)

ನಮ್ಮಲ್ಲಿ ನೆಲದ ಮೇಲೆ ಕೂರುವ ಪರಿಸ್ಥಿತಿ (ಭೂ+ಉಷಿತ)

ನಮ್ಮಲ್ಲಿ ಹೆಗ್ಗಣ ಕೊರೆದ ಬಿಲಗಳನ್ನು ದಾಟಿ ಹೋಗಬೇಕು

(ವಿಲ=ಬಿಲ, ಸತ್ಕ, ರೇಣು, ಗಹನಂ=ಧೂಳಿನಿಂದ ಕೂಡಿ ಕಾಡಿನಂತಿದೆ)

ಹೀಗೆ ಇಬ್ಬರ ಮನೆಗಳೂ ಸಮಾನವಾಗಿವೆ.

* * *

ಆಗಿದ್ದ ಉಪಾಧ್ಯಾಯರುಗಳ ಸಂಕ್ಷಿಪ್ತ ಪರಿಚಯ : ಕಳ್ಳೆ ಸುಂದರ ಶಾಸ್ತ್ರಿಗಳೆಂಬುವರು ಪಾಠಶಾಲೆಯ ಮುಖ್ಯೋಪಾಧ್ಯಾಯರು. ಅವರು ಅಲಂಕಾರ-ವೇದಾಂತ ಶಾಸ್ತ್ರಗಳಲ್ಲಿ ಪರಿಣತರು. ವಿಶೇಷವಾಗಿ ಸಾಹಿತ್ಯ ಬೋಧನೆಯಲ್ಲಿ ಅಪ್ರತಿಮರು. ಅವರ ಮಾತಿನ ಮೋಡಿಗೆ ಮುಗ್ಧರಾಗದವರೇ ಇಲ್ಲ. ಅವರು ಶಾಕುಂತಳ ನಾಟಕವನ್ನು ಬೋಧಿಸಲು ಉಪಕ್ರಮಿಸಿದರೆಂದರೆ ಇತರ ಉಪಾಧ್ಯಾಯರೆಲ್ಲಾ ತಾತ್ಕಾಲಿಕವಾಗಿ ತಮ್ಮ ತರಗತಿಗಳನ್ನು ವಿರಾಮಗೊಳಿಸಿ ಇಲ್ಲಿ ಬಂದು ನೆರೆಯುತ್ತಿದ್ದರು. ನಾಟಕಾಂತ ಸಾಹಿತ್ಯವು ನನಗೆ ಇವರಲ್ಲೇ ಆಯಿತು. ಮಲ್ಲಿಕೆರೆ ಸುಬ್ರಹ್ಮಣ್ಯಶಾಸ್ತ್ರಿಗಳೆಂಬುವರು ತರ್ಕದಲ್ಲಿ ಅಪ್ರತಿಮ ಬೋಧಕರು. ನಾನು ತರ್ಕವನ್ನೂ ಓದಿದ್ದು ಇವರಲ್ಲೇ. ರಾಮಚಂದ್ರ ಶಾಸ್ತ್ರಿಗಳಲ್ಲಿ ಮೀಮಾಂಸ, ವೇದಾಂತ, ಅಲಂಕಾರಶಾಸ್ತ್ರಗಳನ್ನು ಕಲಿತೆ. ಸುಂದರಶಾಸ್ತ್ರಿಗಳಲ್ಲಿ ಅಲಂಕಾರದ ಒಂದೆರಡು ಗ್ರಂಥ ಆಗಿತ್ತಷ್ಟೇ. ಅಷ್ಟರಲ್ಲಿ ಶಾಸ್ತ್ರಿಗಳೇ ತೀರಿಕೊಂಡದ್ದರಿಂದ ಮುಂದಿನ ಗ್ರಂಥಗಳೆಲ್ಲಾ ರಾಮಚಂದ್ರಶಾಸ್ತ್ರಿಗಳಲ್ಲೇ ಆಯಿತು. ಕೊನೆತನಕ ಅವರಲ್ಲೇ ಶಿಷ್ಯನಾಗಿದ್ದೆ. ನನ್ನ ಮೇಲೆ ಅವರ ಪ್ರೀತಿಯು ಮಗನ ಮೇಲಿಗಿಂತಲೂ ಮಿಗಿಲಾಗಿತ್ತು. ಯಜುರ್ವೇದಕ್ಕೆ ಕೊಡತಲ ಸುಬ್ಬಾಭಟ್ಟರು, ಕೃಷ್ಣಘನ ಪಾಠಿಗಳು-ಅವರಲ್ಲಿ ಕ್ರಮಾಂತ ಅಧ್ಯಯನವಾಯಿತು. ಇನ್ನು ಕೆಳಗಿನ ಕಾವ್ಯಪಾಠಗಳಿಗೆ ಕೊಡೂರು ಶ್ಯಾಮಭಟ್ಟರು, ಭಂಡಿಗಡಿ ವೆಂಕಟ ರಾಮಭಟ್ಟರು ಉಪಾಧ್ಯಾಯರಾಗಿದ್ದರು.

* * *

ನನಗೆ ಎಷ್ಟೇ ಕ್ಲಿಷ್ಟವಾದ ಪಾಠವೂ ಸುಲಭವಾಗಿ ಅರ್ಥ ವಾಗುತ್ತಿತ್ತು. ಆದ್ದರಿಂದ ಎಲ್ಲ ವಿದ್ಯಾರ್ಥಿಗಳಿಗೂ ನಾನೇ ಚಿಂತನೆ (ಮರುಪಾಠ) ಮಾಡಿಸುತ್ತಿದ್ದೆ. ಏನೇ ಸಂದೇಹ ಬಂದರೂ ನನ್ನನ್ನೇ

ಕೇಳುತ್ತಿದ್ದರು. ಉಪಾಧ್ಯಾಯರ ಹತ್ತಿರ ಹೋಗುತ್ತಿರಲಿಲ್ಲ. ಎಲ್ಲ ವಿದ್ಯಾರ್ಥಿಗಳೂ ನನ್ನನ್ನು ಒಬ್ಬ ಉಪಾಧ್ಯಾಯನೆಂದೇ ಭಾವಿಸುತ್ತಿದ್ದರು. ಸಹಪಾಠಿಯೆಂದು ಭಾವಿಸಿರಲಿಲ್ಲ, ಮತ್ತು ಅದೇ ಗೌರವ ಕೊಡುತ್ತಿದ್ದರು.

ಚಂಪೂ ತರಗತಿ - ಎಂದರೆ ನಾಲ್ಕನೆ ತರಗತಿಯಲ್ಲಿದ್ದಾಗ ಶ್ರೀ ಚಂದ್ರಶೇಖರಭಾರತೀಗಳವರ ವರ್ಧಂತ್ಯುತ್ಸವ ಬಂತು. ಆಗ ವಿದ್ಯಾರ್ಥಿಗಳೆಲ್ಲಾ ಸಭೆ ಸೇರಿ ಶ್ರೀಗಳವರ ಗುಣಕೀರ್ತನೆ ಮಾಡಿದೆವು. ನಾನು ಅವರ ಮೇಲೆ ಇಪ್ಪತ್ತೈದು ಶ್ಲೋಕಗಳನ್ನು ಶಾರ್ದೂಲ ವಿಕ್ರೀಡಿತ ವೃತ್ತದಲ್ಲಿ ಮಾಡಿದ್ದೆ. ಅದನ್ನು ಸಭೆಯಲ್ಲಿ ಓದಿ ಶ್ರೀಗಳವರಿಗೆ ಸಮರ್ಪಿಸಿದೆ. ಅವರು ಅದನ್ನು ನೋಡಿ ಬಹಳ ಸಂತೋಷಪಟ್ಟರು ಮತ್ತು ಅಂದಿನಿಂದ ನನ್ನ ಮೇಲೆ ವಿಶೇಷ ವಿಶ್ವಾಸವನ್ನಿಟ್ಟಿದ್ದರು. ನನ್ನ ವಿದ್ಯಾಭ್ಯಾಸದ ಬಗ್ಗೆ ಹೆಚ್ಚು ನಿಗಾವಹಿಸಲು ಉಪಾಧ್ಯಾಯರಿಗೆ ಸೂಚಿಸಿದ್ದರು. ಅದರ ನಕಲೊಂದನ್ನು ನಾನು ಇಟ್ಟುಕೊಳ್ಳಲೇ ಇಲ್ಲ. ಹಾಗಾಗಿ ಈಗ ಅದು ಅಲಭ್ಯವಾಗಿದೆ.

ಐದನೇ ತರಗತಿಯಲ್ಲಿ ಎಂದರೆ ನೈಷಧ ಕಾವ್ಯದ ತರಗತಿ: ನೈಷಧ ಅತಿ ಕಠಿಣವಾದ ಕಾವ್ಯ. ಆದರೆ ಅಷ್ಟೇ ರಸವತ್ತಾದ್ದು. ಆದ್ದರಿಂದಲೇ 'ನೈಷಧಂ ವಿದ್ವದೌಷಧಮ್' ಎಂಬ ಬಿರುದು ಅದಕ್ಕೆ ಬಂದಿರುತ್ತೆ. ಅದರ ತಾತ್ಪರ್ಯವನ್ನು ಗ್ರಹಿಸುವುದು ಕಷ್ಟ. ಗ್ರಹಿಸಿದರೆ ಅದರ ಕಾವ್ಯಾನಂದ ಹೇಳತೀರದು. ಉದಾಹರಣೆಗೆ ಒಂದು ಶ್ಲೋಕವನ್ನು ಕೊಟ್ಟಿದ್ದೇನೆ.

ಕಲಶೇ ನಿಜಹೇತುದಂಡಜಃ ಕಿಮು ಚಕ್ರಭ್ರಮಕಾರಿತಾ ಗುಣಃ|
ಸತದುಚ್ಚಕುಚೌ ಭವನ್ಪ್ರಭಾಝುರಚಕ್ರಭ್ರಮಮಾತನೋತಿ ಯತ್||

ತರ್ಕಶಾಸ್ತ್ರ ಪ್ರಕ್ರಿಯೆ ಈ ರೀತಿ ಇದೆ : ಎಲ್ಲ ವಸ್ತುಗಳಿಗೂ ಮುಖ್ಯವಾಗಿ ಎರಡು ಕಾರಣಗಳಿರುತ್ತವೆ-ಸಮವಾಯಿ ಕಾರಣ ಮತ್ತು ನಿಮಿತ್ತ ಕಾರಣ. ಘಟ-ಪಟ-ವಡವೆ ಇತ್ಯಾದಿಗಳಿಗೆ ಮೃತ್ತು-ತಂತು-ಸುವರ್ಣ ಇತ್ಯಾದಿಗಳು ಸಮವಾಯಿ ಕಾರಣಗಳು. ಕುಂಬಾರ-ದಂಡ-ಚಕ್ರ ಇತ್ಯಾದಿಗಳು ನಿಮಿತ್ತ ಕಾರಣಗಳು. ಅದರಲ್ಲಿ ಸಮವಾಯಿ ಕಾರಣದ ಗುಣವು ಕಾರ್ಯದಲ್ಲಿ ಬರುತ್ತೆ. ಮಣ್ಣು ಕಪ್ಪಾಗಿದ್ದರೆ ಘಟ ಕಪ್ಪು, ಕೆಂಪಾಗಿದ್ದರೆ ಕೆಂಪು ಇತ್ಯಾದಿ. ಆದರೆ ನಿಮಿತ್ತ ಕಾರಣದ ಗುಣ ಕಾರ್ಯದಲ್ಲಿ ಬರುವುದಿಲ್ಲ. ಇದು ಸಿದ್ಧಾಂತ. ಹೀಗಿರುವಾಗ ನಿಮಿತ್ತ ಕಾರಣದ ಗುಣ ಕಾರ್ಯದಲ್ಲಿ ಬಂದಿದೆ. ಇದು ಆಶ್ಚರ್ಯ ಎಂದು ಕವಿ ಉತ್ಪ್ರೇಕ್ಷಿಸುತ್ತಾನೆ. ನೋಡಿ. ದಂಡದಲ್ಲಿ ಚಕ್ರಭ್ರಮಕಾರಿತಾ ಎಂಬ ಗುಣವಿದೆ. ದಂಡವು ಚಕ್ರವನ್ನು ತಿರುಗಿಸುವುದು. ಇದೇ ಚಕ್ರಭ್ರಮಕಾರಿತಾ. ಅದು ಘಟದಲ್ಲಿ ಬಂದಿದೆ. ದಮಯಂತಿಯ ಸ್ತನವೇ ಘಟ. ಅದರಲ್ಲಿ ಈ ಗುಣ ಬಂದಿದೆ. ಹೇಗೆಂದರೆ ಚಕ್ರವೆಂದರೆ ಗಾಲಿ ಮತ್ತು ಚಕ್ರವಾಕ ಪಕ್ಷಿ ಎಂದು ಅರ್ಥ. ಭ್ರಮ ಎಂದರೆ ಭ್ರಾಂತಿ ಮತ್ತು ತಿರುಗುವಿಕೆ ಎಂದು ಎರಡು ಅರ್ಥ. ಈ ಎರಡು ಅರ್ಥಗಳೂ ಶ್ಲೇಷದಿಂದ ಒಂದಾಗಿವೆ. ಆದ್ದರಿಂದ ದಮಯಂತಿಯ ಸ್ತನವೆಂಬ ಘಟವು ಚಕ್ರಭ್ರಮಕಾರಿಯಾಗಿದೆ ಎಂದರೆ ಚಕ್ರವಾಕಪಕ್ಷಿಯ ಭ್ರಾಂತಿಯನ್ನುಂಟು ಮಾಡುತ್ತಿದೆ. ನೋಡಿ - ಕಾವ್ಯೋಕ್ತಿಯ ಮೋಡಿ. ಇನ್ನೊಂದೆಡೆ ದಮಯಂತೀ ಸ್ವಯಂವರದಲ್ಲಿ ಅವಳ ಸಖಿಯು ಅಲ್ಲಿ ನೆರೆದ ರಾಜರನ್ನು ವರ್ಣಿಸುತ್ತಾ ಹೋಗುತ್ತಾಳೆ. ಆಗ ಒಬ್ಬನನ್ನು ಕುರಿತು ಈ ರಾಜನು ತನ್ನ ಮುಖಕಾಂತಿಯಿಂದ ಚಂದ್ರನನ್ನು ತೃಣೀಕರಿಸಿರುವನು ಎಂದು ಹೇಳುತ್ತಾಳೆ. ಅದಕ್ಕೆ ಪುರಾವೆಯನ್ನು ಕೊಡುತ್ತಾಳೆ. ಇಲ್ಲಿ ತೃಣೀಕೃತ ಎಂದರೆ ಕೀಳಾಗಿ ಮಾಡಲ್ಪಟ್ಟವನು. ಹುಲ್ಲುಳ್ಳದ್ದಾಗಿ ಮಾಡಲ್ಪಟ್ಟವನು ಎಂದೂ ಅರ್ಥ. ಈ ಎರಡರ್ಥಗಳೂ ಶ್ಲೇಷದಿಂದ ಒಂದಾಗುತ್ತವೆ ನೋಡಿ. ಚಂದ್ರನು ಹುಲ್ಲುಳ್ಳದ್ದಾಗಿ ಮಾಡಲ್ಪಟ್ಟಿರುವನು. ಅಲ್ಲಿ ಜಿಂಕೆ ಇದೆ ನೋಡಿ. ಹುಲ್ಲು ನೀರು ಇರುವ ಕಡೆ ಮಾತ್ರ ಜಿಂಕೆ ಇರಬಲ್ಲದು. ಈ ರೀತಿಯಾಗಿ ನೈಷಧ ಕಾವ್ಯವು ಅಡಿಯಿಂದ ಮುಡಿಯವರೆಗೆ ಮನಸೂರೆಗೊಳ್ಳುವ ವೈಚಿತ್ರ್ಯಗಳಿಂದ ಕೂಡಿದೆ. ಈ ನೈಷಧದ ಪರೀಕ್ಷೆಗಾಗಿ ಶ್ರೀಗಳವರೇ ಬಂದು ಕೂತಿದ್ದರು. ನನಗೆ ಮೊದಲ ರ್‍ಯಾಂಕು ಬಂದಿತು. ಅದಕ್ಕಾಗಿ ಇಪ್ಪತ್ತೆರಡು ಸರ್ಗಗಳುಳ್ಳ ನೈಷಧ ಕಾವ್ಯವನ್ನು ನನಗೆ ಬಹುಮಾನವಾಗಿ ನೀಡಿದರು.

* * *

೧೯೩೩ರ ಹೊತ್ತಿಗೆ ನಾಟಕಾಂತ ಸಾಹಿತ್ಯ ಮತ್ತು ಯಜುರ್ವೇದ ಪೂರ್ತಿ ಆಯಿತು. ನಾಟಕಾಂತ ಸಾಹಿತ್ಯವಾದ ಅನಂತರ ವ್ಯಾಕರಣವನ್ನೂ ಓದಬೇಕೆಂದು ಹಂಬಲ ಉಂಟಾಯಿತು. ಆಗ ಅಲ್ಲಿ ಸೀತಾರಾಮಾಚಾರ್ಯರೆಂಬ ವ್ಯಾಕರಣ ಪಂಡಿತರೊಬ್ಬರು ಮಾಧ್ಯಮಿಕ ಶಾಲಾ ಉಪಾಧ್ಯಾಯರಾಗಿ ಬಂದಿದ್ದರು. ಅವರನ್ನೇ ಈ ಪಾಠಶಾಲೆಗೂ ನೇಮಕ ಮಾಡಿಕೊಂಡಿದ್ದರು. ಈ ಪಾಠಶಾಲೆ ಬೆಳಗ್ಗೆ ಏಳರಿಂದ ಮತ್ತು ಸ್ಕೂಲು ಹನ್ನೊಂದರಿಂದ ಇದ್ದುದರಿಂದ ಅವರಿಗೆ ತೊಂದರೆಯಿರಲಿಲ್ಲ. ಅವರಿಂದ ನನಗೆ ಲಘು ಕೌಮುದಿಯ ಕೆಲವು ಪಾಠ ಆಗಿತ್ತು. ಅಷ್ಟರಲ್ಲಿ ಅವರಿಗೆ ವರ್ಗಾವಣೆಯಾಗಿ ಬೇರೆಡೆ ಹೋಗಿಬಿಟ್ಟರು. ಅದರಿಂದಾಗಿ ಇಲ್ಲಿ ಸದ್ಯಕ್ಕೆ ವ್ಯಾಕರಣದ ಉಪಾಧ್ಯಾಯರ ಅಭಾವವುಂಟಾಯಿತು. ಗೋಕರ್ಣದಲ್ಲಿ ಪ್ರಖ್ಯಾತ ವ್ಯಾಕರಣ ಪಂಡಿತರಿದ್ದಾರೆಂದು ತಿಳಿದು ಅಲ್ಲಿಗೆ ಹೋದೆವು, ನಮ್ಮ ದುರದೃಷ್ಟಕ್ಕೆ ಅವರಲ್ಲಿರಲಿಲ್ಲ. ಅಧ್ಯಾಪಕ ವೃತ್ತಿ ಹಿಡಿದು ಬೇಲೂರಿಗೆ ಹೋಗಿದ್ದರು. ಸರಿ, ಅಲ್ಲಿಂದ ಧಾರವಾಡಕ್ಕೆ ಬಂದು ಶ್ರೀ ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಗೆ ಹೋದೆವು. ಅಲ್ಲಿ ವಿದ್ಯಾರ್ಥಿಗಳಿಗಾಗಿ ಕಾಲೇಜಿನ ಛತ್ರದಲ್ಲಿ ಊಟವಸತಿಗೆ ಏರ್ಪಾಡಿತ್ತು. ಆ ಪಾಠಶಾಲೆಯು ಬೆಟಗೇರಿ ನಾಗೇಶಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯುತ್ತಿತ್ತು. ನಾಗೇಶಶಾಸ್ತ್ರಿಗಳು ಸಕಲಶಾಸ್ತ್ರಪಂಡಿತರೂ, ನಿರ್ಗರ್ವಿಗಳೂ, ಎಲ್ಲರಲ್ಲೂ ಪ್ರೀತಿ ವಿಶ್ವಾಸವುಳ್ಳವರೂ ಆಗಿದ್ದು ಆ

ಪ್ರಾಂತದಲ್ಲಿ ಅತಿ ಗೌರವಶಾಲಿ ವ್ಯಕ್ತಿಗಳಾಗಿದ್ದರು. ಅಲ್ಲಿ ಮಲ್ಲಾರಿಶಾಸ್ತ್ರಿಗಳೆಂಬ ವ್ಯಾಕರಣದ ಮಹಾಪಂಡಿತರಿದ್ದರು. ಅವರಿಗೆ ಇಡೀ ವ್ಯಾಕರಣ ಬಾಯಲ್ಲಿ ಇತ್ತು. ಅವರು ಪುಸ್ತಕ ಹಿಡಿದದ್ದೇ ನೋಡಿಲ್ಲ. ನಾವು ಅಲ್ಲಿ ಹೋದಾಗ ಐದಾರು ವಿದ್ಯಾರ್ಥಿಗಳಿದ್ದರು. ವ್ಯಾಕರಣ ತರಗತಿಯಲ್ಲಿ ಅವರಿಗೆ ಒಂದು ವರ್ಷದ ಪಾಠವಾಗಿ, ಎರಡನೆಯ ವರ್ಷದ 'ಯುಷ್ಮದಸ್ಮತ್ಪ್ರಕ್ರಿಯೆ' ಪಾಠ ನಡೆಯುತ್ತಿತ್ತು. ಅವರು ನನ್ನನ್ನು ಸಾಹಿತ್ಯ ಮತ್ತು ವ್ಯಾಕರಣದ ಬಗ್ಗೆ ಪರೀಕ್ಷಿಸಿ ಅದೇ ತರಗತಿಗೇ ಸೇರಿಸಿಕೊಂಡರು. ನಾವು ಒಟ್ಟು ಐದು ಜನ ಇದ್ದೆವು. ನಾನು, ಕೃಷ್ಣಮೂರ್ತಿ, ಚಿದಂಬರಜೋಯಿಸ, ಕಾಸರಗೋಡಿನ ನಾರಾಯಣ ಭಟ್ಟ, ಕೃಷ್ಣಭಟ್ಟ. ನಾವು ಹೊಸದಾಗಿ ಬಂದು ಅದೇ ತರಗತಿಗೆ ಸೇರಿದ್ದು ಆ ವಿದ್ಯಾರ್ಥಿಗಳ ಅಸೂಯೆಗೆ ಕಾರಣವಾಯಿತು. ಅವರು ನಮ್ಮನ್ನು ಮಾತು ಕೂಡ ಆಡಿಸುತ್ತಿರಲಿಲ್ಲ. ಅವರು ಬೇರೆಯೇ ಚಿಂತನೆಗೆ ಕೂಡುತ್ತಿದ್ದರು. ನನಗೆ ಈ ಯಾವ ಪಾಠವೂ ದುರ್ಬೋಧವಾಗದೇ ಇದ್ದದ್ದರಿಂದ ನಮ್ಮವರಿಗೆ ಪ್ರತ್ಯೇಕವಾಗಿ ಚಿಂತನೆ ಹೇಳುತ್ತಿದ್ದೆ. ಮತ್ತು ಅವತ್ತವತ್ತಿನ ಪಾಠವನ್ನು ಬಾಯಿಗೇ ಗಟ್ಟಿ ಮಾಡಿಬಿಡುತ್ತಿದ್ದೆವು. ಹೀಗೆ ಒಂದೆರಡು ತಿಂಗಳು ಸಾಗಿ ಕಾರಕ ಪ್ರಕ್ರಿಯೆ ಆರಂಭವಾಯಿತು. ಅದರಲ್ಲಿ ಮೊದಲನೆ ಸೂತ್ರ 'ಪ್ರಾತಿಪದಿಕಾರ್ಥಲಿಂಗಪರಿಮಾಣ ವಚನಮಾತ್ರೇ ಪ್ರಥಮಾ' ಎಂಬುದು ಪಾಠವಾಯಿತು. ಅದರ ಶಾಸ್ತ್ರಾರ್ಥ ಜಟಿಲ ವಾದದ್ದರಿಂದ ಅತಿ ದುರ್ಬೋಧವಾಗಿತ್ತು. ಆದರೆ ನನಗೆ ಚೆನ್ನಾಗಿ ಅರ್ಥವಾಯಿತು. ನಮ್ಮ ಹುಡುಗರಿಗೆ ಎಂದಿನಂತೆ ಚಿಂತನೆ ಹೇಳುತ್ತಿದ್ದೆ. ಆ ಹುಡುಗರಿಗೆ ಈ ಸೂತ್ರ ಏನೂ ಅರ್ಥವಾಗಲೇ ಇಲ್ಲ. ಅಲ್ಲಿಂದ ಎದ್ದು ಬಂದು ಇಲ್ಲಿ ನಿಂತುಕೊಂಡರು. ಆಲಿಸಿದರು. ಕೂತುಕೊಂಡರು. ಮರುದಿನದಿಂದ ನಮ್ಮಲ್ಲಿಗೇ ಬರತೊಡಗಿದರು. ಅನಂತರ ನಮಗೂ ಅವರಿಗೂ ಗಾಢ ಸ್ನೇಹ ಏರ್ಪಟ್ಟಿತು.

ವ್ಯಾಕರಣ ಮುಗಿದು ಕೊನೆ ವರ್ಷದ ಪರೀಕ್ಷೆಗೆ ಪೂನಾದಿಂದ ಗಜೇಂದ್ರಗಡಕರ್ ಎಂಬ ಮಹಾ ವೈಯಾಕರಣರನ್ನು ಪರೀಕ್ಷಕರನ್ನಾಗಿ ಕರೆಸಿದ್ದರು. ಮಧ್ಯಾಹ್ನ ಮೂರು ಗಂಟೆಗೆ ಪರೀಕ್ಷೆ ಆರಂಭವಾಯಿತು. ಇವರ ಪ್ರಶ್ನೆಗಳಿಗೆ ಹಳೇ ವಿದ್ಯಾರ್ಥಿಗಳು ತತ್ತರಿಸಿದರು. ಹೀಗೆ ಒಂದು ಗಂಟೆ ಕಳೆಯಿತು. ಅನಂತರ ನಮ್ಮ ತರಗತಿಯನ್ನು ತೆಗೆದುಕೊಂಡು ನನಗೆ ಪ್ರಶ್ನೆ ಹಾಕಿದರು. ನಾನು ಸರಿಯಾಗಿ ಉತ್ತರಿಸಿದೆ. ಅವರು ತಲೆಕೆಳಗಾಗಿ ಪ್ರಶ್ನಿಸಿದರೂ ಹೇಳಬಲ್ಲಷ್ಟು ನನಗೆ ಪರಿಣತಿಯಿತ್ತು. ಅನಂತರ ಅವರು 'ಎಲ್ಲಾ ಹೇಳುತ್ತೀಯೋ' ಎಂದು ಸೆಟೆದು ಕೂತರು. ಅವರಿಗೆ ಕನ್ನಡ ಬರುತ್ತಿರಲಿಲ್ಲ. ಸಂಸ್ಕೃತದಲ್ಲಿ ಪ್ರಶ್ನೋತ್ತರ ನಡೆಯುತ್ತಿತ್ತು. ಅನಂತರ ಅವರು ಅನೇಕ ಪ್ರಶ್ನೆಗಳನ್ನು ಕೇಳಿದರು. ಎಲ್ಲಕ್ಕೂ ಉತ್ತರಿಸಿದೆ. ಆಮೇಲೆ ಅವರಿಗೆ ಹಠ ಬಂದಿತು. ನಿನ್ನನ್ನು ತಪ್ಪಿಸಿಯೇ ಬಿಡುತ್ತೇನೆ ಎಂದು ಹಠ ತೊಟ್ಟು ಸಂದಿ ಮೂಲೆಯಲ್ಲಿ ಇದ್ದುದನ್ನೆಲ್ಲಾ ಕೆದಕಿ ತೀಕ್ಷ್ಣವಾಗಿ ಕೇಳತೊಡಗಿದರು. ಒಂದೂ ತಪ್ಪಿಸಲು ಅವರಿಂದಾಗಲೇ ಇಲ್ಲ. ಆಗ ಅವರು ಹೃಷ್ಟರಾಗಿ ಬೆನ್ನು ತಟ್ಟಿದರು. ಅಧ್ಯಕ್ಷರ ಬಳಿಗೆ ನನ್ನನ್ನು ಕರೆದೊಯ್ದು, 'ಈ ವಿದ್ಯಾರ್ಥಿಯನ್ನು ಸರಿಯಾಗಿ ನೋಡಿಕೊಳ್ಳಿ. ನಿಮ್ಮ ಶಾಲೆಗೆ ಹೆಸರು ತರುತ್ತಾನೆ' ಎಂದು ಹೇಳಿದರು.

* * *

ಅಲ್ಲಿ ಐದು ವರ್ಷದ ವ್ಯಾಕರಣ ಪಾಠವನ್ನು ಮೂರು ವರ್ಷಕ್ಕೆ (೧೯೩೩-೧೯೩೬) ಮುಗಿಸಿದೆವು. ಪುನಃ ಶೃಂಗೇರಿಗೆ ಬಂದೆವು. ಆಗ ನಮ್ಮ ಹಿಂದಿನ ಸಹಪಾಠಿಗಳು ಎಂದರೆ ದುರ್ಗದ ಸುಬ್ಬರಾಯ, ಪಶ್ಚಿಮವಾಹಿನಿ ಮಹಾದೇವ, ಸೀತಾರಾಮ (ಮಾಣು), ಕೋರನಕುಡಿಗೆ ರಾಮು, ಪಾಣ್ಯಂ ರಾಮು ಇತ್ಯಾದಿಗಳು ಇದ್ದರು. ಇವರಿಗೆ 'ತರ್ಕಸಂಗ್ರಹ ದೀಪಿಕೆ' ಆಗಿ ಮುಕ್ತಾವಳಿ ಸಾಧರ್ಮ್ಯ-ವೈಧರ್ಮ್ಯ ಪ್ರಕ್ರಿಯೆ ನಡೆಯುತ್ತಿತ್ತು- ಎಂದರೆ ತರ್ಕದ ಎರಡನೆಯ ತರಗತಿ ಅಂತ್ಯ. ಇದನ್ನು ಸುಂದರಶಾಸ್ತ್ರಿಗಳೇ ಹೇಳುತ್ತಿದ್ದರು. ನಾವು ತರ್ಕದ ಒಂದನೇ ತರಗತಿಗೆ ಸೇರಬೇಕಿತ್ತು. ಆದರೆ ಸುಂದರಶಾಸ್ತ್ರಿಗಳಿಗೆ ನನ್ನ ಮೇಲೆ ಬಹಳ ಅಭಿಮಾನವಿದ್ದುದರಿಂದ ಅದೇ ತರಗತಿಗೇ ಸೇರಿಸಿಕೊಂಡರು. 'ಹಿಂದಿನ ಪಾಠವನ್ನೆಲ್ಲಾ ಹೇಗಾದರೂ ಕಲಿತುಕೋ' ಎಂದು ಹೇಳಿದರು. ಆದರೆ ಇದು ಹಿಂದಿನ ವಿದ್ಯಾರ್ಥಿಗಳಿಗೆ ಸಹಿಸಲಿಲ್ಲ. ಅವರು ನಮ್ಮ ಮೇಲೆ ದ್ವೇಷ ತಳೆದರು. ನನಗೆ ಆ ಪಾಠಗಳೆಲ್ಲಾ ಅರ್ಥವಾಗುತ್ತಿದ್ದವು. ಅದರಂತೆ ನಮ್ಮ ಗುಂಪಿಗೆ ಚಿಂತನೆ ಹೇಳುತ್ತಿದ್ದೆ. ಅವರು ಪ್ರತ್ಯೇಕ ಸೇರಿ ಚಿಂತನೆ ಮಾಡುತ್ತಿದ್ದರು. ಹೀಗೆ ಸಾಗಿ ಕಾಲ-ಪ್ರಕ್ರಿಯೆ ಶುರುವಾಯಿತು. ಅಲ್ಲಿ ಕಾಲೋಪಾದಿಯಲ್ಲಿ ನಾಲ್ಕು ಲಕ್ಷಣಗಳಿವೆ. 'ಸ್ವಜನ್ಯವಿಭಾಗಪ್ರಾಗಭಾವಾಚ್ಛಿನ್ನಂ ಕರ್ಮ' ಇತ್ಯಾದಿ. ಅದನ್ನು ಸಮನ್ವಯ ಮಾಡುವುದು ಬಹು ಕಷ್ಟ. ಅವರಿಗೆ ಇದೇನೂ ಅರ್ಥ ವಾಗಲೇ ಇಲ್ಲ. ನಾನು ನಮ್ಮವರಿಗೆ ವಿವರಿಸಿ ಹೇಳುತ್ತಿದ್ದೆ. ಅವರೂ ಮರುದಿನದಿಂದ ನಮ್ಮಲ್ಲಿಗೇ ಬರತೊಡಗಿದರು. ಮತ್ತೆ ನಮ್ಮ ಸ್ನೇಹ ಚಿಗುರಿತು.

ತರ್ಕದ ಪರೀಕ್ಷೆಗೆ ಶ್ರೀ ಅಭಿನವತೀರ್ಥರು ನಮಗೆ ಪ್ರಶ್ನೆ ಪತ್ರಿಕೆ ನೀಡಿದ್ದರು. ಅವರ ಬಳಿ ಪಾಠ ಹೇಳಿಸಿಕೊಳ್ಳುತ್ತಿದ್ದ ಓಣಿಕೇರಿ ನರಸಿಂಹಮೂರ್ತಿ ಮತ್ತು ನನಗೆ ೬೬ ಅಂಕ ಬಂದಿತ್ತು. ತರ್ಕದ ಬಳಿಕ ಅಲಂಕಾರಕ್ಕೆ ಸೇರಿಕೊಂಡೆ. ಅಲ್ಲಿ ರಾಮಚಂದ್ರಶಾಸ್ತ್ರಿಗಳೆಂಬ ಘನ ವಿದ್ವಾಂಸರಿದ್ದರು. ಜೊತೆಗೆ ಸುಂದರಶಾಸ್ತ್ರಿಗಳೆಂಬ ಪಂಡಿತರಂತೂ ಮಹಾಮೇಧಾವಿಗಳು. ಅವರು ಕುವಲಯಾನಂದ, ರಸಗಂಗಾಧರ ಮೊದಲಾದ ಪಾಠ ಮಾಡಿದರು. ಅನಂತರ ಮಂಗಳೂರಿನ ಪರೀಕ್ಷಾ ಕೇಂದ್ರದಲ್ಲಿ 'ಮದ್ರಾಸು ಸಾಹಿತ್ಯಶಿರೋಮಣಿ' ಎಂಬ ಪದವಿಯ ಪರೀಕ್ಷೆ ಮಾಡಿಕೊಂಡೆ. ೧೯೪೦ರಲ್ಲಿ ಮೀಮಾಂಸಾ ಅಧ್ಯಯನಕ್ಕಾಗಿ ಬೆಂಗಳೂರು ಶಂಕರಮಠ ಸೇರಿದೆ. ಅಲ್ಲಿಯೇ ವೇದಾಂತ

ಅಧ್ಯಯನವನ್ನು ಮುಗಿಸಿದೆ. ನನಗೆ ಮೊದಲಿನಿಂದಲೂ ವ್ಯಾಕರಣ ಅಂದರೆ ತುಂಬಾ ಇಷ್ಟ. ಎಸ್.ಎಸ್.ಎಲ್.ಸಿ. ಶಾಲಾ ಪರೀಕ್ಷೆಯಲ್ಲಿ ಇಂಗ್ಲಿಷ್ ಗ್ರಾಮರ್‌ನಲ್ಲಿ ೧೦೦ ಅಂಕ ಬಂದಿತ್ತು.

ಅಧ್ಯಾಪನ

ತರ್ಕ ಮೀಮಾಂಸಾಶಾಸ್ತ್ರಗಳು ಮುಗಿದು ಬೆಂಗಳೂರು ಶಂಕರಮಠದಲ್ಲಿ ವೇದಾಂತ ಪೂರ್ತಿಯಾಯಿತು. ಅಷ್ಟರಲ್ಲಿ ಭಂಡಿಗಡಿಯ ಶಕಟಪುರ ಮಠದ ಸ್ವಾಮಿಗಳಾದ ರಾಮಚಂದ್ರಾನಂದ ತೀರ್ಥರು ದಕ್ಷಿಣ ದೇಶದ ಸಂಚಾರಕ್ಕೆ ಹೊರಟಿದ್ದು ನನ್ನನ್ನು ಕರೆದರು. ನಾನೂ ಅವರೊಡನೆ ಹೊರಟೆ. ರಾಮೇಶ್ವರದವರೆಗೂ ಸಂಚಾರ ವಾಯಿತು. ಆ ಸಮಯದಲ್ಲೇ ವೇದಾಂತ ಪಾಠ ಮಾಡಿದೆ. ಒಂದೊಂದೂರಿನಲ್ಲಿ ೪-೫-೧೦-೧೨ ದಿನ ಕ್ಯಾಂಪು ಇರುತ್ತಿತ್ತು. ಗೋಪಿ ಚಟ್ಟಿಪಾಳ್ಯದಲ್ಲಿ ನಮ್ಮ ಕ್ಯಾಂಪು ಇದ್ದಾಗ ಶ್ರೀಚಂದ್ರಶೇಖರ ಭಾರತಿಗಳವರು ಮುಕ್ತರಾದರು. ಆ ಊರಿನವರು ಆ ಸಂಬಂಧ ಆರಾಧನೆ ಇಟ್ಟುಕೊಂಡಿದ್ದರು. ನಮ್ಮ ಮಠಕ್ಕೂ ಆಹ್ವಾನವಿತ್ತು. ಅದರಂತೆ ಹತ್ತು ಗಂಟೆಗೆ ನಾನು ಅಲ್ಲಿಗೆ ಹೋದೆ. ಆಗ ಅಲ್ಲಿ ಶ್ರೀಶಂಕರಾಚಾರ್ಯರ ಅಷ್ಟೋತ್ತರ ಪೂಜೆ ನಡೆಯುತ್ತಿತ್ತು. ಕೆಲವರು ಪಂಡಿತರೂ ಅಲ್ಲಿ ಸೇರಿದ್ದರು. ಆ ಅಷ್ಟೋತ್ತರದಲ್ಲಿ ಒಂದು ನಾಮ ಹೀಗಿದೆ. "ಪಾಪಾಗಭಿದುರಾಕೃತಯೇ ನಮಃ" ಎಂದು. ಆಗ ಆ ಪಂಡಿತರು ಆ ನಾಮದ ಅರ್ಥ ಸಾಧುವಾಗಿಲ್ಲ ಎಂದು ತರ್ಕಿಸುತ್ತಿದ್ದರು. 'ಪಾಪಾಗಭಿ' ಎಂಬುದಕ್ಕೆ ನಿಷ್ಪೃಷ್ಟಾರ್ಥವಿಲ್ಲ. ದುರಾಕೃತಯೇ ಎಂಬುದಂತೂ ಅತಿ ವಿರುದ್ಧ - ಈ ರೀತಿ. ನಾನು ಹೋದೊಡನೆ ಅವರು ನನಗೆ ಪುಸ್ತಕ ಕೊಟ್ಟು 'ಶಾಸ್ತ್ರಿಣಃ ಚಿಂತ್ಯತಾಮಿದಮ್' ಎಂದರು. ನಾನು ನೋಡಿದೆ. ಆಗ ಗೊತ್ತಾಯಿತು. ಅವರು ಪದಚ್ಛೇದವನ್ನು ತಪ್ಪಾಗಿ ಮಾಡಿ ಕೊಂಡಿದ್ದರು. ಆಗ ನಾನು ಹೇಳಿದೆ. ಪದಚ್ಛೇದ ಹೀಗೆ ಮಾಡಿಕೊಳ್ಳ ಬೇಕು. 'ಪಾಪ-ಅಗ-ಭಿದುರ-ಆಕೃತಿ, ಪಾಪವೆಂಬ ಪರ್ವತಕ್ಕೆ ವಜ್ರಾಯುಧದಂತೆ ಇರತಕ್ಕವರು' ಎಂದು. ಆಗ ಎಲ್ಲರೂ ಆಶ್ಚರ್ಯ ಚಕಿತರಾದರು. ಬಳಿಕ ಅನೇಕ ಕಡೆ ನನಗೆ ಉಪನ್ಯಾಸಗಳಿಗೆ ಅವಕಾಶ ಮಾಡಿಕೊಟ್ಟರು. ಮಧುರೈ ಕ್ಯಾಂಪಿನಲ್ಲಿದ್ದಾಗ ಶಾಸ್ತ್ರಸೇವೆಯಲ್ಲಿ ವಾಕ್ಯಾರ್ಥ ಮಾಡುವುದನ್ನು ನೋಡಿ ಅನೇಕ ಪಂಡಿತರು ಮೆಚ್ಚುಗೆ ವ್ಯಕ್ತಪಡಿಸಿದರು. ಅಲ್ಲಿಂದ ಬಂದ ಮೇಲೆ ಶೃಂಗೇರಿ ಗುರುಗಳು ಕರೆದರು. ಏಕೋ ಮಠ ಸೇರುವ ಮನಸ್ಸಾಗಲಿಲ್ಲ. ಮುಳಬಾಗಿಲ ಸ್ವಾಮಿಗಳೂ ಕರೆ ನೀಡಿ ಆಸ್ಥಾನ ಪಂಡಿತರಾಗಿರಿ ಎಂದರು. ಅಲ್ಲಿಗೂ ಹೋಗಲಿಲ್ಲ.

ಹೀಗೆ ಅನೇಕ ಕಡೆಗಳಲ್ಲಿ ವಿದ್ವಾಂಸರ ಒಡನಾಟ ದೊರೆಯುತ್ತಿತ್ತು. ಆಗ ಶೃಂಗೇರಿಯಲ್ಲಿ ಶ್ರೀಚಂದ್ರಮೌಳಿ ರಾಯರು ೧೯೬೭ರಲ್ಲಿ ಒಂದು ಕಾಲೇಜು ಆರಂಭಿಸಿದರು. ಅದರಲ್ಲಿ ಅಲಂಕಾರ ಮತ್ತು ಜ್ಯೋತಿಷ್ಯ- ಒಂದೊಂದು ಶಾಸ್ತ್ರದಲ್ಲಿ ಐದೈದು ವಿದ್ಯಾರ್ಥಿಗಳು. ಬಸವಾನಿ ರಾಮಶರ್ಮರ ಸೂಚನೆಯಂತೆ ಅದರಲ್ಲಿ ನಾನು ಅಲಂಕಾರಶಾಸ್ತ್ರದ ಉಪಾಧ್ಯಾಯನಾಗಿ ಸೇರಿಕೊಂಡೆ. ನಾಲ್ಕು ವರ್ಷಗಳಲ್ಲಿ ಎಲ್ಲರೂ ವಿದ್ವತ್ಪರೀಕ್ಷೆಯಲ್ಲಿ ತೇರ್ಗಡೆಯಾದರು. ಕಾರಣಾಂತರದಿಂದ ಆ ಕಾಲೇಜು ಅಲ್ಲಿಗೇ ನಿಂತಿತು. ಅನಂತರ ತೀರ್ಥಹಳ್ಳಿ ತಾಲ್ಲೂಕಿನ ಭೀಮನಕಟ್ಟೆ ಶ್ರೀಮಠದಲ್ಲಿ ಐದು ವರ್ಷ ಶ್ರೀ ಗುರುರಾಯರಿಗೆ ಸಾಹಿತ್ಯ, ತರ್ಕ, ವ್ಯಾಕರಣಗಳನ್ನು ಪಾಠ ಮಾಡಿದೆ. ಅನಂತರ ಅವರೊಂದಿಗೇ ಬದರಿ ಪರ್ಯಂತರವಾಗಿ ಉತ್ತರ ದೇಶದ ಯಾತ್ರೆಯನ್ನು ಮುಗಿಸಿದೆ. ಆಗ ಕಾಶಿಯಲ್ಲಿ ಹತ್ತು ದಿನ ಪರ್ಯಂತ ವಿದ್ವನ್ಮಹಾಸಭೆಯಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಿತ್ತು. ಆಮೇಲೆ ಸಾಗರ ತಾಲ್ಲೂಕು ಹೆಗ್ಗೋಡಿನ ಕೇಡಲಸರ ಪಾಠಶಾಲೆಯಲ್ಲಿ ವೇದ ಮತ್ತು ಸಂಸ್ಕೃತ ಉಪಾಧ್ಯಾಯನಾಗಿ ಐದು ವರ್ಷ ಸೇವೆ ಸಲ್ಲಿಸಿದೆ. ಬೋಧಾಯನ ಪ್ರಯೋಗವನ್ನು ಹೇಳಿಕೊಟ್ಟೆ. ಆ ಕಾಲದಲ್ಲಿ ನಾನು ಮತ್ತಿಕೊಪ್ಪದ ಶ್ರೀ ಹರನಾಥರಾಯರ ಮನೆಯಲ್ಲೇ ಇದ್ದೆ. ಹರನಾಥ ರಾಯರೆಂಬುವರು ಮಹಾ ಉದಾತ್ತ ವ್ಯಕ್ತಿಗಳು, ಲೌಕಿಕ ವ್ಯವಹಾರದಲ್ಲಿ ಪರಿಣತರು, ಪರೋಪಕಾರಿಗಳು ಮತ್ತು ಶೀಲವಂತರು, ತ್ರಿಕರಣಶುದ್ಧರು. ಅವರಲ್ಲಿದ್ದುದು ನನಗೆ ಮರೆಯಲಾಗದ ಸಂಗತಿ ಯಾಗಿದೆ. ಅವರ ಕುಟುಂಬವರ್ಗದವರೆಲ್ಲರೂ ಅತಿ ಸಾಮರಸ್ಯ ಶಾಲಿಗಳು. ಕುಟುಂಬಗಳಿಗೆ ಮಾದರಿಯಾದಂಥವರು. ಅಲ್ಲಿ ಭೀಮನ ಕೋಣೆಯಲ್ಲಿ ಭಾಸ್ಕರಭಟ್ಟರೆಂಬ ಮಹಾ ಸಂಸ್ಕೃತ ಪಂಡಿತರಿರುವರು. ಅವರು ಹಿಂದಿನಿಂದಲೂ ನನಗೆ ಪರಿಚಿತರು, ವಿಶ್ವಾಸಿಗಳು, ಕವಿತೆಯಲ್ಲಿ ನಿಸ್ಸೀಮರು. ಅವರು ರಚಿಸಿದ ಕವಿತೆಗಳಿಗೆ ಮಿತಿಯಿಲ್ಲ. ಅವರು ನಿವೃತ್ತ ಪ್ರೌಢಶಾಲಾ ಶಿಕ್ಷಕರು. ಅನಂತರ ತೀರ್ಥಹಳ್ಳಿಯ ಮುಳುಬಾಗಿಲು ಮಠದ (ದುರ್ವಾಸಪುರ) ಶ್ರೀಗಳವರಿಗೆ ಎರಡು ವರ್ಷ ವೇದಾಂತ ಪಾಠ ಮಾಡಿದೆ. ಅನಂತರ ಶಿವಮೊಗ್ಗೆಯ ಕೂಡಲೀಮಠದಲ್ಲಿ ಶ್ರೀಗಳವರಿಗೆ ಸಾಹಿತ್ಯ ವೇದಾಂತ ಪಾಠ ಮಾಡಿದೆ. ಅನಂತರ ೧೯೯೧ರಿಂದ ಊರಲ್ಲೇ ನೆಲಸಿ ಇಲ್ಲಿಯ ಹುಡುಗರಿಗೆ ವೇದಸಂಸ್ಕೃತ ಪಾಠ ಮಾಡುತ್ತಿದ್ದೇನೆ. ನನಗೆ ಸಾಮರ್ಥ್ಯವಿರುವಷ್ಟು ಕಾಲ ವೇದ ಸಾಹಿತ್ಯಗಳ ಸೇವೆ ಮಾಡಬೇಕೆಂಬುದು ನನ್ನ ಉದ್ದೇಶ.

ನನ್ನ ಶ್ರೀಮಂತಿಕೆ

ನನ್ನ ಮೂವರು ಹೆಣ್ಣುಮಕ್ಕಳು ರತ್ನದಂತೆ ಗುಣಶೀಲರಾಗಿದ್ದು ನನ್ನಲ್ಲಿ ಅಪಾರ ಪ್ರೀತಿಯನ್ನಿಟ್ಟಿರುವರು. ಅದೇ ಒಂದು ಮಹಾಸಂಪತ್ತೆಂದು ಭಾವಿಸಿದ್ದೇನೆ. ಮತ್ತು ಮೊಮ್ಮಕ್ಕಳೂ ಅಳಿಯಂದಿರೂ ಅತ್ಯಂತ ಸಚ್ಛೀಲರಾಗಿದ್ದು ಆ ಸಂಪತ್ತಿಗೆ ಮುಕುಟ ವನ್ನಿಟ್ಟು ಇಹಲೋಕದ ಭಾಗ್ಯವನ್ನು ಬೆಳಗಿರುವರು. ನನ್ನ ತಮ್ಮಂದಿರ ಮಕ್ಕಳಾದ ದಿನಮಣಿ, ಸುಧಾಕರ, ಆನಂದ ಮತ್ತು ಹೆಣ್ಣುಮಕ್ಕಳಾದ ಮೀನಾಕ್ಷಿ, ರಾಧಾ, ಲೀಲಾ, ಪ್ರಭಾ, ಗಾಯತ್ರೀ, ಭಾರತೀ, ನನಗೆ ಪುತ್ರನಿರ್ವಿಶೇಷರಾಗಿ ಮಹದಾನಂದವನ್ನು ಕೊಡುತ್ತಿದ್ದಾರೆ. ಎಲ್ಲಕ್ಕಿಂತ

ಮಿಗಿಲಾಗಿ ನನ್ನ ಅಣ್ಣನ ಮಗನಾದ ಅನಂತನು ಎಲ್ಲ ವಿಷಯದಲ್ಲೂ ನನ್ನ ಬಲಗೈ ಬಂಟನಾಗಿ ಪುತ್ರನಿಲ್ಲವೆಂಬ ದುಗುಡುವನ್ನು ದೂರ ಮಾಡಿರುವನು. ಇನ್ನು ನಮ್ಮ ಚಿದಂಬರ ಜೋಯಿಸರ ಪುತ್ರವರ್ಗದವರೂ ನಿರ್ವ್ಯಾಜ ಪ್ರೀತಿಯನ್ನಿಟ್ಟಿರುವರು. ಮತ್ತು ನಮ್ಮ ಸಂಕೇತಿ ಜನಾಂಗದ ಬಂಧುಮಿತ್ರರೆಲ್ಲಾ ನನ್ನಲ್ಲಿ ಅಪಾರ ಪ್ರೀತಿಯನ್ನಿಟ್ಟಿರುವರು. ಅದಕ್ಕೆಲ್ಲಾ ಹೇಗೆ ಕೃತಜ್ಞತೆ ಸಲ್ಲಿಸ ಬೇಕೆಂಬುದೇ ನನಗೆ ತಿಳಿಯದು.

ಇನ್ನೂ ಕೆಲವು ಮಹಾವ್ಯಕ್ತಿಗಳನ್ನು ಇಲ್ಲಿ ಸ್ಮರಿಸುವುದು ಅನುಚಿತವಾಗಲಾರದು. ಅಷ್ಟೇ ಅಲ್ಲ, ಅತ್ಯಂತ ಉಚಿತವಾಗಿದೆ. ಶ್ರೀಮಾನ್ ಮತ್ತೂರು ಕೃಷ್ಣಮೂರ್ತಿಗಳು- ಅಪಾರ ಪಾಂಡಿತ್ಯ, ಲೋಕಸೇವಾತುರತೆ, ಸೌಜನ್ಯ, ಅಭೂತಪೂರ್ವ ವಾಗ್ಮಿತ್ವ, ಸಂಸ್ಕೃತ, ಆಂಗ್ಲ, ಕನ್ನಡ ಇತ್ಯಾದಿ ಅನೇಕ ಭಾಷೆಗಳಲ್ಲಿ ಪ್ರಭುತ್ವ ಇನ್ನೂ ಅನೇಕ ಹಿರಿಯಗುಣಗಳಿಂದ ಭಾರತದಲ್ಲೇ - ವಿಶೇಷವಾಗಿ, ದಕ್ಷಿಣಭಾರತದಲ್ಲಿ ಅತಿ ಗೌರವಾನ್ವಿತರು. ಅವರು ನನ್ನ ಮೇಲೆ ಅಕಾರಣ ಪ್ರೀತಿಯನ್ನಿಟ್ಟಿರು ವರೆಂಬುದು ನನಗೆ ಹಿಡಿಸಲಾರದಷ್ಟು ಸಂತೋಷ ತಂದಿದೆ. ಅವರ ಮುಂದೆ ಮೌನವಾಗಿ ತಲೆ ತಗ್ಗಿಸಿ ನಿಂತಿರುವುದೇ ಅವರಿಗೆ ಸಲ್ಲಿಸುವ ಕಾಣಿಕೆಯೆಂದು ಭಾವಿಸಿದ್ದೇನೆ. ಇನ್ನೂ ಸಂಕೇತಿ ಜನಾಂಗದ ಅಭಿಮಾನಿಗಳೂ ಇತರ ಜನಾಂಗದ ಅಭಿಮಾನಿಗಳೂ ಇರುವರು. ಅವರಿಗೂ ಈ ನಮ್ರ ಕಾಣಿಕೆಯನ್ನು ವಿನಾ ಇನ್ನೇನೂ ಅರ್ಪಿಸಲಾರೆ. ವಿಶೇಷವಾಗಿ ಮತ್ತೂರು ಹೊಸಹಳ್ಳಿಯ ಬಂಧುಮಿತ್ರ ಅಭಿಮಾನಿಗಳಿಂದ ನಾನು ಆಕರ್ಷಿತನಾಗಿದ್ದೇನೆ. ಮತ್ತೂರಿನ ಶ್ರೀ ಮಾರ್ಕಂಡೇಯ ಅವಧಾನಿಗಳು ಮತ್ತು ಅವರ ಕುಟುಂಬವರ್ಗದವರು - ಅವರ ವಿದ್ವತ್ತೆ, ಅದನ್ನು ಮೀರಿದ ವಿನಯ, ಅದನ್ನು ಮೀರಿದ ಸೌಜನ್ಯ, ಅದನ್ನು ಮೀರಿದ ತ್ಯಾಗ ಇತ್ಯಾದಿ ಗುಣಗಳಿಗೆ ನಾನು ಮಾರುಹೋಗಿದ್ದೇನೆ. ಶ್ರೀಮಾನ್ ಅಶ್ವತ್ಥನಾರಾಯಣ ಅವಧಾನಿಗಳು, ಕೇಶವಾವಧಾನಿಗಳು, ಅಪಾರವಾದ ವೇದಶಾಸ್ತ್ರ ವಿದ್ವತ್ತನ್ನು ಗಳಿಸಿರುವುದಲ್ಲದೆ ಅದರ ಪ್ರಚಾರಕ್ಕಾಗಿ ತಮ್ಮ ಸರ್ವಸ್ವವನ್ನೂ ಅರ್ಪಿಸಿಕೊಂಡು ಅನವರತ ದುಡಿಯುತ್ತಿರುವುದು ಸ್ತುತಿ ಮೀರಿದ ಸಂಗತಿಯಾಗಿದೆ. ಇನ್ನು ನನ್ನ ಒಡನಾಟದಲ್ಲಿದ್ದ ಮಠಾಧೀಶ್ವರರು ಇಂದಿಗೂ ನನ್ನ ಮೇಲೆ ಅಭಿಮಾನವಿಟ್ಟು ಪತ್ರ ಬರೆಯುತ್ತಿರುವುದೂ, ವಿಶೇಷ ಕಾರ್ಯಕ್ಕೆ ಆಹ್ವಾನವೀಯುತ್ತಿರುವುದೂ, ಅವರ ಮೇಲಿನ ನನ್ನ ಭಕ್ತಿಯನ್ನು ಇಮ್ಮಡಿಸುತ್ತಿದೆ.

ಮಹಾ ವಿಷಾದ

ಹಿಂದೆ ಶೃಂಗೇರಿ ಪಾಠಶಾಲೆಯಲ್ಲಿ ನಡೆದ ಒಂದು ಸಂಗತಿ ಜ್ಞಾಪಕಕ್ಕೆ ಬರುತ್ತಿದೆ. ರಾಮಕೃಷ್ಣಶರ್ಮ ಎಂಬುವನು ಮಂಗಳೂರಿನಲ್ಲಿ ಮೆಟ್ರಿಕ್ ಓದುತ್ತಿದ್ದ ಒಬ್ಬ ಹುಡುಗ. ಅವನು ಎಲ್ಲೋ ಒಂದೆಡೆ ಗೀತೋಪನ್ಯಾಸವನ್ನು ಕೇಳಿ ಅದಕ್ಕೆ ಮಾರುಹೋಗಿ ಸಂಸ್ಕೃತವನ್ನು ಕಲಿಯಬೇಕೆಂದು ಛಲ ತೊಟ್ಟು ಶೃಂಗೇರಿಗೆ ಬಂದ. ಅಲ್ಲಿಯ ನಿಯಮವನ್ನೇ ಅನುಸರಿಸಬೇಕಿತ್ತು. ಅದಕ್ಕಾಗಿ ಶಿಖೆಯನ್ನು ಬಿಟ್ಟ. ಪಂಚೆ ಹೊದಿಯಲು ಶುರು ಮಾಡಿದ. ಭಿಕ್ಷಾನ್ನ ಮಾಡತೊಡಗಿದ. ದಿನ ಸಾವಿರ ಗಾಯತ್ರೀ ಮಾಡುತ್ತಿದ್ದ. ಹೊಳೆ ಸ್ನಾನ ಮಾಮೂಲು. ಆದರೆ ಅವನಿಗೆ ಸಂಸ್ಕೃತ ಶಬ್ದೋಚ್ಚಾರಣೆ ಮಾಡಲೇ ಬರದು. ಹೀಗಿರುವಾಗ ಹೇಗೆ ಕಲಿಯುವುದು? ಆದರೆ ಅವನು ಛಲ ಬಿಡಲಿಲ್ಲ. ರಾಮಶಬ್ದವೊಂದನ್ನು ಕಲಿಯಲು ಒಂದು ತಿಂಗಳು ಹಿಡಿಯಿತು. ಮುಂದಿನದೆಲ್ಲಾ ಸುಲಭವಾಯಿತು. ಹೀಗೆ ಧಾತುರೂಪಗಳನ್ನೂ ಗಟ್ಟಿ ಮಾಡಿದ. ಅದಕ್ಕೆ ಸಂಬಂಧಪಟ್ಟ ವ್ಯಾಕರಣ ಮುಂತಾದ್ದನ್ನು ಗಟ್ಟಿ ಮಾಡಿದ. ಸತತ ಪರಿಶ್ರಮದಿಂದ ಒಂದು ವರ್ಷದಲ್ಲೇ ದಶಕುಮಾರ ಚರಿತೆ, ಪಂಚತಂತ್ರ ಇತ್ಯಾದಿಗಳನ್ನು ಮುಗಿಸಿದ. ಅನಂತರ ಸಂಸ್ಕೃತದಲ್ಲೇ ಮಾತನಾಡ ತೊಡಗಿದ. ದಿನಾ ನನ್ನೊಡನೆ ಬಂದು ಅರ್ಧಗಂಟೆ ಮಾತನಾಡಿ ಹೋಗುತ್ತಿದ್ದ. ಮೂರು ವರ್ಷಗಳಲ್ಲಿ ಸಂಸ್ಕೃತ ಸಾಹಿತ್ಯದಲ್ಲಿ ಸಾರ್ವಭೌಮತ್ವವನ್ನು ಪಡೆದ. ಸ್ವಯಂ ಗದ್ಯಕವನಗಳನ್ನು ರಚಿಸತೊಡಗಿದ. ಅವು ದಂಡಿಬಾಣಭಟ್ಟರ ಕವಿತೆಗಳಿಗೆ ಸರಿಸಾಟಿ ಯಾಗಿದ್ದವು. ಹುಡುಕಿದರೂ ಒಂದೇ ಒಂದು ತಪ್ಪೂ ಸಿಕ್ಕುತ್ತಿರಲಿಲ್ಲ. ಒಂದು ಬಾರಿ ತಂಜಾವೂರಿಂದ ಬಂದ ಪಂಡಿತರೊಬ್ಬರೊಡನೆ ಸಂಭಾಷಣೆ ನಡೆಸಿದೆ. ಅವರು ಮಾತಿನ ಭರದಲ್ಲಿ 'ಚತುರ್ಭಿರ್ಭಿತ್ತಿತ್ತಿಭಿಃ 'ಎಂದು ತಪ್ಪು ಪ್ರಯೋಗಿಸಿದರು. ಅದು 'ಚತಸೃಭಿರ್ಭಿತ್ತಿಭಿಃ' ಎಂದಾಗಬೇಕು. ಅದಕ್ಕೆ ಅವನು ನೇರ ತಪ್ಪು ತಿದ್ದದೆ, ಮಾತಿನ ಸರಣಿಯಲ್ಲಿ 'ಚತಸೃಭಿರ್ಭಿತ್ತಿಭಿಃ' ಎಂದು ಪ್ರಯೋಗಿಸಿದ. ಥಟ್ಟನೆ ತಮ್ಮ ತಪ್ಪು ಅವರಿಗೆ ಅರಿವಾಯಿತು. ಕ್ಷಮೆ ಕೇಳಿದರು. ಅನಂತರ ಅವನು ವ್ಯಾಕರಣವನ್ನು ಪೂರ್ತಿ ಕಲಿಯಬೇಕೆಂದು ಕಾಶಿಗೆ ಹೋದನು. ಅಲ್ಲಿ ಜ್ಯೋತಿಶ್ಶಾಸ್ತ್ರ, ವ್ಯಾಕರಣವನ್ನು ಪೂರ್ತಿ ಅಭ್ಯಸಿಸಿ ಪುನಃ ಶೃಂಗೇರಿಗೆ ಬಂದನು. ಅಷ್ಟು ಹೊತ್ತಿಗೆ ನಾನು ಧಾರವಾಡದಿಂದ ವಾಪ್ಸು ಬಂದಿದ್ದೆ. ನಾನು ಎಷ್ಟೋ ಹುಡುಗರಿಗೆ ಈ ರಾಮಕೃಷ್ಣನ ಉದಾಹರಣೆಯನ್ನು ಕೊಟ್ಟಿದ್ದೇನೆ. ಛಲವಿದ್ದರೆ ಯಾವುದೂ ಅಸಾಧ್ಯವಲ್ಲ ಎಂದು ಇದು ತೋರಿಸುತ್ತದೆ. ಆದರೆ ಊರಿಗೆ (ಮಂಗಳೂರಿಗೆ)ಹೋದಾಗ ಆತ ಹೇಗೋ ತೀರಿಕೊಂಡರು ಎಂಬುದು ನನ್ನನ್ನು ತೀವ್ರ ವಿಷಾದಕ್ಕೀಡು ಮಾಡಿತು.

ಶಾಸ್ತ್ರಸಂಪ್ರದಾಯ

ಮೊದಲಿಂದಲೂ ಯಾವುದೇ ವಿಷಯವನ್ನು ವಿಮರ್ಶಿಸುವಾಗ, ಯಾವುದೇ ಕಡೆ ಒಲವಿಲ್ಲದೆ ಮಧ್ಯಸ್ಥ ದೃಷ್ಟಿಯಿಂದ ವಿಮರ್ಶಿಸಬೇಕು ಮತ್ತು ಸತ್ಯದ ಅಡಿಗಲ್ಲ ಮೇಲೆ ನಿಂತು ವಿಮರ್ಶಿಸಬೇಕು ಎಂಬುದು ನನಗೆ ಜಾಯಮಾನವಾಗಿ ಬಂದಿತ್ತು. ಅದೇ ರೀತಿ ವೇದಗಳನ್ನಾಗಲಿ ಪುರಾಣಗಳನ್ನಾಗಲಿ ಧರ್ಮಶಾಸ್ತ್ರಗಳನ್ನಾಗಲಿ ವಿಮರ್ಶಿಸುತ್ತಿದ್ದೇನೆ.

ನಮ್ಮ ಷೋಡಶಕರ್ಮ ಪ್ರಯೋಗದಲ್ಲಿ ಅನೇಕ ಅನಗತ್ಯ ಸಂಪ್ರದಾಯಗಳೂ, ಕಂದಾಚಾರಗಳೂ ನುಸುಳಿ ಬಂದು ಪ್ರಯೋಗವನ್ನೇ ಸ್ವಲ್ಪ ತಿರುಚುವಂತೆ ಮಾಡಿವೆ. ಈ ಅನವಶ್ಯ ಗಳನ್ನೆಲ್ಲಾ ವರ್ಜ್ಯ ಮಾಡಿ ಪ್ರಯೋಗವನ್ನು ಶುದ್ಧಿಗೊಳಿಸಬೇಕೆಂದು ಪ್ರಯತ್ನಪಟ್ಟೆ. ಆದರೆ ಅದು ಸಾಧ್ಯವೇ ಇಲ್ಲವೆಂದು ಮನವರಿಕೆ ಯಾಯಿತು. ಯಾಕೆಂದರೆ ಶಾಸ್ತ್ರಾಚಾರವನ್ನು ಮೊಟಕುಗೊಳಿಸಲು ಒಪ್ಪುವರೇ ಹೊರತು ಕಂದಾಚಾರವನ್ನು ಸ್ವಲ್ಪ ಮೊಟಕುಗೊಳಿಸಲೂ ಯಾರೂ ಒಪ್ಪಲಾರರು. ಉದಾಹರಣೆಗೆ ಒಂದು ವಿಷಯ : ಕೌಶಿಕ ಸಂಕೇತಿಗಳಲ್ಲಿ ವರಪೂಜೆಯಲ್ಲಿ ಸೂಜಿ ನಿಂಬೆಹಣ್ಣನ್ನು ತಂದಿಡಬೇಕು. ಅದು ಲಿಂಗದಹಳ್ಳಿ ಕಡೆಯಲ್ಲಿಲ್ಲ. ಕುಪ್ಪಳ್ಳಿಯ ವರನಿಗೆ ಇಲ್ಲಿಯ ಕನ್ಯೆಯನ್ನು ಕೊಡುವುದಿದ್ದುದರಿಂದ ಸೂಜಿ ನಿಂಬೆಹಣ್ಣು ತಂದಿಟ್ಟಿದ್ದೆವು. ವರಪೂಜೆ ಶುರುವಾಯಿತು. ಆ ಪುರೋಹಿತರು ನೋಡಿ, 'ತೆಂಗಿನೆಣ್ಣೆ ಎಲ್ಲಿ?' ಎಂದರು. ಅದು ಬೇಕೆಂದು ನನಗೆ ಗೊತ್ತಿರಲಿಲ್ಲ. ಮತ್ತೆ ಅದನ್ನೂ ತಂದೆವು. ಆಗ ನನಗೆ ಹೊಳೆಯಿತು. ಸೂಜಿಯಿಂದ ಕಾಲನ್ನು ಚುಚ್ಚುವಾಗ ಕಾಲು ನೋಯುತ್ತಾದ್ದರಿಂದ ಎಣ್ಣೆ ಅಗತ್ಯವೆನಿಸಿತು. ಆಮೇಲೆ, ಈ ಸಾಮಾನು ಜೋಡಣೆಯಲ್ಲಿ ಅವರು ಸ್ವಲ್ಪ ಎಡವಿದ್ದಾರೆ ಎಂದು ನನಗೆನಿಸಿತು. ಏಕೆಂದರೆ ನಿಂಬೆಹಣ್ಣು ಸೂಜಿ ಎಲ್ಲಾ ಉಪಕರಣಗಳೇ ಹೊರತು, ಪ್ರಧಾನವಲ್ಲ. ಪ್ರಧಾನ ಪದಾರ್ಥ ಮತ್ತೊಂದಿದೆ. ಅದು ಮುಳ್ಳು. ಅದೇ ಇಲ್ಲದೆ ಈ ಕಾರ್ಯ ಹೇಗೆ ಸಾಂಗವಾಗುತ್ತೆ? ನಾಲ್ಕು ಮುಳ್ಳು ತಂದು ಅದನ್ನು ಕಾಲಿಗೆ ತಗುಲಿಸಿ ಇಟ್ಟರೆ, ಮುಳ್ಳು ತೆಗೆಯುವ ಶಾಸ್ತ್ರ ಪೂರ್ತಿಗೊಳ್ಳುತ್ತೆ. ಇದು ಯಾವುದೂ ಅಗತ್ಯವಿಲ್ಲವೆಂದು ಎಲ್ಲರಿಗೂ ಗೊತ್ತು. ಆದರೂ ಇದು ಅತ್ಯಗತ್ಯ. ಅನಂತರ ಪುರೋಹಿತರಲ್ಲಿ 'ಇದೆಲ್ಲಾ ಅಗತ್ಯವೆ?' ಎಂದು ಕೇಳಿದೆ. ಅದಕ್ಕವರು 'ಅಧಿಕ ಪ್ರಸಂಗ ಮಾಡಕೂಡದು. ಅದು ಹೇಗೆ ನಡೆಯಬೇಕೋ ಹಾಗೆ ಪಾಂಕ್ತವಾಗಿಯೇ ಆಗಬೇಕು' ಎಂದು ತೀರ್ಪು ಕೊಟ್ಟುಬಿಟ್ಟರು. ಅನಂತರ ಅವರು ಪ್ರವಿಶ್ಯ ಹೋಮಾದಿ ಶೇಷ ಹೋಮಾಂತ ಕರ್ಮವನ್ನು ಒಂದೇ ಅಗ್ನಿಮುಖದಲ್ಲಿ ನಡೆಸಲು ಸಂಕಲ್ಪ ಮಾಡಿಸಿದರು. 'ಅದನ್ನು ಪ್ರತ್ಯೇಕ ಮಾಡಬೇಕಲ್ಲವೇ?' ಎಂದು ಕೇಳಿದೆ. ಅದಕ್ಕವರು 'ಅದನ್ನು ಹೇಗೆ ಮಾಡಿದರೂ ಆಗುತ್ತೆ' ಎಂದುಬಿಟ್ಟರು. ಎಂದರೆ ಅವರಭಿಪ್ರಾಯ, ಶಾಸ್ತ್ರವು ಅನಾಸ್ಥೆಯನ್ನು ತಡಕೊಳ್ಳ ಬಲ್ಲದು, ಆದರೆ ಸಂಪ್ರದಾಯವು ಅನಾಸ್ಥೆಯನ್ನು ತಡಕೊಳ್ಳಲಾರದು ಎಂದು.

ಈ ರೀತಿ ಇನ್ನೂ ಎಷ್ಟೋ ಉಚಿತವಾದ್ದರಲ್ಲಿ ಅನಾಸ್ಥೆ, ಅನುಚಿತವಾದ್ದರಲ್ಲಿ ಆಸ್ಥೆ ಇವೆ. ಅದಕ್ಕೇನು ಮಾಡಲೂ ಬರದು. ಎಲ್ಲರಲ್ಲೂ ವಿದ್ವತ್ತೆಯಿದೆ, ವಿಚಾರಶೀಲತೆಯಿದೆ, ತರ್ಕವೈಚಕ್ಷಣ್ಯವಿದೆ, ನಿರ್ಣಯ ಕೌಶಲವಿದೆ. ಇವರೆಲ್ಲರಿಗೂ ನಾನು ಹೇಳುವುದಿಷ್ಟೆ. 'ನೀವು ತರ್ಕ ಮಾಡಿ, ವಿಚಾರ ಮಾಡಿ, ನಿರ್ಣಯ ಮಾಡಿ. ಕೊನೆಗೆ ಎಲ್ಲವನ್ನೂ ಇಸ್ಪೀಟು ಎಲೆಯಂತೆ ಮಡಿಚಿಟ್ಟು ಮೇಲೇಳಿ. ಏಕೆಂದರೆ ಕಂದಾಚಾರದ ಪ್ರವಾಹಕ್ಕೆ ಧಕ್ಕೆಯುಂಟು ಮಾಡುವ ಯಾವ ಕಾರ್ಯವನ್ನೂ ಮಾಡ ಹೋಗಬೇಡಿ. ಅದು ಜೇನುಹುಟ್ಟಿಗೆ ಕೈ ಹಾಕಿದಂತಾದೀತು' ಎಂದು.

ಮನೆತನ

ಈಗ ನಮ್ಮ ಪೂರ್ವಿಕರ ಕೆಲವೊಂದು ಚರಿತ್ರೆಯನ್ನು ಹೇಳಬೇಕೆನಿಸುತ್ತದೆ. ೧೭೫೦ರಲ್ಲಿ ಹರಿತಸಗೋತ್ರ I ರಾಮಯ್ಯ ನೆಂಬುವರು ಹುಟ್ಟಿದರು. ಅವರ ತಂದೆ ಶಿವರಾಮ. ಅದೇ ಸಮಯದಲ್ಲಿ ವಾಧೂಲಸ ಗೋತ್ರ II ವಿಶ್ವನಾಥಶಾಸ್ತ್ರಿಗಳೆಂಬುವರು ಹುಟ್ಟಿದರು. ಅದೇ ಸಮಯದಲ್ಲಿ ಭಾರದ್ವಾಜ ಗೋತ್ರದ III ರಾಮಯ್ಯನೆಂಬ ಶ್ಯಾನುಭೋಗರಿದ್ದರು. ಮತ್ತು ಕೌಂಡಿನ್ಯ ಗೋತ್ರದ IV ವೆಂಕಟೇಶ ದೀಕ್ಷಿತರೆಂಬುವರು, ಆತ್ರೇಯ ಸಗೋತ್ರದ V ಮಂಜುಭಟ್ಟ ರೆಂಬುವರು, VII ಕೌಶಿಕ ಗೋತ್ರದ ನರಸಿಂಹಜೋಯಿಸರು. Iನೇ ಶಿವಯ್ಯನವರಿಗೆ ೧೭೮೫ರಲ್ಲಿ ಬಸವಾನಿ ಸುಬ್ಬಯ್ಯಪುರಾಣಿಕರ ಮಗಳನ್ನು ತಂದು ಮದುವೆಯಾಯಿತು. ಅವಳಿಗೊಬ್ಬ ಮಗ ಶಿವರಾಮ. ಅವಳಿಗೆ ಗೂರಲು ರೋಗ ಇತ್ತು. ಆದ್ದರಿಂದ ಅವರಿಗೆ ಮತ್ತೊಂದು ಮದುವೆ ಯೋಚನೆ ಇತ್ತು. ಆದರೆ ಮೊದಲನೆಯ ಹೆಂಡತಿ ಇರುವಾಗ ಹೇಗೆ ಸಾಧ್ಯ? ಇತ್ತ IIIನೇ ರಾಮಯ್ಯನವರಿಗೆ ವೆಂಕಟಪತಯ್ಯ ಎಂಬ ಮಗ; ಸಾವಿತ್ರಮ್ಮ ಸುಬ್ಬಮ್ಮ ಎಂಬ ಎರಡು ಹೆಣ್ಣುಮಕ್ಕಳು. ಇಲ್ಲಿ ಪಂಜುಗಳ್ಳರ ಬಾಧೆ ಇತ್ತು. ರಾತ್ರಿ ಪಂಜು ಹಿಡುಕೊಂಡು ಬಂದು ಲೂಟಿ ಮಾಡುತ್ತಿದ್ದರು. ಹೆಣ್ಣುಮಕ್ಕಳನ್ನು ಅಪಹರಿಸುತ್ತಿದ್ದರು. ರಾಮಯ್ಯನ ಎರಡನೆಯ ಮಗಳು ಸುಬ್ಬಮ್ಮನನ್ನು ಅಪಹರಿಸಿದರು. ಸುಬ್ಬಮ್ಮನಿಗೂ ಎಂಟು ವರ್ಷ. ಅವಳನ್ನು ಸಾಬಮ್ಮ ಎಂದು ಕರೆಯುತ್ತಿದ್ದರು. ಆರು ತಿಂಗಳನಂತರ ಅವರು ಅವಳನ್ನು ಇಲ್ಲಿಗೇ ಬಿಟ್ಟುಹೋದರೂ ಊರಲೆಲ್ಲಾ ಅವಳಿಗೆ ಬಹಿಷ್ಕಾರ ಭಾವನೆಯಿತ್ತು. ಆದರೂ ಪ್ರತ್ಯಕ್ಷವಾಗಿ ಬಹಿಷ್ಕಾರ ಹಾಕಿರಲಿಲ್ಲ. ಏಕೆಂದರೆ ಅವಳಿನ್ನೂ ಕನ್ಯೆ. ಅಕ್ಕನ ಮದುವೆಯಲ್ಲಿ ರಾಮಯ್ಯನವರು ಸುಬ್ಬಮ್ಮನನ್ನು ಊಟ ಬಡಿಸಲು ಕಳಿಸಿದರು. ಇವರು ಶ್ಯಾನುಭೋಗರು, ದೊಡ್ಡ ವ್ಯಕ್ತಿಗಳು. ಆದ್ದರಿಂದ ಎಲ್ಲರೂ ಸುಮ್ಮನಾಗಿಬಿಟ್ಟರು. ಅಂದಿನಿಂದ ಇವರು ಸಮಾಜದಲ್ಲಿ ಬೆರೆತುಹೋದರು. ಆಗ ಇವಳನ್ನು ಶಿವಯ್ಯನಿಗೆ ಕಟ್ಟಲು ಯೋಚಿಸಿದರು. ಸ್ವಲ್ಪ ಕಳಂಕವಿದ್ದದ್ದರಿಂದ ಇವಳೆಡೆಗೆ ಯಾರೂ ಬರುತ್ತಿರಲಿಲ್ಲ. ಹೆಂಡತಿಯಿದ್ದದ್ದರಿಂದ ಶಿವಯ್ಯನಿಗೆ ಯಾರೂ ಕೊಡುತ್ತಿರಲಿಲ್ಲ. ಹೀಗಾಗಿ ಅವರ ಜೋಡಿ ಹೊಂದಿತು. ಒಬ್ಬರಿಗೂ ಗೊತ್ತಿಲ್ಲದಂತೆ (ಮುಖ್ಯವಾಗಿ ಹೆಂಡತಿಗೆ ಗೊತ್ತಿಲ್ಲದಂತೆ) ರಾತ್ರೋರಾತ್ರಿ ಮದುವೆ ನಡೆಯಿತು. ಸಂಗತಿ ತಿಳಿದ ಹಿರಿ ಹೆಂಡತಿಯು ಮಗನನ್ನು ಕರಕೊಂಡು ತವರಿಗೆ ತೆರಳಿದಳು. ಆ ಹುಡುಗ ಅಜ್ಜನ

ಮನೆಯಲ್ಲೇ ವೇದಾಧ್ಯಯನ ಮಾಡಿದ. ಅವನನ್ನು 'ಕರಡಿ ಮಾವ' ಎಂದು ಕರೆಯುತ್ತಿದ್ದರು. ಇತ್ತ ಸಾವಿತ್ರಮ್ಮನಿಗೆ ಮೂರು ಹೆಣ್ಣು, ಮೂರು ಗಂಡು. ಮೊದಲನೆಯವಳು ನಾಗಮ್ಮ, ಹಿಂದೆ ಹೇಳಿದ ಶತಾಯುಷಿ. ಅವಳನ್ನು ಭಾರದ್ವಾಜ ಗೋತ್ರದ ವೆಂಕಟರಮಣ ಎಂಬುವರಿಗೆ ಕೊಟ್ಟಿತ್ತು. ಅವರಿಗೆ ವೆಂಕಟನರಸಿಂಹ ಎಂಬ ಮಗನಿದ್ದ. ಎರಡನೆಯವನು ಕೌಂಡಿನ್ಯ ಗೋತ್ರದ ಶ್ರೀನಿವಾಸ ಎಂಬುವರಿಗೆ ದತ್ತು ಕೊಟ್ಟಿತ್ತು. ಅವರು ಅವನಿಗೆ ತನ್ನ ತಂದೆ ಹೆಸರು ವೆಂಕಟನರಸಿಂಹ ಎಂದೇ ನಾಮಕರಣ ಮಾಡಿದರು. ಅವರ ಮಗ ಶ್ರೀನಿವಾಸ ನನ್ನ ಭಾವ. ಅಣ್ಣ ವೆಂಕಟನರಸಿಂಹನಿಗೆ ನಂಜುಂಡ ಎಂಬ ಪುತ್ರ. ಅವರಿಗೆ ವೆಂಕಟರಮಣ-ವೆಂಕಟನರಸಿಂಹ ಎಂಬಿಬ್ಬರು ಪುತ್ರರು, ನಾಲ್ಕು ಹೆಣ್ಣು ಮಕ್ಕಳು. ಅವರೆಲ್ಲಾ ಈಗಲೂ ಇರುವವರು. ನಾಗಮ್ಮನ ತಂಗಿ ತಿಮ್ಮಮ್ಮನನ್ನು ಭಾರದ್ವಾಜಗೋತ್ರದ ಶ್ಯಾನುಭೋಗ್ ವೆಂಕಟರಾಮ ಎಂಬುವರಿಗೆ ಕೊಟ್ಟಿತ್ತು. ಅವರಿಗೆ ಮೂರು ಗಂಡು, ಮೂರು ಹೆಣ್ಣು, ಈಗ ಅವರಾರೂ ಇಲ್ಲ. ಹಿರಿಮಗ ಗೋಪಾಲ. ಅವರ ಮೊಮ್ಮಗ ಗೋಪಾಲ ಮತ್ತು ಪುತ್ರರು ಇರುವವರು. ಮೂರನೆ ನರಸಮ್ಮನನ್ನು ಆತ್ರೇಯ ಗೋತ್ರದ ಮಂಜುಭಟ್ಟರ ಮಗ ವೆಂಕಟರಾಮಾವಧಾನಿಗಳಿಗೆ ಕೊಟ್ಟಿತ್ತು. ಅವರು ಘನಪಾಠಿಗಳು ಮತ್ತು ನನ್ನ ಮಾತಾಮಹ ಶ್ರೀನಿವಾಸಾವಧಾನಿಗಳ ತಂದೆ. ಅವರ ಹಿರಿಯ ಮಗಳು ಮಹಾಲಕ್ಷ್ಮಮ್ಮನನ್ನು ಕೌಶಿಕಗೋತ್ರದ ನರಸಿಂಹಜೋಯಿಸರ ಮೊಮ್ಮಗ ನರಸಿಂಹಜೋಯಿಸರ ಪುತ್ರ ರಾಮಾಜೋಯಿಸರಿಗೆ ಕೊಟ್ಟಿತ್ತು. ಅವರಿಗೆ ನಾಲ್ಕು ಗಂಡು, ಒಂದು ಹೆಣ್ಣು. ಕೊನೆಯವರು ರಾಮಕೃಷ್ಣಜೋಯಿಸರು ಅತಿಪ್ರಸಿದ್ಧರು ಮತ್ತು ನನ್ನ ಬಾಲ್ಯಗುರುಗಳು. ಅಲ್ಲದೆ ನನ್ನ ಚಿಕ್ಕಮ್ಮನ ಪತಿ- ಚಿಕ್ಕಪ್ಪ. ಅವರ ಪುತ್ರ ಚಿದಂಬರ ಜೋಯಿಸ. ಆತ ಕವಿತಾ ಕುಶಲ ಮತ್ತು ಸಕಲ ಕಲೆಗಳಲ್ಲೂ ಪ್ರವೀಣ. ಅವರದೇ ಪಡಿಯಚ್ಚುಳ್ಳ ಪುತ್ರಪೌತ್ರರೆಲ್ಲರೂ ಇರುವವರು. ಅವಧಾನಿಗಳ ಕಿರಿಯ ಮಗಳು ಮಂಜಮ್ಮ. ಅವರೇ ನಮಗೆ ಹಿಂದಿನ ಎಲ್ಲ ಕಥೆಗಳನ್ನೂ ಹೇಳುತ್ತಿದ್ದರು. ಅವರು ಬಾಲ್ಯದಲ್ಲಿ ಅವರ ಅಜ್ಜಿಯಿಂದ ಎಲ್ಲ ಕಥೆಗಳನ್ನೂ ತಿಳಿದಿದ್ದರಂತೆ. ಕೌಂಡಿನ್ಯಗೋತ್ರದ ವೆಂಕಟೇಶ ದೀಕ್ಷಿತರ ಮೊಮ್ಮಗ ವೆಂಕಟೇಶ ದೀಕ್ಷಿತರು. ಅವರ ಮಗ ಸುಬ್ರಹ್ಮಣ್ಯದೀಕ್ಷಿತರು. ಅವರ ಹೆಂಡತಿ ಭಾಗೀರಥಮ್ಮ. ಅವರಿಗೆ ನಾಲ್ಕು ಗಂಡು, ಒಂದು ಹೆಣ್ಣು. ಹಿರಿಯವರು ವೆಂಕಟೇಶ ದೀಕ್ಷಿತರು; ಅವರ ಮೊಮ್ಮಕ್ಕಳು ಈಗ ಇರುವವರು. ಎರಡನೆಯವರು ರಾಮಜ್ಜ. ಅವರಿಗೆ ಮದುವೆಯಾಗಲಿಲ್ಲ. ಮೂರನೆಯವರು ಸುಬ್ರಹ್ಮಣ್ಯ ದೀಕ್ಷಿತರು. ಅವರಿಗೆ ಮೊದಲು ನನ್ನ ದೊಡ್ಡಮ್ಮನನ್ನು ಕೊಟ್ಟಿತ್ತು. ಅನ್ನಪೂರ್ಣೆ. ಅವರ ಮಗ ರಾಮು ನನ್ನ ತಮ್ಮ. ವಾಧೂಲ ಗೋತ್ರದ ವಿಶ್ವನಾಥರಿಗೆ (ನಮ್ಮ ಮೂಲಪುರುಷರು) ಇಬ್ಬರು ಮಕ್ಕಳು ಸುಬ್ರಹ್ಮಣ್ಯ, ಶ್ರೀನಿವಾಸ. ಅವರು ಹಿರಿಯಂಗಳದಲ್ಲಿದ್ದರು. ಅವರ ಹೆಂಡತಿ ಮಹಾಲಕ್ಷ್ಮಿ, ತಾಯಿ ಜಾನಕಿ. ತಂದೆ ಇರಲಿಲ್ಲ. ಅವರಿಗೆ ನರಸಿಂಹ, ವಿಶ್ವನಾಥ, ರಾಮ ಎಂಬ ಪುತ್ರರು. ನರಸಿಂಹನ ಮಗ ಸುಬ್ರಹ್ಮಣ್ಯ. ಸುಬ್ರಹ್ಮಣ್ಯನ ಪುತ್ರರು ವಿಶ್ವನಾಥ, ಶಂಕರ (ನರಸಿಂಹ). ವಿಶ್ವನಾಥಶಾಸ್ತ್ರಿಗಳಿಗೆ ಸುಬ್ರಹ್ಮಣ್ಯಶಾಸ್ತ್ರಿ (ನನ್ನ ಷಡ್ಡಕರು). ಇವರಾರೂ ಈಗಿಲ್ಲ. ಸುಬ್ರಹ್ಮಣ್ಯಶಾಸ್ತ್ರಿಗಳ ಮಗ ಶಿವರಾಮಶಾಸ್ತ್ರಿ. ಅವರ ಪುತ್ರರು ರಾಮಶಾಸ್ತ್ರಿಯೆಂಬುವರು ನಮ್ಮ ಪಿತಾಮಹ. ಅವರಿಗೆ ಕುಮಾರಶಾಸ್ತ್ರಿ, ಸೀತಾರಾಮಶಾಸ್ತ್ರಿ, ಸುಬ್ರಹ್ಮಣ್ಯಶಾಸ್ತ್ರಿ ಎಂದು ನಾಲ್ಕು ಪುತ್ರರು. ಕುಮಾರಶಾಸ್ತ್ರಿಗೆ ಗಂಡು ಮಕ್ಕಳಿಲ್ಲ. ಸೀತಾರಾಮನನ್ನು ದೊಡ್ಡಪ್ಪ ವಿಶ್ವನಾಥನಿಗೆ ದತ್ತುಕೊಟ್ಟರು. ಆದರೆ ಅವರ ಮಕ್ಕಳಾರೂ ಉಳಿಯಲಿಲ್ಲ. ಶ್ಯಾಮಶಾಸ್ತ್ರಿಗಳು ನನ್ನ ತಂದೆ. ಸುಬ್ರಹ್ಮಣ್ಯಶಾಸ್ತ್ರಿಗೆ ಗೋಪಾಲಮೂರ್ತಿ ಎಂಬ ಪುತ್ರ. ಅವರಿಗೆ ಪ್ರಕಾಶ, ಅನಂತ ಎಂಬ ಪುತ್ರರು. ಇವರಿಬ್ಬರು ಪುತ್ರ ಪುತ್ರಿಯರೊಡನೆ ಇರುವವರು. ಹಿಂದಕ್ಕೆ ಎರಡನೇ ಶ್ರೀನಿವಾಸನಿಗೆ ಶಿವಯ್ಯನ ಅಕ್ಕ ಭಾಗ್ಯಮ್ಮನನ್ನು ಕೊಟ್ಟಿತ್ತು. ಲಕ್ಷ್ಮೀನಾರಾಯಣ, ಲಕ್ಷ್ಮಣ ಎಂಬ ಪುತ್ರರು. ಲಕ್ಷ್ಮೀನಾರಾಯಣನಿಗೆ ಶೃಂಗೇರಿ ಲಕ್ಷ್ಮೀನಾರಾಯಣ ಉಪಾಧ್ಯರ ಮಗಳು ಸುಬ್ಬಮ್ಮನನ್ನು ಕೊಟ್ಟಿತ್ತು. ಅವರಿಗೆ ಶ್ರೀನಿವಾಸ, ಸುಬ್ರಹ್ಮಣ್ಯ ಎಂಬಿಬ್ಬರು ಮಕ್ಕಳು. ಸುಬ್ರಹ್ಮಣ್ಯನ ಮಗ ವೆಂಕಟರಮಣ. ಸುಬ್ರಹ್ಮಣ್ಯರು ಕ್ರಮಾಂತ ಅಧ್ಯಯನ ಮಾಡಿ ಊರಿನ ಪೌರೋಹಿತ್ಯವನ್ನೆಲ್ಲಾ ಮಾಡಿಸುತ್ತಿದ್ದರು. ಸುಬ್ಬಾವಧಾನಿಗಳು ಎಂದು ಪ್ರಸಿದ್ಧರಾಗಿದ್ದರು. ವೆಂಕಟರಮಣಾ ವಧಾನಿಗಳೂ ಪೌರೋಹಿತ್ಯ ಮಾಡಿಸುತ್ತಿದ್ದರು. ಅವರಿಗೆ ನನ್ನ ಚಿಕ್ಕಮ್ಮ ಮಹಾಲಕ್ಷ್ಮಮ್ಮನನ್ನು ಕೊಟ್ಟಿತ್ತು. ಅವರಿಗೆ ಕೃಷ್ಣಮೂರ್ತಿ, ಸೂರ್ಯ ನಾರಾಯಣ, (ಘವತಿ), ಸೀತಾರಾಮ, ಸುಬ್ರಹ್ಮಣ್ಯ(ಘವತಿ)–ಈ ಗಂಡು ಮಕ್ಕಳು, ಸಾವಿತ್ರಮ್ಮ, ಸುಭದ್ರಾ (ಘವತಿ) ಎಂಬ ಪುತ್ರಿಯರು. ಸಾವಿತ್ರಮ್ಮನ ಪತಿ ಲೌಕಿಕ ವೈದಿಕ ನಿಷ್ಣಾತರಾದ ರಾಮಶರ್ಮರು (ಈಗಿಲ್ಲ). ಸಾವಿತ್ರಮ್ಮ ಲೌಕಿಕ ವೈದಿಕ ಧರ್ಮ ಜ್ಞಾನ ಹೊಂದಿ ನಿಸ್ಸ್ವಾರ್ಥತೆಯಿಂದ ದೇಶಸೇವೆಯಲ್ಲೇ ತಮ್ಮ ಆಯುಸ್ಸನ್ನು ಕಳೆದರು. ಅವರಿಗೆ ಸ್ವಂತ ಮಕ್ಕಳಿಲ್ಲ. ಆದರೆ ಅನೇಕ ಅನಾಥ ಗಂಡು ಮತ್ತು ಹೆಣ್ಣುಮಕ್ಕಳನ್ನು ಮನೆಯಲ್ಲೇ ಇಟ್ಟುಕೊಂಡು ವಿದ್ಯಾಭ್ಯಾಸಾದಿ ಪುರೋಭಿವೃದ್ಧಿ ಮಾಡಿರುವವರು. ಅವರಿಗೆ ಕೈಕಾಲು ಸಂಧಿಗಳು ವಾಯುಗ್ರಸ್ತವಾಗಿದ್ದರೂ ವೃದ್ಧಾಪ್ಯದಲ್ಲೂ ಈ ಕಾರ್ಯವನ್ನು ನಡೆಸಿದರು.

ನನ್ನದು ವಾಧೂಲಗೋತ್ರ. ಇಲ್ಲಿರುವ ಎಲ್ಲ ವಾಧೂಲ ಗೋತ್ರದ ಕುಟುಂಬಗಳ ಮೂಲಪುರುಷರು ವೇ||ಬ್ರ||ಶ್ರೀ ವಿಶ್ವನಾಥಶಾಸ್ತ್ರಿಗಳೆಂಬುವರು. ಅವರಿಂದ ಹಿಡಿದು ಇಲ್ಲಿಯವರೆಗಿನ ಎಲ್ಲ ತಲೆಮಾರುಗಳ ಪೂರ್ಣ ಅರಿವು ನಮಗಿದೆ. ಹೀಗಾಗಿ ಸ್ಪಷ್ಟವಾದ ನಮ್ಮ ವಂಶವೃಕ್ಷವನ್ನು ಬರೆದಿಟ್ಟುಕೊಂಡಿದ್ದೇವೆ. ಅದರಿಂದಾಗಿ ಆಶೌಚಾಚರಣೆಯಲ್ಲಿ ದಶರಾತ್ರ ತ್ರಿರಾತ್ರ ನಿರ್ಣಯ ಸುಲಭವಾಗಿದೆ. ಪ್ರಕೃತ ಎಂಟನೇ ತಲೆಯವರೂ ಇದ್ದು ಅವರು ತ್ರಿರಾತ್ರವನ್ನು

ಆಚರಿಸುತ್ತಿದ್ದಾರೆ. ಇಲ್ಲಿಯ ನಮ್ಮ ಪೂರ್ವಿಕರು ಎಂದರೆ ಇತರ ಗೋತ್ರದವರು ಯಾರೂ ವಂಶವೃಕ್ಷ ಬರೆದಿಟ್ಟಿಲ್ಲ. ಆದ್ದರಿಂದ ಆತ್ರೇಯ ಭರದ್ವಾಜಾದಿಗೋತ್ರಗಳಲ್ಲಿ ಈಗ ಎಂದರೆ ೬೦-೭೦ ವರ್ಷ ಗಳಿಂದ ತ್ರಿರಾತ್ರಾಚರಣೆಯಿದ್ದು ಅದು ಎಂದಿಗೆ ಕೊನೆಗೊಳ್ಳುವುದೆಂದು ನಿರ್ಧರಿಸಲಾಗಿಲ್ಲ. ಬೀರೂರು ಚಿದಂಬರಜೋಯಿಸರೆಂಬುವರು (ನನ್ನ ತಮ್ಮ ಎಂದರೆ ಚಿಕ್ಕಮ್ಮನ ಮಗ) ಇಲ್ಲಿಯ ಎಲ್ಲಾ ಗೋತ್ರಗಳ ವಂಶವೃಕ್ಷಗಳನ್ನು ಹಿಂದಿನ ವೃದ್ಧರಿಂದ ತಿಳಿದು ಅತಿಸ್ಫುಟವಾಗಿ ಬರೆದಿಟ್ಟಿರುವರು. ಅದನ್ನು ಮುಂದುವರಿಸಿಕೊಂಡು ಹೋದರೆ ಮುಂದಿನ ಪೀಳಿಗೆಗೆ ಅನುಕೂಲವಾಗುವುದು.

ನಿಜಜೀವನದ ಕೆಲವು ಮರೆಯಲಾಗದ ಸಂಗತಿಗಳನ್ನು ಮೆಲುಕುವುದು ಉತ್ತಮ. ಸುಬ್ಬರಾಯರು ಎಂಬ ನಮ್ಮ ಚಿಕ್ಕಪ್ಪನವರೊಬ್ಬರಿದ್ದರು. ಅವರು ಇಂಟರ್‌ಮೀಡಿಯೆಟ್ ಓದಿ ಮಾರೀಕಣಿವೆ ಡ್ಯಾಂನಲ್ಲಿ ಕೆಲಸ ಮಾಡುತ್ತಿದ್ದರು. ಆಗ ಸ್ವಾತಂತ್ರ್ಯ ಚಳವಳಿಯ ಅಲೆಯೆದ್ದಿತ್ತು. ಅವರು ಗಾಂಧಿ ವಿಚಾರಧಾರೆಗೆ ಮನಸೋತು ಕೆಲಸಕ್ಕೆ ರಾಜೀನಾಮೆಯಿತ್ತು ಚಳವಳಿಯಲ್ಲಿ ಭಾಗಿಗಳಾದರು. 'ನೇಚರ್ ಕ್ಯೂರ್' ಎಂಬ ಪುಸ್ತಕವನ್ನೋದಿ ಅದಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ಫ್ರೂಟ್ಸ್ ಅಂಡ್ ನಟ್ಸ್ – ಇದೇ ಮನುಷ್ಯನ ನೈಜ ಆಹಾರವೆಂದು ದೃಢಗೊಂಡು ತಣಿಗೆ ಬೈಲು ಸಮೀಪದ ಮುಂಚತ್ತೇವರು ಎಂಬ ಗ್ರಾಮದಲ್ಲಿ ಜಮೀನು ಮಾಡಿ ಸ್ವತಃ ಉತ್ತು ಹಣ್ಣು ಹಂಪಲನ್ನು ಬೆಳೆದು ಅದನ್ನೇ ಆಹಾರವಾಗಿ ಉಪಯೋಗಿಸುತ್ತಿದ್ದರು. ಆಗ ನಾನು ಒಂದೆರಡು ತಿಂಗಳು ಅವರ ಜೊತೆಯಲ್ಲಿದ್ದೆ. ಅವರು ದಿನಾ ನೇಚರ್ ಕ್ಯೂರ್ ಓದಿ, ಓದಿ ಅರ್ಥಹೇಳುತ್ತಿದ್ದರು. ಅದರಿಂದ ನನಗೆ ಆರೋಗ್ಯ ಕಾಪಾಡಿಕೊಳ್ಳಲು ಬಹಳ ಅನುಕೂಲವಾಗಿದೆ ಮತ್ತು ಅವರು ಸ್ವಾವಲಂಬಿಗಳು. ನಮ್ಮ ಉಪಯೋಗಕ್ಕೆ ಬೇಕಾದ್ದೆಲ್ಲವನ್ನೂ ನಾವೇ ಮಾಡಿಕೊಳ್ಳಲೇ ಬೇಕೆಂಬುದು ಅವರ ತತ್ತ್ವ. ಅದರಂತೆ ಅವರು ಚಾಪೆಯನ್ನು ಸ್ವತಃ ಹೆಣೆಯುತ್ತಿದ್ದರು. ಬಿದಿರಿನಲ್ಲಿ ಭತ್ತದ ಕಣಜವನ್ನು ಬಹು ಸೊಗಸಾಗಿ ತಯಾರಿಸುತ್ತಿದ್ದರು. ಗಾಂಧೀಜಿಯಂತೆ ತುಂಡು ಬಟ್ಟೆಯನ್ನೇ ಉಡುತ್ತಿದ್ದರು. ಬಲ್ಲವರು ಯಾರು ಸಿಕ್ಕಿದರೂ ಈ ಪ್ರಕೃತಿ ಚಿಕಿತ್ಸೆಯನ್ನೇ ಚರ್ಚಿಸುತ್ತಿದ್ದರು. ಅಂಡೇಕುಳಿ ಮಂಜಯ್ಯನೆಂಬುವರು ನಮ್ಮ ಸೋದರತ್ತೆಯ ಮಗ. ತೀರ್ಥಹಳ್ಳಿ ತಾಲ್ಲೂಕು ಬಸವಾನಿ ಗ್ರಾಮದ ಅಂಡೇಕುಳಿಯಲ್ಲಿದ್ದರು. ಅವರು ಗಾಂಧೀಜಿಯವರಿಂದ ಪ್ರಭಾವಿತರಾಗಿ ದೇಶಕ್ಕಾಗಿ ತಮ್ಮನ್ನು ಪೂರ್ಣವಾಗಿ ಅರ್ಪಿಸಿಕೊಂಡು ಬಿಟ್ಟಿದ್ದರು. ಅವರು ನಿರ್ವ್ಯಾಜವಾದ ಸ್ವಾತಂತ್ರ್ಯ ನಿಷ್ಠಾವಂತರು. ಸ್ವಾತಂತ್ರ್ಯ ಚಳವಳಿಯಲ್ಲಿ ಅನೇಕ ಬಾರಿ ಜೈಲಿಗೆ ಹೋಗಿ ಬಂದಿದ್ದರು. ಅವರ ಮಕ್ಕಳು ಕೂಡ ಅದೇ ಮಾರ್ಗದಲ್ಲೇ ಮುನ್ನಡೆದು ಶೀಲವಂತಿಕೆಯ ಜೀವನವನ್ನು ನಡೆಸುತ್ತಿದ್ದರು.

ರಾಮಕೃಷ್ಣಜೋಯಿಸರೆಂಬುವರು ಬೀರೂರಲ್ಲಿ ಜ್ಯೋತಿಷ್ಯ ಮತ್ತು ಪೌರೋಹಿತ್ಯ ನಡೆಸುತ್ತಿದ್ದರು. ಅವರು ನಮ್ಮ ಚಿಕ್ಕಪ್ಪ -ಚಿಕ್ಕತಾಯಿಯ ಪತಿ. ಅವರು ಶೃಂಗೇರಿಯಲ್ಲಿ ವಿದ್ಯಾಭ್ಯಾಸ ಮಾಡಿದರು. ಸಂಸ್ಕೃತದಲ್ಲಿ ಪಂಡಿತರು. ಶ್ರೀಶ್ರೀಚಂದ್ರಶೇಖರ ಭಾರತಿಗಳೊಂದಿಗೆ ಅವರ ಪೂರ್ವಾಶ್ರಮದಲ್ಲಿ ಸಹಪಾಠಿಗಳಾಗಿದ್ದರು. ಪುರಾಣಗಳನ್ನು ಹೇಳುವುದು ಅವರ ಮತ್ತೊಂದು ಹವ್ಯಾಸವಾಗಿತ್ತು. ಇನ್ನೊಂದು ವಿಶೇಷ ಅವರ ಮನೆ ಧರ್ಮಛತ್ರವಿದ್ದಂತೆ. ಬೇರೆ ಊರುಗಳಿಂದ ಬಂದವರು ಅವರ ಮನೆಯಲ್ಲೇ ತಂಗುತ್ತಿದ್ದರು. ಸ್ನಾನ ಊಟ ತಿಂಡಿ ಎಲ್ಲಾ ಯಾವುದೇ ಸಂಕೋಚವಿಲ್ಲದೆ ನಡೆಯುತ್ತಿತ್ತು. ಅವರಿಗೆ ಹೆಚ್ಚೇನೂ ವರಮಾನವಿರಲಿಲ್ಲ. ಆದರೆ ಅವರ ಉದಾರ ಭಾವನೆಯೇ ಎಲ್ಲವನ್ನೂ ನಡೆಸಿಕೊಂಡು ಹೋಗುತ್ತಿತ್ತು. ಅವರ ಮಗ ಚಿದಂಬರ ಜೋಯಿಸರೂ ತದ್ವತ್ತಾಗಿದ್ದರು. ಅವರಿಗೆ ಕನ್ನಡ ಮತ್ತು ಸಂಸ್ಕೃತಗಳಲ್ಲಿ ಕವಿತೆಯೆಂಬುದು ಲೀಲಾಜಾಲ.

ಹಿಂದೆ ನಮ್ಮೂರಲ್ಲಿ ಸಾಂಸ್ಕೃತಿಕ ಚಟುವಟಿಕೆ, ಒಂದು ಸಂಘ ಇಂಥಾದ್ದು ಇರಲಿಲ್ಲ. ಎಲ್ಲರೂ ತಂತಮ್ಮ ಕೃಷ್ಯಾದಿ ಕಾರ್ಯಗಳಲ್ಲಿ ಮಗ್ನರಾಗಿ ಪ್ರತ್ಯೇಕತೆಯಿಂದ ಇರುತ್ತಿದ್ದರು. ಹೀಗಾಗಿ ಪರಸ್ಪರ ಸ್ನೇಹ ಸೌಹಾರ್ದಗಳ ವೃದ್ಧಿಗೆ ಅವಕಾಶ ಇರಲಿಲ್ಲ. ಈಗ ಇಲ್ಲಿನ ಯುವಕರೆಲ್ಲಾ ನಿತ್ಯಜೀವನವನ್ನು ಗೌಣವಾಗಿಟ್ಟುಕೊಂಡು, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತಮ್ಮನ್ನು ಅರ್ಪಿಸಿಕೊಳ್ಳುತ್ತಿರುವರು. ಅವರಲ್ಲಿ ಎಲ್.ಜಿ. ಅನಂತ ನನ್ನ ಅಣ್ಣ ಗೋಪಾಲಮೂರ್ತಿಗಳ ಮಗ ವಿಶೇಷವಾಗಿ ಇದನ್ನು ನಡೆಸುತ್ತಿರುವನು. ಅವನ ಉತ್ಸಾಹ ಮತ್ತು ಕರ್ತೃತ್ವಶಕ್ತಿಯಿಂದಾಗಿ ಇಲ್ಲಿಯ ಮಹೋನ್ನತ ರಾಮಮಂದಿರವು ನಿರ್ಮಾಣವಾಗಿರುವುದು. ಇನ್ನೂ ಅನೇಕ ಯುವಕ ಯವತಿಯರು ಹಲವಾರು ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಕಾರ್ಯಕ್ರಮಗಳಲ್ಲಿ ನಿರತರಾಗಿರುವರು. ಇದರಿಂದಾಗಿ ಪರಸ್ಪರ ಸ್ನೇಹ ಸೌಹಾರ್ದ ವೃದ್ಧಿಯಾಗಿ ಎಲ್ಲರೂ ಏಕಕುಟುಂಬದಂತೆ ಇರುವರು. ಇಲ್ಲಿ ಆಸ್ತಿಕ ವಿವರ್ಧಿನಿ ಸಂಘವೆಂಬ ಸಂಸ್ಥೆ ಏರ್ಪಟ್ಟಿದ್ದು ಅನೇಕ ಶೈಕ್ಷಣಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ವಿಚಾರಗಳು ಚರ್ಚಿಸಲ್ಪಟ್ಟು ನಡೆಸಲ್ಪಡುತ್ತಿದ್ದು ಸಮಾಜದ ಪುರೋಭಿವೃದ್ಧಿಗೆ ನಾಂದಿ ಹಾಡುತ್ತಿವೆ. ಇದರಿಂದಾಗಿ ಸಮಾಜದ ನೈತಿಕ ಮಟ್ಟ ಉಜ್ವಲವಾಗಲಿ ಎಂದು ಹಾರೈಸುವೆ.

ಇತಿ ಶಂ

ನನ್ನ ಬದುಕು

ಪ್ರೊ|| ಆರ್. ಎನ್. ದೊರೆಸ್ವಾಮಿ

ನನ್ನ ಬದುಕು*

'ನನ್ನ ಬದುಕು' ಎಂಬ ಶೀರ್ಷಿಕೆಯ ಈ ಪುಸ್ತಕ ನನ್ನ ಪುನರ್ರಚಿತ ಆತ್ಮಕಥನವೇ ಆಗಿದೆ. ಈ ಹಿಂದೆ ೧೯೮೯ರಲ್ಲಿ ಪ್ರಕಟಿತವಾದ ನನ್ನ ಪುಸ್ತಕ 'ಲಕ್ಷ್ಮೀರಮಣ ಕೃತಿಮಂಜರಿ'ಯಲ್ಲಿ ನನ್ನ ಸ್ವಂತ ಗೇಯರಚನೆಗಳ ಜತೆಗೆ ಆತ್ಮಕಥನವೂ ಸೇರಿದೆ. ಇದನ್ನು ಓದಿದ ನನ್ನ ಸಹೃದಯ ಮಿತ್ರರು, ಅಭಿಮಾನಿಗಳು ತಮ್ಮ ಅಪಾರ ಮೆಚ್ಚುಗೆಯನ್ನು ಸೂಚಿಸಿ ನನ್ನನ್ನು ಪ್ರೋತ್ಸಾಹಿಸಿದ್ದಾರೆ. ಇವರಲ್ಲಿ ಪ್ರಮುಖರು ಡಾ|| ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಹಾಗೂ ಡಾ|| ಪ್ರಣತಾರ್ತಿಹರನ್. ಇವರಿಗೆಲ್ಲಾ ನಾನು ಋಣಿ.

ಪ್ರಸ್ತುತ ಈ 'ನನ್ನ ಬದುಕು' ಪುಸ್ತಕವನ್ನು ಮತ್ತೆ ನಾನು ಬರೆಯಲು ಡಾ|| ಪ್ರಣತಾರ್ತಿಹರನ್ ಅವರ ಪ್ರೇರಣೆ ಪ್ರೋತ್ಸಾಹಗಳೇ ಮುಖ್ಯ ಕಾರಣ. ಸಂಕೇತಿ ಜನಾಂಗದ ಬಗೆಗೆ ಆಳವಾದ ಅಧ್ಯಯನ, ಸಂಶೋಧನೆ ನಡೆಸಿರುವ ಅವರು ನನ್ನ ಬದುಕಿನ ಹೆಚ್ಚಿನ ವಿವರಗಳು, ಆಗಿನ ಜನಜೀವನ, ಸಂಸ್ಕೃತಿ, ಸಾಮಾಜಿಕ ಪರಿಸರ ಇತ್ಯಾದಿ ವಿಷಯಗಳನ್ನು ಇನ್ನೂ ಸವಿಸ್ತಾರವಾಗಿ ಬರೆಯುವಂತೆ ನನ್ನನ್ನು ಪ್ರೇರೇಪಿಸಿದುದರ ಫಲವಾಗಿ ಈ ಪುಸ್ತಕ ಸಿದ್ಧವಾಗಿದೆ...

ಅ. ಪೂರ್ವರಂಗ

ಸಂಗೀತ, ಸಾಹಿತ್ಯ, ವೇದಾಧ್ಯಯನಗಳಿಗೆ ಹೆಸರಾದ ಸಂಕೇತಿ ಜನಾಂಗದಲ್ಲಿ ನಾನು ಹುಟ್ಟಿದ್ದು (೧೨-೧೨-೧೯೧೬) ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ರುದ್ರಪಟ್ಟಣದಲ್ಲಿ.

ಕಾವೇರಿ ತೀರದ ಈ ಪುಟ್ಟ ಗ್ರಾಮ ಸಂಕೇತಿ ಅಷ್ಟಗ್ರಾಮಗಳಲ್ಲಿ ಒಂದು. ಬೆಟ್ಟದಪುರ ಮತ್ತು ಕೌಶಿಕ ಈ ಎರಡು ಗ್ರಾಮಗಳು ಈ ಜನಾಂಗದ ಪ್ರಮುಖ ನೆಲೆಗಳು. ಕ್ರಮೇಣ ಅಕ್ಕಪಕ್ಕದ ಕೆಲವು ಗ್ರಾಮಗಳಲ್ಲಿ ಈ ಸಮುದಾಯದ ಜನರು ನೆಲೆಸಿ ಸಂಗೀತ, ಜ್ಯೋತಿಶ್ಶಾಸ್ತ್ರ , ಸಾಹಿತ್ಯ, ವ್ಯವಸಾಯ, ವೇದಾಧ್ಯಯನ ಇವುಗಳಲ್ಲಿ ನಿರತರಾಗಿ ತಮ್ಮ ಬೌದ್ಧಿಕ ಹಾಗೂ ದೈಹಿಕ ಸಾಮರ್ಥ್ಯಗಳಿಂದ ಬಹಳ ಪ್ರಸಿದ್ಧರಾಗಿದ್ದರು.

ಅವರ ಹುಟ್ಟುಗುಣಗಳಾದ ಕರ್ತವ್ಯನಿಷ್ಠೆ, ಪ್ರಾಮಾಣಿಕತೆ, ಸ್ನೇಹಪರತೆ ಹಾಗೂ ನಿರ್ದಾಕ್ಷಿಣ್ಯವಾದ ಮಾತುಗಾರಿಕೆ ಇವು ಇಂದಿಗೂ ಜನಜನಿತವಾಗಿವೆ. ಕಷ್ಟಸಹಿಷ್ಣುಗಳಾಗಿದ್ದ ಸಂಕೇತಿಗಳು ಒಳ್ಳೆಯ ಬಲಿಷ್ಠರೂ, ಆರೋಗ್ಯಶಾಲಿಗಳೂ ಆಗಿದ್ದರು. ಧೈರ್ಯ, ಸಾಹಸಗಳಿಗೆ ಅವರು ಬಹಳ ಹೆಸರುವಾಸಿಯಾಗಿದ್ದರು. ಕಾವೇರಿಯ ಹುಚ್ಚು ಪ್ರವಾಹದಲ್ಲಿಯೂ ಈಜಿಕೊಂಡು ಆಚೆಯ ದಡವನ್ನು ಸೇರುತ್ತಿದ್ದ ಸಾಹಸಿಗಳನ್ನು ಪ್ರತ್ಯಕ್ಷ ಕಂಡಿದ್ದೇನೆ. ಬಾವಿಯಿಂದ ಲೆಕ್ಕವಿಲ್ಲದಷ್ಟು ಕೊಡ ನೀರು ಸೇದುವುದು, ಸೌದೆ ಒಡೆಯುವುದು, ತೋಟದಲ್ಲಿ ಭೂಮಿಯನ್ನು ಅಗೆತ ಮಾಡಿ ಹದಗೊಳಿಸುವುದು, ಎಲೆ ಹಂಬಿಗೆ ನೀರು ಹಾಕುವುದು, ಗದ್ದೆಯಲ್ಲಿ ನೇಗಿಲು ಹಿಡಿದು ಉಳುವುದು ಇವೆಲ್ಲ ಅವರಿಗೆ ನೀರು ಕುಡಿದಂತೆ. ಸುಖಭೋಜನ ಹಾಗೂ ಅತಿಥಿಸತ್ಕಾರಗಳಲ್ಲಂತೂ ಸಂಕೇತಿಗಳು ಎತ್ತಿದ ಕೈ ಎಂಬುದು ಇಂದಿಗೂ ಮನೆಮಾತಾಗಿದೆ. ಅವರು ಒಳ್ಳೆ ಪಾಕಶಾಸ್ತ್ರಪ್ರವೀಣರೂ ಆಗಿದ್ದು ಅವರ ಅಡುಗೆಯ ರುಚಿಯನ್ನು ನೆನೆಸಿಕೊಂಡರೆ ಈಗಲೂ ನನ್ನ ಬಾಯಲ್ಲಿ ನೀರೂರುತ್ತದೆ. ಊರಿನ ಸಂತರ್ಪಣೆಗಳಲ್ಲಿ , ಹಬ್ಬ ಹರಿದಿನಗಳಲ್ಲಿ ಅವರು ತಯಾರು ಮಾಡುತ್ತಿದ್ದ ಆಂಬೊಡೆ, ಮಜ್ಜಿಗೆಹುಳಿ, ಹುಳಿಯನ್ನ, ತಡಗುಣಿಕಾಳು-ಬದನೆಕಾಯಿ ಹುಳಿ, ಬೆಲ್ಲದ ಹೂರಣ ತುಂಬಿದ ಒಬ್ಬಟ್ಟು , ಬೆಣ್ಣೆ ಕಾಯಿಸಿದ ತುಪ್ಪ , ಇಂತಹ ಚೊಕ್ಕ ಭೋಜನವನ್ನು ಮನಸಾರೆ ಉಂಡು ತೇಗಿದ ನನಗೆ ಈಗಿನ ಸತ್ತ್ವಹೀನ ಊಟ, ತಿಂಡಿ ತಿನಿಸುಗಳು ಬಹಳ ಪೇಲವವಾಗಿ ಕಂಡರೆ ಆಶ್ಚರ್ಯವಿಲ್ಲ.

---

* **ಮಹತೀ** (ಸಂಗೀತಕಲಾರತ್ನ ಪ್ರೊ|| ಆರ್.ಎನ್. ದೊರೆಸ್ವಾಮಿ ಅಭಿನಂದನ ಗ್ರಂಥ) ಸಂಪಾದಕರು : ಡಾ|| ಪ್ರಣತಾರ್ತಿಹರನ್, ಎನ್.ಎಸ್. ಶಾರದಾ ಪ್ರಸಾದ್ ; ಪ್ರ.ಮು : ೨೦೦೦ ; ಪು : xviii + xvi + 688 ; $^1/_8$ ಡೆಮಿ ; ಪ್ರ : ಸಂಗೀತ ಕಲಾರತ್ನ ಪ್ರೊ|| ಆರ್.ಎನ್. ದೊರೆಸ್ವಾಮಿ ಅಭಿನಂದನ ಸಮಿತಿ, ಸಮುದಾಯ ಅಧ್ಯಯನ ಕೇಂದ್ರ, ೩೦೫೫, ೫ನೇ ಅಡ್ಡರಸ್ತೆ, ಗೋಕುಲಂ ಪಾರ್ಕ್ ರಸ್ತೆ, ಗೋಕುಲಂ, ಮೈಸೂರು - 570002

ರುದ್ರಪಟ್ಟಣ ಮತ್ತು ನನ್ನ ಪೂರ್ವಿಕರು

ನನ್ನ ಬಾಲ್ಯದಲ್ಲಿ ಅಂದರೆ ಸುಮಾರು ಎಪ್ಪತ್ತೈದು ವರ್ಷಗಳ ಹಿಂದೆ ನಾನು ಕಂಡ ಆ ರುದ್ರಪಟ್ಟಣದ ವೈಭವ ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಸಂಕೇತಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದ ಆ ಊರಿನಲ್ಲಿ ಸುಮಾರು ಮೂವತ್ತು-ನಲವತ್ತು ಸಂಕೇತಿ ಕುಟುಂಬಗಳು ಆನುವಂಶಿಕವಾಗಿ ಬೆಳೆದುಬಂದಿದ್ದವು. ನಮ್ಮದು ನಾಲಾ ಕುಟುಂಬವೆಂದು ಪ್ರಸಿದ್ಧವಾಗಿತ್ತು. ನಮ್ಮ ಪೂರ್ವಜರ ಜಮೀನಿನ ಹಿಂಭಾಗ ನಾಲೆಯ ಪಕ್ಕದಲ್ಲೇ ಇದ್ದುದರಿಂದ ಈ ಹೆಸರು ಬಂದಿತ್ತು ಎಂದು ತೋರುತ್ತದೆ. ನನ್ನ ತಂದೆ ನಾಲಾ ವೆಂಕಟರಾಮಯ್ಯ , ತಾಯಿ ಸಾವಿತ್ರಮ್ಮ , ಅಜ್ಜ ನಾಲಾ ವೆಂಕಟಸುಬ್ಬಯ್ಯ ಇವರುಗಳು ಅಂದಿನ ನಾಲಾ ಕುಟುಂಬದ ಪ್ರಮುಖರು. ನನ್ನ ಅಜ್ಜನವರ ಬಗ್ಗೆ ಹೆಚ್ಚಿನ ವಿವರಗಳು ನನ್ನ ತಂದೆಯವರಿಂದಾಗಲೀ, ಬೇರೆಯವರಿಂದಾಗಲೀ ಲಭಿಸದೇ ಹೋದುದು ಒಂದು ವಿಪರ್ಯಾಸ. ಅವರಿಗೆ ನನ್ನ ತಂದೆ ಏಕಮಾತ್ರ ಪುತ್ರ . ಹುಟ್ಟುತ್ತಿದ್ದಂತೆಯೇ ತಾಯಿಯನ್ನು ಕಳೆದುಕೊಂಡಿದ್ದ ನನ್ನ ತಂದೆ, ತನ್ನ ಸಮೀಪ ಬಂಧುಗಳ ಲಾಲನೆ ಪಾಲನೆಯಲ್ಲಿ ಬೆಳೆದರು. ನನ್ನ ಅಜ್ಜ ಬಹಳ ಮುಂಗೋಪಿಯೂ, ಕಠಿಣ ಸ್ವಭಾವದವರೂ ಆಗಿದ್ದರಂತೆ. ಹೀಗಾಗಿ, ನನ್ನ ತಂದೆಗೆ ತಾಯಿತಂದೆಯರ ಮಮತೆ ಪ್ರೀತಿ ವಾತ್ಸಲ್ಯಗಳು ಲಭ್ಯವಿರಲಿಲ್ಲ. ಆದರೂ, ತಮ್ಮ ಸ್ವಂತ ಪ್ರಯತ್ನ, ಪರಿಶ್ರಮ ಹಾಗೂ ಬುದ್ಧಿಶಕ್ತಿಗಳಿಂದ ಕಷ್ಟಪಟ್ಟು ಓದಿ ಮೈಸೂರಿನಲ್ಲಿ ವಾರಾನ್ನ ಮಾಡಿಕೊಂಡು ಮದರಾಸಿನ ಮೆಟ್ರಿಕ್ಯುಲೇಷನ್ ಪಾಸು ಮಾಡಿದರು. ಆಧುನಿಕ ವಿದ್ಯಾವಂತರೇ ಇಲ್ಲದಿದ್ದ ಆಗಿನ ಕಾಲದ ಸಂಕೇತಿ ಜನಾಂಗದಲ್ಲಿ ಒಂದು ಗಣ್ಯಸ್ಥಾನವನ್ನು ಪಡೆದುಕೊಂಡರು. ನನ್ನ ತಾತ ಅಷ್ಟು ನಿಷ್ಠುರ ವ್ಯಕ್ತಿಯಾಗಿದ್ದರೂ, ನನ್ನ ತಂದೆಯವರು ಅವರನ್ನು ಬಹಳ ಗೌರವಿಸುತ್ತಿದ್ದರು. ಅವರು ವೃದ್ಧಾಪ್ಯದಲ್ಲಿ ಅವರ ಸೇವೆಯನ್ನು ಹಗಲಿರುಳೂ ಬಹಳ ಶ್ರದ್ಧೆಯಿಂದ ಮಾಡುತ್ತಿದ್ದರು. ನಮ್ಮ ಅಜ್ಜ ಹಾಸಿಗೆ ಹಿಡಿದು ಮಲಗಿದಾಗ ನಾವು ಬಸವಾ ಪಟ್ಟಣದಲ್ಲಿದ್ದೆವು. ಅವರ ಹಾಗೂ ನನ್ನ ತಾಯಿಯ ತಂದೆ ಸಾಲಿಗ್ರಾಮದ ರಾಮಶಾಸ್ತ್ರಿಗಳು- ಈ ಇಬ್ಬರು ಅಜ್ಜಂದಿರ ಅಂತ್ಯಕಾಲವೂ ಬಸವಾಪಟ್ಟಣದಲ್ಲಿಯೇ ಸಂಭವಿಸಿತು. ಆಗ ನನಗೆ ಸುಮಾರು ಒಂಬತ್ತು - ಹತ್ತು ವರ್ಷ ವಯಸ್ಸು. ಇಬ್ಬರು ಅಜ್ಜಂದಿರೂ ನನ್ನನ್ನು ಬಹಳ ಪ್ರೀತಿಸುತ್ತಿದ್ದರು. ಅವರಿಬ್ಬರೂ ನಿಧನರಾದ ಸಂದರ್ಭಗಳಲ್ಲಿ ನಾನು ಅವರ ಪಕ್ಕದಲ್ಲೇ ನನ್ನ ತಾಯಿಯ ಸೆರಗಿನಲ್ಲಿ ಹುದುಗಿ ಕುಳಿತಿದ್ದೆ. ಏನೂ ತಿಳಿಯದ ನನಗೆ ಇದನ್ನೆಲ್ಲಾ ನೋಡಿ ಭಯವೂ, ಇದೆಲ್ಲ ಏಕೆ ನಡೆಯುತ್ತಿದೆ ಎಂದು ಒಂದು ರೀತಿಯ ಮಾನಸಿಕ ಗೊಂದಲವೂ ಉಂಟಾಗುತ್ತಿತ್ತು. ಮುಂದೆ ನನ್ನ ತಂಗಿ ಜಯಮ್ಮನೂ ಚಿಕ್ಕವಯಸ್ಸಿನಲ್ಲೇ ಇದೇ ಬಸವಾಪಟ್ಟಣದಲ್ಲಿ ಮೃತಳಾದಳು. ಇದೆಲ್ಲವನ್ನೂ ಪ್ರತ್ಯಕ್ಷವಾಗಿ ನೋಡಿದ ನನಗೆ ಬಹು ದುಃಖವಾಗುತ್ತಿತ್ತು. ಆದರೂ ಇನ್ನೂ ಆಟವಾಡುವ ವಯಸ್ಸಿನ ಬಾಲಕನಾಗಿದ್ದ ನಾನು ತಂದೆ , ತಾಯಿ , ಅಕ್ಕ , ತಮ್ಮ ಇವರೆಲ್ಲರ ಮಧುರ ಪ್ರೀತಿ, ವಾತ್ಸಲ್ಯಗಳಲ್ಲಿ ಎಲ್ಲವನ್ನೂ ಮರೆಯುತ್ತಿದ್ದೆ. ಎಂದಿನಂತೆ ದಿನಗಳು ಸಂತೋಷದಿಂದ ಕಳೆಯುತ್ತಿದ್ದವು.

ಬಸವಾಪಟ್ಟಣಕ್ಕೆ

ನನ್ನ ಬಾಲ್ಯದ ನಾಲ್ಕೈದು ವರ್ಷಗಳು ಆಟಪಾಠಗಳಲ್ಲಿ ರುದ್ರಪಟ್ಟಣದಲ್ಲೇ ಕಳೆದವು. ಆ ಕಾಲದಲ್ಲಿ ಮಕ್ಕಳ ವಿದ್ಯಾಭ್ಯಾಸವು ಅಂತಹ ಮಹತ್ತ್ವದ ಹಾಗೂ ಕಡ್ಡಾಯವಾದ ವಿಷಯವಾಗಿರಲಿಲ್ಲ. ಅನೇಕ ಮಕ್ಕಳು ಶಾಲೆಗೇ ಹೋಗುತ್ತಿರಲಿಲ್ಲ. ನಾನೂ ಹಾಗೆಯೇ ಆಟವಾಡಿಕೊಂಡು ಕಾಲ ಕಳೆಯುತ್ತಿದ್ದೆ. ಆ ವೇಳೆಗೆ ನಮ್ಮ ತಂದೆಯವರಿಗೆ ಮೈಸೂರಿನ ಜಿಲ್ಲಾ ವಿದ್ಯಾಧಿಕಾರಿಗಳ ಆಪ್ತ ಸಹಾಯಕರಾಗಿ ಕೆಲಸ ಸಿಕ್ಕಿತು. ಸರಿ, ನಮ್ಮ ಸಂಸಾರವು ಮೈಸೂರಿನಲ್ಲಿ ಬಿಡಾರ ಹೂಡಿತು. ಆಗ ನಮ್ಮ ಕುಟುಂಬದಲ್ಲಿ ನನ್ನ ಜೊತೆಗೆ ನನ್ನ ಅಕ್ಕ ಕಮಲಮ್ಮ ಮತ್ತು ತಮ್ಮ ರಾಮು ಇದ್ದರು. ನನ್ನ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸ ಮೈಸೂರಿನಲ್ಲೇ ನಡೆಯಿತು. ನಾನು ಮತ್ತು ನನ್ನ ತಮ್ಮ ರಾಮು ಹಳೇ ಅಗ್ರಹಾರದ ಒಂದು ಶಾಲೆಗೆ ಹೋಗುತ್ತಿದ್ದೆವು. ಆಗ ಸಿಡುಬುರೋಗದ ಹಾವಳಿ ಹೆಚ್ಚಾಗಿತ್ತು. ನಮ್ಮ ಮನೆಯಲ್ಲಿ ನಾವು ಮೂರು ಮಕ್ಕಳಿಗೂ ರೋಗ ತಗುಲಿತು. ನಾನು ಮತ್ತು ನನ್ನ ಅಕ್ಕ ಉಳಿದುಕೊಂಡೆವು. ನನ್ನ ತಮ್ಮ ರಾಮು ದುರ್ದೈವದಿಂದ ಅದಕ್ಕೆ ಬಲಿಯಾದ. ಸುಮಾರು ಎರಡು ವರ್ಷ ಮೈಸೂರಿನಲ್ಲಿದ್ದು ಅನಂತರ ನನ್ನ ತಂದೆಯವರು ಬಸವಾಪಟ್ಟಣದ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿ ನೇಮಕಗೊಂಡರು. ಆಗ ನಮ್ಮ ಸಂಸಾರ ಬಸವಾಪಟ್ಟಣದಲ್ಲಿ ನೆಲೆಸಿತು. ಅದು ೧೯೨೫ನೇ ಇಸವಿ. ಆಗ ನನಗೆ ಒಂಬತ್ತು ವರ್ಷ. ನಮ್ಮ ತಂದೆಯವರು ನನ್ನನ್ನು ವಿಶೇಷ ಅರ್ಹತಾ ಪರೀಕ್ಷೆಯ ಆಧಾರದ ಮೇಲೆ ಶಿಫಾರಸ್ಸು ಮಾಡಿ ಮಾಧ್ಯಮಿಕ ಶಾಲೆಗೆ ನೇರವಾಗಿ ಸೇರಿಸಿಕೊಂಡರು. ಏಕೆಂದರೆ ನನ್ನ ಪ್ರಾಥಮಿಕ ಶಾಲಾಶಿಕ್ಷಣ ಇನ್ನೂ ಪೂರ್ತಿ ಆಗಿರಲಿಲ್ಲ. ನಮ್ಮ ತಂದೆಯವರು ಶ್ರೇಷ್ಠ ಉಪಾಧ್ಯಾಯರೆಂದು ಪ್ರಸಿದ್ಧರಾಗಿದ್ದರು. ಅವರ ಶಿಸ್ತಿನ ಪಾಠಕ್ರಮದಲ್ಲಿ ನಾನು ಬಹಳ ಬೇಗ ವಿದ್ಯಾಭ್ಯಾಸದಲ್ಲಿ ಮುಂದುವರೆಯುತ್ತಾ ಬಂದೆ. ಇದೇ ಶಾಲೆಯಿಂದ ೧೯೨೭ನೇ ಇಸವಿಯಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾದೆ. ನನ್ನ ತಂದೆತಾಯಿಗಳಿಗಾದ ಸಂತೋಷ ಅಷ್ಟಿಷ್ಟಲ್ಲ.

ನಾವು ಬಸವಾಪಟ್ಟಣದಲ್ಲಿದ್ದ ವೇಳೆಗೆ ನಮ್ಮ ಸಂಸಾರದಲ್ಲಿ ನನಗೆ ಒಬ್ಬ ತಂಗಿ ಜಯಮ್ಮ ಹಾಗೂ ಒಬ್ಬ ಕಡೆಯ ತಮ್ಮ ಸತ್ಯಮೂರ್ತಿ ಇವರ ಸೇರ್ಪಡೆಯಾಗಿತ್ತು. ಈ ಹಿಂದೆ ಹೇಳಿದಂತೆ, ನನ್ನ ಇಬ್ಬರು

ತಾತಂದಿರು, ಜತೆಗೆ ನನ್ನ ತಂಗಿ ಜಯಮ್ಮ ಇವರೆಲ್ಲಾ ಇದೇ ಬಸವಾಪಟ್ಟಣದಲ್ಲಿ ನಿಧನರಾದುದು ನಮಗೆಲ್ಲ ಆಘಾತವಾಗಿತ್ತು. ಆಗ ಇನ್ನೂ ಚಿಕ್ಕ ಮಗುವಾಗಿದ್ದ ನನ್ನ ತಮ್ಮ ಸತ್ಯಮೂರ್ತಿಯ ಆಟಪಾಠಗಳನ್ನು ನೋಡುತ್ತಾ ನಮ್ಮ ದುಃಖವನ್ನು ಹೇಗೋ ಮರೆಯಲು ಪ್ರಯತ್ನಿಸುತ್ತಿದ್ದೆವು. ಸ್ವಲ್ಪ ಕಾಲದನಂತರ ನಮ್ಮ ಕುಟುಂಬದಲ್ಲಿ ನಡೆದ ಎರಡು ಶುಭಕಾರ್ಯಗಳು ನಮ್ಮೆಲ್ಲರಿಗೂ ಹೊಸ ಉತ್ಸಾಹ ಸಂಭ್ರಮಗಳನ್ನು ತಂದುಕೊಟ್ಟವು. ಒಂದು ನಮ್ಮ ಅಕ್ಕನ ವಿವಾಹ. ಅವಳು ನನಗಿಂತ ಎರಡು ವರ್ಷ ದೊಡ್ಡವಳು. ಅವಳಿಗೆ ಆಗ ಹದಿನಾಲ್ಕು ವರ್ಷ. ರುದ್ರಪಟ್ಟಣದ ಆರ್. ಎಂ. ನಾರಾಯಣರಾಯರ ಜತೆ ಅವಳ ವಿವಾಹ ನಡೆಯಿತು. ನಮ್ಮ ತಂದೆಯವರು ಆ ವಿವಾಹಕ್ಕೆ ಖರ್ಚು ಮಾಡಿದ್ದು ಆಗಿನ ಕಾಲದ ಒಂದು ಸಾವಿರ ರೂಪಾಯಿ. ಆ ವಿವಾಹ ಸಮಾರಂಭ ನಮ್ಮ ಸಮುದಾಯದಲ್ಲೇ ಅತ್ಯಂತ ವಿಜೃಂಭಣೆಯ, ಅದ್ದೂರಿಯ ಸಮಾರಂಭವಾಗಿತ್ತೆಂದು ಎಲ್ಲರೂ ಬಾಯಿ ತುಂಬ ಹೊಗಳಿದರು. ಆ ಕಾಲದಲ್ಲಿ ದುಡ್ಡಿಗೆ ಅಷ್ಟೊಂದು ಬೆಲೆಯಿತ್ತು. ಕಾಲವೂ ಸುಭಿಕ್ಷವಾಗಿತ್ತು. ಮತ್ತೊಂದು ಸಮಾರಂಭ ನನ್ನ ಉಪನಯನ. ಇದು ಸಹ ಬಹಳ ಅದ್ದೂರಿಯಾಗಿಯೇ ನಡೆಯಿತು. ನಾನು ಬಹಳ ನಿಷ್ಠೆ, ಶ್ರದ್ಧಾಭಕ್ತಿಗಳಿಂದ ಸಂಧ್ಯಾವಂದನೆ, ಅಗ್ನಿಕಾರ್ಯಾದಿಗಳನ್ನು ಮಾಡುತ್ತಿದ್ದೆ. ನನ್ನ ತಂದೆ - ತಾಯಿಯರು ಬಹಳ ಪ್ರಸನ್ನರಾಗಿದ್ದರು.

ಸಂಗೀತದಲ್ಲಿ ಆಸಕ್ತಿ

ನಮ್ಮ ವಂಶದ ಪೂರ್ವಜರಲ್ಲಿ ಸಂಗೀತಗಾರರು ಯಾರಾದರೂ ಇದ್ದರೋ ಇಲ್ಲವೋ ಖಚಿತವಾಗಿ ಗೊತ್ತಿಲ್ಲ. ಆದರೆ ನಮ್ಮ ತಂದೆಯವರಿಗೆ ಸಂಗೀತದಲ್ಲಿ ಬಹಳ ಆಸಕ್ತಿ. ತಾಯಿ ಬಹಳ ಮಧುರವಾಗಿ ಸಂಪ್ರದಾಯದ ಹಾಡುಗಳನ್ನು ಹಾಡುತ್ತಿದ್ದರು. ನನಗೂ ಒಳ್ಳೆಯ ಸಂಗೀತವನ್ನು ಕೇಳಿದಾಗ ಏನೂ ಅರ್ಥವಾಗದಿದ್ದರೂ ಏನೋ ಒಂದು ಅವರ್ಣನೀಯ ಆನಂದಾನುಭವವಾಗುತ್ತಿತ್ತು. ನನಗೆ ಬಹಳ ಇಂಪಾದ ಶಾರೀರವಿತ್ತು. ನಾವು ರುದ್ರಪಟ್ಟಣದಲ್ಲಿದ್ದಾಗಲೇ ಆಗಿನ ಪ್ರಸಿದ್ಧ ವಿದ್ವಾಂಸರಾಗಿದ್ದ ವೀಣೆ ವೆಂಕಟರಾಯರು ನಮ್ಮ ತಂದೆಯವರಿಗೆ ನನ್ನನ್ನು ಸಂಗೀತಗಾರನನ್ನೇ ಮಾಡಬೇಕೆಂಬ ಬಗ್ಗೆ ಬಹಳ ಪ್ರಭಾವ ಬೀರಿದ್ದರು. ನಮ್ಮ ತಂದೆಯವರಿಗೂ ಅದೇ ಇಷ್ಟವೂ ಆಗಿತ್ತು. ಹೀಗಾಗಿ, ಒಬ್ಬ ಕಲಾವಿದನಾಗುವ ಪ್ರಕ್ರಿಯೆಗೆ ರುದ್ರಪಟ್ಟಣದಲ್ಲಿಯೇ ಬೀಜಾಂಕುರವಾಗಿತ್ತು. ಆಗಿನ ಮತ್ತೊಬ್ಬ ಖ್ಯಾತ ವಿದ್ವಾಂಸರಾಗಿದ್ದ ಶತಾವಧಾನಿ ವೆಂಕಟರಾಮಯ್ಯನವರಿಂದ ಸಂಗೀತದ ಪ್ರಾರಂಭಿಕ ಶಿಕ್ಷಣ ಲಭಿಸಿತು. ರುದ್ರಪಟ್ಟಣದ ಸಾಂಸ್ಕೃತಿಕ ಪರಿಸರದಲ್ಲಿ ಬೆಳೆದ ನನಗೆ ಸ್ವಾಭಾವಿಕವಾಗಿಯೇ ಸಂಗೀತದ ಕಡೆಗೆ ಒಲವಿತ್ತು. ಅಲ್ಲದೇ, ವರ್ಷವಿಡೀ ಅಲ್ಲಿ ನಡೆಯುತ್ತಿದ್ದ ಭಜನೆ, ಹರಿಕಥೆ, ಗಮಕ, ಸಂಗೀತ ಮುಂತಾದ ಕಾರ್ಯಕ್ರಮಗಳನ್ನು ತಪ್ಪದೇ ಕೇಳುತ್ತಿದ್ದೆ. ರಾಮೋತ್ಸವ, ಗಣೇಶೋತ್ಸವ, ನವರಾತ್ರಿ, ಶಿವರಾತ್ರಿ ಮುಂತಾದ ಉತ್ಸವಗಳು ಊರಿನ ಜನರೆಲ್ಲ ಸೇರಿ ಅತ್ಯಂತ ವೈಭವದಿಂದ ಆಚರಿಸುತ್ತಿದ್ದ ಸಮಾರಂಭಗಳಾಗಿದ್ದು, ಊರಿನ ಜನರಿಗೆಲ್ಲ ಮುದ ನೀಡುವ ಮನರಂಜನೆಯ ಕಾರ್ಯಕ್ರಮಗಳಾಗಿದ್ದವು.

ರುದ್ರಪಟ್ಟಣ

ನಮ್ಮ ತಂದೆತಾಯಿಯರಿಗೆ ಅವರ ಒಡಹುಟ್ಟಿದವರು ಯಾರೂ ಇರಲಿಲ್ಲ. ನನ್ನ ತಾತ ನಾಲಾ ವೆಂಕಟಸುಬ್ಬಯ್ಯ ಅವರಿಗೆ ನಾಲ್ವರು ತಮ್ಮಂದಿರು. ನಾಲಾ ರಾಮಸ್ವಾಮಯ್ಯ, ನಾಲಾ ನಾರಣಪ್ಪ, ನಾಲಾ ಕಾಶಯ್ಯ (ಇವರಿಗೆ ಸಂತಾನವಿಲ್ಲ) ಮತ್ತು ನಾಲಾ ಕೃಷ್ಣಪ್ಪ. ಇವರ ಮಕ್ಕಳು ಕ್ರಮಶಃ ೧. ಜಯಣ್ಣ, ಚಂದ್ರಶೇಖರಯ್ಯ, ೨. ಗಮಕಿ ಗುಂಡುರಾಮಯ್ಯ (ಇವರು ಈಗಲೂ ಇದ್ದಾರೆ. ಈಗ ಅವರಿಗೆ ೯೮ ವರ್ಷ)* ೩. ಆರ್.ಕೆ. ರಾಮಸ್ವಾಮಯ್ಯ, ಆರ್.ಕೆ. ತಮ್ಮಣ್ಣ ಮತ್ತು ಆರ್.ಕೆ. ಶ್ರೀನಿವಾಸಯ್ಯ. ವಯಸ್ಸಿನಲ್ಲಿ ಇವರೆಲ್ಲರಿಗಿಂತಲೂ ಹಿರಿಯರಾಗಿದ್ದ ನಮ್ಮ ತಂದೆಯವರನ್ನು ಇವರೆಲ್ಲರೂ ಸ್ವಂತ ಅಣ್ಣನಂತೆಯೇ ಗೌರವಿಸುತ್ತಿದ್ದರು. ನಾಲಾ ಕುಟುಂಬದಲ್ಲಿ ಅವರಿಗೇ ಅಗ್ರಸ್ಥಾನವನ್ನು ಕೊಟ್ಟು ಎಲ್ಲ ವಿಷಯಗಳಲ್ಲಿಯೂ ಅವರ ಸಲಹೆ, ಮಾರ್ಗದರ್ಶನ ಪಡೆಯುತ್ತಿದ್ದರು. ಪಿತ್ರಾರ್ಜಿತವಾಗಿ ಬಂದಿದ್ದ ಆಸ್ತಿಯೆಲ್ಲವೂ ಪಾಲಾಗಿ ವಿಭಜನೆಯಾಗಿತ್ತು. ನಮ್ಮ ತಂದೆಯವರ ಪಾಲಿಗೆ ಸುಮಾರು ಎರಡು ಎಕರೆ ವಿಸ್ತೀರ್ಣದ ಎರಡು ತೋಟ, ಎರಡೂವರೆ ಎಕರೆ ಗದ್ದೆ ಮತ್ತು ಒಂದು ದೊಡ್ಡ ಮನೆ ಲಭಿಸಿತ್ತು. ವಿಶಾಲವಾದ ಹಜಾರವಿದ್ದ ಈ ಮನೆಯಲ್ಲೇ ಧಾರ್ಮಿಕ ಮತ್ತು ಸಾಂಸ್ಕೃತಿಕ ಉತ್ಸವಗಳು ನಡೆಯುತ್ತಿದ್ದವು. ಈ ಎಲ್ಲ ಉತ್ಸವಗಳಲ್ಲೂ ನಾನೂ, ನನ್ನ ವಯಸ್ಸಿನ ಇತರ ಬಾಲಕರೂ ಸ್ವಯಂಸೇವಕರಾಗಿ ಓಡಾಡುತ್ತಾ, ಹಿರಿಯರ ಮೆಚ್ಚುಗೆಗೆ ಪಾತ್ರರಾಗಿದ್ದೆವು. ಈ ಉತ್ಸವಗಳಲ್ಲಿ ನಮಗೆ ಸಿಗುತ್ತಿದ್ದ ಚರಪು, ಕೊಬ್ಬರಿಸಕ್ಕರೆ, ಕಡ್ಲೆಹಿಟ್ಟು , ಪಾನಕ, ಕೋಸುಂಬರಿ, ರಸಾಯನ, ಗೊಜ್ಜವಲಕ್ಕಿ ಇವೇ ನಮಗೆ ಪ್ರಮುಖ ಆಕರ್ಷಣೆ. ಒಟ್ಟಿನಲ್ಲಿ ವರ್ಷವಿಡೀ ಒಂದಲ್ಲ ಒಂದು ಕಾರ್ಯಕ್ರಮ ನಡೆದು ಸಂಭ್ರಮದ ವಾತಾವರಣ ತುಂಬಿದ್ದ ಆಗಿನ ಆ ರುದ್ರಪಟ್ಟಣ ಇನ್ನೆಲ್ಲಿದೆ ?

ವರ್ಗಾವಣೆಗಳ ನಡುವೆ

ನಮ್ಮ ಅಜ್ಜನ ಮರಣಾನಂತರ ನಮ್ಮ ತಂದೆಯವರಿಗೆ ಪಿತ್ರಾರ್ಜಿತ ಆಸ್ತಿಯ ಅಧಿಕಾರ ಲಭಿಸುವ ವೇಳೆಗೆ ನಾವು ರುದ್ರಪಟ್ಟಣವನ್ನು

* *ಮರಣ : ೧೧.೪.೨೦೦೦*

ಬಿಟ್ಟಾಗಿತ್ತು. ಅಷ್ಟು ಸಮೀಪದ ಬಸವಾಪಟ್ಟಣದಲ್ಲಿಯೇ ನಾವಿದ್ದರೂ ಜಮೀನನ್ನೂ ನೋಡಿಕೊಂಡು, ಸರ್ಕಾರಿ ಕೆಲಸವನ್ನೂ ಮಾಡಿ ನಿರ್ವಹಿಸುವುದು ನಮ್ಮ ತಂದೆಯವರಿಗೆ ಕಷ್ಟವಾಗಿ ಕಂಡಿರಬೇಕು. ನಾವೆಲ್ಲ ಆಗ ಇನ್ನೂ ಏನೂ ತಿಳಿಯದ ಚಿಕ್ಕಹುಡುಗರು. ನಮ್ಮ ತಾಯಿ ಅನೇಕ ವೇಳೆ ನಮ್ಮ ತಂದೆಯವರಿಗೆ ಗೃಹಕೃತ್ಯ, ವ್ಯವಹಾರಾದಿ ವಿಷಯಗಳಲ್ಲಿ ಸಲಹೆ ನೀಡುತ್ತಿದ್ದುದುಂಟು. ಆದರೆ ನಮ್ಮ ತಂದೆಯವರು ಮಹಾ ಹಠವಾದಿ. ತಮಗೆ ತೋಚಿದ್ದನ್ನೇ ಅವರು ಯಾವಾಗಲೂ ಮಾಡುತ್ತಿದ್ದರು. ನಮ್ಮ ತಾಯಿಯವರಿಗೂ-ಅವರಿಗೂ ಅನೇಕ ವಿಷಯಗಳಲ್ಲಿ ಆಗಾಗ ಘರ್ಷಣೆಗಳಾಗುತ್ತಲೇ ಇದ್ದವು. ಆದರೆ, ನಮ್ಮ ತಂದೆಯವರು ರುದ್ರಪಟ್ಟಣದ ಎಲ್ಲ ಆಸ್ತಿಪಾಸ್ತಿಗಳನ್ನೂ ಮಾರಿ, ಬಸವಾಪಟ್ಟಣದಲ್ಲೇ ಒಂದು ತೋಟವನ್ನು ಕೊಂಡು ಕೊಂಡರು. ಅದರಲ್ಲಿ ನಂಜನಗೂಡಿನಿಂದ ಬಾಳೆಕಂದುಗಳನ್ನು ತರಿಸಿ ರಸಬಾಳೆ ಬೆಳೆಸಿದರು. ಮಾವಿನಹಣ್ಣು , ರಸಬಾಳೆ, ತೆಂಗಿನಕಾಯಿ ಇವುಗಳ ಫಸಲು ನಮಗೆ ಎರಡು-ಮೂರು ವರ್ಷ ತಕ್ಕಮಟ್ಟಿಗೆ ಲಭಿಸಿತು. ಇದರಿಂದ ಬರುವ ಆದಾಯಕ್ಕಿಂತ ನಾವು ತಿನ್ನುವುದು ಮತ್ತು ಬೇರೆಯವರಿಗೆ ಹಂಚುವುದು ಇಷ್ಟಕ್ಕೇ ಎಲ್ಲವೂ ಮುಗಿಯುತ್ತಿತ್ತು. ಫಸಲಿನ ಬಹುಪಾಲು ಕಳ್ಳಕಾಕರ ಪಾಲಾಗುತ್ತಿತ್ತು. ಅಂತೂ, ನಮ್ಮ ತಂದೆಯವರಿಗೆ ೧೯೩೦ರ ವೇಳೆಗೆ ಬೇರೆ ಊರಿಗೆ ವರ್ಗವಾಗುವುದ ರೊಳಗೆ ತೋಟ ಪಾಳು ಬಿದ್ದಿತ್ತು. ನಾನು ಹೈಸ್ಕೂಲ್ ವಿದ್ಯಾಭ್ಯಾಸಕ್ಕಾಗಿ ಹೊಳೆನರಸೀಪುರದ ಮುನಿಸಿಪಲ್ ಹೈಸ್ಕೂಲಿನಲ್ಲಿ ಫೋರ್ತ್ ಫಾರಂಗೆ ಸೇರಿದ್ದೆ. ತಂದೆಯವರಿಗೆ ಬಾಣಾವಾರಕ್ಕೆ ವರ್ಗವಾಗಿತ್ತು. ನಾನು ಹೊಳೆ ನರಸೀಪುರದಲ್ಲಿ ಮೊದಲು ಸ್ವಲ್ಪ ಕಾಲ ನಮ್ಮ ತಂದೆಯವರ ಬಾಲ್ಯ ಸ್ನೇಹಿತರಾಗಿದ್ದ ಲಾಯರ್ ಶ್ರೀನಿವಾಸಯ್ಯನವರ ಮನೆಯಲ್ಲಿದ್ದೆ. ಅವರು ನನ್ನನ್ನು ತಮ್ಮ ಮಗನಂತೆಯೇ ನೋಡಿ ಕೊಳ್ಳುತ್ತಿದ್ದರು. ಅವರು ಆ ಕಾಲಕ್ಕೆ ವಕೀಲಿ ವೃತ್ತಿಯಲ್ಲಿ ಒಳ್ಳೆಯ ಹೆಸರುಗಳಿಸಿ ಸಾಕಷ್ಟು ಶ್ರೀಮಂತರಾಗಿದ್ದರು. ಧಾರಾಳಿಗಳೂ, ದಯಾಳುಗಳೂ ಆಗಿದ್ದ ಅವರು ಅನೇಕ ಬಡ ಹುಡುಗರಿಗೆ ಮನೆಯಲ್ಲೇ ಊಟ, ವಸತಿ, ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಅವರ ವಿದ್ಯಾಭ್ಯಾಸಕ್ಕೂ ಧನಸಹಾಯ ಮಾಡುತ್ತಿದ್ದರು. ನಾನು ಶಾಲಾ ವಿದ್ಯಾಭ್ಯಾಸದಲ್ಲಿ ಬಹಳ ಚುರುಕಾಗಿದ್ದ ಕಾರಣ ನನ್ನ ಎಲ್ಲ ಉಪಾಧ್ಯಾಯರೂ ನನ್ನನ್ನು ತುಂಬ ಪ್ರೀತಿಸುತ್ತಿದ್ದರು. ಕಷ್ಟಪಟ್ಟು ಓದಿ ಹೈಸ್ಕೂಲ್ ಫಿಫ್ತ್ ಫಾರಂ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾದೆ. ನಮ್ಮ ಸಂಸಾರವೂ ಕೆಲವು ತಿಂಗಳುಗಳಲ್ಲೇ ಹೊಳೆ ನರಸೀಪುರಕ್ಕೆ ಬಂದು ನೆಲೆಸಿತ್ತು. ಅಷ್ಟರಲ್ಲೇ ನಮ್ಮ ತಂದೆಯವರಿಗೆ ಸಾಲಿಗ್ರಾಮಕ್ಕೆ ವರ್ಗವಾಯಿತು. ನಾನು ಬೇಸಿಗೆ ರಜೆಯನ್ನು ಸಾಲಿಗ್ರಾಮದಲ್ಲಿ ಕಳೆದು ಮತ್ತೆ ಹೊಳೆನರಸೀಪುರಕ್ಕೆ ಬಂದು ನನ್ನ ಮುಂದಿನ ವ್ಯಾಸಂಗಕ್ಕೆ ಫಿಫ್ತ್ ಫಾರಂ ಸೇರಿದೆ. ಪಾಠ ಪ್ರವಚನಗಳು ಬಹಳ ಚೆನ್ನಾಗಿ ನಡೆಯುತ್ತಿದ್ದವು. ಅಧ್ಯಾಪಕರು ವಿದ್ಯಾರ್ಥಿಗಳಿಗೆ ಬಹಳ ಪ್ರೀತಿಯಿಂದ ಪಾಠ ಹೇಳುತ್ತಿದ್ದರು. ವಿದ್ಯಾರ್ಥಿಗಳೂ ಗುರುಗಳಲ್ಲಿ ಬಹಳ ಭಕ್ತಿ ಗೌರವಗಳನ್ನು ಇಟ್ಟುಕೊಂಡಿದ್ದರು. ಆಗ ವಿದ್ಯಾಭ್ಯಾಸವೇ ಎಲ್ಲರ ಮುಖ್ಯ ಗುರಿಯಾಗಿತ್ತು.

ತಂದೆಯ ನಿರ್ಧಾರ

ಹೀಗೆ ನಾನು ನನ್ನ ವಿದ್ಯಾಭ್ಯಾಸದಲ್ಲಿ ಬಹಳ ಆಸಕ್ತಿಯಿಂದ ನಿರತನಾಗಿದ್ದುದೇನೋ ಸರಿ. ಆದರೆ ನನಗೆ ನನ್ನ ಭವಿಷ್ಯದ ಬಗ್ಗೆ ಏನೇನೂ ಕಲ್ಪನೆಯಿರಲಿಲ್ಲ. ನಾನು ಏನಾಗಬಹುದು, ಏನಾಗಬೇಕು ಎಂಬ ವಿಷಯವಾಗಿ ಯೋಚನೆಯೇ ಮಾಡಿರಲಿಲ್ಲ. ಮುಂದೆ ನಾನೊಬ್ಬ ಕಲಾವಿದನಾಗಬಹುದೆಂಬ ಸಾಧ್ಯತೆಯಂತೂ ನನ್ನ ಊಹೆಗೂ ಮೀರಿದ ವಿಷಯವಾಗಿತ್ತು. ನನಗೆ ಸಂಗೀತದ ಯಾವ ಹಿನ್ನೆಲೆಯೂ ಇರಲಿಲ್ಲ; ಅಂಥ ಒಳ್ಳೆಯ ಸಂಗೀತವನ್ನು ಕೇಳಿ ಅದರಿಂದ ಪ್ರಭಾವಿತನಾಗುವ ಅವಕಾಶವೂ ಲಭಿಸಿರಲಿಲ್ಲ. ತಂದೆಯವರು ನನಗೆ ಬಲವಂತವಾಗಿ ಹೇಳಿಸಿದ ಸ್ವಲ್ಪಕಾಲದ ಬಾಲ್ಯಪಾಠವನ್ನು ಬಿಟ್ಟರೆ ನನಗೆ ಸಂಗೀತದಲ್ಲಿ ಕ್ರಮಬದ್ಧವಾದ ಯಾವ ಶಿಕ್ಷಣವೂ ದೊರೆತಿರಲಿಲ್ಲ. ಹೀಗೆ, ಸಂಗೀತದಲ್ಲಿ ಯಾವ ರೀತಿಯ ಭರವಸೆಯನ್ನೂ ಮೂಡಿಸದ, ಯಾವ ರೀತಿಯ ಪ್ರತಿಭೆಯನ್ನೂ ತೋರದ ನನ್ನನ್ನು ಒಬ್ಬ ಸಂಗೀತಗಾರನನ್ನೇ ಮಾಡಬೇಕೆಂಬ ನಮ್ಮ ತಂದೆಯವರ ಅಚಲ ನಿರ್ಧಾರ ಎಲ್ಲರಿಗೂ ದಿಗ್ಭ್ರಮೆ ಉಂಟುಮಾಡಿತು. ಹೈಸ್ಕೂಲು ವಿದ್ಯಾಭ್ಯಾಸವನ್ನು ಅಷ್ಟಕ್ಕೇ ನಿಲ್ಲಿಸಿ ಸಾಲಿಗ್ರಾಮಕ್ಕೆ ಹಿಂದಿರುಗಬೇಕೆಂದೂ, ಸಂಗೀತಾಭ್ಯಾಸಕ್ಕಾಗಿ ನನ್ನನ್ನು ತಮಿಳುನಾಡಿಗೆ ಕಳುಹಿಸಿಕೊಡಲು ತೀರ್ಮಾನ ಮಾಡಿರುವುದಾಗಿಯೂ ನಮ್ಮ ತಂದೆ ನನಗೆ ಪತ್ರ ಬರೆದರು. ಇದನ್ನು ನೋಡಿ ನನ್ನ ಅಧ್ಯಾಪಕರೂ, ನನ್ನ ಕ್ಷೇಮಪಾಲಕರೂ ಆಗಿದ್ದ ಲಾಯರ್ ಶ್ರೀನಿವಾಸಯ್ಯನವರೂ, ಇತರ ಬಂಧುಮಿತ್ರರೂ ಅದನ್ನು ತೀವ್ರವಾಗಿ ವಿರೋಧಿಸಿ , ಪ್ರತಿಭಟಿಸಿದರು. ತಂದೆಯವರಿಗೆ ತಮ್ಮ ನಿರ್ಧಾರವನ್ನು ಬದಲಿಸುವಂತೆ ಪತ್ರ ಬರೆದರು. ಆದರೆ, ನಮ್ಮ ತಂದೆಯವರು ಇದು ಯಾವುದಕ್ಕೂ ಸೊಪ್ಪು ಹಾಕಲಿಲ್ಲ. ಶಾಲೆಯಲ್ಲಿ ಓದಿ ಮುಂದೆ ನಾನೂ ತಮ್ಮಂತೆಯೇ ಒಬ್ಬ ಸರ್ಕಾರಿ ಗುಲಾಮನಾಗಿ ಕೆಲಸ ಮಾಡುವುದು ತಮಗೆ ಇಷ್ಟವಿಲ್ಲವೆಂದೂ, ನಾನು ಒಬ್ಬ ಶ್ರೇಷ್ಠ ಕಲಾವಿದನಾಗಿ, ಸ್ವತಂತ್ರವಾಗಿ ಜೀವನವನ್ನು ನಡೆಸಿ ಎಲ್ಲರಿಂದಲೂ ಗೌರವಿಸಲ್ಪಡುವ ಒಬ್ಬ ಪ್ರತಿಷ್ಠಿತ ವ್ಯಕ್ತಿಯಾಗಬೇಕೆಂಬುದೇ ತಮ್ಮ ಅಭಿಲಾಷೆ ಎಂದೂ ಎಲ್ಲರಿಗೂ ತಿಳಿಸಿಬಿಟ್ಟರು. ನಾನು ನಮ್ಮ ತಂದೆಯವರನ್ನು ಎದುರಿಸುವ ಪ್ರಶ್ನೆಯೇ ಇರಲಿಲ್ಲ. ಅವರ ಮಾತೇ ನನಗೆ ವೇದವಾಕ್ಯ. ಅಂತೆಯೇ ಅವರ ಆಣತಿಯಂತೆ ಶಾಲೆಗೆ ಕೈ ಮುಗಿದು ಸಾಲಿಗ್ರಾಮಕ್ಕೆ ಹಿಂದಿರುಗಿದೆ.

ಭವಿಷ್ಯದ ಕಣ್ಣುಮುಚ್ಚಾಲೆ : ಅವ್ಯಕ್ತ ಕನಸು

ಈ ಪ್ರಪಂಚದಲ್ಲಿ ಭವಿಷ್ಯವೆಂಬುದು ಅತ್ಯಂತ ಜಟಿಲ, ನಿಗೂಢ. ಮುಂದೇನು ಎಂಬುದು ಯಾರಿಗೂ ತಿಳಿಯದು. ಅದನ್ನು ಭೇದಿಸಿ ಆ ರಹಸ್ಯವನ್ನು ಅರಿಯಲು ಮನುಷ್ಯ ಎಷ್ಟೇ ಪ್ರಯತ್ನಪಟ್ಟರೂ ಅವನಿಂದ ಅದು ಸಾಧ್ಯವಾಗಿಲ್ಲ. ಕಳೆದು ಹೋದುದು ನಮ್ಮ ಕೈಯಿಂದ ಜಾರಿಹೋಗಿದೆ. ಮುಂದೇನಾಗುವುದೋ ಗೊತ್ತಿಲ್ಲ. ಆದ್ದರಿಂದ, ಮನುಷ್ಯ ಬದುಕುವುದು ವರ್ತಮಾನದಲ್ಲಿ ಮಾತ್ರ ಎಂಬ ಮಾತು ನಿತ್ಯಸತ್ಯ. ನನ್ನ ಜೀವನದಲ್ಲಿ ಸಂಭವಿಸಿದ ಅನೇಕ ಅನಿರೀಕ್ಷಿತ ತಿರುವುಗಳೇ ಇದಕ್ಕೆ ಸಾಕ್ಷಿ. ನಾನು ಜೀವನದಲ್ಲಿ ನನಗೆ ಎದುರಾದ ಯಾವ ಪರಿಸ್ಥಿತಿಯನ್ನೂ ವಿರೋಧಿಸದೇ ಅದೇ ನನ್ನ ಸಹಜವಾದ ಮಾರ್ಗವೇನೋ ಎಂಬಂತೆ ಸಂತೋಷದಿಂದ ಸ್ವೀಕರಿಸುತ್ತಾ ಬಂದೆ. ಎಲ್ಲ ಸನ್ನಿವೇಶಗಳಿಗೂ ಸ್ವಾಭಾವಿಕವಾಗಿಯೇ ಹೊಂದಿಕೊಂಡೆ. ಎಲ್ಲದರಲ್ಲೂ ಬಹಳ ಆಸಕ್ತಿಯಿಂದಲೇ ನನ್ನನ್ನು ನಾನು ತೊಡಗಿಸಿ ಕೊಂಡೆ. ಇದರಿಂದಲೇ ನನಗೆ ಇಂದಿಗೂ ಮಾನಸಿಕ ಸಮತೋಲನ ಹಾಗೂ ನೆಮ್ಮದಿ ಲಭಿಸಿದೆಯೆಂದು ದೃಢವಾಗಿ ನಂಬಿದ್ದೇನೆ.

ಸರಿ, ತಂದೆಯವರ ಇಚ್ಛೆಯಂತೆ ಓದು ನಿಲ್ಲಿಸಿ , ಸಾಲಿಗ್ರಾಮದಲ್ಲಿ ಬಂದು ಕುಳಿತದ್ದಾಯಿತು. ಅಷ್ಟು ಚೆನ್ನಾಗಿ ನಡೆಯುತ್ತಿದ್ದ ವಿದ್ಯಾಭ್ಯಾಸ ನಿಂತು ಹೋಯಿತಲ್ಲಾ ಎಂಬ ಚಿಂತೆ ನನ್ನ ಮನಸ್ಸಿನಲ್ಲಿ ಆಗಾಗ ಕಾಡುತ್ತಿತ್ತು ನಿಜ. ಆದರೆ ಯಾವುದೋ ಒಂದು ಅವ್ಯಕ್ತವಾದ, ಅಸ್ಪಷ್ಟವಾದ ಆಕರ್ಷಣೆ ನನ್ನನ್ನು ಹಿಡಿದಿಟ್ಟಿತ್ತು. ನನ್ನಲ್ಲಿ ಯಾವ ಒಂದು ಪಾರಂಪರಿಕ ಮನೋಭೂಮಿಕೆ ಇಲ್ಲದಿದ್ದರೂ, ಒಬ್ಬ ಕಲಾವಿದನ ವೃತ್ತಿಜೀವನ ಇತರ ವೃತ್ತಿಜೀವನಗಳಿಗಿಂತ ಶ್ರೇಷ್ಠ ಎಂಬ ಒಂದು ಸೈದ್ಧಾಂತಿಕ ನಿಲುವು ನನಗೆ ತುಂಬಾ ಹಿಡಿಸಿತ್ತು. ಹಾಗೂ ದೂರದೇಶಕ್ಕೆ ರೈಲು ಪ್ರಯಾಣ, ಅಲ್ಲಿ ಹೊಸ ಹೊಸ ಊರುಗಳು, ಹೊಸ ಹೊಸ ದೃಶ್ಯಗಳನ್ನು ನೋಡುವುದು, ಜೊತೆಗೆ ಕ್ರಮಬದ್ಧವಾದ ಸಂಗೀತ ಶಿಕ್ಷಣ ಇವೆಲ್ಲವೂ ನನಗೆ ಅತ್ಯಂತ ಆಕರ್ಷಕವಾಗಿ ಕಂಡವು . ನಾನು ಸಂತೋಷ ದಿಂದಲೇ ಮುಂದಿನ ಬೆಳವಣಿಗೆಗಳನ್ನು ಎದುರು ನೋಡುತ್ತಿದ್ದೆ. ನನ್ನ ತಂದೆಯವರು ನನ್ನ ಸಂಗೀತ ಶಿಕ್ಷಣ ಹೇಗೆ, ಎಲ್ಲಿ, ಯಾರಲ್ಲಿ ನಡೆಯಬೇಕು ಎಂಬ ಬಗ್ಗೆ ಬಲ್ಲವರಿಂದ ಸಲಹೆಗಳನ್ನು ಪಡೆದು ಕಡೆಗೆ ಅಣ್ಣಾಮಲೈ ವಿಶ್ವವಿದ್ಯಾಲಯದ ಸಂಗೀತ ವಿಭಾಗದಲ್ಲಿ ನನ್ನ ಸಂಗೀತ ಶಿಕ್ಷಣ ನಡೆಯಬೇಕೆಂದು ತೀರ್ಮಾನಿಸಿದರು. ಅದಕ್ಕೆ ಬೇಕಾದ ಎಲ್ಲ ಪತ್ರವ್ಯವಹಾರಗಳನ್ನೂ ನಡೆಸಿ ಅಲ್ಲಿ ಅದಕ್ಕಾಗಿ ನಡೆಯುವ ಪ್ರವೇಶ ಪರೀಕ್ಷೆಗಳ ದಿನಾಂಕ, ಶುಲ್ಕ, ಇತ್ಯಾದಿ ಎಲ್ಲ ವಿವರಗಳನ್ನೂ ತರಿಸಿಕೊಂಡರು. ದೂರಪ್ರಯಾಣವಾದ್ದರಿಂದಲೂ, ಆ ಕಾಲದಲ್ಲಿ ಹೆಚ್ಚು ನೇರ ಪ್ರಯಾಣದ ಸೌಕರ್ಯಗಳಿಲ್ಲದ್ದರಿಂದಲೂ ಚಿದಂಬರಂ ತಲುಪಲು ಎಲ್ಲೆಲ್ಲಿ ರೈಲು ಬದಲಾಯಿಸಬೇಕು, ಎಷ್ಟು ದಿನಗಳ ಪ್ರಯಾಣ ಎಂಬ ಎಲ್ಲ ವಿಷಯಗಳನ್ನೂ ಖಚಿತಪಡಿಸಿಕೊಂಡರು. ಅದಕ್ಕೆ ಅನುಸಾರವಾಗಿ ನಮ್ಮ ಪ್ರಯಾಣದ ದಿನವನ್ನು ಗೊತ್ತುಮಾಡಿ ಪ್ರಯಾಣಕ್ಕೆ ಸಿದ್ಧವಾಗಿರುವಂತೆ ನನಗೆ ಸೂಚಿಸಿದರು. ಬಹಳ ಉತ್ಸಾಹದಿಂದ ಪ್ರಯಾಣ ಹೊರಡುವ ದಿನವನ್ನೇ ಎದುರು ನೋಡುತ್ತಿದ್ದೆ.

ಚಿದಂಬರಂ

ಸರಿ, ಪ್ರಯಾಣ ಹೊರಡುವ ದಿನ ಬಂತು. ನಾನೂ ತಂದೆಯವರೂ ನಮ್ಮ ಕುಲದೈವ ವೆಂಕಟರಮಣಸ್ವಾಮಿಗೆ ಭಕ್ತಿಯಿಂದ ಕೈ ಮುಗಿದು ಚಿದಂಬರಂಗೆ ಪ್ರಯಾಣ ಹೊರಟೆವು. ಸಾಲಿಗ್ರಾಮದಿಂದ ಹೊಸ ಅಗ್ರಹಾರಕ್ಕೆ ಬಸ್ಸು , ಅಲ್ಲಿಂದ ರೈಲಿನಲ್ಲಿ ಮೈಸೂರು ಮಾರ್ಗವಾಗಿ ಬೆಂಗಳೂರು. ಅಲ್ಲೇ ಮತ್ತೆ ರೈಲು ಬದಲಿಸಿ ಮದರಾಸ್ ಮೇಲಿನಲ್ಲಿ ಜೋಲಾರಪೇಟೆ. ಅಲ್ಲಿಂದ ಮದಾರಾಸ್-ಮೆಟ್ಟುಪಾಳಯಂ ರೈಲಿನಲ್ಲಿ ಸೇಲಂ ತಲುಪಿ ಅಲ್ಲಿ ಮತ್ತೆ ಬೇರೆ ರೈಲಿನಲ್ಲಿ ವೃದ್ಧಾಚಲಂ-ಕಡಲೂರು ಮಾರ್ಗವಾಗಿ ಚಿದಂಬರಂ ತಲುಪುವ ಹೊತ್ತಿಗೆ ನಮಗೆ ಸಾಕುಸಾಕಾಗಿ ಹೋಯಿತು. ಪ್ರಯಾಣ ಎಷ್ಟೇ ಕಷ್ಟಕರವಾಗಿ ಆಯಾಸವಾಗಿದ್ದರೂ ನನ್ನ ಬಾಲ್ಯಸಹಜವಾದ ಉತ್ಸಾಹದಲ್ಲಿ ನನಗೆ ಏನೂ ಬೇಸರ ವಾಗಲಿಲ್ಲ. ಪ್ರಯಾಣದ ಉದ್ದಕ್ಕೂ ಎಲ್ಲವನ್ನೂ ನೋಡುತ್ತಾ ತಂದೆಯವರಿಂದ ಅನೇಕ ವಿಷಯಗಳನ್ನು ಕೇಳಿ ತಿಳಿದುಕೊಳ್ಳುತ್ತಾ, ರುಚಿರುಚಿಯಾದ ತಿಂಡಿ ತಿನಿಸುಗಳನ್ನು ಮೆಲ್ಲುತ್ತಾ , ಪ್ರಯಾಣದ ಆನಂದವನ್ನು ಸವಿಯುತ್ತಾ ಇದ್ದ ನನಗೆ ಆ ದೀರ್ಘ ಪ್ರಯಾಣ ಕಳೆದದ್ದೇ ಗೊತ್ತಾಗಲಿಲ್ಲ. ಸುಮಾರು ಎರಡು ದಿನಗಳೇ ಹಿಡಿದ ಆ ಪ್ರಯಾಣ ಮುಗಿದು ನಾವು ಚಿದಂಬರಂ ತಲುಪಿದಾಗ ರಾತ್ರಿ ಒಂಬತ್ತು ಘಂಟೆ ಇರಬಹುದು. ಯಾವುದೋ ಒಂದು ಹೋಟೆಲ್‌ನಲ್ಲಿ ಊಟ ಮಾಡಿ ಧರ್ಮಛತ್ರ ಒಂದರಲ್ಲಿ ಹೋಗಿ ಮಲಗಿದೆವು. ಆಯಾಸದಿಂದ ಬಳಲಿದ್ದ ನಾನೂ, ತಂದೆಯವರೂ ಕೂಡಲೇ ಸುಖನಿದ್ರೆಯಲ್ಲಿ ಮುಳುಗಿಹೋದೆವು.

ದಕ್ಷಿಣ ಭಾರತದ ಅನೇಕ ಪುಣ್ಯಕ್ಷೇತ್ರಗಳಲ್ಲಿ ಚಿದಂಬರಂ ಒಂದು. ಈ ಪುಣ್ಯಕ್ಷೇತ್ರಕ್ಕೆ ನಾವು ಯಾತ್ರಾರ್ಥಿಗಳಾಗಿ ಅಲ್ಲದಿದ್ದರೂ ಬೇರೆ ಒಂದು ಕಾರಣಕ್ಕಾಗಿ ಹೋಗಿ ಸೇರಿದ್ದೆವು. ಹೇಗಾದರೂ ಫಲಿತಾಂಶ ಒಂದೇ ತಾನೇ? ಆ ಪುಣ್ಯಪ್ರಾಪ್ತಿಯೂ ನಮಗಾಯಿತು. ಮಾರನೇ ದಿನ ಬೆಳಗ್ಗೆ ದರ್ಶನ ಮಾಡಿ ತೀರ್ಥ ಪ್ರಸಾದಗಳನ್ನು ಸ್ವೀಕರಿಸಿದೆವು. ಇದರಿಂದ ಮನಸ್ಸಿಗೆ ಒಂದು ರೀತಿಯ ನೆಮ್ಮದಿಯೂ, ಧನ್ಯತಾಭಾವವೂ ಲಭಿಸಿತು. ಅನಂತರ, ಉಪಾಹಾರ ಮುಗಿಸಿ, ಊರಿನಿಂದ ಹೊರಗೆ ಸುಮಾರು ಎರಡು ಮೈಲಿ ಆಚೆ ಇರುವ ಅಣ್ಣಾಮಲೈ ವಿಶ್ವವಿದ್ಯಾಲಯದ ಕ್ಯಾಂಪಸ್‌ಗೆ ಹೋದೆವು. ಅಲ್ಲಿ ನಮಗೆ ಎಲ್ಲರೂ ಹೊಸಬರೆ ! ಅವರ ತಮಿಳು ಭಾಷೆ ನಮಗೆ ಬರದು. ನಮ್ಮ ಕನ್ನಡ

ಅವರಿಗೆ ತಿಳಿಯದು. ಆದರೂ, ಹೇಗೋ ಹರುಕು ಮುರುಕು ತಮಿಳು ಮತ್ತು ಇಂಗ್ಲಿಷ್ ಭಾಷೆಗಳ ಸಹಾಯದಿಂದ ಹಾಗೂ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸಿದ ವಿವರಗಳಿಂದ ತಂದೆಯವರು ಎಲ್ಲವನ್ನೂ ಖಚಿತಪಡಿಸಿಕೊಂಡರು. ಅದೇ ದಿನ ನನ್ನ ಲಿಖಿತಪರೀಕ್ಷೆ ನಡೆಯಿತು. ಅಭ್ಯರ್ಥಿಗಳ ಸಂಖ್ಯೆ ಹೆಚ್ಚಾಗಿಲ್ಲದುದರಿಂದ ಮಾರನೇ ದಿನವೇ ಫಲಿತಾಂಶವನ್ನು ಪ್ರಕಟಿಸಿದರು. ನಾನು ಉತ್ತೀರ್ಣನಾಗಿದ್ದೆ. ಆದರೆ, ಇನ್ನೊಂದು ಪ್ರಯೋಗ ಪರೀಕ್ಷೆಯನ್ನೂ ನಾನು ಎದುರಿಸಬೇಕಾಗಿತ್ತು. ಅಲ್ಲಿ ಒಳ್ಳೆಯ ಶಾರೀರ ಮತ್ತು ತಕ್ಕಮಟ್ಟಿನ ಸಂಗೀತಜ್ಞಾನ ಇರುವವರನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು. ನನ್ನ ಶಾಸ್ತ್ರೀಯ ಸಂಗೀತಜ್ಞಾನ ಸೊನ್ನೆ. ಶಾರೀರವೇನೋ ಎತ್ತರದ ಶ್ರುತಿಯಲ್ಲಿದ್ದು ಇಂಪಾಗಿತ್ತು. ಆಗ ನನಗೆ ಬರುತ್ತಿದ್ದುದು ಬಿ.ಎಸ್. ರಾಜಯ್ಯಂಗಾರ್ ಅವರು ಗ್ರಾಮಫೋನ್ ರಿಕಾರ್ಡ್‌ನಲ್ಲಿ ಹಾಡಿದ್ದ "ಆಡಿಸಿದಳೆಶೋದಾ" ಒಂದೆ. ಇದನ್ನು ನಾನೇ ಹಾರ್ಮೋನಿಯಂ ನುಡಿಸಿಕೊಂಡು ಭಾವಪರವಶನಾಗಿ ಹಾಡುತ್ತಿದ್ದೆ. ಈ ಹಾಡು ತಮಿಳುನಾಡಿನಲ್ಲಿ ಸಹ ಬಹಳ ಪ್ರಸಿದ್ಧವಾಗಿತ್ತು. ನಾನು ಅಲ್ಲೂ ಇದನ್ನೇ ಹಾಡಿದೆ. ಶಾಸ್ತ್ರೀಯ ಸಂಗೀತದ ಬಗ್ಗೆ ಇನ್ನೂ ಕೆಲವು ಪ್ರಶ್ನೆಗಳನ್ನು ಕೇಳಿದರು. ನನಗೆ ಏನೂ ಗೊತ್ತಿಲ್ಲವೆಂದಷ್ಟೇ ಹೇಳಿದೆ. ಅಲ್ಲಿ ಆಯ್ಕೆಯಾದ ಎಲ್ಲ ವಿದ್ಯಾರ್ಥಿಗಳೂ ನನಗಿಂತ ದೊಡ್ಡವರಾಗಿದ್ದು ಕಮ್ಮಿ ಶ್ರುತಿಯಲ್ಲಿ ಹಾಡುವವರಾಗಿದ್ದರು. ನನ್ನದು ಬಹಳ ಎತ್ತರದ ಶ್ರುತಿ. ಹೀಗೆ, ಏನೇನೋ ಕಾರಣಗಳನ್ನು ಹೇಳಿ ನನಗೆ ಕಾಲೇಜಿಗೆ ಪ್ರವೇಶವನ್ನು ನಿರಾಕರಿಸಿದರು. ಇದು ಒಂದು ದೃಷ್ಟಿಯಿಂದ ಒಳ್ಳೆಯದೇ ಆಯಿತೇನೋ ಎಂದು ಈಗ ಅನ್ನಿಸುತ್ತದೆ. ಇಲ್ಲಿ ನನಗೆ ಪ್ರವೇಶ ದೊರಕಿದ್ದರೆ ಮುಂದೆ ನಾನು ಶಿಕ್ಷಣ ಪಡೆದ ಎರಡು ಪ್ರಮುಖ ಗುರುಕುಲವಾಸಗಳು ತಪ್ಪಿಹೋಗುತ್ತಿದ್ದವು. ಆದದ್ದೆಲ್ಲಾ ಒಳಿತೇ ಆಯಿತು ಎಂದುಕೊಂಡು ಸುಮ್ಮನಾದೆವು.

ಶ್ರೀನಿವಾಸ ಅಯ್ಯರ್

ಹೀಗೆ, ಬಂದ ಉದ್ದೇಶ ನೆರವೇರಲಿಲ್ಲವಲ್ಲಾ ಎಂದು ತಂದೆಯವರು ಚಿಂತಿಸಲಾರಂಭಿಸಿದರು. ನಾನಿನ್ನೂ ಹದಿನಾಲ್ಕು ವರ್ಷದ ಬಾಲಕ. ಏನೂ ತಿಳಿಯದ ನಾನು ಅವರಿಗೆ ಯಾವ ಸಲಹೆಯನ್ನೂ ಕೊಡುವ ಸ್ಥಿತಿಯಲ್ಲಿರಲಿಲ್ಲ. ಅದೇ ಕಾಲೇಜಿನಲ್ಲಿ ಪಿಟೀಲು ಅಧ್ಯಾಪಕರಾಗಿದ್ದ ಶ್ರೀನಿವಾಸ ಅಯ್ಯರ್ ಎಂಬುವವರು ತಂದೆಯವರಿಗೆ ಸ್ವಲ್ಪ ಪರಿಚಿತರಾಗಿದ್ದರು. ಅವರು ತಾವೇ ನನ್ನನ್ನು ಅತಿ ಶೀಘ್ರದಲ್ಲಿ ದೊಡ್ಡ ವಿದ್ವಾಂಸನನ್ನಾಗಿ ತಯಾರು ಮಾಡಿಬಿಡುವುದಾಗಿಯೂ, ಸುಲಭವಾಗಿ ಅತಿ ಕಡಮೆ ಅವಧಿಯಲ್ಲಿ ಸಂಗೀತವನ್ನು ಕಲಿಸುವ ಹೊಸ ವಿಧಾನವನ್ನು ತಾವು ಸಂಶೋಧನೆ ಮಾಡಿ ಕಂಡು ಹಿಡಿದಿರುವುದಾಗಿಯೂ, ಈ ಕಾಲೇಜಿಗೆ ಸೇರಿದ್ದರೂ ನನಗೆ ಬರುತ್ತಿದ್ದ ಸಂಗೀತ ಅಷ್ಟಕ್ಕಷ್ಟೇ ಎಂದೂ ಏನೇನೆಲ್ಲವನ್ನೂ ಹೇಳಿ ನನ್ನ ತಂದೆಯವರನ್ನು ಮರುಳು ಮಾಡಿಬಿಟ್ಟರು. ನನ್ನ ಎಲ್ಲ ಯೋಗಕ್ಷೇಮವನ್ನೂ ತಾವೇ ವಹಿಸಿಕೊಳ್ಳುವುದಾಗಿಯೂ ಆಶ್ವಾಸನೆ ಕೊಟ್ಟರು. ತಂದೆಯವರು ಇದನ್ನೆಲ್ಲಾ ಸಂಪೂರ್ಣ ನಂಬಿದರು. ಅವರು ಕೇಳಿದಷ್ಟು ಹಣವನ್ನು ಕೊಟ್ಟು , ಗುರುಗಳಿಗೆ ವಿಧೇಯನಾಗಿದ್ದುಕೊಂಡು ಚೆನ್ನಾಗಿ ಸಂಗೀತವನ್ನು ಕಲಿಯುವಂತೆ ಬುದ್ಧಿ ಮಾತು ಹೇಳಿ ನನ್ನನ್ನು ಗುರುಗಳ ವಶಕ್ಕೆ ಒಪ್ಪಿಸಿ ನಿಶ್ಚಿಂತರಾಗಿ ಊರಿಗೆ ಹಿಂದಿರುಗಿದರು.

ಚಿದಂಬರಂನಲ್ಲಿ ನಾನು ಏಕಾಂಗಿಯಾಗಿ ನಿಂತ ಮೊದಲ ಕೆಲವು ದಿನಗಳು ಬಹಳ ಕಷ್ಟದಿಂದ ಕಳೆದವು. ಪದೇ ಪದೇ ನನ್ನ ಊರು, ಅಪ್ಪ , ಅಮ್ಮ, ಅಕ್ಕ, ತಮ್ಮ ಎಲ್ಲ ಜ್ಞಾಪಕಕ್ಕೆ ಬರುತ್ತಿದ್ದರು. ದೇಶ, ಭಾಷೆ, ಆಚಾರ, ವಿಚಾರ ಎಲ್ಲವೂ ಹೊಸದು. ಏನು ಮಾಡಲೂ ತೋಚದೇ ಒಮ್ಮೊಮ್ಮೆ ಅಳು ಬರುತ್ತಿತ್ತು. ನನ್ನ ಸಂಗೀತ ಪಾಠ, ದಿನದಲ್ಲಿ ಒಂದು ಅರ್ಧ ಘಂಟೆ ನಡೆಸಿದರೆ ಹೆಚ್ಚು. ಗುರುಗಳು ಯಾವಾಗಲೂ ಕಾಲೇಜು, ಸ್ನೇಹಿತರು ಅಂತ ಓಡಾಡಿಕೊಂಡು ಇದ್ದುಬಿಡುತ್ತಿದ್ದರು. ಸಂಗೀತ ಪಾಠಕ್ರಮವೂ ಅಷ್ಟೇನೂ ಕ್ರಮಬದ್ಧವಾಗಿರಲಿಲ್ಲ. ಬರೀ ಸಾಹಿತ್ಯವನ್ನು ಸ್ವರ ಲಿಪಿಯಿಲ್ಲದೇ ಬರೆಸಿ ಅದನ್ನು ಒಮ್ಮೆ ಹಾಡಿ ತೋರಿಸುತ್ತಿದ್ದರು. ಅಷ್ಟರಿಂದಲೇ ನಾನು ಹಾಡನ್ನು ಕಲಿಯಬೇಕಾಗಿತ್ತು. ಅವರು ಪ್ರಾರಂಭದಿಂದ ಶಾಸ್ತ್ರೀಯ ರೀತಿಯಲ್ಲಿ ಪಾಠ ಮಾಡುತ್ತಲೇ ಇರಲಿಲ್ಲ. ಸುಲಭವಾಗಿ ಎಷ್ಟು ಸಾಧ್ಯವೋ ಅಷ್ಟು ಮಾತ್ರ ಕಲಿಸಲು ಪ್ರಯತ್ನಿಸುತ್ತಿದ್ದರು. ಇವರಿಂದ ನನಗೆ ಒಳ್ಳೆಯ ಸಂಗೀತಜ್ಞಾನವಾಗಲೀ, ಒಳ್ಳೆಯ ಪಾಠಾಂತರವಾಗಲೀ ಲಭಿಸಲು ಸಾಧ್ಯವಾಗಲಿಲ್ಲ. ಹೀಗೆ ಸುಮಾರು ನಾಲ್ಕೈದು ತಿಂಗಳು ಕಳೆದವು. ಅಷ್ಟು ಹೊತ್ತಿಗೆ ಅದೇ ಕಾಲೇಜಿನಲ್ಲಿ ಪಿಟೀಲು ಶಿಕ್ಷಣ ಪಡೆಯುತ್ತಿದ್ದ ನಮ್ಮ ಸಂಕೇತಿಯೇ ಆಗಿದ್ದ ನನ್ನ ಹಿರಿಯ ಸ್ನೇಹಿತ ಶ್ರೀಕಂಠ ಎಂಬುವವರು ನನ್ನ ಸ್ಥಿತಿಯನ್ನು ನೋಡಿ ನನಗೆ ಚೆನ್ನಾಗಿ ಬುದ್ಧಿವಾದ ಹೇಳಿದರು. ನಾನು ನಿಜವಾಗಿ ಒಬ್ಬ ಒಳ್ಳೆಯ ಸಂಗೀತ ವಿದ್ವಾಂಸನಾಗಬೇಕಾದರೆ ಸೇಲಂ ದೊರೆಸ್ವಾಮಿ ಅಯ್ಯಂಗಾರ್ ಅವರ ಬಳಿ ಶಿಷ್ಯವೃತ್ತಿ ಮಾಡಬೇಕೆಂದೂ, ಅವರು ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರೆ ಅದು ನನ್ನ ಮಹಾ ಅದೃಷ್ಟವೆಂದೂ ನನಗೆ ಒತ್ತಿ ಒತ್ತಿ ಹೇಳಿ ಆದಷ್ಟು ಶೀಘ್ರವಾಗಿ ಅದಕ್ಕೆ ಪ್ರಯತ್ನಿಸುವಂತೆ ಬಹಳ ಆಗ್ರಹಪೂರ್ವಕವಾಗಿ ಹೇಳಿದರು. ಇದನ್ನೆಲ್ಲಾ ವಿವರಿಸಿ ನಮ್ಮ ತಂದೆಯವರಿಗೆ ಪತ್ರ ಬರೆದೆ. ಅವರು ಸಹ ಇದಕ್ಕೆ ಸಮ್ಮತಿಸಿ ಕೂಡಲೇ ಊರಿಗೆ ಹಿಂದಿರುಗಲು ನನಗೆ ಅನುಮತಿಯಿತ್ತರು.

ಚಿದಂಬರಂನಲ್ಲಿ ನಾನಿದ್ದ ಮೊದಲ ಕೆಲವು ದಿನಗಳನ್ನು ಬಿಟ್ಟರೆ ಉಳಿದ ನಾಲ್ಕೈದು ತಿಂಗಳು ನಾನು ಸಂತೋಷವಾಗಿಯೇ ಕಳೆದೆ. ಒಂದು ಹೊಸ ಸಂಸ್ಕೃತಿ, ಹೊಸ ಪರಿಸರ, ತಮಿಳು ಸಂತಕವಿಗಳ ಭಕ್ತಿಗೀತೆಗಳು- ಆಗ ಅತ್ಯಂತ ಪ್ರಸಿದ್ಧರಾಗಿದ್ದ ಎಸ್.ಜಿ. ಕಿಟ್ಟಪ್ಪ ಮತ್ತು ಕೆ.ಟಿ.

ಸುಂದರಾಂಬಾಳ್ ಇವರುಗಳ ಧ್ವನಿಮುದ್ರಿಕೆಗಳು-ಇವುಗಳೆಲ್ಲದರಿಂದಲೂ ನಾನು ಅತ್ಯಂತ ಪ್ರಭಾವಿತನಾಗಿದ್ದೆ. ಭಕ್ತಿಸಂಗೀತವನ್ನು ಕೇಳಿದಾಗ ನಾನು ಭಾವಪರವಶನಾಗಿ ಮೈಮರೆಯುತ್ತಿದ್ದೆ. ಪ್ರತಿದಿನ ದೇವಾಲಯಕ್ಕೆ ಹೋಗಿ ನಟರಾಜಸ್ವಾಮಿಯ ದರ್ಶನ ಮಾಡಿ ಪೊಂಗಲು ಪ್ರಸಾದವನ್ನು ಸವಿಯುತ್ತಿದ್ದೆ. ಯಾವುದೋ ಜನ್ಮದ ಪುಣ್ಯ ವಿಶೇಷದಿಂದ ಇಂತಹ ಒಂದು ಪುಣ್ಯಭೂಮಿಯಲ್ಲಿ ನಟರಾಜನ ಸನ್ನಿಧಿಯಲ್ಲಿ ಸುಮಾರು ಆರು ತಿಂಗಳು ಕಳೆದ ನನಗೆ ಏನೋ ಒಂದು ವರ್ಣಿಸಲಾಗದ ಆನಂದ, ಆತ್ಮಬಲ, ಧೈರ್ಯ, ಸ್ಥೈರ್ಯಗಳ ಅನುಭವವಾಗುತ್ತಿತ್ತು. ನಾನು ಏನು ಬೇಕಾದರೂ ಸಾಧಿಸಬಲ್ಲೆ ಎಂಬ ವಿಶ್ವಾಸ ನನ್ನಲ್ಲಿ ಮೂಡಿತ್ತು. ನನ್ನ ಜೀವನದ ಗುರಿ ಏನೆಂಬುದು ಸ್ಪಷ್ಟವಾಗಿರದಿದ್ದರೂ, ನನ್ನ ಅದೃಷ್ಟ ನನ್ನನ್ನು ಸರಿಯಾದ ಮಾರ್ಗದಲ್ಲೇ ಕೊಂಡೊಯ್ಯುವುದೆಂಬ ಭರವಸೆ ನನಗಿತ್ತು. ನಾನು ಅಂದಿಗೂ, ಇಂದಿಗೂ ಆಶಾವಾದಿಯಾಗಿಯೇ ಉಳಿದು ಬಂದಿದ್ದೇನೆ. ನಿರಾಶಾವಾದದ ಛಾಯೆಯೂ ನನಗೆ ಹಿಡಿಸದು. ಎಂದೂ ಭವಿಷ್ಯದ ಬಗ್ಗೆ ತಲೆ ಕೆಡಿಸಿಕೊಂಡವನೇ ಅಲ್ಲ. ಆದ್ದರಿಂದಲೇ ಅಷ್ಟು ಚಿಕ್ಕವಯಸ್ಸಿನಲ್ಲೇ ಶಾಲಾ ವಿದ್ಯಾಭ್ಯಾಸವನ್ನು ಮಧ್ಯದಲ್ಲೇ ನಿಲ್ಲಿಸಿ ದೂರದ ಊರುಗಳಲ್ಲಿ ಒಬ್ಬನೇ ಇದ್ದು , ಅಲ್ಲಿನ ಪರಿಸರಕ್ಕೆ ಹೊಂದಿಕೊಂಡು ಧೈರ್ಯದಿಂದ ಮುನ್ನಡೆಯಲು ಸಾಧ್ಯವಾಯಿತು. ನಂಬಿದ ದೈವ ನನ್ನನ್ನು ಎಂದೂ ಕೈ ಬಿಡುವುದಿಲ್ಲ ಎಂಬ ನಂಬಿಕೆಯೇ ನನಗೆ ಶ್ರೀರಕ್ಷೆ.

ಸೇಲಂನಲ್ಲಿ

ಅಂತೂ, ಚಿದಂಬರಂನಲ್ಲಿ ನನ್ನ ಸಂಗೀತ ಶಿಕ್ಷಣ ಫಲಪ್ರದವಾಗದೇ ಸಾಲಿಗ್ರಾಮಕ್ಕೆ ಹಿಂದಿರುಗಿದೆ. ಮನೆ ಮಂದಿಯನ್ನೆಲ್ಲಾ ಮತ್ತೆ ನೋಡಿದ ನನಗೆ ಬಹಳ ಖುಷಿಯಾಯಿತು. ಎಲ್ಲರ ಜತೆ ಕೆಲವು ದಿನ ಹಾಯಾಗಿ ಕಳೆದೆ. ಇಷ್ಟರಲ್ಲಿ ತಂದೆಯವರು ನನ್ನನ್ನು ಸೇಲಂಗೆ ಕಳುಹಿಸುವ ಎಲ್ಲ ಏರ್ಪಾಡುಗಳನ್ನೂ ಮಾಡಿದ್ದರು. ಅಲ್ಲಿ ವೈದ್ಯವೃತ್ತಿಯನ್ನು ನಡೆಸುತ್ತಿದ್ದ ನಮ್ಮವರೇ ಆದ ಡಾ. ಹೆಚ್. ಶ್ರೀನಿವಾಸಯ್ಯನವರು ನನ್ನ ಕ್ಷೇಮಪಾಲಕರಾಗಿರಲು ಒಪ್ಪಿ ನನ್ನನ್ನು ತುಂಬು ಹೃದಯದಿಂದ ಸೇಲಂಗೆ ಬರಮಾಡಿಕೊಂಡರು. ತಮ್ಮ ಡಿಸ್ಪೆನ್ಸರಿ ಇದ್ದ ಮನೆಯಲ್ಲೇ ನನಗೆ ವಾಸಕ್ಕೆ ಅನುಕೂಲಮಾಡಿಕೊಟ್ಟರು. ಅವರ ವಾಸದ ಬಂಗಲೆ ಎರಡು ಮೈಲಿ ದೂರದ ಒಂದು ಬಡಾವಣೆಯಲ್ಲಿತ್ತು. ಅವರು ಪ್ರತಿ ದಿನ ಬೆಳಗ್ಗೆ ಮತ್ತು ಸಂಜೆ ತಮ್ಮ ಕಾರಿನಲ್ಲಿ ಡಿಸ್ಪೆನ್ಸರಿಗೆ ಬಂದು ಹೋಗುತ್ತಿದ್ದರು. ಅವರು ಅಲ್ಲಿ ಅತ್ಯಂತ ಜನಪ್ರಿಯ ವೈದ್ಯರಾಗಿದ್ದರು. ನಾನು ಹತ್ತಿರದಲ್ಲೇ ಇದ್ದ ಹೋಟಲ್ ಒಂದರಲ್ಲಿ ಊಟ ತಿಂಡಿಗಳಿಗೆ ವ್ಯವಸ್ಥೆ ಮಾಡಿಕೊಂಡಿದ್ದೆ. ತಂದೆಯವರು ಪ್ರತಿ ತಿಂಗಳೂ ಹಣ ಕಳುಹಿಸುತ್ತಿದ್ದರು. ಹಬ್ಬ-ಹರಿದಿನಗಳಲ್ಲಿ ಶ್ರೀನಿವಾಸಯ್ಯನವರು ನನ್ನನ್ನು ತಮ್ಮ ಮನೆಗೆ ಊಟಕ್ಕೆ ಕರೆದುಕೊಂಡು ಹೋಗುತ್ತಿದ್ದರು. ನನ್ನ ಗುರುಗಳಾದ ಸೇಲಂ ದೊರೆಸ್ವಾಮಿ ಅಯ್ಯಂಗಾರ್ಯರೇ ಶ್ರೀನಿವಾಸಯ್ಯನವರ ಮೂವರು ಪುತ್ರಿಯರಿಗೂ ಸಂಗೀತ ಪಾಠ ಹೇಳಿಕೊಡುತ್ತಿದ್ದರು. ಗುರುಗಳಾದಿಯಾಗಿ ಪ್ರತಿಯೊಬ್ಬರೂ ನನ್ನನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಒಟ್ಟಿನಲ್ಲಿ ಸೇಲಂನಲ್ಲಿ ಗುರುಕುಲವಾಸ ಮಾಡಿದ ಸುಮಾರು ನಾಲ್ಕು ವರ್ಷಗಳನ್ನು ನಾನು ಅತ್ಯಂತ ಸಂತೋಷದಿಂದ ಕಳೆದೆ. ಎಲ್ಲರ ಪ್ರೀತಿ ವಿಶ್ವಾಸಗಳಲ್ಲಿ ಮುಳುಗಿದ್ದ ನನಗೆ ನಮ್ಮ ಮನೆಯವರಿಂದ ದೂರ ಇದ್ದೇನೆ ಎನಿಸುತ್ತಲೇ ಇರಲಿಲ್ಲ. ಈ ಸಂತೋಷಮಯ ವಾತಾವರಣದಲ್ಲಿ ನನಗರಿವಿಲ್ಲದಂತೆಯೇ ದೈಹಿಕವಾಗಿ, ಮಾನಸಿಕವಾಗಿ ಪ್ರಬುದ್ಧನಾದೆ. ನನಗೆ ಇಲ್ಲಿ ದೊರೆತ ಸಂಗೀತ ದೀಕ್ಷೆಯೇ ಮುಂದಿನ ಎಲ್ಲ ಸಾಧನೆಗಳಿಗೂ ಒಳ್ಳೆಯ ಅಡಿಪಾಯವಾಯಿತು.

ಚಿದಂಬರಂನಿಂದ ಊರಿಗೆ ಹಿಂದಿರುಗಿದಾಗ ಒಂಟಿಯಾಗಿಯೇ ಮದರಾಸು, ಬೆಂಗಳೂರು, ಮೈಸೂರು ಮೂಲಕ ಸಾಲಿಗ್ರಾಮಕ್ಕೆ ಪ್ರಯಾಣ ಮಾಡಿದ್ದೆ. ಈಗ ಎಲ್ಲೆಂದರಲ್ಲಿ ಒಬ್ಬನೇ ಓಡಾಡುವಷ್ಟು ಸಮರ್ಥನಾಗಿದ್ದೆ. ಸೇಲಂಗೂ ಒಂಟಿಯಾಗಿಯೇ ಪ್ರಯಾಣ ಮಾಡಿದೆ. ಆಗ ನನಗೆ ಹದಿನೈದನೆಯ ವರ್ಷ ನಡೆಯುತ್ತಿತ್ತು. ನನ್ನ ತಂದೆಯವರು ಡಾ. ಶ್ರೀನಿವಾಸಯ್ಯನವರಿಗೆ ಒಂದು ಪತ್ರವನ್ನು ಕೊಟ್ಟಿದ್ದರು. ಸೇಲಂನಲ್ಲಿ ಬಂದಿಳಿದ ಕೂಡಲೇ ನೇರವಾಗಿ ಡಿಸ್ಪೆನ್ಸರಿಗೆ ಹೋಗಿ ಅವರನ್ನು ಕಂಡು ತಂದೆಯವರ ಪತ್ರವನ್ನು ಅವರಿಗೆ ತಲುಪಿಸಿದೆ. ಅವರು ಅದನ್ನು ಓದಿ ಬಹಳ ಸಂತೋಷಪಟ್ಟು ನನ್ನನ್ನು ಸ್ವಾಗತಿಸಿದರು; ತಮ್ಮ ಮನೆಗೆ ಊಟಕ್ಕೆ ಕರೆದುಕೊಂಡು ಹೋದರು. ಅಂದು ಸಂಜೆ ಅವರ ಜತೆಯಲ್ಲೇ ಕಾರಿನಲ್ಲಿ ತಿರುಗಿ ಬೇಕಾದ ಸಲಕರಣೆಗಳನ್ನೆಲ್ಲಾ ಅಣಿ ಮಾಡಿಕೊಂಡೆ. ಅಂದೇ ಸಾಯಂಕಾಲ ಸುಮಾರು ಏಳೂವರೆ ಘಂಟೆ ವೇಳೆಗೆ ನನ್ನ ಗುರು ಸೇಲಂ ದೊರೆಸ್ವಾಮಿ ಅಯ್ಯಂಗಾರ್ಯರು ಡಿಸ್ಪೆನ್ಸರಿಗೆ ಬಂದರು. ಡಾ. ಶ್ರೀನಿವಾಸಯ್ಯನವರು ನನ್ನನ್ನು ಅವರಿಗೆ ಪರಿಚಯಿಸಿ ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ವಿನಂತಿಸಿಕೊಂಡರು. ನನಗೆ ಅದೇ ಗುರುಗಳ ಪ್ರಥಮ ದರ್ಶನ. ಅವರ ತೇಜಃಪುಂಜವಾದ ಭವ್ಯ ನಿಲುವಿನ ಆಕರ್ಷಕ ವ್ಯಕ್ತಿತ್ವವನ್ನು ಕಂಡು ಬೆರಗಾದೆ. ಬಹಳ ಭಕ್ತಿಯಿಂದ ಅವರ ಪಾದಗಳಿಗೆ ನಮಸ್ಕರಿಸಿದೆ. ಅವರು ನನ್ನನ್ನು ಮೈದಡವಿ ಆಶೀರ್ವದಿಸಿ ಮಾರನೇ ದಿನ ತಮ್ಮ ಮನೆಗೆ ಪಾಠಕ್ಕೆ ಬರಲು ಆದೇಶಿಸಿದರು.

ದೊರೆಸ್ವಾಮಿ ಅಯ್ಯಂಗಾರ್ಯರು

ನಾನು ಮಾರನೇ ದಿನ ಬೆಳಗ್ಗೆ ಶುಚಿರ್ಭೂತನಾಗಿ, ದೇವರಿಗೆ ಭಕ್ತಿಯಿಂದ ಕೈಮುಗಿದು, ಮನಸಾಭೀಷ್ಟ ಪ್ರಾರ್ಥನೆಗಳನ್ನು ಸಲ್ಲಿಸಿ, ಫಲಪುಷ್ಪಗಳ ಸಮೇತ ಗುರುಗಳ ಮನೆಗೆ ಹೋದೆ. ಗುರುಗಳು ಆದರದಿಂದ ಬರಮಾಡಿಕೊಂಡರು. ಆ ದಿನ ಶುಭದಿನವಾದ್ದರಿಂದ

ವಾಗ್ದೇವಿಗೆ ಪೂಜೆಯನ್ನು ಸಲ್ಲಿಸಿ ಅಂದೇ ಪಾಠವನ್ನು ಪ್ರಾರಂಭಿಸಿದರು. ಶಾರೀರ ಹೇಗಿದೆ ಎಂದು ಹಾಡಿಸಿ ನೋಡಿದರು. ಸಂಗೀತದ ಬಗ್ಗೆ ಸಾಮಾನ್ಯಜ್ಞಾನ ಎಷ್ಟು ಎಂಬುದನ್ನೂ ಕೆಲವು ಪ್ರಶ್ನೆಗಳನ್ನು ಕೇಳಿ ಪರೀಕ್ಷೆ ಮಾಡಿದರು. ಶಾರೀರವೇನೋ ಅವರಿಗೆ ಮೆಚ್ಚುಗೆಯಾಗಿತ್ತು. ಸಂಗೀತಜ್ಞಾನ ಏನೇನೂ ಇಲ್ಲ. ಆದರೆ, ನಾನೊಬ್ಬ ಒಳ್ಳೆಯ ಶಿಷ್ಯನಾಗ ಬಲ್ಲೆ ಎಂಬ ಭರವಸೆ ಅವರಿಗೆ ಮೂಡಿರಬೇಕು. ನನಗೆ ಪ್ರಾಸ್ತಾವಿಕ ವಾಗಿ ಕೆಲವು ಉಪದೇಶದ ಮಾತುಗಳನ್ನು ಹೇಳಿ, ಶಾಸ್ತ್ರಬದ್ಧವಾದ ರೀತಿಯಲ್ಲಿ ಪ್ರಾರಂಭದ ಸರಳೆವರಸೆಗಳಿಂದ ಪಾಠವನ್ನು ಶುರುಮಾಡಿದರು. ನನಗೆ ಹಿಡಿಸಲಾರದಷ್ಟು ಆನಂದವಾಯಿತು. ಕೊನೆಗೆ ಒಬ್ಬ ಇಂತಹ ಶ್ರೇಷ್ಠ ಗುರುಗಳು ಸಿಕ್ಕಿದರಲ್ಲಾ ಎಂದು ಹಿರಿಹಿರಿ ಹಿಗ್ಗಿದೆ.

ಸೇಲಂ ದೊರೆಸ್ವಾಮಿ ಅಯ್ಯಂಗಾರ್ಯರು ಶ್ರೀ ತ್ಯಾಗರಾಜರ ಶಿಷ್ಯ ಪರಂಪರೆಗೆ ಸೇರಿದ ಒಬ್ಬ ಶ್ರೇಷ್ಠವಿದ್ವಾಂಸರು. ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್ಯರೂ ಅವರೂ ಸಹಪಾಠಿಗಳು. ಇವರ ಗುರುಗಳು ರಾಮನಾಥಪುರ (ರಾಮನಾಡ್) ಶ್ರೀನಿವಾಸ ಅಯ್ಯಂಗಾರ್ಯರು, ಇವರನ್ನು 'ಪೂಚ್ಚಿ ಅಯ್ಯಂಗಾರ್' ಎಂದೂ ಕರೆಯುತ್ತಿದ್ದರು. ತ್ಯಾಗರಾಜರ ಶಿಷ್ಯರುಗಳಲ್ಲಿ ಮಾನಂಬುಚಾವಡಿ ವೆಂಕಟಸುಬ್ಬಯ್ಯರ್ ಪ್ರಮುಖರು. ಅವರ ಶಿಷ್ಯರಾದ ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಅವರೇ ಪೂಚ್ಚಿ ಅಯ್ಯಂಗಾರ್ ಅವರ ಗುರುಗಳು. ಹೀಗೆ ತ್ಯಾಗರಾಜರ ಪರಂಪರೆಯಲ್ಲಿ ಬಂದ ಸೇಲಂ ದೊರೆಸ್ವಾಮಿ ಅಯ್ಯಂಗಾರ್ ಅವರ ಶಿಷ್ಯನಾಗಿ ನಾನು ಸಹ ಶ್ರೀ ತ್ಯಾಗರಾಜರ ಪರಂಪರೆಗೆ ಸೇರಿದವನಾದೆ. ಇದು ನನ್ನ ಭಾಗ್ಯವಿಶೇಷ. ಇಂಥ ಶ್ರೇಷ್ಠ ಗುರುಪರಂಪರೆಯಲ್ಲಿ ಗುರುಕುಲವಾಸ ಮಾಡಿ, ಶ್ರದ್ಧಾಭಕ್ತಿಗಳಿಂದ ಗುರುಸೇವೆ ಮಾಡಿ ಅವರ ಕೃಪೆಗೆ ಪಾತ್ರನಾದೆ. ಅವರು ನನ್ನಲ್ಲಿ ವಿಶೇಷವಾದ ಅಭಿಮಾನವಿಟ್ಟು ಸಂಗೀತಶಾಸ್ತ್ರ ಮತ್ತು ಪ್ರಯೋಗದ ಎಲ್ಲ ರಹಸ್ಯಗಳನ್ನೂ ನಿರ್ವಂಚನೆ ಯಿಂದ ಬೋಧಿಸಿದರು. ರಾಗ, ಲಯ, ಶ್ರುತಿ, ಸ್ವರ, ಇತ್ಯಾದಿ ವಿಷಯ ಗಳನ್ನೂ, ನೂರಾರು ಶ್ರೇಷ್ಠ ಗೇಯ ರಚನೆಗಳನ್ನೂ, ವಿವಿಧ ವಾಗ್ಗೇಯ ಕಾರರ ಜೀವನಚರಿತ್ರೆಗಳನ್ನೂ ವಿವರಿಸಿ ಹೇಳಿ ನನ್ನ ಜ್ಞಾನಭಂಡಾರವನ್ನು ತುಂಬಿದರು. ತಮ್ಮ ಕಛೇರಿಗಳಲ್ಲಿ ಸಹಗಾಯನಕ್ಕೆ ನನ್ನನ್ನು ಕರೆದು ಕೊಂಡು ಹೋಗುತ್ತಿದ್ದರು. ಹೀಗೆ ಕೊಯಮತ್ತೂರು, ತಿರುಚ್ಚೂರು, ಮದರಾಸು ಮುಂತಾದ ಕಡೆಗಳಲ್ಲಿ ಸುತ್ತಾಡಿದ್ದಲ್ಲದೇ, ಗುರುಗಳ ಕಛೇರಿಗಳನ್ನು ಕೇಳಿ ನನ್ನ ಮನೋಧರ್ಮ ಹಾಗೂ ಕೇಳ್ಮೆಯ ಜ್ಞಾನ ವೃದ್ಧಿಯಾಯಿತು. ಗುರುಗಳು ನನ್ನ ಬಗ್ಗೆ ಬಹಳ ಭರವಸೆ ಇಟ್ಟುಕೊಂಡು ನನ್ನನ್ನು ಒಬ್ಬ ಶ್ರೇಷ್ಠ ಗಾಯಕನನ್ನಾಗಿ ಮಾಡಬೇಕೆಂದು ಹಂಬಲಿಸುತ್ತಿದ್ದರು. ನಾನೂ ಬಹಳ ಶ್ರದ್ಧೆಯಿಂದ ಸಾಧನೆಯಲ್ಲಿ ನಿರತನಾಗಿದ್ದೆ.

ಕೈ ಕೊಟ್ಟ ಕಂಠ

ಹೀಗೆ, ನಾನು ಸಂಗೀತ ಶಿಕ್ಷಣದಲ್ಲಿ ಮುನ್ನಡೆಯುತ್ತಾ ಮುಂದೆ ಶ್ರೇಷ್ಠಗಾಯಕನಾಗುವ ಕನಸು ಕಾಣುತ್ತಿದ್ದಂತೆಯೇ ನನ್ನ ಅದೃಷ್ಟ ನನಗೆ ಮತ್ತೆ ಪ್ರತಿಕೂಲವಾಗಿ, ಅದರ ಪ್ರಭಾವ ಸ್ವಲ್ಪಸ್ವಲ್ಪವಾಗಿ ಪ್ರಕಟವಾಗ ತೊಡಗಿತ್ತು. ಇಷ್ಟು ಹೊತ್ತಿಗೆ ಸೇಲಂನಲ್ಲಿ ಸುಮಾರು ಮೂರು ವರ್ಷಗಳು ಕಳೆದಿದ್ದೆ. ೧೯೩೪ ಡಿಸೆಂಬರ್ ಹನ್ನೆರಡರಂದು ನನಗೆ ಹದಿನೆಂಟು ವರ್ಷ ತುಂಬಿತ್ತು. ಈ ಮಧ್ಯೆ ಒಂದೆರಡು ಬಾರಿ ಸಾಲಿಗ್ರಾಮಕ್ಕೂ ಹೋಗಿ ಬಂದಿದ್ದೆ. ನನ್ನ ವಯೋಗುಣವಾದ ಶಾರೀರಿಕ ಬದಲಾವಣೆಯಿಂದಾಗಿ ಶಾರೀರವು ದಿನದಿನಕ್ಕೆ ತನ್ನ ಮಾಧುರ್ಯವನ್ನು ಕಳೆದುಕೊಳ್ಳುತ್ತಾ ಹಾಡುವ ಶ್ರುತಿ ಕಡಿಮೆಯಾಗುತ್ತಾ ಬಂದು ತಾರಸ್ಥಾಯಿಯಲ್ಲಿ ಹಾಡುವುದಕ್ಕೆ ಆಗದೇ ಬಹಳ ಕಷ್ಟವಾಗುತ್ತಿದ್ದು ಒಡೆದುಹೋದ ನನ್ನ ಗೊಗ್ಗರು ಧ್ವನಿಯನ್ನು ಕೇಳಿ ನನಗೆ ಬೇಸರ ವಾಗುತ್ತಿತ್ತು. ನನ್ನ ಗುರುಗಳು ಈ ಅಸಹಾಯಕ ಸ್ಥಿತಿಯನ್ನು ನೋಡಿ ಏನೂ ಮಾಡಲಾಗದೇ ಸುಮ್ಮನಿದ್ದುಬಿಟ್ಟರು. ಪಾಠ ಪ್ರವಚನವೆಲ್ಲಾ ತಟಸ್ಥವಾಗಿತ್ತು. ಬಾಯಿ ಬಿಡುವುದಕ್ಕೂ ಇಷ್ಟವಾಗುತ್ತಿರಲಿಲ್ಲ. ಊರಿಗೆ ಹೋಗಿದ್ದಾಗಲೂ ನಮ್ಮ ಮನೆಯವರೆಲ್ಲಾ ನನ್ನಲ್ಲಾದ ಈ ಅಹಿತಕರ ಬದಲಾವಣೆಯಿಂದ ಬಹಳ ಖಿನ್ನರಾಗಿದ್ದರು. ನನ್ನ ಒಟ್ಟಾರೆ ಆರೋಗ್ಯವೂ ಅಷ್ಟೇನೂ ಚೆನ್ನಾಗಿರಲಿಲ್ಲ. ಆದರೆ ಯಾರೂ ಏನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ನನಗಾದ ನಿರಾಸೆ, ಜುಗುಪ್ಸೆ , ಹತಾಶೆ ಅಷ್ಟಿಷ್ಟಲ್ಲ. ನನ್ನ ಅದೃಷ್ಟ ಯಾಕೆ ಹೀಗೆ, ಅದರಲ್ಲೇನು ದೋಷವಿದೆ? ಎಂದೆಲ್ಲಾ ಚಿಂತಿಸುತ್ತಿದ್ದೆ. ನನ್ನ ಬಗ್ಗೆ ನನಗೇ ಒಮ್ಮೊಮ್ಮೆ ಬೇಸರ ಬರುತ್ತಿತ್ತು. ಇಷ್ಟಾದರೂ ಇದೇ ಸ್ಥಿತಿಯಲ್ಲಿ ಮತ್ತೂ ಸುಮಾರು ಆರು ತಿಂಗಳು ಸೇಲಂನಲ್ಲೇ ಹೇಗೋ ಕಳೆದದ್ದಾಯಿತು. ಬೆಳಗಿನಿಂದ ರಾತ್ರಿಯವರೆಗೆ ಗುರುಗಳ ಮನೆಯಲ್ಲಿ ಸೇವೆ ಮಾಡಿಕೊಂಡು ಓಡಾಡುವುದಷ್ಟೇ ನನ್ನ ಕೆಲಸವಾಗಿತ್ತು. ಇದಕ್ಕೆಲ್ಲಾ ಪರಿಹಾರ ಹೇಗೆ, ಏನು ಎಂಬುದೇ ಗೊತ್ತಾಗುತ್ತಿರಲಿಲ್ಲ. ಒಂದು ದಿನ ಇದ್ದಕ್ಕಿದ್ದಂತೆ ನನ್ನ ತಂದೆಯವರು ಪ್ರತ್ಯಕ್ಷರಾದರು. ಅವರು ಮೂರು ದಿನಗಳಿಂದ ಸೇಲಂನಲ್ಲಿ ಅಜ್ಞಾತವಾಗಿದ್ದುಕೊಂಡು ನನ್ನ ದಿನಚರಿಯನ್ನೂ, ನಾನು ಪಡುತ್ತಿದ್ದ ಶ್ರಮವನ್ನೂ, ನನ್ನಲ್ಲಾಗಿರುವ ಗುರುತು ಹಿಡಿಯ ಲಾಗದಂತಹ ಬದಲಾವಣೆಗಳನ್ನೂ ಗಮನಿಸಿ ಬಹಳ ಹತಾಶರಾದರು. ಇದೆಲ್ಲವೂ ಇಷ್ಟಕ್ಕೆ ಸಾಕು ಎಂಬ ತೀರ್ಮಾನಕ್ಕೆ ಬಂದರು. ತಾತ್ಕಾಲಿಕ ವಾಗಿ ನನ್ನನ್ನು ಕರೆದುಕೊಂಡು ಹೋಗುತ್ತಿರುವುದಾಗಿ ಗುರುಗಳಲ್ಲಿ ನೆಪಹೇಳಿ, ನನ್ನನ್ನು ವಾಪಸ್ಸು ಸಾಲಿಗ್ರಾಮಕ್ಕೆ ಕರೆದುಕೊಂಡು ಬಂದು ಬಿಟ್ಟರು. ಅವರಿಗೂ ತಮ್ಮ ಪ್ರಯತ್ನವೆಲ್ಲಾ ಹೀಗೆ ನಿಷ್ಫಲವಾಗುತ್ತಿದೆ ಯಲ್ಲಾ ಎಂಬ ಚಿಂತೆ ಕಾಡಹತ್ತಿತ್ತು. ಊರಿಗೆ ಹಿಂದಿರುಗಿದ ಮೇಲೆ ಸ್ವಲ್ಪಕಾಲ ಎಲ್ಲವನ್ನೂ ಮರೆತು ಸ್ನೇಹಿತರ ಜತೆ ಆಟವಾಡಿಕೊಂಡು

ತಂದೆಯವರ ಮಾರ್ಗದರ್ಶನದಲ್ಲಿ ಇಂಗ್ಲಿಷ್, ಕನ್ನಡ ಭಾಷೆಗಳ ಗ್ರಂಥಗಳನ್ನು ಅಧ್ಯಯನ ಮಾಡುತ್ತಾ ಕಾಲವನ್ನು ಕಳೆಯುತ್ತಿದ್ದೆ. ಸಂಸ್ಕೃತ ಭಾಷೆಗೆ ಬೇರೆ ಮೇಷ್ಟ್ರನ್ನು ಗೊತ್ತುಮಾಡಿದ್ದರು. ಹೀಗೆ, ನಾನು ಶಾಲೆಗೆ ಹೋಗದಿದ್ದರೂ ನನ್ನ ಜ್ಞಾನದ ಮಟ್ಟ ಶಾಲೆಯಲ್ಲಿ ಓದಿದವರಿಗಿಂತ ಒಂದು ಕೈ ಮೇಲಾಗಿರಬೇಕು ಎಂಬುದೇ ತಂದೆಯವರ ಉದ್ದೇಶವಾಗಿತ್ತು. ಅದು ಬಹಳ ಮಟ್ಟಿಗೆ ನೆರವೇರುತ್ತಿದ್ದುದು ತಂದೆಯವರಿಗೆ ಸಮಾಧಾನದ ವಿಷಯವಾಗಿತ್ತು.

ವೈಣಿಕನಾಗಲು ಹೊಸ ಸಂಕಲ್ಪ

ನನ್ನ ಸಂಗೀತ ಶಿಕ್ಷಣದಲ್ಲಿ ತಮ್ಮ ಪ್ರಯತ್ನಗಳೆಲ್ಲಾ ಹೀಗೆ ವಿಫಲವಾಗುತ್ತಿದ್ದರೂ, ನನ್ನ ತಂದೆಯವರು ಛಲಬಿಡದ ತ್ರಿವಿಕ್ರಮನಂತೆ, ನಾನು ಹೇಗಾದರೂ ಸರಿ ಸಂಗೀತಕ್ಷೇತ್ರದಲ್ಲೇ ಉಳಿಯಬೇಕು, ಬೆಳೆಯಬೇಕು, ಬಾಳಬೇಕು ಎಂಬ ಖಚಿತವಾದ ನಿಲುವನ್ನು ಬದಲಿಸಲಿಲ್ಲ. ಇದಕ್ಕೆ ಬೇರೆ ರೀತಿಯಲ್ಲಿ ಅವರು ಪರಿಹಾರೋಪಾಯವನ್ನು ಕಂಡುಹಿಡಿದರು. ಸಂಗೀತದಲ್ಲಿ ಹಾಡುಗಾರಿಕೆಯಾದರೆ ಶಾರೀರದ ತೊಂದರೆ ಇತ್ಯಾದಿ ಸಮಸ್ಯೆಗಳು ಬರಬಹುದು. ಆದರೆ, ವಾದ್ಯಸಂಗೀತವಾದರೆ ಇಂತಹ ಯಾವ ಸಮಸ್ಯೆಗಳೂ ಇರುವುದಿಲ್ಲ. ವಾದ್ಯಗಳಲ್ಲಿ ವೀಣೆಯೇ ಅತ್ಯಂತ ಶ್ರೇಷ್ಠ. ಆದ್ದರಿಂದ, ನಾನು ಒಬ್ಬ ವೈಣಿಕನೇ ಆಗಬೇಕು ಎಂಬುದಾಗಿ ಸಂಕಲ್ಪ ಮಾಡಿದರು. ಅವರು ಯಾವ ಅಮೃತ ಘಳಿಗೆಯಲ್ಲಿ ಈ ಸಂಕಲ್ಪ ಮಾಡಿದರೋ! ಅವರ ಸಂಕಲ್ಪಬಲ ಮತ್ತು ದೈವಕೃಪೆಗಳಿಂದ ನಾನು ಒಬ್ಬ ವೈಣಿಕನಾಗಿಯೇ ಮುಂದೆ ಬೆಳೆಯಲು, ಬಾಳಲು ಸಾಧ್ಯವಾಯಿತು. ಇದಕ್ಕಾಗಿ ನಾನು ತಂದೆಯವರನ್ನು ಎಷ್ಟು ಸ್ಮರಿಸಿದರೂ ಸಾಲದು. ಈ ದಿಶೆಯಲ್ಲಿ ನನ್ನನ್ನು ಮುನ್ನಡೆಸಲು ತಂದೆಯವರು ಕೂಡಲೇ ಪ್ರಯತ್ನಶೀಲರಾದರು.

ನಮ್ಮ ಎದುರುಮನೆಯಲ್ಲಿದ್ದ ನಮ್ಮ ಬಂಧುಗಳ ಬಳಿ ಒಂದು ಹಳೆಯ ವೀಣೆ ಇತ್ತು. ಅದನ್ನೇ ತಂದೆಯವರು ನನ್ನ ಉಪಯೋಗಕ್ಕೆಂದು ಅವರನ್ನು ಕೇಳಿದಾಗ ಅವರು ಬಹಳ ಸಂತೋಷದಿಂದಲೇ ಕೊಟ್ಟರು. ವೀಣೆ ಚೆನ್ನಾಗಿಯೇ ಇತ್ತು. ಯಾರ ಬಳಿ ಕಲಿಯುವುದು ಎಂಬ ಪ್ರಶ್ನೆ ಎದುರಾಯಿತು. ಆಗಿನ ಕಾಲದಲ್ಲಿ ನಮ್ಮ ಜನಾಂಗದಲ್ಲಿ ಅತ್ಯಂತ ಹಿರಿಯ ವೈಣಿಕರಾಗಿದ್ದ ವೀಣೆ ಚೆನ್ನಕೇಶವಯ್ಯನವರಲ್ಲಿ (ಇವರನ್ನು ಪುಡಶಾಮಣ್ಣ ಎಂದೂ ಕರೆಯುತ್ತಿದ್ದರು) ನಾನು ವೀಣೆ ಕಲಿಯಲು ಏರ್ಪಾಡು ಮಾಡಿದರು. ಇವರು ನಮ್ಮವರೇ ಆದ, ಹಾಗೂ ನನ್ನ ಪ್ರಥಮ ಗುರುಗಳಾದ ಶತಾವಧಾನಿ ವೆಂಕಟರಾಮಯ್ಯನವರ ಅಣ್ಣಂದಿರು. ಇವರು ಮೈಸೂರು ಮಹಾರಾಣಿ ಹೈಸ್ಕೂಲಿನಲ್ಲಿ ವೀಣೆ ಮೇಷ್ಟರಾಗಿದ್ದರು. ನಾನು ಪ್ರತಿದಿನ ಊಟ ಮಾಡಿಕೊಂಡು ಮಧ್ಯಾಹ್ನ ಬಸ್ಸಿನಲ್ಲಿ ಹೊಸಅಗ್ರಹಾರಕ್ಕೆ ಬಂದು, ಅಲ್ಲಿಂದ ರೈಲಿನಲ್ಲಿ ಮೈಸೂರಿಗೆ ಸಾಯಂಕಾಲ ತಲುಪಿ, ನೇರವಾಗಿ ದಿವಾನ್ ರಸ್ತೆಯಲ್ಲಿದ್ದ ಗುರುಗಳ ಮನೆಗೆ ಹೋಗಿ ಪಾಠ ಹೇಳಿಸಿಕೊಂಡು ರಾತ್ರಿ ಶಿವರಾಂಪೇಟೆ ವಿಠಲರಾಯರ ರಾಮಮಂದಿರದಲ್ಲಿ ಮಲಗುತ್ತಿದ್ದೆ. ಬೆಳಗ್ಗೆ ಏಳು ಗಂಟೆಗೆ ಹೊರಡುತ್ತಿದ್ದ ಅರಸೀಕೆರೆ ರೈಲಿನಲ್ಲಿ ಮತ್ತೆ ಹೊಸಅಗ್ರಹಾರಕ್ಕೆ ಬಂದು ಬಸ್ಸಿನಲ್ಲಿ ಹತ್ತು ಘಂಟೆಯ ವೇಳೆಗೆ ಸಾಲಿಗ್ರಾಮ ತಲುಪುತ್ತಿದ್ದೆ. ಮೂರು ಘಂಟೆಯವರೆಗೆ ಊಟ, ಸ್ವಲ್ಪ ವಿಶ್ರಾಂತಿ. ಅನಂತರ ಮತ್ತೆ ಮೈಸೂರಿಗೆ ಪ್ರಯಾಣ. ಹೀಗೆ ಸುಮಾರು ಮೂರು-ನಾಲ್ಕು ತಿಂಗಳು ಸುತ್ತಾಡಿದೆ. ವೀಣೆ ಪಾಠದಲ್ಲಿ ಯಾವ ಹೆಚ್ಚಿನ ಪ್ರಗತಿಯೂ ಆಗಲಿಲ್ಲ.

ಎಸಳೂರಿಗೆ

ಅಷ್ಟರಲ್ಲಿ ನಮ್ಮ ಜೀವನದಲ್ಲಿ ಮತ್ತೊಂದು ಅನಿರೀಕ್ಷಿತ ತಿರುವು ಬಂದು ನನ್ನ ಜೀವನದ ದಿಕ್ಕನ್ನೇ ಬದಲಾಯಿಸಿಬಿಟ್ಟಿತು. ನಮ್ಮ ತಂದೆಯವರಿಗೆ ಸಕಲೇಶಪುರ ತಾಲ್ಲೂಕು ಎಸಳೂರುಪೇಟೆಗೆ ವರ್ಗವಾಯಿತು. ಅದು ಮಲೆನಾಡಿನ ಒಂದು ಊರು. ಆಗಿನ ಸರ್ಕಾರಿ ನಿಯಮದಂತೆ, ಪ್ರತಿಯೊಬ್ಬ ಶಾಲಾ ಮಾಸ್ತರಿಗೂ ಮಲೆನಾಡು ಸೇವೆ ಕಡ್ಡಾಯವಾಗಿತ್ತು. ಹೀಗೆ, ನಮ್ಮ ಸಂಸಾರ ಸಾಲಿಗ್ರಾಮದಿಂದ ಎಸಳೂರುಪೇಟೆಗೆ ಬಂದು ನೆಲೆಸಿತು. ನಾನು ಸಂಗೀತ ಪ್ರಪಂಚದ ಸಂಪರ್ಕವೇ ಇಲ್ಲದ ಈ ಎಸಳೂರು ಪೇಟೆಯಲ್ಲಿ ನನ್ನ ಬದುಕಿನ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಿದೆ. ಇದು ನನಗೆ ಒಂದು ಚೇತೋಹಾರಿ ಅನುಭವವಾಗಿತ್ತಲ್ಲದೆ, ಯಾವ ಪರಿಸ್ಥಿತಿಗೆ ಬೇಕಾದರೂ ಹೊಂದಿಕೊಳ್ಳಬಲ್ಲೆ , ಏನು ಬೇಕಾದರೂ ಸಾಧಿಸಬಲ್ಲೆ ಎಂಬ ನನ್ನ ಆತ್ಮವಿಶ್ವಾಸಕ್ಕೆ ಪ್ರಯೋಗಶಾಲೆಯಾಗಿ ಪರಿಣಮಿಸಿತು. ಅದರಲ್ಲೂ ನಾನು ಯಶಸ್ಸು ಗಳಿಸಿ ಜಯಶಾಲಿಯಾದೆ ಎಂಬುದು ಈಗಲೂ ಹೆಮ್ಮೆಯ ವಿಷಯವೇ ಆಗಿದೆ.

ಸಸ್ಯಶ್ಯಾಮಲೆ ಪ್ರಕೃತಿಯ ಮಡಿಲಲ್ಲಿ : ಹೊಸ ತೋಟ

ನಮ್ಮ ತಂದೆಯವರದು ಒಂದು ರೀತಿಯ ಸಾಹಸ ಪ್ರವೃತ್ತಿ. ಅವರು ಜೀವನದಲ್ಲಿ ಯಾವ ಸವಾಲನ್ನು ಎದುರಿಸಲೂ ಅಂಜುತ್ತಿರಲಿಲ್ಲ. ಸಂಕೇತಿಗಳಿಗೆ ಸ್ವಭಾವಜನ್ಯವಾದ ತೋಟಗಾರಿಕೆಯಲ್ಲಿ ಅವರಿಗೆ ಮೊದಲಿನಿಂದಲೂ ಆಸಕ್ತಿ. ಆದರೆ ಅವರ ಯಾವ ಪ್ರಯತ್ನವೂ ಇದುವರೆಗೆ ಯಶಸ್ವಿಯಾಗಿರಲಿಲ್ಲ. ಆದರೂ, ಅವರು ಮತ್ತೆ ಮತ್ತೆ ಪ್ರಯತ್ನ ಮಾಡುವುದನ್ನು ಬಿಡಲಿಲ್ಲ. ಅವರು ಬಸವಾಪಟ್ಟಣದಲ್ಲಿ ಮಾಡಿದ್ದ ತೋಟವು ನೋಡಿಕೊಳ್ಳುವವರಿಲ್ಲದೇ ಹಾಳಾಗಿತ್ತು. ನಾವು ಎಸಳೂರುಪೇಟೆಗೆ ಬಂದ ಮೇಲೆ ಅದನ್ನು ಬಂದಷ್ಟು ಬೆಲೆಗೆ ಮಾರಿ, ಎಸಳೂರುಪೇಟೆಯಲ್ಲಿ ಸುಮಾರು ಹತ್ತು ಎಕರೆ ಮರಗಾಡು, ಸುತ್ತ ಮೈದಾನ, ಎರಡು ಮೂರು ಎಕರೆ ಗದ್ದೆ ಇವುಗಳನ್ನೊಳಗೊಂಡ ಜಮೀನನ್ನು ಹರಾಜಿನಲ್ಲಿ ಕೇವಲ ಐದು ನೂರು ರೂಪಾಯಿಗಳಿಗೆ ಕೊಂಡುಕೊಂಡರು. ಅದನ್ನೆಲ್ಲಾ ಹಸನು ಮಾಡಿಸಿ ಐದಾರು ತಿಂಗಳಲ್ಲಿ

ಅದರಲ್ಲಿ ಒಂದು ಸಾವಿರ ಏಲಕ್ಕಿ ಸಸಿಗಳನ್ನು ನೆಡಿಸಿ, ಅದನ್ನು ಏಲಕ್ಕಿ ತೋಟವನ್ನಾಗಿ ಮಾಡಿದರು. ಕಿತ್ತಳೆ, ಬಾಳೆ, ತೆಂಗು ಹಾಗೂ ಮಾವಿನ ಗಿಡಗಳನ್ನು ನೆಡಿಸಿದರು. ನಾವು ಕೊಳ್ಳುವಾಗಲೇ ತೋಟದಲ್ಲಿ ಇತರ ಮರಗಳ ಜತೆಗೆ ಒಳ್ಳೆಯ ಹಲಸಿನ ಮರಗಳೂ ಇದ್ದುವು. ಅಲ್ಲೇ ಒಂದು ಪುಟ್ಟ ಮನೆಯನ್ನೂ ಕಟ್ಟಿಸಿದರು. ಗದ್ದೆಯನ್ನೂ ಸಾಗುವಳಿ ಮಾಡಿಸಿದರು. ಈ ಎಲ್ಲ ಕೆಲಸಗಳಲ್ಲೂ ನಾನು ತಂದೆಯವರಿಗೆ ಬಲಭುಜವಾಗಿ ನಿಂತೆ. ತೋಟದ ವನಸಿರಿಯ ಸೊಬಗನ್ನು ಸವಿಯುತ್ತಾ ನನ್ನ ಮನಸ್ಸು ಹಕ್ಕಿಯಂತೆ ಹಾರಾಡಿತು. ನಾವು ಮನೆಯವರೆಲ್ಲಾ ಇಂತಹ ಸುಂದರತಾಣಕ್ಕೆ ಆಗಾಗ ಬಂದು ಸಂತೋಷದಿಂದ ವಿಹರಿಸುತ್ತಿದ್ದೆವು. ನಮ್ಮ ಗದ್ದೆಯ ಪಕ್ಕದಲ್ಲೇ ಒಂದು ಸಣ್ಣ ತೊರೆ ಹರಿಯುತ್ತಿತ್ತು. ಇದರಲ್ಲಿ ಸ್ನಾನ ಮಾಡುವುದೆಂದರೆ ನಮಗೆಲ್ಲಾ ಬಲು ಖುಷಿ. ನಮ್ಮ ತಮ್ಮ, ಅಕ್ಕ, ಭಾವ, ತಂದೆ, ತಾಯಿ ಎಲ್ಲರೂ ಸಂಭ್ರಮ, ಸಂತೋಷ ಗಳಿಂದ ಅಲ್ಲಿನ ಪ್ರಕೃತಿ ಸೌಂದರ್ಯವನ್ನು ಸವಿದು ತಣಿಯುತ್ತಿದ್ದೆವು.

ಮಲೆನಾಡಿನ ಸಿರಿಯನ್ನು ಕಂಡು ನಾನು ಮುಗ್ಧನಾಗಿದ್ದೆ. ಅಲ್ಲಿನ ಆ ಕಾಲದ ಮಳೆಗಾಲವಂತೂ ಈಗ ಊಹಿಸುವುದೂ ಸಾಧ್ಯವಿಲ್ಲ. ಜೂನ್ ಮೊದಲವಾರದಲ್ಲಿ ಠಾಕೋಠೀಕಾಗಿ ಪ್ರಾರಂಭವಾಗುತ್ತಿದ್ದ ಮಳೆಗಾಲ ಮೂರು ತಿಂಗಳು ಅವಿಚ್ಛಿನ್ನವಾಗಿ ನಡೆಯುತ್ತಿತ್ತು. ಸೂರ್ಯನ ದರ್ಶನವೇ ಇಲ್ಲದೇ ದಿನಗಳು, ವಾರಗಳು ಕಳೆಯುತ್ತಿದ್ದವು. ವರ್ಷದಲ್ಲಿ ಇನ್ನೂರೈವತ್ತು-ಮುನ್ನೂರು ಅಂಗುಲ ಮಳೆಯಾಗುತ್ತಿತ್ತು. ಅಂತಹ ಮಳೆಯಲ್ಲಿ ನಾನು ಮಲೆನಾಡಿನ ಬಿದುರಿನ ಗೊರಗನ್ನು ತಲೆಯಿಂದ ಕಾಲಿನವರೆಗೆ ಮುಚ್ಚುವಂತೆ ಹಾಕಿಕೊಂಡು ತೋಟದಲ್ಲೆಲ್ಲಾ ಓಡಾಡುತ್ತಿದ್ದೆ. ಆಗ ಇನ್ನೂ ಬಿಸಿರಕ್ತದ ಯುವಕನಾಗಿದ್ದ ನನಗೆ ಛಳಿ, ಗಾಳಿ, ಮಳೆ, ಬಿಸಿಲು ಇದು ಯಾವುದರ ಪರಿವೆಯೂ ಇರಲಿಲ್ಲ. ನಾವು ಹಾಕಿಸಿದ್ದ ಏಲಕ್ಕಿ ಗಿಡಗಳು ದಿನದಿನಕ್ಕೆ ದೊಡ್ಡದಾಗಿ ಬೆಳೆಯುತ್ತಿದ್ದವು. ಈ ಗಿಡಗಳಿಗೆ ಪರಮವೈರಿ ಎಂದರೆ ಕೋತಿಗಳು. ಇವು ಏಲಕ್ಕಿ ಗಿಡಗಳ ಕಾಂಡಗಳನ್ನೆಲ್ಲಾ ಸಿಗಿದು ಒಳಗಿನ ತಿರುಳನ್ನು ತಿನ್ನುತ್ತಿದ್ದವು.

ಈ ಕೋತಿಗಳ ದಾಳಿಯನ್ನು ತಪ್ಪಿಸಲು ಪ್ರತಿ ಎಸ್ಟೇಟಿನಲ್ಲಿಯೂ ಕೋವಿಧಾರಿಯಾದ ಒಬ್ಬ ಕಾವಲುಗಾರ ಹಗಲೆಲ್ಲಾ ಒಂದು ರೀತಿಯ ಕೂಗನ್ನು ಹಾಕುತ್ತಾ ಏರುಧ್ವನಿಯಲ್ಲಿ ಅರಚುತ್ತಾ ಗಸ್ತು ತಿರುಗುವ ಏರ್ಪಾಡಿತ್ತು. ಕೋತಿಗಳು ಬಂದಾಗ ಬೆದರುಗುಂಡು ಹಾರಿಸಿ ಅವುಗಳನ್ನು ಓಡಿಸಬೇಕಾಗಿತ್ತು. ಕೆಲವರು ಒಂದೋ - ಎರಡೋ ಕೋತಿಗಳನ್ನು ಗುಂಡಿನಿಂದ ಸಾಯಿಸಿ ತೋಟದ ಹೊರವಲಯದಲ್ಲಿ ಅವುಗಳನ್ನು ನೇತುಹಾಕುತ್ತಿದ್ದರು. ಇದನ್ನು ನೋಡಿ ಪ್ರಾಣಭಯದಿಂದ ಕೋತಿಗಳು ತೋಟದೊಳಗೆ ಬರಲು ಹೆದರುತ್ತವೆಂದು ಹೀಗೆ ಮಾಡುತ್ತಿದ್ದರು. ಆದರೆ ಕೋತಿಯನ್ನು ಸಾಯಿಸುವುದು ಮಹಾಪಾಪ ವೆಂದು ನಂಬಿರುವವರು ಈ ಕೆಲಸವನ್ನು ಮಾಡುತ್ತಿರಲಿಲ್ಲ. ನಮ್ಮ ತೋಟದಲ್ಲಿ ಗಸ್ತು ತಿರುಗಲು, ಕೋತಿಗಳನ್ನು ಓಡಿಸಲು ಆಳುಕಾಳು ಗಳಿದ್ದರು. ಒಮ್ಮೊಮ್ಮೆ ನಾನು ಸಹ ಕೋವಿ ಹಿಡಿದು ಬೆದರುಗುಂಡು ಹಾರಿಸುತ್ತಾ ಎಲ್ಲೆಡೆ ಓಡಾಡುತ್ತಿದ್ದೆ.

ಏಲಕ್ಕಿ

ತೋಟದಲ್ಲಿ ಮನೆಗೆ ಬೇಕಾದ ತರಕಾರಿ, ಬಾಳೆಎಲೆ, ಬಾಳೆಹಣ್ಣು, ಬಾಳೆಕಾಯಿ, ನಿಂಬೆ, ಹೆರಳೆ, ಚಕ್ಕೋತ, ಮಾದಲ, ಪಪ್ಪಾಯಿ, ಹಲಸು, ಮಾವು, ಕಿತ್ತಳೆ, ದಾಳಿಂಬೆ ಈ ಎಲ್ಲ ಹಣ್ಣುಗಳೂ ಸಿಗುತ್ತಿದ್ದವು. ಬತ್ತದ ಫಸಲೂ ಬರಲು ಪ್ರಾರಂಭವಾಯಿತು. ಏಲಕ್ಕಿ ಮೊದಲನೆಯ ಫಸಲನ್ನು ನಾನೇ ಸ್ವತಃ ರೇಖೆ ಮಾಡಿಸಿದೆ. ಪ್ರಥಮ ಫಸಲಲ್ಲೇ ನಮಗೆ ಇಪ್ಪತ್ತು ಮಣ ಏಲಕ್ಕಿ ಲಭಿಸಿದಾಗ ನಮ್ಮ ಸಂತೋಷಕ್ಕೆ ಎಲ್ಲೆಯೇ ಇರಲಿಲ್ಲ. ನಾನೇ ಖುದ್ದು ಈ ಮಾಲನ್ನು ಸಕಲೇಶಪುರದ ಮಾರು ಕಟ್ಟೆಯಲ್ಲಿ ಮಾರಾಟ ಮಾಡಿ ಬಂದೆ. ಆಗಿನ ಬೆಲೆ ಮಣಕ್ಕೆ ಕೇವಲ ಮೂವತ್ತು ರೂಪಾಯಿ. ಒಟ್ಟು ಆರುನೂರು ರೂ.ಗಳನ್ನು ತಂದೆಯವರ ಕೈಗೆ ತಂದುಕೊಟ್ಟಾಗ ಮನೆಯಲ್ಲೆಲ್ಲಾ ಸಂಭ್ರಮವೋ ಸಂಭ್ರಮ. ಇದು ಹೀಗೆಯೇ ಮುಂದುವರಿದಿದ್ದರೆ ಈಗ ನಾನು ಒಬ್ಬ ಏಲಕ್ಕಿ ಎಸ್ಟೇಟ್ ಮಾಲೀಕನಾಗಿರುತ್ತಿದ್ದೆ.* ಶ್ರೀಮಂತಿಕೆಯೇನೋ ಲಭಿಸುತ್ತಿತ್ತು. ಆದರೆ, ಜೀವನದಲ್ಲಿ ಇದೊಂದೇ ಸಾಕೆ? ಆದರೂ, ದೈವನಿಯಾಮಕ ಎಂಬುದೊಂದಿದೆಯಲ್ಲ! ಅದೇ ನಮ್ಮನ್ನು ನಮ್ಮ ನಿಜವಾದ ಜೀವನದ ಗುರಿಯತ್ತ ಕೊಂಡೊಯ್ಯುವ ಶಕ್ತಿಯಾಗಿರುತ್ತದೆಯಲ್ಲವೇ?

ತಂದೆ–ತಾಯಿ

ಹೀಗೆ, ನಾವು ಎಸಳೂರುಪೇಟೆಯಲ್ಲಿ ಸಂತೋಷ ಹಾಗೂ ನೆಮ್ಮದಿಯ ದಿನಗಳನ್ನು ಕಳೆಯುತ್ತಿದ್ದೆವು. ನನ್ನ ತಂದೆಯವರು ಮಾಧ್ಯಮಿಕಶಾಲಾ ಮುಖ್ಯೋಪಾಧ್ಯಾಯರಾಗಿ ಬಹಳ ಒಳ್ಳೆಯ ಹೆಸರುಗಳಿಸಿದ್ದರು. ಹೋದೆಡೆಯೆಲ್ಲಾ ಅವರ ಸಹೋದ್ಯೋಗಿಗಳು, ವಿದ್ಯಾರ್ಥಿಗಳು, ಊರಿನ ಜನ ಎಲ್ಲರೂ ಅವರನ್ನು ತುಂಬ ಪ್ರೀತಿಸುತ್ತಿದ್ದರು, ಗೌರವಿಸುತ್ತಿದ್ದರು. ಅವರಲ್ಲಿ ವಿದ್ಯೆ ಕಲಿತು ಮುಂದೆ ಒಳ್ಳೆಯ ಹುದ್ದೆಗಳಲ್ಲಿದ್ದು ಈಗ ನಿವೃತ್ತರಾಗಿರುವ ಅನೇಕರು ನನ್ನ ತಂದೆಯವರನ್ನು ಈಗಲೂ ಬಹಳ ಪೂಜ್ಯಭಾವನೆಯಿಂದ ಸ್ಮರಿಸಿ ಕೊಳ್ಳುತ್ತಾರೆ. ಅವರು ಒಬ್ಬ ಶ್ರೇಷ್ಠ ಉಪಾಧ್ಯಾಯರಾಗಿದ್ದರಲ್ಲದೇ ಒಬ್ಬ ಸಮರ್ಥ ಆಡಳಿತಗಾರರೂ ಆಗಿದ್ದರು. ಸಹೋದ್ಯೋಗಿಗಳಲ್ಲಿ ವಿಶ್ವಾಸ, ವಿದ್ಯಾರ್ಥಿಗಳಲ್ಲಿ ಪ್ರೀತಿ, ಊರಿನ ಜನರಲ್ಲಿ ಸ್ನೇಹ, ಬಡವರು ಹಾಗೂ ಕಷ್ಟದಲ್ಲಿರುವವರ ಬಗ್ಗೆ ಅನುಕಂಪ ಇವೆಲ್ಲವೂ ಅವರಲ್ಲಿದ್ದ ವಿಶೇಷ ಗುಣಗಳು. ಮಕ್ಕಳಾದ ನಮ್ಮನ್ನು ಬಹಳವಾಗಿ

* ಆರ್.ಎನ್.ಡಿ. ಅವರ ಮರಣ ೧೭.೮.೨೦೦೨

ಪ್ರೀತಿಸುತ್ತಿದ್ದರು. ಅವರು ತಮ್ಮ ಬಾಲ್ಯದಲ್ಲಿ ತಮ್ಮ ತಂದೆಯವರ ಕೈಯಲ್ಲಿ ಅನುಭವಿಸಿದ ಕಷ್ಟಕಾರ್ಪಣ್ಯಗಳು ನಮಗೆಂದಿಗೂ ಬರದಿರಲಿ ಎಂದು ನಮ್ಮನ್ನು ಆದಷ್ಟು ಮಮತೆ ಪ್ರೀತಿಗಳಿಂದ ಸುಖವಾಗಿಡಲು ಪ್ರಯತ್ನಿಸುತ್ತಿದ್ದರು.

ನಮ್ಮ ತಾಯಿಯವರು ನಮ್ಮ ಮನೆಯ ಮಹಾಲಕ್ಷ್ಮಿಯಂತಿದ್ದರು. ಪತಿಗೆ ಅನುರೂಪಳಾದ ಪತ್ನಿಯಾಗಿ, ಮನೆಗೆ ಸದ್ಗೃಹಿಣಿಯಾಗಿ, ಮಕ್ಕಳಿಗೆ ಮಮತೆಯ ತಾಯಿಯಾಗಿ ಸಂಸಾರವನ್ನು ಬಹಳ ಚೆನ್ನಾಗಿ ನಿರ್ವಹಿಸುತ್ತಿದ್ದರು. ನನ್ನ ತಮ್ಮ ಸತ್ಯಮೂರ್ತಿ ಇಷ್ಟು ಹೊತ್ತಿಗೆ ಮಾಧ್ಯಮಿಕ ಶಾಲೆಯ ಮೊದಲನೇ ವರ್ಷದ ವಿದ್ಯಾರ್ಥಿಯಾಗಿದ್ದ. ನನಗಿಂತ ಅವನು ಒಂಬತ್ತು ವರ್ಷ ಚಿಕ್ಕವನು. ನಮ್ಮ ಅಕ್ಕ ಕಮಲಮ್ಮ ನನಗಿಂತ ಎರಡು ವರ್ಷ ದೊಡ್ಡವರು. ಅವರಿಗೆ ಆಗಲೇ ಮದುವೆಯಾಗಿ ಎರಡು ಹೆಣ್ಣು , ಒಂದು ಗಂಡು ಹೀಗೆ ಮೂರು ಮಕ್ಕಳ ತಾಯಿಯಾಗಿದ್ದರು. ಅವರೆಲ್ಲ ಸಾಮಾನ್ಯವಾಗಿ ವರ್ಷದ ಬಹುಭಾಗ ನಮ್ಮ ಮನೆಯಲ್ಲೇ ಇರುತ್ತಿದ್ದರು. ಕಾರಣ, ನಮ್ಮ ತಂದೆತಾಯಿಯರಿಗೆ ಮಗಳು, ಮೊಮ್ಮಕ್ಕಳು ಎಂದರೆ ಪ್ರಾಣ. ನಮ್ಮ ಭಾವ ಆರ್. ಎಂ. ನಾರಾಯಣರಾಯರು ಬಹಳ ಸೌಮ್ಯ ಸ್ವಭಾವದವರು. ಅಳಿಯನೆಂಬ ಬಿಗುಮಾನ ಅವರಲ್ಲಿ ಎಳ್ಳಷ್ಟೂ ಇರಲಿಲ್ಲ. ಅವರೂ ನಮ್ಮ ಜೊತೆ ಮನೆಯ ಮಗನಂತೆಯೇ ಇದ್ದುಬಿಡುತ್ತಿದ್ದರು. ಮಾಧ್ಯಮಿಕ ಶಾಲಾ ಉಪಾಧ್ಯಾಯರಾಗಿದ್ದ ಅವರಿಗೆ ಬೇರೆ ಬೇರೆ ಊರುಗಳಿಗೆ ವರ್ಗವಾಗುತ್ತಿದ್ದುದರಿಂದ ನಮ್ಮ ಅಕ್ಕ ಮತ್ತು ಮಕ್ಕಳು ನಮ್ಮ ಮನೆಯಲ್ಲಿ ಆಗಾಗ್ಗೆ ಬಂದಿರುವುದು ಅನಿವಾರ್ಯವೂ ಆಗಿತ್ತು. ನಮ್ಮ ಮನೆಗೆ ಅನೇಕ ಬಂಧುಮಿತ್ರರು ವರ್ಷವಿಡೀ ಬಂದು ಹೋಗುತ್ತಿದ್ದರು. ಹೀಗೆ, ನಮ್ಮ ಸಂಸಾರವನ್ನು ನಮ್ಮ ತಾಯಿಯವರು ಬಹಳ ದಕ್ಷತೆಯಿಂದ ನಿರ್ವಹಿಸುತ್ತಾ ಗೃಹಲಕ್ಷ್ಮಿಯಾಗಿ ಅನ್ನಪೂರ್ಣೆಯಂತೆ ಮನೆಯನ್ನು ಬೆಳಗಿದರು.

ನಾವು ಎಸಳೂರುಪೇಟೆಯಲ್ಲಿ ಇದ್ದಷ್ಟು ದಿನವೂ ತೋಟಗಾರಿಕೆಯಲ್ಲಿ ನನ್ನನ್ನು ನಾನು ಸಂಪೂರ್ಣವಾಗಿ ತೊಡಗಿಸಿಕೊಂಡರೂ ಸಂಗೀತವನ್ನು ಕೈಬಿಡಲಿಲ್ಲ. ಕಲಿತಷ್ಟು ವಿದ್ಯೆಯನ್ನು ಮರೆಯಲಿಲ್ಲ. ಸೇಲಂನಲ್ಲಿ ಕಲಿತ ಸುಮಾರು ಒಂದು ನೂರು ಕೃತಿಗಳು ನನಗೆ ಕಂಠಪಾಠವಾಗಿದ್ದವು. ಇತ್ತೀಚೆಗೆ ಶಾರೀರವೂ ಸ್ವಲ್ಪ ಮಟ್ಟಿಗೆ ಸುಧಾರಿಸಿತ್ತು. ಆದರೂ ಹೆಚ್ಚು ಹೊತ್ತು ಹಾಡುವುದಕ್ಕಾಗುತ್ತಿರಲಿಲ್ಲ ಹಾಗೂ ಮೇಲಿನ ಸ್ಥಾಯಿಯಲ್ಲಿ ಹಾಡಲು ಕಷ್ಟವಾಗುತ್ತಿತ್ತು. ಆದ್ದರಿಂದ, ನನಗೆ ಅನುಕೂಲವಾದ ಶ್ರುತಿಯಲ್ಲಿ ಸ್ವಲ್ಪಸ್ವಲ್ಪವಾಗಿ ಹಾಡುತ್ತಾ ಬಂದೆ. ನಮ್ಮ ತಂದೆಯವರಿಗೆ ಪ್ರಿಯವಾದ 'ಕ್ಷೀರಸಾಗರ ಶಯನ', 'ನಗುಮೋಮು', 'ದಿನಮಣಿವಂಶ', ಇವುಗಳನ್ನು ಆಗಾಗ ಹಾಡುತ್ತಿದ್ದೆ.

ನನಗೆ ಹಾಡುವ ಹುಮ್ಮಸ್ಸು ಬರುವಂತೆ ಮಾಡಲು ತಂದೆಯವರು ಬಹಳ ಪ್ರಯಾಸಪಡಬೇಕಾಗಿತ್ತು. ಆದರೂ, ಅವರು ಬಿಡುತ್ತಿರಲಿಲ್ಲ. ವೀಣೆ ನನ್ನ ಬಳಿ ಇದ್ದರೂ ನುಡಿಸಲು ನನಗೆ ಏನೂ ಬರುತ್ತಿರಲಿಲ್ಲ. ಆದ್ದರಿಂದ, ಹಾಡುಗಾರಿಕೆಯಲ್ಲೇ ನನ್ನ ಸಂಗೀತಾಭ್ಯಾಸ ಒಂದು ರೀತಿಯಲ್ಲಿ ಮುಂದುವರೆಯುತ್ತಿತ್ತು. ಇದರ ಜೊತೆಗೆ, ನನ್ನ ತಂದೆಯವರು ಮಹಾತ್ಮಾ ಗಾಂಧಿ, ಜವಹರಲಾಲ್ ನೆಹರು, ರಾಮಕೃಷ್ಣ ಪರಮಹಂಸ, ವಿವೇಕಾನಂದ ಇವರ ಜೀವನ ಚರಿತ್ರೆಗಳನ್ನು ನನ್ನಿಂದ ಓದಿಸಿ ನನ್ನ ಇಂಗ್ಲಿಷ್ ಜ್ಞಾನಭಂಡಾರವನ್ನು ಹೆಚ್ಚಿಸಿದರು. ವೇದಾಂತ ವಿಷಯಗಳನ್ನು ಮನನ ಮಾಡಿಸಿದರು. ಪ್ರಸ್ತುತ ರಾಜಕೀಯ ವಿದ್ಯಮಾನಗಳಲ್ಲೂ ನನ್ನಲ್ಲಿ ಅಭಿರುಚಿಯನ್ನು ಬೆಳೆಸಿದರು. ಶರೀರ ಸೌಷ್ಠವ, ಆರೋಗ್ಯ, ಆಹಾರ ನಿಯಮಗಳು ಇವುಗಳನ್ನೆಲ್ಲಾ ನನಗೆ ಮನದಟ್ಟು ಮಾಡಿಕೊಟ್ಟರು. ಹೀಗೆ, ನನ್ನ ಸರ್ವಾಂಗೀಣ ಅಭಿವೃದ್ಧಿಗೆ ಅವರು ಅಹರ್ನಿಶಿ ಗಮನ ಕೊಡುತ್ತಿದ್ದರು. ಅಂತಹ ತಂದೆಯನ್ನು ಪಡೆದ ನಾನೇ ಭಾಗ್ಯಶಾಲಿ.

ಆ. ಮಧ್ಯರಂಗ

ಸುಂದರ ರಾಜಧಾನಿ

ಮಲೆನಾಡಿನ ಪ್ರಕೃತಿಸೌಂದರ್ಯವನ್ನು ನಾಲ್ಕು ವರ್ಷಗಳ ಕಾಲ ಸವಿದು ಆನಂದಿಸಿದ ನನಗೆ ಬಯಲುಸೀಮೆಯನ್ನು ಮತ್ತೆ ನೋಡಿದಾಗ ಎಲ್ಲವೂ ಬಹಳ ಬರಡಾಗಿ ಕಂಡಿತು. ಮಲೆನಾಡಿಗೆ ನಾನು ಅಷ್ಟು ಮಾರುಹೋಗಿದ್ದೆ. ಇದೇ ನನ್ನ ನಿಶ್ಚಿತ ಬದುಕು ಎಂದು ತೀರ್ಮಾನಿಸಿದ್ದೆ. ಸಂಗೀತಪ್ರಪಂಚಕ್ಕೆ ಮತ್ತೆ ಮರಳುವ ಸಾಧ್ಯತೆಯನ್ನಂತೂ ನಾನು ಸಂಪೂರ್ಣವಾಗಿ ತಳ್ಳಿಹಾಕಿದ್ದೆ. ಹಳ್ಳಿಯ ನಿರಾಡಂಬರ ಜೀವನ ನನಗೆ ತುಂಬ ಹಿಡಿಸಿತ್ತು. ಆದರೆ ನಾನು ಹುಡುಗನಾಗಿದ್ದಾಗ ತಂದೆಯವರ ಜತೆ ಒಂದೆರಡು ಬಾರಿ ಮೈಸೂರಿಗೆ ಹೋಗಿ ಅಲ್ಲಿನ ಅರಮನೆ, ದಸರಾ ಉತ್ಸವ, ಮಹಾರಾಜರ ಜಂಬೂಸವಾರಿ ಇವೆಲ್ಲವನ್ನೂ ನೋಡಿ ಮೂಕವಿಸ್ಮಿತನಾಗಿದ್ದೆ. ಇಂತಹ ಸುಂದರ ರಾಜಧಾನಿಯಲ್ಲೇ ವಾಸಮಾಡುವ ಜನ ಎಂತಹ ಅದೃಷ್ಟಶಾಲಿಗಳು ಎಂದು ಅಸೂಯೆಪಟ್ಟಿದ್ದೆ. ಮುಂದೆ ಒಂದು ದಿನ ಇದೇ ರಾಜಧಾನಿ ಮೈಸೂರಿನಲ್ಲಿ ವಾಸಿಸುವ ಒಬ್ಬ ಪ್ರಜೆಯಾಗುವ ಅದೃಷ್ಟ ನನಗಿದೆ ಎಂಬುದನ್ನು ಊಹಿಸಲೂ ಸಾಧ್ಯವಿರಲಿಲ್ಲ. ಅನಿರೀಕ್ಷಿತವಾದ ಬೆಳವಣಿಗೆಗಳಿಂದ ಈ ಕನಸು ನನಸಾದಾಗ ನನ್ನ ಅದೃಷ್ಟಕ್ಕೆ ಹಿರಿಹಿರಿ ಹಿಗ್ಗಿದೆ.

ಮಣಿದ ತಂದೆ

ಈ ನಾಲ್ಕು ವರ್ಷಗಳಲ್ಲಿ ನನ್ನ ತಮ್ಮ ಸತ್ಯಮೂರ್ತಿ ಮಿಡ್ಲ್‌ಸ್ಕೂಲಿನ ವಿದ್ಯಾಭ್ಯಾಸವನ್ನು ಮಾಡಿ ೧೯೩೮-೩೯ರ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾದ. ಅವನು ಮುಂದಿನ ಹೈಸ್ಕೂಲ್ ವಿದ್ಯಾಭ್ಯಾಸಕ್ಕೆ ಬೇರೆ ಊರಿಗೆ ಹೋಗಲೇಬೇಕಾಗಿತ್ತು. ನನ್ನ ವಿದ್ಯಾಭ್ಯಾಸ ಮಧ್ಯದಲ್ಲೇ ನಿಂತು ಹೋಗಿ ಒಬ್ಬ ಪದವೀಧರನಾಗದೇ ಹೋದುದು ನನ್ನ ತಾಯಿಯವರಿಗೆ ಬಹಳ ನಿರಾಸೆಯಾಗಿತ್ತು. ಆ ಕೊರತೆಯನ್ನು ತುಂಬಲು ನನ್ನ ತಮ್ಮನಿಗಾದರೂ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಿಸಲೇಬೇಕೆಂದು ನಮ್ಮ ತಾಯಿ ಪಟ್ಟುಹಿಡಿದರು. ಅವನು ಒಬ್ಬನನ್ನೇ ಬೇರೆ ಊರಿಗೆ ಕಳುಹಿಸುವುದು ಯಾರಿಗೂ ಇಷ್ಟವಾಗಲಿಲ್ಲ. ನಾವು ಸಂಸಾರ ಸಮೇತ ಮೈಸೂರಿಗೇ ಯಾಕೆ ಹೋಗಿ ನೆಲೆಸಬಾರದು ಎಂಬ ತಾಯಿಯವರ ಸಲಹೆಯನ್ನು ಬಹಳ ಚರ್ಚೆ, ವಾದ–ವಿವಾದಗಳ ಅನಂತರ ತಂದೆಯವರು ಅದು ಹೇಗೋ ಒಪ್ಪಿದರು. ಅವರಿಗೂ ಇಷ್ಟು ಹೊತ್ತಿಗೆ ಅವರು ನನ್ನ ಮೇಲೆ ಮಾಡಿದ ಪ್ರಯೋಗಗಳ ನಿಷ್ಫಲತೆಯ ಅರಿವಾಗಿರಬೇಕು. ನನ್ನ ತಮ್ಮನಾದರೂ ಉನ್ನತಶಿಕ್ಷಣವನ್ನು ಪಡೆದು ಒಬ್ಬ ಪದವೀಧರ ನಾಗಬೇಕೆಂದು ತೀರ್ಮಾನಿಸಿದರು. ಎಸಳೂರು ಪೇಟೆಯ ನಮ್ಮ ಏಲಕ್ಕಿ ತೋಟದ ಭವಿಷ್ಯಕ್ಕಿಂತ ನನ್ನ ತಮ್ಮನ ಭವಿಷ್ಯದ ಬಗ್ಗೆ ಅವರು ಹೆಚ್ಚು ಪ್ರಾಮುಖ್ಯ ಕೊಟ್ಟರು. ಜತೆಗೆ ಮೈಸೂರಿನಲ್ಲಿ ವಾಸ್ತವ್ಯ ಹೂಡುವುದರಿಂದ ನನ್ನ ಸಂಗೀತ ಶಿಕ್ಷಣವನ್ನು ಸರಿಯಾದ ಗುರುಗಳಲ್ಲಿ ಮತ್ತೆ ಮುಂದುವರಿಸಬಹುದೆಂಬ ಒಂದು ಮಹದಾಸೆಯೂ ಅವರ ಮನಸ್ಸಿನಲ್ಲಿತ್ತು. ಈ ಎರಡು ಉದ್ದೇಶಗಳೂ ಸಫಲವಾಗಿ ಕೈಗೂಡ ಲೆಂಬ ಮಹದಾಸೆಯಿಂದ ನನ್ನ ತಂದೆಯವರು ಇದಕ್ಕೆ ಒಪ್ಪಿದರು. ಹೀಗೆ, ನಾವು ಸಂಸಾರಸಮೇತ ಮೈಸೂರಿಗೆ ಹೊರಡುವುದೆಂದು ತೀರ್ಮಾನವಾಯಿತು.

ಉದ್ಯಾನನಗರಿ ಮೈಸೂರಿನಲ್ಲಿ

೧೯೩೯ನೇ ಇಸವಿ ನನ್ನ ಜೀವನದ ಶುಭಪ್ರದ ಹಾಗೂ ಅತ್ಯಂತ ಹರ್ಷದಾಯಕ ವರ್ಷ. ನನ್ನ ತಮ್ಮನ ವಿದ್ಯಾಭ್ಯಾಸದ ನಿಮಿತ್ತ ನಾವು ಆಗ ಮೈಸೂರಿಗೆ ಬಂದು ನೆಲೆಸಿದ್ದು ಮುಂದಿನ ಅನೇಕ ಶುಭ ಘಟನೆಗಳಿಗೆ ನಾಂದಿಯಾಯಿತು. ಅನಿಶ್ಚಿತತೆಯಲ್ಲಿ ತೊಯ್ದಾಡುತ್ತಿದ್ದ ನನ್ನ ಜೀವನದ ಒಂದು ಶಾಶ್ವತ ನೆಲೆ ಇದರಿಂದಾಗಿ ನನಗೆ ಲಭಿಸಿತು. ಗೃಹಸ್ಥನಾಗಿ ನಾನು ಸಂಸಾರದ ಚುಕ್ಕಾಣಿ ಹಿಡಿದು ತನು ಮನ ಧನಗಳಿಂದ ನನ್ನ ಕರ್ತವ್ಯಗಳನ್ನು ನಿರ್ವಹಿಸುವ ಸತ್ಸಂಕಲ್ಪ ಹಾಗೂ ನೈತಿಕ ಬಲಗಳು ನನ್ನಲ್ಲಿ ಜಾಗೃತವಾದುದು ಆಗಲೇ. ಹೀಗೆ , ನನ್ನ ಜೀವನದ ಮಧ್ಯರಂಗದ ವಿವಿಧ ಘಟನಾವಳಿಗಳ ಶುಭಾರಂಭವಾಯಿತು. ನನ್ನ ತಮ್ಮನ ಮುಂದಿನ ವಿದ್ಯಾಭ್ಯಾಸ ನಿರ್ವಿಘ್ನವಾಗಿ ನೆರವೇರುವ ಶುಭ ಸೂಚನೆಯೂ ಇದಾಯಿತು.

ಅದು ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲ. ಸುಂದರ ರಾಜಧಾನಿ ಮೈಸೂರು ನಗರ ಕಾರಂಜಿಗಳ, ಉದ್ಯಾನವನಗಳ, ಮನೋಹರ ವಾಸ್ತುಶಿಲ್ಪಗಳ ಬೀಡು. ಎಲ್ಲೆಲ್ಲೂ ಸಮೃದ್ಧಿ , ಸಂತಸ, ಸಂಭ್ರಮ. ಆಗಿನ ರಾಜನೇ ಪ್ರಜೆಗಳಿಗೆ ಪ್ರತ್ಯಕ್ಷ ದೇವರು. ರಾಜನ ಆಸ್ಥಾನವು ಕವಿಗಳಿಗೆ, ಕಲಾವಿದರಿಗೆ ಕಲ್ಪವೃಕ್ಷ, ಕಾಮಧೇನು. ಲಲಿತಕಲೆಗಳ ತವರೂರು ಮೈಸೂರು. ಅನೇಕ ಪ್ರೇಕ್ಷಣೀಯ ಸ್ಥಳಗಳಿಂದ ಕೂಡಿದ ಮೈಸೂರು ಪ್ರವಾಸಿಗರ ಸ್ವರ್ಗ. ವಿಧವಿಧದ ದೀಪಾಲಂಕಾರಗಳಿಂದ ಪ್ರಕಾಶಿಸುತ್ತಿದ್ದ ರಾಜಮಾರ್ಗಗಳಲ್ಲಿ ಸುತ್ತಾಡುವುದೇ ಒಂದು ಚೇತೋಹಾರಿ ಅನುಭವ. ವಿಶ್ವವಿಖ್ಯಾತ ಮೈಸೂರು ಅರಮನೆ, ನವರಾತ್ರಿ ಉತ್ಸವದ ವೈಭವ, ಸನಿಹದಲ್ಲೇ ಚಾಮುಂಡೇಶ್ವರಿಯ ದಿವ್ಯಸನ್ನಿಧಿ, ಚಾಮುಂಡಿಬೆಟ್ಟದ ಸುಂದರ ಹಿನ್ನೆಲೆ, ನಗರದ ಒಳಗೇ ತುಂಬಿ ತುಳುಕುತ್ತಿದ್ದ ದೊಡ್ಡಕೆರೆ, ಸುಬ್ಬರಾಯನಕೆರೆ, ಕಾರಂಜಿಕೆರೆ ಮತ್ತು ಕುಕ್ಕರಹಳ್ಳಿ ಕೆರೆ, ಇವುಗಳ ಸಮೀಪದ ಲತಾಮಂಟಪಗಳು, ವಿಶ್ವವಿಖ್ಯಾತ ಮೃಗಾಲಯ, ಲಲಿತಮಹಲ್ ಅರಮನೆ, ಜಗನ್ಮೋಹನ ಅರಮನೆ, ಪ್ರಾಚ್ಯ ವಸ್ತುಸಂಗ್ರಹಾಲಯ- ಹೀಗೆ ಕಣ್ಮನಗಳನ್ನು ತಣಿಸುವ ವಿವಿಧ ರೀತಿಯ ಆಕರ್ಷಣೆಗಳಿಂದ ಕೂಡಿದ ಇಂತಹ ಸುಂದರ ರಾಜಧಾನಿ ಮೈಸೂರು ನಗರಕ್ಕೆ ೧೯೩೯ರಲ್ಲಿ ಬಂದು ನೆಲೆಸಿದೆವು.

ಹೀಗೆ ಮೈಸೂರಿನಲ್ಲಿ ನಮ್ಮ ಸಂಸಾರವು ಪ್ರಾರಂಭವಾದ ಮೇಲೆ ನನ್ನ ತಮ್ಮ ಸತ್ಯಮೂರ್ತಿ ತನ್ನ ಮುಂದಿನ ವ್ಯಾಸಂಗಕ್ಕಾಗಿ ಬನುಮಯ್ಯ ಪ್ರೌಢಶಾಲೆಯನ್ನು ಸೇರಿದ. ನಮ್ಮ ತಂದೆ ತಮ್ಮ ಸರಕಾರಿ ಕೆಲಸದ ಮೇಲೆ ಎಸಳೂರುಪೇಟೆಯಲ್ಲೇ ಮುಂದುವರಿಯುತ್ತಿದ್ದರು. ಆಗಾಗ ಮೈಸೂರಿಗೆ ಬಂದು ಹೋಗುತ್ತಿದ್ದರು. ನಾನು ಯಾವ ಒಂದು ನಿರ್ದಿಷ್ಟವಾದ ಗುರಿಯಿಲ್ಲದೆ ಸುಮ್ಮನೆ ಅಲ್ಲಿ ಇಲ್ಲಿ ಓಡಾಡಿಕೊಂಡಿದ್ದೆ. ಕೆಲವು ಮಿತ್ರರ ಪರಿಚಯವೂ ಆಯಿತು. ಅವರೂ ನನ್ನಂತೆಯೇ ಆರಾಮವಾಗಿ ಕಾಲ ಕಳೆಯುವವರೇ ಆಗಿದ್ದರು. ಆಗಿನ ನಮ್ಮ ಕಾರ್ಯಚಟುವಟಿಕೆಗಳೆಂದರೆ ಊರಿನಲ್ಲೆಲ್ಲಾ ಸುತ್ತಾಡುವುದು, ಸಂಜೆ ವೇಳೆ ವ್ಯಾಯಾಮಶಾಲೆಗೆ ಹೋಗಿ ಸ್ವಲ್ಪ ವ್ಯಾಯಾಮ ಮಾಡುವುದು, ಹೋಟಲಿಗೆ ಹೋಗಿ ತೃಪ್ತಿಯಾಗಿ ತಿಂಡಿ ತಿನ್ನುವುದು, ಸಿನಿಮಾ ನೋಡುವುದು, ಚಾಮುಂಡಿಬೆಟ್ಟ ಹತ್ತುವುದು-ಹೀಗೆ ತಾರುಣ್ಯದ ಆಸೆ, ಆಕಾಂಕ್ಷೆಗಳಿಗನುಗುಣವಾಗಿ ಓಡಾಡಿಕೊಂಡಿರುವುದೇ ಆಗಿತ್ತು. ನನ್ನ ಸಂಗೀತಾಭ್ಯಾಸ ಸದ್ಯಕ್ಕೆ ಸ್ಥಗಿತವಾಗಿತ್ತು. ಅಲ್ಲಲ್ಲಿ ನಡೆಯುತ್ತಿದ್ದ ಕೆಲವು ಸಂಗೀತ ಕಾರ್ಯಕ್ರಮಗಳನ್ನು ಕೇಳುತ್ತಿದ್ದೆ. ಮಹಾ ಸಂಗೀತ ಪ್ರೇಮಿಗಳಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಅರಮನೆಯಲ್ಲಿ ಹೆಸರಾಂತ ಸಂಗೀತಗಾರರನ್ನು ಎಲ್ಲೆಡೆಯಿಂದ ಬರಮಾಡಿಕೊಂಡು

ಅವರ ಸಂಗೀತ ಕಛೇರಿಗಳನ್ನು ಏರ್ಪಡಿಸುತ್ತಿದ್ದರು. ಇಂತಹ ದಿವ್ಯ ಸಂಗೀತವನ್ನು ಊರಿನ ಪ್ರಜೆಗಳೆಲ್ಲ ಕೇಳಲು ಅನುಕೂಲವಾಗುವಂತೆ ಅರಮನೆಯ ಕೋಟೆಯ ನಾಲ್ಕು ಪ್ರಮುಖ ದ್ವಾರಗಳ ಮೇಲೂ ಧ್ವನಿವರ್ಧಕಗಳನ್ನು ಹಾಕಿಸಿ ಪ್ರಸಾರ ಮಾಡುತ್ತಿದ್ದರು. ಹೀಗೆ ಹಿಂದೂಸ್ತಾನಿ ಹಾಗೂ ಕರ್ನಾಟಕ ಸಂಗೀತದ ದಿಗ್ಗಜರ ಸಂಗೀತವನ್ನು ಕೇಳಿ ಆನಂದಿಸುವ ಅವಕಾಶ ನನಗೆ ಲಭಿಸಿ ನನ್ನ ಸಂಗೀತಾಭಿರುಚಿ ಬಹಳ ಮಟ್ಟಿಗೆ ಬೆಳೆಯಲು ಅನುಕೂಲವಾಯಿತು.

ಸುವರ್ಣಯುಗ

ಮೈಸೂರು ರಾಜಮನೆತನ ಸಂಗೀತಕ್ಷೇತ್ರಕ್ಕೆ ಸಲ್ಲಿಸಿರುವ ಸೇವೆ ಅನುಪಮ, ಅನ್ಯಾದೃಶ. ಮುಮ್ಮಡಿ ಕೃಷ್ಣರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ಇವರುಗಳ ಮೇಲ್ಪಂಕ್ತಿಯನ್ನೇ ಅನುಸರಿಸಿದ ಜಯಚಾಮರಾಜೇಂದ್ರ ಒಡೆಯರ್–ಇವರುಗಳ ಕಾಲ ಮೈಸೂರು ಸಂಗೀತಕ್ಷೇತ್ರದ ಸುವರ್ಣಯುಗ. ನಾಲ್ವಡಿ ಕೃಷ್ಣರಾಜ ಪ್ರಭುಗಳ ಕಾಲದಲ್ಲಿ ಮೈಸೂರು ದರ್ಬಾರನ್ನು ಅಲಂಕರಿಸಿದ್ದ ಹಿಂದೂಸ್ತಾನಿ ಸಂಗೀತ ದಿಗ್ಗಜಗಳು ಇಂದುಬಾಲ, ಗೋಹರ್‌ಜಾನ್, ಕೇಸರಿಬಾಯಿ ಕೇರ್‌ಕರ್, ಅಬ್ದುಲ್ ಕರೀಂಖಾನ್, ಫೈಯಾಜ್ ಖಾನ್, ಬರಕತುಲ್ಲಾಖಾನ್, ವಿಷ್ಣುದಿಗಂಬರ್ ಪಲೂಸ್ಕರ್, ಮುಂತಾದವರು ಹಾಗೂ ಕರ್ನಾಟಕ ಸಂಗೀತದಲ್ಲಿ ವೀಣಾ ಕುಪ್ಪಯ್ಯ, ಸಾಂಬಯ್ಯ, ಮಹಾವೈದ್ಯನಾಥಯ್ಯರ್, ಪಟ್ಣಂಸುಬ್ರಹ್ಮಣ್ಯ ಅಯ್ಯರ್, ಎಂ.ಎಸ್. ಸುಬ್ಬುಲಕ್ಷ್ಮಿ, ಪಟ್ಟಮ್ಮಾಳ್, ರಾಮನಾಡ್ ಶ್ರೀನಿವಾಸ ಅಯ್ಯಂಗಾರ್, ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್, ಮುಸರಿ ಸುಬ್ರಹ್ಮಣ್ಯ ಅಯ್ಯರ್, ಚಂಬೈ ವೈದ್ಯನಾಥ ಭಾಗವತರ್, ಶೆಮ್ಮಂಗುಡಿ ಶ್ರೀನಿವಾಸಯ್ಯರ್, ತಿರುಕ್ಕೋಡಿಕ್ಕಾವಲ್ ಕೃಷ್ಣಯ್ಯರ್, ಗೋವಿಂದಸ್ವಾಮಿ ಪಿಳ್ಳೈ , ಟೈಗರ್ ವರದಾಚಾರ್, ಪಾಪವೆಂಕಟ ರಾಮಯ್ಯ, ದ್ವಾರಂ ವೆಂಕಟಸ್ವಾಮಿನಾಯ್ಡು ಹೀಗೆ ಆ ಕಾಲದ ಸಂಗೀತ ಪ್ರಪಂಚದ ಅತಿರಥ ಮಹಾರಥರೆಲ್ಲರೂ ಮೈಸೂರು ರಾಜ ದರ್ಬಾರಿನಲ್ಲಿ ಮಹಾರಾಜರ ಸಮ್ಮುಖದಲ್ಲಿ ಕಛೇರಿ ಮಾಡಿ ರಾಜ ಸನ್ಮಾನಕ್ಕೆ ಪಾತ್ರರಾಗಿದ್ದರು. ಕೃಷ್ಣರಾಜ ಪ್ರಭುಗಳ ಸಂಗೀತಜ್ಞಾನ, ಅಭಿರುಚಿ ಬಹಳ ಉನ್ನತ ಮಟ್ಟದ್ದಾಗಿತ್ತು. ಅವರನ್ನು ಮೆಚ್ಚಿಸುವುದು ಅಷ್ಟೇನೂ ಸುಲಭದ ಮಾತಾಗಿರಲಿಲ್ಲ. ಅವರೇ ಸ್ವತಃ ಒಬ್ಬ ಶ್ರೇಷ್ಠ ಕಲಾವಿದರಾಗಿದ್ದರು. ಅವರು ಪೋಷಿಸಿ ಬೆಳೆಸಿದ ಮೈಸೂರು ಸಂಗೀತ ಪರಂಪರೆಯ ಆಧಾರ ಸ್ತಂಭಗಳಾಗಿದ್ದ ಮೈಸೂರು ಸದಾಶಿವರಾಯರು, ಕರಿಗಿರಿರಾಯರು, ವೀಣಾ ವೆಂಕಟಸುಬ್ಬಯ್ಯನವರು, ವೀಣಾ ದೊಡ್ಡ ಶೇಷಣ್ಣನವರು, ವೀಣಾ ಶೇಷಣ್ಣನವರು, ವೀಣಾ ಚಿಕ್ಕರಾಮಪ್ಪನವರು, ವೀಣಾ ಸುಬ್ಬಣ್ಣನವರು, ಬಿಡಾರಂ ಕೃಷ್ಣಪ್ಪನವರು, ವಾಸುದೇವಾ ಚಾರ್ಯರು, ವೀಣಾ ಪದ್ಮನಾಭಯ್ಯಯನವರು, ವೀಣಾ ಶಿವರಾಮಯ್ಯ ನವರು, ವೀಣಾ ವೆಂಕಟಗಿರಿಯಪ್ಪನವರು, ಚಿಕ್ಕರಾಮರಾಯರು, ದೇವೇಂದ್ರಪ್ಪನವರು, ಆರ್.ಎಸ್. ಕೇಶವಮೂರ್ತಿಗಳು, ಚೌಡಯ್ಯ ನವರು ಮುಂತಾದ ಸಂಗೀತ ದಿಗ್ಗಜಗಳು ರಾಜರ ಆಸ್ಥಾನವನ್ನು ಅಲಂಕರಿಸಿದ್ದರು. ಹೀಗೆ, ನಾಲ್ವಡಿ ಕೃಷ್ಣರಾಜ ಪ್ರಭುಗಳ ಆಸ್ಥಾನ ಭೋಜರಾಜನ ಆಸ್ಥಾನದಂತೆ ಕಂಗೊಳಿಸುತ್ತಿತ್ತು.

ಮತ್ತೆ ಚಿಗುರಿದ ಆಸೆ

ಈ ಮಧ್ಯೆ ನನ್ನ ಸಂಗೀತ ಶಿಕ್ಷಣವನ್ನು ಹೇಗಾದರೂ ಮುಂದುವರೆಸಬೇಕೆಂದು ತೀರ್ಮಾನಿಸಿದೆ. ಶಾರೀರ ಸ್ವಲ್ಪಮಟ್ಟಿಗೆ ಸುಧಾರಿಸಿದ್ದರಿಂದ ಗಾಯನದಲ್ಲೇ ಏಕೆ ಮುಂದುವರೆಯಬಾರದು ಎಂದು ಯೋಚಿಸಿ ಆಸ್ಥಾನ ವಿದ್ವಾನ್ ಚಿಕ್ಕರಾಮರಾಯರನ್ನು ಆಶ್ರಯಿಸಿದೆ. ಅವರು ನನ್ನನ್ನು ಸಂತೋಷದಿಂದಲೇ ಶಿಷ್ಯನನ್ನಾಗಿ ಸ್ವೀಕರಿಸಿದರು. ಬಹಳ ಪ್ರೀತಿಯಿಂದ ಪಾಠ ಹೇಳಿದರು. ಅವರಲ್ಲಿ ಹೆಚ್ಚು ಕಾಲ ನಾನು ಕಲಿಯಲಿಲ್ಲವಾದರೂ ಅವರು ನನ್ನ ಬಗ್ಗೆ ತೋರಿದ ಪ್ರೀತಿವಿಶ್ವಾಸಗಳನ್ನು ನಾನೆಂದೂ ಮರೆಯಲಾರೆ. ನನ್ನ ಗುರುಪಂಕ್ತಿಯಲ್ಲಿ ಅವರಿಗೂ ಒಂದು ವಿಶಿಷ್ಟ ಸ್ಥಾನವಿದೆ. ಇಂದಿಗೂ ಅವರನ್ನು ಭಕ್ತಿಯಿಂದ ಸ್ಮರಿಸುತ್ತೇನೆ.

ನನ್ನ ಶಾರೀರದ ಅಸ್ಥಿರತೆಯಿಂದ ಗಾಯನದಲ್ಲಿ ಮುಂದು ವರೆಯುವುದು ಸಾಧ್ಯವಿಲ್ಲವೆಂದು ಅರಿತ ಮೇಲೆ, ಒಳ್ಳೆಯ ವೀಣಾ ಗುರುಗಳ ಅನ್ವೇಷಣೆಯಲ್ಲಿ ತೊಡಗಿದೆವು. ಆ ವೇಳೆಗೆ ಶೇಷಣ್ಣನವರು, ಸುಬ್ಬಣ್ಣನವರು ಕಾಲವಾಗಿದ್ದರು. ಅವರನಂತರ ಶೇಷಣ್ಣನವರ ಪಟ್ಟ ಶಿಷ್ಯರಾಗಿದ್ದ ವೀಣಾ ವೆಂಕಟಗಿರಿಯಪ್ಪನವರು ಆಗ ಆಸ್ಥಾನ ಪ್ರಮುಖರಾಗಿ, ನಾಲ್ವಡಿ ಕೃಷ್ಣರಾಜ ಒಡೆಯರ ಅಚ್ಚುಮೆಚ್ಚಿನ ವೈಣಿಕರಾಗಿ ಅತ್ಯಂತ ಪ್ರಸಿದ್ಧರಾಗಿದ್ದರು. ಕಲಿತರೆ ಅಂತಹ ಶ್ರೇಷ್ಠ ಗುರುಗಳಲ್ಲೇ ಕಲಿಯಬೇಕು, ಹೇಗಾದರೂ ಮಾಡಿ ಅವರ ಮನಸ್ಸನ್ನು ಒಲಿಸಿಕೊಳ್ಳಬೇಕು ಎಂದು ತೀರ್ಮಾನಿಸಿದೆವು.

ವಿವಾಹ

ಈ ವೇಳೆಗೆ ನಾನು ಇಪ್ಪತ್ಮೂರು ವರ್ಷದ ತರುಣನಾಗಿದ್ದೆ. ಮನೆಯಲ್ಲಿ ನನ್ನ ವಿವಾಹದ ಪ್ರಸ್ತಾಪ ನಡೆಯುತ್ತಿತ್ತು. ಒಂದು ದಿನ ನನ್ನ ಅಮ್ಮ ನನ್ನ ಮದುವೆ ನಿಶ್ಚಯವಾಗಿರುವ ವಿಷಯವನ್ನು ನನಗೆ ತಿಳಿಸಿದರು. ರುದ್ರಪಟ್ಟಣದವರೇ ಆಗಿದ್ದ ಗಂಗೂರು ಶ್ಯಾನುಭೋಗ್ ರಾಮಸ್ವಾಮಯ್ಯನವರ ಜ್ಯೇಷ್ಠಪುತ್ರಿ ಕೇವಲ ಹನ್ನೊಂದು ವರ್ಷದ ಕಿಶೋರಿ ಲಕ್ಷ್ಮಿಯೇ ನನ್ನ ವಧು. ನಾವಿಬ್ಬರೂ ಒಂದೇ ಊರಿನವರಾದರೂ ಅವಳು ಹುಟ್ಟುವ ವೇಳೆಗೆ ನಾವು ರುದ್ರಪಟ್ಟಣವನ್ನು ಬಿಟ್ಟಾಗಿದ್ದುದರಿಂದ ನಾವು ಒಬ್ಬರನ್ನೊಬ್ಬರು ಸರಿಯಾಗಿ ನೋಡಿಯೇ ಇರಲಿಲ್ಲ. ಅವಳಿಗೂ ನನಗೂ ಹನ್ನೆರಡು ವರ್ಷಗಳ ವಯಸ್ಸಿನ ಅಂತರ.

ಆ ಕಾಲದಲ್ಲಿ ಇದೆಲ್ಲ ಸರ್ವೇಸಾಮಾನ್ಯ. ಹಿರಿಯರದ್ದೇ ತೀರ್ಮಾನ. ಹುಡುಗ ಹುಡುಗಿಯರ ಅಭಿಪ್ರಾಯಗಳನ್ನು ಕೇಳುವ ಪದ್ಧತಿ ಆಗ ಇರಲೇ ಇಲ್ಲ. ಹೀಗಾಗಿ ಯಾವಾಗಲೋ ಒಮ್ಮೆ ನಮ್ಮ ಮನೆಗೆ ಬಂದಿದ್ದು ಲಂಗ ಹಾಕಿಕೊಂಡು ಸ್ನೇಹಿತೆಯರ ಜತೆ ಆಟವಾಡುತ್ತಿದ್ದಾಗ ನೋಡಿದ್ದ ಈ ಪುಟ್ಟ ಹುಡುಗಿ ನನ್ನ ಜೀವನ ಸಂಗಾತಿಯಾಗಿ ನಿಶ್ಚಿತಾರ್ಥ ವಾಯಿತು. ೧೯೩೯ನೇ ಇಸವಿ ಜೂನ್ ತಿಂಗಳಲ್ಲಿ ನಮ್ಮ ವಿವಾಹವು ವಿಜೃಂಭಣೆಯಿಂದ ನಡೆಯಿತು.

ಒಂದು ವಾರದ ಆ ಕಾಲದ ವಿವಾಹಗಳು ಬಂಧು, ಬಳಗ, ಇಷ್ಟಮಿತ್ರರಿಂದ ಕೂಡಿದ ಅತ್ಯಂತ ಆತ್ಮೀಯ ಸಾಮುದಾಯಿಕ ಸಮಾರಂಭಗಳಾಗಿರುತ್ತಿದ್ದವು . ಪುಟ್ಟ ವಯಸ್ಸಿನ ಮದುಮಕ್ಕಳ ಉರುಟಣೆ ಶಾಸ್ತ್ರಗಳು ಹೆಂಗಳೆಯರಿಗೆಲ್ಲಾ ಅತ್ಯಂತ ಸಂಭ್ರಮದ ಮನರಂಜನೆಯಾಗಿದ್ದುವು. ಇಂತಹ ಸಂದರ್ಭಗಳಲ್ಲಿ ಮಾತ್ರ ಹುಡುಗಿಯ ಮುಖವನ್ನು ಚೆನ್ನಾಗಿ ನೋಡುವ ಅವಕಾಶ ಸಿಗುತ್ತಿದ್ದುದರಿಂದ ನಾನು ಇಂತಹ ಶಾಸ್ತ್ರಗಳನ್ನು ಸಂತೋಷದಿಂದಲೇ ಎದುರು ನೋಡುತ್ತಿದ್ದೆ. ನನ್ನ ಪತ್ನಿಯ ಮುಗ್ಧಮುಖವನ್ನು ನೋಡಿ ಮನಸ್ಸಿನಲ್ಲೇ ಹಿಗ್ಗುತ್ತಿದ್ದೆ. ಮುಂದೆ, ಅವಳನ್ನು ಮತ್ತೆ ನಾನು ನೋಡಿದ್ದು ಹೊಸ ಅಳಿಯನಾಗಿ ಆ ವರ್ಷದ ದೀಪಾವಳಿಗೆ ಮಾವನ ಮನೆಗೆ ಹೋಗಿ ಬಂದಾಗ ಮಾತ್ರ . ಆಗಲೂ ಅವಳು ನಾಚಿಕೆಯಿಂದ ನನ್ನ ಕಣ್ಣು ತಪ್ಪಿಸಿಕೊಂಡೇ ಓಡಾಡುತ್ತಿದ್ದಳು. ಅವಳನ್ನು ಬಿಟ್ಟು ಮಿಕ್ಕವರೇ ನನಗೆ ಧಂಡಿಯಾಗಿ ಸಿಗುತ್ತಿದ್ದರು. ಕೂತರೆ ನಿಂತರೆ ಉಪಚಾರ, ಮಾವನವರು ಅಳಿಯನಿಗೆ ಮಾಡಿದ ಗುಳು ಗುಳು ಅಭ್ಯಂಜನದ ಭಯಂಕರ ಅನುಭವ, ಊಟ ತಿಂಡಿಗಳಲ್ಲಿ ಅತಿಯಾದ ಬಲವಂತ, ಇವೆಲ್ಲವೂ ನನಗೆ ಸಾಕುಸಾಕಾಗಿ ಹೋಗಿತ್ತು. ಆದರೆ, ಮಾವನ ಮನೆಯವರೆಲ್ಲರೂ ನನ್ನನ್ನು ಬಹಳ ಪ್ರೀತಿಸುತ್ತಿದ್ದರು. ಅವರ ಪ್ರೀತ್ಯಾದರಗಳು, ಹಳ್ಳಿಯ ವಾತಾವರಣ, ಅಲ್ಲಿಯ ಜನರ ಮುಗ್ಧತೆ, ಸರಳತೆ ಇವೆಲ್ಲ ನನಗೆ ಬಹಳ ಹಿಡಿಸಿತ್ತು. ಹೀಗೆ, ನಾನು ಹೊಸ ಮದು ಮಗನಾಗಿ ಠೀವಿಯಿಂದ ಎಲ್ಲೆಡೆ ಓಡಾಡಿಕೊಂಡು ಹೆಮ್ಮೆಯಿಂದ ಬೀಗುತ್ತಿದ್ದೆ.

ಮದುವೆಯೇನೋ ನಡೆದುಹೋಯಿತು. ಆದರೆ, ನಾನು ಮಾತ್ರ ಇನ್ನೂ ಯಾವ ಕ್ಷೇತ್ರದಲ್ಲೂ ಗಟ್ಟಿಯಾಗಿ ನನ್ನ ಕಾಲ ಮೇಲೆ ನಾನು ನಿಲ್ಲುವಂತಹ ಸಾಮರ್ಥ್ಯವನ್ನು ಪಡೆದಿರಲಿಲ್ಲ. ಇತ್ತ ವಿದ್ಯಾಭ್ಯಾಸವೂ ಇಲ್ಲ , ಅತ್ತ ಸಂಗೀತವೂ ಇಲ್ಲ. ಬೇಸಾಯದಲ್ಲಾದರೂ ಸ್ಥಿರವಾಗಿ ನಿಲ್ಲಬಹುದಿತ್ತು. ಅದೂ ಮಾಡಲಿಲ್ಲ. ಹೀಗಾಗಿ , ನನ್ನ ಭವಿಷ್ಯ ಏನು ಎಂಬುದರ ಕಲ್ಪನೆಯೇ ಯಾರಿಗೂ ಬರುವಂತಿರಲಿಲ್ಲ. ನಮ್ಮ ತಂದೆಯವರ ಸಂಬಳ ತಿಂಗಳಿಗೆ ಕೇವಲ ಐವತ್ತು ರೂಪಾಯಿ. ಆದರೆ, ಅದು ಬಹಳ ಒಳ್ಳೆಯ ಕಾಲ. ತಿಂಗಳಿಗೆ ಇಪ್ಪತ್ತೈದು, ಮೂವತ್ತು ರೂಪಾಯಿಗಳಲ್ಲಿ ಒಂದು ಮಧ್ಯಮವರ್ಗದ ಸಂಸಾರವನ್ನು ನಡೆಸ ಬಹುದಿತ್ತು. ತಂದೆಯವರ ಆವಶ್ಯಕತೆಗಳೂ ಅತ್ಯಲ್ಪ. ಅವರ ಆಹಾರ, ವೇಷಭೂಷಣಗಳು ಬಹಳ ಸರಳ, ನಿರಾಡಂಬರ. ಆದುದರಿಂದ ಸದ್ಯದ ಪರಿಸ್ಥಿತಿಯಲ್ಲಿ ಹೇಗೋ ನಿಭಾಯಿಸಿಕೊಂಡು ಹೋಗಬಹುದಾಗಿತ್ತು. ಆದರೆ ನಾನು ಸಂಸಾರದ ಜವಾಬ್ದಾರಿಯನ್ನು ಹೊರಲು ಇಂದಲ್ಲ ನಾಳೆ ಸಿದ್ಧವಾಗಲೇ ಬೇಕಲ್ಲವೇ? ಹೀಗಾಗಿ , ನನ್ನ ಅದೃಷ್ಟದ 'ಕಡೆ'ಯ ಪರೀಕ್ಷೆ ಮಾಡಿಯೇ ಬಿಡುವುದೆಂದು ನಿಶ್ಚಯಿಸಿ ನಾನು, ವೀಣಾ ಶಿಕ್ಷಣಕ್ಕಾಗಿ ಗುರು ವೀಣಾ ವೆಂಕಟಗಿರಿಯಪ್ಪನವರ ಗುರುಕುಲದಲ್ಲಿ ಆಶ್ರಯ ಪಡೆಯುವುದೇ ಸರಿಯಾದ ಮಾರ್ಗವೆಂದು ತಂದೆಯವರು ತೀರ್ಮಾನಿಸಿದರು.

ಗುರುಗಳು ಒಪ್ಪಿದರು

ಸರಿ, ವೀಣಾ ವೆಂಕಟಗಿರಿಯಪ್ಪನವರನ್ನು ಭೇಟಿ ಮಾಡಲು ಒಂದು ಶುಭ ದಿನ ನಾನೂ, ನನ್ನ ತಂದೆಯವರೂ ಹೊಸಕೇರಿಯಲ್ಲಿರುವ ಅವರ ಮನೆಗೆ ಫಲಪುಷ್ಪಸಮೇತ ಹೋದೆವು. ಅವರು ಆಗ ತಾನೇ ಅರಮನೆಯಿಂದ ಬಂದಿದ್ದರು. ಅವರ ಮನೆಯ ಜಗಲಿಯ ಮೇಲಿದ್ದ ಒಂದು ರೂಮಿನಲ್ಲಿ ಕೆಲವು ಶಿಷ್ಯರು ವೀಣೆ ಅಭ್ಯಾಸ ಮಾಡುತ್ತಿದ್ದರು. ರಾಜಕಳೆಯ ಗಾಂಭೀರ್ಯದಿಂದ ಕೂಡಿದ್ದ ಮಧ್ಯವಯಸ್ಸಿನ ವೆಂಕಟ ಗಿರಿಯಪ್ಪನವರನ್ನು ನೋಡಿದ ಕೂಡಲೆ ಅವರಿಗೆ ಫಲಪುಷ್ಪಗಳನ್ನು ನೀಡಿ ಅವರ ಪಾದ ಮುಟ್ಟಿ ನಮಸ್ಕರಿಸಿದೆವು. ಅವರು ಬಹಳ ಹಸನ್ಮುಖದಿಂದ ನಮ್ಮಬಗ್ಗೆ ವಿಚಾರಿಸಿ ನಮ್ಮ ವೃತ್ತಾಂತವನ್ನೆಲ್ಲಾ ತಿಳಿದುಕೊಂಡರು. ತಂದೆಯವರು ನನ್ನ ವಿಷಯವಾಗಿ ಒಂದೂ ಬಿಡದೇ ಎಲ್ಲವನ್ನೂ ಗುರುಗಳಿಗೆ ವಿವರವಾಗಿ ತಿಳಿಸಿ, ನನ್ನನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿ , ವಿದ್ಯಾದಾನ ಮಾಡಿ , ನನ್ನ ಜೀವನೋಪಾಯಕ್ಕೆ ಒಂದು ಮಾರ್ಗ ಕಲ್ಪಿಸಿಕೊಡಬೇಕೆಂದು ಬಿನ್ನವಿಸಿಕೊಂಡರು. ಆದರೆ, ಗುರುಗಳು ತಮಗಿದ್ದ ಬಿಡುವಿಲ್ಲದ ಕಾರ್ಯಗೌರವಗಳು, ತಮ್ಮ ಆರೋಗ್ಯದ ಸಮಸ್ಯೆಗಳು, ಅರಮನೆಯ ಜವಾಬ್ದಾರಿಗಳು ಇವುಗಳನ್ನೆಲ್ಲಾ ಮುಂದಿಟ್ಟು ತಮ್ಮ ಅಸಹಾಯಕತೆಯನ್ನು ಹೇಳಿಕೊಂಡರು. ಆದರೆ, ನಾನು ಪಟ್ಟುಬಿಡದೇ "ನನ್ನನ್ನು ತಾವು ಶಿಷ್ಯನನ್ನಾಗಿ ಸ್ವೀಕರಿಸಿದರೆ ಅಷ್ಟೇ ಸಾಕು. ತಮ್ಮ ಸೇವೆ ಮಾಡಿಕೊಂಡು, ತಮ್ಮ ವೀಣಾಗಾನವನ್ನು ಕೇಳುತ್ತಾ ಇರುತ್ತೇನೆ. ತಮ್ಮಿಂದ ನನಗೆ ಎರಡಕ್ಷರ ಅನುಗ್ರಹವಾದರೂ ಸಾಕು, ಅದೇ ನನ್ನ ಭಾಗ್ಯ" ಎಂದು ಹೇಳಿ ಅವರ ಪಾದಗಳನ್ನು ಹಿಡಿದೆ. ನನ್ನ ನಯ, ವಿನಯ, ಗುರುಭಕ್ತಿಗಳನ್ನು ಕಂಡು ಅವರಿಗೂ ಮನಸ್ಸು ಕರಗಿರಬೇಕು. ಅವರು ಪ್ರೀತಿಯಿಂದ ನನ್ನನ್ನು ನೋಡಿ "ನೀನು ಬುದ್ಧಿವಂತನ ಹಾಗೆ ಕಾಣುತ್ತೀಯ. ನನ್ನದು ಬಹಳ ಶಿಸ್ತಿನ ಪಾಠಕ್ರಮ. ಚನ್ನಾಗಿ ಕಷ್ಟಪಟ್ಟು ಸಾಧನೆ ಮಾಡಬೇಕು. ನೀನು ಎಷ್ಟರಮಟ್ಟಿಗೆ ವಿದ್ಯೆಯಲ್ಲಿ ಮುಂದು ವರೆಯುತ್ತೀಯೆ ಎಂಬುದು ನಿನ್ನ ಸಾಧನೆಯನ್ನೇ ಅವಲಂಬಿಸಿದೆ. ನೀನು

ನಾಳೆ ಬೆಳಗ್ಗೆ ಬಾ, ಪಾಠ ಶುರು ಮಾಡುತ್ತೇನೆ" ಎಂದು ಹೇಳಿದಾಗ ನಮಗೆ ಅಮೃತಪಾನ ಮಾಡಿದಷ್ಟು ಆನಂದವಾಯಿತು.

ಮಾರನೆಯ ದಿನ ಗುರುಗಳು ಹೇಳಿದ ಸಮಯಕ್ಕೆ ಸರಿಯಾಗಿ ಅವರ ಮನೆಗೆ ಹೋದೆ. ಗುರುಗಳು ವೀಣೆಯನ್ನು ತರಿಸಿ ಪೂಜೆ ಮಾಡಿಸಿದರು. ನಾನು ವೀಣೆಯನ್ನು ಕಣ್ಣಿಗೆ ಒತ್ತಿಕೊಂಡು ಗುರುಗಳಿಗೆ ಸಾಷ್ಟಾಂಗ ಪ್ರಣಾಮ ಮಾಡಿ ಕುಳಿತೆ. ಗುರುಗಳು ನನ್ನ ಸಂಗೀತ ಜ್ಞಾನದ ಮಟ್ಟವನ್ನು ಪರೀಕ್ಷೆಗೊಳಪಡಿಸಿದರು. ಈಗಾಗಲೇ ಗಾಯನದಲ್ಲಿ ಒಂದು ಒಳ್ಳೆಯ ಮಟ್ಟದ ಶಿಕ್ಷಣ ಲಭಿಸಿದ್ದರಿಂದ ನನಗೆ ತುಂಬ ಅನುಕೂಲವಾಯಿತು. ವೀಣೆಯಲ್ಲೂ ಅಲ್ಪಸ್ವಲ್ಪ ಕೈಯಾಡಿಸಿದ್ದುದರಿಂದ ಮೀಟುಗಳು ಮತ್ತು ಎಡಗೈ ಬೆರಳುಗಳ ಚಲನೆ ನನಗಾಗಲೇ ಸುಗಮವಾಗಿತ್ತು. ಗುರುಗಳಿಗೆ ತುಂಬ ಸಂತೋಷವೂ, ಸಮಾಧಾನವೂ ಆಯಿತು. ಪ್ರಾರಂಭದ ವರಸೆಗಳು, ಅಲಂಕಾರಗಳು, ಗೀತೆಗಳು ಇವುಗಳನ್ನೆಲ್ಲಾ ನಾನೇ ಅಭ್ಯಾಸ ಮಾಡಿಕೊಳ್ಳುವಂತೆ ಹೇಳಿ ನೇರವಾಗಿ ಮೋಹನರಾಗದ ಸ್ವರಜತಿ ಯಿಂದಲೇ ಪಾಠವನ್ನು ಪ್ರಾರಂಭಿಸಿದರು. ಗುರುಗಳು ಹೇಳಿಕೊಟ್ಟದ್ದನ್ನು ನಾನು ಬೇಗ ಗ್ರಹಿಸುತ್ತಿದ್ದುದರಿಂದ ಅವರಿಗೆ ತುಂಬ ಸಂತೋಷ ವಾಗಿತ್ತು. ವೀಣೆಯ ಮೀಟುಗಳು ಮೃದುವಾಗಿರಬೇಕು, ಸುನಾದದಿಂದ ಕೂಡಿರಬೇಕು, ಗಮಕಗಳನ್ನು ಸರಿಯಾದ ರೀತಿಯಲ್ಲಿ ಪ್ರಯೋಗಿಸ ಬೇಕು ಇತ್ಯಾದಿ ವೀಣಾವಾದನದ ಸೂಕ್ಷ್ಮ ವಿಚಾರಗಳನ್ನೆಲ್ಲಾ ವಿವರಿಸಿ ಹೇಳುತ್ತಿದ್ದರು. ನಾನು ಬಹಳ ಶ್ರದ್ಧೆಯಿಂದ ಬೆಳಗಿನ ಜಾವ ಐದು ಘಂಟೆಗೇ ಎದ್ದು ಏಳು ಘಂಟೆವರೆಗೂ ವೀಣಾ ಅಭ್ಯಾಸ ಮಾಡುತ್ತಿದ್ದೆ. ಗುರುಗಳ ಮನೆಗೆ ತಪ್ಪದೇ ಹೋಗುತ್ತಿದ್ದೆ. ಪಾಠ ಬಹಳ ಚೆನ್ನಾಗಿ ಮುಂದುವರೆಯುತ್ತಿತ್ತು. ನನಗೆ ವೀಣೆ ನುಡಿಸುವುದನ್ನು ಬಿಟ್ಟರೆ ಬೇರೆ ಯೋಚನೆಯೇ ಇರುತ್ತಿರಲಿಲ್ಲ. ನಮ್ಮ ತಂದೆ–ತಾಯಿಯರಿಗೆ ನನ್ನ ಪ್ರಗತಿಯನ್ನು ಕಂಡು ಸಂತೋಷವಾಗಿತ್ತು. ಗುರುಗಳು ನನ್ನ ಮೇಲೆ ತೋರುತ್ತಿದ್ದ ಪ್ರೀತಿ, ಅಭಿಮಾನಗಳಿಂದ ನನ್ನಲ್ಲಿ ಎಲ್ಲಿಲ್ಲದ ಉತ್ಸಾಹ ಮೂಡಿತ್ತು. ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೇ ಶಿಷ್ಯರಿಗೆ ಹೃದಯಪೂರ್ವಕವಾಗಿ ವಿದ್ಯಾದಾನ ಮಾಡಿ ಸತತವೂ ಅವರ ಶ್ರೇಯೋಭಿವೃದ್ಧಿಯನ್ನೇ ಹಾರೈಸುತ್ತಿದ್ದ ಅಪರೂಪದ ಇಂತಹ ಶ್ರೇಷ್ಠಗುರುಗಳು ಲಭಿಸಿದ್ದು ನನ್ನ ಪೂರ್ವಜನ್ಮದ ಪುಣ್ಯ. ಹೀಗೆ ಒಂದು ವರ್ಷದ ವೇಳೆಗೆ ಮೂರು ನಾಲ್ಕು ಸ್ವರಜತಿಗಳು, ನಾಲ್ಕು ವರ್ಣಗಳು, ಸುಮಾರು ಹದಿನೈದು ಇಪ್ಪತ್ತು ಕೃತಿಗಳನ್ನು ಕಲಿತೆ. ಗುರುಗಳೂ ನನ್ನ ವಿಷಯದಲ್ಲಿ ಸುಪ್ರೀತರಾಗಿದ್ದರು.

ದಯಾಳು

ಇಷ್ಟು ಅಭಿಮಾನದಿಂದ ಗುರುಗಳು ನನಗೆ ವಿದ್ಯೆ ಕಲಿಸುತ್ತಿದ್ದುದರ ಜತೆಗೆ ಅವರು ನಮ್ಮ ಸಂಸಾರದ ಸ್ಥಿತಿಗತಿಗಳ ಬಗೆಗೂ ಎಲ್ಲವನ್ನೂ ವಿಚಾರಿಸಿ ತಿಳಿದುಕೊಳ್ಳುತ್ತಿದ್ದರು. ಅವರು ಸ್ವಭಾವತಃ ಪರಮ ದಯಾಳು. ಬೇರೆಯವರ ಕಷ್ಟಗಳನ್ನು ನೋಡಿ ಮರುಗುತ್ತಿದ್ದಂತಹ ಆರ್ದ್ರಹೃದಯ ಅವರದು. ಅಂತಹ ಕಷ್ಟದಲ್ಲಿರುವವರಿಗೆ ಅಯಾಚಿತ ವಾಗಿ ತಾವೇ ಬಂದು ಸಹಾಯ ಮಾಡುತ್ತಿದ್ದುದೂ ಉಂಟು. ಹೀಗಾಗಿ , ನಮ್ಮ ಸಂಸಾರದ ಆರ್ಥಿಕ ಸಂಕಷ್ಟಗಳನ್ನು ಅರಿತಿದ್ದ ಅವರು ನನಗೆ ಧೈರ್ಯ ಹೇಳಿ, ನನಗೆ ಹೇಗೋ ಹಾಡುಗಾರಿಕೆಯಲ್ಲಿ ನೂರಾರು ಕೃತಿಗಳು ಪಾಠವಾಗಿದ್ದುದರಿಂದ ಹಾಗೂ ವೀಣೆಯಲ್ಲೂ ತಕ್ಕಮಟ್ಟಿಗೆ ಪಾಠವಾಗಿದ್ದುದರಿಂದ ಕೆಲವು ಹಾಡುಗಾರಿಕೆ ಮತ್ತು ವೀಣೆ ಪಾಠಗಳನ್ನು ಗೊತ್ತು ಮಾಡಿಕೊಟ್ಟರು. ಆಗಿನ ಮನೆಪಾಠಗಳ ಗುರುಸಂಭಾವನೆ ತಿಂಗಳಿಗೆ ಹತ್ತು ರೂಪಾಯಿಗಳಿಂದ ಇಪ್ಪತ್ತೈದು ರೂಪಾಯಿಗಳಷ್ಟಿತ್ತು. ಗುರುಗಳು ನನಗೆ ಕೊಡಿಸಿದ ನಾಲ್ಕು ಪಾಠಗಳು ದೊಡ್ಡ ಅಧಿಕಾರಿಗಳ ಮನೆಯವಾದ್ದರಿಂದ ನನಗೆ ತಿಂಗಳಿಗೆ ಇಪ್ಪತ್ತೈದು ರೂಪಾಯಿಗಳಂತೆ ನಾಲ್ಕುಪಾಠಗಳಿಗೆ ನೂರು ರೂಪಾಯಿ ಸಿಗುತ್ತಿತ್ತು. ಕಾಲಕ್ರಮೇಣ ತಿಂಗಳಿಗೆ ಇನ್ನೂರು, ಇನ್ನೂರೈವತ್ತು ರೂಪಾಯಿ ಸಂಪಾದಿಸುತ್ತಿದ್ದೆ. ನನ್ನ ಈ ಸಂಪಾದನೆಯನ್ನು ನನ್ನ ತಾಯಿ ತಂದೆಯರ ಕೈಯಲ್ಲಿ ಕೊಟ್ಟಾಗ ಅವರಿಗಾಗುತ್ತಿದ್ದ ಆನಂದ ಅಷ್ಟಿಷ್ಟಲ್ಲ. ಆ ಕಾಲದ ಒಬ್ಬ ಕಾಲೇಜು ಅಧ್ಯಾಪಕನಿಗೆ ಬರುತ್ತಿದ್ದ ಸಂಬಳ ತಿಂಗಳಿಗೆ ಎಪ್ಪತ್ತೈದು ರೂಪಾಯಿ. ಅದಕ್ಕಿಂತಲೂ ಹೆಚ್ಚಿನ ಸಂಪಾದನೆಯನ್ನು ಮಾಡಬಹುದಾದ ಸಾಮರ್ಥ್ಯವನ್ನು ಪಡೆದಿದ್ದೇನೆ ಎಂಬುದು ಅವರಿಗೆ ಅತ್ಯಂತ ಹೆಮ್ಮೆಯ ಹಾಗೂ ಸಮಾಧಾನದ ವಿಷಯವಾಗಿತ್ತು. ನನ್ನ ಕಾಲ ಮೇಲೆ ನಾನು ನಿಂತು ನನ್ನ ಯೋಗಕ್ಷೇಮವನ್ನು ನೋಡಿಕೊಳ್ಳಬಲ್ಲೆ ಎಂಬ ಧೈರ್ಯ ಅವರಲ್ಲಿ ಮೂಡಿತು. ಭವಿಷ್ಯದ ಬಗ್ಗೆ ಬಹಳ ಚಿಂತೆಗೊಳಗಾಗಿದ್ದ ತಂದೆತಾಯಿಯರು ಈ ನನ್ನ ಪ್ರಗತಿಯನ್ನು ಕಂಡು ಸಮಾಧಾನದ ನಿಟ್ಟುಸಿರು ಬಿಟ್ಟರು.

ನನ್ನ ಸಹಪಾಠಿಗಳು ಹಾಗೂ ಗುರುಗಳ ಕಛೇರಿ ಪ್ರವಾಸಗಳು

ಗೆಳೆಯರು

ನಾನು ನನ್ನ ಗುರುಗಳಲ್ಲಿ ಬಂದು ಸೇರುವ ವೇಳೆಗಾಗಲೇ ಅನೇಕ ಮಂದಿ ಶಿಷ್ಯರು ಅವರಲ್ಲಿ ಶಿಕ್ಷಣ ಪಡೆದಿದ್ದರು. ಅವರಲ್ಲಿ ಪ್ರಮುಖರು ವೀಣಾ ದೊರೆಸ್ವಾಮಿ ಅಯ್ಯಂಗಾರ್. ನಾನು ಗುರುಕುಲಕ್ಕೆ ಬಂದ ಮೇಲೆ ಅವರೂ ನಾನೂ ಬಹಳ ಆಪ್ತರಾದೆವು. ಗುರುಗಳ ಮನೆಯಲ್ಲಿ ಪ್ರತಿದಿನ ಭೇಟಿಯಾಗುತ್ತಿದ್ದೆವು. ಆಗಲೇ ದೇಶಾದ್ಯಂತ ಕೀರ್ತಿಶಾಲಿಗಳಾಗಿದ್ದ ದೊರೆಸ್ವಾಮಿ ಅಯ್ಯಂಗಾರ್ ಅವರನ್ನು ಕಂಡರೆ ಗುರುಗಳಿಗೆ ಅಪಾರ ಅಭಿಮಾನ. ನನ್ನನ್ನೂ, ಅವರನ್ನೂ ತಮ್ಮ ಎರಡು ಕಣ್ಣುಗಳೆಂದೂ, ತಮ್ಮ ಅಚ್ಚುಮೆಚ್ಚಿನ ಶಿಷ್ಯದ್ವಯರೆಂದೂ ಗುರುಗಳೇ ಹೇಳುತ್ತಿದ್ದು ದುಂಟು. ಗುರುಗಳ ಅಂತ್ಯಕಾಲದವರೆಗೂ ಅವರ ಸಮೀಪವರ್ತಿಗಳಾಗಿ ಅವರ ಸೇವೆ ಮಾಡುವ ಭಾಗ್ಯ ನಮ್ಮದಾಗಿತ್ತು. ದೊರೆಸ್ವಾಮಿ ಅಯ್ಯಂಗಾರ್ ಇತ್ತೀಚೆಗೆ ನಿಧನರಾಗುವವರೆಗೂ ನಾವಿಬ್ಬರೂ ಪರಸ್ಪರ

ಅದೇ ಸ್ನೇಹ ಪ್ರೀತಿ ವಿಶ್ವಾಸಗಳನ್ನು ಹೊಂದಿದ್ದೆವು. ಅವರ ಅನಿರೀಕ್ಷಿತ ನಿಧನದಿಂದ ನಾನು ಒಬ್ಬ ಆತ್ಮೀಯ ಗೆಳೆಯನನ್ನು ಕಳೆದು ಕೊಂಡಂತಾಯಿತು.

ವೀಣಾ ದೊರೆಸ್ವಾಮಿ ಅಯ್ಯಂಗಾರ್ ಅವರ ತಂದೆ ವೆಂಕಟೇಶ ಅಯ್ಯಂಗಾರ್ ಅವರು ಸಹ ನಮ್ಮ ಗುರುಗಳ ಹಿರಿಯ ಶಿಷ್ಯರು. ವೀಣೆ ಮತ್ತು ಕೊಳಲು ವಾದ್ಯಗಳಲ್ಲಿ ಪರಿಣತರಾಗಿದ್ದ ಇವರು ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನ ವಿದ್ವಾಂಸರಾಗಿದ್ದರು. ಇವರ ಮತ್ತೊಬ್ಬ ಪುತ್ರ ವಿ. ದೇಶಿಕಾಚಾರ್ ತಮ್ಮ ತಂದೆಯವರಲ್ಲಿ ಕೊಳಲು ಮತ್ತು ವೀಣಾವಾದನದಲ್ಲಿ ಪ್ರಾರಂಭಿಕ ಶಿಕ್ಷಣ ಪಡೆದು ಅನಂತರ ಗುರುಗಳಾದ ವೀಣಾ ವೆಂಕಟಗಿರಿಯಪ್ಪನವರಲ್ಲಿ ಪ್ರೌಢಶಿಕ್ಷಣ ಪಡೆದರು. ನನ್ನ ಸಹಪಾಠಿಗಳಾದ ಇವರು ಈಗಲೂ ನನ್ನ ಆಪ್ತಮಿತ್ರರಲ್ಲೊಬ್ಬ ರಾಗಿದ್ದಾರೆ. ನಮ್ಮ ಗುರುಗಳ ಶಿಷ್ಯ ಪರಂಪರೆಯಲ್ಲಿ ಬಂದ ಮತ್ತೊಬ್ಬ ಹಿರಿಯ ಶಿಷ್ಯರು ಎಂ. ಚೆಲುವರಾಯಸ್ವಾಮಿ. ಇವರು ಒಳ್ಳೆಯ ವೈಣಿಕರೂ, ಸಂಗೀತಶಾಸ್ತ್ರಜ್ಞರೂ, ವೇದಾಂತ ವಿಷಯಗಳಲ್ಲಿ ಪರಿಣತರೂ ಆಗಿದ್ದರು. ಒಳ್ಳೆಯ ಭಾಷಣಕಾರರಾಗಿದ್ದ ಇವರು ಒಬ್ಬ ಶ್ರೇಷ್ಠ ಸಂಗೀತಶಾಸ್ತ್ರಜ್ಞರೆಂದೇ ಹೆಚ್ಚು ಪರಿಚಿತರು. ನಮ್ಮ ಗುರುಗಳಲ್ಲಿ ಕಲಿತ ಮತ್ತೊಬ್ಬ ವೈಣಿಕರು ಎಂ.ಜೆ. ಶ್ರೀನಿವಾಸ ಅಯ್ಯಂಗಾರ್. ಇವರು ಸಹ ನನ್ನ ಆತ್ಮೀಯ ಮಿತ್ರರಲ್ಲೊಬ್ಬರು. ನಮ್ಮ ನಾಡಿನ ಒಬ್ಬ ಹಿರಿಯ ವೈಣಿಕರಾಗಿ ಪ್ರಸಿದ್ಧರು.

ರಾಜಪ್ರಿಯರು

ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಡೆಯ ಒಂದು ವರ್ಷವನ್ನು ಮಾತ್ರ ನಾನು ಕಂಡೆ. ಗುರುಗಳ ಜತೆಯಲ್ಲಿ ಆಗಾಗ ಅರಮನೆಗೆ ಹೋಗುತ್ತಿದ್ದಾಗ ಮಹಾರಾಜರನ್ನು ಅತ್ಯಂತ ಸಮೀಪದಿಂದ ನೋಡುವ ಅವಕಾಶ ನನಗೆ ಲಭಿಸಿತ್ತು. ಗುರುಗಳು ಅರಮನೆಯ ಸಂಗೀತದ ಏರ್ಪಾಡುಗಳ ಮೇಲ್ವಿಚಾರಕರೂ, ಸಲಹೆಗಾರರೂ ಆಗಿದ್ದರು. ವೀಣಾ ಬಕ್ಷಿಗಳಾಗಿದ್ದ ವೀಣಾ ಶೇಷಣ್ಣ ಮತ್ತು ವೀಣಾ ಸುಬ್ಬಣ್ಣನವರ ಅನಂತರ ಗುರುಗಳೇ ಆ ಪದವಿಗೆ ನಿಯುಕ್ತರಾಗಿದ್ದರು. ವೀಣಾ ಶೇಷಣ್ಣನವರ ವೀಣಾ ಗಾನಸುಧೆಯನ್ನು ಯಥೇಚ್ಛವಾಗಿ ಸವಿದಿದ್ದ ನಾಲ್ವಡಿ ಕೃಷ್ಣರಾಜ ಪ್ರಭುಗಳಿಗೆ ಅವರ ಅನಂತರ ನಮ್ಮ ಗುರುಗಳ ವೀಣಾವಾದನ ತುಂಬ ಮೆಚ್ಚುಗೆಯಾಗಿತ್ತು. ಶೇಷಣ್ಣನವರ ಪಟ್ಟಶಿಷ್ಯರೇ ಆಗಿದ್ದ ಗುರುಗಳು ಅವರ ಶೈಲಿಯನ್ನು ಬಹಳ ಚೆನ್ನಾಗಿ ಮೈಗೂಡಿಸಿಕೊಂಡಿದ್ದರು. ಮಹಾರಾಜರು ತಮಗೆ ಬೇಕೆನಿಸಿದಾಗಲೆಲ್ಲ ಗುರುಗಳ ವೀಣಾವಾದನವನ್ನು ಕೇಳಿ ಸಂತೋಷಪಡುತ್ತಿದ್ದರು. ಅರಮನೆಗೆ ಬರುತ್ತಿದ್ದ ಗೌರವಾನ್ವಿತ ರಾಜ ಅತಿಥಿಗಳಿಗೂ ಅವರ ವೀಣಾವಾದನವನ್ನು ಕೇಳಿಸುತ್ತಿದ್ದರು. ಇಷ್ಟೇ ಅಲ್ಲದೆ, ತಾವು ಪ್ರವಾಸ ಹೋಗುವ ಕಡೆಗಳಿಗೂ ಗುರುಗಳನ್ನೂ ರಾಜಪರಿವಾರದೊಂದಿಗೆ ಕರೆದುಕೊಂಡು ಹೋಗುತ್ತಿದ್ದರು. ಹೀಗೆ ಮಹಾರಾಜರ ವಿಶೇಷ ಅಭಿಮಾನಕ್ಕೆ ಪಾತ್ರರಾಗಿದ್ದ ಗುರುಗಳು ಅಷ್ಟೇ ರಾಜಭಕ್ತಿಯಿಂದ ಅರಮನೆಯ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಮಹಾರಾಜರು ಗುರುಗಳ ವೀಣಾವಾದನದಿಂದ, ಅವರ ಸಮರ್ಥ ಕಾರ್ಯನಿರ್ವಹಣೆಯಿಂದ ಅತ್ಯಂತ ಪ್ರಸನ್ನರಾಗಿ ಅವರಿಗೆ ಆಗಾಗ ವಿಶೇಷ ಸಂಭಾವನೆ, ಬಿರುದು, ಖಿಲ್ಲತ್ತುಗಳನ್ನು ನೀಡಿ ಗೌರವಿಸುತ್ತಿದ್ದರು.

ಸಾವುಗಳು

ಹೀಗೆ, ಮೈಸೂರಿನಲ್ಲಿ ನಮ್ಮ ಸಾಂಸಾರಿಕ ಜೀವನ ಒಂದು ರೀತಿಯಲ್ಲಿ ಸಂತೋಷ ಸಂಭ್ರಮಗಳಿಂದಲೇ ನಡೆಯುತ್ತಿತ್ತು. ಎತ್ತೆತ್ತಲೋ ತೊಯ್ದಾಡುತ್ತಿದ್ದ ನನ್ನ ಭವಿಷ್ಯ ಈಗ ಒಂದು ಭದ್ರನೆಲೆಯನ್ನು ಕಂಡುಕೊಂಡುದು ಎಲ್ಲರಿಗೂ ಸ್ವಲ್ಪ ನೆಮ್ಮದಿಯನ್ನು ತಂದಿತ್ತು. ನನ್ನ ತಮ್ಮನ ವಿದ್ಯಾಭ್ಯಾಸ ಮುಂದುವರೆಯುತ್ತಿತ್ತು. ನನ್ನ ವಿವಾಹವೂ ಆಗಿತ್ತು. ನನ್ನ ಅಕ್ಕ , ಭಾವ, ಮಕ್ಕಳು ಹೆಚ್ಚು ಕಡಮೆ ನಮ್ಮ ಜತೆಯಲ್ಲೇ ಇರುತ್ತಿದ್ದರು. ನಾನು ವೀಣೆ ಅಭ್ಯಾಸ ಮಾಡುವುದು, ಗುರುಗಳ ಮನೆಗೆ ಹೋಗುವುದು, ಸಾಯಂಕಾಲ ಸ್ವಲ್ಪ ವ್ಯಾಯಾಮ ಮಾಡುವುದು, ಮನೆ–ಪಾಠಗಳಿಗೆ ತಪ್ಪದೇ ಹೋಗುವುದು, ಇದೆಲ್ಲದರ ಮಧ್ಯೆ ಹಿಂದಿ ಕಲಿಯುವುದು ಹೀಗೆ ನಾನಾ ವಿಧವಾದ ಪ್ರವೃತ್ತಿಗಳಲ್ಲಿ ನಿರತನಾಗಿದ್ದೆ. ನನಗೆ ಇವೆಲ್ಲವೂ ಪ್ರಿಯವೂ, ಹರ್ಷದಾಯಕವೂ ಆಗಿದ್ದುವು.

೧೯೪೦ರ ಮಧ್ಯಭಾಗದಲ್ಲಿ ಸಂಭವಿಸಿದ ಎರಡು ಅನಿರೀಕ್ಷಿತ ಸಾವುಗಳು ನನ್ನ ಮನಸ್ಸಿಗೆ ವಿಶೇಷ ಆಘಾತವನ್ನುಂಟುಮಾಡಿದವು. ನನ್ನ ಭವಿಷ್ಯ ಜೀವನವನ್ನು ನೋಡಿ ಸಂತೋಷ ಪಡಬೇಕಾಗಿದ್ದ ನನ್ನ ಅತ್ತೆ ಮೂವತ್ತೈದರ ಹರೆಯದಲ್ಲೇ ರುದ್ರಪಟ್ಟಣದಲ್ಲಿ ಟೈಫಾಯಿಡ್ ಜ್ವರದಲ್ಲಿ ನರಳಿ ಶ್ರಾವಣ ಶುದ್ಧ ಪಾಡ್ಯಮಿಯಂದು ಕಾಲವಾದರು. ಇತ್ತ ಅರಮನೆಯಲ್ಲಿ ಅದರ ಹಿಂದಿನ ದಿನವೇ ಆಷಾಢ ಬಹುಳ ಅಮಾವಾಸ್ಯೆಯಂದು ನಾಲ್ವಡಿ ಕೃಷ್ಣರಾಜ ಒಡೆಯರು ನಿಧನರಾದರು. ನನ್ನ ಅತ್ತೆಯವರ ನಿಧನದಿಂದ ನಮ್ಮ ಸಂಸಾರದಲ್ಲಿ ದುಃಖದ ಕಾರ್ಮೋಡ ಕವಿದಿದ್ದರೆ, ನಾಲ್ವಡಿ ಕೃಷ್ಣರಾಜಪ್ರಭುಗಳ ನಿಧನದಿಂದ ಇಡೀ ರಾಜ್ಯವೇ ದುಃಖ ಸಾಗರದಲ್ಲಿ ಮುಳುಗಿತ್ತು. ಎಂತಹ ಘಟನಾವಳಿಗಳು ನಡೆದು ಹೋದರೂ ಪ್ರಪಂಚ ಮುಂದುವರಿಯ ಬೇಕಲ್ಲವೇ? ರಾಜನ ಸ್ಥಾನಕ್ಕೇನೋ ಉತ್ತರಾಧಿಕಾರಿಯಾಗಿ ಶ್ರೀ ಜಯಚಾಮರಾಜೇಂದ್ರ ಒಡೆಯರು ಸಿಂಹಾಸನಾರೋಹಣ ಮಾಡಿದರು. ಆದರೆ ನನ್ನ ಪ್ರೀತಿಯ ಅತ್ತೆಯ ಸ್ಥಾನ ಮಾತ್ರ ಖಾಲಿಯಾಗಿಯೇ ಉಳಿಯಿತು. ಇನ್ನೂ ಚಿಕ್ಕ ವಯಸ್ಸಿನವರಾಗಿದ್ದ ನನ್ನ ಮಾವನವರಿಗೆ ನನ್ನ ತಂದೆಯವರೇ ನಿಂತು ಮರುವಿವಾಹ ಮಾಡಿಸಿದರು.

ಅತ್ತೆಯ ಸ್ಥಾನವೇನೋ ತುಂಬಿತು. ಆದರೆ, ನಿಜವಾದ ಅತ್ತೆಯವರು ಮಾತ್ರ ನೆನಪಾಗಿಯೇ ಉಳಿದರು. ಇದೆಲ್ಲದರ ಪರಿಣಾಮವಾಗಿ ಇನ್ನೂ ಕನ್ಯೆಯಾಗಿದ್ದ ನನ್ನ ಪತ್ನಿ ಮತ್ತು ಅವಳ ಇಬ್ಬರು ಪುಟ್ಟತಂಗಿಯರು ನಮ್ಮ ಮನೆಯಲ್ಲಿ ಆಶ್ರಯ ಪಡೆಯಬೇಕಾಯಿತು. ಅಲ್ಲಿಗೆ ನನ್ನ ಪತ್ನಿಗೆ ತನ್ನ ತವರಿನ ಸುಖದ ಕನಸು ಮುಕ್ತಾಯವಾಯಿತು. ಗಂಡು ಸಂತಾನವಿಲ್ಲದ ನನ್ನ ಮಾವನವರು ತಮ್ಮ ಮರುವೈವಾಹಿಕ ಜೀವನದಲ್ಲಿ ಮೂವರು ಪುತ್ರರು, ಮೂವರು ಪುತ್ರಿಯರನ್ನು ಪಡೆದು ಅವರೆಲ್ಲರೂ ಈಗ ತಮ್ಮ ಮಕ್ಕಳ ವಿವಾಹಗಳನ್ನು ನಡೆಸಿ ಮೊಮ್ಮಕ್ಕಳನ್ನೂ ಕಾಣುತ್ತಿದ್ದಾರೆ.

ಆಸ್ಥಾನ ವಿದ್ವಾಂಸ

ಅರಮನೆಯ ನನ್ನ ಬಾಂಧ್ಯವ್ಯ ನಾಲ್ವಡಿ ಕೃಷ್ಣರಾಜ ಪ್ರಭುಗಳ ಕಾಲದಲ್ಲಿ ಕೇವಲ ಪ್ರಾಸಂಗಿಕವಾಗಿತ್ತು. ಆಸ್ಥಾನ ವಿದ್ವಾಂಸನಾಗಿ ನೇರವಾಗಿ ನನಗೆ ಅರಮನೆಗೆ ಪ್ರವೇಶ ದೊರಕಿದ್ದು ೧೯೪೫ರ ದಸರೆಯಲ್ಲಿ. ದೊರೆ ಶ್ರೀ ಜಯಚಾಮರಾಜೇಂದ್ರ ಒಡೆಯರ ಆಳ್ವಿಕೆಯಲ್ಲಿ ಪ್ರಾರಂಭದ ಕೆಲವು ವರ್ಷಗಳು ಆಸ್ಥಾನ ವಿದ್ವಾಂಸರಿಗೆ ಸುವರ್ಣವೃಷ್ಟಿಯ ಕಾಲವೇ ಆಗಿತ್ತು. ತಮ್ಮ ದೊಡ್ಡಪ್ಪನವರ ಮೇಲ್ಪಂಕ್ತಿಯನ್ನೇ ಅನುಸರಿಸಿದ ಜಯಚಾಮರಾಜೇಂದ್ರ ಒಡೆಯರು ಸಂಗೀತ ವಿದ್ವಾಂಸರಿಗೆ ಕೊಡುತ್ತಿದ್ದ ಪ್ರೋತ್ಸಾಹದಲ್ಲಿ ಅವರಿಗಿಂತಲೂ ಒಂದು ಕೈ ಮೇಲು ಎನ್ನುವಂತೆ ಧಾರಾಳವಾಗಿ ಸಂಭಾವನೆಗಳನ್ನು ನೀಡುತ್ತಿದ್ದರು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಆದ ರಾಜಕೀಯ ಬದಲಾವಣೆಗಳಿಗೂ ಹೊಂದಿಕೊಂಡು ಅವರು ದಕ್ಷ ಆಡಳಿತಗಾರರಾಗಿ, ಮಹಾ ಕಲಾಪೋಷಕರಾಗಿ, ಶ್ರೇಷ್ಠ ವಾಗ್ಗೇಯಕಾರರಾಗಿ ಮೈಸೂರಿನ ಸಾಂಸ್ಕೃತಿಕ ದಿಗಂತದಲ್ಲಿ ಧ್ರುವತಾರೆಯಾಗಿದ್ದಾರೆ.

ತೋಟಕ್ಕೆ ಬದಲು ಎಮ್ಮೆಗಳು

ಈ ಮಧ್ಯೆ ನನ್ನ ತಂದೆಯವರಿಗೆ ಎಸಳೂರುಪೇಟೆಯಿಂದ ಮೂಗೂರಿಗೆ ವರ್ಗವಾಗಿತ್ತು. ಮೈಸೂರಿಗೆ ಹತ್ತಿರವಾಗಿದ್ದುದರಿಂದ ಮೂಗೂರಿನಿಂದ ವಾರಕ್ಕೊಮ್ಮೆ ಬಂದು ಹೋಗುತ್ತಿದ್ದರು. ಎಸಳೂರು ಪೇಟೆಯ ತೋಟದ ಮೇಲುಸ್ತುವಾರಿ ಜವಾಬ್ದಾರಿಯನ್ನು ಒಬ್ಬ ಮೇಸ್ತ್ರಿಗೆ ವಹಿಸಿ ಬಂದಿದ್ದರು. ಮುಂದಿನ ಒಂದೆರಡು ವರ್ಷಗಳಲ್ಲಿ ತೋಟ ಬರಡಾಗಿತ್ತು. ತಂದೆಯವರು ತೋಟವನ್ನು ಸುಸ್ಥಿತಿಯಲ್ಲಿದ್ದಾಗಲೇ ಮಾರಾಟ ಮಾಡಿದ್ದರೆ ಒಳ್ಳೆಯ ಬೆಲೆಯಾದರೂ ಬರುತ್ತಿತ್ತು. ಆದರೆ, ಈ ಆಸ್ತಿಯನ್ನಾದರೂ ಮಕ್ಕಳಿಗೆ ಉಳಿಸಿಕೊಡಬೇಕೆಂದು ಅವರು ಪ್ರಯತ್ನಿಸಿದರು. ಮೇಸ್ತ್ರಿ ಅವರಿಗೆ ಸಂಪೂರ್ಣವಾಗಿ ಕೈಕೊಟ್ಟಿದ್ದ. ತಂದೆಯವರ ಅದೃಷ್ಟ ಇಲ್ಲಿಯೂ ಅವರಿಗೆ ಒಲಿಯಲಿಲ್ಲ. ಕಡೆಗೆ ಹತಾಶರಾಗಿ ಕೇವಲ ಮೂರು ಸಾವಿರ ರೂಪಾಯಿ ಬೆಲೆಗೆ ತೋಟವನ್ನು ಮಾರಿದರು.

ಆಗಿನ ಕಾಲದ ಮೂರು ಸಾವಿರ ಕಡಮೆ ಹಣವೇನಲ್ಲ. ಮೈಸೂರು ನಗರದಲ್ಲಿ ಆಗಿನ ಬೆಲೆಗೆ ಎರಡು ಒಳ್ಳೆಯ ಮನೆಗಳನ್ನು ಕೊಳ್ಳಬಹುದಾಗಿತ್ತು. ಆದರೆ, ಅವರು ಮತ್ತೆ ತಿಳಿದೂ ತಿಳಿದೂ ತಮ್ಮ ಅದೃಷ್ಟ ಪರೀಕ್ಷೆಗೆ ಕೈ ಹಾಕಿದರು. ಎಮ್ಮೆಗಳನ್ನು ಕಟ್ಟಿ ಹಾಲಿನ ವ್ಯಾಪಾರ ಮಾಡಿದರೆ ಒಳ್ಳೆಯ ಲಾಭ ಬರುವುದಾಗಿ ಯಾರೋ ಅವರ ತಲೆ ಕೆಡಿಸಿದರು. ಎಲ್ಲರನ್ನೂ ನಂಬುವ ಸ್ವಭಾವದ ತಂದೆಯವರು ಅದನ್ನು ನಂಬಿ ಮೋಸಹೋದರು. ಇದ್ದ ಹಣವನ್ನೆಲ್ಲಾ ಖರ್ಚು ಮಾಡಿ ಹತ್ತಿರದ ಹಳ್ಳಿಯಲ್ಲಿ ಏಳು-ಎಂಟು ಎಮ್ಮೆಗಳನ್ನು ಕೊಂಡರು. ಅಲ್ಲಿಯೇ ಒಬ್ಬ ರೈತನಿಗೆ ಎಲ್ಲವನ್ನೂ ವಹಿಸಿದ್ದರು. ಆದರೆ ಎಮ್ಮೆಗಳೆಲ್ಲಾ ಒಂದೊಂದಾಗಿ ಕಾರಲುರೋಗಕ್ಕೆ ತುತ್ತಾದವು. ಒಂದೇ ವರ್ಷದಲ್ಲಿ ಎಲ್ಲ ಎಮ್ಮೆಗಳೂ ಸತ್ತವು. ಮೂರು ಸಾವಿರ ರೂಪಾಯಿ ಹಣವನ್ನು ನೀರಿನಲ್ಲಿ ಹೋಮ ಮಾಡಿದಂತಾಗಿತ್ತು. ಈ ರೀತಿ ತಮ್ಮ ಕಟ್ಟಕಡೆಯ ಈ ಪ್ರಯತ್ನವೂ ವಿಫಲವಾಗಿ ತಂದೆಯವರ ಕೈ ಸಂಪೂರ್ಣ ಬರಿದಾಗಿತ್ತು. ಅನ್ಯಮಾರ್ಗವಿಲ್ಲದೇ ಕೈಕಟ್ಟಿ ಕುಳಿತರು. ಒಂದು ದಿನ ಅವರು ಬಹಳ ಖಿನ್ನತೆಯಿಂದ ವಿಚಲಿತರಾಗಿ ಮಕ್ಕಳಿಗೆ ತಾವು ಏನೂ ಇಡಲಿಲ್ಲವಲ್ಲಾ ಎಂದು ಬಹಳ ಪಶ್ಚಾತ್ತಾಪ ಪಟ್ಟರು. ಆದರೆ, ನನ್ನ ತಾಯಿಯವರು ಹೇಳುತ್ತಿದ್ದ ಮಾತನ್ನು ಯಾವಾಗಲೂ ಅವರು ಕೇಳುತ್ತಲೇ ಇರಲಿಲ್ಲ. ಹೀಗಾಗಿ, ತಾಯಿಯವರಿಗೆ ಈ ವಿದ್ಯಮಾನಗಳಿಂದ ಬಹಳ ನಿರಾಸೆಯೂ, ಬೇಸರವೂ ಆಗಿತ್ತು. ನಾನು ಮಾತ್ರ ಇದಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳದೇ ನನ್ನ ಕರ್ತವ್ಯದಲ್ಲಿ ನಿರತನಾಗಿದ್ದೆ. ಸ್ವಪ್ರಯತ್ನದಿಂದ ಮುಂದೆ ಬರಬೇಕೆಂಬ ಛಲವೂ ನನ್ನಲ್ಲಿತ್ತು.

ಇತ್ತ ನನ್ನ ತಮ್ಮ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾಗಿ ಇಂಟರ್‌ಮೀಡಿಯೆಟ್ ಕಾಲೇಜಿಗೆ ಸೇರಿದ. ಅವನು ವಿದ್ಯಾಭ್ಯಾಸದಲ್ಲಿ ಬಹಳ ಚುರುಕಾಗಿದ್ದ. ಎರಡು ವರ್ಷದ ಇಂಟರ್‌ಮೀಡಿಯೆಟ್ ಮುಗಿಸಿ, ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್‌ಸಿ., ಸೇರಿದ. ಅದಾದನಂತರ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿಗೆ ಸೇರಿ ೧೯೪೯ರಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವೀಧರನಾದ. ನಮಗಿದ್ದ ಆರ್ಥಿಕ ಮುಗ್ಗಟ್ಟು, ಸಾಂಸಾರಿಕ ಸಮಸ್ಯೆಗಳು ಇವುಗಳ ಮಧ್ಯೆ ನನ್ನ ತಮ್ಮನ ವಿದ್ಯಾಭ್ಯಾಸವನ್ನು ಆರು ವರ್ಷಗಳ ಕಾಲ ಬೆಂಗಳೂರಿನಲ್ಲಿ ನಿರ್ವಹಿಸುವ ಹೊತ್ತಿಗೆ ನಮಗೆ ಸಾಕುಸಾಕಾಗಿ ಹೋಗಿತ್ತು. ಈ ಮಧ್ಯೆ ನನ್ನ ತಮ್ಮನ ಮದುವೆಯೂ ನಡೆದು ಹೋಗಿತ್ತು. ಆದರೆ, ಅವನು ಸಂಸಾರ ಹೂಡಿದುದು ತನ್ನ ವಿದ್ಯಾಭ್ಯಾಸ ಮುಗಿದ ಮೇಲೆಯೇ. ನಾನು ಅಷ್ಟು ಹೊತ್ತಿಗೆ ವೀಣೆ ಪಾಠಗಳಲ್ಲಿ ತಕ್ಕಮಟ್ಟಿಗೆ ಸಂಪಾದಿಸುತ್ತಿದ್ದುದರಿಂದ

ಹೇಗೋ ಅವನ ವಿದ್ಯಾಭ್ಯಾಸ ನಿರ್ವಿಘ್ನವಾಗಿ ನಡೆಯಿತು. ನನ್ನ ತಾಯಿಯವರ ಮನೋಭೀಷ್ಟ ನೆರವೇರಿತ್ತು. ನನಗೂ ಒಂದು ಪವಿತ್ರ ಕರ್ತವ್ಯವನ್ನು ನಿರ್ವಹಿಸಿದ ತೃಪ್ತಿ ಲಭಿಸಿತ್ತು.

ಆಪ್ತಸಹಾಯಕ

ವೀಣಾ ಶಿಕ್ಷಣವು ಗುರುಗಳಲ್ಲಿ ಮುಂದುವರೆಯುತ್ತಿದ್ದಂತೆಯೇ ೧೯೪೫ರಲ್ಲಿ ಗುರುಗಳ ದಯೆಯಿಂದ ಆಸ್ಥಾನ ವಿದ್ವಾಂಸನಾದೆ. ಜತೆಗೆ, ಗುರುಗಳು ನನ್ನನ್ನು ತಮ್ಮ ಕಛೇರಿಗಳಲ್ಲಿ ಸಹವಾದನಕ್ಕಾಗಿ ವೇದಿಕೆಯ ಮೇಲೆ ತಂದು ನನ್ನ ಮುಂದಿನ ಕಛೇರಿ ವೃತ್ತಿಯ ಅಂಕುರಾರ್ಪಣವನ್ನೂ ಆಗಲೇ ನೆರವೇರಿಸಿದ್ದರು. ಮೈಸೂರು ಬಾನಿಯ ವೀಣಾ ಪರಂಪರೆಗೆ ಸೇರುವ ಭಾಗ್ಯಶಾಲಿಯಾದ ನನ್ನ ಮೇಲೆ ಗುರುಗಳು ತುಂಬು ಹೃದಯದಿಂದ ಆಶೀರ್ವಾದ ಅನುಗ್ರಹಗಳನ್ನು ಕರುಣಿಸಿದರು. ತಮ್ಮ ಕಛೇರಿ ಪ್ರವಾಸಗಳಿಗೆಲ್ಲಾ ೧೯೪೨ ರಿಂದಲೇ ನನ್ನನ್ನೂ ಜತೆಯಲ್ಲಿ ಕರೆದುಕೊಂಡು ಹೋಗಲು ಪ್ರಾರಂಭಿಸಿದ್ದರು. ಸ್ವಲ್ಪ ಚೂಟಿಯಾಗಿ ಎಲ್ಲದರಲ್ಲೂ ಆಸಕ್ತಿವಹಿಸಿ ಉತ್ಸಾಹದಿಂದ ಎಲ್ಲ ವ್ಯವಹಾರಗಳನ್ನೂ ಸಮರ್ಥವಾಗಿ ನಿರ್ವಹಿಸುತ್ತಿದ್ದ ನನ್ನನ್ನು ಕಂಡರೆ ಅವರಿಗೆ ವಿಶೇಷ ಪ್ರೀತಿ, ಅಭಿಮಾನ. ಹೀಗಾಗಿ ಉತ್ತರ, ದಕ್ಷಿಣ ಭಾರತದ ಏಳೆಂಟು ಪ್ರವಾಸಗಳಲ್ಲಿ ಅವರ ಆಪ್ತಕಾರ್ಯದರ್ಶಿಯಂತೆ ಪ್ರವಾಸಗಳನ್ನು ವ್ಯವಸ್ಥೆ ಮಾಡಿ, ಶಿಷ್ಯನಾಗಿ ಗುರುಗಳ ಕಛೇರಿಗಳಲ್ಲಿ ಸಹವಾದನ ಮಾಡಿ, ಯೋಗಕ್ಷೇಮವನ್ನು ನೋಡಿಕೊಳ್ಳುವ ಒಬ್ಬ ಆಪ್ತಸಹಾಯಕನಾಗಿ ಸೇವೆ ಮಾಡಿ ಅವರ ಪ್ರೀತಿ ಅಭಿಮಾನಗಳಿಗೆ ಪಾತ್ರನಾದೆ. ಹೀಗೆ, ಗುರುಸೇವೆ ಮಾಡಿದ ತೃಪ್ತಿ ನನಗೆ ಲಭಿಸಿತು. ಎಲ್ಲೆಡೆ ರಾಜೋಪಚಾರದ ಗೌರವಕ್ಕೆ ಪಾತ್ರರಾಗಿದ್ದ ಗುರುಗಳು ಸ್ವತಃ ತಮ್ಮ ಹೃದಯಶ್ರೀಮಂತಿಕೆ ಹಾಗೂ ರಾಜಗಾಂಭೀರ್ಯದಿಂದ ಕೂಡಿದ್ದ ಆಕರ್ಷಕ ವ್ಯಕ್ತಿತ್ವಗಳಿಂದ ಸಂಗೀತ ಪ್ರಪಂಚದಲ್ಲಿ ಒಬ್ಬ ರಾಜನಂತೆಯೇ ಬದುಕಿ ಬಾಳಿದರು.

ತಿರುಚಿನಾಪಳ್ಳಿಗೆ

ನನ್ನ ಗುರುಗಳು ೧೯೪೦ರ ದಶಕದಲ್ಲಿ ಆಗಿನ ಮನರಂಜನೆಯ ಏಕೈಕ ಮಾಧ್ಯಮವಾಗಿದ್ದ ಬಾನುಲಿಯ ಪ್ರಥಮ ದರ್ಜೆ ಕಲಾವಿದರಾಗಿದ್ದರು. ಮದರಾಸ್, ತಿರುಚಿನಾಪಳ್ಳಿ ರೇಡಿಯೋ ಕೇಂದ್ರಗಳಿಂದ ಅಖಿಲ ಭಾರತ ಕಾರ್ಯಕ್ರಮಗಳ ಸರಣಿಯಲ್ಲಿ ರಾತ್ರಿ ೭.೩೦ ರಿಂದ ೮ರವರೆಗೆ ಅವರ ವೀಣಾವಾದನ ಬಿತ್ತರಿಸಲ್ಪಡುತ್ತಿತ್ತು.

ಇಂತಹ ಒಂದು ಕಾರ್ಯಕ್ರಮಕ್ಕೆ ಗುರುಗಳು ತಿರುಚಿನಾಪಳ್ಳಿಗೆ ಜತೆಯಲ್ಲಿ ನನ್ನನ್ನು ಕರೆದುಕೊಂಡು ಹೊರಟಿದ್ದರು. ಆಗ ನೇರವಾದ ರೈಲು ಸಂಚಾರವಿಲ್ಲದೇ, ಬೆಂಗಳೂರು, ಜೋಲಾರಪೇಟೆ ಹಾಗೂ ಈರೋಡುಗಳಲ್ಲಿ ರೈಲು ಬದಲಿಸಿ ತಿರುಚಿನಾಪಳ್ಳಿ ತಲುಪಬೇಕಾಗಿತ್ತು. ನಾವು ಕಛೇರಿಯ ಹಿಂದಿನ ದಿನವೇ ಮೈಸೂರಿನಿಂದ ಹೊರಟು ಬೆಂಗಳೂರಿನಿಂದ ರಾತ್ರಿ ಮದರಾಸ್ ರೈಲಿನಲ್ಲಿ ಜೋಲಾರ್‌ಪೇಟೆ ತಲುಪಿ ಅಲ್ಲಿಂದ ಮದರಾಸ್-ಮೆಟ್ಟುಪಾಳಯಂ ರೈಲಿನಲ್ಲಿ ಪ್ರಯಾಣವನ್ನು ಮುಂದುವರೆಸಿದೆವು. ಬೆಳಗಾಗುವ ವೇಳೆಗೆ ರೈಲು ಒಂದು ಕಡೆ ತಡೆ ಹಿಡಿಯಲ್ಪಟ್ಟಿತು. ಕೆಲವು ಗಂಟೆಗಳು ಕಳೆದವು. ಒಂದು ಗೂಡ್ಸ್ ರೈಲು ಹಳಿ ತಪ್ಪಿಬಿದ್ದಿತ್ತು. ಇದರ ದುರಸ್ತಿ ಕೆಲಸ ಸದ್ಯಕ್ಕೆ ಮುಗಿಯುವಂತಿರಲಿಲ್ಲ. ರೈಲ್ವೇ ಇಲಾಖೆಯವರು ಜಖಂ ಆದ ಜಾಗದಿಂದ ಸುಮಾರು ಅರ್ಧ, ಮುಕ್ಕಾಲು ಕಿಲೋಮೀಟರ್ ದೂರದಿಂದ ಆಚೆಗೆ ಒಂದು ವಿಶೇಷ ರೈಲನ್ನು ಓಡಿಸಲು ಏರ್ಪಾಡು ಮಾಡಿದರು. ಈ ರೈಲಿನಿಂದ ನಾವೆಲ್ಲ ಪ್ರಯಾಣಿಕರೂ ತಮ್ಮ ತಮ್ಮ ಸಾಮಾನುಗಳನ್ನು ಸಾಗಿಸಿಕೊಂಡು ಆ ರೈಲಿನಲ್ಲಿ ಕುಳಿತು ಪ್ರಯಾಣವನ್ನು ಮುಂದುವರೆಸಿದೆವು. ಈ ವೇಳೆಗೆ ಸುಮಾರು ನಾಲ್ಕೈದು ಘಂಟೆಗಳ ಕಾಲ ತಡವಾಗಿತ್ತು. ಹೀಗೆಯೇ ಪ್ರಯಾಣ ಮುಂದುವರೆಸಿದ್ದರೆ ನಾವು ತಿರುಚಿನಾಪಳ್ಳಿಗೆ ರೇಡಿಯೋ ಕಾರ್ಯಕ್ರಮದ ವೇಳೆಗೆ ತಲುಪುವ ಸಾಧ್ಯತೆ ಇರಲಿಲ್ಲ. ಗುರುಗಳು ಬಹಳ ನಿರಾಶರಾದರು. ರೇಡಿಯೋ ನಿಲಯಕ್ಕೆ ಒಂದು ಟೆಲಿಗ್ರಾಂ ಕೊಟ್ಟು ವಾಪಸ್ಸು ಮೈಸೂರಿಗೆ ಹಿಂದಿರುಗುವುದೆಂದು ತೀರ್ಮಾನಿಸಿದೆವು.

ಅಷ್ಟರಲ್ಲಿ ನನಗೆ ಒಂದು ಉಪಾಯ ಹೊಳೆಯಿತು. ನಾನು ಹೇಗೂ ಸೇಲಂನಲ್ಲಿ ನಾಲ್ಕೈದು ವರ್ಷಗಳು ಕಳೆದಿದ್ದೆ. ನಾವು ಸೇಲಂನಲ್ಲಿ ಇಳಿದು ಅಲ್ಲಿಂದ ತಿರುಚಿನಾಪಳ್ಳಿಗೆ ಬಸ್ಸಿನಲ್ಲಿ ಸ್ವಲ್ಪ ಕಷ್ಟಪಟ್ಟು ಪ್ರಯಾಣ ಮಾಡಿದರೆ ಕಾರ್ಯಕ್ರಮದ ಹೊತ್ತಿಗೆ ತಿರುಚಿ ತಲುಪುವ ಸಾಧ್ಯತೆ ಇತ್ತು. ನಮ್ಮ ಮುಂದೆ ಇದ್ದುದು ಇದೊಂದೇ ಮಾರ್ಗ. ಇದನ್ನು ಗುರುಗಳಿಗೆ ನಾನು ವಿವರಿಸಿದಾಗ , ಹತಾಶರಾಗಿದ್ದ ಅವರಿಗೆ ಒಂದು ಆಶಾಕಿರಣ ಕಂಡಂತಾಯಿತು. ಅನ್ಯಮಾರ್ಗವಿಲ್ಲದೇ ಎಲ್ಲವನ್ನೂ ನನ್ನ ತೀರ್ಮಾನಕ್ಕೆ ಬಿಟ್ಟುಬಿಟ್ಟರು.

ಸರಿ , ಸೇಲಂನಲ್ಲಿ ನಾವು ರೈಲಿನಿಂದ ಇಳಿದು ನೇರವಾಗಿ ಬಸ್ ನಿಲ್ದಾಣಕ್ಕೆ ಹೋದೆವು. ಅದೃಷ್ಟವಶಾತ್ ತಿರುಚಿಗೆ ಹೊರಟಿದ್ದ ಒಂದು ಬಸ್ಸು ಸಿದ್ಧವಾಗಿತ್ತು. ನಾನು ಗುರುಗಳಿಗೆ ಸ್ವಲ್ಪವೂ ತೊಂದರೆ ಯಾಗದಂತೆ ವೀಣೆಯನ್ನು ಇಟ್ಟುಕೊಂಡೆ. ಪ್ರಯಾಣವನ್ನು ಮುಂದುವರೆಸಿದೆವು. ಬಸ್ಸಿನ ಕಂಡಕ್ಟರ್ ತುಂಬಾ ಒಳ್ಳೆಯವನು. ಗುರುಗಳ ಬಗೆಗೆ ಅವನಿಗೆ ಎಲ್ಲವನ್ನೂ ವಿವರಿಸಿ ಹೇಳಿ ರೇಡಿಯೋ ಕಾರ್ಯಕ್ರಮಕ್ಕೆ ಸಕಾಲದಲ್ಲಿ ತಲುಪಿಸುವಂತೆ ಅವನಿಗೆ ಒತ್ತಿ ಹೇಳಿದ್ದೆ. ಡ್ರೈವರ್ ಸಹ ನನಗೆ ಭರವಸೆ ಕೊಟ್ಟು ಸಂಜೆ ಏಳು ಘಂಟೆಗೆಲ್ಲಾ ಸುಮಾರು ಅರ್ಧ ಮುಕ್ಕಾಲು ಘಂಟೆ ಮುಂಚಿತವಾಗಿ ತಿರುಚ್ಚಿ ತಲುಪಿಸಿದ. ಬಸ್‌ಸ್ಟಾಂಡಿನಿಂದ ರೇಡಿಯೋ ನಿಲಯಕ್ಕೆ ಟ್ಯಾಕ್ಸಿಯಲ್ಲಿ ಹೋಗಿ ಸೇರುವ ವೇಳೆಗೆ ಇನ್ನು ಕೇವಲ ಐದು ನಿಮಿಷ ಉಳಿದಿತ್ತು. ನಿಲಯದ ಅಧಿಕಾರಿಗಳು ಕಲಾವಿದರನ್ನು ಕಾಣದೆ ಚಡಪಡಿಸುತ್ತಿದ್ದರು. ಟ್ಯಾಕ್ಸಿಯಿಂದ ಇಳಿಯುತ್ತಿದ್ದಂತೆಯೇ ಸ್ಟುಡಿಯೋಗೆ ಧಾವಿಸಿದೆವು.

ಎರಡೇ ನಿಮಿಷದಲ್ಲಿ ಶ್ರುತಿ ಮಾಡಿಕೊಂಡು ಗುರುಗಳು ಕಾರ್ಯಕ್ರಮ ಪ್ರಾರಂಭಿಸಿಯೇ ಬಿಟ್ಟರು.

ಅಷ್ಟೆಲ್ಲಾ ಆಯಾಸ ಆತಂಕಗಳ ಮಧ್ಯೆಯೂ ಗುರುಗಳು ವಿಚಲಿತರಾಗದೇ ಧೈರ್ಯ ಸ್ಥೈರ್ಯಗಳಿಂದ ಬಹಳ ಯಶಸ್ವಿಯಾಗಿ ಕಾರ್ಯಕ್ರಮವನ್ನು ನಿರ್ವಹಿಸಿದರು. ಅವರ ಸಾಧನಾಬಲ ಅಂತಹುದು. ಅಂದಿನ ನಮ್ಮ ಪ್ರಯಾಣದ ಸಂಕಷ್ಟಗಳ ಬಳಿಕವೂ ಇಂತಹ ಶ್ರೇಷ್ಠಮಟ್ಟದ ಕಾರ್ಯಕ್ರಮವನ್ನು ನೀಡಿದ್ದಕ್ಕಾಗಿ ಎಲ್ಲರೂ ಗುರುಗಳನ್ನು ಮನಸಾರ ಅಭಿನಂದಿಸಿದರು. ಗುರುಗಳು ಸಮಾಧಾನದ ನಿಟ್ಟುಸಿರು ಬಿಟ್ಟರು. ಈ ಕಾರ್ಯಕ್ರಮದ ಯಶಸ್ಸಿಗೆ ನಾನೇ ಕಾರಣನೆಂದು ನನ್ನ ಮೈದಡವಿ ಆಶೀರ್ವದಿಸಿದರು. ದೈವಕೃಪೆಯಿಂದ ನನ್ನ ಸಮಯ ಸ್ಫೂರ್ತಿಯ ಸಲಹೆ, ಪ್ರಯತ್ನ ಇಷ್ಟು ಸುಸೂತ್ರವಾಗಿ ನಡೆಯಿತಲ್ಲ ಎಂದು ಹಿರಿಹಿರಿ ಹಿಗ್ಗಿದೆ.

ಅರ್ಧಕ್ಕೇ ಮುಗಿದ ಯಾನ

೧೯೪೪ ರಿಂದ ೧೯೪೮ರವರೆಗೆ ಗುರುಗಳ ಜತೆಯಲ್ಲಿ ನಾಲ್ಕು ಬಾರಿ ಉತ್ತರ ಭಾರತ ಪ್ರವಾಸ ಮಾಡುವ ಅವಕಾಶ ನನಗೆ ಲಭಿಸಿತು. ಮೊದಲನೆಯ ಪ್ರವಾಸದಲ್ಲಿ ಉತ್ತರ ಭಾರತದ ಒಂದು ಸಂಸ್ಥಾನದ ರಾಜವಿವಾಹದಲ್ಲಿ ಗುರುಗಳ ವೀಣಾ ಕಾರ್ಯಕ್ರಮ ಏರ್ಪಾಡಾಗಿತ್ತು. ಮೈಸೂರು ಅರಮನೆಯಿಂದ ಗುರುಗಳನ್ನು ಕಳುಹಿಸಿಕೊಡಲಾಗಿತ್ತು. ನಾವು ಪ್ರಯಾಣ ಹೊರಟಿದ್ದಾಯಿತು. ಆದರೆ, ನಾವು ಬೊಂಬಾಯಿ ತಲಪುತ್ತಿದ್ದಂತೆಯೇ ಅಲ್ಲಿಗೆ ಮೈಸೂರು ಅರಮನೆಯಿಂದ ಒಂದು ತಂತಿ ಸಂದೇಶ ಬಂದಿತ್ತು. ರಾಜವಿವಾಹ ಕಾರಣಾಂತರಗಳಿಂದ ರದ್ದಾಗಿರುವುದಾಗಿಯೂ, ನಾವುಗಳು ಮೈಸೂರಿಗೆ ಹಿಂದಿರುಗಬೇಕೆಂದೂ ಅದರಲ್ಲಿ ಸೂಚಿಸಲಾಗಿತ್ತು. ಗುರುಗಳಿಗೂ ನನಗೂ ಆದ ನಿರಾಸೆ ಅಷ್ಟಿಷ್ಟಲ್ಲ. ಆದರೆ, ವಿಧಿಯಿಲ್ಲದೇ ನಾವು ವಾಪಸ್ಸು ಹೊರಡ ಬೇಕಾಯಿತು.

ಮೈಸೂರಿಗೆ ಹಿಂದಿರುಗುವ ಮಾರ್ಗದಲ್ಲಿ ಮಂತ್ರಾಲಯದಲ್ಲಿ ಇಳಿದು ಶ್ರೀ ರಾಘವೇಂದ್ರಸ್ವಾಮಿಗಳ ಸೇವೆಯನ್ನು ಮಾಡುವ ಭಾಗ್ಯ ನಮಗೆ ಲಭಿಸಿತು. ಗುರುಗಳು ರಾಘವೇಂದ್ರಸ್ವಾಮಿಗಳ ಪರಮಭಕ್ತರು. ಶ್ರೀಮಠದಲ್ಲಿ ಸ್ವಾಮಿಗಳ ಸನ್ನಿಧಿಯಲ್ಲಿ ಗುರುಗಳು ಭಕ್ತಿಭಾವದಲ್ಲಿ ತಲ್ಲೀನರಾಗಿ ವೀಣಾವಾದನ ಮಾಡಿದರು. ನಾನೂ ಗುರುಗಳ ಹಿರಿಯ ಮಗ ಪ್ರಸನ್ನಶ್ರೀನಿವಾಸನೂ ಸಹವಾದನ ಮಾಡಿದೆವು. ಶ್ರೀಮಠದಿಂದ ಎಲ್ಲರಿಗೂ ಫಲಮಂತ್ರಾಕ್ಷತೆ , ಖಿಲ್ಲತ್ತು, ಸಂಭಾವನೆ ಅನುಗ್ರಹಿಸ ಲಾಯಿತು. ನಮಗೆಲ್ಲಾ ಒಂದು ರೀತಿಯ ಧನ್ಯತಾಭಾವ ಮೂಡಿತು. ಪ್ರವಾಸ ರದ್ದಾದುದರಿಂದ ನಮಗಾಗಿದ್ದ ಬೇಸರವೆಲ್ಲ ಕಳೆಯಿತು. ರಾಯರ ಅನುಗ್ರಹದಿಂದ ಎಲ್ಲರೂ ಹರ್ಷಚಿತ್ತರಾಗಿ ಮೈಸೂರಿಗೆ ಹಿಂದಿರುಗಿದೆವು.

ಎರಡನೆಯ ಪ್ರವಾಸ

ಉತ್ತರ ಭಾರತದ ನಮ್ಮ ಎರಡನೆಯ ಪ್ರವಾಸದ ಸಂದರ್ಭ ಬೊಂಬಾಯಿನಲ್ಲಿ ಏರ್ಪಡಿಸಲಾಗಿದ್ದ ವಿಕ್ರಮ ಶಕೆಯ ಎರಡು ಸಾವಿರ ವರ್ಷಗಳ ಒಂದು ಅದ್ದೂರಿ ಮಹೋತ್ಸವ. ಇದರ ಅಂಗವಾಗಿ ಒಂದು ರಾಷ್ಟ್ರಮಟ್ಟದ ಸಂಗೀತೋತ್ಸವವನ್ನು ಏರ್ಪಡಿಸಲಾಗಿತ್ತು. ಮೈಸೂರಿನಿಂದ ಗುರುಗಳನ್ನು ವೀಣಾವಾದನಕ್ಕಾಗಿ ಆಹ್ವಾನಿಸಿದ್ದರು. ಮದರಾಸಿನಿಂದ ಎಂ.ಎಸ್. ಸುಬ್ಬುಲಕ್ಷ್ಮಿ, ಪರೂರು ಸುಂದರಂ ಅಯ್ಯರ್ ಹಾಗೂ ಉತ್ತರ ಭಾರತದ ಘಟಾನುಘಟಿ ಹಿಂದೂಸ್ತಾನಿ ವಿದ್ವಾಂಸರನೇಕರು ಇದರಲ್ಲಿ ಭಾಗವಹಿಸಿದ್ದರು.

ಗುರುಗಳು ನನ್ನನ್ನು ಜತೆಯಲ್ಲಿ ಕರೆದುಕೊಂಡು ಹೊರಟರು. ನನಗೆ ಎಲ್ಲಿಲ್ಲದ ಸಂಭ್ರಮ. ಪ್ರಯಾಣಕ್ಕೆ ಬೇಕಾದ ಸಕಲಸಿದ್ಧತೆಗಳನ್ನೂ ಮಾಡತೊಡಗಿದೆ. ಗುರುಗಳ ವಿಧವಿಧವಾದ ಅರಮನೆಯ ಜರತಾರಿ ಉಡುಪುಗಳು ; ಕಟ್ಟಿ ಸಿದ್ಧಪಡಿಸಿದ್ದ ಮೈಸೂರು ಜರತಾರಿ ಪೇಟಗಳು, ಒಂದು ಗೇಣಗಲ ಕಲಾಪತ್ತು ಪಂಚೆಗಳು, ಜರತಾರಿ ವಲ್ಲಿಗಳು, ಗುರುಗಳಿಗೆ ಅರಮನೆ ಗುರುಮನೆಗಳಿಂದ ನೀಡಲಾಗಿದ್ದ ಬಂಗಾರದ ತೋಡಾಗಳು, ವಜ್ರದ ಉಂಗುರಗಳು, ಮೆಡಲುಗಳು, ಚಿನ್ನದ ಸರಗಳು ಇವುಗಳಲ್ಲದೇ ಬುಟ್ಟಿಗಟ್ಟಲೇ ಸೇಬು, ಕಿತ್ತಳೆ, ದ್ರಾಕ್ಷಿ, ಮೂಸುಂಬಿ, ಬೀಜರಹಿತ ದಾಳಿಂಬೆ ಹಣ್ಣುಗಳು ಇವೆಲ್ಲವನ್ನೂ ಪ್ರವಾಸಕಾಲಕ್ಕೆ ಸಿದ್ಧಗೊಳಿಸಲಾಗಿತ್ತು. ಪ್ರವಾಸಕ್ಕೆ ಒಂದು ವಾರ ಮುಂಚೆಯೇ ಈ ಸಿದ್ಧತೆಗಳ ಪ್ರಕ್ರಿಯೆ ಪ್ರಾರಂಭವಾಗಿತ್ತು. ಈ ವೇಳೆಗಾಗಲೇ ನನಗೆ ಇದರ ಬಗ್ಗೆ ಅನುಭವ ಆಗಿದ್ದುದರಿಂದ ಗುರುಗಳಿಗೆ ಎಲ್ಲ ರೀತಿಯಲ್ಲೂ ತೃಪ್ತಿಯಾಗುವಂತೆ ಎಲ್ಲವನ್ನೂ ನಿರ್ವಹಿಸುತ್ತಿದ್ದೆ.

ಹೀಗೆ, ಈ ರಾಜವೈಭವದೊಂದಿಗೆ ನಾವು ಪ್ರಯಾಣ ಹೊರಟು ಬೊಂಬಾಯಿ ತಲುಪಿದೆವು. ಆ ಮಹೋತ್ಸವದಲ್ಲಿ ಭಾಗವಹಿಸುವ ಕಲಾವಿದರಿಗಾಗಿಯೇ ಎರಡು ಮೂರು ಪ್ರತ್ಯೇಕ ಬಂಗಲೆಗಳನ್ನು ಒದಗಿಸಲಾಗಿತ್ತು. ಸುವ್ಯವಸ್ಥಿತವಾದ ರೀತಿಯಲ್ಲಿ ವಸತಿ, ಊಟ, ತಿಂಡಿ, ಆವಶ್ಯಕ ಸೇವಾ ಸಿಬ್ಬಂದಿ, ಆದರೋಪಚಾರ ಎಲ್ಲವೂ ಏರ್ಪಾಡಾಗಿತ್ತು. ಅದು ಒಂದು ರೀತಿಯ ಸಡಗರ, ಸಂಭ್ರಮ, ಸೌಹಾರ್ದಗಳ ಕಲಾಮೇಳ ವಾಗಿತ್ತು. ಎಲ್ಲಿಯೂ, ಯಾವ ಕೊರತೆಯೂ ಇಲ್ಲದಂತೆ ನೂರಾರು ಮಂದಿ ಕಲಾವಿದರನ್ನು ಒಂದೆಡೆ ಕಲೆಹಾಕಿ ಅವರನ್ನು ಅಷ್ಟು ದಿನಗಳ ಕಾಲ ಸುಧಾರಿಸಿ ನೋಡಿಕೊಳ್ಳುವುದು ಎಂತಹ ಕಷ್ಟದ ಕೆಲಸ ಎಂಬುದನ್ನು ಯಾರು ಬೇಕಾದರೂ ಊಹಿಸ ಬಹುದು.

ನಾವು ಇಳಿದುಕೊಂಡಿದ್ದ ಬಂಗಲೆಯಲ್ಲಿ ಪರೂರು ಸುಂದರಂ ಅಯ್ಯರ್ ತಮ್ಮ ಮಗ (ಆಗ ಇನ್ನೂ ಬಾಲಕ) ಈಗಿನ ಸುಪ್ರಸಿದ್ಧ ಪಿಟೀಲು ವಿದ್ವಾಂಸ ಎಂ.ಎಸ್. ಗೋಪಾಲಕೃಷ್ಣನ್ ಅವರೊಂದಿಗೆ ತಂಗಿದ್ದರು. ಅವರು ಗುರುಗಳನ್ನು ಬಹಳ ಪೂಜ್ಯಭಾವದಿಂದ

ಕಾಣುತ್ತಿದ್ದರು. ಪರೂರು ಸುಂದರಂ ಅಯ್ಯರ್ ಹಿಂದೂಸ್ತಾನಿ ಹಾಗೂ ಕರ್ಣಾಟಕ ಶೈಲಿಗಳೆರಡರಲ್ಲೂ ಪಿಟೀಲು ನುಡಿಸಬಲ್ಲವರಾಗಿದ್ದರು. ಹಿಂದೂಸ್ತಾನಿ ಸಂಗೀತ ದಿಗ್ಗಜರೆನಿಸಿದ್ದ ಫೈಯಾಜ್‌ಖಾನ್ ಗುರುಗಳಿಗೆ ಬಹಳ ಪರಿಚಿತರಾಗಿದ್ದರು. ಏಕೆಂದರೆ ಮೈಸೂರು ಆಸ್ಥಾನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರವರಿಂದ 'ಆಫ್ತಾಬ್-ಎ-ಮೌಸಿಕಿ' ಎಂದರೆ 'ಸಂಗೀತ ಭಾಸ್ಕರ' ಎಂಬ ಬಿರುದನ್ನು ಪಡೆದಿದ್ದ ಫೈಯಾಜ್‌ಖಾನ್ ಮಹಾರಾಜರಿಗೆ ಅತ್ಯಂತ ಆಪ್ತರಾಗಿದ್ದ ನಮ್ಮ ಗುರುಗಳನ್ನು ಗೌರವಿಸುತ್ತಿದ್ದರು. ಇಂತಹ ಇನ್ನೂ ಕೆಲವು ಪ್ರಸಿದ್ಧ ವಿದ್ವಾಂಸರೊಡನೆ ಪರಸ್ಪರ ಮಿಲನ ಹಾಗೂ ವಿಚಾರ ವಿನಿಮಯಗಳಿಂದ ಒಂದು ರೀತಿಯ ಮಧುರ, ಸ್ನೇಹಮಯ, ವಾತಾವರಣ ಉಂಟಾಗಿತ್ತು.ಇಡೀ ದಿನ ನಡೆಯುತ್ತಿದ್ದ ಈ ಸಂಗೀತಸುಧೆಯ ಮಹಾಪೂರದಲ್ಲಿ ರಸಿಕರಿಗೆ ಗಾಯನ, ವೀಣೆ, ಸಿತಾರ್, ಬಾನ್‌ಸುರಿ, ಶಹನಾಯಿ, ಸರೋಡ್, ವಯಲಿನ್, ಸಾರಂಗಿ, ಮೃದಂಗ, ತಬಲ, ಪಖಾವಜ್ ಹೀಗೆ ಸಂಗೀತ ಸರಸ್ವತಿಯ ವಿವಿಧ ಮುಖಗಳ ಸುಂದರ ದರ್ಶನವಾಗುತ್ತಿತ್ತು. ಆ ವಿಕ್ರಮಶಕೆಯ ಮಹೋತ್ಸವದ ವೈಭವವನ್ನು ಎಂದೂ ಮರೆಯುವಂತಿಲ್ಲ.

ಗುರುಗಳು ತಮ್ಮ ರಾಜಠೀವಿಯ ಉಡುಪುಗಳನ್ನು ಧರಿಸಿ ರಾಜಗಾಂಭೀರ್ಯದಿಂದ ವೇದಿಕೆಯ ಮೇಲೆ ಬಂದಾಗ ನೆರೆದಿದ್ದ ಪ್ರೇಕ್ಷಕರು ಅವರಿಗೆ ಪ್ರಚಂಡ ಕರತಾಡನದ ಸ್ವಾಗತ ನೀಡಿದರು. ಕಛೇರಿ ಪ್ರಾರಂಭವಾಯಿತು. ಕ್ಷಿಪ್ರದಲ್ಲೇ ವೀಣೆಯ ಮಧುರ ಇಂಚರ ಇಡೀ ಸಭಾಂಗಣದಲ್ಲಿ ಮೊಳಗಿತು. ಎಲ್ಲರೂ ತನ್ಮಯರಾದರು. ಕಲಾವಿದರು ಮತ್ತು ಶ್ರೋತೃಗಳು ನಾದಲೋಕದಲ್ಲಿ ಲೀನರಾದರು. ಒಂದೊಂದು ಸಂಗತಿಗೂ ಶಹಭಾಸ್‌ಗಿರಿ ಕೇಳಿಬರುತ್ತಿತ್ತು. ಕೃತಿ, ರಾಗ, ಸ್ವರಕಲ್ಪನೆ, ತಾನ, ತಿಲ್ಲಾನ, ಇವುಗಳ ಸುಮಧುರವಾದ ಝೇಂಕಾರದಿಂದ ಶ್ರೋತೃಗಳು ಮಹಾಮಂತ್ರಮುಗ್ಧರಾಗಿ ಬಿಟ್ಟರು. ಎಂ.ಎಸ್. ಸುಬ್ಬುಲಕ್ಷ್ಮಿಯವರು ತಮ್ಮ ಪತಿ ಸದಾಶಿವಂ ಅವರೊಂದಿಗೆ ಸಭೆಯಲ್ಲಿ ಉಪಸ್ಥಿತರಿದ್ದರು. ಕಛೇರಿ ಮುಗಿದ ಅನಂತರ ಇಬ್ಬರೂ ಗುರುಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದರು. ಎಂ.ಎಸ್. ಸುಬ್ಬುಲಕ್ಷ್ಮಿಯವರು ಗುರುಗಳ ಪಾದ ಮುಟ್ಟಿ ನಮಸ್ಕರಿಸಿ ಅವರ ಆಶೀರ್ವಾದ ಪಡೆದರು. ಇದಾದನಂತರ ನಡೆದ ಅವರ ಗಾಯನ ಕಛೇರಿ ಒಂದು ಸ್ವರ್ಗೀಯ, ಅವಿಸ್ಮರಣೀಯ ಅನುಭವ. ದೈವದತ್ತವಾದ ಆ ದಿವ್ಯಕಂಠದಿಂದ ಹೊರಹೊಮ್ಮಿದ ಆ ಗಾನಸುಧೆ ಎಲ್ಲರನ್ನೂ ಗಂಧರ್ವಲೋಕಕ್ಕೆ ಕೊಂಡೊಯ್ದಿತು. ಭಕ್ತಿಭಾವದಿಂದ ತನ್ನನ್ನೇ ತಾನು ಮರೆತು ಹಾಡಿದ ಸುಬ್ಬುಲಕ್ಷ್ಮಿಯವರು ಎಲ್ಲರನ್ನೂ ಆನಂದ ಸಾಗರದಲ್ಲಿ ತೇಲಾಡಿಸಿ ಎಲ್ಲರ ಮೆಚ್ಚುಗೆ ಮತ್ತು ಅಭಿನಂದನೆಗಳಿಗೆ ಪಾತ್ರರಾದರು.

ಜಾತಕಫಲ

ವಿಕ್ರಮ ಶಕೆಯ ಶತಮಾನೋತ್ಸವದಲ್ಲಿ ಭಾರಿ ಯಶಸ್ಸು ದೊರೆಯಿತು. ಎಲ್ಲರ ಮೆಚ್ಚುಗೆ, ಕೈತುಂಬ ಸಂಭಾವನೆಗಳನ್ನು ಕಂಡ ಗುರುಗಳು ಬಹಳ ಹರ್ಷಚಿತ್ತರಾಗಿದ್ದರು. ಇದಲ್ಲದೇ, ಅವರ ಕಛೇರಿಯನ್ನು ಸಂಗೀತೋತ್ಸವದಲ್ಲಿ ಕೇಳಿ ಸಂತೋಷಪಟ್ಟಿದ್ದ ಬರೋಡಾ, ಗ್ವಾಲಿಯರ್ ಮಹಾರಾಜರುಗಳು ತಮ್ಮ ಬೊಂಬಾಯಿನ ಅರಮನೆಗಳಿಗೆ ಆಹ್ವಾನಿಸಿ, ಅವರ ವೀಣಾವಾದನವನ್ನು ಮತ್ತೊಮ್ಮೆ ಕೇಳಿ ಆನಂದಿಸಿದರು. ಗುರುಗಳಿಗೆ ರಾಜಮರ್ಯಾದೆ, ಅರಮನೆ ಖಿಲ್ಲತ್ತು, ಧಾರಾಳವಾದ ಸಂಭಾವನೆಗಳನ್ನು ನೀಡಿ ಗೌರವಿಸಲಾಯಿತು. ಇಂತಹ ಅನಿರೀಕ್ಷಿತ ರಾಜಸನ್ಮಾನ ಗುರುಗಳಿಗೆ ಇನ್ನೂ ಹೆಚ್ಚಿನ ಸಂತೋಷವನ್ನು ತಂದಿತ್ತು.

ನಮ್ಮ ಈ ಹಿಂದಿನ ಪ್ರಥಮ ಪ್ರವಾಸದಲ್ಲಿ ಅರ್ಧದಲ್ಲೇ ಉಂಟಾದ ವಿಘ್ನಕ್ಕೆ ಗುರುಗಳು ನನ್ನ ಗ್ರಹಗತಿ ಚೆನ್ನಾಗಿಲ್ಲದಿದ್ದುದೇ ಕಾರಣವೆಂದು ಹಳಿದಿದ್ದರು. ನನ್ನ ಜಾತಕವನ್ನು ನೋಡಿದ ಜ್ಯೋತಿಷಿ ನನಗೆ ಶುಭಫಲಗಳನ್ನೇ ಹೇಳಿದ್ದರು. ಆದರೆ ಫಲಿತಾಂಶ ತದ್ವಿರುದ್ಧವಾಗಿತ್ತು. ನಮ್ಮ ಎರಡನೆಯ ಈ ಪ್ರವಾಸದಲ್ಲಿ ನನ್ನ ಜಾತಕಫಲ ಅಷ್ಟೇನೂ ಚೆನ್ನಾಗಿಲ್ಲವೆಂದು ಜ್ಯೋತಿಷಿಗಳು ಹೇಳಿದ್ದರು. ಅದನ್ನು ಒರೆಗೆ ಹಚ್ಚಿ ನೋಡಿಯೇಬಿಡಬೇಕೆಂಬ ಛಲದಿಂದ ಗುರುಗಳಿಗೆ, ಎಲ್ಲವೂ ಬಹಳ ಶುಭಪ್ರದವಾಗಿದೆಯೆಂದು (ಮನಸ್ಸಿನಲ್ಲೇ ಗುರುಗಳ ಕ್ಷಮೆ ಬೇಡಿ ಒಂದು ಸಣ್ಣ ಸುಳ್ಳು) ಹೇಳಿಬಿಟ್ಟಿದ್ದೆ. ನನಗೆ ಇದರಲ್ಲೆಲ್ಲಾ ಸ್ವಲ್ಪವೂ ನಂಬಿಕೆ ಇಲ್ಲದಿದ್ದರೂ ನನ್ನ ಮನಸ್ಸಿನಲ್ಲೂ ಸ್ವಲ್ಪ ಅಂಜಿಕೆ ಇದ್ದೇ ಇತ್ತು. ಕಾಕತಾಳೀಯವಾಗಿ ಈ ಬಾರಿಯೂ ಏನಾದರೂ ವಿಘ್ನಗಳು ಬಂದಿದ್ದರೆ, ಗುರುಗಳು ನನ್ನ ಗ್ರಹಗತಿಯನ್ನೇ ಖಂಡಿತ ದೂಷಿಸುತ್ತಿದ್ದರು. ಆದರೆ, ದೇವರ ದಯದಿಂದ ಎಲ್ಲವೂ ಬಹಳ ಯಶಸ್ವಿಯಾಗಿ ನಡೆದು ಗುರುಗಳು ಸಂತೋಷಭರಿತರಾಗಿದ್ದುದು ನನಗೂ ಬಹಳ ಸಮಾಧಾನವಾಗಿತ್ತು. ನಾನು ಒರೆಗೆ ಹಚ್ಚಿದ ಜ್ಯೌತಿಷದ ಭವಿಷ್ಯವಾಣಿಯ ಪರೀಕ್ಷೆಯಿಂದ ಮನಸ್ಸಿನಲ್ಲಿದ್ದ ಸಂಶಯ ನಿವಾರಣೆ ಯಾಗಿತ್ತು. ಒಳ್ಳೆಯದು ಕೆಟ್ಟದ್ದು ಯಾವುದೂ ನಮ್ಮ ಕೈಯಲ್ಲಿಲ್ಲ. ಏನು ನಡೆದರೂ ಅದೆಲ್ಲ ಕಾಕತಾಳೀಯ. ಜ್ಯೌತಿಷವೂ ಅಷ್ಟೇ. ಅದು ಹೇಳುವ ಭವಿಷ್ಯವೆಲ್ಲವೂ ಖಂಡಿತ ನಿಜವಾಗುವುದು ಸಾಧ್ಯವಿಲ್ಲ. ಈ ದೃಢವಿಶ್ವಾಸ ಈ ಸಲದ ನಮ್ಮ ಪ್ರವಾಸದಲ್ಲಿ ಹಾಗೂ ನಾನು ಪ್ರಯೋಗಿಸಿದ ಸಣ್ಣ ಪರೀಕ್ಷೆಯಲ್ಲಿ ಇನ್ನೂ ದೃಢಪಟ್ಟಿತು. ಹೇಗಾದರೂ ಸರಿ , ಗುರುಗಳ ಯಶಸ್ಸು , ಅವರ ಸಂತೋಷ ಇವುಗಳೇ ನನಗೆ ಬಹಳ ಮುಖ್ಯವಾಗಿದ್ದವು. ಇವೆಲ್ಲಾ ನಮಗೆ ಈ ಪ್ರವಾಸದಲ್ಲಿಯೇ ಯಥೇಚ್ಛವಾಗಿ ಲಭಿಸಿದ್ದು ನಮ್ಮಿಬ್ಬರಿಗೂ ಅತ್ಯಂತ ಹರ್ಷದಾಯಕ ವಾಗಿತ್ತು.

ನಾವು ಬೊಂಬಾಯಿನಲ್ಲಿದ್ದ ಇದೇ ಸಮಯದಲ್ಲಿ ಮಧುಬೋಸ್ ಎಂಬ ಚಿತ್ರನಿರ್ಮಾಪಕರು 'ಭಾರತೀಯ ಸಂಗೀತ ವಾದ್ಯಗಳು' ಎಂಬ ಸಾಕ್ಷ್ಯಚಿತ್ರವನ್ನು ತಯಾರಿಸುತ್ತಿದ್ದರು. ಅದಕ್ಕಾಗಿ ಗುರುಗಳ

ವೀಣಾವಾದನವನ್ನು ನನ್ನ ಸಹವಾದನದೊಂದಿಗೆ ಹದಿನೈದು ನಿಮಿಷಗಳ ಕಾಲ ಚಿತ್ರಿಸಿಕೊಳ್ಳಲಾಯಿತು. ಅದು ಮುಂದೆ ಮೈಸೂರಿನ ರಣಜಿತ್ ಚಿತ್ರಮಂದಿರದಲ್ಲಿ ಪ್ರದರ್ಶಿತವಾದಾಗ ಅದರ ಮಾಲೀಕರು ಗುರುಗಳನ್ನೂ ನನ್ನನ್ನೂ ಕರೆದುಕೊಂಡುಹೋಗಿ ಬಹಳವಾಗಿ ಉಪಚರಿಸಿ ಚಿತ್ರವನ್ನು ತೋರಿಸಿದರು. ಚಿತ್ರ ತುಂಬಾ ಚೆನ್ನಾಗಿತ್ತು. ಗುರುಗಳಿಗೆ ಇದಕ್ಕಾಗಿ ಒಳ್ಳೆಯ ಸಂಭಾವನೆಯೂ ಸಿಕ್ಕಿತ್ತು. ಮೈಸೂರು ಅರಮನೆಯ ಉಡುಪಿನಲ್ಲಿದ್ದ ಗುರುಗಳು ಬಹಳ ಚೆನ್ನಾಗಿ ಕಾಣುತ್ತಿದ್ದರು. ಜೊತೆಯಲ್ಲಿ ನಾನೂ ತೆರೆಯ ಮೇಲೆ ಮಿಂಚಿದ್ದೆ. ನಮಗೆ ಬಹಳ ಸಂತೋಷವಾಗಿತ್ತು. ಈ ಚಿತ್ರ ಈಚೆಗೆ ಎಷ್ಟು ಪ್ರಯತ್ನ ಪಟ್ಟರೂ ಲಭ್ಯವಾಗಲಿಲ್ಲ. ಅದು ಸಿಕ್ಕಿದರೆ ಒಂದು ಅಮೂಲ್ಯವಾದ ದಾಖಲೆಯಾಗುತ್ತಿದ್ದುದರಲ್ಲಿ ಸಂಶಯವಿಲ್ಲ.

ಇಷ್ಟೆಲ್ಲಾ ಕಾರ್ಯಕ್ರಮಗಳ ಜತೆಗೆ ಆಲ್ ಇಂಡಿಯಾ ರೇಡಿಯೋದವರು ಗುರುಗಳ ಒಂದು ಘಂಟೆಯ ವೀಣಾ ಕಾರ್ಯ ಕ್ರಮವನ್ನು ಧ್ವನಿಮುದ್ರಿಸಿಕೊಂಡರು. ಇದಲ್ಲದೆ, ಬೊಂಬಾಯಿನ ಮೈಸೂರು ಅಸೋಸಿಯೇಷನ್ ಹಾಗೂ ಕನ್ನಡಸಂಘಗಳಲ್ಲಿ ನಮ್ಮ ವೀಣಾ ಕಾರ್ಯಕ್ರಮ ನಡೆಯಿತು. ಹೀಗೆ ಮೇಲೆ ಮೇಲೆ ಕಛೇರಿಗಳು, ಎಲ್ಲರ ಮನೆಗಳಲ್ಲೂ ಆದರಾತಿಥ್ಯಗಳು, ಕೈತುಂಬ ಸಂಭಾವನೆ, ಎಲ್ಲೆಡೆ ಕಾರಿನಲ್ಲಿ ಸುತ್ತಾಟ - ಹೀಗೆ ಸುಮಾರು ಒಂದು ತಿಂಗಳು ಬೊಂಬಾಯಿನಲ್ಲಿ ಬಹಳ ಆನಂದವಾಗಿ ಕಳೆದು ಮೈಸೂರಿಗೆ ಹಿಂದಿರುಗಿದೆವು.

ಮೂರನೆಯ ಪ್ರವಾಸ

ಗುರುಗಳು ತಮ್ಮ ಉತ್ತರ ಭಾರತದ ಮೂರನೆಯ ಪ್ರವಾಸವನ್ನು ಕೈಗೊಂಡಿದ್ದು ಗುಜರಾತಿನ ಪಾಲಿಟಾನಾ ಸಂಸ್ಥಾನದ ರಾಜ ವಿವಾಹದಲ್ಲಿ ವೀಣಾ ಕಛೇರಿಗಾಗಿ. ಇದು ಸುಮಾರು ೧೯೪೬ರಲ್ಲಿರಬಹುದು. ಮೈಸೂರಿನ ಡವೇಜರ್ ಮಹಾರಾಣಿಯವರ ಬಹಳ ಹತ್ತಿರದ ರಾಜಬಂಧುಗಳ ಈ ವಿವಾಹಕ್ಕೆ ಅವರೇ ಗುರುಗಳನ್ನು ವೀಣಾವಾದನಕ್ಕೆ ಪಾಲಿಟಾನಾಕ್ಕೆ ಕರೆಸಿಕೊಂಡಿದ್ದರು. ಸರಿ, ಗುರುಗಳು ಯಥಾಪ್ರಕಾರ ನನಗೆ ಜತೆಯಲ್ಲಿ ಹೊರಡಲು ತಾಕೀತು ಮಾಡಿದರು. ನಾನಂತೂ ಸದಾ ಸಿದ್ಧನಾಗಿಯೇ ಇರುತ್ತಿದ್ದೆ. ಈ ಬಾರಿ ಉತ್ತರ ಭಾರತದ ಇನ್ನೂ ಕೆಲವು ಸಂಸ್ಥಾನಗಳಿಗೆ ಭೇಟಿ ಕೊಡುವ ಏರ್ಪಾಡಾಗಿತ್ತು. ಈ ಸಲ ಬೊಂಬಾಯಿಗೆ ಹೋದಾಗ ನಾವು ಕಾರ್ಪೊರೇಷನ್ ಇಂಜಿನಿಯರ್ 'ಬೊಂಬಾಯಿ ರಾಮಸ್ವಾಮಿ' ಯವರ ಅತಿಥಿಗಳಾಗಿದ್ದು ಅಲ್ಲಿ ಒಂದು ಕಾರ್ಯಕ್ರಮವನ್ನು ನಡೆಸಿಕೊಟ್ಟೆವು. ಅಲ್ಲಿಂದ ಕೋಟಾ ಸಂಸ್ಥಾನಕ್ಕೆ ಭೇಟಿ, ಅಲ್ಲಿ ಬೆಂಗಳೂರಿನ ಲಕ್ಷ್ಮೀನರಸಿಂಹಯ್ಯ ಎಂಬುವರು ದಿವಾನ ರಾಗಿದ್ದರು. ಅವರ ಬಂಗಲೆಯಲ್ಲೇ ನಮ್ಮ ವಾಸ್ತವ್ಯ. ಅವರ ಮನೆಯಲ್ಲೂ ಒಂದು ಕಾರ್ಯಕ್ರಮ ನಡೆಯಿತು. ಅನಂತರ ಅರಮನೆಯಲ್ಲಿ ಮಹಾರಾಜರ ಸಮ್ಮುಖದಲ್ಲೂ ಕಛೇರಿ; ರಾಜಮನ್ನಣೆ, ಖಿಲ್ಲತ್ತು , ಸಂಭಾವನೆ. ನಮ್ಮ ಮುಂದಿನ ಸಂಸ್ಥಾನ ಭೂಪಾಲ್. ಇಲ್ಲಿಯೂ ಮಹಾರಾಜರು ಗುರುಗಳ ವೀಣಾವಾದನವನ್ನು ಕೇಳಿ ಬಹಳವಾಗಿ ಮೆಚ್ಚಿ ವಿಶೇಷವಾಗಿ ಸನ್ಮಾನ ಮಾಡಿದರು. ಅನಂತರ, ಭರತ್ಪುರಕ್ಕೆ ಪ್ರಯಾಣ. ಮಧ್ಯೆ ಆಗ್ರಾದಲ್ಲಿ ಇಳಿದು ಜಗತ್ಪ್ರಸಿದ್ಧ ತಾಜ್ ಮಹಲ್ಲನ್ನು ವೀಕ್ಷಿಸಿ ಭರತ್ಪುರಕ್ಕೆ ಪ್ರಯಾಣ ಮುಂದುವರೆಸಿದೆವು. ಅಲ್ಲಿಯೂ ಬಹಳ ಯಶಸ್ವೀ ಕಾರ್ಯಕ್ರಮ. ಮುಂದೆ, ಜಯಪುರಕ್ಕೆ ಭೇಟಿ. ಆಗ ಮಿರ್ಜಾ ಇಸ್ಮಾಯಿಲ್ ಅಲ್ಲಿನ ದಿವಾನರಾಗಿದ್ದರು. ಕೆ. ಗುಂಡಪ್ಪನವರು ರೈಲ್ವೇ ಜನರಲ್ ಮ್ಯಾನೇಜರ್ ಆಗಿದ್ದರು. ಇವರಿಬ್ಬರಿಗೂ ಗುರುಗಳಲ್ಲಿ ವಿಶೇಷ ಗೌರವ. ರಾಜಧಾನಿ ಜಯಪುರವನ್ನು ಮಿರ್ಜಾ ಸಾಹೇಬರು ಮೈಸೂರಿನ ಮಾದರಿಯಲ್ಲೇ ಒಂದು ಸುಂದರ ನಗರಿಯಾಗಿ ರೂಪಿಸಿದ್ದರು. ಅಲ್ಲಿ ಆಗ ನಡೆಯುತ್ತಿದ್ದ ವಸ್ತುಪ್ರದರ್ಶನ ಹಾಗೂ ಅರಮನೆಗಳಲ್ಲಿ ವೀಣಾ ಕಾರ್ಯಕ್ರಮ ನಡೆಯಿತು. ಎಲ್ಲರೂ ಬಹಳ ಮೆಚ್ಚಿ ಕೊಂಡಾಡಿದರು.

ನಾವು ಜಯಪುರದಲ್ಲಿ ಇಳಿದುಕೊಂಡಿದ್ದ ವಸತಿಗೃಹದಲ್ಲಿ ನಮ್ಮ ಪಕ್ಕದ ಕೊಠಡಿಯಲ್ಲಿ ಇಳಿದುಕೊಂಡಿದ್ದ ಬೊಂಬಾಯಿನ ಭಾರೀ ಶ್ರೀಮಂತ ಕೈಗಾರಿಕೋದ್ಯಮಿ ಭಿವಂಡಿವಾಲಾ ದಂಪತಿಗಳ ಪರಿಚಯ ನಮಗಾಯಿತು. ಗುರುಗಳು ಒಂದು ದಿನ ಬೆಳಗ್ಗೆ ವೀಣೆ ನುಡಿಸಿ ಕೊಳ್ಳುತ್ತಿದ್ದಾಗ ಈ ದಂಪತಿಗಳು ಅಲ್ಲಿ ಬಂದು ಕುಳಿತು ಗುರುಗಳ ವೀಣಾವಾದನವನ್ನು ಕೇಳಿ ಆನಂದಪಟ್ಟರು. ಗುರುಗಳಿಗೆ ಧನ್ಯವಾದಗಳನ್ನು ಹೇಳಿ ಬೊಂಬಾಯಿಗೆ ಬಂದಾಗ ಖಂಡಿತ ತಮ್ಮನ್ನು ಕಾಣಬೇಕೆಂದೂ, ಅಲ್ಲಿ ನಡೆಯಲಿದ್ದ ರಾಜರುಗಳ ಸಮಾವೇಶದಲ್ಲಿ ಗುರುಗಳ ಕಛೇರಿಯನ್ನು ಏರ್ಪಡಿಸುವುದಾಗಿಯೂ ಹೇಳಿ ಬೀಳ್ಕೊಂಡರು.

ಜಯಪುರದ ಕಾರ್ಯಕ್ರಮಗಳನ್ನು ಮುಗಿಸಿಕೊಂಡು ಅಜ್ಮೀರಕ್ಕೆ ನಾವು ಪ್ರಯಾಣ ಮಾಡಿದೆವು. ಅದೊಂದು ಪ್ರಕೃತಿರಮ್ಯವಾದ ಸುಂದರ ತಾಣ. ಅಲ್ಲಿನ ಕನ್ನಡಿಗರೆಲ್ಲ ಸೇರಿ ಗುರುಗಳ ಕಛೇರಿಯನ್ನು ಏರ್ಪಾಡು ಮಾಡಿ, ಕೇಳಿ ಆನಂದಿಸಿ ಯಥಾಶಕ್ತಿ ಸನ್ಮಾನ ಮಾಡಿದರು. ಅಲ್ಲಿಂದ ಮುಂದೆ ಅಹಮದಾಬಾದ್‌ನಲ್ಲಿ ರೈಲು ಬದಲಿಸಿ ಗುಜರಾತಿನ ಪಾಲಿಟಾನಾ ರಾಜಧಾನಿಗೆ ಹೋಗಿ ತಲುಪಿದೆವು. ಮೈಸೂರು ಡವೇಜರ್ ಮಹಾರಾಣಿಯವರು ಆಗಲೇ ಅಲ್ಲಿದ್ದು ರಾಜವಿವಾಹದ ಎಲ್ಲ ಏರ್ಪಾಡುಗಳನ್ನೂ ನೋಡಿಕೊಳ್ಳುತ್ತಿದ್ದರು. ವಿವಾಹ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಅನೇಕ ರಾಜಮಹಾರಾಜರುಗಳು ಆಗಮಿಸಿದ್ದರು. ಗುರುಗಳ ವೀಣೆಯನ್ನು ಕೇಳಿ ಎಲ್ಲರೂ ಬಹಳ ಸಂತೋಷಪಟ್ಟರು. ಗುರುಗಳಿಗೆ ಯಥೋಚಿತ ರಾಜಮರ್ಯಾದೆ, ಖಿಲ್ಲತ್ತು, ಸಂಭಾವನೆ ನೀಡಿ ಗೌರವಿಸಲಾಯಿತು. ಅಲ್ಲಿಗೆ ರಾಜ ಅತಿಥಿಯಾಗಿ ಬಂದಿದ್ದ ಭಾವನಗರದ ಮಹಾರಾಜರು ಗುರುಗಳನ್ನು

ತಮ್ಮ ಸಂಸ್ಥಾನಕ್ಕೂ ಭೇಟಿ ಕೊಡಬೇಕೆಂದು ಆಹ್ವಾನಿಸಿದರು. ಬಹಳ ಸಂತೋಷದಿಂದ ನಮ್ಮನ್ನು ತಮ್ಮ ಜತೆಯಲ್ಲೇ ಅರಮನೆ ಕಾರಿನಲ್ಲಿ ಭಾವನಗರಕ್ಕೆ ಕರೆದುಕೊಂಡು ಹೋಗಿ ನಮ್ಮನ್ನು ರಾಜ ಅತಿಥಿಗಳಂತೆ ನೋಡಿಕೊಂಡರು. ಭಾವನಗರದಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ನೋಡುತ್ತಾ ಬಹಳ ಸಂತೋಷದಿಂದ ಒಂದೆರಡು ದಿನ ಕಳೆದೆವು.

ಅಂದು ಬೆಳಗ್ಗೆ ಗುರುಗಳು ಮಾಮೂಲಿನಂತೆ ತಮ್ಮ ಡಯಾಬಿಟೀಸ್‌ಗೆ ಇನ್‌ಸುಲಿನ್ ಇನ್‌ಜಕ್ಷನ್ ತೆಗೆದುಕೊಂಡರು. ಏನು ವ್ಯತ್ಯಾಸವಾಯಿತೋ, ಸ್ವಲ್ಪ ಹೊತ್ತಿಗೆಲ್ಲಾ ಇಂಜೆಕ್ಷನ್ ತೆಗೆದುಕೊಂಡ ಜಾಗ ಊದಿಕೊಂಡು ಜ್ವರ ಕಾಣಿಸಿಕೊಂಡಿತು. ದೂರದೇಶ. ಜತೆಯಲ್ಲಿ ನಾನೊಬ್ಬನೇ. ಗುರುಗಳಿಗೆ ಸ್ವಲ್ಪ ಗಾಬರಿಯೇ ಆಯಿತು. ಏನೇನೋ ಮಾತನಾಡಲು ಪ್ರಾರಂಭಿಸಿದರು. ಆಗಲೇ ಏನೋ ಆಗಿಬಿಡುವುದೆಂದು ಹೆದರಿದರು. ಹಾಗೇನಾದರೂ ಆದರೆ ತಮ್ಮ ಮಗನಂತೆ ನಾನೇ ಅಲ್ಲಿಯೇ ಎಲ್ಲವನ್ನೂ ಮಾಡಿ ಮುಗಿಸಿಬಿಡಬೇಕೆಂದೂ ಹೇಳಿಬಿಟ್ಟರು. ಇದನ್ನೆಲ್ಲಾ ನೋಡಿ ನನಗೆ ಆಕಾಶವೇ ತಲೆಯ ಮೇಲೆ ಬಿದ್ದಂತಾಯಿತು. ಅಂತಹ ಪರಿಸ್ಥಿತಿಯನ್ನು ಊಹಿಸಿಕೊಳ್ಳುವುದೂ ಅಸಾಧ್ಯವಾಗಿತ್ತು. ದಿಕ್ಕು ತೋಚದೆ ದೇವರ ಮೇಲೆ ಭಾರ ಹಾಕಿ ತಲೆಯ ಮೇಲೆ ಕೈಹೊತ್ತು ಕುಳಿತೆ. ಅಂತರಾಳದಿಂದ ದೇವರಲ್ಲಿ ಮೊರೆಯಿಟ್ಟೆ. ಇಷ್ಟು ಹೊತ್ತಿಗೆ ಗುರುಗಳ ಉದ್ವಿಗ್ನತೆ ಸ್ವಲ್ಪ ಇಳಿಮುಖವಾಗಿತ್ತು. ಸ್ವಲ್ಪ ಹೊತ್ತಿಗೆಲ್ಲಾ ನಿದ್ರೆ ಹೋದರು. ಮಧ್ಯಾಹ್ನ ಮೂರು ಘಂಟೆಯ ವೇಳೆಗೆ ಜ್ವರ ಆರಿ ಮೈ ಬೆವೆತು ಎದ್ದು ಕುಳಿತರು. ಲಘುವಾಗಿ ಆಹಾರ ಸೇವಿಸಿದರು. ನಿಧಾನವಾಗಿ ಚೇತರಿಸಿಕೊಂಡರು. ಅವರ ಮುಖದಲ್ಲಿ ಯಾವ ಆಯಾಸದ ಚಿಹ್ನೆಯೂ ಇರಲಿಲ್ಲ. ಅಂದು ಸಂಜೆಯೇ ಅರಮನೆಯಲ್ಲಿ ವೀಣೆ ನುಡಿಸಬೇಕಾಗಿತ್ತು. ಅದನ್ನು ಮುಂದೂಡಬಾರದೇಕೆ ಎಂಬ ನನ್ನ ಸಲಹೆಯನ್ನು ಒಮ್ಮೆಲೆ ತಳ್ಳಿಹಾಕಿದರು. ದೇವರ ಮೇಲೆ ಭಾರ ಹಾಕಿ, ಶುಚಿರ್ಭೂತರಾಗಿ ತಮ್ಮ ಅರಮನೆ ಉಡುಪನ್ನು ಧರಿಸಿ ಕಛೇರಿಗೆ ಹೊರಡಲು ಸಿದ್ಧರಾಗಿಯೇ ಬಿಟ್ಟರು. ನನಗೆ ಅವರ ಈ ಆತ್ಮಬಲವನ್ನು ನೋಡಿ ಪರಮಾಶ್ಚರ್ಯವಾಯಿತು. ಅವರ ಅಸಾಧಾರಣ ಕಲಾನಿಷ್ಠೆಯನ್ನು ಕಂಡು ಬೆರಗಾದೆ.

ಸಮಯಕ್ಕೆ ಸರಿಯಾಗಿ ಅರಮನೆಗೆ ವೀಣೆಗಳ ಸಮೇತ ಹೊರಟೆವು. ಸೆಖೆಯ ತಾಪದ ಕಾರಣ ಕಛೇರಿಯನ್ನು ಅರಮನೆ ಉದ್ಯಾನವನದಲ್ಲಿ ಏರ್ಪಡಿಸುವಂತೆ ಮಹಾರಾಜರು ಅಪೇಕ್ಷೆ ಪಟ್ಟಿದ್ದರು. ಅಂತೆಯೇ ಹೊರಗಡೆ ಹಾಲಿನಲ್ಲಿ ರತ್ನಗಂಬಳಿಯನ್ನು ಹಾಸಿ, ಸ್ವಲ್ಪ ದೂರದಲ್ಲಿ ರಾಜಪರಿವಾರದವರಿಗೂ, ಆಹ್ವಾನಿತ ಗಣ್ಯರಿಗೂ ಕುರ್ಚಿಗಳನ್ನು ಹಾಕಲಾಗಿತ್ತು. ಇದನ್ನೆಲ್ಲಾ ನೋಡಿ ಗುರುಗಳು ವಿಸ್ಮಿತರಾದರು. ಹೇಳಿಕೇಳಿ ಇದು ವೀಣೆ. ಹೆಚ್ಚು ನಾದಗಾತ್ರವಿಲ್ಲದ ವಾದ್ಯ. ಧ್ವನಿವರ್ಧಕವೂ ಇಲ್ಲ. ಬಟ್ಟ ಬಯಲಿನಲ್ಲಿ ವೀಣೆ ಕಛೇರಿ! ಇಂದೆಂತಹ ವಿಷಮ ಪರೀಕ್ಷೆ ಎಂದು ಗುರುಗಳಿಗೆ ಸ್ವಲ್ಪ ಯೋಚನೆ ಆಯಿತು. ಮೊದಲೇ ಅವರಿಗೆ ಅಂದು ಆರೋಗ್ಯವೂ ಅಷ್ಟು ಚನ್ನಾಗಿರಲಿಲ್ಲ. ಇಷ್ಟಾದರೂ, ಮನಸ್ಸನ್ನು ಗಟ್ಟಿ ಮಾಡಿಕೊಂಡು ಈ ಪರಿಸ್ಥಿತಿಯನ್ನು ಎದುರಿಸಲು ಸಿದ್ಧರಾದರು. ತಮ್ಮ ಕುಲದೈವವನ್ನೂ, ವಿದ್ಯಾಗುರುಗಳನ್ನೂ ಭಕ್ತಿಯಿಂದ ನೆನೆದರು. ಶ್ರೋತೃಗಳೂ, ರಾಜರೂ, ರಾಜಪರಿವಾರದವರೂ ಆಗಮಿಸಿ ತಮ್ಮ ತಮ್ಮ ಆಸನಗಳಲ್ಲಿ ಕುಳಿತರು. ಕಛೇರಿ ಪ್ರಾರಂಭವಾಯಿತು. ಒಂದು ವರ್ಣ, ಒಂದು ವಿಘ್ನೇಶ್ವರ ಸ್ತುತಿ, ಒಂದು ಅಂಬಿಕೆಯ ಮೇಲಿನ ಕೃತಿ ಇವುಗಳನ್ನು ನುಡಿಸುವ ಹೊತ್ತಿಗೆ ವೀಣಾನಾದದ ಮಾಧುರ್ಯ ಎಲ್ಲೆಡೆ ಪಸರಿಸಿ ಸಂಗೀತಮಯ ವಾತಾವರಣ ಸೃಷ್ಟಿಯಾಗಿತ್ತು. ಗುರುಗಳಿಗೂ ವೀಣಾವಾದನದಲ್ಲಿ ಮನಸ್ಸು ಕೇಂದ್ರೀಕೃತವಾಗಿ ಒಂದು ಹೆಚ್ಚಿನ ಹುಮ್ಮಸ್ಸು , ನೆಮ್ಮದಿ ಮೂಡಿತ್ತು. ಮುಂದೆ, ತಮಗೆ ಪ್ರಿಯವಾದ ಇನ್ನೂ ಒಂದೆರಡು ಕೃತಿಗಳನ್ನು ನುಡಿಸಿದನಂತರ ವಿಸ್ತಾರವಾದ ಆಲಾಪನೆಗೆ ಕಲ್ಯಾಣಿ ರಾಗವನ್ನು ತೆಗೆದುಕೊಂಡರು. ಇದರಲ್ಲಿ ಮೂಡಿ ಬಂದ ಕೆಲವು ರಂಜನೀಯ ಸಂಚಾರಗಳಿಂದ ಶ್ರೋತೃಗಳೂ, ಮಹಾರಾಜರೂ, ಆಕರ್ಷಿತರಾದರು. ಅಸಾಧಾರಣ ಕೈಚಳಕದ ಚಲನೆಯೊಂದಿಗೆ ಗುರುಗಳ ಬೆರಳುಗಳಿಂದ ಹೊರ ಹೊಮ್ಮುತ್ತಿದ್ದ ಸಂಗತಿಗಳು, ಬಿರ್ಕಾಗಳು, ಆ ಸುನಾದ, ಸುಸ್ವರ, ವಿಧವಿಧವಾದ ಮೀಟುಗಳ ಝೇಂಕಾರ ಇವುಗಳಿಂದ ಕೂಡಿದ ವಿವಿಧ ಲಯಗಳಲ್ಲಿ ಮೂಡಿ ಬಂದ ತಾನಗಳು ರೋಮಾಂಚಕಾರಿಯಾಗಿದ್ದುವು. ರಾಜರೂ, ಪರಿವಾರದವರೂ ಅತ್ಯಂತ ಆಕರ್ಷಿತರಾಗಿ ತಮ್ಮ ಆಸನಗಳನ್ನು ಗುರುಗಳ ಸಮೀಪಕ್ಕೆ ಹಾಕಿಸಿ ಕುಳಿತು ಕೇಳಿ ಆ ನಾದಸುಧೆಯನ್ನು ಸವಿದರು. ರಾಗಮಾಲಿಕಾ ತಾನ, ಪಲ್ಲವಿ, ಸ್ವರಕಲ್ಪನೆ ಮತ್ತು ತಿಲ್ಲಾನಗಳೊಂದಿಗೆ ಕಛೇರಿ ಮುಕ್ತಾಯವಾಯಿತು. ಎಲ್ಲರೂ ಮಂತ್ರಮುಗ್ಧರಾಗಿ ಕೇಳಿ ಆನಂದಿಸಿದರು. ಗುರುಗಳಿಗೆ ಈ ಎರಡು ಘಂಟೆಗಳ ಕಾಲ ಕಳೆದದ್ದೇ ಗೊತ್ತಾಗಲಿಲ್ಲ. ಮೈ ಮರೆತು ಅವರು ನಾದಲೋಕದಲ್ಲಿ ವಿಹರಿಸುತ್ತಿದ್ದರು.

ಅವರ ಬಾಲ್ಯದಲ್ಲಿ ಮಾಡಿದ್ದ ಕಠಿಣಸಾಧನೆ, ಶೇಷಣ್ಣನವರ ವೀಣಾಗಾನವನ್ನು ಯಥೇಚ್ಛವಾಗಿ ಕೇಳಿದ್ದು , ಅವರಿಗಿದ್ದ ಅಸಾಧಾರಣ ಮನೋಧರ್ಮ ಇವೆಲ್ಲವೂ ಅವರ ವೀಣಾವಾದನಕ್ಕೆ ವಿಶೇಷವಾದ ಮೆರುಗು, ಸೌಂದರ್ಯಗಳನ್ನು ತಂದಿದ್ದುವು. ಮಹಾರಾಜರ ಸಂತೋಷಕ್ಕೆ ಎಣೆಯೇ ಇಲ್ಲ. ಗುರುಗಳನ್ನು ಖಿಲ್ಲತ್ತು, ಸಂಭಾವನೆಗಳನ್ನು ನೀಡಿ ಗೌರವಿಸಿದರು. ಒಟ್ಟಿನಲ್ಲಿ ತಮಗೆ ಎದುರಾದ ಎಲ್ಲ ವಿಷಮ ಪರಿಸ್ಥಿತಿಗಳನ್ನೂ ಧೈರ್ಯದಿಂದ ಎದುರಿಸಿ ಗುರುಗಳು ಜಯಶಾಲಿಗಳಾಗಿದ್ದರು.

ಈಗ ನಮ್ಮ ಈ ದೀರ್ಘ ಪ್ರವಾಸವು ಮುಗಿಯುವ ಹಂತಕ್ಕೆ ಬಂದಿತ್ತು. ನಾವು ಮತ್ತೆ ಬೊಂಬಾಯಿಗೆ ಬಂದು ಅಲ್ಲಿ ಭಿವಂಡಿವಾಲಾ ಅವರನ್ನು ಭೇಟಿಯಾಗಬೇಕಿತ್ತು. ಸರಿ, ಮಹಾರಾಜರ ಅಪ್ಪಣೆಯನ್ನು ಪಡೆದು ನಾವು ವಾಪಸ್ಸು ಬೊಂಬಾಯಿಗೆ ಹೊರಟೆವು. ಭಾವನಗರದಿಂದ

ಅಹಮದಾಬಾದ್ ಮೂಲಕ ಬೊಂಬಾಯಿ ತಲುಪಿದೆವು. ಅಲ್ಲಿ ವಿ.ಟಿ. ಸ್ಟೇಷನ್ ಸಮೀಪವೇ ಇದ್ದ ಮಾಡರ್ನ್ ಹೋಟಲ್‌ನಲ್ಲಿ ಮೊಕ್ಕಾಂ ಮಾಡಿದೆವು.

ಬೊಂಬಾಯಿಗೆ ಬಂದ ಮಾರನೆಯ ದಿನವೇ ನಾನು ಭಿವಂಡಿವಾಲಾ ಅವರನ್ನು ಭೇಟಿ ಮಾಡಿದೆ. ಅವರು ನನ್ನನ್ನು ಬಹಳ ಪ್ರೀತಿಯಿಂದ ಬರಮಾಡಿಕೊಂಡರು. ಗುರುಗಳ ಬಗ್ಗೆ ತುಂಬಾ ವಿಚಾರಿಸಿದರು. ಆದರೆ, ಅವರು ನಮಗೆ ಆಶ್ವಾಸನೆ ಕೊಟ್ಟಿದ್ದ ಕಾರ್ಯಕ್ರಮ (ರಾಜರುಗಳ ಸಮಾವೇಶ ಕಾರಣಾಂತರಗಳಿಂದ ರದ್ದಾಗಿ) ನಡೆಯಲಾರದೇ ಹೋದುದಕ್ಕಾಗಿ ಬಹಳ ವಿಷಾದಿಸಿದರು. ಹಾಗೂ, ತಾವು ಅಂದು ಜಯಪುರದಲ್ಲಿ ಗುರುಗಳ ವೀಣೆಯನ್ನು ಕೇಳಿ ಸಂತೋಷಪಟ್ಟುದಕ್ಕಾಗಿ ಒಂದು ಕಿರುಕಾಣಿಕೆ, ಒಂದು ಸಾವಿರ ರೂ.ಗಳನ್ನು ಕೊಟ್ಟು ಗುರುಗಳಿಗೆ ತಮ್ಮ ಗೌರವವನ್ನು ಸಲ್ಲಿಸಿದರು. ಗುರುಗಳಿಗೆ ಇದನ್ನು ತಿಳಿಸಿದಾಗ ಅವರು ಅತ್ಯಂತ ಸಂತೋಷಪಟ್ಟು ನನ್ನ ವ್ಯವಹಾರಕುಶಲತೆಯನ್ನು ಕೊಂಡಾಡಿದರು.

ಇದು ನಮಗೆ ಕೇವಲ ಅನಿರೀಕ್ಷಿತವಾದ ಸಂಭಾವನೆಯಾಗಿತ್ತು. ಏಕೆಂದರೆ, ನಮ್ಮ ಕಾರ್ಯಕ್ರಮ ರದ್ದಾದ ವಿಷಯವನ್ನು ಅವರು ಈ ಮುಂಚೆಯೇ ನಮಗೆ ತಿಳಿಸಿಯಾಗಿತ್ತು. ಆದರೂ, ನಾವು ಬೊಂಬಾಯಿ ಬಿಡುವ ಮುನ್ನ, ಭಿವಂಡಿವಾಲಾರನ್ನು ಭೇಟಿಯಾಗಿ, ಊರಿಗೆ ಹೊರಟಿರುವ ವಿಷಯವನ್ನು ಅವರಿಗೆ ತಿಳಿಸಿ ಬರೋಣವೆಂದು, ಗುರುಗಳು ಬೇಡವೆಂದರೂ ಕೇಳದೇ ನಾನೇ ಸ್ವತಃ ಹೋಗಿದ್ದೆ. ನನಗೂ, ಅವರು ಎಂದೋ ವೀಣೆ ಕೇಳಿದ್ದಕ್ಕಾಗಿ ಇಷ್ಟು ಧಾರಾಳವಾಗಿ ಸಂಭಾವನೆ ಕೊಡುವರೆಂಬ ನಿರೀಕ್ಷೆ ಖಂಡಿತ ಇರಲಿಲ್ಲ. ಅದರಲ್ಲೂ ಅವರು ಆಗಿನ ಮೌಲ್ಯದ ಒಂದು ಸಾವಿರ ರೂಪಾಯಿಗಳನ್ನು ಇಷ್ಟು ಧಾರಾಳವಾಗಿ ನೀಡಿದುದು ನನಗೂ, ಗುರುಗಳಿಗೂ ಅತ್ಯಂತ ಅವಿಸ್ಮರಣೀಯ ಘಟನೆಯಾಗಿತ್ತು. ಅವರ ಇಂತಹ ಔದಾರ್ಯವನ್ನು ಕೊಂಡಾಡಿ, ಅವರಿಗೆ ಕೃತಜ್ಞತೆಗಳನ್ನು ತಿಳಿಸಿ ನಾವು ಮೈಸೂರಿಗೆ ಪ್ರಯಾಣ ಮಾಡಿದೆವು.

ಕಡೆಯ ಪ್ರವಾಸ

ನಮ್ಮ ಗುರುಗಳ ಉತ್ತರ ಭಾರತದ ಕಡೆಯ ಪ್ರವಾಸ ನಡೆದದ್ದು ೧೯೪೪ರಲ್ಲಿ. ಜೋಧಪುರದಲ್ಲಿ ಏರ್ಪಡಿಸಿದ್ದ ಅಖಿಲ ಭಾರತ ಸಂಗೀತ ಸಮ್ಮೇಳನಕ್ಕೆ ಗುರುಗಳಿಗೆ ಆಹ್ವಾನ ಬಂದಿತ್ತು. ಈ ಬಾರಿ ದೊರೆಸ್ವಾಮಿ ಅಯ್ಯಂಗಾರ್ ಅವರು ನಮ್ಮ ಜೊತೆಯಲ್ಲಿ ಬಂದಿದ್ದರು. ಇಬ್ಬರು ಶಿಷ್ಯರೂ ಜೊತೆಯಲ್ಲಿದ್ದುದು ಗುರುಗಳಿಗೆ ಇನ್ನೂ ಹೆಚ್ಚಿನ ಸಂತಸ ತಂದಿತ್ತು. ಜೋಧಪುರಕ್ಕೆ ಸುಮಾರು ಎರಡು ದಿನಗಳ ಪ್ರಯಾಣ. ಅದು ಬಹಳ ಸುಖಕರವಾಗಿಯೇ ಕಳೆಯಿತು. ಜೋಧಪುರದಲ್ಲಿ ನಮಗೆಲ್ಲ ಬಿಡಾರದ ವ್ಯವಸ್ಥೆ ಬಹಳ ಚೆನ್ನಾಗಿತ್ತು. ಮಹಾರಾಜರೇ ಸ್ವತಃ ಎಲ್ಲವನ್ನೂ ಮೇಲು ಉಸ್ತುವಾರಿ ಮಾಡುತ್ತಿದ್ದರೆಂದ ಮೇಲೆ, ಕೇಳಬೇಕೆ? ಸಮ್ಮೇಳನಕ್ಕೆ ಹಿಂದೂಸ್ತಾನಿ ಸಂಗೀತ ವಿದ್ವಾಂಸರೇ ಹೆಚ್ಚಾಗಿ ಬಂದಿದ್ದರು. ಗುರುಗಳ ಕಛೇರಿಯೂ ಇಬ್ಬರು ಶಿಷ್ಯರ ಸಹವಾದನ ದೊಂದಿಗೆ ಬಹಳ ಚೆನ್ನಾಗಿ ನಡೆಯಿತು. ಸುಮಾರು ಒಂದು ವಾರ ಕಾಲ ನಾವು ಗಂಧರ್ವಲೋಕದಲ್ಲಿ ವಿಹರಿಸಿದೆವು. ಗುರುಗಳಿಗೆ ಸೂಕ್ತ ಸಂಭಾವನೆ ನೀಡಿ ಗೌರವಿಸಲಾಯಿತು. ಅಲ್ಲಿಂದ ಬೊಂಬಾಯಿಗೆ ವಾಪಸ್ಸು ಹೊರಟೆವು.

ಅದು ಅತ್ಯಂತ ಸೆಖೆಯ ಕಾಲ. ಗುರುಗಳು ಆ ಉರಿಬಿಸಿಲಿನಲ್ಲಿ ಬೊಂಬಾಯಿಗೆ ರೈಲು ಪ್ರಯಾಣ ಮಾಡಲು ಹೆದರಿದರು. ಹೆಚ್ಚಿಗೆ ಹಣ ಖರ್ಚಾದರೂ ಸರಿ, ಎಲ್ಲರೂ ಸುಖವಾಗಿ ಕೆಲವೇ ಘಂಟೆಗಳಲ್ಲಿ ತಲುಪುವಂತೆ ಬೊಂಬಾಯಿಗೆ ವಿಮಾನದಲ್ಲೇ ಪ್ರಯಾಣ ಮಾಡುವುದೆಂದು ತೀರ್ಮಾನಿಸಿದರು. ಅಂತೆಯೇ ನಮ್ಮ ಪ್ರಪ್ರಥಮ ವಿಮಾನಯಾನ ಗುರುಗಳ ಕೃಪೆಯಿಂದ ಸಾಧ್ಯವಾಯಿತು. ಬೊಂಬಾಯಿನಲ್ಲಿ ಮೈಸೂರು ಅಸೋಸಿಯೇಷನ್‌ನಲ್ಲಿ ಮೊಕ್ಕಾಂ ಮಾಡಿದೆವು. ಅಲ್ಲಿ ಒಂದೆರಡು ಕಾರ್ಯಕ್ರಮಗಳನ್ನು ಮುಗಿಸಿ, ಪ್ರೇಕ್ಷಣೀಯ ಸ್ಥಳಗಳನ್ನೆಲ್ಲಾ ನೋಡುತ್ತಾ ಸುತ್ತಾಡಿದೆವು. ಬಹಳ ಹರ್ಷಚಿತ್ತರಾಗಿದ್ದ ಗುರುಗಳು ಇಬ್ಬರು ಶಿಷ್ಯರಿಗೂ ತಮ್ಮ ಅನುಭವಗಳನ್ನೆಲ್ಲಾ ವಿವರಿಸಿ ಹೇಳುತ್ತಿದ್ದರು. ಯಾವಾಗಲೂ ಸರಸ, ವಿನೋದಗಳಲ್ಲೇ ಸಂತೋಷದಿಂದ ಕಾಲ ಕಳೆಯುತ್ತಿದ್ದ ಗುರುಗಳು ಇಂತಹ ಪ್ರವಾಸ ಕಾಲಗಳಲ್ಲಿ ತಮ್ಮ ಎಲ್ಲ ಕಷ್ಟಕಾರ್ಪಣ್ಯಗಳನ್ನೂ ಮರೆತು ನಿರ್ಲಿಪ್ತರಾಗಿ ಇದ್ದು ಬಿಡುತ್ತಿದ್ದರು. ಇದರಿಂದ ಅವರ ಆರೋಗ್ಯವೂ ಸುಧಾರಿಸುತ್ತಿತ್ತು.

೩. ಉತ್ತರ ರಂಗ

ಆಸ್ಥಾನ ವಿದ್ವಾನ್ ಆದ ಸಂಭ್ರಮ

ಇತ್ತ, ಮೈಸೂರಿನ ನಮ್ಮ ಸಾಂಸಾರಿಕ ಜೀವನ ಒಂದು ರೀತಿಯಲ್ಲಿ ಚೆನ್ನಾಗಿಯೇ ನಡೆಯುತ್ತಿತ್ತು. ನನ್ನ ತಮ್ಮನ ಇಂಜಿನಿಯರಿಂಗ್ ವಿದ್ಯಾಭ್ಯಾಸ ಯಶಸ್ವಿಯಾಗಿ ಮುಂದುವರೆಯುತ್ತಿತ್ತು. ಮನೆಪಾಠಗಳ ನನ್ನ ವರಮಾನವೂ ಚೆನ್ನಾಗಿತ್ತು. ಮನೆಯಲ್ಲಿ ಕಟ್ಟುನಿಟ್ಟಾಗಿ ವೀಣೆಯ ಅಭ್ಯಾಸವನ್ನು ಪ್ರತಿದಿನ ಮೂರು–ನಾಲ್ಕು ಘಂಟೆಗಳ ಕಾಲ ತಪ್ಪದೇ ಮಾಡುತ್ತಿದ್ದೆ. ಗುರುಗಳಲ್ಲಿ ವೀಣಾವಾದನದ ಪ್ರೌಢಶಿಕ್ಷಣ ಮುಂದು

ವರೆಯುತ್ತಿತ್ತು. ಈ ಮಧ್ಯೆ ೧೯೪೫ರಲ್ಲಿ ನಾನು ಆಸ್ಥಾನ ವಿದ್ವಾಂಸನೂ ಆಗಿದ್ದೆ. ಗುರುಗಳು ಇದಕ್ಕಾಗಿ ಬಹಳ ಮುತುವರ್ಜಿ ವಹಿಸಿದ್ದರು. ನನ್ನನ್ನು ಆಸ್ಥಾನ ವಿದ್ವಾಂಸನಾಗಿ ನೇಮಕ ಮಾಡಿರುವ ಅರಮನೆ ಆದೇಶವನ್ನು ಕೈಯಲ್ಲಿ ಹಿಡಿದು ಈ ಶುಭವಾರ್ತೆಯನ್ನು ನಮಗೆ ತಿಳಿಸಲು ಗುರುಗಳು ಡಿ. ಸುಬ್ಬಯ್ಯ ರಸ್ತೆಯಲ್ಲಿ ವಾಸವಾಗಿದ್ದ ನಮ್ಮ ಮನೆಗೆ ಟಾಂಗಾದಲ್ಲಿ ಖುದ್ದು ಬಂದಿದ್ದರು. ಆಗಿನ ಕಾಲಕ್ಕೆ 'ಆಸ್ಥಾನ ವಿದ್ವಾನ್' ಪದವಿ ಒಂದು ಬಹಳ ದೊಡ್ಡ ಗೌರವವಾಗಿತ್ತು. ನಮ್ಮ ತಂದೆತಾಯಿಯರ ಸಂತೋಷಕ್ಕೆ ಪಾರವೇ ಇಲ್ಲ. ದೇವರಂತೆ ಬಂದಿದ್ದ ನನ್ನ ಗುರುಗಳನ್ನು ನನ್ನ ತಂದೆಯವರು ಅತ್ಯಂತ ಕೃತಜ್ಞತೆ, ಗೌರವಗಳಿಂದ ಉಪಚರಿಸಿದರು. ಶಿಷ್ಯರ ಅಭ್ಯುದಯವನ್ನೇ ಸದಾ ಚಿಂತಿಸುತ್ತಿದ್ದ ಇಂತಹ ಗುರುಗಳನ್ನು ಪಡೆದುದು ನಮ್ಮ ಸೌಭಾಗ್ಯ ವಾಗಿತ್ತು. ನವರಾತ್ರಿ ರಾಜ ದರ್ಬಾರಿಗೆ ನಾನು ಆಸ್ಥಾನವಿದ್ವಾಂಸನಾಗಿ ಹೋದ ಮೊದಲ ದಿನ ನಮ್ಮ ಮನೆಯಲ್ಲೆಲ್ಲಾ ಸಂಭ್ರಮವೋ ಸಂಭ್ರಮ. ದರ್ಬಾರಿಗೆ ಬೇಕಾದ ಕರಿನಿಲುವಂಗಿ , ಬಿಳಿ ಷರಾಯಿ, ಜರತಾರಿ ಪೇಟ , ಮಡಿಸಿ ಇಸ್ತ್ರಿ ಮಾಡಿದ ಜರತಾರಿ ವಲ್ಲಿ ಇವುಗಳನ್ನೆಲ್ಲಾ ಸಿದ್ಧಪಡಿಸಿಕೊಂಡಿದ್ದೆ. ಈ ದರ್ಬಾರ್ ಉಡುಪನ್ನು ಧರಿಸಿದ ನನ್ನನ್ನು ನೋಡಿ ನನ್ನ ತಂದೆತಾಯಿಯವರ ಪ್ರೀತಿಯ ಕಣ್ಣುಗಳಿಗೆ ನಾನೊಬ್ಬ ರಾಜಕುಮಾರನಂತೆಯೇ ಕಂಡಿರಬೇಕು! ಅವರ ಸಂತೋಷವನ್ನು ಹೇಳತೀರದು. ನನಗೂ ಅಷ್ಟೇ ಆನಂದವಾಗಿತ್ತು. ಜೀವನದಲ್ಲಿ ಪ್ರಪ್ರಥಮವಾಗಿ ನಾನು ಕಂಡ ಒಂದು ಗೌರವದ ಹುದ್ದೆ ಇದಾಗಿತ್ತು. ಮಹಾರಾಜ ಜಯಚಾಮರಾಜೇಂದ್ರ ಒಡೆಯರು ನನ್ನ ಆಶ್ರಯದಾತರಾಗಿದ್ದರು. ಆಗಿನ ಮಾಸಿಕ ಸಂಭಾವನೆ ಕೇವಲ ಮೂವತ್ತು ರೂ.ಗಳಾದರೂ, ಅಂದಿನ ಕಾಲಸ್ಥಿತಿಗೆ ಅದು ಒಂದು ದೊಡ್ಡ ಮೊಬಲಗೇ ಆಗಿತ್ತು. ಅದರಲ್ಲೇ ಒಂದು ಸಾಮಾನ್ಯ ಸಂಸಾರವನ್ನೇ ನಿರ್ವಹಿಸಬಹುದಾಗಿತ್ತು.

ಎರಡು ಹವ್ಯಾಸಗಳು

ನನ್ನ ಆಗಿನ ದಿನಚರಿಯಲ್ಲಿ ಇನ್ನೂ ಎರಡು ಹವ್ಯಾಸಗಳು ಬಹಳ ಮುಖ್ಯವಾಗಿದ್ದವು. ಒಂದು, ಹಿಂದಿ ಕಲಿಕೆ. ೧೯೩೩ರಲ್ಲಿ ನಾವು ಮೈಸೂರಿಗೆ ಬಂದಾಗಲೇ ಹಿಂದಿ ಕಲಿಯಲು ಪ್ರಾರಂಭ ಮಾಡಿದ್ದೆ. ಸುಮಾರು ೧೯೪೬ರಲ್ಲಿ ವಿಶಾರದ ಪರೀಕ್ಷೆಯಲ್ಲಿ ಮೈಸೂರು ಸಂಸ್ಥಾನಕ್ಕೆ ಪ್ರಥಮ ಸ್ಥಾನದಲ್ಲಿ ಉತ್ತೀರ್ಣನಾದೆ. ಮದರಾಸಿನಲ್ಲಿ ಹಿಂದಿ ಪ್ರಚಾರ ಸಭೆಯವರು ಏರ್ಪಡಿಸಿದ್ದ ಹಿಂದಿ ಘಟಿಕೋತ್ಸವದಲ್ಲಿ ಮಹಾತ್ಮಾ ಗಾಂಧೀಜಿಯವರು ಘಟಿಕೋತ್ಸವ ಭಾಷಣ ಮಾಡಿ ನಮಗೆಲ್ಲಾ ವಿಶಾರದ ಪದವಿಪತ್ರಗಳನ್ನು ವಿತರಿಸಿದರು. ಗಾಂಧೀಜಿಯವರನ್ನು ಅಷ್ಟು ಸಮೀಪದಿಂದ ನೋಡುವ ಹಾಗೂ ಅವರ ಭಾಷಣಗಳನ್ನು ನೇರವಾಗಿ ಕೇಳುವ ಇಂತಹ ಸುಯೋಗ ಲಭಿಸಿದ್ದು ನಮ್ಮ ಮಿತ್ರವೃಂದಕ್ಕೆ ಅತ್ಯಂತ ಹರ್ಷದಾಯಕ ಸನ್ನಿವೇಶವಾಗಿತ್ತು. ಆ ನೆನಪು ನನ್ನಲ್ಲಿ ಈಗಲೂ ಹಚ್ಚಹಸಿರಾಗಿದೆ.

ನನ್ನ ಎರಡನೆಯ ಹವ್ಯಾಸ ವ್ಯಾಯಾಮ ಶಾಲೆಗೆ ಹೋಗಿ ಪ್ರತಿದಿನ ಸಂಜೆ ವ್ಯಾಯಾಮ ಮಾಡುವುದು. ಆಗ ಇನ್ನೂ ತರುಣನಾಗಿದ್ದ ನನಗೆ ಶರೀರಸೌಷ್ಠವದ ಜತೆಗೆ ಆರೋಗ್ಯವನ್ನೂ ಚೆನ್ನಾಗಿ ಕಾಪಾಡಿಕೊಳ್ಳ ಬೇಕೆಂಬ ಕಾಳಜಿ ತುಂಬ ಇತ್ತು. ಆದ್ದರಿಂದ, ತಪ್ಪದೇ ವ್ಯಾಯಾಮ ಮಾಡುತ್ತಿದ್ದೆ. ನನ್ನ ಸಹಪಾಠಿ ಎಂ. ಚೆಲುವರಾಯಸ್ವಾಮಿಗಳೂ ಅಲ್ಲಿಗೆ ವ್ಯಾಯಾಮ ಮಾಡಲು ಬರುತ್ತಿದ್ದರು. ನಮ್ಮ ಸ್ನೇಹ, ಪರಿಚಯ ಆದುದೂ ಅಲ್ಲೇ. ನಮ್ಮ ಇನ್ನೊಬ್ಬ ಸಹಪಾಠಿ ವೀಣಾ ದೊರೆಸ್ವಾಮಿ ಅಯ್ಯಂಗಾರ್ ಅವರಿಗೆ ಇದರಲ್ಲಿ ಆಸಕ್ತಿ ಇರಲಿಲ್ಲ. ನಾನು ಆಗಾಗ ಅವರಿಗೆ ವ್ಯಾಯಾಮದ ಮಹತ್ವದ ಬಗ್ಗೆ ಬಲವಾದ ಭಾಷಣ ಬಿಗಿಯುತ್ತಿದ್ದೆ. ಆದರೂ, ಅವರು ಅದರ ಬಗ್ಗೆ ಒಲವು ತೋರಿರಲಿಲ್ಲ. ೧೯೪೮ರಲ್ಲಿ ನಾವಿಬ್ಬರೂ ಗುರುಗಳ ಜತೆ ಜೋಧಪುರಕ್ಕೆ ಹೋಗಿದ್ದಾಗ ಒಂದು ಬೆಳಗ್ಗೆ ನಾನು ವ್ಯಾಯಾಮ ಮಾಡುತ್ತಿದ್ದೆ. ದೊರೆಸ್ವಾಮಿ ಅಯ್ಯಂಗಾರ್ ಅವರು ಅಲ್ಲೇ ನೋಡುತ್ತಾ ನಿಂತಿದ್ದರು. ನಾನು ಸುಮ್ಮನೆ, 'ನೀವು ಯಾಕೆ ಇಂದಿನಿಂದ ವ್ಯಾಯಾಮ ಪ್ರಾರಂಭಿಸ ಬಾರದು?' ಎಂದು ಕೇಳಿದೆ. ಅದಕ್ಕೆ ಅವರು ಒಪ್ಪಿ ತಕ್ಷಣ ಸಿದ್ಧರಾಗಿಯೇ ಬಿಟ್ಟರು. ನನಗೆ ಆಶ್ಚರ್ಯವೋ ಆಶ್ಚರ್ಯ. ಇನ್ನೊಂದು ಕಡೆ ಸಂತೋಷ. ಸರಿ, ವ್ಯಾಯಾಮದ ಮೊದಲ ಕೆಲವು ಅಭ್ಯಾಸಗಳನ್ನು ವಿವರಿಸಿ ಕೆಲವು ದಂಡೆ, ಉಠ್‌ಬೈಸ್ ಇವುಗಳನ್ನು ಹೊಡೆಸಿದೆ. ಇಷ್ಟೆಲ್ಲಾ ಮಾಡುವ ಹೊತ್ತಿಗೆ ಅಯ್ಯಂಗಾರ್ಯರು ಬೆವೆತರು, ಸುಸ್ತಾದರು. ಅಲ್ಲಿಗೆ ವ್ಯಾಯಾಮವನ್ನು ನಿಲ್ಲಿಸಿದೆವು. ಮಾರನೆಯ ದಿನ ಬೆಳಗ್ಗೆ ಅಯ್ಯಂಗಾರ್ಯರ ಸೊಂಟ, ಕಾಲು, ಕೈ ಎಲ್ಲವೂ ನೋವಿನಿಂದ ಹಿಡಿದು ಕೊಂಡಿತ್ತು. ನೆಟ್ಟಗೆ ನಿಲ್ಲುವುದಕ್ಕೂ, ನಡೆಯುವುದಕ್ಕೂ ಕಷ್ಟವಾಗಿತ್ತು. ಗುರುಗಳಿಗೆ ಗಾಬರಿಯಾಯಿತು. ಅವರಿಗೆ ಇದೆಲ್ಲವನ್ನೂ ವಿವರಿಸಿ ಹೇಳಿದಾಗ ಅವರು ನನಗೆ ಲಘುವಾಗಿ ಛೀಮಾರಿ ಹಾಕಿದರು. ದೊರೆಸ್ವಾಮಿ ಅಯ್ಯಂಗಾರ್ ನನ್ನನ್ನು ಬಿಟ್ಟುಕೊಡದೇ ತಾವಾಗಿಯೇ ವ್ಯಾಯಾಮ ಮಾಡಿದುದಾಗಿ ಹೇಳಿ ಗುರುಗಳಿಗೆ ಸಮಾಧಾನ ಮಾಡಿದರು. ಅಂದಿನಿಂದ, ನಾನು ದೊರೆಸ್ವಾಮಿ ಅಯ್ಯಂಗಾರರಿಗೆ ವ್ಯಾಯಾಮದ ಬಗ್ಗೆ ಹೇಳುವುದನ್ನು ಬಿಟ್ಟುಬಿಟ್ಟೆ. ಅವರು ಸಹಾ ಮತ್ತೆಂದೂ ವ್ಯಾಯಾಮ ಮಾಡಲಿಲ್ಲ. ಈ ತಮಾಷೆಯ ಪ್ರಸಂಗವನ್ನು ಅನೇಕ ಬಾರಿ ನೆನಪಿಸಿಕೊಂಡು ಹೊಟ್ಟೆ ಹುಣ್ಣಾಗುವಂತೆ ನಕ್ಕಿದ್ದೇವೆ.

ಆಶಾದಾಯಕ ಸ್ಥಿತಿ

ನನ್ನ ಸಂಗೀತದ ವೃತ್ತಿಜೀವನದಲ್ಲಿ ಈ ವೇಳೆಗಾಗಲೇ ಸ್ವಲ್ಪಮಟ್ಟಿಗೆ ಹೆಸರು ಗಳಿಸಲು ಪ್ರಾರಂಭಿಸಿದ್ದೆ. ನನ್ನನ್ನು ಒಳ್ಳೆಯ ವೀಣಾ ಹಾಗೂ ಗಾಯನ ಶಿಕ್ಷಕನೆಂದು ಎಲ್ಲರೂ ಇಷ್ಟಪಡುತ್ತಿದ್ದರು. ಆದ್ದರಿಂದ, ಆಗ

ನಾನು ಅತ್ಯಂತ ಹೆಚ್ಚಿನ ಬೇಡಿಕೆಯ ಸಂಗೀತ ವಿದ್ವಾಂಸನಾಗಿದ್ದೆ. ಇದಲ್ಲದೇ, ವೀಣಾ ಕಛೇರಿಗಳನ್ನೂ ಸ್ವತಂತ್ರವಾಗಿ ಮಾಡಲು ಪ್ರಾರಂಭಿಸಿದ್ದೆ. ರಾಮನವಮಿ ಸಂಗೀತೋತ್ಸವ, ಕೃಷ್ಣೋತ್ಸವ, ಗಣಪತಿ ಸಂಗೀತೋತ್ಸವ, ಶಾಲಾ ಕಾಲೇಜುಗಳ ವಿಶೇಷ ಸಮಾರಂಭಗಳು ಇತ್ಯಾದಿ ಕಾರ್ಯಕ್ರಮಗಳಲ್ಲಿ ನನ್ನ ವೀಣಾ ಕಛೇರಿಗಳು ನಡೆಯ ಲಾರಂಭಿಸಿದುವು. ಮೈಸೂರು ಆಕಾಶವಾಣಿಯೂ ಇಷ್ಟು ಹೊತ್ತಿಗೆ ಪ್ರಾರಂಭವಾಗಿತ್ತು. ವರ್ಷದಲ್ಲಿ ನಾಲ್ಕೈದು ಬಾರಿ ನನ್ನ ವೀಣಾ ಕಾರ್ಯ ಕ್ರಮಗಳು ನಡೆಯುತ್ತಿದ್ದವು. ಕೇವಲ ಹದಿನೈದು ರೂಪಾಯಿ ಸಂಭಾವನೆಯನ್ನು ಫಲತಾಂಬೂಲದ ಸಹಿತ ಕೊಡುತ್ತಿದ್ದರು. ಅದೇ ಆಗಿನ ಕಲಾವಿದರಿಗೆಲ್ಲಾ ಒಂದು ಬಹಳ ದೊಡ್ಡ ಗೌರವದ ವಿಷಯ ವಾಗಿತ್ತು. ಅದರ ಜತೆಗೆ, ನಾನು ಮದರಾಸ್ ಆಲ್ ಇಂಡಿಯಾ ರೇಡಿಯೋ ಕಲಾವಿದನಾಗಿಯೂ ಆಯ್ಕೆ ಆಗಿ ಸುಮಾರು ೧೯೪೫ರಿಂದ ವೀಣಾ ಕಾರ್ಯಕ್ರಮಗಳನ್ನು ನೀಡಲು ಪ್ರಾರಂಭಿಸಿದ್ದೆ. ಅಲ್ಲಿಂದಲೂ ವರ್ಷದಲ್ಲಿ ನಾಲ್ಕೈದು ಕರೆಗಳು ಬರುತ್ತಿದ್ದವು. ನನ್ನ ಕೆಲವು ಕಾರ್ಯಕ್ರಮಗಳ ಬಗ್ಗೆ ಮದರಾಸಿನ ತಮಿಳು ಮಾಸಪತ್ರಿಕೆ 'ಕಲ್ಕಿ' ಮತ್ತು 'ಆನಂದ ವಿಕಟನ್'ಗಳಲ್ಲಿ ಒಳ್ಳೆಯ ವಿಮರ್ಶೆಗಳೂ ಬಂದಿದ್ದುವು. ಹೀಗೆ, ನನ್ನ ಕಲಾಜೀವನ ಒಂದು ರೀತಿಯಲ್ಲಿ ಆಶಾದಾಯಕವಾಗಿ ನಡೆಯಲಾರಂಭಿಸಿದ್ದುದು ನನ್ನ ತಂದೆ ತಾಯಿ ಹಾಗೂ ಗುರುಗಳಿಗೆ ಬಹಳ ಸಂತೋಷವಾಗಿತ್ತು.

ನಾನು ಯಾವಾಗಲೂ ಚಟುವಟಿಕೆಯಿಂದ ಎಲ್ಲವನ್ನೂ ಅಚ್ಚುಕಟ್ಟಾಗಿ ನಿರ್ವಹಿಸುತ್ತಾ ಸಂತೋಷ ಸಂಭ್ರಮಗಳಿಂದ ಓಡಾಡುತ್ತಿದ್ದೆ. ಬೆಳಗಿನಿಂದ ಸಂಜೆಯವರೆಗೂ ಸೈಕಲ್ ತುಳಿಯುತ್ತಾ ಇಡೀ ಮೈಸೂರಿನ ಮೂಲೆಮೂಲೆಗೆ ಸುತ್ತುತ್ತಾ ಪಾಠದ ಮನೆಗಳಿಗೆ ಹೋಗುತ್ತಿದ್ದೆ. ಆದರೂ, ನನ್ನ ಆಗಿನ ಉತ್ಸಾಹದಲ್ಲಿ ನನಗೆ ಸ್ವಲ್ಪವೂ ಆಯಾಸವಾಗಲಿ, ಬೇಸರವಾಗಲಿ ಆಗುತ್ತಿರಲಿಲ್ಲ. ನಮ್ಮ ಗೃಹಕೃತ್ಯ ನಿರ್ವಹಣೆಯಲ್ಲಿ ನನ್ನ ಹೊಣೆಗಾರಿಕೆಯನ್ನು ನಾನು ಇಷ್ಟರಮಟ್ಟಿಗೆ ನಿಭಾಯಿಸುವಂತಾದುದೇ ನನಗೂ, ನನ್ನ ತಂದೆತಾಯಿಯರಿಗೂ ಅತ್ಯಂತ ಸಮಾಧಾನದ ವಿಷಯವಾಗಿತ್ತು. ಒಂದು ಮೆಟ್ರಿಕ್ಯುಲೇಷನ್ ಸಹ ಆಗದೇ ಇದ್ದ ನಾನು ಆಗ ಪ್ರತಿ ತಿಂಗಳಿಗೆ ೨೫೦-೩೦೦ ರೂ.ಗಳಷ್ಟು ಸಂಪಾದಿಸುತ್ತಿದ್ದೆ. ಆ ಕಾಲದ ಒಬ್ಬ ಎಂ.ಎ., ಎಂ.ಎಸ್‌ಸಿ., ಪದವೀಧರ ಕಾಲೇಜು ಅಧ್ಯಾಪಕನಿಗೆ ಬರುತ್ತಿದ್ದ ಸಂಬಳ ತಿಂಗಳಿಗೆ ಎಪ್ಪತ್ತೈದು ರೂಪಾಯಿ. ನನ್ನದು ಸ್ವತಂತ್ರ ಕಲಾಜೀವನ. ಸಮಾಜದಲ್ಲಿ ಒಂದು ಗೌರವಸ್ಥಾನ. ಒಳ್ಳೆಯ ಸಂಪಾದನೆ. ನಾನು ಹೀಗೆ ಪ್ರಗತಿ ಹೊಂದುತ್ತಿದ್ದುದನ್ನು ಕಂಡು ನನ್ನ ತಂದೆಯವರನ್ನು ಟೀಕೆ ಮಾಡುತ್ತಿದ್ದವರಿಗೆಲ್ಲಾ ಒಂದು ರೀತಿಯಲ್ಲಿ ಆಶ್ಚರ್ಯವೂ, ಈರ್ಷ್ಯೆಯೂ ಆಗಿತ್ತು. ಒಟ್ಟಿನಲ್ಲಿ ಮುಂದೆ ಹೇಗೋ ಎಂಬ ನಮ್ಮ ಆತಂಕದ ದಿನಗಳು ಕಳೆದು ಇಷ್ಟರಮಟ್ಟಿಗೆ ನಮ್ಮ ಪರಿಸ್ಥಿತಿ ಸುಧಾರಿಸಿದ್ದು ನಮ್ಮೆಲ್ಲರಿಗೂ ಅತ್ಯಂತ ಸಮಾಧಾನದ ವಿಷಯಾಗಿತ್ತು.

ಕರಾಳ ವರ್ಷಗಳು

ನನ್ನ ತಂದೆ ಮತ್ತು ಭಾವ ಇಬ್ಬರೂ ಬೇರೆಬೇರೆ ಊರುಗಳಿಗೆ ವರ್ಗವಾಗುತ್ತಾ ಶಾಲಾಮಾಸ್ತರರ ಸರಕಾರೀ ಸೇವೆಯನ್ನು ನಿರ್ವಹಿಸುತ್ತಿದ್ದರು. ನನ್ನ ತಂದೆಯವರು ಆಗಾಗ ಮೈಸೂರಿಗೆ ಬಂದು ಸಂಸಾರದ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ್ತಿದ್ದರು. ಭಾವನವರು ಸ್ವತಂತ್ರವಾಗಿ ತಮ್ಮ ಸಂಸಾರವನ್ನು ಹೂಡಲು ಇಷ್ಟಪಟ್ಟರೂ ನನ್ನ ಅಕ್ಕನ ಆರೋಗ್ಯದ ಸಮಸ್ಯೆಗಳು, ಅವಳ ಹೆರಿಗೆ ಸಂದರ್ಭಗಳು ಹೀಗೆ ಅವಳು ಮಕ್ಕಳೊಡನೆ ಹೆಚ್ಚಾಗಿ ನಮ್ಮ ಮನೆಯಲ್ಲೇ ಇರಬೇಕಾಗುತ್ತಿತ್ತು. ಅವಳ ಇಬ್ಬರು ಹೆಣ್ಣು ಮಕ್ಕಳಲ್ಲಿ ದೊಡ್ಡ ಮಗಳ ವಿವಾಹ ೧೯೪೭-೪೮ರ ವೇಳೆಗೆ ಅವಳ ಹದಿನೈದನೆಯ ವಯಸ್ಸಿಗೆ ನೆರವೇರಿತ್ತು. ಆ ಮದುಮಗಳ ತಂಗಿ ಮತ್ತು ತಮ್ಮ ಇನ್ನೂ ಚಿಕ್ಕವರಾಗಿದ್ದರು. ನನ್ನ ತಂದೆಯವರು ಈ ಹೊತ್ತಿಗೆ ಮೈಸೂರಿಗೆ ವರ್ಗವಾಗಿ ಬಂದರು. ಅವರು ನಮ್ಮೊಂದಿಗೇ ಇರುವಂತಾದುದು ನಮಗೆಲ್ಲಾ ಬಹಳ ಸಂತೋಷವಾಯಿತು. ಆದರೆ, ಅವರ ಆರೋಗ್ಯ ಸ್ವಲ್ಪವೂ ಚೆನ್ನಾಗಿರಲಿಲ್ಲ. ಯಾವಾಗಲೂ ಕೆಮ್ಮು, ಉಬ್ಬಸಗಳಿಂದ ನರಳುತ್ತಾ ಯಾವ ಔಷಧೋಪಚಾರಗಳನ್ನೂ ಮಾಡಿಕೊಳ್ಳದೇ ಕೃಶವಾಗುತ್ತಿದ್ದರು. ಪ್ರಕೃತಿಚಿಕಿತ್ಸೆಯೇ ಶ್ರೇಷ್ಠವೆಂದು ನಂಬಿದ್ದ ಅವರು ಉಪವಾಸ , ಬಿಸಿಲಿನ ಸ್ನಾನ , ತಣ್ಣೀರಿನ ಸೊಂಟಸ್ನಾನ , ಮಣ್ಣಿನ ಲೇಪನ ಹೀಗೆಲ್ಲಾ ತಾವೇ ಏನೇನೋ ಪ್ರಯೋಗಗಳನ್ನು ಮಾಡಿಕೊಂಡು ತಮ್ಮ ಆರೋಗ್ಯವನ್ನು ಸಂಪೂರ್ಣವಾಗಿ ಹದಗೆಡಿಸಿಕೊಂಡಿದ್ದರು. ಈ ವೇಳೆಗಾಗಲೇ ನಮ್ಮ ಎಸಳೂರುಪೇಟೆಯ ಎಸ್ಟೇಟನ್ನೂ ಬಂದಷ್ಟು ಬೆಲೆಗೆ ಮಾರಿ ಆ ಹಣವನ್ನು ಎಮ್ಮೆಗಳ ಮೇಲೆ ಸುರಿದು ಎಲ್ಲವನ್ನೂ ಕಳೆದುಕೊಂಡಾಗಿತ್ತು. ತಮ್ಮ ಇಡೀ ಜೀವಮಾನದಲ್ಲಿ ಮಕ್ಕಳಿಗಾಗಿ ಏನೂ ಮಾಡಲಾಗಲಿಲ್ಲವಲ್ಲಾ ಎಂಬ ಕೊರಗು ಅವರನ್ನು ಕಾಡುತ್ತಿತ್ತು. ಈ ಬಗ್ಗೆ ಅನೇಕ ಬಾರಿ ತಮ್ಮ ಅಳಲನ್ನು ನಮ್ಮ ಮುಂದೆ ತೋಡಿ ಕೊಂಡಿದ್ದುದೂ ಉಂಟು. ಇಷ್ಟು ಸಾಲದೆಂಬಂತೆ ನಮ್ಮ ಭಾವನವರಿಗೂ ಆರೋಗ್ಯ ಕೆಡುತ್ತಾ ಬಂತು. ಕರುಳಿನ ಬೇನೆ ಅವರನ್ನು ಕಾಡುತ್ತಿತ್ತು. ಜನ್ಮತಃ ಒಳ್ಳೆಯ ಆರೋಗ್ಯಶಾಲಿಗಳಾಗಿದ್ದ ಅವರಿಗೆ ಇಂತಹ ವ್ಯಾಧಿ ಬಂದದ್ದು ನನ್ನ ತಂದೆಯವರಿಗೆ ಬಹಳ ಆತಂಕದ ವಿಷಯವಾಗಿತ್ತು. ಮನೆಯಲ್ಲಿ ಎಲ್ಲರಿಗೂ ಒಂದು ರೀತಿಯ ಮಂಕು ಕವಿದಿತ್ತು.

೧೯೪೮-೪೯ನೇ ಇಸವಿಗಳು ನನ್ನ ಪಾಲಿಗೆ ಅತ್ಯಂತ ಕರಾಳ ವರ್ಷಗಳಾಗಿದ್ದವು. ಈ ಅವಧಿಯಲ್ಲಿ ಸಂತೋಷ ಹಾಗೂ ದುಃಖಗಳೆರಡನ್ನೂ ನಾವು ಏಕಕಾಲದಲ್ಲಿ ಅನುಭವಿಸ ಬೇಕಾಯಿತು. ನನ್ನ ತಂದೆ-ತಾಯಿಯರ ಬಹಳ ಕಾಲದ ಕನಸಾಗಿದ್ದ ಅವರ ಮೊಮ್ಮಗನ ಜನನ ೧೯೪೮ರ ಮಧ್ಯಭಾಗದಲ್ಲಿ ಆಗಿತ್ತು. ನಾನು ತಂದೆಯಾದ ಸಂಭ್ರಮದಲ್ಲಿ ನನ್ನ ಪ್ರಥಮ ಪುತ್ರರತ್ನನನ್ನು ಎತ್ತಿ ಮುದ್ದಾಡಿದೆ.

ಎಲ್ಲರಿಗೂ ಮನಸಾರ ಸಿಹಿಯನ್ನು ಹಂಚಿದ್ದೆ. ಇಷ್ಟೆಲ್ಲಾ ಸಂತೋಷದಿಂದ ಇರುವಾಗ ಅದೇ ವರ್ಷದ ನವರಾತ್ರಿಯ ವೇಳೆಗೆ ನನ್ನ ಗುರುಗಳ ಹಿರಿಯ ಮಗ ಪ್ರಸನ್ನಶ್ರೀನಿವಾಸ ಟೈಫಾಯಿಡ್ ಜ್ವರದಲ್ಲಿ ನರಳಿ ನರಳಿ ಯಾವ ಚಿಕಿತ್ಸೆಯೂ ಫಲಿಸದೇ ವಿಧಿವಶನಾದ. ಈ ಆಘಾತದಿಂದ ಗುರುಗಳು ಜರ್ಝರಿತರಾದರು. ಆ ವರ್ಷವಷ್ಟೇ ತಮ್ಮ ಇಬ್ಬರೂ ಶಿಷ್ಯರಾದ ನಮ್ಮೊಂದಿಗೆ ಜೋಧಪುರದ ಪ್ರವಾಸವನ್ನು ಮುಗಿಸಿ ಸಂತೋಷದಿಂದಿದ್ದರು. ಆದರೆ ವಿಧಿ ಅವರಿಗೆ ಇಂತಹ ಸಹಿಸಲಾರದ ದುಃಖವನ್ನು ತಂದಿತ್ತು. 'ಪುತ್ರಶೋಕಂ ನಿರಂತರಮ್' ಎಂಬಂತೆ ಪುತ್ರಶೋಕದಿಂದ ಬಳಲಿ ಬೆಂಡಾದರು. ಯಾವಾಗಲೂ ಕಣ್ಣೀರಿಡುತ್ತಿದ್ದ ಗುರುಗಳು ಸಂಪೂರ್ಣವಾಗಿ ಹತಾಶರಾದರು. ಇತ್ತ ನನ್ನ ಭಾವನವರು ತೀವ್ರವಾದ ಕರುಳುಬೇನೆಯ ಚಿಕಿತ್ಸೆಗೆ ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಗೆ ದಾಖಲಾದರು. ಯಾವ ಚಿಕಿತ್ಸೆಯೂ ಫಲಿಸದೇ ಅದೇ ನವರಾತ್ರಿಯನಂತರದ ಚಾಮುಂಡೇಶ್ವರಿ ತೆಪ್ಪೋತ್ಸವದಂದು ಅವರೂ ನಿಧನರಾದರು. ಇದು ನಮ್ಮೆಲ್ಲರಿಗೂ ಮುಖ್ಯವಾಗಿ ನನ್ನ ಅಕ್ಕ ಮತ್ತು ಹಾಸಿಗೆ ಹಿಡಿದು ಮಲಗಿದ್ದ ತಂದೆಯವರಿಗೆ, ವಜ್ರಾಘಾತವೇ ಆಗಿತ್ತು. ಮೂರು ಮಕ್ಕಳು ಮತ್ತು ಪತ್ನಿಯನ್ನು ನನ್ನ ಭಾವನವರು ಅಗಲಿದ್ದರು. ಯಾವ ಆಸರೆಯೂ ಇಲ್ಲದ ಆ ಸಂಸಾರ ಅಂಧಕಾರದಲ್ಲಿ ಮುಳುಗಿತ್ತು. ನನ್ನ ತಂದೆ-ತಾಯಿಯರು ಮಗಳ ಈ ದುಃಸ್ಥಿತಿಗೆ ಮರುಗಿ ಗೋಳಾಡಿದರು. ತಂದೆಯವರಂತೂ ತನ್ನ ಅತ್ಯಂತ ಪ್ರೀತಿಯ ಮಗಳು ಮತ್ತು ಮೊಮ್ಮಕ್ಕಳ ಭವಿಷ್ಯವನ್ನೇ ಚಿಂತಿಸಲಾರಂಭಿಸಿದರು. ತಮ್ಮ ಆರೋಗ್ಯವೂ ಚೆನ್ನಾಗಿಲ್ಲ. ಮುಂದೆ ಹೇಗೋ? ಅವರನ್ನು ನೋಡಿ ಕೊಳ್ಳುವವರು ಯಾರು? ಹೀಗೆಲ್ಲಾ ನನ್ನೊಂದಿಗೆ ತಮ್ಮ ಮನಸ್ಸಿನ ದುಗುಡವನ್ನು ಹಂಚಿಕೊಂಡು ಅದಕ್ಕೆ ಪರಿಹಾರವಾಗಿ ನನ್ನಿಂದ ಅವರು ಒಂದು ಆಶ್ವಾಸನೆಯನ್ನು ಅಪೇಕ್ಷಿಸಿದರು. ಅವರಿಗೆ ಯಾವಾಗಲೂ ಅತ್ಯಂತ ವಿಧೇಯನಾಗಿದ್ದ ನನ್ನಲ್ಲಿ ಅವರಿಗೆ ವಿಶೇಷವಾದ ನಂಬಿಕೆ ಇತ್ತು. ಅವರ ಇಂಗಿತವನ್ನರಿತ ನಾನು ನನ್ನ ಅಕ್ಕ ಮತ್ತು ಅವಳ ಮಕ್ಕಳನ್ನು ಎಂದಿಗೂ ಕೈ ಬಿಡುವುದಿಲ್ಲವೆಂದು ವಚನ ಕೊಟ್ಟಮೇಲೆ ಅವರು ಸಮಾಧಾನದ ನಿಟ್ಟುಸಿರುಬಿಟ್ಟರು.

ಅಳಿಯನ ಅನಿರೀಕ್ಷಿತ ಮರಣದ ದುಃಖದಿಂದ ನನ್ನ ತಂದೆಯವರ ಆರೋಗ್ಯ ಮತ್ತಷ್ಟು ಹದಗೆಟ್ಟಿತು. ತಾವು ಇನ್ನು ಹೆಚ್ಚು ಕಾಲ ಬದುಕುವುದಿಲ್ಲವೆಂದು ಅರಿತುಕೊಂಡರು. ಮನೆಯಲ್ಲಿ ಮೊದಲೇ ದುಃಖದ ವಾತಾವರಣ. ಅದೂ ಸಾಲದೆಂಬಂತೆ ಈಗ ತಂದೆಯವರ ಅಂತ್ಯಕಾಲ ಸನ್ನಿಹಿತವಾಗಿತ್ತು. ೧೯೪೮ರ ಡಿಸೆಂಬರ್ ಒಂದರಂದು ಬೆಳಗ್ಗೆ ಪ್ರಜ್ಞಾಹೀನರಾದ ತಂದೆಯವರು ಅಂದೇ ಮಧ್ಯಾಹ್ನ ಕೊನೆಯುಸಿರೆಳೆದರು. ನನ್ನ ಭಾವನವರ ಮರಣದ ಕೇವಲ ಒಂದೂವರೆ ತಿಂಗಳೊಳಗೆ ತಂದೆಯವರ ಮರಣ! ಇದೆಂಥ ವಿಧಿ ಕ್ರೌರ್ಯ! ಮನೆಯ ಹಿರಿಯ ಮಗನಾಗಿ ಎಲ್ಲ ಜವಾಬ್ದಾರಿಗಳನ್ನೂ ಹೊರಬೇಕಾಗಿದ್ದ ನನ್ನ ಪಾಡು ಹೇಗಿರಬೇಡ! ನನ್ನ ತಮ್ಮನ ವಿದ್ಯಾಭ್ಯಾಸ ಇನ್ನೂ ಮುಗಿದಿರಲಿಲ್ಲ. ಮನೆಯಲ್ಲಿ ಪತಿಯನ್ನು ಕಳೆದುಕೊಂಡು ಅನಾಥಳಾಗಿದ್ದ ನನ್ನ ಅಕ್ಕ ಮತ್ತು ಅವಳ ಮಕ್ಕಳು. ಈಗ ನನ್ನ ತಾಯಿಯ ಸರದಿ! ತನ್ನ ತಾಳಿಯ ಭಾಗ್ಯವನ್ನು ಕಳೆದುಕೊಂಡು ಕಣ್ಣೀರಿಡುತ್ತಿದ್ದ ಮಗಳನ್ನು ಕಂಡು ತಾಯಿ ಗೋಳಾಡುತ್ತಿದ್ದರೆ ಈಗ ತಾಯಿಯನ್ನು ನೋಡಿ ಮಗಳು ಗೋಳಾಡುತ್ತಿದ್ದಳು. ಈ ಇಬ್ಬರೂ ಹತಭಾಗ್ಯೆಯರ ದುಃಖವನ್ನು ನೋಡಿದಾಗ ನನಗೆ ಕರುಳು ಕಿತ್ತು ಬರುತ್ತಿತ್ತು. ಹೇಗೋ ಆ ಕಾಲಕ್ಕೆ ಒಂದು ಕೆಟ್ಟ ಧೈರ್ಯ, ಹುಮ್ಮಸ್ಸಿನಿಂದ ತಂದೆಯವರ ಉತ್ತರಕ್ರಿಯಾದಿಗಳನ್ನೆಲ್ಲಾ ಯಾವ ಲೋಪವೂ ಇಲ್ಲದಂತೆ ಸಾಂಗವಾಗಿ ಮಾಡಿ ಮುಗಿಸಿದೆ. ಪಿತೃಋಣವನ್ನು ತೀರಿಸಿದ ಸಾರ್ಥಕತೆ ನನ್ನಲ್ಲಿ ಮೂಡಿತ್ತು. ಆದರೆ, ನನ್ನ ಎಲ್ಲ ಶ್ರೇಯಸ್ಸಿಗೂ ಕಾರಣರಾಗಿದ್ದ ಅಂತಹ ತಂದೆಯ ಋಣವನ್ನು ಸಂಪೂರ್ಣವಾಗಿ ತೀರಿಸಲು ಸಾಧ್ಯವೆ? ಇಂದಿಗೂ ನಾನು ಅವರ ಪುಣ್ಯಸ್ಮರಣೆ ಮಾಡುತ್ತಾ ಅವರು ನನ್ನ ಮೇಲೆ ತೋರಿಸುತ್ತಿದ್ದ ಪ್ರೀತಿ ವಾತ್ಸಲ್ಯಗಳನ್ನು ನೆನೆದು ಪುಳಕಿತನಾಗುತ್ತೇನೆ.

ಈ ಎರಡು ದುರಂತಗಳು ಕಳೆದ ಮೇಲಾದರೂ ನಮಗೆ ಸ್ವಲ್ಪ ನೆಮ್ಮದಿ ಸಿಗಬಹುದೇನೋ ಎಂಬ ನಿರೀಕ್ಷೆಯೂ ಹುಸಿಯಾಗುತ್ತಾ ಬಂದಿತು. ನನ್ನ ತಾಯಿಯವರ ಆರೋಗ್ಯವೂ ಈಚೆಗೆ ಅಷ್ಟು ಚೆನ್ನಾಗಿರಲಿಲ್ಲ. ಅವರು ಸಹ ವೈದ್ಯಕೀಯ ಚಿಕಿತ್ಸೆಯಿಂದ ಬಹಳ ದೂರವೇ ಇರುತ್ತಿದ್ದರು. ಜತೆಗೆ ಈಗ ಒಮ್ಮೆಲೇ ಮೇಲೆರಗಿದ್ದ ಈ ಎರಡು ಆಘಾತಗಳು. ಹೀಗಾಗಿ ಮಾನಸಿಕವಾಗಿ ಜರ್ಝರಿತವಾದ ತಾಯಿಯವರೂ ಹಾಸಿಗೆ ಹಿಡಿದರು. ಬಲವಂತವಾಗಿ ಮಾಡುತ್ತಿದ್ದ ಔಷಧೋಪಚಾರಗಳಿಂದ ಏನೂ ಪ್ರಯೋಜನವಾಗುತ್ತಿರಲಿಲ್ಲ. ಸದಾ ಪತಿಯ ಧ್ಯಾನದಲ್ಲೇ ಕೊರಗುತ್ತಿದ್ದ ಅವರಿಗೆ ಈ ಪ್ರಪಂಚದ ಅರಿವೇ ಇಲ್ಲವೇನೋ ಎನ್ನಿಸುತ್ತಿತ್ತು. ಅವರನ್ನಾದರೂ ಇನ್ನೂ ಸ್ವಲ್ಪ ಕಾಲ ಉಳಿಸಿಕೊಂಡು ಅವರ ಸೇವೆಯನ್ನು ಮಾಡಬೇಕೆಂದು ನಾವೆಲ್ಲಾ ಹಂಬಲಿಸುತ್ತಿದ್ದೆವು. ಆದರೆ, ಎಲ್ಲದರಲ್ಲೂ ಆಸಕ್ತಿಯನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದ ಅವರಿಗೆ ಬದುಕಬೇಕೆಂಬ ಆಸೆ ಬತ್ತಿಹೋಗಿತ್ತು. ತನ್ನ ಮಕ್ಕಳು ಮುಂದೆ ಬಂದು ಅವರೆಲ್ಲ ಚೆನ್ನಾಗಿರುವುದನ್ನು ನೋಡುವ ಹಂಬಲ ಅವರಿಗೆ ಎಷ್ಟೇ ಇದ್ದರೂ ಪತಿವಿಯೋಗ ಮತ್ತು ಮಗಳ ದುಃಸ್ಥಿತಿ ನೋಡಿಕೊಂಡು ಬದುಕಿರಲು ಅವರಿಂದ ಸಾಧ್ಯವಾಗಲಿಲ್ಲ. ಸಂಸಾರದಲ್ಲಿ ಬೇಕಾದಷ್ಟು ಸುಖ ಸಂತೋಷಗಳನ್ನೂ ಅಷ್ಟೇ ಕಷ್ಟಕಾರ್ಪಣ್ಯಗಳನ್ನೂ ಅನುಭವಿಸಿ ಅವರು ಹಣ್ಣಾಗಿದ್ದರು. ಒಳ್ಳೆಯ ಕಾಲದಲ್ಲಿ ಅವರು ಅನ್ನಪೂರ್ಣೆಯಾಗಿದ್ದರು. ಆದರ್ಶ ಗೃಹಿಣಿ, ಆದರ್ಶ ಮಾತೆಯಾಗಿದ್ದರು. ಇಂತಹ ನನ್ನ ತಾಯಿ ೧೯೪೯ರ ಜೂನ್ ತಿಂಗಳಲ್ಲಿ ನಮ್ಮನ್ನೆಲ್ಲಾ ಬಿಟ್ಟಗಲಿದರು. ಒಂದೇ

ವರ್ಷದಲ್ಲಿ ಮೂರು ಸಾವು ! ವಿಧಿನಿಯಾಮಕಕ್ಕೆ ತಲೆಬಾಗಿ ಜನ್ಮದಾತ ತಾಯಿಯ ಕ್ರಿಯಾಕರ್ಮಗಳನ್ನು ಶ್ರದ್ಧಾಭಕ್ತಿಗಳಿಂದ ಮಾಡಿದೆ. ಈಗ ನಾವು ಸಂಪೂರ್ಣವಾಗಿ ತಬ್ಬಲಿಗಳಾಗಿದ್ದೆವು. ಏನೇ ಆದರೂ ಜೀವನದ ಹೋರಾಟ ಮುಂದುವರೆಯಲೇಬೇಕಲ್ಲವೇ? ಕಾಲಚಕ್ರದ ಉರುಳುವಿಕೆಯಲ್ಲಿ ನಮ್ಮದೇ ಆದ ಹೊಸ ಬದುಕನ್ನು ರೂಪಿಸಿ ಕೊಳ್ಳಲು ಈಗ ನಾವು ಅಣಿಯಾಗುವುದು ಅನಿವಾರ್ಯವಾಗಿತ್ತು.

ಇಷ್ಟೆಲ್ಲಾ ಸಂಕಟಗಳು ಕಳೆದು ನಮ್ಮ ಸಂಸಾರದಲ್ಲಿ ಒಂದು ಸಮಾಧಾನ ಸ್ಥಿತಿ ಮೂಡಲು ಸ್ವಲ್ಪ ಕಾಲವೇ ಹಿಡಿಯಿತು. ಈ ವೇಳೆಗೆ ನನ್ನ ತಮ್ಮ ಸತ್ಯಮೂರ್ತಿಯ ವಿದ್ಯಾಭ್ಯಾಸ ಮುಗಿದು ಅವನು ಇಂಜಿನಿಯರಿಂಗ್ ಪದವೀಧರನಾಗಿದ್ದ. ೧೯೪೯ರ ಜುಲೈ ವೇಳೆಗೆ ಕಾರವಾರದಲ್ಲಿ ಅವನಿಗೆ ಸರಕಾರಿ ನೌಕರಿಯೂ ಸಿಕ್ಕಿತು. ಆದರೆ, ಇದನ್ನೆಲ್ಲಾ ನೋಡಿ ಅತಿಶಯವಾಗಿ ಸಂತೋಷಪಡಬೇಕಾಗಿದ್ದ ನಮ್ಮ ತಾಯಿ-ತಂದೆಯವರೇ ನಮ್ಮನ್ನು ಬಿಟ್ಟಗಲಿದ್ದರು. ನನ್ನ ತಮ್ಮ ನನ್ನನ್ನು ಬಹಳ ಪ್ರೀತಿಸುತ್ತಿದ್ದ , ಗೌರವಿಸುತ್ತಿದ್ದ. ಈಗ, ಹಿರಿಯಣ್ಣನಾದ ನನ್ನನ್ನೇ ಅವನು ತಂದೆಯಂತೆ ಭಾವಿಸತೊಡಗಿದ. ಕಾರವಾರದಲ್ಲಿ ಅವನು ತನ್ನ ಹೊಸ ಸಂಸಾರವನ್ನು ಹೂಡಿದಾಗ ನಾನು ಹಾಗೂ ನನ್ನ ಪತ್ನಿ ಅಲ್ಲಿಗೆ ಹೋಗಿ ಅವರ ಜತೆ ಸ್ವಲ್ಪ ಕಾಲ ಇದ್ದು ಅವರನ್ನು ಆಶೀರ್ವದಿಸಿ ಬಂದಿದ್ದೆವು. ನಮ್ಮಿಬ್ಬರಲ್ಲೂ ತಪ್ಪದೇ ಯೋಗಕ್ಷೇಮ ಪತ್ರವ್ಯವಹಾರ ನಡೆಯುತ್ತಿತ್ತು. ಮೈಸೂರಿಗೂ ಅವನು ಆಗಾಗ ಬಂದು ನಮ್ಮನ್ನು ನೋಡಿಕೊಂಡು ಹೋಗುತ್ತಿದ್ದ. ತನ್ನ ಕಾರ್ಯಕ್ಷೇತ್ರದಲ್ಲಿ ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಾ ಒಳ್ಳೆಯ ಹೆಸರು ಸಂಪಾದಿಸಿದ್ದ. ಮೇಲಧಿಕಾರಿಗಳ ಮೆಚ್ಚುಗೆಗೆ ಪಾತ್ರನಾಗಿ ಶೀಘ್ರದಲ್ಲೇ ಬಡ್ತಿ ಪಡೆದು ಅಸಿಸ್ಟೆಂಟ್ ಇಂಜಿನಿಯರ್, ಅನಂತರ ಎಕ್ಸಿಕ್ಯೂಟಿವ್ ಇಂಜಿನಿಯರ್ ಆದ. ಆಗ ನಮಗಾದ ಸಂತೋಷ ಅಷ್ಟಿಷ್ಟಲ್ಲ.

ನನ್ನ ಕಷ್ಟ ಪರಂಪರೆಯಲ್ಲಿ ಇನ್ನೂ ಸ್ವಲ್ಪ ಬಾಕಿ ಉಳಿದಿತ್ತೇನೋ ಎನ್ನುವಂತೆ ೧೯೫೦ರ ಜನವರಿ ತಿಂಗಳಲ್ಲಿ ನನ್ನ ಮೇಲೆ ಮತ್ತೊಂದು ಸಹಿಸಲಾಗದ ಆಘಾತ ಬಂದೆರಗಿತು. ನನ್ನ ಮುದ್ದಾದ ಒಂದು ವರ್ಷ ಮೂರು ತಿಂಗಳ ಚೊಚ್ಚಲ ಗಂಡು ಮಗು ಡಯರಿಯಾದಲ್ಲಿ - ಅತಿಸಾರದಲ್ಲಿ-ನರಳಿ ನರಳಿ ಯಾವ ಚಿಕಿತ್ಸೆಗೂ ಬಗ್ಗದೇ ಕಣ್ಣುಮುಚ್ಚಿತು. ಮೊದಲೇ ಆ ವರ್ಷವಿಡೀ ಸಂಭವಿಸಿದ ಮೂವರು ಹಿರಿಯರ ಸಾವಿನಿಂದ ಕಂಗಲಾಗಿದ್ದವನು ನಾನು. ನನ್ನ ಸಂತೋಷ, ಸಮಾಧಾನಗಳ ಏಕೈಕ ಆಸರೆಯಾಗಿದ್ದ ಹಾಗೂ ಮುಂದೆ ಚೆನ್ನಾಗಿ ಬಾಳಿ ಬದುಕಬೇಕಾಗಿದ್ದ ನಮ್ಮ ವಂಶದ ಕುಡಿ- ಈ ಎಳೆಯ ಕಂದನನ್ನೂ- ಕಳೆದುಕೊಂಡಾಗ ನನ್ನ ಧೈರ್ಯಸ್ಥೈರ್ಯಗಳು ನುಚ್ಚು ನೂರಾದವು. ನಾನು ಸಂಪೂರ್ಣವಾಗಿ ಮಾನಸಿಕ ಸಮತೋಲನವನ್ನು ಕಳೆದುಕೊಂಡು ಹತಾಶನಾದೆ. ಯಾವಾಗಲೂ ಆಶಾವಾದಿಯಾಗಿದ್ದ ನನಗೆ ಈಗ ಪ್ರಪಂಚವೆಲ್ಲಾ ಅಂಧಕಾರಮಯವಾಗಿ ಕಾಣಿಸತೊಡಗಿತು. ನನ್ನ ದುಃಖದ ಆವೇಗದಲ್ಲಿ, ಮಾತಾಪಿತೃವಿಯೋಗ ದುಃಖದ ಜತೆಗೆ ಇಂತಹ ನಿರಂತರ ಪುತ್ರಶೋಕವನ್ನು ಕೊಟ್ಟ ಆ ದೇವರನ್ನೂ, ನನ್ನ ದುರದೃಷ್ಟವನ್ನೂ ಹಳಿದೆ. ನಾನು ಸದಾ ನಂಬಿದ್ದ ನನ್ನ ಆ ಕುಲದೈವ ಇಷ್ಟು ನಿಷ್ಕರುಣಿಯೇ ಎಂದು ಪರಿಪರಿಯಾಗಿ ಪರಿತಪಿಸಿದೆ. ನನ್ನ ಈ ಪರಿಸ್ಥಿತಿಯಲ್ಲಿ ನನಗೆ ಧೈರ್ಯ ಸಮಾಧಾನಗಳನ್ನು ಹೇಳಲು ಮನೆಯಲ್ಲಿ ಯಾರೂ ಹಿರಿಯರೇ ಇಲ್ಲದಂತಾಗಿತ್ತು. ಇಂತಹ ಸಮಯದಲ್ಲಿ ನನ್ನ ಗುರುಗಳು ನನ್ನ ಈ ದುರವಸ್ಥೆಯನ್ನು ಕಂಡು ಬಹಳವಾಗಿ ಮರುಗಿದರು. ನನ್ನನ್ನು ಸಮಾಧಾನಗೊಳಿಸಲು ಸತತ ಪ್ರಯತ್ನಪಟ್ಟರು. ತಾವು ಸಂಸಾರದಲ್ಲಿ ಅನುಭವಿಸಿದ ಸಾವು–ನೋವುಗಳು, ಕಷ್ಟಕಾರ್ಪಣ್ಯಗಳನ್ನೆಲ್ಲಾ ಹೇಳಿ ದೈವನಿಯಾಮಕಕ್ಕೆ ಎಲ್ಲರೂ ತಲೆಬಾಗಲೇಬೇಕೆಂದು ತಮ್ಮ ಅನುಭವಗಳನ್ನೆಲ್ಲಾ ಹೇಳಿ, ನನ್ನ ಮನಸ್ಸನ್ನು ಹಗುರಗೊಳಿಸಲು ಪ್ರಯತ್ನಿಸಿದರು. ಅವರೇ ನನ್ನ ಪಾಲಿಗೆ ತಂದೆ, ತಾಯಿ, ಪ್ರತ್ಯಕ್ಷ ದೈವ ಎಲ್ಲವೂ ಆಗಿದ್ದರು. ಕಾಲ ಸರಿದಂತೆ ನನ್ನ ದುಃಖವೂ ಕ್ರಮೇಣ ಕಡಮೆಯಾಗತೊಡಗಿತು. ದೇವರು ಯಾವ ಕಾಲಕ್ಕೆ ಯಾರನ್ನು ಹೇಗೆ ನಡೆಸುತ್ತಾನೆ ಎನ್ನುವುದೇ ಈ ಪ್ರಪಂಚದಲ್ಲಿ ಯಾರಿಗೂ ಅರ್ಥವಾಗದ ಒಂದು ಒಗಟು. ಕಷ್ಟ ಬಂದಾಗ ನಾವು ದೇವರನ್ನು ನಿಂದಿಸುತ್ತೇವೆ. ಆದರೆ ಕಷ್ಟ ಸುಖಗಳು ಒಂದೇ ನಾಣ್ಯದ ಎರಡು ಮುಖಗಳು. ರಾತ್ರಿಯಾದ ಮೇಲೆ ಹಗಲು ಬರಲೇಬೇಕು. ಹೀಗೆ ನನ್ನ ಜೀವನದಲ್ಲೂ ಈ ಕಷ್ಟದ ಕತ್ತಲು ಹರಿದು ಬೆಳಕಿನ ಹೊಂಗಿರಣವನ್ನು ದೇವರು ಮತ್ತೆ ನನಗೆ ಕರುಣಿಸಿದ. ೧೯೫೧ರ ನವಂಬರ್ ತಿಂಗಳಲ್ಲಿ ನನ್ನ ಪತ್ನಿ ಮತ್ತೊಬ್ಬ ಪುತ್ರನನ್ನು ಹಡೆದಾಗ ನಮ್ಮ ಸಂಸಾರದಲ್ಲಿ ಮತ್ತೊಮ್ಮೆ ಸಂತಸದ ಹೊನಲು ಹರಿಯಿತು.

ಇತ್ತ ನನ್ನ ಗುರುಗಳು, ಈ ಹಿಂದೆಯೇ ಹೇಳಿದಂತೆ, ೧೯೪೮ರಲ್ಲಿ ಅವರಿಗೆ ಬಂದೊದಗಿದ ಪುತ್ರಶೋಕದಿಂದ ಬಳಲಿ ಬೆಂಡಾಗಿ ಹಾಸಿಗೆ ಹಿಡಿದರು. ಮತ್ತೆ ಅವರು ಹಿಂದಿನಂತೆ ಓಡಾಡುವುದಾಗಲಿ, ವೀಣೆ ನುಡಿಸುವುದಾಗಲಿ ಸಾಧ್ಯವಾಗಲೇ ಇಲ್ಲ. ಮೈಸೂರು ಆಕಾಶವಾಣಿ ಯವರು ಗುರುಗಳ ಒಂದು ಡಿಸ್ಕ್ ರಿಕಾರ್ಡಿಂಗ್ ಆದರೂ ಮಾಡಿಕೊಳ್ಳ ಬೇಕೆಂದು ಏರ್ಪಾಡು ಮಾಡಿದರು. ಆದರೆ, ದೇಹದಲ್ಲಿ ಶಕ್ತಿಯೇ ಬತ್ತಿಹೋಗಿದ್ದ ಸ್ಥಿತಿಯಲ್ಲಿದ್ದ ಗುರುಗಳಿಗೆ ಬೆರಳುಗಳ, ಮೀಟುಗಳ ಸ್ವಾಧೀನವೇ ಇಲ್ಲದೇ ಏನೂ ನುಡಿಸಲು ಸಾಧ್ಯವೇ ಆಗದೆ ಹೋದಾಗ ಗುರುಗಳು ಗಳಗಳನೆ ಅತ್ತುಬಿಟ್ಟರು. ಅಂದು ತಾವು ಇದ್ದೂ ಸತ್ತಂತೆಯೇ ಎಂದು ಹಲುಬಿದರು. ೧೯೫೧ರ ಕೊನೆಯ ವೇಳೆಗೆ ಅವರ ಅನಾರೋಗ್ಯ ಉಲ್ಬಣಗೊಂಡು ಪ್ರಜ್ಞಾಹೀನರಾಗಿ ಸ್ವಲ್ಪ ಕಾಲ ಇದ್ದು ೧೯೫೨ರ ಜನವರಿ ೩೧ರಂದು ಪತ್ನಿ, ಇಬ್ಬರು ಪುತ್ರರು, ನಾಲ್ವರು ಪುತ್ರಿಯರಿದ್ದ ತುಂಬಿದ ಸಂಸಾರ, ಶಿಷ್ಯವೃಂದ ಮತ್ತು ಅಪಾರ ಬಂಧುಮಿತ್ರರನ್ನು ಅಗಲಿ ಗುರುಗಳು ಅನಂತದಲ್ಲಿ ಲೀನವಾದರು. ನಾವೆಲ್ಲಾ ತಬ್ಬಲಿಗಳಾದೆವು. ಮೈಸೂರು ವೀಣೆಯ ಒಂದು ಉಜ್ವಲ ಅಧ್ಯಾಯ

ಅಲ್ಲಿಗೆ ಅಂತ್ಯವಾಯಿತು. ಅವರ ಪರಂಪರೆಯನ್ನು ಇಂದು ಅವರ ಪ್ರಮುಖ ಶಿಷ್ಯರು ಮುಂದುವರೆಸಿಕೊಂಡು ಬಂದಿರುವರಲ್ಲದೇ, ಅವರ ಮುಂದಿನ ಪೀಳಿಗೆಯ ಶಿಷ್ಯರೂ ಈಗಾಗಲೇ ಪ್ರಸಿದ್ಧರಾಗಿ ಮೈಸೂರಿನ ಕೀರ್ತಿಯನ್ನು ಎತ್ತಿ ಹಿಡಿದಿದ್ದಾರೆ.

ವೃತ್ತಿಜೀವನ

೧೯೫೨ನೇ ಇಸವಿಯಲ್ಲಿ ನನ್ನ ವೃತ್ತಿಜೀವನಕ್ಕೆ ಸಂಬಂಧಪಟ್ಟ ಎರಡು ಪ್ರಮುಖ ಬೆಳವಣಿಗೆಗಳು ಉಲ್ಲೇಖಾರ್ಹ ವಾಗಿವೆ. ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಅದೇ ವರ್ಷದಿಂದ ಸಂಗೀತವನ್ನು ಒಂದು ಐಚ್ಛಿಕ ವಿಷಯವಾಗಿ ಪ್ರಾರಂಭಿಸಿದರು. ಅದರ ಆಯ್ಕೆ ಸಮಿತಿಯವರು ಮಾಡಿದ ಶಿಫಾರಸ್ಸಿನ ಮೇಲೆ ವೀಣಾ ಭಾಗಕ್ಕೆ ಮೈಸೂರು ವಿಶ್ವವಿದ್ಯಾನಿಲಯದವರು ನನ್ನನ್ನು ಅಧ್ಯಾಪಕನನ್ನಾಗಿ ನೇಮಕ ಮಾಡಿದರು. ಅದು ನನಗೆ ಒಂದು ಅನಿರೀಕ್ಷಿತ ವರದಾನವೇ ಆಯಿತು. ಆಗ ಅದು ಅರೆಕಾಲಿಕ ಹುದ್ದೆಯಾದರೂ, ನನಗೆ ಅದು ಗಣನೀಯವಾದ ಹೆಚ್ಚುವರಿ ವರಮಾನವನ್ನು ತಂದಿತ್ತು. ಅದರ ಜತೆಗೆ ಅರಮನೆಯ ಮಾಸಿಕ ವೇತನವೂ ಸೇರಿ ನನ್ನ ಆರ್ಥಿಕ ಸ್ಥಿತಿ ಬಹಳ ಮಟ್ಟಿಗೆ ಸುಧಾರಿಸಲು ಸಾಧ್ಯವಾಯಿತು. ಅದಲ್ಲದೇ, ನನ್ನ ಮನೆಯಪಾಠದ ಕೆಲವು ಶಿಷ್ಯೆಯರೂ ಈ ಕಾಲೇಜಿನಲ್ಲೇ ವಿದ್ಯಾಭ್ಯಾಸ ಮಾಡುತ್ತಿದ್ದುದರಿಂದ, ಅವರು ಮುಂದೆ ನನಗೂ, ನಮ್ಮ ಕಾಲೇಜಿಗೂ ಒಳ್ಳೆಯ ಕೀರ್ತಿಯನ್ನು ತರುವಂತಾದುದು ನನಗೆ ಬಹಳ ಹೆಮ್ಮೆಯ ವಿಷಯವಾಗಿತ್ತು . ಹಾಗೂ ಪದವಿ ತರಗತಿಗಳಿಗೆ ಶಿಕ್ಷಣ ನೀಡಿದ ನನ್ನ ಈ ಹನ್ನೆರಡು ವರ್ಷಗಳ ಅನುಭವ ಮುಂದೆ ಇದೇ ವಿಶ್ವವಿದ್ಯಾನಿಲಯದ ಲಲಿತಕಲಾ ಕಾಲೇಜಿನಲ್ಲಿ ಇನ್ನೂ ಉನ್ನತ ಹುದ್ದೆಯನ್ನು ಅಲಂಕರಿಸಲು ನನಗೆ ವಿಶೇಷ ರೀತಿಯ ಅರ್ಹತೆಯನ್ನು ತಂದು ಕೊಟ್ಟಿತು. ಆದ್ದರಿಂದ ಈ ನೇಮಕ ನನ್ನ ಭವಿಷ್ಯದ ಯಶಸ್ಸಿಗೆ ಒಂದು ಶುಭಾರಂಭವಾಯಿತು.

ಮತ್ತೊಂದು ಬೆಳವಣಿಗೆ ನನ್ನ ಸಾರ್ವಜನಿಕ ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಂಬಂಧಿಸಿದುದು. ಇದು ಸಹ ಬಹಳಮಟ್ಟಿಗೆ ನನ್ನ ಸ್ವಭಾವಜನ್ಯವಾದ ಕಾರ್ಯತತ್ಪರತೆ, ವ್ಯವಹಾರಕುಶಲತೆ, ಸಂಘಟನಾ ಸಾಮರ್ಥ್ಯ ಹಾಗೂ ಸೇವಾ ಮನೋಭಾವಗಳ ಸಂಪೂರ್ಣ ವಿಕಸನಕ್ಕೆ ಒಂದು ಪ್ರಯೋಗಕ್ಷೇತ್ರವಾಗಿ ಇದರಿಂದ ನನಗೆ ಮುಂದೆ ಬಹಳ ಮಟ್ಟಿನ ಯಶಸ್ಸು ಲಭಿಸಲು ಸಾಧ್ಯವಾಯಿತು. ಕಲೆಗಳ ಕೇಂದ್ರವಾದ ಮೈಸೂರು ನಗರದಲ್ಲಿ ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ನಗರದ ಎಲ್ಲಾ ವಿದ್ವಾಂಸರೂ ಸೇರಿ 'ಸಂಗೀತ ಕಲಾಭಿವರ್ಧಿನೀ ಸಭಾ'ವನ್ನು ೧೯೫೨ರ ಕೊನೆಯ ಭಾಗದಲ್ಲಿ ಪ್ರಾರಂಭಿಸಲು ತೀರ್ಮಾನಿಸಿದರು. ಅದರ ಆಜೀವ ಅಧ್ಯಕ್ಷರಾಗಿರಲು ಮೈಸೂರು ವಾಸುದೇವಾಚಾರ್ಯರನ್ನು ಪ್ರಾರ್ಥಿಸಿಕೊಳ್ಳಲಾಯಿತು. ಅವರು ಅತ್ಯಂತ ಸಂತೋಷದಿಂದ ಒಪ್ಪಿ ಆಶೀರ್ವದಿಸಿದರು. ಬಿ.ಕೆ. ಪದ್ಮನಾಭರಾಯರು, ಎಚ್. ಯೋಗಾನರಸಿಂಹ ಹಾಗೂ ಚನ್ನಕೇಶವಯ್ಯನವರನ್ನು ಉಪಾಧ್ಯಕ್ಷರುಗಳಾಗಿಯೂ, ನನ್ನನ್ನು ಕಾರ್ಯದರ್ಶಿಯನ್ನಾಗಿಯೂ ಆಯ್ಕೆ ಮಾಡಲಾಯಿತು. ಸಭೆಯ ಮುಂದಿನ ಎಲ್ಲ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಪಾಲ್ಗೊಂಡು ಸಭೆಯ ಮುನ್ನಡೆಗೆ ನಿಃಸ್ವಾರ್ಥ ಸೇವೆ ಸಲ್ಲಿಸಿದ ಸಮಾಧಾನ ನನಗಿದೆ.

ಹಿರಿಯರ ಸಂಗ

ಮೈಸೂರು ಮತ್ತು ಮದರಾಸ್ ಆಕಾಶವಾಣಿ ಕೇಂದ್ರಗಳಿಂದ ವೀಣಾ ಕಾರ್ಯಕ್ರಮಗಳನ್ನು ನೀಡುತ್ತಿದ್ದೆನಷ್ಟೆ. ಮೈಸೂರು ಕೇಂದ್ರವು ಆಲ್ ಇಂಡಿಯಾ ರೇಡಿಯೋ ಆದ ಮೇಲೆ ನಮ್ಮ ಕಾರ್ಯಕ್ರಮಗಳು ಕೇವಲ ಮೈಸೂರಿನಿಂದ ಪ್ರಸಾರವಾಗುತ್ತಿದ್ದವು. ಕೆಲವು ವರ್ಷಗಳನಂತರ ಈ ಕೇಂದ್ರವನ್ನು ಬೆಂಗಳೂರಿಗೆ ವರ್ಗಾಯಿಸಲಾಯಿತು. ಆಗ ನಮ್ಮ ಕಾರ್ಯಕ್ರಮಗಳು ಬೆಂಗಳೂರು ಕೇಂದ್ರದಿಂದ ಪ್ರಸಾರವಾಗುತ್ತಿದ್ದವು. ಸ್ವಲ್ಪ ಕಾಲದ ಅನಂತರ ಮೈಸೂರು ಕೇಂದ್ರವು ಮತ್ತೆ ಪ್ರಾರಂಭ ವಾಯಿತು. ಮತ್ತೆ ನಮ್ಮ ಕಾರ್ಯಕ್ರಮಗಳು ಮೈಸೂರಿಗೆ ಸೀಮಿತ ವಾದವು. ಏಕಪ್ರಕಾರವಾಗಿ ನಾನು ಬಾನುಲಿಯಲ್ಲಿ ೧೯೪೫ರಿಂದ ಕಾಯಕ್ರಮಗಳನ್ನು ನೀಡುತ್ತಾ ಬಂದಿದ್ದೇನೆ. 'ಎ' ದರ್ಜೆಯ ಕಲಾವಿದನಾಗಿ ಇಂದಿಗೂ ನನ್ನ ವೀಣಾ ಕಾರ್ಯಕ್ರಮಗಳು ಪ್ರಸಾರ ವಾಗುತ್ತಿವೆ. ಇದಲ್ಲದೇ ಅನೇಕ ವಿಶೇಷ ರೂಪಕಗಳು, ಭಾಷಣಗಳು ಹಾಗೂ ಪಂಚವೀಣಾ ವಾದ್ಯಗೋಷ್ಠಿಗಳಲ್ಲೂ ಭಾಗವಹಿಸುತ್ತಾ ಬಂದಿದ್ದೇನೆ.

ಮೈಸೂರು ನಗರದಲ್ಲಿ ಆಗಿನ ಕಾಲದಲ್ಲಿ ಅತ್ಯಂತ ಹಿರಿಯ ಸಂಗೀತ ವಿದ್ವಾಂಸರಾಗಿದ್ದ ಮೈಸೂರು ಶ್ರೀ ಕೆ. ವಾಸುದೇವಾಚಾರ್ಯರು ಕಿರಿಯ ವಿದ್ವಾಂಸರಾಗಿದ್ದ ನಮಗೆಲ್ಲಾ ಅತ್ಯಂತ ಗೌರವಾನ್ವಿತರಾಗಿದ್ದರು. 'ಅಭಿನವತ್ಯಾಗರಾಜ'ರೆಂದೇ ಖ್ಯಾತರಾಗಿದ್ದ ಅವರು ಸರಳರೂ ಸರಸಿಗಳೂ ನಿಗರ್ವಿಗಳೂ ಆಗಿದ್ದರು. ಕಿರಿಯರಾದ ನಮ್ಮನ್ನು ಬಹಳ ಪ್ರೀತಿ ವಿಶ್ವಾಸದಿಂದ ಕಾಣುತ್ತಿದ್ದರು. ನಾವು ಎಲ್ಲಿ ಸಿಕ್ಕಿದರೂ ಆತ್ಮೀಯವಾಗಿ ಮಾತನಾಡಿಸಿ ತಮ್ಮ ಅನುಭವಗಳನ್ನೆಲ್ಲಾ ನಮಗೆ ಹೇಳುತ್ತಿದ್ದರು. ಹಿಂದಿನ ವಿದ್ವಾಂಸರು ಹೇಗೆ ಸಂಪ್ರದಾಯಶುದ್ಧವಾಗಿ ಹಾಡುತ್ತಿದ್ದರು ಎಂಬುದನ್ನು ತಾವು ಹಾಡಿ ತೋರಿಸುತ್ತಿದ್ದರು. ಅಂತಹ ಮಹಾನ್ ಕಲಾವಿದರನ್ನು ಪ್ರತ್ಯಕ್ಷ ನೋಡಿ ಅವರ ಸಂಗೀತವನ್ನು ಕೇಳಿದ ನಾವೇ ಧನ್ಯರು!

ಇದೇ ರೀತಿ, ನನ್ನ ಬಗ್ಗೆ ವಿಶೇಷ ಪ್ರೀತಿ ವಿಶ್ವಾಸಗಳನ್ನು ಹೊಂದಿದ್ದ ಮತ್ತೊಬ್ಬ ಹಿರಿಯ ವಿದ್ವಾಂಸರೆಂದರೆ ಮೈಸೂರು ಟಿ. ಚೌಡಯ್ಯನವರು. ಆಗಿನ ಕಾಲದ ಅತ್ಯಂತ ಪ್ರಸಿದ್ಧ ಪಿಟೀಲು ವಿದ್ವಾಂಸರಾಗಿದ್ದ ಚೌಡಯ್ಯನವರು ಕರ್ನಾಟಕ ಸಂಗೀತ ಪ್ರಪಂಚದಲ್ಲಿ

ಅಗ್ರಮಾನ್ಯರಾಗಿದ್ದರು. ಅವರ ಪಕ್ಕವಾದ್ಯಕ್ಕಾಗಿ ಹಿರಿಯ, ಕಿರಿಯ ವಿದ್ವಾಂಸರಾದಿಯಾಗಿ ಎಲ್ಲರೂ ಹಾತೊರೆಯುತ್ತಿದ್ದರು. ಮೈಸೂರು ಆಸ್ಥಾನ ವಿದ್ವಾಂಸರಾಗಿದ್ದ ಅವರು ಮಹಾರಾಜರಿಗೆ ಅತ್ಯಂತ ಆಪ್ತರಾಗಿದ್ದರು. ನನ್ನ ಗುರು ವೀಣಾವೆಂಕಟಗಿರಿಯಪ್ಪನವರನ್ನು ಬಿಟ್ಟರೆ, ಮೈಸೂರು ಟಿ. ಚೌಡಯ್ಯನವರು ಹಾಗೂ ಮೈಸೂರು ಕೆ. ವಾಸುದೇವಾಚಾರ್ಯರನ್ನು ಕಂಡರೆ ಮಹಾರಾಜರಿಗೆ ವಿಶೇಷ ಗೌರವ. ಇಂತಹ ಹಿರಿಯ ವಿದ್ವಾಂಸರಾಗಿದ್ದ ಚೌಡಯ್ಯನವರಿಗೆ ಅವರಿಗಿಂತ ಎಲ್ಲದರಲ್ಲೂ ಕಿರಿಯನಾಗಿದ್ದ ನನ್ನನ್ನು ಕಂಡರೆ ಅದೇನೋ ಒಂದು ವಿಶೇಷ ಅಭಿಮಾನ. ಇದು ನನ್ನ ಸುಯೋಗವೆಂದೇ ಹೇಳಬೇಕು. ಅವರು ಇದೇ ಸುಮಾರಿನಲ್ಲಿ ಅಂದರೆ ೧೯೫೪-೫೫ರಲ್ಲಿ ಮದರಾಸ್ ಮ್ಯೂಸಿಕ್ ಅಕಾಡಮಿ ಸಂಗೀತ ಸಮ್ಮೇಳನದ ಅಧ್ಯಕ್ಷರಾಗಿದ್ದಾಗ ನನ್ನ ವೀಣಾಕಾರ್ಯಕ್ರಮ ಏರ್ಪಾಡಾಗಿತ್ತು. ಅಂದು ಚೌಡಯ್ಯನವರು ನನ್ನ ಕಛೇರಿಯನ್ನು ಸಂಪೂರ್ಣವಾಗಿ ಕೇಳಿ ಕೊನೆಯಲ್ಲಿ ನನ್ನ ಬಗ್ಗೆ ಕೆಲವು ಬಹಳ ಒಳ್ಳೆಯ ಮಾತುಗಳನ್ನಾಡಿದರು. ಇದು ನನಗೆ ಅವರಲ್ಲಿದ್ದ ಪ್ರೀತಿ, ಗೌರವಗಳು ಇನ್ನೂ ಹೆಚ್ಚಲು ಕಾರಣವಾಯಿತು.

ಇದಲ್ಲದೇ, ಆಗ ತಾನೇ ಕೆಸರೆಯಲ್ಲಿ ಪ್ರಾರಂಭವಾಗಿದ್ದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಆಶ್ರಮಕ್ಕೆ ನನ್ನನ್ನು ಕರೆದುಕೊಂಡು ಹೋಗಿ, ಸ್ವಾಮೀಜಿಯವರಿಗೆ ನನ್ನ ಪರಿಚಯ ಮಾಡಿಸಿ ನನ್ನ ವೀಣಾವಾದನವನ್ನು ಸ್ವಾಮೀಜಿಯವರಿಗೆ ಕೇಳಿಸಿದರು. ಸ್ವಾಮೀಜಿಯವರು ಬಹಳ ಸಂತೋಷಪಟ್ಟು ನನ್ನನ್ನು ಆಶೀರ್ವದಿಸಿ ಅನುಗ್ರಹಿಸಿದರು. ಇದು ಮುಂದೆ ನಂಜನಗೂಡುರಸ್ತೆಯಲ್ಲಿ ಸ್ವಾಮೀಜಿಯವರು ಸ್ಥಾಪಿಸಿದ ದತ್ತಪೀಠದಲ್ಲಿ ನಾನು ಅನೇಕ ವರ್ಷಗಳು ಕಾರ್ಯಕ್ರಮಗಳನ್ನು ನೀಡಿ ಸ್ವಾಮೀಜಿಯವರ ವಿಶೇಷ ಅನುಗ್ರಹಕ್ಕೆ ಪಾತ್ರನಾಗಲು ನಾಂದಿಯಾಯಿತು. ಸ್ವಾಮೀಜಿಯವರು ನನಗೆ ಎರಡು ಬಾರಿ ಬಿರುದು, ಖಿಲ್ಲತ್ತುಗಳನ್ನು ನೀಡಿ ಸನ್ಮಾನ ಮಾಡಿ ಅನುಗ್ರಹಿಸಿದರು. ಅವರು ನೀಡಿರುವ 'ವೈಣಿಕ ಕಲ್ಪತರು' ಹಾಗೂ 'ನಾದನಿಧಿ' ಪ್ರಶಸ್ತಿಗಳು ನನ್ನ ಜೀವಮಾನದಲ್ಲಿ ನನಗೆ ಸಂದ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿಗಳಾಗಿವೆ. ಇದಕ್ಕೆಲ್ಲಾ ಒಂದು ರೀತಿಯಲ್ಲಿ ಚೌಡಯ್ಯನವರು ಮೂಲಕಾರಣರಾಗಿದ್ದಾರೆ. ಅವರು ಸ್ವಾಮೀಜಿಯವರಿಗೂ ಅತ್ಯಂತ ಆಪ್ತರಾಗಿದ್ದರು. ಹೀಗೆ, ನನ್ನ ಭವಿಷ್ಯದ ಯಶಸ್ಸಿಗೆ ಪರೋಕ್ಷವಾಗಿ ಕಾರಣರಾದ ಪಿಟೀಲು ಚೌಡಯ್ಯನವರನ್ನು ಇಂದಿಗೂ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಸಂಸಾರ

ಇತ್ತ ನನ್ನ ಸಾಂಸಾರಿಕ ಜೀವನ ಒಂದು ರೀತಿಯಲ್ಲಿ ನೆಮ್ಮದಿಯಿಂದಲೇ ಸಾಗುತ್ತಿತ್ತು. ನನಗಿದ್ದ ಒಂದೇ ಮಗು ಹಾಗೂ ನನ್ನ ಅಕ್ಕ ಮತ್ತು ಅವಳ ಇಬ್ಬರು ಮಕ್ಕಳನ್ನು ನೋಡಿಕೊಳ್ಳುವುದು ನನಗೆ ಅಷ್ಟೇನೂ ಕಷ್ಟವಾಗಿರಲಿಲ್ಲ. ನನ್ನ ಅಕ್ಕನ ಹಿರಿಯ ಮಗಳಿಗೆ ಆಗಲೇ ವಿವಾಹವಾಗಿ ಗಂಡನ ಮನೆಯಲ್ಲಿದ್ದಳು. ನನ್ನ ಅಕ್ಕ ಮೊದಲಿನಿಂದಲೂ ಅನಾರೋಗ್ಯದಲ್ಲಿ ನರಳುತ್ತಿದ್ದು ಇತ್ತೀಚೆಗೆ ಅವಳ ಆರೋಗ್ಯ ಮತ್ತಷ್ಟು ಹದಗೆಟ್ಟಿತ್ತು. ಆಗ ತಾನೇ ಎಸ್.ಎಸ್.ಎಲ್.ಸಿ. ಪಾಸು ಮಾಡಿದ್ದ ತನ್ನ ಎರಡನೇ ಮಗಳಿಗೂ ಆದಷ್ಟು ಬೇಗ ವಿವಾಹ ಮಾಡಿಬಿಡಬೇಕೆಂದು ಹಂಬಲಿಸುತ್ತಿದ್ದಳು. ತಾನು ಇನ್ನು ಹೆಚ್ಚು ಕಾಲ ಬದುಕುವುದಿಲ್ಲವೆಂದು ಅವಳಿಗೂ ಅನಿಸಿರಬಹುದೇನೋ! ಅದಕ್ಕೆ ತಕ್ಕಂತೆ, ಒಂದು ಒಳ್ಳೆಯ ಕಡೆಯ ಬಾಂಧವ್ಯವೂ ಕುದುರಿತು. ನಮ್ಮ ಶಕ್ತ್ಯನುಸಾರ ವಿವಾಹ ನಡೆಯಿತು. ಅಕ್ಕನ ಮನಸ್ಸಿಗೆ ಸಮಾಧಾನವೂ ಆಯಿತು. ನನಗೂ ಒಂದು ದೊಡ್ಡ ಜವಾಬ್ದಾರಿ ಕಳೆದಂತಾಯಿತು. ಇನ್ನು ಉಳಿದಿರುವ ಒಬ್ಬ ಮಗನ ಯೋಗಕ್ಷೇಮವನ್ನು ನೋಡಿಕೊಳ್ಳುವುದೇನೂ ಅಷ್ಟು ಕಷ್ಟವಾಗಿರಲಿಲ್ಲ. ಆ ಕಾಲದಲ್ಲಿ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಹಣ ಖರ್ಚು ಮಾಡಬೇಕಾಗಿರಲಿಲ್ಲ. ಜೀವನ ನಿರ್ವಹಣೆಯೂ ಸುಲಭವಾಗಿತ್ತು. ನನ್ನ ಪತ್ನಿ ಎಲ್ಲರನ್ನೂ ಮಮತೆ, ಪ್ರೀತಿ ವಾತ್ಸಲ್ಯಗಳಿಂದ ಕಂಡು, ಸಂಸಾರವನ್ನು ಸಾಮರಸ್ಯದಿಂದ ಬಹಳ ಸಮರ್ಥವಾಗಿ ನಿರ್ವಹಿಸುತ್ತಿದ್ದಳು. ಸ್ವಾರ್ಥವನ್ನೇ ಕಂಡರಿಯದ ಅವಳಿಗೆ ತನ್ನವರು, ಬೇರೆಯರು ಎಂಬ ವ್ಯತ್ಯಾಸವೇ ಇರಲಿಲ್ಲ. ಹೀಗಾಗಿ, ನಾನು ಮಾಡಿರಬಹುದಾದ ಕೆಲವು ಸತ್ಕಾರ್ಯಗಳಿಗೆ ಬಹಳ ಮಟ್ಟಿಗೆ ನನ್ನ ಪತ್ನಿ ಲಕ್ಷ್ಮೀಯಿಂದ ನನಗೆ ದೊರೆತ ನೈತಿಕ ಬೆಂಬಲವೇ ಸ್ಫೂರ್ತಿಯಾಯಿತೆಂದು ಹೇಳಬಹುದು. ನನ್ನ ಅಕ್ಕನಲ್ಲಿ ವಿಶೇಷವಾದ ಪ್ರೀತಿ ಗೌರವಗಳನ್ನು ಹೊಂದಿದ್ದ ಅವಳು ನನ್ನ ಅಕ್ಕನ ಮಕ್ಕಳನ್ನು ತನ್ನ ಸ್ವಂತ ಮಕ್ಕಳಿಗಿಂತ ಹೆಚ್ಚಾಗಿ ಕಂಡುಕೊಂಡು ಅವರನ್ನು ಸಾಕಿ ಸಲಹಿದಳು. ಇಂದಿಗೂ ಆ ಮೂವರೂ ಮಕ್ಕಳು ನಮ್ಮನ್ನೇ ತಂದೆತಾಯಿಯರಂತೆ ಕಂಡು ನಮ್ಮಲ್ಲಿ ಅಪರಿಮಿತವಾದ ಪ್ರೀತಿ ಗೌರವಗಳನ್ನು ಹೊಂದಿದ್ದಾರೆ. ೧೯೫೪ರ ಆಗಸ್ಟ್‌ನಲ್ಲಿ ನನ್ನ ಅಕ್ಕನ ಸ್ಥಿತಿ ಗಂಭೀರವಾಗಿ , ಉಲ್ಬಣಿಸಿ ಒಂದು ರಾತ್ರಿ ತನ್ನ ಮಗನ ತೊಡೆಯ ಮೇಲೆ ಮಲಗಿ ಅನಾಯಾಸವಾಗಿ ಕೊನೆಯುಸಿರೆಳೆದಳು. ಅತ್ಯಂತ ಸಾಧು ಸ್ವಭಾವದವಳಾಗಿದ್ದ ನನ್ನ ಅಕ್ಕನನ್ನು ಕಳೆದುಕೊಂಡ ನಾನು ಬಹಳವಾಗಿ ಪರಿತಪಿಸಿದೆ. ಅವಳಿಗೆ ಅಶ್ರುತರ್ಪಣವನ್ನು ಸಮರ್ಪಿಸಿದೆ. ಪ್ರಪಂಚದ ಜಂಜಾಟದಿಂದ ಅವಳೇನೋ ಮುಕ್ತಳಾಗಿದ್ದಳು, ನಿಜ. ಆದರೆ ಇದು ನಮಗೆ ಮತ್ತೊಂದು ದೊಡ್ಡ ಆಘಾತವಾಗಿತ್ತು. ಒಟ್ಟಿನಲ್ಲಿ, ದೈವೇಚ್ಛೆಯಂತೆ ಎಲ್ಲವೂ ನಡೆಯಲೇಬೇಕಲ್ಲವೇ?

ನನ್ನ ಮಗ ಶ್ಯಾಮಪ್ರಸಾದನಿಗೆ ಸುಮಾರು ನಾಲ್ಕೂವರೆ ವರ್ಷಗಳಾಗುವ ವೇಳೆಗೆ, ೧೯೫೭ರ ಮೇ ತಿಂಗಳಲ್ಲಿ ನನ್ನ ಎರಡನೇ ಮಗ ಮೋಹನನ ಜನನವಾಯಿತು. ಕೆಂಪಗೆ, ದುಂಡು ದುಂಡಗಿದ್ದ ಅವನನ್ನು ಎಲ್ಲರೂ ಎತ್ತಿ ಮುದ್ದಾಡುತ್ತಿದ್ದರು. ಮತ್ತೆ ೧೯೫೯ರ ಜನವರಿಯಲ್ಲಿ ನನ್ನ ಒಬ್ಬಳೇ ಮಗಳು ರಾಧಾ ಜನಿಸಿದಳು. ನನ್ನ ಅಕ್ಕನ

ಮಗ ಸುಬ್ರಹ್ಮಣ್ಯ ಈ ವೇಳೆಗೆ ಇಂಜಿನಿಯರಿಂಗ್ ಡಿಪ್ಲೋಮಾ ವಿದ್ಯಾರ್ಥಿಯಾಗಿದ್ದ. ಅವನು ಸೌಮ್ಯಸ್ವಭಾವದ ಸಭ್ಯ ಹುಡುಗ. ವಿದ್ಯಾಭ್ಯಾಸದಲ್ಲೂ ತಕ್ಕಮಟ್ಟಿಗೆ ಚೆನ್ನಾಗಿಯೇ ಮುಂದುವರಿಯುತ್ತಿದ್ದ. ಡಿಪ್ಲೋಮಾ ಮುಗಿಸಿದ ಕೂಡಲೇ ಅವನಿಗೆ ಸರ್ಕಾರಿ ಕೆಲಸ ಸಿಕ್ಕಿತು. ನಮ್ಮ ಸಂಬಂಧದಲ್ಲೇ ಒಳ್ಳೆಯ ಗುಣವತಿಯಾದ ವಧುವಿನೊಡನೆ ಅವನ ವಿವಾಹವೂ ನೆರವೇರಿತು. ಇಂದು ಅವನು ಪ್ರತಿಭಾವಂತರಾದ ಮೂವರು ಗಂಡು ಮಕ್ಕಳ ತಂದೆ. ಎಲ್ಲರೂ ಇಂಜನಿಯರಿಂಗ್ ಪದವೀಧರರು. ಮೂವರಿಗೂ ಕೈ ತುಂಬಾ ಸಂಪಾದನೆ. ಸುಬ್ರಹ್ಮಣ್ಯ ಈಗ ಒಬ್ಬ ನಿವೃತ್ತ ಅಧಿಕಾರಿ. ಮಕ್ಕಳ ಪುರೋಭಿವೃದ್ಧಿಯನ್ನು ಕಂಡು ಹಿಗ್ಗುತ್ತಾ ಅವನೂ, ಅವನ ಪತ್ನಿ ಸರಸ್ವತಿಯೂ ಸಂತೋಷವಾಗಿ ನೆಮ್ಮದಿಯಿಂದಿದ್ದಾರೆ. ನನ್ನ ಅಕ್ಕನ ಹಿರಿಯ ಮಗಳು ಶಾಂತಾ ತನ್ನ ಸಾಂಸಾರಿಕ ಜೀವನದಲ್ಲಿ ಬಹಳವಾಗಿ ಬೆಂದು, ಬೇಸತ್ತು , ಅತ್ತೆ ಮನೆಯವರ ಕಿರುಕುಳ ತಾಳಲಾರದೇ ಅವರನ್ನೆಲ್ಲಾ ತ್ಯಜಿಸಿ ನಮ್ಮಲ್ಲಿಗೆ ಬಂದಳು. ಮತ್ತೆ ಹೋಗಲಿಲ್ಲ. ಎಸ್.ಎಸ್.ಎಲ್.ಸಿ. ಮಾಡಿದ್ದ ಅವಳು ಟಿ.ಸಿ.ಎಚ್. ಟ್ರೈನಿಂಗ್ ಮಾಡಿಕೊಂಡು ಶಾಲಾ ಉಪಾಧ್ಯಾಯನಿಯಾಗಿ ಕೆಲಸಕ್ಕೆ ಸೇರಿದಳು. ನಮ್ಮ ಜತೆಯಲ್ಲಿಯೇ ಇದ್ದುಕೊಂಡು ಸ್ವತಂತ್ರ ಜೀವನ ನಡೆಸುತ್ತಿರುವ ಅವಳು ಈಗ ನಿವೃತ್ತಳಾಗಿ, ಆಪ್ತೇಷ್ಟರಿಗೆಲ್ಲಾ ಕಷ್ಟಸುಖಗಳಲ್ಲಿ ನೆರವಾಗಿ ಎಲ್ಲ ಕಡೆ ಓಡಾಡಿಕೊಂಡಿದ್ದಾಳೆ. ಅಕ್ಕನ ಎರಡನೆಯ ಮಗಳೂ ಮೂವರು ಪುತ್ರರು ಮತ್ತು ಒಬ್ಬ ಪುತ್ರಿಯ ತಾಯಿಯಾಗಿ, ಮಕ್ಕಳೆಲ್ಲರೂ ವಿದ್ಯಾವಂತರಾಗಿ ಪ್ರವೃದ್ಧಮಾನಕ್ಕೆ ಬಂದಿರುವುದನ್ನು ನೋಡಿಕೊಂಡು ಸಂತೋಷದಿಂದಿದ್ದಾಳೆ. ಹೀಗೆ, ನನ್ನ ಅಕ್ಕನ ಮಕ್ಕಳ ಜವಾಬ್ದಾರಿಯನ್ನು ಹೊತ್ತಿದ್ದ ನನಗೆ ಅವರೆಲ್ಲರ ಅಭ್ಯುದಯವನ್ನು ಕಂಡು ಒಮ್ಮೆಲೇ ಸಂತೋಷವೂ, ಹೆಮ್ಮೆಯೂ ಆಗಿದೆ.

ನನ್ನ ಮನೆ

೧೯೩೩ರಲ್ಲಿ ನಾವು ಮೈಸೂರಿಗೆ ಬಂದಾಗಿನಿಂದ, ವಿವಿಧ ಕಡೆಗಳಲ್ಲಿ ಬಾಡಿಗೆ ಮನೆಗಳ ವಾಸ, ಅಲ್ಲಿನ ನಾನಾ ರೀತಿಯ ತೊಂದರೆಗಳು, ಪದೇಪದೇ ಮನೆಗಳನ್ನು ಬದಲಾಯಿಸುವುದು ಇದೆಲ್ಲದರಿಂದ ನಾನು ಬಹಳವಾಗಿ ಬೇಸರಗೊಂಡಿದ್ದೆ. ನಮ್ಮದೇ ಆದ ಒಂದು ಸಣ್ಣ ಗುಡಿಸಲಾದರೂ ಸರಿ, ಅದರಲ್ಲಿ ಸ್ವತಂತ್ರವಾಗಿ ಯಾರ ಹಂಗೂ ಇಲ್ಲದೇ ನೆಮ್ಮದಿಯಾಗಿರಬೇಕೆಂದು ಬಯಸುತ್ತಿದ್ದೆ. ಅದಕ್ಕೆ ಸರಿಯಾಗಿ, ಆಗಿನ ಮೈಸೂರು ಗೃಹಮಂಡಲಿಯವರು ಜಯನಗರ ಬಡಾವಣೆಯಲ್ಲಿ ಕಡಮೆ ಆದಾಯದವರಿಗೆ ಅನುಕೂಲವಾಗುವಂತಹ ನಲವತ್ತು ಮನೆಗಳನ್ನು ನಿರ್ಮಿಸಿ ಅರ್ಜಿಗಳನ್ನು ಆಹ್ವಾನಿಸಿದ್ದರು. ಹೇಗಾದರಾಗಲಿ ಎಂದು ಒಂದು ಅರ್ಜಿಯನ್ನು ಗುಜರಾಯಿಸಿದ್ದೆ. ಅದೇನೋ ಅದೃಷ್ಟವಶಾತ್ ಒಂದು ಮನೆ ನನ್ನ ಹೆಸರಿಗೆ ಲಭಿಸಿತ್ತು. ಇದು ನಮಗೆಲ್ಲಾ ಒಂದು ಅತ್ಯಂತ ಸಂತಸದ, ಸಂಭ್ರಮದ ವಿಷಯವಾಗಿತ್ತು. ಒಳ್ಳೆಯ ಮನೆಗಳನ್ನೇ ಕಂಡರಿಯದ ನಮಗೆ ೫೦'x ೬೦' ನಿವೇಶನದಲ್ಲಿ ನಿರ್ಮಿತವಾದ ಎಂಟು ಚದುರದ ಆ ತಾರಸಿ ಮನೆ ಒಂದು ಪುಟ್ಟ ಅರಮನೆಯಂತೆಯೇ ಕಂಡಿತು! ಒಳ್ಳೆಯ ಗಾಳಿ, ಬೆಳಕು, ನೀರು, ದೀಪಗಳ ಸೌಕರ್ಯವಿದ್ದ ಆ ಮನೆಯ ವಾಸ ನಮಗೆಲ್ಲ ಆಪ್ಯಾಯಮಾನವಾಗಿತ್ತು. ಕೇವಲ ೩,೫೦೦ ರೂ.ಗಳನ್ನು ಮೊದಲು ಪಾವತಿ ಮಾಡಿ ಉಳಿದ ೮೦೦೦ ರೂ.ಗಳನ್ನು ತಿಂಗಳಿಗೆ ಐವತ್ತೈದು ರೂ.ಗಳಂತೆ ಹತ್ತೊಂಬತ್ತು ವರ್ಷಗಳಲ್ಲಿ ತೀರಿಸಬೇಕಾಗಿತ್ತು. ಇಂತಹ ಸೌಲಭ್ಯ ಈಗ ಇಲ್ಲವೇ ಇಲ್ಲ. ಹೀಗಾಗಿ, ನನಗೆ ಸ್ವಂತ ಮನೆಯನ್ನು ಪಡೆಯಲು ಒಮ್ಮೆಲೇ ಹೆಚ್ಚು ಹಣ ಖರ್ಚು ಮಾಡಬೇಕಾಗಲಿಲ್ಲ. ಆಗ ನನ್ನ ಬಳಿ ೧೧,೫೦೦ ರೂ.ಗಳಷ್ಟು ದೊಡ್ಡ ಮೊಬಲಗೂ ಇರಲಿಲ್ಲ. ಮುಂಗಡವಾಗಿ ಪಾವತಿ ಮಾಡಬೇಕಾಗಿದ್ದ ೩,೫೦೦ ರೂ.ಗಳನ್ನು ಅಲ್ಲಿ ಇಲ್ಲಿ ಸಾಲ ಮಾಡಿ ಕಟ್ಟಿದ್ದೆ. ಅದನ್ನು ಒಂದೆರಡು ವರ್ಷಗಳಲ್ಲಿ ತೀರಿಸಿದ್ದೆ. ಮುಂದೆ ನನಗೆ ಅನುಕೂಲವಾದಾಗ ಈ ಮನೆಗೆ ಅಲ್ಪಸ್ವಲ್ಪ ಕಾಯಕಲ್ಪ ಮಾಡಿ ನನ್ನ ಬೆಳೆಯುತ್ತಿದ್ದ ಸಂಸಾರದ ಆವಶ್ಯಕತೆಗಳಿಗೆ ತಕ್ಕಂತೆ ಹೆಚ್ಚುವರಿ ಸೌಲಭ್ಯಗಳನ್ನು ಮಾಡಿ ಕೊಂಡಿದ್ದೆ. ಇದಕ್ಕೆಲ್ಲಾ ಸುಮಾರು ೭೫,೦೦೦ ರೂ. ಖರ್ಚಾಗಿತ್ತು. ಒಟ್ಟಿನಲ್ಲಿ, ಇಂತಹ ಒಂದು ಅಚ್ಚುಕಟ್ಟಾದ ಸ್ವಂತ ಮನೆಯಲ್ಲಿ ವಾಸ ಮಾಡುವುದು ನಮಗೆಲ್ಲ ದೈವಕೃಪೆಯಿಂದ ಒದಗಿದ ವರವಾಗಿತ್ತು. ಇದರ ಗೃಹಪ್ರವೇಶ ಸಮಾರಂಭವನ್ನು ೧೯೬೧ರ ಆಗಸ್ಟ್‌ನಲ್ಲಿ ನೆರವೇರಿಸಿದೆ. ಈ ಮೂವತ್ತೆಂಟು ವರ್ಷಗಳು ಅಲ್ಲಿ ವಾಸ ಮಾಡಿ, ಅನೇಕ ಶುಭ ಕಾರ್ಯಗಳು ಅಲ್ಲಿ ನೆರವೇರಿದುದು ನಮ್ಮ ಗುರುಹಿರಿಯರ ಹಾಗೂ ತಂದೆತಾಯಿಯರ ಆಶೀರ್ವಾದ , ಅನುಗ್ರಹ ಹಾಗೂ ದೈವಕೃಪೆಯಲ್ಲದೇ ಮತ್ತೇನು!

ನನ್ನ ಎರಡೂ ಕಡೆ ತಾತಂದಿರ ಬಂಧುಗಳೂ ನಮಗೆ ಅತ್ಯಂತ ಆತ್ಮೀಯರಾಗಿದ್ದರು. ಹಿರಿಯಣ್ಣನಂತಿದ್ದ ನನ್ನ ತಂದೆಯವರನ್ನು ಅವರೆಲ್ಲರೂ ಬಹಳವಾಗಿ ಗೌರವಿಸುತ್ತಿದ್ದರು. ನಾಲೆ ಮನೆತನದವ ರೆಂದರೆ ಎಲ್ಲರಿಗೂ ಒಂದು ರೀತಿಯ ವಿಶೇಷ ಗೌರವ ಭಾವನೆ ಇತ್ತು. ಅವರ ಸಭ್ಯತೆ, ಸಾಧುಸ್ವಭಾವ, ಪ್ರಾಮಾಣಿಕತೆ ಹಾಗೂ ನಿಃಸ್ವಾರ್ಥ ಮನೋಭಾವಗಳು ಜನಜನಿತವಾಗಿದ್ದವು. ನಾನು ಕಂಡ ನಮ್ಮ ನಾಲೆ ಮನೆತನದ ನನ್ನ ಬಂಧುಬಳಗದಲ್ಲಿ ಈಗ ಜೀವಂತವಾಗಿರುವ ಅತ್ಯಂತ ಹಿರಿಯ ಸುಮಾರು ತೊಂಬತ್ತೆಂಟರ ಹರೆಯದ ನನ್ನ ಚಿಕ್ಕಪ್ಪನವರಾದ ಗಮಕಿ ಆರ್.ಎನ್. ಗುಂಡೂರಾಮಯ್ಯನವರು ಪ್ರಮುಖರು. ಇವರು ನಾಲಾ ನಾರಣಪ್ಪನವರ ಮಕ್ಕಳು. ಇವರಲ್ಲದೇ, ಈಗಾಗಲೇ ಗತಿಸಿರುವವರಲ್ಲಿ ಜಯಣ್ಣ, ಚಂದ್ರಶೇಖರಯ್ಯ ಅವರುಗಳೆಲ್ಲರೂ ನಾಲೆ ರಾಮಸ್ವಾಮಯ್ಯನವರ ಮಕ್ಕಳು. ಹಾಗೆಯೇ ತಮ್ಮಣ್ಣ, ಆರ್.ಕೆ. ರಾಮಸ್ವಾಮಯ್ಯ ಮತ್ತು ಆರ್.ಕೆ. ಶ್ರೀನಿವಾಸಯ್ಯನವರು

ನಾಲೆ ಕೃಷ್ಣಪ್ಪನವರ ಮಕ್ಕಳು. ಇವರೆಲ್ಲರೂ ನನ್ನ ತಾತನ ತಮ್ಮಂದಿರ ಮಕ್ಕಳು. ಇವರಲ್ಲಿ ಜಯಣ್ಣನವರು ನಮಗೆ ಹಿಂದಿನಿಂದಲೂ ಅತ್ಯಂತ ಆತ್ಮೀಯರಾಗಿ ನಮ್ಮ ಮನೆಗೆ ಬಂದು, ಹೋಗುತ್ತಾ ನನ್ನ ಸ್ವಂತ ಚಿಕ್ಕಪ್ಪನಂತೆಯೇ ಇದ್ದರು. ನನ್ನ ತಂದೆಯವರ ಕಾಲಾನಂತರ ಆ ಸ್ಥಾನವನ್ನು ಅವರು ಬಹುಮಟ್ಟಿಗೆ ತುಂಬಿದ್ದು ನನಗೆ ಎಲ್ಲದರಲ್ಲಿಯೂ ತಮ್ಮ ಸಲಹೆ, ಸಹಕಾರಗಳನ್ನು ನೀಡುತ್ತಾ ಬಂದಿದ್ದರು. ನನ್ನ ತಾಯಿಯ ಕಡೆಯಿಂದ ಅವರ ಚಿಕ್ಕಪ್ಪನ ಮಗ ಮನ್ನಾರು ಕೃಷ್ಣಪ್ಪನವರು ನಮಗೆ ಸ್ವಂತ ಸೋದರಮಾವನಂತೆಯೇ ಇದ್ದರು. ನನ್ನ ಅಮ್ಮನ ಅಕ್ಕನ ಮಗ ಗಂಗಾಧರಯ್ಯ ಎಂಬುವರು ನಮ್ಮ ಮನೆಗೆ ಬಹಳವಾಗಿ ಬಂದು ಹೋಗುತ್ತಿದ್ದರು.

ನನ್ನ ಪತ್ನಿಯ ಕಡೆ ಅವಳ ಸೋದರಮಾವ ಅಡ್ವೊಕೇಟ್ ಆರ್.ಕೆ. ಆನಂದರಾಮಯ್ಯನವರು ನಮ್ಮ ಸಂಕೇತಿ ಜನಾಂಗದ ಒಬ್ಬ ಗಣ್ಯ ವ್ಯಕ್ತಿಯಾಗಿದ್ದರು. ಇವರ ತಂದೆ ಕಲ್ಲೀಕೋಟೆ ಶ್ಯಾಮಶಾಸ್ತ್ರಿಗಳು. ಇವರ ಮಗಳೇ ನನಗೆ ಹೆಣ್ಣು ಕೊಟ್ಟ ಅತ್ತೆ. ರಾಮಶಾಸ್ತ್ರಿಗಳ ತಮ್ಮ ಕೃಷ್ಣಶಾಸ್ತ್ರಿಗಳು. ಇವರಿಬ್ಬರೂ ಸಂಗೀತ, ಸಾಹಿತ್ಯ ವಿದ್ವಾಂಸರು. ಕೃಷ್ಣಶಾಸ್ತ್ರಿಗಳ ಮಕ್ಕಳೇ ಆರ್.ಕೆ. ವೆಂಕಟರಾಮಶಾಸ್ತ್ರಿ, ಆರ್.ಕೆ. ನಾರಾಯಣಸ್ವಾಮಿ, ಆರ್.ಕೆ. ರಾಮನಾಥನ್ ಮತ್ತು ಆರ್.ಕೆ. ಶ್ರೀಕಂಠನ್. ಇವರೆಲ್ಲರೂ ಕಲ್ಲೀಕೋಟೆ ಮನೆತನದವರು ಹಾಗೂ ನಾಲೆ ಮನೆತನದ ಜ್ಞಾತಿಗಳು.

ಹೊಸ ಅಧ್ಯಾಯ

ಇತ್ತ ಮೈಸೂರು ಮಹಾರಾಣಿ ಕಾಲೇಜಿನಲ್ಲಿ ವೀಣಾ ಅಧ್ಯಾಪಕನಾಗಿ ನನ್ನ ಕೆಲಸ ಮುಂದುವರೆಯುತ್ತಿತ್ತು. ಆದರೆ, ೧೯೬೦ರ ವೇಳೆಗೆ ಒಂದು ಅನಿರೀಕ್ಷಿತ ಸಮಸ್ಯೆ ಉದ್ಭವವಾಯಿತು. ಮೈಸೂರು ವಿಶ್ವವಿದ್ಯಾನಿಲಯ ಒಂದು ಹೊಸ ಕಾನೂನನ್ನು ಜಾರಿಗೆ ತಂದಿತ್ತು. ಅದರಂತೆ, ಯಾವ ಐಚ್ಛಿಕ ವಿಷಯದಲ್ಲೂ ಕನಿಷ್ಠ ಐದು ಮಂದಿ ವಿದ್ಯಾರ್ಥಿಗಳು ಇರಬೇಕೆಂಬ ನಿಯಮ ಮುಖ್ಯವಾಗಿ ವೀಣೆಗೆ ದೊಡ್ಡ ಅಡಚಣೆ ಯಾಯಿತು. ಇದರ ಪರಿಣಾಮ ಏನಾಗಬಹುದೆಂಬುದರ ಬಗ್ಗೆ ನಾನು ಆಗಿನ ಪ್ರಿನ್ಸಿಪಾಲ್ ಹಾಗೂ ಸೆನೆಟ್ ಸದಸ್ಯೆ ಜಯಲಕ್ಷ್ಮಮ್ಮಣ್ಣಿ ಯವರಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದೆ. ವೀಣೆಗೆ ಏಕಪ್ರಕಾರವಾಗಿ ಐದು ಮಂದಿ ಪ್ರತಿವರ್ಷ ಸೇರುವ ಸಂಭವ ಕಡಮೆ. ಅದರಂತೆ ಕ್ರಮೇಣ ವೀಣಾ ಭಾಗವನ್ನು ಮುಚ್ಚಬೇಕಾಗಬಹುದೆಂದೂ ತಿಳಿಸಿದೆ. ಆದರೆ, ಅವರು ಈ ವಿಷಯವಾಗಿ ಹೆಚ್ಚಿನ ಕಾಳಜಿ ವಹಿಸಿದಂತೆ ಕಾಣಲಿಲ್ಲ. ಹಾಗೂ ಅದು ಅರೆಕಾಲಿಕ ಹುದ್ದೆಯಾಗಿಯೇ ಉಳಿದಿದ್ದುದರಿಂದ ನನಗೂ ಅದರಲ್ಲಿ ಹೋರಾಡಲು ಹೆಚ್ಚು ಆಸಕ್ತಿ ಇರಲಿಲ್ಲ. ಹೀಗಾಗಿ , ಹೊಸ ವಿದ್ಯಾರ್ಥಿಗಳಿಗೆ ಪ್ರವೇಶವಿಲ್ಲದೇ , ಆಗಲೇ ಕಲಿಯುತಿದ್ದ ಮೂರು ಪದವಿ ತರಗತಿಗಳ ವಿದ್ಯಾರ್ಥಿಗಳಿಗೆ ಮುಂದಿನ ಮೂರು ವರ್ಷ ಪಾಠ ಹೇಳಿ ಅವರನ್ನು ಪದವೀಧರರನ್ನಾಗಿ ಮಾಡಿ, ವೀಣೆ ವಿಭಾಗಕ್ಕೆ ವಿದಾಯ ಹೇಳಿ ೧೯೬೩ರಲ್ಲಿ ಮಹಾರಾಣಿ ಕಾಲೇಜಿನಿಂದ ಹೊರಬಂದೆ. ಅಲ್ಲಿಗೆ ಆ ಸಂಸ್ಥೆಯೊಂದಿಗಿನ ನನ್ನ ಸಂಬಂಧ ಅಂತ್ಯವಾಯಿತು.

ಇದಾದ ಎರಡು ವರ್ಷಗಳಲ್ಲೇ ನನ್ನ ಅದೃಷ್ಟದ ಬಾಗಿಲು ಮತ್ತೆ ತೆರೆಯಿತು. ೧೯೬೫ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಆಗಿನ ಕುಲಪತಿ ಡಾ|| ಶ್ರೀಮಾಲಿಯವರ ನೇತೃತ್ವದಲ್ಲಿ ಸಂಗೀತ ಮತ್ತು ನೃತ್ಯ ಕಾಲೇಜನ್ನು ಪ್ರಾರಂಭಿಸಿತು. ಹುದ್ದೆಗಳಿಗೆ ಅರ್ಜಿಗಳನ್ನು ಕರೆಯಲಾಯಿತು. ನಾನೂ ಅರ್ಜಿಯನ್ನು ಹಾಕಿದೆ. ಸಂದರ್ಶನಕ್ಕೆ ಕರೆ ಬಂದಿತು. ಹೆಚ್ಚಿನ ಭರವಸೆಯನ್ನೇನೂ ಇಟ್ಟುಕೊಳ್ಳದೇ ಸಂದರ್ಶನಕ್ಕೆ ಹೋದೆ. ಮದರಾಸಿನಿಂದಲೂ ಕೆಲವು ಪ್ರಸಿದ್ಧ ವಿದ್ವಾಂಸರು ಈ ಹುದ್ದೆಗಳಿಗಾಗಿ ಬಂದಿದ್ದರು. ಆದ್ದರಿಂದ, ನನಗೆ ಯಾವ ಸಾಧ್ಯತೆಯೂ ಗೋಚರಿಸಲಿಲ್ಲ. ದೇವರ ಮೇಲೆ ಭಾರ ಹಾಕಿ ಸುಮ್ಮನಿದ್ದೆ. ಒಂದು ವಾರದೊಳಗೇ, ವೀಣಾ ವಿಭಾಗದ ಮುಖ್ಯಸ್ಥನನ್ನಾಗಿ ಪ್ರೊಫೆಸರ್ ಹುದ್ದೆಗೆ ಆಯ್ಕೆ ಮಾಡಿದ್ದಾರೆಂಬ ಸುದ್ದಿ ತಿಳಿದಾಗ ನನ್ನ ಕಿವಿಗಳನ್ನೇ ನಂಬಲಾಗಲಿಲ್ಲ. ಇಂತಹ ಗೆಜೆಟೆಡ್ ಹುದ್ದೆ , ಅದೂ ವಿಶ್ವವಿದ್ಯಾ ನಿಲಯದಲ್ಲಿ ನನಗೆ ಲಭಿಸಬಹುದೆಂದು ನಾನು ಕನಸಿನಲ್ಲಿಯೂ ಎಣಿಸಿರಲಿಲ್ಲ. ದೈವಕೃಪೆಗೆ ತಲೆ ಬಾಗಿ ವಂದಿಸಿದೆ. ನನ್ನ ಮಾತಾ ಪಿತೃಗಳನ್ನೂ , ವಿದ್ಯಾಗುರುಗಳನ್ನೂ ಭಕ್ತಿಯಿಂದ ಸ್ಮರಿಸಿದೆ. ನನ್ನ ಜೀವನದ ಅತ್ಯಂತ ಸಂಭ್ರಮದ ಒಂದು ಹೊಸ ಅಧ್ಯಾಯ ಹೀಗೆ ಪ್ರಾರಂಭವಾಗಿ ನನ್ನ ಮುಂದಿನ ಶ್ರೇಯಸ್ಸಿಗೆ ನಾಂದಿಯಾಯಿತು.

ಹೀಗೆ , ನಮ್ಮ ಸಂಗೀತ ನೃತ್ಯ ಕಾಲೇಜು - ಈಗಿನ ಲಲಿತಕಲಾ ಕಾಲೇಜು - ೧೯೬೫ರ ಆಗಸ್ಟ್ ಸುಮಾರಿನಲ್ಲಿ ಪ್ರಾರಂಭವಾಯಿತು. ವೀಣಾ ವಿಭಾಗದಲ್ಲಿ ನನ್ನ ಜೊತೆಗೆ ವಿ. ಲಲಿತ ಹಾಗೂ ಎ.ಎಸ್. ಪದ್ಮ ಸೇರ್ಪಡೆಯಾದರು. ಎ.ಎಸ್. ಪದ್ಮ ಕೆಲವು ವರ್ಷಗಳ ಅನಂತರ ಆಕಾಶವಾಣಿಯನ್ನು ಸೇರಿಕೊಂಡರು. ಆ ವೇಳೆಗೆ ಆರ್. ವಿಶ್ವೇಶ್ವರನ್ ಸಂಗೀತಶಾಸ್ತ್ರ ವಿಭಾಗದಿಂದ ವೀಣಾ ವಿಭಾಗಕ್ಕೆ ನೇಮಕಗೊಂಡರು. ಗಾಯನ ವಿಭಾಗದಲ್ಲಿ ವಿ.ರಾಮರತ್ನಂ ಅವರು ವಿಭಾಗ ಮುಖ್ಯಸ್ಥರೂ, ಪ್ರಿನ್ಸಿಪಾಲರೂ ಆಗಿ ನೇಮಕಗೊಂಡರು. ಅವರ ಜತೆಗೆ ಗೌರಿ ಕುಪ್ಪಸ್ವಾಮಿ ಹಾಗೂ ಬಿ.ಎಸ್. ವಿಜಯರಾಘವನ್ ಸೇರ್ಪಡೆ ಯಾದರು. ನೃತ್ಯ ವಿಭಾಗದಲ್ಲಿ ಕೆ. ವೆಂಕಟಲಕ್ಷ್ಮಮ್ಮ ಹಾಗೂ ಶಕುಂತಲ ಅವರ ನೇಮಕವಾಯಿತು. ಪಿಟೀಲು ವಿಭಾಗದಲ್ಲಿ ಎಸ್. ಮಹದೇವಪ್ಪ , ಕೊಳಲಿನಲ್ಲಿ ವಿ.ದೇಶಿಕಾಚಾರ್, ಮೃದಂಗದಲ್ಲಿ ವಿ. ನಾಗಭೂಷಣಾ ಚಾರ್ ಹಾಗೂ ನಾಟಕ ವಿಭಾಗದಲ್ಲಿ ಸಿಂಧುವಳ್ಳಿ ಅನಂತಮೂರ್ತಿ ನೇಮಕಗೊಂಡರು.

ಆಗ ಖಾಲಿ ಇದ್ದ ಈಗಿನ ಆಕಾಶವಾಣಿ ಕಟ್ಟಡದಲ್ಲಿ ನಮ್ಮ ಕಾಲೇಜು ಪ್ರಾರಂಭವಾಯಿತು. ಬಹಳಷ್ಟು ಜನ ವಿದ್ಯಾರ್ಥಿ

ವಿದ್ಯಾರ್ಥಿನಿಯರು ಸೇರಿ ಕಾಲೇಜು ಬಹಳ ಯಶಸ್ವಿಯಾಗಿ ಮುನ್ನಡೆಯುತ್ತಿತ್ತು. ಎಲ್ಲರೂ ಉತ್ಸಾಹದಿಂದ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದೆವು. ಗುರುಶಿಷ್ಯರ ಬಾಂಧವ್ಯ ಬಹಳ ಮಧುರವಾಗಿತ್ತು. ಅಧ್ಯಾಪಕ ವರ್ಗದವರೆಲ್ಲರೂ ಅತ್ಯಂತ ಆತ್ಮೀಯರಾಗಿ ಸಹೃದಯತೆ, ಸೌಹಾರ್ದಗಳಿಂದ ಪರಸ್ಪರ ಪ್ರೀತಿ, ವಿಶ್ವಾಸಗಳನ್ನು ಹೊಂದಿದ್ದರು. ಒಟ್ಟಿನಲ್ಲಿ , ಎಲ್ಲರಿಗೂ ಇಂತಹ ಒಂದು ಪ್ರತಿಷ್ಠಿತ ಸ್ಥಾನಮಾನ ಲಭಿಸಿದ್ದು ಅತ್ಯಂತ ಸಂತೋಷ ಸಂಭ್ರಮಗಳ ವಿಷಯವಾಗಿತ್ತು. ಒಂದೆರಡು ವರ್ಷಗಳಲ್ಲೇ ಆಕಾಶವಾಣಿ ಕೇಂದ್ರ ಮೈಸೂರಿನಲ್ಲಿ ಸ್ಥಾಪಿತ ವಾದಾಗ ನಮ್ಮ ಕಾಲೇಜು ಮಾನಸಗಂಗೋತ್ರಿಗೆ ವರ್ಗಾಯಿಸಲ್ಪಟ್ಟಿತು. ಕೆಲವು ವರ್ಷಗಳಲ್ಲೇ ಇದಕ್ಕೆ ಒಂದು ಸ್ವಂತ ಕಟ್ಟಡವೂ ನಿರ್ಮಿತವಾಗಿ ಅಲ್ಲಿ ನಮ್ಮ ಕಾಲೇಜು ಖಾಯಂ ಆಗಿ ನೆಲೆಸಿತು.

ಕೃತಿ ರಚನೆ

ನನಗೆ ಲಲಿತಕಲಾ ಕಾಲೇಜಿನ ಹುದ್ದೆ ದೊರೆತ ಅನಂತರ ನನ್ನ ಜೀವನಕ್ರಮದಲ್ಲಿ ಅನೇಕ ಗಮನಾರ್ಹ ಬದಲಾವಣೆಗಳಾದುವು. ಅದರಲ್ಲಿ ಅತಿ ಮುಖ್ಯವಾದುದೆಂದರೆ ನನಗೆ ಅದರಿಂದ ದೊರೆತ ಮಾನಸಿಕ ನೆಮ್ಮದಿ. ಅದುವರೆವಿಗೂ ಬರೀ ಪಾಠಗಳನ್ನೇ ನೆಚ್ಚಿಕೊಂಡು, ಎಲ್ಲ ಏರುಪೇರುಗಳನ್ನೂ ಎದುರಿಸುತ್ತಾ, ದಿನವಿಡೀ ದುಡಿಯುತ್ತಾ ಕಷ್ಟಪಡುತ್ತಿದ್ದ ನನಗೆ ಒಂದು ನಿರ್ದಿಷ್ಟವಾದ ವರಮಾನ ತಿಂಗಳಾದ ಕೂಡಲೇ ಕೈಗೆ ಸಿಗುವಂತಾದುದು ದೊಡ್ಡ ವರದಾನವೇ ಆಗಿತ್ತು. ಬೆಳೆಯುತ್ತಿದ್ದ ಸಂಸಾರದ ಖರ್ಚು–ವೆಚ್ಚಗಳು, ಮಕ್ಕಳ ವಿದ್ಯಾಭ್ಯಾಸ, ಉಡುಗೆ ತೊಡುಗೆ ಇವುಗಳ ನಿರ್ವಹಣೆಗೆ ಸಾಕಷ್ಟು ಹಣ ಬೇಕಾಗುತ್ತಿತ್ತು. ಈ ಸಮಸ್ಯೆ ಈಗ ನಿವಾರಣೆಯಾಗಿತ್ತು. ಅದೂ ಅಲ್ಲದೆ, ಕಾಲೇಜಿನ ನಿಯಮದ ಪ್ರಕಾರ ನಾವು ಮನೆಪಾಠಗಳನ್ನು ಇಟ್ಟುಕೊಳ್ಳುವಂತಿರಲಿಲ್ಲ. ಹೀಗಾಗಿ, ಕೇವಲ ಕಾಲೇಜಿಗೆ ಮೀಸಲಾದ ನನ್ನ ದಿನಚರಿಯಲ್ಲಿ ನನಗೆ ಈಗ ಸಾಕಷ್ಟು ವಿರಾಮ ಸಮಯ ಸಿಗುತ್ತಿತ್ತು. ಇದರಿಂದ ನನ್ನ ಅಧ್ಯಾಪನ, ಅಧ್ಯಯನ, ಕೃತಿರಚನೆ ಇವುಗಳಿಗೆ ಬಹಳ ಅನುಕೂಲವಾಯಿತು. ನನ್ನ ಅಂತಃಸತ್ವ ಪ್ರಖರ ಗೊಂಡು ಪ್ರಜ್ವಲಿಸಲು ನನಗೆ ಪ್ರೇರಣೆ ಪ್ರೋತ್ಸಾಹಗಳು ದೊರೆತುದು ಇಲ್ಲಿಯೇ. ಸಂಗೀತಶಾಸ್ತ್ರ ಪ್ರಯೋಗಗಳಲ್ಲಿ ಹೆಚ್ಚಿನ ಪರಿಣತಿ, ವಾಗ್ಗೇಯ ರಚನೆಗಳ ಸೃಷ್ಟಿ, ಸಂಗೀತ ಕ್ಷೇತ್ರದಲ್ಲಿ ವ್ಯಾಪಕ ಚಟುವಟಿಕೆಗಳು, ವಿದ್ವಜ್ಜನರ ಸತ್ಸಹವಾಸ ಇವೆಲ್ಲವೂ ಲಭಿಸಿ ನಾನು ನಿರಂತರ ಪ್ರಯೋಗಶೀಲನಾಗಿ , ನನ್ನ ಕೆಲವು ಉನ್ನತಾದರ್ಶಗಳು ಸಾಕಾರಗೊಂಡುದನ್ನು ಕಾಣಲು ಸಾಧ್ಯವಾದುದೂ ಇಲ್ಲಿಯೇ.

ಒಬ್ಬ ವೇದಿಕೆಯ ಕಲಾವಿದನಾಗಿ , ಸಂಗೀತ ಶಿಕ್ಷಕನಾಗಿ ಈಗಾಗಲೇ ಸಾಕಷ್ಟು ಅನುಭವವನ್ನು ಪಡೆದಿದ್ದರೂ ಒಬ್ಬ ಬರಹಗಾರನಾಗಿ, ವಾಗ್ಗೇಯಕಾರನಾಗಿ ರೂಪುಗೊಳ್ಳಲು ನನ್ನ ಕಾಲೇಜಿನ ವಾತಾವರಣ ನನಗೆ ಬಹಳ ಮಟ್ಟಿಗೆ ಪ್ರೋತ್ಸಾಹದಾಯಕವಾಗಿತ್ತು. ಜತೆಗೆ, ರಾಷ್ಟ್ರಕವಿ ಕುವೆಂಪು ಅವರು 'ಶಾಸ್ತ್ರೀಯ ಗೇಯರಚನೆಗಳನ್ನು ಕನ್ನಡ ಭಾಷೆಯಲ್ಲಿ ಏಕೆ ಮಾಡಬಾರದು? ಅದು ನಮ್ಮ ಮಾತೃಭಾಷೆಗೆ ನಾವು ಸಲ್ಲಿಸಬೇಕಾದ ಸೇವೆಯಲ್ಲವೇ?' ಎಂದು ಒಂದು ಸವಾಲಿನಂತೆ ನಮಗೆ ಕಿವಿಮಾತು ಹೇಳಿದರು. ಇದು ನನ್ನ ಮೇಲೆ ವಿಶೇಷ ಪ್ರಭಾವ ಬೀರಿತು. ಸಂಗೀತ ತ್ರಿಮೂರ್ತಿಗಳ ಧಾಟಿಯಲ್ಲಿ ಪುರಂದರದಾಸರು ಕನಕದಾಸರು ಇವರುಗಳ ಮೇಲ್ಪಂಕ್ತಿ ಅನುಸರಿಸಿ ಕನ್ನಡ ಭಾಷೆಯಲ್ಲಿ ಹಾಗೂ ಸಂಸ್ಕೃತ , ತೆಲುಗು, ಹಿಂದೀ ಭಾಷೆಗಳಲ್ಲಿ ಕೃತಿ ರಚನೆ ಪ್ರಾರಂಭಿಸಿಯೇ ಬಿಟ್ಟೆ.

ಮೊದಮೊದಲು ಮನಸ್ಸಿನಲ್ಲಿ ಏನೋ ಅಳುಕು. ಎಲ್ಲಿ ಯಾವ ರೀತಿ ತಪ್ಪಾಗಬಹುದೋ ಎಂಬ ಭಯ. ಹೀಗೆ ಪ್ರಾರಂಭದ ಒಂದೆರಡು ರಚನೆಗಳನ್ನು ರಚಿಸಿದ ಮೇಲೆ, ನನ್ನ ವಿದ್ವಾಂಸಮಿತ್ರರ ಮುಂದೆ ಹಾಡಿ ತೋರಿಸಿದೆ. ಆಶ್ಚರ್ಯವೆಂದರೆ ಪ್ರತಿಯೊಬ್ಬರೂ ಅದನ್ನು ಬಹಳವಾಗಿ ಮೆಚ್ಚಿಕೊಂಡಾಡಿದರು. ಇದರಿಂದ ನನಗೆ ವಿಶೇಷವಾದ ಪ್ರೋತ್ಸಾಹವೂ , ಆತ್ಮವಿಶ್ವಾಸವೂ ಲಭಿಸಿತು. ಸದಾಕಾಲವೂ ಕೃತಿರಚನೆಯ ಗುಂಗಿನಲ್ಲೇ ಇರತೊಡಗಿದೆ. ಧಾತು, ಮಾತು, ಲಯಧಾಟಿಗಳು ನಿರರ್ಗಳವಾಗಿ ಸ್ಫುರಿಸಲಾರಂಭಿಸಿದವು. ರಾತ್ರಿ ಮಲಗಿದ್ದಾಗಲೂ ಮಧ್ಯೆ ಎದ್ದು ಆಗ ತಾನೇ ಮನಸ್ಸಿಗೆ ಹೊಳೆದ ಸಂಗೀತ, ಸಾಹಿತ್ಯಗಳನ್ನು ಗುರುತು ಹಾಕಿಕೊಳ್ಳುತ್ತಿದ್ದೆ. ರಾಮ, ಕೃಷ್ಣ, ಶಿವ, ಅಂಬಿಕೆ, ಗಣಪತಿ, ಆಂಜನೇಯ, ರಾಘುವೇಂದ್ರಸ್ವಾಮಿ-ಇವರುಗಳ ಮೇಲೆ ಒಂದಾದ ಮೇಲೊಂದು ಕೃತಿಗಳು ಮೂಡಿ ಬಂದವು. ಅಲ್ಲದೇ, ಸ್ವರಜತಿ, ಜತಿಸ್ವರ, ರಾಗಮಾಲಿಕೆ, ಭಜನ್, ತಿಲ್ಲಾನ, ನಗಮಾ ಮೊದಲಾದ ಇತರ ವಿವಿಧ ರೀತಿಯ ಗೇಯ ರಚನೆಗಳೂ ರೂಪುಗೊಂಡವು. ಒಟ್ಟಾರೆ ಅರುವತ್ತಾರು ಗೇಯ ರಚನೆಗಳ ಒಂದು ಸಂಪುಟ ಸಿದ್ಧವಾಯಿತು. ಜತೆಜತೆಗೇ ನನ್ನ ಒಂದು ಕಿರು ಆತ್ಮಕಥನವನ್ನೂ ಬರೆದು ಸಿದ್ಧಪಡಿಸಿದೆ. ವಿಶ್ವವಿದ್ಯಾನಿಲಯದ ಪ್ರಸಾರಾಂಗಕ್ಕೆ ಪುಸ್ತಕದ ಹಸ್ತಪ್ರತಿಯನ್ನು ಪ್ರಕಟಣೆಗಾಗಿ ಕಳುಹಿಸಿದೆ. ನನ್ನ ಕೃತಿಗಳಲ್ಲಿ ನನ್ನ ಕುಲದೈವ ವೆಂಕಟರಮಣಸ್ವಾಮಿಯ ಪರ್ಯಾಯನಾಮ 'ಲಕ್ಷ್ಮೀರಮಣ' ಎಂಬ ಅಂಕಿತವನ್ನಿಟ್ಟು ಈ ಪುಸ್ತಕಕ್ಕೆ 'ಲಕ್ಷ್ಮೀರಮಣ ಕೃತಿಮಂಜರಿ' ಎಂಬ ಶೀರ್ಷಿಕೆಯನ್ನು ಕೊಟ್ಟಿದ್ದೆ. ನಾಲ್ಕು ಭಾಷೆಗಳಲ್ಲಿ ಅಂದರೆ ಕನ್ನಡ, ಸಂಸ್ಕೃತ, ತೆಲುಗು ಮತ್ತು ಹಿಂದಿ ಭಾಷೆಗಳಲ್ಲಿ ಕೃತಿ ರಚನೆ ಮಾಡಿದ್ದೆ. ವಿದ್ವಾಂಸರೆಲ್ಲರೂ ಏಕಕಂಠದಿಂದ ನನ್ನ ರಚನೆಗಳ ಬಗ್ಗೆ ಮೆಚ್ಚುಗೆ ಸೂಚಿಸಿದ್ದರೂ, ಪ್ರಸಾರಾಂಗದ ಆಯ್ಕೆ ಸಮಿತಿಯವರು ಮಾತ್ರ ಏನೋ ಸಲ್ಲದ ನೆಪ ಹೇಳಿ ಹಸ್ತಪ್ರತಿಯನ್ನು ಹಿಂದಿರುಗಿಸಿದರು. ಇದರಿಂದ ನಾನೇನೂ ಧೃತಿಗೆಡಲಿಲ್ಲ. ಮುಂದೆ ೧೯೭೮ರಲ್ಲಿ ನಾನೇ ಪ್ರಕಾಶಕನಾಗಿ ಪುಸ್ತಕವನ್ನು ಹೊರತಂದೆ. ಈ ಪ್ರಯತ್ನ ಸಾರ್ಥಕವಾಗಿ ಫಲಪ್ರದ ವಾಯಿತು. ವಿದ್ವಾಂಸರು, ವಿದ್ಯಾರ್ಥಿಗಳು, ವಿಮರ್ಶಕರು ಅದನ್ನು

ತುಂಬುಹೃದಯದಿಂದ ಸ್ವಾಗತಿಸಿದರು. ಹೀಗೆ, ಅನಿರೀಕ್ಷಿತವಾಗಿ ನಾನೊಬ್ಬ ವಾಗ್ಗೇಯಕಾರನಾಗಿ ರೂಪುಗೊಂಡು ಅದು ಇಷ್ಟರಮಟ್ಟಿಗೆ ಫಲಕಾರಿಯಾಗಬಹುದೆಂದು ನಾನು ಊಹಿಸಿಯೂ ಇರಲಿಲ್ಲ. ಇದೆಲ್ಲವೂ ದೈವಕೃಪೆ, ಗುರುಹಿರಿಯರ ಆಶೀರ್ವಾದ, ಅನುಗ್ರಹ ಗಳಲ್ಲದೇ ಮತ್ತೇನು?

ಸಂಭ್ರಮ

ಕಾಲೇಜಿನಲ್ಲಿ ಇದ್ದ ಅವಧಿಯಲ್ಲಿ ನನಗೆ ಅನೇಕ ಪ್ರವಾಸ ಕಾರ್ಯಕ್ರಮಗಳು ಲಭಿಸಿದುವು. ಅದರಲ್ಲಿ ಮುಖ್ಯವಾಗಿ ಕಾಲೇಜಿನ ಶೈಕ್ಷಣಿಕ ಪ್ರವಾಸದ ಅಂಗವಾಗಿ ಸುಮಾರು ನಲವತ್ತು ಮಂದಿ ವಿದ್ಯಾರ್ಥಿನಿಯರ ತಂಡದ ಮುಖ್ಯಸ್ಥನಾಗಿ ದಕ್ಷಿಣ ಭಾರತದ ಚಿದಂಬರಂ, ಮಧುರೈ, ತಿರುಚಿರಾಪಳ್ಳಿ, ಶ್ರೀರಂಗಂ, ನಾಗರ್ ಕೋಯಿಲ್, ಕನ್ಯಾಕುಮಾರಿ, ಶುಚೀಂದ್ರಂ, ಕುಂಭಕೋಣಂ, ತಂಜಾವೂರು, ತಿರುವಾರೂರು, ತಿರುವೈಯಾರುಗಳಿಗೆ ಭೇಟಿ ನೀಡಿ ಅಲ್ಲಿನ ಸಾಂಸ್ಕೃತಿಕ ವೈಶಿಷ್ಟ್ಯಗಳ ಪರಿಚಯ ಮಾಡಿಕೊಂಡು, ತಿರುವೈಯಾರಿನ ಶ್ರೀ ತ್ಯಾಗರಾಜಸ್ವಾಮಿಯವರ ಆರಾಧನಾ ಮಹೋತ್ಸವದಲ್ಲಿ ಪಾಲ್ಗೊಂಡು ಮೈಸೂರಿಗೆ ಹಿಂದಿರುಗಿದೆವು. ಸುಮಾರು ಮೂರು ವಾರಗಳ ಈ ಪ್ರವಾಸ ಅತ್ಯಂತ ಬೋಧಪ್ರದವೂ, ಹರ್ಷದಾಯಕವೂ ಆಗಿತ್ತು. ಇದಲ್ಲದೇ ಬೊಂಬಾಯಿನಲ್ಲಿ ಕಾರ್ಯಕ್ರಮ ವೈವಿಧ್ಯವನ್ನು ನೀಡುವುದಕ್ಕಾಗಿ ನಾವು ಕೆಲವು ಅಧ್ಯಾಪಕರೂ, ಕೆಲವು ವಿದ್ಯಾರ್ಥಿನಿಯರೂ ಎರಡು ಬಾರಿ ಹೋಗಿ ಬಂದದ್ದು ನಮ್ಮ ಕಾಲೇಜಿಗೆ ಒಳ್ಳೆಯ ಹೆಸರು ತಂದುಕೊಡಲು ಕಾರಣವಾಯಿತು. ಇದಲ್ಲದೇ ರಾಜ್ಯ ಸರಕಾರ ದೆಹಲಿಯಲ್ಲಿ ಏರ್ಪಡಿಸಿದ್ದ 'ಕರ್ನಾಟಕ ಸಂಸ್ಕೃತಿ ಸೌರಭ' ಎಂಬ ಒಂದು ಸಾಂಸ್ಕೃತಿಕ ಸಪ್ತಾಹದಲ್ಲಿ ನಮ್ಮ ಕಾಲೇಜಿನಿಂದ ಪಂಚವೀಣೆ ಹಾಗೂ ನೃತ್ಯ ಕಾರ್ಯಕ್ರಮಗಳನ್ನು ದೆಹಲಿಯ ಅಶೋಕ ಹೋಟಲ್ ಕಾನ್‌ಫರೆನ್ಸ್ ಹಾಲ್‌ನಲ್ಲಿ ಒಂದು ವಾರ ಕಾಲ ನೀಡಿದೆವು. ಇದು ಎಲ್ಲರ ಮೆಚ್ಚುಗೆಗೂ ಪಾತ್ರವಾಗಿ ನಮ್ಮ ಕಾಲೇಜಿಗೆ ಒಳ್ಳೆಯ ಕೀರ್ತಿ ಲಭಿಸಿತು. ಆ ಸಂದರ್ಭದಲ್ಲಿ ನನ್ನನ್ನು ಪರಿಚಯ ಮಾಡಿಕೊಂಡ ದೆಹಲಿ ಮ್ಯೂಸಿಕ್ ಕ್ಲಬ್‌ನವರು ಮತ್ತೆ ಎರಡು ತಿಂಗಳಲ್ಲೇ ತಮ್ಮ ಕ್ಲಬ್‌ನಲ್ಲಿ ನನ್ನ ವೀಣಾ ಕಛೇರಿಯನ್ನು ಏರ್ಪಡಿಸಿ, ನನಗೆ ಪುಟ್ಟ ನಿಧಿಯನ್ನು ಸಮರ್ಪಿಸಿ ಸನ್ಮಾನಿಸಿದರು. ಅಂದು ಮುಖ್ಯ ಅತಿಥಿಗಳಾಗಿ ವಿದ್ವಾನ್ ವಿ.ವಿ. ಷಡಗೋಪನ್‌ರವರು ಬಂದಿದ್ದು ನನ್ನ ಬಗ್ಗೆ ಕೆಲವು ಒಳ್ಳೆಯ ಮಾತು ಗಳನ್ನಾಡಿದರು. ಇದಾದ ಮಾರನೆಯ ವರ್ಷವೇ ಅಂದರೆ ೧೯೭೭ರಲ್ಲಿ ಹೈದರಾಬಾದ್ ಸೌತ್ ಇಂಡಿಯನ್ ಕಲ್ಚರಲ್ ಅಸೋಸಿಯೇಷನ್ ನವರು ನನ್ನ ವೀಣಾ ಕಛೇರಿಯನ್ನು ರವೀಂದ್ರ ಭಾರತಿ ಸಭಾಂಗಣದಲ್ಲಿ ಏರ್ಪಡಿಸಿ ಸನ್ಮಾನಿಸಿದರು. ಹೀಗೆ ನನ್ನ ಕಲಾಜೀವನದ ಕೆಲವು ಮಹತ್ತ್ವಪೂರ್ಣ ಕಾರ್ಯಕ್ರಮಗಳು ಸುಮಾರು ೧೯೭೬-೭೭ರ ಅವಧಿಯಲ್ಲಿ ನಡೆದುದು ಹಾಗೂ ತಿರುಪತಿ ಕ್ಷೇತ್ರದಲ್ಲಿ ಎರಡು ಬಾರಿ ಆಹ್ವಾನಿತನಾಗಿ ವೀಣಾ ಕಾರ್ಯಕ್ರಮಗಳನ್ನು ನೀಡಿದ್ದು ನನಗೆ ಅತ್ಯಂತ ಸಂತಸವನ್ನು ತಂದಿತ್ತು.

ತಮ್ಮನ ದುರಂತ

ಇತ್ತ ನನ್ನ ತಮ್ಮನ ಸಾಂಸಾರಿಕ ಜೀವನ ಒಬ್ಬ ಪುತ್ರ ಮತ್ತು ನಾಲ್ವರು ಪುತ್ರಿಯರಿಂದ ಕೂಡಿ ಸಂತೋಷ ಸಂಭ್ರಮಗಳಿಂದ ಮುನ್ನಡೆಯುತ್ತಿತ್ತು. ಅವನು ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ಉತ್ತರ ಕರ್ನಾಟಕದ ಘಟಪ್ರಭಾ, ಮಲಪ್ರಭಾ, ರಾಯಚೂರು ಹಾಗೂ ಕಬಿನಿ ಹಾಗೂ ಹಾರಂಗಿ ಪ್ರಾಜೆಕ್ಟ್‌ಗಳಲ್ಲಿ ಕೆಲಸ ಮಾಡಿ ಕಡೆಗೆ ಹೇಮಾವತಿ ಪ್ರಾಜೆಕ್ಟ್‌ನಲ್ಲಿ ಗೊರೂರಿಗೆ ವರ್ಗವಾಗಿ ಬಂದ. ಅವನ ಮಕ್ಕಳ ವಿದ್ಯಾಭ್ಯಾಸವೆಲ್ಲವೂ ಹುಬ್ಬಳ್ಳಿಯಲ್ಲೇ ನಡೆಯುತ್ತಿತ್ತು. ಹಿರಿಯ ಮಗಳು ವಿಜಯ ಮಾತ್ರ ಮೈಸೂರಿನಲ್ಲಿ ನಮ್ಮ ಮನೆಯಲ್ಲಿಯೇ ಓದಿ ಬಿ.ಎಸ್‌ಸಿ., ಪದವೀಧರೆಯಾದಳು. ಮಗ ಪ್ರಕಾಶ ಹುಬ್ಬಳ್ಳಿಯಲ್ಲಿ ಇಂಜಿನಿಯರಿಂಗ್ ಪದವೀಧರನಾದ. ಎರಡನೆಯ ಮಗಳು ರಜನಿ ಹುಬ್ಬಳ್ಳಿ ಮೆಡಿಕಲ್ ಕಾಲೇಜಿನಲ್ಲಿ ಓದಿ ಡಾಕ್ಟರ್ ಆದಳು. ಮತ್ತಿಬ್ಬರು ಹೆಣ್ಣು ಮಕ್ಕಳು ಮಮತಾ ಮತ್ತು ವಿನುತಾ ಶಾಲೆಯಲ್ಲಿ ಓದುತ್ತಿದ್ದರು. ಈಗ ಅವರಿಬ್ಬರೂ ಇಂಜಿನಿಯರಿಂಗ್ ಪದವಿ ಪಡೆದಿದ್ದಾರೆ. ಸಂಸಾರ ಹುಬ್ಬಳ್ಳಿಯಲ್ಲೇ ಇತ್ತು.

ನನ್ನ ತಮ್ಮ ಗೊರೂರಿನಿಂದ ಆಗಾಗ ಹುಬ್ಬಳ್ಳಿಗೂ, ಮೈಸೂರಿಗೂ ಓಡಾಡಿಕೊಂಡಿದ್ದ. ಈ ಮಧ್ಯೆ ಒಮ್ಮೆ ಅವನು ಆಫೀಸ್ ಕೆಲಸದ ಮೇಲೆ ಹುಬ್ಬಳ್ಳಿಯಿಂದ ಬೆಂಗಳೂರಿಗೆ ಹೊರಟಿದ್ದಾಗ ಅವನು ಪ್ರಯಾಣ ಮಾಡುತ್ತಿದ್ದ ಬಸ್ಸು ವೇಗವಾಗಿ ಚಲಿಸುವಾಗ ತಕ್ಷಣ ಬ್ರೇಕು ಹಾಕಿದ್ದರಿಂದ ಹಿಂದಿನ ಸೀಟಿನಲ್ಲಿ ಕುಳಿತಿದ್ದ ಅವನು ಆಯ ತಪ್ಪಿ ಬಸ್ಸಿನೊಳಗೇ ಅಷ್ಟು ದೂರ ಎಸೆಯಲ್ಪಟ್ಟು ತಲೆಗೆ ಜೋರಾಗಿ ಪೆಟ್ಟುಬಿದ್ದಿತು. ಬಹಳ ರಕ್ತಸ್ರಾವವಾಗಿ ಆಸ್ಪತ್ರೆ ಸೇರಿದ. ಸುಮಾರು ಒಂದು ವಾರದಲ್ಲಿ ತಾತ್ಕಾಲಿಕವಾಗಿ ಗುಣವಾದಂತೆ ಕಂಡರೂ ಕಾಲಕ್ರಮೇಣ ಅಸಾಧ್ಯ ತಲೆನೋವು, ಕಣ್ಣುಮಂಜು, ಆರೋಗ್ಯದಲ್ಲಿ ಏರುಪೇರುಗಳು ಪ್ರಾರಂಭವಾದವು. ಒಳ್ಳೆಯ ವೈದ್ಯಕೀಯ ತಪಾಸಣೆ ಚಿಕಿತ್ಸೆಗಳಿಗಾವುದಕ್ಕೂ ಬಗ್ಗದೆ ಇದ್ದಾಗ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ತಲೆಯ ಸ್ಕ್ಯಾನಿಂಗ್ ಮಾಡಿದ ವೈದ್ಯರು ತಲೆಯ ಶಸ್ತ್ರಚಿಕಿತ್ಸೆ ಅನಿವಾರ್ಯವೆಂದು ತಿಳಿಸಿಬಿಟ್ಟರು. ನಮಗೆ ಆಕಾಶವೇ ತಲೆಯ ಮೇಲೆ ಕಳಚಿ ಬಿದ್ದಂತಾಯಿತು. ಆದರೆ ಅದಕ್ಕೆ ಪರ್ಯಾಯ ಉಪಾಯವೇ ಇರಲಿಲ್ಲ. ದೇವರ ಮೇಲೆ ಭಾರ ಹಾಕಿ ಶಸ್ತ್ರಚಿಕಿತ್ಸೆಗೆ ಒಪ್ಪಿಗೆ ನೀಡಿದ್ದಾಯಿತು. ಆದರೆ ವಿಧಿ ನಮಗೆ ಬಹಳ ಕ್ರೂರವಾಗಿತ್ತು.

ಶಸ್ತ್ರಚಿಕಿತ್ಸೆಯನಂತರ ಅಂದೇ ನನ್ನ ಪ್ರೀತಿಯ ತಮ್ಮ ಸತ್ಯಮೂರ್ತಿ ತನ್ನ ಐವತ್ತೊಂದರ ನಡುವಯಸ್ಸಿನಲ್ಲಿ ೧೯೭೭ರ ಸೆಪ್ಟೆಂಬರ್ ತಿಂಗಳಲ್ಲಿ ವಿಧಿವಶನಾದ. ತುಂಬಿದ ಸಂಸಾರ, ಅಪಾರ ಬಂಧುಬಳಗ ಎಲ್ಲವನ್ನೂ ಬಿಟ್ಟಗಲಿದ್ದ.

ಇಂತಹ ಸಹಿಸಲಾಗದ ಪತಿವಿಯೋಗ ಹಾಗೂ ಸಂಸಾರದ ಹೊಣೆಗಾರಿಕೆಗಳನ್ನು ನನ್ನ ತಮ್ಮನ ಪತ್ನಿ, ಬಹಳ ಧೈರ್ಯ ಸ್ಥೈರ್ಯಗಳಿಂದ ಎದುರಿಸಿ ಮಕ್ಕಳ ವಿದ್ಯಾಭ್ಯಾಸವನ್ನು ಸಮರ್ಥವಾಗಿ ಮುಂದುವರೆಸಿ ಉಳಿದ ಇಬ್ಬರು ಹೆಣ್ಣು ಮಕ್ಕಳನ್ನೂ ಇಂಜಿನಿಯರ್ ಗಳನ್ನಾಗಿ ಮಾಡಿ ಅವರೆಲ್ಲರ ವಿವಾಹಗಳನ್ನೂ ನೆರವೇರಿಸಿ ಅತ್ಯಂತ ದಿಟ್ಟತನದಿಂದ ನಿರ್ವಹಿಸಿದಾಗ ಎಲ್ಲರೂ ಬೆರಗಾದರು. ಈಗ ಅವರೆಲ್ಲರೂ ಬಹಳ ಸಂತೋಷ, ಸಂಭ್ರಮಗಳ ಜೀವನ ನಡೆಸುತ್ತಿದ್ದಾರೆ.

ಸಮತೋಲ ಧೋರಣೆ

ಹೀಗೆ, ಕಷ್ಟ–ಸುಖಗಳ ಈ ದ್ವಂದ್ವಸರಣಿಯಲ್ಲಿ ನಮ್ಮ ಜೀವನನೌಕೆ ಸಾಗುತ್ತಿತ್ತು. ನನ್ನ ಈ ಎಲ್ಲ ಅನುಭವಗಳಿಂದ ಒಂದು ರೀತಿಯಲ್ಲಿ ನಿರ್ಲಿಪ್ತತೆಯನ್ನು ಮೈಗೂಡಿಸಿಕೊಂಡಿದ್ದರಿಂದ ನಮಗೆ ಎದುರಾದ ಸಮಸ್ಯೆಗಳನ್ನೆಲ್ಲಾ ಧೈರ್ಯದಿಂದ ಎದುರಿಸಿ ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳುವ ಶಕ್ತಿ ನನಗೆ ಲಭಿಸಿತ್ತು. ಭವಿಷ್ಯದ ಬಗ್ಗೆ ನಾನೆಂದೂ ತಲೆಕೆಡಿಸಿಕೊಂಡವನಲ್ಲ. ನಾನೊಬ್ಬ ಆಶಾವಾದಿ ಆಗಿದ್ದುದೇ ಕಾರಣ. ಭೂತಕಾಲದ ಘಟನೆಗಳನ್ನೂ ಕಹಿ ಪ್ರಸಂಗಗಳನ್ನೂ ಪದೇ ಪದೇ ನೆನೆಯುತ್ತಾ ಚಿಂತಿಸುವ ಸ್ವಭಾವವೂ ನನಗಿರಲಿಲ್ಲ. ಕೇವಲ ವರ್ತಮಾನದಲ್ಲಿ ಮಾತ್ರ ನನ್ನ ಗಮನವನ್ನೆಲ್ಲಾ ಕೇಂದ್ರೀಕರಿಸಿ ಜೀವನದ ಸಾಫಲ್ಯವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದೆ. ಇದರಿಂದ ನನಗೆ ಒಂದು ವಿಶೇಷ ನೆಮ್ಮದಿ ಹಾಗೂ ಉಲ್ಲಾಸದ ಅನುಭವವಾಗುತ್ತಿತ್ತು. ನನ್ನ ಭಾವುಕತೆ, ಆಧ್ಯಾತ್ಮಿಕ ಚಿಂತನೆ, ಸಂಗೀತಕ್ಷೇತ್ರದಲ್ಲಿನ ಹೆಚ್ಚಿನ ಪರಿಶ್ರಮ ಹಾಗೂ ಸಾಧನೆ ಇವುಗಳಲ್ಲಿ ನನ್ನನ್ನು ನಾನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದೆ. ವೃತ್ತಿಜೀವನದಲ್ಲಿ ಆಗಾಗ ಎದುರಾಗುತ್ತಿದ್ದ ಸಮಸ್ಯೆಗಳನ್ನೂ ಬಹಳ ಜಾಣ್ಮೆಯಿಂದ ಪರಿಹರಿಸಿಕೊಳ್ಳುತ್ತಿದ್ದೆ. ಸಾಂಸಾರಿಕ ವಿಷಯ ಗಳಲ್ಲಿಯೂ ನಾನು ಎಂದೂ ಯಾರಲ್ಲೂ ನಿಷ್ಠುರವಾಗಿ ನಡೆದು ಕೊಂಡವನಲ್ಲ. ಅಧಿಕಾರ ಚಲಾಯಿಸುವ ದರ್ಪದ ಮನೋಭಾವ ನನಗೆ ಯಾವಾಗಲೂ ಇರಲಿಲ್ಲ. ಮನೆಯಲ್ಲಿರಲಿ, ಕಾಲೇಜಿನಲ್ಲಿಯೂ ವಿಭಾಗದ ಮುಖ್ಯಸ್ಥನಾಗಿ ಎದುರಿಸಬೇಕಾಗಿ ಬಂದ ಸಮಸ್ಯೆಗಳನ್ನು ನನ್ನ ಸಹೋದ್ಯೋಗಿಗಳಲ್ಲಿ ಬಹಳ ಸಂಯಮ, ಸೌಹಾರ್ದಗಳಿಂದಲೇ ಪರಿಹರಿಸಿಕೊಂಡು ಬಂದಿದ್ದೆ. ಹೀಗಾಗಿ, ಈಗಲೂ ನನ್ನ ಸಹೋದ್ಯೋಗಿಗಳು, ವಿದ್ಯಾರ್ಥಿಗಳು ನನ್ನನ್ನು ನೆನಪಿಸಿಕೊಳ್ಳುತ್ತಾರೆ. ನನ್ನಲ್ಲಿ ವಿಶೇಷವಾದ ಗೌರವಾದರಗಳನ್ನು ಹೊಂದಿದ್ದಾರೆ. ಒಟ್ಟಿನಲ್ಲಿ ಈವರೆಗಿನ ನನ್ನ ಸುಮಾರು ಐವತ್ತು ವರ್ಷಗಳ ಪ್ರಾಪಂಚಿಕ ಅನುಭವ ನನಗೆ ಆಹ್ಲಾದಕರವಾಗಿ ಇದೆಯೆಂಬುದೇ ನನಗೆ ಒಂದು ಅತ್ಯಂತ ಸಮಾಧಾನದ ವಿಷಯ.

ನಿವೃತ್ತಿ

ಈ ಕಾಲಚಕ್ರದಲ್ಲಿ ವರ್ಷಗಳು ಉರುಳಿದುದೇ ನನಗೆ ಗೊತ್ತಾಗಲಿಲ್ಲ. ಪ್ರತಿವರ್ಷವೂ ನನ್ನ ಹುಟ್ಟುಹಬ್ಬಗಳು ಅತ್ಯಂತ ಸರಳ ರೀತಿಯಲ್ಲಿ ಬಂದುಹೋಗುತ್ತಿದ್ದವು. ಅವುಗಳನ್ನೆಂದೂ ನಾನು ಆಡಂಬರವಾಗಿ ಆಚರಿಸಿದವನಲ್ಲ. ದೇವಸ್ಥಾನಕ್ಕೆ ಹೋಗಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ಪ್ರದಕ್ಷಿಣೆ ನಮಸ್ಕಾರ ಹಾಕಿ ಪ್ರಸಾದವನ್ನು ಸ್ವೀಕರಿಸುತ್ತಿದ್ದೆ. ಮನೆಯಲ್ಲಿ ಮಡದಿ ಮಕ್ಕಳೊಂದಿಗೆ ಪಾಯಸಾನ್ನ, ಸಿಹಿಭಕ್ಷ್ಯಗಳ ಭೋಜನವಾಗುತ್ತಿತ್ತು. ಹೀಗೆ ವರ್ಷಗಳು ಕಳೆಯುತ್ತಾ ೧೯೭೬ಡಿಸೆಂಬರ್ ೧೨ಕ್ಕೆ ನನಗೆ ಅರುವತ್ತು ತುಂಬಿತು. ಸರಿ, ವಿಶ್ವವಿದ್ಯಾನಿಲಯದ ನಿಯಮಾನುಸಾರ ನನ್ನ ಕಾಲೇಜು ನೌಕರಿಯಿಂದ ನಿವೃತ್ತನಾಗಲು ಸಿದ್ಧನಾದೆ. ಇದರಿಂದ ನನ್ನ ಮನಸ್ಸಿನ ಮೇಲೆ ಯಾವ ಪರಿಣಾಮವೂ ಆಗಲಿಲ್ಲ. ಸುಮಾರು ಹನ್ನೆರಡು ವರ್ಷಗಳ ಕಾಲ ಒಬ್ಬರಿಗೆ ಅಧೀನವಾಗಿ, ಅನೇಕ ಕಟ್ಟುಪಾಡುಗಳಿಗೆ ಒಳಗಾಗಿದ್ದುದು ಸ್ವತಂತ್ರ ಮನೋಭಾವದ ನನಗೆ ಸ್ವಲ್ಪ ಮುಜುಗರವೇ ಆಗಿತ್ತು. ನಾನು ಮತ್ತೆ ಸಂಪೂರ್ಣ ಸ್ವತಂತ್ರನಾಗಿರಲು ಬಯಸುತ್ತಿದ್ದೆ. ಆದುದರಿಂದ, ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತನಾಗಲು ಸಂತೋಷದಿಂದಲೇ ಸಿದ್ಧನಾದೆ. ಆದರೆ, ಅದು ಶೈಕ್ಷಣಿಕ ವರ್ಷದ ಮಧ್ಯಭಾಗವಾಗಿದ್ದು ದರಿಂದಲೂ, ಸ್ನಾತಕೋತ್ತರ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದು ದರಿಂದಲೂ ನನ್ನ ಸೇವೆಯನ್ನು ೧೯೭೭ರ ಮೇ ಅಂತ್ಯದವರೆಗೂ ವಿಸ್ತರಿಸಲಾಯಿತು. ಈ ಎಲ್ಲ ಜವಾಬ್ದಾರಿಗಳನ್ನೂ ನಿರ್ವಹಿಸಿ ಗೊತ್ತಾದ ದಿನದಂದು ಸೇವೆಯಿಂದ ನಿವೃತ್ತನಾದೆ.

ನನ್ನ ಬೀಳ್ಕೊಡುಗೆ ಸಮಾರಂಭ ಒಂದು ಅತ್ಯಂತ ಹೃದಯ ಸ್ಪರ್ಶಿಯಾದ ಸನ್ನಿವೇಶವಾಗಿತ್ತು. ಸುಮಧುರ ಬಾಂಧವ್ಯ ಹೊಂದಿದ್ದ ನನ್ನ ಸಹೋದ್ಯೋಗಿಮಿತ್ರರು ಹಾಗೂ ಪ್ರೀತಿಪಾತ್ರರಾದ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಅಗಲುವುದು ಅಷ್ಟು ಸುಲಭವಾಗಿರಲಿಲ್ಲ. ಎಲ್ಲರಿಗೂ ವಿದಾಯ ಹೇಳಿ ಕಾಲೇಜಿನಿಂದ ಹೊರಬಂದಾಗ ನಾನು ಭಾವುಕತೆಯಿಂದ ಗದ್ಗದಿತನಾಗಿದ್ದೆ. ನನಗೆ ವಿಶೇಷವಾದ ನೆಮ್ಮದಿ, ಸ್ಥಾನಮಾನಗಳನ್ನು ತಂದುಕೊಟ್ಟಿದ್ದ ಆ ಕಾಲೇಜಿಗೆ ನಾನು ಚಿರಋಣಿಯಾಗಿದ್ದೆ. ನನ್ನಲ್ಲಿ ಅಪಾರ ಪ್ರೀತಿ, ವಾತ್ಸಲ್ಯಗಳನ್ನು ತೋರುತ್ತಿದ್ದ ನನ್ನ ಮಿತ್ರರನ್ನು ನಾನು ಎಂದೂ ಮರೆಯಲಾರೆ. ನನ್ನ ವಿದ್ಯಾರ್ಥಿಗಳು ಈಗಲೂ ನನ್ನನ್ನು ಕಂಡಾಗ ವಿಶೇಷ ಪ್ರೀತಿ ಗೌರವಗಳಿಂದ ಮಾತನಾಡಿಸಿ ತಮ್ಮ ಕಾಲೇಜಿನ ದಿನಗಳನ್ನು

ನೆನಪಿಸಿಕೊಳ್ಳುತ್ತಾರೆ. ಅವರಲ್ಲಿ ಕೆಲವರು ಒಳ್ಳೆಯ ವೇದಿಕೆಯ ಕಲಾವಿದೆಯರೂ ಆಗಿ ಪ್ರಸಿದ್ಧರಾಗಿದ್ದಾರೆ. ಕಾಲೇಜುಗಳಲ್ಲಿ ಮತ್ತು ಆಕಾಶವಾಣಿ ಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕಾರ್ಯಗೌರವ ನಿಮಿತ್ತ ನಾನು ಅಲ್ಲಿಗೆ ಹೋದಾಗಲೆಲ್ಲಾ ನನಗೆ ಯಾರಾದರೊಬ್ಬರು ಇಂತಹ ಶಿಷ್ಯೆಯರು ಸಿಕ್ಕಿ ಮಾತನಾಡಿಸಿದಾಗ ನನಗಾಗುವ ಸಂತೋಷ ಅಷ್ಟಿಷ್ಟಲ್ಲ. ಒಬ್ಬ ಕಲಾವಿದನಿಗೆ ಇದಕ್ಕಿಂತ ಇನ್ನೇನು ಬೇಕು? ಒಬ್ಬ ಗುರುವಿಗೆ ಒಳ್ಳೆಯ ಹೆಸರು ತರುವಂತಹ ಶಿಷ್ಯರೇ ಅವನ ನಿಜವಾದ ಆಸ್ತಿ. ಅವನ ಪರಂಪರೆ ಮುಂದುವರೆಯುವುದೇ ಇಂತಹ ಶಿಷ್ಯವರ್ಗ ದವರಿಂದ. ಹೀಗೆ ನಾನು ನನ್ನ ಮಿತ್ರವೃಂದ ಮತ್ತು ಶಿಷ್ಯವೃಂದ ಎರಡರಲ್ಲೂ ಬಹಳ ಅದೃಷ್ಟಶಾಲಿಯಾಗಿದ್ದೇನೆ. ಇಂತಹ ಸಿಹಿ-ನೆನಪು ನನಗೆ ಸದಾ ಆಹ್ಲಾದಕರವಾಗಿರುತ್ತದೆ.

ನಿವೃತ್ತಿಯ ಅನಂತರ

ನಾನು ಕಾಲೇಜಿನಿಂದ ನಿವೃತ್ತನಾದ ಮೇಲೆ ಮತ್ತೆ ನನಗೆ ಜೀವನ ನಿರ್ವಹಣೆಯ ಸಮಸ್ಯೆ ಎದುರಾಯಿತು. ಇತ್ತ ಪ್ರತಿ ತಿಂಗಳು ತಪ್ಪದೇ ಬರುತ್ತಿದ್ದ ವೇತನ ನಿಂತುಹೋಗಿ ವರಮಾನ ಸ್ಥಗಿತ. ಅತ್ತ ಮನೆಯಲ್ಲಿ ಮಕ್ಕಳ ವಿದ್ಯಾಭ್ಯಾಸ, ವಿವಾಹ, ಗೃಹಕೃತ್ಯದ ಆವಶ್ಯಕತೆಗಳ ಪೂರೈಕೆ ಇವುಗಳ ಜವಾಬ್ದಾರಿ. ಹೊರಗಿನ ಸಂಪರ್ಕವನ್ನು ಸುಮಾರು ಹನ್ನೆರಡು ವರ್ಷಗಳ ಕಾಲ ಸಂಪೂರ್ಣವಾಗಿ ಕಳೆದುಕೊಂಡಿದ್ದ ನನಗೆ ಮತ್ತೆ ಹಿಂದಿನಂತೆ ನನ್ನ ವೃತ್ತಿಜೀವನ ನಡೆಸುವುದು ಸಾಧ್ಯವೇ ಎಂಬ ಚಿಂತೆ ಕಾಡಹತ್ತಿತು.

ಆದರೆ, ಅದು ಏನು ಅದೃಷ್ಟವೋ, ಅನತಿ ಕಾಲದಲ್ಲೇ ಎಲ್ಲಿಲ್ಲದ ಬೇಡಿಕೆ ಬರಲು ಪ್ರಾರಂಭವಾಯಿತು. ಕೇಳಿದಷ್ಟು ಸಂಭಾವನೆ ಕೊಟ್ಟು ಪಾಠ ಹೇಳಿಸಿಕೊಳ್ಳಲು ಜನ ಸಿದ್ಧರಾಗಿದ್ದರು. ನನಗೆ ಆಶ್ಚರ್ಯವೋ ಆಶ್ಚರ್ಯ ! ಕೆಲವೇ ತಿಂಗಳಲ್ಲಿ ಬಿಡುವಿಲ್ಲದಷ್ಟು ಪಾಠಗಳು ಲಭಿಸಿ ಮತ್ತೆ ಹೊರಗಿನ ಓಡಾಟಗಳಲ್ಲಿ ನಿರತನಾದೆ. ಕಾಲೇಜಿನಲ್ಲಿ ಪ್ರಾಧ್ಯಾಪಕನಾಗಿ ನಾನು ಪಡೆಯುತ್ತಿದ್ದ ಗರಿಷ್ಠವೇತನ ಕೇವಲ ೮೦೦ ರೂ.ಗಳು. ಆದರೆ ಈಗ ಪಾಠಗಳಲ್ಲಿ ತಿಂಗಳಿಗೆ ೨೦೦೦ ರೂ.ಗಳಿಗೂ ಹೆಚ್ಚು ಸಂಪಾದನೆ ಮಾಡಲಾರಂಭಿಸಿದೆ. ಇದರಿಂದ ನನ್ನ ಆರ್ಥಿಕ ಸ್ಥಿತಿ ಬಹಳಷ್ಟು ಸುಧಾರಿಸಿತು. ವಿಶ್ವವಿದ್ಯಾನಿಲಯದಲ್ಲಿ ನಾನು ಮಾಡಿದ ಹನ್ನೆರಡು ವರ್ಷಗಳ ಸೇವೆಗೆ ಪ್ರತಿಫಲವಾಗಿ ನನಗೆ ದೊರೆತದ್ದು ನನ್ನ ಭವಿಷ್ಯನಿಧಿಯ ಹಣ ೨೩,೦೦೦ ರೂ.ಗಳು ಮಾತ್ರ. ಆಗ ವಿಶ್ವವಿದ್ಯಾನಿಲಯದಲ್ಲಿ ಇನ್ನೂ ನಿವೃತ್ತಿವೇತನದ ವ್ಯವಸ್ಥೆ ಇರಲಿಲ್ಲ. ಆದ್ದರಿಂದ, ಬೇರೆ ಯಾವ ರೀತಿಯ ವರಮಾನವೂ ಇಲ್ಲದೆ ನನಗೆ ಪಾಠಗಳಿಗಾಗಿ ಸುತ್ತುವುದು ಅನಿವಾರ್ಯವಾಗಿತ್ತು.

ಮಗಳ ವಿವಾಹದ ಜವಾಬ್ದಾರಿಯನ್ನು ಆದಷ್ಟು ಶೀಘ್ರದಲ್ಲಿ ನೆರವೇರಿಸಬೇಕಾಗಿತ್ತು. ಅವಳ ಬಿ.ಎಸ್‌ಸಿ, ವ್ಯಾಸಂಗ ಮುಗಿದಿತ್ತು. ಒಳ್ಳೆಯ ವರನ ಅನ್ವೇಷಣಾಕಾರ್ಯ ನಡೆಯುತ್ತಿತ್ತು. ನನ್ನ ಹಿರಿಯ ಮಗ ಶ್ಯಾಮಪ್ರಸಾದನ ಇಂಜಿನಿಯರಿಂಗ್ ಮುಗಿದಿತ್ತು. ಎರಡನೆಯ ಮಗ ಮೋಹನ್ ಮೂರನೇ ವರ್ಷದ ಇಂಜಿನಿಯರಿಂಗ್‌ನಲ್ಲಿದ್ದ. ಮಗಳ ಮದುವೆಗೆ ಕನಿಷ್ಠ ಒಂದು ಲಕ್ಷರೂ.ಗಳ ಅಂದಾಜಿತ್ತು. ನನ್ನ ಬಳಿ ಅರ್ಧದಷ್ಟು ಹಣ ಕೂಡ ಇರಲಿಲ್ಲ. ನನ್ನ ಹಿರಿಯ ಮಗ ಶ್ಯಾಮಪ್ರಸಾದ ತಾನು ಪ್ರೀತಿಸಿದ ಒಬ್ಬ ಹುಡುಗಿಯನ್ನು ಮದುವೆಯಾಗಿ ಗೋವಾದಲ್ಲಿ ಸಂಸಾರ ಹೂಡಿ ಮೂರು ಮಕ್ಕಳ ತಂದೆಯಾಗಿ ಅವರ ಪಾಡಿಗೆ ಅವರು ಸುಖವಾಗಿದ್ದರು. ನನ್ನ ಎರಡನೆಯ ಮಗ ಮೋಹನ್ ಇಂಜಿನಿಯರಿಂಗ್ ಕಡೆಯ ವರ್ಷದಲ್ಲೇ ನೌಕಾ ಪಡೆಗೆ ಆಯ್ಕೆಯಾಗಿ ವೇತನ ಪಡೆಯಲಾರಂಭಿಸಿದಾಗ ನಮಗೆ ಆರ್ಥಿಕವಾಗಿ ಬಹಳ ಅನುಕೂಲವಾಯಿತು. ಮುಂದೆ ಅವನು ಕೊಚಿನ್‌ನಲ್ಲಿ ಸಬ್‌ಲೆಫ್ಟಿನೆಂಟ್ ಆಗಿ ನೌಕಾಪಡೆಗೆ ಸೇರಿ ೧೯೭೮ರಿಂದ ಸೇವೆ ಸಲ್ಲಿಸಿ ಈಗ ಕಮಾಂಡರ್ ಆಗಿದ್ದಾನೆ.

೧೯೮೩ನೇ ಇಸವಿಯು ಕೆಲವು ವಿಶಿಷ್ಟ ಬೆಳವಣಿಗೆಗಳಿಂದ ನನ್ನ ಮನಸ್ಸಿನಲ್ಲಿ ಹಚ್ಚಹಸಿರಾಗಿ ಉಳಿದಿದೆ. ಕರ್ನಾಟಕ ಸರಕಾರ ಆ ವರ್ಷದ ಜನವರಿಯಿಂದ ನನಗೆ ಮಾಸಿಕ ಗೌರವಧನ ೫೦೦ ರೂ.ಗಳನ್ನು ಮಂಜೂರು ಮಾಡಿತ್ತು. ಅದು ನನಗೆ ಆಗಿನ ಅತ್ಯಂತ ದೊಡ್ಡ ಗೌರವ ವಾಗಿತ್ತು. ಅದನ್ನು ಪಡೆಯಲು ಅನೇಕರು ಏನೇನೋ ಕಸರತ್ತು ಮಾಡುತ್ತಿದ್ದ ವಿಷಯ ನನಗೆ ತಿಳಿದಿತ್ತು. ಆದರೆ, ಅಂತಹ ಕೆಲಸ ನನ್ನಿಂದ ಖಂಡಿತ ಸಾಧ್ಯವಿರಲಿಲ್ಲ. ಆದ್ದರಿಂದ, ದೇವರ ಮೇಲೆ ಭಾರ ಹಾಕಿ ಸುಮ್ಮನಿದ್ದೆ. ಗೌರವಧನ ಮಂಜೂರಾದ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾದಾಗ ನನಗೆ ಅದು ಒಂದು ಆಶ್ಚರ್ಯದ ಸುದ್ದಿಯೇ ಆಗಿತ್ತು. ನನ್ನ ಅದೃಷ್ಟ ತಾನಾಗಿಯೇ ನನಗೆ ಒಲಿದಿತ್ತು. ಅದರಿಂದ ನನ್ನ ಆರ್ಥಿಕ ಪರಿಸ್ಥಿತಿಯಲ್ಲಿ ಒಂದು ಸ್ಥಿರತೆ ಉಂಟಾಗಲು ಸಾಧ್ಯವಾಯಿತು.

ಮತ್ತೊಂದು ಬೆಳವಣಿಗೆ ನನ್ನ ಮನೆಯ ವಿಸ್ತರೀಕರಣ. ಕೇವಲ ಎಂಟು ಚದುರದ ನಮ್ಮ ಮನೆ ಈಗ ನಮಗೆ ಬಹಳ ಚಿಕ್ಕದಾಗಿ ಕಾಣುತ್ತಿತ್ತು. ಇನ್ನೂ ಸ್ವಲ್ಪ ಹೆಚ್ಚಿನ ಸ್ಥಳಾವಕಾಶ ಬೇಕಾಗಿತ್ತು. ಆದ್ದರಿಂದ ಮನೆಯ ಪಕ್ಕದಲ್ಲಿ ಖಾಲಿ ಇದ್ದ ಜಾಗವನ್ನು ಸೇರಿಸಿಕೊಂಡು ಒಂದು ದೊಡ್ಡ ಹಾಲ್, ಹಿಂಭಾಗದಲ್ಲಿ ಒಂದು ಅಡುಗೆ ಮನೆ, ಒಂದು ಬಚ್ಚಲು ಮನೆ ಇವುಗಳನ್ನು ಕಟ್ಟಿಸಿದೆ. ಇದಕ್ಕೆ ಸುಮಾರು ೭೫,೦೦೦ರೂ. ಖರ್ಚಾಯಿತು. ನೀರಿನ ಸಮಸ್ಯೆಯ ಪರಿಹಾರಕ್ಕಾಗಿ ಸಂಪು , ಓವರ್ ಹೆಡ್‌ಟ್ಯಾಂಕ್, ಪಂಪು ಎಲ್ಲವನ್ನೂ ಹಾಕಿಸಿದ್ದಾಯಿತು. ಈಗ ನಮ್ಮ ಮನೆ ಎ.ಇ.ಹೆಚ್. ಸಮೇತ ವಾಸಕ್ಕೆ ಯೋಗ್ಯವಾದ ಒಳ್ಳೆಯ ಮನೆಯಾಗಿ ಪರಿವರ್ತಿತವಾಯಿತು. ನನಗೂ ಮನಸ್ಸಿಗೆ ತೃಪ್ತಿಯಾಯಿತು.

ವೃತ್ತಿಸಂಬಂಧವಾದ ಇನ್ನೊಂದು ಸಂತೋಷದ ಬೆಳವಣಿಗೆ ಆ ವರ್ಷ ನಡೆದ ಸಂಗೀತ ಕಲಾಭಿವರ್ಧಿನೀ ಸಭೆಯ ತೃತೀಯ ಸಂಗೀತ

ಸಮ್ಮೇಳನದ ಅಧ್ಯಕ್ಷತೆ. ಇದು ನನಗೆ ಸಂಗೀತ ಕ್ಷೇತ್ರದಲ್ಲಿ ಲಭಿಸಿದ ಪ್ರಪ್ರಥಮ ವಿದ್ವಜ್ಜನ ಮನ್ನಣೆ. ಅದ್ದೂರಿಯಾದ ಆ ಸಮಾರಂಭದಲ್ಲಿ ನನಗೆ ಶಾಲು ಹೊದಿಸಿ 'ಗಾನರತ್ನಾಕರ' ಎಂಬ ಬಿರುದು ನೀಡಿ ಸನ್ಮಾನಿಸಲಾಯಿತು. ನನ್ನ ಜೀವನದಲ್ಲಿ ಇದೊಂದು ಮಹತ್ತ್ವಪೂರ್ಣ ಸನ್ನಿವೇಶವಾಗಿತ್ತು.

ಹೀಗೆಯೇ, ನನ್ನ ಸಾಂಸಾರಿಕ ಹೊಣೆಗಾರಿಕೆಯಲ್ಲಿ ಅತಿ ಮುಖ್ಯವಾಗಿದ್ದ ನನ್ನ ಏಕೈಕ ಪುತ್ರಿ ರಾಧಾಳ ವಿವಾಹವೂ ಅದೇ ವರ್ಷ (೧೯೮೩) ಡಿಸೆಂಬರ್ ತಿಂಗಳಿನಲ್ಲಿ ನೆರವೇರಿದುದು ನಮಗೆಲ್ಲಾ ಒಂದು ಅತ್ಯಂತ ಹರ್ಷದಾಯಕ ವಿಷಯವಾಗಿತ್ತು. ಅವಳು ಒಳ್ಳೆಯ ಮನೆ ಸೇರಿ, ಯೋಗ್ಯ ವರನ ಕೈಹಿಡಿದು, ಸೇರಿದ ಮನೆಯ ಹಿರಿಯ ಸೊಸೆಯಾಗಿ ಅವರ ಮನೆಯನ್ನು ಬೆಳಗಿದಳು. ಅತ್ತೆ-ಮಾವಂದಿರಿಗೆ ಅಚ್ಚುಮೆಚ್ಚಿನ ಸೊಸೆಯಾಗಿ ಪತಿಗೆ ಒಲವಿನ ಪತ್ನಿಯಾಗಿ, ಮಮತೆಯ ತಾಯಿಯಾಗಿ ಬಹಳ ಅಚ್ಚುಕಟ್ಟಾಗಿ ಸಂಸಾರವನ್ನು ನಿರ್ವಹಿಸುತ್ತಿದ್ದಾಳೆ. ಅವರು ಈಗ ದುಬೈನಲ್ಲಿ ಕೈತುಂಬ ಹಣ ಸಂಪಾದಿಸುತ್ತಾ , ಭಾರತಕ್ಕೂ ಆಗಾಗ ಬಂದು ಹೋಗುತ್ತಾ ಸುಖ ಸಂತೋಷಗಳಿಂದಿದ್ದಾರೆ.

ಈ ಮಧ್ಯೆ ನನ್ನ ನಿವೃತ್ತಿಯನಂತರ ನನ್ನ ಬಂಧು-ಮಿತ್ರರೂ ನನ್ನನ್ನು ಬೆಂಗಳೂರಿಗೇ ಬಂದುಬಿಡುವಂತೆ ಬಹಳ ಒತ್ತಾಯ ಮಾಡುತ್ತಲೇ ಇದ್ದರು. ನನ್ನ ವೃತ್ತಿಜೀವನಕ್ಕೆ ಮೈಸೂರಿಗಿಂತ ಬೆಂಗಳೂರು ಎಲ್ಲ ವಿಷಯಗಳಲ್ಲೂ ಉತ್ತಮ , ಕೈತುಂಬಾ ಹಣ ಸಂಪಾದಿಸ ಬಹುದೆಂಬುದು ಅವರ ಸಮರ್ಥನೆ. ನಾನು ಸಹ ಒಂದೆರಡು ಬಾರಿ ಇಂತಹ ಒಂದು ಬದಲಾವಣೆಗೆ ಮನಸ್ಸು ಮಾಡಿ ಮೈಸೂರಿನ ಮನೆಯನ್ನು ಕ್ರಯಕ್ಕೆ ಕೊಟ್ಟುಬಿಡುವುದೆಂದು ತೀರ್ಮಾನಿಸಿ ಮಾತುಕತೆಯೂ ಆಗಿತ್ತು. ಆದರೆ, ಇಂತಹ ನನ್ನ ಮೂರು ಪ್ರಯತ್ನಗಳೂ ಫಲಕಾರಿಯಾಗದೇ ಕೊನೇ ಘಳಿಗೆಯಲ್ಲಿ ನನ್ನ ಆರೋಗ್ಯ ಕೆಟ್ಟು ಆ ಪ್ರಯತ್ನಗಳನ್ನು ಕೈಬಿಡಬೇಕಾಯಿತು. ಹೀಗಾಗಿ, ನಾವು ಎಷ್ಟೇ ಮನಸ್ಸು ಮಾಡಿದರೂ ಮೈಸೂರಿನಿಂದ ಸ್ಥಳಾಂತರಿಸುವುದು ಸಾಧ್ಯವಾಗಲೇ ಇಲ್ಲ. ಕಡೆಗೆ, ಇದೆಲ್ಲವೂ ದೈವೇಚ್ಛೆ ಎಂದು ತೀರ್ಮಾನಿಸಿ ಮೈಸೂರಿನಲ್ಲೇ ಸ್ವಂತ ಮನೆಯಲ್ಲಿ ನೆಮ್ಮದಿಯಿಂದ ಇದ್ದೇವೆ. ಈಗ ನನ್ನ ಎರಡನೆಯ ಮಗ ಮೋಹನ್ ಬೆಂಗಳೂರಿಗೆ ವರ್ಗವಾಗಿ ಬಂದಿರುವುದರಿಂದ ಅಲ್ಲಿಗೆ ತಿಂಗಳು-ಎರಡು ತಿಂಗಳಿಗೊಮ್ಮೆ ಹೋಗಿ ಸ್ವಲ್ಪ ದಿವಸ ಇದ್ದು ಬರುತ್ತಿದ್ದೇವೆ. ಅವರೂ ಆಗಾಗ ಮೈಸೂರಿಗೆ ಭೇಟಿ ನೀಡುತ್ತಿರುತ್ತಾರೆ.

ಸನ್ಮಾನ

ಮೈಸೂರಿನ ಶ್ರೀ ಗಣಪತಿಸಚ್ಚಿದಾನಂದ ಸ್ವಾಮೀಜಿಯವರು ನನ್ನ ಮೇಲೆ ವಿಶೇಷ ಅಭಿಮಾನವಿಟ್ಟಿದ್ದರೆಂದು ಈ ಹಿಂದೆಯೇ ಹೇಳಿದ್ದೇನಷ್ಟೆ. ಎಂಬತ್ತರ ದಶಕದಲ್ಲಿ ಪ್ರತಿ ವರ್ಷವೂ ನವರಾತ್ರಿ ಸಂದರ್ಭದಲ್ಲಿ ನನ್ನ ವೀಣಾವಾದನ ತಪ್ಪದೇ ನಡೆಯುತ್ತಿತ್ತು. ೧೯೮೪ರ ಶರನ್ನವರಾತ್ರಿ ಉತ್ಸವದಲ್ಲಿ ಸ್ವಾಮೀಜಿಯವರು ನನ್ನ ಕಲಾಸೇವೆಯನ್ನು ಮೆಚ್ಚಿ ನನಗೆ 'ವೈಣಿಕ ಕಲ್ಪತರು' ಎಂಬ ಬಿರುದನ್ನು , ಖಿಲ್ಲತ್ತು ಹಾಗೂ ಕೈಗೆ ಧರಿಸುವ ಒಂದು ಬಂಗಾರದ ಚೈನ್ ಸಹಿತ ನೀಡಿ ಆಶೀರ್ವದಿಸಿದರು. ಇತ್ತೀಚೆಗೆ ಅಂದರೆ ೧೯೯೮ರ ಮೇ ತಿಂಗಳಲ್ಲಿ ನಡೆದ ದತ್ತಪೀಠದ ನಾದಮಂಟಪದ ಉದ್ಘಾಟನೆ ಹಾಗೂ ಸ್ವಾಮೀಜಿಯವರ ಹುಟ್ಟುಹಬ್ಬದ ಅಂಗವಾಗಿ ನಡೆದ ಅದ್ದೂರಿಯ ಸಮಾರಂಭದಲ್ಲಿ ರಾಷ್ಟ್ರಮಟ್ಟದ ಅತಿ ಶ್ರೇಷ್ಠ ಪ್ರಶಸ್ತಿ 'ನಾದ ನಿಧಿ' ಹಾಗೂ ಇಪ್ಪತ್ತೈದು ಸಾವಿರ ರೂ. ನಗದು ಬಹುಮಾನವನ್ನು ನನಗೆ ನೀಡಿ ಗೌರವಿಸಲಾಯಿತು. ನನ್ನ ಜತೆಯಲ್ಲಿ ಈ ಪ್ರಶಸ್ತಿಯನ್ನು ಪಡೆದ ಇತರರೆಂದರೆ ಪಂಡಿತ್ ಜಸರಾಜ್, ಅಬ್ದುಲ್ ಹಲೀಂ ಜಾಫರ್ ಖಾನ್, ಡಾ|| ಎನ್. ರಾಜಂ, ಡಾ|| ಎನ್. ರಮಣಿ, ಡಾ|| ಪಿ.ಕೆ. ಮೂರ್ತಿ, ವಿ.ಜಿ. ಜೋಗ್, ಅನ್ನವರಪು ರಾಮಸ್ವಾಮಿ, ನೂಕಲ ಚಿನ್ನಸತ್ಯನಾರಾಯಣ ಹಾಗೂ ನೇದನೂರಿ ಕೃಷ್ಣಮೂರ್ತಿ. ಇಂತಹ ಶ್ರೇಷ್ಠ ಕಲಾವಿದರ ಜತೆ ಈ ಗೌರವ ನನಗೆ ಲಭಿಸಿದ್ದು ನನ್ನ ಕಲಾಜೀವನದಲ್ಲಿ ಅತ್ಯಂತ ಮಹತ್ತ್ವಪೂರ್ಣ ಸನ್ನಿವೇಶವಾಗಿತ್ತು.

೧೯೮೩ರಲ್ಲಿ ಬೆಂಗಳೂರಿನ ಕರ್ನಾಟಕ ಸಂಗೀತ ನೃತ್ಯ ಅಕಾಡಮಿಯವರು 'ಕರ್ನಾಟಕ ಕಲಾತಿಲಕ ಪ್ರಶಸ್ತಿ' ಹಾಗೂ ೫೦೦೦ ರೂ. ನಗದು ಬಹುಮಾನ ನೀಡಿ ಗೌರವಿಸಿದರು. ೧೯೯೯ರಲ್ಲಿ ಕರ್ನಾಟಕ ಸರಕಾರ 'ರಾಜ್ಯೋತ್ಸವ ಪ್ರಶಸ್ತಿ' ಹಾಗೂ ೫೦೦೦ ರೂ.ಗಳನ್ನು ನೀಡಿ ಗೌರವಿಸಿತು. ಬೆಂಗಳೂರಿನ ಶ್ರೀ ಕೆ.ಕೆ. ಮೂರ್ತಿ ಯವರು ಸ್ಥಾಪಿಸಿರುವ ಅಕಾಡಮಿ ಆಫ್ ಮ್ಯೂಸಿಕ್‌ನವರು ೧೯೯೪ರಲ್ಲಿ 'ಚೌಡಯ್ಯ ಸ್ಮಾರಕ ಪ್ರಶಸ್ತಿ' ಹಾಗೂ ೫೦೦೦ ರೂ. ನೀಡಿ ಗೌರವಿಸಿದರು. ೧೯೮೭ರಲ್ಲಿ ಬೆಂಗಳೂರು ಗಾಯನ ಸಮಾಜ ತನ್ನ ೧೯ನೆಯ ಸಂಗೀತ ಸಮ್ಮೇಳನದ ಅಧ್ಯಕ್ಷನಾಗಿ ನನ್ನನ್ನು ಆಹ್ವಾನಿಸಿ 'ಸಂಗೀತ ಕಲಾರತ್ನ' ಬಿರುದು, ಶ್ರೀ ಟಿ. ಶ್ರೀನಿವಾಸನ್ ಸ್ಮಾರಕ ನಗದು ಬಹುಮಾನ ೧೦೦೦ ರೂ. ನೀಡಿ ಗೌರವಿಸಿತು. ಇದು ನನಗೆ ಲಭಿಸಿದ ಎರಡನೆಯ ಸಂಗೀತ ಸಮ್ಮೇಳನಾಧ್ಯಕ್ಷತೆಯಾಗಿದ್ದು ಹೆಚ್ಚಿನ ಸಂತಸ ತಂದಿತ್ತು. ಇವುಗಳಲ್ಲದೇ ಮೈಸೂರಿನಲ್ಲಿ ಡಾ|| ಬಿ.ದೇವೇಂದ್ರಪ್ಪನವರು ನಡೆಸುತ್ತಿದ್ದ ಹನುಮಜ್ಜಯಂತಿ ಸಮಾರಂಭದಲ್ಲಿ 'ವೈಣಿಕ ಪ್ರವೀಣ' ಎಂಬ ಬಿರುದು ನೀಡಿ ಗೌರವಿಸಲಾಯಿತು. ಮೈಸೂರಿನ ಶ್ರೀ ಸರಸ್ವತಿ ಗಾನ ಕಲಾಮಂದಿರದ ವ್ಯವಸ್ಥಾಪಕರಾಗಿದ್ದ ಶ್ರೀ ಎಸ್.ಎನ್. ಮರಿಯಪ್ಪನವರು ಶ್ರೀ ತ್ಯಾಗರಾಜರ ಆರಾಧನಾ ಮಹೋತ್ಸವದ ಅಂಗವಾಗಿ 'ವೀಣಾ ವಿದ್ಯಾವಾರಿಧಿ' ಬಿರುದು, ಚಿನ್ನದ ಪದಕ ನೀಡಿ ಗೌರವಿಸಿದರು. ಹೀಗೆ, ಇನ್ನೂ ಅನೇಕ ಸಂಘ-ಸಂಸ್ಥೆಗಳು ಸನ್ಮಾನ ಮಾಡಿ ನನಗೆ ವಿಶೇಷ ಗೌರವವನ್ನು ತೋರಿಸಿದ್ದಾರೆ. ಇದೆಲ್ಲವೂ ನನ್ನ ಅಭಿಮಾನಿಗಳು ನನ್ನ ಮೇಲಿಟ್ಟಿರುವ ಪ್ರೀತಿ, ವಿಶ್ವಾಸಗಳ ಸಂಕೇತವೆಂದು

ಬಹಳ ನಮ್ರತೆಯಿಂದಲೇ ಸ್ವೀಕರಿಸಿದ್ದೇನೆ. ಒಬ್ಬ ಕಲಾವಿದನ ಜೀವನದಲ್ಲಿ ಸಮಾಜ ಆತನನ್ನು ಗುರುತಿಸಿ ಅವನ ಕಲಾಸೇವೆಯನ್ನು ಮೆಚ್ಚಿ ನಾಲ್ಕು ಒಳ್ಳೆಯ ಮಾತುಗಳನ್ನು ಆಡಿದಾಗ ಆ ಕಲಾವಿದನಿಗೆ ಒಂದು ರೀತಿಯ ತೃಪ್ತಿ, ಸಾರ್ಥಕತೆಗಳ ಅನುಭವವಾಗುವುದು ಸಹಜವೇ. ಆದರೆ ಇಂತಹ ಸನ್ಮಾನಗಳು, ಪ್ರಶಸ್ತಿಗಳು, ಪ್ರಶಂಸೆಗಳೇ ಒಬ್ಬ ಕಲಾವಿದನ ಅಂತಿಮ ಗುರಿಯಾಗಿರಬಾರದು ಅಷ್ಟೆ. ಇವೆಲ್ಲವೂ ಸ್ವಾಭಾವಿಕವಾಗಿ ತಾವಾಗಿಯೇ ಬರಬೇಕು. ಕಲೋಪಾಸನೆ ಒಂದೇ ಒಬ್ಬ ಕಲಾವಿದನ ನಿಜವಾದ ಗುರಿಯಾಗಬೇಕು.

ಕೃತಿಮಂಜರಿ

ವಾಗ್ಗೇಯಕಾರನಾಗಿ ನಾನು ರಚಿಸಿದ ಸುಮಾರು ಒಂದು ನೂರು ರಚನೆಗಳಲ್ಲಿ ಅರುವತ್ತಾರು ವಿವಿಧ ರಚನೆಗಳು ಹಾಗೂ ನನ್ನ ಸಂಕ್ಷಿಪ್ತ ಆತ್ಮಕಥನವನ್ನೊಳಗೊಂಡ ಪ್ರಥಮ ಸಂಪುಟ 'ಲಕ್ಷ್ಮೀರಮಣ ಕೃತಿ ಮಂಜರಿ'ಯನ್ನು ಹೇಗಾದರೂ ಮಾಡಿ ಮುದ್ರಿಸಿ ಹೊರತರಬೇಕೆಂಬ ನನ್ನ ಪ್ರಯತ್ನ ೧೯೯೯ರ ವೇಳೆಗೆ ಫಲಿಸಿತು. ನಾಗ್ ಪ್ರಿಂಟರ್ಸ್ ಮಾಲೀಕರಾಗಿದ್ದ ನನ್ನ ಮಿತ್ರರಾಗಿದ್ದ ಜಿ.ಆರ್. ವೆಂಕಟರಾಮಯ್ಯನವರು ಪುಸ್ತಕದ ಮುದ್ರಣದ ಜವಾಬ್ದಾರಿಯನ್ನು ವಹಿಸಿಕೊಂಡು ಪುಸ್ತಕವನ್ನು ಬಹಳ ಅಂದವಾಗಿ ಅತಿ ಶೀಘ್ರದಲ್ಲೇ ಮುದ್ರಿಸಿಕೊಟ್ಟರು. ಪುಸ್ತಕವನ್ನು ನನ್ನ ಸ್ವಂತ ಲಾಂಛನ 'ಲಕ್ಷ್ಮೀರಮಣ ಪ್ರಕಾಶನ' ದಿಂದಲೇ ಪ್ರಕಟಿಸಲಾಯಿತು. ಇದರ ಬಿಡುಗಡೆ ಸಮಾರಂಭ ೧೯೯೯ರ ಜೂನ್ ತಿಂಗಳಲ್ಲಿ ಮೈಸೂರು ಜಯನಗರದ ಶ್ರೀರಾಮಮಂದಿರದಲ್ಲಿ ಬಹಳ ಅದ್ದೂರಿಯಾಗಿ ನಡೆಯಿತು. ಡಾ|| ವಿ. ದೊರೆಸ್ವಾಮಿ ಅಯ್ಯಂಗಾರ್ ಪುಸ್ತಕ ಬಿಡುಗಡೆ ಮಾಡಿ ನನ್ನ ಬಗ್ಗೆ ಹಾಗೂ ನನ್ನ ರಚನೆಗಳ ಬಗ್ಗೆ ಬಹಳ ಒಳ್ಳೆಯ ಮಾತುಗಳನ್ನಾಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಶ್ರೀ ಎಚ್.ಕೆ. ಯೋಗಾನರಸಿಂಹ ಅವರು ಪುಸ್ತಕ ಪರಿಚಯ ಮಾಡಿಕೊಟ್ಟು , ಕೃತಿಗಳ ಬಗ್ಗೆ ಬಹಳ ವಿದ್ವತ್‌ಪೂರ್ಣವಾದ ವಿಶ್ಲೇಷಣೆ ಮಾಡಿದರು. ವಿದ್ವಾನ್ ತಿಟ್ಟೆಕೃಷ್ಣಯ್ಯಂಗಾರ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿ ತಮ್ಮ ಅಭಿಮಾನಪೂರ್ವಕವಾದ ಒಳ್ಳೆಯ ಮಾತುಗಳಿಂದ ನನ್ನನ್ನು ಆಶೀರ್ವದಿಸಿದರು. ಅನಂತರ ನಡೆದ ನನ್ನ ಕೃತಿಗಳ ಗಾಯನ ವಾದನ ಕಾರ್ಯಕ್ರಮಗಳಲ್ಲಿ ರುದ್ರಪಟ್ಟಣ ಸಹೋದರರ ದ್ವಂದ್ವಗಾಯನ, ನನ್ನ ಶಿಷ್ಯೆಯರಾದ ಶ್ರೀಮತಿ ರಾಜಲಕ್ಷ್ಮಿ ತಿರುನಾರಾಯಣನ್ ಸಹೋದರಿಯರಿಂದ ಪಂಚವೀಣಾ ಕಾರ್ಯಕ್ರಮಗಳು ಬಹಳ ರಂಜನೀಯವಾಗಿ ಮೂಡಿಬಂದು ಎಲ್ಲರೂ ಬಹಳವಾಗಿ ಕೊಂಡಾಡಿದರು. ಈ ಕಾರ್ಯಕ್ರಮದ ಬಗ್ಗೆ ಹಾಗೂ ನನ್ನ ಪುಸ್ತಕದ ಬಗ್ಗೆ ಖ್ಯಾತ ವಿಮರ್ಶಕ ಶ್ರೀ ಜಿ.ಟಿ. ನಾರಾಯಣರಾಯರು ಬಹಳ ಒಳ್ಳೆಯ ವಿಮರ್ಶೆಗಳನ್ನು ಬರೆದು, ನನ್ನ ಈ ಪ್ರಯತ್ನ ಇಷ್ಟು ಯಶಸ್ವಿಯಾಗಲು ಕಾರಣರಾದರು. ನನ್ನ ಪುಸ್ತಕಗಳು ಅತಿ ಶೀಘ್ರದಲ್ಲೇ ಅತ್ಯಂತ ಜನಪ್ರಿಯವಾಗಿ ಎಲ್ಲೆಡೆಯಿಂದ ಬೇಡಿಕೆಗಳು ಬರಲಾರಂಭಿಸಿದವು. ಈಗ ಇನ್ನು ಕೆಲವೇ ಪ್ರತಿಗಳು ಉಳಿದಿದ್ದು ಶೀಘ್ರದಲ್ಲೇ ಇದರ ದ್ವಿತೀಯ ಮುದ್ರಣವನ್ನು ಕೈಗೆತ್ತಿಕೊಳ್ಳಬೇಕಾಗಬಹುದು. ಹಾಗಾಗುವುದಾದರೆ, ಅದರಲ್ಲಿ ನನ್ನ ಉಳಿದಿರುವ ಸುಮಾರು ಮೂವತ್ತು ರಚನೆಗಳನ್ನು ಸೇರಿಸಬಹುದು. ಈ ಯೋಜನೆಯನ್ನು ಆದಷ್ಟು ಶೀಘ್ರದಲ್ಲೇ ಕಾರ್ಯರೂಪಕ್ಕೆ ತರಬೇಕೆಂಬ ನನ್ನ ಆಸೆ ಈಗ ದೈವಕೃಪೆಯಿಂದ ಕೈಗೂಡಬೇಕಾಗಿದೆ.

ಪುಣ್ಯ ವಿಶೇಷ

ನಾನು ನನ್ನ ಹುಟ್ಟುಹಬ್ಬಗಳನ್ನು ಯಾವಾಗಲೂ ಹೆಚ್ಚು ಆಡಂಬರದಿಂದ ಆಚರಿಸಿದವನಲ್ಲವೆಂಬುದನ್ನು ಹಿಂದೆಯೇ ಹೇಳಿದ್ದೇನೆ. ಆದರೆ ೧೯೯೬ರಲ್ಲಿ ನನಗೆ ಎಂಬತ್ತು ವರ್ಷ ತುಂಬಿದಾಗ ತಾನಾಗಿಯೇ ಒದಗಿಬಂದ ಒಂದು ಸಾರ್ವಜನಿಕ ಅಭಿನಂದನಾ ಸಮಾರಂಭ ಬಹಳ ಹೃದಯಸ್ಪರ್ಶಿಯಾಗಿದ್ದು ನಾನು ಅದನ್ನು ಎಂದೂ ಮರೆಯುವಂತಿಲ್ಲ. ಈ ಹುಟ್ಟು ಹಬ್ಬವನ್ನೂ ಎಂದಿನಂತೆ ಸರಳವಾಗಿ ಆಚರಿಸುವುದೆಂದು ತೀರ್ಮಾನಿಸಿದ್ದೆ. ಆದರೆ ಇದನ್ನು ಹೇಗೋ ಅರಿತ ಗಾನಭಾರತಿ ಸಭಾದವರು ನನಗೆ ಎಂಬತ್ತು ವರ್ಷ ತುಂಬಿದ ನನ್ನ ಹುಟ್ಟು ಹಬ್ಬದ ಇಂತಹ ಒಂದು ಮಹತ್ತ್ವಪೂರ್ಣ ಸನ್ನಿವೇಶದಲ್ಲಿ ತಮ್ಮ ಸಭೆಯ ಆಶ್ರಯದಲ್ಲಿ ಒಂದು ಅಭಿನಂದನಾ ಸಮಾರಂಭವನ್ನು ಏರ್ಪಡಿಸಬೇಕೆಂದು ತೀರ್ಮಾನಿಸಿದರು. ಅವರ ಪ್ರೀತಿ, ಆದರ, ಅಭಿಮಾನಪೂರ್ವಕ ಆಹ್ವಾನಕ್ಕೆ ನಾನು ಮಣಿಯಲೇಬೇಕಾಯಿತು. ಡಾ|| ವಿ. ದೊರೆಸ್ವಾಮಿ ಅಯ್ಯಂಗಾರ್, ಮೈಸೂರು ವಿ. ಸುಬ್ರಹ್ಮಣ್ಯ, ಬಿ.ವಿ.ಕೆ.ಶಾಸ್ತ್ರಿ ಮುಂತಾದ ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಆ ಸಮಾರಂಭ ನಿಜಕ್ಕೂ ನನ್ನ ಜೀವಮಾನದಲ್ಲಿ ಎಂದೂ ಮರೆಯಲಾಗದಂತಹ ಅತ್ಯಂತ ಆತ್ಮೀಯ ಹೃದಯಪೂರ್ವಕ ಅಭಿನಂದನಾ ಸಮಾರಂಭವಾಗಿತ್ತು. ಎಲ್ಲರೂ ಶುಭವನ್ನೂ, ಆಯುರಾರೋಗ್ಯಗಳನ್ನೂ ಕೋರಿ ಬಹಳ ಮನಮುಟ್ಟುವಂತಹ ಒಳ್ಳೆಯ ಮಾತುಗಳನ್ನಾಡಿದರು. ನಾನು ಭಾವಪರವಶನಾಗಿ ಈ ಪ್ರೀತಿ, ವಿಶ್ವಾಸಗಳ ಮಹಾಪೂರದಲ್ಲಿ ಮುಳುಗಿ ಪುಲಕಿತನಾಗಿದ್ದೆ. ಈ ಸಮಾರಂಭದ ಉತ್ತರಾರ್ಧದಲ್ಲಿ ನನ್ನ ರಚನೆಗಳನ್ನೇ ಆಧರಿಸಿ ರಚಿಸಿದ 'ಶ್ರೀ ಲಕ್ಷ್ಮೀರಮಣ ನವರತ್ನಮಾಲಾ' ಎಂಬ ಗೀತ ರೂಪಕ ಅಂದು ಎಲ್ಲರನ್ನೂ ಆನಂದಸಾಗರದಲ್ಲಿ ಮುಳುಗಿಸಿತೆಂದರೆ ಅದು ಅತಿಶಯೋಕ್ತಿಯಲ್ಲ. ಈ ರೂಪಕದ ರಚನೆ, ನಿರೂಪಣೆ ಹಾಗೂ ನಿರ್ದೇಶನವನ್ನು ಖ್ಯಾತ ಸಂಗೀತಶಾಸ್ತ್ರಜ್ಞ ವೈಣಿಕ ವಿದ್ವಾನ್ ವಿ.ನಂಜುಂಡಸ್ವಾಮಿಯವರು ಬಹಳ ಸಮರ್ಥವಾಗಿ ನಿರ್ವಹಿಸಿ ಕಾರ್ಯಕ್ರಮವನ್ನು ಬಹಳ ಯಶಸ್ವಿಯಾಗಿ ನಡೆಸಿಕೊಟ್ಟರು. ಇದಕ್ಕೆ ಕಲಶವಿಟ್ಟಂತೆ ಗಾನಕಲಾಶ್ರೀ ಸುಕನ್ಯಾ ಪ್ರಭಾಕರ್ ಅವರು ನನ್ನ ಆಯ್ದ

ಒಂಬತ್ತು ರಚನೆಗಳನ್ನು ತಮ್ಮ ಸುಮಧುರ ಕಂಠದಲ್ಲಿ ತನ್ಮಯತೆಯಿಂದ ಭಾವಪೂರ್ಣವಾಗಿ ಹಾಡಿ ಶ್ರೋತೃಗಳನ್ನು ಗಂಧರ್ವಲೋಕಕ್ಕೆ ಕೊಂಡೊಯ್ದರು. ಒಟ್ಟಿನಲ್ಲಿ ತಾನಾಗಿಯೇ ಇಂತಹ ಒಂದು ಅದ್ದೂರಿ ಸಮಾರಂಭ ನಡೆದು ನನಗೆ ಎಲ್ಲರ ಶುಭಹಾರೈಕೆಗಳು ದೊರೆತುದು ನನ್ನ ಪುಣ್ಯವಿಶೇಷವಲ್ಲದೇ ಮತ್ತೇನು?

ನನ್ನ ಜೀವನದೃಷ್ಟಿ ಹಾಗೂ ಮೌಲ್ಯಗಳು

ಹೀಗೆ, ನನ್ನ ಈ ಎಂಬತ್ತೂರು ವರ್ಷಗಳ ಸುದೀರ್ಘ ಜೀವನದ ವಿವಿಧ ಘಟನಾವಳಿಗಳು ಹಾಗೂ ನನ್ನ ಅನುಭವಗಳನ್ನು ಇಲ್ಲಿ ಯಥಾವತ್ತಾಗಿ ಚಿತ್ರಿಸಲು ಪ್ರಯತ್ನಿಸಿದ್ದೇನೆ. ಇದರಲ್ಲಿ ಯಾವ ಉತ್ಪ್ರೇಕ್ಷೆಗೂ, ಆತ್ಮಶ್ಲಾಘನೆಗೂ, ಸಲ್ಲದ ವೈಭವೀಕರಣಕ್ಕೂ ಅವಕಾಶ ಕೊಟ್ಟಿಲ್ಲವೆಂದು ದೃಢವಾಗಿ ನಂಬಿದ್ದೇನೆ. ಆತ್ಮಚರಿತ್ರೆ ಬರೆಯುವಾಗ ಬೇರೆಯವರು ನಮ್ಮ ಬಗ್ಗೆ ಆಡುವ ಶ್ಲಾಘನೆಯ , ಹೊಗಳಿಕೆಯ ಮಾತುಗಳನ್ನು , ಅದರಿಂದ ನಮಗಾಗುವ ಸಂತೋಷವನ್ನು ಹೇಳಲೇ ಬೇಕಾಗುತ್ತದೆ. ಆದರೆ, ಅದನ್ನು ಆತ್ಮಪ್ರಶಂಸೆ ಅಥವಾ ವೈಭವೀಕರಣವೆಂದು ಖಂಡಿತ ಯಾರೂ ಭಾವಿಸಬಾರದು. ಜೀವನದ ಉದ್ದಕ್ಕೂ ನಡೆದು ಬಂದ ಹಾದಿಯಲ್ಲಿ ಕಂಡ ಸುಖ-ದುಃಖ, ಆಸೆ-ನಿರಾಸೆ, ತೃಪ್ತಿ-ಅತೃಪ್ತಿ, ಸೋಲು-ಗೆಲುವು, ನೋವು-ನಲಿವು ಇಂತಹ ದ್ವಂದ್ವ ಸನ್ನಿವೇಶಗಳನ್ನು ಹೇಗೆ ಎದುರಿಸಬೇಕಾಯಿತು, ಆಯಾ ಸನ್ನಿವೇಶಗಳಲ್ಲಿ ನನ್ನ ಮನಃಸ್ಥಿತಿ ಹಾಗು ಪ್ರತಿಕ್ರಿಯೆಗಳು ಹೇಗಿದ್ದುವು ಎಂಬುದನ್ನೆಲ್ಲಾ ಯಾವ ಲೋಪವೂ ಇಲ್ಲದಂತೆ ಬಣ್ಣಿಸಿದ್ದೇನೆ.

ನನ್ನ ಜೀವನ ಒಂದು ತೆರೆದ ಪುಸ್ತಕ. ಜೀವನವನ್ನು ನಾನು ಎಂದೂ ಹಗುರವಾಗಿ ಕಂಡವನಲ್ಲ. ಈ ನನ್ನ ಇಳಿವಯಸ್ಸಿನಲ್ಲಿಯೂ ಎಂದಿನಂತೆ ಆಶಾವಾದಿಯಾಗಿಯೇ ಉಳಿದಿದ್ದೇನೆ. ವಯೋಧರ್ಮದ ದೈಹಿಕ ಬದಲಾವಣೆಗಳನ್ನು ಬಿಟ್ಟರೆ ಮಾನಸಿಕವಾಗಿ ಇನ್ನೂ ದೃಢವಾಗಿಯೇ ಇದ್ದೇನೆ. ಬದುಕನ್ನು ಇಂದೂ ಅಷ್ಟೇ ಪ್ರೀತಿಸುತ್ತೇನೆ. ಎಲ್ಲರ ಪ್ರೀತಿ, ಸ್ನೇಹ, ವಿಶ್ವಾಸಗಳು ನನಗೆ ಬೇಕು. ಎಲ್ಲರೊಡನೆ ನಾನು ಸಂತೋಷವಾಗಿರಬೇಕು. ನನ್ನ ಸುಖ-ಸಂತೋಷಗಳನ್ನು ಎಲ್ಲರೊಡನೆ ಹಂಚಿಕೊಳ್ಳಬೇಕು. ಇದೇ ನನ್ನ ಸದಿಚ್ಛೆ . ಪರನಿಂದೆ, ಈರ್ಷ್ಯೆ, ದ್ವೇಷ ಇಂತಹ ಪದಗಳೇ ನನ್ನ ನಿಘಂಟಿನಲ್ಲಿಲ್ಲ. ಸತ್ಯಂ ಶಿವಂ ಸುಂದರಂ ಎನ್ನುವಂತೆ ಜೀವನದಲ್ಲಿ ಸತ್ಯವಾದುದನ್ನು, ಮಂಗಳಕರವಾದುದನ್ನು, ಸುಂದರವಾದುದನ್ನು ಯಾವಾಗಲೂ ಪ್ರೀತಿಸುತ್ತೇನೆ. ಹಾಗೆ ನೋಡಿದರೆ, ಎಲ್ಲರೂ ಬಯಸುವುದೂ ಇದನ್ನೇ. ವೇದಾಂತಿಗಳು ಹೇಳುವುದೂ ಇದೇ. ಸಚ್ಚಿದಾನಂದಸ್ವರೂಪವೇ ಪರಬ್ರಹ್ಮನಲ್ಲವೇ? ಇನ್ನು , ಅಲ್ಪಜ್ಞನಾದ ನಾನು ಜ್ಞಾನಿ, ವಿಜ್ಞಾನಿ, ತತ್ತ್ವಜ್ಞಾನಿ ಇವುಗಳಲ್ಲಿ ಯಾವುದೂ ಅಲ್ಲ. ನಾನು ಸಾಧಾರಣ ವ್ಯಕ್ತಿ ಅಷ್ಟೆ. ಆದರೆ, ನಾನೊಬ್ಬ ಚಿಂತನಶೀಲ ಹಾಗೂ ವಿಚಾರವಾದಿ ಎಂಬುದೇನೋ ನಿಜ. ಜ್ಞಾನಾರ್ಜನೆಯ ಹಂಬಲ ನನ್ನಲ್ಲಿ ಏಕಪ್ರಕಾರವಾಗಿ ಮುಂದುವರೆಯುತ್ತಿದೆ. ವೇದಾಂತಿಗಳು, ವಿಜ್ಞಾನಿಗಳು ಅನೇಕ ರೀತಿಯಲ್ಲಿ ಬಣ್ಣಿಸಿರುವ ಈ ಅದ್ಭುತ ಬ್ರಹ್ಮಾಂಡದ ಸೃಷ್ಟಿ , ಪ್ರಕೃತಿಯ ರಮಣೀಯ ಸೌಂದರ್ಯ, ಅದರ ರುದ್ರತಾಂಡವ, ಹುಟ್ಟು , ಸಾವು , ದೇವರ ಬಗ್ಗೆ ಇರುವ ವಿವಿಧ ಕಲ್ಪನೆಗಳು ಇವೆಲ್ಲವೂ ಈಗಲೂ ನನಗೆ ಕುತೂಹಲಕಾರಿಯಾಗಿಯೇ ಉಳಿದಿವೆ. ಇವುಗಳ ಬಗ್ಗೆ ಕಡೆಯ ಮಾತನ್ನು ಇದುವರೆವಿಗೂ ಯಾರೂ ಹೇಳಿಲ್ಲ. ಎಂತಹ ಜ್ಞಾನಿಯಾಗಲಿ, ವಿಜ್ಞಾನಿಯಾಗಲಿ, ತತ್ತ್ವಜ್ಞಾನಿಯಾಗಲಿ ಈ ವಿಶ್ವದ ಎಲ್ಲ ರಹಸ್ಯಗಳನ್ನೂ ಸಂಪೂರ್ಣವಾಗಿ ತಿಳಿಯುವುದು ಸಾಧ್ಯವಿಲ್ಲ. ಇವೆಲ್ಲದರ ಬಗ್ಗೆ ಅಷ್ಟೋ ಇಷ್ಟೋ ತಿಳಿದುಕೊಂಡಿರುವ ನಾನು ನನ್ನ ಮನಸ್ಸಿಗೆ ಒಗ್ಗುವ ರೀತಿಯಲ್ಲಿ ಇವೆಲ್ಲವನ್ನೂ ಅರ್ಥೈಸಿ ಕಂಡುಕೊಳ್ಳಲು ಪ್ರಯತ್ನಿಸಿದ್ದೇನೆ. ಯಾವುದನ್ನೂ ಅತಿಯಾಗಿ ಭ್ರಮಿಸದೇ ಅಥವಾ ವಿರೋಧಿಸದೇ ಒಂದು ಮಧ್ಯಮಾರ್ಗವನ್ನು ಕಂಡುಕೊಂಡು ಅದರಿಂದ ಶಾಂತಿ ಸಮಾಧಾನಗಳನ್ನು ಪಡೆದುಕೊಳ್ಳಲು ಪ್ರಯತ್ನಿಸಿದ್ದೇನೆ. ಮೂಢನಂಬಿಕೆ, ಅಂಧಶ್ರದ್ಧೆಗಳಿಗೆ ನಾನು ಎಂದೂ ಒಳಗಾಗಿಲ್ಲ.

ಒಬ್ಬ ಕಲಾವಿದನಿಗೆ ಇರಬೇಕಾದ ಮಾನಸಿಕ ಸಮತೋಲನವನ್ನು ಬಹಳ ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದೇನೆ. ಸಾತ್ತ್ವಿಕ ಭಕ್ತಿಗೆ ಹೆಚ್ಚು ಒಲಿದಿದ್ದೇನೆ. ದೇವರನ್ನು ಎಲ್ಲಿಯೋ ಹುಡುಕಿಕೊಂಡು ಹೋಗದೇ, ನನ್ನ ಅಂತರಂಗದಲ್ಲೇ ಅವನನ್ನು ಸದಾ ಕಾಣುವ ಹಂಬಲ ನನ್ನದು. ಬಾಹ್ಯ ಆಚರಣೆಗಳು ನನಗೆ ಅಷ್ಟು ಮುಖ್ಯವಲ್ಲ. ದೇವರನ್ನು ಸಗುಣ, ನಿರ್ಗುಣ, ಸಾಕಾರ, ನಿರಾಕಾರ ಎಂದೆಲ್ಲ ಬಣ್ಣಿಸಿದ್ದಾರೆ. ಸಂಗೀತಕ್ಕೆ ಮೂಲಭೂತವಾದ ನಾದವನ್ನು ನಾದಬ್ರಹ್ಮನೆಂದು ಕರೆದಿದ್ದಾರೆ. ಆದ್ದರಿಂದ ಒಬ್ಬ ಕಲಾವಿದನಿಗೆ ಅವನ ನಾದ ಮಾಧ್ಯಮವೇ ದೇವರು ; ಅವನ ನಾದೋಪಾಸನೆಯೇ ತಪಸ್ಸು ; ಭಗವದ್ಭಕ್ತಿಯಲ್ಲಿ , ನಾದಸೌಖ್ಯದಲ್ಲಿ , ಲೀನವಾಗುವುದೇ ಪಾವನ ಗಂಗಾಸ್ನಾನ. ನವವಿಧ ಭಕ್ತಿಯ ಮೂಲಕ ದೇವರನ್ನು ಆರಾಧಿಸಿ ಆತ್ಮೋದ್ಧಾರವನ್ನು ಕಂಡುಕೊಳ್ಳುವುದೇ ಒಬ್ಬ ಕಲಾವಿದನ ಅಂತಿಮ ಗುರಿ. ಈ ಮನೋಭೂಮಿಕೆ ಇಲ್ಲದ ಸಂಗೀತಜ್ಞಾನ ನಿರರ್ಥಕ.

ಸಮಾರೋಪ

ಇಷ್ಟು ಹೇಳಿ ನನ್ನ ಈ ಕಥಾನಕದ ಹರಿವನ್ನು ಇಲ್ಲಿಗೆ ನಿಲ್ಲಿಸುತ್ತಿದ್ದೇನೆ. ಇನ್ನು ಮುಂದಿನದು ಭವಿಷ್ಯಕ್ಕೆ ಸೇರಿದ್ದು. ಅದು ಅವ್ಯಕ್ತ , ಅಸ್ಪಷ್ಟ. ನಾನು ಮುಪ್ಪನ್ನು ಸಂತೋಷದಿಂದಲೇ ಸ್ವೀಕರಿಸಿದ್ದೇನೆ, ಸ್ವಾಗತಿಸಿದ್ದೇನೆ. ಅದರಿಂದ ಯಾರೂ ತಪ್ಪಿಸಿಕೊಳ್ಳುವಂತಿಲ್ಲ. ಆದರೆ, ಮುಪ್ಪಿನಲ್ಲಿಯೂ ಒಂದು ಆನಂದವಿದೆ, ನೆಮ್ಮದಿ ಇದೆ, ತೃಪ್ತಿ ಇದೆ ಎನ್ನುವುದನ್ನು ಕಂಡುಕೊಂಡಿದ್ದೇನೆ. ಹಾಗೆ ನೋಡಿದರೆ, ಅರುವತ್ತು ದಾಟಿದ ಅನಂತರವೇ ನನ್ನ ಜೀವನದ

ಮಹತ್ತರ ಸಾಧನೆಗಳೆಲ್ಲವೂ ಕೈಗೂಡಿವೆ ಎಂಬುದು ಗಮನಾರ್ಹ. ಒಬ್ಬ ಬರಹಗಾರನಾಗಿ ರೂಪುಗೊಂಡುದೂ, ನನ್ನ ಅನೇಕ ಬರಹಗಳು ಪ್ರಕಟವಾದುದೂ ನನ್ನ ಅರುವತ್ತು-ಎಪ್ಪತ್ತರ ದಶಕಗಳಲ್ಲೇ. ವಾಗ್ಗೇಯಕಾರನಾಗಿ ಇನ್ನೂ ಕೆಲವು ರಚನೆಗಳು ರಚಿತವಾದುದೂ ಈಗಲೇ. ಹೀಗಾಗಿ ನಾನು ನನ್ನ ಹೃದಯ ಬುದ್ಧಿಗಳೆರಡನ್ನೂ ಶಿಥಿಲವಾಗಲು ಬಿಡದೇ ನನ್ನ ಮನಸ್ಸಿಗೆ ಮುದವನ್ನು ನೀಡುವ ಇಂತಹ ಹವ್ಯಾಸಗಳಲ್ಲಿ ನಿರತನಾಗಿ, ಪ್ರತಿದಿನದ ನನ್ನ ವೀಣಾವಾದನದ ನಾದಸೌಖ್ಯದಲ್ಲಿ ಮೈಮರೆತು, ಸದಾ ಒಳ್ಳೆಯದನ್ನು ಚಿಂತಿಸುತ್ತಾ ಮುನ್ನಡೆಯುತ್ತಿದ್ದೇನೆ. ನನ್ನ ಜೀವನದ ಗತಕಾಲದ ನೆನಪುಗಳು ಆಗಾಗ ಬಂದು ಕಣ್ಣ ಮುಂದೆ ನಿಂತಾಗ ಪ್ರೇಕ್ಷಕನಂತೆ ಅದನ್ನು ನೋಡಿ ಸಂತೋಷಪಡುತ್ತೇನೆ. ಈ ಜೀವನನಾಟಕದಲ್ಲಿ ಪಾತ್ರಧಾರಿಯಾಗಿ ನನ್ನ ಪಾತ್ರವನ್ನು ಹೇಗೆ ನಿರ್ವಹಿಸಿದ್ದೇನೆ ಎಂಬುದನ್ನು ನೋಡಿದಾಗ ನನಗೆ ನಿರಾಸೆ ಏನೂ ಆಗಿಲ್ಲ. ಬದಲಿಗೆ ಒಂದು ರೀತಿಯ ತೃಪ್ತಿ, ಸಂತೋಷ ಸಮಾಧಾನಗಳೇ ಲಭಿಸಿವೆ. ನನ್ನನ್ನು ನಾನು ಕಂಡುಕೊಳ್ಳುವ ಈ ಪ್ರಕ್ರಿಯೆ ನನಗೆ ಬಹಳ ಇಷ್ಟವಾಗಿದೆ. ನಾನು ಮಾಡಿರುವ ಸಾಧನೆ ಅತ್ಯಲ್ಪವಿರಬಹುದು. ಆದರೆ ನನಗಿದ್ದ ಇತಿ-ಮಿತಿಗಳಲ್ಲಿ ಇಷ್ಟರಮಟ್ಟಿಗೆ ಮುನ್ನಡೆದುದು ಅಂತಹ ಸಣ್ಣ ಸಾಧನೆಯೇನಲ್ಲವೆಂದು ಭಾವಿಸಿದ್ದೇನೆ.

ಪ್ರೊ ಆರ್. ಎಸ್. ದೊರೆಸ್ವಾಮಿ ಅವರ 'ಲಕ್ಷ್ಮೀರಮಣ ಕೃತಿಮಂಜರಿ' ಎಂಬ ಗ್ರಂಥದಲ್ಲಿ 'ಆತ್ಮ ಕಥನ' ಎಂಬ ಹೆಸರಿನಲ್ಲಿ ಪ್ರಕಟವಾಗಿದ್ದ ಲೇಖನದ ವಿಸ್ತೃತ ರೂಪ ಇದು ;
'ಮಹತೀ' ಅಭಿನಂದನ ಗ್ರಂಥದಿಂದ ಉದ್ಧರಿಸಲಾಗಿದೆ.

ನೆನಪು ಕೆದರಿದಾಗ

(ಯೋಧನೊಬ್ಬನ ಬದುಕಿನ ನೆನಪುಗಳು)

ಇಂಗ್ಲಿಷ್ ಮೂಲ

ಮೇಜರ್ ಎಚ್.ಸಿ . ವೇಣುಗೋಪಾಲ್ ವಿ.ಎಸ್.ಎಂ.

(ಮರಾಠ ಲೈಟ್ ಇನ್‌ಫೆಂಟ್ರಿ, ಗಡಿ ರಕ್ಷಣಾದಳ)

ಅನುವಾದ : ಆರ್.ಎಲ್. ಅನಂತರಾಮಯ್ಯ

ನೆನಪು ಕೆದರಿದಾಗ *

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದೂ, ಕೊನೆಗೆ ಭಾರತದ ಸೇನೆಯಲ್ಲಿಯೇ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೂ ಒಂದು ವಿಚಿತ್ರ ಸಂಯೋಗ. ಸೇನೆಯಲ್ಲಿಯೂ, ಯುದ್ಧ ಮಾಡಿದಷ್ಟೇ ಹೆಚ್ಚಾಗಿ ಮಾಡಿದ್ದು ಸುಧಾರಣಾ ಕೆಲಸಗಳನ್ನು ; ಅಲ್ಲಿ ಒತ್ತು ಇದ್ದುದು ಮಾನವೀಯ ಅನುಕಂಪಕ್ಕೆ; ಅದು ಇನ್ನೊಂದು ವಿಶೇಷ. ನನ್ನ ಸೇವೆಗಾಗಿ ಭಾರತ ಸರ್ಕಾರ ವಿಶಿಷ್ಟ ಸೇವಾ ಪದಕವನ್ನು ನೀಡಿ ಗೌರವಿಸಿತು. ಸೈನಿಕರೂ, ಸಹೋದ್ಯೋಗಿಗಳೂ, ಮೇಲಧಿಕಾರಿಗಳೂ, ಜನಸಾಮಾನ್ಯರೂ ಸಮಾನವಾಗಿ ಪ್ರೀತಿಸಿದರು, ಸಹಕರಿಸಿದರು, ಮೆಚ್ಚಿದರು, ಅಂತಃಕರಣ ಮಿಡಿದರು. ಅದು ಇನ್ನೂ ದೊಡ್ಡ ಪ್ರಶಸ್ತಿ ಎನಿಸಿತು. ಆ ನೆನಪುಗಳು ಇಲ್ಲಿವೆ...

೧. ಬಾಲ್ಯ

ನಾನು ಹುಟ್ಟಿದ್ದು ಹಂದನಹಾಳು ಎಂಬ ಒಂದು ಸಂಕೇತಿ ಗ್ರಾಮದಲ್ಲಿ, ೧೯೨೨ರ ಸೆಪ್ಟೆಂಬರ್ ೨೩ ರಂದು. ಹಾಸನ ಜಿಲ್ಲೆಯ ಬೇಲೂರು, ಹಳೇಬೀಡು ಮತ್ತು ಹಂದನಹಾಳು ಮೂರೂ ಕೂಡಿ ಒಂದು ತ್ರಿಕೋನವಾಗುತ್ತದೆ. ಒಂದೊಂದು ಪಾರ್ಶ್ವವೂ ಸುಮಾರು ಎಂಟು ಮೈಲು ಉದ್ದ. ಬೇಲೂರು ಮತ್ತು ಹಳೇಬೀಡು ಹೊಯ್ಸಳ ವಾಸ್ತುಕಲೆಯ ಭವ್ಯ ದೇವಾಲಯಗಳಿಗೆ ಪ್ರಸಿದ್ಧವಾದವು. ಹೊಯ್ಸಳರ ಕಾಲದಲ್ಲಿ ಈ ದೇವಾಲಯಗಳು ಶಿಕ್ಷಣ ಮತ್ತು ಸಂಸ್ಕೃತಿ ಕೇಂದ್ರಗಳಾಗಿದ್ದವು. ಪ್ರಖ್ಯಾತ ವಿದ್ವಾಂಸರು ಇಲ್ಲಿ ಸೇರಿ ಮಹತ್ತ್ವದ ತತ್ತ್ವಶಾಸ್ತ್ರೀಯ ಹಾಗೂ ಧಾರ್ಮಿಕ ವಿಚಾರಗಳನ್ನು ಕುರಿತು ಚರ್ಚೆಗಳನ್ನು ನಡೆಸುತ್ತಿದ್ದರು. ಇಂದು ಬೇಲೂರಿನ ಚನ್ನಕೇಶವ ದೇವಾಲಯವೂ ಹಳೇಬೀಡಿನ ಶಿವ ದೇವಾಲಯವೂ ಅಪಾರ ಸಂಖ್ಯೆಯ ಪ್ರವಾಸಿಗಳ ಜತೆಗೆ ಪ್ರತಿ ವರ್ಷವೂ ಸಾವಿರಾರು ಭಕ್ತರನ್ನು ಆಕರ್ಷಿಸುತ್ತಿವೆ.

ಇಂದು ಹಂದನಹಾಳಿನಲ್ಲಿ ಎಲ್ಲೋ ಕೆಲವರು ದೂರದ ಬಂಧುಗಳು - ಹೆಚ್ಚೆಂದರೆ ಎಂಟೋ ಒಂಬತ್ತೋ ಕುಟುಂಬಗಳು - ವಾಸ ಮಾಡುತ್ತಿದ್ದಾರೆ. ಮಿಕ್ಕವರೆಲ್ಲಾ ಬೆಂಗಳೂರು, ಮೈಸೂರು, ಹಾಸನ ಮತ್ತಿತರ ಸ್ಥಳಗಳಿಗೆ ಹೋಗಿ ನೆಲೆಸಿದ್ದಾರೆ. ಕೆಲವರು ಅಮೆರಿಕಾಕ್ಕೂ ಹೋಗಿದ್ದಾರೆ. ಬ್ರಾಹ್ಮಣೇತರ ಕುಟುಂಬಗಳೂ, ಕೆಲವು ದಲಿತರೂ ಹಂದನಹಾಳಿನಲ್ಲಿ ಈಗ ಇದ್ದಾರೆ. ಇವರೆಲ್ಲಾ ತಲೆ ತಲಾಂತರಗಳಿಂದ ಸಾಮರಸ್ಯದ ಸಹಬಾಳ್ವೆ ನಡೆಸುತ್ತಿರುವವರು. ನಮ್ಮ ಪೂರ್ವಜರು ಇಲ್ಲಿಗೆ ಬಂದು ನೆಲೆಸಿದಾಗ ಅವರಿಗೆ ರಾಜರು ನೀಡಿದ ಜೋಡಿಗ್ರಾಮ ಇದು.

ನನ್ನ ತಂದೆಯವರು ಹೇಳುತ್ತಿದ್ದರು, ನಾವು ಮೂಲತಃ ಅಯ್ಯರ್‌ಗಳು, ತಮಿಳುನಾಡಿನ ಶೆಂಕೋಟ್ಟೈ ಎಂಬ ಸ್ಥಳದಿಂದ ಬಂದವರು ಎಂದು. ಈ ಸಂಬಂಧವಾದ ಒಂದು ಕಥೆಯಿದೆ. ಕಡುಬಡತನದಿಂದ ಬಳಲುತ್ತಿದ್ದ ಗಂಡ-ಹೆಂಡತಿ ಮತ್ತು ಮಗ ಇದ್ದ ಅಯ್ಯರ್ ಕುಟುಂಬವಿತ್ತು. ತಮ್ಮ ಬಡತನದಿಂದ ಪಾರಾಗಲು ಬಯಸಿದ ಈ ಕುಟುಂಬಕ್ಕೆ ಯೋಗಿಯೊಬ್ಬರ ಅನುಗ್ರಹವಾಯಿತು. ಅವರು ಗಂಗುಂಡೆಕಾಯಿ ಎಂಬ ಮೂಲಿಕೆಯ ಕಷಾಯವನ್ನು ಇವರಿಗೆ ಕೊಟ್ಟರು. ಅದನ್ನು ಕುಡಿದ ಮೂವರಲ್ಲಿ ಒಬ್ಬರು ಸತ್ತು ಹೋಗುವರು, ಇನ್ನೊಬ್ಬರಿಗೆ ಹುಚ್ಚು ಹಿಡಿಯುವುದು, ಮೂರನೆಯವರು ದೊಡ್ಡ ವಿದ್ವಾಂಸರಾಗಿ ಸಕಲ ಸಿರಿಸಂಪದಗಳಿಗೆ ಭಾಜನರಾಗುವರು ಎಂದು ಯೋಗಿ ಹೇಳಿದರು. ಹೆಂಡತಿ ಸತ್ತು, ಗಂಡನಿಗೆ ಹುಚ್ಚು ಹಿಡಿದು, ಮಗನು ವಿದ್ಯಾವಂತನೂ ಶ್ರೀಮಂತನೂ ಆಗುವನೆಂದು ಆಲೋಚಿಸಿ

---

* **ನೆನಪು ಕೆದರಿದಾಗ** (ಯೋಧನೊಬ್ಬನ ಬದುಕಿನ ನೆನಪುಗಳು) ಇಂಗ್ಲಿಷ್ ಮೂಲ : ಮೇಜರ್ ಎಚ್.ಸಿ. ವೇಣುಗೋಪಾಲ್, ಅನುವಾದ : ಆರ್.ಎಲ್. ಅನಂತರಾಮಯ್ಯ; ಪ್ರ.ಮು : ೧೯೯೮ ; ಪು : ೨೦೨ ; $^1/_8$ ಕ್ರೌನ್ ; ಪ್ರ : ಸಮುದಾಯ ಅಧ್ಯಯನ ಕೇಂದ್ರ, ಮೈಸೂರು ಇ/ಪ ಭಾರತೀ ಪ್ರಕಾಶನ, ಮೈಸೂರು

ಮೂವರೂ ಈ ಕಷಾಯವನ್ನು ಕುಡಿದರು. ದುರುದೃಷ್ಟಕ್ಕೆ ಫಲ ಅವರೆಣಿಸಿದಂತೆ ಆಗಲಿಲ್ಲ. ಕಷಾಯ ಸೇವಿಸಿದ ತಕ್ಷಣ ಪತಿಯು ಮೃತನಾದನು. ಪುತ್ರನಿಗೆ ಹುಚ್ಚು ಹಿಡಿಯಿತು. ಹೀಗೆ ಪತಿ ಪುತ್ರರನ್ನು ಕಳೆದುಕೊಂಡ ಪತ್ನಿಯು ವಿದ್ಯಾಭ್ಯಾಸಕ್ಕೆ ಗಮನ ಕೊಟ್ಟು ಅಪಾರ ಬುದ್ಧಿಶಕ್ತಿಯಿಂದ ಅತ್ಯಲ್ಪ ಅವಧಿಯಲ್ಲೇ ವೇದ ವೇದಾಂತಗಳಲ್ಲಿ ನಿಷ್ಣಾತೆಯಾದಳು. ಆ ಊರಿನಲ್ಲಿದ್ದ ವಿದ್ವಾಂಸರಾದ ಬ್ರಾಹ್ಮಣ ರೆಲ್ಲರನ್ನೂ ವಾದದಲ್ಲಿ ಸೋಲಿಸಿದಳು. ಆಕೆಯೇ ನಾಚಾರಮ್ಮ.

ಆದರೆ ಬಹುಬೇಗ ಕಷ್ಟಗಳು ಪ್ರಾಪ್ತವಾದವು. ತಮ್ಮ ಸ್ಥಾನಮಾನಕ್ಕೆ ಕುಂದು ತಂದ ಈ ಮಹಿಳೆಯನ್ನು ಊರಿನ ಹಿರಿಯ ವಿದ್ವಾಂಸರು ಸಹಿಸದಾದರು. ಆಕೆಗೆ ಅಪಮಾನ ಮಾಡಲು ಪಿತೂರಿ ನಡೆಸಿದರು. ಊರಿನ ಅತ್ಯಂತ ಶ್ರೇಷ್ಠ ವಿದ್ವಾಂಸೆಯಾದ ಆಕೆಯನ್ನು ಸತ್ಕರಿಸುವುದಾಗಿ ಹೇಳಿ ಒಂದು ಔತಣಕೂಟವನ್ನು ಏರ್ಪಾಡು ಮಾಡಿದರು. ಈ ಸಮಾರಂಭಕ್ಕೆ ಎಲ್ಲರೂ ಆಹ್ವಾನಿತರಾಗಿದ್ದರು. ಎಲ್ಲರೂ ಆಕೆಗೆ ಗೌರವ ಸೂಚಿಸಿ ನುಣುಪಾದ ಒಂದೊಂದು ರೇಷ್ಮೆ ಸೀರೆಯನ್ನು ಉಡುಗೊರೆ ಯಾಗಿ ನೀಡಿದರು. ಅವುಗಳಲ್ಲಿ ಒಂದು ಸೀರೆಯನ್ನು ಉಟ್ಟು ಆಕೆ ಊಟಕ್ಕೆ ಕುಳಿತ ಅತಿಥಿಗಳಿಗೆ ತುಪ್ಪ ಬಡಿಸಬೇಕೆಂದು ಕೇಳಿಕೊಳ್ಳ ಲಾಯಿತು. ನಾಚಾರಮ್ಮನು ಸೀರೆಯನ್ನು ಬದಲಿಸಲು ಪ್ರಯತ್ನಿಸಿದರೆ ಏನು ಮಾಡಿದರೂ ಅದು ಮೈಮೇಲೆ ಸರಿಯಾಗಿ ನಿಲ್ಲುತ್ತಿರಲಿಲ್ಲ. ಕಪಟಿಗಳು ಅದಕ್ಕೆ ಬಳಪದ ಕಲ್ಲಿನ ಹುಡಿಯನ್ನು ಸವರಿದ್ದರು. ಆಕೆ ಬಿಗಿಯಾಗಿ ಸೀರೆಯನ್ನುಡಲು ಪ್ರಯತ್ನ ಮಾಡುತ್ತಿದ್ದಂತೆಯೇ ಆ ದುರ್ಜನರು ಕೇಕೆ ಹಾಕಿ ನಗುತ್ತಿದ್ದರು. ಕೊನೆಗೆ ಕೊಡಗಿನ ಮಹಿಳೆಯರು ಉಡುವ ಮಾದರಿಯಲ್ಲಿ ಸೀರೆಯನ್ನು ಉಟ್ಟುಕೊಂಡು ತಮ್ಮ ಕರ್ತವ್ಯವನ್ನು ಪೂರೈಸಿದರು.

ಈ ಘಟನೆಯನಂತರ ಈರ್ಷ್ಯೆ-ಮಾತ್ಸರ್ಯಗಳು ತುಂಬಿದ ಆ ಊರಿನಲ್ಲಿರಲು ನಾಚಾರಮ್ಮ ಇಷ್ಟಪಡಲಿಲ್ಲ. ಅಲ್ಲಿಂದ ಹೊರಟು ಆಗಿನ ಮೈಸೂರು ಸಂಸ್ಥಾನದ ಕಡೆಗೆ ಬಂದು ಬಿಟ್ಟರು. ಆಕೆಯೊಂದಿಗೆ ಸುಮಾರು ೪೦-೫೦ ಕುಟುಂಬಗಳು ತಮ್ಮ ಸಾಮಾನು ಸರಂಜಾಮುಗಳೊಂದಿಗೆ ಬಂದರು. ಆಮೇಲೆ ತಂಡವು ಒಡೆಯಿತು. ಒಂದು ಗುಂಪು ಹಾಸನ ಜಿಲ್ಲೆಯ ಕೌಶಿಕಕ್ಕೆ ಹೋಗಿ ನೆಲೆಸಿತು. ಇನ್ನೊಂದು ಗುಂಪು ಮೈಸೂರು ಜಿಲ್ಲೆಯ ಬೆಟ್ಟದಪುರಕ್ಕೆ ಹೋಯಿತು. ಮೂರನೇ ಗುಂಪು ಶಿವಮೊಗ್ಗ ಜಿಲ್ಲೆಯ ಮತ್ತೂರು-ಹೊಸಹಳ್ಳಿಗೆ ಹೋಗಿ ಅಲ್ಲಿ ನೆಲೆಸಿತು. ನಾವು ಕೌಶಿಕದ ಗುಂಪಿಗೆ ಸೇರಿದವರು. ಶೆಂಕೋಟ್ಟೈಯಿಂದ ಬಂದವರಾದ್ದರಿಂದಲೂ ಯಾವುದೇ ಸಂಕೇತವಿಲ್ಲದೆ ಬಂದವರಾದ್ದರಿಂದಲೂ ನಮ್ಮ ಪೂರ್ವಜರನ್ನು ಸಂಕೇತಿಗಳೆಂದು ಕರೆದರು.

ಸಂಕೇತಿ ಸಮುದಾಯವು ಹೀಗೆ ಅಸ್ತಿತ್ವಕ್ಕೆ ಬಂದಿತು. ಕ್ರಮೇಣ ಅವರ ವಿದ್ವತ್ತು, ಸಾಮರ್ಥ್ಯ ಮತ್ತು ಪ್ರಾಮಾಣಿಕತೆಗಳ ಬಲದಿಂದ ಸ್ಥಳೀಯ ಅರಸರ ಆಶ್ರಯವು ಅವರಿಗೆ ದೊರಕಿತು. ಸಣ್ಣ ಪುಟ್ಟ ಹಳ್ಳಿಗಳನ್ನೂ ಜಮೀನುಗಳನ್ನೂ ಅವರಿಂದ ಉಂಬಳಿಯಾಗಿ ಪಡೆದರು.

ನನ್ನ ತಂದೆ ಚೆನ್ನಕೇಶವಯ್ಯ, ತಾಯಿ ಸುಂದರಮ್ಮ. ಆಕೆ ಮೈಸೂರಿನ ಒಂದು ಕುಟುಂಬದಿಂದ ಬಂದವರು. ಇಬ್ಬರೂ ದೇವರಲ್ಲಿ ಭಯಭಕ್ತಿಗಳುಳ್ಳವರು, ಶ್ರಮಜೀವಿಗಳು, ಆದರೆ ಬಡವರು. ತಂದೆ ಆ ಕಾಲದ ಕನ್ನಡದ ಅಪ್ಪರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣ ರಾಗಿದ್ದರು. ಆದರೆ ಇಂಗ್ಲಿಷ್ ಜ್ಞಾನವಿರಲಿಲ್ಲ. ಆದ್ದರಿಂದ ತಮ್ಮ ವೃತ್ತಿಜೀವನ ಪೂರ್ತಿಯಾಗಿ ಅವರು ಕನ್ನಡ ಉಪಾಧ್ಯಾಯರಾಗಿಯೇ ಕಳೆಯಬೇಕಾಯಿತು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಅವರು ಸೇವೆ ಸಲ್ಲಿಸಿದರು. ಸೇವಾ ಪ್ರಾರಂಭದಲ್ಲಿ ಅವರಿಗೆ ಬರುತ್ತಿದ್ದ ವೇತನ ತಿಂಗಳಿಗೆ ಒಂದು ರೂಪಾಯಿ! ನಲವತ್ತು ವರ್ಷಗಳನಂತರ ಅವರು ನಿವೃತ್ತರಾದಾಗ ಅವರು ಪಡೆಯುತ್ತಿದ್ದ ವೇತನ 35 ರೂಪಾಯಿ. ನಿವೃತ್ತರಾದ ಮೇಲೆ ೧೬ ರೂಪಾಯಿ ನಿವೃತ್ತಿ ವೇತನಬಿಟ್ಟು ಬೇರೆ ಯಾವ ವರಮಾನವೂ ಇಲ್ಲದೆ ೧೧-೧೨ ಜನರಿದ್ದ ದೊಡ್ಡ ಕುಟುಂಬವನ್ನು ಅವರು ನಿರ್ವಹಿಸಬೇಕಾಗಿತ್ತು. ಹೀಗಿದ್ದರೂ ನಮ್ಮೆಲ್ಲರನ್ನೂ ಅವರು ಹೇಗೋ ಕಷ್ಟದಿಂದ ಎಸ್.ಎಸ್.ಎಲ್.ಸಿ. ವರೆಗೂ ಓದಿಸಿದರು.

ನಾವು ಆರು ಜನ ಸಹೋದರರು, ಮೂವರು ಸೋದರಿಯರು. ದೊಡ್ಡ ಅಕ್ಕ ಪದ್ಮ. ಆಕೆಯ ಪತಿ ಬೇಲೂರಿನ ಬಳಿಯ ತೆಂಡೇಕೆರೆ ಗ್ರಾಮದ ಒಬ್ಬ ಜೋಡೀದಾರರು. ಅವರಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗ ಇದ್ದರು. ನಾಲ್ಕನೆಯ ಸಾರಿ ಗರ್ಭಿಣಿಯಾಗಿದ್ದಾಗ ನನ್ನ ಅಕ್ಕ ಪದ್ಮ ತೀರಿಕೊಂಡರು. ಆ ದಿನಗಳಲ್ಲಿ ಹಾಗಾಗುವುದು ಮಾಮೂಲಿನ ಸಂಗತಿಯಾಗಿತ್ತು. ಆಮೇಲೆ ಆಕೆಯ ಗಂಡ ಇನ್ನೊಬ್ಬರನ್ನು ವಿವಾಹವಾದರು. ಆ ಮೂರು ಚಿಕ್ಕಮಕ್ಕಳೂ ನಮ್ಮ ಮನೆಯಲ್ಲೇ ಬೆಳೆದರು. ಆವೇಳೆಗಾಗಲೇ ನಮ್ಮ ಕುಟುಂಬದಲ್ಲಿ ಮೂರು ಸಾವುಗಳಾಗಿದ್ದವು. ನಾವು ಆರು ಜನ ಸೋದರರಲ್ಲಿ ದೊಡ್ಡವರು ಸುಬ್ಬರಾವ್, ಅವರಿಗಿಂತಲೂ ಮೊದಲು ನಮ್ಮ ತಾಯಿಗೆ ಎರಡು ಮಕ್ಕಳು ಹುಟ್ಟಿ ಸತ್ತುಹೋಗಿದ್ದವು. ಅವರಾದ ಅನಂತರ ನಾನು ಹುಟ್ಟುವುದಕ್ಕೆ ಮೊದಲು ಇನ್ನೊಂದು ಮಗುವು ಹುಟ್ಟಿ ತೀರಿಕೊಂಡಿತ್ತು. ಆಮೇಲೆ ನಾನು, ಅನಂತರ ಸುಂದರಮೂರ್ತಿ, ಆಮೇಲೆ ಪದ್ಮ, ಮಣಿ, ಸೋಮರಾಯ, ಶಾಂತಾ, ರಾಧಾಕೃಷ್ಣ, ಕೊನೆಗೆ ಪ್ರಸನ್ನ.

ನನ್ನ ತಂದೆಯ ತಂದೆ-ತಾಯಿ ಸುಬ್ಬಾವಧಾನಿ ಮತ್ತು ಗೌರಮ್ಮ. ತಾತ ಸುಬ್ಬಾವಧಾನಿಗಳು ದೊಡ್ಡ ವೇದ ವಿದ್ವಾಂಸರು, ಬಹು ಸೊಗಸಾಗಿ ಯಜುರ್ವೇದವನ್ನು ಪಠಿಸುತ್ತಿದ್ದರು. ಧಾರ್ಮಿಕ ಆಚರಣೆಗಳು, ಸಮಾರಂಭಗಳಲ್ಲಿ ಅವರು ಭಾಗವಹಿಸುತ್ತಿದ್ದರು. ಆಗೀಗ ಪಕ್ಕದ ಹಳ್ಳಿಯಲ್ಲೋ ಪಟ್ಟಣದಲ್ಲೋ ಪೂಜೆ ಮಾಡಲೆಂದೋ ಯಾವುದೋ ಧಾರ್ಮಿಕ ಆಚರಣೆಗೆಂದೋ ಅವರಿಗೆ ಆಹ್ವಾನ ಬರುತ್ತಿತ್ತು. ಆಗೆಲ್ಲಾ ಅವರು ನನ್ನನ್ನು ಜತೆಗೆ ಕರೆದೊಯ್ಯುತ್ತಿದ್ದರು. ಇಂತಹ ಪ್ರಯಾಣಗಳು

ನನಗೆ ಬಹಳ ಆಪ್ಯಾಯಮಾನವಾಗಿರುತ್ತಿದ್ದವು. ಒಂದು ಸಾರಿ ಹಳೇಬೀಡಿನ ಕಡೆಯಿಂದ ಹಂದನಹಾಳಿಗೆ ಬರುತ್ತಿದ್ದೆವು. ರಸ್ತೆಯ ಎರಡೂ ಕಡೆ ಮಾವಿನ ಮರಗಳು. ಒಂದು ಮರದಲ್ಲಿ ಹಸಿರಾದ ಎಳೆಯ ಮಾವಿನ ಕಾಯಿಗಳು ಜೊಂಪೆ ಜೊಂಪೆಯಾಗಿ ನೇತಾಡುತ್ತಿದ್ದವು. ಆಗ ನನಗೆ ಏಳೋ – ಎಂಟೋ ವರ್ಷ. ಮಾವಿನಕಾಯಿ ಕಿತ್ತು ತಿನ್ನುವ ಆಸೆ ಅದುಮಿಡಲು ಆಗಲಿಲ್ಲ. ವಾಸನೆಯಿಂದಲೇ ಅದು ಜೀರಿಗೆ ಮಾವಿನಕಾಯಿ ಎಂದು ನನಗೆ ಗೊತ್ತಾಗುತ್ತಿತ್ತು. ಉಪ್ಪು , ಮೆಣಸಿನ ಪುಡಿಯೊಂದಿಗೆ ತಿನ್ನಲು ಅದು ಬಲು ರುಚಿ. ಮರ ಹತ್ತಿದೆ. ಒಂದರ ಮೇಲೊಂದು ಮೂರೋ ನಾಲ್ಕೋ ಕೊಂಬೆಗಳಿದ್ದವು. ತೀರಾ ಮೇಲಿನ ಕೊಂಬೆ ಹತ್ತಿಹೋದೆ. ಕೆಲವು ಕಾಯಿಗಳನ್ನು ಕಿತ್ತಿರಬೇಕು. ಅಷ್ಟರಲ್ಲಿ ನಾನು ನಿಂತಿದ್ದ ಎಳೆಯ ಕೊಂಬೆ ಮುರಿದು ನಾನು ಅನಾಮತ್ತಾಗಿ ಕೆಳಗೆ ಬೀಳತೊಡಗಿದೆ! ಬಹು ಕಷ್ಟದಿಂದ ಎರಡನೆಯ ಕೊಂಬೆಯನ್ನು ಹಿಡಿದುಕೊಂಡು ನೇತಾಡಿದೆ. ಸ್ವಲ್ಪ ಸಮಾಧಾನ ಮಾಡಿಕೊಂಡು, ಆಘಾತದಿಂದ ಚೇತರಿಸಿಕೊಂಡು ನಿಧಾನವಾಗಿ ಇಳಿದೆ. ನನ್ನ ದೇಹ ನಡುಗುತ್ತಿತ್ತು. ಅಜ್ಜಯ್ಯನಿಗೆ ವಿಪರೀತ ದಿಗಿಲಾಗಿತ್ತು. ಜೋರಾದ ನಡುಗುವ ದನಿಯಲ್ಲಿ ಅವರು ಒಂದೇ ಉಸಿರಿನಲ್ಲಿ ನನ್ನನ್ನು ಉಳಿಸಿಕೊಟ್ಟಿದ್ದಕ್ಕಾಗಿ ರಾಮನಿಗೆ ಕೃತಜ್ಞತೆ ಅರ್ಪಿಸುತ್ತಲೂ, ಇನ್ನೊಂದು ಉಸಿರಿನಲ್ಲಿ ನನ್ನನ್ನು ಹೀನಾಮಾನವಾಗಿ ಬಯ್ಯುತ್ತಲೂ ಇದ್ದರು.

ಅಜ್ಜಿಯನ್ನು ನಾನು ಅಮ್ಮ ಎಂದು ಕರೆಯುತ್ತಿದ್ದೆ. ನನ್ನನ್ನು ಕಂಡರೆ ಅವರಿಗೆ ತುಂಬಾ ಅಕ್ಕರೆ. ನನ್ನ ಅಣ್ಣ ಸುಬ್ಬರಾಯನೂ ನಾನೂ ಹೋದಾಗಲೆಲ್ಲ ಅಜ್ಜಿ ನಮ್ಮನ್ನು ತುಂಬಾ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಅಜ್ಜಿ ಸೊಗಸಾಗಿ ಅಡುಗೆ ಮಾಡುತ್ತಿದ್ದರು. ಹಾಲು, ಮೊಸರು ಮನೆಯಲ್ಲಿ ಧಾರಾಳವಾಗಿದ್ದವು. ಆ ಕಾಲದಲ್ಲಿ ಇತರರಂತೆಯೇ ಮನೆಯಲ್ಲಿ ಹಸುಗಳನ್ನೂ ಎಮ್ಮೆಗಳನ್ನೂ ಕಟ್ಟಿದ್ದರು. ತಂದೆ, ತಾಯಿ, ಅಜ್ಜ-ಅಜ್ಜಿ ಇವರ ಅಕ್ಕರೆಯ ಸೆರಗಿನಲ್ಲಿ ನಾವು ಬೆಳೆದೆವು.

ಕುಟುಂಬದಲ್ಲಿ ನನ್ನ ತಂದೆಯೇ ಹಿರಿಯವರು. ಅವರ ನಂತರದವರು ಅನಂತರಾಮಯ್ಯ. ಅವರು ಎಸ್.ಎಸ್. ಎಲ್.ಸಿ. ಮುಗಿಸಿದನಂತರ ಅರಣ್ಯಶಾಸ್ತ್ರದಲ್ಲಿ ಅಭ್ಯಾಸ ಮಾಡಿ ಮೈಸೂರು ರಾಜ್ಯ ಅರಣ್ಯ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರು. ಸಮರ್ಥರೂ ದಕ್ಷರೂ ಆಗಿದ್ದ ಅವರು ಫಾರೆಸ್ಟ್ ರೇಂಜರ್ ಹುದ್ದೆಯಿಂದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್‌ವರೆಗೆ ಮೇಲೇರಿದರು. ಕೊನೆಗೆ ಚೀಫ್ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್ ಆದರು. ಹಸನ್ಮುಖರೂ, ಸಹಾಯಪರರೂ ಆದ ಅವರು ಬಹಳ ಜನಪ್ರಿಯ ಅಧಿಕಾರಿಯಾಗಿದ್ದರು. ಹಲವು ಹತ್ತು ಬಗೆಯ ಸಹಾಯವನ್ನು ಕೋರಿ ಜನರು ಅವರ ಬಳಿಗೆ ಹೋಗುತ್ತಿದ್ದರು. ಅನಂತರಾಮಯ್ಯನವರು ಈಚೆಗೆ ಕೆಲವು ವರ್ಷಗಳ ಹಿಂದೆ ತೀರಿಕೊಂಡರು. ಅವರ ಪತ್ನಿ, ಅಂದರೆ ನನ್ನ ಚಿಕ್ಕಮ್ಮ ಈಗ ೮೫ ವರ್ಷದವರಾಗಿದ್ದರೂ ಚೆನ್ನಾಗಿದ್ದಾರೆ, ದೃಢವಾಗಿದ್ದಾರೆ. ಇಂದು ನಮ್ಮ ಕುಟುಂಬದಲ್ಲಿ ಅತ್ಯಂತ ಹಿರಿಯ ಜೀವ ಅವರು. ಈಗಲೂ ಅವರ ಆಲೋಚನಾ ಶಕ್ತಿ ನಿಚ್ಚಳವಾಗಿದೆ. ಶಾಂತವಾಗಿದೆ. ಅನೇಕ ವಿಚಾರಗಳಲ್ಲಿ ಈಗಲೂ ನಾವು ಅವರ ಸಲಹೆಯನ್ನು ಕೇಳುತ್ತೇವೆ. ನನ್ನ ಬಾಲ್ಯದ ನೆನಪುಗಳಲ್ಲಿ ಆಕೆಯ ವಿಶ್ವಾಸ, ಪ್ರೀತಿ ತುಂಬ ಹಸಿರಾಗಿ ಉಳಿದಿವೆ.

ಅನಂತರಾಮಯ್ಯನವರ ಅನಂತರ ನನಗೆ ಇಬ್ಬರು ಚಿಕ್ಕಪ್ಪಂದಿರು - ಸುಬ್ಬರಾಯರು ಮತ್ತು ಮಂಜಯ್ಯ. ಇವರೊಂದಿಗೆ ನನಗೆ ಸಂಪರ್ಕ ಕಡಮೆ. ಅವರೂ ಪೂರ್ಣ ಜೀವನ ನಡೆಸಿದರು. ಮಕ್ಕಳು, ಮೊಮ್ಮಕ್ಕಳನ್ನು ಕಂಡರು. ಇನ್ನೂ ಚೆನ್ನಾಗಿ ಅವರ ಪರಿಚಯ ನನಗಾಗಲಿಲ್ಲವಲ್ಲ ಎಂದು ವಿಷಾದವಾಗುತ್ತದೆ.

ಕೊನೆಯ ಚಿಕ್ಕಪ್ಪ ಕೃಷ್ಣಮೂರ್ತಿ. ಅವರು ಮೈಸೂರಿನಲ್ಲಿ ಬಿ.ಎಸ್‌ಸಿ., ಓದಿ ಆಮೇಲೆ ಬೆಂಗಳೂರಿನಲ್ಲಿ ಎಂಬಿಬಿಎಸ್ ಮಾಡಿದರು. ವೈದ್ಯಶಿಕ್ಷಣವನ್ನು ಪ್ರಾರಂಭಿಸಿದಾಗ ಸುಪ್ರಸಿದ್ಧ ನೇತ್ರತಜ್ಞರೊಬ್ಬರ ಮಗಳು ಲಕ್ಷ್ಮಿ ಎನ್ನುವವರನ್ನು ವಿವಾಹವಾದರು. ಎಂಬಿಬಿಎಸ್ ಮುಗಿಸುವ ವೇಳೆಗೆ ಅವರ ಮಾವನವರು ನಿವೃತ್ತರಾಗಿ ಬೆಂಗಳೂರಿನ ವಿಶ್ವೇಶ್ವರಪುರದಲ್ಲಿ ಪ್ರಭಾ ನೇತ್ರಚಿಕಿತ್ಸಾಲಯವನ್ನು ತೆರೆದರು. ಸ್ವಲ್ಪಕಾಲ ಸರ್ಕಾರಿ ನೌಕರಿ ಮಾಡಿ ನನ್ನ ಚಿಕ್ಕಪ್ಪನವರೂ ಅವರೊಂದಿಗೆ ಸೇರಿಕೊಂಡರು. ಪ್ರಭಾ ನೇತ್ರ ಚಿಕಿತ್ಸಾಲಯ ಚೆನ್ನಾಗಿ ಬೆಳೆಯಿತು. ಮಾವನವರು ವೈದ್ಯಕೀಯ ನಿಲ್ಲಿಸಿದ ಮೇಲೆ ನನ್ನ ಚಿಕ್ಕಪ್ಪ ಕೃಷ್ಣಮೂರ್ತಿಯವರೇ ಚಿಕಿತ್ಸಾಲಯದ ನಿರ್ವಾಹವನ್ನು ಕೈಗೆತ್ತಿಕೊಂಡರು. ಅವರ ವೈದ್ಯಕೀಯ ಮತ್ತು ಶಸ್ತ್ರಕ್ರಿಯಾ ಕೌಶಲ, ಅವರ ದಯೆ, ಅನುಕಂಪ, ಔದಾರ್ಯಗಳಿಂದಾಗಿ ಭಾರತದ ಎಲ್ಲಾ ಕಡೆಗಳಿಂದಲೂ ರೋಗಿಗಳು ಬರುತ್ತಿದ್ದರು. ಚಿಕಿತ್ಸಾಲಯವು ಯಶಸ್ವಿಯಾಯಿತು. ಇಂದು ಪ್ರಭಾ ನೇತ್ರ ಚಿಕಿತ್ಸಾಲಯವು ಬೆಂಗಳೂರಿನ ಅತ್ಯಂತ ಪ್ರಸಿದ್ಧವಾದ ಸಂಸ್ಥೆಯಾಗಿದೆ. ನನ್ನ ಚಿಕ್ಕಪ್ಪನವರ ಮಕ್ಕಳಲ್ಲಿ ಒಬ್ಬರಾದ ರಾಮಚಂದ್ರಮೂರ್ತಿ ಕೂಡ ನೇತ್ರವೈದ್ಯವನ್ನು ಅಧ್ಯಯನ ಮಾಡಿ ಸುಪ್ರಸಿದ್ಧ ನೇತ್ರ ವೈದ್ಯರಾಗಿದ್ದಾರೆ. ತಂದೆ-ಮಗ ಇಬ್ಬರೂ ಸೇರಿ ಚಿಕಿತ್ಸಾಲಯವನ್ನು ವಿಸ್ತರಿಸಿ ಅತ್ಯಾಧುನಿಕಗೊಳಿಸಿ ಯೂರೋಪು ಮತ್ತು ಅಮೆರಿಕಗಳಲ್ಲಿನ ಅತ್ಯುತ್ತಮ ಚಿಕಿತ್ಸಾಲಯಗಳ ಮಟ್ಟಕ್ಕೆ ಬರುವಂತೆ ಮಾಡಿದ್ದಾರೆ. ಎಪ್ಪತ್ತು ಮೀರಿದರೂ ನನ್ನ ಚಿಕ್ಕಪ್ಪ ಇನ್ನೂ ರೋಗಿಗಳಿಗೆ ಪರೀಕ್ಷೆ ಮಾಡುತ್ತಾರೆ. ಆದರೆ ಈಗ ಶಸ್ತ್ರಚಿಕಿತ್ಸೆ ಮಾಡುತ್ತಿಲ್ಲ. ಎಂದಿನಂತೆಯೇ ಸ್ಥಳೀಯವಾದ ವಿವಿಧ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಇದೆಲ್ಲವೂ ತಮ್ಮ ಶಿಕ್ಷಣ ಮತ್ತು ಕಠಿಣ ಪರಿಶ್ರಮದ ಫಲ ಎಂದು ಅವರು ನಂಬುತ್ತಾರೆ. ಈ ಹಲವು ವರ್ಷಗಳಲ್ಲಿ ಕರ್ನಾಟಕದಲ್ಲಿ ಅವರು ಅನೇಕ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಮತ್ತು ಬೆಳವಣಿಗೆಗೆ ನೆರವಾಗಿದ್ದಾರೆ. ಅವುಗಳ ಕ್ಷೇಮಾಭಿವೃದ್ಧಿಗಾಗಿ ಅವರು ಈಗಲೂ ಸಕ್ರಿಯವಾಗಿ ಆಸಕ್ತಿ ತೋರಿಸುತ್ತಾರೆ.

ನನ್ನ ಬಾಲ್ಯದ ದಿನಗಳು ಬೇಲೂರು, ಹಾಸನ ಮತ್ತು ಗೊರೂರಿನಲ್ಲಿ ಕಳೆದವು. ಗೊರೂರಿನಲ್ಲಿ ೧೯೩೬ರಲ್ಲಿ ನಾನು ಲೋಯರ್ ಸೆಕೆಂಡರಿ ತರಗತಿ ಓದಿ ಮುಗಿಸಿದೆ. ಇದು ಇಂದಿನ ಆರನೆ ತರಗತಿಗೆ ಸಮನಾದ ಪಬ್ಲಿಕ್ ಪರೀಕ್ಷೆ. ಆಮೇಲೆ ಫೋರ್ತ್, ಫಿಫ್ತ್ ಸಿಕ್ಸ್ತ್‌ನೇ ಫಾರಮ್ಮುಗಳಿದ್ದ ಪ್ರೌಢಶಾಲಾ ವಿದ್ಯಾಭ್ಯಾಸ, ಸಿಕ್ಸ್ತ್ ಫಾರಮ್ಮಿನ ಕೊನೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಅಥವಾ ಮೆಟ್ರಿಕ್ಯುಲೇಷನ್ ಎಂದು ಕರೆಯುವ ಪರೀಕ್ಷೆ.

ಲೋಯರ್ ಸೆಕೆಂಡರಿ ತೇರ್ಗಡೆಯಾದ ಮೇಲೆ ಮೈಸೂರಿನ ಮಹಾರಾಜ ಹೈಸ್ಕೂಲಿನಲ್ಲಿ ಫೋರ್ತ್ ಫಾರಮ್ಮಿಗೆ ಸೇರಿಕೊಂಡೆ. ಆಗ ನನಗೆ ಹದಿನಾಲ್ಕೋ ಹದಿನೈದೋ ವರ್ಷ ವಯಸ್ಸು. ಆ ವೇಳೆಗೆ ವಿಧವೆಯಾಗಿದ್ದ ನನ್ನ ಅಜ್ಜಿಯ (ತಾಯಿಯ ತಾಯಿ) ಮನೆಯಲ್ಲಿ ನಾನಿದ್ದೆ. ಅವರ ಇನ್ನೊಬ್ಬ ಮಗಳನ್ನು ಹಾಸನದ ಬಳಿ ಪೂಮ ಗಾಮೆಯ ಒಬ್ಬ ಜಮೀನುದಾರರಿಗೆ ಮದುವೆ ಮಾಡಿಕೊಡಲಾಗಿತ್ತು. ಆಕೆಗೆ ಮೂವರು ಗಂಡು ಮಕ್ಕಳು. ಇಬ್ಬರು ಆಕೆಯನ್ನು ತೊರೆದು ಹೊರಟು ಹೋಗಿದ್ದರು. ದೊಡ್ಡಮಗ ಸ್ಥಿರವಾದ ಮನಸ್ಸಿನವಲ್ಲ. ಯಾವುದೇ ಕೆಲಸಕ್ಕೆ ಸರಿಯಾಗಿ ಅಂಟಿಕೊಳ್ಳಲಿಲ್ಲ. ಒಂದು ದಿನ ಮನೆಬಿಟ್ಟು ಹೋದವನು ಮತ್ತೆ ಬರಲೇ ಇಲ್ಲ. ಚಿಕ್ಕವನು ೧೪-೧೫ ವರ್ಷದವನಾಗಿದ್ದಾಗ ಮನೆ ಬಿಟ್ಟು ಓಡಿ ಹೋದನು. ಒಂದು ನಾಟಕ ಕಂಪನಿಯೊಂದಿಗೆ ಅವನು ರಂಗೂನಿಗೆ ಹೋದನೆಂದು ತಿಳಿಯಿತು. ಆ ಸಮಯದಲ್ಲಿ ಅವನ ಪೂರ್ವೋತ್ತರಗಳೂ ತಿಳಿದಿರಲಿಲ್ಲ. ಹಾಗಾಗಿ ನಮ್ಮ ಅಜ್ಜಿ ಒಂದು ಸಣ್ಣ ಬಾಡಿಗೆ ಕೊಠಡಿಯಲ್ಲಿ ವಾಸವಾಗಿದ್ದರು. ಅಗತ್ಯವಿದ್ದವರಿಗೆ ಇಡ್ಲಿ, ದೋಸೆಹಿಟ್ಟುಗಳನ್ನು ರುಬ್ಬಿಕೊಡುವುದು, ಹುಳಿಪುಡಿ, ಸಾರಿನ ಪುಡಿ ಮೊದಲಾದ ಮಸಾಲೆಪುಡಿಗಳನ್ನು ತಯಾರಿಸಿಕೊಡುವುದು ಹೀಗೆ ಕುಟ್ಟಿ, ಬೀಸಿ ತಮ್ಮ ಜೀವನಕ್ಕೆ ಬೇಕಾದಷ್ಟನ್ನು ದುಡಿದುಕೊಳ್ಳುತ್ತಿದ್ದರು. ಅದು ಬಹಳ ಕಷ್ಟದ ದುಡಿಮೆ. ಆದರೆ ಜೀವವಿರುವವರೆಗೂ ಅವರು ಅದನ್ನೇ ಮಾಡಿದರು. ಸ್ವತಂತ್ರವಾದ ಮನೋಧರ್ಮವಿದ್ದ ಅಜ್ಜಿ ಯಾರ ಮುಂದೆಯೂ ಕೈ ಚಾಚಲು ಬಯಸಲಿಲ್ಲ. ಆದರೆ ತುಂಬಾ ಸಂತೋಷದಿಂದ ನನ್ನನ್ನು ಪೋಷಿಸಿದರು. ಅವರಿಗೆ ಹೊರೆಯನ್ನು ಸ್ವಲ್ಪವಾದರೂ ಕಡಮೆ ಮಾಡಬೇಕೆಂದು ನಾನು ವಾರಾನ್ನಗಳನ್ನು ಹಿಡಿದಿದ್ದೆ. ವಾರದ ಒಂದೊಂದು ದಿನವೂ ಬೇರೆ ಬೇರೆ ಬಂಧುಗಳ ಮನೆಯಲ್ಲಿ ಊಟ ಮಾಡುವುದು ಆ ಪದ್ಧತಿ.

ನಾನು ಮೈಸೂರಿನಲ್ಲಿದ್ದುದು ಫೋರ್ತ್ ಫಾರಮ್ಮಿಗೆ ಮಾತ್ರ. ಅಷ್ಟರಲ್ಲಿ ನನ್ನ ತಂದೆಗೆ ಹೊಳೆನರಸೀಪುರಕ್ಕೆ ವರ್ಗವಾಯಿತು. ಅಲ್ಲಿನ ಮುನಿಸಿಪಲ್ ಹೈಸ್ಕೂಲಿನಲ್ಲಿ ನಾನು ವಿದ್ಯಾಭ್ಯಾಸ ಮುಂದು ವರಿಸುವುದು ಎಂದಾಯಿತು. ಅಲ್ಲಿ ಇನ್ನೆರಡು ವರ್ಷ ಓದಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾದೆ. ಆಮೇಲೆ ಮತ್ತೆ ಇಂಟರ್‌ಮೀಡಿಯೆಟ್ ಓದಲು ಮೈಸೂರಿಗೆ ಹೋದೆ. ಆದರೆ ನಾನು ಉತ್ತಮ ವಿದ್ಯಾರ್ಥಿಯಲ್ಲ. ಸೀನಿಯರ್ ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ ನಾನು ಉತ್ತೀರ್ಣನಾಗಲಿಲ್ಲ. ಅದು ೧೯೪೦ನೆಯ ವರ್ಷ. ನಾನು ಕ್ರಮೇಣ ಸ್ವಾತಂತ್ರ್ಯ ಚಳವಳಿಯಲ್ಲಿ ಸೇರಿಕೊಂಡೆ.

೨. "ಕ್ವಿಟ್ ಇಂಡಿಯಾ" ಕರ್ನಾಟಕಕ್ಕೆ ಬಂತು

ಒಂದು ದೀಪಾವಳಿಯ ದಿನ, ನನಗೆ ನೆನಪಿದೆ, ಗೊರೂರಿನಲ್ಲಿ ಪಟಾಕಿಗಳಿಗಾಗಿ ನನ್ನ ತಂದೆಯನ್ನು ಪೀಡಿಸುತ್ತಿದ್ದೆ. ಆಗ ನಮ್ಮ ಕುಟುಂಬಮಿತ್ರರಾಗಿದ್ದ ಜಿ. ರಾಮಸ್ವಾಮಿಅಯ್ಯಂಗಾರ್ ಅವರು ನನಗೆ ಹೇಳಿದರು, "ನಿಮ್ಮ ತಂದೆ ಕಷ್ಟಪಟ್ಟು ಸಂಪಾದಿಸಿರುವ ಹಣವನ್ನು ಇಂಗ್ಲಿಷ್ ಜನರಿಗೆ ಒಪ್ಪಿಸಿಬಿಡಲು ಏಕೆ ಬಯಸುತ್ತೀಯೆ? ನಮ್ಮ ಜನಕ್ಕೇ ಸಹಾಯವಾಗುವಂತೆ ಜನರಿಗೆ ಹಣ್ಣುಗಳನ್ನು ಕೊಳ್ಳಬಾರದೆ?" ಈ ಮಾತು ನನ್ನ ಮನಸ್ಸಿನಲ್ಲಿ ಬೇರೂರಿತು.

ರಾಷ್ಟ್ರೀಯತೆಯ ಪ್ರಜ್ಞೆಗೆ ಗೊರೂರು ಗಮನಾರ್ಹವಾದ ಕೇಂದ್ರ ವಾಗಿತ್ತು. ಜಿ. ರಾಮಸ್ವಾಮಿ ಅಯ್ಯಂಗಾರ್, ಸಂಪತ್ತೈಯ್ಯಂಗಾರ್, ಶೆಲ್ವಪಿಳ್ಳೆ ಅಯ್ಯಂಗಾರ್, ಗರುಡ ಅಯ್ಯಂಗಾರ್ ಮೊದಲಾದ ಹಿರಿಯ ವ್ಯಕ್ತಿಗಳು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಕಾಂಗ್ರೆಸ್ ಧುರೀಣರೂ ಆಗಿದ್ದರು. ನಾನು ಹೊಳೆನರಸೀಪುರಕ್ಕೆ ಹೋಗುವ ವೇಳೆಗೆ ಸ್ವಾತಂತ್ರ್ಯ ಚಳವಳಿಗೆ ಕಾವೇರಿತ್ತು. ದೇಶದ ಪದರ ಪದರಗಳಿಗೆ ಇಳಿಯುತ್ತಿತ್ತು. ಪುಟ್ಟ ಹೊಳೆನರಸೀಪುರ ಅದಕ್ಕೆ ಹೊರತಾಗಿರಲಿಲ್ಲ.

ಮಹಾತ್ಮಾಗಾಂಧಿಯವರ ವಿಶ್ವಾಸಕ್ಕೆ ಪಾತ್ರರಾಗಿದ್ದ ಪಟ್ಟಾಭಿ ಸೀತಾರಾಮಯ್ಯ, ಟಿ. ಸಿದ್ಧಲಿಂಗಯ್ಯ, ಕೆ.ಟಿ. ಭಾಷ್ಯಂ, ಚಂಗಲ ರಾಯರೆಡ್ಡಿ ಮೊದಲಾದ ನಾಯಕರು ಆಯಾಸವನ್ನೇ ಕಾಣದೆ, ಮಿಷನರಿಗಳ ಹಾಗೆ ಸಣ್ಣಪುಟ್ಟ ಹಳ್ಳಿಗಳು ಮತ್ತು ಪಟ್ಟಣಗಳಲ್ಲಿ ಸಂಚಾರ ಮಾಡುತ್ತಾ ರಾಷ್ಟ್ರೀಯತೆಯನ್ನು ಬೋಧಿಸುತ್ತಿದ್ದರು. "ನಾವು ಗುಲಾಮರಾಗಿದ್ದೇವೆ, ಸರ್ವಸ್ವವನ್ನೂ ಪಣವಾಗಿ ಒಡ್ಡಿಯಾದರೂ ನಮ್ಮ ಸ್ವಾತಂತ್ರ್ಯವನ್ನು ಬ್ರಿಟಿಷರಿಂದ ಕಸಿದುಕೊಳ್ಳಬೇಕು" ಎಂದು ಅವರು ಹೇಳುತ್ತಿದ್ದರು. ಅವರ ನಿರರ್ಗಳ ಮಾತುಗಾರಿಕೆ ನನ್ನ ಮೇಲೆ ಗಾಢವಾದ ಪ್ರಭಾವ ಬೀರಿತ್ತು. ನನ್ನ ಹಾಗೆಯೇ ಸಾವಿರಾರು ಜನರಿದ್ದರು. ನಾವು ಖಾದಿ ಧರಿಸತೊಡಗಿದೆವು. ನಮ್ಮ ಉಪಾಧ್ಯಾಯರು ನಮ್ಮ ಶಿಕ್ಷಣದ ಬಗೆಗೆ ಕಾಳಜಿ ತೋರಿಸುತ್ತಲೇ ತಮಗೆ ಸಾಧ್ಯವಾದ ಮಟ್ಟಿಗೆ ನಮ್ಮ ರಾಷ್ಟ್ರೀಯ ಮನೋಧರ್ಮದ ಉರಿಗೆ ಗಾಳಿಯೂದಿದರು.

ನಾನು ಇಂಟರ್‌ಮೀಡಿಯೆಟ್ ತರಗತಿಗೆ ಬರುವ ವೇಳೆ ಸುಬ್ಬರಾಯನ ಕೆರೆಯಲ್ಲಿ ನಡೆಯುತ್ತಿದ್ದ ಕಾಂಗ್ರೆಸ್ ಸಭೆಗಳಿಗೆ ಹೋಗುತ್ತಿದ್ದೆ. ಅಲ್ಲಿ ನನಗೆ ಎಂ.ಎನ್. ಜೋಯಿಸ್ ಅವರ ನಿಕಟ ಸಂಪರ್ಕವುಂಟಾಯಿತು. ವಾರಕ್ಕೊಂದು ದಿನ ಅವರ ಮನೆಗೆ ಊಟಕ್ಕೆ ಹೋಗುತ್ತಿದ್ದೆ. ಆ ಕಾಲದಲ್ಲಿ ಯಶೋಧರಮ್ಮ, ಆಕೆಯ ಪತಿ ಎಚ್.ಸಿ. ದಾಸಪ್ಪ ಮತ್ತು ಪೈಲ್ವಾನ್ ಶಿವಣ್ಣ ನನಗೆ ಮಾರ್ಗದರ್ಶಕರಾಗಿದ್ದರು.

ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ ಅನುತ್ತೀರ್ಣನಾದ್ದರಿಂದ, ನನ್ನ ಹಿರಿಯಣ್ಣ ಸುಬ್ಬರಾವ್ ಬೆಂಗಳೂರಿಗೆ ಬಂದು ತಮ್ಮ ಕಣ್ಣೆದುರಿಗಿರಲು ಹೇಳಿದರು. ಆಗ ಅವರು ವಿಶ್ವಕರ್ನಾಟಕ ಪತ್ರಿಕೆಗೆ ವರದಿಗಾರರಾಗಿ ಕೆಲಸ ಮಾಡುತ್ತಿದ್ದರು. ಅವರಿಗೆ ಬರುತ್ತಿದ್ದ ಸಂಬಳ ಕೇವಲ ೩೦ ರೂಪಾಯಿ. ಹಾಗಾಗಿ ಮತ್ತೆ ನಾನು ವಾರಾನ್ನ ಹಿಡಿಯಬೇಕಾಯಿತು. ಮತ್ತೆ ತರಗತಿಗೆ ಹೋಗಲು ಸಾಧ್ಯವಿರಲಿಲ್ಲವಾದ್ದರಿಂದ ಇಂಟರ್‌ಮೀಡಿಯೆಟ್ ಪರೀಕ್ಷೆಗೆ ಖಾಸಗಿಯಾಗಿ ಕುಳಿತೆ. ಆ ಸಾರಿ ಭೌತವಿಜ್ಞಾನ, ರಸಾಯನ ವಿಜ್ಞಾನ ಮತ್ತು ಗಣಿತ ವಿಜ್ಞಾನ ಈ ಐಚ್ಛಿಕ ವಿಷಯಗಳಲ್ಲಿ ಉತ್ತೀರ್ಣನಾದೆ. ಆದರೆ ಇಂಗ್ಲಿಷ್ ಮತ್ತು ಕನ್ನಡ ನನ್ನ ಎಟುಕಿಗೆ ಮೀರಿದ್ದವು. ಮತ್ತೆ ಪ್ರಯತ್ನಿಸಿ ಆ ಎರಡು ವಿಷಯಗಳನ್ನು ಮುಗಿಸಿಕೊಳ್ಳಲು ತೀರ್ಮಾನಿಸಿದೆ. ಈ ಮಧ್ಯೆ ಎಚ್.ಎ.ಎಲ್. ನಲ್ಲಿ ಅವರ ಶೀಟ್ ಮೆಟಲ್ ವಿಭಾಗದಲ್ಲಿ ಟ್ರೈನಿ ಆಗಿ ಸೇರಿಕೊಂಡೆ. ಆಗ ನನಗೆ ೩೦ ರೂಪಾಯಿ ಶಿಷ್ಯವೇತನ ದೊರಕುತ್ತಿತ್ತು ಎಂದು ತೋರುತ್ತದೆ.

೧೯೪೨ರಲ್ಲಿ ಕ್ರಿಪ್ಸ್ ಆಯೋಗವು ವಿಫಲಗೊಂಡಿತು. ನಮ್ಮ ದೇಶಕ್ಕೆ ಡೊಮಿನಿಯನ್ ಸ್ಥಾನಮಾನ ನೀಡುವ ಬಗೆಗೆ ಸಂಧಾನಗಳು ಮುರಿದುಬಿದ್ದವು. ಆಗಸ್ಟ್ ೯ನೆಯ ತಾರೀಕು ಮಹಾತ್ಮಾ ಗಾಂಧೀಜಿ ಬ್ರಿಟಿಷರಿಗೆ "ಭಾರತ ಬಿಟ್ಟು ತೊಲಗಿ" (ಕ್ವಿಟ್ ಇಂಡಿಯಾ) ಕರೆ ಕೊಟ್ಟರು. ಅದು ಇಡೀ ದೇಶಕ್ಕೆ ಅತಿ ಮಹತ್ತ್ವದ ದಿನ. ಮಹಾತ್ಮರ ಆ ಒತ್ತಾಯದ ದನಿಯಿಂದ ಯಾರೂ ತಪ್ಪಿಸಿಕೊಳ್ಳಲಾಗಲಿಲ್ಲ.

ಎಚ್.ಎ.ಎಲ್. ನಲ್ಲಿ ನಾವು ಮಹಾತ್ಮರ ಕರೆಗೆ ಸ್ಪಂದಿಸಿ ಒಂದು ಮುಷ್ಕರವನ್ನು ವ್ಯವಸ್ಥೆ ಮಾಡಿದೆವು. ಇಡೀ ಕಾರ್ಖಾನೆಯು ನಗರದ ಕಡೆಗೆ ಮೆರವಣಿಗೆ ಹೊರಟಿತು. ಸಿಬ್ಬಂದಿ ಮತ್ತು ಆಯೋಜನಾ ವಿಭಾಗದ ಮ್ಯಾನೇಜರ್ ಆಗಿದ್ದ ಎಂ.ಎಚ್. ಷಹಾ (ಪ್ರೀಮಿಯರ್ ಆಟೋಮೊಬೈಲ್ಸ್‌ನ ವಾಲ್‌ಚಂದ್ ಹೀರಾಚಂದ್ ಅವರ ಷಡ್ಡಕ) ಮೆರವಣಿಗೆಯನ್ನು ಮುನ್ನಡೆಸಿದ್ದರು. ನಾನು ಕೆಲವು ನೂರು ಗಜಗಳಷ್ಟು ದೂರ ಹೋಗಿದ್ದಾಗ ಎಚ್.ಎ.ಎಲ್. ಜನರಲ್ ಮ್ಯಾನೇಜರ್ ಎದುರಾದದ್ದು. ಆತ ಅಮೆರಿಕನ್. 'ಕೆಲಸದಲ್ಲಿ ತೊಡಗಿರಬೇಕಾದ ಈ ಸಮಯದಲ್ಲಿ ಎಲ್ಲರೂ ಎಲ್ಲಿಗೆ ಹೋಗುತ್ತಿರುವಿರಿ?' ಎಂದು ಆತನು ಕೇಳಿದನು.

ನಾವು, 'ಮಹಾತ್ಮಾ ಗಾಂಧಿಯವರನ್ನು ಬ್ರಿಟಿಷ್ ಸರಕಾರವು ಬಂಧಿಸಿದೆ. ಅವರನ್ನು ಒಡನೆಯೇ ಬಿಡುಗಡೆ ಮಾಡಬೇಕು ಮತ್ತು ಬ್ರಿಟಿಷರು ಭಾರತ ಬಿಟ್ಟು ತೊಲಗಿ ಹೋಗಬೇಕು' ಎಂದೆವು. ಅವನು 'ಮಿ. ಗಾಂಧಿ ಒಬ್ಬ ಮೂರ್ಖ, ನೀವೆಲ್ಲರೂ ಸುಮ್ಮನೆ ಕೆಲಸಕ್ಕೆ ಹಿಂದಿರುಗತಕ್ಕದ್ದು, ಇಲ್ಲವಾದರೆ ಎಲ್ಲರೂ ಕೆಲಸ ಕಳೆದುಕೊಳ್ಳಬೇಕಾದೀತು' ಎಂದು ಗುಡುಗಿದನು. ಇದನ್ನು ಕೇಳಿ ಕಾರ್ಮಿಕರು ಕೆರಳಿದರು. ಆತನನ್ನು ಅಲ್ಲೇ ಸದೆಬಡಿಯಲು ನುಗ್ಗಿದರು. ಆದರೆ ಚುರುಕಾಗಿದ್ದ ಡ್ರೈವರನು ಹೇಗೋ ಆತನನ್ನು ಕಾರಿನೊಳಕ್ಕೆ ನೂಕಿ ಅಲ್ಲಿಂದ ಓಡಿಸಿಕೊಂಡು ಹೊರಟು ಹೋದನು.

ಮೆರವಣಿಗೆ ಕೆಂಪೇಗೌಡ ರಸ್ತೆಯ ಬದಿ ಬನಪ್ಪ ಪಾರ್ಕ್‌ವರೆಗೆ ಹೋಯಿತು. ಅಲ್ಲಿ ನಾವು ಸಭೆ ಸೇರಿ, ಗಾಂಧೀಜಿಯವರನ್ನು ಅಪಮಾನಿಸಿದುದಕ್ಕಾಗಿ ಜನರಲ್ ಮ್ಯಾನೇಜರ್ ಕ್ಷಮೆ ಕೋರುವವರೆಗೂ ಕೆಲಸಕ್ಕೆ ಹೋಗುವುದಿಲ್ಲ ಎಂದು ನಿರ್ಣಯವನ್ನು ಅಂಗೀಕರಿಸಿದೆವು. ಕೆಲವು ದಿನ ಮುಷ್ಕರ ಮುಂದುವರಿಯಿತು. ಕ್ರಮೇಣ ಬತ್ತಿಹೋಯಿತು. ಕಾರ್ಮಿಕರಲ್ಲಿ ಅನೇಕರು ತುಂಬಾ ಬಡವರು. ಮುಷ್ಕರದ ಅವಧಿಯಲ್ಲಿ ಅವರ ನೆರವಿಗೆ ಬರುವ ಸಂಸ್ಥೆ ಯಾವುದೂ ಇರಲಿಲ್ಲ. ಆದರೂ ನಮ್ಮಲ್ಲಿ ಕೆಲವರು ದೇಶವು ಸ್ವಾತಂತ್ರ್ಯವನ್ನು ಗಳಿಸುವವರೆಗೂ ಕೆಲಸಕ್ಕೆ ಹಿಂದಿರುಗಕೂಡದು ಎಂದು ನಿರ್ಧರಿಸಿಕೊಂಡಿದ್ದೆವು.

ಕೆಲಸ ಹೋದಮೇಲೆ ನಾನು ತುಂಬಾ ಕಷ್ಟ ಪಡಬೇಕಾಯಿತು. ನನ್ನ ಬಂಧುಮಿತ್ರರ ಅನುಕಂಪ ಕರುಣೆಗಳನ್ನು ಅವಲಂಬಿಸಿ ಬದುಕಬೇಕಾಯಿತು. ಅಲ್ಲಿಗೆ ನನ್ನ ಶಿಕ್ಷಣವು ಕೊನೆಗೊಂಡಿತು. ಮತ್ತೆ ಓದಲು ಹೋಗಲಿಲ್ಲ. ಹೀಗೆ ಆದ ಔಪಚಾರಿಕ ಶಿಕ್ಷಣದ ಕೊರತೆ ನನ್ನ ಜೀವನದುದ್ದಕ್ಕೂ ನನ್ನನ್ನು ಕಾಡಿತು. ನನ್ನ ವೃತ್ತಿಯಲ್ಲಿ ತಡೆಯಾಗಿ ಪರಿಣಮಿಸಿತು.

ಸತ್ಯಾಗ್ರಹ ಚಳವಳಿಯು ಅಹಿಂಸಾತ್ಮಕವಾಗಿರಬೇಕೆಂದು ಗಾಂಧೀಜಿಯವರ ಅಪೇಕ್ಷೆಯಾಗಿತ್ತು. ಆದರೆ ಅವರ ಮಾರ್ಗದಲ್ಲಿ ನಂಬಿಕೆಯಿಲ್ಲದ ಕೆಲವರಿದ್ದರು. ಬ್ರಿಟಿಷರು ಯುದ್ಧದಲ್ಲಿ ನಿರತರಾಗಿರುವ ಆ ಸಂದರ್ಭದಲ್ಲೇ ಅವರಿಗೆ ಸರಿಯಾಗಿ ಪೆಟ್ಟುಕೊಡಬೇಕು. ಅದೇ ಸುಸಂದರ್ಭ ಎಂದು ಅವರು ಯೋಚಿಸುತ್ತಿದ್ದರು. ರೈಲ್ವೆ, ಟೆಲಿಫೋನ್, ಟೆಲಿಗ್ರಾಫ್ ಮೊದಲಾದ ದೇಶದೊಳಗಿನ ಸಂಪರ್ಕ ಮಾಧ್ಯಮಗಳಿಂದ ತಾನೆ ಮುಷ್ಟಿಯಷ್ಟು ಜನ ಬ್ರಿಟಿಷರು ಇಡೀ ದೇಶವನ್ನು ಆಳುತ್ತಿದ್ದದ್ದು? ಅವುಗಳನ್ನು ಧ್ವಂಸ ಮಾಡಿ ಅವರ ಆಡಳಿತವು ಕುಸಿಯುವಂತೆ ಮಾಡಬೇಕು ಎಂದು ಅವರು ಹೇಳುತ್ತಿದ್ದರು. ಈ ಬಗೆಯ ಚಿಂತನೆಯ ಪ್ರಭಾವಕ್ಕೆ ನಾನು ಒಳಗಾದೆ. ಅಂತಹ ಅನೇಕ ಚಟುವಟಿಕೆಗಳಲ್ಲಿ ಭಾಗವಹಿಸಿದೆ. ನಾನು ಭೂಗತನಾದೆ. ನಾನೂ ನನ್ನಂತಹ ಹಲವರೂ ಸದಾಕಾಲವೂ ಪೋಲೀಸರ ಕಣ್ಣುತಪ್ಪಿಸಿಕೊಂಡೇ

ಇರಬೇಕಾಗಿತ್ತು. ನಮ್ಮ ಚಟುವಟಿಕೆಗಳು ನಮ್ಮ ಬಂಧುಗಳ ಮೇಲೆ ಉಂಟುಮಾಡುವ ಪರಿಣಾಮದ ಬಗೆಗೆ ಸದಾ ಕಳವಳ ಪಡುತ್ತಿರಬೇಕಾಗಿತ್ತು.

ಎಂ.ಹೆಚ್. ಷಹಾ ಕೂಡ ಕೆಲಸವನ್ನು ಕಳೆದುಕೊಂಡಿದ್ದರು. ಅವರು ಸತ್ಯಾಗ್ರಹದಲ್ಲೂ ಸಕ್ರಿಯವಾಗಿ ಪಾಲುಗೊಳ್ಳುತ್ತಿದ್ದರು. ವಿಧ್ವಂಸಕಾರೀ ಚಟುವಟಿಕೆಗಳಲ್ಲೂ ಭಾಗವಹಿಸುತ್ತಿದ್ದರು. ನಾನು ಯಾವಾಗಲೂ ಅವರ ಜತೆಯೇ ಇರುತ್ತಿದ್ದೆ. ಒಂದು ಘಟನೆ ೧೯೪೨ ಆಗಸ್ಟ್ ೧೧ರಂದೋ ೧೨ರಂದೋ ನಡೆಯಿತು. ಒಂದು ಗುಂಪು ವಿದ್ಯಾರ್ಥಿಗಳೊಂದಿಗೆ ಟಿಕೆಟುರಹಿತ ಪ್ರಯಾಣವನ್ನು ಅವರು ವ್ಯವಸ್ಥೆ ಮಾಡಿದರು. ಇವರ ಉದ್ದೇಶ ರೈಲ್ವೆ ಇಲಾಖೆಗೆ ನಷ್ಟ ಉಂಟು ಮಾಡುವುದಾಗಿತ್ತು. ನಾನೂ ಟಿಕೇಟಿಲ್ಲದ ಪ್ರಯಾಣಿಕನಾಗಿ ಹರಿಹರ ಟೌನ್‌ವರೆಗೆ ಷಹಾ ಅವರೊಂದಿಗೆ ಪ್ರಯಾಣ ಮಾಡಿದೆ. ಅಲ್ಲಿ ಅಗಲುವಾಗ ಅವರು ನನಗೆ ದಾವಣಗೆರೆಯಲ್ಲಿ ಕೆಲವು ವಿದ್ಯಾರ್ಥಿಗಳನ್ನು ಕೂಡಿಸಿಕೊಂಡು ತಂತಿಗಳನ್ನು ಕತ್ತರಿಸಿ ರೈಲ್ವೆ ಟೆಲಿಫೋನ್ ವ್ಯವಸ್ಥೆಯನ್ನು ಧ್ವಂಸಗೊಳಿಸಬೇಕೆಂದು ಹೇಳಿಕೊಟ್ಟರು. ಅದೇ ಪ್ರಕಾರ ನಾನು ದಾವಣಗೆರೆಗೆ ಹೋಗಿ ಧೈರ್ಯಶಾಲಿಗಳಾಗಿದ್ದ ವಿದ್ಯಾರ್ಥಿಗಳ ಒಂದು ತಂಡದ ನೆರವಿನಿಂದ ಹೆಚ್ಚುಕಡಮೆ ಒಂದು ಫರ್ಲಾಂಗ್ ಉದ್ದದ ಟೆಲಿಫೋನ್ ತಂತಿಯನ್ನು ಕತ್ತರಿಸಿ ಹಾಕಿದೆನು. ಇದರಿಂದ ರೈಲುಗಳು ಸಂಚರಿಸುವುದು ೧೨ ಗಂಟೆಗಳ ಕಾಲ ತಡವಾಯಿತು. ಸೇನಾಪಡೆಯು ಬರುವುದೂ ಅಷ್ಟೇ ತಡವಾಯಿತು. ಟಿಕೆಟ್‌ರಹಿತ ಪ್ರಯಾಣವೇ ರೈಲ್ವೆಗೆ ಸಾಕಷ್ಟು ಹಾನಿ ಉಂಟು ಮಾಡಿದ್ದಿತು. ಇದರ ಜತೆಗೆ ಪದೇಪದೇ ಚೈನು ಎಳೆಯುವುದೂ ಅವುಗಳ ಸಂಚಾರಕ್ಕೆ ತಡೆಯನ್ನುಂಟುಮಾಡುತ್ತಿತ್ತು. ಅದರಿಂದ ರೈಲ್ವೆ ಅಧಿಕಾರಿಗಳಿಗೆ ಬಹಳ ಕಿರುಕುಳವುಂಟಾಗಿ ಎಷ್ಟೋ ರೈಲುಗಳು ಸ್ಥಗಿತಗೊಳ್ಳುತ್ತಿದ್ದವು.

ಕೆಲವು ದಿನಗಳ ಅನಂತರ ನಾನು ತಡವಾಗಿ ಬರುತ್ತಿದ್ದ ರೈಲೊಂದರಲ್ಲಿ ಕುಳಿತು ಬರುತ್ತಿದ್ದೆ. ಸುಮಾರು ಮಧ್ಯರಾತ್ರಿಯ ವೇಳೆಗೆ ರೈಲು ಕ್ರಾಸಿಂಗಿಗಾಗಿ ಬಾಣಾವರ ನಿಲ್ದಾಣದಲ್ಲಿ ನಿಂತಿತು. ಅದು ಅರಸೀಕೆರೆಗೂ ಕಡೂರಿಗೂ ನಡುವೆ ಇರುವ ನಿಲ್ದಾಣ. ಬೆಂಗಳೂರಿನಿಂದ ಎದುರಾಗಿ ಬಂದ ರೈಲಿಗೆ ಸಶಸ್ತ್ರ ಪೊಲೀಸರ ಕಾವಲಿತ್ತು. ಟಿಕೆಟ್ ಕಲೆಕ್ಟರನೊಂದಿಗೆ ಮಾತನಾಡಿ ಅವರು ನಮ್ಮ ರೈಲನ್ನು ಹತ್ತಿದರು. ಟಿಕೆಟಿಲ್ಲದೆ ಪ್ರಯಾಣ ಮಾಡುತ್ತಿದ್ದ ನಮ್ಮೆಲ್ಲರನ್ನೂ ಕೆಳಕ್ಕಿಳಿಸಿದರು. ನಮ್ಮ ಮೇಲೆ ಲಾಠಿ ಚಾರ್ಜು ಮಾಡಿದ್ದಲ್ಲದೆ ಗಾಳಿಯಲ್ಲಿ ಕೆಲವು ಸುತ್ತು ಗುಂಡು ಹಾರಿಸಿದರು. ಆಮೇಲೆ ಎರಡು ರೈಲುಗಳೂ ತಮ್ಮ ತಮ್ಮ ದಿಕ್ಕಿನಲ್ಲಿ ಹೊರಟು ಹೋದವು. ಹೊರಹಾಕಲ್ಪಟ್ಟು ಲಾಠಿ ಪೆಟ್ಟಿಗೆ ತುತ್ತಾಗಿ ಅನೇಕ ವಿದ್ಯಾರ್ಥಿಗಳು ಗಾಯಗೊಂಡಿದ್ದರು. ಸಾಮಾನ್ಯವಾಗಿ ಪ್ರಥಮ ಚಿಕಿತ್ಸೆಗೆ ಅಗತ್ಯವಾದ ವಸ್ತುಗಳನ್ನು ನಾನು ಒಯ್ಯುತ್ತಿದ್ದೆ. ನೆರವಿನ ಅಗತ್ಯ ತುಂಬಾ ಇದ್ದವರಿಗೆ ಸಹಾಯ ಮಾಡುತ್ತಿದ್ದೆ. ವಾತಾವರಣ ತುಂಬಾ ಬಿಗುವಾಗಿತ್ತು. ಪ್ಲಾಟ್‌ಫಾರಮ್‌ನ ತುಂಬಾ ಜನರು ಗಾಯಗೊಂಡು ರಕ್ತಸಿಕ್ತರಾಗಿ ಬಿದ್ದಿದ್ದರು. ಪೊಲೀಸರ ಆ ದೌರ್ಜನ್ಯ ಸಂಪೂರ್ಣವಾಗಿ ಅಪ್ರಚೋದಿತವಾಗಿತ್ತು. ಅತ್ಯಂತ ಕ್ರೂರವಾಗಿತ್ತು. ಏನಾದರೂ ಮಾಡಬೇಕೆಂದು ಎಲ್ಲರೂ ತುಡಿಯುತ್ತಿದ್ದರು. ಇದು ಸರಿಯಾದ ಸಮಯ ಎಂದು ನನಗೆ ಅನ್ನಿಸಿತು. ಕೆಲವು ವಿದ್ಯಾರ್ಥಿಗಳನ್ನು ಪಕ್ಕಕ್ಕೆ ಕರೆದು ಅವರೊಂದಿಗೆ ತುರ್ತಾಗಿ ಒತ್ತಾಯದಿಂದ ಮಾತನಾಡಿದೆ.

ಬೆಳಗಿನ ಜಾವ ಎರಡು ಗಂಟೆಯಾಗಿತ್ತು. ರೈಲ್ವೆ ಸಿಬ್ಬಂದಿಗೆ ಒಡನೆಯೇ ಅಲ್ಲಿಂದ ಹೊರಟು ಹೋಗಬೇಕೆಂದು ಹೇಳಿ ಆಮೇಲೆ ರೈಲ್ವೆ ಸ್ಟೇಷನ್ನಿಗೆ ಬೆಂಕಿಯಿಟ್ಟೆವು. ಮರದಿಂದ ನಿರ್ಮಿತವಾಗಿದ್ದುದೆಲ್ಲವೂ ಉರಿದು ಬೂದಿಯಾಯಿತು. ಅಲ್ಲೊಂದು ಮರದ ಪೆಟ್ಟಿಗೆಯಲ್ಲಿ ಒಂದು ಸ್ಪ್ಯಾನರ್ ಎತ್ತಿಕೊಂಡೆವು. ಅದರ ಸಹಾಯದಿಂದ ಫಿಷ್‌ಪ್ಲೇಟುಗಳನ್ನು ಕಿತ್ತು ಮೂರು ರೈಲು ಹಳಿಗಳನ್ನು ತೆಗೆದು ಹಾಕಿದೆವು. ಮುಂದಿನ ಉಪಯೋಗಕ್ಕೆ ಇರಲೆಂದು ಆ ಸ್ಪ್ಯಾನರನ್ನು ನಾನೇ ಇರಿಸಿಕೊಳ್ಳಲು ನಿರ್ಧರಿಸಿದೆ. ಆಮೇಲೆ ವಿದ್ಯಾರ್ಥಿಗಳೊಂದಿಗೆ ಎಲ್ಲರೂ ಅಲ್ಲಿಂದ ನುಸುಳಿ ಹೊರಟುಹೋದೆವು. ಯಾರಾದರೂ ಕಂಡಾರೆಂದು ಹೆದರಿ ಅಡ್ಡಾದಿಡ್ಡಿ ನಡೆದು ಹೋಚೀಹಳ್ಳಿ ತಲುಪಿದೆವು. ಅಲ್ಲಿದ್ದ ಕೇಶವಮೂರ್ತಿ ಎಂಬ ನನ್ನ ಬಂಧು ನಮಗೆಲ್ಲಾ ತಿನ್ನಲು ಆಹಾರ ಕೊಟ್ಟರು. ಅಲ್ಲಿಂದ ನಾವು ಚದುರಿ ನಮ್ಮ ನಮ್ಮ ದಾರಿ ಹಿಡಿದು ಹೋದೆವು.

ಕೇಶವಮೂರ್ತಿ ನನ್ನ ತಂದೆಯವರ ಮಲಸೋದರರಾಗಿದ್ದು ನನ್ನ ಚಿಕ್ಕಪ್ಪನಾಗಬೇಕು. ಅವರ ಮನೆಯಲ್ಲೇ ನಾನು ರಾತ್ರಿ ಕಳೆದು ಮರು ರಾತ್ರಿ ಬೆಂಗಳೂರಿಗೆ ಹೊರಡಲು ಯೋಚಿಸಿದೆ. ಬಹುಶಃ ಆಗಸ್ಟ್ ೧೫, ೧೯೪೨. ಹೋಚೀಹಳ್ಳಿಗೆ ಹತ್ತಿರವಾದ ದೇವನೂರಿಗೆ ಹೊರಟೆ. ಅದೇ ಅತಿ ಸಮೀಪದ ರೈಲುನಿಲ್ದಾಣ. ಪ್ರಸಿದ್ಧ ಕವಿ ಲಕ್ಷ್ಮೀಶನ ಜನ್ಮಸ್ಥಳ ಇದೇಯೆ. ನನ್ನ ಜತೆಯಲ್ಲಿ ಒಬ್ಬ ವಿಧವೆಯಿದ್ದರು. ಆಕೆ ಮೈಸೂರಿಗೆ ಹೋಗಬೇಕಾಗಿತ್ತು. (ಅವರನ್ನು ನಾನು ಅಮ್ಮ ಎಂದು ಕರೆಯುತ್ತಿದ್ದೆ.) ನನ್ನ ಕೈಲೊಂದು ಸಣ್ಣ ಚೀಲವಿತ್ತು. ಆಕೆ ಭಾರವಾದ ಒಂದು ಬುಟ್ಟಿ ಹಿಡಿದುಕೊಂಡಿದ್ದರು. ಉಪ್ಪಿನಕಾಯಿ ತುಂಬಿದ್ದ ಜಾಡಿ ಅದರಲ್ಲಿತ್ತು. ನಾವು ರೈಲ್ವೆನಿಲ್ದಾಣಕ್ಕೆ ನಾಲ್ಕು ಮೈಲಿ ನಡೆದುಹೋದೆವು. ಸುಮಾರು ಎರಡು ಅಡಿ ಉದ್ದವಾಗಿದ್ದ ಸ್ಪ್ಯಾನರನ್ನು ನಾನು ಉಟ್ಟಿದ್ದ ಖದ್ದರ್ ಪಂಚೆಯೊಳಗೆ ಭದ್ರವಾಗಿ ಕಟ್ಟಿಕೊಂಡಿದ್ದೆ. ನಡೆಯುವಾಗ ಅದು ಬಹಳ ಮುಜುಗರವಾದ ಭಾರವಾಗಿತ್ತು. ಅಂತೂ ರಾತ್ರಿ ಎಂಟು ಗಂಟೆ ವೇಳೆಗೆ ನಾವು ನಿಲ್ದಾಣ ತಲುಪಿದೆವು. ರೈಲುಗಳ ಸಂಚಾರದಲ್ಲಿ ವಿಳಂಬವಾಗಿದ್ದರಿಂದ ಪ್ಲಾಟ್‌ಫಾರಂನಲ್ಲಿ ತುಂಬಾ ಜನರಿದ್ದರು. ಸ್ಟೇಷನ್ ಮಾಸ್ಟರ್‌ರ ಕಚೇರಿಯಲ್ಲಿ ಕಾಯಲು ನಿರ್ಧರಿಸಿದೆವು. ನಮ್ಮಂತೆ ಇನ್ನೂ ಅನೇಕರು ಅಲ್ಲಿ ಕಾಯುತ್ತಿದ್ದರು. ನಾನು ಗೋಡೆಗೆ ಒರಗಿಕೊಂಡು

ವಿಶ್ರಮಿಸಿಕೊಂಡೆ. ಅಮ್ಮನೂ ಪಕ್ಕದಲ್ಲೇ ಕುಳಿತರು. ನಮಗೆ ತುಂಬಾ ಆಯಾಸವಾಗಿತ್ತು. ಅಲ್ಲಿದ್ದವರೆಲ್ಲರೂ ಹಿಂದಿನ ರಾತ್ರಿ ಬಾಣಾವರ ರೈಲು ನಿಲ್ದಾಣವನ್ನು ಸುಟ್ಟು ಹಾಕಿದ ಘಟನೆಯನ್ನು ಕುರಿತೇ ಮಾತನಾಡುತ್ತಿದ್ದರು. ತಮಗೆ ಮನಸ್ಸು ಬಂದ ಹಾಗೆ ಅದಕ್ಕೆ ತಿರುವು ಕೊಡುತ್ತಿದ್ದರು. ಹೇಗೆ ಸ್ಟೇಷನ್ ಮಾಸ್ಟರರ ಹೆಂಡತಿಯು ತಮ್ಮ ಕುಟುಂಬವನ್ನು ನಾಶಪಡಿಸಬಾರದೆಂದು ವಿದ್ಯಾರ್ಥಿಗಳಿಗೆ ಮೊರೆಯಿಟ್ಟರು ಎಂದು ವರ್ಣಿಸುತ್ತಿದ್ದರು. ಆಕೆಯೇ ಎಲ್ಲರಿಗೂ ಕಾಫಿ ಕೊಟ್ಟು ಸತ್ಕರಿಸಿದರು ಎಂದು ಇತರ ಕೆಲವರು ಹೇಳಿದರು. ಇನ್ನೊಬ್ಬರು ಹೇಳುತ್ತಿದ್ದರು, ಸ್ಟೇಷನ್ ಮಾಸ್ಟರರೇ ಉಪಕರಣಗಳಿದ್ದ ಪೆಟ್ಟಿಗೆಯ ಬೀಗದ ಕೈಯನ್ನು ಕೊಟ್ಟಿದ್ದರು ಎಂದು. ನನಗೆ ನಾನೇ ಬೆನ್ನು ಚಪ್ಪರಿಸಿ ಕೊಂಡೆ. ಬೇರೆ ಕೆಲವರು, ವಿದ್ಯಾರ್ಥಿಗಳನ್ನು ಗೂಂಡಾಗಳೆಂದು ಹಳಿದು ರಾಜ್ಯ ಸರಕಾರವನ್ನು ಬೆಂಬಲಿಸಿದರು. ಆದರೆ ತರುಣರಾಗಿದ್ದವರಲ್ಲಿ ಬಹುತೇಕ ಜನ ಗಾಂಧೀಜಿ ಮತ್ತು ಅವರ ಚಳವಳಿಯ ಪರವಾಗಿದ್ದರು.

ರೈಲು ಬರುವ ಸೂಚನೆಯೇ ಕಾಣಲಿಲ್ಲ. ನಾವು ತೂಕಡಿಸ ತೊಡಗಿದೆವು. ಮಧ್ಯರಾತ್ರಿಯ ವೇಳೆಗೆ ಕಡೂರು ಜಿಲ್ಲೆಯ ಕಲೆಕ್ಟರ್, ಎ.ಎಸ್.ಪಿ.ಯ ನೇತೃತ್ವದಲ್ಲಿ ಸಶಸ್ತ್ರ ಪೊಲೀಸರ ತಂಡದೊಂದಿಗೆ ಅಲ್ಲಿಗೆ ಬಂದರು. ಬಾಣಾವರ ರೈಲು ನಿಲ್ದಾಣವನ್ನು ಸುಟ್ಟು ಹಾಕಿದ ವಿದ್ಯಾರ್ಥಿಗಳನ್ನು ಕುರಿತು ಏನಾದರೂ ಮಾಹಿತಿ ದೊರಕಬಹುದೋ ಎಂದು ನೋಡಲು ಅವರು ಬಂದಿದ್ದರು. ಯಾರೂ ಅವರಿಗೆ ಏನನ್ನೂ ಹೇಳುವ ಸ್ಥಿತಿಯಲ್ಲಿರಲಿಲ್ಲ. ತೃಪ್ತಿಯಾಗದೆ ಆತ ಸ್ಟೇಷನ್‌ಮಾಸ್ಟರರ ಕಛೇರಿಯ ಬಾಗಿಲಿಗೆ ಬಂದು ಕೆಳಗಿದ್ದ ಎಲ್ಲರ ಮೇಲೂ ತಮ್ಮ ಕೈಯಲ್ಲಿದ್ದ ಟಾರ್ಚಿನಿಂದ ಬೆಳಕು ಹಾಯಿಸಿದರು. ನಾನು ನಿದ್ದೆ ಮಾಡುತ್ತಿರುವಂತೆ ನಟಿಸಿದೆ. ಆದರೆ ಪೂರ್ತಿ ಎಚ್ಚರವಾಗಿದ್ದೆ. ನನ್ನ ಪಕ್ಕೆಯನ್ನು ತಿವಿಯುತ್ತಿದ್ದ ಸ್ಪ್ಯಾನರ್ ಬಗ್ಗೆ ತುಂಬಾ ಎಚ್ಚರವಾಗಿದ್ದೆ. ಗೋಡೆಗೆ ಆತುಕೊಂಡು ಮುದುರಿಕೊಂಡಿದ್ದೆ. ನನ್ನ ಪಕ್ಕದಲ್ಲಿ ಆಕಳಿಸುತ್ತಾ ಅಮ್ಮ ಕುಳಿತಿದ್ದರು. ತಾಯಿ-ಮಗ ಎಂದು ಅವರಿಗೆ ಕಂಡಿರಬೇಕು. ಮತ್ತೆ ಆತ ನನ್ನ ಮುಖಕ್ಕೆ ಬೆಳಕು ಬಿಟ್ಟರು. ನನ್ನ ಬಿಗುವು ಹೆಚ್ಚಾಯಿತು, ಎದೆ ಹೊಡೆದುಕೊಂಡಿತು. ಆದರೆ ಅವರಷ್ಟಕ್ಕೆ ತಿರುಗಿಕೊಂಡು ಆತ ಹೊರಟು ಹೋದರು. ಎ.ಎಸ್.ಪಿ. ಅವರೊಂದಿಗೆ ಒಂದಷ್ಟು ಮಾತನಾಡಿ ತಮ್ಮ ವಾಹನವನ್ನು ಹತ್ತಿಕೊಂಡು ಹೋದರು. ಹಿಂದೆಯೇ ಎ.ಎಸ್.ಪಿ. ಹಾಗೂ ಅವರ ಪೊಲೀಸ್ ಸಿಬ್ಬಂದಿಯೂ ಹೊರಟುಹೋದರು. ದುಷ್ಟರು ಕಡೂರಿನ ಕಡೆಗೆ ಹೋಗುತ್ತಿದ್ದುದನ್ನು ನೋಡಿದುದಾಗಿ ಕೆಲವರು ಅವರಿಗೆ ಹೇಳಿದ್ದರು.

ಕೆಲವು ದಿನಗಳ ಅನಂತರ ಹಿಂದೂ ಪತ್ರಿಕೆಯಲ್ಲಿ ಒಂದು ಸುದ್ದಿ ನನ್ನ ಗಮನ ಸೆಳೆಯಿತು. ಹೇಮು ಕಲಾನಿ ಎಂಬ ೧೪ ವರ್ಷದ ಬಾಲಕನೊಬ್ಬನು ರೈಲು ಮಾರ್ಗದಲ್ಲಿ ಫಿಷ್‌ಪ್ಲೇಟುಗಳನ್ನು ಕೀಳುವ ಪ್ರಯತ್ನದಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದ. ಅವನನ್ನು ವಿಚಾರಣೆ ಗೊಳಪಡಿಸಿ ಗಲ್ಲಿಗೇರಿಸಲಾಯಿತು. ನಾನು ಎಂತಹ ಕೆಲಸ ಮಾಡಿದ್ದೆನೆನ್ನುವುದೂ, ಎಷ್ಟು ಸೂಕ್ಷ್ಮದಲ್ಲಿ ತಪ್ಪಿಸಿಕೊಂಡಿದ್ದೆ ನೆನ್ನುವುದೂ ಆಗ ನನಗೆ ಮನವರಿಕೆಯಾಯಿತು. ದೇವರ ದಯೆಯಿಂದ ಆ ಗತಿಯನ್ನು ನಾನು ತಪ್ಪಿಸಿಕೊಂಡಿದ್ದೆ.

ಯಾವ ಕಡೆಯಿಂದಲೂ ಯಾವ ರೈಲೂ ಬರದುದನ್ನು ನೋಡಿ (ನಮ್ಮ ಪ್ರಯತ್ನ ಅಷ್ಟೊಂದು ಫಲಪ್ರದವಾಗಿತ್ತು) ಅರಸೀಕೆರೆಯವರೆಗೆ ೧೫ ಮೈಲು ನಡೆದುಹೋಗಿ ಅಲ್ಲಿ ಬಸ್ಸು ಹತ್ತಿ ಹೋಗುವುದು ಎಂದು ನಿರ್ಧರಿಸಿದೆವು. ನಾನು ತರುಣನಾಗಿದ್ದುದರಿಂದಲೂ ಬಲವಾಗಿದ್ದು ದರಿಂದಲೂ ಅಮ್ಮನಿಗೆ ಸಹಾಯ ಮಾಡಲು ಸಾಧ್ಯವಾಯಿತು. ಅರಸೀಕೆರೆಯಿಂದ ಅಮ್ಮ ಮೈಸೂರು ಬಸ್ಸು ಹತ್ತಿದರು. ನಾನು ಬೆಂಗಳೂರಿಗೆ ಬಂದೆ. ಬಾಣಾವರದಲ್ಲಿ ಲಾಠಿಚಾರ್ಜು ನಡೆದ ಸುದ್ದಿ ಮಾರನೆಯ ದಿನವೇ ದಾವಣಗೆರೆ ತಲುಪಿತು. ಉದ್ರಿಕ್ತರಾದ ಜನರ ಗುಂಪು ದಾವಣಗೆರೆ ರೈಲು ನಿಲ್ದಾಣವನ್ನು ಸುಟ್ಟುಹಾಕಿತು. ಕೆಲವು ದಿನಗಳ ಅನಂತರ ಅರಸೀಕೆರೆ ನಿಲ್ದಾಣಕ್ಕೂ ಅದೇ ಗತಿ ಒದಗಿತು.

ಇನ್ನೊಂದು ಘಟನೆ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ. ಆ ದಿನಗಳಲ್ಲೇ ಬೆಂಗಳೂರು ದೊಡ್ಡ ಮಿಲಿಟರಿ ನೆಲೆ 'ಕಂಟೋನ್ಮೆಂಟ್' ಆಗಿತ್ತು. ಯುದ್ಧದ ವೆಚ್ಚಗಳ ಸಲುವಾಗಿ ನಿಧಿಯನ್ನು ಸಂಗ್ರಹಿಸಲು ಸೇನಾದಳವು ಆಗಾಗ ಮನರಂಜನಾ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದಿತು. ವಿಶೇಷವಾಗಿ ಶನಿವಾರ ಮತ್ತು ಭಾನುವಾರ ಗಳಂದು ಅವರಿಗೆ ತುಂಬಾ ಹಣ ಸಂಗ್ರಹವಾಗುತ್ತಿತ್ತು. ಅದು ದೊರಕದ ಹಾಗೆ ಮಾಡುವುದು ಒಳ್ಳೆಯ ವಿಚಾರ ಎಂದು ನನಗೂ, ನನ್ನ ಮಿತ್ರರಿಗೂ ಅನ್ನಿಸಿತು. ಈ ಕಾರ್ಯಕ್ರಮಗಳು ತಟ್ಟಿಹೊದಿಸಿದ ಚಾವಣಿಯಿದ್ದ ಚಪ್ಪರಗಳಲ್ಲಿ ನಡೆಯುತ್ತಿದ್ದವು–ಒಂದು ಕೆಂಪೇಗೌಡ ರಸ್ತೆಯಲ್ಲಿದ್ದ ಸ್ಟೇಟ್ಸ್ ಟಾಕೀಸಿನ ಎದುರಿಗೆ, ಇನ್ನೊಂದು ಸಿಟಿ ಮಾರ್ಕೆಟ್ ಬಳಿ, ಮೂರನೆಯದು ಕಬ್ಬನ್ ಪಾರ್ಕಿನಲ್ಲಿ. ಒಣಗಿದ ಚಪ್ಪರಕ್ಕೆ ಬೆಂಕಿಯಿಡುವುದರಿಂದ ಅತಿ ಕಡಮೆ ಪ್ರಯತ್ನದಿಂದ ಅವರಿಗೆ ಅತ್ಯಂತ ಹೆಚ್ಚು ತೊಂದರೆಯನ್ನುಂಟು ಮಾಡಬಹುದಾಗಿತ್ತು.

ನಾನು ಬೆಂಗಳೂರಿನಲ್ಲಿದ್ದಾಗ ಕೋಲಾರ ಚಿನ್ನದ ಗಣಿಯ ಉರಿಗಾಂ ಗಣಿಗೆ ಸೇರಿದ ರಾಜಗೋಪಾಲ ಎನ್ನುವವರ ಸ್ನೇಹ ಮಾಡಿಕೊಂಡಿದ್ದೆ. ಕೆ.ಜಿ.ಎಫ್. ಗೆ ಹೋಗಿ ಆತನ ಸಹಾಯದಿಂದ ಸ್ವಲ್ಪ ಜೆಲೆಗ್ನೈಟನ್ನೂ ೨೦ ಡಿಟೋನೇಟರುಗಳನ್ನೂ ಸೇಫ್ಟಿಫ್ಯೂಸ್‌ಗಳನ್ನೂ ಕದ್ದು ಬೆಂಗಳೂರಿಗೆ ಸಾಗಿಸಿ ತಂದೆ.

ಒಂದು ಶನಿವಾರ ಸೆಂಟ್ರಲ್ ಕಾಲೇಜು ಕ್ರಿಕೆಟ್ ಮೈದಾನದಲ್ಲಿದ್ದ ಯುದ್ಧನಿಧಿಯ ಚಪ್ಪರದ ಸಮೀಪಕ್ಕೆ ಬಂದೆ. ರಾಜಗೋಪಾಲ್ ಅವರಿಂದ ಪಡೆದು ತಂದಿದ್ದ ಜೆಲೆಗ್ನೈಟಿನಿಂದ ಒಂದು ಬಗೆಯ ಸ್ಫೋಟಕ ಸಿಗರೇಟುಗಳನ್ನು ತಯಾರಿಸಿದ್ದೆ. ಹಚ್ಚಿ, ಹೊಗೆ ಬರತೊಡಗಿ ಅರ್ಧದಷ್ಟು ಉರಿದ ಅನಂತರ ಅದು ಜ್ವಾಲೆಗಳಾಗಿ ಸಿಡಿಯುತ್ತಿದ್ದಿತು.

ಅನೇಕ ಸಾರಿ ಅಭ್ಯಾಸ ಮಾಡಿ, ನಾನು ಏನು ಮಾಡಬೇಕು, ಅದಕ್ಕೆ ನನಗೆ ಎಷ್ಟು ಸಮಯ ಇರುತ್ತದೆ ಎಂಬುದನ್ನು ತಿಳಿದುಕೊಂಡಿದ್ದೆ. ಕ್ರಿಕೆಟ್ ಪಂದ್ಯ ನಡೆಯುತ್ತಿತ್ತು, ಜನರು ಆಟ ನೋಡುವುದರಲ್ಲಿ ತಲ್ಲೀನರಾಗಿದ್ದರು. ಒಂದು ಸಿಗರೇಟನ್ನು ಹಚ್ಚಿ ಸರಿಯಾದ ಕ್ಷಣದಲ್ಲಿ ಅದನ್ನು ಒಣಗಿದ ಚಪ್ಪರದ ಚಾವಣಿಗೆ ಎಸೆದುಬಿಟ್ಟೆ. ಆಮೇಲೆ ಸದ್ದಿಲ್ಲದೆ ಕ್ರಿಕೆಟ್ ಮೈದಾನದ ಮುಂಭಾಗಕ್ಕೆ ಬಂದೆ. 'ಕಿಸೀಸೇ ನಾ ಕಹನಾ' ಎನ್ನುವ ಚಿತ್ರ ಅಲ್ಲಿ ಪ್ರದರ್ಶಿತವಾಗುತ್ತಿತ್ತೆಂದು ತೋರುತ್ತದೆ. ಒಂದು ಟಿಕೆಟ್ ಕೊಂಡು ಒಳಗೆ ಹೋಗಿ ಕುಳಿತೆ. ಕೆಲವೇ ಕ್ಷಣಗಳಲ್ಲಿ ಹೊರಗೆ ಜನರು 'ಬೆಂಕಿ ಬೆಂಕಿ' ಎಂದು ಕಿರಿಚುತ್ತಿದ್ದುದು ಒಳಗಿದ್ದ ನಮಗೇ ಕೇಳಿಸುತ್ತಿತ್ತು. ಹೊರಗೆ ಬಂದು ನೋಡಿದರೆ, ಇಡೀ ಚಪ್ಪರ ಧಗಧಗನೆ ಉರಿಯುತ್ತಿತ್ತು. ಅಗ್ನಿಶಾಮಕ ದಳದವರು ಬರುವ ಹೊತ್ತಿಗೆ ಎಲ್ಲವೂ ಸುಟ್ಟು ಬೂದಿಯಾಗಿ ಹೋಗಿತ್ತು. ಇದೇ ಘಟನೆ ಇನ್ನೆರಡು ಚಪ್ಪರಗಳಲ್ಲೂ ಮರುಕಳಿಸಿತು. ಅವೂ ಉರಿದುಹೋದವು. ಈ ಚಟುವಟಿಕೆಗಳಲ್ಲಿ ನನ್ನ ಜೊತೆಗಿದ್ದವನು ಸೆಂಟ್ ಜೋಸೆಫ್ ಕಾಲೇಜಿನ ವಿದ್ಯಾರ್ಥಿಯಾಗಿದ್ದ ರಾಜ ಅಯ್ಯಂಗಾರ್ ಎನ್ನುವವನು. ಈಗ ಆತ ಎಲ್ಲಿದ್ದಾನೋ ನನಗೆ ತಿಳಿಯದು. ಹೀಗೆ ಬ್ರಿಟಿಷರ ಯುದ್ಧಪ್ರಯತ್ನಕ್ಕೆ ಅಡ್ಡಿಯುಂಟು ಮಾಡಲು ನಮಗೆ ಸಾಧ್ಯವಾದ ಕಾರ್ಯವನ್ನು ನಾವು ಮಾಡಿದೆವು.

ಇನ್ನೂ ಗಟ್ಟಿಯಾದ ನಮ್ಮ ಪ್ರಯತ್ನ ಭದ್ರಾವತಿ ಕಾಗದ ಕಾರ್ಖಾನೆ ಮತ್ತು ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗಳಲ್ಲಿ ಉತ್ಪಾದನೆಗೆ ತಡೆಯುಂಟು ಮಾಡಿದ್ದು. ಜರ್ಮನಿಯನ್ನು ಎದುರಿಸಲು ಬ್ರಿಟಿಷರಿಗೆ ನೇರವಾಗಿ ನೆರವಾಗುವ ಅನೇಕ ವಸ್ತುಗಳನ್ನು ಭದ್ರಾವತಿ ಉತ್ಪಾದಿಸುತ್ತಿತ್ತು. ನಿದರ್ಶನಕ್ಕೆ–ವಿಶೇಷವಾಗಿ ಸಂಸ್ಕರಿಸಿ, ಬ್ರೆನ್ ಮತ್ತು ಲೈಟ್ ಮೆಷಿನ್ ಗನ್‌ಗಳಿಗೆ ಉಪಯೋಗಿಸುತ್ತಿದ್ದ ನಿರ್ದಿಷ್ಟರೀತಿಯ ಉಕ್ಕು.

ಎನ್.ಡಿ.ಶಂಕರ್ ಅವರ ಸಮರ್ಥ ನಾಯಕತ್ವದಲ್ಲಿ ಈ ಎರಡೂ ಸ್ಥಾವರಗಳ ಕಾರ್ಮಿಕರು ಕೆಲಸವನ್ನು ನಿಲ್ಲಿಸಿದರು. ಶಂಕರ್ ಒಬ್ಬ ಬುದ್ಧಿವಂತ, ನಿರ್ಭೀತ, ರಾಷ್ಟ್ರೀಯವಾದೀ ವ್ಯಕ್ತಿ. ತಮ್ಮ ಚಟುವಟಿಕೆಗಳಿಂದಾಗಿ ಅವರು ಭೂಗತರಾಗಬೇಕಾಗಿತ್ತು. ಸ್ವಲ್ಪಕಾಲ ಅವರು ಮುಷ್ಕರವನ್ನು ನಿರ್ದೇಶಿಸಿದರು. ಆದರೆ ಬೇಗನೆ ಪೊಲೀಸರ ಕೈಗೆ ಸಿಕ್ಕಿಬಿದ್ದರು. ಬಹುಕಾಲ ಆಗಲೇ ವೇತನವಿಲ್ಲದೆ ಕಷ್ಟದಲ್ಲಿದ್ದ ಕಾರ್ಮಿಕರಲ್ಲಿ ಆತ್ಮಸ್ಥೈರ್ಯ ಕುಸಿಯಿತು. ಮುಷ್ಕರ ಇನ್ನೇನು ಮುರಿದು ಬೀಳುವುದರಲ್ಲಿತ್ತು.

ಪರಿಸ್ಥಿತಿಯನ್ನು ಗಮನಿಸಿದ ಎಂ.ಎಚ್. ಷಹಾ ಆಸಕ್ತಿ ವಹಿಸಿ ಬೆಂಗಳೂರಿನ ರಾಜಾಸ್ಥಾನೀ ವ್ಯಾಪಾರಿ ಸಮುದಾಯಕ್ಕೆ ಮನವಿ ಮಾಡಿಕೊಂಡರು. ಅವರಿಂದ ಒಂದು ಪತ್ರವನ್ನು ಪಡೆದು, ಅದರ ಸಹಾಯದಿಂದ ಶಿವಮೊಗ್ಗದಲ್ಲಿದ್ದ ರಾಜಾಸ್ಥಾನೀ ವರ್ತಕರಿಂದ ನಾಲ್ಕು ಸಾವಿರ ರೂಪಾಯಿಗಳನ್ನು ಸಂಗ್ರಹಿಸಲು ಅವಕಾಶ ಮಾಡಿದರು. ಹಣವನ್ನು ವರ್ಗಾಯಿಸಲು ಆ ಪತ್ರವು ಸುರಕ್ಷಿತವಾದ ವಿಧಾನವಾಗಿತ್ತು. ಸದಾಕಾಲವೂ ಬಂಧನದ ಭೀತಿಯ ಅಡಿಯಲ್ಲೇ ಇದ್ದುದರಿಂದ ಅದನ್ನು ಕೈಯಲ್ಲಿಟ್ಟುಕೊಂಡಿದ್ದರೆ ಕಳೆದುಕೊಳ್ಳುವ ಅಪಾಯವಿತ್ತು. ಷಹಾ ಮತ್ತು ನಾನು ತರೀಕೆರೆ ತಲುಪಿ, ಸಾಮಿಲ್ ಮಾಲೀಕರು ಬಸಪ್ಪ ಎನ್ನುವವರ ಮನೆಗೆ ಹೋದೆವು. ಅವರ ಸಹಾಯದಿಂದ ಕಾರ್ಮಿಕ ನಾಯಕರಾದ ತಿರುಮಲರಾವ್ ಮತ್ತು ಸುಂದರರಾವ್ ಅವರನ್ನು ಸಂಪರ್ಕಿಸಿದೆವು. ಶಂಕರ್ ಇಲ್ಲದಾಗ ಅವರು ಮುಷ್ಕರದ ನಾಯಕತ್ವ ವಹಿಸಿದ್ದರು. ಭದ್ರಾವತಿಯು ತರೀಕೆರೆಗೂ ಶಿವಮೊಗ್ಗಕ್ಕೂ ನಡುವೆ ಇರುವ ನಗರ. ಶಿವಮೊಗ್ಗಕ್ಕೆ ಹೋಗಿ, ಹಣವನ್ನು ತೆಗೆದುಕೊಂಡು, ಭದ್ರಾವತಿಗೆ ಬಂದು ಮುಷ್ಕರನಿರತ ಕಾರ್ಮಿಕರಿಗೆ ಹಂಚುವುದು, ಆಮೇಲೆ ತರೀಕೆರೆಗೆ ಹಿಂದಿರುಗಿ ಷಹಾ ಅವರಿಗೆ ವರದಿ ಮಾಡುವುದು ನಮ್ಮ ಆಲೋಚನೆ. ಸುಂದರರಾವ್ ಮತ್ತು ನಾನು ರಾತ್ರಿ ಸುಮಾರು ಎಂಟು ಗಂಟೆಗೆ ತರೀಕೆರೆ ಬಿಟ್ಟು ೧೧ ಅಥವಾ ೧೧.೩೦ ಗಂಟೆಗೆ ಶಿವಮೊಗ್ಗ ತಲುಪಿದೆವು. ಪತ್ರವನ್ನು ಸೂಕ್ತ ವ್ಯಕ್ತಿಗೆ ಕೊಟ್ಟು ಹಣವನ್ನು ಪಡೆದೆವು. ಮತ್ತೆ ಕೂಡಲೆ ಸೈಕಲ್ ಮೇಲೆ ಭದ್ರಾವತಿಗೆ ಹೊರಟೆವು. ಇದು ಇಡೀ ಕಾರ್ಯಕ್ರಮದಲ್ಲಿ ಅತ್ಯಂತ ಅಪಾಯಕಾರಿಯಾದ ಭಾಗವಾಗಿತ್ತು. ತಿರುಮಲರಾವ್ ಅವರ ನೆರವಿನಿಂದ ಕಾರ್ಮಿಕರಿಗೆ ಹಣವನ್ನು ಹಂಚಿದ್ದಾಯಿತು. ಮತ್ತೆ ಸೈಕಲ್ ಹತ್ತಿ ತರೀಕೆರೆಗೆ ಹಿಂದಿರುಗಿ ಬಂದಾಗ ಮರುದಿನ ಬೆಳಗಿನ ಜಾವ ೫ ಗಂಟೆ. ಆ ರಾತ್ರಿ ಸುಂದರರಾಯರೂ ನಾನೂ ಸುಮಾರು ೫೦ ಮೈಲಿಗಳಿಗಿಂತಲೂ ಹೆಚ್ಚು ದೂರ ಸೈಕಲ್ ಪ್ರಯಾಣ ಮಾಡಿದ್ದೆವು. ಎಲ್ಲಿಂದಲೋ ಬಂದ ಅನಿರೀಕ್ಷಿತ ನೆರವು ಮುಷ್ಕರಕಾರರ ಸ್ಥೈರ್ಯವನ್ನು ಹೆಚ್ಚಿಸಿತು. ಇನ್ನೂ ಕೆಲಕಾಲ ಮುಷ್ಕರ ಮುಂದುವರಿಯಿತು.

ಆದರೆ ಅದನ್ನು ಅನಿರ್ದಿಷ್ಟಕಾಲ ಮುಂದುವರಿಸುವಂತಿರಲಿಲ್ಲ. ಇದ್ದ ಹಣ ಖರ್ಚಾಯಿತು, ಮತ್ತೆ ಯಾವ ನೆರವೂ ಕಾಣಿಸಲಿಲ್ಲ. ಎಲ್ಲೋ ಕೆಲವರ ಹೊರತು ಬಹುತೇಕ ಕಾರ್ಮಿಕರು ಅತಿ ಹೀನಾಯವಾದ ಪರಿಸ್ಥಿತಿಯಲ್ಲಿ ಕೆಲಸಕ್ಕೆ ಹಿಂದಿರುಗಿದ್ದರು. ಉತ್ಪಾದನೆಯನ್ನು ನಿಧಾನಗೊಳಿಸಲು ನಾವು ಬೇರೆ ಏನನ್ನಾದರೂ ಮಾಡಬೇಕಾಗಿತ್ತು. ಭದ್ರಾವತಿಗೆ ವಿದ್ಯುತ್ ಬರುತ್ತಿದ್ದ ಮುಖ್ಯ ತಂತಿ ಮಾರ್ಗವನ್ನೇ ಕಡಿದು ಹಾಕಿ ಇಡೀ ಕಾರ್ಖಾನೆ ಸ್ತಬ್ಧಗೊಳ್ಳುವಂತೆ ಮಾಡಬಹುದು ಎಂದು ನಮಗೆ ಹೊಳೆಯಿತು. ಅಧಿಕ ವಿದ್ಯುತ್ ಪ್ರವಾಹವಿದ್ದ ತಂತಿಗಳನ್ನು ಕಡಿಯಲು ಜೆಲೆಗ್ನೈಟ್ ಬಳಸಬಹುದಾಗಿತ್ತು. ಶಿವಮೊಗ್ಗದ ಮತ್ತೊಬ್ಬ ಭೂಗತ ನಾಯಕ ಎಂ.ಪಿ. ಈಶ್ವರಪ್ಪ (ಮುಂದೆ ಇವರು ಕರ್ನಾಟಕ ಹೌಸಿಂಗ್ ಬೋರ್ಡಿನ ಅಧ್ಯಕ್ಷರಾದರು) ಈ ಕೆಲಸಕ್ಕೆ ಅಗತ್ಯವಾದ ಜೆಲೆಗ್ನೈಟ್ ಸಂಪಾದಿಸಲು ಮುಂದೆ ಬಂದರು. ಒಂದು ರಾತ್ರಿ ಮೂರು ಮಿತ್ರರೊಂದಿಗೆ ನಾನು ಈಶ್ವರಪ್ಪನವರಿಂದ ಜೆಲೆಗ್ನೈಟನ್ನೂ ಫ್ಯೂಸ್

ಡಿಟೊನೇಟರ್ ಅನ್ನೂ ಸಂಗ್ರಹಿಸಿಕೊಂಡು ಭದ್ರಾವತಿಗೆ ಹೋದೆ. ನಮಗೆ ಅಗತ್ಯವಾಗಿದ್ದ ಹಣ, ಇತರ ವಸ್ತುಗಳು ಮತ್ತು ಬೈಸಿಕಲ್ಲುಗಳನ್ನು ಅವರು ಒದಗಿಸಿಕೊಟ್ಟರು.

ಒಬ್ಬ ಗೆಳೆಯನ ಮನೆಗೆ ಹೋದೆವು. ಅಲ್ಲಿ ಆ ಎಲ್ಲ ವಸ್ತುಗಳನ್ನೂ ಹೊರಕ್ಕೆ ತೆಗೆದೆ. ಜೆಲೆಗ್ನೈಟನ್ನು ಚಚ್ಚಿ ಅಗತ್ಯವಾದ ಗಾತ್ರದ ಉಂಡೆಗಳನ್ನಾಗಿ ಮಾಡಿದೆ. ಅದಕ್ಕೆ ಡಿಟೊನೇಟರುಗಳನ್ನು ಜೋಡಿಸಿ ಸೇಫ್ಟಿಫ್ಯೂಸ್ ಅಳವಡಿಸಿದೆ. ಸೈಕಲ್ ಹತ್ತಿ ಭದ್ರಾನದಿಯ ದಡದ ಕಾಡು ಪ್ರದೇಶಕ್ಕೆ ಹೋದೆವು. ವಿದ್ಯುತ್ತಿನ ಮುಖ್ಯ ಮಾರ್ಗವು ಅಲ್ಲಿ ಹಾದು ಹೋಗುತ್ತಿದ್ದಿತು. ಸ್ಫೋಟಕಗಳನ್ನು ಹಗ್ಗಕ್ಕೆ ಕಟ್ಟಿ ವಿದ್ಯುತ್ ತಂತಿಗಳ ಮೇಲಕ್ಕೆ ಎಸೆದು ಹಗ್ಗವನ್ನು ಎಳೆದು ಸ್ಫೋಟಕವು ತಂತಿಯ ಸಂಪರ್ಕಕ್ಕೆ ಬರುವ ಹಾಗೆ ಮಾಡಿದೆ. ಆಮೇಲೆ ಹಗ್ಗವನ್ನು ಗೋಪುರ ಕಂಬಕ್ಕೆ ಕಟ್ಟಿದೆವು. ನಾನು ಸೈಕಲ್ ಏರಿಹೋಗಿ ಸುರಕ್ಷಿತ ಸ್ಥಳವನ್ನು ತಲುಪುವಷ್ಟು ಹೊತ್ತು ಸಿಡಿಯದಂತೆ ಫ್ಯೂಸ್ ಅಳವಡಿಸಿದ್ದೆ. ನಾಗಾಲೋಟ ಓಡಿ ಸೈಕಲುಗಳನ್ನು ನಿಲ್ಲಿಸಿದ್ದ ಅಪಾಯದೂರವಾದ ಸ್ಥಳ ಸೇರಿದೆವು.

ಮರುಕ್ಷಣವೇ ಕಿವಿ ಗಡಚಿಕ್ಕುವಂತಹ ಶಬ್ದ ಕೇಳಿಸಿತು. ಒಂದಾದ ಮೇಲೊಂದರಂತೆ ಮೂರು ಸ್ಫೋಟಕಗಳೂ ಸಿಡಿದುವು. ಭದ್ರಾವತಿಯೂ, ಅಲ್ಲಿನ ಎಲ್ಲಾ ಕಾರ್ಖಾನೆಗಳೂ ಕಗ್ಗತ್ತಲಲ್ಲಿ ಮುಳುಗಿಹೋದವು. ನಾವು ಸೈಕಲ್ ಮೇಲೆ ವೇಗವಾಗಿ ಬಂದುಬಿಟ್ಟೆವು. ಬೆಳಗಿನ ಜಾವ ಶಿವಮೊಗ್ಗದಲ್ಲಿದ್ದೆವು. ಆ ವೇಳೆಗೆ ನನಗೆ ತಲೆ ಸಿಡಿಯುತ್ತಿತ್ತು. ಒಂದೆರಡು ಸಲ ವಾಂತಿಯಾಯಿತು. ಜೆಲೆಗ್ನೈಟ್ ಮುಟ್ಟಿ ಕೆಲಸ ಮಾಡಿದ್ದರ ಫಲ. ಮೆಗಾನ್ ಆಸ್ಪತ್ರೆಗೆ ಹೋಗಿ ಸೀದಾ ಡಾ. ಎನ್.ಎಸ್. ಅಯ್ಯಂಗಾರ್ ಎಂಬ ವೈದ್ಯರ ಕೊಠಡಿಗೆ ನುಗ್ಗಿದೆ. ನಡೆದುದೆಲ್ಲವನ್ನೂ ಅವರಿಗೆ ವಿವರಿಸಿದೆ. ಅವರು ನನ್ನ ರಹಸ್ಯವನ್ನು ಕಾಪಾಡಿದರು. ಬಹಳ ಅನುಕಂಪದಿಂದ ನನಗೆ ಚಿಕಿತ್ಸೆ ಮಾಡಿದರು. ನಮ್ಮ ಪ್ರಯತ್ನದ ಗೆಲುವಿನಿಂದ ಈಶ್ವರಪ್ಪನವರಿಗೆ ತುಂಬಾ ಸಂತೋಷವಾಯಿತು. ಒಂದು ವಾರ ಕಾಲ ಉಕ್ಕಿನ ಉತ್ಪಾದನೆ ಸ್ಥಗಿತಗೊಂಡಿತು.

ಭೂಗತ ಚಟುವಟಿಕೆಗಳಲ್ಲಿರುವ ಕಷ್ಟವೇನೆಂದರೆ ವ್ಯಕ್ತಿಗಳು ಸಿಕ್ಕಿಬಿದ್ದು ಜೈಲಿಗೆ ಹೋಗುತ್ತಿದ್ದ ಹಾಗೆ ವ್ಯವಸ್ಥೆ ಸೊರಗಿ ಹೋಗುತ್ತದೆ. ೧೯೪೨ರ ಕೊನೆಯ ವೇಳೆಗೆ ನಮ್ಮ ಭೂಗತ ನಾಯಕರಲ್ಲಿ ಬಹುಜನರು ಜೈಲಿನಲ್ಲಿದ್ದರು. ನಾಯಕರಿಲ್ಲದೆ ಚಳವಳಿಯು ಸೊರಗಿಹೋಗುವ ದೊಡ್ಡ ಅಪಾಯವಿತ್ತು. ಬಂಧಿತರಾದ ನಾಯಕರಲ್ಲಿ ಕೊನೆಯಪಕ್ಷ ಒಬ್ಬರು ತಪ್ಪಿಸಿಕೊಳ್ಳಲು ಸಹಾಯ ಮಾಡುವುದಾದರೆ ಅದರಿಂದ ಚಳವಳಿಯ ಬಿಸಿ ಆರದೆ, ನೈತಿಕ ಸ್ಥೈರ್ಯ ಇಮ್ಮಡಿಸುತ್ತದೆ ಎಂದು ನಾವು ಆಲೋಚಿಸಿದೆವು. ಚರ್ಚೆ ಮಾಡಿದ ಮೇಲೆ, ಸ್ವಲ್ಪ ಹೆಚ್ಚು ಕಾಲದಿಂದ ಜೈಲಿನಲ್ಲಿದ್ದ ಪ್ರಭುದೇವ ಎಂಬ ದಕ್ಷನಾದ ಮಿತ್ರನಿಗೆ ಸಹಾಯ ಮಾಡಲು ನಿರ್ಧರಿಸಿದೆವು. ನಾವು ಒಬ್ಬ ಪೊಲೀಸ್ ಅಧಿಕಾರಿಯ ವೇಷದಲ್ಲಿ ಸೀದಾ ಸೆಂಟ್ರಲ್ ಜೈಲಿಗೆ ಹೋಗಿ ಪ್ರಭುದೇವನನ್ನು ವಿಚಾರಣೆಗೊಳಪಡಿಸುವ ನೆಪದಿಂದ ಹೇಗಾದರೂ ಅವನನ್ನು ಹಾರಿಸಿ ತರುವುದೆಂದು ಹಂಚಿಕೆ ಹಾಕಲಾಯಿತು.

ಕೆಲವು ವಾರಗಳ ಹಿಂದೆ ಕ್ಯಾಪ್ಟನ್ ಜ್ವಾಲಾಸಿಂಗ್ ಎನ್ನುವವರ ಪರಿಚಯ ನನಗಾಗಿತ್ತು. ಅವರ ೧೪ ವರ್ಷದ ಮಗನಿಗೆ ಇಂಗ್ಲಿಷ್ ಕಲಿಸಿಕೊಡುವ ಒಬ್ಬರ ಆವಶ್ಯಕತೆಯಿತ್ತು. ನಾನು ಅದಕ್ಕೆ ಒಪ್ಪಿಕೊಂಡಿದ್ದೆ. ಅವರು ಸಿಖ್ ರೆಜಿಮೆಂಟ್‌ಗೆ ಸೇರಿದವರು. ಬೆಂಗಳೂರಿನ ಹೊರವಲಯದ ಜಾಲಹಳ್ಳಿ ಪ್ರದೇಶದಲ್ಲಿ ಅವರ ಶಿಬಿರಗಳಿದ್ದವು. ತೊಂದರೆಯಿಲ್ಲದೆ ಒಳಕ್ಕೆ ಬರಲು, ಹೊರಕ್ಕೆ ಹೋಗಲು ಅವರು ನನಗೆ 'ಪಾಸು' ಕೊಟ್ಟಿದ್ದರು. ಇದರ ಬಲದಿಂದ ಆ ಮಿಲಿಟರಿ ನೆಲೆಯಲ್ಲಿ ಓಡಾಡಿ ಕೆಲವು ಜನರ ಸಂಪರ್ಕ ಬೆಳೆಸಿಕೊಂಡಿದ್ದೆ. ರಾಜಾರಾಂ ಎನ್ನುವವರ ಮತ್ತು ಹವಾಲ್ದಾರ ದಾವೂದ್ ಎನ್ನುವವರ ಸ್ನೇಹವಾಗಿತ್ತು. ಅವರ ಸಹಾಯದಿಂದ ಒಂದು ರಿವಾಲ್ವರ್ ಪಡೆದು ಅದನ್ನು ಶಿಬಿರದಿಂದ ಹೊರಕ್ಕೆ ಕದ್ದು ತಂದಿದ್ದೆ.

ಆದರೆ ಪ್ರಭುದೇವನನ್ನು ಬಿಡಿಸಿ ತರುವ ಹುನ್ನಾರ ವಿಫಲವಾಯಿತು, ಮಾಹಿತಿ ಸರಿಯಾಗಿ ದೊರಕದೆ. ತನ್ನದೇ ಪ್ರಯತ್ನದಿಂದ ಪ್ರಭುದೇವ ಹಿಂದಿನ ದಿನವೇ ಸೆಂಟ್ರಲ್ ಜೈಲಿನಿಂದ ತಪ್ಪಿಸಿಕೊಂಡು ಬಿಟ್ಟಿದ್ದ. ಅದು ತಿಳಿಯದೆ ನಾನು ಪೊಲೀಸ್ ಅಧಿಕಾರಿಯ ವೇಷದಲ್ಲಿ ಅವನನ್ನು ಭೇಟಿ ಮಾಡಲು ಹೋದೆ. ಒಡನೆಯೇ ಸಂದೇಹಗಳೆದ್ದವು. ರಿವಾಲ್ವರ್ ಇಟ್ಟುಕೊಂಡಿದ್ದ ನನ್ನನ್ನು ಬಂಧಿಸಲಾಯಿತು.

ಜೈಲಿಗೆ ತಂದು ನನ್ನನ್ನು ಶಿಕ್ಷೆಗೊಳಪಟ್ಟ ಖೈದಿಗಳನ್ನಿಡುವ ಕೋಣೆಯಲ್ಲಿ (ನಂ. ೨) ಕೂಡಿದರು. ವಿಪರೀತ ಹಿಂಸೆಗೊಳಪಡಿಸಿದರು. ಆರ್ಮ್ಸ್ ಆಕ್ಟಿನ ೧೪-C ಪ್ರಕರಣದನ್ವಯ ನನ್ನ ಮೇಲೆ ಆರೋಪ ಹೊರಿಸಲಾಯಿತು. ಸಿಟಿ ಮ್ಯಾಜಿಸ್ಟ್ರೇಟರು ನನಗೆ ಒಂದೂವರೆ ವರ್ಷ ಕಠಿಣ ಸಜೆ ವಿಧಿಸಿದರು. ನನ್ನ ವಿಚಾರಣೆಗೋಸ್ಕರವಾಗಿ ನ್ಯಾಯಾಲಯವು ಬೇರೆ ಎಲ್ಲಾ ಮೊಕದ್ದಮೆಗಳನ್ನೂ ಬದಿಗೆ ನೂಕಿತ್ತು. ನಮ್ಮಲ್ಲಿ ಕೆಲವರ ಬಗೆಗೆ ಸರಕಾರ ಎಷ್ಟು ಕಳವಳ ಪಡುತ್ತಿದ್ದಿತು ಎಂಬುದು ಇದರಿಂದ ತಿಳಿಯುತ್ತದೆ. ನನ್ನನ್ನು ಬಂಧಿಸಿದ್ದು ನವಂಬರ್ ೧೮ರಂದು, ವಿಚಾರಣೆ ಮುಗಿದದ್ದು ಡಿಸೆಂಬರ್ ೨೩ರಂದು. ಸೈನ್ಯದ ರಿವಾಲ್ವರ್ ಸೇರಿಕೊಂಡಿದ್ದುದರಿಂದ ವಿಷಯವನ್ನು ಸೈನ್ಯದ ಅಧಿಕಾರಿಗಳಿಗೆ ತಿಳಿಸಲಾಯಿತು. ಬ್ರಿಟಿಷ್ ಅಧಿಕಾರಿಗಳು ವಿಚಾರಣೆ ನಡೆಸಿದರು. ಕ್ಯಾಪ್ಟನ್ ಜ್ವಾಲಾಸಿಂಗ್ ಅವರನ್ನು ಕರೆಸಿ ಪ್ರಶ್ನಿಸಲಾಯಿತು. ಈ ವಿಚಾರವೇ ತನಗೆ ಏನೂ ತಿಳಿಯದು ಎಂದು ಹೇಗೋ ಆತ ಅಧಿಕಾರಿಗಳಿಗೆ ಮನವರಿಕೆ ಮಾಡಿದರು. ಆದರೆ ವಿಚಾರಣೆ ನಡೆಯುತ್ತಿದ್ದ ಕಾಲ ಪೂರ್ತಿ ಕ್ಯಾಪ್ಟನ್ ಜ್ವಾಲಾಸಿಂಗ್ ನನ್ನೊಂದಿಗೆ ರಹಸ್ಯವಾಗಿ ಮಾತನಾಡುತ್ತಿದ್ದರು. ನಮ್ಮ ಹೋರಾಟ ಮತ್ತು ಚಟುವಟಿಕೆಗಳ ಬಗೆಗೆ ಅವರಿಗೆ ಬಹಳ ಸಹಾನುಭೂತಿಯಿತ್ತು. ಅಗಲಿದಾಗ ಆತ್ಮೀಯತೆಯಿಂದ ಕೈಕುಲುಕಿದೆವು.

[೧೯೪೫ರಲ್ಲಿ ನಾನು ಭಾರತೀಯ ಸೇನೆಗೆ ವಿಧ್ಯುಕ್ತವಾಗಿ ಸೇರಿದೆ. ಲಕ್ನೋದಲ್ಲಿ ೧೯ ಮರಾಠಾ ರೆಜಿಮೆಂಟಿಗೆ ನನ್ನನ್ನು ಕಳುಹಿಸಿದರು. ಒಂದು ಸಂಜೆ, ಕ್ಯಾಪ್ಟನ್ ಜ್ವಾಲಾಸಿಂಗ್ ಅವರನ್ನು ಅದೇ ಸ್ಥಳಕ್ಕೆ ವರ್ಗ ಮಾಡಿ ಕಳಿಸಿದ್ದಾರೆ ಎಂದು ತಿಳಿಯಿತು. ಆ ವೇಳೆಗೆ ಅವರು ಕರ್ನಲ್ ಆಗಿದ್ದರು. ನಾನು ನೇರವಾಗಿ ಅವರ ಮನೆಗೆ ಹೋದೆ. ಅವರಿಗಾದ ಆಶ್ಚರ್ಯ ಸಂತೋಷಗಳು ಬಣ್ಣನೆಗೆ ಮೀರಿದ್ದುವು. ಆ ಸೊಗಸಾದ ಸಂಜೆ, ಹಿಂದೆ ನಡೆದುದೆಲ್ಲವನ್ನೂ ನೆನೆದು ಹೊಟ್ಟೆತುಂಬಾ ನಕ್ಕೆವು . ಒಂದು ಸೇನಾ ರಿವಾಲ್ವರ್ ಕದ್ದ ನಾನು ಸೇನೆಗೇ ಸೇರಿಕೊಳ್ಳು ವಂತಾದುದು ಎಂಥ ವಿಚಿತ್ರ ಎಂದುಕೊಂಡರು.]

ನನ್ನನ್ನು ಇರಿಸಿದ ಏಕಾಂತ ಸೆಲ್ ತುಂಬಾ ಚಿಕ್ಕದು, ಬಹಳ ಗುರುತರವಾದ ಅಪರಾಧಗಳನ್ನು ಮಾಡಿ ಶಿಕ್ಷೆ ಪಡೆದಿದ್ದ ಖೈದಿಗಳನ್ನು ಇರಿಸುವಂಥದು. ಆ ಕೊಠಡಿಯಿಂದ ಬೆಳಗ್ಗೆ ಒಂದು ಸಾರಿ ಸ್ನಾನ ಮಾಡಲು ಹೊರಗೆ ಬರಲು ಅವಕಾಶವಿತ್ತು. ಕಾಲಪ್ರವೃತ್ತಿಗಳು ಈ ಕಿರುಕೋಣೆಯಲ್ಲೇ ನಡೆಯಬೇಕಾಗಿತ್ತು. ಅದಕ್ಕಾಗಿ ಒಂದು ಮೂಲೆಯಲ್ಲಿ ಒಂದು ಮಡಕೆಯನ್ನಿಟ್ಟಿದ್ದರು. ಆ ಮಡಕೆಯನ್ನು ಪ್ರತಿದಿನವೂ ನಾವೇ ತೊಳೆದುಕೊಳ್ಳಬೇಕಾಗಿತ್ತು. ವಾರ್ಡರುಗಳಲ್ಲಿ ಒಬ್ಬರಿಗೆ ನನ್ನ ಮೇಲೆ ಕರುಣೆಯುಂಟಾಗಿತ್ತು. ಪ್ರತಿದಿನವೂ ಸೂರ್ಯ ನಮಸ್ಕಾರ ಮಾಡುವಂತೆ ನನಗೆ ಸಲಹೆ ಕೊಟ್ಟರು. ಆದರೆ ನನ್ನ ಕಾಲುಗಳಿಗೆ ಸರಪಣಿ ಹಾಕಿದ್ದುದರಿಂದ ಸೂರ್ಯನಮಸ್ಕಾರ ಮಾಡುವುದು ತುಂಬಾ ಕಷ್ಟ ಎಂದು ಹೇಳಿದೆ. ಅವರು ಅದಕ್ಕೆ ಬದಲು ಸೂರ್ಯನಿಗೆದುರಾಗಿ ನಿಂತು ಕೈಮುಗಿದುಕೊಂಡು ೨೧ ದಿನ ಪ್ರಾರ್ಥನೆ ಮಾಡು ಎಂದು ಹೇಳಿದರು. ಕಾಕತಾಳೀಯವೆಂಬಂತೆ ೨೧ ದಿನ ಮುಗಿದೊಡನೆ ನನಗೆ ಬಿಡುಗಡೆಯಾಯಿತು.

ನನ್ನನ್ನು ಬಂಧಿಸಿ ಸೆರೆಗೆ ಹಾಕಿದಾಗ ನನ್ನ ಅಣ್ಣ ಸುಬ್ಬರಾವ್ ಬೆಂಗಳೂರಿನ ಮೇಧಾವಿ ಅಡ್ವೋಕೇಟ್ ಜಿ.ವಿ.ರಾಮಾಚಾರ್ ಎನ್ನುವವರನ್ನು ಸಂಪರ್ಕಿಸಿದರು. ಅವರು ಸೆಷನ್ಸ್ ಕೋರ್ಟಿನಲ್ಲಿ ವಾದ ಮಂಡಿಸಿ ಜಾಮೀನಿನ ಮೇಲೆ ನನ್ನನ್ನು ಬಿಡುಗಡೆ ಮಾಡಿಸಿದರು. ಆಮೇಲೆ ಸೆಷನ್ಸ್ ಕೋರ್ಟಿನಲ್ಲಿ ಮೊಕದ್ದಮೆ ವಿಚಾರಣೆಗೆ ಬಂದಾಗ ನ್ಯಾಯಮೂರ್ತಿಯಾಗಿದ್ದ ಶ್ಯಾಮರಾಜ ಅಯ್ಯಂಗಾರ್ ಅವರು ನಾನು ನಿರಪರಾಧಿ ಎಂದು ತೀರ್ಪಿತ್ತು ಜೈಲಿನಿಂದ ಬಿಡುಗಡೆ ಮಾಡಿದರು. ಈ ಮೊಕದ್ದಮೆಗಾಗಿ ನನ್ನ ಅಣ್ಣನಿಗೆ ತುಂಬಾ ಹಣ ವೆಚ್ಚವಾಗಿತ್ತು. ಹಣ ಇನ್ನೂ ಬೇಕಾಗಿತ್ತು. ಮತ್ತೆ ಷಹಾ ಅವರೂ ಕೆಲವು ಮಿತ್ರರೂ ನನ್ನ ನೆರವಿಗೆ ಬಂದರು. ಚಂದಾ ಕೂಡಿಸಿ ಅಡ್ವೊಕೇಟರ ಶುಲ್ಕ ಮತ್ತು ಮೊಕದ್ದಮೆಯ ವೆಚ್ಚಗಳನ್ನು ತುಂಬಿದರು. ನನ್ನ ಅಣ್ಣ ಮತ್ತು ಅತ್ತಿಗೆ ಲಲಿತಮ್ಮ ತುಂಬಾ ಕಿರುಕುಳವನ್ನು ಅನುಭವಿಸಬೇಕಾಯಿತು. ಚಾಮರಾಜಪೇಟೆಯಲ್ಲಿದ್ದ ಅವರ ಮನೆಯ ಕೊಠಡಿಗಳನ್ನು ಪೊಲೀಸರು ಶೋಧನೆ ಮಾಡಿದರು. ಯಾವ ಯಾವುದೋ ಸಮಯ ಗಳಲ್ಲಿ ಬಂದು ಪೊಲೀಸರು ತೊಂದರೆ ಕೊಡುತ್ತಿದ್ದರು. ಅಣ್ಣನವರ ಸಹಾಯವಿರದಿದ್ದರೆ ನಾನು ಅಷ್ಟು ಕಡಮೆ ಸಮಯದಲ್ಲಿ ಜೈಲಿನಿಂದ ಹೊರಬರಲು ಸಾಧ್ಯವಾಗುತ್ತಿರಲಿಲ್ಲ. ನನ್ನ ಚಟುವಟಿಕೆಗಳಿಗೆ ಎಂದೂ ಅವರು ತಣ್ಣೀರೆರಚಲಿಲ್ಲ. ನನ್ನ ಅತ್ತಿಗೆ ಸದಾ ನನಗೆ ಸಹಾಯಕ ರಾಗಿದ್ದರು. ನಾನು ಪುಷ್ಕಳವಾಗಿ ತಿನ್ನುವವನು. ಹಗಲೋ ರಾತ್ರಿಯೋ ನಾನು ಹೋದಾಗಲೆಲ್ಲ ಆಕೆ ಸ್ವಲ್ಪವೂ ಬೇಸರಗೊಳ್ಳದೆ ನನಗೆ ಉಣಬಡಿಸುತ್ತಿದ್ದರು.

ನನಗೆ ಪೂರ್ಣ ಬಿಡುಗಡೆ ದೊರಕಿದ್ದರೂ ಪೊಲೀಸರು ನನ್ನ ಬೆನ್ನು ಹತ್ತಿದ್ದರು. ಈ ಸಾರಿ ರಾಜಕೀಯ ಬಂದಿಯಾಗಿ ಬಂಧಿಸಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಇಟ್ಟರು. ಇಲ್ಲಿ ಹಿರಿಯ, ನಿಃಸ್ವಾರ್ಥ ನಾಯಕರಾದ ಟಿ. ಸಿದ್ದಲಿಂಗಯ್ಯ, ಕೆ.ಟಿ. ಭಾಷ್ಯಂ, ಎಸ್. ನಿಜಲಿಂಗಪ್ಪ, ಕೆ. ಹನುಮಂತಯ್ಯ, ಸರ್ದಾರ್ ವೆಂಕಟರಾಮಯ್ಯ, ಕಡಿದಾಳ್ ಮಂಜಪ್ಪ, ಎಸ್.ಎನ್. ಬಿಳಿಗಿರಿ ಮತ್ತು ಇತರ ನೂರಾರು ಜನರ ಸಂಪರ್ಕ ನನಗೆ ಒದಗಿತು. ಈ ನಾಯಕರೊಂದಿಗೆ ಕಳೆದ ಕೆಲವು ತಿಂಗಳು ನನಗೆ ತುಂಬಾ ಲಾಭಕರವಾಗಿದ್ದುವು. ಅವರು ಹೋರಾಟದ ಅವಧಿಯಲ್ಲಿ ತರಗತಿಗಳಿಂದ ತಪ್ಪಿಸಿಕೊಂಡಿದ್ದ ನನ್ನಂಥ ಅನೇಕರಿಗೆ ತರಗತಿಗಳು, ಉಪನ್ಯಾಸಗಳು ಮತ್ತು ಸಂವಾದಗಳನ್ನು ಏರ್ಪಡಿಸುತ್ತಿದ್ದರು. ಬಹು ಸ್ಫೂರ್ತಿದಾಯಕರಾಗಿದ್ದ ಅವರು ನಮ್ಮ ವ್ಯಕ್ತಿತ್ವ-ಚಾರಿತ್ರ್ಯಗಳನ್ನು ಬೆಳೆಸಿಕೊಳ್ಳುವಲ್ಲಿ ತುಂಬಾ ಸ್ಫೂರ್ತಿ ತುಂಬಿದರು. ಅದರಲ್ಲೂ ವಿಶೇಷವಾಗಿ ಟಿ. ಸಿದ್ದಲಿಂಗಯ್ಯನವರು ನನ್ನ ಗುರುವಾದರು. ನನ್ನೆಲ್ಲ ಚಟುವಟಿಕೆಗಳಲ್ಲೂ, ಕಷ್ಟಕಾಲಗಳಲ್ಲೂ, ಅವರು ನನಗೆ ದಾರಿ ತೋರಿಸಿದರು. ಆ ಮಹಾಯುದ್ಧ ಸಮಯದಲ್ಲಿ ಭಾರತದ ಸ್ವಾತಂತ್ರ್ಯ ಆಂದೋಲನದ ಕೇಂದ್ರಬಿಂದುವಾಗಿತ್ತು ಕ್ವಿಟ್ ಇಂಡಿಯಾ ಚಳವಳಿ. ಯುದ್ಧ ಮುಗಿದ ಅನಂತರ ಬ್ರಿಟಿಷರು ಪಟ್ಟು ಬಿಡಲೇಬೇಕಾಯಿತು. ಕೊನೆಗೆ ಭಾರತದಿಂದ ನಿರ್ಗಮಿಸಲೇಬೇಕಾಯಿತು.

೩. ವಯಸ್ಕರ ಶಿಕ್ಷಣ ಮತ್ತೂರಿಗೆ ಬಂತು

೧೯೪೩ರ ಕೊನೆಗೆ ನಾನು ನಿರುದ್ಯೋಗಿಯಾಗಿದ್ದೆ. ಸೋಮಾರಿ ಯಾಗಿದ್ದೆ. ನನ್ನ ರಾಜಕೀಯ ಚಟುವಟಿಕೆಗಳು, ವಿಧ್ವಂಸಕ ಕೃತ್ಯಗಳು ಕೊನೆಗೊಂಡಿದ್ದವು. ಏಕೆಂದರೆ ಆ ವೇಳೆಗೆ ಚಳವಳಿ ತನ್ನ ಕಾವು ಕಳೆದುಕೊಂಡಿತ್ತು.

ಏನೋ ಕಾರಣದಿಂದ ಮೈಸೂರಿನಲ್ಲಿದ್ದಾಗ ನನಗೆ ಪ್ರೊಫೆಸರ್ ಕೃಷ್ಣಮೂರ್ತಿ ಎನ್ನುವವರ ಪರಿಚಯವಾಯಿತು. ಅವರು ಮೈಸೂರು

ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರು. ರಾಜ್ಯದಲ್ಲಿ ವಯಸ್ಕರ ಶಿಕ್ಷಣದ ಪ್ರಚಾರಕಾರ್ಯ ನಡೆಯುತ್ತಿದ್ದು, ಆ ಸಂಬಂಧವಾಗಿ ಕೆಲಸ ಮಾಡಲು ಅವರು ನನ್ನನ್ನು ಕರೆದರು. ಅವರೇ ಕೌನ್ಸಿಲಿನ ಸಕ್ರಿಯ ಸದಸ್ಯರಾಗಿದ್ದರು. ಸಮಾಜದ ತೀರಾ ಕೆಳಗಿನ ಹಂತದಲ್ಲಿ, ವಿಶೇಷವಾಗಿ ಹಳ್ಳಿಗರೊಂದಿಗೆ ಸಾಮೂಹಿಕ ಸಂಪರ್ಕಗಳನ್ನು ಬೆಳೆಸ ಬೇಕಾಗಿತ್ತು. ಮುಂದೆ ಅವರನ್ನು ಸ್ವಾತಂತ್ರ್ಯ ಹೋರಾಟಕ್ಕೆ ಸೇರಿಸಿಕೊಳ್ಳುವ ದೃಷ್ಟಿಯಿಟ್ಟುಕೊಂಡು ಕೆಲಸ ಮಾಡಬೇಕಾಗಿತ್ತು.

ಇಂಟರ್‌ಮೀಡಿಯೆಟ್ ಫೇಲಾದ ಒಬ್ಬ ವ್ಯಕ್ತಿಗೆ ಇದು ವರದಾನ ವಾಗಿತ್ತು. ಉತ್ಸಾಹದಿಂದ ನಾನು ಒಪ್ಪಿದೆ. ತಿಂಗಳಿಗೆ ೩೦ ರೂಪಾಯಿ ವೇತನದ ಮೇಲೆ ಮ್ಯಾನೇಜರ್ ಎಂಬ ಭಾರೀ ಹೆಸರನ್ನು ಕೊಟ್ಟು ನನ್ನನ್ನು ಶಿವಮೊಗ್ಗ ಜಿಲ್ಲೆಗೆ ನೇಮಿಸಿದರು. ಜಿಲ್ಲಾ ವ್ಯವಸ್ಥಾಪಕರನ್ನು ಭೇಟಿ ಮಾಡಿದೆ. ಅವರ ಹೆಸರು ನನಗೆ ಈಗ ನೆನಪಿಲ್ಲ. ಅವರೂ ಇದಕ್ಕೆ ಹೊಸಬರು. ತುಮಕೂರಿನಿಂದ ಬಂದವರು, ಪದವೀಧರ. ಅವರು ದುರ್ಗೀಗುಡಿ ಬಡಾವಣೆಯಲ್ಲಿ ಒಂದು ಚಿಕ್ಕ ಮನೆಯನ್ನು ಬಾಡಿಗೆಗೆ ಹಿಡಿದು ಹೆಂಡತಿಯೊಂದಿಗೆ ವಾಸವಾಗಿದ್ದರು. ಅದೇ ತಾನೆ ಮದುವೆಯಾಗಿದ್ದುದರಿಂದ ಹಳ್ಳಿಯಿಂದ ಹಳ್ಳಿಗೆ ನಡೆದು ಹೋಗಿ ತರಗತಿಗಳನ್ನು ನಡೆಸುವುದು ಅವರಿಗೆ ಅಷ್ಟಾಗಿ ಇಷ್ಟವಾಗುತ್ತಿರಲಿಲ್ಲ. ಅವರು ಪತ್ರವ್ಯವಹಾರ, ಸ್ಲೇಟು ಪುಸ್ತಕಗಳ ಸರಬರಾಜು ಇತ್ಯಾದಿ ಗಳನ್ನು ನೋಡಿಕೊಂಡರೆ ನಾನು ಓಡಾಟದ ಕೆಲಸ ಮಾಡುವುದಾಗಿ ಒಪ್ಪಿಕೊಂಡೆ.

ನಡೆಯುತ್ತಾ ಪ್ರವಾಸ ಮಾಡುವುದು ಬಹಳ ಕಷ್ಟದ ಕೆಲಸವಾಗಿದ್ದರೂ ತಿಂಗಳಿಗೆ ೩೦ ರೂಪಾಯಿ ಸಂಪಾದಿಸಲು ಬೇರೆ ದಾರಿಯಿರಲಿಲ್ಲ. ಮಣಿಯನ್ ಇರದಿದ್ದರೆ ಎಷ್ಟು ಕಾಲ ಅದಕ್ಕೆ ಅಂಟಿಕೊಂಡಿರುತ್ತಿದ್ದೆನೋ ನಾನರಿಯೆ. ಮಣಿಯನ್ ಹಿಂದೂ ಪತ್ರಿಕೆಯ ವರದಿಗಾರರು. ನನ್ನ ಕಷ್ಟವನ್ನು ನೋಡಿ ಅವರು ಸ್ಥಳೀಯ ಬಸ್ ಕಂಪನಿಯಲ್ಲಿ ಮಾತನಾಡಿ ನನಗೆ ಬಸ್‌ಪಾಸು ಕೊಡಿಸಿದರು. ಆ ಕಂಪನಿಯ ಬಸ್ಸುಗಳು ಶಿವಮೊಗ್ಗ ಜಿಲ್ಲೆಯ ಎಲ್ಲಾ ಕಡೆಯೂ ಸಂಚರಿಸುತ್ತಿದ್ದವು. ನನಗೆ ಇದು ವರವೇ ಆಯಿತು. ಒಂದಾದ ಮೇಲೊಂದರಂತೆ ತೀರ್ಥಹಳ್ಳಿ, ಚನ್ನಗಿರಿ, ಶಿಕಾರಿಪುರ, ಸೊರಬ, ಸಾಗರಗಳಲ್ಲಿ ನನ್ನ ಕೆಲಸವನ್ನು ನಿರ್ವಹಿಸಿದೆ. ಅನೇಕ ಸ್ಥಳಗಳಲ್ಲಿ ನಾವು ರಾತ್ರಿ ಶಾಲೆಗಳನ್ನು ಪ್ರಾರಂಭಿಸಿದೆವು.

ಇಂತಹ ಒಂದು ಸಂಚಾರದಲ್ಲಿ ನಾನು ಮತ್ತೂರಿಗೆ ಹೋಗಿದ್ದೆ. ಮತ್ತೂರು ಮತ್ತು ಅದರ ಅವಳಿ ಗ್ರಾಮ ಹೊಸಹಳ್ಳಿ ಹೆಚ್ಚು ಕಡಮೆ ಎದುರುಬದುರಾಗಿವೆ. ನಡುವೆ ತುಂಗಾನದಿ ಹರಿಯುತ್ತದೆ. ಈ ಸ್ಥಳದಲ್ಲಿ ತುಂಗೆಯ ಪಾತ್ರ ತುಂಬ ವಿಶಾಲವಾದದ್ದು. ಎತ್ತರದ ದಡಗಳ ಮೇಲೆ ಹಸುರು ಪೊದೆಗಳೂ ಮರಗಳೂ ತುಂಬಿವೆ. ಕಡಿದಾದ ಮೆಟ್ಟಿಲುಗಳನ್ನೇರಿ ಹೋದರೆ ಹಳ್ಳಿಗೆ ಹೋಗಬಹುದು. ಇಂದು ಮತ್ತೂರು ಹೆಮ್ಮೆಯ ಸಂಪದ್ಭರಿತವಾದ ಹಳ್ಳಿ. ಅಲ್ಲಿಯ ಗದ್ದೆಗಳಲ್ಲಿ, ತೋಟಗಳಲ್ಲಿ ಅಡಕೆ, ತೆಂಗು, ಕಬ್ಬು, ಮಾವು ಮತ್ತು ಭತ್ತ ಸಮೃದ್ಧಿಯಾಗಿ ಬೆಳೆಯುತ್ತವೆ. ಜನರು ವಿವಿಧ ತರಕಾರಿಗಳನ್ನು ಬೆಳೆಯುತ್ತಾರೆ. ಕೆಲವು ವರ್ಷಗಳಿಂದೀಚೆಗೆ ಮತ್ತೂರಿನಲ್ಲಿ ಕೂಡ ರಾಜಕೀಯ ಜಾಗೃತಿ ಉಂಟಾಗಿದೆ. ಇಂದು ಅದು ಭಾರತೀಯ ಜನತಾ ಪಕ್ಷದ ಭದ್ರಕೋಟೆ. ಅಲ್ಲಿಯ ಅನೇಕ ತರುಣರು ಬಾಬ್ರಿ ಮಸೀದಿಯ ಘಟನೆಯ ಸಂದರ್ಭದಲ್ಲಿ ಅಯೋಧ್ಯೆಗೆ ಕೂಡ ಹೋಗಿದ್ದರು. ಅಲ್ಲಿಯ ಜನರು ಸಂಸ್ಕೃತದಲ್ಲೇ ಮಾತನಾಡುತ್ತಾರೆ.

೧೯೪೩-೪೪ರಲ್ಲಿ ಈ ಹಳ್ಳಿಗಳು 'ಬಡ' ಅಲ್ಲದಿದ್ದರೂ ಹಿಂದುಳಿದ ಗ್ರಾಮಗಳಾಗಿದ್ದವು. ಅದೇ ತಾನೇ ವಿದ್ಯುತ್ ಬಂದಿದ್ದಿತು. ಆದರೆ ಕುಡಿಯುವ ನೀರನ್ನು ನದಿಯಿಂದ ತರಬೇಕಾಗಿತ್ತು. ಒಂದು ಪಂಪ್ ವ್ಯವಸ್ಥೆಯಿಂದ ಗದ್ದೆಗಳಿಗೂ ಮನೆಗಳ ಬಳಿಗೂ ನೀರನ್ನು ಹಾಯಿಸಿ ತರುವ ಮಾತುಕತೆಗಳು ಆಗ ಕೇಳಿ ಬರುತ್ತಿದ್ದವು. ಈ ಎರಡೂ ಹಳ್ಳಿಗಳೂ ಆಗ, – ಈಗಲೂ ಕೂಡ – ಮುಖ್ಯವಾಗಿ ಸಂಕೇತಿ ಗ್ರಾಮಗಳು. ಇತರ ಸಂಕೇತಿ ಹಳ್ಳಿಗಳಂತೆ ಇವೂ ಆಚಾರವಂತ ಸ್ಥಳಗಳಾಗಿದ್ದವು. ಹಳ್ಳಿಯ ಪ್ರತಿಯೊಬ್ಬ ಗಂಡಸೂ ವೇದ–ಶಾಸ್ತ್ರಗಳಲ್ಲಿ ಪರಿಣಿತನಾಗಿದ್ದನು. ಆದರೆ ಅರ್ಧಕ್ಕಿಂತಲೂ ಹೆಚ್ಚು ಜನ ಹೆಂಗಸರು ನಿರಕ್ಷರಸ್ಥರು. ಅವರು ಕನ್ನಡವನ್ನೂ ನಮ್ಮ ಸಂಕೇತಿ ಉಪಭಾಷೆ ಯನ್ನೂ ಮಾತನಾಡುತ್ತಿದ್ದರು. ಸುಮಾರು ೧೦ ಅಥವಾ ೧೧ ನೆಯ ವಯಸ್ಸಿಗೆ ಜನರು ಮದುವೆ ಮಾಡಿಕೊಳ್ಳುತ್ತಿದ್ದರು.

ಮತ್ತೂರಿಗೆ ಹೋದಾಗ ನಾನು ಮಾಡಿದ ಮೊದಲನೆಯ ಕೆಲಸ ಅಲ್ಲಿಯ ಮುಖ್ಯಸ್ಥರನ್ನು ನೋಡಿ ನಾನು ಬಂದ ಉದ್ದೇಶವನ್ನು ವಿವರಿಸಿದುದು. ಅವರಲ್ಲಿ ಒಬ್ಬರು ಎರಡು ಮೂರು ದಿನ ನನ್ನನ್ನು ತಮ್ಮೊಂದಿಗೆ ಇಟ್ಟುಕೊಂಡು ಉಪಚರಿಸಿದರು. ಒಂದು ದಿನ ಅವರ ಮಗ ದೊರೆ ಎಂಬಾತ ತೋಟಕ್ಕೆ ತನ್ನೊಂದಿಗೆ ಬರಬೇಕೆಂದೂ ಎಳನೀರು ಕುಡಿಯಬೇಕೆಂದೂ ಆಹ್ವಾನಿಸಿದನು. ಆಗತಾನೇ ಹೊಳೆಯಲ್ಲಿ ಈಜಿಕೊಂಡು ಬಂದು ಹಸಿದಿದ್ದ ನಾನು ಸಂತೋಷವಾಗಿ ಒಪ್ಪಿಕೊಂಡೆ. ತೋಟವು ತುಂಬಾ ದೂರವೇನಿರಲಿಲ್ಲ.

ಕೆಲವು ನಿಮಿಷ ನಡೆದಿರಬಹುದು. ಅಷ್ಟರಲ್ಲಿ ೧೨ ಅಥವಾ ೧೩ ವಯಸ್ಸಿನ ಚುರುಕಾದ ಹುಡುಗಿಯೊಬ್ಬಳು ಮರ ಹತ್ತುತ್ತಿದ್ದುದನ್ನು ನೋಡಿದೆ. ಮರ ಹತ್ತಿದ ಅವಳು ಕೆಲವು ಹೂವುಗಳನ್ನು ಬಿಡಿಸಿಕೊಂಡಳು. ಆಕೆಯ ಚುರುಕುತನ ನೋಡಿ ನನಗೆ ಆಶ್ಚರ್ಯ ವಾಯಿತು. ದೊರೆ ಅವಳ ಕುಟುಂಬದ ಹಿನ್ನೆಲೆಯ ಬಗೆಗೆ ಹೇಳಿದ. ಆ ಹುಡುಗಿಯ ತಂದೆ ಒಬ್ಬ ಶ್ರೇಷ್ಠ ವೇದ ವಿದ್ವಾಂಸರು. ಹಳ್ಳಿಯ ಅನೇಕರಿಗೆ ಅವರು ಗುರುವಾಗಿದ್ದರು. ಅನಿರೀಕ್ಷಿತವಾಗಿ ಹೆಂಡತಿ ಮತ್ತು ಮೂವರು ಮಕ್ಕಳನ್ನು-ಇಬ್ಬರು ಪುತ್ರಿಯರು ಮತ್ತು ಒಬ್ಬ ಪುತ್ರ- ಬಿಟ್ಟು ತೀರಿಕೊಂಡರು. ಹಿರಿಯ ಮಗಳಿಗೆ ಮದುವೆಯಾಗಿತ್ತು. ಅವಳು

ಶಿವಮೊಗ್ಗದಲ್ಲೇ ವಾಸವಾಗಿದ್ದಳು. ಆಕೆಯ ಪತಿ ಒಂದು ದಿನಸಿ ಅಂಗಡಿ ನಡೆಸುತ್ತಿದ್ದು ಕುಟುಂಬಕ್ಕೆ ತುಂಬಾ ಸಹಾಯ ಮಾಡುತ್ತಿದ್ದನು. ಎರಡನೆಯ ಹುಡುಗಿಗೆ ಮದುವೆ ಆಗಬೇಕಾಗಿತ್ತು. ಆದರೆ ಕುಟುಂಬದ ಕಷ್ಟದ ಸ್ಥಿತಿಯಿಂದಾಗಿ ಯಾರೂ ಮುಂದೆ ಬಂದಿರಲಿಲ್ಲ. ಬೇರೆ ದಾರಿ ಕಾಣದೆ ವಿಧುರನೊಬ್ಬನಿಗೆ ಮದುವೆ ಮಾಡಿಕೊಡಲು ಕೂಡ ಪ್ರಯತ್ನಿಸಿದ್ದರು. ಅವನು ಆಗಲೇ ಇಬ್ಬರು ಪತ್ನಿಯರನ್ನು ಕಳೆದುಕೊಂಡಾಗಿತ್ತು ; ಆದರೆ ಇವಳನ್ನು ಮದುವೆಯಾಗಲು ಭಾರೀ ವರದಕ್ಷಿಣೆಯನ್ನು ಕೇಳಿದನು.

ಈ ಕತೆ ಕೇಳಿ ನನಗೆ ಮನಸ್ಸು ಕರಗಿತು. ಈ ಹುಡುಗಿಯೇ ನನಗೆ ಉತ್ತಮ ಪತ್ನಿಯಾಗುತ್ತಾಳೆ ಎಂದು ನಾನು ಅಲ್ಲೇ ನಿರ್ಧರಿಸಿದೆ. ದೊರೆಗೆ ಇದನ್ನು ತಿಳಿಸಿ, ನನಗೆ ವರದಕ್ಷಿಣೆ ಆವಶ್ಯಕತೆ ಇಲ್ಲ ಎಂದೂ ಹೇಳಿದೆ.

"ನೀನು ಆ ಕುಟುಂಬಕ್ಕೆ ದೊಡ್ಡ ಸೇವೆ ಮಾಡಿದ ಹಾಗಾಗುತ್ತದೆ" ಎಂದು ದೊರೆ ಹೇಳಿದ.

ಆ ವೇಳೆಗೆ ನಾವು ತೋಟವನ್ನು ತಲುಪಿದ್ದೆವು. ಎತ್ತರವಾದ ತೆಂಗು ಮತ್ತು ಅಡಕೆಯ ಮರಗಳು ತುಂಬಿದ್ದವು. ಒಬ್ಬ ಆಳನ್ನು ದೊರೆ ಕರೆದು ಎಳನೀರು ಕೀಳಲು ಹೇಳಿದ. ಅವನು ಕಾಲಿಗೆ ಹಗ್ಗದ ಕುಣಿಕೆ ಹಾಕಿಕೊಂಡು ಮರಹತ್ತಿ ಒಳ್ಳೆಯ ಹದವಾದ ಎಳನೀರುಗಳನ್ನು ಕಿತ್ತನು. ನೀರು ಮತ್ತು ತಿರುಳು ತುಂಬಾ ರುಚಿಯಾಗಿದ್ದವು. ನಾನು ಎಷ್ಟು ಎಳನೀರುಗಳನ್ನು ಕುಡಿದೆನೋ ತಿಳಿಯದು. ತೃಪ್ತನಾಗಿ ದೊರೆಯೊಂದಿಗೆ ಮನೆಗೆ ಹಿಂದಿರುಗಿದೆ.

ಅಂದು ಸಂಜೆ ಗೋಪಾಲಮಾಮ, ನನ್ನ ಬಂಧು ಹಾಗೂ ಆ ಸಲದ ಪ್ರವಾಸದಲ್ಲಿ ಪರಿಚಯವಾದ ಒಬ್ಬರು ಮಿತ್ರರೊಂದಿಗೆ ಮಾತನಾಡುತ್ತಾ ಕುಳಿತಿದ್ದೆ. ಸ್ವಲ್ಪ ಸುತ್ತಾಡಿ ಆಮೇಲೆ ದೇವಾಲಯದ ಅಂಗಳದಲ್ಲಿ ಕುಳಿತುಕೊಂಡಿದ್ದೆವು . ಕತ್ತಲಾಗುತ್ತಿತ್ತು. ನಮ್ಮ ಬೆನ್ನ ಹಿಂದೆ ನದಿ ಹರಿಯುವ ಸದ್ದು ಕೇಳಿಸುತ್ತಿತ್ತು. ಸಂಧ್ಯಾವಂದನೆ ಮಾಡುತ್ತ ನಡುನಡುವೆ ಮಾತನಾಡುತ್ತಿದ್ದ ಬ್ರಹ್ಮಚಾರಿಗಳ ಧ್ವನಿ ಆಗೀಗ ಕಿವಿಗೆ ಕೇಳುತ್ತಿದ್ದಿತು.

ದೇವಾಲಯದ ಎದುರಿಗೆ ಹಳ್ಳಿಯ ಮುಖ್ಯರಸ್ತೆ. ಅದರ ಎರಡೂ ಪಕ್ಕಗಳಲ್ಲಿ ಸಾಲು ಸಾಲಾಗಿ ಮನೆಗಳು, ಒಂದೊಂದರ ಮುಂದೂ ಚಿಕ್ಕ ವರಾಂಡಾ ಇತ್ತು. ಪ್ರತಿಯೊಂದು ಮನೆಯ ವರಾಂಡಾ ಅದರ ಎರಡೂ ಬದಿಯ ಮನೆಗಳವರೆಗೆ ಹರಡಿಕೊಂಡಿದ್ದು ಒಂದೇ ಉದ್ದವಾದ ನಡವೆಯಂತಾಗುತ್ತಿತ್ತು. ಅದರ ಒಂದು ಪಕ್ಕ ರಸ್ತೆ, ಇನ್ನೊಂದು ಪಕ್ಕ ಮನೆಗಳ ತಲೆಬಾಗಿಲುಗಳು. ರಸ್ತೆಯ ಈ ತುದಿಯ ಮನೆಯ ವರಾಂಡದಿಂದ ಆ ತುದಿಯವರೆಗೆ, ರಸ್ತೆಗೆ ಕಾಲಿಡದೆಯೇ ನಡೆದು ಹೋಗಬಹುದಾಗಿತ್ತು.

ಬಲಗಡೆ ಮೂರನೆಯ ಬಾಗಿಲಿನಿಂದ ಒಬ್ಬ ಹುಡುಗಿ ಹೊರಕ್ಕೆ ಬಂದಳು. ಅವಳೇ ನಾನು ಅಂದು ಮಧ್ಯಾಹ್ನ ನೋಡಿದವಳು. ನಾನು ಅವಳ ಬಗೆಗೆ ಆಸಕ್ತಿ ತೋರಿಸಿದ ವಿಷಯ ಗೋಪಾಲಮಾಮ ಅವರಿಗೆ ತಿಳಿದಿರಬೇಕು. ಅವಳ ವಿಷಯವಾಗಿ ಮಾತನಾಡ ತೊಡಗಿದರು. ದೊರೆ ಹೇಳಿದ್ದನ್ನೇ ಅವರೂ ಹೇಳಿದರು. ಅವಳನ್ನು ಮದುವೆ ಮಾಡಿಕೊಳ್ಳುವ ವಿಚಾರ ಗಂಭೀರವಾಗಿ ಪರಿಶೀಲಿಸುತ್ತಿದ್ದೀಯಾ ಎಂದು ಕೇಳಿದರು.

"ಅವಳನ್ನು ಹತ್ತಿರದಿಂದ ನೋಡಬೇಕೆನಿಸುತ್ತಿರ ಬಹುದಲ್ಲವೇ?" ಎಂದು ಕೇಳಿ ಆ ಹುಡುಗಿಯನ್ನು ಕರೆದರು,

"ಸಾವಿತ್ರಿ, ಕುಡಿಯಲು ಸ್ವಲ್ಪ ನೀರು ತರುತ್ತೀಯಾ?"

ಆ ಹುಡುಗಿ ಒಂದು ಹಿತ್ತಾಳೆಯ ಚೆಂಬಿನ ತುಂಬಾ ನೀರು, ಹಿತ್ತಾಳೆ ಲೋಟಗಳನ್ನು ತಂದಳು. ನನಗೆ ಕೊಡುವಾಗ ಸುಮ್ಮನೆ ನನ್ನ ಮುಖವನ್ನು ನೋಡಿದಳು. ನಾನೇನೋ ಅವಳನ್ನು ಚೆನ್ನಾಗಿ ನೋಡಿದೆ. ತುಂಬ ಸುಂದರಳಾದ ಹುಡುಗಿ ಎಂದು ನನಗೆನ್ನಿಸಿತು 'ಇನ್ನೂ ಪ್ರೌಢೆಯಾಗಬೇಕು' ಎಂದುಕೊಂಡೆ.

ತುಂಟತನ ಅನ್ನುವ ಹಾಗೆ ಗೋಪಾಲಮಾಮ "ಏನು ಸಾವಿತ್ರಿ, ಇವನನ್ನು ಮದುವೆ ಮಾಡಿಕೊಳ್ಳುವೆಯಾ?" ಎಂದು ಕೇಳಿದರು. ಅವಳು ಮುಗುಳುನಗೆ ಸೂಸಿದಳು. ಏನೂ ಉತ್ತರ ಕೊಡಲಿಲ್ಲ. ನಾನು ನೀರು ಕುಡಿದ ಮೇಲೆ ಹೊರಟುಹೋದಳು. ಗೋಪಾಲ ಮಾಮ ಅವಳ ಕುಟುಂಬ ಕುರಿತು ಇನ್ನಷ್ಟು ವಿವರವಾಗಿ ಹೇಳಿದರು.

ಮಾರನೆಯ ದಿನ ನಾನು ಶಿವಮೊಗ್ಗಕ್ಕೆ ಹಿಂದಿರುಗಿದೆ. ಅಲ್ಲಿ ನನ್ನ ಕೊಠಡಿಯಿದ್ದುದು ದೊಡ್ಡಪೇಟೆಯಲ್ಲಿ. ಅದು ಖಾದಿ ಭಂಡಾರದ ಮಹಡಿ. ಅದನ್ನು ನಡೆಸುತ್ತಿದ್ದವರು ನಾಗಪ್ಪಶೆಟ್ಟಿ ಎಂಬ ನಿಃಸ್ವಾರ್ಥ, ನಿಷ್ಠಾವಂತ, ಗಾಂಧಿ ಅನುಯಾಯಿ. ನಾನು ವಯಸ್ಕರ ಶಿಕ್ಷಣ ಕಾರ್ಯದಲ್ಲಿ ತೊಡಗಿದ್ದೇನೆ ಎಂದು ತಿಳಿದು ನನ್ನಿಂದ ಕೊಠಡಿಗೆ ಬಾಡಿಗೆ ತೆಗೆದುಕೊಳ್ಳಲು ನಿರಾಕರಿಸಿದರು. ಆಗಿನ ಅತಿಕಷ್ಟದ ದಿನಗಳಲ್ಲಿ ಇದಕ್ಕಾಗಿ ಅವರಿಗೆ ನಾನು ಕೃತಜ್ಞತೆ ಅರ್ಪಿಸಿದೆ.

ಒಂದು ದಿನ ಮಧ್ಯಾಹ್ನ ಊಟ ಮಾಡಿ ಹಾಗೇ ಚಾಪೆಯ ಮೇಲೆ ಮಲಗಿಕೊಂಡಿದ್ದೆ. ಬಾಗಿಲು ತಟ್ಟಿದ ಸದ್ದಾಯಿತು. ಸುಮಾರಾಗಿ ಕುಳ್ಳಗಿದ್ದ ಒಬ್ಬ ವ್ಯಕ್ತಿ ಒಳಕ್ಕೆ ಬಂದರು. ತೀಕ್ಷ್ಣವಾದ ಕಣ್ಣುಗಳು, ಬುದ್ಧಿವಂತನೆಂದು ಸೂಚಿಸುವ ಮುಖ. ಶುಭ್ರವಾದ ಬಿಳಿಯ ಧೋತಿ ಮತ್ತು ಒಂದು ಷರ್ಟು ಧರಿಸಿದ್ದರು. ನನ್ನನ್ನು ವೇಣುಗೋಪಾಲ್ ಹೌದೆ ಎಂದು ಕೇಳಿ, ತಮ್ಮನ್ನು ಗಂಗಾಧರಶಾಸ್ತ್ರಿ ಎಂದು ಪರಿಚಯ ಮಾಡಿಕೊಂಡರು. ಚಾಪೆಯ ಮೇಲೆ ಕೂರಿಸಿದೆ. ನನ್ನಿಂದ ಏನಾಗ ಬೇಕಾಗಿದೆ ಎಂದು ಕೇಳಿದೆ.

"ಒಂದು ಬಹುಮುಖ್ಯವಾದ ವಿಚಾರವಾಗಿ ಮಾತನಾಡ ಬೇಕಾಗಿದೆ. ನೀವು ಮತ್ತೂರಿಗೆ ಹೋಗಿದ್ದಾಗ ದೊರೆಯೊಂದಿಗೆ ತಂಗಿದ್ದಿರಷ್ಟೆ. ಅವನು ಹೇಳಿದ, ನಿಮಗೆ ನನ್ನ ನಾದಿನಿ ಸಾವಿತ್ರಿಯನ್ನು ಮದುವೆಯಾಗುವ ಅಪೇಕ್ಷೆ ಇದೆ ಅಂತ. ಅವಳು ಬಡ ಹುಡುಗಿ ನಿಜ, ಮೂರನೆಯ ತರಗತಿಯವರೆಗೆ ಮಾತ್ರ ಓದಿದ್ದಾಳೆ. ಆದರೆ ಬಹಳ

ಬುದ್ಧಿವಂತೆ, ಜಾಣೆ, ಗೃಹಕೃತ್ಯದ ಎಲ್ಲಾ ಕೆಲಸಗಳಲ್ಲಿ ಕುಶಲೆ. ಅವಳನ್ನು ಮದುವೆಯಾಗುವ ವಿಷಯವನ್ನು ನೀವು ಗಂಭೀರವಾಗಿ ಪರಿಶೀಲಿಸಿದರೆ ನಾವೆಲ್ಲ ನಿಮಗೆ ಋಣಿಗಳಾಗಿರುತ್ತೇವೆ. ಅವಳಿಗೂ ವಯಸ್ಸು ಮೀರುತ್ತಿದೆ. ಮೈನೆರೆಯುವುದಕ್ಕಿಂತ ಮೊದಲೇ ಮದುವೆ ಆಗಬೇಕು, ನಿಮಗೆ ಗೊತ್ತಲ್ಲ. ಈಗ ಸಾವಿತ್ರಿಗೆ ೧೨ ವರ್ಷ. ನಿಮಗೆ ವರದಕ್ಷಿಣೆಯ ಅಪೇಕ್ಷೆ ಇದ್ದರೆ ದಯವಿಟ್ಟು ಹೇಳಿ. ನಮ್ಮಿಂದ ಏನಾಗಬಹುದೋ ನೋಡುತ್ತೇವೆ" ಎಂದರು ಅವರು.

ಕೆಲಕ್ಷಣ ನಿಃಶಬ್ದವಾಗಿತ್ತು. ನನ್ನ ಪರಿಸ್ಥಿತಿಯೆಲ್ಲವನ್ನೂ ಅವರಿಗೆ ವಿವರಿಸಿದೆ. "ನಮ್ಮಲ್ಲಿ ವರದಕ್ಷಿಣೆ ತೆಗೆದುಕೊಳ್ಳುವ ಪದ್ಧತಿ ಇಲ್ಲ. ಅಥವಾ ಹುಡುಗಿಗೆ ವಯಸ್ಸು ಮೀರುತ್ತಿದೆ ಎಂದೂ ನೀವು ಕಳವಳಪಡಬೇಕಾಗಿಲ್ಲ. ನನಗೆ ಈಗ ಇಪ್ಪತ್ತೆರಡು ವರ್ಷ. ನಾನು ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ ಪೂರ್ತಿ ಉತ್ತೀರ್ಣನಾಗಿಲ್ಲ. ನಮ್ಮದು ತುಂಬಾ ಬಡ ಕುಟುಂಬ. ಹೇಳಿಕೊಳ್ಳುವಂತಹ ಜಮೀನು ಕೂಡ ನಮಗಿಲ್ಲ. ಅಷ್ಟು ಮಾತ್ರವಲ್ಲ, ಕ್ವಿಟ್ ಇಂಡಿಯಾ ಚಳವಳಿಯಲ್ಲಿ ನನ್ನನ್ನು ಜೈಲಿಗೆ ಹಾಕಿದ್ದರು. ಈಗ ವಯಸ್ಕರ ಶಿಕ್ಷಣ ಸಮಿತಿಗಾಗಿ ಕೆಲಸ ಮಾಡುತ್ತಿದ್ದೇನೆ. ಈಗ ನನಗೆ ತಿಂಗಳಿಗೆ ೩೦ ರೂಪಾಯಿ ಕೊಡುತ್ತಿದ್ದಾರೆ.

"ಇದು ನನ್ನ ಪರಿಸ್ಥಿತಿ. ನಿಮಗೆ ಮತ್ತು ನಿಮ್ಮ ಕಡೆಯವರೆಲ್ಲರಿಗೂ ನನ್ನ ಈ ಹಿನ್ನೆಲೆ ಒಪ್ಪಿಗೆ ಆಗಬಹುದೆಂದಾದರೆ ನೀವು ಹಾಸನದಲ್ಲಿ ನನ್ನ ತಂದೆತಾಯಿಯರನ್ನು ಹೋಗಿ ಭೇಟಿ ಮಾಡಬಹುದು. ಹುಡುಗಿಯನ್ನು ಒಪ್ಪಿಕೊಳ್ಳುವ ಪ್ರಶ್ನೆ ಬಂದಾಗ ನಾನು ನಿಮ್ಮ ಪರವಾಗಿ ನಿಲ್ಲುತ್ತೇನೆ. ನಿಮಗೂ ದೊರೆಗೂ ಕೊಟ್ಟ ಮಾತಿನಂತೆ ನಡೆದು ಕೊಳ್ಳುತ್ತೇನೆ."

ನಮ್ಮ ನಮ್ಮ ಕುಟುಂಬಗಳ ಬಗೆಗೆ ಇನ್ನಷ್ಟು ಮಾಹಿತಿಗಳನ್ನು ವಿನಿಮಯ ಮಾಡಿಕೊಂಡು ಪರಸ್ಪರ ಒಳ್ಳೆಯ ಭಾವನೆ ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿದೆವು. ಆಮೇಲೆ ಅವರು ನನ್ನನ್ನು ಬೀಳ್ಕೊಂಡು ಹೊರಟು ಹೋದರು.

ಹತ್ತು–ಹನ್ನೆರಡು ದಿನಗಳ ಅನಂತರ ಗಂಗಾಧರಶಾಸ್ತ್ರಿ ಹಾಸನಕ್ಕೆ ಹೋಗಿ ನನ್ನ ತಂದೆತಾಯಿಯರೊಂದಿಗೆ ಮಾತನಾಡಿದರು. ಕೇವಲ ವರದಕ್ಷಿಣೆಗಾಗಿ ಬಾಯಿ ಬಿಡುವ ಹುಡುಗನಿಗಿಂತಲೂ, ಬಡವನಾದ ಆದರೆ ಆತ್ಮಗೌರವವುಳ್ಳ ಕುಟುಂಬದ ದೃಢಕಾಯನಾದ ಹುಡುಗನಿಗೆ ತಮ್ಮ ಹುಡುಗಿಯನ್ನು ಮದುವೆ ಮಾಡಿಕೊಡುವುದು ಮೇಲೆಂದು ತಾವು ಯೋಚಿಸಿರುವುದಾಗಿ ಹೇಳಿದರು. ಒಂದು ದಿನ ನನ್ನ ತಂದೆ ತಾಯಿಯೋ, ನನ್ನ ಅಣ್ಣನೋ ನನಗೆ ಸರಿಯಾಗಿ ನೆನಪಿಲ್ಲ , ಮತ್ತೂರಿಗೆ ಹೋಗಿ ಕನ್ಯೆಯನ್ನು ನೋಡಿ ತಮ್ಮ ಒಪ್ಪಿಗೆ ಸೂಚಿಸಿದರು.

ಮದುವೆಯು ೧೯೪೫ರ ಮಾರ್ಚಿ ೧ನೆಯ ತಾರೀಖು ನಡೆಯುವುದೆಂದು ನಿರ್ಧಾರವಾಯಿತು.

ಅದಿನ್ನೂ ಜನವರಿ. ಮದುವೆಗೆ ಇನ್ನೂ ಎರಡು ತಿಂಗಳಿದ್ದವು. ಈ ಅವಧಿಯಲ್ಲಿ ವಯಸ್ಕರಿಗೆ ರಾತ್ರಿ ತರಗತಿಗಳನ್ನು ನಡೆಸುವ ಸಲುವಾಗಿ ನಾನು ಆಗಾಗ ಮತ್ತೂರಿಗೆ ಹೋಗುತ್ತಿದ್ದೆ. ಅಲ್ಲೊಂದು ಕರ್ನಾಟಕ ಸಂಘದ ಶಾಖೆಯೂ ಇತ್ತು. ಕುಮಾರವ್ಯಾಸ ಭಾರತ ವಾಚನ, ಲಕ್ಷ್ಮೀಶ ಮೊದಲಾದವರ ಕೃತಿಗಳ ರಂಗ ಪ್ರದರ್ಶನ ಮೊದಲಾದ ಚಟುವಟಿಕೆಗಳು ಅಲ್ಲಿ ನಡೆಯುತ್ತಿದ್ದವು. ಪ್ರವಚನಗಳು, ವ್ಯಾಖ್ಯಾನಗಳು, ವಿದ್ವಾಂಸರು ಮತ್ತು ಬರಹಗಾರರಿಂದ ಚರ್ಚೆಗಳು ನಡೆಯುತ್ತಿದ್ದವು. ಇಂತಹ ಕೆಲವು ಸಂದರ್ಭಗಳಲ್ಲಿ ನನಗೂ ಆಹ್ವಾನ ಬರುತ್ತಿತ್ತು. ಅದನ್ನು ಉಪಯೋಗಿಸಿಕೊಂಡು ನಾನು ವಯಸ್ಕರ ಶಿಕ್ಷಣದ ವಿಷಯವಾಗಿ ಮಾತನಾಡುತ್ತಿದ್ದೆ.

ಉತ್ತಮ ವಾಗ್ಮಿಯಲ್ಲದ ನಾನು ಕಥೆ, ದೃಷ್ಟಾಂತಗಳನ್ನು ಹೇಳಿ ನನ್ನ ವಿಚಾರವನ್ನು ಜನರಿಗೆ ಮನವರಿಕೆ ಮಾಡಲು ಪ್ರಯತ್ನಿಸುತ್ತಿದ್ದೆ.

"ಇಷ್ಟೆಲ್ಲಾ ಪೂಜೆ ಜಪ ವ್ರತಗಳನ್ನು ಮಾಡಿದ ಮೇಲೆ ನಿಮಗೆ ದೇವರು ಒಂದಷ್ಟು ಸುಖವನ್ನು ಕೊಡುತ್ತಾನೆ ಎಂದಿಟ್ಟುಕೊಳ್ಳೋಣ. ನೀವು ಸ್ವರ್ಗದವರೆಗೆ ಹೋಗುವಿರಿ. ಅಲ್ಲಿ ಬಾಗಿಲಲ್ಲಿ ಕಾಯುವವ ನಿದ್ದಾನೆ. ನಿಮ್ಮ ದಾಖಲೆಗಳನ್ನು ಅವನು ಪರೀಕ್ಷಿಸುತ್ತಾನೆ. ಪಾಪಪುಣ್ಯಗಳ ಲೆಕ್ಕ ಮಾಡಿ ಒಳಕ್ಕೆ ಪ್ರವೇಶಿಸಲು ನೀವು ಅರ್ಹರಾಗಿರುವಿರೋ ಇಲ್ಲವೋ ಎಂದು ನಿರ್ಧರಿಸುತ್ತಾನೆ. ಈ ಸುಂದರ ಕ್ಷಣದಲ್ಲಿ ಬಾಗಿಲಿನಿಂದ ಒಳಗೆ ಸುಂದರಿಯರಾದ ಅಪ್ಸರೆಯನ್ನೂ ಸ್ವರ್ಗಸುಖವನ್ನೂ ಕಾಣುತ್ತಿರುವಾಗ, ದ್ವಾರಪಾಲಕನು ನಿಮ್ಮ ಅಧಿಕೃತ ದಾಖಲೆಗೆ ಸಹಿಮಾಡಲೂ, ಪ್ರಮಾಣಿಸಲೂ ಹೇಳುತ್ತಾನೆ. ನಿಮ್ಮ ಹೆಸರನ್ನು ಸಹಿ ಮಾಡಲು ಬರದಿದ್ದರೆ ನಿಮಗೆ ಏನನ್ನಿಸುತ್ತದೆ?

"ಆಗ ದ್ವಾರಪಾಲಕನು ಏನು ಮಾಡುತ್ತಾನೆ ಗೊತ್ತೆ? ಹೋಗಿ ಓದಲು ಮತ್ತು ಬರೆಯಲು ಕಲಿತುಕೊಂಡು ಬಾ ಎಂದು ಹೇಳಿ ಕಳಿಸಿಬಿಡುತ್ತಾನೆ. ನೇರವಾಗಿ ಭೂಮಿಯ ಮೇಲೆ ಯಾವುದೋ ಮಹಿಳೆಯ ಗರ್ಭದೊಳಕ್ಕೆ ನಿಮ್ಮನ್ನು ಎಸೆಯಲಾಗುತ್ತದೆ. ಮತ್ತೆ ಹುಟ್ಟಿ ಎಲ್ಲಾ ಕಷ್ಟ ಸುಖ, ನೋವು ದುಡಿತಗಳನ್ನು ಇಡೀ ಜೀವನ ಪೂರ್ತಿಯಾಗಿ ಅನುಭವಿಸಬೇಕಾಗುತ್ತದೆ. ಯಾಕೆ ? ಈಗ ನೀವು ಈ ವಯಸ್ಕರ ಶಿಕ್ಷಣ ತರಗತಿಗಳಿಗೆ ಬರಲಿಲ್ಲವೆನ್ನುವ ಕಾರಣದಿಂದ."

ಸಾಮಾನ್ಯವಾಗಿ ಇದನ್ನು ಕೇಳಿ ನಗುವಿನ ಅಲೆ ಏಳುತ್ತಿತ್ತು. ಕೊನೆಯ ಪಕ್ಷ ಕೆಲವು ದಿನಗಳ ರಾತ್ರಿ ತರಗತಿಗಳಲ್ಲಿ ಹಾಜರಾತಿ ಏರುತ್ತಿತ್ತು. ಎಲ್ಲ ಕಡೆಯೂ ನಾನು ಈ ಮಾರ್ಗವನ್ನು ಅನುಸರಿಸುತ್ತಿದ್ದೆ. ಬಹುಶಃ ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಗಳಿಗೂ ನಾನು ಹೋಗಿರಬಹುದು. ಕೆಲವು ಕಡೆ ನನ್ನ ಭೇಟಿ ತಕ್ಷಣದ ಪರಿಣಾಮ ಉಂಟುಮಾಡುತ್ತಿತ್ತು. ಮತ್ತೆ ಕೆಲವು ಕಡೆ ಕಲ್ಲಿನ ಗೋಡೆಗೆ ಮಾತನಾಡಿದ ಹಾಗಾಗುತ್ತಿತ್ತು. ಈ ಮಧ್ಯೆ ಮದುವೆಯ ದಿನಕ್ಕಾಗಿ ಕಾತರದಿಂದ ಕಾಯುತ್ತಿದ್ದೆ.

೪. ಇಯಂ ಸೀತಾ ಮಮ ಸುತಾ...

ರೂಢಿಯ ಪ್ರಕಾರ ಮದುವೆಯು ಕನ್ಯೆಯ ಸ್ಥಳವಾದ ಮತ್ತೂರಿನಲ್ಲಿ ನಡೆಯಬೇಕಾಗಿತ್ತು. ಒಟ್ಟಾಗಿ ನೇಯ್ದುಕೊಂಡ ಒಂದು ಹಳ್ಳಿಯಲ್ಲಿ ಯಾವುದೇ ಒಂದು ಮದುವೆಯೆನ್ನುವುದು ಎಲ್ಲರಿಗೂ ಸಂಭ್ರಮದ ಹಾಗೂ ಕೆಲಸದ ಸಂದರ್ಭ. ಮದುವೆಗೆ ಇನ್ನೂ ಹಲವು ವಾರಗಳಿರುವಾಗಲೇ ವಧುವಿನ ಬಂಧು ಬಳಗದವರು ಸಿದ್ಧತೆ ನಡೆಸುತ್ತಾರೆ. ಎರಡೂ ಕಡೆಯ ನೆಂಟರಿಷ್ಟರಿಗೆ ಉಡುಗೊರೆಗಳನ್ನು ಜೋಡಿಸಬೇಕು - ಸೀರೆಗಳು, ರವಿಕೆಗಳು, ಪಂಚೆಗಳು, ಅಂಗವಸ್ತ್ರಗಳು ಇವುಗಳನ್ನು ಅವರವರ ಪ್ರಾಮುಖ್ಯಕ್ಕನುಗುಣವಾಗಿ ಕೊಡಬೇಕಾಗುತ್ತದೆ. ಕೊಬ್ಬರಿಯನ್ನು ವಿವಿಧ ಆಲಂಕಾರಿಕ ವಿನ್ಯಾಸಗಳಲ್ಲಿ ಕೊರೆಯಬೇಕು. ಬೆಲ್ಲದ ಅಚ್ಚುಗಳನ್ನು ಕೊಳ್ಳಬೇಕು. ನಿಂಬೆ ಮತ್ತು ಮಾವಿನಕಾಯಿ ಉಪ್ಪಿನಕಾಯಿ ಹಾಕಿಡಬೇಕು ; ಅಕ್ಕಿಯನ್ನು ಆರಿಸಿ ಶುದ್ಧಪಡಿಸಬೇಕು ; ಹಿಟ್ಟುಗಳನ್ನು ಬೀಸಿಡಬೇಕು ; ಹೆಚ್ಚು ಪ್ರಮಾಣದ ಸಾಂಬಾರ ವಸ್ತುಗಳನ್ನು ಬೆರೆಸಿ, ಕುಟ್ಟಿ , ಬೀಸಿ ಇಡಬೇಕು ; ಅಡಿಕೆಗೆ ಬಣ್ಣ ಕಟ್ಟಿ ಇಡಬೇಕು ಇತ್ಯಾದಿ ಇತ್ಯಾದಿ. ಬರುವ ಅನೇಕ ಜನ ಬಂಧುಗಳಿಗೆ ತಂಗಲು ಏರ್ಪಾಟು ಮಾಡಬೇಕು. ಅಡುಗೆ ಊಟದ ವ್ಯವಸ್ಥೆಯಾಗಬೇಕು. ಗಂಡಿನ ಕಡೆಯಿಂದ ಏನಾದರೂ ಒಂದು ದೂರು ಬಂದರೆ ಅದು ಅವಮಾನದ ವಿಷಯ.

ಮದುವೆಗೆ ಕೆಲವೇ ದಿನಗಳ ಹಿಂದೆ ನನ್ನ ನೆಂಟರಿಷ್ಟರು ಬೆಂಗಳೂರಿನಿಂದ ಬರತೊಡಗಿದರು. ಮೈಸೂರು, ಹಾಸನ, ಭದ್ರಾವತಿ ಮತ್ತು ಇತರ ಸ್ಥಳಗಳಿಂದಲೂ ಬಂದರು. ಕೆಲವರು ರೈಲಿನಲ್ಲಿ ಶಿವಮೊಗ್ಗಕ್ಕೆ ಬಂದು ಅಲ್ಲಿಯ ಎರಡು ನಿಲ್ದಾಣಗಳಲ್ಲಿ ಒಂದರಲ್ಲಿ ಇಳಿದರು. ಇನ್ನು ಕೆಲವರು ಬಸ್ಸಿನಲ್ಲಿ ಬಂದರು. ಹೆಣ್ಣಿನ ಕಡೆಯವರು ಅತಿಥಿಗಳನ್ನು ರೈಲು ನಿಲ್ದಾಣದಿಂದ ಮತ್ತು ಬಸ್ ನಿಲ್ದಾಣದಿಂದ ಮತ್ತೂರಿಗೆ ಕರೆದೊಯ್ಯಲು ಎತ್ತಿನಗಾಡಿಗಳನ್ನು ಏರ್ಪಡಿಸಿದ್ದರು. ಅದು ನಾಲ್ಕು ಮೈಲಿಯಷ್ಟು ದೂರ. ಈ ಪ್ರಯಾಣಕ್ಕೆ ಒಂದೂವರೆಗಂಟೆ ಹಿಡಿಸುತ್ತಿತ್ತು. ಹೊಸಹಳ್ಳಿಯಿಂದ ಬರುವವರು ಹರಿಗೋಲಿನಲ್ಲಿ ಕುಳಿತು ನದಿದಾಟಿ ಬರಬೇಕಾಗಿತ್ತು. ಅದರಲ್ಲಿ ಎಂಟು-ಹತ್ತು ಜನ ಕುಳಿತು ದಾಟಬಹುದಾಗಿತ್ತು. ಜನರನ್ನು ನದಿ ದಾಟಿಸಲು ಒಬ್ಬ ಅಂಬಿಗನು ಸದಾ ಸಿದ್ಧವಾಗಿಯೇ ಇರುತ್ತಿದ್ದನು. ಅಲ್ಲಿಂದ ಎತ್ತಿನಗಾಡಿಗಳು ಅತಿಥಿಗಳನ್ನು ಮತ್ತೂರಿಗೆ ಕರೆದೊಯ್ಯುತ್ತಿದ್ದವು. ಹೀಗೆ ಎಲ್ಲಾ ಕಡೆಗಳಿಂದಲೂ ಮತ್ತೂರಿಗೆ ಜನರು ಬಂದು ನೆರೆದರು. ಅವರೆಲ್ಲರನ್ನೂ ನೋಡಿಕೊಳ್ಳುವ ಜವಾಬ್ದಾರಿ ವಧುವಿನ ಕಡೆಯವರಿಗೆ ಸೇರಿತ್ತು.

ಮುಖ್ಯವಾದ ವಿವಾಹದಿನದ ಹಿಂದಿನ ದಿನ ನಿಶ್ಚಿತಾರ್ಥ ಎಂಬ ಒಂದು ಸಣ್ಣ ಸಮಾರಂಭವು ನಡೆಯುತ್ತದೆ. ಇದು ಔಪಚಾರಿಕವಾಗಿ ಒಪ್ಪಂದ ಮಾಡಿಕೊಳ್ಳುವ ಸಂದರ್ಭ. ಎಲ್ಲರ ಎದುರಿಗೆ ಹುಡುಗಿಯ ಕಡೆಯವರು ತಮ್ಮ ಮಗಳನ್ನು ಇಂತಹ ಕುಟುಂಬಕ್ಕೆ ಸೇರಿದ ಇಂತಹ ವರನಿಗೆ ಕೊಟ್ಟು ವಿವಾಹ ನಡೆಸುವುದಕ್ಕೆ ಸಮ್ಮತಿಸಿರುವುದಾಗಿ ಘೋಷಿಸುತ್ತಾರೆ. ಹುಡುಗನ ಕಡೆಯವರು ಇದನ್ನು ಒಪ್ಪಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ವರನಾಗಲೀ ವಧುವಾಗಲೀ ಅಲ್ಲಿರುವುದಿಲ್ಲ.

ಮಾರನೆಯ ದಿನ ಮದುವೆ. ಇದರಲ್ಲಿ ನಾಲ್ಕು ಹಂತಗಳಿವೆ. ಮೊದಲನೆಯದು ಗಾಂಧರ್ವ ಹಂತ. ವಧು ಮತ್ತು ಅವಳ ಕಡೆಯವರು, ವರ ಮತ್ತು ಅವನ ಕಡೆಯವರು ಎಲ್ಲರೂ ಹುಡುಗಿಯ ಮನೆಯ ಎದುರಿಗೆ ರಸ್ತೆಯಲ್ಲಿ ಸೇರುತ್ತಾರೆ. ಆದರೆ ಎರಡೂ ಪಂಗಡಗಳ ನಡುವೆ ಒಂದು ರೇಷ್ಮೆ ತೆರೆಯಿರುತ್ತದೆ. ಎಲ್ಲರೂ ಅತ್ಯುತ್ತಮವಾದ ಉಡುಗೆ ತೊಡುಗೆಗಳಲ್ಲಿರುತ್ತಾರೆ. ಮಕ್ಕಳು ಓಡಾಡುತ್ತಿರುತ್ತಾರೆ. ವಧುವಿಗೆ ಸಾಂಪ್ರದಾಯಿಕವಾಗಿ ಜರಿಸೀರೆ ಉಡಿಸಿ, ತಲೆತುಂಬ ಹೂ ಮುಡಿಸಿ ಅಲಂಕರಿಸಲಾಗಿರುತ್ತದೆ. ಹುಡುಗನೂ ಪಂಚೆಯನ್ನುಟ್ಟು ತಲೆಗೆ ಪೇಟ ಧರಿಸಿರುತ್ತಾನೆ. ಇಬ್ಬರೂ ಕೈಯಲ್ಲಿ ಹಾರಗಳನ್ನು ಹಿಡಿದು ಕೊಂಡಿರುತ್ತಾರೆ. ಎಲ್ಲರೂ ಬಹು ಉದ್ವೇಗದಿಂದ ರೇಷ್ಮೆ ತೆರೆಯು ಸರಿಯುವುದನ್ನೇ ಕಾಯುತ್ತಿರುತ್ತಾರೆ. ಅದೋ, ಆ ಘಟನೆ ಜರುಗಿಯೇ ಬಿಡುತ್ತದೆ! ಶುಭ ಮುಹೂರ್ತದಲ್ಲಿ ಬ್ರಾಹ್ಮಣರು ಒಟ್ಟಿಗೆ ಮಂತ್ರಗಳನ್ನು ಉಚ್ಚರಿಸುತ್ತಾರೆ. ನಾದಸ್ವರವನ್ನು ವಿದ್ವಾಂಸರು ನುಡಿಸುತ್ತಿರುತ್ತಾರೆ. ತೆರೆ ಸರಿಯುತ್ತದೆ. ಅಧಿಕೃತವಾಗಿ ಹುಡುಗನೂ ಹುಡುಗಿಯೂ ಮೊದಲ ಸಾರಿ ನೋಡುವುದು ಈಗಲೇ. ಪ್ರತಿಯೊಬ್ಬರೂ ವೇದವನ್ನು ಕಲಿತಿರುವ ಮತ್ತೂರಿನಲ್ಲಿ ೧೫೦-೨೦೦ ಕೊರಲುಗಳಿಂದ ಒಟ್ಟಿಗೆ ವೇದ ಪಠಣವಾಗುವಾಗ ಅದು ಮೋಡಿಮಾಡುವ ಸನ್ನಿವೇಶವಾಗಿರುತ್ತದೆ. ಆಗ ಹುಡುಗಿಯ ಸೋದರಮಾವನು ಅವಳನ್ನು ಎತ್ತಿಕೊಳ್ಳುತ್ತಾನೆ, ಹುಡುಗನ ಸೋದರಮಾವನೂ ಅವನನ್ನು ಎತ್ತಿಕೊಳ್ಳುತ್ತಾನೆ. ಎಲ್ಲರೂ ಸಂತೋಷದಿಂದ ಉದ್ಗರಿಸುತ್ತಿರುವಾಗ, ಹೂವು ಮಂತ್ರಾಕ್ಷತೆಗಳನ್ನು ತಳಿಯುತ್ತಿರುವಾಗ, ಗಂಟೆಗಳು ದನಿ ಮಾಡುತ್ತಿರುವಾಗ, ವಧುವೂ ವರನೂ ಪರಸ್ಪರ ಮಾಲೆ ಹಾಕುತ್ತಾರೆ. ಸ್ವರ್ಗದಿಂದ ಗಂಧರ್ವರು ಇದನ್ನು ನೋಡಿ ದಂಪತಿಗಳನ್ನು ಆಶೀರ್ವದಿಸುತ್ತಾರೆ.

ಎರಡನೆಯ ಹಂತ ಧಾರೆ. ವಧುವಿನ ಕೈಗಳನ್ನು ವರನ ಕೈಗಳಲ್ಲಿ ತಂದೆಯು ಇರಿಸಿರಲು, ತಾಯಿಯು ಪವಿತ್ರ ನದಿಗಳ ತೀರ್ಥವನ್ನು ಹಾಲಿನೊಂದಿಗೆ ಬೆರೆಸಿ ವಧುವಿನ ಕೈಗೆ ಎರೆಯುತ್ತಾಳೆ. ಆ ದಿನಗಳಲ್ಲಿ ಜನರು ಗಂಗೆ, ಯಮುನೆ, ಗೋದಾವರಿ, ಸರಸ್ವತಿ, ನರ್ಮದಾ, ಸಿಂಧು, ಕಾವೇರಿ ಮೊದಲಾದ ಪವಿತ್ರನದಿಗಳಿಗೆ ತೀರ್ಥಯಾತ್ರೆ ಹೋದಾಗ ಅಲ್ಲಿಯ ನೀರನ್ನು ಸೀಲು ಮಾಡಿದ ಹಿತ್ತಾಳೆ ಸ್ಥಾಲಿಗಳಲ್ಲಿ

ತಂದಿಟ್ಟುಕೊಳ್ಳುತ್ತಿದ್ದರು. ಇಂತಹ ಶುಭ ಸಂದರ್ಭಗಳಲ್ಲಿ ಉಪಯೋಗಿಸುತ್ತಿದ್ದರು. ವಧುವರರ ಕೈಗೆ ಈ ಪವಿತ್ರ ತೀರ್ಥವನ್ನು ಧಾರೆಯೆರೆಯುವುದು ಔಪಚಾರಿಕವಾಗಿ ಹುಡುಗಿಯನ್ನು ಹುಡುಗನ ಕಾಳಜಿಗೆ ವಹಿಸಿಕೊಡುವುದನ್ನು ಸೂಚಿಸುತ್ತಿತ್ತು. ಅದು ವಧುವಿನ ಕಡೆಯವರಿಗೆ ಬಹಳ ಭಾವೋದ್ವೇಗದ ಸಮಯ. ಹುಡುಗಿಯು ಮನೆಯನ್ನು ತೊರೆಯುತ್ತಾಳೆ, ಆ ಗಳಿಗೆಯಿಂದ ಅವಳು ತನ್ನ ಗಂಡ ಮತ್ತು ಆ ಕುಟುಂಬಕ್ಕೆ ಸೇರಿದವಳು. ವಧುವಿನ ಕುಟುಂಬದವರೂ, ವಧುವೂ ಅಗಲಿಕೆಯನ್ನು ನೆನೆದು ಕಣ್ಣೀರಿಡುತ್ತಾರೆ.

ಮೂರನೆ ಹಂತ ಮಂಗಳಸೂತ್ರ ಧಾರಣೆ. ವರನು ಚಿನ್ನದ ಮಾಂಗಲ್ಯಸೂತ್ರವನ್ನು ವಧುವಿನ ಕೊರಳಿಗೆ ಕಟ್ಟುತ್ತಾನೆ. ಅದರಲ್ಲಿ ಅವನ ಮನೆದೇವರುಗಳ ಚಿತ್ರವಿರುತ್ತದೆ. ಒಂದು ಸಾರಿ ಧರಿಸಿದ ಮೇಲೆ ಯಾವಜ್ಜೀವವೂ ಅದನ್ನು ತೆಗೆಯುವಂತಿಲ್ಲ. ವಧುವರರು ಪರಸ್ಪರ ಉಂಗುರಗಳನ್ನು ತೊಡಿಸುತ್ತಾರೆ.

ನಾಲ್ಕನೆಯ ಹಂತಕ್ಕೆ ಸಪ್ತಪದಿ ಎಂದು ಹೆಸರು. ವರನು ವಧುವಿನ ಕೈ ಹಿಡಿದು ಪವಿತ್ರ ಅಗ್ನಿಯ ಸುತ್ತ ಏಳು ಹೆಜ್ಜೆ ನಡೆಯುತ್ತಾನೆ. ಆಮೇಲೆ ಅವರು ಪತಿ-ಪತ್ನಿಯರೆಂದು ಘೋಷಿಸಲಾಗುತ್ತದೆ. ಅಲ್ಲೇ ವಧುವಿನ ತಂದೆಯು ಶ್ರೀರಾಮನಿಗೆ ಸೀತೆಯನ್ನು ಒಪ್ಪಿಸಿಕೊಡುವಾಗ ಜನಕರಾಜನು ಆಡಿದ ಮಾತುಗಳನ್ನು ಪ್ರತಿಧ್ವನಿಸುತ್ತಾನೆ :

ಇಯಂ ಸೀತಾ ಮಮ ಸುತಾ
ಸಹಧರ್ಮಚರೀ ತವ |
ಪ್ರತೀಚ್ಛ ಚೈನಾಂ ಭದ್ರಂ ತೇ
ಪಾಣಿಂ ಗೃಹ್ಣೀಷ್ವ ಪಾಣಿನಾ ||
ಪತಿವ್ರತಾ ಮಹಾಭಾಗಾ
ಛಾಯೇವಾನುಗತಾ ಸದಾ

ಸಿ.ರಾಜಗೋಪಾಲಚಾರಿಯವರು ಅನುವಾದಿಸಿದ ಈ ಪಂಕ್ತಿಗಳನ್ನು ಕನ್ನಡದಲ್ಲಿ ಹೀಗೆ ಹೇಳಬಹುದು:

ನನ್ನ ಮಗಳು ಸೀತೆ ಇವಳು
ಧರ್ಮದ ಹಾದಿಯಲ್ಲಿ ನಿನ್ನ ಜೊತೆಗೆ ನಡೆಯುತ್ತಾಳೆ
ಇವಳ ಕೈಯನ್ನು ನೀನು ಹಿಡಿದುಕೊ
ಪತಿವ್ರತೆಯಾಗಿ ಮಹಾಭಾಗಿಯಾದ
ಇವಳು ನಿನ್ನ ನೆರಳಿನಂತೆ ಅನುಸರಿಸುತ್ತಾಳೆ

ಇಷ್ಟಾದ ಮೇಲೆ ಇನ್ನೊಂದು ಕಾರ್ಯಕ್ರಮವಿರುತ್ತದೆ. ವಧುವರರ ಆತ್ಮಗಳನ್ನು ಲಕ್ಷ್ಮೀನಾರಾಯಣ ಎಂದು ಭಾವಿಸಿ ತಾಂತ್ರಿಕ ಆಚರಣೆಗಳ ಮೂಲಕ ಪೂಜಿಸಿ ಮಂಗಳಾರತಿ ಮಾಡಲಾಗುತ್ತದೆ. ಅಗಲಿಕೆಯನಂತರ ಆ ದೇವ ದಂಪತಿಗಳು ಒಟ್ಟುಗೂಡಿದರೆಂದು ಭಾವಿಸಲಾಗುತ್ತದೆ. ನಾವು ಈ ಎಲ್ಲಾ ಆಚರಣೆಗಳನ್ನೂ ವಿಧಿಗಳನ್ನೂ ನೆರವೇರಿಸಿ ಭಗವತ್ಕೃಪೆ ಯಿಂದ ಪತಿ-ಪತ್ನಿಯರಾದೆವು. ಸಾವಿತ್ರಿ ನನ್ನ ಪತ್ನಿಯಾದಳು.

ನಾವು ಇನ್ನೂ ಮೂರು ದಿನ ಅಲ್ಲೇ ಇದ್ದೆವು. ವಿವಾಹ ಸಮಾರಂಭದ ಮುಖ್ಯ ಕಾರ್ಯಕ್ರಮಗಳು ಮತ್ತು ಸಂಭ್ರಮ ಕಳೆದ ಮೇಲೆ ನವದಂಪತಿಗಳನ್ನು ನೆಪ ಮಾಡಿಕೊಂಡು ಮನರಂಜನೆಪಡುವ ಸಂತೋಷದ ಕ್ಷಣಗಳು ಇರುತ್ತಿದ್ದವು. ಅಂಥದೊಂದು ಸಂದರ್ಭ ಬೀಗರೌತಣ. ಅದು ಗಂಡಿನ ಕಡೆಯವರು ಹೆಣ್ಣಿನ ಕಡೆಯವರಿಗೆ ಕೊಡುವ ಸತ್ಕಾರ. ಹಾಡು ಹಸೆ ತುಂಬಾ ಇರುತ್ತದೆ. ಬೇರೆ ಬೇರೆ ಸಮುದಾಯಗಳು ಮತ್ತು ಬುಡಕಟ್ಟು ಜನರ ವೇಷಗಳನ್ನು ಧರಿಸುತ್ತಾರೆ. ತಮ್ಮ ತಮ್ಮ ಕಲಾ ಪ್ರೌಢಿಮೆಗಳನ್ನು ಪ್ರದರ್ಶಿಸಲು ಅದುವೇ ತಕ್ಕ ಕಾಲ. ಕಣ್ಣುಮುಚ್ಚಾಲೆಯಂತಹ ಆಟಗಳನ್ನು ಏರ್ಪಡಿಸಲಾಗುತ್ತಿತ್ತು. ವಧುವನ್ನು ಬಚ್ಚಿಡಲಾಗುತ್ತಿತ್ತು. ವರನು ಅವಳನ್ನು ಹುಡುಕ ಬೇಕು. ಆ ಭಾರೀ ಮನೆಗಳ ಮೂಲೆ ಮೊಡಕುಗಳಲ್ಲಿ ಬಚ್ಚಿಟ್ಟುಕೊಂಡ ಸಾವಿತ್ರಿಯನ್ನು ಹುಡುಕಲು ನಾನು ವಿಫಲನಾದೆ.

ಕೊನೆಯ ದಿನ ಹಳ್ಳಿಯ ಎಲ್ಲಾ ದೇವಾಲಯಗಳಿಗೂ ನಾವು ಹೋಗಿಬರಬೇಕಾಯಿತು. ನಾಲ್ಕೂ ಮೂಲೆಗಳಲ್ಲಿ ಒಂದೊಂದು ದೇವಾಲಯವಿದ್ದಿತು. ನಾವು ಮೆರವಣಿಗೆಯಲ್ಲಿ ಹೊರಟೆವು. ನಾನು ಸಾವಿತ್ರಿಯ ಕೈ ಹಿಡಿದುಕೊಂಡಿದ್ದೆ. ಕೆಲವು ತುಂಟ ನೆಂಟರು ಬಂದು ನಾನು 'ಹೆಂಡತಿಯನ್ನು ಎತ್ತಿಕೊಂಡು ಹೋಗಬೇಕು, ಅದೇ ಪದ್ಧತಿ' ಎಂದರು. ಕೃಷ್ಣನು ರುಕ್ಮಿಣಿಯನ್ನು ಎತ್ತಿಕೊಂಡು ಹೋದಹಾಗೆ ಎಂದು ಉದಾಹರಣೆಯನ್ನೂ ಕೊಟ್ಟರು. ಅಂಥ ಯಾವ ಪದ್ಧತಿಯೂ ಇರಲಿಲ್ಲ. ಅದು ನನಗೆ ತಿಳಿಯದು. ಆದರೂ ಅದು ನನಗೆ ನಾಚಿಕೆಯ ವಿಷಯವೆನ್ನಿಸಿ, 'ಸಾಧ್ಯವಿಲ್ಲ' ಎಂದು ಪಟ್ಟುಹಿಡಿದೆ. ಎಲ್ಲರಿಗೂ ನಿರಾಶೆಯಾಯಿತು. ಆದರೇನಂತೆ, ನಿಮಗೆ ಸಂತೋಷ ಬೇಕಾದರೆ ಅದಕ್ಕೆ ಇನ್ನೊಂದು ಪಕ್ಷವೂ ಸಮ್ಮತಿಸಬೇಡವೆ ?

ಆಮೇಲೆ ನಮ್ಮ ನಮ್ಮ ಊರುಗಳಿಗೆ ಹಿಂದಿರುಗಿದೆವು. ಸಾವಿತ್ರಿ ನನ್ನ ಜತೆ ಬರಲಿಲ್ಲ. ಆ ದಿನಗಳಲ್ಲಿ ಮದುವೆಯಾಗುವಾಗ ಕನ್ಯೆಯು ಗೃಹಿಣಿಯಾಗುವುದಕ್ಕೆ ತಕ್ಕ ವಯಸ್ಸು ಬಂದಿರುವುದೇ ಇಲ್ಲ. ಅವಳು ತಂದೆಯ ಮನೆಯಲ್ಲೇ ಇರುತ್ತಾಳೆ. ಪ್ರೌಢೆಯಾದಾಗ 'ಪ್ರಸ್ತ' ಎಂದು ಇನ್ನೊಂದು ಸಮಾರಂಭವನ್ನು ಏರ್ಪಡಿಸಿ ಆಮೇಲೆ ಗಂಡನ ಮನೆಗೆ ಅವಳನ್ನು ಕಳಿಸಿಕೊಡಲಾಗುತ್ತದೆ. ಬಾಲ್ಯವಿವಾಹದಲ್ಲಿ ತಮಾಷೆಯ ಅಂಶಗಳು ಇರುತ್ತಿದ್ದವು. ಮದುವೆಯ ಹುಡುಗ-ಹುಡುಗಿ ಇಬ್ಬರೂ ತುಂಬಾ ಚಿಕ್ಕವರಾಗಿದ್ದು ಅಷ್ಟುಷ್ಟು ಹೊತ್ತು ಹಸೆಯ ಮೇಲೆ ಕುಳಿತಿರಲು ಬೇಸರವಾಗಿ ತಮ್ಮ ತಮ್ಮ ಗೆಳೆಯ ಗೆಳತಿಯರೊಂದಿಗೆ ಆಟ ಆಡಲು ಓಡಿಬಿಡುತ್ತಿದ್ದರು! ಮುಖ್ಯವಾದ ಸಂದರ್ಭಗಳು ಬಂದಾಗ, ಇವರೆಲ್ಲಿ ಹೋದರೆಂದು ಎಲ್ಲರೂ ಹುಡುಕುತ್ತಿದ್ದರು. ಕಂಡಾಗ ಅವರಿಗೆ ಏನಾದರೂ ಲಂಚದ ಆಸೆ ತೋರಿಸಿ, ಸಿಹಿ ಕೊಡುವುದಾಗಿ ಆಸೆ ತೋರಿಸಿ, ಅಥವಾ ಶಿಕ್ಷಿಸುವುದಾಗಿ ಬೆದರಿಸಿ ಕರೆದುಕೊಂಡು ಬಂದು ಮತ್ತೆ ಹಸೆಮಣೆಯ ಮೇಲೆ ಕೂರಿಸುತ್ತಿದ್ದರು.

ನನ್ನ ಅಣ್ಣನೂ ನಾನೂ ಬೆಂಗಳೂರಿಗೆ ಹಿಂದಿರುಗಿದೆವು. ಅವರು ತಮ್ಮೊಂದಿಗೆ ನಾನು ಕೆಲಸ ಮಾಡಬೇಕೆಂದು ಇಷ್ಟಪಟ್ಟರು. ಅವರು ಆಗ ವೈದ್ಯಕೀಯ ಉಪಕರಣಗಳ ಮಾರಾಟದ ಸಣ್ಣದೊಂದು ವ್ಯವಹಾರವನ್ನು ಪ್ರಾರಂಭಿಸಿದ್ದರು. ಸುಪ್ರಸಿದ್ಧ ಸಂಸ್ಥೆಗಳ ಏಜೆನ್ಸಿಯನ್ನು ಪಡೆಯಲೂ ಪ್ರಯತ್ನಿಸುತ್ತಿದ್ದರು. ಕಲ್ಕತ್ತೆಯ ಬಿರ್ಲಾ ಲ್ಯಾಬೊರೇಟರೀಸ್ ಸಂಸ್ಥೆಯ ಏಜೆನ್ಸಿ ಅವರಿಗೆ ದೊರೆತಿತ್ತು. ಮೆಡಿಕಲ್ ರೆಪ್ರೆಸೆಂಟೆಟಿವ್ ಹುದ್ದೆಯೊಂದನ್ನು ಅವರು ಅಲ್ಲಿ ನನಗೆ ದೊರಕಿಸಿಕೊಟ್ಟರು. ವಯಸ್ಕರ ಶಿಕ್ಷಣದ ನೌಕರಿಯನ್ನು ಬಿಟ್ಟೆ.

ಮೈಸೂರು, ಕೊಡಗು ಮತ್ತು ದಕ್ಷಿಣಕನ್ನಡ ಪ್ರದೇಶಗಳಲ್ಲಿ ಸಂಚಾರಮಾಡಿ ಅವರ ಉತ್ಪಾದನೆಗಳ ಪ್ರಚಾರ ಮಾಡಿ ಅವುಗಳಿಗೆ ಬೇಡಿಕೆಯನ್ನು ದಾಖಲು ಮಾಡಿಕೊಳ್ಳಬೇಕಾಗಿತ್ತು. ಇದರಿಂದಾಗಿ ಮೇಲ್ಕಂಡ ಪ್ರದೇಶಗಳಿಗೆ ಪದೇ ಪದೇ ಹೋಗಿಬರಲು ಅವಕಾಶ ದೊರಕಿತು. ನಡುನಡುವೆ, ಯುಗಾದಿ, ಕೃಷ್ಣಾಷ್ಟಮಿ, ದಸರಾ ಮತ್ತು ದೀಪಾವಳಿ ಹಬ್ಬಗಳಿಗೆ ಬರಬೇಕೆಂದು ನನ್ನ ಅತ್ತೆಯವರ ಮನೆಯಿಂದ ಆಹ್ವಾನ ಬರುತ್ತಿತ್ತು. ಅವುಗಳನ್ನು ಉಪಯೋಗಿಸಿಕೊಂಡು ಮತ್ತೂರಿಗೆ ಹೋಗಿ ಸಾವಿತ್ರಿಯನ್ನು ನೋಡಿಕೊಂಡು ಬರುತ್ತಿದ್ದೆ. ಮದುವೆಯ ಸಂದರ್ಭದಲ್ಲಿ ಮತ್ತು ಆಮೇಲೆ ಹಲವು ಸಾರಿ ನೋಡಿದ ಮೇಲೆ ನನ್ನ ಸಾವಿತ್ರಿ ಸುಂದರಿಯಾಗಿದ್ದಾಳೆ ಎಂದು ನನಗೆ ಮನವರಿಕೆಯಾಗಿತ್ತು. ಯಾವಾಗಲೂ ನಾನು ಅವಳನ್ನು ಕುರಿತೇ ಧ್ಯಾನಿಸುತ್ತಿದ್ದೆ. ಆಹ್ವಾನ ಬಂದಾಗಲೆಲ್ಲಾ , ನನ್ನ ಬಳಿ ಇದ್ದ ಅತ್ಯುತ್ತಮವಾದ ಬಟ್ಟೆಗಳನ್ನು ಚೆನ್ನಾಗಿ ಒಗೆದು ಶುಭ್ರಗೊಳಿಸಿಕೊಳ್ಳುತ್ತಿದ್ದೆ. ಹಣ್ಣುಗಳು, ತೆಂಗಿನಕಾಯಿ, ಸಾವಿತ್ರಿಗೆ ಏನಾದರೂ ಸಣ್ಣಪುಟ್ಟ ಉಡುಗೊರೆಗಳನ್ನು ತೆಗೆದುಕೊಂಡು ಹೋಗುತ್ತಿದ್ದೆ. ಶಿವಮೊಗ್ಗದವರೆಗೆ ರೈಲಿನಲ್ಲಿ ಅಥವಾ ಬಸ್ಸಿನಲ್ಲಿ ಪ್ರಯಾಣ ಮಾಡಿ, ಸಾಮಾನು ಹೆಚ್ಚಾಗಿರದಿದ್ದರೆ ಮತ್ತೂರಿಗೆ ನಡೆದೇ ಹೋಗಿಬಿಡುತ್ತಿದ್ದೆ , ಅಥವಾ ಒಂದು ಜಟಕಾ ಹತ್ತಿಕೊಂಡು ಹೋಗುತ್ತಿದ್ದೆ.

ಹೀಗೆ ಒಂದೊಂದು ಸಾರಿ ಹೋದಾಗಲೂ ಸಾವಿತ್ರಿಯು ನನಗಾಗಿ ಬಾಗಿಲ ಬಳಿ ಕಾದು ನಿಂತಿರುತ್ತಾಳೆ ಎಂದು ನಿರೀಕ್ಷಿಸುತ್ತಿದ್ದೆ. ಅದಕ್ಕೆ ಬದಲು ನನ್ನ ಭಾವಮೈದುನನೂ ಅವನ ಗೆಳೆಯರೂ ನನ್ನನ್ನು ಸ್ವಾಗತಿಸಿ, ನನ್ನ ಲಗೇಜನ್ನು ಒಳಕ್ಕೆ ಒಯ್ಯುತ್ತಿದ್ದರು. ಸಾವಿತ್ರಿಗಾಗಿ ನಾನು ಆಕಡೆ ಈಕಡೆ ಹುಡುಕುಗಣ್ಣಿನಿಂದ ನೋಡುತ್ತಿದ್ದೆ. ಆದರೆ ಎಲ್ಲೂ ಅವಳು ಕಾಣಿಸುತ್ತಿರಲಿಲ್ಲ. ಅವಳ ಅಣ್ಣ "ಇಲ್ಲೇ ಎಲ್ಲೋ ಇದ್ದಾಳೆ..." ಎಂದು ಗೊಣಗುತ್ತಿದ್ದನು. ಹೇಗೋ ಅವರ ಕಣ್ಣುತಪ್ಪಿಸಿ ಸಾವಿತ್ರಿ ಹಿತ್ತಲಿಗೆ ಹೋಗಿರುತ್ತಿದ್ದಳು.

ಇದು ನನಗೆ ಅರ್ಥವಾಗುತ್ತಿರಲಿಲ್ಲ. ಹುಡುಗಿಯು ಇನ್ನೂ ತವರು ಮನೆಯಲ್ಲಿರುವಾಗ ಅವಳನ್ನು ಪದೇ ಪದೇ ಸಂಧಿಸುವುದನ್ನಾಗಲೀ ಅವಳೊಂದಿಗೆ ಮಾತನಾಡುವುದನ್ನಾಗಲೀ ಹಿರಿಯರು ಒಪ್ಪುತ್ತಿರಲಿಲ್ಲ. ನನಗೆ ತುಂಬಾ ನಿರಾಶೆಯಾಗಿ 'ಊಟ ಬೇಡ' ಎಂದುಬಿಡುತ್ತಿದ್ದೆ. ಎಲ್ಲರಿಗೂ ಬಹಳ ಕೆಡುಕೆನಿಸಿ ನನ್ನ ಅತ್ತೆ ಅಳತೊಡಗುತ್ತಿದ್ದರು. ಆದರೂ ಈ ಭೇಟಿಗಳಲ್ಲಿ ನಾನು ಸಾವಿತ್ರಿಯನ್ನು ಅಪರೂಪವಾಗಿ ನೋಡುತ್ತಿದ್ದೆ.

ಮತ್ತೂರಿನ ಎಲ್ಲಾ ಹುಡುಗಿಯರ ಹಾಗೆಯೇ ಸಾವಿತ್ರಿಗೂ ಸಿನಿಮಾ ನೋಡಲು ಬಹಳ ಆಸೆ. ನನ್ನ ಜತೆಯಲ್ಲಿ ಸಿನಿಮಾ ನೋಡಲು ಬರುವುದಕ್ಕೆ ತುಂಬಾ ಸುಲಭವಾಗಿ ಒಪ್ಪಿಸಿಬಿಡಬಹುದಾಗಿತ್ತು.

ಒಂದು ಘಟನೆ ನನ್ನ ಮನಸ್ಸಿನಲ್ಲಿ ಬೇರೂರಿದೆ. ನನ್ನ ಜತೆಯಲ್ಲಿ ಒಂದು ಸಿನಿಮಾ ನೋಡಲು ಶಿವಮೊಗ್ಗಕ್ಕೆ ಬರಲು ಸಾವಿತ್ರಿ ಒಪ್ಪಿದಳು. ತೆಪ್ಪದ ಮೇಲೆ ಕುಳಿತು ನದಿಯನ್ನು ದಾಟಿದೆವು. ಹೊಸಹಳ್ಳಿಯಿಂದ ಬಸ್ಸು ಹತ್ತಿ ಶಿವಮೊಗ್ಗಕ್ಕೆ ಹೋದೆವು. ಅದು ರಾತ್ರಿಯ ಮೊದಲ ಪ್ರದರ್ಶನ. ಸಿನಿಮಾ ನೋಡಿ ಸಾವಿತ್ರಿ ತುಂಬಾ ಸಂತೋಷಪಟ್ಟಳು. ನಾಯಕಿಯು ಕಷ್ಟಪಡುವಾಗ ತಾನೂ ಅತ್ತಳು. ವಿದೂಷಕನು ಕುಚೇಷ್ಟೆ ಮಾಡಿದಾಗ ನಕ್ಕಳು. ಸಿನಿಮಾ ಮುಗಿದಾಗ ರಾತ್ರಿ ೧೦ ಗಂಟೆ. ಆಮೇಲೆ ಬಸ್ಸು ಹತ್ತಿ ಹೊಸಹಳ್ಳಿಗೆ ಬಂದು ನದಿಯ ಕಡೆಗೆ ನಡೆದು ಹೊರಟೆವು. ಕಗ್ಗತ್ತಲೆ, ನನಗೆ ಏನೂ ಕಾಣಿಸುತ್ತಿರಲಿಲ್ಲ. ಆದರೆ ಸಾವಿತ್ರಿಗೆ ಅಲ್ಲೆಲ್ಲಾ ನಡೆದು ರೂಢಿಯಾಗಿತ್ತು. ಆದ್ದರಿಂದ ಅವಳೇ ಮುಂದೆ ನಡೆದಳು. ನಾನು ಅವಳ ಹಿಂದೆ ನಡೆಯತೊಡಗಿದೆ. ಕೊನೆಗೆ ನಾವು ನದಿ ತಲುಪಿದಾಗ ಸುಮಾರು ೧೧.೩೦ ಗಂಟೆ ಆಗಿರಬಹುದು. ಅಲ್ಲಿ ತೆಪ್ಪ ಇರಲಿಲ್ಲ. ನಮಗಿಂತ ಮೊದಲು ಬಂದ ಯಾರೋ ಅದನ್ನು ತೆಗೆದುಕೊಂಡು ಆಚೆ ದಡಕ್ಕೆ ಹೊರಟುಹೋಗಿದ್ದರು. ಈಗ ಅದು ಅಲ್ಲೇ ಉಳಿದುಬಿಟ್ಟಿತ್ತು. ನಾವು ಕಷ್ಟಕ್ಕೆ ಸಿಕ್ಕಿಕೊಂಡೆವು. ಮೊದಲು ನನಗನ್ನಿಸಿದ್ದು , ಜೋರಾಗಿ ಕೂಗಿ ಯಾರಾದರೂ ತೆಪ್ಪವನ್ನು ಈ ದಡಕ್ಕೆ ತರುವಂತೆ ಹೇಳುವುದು ಎಂದು. "ಬೇಡ ಬೇಡ, ಜನರಿಗೆ ಗೊತ್ತಾಗಿ ಮಾತನಾಡತೊಡಗುತ್ತಾರೆ" ಎಂದು ಸಾವಿತ್ರಿ ತಡೆದಳು.

ನನಗೆ ಇನ್ನೊಂದು ದಾರಿ ಹೊಳೆಯಿತು. ಅವಳು ಏನಾದರೂ ಹೇಳುವುದಕ್ಕೆ ಮೊದಲೇ ಷರ್ಟು ಬಿಚ್ಚಿ ನೀರಿಗೆ ಧುಮುಕಿ ಈಜತೊಡಗಿದೆ.

ಈ ಸ್ಥಳದಲ್ಲಿ ತುಂಗಾ ನದಿಯ ಪಾತ್ರ ೧೦೦ ಅಥವಾ ೧೨೫ ಗಜ ಅಗಲವಾಗಿದೆ. ಹೊಳೆಯು ನನಗೆ ಪರಿಚಯವಿಲ್ಲವಾದ್ದರಿಂದ ನಿಧಾನವಾಗಿ ಈಜಿದೆ. ಕಲ್ಲು ಬಂಡೆಗೆ ಹೊಡೆದುಬಿಟ್ಟರೆ ಎಂಬ ಕಾತರವಿತ್ತು. ಅಂತೂ ತೊಂದರೆಯಿಲ್ಲದೆ ಎದುರು ದಡ ಸೇರಿದೆ. ಅಲ್ಲಿ ಯಾರೂ ಇರಲಿಲ್ಲ. ಒಬ್ಬ ಮುದುಕಿ ಏನನ್ನೋ ತೊಳೆಯುತ್ತಿದ್ದಳು. ನಿಶ್ಶಬ್ದವಾಗಿ ನಾನು ತೆಪ್ಪವಿದ್ದಲ್ಲಿಗೆ ಹೋಗಿ, ಹಗ್ಗ ಬಿಚ್ಚಿ , ಗಳುವನ್ನು ಒತ್ತಿ ನೂಕ ತೊಡಗಿದೆ. ಕೆಲವೇ ನಿಮಿಷಗಳಲ್ಲಿ ಈಚೆ ದಡಕ್ಕೆ ಬಂದಾಯಿತು. ಸಾವಿತ್ರಿ ತೆಪ್ಪದ ಮೇಲಕ್ಕೆ ಮೆಲ್ಲನೆ ನೆಗೆದಳು. ಹೆದರಿಕೆ ಯಾಯಿತೆ ಎಂದು ಕೇಳಿದೆ. ಇಲ್ಲ ಎಂದಳು. ನಾವು ಮಾಡಿದ

ಸಾಹಸದಿಂದ ನನಗೆ ಸಂತೋಷವೆನಿಸಿತ್ತು. ಗಳುವನ್ನು ನೂಕಿ ಆಚೆ ದಡದ ಕಡೆಗೆ ತೇಲಿದೆವು.

ಮನೆಯಲ್ಲಿ ನಮಗೆ ಏನಾಯಿತು, ಏನು ಮಾಡಬೇಕೆಂದು ತಿಳಿಯದೆ ಚಿಂತಾಕ್ರಾಂತರಾಗಿ ಕಾಯುತ್ತಿದ್ದರು. ಎಲ್ಲರಿಗೂ ಕೋಪಬಂದಿತ್ತು. ಆದರೆ ಅಳಿಯನಿಗೆ ಕಟುವಾಗಿ ಏನನ್ನೂ ಹೇಳಲು ಸಾಧ್ಯವಿರಲಿಲ್ಲ. ಪ್ರಶ್ನೆಗಳ ಮಳೆಯನ್ನೇ ಸುರಿಸಿದರು. ಆದರೆ ಸಾವಿತ್ರಿ ಬಹಳ ಕುಶಲತೆ ಯಿಂದ ಅವುಗಳನ್ನು ನಿವಾರಿಸಿದಳು. ಎಲ್ಲರಿಗೂ ಬಹಳ ಗಾಬರಿ ಯಾಗಿತ್ತು ಎಂದು ಹೇಳಿದರು. ಹಳ್ಳಿಯ ಪ್ರತಿಯೊಬ್ಬರನ್ನೂ ನಮ್ಮ ಬಗ್ಗೆ ವಿಚಾರಿಸಿಯಾಗಿತ್ತು. ನಾವು ಎಲ್ಲಿದ್ದೇವೆಂದು ಯಾರಿಗೂ ತಿಳಿದಿರಲಿಲ್ಲ. ಪಾಪ ಅವರು ಏನೆಂದು ಯೋಚಿಸಬೇಕು? ನಾನು ಹೆಚ್ಚು ಮಾತಾಡಲೇ ಇಲ್ಲ. ಊಟ ಬಡಿಸಿದರು. ಸದ್ದಿಲ್ಲದೆ ಊಟ ಮಾಡಿ ನಮ್ಮ ನಮ್ಮ ಕೊಠಡಿಗಳಿಗೆ ಹೊರಟುಹೋದೆವು.

ಮಾರನೆಯ ದಿನ ಹಳ್ಳಿಯಲ್ಲಿ ಯಾರು ಸಿಕ್ಕಿದರೂ ನಮ್ಮನ್ನು ಕೇಳುವವರೇ, "ಯಾಕೆ ಹೋದಿರಿ? ಕತ್ತಲ ರಾತ್ರಿ ಹೊಳೆ ದಾಟುವ ಹುಚ್ಚು ಸಾಹಸ ಯಾಕೆ? ಎಷ್ಟು ಜನ ಆ ನದಿಯಲ್ಲಿ ಬಿದ್ದು ಪ್ರಾಣ ಕಳೆದುಕೊಂಡಿದ್ದಾರೆ ಅಂತಾ ಗೊತ್ತಾ ನಿಮಗೆ!" ನನಗೆ ಸ್ನೇಹಿತರಾಗಿದ್ದ ಕೆಲವರು ತರುಣರು ನನ್ನ ಸಾಹಸ ಕೇಳಿ ಚಕಿತರಾಗುತ್ತಿದ್ದರು. ಹಿರಿಯರು ಮಾತ್ರ ಗಾಬರಿಗೊಂಡಿದ್ದರು. "ಪ್ರಸ್ತವಾಗುವುದಕ್ಕೆ ಮೊದಲೇ ಅವಳನ್ನು ಹೊರಗೆ ಹೋಗಲು ಬಿಟ್ಟಿದ್ದು ಯಾಕೆ?" ಹೀಗೆ ಸಾರ್ವತ್ರಿಕವಾಗಿ ಬಂದ ಟೀಕೆಯ ಫಲ ನನ್ನ ಅತ್ತೆಯವರು ಸಾವಿತ್ರಿಯ ಚಲನವಲನಗಳ ಮೇಲೆ ನಿರ್ಬಂಧವನ್ನು ಹೆಚ್ಚು ಮಾಡಿದ್ದು.

ಆಗ ನಡೆದ ಇನ್ನೂ ಒಂದು ಘಟನೆ ನನಗೆ ನೆನಪಾಗುತ್ತದೆ. ಹೇಗೆ ಎಂದು ನೆನಪಿಲ್ಲ. ಅಂತೂ ಏನಾದರೂ ಕಾರಣದಿಂದ ಸಾವಿತ್ರಿಯು ನನ್ನೊಂದಿಗೆ ಶಿವಮೊಗ್ಗಕ್ಕೆ ಬರಲು ಒಪ್ಪಿಸಿದ್ದೆ. ತೆಪ್ಪದ ಮೇಲೆ ನದಿದಾಟಿ, ಬಸ್ಸುಹಿಡಿಯಲೆಂದು ಮುಖ್ಯರಸ್ತೆಗೆ ಬಂದೆವು. ಏನೋ ಕಾರಣದಿಂದ ಯಾವ ಬಸ್ಸೂ ನಿಲ್ಲಲಿಲ್ಲ, ಸ್ವಲ್ಪ ಹೊತ್ತಾದ ಮೇಲೆ ಹೊಸಹಳ್ಳಿವರೆಗೆ ನಡೆದುಹೋಗಿ ಅಲ್ಲಿ ನನ್ನ ಮಿತ್ರನೊಬ್ಬನಿಂದ ಸೈಕಲನ್ನು ತೆಗೆದುಕೊಂಡೆ. ಆದರೆ ಈಗ ಇನ್ನೊಂದು ಸಮಸ್ಯೆ ಇತ್ತು. ಸಾವಿತ್ರಿ ಬೈಸಿಕಲ್ ಮೇಲೆ ಕುಳಿತುಕೊಳ್ಳಲು ಒಪ್ಪಲಿಲ್ಲ. "ನೋಡಿದವರು ನಗುತ್ತಾರೆ" ಎಂದುಬಿಟ್ಟಳು.

ನೂರು ಗಜಗಳಷ್ಟು ದೂರ ನಡೆದೇ ಹೋದೆವು. ಹಳ್ಳಿಯಿಂದ ದೂರವಾಗಿದ್ದೆವು . ಸೈಕಲಿನ ಮುಂದಿನ ಬಾರ್ ಮೇಲೆ ಕೂರಿಸಿಕೊಂಡೆ, ಬೈಸಿಕಲ್ ಸವಾರಿ ಹೊರಟಿತು. ಮೊದಲು ಒಲ್ಲೆನೆಂದರೂ, ವೇಗವಾಗಿ ಹೋಗುವಾಗ ಮುಖಕ್ಕೆ ಗಾಳಿಯು ಬಡಿಯುವುದು ಅವಳಿಗೆ ಇಷ್ಟವಾಯಿತು.

ಸ್ವಲ್ಪ ದೂರ ಹೀಗೇ ಹೋದೆವು. ಅಷ್ಟರಲ್ಲಿ ಮತ್ತೂರಿನ ಕೆಲವು ಜನರು ಎದುರಾಗಿ ಬರುತ್ತಿದ್ದರು. ನಮ್ಮನ್ನು ನೋಡಿ ಅವರು ನಕ್ಕರು. ಆಮೇಲೆ ನನಗೆ ಪರಿಚಯವಿದ್ದ ಪಾರ್ಥಸಾರಥಿ ಎನ್ನುವವರು ಸೈಕಲ್ ಮೇಲೆ ಎದುರಿಗೆ ಬಂದರು. ಅವರೂ ನಮ್ಮನ್ನು ನೋಡಿ ನಕ್ಕು , ಅವತ್ತೇ ನನ್ನ ಷಡ್ಡಕನ ಬಳಿಗೆ ಹೋಗಿ ತಾನು ಕಂಡದ್ದನ್ನು ತಿಳಿಸಿದರು.

ಮಾರನೆಯ ದಿನದ ವೇಳೆಗೆ ಈ ಬೈಸಿಕಲ್ ಸವಾರಿ ಇಡೀ ಹಳ್ಳಿಯ ಚರ್ಚೆಯ ವಸ್ತುವಾಯಿತು. ಮತ್ತೆ ಸಾವಿತ್ರಿಗೆ ಇಷ್ಟೊಂದು ಸಲಿಗೆ ಕೊಟ್ಟಿದ್ದಕ್ಕೆ ಅತ್ತೆಯವರು ನಿಂದೆಗೊಳಗಾಗಿರಬೇಕು.

ಇದು ಸಾಕಾಗಿ, ನಾನು ಬಿಗಿಯಾಗಿದ್ದುದರಿಂದ ಕೆಲವು ದಿನಗಳ ಅನಂತರ ಸಾವಿತ್ರಿಯನ್ನು ಅಲ್ಲಿಯ ಶಾಲೆಯ ಆಟದ ಬಯಲಿಗೆ ಕರೆದೊಯ್ದು ಬೈಸಿಕಲ್ ಹತ್ತಿ ಸವಾರಿ ಮಾಡುವುದನ್ನು ಹೇಳಿಕೊಡಲು ತೊಡಗಿದೆ. ಒಡನೆಯೇ ನಮ್ಮ ಸುತ್ತ ಜನರ ಒಂದು ಗುಂಪು ನೆರೆಯಿತು. ದೊಡ್ಡವರು ಇದನ್ನು ಒಪ್ಪದೆ ಗುಸುಗುಟ್ಟುತ್ತಿದ್ದರು. ಸಾವಿತ್ರಿಯ ವಯಸ್ಸಿನವರೇ ಕಿರಿಯರು ಆಶ್ಚರ್ಯದಿಂದ ನೋಡುತ್ತಿದ್ದರು. ವಾಸ್ತವವಾಗಿ ಅವಳ ಗೆಳತಿಯರಲ್ಲಿ ಒಬ್ಬಳನ್ನು, ಬಂದು ಸಾವಿತ್ರಿಯೊಂದಿಗೆ ನೀನೂ ಕಲಿತುಕೊ ಎಂದು ಕರೆದೆ.

ಅದನ್ನು ಕೇಳಿದವನೇ ಗುಂಪಿನಲ್ಲಿದ್ದ ಅವಳ ಅಣ್ಣನು ಮುಂದೆ ನುಗ್ಗಿಬಂದು, "ಸೈಕಲ್ ಕಲಿಯಲು ಹೋದರೆ ನಿನ್ನ ಕಾಲು ಮುರಿಯುತ್ತೇನೆ" ಎಂದು ಗದರಿಸಿ ಎಳೆದುಕೊಂಡು ಹೊರಟು ಹೋದನು.

ಸಾವಿತ್ರಿ ಲೋಯರ್ ಸೆಕೆಂಡರಿ (ನಾಲ್ಕನೆಯ ವರ್ಷದಲ್ಲಿ) ಓದುತ್ತಿದ್ದಳು. ಮದುವೆ ತೀರ್ಮಾನವಾದಾಗ ಶಾಲೆಗೆ ಹೋಗುವುದನ್ನು ನಿಲ್ಲಿಸಿಬಿಟ್ಟಳು. ಮದುವೆಯಾದ ಮೇಲೆ ನನಗೆ ಇದು ತಿಳಿದು,ಅವಳು ಶಾಲೆಗೆ ಹೋಗಿ ಓದು ಮುಂದುವರಿಸಲಿ ಎಂದು ನನ್ನ ಭಾವಮೈದುನನಿಗೆ ಹೇಳಿದೆ. ಆದರೆ ಅವರ ಮನೆಯಲ್ಲಿ ಯಾರೂ ಅದನ್ನು ಒಪ್ಪುತ್ತಿರಲಿಲ್ಲ. ನನ್ನ ಒತ್ತಡಕ್ಕಾಗಿ ಸಾವಿತ್ರಿಯನ್ನು ಶಾಲೆಗೆ ಕಳುಹಿಸಲು ತೊಡಗಿದರು. ಆ ದಿನಗಳಲ್ಲಿ ಲೋಯರ್ ಸೆಕೆಂಡರಿ (ನಾಲ್ಕನೇ ವರ್ಷ) ಪಬ್ಲಿಕ್ ಪರೀಕ್ಷೆ. ಅವಳ ತರಗತಿಯ ಉಪಾಧ್ಯಾಯ ರೊಂದಿಗೆ ನಾನು ಮಾತನಾಡಿದೆ. ಅವಳು ಬುದ್ಧಿವಂತೆಯಾದ ವಿದ್ಯಾರ್ಥಿನಿ ಎಂದು ತಿಳಿಯಿತು. ತರಗತಿಯಲ್ಲಿ ಯಾರು ಮೊದಲ ಸ್ಥಾನ ಪಡೆಯುವವರೋ ಅವರಿಗೆ ೧೦ ರೂಪಾಯಿಗಳನ್ನೂ, ಎರಡನೆಯ ಸ್ಥಾನ ಪಡೆಯುವರಿಗೆ 8 ರೂಪಾಯಿಗಳನ್ನೂ ಬಹುಮಾನ ನೀಡುವುದಾಗಿ ಹೇಳಿದೆ. ಆದರೆ ಈ ಬಹುಮಾನಗಳನ್ನು ಕೊಡುತ್ತಿರುವುದು ನಾನು ಎಂಬುದು ಯಾರಿಗೂ ತಿಳಿಯಬಾರದು ಎಂದು ಪ್ರಾರ್ಥಿಸಿಕೊಂಡೆ. ಉಪಾಧ್ಯಾಯರಿಗೆ ತುಂಬಾ ಸಂತೋಷವಾಗಿ ಒಡನೆಯೇ ಅದನ್ನು ಪ್ರಕಟಿಸಿದರು. ಆಗ ೧೦ ರೂಪಾಯಿ ಬಹಳ ದೊಡ್ಡ ಮೊತ್ತ. ಪ್ರತಿಯೊಬ್ಬರೂ ತುಂಬಾ ಕಷ್ಟಪಟ್ಟು ವ್ಯಾಸಂಗ ಮಾಡತೊಡಗಿದರು. ಪರೀಕ್ಷೆ ಮುಗಿಯಿತು. ಸಾವಿತ್ರಿ ತರಗತಿಯಲ್ಲಿ ಮೊದಲನೆಯ ರ್‍ಯಾಂಕ್

ಗಳಿಸಿದ್ದಳು. ಅಶ್ವತ್ಥ ಎಂಬ ಹುಡುಗ ಎರಡನೆಯ ರ್‍ಯಾಂಕ್ ಪಡೆದಿದ್ದ. ಆಮೇಲೆ ಆತ ಬಹು ಪ್ರತಿಭಾಸಂಪನ್ನ ವೇದವಿದ್ವಾಂಸನಾದ. ಒಂದು ಸಮಾರಂಭದಲ್ಲಿ ಊರಿನ ಗಣ್ಯರು ಮತ್ತು ಹಿರಿಯರೆಲ್ಲರ ಸಮ್ಮುಖದಲ್ಲಿ ಬಹುಮಾನಗಳನ್ನು ವಿತರಿಸಲಾಯಿತು. ಬಹುಮಾನ ತೆಗೆದುಕೊಂಡಾಗ ಸಾವಿತ್ರಿಯ ಮುಖವೆಲ್ಲ ನಗುವೋ ನಗು. ಬಹುಮಾನಗಳನ್ನು ಕೊಟ್ಟವರು ಯಾರು ಎಂದು ತಿಳಿಯಲು ಜನರು ಬಯಸಿದಾಗ, ಅವರು ತಮ್ಮ ಹೆಸರನ್ನು ಗೋಪ್ಯವಾಗಿಡಲು ಬಯಸಿದ್ದಾರೆ ಎಂದು ಉಪಾಧ್ಯಾಯರು ಹೇಳಿದರು.

ಸಾವಿತ್ರಿಯ ಪರಿಶ್ರಮದಿಂದ ನನಗೆ ತುಂಬಾ ಸಂತೋಷವಾಗಿತ್ತು. ಎಸ್‌ಎಸ್‌ಎಲ್‌ಸಿವರೆಗೂ ಓದು ಮುಂದುವರಿಸು ಎಂದು ಪ್ರೋತ್ಸಾಹಿಸಿದೆ. ಆದರೆ ಅದಕ್ಕೆ ಶಿವಮೊಗ್ಗಕ್ಕೇ ಹೋಗಬೇಕಾಗಿತ್ತು. ದಿನಾಲೂ ನಡೆದು ಹೋಗುವ ಪ್ರಶ್ನೆಯೇ ಇರಲಿಲ್ಲ. ಹಾಗಾಗಿ ತಾತ್ಕಾಲಿಕವಾಗಿ ಅವಳ ವಿದ್ಯಾಭ್ಯಾಸ ಸ್ಥಗಿತಗೊಂಡಿತು.

ಆ ವೇಳೆಗೆ ಅವಳ ಜವಾಬ್ದಾರಿಯನ್ನು ವಿಧ್ಯುಕ್ತವಾಗಿ ನನಗೆ ವಹಿಸಿಕೊಡಲು ಕುಟುಂಬದವರು ಕಾತರರಾಗಿದ್ದರು. ಪ್ರಸ್ತವನ್ನು ನಡೆಸಿ ಸಾವಿತ್ರಿಯನ್ನು ನನ್ನ ಜತೆಯಲ್ಲಿ ಕರೆದುಕೊಂಡು ಹೋಗುವುದು ಎಂದು ನಿರ್ಧರಿಸಿದರು.

ಪ್ರಸ್ತ ಮುಗಿದ ಮೇಲೆ ನಾವು ಹಾಸನಕ್ಕೆ ಹೋದೆವು . ಅಲ್ಲೊಂದು ಬಾಲಕಿಯರ ಪ್ರೌಢಶಾಲೆಯಿತ್ತು. ಸಾವಿತ್ರಿಯನ್ನು ಅಲ್ಲಿಗೆ ಸೇರಿಸಿದೆ. ಆದರೆ ಕೆಲವೇ ದಿನಗಳಲ್ಲಿ ಶಾಲೆಗೆ ಹೋಗಲು ಆಸಕ್ತಿ ಇಲ್ಲವೆಂದು ಅವಳು ಹೇಳಿಬಿಟ್ಟಳು. ಮತ್ತೂರಿನ ಎಲ್ಲಾ ವಿವಾಹಿತ ತರುಣಿಯರಂತೆ ಗೃಹಿಣಿಯಾಗಿ ಪತಿಯನ್ನೂ , ಪತಿಗೃಹದ ಉಸ್ತುವಾರಿಯನ್ನೂ ನೋಡಿ ಕೊಳ್ಳಬೇಕು ಎಂಬುದು ಅವಳ ಇಷ್ಟವಾಗಿತ್ತು. ಎಷ್ಟು ಬುದ್ಧಿ ಹೇಳಿದರೂ ಅವಳನ್ನು ಒಪ್ಪಿಸಲು ಸಾಧ್ಯವಾಗಲಿಲ್ಲ. ನನಗೆ ಬಹಳ ಕೋಪಬಂದಿತು. ಓದು ಮುಂದುವರಿಸದೆ ಹೋದರೆ ಅವಳನ್ನು ಮತ್ತೂರಿಗೆ, ತಾಯಿ ಮನೆಗೆ ಕಳಿಸಿಬಿಡುವುದಾಗಿ ಹೆದರಿಸಿದೆ. ಒಲ್ಲದ ಮನಸ್ಸಿನಿಂದ ಮತ್ತೆ ಶಾಲೆಗೆ ಹೋಗಲು ತೊಡಗಿದಳು.

ಕೆಲವು ದಿನಗಳ ಅನಂತರ ಮೆಡಿಕಲ್ ರೆಪ್ರೆಸೆಂಟೆಟಿವ್ ಆಗಿ ನನ್ನ ಕೆಲಸದ ಮೇಲೆ ಬೆಂಗಳೂರಿಗೆ ಹೋಗಬೇಕಾಯಿತು. ಅಲ್ಲಿದ್ದಾಗ ಹಾಸನದಿಂದ ನನ್ನ ತಂದೆತಾಯಿ ಕಾಗದ ಬರೆದರು, ಸಾವಿತ್ರಿ ಶಾಲೆಗೆ ಹೋಗುವುದನ್ನು ನಿಲ್ಲಿಸಿದ್ದಾಳೆ ಎಂದು. ನನಗೆ ಕೋಪ ಉಕ್ಕೇರಿತು. ಹಾಸನಕ್ಕೆ ಬಂದವನೇ 'ಗಂಟು ಮೂಟೆ ಕಟ್ಟಿಕೋ, ಮತ್ತೂರಿಗೆ ಹೋಗಬೇಕು' ಎಂದು ಹೇಳಿದೆ. ಅವಳ ಮನೆಯವರಿಗೆ, ಸಾವಿತ್ರಿ ಓದಲು ಇಷ್ಟಪಡುವುದಿಲ್ಲವಾದ್ದರಿಂದ ನನಗೆ ತುಂಬಾ ಅಸಮಾಧಾನ ವಾಗಿರುವುದಾಗಿಯೂ ಅವರ ಮಗಳನ್ನು ಅವರೇ ಇಟ್ಟುಕೊಳ್ಳ ಬಹುದೆಂದೂ, ಶಾಲೆಗೆ ಹೋಗುವ ವಿಷಯದಲ್ಲಿ ಅವಳು ತನ್ನ ಮನಸ್ಸು ಬದಲಾಯಿಸುವವರೆಗೆ ಅವಳು ನನಗೆ ಬೇಕಾಗಿಲ್ಲವೆಂದೂ ಖಡಾ ಖಂಡಿತವಾಗಿ ಹೇಳಿಬಿಟ್ಟೆ.

೫. ಇಟಗಿ ಹೈದರಾಬಾದನ್ನು ಎದುರಿಸಿತು

ಬಿರ್ಲಾ ಲ್ಯಾಬೊರೇಟರಿಗಾಗಿ ಇನ್ನು ಕೆಲಸ ಮಾಡುವುದು ನನಗೆ ಸಾಧ್ಯವಿಲ್ಲವೆನಿಸಿತು. ಕೆಲಸದ ಬಗೆಗೆ ನನ್ನದೇನೂ ಆಕ್ಷೇಪಣೆ ಯಿರಲಿಲ್ಲ. ಅದು ೧೯೪೭ನೆಯ ವರ್ಷ. ಸ್ವಾತಂತ್ರ್ಯ ಬಂದಿದ್ದರೂ, ದೇಶಕ್ಕಾಗಿ ಏನಾದರೂ ಮಾಡಬೇಕೆಂದು ನನ್ನ ಮನಸ್ಸು ತುಡಿಯುತ್ತಿತ್ತು. ಹೈದರಾಬಾದ್ ಹೋರಾಟಕ್ಕೆ ಸೇರಿಕೊಂಡೆ.

೧೯೪೭ರಲ್ಲಿ ದೇಶವು ಸ್ವಾತಂತ್ರ್ಯವನ್ನು ಗಳಿಸಿದಾಗ ಕಾಶ್ಮೀರ, ಜುನಾಗಢ ಮತ್ತು ಹೈದರಾಬಾದ್ ಮೊದಲಾದ ಕೆಲವು ಸಂಸ್ಥಾನಗಳು ಒಕ್ಕೂಟಕ್ಕೆ ಸೇರಿಕೊಳ್ಳಲಿಲ್ಲ. ಆ ಆದೇಶಕ್ಕೆ ಸಹಿಹಾಕಲಿಲ್ಲ. ಅಲ್ಲಿಯ ರಾಜಮಹಾರಾಜರು ಸುಲಭವಾಗಿ ತಮ್ಮ ಅಧಿಕಾರವನ್ನೂ ಸವಲತ್ತು ಗಳನ್ನೂ ಬಿಟ್ಟುಕೊಡಲು ಸಿದ್ಧರಾಗಿರಲಿಲ್ಲ. ಸ್ವಲ್ಪ ಒಲಿಸಿದ ಮೇಲೆ ಹಲವು ರಾಜ್ಯಗಳು ಒಪ್ಪಿಕೊಂಡುವಾದರೂ ಹೈದರಾಬಾದಿನ ನಿಜಾಮನು ರಜಾಕಾರರ ನಾಯಕ ಖಾಸಿಂ ರಿಜ್ವಿ ಪ್ರಭಾವಕ್ಕೆ ಸಿಕ್ಕಿ , ತನ್ನ ಅಧಿಕಾರವನ್ನು ಬಿಡಲು ನಿರಾಕರಿಸಿದನು. ಸ್ಥಳೀಯ ಅಹಿಂಸಾತ್ಮಕ ಸ್ವಾತಂತ್ರ್ಯ ಹೋರಾಟವನ್ನು ಉಗ್ರಗಾಮಿಗಳಾದ ರಜಾಕಾರರು ದಯಾದಾಕ್ಷಿಣ್ಯವಿಲ್ಲದೆ ಬಗ್ಗುಬಡಿದರು.

೧೯೪೭ರಲ್ಲಿ ಚಿತ್ರದುರ್ಗದಲ್ಲಿ ನಡೆದ ಮೈಸೂರು ರಾಜ್ಯ ಕಾಂಗ್ರೆಸ್ ಅಧಿವೇಶನದಲ್ಲಿ ಹನುಮಂತಯ್ಯನವರನ್ನು ಸೋಲಿಸಿ ಸಿದ್ಧಲಿಂಗಯ್ಯ ನವರು ಅಧ್ಯಕ್ಷರಾಗಿ ಆಯ್ಕೆಯಾದರು. ಅದಾದ ಒಡನೆಯೇ ಸಿದ್ಧಲಿಂಗಯ್ಯನವರು ನನ್ನನ್ನು ಒತ್ತಟ್ಟಿಗೆ ಕರೆದು, ನಾನು ಹೈದರಾಬಾದ್ ರಾಜ್ಯದ ರಾಯಚೂರು ಜಿಲ್ಲೆಯ ಇಟಗಿ ಎಂಬ ಸ್ಥಳಕ್ಕೆ ಹೋಗ ಬೇಕೆಂದೂ, ರಜಾಕಾರರ ವಿರುದ್ಧವಾಗಿ ಅಲ್ಲಿ ಪ್ರತಿಭಟನೆಯನ್ನು ಸಂಘಟಿಸಬೇಕೆಂದೂ ಹೇಳಿದರು. ಅದು ರೋಣ ತಾಲೂಕಿನ ಮಧ್ಯೆ ಹತ್ತು-ಹನ್ನೆರಡು ಹಳ್ಳಿಗಳೊಂದಿಗೆ ಸೇರಿಕೊಂಡಿದ್ದ ಒಂದು ಪ್ರದೇಶ. ಅದು ಈಗ ಧಾರವಾಡ ಜಿಲ್ಲೆಯಲ್ಲಿದೆ.

ನಡುಗಡ್ಡೆಯಂತಹ ಈ ಪ್ರದೇಶದಲ್ಲಿ ೧೪ ಹಳ್ಳಿಗಳಿವೆ. ಅದು ಭಾರತ ಒಕ್ಕೂಟದೊಳಕ್ಕೆ ಚಾಚಿಕೊಂಡಿದೆ. ಸುಮಾರು ೧೨೫೦ ಗಜ ಅಗಲವಾಗಿರುವ ಭೂಭಾಗವು ಅದನ್ನು ಹೈದರಾಬಾದ್ ಸಂಸ್ಥಾನಕ್ಕೆ ಕೂಡಿಸಿದೆ. ನಿಜಾಂ ಪೊಲೀಸರ ಹಾಗೂ ರಜಾಕಾರರ ಭೀತಿಯಿಂದಾಗಿ ಗ್ರಾಮಸ್ಥರು ತಮ್ಮ ಹಳ್ಳಿಗಳನ್ನು ತೊರೆದು ಭಾರತ ಒಕ್ಕೂಟದೊಳಕ್ಕೆ ನುಸುಳಿದ್ದರು. ಅವರೆಲ್ಲ ಏನು ಮಾಡಬೇಕೆಂದು ತೋಚದೆ

ದಿಗ್ಭ್ರಾಂತರಾಗಿದ್ದರು. ಅವರ ನೈತಿಕ ಸ್ಥೈರ್ಯ ಕುಸಿದುಹೋಗಿತ್ತು. ನಾನು ಹೋಗಿ ಅವರ ನಾಯಕರನ್ನು ಇಟಗಿಯಿಂದ ಸುಮಾರು ಮೂರು ಮೈಲು ದೂರದ ಸೂಡಿ ಎಂಬಲ್ಲಿ ಸಂಧಿಸಿದಾಗ ಇದ್ದ ಪರಿಸ್ಥಿತಿ ಇದು.

ಅವರೊಂದಿಗೆ ನಾನು ಪರಿಸ್ಥಿತಿಯನ್ನು ಕುರಿತು ಚರ್ಚಿಸಿದೆ. ಭಾರತ ಒಕ್ಕೂಟದೊಂದಿಗೆ ಸೇರಿಕೊಳ್ಳಲು ಹೈದರಾಬಾದಿನ ನಿರಾಕರಣೆ ಬಹಳ ಕಾಲ ಮುಂದುವರಿಯುವುದಿಲ್ಲ. ಅವರು ತಮ್ಮ ತಮ್ಮ ಹಳ್ಳಿಗಳಿಗೆ ಹಿಂದಿರುಗಿ ಹೋಗಬೇಕು ಎಂದು ಮನವಿ ಮಾಡಿಕೊಂಡೆ. ಅಲ್ಲಿಗೆ ನಾನು ಹೋದುದರ ಉದ್ದೇಶವೇ ರಜಾಕಾರರನ್ನು ಎದುರಿಸಿ ತಮ್ಮನ್ನು ರಕ್ಷಿಸಿಕೊಳ್ಳಲು ಸಹಾಯ ಮಾಡುವುದು. ಹಳ್ಳಿಗೆ ಹಿಂದಿರುಗಲು ನಾನೇ ಅವರ ಜೊತೆಗಿರುವುದಾಗಿ ಹೇಳಿದೆ. ಅವರಿಗೆ ಈ ವಿಚಾರ ಇಷ್ಟವಾಯಿತು. ಒಂದು ಬೆಳಗ್ಗೆ ಮೆರವಣಿಗೆಯಲ್ಲಿ ಅವರ ಹಳ್ಳಿಗಳ ಕಡೆ ಹೊರಟೆವು. ಅವರಲ್ಲಿ ಧೈರ್ಯವನ್ನು ತುಂಬುವ ಸಲುವಾಗಿ ಪಕ್ಕದಲ್ಲಿದ್ದ ತೋಟದ ಹೊಲಕ್ಕೆ ಒಂದು ನಾಡಬಾಂಬು ಎಸೆದೆ. ಅವರು ದಿಗ್ಭ್ರಾಂತರಾದರು! ಆ ಬಾಂಬು ಸುಮಾರು ೧೫ ಅಡಿ ಸುತ್ತಣ ಜಾಗವನ್ನು ತೆರವು ಮಾಡಿಬಿಟ್ಟಿತ್ತು. ಬೆಂಕಿಯ ಶಕ್ತಿಯ ಈ ಪ್ರದರ್ಶನವು ಅವರ ನೈತಿಕಸ್ಥೈರ್ಯವನ್ನು ಸಾಕಷ್ಟು ಹೆಚ್ಚಿಸಿತು.

ನಾನು, ಹಳ್ಳಿಯಾದ ಇಟಗಿಯಲ್ಲಿ ಬಿಡಾರ ಹೂಡಿದೆ. ರಜಾಕಾರರ ವಿರುದ್ಧ ಹೋರಾಡಲು ಸ್ವಯಂಸೇವಕರಿಗೆ ಗೆರಿಲ್ಲಾ ಹೋರಾಟದ ತರಬೇತಿಕೊಟ್ಟು ಅವರನ್ನು ಸಂಘಟಿಸುವುದರಲ್ಲಿ ತೊಡಗಿದೆ. ಅನೇಕ ಮಹಿಳೆಯರೂ ತರಬೇತಿಗೆ ಸೇರಿಕೊಂಡರು. ಅವರ ಹಳ್ಳಿಗಳು ಹೈದರಾಬಾದ್ ರಾಜ್ಯಕ್ಕೆ ಕೂಡಿಸಿದ ಆ ಕಿರಿದಾದ ಭೂಭಾಗವನ್ನು ಎಷ್ಟು ಎಚ್ಚರಿಕೆಯಿಂದ ರಕ್ಷಿಸಿದವೆಂದರೆ ರಾಜ್ಯದ ಪೊಲೀಸರಾಗಲೀ ರಜಾಕಾರರಾಗಲೀ ಅಲ್ಲಿಗೆ ಬರುವುದು ಅಸಾಧ್ಯವಾಗಿತ್ತು.

ಹಳ್ಳಿಗಳು ವಾಸ್ತವಿಕವಾಗಿ ಸ್ವತಂತ್ರವಾದವು. ಅಲ್ಲಲ್ಲಿಯ ಪಂಚಾಯತುಗಳು ಅವುಗಳ ಆಡಳಿತ ನಿರ್ವಹಣೆ ಮಾಡುತ್ತಿದ್ದವು.

ಪಂಚಾಯಿತಿಯ ಸಮಿತಿಯ ಅಧ್ಯಕ್ಷರಾದ ಶ್ರೀ ಚನ್ನಬಸವಯ್ಯ ಬಹು ಸಮರ್ಥರಾದ ಕುಶಲಿಯಾದ ಆಡಳಿತಗಾರರು. ವ್ಯಾಜ್ಯಗಳಲ್ಲಿ ಅವರು ನೀಡುತ್ತಿದ್ದ ತೀರ್ಪನ್ನು ಎಲ್ಲರೂ ಗೌರವಪೂರ್ವಕವಾಗಿ ಒಪ್ಪಿಕೊಳ್ಳುತ್ತಿದ್ದರು. ಭಾರತ ಒಕ್ಕೂಟಕ್ಕೆ ಸೇರದ ಭಾಗಗಳಿಂದಲೂ ಜನರು ಅಲ್ಲಿಗೆ ಬಂದು ತಮ್ಮ ವ್ಯಾಜ್ಯಗಳನ್ನು ಅವರ ನೆರವಿನಿಂದ ಪರಿಹರಿಸಿಕೊಂಡು ಹೋಗುತ್ತಿದ್ದರು. ಪ್ರದೇಶದ ಎಲ್ಲರೂ ಅವರನ್ನು 'ಗುರುಗಳು' ಎಂದು ಗೌರವದಿಂದ ಕರೆಯುತ್ತಿದ್ದರು. ನನಗೆ ನೆನಪಿರುವ ಮಟ್ಟಿಗೆ ಇತರ ಪಂಚಾಯಿತಿ ಸದಸ್ಯರು ಅಂದಾನಯ್ಯ, ಭೀಮಪ್ಪ , ಕರಿಯಪ್ಪ , ಸಂಗಯ್ಯಗೌಡ , ಅಂದಾನಪ್ಪಕುಮಾರ , ಶಂಕರಪ್ಪ , ಲಿಂಗಪ್ಪ, ರೇವಣ್ಣ, ಗೌಡಾಚಾರಿ, ಕಾಳಪ್ಪ ಮತ್ತು ನಿಂಗಪ್ಪ. ಪ್ರತಿಯೊಬ್ಬರೂ ತಮ್ಮ ಹೊಣೆಗಾರಿಕೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದ್ದರು. ಅವರು ನನಗೆ ನೀಡಿದ ಸಹಕಾರವಂತೂ ಬಹು ಅಮೂಲ್ಯವಾಗಿತ್ತು.

ಹೈದರಾಬಾದ್ ರಾಜ್ಯಪೊಲೀಸರೂ ರಜಾಕಾರರೂ ಗ್ರಾಮ ಸಮುಚ್ಚಯದೊಳಕ್ಕೆ ಪ್ರವೇಶಿಸಲು ಅನೇಕಸಾರಿ ಪ್ರಯತ್ನಿಸಿದರು. ಆದರೆ ಹೊಸದಾಗಿ ತರಬೇತಿ ಪಡೆದ ನಮ್ಮ ಸ್ವಯಂಸೇವಕರು ಅವರ ಪ್ರಯತ್ನವನ್ನು ವಿಫಲಗೊಳಿಸಿದರು. ಈ ಚಟುವಟಿಕೆಗಳನ್ನು ಡೆಕ್ಕನ್ ಹೆರಾಲ್ಡ್ ಪತ್ರಿಕೆಯು ೧೯೪೮ರ ಸೆಪ್ಟೆಂಬರ್ ೫ನೇ ತಾರೀಕಿನ ಸಂಚಿಕೆಯ ಕೊನೆಯಪುಟದಲ್ಲಿ ಒಂದು ಲೇಖನವಾಗಿ ಪ್ರಕಟಿಸಿತು.

ಹೀಗೆ ಇಟಗಿ ಮತ್ತು ಇತರ ಹಳ್ಳಿಗಳ ಪರಿಸ್ಥಿತಿ ಶಾಂತವಾಯಿತು. ಹಳ್ಳಿಗರು ಧೈರ್ಯವಾಗಿ, ರಜಾಕಾರರ ತೊಂದರೆಯಿಲ್ಲದೆ ತಮ್ಮ ಕೆಲಸಕಾರ್ಯಗಳಲ್ಲಿ ಮಗ್ನರಾಗಿದ್ದರು. ಹಾಗಾಗಿ ಕ್ವಿಟ್ ಇಂಡಿಯಾ ಕಾಲದಿಂದಲೂ ನನ್ನ ಜೊತೆಗಾರರಾಗಿದ್ದ ಎಂ.ಎಚ್. ಷಹಾ ಮುಂಬಯಿ ಯಿಂದ ತಮ್ಮೊಂದಿಗೆ ಕೆಲಸ ಮಾಡಲು ಕರೆದಾಗ ಹೋಗಲು ನಿರ್ಧರಿಸಿದೆ.

ಸಾವಿತ್ರಿ ಮತ್ತೂರಿನಲ್ಲಿ ಸಾಕಷ್ಟು ಕಷ್ಟಪಡುತ್ತಿದ್ದಾಳೆ, ನಿಂದನೆಗೆ ಟೀಕೆಗೆ ಗುರಿಯಾಗುತ್ತಿದ್ದಾಳೆ ಎಂದು ನನಗೆ ಅನ್ನಿಸಿತು. ಷಹಾ ಅವರ ಆಹ್ವಾನವನ್ನು ಒಪ್ಪಿಕೊಳ್ಳಲು ಅದೂ ಕಾರಣವಾಯಿತು. ಇಟಗಿಯಿಂದ ಸಾವಿತ್ರಿಗೆ ಒಂದು ತಂತಿ ಕಳಿಸಿ ಬೆಂಗಳೂರಿನಲ್ಲಿ ನನ್ನನ್ನು ಕೂಡಿಕೊಳ್ಳ ಬೇಕೆಂದು ತಿಳಿಸಿದೆ. ಅವಳ ಕಡೆಯವರು ಸಂತೋಷವಾಗಿ ಕಳುಹಿಸಿ ಕೊಟ್ಟರು. ನಾನು ಬೆಂಗಳೂರಿಗೆ ಹೋಗಿ ಸಾವಿತ್ರಿ ಬರುವುದನ್ನು ಕಾಯುತ್ತಿದ್ದೆ. ತಕ್ಷಣವೇ ಮುಂಬಯಿಗೆ ಹೊರಟುಬಿಟ್ಟೆವು.

ಷಹಾ ಅವರು ಪ್ರೀಮಿಯರ್ ಆಟೋಮೊಬೈಲ್ ಸಂಸ್ಥೆಯ 'ಸಿಬ್ಬಂದಿ ಮತ್ತು ಯೋಜನಾ ವ್ಯಾನೇಜರ್' ಆಗಿದ್ದರು. ಅಂಧೇರಿಯಲ್ಲಿದ್ದ ತಮ್ಮ ಬಂಗಲೆಯ ಕಾಂಪೌಂಡಿನೊಳಗೇ ಇದ್ದ ಒಂದು ಸಣ್ಣ ಕೊಠಡಿಯಲ್ಲಿ ಅಡುಗೆಪಾತ್ರೆಗಳು ಮೊದಲಾದ ಸೌಲಭ್ಯಗಳನ್ನು ಒದಗಿಸಿ ನಮಗಾಗಿ ಸಜ್ಜುಗೊಳಿಸಿದ್ದರು. ಕಾರ್ಖಾನೆಯಲ್ಲಿ ಅವರ ಕಚೇರಿಯಲ್ಲಿ ನಾನು ಒಬ್ಬ ಸ್ಟಾಫ್ ಅಸಿಸ್ಟೆಂಟ್ ಆಗಿ ಕೆಲಸ ಮಾಡ ಬೇಕಾಗಿತ್ತು. ವೇತನ ೬೦ ರೂಪಾಯಿ. ಅದೇನೂ ತೀರಾ ಕಡಮೆಯಲ್ಲ, ಜತೆಗೆ ಕಾರ್ಖಾನೆಗೆ ಹೋಗುವಾಗ ಮತ್ತು ಬರುವಾಗ ಅವರ ಜೊತೆಯಲ್ಲೇ ಕಾರಿನಲ್ಲಿ ಹೋಗಿಬರುತ್ತಿದ್ದೆ.

ಸಾವಿತ್ರಿಗೆ ಕೈತುಂಬಾ ಕೆಲಸವಿರಲಿಲ್ಲವಾದ್ದರಿಂದ ಮನೆಗೆ ದೂರವಲ್ಲದ ಒಂದು ಶಾಲೆಗೆ ಅವಳನ್ನು ಸೇರಿಸಿದೆ. ಶ್ರೀಮತಿ ಷಹಾ ನಮ್ಮನ್ನು ತಾಯಿಯಂತೆ ನೋಡಿಕೊಂಡರು. ಅನೇಕ ದಿನ ಅವರ ಮನೆಯಲ್ಲೇ ನಮ್ಮ ಊಟ ಮುಗಿದು ಹೋಗುತ್ತಿತ್ತು. ನಮ್ಮ ಎಲ್ಲಾ ಕಷ್ಟಗಳಲ್ಲಿ, ಸಮಸ್ಯೆಗಳಲ್ಲಿ ಅವರು ನಮಗೆ ಸಹಾಯ ಮಾಡಿದರು.

ಅದು ನಾವು ಒಟ್ಟಿಗೆ ಜೀವಿಸುವ ಮೊತ್ತ ಮೊದಲ ಅನುಭವ ವಾಗಿತ್ತು. ವಾಸ್ತವವಾಗಿ ನೋಡಿದರೆ ಸಾವಿತ್ರಿಗೆ ನಾನು ಇನ್ನೂ ಅಪರಿಚಿತ. ನಮ್ಮ ಸ್ಥಿತಿಗತಿ ಸ್ವಲ್ಪ ಮಟ್ಟಿಗೆ ಸುಧಾರಿಸಿದ್ದರೂ ಇನ್ನೂ ಅಹನ್ಯಹನಿ ಜೀವನವೇ ಆಗಿತ್ತು. ಒಂದೋ ಎರಡೋ ಷರ್ಟುಗಳು

ಮತ್ತು ಪ್ಯಾಂಟುಗಳು, ಕೆಲವು ಪಂಚೆಗಳು ಇಷ್ಟೇ ನನ್ನ ಬಳಿ ಇದ್ದ ಬಟ್ಟೆ ; ಸಾವಿತ್ರಿಗೆ ಎರಡು ಧರ್ಮಾವರಂ ಸೀರೆಗಳು, ಎರಡು ಸಾಮಾನ್ಯ ನೂಲಿನ ಸೀರೆಗಳು ಇದ್ದವು. ಕಂಟ್ರೋಲ್ ದರದ ಅಂಗಡಿಯಲ್ಲಿ ಮೂರು ರೂಪಾಯಿಗಳಿಗೆ ಒಂದರಂತೆ ಎರಡು ಬಿಳಿಯ ಮಿಲ್ ಸೀರೆಗಳನ್ನು ತೆಗೆದುಕೊಟ್ಟಿದ್ದೆ. ಅವುಗಳನ್ನು ಉಟ್ಟು ಅವಳು ಶಾಲೆಗೆ ಹೋಗುತ್ತಿದ್ದಳು. ಆ ಮೂರು ರೂಪಾಯಿ ಸೀರೆಯಲ್ಲೂ ಅವಳು ಸೊಗಸಾಗಿ ಕಾಣಿಸುತ್ತಿದ್ದಳು. ಅವಳ ತಾಯಿ ಮನೆಯಿಂದ ಕಳಿಸಿ ಕೊಟ್ಟಿದ್ದ ಕೆಲವೇ ಪಾತ್ರೆ ಪಡಗಗಳು ನಮಗೆ ಸಾಕಾಗಿದ್ದವು . ಸರಳವಾದ ಊಟ ಮಾಡುತ್ತಿದ್ದೆವು. ಅವಳಿಗೆ ಮೊದಲು ಅಡುಗೆ ಮಾಡಿ ಅಭ್ಯಾಸವಿರಲಿಲ್ಲ. ಆದರೆ ಬೇಗನೆ ಎಲ್ಲವನ್ನೂ ಕಲಿತುಕೊಂಡಳು.

ಅವಕಾಶ ದೊರೆತಾಗಲೆಲ್ಲಾ ನಾನು ಸಾವಿತ್ರಿಯನ್ನು ಹೊರಗೆ ಕರೆದೊಯ್ಯುತ್ತಿದ್ದೆ. ಭಾನುವಾರಗಳಂದು ವಾಡಾಲಾದಲ್ಲಿದ್ದ ನನ್ನ ಒಬ್ಬ ಗೆಳೆಯನ ಮನೆಗೆ ಹೋಗುತ್ತಿದ್ದೆವು. ಆತ ಎಲೆಕ್ಟ್ರಿಕಲ್ ಇಂಜಿನಿಯರ್, ಬೆಂಗಳೂರಿನಿಂದ ಬಂದವನು. ಬಹಳ ದಯಾಳುವಾದ ಉದಾರಿಯಾದ ಮನುಷ್ಯ. ನಮ್ಮ ಕಷ್ಟಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ನಾವು ಒಂದೇ ಒಂದು ಕಾಸನ್ನೂ ವೆಚ್ಚ ಮಾಡಲು ಬಿಡುತ್ತಿರಲಿಲ್ಲ. ತಿಂಡಿತೀರ್ಥ–ಹಬ್ಬಗಳು–ಸಿನಿಮಾ ಟಿಕೆಟ್ ಎಲ್ಲದಕ್ಕೂ ತಾನು ಮುಂದಾಗಿ ಹಣ ಕೊಟ್ಟುಬಿಡುತ್ತಿದ್ದನು. ಮನೆಗೆ ಹಿಂದಿರುಗುವ ಸಮಯಬಂದಾಗ ವಾಡಾಲ ನಿಲ್ದಾಣದವರೆಗೂ ನಮ್ಮ ಜತೆಯಲ್ಲಿ ಬಂದು, ತಮಾಷೆ ಮಾಡುತ್ತಾ ನಮ್ಮ ಗಮನ ಬೇರೆ ಕಡೆ ಸೆಳೆದು ನಮಗಾಗಿ ಟಿಕೆಟ್ ಕೊಂಡುಬಿಡುತ್ತಿದ್ದನು.

೧೯೪೮ರ ಜನವರಿ ೩೦ರಂದು ನಾವು ರೇಡಿಯೋದಲ್ಲಿ ಒಂದು ಸುದ್ದಿ ಕೇಳಿದೆವು. ಮಹಾತ್ಮಾಗಾಂಧಿಯವರನ್ನು ಗುಂಡಿಟ್ಟು ಕೊಲೆ ಮಾಡಲಾಗಿತ್ತು. ಸಿಡಿಲು ಬಡಿದಂತೆ ಆಯಿತು. ನಮ್ಮೆಲ್ಲರಿಗೆ ಅವರು ರಾಷ್ಟ್ರಪಿತರಾದವರು. ನನಗೆ ನೆನಪಿರುವಷ್ಟು ಸಮಯದಿಂದಲೂ ಅವರು ದೇಶದ ಸ್ವಾತಂತ್ರ್ಯ ಹೋರಾಟವನ್ನು ಮುನ್ನಡೆಸಿದ್ದರು. ಅವರು ಆ ಹೋರಾಟದ ಸೂತ್ರಗಳನ್ನು ಕೈಗೆತ್ತಿಕೊಂಡು, ಒಂದು ದಿನ ಅಗಾಧವಾದ ಬ್ರಿಟಿಷ್ ಶಕ್ತಿಯನ್ನೇ ಮಣಿಸುವ ಮಹಾಶಕ್ತಿಯಾಗಿ ಪರಿವರ್ತಿಸಿದಾಗ ನಾನಿನ್ನೂ ಜನಿಸಿಯೇ ಇರಲಿಲ್ಲ.

ಇಡೀ ದುಃಖದ ಕಟ್ಟೆ ಬಿರಿದಿತ್ತು. ಷಹ ಎರಡುದಿನ ಅನ್ನಾಹಾರ ಗಳಿಲ್ಲದೆ ಸುಮ್ಮನೆ ಕುಳಿತಿದ್ದರು. ರೇಡಿಯೋಗೆ ಕಿವಿಗಳನ್ನು ಅಂಟಿಸಿಕೊಂಡು ಕುಳಿತಿದ್ದೆವು. ಮಹಾತ್ಮರ ಅಂತಿಮಯಾತ್ರೆ ಮತ್ತು ಸಂಸ್ಕಾರಗಳ ವರದಿಯನ್ನು ಕೇಳುತ್ತಿದ್ದೆವು. ರಾಷ್ಟ್ರಪಿತನ ಇಚ್ಛೆಯಂತೆ ಅವರ ಚಿತಾಭಸ್ಮವನ್ನು ದೇಶದ ಪ್ರತಿಯೊಂದು ಭಾಗದಲ್ಲೂ, ನದಿಗಳಲ್ಲೂ, ಸಮುದ್ರಗಳಲ್ಲೂ ವಿಸರ್ಜಿಸಲು ಕಳುಹಿಸಲಾಯಿತು.

ಚಿತಾಭಸ್ಮವನ್ನು ಒಯ್ದು ತಂದಿದ್ದ ರೈಲು ಅಂಧೇರಿ ನಿಲ್ದಾಣಕ್ಕೆ ಬಂದಾಗ ಹಲವು ಸಹಸ್ರ ಜನರು ಕಾದು ನಿಂತಿದ್ದರು. ಅವರಲ್ಲಿ ನಾನೂ ಒಬ್ಬ. ಸಾವಿತ್ರಿ ಮನೆಯಲ್ಲಿ ಅಡುಗೆ ಮಾಡುತ್ತಿದ್ದಳು. ಶೋಕತಪ್ತ ಮೆರವಣಿಗೆಯಲ್ಲಿ ಗಾಂಧೀಜಿಯವರಿಗೆ ಪ್ರಿಯವಾಗಿದ್ದ ಭಜನೆಗಳನ್ನು ಹಾಡುತ್ತಾ, ಭಸ್ಮಕರಂಡದ ಹಿಂದೆ ವರ್ಸೋವಾ ಸಮುದ್ರ ದಂಡೆಗೆ ಹೋದೆವು. ಮೆರವಣಿಗೆ ಅಲ್ಲಿಗೆ ತಲುಪಲು ಎರಡು ಗಂಟೆ ಕಾಲ ಹಿಡಿಯಿತು.

ಕರಂಡವನ್ನು ಒಂದು ದೊಡ್ಡ ದೋಣಿಯಲ್ಲಿ ಇರಿಸಲಾಯಿತು. ಸುಮಾರು ೪೦೦-೫೦೦ ಜನರು ದೋಣಿಗೆ ಹತ್ತಲು ಸಾಧ್ಯವಾಯಿತು. ಅವರಲ್ಲಿ ನಾನೂ ಒಬ್ಬ. ನಿಧಾನವಾಗಿ ನಾವು ಸಮುದ್ರದಲ್ಲಿ ಮುಂದೆ ಮುಂದೆ ಹೋದೆವು. ತೀರದಿಂದ ಒಂದು ಮೈಲು ದೂರದಲ್ಲಿ ದೋಣಿ ನಿಂತಿತು. ಭಸ್ಮ ವಿಸರ್ಜನೆಯಾಗಬೇಕಾಗಿದ್ದುದು ಆ ಸ್ಥಳದಲ್ಲಿ. ಒಬ್ಬ ಪಂಡಿತರು ವೇದಮಂತ್ರಗಳನ್ನು ಪಠಿಸುತ್ತಿದ್ದರು. ನಾವು ಗಾಂಧೀಜಿಯವರಿಗೆ ಪ್ರಿಯವಾಗಿದ್ದ ವೈಷ್ಣವ ಜನತೋ, ರಘುಪತಿ ರಾಘವರಾಜಾರಾಮ್ ಮೊದಲಾದ ಭಜನೆಗಳನ್ನು ಹಾಡುತ್ತಿದ್ದೆವು . ಭಸ್ಮವನ್ನು ಅರೇಬಿಯನ್ ಸಮುದ್ರಕ್ಕೆ ಸಿಂಪಡಿಸಿದೆವು .

ದೋಣಿಯು ಹಿಂದಕ್ಕೆ ಹಿಂದಿರುಗಿದಾಗ ನನಗೆ ಏನಾದರೂ ಮಾಡಬೇಕೆನಿಸಿತು. ಸೊಂಟದವರೆಗೆ ಬಟ್ಟೆಗಳನ್ನು ತೆಗೆದು 'ಭಾರತ ಮಾತಾಕೀ ಜೈ' 'ಮಹಾತ್ಮಾ ಗಾಂಧೀಕಿ ಜೈ' ಎಂದು ಕೂಗಿ ಸಮುದ್ರಕ್ಕೆ ನೆಗೆದು ಬೂದಿಯನ್ನು ಸಿಂಪಡಿಸಿದ ಸುತ್ತಲೂ ಈಜಿ ಬಂದೆ.

ಕೆಲವು ಕ್ಷಣಗಳಾದ ಮೇಲೆ ತಿರುಗಿಕೊಂಡು ದೋಣಿಯನ್ನೇ ಅನುಸರಿಸಿ ದಡಕ್ಕೆ ಈಜಿಕೊಂಡು ಬಂದೆ. ಆ ಮಹಾಚೇತನದೊಂದಿಗೆ ಕೊನೆಯಪಕ್ಷ ಅಲ್ಪಕಾಲವಾದರೂ ನಾನೂ ಒಂದಾದೆ ಎಂಬ ಭಾವನೆ ಮೂಡಿತು. ದಡ ಸೇರಿ ಬಟ್ಟೆ ಹಾಕಿಕೊಂಡು ಮನೆಗೆ ಹಿಂದಿರುಗಿದೆ.

ಮುಂಬಯಿಯಲ್ಲಿ ಹೆಚ್ಚು ಕಡಮೆ ನೆಲೆಗೊಂಡಿದ್ದ ಜೀವನ ಬಹುಬೇಗ ಕೊನೆಗೊಳ್ಳಲಿತ್ತು. ಇಟಗಿಯ ಜನರನ್ನು ಮತ್ತೆ ರಜಾಕಾರರು ಕಾಡುತ್ತಿದ್ದರು. ಇಟಗಿಯ ಜನರು ಮತ್ತೆ ಸಿದ್ಧಲಿಂಗಯ್ಯನವರಿಗೆ ಒತ್ತಡ ಹಾಕಿದರು. ಅವರು ಷಹಾ ಅವರಿಗೆ ಹೇಳಿ ನನ್ನನ್ನು ಮತ್ತೆ ಅಲ್ಲಿಗೆ ಕಳಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕೇಳಿಕೊಂಡರು. ಸಿದ್ಧಲಿಂಗಯ್ಯನವರ ಮಾತಿಗೆ ನಾನು ಇಲ್ಲ ಎನ್ನುವಂತಿರಲಿಲ್ಲ. ಗಂಟುಮೂಟೆ ಕಟ್ಟಿದೆವು. ನಾವು ಮುಂಬಯಿಯಲ್ಲಿ ವಾಸ ಮಾಡಿದ್ದು ಮೂರು ತಿಂಗಳು ಮಾತ್ರ. ಸಾವಿತ್ರಿ ಒಂದೇ ಒಂದು ಸಲವಾದರೂ ಗೊಣಗಲಿಲ್ಲ, ಆಕ್ಷೇಪಿಸಲಿಲ್ಲ. ನಾವು ಮತ್ತೂರಿಗೆ ಹೋದೆವು. ತವರು ಮನೆಯಲ್ಲಿ ಅವಳನ್ನು ಬಿಟ್ಟು ಇಟಗಿಗೆ ಹೋದೆ.

ಈ ಸಮಯದಲ್ಲಿ ನಡೆದ ಒಂದು ಘಟನೆ ಮನಸ್ಸಿನಲ್ಲಿ ನೆಟ್ಟಿದೆ. ಹೈದರಾಬಾದ್ ಹೋರಾಟದ ನಾಯಕರಾಗಿ ಅದನ್ನು ನೋಡಿ ಕೊಳ್ಳುತ್ತಿದ್ದ ಸ್ವಾಮಿ ರಾಮಾನಂದತೀರ್ಥ ಅವರು ಇಟಗಿಗೇ ಬಂದು ತ್ರಿವರ್ಣಧ್ವಜವನ್ನು ಹಾರಿಸಿ , ಹೈದರಾಬಾದಿನಿಂದ ಅದು ಸ್ವತಂತ್ರವಾದ ಸಂಭ್ರಮವನ್ನು ಆಚರಿಸಬೇಕಾಗಿದ್ದಿತು.

ಅವರು ಆಗಮಿಸುವುದಕ್ಕೆ ಕೆಲವು ದಿನಗಳ ಮೊದಲು ಹೈದರಾಬಾದ್ ಪೊಲೀಸರ ಒಂದು ಪಡೆಯು ಮಾಲಗತ್ತಿ ಎಂಬ ಹಳ್ಳಿಯನ್ನು , ಅದನ್ನು ಮತ್ತೆ ಆಕ್ರಮಿಸಿಕೊಳ್ಳುವ ಸಲುವಾಗಿ ಪ್ರವೇಶಿಸಿದೆ ಎಂದು ತಿಳಿಯಿತು. ಅವರಿಗೆ ಒಂದು ಪಾಠ ಕಲಿಸಲು ಶಿಬಿರದ ಮೇಲೆ ದಿಢೀರನೆ ದಾಳಿ ಮಾಡಿ, ಅವರ ಆಯುಧಗಳನ್ನು ಕಸಿದುಕೊಳ್ಳಬೇಕು ಎಂದು ನಾನು ನಿರ್ಧರಿಸಿದೆ. ದಾಳಿಗಾಗಿ ಕೆಲವು ಉತ್ಸಾಹಿ ತರುಣ ಸ್ವಯಂ ಸೇವಕರನ್ನು ಆರಿಸಿಕೊಂಡೆ. ಗೋಪಾಲ ಮಜುಂದಾರ್ ಎಂಬ ೧೭-೧೮ ವಯಸ್ಸಿನ ಒಬ್ಬ ವಿದ್ಯಾರ್ಥಿ, ಬೆಂಗಳೂರಿನ ಚುರುಕಾದ ತರುಣ ಶ್ಯಾಮ್ ಸೆಟ್ಲೂರ್, ಇಟಗಿಯ ಧೈರ್ಯಶಾಲಿಗಳಾದ ಕಟ್ಟುಮಸ್ತಾದ ತರುಣ ಫಕೀರಪ್ಪ ಇವರು ನನ್ನ ನೆನಪಿನಲ್ಲಿ ಉಳಿದಿದ್ದಾರೆ. ಮಾಲಗತ್ತಿ ಸಣ್ಣ ಬೆಟ್ಟದತಪ್ಪಲಲ್ಲಿನ ಒಂದು ಹಳ್ಳಿ. ಬೆಟ್ಟದ ನೆತ್ತಿಯಿಂದ ನಾವು ನಮ್ಮ ದಾಳಿಯನ್ನು ನಡೆಸಬೇಕೆಂದು ನಿರ್ಧರಿಸಿದೆವು.

ಕೆಲವು ನಾಡಬಾಂಬುಗಳು, ಕೆಲವು ದಾಹ್ (ಬರ್ಮಾದೇಶದ ಕಿರುಗತ್ತಿ, ದೊಡ್ಡಬಾಕು)ಗಳು, ಸ್ಥಳೀಯವಾಗಿ ನಿರ್ಮಿಸಿದ ಒಂದು ರಿವಾಲ್ವರ್ ಮತ್ತು ಒಂದು ಸ್ಟೆನ್‌ಗನ್ ಇಷ್ಟು ಆಯುಧಗಳಿಂದ ಸಜ್ಜಿತರಾಗಿ ನಾವು ಇಟಗಿಯಿಂದ ಹೊರಟೆವು. ಮಾಲಗತ್ತಿಗೆ ಹೋಗುವ ದಾರಿಯಲ್ಲಿ ಒಂದು ಹಳ್ಳಿಯಲ್ಲಿ ಭಾರತ ಒಕ್ಕೂಟಕ್ಕೆ ಸೇರಿದ ಪೊಲೀಸ್ ಪಡೆಯ ಒಂದು ತುಕಡಿಯು ಬೀಡು ಬಿಟ್ಟಿದ್ದುದು ಕಾಣಿಸಿತು. ಅವರಲ್ಲಿ ಒಬ್ಬ ತರುಣನು ನಮ್ಮ ಜತೆಯಲ್ಲಿ ಬರಲು ಮುಂದಾದನು. ಸ್ವಯಂಚಾಲೀ ಶಸ್ತ್ರಗಳನ್ನು ಪ್ರಯೋಗಿಸುವುದರಲ್ಲಿ ಅವನು ತರಬೇತಿ ಪಡೆದಿದ್ದನು. ಆದ್ದರಿಂದ ಸ್ಟೆನ್‌ಗನ್ನನ್ನೂ ೯mm ಗುಂಡುಗಳ ಸುತ್ತುಗಳನ್ನೂ ಅವನ ವಶಕ್ಕೆ ಕೊಟ್ಟೆವು . ಇನ್ನೊಂದು ಪಕ್ಕದಿಂದ ಬೆಟ್ಟದ ಮೇಲಕ್ಕೆ ಹೋದಾಗ ಒಂದು ಮುಗ್ಗಾಲಿಯ ಮೇಲೆ ಒಂದು ದೂರದರ್ಶಕವನ್ನು ಜೋಡಿಸಿ ಕೆಳಗಿದ್ದ ಮಾಲಗತ್ತಿಹಳ್ಳಿಯ ಕಡೆಗೆ ನೋಡಿದೆ. ಒಂದು ಮನೆಯ ಮೇಲೆ ಆಯುಧಧಾರಿಯಾದ ಸೆಂಟ್ರಿಯೊಬ್ಬನು ಕಾವಲು ಕಾಯುತ್ತಿದ್ದನು– ಹೈದರಾಬಾದಿನ ಪ್ಲೆಟೂನಿನ ಆಯುಧಗಳನ್ನು ಮುಖ್ಯವಾಗಿ. ೩೦೩ ರೈಫಲುಗಳನ್ನೂ ಒಂದೋ ಎರಡೋ ಲೈಟ್ ಮೆಷಿನ್‌ಗನ್ನುಗಳನ್ನೂ ಆ ಮನೆಯಲ್ಲಿ ಇರಿಸಿದ್ದಾರೆ ಎಂದು ನನಗೆ ಸುದ್ದಿ ಬಂದಿತ್ತು.

ಪೂರ್ತಿ ಕತ್ತಲಾಗುವವರೆಗೂ ಕಾದಿದ್ದೆವು. ಆಮೇಲೆ ಮೇಲಿನಿಂದ ಇಳಿದು ಆ ಮನೆಯ ಹಿಂಭಾಗಕ್ಕೆ ಸದ್ದಿಲ್ಲದೆ ಬಂದೆವು . ಸ್ಟೆನ್‌ಗನ್ ಉಪಯೋಗಿಸಲು ಕಲಿತಿದ್ದ ಹುಡುಗನಿಗೆ, ನಾವು ಆ ಮನೆಯ ಮೇಲೆ ದಾಳಿ ಮಾಡಿದ ಕೂಡಲೆ ಚಾವಣಿಯ ಮೇಲೆ ನಿಂತಿದ್ದ ಕಾವಲು ಗಾರನನ್ನು ಮುಗಿಸಿಬಿಡುವಂತೆ ಹೇಳಿದ್ದೆವು. ಅವನು ಇನ್ನೊಂದು ಮನೆಯ ಚಾವಣಿಯ ಮೇಲೆ ಹತ್ತಿ 'ಭಾರತ್ ಮಾತಾಕೀ ಜೈ!' ಎಂದು ಕೂಗಿ ಸೂಚನೆ ಕೊಟ್ಟೊಡನೆ ಸೆಂಟ್ರಿಗೆ ಗುಂಡು ಹಾರಿಸಿ ಅವನನ್ನು ಕೊಲ್ಲಬೇಕಾಗಿತ್ತು. ಹಿಂದಿನಿಂದ ನಾವು ಮನೆಯನ್ನು ಸಮೀಪಿಸುತ್ತಿದ್ದಂತೆ ನಾಯಿಗಳು ಬೊಗುಳತೊಡಗಿದವು. ಆದರೆ ಸ್ವಾರಸ್ಯವೇನೆಂದರೆ ನಾವು ಗುಂಪಾಗಿ ಜನರು ಬಂದುದನ್ನು ನೋಡಿದೊಡನೆ ಅವು ಸುಮ್ಮನಾಗಿಬಿಟ್ಟವು. ಸದ್ದಿಲ್ಲದೆ ನಾವು ಮನೆಯ ಮುಂಭಾಗಕ್ಕೆ ಬರುವವರೆಗೂ ಏನೂ ಆಗಲಿಲ್ಲ. ಎಲ್ಲವೂ ಸುಮುಖವಾಗಿದ್ದಂತೆ ತೋರಿತು. 'ಭಾರತ ಮಾತಾಕೀ ಜೈ' ! ಎಂದು ಜೋರಾಗಿ ಕೂಗಿ ಮನೆಯ ಬಾಗಿಲಿನತ್ತ ನುಗ್ಗಿದೆವು.

ಆದರೆ ನಮ್ಮ ಸ್ಟೆನ್‌ಗನ್ ಯೋಧನಿಂದ ಯಾವುದೇ ಕಾರ್ಯದ ಸೂಚನೆ ಬರಲಿಲ್ಲ. ಆಮೇಲೆ ಗೊತ್ತಾಯಿತು, ಸೆಂಟ್ರಿಗೆ ಗುಂಡು ಹಾರಿಸಲು ಗುರಿಯಿಡುತ್ತಿದ್ದಂತೆ ಮದ್ದನ್ನೇ ಹಾಕಿರಲಿಲ್ಲವೆಂದೂ, ಮನೆಯ ಮೇಲಕ್ಕೆ ಹತ್ತುವಾಗ ಎಲ್ಲೋ ಬೀಳಿಸಿಕೊಂಡಿದ್ದನೆಂದೂ ತಿಳಿಯಿತಂತೆ!

ಏನೋ ತಪ್ಪಾಗಿದೆ ಎಂದು ತಿಳಿದೊಡನೆ ನನ್ನ ಕೈಯಲ್ಲಿದ್ದ ನಾಡ ರೈಫಲಿನಿಂದ ಸೆಂಟ್ರಿಯ ಕಡೆಗೆ ಮೂರು ಸುತ್ತು ಗುಂಡು ಹಾರಿಸಿದೆ. ಒಳಗಿದ್ದ ಆಯುಧಗಳ ಕಡೆಗೆ ನುಗ್ಗಿದೆ. ಫಕೀರಪ್ಪ ಮತ್ತು ಇತರ ಕೆಲವರು ನನ್ನ ಹಿಂದೆ ಬಂದರು. ಒಂದು ರೈಫಲನ್ನು ಎತ್ತಿಕೊಂಡೆ, ಓಡಿಹೋಗಲು ಯತ್ನಿಸಿದೆ. ಆದರೆ ಅಷ್ಟರಲ್ಲಿ ಇಡೀ ಪ್ಲೆಟೂನ್ ಎಚ್ಚರಗೊಂಡಿತು. ಕೋಚ್ ಒಳಗಿನಿಂದ ಅವರ ಕಡೆಯ ಇಬ್ಬರು ಓಡಿಹೋದರು. ನನ್ನ ಕೈಯಲ್ಲಿದ್ದ ರೈಫಲನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದರು. ಒಂದೆರಡು ಕ್ಷಣ ಜಗ್ಗಾಟ ನಡೆಯಿತು. ಒಬ್ಬನಿಗೆ ಬಲವಾದ ಒದೆಕೊಟ್ಟೆ . ಈ ಗುದ್ದಾಟದಲ್ಲಿ ನಾನು ಜಾರಿದಾಗ ರೈಫಲಿನ ಮೇಲಿನ ಹಿಡಿತ ತಪ್ಪಿತು. ಆದರೆ ಕೋಚ್ ಒಳಗಿನಿಂದ ಓಡಿಹೋಗಲು ಸಾಧ್ಯವಾಯಿತು. ಎರಡೂ ಪಕ್ಷಗಳಿಂದ ಗುಂಡುಗಳು ಹಾರಿದುವು . ಹೈದರಾಬಾದಿಗಳು ತಮ್ಮ ಎಲ್ಲಾ ರೈಫಲುಗಳಿಂದಲೂ ಲೈಟ್ ಮೆಷಿನ್‌ಗನ್ನುಗಳಿಂದಲೂ ಉಡಾಯಿಸತೊಡಗಿದರು. ನಾವು ಭಾರತ ಒಕ್ಕೂಟ ಪ್ರದೇಶಕ್ಕೆ ಓಡಿಹೋಗಿ ಸುರಕ್ಷಿತರಾಗಲು ನಿರ್ಧರಿಸಿದೆವು. ನಮ್ಮ ಕಡೆಯ ಒಬ್ಬ ಹುಡುಗನಿಗೆ ಸ್ವಲ್ಪ ಗಾಯವಾಗಿತ್ತು. ಅವನನ್ನು ಸೂಡಿಯಲ್ಲಿ ಒಬ್ಬ ವೈದ್ಯರ ಬಳಿಗೆ ಕರೆದೊಯ್ದೆವು.

ಈ ದಾಳಿಯಲ್ಲಿ ಇಬ್ಬರು ಹೈದರಾಬಾದಿಗಳು ಸತ್ತಿದ್ದರೆಂದು ಮಾರನೆಯ ದಿನ ತಿಳಿಯಿತು. ಇದರಿಂದ ಅವರ ಎದೆ ನಡುಗಿ ಹೋಗಿರಬೇಕು. ಏಕೆಂದರೆ ಆಮೇಲೆ ಅವರಾಗಲಿ, ರಜಾಕಾರರಾಗಲಿ ಮತ್ತೆ ಯಾವುದೇ ಹಳ್ಳಿಗೆ ಪ್ರವೇಶಿಸುವ ಪ್ರಯತ್ನ ಮಾಡಲಿಲ್ಲ. ಹೆಸರು ಹೇಳಬಹುದಾದ ಯಾವುದೇ ಆಯುಧವಿಲ್ಲದೆ ನಾವು ನಮಗಿಂತ ತುಂಬ ದೊಡ್ಡದಾಗಿದ್ದ, ಪೂರ್ತಿ ಶಸ್ತ್ರಸಜ್ಜಿತವಾಗಿದ್ದ ವೈರಿಯನ್ನು ಸ್ತಬ್ಧಗೊಳಿಸುವುದರಲ್ಲಿ ಯಶಸ್ವಿಯಾಗಿದ್ದೆವು.

ಕಾರ್ಯಕ್ರಮದ ಪ್ರಕಾರ ಸ್ವಾಮಿ ರಾಮಾನಂದ ತೀರ್ಥರು ಇಟಗಿಗೆ ಆಗಮಿಸಿದ್ದರು. ಹದಿನಾಲ್ಕು ಹಳ್ಳಿಗಳ ಎಲ್ಲರೂ ಅವರನ್ನು ಸ್ವಾಗತಿಸಲು ಅಲ್ಲಿಗೆ ಬಂದಿದ್ದರು. ನಮ್ಮ ಸ್ವಯಂಸೇವಕ ದಳವು ಲಾಠಿ ಹಿಡಿದು

ಸಾಂಪ್ರದಾಯಿಕವಾಗಿ ಅವರಿಗೆ ಗೌರವರಕ್ಷೆಯನ್ನು ನೀಡಿತು. ರಾಷ್ಟ್ರಧ್ವಜವನ್ನು ಹಾರಿಸಲಾಯಿತು. ಸ್ವಾಮಿಯವರು ಸ್ಫೂರ್ತಿದಾಯಕವಾದ ಭಾಷಣ ಮಾಡಿದರು. ಸೊಗಸಾದ ಭೋಜನದ ವ್ಯವಸ್ಥೆಯಾಗಿತ್ತು. ಇಟಗಿಯಲ್ಲಿದ್ದಾಗ ಹೈದರಾಬಾದ್ ಸಶಸ್ತ್ರ ಪೊಲೀಸರು ಹಾಗೂ ಅವರ ಚಟುವಟಿಕೆಗಳನ್ನು ಕುರಿತ ಮಾಹಿತಿಯನ್ನು ಸಂಗ್ರಹಿಸಿದ್ದೆ. ಅವರ ದೌರ್ಜನ್ಯಗಳಿಗೆ ಆಧಾರಭೂತ ದಾಖಲೆಗಳನ್ನು ಒದಗಿಸಿಕೊಂಡಿದ್ದೆ. ಹಿಂದಿರುಗಿದ ಮೇಲೆ ಸಿದ್ಧಲಿಂಗಯ್ಯನವರೊಂದಿಗೆ ಇದನ್ನು ಚರ್ಚಿಸಿದೆ. ಆಮೇಲೆ ಅವರು ದೆಹಲಿಯಲ್ಲಿ ಸರ್ದಾರ್ ಪಟೇಲರನ್ನು ಭೇಟಿ ಮಾಡಿ ಮಾತಾಡಿದರು. ಹೈದರಾಬಾದಿನ ಮೇಲೆ ಕ್ರಮ ಜರುಗಿಸಲೇ ಬೇಕೆಂದು ಒತ್ತಾಯಿಸಿದರು. ಬಹುಶಃ ಅವರ ವಾದ ಫಲಕೊಟ್ಟಿರಬೇಕು. ಕೆಲವೇ ವಾರಗಳಲ್ಲಿ ಅವರ ಸುಪ್ರಸಿದ್ಧ ಹೈದರಾಬಾದ್ ಪೊಲೀಸ್ ಕಾರ್ಯಾಚರಣೆ ನಡೆಯಿತು.

೬. ಚಿರತೆ ಮತ್ತು ಪೊರಕೆ

ನನಗೆ ತಾರೀಕುಗಳು ಅಷ್ಟಾಗಿ ನೆಪಿನಲ್ಲುಳಿಯುವುದಿಲ್ಲ. ಸುಮಾರು ಈ ಸಮಯದಲ್ಲೇ ಚಿರತೆಯ ಘಟನೆ ನಡೆಯಿತು. ಏನೋ ಕಾರಣಕ್ಕೆ ನಾನು ಬೆಂಗಳೂರಿನಲ್ಲಿದ್ದೆ. ಬುಲ್ ಟೆಂಪಲ್ ರಸ್ತೆಯಲ್ಲಿರುವ ಶ್ರೀರಾಮಕೃಷ್ಣ ಆಶ್ರಮಕ್ಕೆ ಹೋಗಿದ್ದೆ. ಅಲ್ಲಿ ಕೆಲಸ ಮುಗಿಸಿಕೊಂಡು ಅಲ್ಲೇ ಹತ್ತಿರ ಇದ್ದ ನನ್ನ ಗೆಳೆಯನೊಬ್ಬನ ಮನೆಗೆ ಹೋಗಿ ಅಲ್ಲೇ ಊಟಮಾಡುವುದು ಎಂದು ಯೋಚಿಸಿದ್ದೆ.

ಅವನ ಮನೆಯ ಕಡೆಗೆ ನಡೆಯುತ್ತಿದ್ದೆ. ಈಗ ಉಮಾ ಟಾಕೀಸ್ ಇರುವಲ್ಲಿ ಎಡಕ್ಕೆ ತಿರುಗಿಕೊಂಡೆ. ಈಗಿರುವಂತೆ ಆಗ ಈ ಪ್ರದೇಶ ಜನನಿಬಿಡವಾಗಿರಲಿಲ್ಲ. ನಗರದ ಅಂಚುಪ್ರದೇಶವಾಗಿದ್ದು ತುಸು ಹಸುರು ಹೊದ್ದ ಮರಗಿಡಗಳು ತುಂಬಿದ್ದುವು. ಎಡಕ್ಕೆ ತಿರುಗಿದ ಮೇಲೆ ಒಂದು ಸಣ್ಣ ಸೇತುವೆ ಸಿಕ್ಕುತ್ತದೆ. ಸಿಮೆಂಟಿನಲ್ಲಿ ಕಟ್ಟಿದ ಒಳಚರಂಡಿಯ ಮೇಲೆ ಹಾಕಿದ ಕಾಲು ಸೇತುವೆ ಅದು. ಅದಾದೊಡನೆ ಯಾರದೋ ತರಕಾರಿ ತೋಟ.

ತೋಟದ ಸಮೀಪಕ್ಕೆ ಬಂದಾಗ ಅಲ್ಲೇನೋ ಆಗುತ್ತಿರುವಂತೆ ಕಾಣಿಸಿತು. ಜನರು ಉದ್ವೇಗದಿಂದ 'ಅದೇ? ಅಲ್ಲಿದೆ!' 'ಎಲ್ಲಿ?' 'ನನಗೆ ಕಾಣುತ್ತಿಲ್ಲ', ಹೀಗೆಲ್ಲಾ ಕಿರುಚುತ್ತಿದ್ದರು. ಹಿರಿಯರು ತಮ್ಮ ಮಕ್ಕಳನ್ನು ಮೇಲಕ್ಕೆ ಎತ್ತಿ ಹಿಡಿದು ತೋರಿಸುತ್ತಿದ್ದರು. ಇನ್ನೂ ಸ್ವಲ್ಪ ಧೈರ್ಯವಿದ್ದವರು ತೋಟದೊಳಕ್ಕೆ ಕೈಗೆ ಸಿಕ್ಕಿದ್ದನ್ನು ಎಸೆಯುತ್ತಿದ್ದರು. ಹಾವು ಇರಬಹುದು ಎಂದುಕೊಂಡೆ.

ಈಗ ನಾನು ತೋಟಕ್ಕೆ ಬಂದಿದ್ದೆ. ಆ ದೊಡ್ಡ ತೋಟಕ್ಕೆ ಬೇಲಿ ಇತ್ತು. ಸುತ್ತಲೂ ಮರಗಳಿದ್ದವು . ಬದನೆ, ಬಾಳೆಗಳು ಸೊಂಪಾಗಿ ಬೆಳೆದಿದ್ದುವು. "ಇದೇನು ಗಲಾಟೆ?" ಎಂದು ಪಕ್ಕದಲ್ಲಿದ್ದವನನ್ನು ಕೇಳಿದೆ. "ಸ್ವಾಮಿ, ಇಲ್ಲೊಂದು ಚಿರತೆ ಸೇರಿಕೊಂಡಿದೆ" ಎಂದು ಅವನು ಹೇಳಿದ. "ಯಾರದ್ದು ಅದು?" "ಯಾರದ್ದೂ ಅಲ್ಲ, ಬಹುಶಃ ಕಾಡಿನಿಂದ ಬಂದಿರಬೇಕು."

ವಿಷಯ ಉದ್ವೇಗಕಾರಿಯಾಗಿತ್ತು. ಸಮೀಪದ ಮರವೊಂದನ್ನು ಹತ್ತಿ ನೋಡಿದೆ. ಗಿಡಗಳ ನಡುವೆ ಏನೋ ಓಡಾಡುತ್ತಿರುವಂತೆ ಕಾಣಿಸಿತು. ಅದು ಚಿರತೆಯೆ? ಕುತೂಹಲದಿಂದ ನೋಡಿದೆ, ಕಾಣಿಸಿತು. ಜನರು ಕಲ್ಲುಗಳನ್ನೂ ಕೋಲುಗಳನ್ನೂ ಎಸೆಯುತ್ತಿದ್ದರು. ಅವು ಬಾಳೆಗಿಡಗಳಿಗೆ ತಗುಲಿ ಎಲೆಗಳು ಸೀಳುತ್ತಿದ್ದುವು. ಯಾರೋ ಒಬ್ಬ ಧೈರ್ಯಶಾಲಿ ಒಂದು ಇಟ್ಟಿಗೆಯಿಂದ ಗುರಿಯಿಟ್ಟು ಹೊಡೆದ. ಅದು ಆ ಪ್ರಾಣಿಗೆ ತಗುಲಿತು. ಕೋಪ ಕೆರಳಿ, ಗಾಯಗೊಂಡ ಆ ಚಿರತೆ ಒಂದೇ ಸಲಕ್ಕೆ ಬೇಲಿಯನ್ನು ಹಾರಿ ಒಂದೇ ಕ್ಷಣದಲ್ಲಿ ಮಾಯವಾಯಿತು. ಜನರು ಏನಾಯಿತೆಂದು ನೋಡುವಷ್ಟರಲ್ಲಿ ಚಿರತೆ ಓಡಿಬಿಟ್ಟಿತ್ತು. ಆದರೆ ಅದು ಬೇಲಿ ನೆಗೆಯುವಾಗ ಚೆನ್ನಾಗಿ ನೋಡಿದೆ, ಭಾರೀ ಚಿರತೆ!

ಪ್ರಾಣಿ ಹೊರಟುಹೋದುದರಿಂದ ಜನರು ಚೆದುರಿ ಹೋದರು. ಬೇಗ ಹೋಗಿ ಮನೆ ಸೇರಿ ಬಾಗಿಲು ಹಾಕಿಕೊಳ್ಳಬೇಕೆಂದು ಒಂದೇ ಯೋಚನೆಯಿಂದ ಧಾವಿಸಿದರು.

ನಾನೂ ಮರದಿಂದ ಇಳಿದವನೇ ಚಿರತೆಯು ಹೋಗಿದ್ದ ದಿಕ್ಕಿನಲ್ಲಿ ಓಡಿದೆ. ದಾರಿಯಲ್ಲಿ , ನನಗೆ ಮೊದಲು ಚಿರತೆಯ ಸುದ್ದಿ ಕೊಟ್ಟ ವ್ಯಕ್ತಿಯೇ ಸಿಕ್ಕಿದ. ಅವನು ಪ್ರತಿಭಟಿಸುವುದಕ್ಕೆ ಮೊದಲೇ ಅವನ ಬೈಸಿಕಲ್ಲನ್ನು ಕಿತ್ತುಕೊಂಡು ರಭಸವಾಗಿ ಪೆಡಲು ತುಳಿಯುತ್ತಾ ನುಗ್ಗಿದೆ . ನನ್ನ ಗೆಳೆಯನಾಗಲೀ ಕಾಯುತ್ತಿದ್ದ ಭೋಜನವಾಗಲೀ ಈಗ ನನ್ನ ಮನಸ್ಸಿನಲ್ಲಿ ಉಳಿದಿರಲಿಲ್ಲ. ಅಕಸ್ಮಾತ್ ಆ ಪ್ರಾಣಿ ಎದುರಾದರೆ ನಾನು ಏನು ಮಾಡಬೇಕು ಎಂದು ಯೋಚಿಸುತ್ತಿದ್ದೆನೆ? ನಾನರಿಯೆ. ಅಲ್ಲಿ ಇಲ್ಲಿ ಸುತ್ತಾಡಿ , ಭಯದಿಂದ ಕಿಟಕಿಗಳ ಮೂಲಕ ಇಣುಕುತ್ತಿದ್ದ ಮುಖಗಳನ್ನು "ಚಿರತೆಯನ್ನು ಕಂಡಿರಾ..." ಎಂದು ಕೇಳುತ್ತಾ ಹೋದೆ. ಬಾಗಿಲುಗಳು ಮುಚ್ಚಿದ್ದುವು. ಕೆಲವರು ಹಾಗೆ ಹೋಯಿತು ಎಂದರು. ಕೆಲವರು ಹೀಗೆ ಎಂದರು, ಮಾಮೂಲಿನಂತೆ ಹೊರಗಿದ್ದ ಒಬ್ಬನೇ ವ್ಯಕ್ತಿ ಬೀಡಿ ಸೇದುತ್ತಾ ಕುಳಿತಿದ್ದ. ಅದೊಂದು ಎರಡಂತಸ್ತಿನ ದೊಡ್ಡಮನೆ. ಮನೆಯವರು ಭಯಭೀತರಾಗಿ ಕಿಟಕಿಯಿಂದ ನೋಡುತ್ತಿದ್ದರು.

ಇದ್ದಕ್ಕಿದ್ದಂತೆ ಆ ಮನೆಯ ದಿಕ್ಕಿನಿಂದ ಗಲಾಟೆ ಕೇಳಿಸಿತು. ಆ ಎತ್ತರವಾದ ಮನೆಯ ಪಕ್ಕದಲ್ಲೊಂದು ಸಣ್ಣ ಕಾಂಪೌಂಡು ಇತ್ತು. ಜನರು ಆಕಡೆಗೆ ಬೆಟ್ಟು ಮಾಡಿ ತೋರಿಸುತ್ತಿದ್ದರು. ಅದು ಚಿರತೆಯೇ ಇರಬೇಕೆಂದು ನನಗನ್ನಿಸಿತು. ಏನು ಮಾಡಬೇಕು? ನನಗೆ ಉತ್ತರ ಸಿಕ್ಕುವ

ಮೊದಲೇ ಆ ಮನೆಯವರು ಕ್ರಮ ಕೈಗೊಂಡಿದ್ದರು. ಹಳ್ಳಿಯ ಪದ್ಧತಿಯಂತೆ ಕೈಗೆ ಸಿಕ್ಕಿದ ವಸ್ತುಗಳನ್ನು ಅದರ ಕಡೆಗೆ ಎಸೆಯ ತೊಡಗಿದ್ದರು.

ಬೇಸತ್ತ ಚಿರತೆ ಮಾಡಬಹುದಾದುದನ್ನೇ ಮಾಡಿತು. ದಿಢೀರನೇ ಗೋಡೆಯನ್ನು ಹಾರಿಬಂದು ನನ್ನಿಂದ ಕೆಲವೇ ಗಜಗಳ ದೂರದಲ್ಲಿ ನಿಂತಿತು. ಆದರೆ ಅದು ಮಾಡಿದ ಮೊದಲು ಕೆಲಸ ಆ ಕಸಗುಡಿಸುವವನ ಮೇಲೆ ಎರಗಿದ್ದು. ನಾನು ಏನು ಮಾಡಬೇಕು?

ನನ್ನ ಕೈಯಲ್ಲಿದ್ದ ಒಂದೇ ಒಂದು ಆಯುಧ ಬೈಸಿಕಲ್ಲು. ಆ ಪ್ರಾಣಿಯ ತಲೆಯ ಮೇಲೆ ಸರಿಯಾಗಿ ಅದರಿಂದ ಚಚ್ಚಬೇಕೆಂದು ಸೈಕಲನ್ನು ಎತ್ತಿದೆ. ಆದರೆ ಗುರಿತಪ್ಪಿ ಅವನಿಗೆ ಗಾಯವಾದರೆ? ಸರಿ ಅದನ್ನು ಆಕಡೆ ಹಾಕಿ ಏನಾದರೂ ಆಯುಧಕ್ಕಾಗಿ ಆಚೆ ಈಚೆ ನೋಡಿದೆ. ಉದ್ದ ಹಿಡಿಕೆಯಿದ್ದ ಒಂದು ಪೊರಕೆ ಅಲ್ಲಿ ಬಿದ್ದಿತ್ತು. ಬೀಡಿ ಹಚ್ಚಿಕೊಳ್ಳುವುದಕ್ಕೆ ಮೊದಲು ಅವನು ಅದನ್ನು ಅಲ್ಲಿ ಹಾಕಿದ್ದ. ಅದನ್ನೇ ಕೈಗೆತ್ತಿಕೊಂಡು ಬಿಗಿಯಾಗಿ ಹಿಡಿದು ಸರಿಯಾಗಿ ಗುರಿಯಿಟ್ಟು ಚಿರತೆಯ ನೆತ್ತಿಗೆ ಹೊಡೆದೆ. ನನ್ನೆಲ್ಲಾ ಶಕ್ತಿಯನ್ನು ಪ್ರಯೋಗಿಸಿ ಚಚ್ಚಿದೆ.

ಅದು ಬಂಡೆಗೆ ಬಡಿದಂತಾಯಿತು. ಒಂದು ಕ್ಷಣ ನನ್ನ ತೋಳು ಸ್ತಂಭಿತವಾಗಿ ಪೊರಕೆ ಕೈಯಿಂದ ದೂರಕ್ಕೆ ಜಾರಿ ಬಿತ್ತು. ಈಗ ಚಿರತೆ ನನ್ನ ಕಡೆಗೆ ತಿರುಗಿತು. ನನ್ನ ಮೇಲೆ ಹಾರಿ ಬಿದ್ದೊಡನೆ ಅದರ ಮುಂದಿನ ಎರಡು ಕಾಲಿನ ಪಂಜಗಳನ್ನು ಹಿಡಿದೆ. ಕೆಲವು ಕ್ಷಣ ಆಕಡೆ ಈಕಡೆ ವಾಲಾಡಿದೆವು. ಬಲವಾದ ಆ ಪಂಜಗಳನ್ನೂ ಹರಿತವಾದ ದವಡೆ ಹಲ್ಲುಗಳ ಪ್ರಹಾರವನ್ನೂ ನಾನು ಹೆಚ್ಚು ಹೊತ್ತು ತಡೆದಿರಲಾರೆ ಎಂದು ನನಗೆ ಅರಿವಾಯಿತು. ಆಗಲೇ ನನ್ನ ಪಕ್ಕೆ ತೊಡೆಗಳ ಮೇಲೆ ಗಾಯಗಳಾಗಿದ್ದುವು. ಆದರೆ ನೆತ್ತಿಗೆ ನಾನು ಕೊಟ್ಟ ಪೆಟ್ಟಿನಿಂದ ಚಿರತೆಗೆ ಬಲವಾದ ಗಾಯವಾಗಿರಬೇಕು. ನೋವು ತಡೆಯಲಾರದೆ ಅತ್ತಿತ್ತ ತೂಗುವಂತೆ ತೋರಿತು. ಆ ಪೊರಕೆ ಅದೇ ಈಗ ನನಗೆ ಬೇಕಾಗಿದ್ದುದು. ಅದೋ ಅಲ್ಲೇ ಕೈಗೆ ಸಿಕ್ಕಿತು, ದೇವರದಯೆ. ಒಂದೇ ಕ್ಷಣ ಹಿಡಿತಬಿಟ್ಟು ಪೊರಕೆಯನ್ನು ಎತ್ತಿಕೊಂಡೆ, ಶಕ್ತಿಯನ್ನೆಲ್ಲಾ ಕೂಡಿಸಿ ಧಬಧಬನೆ ಅದರ ತಲೆಗೆ ಬಾರಿಸ ತೊಡಗಿದೆ. ಕೆಲವು ಕ್ಷಣಗಳಲ್ಲಿ ಚಿರತೆ ಕೆಳಗುರುಳಿ ಸತ್ತಿತ್ತು.

ಸುತ್ತಲೂ ನೋಡಿದೆ. ಅವನ ಸ್ಥಿತಿ ಚಿಂತಾಜನಕವಾಗಿತ್ತು. ನನ್ನ ಗಾಯಗಳಿಂದ ರಕ್ತ ಹರಿಯುತ್ತಿತ್ತು. ಜನರು ಗುಂಪುಗೂಡಿದರು. ಯಾರೋ ನಮ್ಮಿಬ್ಬರನ್ನೂ ಆಸ್ಪತ್ರೆಗೆ ಒಯ್ದರು.

ನನ್ನ ಗಾಯಗಳು ಬೇಗನೆ ಮಾಯ್ದವು. ಬೇಗ ಚೇತರಿಸಿಕೊಂಡೆ. ಆದರೆ ಆ ಕಸ ಗುಡಿಸುವವನು ಹೆಚ್ಚುಕಾಲ ಆಸ್ಪತ್ರೆಯಲ್ಲಿರಬೇಕಾಯಿತು. ಕಾಲಕ್ರಮದಲ್ಲಿ ಆತನೂ ಗುಣ ಹೊಂದಿದನು. ಚಿರತೆಯ ಚರ್ಮವನ್ನು ಸುಲಿಸಿ ಶುದ್ಧಪಡಿಸಿ ಅದನ್ನು ನನ್ನ ತಂದೆಯವರಿಗೆ ಉಡುಗೊರೆಯಾಗಿ ಕೊಟ್ಟೆ . ಪ್ರಾಚೀನ ಋಷಿಗಳಂತೆ ಅದರ ಮೇಲೆ ಅವರು ಕುಳಿತುಕೊಳ್ಳುತ್ತಿದ್ದರು. ಪೊರಕೆಯ ಹಿಡಿಕೆ ಬಹಳ ಕಾಲ ನಮ್ಮ ಮನೆಯಲ್ಲಿತ್ತು. ಬಟ್ಟೆ ಹರವಲು ನನ್ನ ಅತ್ತಿಗೆ ಅದನ್ನು ಉಪಯೋಗಿಸುತ್ತಿದ್ದರು. ಕಾಲಕ್ರಮದಲ್ಲಿ ಚರ್ಮವು ಸವೆಯಿತು , ಹಿಡಿಕೆ ಮುರಿಯಿತು. ನನ್ನ ಬಳಿ ನೆನಪು ಮಾತ್ರ ಉಳಿಯಿತು.

೭. ಎಸ್.ಎಸ್.ಬಿ.ಯಲ್ಲಿ ಧೋತೀವಾಲ

ಸುಮಾರು ಈ ಸಮಯಕ್ಕೆ ವೃತ್ತಪತ್ರಿಕೆಗಳಲ್ಲಿ , ಸೈನ್ಯಕ್ಕೆ ತಾತ್ಕಾಲಿಕ ಕಮಿಷನ್ ಅಧಿಕಾರಿಗಳನ್ನು ತೆಗೆದುಕೊಳ್ಳುವುದಾಗಿ ಜಾಹಿರಾತು ಬಂದಿತ್ತು. ದೇಶದ ವಿಭಜನೆಯಿಂದಾಗಿ ಅನೇಕ ಅಧಿಕಾರಿಗಳು ಹೊರಟುಹೋಗಿದ್ದರು. ಪಾಕಿಸ್ತಾನದೊಂದಿಗೆ ಕೆಟ್ಟು ಹೋಗಿದ್ದ ಸಂಬಂಧಗಳಿಂದಾಗಿ ಇಲ್ಲಿನ ಸೈನ್ಯದಲ್ಲಿನ ಅಧಿಕಾರಿಗಳ ಕೊರತೆಯನ್ನು ಬೇಗನೆ ತುಂಬಿಕೊಳ್ಳಬೇಕಾಗಿತ್ತು. ನನಗೆ ಕುತೂಹಲವುಂಟಾಯಿತು. ಅರ್ಜಿ ಹಾಕಿದೆ. ಸರ್ವಿಸಸ್ ಸೆಲೆಕ್ಷನ್ ಬೋರ್ಡಿನಿಂದ (ಎಸ್ ಎಸ್ ಬಿ) ಸಂದರ್ಶನಕ್ಕೆ ಕರೆ ಬಂದಿತು. ಬೆಂಗಳೂರು ಕಂಟೋನ್ಮೆಂಟಿನಲ್ಲಿ ನಾನು ಹಾಜರಾಗಬೇಕಾಗಿತ್ತು.

ಪತ್ರದಲ್ಲಿ ನಾವು ಎಂತೆಂತಹ ಬಟ್ಟೆಗಳನ್ನು, ಷೂಗಳನ್ನು ತರಬೇಕು ಎಂದೆಲ್ಲಾ ನಿರ್ದಿಷ್ಟಪಡಿಸಲಾಗಿತ್ತು. ಬೂದುಬಣ್ಣದ ಫ್ಲಾನಲ್ ಪ್ಯಾಂಟು, ಬಿಳಿಯ ನಿಕ್ಕರು, ಬಿಳಿಯ ಪಿ.ಟಿ.ಷೂಗಳು, ಒಂದು ಕೋಟು ಮತ್ತು ಒಂದು ಕಂಬಳಿ ಇವಿಷ್ಟು ಇರಬೇಕಾಗಿತ್ತು. ೧೯೩೭ರಿಂದಲೂ ನಾನು ಖದ್ದರನ್ನು ಮಾತ್ರ ಧರಿಸುತ್ತಿದ್ದೆ. ನಾನು ಈಗ ಇವೆಲ್ಲವನ್ನೂ ಯಾರಿಂದಲಾದರೂ ಎರವಲು ಪಡೆಯಬೇಕಾಗಿತ್ತು. ನನ್ನ ಅತ್ತಿಗೆಯ ಅಣ್ಣ ವೆಂಕಟೇಶ್ ಅವರಿಂದ ಅವರ ಮದುವೆಗೆ ಹೊಲಿಸಿಕೊಂಡಿದ್ದ ಹೊಸ ಉಲ್ಲನ್ ಕೋಟು ತೆಗೆದುಕೊಂಡೆ. ಕೋಟು, ಕ್ಯಾನ್ವಾಸ್ ಷೂಗಳನ್ನು ಒಂದು ಕಂಬಳಿಯಲ್ಲಿ ಸುತ್ತಿ ಕಂಕುಳಲ್ಲಿ ಇರಿಸಿಕೊಂಡು, ಹೈಕೋರ್ಟ್‌ವರೆಗೆ ಸಿಟಿ ಬಸ್ಸಿನಲ್ಲಿ ಹೋಗಿ ಸಂದರ್ಶನದ ಸ್ಥಳದವರೆಗೆ ನಡೆದು ಹೋದೆ.

ಗೇಟಿನಲ್ಲಿ ನಿಂತು ಆಚೀಚೆ ನೋಡಿದೆ. ಇತರ ಅಭ್ಯರ್ಥಿಗಳು ಕಾರುಗಳಲ್ಲಿ, ಟ್ಯಾಕ್ಸಿಗಳಲ್ಲಿ ಬಂದಿಳಿಯುತ್ತಿದ್ದರು. ನಗರದ ಹೊರಗಿನಿಂದ ಬಂದವರು ಟ್ರಕ್ಕುಗಳಲ್ಲಿ ಬರುತ್ತಿದ್ದರು. ಎಲ್ಲರೂ ಸೊಗಸಾಗಿ ಚೆನ್ನಾಗಿ ಬಟ್ಟೆಬರೆ ಧರಿಸಿದ್ದರು. ಸೂಟುಗಳು, ಟೈ, ಮಿರುಗುವ ಷೂಗಳು ಅವರ ಜರ್ಬನ್ನು ಹೆಚ್ಚಿಸಿದ್ದುವು . ಅವರು ತಂದ ಹಾಸಿಗೆಗಳೂ ಸೊಗಸಾಗಿದ್ದುವು . ಅವರೆಲ್ಲರೂ ವಿದ್ಯಾವಂತರೂ, ಶ್ರೀಮಂತ ಹಿನ್ನೆಲೆಯಿಂದ ಬಂದವರೂ ಆಗಿದ್ದರು. ಇಲ್ಲಿ ನಾನು ಎಲ್ಲಿದ್ದೆ?

ಬಾಗಿಲಲ್ಲಿ ಕಾವಲುಗಾರರಿಗೂ ಅದೇ ಪ್ರಶ್ನೆ ಮೂಡಿರಬೇಕು. ನನ್ನ ಬರಿಗಾಲು ಮತ್ತು ಖದ್ದರ್ ಪಂಚೆ ನೋಡಿ ನನ್ನನ್ನು ಆಚೆಗಟ್ಟಲು ಪ್ರಯತ್ನಿಸಿದರು. ನನ್ನ ಸಂದರ್ಶನದ ಕಾರ್ಡು ತೋರಿಸಿದ ಮೇಲೆ ಒಲ್ಲದ ಮನಸ್ಸಿನಿಂದ ಒಳಕ್ಕೆ ಬಿಟ್ಟರು. ನನ್ನ ದಾಖಲೆಗಳನ್ನು ಒಪ್ಪಿಸಬೇಕಾದ ಒಂದು ಮೇಜಿನ ಕಡೆಗೆ ಬೆಟ್ಟು ಮಾಡಿ ತೋರಿಸಿದರು.

ಎಲ್ಲಾ ಕಡೆಯೂ ನಾನು ಕುತೂಹಲ ಮತ್ತು ಗೇಲಿಯ ವಸ್ತುವಾದೆ. ಸ್ವಲ್ಪದರಲ್ಲೇ 'ಏಯ್ ಧೋತೀವಾಲಾ' ಎಂದು ಕರೆಯತೊಡಗಿದರು. ನನಗೆ ಪ್ರತಿಭಟಿಸದೆ ತಡೆದಿರಲಾಗಲಿಲ್ಲ. "ನಿನ್ನ ಮುತ್ತಾತಂದಿರೂ ಧೋತೀವಾಲರಾಗಿದ್ದರು, ನಿನ್ನ ತಾತ ಧೋತೀವಾಲರಾಗಿದ್ದರು, ನಿನ್ನ ಅಪ್ಪನೂ ಧೋತಿಯುಡುತ್ತಾನೆಂದು ತೋರುತ್ತದೆ. ನೀನು ಎಂದಿನಿಂದ ಸೂಟುವಾಲಾನಾದೆ?" ಎಂದೆ. ಈ ಹಂತದಲ್ಲಿ ಬುದ್ಧಿಯಿದ್ದ ಯಾವನೋ ಇನ್ನೊಬ್ಬ, "ಸರಿಬಿಡು, ಈ ವಾಲಾ, ಗೀಲಾ ಮಾತು ಇಲ್ಲೇಕೆ ? ನಾವು ಇಲ್ಲಿಗೆ ಬಂದಿರುವುದು ಇನ್ನೂ ಮುಖ್ಯವಾದ ಉದ್ದೇಶದಿಂದ. ಅದನ್ನು ಕುರಿತು ಯೋಚಿಸೋಣ" ಎಂದ.

ರಾತ್ರಿ ಯಾರೂ ನನ್ನನ್ನು ಮಾತನಾಡಿಸಲಿಲ್ಲ. ಎಲ್ಲರೂ ತಮ್ಮ ಹಾಸಿಗೆಗಳನ್ನು ಅಣಿಮಾಡಿಕೊಂಡರು, ಮರುದಿನದ ಕಾರ್ಯಕ್ರಮವನ್ನು ಕುರಿತು ಚರ್ಚಿಸುತ್ತಾ.

ಮಾರನೆಯ ದಿನ ನಾವೆಲ್ಲ ಒಂದು ಸಭಾಂಗಣದಂತಹ ಸ್ಥಳದಲ್ಲಿ ಸೇರಿದೆವು. ನಮ್ಮ ಪೂರ್ಣವಿವರಗಳನ್ನು ಪಡೆದು ಹಲವು ಫಾರಮ್ಮುಗಳನ್ನು ತುಂಬಿಕೊಂಡರು. ಆಮೇಲೆ ನಮಗೆ ಒಂದು ಪ್ರಶ್ನಾವಳಿಯನ್ನು ಕೊಡಲಾಯಿತು. ಪ್ರತಿಯೊಂದು ಪ್ರಶ್ನೆಗೂ ಒಂದೋ ಎರಡೋ ಪದಗಳ ಉತ್ತರ, ಅಥವಾ ಮನಸ್ಸಿನಲ್ಲೇ ಲೆಕ್ಕ ಹಾಕಿ ತಟಕ್ಕನೆ ಹೇಳಬೇಕಾದ ಸಂಖ್ಯೆ. ಬಹುಶಃ ಇದು ನಮ್ಮ ಬುದ್ಧಿಶಕ್ತಿಯ ಪರೀಕ್ಷೆ. ಒಂದು ನೂರಕ್ಕಿಂತಲೂ ಹೆಚ್ಚು ಪ್ರಶ್ನೆಗಳಿದ್ದುವೆಂದು ತೋರುತ್ತದೆ. ಇದಕ್ಕೆ ಸಮಯದ ಮಿತಿ ಹಾಕಲಾಗಿತ್ತು. 'ಸ್ಟಾರ್ಟ್' ಎಂದಾಗ ಪ್ರಾರಂಭಿಸಿ 'ಸ್ಟಾಪ್' ಎಂದಾಗ ಪೆನ್ಸಿಲನ್ನು ಕೆಳಗಿಟ್ಟುಬಿಡಬೇಕು. ಆಮೇಲೆ ಸಿಬ್ಬಂದಿಯವರು ಯಾರಾದರೂ ಬಂದು ಉತ್ತರಪತ್ರಿಕೆಗಳನ್ನು ಸಂಗ್ರಹಿಸಿಕೊಳ್ಳುತ್ತಿದ್ದರು.

ಮುಂದಿನ ಪತ್ರಿಕೆ ಮನೋವಿಜ್ಞಾನಕ್ಕೆ ಸಂಬಂಧಪಟ್ಟದ್ದು. ಅದು ಇದೇ ರೀತಿ. ನನ್ನ ಉತ್ತರಗಳು ತೀರಾ ಕೆಟ್ಟದಾಗಿರಲಿಲ್ಲವೆಂದು ಭಾವಿಸಿದೆ. ಆಮೇಲೆ ಒಂದು ಕತ್ತಲು ಕೊಠಡಿಯಲ್ಲಿ ತೆರೆಯ ಮೇಲೆ ಪದಗಳನ್ನು ಹಾಯಿಸಿ ತಕ್ಷಣವೇ ಆ ಪದಗಳನ್ನು ಉಪಯೋಗಿಸಿಕೊಂಡು ವಾಕ್ಯ ರಚಿಸುವಂತೆ ಹೇಳಿದರು. ಆಮೇಲೆ ಗುಂಪು ಚರ್ಚೆ. ನಮ್ಮ ಪಾಲಿಗೆ ಬಂದ ವಿಷಯ 'ಗೃಹಕೈಗಾರಿಕೆಗೆದುರಾಗಿ ಔದ್ಯಮೀಕರಣ'. ಬಹಳ ಬಿಸಿಯಾಗಿ ನಾವು ಚರ್ಚೆ ಮಾಡಿದೆವು. ಗೃಹಕೈಗಾರಿಕೆಗಳನ್ನು ಕುರಿತು ಗಾಂಧೀಜಿಯವರ ಕೆಲವು ಪುಸ್ತಕಗಳನ್ನು ನಾನು ಓದಿದ್ದೆ. ನನ್ನ ಪಾತ್ರ ಚೆನ್ನಾಗಿಯೇ ಇತ್ತು.

ಆಮೇಲೆ ಶತ್ರುವಿನ ಠಾಣ್ಯದ ಒಂದು ಮರಳಿನ ಮಾದರಿಯನ್ನು ನಮಗೆ ತೋರಿಸಿದರು. ಅದನ್ನು ವಶಪಡಿಸಿಕೊಂಡು ನಾಶ ಮಾಡುವುದು ಹೇಗೆ ಎನ್ನುವುದು ಚರ್ಚೆಯ ವಿಷಯ. ನನ್ನ ಇಟಗಿ ಅನುಭವ ಸಹಾಯ ಮಾಡಿತು ; ಚೆನ್ನಾಗಿ ಉತ್ತರಕೊಟ್ಟೆ . ಇಲ್ಲಿಗೆ ಒಂದು ದಿನದ ಪರೀಕ್ಷೆ ಮುಗಿಯಿತು.

ಮರುದಿನ ಬೆಳಗ್ಗೆ ಬಯಲು ಪರೀಕ್ಷೆಗಳು. ಇವು ಎರಡು ಬಗೆಯವು; ಗುಂಪುಗೂಡಿ ಮಾಡಬೇಕಾದವು ಮತ್ತು ನಾಯಕತ್ವದ ನಿರ್ವಹಣೆ. ನಮ್ಮಲ್ಲಿ ೧೦-೧೨ ಜನರಿಗೆ ಒಂದೊಂದು ಕೆಲಸ ವಹಿಸಿದರು. ಒಂದು ದೊಡ್ಡ ಡ್ರಮ್ಮನ್ನೂ, ಉದ್ದವಾದ ದಪ್ಪ ಮರದ ದಿಮ್ಮಿಯನ್ನೂ, ಭಾರವಾದ ಹಗ್ಗ ಮೊದಲಾದ ಕೆಲವು ವಸ್ತುಗಳನ್ನೂ – ಒಂದು ಚೌಕಾಕಾರದ ನೀರು ತುಂಬಿದ ಗುಂಡಿಯನ್ನೂ ಮತ್ತು ಇತರ ಕೆಲವು ತಡೆಗಳನ್ನೂ ನಾವಾಗಲೀ ವಸ್ತುಗಳಾಗಲೀ ನೀರಿನಿಂದ ತೇವಗೊಳ್ಳದ ಹಾಗೆ ಆಚೆ ಬದಿಗೆ ಒಯ್ಯಬೇಕು. ಐದೋ-ಆರೋ ಜನ ಅಧಿಕಾರಿಗಳು ನಮ್ಮನ್ನು ಗಮನಿಸುತ್ತಿದ್ದರು. ನಮಗೆ ಸಂಖ್ಯೆಗಳನ್ನು ಕೊಡಲಾಗಿತ್ತು. ನನ್ನ ಸಂಖ್ಯೆ (ಕೆಲವರಿಗೆ ದುರದೃಷ್ಟಕರವಾದ) ೧೩. ಇಲ್ಲಿ ವಸ್ತುಗಳನ್ನು ಜೋಡಿಸಿಟ್ಟಿದ್ದರು. ನಮಗೆ ನಿಯಮಗಳನ್ನು ವಿವರಿಸಿದರು. 45 ನಿಮಿಷಗಳಲ್ಲಿ ನಾವು ಈ ಕೆಲಸವನ್ನು ಮುಗಿಸಬೇಕಾಗಿತ್ತು.

ನನಗೆ ಆತ್ಮವಿಸ್ವಾಸ ಕುಂದುತ್ತಿತ್ತು. ನನ್ನ ತಂಡದ ಎಲ್ಲರೂ ಕಟ್ಟುಮಸ್ತಾಗಿ ಬೆಳೆದವರು, ಎತ್ತರವಾಗಿದ್ದವರು, ಮಿಲಿಟರಿ ಕುಟುಂಬಗಳಿಂದ ಬಂದವರು. 'ಗೋ' (Go) ಎಂಬ ಸೂಚನೆ ಸಿಕ್ಕಿದೊಡನೆ ಎಲ್ಲರೂ ನುಗ್ಗಿ ಒಂದೊಂದು ವಸ್ತುವನ್ನು ಬಾಚಿಕೊಂಡರು. ನನ್ನನ್ನು ಆಕಡೆ ನೂಕಿಬಿಟ್ಟರು. ಹೇಗೋ ಪ್ರಯತ್ನಿಸಿ ಆ ಭಾರವಾದ ಹಗ್ಗವನ್ನು ನಾನು ತೆಗೆದುಕೊಳ್ಳಲು ಸಾಧ್ಯವಾಯಿತು. ಅದು ಸುಮಾರು ೨೦ ಅಡಿ ಉದ್ದವಾಗಿರಬೇಕು.

ಇತರ ಹಲವರು ಎತ್ತರವಾದ ಆ ಮರದ ದಿಮ್ಮಿಯನ್ನು ಹೆಗಲ ಮೇಲೆ ಹೊತ್ತುಕೊಂಡಿದ್ದರು. ಅದನ್ನು ಗುಂಡಿಯಿಂದ ಆಚೆಗೆ ಬೇಗ ತಳ್ಳಿಬಿಡುವುದು ಅವರ ಉದ್ದೇಶ. ಆದರೆ ಅರ್ಧದಷ್ಟು ಕೂಡ ಮುಂದೆ ಹೋಗಿರದಾಗ ಆ ಭಾರವಾದ ಕಂಬವು ನೀರಿನ ಕಡೆಗೆ ವಾಲತೊಡಗಿತು. ನಿಯಮದ ಪ್ರಕಾರ ನೀರು ಸೋಕಲೇಬಾರದು. ತಮ್ಮ ಹತೋಟಿ ಮೀರಿ ಹೋಗುತ್ತಿರುವುದನ್ನು ಗಮನಿಸಿ ಅದನ್ನು ಅವರು ಹಿಂದಕ್ಕೆಳೆಯಲು ತೊಡಗಿದರು.

ಈಗ ನನಗೆ ಏನು ಮಾಡಬೇಕೆಂದು ತಿಳಿದುಹೋಯಿತು.

ಕಂಬದ ಆಚೆಯ ತುದಿಯು ಪೂರ್ತಿ ನಮ್ಮ ಕಡೆಗೆ ಬಂದಾಗ ನಾನು ಮುಂದೆ ನುಗ್ಗಿ ನನ್ನ ಬಳಿಯಿದ್ದ ಹಗ್ಗದ ಮಧ್ಯಭಾಗವನ್ನು ಅದಕ್ಕೆ ಬಲವಾಗಿ ಕಟ್ಟಿದೆ. ಈಗ ದಿಮ್ಮಿಯನ್ನು ನೆಟ್ಟಗೆ ನಮ್ಮ ಕಡೆ ನಿಲ್ಲಿಸಿಕೊಂಡು, ಹಗ್ಗದ ಸಹಾಯದಿಂದ ಅದನ್ನು ಗುಂಡಿಯ ಆಚೆ

ತುದಿಗೆ ಬಾಗುವಂತೆ ಮಾಡಬಹುದೆಂಬುದು ಎಲ್ಲರಿಗೂ ಹೊಳೆಯಿತು. ಸಮಸ್ಯೆ ಪರಿಹಾರವಾದದ್ದು ಎಲ್ಲರಿಗೂ ಸಂತೋಷವಾಯಿತು. ಈಗ ಇಡೀ ಕಾರ್ಯಾಚರಣೆ ನನ್ನ ಕೈಗೆ ಬಂದಿತ್ತು. ದಿಮ್ಮಿಯನ್ನು ಗುಂಡಿಯ ಒಂದು ಪಕ್ಕದಲ್ಲಿ ಭದ್ರವಾಗಿ ನಿಲ್ಲಿಸಿದ ಮೇಲೆ ಒಬ್ಬೊಬ್ಬರಾಗಿ ಅದರ ಮೇಲೆ ತೆವಳಿಕೊಂಡು ಗುಂಡಿಯನ್ನು ದಾಟಿದರು. ಎಲ್ಲ ವಸ್ತುಗಳನ್ನೂ ಹಾಗೆಯೇ ಆಚೆಗೆ ಸೇರಿಸಿದೆವು. ನನ್ನ ಸರದಿ ಬಂದಾಗ ಸಲೀಸಾಗಿ ದಿಮ್ಮಿಯ ಮೇಲೆ ನಡೆದುಕೊಂಡು ಹೊರಟುಹೋದೆ. ಇಂತಹ ಕೆಲಸಗಳು ನನಗೆ ಸಲೀಸಾಗಿದ್ದುವು. ಇತರ ತಂಡಕಾರ್ಯಗಳನ್ನೂ ಯಾವುದೇ ಕಷ್ಟವಿಲ್ಲದೆ ಮುಗಿಸಿದ್ದಾಯಿತು.

ಇದಾದ ಕೂಡಲೇ ನಾಯಕತ್ವ ಪರೀಕ್ಷೆ, ಹಿಂದಿನದರಂತೆಯೇ. ಆದರೆ ಇಲ್ಲಿ ಒಬ್ಬ ನಾಯಕನ ಮಾತನ್ನು ಪಾಲಿಸಬೇಕು. ಅದೇ ವಸ್ತುಗಳು, ಹಗ್ಗ, ಪೀಪಾಯಿ, ಮರದ ದಿಮ್ಮಿ ಇತ್ಯಾದಿ. ಅವನ್ನು ತಡೆಗಳನ್ನು ದಾಟಿಸಿ ಒಯ್ಯಬೇಕು. ನಾನು ತಂಡದ ನಾಯಕನಾದೆ. ಎರಡು ಗೋಡೆಗಳು ಸುಮಾರು ೧೫ - ೧೬ ಅಡಿ ಎತ್ತರವಾಗಿದ್ದವು. ಒಂದಕ್ಕೂ ಇನ್ನೊಂದಕ್ಕೂ ನಡುವೆ ೧೫ - ೨೦ ಅಡಿಗಳ ಅಂತರವಿತ್ತು.

ಇದು ಕಷ್ಟದ ಕೆಲಸ. ನನಗೆ ಸ್ಪಷ್ಟವಾದ ಯಾವ ಉಪಾಯವೂ ಹೊಳೆಯಲಿಲ್ಲ. ಒಬ್ಬರೊಬ್ಬರ ಹೆಗಲ ಮೇಲೆ ಹತ್ತಿ ನಿಂತು ಗೋಡೆಯ ನೆತ್ತಿಯನ್ನು ಮುಟ್ಟಬಹುದೆ ? ಇಬ್ಬರು ಹಾಗೆ ಮಾಡಿದೆವು. ನಮ್ಮ ಪ್ರಯತ್ನ ವಿಫಲವಾಯಿತು. ಹಿಂದಿನ ಒಂದು ತಂಡವೂ ಈ ತಡೆಯನ್ನು ದಾಟಲು ಅಸಮರ್ಥವಾಯಿತು ಎಂದು ಕೇಳಿದ್ದೆ. ನನ್ನ ಉತ್ಸಾಹ ಕುಂದಿತು. ಅಷ್ಟರಲ್ಲಿ ಅಲ್ಲೊಂದು ಮಾವಿನಮರವವಿರುವುದು ಕಾಣಿಸಿತು. ಅದರ ಕೊಂಬೆಗಳು ಗೋಡೆಯ ಮೇಲೆ ಹರಡಿ ಕೊಂಡಿದ್ದುವು. ನಾವು ಗೋಡೆಗಳನ್ನು ಹೇಗೆ ದಾಟಬಹುದು ಎಂಬುದು ಹೊಳೆಯಿತು. ನನ್ನ ಮಿತ್ರರಿಗೆ ವಿವರಿಸಿದೆ. ಹಗ್ಗವನ್ನು ಒಂದು ಕೊಂಬೆಗೆ ಬೀಸಿ ಎಸೆದು ಎರಡೂ ತುದಿಗಳನ್ನು ಹಿಡಿದು ಉಯ್ಯಾಲೆಯಂತೆ ತೂಗಿ ಗೋಡೆಗಳನ್ನು ದಾಟಿ ಹೋಗಬಹುದು. ವಸ್ತುಗಳನ್ನು ಹಾಗೆಯೇ ಸಾಗಿಸಬಹುದು. ಯೋಜನೆಯೇನೋ ಉತ್ತಮವಾಗಿತ್ತು. ಆದರೆ ಡ್ರಮ್ಮನ್ನೂ ಮರದ ತೊಲೆಯನ್ನೂ ಸಾಗಿಸುವುದು ಬಹಳ ಕಷ್ಟವಾಯಿತು. ಅಂತೂ ಇದನ್ನು ಮುಗಿಸಿದಾಗ ನಮಗೆ ನಿಗದಿಪಡಿಸಿದ್ದ ಸಮಯದಲ್ಲಿ ಇನ್ನೂ ಹೆಚ್ಚುಭಾಗ ಉಳಿದಿತ್ತು. ಗಮನಿಸುತ್ತಿದ್ದ ಅಧಿಕಾರಿಗಳು ಮುಗುಳ್ನಗೆ ಬೀರಿದರು. ಒಬ್ಬರು ಬಂದು ನನ್ನ ಬೆನ್ನು ತಟ್ಟಿ "ಚೆನ್ನಾಗಿ ಮಾಡಿದೆ" ಎಂದರು.

ಮಾರನೆಯ ದಿನ ಮೌಖಿಕ ಸಂದರ್ಶನ. ಪ್ರಿಸೈಡಿಂಗ್ ಅಧಿಕಾರಿ ಕರ್ನಲ್ ನ್ಯೂಟನ್ ಅವರು ಅದನ್ನು ನಿರ್ವಹಿಸಿದರು. ಭಾರತೀಯ ಸೇನೆಯು ಆ ಬ್ರಿಟಿಷ್ ಅಧಿಕಾರಿಯನ್ನು, ತಮಗೆ ಸ್ವಲ್ಪಕಾಲ ನೆರವಾಗ ಬೇಕೆಂದು ಕೇಳಿಕೊಂಡಿತ್ತು. ಬೆಳಗ್ಗೆ ೧೦.೩೦ ಗಂಟೆ ಸುಮಾರಿಗೆ ನನ್ನನ್ನು ಬೋರ್ಡಿನ ಸಂದರ್ಶನ ಕೊಠಡಿಗೆ ಕಳುಹಿಸಿದರು.

ನನ್ನ ನೆನಪು ಸರಿಯಾಗಿರುವುದಾದರೆ, ಸಂಭಾಷಣೆ ಹೀಗಿತ್ತು:

"ನಿನ್ನ ಹೆಸರೇನು?"

"ವೇಣುಗೋಪಾಲ್, ಸರ್"

"ವಯಸ್ಸು?"

"೨೬ ವರ್ಷ, ಸರ್"

"ವಿದ್ಯಾರ್ಹತೆ ಏನು?"

"ಸರ್, ೧೯೪೧ ರಲ್ಲಿ ಇಂಟರ್ ಮೀಡಿಯೆಟ್ ತರಗತಿಯಲ್ಲಿ ಫಿಸಿಕ್ಸ್, ಕೆಮಿಸ್ಟ್ರಿ , ಮ್ಯಾಥಮಾಟಿಕ್ಸ್‌ಗಳಲ್ಲಿ ಉತ್ತೀರ್ಣನಾದೆ."

"ಇಷ್ಟುದಿನ ಏನು ಮಾಡುತ್ತಿದ್ದೆ?"

"ಸರ್, ಮತ್ತೆ ಇಂಟರ್ ಪರೀಕ್ಷೆಗೆ ಕುಳಿತು ಬಾಕಿಯಿದ್ದ ಇಂಗ್ಲಿಷ್ ಮತ್ತು ಕನ್ನಡ ತೇರ್ಗಡೆಯಾಗಲು ಪ್ರಯತ್ನಿಸಿದೆ. ಅದೇ ಸಮಯಕ್ಕೆ ೧೯೪೨ ರ ಪ್ರಾರಂಭದಲ್ಲಿ ಜೀವನೋಪಾಯಕ್ಕಾಗಿ ಹಾಗೂ ಓದು ಮುಂದುವರಿಸುವ ಸಲುವಾಗಿ ಎಚ್.ಎ.ಎಲ್.ಗೆ ಕೆಲಸಕ್ಕೆ ಸೇರಿಕೊಂಡೆ. ಆದರೆ ಸರ್, ಮನುಷ್ಯ ನಿರ್ಧರಿಸುತ್ತಾನೆ ದೇವರು ಅದನ್ನು ಮುರಿಯುತ್ತಾನೆ. ೧೯೪೨ರ ಆಗಸ್ಟಿನಲ್ಲಿ ಕ್ವಿಟ್ ಇಂಡಿಯಾ ಚಳವಳಿಗೆ ಸೇರಿದೆ."

"ಮುಂದುವರಿಸು, ದಯವಿಟ್ಟು"

"ನಾನು ಸತ್ಯಾಗ್ರಹಿಯಾಗಿರಲಿಲ್ಲ. ಬಹುತೇಕ ಭೂಗತನಾಗಿದ್ದು ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದ್ದೆ. ನನ್ನ ಒಬ್ಬ ಗೆಳೆಯನು ಜೈಲಿನಿಂದ ತಪ್ಪಿಸಿಕೊಳ್ಳುವಂತೆ ಸಹಾಯ ಮಾಡುತ್ತಿದ್ದಾಗ ರಿವಾಲ್ವರಿನೊಂದಿಗೆ ನನ್ನನ್ನು ಸೆರೆ ಹಿಡಿದರು. ಜೈಲಿಗೆ ಹಾಕಿದರು. ಸಿವಿಲ್ ನ್ಯಾಯಾಲಯವು ವಿಚಾರಣೆ ನಡೆಸಿ ೧೮ ತಿಂಗಳ ಕಠಿಣ ಸಜೆ ವಿಧಿಸಿತು. ಆಮೇಲೆ ಸೆಷನ್ಸ್ ನ್ಯಾಯಾಲಯವು ನನ್ನನ್ನು ಬಿಡುಗಡೆ ಮಾಡಿತು."

"ನಿನ್ನ ಗೆಳೆಯನು ಜೈಲಿನಿಂದ ಹೊರಬರಲು ಹೇಗೆ ಸಹಾಯ ಮಾಡುತ್ತಿದ್ದೆ?"

"ಮೊಳೆಗಳು, ಹಗ್ಗ, ಸ್ವಲ್ಪ ಬಟ್ಟೆಬರೆ ಮತ್ತು ಒಂದು ಆಯುಧ ಇವುಗಳನ್ನು ಒಳಕ್ಕೆ ಕದ್ದುಸಾಗಿಸಲು ಪ್ರಯತ್ನಿಸುತ್ತಿದ್ದೆ. ಆದರೆ ಆ ಪ್ರಕ್ರಿಯೆಯಲ್ಲಿದ್ದಾಗಲೇ ಸಿಕ್ಕಿಕೊಂಡುಬಿಟ್ಟೆ . ಆದರೆ ಅವನು ಕೆಲವು ಗೆಳೆಯರ ನೆರವಿನೊಂದಿಗೆ ಜೈಲಿನ ಗೋಡೆ ಹತ್ತಿ ತಪ್ಪಿಸಿಕೊಂಡ."

"ನೀನು ಯಾವ ಪತ್ರಿಕೆಗಳನ್ನು ಓದುತ್ತೀಯೆ?"

"ಹಿಂದೂ ಮತ್ತು ಹರಿಜನ, ಸರ್."

"ಹಿಂದೂ ಪತ್ರಿಕೆಯ ಸಂಪಾದಕರು ಯಾರು?"

"ಶ್ರೀನಿವಾಸನ್ (ಅವರು ಜನಪ್ರಿಯರಾಗಿದ್ದ ಸಂಪಾದಕರು. ಎಲ್ಲರಿಗೂ ಅವರ ಹೆಸರು ಗೊತ್ತಿತ್ತು.)"

"ಹರಿಜನ ಎಂದರೆ ಅರ್ಥವೇನು?"

"ಭಗವಂತನ ಮಗು ಎಂದು ಸರ್"

"ಬ್ರಿಟಿಷರನ್ನು ಕುರಿತು ನಿನ್ನ ಅಭಿಪ್ರಾಯ ಏನು?"

"ಅವರು ಬುದ್ಧಿವಂತರು, ಆದರೆ ಚಾಣಾಕ್ಷರು, ಒಡೆದು ಆಳುವುದರಲ್ಲಿ ಪರಿಣತರು. ಹೀಗೆ ಹೇಳುವುದನ್ನು ದಯವಿಟ್ಟು ತಪ್ಪಾಗಿ ಭಾವಿಸಬಾರದು ಸರ್. ಅವರು ದೊಡ್ಡ ವರ್ತಕರು, ಚಿನ್ನ ಎಲ್ಲಿ ಕಂಡುಬರುತ್ತದೋ ಅಲ್ಲಿಗೆ ಹೋಗುತ್ತಾರೆ. ಚಂದ್ರನಲ್ಲಿ ಅವರಿಗೆ ಚಿನ್ನ ಕಾಣಿಸಿದರೆ ಅಲ್ಲಿಗೆ ಬೇಕಾದರೂ ಹೋಗುತ್ತಾರೆ." (ಎಲ್ಲರೂ ನಕ್ಕರು. ವಾಸ್ತವವಾಗಿ ಇವು 'ಹಿಂದ್ ಸ್ವರಾಜ್' ಕೃತಿಯಲ್ಲಿ ಗಾಂಧೀಜಿಯವರು ಹೇಳಿದ ಮಾತುಗಳು.)

"ಈಗಲೂ ನಿನಗೆ ಬ್ರಿಟಿಷರ ಬಗೆಗೆ ಅಸಮಾಧಾನವಿದೆಯೇ?"

"ಸರ್, ದೇಶವನ್ನು ಶಾಂತಿಯುತವಾಗಿ ಹಸ್ತಾಂತರಿಸಿ ಕೊಡಲು ಶಕ್ತಿಮೀರಿ ಶ್ರಮಿಸಿದ ಕ್ಲೆಮೆಂಟ್ ಅಟ್ಲೀ ಮತ್ತು ಲಾರ್ಡ್ ಮೌಂಟ್ ಬ್ಯಾಟನ್ ಅವರನ್ನು ಹೇಗೆ ತಾನೆ ನಾವು ಮರೆಯಬಹುದು?"

ಇದಾದ ಮೇಲೆ ಇನ್ನೊಂದೆರಡು ಸರಳವಾದ ಪ್ರಶ್ನೆಗಳು. ಸಂದರ್ಶನ ಮುಗಿಸಿ ಹೊರಗೆ ಬರುವಾಗ ನಾನು ನಿರುತ್ಸಾಹಿತನಾಗಿದ್ದೆ. ಈ ಎರಡು ದಿನ ಅಖಿಲಭಾರತ ಮಟ್ಟದ ಹಲವು ಅಭ್ಯರ್ಥಿಗಳೊಂದಿಗೆ ನಾನು ಬೆರೆತಿದ್ದೆ. ಅವರೆಲ್ಲ ನನಗಿಂತ ಬಹು ಉತ್ತಮ ಮಟ್ಟದಲ್ಲಿ ಇದ್ದವರು. ಅಲ್ಲದೆ ನಾನು ಜೈಲಿಗೆ ಹೋಗಿದ್ದ ವಿಚಾರವೂ ಇತ್ತು. ಅವರು ನನ್ನನ್ನೇಕೆ ಆಯ್ಕೆ ಮಾಡುತ್ತಾರೆ! ಬರಬರುತ್ತಾ ನನ್ನ ನಿರಾಶೆ ಬಲಿಯಿತು. ಫಲಿತಾಂಶದ ಪ್ರಕಟಣೆ ಹತ್ತಿರವಾಯಿತು. ಒಬ್ಬ ಅಧಿಕಾರಿಯು ಸಂದರ್ಶನ ಕೊಠಡಿಯಿಂದ ಹೊರಬಂದು ಆಯ್ಕೆಯಾಗಿರುವ ಹೆಸರುಗಳ ಪಟ್ಟಿ ಹಿಡಿದುಕೊಂಡು ನೋಟೀಸು ಬೋರ್ಡಿನ ಕಡೆಗೆ ಹೋದರು.

ಇನ್ನು ನನಗೆ ತಡೆದುಕೊಳ್ಳಲು ಸಾಧ್ಯವಾಗಲಿಲ್ಲ. ತಕ್ಷಣ ಅಲ್ಲಿಂದ ಹೊರಟುಬಿಡಲು ನಿರ್ಧರಿಸಿದೆ. ನನ್ನ ಬ್ಯಾರಕ್‌ಗೆ ಹಿಂದಿರುಗಿ ನನ್ನ ಕಂಬಳಿ ಸುತ್ತಿಕೊಂಡು ಮನೆಗೆ ಹೋಗಲು ಗೇಟಿನ ಬಳಿಗೆ ಬಂದೆ. ಅಲ್ಲಿ ನಿಲ್ದಾಣಕ್ಕೆ ಹೊರಟಿದ್ದ ಟ್ರಕ್ ನಿಂತಿತ್ತು. ಅನೇಕ ಅಭ್ಯರ್ಥಿಗಳು ನನ್ನ ಹಾಗೆಯೇ ಹೊರಟು ಅದರಲ್ಲಿ ಕುಳಿತಿದ್ದರು. ಬಹಳ ಮೊದಲೇ ಅವರನ್ನು ಪರೀಕ್ಷೆಯಿಂದ ತೆಗೆದುಹಾಕಲಾಗಿತ್ತು.

ಗೇಟನ್ನು ಸಮೀಪಿಸುತ್ತಿದ್ದಂತೆ ಯಾರೋ ನನ್ನ ಹಿಂದೆ ನನ್ನ ಹೆಸರು ಹಿಡಿದು ಕರೆಯುತ್ತಾ , ಬಯ್ಯುತ್ತಾ , ನಿಲ್ಲಲು ಹೇಳುತ್ತಿದ್ದರು. ತಿರುಗಿ ನೋಡಿದೆ. ನಮ್ಮ ಬ್ಯಾರಕ್ ಹೊಣೆಹೊತ್ತಿದ್ದ ಹವಾಲ್ದಾರ ನನ್ನ ಬಳಿಗೆ ಬಂದವನೇ "ನಿನ್ನನ್ನು ಹೋಗು ಎಂದು ಹೇಳಿದವರು ಯಾರು?....... ಹಲೋ........., ಹಿಂದಕ್ಕೆ ಬಾ!....... ನೀನೊಬ್ಬ ....!" ಅವನೊಂದಿಗೆ ಹಿಂದಕ್ಕೆ ಹೋದೆ. ಟ್ರಕ್ ದಾಟಿ ಬರುತ್ತಿದ್ದಾಗ ಹವಾಲ್ದಾರನು, ನಾನು ಆಯ್ಕೆಯಾಗಿರುವುದಾಗಿ ಹೇಳಿದನು.

ಅದನ್ನು ಕೇಳಿ ಟ್ರಕ್‌ನಲ್ಲಿ ಕುಳಿತಿದ್ದ ಒಬ್ಬನು ಹಲ್ಲುಕಿರಿದನು. "ಧೋತೀವಾಲ ಅಧಿಕಾರಿಯಾಗಿಬಿಟ್ಟಿದ್ದಾನೆ." ಅವನನ್ನು ಬೆಟ್ಟುಮಾಡಿ ತೋರಿಸುತ್ತಾ ನಾನು ಟ್ರಕ್‌ನಲ್ಲಿದ್ದ ಇತರರಿಗೆ ಹೇಳಿದೆ "ನಾನೇ ಪ್ರಿಸೈಡಿಂಗ್ ಆಫೀಸರಾಗಿದ್ದರೂ ನನ್ನನ್ನು ಆರಿಸುತ್ತಿರಲಿಲ್ಲ , ಜೋರು ಗಂಟಲಿನ ಈ ಮಹನೀಯರನ್ನು ಆರಿಸುತ್ತಿದ್ದೆ."

ಅವನು ಮೂಕನಾದನು. ಒಬ್ಬಿಬ್ಬರು ನನ್ನನ್ನು ಅಭಿನಂದಿಸಿ "ವೈದ್ಯಕೀಯ ಪರೀಕ್ಷೆಯಲ್ಲಿ ಶುಭವಾಗಲಿ" ಎಂದು ಹಾರೈಸಿದರು.

ನಾವು ಕಚೇರಿಗೆ ಹೋದೆವು. ಇನ್ನೂ ಮೂವರು ಅಭ್ಯರ್ಥಿಗಳು ಆಯ್ಕೆಯಾಗಿದ್ದರು. ನಾವೆಲ್ಲ ಅಲ್ಲೇ ಇದ್ದು ಮರುದಿನ ಬೆಳಗ್ಗೆ ವೈದ್ಯಕೀಯ ಪರೀಕ್ಷೆಗಾಗಿ ಮೆಡಿಕಲ್ ಬೋರ್ಡಿನ ಮುಂದೆ ಹಾಜರಾಗಬೇಕಾಗಿತ್ತು. ಸಮಗ್ರವಾದ ಪರೀಕ್ಷೆ ನಡೆಯಿತು. ದೃಷ್ಟಿ ಸ್ವಲ್ಪ ಕಡಿಮೆಯಿದ್ದುದರಿಂದ ತಾತ್ಕಾಲಿಕವಾಗಿ ಅನರ್ಹ ಎಂದು ನನ್ನನ್ನು ತೀರ್ಮಾನಿಸಿ, ಒಡನೆಯೇ ಸರಿಯಾದ ಕನ್ನಡಕ ಹಾಕಿಕೊಂಡು ಮತ್ತೆ ಮೆಡಿಕಲ್ ಬೋರ್ಡಿನೆದುರು ಹಾಜರಾಗಲು ಹೇಳಿದರು.

ತಕ್ಷಣವೇ ನನ್ನ ಚಿಕ್ಕಪ್ಪ ಕೃಷ್ಣಮೂರ್ತಿಯವರ ಬಳಿಗೆ ಓಡಿದೆ. ಅವರು ನೇತ್ರತಜ್ಞರು. ನನ್ನ ಎಲ್ಲ ಕಷ್ಟಗಳನ್ನೂ ವಿವರವಾಗಿ ಪರೀಕ್ಷೆ ಮಾಡಿದರು. ಅಗತ್ಯವಾದ ಕನ್ನಡಕವನ್ನು ಸಿದ್ಧಪಡಿಸಿಕೊಟ್ಟರು. ಸಮಯ ಪೋಲುಮಾಡದೆ ಮತ್ತೆ ಮೆಡಿಕಲ್ ಬೋರ್ಡಿನೆದುರು ಹಾಜರಾದೆ, ನನ್ನನ್ನು ಆರಿಸಿದರು. ೧೯೪೮ರ ಜನವರಿ ೧೧ರಂದು ಪುಣೆಯ ಡೆಕ್ಕನ್ ಕಾಲೇಜಿನ, ಆಫೀಸರ್ಸ್ ಟ್ರೇನಿಂಗ್ ಸ್ಕೂಲಿನಲ್ಲಿ (ಓ.ಟಿ.ಎಸ್.) ವರದಿ ಮಾಡಿಕೊಳ್ಳಲು ಆದೇಶಿಸಿದರು. ನನ್ನ ಸೇನಾ ಜೀವನ ಪ್ರಾರಂಭ ವಾಗಲಿತ್ತು.

೮. ಎತ್ತು ಮತ್ತು ನನ್ನ ಅತ್ತೆ

ಈ ಸ್ವಾರಸ್ಯವಾದ ಘಟನೆ ನೆನಪಿನಲ್ಲುಳಿದಿದೆ. ಓಟಿಎಸ್ ಸೇರುವುದಕ್ಕೆ ಕೆಲ ಸಮಯ ಮುಂಚೆ ನಾನು ಸಾವಿತ್ರಿಯನ್ನು ನೋಡಲು ಮತ್ತೂರಿಗೆ ಹೋಗಿದ್ದೆ.

ಮನೆಯ ಮುಂಭಾಗದ ಕೊಠಡಿಯಲ್ಲಿ ಒಂದು ಚಾಪೆಯ ಮೇಲೆ ಮಲಗಿಕೊಂಡಿದ್ದೆ. ಈ ಕೊಠಡಿ ಆ ಹಳ್ಳಿಯ ಗ್ರಂಥಾಲಯವೂ ಆಗಿತ್ತು. ಮಧ್ಯಾಹ್ನ ಸುಮಾರು ನಾಲ್ಕು ಗಂಟೆಯಿರಬಹುದು. ಆಚೀಚೆ ಮನೆಯ ಹೆಂಗಸರೂ, ನನ್ನ ಅತ್ತೆಯವರೂ ಮನೆಯ ಮುಂದಿನ ವರಾಂಡದಲ್ಲಿ ಹರಟೆ ಹೊಡೆಯುತ್ತಾ ಕುಳಿತಿದ್ದರು.

ಆ ದಿನಗಳಲ್ಲಿ ಹಳ್ಳಿಯ ಪ್ರತಿಯೊಂದು ಮನೆಯಲ್ಲೂ ದನಕರುಗಳಿರುತ್ತಿದ್ದುವು. ಮನೆಗೆ ತಾಗಿದಂತೆಯೇ ಅವುಗಳನ್ನು ಕಟ್ಟಿರುತ್ತಿದ್ದರು. ನನ್ನ ಅತ್ತೆಯ ಮನೆಯಲ್ಲಿ ತಗಡು ಹೊದಿಸಿದ, ಬೇಲಿ ಕಟ್ಟಿದ ಒಂದು ಆವರಣದಲ್ಲಿ ಕಟ್ಟಿರುತ್ತಿದ್ದರು. ಅದು ರಸ್ತೆಗೂ,

ವರಾಂಡಕ್ಕೂ ನಡುವೆ ಇತ್ತು. ಆಗ ನನ್ನ ಭಾವಮೈದುನ ಗೋಕರ್ಣ ಕೃಷಿಕನಾಗಿದ್ದ. ಕೆಲವು ದನಗಳನ್ನು ಕಟ್ಟಿಕೊಂಡಿದ್ದ. ಅವು ಬಲಕ್ಕೂ, ದಿಢೀರನೆ ಕೆರಳುವುದಕ್ಕೂ ಹೆಸರಾಗಿದ್ದವು. ಅವುಗಳನ್ನು ಹತೋಟಿ ಯಲ್ಲಿಟ್ಟುಕೊಳ್ಳಲು ಅವನಿಗೆ ಮಾತ್ರವೇ ಸಾಧ್ಯವಾಗುತ್ತಿತ್ತು.

ಮಾತನಾಡುತ್ತಾ ಕುಳಿತಿದ್ದ ನನ್ನ ಅತ್ತೆ ಎತ್ತುಗಳಿಗೆ ಮೇವು ಹಾಕಿಲ್ಲವೆಂಬುದನ್ನು ಗಮನಿಸಿದರು. ಒಳಗೆ ಹೋಗಿ ಒಂದು ತಬ್ಬು ಹುಲ್ಲು ತಂದು ಎತ್ತುಗಳನ್ನು ಕಟ್ಟಿದ್ದ ಷೆಡ್ಡಿಗೆ ಹೋದರು. ಅವುಗಳನ್ನು ಸರಿಯಾಗಿ ಕಟ್ಟಿದೆ ಎಂದು ಭಾವಿಸಿ ಸೀದಾ ಒಳಗೆ ಹೋದರು. ಆದರೆ ಒಂದು ಎತ್ತಿನ ಕಟ್ಟು ಕಳಚಿಕೊಂಡಿದ್ದಿರಬೇಕು. ಈಕೆ ಒಳಗೆ ಹೋದೊಡನೆ ನುಗ್ಗಿ ಬಂದು ತನ್ನ ಚೂಪಾದ ಕೊಂಬಿನಿಂದ ಅವರ ಹೊಟ್ಟೆಗೆ ತಿವಿದು ನೆಲದಿಂದ ಮೇಲಕ್ಕೆ ಎತ್ತಿತು. ನೋವು ತಡೆಯ ಲಾರದೆ ಅತ್ತೆ ಕಿಟಾರನೆ ಕಿರುಚಿದರು.

ದಿಢೀರನೆ ಎದ್ದ ಈ ಹುಯ್ಯಲನ್ನು ಕೇಳಿ ಎದ್ದೆ. ಏನಾಯಿತೋ ನೋಡಲು ಓಡಿದೆ. ಜನರು ನೆರೆದು ಬಾಯಿಬಡಿದುಕೊಳ್ಳುತ್ತಿದ್ದರು. ಯಾರಿಗೂ ಒಳಗೆ ಹೋಗಲು ಧೈರ್ಯವಾಗಲಿಲ್ಲ. ಇನ್ನು ಅತ್ತೆಯವರು ಎತ್ತಿನ ಕೊಂಬಿಗೆ ಸಿಕ್ಕಿಕೊಂಡಿದ್ದರು. ನಾನು ಏನನ್ನಾದರೂ ಮಾಡಲೇಬೇಕಾಗಿತ್ತು.

ಒಳಕ್ಕೆ ಹಾರಿದವನೇ ಎತ್ತಿನ ಮೂಗುದಾರವನ್ನು ಹಿಡಿದು ತಿರುಚಿದೆ. ಅದರ ತಲೆಯನ್ನು ಒಂದು ಪಕ್ಕಕ್ಕೆ ಬಲವಾಗಿ ಎಳೆದೆ. ಸದ್ಯ ಅದರಿಂದ ಅತ್ತೆಯವರು ಕೆಳಕ್ಕೆ ಬಿದ್ದರು. ಬಲವಾಗಿ ಒಂದೆರಡು ಪೆಟ್ಟುಕೊಟ್ಟು ಎತ್ತನ್ನು ಕಟ್ಟಿಹಾಕಿದೆ. ಅಷ್ಟುಹೊತ್ತಿಗೆ ಗೋಕರ್ಣನೂ ಬಂದನು. ಕೋಲಿನಿಂದ ಚೆನ್ನಾಗಿ ನಾಲ್ಕು ಪೆಟ್ಟು ಬಡಿದನು. ಎತ್ತು ಬಾಲದಿಂದ ನೊಣಗಳನ್ನು ಹಾರಿಸಿಕೊಂಡು ಸುಮ್ಮನೆ ನಿಂತುಕೊಂಡಿತು.

ತಕ್ಷಣವೇ ಅತ್ತೆಯವರನ್ನು ಆಸ್ಪತ್ರೆಗೆ ಸಾಗಿಸಿದೆವು. ದೇವರ ದಯೆಯಿಂದ ಕೆಲವು ದಿನಗಳ ಚಿಕಿತ್ಸೆಯ ಅನಂತರ ಚೇತರಿಸಿ ಕೊಂಡರು.

೯. ಇಮ್ಮಡಿ ವೇಗದಲ್ಲಿ ಅಧಿಕಾರಿ

೧೯೪೪ರ ಕೊನೆಯ ದಿನ. ನಾನು ಕುಳಿತಿದ್ದ ರೈಲು ಪೂನಾ ರೈಲು ನಿಲ್ದಾಣದಲ್ಲಿ ಬುಸುಗುಡುತ್ತಾ ನಿಂತಿತು. ಬೆಂಗಳೂರಿನಲ್ಲಿದ್ದ ನನ್ನ ಆತ್ಮೀಯ ಸಜ್ಜನರು ಅಗತ್ಯವಾದ ಬಟ್ಟೆಬರೆ ಹಾಗೂ ಇತರ ವಸ್ತುಗಳನ್ನು ಸಜ್ಜುಗೊಳಿಸಿಕೊಳ್ಳಲು ನೆರವಾಗಿದ್ದರು. ಸಿದ್ದಲಿಂಗಯ್ಯ , ನಿಜಲಿಂಗಪ್ಪ, ನಿಟ್ಟೂರು ಶ್ರೀನಿವಾಸರಾವ್, ರಾಮಚಂದ್ರರಾವ್ ಹೀಗೆ ನನ್ನ ಬದುಕಿನಲ್ಲಿ ಮುಗಿಯುತ್ತಿದ್ದ ಅಧ್ಯಾಯದ ಮಿತ್ರರನೇಕರು ಅಗತ್ಯವಸ್ತುಗಳೆಲ್ಲವನ್ನೂ ಜೋಡಿಸಿಕೊಂಡು ಹೊಸ ಜೀವನಕ್ಕೆ ಕಾಲಿಡುವಂತೆ ನೋಡಿಕೊಂಡರು. ಸದಾ ನನಗೆ ಒಂದೇ ಬಗೆಯ ಅವಲಂಬನೆ, ಪೋಷಣೆ ನೀಡುತ್ತಿದ್ದ ಅಣ್ಣ ಸುಬ್ಬರಾವ್ ಮತ್ತು ಚಿಕ್ಕಪ್ಪ ಕೃಷ್ಣಮೂರ್ತಿಯವರಂತೂ ಇದ್ದೇ ಇದ್ದರು.

ನಿಲ್ದಾಣದಲ್ಲಿ ಒಬ್ಬ ಜೆ ಸಿ ಓ ಹಾಗೂ ಒಬ್ಬ ಹವಾಲ್ದಾರ್ "ಓಟಿಎಸ್ ಅಭ್ಯರ್ಥಿಗಳು ಇಲ್ಲಿ ವರದಿ ಮಾಡಿಕೊಳ್ಳಬೇಕು" ಎಂಬ ಒಂದು ಫಲಕ ಇರಿಸಿಕೊಂಡು ಕಾದಿದ್ದರು. ನನ್ನ ಹಾಗೆಯೇ ಬಂದಿದ್ದ ಇತರ ಅಭ್ಯರ್ಥಿಗಳೂ ಅವರ ಮೇಜಿನ ಸುತ್ತ ತುಂಬಿಕೊಂಡಿದ್ದರು. ತಮ್ಮ ಬಳಿ ಇದ್ದ ಪಟ್ಟಿಯಲ್ಲಿ ನಮ್ಮ ಹೆಸರುಗಳನ್ನು ತಾಳೆ ನೋಡಿ, ನಮ್ಮನ್ನೂ ನಮ್ಮ ಸಾಮಾನು ಸರಂಜಾಮುಗಳನ್ನೂ ಹೊರಗೆ ಕಾದಿದ್ದ ೩-ಟನ್ ಲಾರಿಗಳಿಗೆ ತುಂಬಿಸಿದರು.

ಡೆಕ್ಕನ್ ಕಾಲೇಜು ಆವರಣದಲ್ಲಿದ್ದ ಅಧಿಕಾರಿ ತರಬೇತಿ ಶಾಲೆ (ಆಫೀಸರ್ಸ್ ಟ್ರೈನಿಂಗ್ ಸ್ಕೂಲ್) ಸೊಗಸಾದ ಸ್ಥಳ. ವಿಶಾಲವಾದ ಪೆರೇಡ್ ಮೈದಾನ ಮತ್ತು ಆಟದ ಮೈದಾನಗಳು, ಸುತ್ತಲೂ ನೂರಾರು ಮರಗಳು, ಹೂವು ತುಂಬಿದ ಪೊದರುಗಳು. ನಮ್ಮನ್ನು ನಮ್ಮ ವಸತಿಗಳಿಗೆ ಒಂದೊಂದರಲ್ಲಿ ನಾಲ್ಕು ಅಭ್ಯರ್ಥಿಗಳಿಗೆ ಮಂಚಗಳನ್ನು ಜೋಡಿಸಿದ್ದ ಇ ಪಿ ಐ ಪಿ ಗುಡಾರಗಳಿಗೆ ಕರೆದೊಯ್ದರು. ನಮ್ಮ ಲಗ್ಗೇಜುಗಳನ್ನೂ, ಪೆಟ್ಟಿಗೆಗಳನ್ನೂ ಇಳಿಸಿದರು. ಆಗಷ್ಟೇ ಬೆಳಗಾಗಿತ್ತು. ನಮ್ಮನ್ನು ಮೆಸ್‌ಗೆ ಕರೆದೊಯ್ದು ಉಪಾಹಾರ ಕೊಡಿಸಿದರು. ಅನಂತರ ನಾವು ಹೋಗಿ ಅಧಿಕಾರಿಗೆ ನಮ್ಮ ಪರಿಚಯ ಪತ್ರಗಳನ್ನು ಒಪ್ಪಿಸಬೇಕಾಗಿತ್ತು. ಹೆಸರಿನ ಅಕ್ಷರಾನುಕ್ರಮದಲ್ಲಿ ಒಳಕ್ಕೆ ಬಿಟ್ಟಿದ್ದರಿಂದ "V" ಇಂಗ್ಲಿಷ್ ಅಕ್ಷರದಿಂದ ಪ್ರಾರಂಭವಾಗುವ ವೇಣುಗೋಪಾಲ್ ಸರದಿ ಬಂದಾಗ ಹೆಚ್ಚು ಕಡಮೆ ೧೨ ಗಂಟೆ.

ಆತ ತಮ್ಮ ಮೇಜಿನ ಮುಂದೆ ಕುಳಿತು ಟೆಲಿಫೋನಿನಲ್ಲಿ ಯಾರೊಂದಿಗೋ ಮಾತನಾಡುತ್ತಿದ್ದರು. ಒಬ್ಬ ಸೈನ್ಯಾಧಿಕಾರಿಯ ಕಚೇರಿಯೊಳಕ್ಕೆ ನಾನು ಕಾಲಿಟ್ಟಿದ್ದು ಇದೇ ಮೊದಲು. ಹೋದವನೇ ಮೇಜಿನ ಮೇಲೆ ಬಾಗಿ ನಿಂತೆ. ಒಂದು ಕೈಯಲ್ಲಿ ಪತ್ರಗಳನ್ನು ಹಿಡಿದಿದ್ದೆ. ಅವರ ಪ್ರತಿಕ್ರಿಯೆ ತೀಕ್ಷ್ಣವಾಗಿತ್ತು.

"ಮೇಜಿನಿಂದ ನಿನ್ನ ಕೈ ತೆಗೆ" ಎಂದು ಗುಡುಗಿದರು.

"ಅಜುಟೆಂಟರ ಮೇಜಿನ ಮೇಲೆ ನೀನು ಬಾಗಕೂಡದು."

ನಾನು ಗಡಗಡ ನಡುಗಿ ಹಿಂದಕ್ಕೆ ನೆಗೆದೆ. ಹೀಗೆ ಬರಲಿದ್ದ ಛೇಡಿಕೆ, ಮೂದಲಿಕೆ, ನಿಂದನೆಗಳ ರುಚಿಯನ್ನು ಮೊದಲೇ ತೋರಿಸುವ ಘಟನೆಯಿಂದ ನನ್ನ ಸೈನಿಕ ಜೀವನ ಪ್ರಾರಂಭವಾಯಿತು. ಮುಖ ಗಂಟಿಕ್ಕಿಕೊಂಡು ನನ್ನ ಪತ್ರಗಳ ಮೇಲೆ ಕಣ್ಣು ಹಾಯಿಸಿದವರೇ "ನೀನು ಹೋಗಬಹುದು" ಎಂದರು.

ಆಮೇಲೆ ಎಲ್ಲರನ್ನೂ ಕ್ವಾರ್ಟರ್ ಮಾಸ್ಟರ್ ಸ್ಟೋರಿಗೆ ಒಯ್ದರು.

ಅಲ್ಲಿ ಬಗೆ ಬಗೆಯ ಸಮವಸ್ತ್ರಗಳನ್ನುಕೊಟ್ಟರು. ಆಲಿವ್ ಹಸುರು ಬಣ್ಣದ ಉಡುಗೆ, ಪಿ.ಟಿ. ನಿಕ್ಕರು, ಇತರ ಸಾಮಗ್ರಿಗಳು–ಇವುಗಳಲ್ಲಿ ಬಹುತೇಕ ಉಚಿತವಾದವು. ಬೂಟುಗಳು ಎಷ್ಟು ಭಾರವಾಗಿದ್ದುವೆಂದರೆ, ಯಾರಾದರೂ ಅವುಗಳನ್ನು ಧರಿಸಿ ನಡೆಯುವುದಾದರೂ ಸಾಧ್ಯವೇ ಅನ್ನಿಸುತ್ತಿತ್ತು. ಆದರೆ ಕ್ರಮೇಣ ಅವು ನನ್ನ ದೇಹದ ಭಾಗವಾಗಿಬಿಟ್ಟವು. ಈ ಬೂಟುಗಳನ್ನೂ ಅವುಗಳ ಜೊತೆಗೇ ಕೊಡುತ್ತಿದ್ದ ಮಂದವಾದ ಉಣ್ಣೆಯ ಕಾಲುಚೀಲಗಳನ್ನೂ ಎಷ್ಟು ಗಡುಸಾಗಿ ತಯಾರಿಸಿದ್ದರೆಂದರೆ ಎಷ್ಟು ಒರಟಾಗಿ ಬಳಸಿದರೂ ಐದು ವರ್ಷಗಳಿಗಿಂತಲೂ ಹೆಚ್ಚು ಕಾಲ ಬಾಳಿಕೆ ಬರುತ್ತಿದ್ದವು.

ಹೇಳಿದೆನಲ್ಲ, ಜೀವನವು ಛೇಡಿಕೆ, ನಿಂದನೆಗಳಿಂದಲೇ ಪ್ರಾರಂಭ ವಾಯಿತು. ಯಾವುದೇ ತಪ್ಪು-ಅದು ಅತಿ ಚಿಕ್ಕದಾಗಲಿ ದೊಡ್ಡದಾಗಲಿ- ಒಂದು ಬಯ್ಗುಳ ಅಥವಾ ಶಾಪ ಅಥವಾ ಸ್ಥಳದಲ್ಲೇ ಶಿಕ್ಷೆಯಿಲ್ಲದೆ ತಿದ್ದಲ್ಪಡುತ್ತಿರಲಿಲ್ಲ. ಅದೂ ಆ ಶಿಕ್ಷೆಯನ್ನು ಇಮ್ಮಡಿ ವೇಗದಲ್ಲಿ ನಡೆಸಬೇಕು. "ರೈಫಲ್ ಊಪರ್ ಡಬಲ್"! "ಡಬಲ್ ಸೇ ಚಲೋ!" "ಜಬರ್ ಸೇ ದೌಡೇಂಗೇ !".

ಯಾವುದೋ ಪೆರೇಡ್ ಮೈದಾನದಲ್ಲಿ ಹಲವು ತಂಡಗಳು ಡ್ರಿಲ್ ಮಾಡುತ್ತಾ ಪಥಚಲನ ಮಾಡುತ್ತಾ ಇರುತ್ತಿದ್ದವು. "ಲೈಯಿಂಗ್ ಪೊಸಿಷನ್-ಕ್ರಾಲ್" "ಥಂಬ್" "ತೇಜ್‌ಚಲ್" "ಗುತ್ನೇ ಸೀದಾ ರಖೋ!" ಎಂದು ಬೇರೆ ಬೇರೆ ಡ್ರಿಲ್ ಶಿಕ್ಷಕರು ಕಿರುಚುತ್ತಿದ್ದುದು ಒಂದನ್ನೊಂದು ಅಪ್ಪಳಿಸುತ್ತಿದ್ದವು. ಪ್ರಶಾಂತ ವಾತಾವರಣವನ್ನು ಭೇದಿಸುತ್ತಿದ್ದರು.

ಇಮ್ಮಡಿ ವೇಗದಲ್ಲಿ (ಆನ್ ದಿ ಡಬಲ್) ಎಂಬುದನ್ನು ಕುರಿತು ಪ್ರಹಸನಗಳನ್ನು ಹೆಣೆಯಲಾಗಿದೆ. ಒಬ್ಬ ಅಧಿಕಾರಿಯ ಪತ್ನಿ ಗರ್ಭಿಣಿ ಹೆರಿಗೆಗಾಗಿ ತವರು ಮನೆಗೆ ಹೋಗಿದ್ದರು. ಸಮಯ ಬಂದಾಗ ಆಸ್ಪತ್ರೆಗೆ ಸೇರಿಸಿದರು. ಮಾರನೆಯ ದಿನ ಅವಳ ತಾಯಿ ನೋಡಲು ಹೋದಾಗ ಆಗಲೇ ಹೆರಿಗೆ ಆಯಿತು ಎಂಬ ಸುದ್ದಿ ತಿಳಿಯಿತು. ಸರಸರನೆ ವಾರ್ಡಿಗೆ ಹೋಗಿ ನೋಡಿದರು. ಅವಳಿ – ಮಕ್ಕಳೊಂದಿಗೆ ಮಗಳು ಸುಖವಾಗಿದ್ದುದು ಕಾಣಿಸಿತು. ಆಶ್ಚರ್ಯದಿಂದ "ಅವಳಿ!" ಎಂದು ತಾಯಿ ಕಿರಿಚಿದಾಗ ಮಗಳು ಹೇಳಿದಳಂತೆ, "ನಿನಗೆ ಗೊತ್ತಿಲ್ಲವೇನಮ್ಮ, ಸೈನ್ಯದಲ್ಲಿ ಎಲ್ಲವನ್ನೂ ಇಮ್ಮಡಿ ವೇಗದಲ್ಲಿ ಮಾಡಲಾಗುತ್ತದೆ!"

ಶಿಶುಜನನ ಎಂದಾಗ ಹೇಳಬೇಕಾದ ಮಾತಿದೆ. ೧೯೪೫ರ ಜನವರಿ ೧೨ನೆಯ ತಾರೀಕು ಗಾಯಿತ್ರಿ ಹುಟ್ಟಿದಳು. ಆಗಷ್ಟೇ ನನ್ನ ತರಬೇತಿ ಪ್ರಾರಂಭವಾಗಿದ್ದುದರಿಂದ, ಮಗುವನ್ನೂ ಸಾವಿತ್ರಿಯನ್ನೂ ನೋಡಲು ಹೋಗುವ ಪ್ರಶ್ನೆಯೇ ಇರಲಿಲ್ಲ. ಆದರೆ ಭಗವತ್ಕೃಪೆಯಿಂದ ಎಲ್ಲ ಚೆನ್ನಾಗಿ ನಡೆಯಿತು.

ತರಬೇತಿಯ ಪ್ರಾರಂಭಿಕ ಅವಧಿಯಲ್ಲಿ ಸೈನ್ಯಜೀವನ ಬಹುಕಷ್ಟ, ದೈಹಿಕ ಆಯಾಸ ಬಹಳವಾಗಿರುತ್ತದೆ. ಅಲ್ಲದೆ ಒಂದೇಸಮನೆ ಕಿರಿಚುವುದು, ಬಯ್ಯುವುದು, ಮೂದಲಿಸುವುದು ಇವುಗಳಿಂದ ಮಾನಸಿಕವಾಗಿಯೂ ಬಹಳ ಆಯಾಸವಾಗುತ್ತದೆ. ಆದರೆ ಅವೆಲ್ಲದರ ಉದ್ದೇಶ ಅಹಂಕಾರವನ್ನು ಕತ್ತರಿಸಿ ಹಾಕುವುದು, ವಿಧೇಯತೆಯನ್ನೂ ಶಿಸ್ತನ್ನೂ ಬೆಳೆಸಿ ಮಾನಸಿಕವಾಗಿ ದೃಢತೆಯನ್ನು ಮೂಡಿಸುವುದು.

ತರಗತಿಯಲ್ಲಿ ಶಿಕ್ಷಣ ಇದ್ದರೂ, ಬಹುತೇಕ ತರಬೇತಿ ಹೊರಗೆ ಬಯಲಿನಲ್ಲಿ. ದೈಹಿಕ ವ್ಯಾಯಾಮ, ಡ್ರಿಲ್, ಆಯುಧ ತರಬೇತಿ, ಕ್ಷೇತ್ರಕೌಶಲ, ನಕ್ಷೆಯನ್ನೆಲ್ಲ ಓದುವ ಕಲೆ, ಸಂಘಟನ ಚಾತುರ್ಯ ಇವೆಲ್ಲ ಇರುತ್ತವೆ. ಉಳಿಕೆ ಸಮಯದಲ್ಲಿ ಈಜುವುದು, ನದಿ ದಾಟುವುದು, ಪಥಸಂಚಲನ ಇವು ನಡೆಯುತ್ತವೆ. ಎಲ್ಲೂ ಆಲಸ್ಯಕ್ಕೆಡೆಯಿಲ್ಲ. ಎಲ್ಲವೂ ಇಮ್ಮಡಿವೇಗದಲ್ಲೇ. ಡ್ರಿಲ್ ಉಡುಗೆ ಯಿಂದ ಡಬ್ಲ್ಯೂಟಿ ಉಡುಗೆಗೆ ಅದೂ ಇಮ್ಮಡಿ ವೇಗದಲ್ಲಿ. ಬಟ್ಟೆ ಬದಲಾಯಿಸಿಕೊಳ್ಳುವುದೂ ಡಬಲ್‌ನಲ್ಲೇ. ಒಂದು ದಿನ ಅವಸರದಲ್ಲಿ ನಾನು ಬಲಗಾಲಿನ ಬೂಟನ್ನು ಎಡಗಾಲಿಗೂ ಎಡಗಾಲಿನದನ್ನು ಬಲಗಾಲಿಗೂ ಹಾಕಿಕೊಂಡಿದ್ದೆ. ಸಾಲಾಗಿ ನಿಂತಾಗ ಶಿಕ್ಷಕನು ತಕ್ಷಣವೇ ಇದನ್ನು ಗಮನಿಸಿದನು. ಅವಹೇಳನದ ನಗೆ ಬೀರುತ್ತಾ ನನ್ನನ್ನು ಸಾಲಿನಿಂದ ಹೊರಕ್ಕೆ ಎಳೆದನು. ಎಲ್ಲ ಅಭ್ಯರ್ಥಿಗಳೂ ನನ್ನನ್ನು ನೋಡಿ ನಗಬೇಕೆಂದು ಅಪ್ಪಣೆ ಮಾಡಿದನು. (ಅವರು ಅದನ್ನು ಡಬಲ್ ವೇಗದಲ್ಲೇ ಮಾಡಿದರು) ಶಿಕ್ಷೆಯಾದ ನನಗೆ ಅಂದು ಸಂಜೆ ಹೆಚ್ಚಿನ ಪೆರೇಡ್ ಮತ್ತು ಡ್ರಿಲ್.

ಬರಬರುತ್ತಾ ತರಬೇತಿ ಚುರುಕಾಯಿತು. ಸೋಮವಾರದಿಂದ ಶನಿವಾರದವರೆಗೆ, ಬೆಳಗಿನ ಜಾವದಿಂದ ಮಲಗುವವರೆಗೆ ಕ್ಷಣಕಾಲವೂ ಬಿಡುವಿಲ್ಲದಂತೆ ಅರೆದರು. ಭಾನುವಾರ ನಮ್ಮ ಕಂಪನಿಯ ಕಮಾಂಡರ್ ನಮ್ಮಲ್ಲಿರುವ ಅನೇಕ ಕೊರತೆಗಳನ್ನು ತೋರಿಸಿಕೊಟ್ಟು ಹೇಗೆ ತಿದ್ದಿಕೊಳ್ಳಬೇಕೆಂದು ಹೇಳುತ್ತಿದ್ದರು.

ನನಗೊಂದು ಗಂಭೀರವಾದ ಸಮಸ್ಯೆಯಿತ್ತು. ಪ್ರತಿಯೊಂದು ವಿಷಯವನ್ನೂ ಉರ್ದುವಿನಲ್ಲಿ ಕಲಿಸಲಾಗುತ್ತಿತ್ತು. ಆದೇಶದ ಹಿಂದಿ ಪದಗಳನ್ನು ಆಗಷ್ಟೇ ಬಳಕೆಗೆ ಕೊಟ್ಟಿದ್ದರು. ಆದರೆ ಮೈಸೂರು ಮದರಾಸುಗಳ ಕಡೆಯಿಂದ ಬಂದ ಅಭ್ಯರ್ಥಿಗಳಿಗೆ ಎರಡು ಭಾಷೆಗಳೂ ಬರುತ್ತಿರಲಿಲ್ಲ. ಶಿಕ್ಷಕರು ಬಲಕ್ಕೆ ತಿರುಗಿ ಎಂದು ಆದೇಶಿಸಿದರೆ ನಮ್ಮಲ್ಲಿ ಅನೇಕರು ಎಡಕ್ಕೆ ತಿರುಗುತ್ತಿದ್ದೆವು. ಅನೇಕ ವಿಷಯಗಳಲ್ಲಿ ಉರ್ದುಬಾರದುದು ಬಹು ತೀವ್ರವಾದ ಅನನುಕೂಲವಾಗಿತ್ತು. ಕಂಪನಿ ಕಮಾಂಡರರ ನೆರವಿದ್ದರೂ ನಾನು ಹಿಂದೆ ಬೀಳುತ್ತಿದ್ದೆ.

ಕೆಲವೇ ವಾರಗಳಲ್ಲಿ ನನ್ನನ್ನು ಕಮಾಂಡೆಂಟ್ ಬ್ರಿಗೇಡಿಯರ್ ಆರ್.ಕೆ.ಕೋಚಾರ್ ಅವರ ಎದುರಿಗೆ ನಿಲ್ಲಿಸಲಾಯಿತು. ನನ್ನನ್ನು ಸೈನ್ಯದಿಂದ ಹಿಂದಕ್ಕೆ ಕಳಿಸಿಬಿಡುವ ಶಿಫಾರಸು ಮಾಡಿದ್ದರು. 'ನಾನು ಏಕೆ ಕಲಿತುಕೊಳ್ಳುತ್ತಿಲ್ಲ' ಎಂದು ಅವರು ಕೇಳಿದರು, 'ಏನು ಸಮಸ್ಯೆ?' ನಾನು ನನ್ನ ಪರಿಸ್ಥಿತಿಯನ್ನು ವಿವರಿಸಿದೆ.

ಆತ ಸಹಾನುಭೂತಿಯಿದ್ದ ಮನುಷ್ಯ. ಒಡನೆಯೇ ನನ್ನನ್ನು ಮದರಾಸಿನಿಂದ ಬಂದ ಒಬ್ಬ ಅಧಿಕಾರಿ, ಕ್ಯಾಪ್ಟನ್ ಬರ್ನಾರ್ಡ್ ಅವರ ನೇತೃತ್ವದ ತುಕಡಿಗೆ ವರ್ಗಾಯಿಸಿದರು. ಇದರಿಂದ ನನಗೆ ಅನುಕೂಲ ವಾಯಿತು. ಏಕೆಂದರೆ ಕ್ಯಾಪ್ಟನ್ ಬರ್ನಾರ್ಡ್ ನನ್ನ ಬಗೆಗೆ ಸಾಕಷ್ಟು ವೈಯಕ್ತಿಕ ಗಮನ ನೀಡಿದರು. ಆದೇಶಗಳನ್ನು ಇಂಗ್ಲಿಷ್ ಬಲ್ಲ ಶಿಕ್ಷಕರು ಕೊಡುತ್ತಿದ್ದರು. ಗಣನೀಯವಾಗಿ ನಾನು ಸುಧಾರಿಸಿಕೊಂಡು ಇತರ ತರಬೇತಿ ಅಧಿಕಾರಿಗಳ ಸಮಕ್ಕೆ ಬಂದೆ, ಯಶಸ್ವಿಯಾಗಿ ಉತ್ತೀರ್ಣನಾದೆ. ೧೯೪೮ರ ಆಗಸ್ಟ್ ೨೮ ರಂದು ನನ್ನನ್ನು ವಿಧ್ಯುಕ್ತವಾಗಿ ಭಾರತೀಯ ಸೇನೆಗೆ ಸೇರಿಸಿಕೊಳ್ಳಲಾಯಿತು. ಪಾಸಿಂಗ್-ಔಟ್-ಪೆರೇಡಿನಲ್ಲಿ ಜನರಲ್ ರುದ್ರ ಅವರು ವಂದನೆ ಸ್ವೀಕರಿಸಿದರು.

ಈಗ ನಾನು ಸೆಕೆಂಡ್ ಲೆಫ್ಟಿನೆಂಟ್ ಎಚ್.ಸಿ. ವೇಣುಗೋಪಾಲ್. ಬ್ರಿಗೇಡಿಯರ್ ಕೋಚಾರ್ ಮತ್ತು ಕ್ಯಾಪ್ಟನ್ ಬರ್ನಾರ್ಡ್ ಅವರ ಸಹಾನುಭೂತಿಯುತ ನೆರವು ದೊರಕದಿದ್ದರೆ ನಾನು ಸೈನ್ಯಾಧಿಕಾರಿ ಯಾಗಲು, ಈ ಸವಾಲಿನ ಜೀವನವನ್ನು ಅನುಭವಿಸಲು ಅವಕಾಶವೇ ಇರುತ್ತಿರಲಿಲ್ಲ.

ಎರಡು ಕೊರತೆಗಳು ನನ್ನಲ್ಲಿದ್ದವು. ಅವಕ್ಕೆ ನಾನೇನೂ ಮಾಡುವಂತಿರಲಿಲ್ಲ. ನಾನು ಸೈನ್ಯಕ್ಕೆ ಸೇರಿಕೊಂಡುದು ಬಹಳ ತಡವಾಗಿ, ಕಮಿಷನ್ ಆದಾಗ ನನಗೆ ೨೭ ವರ್ಷ. ನನ್ನ ಜೊತೆಯ ಅಭ್ಯರ್ಥಿಗಳಲ್ಲಿ ಬಹುಜನರು ೨೨ ಅಥವಾ ೨೩ ವರ್ಷದಲ್ಲೇ ಸೇವಾಜ್ಯೇಷ್ಠತೆ ಮತ್ತು ಬಡ್ತಿಗಳ ವಿಷಯದಲ್ಲಿ ನನಗಿಂತ ಉತ್ತಮ ಸ್ಥಿತಿಯಲ್ಲಿದ್ದರು. ನಾನು ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿಕೊಂಡಿದ್ದೆನಾಗಿ ಅದಕ್ಕಿಂತ ಮೊದಲು ಸೇರಿಕೊಳ್ಳಲು ಸಾಧ್ಯವಾಗಿರಲಿಲ್ಲ. ಅಲ್ಲದೆ ಬ್ರಿಟಿಷ್ ಅಧಿಕಾರಿಗಳ ಕೈಕೆಳಗೆ ಸೇವೆ ಮಾಡಲು ನನಗೆ ಇಚ್ಛೆಯೂ ಇರಲಿಲ್ಲ. ಸ್ವಾತಂತ್ರ್ಯ ಬಂದ ಮೇಲೆ ಸೈನ್ಯಕ್ಕೆ ಸೇರುವುದು ನನ್ನ ದೃಷ್ಟಿಯಲ್ಲಿ ದೇಶಸೇವೆಯನ್ನು ನೇರವಾಗಿ ಮುಂದುವರಿಸುವ ಅತ್ಯಂತ ಸಹಜ ಮಾರ್ಗವಾಗಿತ್ತು.

ಇನ್ನೊಂದು ಕೊರತೆ ಶಿಕ್ಷಣದ್ದು. ನನ್ನ ಶಾಲಾ ಕಾಲೇಜು ಶಿಕ್ಷಣ ತೃಪ್ತಿಕರವಾಗಿರಲಿಲ್ಲ. ಈ ಎರಡು ದೋಷಗಳಿಂದಾಗಿ ನಾನು ಉನ್ನತ ಸ್ಥಾನಕ್ಕೆ ಏರಲು ಸಾಧ್ಯವಾಗಲೇ ಇಲ್ಲ.

೧೦. ಮರಾಠಾ ಲೈಟ್ ಇನ್‌ಫೆಂಟ್ರಿ

ಇತರ ನಾಲ್ವರು ಅಧಿಕಾರಿಗಳೊಂದಿಗೆ ನನ್ನನ್ನು ಮರಾಠಾ ಲೈಟ್ ಇನ್‌ಫೆಂಟ್ರಿಗೆ ನೇಮಿಸಿ ಬೆಳಗಾಂ ನಗರದ ರೆಜಿಮೆಂಟಲ್ ಸೆಂಟರಿಗೆ ಕಳುಹಿಸಿದರು. ಬೆಳಗಾವಿಗೆ ಪುಣೆಯಿಂದ ಒಂದು ರಾತ್ರಿಯ ಪ್ರಯಾಣ. ಬೆಳಗ್ಗೆ ನಾವು ಬೆಳಗಾಂ ಮುಟ್ಟಿದೆವು. ವಾಹನದೊಂದಿಗೆ ಒಬ್ಬ ಅಧಿಕಾರಿಯು ನಿಲ್ದಾಣದಲ್ಲಿ ನಮಗಾಗಿ ಕಾದಿದ್ದರು. ನಮ್ಮನ್ನು ಸ್ವಾಗತಿಸಿ ಮರಾಠಾ ಮೆಸ್‌ಗೆ ಉಪಾಹಾರಕ್ಕಾಗಿ ಕರೆದೊಯ್ದರು.

ಆಮೇಲೆ ಅಲ್ಲಿಯ ಅಜುಟೆಂಟ್ ಕ್ಯಾಪ್ಟನ್ ಡಿ ಸೋಜಾ ಅವರನ್ನು ಭೇಟಿಯಾಗಲು ಹೋದೆವು. ಆತ ಔಪಚಾರಿಕವಾಗಿ ನಮಗೆ ಸ್ವಾಗತ ಕೋರಿ ಮರಾಠಾ ಕೆಂಪು ಮತ್ತು ಹಸುರು ಬಣ್ಣದ ಹ್ಯಾಕಲ್ ಮತ್ತು ಮರಾಠಾ ಭುಜಪಟ್ಟಿಗಳನ್ನು ಧರಿಸಲು ಆಹ್ವಾನಿಸಿದರು.

ಈಗ ನಾನು ಸೆಕೆಂಡ್ ಲೆಫ್ಟಿನೆಂಟ್ ಎಚ್.ಸಿ. ವೇಣು ಗೋಪಾಲ್ ಮರಾಠಾ.

ಅಂದೇ ನಮ್ಮನ್ನು ಕಮಾಂಡೆಂಟ್ ಲೆ|| ಕ|| ಶೇಖ್ ಮೊಯಿದ್ದೀನ್ ಅವರಿಗೆ ಪರಿಚಯ ಮಾಡಿಕೊಡಲಾಯಿತು. ನಾವು ಈಗ ಮರಾಠಾದಳದವರಾದ್ದರಿಂದ ಹೇಗೆ ನಡೆದುಕೊಳ್ಳಬೇಕು, ಹೇಗೆ ಸುಂದರವಾದ ಕೆಂಪು-ಹಸುರು ಹ್ಯಾಕಲ್ ಹಾರುತ್ತಿರುವಂತೆ ನೋಡಿಕೊಳ್ಳಬೇಕು ಎಂದು ಹೇಳಿದರು. ಕ|| ಮೊಯಿದ್ದೀನ್ ಬಹಳ ಹರಿತ ಮಾತಿನ, ಸದಾ ಜಾಗ್ರತ ಮನಸ್ಸಿನ ವ್ಯಕ್ತಿ ಎಂದು ಹೆಸರಾಗಿದ್ದರು. ವಾರಕ್ಕೊಮ್ಮೆ ಅವರು ವಿಧ್ಯುಕ್ತ ಪೆರೇಡ್ ಸ್ವೀಕರಿಸುತ್ತಿದ್ದರು. ಅತಿ ಸಣ್ಣ ದೋಷವೂ ಅವರ ಗಮನಕ್ಕೆ ಬೀಳದೆ ಹೋಗುತ್ತಿರಲಿಲ್ಲ. ಒಡನೆಯೇ ಅದನ್ನು ಹೇಗೆ ಸರಿಪಡಿಸಬೇಕೆಂಬುದನ್ನು ಸ್ವತಃ ಮಾಡಿ ತೋರಿಸುತ್ತಿದ್ದರು.

ಕ್ಯಾಪ್ಟನ್ ಡಿ ಸೌಜ ನಮ್ಮ ತರಬೇತಿಯ ಹೊಣೆ ಹೊತ್ತಿದ್ದರು. ಅವರ ಕೈಕೆಳಗೆ ನಾವು ಮರಾಠಾ ಪಂಗಡದ ರೂಢಿಗಳು, ವೈಶಿಷ್ಟ್ಯಗಳಲ್ಲಿ ನುರಿತೆವು. ಓ.ಟಿ.ಎಸ್.ನಲ್ಲಿ ಎಲ್ಲಿಗೆ ನಿಲ್ಲಿಸಿದ್ದೆವೋ ಅಲ್ಲಿಂದ ಮುಂದಿನ ತರಬೇತಿ ಇಲ್ಲಿ ನಡೆಯಿತು. ಪೆರೇಡು ಬಯಲಿನಲ್ಲಿ ತರಬೇತಿ, ಡ್ರಿಲ್, ಬಯೊನೆಟ್ ತರಬೇತಿ, ನಾಯಕತ್ವದಲ್ಲಿ ತರಬೇತಿ ಇವುಗಳಿಂದ ನಾವು ಸದಾ ಕಾರ್ಯನಿರತರಾಗಿರುವಂತೆ ನೋಡಿಕೊಳ್ಳಲಾಗಿತ್ತು. ಮುಂದೆ ನಾವು ಪ್ಲಟೂನ್ ಮತ್ತು ಕಂಪನಿ ಕಮಾಂಡರುಗಳಾಗಲಿದ್ದೆವು. ಆದ್ದರಿಂದ ಸದಾಕಾಲವೂ ನಮ್ಮ ಜನರ ಕಲ್ಯಾಣ ನಮ್ಮ ಹೊಣೆಗಾರಿಕೆ ಯಾಗಿತ್ತು. ತರಗತಿಗಳಿಗೆ ಹೋಗುತ್ತಿದ್ದೆವು, ಹೋಂವರ್ಕ್ ಕೂಡ ಇರುತ್ತಿತ್ತು.

ಮರಾಠರದು ಕೆಲವು ಅಂಶಗಳಲ್ಲಿ ಇತರರಿಗಿಂತ ಬೇರೆಯಾದ ಸ್ವರೂಪ. ಅವರು ಲೈನ್‌ಯಾರ್ಡನ್ನು ಕೊರಳ ಸುತ್ತ ಧರಿಸುತ್ತಾರೆ. ಗೂರ್ಖಾ, ಸಿಖ್, ಮಹರ್ ಮತ್ತು ಇತರ ಎಲ್ಲರೂ ಅದನ್ನು ಎಡಭುಜದ ಸುತ್ತ ಧರಿಸುತ್ತಾರೆ. ಭಾರತೀಯ ಸೇನೆಯ ಪ್ರತಿಯೊಂದು ಘಟಕವೂ ಪಥಸಂಚಲನದಲ್ಲಿ ನಿಮಿಷಕ್ಕೆ ೧೨೦ ಹೆಜ್ಜೆಯನ್ನಿಡುತ್ತದೆ. ಮರಾಠರು ನಿಮಿಷಕ್ಕೆ ೧೪೦ ಹೆಜ್ಜೆ ಇಡುತ್ತಾರೆ. ಮರಾಠಾಹ್ಯಾಕಲ್

ಸುಂದರವಾದ ಕೆಂಪು ಮತ್ತು ಹಸುರು ಬಣ್ಣದ್ದು. ಮೊದಲನೆಯ ಮಹಾ ಯುದ್ಧದಲ್ಲಿ ಅದನ್ನು ಅವರಿಗೆ ನೀಡಲಾಯಿತು.

ಮಧ್ಯಪೂರ್ವದೇಶಗಳಲ್ಲಿ ನಡೆದ ಒಂದು ಯುದ್ಧದಲ್ಲಿ ಬ್ರಿಟಿಷ್ ಲೈಟ್ ಇನ್‌ಫೆಂಟ್ರಿ ಘಟಕವೊಂದು ಎಲ್ಲ ಕಡೆಗಳಿಂದಲೂ ವೈರಿಯಿಂದ ಸುತ್ತುವರಿಯಲ್ಪಟ್ಟಿತ್ತು. ಅದು ಇನ್ನೇನು ಸಂಪೂರ್ಣವಾಗಿ ನಾಶವಾಗುವ ಹಂತಕ್ಕೆ ಬಂದಿತ್ತು. ಅವರನ್ನು ಅಲ್ಲಿಂದ ಹೊರಪಡಿಸಲು ಇತರ ಹಲವು ಘಟಕಗಳು ಎಷ್ಟು ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಆಗ ಬ್ರಿಟಿಷ್ ಕಮಾಂಡರನು ಒಂದು ಮರಾಠಾ ಘಟಕವನ್ನು ಆ ಕಾರ್ಯದಲ್ಲಿ ತೊಡಗಿಸಿದನು. "ಛತ್ರಪತಿ ಶಿವಾಜಿ ಮಹಾರಾಜ ಕೀ ಜೈ!" ಎಂಬ ರಣಗರ್ಜನೆ ಮೊಳಗುತ್ತಿರಲು ಮರಾಠರು ವೀರಾವೇಶ ದಿಂದ ಮುನ್ನುಗ್ಗಿದರು. ಉಗ್ರವಾದ ಹೋರಾಟ; ಬಹುಮಟ್ಟಿಗೆ ಕೈಕೈ ಹೋರಾಟ ನಡೆಯಿತು. ಕೊನೆಗೆ ಸುತ್ತು ಪಾಳಯವನ್ನು ಮುರಿದು ಬ್ರಿಟಿಷ್ ಲೈಟ್ ಇನ್‌ಫೆಂಟ್ರಿ ಪಡೆಯನ್ನು ಕಾಪಾಡಲಾಯಿತು. ಈ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದುದರ ಗೌರವಾರ್ಥ ವಾಗಿ ಮರಾಠರಿಗೆ ಕೆಂಪು-ಹಸುರು ಬಣ್ಣದ ಸುಂದರವಾದ ಹ್ಯಾಕಲ್ ನೀಡಿ ಅವರನ್ನು ಲೈಟ್ ಇನ್‌ಫೆಂಟ್ರಿ ಎಂದು ಕರೆಯಲಾಯಿತು.

ಕ್ಯಾಪ್ಟನ್ ಡಿ ಸೌಜ ಅವರ ಕೈ ಕೆಳಗೆ ನಾವು 'ಮರಾಠ' ರಾದೆವು. ನಮ್ಮ ಮುಂದಿನ ಬದುಕಿನುದ್ದಕ್ಕೂ ಒಂದು ಗಣ್ಯ ಪಡೆಯ ಭಾಗವೆಂದು ಹೆಮ್ಮೆಪಟ್ಟೆವು. "ಒಮ್ಮೆ ಮರಾಠಾ, ಎಂದಿಗೂ ಮರಾಠಾ" ಎಂಬ ಮಾತು ಸೈನ್ಯದಲ್ಲಿ ಬಳಕೆಯಲ್ಲಿದೆ. ಹಾಗೆಯೇ ಮರಾಠಾ ರೀತಿರಿವಾಜು ಗಳನ್ನು ನಾವು ಅರಗಿಸಿಕೊಂಡೆವು. ಇದಕ್ಕೆ ತರಬೇತಿಕ್ಷೇತ್ರ ಮೆಸ್. ಸಾಂಪ್ರದಾಯಿಕ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕು, ಪ್ರತಿ ಸಂದರ್ಭಕ್ಕೂ ತಕ್ಕಂತೆ ಯಾವ ಉಡುಗೆ ಧರಿಸಬೇಕು, ಪ್ರತಿಯೊಬ್ಬರನ್ನೂ ಅವರ ಪತ್ನಿಯರನ್ನೂ ಸಂಬೋಧಿಸುವ ರೀತಿ ಏನು, ವಿವಿಧ ಸಮಾರಂಭಗಳಲ್ಲಿ ಸ್ವಸ್ತಿವಾಚನ ಮಾಡುವುದು ಹೇಗೆ – ಇವನ್ನೆಲ್ಲ ನಾವು ಕಲಿತೆವು. ಸೈನ್ಯಕ್ಕೆ ಸುದೀರ್ಘವಾದ ಪರಂಪರೆಯಿದೆ. ನಾವು ಅದರ ಶಿಕ್ಷಣ ಪಡೆಯುತ್ತಿದ್ದೆವು. ಇದು ಎರಡೋ ಮೂರೋ ತಿಂಗಳ ಕಾಲ ನಡೆಯಿತು.

ಈ ಅವಧಿಯಲ್ಲಿ ಹೊಸದಾಗಿ ಬಂದ ಸೆಕೆಂಡ್ ಲೆಫ್ಟಿನೆಂಟ್‌ಗಳಾದ ನಾವು ಅಲ್ಲಿದ್ದ ಎಲ್ಲಾ ಅಧಿಕಾರಿಗಳ ಕುಟುಂಬಗಳಿಗೆ ಭೇಟಿ ನೀಡಿದೆವು. ಕೆಲವೊಮ್ಮೆ ನಮ್ಮನ್ನು ಮಧ್ಯಾಹ್ನದ ಭೋಜನಕ್ಕೋ, ರಾತ್ರಿಯೂಟಕ್ಕೋ ಅವರ ಮನೆಗಳಿಗೆ ಕರೆಯುತ್ತಿದ್ದರು. ಆಗಾಗ ಬೆಳಗಾವಿಯ ಸುತ್ತ ಇದ್ದ ಸುಂದರ ಅರಣ್ಯ ಪ್ರದೇಶದಲ್ಲಿ ಪಿಕ್‌ನಿಕ್ ಇರುತ್ತಿತ್ತು. ಅಥವಾ ಮೆಸ್‌ನಲ್ಲಿಯೇ ಡಿನ್ನರ್ ಪಾರ್ಟಿ. ಇಂತಹ ಸಾಮಾಜಿಕ ಔತಣಕೂಟಗಳಲ್ಲಿ ನಮ್ಮ ರೀತಿರಿವಾಜು–ತರಬೇತಿ ಹೇಗೆ ನಡೆದಿದೆಯೆಂಬುದರ ಪರೀಕ್ಷೆಯೂ ನಡೆಯುತ್ತಿತ್ತು. ಯಾವುದೋ ನಡವಳಿಕೆಯ ತಪ್ಪಿಗಾಗಿ ಮಾರನೆಯ ದಿನ ಅಧಿಕಾರಿಯು ಛೇಡಿಸಿದ ಸಂದರ್ಭವೂ ಇಲ್ಲದಿರುತ್ತಿರಲಿಲ್ಲ.

ಈ ಸಂತೋಷಕರವೂ ಅತ್ಯಂತ ಬಿರುಸಿನದೂ ಆದ ಅವಧಿ ಮುಗಿದ ಮೇಲೆ ನಮ್ಮನ್ನು ಬೇರೆ ಬೇರೆ ಮರಾಠಾ ಬೆಟಾಲಿಯನ್‌ಗಳಿಗೆ ನೇಮಿಸಿದರು. ನಾನು ೧೯ ಮರಾಠಾಗೆ ನೇಮಿತನಾದೆ. ಅದಿದ್ದುದು ಲಕ್ನೋದಲ್ಲಿ, ಎಚ್‌ಕ್ಯೂ ೫ನೇ ಡಿವಿಜನ್ನಿನ ಭಾಗವಾಗಿ. ನಮ್ಮ ಓ.ಟಿ.ಎಸ್. ಗುಂಪಿನಲ್ಲಿ ಲಕ್ನೋಗೆ ನೇಮಿತನಾದವನು ನಾನೊಬ್ಬನೇ.

ನಾನು ಬೆಳಗಾವಿಯನ್ನು ಬಿಟ್ಟು ಹೊರಟ ದಿನ ಸಂಜೆ ಎಲ್ಲ ಅಧಿಕಾರಿಗಳೂ, ಅವರ ಕುಟುಂಬಗಳೂ ನನ್ನನ್ನು ಕಳಿಸಿಕೊಡಲು ರೈಲು ನಿಲ್ದಾಣಕ್ಕೆ ಬಂದಿದ್ದರು. ನಾನು ಇಲ್ಲಿದ್ದುದು ಕೇವಲ ಕೆಲವೇ ತಿಂಗಳು. ಈ ಆತ್ಮೀಯ ಬೀಳ್ಕೊಡುಗೆಯಿಂದ ನನ್ನ ಮನಸ್ಸು ತುಂಬಿಬಂದಿತು. ಇದೂ ಒಂದು ಸತ್ಸಂಪ್ರದಾಯವೇ. ಕುಟುಂಬವು ಎಷ್ಟೇ ದೊಡ್ಡದಾಗಿದ್ದರೂ, ಸ್ಥಾನಮಾನದ ವಿವಕ್ಷೆಯಿಲ್ಲದೆ ಪ್ರತಿಯೊಬ್ಬ ವ್ಯಕ್ತಿಯೂ ಮುಖ್ಯನು, ಯಾರನ್ನೂ ಮರೆಯಲಾಗುವುದಿಲ್ಲ ಎಂದು ಈ ಸಂಪ್ರದಾಯವು ಸೂಚಿಸುತ್ತಿತ್ತು.

೧೧. ಗಾಯತ್ರಿ ನಡೆದಳು, ಸಾವಿತ್ರಿ ಹಿಂದಿ ಕಲಿತಳು

ಎರಡು ದಿನಗಳ ಅನಂತರ ನಾನು ಲಕ್ನೋ ನಿಲ್ದಾಣದಲ್ಲಿಳಿದಾಗ, ಮೂರು–ನಾಲ್ಕು ಜನ ಅಧಿಕಾರಿಗಳು ನನ್ನನ್ನು ಸ್ವಾಗತಿಸಲು ಕಾದಿದ್ದರು.

'ಲಕ್ನೋ' ಉತ್ತರ ಪ್ರದೇಶದ ರಾಜಧಾನಿ, ಸುಂದರವಾದ ನಗರ. ದಂಡುಪ್ರದೇಶ (Cantonment) ತುಂಬಾ ನಿರ್ಮಲವಾಗಿತ್ತು. ಬ್ರಿಟಿಷರು ಸ್ಥಳೀಯ ಜನರೊಂದಿಗೆ ಬೆರೆಯದೆ ಪ್ರತ್ಯೇಕವಾಗಿರಲು ಇಂತಹ ಕಂಟೋನ್ಮೆಂಟುಗಳನ್ನು ನಿರ್ಮಿಸಿಕೊಂಡಿದ್ದರು. ಸಾಮಾನ್ಯವಾಗಿ ಇವು ನಗರದ ಮುಖ್ಯಭಾಗದಿಂದ ದೂರವಾಗಿದ್ದು, ಸ್ಥಳೀಯ ಜನರೇನಾದರೂ ಗಲಭೆಯೆದ್ದರೆ ಸುಲಭವಾಗಿ ಸಂರಕ್ಷಿಸಿ ಕೊಳ್ಳಲು ಅವಕಾಶವಿರುತ್ತಿತ್ತು.

ನಗರಭಾಗದಂತಲ್ಲದೆ ಕಂಟೋನ್ಮೆಂಟುಗಳು ಸ್ವಚ್ಛವಾಗಿರು ತ್ತಿದ್ದವು . ಅಗಲವಾದ ರಸ್ತೆಗಳು, ಅಚ್ಚುಕಟ್ಟಾಗಿ ಸುಣ್ಣಬಣ್ಣ ಬಳಿದ ಮನೆಗಳು, ವಿಶಾಲವಾದ ಕಾಂಪೌಂಡುಗಳಲ್ಲಿ ಕೈತೋಟಗಳು ಇತ್ಯಾದಿ. ಇಲ್ಲಿನ ಸಾರಿಗೆ ಸಂಚಾರವೂ ಅಷ್ಟೇ, ವ್ಯವಸ್ಥಿತ; ಬಹುತೇಕ ಮಿಲಿಟರಿ ವಾಹನಗಳು. ಅಚ್ಚುಕಟ್ಟಾಗಿ ಸಮವಸ್ತ್ರ ಧರಿಸಿದ ಸೈನಿಕರು ಮತ್ತು ಅಧಿಕಾರಿಗಳು ಬೈಸಿಕಲ್ಲುಗಳ ಮೇಲೆ ಸಂಚರಿಸುತ್ತಿದ್ದರು. ಕಾರು ಕಾಣಿಸುವುದು ಅಪರೂಪವಾಗಿತ್ತು. ಎಲ್ಲೆಲ್ಲೂ ಬೂಗನ್ ವಿಲಿಯಾ ತೆಂಡೆ ತೆಂಡೆಯಾಗಿ ಹೂವು ಅರಳಿಸಿಕೊಂಡು ಬೀಗುತ್ತಿದ್ದಿತು.

೯ಮರಾಠಾದಳದವರಿಗೆ ಕ್ಯಾಂಪ್‌ಬೆಲ್‌ಲೈನ್ ಪ್ರದೇಶದಲ್ಲಿ ವಸತಿ ಏರ್ಪಡಿಸಲಾಗಿತ್ತು. ನನ್ನನ್ನು ಮೆಸ್‌ಗೆ ಕರೆದೊಯ್ದರು. ತಾತ್ಕಾಲಿಕವಾಗಿ ನಾನು ಅಲ್ಲೇ ತಂಗಬೇಕಾಗಿತ್ತು. ಅಲ್ಲಿಯೇ ನನ್ನ ಊಟವಾಯಿತು.

ಮರುದಿನ ಬೆಳಗ್ಗೆ ಅಜುಟೆಂಟ್ ಕ್ಯಾಪ್ಟನ್ ಮಣಿಶಾಸ್ತ್ರಿ ಅವರನ್ನು ನೋಡಲು ಹೋದೆ. ಅವರು ಒಳ್ಳೆಯ, ಬುದ್ಧಿವಂತ ಅಧಿಕಾರಿ. ನನಗೆ ಮದುವೆಯಾಗಿದೆ ಎಂದು ಹೇಳಿದೊಡನೆ, ತಕ್ಷಣ 'ಕುಟುಂಬವಸತಿ ಬೇಕೆಂದು ಅರ್ಜಿ ಹಾಕಿಕೋ' ಎಂದು ಸಲಹೆ ಕೊಟ್ಟರು. ಆಮೇಲೆ ಕಮಾಂಡಿಂಗ್ ಆಫೀಸರ್ ಲೆ.ಕ. ಚೆಟ್ಟಿಯವರನ್ನು ಭೇಟಿಯಾದೆ. ಬಹಳ ಸಜ್ಜನಿಕೆಯಿಂದ ನಡೆದುಕೊಂಡರು. ಆದರೆ ಅವರ ದನಿಯಲ್ಲಿ ಒಂದು ಬಗೆಯ ಬಿಗಿ ಇರುವುದು ಮನಸ್ಸಿಗೆ ಬಂದಿತು. ಆಮೇಲೆ ನನ್ನ ಭಾವನೆ ಸ್ಥಿರಪಟ್ಟಿತು. ಆತ ಬಹಳ ಕಟ್ಟುನಿಟ್ಟಾದ, ತುಂಬಾ ಗೌರವಕ್ಕೆ ಪಾತ್ರನಾಗಿದ್ದ ವ್ಯಕ್ತಿ.

ಕುಟುಂಬವಸತಿಗೆ ಅರ್ಜಿಹಾಕಿಕೊಂಡ ಹತ್ತುದಿನಗಳಲ್ಲಿ ನನಗೆ ಸ್ಥಳೀಯ ಸಿಬ್ಬಂದಿ ಅಧಿಕಾರಿಯು T ಮಾದರಿಯ ಒಂದು ಮನೆಯನ್ನು ಮಂಜೂರು ಮಾಡಿದರು. ಮನೆ ತುಂಬಾ ದೊಡ್ಡದೆಂಬಂತೆ ನನಗೆ ತೋರಿತು. ಅಧಿಕೃತ ಪೀಠೋಪಕರಣಗಳನ್ನು ಬಾಡಿಗೆಗೆ ಪಡೆಯ ಬಹುದಾಯಿತು. ಸರಕಾರವು ಆ ವೆಚ್ಚವನ್ನು ಭರಿಸಿತು. ನನಗೆ ಸಂತೋಷ ವಾಯಿತು. ಅಂಥ ಪೀಠೋಪಕರಣಗಳನ್ನು ಹಿಂದೆ ನಾನೆಂದೂ ಕಂಡಿರಲಿಲ್ಲ. ಆಲ್ಮೇರಾಗಳು, ಸೋಫಾಸೆಟ್ಟುಗಳು, ಊಟದ ಮೇಜು, ಕುರ್ಚಿಗಳು ಇತ್ಯಾದಿ. ಎಲ್ಲವೂ ಬಲವಾದ ತೇಗದಿಂದ ಕೂಡಿದವು. ಅತ್ಯುತ್ತಮ ಗುಣಮಟ್ಟದವಾಗಿದ್ದವು. ಯೂನಿಟ್ಟಿಗೆ ಹೋಗಿಬರಲು ತಿಂಗಳ ಬಾಡಿಗೆ ಮೇಲೆ ಒಂದು ಬೈಸಿಕಲ್ ಪಡೆದುಕೊಂಡೆ.

ಸಾವಿತ್ರಿ ಲಕ್ನೋಗೆ ಬರಬೇಕೆಂದು ಟೆಲಿಗ್ರಾಂ ಕೊಟ್ಟೆ . ಅಧಿಕಾರಿ ತರಬೇತಿ ಶಾಲೆಯಲ್ಲಿದ್ದಾಗ (ಓ.ಟಿ.ಎಸ್.) ಅವಳು ನನ್ನ ಜೊತೆಯಲ್ಲಿರುವುದು ಸಾಧ್ಯವೇ ಇರಲಿಲ್ಲ. ಆಮೇಲೆ ಬೆಳಗಾವಿಯಲ್ಲಿ ನಾನಿದ್ದುದು ಎರಡೂವರೆ ತಿಂಗಳು ಮಾತ್ರ.

ಸಾವಿತ್ರಿ ಓದು ಮುಂದುವರಿಸಲಿಲ್ಲ ಎಂದು ಇನ್ನೂ ನನಗೆ ಅಸಮಾಧಾನವಿತ್ತು. ಆದರೆ ಇನ್ನೂ ಹೆಚ್ಚಾಗಿ ಅವಳಿಗೆ ಶಿಕ್ಷೆ ಕೊಡುವುದು ಸರಿಯಲ್ಲವೆನಿಸಿತು. ಮಗಳು ತುಂಬಾ ನಿಶ್ಯಕ್ತಳಾಗಿದ್ದಾಳೆ, ತೆಳ್ಳಗಿದ್ದಾಳೆ ಎಂದು ಕೂಡ ತಿಳಿಯಿತು. ಇಲ್ಲಿ ಲಕ್ನೋದಲ್ಲಿ ಒಳ್ಳೆಯ ಆಹಾರ ಮತ್ತು ವೈದ್ಯಕೀಯ ನೆರವಿನಿಂದ ಮಗು ಸುಧಾರಿಸುತ್ತಾಳೆ ಅನ್ನಿಸಿತು.

ಬೆಂಗಳೂರಿನಲ್ಲಿ ನನ್ನ ಆಯ್ಕೆಯಾದಾಗ ನಾನೊಬ್ಬ ಸಾಮಾನ್ಯ ಯೋಧನಾಗುತ್ತೇನೆ ಎಂಬ ಭಾವನೆಯಿತ್ತು ನನ್ನ ಮನಸ್ಸಿನಲ್ಲಿ. ಆದರೆ ಓ.ಟಿ.ಎಸ್.ನಲ್ಲಿ ಶಿಕ್ಷಕರು ಪ್ರತಿಕ್ಷಣವೂ, ನಾವು ಅಧಿಕಾರಿಗಳಾಗಲಿರುವವರು ಎಂದು ಅರೆದರು. ಬೆಳಗಾವಿಯಲ್ಲಿ ತಕ್ಕ ಸಿದ್ಧತೆಯಾದ ಮೇಲಂತೂ ನನಗೇ ಅಧಿಕಾರಿಯಾದಂತೆ ಅನ್ನಿಸಿತು. ಲಕ್ನೋದಲ್ಲಿ ನನ್ನ ಮೊದಲನೆಯ ವೇತನ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ನನ್ನ ಖಾತೆಗೆ ಜಮಾ ಆಯಿತು. ೪೨೦ ರೂಪಾಯಿ! ನನಗೆ ಗಾಬರಿಯಾಗುವಷ್ಟು ಮೊತ್ತ! ಮೊದಲು, ನನ್ನದು ಎನ್ನುವ ಬ್ಯಾಂಕ್ ಖಾತೆಯೇ ಇರಲಿಲ್ಲ. ಸೈನ್ಯಜೀವನದ ರುಚಿ ಹತ್ತತೊಡಗಿತು. ಲೆಫ್ಟಿನೆಂಟ್ ವೇಣುಗೋಪಾಲ್ ಎಂದು ಕರೆಸಿಕೊಳ್ಳುವುದು ಹಿತವೆನಿಸತೊಡಗಿತು.

ನಾನಿದ್ದುದು 'ಎ' ಕಂಪನಿಯಲ್ಲಿ. ಅದರ ಕಮಾಂಡರ್ ಮೇಜರ್ ಎಂ.ಆರ್. ಮೋರೆ ಎನ್ನುವವರು. ಒಂದು ಕಂಪೆನಿಯಲ್ಲಿ ನಾನು ನಿರ್ವಹಿಸಬೇಕಾದ ಜವಾಬ್ದಾರಿಗಳು ಯಾವುವು ಎಂಬುದನ್ನು ಕಲಿಸಿಕೊಡುವ ಕೆಲಸ ಅವರದಾಗಿತ್ತು. ಕೆಲಸವನ್ನು ಹೇಗೆ ಮಾಡ ಬೇಕೆಂದು ಮಾತ್ರವಲ್ಲ. ಅವರಿಂದ ನಾನು ಕೆಲಸದಲ್ಲಿ ಹೇಗೆ ಹೆಮ್ಮೆ ಪಟ್ಟುಕೊಳ್ಳಬೇಕೆಂಬುದನ್ನೂ ಕಲಿತೆ. ನಾನು ಸೇರ್ಪಡೆಯಾಗಿರುವುದು ಒಂದು ಪವಿತ್ರ ಧ್ಯೇಯಕ್ಕಾಗಿ, ಅದರ ಘನತೆಯನ್ನು ಕೀಳುಗಳೆಯುವಂತೆ ಏನನ್ನೂ ನಾನು ಮಾಡಬಾರದು ಎಂದು ಅವರು ಪದೇ ಪದೇ ಹೇಳುತ್ತಿದ್ದರು.

ನನ್ನ ಟೆಲಿಗ್ರಾಂ ಮತ್ತೂರಿಗೆ ಸೇರಿದೊಡನೆ, ನನ್ನ ಭಾವಮೈದುನ ಗೋಕರ್ಣ ನನ್ನ ಅಣ್ಣ ಸುಬ್ಬರಾವ್ ಅವರನ್ನು ಸಂಪರ್ಕಿಸಿದನು. ಸಾವಿತ್ರಿಯನ್ನು ಬೆಂಗಳೂರಿಗೆ ಕರೆಸಿಕೊಂಡರು. ಅವರ ಭಾವ ವೆಂಕಟೇಶ್ (ಎಸ್ ಎಸ್ ಬಿ ಸಂದರ್ಶನಕ್ಕೆ ನಾನು ಹಾಕಿಕೊಂಡು ಹೋಗಿದ್ದುದು ಇವರ ಕೋಟನ್ನೇ) ವಾರಾಣಸಿಗೆ ಹೋಗುತ್ತಿದ್ದರು. ಸಾವಿತ್ರಿ ಮತ್ತು ಗಾಯತ್ರಿಯರನ್ನು ತಮ್ಮೊಂದಿಗೆ ಕರೆತಂದರು. ಇದು ದೈವಸಹಾಯವೇ ಅನ್ನಿಸಿತು. ಚಿಕ್ಕ ಮಗುವನ್ನಿಟ್ಟುಕೊಂಡು ಮೂರನೆಯ ತರಗತಿಯಲ್ಲಿ ಪ್ರಯಾಣ ಮಾಡುವುದು ತುಂಬಾ ಕಷ್ಟವಾಗಿತ್ತು. ಆ ದಿನಗಳಲ್ಲೂ ಮೂರನೆ ದರ್ಜೆ ಬೋಗಿಗಳಲ್ಲಿ ವಿಪರೀತ ಜನಜಂಗುಳಿ. ಅಲ್ಪಾವಧಿಯಲ್ಲಿ ಕಾದಿರಿಸಿಕೊಳ್ಳುವುದೂ ಸಾಧ್ಯವಿರಲಿಲ್ಲ. ಕೆಲವೊಮ್ಮೆ ಪ್ರಯಾಣದುದ್ದಕ್ಕೂ ನಿಂತೇ ಇರಬೇಕಾಗುತ್ತಿತ್ತು. ಸದ್ಯ ಸಾವಿತ್ರಿಗೆ ಸಹಾಯ ಮಾಡಲು ಒಬ್ಬರು ದೊರಕಿದ್ದು ಸಂತೋಷವಾಯಿತು.

ರೈಲುನಿಲ್ದಾಣದಲ್ಲಿ ಅವರನ್ನು ನಾನು ಇಳಿಸಿಕೊಂಡೆ. ಗಾಯತ್ರಿಯನ್ನು ನಾನು ನೋಡಿದುದು ಇದೇ ಮೊದಲು. ನನಗೆ ತುಂಬಾ ವಿಷಾದ ವಾಯಿತು. ಮಗು ತುಂಬಾ ತೆಳ್ಳಗೆ, ಕಾಯಿಲೆಯಾದವಳ ಹಾಗೆ ಕಾಣಿಸುತ್ತಿದ್ದಳು. ವೆಂಕಟೇಶ್ ವಾರಾಣಸಿಗೆ ಹೋಗುವ ಮೊದಲು ಒಂದು ದಿನ ನಮ್ಮ ಜತೆಯಲ್ಲಿ ಕಳೆಯಲು ಸಮ್ಮತಿಸಿದರು. ಎಲ್ಲರೂ ಯೂನಿಟ್ಟಿನ ನಮ್ಮ ಮನೆಗೆ ಹೋದೆವು. ಸಾವಿತ್ರಿಯ ಆಗಮನಕ್ಕೆ ಸಿದ್ಧತೆಯಾಗಿ ಅಡುಗೆ ಮನೆಯಲ್ಲಿ ಮುಖ್ಯವಾದ ಕೆಲವು ವಸ್ತುಗಳನ್ನೂ ಪುಡಿಗಳನ್ನೂ ತರಿಸಿ ಇಟ್ಟಿದ್ದೆ ; ಅವೆಲ್ಲ ಇನ್ನೂ ಪೊಟ್ಟಣಗಳಲ್ಲೇ ಇದ್ದುವು. ಒಂದು ಸೀಮೆಎಣ್ಣೆ ಹಾಕುವ ಪ್ರೈಮಸ್ ಸ್ಟೌವ್ ಕೊಂಡುಕೊಂಡಿದ್ದೆ. ಹೆಮ್ಮೆಯಿಂದ ಅಡುಗೆ ಮನೆಯನ್ನು ಸಾವಿತ್ರಿಗೆ ಹಸ್ತಾಂತರಿಸಿದೆ.

ಸಾವಿತ್ರಿಯ ಬರುವಿಕೆಗಾಗಿ ಕಾದು ನಿಂತಿದ್ದಾಗ, ಇನ್ನೊಬ್ಬ ಕಂಪನಿ ಕಮಾಂಡರ್ ಮೇಜರ್ ಮೋಹನ್‌ರಾಜು ಅವರ ಪರಿಚಯವಾಯಿತು. ನಾವಿಬ್ಬರೂ ದಕ್ಷಿಣ ಭಾರತದವರೇ ಆದ್ದರಿಂದ ನನ್ನಲ್ಲಿ ಅವರಿಗೆ ಆಸಕ್ತಿಯುಂಟಾಯಿತು. ಸೈಕಲಿಗೆ ನಾನು ಪ್ರತಿ ತಿಂಗಳು ಬಾಡಿಗೆ ಕೊಡುತ್ತಿದ್ದೇನೆ ಎಂದು ತಿಳಿದಾಗ ಅವರು ಸ್ವಲ್ಪ ಹಣ ಎರವಲು ನೀಡುವುದಾಗಿಯೂ ಹೊಸ ಬೈಸಿಕಲ್ ಕೊಳ್ಳಬೇಕೆಂದೂ ಹೇಳಿದರು. ನನಗೆ ಹೊಸ ಸೈಕಲ್ ಬಂತು. ಒಂದು ಲೇಡೀಸ್ ಸೈಕಲನ್ನು ಕೊಂಡೆ. ಸಾವಿತ್ರಿಯು ಅದರಲ್ಲಿ ಓಡಾಡಲು ಕಲಿಯಬೇಕು ಎಂದು ನನ್ನ ಆಸೆ. ಅದರಿಂದ ಅವಳು ಸ್ವತಂತ್ರವಾಗಿ ಓಡಾಡಬಹುದಾಗಿತ್ತು. ಒಂದು ಸ್ಕೂಟರ್ ಕೊಳ್ಳಲು ನನಗೆ ಮತ್ತೆ ಹತ್ತುವರ್ಷಗಳೇ ಹಿಡಿದುವು.

ಮೇಜರ್ ರಾಜು ಅವರ ಔದಾರ್ಯದಿಂದ ನಾನು ಅವಾಕ್ಕಾದೆ. ಸ್ವಲ್ಪದರಲ್ಲೇ ಅದಕ್ಕೆ ಪ್ರತಿಯಾಗಿ ನೆರವಾಗುವ ಅವಕಾಶ ದೊರಕಿತು. ಎರಡು ತಿಂಗಳಿಂದ ಪ್ರಯತ್ನಿಸಿದರೂ ಅವರ ಹೆಂಡತಿ ಮತ್ತು ಮಗ ಇಲ್ಲಿ ಅವರೊಂದಿಗಿರಲು ಸೂಕ್ತ ವಸತಿ ಸಿಕ್ಕಿರಲಿಲ್ಲವೆಂದು ತಿಳಿಯಿತು. ನಾನು ಒಡನೆಯೇ ಅವರು ನನ್ನ ಮನೆಯಲ್ಲೇ ಹಂಚಿಕೊಂಡು ಒಂದು ಭಾಗವನ್ನು ಉಪಯೋಗಿಸಬಹುದು ಎಂದು ಹೇಳಿದೆ. ಎರಡು ಕುಟುಂಬಗಳು ವಾಸಮಾಡುವಷ್ಟು ದೊಡ್ಡದಾಗಿತ್ತು ಮನೆ. ಮೇಜರ್ ರಾಜು ಅವರಿಗೆ ತುಂಬಾ ಸಂತೋಷವಾಯಿತು. ಅವರ ಕುಟುಂಬದವರೂ ಬಂದರು. ಸಾವಿತ್ರಿ ಬಂದ ಕೆಲವು ದಿನಗಳ ಅನಂತರ ಅವರು ಬಂದರು. ಮನೆಯ ಅರ್ಧಭಾಗವನ್ನು ಅವರಿಗೆ ಬಿಟ್ಟು ಕೊಟ್ಟೆವು.

ಸಾವಿತ್ರಿಗೆ ಭಾಷೆ ದೊಡ್ಡ ಸಮಸ್ಯೆಯಾಯಿತು. ಅವಳಿಗೆ ಹಿಂದಿಯಾಗಲಿ ಇಂಗ್ಲಿಷ್ ಆಗಲಿ ಸ್ವಲ್ಪವೂ ಬರುತ್ತಿರಲಿಲ್ಲ. ಸೈನ್ಯದಲ್ಲಿ ಕೊನೆಯ ಪಕ್ಷ ಈ ಎರಡರಲ್ಲಿ ಯಾವುದಾದರೂ ಒಂದು ತಿಳಿದಿರಲೇಬೇಕಾಗುತ್ತದೆ. ರಾಜುವಿನ ಪತ್ನಿ ತೆಲುಗು ಮತ್ತು ಹಿಂದಿ ಮಾತನಾಡುತ್ತಿದ್ದರು. ಅವರು ಹೇಗೋ ಸಂವಹಿಸಲು ಪ್ರಯತ್ನಿಸುತ್ತಿದ್ದರು. ಬಹುತೇಕ ಸಂದರ್ಭಗಳಲ್ಲಿ ಮಾತನಾಡಲು ಸಾವಿತ್ರಿಗೆ ಯಾರೂ ಜತೆಯಿರುತ್ತಿರಲಿಲ್ಲ. ಕಂಪನಿಯಲ್ಲಿದ್ದ ಕನ್ನಡ ಮಾತನಾಡುವ ಒಬ್ಬ ಹುಡುಗನನ್ನು ನಮ್ಮ ಆರ್ಡರ್ಲಿಯಾಗಿ ಕರೆಸಿಕೊಂಡಾಗ ಪರಿಸ್ಥಿತಿ ಸ್ವಲ್ಪ ಉತ್ತಮಗೊಂಡಿತು. ಅವನ ಆಗಮನ ಒಂದು ವರವಾಯಿತು.

ನಮಗಿದ್ದ ದೊಡ್ಡ ಚಿಂತೆ ಗಾಯತ್ರಿಯದು. ಅವಳಿಗೆ ಪುಷ್ಟಿ ತುಂಬಾ ಕಡಮೆಯಾಗಿತ್ತು. ಕಾರಣ ಅವಳು ಹುಟ್ಟಿದಾಗ ಸಾವಿತ್ರಿ ಇನ್ನೂ ಹದಿಹರಯದಲ್ಲಿದ್ದಳು. ಮಗು ಸದಾ ಅಳುತ್ತಿದ್ದಳು. ತುಂಬಾ ಅನಾರೋಗ್ಯವಿರುತ್ತಿತ್ತು. ಕಾಲುಗಳಲ್ಲಿ ಶಕ್ತಿಯೇ ಇರಲಿಲ್ಲ. ದುರ್ಬಲವಾಗಿ ಅವಳು ಮನೆಯಲ್ಲಿ ಅತ್ತಿಂದಿತ್ತ ತೆವಳುತ್ತಿದ್ದಳು.

ಒಂದು ಮೂರು ಚಕ್ರದ ಆಟಿಕೆ ತರಿಸಿದೆ, ಅದನ್ನು ಹಿಡಿದು ನಡೆಯಲಿ ಎಂದು. ಮೊದ ಮೊದಲು ಅವಳಿಗೆ ಅದು ತುಂಬಾ ನೋವಾಗುತ್ತಿತ್ತೆಂದು ತೋರುತ್ತದೆ, ಅಳುತ್ತಿದ್ದಳು. ಆದರೆ ನಾನು ಬಿಡಲಿಲ್ಲ, ಪಟ್ಟು ಹಿಡಿದು ಮೆಲ್ಲಮೆಲ್ಲಗೆ ನಡೆಸಿದೆ. ಕ್ರಮೇಣ ಉತ್ತಮ ಆಹಾರದಿಂದ ಚೇತರಿಸಿಕೊಂಡಳು. ಈಗಲೂ ಅಳುತ್ತಿದ್ದಳಾದರೂ ಅದು ರಭಸದಿಂದಿರುತ್ತಿತ್ತು. ಪ್ರಗತಿಯ ಸೂಚಕವಾಗಿತ್ತು. ಅವಳ ಮಂಡಿಗಳನ್ನು ಸಾವಿತ್ರಿ ದಿನವೂ ಮಾಲೀಷು ಮಾಡುತ್ತಿದ್ದಳು. ನಿಧಾನವಾಗಿ ಗಾಯತ್ರಿಯ ಕಾಲುಗಳಲ್ಲಿ ಶಕ್ತಿ ತುಂಬಿತು, ಅವಳು ನಡೆಯಲು ಕಲಿತಳು.

ಗಾಯತ್ರಿಯೊಂದಿಗೇ ನಮ್ಮ ಪರಿಸ್ಥಿತಿಯೂ ಸುಧಾರಿಸಿತು. ಕೆಲವು ಪಿಂಗಾಣಿಪಾತ್ರೆಗಳನ್ನೂ ತಟ್ಟೆ ಬಟ್ಟಲುಗಳನ್ನೂ ಕೊಂಡೆವು. ಚಳಿಗಾಲಕ್ಕಾಗಿ ಉಡುಪುಗಳನ್ನು ಸಿದ್ಧಪಡಿಸಿಕೊಂಡೆವು. ಲಕ್ನೋದಲ್ಲಿ ಚಳಿಗಾಲದಲ್ಲಿ ಅಸಾಧ್ಯವಾದ ಚಳಿಯಿರುತ್ತದೆ. ಹೀಗೆ ಸೈನ್ಯದಲ್ಲಿ ನಮ್ಮ ಜೀವನ ಪ್ರಾರಂಭವಾಯಿತು.

ಹೊಸದಾಗಿ ಬಂದ ಅಧಿಕಾರಿಗಳು ತಮ್ಮ ಇರುವಿಕೆಯನ್ನು ಗವರ್ನರ್ ಮತ್ತು ಡಿವಿಜನಲ್ ಕಮಾಂಡರ್ ಮೊದಲಾದ ಸಿವಿಲ್ ಹಾಗೂ ಮಿಲಿಟರಿ ಗಣ್ಯರಿಗೆ ತಿಳಿಯಪಡಿಸುವುದು ಪದ್ಧತಿ. ಅವರ ಅಧಿಕೃತ ಬಂಗಲೆಗಳ ಬಾಗಿಲಲ್ಲಿ ಇಟ್ಟಿರುತ್ತಿದ್ದ ಸಂದರ್ಶಕರ ಪುಸ್ತಕದಲ್ಲಿ ಸಹಿಮಾಡುವ ಮೂಲಕ ಅದನ್ನು ತಿಳಿಸುತ್ತಿದ್ದೆವು. ನಾನೂ ಈ ಕೆಲಸ ಮಾಡಿದ್ದೆ. ೧೦-೧೨ ದಿನಗಳಲ್ಲಿ ಡಿವಿಜನಲ್ ಕಮಾಂಡರ್ ಮೇಜರ್ ಜನರಲ್ ಮಹೇಂದ್ರ ಸಿಂಗ್ ಚೋಪ್ರಾ ಅವರಿಂದ ನಮಗೆ ಔತಣಕ್ಕೆ ಆಹ್ವಾನ ಬಂದಿತು. ಕೆಲವು ದಿನಗಳ ಅನಂತರ ಗವರ್ನರ್‌ರಿಂದಲೂ ಬಂದಿತು.

ಡಿವಿಜನಲ್ ಕಮಾಂಡರರ ಮನೆಯಲ್ಲಿ ನಡೆದ ಕೂಟವು ಸಾವಿತ್ರಿಯ ಕಣ್ಣು ತೆರೆಸುವಂತಾಯಿತು. ಇಂಥದೊಂದು ಪರಿಸರಕ್ಕೆ ಅವಳು ಕಾಲಿಟ್ಟಿದ್ದು ಇದೇ ಮೊದಲು. ಪ್ರತಿಯೊಬ್ಬರೂ ಉಜ್ವಲವಾದ ಉಡುಗೆ ಧರಿಸಿದ್ದರು. ಅಧಿಕಾರಿಗಳು ಧೂಮಪಾನ ಮಾಡುತ್ತಿದ್ದರು. ಒಂದಿಲ್ಲ ಒಂದು ಬಗೆಯ ಆಲ್ಕೋಹಾಲ್ ಸೇವಿಸುತ್ತಿದ್ದರು. ಜಾಟರು, ಸಿಕ್ಖರು, ರಜಪೂತರು, ಮರಾಠರು. ದಕ್ಷಿಣದಿಂದ ಬಂದವರು ಕೆಲವೇ ಮಂದಿ. ಅನೇಕರು ರಾಜಮನೆತನಗಳಿಂದ ಬಂದವರು. ಅವರ ಪತ್ನಿಯರೂ ಅಷ್ಟೇ ಸೊಗಸಾದ ಆಭರಣಗಳನ್ನು ಧರಿಸಿ ಪರಿಮಳವನ್ನೆಲ್ಲ ಪೂಸಿಕೊಂಡು, ಮೇಕಪ್ ಮಾಡಿಕೊಂಡಿದ್ದರು. ಸಾವಿತ್ರಿಯು ಕೇಳಿಯೂ ಇರದ ಅನೇಕಾನೇಕ ವಿಷಯಗಳನ್ನು ಕುರಿತು ಅವರು ನಿರರ್ಗಳವಾಗಿ ಸಂಭಾಷಣೆ ನಡೆಸುತ್ತಿದ್ದರು. ಎಲ್ಲರೂ ಯಾವುದಾದರೂ ಪದವಿ ಪಡೆದವರೇ. ಕೆಲವರು ಎರಡು ಪದವಿಗಳನ್ನು ಪಡೆದವರು. ಮತ್ತೂರು ಹಾಸನಗಳಲ್ಲಾಗಲೀ ಮುಂಬಯಿಯಲ್ಲಾಗಲೀ ಸಾವಿತ್ರಿಯನ್ನು ಈ ಬಗೆಯ ವಾತಾವರಣಕ್ಕೆ ಯಾವುದೂ ಸಿದ್ಧಪಡಿಸಿರಲಿಲ್ಲ.

ಡಿವಿಜನಲ್ ಕಮಾಂಡರ್ ಅವರು ತಂಡ ತಂಡಗಳ ಬಳಿಗೆ ಹೋಗಿ ತಮ್ಮ ಅಧಿಕಾರವ್ಯಾಪ್ತಿಯ ವಿವಿಧ ಯೂನಿಟುಗಳ ಅಧಿಕಾರಿಗಳೊಂದಿಗೆ ಮಾತನಾಡುತ್ತಾ , ಅವರ ಪತ್ನಿಯರೊಂದಿಗೆ ಸಲ್ಲಾಪ ಮಾಡುತ್ತಾ ತಿರುಗಾಡುತ್ತಿದ್ದರು. ಅವರು ಹತ್ತಿರ ಬಂದಾಗ ಸಾವಿತ್ರಿ ಶ್ರೀಮತಿ ಮೋಹನರಾವ್ ಅವರ ಬಳಿ ಕುಳಿತಿದ್ದಳು.

"ತಾವು ಯಾರು ಎಂದು ತಿಳಿದುಕೊಳ್ಳಬಹುದೆ?" ನಯವಾಗಿ ಡಿವಿಜನಲ್ ಕಮಾಂಡರ್ ಸಾವಿತ್ರಿಯನ್ನು ಕೇಳಿದರು.

ಯಾರೊಂದಿಗೋ ಮಾತನಾಡುತ್ತಿದ್ದ ನನ್ನ ಕಣ್ಣು ಈ ಕಡೆಯೇ ಇತ್ತು. ಅವರು ಸಾವಿತ್ರಿಯ ಬಳಿಗೆ ಹೋದುದನ್ನು ಕಂಡೊಡನೇ ಅಲ್ಲಿಗೆ ಧಾವಿಸಿದೆ.

"ಸರ್, ಈಕೆ ನನ್ನ ಪತ್ನಿ"ಎಂದು ಪರಿಚಯ ಮಾಡಿಕೊಟ್ಟೆ.

"ಹೆಸರು ಸಾವಿತ್ರಿ ಸರ್. ಒಂದು ಹಳ್ಳಿಯಿಂದ ಬಂದವಳು. ಕನ್ನಡ ಹೊರತು ಬೇರೆ ಯಾವ ಭಾಷೆಯನ್ನೂ ಮಾತನಾಡಲಾರಳು."

"ಹಾಗೇನು ವೇಣುಗೋಪಾಲ್, ನಾನು ಅವರಿಗೆ ಹೇಳುವುದನ್ನು ನೀವು ಭಾಷಾಂತರ ಮಾಡಿ ಹೇಳುವಿರಾ? ಹಾಗೆಯೇ ಅವರು ಕೊಡುವ ಉತ್ತರವನ್ನೂ ನನಗೆ ಭಾಷಾಂತರಿಸಿ ಹೇಳುವಿರಾ?"

"ಆಗಬಹುದು, ಸರ್".

"ಆಪ್ ಮೈಸೂರ್ ದೇಖೇ ಹೈ ಕ್ಯಾ? ಬಹುತ್ ಅಚ್ಛಾ ಹೈ. ಹಮ್ ದೇಖೇ ಹೈ." (ನೀವು ಮೈಸೂರನ್ನು ನೋಡಿರುವಿರಾ? ಬಹಳ ಒಳ್ಳೆಯ ಸ್ಥಳ. ನಾವು ನೋಡಿದ್ದೇವೆ.)

ನಾನು ಇದನ್ನು ಭಾಷಾಂತರಿಸಿ ಹೇಳಿದೆ. ಅವಳು ಮುಗುಳ್ನಕ್ಕು ಸುಮ್ಮನಾದಳು. ಅವಳು ಮೈಸೂರನ್ನು ನೋಡಿಲ್ಲವೆಂದು ನಾನು ತಿಳಿಸಿದೆ. ಇನ್ನೊಂದೆರಡು ವಾಕ್ಯಗಳ ಅನಂತರ ಸದ್ಯ , ಶ್ರೀಮತಿ ರಾಜು ಅವರ ಕಡೆಗೆ ತಿರುಗಿದರು.

ಆದರೆ ಅವರು ಮರೆಯಲಿಲ್ಲ. ಊಟ ಮುಗಿದ ಮೇಲೆ ನನ್ನನ್ನು ಒಂದು ಪಕ್ಕಕ್ಕೆ ಕರೆದರು.

"ನೋಡಿ ವೇಣುಗೋಪಾಲ್, ಮುಂದಿನ ಸಾರಿ ನಿಮ್ಮಿಬ್ಬರನ್ನೂ ನಾನು ನೋಡುವಾಗ ಆಕೆ ಹಿಂದಿ ಮಾತನಾಡುತ್ತಿರಬೇಕು. ಇಂತಹ ಪಾರ್ಟಿಗಳಲ್ಲಿ ಎಲ್ಲರೂ ಮಾತನಾಡುತ್ತಿರುವಾಗ ಆಕೆ ಮಾತ್ರ ಸುಮ್ಮನೆ ಮೌನವಾಗಿ ಕುಳಿತಿರುವುದು ಸ್ವಲ್ಪವೂ ಚೆನ್ನಾಗಿರುವುದಿಲ್ಲ."

"ಸರಿ, ಸರ್" ಎಂದೆ.

ನನ್ನ ಕಮಾಂಡಿಂಗ್ ಆಫೀಸರ್ ಇದನ್ನು ನೋಡುತ್ತಿದ್ದರು. ಏನಾಯಿತು ಎಂದು ಕೇಳಿದರು. ನಾನು ನಡೆದುದನ್ನು ವಿವರಿಸಿದೆ.

"ಡಿವಿಜನಲ್ ಕಮಾಂಡರ್ ಹೇಳಿದ್ದು ಸರಿ , ವೇಣು. ಅವರ ಅಪೇಕ್ಷೆ ನಮಗೆ ಆದೇಶ ಇದ್ದ ಹಾಗೆ. ಹೇಗಾದರೂ ಒಂದಿಷ್ಟು ಹಿಂದಿ ಕಲಿಯುವಂತೆ ಮಾಡು" ಎಂದರು.

ಮನೆಗೆ ಬಂದ ಮೇಲೆ ಸಾವಿತ್ರಿಗೆ ನಾನು ವಿವರಿಸಿ ಹೇಳಿದೆ. ಅವಳಿಗೆ ಹಿಂದಿ ಬರದಿರುವ ವಿಷಯ ಈಗ ಸೇನಾಪಡೆಯ ಎಲ್ಲರ ವಿಷಯ ವಾಗಿತ್ತು. ಆಕೆ ಸ್ವಲ್ಪವಾದರೂ ಹಿಂದಿ ಕಲಿಯದಿದ್ದರೆ ನಾವು ಕಷ್ಟಕ್ಕೆ ಸಿಲುಕಿಕೊಳ್ಳಬಹುದು. ಮಾರನೆಯ ದಿನ ಮಧ್ಯಾಹ್ನ ಹಜರತ್ ಗಂಜ್‌ಗೆ ಹೋಗಿ ಎರಡು ಪುಸ್ತಕಗಳನ್ನು ಕೊಂಡೆವು. ಹಿಂದೀ ಸ್ವಯಂಶಿಕ್ಷಕ ಮತ್ತು ಬಚ್ಚೋಂಕಿ ಕಿತಾಬ್ ಎಂಬ ಪುಸ್ತಕ. ಕನ್ನಡ ಮಾತನಾಡುತ್ತಿದ್ದ ಆರ್ಡರ್ಲಿ ಹುಡುಗನನ್ನು ಹಿಂದಕ್ಕೆ ಕಳಿಸಿ ಹಿಂದಿ ಮಾತ್ರ ಬರುತ್ತಿದ್ದವನನ್ನು ನೇಮಕ ಮಾಡಿಸಿಕೊಂಡೆ. ಎರಡು ಪುಸ್ತಕಗಳಿಂದ ದಿನವೂ ಒಂದೆರಡು ಪಾಠಗಳನ್ನು ಕಲಿಸಿಕೊಟ್ಟೆ. ಅವಳೊಂದಿಗೆ ಹಿಂದಿಯಲ್ಲಿ ಮಾತ್ರವೇ ಮಾತನಾಡಿದೆ. ತರಕಾರಿ ತರಲು ಬಜಾರಿಗೆ ಹೋದಾಗ ಹಿಂದೀ ಮಾತಾಡುವವವರಿಂದ ಕೊಳ್ಳಬೇಕಾಯಿತು. ಪದೇ ಪದೇ ಹಿಂದೀ ಸಿನಿಮಾಗಳಿಗೂ ಹೋಗತೊಡಗಿದೆವು. ಹೀಗೆ ಸಾವಿತ್ರಿಯ ಹಿಂದೀ ಕಲಿಕೆ ಪ್ರಾರಂಭವಾಯಿತು.

ಎರಡು ವಾರಗಳ ಅನಂತರ ಕೋರಿಯರ್ ಕೆಲಸ ನನಗೆ ಬಿತ್ತು. 3-4 ದಿನ ನಾನು ಊರು ಬಿಟ್ಟು ಹೋಗಬೇಕಾಯಿತು. ನನ್ನ ಪ್ರಯಾಣದ ಹಿಂದಿನ ದಿನ ಲೆಫ್ಟಿನೆಂಟ್ ದೊರೆರಾಜ್ ನನ್ನನ್ನು ನೋಡಲು ಬಂದನು. ನನಗೆ ತುಂಬಾ ಸಂತೋಷವಾಯಿತು. ನಾವಿಬ್ಬರೂ ಒಟ್ಟಿಗೆ ತರಬೇತಿ ಪಡೆದು ಒಟ್ಟಿಗೆ ಕಮಿಷನ್ ಆದವರು. ಆತ ಗೂರ್ಖಾಪಡೆಗೆ ಸೇರಿಕೊಂಡು ಈಗ ಒಂದು ಫುಟ್‌ಬಾಲ್ ಪಂದ್ಯದಲ್ಲಿ ಭಾಗವಹಿಸಲು ತನ್ನ ಫುಟ್‌ಬಾಲ್ ತಂಡವನ್ನು ಕರೆತಂದಿದ್ದನು. ಅದು ಬಲಿಷ್ಠ ತಂಡವಾಗಿದ್ದು ಫೈನಲ್‌ಗೆ ಬಂದಿತ್ತು. ಮಾರನೆಯ ದಿನ ಬಂದು ಪಂದ್ಯವನ್ನು ನೋಡಬೇಕೆಂದೂ, ಜನರಲ್ ಚೋಪ್ರಾ ಮುಖ್ಯ ಅತಿಥಿಯಾಗಿರುವರೆಂದೂ ಹೇಳಿದನು.

ಆದರೆ ನಾನು ಕರ್ತವ್ಯದಮೇರೆಗೆ ಊರು ಬಿಟ್ಟು ಹೋಗ ಬೇಕಾಗಿತ್ತು. ಸಾವಿತ್ರಿಯನ್ನೂ ಗಾಯತ್ರಿಯನ್ನೂ ಕರೆದೊಯ್ಯಬಹುದೆ ಎಂದು ಕೇಳಿದನು. ಅದು ಬಹಳ ಒಳ್ಳೆಯ ಸಲಹೆಯಾಗಿತ್ತು. ಸೊಗಸಾದ ಒಂದು ಪಂದ್ಯಾಟವನ್ನು ಸಾವಿತ್ರಿ ನೋಡಬಹುದಾಗಿತ್ತು. ಮಾರನೆ ದಿನ ದೊರೈರಾಜ್ ಸಾವಿತ್ರಿಯನ್ನು ಕರೆದೊಯ್ದನು. ಮುಂದಿನ ಸಾಲಿನಲ್ಲಿ ಇತರ ಅಧಿಕಾರಿಗಳ ಪತ್ನಿಯರು ಮತ್ತು ಮಕ್ಕಳೊಂದಿಗೆ ಕುಳಿತಳು. ಜನರಲ್ ಚೋಪ್ರಾ ಬಂದಾಗ, ಮೊದಲ ಸಾಲಿನಲ್ಲಿ ಕುಳಿತಿದ್ದ ಅತಿಥಿಗಳನ್ನು ಅವರಿಗೆ ಪರಿಚಯ ಮಾಡಿಕೊಡಲಾಯಿತು. ಸಾವಿತ್ರಿ ಯನ್ನು ಅವರು ನೆನಪಿಟ್ಟುಕೊಂಡಿದ್ದರು.

ಮುಗುಳ್ನಗುತ್ತಾ ಅವರು ಕೇಳಿದರು: "ಆಪ್ ಕೈಸೇ ಹೈಂ?" (ನೀವು ಹೇಗಿದ್ದೀರಿ?)

ಸಾವಿತ್ರಿ "ಅಚ್ಛೇ ಹೈಂ. " (ಚೆನ್ನಾಗಿದ್ದೇವೆ)

"ಬಚ್ಚೀ ಕೈಸೀ ಹೈ?" (ಮಗಳು ಹೇಗಿದ್ದಾಳೆ?)

"ಅಭಿ ಅಚ್ಛಾ ಹೋಯೀಗೀ" (ಈಗಷ್ಟೇ ಗುಣ ವಾಗುತ್ತಿದ್ದಾಳೆ) ಕಷ್ಟಪಟ್ಟು ಹೇಳಿದಳು.

"ಕೈಸೇ ವಾಪಸ್ ಜಾರಹೇಹೈಂ ?" (ಹಿಂದಕ್ಕೆ ಹೇಗೆ ಹೋಗುತ್ತೀರಿ?)

"ಭಾಯಿಸಾಬ್‌ಕೆ ಸಾಥ್..." (ಈ ಸೋದರರೊಂದಿಗೆ) ಎಂದು ತಪ್ಪು ಹೆಜ್ಜೆಯಿಡದೆ ಲೆ.ದೊರೆರಾಜ್‌ರನ್ನು ತೋರಿಸಿದಳಂತೆ.

ನನ್ನ ಕೆಲಸ ಮುಗಿಸಿಕೊಂಡು ಹಿಂದಿರುಗಿ , ಆಟ ಹೇಗಿತ್ತು ಎಂದು ಕೇಳಿದೆ. ಆಗ ಡಿವಿಜನಲ್ ಕಮಾಂಡರ್ ಅವರಿಗೂ ತನಗೂ ನಡೆದ ಸಂಭಾಷಣೆಯನ್ನು ಸಾವಿತ್ರಿ ವಿವರಿಸಿದಳು. ನನಗೆ ತುಂಬಾ ಸಂತೋಷ ವಾಯಿತು.

ಮಾರನೆಯ ದಿನ ನಾನು ಅಜುಟೆಂಟ್ ಅವರ ಕಚೇರಿಯಲ್ಲಿ ಇದ್ದಾಗ ಫೋನು ಸದ್ದಾಯಿತು. ಅದು ನನಗೆ ಬಂದಿದ್ದ ಕರೆ. ಜನರಲ್ ಚೋಪ್ರಾ ಮಾತನಾಡುತ್ತಿದ್ದರು.

"ಹಲೋ! ವೇಣುಗೋಪಾಲ್ ಅವರೇನು?"

"ಹೌದು, ಸರ್..."

"ವೇಣುಗೋಪಾಲ, ಅವತ್ತು ಫುಟ್‌ಬಾಲ್ ಆಟಕ್ಕೆ ಹೋಗಿದ್ದಾಗ ನಿಮ್ಮ ಪತ್ನಿಯನ್ನು ನೋಡಿದೆ. ಅವರು ಸ್ವಲ್ಪವಾದರೂ ಹಿಂದೀ ಮಾತನಾಡಿದ್ದು ಕೇಳಿ ತುಂಬಾ ಸಂತೋಷವಾಯಿತು. ಅದನ್ನು ಬಿಡದೆ ಮುಂದುವರಿಸಬೇಕೆಂದು ಹೇಳಿ. ಬಹಳ ಚೆನ್ನಾಗಿತ್ತು."

ಒಬ್ಬ ಕಿರಿಯ ಅಧಿಕಾರಿಯಾಗಿದ್ದ ನನಗೆ ಕಮಾಂಡರ್ ಅವರಿಂದಲೇ ಈ ರೀತಿ ಹೇಳಿಸಿಕೊಂಡಿದ್ದು ರೋಮಾಂಚಕರವಾಗಿತ್ತು. ಮಧ್ಯಾಹ್ನ ಊಟಕ್ಕೆ ಹೋದಾಗ ಸಾವಿತ್ರಿಗೆ ಅದನ್ನು ಹೇಳಿದೆ. ಸಂತೋಷದ ನಗೆ ಬೀರಿದಳು, ನನ್ನ ಸಾವಿತ್ರಿ. ನಮ್ಮ ಹಿಂದೀ ಕಲಿಕೆಗೆ ಹೊಸ ಚಾಲನೆ ಸಿಕ್ಕಿತು.

ಉತ್ತಮ ಕಮಾಂಡರರು ತಮ್ಮ ಪಡೆಯ ನೈತಿಕತೆ ಕುಗ್ಗದಂತೆ ಎಷ್ಟು ದೂರ ಹೋಗಿ ಪ್ರಯತ್ನಿಸಬಲ್ಲರು ಎಂಬುದು ನನಗೆ ಅರ್ಥವಾಗ ತೊಡಗಿತ್ತು.

೧೨. ನೆರೆಹೊರೆಯ ಸಮಸ್ಯೆಗಳು

ಸುಮಾರು ಇದೇ ಸಮಯಕ್ಕೆ ಕಾನೂನು ಸುವ್ಯವಸ್ಥೆಯನ್ನು ಪಾಲಿಸುವ ಒಂದು ಕೆಲಸ ನಮ್ಮ ಯೂನಿಟಿಗೆ ಬಂತು. ಈ ಸಂದರ್ಭದ ಅಪರಾಧಿ ಒಂದು ಕಿರುಬ. ಲಕ್ನೋದ ಕೆಲವು ಮೈಲುಗಳಾಚೆಗಿನ ಹಳ್ಳಿಗಳಲ್ಲಿ ಅದು ಸಿಂಹಸ್ವಪ್ನವಾಗಿತ್ತು. ಹಳ್ಳಿಗರ ಪ್ರಕಾರ ಈ ಕಿರುಬವು ಅವರ ಮಕ್ಕಳನ್ನು ಎತ್ತಿಕೊಂಡು ಹೋಗಿಬಿಡುತ್ತಿತ್ತು. ಅನೇಕ ಮಕ್ಕಳು ಕಾಣೆಯಾಗಿರುವುದಾಗಿ ವರದಿಯಾಗಿತ್ತು. ಆ ಇಡೀ ಪ್ರದೇಶವನ್ನು ಜಾಲಾಡಿ , ಕಿರುಬವನ್ನು ಹೊರಹೊರಡಿಸಿ ಕೊಂದುಹಾಕುವುದು ನಮ್ಮ ಪಾಲಿಗೆ ಬಂದ ಕೆಲಸ. ಎಷ್ಟು ಹುಡುಕಿ ನೋಡಿದರೂ ಯಾವ ಕಿರುಬವೂ ನಮಗೆ ಕಾಣಿಸಲಿಲ್ಲ. ಸೈನ್ಯದಲ್ಲಿದ್ದು, ಮಿಲಿಟರಿಯೇತರ ಪಾತ್ರವೊಂದನ್ನು ನಿರ್ವಹಿಸಬೇಕಾಗಿ ಬಂದದ್ದು ಇದೇ ಮೊದಲು.

ಅನೇಕರು, ವಿದ್ಯಾವಂತರು ಕೂಡ ಸೈನ್ಯದ ಜೀವನ, ಯುದ್ಧ ಕಾಲದ ಹೊರತು ತುಂಬ ಸುಲಭವಾದ ಜೀವನ ಎಂದು ಹೇಳಿದ್ದಾರೆ. ಏಕೆಂದರೆ ನಾವು ಮಾಡುತ್ತಿರುವುದೇನು? ಕಚೇರಿಯಲ್ಲಿ ಶಾಂತವಾಗಿ ಕುಳಿತಿದ್ದು , ಸ್ವಲ್ಪವೂ ದೇಹಾಯಾಸವಿಲ್ಲದೆ, ಹಲವು ರೌಂಡ್ ಟೆನಿಸ್ ಮತ್ತು ಬ್ಯಾಡ್ಮಿಂಟನ್ ಆಡಲು ಸಿದ್ಧವಾಗಿ ಮನೆಗೆ ಬರುವುದು ಅಥವಾ ಹೆಂಡಿರನ್ನು ಷಾಪಿಂಗ್‌ಗೆ ಒಯ್ಯುವುದು. ಈ ಮಾತು ಈಗ ನೂರು ವರ್ಷಗಳ ಹಿಂದೆ ಸ್ವಲ್ಪಮಟ್ಟಿಗೆ ಸತ್ಯವಾಗಿದ್ದಿರಬಹುದು. ಈಗ ಸೈನ್ಯವು ಅಧಿಕಾರಿಗಳ ಕೈಯಲ್ಲಿರುವ ಕಾನೂನು-ಸುವ್ಯವಸ್ಥೆ ಪಾಲನೆಯ ಉಪಕರಣವಾಗಿದೆ. ನೈಸರ್ಗಿಕ ಗಂಡಾಂತರಗಳು ಎರಗಿದಾಗ ಅಲ್ಲಿಗೆ ಮೊದಲು ಧಾವಿಸುವವರು ನಾವು. ಭೂಕಂಪಗಳು, ಪ್ರವಾಹಗಳು, ಕ್ಷಾಮ, ಎಲ್ಲವನ್ನೂ ನೋಡಿದ್ದೇವೆ. ಪೊಲೀಸರು ಮುಷ್ಕರ ಹೂಡಿದಾಗ ನಾವು ಹೊಣೆಗಾರಿಕೆ ಹೊತ್ತುಕೊಳ್ಳುತ್ತೇವೆ. ನ್ಯಾಯಾಧೀಶರು ಚಳವಳಿಯಲ್ಲಿ ನಿರತರಾದರೆ ನಾವು ನ್ಯಾಯ ವಿತರಣೆ ಮಾಡುತ್ತೇವೆ. ರೈಲ್ವೇ ಸಿಬ್ಬಂದಿ ಮುಷ್ಕರ ಹೂಡಿದಾಗ ನಾವು ರೈಲುಗಳನ್ನು ನಡೆಸುತ್ತೇವೆ. ಫಿಷ್‌ಪ್ಲೇಟುಗಳನ್ನು ಪರೀಕ್ಷಿಸುತ್ತೇವೆ.

ನಾವು ಹೈದರಾಬಾದನ್ನು ಒಕ್ಕೂಟದ ತೆಕ್ಕೆಗೆ ತಂದೆವು. ಗೋವಾದಿಂದ ಪೋರ್ಚುಗೀಸರನ್ನು ಹೊರಗಟ್ಟಿದೆವು. ಆಗಿನಿಂದಲೂ ಪಟ್ಟಿ ಮಾಡಬಹುದಾದ ಘಟನೆಗಳು ಬೇಕಾದಷ್ಟಿವೆ. ಪಂಜಾಬು, ಜಮ್ಮು ಮತ್ತು ಕಾಶ್ಮೀರ, ಮಣಿಪುರ, ನಾಗಾಲ್ಯಾಂಡ್, ಮಿಜೋರಾಂ ಹೀಗೆ ನಮ್ಮ ತರಬೇತಿ ಕೇವಲ ಡ್ರಿಲ್ಲು , ಆಯುಧಗಳು ಮತ್ತು ಯುದ್ಧ ಇವಿಷ್ಟಕ್ಕೇ ಸೀಮಿತಗೊಳ್ಳುವುದಿಲ್ಲ. ಕಾನೂನನ್ನು ಗೌರವಿಸದ ತುಂಟರನ್ನು ಹೇಗೆ ಜಾಣ್ಮೆಯಿಂದ ತಿದ್ದುವುದು, ಅವ್ಯವಸ್ಥೆಯ ಸಮಯಗಳಲ್ಲಿ ಜನತೆಯಲ್ಲಿ ಹೇಗೆ ಆತ್ಮವಿಶ್ವಾಸವನ್ನು ತುಂಬುವುದು ಎಂಬುದನ್ನು ನಾವು ಕಲಿಯಬೇಕು.

ಲಕ್ನೋದಲ್ಲಿ ನಾವು ನೆಲೆಸಿ ಒಂದು ತಿಂಗಳೂ ಆಗಿರಲಿಲ್ಲ. ಇಡೀ ಡಿವಿಜನ್ ಪಾಕಿಸ್ತಾನ್ ಗಡಿಯ ಬಳಿ ಇದ್ದ ಹಿಸ್ಸಾರ್‌ಗೆ ಹೋಗ ಬೇಕೆಂದು ಆಜ್ಞೆ ಬಂದಿತು. ಅಲ್ಲಿ ಗಡಿಯಿಂದಾಚೆಗೆ ಪಾಕಿಸ್ತಾನದಲ್ಲಿ ಭಾರೀ ಪ್ರಮಾಣದ ಸೇನಾ ಚಲನವಲನಗಳು ಕಾಣಿಸಿದ್ದವು. ಸಾವಿತ್ರಿಯೂ ಗಾಯತ್ರಿಯೂ ಬೆಂಗಳೂರಿಗೆ ಹಿಂದಕ್ಕೆ ಹೋಗ ಬೇಕಾಯಿತು. ಏಕೆಂದರೆ ಡಿವಿಜನ್ ಮತ್ತೆ ಲಕ್ನೋಗೆ ಹಿಂದಿರುಗುತ್ತದೋ ಇಲ್ಲವೋ ಹೇಳುವಂತಿರಲಿಲ್ಲ. ಮದುವೆ ಯಾದಾಗಿನಿಂದಲೂ ನಾನೂ ಸಾವಿತ್ರಿಯೂ ಕೆಲವು ತಿಂಗಳ ಕಾಲವಾದರೂ ಒಟ್ಟಿಗೆ ಇರಲಿಲ್ಲ.

ಒಂದು ವಿಶೇಷ ರೈಲಿನಲ್ಲಿ ನಾವು ಹಿಸ್ಸಾರ್‌ಗೆ ಹೋದೆವು. ಹೊರವಲಯದಲ್ಲಿ ಮುಳ್ಳುಪೊದೆಗಳು ಮತ್ತು ಮರಳು ದಿಣ್ಣೆಗಳ ನಡುವೆ ಶಿಬಿರ ಹೂಡಿದೆವು. ತುಂಬ ಆಳವಾಗಿ ಕೊರೆದು ನೀರನ್ನು ಪಂಪ್ ಮಾಡಿ ಮೇಲೆತ್ತಿಕೊಳ್ಳಬೇಕಾಗಿತ್ತು. ಕ್ಯಾನವಾಸಿನ ಗುಡಾರಗಳಲ್ಲಿ ನಾವು ತಂಗಿದೆವು. ಅಪಾರವಾದ ಸೆಕೆಯಲ್ಲಿಯೂ ಡ್ರಿಲ್ ಮಾಡಿದೆವು. ಪಥಸಂಚಲನ ನಡೆಯಿತು. ಫೈರಿಂಗ್ ರೇಂಜಿನಲ್ಲಿ ಅಭ್ಯಾಸ ಮಾಡಿದೆವು. ನಮ್ಮ ಶಸ್ತ್ರಾಸ್ತ್ರಗಳನ್ನು ಹಾರಿಸಲು ಅದರ ಲಕ್ಷ್ಯಕ್ಕೆ ಸರಿಯಾಗಿ ಅಳವಡಿಸಿದೆವು. ಪೌರರೂ ಸ್ಥಳೀಯ ರಾಜಕಾರಣಿಗಳೂ ಕುತೂಹಲ ದಿಂದ, ಆಸಕ್ತಿಯಿಂದ ನಮ್ಮ ಅಣಕು ಕಾರ್ಯಕ್ರಮಗಳನ್ನು ನೋಡುತ್ತಿದ್ದರು. ಟ್ಯಾಂಕುಗಳು, ಆರ್ಟಿಲರಿ, ಇನ್‌ಫೆಂಟ್ರಿ ಎಲ್ಲ ಸೇರಿ ಅಡಗಿಕೊಂಡ ಶತ್ರುವನ್ನು ಆಕ್ರಮಿಸುವ ಅಣಕು ಯುದ್ಧ ನಡೆಸುತ್ತಿದ್ದೆವು. ಇವುಗಳಿಂದಾಗಿ ಆ ಪ್ರದೇಶದ ಅನೇಕ ಜಾಟ್ ತರುಣರನ್ನು ಸೈನ್ಯಕ್ಕೆ ಸೇರಿಸಿಕೊಳ್ಳಲು ಸಹಾಯವಾಯಿತು.

ಆದರೆ ಮಾತುಕತೆಗಳು ನಡೆದು ಗಡಿಯಲ್ಲಿ ಬಿಗುವು ಸಡಿಲ ವಾಯಿತು. ನಮ್ಮ ಡಿವಿಜನ್ ಮತ್ತೆ ಲಕ್ನೋಗೆ ಹಿಂದಿರುಗಲು ಆದೇಶ ದೊರಕಿತು. ೧೯ ಮರಾಠಾದಳವು ಮತ್ತೆ ಕ್ಯಾಂಪ್‌ಬೆಲ್ ಲೈನ್‌ಗೆ ಸೇರಿಕೊಂಡಿತು. ಸಾಧ್ಯವಾದಷ್ಟು ಬೇಗನೆ ಸಾವಿತ್ರಿಯು ಗಾಯತ್ರಿ ಯೊಂದಿಗೆ ಬಂದಳು. ಈ ಸಾರಿ ನನ್ನ ತಮ್ಮ ಸುಂದರಮೂರ್ತಿಯು ಅವರನ್ನು ಕರೆದುಕೊಂಡು ಬಂದನು.

ಮತ್ತೆ ನಮ್ಮ ಹಿಂದಿನ ಜೀವನ ಪ್ರಾರಂಭವಾಯಿತು. ಸಾವಿತ್ರಿಯ ಅಡುಗೆ ಗಣನೀಯವಾಗಿ ಸುಧಾರಿಸಿತ್ತು. ನಮ್ಮ ಎಲ್ಲ ಅಧಿಕಾರಿ ಗಳನ್ನೂ, ಅವರ ಕುಟುಂಬದವರನ್ನೂ ಮಧ್ಯಾಹ್ನದ ಭೋಜನಕ್ಕೋ, ರಾತ್ರಿಯೂಟಕ್ಕೋ, ಆಹ್ವಾನಿಸಿದೆವು. ಅನೇಕರು ಉಪಾಹಾರಕ್ಕೂ ಬರುತ್ತಿದ್ದರು. (ಒಮ್ಮೆಯಾದರೂ ಬರುತ್ತಿದ್ದರು). ದೋಸೆ, ವಡೆ, ಇಡ್ಲಿಗಳಿಗೆ ಅವಳು ಹೆಸರಾಗಿದ್ದಳು. ಅದು ನ್ಯಾಯವಾಗೇ ಇತ್ತು.

ಅವಳ ಹಿಂದಿಯೂ ವೇಗವಾಗಿ ಸುಧಾರಣೆಗೊಂಡಿತು. ಧೈರ್ಯ ವಾಗಿ ಸೈಕಲ್ ಸವಾರಿ ಮಾಡುತ್ತಿದ್ದಳು. ಗಾಯತ್ರಿಯನ್ನು ಸೈಕಲಿನ ಕ್ಯಾರಿಯರ್ ಮೇಲೆ ಕುಳ್ಳಿರಿಸಿಕೊಂಡು ಅವಳೇ ಬಜಾರಿಗೆ ಹೋಗಿ ಬರುತ್ತಿದ್ದಳು. ಬರುವಾಗ ಹ್ಯಾಂಡಲಿಗೆ ತರಕಾರಿ ತುಂಬಿದ ಎರಡೋ– ಮೂರೋ ಬ್ಯಾಗುಗಳನ್ನು ನೇತುಹಾಕಿರುತ್ತಿದ್ದಳು. ನಾನು ಗಂಡಸರ ಬೈಸಿಕಲ್ಲೊಂದನ್ನು ಬಾಡಿಗೆಗೆ ತೆಗೆದುಕೊಳ್ಳುತ್ತಿದ್ದೆ; ಮೂವರೂ ಎಲ್ಲ ಕಡೆಗೂ ಹೋಗುತ್ತಿದ್ದೆವು. ಗವರ್ನರರ ಕಚೇರಿಯಲ್ಲಿ ಸ್ಟಾಫ್ ಆಫೀಸರ್ ಆಗಿದ್ದ ಕನ್ನಡಿಗರೊಬ್ಬರ ಪರಿಚಯವಾಯಿತು. ಆತ ತನ್ನ ಕುಟುಂಬ ದೊಂದಿಗೆ ಗವರ್ನರ್‌ರ ಬಂಗಲೆಯ ಕಾಂಪೌಂಡಿನಲ್ಲಿದ್ದ ಕ್ವಾರ್ಟರ್ಸ್‌ನಲ್ಲಿ ವಾಸವಾಗಿದ್ದರು. ನಾವು ಆಗಾಗ ಅವರ ಮನೆಗೆ ಹೋಗುತ್ತಿದ್ದೆವು.

ಈ ಸಮಯಕ್ಕೆ ನೇಪಾಳದಲ್ಲಿ ಒಂದು ಸಮಸ್ಯೆಯನ್ನು ಪರಿಹರಿಸಬೇಕೆಂದು ೧೯ ಮರಾಠಾದಳಕ್ಕೆ ಆದೇಶವಾಯಿತು. ರಾಜಾ ತ್ರಿಭುವನರು ತಮ್ಮ ಮಂತ್ರಿ ಜಂಗ್ ಬಹಾದೂರ್ ರಾಣಾ ಅವರ ಕೈಗೊಂಬೆಯಾಗಿದ್ದರು. ಅವರ ಚಲನವಲನಗಳ ಮೇಲೆ ಎಷ್ಟು ತಡೆ ಹಾಕಲಾಗಿದ್ದಿತೆಂದರೆ ಅವರು ವಾಸ್ತವವಾಗಿ ಗೃಹಬಂಧನದಲ್ಲಿದ್ದರು. ಆದರೂ ದೊರಕಿದ ಅಲ್ಪ ಅವಕಾಶದಲ್ಲಿ ಪಶುಪತಿನಾಥ ದೇವಾಲಯಕ್ಕೆ ಹೋಗಿದ್ದಾಗ ಖಟ್ಮಂಡುವಿನ ಭಾರತ ರಾಯಭಾರಿ ಕಚೇರಿಗೆ ಓಡಿಹೋದರು, ಅಲ್ಲಿಂದ ದೆಹಲಿಗೆ ಬಂದರು. ಆಮೇಲೆ ಭಾರತ ಸರ್ಕಾರವು ರಾಣಾನು ಕೆಳಗಿಳಿಯಬೇಕೆಂದು ಒತ್ತಾಯಪಡಿಸಿತು. ರಾಜನು ಹಿಂದಿರುಗಿದನು. ಪ್ರಜಾಸತ್ತಾತ್ಮಕ ಸುಧಾರಣೆಗಳು ಜಾರಿಗೆ ಬಂದವು. ಆದರೆ ಕೆಲವು ತಿಂಗಳ ನಂತರ ರಾಣಾನ ಬೆಂಬಲಿಗರಲ್ಲೊಬ್ಬನಾದ ಕೆ.ಐ.ಸಿಂಗ್, ಸುಮಾರು ನೂರು ಜನ ಸಹಾಯಕರೊಂದಿಗೆ ನೇಪಾಲ್ ಗಂಜ್ ಮತ್ತು ಭೈರವ ಎಂಬ ಎರಡು ಗಡಿ ಜಿಲ್ಲೆಗಳನ್ನು ಕಿತ್ತುಕೊಂಡನು. ರಾಜನು ಮತ್ತೆ ದೆಹಲಿಗೆ ಮನವಿ ಮಾಡಿಕೊಂಡನು. ಸಿಂಗ್‌ನನ್ನು ಬಂಧಿಸುವ ಕೆಲಸವನ್ನು ಸರ್ಕಾರವು ಸೈನ್ಯಕ್ಕೆ ವಹಿಸಿತು. ಅಲ್ಲಿಂದ ಅದು ೫ ನೇ ಡಿವಿಜನ್‌ಗೆ ಬಂದಿತು. ಅವರು ಅದನ್ನು ನಮಗೆ ವಹಿಸಿದರು.

ಹೀಗೆ ನಮ್ಮ ಲೆಫ್ಟಿನೆಂಟ್ ಕರ್ನಲ್ ಜೇಟ್ಲೀ ಅವರ ನೇತೃತ್ವದಲ್ಲಿ ಗಡಿಯ ಭಾರತೀಯ ಪಕ್ಕದ ನೌತನ್ವಾ ಎಂಬಲ್ಲಿಗೆ ಬೆಟಾಲಿಯನ್ ಬಂದು ಸೇರಿತು. ಅದು ಗೋರಖ್‌ಪುರದಿಂದಾಚೆಗೆ ೨೦ ಮೈಲಿ ದೂರದಲ್ಲಿ ನೇಪಾಳದ ಭೈರವ ಜಿಲ್ಲೆಗೆ ಅತಿ ಸಮೀಪದ ಸ್ಥಳವಾಗಿತ್ತು. ಭಾರತದಿಂದ ಬಂದು ಹೋಗಿ ಮಾಡುವ ಬಹುಸಂಖ್ಯೆಯ ಗೂರ್ಖಾ ಗಳಿಗೆ ನೌತನ್ವಾ ಸಂಧಿ ಸ್ಥಳ. ಅವರು ವೈರಿಗೆ ದಿಗಿಲು ಹುಟ್ಟಿಸುವ ಸೈನಿಕರು. ಗೂರ್ಖಾಗಳು ಭಾರತೀಯ ಸೇನೆಯಲ್ಲಿ ಬೃಹತ್ ಸಂಖ್ಯೆ ಯಲ್ಲಿದ್ದಾರೆ. ಇಂಗ್ಲೆಂಡು ಈಗಲೂ ತನ್ನ ಕೆಲವು ಇನ್‌ಫೆಂಟ್ರಿ ಬೆಟಾಲಿಯನ್‌ಗಳಿಗೆ ಗೂರ್ಖಾರನ್ನು ನೇಮಿಸಿಕೊಳ್ಳುತ್ತದೆ. ಫಾಕ್‌ಲೆಂಡ್ಸ್ ಯುದ್ಧದಲ್ಲಿ ಗೂರ್ಖಾ ಯೋಧರು ತಮ್ಮ ಖುಕ್ರಿಗಳೊಂದಿಗೆ ಬಂದಿಳಿಯುತ್ತಿದ್ದಾರೆ ಎಂದು ಸುದ್ದಿ ಬಂದಾಗ ಅರ್ಜೆಂಟೀನಾದ ಯೋಧರು ಸಾಮೂಹಿಕವಾಗಿ ಶರಣಾದರು ಎಂದು ಯಾರೋ ನನಗೆ ಹೇಳಿದರು. ಹಾಗೆ ಮಾಡಿದವರಲ್ಲಿ ಅವರು ಮೊದಲಿಗರೂ ಅಲ್ಲ. ಪ್ರದೇಶವನ್ನು ಜಾಗರೂಕತೆಯಿಂದ ಪರಿಶೀಲಿಸಿದಾಗ ಸಿಂಗ್‌ನ ಚಲನವಲನಗಳು ನಮಗೆ ಸ್ಥಿರಪಟ್ಟವು. ಒಂದು ದಿನ ದಿಢೀರ್ ದಾಳಿ ನಡೆಸಿ ಅವನನ್ನೂ, ಅವನ ಅನುಯಾಯಿಗಳಲ್ಲಿ ಹೆಚ್ಚಿನವರನ್ನೂ ಸೆರೆಹಿಡಿದೆವು. ನಾಲ್ಕೋ–ಐದೋ ಜನ ಸತ್ತರು ಅಷ್ಟೆ . ಅವರನ್ನು ಭೈರವದ ಜೈಲಿಗೆ ಒಪ್ಪಿಸಿದ ಮೇಲೆ ಪರಿಸ್ಥಿತಿ ತಿಳಿಗೊಳ್ಳುವವರೆಗೆ ಇನ್ನೂ ಕೆಲವು ದಿನ ಅಲ್ಲೇ ನಾವು ಇದ್ದೆವು.

ಈ ಸಮಯದಲ್ಲಿ ಬುದ್ಧನ ಜನನ ಸ್ಥಳವಾದ ಲುಂಬಿನಿಗೆ

ಹೋಗಿಬಂದೆ. ದಟ್ಟವಾದ ಕಾಡಿನ ಮೂಲಕ ಆನೆಯ ಮೇಲೆ ಕುಳಿತು ಅಲ್ಲಿಗೆ ಹೋಗಬೇಕು. ಅದೊಂದು ದೂರದ ಶಾಂತವಾದ ಸ್ಥಳ. ಪ್ರವಾಸಿಗರಿಗೆ ಅಲ್ಲಿ ಯಾವುದೇ ಸೌಲಭ್ಯಗಳು ದೊರಕುವುದಿಲ್ಲ. ಈ ಅವಕಾಶ ನನಗೆ ದೊರೆತು ಸಂತೋಷವಾಯಿತು. ನಾನು ಅದೃಷ್ಟಶಾಲಿ ಎಂದುಕೊಂಡೆ.

ಲಕ್ನೋಗೆ ಹಿಂದಿರುಗಿದೆವು. ಆದರೆ ಕೆಲವೇ ದಿನಗಳಲ್ಲಿ ಸಿಂಗ್ ಸೆರೆಯಿಂದ ತಪ್ಪಿಸಿಕೊಂಡನೆಂದು ಸುದ್ದಿ ಬಂದಿತು. ಆದ್ದರಿಂದ ಮತ್ತೆ ಭೈರವಕ್ಕೆ ಹೋದೆವು. ದಟ್ಟವಾದ ಕಾಡು ತುಂಬಿದ ಬೆಟ್ಟಗಳಲ್ಲಿ ಜಾಲಾಡಿದೆವು . ೬-೭ ಜನರೊಂದಿಗೆ ಅವನು ನಮ್ಮಿಂದ ಸುಮಾರು ೧೫ ಮೈಲು ದೂರದಲ್ಲಿ ಮುಂದಿರುತ್ತಿದ್ದನು. ಅವನು ನೇಪಾಳ-ಚೈನಾ ಗಡಿಗೆ ಹೋಗುತ್ತಿರುವುದು ನಮಗೆ ಗೊತ್ತು. ಆದ್ದರಿಂದ ಬೇಗನೆ ಅವನನ್ನು ಹಿಡಿಯಲು ಪ್ರಯತ್ನಿಸಿದೆವು.

ಅವನಿಗೆ ಸ್ಥಳಪರಿಚಯ ಚೆನ್ನಾಗಿತ್ತು. ನಾವು ಮಾರ್ಗದರ್ಶಿಗಳನ್ನು ಅವಲಂಬಿಸಬೇಕಾಗಿತ್ತು. ಗಡಿಗೆ ಹೋದಾಗ, ಆಗಷ್ಟೇ ಅವನು ಚೈನಾ ದೇಶದ ಕಡೆಯ ಗಡಿಪಕ್ಕಕ್ಕೆ ಹೋದನೆಂದು ತಿಳಿಯಿತು. ಆ ಗಡಿಗೆ ನಾವು ಹೋಗುವಂತಿರಲಿಲ್ಲ. ಅಲ್ಲೇ ಶಿಬಿರ ಹೂಡಿದೆವು.

ಅಂದು ರಾತ್ರಿ ನಾನು ಮತ್ತು ನನ್ನ ಜೆ.ಸಿ.ಓ. ಒಬ್ಬ ನೇಪಾಳೀ ಗೃಹಸ್ಥರ ಮನೆಗೆ ಸತ್ಯನಾರಾಯಣ ಪೂಜೆಗಾಗಿ ಹೋಗಿದ್ದೆವು. ಅಲ್ಲಿ ನಡೆದ ಪೂಜೆ ಪುನಸ್ಕಾರವೆಲ್ಲಾ ನಮಗೆ ತಿಳಿದಿದ್ದುವೇ. ಕರ್ನಾಟಕ ವಾಗಲಿ, ಆಂಧ್ರವಾಗಲಿ, ತಮಿಳುನಾಡಾಗಲಿ ಪೂಜೆಯನ್ನು ಹಾಗೇ ಮಾಡುತ್ತಾರೆ. ಪ್ರಸಾದದ ರುಚಿಯೂ ಹಾಗೆಯೇ ಇರುತ್ತದೆ. ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ನಾವು ಬೇರೆ ಬೇರೆ ಭಾಷೆಗಳನ್ನಾಡಿದರೂ ಸಾಂಸ್ಕೃತಿಕವಾಗಿ ನಾವೆಲ್ಲರೂ ಒಂದೇ ಎಂಬ ಭಾವನೆ ನನಗೆ ಬಂದಿತು.

ಉನ್ನತ ಮಟ್ಟದ ಮಾತುಕತೆಯ ಅನಂತರ ಸಿಂಗ್ ಪ್ರಜಾಸತ್ತಾತ್ಮಕ ವಿಧಾನದಲ್ಲಿ ತನ್ನ ಗುರಿಯನ್ನು ಸಾಧಿಸಿಕೊಳ್ಳಲು ಒಪ್ಪಿದನು. ನೇಪಾಳಕ್ಕೆ ಹಿಂದಿರುಗಿದನು. ಅನೇಕ ಉನ್ನತ ಪದವಿಗಳಲ್ಲಿ ಕೆಲಸ ಮಾಡಿ ಆಮೇಲೆ ಸರ್ಕಾರದಲ್ಲಿ ಮಂತ್ರಿಯಾದನು.

೧೩. ಒಂದು ವ್ಯರ್ಥ ಸಾಹಸ.......

ಮತ್ತೆ ಪಾಕಿಸ್ತಾನೀಯರು ಅವರ ಗಡಿಯಲ್ಲಿ ಜಮಾಯಿಸುತ್ತಿದ್ದರು. ನೇಪಾಳದಿಂದ ಹಿಂದಕ್ಕೆ ಬಂದೆವೋ ಇಲ್ಲವೋ ಪೂರ್ವ ಪಾಕಿಸ್ತಾನ ಗಡಿಗೆ ಹೋಗಲು ಆಜ್ಞೆ ಬಂದಿತು.

ಅಲ್ಲಿ ಕುಟುಂಬಗಳಿಗೆ ಎಡೆಯಿರಲಿಲ್ಲ. ಮತ್ತೆ ನಾನು ಸಾವಿತ್ರಿಯನ್ನು ಗಂಟುಮೂಟೆ ಸಹಿತ, ಈ ಸಾರಿ ಹಾಸನದಲ್ಲಿ ನನ್ನ ತಂದೆತಾಯಿಯರ ಜತೆ ಇರಲು ಕಳಿಸಬೇಕಾಯಿತು.

ನಾವು ಈಗ ಕೊನೆಯ ಪಕ್ಷ ಒಂದು ವರ್ಷ ಅಗಲಿರ ಬೇಕಾಗಿದ್ದುದರಿಂದ ಅವಳು ಓದಿ ಎಸ್. ಎಸ್. ಎಲ್.ಸಿ. ಮುಗಿಸಿದರೆ ಮೇಲು ಅನ್ನಿಸಿತು. ಅವಳಿಗೆ ಧೈರ್ಯವಿರಲಿಲ್ಲ. ಅದು ಅವಳಿಗೆ ಬಹಳ ಕಷ್ಟವಾಗುತ್ತಿತ್ತು. ಮೂರು ವರ್ಷಗಳ ಪಾಠಗಳನ್ನೂ ಆರೋ ಮೂರೋ ತಿಂಗಳಲ್ಲಿ ಓದಿ ಮುಗಿಸಿ ಪರೀಕ್ಷೆಗೆ ಕೂಡಬೇಕಾಗಿತ್ತು. ಓದುವುದನ್ನು ಬಿಟ್ಟು ಹಲವು ವರ್ಷಗಳೇ ಆಗಿಬಿಟ್ಟಿದ್ದವು. ತಾನು ಫೇಲಾಗುವುದು ಖಂಡಿತ ಎಂದು ಅವಳು ನಿರ್ಧರಿಸಿದ್ದಳು. ಆದರೆ ನಾನು ವಾದ ಮಾಡಿದೆ. ಒಬ್ಬ ಉಪಾಧ್ಯಾಯರನ್ನು ನೇಮಿಸಿಕೊಳ್ಳೋಣ ಎಂದೆ. ನನ್ನ ಹಠಮಾರಿತನ ಗೊತ್ತಿದ್ದುದರಿಂದ ಆಕೆ ಒಲ್ಲದ ಮನಸ್ಸಿನಿಂದ ಸಮ್ಮತಿಸಿದಳು. ಇಲ್ಲಿದ್ದ ಕೆಲವೇ ತಿಂಗಳಲ್ಲಿ ಸಾವಿತ್ರಿ ಅನೇಕ ಜನ ಅಧಿಕಾರಿಗಳ ಪತ್ನಿಯರನ್ನು ಸಂಧಿಸಿದ್ದಳು. ಅವರೆಲ್ಲಾ ಬಹಳ ನಾಜೂಕಿನ ವಿದ್ಯಾವತಿಯರಾಗಿ ಕಂಡಿದ್ದರು. ಅವರು ಮಾತನಾಡುವಾಗ ಸಾವಿತ್ರಿ ತಾನು ಬಹಳ ಕೆಳಮಟ್ಟದವಳು ಎಂದುಕೊಳ್ಳುತ್ತಿದ್ದಳು. ಕೊನೆಯ ಪಕ್ಷ ತಾನು ಎಸ್.ಎಸ್.ಎಲ್.ಸಿ. ಆದರೂ ಮುಗಿಸಬೇಕು ಎಂದು ಅವಳಿಗೇ ಅನ್ನಿಸಿತು.

ಇಷ್ಟು ತೀರ್ಮಾನಿಸಿದ ಮೇಲೆ ನನಗಿನ್ನು ಸಮಯವಿರಲಿಲ್ಲ. ತಕ್ಷಣವೇ ಗಾಯತ್ರಿಯನ್ನೂ ಸಾವಿತ್ರಿಯನ್ನೂ ರೈಲಿನಲ್ಲಿ ಕುಳ್ಳಿರಿಸಿ ಕಳಿಸಿದೆ. ಇನ್ನು ಹದಿನೈದು ದಿನ ನಮ್ಮ ಬೆಟಾಲಿಯನ್ ಲಕ್ನೋದಲ್ಲೇ ಇರುತ್ತಿದ್ದರೂ ನಾನು ಇವರನ್ನು ಊರಿಗೆ ಕಳಿಸಿದೆ. ಒಬ್ಬ ಒಳ್ಳೆಯ ಉಪಾಧ್ಯಾಯರನ್ನು ಗೊತ್ತುಪಡಿಸಬೇಕೆಂದು ನನ್ನ ತಂದೆಗೆ ಬರೆದಿದ್ದೆ. ಈ ವಿಷಯವಾಗಿ ತಂದೆಯವರು ತಮ್ಮ ಹಲವು ಮಿತ್ರರೊಂದಿಗೆ ಮಾತನಾಡಿದ್ದರು. ಅವರು ಯಾರೂ ಆಶಾವಾದಿಗಳಾಗಿರಲಿಲ್ಲ. ಖಾಸಗಿಯಾಗಿ ಓದುತ್ತ ಆರು ತಿಂಗಳಲ್ಲಿ ಎಸ್.ಎಸ್.ಎಲ್.ಸಿ. ತೇರ್ಗಡೆ ಹೊಂದುವುದು ಯಾರಿಗೂ ಸಾಧ್ಯವಿಲ್ಲ ಎಂಬುದು ಅವರ ಅಭಿಪ್ರಾಯ.

ಸಾವಿತ್ರಿಯನ್ನು ಇಂತಹ ವ್ಯರ್ಥ ಸಾಹಸಕ್ಕೆ ಒಡ್ಡಬಾರದೆಂದು ನನ್ನ ತಂದೆ ಪತ್ರ ಬರೆದರು. ಆದರೆ ನನ್ನ ನಿರ್ಧಾರ ಅಚಲವಾಗಿತ್ತು. ಅವಳಿಗಾಗಿ ಒಬ್ಬ ಉಪಾಧ್ಯಾಯರನ್ನು ಗೊತ್ತುಮಾಡಿಕೊಡಿ, ಅವಳು ಫೇಲಾದರೂ ಚಿಂತೆಯಿಲ್ಲ , ಓದಲಿ ಎಂದು ಉತ್ತರ ಕೊಟ್ಟೆ . ಹಾಗಾಗಿ ಅವರು ವೆಂಕಟರಮಣಪ್ಪ ಎಂಬುವವರೊಂದಿಗೆ ಮಾತನಾಡಿದರು. ಅವರು ಮೊದಲು ಸಮ್ಮತಿಸಲಿಲ್ಲ. ಆದರೆ ನನ್ನ ತಂದೆ ಹೇಗೋ ಅವರನ್ನು ಒಲಿಸಿ ಒಪ್ಪಿಸಿದರು. ದಿನವೂ ಅವರು ಎರಡು ಗಂಟೆಗಳ ಕಾಲ ಬಿಡುವು ಮಾಡಿಕೊಂಡರು. ಮೂರು ತಿಂಗಳ ಕಾಲ ಸಾವಿತ್ರಿಯ ಕಲಿಕೆಯನ್ನು ಗಮನಿಸುವುದಾಗಿಯೂ, ಅದು ತೃಪ್ತಿಕರವಾಗಿರದಿದ್ದರೆ ನಿಲ್ಲಿಸಿಬಿಡುವುದಾಗಿಯೂ ಹೇಳಿದರು.

ಹೀಗೆ ಎಸ್ಎಸ್ಎಲ್ಸಿ ಕಾರ್ಯಾಚರಣೆ ಆರಂಭವಾಯಿತು. ಸಾವಿತ್ರಿ

ಪ್ರತಿದಿನ ಬೆಳಗ್ಗೆ ೭ ಗಂಟೆಯಿಂದ ೯ ಗಂಟೆಯವರೆಗೆ ಅವರ ಮನೆಗೆ ಹೋಗುತ್ತಿದ್ದಳು. ಆಮೇಲೆ ಸಾಧ್ಯವಾದಾಗಲೆಲ್ಲಾ ಓದುತ್ತಿದ್ದಳು. ಅಷ್ಟೊಂದು ಜನರಿರುವ ಮನೆಯಲ್ಲಿ ಮಾಡಲು ಬೇಕಾದಷ್ಟು ಕೆಲಸಗಳಿದ್ದವು. ಬಟ್ಟೆಗಳನ್ನು ಒಗೆಯಬೇಕು, ಬೂದಿ ಮಣ್ಣು ಉಜ್ಜಿ ಪಾತ್ರೆ ತೊಳೆಯಬೇಕು, ಬಾವಿಯಿಂದ ನೀರು ಸೇದಿ ತುಂಬಬೇಕು; ಗಾಯತ್ರಿಗೆ ಮಾತ್ರವಲ್ಲ, ಅನೇಕ ಮಕ್ಕಳಿಗೆ ಸ್ನಾನ ಮಾಡಿಸಿ, ಬಟ್ಟೆ ತೊಡಿಸಿ ಊಟ ಮಾಡಿಸಬೇಕು. ಆದರೂ ಸಾವಿತ್ರಿ ಓದಿನಲ್ಲಿ ಪ್ರಗತಿ ತೋರಿಸಿದಳು. ಇದನ್ನು ಗಮನಿಸಿ ವೆಂಕಟರಮಣಪ್ಪನವರು ಹೆಚ್ಚು ಹೆಚ್ಚು ಸಮಯ ಕೊಡತೊಡಗಿದರು. ನನ್ನ ತಂದೆ ತಾಯಿ ಸೋದರರು ಇವೆಲ್ಲದರ ಉತ್ಸಾಹದ ವರದಿಕೊಟ್ಟರು. ಪರೀಕ್ಷೆ ಸಮೀಪಿಸಿದಂತೆ ಪ್ರತಿಯೊಂದು ಗಂಟೆಯೂ ಅಮೂಲ್ಯವಾಯಿತು. ಒತ್ತಡಕ್ಕೆ ಇನ್ನಷ್ಟು ಕೂಡಿದಂತೆ ಪರೀಕ್ಷೆ ಏನೋ ಕಾರಣಕ್ಕೆ ಹದಿನೈದು ದಿನ ಮುಂದಕ್ಕೆ ಹೋಯಿತು. ಅವಳು ಓದಲು ಪ್ರಾರಂಭಿಸಿ ಸರಿಯಾಗಿ ಆರು ತಿಂಗಳಿಗೆ ಪರೀಕ್ಷೆಗಳು ನಡೆದುವು.

ಫಲಿತಾಂಶ ಪ್ರಕಟವಾಯಿತು. ಸಾವಿತ್ರಿ ಉನ್ನತ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣಳಾಗಿದ್ದಳು. ಪ್ರಥಮಶ್ರೇಣಿಗೆ ಎರಡೇ ಅಂಕ ಕಡಮೆಯಾಗಿದ್ದವು. ನನ್ನ ಆನಂದಕ್ಕೆ ಮಿತಿಯಿಲ್ಲ. ಇದಾದ ಮೇಲೆ ಸಾವಿತ್ರಿಗೆ ತನ್ನ ಸಾಮರ್ಥ್ಯದ ಬಗೆಗೆ ತನಗೇ ವಿಶ್ವಾಸ ಮೂಡಿತು. ಉತ್ತಮ ವಿದ್ಯಾಭ್ಯಾಸದ ರುಚಿ ಹಿಡಿಸತೊಡಗಿತು. ಆ ಕೆಲ ತಿಂಗಳುಗಳಲ್ಲಾಕೆ ಕಲಿತದ್ದು ಎಂದಿಗೂ ವ್ಯರ್ಥವಾಗಲಿಲ್ಲ. ನಮ್ಮ ಮಕ್ಕಳಿಗೆ ಅವರು ಹೈಸ್ಕೂಲಿಗೆ ಬರುವವರೆಗೂ ಅನೇಕ ವಿಷಯಗಳನ್ನು ಕಲಿಸಿಕೊಡಲು ಅವಳಿಗೆ ಸಾಮರ್ಥ್ಯ ಬಂದಿತು.

೧೪. ಅಲೆದಾಟದ ಮಧ್ಯಾಂತರ

ಕೆಲವು ದಿನಗಳ ಅನಂತರ ನಮ್ಮ ಬೆಟಾಲಿಯನ್, ಪೂರ್ವ ಪಾಕಿಸ್ತಾನದಲ್ಲಿ ಜೆಸ್ಸೂರಿನಿಂದ ಸುಮಾರು ೨೫ ಮೈಲಿ ದೂರದ ಬೋರಿಗಾಂವ್ ಎಂಬ ಗಡಿನಾಡಿನ ಸಣ್ಣದೊಂದು ಊರಿಗೆ ಹೋಗ ಬೇಕಾಯಿತು. (ಬಾಚಣಿಗೆಗಳಿಗೆ ಪ್ರಸಿದ್ಧವಾದುದು ಜೆಸ್ಸೂರ್.) ಅಲ್ಲಿ ೫-೬ ತಿಂಗಳುಗಳಿದ್ದೆವು. ಅಲ್ಲಿಂದ ಗಂಗೆಯಿಂದ ಹೂಗ್ಲಿ ಕವಲೊಡೆಯುವ ಸ್ಥಳದಲ್ಲಿದ್ದ ಕಾಂಚನಪುರ ಎಂಬ ಸ್ಥಳಕ್ಕೆ ಹೋದೆವು. ಈ ಸ್ಥಳಗಳಲ್ಲಿ ನದಿಯು ಹಲವು ಮೈಲುಗಳಷ್ಟು ಅಗಲವಾಗಿದೆ, ಅಸಂಖ್ಯಾತ ಸ್ಟೀಮರುಗಳು ಮತ್ತು ದೋಣಿಗಳು ಆ ಮಾರ್ಗದಲ್ಲಿ ಸಂಚರಿಸುತ್ತವೆ.

ನಮ್ಮ ಸಂಸಾರವನ್ನು ಕಾಂಚನಪುರಕ್ಕೆ ಕರೆಸಿಕೊಳ್ಳಲು ಸಿ.ಓ. ಅನುಮತಿ ನೀಡಿದ್ದರು. ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟ ವಾದೊಡನೆ ಸಾವಿತ್ರಿ ಮತ್ತು ಗಾಯತ್ರಿಯರು ನನ್ನನ್ನು ಕೂಡಿಕೊಂಡರು. ಎಂಇಎಸ್ ವಸತಿ ಸೌಲಭ್ಯವಿರಲಿಲ್ಲವಾಗಿ ಭಾಟ್‌ಪುರದಲ್ಲಿ ಮನೆಯನ್ನು ಬಾಡಿಗೆಗೆ ಹಿಡಿದೆವು.

ಗಾಯತ್ರಿಗೆ ಮೂರು ವರ್ಷ ತುಂಬುತ್ತಿತ್ತು. ಅವಳ ಮಿನುಗುವ ಕಣ್ಣುಗಳು ಪ್ರಚಂಡ ಬುದ್ಧಿಶಕ್ತಿಯನ್ನು ಸೂಚಿಸುತ್ತಿದ್ದವು . ನನಗಾಗಿ ಲೋಟದಲ್ಲಿ ನೀರನ್ನು ತರುವುದು, ಟವೆಲ್ಲನ್ನೋ ಸೋಪನ್ನೋ ತರುವುದು ಇಂತಹ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಡುತ್ತಿದ್ದಳು.

ಭಾಟ್‌ಪುರದಲ್ಲಿ ಸುಮಾರು ಆರು ತಿಂಗಳಿದ್ದೆವು . ಬೆಟಾಲಿಯನ್ ಜಮ್ಮು-ಕಾಶ್ಮೀರಕ್ಕೆ ಹೋಗಲು ಆಜ್ಞೆಯಾಯಿತು. ದೇಶದ ಪೂರ್ವದ ತುತ್ತತುದಿಯಿಂದ ನಾವು ಉತ್ತರದ ಅತ್ಯಂತ ತುದಿಗೆ ಹೋಗ ಬೇಕಾಯಿತು. ಈ ಬಗೆಯ ಸಂಚಾರ ಸಾವಿತ್ರಿಗೆ ಈಚೀಚೆಗೆ ಚೆನ್ನಾಗೇ ಪರಿಚಯವಾಗಿತ್ತು. ಅವಳು ದಕ್ಷಿಣಕ್ಕೆ ಮತ್ತೂರಿಗೆ ಪ್ರಯಾಣ ಮಾಡಿದಳು.

ಜಮ್ಮು-ಕಾಶ್ಮೀರದಲ್ಲಿ ಆರು ತಿಂಗಳು ಇದ್ದೆವು . ಆಗ ನಾನು ಎಂ.ಟಿ.ಓ. (ಮಿಲಿಟರಿ ಟ್ರಾನ್ಸ್‌ಪೋರ್ಟ್ ಆಫೀಸರ್) ಆಗಿದ್ದೆ. ಆರು ತಿಂಗಳ ಅನಂತರ ಆಗ್ರಾದ ಆರ್ಡಿನನ್ಸ್ ಡಿಪೋಗೆ ವರ್ಗ ಮಾಡಿದರು. ಡಿಪೋದ ಭದ್ರತೆಗಾಗಿ ೧೫ ಪ್ಲಟೂನುಗಳನ್ನು ನೇಮಿಸಲಾಗಿತ್ತು. ಈ ಪ್ಲಟೂನುಗಳ ಆಡಳಿತವನ್ನು ನೋಡಿಕೊಳ್ಳುವುದೂ, ಡಿಪೋದ ರಕ್ಷಣೆಗೆ ವ್ಯವಸ್ಥೆ ಮಾಡುವುದೂ ನನ್ನ ಕರ್ತವ್ಯವಾಗಿತ್ತು.

ಆಗ್ರಾಕ್ಕೆ ಬಂದು, ಹಿಂದಿದ್ದವರಿಂದ ಚಾರ್ಜು ವಹಿಸಿಕೊಂಡ ಮೇಲೆ, ಮತ್ತೂರಿನಲ್ಲಿದ್ದ ಸಾವಿತ್ರಿಗೆ ಒಂದು ಟೆಲಿಗ್ರಾಂ ಕೊಟ್ಟೆ . ಆರೇಳು ದಿನಗಳ ಅನಂತರ ಆಕೆ ಈ ಸಾರಿ ನನ್ನ ಭಾವಮೈದುನ ಮಹಾಬಲ (ಗೋಕರ್ಣ) ನೊಂದಿಗೆ ಬಂದಳು. ಸಾವಿತ್ರಿ ಮತ್ತು ಗಾಯತ್ರಿ ಇಬ್ಬರೂ ದೇಶದ ಉದ್ದಗಲದ ಈ ಬಗೆಯ ಪ್ರಯಾಣಕ್ಕೆ ಒಗ್ಗಿಹೋಗಿದ್ದರು. ದಾರಿಯಲ್ಲಿ ಎರಡೋ–ಮೂರೋ ರೈಲುಗಳನ್ನು ಬದಲಾಯಿಸ ಬೇಕಿತ್ತು. ಆದರೆ ಗೋಕರ್ಣನಿಗೆ ಅದು ಸಂಪೂರ್ಣವಾಗಿ ಹೊಸ ಅನುಭವ.

ಮೊದಲ ಬಾರಿಗೆ ಜೀವನದಲ್ಲಿ ಒಂದು ಕ್ರಮ ರೂಪುಗೊಂಡ ಹಾಗಾಯಿತು. ನಮಗೆ ಕೊಟ್ಟಿದ್ದ ಮನೆ ಎಲ್ಲಾ ದೃಷ್ಟಿಯಿಂದಲೂ ಅನುಕೂಲವಾಗಿತ್ತು. ಗಾಯತ್ರಿಯನ್ನು ಒಂದು ಕಾನ್ವೆಂಟ್ ಶಾಲೆಗೆ ಸೇರಿಸಿದೆವು. ಗೋಕರ್ಣನೋ ಆರ್ಡರ್ಲಿಯೋ ಅವಳನ್ನು ಶಾಲೆಗೆ ಕರೆದೊಯ್ಯುತ್ತಿದ್ದರು, ಕರೆದು ತರುತ್ತಿದ್ದರು. ಅವಳು ಸಂತೋಷವಾಗಿ ಶಾಲೆಗೆ ಹೋಗಿಬರುತ್ತಿದ್ದಳು. ದಿನಾಲೂ ಒಂದು ಹೊಸ ಹಾಡನ್ನೋ, ಪದ್ಯವನ್ನೋ ಕಲಿತು ಬಂದು ನಮ್ಮೆದುರಿಗೆ ಅಭಿನಯಸಹಿತ ಹೇಳಿ ಸಂತೋಷಪಡಿಸುತ್ತಿದ್ದಳು. ಇಂಗ್ಲಿಷ್ ಮತ್ತು ಹಿಂದಿಗಳೆರಡನ್ನೂ ಅವಳು ಕಲಿಯುತ್ತಿದ್ದಳು.

ಗೋಕರ್ಣನಿಗೂ ಈ ಬದುಕು ಹೊಸದು. ಮತ್ತೂರಿನಲ್ಲಿ ಅವನು ಭತ್ತದ ಗದ್ದೆಗಳು, ತೆಂಗಿನ ಮರಗಳು, ಅಡಕೆ-ಕಬ್ಬುಗಳ ವ್ಯವಸಾಯ, ಒಂದು ಬ್ರಾಹ್ಮಣ ಗ್ರಾಮದ ಬದುಕಿನ ಸಕಲ ಆಚರಣೆಗಳಷ್ಟಕ್ಕೇ ಸೀಮಿತನಾಗಿದ್ದನು. ಆಗ್ರಾದ ಕೋಟೆಗಳು, ಸ್ಮಾರಕಗಳು, ಸುಂದರವಾದ ತಾಜ್‌ಮಹಲ್, ಅದನ್ನು ನೋಡಲು ಹೋಗುವ ಜನ ಸಮೂಹ, ಧೂಳು, ಭಾಷೆ ಮತ್ತು ಆಹಾರ ಎಲ್ಲವೂ ಅವನಿಗೆ ಬೇರೆಯಾಗಿದ್ದವು.

ನಮ್ಮ ಜತೆಗಿದ್ದ ಕೆಲವು ತಿಂಗಳು ಅವನು ಚೆನ್ನಾಗಿ ಹೊಂದಿಕೊಂಡನು. ಸಾಧ್ಯವಿರುವ ಎಲ್ಲಾ ರೀತಿಗಳಲ್ಲಿ ಅವನು ನಮಗೆ ನೆರವಾದನು. ಬೇಜಾರಾದಾಗ ಮಾರ್ಕೆಟ್ಟಿಗೋ, ಪೋಸ್ಟ್ ಆಫೀಸಿಗೋ ಸೈಕಲ್ ಮೇಲೆ ಹೋಗಿಬರುತ್ತಿದ್ದನು. ಕಾಶಿ ಸಮೀಪವಾಗಿದ್ದರಿಂದ ಸಾವಿತ್ರಿ ಮತ್ತು ಗೋಕರ್ಣ ಅಲ್ಲಿಗೆ ಹೋಗಿ ತಮ್ಮ ತಂದೆಯ ಶ್ರಾದ್ಧವನ್ನು ಮಾಡಿ ಬಂದರು.

ಕಮಾಂಡಿಂಗ್ ಆಫೀಸರಾಗಿದ್ದವರು ಕರ್ನಲ್ ರವೀಂದ್‌ಸಿಂಗ್, ನಾನು ನೋಡಿದ ಇತರ ಎಲ್ಲ ಅಧಿಕಾರಿಗಳಿಗಿಂತ ಬೇರೆಯೇ ತರದವರು; ಬಹುದಯಾಳು, ಮೆದುವಾದ ಸ್ವಭಾವದವರು. ಯಾರನ್ನೂ ಯಾವುದಕ್ಕೂ ಅವರು ಶಿಕ್ಷಿಸಿದ್ದೇ ಇಲ್ಲ. ಹೆಚ್ಚೆಂದರೆ ಒಂದು ಎಚ್ಚರಿಕೆ ಕೊಡುತ್ತಿದ್ದರು ಅಷ್ಟೆ. ಬೇಕಾದರೆ ಅವರನ್ನು ಒಬ್ಬ ಸಂತನೆಂದೇ ಕರೆಯ ಬಹುದಾಗಿತ್ತು. ಅವರ ವ್ಯಕ್ತಿತ್ವದಿಂದ ನಾನು ಎಷ್ಟು ಗಾಢವಾಗಿ ಪ್ರಭಾವಿತನಾದೆನೆಂದರೆ ಅವರ ಸ್ವಭಾವದ ಬಗೆಗೆ ಅವರನ್ನೇ ಕೇಳದೆ ಇರಲು ನನಗೆ ಸಾಧ್ಯವೇ ಆಗಲಿಲ್ಲ. "ಶಿಕ್ಷೆಯೇ ಉದ್ದೇಶವಲ್ಲ, ನಡವಳಿಕೆಯಲ್ಲಿ ಸುಧಾರಣೆಯನ್ನುಂಟು ಮಾಡುವುದೀಗ ನಿಜವಾದ ಉದ್ದೇಶ" ಎಂದು ಆತ ಉತ್ತರಕೊಟ್ಟರು. "ಸತ್ಯವು ಹೊರಕ್ಕೆ ಬರಲಾರದಷ್ಟು ಮಟ್ಟಿಗೆ ತನ್ನನ್ನು ಕುರಿತು ಇತರರಲ್ಲಿ ಹೆದರಿಕೆಯನ್ನು ಉಂಟುಮಾಡಬಾರದು. ಒಂದು ಕಾಲದಲ್ಲಿ ನಾನೂ ಬಹಳ ಕಟ್ಟುನಿಟ್ಟಾದ ಅಧಿಕಾರಿಯಾಗಿದ್ದೆ. ಜೋರಾಗಿ ಕೂಗಾಡುತ್ತಿದ್ದೆ. ಕೆಲವು ಸಲ ನನ್ನ ಅಧೀನ ಅಧಿಕಾರಿಗಳ, ನೌಕರರ ಕೆನ್ನೆಗೆ ಹೊಡೆದುಬಿಡುತ್ತಿದ್ದೆ. ನನ್ನ ಇಂಗ್ಲಿಷ್ ಅಧಿಕಾರಿಯಿಂದ ನಾನು ಇದನ್ನು ಕಲಿತಿದ್ದೆ. ಆತ ಪಕ್ಕಾ ರಾಕ್ಷಸ. ಅವರ ಕೋಪಕ್ಕೆ ಹೆದರಿ ಜನರು ಅವರ ಕಚೇರಿಯ ಬಳಿಗೂ ಸುಳಿಯುತ್ತಿರಲಿಲ್ಲ. ಅವರು ಎಲ್ಲರಿಗೂ ಸಿಂಹಸ್ವಪ್ನವಾಗಿದ್ದರು.

"೧೯೪೩ರಲ್ಲಿ ನಾವು ಬರ್ಮಾ ಕ್ಷೇತ್ರದಲ್ಲಿದ್ದೆವು. ಒಂದು ರಾತ್ರಿ ವೈರಿಯ ಚಟುವಟಿಕೆ ತುಂಬಾ ಜೋರಾಗಿತ್ತು. ಏನೋ ಸಂಭವಿಸಲಿದೆಯೆಂದು ಕಂಪನಿ ಕಮಾಂಡರರು ಬಹಳ ಆತಂಕಗೊಂಡಿದ್ದರು. ನನ್ನ ಬಳಿ ಬಂದು ಸಲಹೆ ಕೇಳಿದರು. ಆಗ ನಾನು ಅಜುಟೆಂಟ್ ಆಗಿದ್ದೆ. ಇದು ತುಂಬಾ ಗಂಭೀರವಾದ ಸಂದರ್ಭವೆಂದು ನನಗೆ ಅರ್ಥವಾಯಿತು. ಸಿ.ಓ.ಗೆ ತಿಳಿಸಲೇ ಬೇಕಾದ ಸಂದರ್ಭವಾಗಿತ್ತು. ಆದರೆ ಸಿ.ಓ. ನಿದ್ದೆ ಮಾಡುತ್ತಿದ್ದರು. ಅವರನ್ನು ಎಚ್ಚರಗೊಳಿಸುವ ಗಂಡೆದೆ ಯಾರಿಗಿತ್ತು? ಅಂತೂ ನಾನು ಮತ್ತು ಇಬ್ಬರು ಕಂಪನಿ ಕಮಾಂಡರರು, ಒಟ್ಟು ಮೂರು ಜನ ಧೈರ್ಯ ಮಾಡಿದೆವು.

"ಅವರ ಪ್ರತಿಕ್ರಿಯೆ ಊಹಿಸಬಹುದಾಗಿತ್ತು. ಬೈಗುಳ ಮಳೆಯೇ ಸುರಿಯಿತು. 'ಅವಿವೇಕಿಗಳಾ, ನೀವು ಹೆದರಿ ನಡುಗುತ್ತಿದ್ದೀರಿ. ನಿಮ್ಮನ್ನು ನಾಳೆ ಬೆಳಗ್ಗೆ ವಿಚಾರಿಸಿಕೊಳ್ಳುತ್ತೇನೆ. ಈಗ ತೊಲಗಿ ಹೋಗಿ, ನನಗೆ ತೊಂದರೆ ಕೊಡಬೇಡಿ' ಎಂದು ಕಿರಿಚಿದರು.

"ಆ ನಾಳೆ ಬೆಳಗ್ಗೆ ಬರಲೇ ಇಲ್ಲ, ಅಂದು ರಾತ್ರಿ ಜಪಾನೀಯರು ನಮ್ಮ ಶಿಬಿರದ ಮೇಲೆ ದಾಳಿ ಮಾಡಿ ಅದನ್ನು ನಿರ್ನಾಮ ಮಾಡಿದರು. ನಮ್ಮ ಕಡೆಯ ಬಹುತೇಕ ಜನರು, ಸಿ.ಓ. ಸಹಿತ ಕೊಲ್ಲಲ್ಪಟ್ಟರು. ಅವರಿಗೆ ಭಯಾನಕವಾದ ಸಾವು ಬಂದಿತೆಂದು ತಿಳಿಯಿತು. ಯಾರೂ ಅವರ ಸಹಾಯಕ್ಕೆ ಹೋಗಲಿಲ್ಲ. ನನ್ನ ಕಾಲಿಗೆ ಪೆಟ್ಟು ಬಿದ್ದು, ಹಿಂದಕ್ಕೆ ಸರಿಯುತ್ತಾ ಟ್ರೆಂಚಿನೊಳಕ್ಕೆ ಬಿದ್ದಿದ್ದೆ. ದೇವರ ದಯೆಯಿಂದ ಹೇಗೋ ಬದುಕಿಕೊಂಡೆ. ಆ ಗಾಯ ಇನ್ನೂ ಈಗಲೂ ತೊಂದರೆ ಕೊಡುತ್ತಿದೆ. ಅದರಿಂದ ಅಂದಿನಿಂದ ನನ್ನ ಸ್ವಭಾವ ಬದಲಾಯಿತು. ನನ್ನ ಜನರ ಗೌರವ ಅಥವಾ ಭೀತಿಗಿಂತಲೂ ನನಗೆ ಸತ್ಯ ಮುಖ್ಯ." ಎಂದರು ಅವರು. ಅಧಿಕೃತ ಕರ್ತವ್ಯಗಳ ಜತೆಗೆ ನಾನು ಕ್ರೀಡಾ ಅಧಿಕಾರಿಯೂ ಆಗಿದ್ದೆ. ಅಲ್ಲದೆ ಇತರ ಅಧಿಕಾರಿಗಳಿಗೆ ಆಯುಧ ತರಬೇತಿ ಕೊಡುವ, ಸ್ಪರ್ಧೆಗಳನ್ನು ನಡೆಸುವ ಜವಾಬ್ದಾರಿಯೂ ನನ್ನದಾಗಿತ್ತು.

ಆದರೆ ಒಬ್ಬ ಇನ್‌ಫೆಂಟ್ರಿ ಅಧಿಕಾರಿಯಾಗಿ ಹೀಗೆ ಆಯುಧಗಳ ಡಿಪೋದಲ್ಲಿ ಅವನ ಸೇವೆ ವ್ಯರ್ಥವಾಗಬಾರದು ಎಂದು ಕರ್ನಲ್ ಸಿಂಗ್ ಭಾವಿಸಿದರು. ಕೆಲವು ಕಾಲ ಕಳೆದ ಮೇಲೆ ನನ್ನನ್ನು ಮತ್ತೆ ಬೆಳಗಾವಿಗೆ ವರ್ಗ ಮಾಡಿಸಿದರು. ಮರಾಠಾ ರೆಜಿಮೆಂಟಲ್ ಸೆಂಟರಿನಲ್ಲಿ ಕರ್ತವ್ಯವನ್ನು ನಿರ್ವಹಿಸುವ ಸಲುವಾಗಿ ನಾನು ಎರಡನೆಯ ಸಾರಿ ಬೆಳಗಾವಿಗೆ ಬಂದೆ.

೧೫. ಮತ್ತೆ ಬೆಳಗಾವಿ

ಈಗ ಕಮಾಂಡರ್ ಆಗಿದ್ದವರು ಲೆ|| ಕ|| ವೈ.ಕೆ. ಸಾವಂತ್. ಆತ ಬಹು ಚುರುಕಾದ ಚಟುವಟಿಕೆಯ ವ್ಯಕ್ತಿ. ಸೇವಾ ಜೀವನದ ಎಲ್ಲಾ ಅಂಶಗಳಲ್ಲೂ ಆತನಿಗೆ ಅಪಾರ ಆಸಕ್ತಿ. ರೆಜಿಮೆಂಟಿನ ಔತಣಕೂಟ ವಾಗಲಿ, ಪೆರೇಡ್ ಆಗಿರಲಿ, ಮಹಿಳೆಯರ ಸಂಜೆ ಕಾರ್ಯಕ್ರಮವಾಗಲಿ, ಪಥಸಂಚಲನವಾಗಲಿ, ಪಿಕ್‌ನಿಕ್ ಆಗಲಿ, ಸೇನಾಭರ್ತಿಯಾಗಲಿ, ಶಿವಾಜಿ ನಾಟಕವಾಗಲಿ, ಸೈನಿಕ ಸಮ್ಮೇಳನವಾಗಲಿ ಪ್ರತಿಯೊಂದಕ್ಕೂ ಅವರು ಪೂರ್ಣ ಗಮನ ಕೊಡುತ್ತಿದ್ದರು. ಪ್ರತಿಯೊಂದೂ ಸರಿಯಾಗಿ ಸಾಂಪ್ರದಾಯಿಕ ವಿಧಾನದಲ್ಲೇ ಜರುಗತಕ್ಕದ್ದೆಂದು ಹೇಳುತ್ತಿದ್ದರು. ಎಲ್ಲೂ ಆಲಸ್ಯಕ್ಕೆ ಅವಕಾಶವಿರಲಿಲ್ಲ.

ರೆಜಿಮೆಂಟಲ್ ಸೆಂಟರಿನ ಮುಖ್ಯ ಕರ್ತವ್ಯ ಸ್ಥಳೀಯ ಪ್ರದೇಶದಿಂದ ತರುಣರನ್ನು ನೇಮಿಸಿಕೊಂಡು ಅವರಲ್ಲಿ ಸ್ವಲ್ಪ ಶಿಸ್ತು , ಸಂಯಮ ಕಲಿಸಿ ಆಮೇಲೆ ಯೋಧರಾಗಿ ರೂಪುಗೊಳ್ಳುವ ಸಲುವಾಗಿ ವಿವಿಧ ಮರಾಠಾ ರೆಜಿಮೆಂಟುಗಳಿಗೆ ಕಳುಹಿಸುವುದಾಗಿತ್ತು.

ಕರ್ನಲ್ ಸಾವಂತರ ಕೈಕೆಳಗೆ ಯುದ್ಧವಿಧವೆಯರ ಮತ್ತು ಸೇನೆಯಲ್ಲಿರುವ ಜವಾನರ ಪತ್ನಿಯರ ಕಲ್ಯಾಣವೂ , ಅವರ ಮಕ್ಕಳ ವಿದ್ಯಾಭ್ಯಾಸವೂ ಬಹಳ ಮುಖ್ಯವಾದ ಸ್ಥಾನವನ್ನು ಪಡೆದಿದ್ದವು. ಅವರ ಪತ್ನಿ ಒಂದು ಕಲ್ಯಾಣಕೇಂದ್ರವನ್ನು ನಡೆಸುತ್ತಿದ್ದರು. ಇತರ ಅಧಿಕಾರಿಗಳ ಪತ್ನಿಯರೂ ಅದಕ್ಕೆ ನೆರವಾಗುತ್ತಿದ್ದರು. ಸೈನಿಕರ ಪತ್ನಿಯರಿಗೆ ಮತ್ತು ವಿಧವೆಯರಿಗೆ ಕಸೂತಿಯನ್ನೂ ಹೊಲಿಗೆಕಲೆಯನ್ನೂ ಕಲಿಸಿಕೊಡುವುದು ಅವರ ಉದ್ದೇಶವಾಗಿತ್ತು. ಈ ಕೌಶಲವನ್ನು ಕಲಿತ ಮೇಲೆ ಅವರು ಸ್ವೆಟರುಗಳನ್ನು ತಯಾರಿಸುತ್ತಿದ್ದರು. ಕೇಂದ್ರದಲ್ಲಿದ್ದ ಹೊಲಿಗೆ ಯಂತ್ರಗಳನ್ನು ಉಪಯೋಗಿಸಿಕೊಂಡು ಮಕ್ಕಳ ಬಟ್ಟೆಬರೆಗಳನ್ನು ಹೊಲಿಯುತ್ತಿದ್ದರು. ಪ್ರತಿವರ್ಷ ಧ್ವಜ ದಿನಾಚರಣೆ ನಡೆಯುತ್ತಿತ್ತು. ಕೇಂದ್ರವು ಉತ್ಪಾದಿಸಿದ ಹಲವು ವಸ್ತುಗಳನ್ನು ಮಾರಿ ಅಲ್ಲಿ ಹಣವನ್ನು ಸಂಗ್ರಹಿಸಲಾಗುತ್ತಿತ್ತು. ಈ ಹಣವು ಯೋಧರ ಪತ್ನಿಯರು ಮತ್ತು ವಿಧವೆಯರಿಗೆ ಹೋಗುತ್ತಿತ್ತು. ಅಲ್ಲದೆ ಈ ಕಲ್ಯಾಣಕೇಂದ್ರಕ್ಕೆ ೧೦-೨೦ ಎಕರೆ ಜಮೀನೂ ಇದ್ದು ಅಲ್ಲಿ ಕಬ್ಬನ್ನು ಬೆಳೆಯಲಾಗುತ್ತಿತ್ತು. ಈ ಗದ್ದೆಯಲ್ಲಿ ಬೆಲ್ಲ ಮತ್ತು ಕಬ್ಬಿನಹಾಲು ಮಾರಿ ಬಂದ ಹಣವು ಕಲ್ಯಾಣಕೇಂದ್ರಕ್ಕೆ ಹೋಗುತ್ತಿತ್ತು.

ಕರ್ನಲ್ ಸಾವಂತರ ಇನ್ನೊಂದು ಯೋಜನೆ ಮಹಾದೇವ ದೇವಾಲಯ ನಿರ್ಮಾಣ. ಎಲ್ಲಾ ಶ್ರೇಣಿಯವರೂ ಸೇರಿ ಬಹು ಕಷ್ಟಪಟ್ಟು ಇದಕ್ಕೆ ಅಗತ್ಯವಾದ ನಿಧಿಯನ್ನು ಸಂಗ್ರಹಿಸಿದೆವು. ಸಂಗೀತ ಕಚೇರಿಗಳು, ಮಲ್ಲಕಂಭ ಮತ್ತು ಲೆಜೀಂ ಪ್ರದರ್ಶನಗಳು ಇವುಗಳಿಂದಲ್ಲದೆ ಮನೆ ಮನೆಯ ಬಾಗಿಲಿಗೆ ಹೋಗಿ ಹಣವನ್ನು ಸಂಗ್ರಹಿಸಿದೆವು. ಬಹು ಸುಂದರವಾದ ಕಟ್ಟಡವಾಗಿ ಮಹಾದೇವ ದೇವಾಲಯವು ನಿರ್ಮಾಣಗೊಂಡಿತು.

ಈ ದೇವಾಲಯವನ್ನು ಈಗಲೂ ತಲಕವಾಡಿ ರಸ್ತೆಯಲ್ಲಿ ರೈಲ್ವೇ ನಿಲ್ದಾಣಕ್ಕೆ ಹೋಗುವ ದಾರಿಯಲ್ಲಿ ನೋಡಬಹುದು. ಜನರು ಅದನ್ನು 'ಮಿಲಿಟರಿ ಮಹಾದೇವ ದೇವಾಲಯ' ಎಂದು ಕರೆಯುತ್ತಾರೆ. ಅದರ ಸುತ್ತ ಸುಂದರವಾದ ಹೂಗಳು ಅರಳಿರುವ ಉದ್ಯಾನವನವಿದೆ. ಅದಕ್ಕೆ ತಾಗಿದಂತೆಯೇ ಇರುವ ಸಣ್ಣ ತೋಟದಲ್ಲಿ ಕಬ್ಬು ಬೆಳೆಯುತ್ತದೆ. ಕಬ್ಬಿನಹಾಲನ್ನು ಜನರಿಗೆ ಮಾರಲಾಗುತ್ತದೆ. ಈ ದೇವಾಲಯದ ವರಮಾನವೂ ಕಲ್ಯಾಣಕೇಂದ್ರಕ್ಕೆ ಹೋಗುತ್ತದೆ.

ಶ್ರೀಮತಿ ಸಾವಂತ, ಸಾವಿತ್ರಿಯನ್ನು ಕಲ್ಯಾಣ ಕೇಂದ್ರದ ಚಟುವಟಿಕೆಗಳಲ್ಲಿ ಸೇರಿಸಿಕೊಂಡರು. ನಾನಂತೂ ಕರ್ನಲ್ ಸಾವಂತರ ಪ್ರತಿಯೊಂದು ಯೋಜನೆಯಲ್ಲೂ ತೊಡಗಿಕೊಂಡಿದ್ದೆ.

೧೯೫೪ ಸೆಪ್ಟೆಂಬರ್ 3ರಂದು ರವಿ ಹುಟ್ಟಿದ. ಎರಡನೇ ತಾರೀಕು ರಾತ್ರಿ ಸುಮಾರು ೧೧.೩೦ರ ಸುಮಾರಿಗೆ ಸಾವಿತ್ರಿಗೆ ಹೆರಿಗೆ ನೋವು ಕಾಣಿಸಿಕೊಂಡಿತು. ಆಂಬ್ಯುಲೆನ್ಸ್ ಆಗಲಿ ಬೇರೆ ಯಾವುದಾದರೂ ವಾಹನವಾಗಲಿ ದೊರಕುತ್ತದೆಯೆ ಎಂದು ವಿಚಾರ ಮಾಡಿದೆ. ಅದಕ್ಕೆ ಸ್ವಲ್ಪ ತಡವಾಗಬಹುದು ಎಂದು ತಿಳಿಯಿತು. ಸಾವಿತ್ರಿ ದೃಢವಾದ ಆರೋಗ್ಯವಿದ್ದವಳು. ಮಿಲಿಟರಿ ಆಸ್ಪತ್ರೆ ತುಂಬಾ ದೂರವೂ ಇರಲಿಲ್ಲ. ಹಾಗಾಗಿ ನಾವು ನಡೆದೇ ಹೋದೆವು. ಮೇಟ್ರನ್ ನಮ್ಮನ್ನು ಬರಮಾಡಿಕೊಂಡರು. ಆಫೀಸರ್ಸ್ ವಾರ್ಡಿಗೆ ಸೇರಿಸಿಕೊಂಡರು. ಪರೀಕ್ಷೆ ಮಾಡಿದ ಮೇಲೆ ಹೆರಿಗೆಯಾಗಲು ಇನ್ನೂ ಸ್ವಲ್ಪ ಸಮಯ ಹಿಡಿಯುವುದೆಂದೂ, ನಾನು ಮನೆಗೆ ಹಿಂದಿರುಗಬಹುದೆಂದೂ ಹೇಳಿದರು. ಪರಿಸ್ಥಿತಿ ಹತೋಟಿಯಲ್ಲಿದ್ದುದರಿಂದ ಮೇಟ್ರನ್ ಕೂಡ ಮನೆಗೆ ಹೋದರು.

ಆದರೆ ಪ್ರಕೃತಿಯು ನಮ್ಮಿಬ್ಬರನ್ನೂ ಮೋಸಗೊಳಿಸಿತು. ನಿರೀಕ್ಷಿಸಿದುದಕ್ಕಿಂತ ಬಹಳ ಮೊದಲೇ ಸಾವಿತ್ರಿ ಹಡೆದಳು. ಮಗು ಹುಟ್ಟಿದಾಗ ವಾಸ್ತವವಾಗಿ ಒಬ್ಬಳೇ ಇದ್ದಳು. ತಾನೇ ಎಲ್ಲವನ್ನೂ ನಿರ್ವಹಿಸಿಕೊಂಡಳು. ಸ್ವಲ್ಪ ನಿದ್ದೆ ಮಾಡಿ ನಾನು ಆಸ್ಪತ್ರೆಗೆ ಹೋಗಿ ನೋಡಿದರೆ ಆಶ್ಚರ್ಯವಾಯಿತು, ಭಯವೂ ಆಯಿತು. ಡಾಕ್ಟರುಗಳು, ನರ್ಸುಗಳು ಎಲ್ಲಾ ಎಲ್ಲಿ? ನನಗೆ ತುಂಬಾ ಕೋಪ ಬಂದಿತು. ಆಮೇಲೆ ಎಂಟೂವರೆ ಪೌಂಡು ತೂಕದ ಆರೋಗ್ಯವಾದ ಮಗುವನ್ನು ನೋಡಿದೆ. ದೇವರ ದಯೆಯಿಂದ ಎಲ್ಲವೂ ಸುಮುಖವಾಗಿ ನಡೆದಿತ್ತು. ನನ್ನ ಕೋಪ ಇಂಗಿತು.

ಸರಿ. ಆದರೆ ಸಾವಿತ್ರಿ ಒಂಟಿಯಾಗಿ ತನ್ನನ್ನು ತಾನೇ ನೋಡಿಕೊಳ್ಳಬೇಕಾಯಿತು. ಈ ಸಾರಿ ಅವಳ ತಾಯಿಯಾಗಲಿ, ತಂಗಿಯಾಗಲಿ ಹತ್ತಿರ ಇರಲಿಲ್ಲ. ನಾನು ಕೂಗು ಅಳತೆಯಷ್ಟೇ ದೂರದಲ್ಲಿದ್ದರೂ, ಅಗತ್ಯವಾಗಿದ್ದ ಸಮಯದಲ್ಲಿ ಅಲ್ಲಿ ಇರದೇ ಹೋಗಿದ್ದೆ.

ನಿಜವಾಗಿ ಕೋಪಗೊಂಡವರು ಆಸ್ಪತ್ರೆಯ ಸಿ.ಓ. ಎಲ್ಲ ಡಾಕ್ಟರುಗಳನ್ನೂ ನರ್ಸುಗಳನ್ನೂ ಅವರು ಸಾವಿತ್ರಿಯನ್ನು ಒಂಟಿಯಾಗಿ ಬಿಟ್ಟು ಹೋದುದಕ್ಕಾಗಿ ತರಾಟೆಗೆ ತೆಗೆದುಕೊಂಡರು. ಮೇಟ್ರನ್ ಅವರನ್ನಂತೂ ತುಂಬಾ ಬೈದರು.

ಬೆಳಗಾವಿಯಲ್ಲಿ ಮೂರು ವರ್ಷಗಳನ್ನು ಪೂರೈಸುತ್ತಿದ್ದಂತೆ ನನ್ನನ್ನು ಜಮ್ಮು ಬಳಿ ಸಂಬಾದಲ್ಲಿ ೨೨ ಮರಾಠಾ ಪಡೆಗೆ ವರ್ಗ ಮಾಡಿದ ಆದೇಶ ಬಂತು. ಅದು ಕುಟುಂಬ – ವಸತಿ ಇಲ್ಲದ ಸ್ಥಳ.

ಯಾವುದೇ ರೆಜಿಮೆಂಟಲ್ ಸೆಂಟರಿನಲ್ಲಿ 'ಆಫೀಸರ್ಸ್ ಮೆಸ್' ಅಲ್ಲಿಯ ಸಂಪ್ರದಾಯ ಮತ್ತು ಎಲ್ಲಾ ರೆಜಿಮೆಂಟ್‌ಗಳ ಇತಿಹಾಸಗಳನ್ನು ಸಂಗ್ರಹಿಸಿಟ್ಟ ಸ್ಥಳ. ಮರಾಠಾ ಮೆಸ್ ಭವ್ಯವಾದದ್ದು. ಅಲ್ಲಿಯ ಪ್ರತಿಯೊಂದು ಗೋಡೆಯ ಮೇಲೂ ಜಗತ್ತಿನ ಹಲವೆಡೆಗಳಲ್ಲಿನ– ಉತ್ತರ ಆಫ್ರಿಕಾ, ಅರೇಬಿಯಾ, ಇಟಲಿ, ಟರ್ಕಿ, ಪಾಕಿಸ್ತಾನ, ಈಶಾನ್ಯ ಗಡಿ ಪ್ರದೇಶ ಇತ್ಯಾದಿ ಸ್ಥಳಗಳ–ಯುದ್ಧ ರಂಗಗಳಲ್ಲಿ,

ಯೋಧರು ಮತ್ತು ಅಧಿಕಾರಿಗಳು ಕಾರ್ಯೋನ್ಮುಖರಾದ ವಿವಿಧ ಯುದ್ಧರಂಗಗಳ ಚಿತ್ರಗಳು ಮತ್ತು ಛಾಯಾಚಿತ್ರಗಳು ಕಂಗೊಳಿಸುತ್ತವೆ. ಆಯುಧಗಳು, ಧ್ವಜಗಳು, ನಿಶಾನೆಗಳು ಇತ್ಯಾದಿಗಳನ್ನು ಎದ್ದು ಕಾಣುವಂತೆ ಪ್ರದರ್ಶಿಸಿದ್ದರು. ಎಲ್ಲೆಲ್ಲೂ ಮಿರುಗುಹಾಕಿದ ಹಿತ್ತಾಳೆ ಮತ್ತು ಬೆಳ್ಳಿ ಫಲಕಗಳು ಫಳಫಳನೆ ಹೊಳೆಯುತ್ತವೆ. ಮರಾಠರು ಬ್ರಿಟಿಷರ ಕೆಳಗೂ, ಆಮೇಲೂ ಸಾಹಸ ಪರಾಕ್ರಮಗಳಿಗೆ ಬೇಕಾದಷ್ಟು ಪುರಸ್ಕಾರಗಳನ್ನು ಪಡೆದಿದ್ದಾರೆ. ಈ ವೀರರಲ್ಲಿ ಪ್ರತಿಯೊಬ್ಬನೂ ಬದುಕಿರಲಿ, ವಿಧಿವಶನಾಗಿರಲಿ, ಈ ಮೆಸ್ಸಿನ ಗೌರವಾನ್ವಿತರ ಪಟ್ಟಿಯಲ್ಲಿ ಆತನ ಹೆಸರು ಸೇರಿದೆ.

ಈ ಭವ್ಯವಾದ ಕಟ್ಟಡದಲ್ಲಿ ಎಲ್ಲಾ ಅಧಿಕಾರಿಗಳೂ, ಅವರ ಪತ್ನಿಯರೂ ಸೇರಿ ನಮಗೆ ಅದ್ದೂರಿಯಾದ ಬೀಳ್ಕೊಡುಗೆ ಕೊಟ್ಟರು. ಮತ್ತೆ ಮಾರನೆಯ ದಿನ ರೈಲ್ವೆ ನಿಲ್ದಾಣದಲ್ಲಿ ಎಲ್ಲರೂ ಸೇರಿದ್ದರು.

ಸಾಂಬಾಕ್ಕೆ ಹೋಗುವ ಮೊದಲು ನಾನು ಕೆಲವು ದಿನ ರಜೆ ಪಡೆದುಕೊಂಡೆ. ಸಾವಿತ್ರಿಯನ್ನೂ ಮಕ್ಕಳನ್ನೂ ಶಿವಮೊಗ್ಗಕ್ಕೆ ಜತೆಯಲ್ಲಿ ಕರೆದುಕೊಂಡು ಹೋದೆ. ೨೨ ಮರಾಠಾ ಪಡೆಯು ಕುಟುಂಬ ವಸತಿಯಿರುವ ನೆಲೆಗೆ ಬರುವವರೆಗೂ ಅವರು ಅಲ್ಲೇ ಇರಬೇಕಾಗಿತ್ತು. ಸಾವಿತ್ರಿಯ ಅಕ್ಕನ ಮನೆಯ ಬಳಿ ಒಂದು ಸಣ್ಣ ಮನೆಯನ್ನು ಬಾಡಿಗೆಗೆ ತೆಗೆದುಕೊಂಡೆವು. ಗಾಯತ್ರಿಯನ್ನು ಸಮೀಪದಲ್ಲೇ ಇದ್ದ ಒಂದು ಶಾಲೆಗೆ ಸೇರಿಸಿದೆವು.

೧೬. ೨೨ ಮರಾಠಾ ದಳ

ಹೈದರಾಬಾದಿನ ನಿಜಾಮನು ಶರಣಾಗತನಾದಾಗ ಅವನ ಸೈನ್ಯದ ಬಹುಭಾಗವನ್ನು ವಿಸರ್ಜಿಸಲಾಯಿತು. ಅದಕ್ಕೆ ಒಂದು ಅಪವಾದ ಹೈದರಾಬಾದ್ ಇನ್‌ಫೆಂಟ್ರಿಯ ೨ನೆಯ ಬೆಟಾಲಿಯನ್. ಅದು ದಾಖಲೆಗಳಿಂದ ಅತ್ಯುತ್ತಮ ತರಬೇತಿ ಪಡೆದ ವೃತ್ತಿನಿರತ ಬೆಟಾಲಿಯನ್ನು ಎಂಬ ಹೆಸರು ಪಡೆದಿತ್ತು. ರಜಾಕಾರರಂತೆ ಅದು ಪೌರರ ಮೇಲೆ ಗುಂಡು ಹಾರಿಸುವುದೇ ಮೊದಲಾದ ದೌರ್ಜನ್ಯಗಳಲ್ಲಿ ತೊಡಗಿರಲಿಲ್ಲ. ಈ ೨ನೇ ಬೆಟಾಲಿಯನ್ನನ್ನು ಮರಾಠಾ ತಂಡಕ್ಕೆ ಸೇರಿಸಿ ೨೨ ಮರಾಠಾ ದಳವನ್ನಾಗಿ ರೂಪಿಸಲಾಯಿತು.

ಆದರೆ ಜನರನ್ನೂ ಅವರ ಸರಂಜಾಮುಗಳನ್ನೂ ವರ್ಗಾವಣೆ ಮಾಡುವ ಕೆಲಸ ಕೆಟ್ಟದಾಗಿ ನಡೆದು ಗಣನೀಯ ಪ್ರಮಾಣದ ಸಾಮಗ್ರಿಗಳು ಮತ್ತು ಆಹಾರ ವಸ್ತುಗಳು ಲೆಕ್ಕಕ್ಕೆ ಸಿಕ್ಕದಾದವು. ಕ್ವಾರ್ಟರ್ ಮಾಸ್ಟರ್ ಆಗಿ ಈ ತಲೆನೋವು ನನಗೆ ಗಂಟು ಬಿದ್ದಿತು. ಮುಂದೆ ಐದು ವರ್ಷಗಳ ಅನಂತರ ನಾನು ೨೨ ಮರಾಠಾದಳವನ್ನು ಬಿಟ್ಟು ಹೊರಡುವ ವೇಳೆಗೆ ಬಹುತೇಕ ಈ ಸಮಸ್ಯೆಗಳನ್ನು ಪರಿಹರಿಸಿದ್ದೆ.

ಸಾಂಬಾದಲ್ಲಿ ನಾನು ಬಂದ ಆರು ತಿಂಗಳೊಳಗೆ ನಮ್ಮ ಸಿ. ಓ. ಆಗಿದ್ದ ಲೆ|| ಕ|| ನಂದಿ, ಅಧಿಕಾರಿಗಳ ಕುಟುಂಬಗಳಿಗಾಗಿ ಬಾಷಾಗಳನ್ನು ನಿರ್ಮಿಸಲು ಅನುಮತಿ ಕೊಡತೊಡಗಿದರು. ಆದರೂ ನಮ್ಮೆಲ್ಲರಿಗೂ ಸಾಕಾಗುವಷ್ಟು ಬಾಷಾಗಳಿರಲಿಲ್ಲ. ಹಿರಿಯ ಅಧಿಕಾರಿಗಳಿಗೆ ಮೊದಲು ದೊರಕಿತು. ವರ್ಷಕ್ಕೊಮ್ಮೆ ಸುದೀರ್ಘ ಪ್ರಯಾಣ ಮಾಡಿ ಶಿವಮೊಗ್ಗಕ್ಕೆ ಬರುತ್ತಿದ್ದೆ. ಜೀಪಿನಲ್ಲಿ ಪಠಾಣ್‌ಕೋಟ್‌ವರೆಗೆ, ಅಲ್ಲಿಂದ ಪಠಾಣ್ ಕೋಟ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಮುಂಬಯಿಗೆ, ಮುಂಬೈಯಿಂದ ಮೀರಜ್, ಆಮೇಲೆ ಅಲ್ಲಿಂದ ಮೀಟರ್‌ಗೇಜ್ ರೈಲಿನಲ್ಲಿ ಬೀರೂರು ಅಥವಾ ಕಡೂರು. ಅಲ್ಲಿ ಶಿವಮೊಗ್ಗಕ್ಕೆ ಬಸ್ಸು ಹತ್ತುತ್ತಿದ್ದೆ.

ರವಿ ಬೆಳೆಯುತ್ತಿದ್ದ. ಈ ಸಮಯದಲ್ಲಿ ನಮ್ಮ ಮೂರನೇ ಮಗು ಹೇಮಾ ಹುಟ್ಟಿದಳು. ಎಂದಿನಂತೆ ಈ ಸಲವೂ ನಾನು ಸಮೀಪದಲ್ಲಿರದೆ ಸಾವಿತ್ರಿ ಎಲ್ಲವನ್ನೂ ತಾನೇ ಮಾಡಿಕೊಂಡಳು. ಕೊನೆಗೆ ನನಗೆ ಒಂದು ಬಾಷಾ ದೊರಕಿತು. ಸಾವಿತ್ರಿ ಬಂದು ನನ್ನನ್ನು ಕೂಡಿಕೊಳ್ಳಲು ಹೇಳಿ ಬರೆದೆ. ಗಾಯತ್ರಿಯನ್ನು ಬೆಂಗಳೂರಿನಲ್ಲೇ ನನ್ನ ಅಣ್ಣನ ಮನೆಯಲ್ಲಿ ಬಿಡಲು ನಿರ್ಧರಿಸಿದೆವು. ಒಳ್ಳೆಯ ಶಾಲೆಗೆ ಅವಳು ಹೋಗಲೆಂಬುದು ನನ್ನ ಅಪೇಕ್ಷೆಯಾಗಿತ್ತು.

ಕೆಲವು ತಿಂಗಳವರೆಗೆ ಒಂದು ರೀತಿಯ ಸ್ಥಿರತೆ ಉಂಟಾದಂತೆ ತೋರಿತು. ನಮ್ಮ ದೈನಂದಿನ ಜೀವನ ನಮ್ಮ ಬಡಾವಣೆಯ ಚಟುವಟಿಕೆಗಳಿಗೆ ಸೀಮಿತವಾಯಿತು. ಇತರ ಅಧಿಕಾರಿಗಳ ಮನೆಗಳಿಗೆ ನಾವು ಹೋಗುತ್ತಿದ್ದೆವು. ಅವರು ನಮ್ಮಲ್ಲಿಗೆ ಬರುತ್ತಿದ್ದರು. ಆಗೀಗ ಬಸಂತರ್ ನದಿಯನ್ನು ದಾಟಿ ಜಮ್ಮುವಿಗೆ ಹೋಗುತ್ತಿದ್ದೆವು. ಕೆಲವೊಮ್ಮೆ ಹಿಂದಿ ಸಿನಿಮಾ ನೋಡುತ್ತಿದ್ದೆವು. ರವಿಯನ್ನು ಜಮ್ಮುವಿನಲ್ಲಿ ಒಂದು ಶಾಲೆಗೆ ಸೇರಿಸಿದೆವು. ಆದರೆ ಪ್ರಯಾಣ ತುಂಬಾ ದೂರವಾಗುತ್ತಿತ್ತು. ಆದ್ದರಿಂದ ಸಾವಿತ್ರಿ ಮನೆಯಲ್ಲೇ ಅಕ್ಷರಗಳನ್ನೂ ಮಗ್ಗಿಯನ್ನೂ ಹೇಳಿಕೊಡುತ್ತಿದ್ದಳು. ಹೇಮ ಅಂಬೆಗಾಲಿಡುತ್ತಿದ್ದಳು. ಅವಳನ್ನು ತಡೆಯಲು ಎಲ್ಲಾ ಬಾಗಿಲುಗಳಿಗೂ ತಡೆ ಹಾಕಬೇಕಾಗಿತ್ತು. ಸಾಂಬಾದಲ್ಲಿ ಹಾವು-ಚೇಳುಗಳು ಯಥೇಚ್ಛವಾಗಿದ್ದವು.

ಮಧ್ಯೆ ಸ್ವಲ್ಪ ಕಾಲ ೨೨ ಮರಾಠಾ ಅಧಿಕಾರಿಗಳು ಮತ್ತು ಕುಟುಂಬಗಳು ಶ್ರೀನಗರ ಬಳಿಯ ಕುಂಜ್ರು ಎಂಬಲ್ಲಿಗೆ ಹೋದೆವು. ಕೆಲವು ವಾರಗಳ ಕಾಲ ಒಂದು ಸೇಬಿನತೋಟದ ನಡುವೆ ಶಿಬಿರ ಹೂಡಿದೆವು. ಅದೊಂದು ಬಹು ಮೋಹಕವಾದ ಸ್ಥಳ. ಅಲ್ಲಿಂದ ಇನ್ನೊಂದು ಸ್ಥಳಕ್ಕೆ ಬದಲಾಯಿಸಿದೆವು. ಅದು ಎರಡು ತೊರೆಗಳ ನಡುವೆ ಒಣಗಿಹೋದ ಪಾತ್ರಗಳ ಮಧ್ಯೆ ಇದ್ದ ಸ್ಥಳ. ಮಳೆಗಾಲದಲ್ಲಿ ಒಂದು

ಮಧ್ಯಾಹ್ನ ಶಿಬಿರಕ್ಕೆ ಹಿಂದಿರುಗುತ್ತಿದ್ದಾಗ ನೋಡುತ್ತೇವೆ – ಸದಾ ಬತ್ತಿ ಹೋಗಿರುತ್ತಿದ್ದ ತೊರೆಗಳು ಈಗ ಎರಡು ನದಿಗಳಾಗಿ ಹರಿಯುತ್ತಿವೆ! ನಾವು ಕೊಚ್ಚಿಯೇ ಹೋಗುವ ಅಪಾಯದಲ್ಲಿದ್ದೇವೆ ಅನ್ನಿಸಿತು. ಏನು ಮಾಡಬೇಕೆಂದು ತೋಚದೆ ದಿಙ್ಮೂಢನಾಗಿದ್ದೆ. ಆದರೆ ಅಷ್ಟರಲ್ಲಿ ನೀರು ಇಳಿಯತೊಡಗಿತು. ಮರುದಿನದ ವೇಳೆಗೆ ತೊರೆಗಳು ಹಿಂದಿನಂತೆ ಹರಿಯುವಂತಾದವು. ಕೆಲವು ಕಾತರದ ಗಂಟೆಗಳನ್ನಂತೂ ನಾವು ಕಳೆದದ್ದು ನಿಜ.

ಆಮೇಲೆ ನಮ್ಮ ಬೆಟಾಲಿಯನ್, ರಾಜಾಸ್ಥಾನದಲ್ಲಿ ಜೋಧ್‌ಪುರಕ್ಕೆ ವರ್ಗಾವಣೆಗೊಂಡಿತು. ಇಲ್ಲಿ ನಾವು ಮೂರು ವರ್ಷ ಇದ್ದೆವು. ಅಷ್ಟರಲ್ಲಿ ಮೂರು ಮನೆ ಬದಲಾಯಿಸಿದೆವು. ರವಿಯು ಸೇಂಟ್ ಪ್ಯಾಟ್ರಿಕ್ ಶಾಲೆಗೆ ಸೇರಿದ. ಮೂರನೆಯ ತರಗತಿಯವರೆಗೂ ಗಂಡುಮಕ್ಕಳನ್ನು ಅಲ್ಲಿ ಸೇರಿಸಿಕೊಳ್ಳುತ್ತಿದ್ದರು. ಅಲ್ಲಿಂದ ಮುಂದಕ್ಕೆ ಹೆಣ್ಣುಮಕ್ಕಳು ಮಾತ್ರ. ಒಂದು ಪ್ರವೇಶಪರೀಕ್ಷೆ ಮಾಡಿದಮೇಲೆ ಅವನನ್ನು ನೇರವಾಗಿ ಎರಡನೆಯ ತರಗತಿಗೆ ಸೇರಿಸಿಕೊಂಡರು. ಸಾವಿತ್ರಿಯು ಮನೆಯಲ್ಲಿ ಕಲಿಸುತ್ತಿದ್ದುದರಿಂದ ಅವನು ಇಂಗ್ಲಿಷ್ ಮತ್ತು ಗಣಿತ ಎರಡರಲ್ಲೂ ತನ್ನ ವಯಸ್ಸಿನ ಇತರ ಮಕ್ಕಳಿಗಿಂತ ಮೇಲುಮಟ್ಟದಲ್ಲಿದ್ದನು. ಅಜ್ಮೀರದ ಸೋಫಿಯಾ ಕಾನ್ವೆಂಟ್ (ಜೋಧ್‌ಪುರದಿಂದ ಕೆಲ ಗಂಟೆಗಳ ಪ್ರಯಾಣ) ಬಹಳ ಒಳ್ಳೆಯ ಬೋರ್ಡಿಂಗ್ ಶಾಲೆ ಎಂದು ತಿಳಿಯಿತು. ಗಾಯತ್ರಿಯನ್ನು ಬೆಂಗಳೂರಿನಿಂದ ಕರೆಸಿಕೊಂಡು ಅಲ್ಲಿಗೆ ಸೇರಿಸಲು ನಿರ್ಧರಿಸಿದೆ.

ಒಂದು ವರ್ಷವಾಗುವ ವೇಳೆಗೆ ಅದು ಬಹಳ ದುಬಾರಿಯಾದ ಶಾಲೆ ಎಂದು ಅರ್ಥವಾಯಿತು. ಅಲ್ಲಿಂದ ಅವಳನ್ನು ಬಿಡಿಸಿ ಜೋಧ್‌ಪುರದಲ್ಲೇ ಇದ್ದ ಏರ್‌ಫೋರ್ಸ್ ಶಾಲೆಗೆ ಸೇರಿಸಿದೆವು. ಈಗ ಅವಳು ಹತ್ತನೆಯ ತರಗತಿಯಲ್ಲಿದ್ದರೂ ತನ್ನ ವಯಸ್ಸಿಗೆ ಸ್ವಲ್ಪ ಎತ್ತರವಾಗಿಯೇ ಇದ್ದಳು. ಬಹಳ ಕಾಲವಾದ ಮೇಲೆ ನಾವೆಲ್ಲಾ ಒಟ್ಟಿಗೆ ಇದ್ದೆವು . ರವಿಯೂ ನಾಲ್ಕನೇ ತರಗತಿಗೆ ಅದೇ ಶಾಲೆಗೆ ಹೋಗುತ್ತಿದ್ದ. ಗಾಯತ್ರಿ ಒಂದು ಬೈಸಿಕಲ್ ಕ್ಯಾರಿಯರ್ ಮೇಲೆ ರವಿಯನ್ನು ಕುಳ್ಳಿರಿಸಿ ಕೊಂಡು ಶಾಲೆಗೆ ಹೋಗುತ್ತಿದ್ದಳು.

ನಾನು ಸೈನ್ಯಕ್ಕೆ ಸೇರಿದ್ದು ತಾತ್ಕಾಲಿಕ ಕಮಿಷನ್ ಆಫೀಸರಾಗಿ (Temporary Commissioned Officer). ಸಾಮಾನ್ಯ ಪರಿಸ್ಥಿತಿಯಲ್ಲಿ, ಸೇವಾವಧಿ ಮುಗಿದೊಡನೆ ನಾನು ನಿವೃತ್ತನಾಗಿ ಬರಬೇಕಿತ್ತು ಇಲ್ಲವೇ, ಪೂರ್ಣ ಕಮಿಷನ್‌ಗೆ ಆಯ್ಕೆಯಾಗ ಬೇಕಿತ್ತು. ಇಂಟರ್‌ಮೀಡಿಯೆಟ್ ಕೂಡ ಆಗಿರದ ನನಗೆ ನನ್ನ ಗತಿ ಏನಾಗುತ್ತದೋ ಎಂಬ ಆತಂಕವಿದ್ದಿತು. ಆಯ್ಕೆಯಾಗದೆ ಹೋದರೆ ಏನು ಮಾಡಬೇಕು? ಸೈನಿಕನಾಗಿರುವುದರ ಹೊರತು ನನಗೆ ಬೇರೆ ಏನೂ ಗೊತ್ತಿರಲಿಲ್ಲ.

ಆದರೆ ಈ ಸಮಯಕ್ಕೆ ಆರ್ಮಿ ಚೀಫ್ ಆಫ್ ಸ್ಟಾಫ್ ಜನರಲ್ ತಿಮ್ಮಯ್ಯ ತಾತ್ಕಾಲಿಕ ಕಮಿಷನ್ ಆಗಿದ್ದ ವರೆಲ್ಲರನ್ನೂ ಖಾಯಂ ಆಗಿ ಸಕ್ರಮಗೊಳಿಸಲು ನಿರ್ಧರಿಸಿದರು. (ನಮ್ಮನ್ನು ನಾವೇ ತಿಮ್ಮೀಸ್ ಕಮೀಷನ್ಡ್ ಅಧಿಕಾರಿಗಳು ಎಂದು ಕರೆದುಕೊಂಡೆವು!) ಹೀಗೆ ದೇವರ ಕೃಪೆಯಿಂದ ಅನಿಶ್ಚಿತತೆ ಪರಿಹಾರವಾಯಿತು.

೧೯೬೨ರ ಕೊನೆಗೆ, ಜೋಧ್‌ಪುರದಲ್ಲಿ ಎರಡು ವರ್ಷ ಕಳೆದ ಮೇಲೆ ನಮ್ಮ ಘಟಕವನ್ನು ಮತ್ತೆ ಜಮ್ಮು-ಕಾಶ್ಮೀರಕ್ಕೆ ವರ್ಗಾಯಿಸಿದರು. ರಜೌರಿಯ ಬಳಿ ಗಮೀರ್ ಎಂಬ ಸ್ಥಳಕ್ಕೆ ಹೋದೆವು. ಭಾರತವು ಪೂರ್ವದ ಗಡಿಯಲ್ಲಿ ಚೀನಾದೊಂದಿಗೆ ಯುದ್ಧ ಮಾಡುತ್ತಿತ್ತು. ಪಶ್ಚಿಮದಲ್ಲಿ ಪಾಕಿಸ್ತಾನಕ್ಕೆ ತಡೆಯೊಡ್ಡಲು ಕಾಶ್ಮೀರದ ಗಡಿಯಲ್ಲಿದ್ದ ಸೈನ್ಯಗಳಿಗೆ ಪೋಷಕವಾಗಿ ನಮ್ಮ ದಳವನ್ನು ಕಳಿಸಿದ್ದರು. ಅದೂ ಕುಟುಂಬ ವಸತಿ ಇಲ್ಲದ ನೆಲೆ. ಸಾವಿತ್ರಿಯೂ, ಮಕ್ಕಳೂ ಜೋಧ್ ಪುರದಲ್ಲೇ ಮಕ್ಕಳ ಶಾಲಾ ವರ್ಷ ಮುಗಿಯುವವರೆಗೆ ಉಳಿದು ಕೊಂಡರು. ಬೆಟಾಲಿಯನ್ನು ಗಮೀರ್‌ನಲ್ಲಿ ಎಷ್ಟುಕಾಲ ಇರಬಹುದೆಂದು ತಿಳಿಯದುದರಿಂದ ಬೆಂಗಳೂರಿಗೆ ಹೋದರು. ಗಾಯತ್ರಿಯೂ ಬಸವನ ಗುಡಿಯ ನ್ಯಾಷನಲ್ ಕಾಲೇಜಿಗೆ ಸೇರಿದಳು. ರವಿಯನ್ನು ಮಹಿಳಾ ಸೇವಾ ಸಮಾಜ ಶಾಲೆಯಲ್ಲಿ ಐದನೆಯ ತರಗತಿಗೆ ಸೇರಿಸಲಾಯಿತು. ಸದ್ಯಕ್ಕೆ ಅವರೆಲ್ಲ ಶಂಕರಪುರದಲ್ಲಿ ನನ್ನ ಅಣ್ಣ ಸುಬ್ಬರಾವ್ ಅವರೊಂದಿಗೆ ತಂಗಿದರು.

೧೭. ಕನ್ನಡ ಹುಡುಗರನ್ನು ಯೋಧರನ್ನಾಗಿ ಮಾಡಿದ್ದು

ಅವರು ಬೆಂಗಳೂರಿನಲ್ಲಿ ಒಂದು ತಿಂಗಳಷ್ಟೂ ಇರಲಿಲ್ಲ. ೧೯೬೩ರ ಜುಲೈ ತಿಂಗಳಲ್ಲಿ ನನ್ನನ್ನು ಬೆಳಗಾವಿಯ ರೆಜಿಮೆಂಟಲ್ ಸೆಂಟರಿಗೆ ವರ್ಗ ಮಾಡಿದರು. ಒಳ್ಳೆಯ ಕಾಲೇಜಿಗೆ ಹೋಗುತ್ತಿದ್ದುದರಿಂದ ಗಾಯತ್ರಿಯನ್ನು ಅಲ್ಲಿಂದ ಕದಲಿಸಲು ಇಷ್ಟವಾಗದೆ ಸಾವಿತ್ರಿ, ರವಿ ಮತ್ತು ಹೇಮಾ ಮಾತ್ರ ಬೆಳಗಾವಿಗೆ ಬಂದರು. ಸೇಂಟ್ ಪಾಲ್ಸ್ ಹೈಸ್ಕೂಲು ರವಿಯನ್ನು ಐದನೇ ತರಗತಿಗೆ ಸೇರಿಸಿಕೊಂಡಿತು. ಹೇಮಾ ಕೂಡ ಸೇಂಟ್ ಮೇರೀಸ್ ಶಾಲೆಗೆ ಹೋಗತೊಡಗಿದಳು. ಅದು ರವಿಯ ಶಾಲೆಯ ಪಕ್ಕದಲ್ಲೇ ಇತ್ತು. ಆರ್ಡರ್ಲಿಯು ಬೈಸಿಕಲ್ ಮೇಲೆ ಇಬ್ಬರನ್ನೂ ಕರೆದೊಯ್ಯುತ್ತಿದ್ದನು. ಸಂಜೆ ಕರೆತರುತ್ತಿದ್ದನು. ಆಮೇಲೆ ರವಿಯೇ ಸೈಕಲ್ ನಡೆಸಲು ಕಲಿತು ತಂಗಿಯನ್ನು ಕರೆದುಕೊಂಡು ಹೋಗತೊಡಗಿದನು.

ಬೆಳಗಾವಿಗೆ ಬಂದ ಕೂಡಲೇ ನಾನೊಂದು ತಪ್ಪು ಮಾಡಿದೆ. ಮೆಸ್‌ಗೆ ಕರೆದೊಯ್ದರು, ಮಾಮೂಲಿನಂತೆ ಸಂದರ್ಶಕರ ಪುಸ್ತಕದಲ್ಲಿ ಸಹಿ ಮಾಡಿದೆ. ರಿಮಾರ್ಕ್ಸ್ ಎಂಬ ಕಲಮಿನಲ್ಲಿ “ಯೂನಿಟಿಗೆ

ನೇಮಕವಾದುದರಿಂದ" ಎಂದು ಬರೆದೆ. ಅದೂ ಮಾಮೂಲು ಪದ್ಧತಿಯೇ. ಆ ಪುಟಕ್ಕೆ ಮೇಲೆ ಪಿನ್ನಿನಿಂದ ಚುಚ್ಚಿದ ಒಂದು ಕಾಗದದ ತುಂಡು ಆಮೇಲೆ ನನ್ನ ಕಣ್ಣಿಗೆ ಬಿತ್ತು. "ರಿಮಾರ್ಕ್ಸ್ ಕಲಮಿನಲ್ಲಿ ಏನನ್ನೂ ಬರೆಯಬಾರದು" ಎಂದು ಅದರಲ್ಲಿತ್ತು! ಈಗ ನಾನು ಏನೂ ಮಾಡುವಂತಿರಲಿಲ್ಲ. ಮನಸ್ಸಿನಿಂದ ಹೊರಹಾಕಿದೆ. ಆ ತೊಗಲು ಬೈಂಡಿನ ಬೆಳ್ಳಿರೇಖಿನ ಪುಸ್ತಕದ ಪುಟಗಳನ್ನು ತಿರುವಿಹಾಕಿದೆ. ಕಾರಿಯಪ್ಪ , ತಿಮ್ಮಯ್ಯ , ಶ್ರೀನಾಗೇಶ್ ಮೊದಲಾದ ಹೆಸರುಗಳು ಅಲ್ಲಿ ಕಾಣಿಸಿದವು. ಈ ಹಿರಿಯ ವ್ಯಕ್ತಿಗಳ ಹೆಸರುಗಳಿರುವ ಪುಟದಲ್ಲೇ ನನ್ನ ಹೆಸರೂ ಸೇರಿತೆಂದು ಬೀಗಿದೆ.

ಎರಡು ದಿನಗಳು ಕಳೆದವು , ನನ್ನ ಹೊಣೆಗಾರಿಕೆಗಳ ಚಾರ್ಜೂ ತೆಗೆದುಕೊಂಡೆ. ಮೂರನೆಯ ದಿನ ಕಮಾಂಡೆಂಟ್ ಕರ್ನಲ್ ಹ್ಯಾಮಿಲ್ಟನ್ ಅವರಿಗೆ ವರದಿ ಮಾಡಿಕೊಳ್ಳಬೇಕೆಂದು ಕರೆ ಬಂದಿತು. ಅವರ ಕೊಠಡಿಯನ್ನು ಪ್ರವೇಶಿಸುತ್ತಿದ್ದ ಹಾಗೆಯೇ ಕಟುವಾದ ಬಯ್ಗುಳ ಮಳೆಯೇ ಸುರಿಯಿತು. ಸದ್ಯ ಹೀಗಾಗಬಹುದೆಂದು ಮೊದಲೇ ಅಜುಟೆಂಟ್ ನನಗೆ ಸೂಚನೆ ಕೊಟ್ಟಿದ್ದರು. ನಾನು ಸಂದರ್ಶಕ ಪುಸ್ತಕದಲ್ಲಿ ರಿಮಾರ್ಕ್ಸ್ ಕಲಮಿನಲ್ಲಿ ಬರೆದುದರ ಫಲ ಇದು. ಮುಖ್ಯ ಮತ್ತು ಅತಿಮುಖ್ಯ (ವಿ.ಐ.ಪಿ., ವಿ.ವಿ.ಐ.ಪಿ.) ವ್ಯಕ್ತಿಗಳು ಮಾತ್ರ ಅದನ್ನು ಉಪಯೋಗಿಸಬೇಕಿತ್ತು.

ಆದರೇನು, ಬೈಗುಳವನ್ನೆಲ್ಲ ಕೇಳಿ, ಕ್ಷಮೆ ಕೋರಲು ಪ್ರಯತ್ನಿಸುವುದಷ್ಟೇ ನಾನು ಮಾಡಬಹುದಾಗಿದ್ದ ಕೆಲಸ. ಬೆರೆಟ್ (beret) ಒಳಗೆ ಬೆವತು ನೀರಾಗಿ ಕಚೇರಿಯಿಂದ ಹೊರಗೆ ಬಂದೆ. ಈ ಮನುಷ್ಯನ ಮನಸ್ಸು ಕೆರಳುವಂತಹ ಏನನ್ನೂ ಮಾಡಕೂಡದು ಎಂದು ನಿರ್ಧರಿಸಿದೆ.

೨೨ನೆ ಕಂಪನಿಯ ಅಭ್ಯರ್ಥಿಗಳ ಕಂಪನಿ ಕಮಾಂಡರ್ ಆಗಿ ನಾನು ನೇಮಕಗೊಂಡಿದ್ದೆ. ಇಲ್ಲಿ ತರಬೇತಿ ಪಡೆದ ಈ ತರುಣರು ೨೨ ಮರಾಠಾ ದಳಕ್ಕೆ ಸೇರ್ಪಡೆಯಾಗುತ್ತಿದ್ದರು. ಇದು ಸಾಮಾನ್ಯ ಪದ್ಧತಿ. ಪ್ರತಿಯೊಂದು ಬೆಟಾಲಿಯನ್ ಒಬ್ಬ ಅಧಿಕಾರಿಯನ್ನು ರೆಜಿಮೆಂಟಲ್ ಸೆಂಟರಿಗೆ ಕಳಿಸುತ್ತಿತ್ತು. ಅವನು ಆ ಬೆಟಾಲಿಯನ್‌ಗೆ ಸೇರಲಿರುವ ಅಭ್ಯರ್ಥಿಗಳಿಗೆ ತರಬೇತಿ ಕೊಡುವ ಹೊಣೆಗಾರಿಕೆ ಹೊತ್ತು ಕೊಳ್ಳುತ್ತಿದ್ದನು. ಹೀಗೆ ತನ್ನ ಯೋಧರ ನಿರ್ಮಾಣದಲ್ಲಿ ಪ್ರತಿಯೊಂದು ಬೆಟಾಲಿಯನ್ನಿಗೂ ಅವಕಾಶವಿದ್ದಿತು.

ಈಚಿನವರೆಗೂ ಮರಾಠರು ಮಹಾರಾಷ್ಟ್ರದಿಂದ ಮರಾಠೀ ಮಾತನಾಡುವ ಹುಡುಗರನ್ನು ಮುಖ್ಯವಾಗಿ ಭರ್ತಿಮಾಡಿ ಕೊಳ್ಳುತ್ತಿದ್ದರು. ಸೇನೆಯ ಮುಖ್ಯ ಕಛೇರಿಯು , ಕರ್ನಾಟಕದಿಂದಲೂ ಹುಡುಗರನ್ನು ಆರಿಸಿಕೊಳ್ಳಬೇಕೆಂದು ನಿರ್ಧರಿಸಿತು. ಕೇಂದ್ರದ ಎಲ್ಲಾ ಕಂಪನಿಗಳಿಗೂ ಕೆಲವು ಕನ್ನಡ ಮಾತನಾಡುವ ಹುಡುಗರನ್ನು ವಹಿಸಿಕೊಡಲಾಗಿತ್ತು. ಸಮಸ್ಯೆ ಏನೆಂದರೆ, ಈ ಹುಡುಗರಿಗೆ ಹಿಂದಿಯಾಗಲೀ ಮರಾಠಿಯಾಗಲೀ ಅರ್ಥವಾಗುತ್ತಿರಲಿಲ್ಲ. ಹಿಂದಿ ಭಾಷೆಯ ಆದೇಶಗಳು ಅವರಿಗೆ ತಿಳಿಯದೆ ಅವಕ್ಕೆ ತಕ್ಕಂತೆ ಮಾಡಲಾಗುತ್ತಿರಲಿಲ್ಲ. ಹಾಗಾಗಿ ಜೆಸಿಓಗಳು ಮತ್ತು ಇತರ ಅಧಿಕಾರಿಗಳು ಅವರನ್ನು ಬಹಳ ಕಟುವಾಗಿ ನಡೆಸಿಕೊಳ್ಳುತ್ತಿದ್ದರು. ಫಲವಾಗಿ ಅಭ್ಯರ್ಥಿಗಳಾಗಿ ಸೇರಿದ ಅನೇಕರು ಬಿಟ್ಟು ಹೊರಟು ಹೋಗುತ್ತಿದ್ದರು. ನಾನು ೧೩-೧೪ ವರ್ಷಗಳ ಹಿಂದೆ ಓಟಿಎಸ್‌ನಲ್ಲಿ ಯಾವ ಕಷ್ಟಗಳನ್ನು ಅನುಭವಿಸುತ್ತಿದ್ದೆನೋ ಅದೇ ಬಗೆಯ ಕಷ್ಟಗಳನ್ನು ಇವರು ಅನುಭವಿಸುತ್ತಿದ್ದರು. ಇವರನ್ನು ಉಳಿಸಿಕೊಳ್ಳುವುದು ಹೇಗೆ?

ಪ್ರತಿ ಬುಧವಾರ ನಡೆಯುತ್ತಿದ್ದ ಸಿ.ಓ.ಗಳ ಸಭೆಯಲ್ಲಿ ಅತ್ಯಂತ ಮುಖ್ಯವಾಗಿ ಬರುತ್ತಿದ್ದ ವಿಷಯ ಇದೇ. ಕನ್ನಡದ ತರುಣರು ಯೋಧರಾಗಲು ತಕ್ಕವರಲ್ಲ ಎನ್ನುವುದು ಅನೇಕ ಅಧಿಕಾರಿಗಳ ಅಭಿಪ್ರಾಯವಾಗಿತ್ತು. ಸೈನ್ಯದ ಮುಖ್ಯಕಚೇರಿಯ ಮರಾಠಾದಳಕ್ಕೆ ಈ ಹುಡುಗರನ್ನು ನೇಮಿಸಿಕೊಳ್ಳುವುದನ್ನು ನಿಲ್ಲಿಸುವಂತೆ ಮನವಿ ಮಾಡಿಕೊಳ್ಳಬೇಕೆಂದು ಸಿ.ಓ.ಗೆ ಒತ್ತಾಯ ಮಾಡುತ್ತಿದ್ದರು. ಅವರೂ ಈ ಅಭಿಪ್ರಾಯವನ್ನು ಒಪ್ಪುವಂತೆ ತೋರಿತು. ಅವರೆಲ್ಲರ ಅಭಿಪ್ರಾಯವೂ ತಪ್ಪು ಎಂದು ನನಗೆ ತಿಳಿದಿತ್ತು.

ಅಂತಹ ಒಂದು ಸಭೆಯಲ್ಲಿ ನಾನು ಹೇಳಿದೆ :

"ಸರ್, ಕನ್ನಡ ಮಾತನಾಡುವ ಎಲ್ಲಾ ಹುಡುಗರನ್ನೂ ನನಗೆ ವಹಿಸಿಕೊಡಿ. ಅವರಿಗೆ ನಾನು ತರಬೇತಿ ಕೊಡುತ್ತೇನೆ."

ಸಿ.ಓ. ನನ್ನನ್ನು ನೋಡಿದರು.

"ನೀವಿನ್ನೂ ಈಗ ತಾನೇ ಇಲ್ಲಿಗೆ ಬಂದಿದ್ದೀರಿ. ಇವರೆಲ್ಲಾ ಕಳೆದ ಆರೆಂಟು ತಿಂಗಳಿಂದ ಪ್ರಯತ್ನಿಸುತ್ತಿದ್ದಾರೆ" ಅವರು ಗುಡುಗಿದರು.

"ನಾನು ಆ ಹುಡುಗರ ಪ್ರದೇಶದಿಂದಲೇ ಬಂದವನು. ಅವರ ಅಭ್ಯಾಸಗಳು, ನಡೆ ನುಡಿ ಎಲ್ಲವನ್ನೂ ಬಲ್ಲೆ. ಅವರ ಭಾಷೆಯನ್ನೇ ನಾನೂ ಮಾತನಾಡುತ್ತೇನೆ" ಎಂದು ಉತ್ತರ ಕೊಟ್ಟೆ.

"ಸಾಧ್ಯವಿಲ್ಲ" ಕೊನೆಯ ಮಾತಿನಂತೆ ಅವರು ಹೇಳಿಬಿಟ್ಟರು. ಸಭೆ ಮುಗಿಯಿತು.

ಮಾರನೆಯ ದಿನ ಬೆಳಗ್ಗೆ ಅಜುಟೆಂಟ್ ಅವರ ಕಚೇರಿಗೆ ನನ್ನನ್ನು ಕರೆದರು. ಅವರ ಹೆಸರು ಸುಬ್ರಹ್ಮಣ್ಯಂ. ಅವರೂ ನನ್ನ ಹಾಗೆಯೇ ಓ.ಟಿ.ಎಸ್. ನಿಂದ ಬಂದ ತಮಿಳರು. ನನಗಿಂತ ಒಂದು ತಿಂಗಳೋ ಏನೋ ದೊಡ್ಡವರು. ಇಲ್ಲಿ ಬೆಳಗಾವಿಯಲ್ಲಿ ನಾವು ನೆರೆಹೊರೆಯವರಾಗಿದ್ದೆವು.

"ಸಿ.ಓ. ಯೋಚನೆ ಮಾಡಿದ್ದಾರೆ" ಅವರು ಹೇಳಿದರು, "ನಿಮ್ಮ ಸಲಹೆಯನ್ನು ಪ್ರಯತ್ನಿಸಲು ಅಪೇಕ್ಷೆಯಾಗಿದೆ. ಕರ್ನಾಟಕದಿಂದ ಬಂದಿರುವ ಎಲ್ಲಾ ಅಭ್ಯರ್ಥಿಗಳನ್ನೂ ತಕ್ಷಣವೇ ನಿಮ್ಮ ಕಂಪನಿಗೆ ವರ್ಗಾಯಿಸಲಾಗುತ್ತದೆ."

ಕರ್ನಲ್ ಹ್ಯಾಮಿಲ್ಟನ್ ಅವರು ನನ್ನ ವಿಚಾರವನ್ನು ನೆನೆಪಿಟ್ಟು

ಕೊಂಡು, ಅದು ಪ್ರಯತ್ನಯೋಗ್ಯ ಎಂದು ಯೋಚಿಸಿದ್ದು ನನಗೆ ಸಂತೋಷವನ್ನುಂಟುಮಾಡಿತು. ಅದೇ ಸಮಯಕ್ಕೆ ಎಂಥ ಹೊಣೆಗಾರಿಕೆಯನ್ನು ನನ್ನ ಹೆಗಲಿಗೇರಿಸಿಕೊಂಡೆನೆಂದು ಕೂಡ ತಿಳಿದುಕೊಂಡೆ.

"ಈ ಕನ್ನಡ ಹುಡುಗರ ಬಗೆಗೆ ಇತರ ಅಧಿಕಾರಿಗಳಿಗೆ ಸ್ವಲ್ಪ ಸದ್ಭಾವನೆ ಬರುವಂತೆ ಏನು ಮಾಡಬಹುದು" ಎಂದು ಸುಬ್ರಹ್ಮಣ್ಯಂ ಅವರ ಸಲಹೆ ಕೇಳಿದೆ. ಅವರು ನುಡಿದರು, "ವೇಣು, ಈ ಉತ್ತರ ಭಾರತೀಯರೂ ಮರಾಠರೂ ಬೇರೆ ಯಾರಿಗೂ ಯುದ್ಧ ಮಾಡಲು ಬರುವುದೇ ಇಲ್ಲವೆಂದು ಭಾವಿಸುತ್ತಾರೆ. ಅವರಿಗೆ ನೀನು ಸರಿಯಾಗಿ ತೋರಿಸಿಕೊಡಬೇಕು. ನಿನ್ನ ಹುಡುಗರು ದೈಹಿಕವಾಗಿ ಸಮರ್ಥರಾಗಿರುವಂತೆ ನೋಡಿಕೋ. ಕ್ರೀಡೆಗಳಲ್ಲಿ ಇತರ ಕಂಪನಿಗಳನ್ನು ಸೋಲಿಸು. ಆಗ ಅವರಿಗೆ ಅರ್ಥವಾಗುತ್ತದೆ. ಚೆನ್ನಾಗಿ ಡ್ರಿಲ್ ಮಾಡುವಂತೆ ನೋಡಿಕೋ. ಸಿ.ಓ. ನಿನ್ನ ವಿಷಯದಲ್ಲಿ ಸಂತೋಷಪಡುತ್ತಾರೆ."

ನನ್ನ ಕಂಪನಿ ಲೈನ್ಸ್‌ಗೆ ಧಾವಿಸಿದೆ. ನನ್ನ **ಜೆ.ಸಿ.ಓ.** ಹಾಗೂ **ಎನ್.ಸಿ.ಓ.** ಗಳ ಒಂದು ತುರ್ತು ಸಭೆ ಕರೆದೆ. ನಾವು ಆರಿಸಿಕೊಂಡಿರುವ ಕೆಲಸ ಎಂಥದೆಂಬುದನ್ನು ಅವರಿಗೆ ವಿವರಿಸಿದೆ. ೨೨ ಮರಾಠಾ ತಂಡದಲ್ಲೇ ಅವರಲ್ಲಿ ಅನೇಕರ ಪರಿಚಯಯ ನನಗಿತ್ತು. ಅವರಲ್ಲಿ ಹೆಚ್ಚಿನವರು ಮುಸ್ಲಿಮರು. ಇತರರು ಮರಾಠೀ ಮಾತನಾಡುವವರು. ಈ ಸವಾಲನ್ನು ಅವರೆಲ್ಲರೂ ಉತ್ಸಾಹದಿಂದ ಎತ್ತಿಕೊಂಡರು. ಈಗ ೨೨ ಮರಾಠಾ ಡಿ.ಸಿ.ಓ. ಆಗಿದ್ದ ಕರ್ನಲ್ ಷಿಂಧೆ ಅವರಿಗೆ ಒಂದು ಸಂದೇಶ ಕಳಿಸಿ, ಉತ್ತಮ ಕ್ರೀಡಾಪಟುಗಳನ್ನೂ, ತರಬೇತಿದಾರರನ್ನೂ ಕಳಿಸಿಕೊಡಬೇಕೆಂದು ಕೋರಿದೆ. ಒಡನೆಯೇ ಕಳಿಸುವುದಾಗಿ ಹೇಳಿದರು.

ಆ ಸಂಜೆ ಒಂದು ಕಂಪನಿ ಸಮ್ಮೇಳನ ನಡೆಸಿದೆ. ನನ್ನ ಹೊಸ ಅಭ್ಯರ್ಥಿಗಳನ್ನು ಕುರಿತು ಕನ್ನಡದಲ್ಲೇ ಮಾತನಾಡಿದೆ. ನನ್ನೊಂದಿಗೆ ಮನಬಿಚ್ಚಿ ಮಾತನಾಡಬೇಕು, ಅವರ ಸಮಸ್ಯೆಗಳು ಏನೆಂದು ಹೇಳಬೇಕು ಎಂದು ಕೇಳಿದೆ. ಸ್ವಲ್ಪ ಒತ್ತಾಯ ಮಾಡಿದ ಮೇಲೆ ಅವರು ಬಾಯಿಬಿಟ್ಟರು. ಮೊದಲನೆಯ ಸಮಸ್ಯೆ ಅವರಿಗೆ ಒಗ್ಗದ ಆಹಾರ. ಅವರಿಗೆ ಅಭ್ಯಾಸವಾಗಿದ್ದುದು ಯಾವುದೂ ಇರಲಿಲ್ಲ. ಆಮೇಲಿನದು ಭಾಷೆಯ ಸಮಸ್ಯೆ.

ಒಡನೆಯೇ ನಾನು ಅವರಿಗೆ ಬೇಕಾದ ರೀತಿಯ ಆಹಾರ ಒದಗಿಸುವುದಾಗಿ ಭರವಸೆ ಕೊಟ್ಟೆ. ಕಂಪನಿಯ ಫಾರಂಫಂಡಿನಿಂದ ಸ್ವಲ್ಪ ಹಣವನ್ನು ಪಡೆದು, ಇಡ್ಲಿ, ದೋಸೆ, ಮೊದಲಾದ ವಸ್ತುಗಳನ್ನು ತಯಾರಿಸಲು ಅಗತ್ಯವಾದ ಪಾತ್ರೆಗಳನ್ನು ಕೊಳ್ಳಲು ಸೀನಿಯರ್ **ಜೆ.ಸಿ.ಓ.**ಗಳನ್ನು ಓಡಿಸಿದೆ. ಎರಡು ದಿನಗಳ ಅನಂತರ ನಮ್ಮ ಹುಡುಗರಿಗೆ ಉಪಾಹಾರಕ್ಕೆ ಇಡ್ಲಿ ಕೊಡಲು ಸಮರ್ಥರಾದೆವು. ನಮ್ಮ ಅಡುಗೆಯವರಿಗೆ, ಸಾಂಬಾರ್, ರಾಗಿರೊಟ್ಟಿ, ಮೊದಲಾದ ಕರ್ನಾಟಕದ ಖಾದ್ಯವಸ್ತುಗಳನ್ನು ತಯಾರಿಸಲು ಕಲಿಸುವ ಏರ್ಪಾಡು ಮಾಡಲಾಯಿತು. ಸ್ಥಳೀಯವಾಗಿ ಕಲಿಸುವವರು ಸಿಕ್ಕದಾದಾಗ ಬೆಳಗಾವಿಯಿಂದ ಹೊರಕ್ಕೆ ಕಳಿಸಿ ಕಲಿಸಿದೆವು. ಇದೆಲ್ಲದರಿಂದ ನಮ್ಮ ಹುಡುಗರ ನೈತಿಕ ಸ್ಥೈರ್ಯ ಬಹುವಾಗಿ ಸುಧಾರಿಸಿತು. ತಮ್ಮ ಕಲ್ಯಾಣದ ಬಗೆಗೆ ನಾನು ತುಂಬಾ ಸೀರಿಯಸ್ ಆಗಿದ್ದೆನೆನ್ನುವುದು ಅವರಿಗೆ ಮನವರಿಕೆಯಾಯಿತು.

ಆಮೇಲೆ ಅವರನ್ನು – ಹಾಕಿ, ಫುಟ್‌ಬಾಲ್, ವಾಲಿಬಾಲ್, ಬಾಕ್ಸಿಂಗ್, ಈಜು ಮೊದಲಾದ ಆಟಗಳ ತಂಡಗಳನ್ನಾಗಿ ರೂಪಿಸಿದೆ. ಪ್ರತಿಭೆಯಿರುವ ಅಭ್ಯರ್ಥಿಗಳನ್ನು ವ್ಯವಸ್ಥಿತವಾಗಿ ಗುರುತಿಸಿ ಅತ್ಯುತ್ತಮ ಶಿಕ್ಷಕರಿಂದ ತರಬೇತಿ ಕೊಡಿಸಿದೆ. ೨೨ ಮರಾಠಾ ದಳದಿಂದ ಕೆಲವು ಅತ್ಯುತ್ತಮ ಕ್ರೀಡಾಳುಗಳೂ ಅಥ್ಲೀಟ್‌ಗಳೂ ಸಹಾಯ ಮಾಡಿದರು.

ಅದೇ ಸಮಯಕ್ಕೆ ಅವರಿಗೆ ನಿಯಮಿತ ಪಠ್ಯಕ್ರಮದ ಪ್ರಕಾರ ಡ್ರಿಲಿಂಗ್‌ನಲ್ಲಿ ಬಿರುಸಿನ ತರಬೇತಿ ಕೊಡಿಸಿದೆ. ನನ್ನ ಕೆಲವು **ಜೆ.ಸಿ.ಓ.** ಹಾಗೂ ಎನ್.ಸಿ.ಓ.ಗಳು ಕನ್ನಡ ಮಾತನಾಡುತ್ತಿದ್ದರು. ಅವರನ್ನು ಡ್ರಿಲ್ ನೋಡಿಕೊಳ್ಳಲು ನೇಮಿಸಿದೆ. ನನ್ನ ಉತ್ಸಾಹ ಅವರಲ್ಲೂ ಉತ್ಸಾಹವನ್ನು ಪುಟಿಯಿಸಿತು. ಅವರೆಲ್ಲರೂ ಶಕ್ತಿಮೀರಿ ಶ್ರಮಿಸಿದರು. ೨೨ನೇ ಕಂಪನಿಯು ಚಟುವಟಿಕೆಯಿಂದ ತುಂಬಿಹೋಗಿತ್ತು.

ತರಬೇತಿಯ ಮೂರನೆಯ ತಿಂಗಳು ನಡೆದ ಪರೀಕ್ಷೆ ಮೊದಲ ಸವಾಲಾಗಿತ್ತು. ಸಾಮಾನ್ಯವಾಗಿ ಕಮಾಂಡೆಂಟರೇ ಅದನ್ನು ನಡೆಸುತ್ತಿದ್ದುದು. ಎಂತಹ ಅತ್ಯುತ್ತಮ ಮಟ್ಟವನ್ನು ಅವರು ನಿರೀಕ್ಷಿಸುತ್ತಿದ್ದರೆಂದರೆ ಯಾವ ಕಂಪನಿಯೂ ಮೊದಲ ಪ್ರಯತ್ನದಲ್ಲಿ ಅವರು ನಡೆಸುವ ಪರೀಕ್ಷೆಯನ್ನು ದಾಟಿರಲಿಲ್ಲ. ಎರಡೋ–ಮೂರೋ ಪ್ರಯತ್ನಗಳು ಅಗತ್ಯವಾಗುತ್ತಿದ್ದವು. ಈ ಪರೀಕ್ಷೆಯ ಬಗೆಗೆ ಎಲ್ಲರೂ ಹೆದರುತ್ತಿದ್ದರು.

ಅಭ್ಯರ್ಥಿಗಳು ಈ ಪರೀಕ್ಷೆಗೆ ಸಿದ್ಧರಾಗಿದ್ದಾರೆಯೇ ಎಂದು ನೋಡಲು ಅಜುಟೆಂಟ್ ಅಥವಾ ತರಬೇತಿ ಅಧಿಕಾರಿ ಮೊದಲು ತಮ್ಮದೇ ಪರೀಕ್ಷೆಗಳನ್ನು ನಡೆಸುವರು. ೨೨ ಕಂಪನಿಯು ಸಾಧಿಸಿರುವ ಮೇಲ್ಮೆಯನ್ನು ನೋಡಿ ಅವರು ಆಶ್ಚರ್ಯಪಟ್ಟರು. ಅಜುಟೆಂಟ್ ಸುಬ್ರಹ್ಮಣ್ಯಂ ಅವರಿಗೆ ಮನಸ್ಸಿನ ಭಾರ ಇಳಿಯಿತು.

ಪರೀಕ್ಷೆಯ ದಿನ ಕಂಪನಿ ತನ್ನ ಅತ್ಯುತ್ತಮ ಸಿದ್ಧತೆಯನ್ನು ನಡೆಸಿತ್ತು. ಸಾಧ್ಯವಿರುವ ಕೊನೆಯ ಕ್ಷಣದವರೆಗೂ ನಾನು ಅವರೊಟ್ಟಿಗೆ ಇದ್ದು ತಿದ್ದುತ್ತಿದ್ದೆ. ಮತ್ತೆ ಡ್ರಿಲ್ ಮತ್ತೊಮ್ಮೆ ಡ್ರಿಲ್, ಬೆದರಿಕೆ, ಬಯ್ಗುಳ, ಮನವೊಲಿಕೆ, ಮೆಚ್ಚಿಕೆ, ಪ್ರಶಂಸೆ, ತಿದ್ದಿಕೆ-ಎಲ್ಲಾ ನಡೆಯಿತು. ಪೆರೇಡ್–ಬಯಲಿಗೆ ಹೋಗುವಾಗ ಸಂದರ್ಶಕ ಪುಸ್ತಕದ ವಿಷಯದಲ್ಲಿ ನನಗಾಗಿದ್ದ ಮಂಗಳಾರತಿ ನೆನಪಾಗಿ ನಡುಕ ಬರುತ್ತಿತ್ತು.

ನಾನು ಕಳವಳಪಡಬೇಕಾಗಲಿಲ್ಲ. ಕರ್ನಲ್ ಹ್ಯಾಮಿಲ್ಟನ್ ಪರೀಕ್ಷೆ ನಡೆಸಿದಾಗ ಒಂದು ಎಳೆಯೂ ದೋಷವಿಲ್ಲದ ಹಾಗೆ ಹುಡುಗರು ನಿಭಾಯಿಸಿದರು. ಆತನಿಗೆ ನಿಜವಾಗಿ ಸಂತೋಷವಾಯಿತೆನ್ನುವುದು ನನಗೆ

ಗೊತ್ತಾಯಿತು. ಎಲ್ಲರಿಗೂ ಆಶ್ಚರ್ಯವಾಗುವಂತೆ ೨೨ನೇ ಕಂಪನಿಯನ್ನು ತೇರ್ಗಡೆ ಮಾಡಿದರು! ಅದೂ ಮೊದಲ ಪ್ರಯತ್ನದಲ್ಲೇ! ಇದು ಇಡೀ ರೆಜಿಮೆಂಟಲ್ ಸೆಂಟರಿನ ಮನೆ ಮಾತಾಯಿತು. ತರಬೇತಿದಾರರಿಗೂ ನನಗೂ ಅಪಾರ ಸಂತೋಷ.

ಅಂದು ಸಂಜೆ ಕಂಪನಿಯನ್ನುದ್ದೇಶಿಸಿ ಮಾತನಾಡಿ, ಅವರನ್ನು ಅಭಿನಂದಿಸಿದೆ. ಮೊದಲ ಗೆಲುವು ಅವರಲ್ಲಿ ಆತ್ಮವಿಶ್ವಾಸ ತುಂಬಿದ್ದು, ಇನ್ನೊಂದು ಕ್ಷೇತ್ರವಾದ ಕ್ರೀಡೆಯಲ್ಲೂ ತಮ್ಮ ಮೇಲ್ಮೈಯನ್ನೂ, ಸಾಮರ್ಥ್ಯವನ್ನೂ ತೋರಿಸಲು ಅವರು ಹಾತೊರೆಯುತ್ತಿದ್ದರು. ಗೆಲುವಿನ ರುಚಿ ಹತ್ತಿದ ಮೇಲೆ ಅವರು ತೆಪ್ಪಗೆ ಕೂಡ ಬಯಸಲಿಲ್ಲ.

ಆದರೆ ಕರ್ನಲ್ ಹ್ಯಾಮಿಲ್ಟನ್ ಅವರಿಗೆ ಕ್ರೀಡಾ ಪರಿಣತಿಯನ್ನು ತೋರಿಸುವುದಕ್ಕೆ ಮೊದಲು ಅವರಿಗೆ ವರ್ಗವಾಯಿತು. ಅವರ ಸ್ಥಾನಕ್ಕೆ ಕರ್ನಲ್ ಬೆಳ್ಳಿಯಪ್ಪ ಬಂದರು. ಇವರೂ ಅಚ್ಚುಕಟ್ಟಾದ, ಎಲ್ಲ ಕ್ಷೇತ್ರಗಳಲ್ಲೂ ನೈಪುಣ್ಯ ಬಯಸುವ ವ್ಯಕ್ತಿಯೇ. ಆದರೆ ಕರ್ನಲ್ ಹ್ಯಾಮಿಲ್ಟನ್ ಅವರಂತೆ ಕೋಪ ಬರುತ್ತಿರಲಿಲ್ಲ. ಕೇಂದ್ರದ ಚಟುವಟಿಕೆಗಳಲ್ಲಿ ಶ್ರೀಮತಿ ಬೆಳ್ಳಿಯಪ್ಪ ಕೂಡ ತುಂಬಾ ಆಸಕ್ತಿ ವಹಿಸಿದರು. ಸಾವಿತ್ರಿಯನ್ನು ತಮ್ಮ ಜತೆ ಕೆಲಸ ಮಾಡಲು ಅವರು ಸೇರಿಸಿಕೊಂಡರು.

೨೨ನೇ ಕಂಪನಿಯ ಅಭ್ಯಾಸ ಮುಂದುವರಿಯಿತು. ವಾರ್ಷಿಕೋತ್ಸವ ಬರಲಿತ್ತು. ಎಲ್ಲಾ ಆಟೋಟಗಳಲ್ಲಿ ಸ್ಪರ್ಧೆಗಳಾಗಬೇಕಿತ್ತು. ನನ್ನನ್ನು ಕ್ರೀಡಾ ಅಧಿಕಾರಿಯನ್ನಾಗಿ ನೇಮಿಸಲಾಯಿತು. ವಾರ್ಷಿಕೋತ್ಸವಕ್ಕೆ ಮೊದಲು ಎಲ್ಲಾ ಆಟಗಳೂ ಮುಗಿಯುವಂತೆ ವ್ಯವಸ್ಥೆ ಮಾಡಬೇಕಾಗಿತ್ತು. ಎಲ್ಲದರಲ್ಲೂ ಬಹು ತೀಕ್ಷ್ಣವಾದ ಸ್ಪರ್ಧೆಯಿತ್ತು. ಆದರೆ ೨೨ನೇ ಕಂಪನಿ ಎಲ್ಲದರಲ್ಲೂ ಮುಂದಾಗಿತ್ತು. ಪ್ರತಿಯೊಂದು ಆಟವನ್ನೂ- ವಿಶೇಷವಾಗಿ ಹಾಕಿ ಮತ್ತು ಫುಟ್‌ಬಾಲ್- ಯುದ್ಧದಂತೆ ಆಡಿದರು. ಎಲ್ಲಾ ತಂಡಗಳಲ್ಲೂ ಕೊಡಗಿನ ತರುಣರು ಕೆಲವರಿರುವಂತೆ ನೋಡಿಕೊಂಡಿದ್ದೆ. ಕರ್ನಾಟಕದ ಬೆಟ್ಟಪ್ರದೇಶದ ಈ ತರುಣರು ಸಹಜವಾಗಿಯೇ ಅಥ್ಲೀಟ್‌ಗಳು. ತರಬೇತಿಯ ನಂತರ ಬಹಳ ಉತ್ತಮ ದೇಹದಾರ್ಢ್ಯವನ್ನು ಪಡೆದಿದ್ದರು. ವ್ಯವಸ್ಥಿತ ತರಬೇತಿಯಿಂದ ಅವರು ನಮ್ಮ ತಂಡಗಳ ಆಧಾರಸ್ತಂಭಗಳಾದರು.

ವಾರ್ಷಿಕೋತ್ಸವ ಸ್ಪರ್ಧೆಗಳಲ್ಲಿ ನನ್ನ ಈ ಯೋಜನೆ ಫಲ ನೀಡಿತು. ಬ್ಯಾಸ್ಕೆಟ್‌ಬಾಲ್ ಹೊರತು ಮಿಕ್ಕೆಲ್ಲದರಲ್ಲೂ ಪ್ರಥಮ ಸ್ಥಾನದಲ್ಲಿ ನಮ್ಮ ಕಂಪನಿ ಮಿಂಚಿತು. ಅಥ್ಲೆಟಿಕ್ಸ್‌ನಲ್ಲೂ ಅಷ್ಟೆ. ಕ್ರೀಡಾ ಅಧಿಕಾರಿಯಾಗಿ, ಸಮಾರಂಭದ ದಿನ ೨೨ನೇ ಕಂಪನಿಯ ಸಾಧನೆಗಳನ್ನು ಒಂದಾದ ಮೇಲೊಂದರಂತೆ ಪ್ರಕಟಿಸುವ ಸಂತೋಷ ನನ್ನ ಪಾಲಿಗೆ ಬಂದಿತು. ಇಷ್ಟಾದ ಮೇಲೆ ಕರ್ನಾಟಕದ ಹುಡುಗರ ಬಗ್ಗೆ ಯಾವ ಕಡೆಯಿಂದಲೂ ದೂರು ಬರಲಿಲ್ಲ.

ಬೆಳಗಾವಿಯಲ್ಲಿ ಕಾಲವು ವೇಗವಾಗಿ ಸರಿದುಹೋಯಿತು. ಮಾಡಬೇಕಾದ ಕೆಲಸ ತುಂಬಾ ಇತ್ತು. ನನ್ನ ಅಧಿಕೃತ ಕಾರ್ಯಗಳೂ ಇದ್ದವು. ಜತೆಗೆ ನಾನು ಬೆಳಗಾಂ ಕ್ಲಬ್ಬಿನ ಬ್ಯಾಡ್ಮಿಂಟನ್ ಕಾರ್ಯದರ್ಶಿ ಯಾಗಿದ್ದೆ. ಇಂಡೋ-ಪಾಕ್ ಯುದ್ಧವೂ ನಡೆಯಿತು. ಆಗ ಯುದ್ಧನಿಧಿಗೆ ಹಣ ಸಂಗ್ರಹಿಸುವುದರಲ್ಲಿ ತೊಡಗಿಕೊಂಡಿದ್ದೆವು. ಮಹಾದೇವ ದೇವಾಲಯವನ್ನು ಕಟ್ಟಿದ ಸಂದರ್ಭದ ನೆನಪಾಯಿತು. ಮನೆಮನೆಗೆ ಹೋಗಿ ಕೇಳಿದೆವು. ಸಂಗೀತ ಕಚೇರಿಗಳನ್ನೂ, ವಿವಿಧ ಮನರಂಜನಾ ಕಾರ್ಯಕ್ರಮಗಳನ್ನೂ, ಮೇಳಗಳನ್ನೂ ನಡೆಸಿದೆವು. ಸುಧೀರ್‌ಫಡ್ಕೆ ಬಂದು ತಮ್ಮ ಪ್ರಸಿದ್ಧ ಗೀತರಾಮಾಯಣವನ್ನು ಹಾಡಿದರು. ಅದಕ್ಕೆ ಸಾವಿರಾರು ಜನರು ಸೇರಿದ್ದರು. ಬೆಳ್ಳಿಯಪ್ಪ ವರ್ಗವಾಗಿ ಕರ್ನಲ್ ಥೋರಟ್ ಅಧಿಕಾರ ವಹಿಸಿಕೊಂಡರು.

೧೮. ಆಕೆ ಎಲ್ಲಾ ವಿಷಯಗಳಲ್ಲೂ ಪಬ್ಲಿಕ್ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿಲ್ಲ !

ಬೆಳಗಾವಿಯಲ್ಲಿ ನಾವು ಕಳೆದ ಮೊದಲನೆಯ ವರ್ಷ ಗಾಯತ್ರಿಯ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಒಂದು ಬಿಕ್ಕಟ್ಟು ಉಂಟಾಯಿತು. ಜೋಧ್‌ಪುರದಲ್ಲಿ ೧೦ನೇ ತರಗತಿ ಮುಗಿಸಿ ಬೆಂಗಳೂರಿಗೆ ಹೋಗಿ ಅಲ್ಲಿ ನ್ಯಾಷನಲ್ ಕಾಲೇಜಿಗೆ ಸೇರಿಕೊಂಡಿದ್ದಳು. ಅದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಕಾಲೇಜು. ಆ ದಿನಗಳಲ್ಲಿ ಕರ್ನಾಟಕದಲ್ಲಿ ೧೦ನೆಯ ತರಗತಿ ಅಥವಾ ಎಸ್‌ಎಸ್‌ಎಲ್‌ಸಿಯ ಪರೀಕ್ಷೆ ಒಂದು ಪಬ್ಲಿಕ್ ಪರೀಕ್ಷೆ ಆಗಿತ್ತು. ಅದನ್ನು ನಡೆಸುತ್ತಿದ್ದುದು ಎಸ್‌ಎಸ್‌ಎಲ್‌ಸಿ ಮಂಡಳಿ. ರಾಜಾಸ್ಥಾನದಲ್ಲಾದರೆ ಕೆಲವು ಪಠ್ಯವಿಷಯಗಳು ಪಬ್ಲಿಕ್ ಪರೀಕ್ಷೆಗೂ ಮಿಕ್ಕವು ಶಾಲಾ ಪರೀಕ್ಷೆಗೂ ಒಳಪಡುತ್ತಿದ್ದವು.

ಈ ಕಷ್ಟವನ್ನು ಮುಂದಾಗಿ ಯೋಚಿಸಿಯೇ ನಾನು ಮೈಸೂರು ವಿಶ್ವವಿದ್ಯಾನಿಲಯದ ರೆಜಿಸ್ಟ್ರಾರರೊಂದಿಗೆ ಪತ್ರವ್ಯವಹಾರ ನಡೆಸಿದೆ. ವಿಶೇಷ ಸಂದರ್ಭವಾಗಿ ಗಾಯತ್ರಿಯು ನ್ಯಾಷನಲ್ ಕಾಲೇಜಿನಲ್ಲಿ ಪಿ.ಯು.ಸಿ. ತರಗತಿಗೆ ಸೇರಲು ಅನುಮತಿ ನೀಡಿದ್ದರು. ಆದರೆ ಪರೀಕ್ಷೆಯ ಅರ್ಜಿಗಳನ್ನು ಪರಿಶೀಲಿಸುವ ಸಮಯ ಬಂದಾಗ ಅವರು ೧೦ನೆ ತರಗತಿಯ ಎಲ್ಲಾ ಪಠ್ಯವಿಷಯಗಳನ್ನೂ ಪಬ್ಲಿಕ್ ಪರೀಕ್ಷೆಯಲ್ಲಿ ಪಾಸು ಮಾಡಿಲ್ಲ ಎಂಬ ಆಕ್ಷೇಪವೆತ್ತಿ ಪರೀಕ್ಷೆಗೆ ಕೂರಿಸಲು ನಿರಾಕರಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಓದಬೇಕಾದರೆ ಮತ್ತೆ ಅವರು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಓದಬೇಕು ಎಂದರು.

ನನ್ನ ಅಣ್ಣ ಸುಬ್ಬರಾವ್ ಮತ್ತು ನಾನು ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಮನವಿ ಮಾಡಿಕೊಂಡುದೆಲ್ಲಾ ವ್ಯರ್ಥವಾಯಿತು. ರೆಜಿಸ್ಟ್ರಾರರಿಗೂ, ಸೆನೆಟ್ ಸದಸ್ಯರಿಗೂ ಪತ್ರಗಳನ್ನು ಬರೆದುದು

ಪ್ರಯೋಜನಕ್ಕೆ ಬರಲಿಲ್ಲ. ಅಣ್ಣ ಹೋಗಿ ಖುದ್ದಾಗಿ ಅನೇಕರನ್ನು ಭೇಟಿ ಮಾಡಿದರು. ಎಲ್ಲ ಕಡೆಯೂ ಒಂದೇ ಉತ್ತರ, "ಅವಳು ಎಲ್ಲಾ ಪಠ್ಯ ವಿಷಯಗಳನ್ನೂ ಪಬ್ಲಿಕ್ ಪರೀಕ್ಷೆಯಲ್ಲಿ ಪಾಸು ಮಾಡಿಲ್ಲ."

ಪರೀಕ್ಷೆಗೆ ಮೂರು ತಿಂಗಳು ಉಳಿದಿದ್ದವು. ನಾನೂ ಅಣ್ಣನೂ ಒಬ್ಬ ವಕೀಲರನ್ನು ಗೊತ್ತು ಮಾಡಿಕೊಂಡು ಹೈಕೋರ್ಟಿನಲ್ಲಿ ರಿಟ್ ಅರ್ಜಿ ಹಾಕಿದೆವು. ಆದರೆ ಒಂದಿಲ್ಲೊಂದು ಕಾರಣಕ್ಕೆ ಮೊಕದ್ದಮೆ ಮುಂದಕ್ಕೆ ಹೋಗುತ್ತಿತ್ತು.

ಒಂದೇ ತಿಂಗಳು ಉಳಿದಿದ್ದಾಗ , ನಾನು ಬೆಂಗಳೂರಿಗೆ ಬಂದು ಖುದ್ದಾಗಿ ವ್ಯವಹರಿಸುವುದು ಮೇಲು ಎಂದು ಅಣ್ಣ ಬರೆದರು. ರಜೆ ಪಡೆದುಕೊಂಡು ನಾನು ಬೆಂಗಳೂರು ತಲುಪುವ ವೇಳೆಗೆ ಪರೀಕ್ಷೆಗೆ ಕೇವಲ ೧೨ ದಿನಗಳು ಉಳಿದಿದ್ದವು.

ಗಾಯತ್ರಿ ಪ್ರಸನ್ನಳಾಗೇ ಇದ್ದಳು. ಏನೇ ಬಂದರೂ ಎದುರಿಸಲು ಸಿದ್ಧಳಾಗಿದ್ದಳು. ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ದೊರಕಿದ್ದೇ ಆದರೆ ಉತ್ತಮವಾಗಿ ನಿರ್ವಹಿಸಬಲ್ಲೆನೆಂಬ ಆತ್ಮವಿಶ್ವಾಸ ಅವಳಲ್ಲಿತ್ತು. ಜೋಧ್‌ಪುರ ಮತ್ತು ಅಜ್ಮೀರಗಳಲ್ಲಿದ್ದಾಗ ಅವಳು ಸರಾಸರಿ ವಿದ್ಯಾರ್ಥಿನಿಯಾಗಿದ್ದಳು. ಬಹಳ ಕಷ್ಟಪಡಬೇಕೆಂದು ನಾನು ಒತ್ತಡ ಹೇರಿರಲಿಲ್ಲ. ನಾನೇ ಸರಾಸರಿಗಿಂತ ಕಡಮೆ ಮಟ್ಟದ ವಿದ್ಯಾರ್ಥಿಯಾಗಿದ್ದವನು. ಆದ್ದರಿಂದ ಓದಿಗಿಂತ ಮಿಗಿಲಾಗಿ ಅವಳು ಬೇರೆ ಯಾವುದರಲ್ಲಾದರೂ ಆಸಕ್ತಿ ತೋರಿಸಿದರೆ ನಾನು ಅದಕ್ಕೆ ಸಹಾನುಭೂತಿ ತೋರುತ್ತಿದ್ದೆ.

ಗಾಯತ್ರಿ ನೋಡಲು ಲಕ್ಷಣವಾಗಿದ್ದಳು, ಚಲನಚಿತ್ರ ಗೀತೆಗಳನ್ನು ಹಾಡುವುದರಲ್ಲಿ ಒಳ್ಳೆಯ ಪರಿಣತಿಯಿತ್ತು. ಅವಳಿಗೆ ಸರಿಯಾದ ವರನನ್ನು ಹುಡುಕುವುದು ನನಗೆ ಕಷ್ಟವಾಗುತ್ತಿರಲಿಲ್ಲ. ಆ ದಿನಗಳಲ್ಲಿ ನನ್ನ ಯೋಚನೆ, ಅವಳು ಡಾಕ್ಟರೋ ವಿಜ್ಞಾನಿಯೋ ಎಂಜಿನಿಯರೋ ಆಗುವುದಕ್ಕಿಂತ ಮದುವೆ ಮಾಡುವುದು ಮುಖ್ಯ ಎಂಬುದಾಗಿತ್ತು. ಆದರೆ ಈಗ ವಿಶ್ವವಿದ್ಯಾಲಯವು ಅವಳಿಗೆ ಮಾಡುತ್ತಿರುವ ಅನ್ಯಾಯದ ವಿರುದ್ಧವಾಗಿ ಹೋರಾಡಲೇಬೇಕು ಎಂಬುದು ದೃಢವಾಯಿತು. ಅದಕ್ಕೆ ಅಣ್ಣನವರ ಬೆಂಬಲವೂ ಇತ್ತು. ಅವರು ವಿದ್ಯಾಭ್ಯಾಸಕ್ಕೆ ತುಂಬ ಮಹತ್ತ್ವ ಕೊಡುತ್ತಿದ್ದರು. ಅವರ ಮಕ್ಕಳೆಲ್ಲಾ ಮುಂದೆ ಬಹಳ ದೊಡ್ಡ ದೊಡ್ಡ ಪದವಿಗಳನ್ನು ಪಡೆಯಲಿದ್ದರು. ಅವರಿಗೆ ಗಾಯತ್ರಿಯೂ ಇನ್ನೊಬ್ಬ ಮಗಳ ಹಾಗೆ ; ಯಾರೂ ಅವಳಿಗೆ ವಿದ್ಯಾಭ್ಯಾಸವನ್ನು ವಂಚಿಸಕೂಡದು.

ನಾನು ಬಂದೊಡನೆಯೇ ಸೆನೆಟಿನ ಎಲ್ಲಾ ಸದಸ್ಯರನ್ನೂ ಭೇಟಿ ಮಾಡಿದೆವು. ಯಾರೂ ನಮ್ಮ ಮಾತು ಕೇಳುತ್ತಿರಲಿಲ್ಲ. "ನಿಯಮದ ಪ್ರಕಾರ ಅವಳು ಹತ್ತನೇ ತರಗತಿಯಲ್ಲಿ ಪಬ್ಲಿಕ್ ಪರೀಕ್ಷೆಯಲ್ಲಿ ಪಾಸು ಮಾಡಿಲ್ಲ" ಎನ್ನುತ್ತಿದ್ದರು. "ನಿಯಮ ನಿಯಮವೇ." ಅಮೂಲ್ಯವಾದ ದಿನಗಳು ಸರಿದು ಹೋಗುತ್ತಿದ್ದವು.

ಪರೀಕ್ಷೆಗೆ ಹಿಂದಿನ ಶುಕ್ರವಾರ ರಿಟ್ ಕೇಸು ನಡೆಸುತ್ತಿದ್ದ ಅಡ್ವೊಕೇಟರು, ನಮಗೆ, ಸೋಮವಾರ ವಿಚಾರಣೆ ನಡೆಯಲಿದೆ ಎಂದು ತಿಳಿಸಿದರು. 'ಆದರೆ ಅಂದು ಮೊಕದ್ದಮೆಯನ್ನು ಆಲಿಸುವ ನ್ಯಾಯಾಧೀಶರು ನಮ್ಮ ಬಗೆಗೆ ಸ್ವಲ್ಪ ವಿರೋಧ ಭಾವನೆಯುಳ್ಳವರು. ನಮ್ಮ ಕೇಸು ಜಯಗಳಿಸುವುದು ಸಂದೇಹ. ಆದ್ದರಿಂದ ಮೈಸೂರಿಗೆ ಹೋಗಿ ಮರುದಿನ ಅಂದರೆ ಶನಿವಾರವೇ ಕುಲಪತಿಗಳನ್ನೇ ಭೇಟಿ ಮಾಡುವುದು ಒಳ್ಳೆಯದು. ಅದರಿಂದ ನಮ್ಮ ಉದ್ದೇಶ ಈಡೇರಿದರೆ ಕೇಸಿಗೆ ಅವಕಾಶವೇ ಇರುವುದಿಲ್ಲ' ಎಂದರು. ಈಗ ನಾವು ಏನನ್ನು ಬೇಕಾದರೂ ಮಾಡಲು ಸಿದ್ಧರಾಗಿದ್ದೆವು.

ಮರುದಿನ ನನ್ನ ಅತ್ಯುತ್ತಮ ಯೂನಿಫಾರಂ ಧರಿಸಿ ಬೆಳಗ್ಗೆ ಬೇಗನೆ ಬಸ್ಸು ಹತ್ತಿ ಮೈಸೂರಿಗೆ ಹೋದೆ. ನೇರವಾಗಿ ಕುಲಪತಿಗಳ ನಿವಾಸಕ್ಕೆ ಹೋದೆ. ಬಾಗಿಲ ಕರೆಗಂಟೆ ಒತ್ತಿದೆ. ಅವರ ಆಪ್ತಸಹಾಯಕರು ಇರಲಿಲ್ಲವಾಗಿ ಅವರೇ ಬಾಗಿಲು ತೆರೆದರು. ಶ್ರೀ ಶ್ರೀಮಾಲಿಯವರು ರಾಜಾಸ್ಥಾನದವರು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದವರು.

ನೆಟ್ಟಗೆ ನಿಂತವನೇ ವಿಧ್ಯುಕ್ತವಾಗಿ ಸೆಲ್ಯೂಟ್ ಮಾಡಿದೆ.

"ಗುಡ್ ಮಾರ್ನಿಂಗ್, ನನ್ನಿಂದ ನಿಮಗೆ ಏನಾಗಬೇಕು," ಎಂದರು.

ನಾನು ಭಾರತೀಯ ಸೇನೆಯ ಮರಾಠಾ ಪಡೆಗೆ ಸೇರಿದವನು, ನನ್ನ ಮಗಳಿಗೆ ಪಿಯುಸಿ ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ನಿರಾಕರಿಸಲಾಗಿದೆ. ರೆಜಿಸ್ಟ್ರಾರ್ ಹೇಗೆ ಪಿಯುಸಿ ಸೇರಿಕೊಳ್ಳಲು ಮೊದಲು ಒಪ್ಪಿಗೆ ಕೊಟ್ಟಿದ್ದರು, ಈಗ ಹೇಗೆ ಮಾತಿನಿಂದ ಹಿಂದೆ ಸರಿದಿದ್ದಾರೆ ಎಂದು ವಿವರವಾಗಿ ಹೇಳಿದೆ. ಪತ್ರವ್ಯವಹಾರವನ್ನೂ ತೋರಿಸಿದೆ.

ನಾವಿಬ್ಬರೂ ಇನ್ನೂ ನಿಂತೇ ಇದ್ದೆವು.

ಅವರು ಪತ್ರಗಳನ್ನು ಕುತೂಹಲದಿಂದ ನೋಡಿದರು. ವಜಾ ಮಾಡುವ ದನಿಯಲ್ಲಿ ಹೇಳಿದರು, "ವಿಷಯ ಸರಳವಾಗಿದೆ. ಪಬ್ಲಿಕ್ ಪರೀಕ್ಷೆ ಪಾಸು ಮಾಡಿರದ ಆಕೆಗೆ ಪರೀಕ್ಷೆ ತೆಗೆದುಕೊಳ್ಳಲು ಹೇಗೆ ಅನುಮತಿ ನೀಡುವುದು ಸಾಧ್ಯ?"

ಶನಿವಾರ ಬೆಳಗಾಗೆದ್ದು ಇಷ್ಟು ಸಣ್ಣ ವಿಷಯಕ್ಕೆ ತಮಗೆ ತೊಂದರೆ ಕೊಟ್ಟದ್ದು ಸರಿಯಲ್ಲ ಎಂಬ ಧೋರಣೆ ಅವರ ದನಿಯಲ್ಲಿ ಇದ್ದಂತೆ ತೋರಿತು.

ನನ್ನಲ್ಲಿ ಬೆಳೆಯುತ್ತಿದ್ದ ಅಸಹನೆಯನ್ನು ತಡೆದುಕೊಂಡು ಹೇಳಿದೆ, "ಸರ್, ರಾಜಾಸ್ಥಾನದ ೧೧ನೆಯ ತರಗತಿಯನ್ನು ಮೈಸೂರಿನ ಎಸ್.ಎಸ್.ಎಲ್.ಸಿ.ಗೆ ಸಮವೆಂದು ತಾವು ಪರಿಗಣಿಸಿದ್ದೀರಿ. ಈ ಪರಸ್ಪರ ಮನ್ನಣೆಯನ್ನು ಆಧಾರವಾಗಿಟ್ಟುಕೊಂಡೇ ರೆಜಿಸ್ಟ್ರಾರರು ಗಾಯತ್ರಿ ನ್ಯಾಷನಲ್ ಕಾಲೇಜಿಗೆ ಸೇರಲು ಅನುಮತಿ ನೀಡಿದರು. ಈಗ ಅದನ್ನು ಹೇಗೆ ಅಲ್ಲಗಳೆಯಲು ಸಾಧ್ಯ?"

ವ್ಯಂಗ್ಯವಾಗಿ ಅವರು ನುಡಿದರು, "ಅಯ್ಯಾ, ನೀವು ಎಲ್ಲಿ ಓದಿದಿರಿ? ನಿಮ್ಮ ಮಗಳು ಪಬ್ಲಿಕ್ ಪರೀಕ್ಷೆಯನ್ನು ಪಾಸು ಮಾಡಿಲ್ಲ , ಪಬ್ಲಿಕ್ ಪರೀಕ್ಷೆ! ನಿಮಗೇಕೆ ಈ ವಿಷಯ ಅರ್ಥವಾಗುತ್ತಿಲ್ಲ."

ಕೋಪದಿಂದ ಒಂದು ಹೆಜ್ಜೆ ಹಿಂದಿಟ್ಟೆ. ಕಾಂಕ್ರೀಟ್ ನೆಲದ ಮೇಲೆ ನನ್ನ ಬೂಟುಗಳು ಪಿಸ್ತೂಲು ಗುಂಡಿನಂತೆ ಶಬ್ದ ಮಾಡಿದವು.

"ಸರ್, ನನ್ನ ದುರ್ಬಲವಾದ ವಿಚಾರವೊಂದನ್ನು ಕಲಕಿಬಿಟ್ಟಿರಿ. ನೀವು ಇಂದು ಕುಲಪತಿಗಳಾಗಿರುವ ಈ ನಿಷ್ಪ್ರಯೋಜಕ ವಿಶ್ವವಿದ್ಯಾನಿಲಯದಲ್ಲೇ ನಾನೂ ಓದಿದೆ. ಮಹಾತ್ಮರ ಕರೆಗೆ ಓಗೊಟ್ಟು ೧೯೪೨ರಲ್ಲಿ ನನ್ನ ವಿದ್ಯಾಭ್ಯಾಸವನ್ನು ತ್ಯಾಗ ಮಾಡಿದೆ. ಒಬ್ಬ ಸ್ವಾತಂತ್ರ್ಯ ಹೋರಾಟಗಾರ ಏನೆಲ್ಲ ಅನುಭವಿಸುತ್ತಾನೋ ಅವೆಲ್ಲವನ್ನೂ ಅನುಭವಿಸಿದೆ. ಆಮೇಲೆ ಭಾರತೀಯ ಸೇನೆಗೆ ಸೇರಿದೆ. ಈಗ ನಿಮ್ಮ ಈ ದೊಡ್ಡ ವಿಶ್ವವಿದ್ಯಾನಿಲಯವು ನನ್ನ ಮಗಳಿಗೆ ಮಾಡುತ್ತಿರುವ ಒಂದು ಅನ್ಯಾಯವನ್ನು ಸರಿಪಡಿಸಿ ನ್ಯಾಯ ಕೊಡಬೇಕೆಂದು ಕೋರುತ್ತಾ ನಿಮ್ಮೆದುರಿಗೆ ಬಂದು ನಿಂತಿದ್ದೇನೆ. ಸ್ವತಃ ಸ್ವಾತಂತ್ರ್ಯ ಹೋರಾಟಗಾರರಾಗಿ ನೀವು ಇದನ್ನು ಅರ್ಥ ಮಾಡಿಕೊಳ್ಳುವಿರಿ ಎಂದು ನಿರೀಕ್ಷಿಸಿದ್ದೆ. ಆದರೆ ನಿಮಗೆ ಇದನ್ನು ಕೇಳಲು ಅಪೇಕ್ಷೆಯಿಲ್ಲ. ನಿಮ್ಮ ಕಾನೂನುಗಳ ಹಿಂದೆ ಬಚ್ಚಿಟ್ಟುಕೊಳ್ಳಲು ಬಯಸುತ್ತೀರಿ. ನಾನು ಇನ್ನು ಹೋಗಬಹುದೆಂದು ತೋರುತ್ತದೆ."

ತಿರುಗಿದವನೆ ನನ್ನ ಕಾಗದ ಪತ್ರಗಳ ಕಟ್ಟು ತೆಗೆದುಕೊಳ್ಳಲು ಹೋದೆ.

"ಅಯ್ಯಾ, ತರುಣ, ಸ್ವಲ್ಪ ನಿಲ್ಲು" ಎಂದರು. "ಭಾವಪರವಶ ನಾಗಬೇಡ, ಸ್ವಲ್ಪ ತಡೆ, ನಿನ್ನ ಫೈಲು ಕೊಡು, ಮತ್ತೆ ನೋಡೋಣ".

ನನ್ನ ಕೈಯಿಂದ ಫೈಲು ತೆಗೆದುಕೊಂಡು ತಿರುವಿಹಾಕಿ ನೋಡಿದರು. ಸ್ವಲ್ಪ ಹೊತ್ತು ಆಲೋಚಿಸಿದರು. "ಏನು ಮಾಡಬಹುದೋ ನೋಡುತ್ತೇನೆ. ನಾಳೆ ಮಧ್ಯಾಹ್ನ ಒಂದು ಸೆನೆಟ್ ಸಭೆಯನ್ನು ಕರೆಯುತ್ತೇನೆ, ಭಾನುವಾರವಾದರೂ ಚಿಂತೆಯಿಲ್ಲ. ಈಗ ಏನೂ ಭರವಸೆ ಕೊಡಲಾರೆ. ಆದರೆ ನನ್ನ ಶಕ್ತಿಮೀರಿ ಪ್ರಯತ್ನ ಮಾಡುತ್ತೇನೆ. ಆಗಬಹುದೇ! ಈ ಕಾಗದ ಪತ್ರಗಳು ಇಲ್ಲೇ ಇರಲಿ" ಎಂದರು.

ನನ್ನ ಹೆಗಲಿನಿಂದ ದೊಡ್ಡ ಭಾರ ಇಳಿದಂತೆನಿಸಿತು.

ಹೃತ್ಪೂರ್ವಕ ವಂದನೆ ಹೇಳಿ ಕುಲಪತಿಗಳನ್ನು ಬೀಳ್ಕೊಂಡು ಬಸ್ ನಿಲ್ದಾಣಕ್ಕೆ ಧಾವಿಸಿ ಬಂದೆ. ಸಿಕ್ಕಿದ ಮೊದಲ ಬಸ್ ಹತ್ತಿ ಬೆಂಗಳೂರು ಸೇರಿದೆ. ಈಗ ಸೆನೆಟ್, ಗಾಯತ್ರಿಗೆ ಅನುಮತಿ ಕೊಡುವುದರಲ್ಲಿ ಸಂದೇಹವಿಲ್ಲ ಎಂದು ನನಗನ್ನಿಸಿತು.

ಮಾರನೆ ದಿನ ಮತ್ತೆ ಅಣ್ಣ ಮತ್ತು ನಾನು ಇಬ್ಬರೂ ಮೈಸೂರಿಗೆ ಹೋದೆವು. ಸೆನೆಟ್ ಸಭೆ ನಡೆಯುತ್ತಿದ್ದ ಕೊಠಡಿಯ ಹೊರಗೆ ಕಾದು ಕುಳಿತೆವು. ಸಭೆ ಎರಡು ಗಂಟೆಗೆ ಪ್ರಾರಂಭವಾಯಿತು. ಸುಮಾರು ಹತ್ತು ನಿಮಿಷಗಳಲ್ಲಿ ಒಬ್ಬ ಸದಸ್ಯರು, ಬನುಮಯ್ಯ ಕಾಲೇಜಿನ ಪ್ರಾಂಶುಪಾಲರು ಹೊರ ಬಂದರು, 'ಸೆನೆಟ್ ನಮ್ಮ ಕೋರಿಕೆಯನ್ನು ಒಪ್ಪಿಕೊಂಡಿದೆ' ಎಂಬ ಸಂತೋಷದ ವಿಷಯ ಪ್ರಕಟಿಸಿದರು. ನಮಗೆ ಇದನ್ನು ತಿಳಿಸಬೇಕೆಂದು ಕುಲಪತಿಗಳೇ ಅವರಿಗೆ ಹೇಳಿದರಂತೆ.

ನಮಗೆ ರೋಮಾಂಚನವಾಯಿತು, ಅವರನ್ನು ವಂದಿಸಿದೆವು. ಮನಸ್ಸಿನಲ್ಲೇ ಶ್ರೀಮಾಲಿ ಅವರಿಗೂ ನಾನು ವಂದನೆ ಅರ್ಪಿಸಿದೆ. ಪರೀಕ್ಷೆಗೆ ಹೋಗಬೇಕಾದ ಎರಡು ಗಂಟೆಗಳ ಮೊದಲು ಗಾಯತ್ರಿಗೆ ಪ್ರವೇಶಪತ್ರ ದೊರಕಿತು. ಎಲ್ಲ ಪಠ್ಯ ವಿಷಯಗಳಲ್ಲೂ ಅವಳು ಉತ್ತಮವಾಗಿ ಬರೆದಳು. ಉನ್ನತ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಯಾದಳು. ಯಾವುದೇ ಇಂಜಿನಿಯರಿಂಗ್ ಅಥವಾ ಮೆಡಿಕಲ್ ಕಾಲೇಜಿನಲ್ಲಿ ಅವಳು ಸುಲಭವಾಗಿ ಸೇರಿಕೊಳ್ಳಬಹುದಾಗಿತ್ತು. ಆದರೆ ನ್ಯಾಷನಲ್ ಕಾಲೇಜಿನಲ್ಲೇ ಬಿ.ಎಸ್‌ಸಿ. ಓದಿದರೆ ಮೇಲು ಎಂದು ನಾವು ಹೇಳಿದೆವು. ಅವಳು ವಿದ್ಯಾವತಿಯಾಗುತ್ತಾಳೆ. ಆದರೆ ಸೂಕ್ತವರನನ್ನು ಹುಡುಕುವುದು ಕಷ್ಟವಾಗುವಷ್ಟು ವಿದ್ಯೆಯಲ್ಲ. ಮೂರು ವರ್ಷಗಳಲ್ಲಿ ಅದು ಮುಗಿಯುತ್ತದೆ. ಒಳ್ಳೆಯ ಸಂಬಂಧವನ್ನು ಹುಡುಕಲು ಅದು ಸರಿಯಾದ ಸಮಯವಾಗುತ್ತಿತ್ತು. ಇನ್ನು ಅಣ್ಣ-ಅತ್ತಿಗೆಯರಿಗೆ ಗಾಯತ್ರಿ ಭಾರವಾಗಿರಬಾರದು ಎಂದೂ ನನಗೆ ಅನ್ನಿಸಿತು. ಅವಳನ್ನು ಗಾರ್ಗಿ ಸದನ್ ಹಾಸ್ಟೆಲ್‌ಗೆ ಸೇರಿಸಿದೆ.

ನಾವು ಬೆಳಗಾವಿಯಲ್ಲಿದ್ದಾಗ ಗಾಯತ್ರಿ ಬಿ.ಎಸ್‌ಸಿ., 2ನೆಯ ತರಗತಿಯಲ್ಲಿದ್ದಳು. ಆಗ ಶಿವಮೊಗ್ಗದಲ್ಲಿ ನನ್ನ ಚಿಕ್ಕ ತಮ್ಮ ಪ್ರಸನ್ನನ ಮದುವೆ ನಡೆಯಿತು. ನಾವೆಲ್ಲ ಅದಕ್ಕಾಗಿ ಶಿವಮೊಗ್ಗಕ್ಕೆ ಹೋದೆವು. ನಾವು ಅಲ್ಲಿಗೆ ಬರುವುದನ್ನು ತಿಳಿದು ಹುಣಸೂರಿನಿಂದ ಒಬ್ಬ ಡಾಕ್ಟರು ತಮ್ಮ ಪತ್ನಿಯೊಂದಿಗೆ ಅಲ್ಲಿಗೆ ಬಂದರು. ಗಾಯತ್ರಿಯನ್ನು ತಮ್ಮ ಮಗ ನಾಗರಾಜನಿಗೆ ತಂದುಕೊಳ್ಳುವುದು ಅವರ ಅಪೇಕ್ಷೆಯಾಗಿತ್ತು. ಅವರಿಗೆ ಗಾಯತ್ರಿ ಮೆಚ್ಚಿಗೆಯಾದಳು. ಔಪಚಾರಿಕವಾಗಿ ಹುಡುಗ-ಹುಡುಗಿ ಭೇಟಿಮಾಡಲಿ ಎಂದರು.

ಒಮ್ಮೆ ಹಾಗೆ ಸಂಧಿಸಿದ ಮೇಲೆ ನಿಶ್ಚಿತಾರ್ಥವಾಯಿತು. ಗಾಯತ್ರಿ ಬಿ.ಎಸ್‌ಸಿ.,ಯ ಅಂತಿಮ ವರ್ಷದಲ್ಲಿ ಕಲಿಯುತ್ತಿದ್ದಳು. ಪರೀಕ್ಷೆ ಮುಗಿದ ಮೇಲೆ ಮುಂದಿನ ಮೇ ತಿಂಗಳಲ್ಲಿ ಒಂದು ಶುಭದಿನ ಮದುವೆ ನಡೆಯಬೇಕೆಂದು ತೀರ್ಮಾನಿಸಲಾಯಿತು.

೧೯. ಬಬಿನಾದಲ್ಲಿ ಒಂದು ವರ್ಷ

ಬೆಳಗಾವಿಯಲ್ಲಿ ಮೂರು ವರ್ಷ ಕಳೆಯಲು ನನ್ನನ್ನು ೧೭ ಮರಾಠಾ ದಳಕ್ಕೆ ಎರಡನೇ ಅಧಿಕಾರಿಯಾಗಿ (ಸೆಕೆಂಡ್-ಇನ್-ಕಮಾಂಡ್) ವರ್ಗಾವಣೆ ಮಾಡಿದರು. ಯೂನಿಟ್ಟು ಸಿಕ್ಕಿಂನಲ್ಲಿ ಚಾಂಗಿಬೋಲ್ ಎಂಬಲ್ಲಿತ್ತು. ನಾಥು-ಲಾ ಕಣಿವೆ ಅದರ ಹೊಣೆಗಾರಿಕೆಯಲ್ಲಿತ್ತು.

ಲೆ.ಕ. ಸಾಬ್ಲೆ ಅಲ್ಲಿಯ ಕಮಾಂಡಿಂಗ್ ಆಫೀಸರ್ ಆಗಿದ್ದರು. ೧೭ ಮರಾಠಾ ಪಡೆಯು ಮೇಜರ್ ಜನರಲ್ ಡಿಸೋಜ ಅವರ ನೇತೃತ್ವದಲ್ಲಿದ್ದ ಒಂದು ಬ್ರಿಗೇಡಿನ ಭಾಗವಾಗಿತ್ತು. ಅವರೇ ಈ ಬೆಟಾಲಿಯನ್ನಿನ ಮೊದಲನೆಯ ಸಿ.ಓ. ಆಗಿದ್ದರು. ಆಗ ಅಜುಟೆಂಟ್ ಆಗಿದ್ದ ಈ ಡಿಸೋಜಾ ಅವರೇ ನನಗೆ ಬೆಳಗಾವಿಯಲ್ಲಿ ಮರಾಠಾದಳಕ್ಕೆ ದೀಕ್ಷೆ ಕೊಟ್ಟವರು.

ಈಚೆಗೆ ಪತ್ರಿಕೆಗಳಲ್ಲಿ ಒಂದು ಚಿತ್ರ ಪ್ರಕಟವಾಗಿತ್ತು. ಭಾರತೀಯ ಸೇನೆಯ ಒಂದು ತುಕಡಿಯೂ, ಚೀನಾದ ಸೇನೆಯ ಒಂದು ತುಕಡಿಯೂ, ತಂತಿ ಬೇಲಿಯ ಆಚೆ ಈಚೆ ನಿಂತು ದುರುಗುಟ್ಟಿ ನೋಡುತ್ತಿರುವ ಚಿತ್ರ. ಅಲ್ಲಿದ್ದವರು ನಮ್ಮ ಹುಡುಗರೇ. ಆಗಾಗ ಬಿಕ್ಕಟ್ಟು ಉಂಟಾಗುತ್ತಿತ್ತು. ಆಮೇಲೆ ಇಳಿಯುತ್ತಿತ್ತು. ಅದು ಬಿಗುವು-ಒತ್ತಡ ಪರಾಕಾಷ್ಠೆಯಲ್ಲಿದ್ದ ಸಮಯ. ಆದರೆ ರಾಜನೀತಿಜ್ಞರು ಕುಳಿತು ಮಾತನಾಡಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು.

ನಾಥು-ಲಾ ೧೮,೦೦೦ ಅಡಿ ಎತ್ತರದಲ್ಲಿದೆ. ಆ ಎತ್ತರದ ಹವೆಯನ್ನು ಒಗ್ಗಿಸಿಕೊಳ್ಳಲು ಹಲವು ಹಂತಗಳಲ್ಲಿ ಅಲ್ಲಿಗೆ ಹೋಗಿ ಸೇರಬೇಕು. ಕೊರೆಯುವ ಚಳಿ ; ಆದರೆ ಬಹುಕಾಲ ನಾವು ಅಲ್ಲಿ ಇರಬೇಕಾಗಲಿಲ್ಲ. ಆರು ತಿಂಗಳಾಗುತ್ತಲೇ ಅಲ್ಲಿಂದ ಮಧ್ಯಪ್ರದೇಶದ ಬಬಿನಾ ಎಂಬಲ್ಲಿಗೆ ಹೋಗಲು ಹೇಳಿದರು. ಅದು ಉತ್ತರಪ್ರದೇಶದ ಝಾನ್ಸಿಯಿಂದ ಸುಮಾರು ೨೫ ಮೈಲು ದೂರದಲ್ಲಿದೆ.

ಸಾವಿತ್ರಿ, ಹೇಮಾ, ರವಿ ನನ್ನನ್ನು ಬೇಗನೆಯೇ ಕೂಡಿಕೊಂಡರು. ಇದು ೧೯೬೭ರ ಅಕ್ಟೋಬರ್. ಬಬಿನಾ ತುಂಬ ಚಳಿಯ ಪ್ರದೇಶ. ರವಿ ಎಂಟನೆಯ ತರಗತಿಯ ಮಧ್ಯೆ, ಹೇಮಾ ನಾಲ್ಕನೇ ತರಗತಿಯ ಮಧ್ಯೆ ಓದುತ್ತಿದ್ದರು. ಅವರು ಝಾನ್ಸಿಯಲ್ಲಿ ಶಾಲೆಗೆ ಹೋಗ ತೊಡಗಿದರು. ಅಲ್ಲಿದ್ದ ಅತ್ಯುತ್ತಮವಾದ ಶಾಲೆ ಸೇಂಟ್ ಮಾರ್ಕ್ಸ್ ಹೈಸ್ಕೂಲು, ಅವರು ಕೇಂಬ್ರಿಡ್ಜ್ ಕ್ರಮವನ್ನು ಅನುಸರಿಸುತ್ತಿದ್ದರು. ಶಾಲೆ ಡಿಸೆಂಬರ್‌ನಿಂದ ಡಿಸೆಂಬರ್‌ವರೆಗೆ ; ಹಾಗಾಗಿ ರವಿ ಎರಡೇ ತಿಂಗಳಲ್ಲಿ ಪರೀಕ್ಷೆ ತೆಗೆದುಕೊಳ್ಳಬೇಕಾಯಿತು. ಅಲ್ಲದೆ ಇಲ್ಲಿಯ ಪಠ್ಯಕ್ರಮದ ಮಟ್ಟ ಮಿಕ್ಕವುಗಳಿಗಿಂತ ತುಂಬಾ ಮೇಲಿನದಾಗಿತ್ತು. ಸಾವಿತ್ರಿ ಮತ್ತು ನಾನು ಜಾಮಿಟ್ರಿ ಹಾಗೂ ಆಲ್ಜೀಬ್ರಾಗಳಲ್ಲಿ ಬಿರುಸಿನ ತರಬೇತಿ ಕೊಟ್ಟಿದ್ದರಿಂದ ಅವನು ಹೇಗೋ ಅಂತೂ ನಿಭಾಯಿಸಿದನು. ಅವನ ಉಪಾಧ್ಯಾಯರಿಗೇ ಆಶ್ಚರ್ಯವಾಯಿತು. ಹೇಮಾ, ಹೆಣ್ಣುಮಕ್ಕಳಿಗಾಗಿ ಇದ್ದ ಇನ್ನೊಂದು ಶಾಲೆಗೆ ಸೇರಿದಳು. ಸೇನೆಯ ಅಧಿಕಾರಿಗಳು ಶಾಲಾ ಮಕ್ಕಳನ್ನು ಝಾನ್ಸಿಗೆ ಕರೆದೊಯ್ಯಲು ಒಂದು ಟ್ರಕ್ ಏರ್ಪಾಡು ಮಾಡಿದ್ದರು. ಇಬ್ಬರೂ ಬೆಳಗ್ಗೆ ಏಳು ಗಂಟೆಗೆ ಹೊರಟು ಸಂಜೆ ೫.೩೦-೬.೦೦ ಗಂಟೆಗೆ ಹಿಂದಿರುಗುತ್ತಿದ್ದರು. ರಜೆಯ ಸಮಯದಲ್ಲಿ ಗಾಯತ್ರಿ ಬರುತ್ತಿದ್ದಳು.

ಈ ಸಮಯದಲ್ಲಿ ಬೆಟಾಲಿಯನ್ನು ಎಕ್ಸ್-ಬೆಟ್ವಾ ಎಂಬ ವಾಸ್ತವಿಕ ಯುದ್ಧಾಭ್ಯಾಸ ನಡೆಸಿತು. ಸುಮಾರು ಮೂರು ತಿಂಗಳ ಕಾಲ ಚಂಬಲ್ ಕಣಿವೆಯ ಬೆಟ್ಟಗಾಡು ಪ್ರದೇಶದಲ್ಲಿ ಅಣಕು ಸೈನ್ಯಾಚರಣೆ ನಡೆಸಿದೆವು. ಯುದ್ಧ, ಗಸ್ತು , ಪಥಸಂಚಲನ , ರಾತ್ರಿ ನದಿ ದಾಟುವಿಕೆ ಎಲ್ಲವೂ ಇದ್ದವು. ಆಹಾರ , ಬಟ್ಟೆ , ಕಂಬಳಿ, ಆಯುಧಗಳು, ಮದ್ದುಗುಂಡು, ಎಲ್ಲವನ್ನೂ ಬೆನ್ನಮೇಲೆ ಹೊರುತ್ತಿದ್ದೆವು. ಆಗೀಗ ಒಂದೆರಡು ದಿನ ನಮ್ಮ ಮನೆಗಳಿಗೆ ಬರಬಹುದಾಗಿತ್ತು. ಆ ರಜಾ ದಿನಗಳು ನೋವು, ಗಾಯ, ಊತಗಳ ಬಳಲಿಕೆಯಿಂದ ಚೇತರಿಸಿಕೊಳ್ಳುವುದರಲ್ಲಿ ಮುಗಿದುಹೋಗುತ್ತಿದ್ದವು.

ಮೇ ತಿಂಗಳ ಮೊದಲಲ್ಲಿ ಗಾಯತ್ರಿಯ ಮದುವೆಯ ಸಿದ್ಧತೆಗಳನ್ನು ಮಾಡಲು ಬೆಂಗಳೂರಿಗೆ ಹೋದೆವು. ಅದೇ ಸಮಯಕ್ಕೆ ರವಿಯ ಉಪನಯನ ಕಾರ್ಯಕ್ರಮವನ್ನು ನಡೆಸಿಬಿಡಲು ಯೋಚಿಸಿದ್ದೆವು. ಯಾವ ತೊಂದರೆಯೂ ಇಲ್ಲದೆ ಮದುವೆ ಸಾಂಗವಾಗಿ ನಡೆಯಿತು. ದೈವಕೃಪೆ! ದೊಡ್ಡ ಜವಾಬ್ದಾರಿ ನಿರ್ವಹಿಸಿ ನಿಟ್ಟುಸಿರು ಬಿಟ್ಟ ಹಾಗಾಯಿತು.

ಸ್ವಲ್ಪ ಚರ್ಚೆ ಮಾಡಿ ರವಿಯನ್ನು ನ್ಯಾಷನಲ್ ಹೈಸ್ಕೂಲಿನಲ್ಲಿ ಓದಲು ಬಿಡುವುದು ಎಂದು ನಿರ್ಧರಿಸಿದೆವು. ಅವನನ್ನು ಒಂಬತ್ತನೆಯ ತರಗತಿಗೆ ಸೇರಿಸಿದರು. ಸೇಂಟ್ ಮಾರ್ಕ್ಸ್ ಶಾಲೆಯ ಮಟ್ಟ ತುಂಬ ಮೇಲಾಗಿದ್ದರಿಂದ ಅವನು ಅಲ್ಲಿ ಸಾಕಷ್ಟು ಉತ್ತಮ ಪ್ರಗತಿ ಸಾಧಿಸುತ್ತಿಲ್ಲ ಎಂದು ನಮಗೆ ಅನ್ನಿಸಿತ್ತು. ಅಲ್ಲಿ ಕಳೆದಿದ್ದ ಆರು ತಿಂಗಳು ಇಲ್ಲಿನ ಹುಡುಗರಿಗಿಂತ ಸ್ವಲ್ಪ ಉತ್ತಮ ಸ್ಥಿತಿಯನ್ನು ಕೊಟ್ಟಿದ್ದು ಎಸ್‌ಎಸ್‌ಎಲ್‌ಸಿ ಯಲ್ಲಿ ಉತ್ತಮ ಅಂಕಗಳನ್ನು ಪಡೆಯಲು ಅವನಿಗೆ ಅನುಕೂಲವಾಗುತ್ತಿತ್ತು. ಅವನು ನ್ಯಾಷನಲ್ ಕಾಲೇಜು ಹಾಸ್ಟೆಲ್‌ನಲ್ಲಿ ತಂಗಲು ವ್ಯವಸ್ಥೆಯಾಯಿತು. ಅಲ್ಲೇ ಬೆಂಗಳೂರಿನಲ್ಲಿಯೇ ಅತ್ಯುತ್ತಮವೆನಿಸಿದ ನ್ಯಾಷನಲ್ ಕಾಲೇಜಿನಲ್ಲಿ ಸೇರಿ ಆಮೇಲೆ ಉತ್ತಮ ವೃತ್ತಿಪರ ಶಿಕ್ಷಣ ಪಡೆಯಲು ಸಾಧ್ಯವಾಗಲಿತ್ತು.

ಬೆಂಗಳೂರಿನಿಂದ ಹಿಂದಕ್ಕೆ ಬಂದ ಮೇಲೆ ಆರೇಳು ತಿಂಗಳು ಬಬಿನಾದಲ್ಲಿದ್ದೆವು. ಭವಿಷ್ಯವನ್ನು ಕುರಿತು ಯೋಚನೆ ಹತ್ತತೊಡಗಿತ್ತು. ಸೈನ್ಯಕ್ಕೆ ಸೇರಿದ ಮೇಲೆ ಕಾಲವು ವೇಗವಾಗಿ ಸರಿದುಹೋಗಿತ್ತು. ಪದೇ ಪದೇ ವರ್ಗಾವಣೆ, ಪ್ರಯಾಣಗಳಿಂದ ನಾನಾಗಲೇ ಸೈನ್ಯದಲ್ಲಿ ೧೮ ವರ್ಷ ಕಳೆದೆನೆಂಬುದು ನಂಬಿಕೆಗೇ ಬರುತ್ತಿರಲಿಲ್ಲ. ಈಗ ನನಗೆ ೪೬ ವರ್ಷ. ನಿವೃತ್ತನಾಗಲು ಇನ್ನು ಎರಡು ವರ್ಷಗಳು ಮಾತ್ರ ಇದ್ದವು. ಹೆಚ್ಚೆಂದರೆ ಇನ್ನೆರಡು ವರ್ಷ ಮುಂದುವರಿಕೆ ಸಿಕ್ಕಬಹುದು. ಆಮೇಲೆ ಏನು ಮಾಡಬೇಕು ? ರವಿ ಮತ್ತು ಹೇಮ ಇನ್ನೂ ಚಿಕ್ಕಮಕ್ಕಳು, ಅವರ ಶಿಕ್ಷಣ ಮುಗಿಯಬೇಕು, ಮದುವೆಯಾಗಬೇಕು. ನಿವೃತ್ತನಾದ ಅನಂತರ ನನಗೆ ಯಾವ ನೌಕರಿ ಸಿಕ್ಕಬಹುದು ? ನನಗೆ ಭವಿಷ್ಯ ಮಂಕಾಗಿ ಕಾಣಿಸಿತು.

ಉತ್ತರವೋ ಎಂಬಂತೆ ಜನರಲ್ ಡಿಸೋಜಾ ಅವರಿಂದ ನನಗೆ ಫೋನ್ ಕರೆ ಬಂದಿತು. ಈಗ ಅವರು ಸೈನ್ಯದ ಕೇಂದ್ರ ಕಚೇರಿಯಲ್ಲಿದ್ದರು. ಮಣಿಪುರಕ್ಕೆ ಹೋಗಲು ನನಗೆ ಅಪೇಕ್ಷೆಯಿದೆಯೇ ಎಂದು ಕೇಳಿದರು. ಎಲ್ಲಾ ಬಿಟ್ಟು ಮಣಿಪುರಕ್ಕೆ!

ಮಣಿಪುರದ ಗವರ್ನರ್ ಅವರು ಕೆಲವು ಅನುಭವೀ ಅಧಿಕಾರಿಗಳನ್ನು ಕಳಿಸಿಕೊಡಲು ಕೋರಿಕೊಂಡಿದ್ದರು. ಅಲ್ಲಿ ಎದ್ದಿದ್ದ ದಂಗೆಯನ್ನು ಅಡಗಿಸಲು ಹೋರಾಡುತ್ತಿದ್ದ ಪ್ಯಾರಾಮಿಲಿಟರಿ ಪಡೆಗಳಿಗೆ ಹೊಸದಾಗಿ ತರಬೇತಿ ನೀಡಿ, ಪುನರ್ ವ್ಯವಸ್ಥೆಗೊಳಿಸಲು ಅವರನ್ನು ನಿಯೋಜಿಸಿ ಕಳಿಸಬೇಕಾಗಿತ್ತು. ಒಡನೆಯೇ ಜನರಲ್ ಡಿಸೋಜಾ ತಮ್ಮ ಹಿಂದಿನ ಬೆಟಾಲಿಯನ್ ನೆನೆದರು. ಇದಕ್ಕೆ ಸೂಕ್ತವಾಗಿ ಹೊಂದಿಕೊಳ್ಳುವ ವ್ಯಕ್ತಿ ನಾನು, ನಿವೃತ್ತಿಯ ಸಮೀಪದಲ್ಲಿರುವವನು ಎಂದು ನನ್ನ ಕಡತದಿಂದ ತಿಳಿದುಕೊಂಡು ನನಗೆ ಈ ಕೆಲಸವನ್ನು ನೀಡಿದರು. ಈ ಸ್ಥಾನ ಕಮಾಂಡೆಂಟ್, ಸೈನ್ಯದ ಲೆಫ್ಟಿನೆಂಟ್ ಕರ್ನಲ್‌ಗೆ ಸಮ. ೫೮ ನೆಯ ವರ್ಷದವರೆಗೂ ಸೇವೆಯಲ್ಲಿರಬಹುದಾಗಿತ್ತು.

ನಾನು ಅದನ್ನು ಒಪ್ಪಿಕೊಳ್ಳುವುದು ಅವರ ಇಚ್ಛೆಯೇ ಎಂದು ಕೇಳಿದೆ. ಹೌದು ಎಂದು ಅವರು ತಿಳಿಸಿದರು. ಸಾವಿತ್ರಿಯೂ ಅದನ್ನು ಒಪ್ಪಿದಳು. ೧೫ ದಿನಗಳಲ್ಲಿ ಸಾವಿತ್ರಿ, ಹೇಮಾ ಮತ್ತು ನಾನು ಇಂಫಾಲಕ್ಕೆ ಹೋಗುವ ದಾರಿಯಲ್ಲಿ ಗುವಾಹಟಿ ರೈಲು ಹತ್ತಿದೆವು.

೨೦. ಮಣಿಪುರದಲ್ಲಿ

ನನ್ನ ಚಲನೆಯ ಆದೇಶದಲ್ಲಿ ನಾನು ಮೊದಲು ಶಿಲಾಂಗ್‌ನಲ್ಲಿದ್ದ ಒಂದು ಗಡಿ ಭದ್ರತಾ ಪಡೆಗೆ (ಬಿಎಸ್‌ಎಫ್) ವರದಿ ಮಾಡಿಕೊಳ್ಳಬೇಕೆಂದೂ, ಇಂಫಾಲಕ್ಕೆ ಹೋಗುವ ಮೊದಲು ಅಲ್ಲಿ ಪರಿಸ್ಥಿತಿಯ ಪರಿಚಯ ಮಾಡಿಕೊಳ್ಳಬೇಕೆಂದೂ ಹೇಳಲಾಗಿತ್ತು. ಮಣಿಪುರಕ್ಕೆ ನನ್ನ ನಿಯೋಜನೆ ಬಿಎಸ್‌ಎಫ್ ಮೂಲಕವಾಗಿತ್ತು.

ಗುವಾಹಟಿ ರೈಲು ನಿಲ್ದಾಣದಲ್ಲಿ ಒಬ್ಬ ಅಸಿಸ್ಟೆಂಟ್ ಕಮಾಂಡೆಂಟ್ ಮತ್ತು ಕೆಲವು ಕಾನ್‌ಸ್ಟೇಬಲ್‌ಗಳು ಇದ್ದರು. ನಮ್ಮನ್ನು ಜೀಪಿನಲ್ಲಿ ಸುಮಾರು ೬೦ ಕಿ.ಮೀ. ದೂರದ ಶಿಲಾಂಗ್‌ಗೆ ಕರೆದೊಯ್ದರು. ದಾರಿಯಾದರೋ ಮರಗಳು ನಿಬಿಡವಾಗಿ ಬೆಳೆದ ಬೆಟ್ಟದಲ್ಲಿ ಸುತ್ತಿ ಬಳಸಿ ಹೋಗುವಂಥದು. ಮರಗಳಿಲ್ಲದ ಕಡೆ ಟೀ ತೋಟಗಳು. ಎತ್ತರದ ಸ್ಥಳಗಳಲ್ಲಿ ಸಣ್ಣ ಹಿಮ ಉದುರುತ್ತಿತ್ತು.

ಶಿಲಾಂಗ್ ಮೇಘಾಲಯದ (ಮೋಡಗಳ ನಾಡಿನ) ರಾಜಧಾನಿ. ದೀರ್ಘವಾದ ಮತ್ತು ಬಳಲಿಕೆಯ ಪ್ರಯಾಣದನಂತರ ಇದು ಬಹಳ ಉಲ್ಲಾಸದಾಯಕವಾಗಿತ್ತು.

ವರದಿ ಮಾಡಿಕೊಳ್ಳುವ ಕೆಲಸಕ್ಕೆ ಹೆಚ್ಚು ಸಮಯ ಬೇಕಾಗಲಿಲ್ಲ. ಅಸಿಸ್ಟೆಂಟ್ ಕಮಾಂಡೆಂಟ್ ಶೇಖದಾರ್ ನಮ್ಮನ್ನು ನೋಡಿಕೊಂಡರು. ರಾತ್ರಿ ತಮ್ಮ ಮನೆಯಲ್ಲೇ ನಮ್ಮನ್ನು ಉಳಿಸಿಕೊಂಡರು. ಬೆಟಾಲಿಯನ್ ಲೈನುಗಳ ಪರಿಚಯ ಮಾಡಿಕೊಟ್ಟರು. ಹದಿಮೂರು ವರ್ಷಗಳ ಅನಂತರ ಬೆಂಗಳೂರಿನಲ್ಲಿ ೧೧೨ ಬಿಎಸ್‌ಎಫ್‌ನಲ್ಲಿ ಕಮಾಂಡೆಂಟ್ ಆಗಿ ನಿವೃತ್ತನಾಗುವಾಗ ಚಾರ್ಜು ವಹಿಸಿಕೊಟ್ಟ ವ್ಯಕ್ತಿ ಇದೇ ಶೇಖದಾರ್. ಹೀಗೆ ನನ್ನ ಬಿಎಸ್‌ಎಫ್ ಜೀವನ ಅವರೊಂದಿಗೆ ಪ್ರಾರಂಭಗೊಂಡು ಅವರೊಂದಿಗೇ ಸಮಾಪನಗೊಂಡಿತು.

ರಾತ್ರಿ ಅಲ್ಲಿ ಕಳೆದು ಮರುದಿನ ವಿಮಾನದಲ್ಲಿ ಸಿಲ್‌ಚಾರ್‌ಗೆ ಹೋದೆವು. ಅದು ಡಕೋಟ ವಿಮಾನ, ತುಂಬಾ ಕುಲುಕುತ್ತಿತ್ತು. ಸಿಲ್‌ಚಾರ್‌ನಲ್ಲಿ ಒಂದು ಪ್ರವಾಸಿ ಬಂಗಲೆಯಲ್ಲಿ ತಂಗಿದೆವು. ಆಹಾರ ಭಯಂಕರವಾಗಿತ್ತು. ಎಲ್ಲೆಲ್ಲೂ ತಿಗಣೆಗಳು ತುಂಬಿದ್ದವು. ಯಾರಿಗೂ ನಿದ್ದೆ ಬರಲಿಲ್ಲ. ಮಾರನೆ ದಿನ ಇಂಫಾಲಕ್ಕೆ ವಿಮಾನವನ್ನೇರಿದೆವು. ಸಿಲ್‌ಚಾರಿಗೂ ಇಂಫಾಲಕ್ಕೂ ನೇರವಾಗಿ ನೂರು ಮೈಲಿ ಕೂಡಾ ಇಲ್ಲ. ಆದರೆ ಎತ್ತರವಾದ ಪರ್ವತ ಪಂಕ್ತಿಗಳು ಎರಡನ್ನೂ ಬೇರ್ಪಡಿಸಿವೆ. ನಮ್ಮ ಡಕೋಟ ಸುತ್ತುಹಾಕಿ ಮೇಲೆ ಚಿಮ್ಮಿ ಎತ್ತರಕ್ಕೆ ಹಾರಿತು. ಆಮೇಲೆ ಒಂದು ಸಾಹಸದಂತಿತ್ತು. ಎಲ್ಲರಿಗೂ ಹೊಟ್ಟೆ ತೊಳಸು, ಕುಲುಕು ಹೆಚ್ಚಾಗಿತ್ತು. ೩೫ ನಿಮಿಷಗಳ ಈ ವಿಮಾನಯಾನವೇ ಇಂಫಾಲದ ತುಲಿಹಲ್ ವಿಮಾನ ನಿಲ್ದಾಣದಲ್ಲಿ ಇಳಿದಾಗ ಸದ್ಯ ಬಂದೆವಲ್ಲ ಎನ್ನಿಸಿತು.

ವಿಮಾನದಿಂದ ಹೊರಬಂದೊಡನೆಯೇ ಹೊಸಗಾಳಿ ಬೀಸಿ ನಮಗೆ ಲವಲವಿಕೆಯನ್ನೂ ಚೈತನ್ಯವನ್ನೂ ನೀಡಿತು. ಅಸಿಸ್ಟೆಂಟ್ ಕಮಾಂಡೆಂಟ್ ಆಪರ್‌ಸಿಂಗ್ ಘುಮಾನ್ ೨ನೇ ಮಣಿಪುರ ರೈಫಲ್ಸ್ ಅಜುಟೆಂಟ್, ನಮ್ಮನ್ನಲ್ಲಿ ಕರೆದೊಯ್ಯಲು ಬಂದಿದ್ದರು. ನಗರವನ್ನು ಪ್ರವೇಶ ಮಾಡುತ್ತಿದ್ದಂತೆ ಇಂಡೋ–ಮಂಗೋಲಿಯನ್ ಲಕ್ಷಣವಿದ್ದ ಸ್ತ್ರೀಪುರುಷರು ಬೈಸಿಕಲ್ ಹತ್ತಿಕೊಂಡು ಓಡಾಡುತ್ತಿದ್ದದುನ್ನು ನೋಡಿದೆವು. ಹೆಂಗಸರು ಸೈಕಲ್ ಸವಾರಿ ಮಾಡುವುದು ಭಾರತದ ಬೇರೆ ಭಾಗಗಳಲ್ಲಿ ಅಷ್ಟೊಂದು ಸಾಮಾನ್ಯ ದೃಶ್ಯವಲ್ಲ. ಎಲ್ಲರೂ ಆರೋಗ್ಯವಾಗಿ, ಶುಭ್ರವಾಗಿ ಕಾಣಿಸಿದರು. ಸಾಂಪ್ರದಾಯಿಕ ಕೈನೇಯ್ಗೆ ಬಟ್ಟೆಗಳನ್ನು ನೀಟಾಗಿ ಧರಿಸಿದ್ದರು. ಹೆಂಗಸರು ಹಣೆಯ ಮೇಲೆ ಉದ್ದವಾದ ಬಿಳಿಯ ಚಿಹ್ನೆ ಇಟ್ಟುಕೊಂಡಿದ್ದರು. ಅವರು ಅದನ್ನು ಗೋಪಿಚಂದನ ಎಂದು ಕರೆಯುತ್ತಿದ್ದರು.

ಮರದಿಂದ ನಿರ್ಮಿಸಿದ ಅವರ ಮನೆಗಳು ಸರಳವಾಗಿದ್ದವು. ಅವನ್ನು ಚೆನ್ನಾಗಿ ಇಟ್ಟುಕೊಂಡಿದ್ದರು. ಅನೇಕ ಮನೆಗಳ ಮುಂದೆ ಸುಂದರ ಉದ್ಯಾನಗಳು, ಸಣ್ಣ ಕೊಳಗಳಲ್ಲಿ ಮೀನುಗಳು ಆಡುತ್ತಿದ್ದವು. ಒಟ್ಟಿನಲ್ಲಿ ಈ ಸ್ಥಳ ಬಹು ಸುಂದರವಾಗಿ ಕಾಣಿಸುತ್ತಿತ್ತು. ಈ ಜನರೂ

ನಮ್ಮ ದೇಶದ ಭಾಗವೇನೇಯೇ ಎಂದು ನೆನೆದು ನನಗೆ ಹೆಮ್ಮೆಯಾಯಿತು. ಸಾಲದಾಗಿ ಇದು ಮಣಿಗಳ ನಾಡು– ಮಣಿಪುರ.

ಸುತ್ತ ಎಲ್ಲ ಕಡೆಗಳಲ್ಲೂ ಬೆಟ್ಟಗಳಿರುವ ಪ್ರದೇಶ ಇಂಫಾಲ್. ಇಲ್ಲಿ ವಾಸ ಮಾಡುವ ಬಹುತೇಕ ಜನರು ವೈಷ್ಣವರು, ಚೈತನ್ಯ ಮಹಾಪ್ರಭುವಿನ ಅನುಯಾಯಿಗಳು. ತಮ್ಮನ್ನು ಅವರು ಮೇಥಿಗಳೆಂದು ಕರೆದುಕೊಳ್ಳುತ್ತಾರೆ. ಮೀನು ತಿನ್ನುವ ಸಸ್ಯಾಹಾರಿಗಳು. ಗೋವಿಂದ ದೇವಾಲಯದ ಸುತ್ತ ಇಲ್ಲಿನ ಜೀವನ ಸುತ್ತುವರಿದಿದೆ. ರಾಧಾ-ಕೃಷ್ಣ ನೃತ್ಯ, ಮಣಿಪುರಿ ನೃತ್ಯದಲ್ಲಿ ಅತ್ಯಂತ ಜನಪ್ರಿಯವಾದುದು. ಮಣಿಪುರಿ ಭಾರತದ ಆರು ಶಾಸ್ತ್ರೀಯ ನಾಟ್ಯಶೈಲಿಗಳಲ್ಲಿ ಒಂದು.

ಇತರ ಮುಖ್ಯ ಪಂಗಡಗಳೆಂದರೆ ನಾಗಾ ಮತ್ತು ಕುಕಿ ಬುಡಕಟ್ಟುಗಳು. ಇವರು ಬೆಟ್ಟಗಳಲ್ಲಿ ವಾಸಮಾಡುತ್ತಾರೆ. ಕಳೆದ ಶತಮಾನಗಳವರೆಗೆ ಮೇಥೀಗಳೂ ಈ ಆದಿವಾಸಿಗಳೂ ಚೆನ್ನಾಗಿಯೇ ಇದ್ದರು. ಆದರೆ ತಮ್ಮನ್ನೂ ಮೇಥೀವರ್ಗಕ್ಕೆ ಸೇರಿಸಿಕೊಳ್ಳಬೇಕೆಂದು ಆದಿವಾಸಿಗಳು ಕೇಳಿದಾಗ, ಅವರು ಮಾಂಸಭಕ್ಷಕರಾದ್ದರಿಂದ ಅದು ಸಾಧ್ಯವಿಲ್ಲವೆಂದು ಮಹಾರಾಜನು ತಿರಸ್ಕರಿಸಿದನು. ಹಾಗಾಗಿ ಕ್ರಿಶ್ಚಿಯನ್ ಮಿಷನರಿಗಳು ಅಲ್ಲಿಗೆ ಬಂದಾಗ ಫಲವತ್ತಾದ ಕ್ಷೇತ್ರವನ್ನು ಕಂಡರು. ನಾಗಾ ಮತ್ತು ಕುಕಿ ಬುಡಕಟ್ಟುಗಳಿಗೆ ಸೇರಿದ ಅನೇಕ ಜನರು ಕ್ರಿಶ್ಚಿಯನ್ನರಾಗಿ ಮತಾಂತರಗೊಂಡರು. ಇಂದು ಅತಿ ಸಣ್ಣ ಆದಿವಾಸಿ ಹಳ್ಳಿಯಲ್ಲೂ ಒಂದು ಚರ್ಚು ಇದೆ, ಒಬ್ಬ ಪ್ಯಾಸ್ಟರ್ ಇರುತ್ತಾನೆ. ಚರ್ಚು ಹಳ್ಳಿಯ ಶಾಲೆಯೂ ಆಗಿ ಕೆಲಸ ಮಾಡುತ್ತದೆ.

ಮಹಾಭಾರತದಲ್ಲಿ ಮಣಿಪುರವು ಯೋಧರಾಜಕುಮಾರಿ ಚಿತ್ರಾಂಗದೆಯ ನಾಡು ಎಂದು ಹೆಸರಾಗಿದೆ. ಒಂದು ಪ್ರಾಯಶ್ಚಿತ್ತ ಯಾತ್ರೆಯ ಸಮಯದಲ್ಲಿ ಅರ್ಜುನನು ಮಣಿಪುರಕ್ಕೆ ಬರುತ್ತಾನೆ. ಚಿತ್ರಾಂಗದೆಯನ್ನು ಪ್ರೇಮಿಸುತ್ತಾನೆ. ಅವರಿಗೆ ಮದುವೆಯಾಗುತ್ತದೆ. ಕೆಲವು ಕಾಲದ ಮೇಲೆ ಅರ್ಜುನನು ಇಂದ್ರಪ್ರಸ್ಥಕ್ಕೆ ಹಿಂದಿರುಗಬೇಕಾಗುತ್ತದೆ. ಚಿತ್ರಾಂಗದೆಗೆ ಮಗನು ಜನಿಸುತ್ತಾನೆ. ಅವನೇ ಬಭ್ರುವಾಹನ. ತಾಯಿ ಅವನಿಗೆ ಶಿಕ್ಷಣ ಕೊಟ್ಟು ಅವನನ್ನು ಬಲಿಷ್ಠ ಯೋಧನನ್ನಾಗಿ ರೂಪಿಸುತ್ತಾಳೆ. ಆದರೆ ತನ್ನ ತಂದೆ ಯಾರು ಎನ್ನುವುದು ಅವನಿಗೆ ತಿಳಿದಿರುವುದಿಲ್ಲ. ಮಹಾಭಾರತ ಯುದ್ಧವಾದ ಮೇಲೆ ಯುಧಿಷ್ಠಿರನು ಅಶ್ವಮೇಧಯಾಗ ಮಾಡುತ್ತಾನೆ. ಯಜ್ಞದ ಕುದುರೆಯನ್ನು ಸಂಚಾರಕ್ಕೆ ಕಳಿಸಿ, ಸೇನಾಸಮೇತ ಅದರ ಹಿಂದೆ ಹೋಗುವುದು, ಅದನ್ನು ತಡೆದು ನಿಲ್ಲಿಸಿದವರ ಮೇಲೆ ಯುದ್ಧ ಮಾಡಿ ಸೋಲಿಸುವುದು ಅರ್ಜುನನ ಕೆಲಸವಾಯಿತು. ವಿಧಿಯ ಸಂಕಲ್ಪದಂತೆ ಕುದುರೆಯು ಮಣಿಪುರಕ್ಕೆ ಕಾಲಿಟ್ಟಿತು. ಬಭ್ರುವಾಹನನು ಅದನ್ನು ಕಟ್ಟಿಹಾಕಿದ. ತಂದೆಗೂ ಮಗನಿಗೂ ಯುದ್ಧವಾಗುವುದನ್ನು ತಪ್ಪಿಸಲು ಚಿತ್ರಾಂಗದೆಯು "ಅರ್ಜುನನೇ ನಿನ್ನ ತಂದೆ" ಎಂದು ಬಭ್ರುವಾಹನನಿಗೆ ತಿಳಿಸುತ್ತಾಳೆ. "ಕುದುರೆಯನ್ನು ಹಿಂದಿರುಗಿಸು, ಸಕಲ ಗೌರವಗಳಿಂದ ತಂದೆಯನ್ನು ಕರೆದು ತಾ" ಎಂದು ಬೇಡುತ್ತಾಳೆ. ತನ್ನ ತಂದೆಯೊಂದಿಗೆ ಯುದ್ಧ ಮಾಡುವ ಅಪೇಕ್ಷೆಯಿಲ್ಲದೆ ಬಭ್ರುವಾಹನನೂ ಅದಕ್ಕೆ ಒಪ್ಪುತ್ತಾನೆ. ಆದರೆ ಕುದುರೆಯನ್ನು ಹಿಂದಿರುಗಿಸಲು ಹೊರಟಾಗ ಅರ್ಜುನನು ಅವನನ್ನು ಯುದ್ಧಕ್ಕೆ ಕರೆಯುತ್ತಾನೆ. ತಾನು ಅವನ ಮಗನೆಂದು ಹೇಳಿದರೂ ಅರ್ಜುನನು ಅದನ್ನು ನಂಬುವುದಿಲ್ಲ. "ನನ್ನ ಮಗನು ಎಂದಿಗೂ ಶರಣಾಗತನಾಗುವುದಿಲ್ಲ" ಎಂದುಬಿಡುತ್ತಾನೆ. ಚಿತ್ರಾಂಗದೆಯು ಹೆದರಿದ್ದ ಗಂಡಾಂತರ ಬಂದೇಬಿಡುತ್ತದೆ. ಭೀಕರ ಯುದ್ಧವಾಗುತ್ತದೆ. ಬಭ್ರುವಾಹನನು ಅಸಾಧಾರಣ ಕೌಶಲದಿಂದಲೂ ಧೈರ್ಯದಿಂದಲೂ ಕಾದುತ್ತಾನೆ. ಯುದ್ಧ ನಿಲ್ಲಿಸುವಂತೆ ಇಬ್ಬರನ್ನೂ ಬೇಡಿಕೊಳ್ಳಲು ಚಿತ್ರಾಂಗದೆ ಯುದ್ಧರಂಗಕ್ಕೆ ಬಂದ ಕ್ಷಣಕ್ಕೆ ಬಭ್ರುವಾಹನನು ಬಿಟ್ಟ ಬಾಣವು ಅರ್ಜುನನ ತಲೆಯನ್ನು ಕತ್ತರಿಸುತ್ತದೆ. ತಾಯಿ-ಮಗ ಇಬ್ಬರೂ ಭಗವಾನ್ ಕೃಷ್ಣನಿಗೆ ಮೊರೆಯಿಡುತ್ತಾರೆ. ಅವನು ಪಾಂಡವರ ರಕ್ಷಕ. ಅರ್ಜುನನನ್ನು ಬದುಕಿಸಲು ಮೊರೆಯಿಟ್ಟ ಅವರ ದುಃಖಕ್ಕೆ ಕೃಷ್ಣನು ಮನಕರಗುತ್ತಾನೆ. ಅರ್ಜುನನ ಅಹಂಕಾರವೇ ಈ ಅನರ್ಥಕ್ಕೆ ಕಾರಣ ಎಂದು ತಿಳಿದು ಕೃಷ್ಣನು ಅವನಿಗೆ ಮತ್ತೆ ಜೀವ ಕೊಡುತ್ತಾನೆ.

ಇಂದಿಗೂ ಇಂಫಾಲದಲ್ಲಿ ಸಗೋಲ್‌ಬಂದ್ ಎಂಬ ಸ್ಥಳವಿದೆ. ಬಭ್ರುವಾಹನನು ಕುದುರೆಯನ್ನು ಕಟ್ಟಿಹಾಕಿದ್ದು ಅಲ್ಲಿಯೇ ಎಂದು ಹೇಳುತ್ತಾರೆ. (ಸಗೋಲ್ ಎಂದರೆ ಕುದುರೆ, ಬಂದ್ ಎಂದರೆ ಕಟ್ಟಿಹಾಕುವುದು.)

೨೧. '೨ನೇ ಮಣಿಪುರ ರೈಫಲ್ಸ್' ಪುನರ್ನಿರ್ಮಾಣ

ಮೊದಲು ಘುಮಾನ್ ನಮ್ಮನ್ನು ಸರ್ಕೀಟ್ ಹೌಸ್‌ಗೆ ಕರೆದೊಯ್ದು. ಅಲ್ಲಿ ನಮ್ಮ ಸಾಮಾನುಗಳನ್ನು ಇಟ್ಟ ಮೇಲೆ ಅವನ ಮನೆಗೆ ಕರೆದೊಯ್ದ. ಹೋದೆವು. ಅಲ್ಲಿಯೇ ಊಟ ಆಯಿತು.

ನಿಗದಿಪಡಿಸಿದ್ದ ಪ್ರಕಾರ ಅದೇ ದಿನ ನಾನು ಮಣಿಪುರದ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್ ಅವರನ್ನು ಭೇಟಿ ಮಾಡಿದೆ. ೨ನೇ ಮಣಿಪುರ ರೈಫಲ್ಸ್ ದಳವನ್ನು ನನ್ನ ವಶಕ್ಕೆ ತೆಗೆದುಕೊಳ್ಳಬೇಕೆಂದು ಅವರು ಔಪಚಾರಿಕವಾಗಿ ಹೇಳಿದರು.

ಮರುದಿನ ಘುಮಾನ್ ಒಂದಿಗೆ ಯೂನಿಟ್‌ನ ಲೈನುಗಳಿಗೆ ಭೇಟಿ ಕೊಟ್ಟೆ . ಅಂಥದೊಂದನ್ನು ನನ್ನ ಸೇನಾ ಜೀವನದಲ್ಲಿ ಅದುವರೆಗೂ ಕಂಡಿರಲಿಲ್ಲ. ಕಟ್ಟಡಗಳನ್ನೂ ಬ್ಯಾರಕ್ಕುಗಳನ್ನೂ ಮಣ್ಣಿನಿಂದ ನಿರ್ಮಿಸಿ ಹುಲ್ಲಿನ ತಡಿಕೆ ಚಾವಣಿ ಹೊದಿಸಿದ್ದರು. ಅವು ಜರ್ಝರಿತವಾಗಿ, ಶಿಥಿಲವಾಗಿ ಕಾಣುತ್ತಿದ್ದವು. ಅನೇಕ ಕಡೆ ತಡಿಕೆ ಚಾವಣಿ

ಮಳೆಯಿಂದಲೋ ಗಾಳಿಯಿಂದಲೋ ಕಿತ್ತು ಹೋಗಿದ್ದಿತು. ಸೈನಿಕರ ಕಟ್ಟಡಗಳೂ ಸಲಕರಣೆಗಳೂ ಚೆದುರಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು.

ಜನರೂ ಅಷ್ಟೆ – ಮುಖಕ್ಷೌರವಿಲ್ಲದೆ, ಒಗೆದು ಶುಭ್ರಗೊಳಿಸಿದ ಬಟ್ಟೆ ಬರೆಯಿಲ್ಲದೆ, ಅಲ್ಲಿ ಇಲ್ಲಿ ಅಲೆದಾಡುತ್ತಾ ಕಾಲ ಕಳೆಯುತ್ತಿದ್ದರು. ವಿಶೇಷವಾಗಿ ನನ್ನ ಕಣ್ಣಿಗೆ ಬಿದ್ದ ೪-೫ ಜನರ ಗುಂಪೊಂದನ್ನು ಹಿಂದಿನ ಕಮಾಂಡೆಂಟರು ಏನೋ ಕಾರಣಕ್ಕೆ ಅಮಾನತ್ತಿನಲ್ಲಿರಿಸಿದ್ದರು. ಆ ಬಗೆಗೆ ಇನ್ನು ಮುಂದಿನ ಯಾವ ಕ್ರಮವನ್ನೂ ಕೈಗೊಂಡಿರಲಿಲ್ಲ.

ಇದು ಕ್ವಾರ್ಟರ್ ಗಾರ್ಡ್, "ಸಿಗ್ನಲ್ ಪ್ಲಟೂನ್", ವಾಹನದಲ್ಲಿ ಗಸ್ತು ತಿರುಗುವ ಪ್ಲಟೂನ್ – ಇವೆಲ್ಲಾ ಇರಬೇಕಾದ ಬೆಟಾಲಿಯನ್ ಕೇಂದ್ರ ಸ್ಥಳವಾಗಿತ್ತು. ಇಲ್ಲಿ ಜೀವಂತಿಕೆಯ ಕುರುಹೇ ಕಾಣಿಸುತ್ತಿರಲಿಲ್ಲ.

"ಅನೇಕರು ಔಟ್‌ಪೋಸ್ಟ್‌ಗಳಲ್ಲಿ ಇದ್ದಾರೆ ಸಾರ್" ಘುಮಾನ್ ಕ್ಷಮಾಯಾಚನೆಯ ಧ್ವನಿಯಲ್ಲಿ ಹೇಳಿದ.

"ಈ ಸ್ಥಳ ಅದಕ್ಕೆ ಗುರುತಾಗುವುದಾದ ಪಕ್ಷದಲ್ಲಿ , ದೇವರೇ ಕಾಪಾಡಬೇಕು" ನಾನು ಉತ್ತರ ಕೊಟ್ಟೆ.

ಇಡೀ ಜೀವನವನ್ನು ಉತ್ತಮ ತರಬೇತಿಯ ಶಿಸ್ತಿನ ಸೇನಾ ಬೆಟಾಲಿಯನ್‌ಗಳಲ್ಲಿ ಕಳೆದಿದ್ದ ನನಗೆ ಇದು ತೀರಾ ಗೊಂದಲದ, ಅವ್ಯವಸ್ಥೆಯ ಕೂಪವಾಗಿ ಕಾಣಿಸಿತು.

ಭೋಜನ ವಿರಾಮದ ಸಮಯದಲ್ಲಿ ಅಡುಗೆಮನೆಗಳ ಕಡೆಗೆ ಹೋಗಿ ನೋಡಿದೆ. ಅಲ್ಲಿಯೂ ಭಯಂಕರ ಪರಿಸ್ಥಿತಿ. ಕೆಲವಕ್ಕೆ ಮೇಲುಚಾವಣಿಯೇ ಇರಲಿಲ್ಲ. ಕಚ್ಚಾ ನೆಲ, ಮಳೆಗಾಲವಾದ್ದರಿಂದ ಕೆಸರಾಗಿತ್ತು. ಹೊಗೆ ತುಂಬಿದ ಒಲೆಗಳ ಮೇಲೆ ಪಾತ್ರೆಗಳನ್ನಿಟ್ಟು ಅಡುಗೆ ಮಾಡುತ್ತಿದ್ದರು. ಆ ಪಾತ್ರೆಗಳೂ, ಬಡಿಸುವ ಪಾತ್ರೆಗಳೂ ಕೊಳಕಾಗಿದ್ದವು. ಸೈನಿಕರು ತಟ್ಟೆಗಳನ್ನು ಹಿಡಿದು ಸಾಲಾಗಿ ನಿಂತಿದ್ದರು, ಬಡಿಸುವುದನ್ನು ಕಾಯುತ್ತಾ. ಅವರಿಗೆ ನೀತಿನಿಯಮಗಳೇನೂ ಇದ್ದಂತೆ ಕಾಣಲಿಲ್ಲ. ಮೇಜುಗಳಾಗಲೀ, ಕುರ್ಚಿಗಳಾಗಲೀ ಇರಲಿಲ್ಲ. ಕೆಸರು ಮಣ್ಣಿನ ಮೇಲೆ ನಿಂತುಕೊಂಡೇ ತಿನ್ನುತ್ತಿದ್ದರು. ಅವರು ಏನು ತಿನ್ನುತ್ತಿದ್ದಾರೆ ಎಂದು ನೋಡಿದೆ. ತರಕಾರಿಯಾಗಲಿ, ಮಾಂಸವಾಗಲಿ ಇಲ್ಲ. ಬರೀ ಅನ್ನ ಮತ್ತು ಬೇಳೆ.

ಮೊದಲು ಆಹಾರವನ್ನು ಸರಿಪಡಿಸಬೇಕೆಂದು ನಿರ್ಧರಿಸಿದೆ. ನನ್ನ ಯೂನಿಟ್ಟಿನಲ್ಲಿದ್ದ ಗಾರೆ ಕೆಲಸದವರ ಸಭೆ ಕರೆದೆ. ಅವರು ಹನ್ನೆರಡು ಜನ ಇದ್ದರು. ಎಲ್ಲ ಅಡುಗೆಮನೆಗಳನ್ನೂ ದುರಸ್ತಿಪಡಿಸತಕ್ಕದ್ದೆಂದು ಹೇಳಿದೆ. ಹಿಂದೆ ಬರೈಲಿಯಲ್ಲಿ ಆಹಾರ ವಿತರಣೆಯನ್ನು ಕುರಿತ ಒಂದು ಅಲ್ಪಾವಧಿ ತರಬೇತಿ ಪಡೆದಿದ್ದುದು ಈಗ ಸಹಾಯವಾಯಿತು. ನನಗಾಗಿ ಒಂದು ಕುಕಿಂಗ್‌ರೇಂಜ್ ಸಿದ್ಧಪಡಿಸಲು ಹೇಳಿದೆ. ಅವರ ಕೆಲಸ ತೃಪ್ತಿಕರ ವಾಗಿದ್ದುದನ್ನು ನೋಡಿ ಎಲ್ಲಾ ಅಡುಗೆಮನೆಗಳಲ್ಲೂ ಅಂಥ ಒಂದೊಂದು ಕಟ್ಟಿಸಿದೆ. ಒಲೆಗಳು ಶುದ್ಧವಾಗಿದ್ದವು ; ಆರೋಗ್ಯಕರ ವಾಗಿದ್ದವು. ಅಡುಗೆಯವರಿಗೆ ಅನುಕೂಲವಾಗಿದ್ದವು. ಕಟ್ಟಿಗೆ ಉಪಯೋಗ ಕಡಮೆಯಾಯಿತು. ಒಲೆಯಿಂದ ಹೊಗೆ ಬಂದು ಚಿಮಣಿಯ ಮೂಲಕ ನೇರವಾಗಿ ಮೇಲಕ್ಕೆ ಹೊರಟುಹೋಗುತ್ತಿತ್ತು. ಪ್ರತಿ ಅಡುಗೆ ಮನೆಯಲ್ಲೂ ಗಾರೇಕಾರರು ಉಗ್ರಾಣವನ್ನು ಕಟ್ಟಿದರು ; ಅದಕ್ಕೆ ತಾಗಿದಂತೆ ಊಟದ ಕೋಣೆಗಳಲ್ಲಿ ಕೈತೊಳೆಯಲು ಹಾಗೂ ತಟ್ಟೆಗಳನ್ನು ತೊಳೆಯಲು ವ್ಯವಸ್ಥೆಯನ್ನೂ ಮಾಡಿಸಿದರು. ಕೆಲವು ವಾರಗಳಲ್ಲಿ ಇದೆಲ್ಲ ಸಿದ್ಧವಾಯಿತು.

ಎಲ್ಲಾ ಶ್ರೇಣಿಯವರನ್ನೂ ಹೊಸದಾಗಿ ಕಟ್ಟಿದ ಅಡುಗೆ ಮನೆಯೊಂದರಲ್ಲಿ ಸಭೆ ಸೇರಿಸಿದೆ. ೧೨ ಜವಾನರಿದ್ದರು. ಮಿಕ್ಕವರು ಜೆ.ಸಿ.ಓ.ಗಳು ಮತ್ತು ಎನ್.ಸಿ.ಓ.ಗಳು, ಕೆಲವು ಅಧಿಕಾರಿಗಳು. ಮಣಿಪುರ ಸರ್ಕಾರವು ನಿಗದಿಪಡಿಸಿದ್ದ ಪಡಿತರವನ್ನು ಪರಿಶೀಲಿಸಿದೆ. ಆಶ್ಚರ್ಯವಾಯಿತು. ಕೆಲವು ಅಂಶಗಳಲ್ಲಿ ಸೈನ್ಯದ ಶ್ರೇಣಿಗಳಿಗಿಂತಲೂ ಹೆಚ್ಚು ಉದಾರವಾಗಿತ್ತು. ಕಂಪನಿಯ ಕ್ವಾರ್ಟರ್ ಮಾಸ್ಟರ್ ಹವಾಲ್ದಾರ್‌ನಿಗೆ (ಸಿಕ್ಯುಎಂಎಚ್) ೧೨ ಜನರ ಪಡಿತರವನ್ನು ಅಡುಗೆಯವರಿಗೆ ಕೊಡಲು ಹೇಳಿದೆ. ನಿಗದಿತ ಪ್ರಮಾಣದ ತಾಜಾ ತರಕಾರಿಗಳನ್ನು ಕೊಡಲು ಮರೆಯಕೂಡದು ಎಂದು ತಾಕೀತು ಮಾಡಿದೆ. ತಾಜಾ ತರಕಾರಿಗಳಿರಲಿಲ್ಲ. ಒಡನೆಯೇ ಹೋಗಿ ಮಾರ್ಕೆಟ್‌ನಿಂದ ಕೊಂಡು ತರಲು ಕಳಿಸಿದೆ.

ಈ ಮಧ್ಯೆ ಅಡುಗೆಯವರು ೧೨ ಜನರಿಗೆ ಅಡುಗೆ ತಯಾರಿಸಲು ಸಿದ್ಧಪಡಿಸಿಕೊಂಡರು. ಒಂದು ಗಂಟೆ ಕಾಲದಲ್ಲಿ ೭೦-೮೦ ಚಪಾತಿಗಳು, ಅನ್ನ , ದಾಲ್, ಎರಡು ಬಗೆಯ ಸಬ್ಜಿ , ಮೊಸರು ರಾಯಿತ, ಚಟ್ನಿ, ಈರುಳ್ಳಿ ಮತ್ತು ಕ್ಯಾಬೇಜ್ ಸಾಲಾಡ್ ಮತ್ತು ಖೀರು ತಯಾರಿಸಿದರು. ಇದೆಲ್ಲವನ್ನೂ ೧೨ ಸಮಭಾಗ ಮಾಡಿ ಬಡಿಸಲು ಹೇಳಿದೆ. ಎಲ್ಲರೂ ಹೊಟ್ಟೆ ತುಂಬಾ ತೃಪ್ತಿಯಾಗಿ ಊಟ ಮಾಡಿದರೂ ತಮ್ಮ ತಟ್ಟೆಗಳಲ್ಲಿದ್ದುದೆಲ್ಲವನ್ನೂ ಮುಗಿಸಲು ಅವರಿಗೆ ಸಾಧ್ಯವಾಗಲಿಲ್ಲ.

ಇದು ನಿಗದಿಪಡಿಸಿರುವ ಮಟ್ಟ . ಯಾರಿಗಾದರೂ ಇದಕ್ಕಿಂತ ಕಡಮೆಯಾದ ಆಹಾರ ದೊರೆತದ್ದೇ ಆದರೆ, ಸಂಬಂಧಪಟ್ಟ ಜವಾನ್ ನೇರವಾಗಿ ನನ್ನ ಕೊಠಡಿಗೆ ಬರಬಹುದು. ಪೂರ್ವಸೂಚನೆಯಿಲ್ಲದೆ ಬಂದು ಹೇಳಬಹುದು. ನಾನು ಅದಕ್ಕೆ ಹೊಣೆಗಾರರಾದವರ ಮೇಲೆ ಕ್ರಮ ಕೈಗೊಳ್ಳುತ್ತೇನೆ ಎಂದು ಆಶ್ವಾಸನೆ ನೀಡಿದೆ. ಅವರಿಗೆ ಉತ್ತಮ ವಾದ ಆಹಾರವನ್ನು ಕೊಡುವುದು ನಿಮ್ಮ ಜವಾಬ್ದಾರಿ ಎಂದು ಅಧಿಕಾರಿಗಳಿಗೆ ಹೇಳಿದೆ. ಅವರಲ್ಲಿ ಯಾರಾದರೂ ಒಬ್ಬರು ಪ್ರತಿಯೊಂದು ಊಟದ ಸಮಯದಲ್ಲೂ ಹಾಜರಿರಬೇಕೆಂದು ಆದೇಶಿಸಿದೆ.

ಸರಿಯಾದ ಉಗ್ರಾಣಗಳನ್ನು ಕಟ್ಟಿಯಾದ ಮೇಲೆ, ಆಹಾರ ಧಾನ್ಯಗಳು ಮತ್ತಿತರ ವಸ್ತುಗಳನ್ನು ಸರಿಯಾದ ರೀತಿಯಲ್ಲಿ ದಾಸ್ತಾನು ಮಾಡಿಡುವ ವ್ಯವಸ್ಥೆ ಮಾಡಿದೆ. ಆಹಾರ ವ್ಯವಸ್ಥೆ ಬೇಗನೆ ಹತೋಟಿಗೆ ಬಂದಿತು. ಸಹೋದ್ಯೋಗಿಗಳ ನೈತಿಕ ಮಟ್ಟವೂ ಕಣ್ಣಿಗೆ

ಕಾಣುವಂತೆಯೇ ಸುಧಾರಿಸಿತು. ಆಹಾರದ ವಿಷಯದಲ್ಲಿ ಯಾವ ದೂರೂ ಬರಲಿಲ್ಲ.

ಒಂದು ದಿನ ಕುಟುಂಬಗಳು ವಾಸವಾಗಿದ್ದ ಭಾಗಕ್ಕೆ ಹೋಗಿದ್ದೆ. ಗಂಡಸರು ಹೊರಗೆ ಕೆಲಸದ ಮೇಲೆ ಹೋಗಿದ್ದರು. ಹೆಂಗಸರು, ಮಕ್ಕಳು ಮಾತ್ರ ಇದ್ದರು. ಅವು ಹಳೆಯ ಮನೆಗಳು. ಮಳೆ ಬಂದರೆ ವಿಪರೀತ ಸೋರುತ್ತಿದ್ದವು. ಮಣ್ಣಿನ ನೆಲಗಳು ಸೋರಿದ ಮೇಲೆ ನೀರಿನಿಂದ ತೊಯ್ದು ಜಾರುತ್ತಿದ್ದವು. ಒಬ್ಬ ಆಫೀಸರರ ಜತೆ ನಾನು ನಡೆದಾಡುತ್ತಿದ್ದಂತೆಯೇ, ಒಬ್ಬ ಜವಾನನ ಪತ್ನಿಯು ಮನೆಯಿಂದ ಹೊರಗೆ ಬಂದಳು. ಆಕೆ ಗರ್ಭಿಣಿ. ಜಾರುತ್ತಿದ್ದ ನೆಲದ ಮೇಲೆ ಕಾಲಿಟ್ಟವಳೇ ಆಯತಪ್ಪಿ ಕೆಳಕ್ಕೆ ಬಿದ್ದುಬಿಟ್ಟಳು. ಸದ್ಯ ಗಾಯವಾಗಲಿಲ್ಲ. ಜೊತೆಯವಳೊಬ್ಬಳು ಆಕೆಗೆ ಸಹಾಯ ಮಾಡಿದಳು.

ಈ ಘಟನೆ ನಡೆದಾಗ ಹೊರಗೆ ಬಂದು ನಿಂತಿದ್ದ ಇತರ ಹೆಂಗಸರು ದುಃಖ ತುಂಬಿದ ಮುಖದಿಂದ ನನ್ನ ಕಡೆ ನೋಡಿದರು.

"ಸಾಬ್, ನಮ್ಮೆಲ್ಲರ ಕತೆಯೂ ಹೀಗೆಯೇ ಆಗಿದೆ..."

ಒಬ್ಬ ವೈದ್ಯರನ್ನು ಒಡನೆಯೇ ಬರಮಾಡಿ ಆಕೆಯನ್ನು ಪರೀಕ್ಷೆ ಮಾಡಿಸಿ, ಕಳಿಸಿಕೊಟ್ಟೆ. ಈ ಪರಿಸ್ಥಿತಿಯನ್ನು ಸುಧಾರಿಸಲು ತಕ್ಷಣವೇ ಏನಾದರೂ ಮಾಡಬೇಕು ಅನ್ನಿಸಿತು.

ಎಲ್ಲಾ ಅಧಿಕಾರಿಗಳು ಮತ್ತು ಜೆ.ಸಿ.ಓ.ಗಳ ಸಭೆ ಸೇರಿಸಿದೆ. ಕುಟುಂಬಗಳಿಗೆ ಸರಿಯಾದ ವಸತಿಸೌಲಭ್ಯ ಅಗತ್ಯ. ಅದನ್ನು ನಾವೇ ಕಟ್ಟಿಕೊಳ್ಳಬೇಕು. ಲೋಕೋಪಯೋಗಿ ಇಲಾಖೆಗೆ ವಹಿಸಿದರೆ ಹತ್ತುಪಟ್ಟು ದುಬಾರಿಯಾಗುತ್ತದೆ ಮತ್ತು ಮುಗಿಯಲು ಹಲವು ವರ್ಷಗಳು ಬೇಕಾಗುತ್ತವೆ. ಮಣಿಪುರಿಗಳು ಮರ, ಬೆತ್ತ, ಮಣ್ಣು, ಗಾರೆಗಳಿಂದ ಹೇಗೆ ಮನೆ ಕಟ್ಟುತ್ತಿದ್ದರೋ ಹಾಗೆಯೇ ಇಲ್ಲೂ ಕಟ್ಟಬಹುದು.

ಕೆಲವು ಉತ್ತಮ ಬಡಗಿಗಳು, ಗಾರೆಯವರು, ಕಮ್ಮಾರರನ್ನು ನೇಮಿಸಿದೆವು. ಸ್ಥಳೀಯ ಕಟ್ಟಡ ನಿರ್ಮಾಣದಲ್ಲಿ ಅವರು ನುರಿತಿದ್ದರು. ಅಗತ್ಯವಾಗಿದ್ದ ಹಣದ ಬಹುಭಾಗ ಬೆಟಾಲಿಯನ್ ನಿಧಿಯಿಂದ ದೊರಕಿಸಿಕೊಂಡೆ. ಮೂರು ತಿಂಗಳಲ್ಲಿ ಎಲ್ಲಾ ಮನೆಗಳನ್ನೂ ಕಟ್ಟಿ ಕುಟುಂಬಗಳು ಹೊಸ ಮನೆಗಳಲ್ಲಿ ನೆಲೆಸಿದರು. ಕಾರುಗೇಟೆಡ್ ಷೀಟುಗಳಿಂದ ಚಾವಣಿಯನ್ನು ಹೊದಿಸಿದ್ದುದರಿಂದ ನೀರು ಮನೆಯೊಳಕ್ಕೆ ಸೋರುತ್ತಿರಲಿಲ್ಲ. ಎಲ್ಲಾ ಮನೆಗೂ ನಲ್ಲಿಯ ನೀರು ಒದಗಿಸಲಾಯಿತು. ಸರಳವಾದ ಕಕ್ಕಸ್ಸುಗಳನ್ನು ಕಟ್ಟಿಸಿದೆವು. ಅವರನ್ನು ನೋಡಿಕೊಳ್ಳಲು ಒಬ್ಬ ವೈದ್ಯರು ಮತ್ತು ಇಬ್ಬರು ನರ್ಸುಗಳು ಎಲ್ಲ ಕಾಲದಲ್ಲೂ ಲಭ್ಯವಾಗಿರುವಂತೆ ವ್ಯವಸ್ಥೆ ಮಾಡಿದೆವು. ಆಮೇಲೆ ಉತ್ತಮ ರಸ್ತೆಗಳನ್ನು ನಿರ್ಮಿಸಿದೆವು. ಬ್ಯಾರಕ್ಕುಗಳಲ್ಲಿ ವಾಸ ಮಾಡುತ್ತಿದ್ದವರಿಗೂ ಈ ಎಲ್ಲಾ ಸೌಲಭ್ಯಗಳನ್ನೂ ಒದಗಿಸಿದೆವು.

ಆಹಾರ ಮತ್ತು ವಸತಿ ಮೊದಲ ಆದ್ಯತೆಯದಾಗಿತ್ತು. ಇವುಗಳ ಮೇಲೆ ಗಮನವನ್ನು ಕೇಂದ್ರೀಕರಿಸುತ್ತಿದ್ದಾಗ ಇತರ ಕ್ಷೇತ್ರಗಳನ್ನು ಅಲಕ್ಷಿಸುವ ಹಾಗಿಲ್ಲ ಎಂದು ಅರ್ಥವಾಯಿತು. ಡ್ರಿಲ್ ಮತ್ತು ತರಬೇತಿ ಅವ್ಯವಸ್ಥಿತವಾಗಿತ್ತು. ಸರಿಯಾದ ತಳಹದಿ ಹಾಕಿ ಅವುಗಳನ್ನು ಕ್ರಮಬದ್ಧಗೊಳಿಸಬೇಕಾಗಿತ್ತು. ಶಿಸ್ತು ಎನ್ನುವುದೇ ಇರಲಿಲ್ಲ. ಅಧಿಕಾರಿಗಳೂ ಅವರಿಗಿಂತ ಉತ್ತಮರೇನೂ ಆಗಿರಲಿಲ್ಲ.

ನಾನು ಅಲ್ಲಿಗೆ ಹೋದ ಮಾರನೆಯ ದಿನ ಒಂದು ಘಟನೆ ನಡೆಯಿತು. ಬೆಟಾಲಿಯನ್ ಗೇಟಿನ ಮೂಲಕ ನಾನು ಜೀಪಿನಲ್ಲಿ ಹೋಗುತ್ತಿದ್ದಾಗ ಪಿ.ಟಿ. ಸಮವಸ್ತ್ರ ಧರಿಸಿ ಒಂದು ಕಂಪನಿಯ ಜನರು ರಸ್ತೆ ನಡಿಗೆ ಮತ್ತು ಓಟದ ಅಭ್ಯಾಸಕ್ಕಾಗಿ ಬರುತ್ತಿದ್ದರು. ಗಮನಿಸಲು ನಾನು ನಿಂತೆ. ಅವರು ಓಡುತ್ತಿದ್ದರೆ ಜತೆಯಲ್ಲಿ ಒಬ್ಬ ಅಧಿಕಾರಿ ಬೈಸಿಕಲ್ ಮೇಲೆ ಬರುತ್ತಿದ್ದನು. ಆ ಮೊದಲು ಆ ಅಧಿಕಾರಿಯನ್ನು ನಾನು ನೋಡಿರಲಿಲ್ಲ. ಅವನೊಬ್ಬ ಅಸಿಸ್ಟೆಂಟ್ ಕಮಾಂಡೆಂಟ್. ಅವನು ನನ್ನ ಬಳಿ ಬಂದಾಗ ನಾನು ಆತನನ್ನು ನಿಲ್ಲಿಸಿದೆ,

"ತಾವು ಯಾರು?"ಎಂದು ಕೇಳಿದೆ.

"ಕಂಪನಿ ಕಮಾಂಡರ್, ಸರ್."

"ನೀವೇಕೆ ಬೈಸಿಕಲ್ ಮೇಲೆ ಹೋಗುತ್ತಿದ್ದೀರಿ?" ಉತ್ತರ ನನಗೇ ಗೊತ್ತಿದ್ದದ್ದೇ.

"ಸೈನಿಕರು ಓಡುವುದನ್ನು , ನಡೆಯುವುದನ್ನು ನೋಡಿಕೊಳ್ಳಲು ಸಾರ್."

ನನ್ನ ಆರ್ಡರ್ಲಿ ಒಬ್ಬ ಹವಾಲ್ದಾರ್ ಮೇಜರನಿಗೆ ಆತನ ಬೈಸಿಕಲ್ ತೆಗೆದುಕೊಳ್ಳುವಂತೆ ಹೇಳಿದೆ.

"ಅವರೊಂದಿಗೆ ನೀವೂ ಓಡಬೇಕು."

"ಅಧಿಕಾರಿಯು ಸೈನಿಕರೊಂದಿಗೆ ಓಡಬೇಕಾಗಿಲ್ಲವಲ್ಲ" ಆತ ಗೊಣಗಿದ.

"ಸಿ.ಓ.ತಾನೇ ಅವರೊಂದಿಗೆ ಓಡುತ್ತಾರೆ."

ಕಂಪನಿ ಸೈನಿಕರೊಂದಿಗೆ ಅರ್ಧಗಂಟೆ ನಡಿಗೆ ಮತ್ತು ಓಟದಲ್ಲಿ ನಾನೇ ಭಾಗವಹಿಸಿದೆ. ಅಧಿಕಾರಿ ನಮ್ಮ ಜತೆ ಓಡದೆ ಬೇರೆ ದಾರಿಯೇ ಇರಲಿಲ್ಲ. ಆಮೇಲೆ ಎಲ್ಲರಿಗೂ ನಾನು ಸ್ಪಷ್ಟಪಡಿಸಿದೆ: ಎಲ್ಲ ಕಂಪನಿ ಕಮಾಂಡರ್‌ಗಳೂ ಜೆಸಿಓ ಹಾಗೂ ತಮ್ಮ ತಮ್ಮ ಜವಾನರೊಂದಿಗೆ ಪಿ.ಟಿ. ಯಲ್ಲಿ ತೊಡಗಿಕೊಳ್ಳತಕ್ಕದ್ದು.

ಎಲ್ಲ ಆಟಗಳನ್ನೂ ತಪ್ಪದೆ ಆಡಿಸಲು ಏರ್ಪಾಟು ಮಾಡಿದೆ. ಫುಟ್‌ಬಾಲ್, ವಾಲಿಬಾಲ್, ಹಾಕಿ, ಬ್ಯಾಸ್ಕೆಟ್‌ಬಾಲ್ ಕೋರ್ಟುಗಳು ಉಪಯೋಗವಾಗತೊಡಗಿದವು. ಪಂದ್ಯಗಳನ್ನು ಏರ್ಪಡಿಸಿ ಇತರ ಪೊಲೀಸ್ ಮತ್ತು ಸೇವಾ ಘಟಕಗಳಿಂದ ಕ್ರೀಡಾಳುಗಳು ಬಂದು ನಮ್ಮ ಹುಡುಗರೊಂದಿಗೆ ಆಡುವಂತೆ ಏರ್ಪಾಟು ಮಾಡಿದೆ.

ಈ ಮಧ್ಯೆ ನಾವೂ ನಿಧಾನವಾಗಿ ನೆಲೆಗೊಂಡೆವು. ಸಂಜೋನ್ ಥಾಂಗ್ ಎಂಬ ಸೊಗಸಾದ ಪ್ರದೇಶದಲ್ಲಿ ನಮಗೆ ಮನೆ ಕೊಟ್ಟಿದ್ದರು.

ಹೇಮಾ ಸೆಂಟ್ರಲ್ ಸ್ಕೂಲಿನಲ್ಲಿ ಆರನೆಯ ತರಗತಿಗೆ ಸೇರಿದ್ದಳು. ಮನರಂಜನೆಯ ದೃಷ್ಟಿಯಿಂದ ಅಲ್ಲಿ ಹೆಚ್ಚಿನ ಅವಕಾಶವಿರಲಿಲ್ಲ. ಕೆಲವೇ ಚಿತ್ರಮಂದಿರಗಳಿದ್ದವು. ಅಲ್ಲೂ ೩-೪ ವರ್ಷ ಹಳೆಯದಾದ ಕೆಟ್ಟ ಹಿಂದೀ ಚಿತ್ರಗಳನ್ನು ಪ್ರದರ್ಶಿಸುತ್ತಿದ್ದರು. ಏನಾದರೂ ಆಟವಾಡಲು ತಕ್ಕ ಕ್ಲಬ್ ಯಾವುದೂ ಇರಲಿಲ್ಲ. ಕತ್ತಲಾದ ಮೇಲೆ ಮಣಿಪುರಿಗಳಲ್ಲದ ಗಂಡಸರು ಕೂಡ ಓಡಾಡುವುದು ಅಪಾಯಕಾರಿ ಎಂಬ ಖ್ಯಾತಿಯಿತ್ತು. ಯಾರೂ ಹೊರಕ್ಕೆ ಕಾಲಿಡುತ್ತಿರಲಿಲ್ಲ. ಹೆಂಗಸರಿಗಂತೂ ತುಂಬಾ ಬೇಸರ ತರಿಸುವ ಸ್ಥಳವಾಗಿತ್ತು.

ಅದೃಷ್ಟದ ಆಕಸ್ಮಿಕವೋ ಎಂಬಂತೆ ಸಿಪಿಡಬ್ಲ್ಯುಡಿ ಉಪಯೋಗಿಸದೆ ಬಿಟ್ಟಿದ್ದ ಮರದ ಬೃಹತ್ ರಾಶಿ ನನ್ನ ಗಮನಕ್ಕೆ ಬಂದಿತು. ಅದನ್ನು ಯಾರಿಗಾದರೂ ಕೊಟ್ಟು ಕೈತೊಳೆದುಕೊಳ್ಳಲು ಅವರು ಕಾತರರಾಗಿದ್ದರು. ಆ ಮರವನ್ನು ಉಪಯೋಗಿಸಿಕೊಂಡು ಒಳ್ಳೆಯ ದೊಂದು ಬ್ಯಾಡ್‌ಮಿಂಟನ್ ಕೋರ್ಟು ನಿರ್ಮಿಸಬಹುದು ಎಂದು ನನಗೆ ತೋರಿತು. ನಮ್ಮ ಬಡಗಿಗಳನ್ನು ಕೆಲಸಕ್ಕೆ ಹಾಕಿದೆ. ಕೆಲವೇ ವಾರಗಳಲ್ಲಿ ಎತ್ತರವಾದ ಚಾವಣಿಯುಳ್ಳ ಸೊಗಸಾದ ಮರದ ಹಾಸಿನ ವಿಶಾಲವಾದ ಹಾಲ್ ಸಿದ್ಧವಾಯಿತು. ಸೊಗಸಾದ ಬ್ಯಾಡ್‌ಮಿಂಟನ್ ಕೋರ್ಟು ದೊರಕಿತು. ಅಗತ್ಯ ಬಂದರೆ ನಾಟಕ ಅಥವಾ ನೃತ್ಯ ಕಾರ್ಯಕ್ರಮ ನಡೆಸಲೂ ಅನುಕೂಲವಿತ್ತು. ಬೇಕಾದರೆ ತರಗತಿಗಳನ್ನೂ ನಡೆಸ ಬಹುದಾಗಿತ್ತು. ಕೋರ್ಟು ಸಿದ್ಧವಾಯಿತೆಂದು ಸುದ್ದಿ ಹರಡುತ್ತಿದ್ದಂತೆ ಎಲ್ಲರೂ ಅಲ್ಲಿ ಆಟವಾಡಲು ಉತ್ಸುಕರಾಗಿ ಬರತೊಡಗಿದರು.

ಒಂದೊಂದು ದಿನ ಐ.ಜಿ., ಡಿ.ಐ.ಜಿ., ಮುಖ್ಯ ಕಾರ್ಯದರ್ಶಿ, ಅಸ್ಸಾಂ ರೈಫಲ್ಸ್‌ನಿಂದ ಅಧಿಕಾರಿಗಳು, ಇಂಫಾಲ್ ಆಸ್ಪತ್ರೆಯ ಕೆಲವು ವೈದ್ಯರು, ಒಂದೊಂದು ಸಾರಿ ಸ್ವಂತ ಮುಖ್ಯಮಂತ್ರಿಯವರೇ ಅಲ್ಲಿಗೆ ಆಟವಾಡಲು ಬರುತ್ತಿದ್ದರು.

ಒಂದು ದಿನ ನಾನು, ಸಾವಿತ್ರಿ ಆಟವಾಡುತ್ತಿದ್ದಾಗ, ಡಿಐಜಿ ಮಿ.ಕ್ವಿನ್ ಅವರು ನಾಗಾಲ್ಯಾಂಡಿನ ಮುಖ್ಯಮಂತ್ರಿಯವರೊಂದಿಗೆ ಬಂದರು. ನಾನು ನನ್ನ ರ್‍ಯಾಕೆಟನ್ನು ಮಾನ್ಯ ಮುಖ್ಯಸಚಿವರಿಗೆ ನೀಡಿದೆ. ಅವರು ಸಾವಿತ್ರಿಯೊಂದಿಗೆ ಆಡಲು ತೊಡಗಿದರು. ಮೊದಮೊದಲು ಸುಲಭವಾದ ಟಾಸ್ ಕೊಡುತ್ತಾ ಆಡಿದರು. ಆದರೆ ಸಾವಿತ್ರಿ ವೇಗವಾದ ಹೊಡೆತಗಳನ್ನು ಬೇರೆ ಬೇರೆ ಕಷ್ಟವಾದ ಕೋನಗಳಲ್ಲಿ ಕೊಡುತ್ತಿರುವ ಬಿರುಸನ್ನು ಗಮನಿಸಿದರು. ಸರಿಯಾದ ಜೋರಿನಿಂದ ಆಡಲು ತೊಡಗಿದರು. ಸಾವಿತ್ರಿ ಅವರಿಗೆ ಸಮ ಸಮನಾಗಿಯೇ ಆಡಿದಳು. ಷಟ್ಲ್ ಕೆಲವು ಸಾರಿ ಎಷ್ಟೋ ನಿಮಿಷಗಳವರೆಗೆ ಹಾರುತ್ತಿರುತ್ತಿತ್ತು. ಸೀರೆ ಉಟ್ಟು ಆಡುವ ಈ ಹೆಂಗಸಿನೊಂದಿಗೆ ಒಂದೊಂದು ಪಾಯಿಂಟಿಗೂ ಕಷ್ಟಪಟ್ಟು ಆಡತೊಡಗಿದರು. ಯಾರು ಗೆದ್ದರೋ ನೆನಪಿಲ್ಲ, ಆದರೆ ಆಟ ಮುಗಿಯುವಾಗ ಅವರು ಬೆವತು ನೀರಾಗಿದ್ದರು. ಇನ್ನೊಂದು ಆಟವಾಡಲೂ ಸಾಧ್ಯವಾಗದಷ್ಟು ಬಳಲಿದ್ದರು. ಸಾವಿತ್ರಿ ಸಲೀಸಾಗಿ ಇನ್ನೂ ಎರಡು ಸಿಂಗಲ್ಸ್ ಮತ್ತು ಹಲವು ಡಬಲ್ಸ್ ಆಟಗಳನ್ನು ಆಡಿದಳು.

ಎಲ್ಲರೂ ನಮ್ಮ ಕೋರ್ಟಿನಲ್ಲಿ ಬ್ಯಾಡ್ಮಿಂಟನ್ ಆಡಲು ಬಯಸುತ್ತಿದ್ದರು. ಇದರ ಫಲವಾಗಿ ನಮ್ಮ ಮಿತ್ರರು ಮತ್ತು ಪರಿಚಿತರ ವಲಯ ಅಪಾರವಾಗಿ ಬೆಳೆಯಿತು.

೨೨. ಡಿನ್ನರಿಗೊಂದು ಮಿಥುನ

ನಾನು ಬೆಟಾಲಿಯನ್ ಚಾರ್ಜು ವಹಿಸಿಕೊಂಡಂದಿನಿಂದ ನಮ್ಮ ನೆಲೆಗಳಿಗೆ ಭೇಟಿ ಕೊಡಲು ಪ್ರಾರಂಭಿಸಿದೆ. ಅವೆಲ್ಲ ಬಹು ದೂರದೂರದ, ಹೋಗಲು ತುಂಬ ಕಷ್ಟವಾದ ಸ್ಥಳಗಳಲ್ಲಿದ್ದವು, ತುಂಬಾ ನಡೆಯಬೇಕಾಗುತ್ತಿತ್ತು. ಕೆಲವು ಸಮೀಪದ ನೆಲೆಗಳಿಗೆ ಒಳ್ಳೆಯ ಹವೆಯಲ್ಲಿ ಮಾತ್ರ ಜೀಪಿನಲ್ಲಿ ಹೋಗಬಹುದಾಗಿದ್ದಿತು. ಅಂತಹ ಒಂದು ನೆಲೆ ಪುಷಿಂಗ್. ಅದು ೩೦ ಮೈಲು ದೂರದಲ್ಲಿದ್ದರೂ ಅಲ್ಲಿಗೆ ತಲುಪಲು ೫ ಗಂಟೆಗಳ ಕಾಲ ಹಿಡಿಯುತ್ತಿತ್ತು. ಸುಮಾರು ೧೦ ವಾಹನಗಳ ಸಾಲಿನಲ್ಲಿ ಹೋಗುತ್ತಿದ್ದೆವು. ರಕ್ಷಣೆಯ ವಾಹನ ಹಾಗೂ ಆಹಾರ ಪೂರೈಕೆಯ ವಾಹನಗಳೂ ಜತೆಗಿರುತ್ತಿದ್ದವು.

ನಮ್ಮ ಸೇನಾನೆಲೆಗಳು ಶತ್ರುವಿನ ಆಕ್ರಮಣಕ್ಕೆ ಸುಲಭವಾಗಿ ತುತ್ತಾಗುವ ಹಾಗಿದ್ದವು. ಸಮಗ್ರವಾದ ರಕ್ಷಣಾವ್ಯವಸ್ಥೆ ಅವುಗಳಿಗೆ ಇರಲಿಲ್ಲ. ಸುಲಭವಾಗಿ ದಾಳಿ ಮಾಡಬಹುದಾಗಿತ್ತು. ಅವರ ವಸತಿಗಳಿಗೆ ತಡಿಕೆ ಚಾವಣಿಗಳಿದ್ದವು. ಒಂದು ಸುತ್ತು ಟ್ರೇಸರ್ ಸಾಕು, ಎಲ್ಲವೂ ಸುಟ್ಟು ಬೂದಿಯಾಗುತ್ತಿದ್ದವು. ನಮ್ಮ ಹುಡುಗರಿಗೆ ಮಾರ್ಟರ್‌ಗಳಿಂದ ರಕ್ಷಣೆ ಪಡೆಯಲು ಟ್ರೆಂಚುಗಳೇ ಇರಲಿಲ್ಲ. ಚಲನವಲನವೆಲ್ಲ ನೆಲದ ಮೇಲೆಯೇ, ಶತ್ರುವಿನ ಗುಂಡಿನ ಗುರಿಗೆ ಅನುಕೂಲವಾದ ಎತ್ತರದಲ್ಲೇ ; ಸುಳುಹುಮರೆ (Camouflage) ಎನ್ನುವ ಹೆಸರೇ ಇರಲಿಲ್ಲ. ನಿತ್ಯ ಗಂಡಾಂತರದ ಭೀತಿಗೆ ಸದಾಕಾಲವೂ ಆಹ್ವಾನವಿತ್ತು. ನಾನು ಬೇಗನೆ ಏನಾದರೂ ಮಾಡಬೇಕಾಗಿತ್ತು.

ಮೊದಲು ತಡಿಕೆ ಚಾವಣಿಯ ವಸತಿಗಳನ್ನು ಉರುಳಿಸಲಾಯಿತು. ನೆಲ ಅಗೆದು, ಬಂದೂಕು ತೋಪುಗಳನ್ನು ಹಾರಿಸಲು ಕಿಂಡಿಗಳಿರುವಂತೆ ಬಂಕರುಗಳನ್ನು ನಿರ್ಮಿಸಲಾಯಿತು. ಟ್ರೆಂಚುಗಳಿಂದ ಬಂಕರುಗಳಿಗೆ ಸಂಪರ್ಕ ಕಲ್ಪಿಸಿ ಸೈನಿಕರು ಹೊರಗೆ ಕಾಣಿಸಿಕೊಳ್ಳದೆಯೇ ಒಂದು ಬಂಕರಿನಿಂದ ಇನ್ನೊಂದಕ್ಕೆ ತೆವಳಿಕೊಂಡು ಹೋಗಲು ಅವಕಾಶ ಕಲ್ಪಿಸಿದೆವು. ಮಾರ್ಟರುಗಳು ಮತ್ತು ಹಗುರ ಮೆಷಿನ್‌ಗನ್‌ಗಳಿಗೆ ತಕ್ಕ ಗುಣಿಗಳನ್ನು ಕಟ್ಟಿದೆವು. ಅಡುಗೆ ಮನೆ, ಉಗ್ರಾಣಗಳು, ಬಂಕರುಗಳಿಗೆ

ಸ್ಥಳಾಂತರಗೊಂಡವು. ಎಲ್ಲ ಬಂಕರುಗಳಿಗೂ ಸುಳುಹುಮರೆ ಹಾಕಲಾಯಿತು. ಆಳವಾದ ಟ್ರೆಂಚ್ ಶೌಚಾಲಯಗಳನ್ನು ನಿರ್ಮಿಸುವ ವಿಧಾನವನ್ನು ಅವರಿಗೆ ಕಲಿಸಿದೆ. ಬೂಬಿಟ್ರಾಪ್‌ಗಳನ್ನು ಹಾಕುವ ರೀತಿಯನ್ನು ಎಲ್ಲರಿಗೂ ಹೇಳಿಕೊಟ್ಟೆ. ನೆಲೆಗಳ ಸುತ್ತಣ ಪ್ರದೇಶದಲ್ಲಿ ಗಸ್ತುಹಾಕಲು ವ್ಯವಸ್ಥೆ ಮಾಡಿದೆ. ಇದಕ್ಕೆ ಕೆಲವು ವಾರಗಳು ಬೇಕಾದವು. ಈಗ ನಾವು ತಕ್ಷಣದ ಅಪಾಯದಿಂದ ರಕ್ಷಿತರಾಗಿದ್ದೆವು.

ನಮ್ಮ ಹುಡುಗರಿಗೆ ಗಸ್ತು , ರಕ್ಷಣೆ, ದಾಳಿ ಮಾಡುವುದು ಅಥವಾ ದಾಳಿಯನ್ನು ಮುರಿಯುವುದು, ಯುದ್ಧದ ತಂತ್ರಗಳು ಅಥವಾ ಡ್ರಿಲ್ ಇವುಗಳಲ್ಲಿ ತರಬೇತಿಯಾಗಿರಲಿಲ್ಲ. ತಂಡತಂಡವಾಗಿ ಅವರನ್ನು ಇಂಫಾಲಕ್ಕೆ ಕರೆದೊಯ್ದು ಈ ಎಲ್ಲ ಅಂಶಗಳಲ್ಲಿ ತರಬೇತಿ ಕೊಡಿಸ ತೊಡಗಿದೆ. ನಿಧಾನವಾಗಿ ಅವರು ಯುದ್ಧದಲ್ಲಿ ಸಮಸಮನಾಗಿ ಎದೆಗೊಡುವ ಯೋಧರಾಗಿ ರೂಪುಗೊಂಡರು.

ಸೇನಾ ಠಾಣ್ಯಗಳಿಗೆ ಹೆಚ್ಚು ಹೆಚ್ಚಾಗಿ ಹೋಗಿ, ಆ ಸುತ್ತಮುತ್ತಣ ಹಳ್ಳಿಗರನ್ನು ಪರಿಚಯ ಮಾಡಿಕೊಂಡಂತೆ ನನಗೆ ಅನ್ನಿಸಿದ್ದು ಅನೇಕಾನೇಕ ವರ್ಷಗಳಿಂದ ಅಲ್ಲಿನ ಅನೇಕರು ಯಾವನೇ ಕೇಂದ್ರದ ಅಥವಾ ರಾಜ್ಯದ ಅಧಿಕಾರಿಯನ್ನು ನೋಡಿರಲಿಲ್ಲ ಎಂಬ ವಿಚಾರ. ಚುನಾಯಿತ ಧುರೀಣರು ಚುನಾವಣೆಗೆ ಮೊದಲು ಕಾಣಿಸಿ ಕೊಳ್ಳುತ್ತಿದ್ದರು, ಆಮೇಲೆ ಮಾಯವಾಗಿಬಿಡುತ್ತಿದ್ದರು. ಬಹುತೇಕ ಹಳ್ಳಿಗಳಲ್ಲಿ ಹರಿಯುವ ನೀರಾಗಲಿ, ವಿದ್ಯುತ್ತಾಗಲಿ ಇರಲಿಲ್ಲ. ಶಾಲೆಗಳಿರಲಿಲ್ಲ. ವೈದ್ಯಕೀಯ ಚಿಕಿತ್ಸಾಲಯ ಇರಲಿಲ್ಲ. ಇನ್ನು ಪೊಲೀಸ್ ಆಗಲಿ, ಅಂಚೆ ಸೇವೆಯಾಗಲಿ ಬಹುದೂರವಾಗಿತ್ತು.

ರಸ್ತೆಗಳೇ ಇರಲಿಲ್ಲ. ಎರಡನೆಯ ಮಹಾಯುದ್ಧದ ಸಮಯದಲ್ಲಿ ಜೀಪುಗಳು ಹೋಗಬಹುದಾದ ಕೆಲವು ದಾರಿಗಳನ್ನು ಮಾಡಿದ್ದರು. ಆಮೇಲೆ ಇವುಗಳನ್ನು ಉಪಯೋಗಿಸಲೂ ಇಲ್ಲ. ಸರಿಯಾಗಿ ಇಟ್ಟುಕೊಳ್ಳಲೂ ಇಲ್ಲ. ವೇಗವಾಗಿ ಬೆಳೆಯುವ ಇಂಡೋ-ಬರ್ಮಾ ಕಾಡುಗಳಲ್ಲಿ ಅವೂ ಅಡಗಿಹೋದವು.

ಆದರೂ ಹೇಗೋ ಅಂತಹ ಒಂದು ದಾರಿ ಉಳಿದುಕೊಂಡಿತ್ತು. ಅದು ಪುಷಿಂಗ್‌ಗೆ ಮಾರ್ಕೋಟ್‌ಅನ್ನು ಸೇರಿಸುತ್ತಿತ್ತು. ಅಲ್ಲಿ ನಮ್ಮ ಇನ್ನೊಂದು ಠಾಣ್ಯವಿದ್ದಿತು. ಅದೀಗ ಒರಟಾದ, ಕಿರಿದಾದ, ಟ್ರೆಕಿಂಗ್‌ಗೆ ಮಾತ್ರವೇ ತಕ್ಕುದಾದ ದಾರಿಯಾಗಿತ್ತು. ಇಂಡೋ–ಬರ್ಮಿಸ್ ಗಡಿಯ ಈಚಿನ ಪಕ್ಕದಲ್ಲಿದ್ದ ಪೂರ್ವದಿಕ್ಕಿನ ಕೊಟ್ಟಕೊನೆಯ ಹಳ್ಳಿ ಮಾರ್ಕೋಟ್. ಈ ಎರಡೂ ಸ್ಥಳಗಳ ನಡುವೆ ಜೀಪು ಹೋಗುವ ಒಂದು ರಸ್ತೆ ಮಾಡಿದರೆ ಒಳ್ಳೆಯದು ಎಂದು ನಾನು ಯೋಚಿಸಿದೆ. ಅದರಿಂದ ಎರಡೂ ಠಾಣ್ಯಗಳ ನಡುವೆ ಓಡಾಟ ಸುಲಭವಾಗುತ್ತದೆ. ಹಳ್ಳಿಗರಿಗೆ ಒಂದು ರಸ್ತೆಯನ್ನು ಒದಗಿಸಿ ಇತರ ಹಳ್ಳಿಗಳಿಗೂ ಹೊರ ಜಗತ್ತಿಗೂ ಅವರಿಗೆ ಸಂಪರ್ಕ ಕೊಟ್ಟು ಅವರ ಸದ್ಭಾವನೆಯನ್ನು ಗಳಿಸಿಕೊಳ್ಳಲು ಸಾಧ್ಯವಾಗುತ್ತದೆ ಎನಿಸಿತು.

ಮತ್ತೆ ಈ ಕೆಲಸವನ್ನು ನಾವೇ ಮಾಡಬೇಕು. ಪಿಡಬ್ಲ್ಯುಡಿ, ಅಥವಾ ಸಿಪಿಡಬ್ಲ್ಯುಡಿಗಳನ್ನು ಕೇಳಿದರೆ ಹಲವು ವರ್ಷಗಳ ಕೆಂಪುಪಟ್ಟಿಗೆ ಸಿಕ್ಕಿಕೊಳ್ಳುತ್ತೇವೆ. ಆಮೇಲೂ ಅಲ್ಲಿ ರಸ್ತೆಯಂತೂ ಬರುವುದಿಲ್ಲ. ನನ್ನ ಅಧಿಕಾರಿಗಳು ಮತ್ತು ಹಳ್ಳಿಯ ಮುಖ್ಯಸ್ಥರೊಂದಿಗೆ ಮಾತನಾಡಿದೆ. ಅವರಿಗೆ ತುಂಬಾ ಸಂತೋಷವಾಗಿತ್ತು. ಹಳ್ಳಿಯ ಕಟ್ಟುಮಸ್ತಾದ ತರುಣ ತರುಣಿಯರು ಸ್ವಯಂಪ್ರೇರಿತರಾಗಿ ಕೆಲಸ ಮಾಡಲು ಮುಂದೆ ಬಂದರು. ಒಂದು ದಿನ–ಅದು ಬಹುದೂರವೇನಿಲ್ಲ– ನಾನು ಪುಷಿಂಗ್‌ನಿಂದ ಜೀಪು ಓಡಿಸಿಕೊಂಡು ಮಾರ್ಕೋಟಿಗೆ ಬರುವುದಾಗಿ ಅವರಿಗೆ ಮಾತುಕೊಟ್ಟೆ.

ಉತ್ಸಾಹದಿಂದ ಕೆಲಸ ಪ್ರಾರಂಭವಾಯಿತು. ಗಂಡಸರು, ಹೆಂಗಸರು, ಚಿಕ್ಕ ಹುಡುಗರು, ಹುಡುಗಿಯರು, ನಮ್ಮವರೇ ಜವಾನ್‌ರ ಅನೇಕ ಪ್ಲಟೂನ್‌ಗಳು, ದಾರಿಯನ್ನು ಶುದ್ಧಗೊಳಿಸತೊಡಗಿದರು. ಒಂದು ಜೀಪು ಹೋಗುವಷ್ಟು ಅಗಲವಾಗುವಂತೆ ಗಿಡಗಂಟಿಗಳನ್ನು ಕಡಿದು ತೆರವು ಮಾಡಿದರು. ಕೆಲವು ಕಡೆ ಭೂಕುಸಿತವುಂಟಾಗಿ ದಾರಿ ಮುಚ್ಚಿ ಹೋಗಿ, ಎಲ್ಲೋ ಒಂದು ಜಾಡು ೧೦೦-೨೦೦ ಅಡಿ ಆಳದ ಕಮರಿಯ ನೆತ್ತಿಗೆ ಹೋಗಿ ನಿಲ್ಲುತ್ತಿತ್ತು. ಇದನ್ನೆಲ್ಲಾ ಸರಿಪಡಿಸುವುದು ಬೆನ್ನು ಮುರಿಯುವ ಕೆಲಸವಾಗಿತ್ತು. ದುರ್ಬಲವಾಗಿದ್ದ ಕಡೆ ಕಲ್ಲುಗಳನ್ನೂ ತೇಗದ ತೊಲೆಗಳನ್ನೂ ಕೂಡಿಸಿ ಬಲಪಡಿಸಬೇಕಾಗಿತ್ತು. ಎಂದಿನಂತೆ ಸೊಳ್ಳೆಗಳು ಮತ್ತು ಜಿಗಣೆಗಳೊಂದಿಗೆ ಹೊಡೆದಾಡ ಬೇಕಾಗಿತ್ತು. ರಸ್ತೆ ನಿರ್ಮಾಣಕಲೆಯನ್ನು ಬಹುಕಷ್ಟಪಟ್ಟು ಕಲಿಯುತ್ತಿದ್ದೆವು.

ಇಷ್ಟು ಮಾಡಿದ ಮೇಲೆ ಮಳೆ ಬಂದುಬಿಡುತ್ತಿತ್ತು. ಹಲವು ದಿನಗಳ ಕಾಲ ಬಹುಕಷ್ಟಪಟ್ಟು ಮಾಡಿದ ಕೆಲಸ ನೀರಿನಲ್ಲಿ ಕೊಚ್ಚಿ ಹೋಗುತ್ತಿತ್ತು. ಆದರೆ ಗ್ರಾಮಸ್ಥರ ಮತ್ತು ನಮ್ಮ ಹುಡುಗರ ಉತ್ಸಾಹ ಹೇಗಿದ್ದಿತೆಂದರೆ ಏನೊಂದೂ ನಮಗೆ ತಡೆಯಾಗುತ್ತಿರಲಿಲ್ಲ. ನಮ್ಮನ್ನು ಹಿಂದಕ್ಕೆಳೆಯುತ್ತಿರಲಿಲ್ಲ. ನಾವು ಸ್ಥಿರಗತಿಯಲ್ಲಿ ಮುನ್ನಡೆದೆವು. ನಾವೇ ವಿಧಿಸಿಕೊಂಡ ತಾರೀಖಿನೊಳಗೆ ಕೆಲಸ ಮುಗಿಯಿತು. ಅಂದು ಬೆಳಗ್ಗೆ ನನ್ನ ಜೀಪಿನಲ್ಲಿ ಕುಳಿತು ಇತರ ನಾಲ್ಕು ಜೀಪುಗಳೊಂದಿಗೆ ಮಾರ್ಕೋಟ್ ಕಡೆಗೆ ಹೊರಟೆವು. ನನ್ನೊಂದಿಗೆ ಸಾವಿತ್ರಿಯಿದ್ದಳು. ಇತರ ಕೆಲವು ಅಧಿಕಾರಿಗಳೂ , ಅವರ ಪತ್ನಿಯರೂ ಬಂದರು. ಡ್ರೈವಿಂಗ್ ಕಷ್ಟವಾಗಿತ್ತು. ಆದರೂ ಚಿಂತೆಯಿಲ್ಲ, ಜೀಪಿನಲ್ಲಿ ಹೋಗಬಲ್ಲ ದಾರಿಯಾಗಿತ್ತು.

ಉದ್ದಕ್ಕೂ ರಸ್ತೆಯನ್ನು ಬಣ್ಣಬಣ್ಣದ ಬಾವುಟಗಳಿಂದಲೂ ತಳಿರುತೋರಣಗಳಿಂದಲೂ, ಅಲಂಕರಿಸಿದ್ದರು. ಹಳ್ಳಿಗರು ಗುಂಪುಗುಂಪಾಗಿ ನೆರೆದು ನಮಗೆ ಕೈಬೀಸಿದರು. ನಮಗೆ ಮೊಟ್ಟೆಗಳು, ಕೋಳಿಮರಿಗಳನ್ನು ಉಡುಗೊರೆಯಾಗಿ ಕೊಡಲು ಹಲವರು ಜೀಪಿನೊಂದಿಗೆ ಓಡಿಬಂದರು.

ಮಾರ್ಕೋಟ್ ಗ್ರಾಮದ ಬಾಗಿಲಲ್ಲಿ ನಾವು ನಿಲ್ಲಬೇಕಾಯಿತು. ನಮ್ಮನ್ನು ಸ್ವಾಗತಿಸಲು ಇಡೀ ಹಳ್ಳಿ ಅಲ್ಲಿ ನೆರೆದಿದ್ದಿತು. ಒಂದು

ಸ್ವಾಗತಕಮಾನು ನಿರ್ಮಿಸಿದ್ದರು. ನಮ್ಮನ್ನು ಕುರ್ಚಿಗಳ ಮೇಲೆ ಕೂರಿಸಿದರು. ಗ್ರಾಮದ ಮುಖ್ಯಸ್ಥನೂ ಇತರ ಮುಖ್ಯಸ್ಥರೂ ನಮಗೆ ಬುಟ್ಟಿಗಳು, ಶಾಲುಗಳು, ಪೊಟ್ಟೆಗಳು, ಹೂಮಾಲೆಗಳನ್ನು ಬಹುಮಾನವಾಗಿ ಕೊಟ್ಟರು. ಅದು ಬಿಸಿಲಿನ ದಿನ, ಕೆಲವು ಹೆಂಗಸರು ನಮಗೆ ಕುಡಿಯಲು ನೀರು ತಂದುಕೊಟ್ಟರು.

ಮುಖ್ಯಸ್ಥನು ಅಧಿಕೃತವಾಗಿ ನಮ್ಮನ್ನು ಸ್ವಾಗತಿಸಿ ಸುದೀರ್ಘ ಭಾಷಣ ಮಾಡಿದನು. ನಮ್ಮನ್ನು ವಂದಿಸಿದನು. ನಾನು ಉತ್ತರ ಕೊಡುತ್ತಾ , ಅದು ನಿಜವಾಗಿ ಅವರ ರಸ್ತೆ ಎಂದು ಹೇಳಿದೆ. "ಅವರು ಬಹು ಕಷ್ಟಪಟ್ಟು ಕೆಲಸ ಮಾಡಿದರು, ಅವರಿಲ್ಲದೆ ಈ ರಸ್ತೆಯ ನಿರ್ಮಾಣ ಸಾಧ್ಯವೇ ಆಗುತ್ತಿರಲಿಲ್ಲ. ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದು, ಹಾಳಾಗಲು ಬಿಡದೆ ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವುದು ತಮಗೇ ಬಿಟ್ಟ ವಿಷಯ" ಎಂದು ಹೇಳಿದೆ. ಆಮೇಲೆ ಇಡೀ ಹಳ್ಳಿ ಒಟ್ಟಾಗಿ ಬೈಬಲ್ ಗೀತೆಗಳನ್ನು ಹಾಡಿತು. ನಮಗೆ ಹೊರಡಲು ಇನ್ನೂ ಅನುಮತಿಯಿರಲಿಲ್ಲ. ನಮಗೆ ಕೊಡಬೇಕಾದ ಇನ್ನೂ ಒಂದು ಮುಖ್ಯವಾದ ಉಡುಗೊರೆಯಿದೆ ಎಂದು ಹೇಳಿದರು. ಅದೇನಿರಬಹುದೆಂದು ನಾನು ಯೋಚಿಸುತ್ತಿರುವಾಗಲೇ ಜನರಲ್ಲಿ ಸ್ವಲ್ಪ ಗುಜುಗುಜು ಆರಂಭವಾಯಿತು. ಮುಖ್ಯಸ್ಥನು ಯಾವುದೋ ಒಂದು ಪ್ರಾಣಿಯನ್ನು ನಡೆಸಿಕೊಂಡು ಬಂದಾಗ ಎಲ್ಲರೂ ಸಂತಸದ ಉದ್ಗಾರವೆತ್ತಿದರು.

ಆ ಪ್ರಾಣಿಯನ್ನು ನನ್ನ ಹತ್ತಿರಕ್ಕೆ ಕರೆದುಕೊಂಡು ಬಂದನು. ಅದನ್ನು ಅವನು ನನಗೆ ಉಡುಗೊರೆಯಾಗಿ ಕೊಡುತ್ತಿದ್ದಾನೆ ಎಂದು ನನಗನ್ನಿಸಿತು. ಅದು ಹಸುವೂ ಅಲ್ಲ, ಎಮ್ಮೆಯೂ ಅಲ್ಲ, ಆದರೆ ಪಶುಕುಟುಂಬಕ್ಕೆ ಸೇರಿದ ದೊಡ್ಡ ಪ್ರಾಣಿ. ನಾನು ಅದನ್ನು ಅದುವರೆಗೂ ನೋಡಿರಲಿಲ್ಲ. ಅದನ್ನು ಮಿಥುನ ಎಂದು ಕರೆಯುತ್ತಿದ್ದರು.

ಜನರು ಜಯಘೋಷ ಮಾಡಿದರು. ಆ ಹಳ್ಳಿಯವರು ತುಂಬಾ ಬಡವರು. ಅವರಿಗೆ ನೋವಾಗದ ಹಾಗೆ, ಅದು ತೀರಾ ಹೆಚ್ಚಿನ ಉಡುಗೊರೆ ಆಯಿತು ಎಂದು ಹೇಳಲು ಪ್ರಯತ್ನಿಸಿದೆ. ಅವರು ಕೇಳಲಿಲ್ಲ. ನಾನು ಒಪ್ಪಿಕೊಳ್ಳಬೇಕಾಯಿತು. ಅವರಿಗೆ ವಂದನೆ ಹೇಳಿದೆ. ಪ್ರಾಣಿಯನ್ನು ಎಳೆದುಕೊಂಡು ಹೋದರು. ಆಮೇಲೆ ಮುಖ್ಯಸ್ಥನು ಆ ದಿನದ ಊಟದ ಕಾರ್ಯಕ್ರಮಗಳನ್ನು ವಿವರಿಸಿದನು. ಕೇಳಿ ನಾನು ಬೆಚ್ಚಿಬಿದ್ದೆ.

ಸಂಜೆ ಒಂದು ಭಾರೀ ಔತಣ ವ್ಯವಸ್ಥೆಯಾಗಿತ್ತು. ನನ್ನ ಗೌರವಾರ್ಥವಾಗಿ ಆ ಮಿಥುನವನ್ನು ಕೊಂದು ಅಡುಗೆ ಮಾಡಲಿದ್ದರು. ಶುದ್ಧ ಸಸ್ಯಾಹಾರಿಯಾಗಿದ್ದ ನಾನು ಅದಕ್ಕೆ ಸಿದ್ಧನಾಗಿರಲಿಲ್ಲ. ಯಾರ ಮನಸ್ಸಿಗೂ ನೋವಾಗದಂತೆ ಇದನ್ನು ನಿಲ್ಲಿಸುವುದು ಹೇಗೆ ? ಸ್ವಲ್ಪ ಕಾಲದಲ್ಲೇ ಮಣಿಪುರದ ಬೆಟ್ಟಗಳಲ್ಲಿದ್ದ ನಾಗಾ ಜನರೂ, ಕುಕಿ ಜನರೂ ಅತ್ಯಂತ ಉದಾರಿಗಳು, ಆದರೆ ಅಷ್ಟೇ ಬೇಗ ಅಸಮಾಧಾನ ಪಡುವವರು ಎಂಬುದನ್ನು ತಿಳಿದುಕೊಂಡಿದ್ದೆ.

ಒಂದು ದಾರಿ ಹೊಳೆಯಿತು.

"ನೀವು ಈ ಪ್ರಾಣಿಯನ್ನು ನನಗೆ ಉಡುಗೊರೆಯಾಗಿ ಪ್ರೀತಿಯಿಂದ ಕೊಟ್ಟಿರುವುದರಿಂದ ನಾನು ನಿರಾಕರಿಸುವುದಿಲ್ಲ. ಅದನ್ನು ತೆಗೆದುಕೊಳ್ಳುವುದು ನನಗೆ ಗೌರವ ಎಂದು ಭಾವಿಸುತ್ತೇನೆ. ಆದರೆ ಈಗ ಈ ಪ್ರಾಣಿ ನನ್ನದಾಯಿತಷ್ಟೆ. ನನಗೆ ಇಷ್ಟ ಬಂದ ಹಾಗೆ ಮಾಡಲು ನೀವು ದಯವಿಟ್ಟು ಅವಕಾಶ ಕೊಡಬೇಕು."

ನಾನು ಏನು ಹೇಳಲಿದ್ದೇನೆಂದು ಊಹಿಸಲಾಗದೆ ತಲೆಯಾಡಿಸಿದರು. 'ಈ ಪ್ರಾಣಿಯು ಕಮಾಂಡೆಂಟ್ ೨ನೇ ಎಂ.ಆರ್.ಗೆ ಸೇರಿದ್ದು' ಎಂಬುದಾಗಿ ಒಂದು ಪಟ್ಟಿ ಬರೆದು ಇದರ ಕೊರಳಿಗೆ ಕಟ್ಟಿಬಿಡಬೇಕು. ಯಾರೂ ಅದಕ್ಕೆ ನೋವುಂಟು ಮಾಡಬಾರದು. ಅದು ಕಾಡಿನ ಪ್ರಾಣಿಯಾದ್ದರಿಂದ ತನಗಿಷ್ಟ ಬಂದ ಹಾಗೆ ಕಾಡಿನಲ್ಲಿ ಸ್ವತಂತ್ರವಾಗಿ ಓಡಾಡುತ್ತಿರಲಿ."

ಹೀಗೆ ಹೇಳಿದ್ದರಿಂದ ಅವರು ತಿರಸ್ಕರಿಸಲು ಸಾಧ್ಯವಾಗಲಿಲ್ಲ. ನಿರಾಳವಾಗಿ ನಿಟ್ಟುಸಿರುಬಿಟ್ಟೆ. ಬಹಳ ಸೂಕ್ಷ್ಮವಾದ ಸಂದರ್ಭವನ್ನು ತಿಳಿಗೊಳಿಸಿದ್ದೆ. ಅವರು ಕೊಟ್ಟ ಮಾತಿನಂತೆಯೇ ನಡೆದುಕೊಂಡರು. ಆಗೀಗ ನಮ್ಮ ಜನರು ಕಾಡಿನಲ್ಲಿ ಗಸ್ತು ತಿರುಗುವಾಗ ಅದನ್ನು ನೋಡಿದೆವೆಂದು ನನಗೆ ವರದಿ ಮಾಡುತ್ತಿದ್ದರು. ನಾನು ನಾಗಾಲ್ಯಾಂಡಿಗೆ ಹೋದ ಮೇಲೂ ಆಗಾಗ ಅದರ ಸುದ್ದಿ ತಿಳಿಯುತ್ತಿತ್ತು. ನನಗೆ ತಿಳಿದಿರುವ ಮಟ್ಟಿಗೆ ಈಗಲೂ ಅಲ್ಲೇ ಕಾಡಿನಲ್ಲಿ ಅದು ಅಲೆದಾಡುತ್ತಿರಬೇಕು.

ಅಂದು ಮಧ್ಯಾಹ್ನ ಹಳ್ಳಿಯ ಹಿರಿಯ ಕಿರಿಯರೆಲ್ಲರನ್ನೂ ಜೀಪುಗಳಲ್ಲಿ ಕೂರಿಸಿಕೊಂಡು ಸುತ್ತಾಡಿಸಿದೆವು. ಅನೇಕರು ತಮ್ಮ ಜೀವಮಾನದಲ್ಲಿ ವಾಹನವನ್ನೇ ನೋಡಿರಲಿಲ್ಲ. ಜೀಪಿನಲ್ಲಿ ಕುಳಿತುಕೊಳ್ಳುವುದೇ ಅವರಿಗೆ ರೋಮಾಂಚಕಾರಿಯಾಗಿತ್ತು. ಅವರ ಉದ್ವೇಗದ ಕೇಕೆ ದೂರಕ್ಕೆ ಕೇಳಿಸುತ್ತಿತ್ತು. ಅಂದು ರಾತ್ರಿ ಭೋಜನ ಏರ್ಪಾಟಾಗಿತ್ತು. ಸದ್ಯ ನನ್ನ ಮಿಥುನ ಮುಖ್ಯವಾದ ಖಾದ್ಯ ವಸ್ತುವಾಗಿರಲಿಲ್ಲ!

ನಾನು ನಿರೀಕ್ಷಿಸಿದಂತೆಯೇ, ರಸ್ತೆಯು ತೆರೆದ ಮೇಲೆ ಹೆಚ್ಚು ಹೆಚ್ಚಾಗಿ ಜನರು ದೊಡ್ಡ ಹಳ್ಳಿಗಳಿಗೂ, ನಗರಗಳಿಗೂ ಹೋಗಿ ಬರತೊಡಗಿದರು. ಕೆಲವರು ಉದ್ಯಮಶೀಲರಾದವರು ಸೆಕೆಂಡ್ ಹ್ಯಾಂಡ್ ಜೀಪು ಕೊಂಡು ವಿವಿಧ ವಸ್ತುಗಳನ್ನು ಹಳ್ಳಿಗೆ ತಂದು ಮಾರತೊಡಗಿದರು. ಜನರ ಜೀವನ ಉತ್ತಮಗೊಂಡಿತು.

೨೩. ಹೃದಯಗಳು ಮತ್ತು ಮನಸ್ಸುಗಳ ಯುದ್ಧ

೨ನೇ ಎಂ. ಆರ್. ದಳದ ಅಧಿಕಾರ ವಹಿಸಿಕೊಂಡಾಗ ಬೆಟ್ಟಗಳಲ್ಲಿದ್ದ ಅನೇಕ ಹಳ್ಳಿಗಳನ್ನು ನಮ್ಮ ವಿರೋಧಿಗಳೆಂದು ಭಾವಿಸಲಾಗಿತ್ತು. ದಟ್ಟ ಅರಣ್ಯದ ಮುಸುಕಿನೊಳಗೆ ಇಂತಹ ಹಲವು ವಿರೋಧೀ ತಂಡಗಳು ಕೆಲಸ ಮಾಡುತ್ತಿದ್ದವು. ಆದರೆ ಇಂತಹ ಯಾವುದೇ ಗುಂಪಿನ ಗಾತ್ರ ತುಂಬಾ ಚಿಕ್ಕದು. ಒಂದು ಹಳ್ಳಿಯಿಂದ ಹೆಚ್ಚೆಂದರೆ ಐದಾರು ತರುಣರು ನಮ್ಮ ವಿರೋಧಿಗಳಾಗುತ್ತಿದ್ದರು. ಪರಿಸ್ಥಿತಿ ಅವರಿಗೆ ವಿಮುಖವಾಗಿ ತಡೆಯಲಾರದಾದಾಗ ಸಾಮಾನ್ಯ ಬಟ್ಟೆಬರೆಗಳನ್ನು ಧರಿಸಿ ಹಳ್ಳಿಗರಾಗಿ ಬರುತ್ತಿದ್ದರು. ಶತ್ರು ಯಾರು ಎಂದು ಕಂಡು ಹಿಡಿಯುವುದೇ ನಮಗೆ ತುಂಬಾ ಕಷ್ಟವಾಗುತ್ತಿತ್ತು. ಮರೆಯಿಂದ ಗುಂಡು ಹಾರಿಸುವುದು (ಸ್ನೈಪಿಂಗು), ದಾಳಿ, ಬೂಬಿ ಟ್ರಾಪ್ಸ್ ಇವುಗಳಿಗೆ ನಾವು ಸದಾ ಕಾಲವೂ ಜಾಗರೂಕವಾಗಿರ ಬೇಕಾಗಿತ್ತು.

ಅಂತಹ ವಾತಾವರಣದಲ್ಲಿ ಸುತ್ತಮುತ್ತ ಇರುವ ಪ್ರತಿಯೊಬ್ಬರೂ ಶತ್ರುವೆಂದು ಭಾವಿಸಿ ಎಲ್ಲರಿಗೂ ಶಿಕ್ಷೆ ಕೊಡಬಹುದಾಗಿದ್ದಿತು. ಇದರಿಂದ ಮತ್ತಷ್ಟು ಜನರ ವಿರೋಧವನ್ನು ಕಟ್ಟಿಕೊಳ್ಳುವುದಾ ಗುತ್ತಿದ್ದಿತೇ ಹೊರತು ಬೇರೆ ಯಾವ ಪ್ರಯೋಜನವೂ ಇರಲಿಲ್ಲ. ಅನೇಕ ಹಳ್ಳಿಗರಿಗೆ ಸ್ವಾತಂತ್ರ್ಯ ಬೇಕಾಗಿರಲಿಲ್ಲ. ಆದರೆ ಅಧಿಕಾರಿಗಳು ತಮ್ಮನ್ನು ಅಲಕ್ಷಿಸಿದ್ದಾರೆ ಎಂಬ ಭಾವನೆ ಅವರಲ್ಲಿತ್ತು. ಅದಕ್ಕಾಗಿ ಅವರು ಅಸಮಾಧಾನಗೊಂಡಿದ್ದರು.

ಗ್ರಾಮಸ್ಥರನ್ನು ನಮ್ಮ ಕಡೆಗೆ ಒಲಿಸಿಕೊಳ್ಳಬೇಕು ; ಅವರು ನಮ್ಮ ವೈರಿಗಳಿಗೆ ಸಹಾನುಭೂತಿ ತೋರಿಸಿ ಸಹಾಯ ಮಾಡುವುದನ್ನು ತಡೆಯಬೇಕು. ಅದಕ್ಕಾಗಿ ಸಾಧ್ಯವಿರುವ ಮಟ್ಟಿಗೂ ಗ್ರಾಮಸ್ಥರಿಗೆ ಸಹಾಯ ಮಾಡಬೇಕೆಂದು ನಮ್ಮ ಹುಡುಗರಿಗೆ ಹೇಳಿದೆ. ಯಾರಿಗಾದರೂ ಕಾಯಿಲೆಯಾದರೆ ಅವರಿಗೆ ನಾವೇ ಚಿಕಿತ್ಸೆ ಮಾಡುತ್ತಿದ್ದೆವು. ಅಥವಾ ಇಂಫಾಲಕ್ಕೋ ಉಕ್ರುಲ್‌ಗೋ ಕರೆತಂದು ಚಿಕಿತ್ಸೆ ಮಾಡಿಸುತ್ತಿದ್ದೆವು. ಅವರಿಗೆ ಬೇಕಾದ ಆಹಾರವಸ್ತುಗಳನ್ನು ನಮ್ಮ ವಾಹನಗಳಲ್ಲಿ ತಂದು ಕೊಡುತ್ತಿದ್ದೆವು.

ಅನೇಕ ಹಳ್ಳಿಗಳಲ್ಲಿ ಕುಡಿಯಲು ನೀರನ್ನು ದೂರದಲ್ಲಿ ಕಡಿದಾದ ಬೆಟ್ಟದಲ್ಲಿದ್ದ ಒರತೆಗಳಿಂದ ತರಬೇಕಾಗಿದ್ದಿತು. ಹೆಂಗಸರು ತಮ್ಮ ಬೆನ್ನಮೇಲೆ ನೀರು ಹೊತ್ತು ತರುವುದರಲ್ಲೇ ಅನೇಕ ಗಂಟೆಗಳು ಕಳೆಯುತ್ತಿದ್ದವು.

ಒಂದು ಹಳ್ಳಿಯಲ್ಲಿ ನಾವು ಸಹಾಯಕ್ಕೆ ಬರಲು ಅವಕಾಶವಾಯಿತು. ನೀರು ಚಿಮ್ಮುತ್ತಿರುವ ಕಡೆ ಸಂಗ್ರಹಿಸಲು ಒಂದು ಟ್ಯಾಂಕ್ ಕಟ್ಟಿದೆವು. ಅಲ್ಲಿಂದ ಹಳ್ಳಿಯವರೆಗೆ ಕೊಳಾಯಿ ಹಾಕಿದರೆ ತೀರಿತು. ಗುರುತ್ವಶಕ್ತಿಯಿಂದಲೇ ನೀರು ಹರಿದು ಬಂದುಬಿಡುತ್ತಿತ್ತು. ಆದರೆ ಯಾವ ಬಗೆಯ ಪೈಪ್ ಹಾಕಬೇಕು? ಲೋಹ ಅಥವಾ ಪ್ಲ್ಯಾಸ್ಟಿಕ್ ಪೈಪುಗಳು ದುಬಾರಿ. ಆದ್ದರಿಂದ ಬೊಂಬುಗಳನ್ನು ಉಪಯೋಗಿಸಿ ಕೊಂಡು ನೀರು ಹರಿಸುವ ಸರಳವಾದ ವ್ಯವಸ್ಥೆಯೊಂದನ್ನು ರೂಪಿಸಿದೆವು. ಈ ಪ್ರದೇಶಗಳಲ್ಲಿ ಬಿದಿರು ತುಂಬಾ ಬೆಳೆಯುತ್ತಿತ್ತು. ನಮಗೆ ಅಗತ್ಯವಾಗಿದ್ದಷ್ಟು ಬಿದಿರು ಬೊಂಬುಗಳನ್ನು ಸಂಗ್ರಹಿಸಿದೆವು. ಅದರ ಗಂಟುಗಳನ್ನು ಸವರಿ, ಟೊಳ್ಳಾದ ನಳಿಗೆಯಾಗುವಂತೆ ಮಾಡಿದೆವು. ಇಂತಹ ೫೦೦-೧೦೦೦ ಬೊಂಬುಗಳನ್ನು ಕೂಡಿಸಿ ಹಳ್ಳಿಯವರೆಗೆ ನಮ್ಮ ಪೈಪ್ ಲೈನ್ ಸಿದ್ಧಪಡಿಸಿದೆವು. ಸಂಗ್ರಹವಾಗುವ ಟ್ಯಾಂಕಿನಿಂದ ಈ ನಳಿಗೆಗಳ ಮಾರ್ಗವಾಗಿ ನೀರು ಹರಿದು ಬಂದಿತು. ಮರದ ಕಂಬಗಳ ಆಧಾರ ಕೊಟ್ಟು, ನಳಿಗೆಗಳನ್ನು ನಿಲ್ಲಿಸಿದೆವು. ಹಳ್ಳಿಯವರೆಗೂ ಹೀಗೆ ತರಲು ಸಾಧ್ಯವಾಯಿತು. ಹಳ್ಳಿಯ ಹೆಂಗಸರಿಗೆ ಇದು ದೊಡ್ಡ ವರವಾಯಿತು. ಈಗ ನೀರು ಅವರ ಬಾಗಿಲಿಗೇ ಬಂದಿತ್ತು. ಅವರ ಜೀವನ ಸುಲಭವಾಯಿತು.

ಸಾಧ್ಯವಿರುವ ಕಡೆಗಳಲ್ಲಿ ಮಕ್ಕಳಿಗಾಗಿ ಶಾಲೆಗಳನ್ನು ತೆರೆದು ಅವರಿಗೆ ಓದಲು ಮತ್ತು ಬರೆಯಲು ಕಲಿಸಲು ಪ್ರಯತ್ನಿಸಿದೆವು. ವಿಧ್ವಂಸಕ ಕೃತ್ಯಗಳಿಗಿಂತ ಕ್ರೀಡೆಗಳಲ್ಲಿ ಕಿರಿಯರಿಗೆ ಆಸಕ್ತಿಯನ್ನು ಉಂಟು ಮಾಡುವ ಸಲುವಾಗಿ ಅವರಿಗೆ ವಾಲೀಬಾಲ್ ಮತ್ತು ಬ್ಯಾಸ್ಕೆಟ್‌ಬಾಲ್ ಆಟದ ವಸ್ತುಗಳನ್ನು ಕೊಟ್ಟೆವು. ನಮ್ಮ ಸೈನಿಕರು ಅವರಿಗೆ ಆಟಗಳನ್ನು ಕಲಿಸಿ, ಅವರೊಂದಿಗೆ ಆಟವಾಡಿದರು.

ಕಠಿಣಕ್ರಮಗಳನ್ನು ಕೈಗೊಳ್ಳಬೇಕಾದ ಸಂದರ್ಭಗಳಲ್ಲೂ ಸ್ವಲ್ಪ ವಿವೇಕದಿಂದ ವರ್ತಿಸಿದರೆ ಹಾನಿಯನ್ನು ಕನಿಷ್ಠ ಪ್ರಮಾಣಕ್ಕೆ ಇಳಿಸಬಹುದೆಂದು ನನಗೆ ಗೊತ್ತಾಯಿತು.

ಉಖ್ರುಲ್ ಜಿಲ್ಲೆಯಲ್ಲಿ ನಡೆದ ಒಂದು ಘಟನೆ ನೆನಪಿದೆ. ಒಂದು ವಿರೋಧಿ ತಂಡದ ಸಾರ್ಜೆಂಟ್ ಎಂದು ಹೇಳಿಕೊಂಡಿದ್ದವನು ತನ್ನ ಹೆಂಡತಿಯನ್ನು ನೋಡಲು ಹಳ್ಳಿಗೆ ಬರುವುದಾಗಿ ಸುದ್ದಿ ದೊರಕಿತು. ಆಕೆ ಆಗತಾನೇ ಹಡೆದಿದ್ದಳು. ಆದರೆ ನಮ್ಮ ಯೋಧರು ಅಲ್ಲಿಗೆ ಹೋಗಿ ಊರ ಸುತ್ತ ಕಾವಲು ಹಾಕುವ ವೇಳೆಗೆ ಅವನು ತಪ್ಪಿಸಿಕೊಂಡು ಹೊರಟು ಹೋಗಿದ್ದನು. ಠಾಣ್ಯದ ಕಮಾಂಡರ್, ಅವನ ಹೆಂಡತಿಯನ್ನು ಪ್ರಶ್ನೆಗೊಳಪಡಿಸಿದರು. ತಾನು ತನ್ನ ಪತಿಯನ್ನು ನೋಡಲೇ ಇಲ್ಲ ಎಂದು ಆಕೆ ಸಾಧಿಸಿದಳು. ನಮ್ಮ ಜನರು ಒಂದು ಕಡೆಯಿಂದ ಆ ಪ್ರದೇಶವನ್ನು ಶೋಧಿಸಿ ಆ ಸಾರ್ಜೆಂಟನನ್ನೂ, ಇನ್ನೂ ಕೆಲವರನ್ನೂ ಹಿಡಿದರು. ಘರ್ಷಣೆಯಲ್ಲಿ ಅವನಿಗೆ ತುಂಬಾ ಗಂಭೀರವಾದ ಗಾಯಗಳಾದವು.

ಹೆಂಡತಿಗೆ ಈ ವಿಷಯ ತಿಳಿದಾಗ, ಅವನನ್ನು ಕರೆತಂದು ಇಟ್ಟಿದ್ದ ಠಾಣ್ಯಕ್ಕೆ ಅವಳು ಓಡಿಬಂದಳು. ಆದರೆ ಅವಳ ಬಗೆಗೆ ಇನ್ನೂ ಕೋಪ

ಆರದಿದ್ದ ಕಮಾಂಡರರು ಅವನನ್ನು ನೋಡಲು ಆಕೆಗೆ ಅನುಮತಿ ಕೊಡಲಿಲ್ಲ. ಹಳ್ಳಿಯವರೆಲ್ಲರೂ ಅಲ್ಲಿ ಜಮಾಯಿಸಿದ್ದರು. ಪರಿಸ್ಥಿತಿ ತುಂಬಾ ಬಿಗುವಾಗಿತ್ತು. ಆಗ ನಾನು ಅಲ್ಲಿಗೆ ಹೋದೆ. ಒಡನೆ ಹಳ್ಳಿಗರೆಲ್ಲರೂ ನನ್ನ ಜೀಪಿಗೆ ಮುತ್ತಿಕೊಂಡು ಏನಾದರೂ ಮಾಡಬೇಕೆಂದು ಆಗ್ರಹಪಡಿಸ ತೊಡಗಿದರು. ನಾನು ತಕ್ಷಣವೇ ಆಕೆಯು ತನ್ನ ಪತಿಯನ್ನು ನೋಡಲು ಬಿಟ್ಟೆ. ಸ್ವಲ್ಪ ಹೊತ್ತಿಗೇ ಅವನು ಅಸುನೀಗಿದನು.

ಆಮೇಲೆ ನಾನು ಹಳ್ಳಿಯವರೊಂದಿಗೆ ಮಾತನಾಡಿದೆ. ಅವರನ್ನು ಕುರಿತು, 'ನಮಗೆ ಯಾವ ಶತ್ರುತ್ವವೂ ಇಲ್ಲ. ನಾವು ವೈರಿಗಳನ್ನು ಮಾತ್ರ ಹಿಡಿಯುತ್ತಿದ್ದೇವೆ. ಅವರನ್ನು ಕೊಲ್ಲುವುದು ನಮಗಿಷ್ಟವಿಲ್ಲ. ಅವರು ಸಾಲಾಗಿ ಶರಣಾದರೆ ನಮಗೆ ತುಂಬಾ ಸಂತೋಷವಾಗುತ್ತದೆ. ಅವರು ಎಂದಿನ ಜೀವನಕ್ಕೆ ಮರಳಬಹುದು. ಸಮಾಜದಲ್ಲಿ ಅವರ ಯಾವುದಾದರೂ ಪುನರ್ವಸತಿಗೆ ನಾವು ಸಹಾಯ ಮಾಡಬಹುದು. ವಿದ್ಯಾಭ್ಯಾಸ, ಯಾವುದಾದರೂ ವೃತ್ತಿತರಬೇತಿ ಕೊಡುವುದರ ಮೂಲಕ, ಹಣವನ್ನು ಕೊಡುವುದರ ಮೂಲಕ ನೆರವಾಗಬಹುದು' ಎಂದು ಹೇಳಿದೆ.

ಕೆಲವು ದಿನಗಳ ಅನಂತರ ಆ ವಿಧವೆಯೂ, ಅವಳ ಮಗುವೂ ಸಂಪೂರ್ಣ ನಿರಾಶ್ರಿತರಾಗಿಬಿಟ್ಟಿದ್ದಾರೆ ಎಂದು ತಿಳಿಯಿತು. ಆಕೆಯ ತಕ್ಷಣದ ಕಷ್ಟದ ಪರಿಹಾರಕ್ಕಾಗಿ ಸ್ವಲ್ಪ ಹಣವನ್ನು ಕಳಿಸಿಕೊಡಲು ಏರ್ಪಾಟು ಮಾಡಿದೆ. ಮಗುವಿನ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವುದಾಗಿ ಹೇಳಿದೆ. ಇಂಫಾಲದಲ್ಲಿದ್ದ ನಮ್ಮ ಕಲ್ಯಾಣಕೇಂದ್ರದಲ್ಲಿ ಆಕೆಗೆ ಹೊಲಿಗೆ ಕಲಿಸಲು ವ್ಯವಸ್ಥೆ ಮಾಡಿದೆ. ಈ ಹಳ್ಳಿಯೊಂದಿಗೆ ನಮ್ಮ ಸಂಬಂಧದಲ್ಲಿ ಇದು ಅತಿ ಮುಖ್ಯವಾದ ತಿರುವಾಯಿತು.

ಈ ಕ್ರಮ ಚೆನ್ನಾಗಿ ಕೆಲಸ ಮಾಡಿತು. ವಿರೋಧೀ ಚಟುವಟಿಕೆಗಳು ಗಣನೀಯವಾಗಿ ತಗ್ಗಿದುವು. ಹೀಗೆ ಸಂಪರ್ಕವು ಅಧಿಕಗೊಂಡುದರಿಂದ ಆದ ಅನಿರೀಕ್ಷಿತ ಫಲಿತಾಂಶ, ನಮ್ಮ ಅನೇಕ ಯೋಧರು ಆದಿವಾಸಿ ಹುಡುಗಿಯರನ್ನು ಮದುವೆಯಾದರು. ಕೆಲವು ಗ್ರಾಮಸ್ಥರು ಈ ವಿಷಯವಾಗಿ ದೂರು ಕೊಟ್ಟರು. 'ಹುಡುಗಿಯರನ್ನು ಬಲಾತ್ಕಾರವಾಗಿ ಕರೆದೊಯ್ಯಲಾಗಿದೆ' ಎಂದು ಆಕ್ಷೇಪಿಸಿದರು. ಇಂತಹ ಎಲ್ಲ ದೂರುಗಳನ್ನೂ ವಿವರವಾಗಿ ಪರೀಕ್ಷಿಸಲಾಯಿತು. ಅವಕ್ಕೆ ಯಾವ ಆಧಾರವೂ ಇಲ್ಲವೆಂದು ನಿರ್ಧರಿಸಲಾಯಿತು. ಆದರೂ ಇಂತಹ ದಂಪತಿಗಳ ಮೇಲೆ ನಾನು ಒಂದು ಕಣ್ಣಿಟ್ಟಿದ್ದೆ. ಆ ಹೆಣ್ಣುಮಕ್ಕಳನ್ನು ಯಾರೂ ಅನುಚಿತವಾಗಿ ನಡೆಸಿಕೊಳ್ಳುತ್ತಿಲ್ಲ ಎಂದು ತಿಳಿದು ಕೊಳ್ಳುತ್ತಿದ್ದೆ.

೨೪. ಉಗ್ರಗಾಮಿಗಳು ದಾಳಿ ಮಾಡಿದರು

ಪ್ರಾರಂಭದ ಹಂತಗಳಲ್ಲಿ ಹಳ್ಳಿಗರು ನಮ್ಮನ್ನು ರಾಕ್ಷಸರೆಂದು ಭಾವಿಸುತ್ತಿದ್ದರು. ಆದರೆ ನಿಧಾನವಾಗಿ ನಾವು ಹೋರಾಟದಲ್ಲಿ ಜಯಿಸಿದೆವು. ಅವರ ಸಹಾನುಭೂತಿಯನ್ನೂ, ಸಹಕಾರವನ್ನೂ ಪಡೆದುಕೊಂಡೆವು. ಉಗ್ರಗಾಮಿಗಳಿಗೆ ಹಳ್ಳಿಗರ ಬೆಂಬಲ ನಿಂತುಹೋದ ಮೇಲೆ ಅವರು ಒಬ್ಬೊಬ್ಬರಾಗಿ ಶರಣಾಗತೊಡಗಿದರು. ಇನ್ನು ಉಳಿದಿದ್ದುದು ಸಮಯದ ಪ್ರಶ್ನೆ ಅಷ್ಟೆ. ಕೆಲವರು ಸದ್ದಿಲ್ಲದೆ ಹಳ್ಳಿಗೆ ಹಿಂದಿರುಗಿ ಹೊಸ ಜೀವನವನ್ನು ಪ್ರಾರಂಭಿಸಿದರು. ಹೆಸರಾಗಿದ್ದ ವೈರಿಗಳು ಸಾಮೂಹಿಕವಾಗಿ ಶರಣಾಗತರಾದರು. ಒಂದು ಸಂದರ್ಭದಲ್ಲಿ ಅಂತಹ ೩೮ ಜನರನ್ನು ಅವರ ಆಯುಧಗಳು ಮತ್ತು ಮದ್ದು ಗುಂಡುಗಳೊಂದಿಗೆ ವಶಪಡಿಸಿಕೊಂಡೆವು. ಐ.ಜಿ. ಆಗಿದ್ದ ಮದನ ಗೋಪಾಲ ಸಿಂಗ್ ಅವರದೂ ನನ್ನ ನೀತಿಯೇ – ವೈರಿಗಳು ಶರಣಾಗುವುದನ್ನು ಪ್ರೋತ್ಸಾಹಿಸುವುದು, ಆಮೇಲೆ ಅವರು ಸಮಾಜದ ಸಾಮಾನ್ಯ ಸದಸ್ಯರಾಗುವಂತೆ ಸಹಾಯ ಮಾಡುವುದು. ಮೆಕ್ಯಾನಿಕ್‌ಗಳೂ, ಬಡಗಿಗಳೂ, ಆಗಲು ಅವರು ಬಯಸಿದರೆ ಅವರಿಗೆ ತರಬೇತಿ ಕೊಡಿಸುತ್ತಿದ್ದೆವು. ಕೋಳಿ ಅಥವಾ ಹಂದಿ ಸಾಕಣೆಗೆ ಇಷ್ಟಪಟ್ಟರೆ ಅವರಿಗೆ ಸ್ವಲ್ಪ ಧನಸಹಾಯ ಮಾಡುತ್ತಿದ್ದೆವು. ಆದರೂ ಕೆಲವು ಕಟ್ಟಾ ಉಗ್ರಗಾಮಿಗಳು ಹೋರಾಡುತ್ತಿದ್ದರು. ಹೊಂಚು ಹಾಕಿ ವಾಹನಗಳನ್ನು ವಶಪಡಿಸಿಕೊಳ್ಳುತ್ತಿದ್ದರು.

೧೯೬೮ರ ಮಾರ್ಚಿಯಲ್ಲಿ ಆಗಿನ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ಇಂಫಾಲ್ ಮತ್ತು ಉಖ್ರುಲ್‌ಗಳಿಗೆ ಭೇಟಿ ನೀಡುವವರಿದ್ದರು. ಉಖ್ರುಲ್ ಭೇಟಿಯ ಸಮಯದಲ್ಲಿ ಅವರಿಗೆ ಭದ್ರತೆ ಒದಗಿಸುವುದು ನನ್ನ ಜವಾಬ್ದಾರಿಯಾಯಿತು. ಅವರ ಹೆಲಿಕಾಪ್ಟರ್ ಇಳಿಯಲು ಉತ್ತಮವಾದೊಂದು ಹೆಲಿಪ್ಯಾಡ್ ನಿರ್ಮಿಸಬೇಕಾಗಿತ್ತು. ಅದಕ್ಕೆ ತಕ್ಕ ನಿವೇಶನವನ್ನು ಗುರುತಿಸಿ, ನೆಲವನ್ನು ಸಮಮಾಡುತ್ತಿದ್ದೆವು. ಒಂದು ರೋಡ್‌ರೋಲರ್ ಅಗತ್ಯವಾಗಿತ್ತು. ಕೆಳಗೆ ೧೫ ಮೈಲು ದೂರದಲ್ಲಿದ್ದ ಒಂದನ್ನು ತಂದು ಉಪಯೋಗಿಸಲು ವ್ಯವಸ್ಥೆ ಮಾಡಿದೆವು. ಉಖ್ರುಲ್ ಎಂಬುದು ಬೆಟ್ಟದ ನೆತ್ತಿಯ ಮೇಲಿದ್ದ ಸ್ಥಳ.

ರೋಡ್ ರೋಲರನ್ನು ತರಬೇಕಾಗಿದ್ದ ದಿನ ನನ್ನ ಅಧಿಕಾರಿಗಳೆಲ್ಲರೂ ಬೇರೆ ಕೆಲಸಗಳಲ್ಲಿ ಮಗ್ನರಾಗಿದ್ದರು. ನಾನೂ ಹೋಗಲು ನಿರ್ಧರಿಸಿದೆ. ಆ ಪ್ರದೇಶದಲ್ಲಿ ಉಗ್ರಗಾಮಿಗಳಿಲ್ಲದಂತೆ ತೆರವು ಮಾಡಲಾಗಿತ್ತು. ಹಾಗಾಗಿ ನಾನು ರಕ್ಷಕ ದಳವನ್ನು ಸೇರಿಸಿ ಕೊಳ್ಳದೆ ಒಬ್ಬನೇ ಹೊರಟೆ. ಆಯುಧವೂ ಇರಲಿಲ್ಲ. ಒಬ್ಬ ಜೆ.ಸಿ.ಓ. ಮತ್ತು ಕೆಲವು ಜನರು ಒಂದು ೩-ಟನ್ ಗಾಡಿಯಲ್ಲಿ, ರೋಡ್

ರೋಲರನ್ನು ಹಾಕಿಕೊಂಡು ಬರುವುದಕ್ಕಾಗಿ ಹೊರಟರು. ಸುಮಾರು ಒಂದು ಕಿಲೋಮೀಟರ್ ಹಿಂದೆ ನಾನು ಸಿವಿಲಿಯನ್ ಬಟ್ಟೆಧರಿಸಿ ಒಂದು ಸಿವಿಲಿಯನ್ ಜೀಪಿನಲ್ಲಿ ಡ್ರೈವರನೊಂದಿಗೆ ಒಂದು ಕಿಲೋಮೀಟರ್ ಹಿಂದೆ ಹೊರಟೆ.

ನನ್ನ ಮುಂದೆ ಒಂದು ತಿರುವು ಇತ್ತು. ನಮ್ಮ ೩-ಟನ್ ವಾಹನ ಅಲ್ಲಿ ತಿರುಗಿಕೊಂಡು ನನ್ನ ದೃಷ್ಟಿಯಿಂದ ಮರೆಯಾಯಿತು. ಆ ಕ್ಷಣದಲ್ಲಿ ತಿರುವಿನ ಮೇಲಿದ್ದ ಕಾಡಿನೊಳಗಿನಿಂದ ಉಗ್ರಗಾಮಿಗಳು ಗುಂಡುಹಾರಿಸಿದರು. ಟೈರುಗಳು ಪಂಕ್ಚರ್ ಆದುವು. ವಾಹನ ನಿಂತಿತು. ಜೆ.ಸಿ.ಓ. ಮತ್ತು ಇಬ್ಬರು ಹುಡುಗರು ತಟಕ್ಕನೆ ನೆಗೆದು ಕೆಳಗೆ ಹಾರಿ ಕಾಡಿನೊಳಗೆ ಮರೆಯಾದರು.

ನಾನು ಒಂದೇ ತಿರುವು ಹಿಂದಿದ್ದರೂ ಗುಂಡಿನ ಸದ್ದು ನನಗೆ ಕೇಳಿಸಲಿಲ್ಲವಾಗಿ ನನ್ನ ಜೀಪು ನೇರವಾಗಿ ಅದೇ ಸ್ಥಳಕ್ಕೆ ಹೋಯಿತು. ಗುಂಡುಗಳು ಹಾರಲು ತೊಡಗಿದಾಗ ನಾನೂ ಜೀಪಿನಿಂದ ಹೊರಗೆ ನೆಗೆದು ರಸ್ತೆಯ ಪಕ್ಕದ ಪೊದೆಗಳ ಹಿಂದೆ ಅವಿತುಕೊಂಡೆ. ಡ್ರೈವರನೂ ಹಾರಿ ಬೇರೊಂದು ದಿಕ್ಕಿನಲ್ಲಿ ಓಡತೊಡಗಿದನು.

ಅಲ್ಲೇ ಕಾದೆ. ಉಗ್ರಗಾಮಿಗಳು ಮೇಲಿಂದ ಕೆಳಗಿಳಿದು ತಮ್ಮಿಂದಾಗಿರಬಹುದಾದ ಹಾನಿಯನ್ನು ನೋಡಲು ಬಂದರು. ಅವರಲ್ಲೊಬ್ಬನು ಬೆಂಕಿಕಡ್ಡಿ ಗೀಚಿ ಜೀಪಿನ ಪೆಟ್ರೋಲ್ ಟ್ಯಾಂಕಿಗೆ ಎಸೆದನು. ಉರಿ ಭಗ್ಗನೆ ಹತ್ತಿತ್ತು. ಹಾಗೆಯೇ 3-ಟನ್ ಗಾಡಿ ಕೂಡ ಉರಿದುಹೋಯಿತು.

ಡ್ರೈವರನನ್ನು ಪ್ರಶ್ನೆ ಮಾಡುತ್ತಿದ್ದರು. ಅವನು ಬಹಳ ದೂರ ಏನೂ ಹೋಗಿರಲಿಲ್ಲ. ಸಿಕ್ಕಿಬಿದ್ದಿದ್ದನು. ಆಗ ಉಗ್ರಗಾಮಿಗಳು ಸಾಮಾನ್ಯ ಜನರಿಗೆ ಹಿಂಸೆ ಮಾಡುತ್ತಿರಲಿಲ್ಲ. ಅವನನ್ನು ಬಿಟ್ಟುಬಿಟ್ಟಿದ್ದರು. ಅವನು ಉಖ್ರುಲ್ ಕಡೆಗೆ ಓಡಿದನು.

ಅವಿತಿದ್ದ ಕಡೆಯಿಂದ ನನಗೆ ಅವರು ರಸ್ತೆಯ ಅಂಚಿನಲ್ಲಿ ನಿಂತು ಯಾರಾದರೂ ಕಂಡಾರೇ ಎಂದು ನೋಡುತ್ತಿದ್ದುದು ಕಾಣಿಸಿತು. ಒಬ್ಬಿಬ್ಬರು ರಸ್ತೆಯಿಂದ ಕೆಳಮಟ್ಟಕ್ಕೆ ನೆಗೆದರು. ನಾನು ಕೈಯಲ್ಲಿ ದಪ್ಪ ಕಲ್ಲೊಂದನ್ನು ಎತ್ತಿಕೊಂಡು ಎಲ್ಲಕ್ಕೂ ಸಿದ್ಧವಾಗಿ ನಿಂತಿದ್ದೆ. ಆದರೆ ಅವರು ನನ್ನನ್ನು ನೋಡಲಿಲ್ಲ. ಅವರು ಅವಸರದಲ್ಲಿದ್ದರು. ರಸ್ತೆಯ ಈ ಭಾಗವನ್ನು ಉಖ್ರುಲ್‌ನಿಂದ ಚೆನ್ನಾಗಿಯೇ ನೋಡಬಹುದು ಎಂದು ಅವರಿಗೆ ಗೊತ್ತು. ಗುಂಡು ಹಾರಿಸಿದ ಸದ್ದು ಖಂಡಿತವಾಗಿಯೂ ಅಲ್ಲಿಗೆ ಕೇಳಿಸಿರುತ್ತದೆ. ಯಾವ ಗಳಿಗೆಯಲ್ಲಿ ಬೇಕಾದರೂ ರಕ್ಷಣಾವ್ಯವಸ್ಥೆ ಬರಬಹುದಾಗಿತ್ತು.

ವಾಸ್ತವವಾಗಿ ಇದೆಲ್ಲವನ್ನೂ ಡಿ. ಐ. ಜಿ. ಕ್ವಿನ್ ನೋಡುತ್ತಿದ್ದರು. ತಕ್ಷಣವೇ ನಮಗೆ ನೆರವಾಗಲು ಒಂದು ಪ್ಲಟೂನ್ ಅನ್ನು ಕಳಿಸಿದರು. ಆದರೆ ಅವರು ಬರುವ ವೇಳೆಗೆ ಉಗ್ರಗಾಮಿಗಳು ಕಾಡಿನೊಳಗೆ ಮಾಯವಾಗಿದ್ದರು.

ದೇವರ ದಯೆಯಿಂದ ಯಾವ ಸಾವು ನೋವೂ ಉಂಟಾಗಲಿಲ್ಲ. ಪ್ರಧಾನಮಂತ್ರಿಯವರು ಬರಬೇಕಾಗಿದ್ದ ದಿನ ಉಖ್ರುಲ್‌ನಲ್ಲಿ ದಟ್ಟವಾಗಿ ಮೋಡ ಕವಿದಿತ್ತು. ಅವರ ಹೆಲಿಕಾಪ್ಟರ್ ಸಿಬ್ಬಂದಿ ಆ ಸ್ಥಿತಿಯಲ್ಲಿ ಇಳಿಯುವುದು ಅಪಾಯಕಾರಿ ಎಂದು ನಿರ್ಧರಿಸಿದರು. ಮೋಡಗಳ ನಡುವಿನ ತೆರಪುಗಳಿಂದ ರೇಡಿಯೋ ಮೂಲಕ ನಾವು ಸೂಚನೆ ಕೊಡುವುದಾಗಿ ಹೇಳಿದರೂ ಅವರು ಸಮ್ಮತಿಸಲಿಲ್ಲ. ಪ್ರಧಾನಮಂತ್ರಿಯವರನ್ನು ಸ್ವಾಗತಿಸಲು ಸೇರಿದ್ದ ಸಾವಿರಾರು ಜನರಿಗೆ ತುಂಬಾ ನಿರಾಶೆಯಾಯಿತು.

ಆ ಗಳಿಗೆಯನ್ನು ಆರಿಸಿಕೊಂಡು, ನಾವು ಪ್ರಧಾನಿಯವರ ಆಗಮನದ ಬಗೆಗೆ ಗಮನವನ್ನು ಕೇಂದ್ರೀಕರಿಸಿದ್ದಾಗ ಶಸ್ತ್ರಾಸ್ತ್ರ ಸಜ್ಜಿತರಾಗಿದ್ದ ಒಂದು ತಂಡದ ಉಗ್ರಗಾಮಿಗಳು ಪಸಾಯ್ ಥ್ರಾಂಗ್‌ನಲ್ಲಿದ್ದ ನಮ್ಮ ನೆಲೆಯ ಮೇಲೆ ಬಲವಾದ ದಾಳಿ ಮಾಡಿದರು. ಉಖ್ರುಲ್‌ನಿಂದ ಸುಮಾರು ಐದು ಮೈಲು ದೂರದಲ್ಲಿದ್ದ ಆ ಠಾಣ್ಯದಲ್ಲಿ ಇದ್ದವರು ಒಬ್ಬ ಹವಾಲ್ದಾರನ ಕೈಕೆಳಗೆ ೨೦ ಯೋಧರು ಮಾತ್ರ. ಪ್ರಧಾನಿಯವರ ಆಗಮನದ ಸಿದ್ಧತೆಗಾಗಿ ನಾನು ಠಾಣ್ಯದಿಂದ ಅನೇಕರನ್ನು ಕರೆಸಿಕೊಂಡುಬಿಟ್ಟಿದ್ದೆ.

ಆದರೂ ನಮ್ಮ ಹುಡುಗರು ಅಪಾರ ಆತ್ಮವಿಶ್ವಾಸದಿಂದ ಕಾದಿದರು. ಹವಾಲ್ದಾರನೇ ಬಂಕರಿನಿಂದ ಬಂಕರಿಗೆ ಓಡಾಡುತ್ತಾ ಮದ್ದುಗುಂಡುಗಳನ್ನು ಹಂಚಿದನು. ಉಗ್ರಗಾಮಿಗಳಿಗೆ ಗುರಿಯಿಟ್ಟು ಹೊಡೆಯುವಂತೆ ಆದೇಶ ನೀಡಿದನು. ಇದು ಎಷ್ಟು ಪರಿಣಾಮಕಾರಿ ಯಾಗಿದ್ದಿತೆಂದರೆ ಉಗ್ರಗಾಮಿಗಳು ಸ್ವಲ್ಪವೂ ಮುಂದಕ್ಕೆ ಬರಲಾಗಲಿಲ್ಲ. ನಾನು ಕಳಿಸಿದ ಪ್ಲಟೂನ್ ಅಲ್ಲಿಗೆ ತಲುಪುವ ವೇಳೆಗೆ ಅವರು ಓಡಿಹೋಗಿದ್ದರು. ಅವರಲ್ಲಿ ಅನೇಕರು ಗಾಯಗೊಂಡಿದ್ದಂತೆ ತೋರಿತು. ನಮ್ಮ ಹುಡುಗರು ಬಹಳ ಉತ್ಸಾಹದಿಂದಿದ್ದರು. ತಮ್ಮನ್ನು ಅವರು ರಕ್ಷಿಸಿಕೊಂಡ ರೀತಿಯನ್ನು ನೋಡಿ ನನಗೆ ಹೆಮ್ಮೆಯೆನ್ನಿಸಿತ್ತು. ಹವಾಲ್ದಾರನು ತನ್ನ ಜನರೊಂದಿಗೆ ದಾಳಿಯನ್ನು ಎದುರಿಸಿದ ಪರಾಕ್ರಮವನ್ನು ಮೆಚ್ಚಿ ಅವನಿಗೆ ಪೊಲೀಸ್ ಮೆಡಲ್ ಕೊಡಲಾಯಿತು.

ಉಖ್ರುಲ್‌ಗೆ ಪ್ರಧಾನಿಯ ಭೇಟಿ ರದ್ದಾದುದರಿಂದ ನಾವು ನಮ್ಮ ಯೂನಿಟುಗಳಿಗೆ ಹಿಂದಿರುಗತೊಡಗಿದೆವು. ನಾನು ಪಸಾಯ್ ಥ್ರಾಂಗ್‌ಗೆ ಹೋಗಿ ಅಲ್ಲಿ ನೆಲೆಯಲ್ಲಿದ್ದ ಜನರಿಗೆ ಈ ದಾಳಿಯ ವಿಷಯವನ್ನು ತಿಳಿಸಿ ಬರಲು ನಿರ್ಧರಿಸಿದೆ. ಡಿ.ಐ.ಜಿ. ಕ್ವಿನ್ ಅವರು ನನ್ನ ಪಡೆಯೊಂದಿಗೆ ಇಂಫಾಲ್‌ಗೆ ಹೋಗುವುದೆಂದಾಯಿತು. ಅವರ ಜೊತೆಗೆ ಮಣಿಪುರ ಗವರ್ನರ್ ಅವರ ಸಲಹಾಕಾರ ರಾಮುಣ್ಣಿ ಎನ್ನುವವರಿದ್ದರು.

ಈಚೆಗೆ ಉಗ್ರಗಾಮಿ ಚಟುವಟಿಕೆಗಳು ಹೆಚ್ಚಾಗಿದ್ದುದರಿಂದ ಅವರು ಎಚ್ಚರಿಕೆಯಿಂದಿರುತ್ತಿದ್ದರು. ದಾರಿಯಲ್ಲಿ ಸಿಕ್ಕುವ ಮರೆಯ ಸ್ಥಳಗಳನ್ನೆಲ್ಲಾ ಪರೀಕ್ಷಿಸಿ ತೆರವು ಮಾಡುವ ಸಲುವಾಗಿ ಮುಂದಾಗಿ

ಒಂದು ತಂಡವನ್ನು ಕಳಿಸಲಾಗಿತ್ತು. ಆಮೇಲೆ ಇವರ ವಾಹನಗಳು ಹೊರಟವು. ಎಲ್ಲ ಸಲೀಸಾಗಿತ್ತು. ಹಾಗಾಗಿ ರಸ್ತೆಯ ಕೆಳಗಿಳಿದು ಬಯಲು ಸೇರುವುದಕ್ಕೆ ಎರಡು ಮೈಲು ಇರುವಾಗ ಸಾಮಾನ್ಯ ಮುಂಜಾಗ್ರತಾ ಕ್ರಮಗಳನ್ನು ಕೈಬಿಟ್ಟು ವೇಗವಾಗಿ ಮುಂದೆ ಸಾಗಿದರು.

ಇದು ಒಂದು ದೊಡ್ಡ ತಪ್ಪಾಯಿತು. ಮುಂದಿದ್ದ ವಾಹನವು ಕೊನೆಯ ತಿರುವಿಗೆ ಬಂದೊಡನೆ ಉಗ್ರರ ಮೆಷಿನ್‌ಗನ್ನುಗಳು ಗುಂಡು ಸುರಿಸತೊಡಗಿದವು. ಅವರ ವಾಹನ ಗುಂಡುಗಳಿಂದ ರಂಧ್ರಮಯ ವಾಯಿತು. ಸ್ಥಳದಲ್ಲಿಯೇ ನಮ್ಮ ನಾಲ್ವರು ಯೋಧರು ಸತ್ತು ಹೋದರು. ಅವರಿಗೆ ಬದುಕುವ ಅವಕಾಶವೇ ಇರಲಿಲ್ಲ.

ಈಗ ಕ್ವಿನ್ ಮತ್ತು ರಾಮುಣ್ಣಿ ಇವರಿದ್ದ ವಾಹನವು ಈ ತಿರುವಿಗೆ ಬರುತ್ತಿದ್ದ ಹಾಗೆಯೇ ಅದರ ಮೇಲೂ ಗುಂಡು ಹಾರಿಸಲಾಯಿತು. ಗುಂಡಿನ ಸದ್ದಿನಿಂದ ಜಾಗ್ರತನಾದ ಚಾಲಕನು ತಕ್ಷಣವೇ ತಪ್ಪಿಸಿಕೊಳ್ಳುವ ಕ್ರಮ ಕೈಗೊಂಡನು. ಆದರೂ ಒಂದು ಗುಂಡು ಕ್ವಿನ್ ಅವರನ್ನು ಉಜ್ಜಿತು, ಮತ್ತೊಂದು ರಾಮುಣ್ಣಿಯ ಕಾಲಿಗೆ ನಾಟಿತು.

ಒಡನೆಯೇ ಡಿ.ಐ.ಜಿ. ಅವರು ಪ್ರತಿದಾಳಿಯನ್ನು ರೂಪಿಸಿದರು. ಪ್ರದೇಶವನ್ನು ಒಂದು ಕಡೆಯಿಂದ ಜಾಲಾಡಲಾಯಿತು. ಆದರೆ ಉಗ್ರಗಾಮಿಗಳು ತಪ್ಪಿಸಿಕೊಂಡರು. ವೈರ್‌ಲೆಸ್‌ನಲ್ಲಿ ನನಗೆ ಈ ಸುದ್ದಿ ಬಂದಾಗ ನಾನು ಪಸಾಯ್ ಥ್ರಾಂಗ್‌ನಲ್ಲಿದ್ದೆ. ತಕ್ಷಣವೇ ಅಪಘಾತದ ಸ್ಥಳಕ್ಕೆ ಧಾವಿಸಿದೆ. ಅನೇಕರಿಗೆ ಗಾಯಗಳಾಗಿದ್ದವು. ಅವರೆಲ್ಲರಿಗೂ ಪ್ರಥಮ ಚಿಕಿತ್ಸೆ ನೀಡಿದ್ದಾಯಿತು. ರಾಮುಣ್ಣಿಯನ್ನೂ , ಕ್ವಿನ್ ಅವರನ್ನೂ ಇಂಫಾಲ ಆಸ್ಪತ್ರೆಗೆ ಕರೆದೊಯ್ದೆ.

ಆ ಮೇಲೆ ಮೃತರಾದ ನಾಲ್ವರ ಕುಟುಂಬದವರಿಗೆ ಸುದ್ದಿ ಕೊಡಬೇಕಾದ ಕೆಲಸಕ್ಕೆ ನಾನು ಹೋಗಬೇಕಾಯಿತು. ಇದು ನನ್ನ ಜೀವನದ ಅತ್ಯಂತ ದುಃಖದ ದಿನವಾಗಿತ್ತು. ನಾನು ಯಾವಾಗಲೂ ಇಷ್ಟು ಜೀವಿಗಳನ್ನು ಒಟ್ಟಿಗೆ ಕಳೆದುಕೊಂಡಿರಲಿಲ್ಲ.

ಇದರಲ್ಲಿ ಸೇರಿಕೊಂಡಿದ್ದ ಜನರನ್ನು ಬೇಟೆಯಾಡಲು ನಾವು ತೊಡಗಿದೆವು. ನಮ್ಮ ಮಾಹಿತಿಜಾಲದ ಮೂಲಕ ಅವರು ಯಾರೆನ್ನುವುದು ನಮಗೆ ಬೇಗನೆಯೇ ತಿಳಿಯಿತು. ಒಂದೇ ತಿಂಗಳಲ್ಲಿ ಆ ಹೋರಾಟದಲ್ಲಿ ಭಾಗಿಗಳಾಗಿದ್ದ ಎಲ್ಲ ಉಗ್ರಗಾಮಿಗಳನ್ನೂ ಹಿಡಿದೆವು. ಅವರನ್ನು ಬಂಧಿಸಿದೆವು, ಇಲ್ಲವೇ ಕೊಂದೆವು.

೨೫. ಶ್ರೀಮತಿ ಗಾಂಧಿ ಇಂಫಾಲಕ್ಕೆ ಬಂದರು

ಅಂದು ರಾತ್ರಿ ನಾನು ಮನೆಗೆ ಬಂದಾಗ ಸಾವಿತ್ರಿ ತನ್ನ ಸಾಹಸವನ್ನು ಹೇಳಿದಳು. ಪ್ರಧಾನಮಂತ್ರಿಯು ಉಖ್ರುಲ್‌ನಲ್ಲಿ ಇಳಿಯಲು ಸಾಧ್ಯವಾಗದೆ ಹೋದಾಗ ರಾಜ್ಯದ ನಾಯಕರೊಂದಿಗೆ ಮಾತುಕತೆ ಗೋಸ್ಕರವಾಗಿ ಇಂಫಾಲಕ್ಕೆ ಹಿಂದಿರುಗಿದರು.

ಕೆಲ ಸಮಯದಿಂದ ಮಣಿಪುರಿಗಳು ಪ್ರತ್ಯೇಕ ರಾಜ್ಯಕ್ಕಾಗಿ ಚಳವಳಿ ಮಾಡುತ್ತಿದ್ದರು. ಮುಷ್ಕರ, ಪ್ರತಿಭಟನೆ ಮತ್ತು ಮೆರವಣಿಗೆಗಳು ಅಂದು ಸಾಮಾನ್ಯವಾದ ವಿಷಯವಾಗಿದ್ದವು. ಅನೇಕ ಹಿಂಸಾತ್ಮಕ ಘಟನೆಗಳು ನಡೆಯುತ್ತಿದ್ದವು. ಪಕ್ಕದ, ಇನ್ನೂ ಕಡಿಮೆ ಜನಸಂಖ್ಯೆಯ ನಾಗಾಲ್ಯಾಂಡಿಗೆ ಪ್ರತ್ಯೇಕ ರಾಜ್ಯದ ಸ್ಥಾನಮಾನ ದೊರೆತಾಗ ಪರಿಸ್ಥಿತಿ ಇನ್ನೂ ಬಿಗಡಾಯಿಸಿತು.

ಶ್ರೀಮತಿ ಗಾಂಧಿಯವರು ಮಣಿಪುರಕ್ಕೆ ಭೇಟಿ ನೀಡಿದಾಗ ಈ ಪ್ರತಿಭಟನೆಗಳು ಹೆಚ್ಚಿದವು. ಬಸ್ಸುಗಳನ್ನೂ , ಅಂಗಡಿ ಮುಂಗಟ್ಟು ಗಳನ್ನೂ, ಸರಕಾರಿ ಕಚೇರಿಗಳನ್ನೂ ಸುಡಲಾಯಿತು. ಕರ್ಫ್ಯೂ ವಿಧಿಸಲಾಯಿತು. ಕಂಡಲ್ಲಿ ಗುಂಡು ಹೊಡೆಯುವ ಆಜ್ಞೆಯನ್ನು ಜಾರಿಗೊಳಿಸಲಾಗಿತ್ತು. ಆದರೆ ಚಳವಳಿಗಾರರನ್ನು ಇದು ಯಾವುದೂ ಎದೆಗೆಡಿಸಲಿಲ್ಲ. ಪೊಲೀಸ್, ಮಣಿಪುರ ರೈಫಲ್ಸ್, ಸಿ.ಆರ್.ಪಿ.ಎಫ್. ಮತ್ತು ಬಿ.ಎಸ್.ಎಫ್. ಎಲ್ಲರಿಗೂ ಕೈ ತುಂಬಾ ಕೆಲಸ. ಒಂದು ಕಡೆ ಪರಿಸ್ಥಿತಿ ಹತೋಟಿಗೆ ಬಂದರೆ ಇನ್ನೆಲ್ಲೋ ಒಂದು ಕಡೆ ಉಲ್ಬಣಿಸುತ್ತಿತ್ತು. ಇಂತಹ ಒಂದು ಘಟನೆಯಲ್ಲಿ ನಮ್ಮ ಆಪ್ತಮಿತ್ರರಾಗಿದ್ದ ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ತಿರುವೆಂಗಡಂ ಅವರ ಮೇಲೆ ಉದ್ರಿಕ್ತ ಜನರ ಗುಂಪೊಂದು ಹಲ್ಲೆ ಮಾಡಿತು. ಗಲಭೆ - ಪ್ರದೇಶವೊಂದರ ಪರಿಶೀಲನೆಗೆ ಹೋಗಿದ್ದಾಗ ಜನಸಮೂಹವು ಅವರ ಜೀಪನ್ನು ಸುತ್ತುಗಟ್ಟಿತು. ಒಡನೆಯೇ ಕ್ರಮ ಕೈಗೊಂಡು ಜನರನ್ನು ಅವರು ಚದುರಿಸಬಹುದಾಗಿತ್ತು. ಆದರೆ ಅವರು ಸ್ವಲ್ಪ ಹಿಂಜರಿದಿರಬೇಕು. ಹತ್ತಿರ ಆಯುಧವಿದ್ದರೂ ಜನರ ಮೇಲೆ ಗುಂಡು ಹಾರಿಸುವುದು ಸುಲಭದ ಕೆಲಸವಲ್ಲ.

ಗುಂಪು ಅವರನ್ನು ಜೀಪಿನಿಂದ ಹೊರಕ್ಕೆಳೆದು ಪ್ರಜ್ಞೆ ತಪ್ಪುವವರೆಗೆ ಹೊಡೆಯಿತು. ಜೀಪನ್ನು ಉರುಳಿಸಿ ಬೆಂಕಿಯಿಡಲಾಯಿತು. ಅವರ ಜತೆಯಲ್ಲಿದ್ದ ಕಾನ್‌ಸ್ಟೇಬಲ್‌ಗಳು ಎದುರಿಸುವುದಕ್ಕೆ ಬದಲಾಗಿ ಓಡಿಹೋದರು.

ತಿರುವೆಂಗಡಂ ನೆಲದ ಮೇಲೆ ಬಿದ್ದಿದ್ದಾಗ ಉದ್ರಿಕ್ತ ಜನರು ಏನು ಮಾಡುಬಿಡುತ್ತಿದ್ದರೋ ಯಾರು ಬಲ್ಲರು? ಅಷ್ಟರಲ್ಲಿ ಪೊಲೀಸ್ ಪಡೆ ಧಾವಿಸಿ ಬಂದಿತು. ಜನರು ಓಡಿಹೋದರು. ಪ್ರಜ್ಞಾಶೂನ್ಯ ಸ್ಥಿತಿಯಲ್ಲೇ ತಿರುವೆಂಗಡಂ ಅವರನ್ನು ಸಿವಿಲ್ ಆಸ್ಪತ್ರೆಗೆ ಒಯ್ಯಲಾಯಿತು.

ಅವರ ಪತ್ನಿಗೆ ಚೂರುಪಾರು ಸುದ್ದಿ ಸಿಕ್ಕಿತು. ಆದರೆ ಅವರು ಜೀವಸಹಿತ ಇದ್ದಾರೆಯೆ ಇಲ್ಲವೆ, ಚಿಕಿತ್ಸೆ ನಡೆಯುತ್ತಿದೆಯೆ ಇಲ್ಲವೆ, ಅವರು ಎಲ್ಲಿದ್ದಾರೆ ಇದು ಏನೊಂದೂ ತಿಳಿಯಲಿಲ್ಲ.

ದಿಕ್ಕು ತೋಚದೆ ಆಕೆ ಸಾವಿತ್ರಿಯ ಬಳಿಗೆ ಬಂದರು. ಸಾವಿತ್ರಿ

೨-ಎಂ.ಆರ್.ಗೆ ಟೆಲಿಫೋನ್ ಮಾಡಿದಾಗ, ಸುಬೇದಾರ್ ಮೇಜರ್ ಉತ್ತರ ಕೊಟ್ಟು, ಡಿಎಸ್‌ಪಿ ಅವರಿಗೆ ಗಾಯಗಳಾಗಿವೆಯೆಂದೂ, ಸಿವಿಲ್ ಆಸ್ಪತ್ರೆಗೆ ಅವರನ್ನು ಒಯ್ಯಲಾಗಿದೆಯೆಂದೂ ತಿಳಿಸಿದನು. ಗಾಯಗಳು ಎಷ್ಟರ ಮಟ್ಟಿಗೆ ಗಂಭೀರ ರೂಪದವು ಎಂಬುದು ಅವನಿಗೆ ತಿಳಿದಿರಲಿಲ್ಲ. ದುರದೃಷ್ಟಕ್ಕೆ ಎಲ್ಲ ವಾಹನಗಳೂ ಕರ್ತವ್ಯ ನಿರತವಾಗಿದ್ದುದರಿಂದ ಸಾವಿತ್ರಿಯನ್ನೂ, ಶ್ರೀಮತಿ ತಿರುವೆಂಗಡಂ ಅವರನ್ನೂ ಆಸ್ಪತ್ರೆಗೆ ಕರೆದೊಯ್ಯಲು ವಾಹನ ಕಳಿಸಲು ಅವನಿಗೆ ಅವಕಾಶವಿರಲಿಲ್ಲ.

ಕೊನೆಯ ಪಕ್ಷ ಅವರು ಈಗ ಆಸ್ಪತ್ರೆಯಲ್ಲಿದ್ದಾರೆ ಎಂದಾದರೂ ತಿಳಿಯಿತು. ಆಮೇಲೆ ಸಾವಿತ್ರಿ , ಅಸ್ಸಾಂ ರೈಫಲ್ಸ್‌ನಲ್ಲಿ ಅಜುಟೆಂಟ್ ಆಗಿದ್ದ ನಮ್ಮ ಸ್ನೇಹಿತ ಕ್ಯಾಪ್ಟನ್ ರಾಮಮೂರ್ತಿಯವರಿಗೆ ಫೋನು ಮಾಡಿದಳು. ಅವರು ಇಬ್ಬರು ಸಶಸ್ತ್ರ ಸೈನಿಕರೊಂದಿಗೆ ಜೀಪಿನಲ್ಲಿ ತಕ್ಷಣವೇ, ಬಂದರು. ಸಾವಿತ್ರಿಯನ್ನೂ, ತಿರುವೆಂಗಡಂ ಅವರ ಪತ್ನಿಯನ್ನೂ ಆಸ್ಪತ್ರೆಗೆ ಕರೆದೊಯ್ದರು. ಸೂಕ್ಷ್ಮವಾಗಿದ್ದ ಪ್ರದೇಶಗಳನ್ನು ನಿವಾರಿಸಿ, ಸುತ್ತಿ ಬಳಸಿ ಯಾವ ಘಟನೆಯೂ ಆಗದೆ ಆಸ್ಪತ್ರೆಯನ್ನು ತಲುಪಿದರು.

ಆ ವೇಳೆಗೆ ತಿರುವೆಂಗಡಂ ಅವರಿಗೆ ಪ್ರಜ್ಞೆ ಬಂದಿತ್ತು. ಗಾಯಗಳು ಬಹಳ ಕೆಟ್ಟದ್ದಾಗಿದ್ದವು, ಆದರೆ ಮಾರಕವಾಗಿರಲಿಲ್ಲ. ವೈದ್ಯರು ಅವರನ್ನು ಮನೆಗೆ ಕಳುಹಿಸುವವರೆಗೂ ತಾವು ಅಲ್ಲೇ ಇರುವುದಾಗಿ ತಿರುವೆಂಗಡಂ ಅವರ ಪತ್ನಿ ನಿರ್ಧರಿಸಿದರು.

ರಾಮಮೂರ್ತಿ ಮತ್ತು ಸಾವಿತ್ರಿ ಹಿಂದಕ್ಕೆ ಹೊರಟರು. ದಾರಿಯಲ್ಲಿ ನೇರವಾಗಿ ದುಷ್ಕರ್ಮಿಗಳ ಗುಂಪಿನ ಮಧ್ಯೆ ಸಿಕ್ಕಿಕೊಂಡರು.

ಹಸಿರು ಬಣ್ಣದ ಮಿಲಿಟರಿ ವಾಹನವನ್ನು ನೋಡಿಯೇ ಗುಂಪು ಉದ್ರೇಕಗೊಂಡಿತು. ಅವರತ್ತ ಕಲ್ಲು ತೂರಲು ತೊಡಗಿತು. ಕಲ್ಲು ತೂರಾಟ ಹೆಚ್ಚಿತು , ಜನಸಮೂಹ ದೊಡ್ಡದಾಗತೊಡಗಿತು. ಡ್ರೈವರನು ಬದಲಿ ದಾರಿಯನ್ನು ಹಿಡಿಯಲು ಪ್ರಯತ್ನಿಸಿದನು. ಆದರೆ ಅದನ್ನೂ ಜನರು ಅಡ್ಡಗಟ್ಟಿದರು.

ಪರಿಸ್ಥಿತಿ ತನ್ನ ಕೈ ಮೀರಿ ಹೋಗುತ್ತಿರುವುದನ್ನು ರಾಮಮೂರ್ತಿ ಗಮನಿಸಿದರು. ತಿರುವೆಂಗಡಂ ಅವರಿಗೆ ಏನಾಯಿತೆಂಬುದು ಅವರ ಮನಸ್ಸಿನಲ್ಲಿ ನೆಟ್ಟಿತ್ತು.

ಸೈನಿಕನೊಬ್ಬನ ಕೈಯಿಂದ ರೈಫಲನ್ನು ತೆಗೆದುಕೊಂಡವರೇ ಪೂರ್ತಿ ಗುಂಡು ತುಂಬಿ, ಜನರ ತಲೆಗಿಂತಲೂ ಮೇಲೆ ಸಿಡಿಯುವಂತೆ ಕೆಲವು ಸುತ್ತು ಹಾರಿಸಿದರು. ಸೈನಿಕರೂ ಹಾಗೆಯೇ ಮಾಡಿದರು. ಜನರು ಚೆಲ್ಲಾಪಿಲ್ಲಿಯಾಗಿ ದಿಕ್ಕಾಪಾಲಾಗಿ ಓಡಿದರು. ಸ್ವಲ್ಪದರಲ್ಲೇ ತಪ್ಪಿಸಿಕೊಂಡ ತಮ್ಮ ಸುದೈವವನ್ನು ವಂದಿಸುತ್ತಾ ಇವರು ಬೇಗ ಮನೆ ಸೇರಿದರು.

೨೬. ಒಂದು ಪ್ರಶಸ್ತಿಪತ್ರ

೧೯೭೦ ಜೂನ್‌ನಲ್ಲಿ ಚುರಚಂದ್‌ಪುರ್ ಎಂಬಲ್ಲಿದ್ದ ೯೬ ಬಿಎಸ್‌ಎಫ್ ಪಡೆಯ ಕಮಾಂಡೆಂಟ್ ಆಗಿ ಅಧಿಕಾರ ವಹಿಸಿಕೊಳ್ಳ ಬೇಕೆಂದು ನನಗೆ ಆದೇಶ ಬಂದಿತು. ಅದು ಇಂಫಾಲದಿಂದ ಸುಮಾರು ೫೦ ಮೈಲು ದೂರದಲ್ಲಿದೆ. ೨ನೇ ಮಣಿಪುರ ರೈಫಲ್ಸ್‌ನಲ್ಲಿ ನನ್ನಿಂದ ಏನೇನು ಸಾಧ್ಯವೋ ಅದೆಲ್ಲವನ್ನೂ ಮಾಡಿದ್ದೆ. ಯಾವುದೇ ಸಂದರ್ಭ ಬಂದರೂ ಅದು ಸರಿಯಾಗಿ ನಿಭಾಯಿಸಿಕೊಳ್ಳುತ್ತದೆಂದೂ ವಿಶ್ವಾಸ ಇಡಬಹುದಾಗಿದ್ದಿತು.

ಅದೇ ಕೆಲಸವನ್ನು ೯೬ ಬಿ.ಎಸ್.ಎಫ್.ನಲ್ಲೂ ನಾನು ಮಾಡಬೇಕಾಗಿತ್ತು. ಆದರೆ ಇಲ್ಲಿ ಪರಿಸ್ಥಿತಿ ೨ ಎಂ. ಆರ್. ನಷ್ಟು ಕೆಟ್ಟಿರಲಿಲ್ಲ. ಸಾವಿತ್ರಿ ಮತ್ತು ಹೇಮಾ ಇಂಫಾಲದಲ್ಲೇ ಉಳಿದರು. ಹೇಮಾಳ ವಿದ್ಯಾಭ್ಯಾಸಕ್ಕೆ ಅಡ್ಡಿಯುಂಟಾಗುವಂತಿರಲಿಲ್ಲ.

ಹೊಸ ಅಧಿಕಾರ ವಹಿಸಿಕೊಳ್ಳುವುದಕ್ಕೆ ಮೊದಲು ಬೆಂಗಳೂರಿಗೆ ಹೋಗಿಬಂದೆ. ನನ್ನ ತಾಯಿಗೆ ತೀವ್ರ ಅನಾರೋಗ್ಯವಾಗಿದೆ ಎಂದು ನನ್ನ ತಮ್ಮ ರಾಧಾಕೃಷ್ಣ ಬರೆದಿದ್ದ. ಹೇಗೋ ಬಿಕ್ಕಟ್ಟು ದಾಟಿ, ತಾಯಿಯು ಚೇತರಿಸಿಕೊಂಡರು.

ರವಿ ಬೆಂಗಳೂರಿನಲ್ಲಿ ಬಿ.ಎಂ.ಎಸ್. ಕಾಲೇಜಿನಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್‌ಗೆ ಸೇರಿಕೊಂಡಿದ್ದ. ರಾಮಕೃಷ್ಣ ಆಶ್ರಮವು ನಡೆಸುತ್ತಿದ್ದ ಹಾಸ್ಟೆಲಿನಲ್ಲಿ ಅವನು ಸೇರಿದ್ದ. ಅದು ಬಹಳ ಅಚ್ಚುಕಟ್ಟಾದ ಪ್ರಶಾಂತ ವಾತಾವರಣದ ಸ್ಥಳ. ಆಟೋಟಗಳಿಗೂ ವ್ಯಾಯಾಮಕ್ಕೂ ಅನೇಕ ಸೌಲಭ್ಯಗಳು ಅಲ್ಲಿದ್ದುವು. ವಿದ್ಯಾರ್ಥಿಗೆ ಅದು ಅತ್ಯುತ್ತಮ ಸ್ಥಳವಾಗಿತ್ತು. ರವಿ ಅದರ ಸದುಪಯೋಗ ಮಾಡಿಕೊಳ್ಳುತ್ತಾನೆಂದು ನನಗೆ ವಿಶ್ವಾಸವಿತ್ತು.

೯೬ ಬಿ.ಎಸ್.ಎಫ್.ನಲ್ಲಿ ಕಳೆದ ಮೊದಲನೆಯ ವರ್ಷ ಎಲ್ಲಾ ದೃಷ್ಟಿಗಳಿಂದ ಬೆಟಾಲಿಯನ್ ಅನ್ನು ಶುದ್ಧಗೊಳಿಸುವ ಕೆಲಸವೇ ಆಯಿತು. ಈಗ ಸೇನಾಪಡೆಗೆ ಅರಣ್ಯ - ಯುದ್ಧದ ಎಲ್ಲಾ ಅಂಶಗಳಲ್ಲಿ ವ್ಯವಸ್ಥಿತ ತರಬೇತಿ ಕೊಡಲಾಯಿತು. ಒಳ್ಳೆಯ ಆಹಾರ ಸೇವಿಸುತ್ತಿದ್ದರು. ಒಳ್ಳೆಯ ಬ್ಯಾರಕ್ಕುಗಳಲ್ಲಿ ವಾಸ ಮಾಡುತ್ತಿದ್ದರು. ಅನೇಕ ಬಗೆಯ ಆಟಗಳನ್ನು ಆಡುತ್ತಿದ್ದರು.

ಸೊಗಸಾದ ಆಫೀಸರ್ಸ್ ಮೆಸ್ ಮತ್ತು ಒಳ್ಳೆಯ ಬ್ಯಾಡ್ಮಿಂಟನ್ ಕೋರ್ಟು ಇತ್ತು. ಪಕ್ಕಾ ಆದ ನೀರು ಪೂರೈಕೆ ವ್ಯವಸ್ಥೆಯನ್ನು ಮಾಡಿದೆವು. ಬೆಟ್ಟದ ಮೇಲಿನ ಒಂದು ಜಲಮೂಲದಿಂದ ನೀರನ್ನು ಹಾಯಿಸಿದ್ದೆವು. ಎಲ್ಲಾ ವಸತಿಗಳಿಗೂ ಸದಾ ನೀರು ಹರಿಯುತ್ತಿತ್ತು. ಒಂದು ಈಜುಕೊಳವನ್ನೂ ನಿರ್ಮಿಸಿದೆವು.

ಒಂದು ಸಂಜೆ ಐ.ಜಿ. ಮದನಗೋಪಾಲ್‌ಸಿಂಗ್ ಅವರಿಂದ ನನಗೊಂದು ಆದೇಶ ಬಂದಿತು. ನಾನು ಇಂಫಾಲಕ್ಕೆ ಮತ್ತೆ ಬಂದಾಗ ತಮ್ಮನ್ನು ನೋಡಬೇಕೆಂದು ಅವರು ಬಯಸಿದ್ದರು. ಅವರ ಮಾತು ಏನೋ ಮುಖ್ಯವಾದ ವಿಷಯವಿರುವಂತೆ ತೋರಿತು. ನನಗೂ ಸಾವಿತ್ರಿಯನ್ನೂ ಹೇಮಳನ್ನೂ ನೋಡಬೇಕೆನಿಸಿತ್ತು. ಸರಿ, ಒಡನೆಯೇ ಹೊರಟುಬಿಟ್ಟೆ.

ಇಂಫಾಲಕ್ಕೆ ಬಂದವನೇ ಐ.ಜಿ. ಅವರನ್ನು ನೋಡಲು ಅವರ ಮನೆಗೆ ಹೋದೆ. ನಾವು ಒಟ್ಟಿಗೆ ಬಹಳ ಅನ್ಯೋನ್ಯವಾಗಿ ಕೆಲಸ ಮಾಡುತ್ತಿದ್ದೆವು. ೨ ಎಂ.ಆರ್. ಮತ್ತು ೯೬ ಬಿ.ಎಸ್.ಎಫ್. ಗಳನ್ನು ಪುನರ್ ರೂಪಿಸುವುದರಲ್ಲಿ ಅವರು ನನ್ನ ಪರಿಶ್ರಮಕ್ಕೆ ಒತ್ತಾಸೆಯಾಗಿದ್ದರು. ಅದಕ್ಕಿಂತ ಹಳ್ಳಿಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಹಾಕಿಕೊಂಡ ಯೋಜನೆಗಳಲ್ಲಿ ಅವರ ಬೆಂಬಲ ಸದಾ ನನಗಿತ್ತು.

ಸ್ವಲ್ಪ ಹೊತ್ತು ಹರಟೆ ಹೊಡೆದ ಮೇಲೆ ಇದ್ದಕ್ಕಿದ್ದಂತೆ ಹೇಳಿದರು. "ವೇಣು, ವಿಶಿಷ್ಟ ಸೇವಾ ಪುರಸ್ಕಾರಕ್ಕೆ ನಿನ್ನ ಹೆಸರನ್ನು ಕಳಿಸಬೇಕೆಂದು ನನ್ನ ಅಪೇಕ್ಷೆ. ೨ ಎಂ.ಆರ್. ಮತ್ತು ೯೬ ಬಿ.ಎಸ್.ಎಫ್.ಗಳಲ್ಲಿ ನೀನು ಮಾಡಿದ ಕೆಲಸಗಳ ವಿವರಗಳನ್ನು ಕೊಡು"

ನಾನು ಸ್ತಬ್ಧನಾದೆ.

ಕೆಲವು ಕ್ಷಣ ಕಳೆದು ಹೇಳಿದೆ, "ಸರ್, ನನ್ನ ಕರ್ತವ್ಯ ಎಂದು ನನಗೆ ತೋರಿದುದನ್ನು ಮಾಡಿದ್ದೇನೆ. ಅದನ್ನು ನಿಮ್ಮ ಒತ್ತಾಸೆ ಯಿಲ್ಲದೆ ಮಾಡಲು ಸಾಧ್ಯವಿರಲಿಲ್ಲ."

ಅವರು ನಕ್ಕರು, "ನೀನು ಹೀಗೆ ಹೇಳುವೆ ಎಂದು ನನಗೆ ಗೊತ್ತಿತ್ತು. ಆದರೆ ನನಗೆ ಆ ವಿವರಗಳಂತೂ ಬೇಕೇ ಬೇಕು."

"ಸರ್, ಅದು ನಿಜವಾಗಿ ಮಿತ್ರ ಸೈನಿಕರ ಸಾಧನೆ. ಅದರಲ್ಲಿ ನನ್ನ ಪಾಲು ಏನೂ ಇಲ್ಲ."

ನಮ್ಮ ಮಾತು ಹೀಗೆಯೇ ಸ್ವಲ್ಪ ಹೊತ್ತು ಮುಂದುವರಿಯಿತು. ಕೊನೆಗೆ ಅವರು ತಾಳ್ಮೆ ಕಳೆದುಕೊಂಡರು.

"ಇಲ್ಲಿ ನೋಡು, ವೇಣು, ನೀನು ಪುರಸ್ಕಾರಕ್ಕೆ ಅರ್ಹನಲ್ಲ ಎಂದು ನೀನು ಭಾವಿಸುತ್ತೀಯೆ. ಅದು ನನಗೆ ಗೊತ್ತು. ಆದರೆ ಒಬ್ಬ ಅನರ್ಹನನ್ನು ಪುರಸ್ಕಾರಕ್ಕೆ ಶಿಫಾರಸ್ಸು ಮಾಡಲು ನನಗೆ ಇಷ್ಟವಾದರೆ ನಾನು ಮಾಡುತ್ತೇನೆ. ನಾನು ಏನು ಮಾಡಬೇಕೆಂದು ಹೇಳಲು ನೀನು ಯಾರು?" ಎಂದರು.

ನಾನು ಬಂದುಬಿಟ್ಟೆ.

ಕೆಲವು ದಿನಗಳ ಅನಂತರ ಅವರ ಕಾರ್ಯದರ್ಶಿ ಸಲ್ದಾನಾ ಚುರುಚಂದ್‌ಪುರಕ್ಕೆ ಬಂದು, ಐ.ಜಿ. ಅವರ ಲೆಟರ್‌ಹೆಡ್ ಮೇಲೆ ಟೈಪು ಮಾಡಿದ್ದ ಮೂರು–ನಾಲ್ಕು ಪುಟಗಳನ್ನು ತೋರಿಸಿದರು. ಅದು ವಿಶಿಷ್ಟ ಸೇವಾ ಪುರಸ್ಕಾರಕ್ಕೆ ಶಿಫಾರಸ್ಸು ಮಾಡಿದ ಪ್ರಶಸ್ತಿ ವಾಚನವಾಗಿತ್ತು.

ನನ್ನಿಂದ ಸಹಕಾರವನ್ನು ನಿರೀಕ್ಷಿಸದೆಯೇ ಮದನಗೋಪಾಲ ಸಿಂಗ್, ನನ್ನ ಮುಖ್ಯಗುಮಾಸ್ತರಿಂದ ಅಗತ್ಯವಾಗಿದ್ದ ಎಲ್ಲಾ ವಿವರಗಳನ್ನೂ ಪಡೆಯುವಂತೆ ಸಲ್ದಾನಾ ಅವರಿಗೆ ಆದೇಶಿಸಿದ್ದರು. ಸಿದ್ಧವಾಗುವವರೆಗೂ ನನಗೆ ಅದು ತಿಳಿಯಕೂಡದು ಎಂದು ಆದೇಶವಿತ್ತು. ಪ್ರಶಸ್ತಿ ಹೀಗಿತ್ತು :

ಇನ್ಸ್‌ಪೆಕ್ಟರ್ ಜನರಲ್
ಬಾರ್ಡರ್ ಸೆಕ್ಯೂರಿಟಿ ಫೋರ್ಸ್, ಇ.ಎಫ್.
ಕಲ್ಕತ್ತಾ-೧೯

ವಿಷಯ : ಮೇಜರ್ ಎಚ್.ಸಿ. ವೇಣುಗೋಪಾಲ (ಐ.ಸಿ.೯೯೧೩) ಕಮಾಂಡೆಂಟ್ ೯೬ ಬಿ.ಎಸ್, ಬಿ.ಎಸ್.ಎಫ್. ಇವರಿಗೆ ಪಿ.ವಿ.ಎಸ್.ಎಂ ಪುರಸ್ಕಾರ ನೀಡುವ ಪ್ರಸ್ತಾವ.

ಸರ್,

1) ಇದರೊಂದಿಗೆ ವಿವರವಾದ ಮಾಹಿತಿಯನ್ನು ಒದಗಿಸಿರುವ, ಮೇಜರ್ ಎಚ್.ಸಿ.ವೇಣುಗೋಪಾಲ್ ೨ ನೇ ಬಿ.ಎಸ್. ಮಣಿಪುರ ರೈಫಲ್ಸ್‌ನಲ್ಲಿ ಕಮಾಂಡೆಂಟ್ ಆಗಿ ೬-೩-೧೯೬೮ರಂದು ನೇಮಕ ಗೊಂಡರು. ಬಿ.ಎಸ್.ಎಫ್.ಗೆ ಬಂದ ಈ ಅಧಿಕಾರಿಯು ೧೯-೬-೧೯೭೦ ರಿಂದ ಜಾರಿಗೆ ಬರುವಂತೆ 96ನೇ ಬಿ.ಎಸ್, ಬಿ.ಎಸ್.ಎಫ್.ನಲ್ಲಿ ಕಮಾಂಡೆಂಟ್ ಆಗಿ ನೇಮಿತರಾದರು. ೬-೩-೧೯೬೮ರಿಂದಲೂ ಈ ಕೇಂದ್ರ ಕಚೇರಿಯ ನಿಯಂತ್ರಣದಲ್ಲಿ ಅವಿರತವಾಗಿ ಮಣಿಪುರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

2) ಮೇಜರ್ ಎಚ್.ಸಿ. ವೇಣುಗೋಪಾಲ ಅವರು ೨ ಬಿ.ಎಸ್.ಎಂ.ಆರ್. ಕಮಾಂಡೆಂಟ್ ಆಗಿ ಅಧಿಕಾರ ಸ್ವೀಕರಿಸಿದಾಗ ಬೆಟಾಲಿಯನ್ ಸರಿಯಾಗಿ ವ್ಯವಸ್ಥೆ ಗೊಂಡಿರಲಿಲ್ಲ. ಅದಕ್ಕೆ ಸಾಕಷ್ಟು ಮಟ್ಟಿಗೆ ತರಬೇತಿ ಯಾಗಿರಲಿಲ್ಲ ಮತ್ತು ಸರಿಯಾದ ಆಡಳಿತನಿರ್ವಾಹವಿರಲಿಲ್ಲ. ಮೇಜರ್ ಎಚ್.ಸಿ. ವೇಣುಗೋಪಾಲ್ ಬಹು ಶ್ರದ್ಧೆಯಿಂದ ಬೆಟಾಲಿಯನ್ ಅನ್ನು ಪುನರ್ ವ್ಯವಸ್ಥೆಗೊಳಿಸಿದರು. ಎಲ್ಲಾ ಅಂಶಗಳನ್ನೂ ಸಕ್ರಮಗೊಳಿಸಿದರು, ಅದನ್ನು ಪ್ರಥಮ ಶ್ರೇಣಿಯ ಸಶಸ್ತ್ರ ಪೊಲೀಸ್ ಘಟಕವನ್ನಾಗಿ ರೂಪಿಸಿದರು.

3) ಬೆಟಾಲಿಯನ್ ತಮ್ಮ ವಶಕ್ಕೆ ಬಂದೊಡನೆ, ಸೈನಿಕರಿಗೆ ಸರಿಯಾಗಿ ತರಬೇತಿ ಕೊಟ್ಟು ಶಿಸ್ತಿಗೊಳಪಡಿಸದೆ, ಅವರ ಸುಖ ಸಂತೋಷಗಳನ್ನು ಸರಿಯಾಗಿ ನೋಡಿಕೊಳ್ಳದೆ, ಅವರ ನೈತಿಕಮಟ್ಟವನ್ನು ಸಾಕಷ್ಟು ಮೇಲೆತ್ತಿ ಉನ್ನತ ಹಂತದಲ್ಲಿ ಪಾಲಿಸದೆ ಹೋದರೆ, ಬೆಟಾಲಿಯನ್ ತನ್ನ ನಿರೀಕ್ಷಿತ ಕಾರ್ಯವನ್ನು ಸಾಧಿಸಲು ಸಾಧ್ಯವಿಲ್ಲ ಎಂದು ಸರಿಯಾಗಿಯೇ

ಅವರು ಮನಗಂಡರು. ವಿಶೇಷವಾಗಿ ವ್ಯವಸ್ಥಿತ, ಶಸ್ತ್ರಸಜ್ಜಿತ, ಭೂಗತ ಶಕ್ತಿಗಳ ವಿರುದ್ಧವಾಗಿ ಬಹು ಕಷ್ಟದ ನಿರ್ವಹಣೆಗೆ ಈ ಅಂಶಗಳು ಅತ್ಯಗತ್ಯವಾಗಿದ್ದವು. ಪ್ರಥಮ ಶ್ರೇಣಿಯ ಪಡೆಯೇ ಆದರೂ ಸಾರ್ವಜನಿಕರ ಮನಸ್ಸನ್ನು ತಮ್ಮ ಕಡೆಗೆ ಒಲಿಸಿಕೊಳ್ಳದೆ ಹೋದರೆ ದಂಗೆಗೆ ಪ್ರತಿ ದಂಗೆಯನ್ನು ಕೊಡುವುದರಿಂದ ಏನನ್ನೂ ಸಾಧಿಸಲಾಗದು ಎಂದು ಕೂಡ ಅವರು ವಿಹಿತವಾಗಿಯೇ ತಿಳಿದುಕೊಂಡರು.

4) ಬೆಟಾಲಿಯನ್ ಯೋಧರಿಗೆ ತರಬೇತಿ ಕೊಡಲು ಸುವ್ಯವಸ್ಥಿತವಾದ ರೀತಿಯಲ್ಲಿ ಯೋಜಿತವೂ ಉಪಯುಕ್ತವೂ ಆದ ಶ್ರೇಣಿಗಳನ್ನು ರಚಿಸಿದರು. ಯುದ್ಧತಂತ್ರಗಳಲ್ಲಿ, ಹಲವು ಪ್ರಾತ್ಯಕ್ಷಿಕೆಗಳನ್ನು ಏರ್ಪಾಟು ಮಾಡಿದರು. ಯೂನಿಟ್ಟಿಗೆ ತುಂಬಾ ಕೆಲಸವಿದ್ದರೂ, ಸದಾ ಕಾರ್ಯಾಚರಣೆಗಳಲ್ಲಿ ನಿರತರಾಗಿದ್ದರೂ, ಅವರು ಹೇಗೋ ಸಮಯವನ್ನು ಗೊತ್ತುಪಡಿಸಿ ತರಬೇತಿಗೆ ಅವಕಾಶ ಕಲ್ಪಿಸಿದರು. ದೂರದೃಷ್ಟಿ ಮತ್ತು ಸುದೀರ್ಘ ಅನುಭವಗಳಿಂದ ಅವರು ಹೊರಗೆ ಠಾಣ್ಯಗಳಲ್ಲಿದ್ದ ಜನರಿಗೆ ಹೊಸ ತರಬೇತಿ ಕೊಡಲು ಕ್ರಮಬದ್ಧವಾಗಿ ಏರ್ಪಾಟು ಮಾಡಿದರು. ಮೇಜರ್ ಎಚ್.ಸಿ. ವೇಣುಗೋಪಾಲ್ ಅವರ ನಿರ್ದೇಶನದಲ್ಲಿ ಆ ಯೋಧರಿಗೆ ದೊರೆತ ಪುನರ್ನವೀಕರಣ ಕಾರ್ಯಕ್ರಮಗಳಿಂದಾಗಿ ಎಂಥ ಕಷ್ಟಕರವಾದ, ಅಪಾಯಕರವಾದ ಪರಿಸ್ಥಿತಿಗಳಲ್ಲೂ ಅತ್ಯಂತ ಪ್ರಶಂಸನೀಯವಾಗಿ ವರ್ತಿಸಿದರು.

ಭೂಗತ ಉಗ್ರಗಾಮಿಗಳ ವಿರುದ್ಧವಾದ ಕಾರ್ಯಾಚರಣೆಗಳಲ್ಲಿ ಆ ಯೋಧರು ದಕ್ಷ ರೀತಿಯಲ್ಲಿ ಹೋರಾಡಲು ಸಾಧ್ಯವಾಯಿತು. ಮುಖ್ಯವಾಗಿ ವೇಣುಗೋಪಾಲ್ ಅವರಿಂದ ಪಡೆದ ತರಬೇತಿಯಿಂದಾಗಿ ಅವರ ಬೆಟಾಲಿಯನ್ನಿನ ಒಬ್ಬ ಹವಾಲ್ದಾರರು ಪಸಾಯ್‌ಥ್ರಾಂಗ್‌ನಲ್ಲಿ ಕೇವಲ ೨೦ ಜನ ಯೋಧರೊಂದಿಗೆ ೨೩-೪-೧೯೬೯ ರಂದು ಶಸ್ತ್ರಸಜ್ಜಿತ ಉಗ್ರಗಾಮಿಗಳ ತಂಡದ ಆಕ್ರಮಣವನ್ನು ಪ್ರತಿರೋಧಿಸಿ ಓಡಿಸಲು ಸಾಧ್ಯವಾಯಿತು. ಉಖ್ರುಲ್‌ಗೆ ಪ್ರಧಾನ ಮಂತ್ರಿಯವರ ಭೇಟಿಯ ಸಂಬಂಧವಾಗಿ ಕಾನೂನು-ಸುವ್ಯವಸ್ಥೆಯ ಪಾಲನೆಗಾಗಿ ಅಲ್ಲಿನ ಎಲ್ಲ ಸೈನಿಕರನ್ನೂ ಬೇರೆ ಬೇರೆ ಕರ್ತವ್ಯಗಳಿಗೆ ಬಳಸಿಕೊಳ್ಳಲಾಗಿದ್ದಿತು. ಆ ಹವಾಲ್ದಾರರನ್ನು ಪರಾಕ್ರಮಕ್ಕಾಗಿ ಪೊಲೀಸ್ ಮೆಡಲ್‌ಗಾಗಿ ಬಾರ್‌ನಿಂದ ಅಲಂಕರಿಸಲಾಯಿತು. ಹಾಗೆಯೇ ಇನ್ನೊಬ್ಬ ಜೆ.ಸಿ.ಓ. ಮತ್ತು ಎನ್.ಸಿ.ಓ. ಸಹ ಉಗ್ರಗಾಮಿಗಳೊಂದಿಗೆ ಗಂಡಾಂತಕಾರಿ ಸನ್ನಿವೇಶವು ಎದುರಾಗಿದ್ದಾಗ ಘರ್ಷಣೆಯಲ್ಲಿ ಅಪ್ರತಿಮವಾಗಿ ಹೋರಾಡಿದುದಕ್ಕೂ ಮೇಜರ್ ವೇಣುಗೋಪಾಲ್ ಅವರ ಕೈಕೆಳಗೆ ತರಬೇತಿ ಪಡೆದುದೇ ಕಾರಣ. ಅವರಿಗೂ ಗ್ಯಾಲಂಟ್ರಿ ಪದಕಗಳನ್ನು ನೀಡಿ ಪುರಸ್ಕರಿಸಲಾಯಿತು. ಮೇಜರ್ ವೇಣುಗೋಪಾಲ್ ಅವರಿಂದ ಪುನರ್ ತರಬೇತಿ ಪಡೆದ ಇತರ ಅಸಂಖ್ಯಾತ ಸೈನಿಕರು ಮತ್ತು ಅಧಿಕಾರಿಗಳು, ಯುದ್ಧಗಳು ಮತ್ತು ಕಾರ್ಯಾಚರಣೆಗಳಲ್ಲಿ ತಮಗೆ ಒಳ್ಳೆಯ ಹೆಸರು ಪಡೆದುಕೊಂಡುದು ಮಾತ್ರವಲ್ಲದೆ ಬೆಟಾಲಿಯನ್ನಿಗೂ, ಮಣಿಪುರಕ್ಕೂ ಕೀರ್ತಿ ತಂದಿದ್ದಾರೆ.

5) ಮೇಜರ್ ವೇಣುಗೋಪಾಲ್ ಬೆಟಾಲಿಯನ್ನಿನ ಅಧಿಕಾರ ವಹಿಸಿಕೊಳ್ಳುವವರೆಗೆ ಅಲ್ಲಿಯ ಜನರ ಸುಖ ಸಂತೃಪ್ತಿಗಳು ಸಾಕಷ್ಟು ಗಮನವನ್ನು ಪಡೆದಿರಲಿಲ್ಲ. ಮೇಜರ್ ವೇಣುಗೋಪಾಲ್ ತಮ್ಮ ಪ್ರಭಾವದಿಂದಲೂ ಜಾಣ್ಮೆಯಿಂದಲೂ, ಶಿಥಿಲವಾಗಿದ್ದ ಬ್ಯಾರಕ್ಕುಗಳನ್ನು ದುರಸ್ತಿ ಪಡಿಸಿದರು. ಆಧುನಿಕ ಮಾದರಿಯ ಅಡುಗೆ ಮನೆಗಳನ್ನೂ, ಭೋಜನ ಹಜಾರಗಳನ್ನೂ ಕಟ್ಟಿಸಿದರು. ಅವರ ಆಹಾರದಲ್ಲಿ ಅಗಾಧವಾದ ಸುಧಾರಣೆಗಳನ್ನು ತಂದರು. ಬೆಟಾಲಿಯನ್ನಿನ ಆವರಣ ಮತ್ತು ಠಾಣ್ಯಗಳ ನೈರ್ಮಲ್ಯಕ್ಕೆ ಗಮನ ಕೊಟ್ಟರು. ಇದರಿಂದ ಎಲ್ಲರೂ ಆರೋಗ್ಯವಂತರಾಗಿರಲು ಸಾಧ್ಯವಾಯಿತು. ಅವರಲ್ಲಿ ಅನಾರೋಗ್ಯ ಕಡಮೆಯಾಯಿತು. ಅವರ ನೈತಿಕ ಸ್ಥೈರ್ಯ ಹೆಚ್ಚಿತು. ತರಬೇತಿಯ ಜತೆಜತೆಗೇ ಯೂನಿಟಿನ ಸಿಬ್ಬಂದಿಯ ಕಾರ್ಯಾಚರಣೆಗಳಲ್ಲಿ ಅಮೋಘ ಫಲಿತಾಂಶಗಳನ್ನು ಸಾಧಿಸಿದರು.

6) ಅವರು ಈ ಘಟಕದ ಕಮಾಂಡ್ ವಹಿಸಿಕೊಂಡಾಗ ಬೆಟಾಲಿಯನ್ನಿನಲ್ಲಿ ಕುಟುಂಬ ಕಲ್ಯಾಣವೆನ್ನುವುದು ವಸ್ತುತಃ ಅಪರಿಚಿತವೇ ಆಗಿತ್ತು. ಕುಟುಂಬ ವಸತಿ ಮನೆಗಳೇ ಇರಲಿಲ್ಲ. ವಿವಾಹಿತರು ದುಬಾರಿ ಬಾಡಿಗೆಯ ಕೊಳಕುಗಲ್ಲಿಗಳ ಮನೆಗಳಲ್ಲಿ ವಾಸ ಮಾಡುತ್ತಿದ್ದರು. ಮನೆಯ ಹೆಂಗಸರು ತಮ್ಮ ಬಿಡುವಿನ ಸಮಯವನ್ನು ವ್ಯರ್ಥಮಾಡುತ್ತಿದ್ದರು. ಧನಾಭಾವದಿಂದಾಗಿ ವಸತಿ ಗೃಹಗಳ ನಿರ್ಮಾಣವನ್ನು ಅಧಿಕೃತ ಮಾರ್ಗದಲ್ಲಿ ಕೈಗೊಳ್ಳಲು ಸಾಧ್ಯವಿಲ್ಲವೆಂಬುದನ್ನು ಅರಿತ ಮೇಜರ್ ವೇಣುಗೋಪಾಲ್, ಸ್ವ-ಸಹಾಯ ವಿಧಾನದಿಂದ, ಸ್ಥಳೀಯ ಸಂಪನ್ಮೂಲಗಳನ್ನೇ ಉಪಯೋಗಿಸಿಕೊಂಡು ಕೆಲವು ವಸತಿಗಳನ್ನು ಕಟ್ಟಲು ನಿರ್ಧರಿಸಿದರು. ತಮ್ಮ ಮುಂದೊಡಗು ಮತ್ತು ಜಾಣ್ಮೆಯಿಂದ ಕೂಡಿದ ಯೋಜನೆಯಿಂದಾಗಿ, ಗಣನೀಯ ವೆಚ್ಚವಿಲ್ಲದೆ ಹಲವು ಮನೆಗಳನ್ನು ಕಟ್ಟಿಸಿದರು. ಸೂಕ್ತ ವಸತಿಯಿಲ್ಲದೆ ಕಷ್ಟಪಡುತ್ತಿದ್ದ ಕೆಲವು ಕುಟುಂಬಗಳಿಗೆ

ಮನೆಯನ್ನು ಒದಗಿಸಿದರು. ಕಡಮೆ ವೇತನವಿರುವ ಜನರಿಗೆ ತಮ್ಮ ವರಮಾನವನ್ನು ಹೆಚ್ಚಿಸಿಕೊಳ್ಳಲು ಹಾಗೂ ತಮ್ಮ ಬಿಡುವಿನ ಸಮಯವನ್ನು ಉತ್ಪಾದಕವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಲು ಅವರು ಬೆಟಾಲಿಯನ್‌ನಲ್ಲಿ ಕಲ್ಯಾಣ ಕೇಂದ್ರವನ್ನು ಸ್ಥಾಪಿಸಿದರು. ಅದುವರೆಗೆ ಖಾಸಗಿ ಗುತ್ತಿಗೆದಾರರು ನಿರ್ವಹಿಸುತ್ತಿದ್ದ , ಸಮವಸ್ತ್ರ ಹೊಲಿಯುವ ಕೆಲಸವನ್ನು ಈ ಕೇಂದ್ರವು ಕೈಗೊಂಡಿತು. ಅವರ ಸಮರ್ಥ ನಾಯಕತ್ವದಲ್ಲಿ ಕೇಂದ್ರವು ಬೆಳೆಯಿತು. ಗಣನೀಯ ಪ್ರಮಾಣದ ಪರಿಪೂರ್ಣತೆಯನ್ನು ಸಾಧಿಸಿತು. ಸಮವಸ್ತ್ರಕ್ಕೆ ಸಂಬಂಧಿಸಿದ ಬಟ್ಟೆಗಳನ್ನು ಮಾತ್ರವಲ್ಲದೆ, ಹಲವು ಉಪಯುಕ್ತ ಉಡುಗೆಗಳನ್ನೂ ಮೋಹಕವಾದ ಕರಕುಶಲ ವಸ್ತುಗಳನ್ನೂ ಹೊಲಿಯತೊಡಗಿತು. ಅನೇಕ ಜನ ದೊಡ್ಡ ದೊಡ್ಡ ಅಧಿಕಾರಿಗಳು ಕೇಂದ್ರಕ್ಕೆ ಭೇಟಿ ನೀಡಿ, ಮೇಜರ್ ವೇಣುಗೋಪಾಲ್ ಅವರ ಮುಂದಾಲೋಚನೆ, ಪ್ರಭಾವ ಹಾಗೂ ಪರಿಶ್ರಮಗಳನ್ನು ಕೊಂಡಾಡಿದ್ದಾರೆ. ಸಿಬ್ಬಂದಿಯ ಕಲ್ಯಾಣ ಮಾತ್ರವಲ್ಲದೆ, ಈ ಕೇಂದ್ರವು ಹಲವು ತೆರನಾದ ಶೈಕ್ಷಣಿಕ ಕಾರ್ಯಕ್ರಮಗಳನ್ನೂ ಹಾಕಿಕೊಂಡಿತು. ಆದಿವಾಸಿ ಹುಡುಗಿಯರಿಗೆ ಹೊಲಿಗೆಯಲ್ಲಿ ತರಬೇತಿ, ಮೂಲಬೆಲೆಗೆ ಶಾಲಾ ಮಕ್ಕಳ ಸಮವಸ್ತ್ರವನ್ನು ಹೊಲಿದುಕೊಡುವುದು ಮೊದಲಾದ ಕೆಲಸಗಳನ್ನು ನಿರ್ವಹಿಸಿತು. ಅವರು ಹಾಕಿಕೊಟ್ಟ ಮಾದರಿಯನ್ನು ಇತರ ಮಣಿಪುರ ರೈಫಲ್ಸ್ ಬೆಟಾಲಿಯನ್ನುಗಳ ಕಮಾಂಡೆಂಟರೂ ಅನುಸರಿಸಿದರು. ಪ್ರತಿಯೊಂದು ಬೆಟಾಲಿಯನ್ನಿನಲ್ಲಿ ಒಂದು ಕಲ್ಯಾಣಕೇಂದ್ರವು ಪ್ರಾರಂಭ ವಾಯಿತು.

7) ಪ್ಯಾಕಿಂಗ್ ವಸ್ತುಗಳಿಗೆ ಸ್ಥಳೀಯ ಸಂಪನ್ಮೂಲಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ಅಪಾರವಾದ ಸರಕಾರಿ ಹಣವು ವೆಚ್ಚವಾಗುತ್ತಿತ್ತು. ಮೇಲುನೋಟಕ್ಕೆ ನಿರುಪಯುಕ್ತ ವೆಂದು ತೋರುವ ವಸ್ತುಗಳನ್ನು ಉಪಯುಕ್ತ ವಸ್ತುಗಳನ್ನಾಗಿ ಪರಿವರ್ತಿಸಿ ಹೇಗೆ ಬಳಸಬಹುದು, ಹೇಗೆ ಸರಕಾರಿ ಹಣವನ್ನು ಉಳಿಸಬಹುದು ಎಂಬುದನ್ನು ವೇಣುಗೋಪಾಲ್ ತೋರಿಸಿ ಕೊಟ್ಟರು. ಪೋನಿಗಳನ್ನು ವಿವೇಚನೆಯಿಂದ ಬಳಸಿ ಭಾರೀ ಪ್ರಮಾಣದ ಉಳಿತಾಯ ಸಾಧಿಸಿದರಲ್ಲದೆ, ತಲೆಯ ಮೇಲೆ ಹೊರಲು ಹಳ್ಳಿಗರನ್ನು ಪೋರ್ಟರುಗಳನ್ನಾಗಿ ಉಪಯೋಗಿಸುತ್ತಿದ್ದ ಪದ್ಧತಿಯನ್ನು ಮಿತಿಗೊಳಿಸಿದರು. ಹಳ್ಳಿಗರಿಗೆ ಆ ಕೆಲಸ ಇಷ್ಟವಿರಲಿಲ್ಲ. ಖಾಸಗಿ ನಿಧಿಯ ನಿರ್ವಹಣೆ, ಸರಕಾರಿ ಲೆಕ್ಕಪತ್ರಗಳು, ಸಾರಿಗೆ ವಿಭಾಗ, ಕ್ವಾರ್ಟರ್ ಮಾಸ್ಟರ್ ಶಾಖೆ, ದಾಖಲಾತಿ ಇವೆಲ್ಲವನ್ನೂ ಕ್ರಮಬದ್ಧಗೊಳಿಸಿ ಆಡಳಿತ ದಕ್ಷತೆಯನ್ನು ಉತ್ತಮ ಗೊಳಿಸಿದರು. ಬೆಟಾಲಿಯನ್ನಿನ ಕ್ಷಮತೆ ಬಹು ಪ್ರಮಾಣವಾಗಿ ಹೆಚ್ಚಿತು.

8) ಗ್ರಾಮಸ್ಥರ ಸಹಕಾರವನ್ನು ಪಡೆಯಲು, ಅವರ ಕಲ್ಯಾಣ ಕಾರ್ಯಗಳಿಗೆ ತಮ್ಮ ಶಕ್ತಿಯಿರುವಷ್ಟು ಕೊಡುಗೆ ನೀಡಲು ಅವರು ಅನೇಕ ದೂರ ದೂರದ ಮೂಲೆಯ ಹಳ್ಳಿಗಳಲ್ಲಿ ಹೊಲಿಗೆ ಯಂತ್ರಗಳನ್ನು ವಿತರಿಸಿದರು. ಅಲ್ಲಿಯ ಹೆಂಗಸರಿಗೆ ಹೊಲಿಗೆ ಮತ್ತು ಕಸೂತಿಗಳಲ್ಲಿ ತರಬೇತಿ ಕೊಡಿಸಿದರು. ಕುಡಿಯುವ ನೀರಿನ ಟ್ಯಾಂಕುಗಳನ್ನು ನಿರ್ಮಿಸಿದರು. ಸಂಪರ್ಕ ಸಾಧನಗಳನ್ನು ಉತ್ತಮಪಡಿಸಿದರು. ಸೌಲಭ್ಯಗಳಿಲ್ಲದ ಮೂಲೆಮೂಲೆಯ ಪ್ರದೇಶಗಲ್ಲಿ ತಮ್ಮ ವೈದ್ಯಾಧಿಕಾರಿಗಳು ಹೋಗಿ ವೈದ್ಯಕೀಯ ನೆರವು ನೀಡುವಂತೆ ಏರ್ಪಾಟು ಮಾಡಿದರು. ಇದರಿಂದ ಅವರು ಗ್ರಾಮಸ್ಥರ ಕೃತಜ್ಞತೆಯನ್ನು ಸಂಪಾದಿಸಿದರು. ಪೊಲೀಸ್ ಹಾಗೂ ಸಾರ್ವಜನಿಕ ಸಂಬಂಧಗಳು ಗಣನೀಯವಾಗಿ ಉತ್ತಮಗೊಂಡವು.

9) ತನ್ನ ಪಡೆಗಳ ಉತ್ತಮಿಕೆಗಾಗಿ ಅವರು ಶ್ರದ್ಧೆಯಿಂದ ಶ್ರಮಿಸಿದರು. ಅವರ ಉನ್ನತವಾದ ನಾಯಕತ್ವ ಗುಣಗಳು ಅವರ ಅಧಿಕಾರಿಗಳಲ್ಲಿ ಶ್ರದ್ಧೆ , ಅರ್ಪಣಾ ಮನೋಭಾವ, ಕರ್ತವ್ಯ ಪ್ರಜ್ಞೆಗಳನ್ನು ಬೆಳೆಸಿದವು. ಆ ಮೂಲಕ ತಮ್ಮ ಘಟಕದ ಸುಧಾರಣೆ ಮತ್ತು ಸರ್ವತೋಮುಖ ದಕ್ಷತೆಗಳನ್ನು ಸಾಧಿಸಿದರು.

10) ಅವರ ಅಧಿಕಾರಾವಧಿಯಲ್ಲಿ ೨ನೇ ಬೆಟಾಲಿಯನ್ ಎಂ.ಆರ್. ಅನ್ನು ಉಖ್ರುಲ್ ಪ್ರದೇಶದಲ್ಲಿ ನೇಮಿಸಲಾಗಿತ್ತು. ಅದು ಕಠಿಣವಾದ ಬೆಟ್ಟಪ್ರದೇಶ, ಉಗ್ರಗಾಮಿಗಳ ಹಾವಳಿ ಅಲ್ಲಿ ತುಂಬಾ ಹೆಚ್ಚು. ಭೂಗತ ಉಗ್ರಗಾಮಿಗಳಿಗೂ ಪೊಲೀಸರಿಗೂ ಪದೇ ಪದೇ ಘರ್ಷಣೆಗಳಾಗುತ್ತಿದ್ದವು. ಅಂತಹ ಅಪಾಯಕರವಾದ ಪ್ರದೇಶದಲ್ಲಿ ಅವರ ಬೆಟಾಲಿಯನ್ನಿಗೆ ಸೇರಿದ ೨೨ ಠಾಣ್ಯಗಳಿದ್ದವು. ಈ ದೂರದ ನೆಲೆಗಳಲ್ಲಿ ಅಲ್ಪ ಸಂಖ್ಯೆಯಲ್ಲಿದ್ದ ಪೊಲೀಸರಿಗೆ ಅಪಾಯವನ್ನು ಕಡಮೆ ಮಾಡುವುದಕ್ಕಾಗಿ ಮೇಜರ್ ವೇಣುಗೋಪಾಲ್ ಸುಭದ್ರವಾದ ಹಾಗೂ ಪರಿಣಾಮಕಾರಿಯಾದ ರಕ್ಷಣಾಕ್ರಮುಗಳನ್ನು ನಿರ್ಮಿಸಿದರು. ಈ ರಕ್ಷಣಾ ವ್ಯವಸ್ಥೆಗಳು ಇತರ ಬೆಟಾಲಿಯನ್ನುಗಳವರಿಗೆ ಮಾದರಿಯಾದುವು. ಇತರ ಜೂನಿಯರ್ ಅಧಿಕಾರಿಗಳಿಗೆ ಮೇಲ್ಪಂಕ್ತಿಯಾದುವು.

11) ಈ ಅಧಿಕಾರಿಯು ಒಳನಾಡು ಪ್ರದೇಶದಲ್ಲಿ ಉತ್ತಮ ಮಟ್ಟದ ಬೇಹುಗಾರಿಕೆ ವ್ಯವಸ್ಥೆಯನ್ನು ರಚಿಸಿದರು. ಆ ಮೂಲಕ ಅನೇಕ ಉಗ್ರಗಾಮಿಗಳು ಶರಣು ಬಂದು ತಮ್ಮ ಶಸ್ತ್ರಾಸ್ತ್ರಗಳನ್ನು

ಪೊಲೀಸರಿಗೆ ಒಪ್ಪಿಸುವ ಹಾಗೆ ಮಾಡಿದರು. ಅಪಾಯಕಾರಿಯಾದ ಸ್ಥಳಗಳಲ್ಲಿ ಅವರೇ ಖುದ್ದಾಗಿ ದಾಳಿ ಮಾಡಿ ಹಲವು ಕಟ್ಟಾ ಉಗ್ರಗಾಮಿಗಳನ್ನು ಸೆರೆ ಹಿಡಿದರು. ತಮಗೊದಗಬಹುದಾದ ವಿಪತ್ತನ್ನು ಕಡೆಗಣಿಸಿದರು. ಒಂದು ಕಡೆ ತಮ್ಮ ಜತೆಯ ಅಧಿಕಾರಿಗಳೊಂದಿಗೆ ಅತ್ಯುತ್ತಮ ಬಾಂಧವ್ಯವನ್ನೂ ಇನ್ನೊಂದು ಕಡೆ ಸಾರ್ವಜನಿಕರೊಂದಿಗೆ ಸ್ನೇಹ ಸಂಬಂಧವನ್ನೂ ಬೆಳೆಸಿಕೊಂಡುದರಿಂದ ಅವರು ಕೈಗೊಂಡ ಅಸಂಖ್ಯಾತ ಕಾರ್ಯಾಚರಣೆಗಳಲ್ಲಿ ಒಂದೂ ವಿಫಲ ಗೊಳ್ಳಲಿಲ್ಲ. ಇದರ ಹಾಗೂ ದಿಟ್ಟತನದ ಕಾರ್ಯಾಚರಣೆಗಳ ಫಲವಾಗಿ ಅವರ ಯೂನಿಟ್ಟಿನ ಜವಾಬ್ದಾರಿಯ ಕ್ಷೇತ್ರವು ಉಗ್ರಗಾಮಿಗಳನ್ನು ನಿಯಂತ್ರಿಸಿ ಅಲ್ಲಿ ಪೌರಾಡಳಿತವನ್ನು ಸ್ಥಾಪಿಸಲು ಸಾಧ್ಯವಾಯಿತು. ಉಗ್ರಗಾಮಿಗಳ ಕಿರುಕುಳದಿಂದ ತುಂಬ ಕಷ್ಟಕ್ಕೊಳಗಾಗಿದ್ದ ಸಾಮಾನ್ಯ ಜನತೆಗೆ ಅಪಾರವಾದ ಸಮಾಧಾನ ದೊರಕಿತು. ಉಗ್ರಗಾಮಿಗಳಿಂದ ಬೇಕಾದಷ್ಟು ಆಯುಧಗಳು ಮತ್ತು ಮದ್ದುಗುಂಡುಗಳನ್ನೂ, ಅಮೂಲ್ಯ ವಾದ ದಾಖಲೆಗಳನ್ನೂ, ಶಸ್ತ್ರಕೋಠಿಯನ್ನೂ, ವಶಪಡಿಸಿ ಕೊಂಡರು.

12) ೧೯-೬-೧೯೭೦ ರಂದು ಈ ಅಧಿಕಾರಿಯು ೯೬ನೇ ಬೆಟಾಲಿಯನ್ ಬಿ.ಎಸ್.ಎಫ್. ಅನ್ನು ವಹಿಸಿಕೊಂಡರು. ೯೬ನೇ ಬಿ.ಎಸ್.ಎಫ್., ಅಂತಹ ಯೂನಿಟಿನ ಕಮಾಂಡ್ ಪಡೆದುದು ಅದರ ಅದೃಷ್ಟ. ಆದರೆ ೧೯೬೭ರ ಮಧ್ಯೆ ರೂಪುಗೊಂಡಿದ್ದ ಈ ಬೆಟಾಲಿಯನ್‌ನಲ್ಲಿ ಅನೇಕ ಕೊರತೆಗಳಿದ್ದವು. ಉದಾಹರಣೆಗೆ ಅಲ್ಲಿನ ತಾತ್ಕಾಲಿಕ ಬಾಷಾಗಳು ಕುಸಿದು ಹೋಗಿದ್ದವು. ಪ್ರತಿಕೂಲ ಹವೆಯಲ್ಲಿ ಸೈನಿಕರು ಯಾವ ರಕ್ಷಣೆಯೂ ಇಲ್ಲದೆ ಮಳೆಗಾಳಿಗೆ ಒಡ್ಡಿ ಕೊಂಡಿರಬೇಕಾಗಿತ್ತು. ಕಾರ್ಯಾಚರಣೆಗೆ ಸಂಬಂಧಿಸಿದಂತೆ ಬೆಟಾಲಿಯನ್ ಕೆಲಸದಲ್ಲಿ ಮಗ್ನವಾಗಿದ್ದುದರಿಂದ ಅದು ತರಬೇತಿ ಕ್ಷೇತ್ರದಲ್ಲಿ ಬೆಳೆದಿರಲಿಲ್ಲ. ಅದರದ್ದೇ ರೇಂಜ್ ಕೂಡ ಇರಲಿಲ್ಲ. ಹೀಗಿದ್ದ ೯೬ನೇ ಬೆಟಾಲಿಯನ್ ಬಿ.ಎಸ್.ಎಫ್. ನಲ್ಲಿಯೂ ಮೇಜರ್ ವೇಣುಗೋಪಾಲ್ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡರು. ಇಲ್ಲಿದ್ದ ಒಂಬತ್ತು ತಿಂಗಳ ಅಲ್ಪ ಅವಧಿಯಲ್ಲೇ ಅವರು ಉಗ್ರಗಾಮಿ ಗಳಿಂದ ೧೪ ರೈಫಲ್‌ಗಳು, ೨ ರಿವಾಲ್ವರುಗಳು, ೨ ಎಸ್.ಬಿ.ಎಂ.ಎಲ್. ಗನ್ನುಗಳನ್ನು ಮತ್ತು ಭಾರೀ ಪ್ರಮಾಣದ ಮದ್ದುಗುಂಡುಗಳನ್ನು ವಶಪಡಿಸಿಕೊಂಡರು. ಅನೇಕ ಉಪಯುಕ್ತಸಂಪರ್ಕಗಳನ್ನು ರೂಢಿಸಿದರು. ಗಡಿಗಳಲ್ಲಿ ಗಡಿಭದ್ರತಾಪಡೆಯ ಸ್ಥಾನವನ್ನು ಮತ್ತಷ್ಟು ಬಲಪಡಿಸಿದರು. ವಿಭಾಗದ ವತಿಯಿಂದಲೇ ನಿರ್ಮಿಸಿದ ಒಂದು ಸೊಗಸಾದ ತರಬೇತಿ ಕ್ಷೇತ್ರವನ್ನು ಅವರು ಕೊಡಲು ಸಮರ್ಥರಾದರು. ಹೊಸದಾಗಿ ಮಂಜೂರಾದ ಅನೇಕ ಪಕ್ಕಾ ಕಟ್ಟಡಗಳೂ ಆಶ್ಚರ್ಯವಾಗುಷ್ಟು ಬೇಗ ಮುಗಿದಿವೆ. ನಾಗರಿಕಸಂಸ್ಥೆ ಗಳೊಂದಿಗೂ ಸಮೀಪದ ಸೇನಾಪಡೆಗಳೊಂದಿಗೂ ಆತ್ಮೀಯವಾದ ಸಂಬಂಧವನ್ನು ಬೆಳೆಸಿಕೊಳ್ಳಲು ಸಮರ್ಥ ರಾದುದರಿಂದ, ಬಹುಕಾಲದಿಂದ ನೆನೆಗುದಿಗೆ ಬಿದ್ದಿದ್ದ ಅನೇಕ ಪ್ರಶ್ನೆಗಳನ್ನು ಬಿಡಿಸಲು ಅವರು ಸಮರ್ಥರಾಗಿದ್ದಾರೆ.

13) ೯೬ನೇ ಬೆಟಾಲಿಯನ್ ಬಿ.ಎಸ್.ಎಫ್. ಗೆ ನೀರಿನ ಪೂರೈಕೆ ದಿಕ್ಕು ತೋಚದ ಒಂದು ದೊಡ್ಡ ಸಮಸ್ಯೆಯಾಗಿತ್ತು. ಬಹು ದೂರದಿಂದ ನೀರನ್ನು ಹೊತ್ತು ತರಬೇಕಾಗಿದ್ದಿತು. ಆಗಲೂ ಕುಡಿಯುವ ನೀರಿಗೆ ಕೊರತೆಯಾಗಿರುತ್ತಿತ್ತು. ಈ ಕೊರತೆಯಿಂದಾಗಿ, ಅನಾರೋಗ್ಯ ಮತ್ತು ಉದರಸಂಬಂಧೀ ಕಾಯಿಲೆಗಳು ಈ ಘಟಕದಲ್ಲಿ ಬಹಳ ಹೆಚ್ಚಾಗಿದ್ದವು. ಸಲಹೆ ಮಾಡಿದ್ದ ನೀರು ಪೂರೈಕೆ ಯೋಜನೆಗಳು ಹಲವು ಕಾರಣಗಳಿಂದಾಗಿ ಕಾರ್ಯಗತಗೊಂಡಿರಲಿಲ್ಲ.

ಪೈಪುಗಳ ಅಭಾವ ಮತ್ತು ಇತರರೊಂದಿಗೆ ನೀರನ್ನು ಹಂಚಿಕೊಳ್ಳಲು ಹಳ್ಳಿಗರಿಗೆ ನಿರಾಸಕ್ತಿ ಇವು ಬೆಟಾಲಿಯನ್ನಿಗೆ ನೀರು ಪೂರೈಸುವುದಕ್ಕೆ ಬಹು ದೊಡ್ಡ ಅಡ್ಡಿಯಾಗಿದ್ದುವು. ನೀರಿನ ಕೊರತೆಯಿಂದ ಮೇಜರ್ ವೇಣುಗೋಪಾಲ್ ಅವರ ಮನಸ್ಸಿಗೆ ತುಂಬಾ ವೇದನೆಯಾಯಿತು. ಅವರು ಮೊದಲು ಜಲಮೂಲಗಳ ಸರ್ವೆ ಮಾಡಿದರು. ಪೈಪುಗಳನ್ನು ಹಾಕಬಹುದಾದ ಸುಲಭವಾದ ಮಾರ್ಗವನ್ನು ಗುರುತಿಸಿದರು. ತಮ್ಮಲ್ಲಿರುವ ನೀರನ್ನು ಹಂಚಿಕೊಳ್ಳುವಂತೆ ಹಳ್ಳಿಗರನ್ನು ಒಲಿಸಿ ಒಪ್ಪಿಸಿದರು. ಬೇಕಾದಷ್ಟು ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸಿ ಅವರು ೧೧,೦೦೦ ಅಡಿ ದೂರದಿಂದ ಶುದ್ಧವಾದ ಕುಡಿಯುವ ನೀರನ್ನು ಪೂರೈಸುವ ಅಪ್ರತಿಮ ಸಾಹಸವನ್ನು ಮಾಡಿ ತೋರಿಸಿದರು. ಸ್ವಲ್ಪವೂ ವೆಚ್ಚ ತಗುಲದ ಬಿದಿರು ಕೊಳವೆಗಳನ್ನು ನೆಲದೊಳಗೆ ಜೋಡಿಸಿ ನೀರನ್ನು ಹರಿಯಿಸಿ, ಯೂನಿಟ್ಟನ್ನು ಕಾಡುತ್ತಿದ್ದ ಬೃಹತ್ ಸಮಸ್ಯೆಯೊಂದನ್ನು ಪರಿಹರಿಸಿದರು. ಕೊಳವೆಗಳು ಹಾದು ಬಂದ ದಾರಿಯಲ್ಲಿ ಸಿಕ್ಕಿದ ಹಳ್ಳಿಗಳಿಗೆಲ್ಲ ಈ ಯೋಜನೆಯಿಂದ ನೀರು ಪೂರೈಕೆ ಯಾಯಿತು. ಅದು ನೀರಿನ ಸಮಸ್ಯೆಯನ್ನು ಯಶಸ್ವಿಯಾಗಿ ಪರಿಹರಿಸಿದ್ದು ಮಾತ್ರವಲ್ಲದೆ ಯೋಧರ ನೈತಿಕ ಮಟ್ಟವನ್ನೂ ಅಗಾಧ ಪ್ರಮಾಣದಲ್ಲಿ ಮೇಲಕ್ಕೆತ್ತಿತು. ಸಿವಿಲ್ ಆಡಳಿತ

ಹಾಗೂ ಸೈನ್ಯ ಎರಡರ ಹಿರಿಯ ಅಧಿಕಾರಿಗಳು ಎಲ್ಲರೂ ಬಂದು ಈ ಅಸಾಮಾನ್ಯವಾದ ಯೋಜನೆಯನ್ನು ನೋಡಿ ಅವರ ಪ್ರತಿಭಾವಂತ ಕಾರ್ಯವನ್ನು ಮನಸಾರೆ ಶ್ಲಾಘಿಸಿದ್ದಾರೆ.

14) ಸೈನ್ಯದ ಸದಸ್ಯರು ಆತ್ಮವಿಶ್ವಾಸವುಳ್ಳವರಾಗಿರಬೇಕು, ಸ್ವಾವಲಂಬಿಗಳಾಗಿರಬೇಕು. ಅಷ್ಟೇ ಅಲ್ಲ , ಅವರ ಪತ್ನಿಯರು, ಹೆಣ್ಣುಮಕ್ಕಳು ಕೂಡ ಅದೇ ಮನೋಧರ್ಮವನ್ನು ಹೊಂದಿದ್ದು ಧೈರ್ಯಶಾಲಿಗಳಾಗಿರಬೇಕು ಎಂದು ಮೇಜರ್ ವೇಣುಗೋಪಾಲ್ ವಿಹಿತವಾಗಿಯೇ ಭಾವಿಸುತ್ತಾರೆ. ಅವರೂ ಪುರುಷರೊಂದಿಗೆ ಸಮಸಮವಾಗಿಯೇ ಶತ್ರುವನ್ನು ಎದುರಿಸಲು ಸಮರ್ಥರಾಗಬೇಕು. ಇದನ್ನು ಸಾಧಿಸಲು ಅವರು ತಮ್ಮ ಬೆಟಾಲಿಯನ್ನಿನ ಹೆಂಗಸರು ಮತ್ತು ಹೆಣ್ಣುಮಕ್ಕಳಿಗೆ ಬಂದೂಕುಗಳನ್ನು ಉಪಯೋಗಿಸುವುದರಲ್ಲೂ , ಡ್ರಿಲ್ಲಿನಲ್ಲೂ ತರಬೇತಿಕೊಟ್ಟರು. ೨ನೇ ಬಿ.ಎಸ್.ಎಂ.ಆರ್. ನಲ್ಲಿಯೂ ೯೬ನೇ ಬಿ.ಎಸ್, ಬಿ.ಎಸ್.ಎಫ್.ನಲ್ಲಿಯೂ ಮೇಜರ್ ವೇಣುಗೋಪಾಲ್ ಇದನ್ನು ನಡೆಸಿದರು.

15) ಆತ್ಮಸಾಕ್ಷಿಯುಳ್ಳ, ಪ್ರಾಮಾಣಿಕರಾದ, ಕಾರ್ಯಶೀಲರಾದ, ಧೈರ್ಯವಂತ ಅಧಿಕಾರಿಯಾದ ಮೇಜರ್ ವೇಣುಗೋಪಾಲ್ ತಮ್ಮ ಬೆಟಾಲಿಯನ್ನಿನ ಹಲವು ವಿಭಾಗಗಳ ಕಾರ್ಯ ವಿಧಾನದಲ್ಲಿ ಅಪಾರವಾದ ಸುಧಾರಣೆಗಳನ್ನು ಮಾಡಿದ್ದಾರೆ. ಬಹು ದೂರಸ್ಪರ್ಶಿಯಾದ ಕಾರ್ಯಾಚರಣೆಗಳನ್ನು ಸಾಧಿಸಿದ್ದಾರೆ. ತಮ್ಮ ಮಿಷನರಿ ಉತ್ಸಾಹ ಮತ್ತು ಬಹು ಉನ್ನತ ವರ್ಗದ ಅರ್ಪಣಾ ಮನೋಭಾವದಿಂದ ತಮ್ಮ ಯೂನಿಟ್ಟಿನ ವ್ಯಾಪ್ತಿಯಲ್ಲಿ ಬರುವ ಸ್ಥಳೀಯರ ವಿಶ್ವಾಸವನ್ನೂ, ಸದ್ಭಾವನೆಯನ್ನೂ ಸಂಪಾದಿಸಿದರು. ಅವರು ಗೈದಿರುವ ಸೇವೆಯು 'ಪರಮವಿಶಿಷ್ಟ ಸೇವಾ ಪದಕ'ವನ್ನು ನೀಡಿ ಪುರಸ್ಕರಿಸಲು ಅತ್ಯಂತ ಅರ್ಹವಾಗಿದೆ.

ತಮ್ಮ ನಂಬುಗೆಯ

ಮದನಗೋಪಾಲಸಿಂಗ್
ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್
ಮಣಿಪುರ, ಇಂಫಾಲ.

ಪಿವಿಎಸ್ಎಂ ಪ್ರಶ್ನೆಯೇ ಇಲ್ಲ ಎಂದು ನನಗೆ ಗೊತ್ತಿತ್ತು. ಅದೇ ತಾನೇ ಪಾಕಿಸ್ತಾನದೊಂದಿಗೆ ಯುದ್ಧ ಮುಗಿದಿತ್ತು. ಬಾಂಗ್ಲಾದೇಶವು ಆಗ ತಾನೇ ವಿಮುಕ್ತವಾಗಿತ್ತು. ನನಗಿಂತ ಆ ಪುರಸ್ಕಾರಕ್ಕೆ ಹೆಚ್ಚು ಅರ್ಹರಾದ ಅನೇಕರಿದ್ದಾರೆಂದು ನನಗೆ ತಿಳಿದಿತ್ತು.

ಆದರೆ ನನಗೆ ಒಂದು ಪುರಸ್ಕಾರ ಸಿಕ್ಕುವುದೋ ಇಲ್ಲವೋ ಅದು ಮುಖ್ಯವಾಗಿತ್ತೇನು? ನನ್ನ ಮಟ್ಟಿಗೆ ಹೇಳುವುದಾದರೆ ಮದನ ಗೋಪಾಲಸಿಂಗ್ ಕೊಟ್ಟ ಪ್ರಶಸ್ತಿಪತ್ರವೇ ನನ್ನ ಪುರಸ್ಕಾರ. ನನ್ನ ಬಗೆಗೆ ಅಷ್ಟೊಂದು ಉತ್ತಮವಾದ ಅಭಿಪ್ರಾಯ ತಳೆದಿದ್ದಾರೆ ಎನ್ನುವುದು ಅನೇಕಾನೇಕ ಪದಕಗಳಿಗಿಂತಲೂ ಅಪರಿಮಿತವಾಗಿ ದೊಡ್ಡ ಪುರಸ್ಕಾರ.

ಪ್ರಶಸ್ತಿಪತ್ರವು ಗವರ್ನರ್ ಅವರಿಗೆ ಹೋಯಿತು. ಅವರು ಶಿಫಾರಸ್ಸು ಮಾಡಿ ಸಹಿ ಹಾಕಿ ರಕ್ಷಣಾ ಸಚಿವಾಲಯಕ್ಕೆ ಕಳಿಸಿದರು.

ಕೆಲವು ದಿನಗಳ ಅನಂತರ ಸಂಪೂರ್ಣ ಅನಿರೀಕ್ಷಿತವಾಗಿ ನನಗೆ ಜನರಲ್ ಡಿಸೋಜಾ ಅವರಿಂದ ಸಂದೇಶ ಬಂದಿತು. "ಅಭಿನಂದನೆಗಳು! ನಿಮಗೆ ವಿಶಿಷ್ಟ ಸೇವಾ ಪದಕವನ್ನು ನೀಡಲಾಗಿದೆ."

ಪದಕಪ್ರದಾನ ಸಮಾರಂಭವು ೧೯೭೩ರ ರಿಪಬ್ಲಿಕ್ ದಿನದಂದು ಮುಂಬಯಿಯ ಬ್ರೆಬೋರ್ನ್ ಸ್ಟೇಡಿಯಂನಲ್ಲಿ ನಡೆಯುವುದೆಂದು ನಿಗದಿಯಾಗಿತ್ತು. ರಾಷ್ಟ್ರಪತಿಗಳ ಹಸ್ತದಿಂದಲೇ ನಾವು ಪದಕಗಳನ್ನು ಪಡೆಯಲಿದ್ದೆವು. ಹೇಮಾಳನ್ನು ಇಂಫಾಲದಲ್ಲಿ ಗೆಳೆಯರ ಮನೆಯಲ್ಲಿ ಬಿಟ್ಟು ನಾನು, ಸಾವಿತ್ರಿ ಮುಂಬಯಿಗೆ ಹೋದೆವು. ಸಮಾರಂಭಕ್ಕಾಗಿ ರವಿಯು ಬೆಂಗಳೂರಿನಿಂದ ಬಂದನು.

ಆದರೆ ವಿಧಿ ಬೇರೆಯಾಗಿ ನಿರ್ಧರಿಸಿತು. ೨೬ನೆಯ ತಾರೀಖಿಗೆ ಕೆಲವು ದಿನಗಳ ಮೊದಲು ರಾಷ್ಟ್ರಪತಿ ಜಾಕೀರ್ ಹುಸೇನ್ ಅವರು ವಿಧಿವಶರಾದರು. ಶೋಕಾಚರಣೆಯ ದಿನಗಳನ್ನು ಘೋಷಿಸಲಾಯಿತು. ಸಮಾರಂಭವು ಮುಂದೂಡಲ್ಪಟ್ಟಿತು.

ಆಮೇಲೆ ಮುಂದೆ ಒಂದು ದಿನ ಲಕ್ನೋದಲ್ಲಿ ಫೀಲ್ಡ್ ಮಾರ್ಷಲ್ ಮಾಣೆಕ್‌ಷಾ ಅವರಿಂದ ನಾನು ಪದಕವನ್ನು ಪಡೆದೆ. ಅದು ಅವರು ಫೀಲ್ಡ್‌ಮಾರ್ಷಲ್ ಆದ ಮೊದಲನೆಯ ದಿನ. ಈ ಸಮಾರಂಭದಲ್ಲಿ ನನ್ನ ಹಳೆಯ ಮಿತ್ರ ಅಧಿಕಾರಿಗಳನ್ನು ನೋಡಿದೆ. ಸಬ್ಬರ್‌ವಾಲ್ ಮತ್ತು ಟಾರ್ಫಿ ಅವರೂ ವಿ.ಎಸ್.ಎಂ. ಪದಕಗಳನ್ನು ಪಡೆಯಲಿದ್ದರು. ಇದಕ್ಕಿಂತ ಉತ್ತಮವಾದ ಮಿಲನ ಬೇರೆ ಯಾವುದಿತ್ತು?

೧೯೭೧ರ ಜೂನ್ ತಿಂಗಳಲ್ಲಿ ಗಾಯತ್ರಿ ಚೊಚ್ಚಲು ಹೆರಿಗೆಗಾಗಿ ಇಂಫಾಲಕ್ಕೆ ಬಂದಳು. ಎಲ್ಲ ಸುಮುಖವಾಗಿತ್ತು. ಆಗಸ್ಟ್‌ನಲ್ಲಿ ಸುಂದರವಾದೊಂದು ಹೆಣ್ಣುಮಗು ಸುಮಾಗೆ ಜನ್ಮವಿತ್ತಳು. ಸಾಮಾನ್ಯವಾಗಿ ಹುಟ್ಟಿದ ಕೆಲವು ಮಕ್ಕಳಲ್ಲಿ ಕಂಡುಬರುವ ಕೆಂಬಣ್ಣವಾಗಲಿ, ಮೈಯೆಲ್ಲ ಕೂದಲಾಗಲಿ ಈ ಮಗುವಿಗಿರಲಿಲ್ಲ.

ಮಣಿಪುರದಲ್ಲಿ ಹುಟ್ಟಿದ ಸುಮಾ ಒಂದು ಪುಟ್ಟ ಮುತ್ತಿನ ಮಣಿಯಂತೆ ಕಂಡಳು. ಅವಳ ಮೈ ಬಣ್ಣ ಮತ್ತು ಗುಂಡು ಮುಖ ಮಣಿಯಂತೆಯೇ ಇತ್ತು.

೨೭. ಸಾಮಾನ್ಯರಿಗೆ ಅದು ಅಸಾಧ್ಯ

ನಾವು ಬ್ಯಾರಕುಗಳನ್ನು ಕಟ್ಟಿದ್ದೆವು. ಅಡುಗೆ ಮನೆಗಳನ್ನು ಕಟ್ಟಿದ್ದೆವು. ಬಂಕರುಗಳನ್ನೂ, ರಸ್ತೆಗಳನ್ನೂ ನಿರ್ಮಿಸಿದ್ದೆವು. ೧೯೭೨ರಲ್ಲಿ ಸೇತುವೆಯನ್ನು ನಿರ್ಮಿಸಲು ಒಂದು ಅವಕಾಶ ದೊರಕಿತು. ಅದು ಹೀಗಾಯಿತು.

೧೯೭೨ ರ ಫೆಬ್ರವರಿ ಪ್ರಾರಂಭದಲ್ಲಿ ಗಡಿಭದ್ರತಾ ಪಡೆಯ ಡೈರೆಕ್ಟರ್ ಜನರಲ್ ಕೆ.ಎಫ್.ರುಸ್ತಮ್‌ಜಿ ಅವರು ಬೆಟಾಲಿಯನ್ನಿಗೆ ಭೇಟಿ ನೀಡಿದರು. ಅವರ ಹೆಲಿಕಾಪ್ಟರಿನಲ್ಲೇ ನಾವು , ನಮ್ಮ ಠಾಣ್ಯವೊಂದಿದ್ದ ಸಿಂಜೋಲ್ ಎಂಬ ಹಳ್ಳಿಗೆ ಹೋದೆವು. ಸಿಂಜೋಲ್ ಬರ್ಮಾ ಗಡಿಗೆ ತುಂಬಾ ಹತ್ತಿರದಲ್ಲಿದೆ. ಹಾಗೆಯೇ ಮಣಿಪುರ-ಮೀಜೋರಾಂ ಗಡಿಗೂ ಹತ್ತಿರವಾಗಿದೆ.

ಸಿಂಜೋಲ್ ಗ್ರಾಮ ಮತ್ತು ಸುತ್ತಮುತ್ತಣ ಪ್ರದೇಶದ ಹಳ್ಳಿಗರೆಲ್ಲರೂ ಅವರನ್ನು ಸ್ವಾಗತಿಸಲು ನೆರೆದಿದ್ದರು. ಅನೇಕರು ತಮ್ಮ ಸಾಂಪ್ರದಾಯಿಕ ಉಡುಗೆ ಧರಿಸಿ ಬಂದಿದ್ದರು. ಹಲವಾರು ಭಾಷಣಗಳಾದುವು. ಮುಖ್ಯಸ್ಥರು ಹಲವರು ಬಿ.ಎಸ್.ಎಫ್. ನವರಾದ ನಾವು ಅವರಿಗೆ ಎಷ್ಟು ಮಟ್ಟಿಗೆ ಸಹಾಯ ಮಾಡಿದ್ದೇವೆ ಎಂಬ ಬಗೆಗೆ ತುಂಬಾ ಮೆಚ್ಚುಗೆಯ ಮಾತುಗಳನ್ನಾಡಿದರು. ರುಸ್ತುಮ್‌ಜೀ ಅವರಿಗೆ ತುಂಬಾ ಸಂತೋಷವಾಗಿ, ಗ್ರಾಮಸ್ಥರೂ ಗಡಿಭದ್ರತಾ ಪಡೆಯೂ ಸೇರಿ ಕೈಗೊಳ್ಳುವ ಯಾವುದೇ ಒಂದು ಅಭಿವೃದ್ಧಿ ಕಾರ್ಯಕ್ಕೆ ೫೦೦೦ ರೂಪಾಯಿಗಳನ್ನು ಒಡನೆಯೇ ಮಂಜೂರು ಮಾಡಿದರು.

ನಾವು ಹೊರಡುವುದಕ್ಕೆ ಮೊದಲು ಅವರು ಗ್ರಾಮಸ್ಥರೊಂದಿಗೆ ಸುದೀರ್ಘವಾಗಿ ಮಾತನಾಡಿದರು. ಅವರ ದೂರುಗಳಲ್ಲಿ ಒಂದು ಚುರಚಾಂದ್‌ಪುರ್ ಹಾಗೂ ಮಿಕ್ಕ ಮಣಿಪುರದೊಂದಿಗೆ ರಸ್ತೆ ಸಾರಿಗೆಯ ಸಂಪರ್ಕವಿರದಿದ್ದು. ಸಮಸ್ಯೆ ಅಲ್ಲಿ ಹರಿಯುತ್ತಿದ್ದ ತುಯಿವೈ ನದಿಯದು. ಗ್ರಾಮದಿಂದ ನಡೆಯುವಷ್ಟು ದೂರದಲ್ಲಿ ಎಲ್ಲೂ ಆ ನದಿಗೆ ಅಡ್ಡಲಾಗಿ ಸೇತುವೆಯಿರಲಿಲ್ಲ. ನದಿಯಲ್ಲಿ ಪ್ರವಾಹ ಬಂದಾಗ, ೫೦-೬೦ ಮೈಲುಗಳಿಗಿಂತ ದೂರವಲ್ಲದ ಚುರಚಾಂದ್‌ಪುರವನ್ನು ಸೇರಬೇಕಾದರೆ ಅದು ಹಲವು ದಿನಗಳ ಪ್ರಯಾಣವಾಗುತ್ತಿತ್ತು. ಸಿಂಜೋಲ್‌ನಿಂದ ತಿಪಾಯಿ ಮುಖ, ಅಲ್ಲಿಂದ ಎರಡು–ಮೂರು ದಿನ ದೋಣಿಯಲ್ಲಿ ಜೀರಿಬಾಂ, ಆಮೇಲೆ ಬಸ್ಸುಹತ್ತಿ ಸಿಲ್ಚಾರ್, ವಿಮಾನದಲ್ಲಿ ಇಂಫಾಲ, ಆಮೇಲೆ ಕೊನೆಗೆ ಬಸ್ಸಿನಲ್ಲಿ ಚುರಚಾಂದ್ ಪುರಕ್ಕೆ.

ನಾವು ನಿಂತಲ್ಲಿನಿಂದ ನದಿ ಕಾಣುತ್ತಿತ್ತು. ಡಿ.ಜಿ. ನನ್ನತ್ತ ತಿರುಗಿದರು.

"ವೇಣು, ಈ ನದಿಗೆ ಅಡ್ಡಲಾಗಿ ಒಂದು ಸೇತುವೆ ಕಟ್ಟಬಹುದು ಎಂದು ನಿನಗನ್ನಿಸುತ್ತದೇನು?"

ಅಗಲವಾಗಿ ವೇಗವಾಗಿ ರಭಸದಿಂದ ಹರಿಯುತ್ತಿದ್ದ , ಕಡಿದಾದ ದಂಡೆಯಿದ್ದ , ನದಿಯನ್ನು ನೋಡಿ, ಹೇಳಿದೆ. "ನಮ್ಮಂತಹ ಸಾಮಾನ್ಯರಿಗೆ, ಸರ್, ಅದು ಅಸಾಧ್ಯ..."

ತಮ್ಮ ವಿಶಿಷ್ಟವಾದ ರೀತಿಯಲ್ಲಿ ಡಿ.ಜಿ. ಹೇಳಿದರು, "ಯಾವುದೂ ಅಸಾಧ್ಯವಲ್ಲ..."

ನಮ್ಮ ಠಾಣ್ಯವನ್ನು ಸ್ಥಾಪಿಸಿದಾಗ ಪ್ರತಿಯೊಂದನ್ನೂ ಪೋನಿಯ ಮೇಲೆ ಹೇರಿಕೊಂಡು ತರಬೇಕಾಗಿತ್ತು ಅಥವಾ ತಲೆಹೊರೆಯಿಂದ ತರಬೇಕಾಗಿತ್ತು. ಸಿಂಜೋಲ್ ಮತ್ತು ಇತರ ಗ್ರಾಮಗಳು ಮಣಿಪುರದ ಮಿಕ್ಕ ಭಾಗಗಳಿಂದ ಸಂಪರ್ಕವೇ ಇಲ್ಲದಂತೆ ಕಡಿದು ಹೋಗಿದ್ದುವು. ಯಾವನೇ ಒಬ್ಬ ಸಿವಿಲ್ ಅಧಿಕಾರಿಯೂ ಅಲ್ಲಿಗೆ ಬಂದಿರದಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಅದರಿಂದ ಆಡಳಿತಾತ್ಮಕ ನಿಯಂತ್ರಣವೆನ್ನುವುದು ಇರಲೇ ಇಲ್ಲ. ಈ ಹಳ್ಳಿಗಳ ಅರ್ಥವ್ಯವಸ್ಥೆ ಸ್ಥಗಿತವಾಗಿಬಿಟ್ಟಿತ್ತು. ಏಕೆಂದರೆ ತಮ್ಮ ಉತ್ಪಾದನೆಗಳನ್ನು ಮಾರಾಟ ಮಾಡಲು ಅವರಿಗೆ ಅವಕಾಶವೇ ಇರಲಿಲ್ಲ. ಸಮೃದ್ಧವಾಗಿ ಕಿತ್ತಳೆ ಹಣ್ಣುಗಳು ಬೆಳೆಯುತ್ತಿದ್ದವು. ಆದರೆ ಕೊಯಿಲು ಮಾಡದೆ ಮರದ ಮೇಲೆ ಕೊಳೆತು ಹೋಗುತ್ತಿದ್ದವು. ಶಾಲೆಗಳು ಮತ್ತು ಆಸ್ಪತ್ರೆಗಳ ಹೆಸರನ್ನೇ ಕೇಳಿರಲಿಲ್ಲ.

ಜೀಪು ಹೋಗಬಲ್ಲ ದಾರಿಯನ್ನು ನಿರ್ಮಿಸುವ ಸಲಹೆಯನ್ನು ಮುಂದಿಟ್ಟಾಗ ಗ್ರಾಮಸ್ಥರು ಉತ್ಸಾಹದಿಂದ ಪ್ರತಿಸ್ಪಂದಿಸಿದ್ದರು. ಅವರ ಸಹಾಯದಿಂದ ತಿಂಗಾಟನಿಂದ ಸಿಂಜೋಲ್‌ವರೆಗೆ ೩೦ ಮೈಲಿ ಉದ್ದವಾದ ರಸ್ತೆಯನ್ನು ನಿರ್ಮಿಸಿದ್ದೆವು. ಮಾರ್ಕೋಟ್‌ನಲ್ಲಿನಂತೆಯೇ ಇಲ್ಲೂ ಅನೇಕ ಸಿವಿಲಿಯನ್ ಜೀಪುಗಳು ಓಡಾಡತೊಡಗಿದವು. ಮಣಿಪುರ ಸರಕಾರವು ಅಲ್ಲೊಂದು ಪ್ರೈಮರಿ ಶಾಲೆಯನ್ನೂ, ಒಂದು ಆಸ್ಪತ್ರೆಯನ್ನೂ ಸ್ಥಾಪಿಸಿತು. ಆದರೆ ನದಿಯದು, ಅದರಲ್ಲೂ ಮಳೆಗಾಲದಲ್ಲಿ , ದೊಡ್ಡ ಸಮಸ್ಯೆಯಾಗಿತ್ತು.

ಡಿ.ಜಿ.ಯವರು ಕೊನೆಯಲ್ಲಿ ಆಡಿದ ಮಾತು ನಮಗೆ ಸವಾಲಿನಂತಿತ್ತು. ತುಯಿವೈ ನದಿಗೆ ಸಿಂಜೋಲ್‌ನಲ್ಲಿ ಸೇತುವೆ ಹಾಕಲು ನಿರ್ಧರಿಸಿದೆವು. ಆದರೆ ಅದಷ್ಟೇ ಸಾಲುತ್ತಿರಲಿಲ್ಲ. ಸಿಂಜೋಲ್, ಮಾರ್ಕೋಟ್‌ಗಳನ್ನೂ ಇತರ ಒಳನಾಡ ಗ್ರಾಮಗಳನ್ನೂ ಕೂಡಿಸಲು ಕೊನೆಯ ಪಕ್ಷ ನಾಲ್ಕು ಸೇತುವೆಗಳ ಅಗತ್ಯವಿತ್ತು.

ಮೊದಲು ನನ್ನ ಜೆಸಿಓಗಳು, ಅಧಿಕಾರಿಗಳು ಮತ್ತಿತರ ಶ್ರೇಣಿಗಳ ಸಹೋದ್ಯೋಗಿಗಳೊಂದಿಗೆ ವಿಚಾರ ವಿನಿಮಯ ಮಾಡಿದೆ. ಅವರು ನನ್ನ ಪರವಾಗಿದ್ದರು. ಆಮೇಲೆ ಹಳ್ಳಿಗರೊಂದಿಗೆ ಚರ್ಚೆ ಮಾಡಿದೆವು.

"ನಾವು ಏನು ಮಾಡಬೇಕು ಎಂದಷ್ಟು ಹೇಳಿ, ನಾವು ಮಾಡುತ್ತೇವೆ" ಎಂದು ಅವರು ಮಾತು ಕೊಟ್ಟರು.

ನನ್ನ ಅಸಿಸ್ಟೆಂಟ್ ಕಮಾಂಡೆಂಟ್ ಎನ್.ಕೆ. ಶರ್ಮ ಅವರಿಗೆ ಈ ಕೆಲಸವನ್ನು ವಹಿಸಿದೆ. ಅವರು ನದಿಯ ಎರಡು ದಂಡೆಗಳನ್ನೂ ವಿವರವಾದ ಪರೀಕ್ಷೆಗೊಳಪಡಿಸಿದರು. ಏಪ್ರಿಲ್ ಹತ್ತರಂದು ಎಲ್ಲಾ ಸೇತುವೆಗಳ ನಿರ್ಮಾಣಕಾರ್ಯವು ಆರಂಭವಾಯಿತು.

ಭಾರೀ ಮರಗಳನ್ನು ಕಡಿದು, ಸವರಿದೆವು. ಸಾಗಿಸಲು ಬಹು ಕಷ್ಟವಾದ ಪ್ರದೇಶದಲ್ಲಿ ದಟ್ಟವಾದ ಕಾಡಿನಲ್ಲಿ ನದಿಯ ಅಂಚಿನವರೆಗೂ ಸಾಗಿಸಿಕೊಂಡು ತರಬೇಕಾಗಿದ್ದಿತು. ಇದಕ್ಕೆ ಹಲವು ದಿನಗಳು ಹಿಡಿದವು. ಜೊತೆಗೆ ಸೊಳ್ಳೆಗಳು ಮತ್ತು ಜಿಗಣೆಗಳೊಂದಿಗೆ ಬೇರೆ ಹೋರಾಡಬೇಕಾಗಿತ್ತು.

ಆಮೇಲೆ ಕಲ್ಲುಗಳು ತುಂಬಿದ್ದ ನದಿಯಲ್ಲಿ ಗುಂಡಿ ತೋಡಿ ಕಂಬಗಳನ್ನು ನಿಲ್ಲಿಸುವ ಅತ್ಯಂತ ಕಷ್ಟದ ಕೆಲಸ ಪ್ರಾರಂಭವಾಯಿತು. ಗುಂಡಿ ತೋಡುವ ಮೊದಲು ನೀರಿನ ಹರಿವನ್ನು ನಿಲ್ಲಿಸಿ, ಬೇರೆ ದಿಕ್ಕಿಗೆ ತಿರುಗಿಸಬೇಕಾಗಿತ್ತು , ಅಲ್ಲದೆ ನಮ್ಮ ಈ ದುರ್ವರ್ತನೆಗೆ ನದಿಯು ಸ್ಪಂದಿಸಿತು. ನಾವು ಅಗೆಯುತ್ತಿದ್ದಂತೆ ನೀರು ನೆಲದಿಂದ ಒಸರಿ ಕೊಳ್ಳುತ್ತಿತ್ತು. ಆದರೆ ಸೈನಿಕರೂ ಗ್ರಾಮಸ್ಥರೂ ನದಿಯ ಇಷ್ಟಾನಿಷ್ಟಗಳಿಗೆ ಸೊಪ್ಪುಹಾಕುವವರಾಗಿರಲಿಲ್ಲ. ಎಷ್ಟೋ ವೇಳೆ ಆಹಾರ ನಿದ್ರೆಗಳನ್ನು ಮರೆತು ಕೆಲಸವನ್ನು ಮುಗಿಸಲು ದುಡಿಯುತ್ತಿದ್ದರು.

ನಾನು ಆಗಾಗ ಅವರನ್ನು ಸಂಧಿಸುತ್ತಾ ಸಲಹೆ ಕೊಡುತ್ತಿದ್ದೆ, ಉತ್ಸಾಹ ತುಂಬುತ್ತಿದ್ದೆ. ನಾವು ವೇಗವಾಗಿ ಮುಂದುವರಿಸಿದೆವು. ಅನತಿ ಕಾಲದಲ್ಲೇ ಕಂಬಗಳು ನಿಂತವು. ಇನ್ನು ಉಳಿದಿದ್ದುದು ಸಮಯದ ಪ್ರಶ್ನೆ ಅಷ್ಟೆ. ಜುಲೈ ೭ನೆಯ ತಾರೀಖು, ಪ್ರಾರಂಭ ಮಾಡಿದ ಕೇವಲ ಮೂರು ತಿಂಗಳಲ್ಲಿ ತುಯಿಲೈ ನದಿಗೆ ನಾಲ್ಕು ಸೇತುವೆಗಳನ್ನು ಕಟ್ಟಿ ಮುಗಿಸಿದ್ದೆವು.

ಇವುಗಳಲ್ಲಿ ತುಂಬ ಚಿಕ್ಕದು ೮೦ ಅಡಿ ಉದ್ದ, ಎಂಟು ಅಡಿ ಅಂಕಣಗಳಿದ್ದುದು; ಅತ್ಯಂತ ದೊಡ್ಡದು ೨೪೦ ಅಡಿ ಉದ್ದ, ೨೧ ಅಡಿಯ ಅಂಕಣಗಳಿದ್ದುದು. ಪ್ರತಿಯೊಂದು ಸೇತುವೆಯೂ ೧೧-೧೨ ಅಡಿ ಅಗಲವಾಗಿದ್ದಿತು. ಸುಮಾರು ೨೨ ಅಡಿ ಎತ್ತರವಾಗಿದ್ದಿತು. ಅಸಾಧ್ಯ ವಾಗಿದ್ದ ಕೆಲಸವನ್ನು ಸಾಧ್ಯಮಾಡಿದ್ದೆವು.

ಜುಲೈ ೧೧ರಂದು ಮುಖ್ಯಮಂತ್ರಿ ಅಲಿಮುದ್ದೀನ್ ಅವರು ಅಭಿವೃದ್ಧಿ ಸಚಿವ ಡಿಂಗ್ಲಿಯಾನಾ ಮತ್ತು ಐಜಿ ಮದನ ಗೋಪಾಲ್ ಸಿಂಗ್ ಅವರೊಂದಿಗೆ ಬಂದು ಸಿಂಜೋಲ್‌ನಲ್ಲಿ ಸೇತುವೆಯನ್ನು ಉದ್ಘಾಟಿಸಿದರು. ಡಿಜಿ ಅವರು ಬಂದು ತಾವು ಆಡಿದ ಮಾತು ಕಾರ್ಯರೂಪಕ್ಕೆ ಬಂದುದನ್ನು ನೋಡಬೇಕಾಗಿತ್ತು ಎಂದು ನಾನು ಆಸೆಪಟ್ಟೆ.

ನಮ್ಮ ಕೆಲಸದ ಪೂರ್ಣ ವಿವರಗಳ ವರದಿಯನ್ನು ರುಸ್ತುಂ ಜೀ ಅವರಿಗೆ ಕಳಿಸಿಕೊಟ್ಟೆ. ನಾವು ನಿಜವಾಗಿಯೂ ಸಾಧಿಸಿಬಿಟ್ಟಿದ್ದನ್ನು ನೋಡಿ ಅವರಿಗೆ ಆಶ್ಚರ್ಯವಾಯಿತು, ತುಂಬಾ ಸಂತೋಷವಾಯಿತು. ಅವರಿಂದ ಗೃಹಕಾರ್ಯದರ್ಶಿಯವರಿಗೆ ವಿಷಯ ತಿಳಿಯಿತು. ೯೬ ಬಿ.ಎಸ್.ಎಫ್. ಸಾಧಿಸಿದುದನ್ನು ಮನಸಾರೆ ಪ್ರಶಂಸಿಸಿ ಅವರು ಒಂದು ಸೊಗಸಾದ ಪತ್ರ ಬರೆದರು. ಆಮೇಲೆ ನನಗೆ ತಿಳಿದುಬಂದ ವಿಚಾರ, ಮುಖ್ಯಮಂತ್ರಿಗಳೇ ನಮ್ಮ ಸಾಧನೆಯನ್ನು ಕುರಿತು ಗೃಹ ಸಚಿವಾಲಯ ದೊಂದಿಗೆ ಮಾತನಾಡಿದ್ದರು ಎಂಬುದು.

ನನಗೆ ಮುಖ್ಯಮಂತ್ರಿಯವರಿಂದಲೇ ಪತ್ರ ಬಂದಿತು. "ನೀವು ನಿರ್ಮಿಸಿದ ಸೇತುವೆಯನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ. ಹಾಗೆಯೇ ನೀವು ಆದಿವಾಸಿಗಳಿಗೆ ಕೈಮಗ್ಗಗಳನ್ನೂ ಮತ್ತು ಹೊಲಿಗೆ ಯಂತ್ರಗಳನ್ನೂ ಹಂಚಿರುವುದನ್ನೂ ಅವರ ಅಭಿವೃದ್ಧಿಯಲ್ಲಿ ಅಪಾರವಾದ ಕಾಳಜಿ ಇಟ್ಟುಕೊಂಡಿರುವುದನ್ನೂ ನೋಡಿ ಸಂತೋಷ ಪಟ್ಟಿದ್ದೇನೆ. ಅವು ಎಷ್ಟು ಪ್ರಭಾವಶಾಲಿಯಾಗಿವೆಯೆಂದರೆ, ಮಣಿಪುರದಲ್ಲಿರುವ ಭದ್ರತಾ ಪಡೆಯ ಇತರ ಘಟಕಗಳಿಗೆ, ಇಂಥವೇ ಕಲ್ಯಾಣಕಾರ್ಯಗಳನ್ನು ಕೈಗೊಳ್ಳುವ ಸಲುವಾಗಿ ಧನಸಹಾಯ ಮಾಡಬೇಕೆಂದು ಯೋಚಿಸುತ್ತಿದ್ದೇನೆ."

ನಾವು ಹಾಕಿಕೊಂಡ ಯೋಜನೆ ಇನ್ನೂ ದೊಡ್ಡ ಕೆಲಸಕ್ಕೆ ಎಡೆಗೊಟ್ಟುದ್ದನ್ನು ನೋಡಿ ನನಗೆ ಸಂತೋಷವಾಯಿತು. ಈ ಸುಂದರವಾದ, ಆದರೆ ಹಿಂದುಳಿದ ರಾಜ್ಯದ ದೂರದ ಮೂಲೆಗಳಿಗೂ ಅಭಿವೃದ್ಧಿ , ವಿದ್ಯಾಭ್ಯಾಸಗಳು ತಲುಪಬೇಕಾದರೆ ಇಂತಹ ಪ್ರಯತ್ನ ಗಳು ಬೃಹತ್ ಪ್ರಮಾಣದಲ್ಲಿ ನಡೆಯಬೇಕು. ಆಗ ಅಲ್ಲಿಯ ಕ್ಷೋಭೆಯ ಸ್ಥಿತಿ ತಣಿಯುತ್ತದೆ.

೨೮. ೨ನೆಯ ನಾಗಾಬ್ರಿಗೇಡ್‌ಗಾಗಿ ಹುಡುಕಾಟ

೧೯೭೩ರ ಪ್ರಾರಂಭದಲ್ಲಿ ನನ್ನನ್ನು ನಾಗಾಲ್ಯಾಂಡ್‌ನಲ್ಲಿ ೯೯ ಬಿ.ಎಸ್.ಎಫ್.ಗೆ ನೇಮಿಸಿದರು. ಸಾವಿತ್ರಿ ಮತ್ತು ಹೇಮಾರಿಗಾಗಿ ಇಂಫಾಲದಲ್ಲೊಂದು, ನನಗೆ ಕೊಹಿಮಾದ ಬಳಿ ಲೋಂಗ್‌ನಾಕ್‌ನಲ್ಲಿ ಇನ್ನೊಂದು – ಹೀಗೆ ಎರಡು ಸಂಸಾರಗಳನ್ನು ನಿರ್ವಹಿಸುವುದು ಕಾರ್ಯಸಾಧ್ಯವಲ್ಲ ಎನ್ನಿಸಿತು. ಹೇಮಾ ಹತ್ತನೆಯ ತರಗತಿಯಲ್ಲಿದ್ದಳು. ಅದನ್ನು ಮುಗಿಸಿ ಶಾಲೆಯ ಕೊನೆಯ ವರ್ಷದ ಓದಿಗಾಗಿ ಮದರಾಸಿಗೆ ಹೋದಳು. ನನ್ನ ತಮ್ಮ ರಾಧಾಕೃಷ್ಣ ಪ್ರಾಧ್ಯಾಪಕನಾಗಿದ್ದ ಮದರಾಸಿನ ಐಐಟಿಯಲ್ಲಿ ಒಂದು ಕೇಂದ್ರೀಯ ಶಾಲೆಯೂ ಇತ್ತು. ಅಲ್ಲಿ ಅವಳಿಗೆ ಪ್ರವೇಶ ಸಿಕ್ಕಿತು. ಅವಳಿಗೂ ಒಳ್ಳೆಯದೇ ಆಯಿತು. ಮಣಿಪುರದಲ್ಲಿ ವಾತಾವರಣ ಸ್ಪರ್ಧಾತ್ಮಕ ವಾಗಿರಲಿಲ್ಲ. ಆದರೆ ಐಐಟಿಯ ಕೇಂದ್ರೀಯ ಶಾಲೆಯಲ್ಲಿ ಅವಳು ಅತ್ಯಂತ ಪ್ರತಿಭಾವಂತರಾದ ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸ ಬೇಕಾಗಿತ್ತು. ಉತ್ತಮ ಓದಿಕೆಯ ಅಭ್ಯಾಸ ಬೆಳೆಸಿಕೊಳ್ಳಲು ಅವಕಾಶವಿತ್ತು. ಅಲ್ಲದೆ ಬೆಂಗಳೂರಿನ ಕಾಲೇಜುಗಳಿಗೆ ಮುಂದೆ ಪ್ರವೇಶ ಕೋರಿ ಅರ್ಜಿ ಹಾಕಬಹುದಾಗಿತ್ತು. ಏಕೆಂದರೆ ನಾನು ಅಲ್ಲಿಗೆ ವರ್ಗ ಮಾಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಮೇ ತಿಂಗಳಲ್ಲಿ ಹೇಮಾ

ಮದರಾಸಿಗೆ ಹೋದಳು. ಸಾವಿತ್ರಿ ನನ್ನ ಬಳಿಗೆ ಲೋಂಗ್‌ನಾಕ್‌ಗೆ ಬಂದಳು.

೯೯ ಬಿ.ಎಸ್.ಎಫ್. ಸಾಮಾನ್ಯ ಬೆಟಾಲಿಯನ್ ಅಲ್ಲ. ಅದು ಸಂಪೂರ್ಣವಾಗಿ, ಮೊದಲು ಭೂಗತ ಚಟುವಟಿಕೆಗಳಲ್ಲಿ ನಿರತರಾಗಿದ್ದ ನಾಗಾ ಹುಡುಗರಿಂದಲೇ ರೂಪುಗೊಂಡಿತ್ತು. ಪ್ರದೇಶವನ್ನೂ, ಜನರನ್ನೂ ಚೆನ್ನಾಗಿಬಲ್ಲ ಮತ್ತು ಹಿಂದಿನ ಜೊತೆಗಾರರ ಗೆರಿಲ್ಲಾ ಯುದ್ಧತಂತ್ರಗಳನ್ನೂ ಅರಿತಿದ್ದ ಹುಡುಗರು ಅವರು. ಇದರಿಂದ ಕೇಂದ್ರ ಏಜೆನ್ಸಿಗಳು ಸಂಗ್ರಹಿಸಿಕೊಡುತ್ತಿದ್ದ ಬೇಹು ಮಾಹಿತಿಯನ್ನು ಅವಲಂಬಿಸುವುದು ಬಹುಮಟ್ಟಿಗೆ ಕಡಮೆಯಾಗುತ್ತಿತ್ತು. ಅವರು ಕೊಡುತ್ತಿದ್ದ ಮಾಹಿತಿ ಕರಾರುವಾಕ್ಕಾಗಿರುತ್ತಿರಲಿಲ್ಲ ಅಥವಾ ತಡವಾಗಿ ತಲುಪುತ್ತಿದ್ದಿತು. ಸಕಾಲಕ್ಕೆ ಬೇಹು ಸಿಕ್ಕುತ್ತಿದ್ದರೆ ಎಷ್ಟೋ ಹೊಂಚುಗಳನ್ನು, ದಾಳಿಗಳನ್ನು ನಾವು ನಿವಾರಿಸಿಕೊಳ್ಳಬಹುದಾಗಿತ್ತು.

ಸ್ಥಳೀಯ ನಾಗಾ ಮುಖಂಡರ ನೆರವಿನಿಂದ ಪುನರ್ವಸತಿಗೊಂಡ ಅನೇಕ ನಾಗಾ ತರುಣರನ್ನು ಗುರುತಿಸಿ ಅವರಿಗೆ ಆಕರ್ಷಕ ವೇತನಗಳನ್ನೂ ಭತ್ಯೆಗಳನ್ನೂ ನೀಡಿ ಬೆಟಾಲಿಯನ್ನಿಗೆ ಸೇರಿಸಲಾಯಿತು. ಪ್ರಾಯೋಗಿಕವಾಗಿ ಇದನ್ನು ರಚಿಸುವುದರಿಂದ '೯೯ ಆಕ್ಸಿಲರಿ ಬೆಟಾಲಿಯನ್ ಬಿ.ಎಸ್.ಎಫ್.' ಎಂದು ಕರೆಯಲಾಯಿತು.

ಈ ಬೆಟಾಲಿಯನ್ನಿನ ಕಮಾಂಡಿಂಗ್ ಆಫೀಸರ್ ಆಗಿದ್ದವನು ಒಬ್ಬ ತರುಣ ಅಧಿಕಾರಿ. ಅದನ್ನೊಂದು ಯುದ್ಧನಿಪುಣ ಪಡೆಯನ್ನಾಗಿ ರೂಪಿಸುವುದರಲ್ಲಿ ಅವನು ಅಷ್ಟಾಗಿ ಯಶಸ್ವಿಯಾಗಿರಲಿಲ್ಲ. ಅವನ ಅಧಿಕಾರಾವಧಿಯ ನಡುಭಾಗದಲ್ಲಿ, ಘಟಕವನ್ನು ವಹಿಸಿಕೊಂಡು ಅದನ್ನೊಂದು ಸಮರ್ಪಕ ಪಡೆಯನ್ನಾಗಿ ರಚಿಸಲು ನನ್ನನ್ನು ನೇಮಿಸಲಾಯಿತು. ಹೀಗೆ ನಾನು ೯೬ ಬಿ.ಎಸ್.ಎಫ್. ಅನ್ನೂ ಚುರಚಾಂದ್‌ಪುರವನ್ನೂ ಬಿಟ್ಟು ಹೊಸ ಚಾರ್ಜು ಪಡೆದೆ.

ನನ್ನ ಸುದೈವ. ಒಳ್ಳೆಯ ಅಧಿಕಾರಿಗಳ ಒಂದು ತಂಡವೇ ಇಲ್ಲಿ ನನಗೆ ದೊರಕಿದ್ದಿತು. ಎಲ್ಲರೂ ಒಟ್ಟುಗೂಡಿ ಈ ಬೆಟಾಲಿಯನ್ನನ್ನು ಸರಿಯಾಗಿ ಕಟ್ಟಿ , ತರಬೇತಿ ಕೊಡುವ ಕೆಲಸದಲ್ಲಿ ತೊಡಗಿದೆವು. ಸೇನೆ ಹೊಂಚುಹಾಕುವುದು, ವೈರಿಯ ಹೊಂಚನ್ನು ಮುರಿಯುವುದು ಇವುಗಳಲ್ಲಿ ಕಠಿಣವಾದ ತರಬೇತಿ ಕೊಟ್ಟೆವು. ಅಧಿಕಾರಿಗಳು, ಜೆಸಿಓಗಳು ಮತ್ತು ತರುಣರಲ್ಲಿ , ನಿಷ್ಠೆ ಮತ್ತು ಸಹಯೋಗದ ಭಾವನೆ ಬಲಿಯುವಂತೆ ಖಚಿತಪಡಿಸಿಕೊಂಡೆ. ಪಡೆಗೆ ಭರ್ತಿ ಮಾಡಿಕೊಳ್ಳುವಾಗ ತಮ್ಮನ್ನು ಅಧಿಕಾರಿಗಳೆಂದು ಕರೆದುಕೊಂಡ ಕೆಲವು ಉಗ್ರಗಾಮಿಗಳನ್ನು ಆರಿಸಿಕೊಂಡು ಅವರನ್ನು ಜೆ.ಸಿ.ಓ.ಗಳನ್ನಾಗಿ ಮಾಡಿದೆವು. ಬೇಹುಗಾರಿಕೆಯದೇ ದೊಡ್ಡ ಸಮಸ್ಯೆಯಾಗಿದ್ದುದರಿಂದ ಸುಮಾರು ೨೦೦ ಜನ ತರುಣರನ್ನು ಬೇಹುಸಂಗ್ರಹಣೆಯ ಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳುವಂತೆ ತಯಾರು ಮಾಡಿದೆ. ಅವರು ಉದ್ದವಾಗಿ ಕೂದಲು ಬಿಟ್ಟು , ಸಾಮಾನ್ಯ ನಾಗರಿಕರಂತೆ ಉಡುಪು ಧರಿಸುತ್ತಿದ್ದರು. ಬಹುತೇಕ ಅವರು ತಮ್ಮ ಹಳ್ಳಿಗಳಲ್ಲೇ ಇದ್ದು ಉಗ್ರಗಾಮಿ ಚಟುವಟಿಕೆಗಳ ಬಗೆಗೆ ಮಾಹಿತಿಯನ್ನೂ , ಅವರ ಯೋಜನೆಗಳನ್ನೂ ರಹಸ್ಯವಾಗಿ ತಿಳಿದುಕೊಂಡು ಬೆಟಾಲಿಯನ್ ಕೇಂದ್ರ ಕಚೇರಿಗೆ , ಅದು ಎಲ್ಲೇ ಇದ್ದಿರಲಿ, ರವಾನಿಸುವುದು ಅವರ ಕೆಲಸವಾಗಿತ್ತು. ಅವರ ವೇತನವನ್ನು ಪ್ಯಾಕೆಟುಗಳಲ್ಲಿ ಅವರ ಮನೆಗಳಿಗೆ ರವಾನಿಸಲಾಗುತ್ತಿತ್ತು.

ನನ್ನನ್ನು ಕಾಡುತ್ತಿದ್ದ ದೊಡ್ಡ ಕಳವಳ, ಯಾರಾದರೂ ಒಬ್ಬ ತರುಣನು ತನಗೆ ಕೊಟ್ಟಿರುವ ಆಯುಧದ ಸಮೇತ ಓಡಿಬಿಟ್ಟರೆ ಗತಿಯೇನು ಎನ್ನುವುದು. 'ನಿಮ್ಮ ಪ್ರಾಣವನ್ನು ಬೇಕಾದರೂ ಕಳೆದು ಕೊಳ್ಳಬಹುದು, ಆಯುಧವನ್ನಲ್ಲ' ಎಂಬುದು ಸೈನ್ಯದಲ್ಲಿ ನಮಗೆ ಕಲಿಸಿಕೊಟ್ಟಿರುವ ಪಾಠ. ಯಾವುದೇ ಸಮಯದಲ್ಲೂ ಒಂದೊಂದು ಆಯುಧ, ಒಂದೊಂದು ಸುತ್ತು ಗುಂಡಿಗೂ ನಾವು ಲೆಕ್ಕ ಕೊಡ ಬೇಕಾಗುತ್ತದೆ. ಒಬ್ಬ ಅಧಿಕಾರಿಯಾಗಲೀ ಯೋಧನಾಗಲೀ ಮಾಡಬಹುದಾದ ಅತಿ ದೊಡ್ಡ ಅಪರಾಧವೆಂದರೆ ತನ್ನ ಅಯುಧವನ್ನು ಕಳೆದುಕೊಳ್ಳುವುದು. ಒಂದು ರಿವಾಲ್ವರ್ ಅನ್ನು ಎಲ್ಲೋ ಇಟ್ಟು ಮರೆತು ಅಥವಾ ಒಂದು ರೈಫಲ್ ಕಳೆದು ತಮ್ಮ ವೃತ್ತಿಜೀವನವನ್ನೇ ಕಳೆದುಕೊಂಡವರಿದ್ದಾರೆ.

ಆದರೆ ನಮ್ಮ ಪಡೆ ಎಷ್ಟು ಬಿಗಿಯಾಗಿ ರಚಿತವಾಯಿತೆಂದರೆ, ಇದೊಂದು ಗಂಭೀರ ಸಮಸ್ಯೆಯೇ ಆಗಲಿಲ್ಲ. ಆಯುಧದೊಂದಿಗೆ ಓಡಿಹೋದ ಒಂದೇ ಒಂದು ಘಟನೆ ನಡೆಯಿತು. ಠಾಣ್ಯವೊಂದರಲ್ಲಿ ಒಬ್ಬ ಹುಡುಗನು ಸಂಜೆಯ ಸಮಯದಲ್ಲಿ ತನ್ನ ಸ್ಟೇನ್‌ಗನ್ ಹಾಗೂ ಒಂದಿಷ್ಟು ೯ ಎಂ.ಎಂ. ಗುಂಡುಗಳ ಸಮೇತ ಓಡಿ ಹೋದನು. ಠಾಣ್ಯದ ಕಮಾಂಡರನು ನನ್ನೊಂದಿಗೆ ವೈರ್‌ಲೆಸ್‌ನಲ್ಲಿ ಮಾತನಾಡಿ ಇದನ್ನು ತಿಳಿಸಿದನು. ನಾನು ತಕ್ಷಣವೇ ಅವನನ್ನು ಬಲ್ಲ ಕೆಲವು ತರುಣರನ್ನು ಕರೆದು, ಅವನನ್ನು ಹಳ್ಳಿಗೆ ಹೋಗುವ ದಾರಿಯಲ್ಲಿ ನಡುವೆಯೇ ಹಿಡಿಯಬೇಕೆಂದು ಆಜ್ಞೆಮಾಡಿದೆ. ರಾತ್ರಿ ಸರಿಹೊತ್ತಿನ ಮೇಲೆ ಅವನನ್ನು ಹಿಡಿದು ನನ್ನ ಬಳಿಗೆ ಕರೆತಂದರು. ತಕ್ಷಣವೇ ಅಲ್ಲೇ ಒಂದು ಸಂಕ್ಷಿಪ್ತ ಕೋರ್ಟ್ ಮಾರ್ಷಲ್ ನಡೆಸಿ ಅವನಿಗೆ ಒಂದು ವರ್ಷ ಕಠಿಣ ಸಜೆಯ ಶಿಕ್ಷೆ ವಿಧಿಸಿದೆ. ೨೫ ಮೈಲು ದೂರದಲ್ಲಿದ್ದ ಜೋರ್ಹಾಟ್‌ನ ಸಿವಿಲಿಯನ್ ಜೈಲಿಗೆ ಕಳಿಸಿದೆ. ಬೆಳಗ್ಗೆ ೧೧ ಗಂಟೆ ವೇಳೆಗೆ ಅವನು ಜೈಲಿನಲ್ಲಿದ್ದನು. ಕೇಸು ಅಲ್ಲಿಗೆ ಮುಗಿಯಿತು ಎಂದು ನಾನು ಭಾವಿಸಿದೆ.

ಆ ಪ್ರದೇಶದಲ್ಲಿ ಕಾರ್ಯನಿರತವಾಗಿದ್ದ ಕೇಂದ್ರೀಯ ಗುಪ್ತಚಾರ ದಳವೊಂದು ಬಿರುಸಿನ ಕ್ರಮ ಕೈಗೊಂಡಿತು. ೯೯ ಬಿ.ಎಸ್.ಎಫ್ ನಿಂದ ಒಬ್ಬ ಸೈನಿಕನು ತನ್ನ ಆಯುಧ ಮತ್ತು ಮದ್ದುಗುಂಡುಗಳ ಸಮೇತ ಪರಾರಿಯಾಗಿದ್ದಾನೆ ಎಂದು ದೆಹಲಿಗೆ ತುರ್ತು ಸಂದೇಶ ಕಳಿಸಿತು. ಗೃಹ ಸಚಿವಾಲಯವು ರುಸ್ತುಂಜೀ ಅವರಿಂದ ಈ ವಿಷಯವಾಗಿ ವಿವರಣೆ ಕೇಳಿತು. ರುಸ್ತುಂಜೀ ನನಗೆ ತುರ್ತು ಸಂದೇಶ ಕಳಿಸಿದರು: ಏನು ನಡೆಯುತ್ತಿದೆ ? ನನಗೆ ಯಾವ ಮಾಹಿತಿಯನ್ನೂ ಏಕೆ ನೀಡಿಲ್ಲ? ಓಡಿ

ಹೋದವನ ಬಗೆಗೆ ಏನು ಮಾಡಲಾಗಿದೆ ? ಈ ಘಟನೆ ಸಂಭವಿಸಲು ನೀನು ಅವಕಾಶ ಕೊಟ್ಟಿದ್ದೇಕೆ ? ಅವನನ್ನು ಹಿಡಿಯಲಾಗಿದೆಯೇ ಇಲ್ಲವೇ ?

ನಾನು ಒಡನೆಯೆ ಅವರಿಗೆ ಸಮಾಧಾನಕರವಾದ ಉತ್ತರ ರವಾನಿಸಿದೆ-೨೪ ಗಂಟೆಗಳಿಗಿಂತೂ ಮೊದಲೇ ಆ ತರುಣನನ್ನು ಬೆನ್ನಟ್ಟಿ , ಹಿಡಿದು, ಕೋರ್ಟು ಮಾರ್ಷಲ್ ಮಾಡಿ ಶಿಕ್ಷೆ ವಿಧಿಸಲಾಗಿದೆ. ಅವನೀಗ ಜೋರ್ಹಾಟ್ ಜೈಲಿನಲ್ಲಿದ್ದಾನೆ. ಸ್ಟೆನ್‌ಗನ್ ಮತ್ತು ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಎಲ್ಲ ಲೆಕ್ಕವೂ ಸರಿಯಾಗಿದೆ ಎಂಬುದಾಗಿ.

ರುಸ್ತುಮ್ ಜೀ ಅವರಿಗೆ ಆಶ್ಚರ್ಯವಾಯಿತು, ಸಮಾಧಾನ ವಾಯಿತು. ಬೇಹುಗಾರಿಕೆ ದಳವು ೯೯ ಬಿ.ಎಸ್.ಎಫ್.ನೊಂದಿಗೆ ಸರಿಗಟ್ಟಲು ತಕ್ಕ ವೇಗದಲ್ಲಿಲ್ಲ ಎಂದು ಗೃಹಸಚಿವಾಲಯಕ್ಕೆ ತಿಳಿಸಲು ಅವರಿಗೆ ಸಂತೋಷವೂ ಆಯಿತು.

ಲೋಂಗ್‌ನಾಕ್, ಬೆಟಾಲಿಯನ್ನಿನ ಕೇಂದ್ರಸ್ಥಳ. ಆದರೆ ಕೊಹಿಮಾದ ಬಳಿ ಛಢಿಯಾದಲ್ಲಿ ಮೂರು ಕಂಪನಿಗಳೂ ಇದ್ದವು. ನಾಗಾಲ್ಯಾಂಡ್-ಅಸ್ಸಾಂ ಗಡಿಯಲ್ಲಿದ್ದುದರಿಂದ ಭಾರತ-ಬರ್ಮಾ ಗಡಿಗಳಲ್ಲೂ ಕೆಲವು ಠಾಣ್ಯಗಳನ್ನು ಸ್ಥಾಪಿಸಿ ನಿಯಂತ್ರಿಸುತ್ತಿದ್ದೆವು. ಈ ಅವಧಿಯಲ್ಲಿ ಉಗ್ರಗಾಮಿಗಳ ವಿರುದ್ಧವಾಗಿ ನೂರಕ್ಕೂ ಹೆಚ್ಚು ಕಾರ್ಯಾಚರಣೆಗಳನ್ನು ನಡೆಸಿದೆವು. ಹಲವು ತುಂಬಾ ಚಿಕ್ಕವು . ಕೆಲವು ಅನೇಕ ಕಂಪನಿಗಳನ್ನು ಒಳಗೊಳ್ಳುವಷ್ಟು ದೊಡ್ಡ ಕಾರ್ಯಾಚರಣೆಗಳು.

ಕೆಲವೇ ತಿಂಗಳಲ್ಲಿ ಹಳ್ಳಿಗಳ ನನ್ನ ಮಾಹಿತಿ ಜಾಲವು ವ್ಯವಸ್ಥಿತವಾಗಿ ಸ್ಥಾಪನೆಗೊಂಡಿತು. ಒಂದು ದಿನ ಕೊಹಿಮಾದಿಂದ ಸುಮಾರು ೨೫ ಮೈಲು ದೂರದ ಒಂದು ಕಾಡಿನಲ್ಲಿ ಉಗ್ರಗಾಮಿಗಳ ತಂಡವೊಂದು ಚಟುವಟಿಕೆಯಲ್ಲಿದೆ ಎಂಬ ಸುದ್ದಿ ನನಗೆ ದೊರಕಿತು. ನನ್ನ ಡೆಪ್ಯುಟಿ ಕಮಾಂಡರರಲ್ಲೊಬ್ಬರಾದ ಆರ್.ಎಂ. ಶರ್ಮಾ ಅವರಿಗೆ , ಅಲ್ಲಿಗೆ ದಾಳಿ ಮಾಡಿ ಆ ಪ್ರದೇಶವನ್ನೆಲ್ಲ ಶೋಧಿಸಲು ಹೇಳಿದೆ. ಅವರು ತಂಡದೊಂದಿಗೆ ಸಂಜೆ ೭ ಗಂಟೆ ಸಮಯಕ್ಕೆ ಚಡೀಮಾ ಬಿಟ್ಟು ಕಾಲ್ನಡಿಗೆಯಿಂದ ಹೊರಟರು. ಸುಮಾರು ಬೆಳಗಿನ ಜಾವ ಒಂದು ಗಂಟೆ ವೇಳೆಗೆ ಅನುಮಾನವಿದ್ದ ಸ್ಥಳಕ್ಕೆ ತಲುಪಿದರು. ಆದರೆ ಆ ವೇಳೆಗೆ ತುಂಬಾ ತಡವಾಗಿತ್ತು. ಸುಮಾರು ಒಂದು ಗಂಟೆಯಷ್ಟು ಮೊದಲು ಉಗ್ರಗಾಮಿಗಳು ಆ ಸ್ಥಳದಿಂದ ಹೊರಟುಹೋಗಿದ್ದರು. ಒಂದು ಸಣ್ಣ ನದಿಯ ದಂಡೆಯ ಮೇಲೆ ಎರಡು ಪ್ಲಟೂನ್‌ನಷ್ಟು ಜನರು ಚೆನ್ನಾಗಿ ಮರೆಮುಸುಕು ಹಾಕಿದ ಶಿಬಿರವನ್ನು ಹೂಡಿಕೊಂಡಿದ್ದರು. ಇದು ನಾವು ಭಾವಿಸಿಕೊಂಡಿದ್ದಕ್ಕಿಂತಲೂ ದೊಡ್ಡ ಪಡೆಯಾಗಿದ್ದಂತೆ ತೋರಿತು, ಸುವ್ಯವಸ್ಥಿತವಾಗಿದ್ದಂತೆಯೂ ತೋರಿತು. ನಾವು ಕೆಲವು ಸುದ್ದಿಗಳನ್ನು ಕೇಳಿ ತಿಳಿದುಕೊಂಡಿದ್ದ ೨ನೇ ಆರ್ಮಿ ಬ್ರಿಗೇಡ್ ಇದೇ ಆಗಿದ್ದಿರ ಬಹುದೇ ಎಂದು ನನಗೆ ಆಶ್ಚರ್ಯವಾಯಿತು.

ಕೆಲ ದಿನಗಳ ಅನಂತರ ಒಂದು ಹಳ್ಳಿಯ ಮಿಡ್‌ವೈಫ್ ಒಬ್ಬಳು ಒಂದು ಮಾಹಿತಿ ತಂದುಕೊಟ್ಟಳು. 'ಒಬ್ಬ ಭೂಗತ ಅಧಿಕಾರಿಗೆ ಹಾವು ಕಚ್ಚಿತ್ತು. ವೈದ್ಯಕೀಯ ಚಿಕಿತ್ಸೆಯನ್ನು ಪಡೆಯಲು ಅವನು ಪ್ರಯತ್ನಿಸಿದ್ದನು. ಆಕೆಯು ಆ ಹಳ್ಳಿಯಲ್ಲಿ ಸುದ್ದಿ ಸಂಗ್ರಹಿಸಲು ನಾವು ನೇಮಿಸಿದ್ದ ನಮ್ಮ ಸೈನಿಕನೊಬ್ಬನ ಬಂಧು. ಭೂಗತ ೨ನೇ ನಾಗಾ ಆರ್ಮಿ ಬ್ರಿಗೇಡ್ ಆ ಪ್ರದೇಶದಲ್ಲಿ ಚಮಕ್‌ಡಿಮಾದ ಬಳಿ ಕಾರ್ಯ ನಿರತವಾಗಿದೆ' ಎಂಬ ಸುದ್ದಿಯನ್ನು ಅವಳು ನಮಗೆ ಕೊಟ್ಟಳು.

ಅದು ಪರಿಶೋಧಿಸಲು ತಕ್ಕ ಕಾಲ ಎಂದು ನನಗೆ ಅನ್ನಿಸಿತು. ಮಿಡ್‌ವೈಫ್ ಹಾಗೂ ಆ ಹುಡುಗನನ್ನು ನಮ್ಮ ಮಾರ್ಗದರ್ಶಿಗಳನ್ನಾಗಿ ಇಟ್ಟುಕೊಂಡು ಆ ಬ್ರಿಗೇಡು ಹಾಗೂ ಹಾವು ಕಚ್ಚಿದ ಅದರ ಅಧಿಕಾರಿ ಇವರ ಶೋಧ ಮಾಡಲು ಹೊರಟೆವು. ನಮ್ಮ ಸೇನೆ ಒಂದು ಕಂಪನಿಯಷ್ಟಿತ್ತು. ನನ್ನ ಅಸಿಸ್ಟೆಂಟ್ ಕಮಾಂಡೆಂಟ್ ಎಸ್.ಎಸ್. ರಾವತ್ ನಮ್ಮ ಜೊತೆಗಿದ್ದರು. ಸಮಯ ಪೋಲಾಗಲು ಬಿಡದೆ ಸಾಧ್ಯವಾದಷ್ಟು ದೂರ ವಾಹನಗಳಲ್ಲಿ ಹೋಗಿ , ಆಮೇಲೆ ನಡೆದೆವು. ದಾರಿಯಲ್ಲಿ ಇನ್ನೊಬ್ಬ ಬಾತ್ಮೀದಾರ ಸಿಕ್ಕಿ ಆ ಪ್ರದೇಶದಲ್ಲಿ ಉಗ್ರಗಾಮಿಗಳು ಇರುವುದು ನಿಜ ಎಂದು ಹೇಳಿದನು. ಕತ್ತಲಲ್ಲಿ ಒಂದು ಕಡೆಯಿಂದ ಶೋಧಿಸುತ್ತಾ ಬಂದೆವು. ಯಾರೂ ಕಾಣಿಸಲಿಲ್ಲ. ಆಗ ಬೆಳಗಿನ ಜಾವ ೨.೩೦ ಗಂಟೆ. ಕೊರೆಯುವ ಚಳಿ. ಮುಂದೆ ಏನು ಮಾಡಬೇಕು?

ನನ್ನ ಜನರಿಗೆ ವಿಶ್ರಾಂತಿ ಪಡೆಯಲು ಹೇಳಿದೆ. ನಮ್ಮ ಠಾಣ್ಯವಿದ್ದ ಚಮಕ್‌ಡಿಮಾ ತುಂಬಾ ದೂರವಿರಲಿಲ್ಲ. ಅಲ್ಲಿಗೆ ಹೋಗಿ ನಮ್ಮ ಜನರಿಗೆ ಸ್ವಲ್ಪ ಉಪಾಹಾರವನ್ನೂ ಇನ್ನಷ್ಟು ಮಾಹಿತಿಯನ್ನೂ ತರಲು ಹೋದೆ. ಆ ಕಡೆ ನಾನು ಹೋಗಿರುವಾಗ , ರಾವತ್ ಅವರ ತಂಡದ ಒಬ್ಬನಿಗೆ , ಜನರು ಅಲ್ಲೇ ಸಮೀಪದಲ್ಲಿ ಇರುವ ಸುಳಿವು ಸಿಕ್ಕಿತು. ಹೊಸದಾಗಿ ವಿಸರ್ಜಿತ ಮಲದ ವಾಸನೆ. ಆಗ ಬೆಳಗ್ಗೆ ಸುಮಾರು ೫.೩೦ ಗಂಟೆಯ ಸಮಯ. ಈ ಅವಕಾಶವನ್ನು ಕಳೆದುಕೊಳ್ಳುವಂತಿರಲಿಲ್ಲ. ರಾವತ್ ಒಡನೆಯೇ ಇಬ್ಬಿಬ್ಬರ ಸಾಲಿನಲ್ಲಿ ಹೊರಟು ಆ ಪ್ರದೇಶವನ್ನು ಶೋಧಿಸತೊಡಗಿದರು. ಕಾಡು ನದಿಯ ಕಡೆಗೆ ಇಳುಕಲಾಗಿತ್ತು. ಶೋಧಕ ತಂಡದ ಒಬ್ಬನು ದಟ್ಟ ಕಾಡಿನಿಂದ ಹೊರಬಂದವನೇ ೨ನೇ ನಾಗಾ ಆರ್ಮಿ ಬ್ರಿಗೇಡಿನ ಮಧ್ಯಕ್ಕೇ ಬಂದು ನಿಂತ!

ಬೆಳಗ್ಗೆ ಸುಮಾರು ಆರು ಗಂಟೆ, ಇನ್ನೂ ಕತ್ತಲಾಗಿತ್ತು. ನಾವು ಬೆನ್ನಟ್ಟಿಕೊಂಡೇ ಬಂದುದರಿಂದ ಅವರಿಗೂ ಏನನ್ನೂ ತಿನ್ನಲು ಸಾಧ್ಯವಾಗಿರಲಿಕ್ಕಿಲ್ಲ.

ಒಂದು ದೊಡ್ಡ ಹಂದಿಯನ್ನು ಬೆಂಕಿಗೆ ಅಡ್ಡಲಾಗಿ ಕಟ್ಟಿ ಸುಡುತ್ತಿದ್ದರು. ಕೆಲವರು ಬೆಂಕಿಯ ಸುತ್ತ ಕುಳಿತಿದ್ದರು. ಇತರರು ಅಲ್ಲಿ ಇಲ್ಲಿ ನೆಲದ ಮೇಲೆ ಉರುಳಿಕೊಂಡಿದ್ದರು.

ಅವರು ನಮ್ಮವರಷ್ಟೇ ಚಕಿತರಾಗಿದ್ದರು. ನಮ್ಮ ಇಬ್ಬರು ತರುಣರು ಬಂದೂಕುಗಳನ್ನು ಕೈಗೆತ್ತಿಕೊಂಡು ಹಾರಿಸಲು ತೊಡಗುವ ವೇಳೆಗೆ

ಅವರು ತಲೆಯೆತ್ತಿ ಕಿರಿಚಿದರು. ಏನನ್ನು ತೆಗೆದುಕೊಳ್ಳುವುದಕ್ಕೂ ಸಮಯವಿರಲಿಲ್ಲ. ಆಳವಿಲ್ಲದ ನದಿಯಲ್ಲಿ ಓಡಿದರು. ಸುಮಾರು ೩೦-೪೦ ಜನರು ವೇಗವಾಗಿ ಓಡಿ ನದಿ ದಾಟಿ ಆಚೆ ದಡದ ದಟ್ಟ ಕಾಡಿನಲ್ಲಿ ಕಣ್ಮರೆಯಾದರು. ಅವರು ಎಷ್ಟು ಮಟ್ಟಿಗೆ ಚಕಿತರಾಗಿದ್ದರೆಂದರೆ, ಬಹುಶಃ ೩೨ ಚೀನಾ ನಿರ್ಮಿತ ರೈಫಲುಗಳನ್ನೂ ನೂರಾರು ಸುತ್ತು ಗುಂಡುಗಳನ್ನೂ ಅರ್ಧ ಬೆಂದ ಹಂದಿಯನ್ನೂ ಅಲ್ಲೇ ಬಿಟ್ಟು ಓಡಿದರು. ಕೆಲವರಿಗೆ ತಮ್ಮ ಹವಾಯಿಚಪ್ಪಲಿಗಳನ್ನು ಹಾಕಿಕೊಳ್ಳುವುದಕ್ಕೂ ಸಮಯವಿರಲಿಲ್ಲ.

ರಾವತರ ಜನರು ತುಂಬಾ ಚೆದುರಿ ಹೋಗಿದ್ದುದರಿಂದ ಪರಿಣಾಮಕಾರಿಯಾಗಿ ಬೆನ್ನಟ್ಟಲು ಸಾಧ್ಯವಾಗಲಿಲ್ಲ. ನಾನು ಬೇಗನೆ ಆ ಸ್ಥಳಕ್ಕೆ ಬಂದೆ, ಶೋಧಕ ತಂಡಗಳನ್ನು ರಚಿಸಿದೆ. ಆದರೆ ಎಷ್ಟು ಹುಡುಕಿದರೂ ಆ ಉಗ್ರಗಾಮಿಗಳ ಸುಳಿವು ಸಿಕ್ಕಲಿಲ್ಲ.

ಆದರೆ ನಮ್ಮ ಈ ಕಾರ್ಯಾಚರಣೆಯಿಂದ ನಮಗೆ ತುಂಬಾ ತೃಪ್ತಿಯಾಗಿತ್ತು. ಆಮೇಲೆ ನನಗೆ ತಿಳಿದು ಬಂದಂತೆ ಅವರಲ್ಲಿ ಅನೇಕರಿಗೆ ಗಾಯಗಳಾಗಿದ್ದುವು. ಅವರಲ್ಲಿ ಒಬ್ಬ ನಾಯಕನಾಗಿದ್ದವನು, ಬ್ರಿಗೇಡಿಯರ್ ಯಾನಿಯೋ ಎನ್ನುವವನು. ಅವನ ಜತೆಯವರು ಅವನನ್ನು ಎತ್ತಿಕೊಂಡು ಹೋಗಬೇಕಾಯಿತು. ಕೆಲವು ಗಂಟೆಗಳ ಕಾಲದಲ್ಲಿ ಅವನು ಸತ್ತನು. ಆಯುಧಗಳು ಕಳೆದುಹೋಗಿ , ನಾಯಕನು ಸತ್ತು, ದೊಡ್ಡ ಹೆಸರಿಟ್ಟುಕೊಂಡು ಮೆರೆಯುತ್ತಿದ್ದ ೨ನೇ ನಾಗಾ ಆರ್ಮಿ ಬ್ರಿಗೇಡ್ ಹೀಗೆ ನಿರ್ನಾಮವಾಯಿತು.

೨೯. 'ಬಾಬಾ' ಪವಾಡ ಮಾಡಿದರು

ಮಣಿಪುರದಲ್ಲಿದ್ದಾಗಲೂ ಅಷ್ಟೆ , ನಾಗಾಲ್ಯಾಂಡಿನಲ್ಲಿ ಇದ್ದಾಗಲೂ ಅಷ್ಟೆ , ನಾನು ಹಳ್ಳಿಗಳಿಗೆ ಭೇಟಿ ಕೊಟ್ಟಾಗಲೆಲ್ಲಾ ನನ್ನನ್ನು ತಮ್ಮ ಚರ್ಚುಗಳಿಗೆ ಅತಿಥಿಯಾಗಿ ಆಹ್ವಾನಿಸುತ್ತಿದ್ದರು. ವಿಶೇಷವಾಗಿ ಅದು ಭಾನುವಾರವಾದರೆ, ಭಾಷಣ ಮಾಡಬೇಕೆಂದು ಕೇಳುತ್ತಿದ್ದರು. ನಾನು ಬೈಬಲ್, ಗೀತೆ ಅಥವಾ ಉಪನಿಷತ್ತಿನ ಕತೆಗಳು ಇಂತಹ ಯಾವುದಾದರೂ ವಿಷಯವನ್ನು ತೆಗೆದುಕೊಂಡು, ಅವರ ದೈನಂದಿನ ಜೀವನಕ್ಕೆ ಅನ್ವಯಿಸುವಂತೆ ಮಾತನಾಡುತ್ತಿದ್ದೆ. ಮಣಿಪುರ ಮತ್ತು ನಾಗಾಲ್ಯಾಂಡಿಗೆ ಬಂದಮೇಲೆ ಬಹುತೇಕ ಆದಿವಾಸಿಗಳು ಕ್ರಿಶ್ಚಿಯನ್ನರೆಂಬುದು ತಿಳಿದುದರಿಂದ ಅವರ ಧರ್ಮದ ವಿಷಯವಾಗಿ ತಿಳಿದುಕೊಂಡಿರುವುದು ಉತ್ತಮ ಎಂದು ನನಗೆ ಅನ್ನಿಸಿತು. ಬೈಬಲನ್ನು ಓದಿದೆ. ಕ್ರಿಸ್ತನ ಬೋಧನೆಗಳಿಗೂ ನಮ್ಮ ಗ್ರಂಥಗಳಲ್ಲಿನ ಹಾಗೂ ಸಂತರ ಬೋಧನೆಗಳಿಗೂ ಇರುವ ಹೋಲಿಕೆಯನ್ನು ಗುರುತಿಸಲು ಪ್ರಯತ್ನಿಸಿದೆ.

ಈ ಸಮಯದಲ್ಲಿ ಶ್ರೀ ಸತ್ಯಸಾಯಿಬಾಬಾ ಅವರ ಬೋಧನೆಗಳು ನನ್ನನ್ನು ಆಕರ್ಷಿಸಿದವು. ನನ್ನ ತಮ್ಮಂದಿರು ರಾಧಾಕೃಷ್ಣ ಮತ್ತು ಪ್ರಸನ್ನ ಅವರು ಬಾಬಾರ ಭಕ್ತರಾಗಿದ್ದರು. ಅವರಿಂದ ನನ್ನಲ್ಲಿ ಬಾಬಾ ಅವರ ಬಗೆಗೆ ಆಸಕ್ತಿ ಬೆಳೆದಿತ್ತು. ಅವರ ಸುತ್ತಾ ಬೇಕಾದಷ್ಟು ಭಿನ್ನಾಭಿಪ್ರಾಯಗಳು ಹರಡಿಕೊಂಡಿದ್ದವು. ಅವರ ಅನುಯಾಯಿಗಳು 'ಅವರು ಪವಾಡಗಳನ್ನು ಮಾಡುತ್ತಾರೆ' ಎಂದು ಹೇಳುತ್ತಿದ್ದರು. ಗಾಳಿಯಲ್ಲಿ ಕೈ ಆಡಿಸಿ ವಾಚುಗಳು, ಆಭರಣಗಳು ಮೊದಲಾದವನ್ನು ತೆಗೆದು ತಮ್ಮ ಭಕ್ತರಿಗೆ ಕೊಡುವುದರಿಂದ ತೊಡಗಿ, ಅಪರಿಹಾರ್ಯವಾದ ರೋಗಗಳನ್ನು ಗುಣಪಡಿಸುವುದು, ಕುರುಡರು ನೋಡುವಂತೆ, ಕುಂಟರು ನಡೆಯುವಂತೆ ಮಾಡುವುದರವರೆಗೆ ಆ ಪವಾಡಗಳು ಹಲತೆರನಾಗಿದ್ದುವು. ಇತರರು ಇದೆಲ್ಲವನ್ನೂ ಅಲ್ಲಗಳೆದು ಮೂದಲಿಸುತ್ತಿದ್ದರು.

ಕೊಹಿಮಾದ ಬಳಿ ಚಂಕಿ ಎಂಬ ಸಣ್ಣಹಳ್ಳಿಯಲ್ಲಿನ ಚರ್ಚ್‌ನಲ್ಲಿ ನನ್ನನ್ನು ಮಾತನಾಡಲು ಆಹ್ವಾನಿಸಿದಾಗ ಅದೇ ತಾನೇ, ಆಸ್ಟ್ರೇಲಿಯಾದ ಹೊವಾರ್ಡ್ ಮೊಫೆಟ್ ಎಂಬುವರು ಬರೆದ 'ಸಾಯಿಬಾಬಾ-ಮ್ಯಾನ್ ಆಫ್ ಮಿರಕಲ್ಸ್' ಎಂಬ ಪುಸ್ತಕವನ್ನು ಓದಿ ಮುಗಿಸಿದ್ದೆ. ಸರ್ಮನ್ ಆನ್ ದಿ ಮೌಂಟ್‌ನಲ್ಲಿನ ಕೆಲವು ಪದ್ಯಗಳನ್ನು ಹೇಳಿದೆ. ಅವೇ ವಿಷಯಗಳನ್ನು ನಿರೂಪಿಸುವ ರಾಮಾಯಣ, ಮಹಾಭಾರತ ಮತ್ತು ಉಪನಿಷತ್ತುಗಳ ಕೆಲವು ಕತೆಗಳನ್ನು ಹೇಳಿದೆ, ಕೊನೆಯಲ್ಲಿ ಬಾಬಾ ಪ್ರಾರ್ಥನಾ ಸಭೆಗಳಲ್ಲಿ ಹೇಳುತ್ತಿದ್ದ ಕತೆಗಳನ್ನು ಹೇಳಿ ಭಾಷಣವನ್ನು ಮುಗಿಸಿದೆ.

ಆಮೇಲೆ ಪಾದ್ರಿಯವರ ಮನೆಗೆ ಟೀ ತೆಗೆದುಕೊಳ್ಳಲು ಆಹ್ವಾನಿಸಿದರು. ಅವರ ಕೆಲವರು ಮಿತ್ರರು ಅಲ್ಲಿಗೆ ಬಂದಿದ್ದರು. ನಾನು ಭಾಷಣ ಮಾಡಿದ ಕೆಲವು ವಿಚಾರಗಳನ್ನು ಕುರಿತು ಮಾತುಕತೆ ನಡೆಯಿತು. ಆ ಕತೆಗಳನ್ನು ನಾನು ಎಲ್ಲಿಂದ ಸಂಗ್ರಹಿಸಿದೆ ಎಂದು ಕೇಳಿದರು. ನಾನು ಪುರೋಹಿತನೇ ? ತತ್ತ್ವಶಾಸ್ತ್ರವನ್ನು ಅಧ್ಯಯನ ಮಾಡಿರುವೆನೇ? ಎಂಬುದಾಗಿ ಕೇಳಿದರು. ಸತ್ಯಸಾಯಿಬಾಬಾ ಅವರ ಹಾಗೂ ಅವರ ಬೋಧನೆಯ ಬಗೆಗೆ ನನಗೆ ತಿಳಿದಿದ್ದುದನ್ನು ಹೇಳಿದೆ. ಅಲ್ಲಿದ್ದ ಒಬ್ಬಿಬ್ಬರು ಹೆಂಗಸರು ಬಾಬಾ ಅವರನ್ನು ಜೀವಂತ ಕ್ರಿಸ್ತನೇ ಎಂಬುದಾಗಿ ಕೇಳಿದರು.

ಇದಾದ ಸುಮಾರು ೧೦-೧೨ ದಿನಗಳ ಅನಂತರ ನಾನು ಕಚೇರಿಯಲ್ಲಿದ್ದಾಗ ಒಬ್ಬ ಹೆಂಗಸು ಮತ್ತು ಒಬ್ಬ ಗಂಡಸು ನನ್ನನ್ನು ನೋಡಲು ಕಾದಿರುವುದಾಗಿ ಆರ್ಡರ್ಲಿ ಹೇಳಿದನು. ಅವರನ್ನು ಒಳಕ್ಕೆ ಕಳಿಸಲು ಹೇಳಿದೆ. ನನ್ನ ಯಾರಾದರೂ ಸೈನಿಕನ ಬಗೆಗೆ ಏನಾದರೂ ದೂರು ತಂದಿರಬಹುದೇ ಎಂದು ಸಂದೇಹವುಂಟಾಯಿತು.

"ನಿಮಗೆ ನನ್ನಿಂದ ಏನಾಗಬೇಕು?" ಕೇಳಿದೆ.

ಆ ಗಂಡಸು ಮಾತನಾಡಿದ. ಆತ ಒಬ್ಬ ಉಪಾಧ್ಯಾಯ. "ಈ ಹೆಂಗಸಿನ ಹೆಸರು ಅರೆಪ್ಪಾ ಸ್ವಾಮಿ, ಈ ಮಹಿಳೆಯ ಪತಿ ಕ್ಯಾನ್ಸರಿನಿಂದ ಬಳಲುತ್ತಿದ್ದಾನೆ. ಇನ್ನೇನು ಸಾವಿನಂಚಿಗೆ ಬಂದಿದ್ದಾನೆ. ಆತ ನನ್ನ ಶಾಲೆಯಲ್ಲಿ ನೌಕರನಾಗಿದ್ದನು. ಅನಾರೋಗ್ಯದಿಂದ ಕೆಲಸವನ್ನು ನಿಲ್ಲಿಸಬೇಕಾಯಿತು. ಆತನ ಪತ್ನಿ ಮತ್ತು ಐದು ಜನ ಮಕ್ಕಳಿಗೆ ಬೇರೆ ಅವಲಂಬನೆ ಇಲ್ಲ. ಕೊಹಿಮಾ ಮತ್ತು ದಿಬ್ರೂಘರ್‌ನಲ್ಲಿರುವ ವೈದ್ಯರು ಆಸೆಯನ್ನು ಬಿಟ್ಟುಬಿಟ್ಟಿದ್ದಾರೆ. ನಿಮಗೆ ಕ್ರಿಸ್ತನಂತಹ ಈ ಶ್ರೀ ಸತ್ಯಸಾಯಿಬಾಬಾ ಎನ್ನುವವರು ಗೊತ್ತು ಎಂದು ನೆನ್ನೆ ಯಾರೋ ಹೇಳಿದರು. ಅವರು ಈಕೆಯ ಪತಿಯನ್ನು ಗುಣಪಡಿಸಿ ಈ ಕುಟುಂಬವನ್ನು ಗಂಡಾಂತರದಿಂದ ಪಾರು ಮಾಡುತ್ತಾರೆಯೆ ಎಂದು ಈಕೆ ತಿಳಿಯಬಯಸುತ್ತಾಳೆ."

"ಬಾಬಾ ಆತನನ್ನು ಗುಣಪಡಿಸಬಲ್ಲರೋ ಏನೋ ನನಗೆ ತಿಳಿಯದು. ಆದರೆ ಅವರನ್ನು ಹೋಗಿ ನೋಡುವುದು ಒಳ್ಳೆಯದು. ಮನುಷ್ಯನ ತುರುತು ಭಗವಂತನ ಕಡೆಗೆ ಅವಕಾಶ" ಎಂದೆ.

ಅವನು ಆ ಹೆಂಗಸಿನೊಂದಿಗೆ ಮಾತಾಡಿದ.

"ನಾನೊಬ್ಬ ಬಡ ಹೆಂಗಸು. ತೀವ್ರವಾದ ಕಾಯಿಲೆಯಲ್ಲಿ ಇರುವ ಪತಿಯನ್ನು ಕರೆದುಕೊಂಡು ದೂರದ ವೈಟ್‌ಫೀಲ್ಡ್ ಎನ್ನುವ ಸ್ಥಳಕ್ಕೆ ನಾನು ಹೋಗುವುದಾದರೂ ಹೇಗೆ?"

"ಹಣವನ್ನೇನೋ ಸಂಗ್ರಹಿಸಬಹುದು", ನಾನು ಉತ್ತರ ಕೊಟ್ಟೆ, "ನನಗೆ ಸಾಧ್ಯವಾದುದನ್ನು ಸಂತೋಷವಾಗಿ ನೀಡುತ್ತೇನೆ. ಆದರೆ ಮೊದಲು ನಾವು ಬಾಬಾ ಅವರಿಗೆ ಬರೆದು ಅವರ ಸಲಹೆ ಪಡೆಯುವುದು ಮೇಲು ಎಂದು ನಾನು ಭಾವಿಸುತ್ತೇನೆ."

ಆಕೆ ಒಪ್ಪಿದಳು.

ಒಡನೆಯೇ ನನ್ನ ಆಪ್ತಸಹಾಯಕನನ್ನು ಕರೆದು ಬಾಬಾ ಅವರಿಗೆ ಒಂದು ಪತ್ರವನ್ನು ಹೇಳಿ ಬರೆಸಿದೆ. ಆಕೆಯ ಪತಿಯ ರೋಗದ ವಿವರಗಳನ್ನೂ, ಚಿಕಿತ್ಸೆಯ ಎಲ್ಲಾ ಪ್ರಯತ್ನಗಳೂ ಹೇಗೆ ವಿಫಲವಾದುವು ಎಂಬುದನ್ನೂ ವಿವರಿಸಿದೆ. ಆತ ತುಂಬಾ ನೋವನ್ನು ಅನುಭವಿಸುತ್ತಿದ್ದಾನೆ, ಸದ್ಯದಲ್ಲೇ ಹೆಂಡತಿ - ಮಕ್ಕಳನ್ನು ನಿರ್ಗತಿಕರನ್ನಾಗಿಸಿ ಸತ್ತು ಹೋಗುವ ಸ್ಥಿತಿಯಲ್ಲಿದ್ದಾನೆ. ಈಗ ಬಾಬಾ ಏನು ಸೂಚಿಸುತ್ತಾರೆ? ಆಕೆ ತನ್ನ ಪತಿಯನ್ನು ಕರೆದುಕೊಂಡು ಅವರ ದರ್ಶನ ಮಾಡಲು ಬರಬಹುದೇ?–ಆಕೆಯ ಹೆಸರಿನಲ್ಲಿ ನಾನು ಸಹಿ ಮಾಡಿದೆ. ಪತ್ರದ ಎರಡು ಪ್ರತಿಗಳನ್ನು ತಯಾರಿಸಿ ಒಂದನ್ನು ಪುಟ್ಟಪರ್ತಿಗೂ ಇನ್ನೊಂದನ್ನು ವೈಟ್‌ಫೀಲ್ಡಿಗೂ ಕಳಿಸಿದೆ.

"ಈ ಮಧ್ಯೆ ನೀನು ಸತ್ಯಸಾಯಿಬಾಬಾ ಎಂದು ಅವರ ಹೆಸರನ್ನು ಕೊನೆಯ ಪಕ್ಷ ೨೧ಸಾರಿ ಪ್ರತಿದಿನವೂ ಬರೆಯಬೇಕು. ಪ್ರತಿಸಾರಿ ಬರೆದಾಗಲೂ ಜೋರಾಗಿ ಬಾಯಲ್ಲಿ ಹೇಳಿಕೊಂಡು ಬರೆ. ಅದು ನಿನ್ನ ಗಂಡನಿಗೆ ಕೇಳಿಸಲಿ. ಬೆಳಗ್ಗೆ ಸ್ನಾನವಾದ ಮೇಲೆ ಈ ಕೆಲಸ ಮಾಡು" ಎಂದು ಹೇಳಿದೆ.

ಆಕೆ ಸ್ವಲ್ಪ ಸಂದೇಹದಿಂದಲೆಂಬಂತೆ ನೋಡಿದಳು.

"ನನ್ನ ಕಷ್ಟಕಾಲಗಳಲ್ಲಿ ಇಂಥ ಕೆಲಸಗಳು ಸಹಾಯ ಮಾಡಿವೆ. ಅದನ್ನು ನೀನೂ ಪ್ರಯತ್ನಿಸು. ಅದರಿಂದ ಯಾರಿಗೂ ಏನೂ ತೊಂದರೆ ಇಲ್ಲವಲ್ಲ?"

ಸತ್ಯಸಾಯಿಬಾಬಾ ಎಂದು ಹೇಗೆ ಬಾಯಲ್ಲಿ ಉಚ್ಚರಿಸಬೇಕು ಎಂಬುದನ್ನು ಆಕೆಗೆ ಕಲಿಸಿಕೊಟ್ಟೆ. ಹಲವು ಸಲ ಆಕೆಯ ಕೈಯಲ್ಲಿ ಬರೆಸಿ ಅಭ್ಯಾಸ ಮಾಡಿಸಿದೆ. ನನಗೆ ವಂದನೆ ಹೇಳಿ ಅವರು ಹೊರಟು ಹೋದರು.

ಹದಿನೈದು ದಿನ ಕಳೆದಿರಬಹುದು. ಒಂದು ದಿನ ನಾನು ಊಟಕ್ಕೆ ಮನೆಗೆ ಹೋಗಲು ಕಚೇರಿಯಿಂದ ಹೊರಬಂದೆ. ಒಬ್ಬ ವಯಸ್ಸಾದ ವ್ಯಕ್ತಿ ನನ್ನ ಕಡೆಗೆ ಓಡಿ ಬರುತ್ತಿದ್ದನು, ನಿಲ್ಲಲು ಸಂಜ್ಞೆ ಮಾಡುತ್ತಾ. ನಾನು ನಿಂತೆ.

ಆತ ಅರೆಪ್ಪಾಳ ತಂದೆ.

"ಕಳೆದ ೧೫ ದಿನಗಳಿಂದ ನೀವು ಏನು ಮಾಡಲು ಹೇಳಿದಿರೋ ಅದನ್ನು ಅರೆಪ್ಪಾ ತಪ್ಪದೆ ಮಾಡುತ್ತಿದ್ದಾಳೆ. ಅದೇ, ೨೧ ಸಲ ಸತ್ಯಸಾಯಿಬಾಬಾ ಅವರ ಹೆಸರನ್ನು ಬರೆಯುವುದು. ಈಗ ಕೆಲವು ದಿನಗಳ ಹಿಂದೆ ಪವಾಡ ನಡೆಯಿತು" ಆತ ಹೇಳಿದರು.

ಹೆಚ್ಚುತ್ತಿದ್ದ ಉದ್ವೇಗದಿಂದ ಆತ ಹೇಳುವುದನ್ನು ಕೇಳಿದೆ.

"ಅವಳ ಗಂಡ ಬೆಳಗ್ಗೆ ಎದ್ದಾಗ ನೋವು ಅಷ್ಟು ಹೆಚ್ಚಾಗಿರಲಿಲ್ಲ. ಬಹಳ ಕಾಲವಾದ ಮೇಲೆ ಹಸಿವೆಯಾಗಿ, ಚೆನ್ನಾಗಿ ತಿಂಡಿ ತಿಂದ. ಎದ್ದು ಮೆಲ್ಲಗೆ ಮಾತಾಡಿದ, ಅಂದರೆ, ಅದೇ ನಮಗೆ ಗಾಬರಿಯಾಯಿತು. ವಿಶ್ರಾಂತಿ ತೊಗೋ ಅಂತ ನಾವು ಹೇಳಿದೆವು. ಆದರೆ ದಿನ ಕಳೆದಂತೆ ಅವನು ಹೆಚ್ಚು ಹೆಚ್ಚಾಗಿ ಉಲ್ಲಾಸಗೊಂಡ, ಮಾತನಾಡಿದ. ಅವನಿಗೆ ಗುಣವಾಗುತ್ತಿದೆಯೆಂಬುದನ್ನು ನಮಗೆ ನಂಬಲು ಸಾಧ್ಯವಾಗಲೇ ಇಲ್ಲ. ಇವತ್ತು ಅಲ್ಲೇ ಸುತ್ತಮುತ್ತ ನಡೆದಾಡಿದ. ನೋವು ದಿನದಿಂದ ದಿನಕ್ಕೆ ಗುಣವಾಗುತ್ತಿದೆ. ಇಡೀ ಕುಟುಂಬಕ್ಕೆ ಹೊಸ ಜನ್ಮ ಬಂದ ಹಾಗಾಯಿತು ಎಂದು ಅರೆಪ್ಪಾ ಭಾವಿಸುತ್ತಾಳೆ. ನನ್ನ ಮಗಳ ಮುಖದ ಮೇಲೆ ನಗು ಸುಳಿದುದನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ. ನಾನು ಇಲ್ಲಿಗೆ ಬಂದು ತಮಗೆ ಈ ಶುಭ ಸಮಾಚಾರವನ್ನು ಹೇಳಬೇಕೆಂದು ತಿಳಿಸಿದ್ದಾಳೆ." ಇದನ್ನು ಕೇಳಿ ನನಗೂ ಸಂತೋಷವಾಯಿತು.

"ಭಗವಂತ ಕರುಣೆ ತೋರಿಸುತ್ತಿದ್ದಾನೆ. ಶ್ರೀ ಸಾಯಿಬಾಬಾ ಅವರ ನಾಮವನ್ನು ನೀವೂ ಪ್ರತಿ ದಿನವೂ ಬರೆದರೆ ಒಳ್ಳೆಯದಾಗಬಹುದು. ನಿಮ್ಮ ಅಳಿಯ ಬೇಗನೆ ಪೂರ್ತಿ ಗುಣವಾಗುತ್ತಾನೆ."

"ಖಂಡಿತವಾಗಿಯೂ ತಾವು ಹೇಳಿದಂತೆ ಮಾಡುತ್ತೇನೆ ಸ್ವಾಮಿ! ನನಗೆ ಎಷ್ಟು ಸಂತೋಷವಾಗಿದೆ ಎಂಬುದನ್ನು ಬಾಯಲ್ಲಿ ಹೇಳಿ ಮುಗಿಸಲಾರೆ. ನೀವು ನನ್ನ ಮಗಳಿಗೆ ಅವಳ ಗಂಡನನ್ನು ಮರಳಿ ಕೊಟ್ಟಿದ್ದೀರಿ. ಆ ಮಕ್ಕಳಿಗೆ ತಂದೆಯನ್ನು ಕೊಟ್ಟಿದ್ದೀರಿ. ದೇವರು ನಿಮಗೆ ಒಳ್ಳೆಯದು ಮಾಡಲಿ."

ಅರ್ಹತೆಯಿಲ್ಲದ ನನಗೆ ಇಷ್ಟು ಕೀರ್ತಿಯನ್ನು ಕೊಟ್ಟು ಆತ ಹೊರಟು ಹೋದರು. ಅದೇ ಸಮಯಕ್ಕೆ ನನಗೆ ಬೆಂಗಳೂರಿಗೆ ವರ್ಗ ಮಾಡಿದ ಆದೇಶವೂ ಬಂದಿತ್ತು. ನನ್ನ ಅನಂತರ ಈ ಸ್ಥಾನಕ್ಕೆ ಬರುವವರಿಗೆ ಚಾರ್ಜು ವಹಿಸಿಕೊಡುವ ಸಿದ್ಧತೆ ಮಾಡಿಕೊಳ್ಳುವುದರಲ್ಲಿ ಮಗ್ನನಾದೆ. ಬೇಗನೆಯೇ ನಾನು ಅಲ್ಲಿಂದ ಹೊರಟು ಬರಬೇಕಾಗಿತ್ತು.

ಅಲ್ಲಿಂದ ಹೊರಟು ಬರುವುದಕ್ಕೆ ಕೆಲವು ದಿನಗಳ ಮೊದಲು ಅರೆಪ್ಪಾಳ ತಂದೆ ಮತ್ತೆ ನನ್ನ ಕಚೇರಿಗೆ ಬಂದರು.

"ಸ್ವಾಮಿ, ನೀವು ನಾಡಿದ್ದು ಇಲ್ಲಿಂದ ಹೊರಟು ಹೋಗುತ್ತಿದ್ದೀರಿ ಅಂತ ತಿಳಿಯಿತು. ನೀವು ಒಮ್ಮೆ ನಮ್ಮ ಹಳ್ಳಿಗೆ ದಯವಿಟ್ಟು ಬರಬೇಕು."

"ಈಗ ನಾನು ಬೇಗ ಹೋಗಬೇಕಾಗಿರುವುದರಿಂದ ಅದು ಸಾಧ್ಯವಾಗುವುದಿಲ್ಲ" ಎಂದು ಹೇಳಿದೆ. ತಮ್ಮ ಅಳಿಯ ಚೆನ್ನಾಗಿ ಗುಣವಾಗುತ್ತಿದ್ದಾನೆ ಎಂದು ಹೇಳಿದರು. ಹಳ್ಳಿಯವರ ಸಲಹೆಯಂತೆ ಅವನನ್ನು ದಿಬ್ರೂಘುರ್‌ನಲ್ಲಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರಂತೆ. ಅಲ್ಲಿ ವೈದ್ಯರು ವಿವರವಾಗಿ ಪರೀಕ್ಷೆ ಮಾಡಿ ನೋಡಿದರು. ಕ್ಯಾನ್ಸರಿನ ಕುರುಹೂ ಎಲ್ಲೂ ಕಾಣಿಸಲಿಲ್ಲ. "ಅದೆಲ್ಲಿ ಮಾಯವಾಯಿತೋ ದೇವರಿಗೇ ಗೊತ್ತು!" ಎಂದರಂತೆ. ಆತ ಇನ್ನೂ ನಿಶ್ಯಕ್ತನಾಗಿದ್ದ , ಉತ್ತಮ ಆಹಾರ ಸೇವನೆಯಿಂದ ಅವನು ಬೇಗನೆ ಮುಂಚಿನ ಶಕ್ತಿಯನ್ನು ಪಡೆಯಬಹುದು.

ನಾನು ಹಳ್ಳಿಗೆ ಹೋಗಲಾಗದಿದ್ದರೆ ಅರೆಪ್ಪಾ ತನ್ನ ಗಂಡನನ್ನು ಇಲ್ಲಿಗೆ ನನ್ನ ಬಳಿಗೆ ಕರೆದು ತರಬೇಕೆಂದುಕೊಂಡಿದ್ದಳಂತೆ. ಆದರೆ ಅಂಥದೇನನ್ನೂ ಮಾಡಬೇಡಿ ಎಂದು ನಾನು ಅವರಿಗೆ ಬುದ್ಧಿ ಹೇಳಿದೆ.

"ನಿಮ್ಮ ಪ್ರಾರ್ಥನೆಯನ್ನು ಮುಂದುವರಿಸಿ, ದೇವರು ಸದಾ ನಿಮ್ಮೊಂದಿಗೆ ಇರುತ್ತಾನೆ" ಎಂದು ಹೇಳಿ ಆ ವೃದ್ಧರನ್ನು ಬೀಳ್ಕೊಟ್ಟೆ.

ಕೆಲವು ದಿನಗಳ ಅನಂತರ ಬೆಂಗಳೂರಿಗೆ ಹೊರಟೆ. ಮತ್ತೆ ದೇಶದ ಈ ಭಾಗಕ್ಕೆ ಹಿಂದಿರುಗಿ ಬರಲಿಲ್ಲ.

೩೦. ಬೀಯಾಸಿನ ಸಂತ ಸದ್ಗುರು

ಈಗ ನಾನು ಸ್ವಲ್ಪ ಹಿಂದಕ್ಕೆ ಹೋಗಬೇಕು. ೯ ಬಿ.ಎಸ್.ಎಫ್. ವಹಿಸಿಕೊಂಡ ತರುಣದಲ್ಲೇ ಮದನ ಗೋಪಾಲ್‌ಸಿಂಗ್ ಅವರನ್ನು ಭೇಟಿ ಮಾಡಿದ ಸಂದರ್ಭ. ಸಾವಿತ್ರಿ ಅದೇ ತಾನೇ ಲೋಂಗ್‌ನಾಕ್‌ಗೆ ನನ್ನ ಜೊತೆಯಲ್ಲಿರಲು ಬಂದಿದ್ದಳು. ಐ.ಜಿ. ಅವರಿಂದ ಟೆಲಿಫೋನ್ ಕರೆ ಬಂದಿತು. ಸಾವಿತ್ರಿಯೂ ನಾನೂ ಒಡನೆಯೇ ಇಂಫಾಲಕ್ಕೆ ಬರಬೇಕೆಂದು ತಿಳಿಸಿದರು. ಆಶ್ಚರ್ಯವಾಗಿತ್ತು. ಆದರೆ ಅವರ ವಿಷಯ ಗೊತ್ತು. ಏನೂ ಇಲ್ಲದೆ ಸುಮ್ಮನೆ ಆ ಬೆಟ್ಟಪ್ರದೇಶದಲ್ಲಿ ಆರೇಳು ಗಂಟೆಗಳ ಕಾಲ ಪ್ರಯಾಣ ಮಾಡಿಬರುವಂತೆ ಅವರು ಹೇಳುವವರಲ್ಲ.

ಆದ್ದರಿಂದ ತಕ್ಷಣವೇ ಹೊರಟೆವು. ರಾತ್ರಿಯನ್ನು ಕೊಹಿಮಾದಲ್ಲಿ ಕಳೆದು ಮರುದಿನ ಬೆಳಗ್ಗೆ ೧೧ ಗಂಟೆ ವೇಳೆಗೆ ಇಂಫಾಲ ತಲುಪಿದೆವು. ನೇರವಾಗಿ ಐ.ಜಿ. ಅವರ ನಿವಾಸಕ್ಕೆ ಹೋದರೆ ಅಲ್ಲಿ ನಾವು ಆಗಿಂದಾಗಲೇ ಗುರುದ್ವಾರಕ್ಕೆ ಬರಬೇಕೆಂಬ ಸಂದೇಶವಿತ್ತು. ಅಲ್ಲಿಗೆ ಹೋದೆವು. ಜನರು ತುಂಬಿಹೋಗಿದ್ದರು. ಬೀಯಾಸಿನ ಸಂತ ಸದ್ಗುರು ಅವರ ಪ್ರವಚನವನ್ನು ಕೇಳಲು ಅವರೆಲ್ಲ ಅಲ್ಲಿ ಸೇರಿದ್ದುದಾಗಿ ತಿಳಿಯಿತು. ಜನರಿಗೆ ನೆಲದ ಮೇಲೆ ದರಿಗಳ ವ್ಯವಸ್ಥೆ ಮಾಡಿದ್ದರು. ಒಂದು ಪಕ್ಕದಲ್ಲಿ ಗಂಡಸರು, ಒಂದು ಪಕ್ಕದಲ್ಲಿ ಹೆಂಗಸರು. ಮೊದಲನೆಯ ಸಾಲಿನಲ್ಲಿ ಕುರ್ಚಿಗಳ ಮೇಲೆ ಗವರ್ನರ್ ಅವರು, ಮುಖ್ಯ ಕಾರ್ಯದರ್ಶಿಗಳು ಮೊದಲಾದ ಗಣ್ಯರು ಕುಳಿತಿದ್ದರು. ವೇದಿಕೆಯ ಮೇಲೆ ಸದ್ಗುರು ಅವರು ಕುಳಿತು 'ಸಂತ ಮತ'ವನ್ನು ಕುರಿತು ಪ್ರವಚನ ಮಾಡುತ್ತಿದ್ದರು.

ನಾನು ಮೊದಲೂ ಅವರು ಮಾತನಾಡುವುದನ್ನು ಕೇಳಿದ್ದೆ. ಅದು ಸಂಬಾದಲ್ಲಿ ೨೨ ಮರಾಠಾ ಪಡೆಯಲ್ಲಿದ್ದಾಗ. ಒಬ್ಬ ಮದ್ದುಗುಂಡು ಪರೀಕ್ಷಕರು ಬೆಟಾಲಿಯನ್ನಿಗೆ ಬರುತ್ತಿದ್ದರು. ನಾನು ಕ್ವಾರ್ಟರ್ ಮಾಸ್ಟರ್ ಆಗಿದ್ದುದರಿಂದ ಅವರಿಗೆ ಸುತ್ತ ತೋರಿಸುವುದು ಮತ್ತು ಸತ್ಕರಿಸುವುದು ನನ್ನ ಕೆಲಸವಾಗಿತ್ತು. ತಾನು ಕಟ್ಟಾ ಸಸ್ಯಾಹಾರಿ ಎಂದು ಆತ ಹೇಳಿದರು. ನಾನೂ ಸಸ್ಯಾಹಾರಿಯೇ. ಅದಕ್ಕೆ ಕಾರಣಗಳೇನೆಂದು ನಾವು ಚರ್ಚೆ ಮಾಡಿದೆವು. ಆಗ ಆತ ಬೀಯಾಸಿನ ಸಂತ ಸದ್ಗುರು ಅವರ ವಿಷಯವಾಗಿ ಹೇಳಿದರು. ಅವರನ್ನು ಸಂಧಿಸಲು ನನಗೆ ಆಸಕ್ತಿಯಿರುವುದಾಗಿ ಹೇಳಿದೆ. ಒಂದು ಭಾನುವಾರ ಬೆಳಗ್ಗೆ ಅವರ ಪ್ರವಚನವೊಂದನ್ನು ಕೇಳಲು ಆತ ನನ್ನನ್ನು ಜಮ್ಮುವಿಗೆ ಕರೆದುಕೊಂಡು ಹೋದರು. ದುರದೃಷ್ಟಕ್ಕೆ ನಾವು ಅಲ್ಲಿಗೆ ಹೋದುದು ತುಂಬಾ ತಡವಾಗಿತ್ತು. ಭಕ್ತರು ಅಲ್ಲಿ ಹಂಚುತ್ತಿದ್ದ ಪ್ರಸಾದವನ್ನು ಸ್ವೀಕರಿಸಲು ಸಾಲಾಗಿ ನಿಂತಿದ್ದರು. ನಾವು ಸಾಲಿಗೆ ಸೇರಿಕೊಂಡೆವು. ಪ್ರಸಾದದ ಪೊಟ್ಟಣವನ್ನು ಪಡೆದೆವು.

ಅದನ್ನು ನಾನು ಇನ್ನೇನು ತಿನ್ನಬೇಕು, ಅಷ್ಟರಲ್ಲಿ ಒಬ್ಬ ಭಿಕ್ಷುಕ ಹುಡುಗನು ಕೈ ಚಾಚಿದನು.

ಇನ್ಸ್‌ಪೆಕ್ಟರ್, "ಅದನ್ನು ಅವನಿಗೆ ಕೊಡಬೇಡಿ, ನೀವು ತಿನ್ನಿ. ಅದರಲ್ಲಿ ಪವಾಡಸದೃಶ ಶಕ್ತಿಗಳಿವೆ" ಎಂದರು.

'ಆ ಹುಡುಗನಿಗೆ ನನಗಿಂತ ಆ ಶಕ್ತಿಯ ಅಗತ್ಯ ಹೆಚ್ಚಾಗಿದೆ' ಎಂದು ಹೇಳಿ ಅದೆಲ್ಲವನ್ನೂ ಅವನಿಗೆ ಕೊಟ್ಟುಬಿಟ್ಟೆ.

ಮಣಿಪುರಕ್ಕೆ ಬಂದ ಮೇಲೆ ಮದನಗೋಪಾಲಸಿಂಗ್ ಮತ್ತು ಅವರ

ಪತ್ನಿ ಅವರಿಂದ ಸದ್ಗುರುವಿನ ವಿಚಾರವಾಗಿ ಹೆಚ್ಚು ತಿಳಿದುಕೊಂಡೆ. ಇಂಫಾಲಕ್ಕೆ ಅವರು ಯಾವಾಗಲಾದರೂ ಬಂದರೆ ಸಂಧಿಸಬೇಕೆಂದು ಆಸೆಯಿದೆ ಎಂದು ಹೇಳಿದ್ದೆ. ಇವತ್ತು ನಾವು ಇಲ್ಲಿಗೆ ಬರುವಂತಾದುದಕ್ಕೆ ಅದೇ ಕಾರಣ.

ಪ್ರವಚನ ಮುಗಿದ ಅನಂತರ ಸದ್ಗುರು ಅಲ್ಲಿ ನೆರೆದಿದ್ದ ಜನರ ನಡುವೆ ನಡೆದಾಡಿದರು. ಕೆಲ ನಿಮಿಷಗಳ ಅನಂತರ ಬಂದು ನನ್ನ ಮುಖವನ್ನೇ ನೋಡುತ್ತಾ ನನ್ನೆದುರಿಗೆ ಕುಳಿತರು. ಆಗಲೂ ಅವರು ಏನೂ ಹೇಳಲಿಲ್ಲ. ಕೆಲವು ಕ್ಷಣಗಳ ಅನಂತರ ಎದ್ದು ಹೊರಟು ಹೋದರು. ಇದಕ್ಕೆ ಏನರ್ಥವಿದ್ದಿತೋ ನನಗೆ ತಿಳಿಯಲಿಲ್ಲ. ಆದರೆ ಎಲ್ಲಾ ಗಣ್ಯರನ್ನೂ ಬಿಟ್ಟು ನನ್ನನ್ನು ಆರಿಸಿಕೊಂಡುದರಿಂದ ನನಗೆ ತುಂಬಾ ಸಂತೋಷವಾಯಿತು. ಅಂದು ಸಂಜೆ ಮದನಗೋಪಾಲ ಸಿಂಗ್ ಅವರ ಮನೆಗೆ ಆಹ್ವಾನವಿತ್ತು. ಕೆಲವೇ ಜನ ಆತ್ಮೀಯರು ಸೇರಿದ್ದರು. ಕೆಲವು ಹೆಂಗಸರು ಸ್ವಾಗತಗೀತೆಯನ್ನು ಹಾಡಿದರು. ಆಮೇಲೆ ಆಧ್ಯಾತ್ಮಿಕ ವಿಚಾರವಾದ ಹಲವು ಪ್ರಶ್ನೆಗಳನ್ನು ಕೇಳಲಾಯಿತು. ಸಂತ ಮತ , ಸತ್ಸಂಗ ಇವುಗಳನ್ನು ಕುರಿತು ಕೇಳಿದರು. ಸದ್ಗುರುವು ಅವೆಲ್ಲಕ್ಕೂ ಸರಳವಾದ, ಮನಸೊಪ್ಪುವ ಉತ್ತರಗಳನ್ನು ನೀಡಿದರು.

ಯಾರೇ ಆಗಲಿ ಸತ್ಸಂಗಕ್ಕೆ ದೀಕ್ಷೆ ಪಡೆಯಬೇಕಾದರೆ ನಾಲ್ಕು ಕನಿಷ್ಠ ಅಗತ್ಯಗಳನ್ನು ಪೂರೈಸಿರಬೇಕು ಎಂದು ಅವರು ನುಡಿದರು. ಆತ / ಆಕೆ ಸಸ್ಯಾಹಾರಿಯಾಗಿರಬೇಕು. ಮದ್ಯಪಾನ ಮಾಡಬಾರದು. ನೈತಿಕವಾಗಿ ಶುದ್ಧಜೀವನ ನಡೆಸಬೇಕು ಮತ್ತು ದಿನದಲ್ಲಿ ಕನಿಷ್ಠ ಪಕ್ಷ ಎರಡು-ಮೂರು ಗಂಟೆಗಳಷ್ಟನ್ನಾದರೂ ಧ್ಯಾನ, ಮನನಗಳಿಗೆ ಮೀಸಲಾಗಿಡಬೇಕು. ಸತ್ಸಂಗಕ್ಕೆ ಸೇರಿದ ಮೇಲೆ ಈ ಕೊನೆಯ ಅಗತ್ಯದ ವಿವರಗಳನ್ನು ಹೇಳಿಕೊಡಲಾಗುತ್ತದೆ. ಸ್ಥೂಲವಾಗಿ ಹೇಳುವುದಾದರೆ ಅದರಲ್ಲಿ ಸ್ಮರಣ, ಧ್ಯಾನ ಮತ್ತು ಭಜನ್ (ಧುನ್) ಬರುತ್ತವೆ. ಈ ಆಚರಣೆಯನ್ನು ಸುರತ್‌ಶಬ್ದಯೋಗ ಎಂದು ಕರೆಯಲಾಗುತ್ತದೆ. ಚರ್ಚೆಯು ಮುಗಿದಾಗ ಮಧ್ಯರಾತ್ರಿ ಮೀರಿತ್ತು.

ಬಹಳವಾಗಿ ಪ್ರಭಾವಿತರಾಗಿ ನಾವು ಮಾರನೆಯ ದಿನ ಲೋಂಗ್ ನಾಕ್‌ಗೆ ಹಿಂದಿರುಗಿದೆವು.

೩೧. ಹೇಮಾ ಮೆಡಿಕಲ್ ಕಾಲೇಜಿಗೆ ಸೇರಿದಳು

ಬೆಂಗಳೂರಿನಲ್ಲಿ ೧೦೨ನೆಯ ಬೆಟಾಲಿಯನ್ ಬಿ.ಎಸ್.ಎಫ್. ವಹಿಸಿಕೊಂಡೆ. ಕೊನೆಯ ನೇಮಕಾತಿಗಾಗಿ ನನ್ನನ್ನು ಬೆಂಗಳೂರಿಗೆ ಕಳುಹಿಸಿಕೊಡಬೇಕೆಂದು ಅನೇಕ ವರ್ಷಗಳಿಂದ ಕೇಳುತ್ತಿದ್ದೆ. ನನ್ನ ಹಲವು ಸೋದರ–ಸೋದರಿಯರು ಬೆಂಗಳೂರಿನಲ್ಲಿದ್ದರು. ರವಿ ಅಲ್ಲೇ ಎಂಜಿನಿಯರಿಂಗ್ ನಾಲ್ಕನೆಯ ವರ್ಷದಲ್ಲಿ ಓದುತ್ತಿದ್ದನು. ಹೇಮಾಳಿಗೂ ಕಾಲೇಜು ವಿದ್ಯಾಭ್ಯಾಸ ಪಡೆಯಲು ಅದು ಉತ್ತಮವಾದ ಸ್ಥಳ ಎಂದು ನನ್ನ ಭಾವನೆಯಾಗಿತ್ತು. ಗಾಯತ್ರಿ ಮತ್ತು ನಾಗರಾಜ್ ಕೂಡ ಬೆಂಗಳೂರಿನಲ್ಲೇ ಇದ್ದರು. ಹಾಗಾಗಿ ಬಹಳ ಕಾಲವಾದ ಮೇಲೆ ಎಲ್ಲರೂ ಒಟ್ಟಿಗೆ ಇರಲು ಅವಕಾಶವಾಗಿದ್ದಿತು.

೧೦೨ ಬಿ.ಎಸ್.ಎಫ್. ಎರಡು ಪಾತ್ರಗಳನ್ನು ನಿರ್ವಹಿಸ ಬೇಕಾಗಿದ್ದಿತು. ಬಿ.ಎಸ್.ಎಫ್.ಗೆ ಹೊಸದಾಗಿ ಸೇರಿದವರಿಗೆ ತರಬೇತಿ ಕೇಂದ್ರವಾಗಿತ್ತು. ಎರಡನೆಯದಾಗಿ, ಗಲಭೆಯ ಪ್ರಸಂಗಗಳಲ್ಲಿ ಪೊಲೀಸ್ ಅಥವಾ ಸಿ.ಆರ್.ಪಿ. ಇವರಿಗೆ ನೆರವಾಗಲೋ ವಿಶೇಷ ಸಂದರ್ಭಗಳಲ್ಲಿ ವಿ.ಐ.ಪಿ.ಗಳಿಗೆ ಭದ್ರತೆಯನ್ನು ಒದಗಿಸಲೋ ಕರೆಯ ಬಹುದಾಗಿತ್ತು.

ಬೆಟಾಲಿಯನ್ ಇದ್ದುದು ಬೆಂಗಳೂರಿನಿಂದ ಕೆಲವು ಮೈಲು ದೂರದ ಯಲಹಂಕದಲ್ಲಿ, ಹೈದರಾಬಾದ್‌ಗೆ ಹೋಗುವ ಹೆದ್ದಾರಿಯಲ್ಲಿ. ರುಸ್ತುಂಜೀ ಅದನ್ನು ಪ್ಯಾರಡೈಸ್ ಬೆಟಾಲಿಯನ್ ಎಂದು ಕರೆಯುತ್ತಿದ್ದರು.

ಬಿ.ಎಸ್.ಎಫ್. ಆ ಪ್ರದೇಶವನ್ನು ಬೈರಾಮ್‌ಜೀ ಎಂಬ ಕುದುರೆ ತಳಿಗಾರ ಮತ್ತು ಜೂಜಿನಕುದುರೆಗಳ ಮಾಲೀಕನಿಂದ ಕೊಂಡಿದ್ದಿತು. ಆತ ಅಲ್ಲಿ ಮಾವು , ಗೋಡಂಬಿ ಮತ್ತು ತೆಂಗಿನಮರಗಳನ್ನು ೨೦೦ ಎಕರೆಗಳ ತುಂಬಾ ಬೆಳೆಸಿದ್ದನು. ಚೆನ್ನಾಗಿ ಬೆಳೆಸಿದ ಒಂದು ಗುಲಾಬಿ ತೋಟವಿತ್ತು. ಅನೇಕ ಬಹುಮಾನಗಳನ್ನು ಪಡೆದ ಗುಲಾಬಿ ತಳಿಗಳು ಅಲ್ಲಿ ಅಭಿವೃದ್ಧಿಗೊಂಡಿದ್ದವು. ನಾನು ಗೆರೆಯಿಂದ ಪ್ರಾರಂಭ ಮಾಡಬೇಕಾಗಿದ್ದಿರದ ಮೊದಲನೆಯ ಬೆಟಾಲಿಯನ್ನನ್ನು ಇಲ್ಲಿ ವಹಿಸಿಕೊಂಡಿದ್ದೆ. ಲೈನುಗಳನ್ನು ಚೆನ್ನಾಗಿ ಯೋಜಿಸುತ್ತಿದ್ದರು. ಉತ್ತಮವಾದ ಬ್ಯಾರಕ್ಕುಗಳಿದ್ದವು . ಉತ್ತಮ ಆಹಾರ ಅವರಿಗೆ ದೊರಕುತ್ತಿದ್ದಿತು. ಒಂದು ಹೊರಾಂಗಣ ಸಿನೆಮಾ ಥಿಯೇಟರ್ ಕೂಡ ಇದ್ದಿತು. ಆದರೆ ನಮ್ಮ ಮನರಂಜನೆಯ ಬಜೆಟ್ ತುಂಬ ಕಡಮೆಯಾಗಿದ್ದುದರಿಂದ ಹಳೆಯ ಹಿಂದಿ ಚಿತ್ರಗಳನ್ನು ಮಾತ್ರ ತರಿಸಿಕೊಳ್ಳಬಹುದಾಗಿತ್ತು.

ಇಲ್ಲಿ ನಮ್ಮ ನೆರೆಯಲ್ಲೇ ಏರ್‌ಫೋರ್ಸ್ ಇತ್ತು. ಬೆಂಗಳೂರು ಟ್ರೈನಿಂಗ್ ಕಮಾಂಡ್ ಮುಖ್ಯಸ್ಥಳ. ಇಲ್ಲಿ ಯಲಹಂಕದಲ್ಲಿ ಪೈಲಟ್‌ಗಳಿಗೆ ಎಲ್ಲಾ ಬಗೆಯ ವಾಯುಯಾನ ವಾಹನಗಳನ್ನೂ, ಡಕೋಟಗಳು, ಆವ್ರೋಗಳು, ಎಎನ್-೧೨ಗಳನ್ನೂ ಹಾರಿಸಲು ತರಬೇತಿ ನೀಡಲಾಗುತ್ತಿತ್ತು. ಇಡೀ ದಿನ ವಿಮಾನಗಳು ಮೇಲೇರುತ್ತಿದ್ದವು, ಕೆಳಗಿಳಿಯುತ್ತಿದ್ದವು. ರಸ್ತೆಯ ಆಚೆ ಬದಿಗೆ ಏರ್‌ಫೋರ್ಸ್ ಕಾಲೋನಿಯಿದ್ದಿತು. ಸೈನಿಕರಿಗೂ ಅಧಿಕಾರಿಗಳಿಗೂ ಅವರ ಕುಟುಂಬಗಳಿಗೂ ನೂರಾರು ಆಧುನಿಕ ಕಟ್ಟಡಗಳನ್ನು ನಿರ್ಮಿಸಲಾಗಿದ್ದಿತು.

ಹೇಮಾ ಮದರಾಸಿನ ಐಐಟಿ ಸೆಂಟ್ರಲ್ ಶಾಲೆಯಲ್ಲಿ ಫಿಸಿಕ್ಸ್, ಕೆಮಿಸ್ಟ್ರಿ ಮತ್ತು ಬಯಾಲಜಿಗಳನ್ನು ವಿಷಯವಾಗಿ ತೆಗೆದುಕೊಂಡು ಹೈಯರ್ ಸೆಕೆಂಡರಿ ಓದಿ ಮುಗಿಸಿದಳು. ಪ್ರಥಮದರ್ಜೆಯೇನೋ ದೊರಕಿತು. ಆದರೆ ಅಷ್ಟು ಅಂಕಗಳಿಂದ ಬೆಂಗಳೂರಿನಲ್ಲಿ ಮೆಡಿಕಲ್ ಕಾಲೇಜಿಗೆ ಪ್ರವೇಶ ದೊರಕುವುದು ಸಾಧ್ಯವಿರಲಿಲ್ಲ. ಪಾಂಡಿಚೆರಿ ಮತ್ತು ವೆಲ್ಲೂರುಗಳಲ್ಲಿನ ಕಾಲೇಜುಗಳ ಪ್ರವೇಶಪರೀಕ್ಷೆಗಳಿಗೂ ಆಕೆ ಹೋಗಿಬಂದಳು. ಆದರೆ ಅಲ್ಲೆಲ್ಲೂ ಪ್ರವೇಶ ದೊರಕಲಿಲ್ಲ.

ಡಾಕ್ಟರಾಗಲೇಬೇಕು ಎಂಬ ನಿರ್ಧಾರ ಮಾಡಿದ್ದುದರಿಂದ ಅವಳು ಮತ್ತೆ ಎರಡನೇ ಪಿಯುಸಿ ಪರೀಕ್ಷೆಗೆ ಕುಳಿತು ಮತ್ತೆ ಪ್ರಯತ್ನಿಸಬೇಕೆಂದು ಯೋಚಿಸಿದಳು. ಮಲ್ಲೇಶ್ವರದ ಎಂಇಎಸ್ ಕಾಲೇಜಿಗೆ ಸೇರಿದಳು. ಅದು ಬೆಂಗಳೂರಿನ ಅತ್ಯುತ್ತಮ ಕಾಲೇಜುಗಳಲ್ಲೊಂದು. ಶಾಲಾ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗಾಗಿ ಬಿ.ಎಸ್.ಎಫ್, ಒಂದು ಬಸ್ಸನ್ನು ಏರ್ಪಾಟು ಮಾಡಿದ್ದಿತು. ಅದು ೭ ಗಂಟೆಗೆ ಹೊರಟು ಸಂಜೆ ೬.೩೦-೭.೦೦ ಗಂಟೆಗೆ ಹಿಂದಿರುಗುತ್ತಿದ್ದಿತು. ಮೊದಲು ಹೇಮ ಇಳಿದುಕೊಳ್ಳುತ್ತಿದ್ದಳು, ಬೆಳಗ್ಗೆ ಕೊನೆಗೆ ಬಸ್ಸು ಹತ್ತುತ್ತಿದ್ದಳು. ಪಿ.ಯು.ಸಿ. ಬಹು ಸ್ಪರ್ಧಾತ್ಮಕವಾಗಿದ್ದುದರಿಂದ ತನ್ನ ಸಮಯವನ್ನು ಬಹಳ ಉಪಯುಕ್ತವಾಗಿ ಬಳಸಿಕೊಳ್ಳಬೇಕಾಗಿದ್ದಿತು. ಬಸ್ಸಿನಿಂದ ಇಳಿದವಳೇ ೧೦.೩೦ ಗಂಟೆಗೆ ತರಗತಿಗೆ ಹೋಗುವವರೆಗೂ ಲೈಬ್ರರಿಯಲ್ಲೋ, ಗಾಯತ್ರಿಯ ಗೆಳತಿ ಲತಾಳ ಮನೆಯಲ್ಲೋ ಓದಿಕೊಳ್ಳುತ್ತಿದ್ದಳು. ಸಂಜೆಯೂ ಅಷ್ಟೆ. ಇಡೀ ದಿನ ಬಿಡುವಿಲ್ಲದ ಕಾರ್ಯಕ್ರಮ.

ಮದರಾಸಿನಲ್ಲಿ ಎಚ್.ಎಸ್.ಸಿ. ಕೊನೆಯ ವರ್ಷದಲ್ಲಿ ಗಣಿತವಾಗಲೀ, ವಿಜ್ಞಾನವಾಗಲೀ ಪಠ್ಯವಾಗಿರಲಿಲ್ಲ. ಈಗ ಅವಳು ಅವನ್ನು ಓದಬೇಕಾಗಿತ್ತು. ಖಾಸಗಿಯಾಗಿ ಪಾಠ ಹೇಳಿಸಬಹುದೆ ಎಂದು ಯೋಚಿಸಿದೆವು. ಆದರೆ ತರಗತಿಗಳು, ಬಸ್ಸಿನಲ್ಲಿ ಹೋಗಿಬರುವುದು ಇವುಗಳ ನಡುವೆ ಸಮಯ ಎಲ್ಲಿತ್ತು?

ಒಂದು ವರ್ಷದ ಪಠ್ಯವಿಷಯವನ್ನು ಅವಳು ಸ್ವಂತವಾಗಿಯೇ ಕಲಿತು ಮುಗಿಸಬೇಕಾಗಿತ್ತು. ಅಚ್ಚರಿಯಾಗುವಷ್ಟು ದೃಢ ನಿರ್ಧಾರದಿಂದ ಹೇಮಾ ಅಭ್ಯಾಸಮಗ್ನಳಾದಳು. ಮೊದಲ ಟೆಸ್ಟಿನಲ್ಲಿ ಗಣಿತದಲ್ಲಿ ಕೇವಲ ಪಾಸಾಗಿದ್ದಳು. ಕ್ರಮೇಣ ಸುಧಾರಿಸಿದಳು. ೬೦% ಅಂಕಗಳನ್ನು ಪಡೆದಳು. ಇತರ ವಿಷಯಗಳಲ್ಲಿ ೮೫% , ಗಣಿತ ಇನ್ನೂ ಸಮಸ್ಯೆಯೇ ಆಗಿತ್ತು.

ಸರಸರನೆ ಹತ್ತು ತಿಂಗಳು ಉರುಳಿ ಹೋದವು. ಏಪ್ರಿಲ್‌ನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಗೆ ಕುಳಿತಳು. ಚೆನ್ನಾಗಿ ಉತ್ತರ ಬರೆದಿರುವುದಾಗಿ ಹೇಳಿದಳು. ಅವಳು ಮಾಡಿದ ಅಭ್ಯಾಸವೇನೋ ತೃಪ್ತಿಕರವಾಗಿತ್ತು. ತನ್ನ ಶಕ್ತಿಮೀರಿ ಅವಳು ಪ್ರಯತ್ನಿಸಿದ್ದಳು. ಫಲಿತಾಂಶ ದೇವರ ಕೈಗಳಲ್ಲಿ. ಕೊನೆಯ ಪಕ್ಷ ಒಂಭತ್ತು-ಹತ್ತು ತಿಂಗಳ ಅರೆತ ತಪ್ಪಿತ್ತು. ಫಲಿತಾಂಶಗಳಿಗಾಗಿ ಕಾದೆವು.

ಕೊನೆಗೊಮ್ಮೆ ಫಲಿತಾಂಶ ಬಂದಾಗ ನಮಗೆ ನಮ್ಮ ಕಣ್ಣುಗಳನ್ನೇ ನಂಬಲು ಸಾಧ್ಯವಾಗಲಿಲ್ಲ. ಅಷ್ಟು ಅಂಕಗಳನ್ನು ನಮ್ಮ ಕುಟುಂಬದಲ್ಲೇ ಯಾರೂ ಕಂಡಿರಲಿಲ್ಲ. ಗಣಿತದಲ್ಲಿ ೧೦೦% ಅಂಕಗಳು! ಭೌತವಿಜ್ಞಾನ ಮತ್ತು ರಸಾಯನ ವಿಜ್ಞಾನಗಳಲ್ಲಿ ತಲಾ ಶೇಖಡಾ ೯೬ ಮತ್ತು ಜೀವ ವಿಜ್ಞಾನದಲ್ಲಿ ಶೇಖಡಾ ೮೭. ನಾವು ಕನಸಿನಲ್ಲೂ ಕಾಣದಷ್ಟು ಉತ್ತಮವಾಗಿ ಹೇಮಾ ಸಾಧಿಸಿದ್ದಳು.

"ಈಗ ವೈದ್ಯಶಾಸ್ತ್ರ ಅಧ್ಯಯನಕ್ಕೆ ಪ್ರವೇಶ ನಿರಾಕರಿಸುವ ಧೈರ್ಯ ಯಾರಿಗಿದೆ!" ಎಂದು ನಾವು ಭಾವಿಸಿದೆವು.

ನಮ್ಮ ಭಾವನೆ ತಪ್ಪಾಗಿತ್ತು. ವಿಶ್ವವಿದ್ಯಾಲಯದ ಅಧಿಕಾರಿಗಳು ಬೆಂಗಳೂರು ಮೆಡಿಕಲ್ ಕಾಲೇಜಿಗೆ ಪ್ರವೇಶ ಕೋರಿದ ಹೇಮಳ ಅರ್ಜಿಯನ್ನು ನಿರಾಕರಿಸಿದರು. ಅವಳು ಕರ್ನಾಟಕದಲ್ಲಿ ಖಾಯಂ ಆಗಿ ನೆಲೆಸಿದವಳಲ್ಲ ಎನ್ನುವುದು ಆಕ್ಷೇಪ. ಮತ್ತೊಮ್ಮೆ ಅಧಿಕಾರಿಗಳು ತಮ್ಮ ದೇಶದ ರಕ್ಷಣೆಯಲ್ಲಿ ನಿರತನಾದ ತಂದೆಯಿಂದಾಗಿ ಮಕ್ಕಳಿಗೆ ಶಿಕ್ಷೆ ವಿಧಿಸಲು ಮುಂದಾದರು.

ಒಡನೆಯೇ ನಾನು ಮುಖ್ಯಕಾರ್ಯದರ್ಶಿ ಜಿ.ವಿ.ಕೆ.ರಾವ್ ಅವರಿಗೆ ಮನವಿ ಸಲ್ಲಿಸಿದೆ. ಬೆಳಗಾಂ ದಿನಗಳಿಂದಲೂ ಅವರನ್ನು ನಾನು ಬಲ್ಲೆ. ಆಗ ಅವರು ಅಲ್ಲಿ ಡೆಪ್ಯುಟಿ ಕಮಿಷನರ್ ಆಗಿದ್ದರು.

ಎರಡು ದಿನಗಳ ನಂತರ ನನ್ನ ಮಿತ್ರರೊಬ್ಬರು ತಮ್ಮ ಸಹೋದರನು ರೂಪಿಸಿದ ಹೊಸ ಬಗೆಯ ಶಸ್ತ್ರಚಿಕಿತ್ಸೆಯ ಯಶಸ್ಸು ಆಚರಿಸಲು ವುಡ್‌ಲ್ಯಾಂಡ್ಸ್ ಹೋಟೆಲಿನಲ್ಲಿ ಒಂದು ದೊಡ್ಡ ಪಾರ್ಟಿ ಏರ್ಪಡಿಸಿದ್ದರು. ಅದಕ್ಕೆ ನಾವೆಲ್ಲರೂ ಹೋಗಿದ್ದೆವು. ಅಲ್ಲಿಗೆ ಹೋದ ಕೆಲ ನಿಮಿಷಗಳಲ್ಲಿಯೇ ಯಾರು ಬರಬೇಕು!

ಜಿ.ವಿ.ಕೆ.ರಾವ್ ಮತ್ತು ಅವರ ಪತ್ನಿ! ನನ್ನನ್ನು ಕಂಡವರೇ ಅವರು ಹೇಳಿದರು,

"ವೇಣು, ನಿಮ್ಮ ಪತ್ರ ಬಂತು. ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ನಿಮ್ಮ ಮಗಳಿಗೆ ಹೇಗೆ ಪ್ರವೇಶವನ್ನು ನಿರಾಕರಿಸುತ್ತಾರೆ? ಸಂಬಂಧಿತ ಕಾರ್ಯದರ್ಶಿಗೆ ಫೋನ್ ಮಾಡಿ ನಾನು ಅಗತ್ಯ ಕ್ರಮ ಕೈಗೊಳ್ಳುತ್ತೇನೆ." ಆ ಕಾರ್ಯದರ್ಶಿಯವರು ಆ ಪಾರ್ಟಿಗೇ ಬಂದಿದ್ದರು. ರಾವ್ ಒಡನೆಯೇ ಅವರನ್ನು ಕರೆದರು. ಎಲ್ಲವನ್ನೂ ವಿವರಿಸಿದರು.

"ಆಕೆ, ಕರ್ನಾಟಕದಲ್ಲಿ ವಾಸವಾಗಿಲ್ಲ ಎಂದು ಯಾರು ಹೇಳುತ್ತಾರೆ? ನಾನು ಅದನ್ನು ಪ್ರಮಾಣಿಸುತ್ತೇನೆ. ಇಷ್ಟು ಅಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿನಿಯೊಬ್ಬಳಿಗೆ ನಾವು ಸೀಟು ಕೊಡದಿರುವುದು ಹೇಗೆ?"

ತಾನು ಅದನ್ನು ನೋಡಿಕೊಳ್ಳುವುದಾಗಿ ಕಾರ್ಯದರ್ಶಿ ಮಾತು ಕೊಟ್ಟರು.

ರಾವ್ ಹೇಮಾಗೆ ಹೇಳಿದರು, "ಎಲ್ಲಿ ಈಗ ಸ್ವಲ್ಪ ನಗು ನೋಡೋಣ. ನಾಡಿದ್ದು ಹೋಗಿ ನೋಡು, ಬಿ.ಎಂ.ಸಿ. ಪ್ರವೇಶದ ನೋಟೀಸುಬೋರ್ಡಿನಲ್ಲಿ ನಿನ್ನ ಹೆಸರಿರುತ್ತದೆ."

ಹೇಮಾ ಮೆಡಿಕಲ್ ಕಾಲೇಜಿಗೆ ಸೇರಿದ್ದು ಹೀಗೆ. ಬಿ.ಎಂ.ಸಿ. ಮಹಿಳಾ ಹಾಸ್ಟೆಲಿನಲ್ಲಿ ಅವಳು ತಂಗಿದ್ದಳು. ಪ್ರತಿ ದಿನ, ಬಿ.ಎಸ್.ಎಫ್. ಬಸ್ಸಿನಲ್ಲಿ ಹೋಗಿಬರಲು ಸಾಧ್ಯವಾಗುತ್ತಿರಲಿಲ್ಲ. ವ್ಯಾಸಂಗ ಅಷ್ಟು ಬಿರುಸಾಗಿತ್ತು. ಪ್ರತಿ ಶನಿವಾರ ಮತ್ತು ಭಾನುವಾರ ಮನೆಗೆ ಬರುತ್ತಿದ್ದಳು.

ತನ್ನ ಸಹ - ಸೋದರಿಯರು ಉಮಾ ಮತ್ತು ವಿಜಯರಂತೆಯೇ ಹೇಮಾಳೂ ಸಂಪ್ರದಾಯವನ್ನು ಪಾಲಿಸಿ ಐದು ವರ್ಷಗಳಲ್ಲೂ ಪ್ರಥಮ ಪ್ರಯತ್ನದಲ್ಲೇ ಪ್ರಥಮ ಶ್ರೇಣಿಯಲ್ಲಿಯೇ ಉತ್ತೀರ್ಣಳಾದಳು ಎಂದು ಹೇಳಲು ಹೆಮ್ಮೆಯಾಗುತ್ತದೆ.

ಜುಲೈ ೧೯೭೫ರಲ್ಲಿ ರವಿಯು ಎಂಜಿನಿಯರಿಂಗ್ ಮುಗಿಸಿದನು. ಮದರಾಸಿನ ಐಐಟಿಯ ಇಂಡಸ್ಟ್ರಿಯಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಎಂ.ಟೆಕ್., ಮಾಡಲು ಪ್ರವೇಶ ದೊರಕಿತು. ಪ್ರವೇಶದ ಜತೆಗೆ ಭಾರತ ಸರಕಾರದ ಒಂದು ವಿದ್ಯಾರ್ಥಿವೇತನವೂ ದೊರಕಿ ಅವನ ವೆಚ್ಚಗಳನ್ನೆಲ್ಲಾ ನಿರ್ವಹಿಸುವುದು ಸಾಧ್ಯವಾಯಿತು. ಕಾಲೇಜು ಆವರಣದಲ್ಲೇ ಒಂದು ಹಾಸ್ಟೆಲ್ಲಿನಲ್ಲಿ ಅವನು ತಂಗಿದ್ದನು.

ಗಾಯತ್ರಿ ಮತ್ತು ನಾಗರಾಜ್ ಕೂಡ ಬೆಂಗಳೂರಿಗೆ ಬಂದು ನಮ್ಮೊಂದಿಗೆ ಸ್ವಲ್ಪ ಸಮಯ ಇದ್ದರು. ಆಮೇಲೆ ಯಲಹಂಕದಲ್ಲಿ ಒಂದು ಮನೆಗೆ ಹೋದರು. ಸುಮಾಗೆ ನಾಲ್ಕುವರ್ಷ ವಯಸ್ಸು, ಸಕಾಲಕ್ಕೆ ಅವಳು ಏರ್‌ಫೋರ್ಸ್ ನಡೆಸುತ್ತಿದ್ದ ಕಿಂಡರ್‌ಗಾರ್ಟನ್ ಶಾಲೆಗೆ ಹೋಗತೊಡಗಿದಳು. ೧೯೭೭ ರ ಫೆಬ್ರವರಿಯಲ್ಲಿ ಸಂದೀಪ್ ಹುಟ್ಟಿದನು.

೩.೨. ಉಪಸಂಹಾರ

ಮೊದಲೇ ಹೇಳಿದಂತೆ ೧೦೨ನೆಯ ಬೆಟಾಲಿಯನ್ನಿನ ಮುಖ್ಯ ಕರ್ತವ್ಯಗಳು ತರಬೇತಿ ಮತ್ತು ಆಂತರಿಕ ಭದ್ರತೆ. ೧೯೭೫ರಲ್ಲಿ ದೇಶದಲ್ಲಿ ತುರ್ತುಪರಿಸ್ಥಿತಿ ಜಾರಿಗೆ ಬಂದಿತು. ಅದರೊಂದಿಗೆ ನಮ್ಮ ಆಂತರಿಕ ಭದ್ರತಾ ಜವಾಬ್ದಾರಿಗಳೂ ಹೆಚ್ಚಿದುವು. ಪೊಲೀಸರು ಕಟ್ಟುನಿಟ್ಟಾಗಿ ಕ್ರಮಕೈಗೊಳ್ಳುವ ಭರವಸೆಯಿಲ್ಲವೆನಿಸಿದಾಗ ನಾವು ಪ್ರವೇಶಿಸುತ್ತಿದ್ದೆವು.

ಒಂದು ಸಂದರ್ಭದಲ್ಲಿ ತಮಿಳುನಾಡು ಪೊಲೀಸರು ಮುಷ್ಕರ ಹೂಡಿದರು. ನಾವು ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆಗಾಗಿ ಸೇಲಂಗೆ ಹೋಗಬೇಕಾಯಿತು. ಮುಖ್ಯ ನಾಯಕರೆನಿಸಿಕೊಂಡವರನ್ನು ಬಂಧಿಸಿದೆವು. ರಸ್ತೆಗಳಲ್ಲಿ ಸಂಚಲನ ನಡೆಸಿದೆವು. ಬೇಗನೆ ಮುಷ್ಕರ ಇಂಗಿಹೋಯಿತು. ನಾವು ಬೆಂಗಳೂರಿಗೆ ಹಿಂದಿರುಗಿದೆವು.

ಇನ್ನೊಂದು ಸಾರಿ ಕೇರಳದ ಪಳ್ಳಿಪುರಂ ಎಂಬಲ್ಲಿ ಸಿ ಆರ್ ಪಿ ಎಫ್ ಪಡೆಯು ಮುಷ್ಕರ ನಡೆಸಿತು. ಅದು ಅವರ ತರಬೇತಿಯ ಕ್ಷೇತ್ರ. ಏನೋ ಒಂದು ಬೇಡಿಕೆಯೋ, ವ್ಯಾಜ್ಯವೋ ಇದ್ದುದರಿಂದ ಸೈನಿಕರು ಶಸ್ತ್ರಾಸ್ತ್ರ ಹಾಗೂ ಮದ್ದುಗುಂಡುಗಳನ್ನು ತೆಗೆದುಕೊಂಡು ತಮ್ಮ ಅಧಿಕಾರಿಗಳ ವಿರುದ್ಧವಾಗಿ ದಂಗೆಯೆದ್ದರು. ಕೆಲವೇ ಗಂಟೆಗಳಲ್ಲಿ ನಾವು ಅಲ್ಲಿದ್ದೆವು. ರಾತ್ರಿಯ ಕಗ್ಗತ್ತಲಲ್ಲಿ ಅವರ ಬ್ಯಾರಕ್ಕುಗಳನ್ನು ಸುತ್ತುಗಟ್ಟಿದೆವು. ಬೆಳಗಿನ ಜಾವ ಮೂರು ಗಂಟೆಗೆ ಶರಣಾಗತರಾಗಲು ಧ್ವನಿವರ್ಧಕಗಳ ಮೂಲಕ ಅವರಿಗೆ ಹೇಳಿದೆವು. ಅದಕ್ಕೆ ಉತ್ತರವಾಗಿ ಅವರು, 'ತಮ್ಮ ಬೇಡಿಕೆಗಳನ್ನು ಈಡೇರಿಸದೆ ಹೋದರೆ ಮತ್ತು ನಾವು ಹಿಂದಕ್ಕೆ ಹೋಗದಿದ್ದರೆ, ಅಧಿಕಾರಿಗಳನ್ನು ಕೊಂದು ಕಾದತೊಡಗುವುದಾಗಿ' ಬೆದರಿಕೆ ಹಾಕಿದರು. ಪರಿಸ್ಥಿತಿ ಬಹಳ ಬಿಗುವಾಗಿತ್ತು. ನಮಗೆ ಹಿನ್ನಡೆಯುವ ಉದ್ದೇಶವೇ ಇರಲಿಲ್ಲ. ಬಿ.ಎಸ್.ಎಫ್. ನಂತೆಯೇ ಸಿ.ಆರ್.ಪಿ.ಎಫ್. ಕೂಡ ಕೇಂದ್ರ ಸರಕಾರಕ್ಕೆ ಸೇರಿದ್ದ ಸೈನ್ಯ. ಇಷ್ಟು ಬೃಹತ್ ಪ್ರಮಾಣದ ಅಶಿಸ್ತನ್ನು ತೋರಿಸಿದ ಅವರನ್ನು ಸುಮ್ಮನೆ ಬಿಡಲು ಸಾಧ್ಯವೇ ಇರಲಿಲ್ಲ. ಹಲವು ಗಂಟೆಗಳ ಕಾಲದ ಸಂಧಾನ ಮತ್ತು ಮನವೊಲಿಕೆಗಳ ಅನಂತರ ಕೊನೆಗೊಮ್ಮೆ ಅವರು ಶರಣಾದರು. ಒಂದೇ ಒಂದು ಗುಂಡೂ ಹಾರಲಿಲ್ಲ. ನಮ್ಮ ಸೈನಿಕರು ಮತ್ತು ಅಧಿಕಾರಿಗಳು ಅಪಾರವಾದ ಸಹನೆಯನ್ನೂ, ಧೈರ್ಯವನ್ನೂ ಪ್ರದರ್ಶಿಸಿದರು. ಅವರು ಸ್ವಲ್ಪ ಚಂಚಲವಾಗಿದ್ದರೂ ಕಗ್ಗೊಲೆ ನಡೆದುಹೋಗುತ್ತಿತ್ತು.

ಹಿಂದೆ ಹಿಂದೀ ವಿರೋಧೀ ಗಲಭೆಗಳಾಗುತ್ತಿದ್ದಾಗ ಕೇಂದ್ರಕ್ಕೂ ತಮಿಳುನಾಡು ರಾಜ್ಯ ಸರಕಾರಕ್ಕೂ ನಡುವೆ ತೀವ್ರವಾದ ವೈಷಮ್ಯವುಂಟಾಗಿತ್ತು. ಆಗ ಅಲ್ಲಿ ಕರುಣಾನಿಧಿ ಮುಖ್ಯಮಂತ್ರಿಯಾಗಿದ್ದ ಡಿ.ಎಂ.ಕೆ. ಪಕ್ಷದ ಆಡಳಿತವಿದ್ದಿತು. ತುರ್ತು ಪರಿಸ್ಥಿತಿಯಿಂದಾಗಿ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದ್ದಿತು. ಪ್ರತಿಯೊಂದು ಸಾರ್ವಜನಿಕ ಸಭೆಯಲ್ಲೂ ಇಂದಿರಾಗಾಂಧಿಯವರ ಅವಹೇಳನ ನಡೆಯುತ್ತಿದ್ದಿತು.

ಒಂದು ಮಾದರಿ : ಒಂದು ಸಭೆಯಲ್ಲಿ ಮುಖಂಡರೊಬ್ಬರು ಹೇಳಿದರು: "ಇಲ್ಲಿ ಕೇಳಿ, ಸಮಾಜವನ್ನು ಸುಧಾರಿಸಿ ಬಡತನವನ್ನು ನಿರ್ಮೂಲ ಮಾಡಲು ಇಂದಿರಾಗಾಂಧಿ ಇಪ್ಪತ್ತು ಅಂಶಗಳ ಕಾರ್ಯಕ್ರಮ ಹಾಕಿದ್ದಾರೆ. ನಮ್ಮ ಕರುಣಾನಿಧಿಯವರ ಬಳಿ ಇಪ್ಪತ್ತಮೂರು ಅಂಶಗಳ ಕಾರ್ಯಕ್ರಮವಿದೆ. ಅವುಗಳಲ್ಲಿ ಒಂದು ವಿಧವಾ-ಪುನರ್ವಿವಾಹ. ವಿಧವೆಯೊಬ್ಬಳು ಮತ್ತೆ ಮದುವೆ ಮಾಡಿಕೊಂಡರೆ ನಮ್ಮ ಸರಕಾರವು ಗಂಡ-ಹೆಂಡತಿ ಇಬ್ಬರಿಗೂ ತಲಾ ೪೦೦೦ ರೂಪಾಯಿ ಕೊಡುತ್ತದೆ. ವಿಧವೆಯಾಗಿರುವ ಇಂದಿರಾಗಾಂಧಿ

ಮತ್ತೆ ಮದುವೆ ಮಾಡಿಕೊಂಡರೂ ನಮ್ಮ ಕರುಣಾನಿಧಿ, ಅವರಿಗೂ ೪೦೦೦ ರೂಪಾಯಿ ಕೊಡುತ್ತಾರೆ." ಡಿ.ಎಂ.ಕೆ. ನಾಯಕರು ವಾಚಾಳಿಗಳು, ಇಂತಹ ಜೋಕುಗಳನ್ನು ಜನರು ಕೇಳಿ ನಕ್ಕು ಕೇಕೆ ಹಾಕುತ್ತಿದ್ದರು. ಬೇರೆ ಯಾವುದೇ ರಾಜ್ಯದಲ್ಲಾಗಿದ್ದರೆ ಅವರೆಲ್ಲರನ್ನೂ ತಕ್ಷಣವೇ ಬಂಧಿಸಬಹುದಾಗಿತ್ತು.

ಒಂದು ಹಂತದಲ್ಲಿ ಶ್ರೀಮತಿ ಗಾಂಧಿಯವರು ಡಿಎಂಕೆ ಸರಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಡಳಿತವನ್ನು ಹೇರಲು ನಿರ್ಧರಿಸಿದರು. ಪ್ಯಾರಾಮಿಲಿಟರಿ ಪಡೆಗಳನ್ನು ಆಯಕಟ್ಟಿನ ಸ್ಥಳಗಳಿಗೂ, ದೊಂಬಿಯಾಗಬಹುದಾದ ಸೂಕ್ಷ್ಮಪ್ರದೇಶಗಳಿಗೂ ಹೋಗಿ ನಿಲ್ಲುವಂತೆ ಆದೇಶಿಸಲಾಯಿತು. ಯಾವುದೇ ಕಾನೂನು ಸುವ್ಯವಸ್ಥೆಯು ಭಂಗವಾಗದಂತೆ ನೋಡಿಕೊಳ್ಳಬೇಕಾಗಿತ್ತು.

ನಮಗೆ ಮತ್ತೆ ಸೇಲಂ ಅನ್ನು ವಹಿಸಲಾಯಿತು. ಕೆಲವೇ ಗಂಟೆಗಳಲ್ಲಿ ನಾವು ಅಲ್ಲಿಗೆ ಸೇರಿ ನಗರದ ಹೊರಗೆ ನಿಂತೆವು. ನಾವು ಬೆಟಾಲಿಯನ್ನಿನಷ್ಟು ಜನರು ಬಂದಿರುವುದಾಗಿಯೂ ಯಾವುದೇ ಕ್ಲಿಷ್ಟವಾದ ಸಂದರ್ಭ ಎದುರಾದರೂ ನಾವು ಸಿದ್ಧರಾಗಿರುವುದಾಗಿಯೂ ಕಲೆಕ್ಟರ್ ಅವರಿಗೆ ತಿಳಿಯಪಡಿಸಿದೆ. ಅಂದು ರಾತ್ರಿ ರಾಷ್ಟ್ರಪತಿ ಆಡಳಿತವನ್ನು ಪ್ರಕಟಿಸಲಾಯಿತು. ನಗರದ ಸೂಕ್ಷ್ಮಸ್ಥಳಗಳಿಗೆ ನನ್ನ ಜನರನ್ನು ನೇಮಿಸಿದ್ದೆ. ಎಚ್ಚರಿಕೆಯ ಕ್ರಮವಾಗಿ ಪೊಲೀಸ್ ಶಸ್ತ್ರಾಗಾರಗಳನ್ನೂ ವಾಹನಗಳನ್ನೂ ವಶಕ್ಕೆ ತೆಗೆದುಕೊಳ್ಳಲಾಯಿತು. ಕೆಲವು ಡಿಎಂಕೆ ನಾಯಕರನ್ನೂ, ಗೂಂಡಾಗಿರಿಯನ್ನೂ ಹಿಂಸಾ ಕೃತ್ಯಗಳನ್ನೂ ಪ್ರಚೋದಿಸುವಂತಹ ಜನರನ್ನೂ ಬಂಧಿಸುವುದು ಒಳ್ಳೆಯದು ಎಂದು ಕಲೆಕ್ಟರ್ ಅಭಿಪ್ರಾಯವಾಗಿತ್ತು.

ಆದರೆ ಮಾರನೆಯ ದಿನ ಮುಹೂರ್ತದ ದಿನ. ಅನೇಕ ನಾಯಕರು ತಮ್ಮ ಮಕ್ಕಳ ಮದುವೆ ಸಮಾರಂಭಗಳಲ್ಲಿ ತೊಡಗಿರುವ ದಿನ. ಅಂದು ಆ ಸಮಾರಂಭಗಳಿಗೆ ತಡೆಯಾಗದಂತೆ, ಧಾರ್ಮಿಕ ಭಾವನೆಗಳನ್ನು ಕೆರಳಿಸದಂತೆ ಅವರನ್ನು ಬಂಧಿಸುವುದು ಹೇಗೆ ? ಧರ್ಮದ ಹೆಸರಿನಲ್ಲಿ ಗಲಭೆಯನ್ನು ಸೃಷ್ಟಿಸುವುದು ತುಂಬಾ ಸುಲಭ. ಅದಕ್ಕೆ ಒಂದು ನೆಪ ಒದಗಿಸಲು ನಮಗೆ ಇಷ್ಟವಿರಲಿಲ್ಲ. ಮುಹೂರ್ತವಿದ್ದುದು ೧೦ ಗಂಟೆಗೆ. ಅದು ಮುಗಿದೊಡನೆ ಆ ತಂದೆಯರನ್ನು ಏನೋ ಒಂದು ನೆಪದಲ್ಲಿ ಹೊರಕ್ಕೆ ಕರೆಸಿ , ಸದ್ದಿಲ್ಲದೆ ಅವರನ್ನು ಬಂಧಿಸುವುದು ಎಂದು ನಾನು ಆಲೋಚಿಸಿದೆ.

ಅದು ಹಾಗೆಯೇ ನಡೆಯಿತು. ಸಾಮಾನ್ಯ ನಾಗರಿಕ ಉಡುಪುಗಳಲ್ಲಿ ನಮ್ಮ ಜನರು ನಗರದ ಎಲ್ಲಾ ಮದುವೆ ಚಪ್ಪರಗಳಿಗೂ ಹೋದರು. ಮದುವೆ ಮುಗಿದ ಮೇಲೆ ತಂದೆಗೆ ಯಾರೋ ಹೊರಗೆ ಕರೆಯುತ್ತಿದ್ದಾರೆ ಎಂದು ವಿನಯವಾಗಿ ಹೇಳಿದರು. ಆತ ಹೊರಕ್ಕೆ ಬಂದೊಡನೆ ಪಿಸ್ತೂಲು ತೋರಿಸಿ, ಅವರನ್ನು ಸೆರೆ ಹಿಡಿದೊಯ್ಯಲಾಯಿತು. ಅರ್ಧಗಂಟೆ ಅವಧಿಯಲ್ಲಿ ನೂತನ ವಧೂವರರ ಸು ೨೫-೩೦ ಜನ ತಂದೆಯರು ಹೀಗೆ ನಮ್ಮ ವಶಕ್ಕೆ ಬಂದರು. ಈ ವೇಳೆಗೆ ನಮ್ಮ ಪಡೆಗಳು ನಗರದ ಎಲ್ಲಾ ಸೂಕ್ಷ್ಮ ಪ್ರದೇಶಗಳಲ್ಲೂ ನಿಂತವು. ನಮ್ಮೊಂದಿಗೆ ಸಹಕರಿಸಿ ಬೇಕೆಂದು ಪೊಲೀಸರಿಗೆ ಹೇಳಲಾಯಿತು. ನಾವು ಎಷ್ಟು ಚುರುಕಾಗಿ ನಿಯಂತ್ರಣಕ್ಕೆ ತಂದುಕೊಂಡಿದ್ದೆವೆಂದರೆ ಸಹಕರಿಸದೆ ಅವರಿಗೆ ಬೇರೆ ಮಾರ್ಗವೇ ಉಳಿದಿರಲಿಲ್ಲ.

ನಾವು ಸೇಲಂನಲ್ಲಿ ಒಟ್ಟು ಮೂರು ತಿಂಗಳಿದ್ದೆವು. ಈ ಅವಧಿಯಲ್ಲಿ ಗಂಭೀರವಾದ ಯಾವುದೇ ಘಟನೆ ಅಥವಾ ಗಲಭೆ ನಡೆಯಲಿಲ್ಲ. ನಗರದಲ್ಲೂ ಅಷ್ಟೆ , ಸುತ್ತಮುತ್ತಿನ ಜಿಲ್ಲಾ ಪ್ರದೇಶದಲ್ಲೂ ಅಷ್ಟೆ.

ತುರ್ತುಪರಿಸ್ಥಿತಿಯನ್ನು ತೆಗೆದ ಮೇಲೆ, ಷಹಾ ಆಯೋಗವು ಆ ಸಂದರ್ಭದ ದೌರ್ಜನ್ಯವನ್ನು ಕುರಿತು ವಿಚಾರಣೆ ಪ್ರಾರಂಭ ಮಾಡಿದ ಮೇಲೆ, ಅವರು ಬೆಂಗಳೂರಿಗೆ ಬಂದಿದ್ದಾಗ ಅವರಿಗೆ ಭದ್ರತೆ ಒದಗಿಸುವ ಕೆಲಸ ನಮ್ಮದಾಯಿತು. ಅಲ್ಲದೆ ಕ್ರಿಕೆಟ್ ಟೆಸ್ಟ್ ಪಂದ್ಯಗಳಿಗೂ ನಾವು ಭದ್ರತೆಯನ್ನು ಒದಗಿಸಿದೆವು.

ಇದು ಸುಸ್ಥಿತಿಯಲ್ಲಿದ್ದ ಬೆಟಾಲಿಯನ್ ಆದರೂ ಇನ್ನೂ ಮಾಡಬೇಕಾದ ಕೆಲಸ ಬೇಕಾದಷ್ಟಿದ್ದಿತು. ಕಾರೇಹಳ್ಳಿಯಲ್ಲಿ ನಮಗೆ ಸೇರಿದ ೨೦೦೦ ಎಕರೆ ಪ್ರದೇಶವು ಹಲವು ಬಗೆಯ ಭೂ ಸ್ವರೂಪವನ್ನೊಳಗೊಂಡಿತ್ತು. ಇದನ್ನು ಉಪಯೋಗಿಸಿಕೊಂಡು ನಿಜವಾಗಿಯೂ ತುಂಬಾ ಕಷ್ಟವಾಗುವ ತಡೆ ಹಾದಿಯನ್ನು (obstacle course) ರೂಪಿಸಿದೆವು. ನಮ್ಮ ಅಭ್ಯರ್ಥಿಗಳೆಲ್ಲರೂ ಅಲ್ಲಿ ಕ್ರಮವಾಗಿ ಅಭ್ಯಾಸ ಮಾಡಬೇಕಾಯಿತು. ಫೈರಿಂಗ್ ರೇಂಜನ್ನು ಆಧುನೀಕರಿಸಿದೆವು. ಯಲಹಂಕದ ಬೆಟಾಲಿಯನ್ ಕೇಂದ್ರ ಕಚೇರಿಯಲ್ಲಿದ್ದ ಗುಲಾಬಿ ತೋಟಕ್ಕೆ ನೂತನ ತಳಿಯ ಗುಲಾಬಿಗಳನ್ನು ಸೇರಿಸಿದೆವು. ಎಲ್.ಕೆ. ವರ್ಮ ಎಂಬ ಒಬ್ಬ ಅಧಿಕಾರಿ ಕೃಷಿಯಲ್ಲಿ ತರಬೇತಿ ಪಡೆದಿದ್ದರು. ಅವರಿಗೆ ಗುಲಾಬಿ ತೋಟದ ಜವಾಬ್ದಾರಿಯನ್ನು ವಹಿಸಿದೆ. ಹಾಗೆಯೇ ತೆಂಗು, ಗೋಡಂಬಿ ಮತ್ತು ಮಾವಿನ ಮರಗಳ ಅಭಿವೃದ್ಧಿಯನ್ನೂ ಅವರು ನೋಡಿಕೊಂಡರು. ಹೊಸ ಆಟದ ಬಯಲುಗಳನ್ನು ನಿರ್ಮಿಸಿದೆವು. ವಾಲಿಬಾಲ್ ಮತ್ತು ಬ್ಯಾಸ್ಕೆಟ್‌ಬಾಲ್ ಕೋರ್ಟುಗಳು ಸಿದ್ಧವಾದವು. ಪ್ರಥಮ ದರ್ಜೆಯ ಪೆರೇಡ್ ಬಯಲು ನಿರ್ಮಾಣ ವಾಯಿತು. ಅದು ಎಷ್ಟು ಚೆನ್ನಾಗಿದ್ದಿತೆಂದರೆ ಸೈನ್ಯವು ಹೊಟ್ಟೆಕಿಚ್ಚು ಪಡಬಹುದಾದಷ್ಟು . ಈ ಅನೇಕ ಯೋಜನೆಗಳನ್ನು ಆಡಿಟರು, ನಮ್ಮ ಡಿಐಜಿ ಕೂಡ ಟೀಕಿಸಿದ್ದುಂಟು. ಆದರೆ ನಾವು ಮಾಡಿದುದನ್ನು ಡೈರೆಕ್ಟರ್ ಜನರಲ್ ಅವರೇ ನೋಡಿ, ತುಂಬ ಮೆಚ್ಚಿದಾಗ ಎಲ್ಲ ಟೀಕಾಕಾರರ ಬಾಯಿ ಕಟ್ಟಿತು.

ಕೊನೆಯದಾಗಿ ಒಂದು ಸರ್ವಧರ್ಮ ಪ್ರಾರ್ಥನಾ/ಧ್ಯಾನ ಮಂದಿರವನ್ನು ನಮ್ಮ ಸೈನಿಕರಿಗಾಗಿ ಕಟ್ಟಿದೆವು. ಅದಕ್ಕಾಗಿ ತುಂಬಾ ಹಣ ಸಂಗ್ರಹಿಸಬೇಕಾಯಿತು. ಅದೃಷ್ಟವಶಾತ್, ರಾಜಕಪೂರರ 'ಸತ್ಯಂ, ಶಿವಂ, ಸುಂದರಂ' ಎಂಬ ಹೊಸ ಹಿಂದೀ ಚಿತ್ರದ ಬೆನೆಫಿಟ್ ಪ್ರದರ್ಶನವನ್ನು ಏರ್ಪಡಿಸುವುದು ಸಾಧ್ಯವಾಯಿತು. ಬೆಂಗಳೂರಿನ

ಆರ್ಚ್‌ಬಿಷಪ್ ಅವರೂ ಸಂಸ್ಕೃತ ಕಾಲೇಜಿನ ಪ್ರಾಂಶುಪಾಲರಾದ ವೇ||ಬ್ರ||ಶ್ರೀ ನರಸಿಂಹಮೂರ್ತಿಯವರೂ ಉದ್ಘಾಟನೆ ನೆರವೇರಿಸಿದರು. ನನಗೆ ಶ್ರೀ ಸತ್ಯಸಾಯಿಬಾಬಾ ಬರಬೇಕೆಂದು ಆಸೆಯಿತ್ತು. ಆದರೆ ಕೊನೆಗಳಿಗೆಯಲ್ಲಿ ಅವರಿಗೆ ಬರಲು ಅನನುಕೂಲವಾಯಿತು.

೧೯೭೭ರಲ್ಲಿ ರವಿಯು ಎಂ.ಟೆಕ್. ಪದವಿಯನ್ನು ಪಡೆದು ಇಬ್‌ಕಾನ್ (IBCON) ಎಂಬ ಒಂದು ಕನ್ಸಲ್ಟೆನ್ಸಿ ಸಂಸ್ಥೆಗೆ ಸೇರಿದನು. ಅವರಿಗಾಗಿ ಮದರಾಸು, ಪಾಂಡಿಚೆರಿ, ಬೆಂಗಳೂರು ಮತ್ತು ಪುಣೆಗಳಲ್ಲಿ ಕೆಲಸಗಳನ್ನು ನಿರ್ವಹಿಸಿದನು. ಕೊನೆಗೆ ಈ ಅಲೆತದ ಜೀವನ ಸಾಕಾಗಿ ಮುಂಬಯಿಯ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಅನ್ನು ಸೇರಿದನು. ಉದ್ದಕ್ಕೂ ರವಿ ಉನ್ನತ ವ್ಯಾಸಂಗಕ್ಕಾಗಿ ಅಮೆರಿಕಕ್ಕೆ ಹೋಗಲು ಪ್ರಯತ್ನಿಸುತ್ತಲೇ ಇದ್ದನು. ೧೯೮೦ರಲ್ಲಿ ಆಸ್ಟಿನ್‌ನಲ್ಲಿರುವ ಟೆಕ್ಸಾಸ್ ವಿಶ್ವವಿದ್ಯಾನಿಲಯವು ಮ್ಯಾನೇಜ್‌ಮೆಂಟ್‌ನಲ್ಲಿ ಪಿಎಚ್.ಡಿ., ಅಧ್ಯಯನಕ್ಕಾಗಿ ಪ್ರವೇಶವನ್ನೂ ಹಣದ ನೆರವನ್ನೂ ನೀಡಿತು. ಅದನ್ನು ಒಪ್ಪಿಕೊಂಡು ರವಿ ಆಗಸ್ಟ್ ತಿಂಗಳಲ್ಲಿ ಅಮೆರಿಕಕ್ಕೆ ಹೋದನು.

ರವಿ ಪ್ರಯಾಣ ಮಾಡಿದ ಕೆಲವು ತಿಂಗಳ ಅನಂತರ ಹೇಮಾಳಿಗೆ ಒಬ್ಬ ವರನನ್ನು ಹುಡುಕಿದೆವು . ಪ್ರಸಾದ್ ಅಮೆರಿಕದಿಂದ ಬಂದಿದ್ದ. ಇಬ್ಬರೂ ಪರಸ್ಪರ ಒಪ್ಪಿದರು. ಕೆಲವೇ ದಿನಗಳಲ್ಲಿ ನಮ್ಮ ಸ್ಥಳದಲ್ಲೇ ಮದುವೆಯ ವ್ಯವಸ್ಥೆ ಮಾಡಿದೆವು. ಮುಖ್ಯ ಕಾರ್ಯಕ್ರಮವನ್ನು ನಾವು ಹೊಸದಾಗಿ ನಿರ್ಮಿಸಿದ ಪ್ರಾರ್ಥನಾಮಂದಿರಲ್ಲಿ ನಡೆಸಿದೆವು. ಪ್ರಸಾದ್ ಬೇಗ ಹಿಂದಿರುಗಬೇಕಾಗಿತ್ತು. ಆಗ ಹೇಮಾ ಇಂಟರ್ನ್‌ಶಿಪ್ ಮಾಡುತ್ತಿದ್ದಳಾಗಿ ಆತನೊಂದಿಗೆ ತಕ್ಷಣವೇ ಹೋಗಲು ಸಾಧ್ಯವಾಗಲಿಲ್ಲ. ಕೆಲವು ತಿಂಗಳ ಅನಂತರ ಹೋದಳು. ಆಮೇಲೆ ಅಲ್ಲಿಯೇ ಪೀಡಿಯಾಟ್ರಿಕ್ಸ್‌ನಲ್ಲಿ ರೆಸಿಡೆನ್ಸಿಯನ್ನು ಮುಗಿಸಿ ಪೀಡಿಯಾಟ್ರಿಕ್ ಕಾರ್ಡಿಯಾಲಜಿಯಲ್ಲಿ ಫೆಲೋಶಿಪ್ ಮಾಡಿದಳು. ಈಗ ಅವಳು ನ್ಯೂಜೆರ್ಸಿಯಲ್ಲಿ ಪೀಡಿಯಾಟ್ರಿಕ್ ಕಾರ್ಡಿಯಾಲಜಿಸ್ಟ್ ಆಗಿದ್ದಾಳೆ. ೧೪ ವರ್ಷಗಳಿಂದ ಅವರು ಅಲ್ಲಿ ವಾಸವಾಗಿದ್ದಾರೆ. ನಾನು ಕೇಳದೆಯೆ ನನಗೆ ಅನೇಕ ಸೇವಾ ಮುಂದುವರಿಕೆಗಳು ದೊರೆತಿವೆ. ಹೀಗೆ ನಾನು ಬೆಂಗಳೂರಿನಲ್ಲಿ ಹೆಚ್ಚು ಕಡಮೆ ಎಂಟು ವರ್ಷಗಳನ್ನು ಕಳೆದಿದ್ದೇನೆ. ಹಾಸನವನ್ನು ಬಿಟ್ಟು ಓದಲು ಮೈಸೂರಿಗೆ ಹೋದಾಗಿನಿಂದ ಯಾವುದೇ ಒಂದು ಸ್ಥಳದಲ್ಲಿ ಅತಿ ಹೆಚ್ಚು ಕಾಲ ಕಳೆದದ್ದೆಂದರೆ ಇಲ್ಲೇ.

೩೨ ವರ್ಷ ಸೇವೆ ಸಲ್ಲಿಸಿ ೧೯೮೧ರ ಸೆಪ್ಟೆಂಬರ್ ೨೩ ರಂದು ಸೇವೆಯಿಂದ ನಿವೃತ್ತನಾದೆ. ಪರೀಕ್ಷೆಗಳು, ಕಷ್ಟಗಳು, ಅಗಲಿಕೆಗಳು ಇದ್ದರೂ ಸೈನ್ಯಜೀವನವನ್ನು ನಾನು ಸಂತೋಷವಾಗಿ ಸವಿದಿದ್ದೇನೆ. ಅದರಲ್ಲಿ ಸೇವೆ ಸಲ್ಲಿಸುವ ಅವಕಾಶ ದೊರೆತುದು ನನ್ನ ಭಾಗ್ಯವೆಂದು ಭಾವಿಸಿದ್ದೇನೆ. ನಿವೃತ್ತನಾಗುವುದು ಸುಲಭವಾಗಿರಲಿಲ್ಲ. ನನಗೆ ಬಹಳ ವಿಷಾದವಾಗಿತ್ತು.

೩೩. ಮತ್ತೆ ಸೇರಿಸಿದ್ದು

ಆದರೆ ವ್ಯಕ್ತಿಯು ಇಂಥದಕ್ಕೆಲ್ಲ ಹೊಂದಿಕೊಳ್ಳಲೇ ಬೇಕಷ್ಟೆ. ರಾಜಾಜಿನಗರದಲ್ಲಿ ಒಂದು ಸಣ್ಣ ಮನೆಗೆ ಹೋದೆವು. ಸಾವಿತ್ರಿಯ ಅಕ್ಕನ ಮನೆಗೆ ಒಂದು ರಸ್ತೆ ಹಿಂದೆ ಈ ಮನೆ ಇತ್ತು. ಹತ್ತಿರದಲ್ಲೇ ಮಲ್ಲೇಶ್ವರದಲ್ಲಿ ಗಾಯತ್ರಿ ಒಂದು ಫ್ಲಾಟಿನಲ್ಲಿದ್ದಳು. ಅವಳೀಗ ಉಡುಪುಗಳನ್ನು ತಯಾರಿಸಿ ರಫ್ತುಮಾಡುತ್ತಿದ್ದ ಕಂಪನಿಗಾಗಿ ಕೆಲಸಮಾಡುತ್ತಿದ್ದಳು. ಆಗಾಗ ಯೂರೋಪಿನಾದ್ಯಂತ ಅವಳು ಪ್ರವಾಸ ಮಾಡಬೇಕಾಗುತ್ತಿತ್ತು.

ಸುಮ ಮತ್ತು ಸಂದೀಪ ಇವರಿಗಾಗಿ ನಾವು ಹೆಚ್ಚು ಸಮಯವನ್ನು ವಿನಿಯೋಗಿಸಿದೆವು. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಬಳಿ ಇದ್ದ ಕೇಂದ್ರೀಯ ಶಾಲೆಗೆ ಸುಮಾಳನ್ನು ಸೇರಿಸಿದೆ. ಧಾರ್ಮಿಕ, ಆಧ್ಯಾತ್ಮಿಕ ಪ್ರವಚನಗಳು, ಉಪನ್ಯಾಸಗಳು, ಕುಂಡಲಿನೀಯೋಗ, ಸೋಹಂಜಪ, ಸಹಜ ಯೋಗ ಇಂಥವಕ್ಕೆ ನಾನು ಹೋಗತೊಡಗಿದೆ. ಶ್ರೀ ಸಾಯಿಬಾಬಾ ಅವರಲ್ಲಿ ಭಕ್ತಿಯಿತ್ತು. ಸಾಧ್ಯವಾದಾಗಲೆಲ್ಲ ವೈಟ್‌ಫೀಲ್ಡ್‌ಗೆ ಹೋಗುತ್ತಿದ್ದೆ.

ನಿವೃತ್ತನಾದ ಕೆಲವು ತಿಂಗಳ ಅನಂತರ ಮದನ ಗೋಪಾಲಸಿಂಗ್ ಅವರಲ್ಲಿಗೆ ಹೋಗಿ, ಅವರ ಮೂಲಕ ಸದ್ಗುರು ಅವರು ಬೆಂಗಳೂರಿಗೆ ಆಗಮಿಸಿದ್ದಾಗ, ಬಿಯಾಸ್ ಸತ್ಸಂಗಕ್ಕೆ ದೀಕ್ಷೆ ಪಡೆದುಕೊಂಡೆ. ಹಲವು ಬಗೆಯ ಧ್ಯಾನ, ಪ್ರಾರ್ಥನೆಗಳು ಅಭ್ಯಾಸವಾದುವು. ಇಂದಿಗೂ ಅವುಗಳನ್ನು ನಡೆಸುತ್ತಿದ್ದೇನೆ. ಕೆಲಕಾಲಾನಂತರ ಬೀಯಾಸ್‌ನಲ್ಲಿ ಸಾವಿತ್ರಿಯೂ ದೀಕ್ಷೆ ಪಡೆದಳು.

೧೯೮೪ರಲ್ಲಿ ಸಾವಿತ್ರಿಗೆ ಅಮೆರಿಕಕ್ಕೆ ಹೋಗುವ ಅವಕಾಶ ದೊರಕಿತು. ೧೯೮೦ರಲ್ಲಿ ಹೋದಾಗಿನಿಂದ ರವಿ ಮನೆಗೆ ಬರಲು ಸಾಧ್ಯವಾಗಿರಲಿಲ್ಲ. ಅವನನ್ನು ನೋಡಬೇಕೆಂಬ ಕಾತರ ಸಾವಿತ್ರಿಗೆ ಅಧಿಕವಾಗಿತ್ತು. ಅವರ ಭೇಟಿಯನ್ನು ಹೇಮಾ ಪ್ರಾಯೋಜಿಸಿದಳು. ೧೯೮೪ರ ನವೆಂಬರಿನಲ್ಲಿ ಸಾವಿತ್ರಿ ಅಲ್ಲಿಗೆ ಹೋಗಿ ಕೆಲವು ತಿಂಗಳು ಹೇಮಾಳೊಂದಿಗೂ, ಕೆಲವು ತಿಂಗಳು ರವಿಯೊಂದಿಗೂ ಇದ್ದು ಬಂದಳು. ಅವಳು ಅಲ್ಲಿದ್ದಾಗಲೇ ೧೯೮೫ರ ಆಗಸ್ಟ್‌ನಲ್ಲಿ ಸಂಹಿತಾ ಹುಟ್ಟಿದಳು. ಆಮೇಲೂ ಸಾವಿತ್ರಿ ಅನೇಕ ಸಾರಿ ಅಮೆರಿಕಕ್ಕೆ ಹೋಗಿ ಬಂದಿದ್ದಾಳೆ.

ಇನ್ನೊಂದು ಮಗು ವಿಕ್ರಮ್ ೧೯೮೮ರ ಜೂನ್‌ನಲ್ಲಿ ಹುಟ್ಟಿದನು. ನಾನೂ ಅಲ್ಲಿಗೆ ಮೂರು ಸಾರಿ ಹೋಗಿ ಬಂದೆ.

ಕೆಲವು ವರ್ಷಗಳ ಅನಂತರ, ೧೯೮೬ರಲ್ಲಿ ಎಂದು ಕಾಣುತ್ತದೆ, ಗಾಯತ್ರಿಗೆ ಮುಂಬಯಿಯಲ್ಲಿ ಒಂದು ಕೆಲಸ ಸಿಕ್ಕಿತು. ಅಲ್ಲಿಗೆ ಹೋಗಲು ಅವಳು ತೀರ್ಮಾನಿಸಿದಳು. ಆ ವೇಳೆಗೆ ನನಗೆ ಸ್ವಾತಂತ್ರ್ಯ

ಹೋರಾಟಗಾರರ ರೈಲ್ವೆ ಪಾಸು ಸಿಕ್ಕಿತು. ಹಾಗಾಗಿ ಬೆಂಗಳೂರಿಗೂ ಮುಂಬಯಿಗೂ ಇಷ್ಟ ಬಂದಷ್ಟು ಸಲ ಸುಖವಾಗಿ ಹೋಗಿ ಬರಬಹುದಾಯಿತು. ಹೆಚ್ಚು ಕಾಲ ಮುಂಬಯಿಯಲ್ಲೇ ಕಳೆಯುತ್ತಾ ಸಮಾರಂಭಗಳಿಗೆ ಮಾತ್ರ ಬೆಂಗಳೂರಿಗೆ ಬರುತ್ತಿದ್ದೆ. ಸುಮ ಈಗ ಹೈಸ್ಕೂಲಿನಲ್ಲಿದ್ದಳು. ತನ್ನನ್ನು ತಾನು ನೋಡಿಕೊಳ್ಳಲು ಶಕ್ತಳಾಗಿದ್ದಳು. ಸಂದೀಪನ ಕಡೆಗೆ ಹೆಚ್ಚು ಗಮನ ಕೊಡಬೇಕಾಗಿದೆ ಎನಿಸಿತು. ಸೈನ್ಯಕ್ಕೆ ಸೇರಲು ಅವನಿಗೆ ತುಂಬಾ ಆಸಕ್ತಿಯಿತ್ತು. ಅದಕ್ಕೆ ನಾನು ಅವನನ್ನು ಸಿದ್ಧಪಡಿಸಬಹುದೆಂದು ತೋರಿತು. ಅಂಧೇರಿಯಲ್ಲೊಂದು ಈಜುಕೊಳವಿತ್ತು. ಅವನಿಗೆ ಸಮಯಾವಕಾಶವಾದಾಗಲೆಲ್ಲ, ಅಲ್ಲಿ ಅವನಿಗೆ ಈಜು ಕಲಿಸಿದೆ. ಕುದುರೆ ಸವಾರಿಯನ್ನು ಕಲಿಸಲೂ ಏರ್ಪಾಟು ಮಾಡಿದೆ. ಅವನು ಬೇಸಿಗೆ ರಜೆಯಲ್ಲಿ ಟೆನ್ನಿಸ್ ಆಡುತ್ತಿದ್ದ. ಕ್ರಮತಪ್ಪದೆ ವ್ಯಾಯಾಮ ಮಾಡಿ ಶಕ್ತಿಯನ್ನು ಬೆಳೆಸಿಕೊಳ್ಳುವಂತೆ ಮಾಡಲು ಪ್ರಯತ್ನಿಸಿದೆ.

೧೯೪೯ರಲ್ಲಿ ಸೈನ್ಯಕ್ಕೆ ಸೇರಿದ ಮೇಲೆ ನನ್ನ ಸೇವೆಯ ಬಹುಭಾಗ ಉತ್ತರ ಭಾರತದಲ್ಲೇ ಕಳೆಯಿತು. ಇಟಗಿ ಮತ್ತು ಇತರ ಗ್ರಾಮಗಳ ಜನರೊಂದಿಗೆ ನನಗೆ ಸಂಪರ್ಕ ತಪ್ಪಿಯೇ ಹೋಗಿತ್ತು. ಅಲ್ಲಿ ನಾನು ಕಳೆದ ಒಂದು ವರ್ಷದ ಸವಿನೆನಪು ನನಗೆ ಆಗಾಗ ಬರುತ್ತಿತ್ತು.

ಅಲ್ಲಿಗೆ ಮತ್ತೊಮ್ಮೆ ಹೋಗಿಬರಬೇಕೆಂದು ಅಪೇಕ್ಷೆ ತುಂಬಾ ಬಲವಾಗಿ ೧೯೮೭ರ ಡಿಸೆಂಬರಿನಲ್ಲಿ ಇಟಗಿ ಪಂಚಾಯಿತಿಗೆ ಪತ್ರ ಬರೆದೆ. ಅವರನ್ನು ಭೇಟಿ ಮಾಡಲು ನನಗೆ ತುಂಬಾ ಅಪೇಕ್ಷೆಯಾಗಿರುವುದಾಗಿ ತಿಳಿಸಿದೆ. ಅದಕ್ಕೆ ಯಾವ ಉತ್ತರವೂ ಬರಲಿಲ್ಲ. ಆದರೆ ಹೇಗೊ ಅಲ್ಲಿಗೆ ಹೋಗಲೇಬೇಕೆಂದು ನಿರ್ಧರಿಸಿದ್ದೆನಾಗಿ, 'ಬರುತ್ತಿದ್ದೇನೆ' ಎಂದು ಟೆಲಿಗ್ರಾಂ ಕೊಟ್ಟು, ಸಾವಿತ್ರಿಯೊಂದಿಗೆ ಜನವರಿ ೫ನೇ ತಾರೀಕು ರೈಲುಹತ್ತಿ ಹೊರಟುಬಿಟ್ಟೆ. ಮರುದಿನ ಬೆಳಗ್ಗೆ ನಾವು ರೋಣ ತಲುಪಿದೆವು. ನಿಲ್ದಾಣಕ್ಕೆ ಯಾರೂ ಬಂದಿರಲಿಲ್ಲ. ಅಂದರೆ ನನ್ನ ಟೆಲಿಗ್ರಾಂ ಅವರಿಗೆ ಸೇರಿರಲಿಲ್ಲವೆಂದಾಯಿತು.

ಅಥವಾ ನಾನು ಏತಕ್ಕೆ ಬರುತ್ತಿದ್ದೇನೆ ಎಂಬುದು ಅವರಿಗೆ ತಿಳಿಯದೆಯೂ ಹೋಗಿರಬಹುದು.

ರೋಣದಿಂದ ಇಟಗಿಗೆ ಒಂದು ಬಸ್ಸಿದೆ. ಬಸ್ ನಿಲ್ದಾಣವೂ ರೈಲ್ವೆ ನಿಲ್ದಾಣದ ಹೊರಗೇ ಇದೆ. ಅಲ್ಲಿ ಕಾದಿದ್ದ ಬಸ್ಸನ್ನು ಹತ್ತುವಷ್ಟರಲ್ಲಿ ಇಬ್ಬರು ಗ್ರಾಮಸ್ಥರು ನಮ್ಮ ಬಳಿಗೆ ಬಂದರು. ಪಂಚಾಯತ್ ಕಮಿಟಿಯು ನಮ್ಮನ್ನು ಕರೆದುಕೊಂಡು ಬರಲು ಅವರನ್ನು ಕಳಿಸಿದ್ದಿತು. ನನಗೆ ಮನಸ್ಸು ಹಗುರವಾಯಿತು, ಸಂತೋಷವಾಯಿತು. ನಮ್ಮ ಸಾಮಾನುಗಳನ್ನು ತೆಗೆದುಕೊಂಡು ಬಸ್ಸಿನಲ್ಲಿ ಇರಿಸಿ ನಮ್ಮನ್ನು ಉತ್ತಮವಾದ ಸೀಟುಗಳಲ್ಲಿ ಕೂರಿಸಿದರು. ಅವರೊಂದಿಗೆ ನಾವು ಖುಷಿಯಲ್ಲಿ ಕಳೆದ ದಿನಗಳನ್ನು ಕುರಿತು ಮಾತನಾಡತೊಡಗಿದೆವು. ಇಡೀ ಬಸ್ಸಿನ ಜನರು ನಾವು ಯಾರಿರಬಹುದೆಂದು ಬೆರಗುಗಣ್ಣುಗಳಿಂದ ನೋಡುತ್ತಿದ್ದರು. ಇಪ್ಪತ್ತು ನಿಮಿಷಗಳಲ್ಲಿ ಇಟಗಿ ಸೇರಿದೆವು. ಈಗ ಅದು ಸಾಕಷ್ಟು ದೊಡ್ಡ ಹಳ್ಳಿಯಾಗಿತ್ತು. ನಮ್ಮ ಆ ದಿನಗಳ ಮಿತ್ರರನ್ನು ಸಂಧಿಸಲು ನಾನು ಕಾತರನಾಗಿದ್ದೆ. ಆದರೆ ಬಸ್‌ನಿಲ್ದಾಣದಲ್ಲಿ ನಮಗಾಗಿ ಯಾರೂ ಕಾದಿರಲಿಲ್ಲ. ಸ್ವಲ್ಪ ನಿರಾಶೆಯೇ ಆಯಿತು. ಆದರೆ ನಮ್ಮ ಜತೆಗೆ ಬಂದವರು ಎಲ್ಲವೂ ವ್ಯವಸ್ಥೆಯಾಗಿದೆ ಎಂದು ಹೇಳಿದರು.

ಬೆಳಗ್ಗೆ ೯.೦೦ ಗಂಟೆ ಸಮಯ, ನಮ್ಮನ್ನು ಒಂದು ಮಠಕ್ಕೆ ಕರೆದೊಯ್ದರು. ಅಲ್ಲಿ ಸ್ನಾನಮಾಡಿ ಉಪಾಹಾರ ತೆಗೆದುಕೊಳ್ಳಲು ವ್ಯವಸ್ಥೆ ಮಾಡಿದ್ದರು. ಅದುವರೆಗೆ ೧೯೪೮ರಲ್ಲಿ ನಾನು ಇಟಗಿಯಲ್ಲಿ ತಿಳಿದಿದ್ದ ಯಾರೊಬ್ಬರನ್ನೂ ನೋಡಿರಲಿಲ್ಲ. ಹಾಗಾದರೆ ಇಷ್ಟು ಕಷ್ಟಪಟ್ಟು ಈ ಪ್ರಯಾಣವನ್ನಾದರೂ ನಾವು ಯಾಕೆ ಕೈಗೊಂಡೆವು?

೩೦-೪೦ ನಿಮಿಷಗಳ ಅನಂತರ ಉಪಾಹಾರ ಮುಗಿಸಿ ನಾವು ಹೊರಬಂದಾಗ ಭಾರೀ ಜನಸಮೂಹ ಅಲ್ಲಿ ನೆರೆದಿತ್ತು. ಅಲ್ಲಿ ಎಲ್ಲೋ ಜನ ಏನೋ ಅಪಘಾತವಾಗಿ ಯಾರಿಗೋ ಗಾಯವಾಗಿರಬೇಕು ಎಂದುಕೊಂಡೆ. ಆದರೆ ನನಗೆ ಸಂಪೂರ್ಣ ಅಪರಿಚಿತರಾಗಿದ್ದ ನೂರಾರು ಜನರು ನಮಗೆ ಕೈ ಬೀಸಿದಾಗ ಅವರೆಲ್ಲಾ ನಮಗಾಗಿಯೇ ಅಲ್ಲಿ ಬಂದಿದ್ದರು ಎಂಬುದು ತಿಳಿಯಿತು. ನೂರಾರು ಜನ ಗಂಡಸರು ಹೆಂಗಸರು ಎಲ್ಲರೂ ಒಟ್ಟಿಗೆ ನಮ್ಮೊಂದಿಗೆ ಮಾತನಾಡಲು ಪ್ರಯತ್ನಿಸುತ್ತಿದ್ದರು! ಹದಿನಾಲ್ಕು ಹಳ್ಳಿಗಳಲ್ಲಿದ್ದ ಪ್ರತಿಯೊಬ್ಬರೂ ಅಲ್ಲಿ ಸೇರಿದ್ದಂತೆ ಅನಿಸಿತು. ನಾವು ಜನಸಮೂಹದಲ್ಲಿ ಬೆರೆತೆವು . ಈಗ ನನಗೆ ಪರಿಚಿತರಾಗಿದ್ದವರು ಸಿಕ್ಕಿದರು. ಇತರ ಕೆಲವರು ಆಗಲೇ ತೀರಿಕೊಂಡಿದ್ದವರ ಬಂಧುಗಳೆಂದು ಪರಿಚಯ ಮಾಡಿಕೊಂಡರು.

ಒಂದು ಮೆರವಣಿಗೆ ರೂಪುಗೊಂಡಿತು. ಯಾರೋ ಬಂದು ಅಂದಿನ ಸಮಾರಂಭದ ಆಹ್ವಾನ ಕಾರ್ಯಕ್ರಮ ಪಟ್ಟಿಯನ್ನು ನನ್ನ ಕೈಗೆ ಕೊಟ್ಟರು. ಸಭೆಗೆ ಅಧ್ಯಕ್ಷರು ಯಾರು? ನಾವು ಗುರುಗಳು ಎಂದು ಕರೆಯುತ್ತಿದ್ದ ೪೦ ವರ್ಷಗಳ ಹಿಂದೆ ಪಂಚಾಯಿತಿ ಚೇರ್‌ಮನ್ ಆಗಿದ್ದ ವಿ. ಚನ್ನಬಸವಯ್ಯನವರು!

ಇತರ ಮುಖಂಡರೂ ಇದ್ದರು. ಒಬ್ಬರಾದ ಮೇಲೊಬ್ಬರಂತೆ ಅವರು ಮಾತನಾಡಿದರು. ನನ್ನನ್ನು ಕುರಿತು ಹೇಳಿದರು, ನಮ್ಮ ಚಟುವಟಿಕೆಗಳನ್ನು ನೆನೆದರು. ಭಾಷಣಗಳು ಮುಗಿದ ಮೇಲೆ ಗುರುಗಳು ನನ್ನನ್ನೂ, ನನ್ನ ಪತ್ನಿಯನ್ನೂ ಎದ್ದು ನಿಲ್ಲಲು ಹೇಳಿದರು. ಹೊಸದಾದ ಸುಂದರವಾದ ಒಂದು ಕಾಶ್ಮೀರ ಶಾಲನ್ನು ನನಗೆ ಹೊದಿಸಿದರು. ಹಿರಿಯ ಹೆಂಗಸೊಬ್ಬರು ಬಂದು ಸಾವಿತ್ರಿಗೆ ಒಂದು ಬನಾರಸ್ ಸಿಲ್ಕ್ ಸೀರೆಯನ್ನು ನೀಡಿದರು. ಅವರು ತೋರಿದ ಅದ್ಭುತವಾದ ಪ್ರೀತಿ ಆದರಗಳಿಗೆ ಕೃತಜ್ಞತೆಗಳನ್ನು ಹೇಳಲು ನಾನು ಎದ್ದು ನಿಂತೆ, ಪ್ರಯತ್ನಿಸಿದೆ, ಮಾತನಾಡಲೂ ಸಾಧ್ಯವಾಗಲಿಲ್ಲ. ಗಂಟಲು ಉಬ್ಬಿ ಬಂದಿತು.

ಆಮೇಲೆ ನಮ್ಮನ್ನು ಊಟಕ್ಕೆ ಕರೆದೊಯ್ದರು. ಸೊಗಸಾದ ಆಹಾರ ತಯಾರಾಗಿತ್ತು. ಊಟವಾದ ಮೇಲೆ ೧೯೪೮ರ ನಮ್ಮ ಚಟುವಟಿಕೆಗಳ

ಸ್ಮಾರಕವೊಂದನ್ನು ಕಟ್ಟುವುದಕ್ಕೆ ಯೋಚಿಸುತ್ತಿರುವುದಾಗಿ ಹೇಳಿದರು. ಅದಕ್ಕೆ ಗುದ್ದಲಿಪೂಜೆ ಮಾಡಲು ಇದಕ್ಕಿಂತ ಶುಭಮುಹೂರ್ತ ಯಾವುದು? ಮೊದಲ ಗುದ್ದಲಿಯನ್ನು ಸಾವಿತ್ರಿ ಹಾಕಬೇಕು, ಅಡಿಗಲ್ಲನ್ನಿಡಲು ತೆಂಗಿನಕಾಯಿ ಒಡೆದು ಪೂಜೆ ಮಾಡಬೇಕು ಎಂದು ಕೇಳಿದರು.

ಇಷ್ಟು ಮುಗಿಯುವ ವೇಳೆಗೆ ನಾವು ಹೊರಡುವ ಹೊತ್ತಾಯಿತು. ಅಲ್ಲಿಂದ ಬಿಡಿಸಿಕೊಂಡು ಬರುವುದು ನಮಗೆ ಬಹಳ ಕಷ್ಟವಾಯಿತು. ನಮ್ಮ ಎಲ್ಲ ಹಳೆಯ, ಹೊಸಮಿತ್ರರಿಗೆ ವಿದಾಯ ಹೇಳಿ, ಶ್ರೀ ದೇಸಾಯಿ ಎನ್ನುವವರ ಕಾರಿನಲ್ಲಿ ನಾವು ಹೊರಟೆವು. ಅವರ ತಂದೆ ಆ ಹಳ್ಳಿಗಳ ಜಾಗೀರುದಾರರಾಗಿದ್ದರು. ಶ್ರೀ ದೇಸಾಯಿಯವರೇ ನಮ್ಮನ್ನು ಕಾರಿನಲ್ಲಿ ಹುಬ್ಬಳ್ಳಿ ರೈಲು ನಿಲ್ದಾಣಕ್ಕೆ ಕರೆತಂದು ಬಿಟ್ಟರು. ಅಲ್ಲಿ ನಾನು ಬೆಂಗಳೂರಿಗೆ ರೈಲುಹತ್ತಬೇಕಾಗಿತ್ತು. ೪೦ ವರ್ಷಗಳ ಅನಂತರವೂ ಅವರ ಪ್ರೀತಿ ಮೊದಲಿನಷ್ಟೇ ಬಲವಾಗಿದ್ದುದನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು. ನಾವು ಏನಾದರೂ ಮಾಡಿದ್ದರೆ ಅದು ಮರೆವೆಗೆ ಸಂದು ಹೋಗಿರಲಿಲ್ಲ. ನಾನು ಫೀಲ್ಡ್ ಮಾರ್ಷಲ್ ಮಾಣೆಕ್‌ಷಾ ಅವರಿಂದ ವಿಶಿಷ್ಟ ಸೇವಾ ಪದಕ ಪಡೆದಾಗ ಪಟ್ಟುದಕ್ಕಿಂತ ಹೆಚ್ಚಿನ ಸಂತೋಷ ಈಗ ನನಗಾಯಿತು.

೧೯೮೬ರಲ್ಲಿ ರವಿ ಪಿಎಚ್.ಡಿ., ಮುಗಿಸಿದ. ಆಲ್ಬುಕರ್ಕ್‌ನ ನ್ಯೂ ಮೆಕ್ಸಿಕೋ ವಿಶ್ವವಿದ್ಯಾಲಯದಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಅವನು ಕೆಲಸಕ್ಕೆ ಸೇರಿದ. ಹಸಿರು ಕಾರ್ಡು ಪಡೆದ ಮೇಲೆ ಕೊನೆಗೊಮ್ಮೆ ೧೯೮೮ರ ಬೇಸಿಗೆಯಲ್ಲಿ ಭಾರತಕ್ಕೆ ಬಂದ.

ಮುಂಬಯಿಯಲ್ಲಿ ಎರಡು ವರ್ಷ ಕಳೆದ ಮೇಲೆ ಗಾಯತ್ರಿಗೆ ಅಹಮದಾಬಾದಿನಲ್ಲಿ ಇನ್ನೂ ಉತ್ತಮವಾದೊಂದು ಕೆಲಸ ಸಿಕ್ಕಿತು. ಅವಳು ಅಲ್ಲಿಗೆ ಸಂಸಾರವನ್ನು ವರ್ಗಾಯಿಸಿದಳು. ಹಾಗಾಗಿ ನಮ್ಮ ಪ್ರಯಾಣಕ್ರಮವೂ ವ್ಯತ್ಯಾಸವಾಯಿತು. ಈಗ ಅಹಮದಾಬಾದ್ ಬೆಂಗಳೂರು ಹಾದಿ ಹೆಚ್ಚು ಬಳಕೆಯಾಯಿತು. ಸುಮಾ ಮತ್ತು ಸಂದೀಪರೂ ಅಲ್ಲಿಗೇ ಹೋದರು. ಸುಮಾ ಪಿಯುಸಿ ಮುಗಿಸಿ ಎಲೆಕ್ಟ್ರಾನಿಕ್ ಬಿ.ಎಸ್‌ಸಿ.ಗೆ ಸೇರಿದಳು. ಮತ್ತೆ ಗಾಯತ್ರಿಗೆ ಯೂರೋಪಿನಾದ್ಯಂತ ಸಂಚಾರ ಗಂಟುಬಿತ್ತು. ಒಮ್ಮೆ ಆಫ್ರಿಕಾದಲ್ಲೂ ಪ್ರವಾಸ ಮಾಡಿದಳು.

ಇಲ್ಲಿ ಮೂರು ವರ್ಷ ಕಳೆದ ನಂತರ ಅವಳಿಗೆ ಬರೋಡಾದಲ್ಲಿ ಉತ್ತಮವಾದುದೊಂದು ಕೆಲಸ ಸಿಕ್ಕಿತು. ಅದು ಅಹಮದಾಬಾದಿನಿಂದ ಎರಡು-ಮೂರು ಗಂಟೆಗಳ ಪ್ರಯಾಣ. ಸುಮಾ ಬಿ.ಎಸ್‌ಸಿ. ಮುಗಿಸಿ ಬರೋಡಾದಲ್ಲಿ ಕಂಪ್ಯೂಟರುಗಳನ್ನು ಮಾರುವ ಉದ್ಯೋಗವನ್ನು ಹಿಡಿದಳು. ಸಂದೀಪನಿಗೆ ಒಂದು ಒಳ್ಳೆಯ ಶಾಲೆಯಲ್ಲಿ ಪ್ರವೇಶ ದೊರಕಿತು. ಅವನೀಗ ಹೈಸ್ಕೂಲು ಕೊನೆಯ ವರ್ಷದಲ್ಲಿದ್ದ. ನಾವು ಅಲ್ಲೇ ಇದ್ದು ಅವನು ಈ ಸಂದಿಗ್ಧ ಸಮಯವನ್ನು ಉತ್ತಮ ರೀತಿಯಲ್ಲಿ ಉಪಯೋಗಿಸುವಂತೆ ನೋಡಿಕೊಂಡೆವು. ಒಂದು ವರ್ಷ ಕೆಲಸ ಮಾಡಿದ ಮೇಲೆ ಸುಮಾ ಬರೋಡಾದ ಎಂ.ಎಸ್. ವಿಶ್ವವಿದ್ಯಾಲಯದಲ್ಲಿ ಎಂ.ಬಿ.ಎ. ವ್ಯಾಸಂಗ ಮಾಡಲು ಸೇರಿದಳು.

೧೯೯೪ರ ಬೇಸಿಗೆಯಲ್ಲಿ ಗಾಯತ್ರಿ ಅಹಮದಾಬಾದಿಗೆ ಹಿಂದಿರುಗಬೇಕಾಯಿತು. ಸಂದೀಪ್ ಆಗಷ್ಟೇ ಹೈಸ್ಕೂಲು ಪರೀಕ್ಷೆಗಳನ್ನು ಮುಗಿಸಿದ್ದನು. ಅವನು ಫೆಬ್ರವರಿಯಲ್ಲಿ ಎನ್.ಡಿ.ಎ. ಪರೀಕ್ಷೆ ತೆಗೆದುಕೊಂಡಿದ್ದನು. ಹೈಸ್ಕೂಲು ಪರೀಕ್ಷೆಯ ಫಲಿತಾಂಶ ಬರುವ ವೇಳೆಗೆ ಕಾಲೇಜುಗಳಿಗೆ ಅರ್ಜಿ ಹಾಕುವ ಸಮಯ ಬಂದಿತ್ತು. ಇನ್ನೂ ಎನ್.ಡಿ.ಎ. ಫಲಿತಾಂಶ ಬಂದಿರಲಿಲ್ಲ. ಹೈಸ್ಕೂಲಿನಲ್ಲಿ ಅವನು ಪಡೆದ ಅಂಕಗಳು ಅಷ್ಟೇನೂ ಉತ್ತಮವಾಗಿರಲಿಲ್ಲವಾಗಿ ಒಳ್ಳೆಯ ಎಂಜಿನಿಯರಿಂಗ್ ಕಾಲೇಜಿಗೆ ಸೇರುವ ಪ್ರಶ್ನೆಯಿರಲಿಲ್ಲ. ಕೊನೆ ಗಳಿಗೆಯಲ್ಲಿ ಯಾವ ಸಿದ್ಧತೆಯೂ ಇಲ್ಲದೆ ಅಹಮದಾಬಾದ್ ಮತ್ತು ವಲ್ಲಭ ವಿದ್ಯಾನಗರದ ವಾಸ್ತುಶಿಲ್ಪ ಶಾಲೆಗಳ ಪ್ರವೇಶ ಪರೀಕ್ಷೆಗೆ ಕುಳಿತ.

ಎಲ್ಲರಿಗೂ ಆಶ್ಚರ್ಯವಾಗುವಂತೆ ವಲ್ಲಭ ವಿದ್ಯಾನಗರದ ಶಾಲೆಗೆ ಆಯ್ಕೆಯಾದ. ಅವನ ಪ್ರತಿಭೆ ಈ ದಿಕ್ಕಿನಲ್ಲಿ ಹರಿಯುತ್ತಿದೆಯೆಂದು ಯಾರು ತಾನೇ ಊಹಿಸಿದ್ದರು?

ಆದರೆ ತೊಡಕು ಇನ್ನಷ್ಟು ಜಟಿಲವಾಗುವ ಹಾಗೆ, ತರಗತಿಗೆ ಹೋಗಲು ತೊಡಗುವಷ್ಟರಲ್ಲೇ ಎನ್.ಡಿ.ಎ. ಫಲಿತಾಂಶ ಬಂದಿತು. ಅಲ್ಲೂ ಉತ್ತಮವಾಗಿಯೇ ಮಾಡಿದ್ದ , ಎಸ್.ಎಸ್.ಬಿ. ಸಂದರ್ಶಕ್ಕೆ ಆಯ್ಕೆ ಮಾಡಿದ್ದರು! ಸಂದೀಪ್ ಸಂದರ್ಶನಕ್ಕೆ ಹೋದ. ಮನೋ ವೈಜ್ಞಾನಿಕ ಪರೀಕ್ಷೆ , ತಡೆಹಾದಿ ಪರೀಕ್ಷೆ , ವ್ಯಕ್ತಿಗತ ಹಾಗೂ ತಂಡ ಕಾರ್ಯಗಳು ಎಲ್ಲದರಲ್ಲೂ ಉತ್ತಮವಾಗಿ ತನ್ನ ಸಾಮರ್ಥ್ಯ ತೋರಿಸಿದ. ಆ ತಂಡದ ಮೊದಲ ಐವರಲ್ಲಿ ಒಬ್ಬನಾದ. ನನ್ನ ಸಂತೋಷಕ್ಕೆ ಮೇರೆಯೇ ಇಲ್ಲ. ಆದರೆ ದುರದೃಷ್ಟವಶಾತ್ ವೈದ್ಯಕೀಯ ಆಧಾರದ ಮೇಲೆ ಅವನನ್ನು ನಿರಾಕರಿಸಿದರು. ವಾಸ್ತುಶಿಲ್ಪ ಅಧ್ಯಯನಕ್ಕೆ ಮರಳಿದ. ಚೆನ್ನಾಗಿ ಮುಂದುವರಿಸುತ್ತಿದ್ದಾನೆ.

ನಿವೃತ್ತನಾದೊಡನೆಯೇ ಜಯನಗರ 'ಟಿ' ಬ್ಲಾಕ್‌ನಲ್ಲಿದ್ದ ನನ್ನ ಅಣ್ಣ ಸುಬ್ಬರಾವ್ ಅವರ ಮನೆಯ ಸಮೀಪದಲ್ಲಿ ಬಿ.ಟಿ.ಎಂ. ಲೇಔಟ್‌ನಲ್ಲಿ ನನಗೆ ಒಂದು ನಿವೇಶನ ಮಂಜೂರಾಗಿತ್ತು. ಅದನ್ನು ಏನು ಮಾಡಬೇಕೆಂದು ನಾನು ನಿರ್ಧರಿಸಿರಲಿಲ್ಲ. ಕಾಲ ಸರಿಯುತ್ತಲೇ ಇತ್ತು. ಬೇಗ ಮನೆ ಕಟ್ಟದೆ ಹೋದರೆ ನಿವೇಶನವನ್ನು ಹಿಂದಕ್ಕೊಪ್ಪಿಸಿ ಬಿಡಬೇಕಾಗಿತ್ತು. ರವಿ ಮತ್ತು ಹೇಮಾ ಇವರ ಸಲಹೆ ಕೇಳಿ, ಮನೆ ಕಟ್ಟಿಸಲು ತೊಡಗಿದೆವು. ಶ್ರೀರಂಗನ್ ಎಂಬುವರು ನಮ್ಮ ಕಂಟ್ರಾಕ್ಟರು. ಅವರ ಪತ್ನಿಯು ಹೇಮಾಳ ಕಾಲೇಜು ಗೆಳತಿಯ ತಂಗಿ. ಅವರ ಮಗನಿಗೆ ಹೃದಯಕ್ಕೆ ಸಂಬಂಧಿಸಿದ ಒಂದು ತೊಂದರೆಯಿತ್ತು. ಹೇಮಾ ಅವನಿಗೆ ನ್ಯೂಜೆರ್ಸಿಯಲ್ಲಿ ಜೀವರಕ್ಷಕ ಶಸ್ತ್ರಚಿಕಿತ್ಸೆಯೊಂದನ್ನು ಮಾಡಿಸಿದ್ದಳು. ರಂಗನ್ ನಮಗೆ ಬಹಳ ಸುಂದರವಾದೊಂದು ಮನೆ ಕಟ್ಟಿಸಿಕೊಟ್ಟರು.

ಸ್ವಲ್ಪ ಕಾಲ ಅದನ್ನು ಬಾಡಿಗೆಗೆ ಕೊಟ್ಟಿದ್ದೆವು. ಆದರೆ ಈಗ ನಾವು ಅಲ್ಲೇ ವಾಸವಾಗಿದ್ದೇವೆ. ಅಣ್ಣನವರ ಮನೆ ಅಲ್ಲಿಂದ ೧೫-೨೦ ನಿಮಿಷದ ನಡಿಗೆ. ಅವರನ್ನೂ ಅತ್ತಿಗೆಯನ್ನೂ ಹೆಚ್ಚು ಕಡಮೆ ಪ್ರತಿದಿನವೂ ನೋಡುತ್ತೇವೆ. ಅವರ ಮೂವರು ಮಕ್ಕಳು ಕೇಶವ, ಉಮಾ ಮತ್ತು ರಾಜಿ ಅಮೆರಿಕಾದಲ್ಲಿ ನೆಲೆಸಿದ್ದಾರೆ. ಇನ್ನಿಬ್ಬರು ಹೆಣ್ಣು ಮಕ್ಕಳು ವಿಜಿ ಮತ್ತು ಸಾವಿತ್ರಿ ಬೆಂಗಳೂರಿನಲ್ಲೇ ಇದ್ದಾರೆ. ಸೋಮು ಮತ್ತು ಶಾರದಾರನ್ನು ಕೂಡ ಆಗಾಗ ನೋಡುತ್ತೇವೆ. ಅವರ ಇಬ್ಬರು ಪುತ್ರಿಯರು ಉಷಾ ಮತ್ತು ಸುಧಾ ಅಮೆರಿಕಾದಲ್ಲಿದ್ದಾರೆ. ಪ್ರಸನ್ನ (ಕ್ಯಾಪ್ಟನ್ ಕೃಷ್ಣಪ್ರಸಾದ್) ಮತ್ತು ಲಕ್ಷ್ಮಿ ಮೈಸೂರಿನಲ್ಲಿ ಮನೆ ಕಟ್ಟಿಸಿಕೊಂಡು ನಿವೃತ್ತ ಜೀವನ ನಡೆಸುತ್ತಿದ್ದಾರೆ. ಅವರ ಮೊದಲನೆಯ ಮಗಳು ರಂಜಿನಿ ಗೋರಖಪುರದಲ್ಲಿದ್ದಾಳೆ. ಎರಡನೆಯ ಮಗಳು ನಂದಿನಿ ದುಬಾಯಿಯಲ್ಲಿದ್ದಾಳೆ. ಶಾಂತ ಕಳೆದ ೨೦ ವರ್ಷಗಳಿಂದಲೋ ಏನೋ ಹಾಸಿಗೆ ಹಿಡಿದಿದ್ದಾಳೆ; ಆಕೆಯ ಪತಿ ನಾಗರಾಜ್ ಒಂದಿಗೆ ಮೈಸೂರಿನಲ್ಲಿ ಇದ್ದಾಳೆ. ಅವರ ಹೆಣ್ಣುಮಕ್ಕಳಿಗೆಲ್ಲ ಮದುವೆಯಾಗಿದೆ. ಗೋಕರ್ಣನ ಮಗ ದಿವಾಕರನನ್ನು ಮದುವೆಯಾದ ಪದ್ಮಿನಿ ಹೊರತು ಮಿಕ್ಕವರೆಲ್ಲ ಅಲ್ಲೇ ಇದ್ದಾರೆ. ಮಣಿಯ ಪುತ್ರಿಯರು ಪದ್ಮ ಮತ್ತು ಇಂದಿರಾ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಸುಂದರಮೂರ್ತಿಯ ಎರಡನೆಯ ಮಗ ದಿನೇಶ ಮೈಸೂರಿನಲ್ಲಿ ಕೆಲಸ ಮಾಡುತ್ತಾನೆ. ಹಾಗಾಗಿ ಸುಂದರಮೂರ್ತಿ ಮತ್ತು ಪತ್ನಿ ಶಾಂತಾ ಮೈಸೂರಿನಲ್ಲೇ ಹೆಚ್ಚು ಸಮಯ ಕಳೆಯುತ್ತಾರೆ. ಅವರ ಮಗಳು ವಿದ್ಯಾ ಅಮೆರಿಕಾದಲ್ಲಿದ್ದಾಳೆ, ಇನ್ನೊಬ್ಬ ಮಗ ರಮೇಶ ಮದರಾಸಿನಲ್ಲಿದ್ದಾನೆ. ರಾಧಾಕೃಷ್ಣ ಮದರಾಸಿನ ಐಐಟಿಯಿಂದ ನಿವೃತ್ತನಾದ ಮೇಲೆ ಮಲೇಶಿಯಾದಲ್ಲಿ ಪ್ರಾಧ್ಯಾಪಕನಾಗಿದ್ದಾನೆ. ಇವನ ಇಬ್ಬರು ಮಕ್ಕಳು ಕಾತ್ಯಾಯಿನಿ ಮತ್ತು ಪ್ರಶಾಂತಿ ಬೆಂಗಳೂರಿನ ಹುಡುಗರ ಕೈ ಹಿಡಿದಿದ್ದಾರೆ. ಮೂರನೆಯ ಮಗಳು ಪದ್ಮಾ ದಂತವೈದ್ಯೆಯಾಗಲು ವ್ಯಾಸಂಗ ಮಾಡುತ್ತಿದ್ದಾಳೆ. ನನ್ನ ತೀರಿಕೊಂಡ ತಂಗಿ ಪದ್ಮಳ ಮಕ್ಕಳೂ ಚೆನ್ನಾಗಿದ್ದಾರೆ. ಮಂಜಯ್ಯ ಬೆಂಗಳೂರಿನಲ್ಲಿದ್ದಾರೆ, ಮಣಿ ಮದರಾಸಿನಲ್ಲಿ, ಅವರ ಸೋದರ ಶಂಕರ ಭದ್ರಾವತಿಯಲ್ಲಿ ಇದ್ದಾನೆಂದು ತೋರುತ್ತದೆ. ನನಗೆ ಖಚಿತವಾಗಿಲ್ಲ.

ಸಾವಿತ್ರಿಯ ಅಕ್ಕ ಈಗಲೂ ರಾಜಾಜಿನಗರದಲ್ಲಿ ತನ್ನ ಮಗ ಗೋಪಾಲ, ಅವನ ಪತ್ನಿ ಪದ್ಮಾರೊಂದಿಗೆ ವಾಸಿಸುತ್ತಿದ್ದಾರೆ. ಗಂಗಾಧರಶಾಸ್ತ್ರಿಯವರು ಈಚೆಗೆ ಸ್ವರ್ಗಸ್ಥರಾದರು. ದೀರ್ಘಕಾಲದ ಫಲಪ್ರದವಾದ ತುಂಬುಜೀವನ ನಡೆಸಿದವರು ಅವರು. ಗೋಕರ್ಣ ಮತ್ತು ಅವನ ಪತ್ನಿ ನಾಗರತ್ನ ಮತ್ತೂರಿನಲ್ಲಿದ್ದಾರೆ, ದಿವಾಕರ ಮತ್ತು ಪದ್ಮಿನಿಯರೊಂದಿಗೆ. ಒಬ್ಬಳು ಮಗಳು ಸುಧಾ ಮೈಸೂರಿನಲ್ಲಿದ್ದಾಳೆ. ಇನ್ನೊಬ್ಬಳು ಮಗಳು ಸಾವಿತ್ರಿ , ಪತಿ ಸುಧೀರ್ ಮತ್ತು ಮುದ್ದಾದ ಇಬ್ಬರು ಮಕ್ಕಳೊಂದಿಗೆ ಬೆಂಗಳೂರಿನಲ್ಲಿದ್ದರು. ಅವರ ಮನೆಯಲ್ಲಿ ಈಚೆಗೆ ಒಂದು ದುರಂತ ಸಂಭವಿಸಿತು. ಒಬ್ಬ ದರೋಡೆಗಾರ ಮನೆಗೆ ನುಗ್ಗಿದ. ಆಕೆ ಅವನನ್ನು ಹಿಡಿಯಲು ಪ್ರಯತ್ನಿಸಿರಬೇಕು, ಅವನು ಸಾವಿತ್ರಿಯನ್ನು ಕೊಂದುಬಿಟ್ಟ . ಅದರ ಹಿಂದಿನ ದಿನವಷ್ಟೇ ನಾವು ನೋಡಿಕೊಂಡು ಬಂದಿದ್ದೆವು. ಅವರು ಹೊಸ ಮನೆಗೆ ಹೋಗಿದ್ದರು. ಇಡೀ ಬೆಂಗಳೂರೇ ಶೋಕತಪ್ತವಾಯಿತು ಎಂದು ಬೇರೆ ಹೇಳಬೇಕಾಗಿಲ್ಲ. ಇಂತಹ ಘಟನೆಗಳು ಹೆಚ್ಚು ಹೆಚ್ಚಾಗಿ ನಡೆಯುತ್ತಲೇ ಇವೆ, ಸಮಾಜದಲ್ಲಿ.

ಡಿಸೆಂಬರ್ ೧೯೯೨ರಲ್ಲಿ ಮತ್ತೆ ರವಿ ಭಾರತಕ್ಕೆ ಬಂದ. ೧೯೯೩ರ ಏಪ್ರಿಲ್‌ನಲ್ಲಿ ಅವನು ಆಲ್ಬುಕರ್ಕ್‌ನಲ್ಲಿ ಮದುವೆಯಾದ. ಮರುವರ್ಷ, ೧೯೯೪ರಲ್ಲಿ ನಮ್ಮನ್ನು ನೋಡಲು ಭಾರತಕ್ಕೆ ಬಂದ. ಗಾಯತ್ರಿ ಅಹಮದಾಬಾದಿನಲ್ಲಿ ದೊಡ್ಡದೊಂದು ಫ್ಲಾಟ್ ಕೊಂಡಿದ್ದಳು. ಈಗಲೂ ಅವಳು ಉಡುಪು ರಫ್ತು ವ್ಯವಹಾರದಲ್ಲಿದ್ದಾಳೆ, ಸಾಕಷ್ಟು ಒಳ್ಳೆಯ ಹೆಸರು ಸಂಪಾದಿಸಿದ್ದಾಳೆ. ಈಗಲೂ ವ್ಯಾಪಕವಾಗಿ ವಿದೇಶ ಸಂಚಾರ ಮಾಡುತ್ತಾಳೆ. ಸುಮಳಿಗೆ ಎಂ.ಬಿ.ಎ. ಮುಗಿಯುವುದಕ್ಕೆ ಮೊದಲೇ ಹಲವು ಪ್ರಸಿದ್ಧ ಕಂಪನಿಗಳಿಂದ ಉದ್ಯೋಗಕ್ಕೆ ಕರೆಗಳು ಬಂದುವು. ೧೯೯೫ರ ಜನವರಿಯಲ್ಲಿ ಮೋದಿ ಜೆರಾಕ್ಸ್ ಎಂಬ ಕಂಪನಿ ಸೇರಿದಳು. ಚುರುಕಾದ, ಜನಪ್ರಿಯ ಕೆಲಸಗಾರಳಾಗಿ ಅವಳು ಹೆಸರು ಗಳಿಸಿದ್ದಾಳೆ.

ಹೇಮಾ ಇನ್ನೂ ನ್ಯೂಜೆರ್ಸಿಯಲ್ಲೇ ಇದ್ದಾಳೆ. ಸಂಹಿತಾ ಉತ್ತಮ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿಯಾಗಿ ರೂಪುಗೊಂಡಿದ್ದಾಳೆ. ತ್ಯಾಗರಾಜ, ಪುರಂದರದಾಸ, ದೀಕ್ಷಿತರೇ ಮೊದಲಾದವರ ನೂರಾರು ಕೃತಿಗಳನ್ನು ಸೊಗಸಾಗಿ ಹಾಡುತ್ತಾಳೆ. ಅನೇಕ ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿದ್ದಾಳೆ. ಈ ವಾಗ್ಗೇಯಕಾರರ ಬಗೆಗೆ ಪ್ರಬಂಧಗಳನ್ನು ಬರೆದು ಕೂಡ ಬಹುಮಾನ ಗಳಿಸಿದ್ದಾಳೆ. ಅವಳ ತಮ್ಮ ವಿಕ್ರಂ ಕೂಡ ಹಾಡಲು ಕಲಿಯುತ್ತಿದ್ದಾನೆ. ಅವನಿಗೆ ನಾನು ಒಂದು ಮೃದಂಗವನ್ನು ಕೊಟ್ಟಿದ್ದೇನೆ. ಒಂದು ದಿನ ಅವನು ಅದರಲ್ಲಿಯೇ ನೈಪುಣ್ಯ ಪಡೆದಾನು.

ಕಳೆದ ವರ್ಷ ಬಹಳ ಸಮಯ ರವಿ ಮತ್ತು ಅವನ ಹೆಂಡತಿ ನಮ್ಮ ಜೊತೆಯಲ್ಲಿ ಕಳೆದರು. ರವಿಯು ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಸಂದರ್ಶಕ ಪ್ರಾಧ್ಯಾಪಕನಾಗಿ ಕೆಲಸ ಮಾಡಬೇಕಾಗಿತ್ತು. ಮನೆ ನಮಗೆ ತುಂಬಾ ದೊಡ್ಡದಾಗಿತ್ತು. ಅದನ್ನು ಮಾರಲು ಅವರು ಸಹಾಯ ಮಾಡಿದರು. ಹೆಚ್ಚು ಅನುಕೂಲಕರವಾದ ಒಂದು ಫ್ಲಾಟಿನಲ್ಲಿ ನಾವು ಈಗ ವಾಸಮಾಡುತ್ತಿದ್ದೇವೆ.

ಕಳೆದ ವರ್ಷ ಜೂನ್ ತಿಂಗಳಲ್ಲಿ ಸುಮ, ಸಂಜಯ್‌ಮಾರು ಎಂಬ ಬಹಳ ಒಳ್ಳೆಯ ತರುಣನನ್ನು ಮದುವೆಯಾದಳು. ಇಬ್ಬರೂ ಮೋದಿ ಜೆರಾಕ್ಸ್ ಕಂಪನಿಯಲ್ಲೇ ಕೆಲಸ ಮಾಡುತ್ತಾರೆ. ರವಿ ಮತ್ತೆ ಅಲ್ಪಕಾಲದ ತಂಗಣೆಗಾಗಿ ಬರುತ್ತಿದ್ದಾನೆ. ಆಮೇಲೆ ಹೇಮಾ ಮತ್ತು ಮಕ್ಕಳು ಬರುತ್ತಾರೆ.

ಜೀವನ ಚಕ್ರ ಹೀಗೆಯೇ ಮುಂದುರುಳುತ್ತಿದೆ.*

ವೇಣುಗೋಪಾಲ್ ಅವರ ಮರಣ :
೩.೯.೨೦೦೩

ಮತ್ತೂರಿನಿಂದ ಬ್ರಿಟನ್‌ಗೆ

ಡಾ. ಮತ್ತೂರು ಕೃಷ್ಣಮೂರ್ತಿ

ನಿರೂಪಣೆ : ಸುಮನಾ ವಿಶ್ವನಾಥ್

ಮತ್ತೂರಿನಿಂದ ಬ್ರಿಟನ್‌ಗೆ *

ನನ್ನ ಹಾಗೂ ಶ್ರೀ ಮತ್ತೂರರ ಪರಿಚಯಕ್ಕೆ ಈಗಷ್ಟೇ ಎರಡು ವರ್ಷಗಳು ತುಂಬಿವೆ ! ಇಷ್ಟು ಬೇಗ ನಾನು ಅವರ ಜೀವನಚಿತ್ರಣ ಮಾಡುವ ಸಾಹಸ ಮಾಡುತ್ತೇನೆ ಎನ್ನುವ ಕಲ್ಪನೆಯೂ ನನಗಿರಲಿಲ್ಲ!

ಆಗ ಅವರಿನ್ನೂ ಮೈಸೂರಿಗೆ ಬಂದಿರಲಿಲ್ಲ. ಆಗಾಗ ಅವರ ಲಂಡನ್ ಯಶೋಗಾಥೆಯ ಸುದ್ದಿ ಓದಿ, 'ನಮ್ಮ ಕನ್ನಡದವರು, ಅಲ್ಲಿದ್ದು ಎಂತಹ ಸಾಧನೆ ಮಾಡಿದ್ದಾರೆ. ಅಬ್ಬ...!!' ಎಂದುಕೊಳ್ಳುವುದಿತ್ತು. ಅವರು ಬೆಂಗಳೂರಿಗೆ ಬಂದು ನೆಲೆಸಿರುವ ವಿಷಯ ತಿಳಿದಾಗಲೂ '೨೫ ವರ್ಷಗಳ ಕಾಲ ಲಂಡನ್‌ನಲ್ಲಿದ್ದು, ಬೆಂಗಳೂರಿಗೆ ಬಂದು ನೆಲೆಸಿದರು ಎಂದರೆ ಆಶ್ಚರ್ಯವೇ ಸರಿ' ಎಂದು ಅನಿಸಿತು. ಅವರು ಟಿ.ವಿ. ಯಲ್ಲಿ ಭಾರತ ಕಾರ್ಯಕ್ರಮ ಪ್ರಾರಂಭಿಸಿದಾಗಲೂ ಕಾರ್ಯಕ್ರಮವನ್ನು ಆಗಾಗ ನೋಡುತ್ತಿದ್ದು, 'ಇವೆರಡೂ ಒಂದು ರೀತಿಯಲ್ಲಿ ಹೊಸ ತರಹದ ಪ್ರವಚನ' ಎಂದುಕೊಳ್ಳುತ್ತಿದ್ದಾಗಲೇ, ಮೈಸೂರಿನ ಶ್ರೀ ರಾಮಕೃಷ್ಣಾಶ್ರಮದ ಸ್ವಾಮೀಜಿ, ಶ್ರೀ ಮತ್ತೂರರನ್ನು ಮೈಸೂರಿನಲ್ಲಿ ಪ್ರವಚನ ನಡೆಸಿಕೊಡಲು ಬರಮಾಡಿಕೊಂಡರು. ಮೊದಲನೆಯ ದಿನ ಕಾರ್ಯಕ್ರಮಕ್ಕೆ ಹೋದಾಗ ಸಭಾಂಗಣದಲ್ಲಿ ಒಳಗೆ ನಿಂತುಕೊಳ್ಳಲು ಜಾಗ ಸಿಕ್ಕಿತು. ಆನಂತರದ ದಿನಗಳಲ್ಲಿ ಹೊರಗೆ ಎಲ್ಲೋ ನಿಂತುಕೊಳ್ಳುವ ಪರಿಸ್ಥಿತಿ! ಕಾರ್ಯಕ್ರಮ ಮುಗಿದನಂತರ ಜನ ಶ್ರೀ ಮತ್ತೂರರನ್ನು ಮುತ್ತಿಕೊಳ್ಳುವುದು, ಅವರು ಎಲ್ಲರ ಜತೆ ನಗುನಗುತ್ತ ಕಣ್ಣರಳಿಸಿಕೊಂಡು ಮಾತನಾಡುವುದನ್ನು ನೋಡಿದಾಗ, 'ಇಂತಹ ಮಹಾನ್‌ವ್ಯಕ್ತಿಯ ಹತ್ತಿರಕ್ಕೆ ಹೋಗುವುದಾದರೂ ಹೇಗೆ?' ಎನಿಸಿ ಸುಮ್ಮನಾದೆ.

ಭಾರತೀಯ ವಿದ್ಯಾಭವನದ ಆಜೀವಸದಸ್ಯತ್ವ ತೆಗೆದುಕೊಂಡುದಕ್ಕೆ ಶ್ರೀರಾಮಕೃಷ್ಣಾಶ್ರಮದಲ್ಲಿ ಅವರು ಪ್ರವಚನ ಮಾಡಿದ್ದನ್ನು ಕೇಳಿದುದೇ ಕಾರಣ! ಅಲ್ಲದೆ ಪ್ರಾರಂಭದ ಈ ಸಮಯದಲ್ಲಿ ಹೀಗೆ ಆಜೀವಸದಸ್ಯತ್ವ ತೆಗೆದುಕೊಂಡವರನ್ನು ವೇದಿಕೆಗೆ ಕರೆದು, ಶ್ರೀ ಮತ್ತೂರರು ಶುಭಾಶೀರ್ವಾದ ಮಾಡುವರು ಎನ್ನುವ ವಿಶೇಷ ಆಕರ್ಷಣೆಯೊಂದು ಅಲ್ಲಿತ್ತು. ಜಗನ್ಮೋಹನ ಅರಮನೆಯಲ್ಲಿ ಜೂನ್ ೧೭,೨೦೦೦ದಲ್ಲಿ ನನ್ನ ಪತಿ ಊರಿನಲ್ಲಿ ಇರಲಿಲ್ಲವಾಗಿ ನಾನೊಬ್ಬಳೇ ಅವರ ಅಶೀರ್ವಾದ ಪಡೆಯಲು ವೇದಿಕೆಗೆ ಹೋದಾಗ, ತಾವೂ ಎದ್ದು ನಿಂತು ಸುಂದರವಾದ ಪುಷ್ಪಗುಚ್ಛ ಒಂದನ್ನು ನನ್ನ ಕೈಯಲ್ಲಿಡುತ್ತಾ ಅವರು ಹೇಳಿದ ಮೊದಲ ಮಾತುಗಳು, "ಧರ್ಮಬುದ್ಧಿ ಹೀಗೇ ಬೆಳೆಯಲಿ!" ಎಂದು ! ನಾವು ವಿದ್ಯಾಭವನಕ್ಕೆ ಆಜೀವಸದಸ್ಯತ್ವ ತೆಗೆದುಕೊಂಡುದಕ್ಕೆ, ಅವರು ಅದನ್ನು ಮನತುಂಬಿ 'ಧರ್ಮಬುದ್ಧಿ' ಎಂದಿದ್ದರು! ಆ ಕ್ಷಣ ನನಗೆ ಅವರ ಈ ಮಾತುಗಳ ಹಿನ್ನೆಲೆ ಏನು ಎಂದು ತಿಳಿಯದಿದ್ದ ಕಾರಣ, ಆ ಮಾತಿಗೆ ಹೆಚ್ಚು ಅರ್ಥವನ್ನು ಕಾಣಲು ಸಾಧ್ಯವಾಗಿರಲಿಲ್ಲ.

ಇದಾದ ಎಂಟು ದಿನಕ್ಕೆ, ಪ್ರವಚನದ ಕೊನೆಯ ದಿನಗಳು ಅವು, ಶ್ರೀ ಅಳಸಿಂಗರಾಚಾರ್ಯರ 'ಮಹಾಭಾರತ' ಪುಸ್ತಕವನ್ನು ತೆಗೆದುಕೊಂಡು ಇತ್ತ ತಿರುಗಿದಾಗ, ಸಮೀಪದಲ್ಲೇ ಆಗ ತಾನೆ ಸಭಾಂಗಣವನ್ನು ಪ್ರವೇಶಿಸಿದ್ದ ಶ್ರೀ ಮತ್ತೂರರು ನಸುನಗುತ್ತಾ ನಿಂತಿದ್ದುದು ಕಂಡು, 'ಬಹಳ ಅಪರೂಪ, ಈ ದಿನ ಹೆಚ್ಚಿಗೆ ಜನವಿಲ್ಲ ಅವರ ಸುತ್ತಲೂ...' ಎಂದುಕೊಂಡೇ, ಅವರನ್ನು ಮಾತನಾಡಿಸಿ ಹೋದ ಒಂದಿಬ್ಬರನ್ನು ನೋಡುತ್ತಲೇ ನಾನೂ ಮೆಲ್ಲಗೆ, "ಸರ್, ಇದಕ್ಕೆ ನೀವು ಏನಾದರೂ ಬರೆದು ನಿಮ್ಮ ಸಹಿ ಹಾಕಿಕೊಡಿ" ಎಂದೆ. ಬಹಳ ಪ್ರೀತಿಯಿಂದ ಆ ಪುಸ್ತಕವನ್ನು ತಮ್ಮ ಕೈಗೆ ತೆಗೆದುಕೊಂಡ ಅವರು, "ನಿಮ್ಮ ಹೆಸರೇನು?" ಎಂದರು. "ಸುಮನಾ", ಎಂದಾಗ, "ಸೌ॥ ಸುಮನಾ, ಪ್ರತಿದಿನವೂ ಐದು ನಿಮಿಷಗಳ ಕಾಲ 'ಮಹಾಭಾರತ' ವನ್ನು ಓದಿ! ಒಂದು ವರ್ಷದನಂತರ ನನಗೆ ನಿಮ್ಮ ಅಭಿಪ್ರಾಯ ತಿಳಿಸಿ" ಎಂದು ಬರೆದು ಸಹಿ ಹಾಕಿದರು! ನನ್ನ ಮನಸ್ಸಿನಲ್ಲಿ ಸುಳಿದ ಸಂಶಯವು ಕೂಡಲೆ ಮಾತುಗಳಾಗಿ ಬಂದಿತು. ನಾನೂ ನಗುತ್ತಾ, "ನನಗೆ ತಿಳಿಸಿರಿ ಎಂದರೆ, ಇಷ್ಟು ಜನರ ಸಂಪರ್ಕ ಇರುವ ನಿಮಗೆ ಮೊದಲು ನಾನು ಯಾರು ಎಂದು ಒಂದು ವರ್ಷದ ಮೇಲೆ ನೆನಪಿರುವುದೇ? ನಾನು ನಿಮಗೆ ತಿಳಿಸಲು ಬಂದರೆ ನೀವು ಸಿಗುತ್ತೀರಾ? ನಿಮಗೆ ನನ್ನ ಅಭಿಪ್ರಾಯ ಕೇಳುವಷ್ಟು ಬಿಡುವಿದೆಯೇ?" ಎಂದೆ. ಅದಕ್ಕೆ ಅವರು ಕಣ್ಣರಳಿಸಿ, "ಖಂಡಿತಾ!! ಒಂದು ವಾರಕ್ಕೆ ಮುಂಚೆ ನೀವು ತಿಳಿಸಿದರೆ, ನೀವಾದರೂ ನಮ್ಮಲ್ಲಿಗೆ ಬರಬಹುದು, ಇಲ್ಲಾ ನಾನೇ ನಿಮ್ಮ ಬಳಿಗೆ ಹಾರಿಬರುತ್ತೇನೆ!" ಎಂದರು. ನಾನು 'ಸರಿ' ಎಂದು ನಕ್ಕು ತಲೆಯಾಡಿಸಿದೆ. 'ನಾವು ಕರೆದರೆ ಬರುವಷ್ಟು ಸುಲಭವೇ ಅವರು' ಎನಿಸಿ ಸುಮ್ಮನಾದೆ.

ಆದರೂ ಅವರ ಮಾತಿನಲ್ಲಿ ನನಗೆ ಖಚಿತತೆ ಕಾಣಿಸಿ, ಮನಸ್ಸಿನಲ್ಲಿ ನಂಬಿಕೆ ಮೂಡಿತು. ನನ್ನ ನಂಬಿಕೆ ಸುಳ್ಳಾಗಲಿಲ್ಲ. ಅವರು ಕೊಟ್ಟ ಮಾತನ್ನು ಅವರೂ ಬಹುಶಃ ಮರೆತಿರಲಿಲ್ಲ! ಮೈಸೂರಿನಲ್ಲಿರುವ ಪುಟ್ಟ ಬಳಗ 'ರಾಗ ತರಂಗ'ದ ಸದಸ್ಯೆಯಾದ ನಾನು, ಆಗಸ್ಟ್ ೧೪,೨೦೦೦ ದಂದು ನಡೆಯುವ ನಮ್ಮ ಬಳಗದ ಕಾರ್ಯಕ್ರಮ ಒಂದಕ್ಕೆ ಶ್ರೀ ಮತ್ತೂರರನ್ನು ಆಹ್ವಾನಿಸಿ ಒಂದು ಪತ್ರ ಬರೆದೆ. ಆಗ ಅವರು ಬೆಂಗಳೂರಿನಲ್ಲಿರದೆ ಲಂಡನ್‌ಗೆ ತೆರಳಿದ್ದರು. ನನಗೆ ವಿಷಯ ತಿಳಿದು ಬೇರೆ ದಾರಿ ಕಾಣದೆ ಸುಮ್ಮನಾದೆ. ಜುಲೈ ಮೊದಲನೆಯ ವಾರ ನಾನು ಅವರಿಗೆ ಬರೆದ ಪತ್ರಕ್ಕೆ, ಆಗಸ್ಟ್ ಐದನೆಯ ತಾರೀಖಿಗೆ ಅವರ ಉತ್ತರ ತಲುಪಿತು. 'ತಾವು ಆ ದಿನಗಳಲ್ಲಿ ಅಲಹಾಬಾದ್‌ಗೆ ಹೋಗಿರುವುದಾಗಿಯೂ, ಬರಲು ಸಾಧ್ಯವಾಗುತ್ತಿಲ್ಲವೆಂದೂ, ಮತ್ತೆ ಯಾವುದಾದರೂ ಕಾರ್ಯಕ್ರಮಕ್ಕೆ ಬರುವುದಾಗಿಯೂ' ಅವರು ಬರೆದಿದ್ದರು. ಓದಿ ನನಗೆ ನಿರಾಸೆಯಾದರೂ, ನನ್ನ ಪತ್ರಕ್ಕೆ ಅವರಿಂದ ಉತ್ತರ ಬಂದಿತಲ್ಲ ಎನ್ನುವ ಸಮಾಧಾನ ಆಗಿತ್ತು.

---

* **ಮತ್ತೂರ್‌ಜೀ ಜೀವನಗಾಥೆ :** ನಿರೂಪಣೆ : ಸುಮನಾ ವಿಶ್ವನಾಥ್ ; ಪ್ರ. ಮು : ೨೦೦೨ ; ಪು : xvi+472 ; ¼ ಕ್ರೌನ್ ; ಪ್ರ : ಗಮಕಾ ಕಲಾ ಪರಿಷತ್, ಗಮಕ ಗ್ರಾಮ, ಹೊಸಹಳ್ಳಿ - 577202, ಶಿವಮೊಗ್ಗ ತಾಲ್ಲೂಕು.

ಆಗಸ್ಟ್ ೧೪ರ ಬೆಳಗ್ಗೆ, ಮೈಸೂರು ಭವನದ ಅಧ್ಯಕ್ಷರಾದ ಶ್ರೀ ಎ.ವಿ. ನರಸಿಂಹಮೂರ್ತಿಯವರು ನನಗೆ ಫೋನಿಸಿ, "ಸುಮನಾ, ನೀವು ಯಾವುದೋ ಕಾರ್ಯಕ್ರಮ ಮಾಡುತ್ತಿದ್ದೀರಿ. ಶ್ರೀ ಮತ್ತೂರರನ್ನು ಆ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದೀರಿ ಎಂದು ತಿಳಿಯಿತು." ಎಂದರು. ಕೂಡಲೆ ನಾನು, "ಹೌದು ಸರ್, ಬನ್ನಿ ಎಂದು ಬರೆದಿದ್ದೆ. ಅವರು ಬರುವುದಿಲ್ಲ ಎಂದು ಬರೆದಿದ್ದಾರೆ. ಅವರು ಅಲಹಾಬಾದಿನಲ್ಲಿರುತ್ತಾರಂತೆ" ಎಂದೆ. ನನ್ನ ಧ್ವನಿಯಲ್ಲಿ ಯಾವುದೇ ಉತ್ಸಾಹ ಇರಲಿಲ್ಲ. ಶ್ರೀ ಎ.ವಿ.ಎನ್. ಅವರು ಕೂಡಲೆ ನನ್ನನ್ನು ಸಮಾಧಾನ ಮಾಡುವವರಂತೆ, "ಅದಕ್ಕೆ ನಿಮಗೇಕೆ ಬೇಸರ ಮಾಡಬೇಕು ಎಂದು ಶ್ರೀ ಮತ್ತೂರರು ಈ ದಿನ ಸಂಜೆಯೇ ಬರುತ್ತಿದ್ದಾರೆ... ನಿಮ್ಮ 'ರಾಗ ತರಂಗ'ದ ಕಾರ್ಯಕ್ರಮಕ್ಕೆ ಬರುತ್ತಿದ್ದಾರೆ!" ಎಂದಾಗ ನನ್ನ ಕಿವಿಯನ್ನೇ ನಾನು ನಂಬಲಿಲ್ಲ. "ನಿಜಕ್ಕೂ?" ಎಂದೆ... "ಹೌದು ಸುಮನಾ, ಮತ್ತೂರರು ಬರುತ್ತಿದ್ದಾರೆ" ಎಂದರು ಮತ್ತೊಮ್ಮೆ. ನನಗೆ ಕುಳಿತುಕೊಳ್ಳಲಾಗದ, ನಿಂತುಕೊಳ್ಳಲಾಗದಷ್ಟು ಚಡಪಡಿಕೆ! 'ಮತ್ತೂರರು ಬರುತ್ತಿದ್ದಾರೆಯೇ? ನಾನು ಕರೆದೆ ಎಂದು ಬರುತ್ತಿದ್ದಾರೆಯೇ? ನಿಜಕ್ಕೂ...??' ಅವರು ಬರುವ ತನಕ ನಾನು ನಂಬುವ ಸ್ಥಿತಿಯಲ್ಲಿರಲಿಲ್ಲ.

ಸಂಜೆ ಆರೂವರೆಗೆ ಕಾರ್ಯಕ್ರಮ, ಆರುಗಂಟೆ ಇಪ್ಪತ್ತು ನಿಮಿಷಕ್ಕೆ ಸರಿಯಾಗಿ ಶ್ರೀ ಮತ್ತೂರರು ಶ್ರೀ ಎ.ವಿ.ಎನ್. ರ ಜತೆ ಬಂದೇ ಬಿಟ್ಟರು!! "ನಾನು ಸುಮನಾ..." ಎಂದು ಬಗ್ಗಿ ಅವರ ಕಾಲು ಮುಟ್ಟಿ ಎದ್ದಾಗ, "ನೋಡಿದಿರಾ ಸುಮನಾ... ನಾ ಕೊಟ್ಟ ಮಾತನ್ನು ಉಳಿಸಿಕೊಂಡೆನೋ ಇಲ್ಲವೋ? 'ನಾನು ಕರೆದರೆ ಬರುತ್ತೀರಾ?' ಎಂದಿರಿ ನೀವು. 'ನಾ ಬರುತ್ತೇನೆ' ಎಂದೆ. ನೀವು ಈ ದಿನ ಕರೆದಿರಿ, ನಾನು ಬಂದೆ"! ಎಂದರು.

ಬಹುಶಃ ಅಂದಿನಿಂದಲೇ..... ಬರೆಯಲು ಮಾರ್ಗದರ್ಶನ ಮಾಡತೊಡಗಿದರು. ಇದನ್ನೆಲ್ಲ ನಾನು ಬರೆಯಲೇಬೇಕಿತ್ತು. ಏಕೆಂದರೆ ಈ ವಿಷಯ ನಿಜವಾಗಿ ನಡೆದದ್ದೇ ಆದರೂ, ನಡೆದುದರ ಮೇಲೆ ನನಗೆ ಇನ್ನೂ ನಂಬಿಕೆ ಬಂದಿಲ್ಲ!! ಆ ದಿನ ಹೀಗಾಯಿತೇ ಎನಿಸಿ, ಕುಮಾರವ್ಯಾಸ ಹೇಳುವಂತೆ, 'ಮೈ ರೋಮಾಂಚನ ಪಡೆದುದು' ಎನ್ನುವ ಈ ಅನುಭವವೇ ಆಗುತ್ತದೆ!

ಆಗಲೇ, ಎರಡು ವರ್ಷಗಳ ಹಿಂದೆಯೇ ಶ್ರೀ ಮತ್ತೂರರ ಬಗ್ಗೆ ಬರೆಯಲು ಕುಳಿತರೆ ಬಹುಶಃ ಏನಾದರೂ ಬರೆಯಲು ಸಾಧ್ಯವಾಗುತ್ತಿತ್ತೇನೋ! ಆದರೆ ಈಗ... ಈಗ ನನ್ನಿಂದ ಸಾಧ್ಯವಾಗುತ್ತಿಲ್ಲ! ಹದಿನಾರು ಕ್ಯಾಸೆಟ್ಟುಗಳಲ್ಲಿ ಅವರ ಅನುಭವವನ್ನು ಸುರುಳಿ ಸುತ್ತಿಕೊಂಡು ಬಂದ ನಾನು, ನನ್ನೆದುರು ಅದನ್ನು ಬಿಚ್ಚಿ ಹರಡಿಕೊಂಡಾಗ, ಅವನ್ನು ಬರೆಯುವ ಶಕ್ತಿ ಸಾಮರ್ಥ್ಯ ನನಗಿದೆಯೇ ಎಂದು ಅನಿಸಿ ಧೈರ್ಯಕಳೆದುಕೊಂಡದ್ದು ಹಲವು ಬಾರಿ! ಅವರು ಮೈಸೂರಿನಲ್ಲಿ ನವೆಂಬರ್‌ನಲ್ಲಿ ಪ್ರವಚನ ನಡೆಸಲು ಬಂದಾಗ ನಮ್ಮ ಮನೆಗೊಮ್ಮೆ ಭೇಟಿ ಕೊಟ್ಟ ಸಂದರ್ಭದಲ್ಲಿ, ನನ್ನ ಪತಿ ಶ್ರೀ ವಿಶ್ವನಾಥರ ಜತೆ, ತಾವು ಲಂಡನ್‌ನಲ್ಲಿ ಕಾರು ಚಲಿಸುವುದು ಹೇಗೆ ಎಂದು ಕಲಿತುದರ ಅನುಭವವನ್ನು ಹೇಳಿದಾಗ, ನಾನು "ಸರ್, ಅದೆಲ್ಲ ಅದೆಷ್ಟು ಚೆನ್ನಾಗಿದೆ... ನೀವು ಬರೆದಿಡಬಾರದೆ?" ಎಂದೆ. "ನನಗಂತೂ ಸಾಧ್ಯವಾಗದು ಸುಮನಾ... ಆದರೆ ಬರೆಯುವವರು ಯಾರು ? ನಾನಂತೂ ಹೇಳುತ್ತೇನೆ, ಅಷ್ಟೆ!"ಎಂದರು. ಅವರ ಮಾತಿನ ಆಳದಲ್ಲೆಲ್ಲೋ ಅವರ ಕಾರ್ಯಭಾರದಿಂದ ಬರೆದಿಡಲಾಗದ ಅಸಹಾಯಕತೆ ಇರುವಂತೆ ನನಗೆ ಭಾಸವಾಯಿತು. "ಸರ್, ನೀವು ಕ್ಯಾಸೆಟ್ಟಿನಲ್ಲಿ ಹೇಳುತ್ತಾ ಹೋಗಿ... ನಾನು ಬರೆದುಕೊಡುತ್ತೇನೆ. ನಿಮ್ಮ ನೆನಪಿನ ಭಂಡಾರದಿಂದ ತೆಗೆದ, ನಿಮ್ಮ ಅನುಭವಗಳೆಂಬ ಅಮೂಲ್ಯ ಹೂವುಗಳ ಮಾಲೆ ಕಟ್ಟಿಕೊಡುತ್ತೇನೆ ನಾನು.... ಆಗಬಹುದೇ?" ಎಂದೆ, ಸ್ವಲ್ಪ ನಾಟಕೀಯವಾಗಿ. ಅಲ್ಲಿಯವರೆಗೆ ಶ್ರೀಮತ್ತೂರರು ನನಗೆ, ನಮ್ಮ ಮನೆಯವರಿಗೆಲ್ಲ ಸಾಕಷ್ಟು ಹತ್ತಿರದವರಾಗಿದ್ದರು. "ಆಗಬಹುದು.... ಆದರೆ ಆ ಅಮೂಲ್ಯ ಹೂವುಗಳನ್ನು ನೆನಪಿನಿಂದ ಉದುರಿಸುವುದಕ್ಕಾದರೂ ಸಮಯ ಬೇಕಲ್ಲ!!" ಎಂದು ನಕ್ಕರು ಅವರು.

ದೇವರು ಈ ದಿನ ಆ ಕೆಲಸವನ್ನು ಆಗು ಮಾಡಿಸಿದ್ದಾನೆ! ಅವರು ಹೇಳುತ್ತಾ ಹೋದರು. ಕೇಳುತ್ತಾ ಹೋದಂತೆ ನನಗೆ ಇದನ್ನೆಲ್ಲ ನಂಬುವುದೋ, ನಂಬದೆ ಇರುವುದೋ ತಿಳಿಯದೇ ಹೋಯಿತು! ಆ ಸಮಯದಲ್ಲಿ ಒಂದು ವಾರ ಅವರ ಮನೆಯಲ್ಲೇ ಉಳಿದುಕೊಂಡಿದ್ದ ನಾನು ಅವರ ಫೋಟೋ ಆಲ್ಬಂಗಳನ್ನು ನೋಡಿ, ನೋಡಿ ದಣಿಯದಾದೆ. ಯಾರ ಜತೆ ಮತ್ತೂರರಿಲ್ಲ? ನನ್ನ ಆಶ್ಚರ್ಯವನ್ನು ಹೇಳಿಯೂ ಬಿಟ್ಟೆ, "ನಿಜಕ್ಕೂ ಮತ್ತೂರ್‌ಜೀ, ನೀವು ಹೇಳುವ ಅನುಭವಗಳಿಗೆಲ್ಲ ಈ ಫೋಟೋಗಳ ಸಾಕ್ಷಿ ಇರದಿದ್ದರೆ, ನನಗೆ... ನನಗೆ ಅವುಗಳನ್ನು ನಂಬುವುದು ಕಷ್ಟವಾಗುತ್ತಿತ್ತು!" ಎಂದೆ. ಈ ಪುಸ್ತಕವನ್ನು ಓದಿ, ಆ ಫೋಟೋಗಳನ್ನೆಲ್ಲ ನೋಡಿ ಮುಗಿಸಿದನಂತರ ನಿಮ್ಮೆಲ್ಲರ ಅಭಿಪ್ರಾಯವೂ ಇದುವೇ ಆಗುತ್ತದೆ ಎನ್ನುವುದರಲ್ಲಿ ನನಗೆ ಸಂಶಯವಿಲ್ಲ!

ಶ್ರೀ ಮತ್ತೂರರು, "ನಾನು ಕ್ಯಾಸೆಟ್ಟಿನಲ್ಲಿ ಶ್ರೀ ಆಂಡವನ್‌ಸ್ವಾಮಿಗಳ ರಾಮಾಯಣದ ಮೇಲಿನ ಉಪನ್ಯಾಸಗಳನ್ನು ಕೇಳಿ ಬರೆದೆ" ಎಂದು ಹೇಳಿದಾಗ, ನನಗೆ ಅದು ಅಂಥ ಕಷ್ಟದ ಕೆಲಸವಾಗಿ ಕಾಣಲಿಲ್ಲ. "ಆಗ ಎಷ್ಟು ಕಷ್ಟ ಆಯಿತು ಗೊತ್ತಾ! ಅವರ ಉಪನ್ಯಾಸದ ಹಂದರಕ್ಕೆ, ಕಥೆಯ ರಕ್ತ, ಮಾಂಸ, ನರ, ನಾಡಿಯನ್ನೆಲ್ಲಾ ತುಂಬಿಸಿ, ಅದಕ್ಕೊಂದು ಕೃತಿಯ ರೂಪ ಕೊಡಬೇಕಾದರೆ ಅದೆಷ್ಟು ಕಷ್ಟಪಟ್ಟೆ ನಾನು, ಭಗವಂತಾ!" ಎಂದು ಹೇಳಿ ಅವರು ನಿಲ್ಲಿಸಿದಾಗ ನಾನು, "ಅದೇನು ಮತ್ತೂರ್‌ಜೀ ಕಷ್ಟ? ಹೇಗಿದ್ದರೂ ಅವರು ಕ್ಯಾಸೆಟ್‌ನಲ್ಲಿ ಹೇಳಿರುವುದನ್ನು ಕೇಳಿಕೊಂಡು ಬರೆಯುವುದಷ್ಟೇ? ಸ್ವಲ್ಪ ವೇಗವಾಗಿ ಬರೆದರಾಯಿತು....!"ಎಂದೆ. ಈ ಎರಡು ವರ್ಷಗಳಲ್ಲಿ ಎಲ್ಲೋ ಆಗೊಮ್ಮೆ ಈಗೊಮ್ಮೆ ಈ ರೀತಿಯ ಒಂದೊಂದು ಮಾತನ್ನು ನಾನು ಅವರಲ್ಲಿ ಆಡಿದರೆ, ಅವರು ಹೆಚ್ಚಿಗೆ ಪ್ರತಿಕ್ರಿಯೆ ವ್ಯಕ್ತಪಡಿಸದೆ, ಕಣ್ಣು ಕಿರಿದು ಮಾಡಿ, ಹುಬ್ಬು ಸೇರಿಸಿ, "ಹೌದಾ, ಹಾಗೆನ್ನುತ್ತೀಯಾ?" ಎಂದು ಸುಮ್ಮನಾದರೆ, ಕೂಡಲೆ ನನಗೆ ನನ್ನ ತಪ್ಪಿನ ಅರಿವಾಗುತ್ತದೆ! ನನ್ನ ಆತುರದಲ್ಲಿ ಹೇಳಿದುದರ ಅರಿವಾಗುತ್ತದೆ. ನನಗಾಗಿದೆ ಎಂದು ಅವರಿಗೆ ತಿಳಿದ ಕೂಡಲೇ ಅವರು ಚಿಕ್ಕ ಹುಡುಗರಿಗೆ ಹೇಳಿ ಕೊಡುವಂತೆ, ನನಗೆ ತಿಳಿಸಿ ಹೇಳಿಕೊಡುತ್ತಾರೆ!

ಹಾಗೆಯೇ ಅವರು ಹೇಳಿಕೊಟ್ಟು ನನ್ನಿಂದ ಇದನ್ನೂ ಬರೆಯಿಸಿರುವುದು! ಇದನ್ನು ಬರೆಯಲು ಆತ್ಮಕಥೆಯ ಶೈಲಿಯನ್ನೇ ನಾನು ಬಳಸಿಕೊಂಡಿರುವೆನಾದರೂ, ಶ್ರೀ ಮತ್ತೂರರ ಭಾಷೆಯ ಕಸುವು, ಸಾಮರ್ಥ್ಯ ಇಲ್ಲಿ ಕಾಣಸಿಗದು ಎನ್ನುವ ಅಳುಕಿದೆ. ಆದರೂ ಶ್ರೀ ಮತ್ತೂರರ ಅಪಾರ ಅನುಭವವನ್ನು ಕೇಳಿ ಬರೆದಿರುವ ನನಗೆ ಡಿ.ವಿ.ಜಿ.ಯವರ

ಅನುಭವದ ಪಾಲೊಳು ವಿಚಾರ ಮಂಥನವಾಗೆ|
ಜನಿಯಿಕುಂ ಜ್ಞಾನನವನೀತವದೆ ಸುಖದಂ||
ಗಿಣಿಯೋದು ಪುಸ್ತಕಜ್ಞಾನ ನಿನ್ನನುಭವವೆ|
ನಿನಗೆ ಧರುಮದ ದೀಪ ಮಂಕುತಿಮ್ಮ||

ಎನ್ನುವ ಕಗ್ಗದ ಸಾಲುಗಳು ಮತ್ತೆ ಮತ್ತೆ ನೆನಪಾಗುತ್ತವೆ... ನಿಜ...

ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ|
ಚಿತ್ತದೊಳು ಬೆಳೆದರಿವು ತರು ತಳೆದ ಪುಷ್ಪ||
ವಸ್ತು ಸಾಕ್ಷಾತ್ಕಾರ ಅಂತರೀಕ್ಷಣೆಯಿಂದ|
ಶಾಸ್ತ್ರಿತನದಿಂದಲ್ಲ, ಮಂಕುತಿಮ್ಮ||

ಎಂದಿರುವ ಕಗ್ಗದ ಇನ್ನೊಂದು ಪದ್ಯದಂತೆ ಶ್ರೀ ಮತ್ತೂರರ ಅರಿವೂ ಸಹ! 'ನಾನು ಕಾಲೇಜು ಮೆಟ್ಟಿಲು ಹತ್ತಿದವನಲ್ಲ' ಎನ್ನುವ ಶ್ರೀ ಮತ್ತೂರರ ಕೊರಗಿಗೂ 'ವಸ್ತು ಸಾಕ್ಷಾತ್ಕಾರವು ಅಂತರೀಕ್ಷಣದಿಂದ, ಶಾಸ್ತ್ರಿತನದಿಂದಲ್ಲ ಮಂಕುತಿಮ್ಮ' ಎಂದು ಅವರ ಪ್ರೀತಿಯ ಗುರುಗಳಾದ ಶ್ರೀ ಡಿ.ವಿ.ಜಿ.ಯವರೇ ಉತ್ತರ ಕೊಟ್ಟಿದ್ದಾರೆ. ಇನ್ನು ನನ್ನಂತಹವರು ಶ್ರೀ ಮತ್ತೂರರ ಬಗ್ಗೆ ಏನು ತಾನೆ ಹೇಳಲಾದೀತು?

'ಶಾಸ್ತ್ರಂ ಬಂದೊಡೆ ಶಾಂತಿ, ಸ್ಥೈರಣೆ, ನಿಗರ್ವಂ, ನೀತಿ,
ಮೆಲ್ಪಾತು, ನಿಜಾತ್ಮಚಿಂತೆ ನಿಲವೇಳ್ಕುಂ'

ಎಂದು ರತ್ನಾಕರವರ್ಣಿ ತನ್ನ ಶತಕದಲ್ಲಿ ಹೇಳಿರುವುದು ಶ್ರೀ ಮತ್ತೂರರಂತಹವರನ್ನು ನೋಡಿಯೇ ಇರಬೇಕು. ಸದೈವ 'ವಿದ್ಯಾಭವನ' ಎನ್ನುವ ತಮ್ಮ 'ಆತ್ಮ'ದ ಚಿಂತೆಯಲ್ಲೇ ಇರುವ ಶ್ರೀ ಮತ್ತೂರರಂತಹಾ ಕರ್ಮಯೋಗಿ, ಸಜ್ಜನ, ನಮ್ಮ ನಡುವೆ ಇರುವುದೇ ಒಂದು ಪುಣ್ಯ ವಿಶೇಷ! ತಮ್ಮ ಜೀವನದ ಚಿತ್ರಣ ಮಾಡಲು ಅನುಮತಿಸಿ, ನನಗೆ ಒಂದು ಅಮೂಲ್ಯ ಅವಕಾಶವನ್ನು ಕಲ್ಪಿಸಿಕೊಟ್ಟು, ಅವರೇ ಹೇಳುವಂತೆ 'ಮೂಕಂ ಕರೋತಿ ವಾಚಾಲಮ್' ಎಂದು ಮಾಡಿದ್ದಾರೆ ನನ್ನನ್ನು! ಇದು ಆ ದೇವರ ಕೃಪೆ. ಶ್ರೀ ಮತ್ತೂರರಿಗೆ ನಾನು ನನ್ನ ಕೃತಜ್ಞತೆಗಳನ್ನು ಬರಿಮಾತಿನಿಂದ ತಿಳಿಸುವುದು ಅಶಕ್ಯವೇ ಸರಿ.

'ತಿಳಿಸುವೊಡೆ ಬರಿ ಮಾತುಗಳಳವಲ್ಲ' ಎನ್ನುವ ಕುಮಾರವ್ಯಾಸನ ಮಾತುಗಳನ್ನು ಹೇಳುತ್ತ, ಅವರಿಗೆ ನನ್ನ ವಂದನೆಗಳನ್ನೂ, ಅನನ್ಯ ಕೃತಜ್ಞತೆಗಳನ್ನೂ ಸಲ್ಲಿಸುತ್ತೇನೆ.

ಈ ದಿನ ಎಪ್ಪತ್ತೈದರ 'ಹರೆಯ'ಕ್ಕೆ ಕಾಲಿಡುತ್ತಿರುವ ಶ್ರೀ ಮತ್ತೂರರ ಜನ್ಮಶತಾಬ್ದಿಯನ್ನು ನಾವೆಲ್ಲರೂ ಹೀಗೆಯೇ ಸಂಭ್ರಮ, ಸಂತೋಷದಿಂದ ಆಚರಿಸುವಂತಾಗಿ, ಇನ್ನುಳಿದ ಇಪ್ಪತ್ತೈದು ವರ್ಷಗಳ ಅವರ ಅನುಭವಗಳ ಅಮೂಲ್ಯ ಹೂಗಳ ಮತ್ತೊಂದು ಮಾಲೆಯನ್ನೂ ನಾನೇ ಕಟ್ಟುವಂಥ ಸದವಕಾಶವನ್ನೂ ದೇವರು ನನಗೆ ಕರುಣಿಸಲಿ ಎಂದು ಬೇಡುತ್ತೇನೆ.

೧. ಗಣೇಶನಿಗೆ ಪ್ರಾರ್ಥನೆ

ಯಾವುದೇ ಕೆಲಸದ ಪ್ರಾರಂಭಕ್ಕೆ ಮೊದಲು ಗಣೇಶನಿಗೆ ಪ್ರಾರ್ಥನೆ ಸಲ್ಲಿಸುವುದು ನಮ್ಮ ಪದ್ಧತಿ. ನನ್ನ ಜೀವನದ ಘಟನೆಗಳ ನೆನಪುಗಳನ್ನು ಈಗ ಮೆಲುಕು ಹಾಕುವುದಕ್ಕೆ ಮೊದಲು ಆ ಗಣೇಶನಿಗೆ ನನ್ನ ಪ್ರಾರ್ಥನೆ ಸಲ್ಲಿಸುವುದು ಅಗತ್ಯ.

ಅಗಜಾನನಪದ್ಮಾರ್ಕಂ ಗಜಾನನಮ್ ಅಹರ್ನಿಶಮ್|
ಅನೇಕದಂ ತಂ ಭಕ್ತಾನಾಮ್ ಏಕದಂತಮ್ ಉಪಾಸ್ಮಹೇ||

ನನಗೆ ಈ ಶ್ಲೋಕದ ಅರ್ಥ ತಿಳಿದಿರಲಿಲ್ಲ. ೧೯೫೪ರಲ್ಲಿ ಕಂಚಿ ಪರಮಾಚಾರ್ಯರು ಬೆಂಗಳೂರಿಗೆ ಬಂದಿದ್ದರು. ವೇದರಕ್ಷಣೆಗೆಂದು ಸ್ವಾಮಿಗಳೇ ಸ್ಥಾಪಿಸುವ 'ವೇದರಕ್ಷಣ ಪರಿಪಾಲನಸಭೆ'ಗೆ ಅವರು ಬರಲಿದ್ದು, ಅವರನ್ನು ಸ್ವಾಗತ ಮಾಡುವ 'ಸ್ವಾಗತ ಸಮಿತಿ'ಯ ಸದಸ್ಯ ಆಗಿದ್ದೆ ನಾನು. ಆಗ ಅವರನ್ನು ಸ್ವಾಗತಿಸುವ ಭಾಗ್ಯ ನನಗೆ ಸಿಕ್ಕಿತ್ತು. ಅಲ್ಲದೆ ಅವರು ತಮಿಳಿನಲ್ಲಿ ಮಾತನಾಡಿದ್ದನ್ನು ಕನ್ನಡದಲ್ಲಿ ಹೇಳುವ ಅವಕಾಶ ಸಹ ನನಗೆ ಸಿಕ್ಕಿತ್ತು. ಆ ದಿನ ನಿಜಕ್ಕೂ ಬಹಳ ವಿಶೇಷದ ದಿನ ನನ್ನ ಜೀವನದಲ್ಲಿ... ಪರಮಾಚಾರ್ಯರು ಈ ಗಣೇಶ ಸ್ತುತಿಯಿಂದ ತಮ್ಮ ಮಾತು ಪ್ರಾರಂಭಿಸಿದರು... ಸ್ವಾರಸ್ಯಕರವಾದ ಅದರ ಅರ್ಥವನ್ನೂ ಹೇಳಿದರು. 'ಅ' ಎಂದರೆ 'ಇಲ್ಲ' ಎಂದೂ, 'ಗ' ಎಂದರೆ 'ಗಮಿಸು' ಅಥವಾ 'ಚಲಿಸು' ಎಂದೂ ಅರ್ಥ. 'ಅಗ' ಎಂದರೆ 'ಚಲಿಸದ್ದು' ಎಂದು, 'ಚಲಿಸದೆ ಇರುವಂಥದು' 'ಅಗ' ಎಂದರೆ ಪರ್ವತ, ಬೆಟ್ಟ ಎಂದು, 'ಅಗಜಾ' ಎಂದರೆ ಪರ್ವತಕ್ಕೆ ಹುಟ್ಟಿದ ಮಗಳು, ಅವಳು 'ಪಾರ್ವತಿ', 'ಆನನ' ಎಂದರೆ 'ಮುಖ', 'ಪದ್ಮಾರ್ಕಮ್' ಎಂದರೆ ಸೂರ್ಯನನ್ನು ಕಂಡ ಕಮಲದ ಹೂವಿನಂತೆ ಅರಳಿತು ಪಾರ್ವತಿಯ ಮುಖ. ಯಾವಾಗ ಕಮಲದಂತೆ ಅರಳಿತು? 'ಗಜಾನನ' ತನ್ನ ಮಗ ಗಣೇಶನನ್ನು ನೋಡಿದಾಗ.... ಅವನ ಕೀರ್ತಿಯನ್ನು ಕಂಡಾಗ... ಅಂತಹ ಪಾರ್ವತಿಯ ಮುಖವನ್ನು ಅರಳಿಸಿದ ಆ 'ಗಜಾನನ'ನನ್ನು ಅಹರ್ನಿಶಿ ಧ್ಯಾನ ಮಾಡುವೆ. ಇದು ಮೊದಲನೆಯ ಸಾಲಿನ ಅರ್ಥ. ಇನ್ನು ಎರಡನೆಯ ಸಾಲು : ಅವನನ್ನು ಹಗಲು-ರಾತ್ರಿ ಏಕೆ ಧ್ಯಾನ ಮಾಡಬೇಕು? 'ಅನೇಕದಂ ತಂ ಭಕ್ತಾನಾಂ', 'ಅನೇಕದಂ' ಎಂದರೆ ಒಂದಕ್ಕಿಂತ ಹೆಚ್ಚಿನ ವರವನ್ನು ಕೊಡುವ ಶಕ್ತಿ ಇರುವಂಥವನು, ಗಣೇಶನಿಗೆ ಆ ಯೋಗ್ಯತೆ-ಅರ್ಹತೆ ಇದೆಯಂತೆ! ಅದೇಕೆ ಎಂದರೆ ವೇದವ್ಯಾಸರ, ವಿಶೇಷ ಧರ್ಮಗ್ರಂಥಕ್ಕಾಗಿ ಗಜಾನನ ತನ್ನ ಒಂದು ದಂತವನ್ನೇ ಕೊಟ್ಟ ಎನ್ನುತ್ತಾರೆ... ದಂತವೇ ಏಕೆ? ಎಂದರೆ ಭಗವಂತನು, ಸೃಷ್ಟಿಯಲ್ಲಿ ಪ್ರತಿಜೀವಿಗೂ ಮುಖ್ಯವಾದ ಒಂದೊಂದು ಅಂಗವನ್ನು ಕೊಟ್ಟಿರುತ್ತಾನೆ, ಅದಕ್ಕೆ ಜೀವಾಂಗ ಅಥವಾ ಮರ್ಮಾಂಗ ಎಂದು ಹೆಸರು... ಆನೆಗೆ ದಂತ, ಕತ್ತೆಗೆ ಬೆನ್ನಿನ ನರ, ಕುದುರೆಗೆ ಕಾಲು, ಪಕ್ಷಿಗೆ ರೆಕ್ಕೆಗಳು... ಹೀಗೆ ಪ್ರತಿಯೊಂದು ಜೀವಿಗೂ ಜೀವಾಧಾರ ಅಂಗವನ್ನು ಆ ಪರಮಾತ್ಮ ಕೊಟ್ಟಿರುವುದರಿಂದ, ಇಲ್ಲಿ ಗಣೇಶ ತನಗೆ ಮುಖ್ಯವಾದದ್ದನ್ನು, ಪ್ರಿಯವಾದದ್ದನ್ನು, ದಾನಕೊಟ್ಟ. ನಾವೂ ಅಷ್ಟೆ... ದಾನ ಮಾಡಬೇಕಾದರೆ ಅದು ನಮಗೆ ತುಂಬಾ ಪ್ರಿಯವಾದದ್ದಾಗಿರ ಬೇಕು, ನಮಗೆ ಬೇಡವಾದದ್ದು ಕೊಟ್ಟರೆ ಅದರಿಂದ ಪ್ರಯೋಜನವಿಲ್ಲ. ಮನೆಗೆ ತಂದ ಒಳ್ಳೆಯ ಹಣ್ಣುಗಳನ್ನೇ ಆರಿಸಿ ಇತರರಿಗೆ ಕೊಡಬೇಕು. ಕೆಟ್ಟು ಹೋಗಿರುವುದನ್ನು ಕೊಟ್ಟಲ್ಲಿ ಅದು 'ದಾನ' ಎನ್ನಿಸಿಕೊಳ್ಳದು. ಹೀಗೆ ತನಗೆ ಪ್ರಿಯವಾದದ್ದನ್ನು ಕೊಟ್ಟಾಗಲೇ ಅದು 'ದಾನ' - 'ತ್ಯಾಗ' ಆಗುವುದು. ಅಂತಹ 'ದಾನ' ಮಾಡಿದ ಗಣೇಶನಿಗೆ ಪ್ರಾರ್ಥನೆಯನ್ನು ಸಲ್ಲಿಸಿ, ವೇದರಕ್ಷಣ ಪರಿಪಾಲನ ಸಭೆಯ ಶಾಖೆಯನ್ನು ಇಲ್ಲಿ ಪ್ರಾರಂಭಿಸಬೇಕೆಂದು ಸಂಕಲ್ಪ ಮಾಡಲಾಗಿದೆ" ಎಂದು ಸ್ವಾಮೀಜಿ ಹೇಳಿದರು.

ದೀಪಾವಳಿ

ಆ ದಿನ ಸ್ವಾಮೀಜಿ ಹೇಳಿದ ಈ ಶ್ಲೋಕ, ಅದರ ಅರ್ಥ ನನ್ನ ಮೇಲೆ ಅಗಾಧ ಪ್ರಭಾವ ಬೀರಿತು. ಅಂದಿನಿಂದ ನಾನು ಪ್ರತಿದಿನವೂ ತುಂಬ ಭಕ್ತಿಯಿಂದ ಈ ಶ್ಲೋಕವನ್ನು ಹೇಳುತ್ತೇನೆ. ಈ ಒಂದು ಅನುಭವ... ಅಂದರೆ 'ತಾಯಿಗೆ ಸಂತೋಷವಾಗಬೇಕು' ಎನ್ನುವುದು ನನ್ನ ಆರು-ಏಳನೇ ವಯಸ್ಸಿನಲ್ಲಿ ನಡೆದ ಒಂದು ಘಟನೆಯಿಂದ ನನ್ನ ಅರಿವಿಗೆ ಬಂದಿತು ಎಂದರೆ ಅತ್ಯುಕ್ತಿಯಲ್ಲ!

ನಾವು ತುಂಬಾ ಬಡತನದಲ್ಲಿ ಬೆಳೆದವರು. ಹಾಸನ ಜಿಲ್ಲೆಯ ಮುದಲಾಪುರ ಗ್ರಾಮದವರು. ಶಿವಮೊಗ್ಗ ಜಿಲ್ಲೆಯ ಮತ್ತೂರು ಗ್ರಾಮಕ್ಕೆ ವಲಸೆ ಬಂದವರು ಎಂದು ನಮ್ಮ ತಾಯಿ-ತಂದೆಯರು ಹೇಳುತ್ತಿದ್ದರು. ನಮ್ಮ ತಂದೆಗೆ ಎಂಟು ಮಕ್ಕಳು. ಮೊದಲನೆಯದು ಗಂಡು, ಎರಡು ಮೂರನೆಯದು ಹೆಣ್ಣು ಮಕ್ಕಳಾಗಿ, ಹುಟ್ಟಿದ ಎಂಟು-ಹತ್ತು ತಿಂಗಳಲ್ಲಿ ಎರಡೂ ಕಣ್ಣು ಮುಚ್ಚಿದವು. ಆಮೇಲೆ ಒಂದು ಗಂಡು, ಅನಂತರ ಒಂದು ಹೆಣ್ಣು, ಆರನೆಯದು ಗಂಡು. ಆರು ತಿಂಗಳ ಕೈ ಕೂಸನ್ನು ಎತ್ತಿಕೊಂಡು ಮತ್ತೂರಿಗೆ ಬಂದರು.

ಮತ್ತೂರಿನಲ್ಲಿ ನನಗಿಂತ ಮೇಲಿನ ಒಬ್ಬ ಅಣ್ಣ - ನಾನು ಹುಟ್ಟಿದೆವು. ನಮ್ಮೆಲ್ಲರ ನಡುವಿನ ಅಂತರ ಸರಾಸರಿ ಮೂರು ವರ್ಷಗಳ ಮೇಲೆ ಆರು ಅಥವಾ ಏಳು ತಿಂಗಳು. ಬಾಲ್ಯದ್ದು ಬಡತನ-ಕಡುಬಡತನ ವಿನಾ ಹೆಚ್ಚಿನದು ಏನೂ ನೆನಪಿನಲ್ಲಿ ಇಡುವಂಥದಲ್ಲ!!

ಒಮ್ಮೆ ದೀಪಾವಳಿ ಹಬ್ಬ... ಆಗ ನನಗೆ ಸುಮಾರು ಆರು ವರ್ಷ. ಅಕ್ಕ-ಪಕ್ಕದ ಮನೆಯವರು ತಮ್ಮ ತಮ್ಮ ಮಕ್ಕಳಿಗೆ ಅಂಗಿ-ಚಡ್ಡಿ ಇತ್ಯಾದಿ ಹೊಸಬಟ್ಟೆ ಹೊಲಿಸಿ ಶಿವಮೊಗ್ಗದಿಂದ ತರುತ್ತಿದ್ದರು. ನನಗೂ ಹೊಸಬಟ್ಟೆಯ ಆಸೆ! ಆಗ ನನಗೆ ಸರಿಯಾಗಿ ಬಟ್ಟೆಯೂ ಇರಲಿಲ್ಲ. ಸುಮಾರಾದ ಅಲ್ಲಲ್ಲಿ ಹರಿದುಹೋದ ಅಂಗಿ-ಚಡ್ಡಿ ಹಾಕಿ ಕೊಂಡಿರುತ್ತಿದ್ದೆ. ಆಸೆ ತಡೆಯದೆ ಅಮ್ಮನ ಹತ್ತಿರ ಹೋಗಿ, "ಅಮ್ಮ, ನನಗೂ ಹೊಸ ಅಂಗಿ ಹೊಲಿಸು" ಎಂದು ಕೇಳಿದೆ! ಅದಕ್ಕೆ ಅಮ್ಮ, "ಅವರನ್ನು ಕೇಳು" ಅಂದರು. ಯಜಮಾನರನ್ನು 'ಅವರು' ಎನ್ನುವ ರೂಢಿ! ನಮ್ಮ ತಂದೆ ಬಡಗಿ ಕೆಲಸ ಮಾಡುತ್ತಿದ್ದರು. ಕುರ್ಚಿ , ಕಿಟಕಿ, ಬಾಗಿಲು ಇತ್ಯಾದಿಗಳನ್ನು ಮಾಡಿ, ಊರವರಿಗೆ ಕೊಟ್ಟು, ಬಂದ ಐದು-ಹತ್ತು ರೂಪಾಯಿಗಳಲ್ಲಿ ಸಂಸಾರ ತೂಗಿಸುತ್ತಿದ್ದರು. ತೋಟ-ಗೀಟ ನಮಗೇನೂ ಇಲ್ಲದಿದ್ದ ಕಾರಣ, ಮತ್ತೂರಿಗೆ ಬಂದ ಮೇಲೆ ವಿಶೇಷವಾಗಿ , ಜೀವನಾಧಾರಕ್ಕೆ ಎಂದೇ ಆ ಕೆಲಸ ಕಲಿತುಕೊಂಡಿದ್ದರು. ಮರದ ತೊಲೆ ಒಂದರ ಮೇಲೆ ಕುಳಿತುಕೊಂಡು, ಸಣ್ಣ ಮರವನ್ನಿಟ್ಟುಕೊಂಡು, ಉಳಿಯಲ್ಲಿ ಅದನ್ನು ಹೊಡೆದು, ಅದನ್ನು ನಯವಾಗಿ ಮಾಡುವುದಕ್ಕೋಸ್ಕರ ಉಪಯೋಗಿಸುತ್ತಾರಲ್ಲಾ ಉಜ್ಜುಗೊರಡು... ಅದರಲ್ಲಿ ಉಜ್ಜುತ್ತಿದ್ದರು. ಬಾಯಲ್ಲಿ ತಂಬುಲ. ಅವರಿಗೆ ಎಲೆ ಅಡಕೆ ಹಾಕುವ ಅಭ್ಯಾಸ ಇತ್ತು. ಜತೆಗೆ ತಂಬಾಕು ಸಹ ಹಾಕಿಕೊಳ್ಳುತ್ತಿದ್ದರು. ನಾನು ನನ್ನ ತಂದೆಯ ಹತ್ತಿರ ಹೋಗಿ, ಅವರ ಬೆನ್ನು ಹಿಡಿದು ಅಲುಗಿಸಿ "ಅಪ್ಪಾ... ಅಪ್ಪಾ...." ಎಂದೆ... ಬಾಯಲ್ಲಿ ತಂಬುಲ ಇದ್ದುದರಿಂದ ಅವರು ಮಾತಾಡದೆ 'ಹ್ಞೂಂ...! ಹ್ಞೂಂ...!' ಎಂದರು. "ಅಪ್ಪಾ... ನನಗೂ ಹೊಸ ಅಂಗಿ ಬೇಕು" ಎಂದೆ ನಾನು! ಸುಮ್ಮನೇ ಇದ್ದರು. ಪುನಃ ಹಾಗೇ ಕೇಳಿದೆ. ಮಾತಾಡಲಿಲ್ಲ... ಹೀಗೇ ಎರಡು ಮೂರು ಸಲ ಕೇಳಿದಾಗ, ಅವರು, ಎದ್ದುಹೋಗಿ ಬಾಯಲ್ಲಿದ್ದ ತಂಬುಲವನ್ನು ಉಗಿದು, ಬಾಯಿ ಮುಕ್ಕಳಿಸಿ ಬಂದು, ಅಲ್ಲೇ ನಿಂತಿದ್ದ ನನ್ನ ಎಡಭುಜ ಹಿಡಿದು ಬಲಕ್ಕೆ ತಿರುಗಿಸಿ, ಜೋರಾಗಿ ನನಗೊಂದು ಏಟು ಕೊಟ್ಟರು. ನಾನು ಅಳಲು ಶುರು ಮಾಡಿದೆ... "ಅಂಗಿ ತೆಗೆದುಕೊಡುವವನು ಅಪ್ಪನೇನೋ, ಹೋಗಿ ನಿಮ್ಮ ಅಮ್ಮನನ್ನು ಕೇಳು!" ಎಂದರು. ತಕ್ಷಣ ನಾನು ಅತ್ತುಕೊಂಡು ಅಮ್ಮನ ಹತ್ತಿರ ಓಡಿ ಹೋದೆ. "ಅಂಗೀ ಬೇಕೂಂತ ಕೇಳಿದ... ಅದಕ್ಕೆ ಏಟು ಕೊಡಬೇಕೆ" ಎಂದರು ಅಮ್ಮ... ನನಗಿನ್ನೂ ಚೆನ್ನಾಗಿ ನೆನಪಿದೆ... (ಗಂಟಲುಬ್ಬಿ ಬಂದು ದನಿ ಗದ್ಗದ ಆಯಿತು!) ಆಗ ನಮ್ಮ ತಂದೆ, "ನೋಡು... ನಾನು ಎಷ್ಟು ಸಲ ಹೇಳಿದ್ದೀನಿ. ಅವರಿಗೆ ಏನು ಬೇಕಾದರೂ ನಿನ್ನನ್ನು ಕೇಳಬೇಕು... ನನ್ನನ್ನಲ್ಲ! ನಿನಗಿಂತ ಮೊದಲು ನಾನು ಹೋದರೆ ನೀನೇ ಅವರಿಗೆ ಎಲ್ಲಾ....! 'ಅಮ್ಮನೇ ಎಲ್ಲ ನಮಗೆ' ಅನ್ನುವ ಭಾವನೆ ಅವರಿಗೆ ಬರಬೇಕು. ನಾನು ಅದಕ್ಕೇ ಅವನಿಗೆ ನಿನ್ನ ಅಮ್ಮನನ್ನು ಕೇಳು ಅಂತ ಹೇಳಿದ್ದು... ಇದನ್ನೆಲ್ಲ ಜ್ಞಾಪಕ ಇಟ್ಟುಕೋಬೇಕು" ಎಂದರು. ಆಗ ನಮ್ಮ ಅಮ್ಮ ಮಾತಾಡದೆ ಸುಮ್ಮನೆ ಅವರ ಮುಖ ನೋಡಿದರು. ಅವರ ಕಣ್ಣಲ್ಲಿ ಎರಡು ಹನಿ ನೀರು... ಇಷ್ಟೇ... ಈ ಪ್ರಸಂಗ ನನ್ನ ನೆನಪಿನಲ್ಲಿ ಬಹಳ ದೀರ್ಘಕಾಲ ಉಳಿಯಿತು. ಆಗೆಲ್ಲ ತಂದೆತಾಯಿಗಳು ಮಕ್ಕಳಿಗೆ ಒಳ್ಳೆಯದನ್ನು ಹೇಳಿಕೊಡಬೇಕು ಎಂದುಕೊಂಡಾಗ ಅದನ್ನು ತಮ್ಮ ಕ್ರಿಯೆಯಿಂದ ತೋರಿಸಿ ಹೇಳಿಕೊಡುತ್ತಿದ್ದರು! ಈ ಮಾತಿನ ಅನುಭವ ವಯಸ್ಸಾಗುತ್ತಿದ್ದಂತೆ ಹೆಚ್ಚಾಗಿ ನನಗಾಯ್ತು.

ಮಾತೃಭಕ್ತಿ

ನಮ್ಮಲ್ಲಿ ಮುಖ್ಯವಾಗಿ 'ಮಾತೃದೇವೋ ಭವ' ಎನ್ನುವ ಮಾತಿದೆ. ತೈತ್ತಿರೀಯ ಉಪನಿಷತ್ತಿನಲ್ಲಿ, 'ಅಮ್ಮನೇ ಮೊದಲನೇ ದೇವರು' ಎಂದೇ ಹೇಳಿದೆ... ಆಮೇಲೆ 'ತಂದೆ' ಎಂದು ಹೇಳಿದೆ. ಮಹಾಭಾರತದ ಯಕ್ಷಪ್ರಶ್ನೆಯಲ್ಲಿ ಯಕ್ಷ, ಧರ್ಮರಾಜನಿಗೆ 'ಭೂಮಿಗಿಂತ ಭಾರ ಯಾವುದು?'... ಎನ್ನುವ ಪ್ರಶ್ನೆ ಕೇಳಿದಾಗ 'ತಾಯಿ' ಎನ್ನುತ್ತಾನೆ ಧರ್ಮರಾಜ. ಇದರ ಅರಿವು , ವರ್ಷಗಳು ಕಳೆದಂತೆ ವಯಸ್ಸಾಗುತ್ತಾ, ಮನಸ್ಸಿನಲ್ಲಿ ಅಚ್ಚು ಒತ್ತಿದ ಹಾಗಾಗಿದೆ. ಈ ಮಾತನ್ನು ನಾವು ಚಿಕ್ಕ ವಯಸ್ಸಿನಿಂದಲೂ ಕೇಳುತ್ತಿರುವುದರಿಂದ, ಅದರ ಪರಿಣಾಮವಾಗಿ ಎಲ್ಲ

ಸ್ತ್ರೀಯರನ್ನೂ, ತಾಯಿ ಸ್ವರೂಪವಾಗಿ ಕಂಡು, ಗೌರವದಿಂದ ನಡೆಸಿಕೊಳ್ಳಬೇಕು ಎನ್ನುವ ಭಾವನೆ ನಮ್ಮಲ್ಲಿ ಬಲವಾಗಿರುತ್ತದೆ. ಇದು ನಮ್ಮ ದೇಶದ ಒಂದು ಸಂಸ್ಕೃತಿ, ವೈಶಿಷ್ಟ್ಯ ಎಂದೇ ನನ್ನ ಭಾವನೆ.

ನಮ್ಮ ತಂದೆ ಸಣ್ಣ ವಯಸ್ಸಿನಲ್ಲೇ ಕಣ್ಣು ಮುಚ್ಚಿದ್ದರು. ನಾವು ನಮ್ಮ ತಾಯಿಯನ್ನು ಬಹಳ ಚೆನ್ನಾಗಿಯೇ ನೋಡಿಕೊಂಡೆವು. ತಂದೆಯವರು ಹೋದ ಮೇಲೆ ಸುಮಾರು ೩೫ ವರ್ಷಗಳ ಕಾಲ ನಮ್ಮ ತಾಯಿ ಇದ್ದರು. ಆದರೆ ಇಷ್ಟು ಮಾತ್ರ ನಿಜ... ಅವರು ನಮ್ಮ ಜೊತೆಯಲ್ಲಿದ್ದಷ್ಟು ದಿನದಲ್ಲಿ ಒಂದು ದಿನವೂ ನಾವು ಅವರ ಕಣ್ಣಲ್ಲಿ ನೀರು ತರಿಸಲಿಲ್ಲ! ಇದಕ್ಕೆ ಕಾರಣ ಬಹುಶಃ ನಮ್ಮ ತಂದೆಯವರು ಹೇಳಿದ ಮಾತೇ ಎನ್ನುವುದು ನಮಗೆ ಮನದಟ್ಟಾಗಿತ್ತು.

ಇನ್ನೊಂದು ಸ್ವಾರಸ್ಯಕರ ವಿಷಯ... ತಾಯಿಯ ವಿಷಯವೇ ಇದೂ ಸಹ....! ಸ್ವಲ್ಪ ವಯಸ್ಸಾದ ಮೇಲೆ ನಡೆದದ್ದು ಇದು! ನನ್ನ ಅಣ್ಣ ಎಂ.ಆರ್. ಶಂಕರಮೂರ್ತಿಯವರು, ಸಂಗೀತಗಾರರು... ಅವರು ಪುಸ್ತಕಗಳನ್ನು ಓದಿ, ರಾತ್ರಿಯ ವೇಳೆ ನನಗೆ ಅದರ ಸಾರಾಂಶವನ್ನು ಹೇಳುತ್ತಿದ್ದರು. ಅವರು ಮಾಡಿಸಿದ ಈ ಅಭ್ಯಾಸ ನನಗೆ ವಿಶೇಷವಾಗಿ ಸಾಹಿತ್ಯದಲ್ಲಿ ಬಹಳ ಅಭಿರುಚಿ ಹುಟ್ಟುವುದಕ್ಕೆ ಕಾರಣವಾಯಿತು! ಹಾಗೆಯೇ ನಮ್ಮ ಅಣ್ಣನವರು ಸಾಮಾನ್ಯವಾಗಿ ಆಯಾ ದಿನ ಏನೇನೆಲ್ಲ ಆಯಿತು, ಹೇಗೆ ಆಯಿತು ಎನ್ನುವುದರ ವರದಿಯನ್ನು ನಮ್ಮ ತಾಯಿಗೆ ತಪ್ಪದೆ ಕೊಡುತ್ತಿದ್ದರು. ನನ್ನ ಮನಸ್ಸಿನಲ್ಲಿ ಎಂಥದೋ ಕುತೂಹಲ... ಅಣ್ಣ ಏಕೆ ಇದನ್ನೆಲ್ಲ ಅಮ್ಮನಿಗೆ ದಿನಾ ವರದಿ ಒಪ್ಪಿಸುವುದು ಎಂದು! ಒಂದು ದಿನ ನಮ್ಮ ಅಣ್ಣ ಬಾಲಗಂಗಾಧರ ತಿಲಕರ ಜೀವನದಲ್ಲಿ ನಡೆದ ಒಂದು ಘಟನೆಯನ್ನು ಹೇಳಿದರು...

ಬಾಲಗಂಗಾಧರ ತಿಲಕರ ತಂದೆ ಸಣ್ಣ ವಯಸ್ಸಿನಲ್ಲಿ ತೀರಿ ಕೊಂಡಿದ್ದರು... ವಿಧವೆ ತಾಯಿ... ಒಬ್ಬನೇ ಮಗ... ಪ್ರತಿದಿನ ರಾತ್ರಿ ಅಮ್ಮನವರು ಮಗನಿಗಾಗಿ ಊಟಕ್ಕೆ ಕಾಯುತ್ತಿದ್ದರು. ಮಗ ಬಂದ ಮೇಲೆ ಅವನಿಗೆ ಊಟ ಬಡಿಸಿ, ಅನಂತರ ತಾವು ಊಟ ಮಾಡಿ ಅಥವಾ ಹಣ್ಣು ತಿಂದು ಮಲಗುವುದು ಅವರ ಅಭ್ಯಾಸ. ಹೀಗೇ ಒಂದು ದಿನ ತಿಲಕರು ರಾತ್ರಿ ಬಹಳ ತಡವಾಗಿ, ಸುಮಾರು ಎರಡು ಗಂಟೆಯ ಸಮಯಕ್ಕೆ ಮನೆಗೆ ಬಂದರು. ಮನೆಯಲ್ಲಿ ದೀಪ ಹಾಕಿರದೆ ಬಾಗಿಲು ಹಾಕಿಕೊಂಡು, ಕಿಟಕಿಯಲ್ಲಿ ನೋಡುತ್ತ, ಮಗನ ದಾರಿ ಕಾಯುತ್ತಿದ್ದರು. ತಾಯಿ, ಮಗನನ್ನು ನೋಡಿ ಬಾಗಿಲು ತೆಗೆದು, ಒಳಗೆ ಬಂದ ಮಗನನ್ನು ''ಯಾಕಪ್ಪ ಕಂದಾ, ಈ ದಿನ ಇಷ್ಟು ತಡ ಆಯ್ತು?'' ಎಂದು ಕೇಳಿದರು... ''ಹೀಗೇ ಏನೋ ಕೆಲಸ ಇತ್ತು'' ಎಂದು ಲಘುವಾಗಿ ಹೇಳಿದ ಮಗ ಕೈಕಾಲು ತೊಳೆದುಕೊಳ್ಳಲು ಹೋದ. ಅನಂತರ ಮಲಗಿದ. ಬೆಳಗಾಗೆದ್ದ ತಿಲಕರು ಅಡುಗೆ ಮನೆಯಲ್ಲಿ ಬಂದು ನೋಡಿದರೆ, ಮಾಡಿದ ಅಡುಗೆಯೆಲ್ಲಾ ಹಾಗೆಯೇ ಇದ್ದದ್ದು ಕಂಡಿತು... ''ಯಾಕಮ್ಮ, ರಾತ್ರಿ ನೀವು ಊಟ ಮಾಡಲಿಲ್ಲವೇ?'' ಎಂದರು. ''ಇಲ್ಲಪ್ಪ , ರಾತ್ರಿ ನಾನು ನಿನ್ನನ್ನು ಎಲ್ಲಿಗೆ ಹೋಗಿದ್ದೆ , ಯಾಕೆ ತಡ ಅಂತ ಕೇಳಿದ್ದಕ್ಕೆ ನೀನು ಸರಿಯಾಗಿ ಉತ್ತರ ಕೊಡಲಿಲ್ಲ... ಅದಕ್ಕೆ ಯಾಕೋ ಏನೂ ತಿನ್ನಬೇಕು ಅಂತ ಅನ್ನಿಸಲಿಲ್ಲ'' ಎಂದರು ತಾಯಿ. ಅಂದೇ ತಿಲಕರು ನಿರ್ಧಾರ ಮಾಡಿದರು. ''ಇನ್ನು ಮೇಲೆ ನಾನು ಎಲ್ಲಿಗೇ ಹೋಗಲಿ, ಏನೇ ಮಾಡಲಿ ಅದನ್ನೆಲ್ಲ ಆಯಾ ದಿನವೇ ಏನೇನು ಆಯಿತು ಅನ್ನುವುದನ್ನು ಬೆಳಗ್ಗೆ-ಸಂಜೆ ಅಮ್ಮನಿಗೆ ವರದಿ ಮಾಡುತ್ತೇನೆ'' ಹೀಗೆ ಹೇಳಿ ಅಮ್ಮನ ಪಾದ ಮುಟ್ಟಿ ಪ್ರಮಾಣ ಮಾಡಿದರಂತೆ ! ಆನಂತರ ಅವರು ದೊಡ್ಡ ವ್ಯಕ್ತಿಯಾಗಿ ಬೆಳೆದರು. ಇದು ನನ್ನ ಜೀವನದಲ್ಲಿ ನನ್ನ ಮೇಲೆ ಬಹಳ ಪರಿಣಾಮ ಬೀರಿತು ಎಂದು ಹೇಳುವುದಕ್ಕೆ ನನಗೆ ತುಂಬ ಸಂತೋಷ.

ಬಾಲ್ಯ , ವಿದ್ಯಾಭ್ಯಾಸ , ಬೆಳವಣಿಗೆ ಎಲ್ಲರ ಜೀವನದಲ್ಲಿ ಇದ್ದದ್ದೇ. ಆದರೆ ವ್ಯಕ್ತಿಜೀವನದ ಕೆಲವು ಘಟನೆಗಳು ಅವನನ್ನು ಒಂದು ಸ್ವರೂಪಕ್ಕೆ ತರುತ್ತವೆ. ನನ್ನ ಅಭಿಪ್ರಾಯದಲ್ಲಿ ಬಡತನ ಅನ್ನುವುದು ಒಂದು ಭಾಗ್ಯ! ನನ್ನ ಜೀವನದಲ್ಲಿ ನನಗೆ ಹಾಗೇ ಅನ್ನಿಸಿದೆ... 'ದೇವರು ಬಡತನ ಕೊಡುತ್ತಾನೆ, ಅವನು ನಿರ್ದಯಿ, ಬಡವರಿಗೆ ಬಡತನ-ಶ್ರೀಮಂತರಿಗೆ ಐಶ್ವರ್ಯ ಕೊಡುತ್ತಾನೆ' ಎಂದು ನಾವು ದೇವರನ್ನು ದೂರುತ್ತೇವೆ. ಹಾಗೆ ಯೋಚಿಸುತ್ತ ಹೋದರೆ ಬಡತನವೇ ಆದರೂ, ಎಂತಹ ಒಂದು ಅನುಗ್ರಹ ಅದು ಎಂದು ಅನಿಸದೆ ಇರುವುದಿಲ್ಲ. ವಯಸ್ಸಾಗುತ್ತಿದ್ದಂತೆ ಅನೇಕರ ಜೀವನ ಚರಿತ್ರೆಗಳನ್ನು ಓದಿದಾಗ 'ಬಡತನ ಕೊಟ್ಟು ದೇವರು ನಮ್ಮನ್ನು ಬದುಕಿಸಿದ' ಎಂದೂ ಅನಿಸಿತು. ಈ ಅಭಿಪ್ರಾಯ ಎಲ್ಲಾ ಧರ್ಮದಲ್ಲೂ ಇದೆ... ಭಗವಂತ ಏನೇ ಮಾಡಿದರೂ, ಯಾವುದೋ ಉದ್ದೇಶ ಇಟ್ಟುಕೊಂಡು, ನಮ್ಮನ್ನು ರೂಪಿಸುವುದಕ್ಕಾಗಿಯೇ ಮಾಡುತ್ತಾನೆ ಎನ್ನುವ ನಂಬಿಕೆ ಮೂಡುತ್ತದೆ.

೨. ಸಂಕೇತಿ ಜನಾಂಗ

ನಾವು ಸಂಕೇತಿ ಜನಾಂಗದವರು, ಹಾಗೆಂದು ನಮ್ಮನ್ನು ಕರೆಯುತ್ತಾರೆ. ಈ 'ಸಂಕೇತಿ'ಗಳಿಗೆ ಒಂದು ದಂತ ಕಥೆ ಇದೆ... ಅದಕ್ಕೆ ಒಂದು ಶಾಸನವೂ ಇದೆ. ಈಗ ಸುಮಾರು ಸಾವಿರಾರು ಸಂಕೇತಿ ಕುಟುಂಬಗಳಿವೆ... ಆದರೆ ಆಗ ಒಂದು ನೂರು ಕುಟುಂಬಗಳಿದ್ದಿರ ಬೇಕು... ಇದು ಸುಮಾರು ೬೦೦-೭೦೦ ವರ್ಷಗಳ ಹಿಂದಿನ ಸಮಾಚಾರ. 'ಶೆಂಕೋಟ್ಟೈ' ಎನ್ನುವ ಕೇರಳ-ತಮಿಳುನಾಡಿನ ಗಡಿಯಲ್ಲಿದ್ದ ಒಂದು ಪ್ರದೇಶ, ಈಗಲೂ ಅದು ಒಂದು ವ್ಯಾಪಾರ ಕೇಂದ್ರ ಎಂದೇ ಪ್ರಸಿದ್ಧವಾಗಿದೆ. ಇದು ತಿರುನೆಲ್ವೇಲಿ ಜಿಲ್ಲೆಯಲ್ಲಿದೆ.

ಅಲ್ಲಿಂದ ಸುಮಾರು ನೂರು-ನೂರಿಪ್ಪತ್ತು ಬ್ರಾಹ್ಮಣ ಕುಟುಂಬದವರು ವಲಸೆ ಬಂದರು. 'ವಲಸೆ' ಎಂದರೆ ಆ ಜಾಗವನ್ನು ಬಿಟ್ಟು ಇನ್ನು ಯಾವುದಾದರೂ ರಾಜ್ಯದಲ್ಲಿ ನೆಲೆಸೋಣ ಎಂದು ಬರುವುದು... ಅವರು ವೇದಾಧ್ಯಯನ ಸಂಪನ್ನರು, ಆಚಾರವಂತರು, ಸಂಸ್ಕೃತ, ವೇದವೇ ಅವರಿಗೆ ಆಸ್ತಿಯಾಗಿತ್ತು... ಅವರಿಗೆ ತಮಿಳು-ಮಲಯಾಳಂ ಎರಡೂ ಭಾಷೆ ಬರುತ್ತಿತ್ತು. ಆದರೆ ಸಂಸ್ಕೃತವೇ ಅವರ ಮುಖ್ಯ ಭಾಷೆ! ಈಗಲು ಕೂಡ ನಮ್ಮಲ್ಲಿ ಆ ಛಾಯೆ ಎನ್ನುತ್ತಾರಲ್ಲ, ಅದನ್ನು ಕಾಣಬಹುದು! ಹೀಗೆ ವೇದಾಧ್ಯಯನ ಮಾಡಿದ್ದ ಅವರು ತಮಗೆ ಬಂದದ್ದನ್ನು ಇತರರಿಗೆ ಹೇಳಿಕೊಡುತ್ತಿದ್ದರು. ಇದಕ್ಕೇ 'ಬ್ರಾಹ್ಮಣ್ಯ' ಎಂದು ಹೇಳುವುದು... ಅದು ಬ್ರಾಹ್ಮಣರ ಕಸುಬು... ಅವರು ಯಾವ ಗ್ರಾಮದಲ್ಲಿರುತ್ತಾರೋ ಆ ಗ್ರಾಮದವರು ಅವರ ಪೋಷಕ ರಾಗಿರುತ್ತಾರೆ. ಅವರ ಹತ್ತಿರ ವೇದ ಹೇಳಿಸಿ, ಪೂಜೆ ಮಾಡಿಸುವುದು, ಮಕ್ಕಳಿಗೆ ಹೇಳಿಸುವುದು; ಮದುವೆ ಮುಂತಾದ ಶುಭ ಸಮಾರಂಭಗಳಾಗಲಿ, ಶ್ರಾದ್ಧ ಅಥವಾ ಇತರೇ ಅಪರಕರ್ಮಗಳಾಗಲಿ, ಇವುಗಳನ್ನು ಇತರ ಬ್ರಾಹ್ಮಣ ಕುಟುಂಬಗಳು ಮಾಡಿಸಿಕೊಂಡು ಅವರಿಗೆ ದಕ್ಷಿಣೆ ಕೊಡುವುದು - ರೂಢಿ. ಈ ತರಹದ ವೃತ್ತಿಜೀವನ ಆಗಿತ್ತು. ಇದನ್ನು ನಾವು ಪರಾವಲಂಬನೆ ಎನ್ನುವಂತಿಲ್ಲ. ಏಕೆಂದರೆ ತಮಗೆ ಬಂದದ್ದನ್ನು ಇತರರಿಗೆ ಹೇಳಿಕೊಟ್ಟು ಜೀವನ ನಡೆಸುತ್ತಿದ್ದ ಜನಕ್ಕೆ ಏನು ಕಷ್ಟ ಬಂತೋ ಗೊತ್ತಿಲ್ಲ , ಹಾಗೆಯೇ ಆ ಸ್ಥಳಬಿಟ್ಟು ವಲಸೆ ಹೊರಟವರು ಆಂಧ್ರಪ್ರದೇಶ, ತಮಿಳುನಾಡನ್ನೆಲ್ಲ ಸುತ್ತಿ ಕಡೆಗೆ ಕರ್ನಾಟಕಕ್ಕೆ ಬಂದರು!

ಹೀಗೆ ಬಂದ ಇವರನ್ನು ನೋಡಿ ಮೈಸೂರು ಅರಸರ ಮಂತ್ರಿಗಳು ಮಹಾರಾಜರಿಗೆ ಇವರ ಬಗ್ಗೆ ವರದಿ ಮಾಡಿದರು. ಆಗ ಮಹಾರಾಜರು ವಿದ್ವಾಂಸರುಗಳನ್ನು ಬಹಳವಾಗಿ ಗೌರವಿಸಿ , ಮನ್ನಣೆ ಮಾಡುವುದಿತ್ತು. ಅದೇ ಪ್ರಕಾರ ಇವರುಗಳನ್ನೂ ಆಹ್ವಾನಿಸಿ ಮಹಾರಾಜರು ಮನ್ನಣೆ ಮಾಡಿ, ಇವರ ವಿನಯಪೂರ್ವಕ ನಡವಳಿಕೆಯನ್ನು ನೋಡಿ ಸಂತೋಷಪಟ್ಟು , "ಇಲ್ಲೇ, ನಮ್ಮ ರಾಜ್ಯದಲ್ಲೇ ಏಕೆ ನೆಲಸಬಾರದು ನೀವು?" ಎಂದು ಪ್ರಶ್ನೆ ಮಾಡಿದರಂತೆ! ಆಗ ಇವರು 'ಇಲ್ಲಿ ಹೇಗಿರುವುದು?' ಎಂದು ಸ್ವಲ್ಪ ಹಿಂದೆಗೆದರು. ಅದಕ್ಕೆ ಮಹಾರಾಜರು "ನಾವು ನಿಮಗೆ ಭೂಮಿಯನ್ನು ಕೊಡುತ್ತೇವೆ. ನೀವು ಎಲ್ಲಿ ಬೇಕಾದರೂ ನೆಲೆಸಿ, ನೀವು ನೆಲೆಸಲು ಇಷ್ಟಪಡುವ ಜಾಗ ನಿಮಗೆ ಕೊಡುತ್ತೇನೆ" ಎಂದರು. ಅದಕ್ಕೆ ಇವರು "ನಾವು ಹಾಗೆಲ್ಲ ಕ್ಷತ್ರಿಯರಿಂದ ದಾನ ತೆಗೆದು ಕೊಳ್ಳವವರಲ್ಲ, ಆ ರೂಢಿ ನಮ್ಮಲ್ಲಿಲ್ಲ" ಎಂದರು. ಆಗ ಅಲ್ಲಿಯೇ ಇದ್ದ ಮಂತ್ರಿಗಳು ಒಂದು ಉಪಾಯ ಹೂಡಿ, ಮಹಾರಾಜರಿಂದ ತಾವು ಆ ದಾನವನ್ನು ತೆಗೆದುಕೊಂಡಂತೆ ಮಾಡಿ, ಆ ಭೂಮಿಯನ್ನು ಇವರಿಗೆ ಕೊಟ್ಟು , ನೀವು ಅಲ್ಲಿ ಎಲ್ಲಿ ಬೇಕಾದರೂ ಇರಬಹುದು ಎಂದರಂತೆ! ಆಗ ಹತ್ತು ಹನ್ನೆರಡು ಕುಟುಂಬಗಳು ಆಗಿ ಬೇರ್ಪಟ್ಟು ಕಾವೇರಿ ನದೀ ತೀರಕ್ಕೂ , ಶಿವಮೊಗ್ಗ ಜಿಲ್ಲೆಯ ಮಲೆನಾಡಿನ ತುಂಗಾನದೀ ತೀರಕ್ಕೂ, ಹಾಸನಜಿಲ್ಲೆಯ ಬಯಲು ಸೀಮೆಗೂ ಹೋಗಿ ಅಲ್ಲಿ ಸ್ವಲ್ಪ ಜಾಗ ತೆಗೆದುಕೊಂಡು ವಾಸಮಾಡಲು ಪ್ರಾರಂಭಿಸಿದರಂತೆ... ಹಾಗೆಂದು ಹೇಳ್ತಾರೆ... ಇದು ನಮ್ಮ ಪೂರ್ವಿಕರ ಕಥೆ!

ಇವರನ್ನು 'ಸಂಕೇತಿ ವಡಮರು' ಎಂದು ಹೇಳುತ್ತಾರೆ. ವಡಮ ಎಂದರೆ ದಕ್ಷಿಣದೇಶದಲ್ಲಿ ಬ್ರಾಹ್ಮಣರು ಎಂದು. ಈ ವರ್ಗದಲ್ಲಿ ವಡಮರು, ವಾದ್ಯಮರು, ಬೃಹಚ್ಚರಣರು... ಹೀಗೆ ಬೇರೆ ಬೇರೆ ವಿಧ... ಇದು ನಮ್ಮ ಜನಾಂಗದ ಒಂದು ಹಿನ್ನೆಲೆ ಮಾತ್ರ.

ಈ ಕುಟುಂಬಕ್ಕೆ ಸೇರಿದವರು ನಾವು... ಈವತ್ತು ಕೂಡ ನಮ್ಮಲ್ಲಿ , ನಮ್ಮ ಜನ ಆಚಾರ-ವಿಚಾರ, ನಡವಳಿಕೆ, ಅನುಷ್ಠಾನ ಇದಕ್ಕೆಲ್ಲ ತುಂಬ ಬೆಲೆ ಕೊಡುತ್ತಾರೆ... ಅವರು ಯಾವುದನ್ನು ಮಾಡಿದರು ಕೂಡ ಚೆನ್ನಾಗಿ ನಿರ್ವಹಿಸಬಲ್ಲರು. ನನಗೆ ತಿಳಿದ ಹಾಗೆ ಅನೇಕರು ವೈದ್ಯಕೀಯ, ಜ್ಯೋತಿಷ್ಯ ಶಾಸ್ತ್ರ , ಇಂಜಿನಿಯರಿಂಗ್ ಓದಿದವರಿದ್ದಾರೆ, ಆಧುನಿಕ ವಿದ್ಯೆ ಕಲಿತು, ಇಂಗ್ಲಿಷ್ ಅಭ್ಯಾಸ ಮಾಡಿದ್ದಾರೆ, ಸಲಹೆಗಾರರೂ ಆಗಿದ್ದಾರೆ... ಹೀಗೆ ಎಲ್ಲದರಲ್ಲೂ ಮುಂದಿದ್ದಾರೆ. ಈ ಜನಾಂಗದಲ್ಲಿ ಇದೊಂದು ಆಶ್ಚರ್ಯ! 'ಇದ್ಯಾಕೆ ಹೀಗೆ ಇವರಲ್ಲಿ ಮಾತ್ರ?' ಅಂತ ಅವರನ್ನು ಕೇಳಿದರೆ ಇದಕ್ಕೆ ಅವರು ಕೊಡುವ ಕಾರಣ, 'ಸಣ್ಣ ವಯಸ್ಸಿನಲ್ಲಿ ಉಪನಯನ ಸಂಸ್ಕಾರ ಆಯಿತು, ಗಾಯತ್ರಿ ಮಂತ್ರದ ಉಪದೇಶ ಆಯಿತು, ಸಮಿದಾಧಾನ, ಅಗ್ನಿಕಾರ್ಯ ಇತ್ಯಾದಿಗಳನ್ನೆಲ್ಲ ನಡೆಸಿದರು... ಇದೆಲ್ಲ ಬುದ್ಧಿಗೆ ವಿಶೇಷವಾದ ಶಕ್ತಿ ಪುಷ್ಟಿಯನ್ನು ಕೊಡುವಂಥದು ಅಂತ ವೇದದಲ್ಲಿ ಹೇಳಿದೆ... ಇದನ್ನೆಲ್ಲ ಬಹಳ ಚೆನ್ನಾಗಿ ನಡೆಸಿಕೊಂಡು ಬಂದರು. ಆಚಾರವಂತರಾಗಿದ್ದರು, ನಿಷ್ಠೆಯಿಂದ ತಮ್ಮ ನಿತ್ಯಕರ್ಮವನ್ನು ನಿರ್ವಹಿಸಿದರು... ಆದ್ದರಿಂದ ಈ ಬುದ್ಧಿ ಪ್ರಕಾಶಕ್ಕೆ ಅವಕಾಶವಾಯಿತು' ಎಂದು.

ಇದನ್ನು ಹೇಳುವಾಗ ಮನಸ್ಸಿಗೆ ಬರುವುದು... ಈ ಬುದ್ಧಿ ಅನ್ನುವುದು ಒಂದು ಶಕ್ತಿ. ಆ ಬುದ್ಧಿಯಲ್ಲಿ ಏನನ್ನು ಬೇಕಾದರೂ ಮಾಡಬಹುದು! ಒಬ್ಬ ಮನುಷ್ಯ ಅದನ್ನು ಕ್ರಿಯಾತ್ಮಕವಾಗಿ ಉಪಯೋಗಿಸಿದರೆ ಅದರಿಂದ ಒಳ್ಳೆಯದಾಗುತ್ತದೆ... ಹಾಗೆ ಉಪಯೋಗಿಸದಿದ್ದಲ್ಲಿ ಕೆಟ್ಟದ್ದು ಆಗುತ್ತದೆ. ಈ ಬುದ್ಧಿ ಒಂದು ಹರಿತವಾದ ಕತ್ತಿ ಇದ್ದ ಹಾಗೆ ಎಂದು ಹೇಳಬಹುದು. ನಮ್ಮ ಜನಾಂಗದಲ್ಲಿ ಬುದ್ಧಿಯ ಧನಾತ್ಮಕ ಗುಣ ಜಾಸ್ತಿ ಇರುವುದು. ಆದರೆ ಒಂದೇ ಒಂದು ದೊಡ್ಡ ಅವಗುಣ ಇಸ್ಪೀಟು ಆಟ!! ನನ್ನ ಅಭಿಪ್ರಾಯದಲ್ಲಿ ಇದು ನಮ್ಮವರ ಒಂದು ದೊಡ್ಡ ದೌರ್ಬಲ್ಯ... ಈ ಇಸ್ಪೀಟು ಆಟದಿಂದ ಮನೆಗಳು ಹಾಳು... ಎಲ್ಲವನ್ನೂ ಹಾಳು ಮಾಡುತ್ತದೆ ಅದು... ಅದಕ್ಕೆ ನಮ್ಮ ಮಹಾಭಾರತವೇ ಸಾಕ್ಷಿ! ಈ ಜೂಜಾಟ ಎನ್ನುವುದು ಬಹಳ ಕೆಟ್ಟದ್ದು... ಭಯಂಕರವಾದದ್ದು...

ಎಲ್ಲವನ್ನೂ ಹಾಳು ಮಾಡುವಂಥದ್ದು... ಈ ಆಟದಲ್ಲಿ ಬಹಳ ಆಸಕ್ತಿ ಇದ್ದಂತಹವರು ನಮ್ಮಲ್ಲಿ ಹೆಚ್ಚಾಗಿ ಇದ್ದರು ಅಂತ ಹೇಳ್ತಾರೆ... ಇದು ನನ್ನ ಜೀವನದಲ್ಲಿ ನಮ್ಮ ತಂದೆಯ ಕಾಲದಲ್ಲಿ ನಡೆಯುತ್ತಿದ್ದುದರಿಂದ, ನನಗೆ ಇಷ್ಟು ಭಯಂಕರವಾಗಿ ಕಾಣುತ್ತದೆ!! ಮದ್ಯಪಾನ, ಧೂಮಪಾನ, ಜೂಜು ಇದೆಲ್ಲ ಬಹಳ ಕೆಟ್ಟದ್ದು ; ಅಂತಲೇ, ಮಹಾಭಾರತದಲ್ಲಿ ಇದನ್ನೆಲ್ಲ 'ವ್ಯಸನಗಳು' ಅಂತಲೇ ಹೇಳಿದೆ!

೩. ದಾಯಾದಿ ಮತ್ಸರ : ವಲಸೆ

ದತ್ತುಸ್ವೀಕಾರ !

ನಮ್ಮ ಕುಟುಂಬದ ವಿಷಯಕ್ಕೆ ಬಂದರೆ, ಮೊದಲು ನಮ್ಮದು ಸಣ್ಣ ಕುಟುಂಬ, ಅಜ್ಜ-ಅಜ್ಜಿ ಇದ್ದರು. ನಮ್ಮಜ್ಜ ಅಜ್ಜಿಗೆ ಅನೇಕ ವರ್ಷಗಳು ಮಕ್ಕಳಾಗಿರಲಿಲ್ಲ. ಅಜ್ಜ ಬಹಳ ಜಪತಪಗಳನ್ನು ಮಾಡುತ್ತಿದ್ದರು. ಆದರೂ ಯಾಕೋ ಮಡಿಲು ತುಂಬಿರಲಿಲ್ಲ. ಅವರಿಗೆ ಒಬ್ಬ ಅಣ್ಣ ಇದ್ದರು. ಆ ಅಣ್ಣನಿಗೆ ಒಂಬತ್ತು ಜನ ಮಕ್ಕಳಿದ್ದರು... ಇಷ್ಟು ಕಾಲವಾದರೂ ಮಕ್ಕಳಾಗದಿದ್ದುದರಿಂದ ನಮ್ಮ ಅಜ್ಜನವರು, 'ನಮ್ಮ ಅಣ್ಣನ ಮಕ್ಕಳಲ್ಲಿ ಒಬ್ಬನನ್ನು ದತ್ತು ತೆಗೆದುಕೊಳ್ಳೋಣ' ಎಂದು ಯೋಚನೆ ಮಾಡಿದರು... ಆದರೆ ನಮ್ಮ ಅಜ್ಜಿಗೆ ಇದು ಇಷ್ಟವಿರಲಿಲ್ಲ. ಕಾರಣ ಆ ಮನೆಯವರೆಲ್ಲ ಸ್ವಲ್ಪ ಸೂಕ್ಷ್ಮಸ್ವಭಾವದವರೂ, ಸ್ವಲ್ಪ ಕಠೋರರೂ ಆಗಿದ್ದರು ಎಂದು ಕಾಣುತ್ತದೆ...'ಇದೆಲ್ಲ ಎಲ್ಲರ ಮನೆಯಲ್ಲೂ ಸರ್ವೇ ಸಾಮಾನ್ಯ ಆಗಿದ್ದು , ಎಲ್ಲರ ಮನೆಯಲ್ಲೂ ಇರುವಂಥದೇ ಆಗಿದ್ದು, ಆ ಹುಡುಗರಲ್ಲಿ ಒಬ್ಬರನ್ನು ದತ್ತು ತೆಗೆದುಕೊಳ್ಳಿ' ಅಂದಾಗ ಇವರಿಗೆ 'ಒಲ್ಲೆ' ಎಂದು ಹೇಳಲೂ ಸಾಧ್ಯವಿರಲಿಲ್ಲ. ಸ್ವಂತ ಅಣ್ಣ ಬೇರೆ ನಮ್ಮಜ್ಜನಿಗೆ! ನಮಗೆ ಆಗ ಒಂದರ್ಧ ಮುಕ್ಕಾಲು ಎಕರೆ ಮಾತ್ರ ಜಮೀನಿದ್ದಿತು. ದತ್ತು ಕೊಟ್ಟರೆ ದತ್ತು ತೆಗೆದುಕೊಂಡವರ ಆಸ್ತಿ ಬರುತ್ತದೆ ಎನ್ನುವುದು ಹಿಂದಿನಿಂದಲೂ ಬಂದಿರುವಂಥದೇ. ಇದು, ಈ ವಿಷಯ ದತ್ತು ಕೊಡುವ ತೆಗೆದುಕೊಳ್ಳುವವರಿಬ್ಬರಿಗೂ ಗೊತ್ತೇ ಇರುತ್ತದೆ. ಆದ್ದರಿಂದ ಸಹಜವಾಗಿ ಅವರ ಕಡೆಯವರಿಗೆ 'ಇವರಿಗೆ ಮಕ್ಕಳಾಗುವುದೇ ಬೇಡ' ಅಂತಲೂ ಇದ್ದೀತು! ಏಕೆಂದರೆ ನಮ್ಮ ಮಗುವನ್ನ ಅವರಿಗೆ ದತ್ತು ಕೊಡೋಣ ಎಂದು ಮನಸ್ಸಿನಲ್ಲಿ ಆಸೆ. ಆದರೆ ಈ ದಂಪತಿಗಳು ದತ್ತು ಸ್ವೀಕಾರವನ್ನು ವಿಳಂಬಿಸುತ್ತಾ ಬಂದರು.

ಒಂದು ದಿನ ಯಜ್ಞನಾರಾಯಣ ದೀಕ್ಷಿತರು ಅನ್ನುವವರು, ಇವರು ನಮ್ಮ ದೂರದ ಬಂಧುಗಳು, ಮುದಲಾಪುರ ಗ್ರಾಮಕ್ಕೆ ಬಂದರಂತೆ... [ಇದನ್ನು ನಮ್ಮಜ್ಜಿ ನಮ್ಮಮ್ಮನ ಹತ್ತಿರ ಹೇಳಿದ್ದನ್ನು, ನಮ್ಮಮ್ಮ ನಮಗೆ ಹೇಳಿದ್ದು...] ಈ ಕುಟುಂಬದ ಕಥೆ ಬರುವುದೇ ಹೀಗೆ! ದೀಕ್ಷಿತರು ಮುದಲಾಪುರಕ್ಕೆ ಬಂದರು. ಅವರು ಯಜ್ಞಮಾಡಿದ್ದರಿಂದ ಅವರಿಗೆ ಆ ಹೆಸರು... ದೀಕ್ಷಿತರ ಮನೆತನ ಅವರದ್ದು.. ವೇದದ ಮೇಲೆ ಅವರಿಗೆ ಬಹಳ ಗೌರವ, ಬಹಳ ತಿಳಿದುಕೊಂಡಿದ್ದರಂತೆ... ಆ ದಿನ ನಮ್ಮಮ್ಮ ನಮಗೆ ಹೇಳಿದ್ದು ಈಗಲೂ ಕಣ್ಣಿಗೆ ಕಟ್ಟಿದಂತಿದೆ...

"...ನಿಮ್ಮಜ್ಜ ತುಂಬಾ ಮಾತಾಡುವವರಲ್ಲ... ಮೌನಿ... ದೀಕ್ಷಿತರೂ ಹೆಚ್ಚಿಗೆ ಮಾತನಾಡುವವರಲ್ಲ... ಸೂಕ್ಷ್ಮವಾಗಿ ಕಣ್ಣಲ್ಲೇ ಮಾತನಾಡಿಕೊಳ್ಳುತ್ತಿದ್ದರೋ ಏನೋ, ತಿಳಿಯದು! ಅವತ್ತು ಸಂಜೆಯೂ ಹೀಗೆ... ಇಬ್ಬರೂ ಜಗುಲಿಯ ಮೇಲೆ ಕುಳಿತಿದ್ದಾಗ, ಅರ್ಧಂಬರ್ಧ ಕೇಳುವ ಹಾಗೆ ನಿಮ್ಮಜ್ಜ ದೊಡ್ಡಯ್ಯನ ಜತೆ [ದೊಡ್ಡಯ್ಯ ಅಂದರೆ ದೊಡ್ಡಪ್ಪ ಅಂತ, ಅಯ್ಯ ಅಂತ ತಂದೆಗೂ ಹೇಳುತ್ತಾರೆ. ಯಜ್ಞನಾರಾಯಣ ದೀಕ್ಷಿತರನ್ನು ನಾವೆಲ್ಲ ಪ್ರೀತಿಯಿಂದ ದೊಡ್ಡಯ್ಯ ಎಂದೇ ಕರೆಯುತ್ತಿದ್ದೆವು!] 'ಈಗ ದತ್ತು ತೆಗೆದುಕೊಂಡು ಬಿಡೋಣಾಂತ ಯೋಚನೆ. ಎಲ್ಲರೂ ಒತ್ತಾಯ ಮಾಡುತ್ತಿದ್ದಾರೆ... ಏನೂ ಗೊತ್ತಾಗುತ್ತಿಲ್ಲ, ಏನು ಮಾಡ ಬೇಕೂಂತ...?' ಎಂದು ಉಸಿರಿದರಂತೆ.

ಸಂತಾನವಾಗಬೇಕು, ವಂಶ ಬೆಳೆಯಬೇಕು ಎಂದು ಎಲ್ಲರ ಮನಸ್ಸಿನಲ್ಲೂ ಇರುತ್ತದೆ. ನಮ್ಮ ದೇಶದಲ್ಲಿ ಇದಕ್ಕೆ ಧಾರ್ಮಿಕ ಕಾರಣವೂ ಸಾಕಷ್ಟು ಬಲವಾದದ್ದೇ... ಯಾಕೆಂದರೆ, ಪರಲೋಕಕ್ಕೆ ಹೋದ ಮೇಲೆ ತಮಗೆ ಸದ್ಗತಿ ಆಗಬೇಕು... ಅದಕ್ಕೆ ಮಕ್ಕಳಾಗಬೇಕು... ಅದರಲ್ಲೂ ಗಂಡು ಮಗು ಆಗಬೇಕು ಅಂತ ಒಂದು ಆಕಾಂಕ್ಷೆ , ಇದು ಎಲ್ಲರಿಗೂ ಸಾಮಾನ್ಯ. ಒಂದು ವೇಳೆ ಆಗದೆ ಹೋದಾಗ , ದತ್ತು ತೆಗೆದುಕೊಂಡರೆ, ದತ್ತು ಮಗ ಎಲ್ಲಾ ಕರ್ಮಗಳನ್ನೂ ಮಾಡಬೇಕು ಎಂದು ಶಾಸ್ತ್ರದಲ್ಲಿ ವಿಧಿಸಿದೆ. ಆದರೆ ತಡವಾಗುತ್ತ ಇರುವುದು ನೋಡಿ ನಮ್ಮಜ್ಜನಿಗೆ ಚಿಂತೆ ಆಗಿತ್ತು. ಅವರು ಯಾವಾಗಲೂ ಜಪ ಮಾಡುತ್ತಿದ್ದವರು. ಬಹಳ ಸಹನಾಶೀಲರು. ಸಿಟ್ಟು ಅನ್ನುವುದೇ ಅವರಿಗೆ ಗೊತ್ತಿರಲಿಲ್ಲ ಎಂದು ನಮ್ಮಮ್ಮ ಹೇಳುತ್ತಿದ್ದರು. ಆದರೆ ಇವರಿಗೆ ತದ್ವಿರುದ್ಧ ಇವರ ಅಣ್ಣನ ಮನೆಯವರು, ಇದು ನಮ್ಮಜ್ಜನ ಚಿಂತೆಯನ್ನು ಹೆಚ್ಚಿಸಿತ್ತು...!

ಇಬ್ಬರೂ ಕಣ್ಣುಮುಚ್ಚಿಕೊಂಡು ಗಾಯತ್ರಿ ಜಪ ಮಾಡುತ್ತಿದ್ದರಂತೆ... ಇವರು ಹಾಗೆ ಹೇಳಿ, ಸುಮಾರು ೧೫ ನಿಮಿಷ ಆದ ಮೇಲೆ ದೀಕ್ಷಿತರು ಕಣ್ಣು ತೆಗೆದು, 'ಅನಂತ, ಕೇಳೋ, ನಿನ್ನ ಹೆಂಡ್ತೀನ... ತಲೆಗೆ ಸ್ನಾನ ಮಾಡಿ ಎಷ್ಟು ದಿನ ಆಯ್ತು ಅಂತ' ಅಂತ

ನಿಮ್ಮಜ್ಜನಿಗೆ ಹೇಳಿದರಂತೆ. ಆಗ ನಿಮ್ಮಜ್ಜ, 'ದೀಕ್ಷಿತರು ಕೇಳ್ತಿದ್ದಾರೆ...' ಎಂದು ನಮ್ಮಜ್ಜಿಗೆ ಕೇಳಿದರಂತೆ , ನಿಮ್ಮಜ್ಜಿ 'ಎರಡು ದಿನ ಮೇಲಕ್ಕೆ ಹೋಗಿದೆ'... ಅಂತ ಹೇಳಿದರಂತೆ... ಆಗ ದೀಕ್ಷಿತರು ಹಾಗೇ ಕಣ್ಣು ಮುಚ್ಚಿಕೊಂಡು, 'ಸರಿ... ಈಗಲೇ ಏನೂ ತೀರ್ಮಾನ ತಗೊಳ್ಳುವುದು ಬೇಡ... ನೋಡೋಣ' ಅಂದರಂತೆ... ಸರಿ ಎಂದು ಇವರಿಬ್ಬರೂ ಒಪ್ಪಿಕೊಂಡರು... ನಿಮ್ಮಜ್ಜಿ ಆಮೇಲೆ ಮಾಸಸ್ನಾನ ಮಾಡಲಿಲ್ಲ. ಆ ದೈವ ಕಣ್ಣುಬಿಟ್ಟು ನೋಡಿತ್ತು..."

ಹೀಗೆ ಅವರ ೩೮ನೇ ವಯಸ್ಸಿನಲ್ಲಿ ಗರ್ಭಧರಿಸಿದರು ನಮ್ಮಜ್ಜಿ... ಆದ್ದರಿಂದ ನಮ್ಮಜ್ಜಿಗೆ ಆಗ ನಮ್ಮ ತಂದೆ ಹುಟ್ಟಿದ್ದು... ಅವರು ಒಬ್ಬನೇ ಮಗ... ಆದರೆ ನಮ್ಮಜ್ಜನಿಗೆ ಸಂತಾನವಾಗುವ ವಿಷಯ ತಿಳಿದು ತುಂಬಾ ಸಂತೋಷವಾಗಿ, ದಿನನಿತ್ಯ ತಪ್ಪದೇ ಜಪ ಮಾಡುತ್ತಿದ್ದರಂತೆ... ಈಗಿನವರಂತೆ ಹೆಚ್ಚಿನ ಮಾತಿನವರಲ್ಲ ವಾದ್ದರಿಂದ, ಸರಸವಾಗಿ ಮಾತನಾಡಲಿಕ್ಕೆ ಗೊತ್ತಿದ್ದವರಲ್ಲ. ಆದರೆ ಸಹಜವಾಗಿ ಅವರಿಗೂ ಇನ್ನೇನು ಮಕ್ಕಳಾಗುವ ಸಂಭವವೇ ಇಲ್ಲ ಎಂದುಕೊಂಡಿದ್ದಾಗ ನಮ್ಮಜ್ಜಿ ಗರ್ಭಿಣಿಯಾಗಿದ್ದು ತಿಳಿದು, ಒಂದೇ ಆದರೂ ಗಂಡು ಮಗುವಾದರೆ ಚೆನ್ನು ಅಂತ ಆಸೆ ಮನಸ್ಸಿನಲ್ಲಿ. ಅದೃಷ್ಟವಶಾತ್ ಗಂಡು ಮಗುವೇ ಆಯಿತು.

ಆದರೆ ಇವರು ಗರ್ಭಿಣಿಯಾದಂದಿನಿಂದ ಆ ದಾಯಾದಿಗಳಿಗೆ ಇವರ ಮೇಲೆ ಬಹಳ ದ್ವೇಷಬಂದು, 'ಓಹೋ... ಇನ್ನು ಪ್ರಯೋಜನವಿಲ್ಲ. ನಾವು ಇವರಿಗೆ ದತ್ತು ಕೊಡಲು ಸಾಧ್ಯವಿಲ್ಲ' ಅಂತ ಮನಸ್ಸಿಗೆ ರೋಷ ಬಂದುಬಿಟ್ಟಿತು. ಈಗ ನನಗೆ ಮಹಾಭಾರತದಲ್ಲಿ ವಿಶೇಷ ಆಸಕ್ತಿ ಇರುವುದರಿಂದ, ಇವುಗಳ ಬಗ್ಗೆ ಹೆಚ್ಚು ಗಮನ ಕೊಟ್ಟಿದ್ದರಿಂದ ಆ ದಾಯಾದಿಕಲಹ ಅನ್ನುವುದು, ಅದರ ಹಾಗೇ ಮಿಕ್ಕ ಎಲ್ಲವೂ ಸರ್ವಕಾಲದಲ್ಲೂ ಸಹ ಒಂದೇ ಥರ ಎಂದು ಅನ್ನಿಸುತ್ತದೆ...

ವಿಷದ ಗರ್ಭದಲ್ಲಿ ಅಮೃತ ಇರುತ್ತದೆ, ಅಮೃತದ ಗರ್ಭದಲ್ಲಿ ವಿಷ ಇರುತ್ತದೆ ಎಂದು ಹೇಳುತ್ತಾರಲ್ಲ... ಹಾಗೆ. ಇದರಿಂದ, ನಮ್ಮ ತಂದೆಯವರು ಹುಟ್ಟಿದ ಮೇಲೆ, ಒಂದು ದೊಡ್ಡ ಪರಿಣಾಮ ಆಯಿತಂತೆ... ಆನಂತರ ನಮ್ಮಜ್ಜ ನಮ್ಮ ತಂದೆಗೆ ಉಪನಯನ ಮಾಡಿ ಮದುವೇನೂ ಮಾಡಿದರು... ನಮ್ಮ ತಂದೆಯ ಹೆಸರು ರಾಮಕೃಷ್ಣಯ್ಯ, ತಾಯಿಯ ಹೆಸರು ನಂಜಮ್ಮ. ನನ್ನ ತಂದೆಗೆ ಆಗ ಕೇವಲ ಹನ್ನೊಂದು ವರ್ಷ, ನಮ್ಮ ತಾಯಿಗೆ ಎಂಟು ವರ್ಷ... ಮೂರು ವರ್ಷ ಅಂತರ ಅಷ್ಟೇ ಇಬ್ಬರಿಗೂ !!!

ವಿಶ್ವನಾಥನ ಸನ್ನಿಧಿಗೆ

ಹೀಗೆ ಮಗನ ಮದುವೆ ಮಾಡಿ ನಮ್ಮಜ್ಜ "ನಾನಿನ್ನು ಹೋಗಿಬರುತ್ತೇನೆ... ಕಾಶಿಗೆ ಹೋಗುತ್ತೇನೆ" ಎಂದು ಹೇಳಿದರಂತೆ... ಅದಕ್ಕೆ ನಮ್ಮಜ್ಜಿ "ನೀವು ಹೋಗೋದಾದರೆ ಹೋಗಿ, ನಿಮ್ಮ ಜೊತೆಯಲ್ಲಿ ನಾನೂ ಬಂದು, ಒಂದೈದಾರು ದಿನ ಅಲ್ಲಿದ್ದು ವಾಪಸ್ಸು ಬಂದು ಬಿಡುತ್ತೇನೆ... ಈಗ ತಾನೆ ನಮಗೆ ಸಂತಾನ ಭಾಗ್ಯ ಸಿಕ್ಕಿದೆ... ಸೊಸೆ ಮನೆಗೆ ಬಂದಿದ್ದಾಳೆ... ಈಗ ಹೋಗುತ್ತೇನೆ ಅಂತೀರಲ್ಲ" ಅಂತ ತಮಾಷೆಯಾಗಿಯೇ ಹೇಳಿದರೂ ಸಹ, ನಮ್ಮಜ್ಜ ಹೊರಟು "ನಾನಂತೂ ಹೋಗುತ್ತೇನೆ... ಇಂಥ ದಿನ ನಾನು ಹೋದೆ ಅಂತ ವರ್ತಮಾನ ಬರುತ್ತದೆ. ನನ್ನ ಅಪರಕರ್ಮ ಎಲ್ಲ ಮಾಡಿಬಿಡಿ," ಎಂದು ಅವರು ವಾರ, ದಿನ, ವೇಳೆಯನ್ನೂ ಸಹ ಹೇಳಿದರಂತೆ! ನಮ್ಮಜ್ಜಿ , ಹಾಗೂ ಊರವರೆಲ್ಲ, "ಹಾಗೆಲ್ಲ ಹುಚ್ಚುಹುಚ್ಚಾಗಿ ಹೇಳಬೇಡಿ ನೀವು. ಸುಮ್ಮನಿರಿ" ಎಂದರು. ಆದರೂ ನಮ್ಮಜ್ಜ ಕಾಲಭೈರವನಿಗೆ ಪೂಜೆ ಮಾಡಿ ಕಾಶಿಗೆ ಹೊರಟೇಬಿಟ್ಟರು. ಅನಂತರ ಅವರು ಹೇಳಿದ್ದ ದಿನ ಸರಿಯಾಗಿ, ಮಧ್ಯಾಹ್ನ ಮೂರು ಘಂಟೆಗೆ ಟೆಲಿಗ್ರಾಂ ಬಂದಿತು. ಅದನ್ನು ಓದುವುದಕ್ಕೆ ಯಾರಿಗೂ ಬರದು! ಕುಗ್ರಾಮ. ಯಾರೂ ಇಂಗ್ಲಿಷ್ ಕಲಿತವರಲ್ಲ... ಆದ್ದರಿಂದ ಪೋಸ್ಟ್‌ಮ್ಯಾನ್‌ಗೆ ನೀನೇ ಒಡೆದು ಓದು ಎಂದು ಹೇಳಿದರು... ಅವನು ಒಡೆದು ಓದಿದ... 'ಇಂತಹ ದಿನದಂದು ಅನಂತಾವಧಾನಿಯವರು ತೀರಿಕೊಂಡರು' ಎಂದು ಇತ್ತು. ನಮ್ಮ ತಂದೆಗೆ ಬಹಳ ದುಃಖ ಆಯ್ತು. ಸ್ನಾನ ಮಾಡಿದರು... ಆಮೇಲೆ ನಾಲ್ಕು ದಿನಗಳು ಆದನಂತರ ಇನ್ನೊಂದು ಟೆಲಿಗ್ರಾಮು ಬಂತು! ಪೋಸ್ಟ್‌ಮ್ಯಾನ್ ಅದನ್ನು ಅಲ್ಲೇ ಒಡೆದು ಓದಿಕೊಂಡೇ ಬಂದಿದ್ದ! 'ನಿಮ್ಮ ತಾಯಿಯೂ ತೀರಿಕೊಂಡಿದ್ದಾರೆ' ಎಂದು ಬಂದಿತ್ತು. ಹೀಗೆ ಇಬ್ಬರೂ ಕಾಶೀ ವಿಶ್ವನಾಥನ ಸನ್ನಿಧಿಯನ್ನು ಸೇರಿದರು.

ಜೂಜು

ಇದಾದ ಮೇಲೆ, ನಮ್ಮ ತಂದೆಯ ಮನಸ್ಸಿನಲ್ಲಿ ಏಕೋ ಯಾವುದರ ಮೇಲೂ ಆಸಕ್ತಿ ಇಲ್ಲ ಅನ್ನುವ ಹಾಗಾಗಿತ್ತು... ಆದರೆ ಮನೆಯಲ್ಲಿ ಬಡತನ; ಮಾಡಲು ಕೆಲಸವಿಲ್ಲ. ಈ ಇಸ್ಪೀಟ್ ಆಟವನ್ನು ಆಗ ಬಹಳ ಚೆನ್ನಾಗಿ ಕಲಿತರಂತೆ ನಮ್ಮ ತಂದೆ...! ನಮ್ಮಮ್ಮ ಹೇಳುತ್ತಿದ್ದ ಕಥೆ... "ನಾನು ಮೂರು ಮಕ್ಕಳ ತಾಯಿಯಾಗಿದ್ದಾಗ ೧೫-೨೦ ದಿನ ಹೊರಗಡೆ ಹೋಗುವುದು (ನಮ್ಮ ಜನಾಂಗದಲ್ಲಿ ಮದುವೆ ಮನೆಗಳಲ್ಲಿ ಇಸ್ಪೀಟು ಆಟ ಆಡುತ್ತಾರೆ) ಆ ಮದುವೆ ಮನೆಗಳಿಗೆ ಹೋಗಿ ನಿಮ್ಮ ತಂದೆ ಇಸ್ಪೀಟು ಆಟ ಆಡುತ್ತಿದ್ದರು. ಕೈಯಿಗೆ ದುಡ್ಡು ಬಂದರೆ ಊರಿಗೆ ಬರುವುದು... ಬರೋವಾಗಲೇ ಹದಿನೈದು ಇಪ್ಪತ್ತು ದಿನಗಳಿಗಾಗು ವಷ್ಟು ದಿನಸಿ-ಸಾಮಾನು ತಂದುಬಿಡುತ್ತಿದ್ದರು. ಒಂದೈದಾರು ದಿನ ಇದ್ದು, ಪುನಃ ಹೋಗುವುದು... ಹೀಗೆ... ಇಸ್ಪೀಟ್‌ನಲ್ಲಿ ಬಂದ ಹಣದಿಂದ ಸಂಸಾರ ತೂಗಿಸುತ್ತಿದ್ದರು..."

ಇದೊಂದು ರೀತಿಯಲ್ಲಿ ಗಳಿಕೆಯ ಮಾರ್ಗ ಆಗಿತ್ತು. ನಮ್ಮ ತಾಯಿ ಪಾಪ, ಅವರು ಪಟ್ಟ ಬವಣೆಯನ್ನೆಲ್ಲ ಹೇಳುವಾಗ ಇದನ್ನು ಹೇಳಿ, ಅನಂತರ, "ಸದ್ಯ... ಈ ಬುದ್ಧಿ ನಿಮಗೆಲ್ಲ ಬರಲಿಲ್ಲವಲ್ಲ!" ಎಂದು

ಸಮಾಧಾನ ಮಾಡಿಕೊಳ್ಳುತ್ತಿದ್ದರು. ಆದರೆ ಅದು ಹೀಗಾಯಿತು: ಒಂದು ರೀತಿಯಲ್ಲಿ ದೈವಕೃಪೆ ಅಂತ ಅನ್ನಬೇಕು.

ಇತ್ತ , ನಮ್ಮಜ್ಜನ ಮನೆಯಲ್ಲಿ ಆ ದೊಡ್ಡಪ್ಪನವರು... ಅವರು ಹಿಂಸೆ ಕೊಡುವುದು ಜಾಸ್ತಿ ಆಯಿತಂತೆ... ಒಂದು ದಿನ, ಎದುರು ಮನೆಯಲ್ಲಿ ನಡೆದ ಘಟನೆ ಒಂದನ್ನು ನಮ್ಮಮ್ಮ ನಮಗೆ ಹೇಳಿದರು... ಸುಮಾರು ಐದು ಮನೆಯವರು ಇಸ್ಪೀಟು ಆಟ ಆಡುತ್ತಿದ್ದರು. ಆ ಸಮಯದಲ್ಲಿ ನಮ್ಮ ತಂದೆ ಅದನ್ನು ಪೂರ್ಣವಾಗಿ ಬಿಟ್ಟುಬಿಡಬೇಕು ಎಂದು ನಿರ್ಧಾರ ಮಾಡಿ ಅಲ್ಲಿಗೆ ಹೋಗುತ್ತಿರಲಿಲ್ಲ. ಅವರು ನಿಧಾನವಾಗಿ ಇಸ್ಪೀಟಾಡುವುದನ್ನು ಬಿಡಲು ತೀರ್ಮಾನಿಸಿದ್ದರು. ಆ ಒಂದು ರಾತ್ರಿ, ಅದೂ ಎರಡು ಘಂಟೆಗೆ, ಯಾರೋ ಬಂದು ಕೂಗಿದರು... ನಮ್ಮ ತಂದೆಯ ಹೆಸರು ರಾಮಕೃಷ್ಣಯ್ಯ ಅಂತ, ಎಲ್ಲರೂ ಅವರನ್ನು ಅಯ್ಯಭಟ್ಟ ಅಂತ ಕರೆಯುತ್ತಿದ್ದರು. ಎದುರು ಮನೆಯವರು ಬಂದು ಬಾಗಿಲನ್ನು ತಟ್ಟಿ, 'ಅಯ್ಯಭಟ್ಟ , ಬೇಗ ಬಾ... ಬೇಗ ಬಾ... ಮುಳುಗಿಹೋದೆ ನಾನು...' ಎಂದು ಹೇಳಿದರು. ನಮ್ಮ ತಂದೆ ಬಾಗಿಲು ತೆಗೆದು 'ಯಾಕೆ ? ಏನಾಯ್ತು?' ಎಂದರು ಗಾಬರಿಯಾಗಿ, 'ಹಾಳಾದೆ ನಾನು... ನನ್ನ ಹೆಂಡತಿಯನ್ನ ಜೂಜಲ್ಲಿ ಸೋತೆ. ಈಗ ಅವನು ರಟ್ಟೆ ಹಿಡಿದು ಎಳೆದುಕೊಂಡು ಹೋಗುತ್ತಿದ್ದಾನೆ, ಬೇಗ ಬಾ, ನೀನು ಬೇಗ ಬಾ' ಅಂತ ಹೇಳಿ ಕಾಲಿಗೆ ಬಿದ್ದರು... ಆಗ ನಮ್ಮ ಮನೆಯಲ್ಲಿ ತಮಿಳಿನವನೊಬ್ಬ ಕೆಲಸಕ್ಕಿದ್ದ. ಶೆಟ್ಟಿ ಅಂತ ಅವನ ಹೆಸರು, ಹೊಲದಲ್ಲಿ ಕೆಲಸ ಮಾಡುತ್ತಿದ್ದ, ನಮ್ಮ ಸಂಕೇತಿ ಭಾಷೆಯನ್ನೂ ಕಲಿತಿದ್ದ, ಅವನು ಜಗುಲಿಯ ಮೇಲೇ ಮಲಗಿಕೊಳ್ಳುತ್ತಿದ್ದ. ಆಗ, ತಕ್ಷಣವೇ ನಮ್ಮ ತಂದೆ, 'ಏ ಶೆಟ್ಟಿ ಏಳೋ, ಆ ಚಿಮಿಣಿ ಎಣ್ಣೆ ಡಬ್ಬ ತಗೊಳ್ಳೋ, ಜತೆಗೆ ಬೆಂಕಿಪೊಟ್ಟಣಾನೂ ತಗೋ' ಅಂತ ಹೇಳಿ ನಮ್ಮ ಮನೆಯಿಂದ ಮೂರನೆ ಮನೆಯಲ್ಲಿದ್ದ ಆತನ ಹೆಸರು ಕೂಗಿ ಅವನ ಮನೆ ಬಾಗಿಲು ತಟ್ಟಿದರು... 'ಆ ಹೆಂಗಸನ್ನು ಅವಳ ಮೈಮುಟ್ಟದೆ ತಕ್ಷಣ ಒಪ್ಪಿಸುತ್ತೀಯೋ, ಇಲ್ಲಾ ಮನೆಗೆ ಬೆಂಕಿ ಹಚ್ಚಲೋ... ಇಲ್ಲೇ ಚಿಮಣಿ ಎಣ್ಣೆ ಇದೆ, ಶೆಟ್ಟಿಯೂ ಇದ್ದಾನೆ...!!' ಅಂತ ಹೇಳಿದರು ನಮ್ಮ ತಂದೆ... ತಕ್ಷಣವೇ ಗಾಬರಿಯಾಗಿ ಬಾಗಿಲು ತೆಗೆದ ಆತ, 'ನಾನೇನೂ ಹಿಡ್ಕೊಂಡು ಹೋಗಲಿಲ್ಲ ಬೇಕು ಅಂತ, ಅವನೇ ಪಣ ಇಟ್ಟು ಸೋತ' ಎಂದರಂತೆ ಆ ಮನೆಯಾತ! 'ಅಯ್ಯೋ, ನೀಚ! ಮಹಾಭಾರತ ನಿಜ ಅಂತ ಮಾಡಿತೋರಿಸಿ ಬಿಟ್ಟೆಯಲ್ಲೋ... ಇಷ್ಟು ದೂರ ಹೋಗುತ್ತಾರೇನು ಯಾರಾದರೂ, ಅದೂ ಇಂತಹ ವಿಷಯದಲ್ಲಿ?' ಎಂದು ಹೇಳಿ, ಆಕೆಯನ್ನು ಮನೆಗೆ ಕರೆದುಕೊಂಡು ಹೋಗಲು ಅವಳ ಗಂಡನಿಗೆ ಹೇಳಿ, ಅವನಿಗೂ ಹೀನಾಮಾನವಾಗಿ ಬಯ್ದರು ನಮ್ಮ ತಂದೆ. 'ನೀನೂ ಸರಿ, ಎಂತಹ ಬೇಕೂಫನ ಕೆಲಸ ಮಾಡಿದ್ದೀ? ಇಸ್ಪೀಟು ಆಟ ನಾವು ಎಲ್ಲರೂ ಆಡುತ್ತೇವೆ ನಿಜ... ಆದರೆ ಇಷ್ಟರಮಟ್ಟಕ್ಕೆ ಹೀಗೆ... ಇಷ್ಟು ದೂರ ಹೋಗುವುದೇ ಈ ವಿಪರೀತ?' ಅಂತ ಹೇಳಿ, ಆ ಹೆಂಗಸರಿಗೂ ಸಮಾಧಾನದ ಮಾತುಗಳನ್ನು ಹೇಳಿ ಎಲ್ಲರನ್ನೂ ಅವರವರ ಮನೆಗೆ ಕಳುಹಿಸಿಕೊಟ್ಟರಂತೆ ನಮ್ಮ ತಂದೆ.

ಈ ಘಟನೆಯನ್ನು ಕಣ್ಣಿಗೆ ಕಟ್ಟುವ ಹಾಗೆ ನಮ್ಮಮ್ಮ ನಮಗೆ ಹೇಳಿದಾಗ, ನನಗೆ ನಿಜಕ್ಕೂ ಬಹಳ ಆಶ್ಚರ್ಯ ಆಯಿತು. ನಿಜಕ್ಕೂ ಮಹಾಭಾರತ ಸುಳ್ಳಲ್ಲ ಎನ್ನಿಸಿತು. ಆ ಧರ್ಮರಾಜನೇ ಹೆಂಡತಿಯನ್ನು ಒತ್ತೆ ಇಟ್ಟ ಎಂದಾಗ, ಈ ವ್ಯಸನ ಎನ್ನುವುದು ಮನುಷ್ಯನನ್ನು ಎಲ್ಲಿಯವರೆಗೆ, ಎಷ್ಟು ದೂರ ಎಳೆದುಕೊಂಡು ಹೋಗುತ್ತದೆ ಎಂದು ಅರಿವಾಯಿತು... ಇದನ್ನು ಚರಿತ್ರೆಯ ಪುನರಾವರ್ತನೆ ಅನ್ನುವುದಿಲ್ಲ ನಾನು, ಇದೇನೂ ಚರಿತ್ರೆ ಅಲ್ಲ , ಆದರೂ ಮನುಷ್ಯನ ದೌರ್ಬಲ್ಯ ಎನ್ನುವುದು ಎಂತಹ ಕೆಲಸ ಮಾಡಿಸುತ್ತದೆ ಎನ್ನುವುದನ್ನು ಈ ವ್ಯಸನಗಳಲ್ಲಿ ನೋಡಬಹುದು!

ಮುದಲಾಪುರದಿಂದ ಮತ್ತೂರಿಗೆ

ನಮ್ಮ ತಂದೆ ಬಯ್ದದ್ದು ಅಷ್ಟಕ್ಕೇ ನಿಲ್ಲಲಿಲ್ಲ... ಅವರು ಹೀಗೆಲ್ಲ ಅಂದದ್ದರ ಪರಿಣಾಮ ಏನಾಯಿತೆಂದರೆ... ನಮ್ಮ ತಾಯಿ ಒಂದು ದಿನ ಬಾವಿಗೆ ನೀರು ಸೇದುವುದಕ್ಕೆ ಅಂತ ಹೋದಾಗ, ದಾಯಾದಿಗಳು ಬಾವಿಯಲ್ಲಿ ನೀರು ಸೇದುವುದಕ್ಕೆ ಬಿಡಲಿಲ್ಲ... ಪ್ರಾಯಶಃ ನಮ್ಮ ತಂದೆಯವರಿಗೆ ಅದೊಂದು ತಿರುವು... 'ಓಹೋ... ಇದು ಇಲ್ಲಿಯವರೆಗೂ ಬಂತೇನು? ಇನ್ನು ಸಾಕು ಈ ಊರಿನ ಋಣ ನಮಗೆ' ಅಂತ ಹೇಳಿ ಒಂದು ತಂಬಿಗೆ‌ಲಿ-ಮುದಲಾಪುರದಲ್ಲಿ ಈಗಲೂ ಇದೆ ಒಂದು ಕೆರೆ- ಆ ಕೆರೆಯಲ್ಲಿನ ನೀರು ತೆಗೆದುಕೊಂಡು, ದಾಯಾದಿಗಳನ್ನು ಕೂಗಿ ಕರೆದು 'ಇದೋ, ಇವತ್ತಿಗೆ ಮುಗಿಯಿತು, ಇನ್ನು ನಮಗೂ ನಿಮಗೂ ಬಾಂಧವ್ಯ ಸಾಕು, ಇದೋ ತರ್ಪಣ ಕೊಡುತ್ತಿದ್ದೇನೆ. ನಮ್ಮ ಬಾಂಧವ್ಯಕ್ಕೂ ತರ್ಪಣ, ಈ ಇಸ್ಪೀಟಿನ ಆಟಕ್ಕೂ ತರ್ಪಣ. ಕೂಲಿಯನ್ನಾದರೂ ಮಾಡಿ ಸಂಪಾದಿಸುತ್ತೇನೆ, ಇಸ್ಪೀಟು ಮಾತ್ರ ಮುಟ್ಟುವುದಿಲ್ಲ' ಎಂದು ಹೇಳಿ ಆ ನೀರನ್ನು ಅವರತ್ತ ಚೆಲ್ಲಿ ಆಗಲೇ ಅಲ್ಲಿಂದ ಕಾಲ್ನಡಿಗೆಯಲ್ಲಿ ಹೊರಟು, ಮುದಲಾಪುರದಿಂದ ಸುಮಾರು ಐದು ಮೈಲಿ ದೂರದಲ್ಲಿದ್ದ ಹಾಸನಕ್ಕೆ ಹೊರಟು ಬಂದರು. ಆಗ ನಮ್ಮ ತಾಯಿಯವರು, ದೊಡ್ಡ ಮಗ, ಎರಡನೆಯ ಮಗ, ಮೂರನೆಯ ಮಗಳು, ಕೈಕೂಸು ಶಂಕರಮೂರ್ತಿ... ಇಷ್ಟು ಜನರೂ ಹಾಸನಕ್ಕೆ ಬಂದು, ಅನಂತರ ಶಿವಮೊಗ್ಗಕ್ಕೆ ಬಂದು, ಅಲ್ಲಿ ಒಂದು ಛತ್ರ ಇತ್ತು, ಕೋರ್ಪಳಯ್ಯನ ಛತ್ರ ಅಂತ, ಅಲ್ಲಿ ತಂಗಿದ್ದರಂತೆ!!

ಇದು ಬಹಳ ಸ್ವಾರಸ್ಯಕರವಾದ ಸಂದರ್ಭ... ಇವರು ಅಲ್ಲಿದ್ದಾಗ ಮತ್ತೂರಿನಿಂದ ಶಿವಮೊಗ್ಗಕ್ಕೆ ಇಬ್ಬರು ಬಂದರು! ಅವರಿಗೆ ಯಾರೋ ಹೇಳಿದರಂತೆ, 'ನೋಡ್ರೀ, ನಿಮ್ಮ ಜನ ಯಾರೋ ಬಂದು ಛತ್ರದಲ್ಲಿದ್ದಾರೆ, ತಂದೆ, ತಾಯಿ ಮೂರು ಮಕ್ಕಳು, ಒಂದು ಕೈಕೂಸು ಇಷ್ಟು ಜನ... ಹೋಗಿ ನೋಡಿಯಪ್ಪಾ' ಅಂತ. ಬಂದ ಇಬ್ಬರಲ್ಲಿ

ಒಬ್ಬರು ನಾರಾಯಣ ಅವಧಾನಿಗಳು, (ಇವರು ನಮ್ಮ ಮತ್ತೂರು-ಹೊಸಹಳ್ಳಿಯ ಪುರೋಹಿತರು) ಅವರ ಜೊತೆಯಲ್ಲಿದ್ದವರು ಲಕ್ಷ್ಮೀಕೇಶವಶಾಸ್ತ್ರಿಗಳು. ಇವರು ಮಹಾಭಾರತದ ವ್ಯಾಖ್ಯಾನ ಮಾಡಿ ಬಹಳ ಒಳ್ಳೆಯ ಹೆಸರು ಗಳಿಸಿದ್ದರು. ಛತ್ರಕ್ಕೆ ಬಂದ ಇಬ್ಬರೂ ಪರಸ್ಪರ ಪರಿಚಯ ಮಾಡಿಕೊಂಡರು. 'ಇಲ್ಲೇನು ಮಾಡುತ್ತಿದ್ದೀರಿ, ಬನ್ನಿ ನಮ್ಮ ಮತ್ತೂರಿಗೆ ಹೋಗೋಣ' ಅಂತ ಹೇಳಿ ಛತ್ರದಿಂದ ಅವರನ್ನು ಮತ್ತೂರಿಗೆ ಕರೆದುಕೊಂಡು ಬಂದರು....! ತಂಗುವುದಕ್ಕೆ ಒಂದು ಮನೆಕೊಟ್ಟು ನಮ್ಮ ತಂದೆ ತಾಯಿಗೆ ಆಶ್ರಯ ಕೊಟ್ಟರು ಮತ್ತೂರಿನವರು!! ಹೀಗೆ ನಮ್ಮ ತಂದೆಯ ಜೀವನವು ಮತ್ತೂರಲ್ಲಿ ಪ್ರಾರಂಭವಾಯಿತು (೧೯೨೨-೨೩). ಇಲ್ಲಿಗೆ ನಮ್ಮ ಕುಟುಂಬದ ಮೊದಲ ಅಧ್ಯಾಯದ ಅಂತ್ಯವಾಗಿ ಹೊಸದೊಂದರ ಪ್ರಾರಂಭ ವಾಯಿತು. ಅಂತೂ ಮುದಲಾಪುರದಿಂದ ಬರುವಾಗ ನಮ್ಮ ತಂದೆ ಇಸ್ಪೀಟಾಟ ಬಿಟ್ಟು ಬಂದರು ಎಂದು ಹೇಳುವುದಕ್ಕೆ ನನಗೆ ತುಂಬಾ ಹೆಮ್ಮೆ, ಪ್ರೀತಿ ಇದೆ!!

೪. ಅಪ್ಪನ ಮರಣ

ಮತ್ತೂರಿಗೆ ನಮ್ಮ ತಾಯಿ-ತಂದೆ ಬಂದ ಮೇಲೆ ನಾವು ಇಬ್ಬರು ಹುಟ್ಟಿದೆವು... ನಮ್ಮಣ್ಣ ರಾಮಮೂರ್ತಿ, ('ರಾಮಣ್ಣ' ಎಂದು ಕರೆಯುತ್ತಿದ್ದೆವು) ನಾನು ಕೃಷ್ಣಮೂರ್ತಿ. ನಮ್ಮಿಬ್ಬರಿಗೂ ಇಸ್ಪೀಟಾಟದ ಗಂಧವಿಲ್ಲ. ಅಷ್ಟೇ ಅಲ್ಲ, ಆ ಇಸ್ಪೀಟಿನ ಎಲೆ ನೋಡಿದರೆ ನನಗೆ ತಲೆಸುತ್ತು... ಈ ಸಂಬಂಧದಲ್ಲಿ ಒಂದು ಮಾತು ಹೇಳಬೇಕೆನ್ನಿಸುತ್ತದೆ ನನಗೆ... ನಮ್ಮ ದೊಡ್ಡಣ್ಣನವರು ತುಂಬಾ ಸಂಪಾದಿಸಿದ್ದರು, ಆದರೆ ಎಲ್ಲವನ್ನೂ ಕಳೆದುಕೊಂಡರು. ನಮ್ಮ ಎರಡನೆಯ ಅಣ್ಣನವರಿಗೆ ಆಟ ಬರುತ್ತಿತ್ತು. ಆದರೆ ಅವರು ಆಡಲಿಲ್ಲ. ನಮ್ಮ ಮೂರನೆಯ ಅಣ್ಣ-ಅವರಿಗೆ ಗೊತ್ತಿದ್ದರೂ ಕೂಡ ಒಂದು ದಿನವೂ ಅದನ್ನು ನೋಡಿರಲಿಲ್ಲ, ಆಡಿರಲಿಲ್ಲ , ಆದರೆ ಅವರಿಗೊಬ್ಬ ಸಂಗೀತದ ಗುರುಗಳು ಸಿಕ್ಕಿದರು. ದುರದೃಷ್ಟವಶಾತ್ ಅವರು ನಮ್ಮಣ್ಣನವರಿಗೆ ಆ ಆಟ ಕಲಿಸಿಬಿಟ್ಟರು... ಆ ಅನುಭವ! ಈಗ ಬೇಡ, ಮುಂದೆ ಹೇಳುತ್ತೇನೆ!! ಆದರೆ ಅಂದಿನಿಂದಲೂ ನನಗೆ ಮಾತ್ರ ಆ ಆಟ ಅಂದರೇ ಅಲರ್ಜಿ... ಇವತ್ತಿಗೂ ಆ ಎಲೆಗಳನ್ನು ನೋಡಿದರೆ ನನ್ನ ತಲೆ ಗಿರಗಿರನೆ ಸುತ್ತುತ್ತದೆ! ನನಗೆ ಬೇರೆ ಯಾವ ಆಟದ ಮೇಲೂ ಆ ರೀತಿಯ ಭಾವನೆ ಇಲ್ಲ... ಆದರೆ ಯಾವುದೇ ಜೂಜು ಅಂದ ತಕ್ಷಣ ಮನಸ್ಸು ಬಹಳ ಕೆಟ್ಟುಹೋಗುತ್ತದೆ, ಕೆಟ್ಟ ಪರಿಣಾಮದ ಅನುಭವ ಆಗುತ್ತದೆ! ನನ್ನ ಅಭಿಪ್ರಾಯದಲ್ಲಿ ಇಂಥವೆಲ್ಲ ಬಹುಶಃ ಜೀನ್ಸ್‌ನಲ್ಲಿ ಬಂದು ಬಿಡುತ್ತವೆ. ತಂದೆ ಹೇಗಿರುತ್ತಾನೋ ಹಾಗೆ ಮಕ್ಕಳು. ಆದರೆ ಅದೃಷ್ಟವಶಾತ್ ನಮಗೆ ಬರಲಿಲ್ಲ ಈ ವ್ಯಸನ!!

ಹೀಗೆ ಮತ್ತೂರಿಗೆ ಬಂದ ಮೇಲೆ - ಆ ಇಬ್ಬರು ಮಹಾನುಭಾವರಿಗೆ ನಮೋ ನಮಃ, ಕಡೆಮನೆಯ ನಾರಾಯಣ ಅವಧಾನಿಗಳು, ಇನ್ನೊಬ್ಬರು ಲಕ್ಷ್ಮೀಕೇಶವಶಾಸ್ತ್ರಿಗಳು - ನಮ್ಮ ಮತ್ತು ಆ ಎರಡು ಕುಟುಂಬಗಳ ಬಾಂಧವ್ಯ... ಅದೊಂದು ನೆನಪಿನಲ್ಲಿಟ್ಟುಕೊಳ್ಳಬೇಕಾದ ಮಧುರ ಬಾಂಧವ್ಯ. ಇವರಿಬ್ಬರೂ ಊರಿಗೆ ಕುಟುಂಬವನ್ನು ಕರೆದುಕೊಂಡು ಬಂದರು. ಆದರೆ ನಮ್ಮ ತಾಯಿ ಹೇಳುತ್ತಿದ್ದಂತೆ, ನಮ್ಮ ತಂದೆಗೆ ಯಾರನ್ನೂ ಯಾವುದಕ್ಕೂ ಯಾಚನೆ ಮಾಡುವುದು ಇಷ್ಟವಿರಲಿಲ್ಲ. ಕಷ್ಟವೇನೋ ಇತ್ತು. ಮತ್ತೂರಿನಲ್ಲಿ ಎಲ್ಲರೂ ಕೃಷಿಕರು, ಎಲ್ಲರಿಗೂ ಅಲ್ಪ-ಸ್ವಲ್ಪ ಅಡಕೆ ತೋಟ ಇತ್ತು... ಆದರೆ ಆಗ ತಾನೆ ಬಂದ ನಮಗೆ ಏನೂ ಇರಲಿಲ್ಲ. ಇನ್ನು ಜೀವನ ನಿರ್ವಹಣೆ ಹೇಗೆ? ಹೋದ ಎಂಟು - ಹತ್ತು ದಿವಸಗಳು, ಹೇಗೋ ನಿರ್ವಹಿಸಿದರೆಂದು ತೋರುತ್ತದೆ. ಎಳೆ ಮಗುವಿನೊಂದಿಗೆ ಬಂದಿದ್ದಾರೆ ಪಾಪ... ಅಂತ ಊರವರು ಒಬ್ಬೊಬ್ಬರು ಒಂದೊಂದು ದಿನ ಊಟಕ್ಕೆ ಹೇಳಿ ನೋಡಿಕೊಂಡರು. ಅಲ್ಲಿ ಎಲ್ಲರೂ ವೇದಾಧ್ಯಯನಸಂಪನ್ನರು, ಸಂಭಾವಿತರು. ಶ್ರೀಮಂತರಲ್ಲದಿದ್ದರೂ ಒಂದು ಹೊತ್ತು ಊಟಕ್ಕೆ ಕೊರತೆ ಇಲ್ಲದಿದ್ದವರು... ಹೊರಗಿನಿಂದ ಯಾರೇ ಬಂದರೂ ಅವರ ಊಟದ ಬಗೆಗೆ ನಿಗಾ ವಹಿಸಿ ಸಹಾಯ ಮಾಡುತ್ತಿದ್ದರು... ಇದು ಎಷ್ಟು ದಿನ ನಡೆದೀತು? ಎಂಟುದಿನಗಳೊಳಗಾಗಿ ನಮ್ಮ ತಂದೆ ಶಿವಮೊಗ್ಗಕ್ಕೆ ಹೋಗಿ ಒಬ್ಬ ಬಡಗಿಯ ಹತ್ತಿರ ಇದ್ದು ನಾಲ್ಕೈದು ದಿನದಲ್ಲಿ ಕೆಲಸ ಕಲಿತುಕೊಂಡು ಬಂದರು... ಬಡಗಿ ಕೆಲಸಕ್ಕೆ ಏನು ಬೇಕೋ ಅದನ್ನೆಲ್ಲ ಮೂರು-ನಾಲ್ಕು ರೂಪಾಯಿಕೊಟ್ಟು ಜೊತೆಗೇ ತಂದರು - ಉಳಿ, ಕೊಡವೆ, ಉಜ್ಜುಗೊರಡು ಇತ್ಯಾದಿ. ಊರಿನಲ್ಲಿ ಯಾರಾದರೂ ಕಿಟಕಿ, ಬಾಗಿಲು ಕೇಳಿದರೆ ಮಾಡಿಕೊಟ್ಟು ಜೀವನ ಸಾಗಿಸುವುದು. ಅವರು ಕೊಟ್ಟ ಎರಡೋ-ಮೂರೋ ರೂಪಾಯಿಗಳಲ್ಲಿ ಎಂಟಾಣೆ ಒಂದು ರೂಪಾಯಿಗೆ ಮರ ಮತ್ತು ದಿನಸಿ ತರುವುದು, ಮಿಕ್ಕದ್ದಕ್ಕೆ ಸಾಮಾನು ತರುವುದು, ಬೆಳಗ್ಗೆಯಿಂದ ರಾತ್ರಿಯವರೆಗೂ ಕೆಲಸ ಮಾಡುವುದು... ಆದರೆ ಇದು ನಡೆಯುತ್ತಿದ್ದಾಗ ನಾವಿನ್ನೂ ಹುಟ್ಟಿರಲಿಲ್ಲ. ಮತ್ತೂರು ಗ್ರಾಮದಲ್ಲಿ ಹೀಗೆ ಇವರು ತಮ್ಮ ಜೀವನವನ್ನು ಪ್ರಾರಂಭಿಸಿದರು. ಕಾಲಕ್ರಮದಲ್ಲಿ ನಮ್ಮ ಅಣ್ಣ ರಾಮಮೂರ್ತಿ, ನಾನು ಹುಟ್ಟಿದೆವು.

ಇದು ಒಂದು ತಿರುವು . ನಿಜಕ್ಕೂ ನಾವೂ , ನಮ್ಮ ಸೋದರಮಾವನ ಮನೆಯವರೂ ವಲಸಿಗರಾಗಿ ಮತ್ತೂರಿಗೆ ಬಂದೆವಷ್ಟೇ. ನಮ್ಮ ಸೋದರಮಾವನೂ ನಾವೂ ಒಟ್ಟಿಗೇ ಇದ್ದೆವು, ಅನಂತರ ಸ್ವತಂತ್ರವಾಗಿ ಇರೋಣ ಎಂದು ಮನಸ್ಸಾಯಿತು. ಆಗ ನಮ್ಮ ನಾರಾಯಣ

ಅವಧಾನಿಗಳ ಮನೆಯ ಎದುರಿಗೇ ಒಂದು ಖಾಲಿ ಜಾಗ ಇತ್ತು. ಅಲ್ಲಿ ಒಂದು ಗುಡಿಸಿಲು ಹಾಕಿಕೊಂಡು ಅವರು ಸಂಸಾರ ಮಾಡಿಕೊಂಡಿರಲಿ, ಅಂತ ಊರವರು ಹೇಳಿದರು. ಅಷ್ಟು ಹೊತ್ತಿಗೆ ನಾನು ಹುಟ್ಟಿ, ನಮ್ಮ ದೊಡ್ಡ ಅಣ್ಣನವರಿಗೆ ೨೦ ವರ್ಷ ಆಗಿತ್ತು, ಅವರು ಚೆನ್ನಾಗಿ ಓದಿ, ಶಿವಮೊಗ್ಗದಲ್ಲಿ ಕೆಲಸ ಮಾಡಿ ನಮ್ಮ ಮನೆಯವರಿಗೆ ಒತ್ತಾಸೆಯಾಗಿ ನಿಂತರು. ನಮ್ಮ ತಂದೆಯವರು ಇಸ್ಪೀಟಿನಾಟದ ಕಡೆಗೆ ತಿರುಗಿಯೂ ನೋಡಲಿಲ್ಲ. ಆದರೆ, ಬಹಳ ಚಿಕ್ಕ ವಯಸ್ಸಿನಲ್ಲಿ ೧೯೩೭ರಲ್ಲೇ ಆಗ ನನಗೆ ೯ ವರ್ಷ - ಉಪನಯನಕ್ಕೆ ಮುಹೂರ್ತವನ್ನು ಇಟ್ಟಿದ್ದರು. ದುರ್ದೈವವಶಾತ್ ಎರಡೇ ದಿನ ಜ್ವರ ಬಂದು, ನಮ್ಮನ್ನಗಲಿದರು.

೫. ಓಹ್! ಮಾತೆಯರು

ವೇದಮಾತೆ

ಬಡತನ ಅನ್ನುವುದು ಕಷ್ಟಪಡುವಾಗ ನಮಗೆ ಗೊತ್ತಾಗುವುದಿಲ್ಲ. ಆದರೆ ಮತ್ತೂರಿನ ಜನರು ಉಪಕಾರಿಗಳು. ಕಷ್ಟ ಬಂದವರಿಗೆ ಸಹಾಯಹಸ್ತ ನೀಡಿ ಸಹಕರಿಸುವವರು... ಹೀಗೆ ನಡೆಯುತ್ತಿತ್ತು... ಇಲ್ಲಿ ಒಂದು ವಿಷಯ ನೆನಪಿಗೆ ಬರುತ್ತದೆ ನನಗೆ. ನಾನು ಹಿಂದೆ ಹೇಳಿದ್ದೀನಲ್ಲ ಯಜ್ಞನಾರಾಯಣ ದೀಕ್ಷಿತರು ಅಂತ ಅವರು ಮತ್ತೂರಿಗೆ ಬಂದರು ಒಂದು ದಿನ. ಅವರಿಗೆ ಆಗ ಸುಮಾರು ೮೮ ವರ್ಷ ಇದ್ದೀತು. ಆದರೂ ದೃಢಕಾಯರಾಗಿದ್ದರು. ಕಿವಿ ಕೇಳಿಸುತ್ತಿತ್ತು. ಕನ್ನಡಕ ಇಲ್ಲದೆ ಓದುತ್ತಿದ್ದರು. ಗಟ್ಟಿಯಾದ ಕೋಡುಬಳೆ ತಿನ್ನುತ್ತಿದ್ದರು. ನಿಯಮಬದ್ಧ ಸಂಯಮ ಜೀವನದ ಮೂರ್ತ ಸ್ವರೂಪವಾಗಿದ್ದರು. ನನಗೂ ಬಹಳ ಸಣ್ಣ ವಯಸ್ಸು, ಸುಮಾರು ಏಳು ವರ್ಷ... ವೇದ ಅಂದರೆ ಅವರಿಗೆ ತಾಯಿ ಸಮಾನ, ಅಷ್ಟೇ ಗೌರವ. ಅವರನ್ನು ನಾವೆಲ್ಲ ದೊಡ್ಡಯ್ಯ, ದೊಡ್ಡಯ್ಯ ಎಂದೇ ಕರೆಯುತ್ತಿದ್ದೆವು. ದೊಡ್ಡಯ್ಯ ಬಂದರೆ ನಮಗೆಲ್ಲ ತುಂಬಾ ಖುಷಿ. ಅವರು ಬಂದವರು ನೆಲದ ಮೇಲೆ ಚಾಪೆ ಹಾಸಿ, ಒಂದು ದಿಂಬು ಒರಗಿ ಹಾಗೇ ಮಲಗಿಕೊಂಡಿದ್ದರು. ಕಣ್ಣು ಮುಚ್ಚಿತ್ತು. ನಾನು ಅವರ ಕಾಲು ಒತ್ತುತ್ತಿದ್ದೆ. ನಮ್ಮ ಅಣ್ಣ, ಮತ್ತು ಅವರ ಸ್ನೇಹಿತರು ಇಬ್ಬರು, 'ದೀಕ್ಷಿತರು ಬಂದಿದ್ದಾರೆ, ಒಂದು ಪಂಚಾರಿ ಹೇಳೋಣ ಅವರ ಮುಂದೆ' ಎಂದು ಮಾತಾಡಿಕೊಂಡು, ಹತ್ತಿರಕ್ಕೆ ಬಂದು ಕುಳಿತು 'ಶ್ರೀ ಗುರುಭ್ಯೋನಮಃ' ಎಂದು ಹೇಳಿದರು. ಇದನ್ನು ಕೇಳಿದ ತಕ್ಷಣವೇ ದೊಡ್ಡಯ್ಯ ಚಕ್ ಅಂತ ಎದ್ದು ಕುಳಿತರು! ನಾನು ಗಾಬರಿಯಾಗಿ 'ದೊಡ್ಡಯ್ಯ ಏನಾಯಿತು? ಯಾಕೆ ಹೀಗೆ ಎದ್ದಿರಿ?' ಎಂದೆ. ಅದಕ್ಕೆ ಅವರು 'ಉಶ್... ವೇದಮಾತೆ! ವೇದಮಾತೆ! ಅವಳ ಎದುರಿಗೆ ಕಾಲು ಚಾಚಿಕೊಂಡು ಮಲಗಿರಬಾರದಪ್ಪಾ' ಎಂದು ಹೇಳಿ, ಎದ್ದು ಕುಳಿತವರೇ ಪದ್ಮಾಸನ ಹಾಕಿಕೊಂಡು, ಅವರು ಹೇಳಿದ ವೇದ ಕೇಳಿದರು. ಸಂಸ್ಕೃತ ಗ್ರಾಮ ನಮ್ಮದು!! ನಮ್ಮೂರಲ್ಲೆಲ್ಲಾ, ಸುತ್ತಮುತ್ತ ವೇದ ಹೇಳುವವರಿದ್ದರೂ ಸಹ, ಅದನ್ನೆಲ್ಲ ನಾನು ಕೇಳಿದ್ದರೂ, ಅದು ಪೂಜನೀಯ, ಗೌರವಾನ್ವಿತವಾದದ್ದು, ವೇದವನ್ನು ಹೇಳುವಾಗ ಹಾಗೆಲ್ಲ ತುಂಬಾ ಹಗುರವಾಗಿ ತೆಗೆದುಕೊಳ್ಳಬಾರದು ಎಂದು ಗೊತ್ತಾದದ್ದು ಆಗಲೇ!!

ಒಂದು ಸ್ವಾರಸ್ಯ

ಇನ್ನೊಂದು ಸ್ವಾರಸ್ಯಕರ ವಿಷಯ ಅಂದರೆ... ನಾನು ಹುಟ್ಟಿದಾಗ ನಡೆದದ್ದು. ಆದರೆ ಇದು ಅರಿವಿಗೆ ಬಂದಿದ್ದು ಯಾವಾಗ ಅಂದರೆ ನಾನು ಲಂಡನ್‌ನಲ್ಲಿದ್ದಾಗ... ಸಾಮಾನ್ಯವಾಗಿ ನನಗೆ, ನಾನೇನಾದರೂ ಉಪವಾಸ ಇದ್ದರೆ, ಸುಮಾರು ಎಂಟು ಹತ್ತು ದಿನ ಉಪವಾಸ ಇದ್ದರೂ ಸಹ ತೂಕ ಕಡಮೆ ಆಗುವುದಿಲ್ಲ!! ನನಗೇ ನನ್ನ ಶರೀರ ಪ್ರಕೃತಿ ಬಗ್ಗೆ ಆಶ್ಚರ್ಯ ಇದು!! ಒಂದು ಸಾರಿ ನಾನು ನಾಲ್ಕೈದು ದಿನ ಉಪವಾಸ ಮಾಡಿದೆ, ತೂಕ ಕಡಮೆ ಆಗಲಿಲ್ಲ. ಈ ವಿಷಯವನ್ನು ಮೊದಲು ನಾನು ಡಾಕ್ಟರ್ ಹತ್ತಿರ ಹೇಳಿದೆ. ಡಾ. ಕೋಯ ಅಂತ, ಆತ ಗುಜರಾತಿ. ಅವರು ಹೇಳಿದರು, 'ಮತ್ತೂರ್‌ಜೀ, ನೀವು ೪-೫ ದಿನ ಉಪವಾಸ ಮಾಡಿದರೆ ಗಮನಾರ್ಹವಾಗಿ ತೂಕ ಕಡಮೆ ಆಗುತ್ತದೆ... ಆದ್ದರಿಂದ ತೂಕ ಕಡಮೆ ಮಾಡಿಕೊಳ್ಳುವುದು ಸರಿಯಲ್ಲ, ನೀವು ಉಪವಾಸ ಮಾಡುವುದು ಬೇಡ' ಅಂದರು. ಅದಕ್ಕೆ ನಾನು, 'ಇಲ್ಲಾ ಡಾಕ್ಟರ್, ನಾನು ಉಪವಾಸ ಮಾಡುತ್ತೇನೆ. ನೀವೇ ಬಂದು ನೋಡಿ, ತೂಕ ಎಷ್ಟು ಹೋಗಿದೆ ಎಂದು ಗೊತ್ತಾಗುತ್ತದೆ' ಅಂದೆ. ಆಗ, ನನ್ನ ನೆನಪು ಸರಿಯಿದ್ದರೆ, ಐದು ದಿನ ಉಪವಾಸ ಮಾಡಿದೆ ನಾನು. ಅವರು ಮೊದಲನೆ ದಿನ ತೂಕ ನೋಡಿದರು, ಅನಂತರ ಐದನೇ ದಿನವೂ ನೋಡಿದರು... ಅದೇ ತೂಕ ಇತ್ತು! ಆಗ ಅವರು 'ಮತ್ತೂರ್‌ಜೀ, are you really fasting or eating in the night?' ಎಂದು ಆಶ್ಚರ್ಯದಿಂದ ಕೇಳಿದರು... ಯಾರಿಗೂ ಗೊತ್ತಾಗದೆ ಇರುವ ಹಾಗೆ ತಿಂದು ಬಿಡುತ್ತೀರೋ... ಎನ್ನುವಂತಿತ್ತು ಅವರ ದೃಷ್ಟಿ! ಆಗ ನಾನು 'ಡಾಕ್ಟರ್, ನನಗೂ ಈ ಬಗ್ಗೆ ತುಂಬ ಕುತೂಹಲ ಇದೆ! ಈಗ ಒಂದು ಕೆಲಸ ಮಾಡಿ... ಕೆಲವರು ಒಂದು ದಿನ ಊಟ ಬಿಟ್ಟರೇನೇ ತೂಕ ಕಡಿಮೆಯಾಗುತ್ತಾರೆ, ಎರಡು ದಿನ ಊಟ ಬಿಟ್ಟರೆ ಒಂದು ಕಿಲೋನೇ ತೂಕ ಹೋಗುತ್ತದೆ ಎನ್ನುತ್ತಾರೆ... ನನಗೆ ಮಾತ್ರ ಯಾಕೆ ಹೀಗೆ?

ನನಗೆ ಒಂದು ವಾರ ಉಪವಾಸ ಮಾಡಿದರೂ ಹೀಗೆಲ್ಲಾ ಆಗೋದಿಲ್ಲವಲ್ಲ... ಇದಕ್ಕೆ ಏನಾದರೂ ವಿಶೇಷ ಕಾರಣ ಇದೆಯಾ?' ಎಂದು ಕೇಳಿದೆ.

ಚ್ಯಾರಿಂಗ್ ಕ್ರಾಸ್ ಹಾಸ್ಪಿಟಲ್ ಅಂತ, ಬಹಳ ದೊಡ್ಡ ಆಸ್ಪತ್ರೆ ಲಂಡನ್‌ನಲ್ಲಿ. ಅದು ನಮ್ಮ ಮನೆಗೆ ಬಹಳ ಹತ್ತಿರ. ಆ ಆಸ್ಪತ್ರೆಯಲ್ಲಿ ಐದು ದಿನ ನನ್ನನ್ನು ವಾರ್ಡ್‌ನಲ್ಲಿಟ್ಟರು. ಆರೋಗ್ಯ ಯೋಜನೆಯಲ್ಲಿ , ಅಲ್ಲಿನ ಆಸ್ಪತ್ರೆಯಲ್ಲಿ ನಮಗೆ ಎಲ್ಲಾ ಉಚಿತ ಚಿಕಿತ್ಸೆ. ಅಲ್ಲಿನ ಡಾಕ್ಟರು 'ಏನು ಖಾಯಿಲೆ ಇವರಿಗೆ?' ಎಂದು ಕೇಳಿದರು. ಅದಕ್ಕೆ ನಮ್ಮ ಡಾಕ್ಟರು, 'ಇವರನ್ನು ಸ್ವಲ್ಪ ಪರೀಕ್ಷೆ ಮಾಡಬೇಕು. ಇವರು ಒಂದು ವಾರ ಉಪವಾಸ ಇದ್ದರೂ ತೂಕ ಕಿಂಚಿತ್ತೂ ಕಡಮೆ ಆಗುವುದಿಲ್ಲ! ಆದ್ದರಿಂದ ಇವರನ್ನ ಪರೀಕ್ಷೆ ಮಾಡಿನೋಡಿ' ಎಂದರು. ಆಗ ನನ್ನನ್ನು ಪರೀಕ್ಷೆ ಮಾಡಿದರು. ಏಳು ದಿನ ಆದ ಮೇಲೆ ಒಂದು ವರದಿ ಬರೆಯುವುದಕ್ಕೆ ಬಂದರು... ಮೂರು ಜನ ಡಾಕ್ಟರುಗಳು... ನಾನು ಆ ದಿನ ಖುಷಿಯಾಗಿಯೇ ಇದ್ದೆ! ಬಂದ ಡಾಕ್ಟರು, 'Do you feel weak?' ಎಂದರು, ನಾನು 'ಇಲ್ಲ' ಎಂದೆ. 'Can I see you walk?' ಎಂದರು. ನಾನು ನಡೆಯುತ್ತಿದ್ದೆ, ಹಾಗೇ ನಡೆದು ತೋರಿಸಿದೆ... ನನ್ನ ಆಹಾರ ಬರೀ ನೀರು. ಶುದ್ಧವಾದ ನೀರು... ಬೇರೆ ಏನೇನೇನೂ ಇಲ್ಲ!! ಅವರು ಆಗ 'Can I ask you a question? But you should not feel it awkward?' ಎಂದರು. 'Please ask' ಎಂದೆ, ಆದರೂ ಇನ್ನೂ ಏನು ಕೇಳುತ್ತಾರೋ ಎಂದು ನನಗೂ ಕುತೂಹಲ, ಆತಂಕ! ಆಗ 'Do you remember or are you told, for how many months you were on your mother's breast milk?' ಎಂದು ಕೇಳಿದರು...! ಆಗ ನಾನು ಹೇಳಿದೆ. 'My mother used to tell me, until I completed my 3rd year... I am sorry to say' ಎಂದೆ. ಆಗ ಆತ ಮುಖ ಅರಳಿಸಿ 'That's what exactly I wanted from you !' ಎಂದರು... 'Any special reason' ಎಂದರು. 'Poverty... my mother's milk was the only food for me... I come from a very poor family' ಎಂದೆ. ಆಮೇಲೆ ಅವರು ನನಗೆ ಹಲವಾರು ವಿಷಯಗಳನ್ನು ಹೇಳಿದರು. ಆ ಬಗ್ಗೆ... ಎಷ್ಟು ದಿನ ಹೆಚ್ಚು ಅಮ್ಮನ ಹಾಲು ಕುಡಿಯುತ್ತಾರೋ ಅಂತಹವರಿಗೆ ಜೀರ್ಣಕ್ರಿಯೆ ಶಕ್ತಿಯುತವಾಗಿರುತ್ತದೆಯಂತೆ, ಒಳಗೆ ಶಕ್ತಿ ಹೆಚ್ಚಾಗಿದ್ದು , ಅವರಿಗೆ ದಣಿವು ಬಹಳ ಬೇಗ ಆಗುವುದಿಲ್ಲವಂತೆ... 'ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್' (Guinness Book of World Records) ನಲ್ಲಿ ಒಂದು ಮಗು ನಾಲ್ಕು ವರ್ಷ ಒಂಬತ್ತು ತಿಂಗಳು ಹಾಲು ಕುಡಿದಿರುವುದು ದಾಖಲೆ ಆಗಿದೆಯಂತೆ... ಅಷ್ಟೇ ಅಲ್ಲದೆ ಈಗ ತಾಯಿಯ ಹಾಲನ್ನು ಎಲ್ಲ ಕಡೆಯಲ್ಲೂ ತುಂಬಾ ಸಲಹೆ ಮಾಡುತ್ತಿರುವುದರಿಂದ, ಅವರು ಈ ಬಗ್ಗೆ ಮಾಡುತ್ತಿದ್ದ ಸಂಶೋಧನಾ ವರದಿಯಲ್ಲಿ ನನ್ನ ವಿಷಯವನ್ನು ಹಾಕಿದರು. ಈ ವಿಷಯದ ಬಗೆಗೆ ಇಂಥವರನ್ನೆಲ್ಲ ಸಂದರ್ಶನ ಮಾಡಿದೆವು ಎಂದು ನನ್ನ ಅನುಭವವನ್ನೂ ಸಹ ಬರೆದರು !!

'ಇದು ಯಾಕಮ್ಮ ಹೀಗಾಯಿತು?' ಈ ಪ್ರಶ್ನೆಯನ್ನು ನಾನು ನಮ್ಮಮ್ಮನಿಗೆ ಕೇಳಿದಾಗ ಅಮ್ಮ ಹೇಳಿದರು, 'ಹೊಟ್ಟೆ ಹಸಿವು ಎಂದು ಹೇಳಿದಾಗ ಮನೆಯಲ್ಲಿ ತಿನ್ನುವುದಕ್ಕೆ ಏನೂ ಇರುತ್ತಿರಲಿಲ್ಲ... ಸರಿ ಇನ್ನೇನು ಮಾಡುವುದು? ಹಾಲುಕೊಡೋದು...! ಅದಕ್ಕೇ! ನಮ್ಮ ಪಕ್ಕದ ಮನೆಯಲ್ಲಿ ಆಗ ಕಡೆಯ ಮನೆಯ ನಾರಾಯಣ ಅವಧಾನಿಗಳ ಮೊದಲನೇ ಹೆಂಡತಿ, ಬಹಳ ಒಳ್ಳೆಯವರು, ತುಂಬಾ ಸಾತ್ವಿಕರು. ಅವರಿಗೆ ಆಗ ಒಂದು ಮಗು ನೀನು ಹುಟ್ಟಿದ ಸಮಯದಲ್ಲೇ ಹುಟ್ಟಿತು... ಆಗ ಆಕೆಗೆ ಎದೆ ಹಾಲಿಲ್ಲದೇ ನಾನೇ ಆ ಮಗುವನ್ನು ಎದೆಹಾಲಿಗೆ ಕರೆದುಕೊಳ್ಳುತ್ತಿದ್ದೆ... ನೀನು ಆ ಮಗುವನ್ನು ಹೊರಗೆ ದಬ್ಬುತ್ತಿದ್ದೆ...' ಇದನ್ನು ನಮ್ಮಮ್ಮನೇ ಹೇಳಿದ್ದು... ನಾನು ದೊಡ್ಡವ ನಾದ ಮೇಲೆ ನನಗನ್ನಿಸುತ್ತಿತ್ತು. ಪುನರ್ಜನ್ಮ ಎನ್ನುವುದು ಖಂಡಿತಾ ನಿಜ... ಈ ಸ್ವಾರ್ಥ ಎನ್ನುವುದು ಹುಟ್ಟುವಾಗಲೇ ಹೇಗೆ ಬರುತ್ತದೆ ಎಂದು ಚಕಿತನಾದೆ! ಇಲ್ಲವಾದರೆ ಒಂದು ಎಳೇ ಮಗು ಇನ್ನೊಂದು ಎಳೆಯ ಮಗು ಬಂದರೆ ಈ ಮಗು ಇವನು ಯಾಕೆ ಇದಕ್ಕಾಗಿ ಬರಬೇಕು, ಇದು ನನ್ನ ಆಸ್ತಿ, ಎನ್ನುವ ಭಾವನೆ ಹೇಗೆ ಬರುತ್ತದೆ? ಕೆಲವು ಸ್ವಭಾವಗಳು ರಕ್ತಗತವಾಗಿರುತ್ತವೇನೋ ಎಲ್ಲರಿಗೂ!!

ಭಗವಂತನಿಗೆ ಆಭಾರಿ

ನಮ್ಮ ನಾರಾಯಣ ಅವಧಾನಿಗಳ ವಿಷಯ ಹೇಳಬೇಕು ನಾನು... ಅವಧಾನಿಗಳು ಆಚಾರ-ಮಡಿ-ಇತ್ಯಾದಿಗಳಲ್ಲಿ ಬಹಳ ನಂಬಿಕೆ ಇದ್ದವರು. ನಮ್ಮೂರಿಗೇ ಆದರ್ಶ ವ್ಯಕ್ತಿ ಅವರು. ಅವರ ಪತ್ನಿಗೆ ಮಕ್ಕಳು ಆಗಿ ಆಗಿ ಹೋಗಿಬಿಡುತ್ತಿದ್ದವು. ಅವಧಾನಿಗಳಿಗೆ ಅಸಾಧ್ಯ ಮೇಧಾಶಕ್ತಿ , ವೇದದ ಪಾಂಡಿತ್ಯ ಇದ್ದರೂ ಈ ವಿಷಯ ಮಾತ್ರ ಅವರಿಗೆ ದೊಡ್ಡ ಕೊರಗಾಗಿತ್ತು. ಇದನ್ನು ಅವರ ಪತ್ನಿಯೂ ಮನಗಂಡು ಕೊನೆಗೆ ಒಂದು ದಿನ ತಾವೇ ತಮ್ಮ ಯಜಮಾನರಿಗೆ, ''ನನಗೆ ಇನ್ನು ಸಂತಾನಭಾಗ್ಯ ಇಲ್ಲ... ಹುಟ್ಟಿದ್ದು ಉಳಿಯುತ್ತಿಲ್ಲ, ಇನ್ನು ಉಳಿಯುವ ಸಾಧ್ಯತೆಯೂ ಇಲ್ಲ... ಆದರೆ ನಿಮ್ಮ ಸಂತಾನ ಬೆಳೆಯಬೇಕು! ನನಗಂತೂ ಆ ಅದೃಷ್ಟ ಇಲ್ಲ. ಆದ್ದರಿಂದ ನೀವು ಇನ್ನೊಂದು ಹೆಣ್ಣನ್ನು ಮದುವೆಯಾಗಿ. ನಾನು ಆ ಹೆಣ್ಣನ್ನು ನನ್ನ ಸ್ವಂತ ಒಡಹುಟ್ಟಿದವಳು ಎಂದು ತಿಳಿದು, ನೋಡಿಕೊಂಡು ಅವಳಿಗಾಗುವ ಮಕ್ಕಳನ್ನು ನಾನು ಸಾಕುತ್ತೇನೆ. ನೀವು ಇದಕ್ಕಾಗಿ ಏನೂ ಬೇಜಾರು ಮಾಡಿಕೊಳ್ಳಬೇಡಿ, ನನಗೂ ಈ ವಿಷಯದಲ್ಲಿ ಯಾವುದೇ ಬೇಜಾರಿಲ್ಲ...'' ಎಂದು ಹೇಳಿದರಂತೆ! ಈ ವಿಷಯ ನನಗೆ ತಿಳಿದಾಗ ಆಕೆ ಎಂತಹ ಎತ್ತರದ

ವ್ಯಕ್ತಿ ಎನ್ನಿಸಿ, ಅವರ ಮೇಲೆ ಬಹಳ ಗೌರವ ಮೂಡಿತು. ಆಗ ಅವಧಾನಿಗಳು, ನಮ್ಮೂರಿನ ದೊಡ್ಡ ಕುಟುಂಬ ಒಂದರ ಹೆಣ್ಣು ಲಕ್ಷ್ಮೀದೇವಿ ಎನ್ನುವವರನ್ನು ಮದುವೆ ಆದರು. ಅವರಿಗೆ ಐದು ಜನ ಗಂಡುಮಕ್ಕಳಾದರು. ಇವತ್ತಿಗೂ ಆ ಕುಟುಂಬ ತುಂಬಾ ಒಳ್ಳೆಯ, ನಮ್ಮೂರಿಗೆ ಹೆಸರಾದ ಕುಟುಂಬ. ಆ ಐದು ಜನ ಮಕ್ಕಳಲ್ಲಿ ಒಬ್ಬ ನನ್ನ ಅಳಿಯ!! ಈಗ ಲಂಡನ್‌ನಲ್ಲಿದ್ದಾನೆ. ಇದನ್ನು ನಿಜಕ್ಕೂ ದೈವಕೃಪೆ ಅನ್ನಬೇಕು... ದೈವದಲ್ಲಿ ನಂಬಿಕೆ ಇಟ್ಟಿದ್ದರೆ ಅವನು ಯಾವುದಾದರೂ ಸ್ವರೂಪದಲ್ಲಿ ಬಂದು ಸಹಾಯ ಮಾಡುತ್ತಾನೆ, ನಮ್ಮನ್ನು ಕಾಪಾಡುತ್ತಾನೆ ಎನ್ನುವ ಮಾತು ಸುಳ್ಳಲ್ಲ ಎನ್ನುವಂತೆ, ನಮ್ಮ ತಂದೆ ತಾಯಿಗೆ ಶ್ರೀನಾರಾಯಣ ಅವಧಾನಿಗಳು ಮಾಡಿದ ಸಹಾಯ, ಈ ದಿನ ನಮ್ಮ ಜತೆ ಅವರ ಮನೆಯ ಬಾಂಧವ್ಯ... ಈ ಎರಡು ವಿಷಯಕ್ಕೂ... ಭಗವಂತನಿಗೆ ಆಭಾರಿ ಆಗಿದ್ದೇನೆ.

೬. ಅನ್ನ ದೇವರು

ಭಿಕ್ಷಾನ್ನ

ಈ ಕಡೆ ನಮ್ಮ ಮನೆಯಲ್ಲಿ ಬಡತನ ದಿನೇ ದಿನೇ ಹೆಚ್ಚಾಯಿತು. ನಾವು ಐದು ಜನ ಗಂಡುಮಕ್ಕಳು, ಒಬ್ಬಳೇ ಒಬ್ಬಳು ಮಗಳು. ನಮ್ಮಕ್ಕನನ್ನು ಶಿವಮೊಗ್ಗದಲ್ಲಿ ಅಕೌಂಟೆಂಟ್ ಆಗಿದ್ದ ದೊರೆಸ್ವಾಮಿ ಎನ್ನುವವರು ಮದುವೆಯಾದರು... ಶಿವಮೊಗ್ಗ, ಮತ್ತೂರಿನಿಂದ ಕೇವಲ ನಾಕು ಮೈಲಿ ದೂರ. ನಾನು ಪ್ರೈಮರಿ ಸ್ಕೂಲಿಗೆ ಸೇರಿದಾಗ, ನಮ್ಮ ಸ್ಕೂಲ್‌ನಲ್ಲಿ ಬಹಳ ಒಳ್ಳೆಯ ಮೇಷ್ಟ್ರು ಇದ್ದರು, ಚಿಂತಾಮಣಿ ಅವಧಾನಿಗಳು ಎಂದು. ನನಗೆ ಈಗಲೂ ಬಹಳ ಚೆನ್ನಾಗಿ ನೆನಪಿದೆ, ಅವರು ಅದೆಷ್ಟು ಒಳ್ಳೆಯ ಶಿಕ್ಷಣವನ್ನು ನಮಗೆಲ್ಲ ಕೊಡುತ್ತಿದ್ದರು, ನಮಗೆಲ್ಲ ಅವರ ಮೇಲೆ ಅದೆಷ್ಟು ಭಕ್ತಿ-ಗೌರವಗಳಿದ್ದವು ಅಂತ! ಅವರನ್ನು ನಾವೆಲ್ಲ 'ದೊಡ್ಡಮೇಷ್ಟ್ರು' ಎಂದೇ ಕರೆಯುತ್ತಿದ್ದೆವು. ಇವರ ಜೊತೆಗೆ ನಮ್ಮೂರಿನವರೇ ಸಹಾಯಕ ಶಿಕ್ಷಕರು ಇನ್ನೊಬ್ಬರಿದ್ದರು, ಅವರನ್ನು 'ಚಿಕ್ಕಮೇಷ್ಟ್ರು' ಎನ್ನುತ್ತಿದ್ದೆವು. ಸ್ಕೂಲಿನ ಎದುರಿಗೇ ಸಣ್ಣ ಗುಡಿಸಲು ಜೋಪಡಿ ಅದು, ಆ ಎದುರು ಮನೇಲೇ ನಾವಿದ್ದೆವು. ಅಲ್ಲಿ ಪ್ರಾಥಮಿಕ ಶಾಲಾ ಕಲಿಕೆ ಆಯಿತು. ಮಾಧ್ಯಮಿಕ ಶಾಲೆಗೆ ಶಿವಮೊಗ್ಗದಲ್ಲಿ-ಓಲ್ಡ್ ಬಾಯ್ಸ್ ಮಿಡ್ಲ್ ಸ್ಕೂಲ್ ಸೇರಿಕೊಂಡೆ. ಅಲ್ಲಿ ನಮ್ಮ ಊರಿನ ಸುಮಾರು ಏಳೆಂಟು ಹುಡುಗರಿದ್ದರು. ದೇವೇಂದ್ರಪ್ಪ ಎನ್ನುವವರು ಬಹಳ ದೊಡ್ಡ ಸಂಗೀತಗಾರರು. ಅವರ ತಮ್ಮ ಶೇಷಪ್ಪ ಅಲ್ಲಿ ಮೇಷ್ಟ್ರು ನಮಗೆ... ಶೇಷಪ್ಪ ಮೇಷ್ಟ್ರಿಗೆ ನಮ್ಮೂರ ಹುಡುಗರು ಅಂದರೆ ಭಾರಿ ಇಷ್ಟ . ನಮ್ಮ ಮನೆಗಳಲ್ಲಿ ಮಜ್ಜಿಗೆಹುಳಿ ತುಂಬಾ ಚೆನ್ನಾಗಿ ಮಾಡುತ್ತೇವೆ ಅಂತ, ನಮ್ಮನ್ನೆಲ್ಲ ಅವರು ಮಜ್ಜಿಗೆಹುಳಿ ಅಂತಲೇ ಕರೆಯುತ್ತಿದ್ದರು!

ಮೂರು ವರ್ಷದ ವಿದ್ಯಾಭ್ಯಾಸ ಅದು, ಅಲ್ಲಿ ಓದುತ್ತಿದ್ದಾಗ ಭಿಕ್ಷಾನ್ನ, ವಾರಾನ್ನ, ಅಂತ ಇದನ್ನು ಮಾಡಿಕೊಂಡು ಓದಬೇಕಿತ್ತು. ಇದು ಬಹುಶಃ ಈಗಿನ ಮಕ್ಕಳಿಗೆ ಅರ್ಥವಾಗುವುದಿಲ್ಲ... ಆಗ ತುಂಬಾ ಬಡಹುಡುಗರಿದ್ದರು. ಅದು ನನ್ನೊಬ್ಬನದೇ ಸ್ಥಿತಿಯಾಗಿರಲಿಲ್ಲ. ಬಹಳ ಜನಕ್ಕಿತ್ತು ಅದು. ಆದರೆ ಒಂದು ವಿಷಯ ಏನು ಅಂದರೆ, ಹೀಗೆ ಮಾಡುವುದಕ್ಕೆ ವಯಸ್ಸು ಚಿಕ್ಕದಾಗಿರಬೇಕು... ಹಾಗಲ್ಲದೆ ವಯಸ್ಸು ಸ್ವಲ್ಪ ಜಾಸ್ತಿಯಾದರೂ ಭಿಕ್ಷಾನ್ನ ಮಾಡುವುದಕ್ಕೆ ನಾಚಿಕೆ ಆಗಿಬಿಡುತ್ತದೆ!! ಅದು ಮನುಷ್ಯ ಸ್ವಭಾವ. ಭಿಕ್ಷಾನ್ನ ಅಂದರೆ, ಕೈಯಲ್ಲಿ ಎರಡು ಪಾತ್ರೆ ಹಿಡಿದು ಎಂಟು-ಹತ್ತು ಮನೆಗಳಿಗೆ ಹೋಗುವುದು, 'ಭವತಿ ಭಿಕ್ಷಾಂ ದೇಹಿ' ಅನ್ನುವುದು, ಅವರು (ಮನೆಯವರು) ಒಂದು ಪಾತ್ರೆಗೆ ಅನ್ನ, ಇನ್ನೊಂದು ಪಾತ್ರೆಗೆ ಸಾರೋ, ಹುಳಿಯೋ, ಮಾಡಿದ್ದು ಹಾಕುತ್ತಿದ್ದರು. ಹೆಗಲಲ್ಲಿ ಒಂದು ಜೋಳಿಗೆ... ಯಾಕೆಂದರೆ ಕೈಯಲ್ಲಿ ಪಾತ್ರೆಗಳನ್ನು ಹಿಡಿ ಹಿಡಿದು ಕೈ ನೋವು ಬರುತ್ತದೆ ಅಂತ. ಹತ್ತು ಮನೆಗಳಲ್ಲಿ ಭಿಕ್ಷೆ ಮಾಡಿದರೆ ಬೆಳಗ್ಗೆ, ರಾತ್ರಿ ಎರಡು ಹೊತ್ತಿಗೂ ಸಾಕಾಗುತ್ತಿತ್ತು. ರಾತ್ರಿ ಹೊತ್ತು ಸಾಮಾನ್ಯವಾಗಿ ಭಿಕ್ಷಾನ್ನಕ್ಕೆ ಹೋಗುವುದಿಲ್ಲ. ಬಹುಶಃ ಹುಳು ಹುಪ್ಪಟೆ ಆಹಾರದ ಮೇಲೆ ಬಿದ್ದೀತು ಅಂತ ಇರಬೇಕು... ಅದು ನನ್ನ ಅನಿಸಿಕೆ. ಅದೂ ಅಲ್ಲದೆ ಚಿಕ್ಕ ಮಕ್ಕಳು ಕತ್ತಲೆಯಲ್ಲಿ (ಈಗಿನ ಹಾಗೆ ಬೀದಿ ದೀಪಗಳು ಇರದ ಕಾಲ ಅದು!) ನಡೆದುಕೊಂಡು ಹೋಗುವುದು ಸರಿಯಲ್ಲ, ರಸ್ತೆಗಳೂ ಚೆನ್ನಾಗಿ ಇರುತ್ತಿರಲಿಲ್ಲ... ಈ ಕಾರಣದಿಂದಲೂ ರಾತ್ರಿ ವೇಳೆ ಭಿಕ್ಷೆ ಮಾಡುತ್ತಿರಲಿಲ್ಲ ಅನ್ನಿಸುತ್ತದೆ.

ವಾರಾನ್ನ

ಮಾಧ್ಯಮಿಕ ಶಾಲೆಯ ಕೊನೆಯ ಎರಡು ವರ್ಷಗಳ ಕಾಲ ವಾರಾನ್ನ ಮಾಡುತ್ತಿದ್ದೆ ನಾನು. ಇದೂ ಅಷ್ಟೇ ಕ್ಲಿಷ್ಟ! ಒಬ್ಬೊಬ್ಬರ ಮನೆಯಲ್ಲಿ ಒಂದೊಂದು ದಿನ... ಆದಿತ್ಯ, ಸೋಮ, ಮಂಗಳ, ಬುಧ, ಗುರು, ಶುಕ್ರ, ಶನಿ ಹೀಗೆ ಏಳು ದಿನಗಳು, (ಒಂದೊಂದು ವಾರ ಅಂದರೆ ಭಾನುವಾರ, ಸೋಮವಾರ ಹೀಗೆ ಒಂದೊಂದು ದಿನ) ಒಂದೊಂದು ಮನೆಯಲ್ಲಿ ಊಟ ಕೇಳುವುದು... ನಿಮ್ಮ ಮನೆಯಲ್ಲಿ ಒಂದು ವಾರ ಕೊಡುತ್ತೀರಾ? ಎಂದು ಕೇಳುವುದೇ ಪದ್ಧತಿ! ಅನುಕೂಲಸ್ಥರು, ಒಳ್ಳೆಯವರು, 'ಬಾರಪ್ಪ ಪರವಾಗಿಲ್ಲ' ಎನ್ನುತ್ತಿದ್ದರು. ಹೀಗೆ ಒಬ್ಬೊಬ್ಬರ ಮನೆಯಲ್ಲಿ ಒಬ್ಬರಿಂದ ಹಿಡಿದು ಸುಮಾರು ೨೦ ಹುಡುಗರಿಗೆ ವಾರ ಕೊಡುತ್ತಿದ್ದರು. ಆಗಿನ ಕಾಲದವರದ್ದು ಉದಾರ

ಮನಸ್ಸು. ಆ ಸಣ್ಣ ವಯಸ್ಸಿನಲ್ಲಿ, ಅದೂ ಬಹಳ ಬಡತನದಲ್ಲಿದ್ದವರಿಗೆ, ಆ ಔದಾರ್ಯವನ್ನು ನಾವು ಇನ್ನೊಬ್ಬರಲ್ಲಿ ನೋಡಿದಾಗ ಬಹಳ ಆಶ್ಚರ್ಯ ಆಗುತ್ತಿತ್ತು. ಮನಸ್ಸಿನ ಮೇಲೆ ಬಹಳ ಪರಿಣಾಮ ಬೀರುತ್ತಿತ್ತು, ಆ ರೀತಿ ನನಗೂ ಬಹಳ ಸ್ವಾರಸ್ಯಕರವಾದ ಒಂದೆರಡು ಅನುಭವವಾಗಿದೆ...

ವಾರಾನ್ನ ಅಂತ ಕೇಳುವುದಕ್ಕೆ ಹೋದರೆ ಕೆಲವು ಮನೆಗಳಲ್ಲಿ ಅನುಕೂಲವೇ ಇರುತ್ತಿರಲಿಲ್ಲ... ಒಪ್ಪಿಕೊಂಡು ವಾರಾನ್ನ ಹಾಕಲು ಪ್ರಾರಂಭಿಸಿದರೆ, ಹೆಂಗಸರಿಗೆ ಅನಾನುಕೂಲವಾದ ಕೂಡಲೇ 'ನಾಳೇ ಬರಬೇಡಪ್ಪ' ಅಂತ ಅಂದುಬಿಡುತ್ತಿದ್ದರು! ಆ ಅಂತಹ ಸಂದರ್ಭಗಳಲ್ಲೂ ಇನ್ನೊಬ್ಬರನ್ನು ಕೇಳುವುದು, ಅವರ ಮನೆಗೆ ಹೋಗಿ ಪ್ರಯತ್ನಿಸುವುದು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಕಷ್ಟವಾಗುತ್ತಿತ್ತು. ಆದರೂ ವಿಧಿಯಿಲ್ಲ , ಉಪವಾಸ ಇರಬೇಕಾಗುತ್ತಿತ್ತು. ಇದು ನಿಜಕ್ಕೂ, ನನಗೆ ಅನುಭವ ಇರುವುದರಿಂದ ಹೇಳುತ್ತೇನೆ, ಸಣ್ಣ ವಯಸ್ಸಿನಲ್ಲಿ ಬಹಳ ಕಷ್ಟ... ಹೌದು. ಹಸಿವನ್ನು ತಡೆಯಲಾಗದ ವಯಸ್ಸು ಅದು, ಆಗ ಬಹಳ ಕಷ್ಟ . ನಮ್ಮ ಅಕ್ಕನ ಮನೆ ಶಿವಮೊಗ್ಗದಲ್ಲೇ ಇದ್ದುದರಿಂದ ನಾನು ಒಮ್ಮೊಮ್ಮೆ ಅಲ್ಲಿಗೂ ಹೋಗುತ್ತಿದ್ದೆ... ಆದರೆ ಸದಾ ಅಲ್ಲಿಗೇ ಹೋಗುವಂತಿಲ್ಲ! ಯಾರದೋ ಮನೇಲಿ ಇದ್ದು , ಅವರಿಗೆ ಸಹಾಯ ಮಾಡುವುದು. ಕಸ ಗುಡಿಸುವುದು, ಬಟ್ಟೆ ಒಗೆಯುವುದು, ಅವರ ಮಕ್ಕಳ ಜೊತೆ ಜೊತೆಗೇ ಸೇರಿಕೊಂಡಿರುವುದು... ಹಾಗೇ ಇರಬೇಕಿತ್ತು. ನಾನೂ ಹಾಗೇ ಇದ್ದೆ. ಊಟಕ್ಕೆ ವಾರಕ್ಕೆ ಹೋಗುತ್ತಿದ್ದೆ. ಬೆಳಗಿನ ಹೊತ್ತು ಕಾಫಿ-ಟೀ ಅಂತ ಯಾವುದೇ ಅಭ್ಯಾಸ ಅಂದು ಇರಲಿಲ್ಲ... ತಿನ್ನುವುದಕ್ಕೇ ಕಷ್ಟ ಇದ್ದ ಕಾಲ ಅದು!

ಈ ವಾರಾನ್ನದ ಎರಡು-ಮೂರು ಅನುಭವಗಳನ್ನು ಹೇಳಲೇಬೇಕು ಅಂದರೆ, ಇತರರಿಗೆ ಈ ರೀತಿ ಅನುಭವ ಇರುವುದಿಲ್ಲ ಎಂದು ನಾನು ಹೇಳುವುದಿಲ್ಲ. ನನ್ನ ರೀತಿ ವಾರಾನ್ನ ಮಾಡಿದವರನ್ನು ಹೋಗಿ ಕೇಳಿದಾಗ ಇದೇ ಥರ, ಇದಕ್ಕಿಂತ ಸ್ವಾರಸ್ಯಕರವಾದ ಚೆನ್ನಾಗಿರುವ ಅನುಭವವನ್ನೇ ಹೇಳಿಯಾರು!! ಆದರೆ ನನ್ನ ಜೀವನದಲ್ಲಿ ನಾನು ಸರಿಯಾದ ಪಾಠ ಕಲಿಯಲು, ಮನುಷ್ಯ ಸ್ವಭಾವದಲ್ಲಿನ ಔದಾರ್ಯದ ಬಗ್ಗೆ ತಿಳಿಯಲು ಸಹಾಯ ಮಾಡಿದ ಅಂಶಗಳು... ಬಹು ಮುಖ್ಯ ಅಂಶಗಳು ಈ ನನ್ನ ಅನುಭವಗಳು... ಅಷ್ಟು ಮಾತ್ರ ಹೇಳಬಲ್ಲೆ...

ನನ್ನ ಜತೆಯಲ್ಲಿ ಮೂರು ಹುಡುಗರು ಕನ್ನಡ ಕಲಿಯುತ್ತಿದ್ದರು. ಮಾಧ್ಯಮಿಕಶಾಲೆಯಲ್ಲಿದ್ದಾಗ, ಪ್ರಾರಂಭದಿಂದಲೂ ನನಗೆ ಕನ್ನಡದ ಮೇಲೆ ಹೆಚ್ಚು ಆಸೆ... ನನಗೆ ಅದರಲ್ಲೇ ಹೆಚ್ಚು ನಂಬರು ಬರುತ್ತಿತ್ತು... ಲೆಕ್ಕಕ್ಕಿಂತ ಕನ್ನಡದಲ್ಲೇ ಜಾಸ್ತಿ! ಆದರೆ ನನ್ನ ಜತೆಯ ಈ ಮೂವರು ಹುಡುಗರಿಗೆ ಕನ್ನಡದಲ್ಲಿ , ಸುಮಾರಾಗಿ ಮಾರ್ಕ್ಸ್ ಬರುತ್ತಿತ್ತು ಅಷ್ಟೇ... ಕನ್ನಡ ಸ್ವಲ್ಪ ಕಷ್ಟ ಅವರಿಗೆ. ನಮಗೆಲ್ಲ ಅತ್ಯಂತ ಮೆಚ್ಚಿನವರಾಗಿದ್ದ ಕನ್ನಡ ಮೇಷ್ಟ್ರು ಶಾಮಯ್ಯಂಗಾರ್ ಬಹಳ ಒಳ್ಳೆಯವರು. ಅವರು ಒಂದು ಸಾರಿ ನನಗೆ, 'ಕೃಷ್ಣಮೂರ್ತಿ, ಈ ಮೂರು ಹುಡುಗರಿಗೆ ಕನ್ನಡ ಅಷ್ಟಾಗಿ ಬರೋದಿಲ್ಲ, ನೀನು ಸ್ವಲ್ಪ ಕನ್ನಡ ಹೇಳಿಕೊಡಪ್ಪ... ಬಾಕಿ ವಿಷಯಗಳಲ್ಲಿ ಚೆನ್ನಾಗಿ ಮಾರ್ಕ್ಸ್ ತೆಗೆದುಕೊಳ್ಳುತ್ತಾರೆ, ಬುದ್ಧಿವಂತರಾಗಿದ್ದಾರೆ' ಅಂತ ಹೇಳಿದರು. ನಾನು ಒಪ್ಪಿಕೊಂಡೆ. ಶಾಲೆ ಮುಗಿದ ಮೇಲೆ ಒಂದರ್ಧ ಘಂಟೆ ಅಲ್ಲೇ ಇದ್ದು ಅವರಿಗೆ ಕನ್ನಡ ಹೇಳಿ ಕೊಡುತ್ತಿದ್ದೆ. ಆಗ ನನಗೆ ಶುಕ್ರವಾರ 'ವಾರ'ಇರಲಿಲ್ಲ... ಆ ದಿನ ಉಪವಾಸವೇ ಇರಬೇಕಾಗುತ್ತಿತ್ತು... ಮೂರು-ನಾಲ್ಕು ಪಾಠಗಳನ್ನು ಹೇಳಿಕೊಟ್ಟಾದ ಮೇಲೆ ಆ ಹುಡುಗರನ್ನು 'ನಿಮ್ಮಮ್ಮನ ಕೇಳಿ, ಒಂದು ವಾರ ಕೊಡುತ್ತಾರೆಯೋ ಅಂತ. ನನಗೆ ಶುಕ್ರವಾರ ವಾರ ಇಲ್ಲ' ಎಂದು ಕೇಳಿದೆ. ಅವರೆಲ್ಲ ನನ್ನ ಸಹಪಾಠಿಗಳು... ಅವರಿಗೂ ನನ್ನ ಮೇಲೆ ಅನುಕಂಪ ಬಂದಿತು. 'ಲೋ, ಕೃಷ್ಣಮೂರ್ತಿ... ಬಾರೋ... ಪರವಾಗಿಲ್ಲ... ಕೇಳುವುದೇನು? ನಾವು ಹೇಳುತ್ತೇವೆ ನಮ್ಮಮ್ಮನಿಗೆ! ಬಾರೋ ನಮ್ಮ ಮನೆಗೆ, ನಮ್ಮಮ್ಮ "ಹ್ದೂಂ" ಅಂತಾರೆ. ನೀನೇನೂ ಯೋಚನೆ ಮಾಡಬೇಡ' ಎಂದರು. 'ಮೊದಲು ನೀವು ಕೇಳಿಕೊಂಡು ಬನ್ನಿ... ಆಮೇಲೆ ನಾನು ಖಂಡಿತಾ ಬರುತ್ತೇನೆ ನಿಮ್ಮ ಮನೆಗೆ' ಎಂದೆ ನಾನು. ಮಾರನೆಯ ದಿನ ಅವರಲ್ಲೊಬ್ಬ ಬಂದವನೇ, 'ನಮ್ಮಮ್ಮ ಹೂಂ ಅಂದರು ಕೃಷ್ಣಮೂರ್ತಿ, ಬಾರೋ ನಮ್ಮ ಮನೆಗೆ' ಎಂದ. ಸರಿ, ನಾನು ಹೋದೆ... ಅದು ಶಿವಮೊಗ್ಗದಲ್ಲಿ ತಿಮ್ಮಪ್ಪನ ಕೊಪ್ಪಲು ಎನ್ನುವ ಜಾಗ, ಅಲ್ಲೊಂದು ಗಲ್ಲಿ... ನನಗಿನ್ನೂ ನೆನ್ನೆ ನಡೆದ ಹಾಗೆ ನೆನಪಿದೆ... ಮೂಲೆಯ ಮನೆ ಅದು. ಅವರ ಮನೆಗೆ ಹೋದ ಕೂಡಲೇ, 'ಬಾಪ್ಪ... ಬಾ... ಪಾಠ ಹೇಳ್ತಿಯಂತೆ ನೀನು ನಮ್ಮ ಮಕ್ಕಳಿಗೆ?' ಎಂದರು ಅವರ ತಾಯಿ... ನಾನೂ 'ಹುಂ' ಎಂದೆ... ನಮಸ್ಕಾರ ಮಾಡಿದೆ... 'ಬಾಪ್ಪ ಕೂತ್ಕೋ' ಎಂದರು. ಆದರೆ ಆ ಮನೆ ನೋಡಿದಾಗ ನಾನು ತಪ್ಪು ಮಾಡಿದೆನೇನೋ ಎಂದು ನನಗೆ ಅನ್ನಿಸಿತು. ಸಣ್ಣ ಹಜಾರ ಅದು. ಸುಮಾರು ೨೦'x೧೦' ಇರಬೇಕು. ಒಂದು ಅಡ್ಡ ಗೋಡೆ, ಒಂದು ರೂಮು, ಅಲ್ಲೇ ದೇವರಿಟ್ಟಿದ್ದರು. ಎಂಟು ಜನ ಮಕ್ಕಳು ಅವರಿಗೆ... ಅದೂ ಐದು ಗಂಡು, ಮೂರು ಹೆಣ್ಣು ಮಕ್ಕಳು. ನನಗೆ ಆಗ ಗೊತ್ತಾಯಿತು... ಪಾಪ ಅವರಿಗೂ ತುಂಬಾ ಬಡತನ ಎಂದು! ಅವರ ತಂದೆ ನಿವೃತ್ತ ಮುಖ್ಯೋಪಾಧ್ಯಾಯರು. ತಾಯಿ, ತಂದೆ, ಎಂಟು ಜನ ಮಕ್ಕಳು! ಆ ತಾಯಿಯ ಹೆಸರು ಪಾರ್ವತಮ್ಮ. ಅವರು 'ಕೃಷ್ಣಮೂರ್ತಿ, ಸಾಯಂಕಾಲ ಮಾತ್ರ ಬೇಗ ಬಂದು ಬಿಡಪ್ಪ . ನಮ್ಮ ಮನೆಯಲ್ಲಿ ದೀಪ ಇಲ್ಲ... ಬರೀ ಒಂದು ಹಣತೆ ಇದೆ. ಕತ್ತಲೆ ಆದ ಮೇಲೆ ಕಷ್ಟ... ಹುಡುಗರೆಲ್ಲ ಜಗುಲಿ ಮೇಲೆ ಕುಳಿತೇ ಓದುತ್ತಾರೆ...' ಎಂದರು. ಆ ದಿನ ನನ್ನ ಮನಸ್ಸಿಗೆ ತುಂಬಾ ನೋವಾಯಿತು... ಆದರೂ 'ಸರಿ' ಎಂದೆ... ನನಗೂ ವಾರದ ಅಗತ್ಯ ಇದ್ದಿತು...!! ಮನಸ್ಸಿನಲ್ಲಿ ಅಲ್ಲಿಗೆ ಹೋಗುವುದಕ್ಕೆ ಹಿಂದೇಟು... ಆದರೂ ಹೋದೆ... ಅಮೃತದ ರುಚಿ,

ಅವರ ಕೈ ಅಡುಗೆ!! ಸ್ವಲ್ಪ ಕತ್ತಲಾದರೆ ಮನೆಯಲ್ಲಿ ದೀಪವಿಲ್ಲದೆ ಏನೂ ಕಾಣುತ್ತಿರಲಿಲ್ಲ. ಒಂಬತ್ತು ಮುತ್ತುಗದೆಲೆ ಹಾಕುತ್ತಿದ್ದರು. ಈ ಕಡೆ ನಾಲ್ಕು , ಆ ಕಡೆ ಐದು. ಅವರ ಯಜಮಾನರು, ಹೆಸರು ಸೂರ್ಯ ನಾರಾಯಣರಾಯರು ಅಂತ... ಅವರು ಬಹುಶಃ ಮಕ್ಕಳದೆಲ್ಲ ಊಟ ಆದ ಮೇಲೆ ಊಟ ಮಾಡುತ್ತಿದ್ದರು ಅಂತ ಕಾಣುತ್ತದೆ.

ಹೀಗೆ ಮೂರು-ನಾಲ್ಕು ವಾರ ಕಳೆಯಿತು. ನನಗೂ ಮನೆಯವರ ಜೊತೆಗೆ ಸಲಿಗೆ ಬಂದಿತು... ನಾನೂ ಹೋಗಿ ಎಲೆ ಹಾಕುವುದಕ್ಕೆ ಸಹಾಯ ಮಾಡುತ್ತಿದ್ದೆ. ನಾವೆಲ್ಲ ಹುಡುಗರು ಬಹಳ ಒಂದಾಗಿದ್ದೆವು... ಅವರು ಸಹ ಅವರ ಮನೆಯವನಂತೆ ನೋಡಿಕೊಳ್ಳುತ್ತಿದ್ದರು. ಅವರು ಬಡಿಸುವುದಕ್ಕೆ ಬಂದಾಗ, ಮಕ್ಕಳಿಗೆಲ್ಲ ಬಡಿಸಿ ಆದ ಮೇಲೆ, ಒಂದು ಸಣ್ಣ ಬೋಗುಣಿಯಲ್ಲಿ ಬಿಸಿಬಿಸಿ ಅನ್ನ ತರುತ್ತಿದ್ದರು. ನನಗೆ ಮಾತ್ರ ಆ ಬಿಸಿ ಅನ್ನ ಬಡಿಸುತ್ತಿದ್ದರು. ಪ್ರತಿವಾರವೂ ಇದೇ ಪರಿಪಾಠ... ಆದರೆ ಅಲ್ಲಿಯವರೆಗೆ ನನಗೆ ಏಕೆ ಹಾಗೆ ಎಂದು ಕೇಳುವ ಧೈರ್ಯವಾಗಿರಲಿಲ್ಲ? ಆ ಒಂದು ದಿನ ಹಾಗೆ ನನಗೆ ಬಡಿಸುವುದಕ್ಕೆ ಬಂದಾಗ, ನಾನು 'ಪಾರ್ವತಮ್ಮ ತಡೆಯಿರಿ... ತಡೆಯಿರಿ ಸ್ವಲ್ಪ' ಎಂದೆ... ಸೊಂಟ ಸ್ವಲ್ಪ ಬಗ್ಗಿತ್ತು. ಹಣೆಯಲ್ಲಿ ಹುಣಿಸೇ ಎಲೆ ತರಹ ಕುಂಕುಮ, ವಯಸ್ಸಾದ ಮುಖದಲ್ಲಿ ಸುಕ್ಕು ಇದ್ದಿತು. ಹಳೆ ಕಾಲದ ಬುಗುಡಿ ಹಾಕಿಕೊಂಡಿದ್ದರು ಕಿವಿಗೆ ಪಾರ್ವತಮ್ಮ. 'ಯಾಕಪ್ಪ? ಏನಾಯ್ತು?' ಎಂದರು. ಪಾರ್ವತಮ್ಮ! 'ವಾರ ವಾರವೂ ನಾನು ಊಟಕ್ಕೆ ಬಂದಾಗ ನೀವು ನನಗೆ ಮಾತ್ರ ಬಿಸಿಬಿಸಿ ಅನ್ನ ತರುತ್ತೀರಿ, ಬಡಿಸುತ್ತೀರಿ... ಸುಬ್ಬು, ಸೀನು, ರಾಜಿ, ಗುಂಡು, ಇವರಿಗೆಲ್ಲಾ ತಂಗಳನ್ನು ಹಾಕುತ್ತೀರಲ್ಲ ಯಾಕೆ?' ಎಂದು ಕೇಳಿದೆ. ಆಕೆ 'ಕೃಷ್ಣಮೂರ್ತಿ ಇವರಿಗೆಲ್ಲಾ... ಇವರಿಗೆ ಏನಾದರೂ ಆದರೆ ನೋಡಿ ಕೊಳ್ಳಲು ನಾ ಇದ್ದೀನಿ, ಇವರು ಇದ್ದಾರೆ. ನೀನು ಪಾಪ ಮತ್ತೂರಿಂದ ಓದೋಕೆ ಅಂತ ಇಲ್ಲಿಗೆ ಬಂದಿದ್ದೀಯೆ, ನೋಡಿಕೊಳ್ಳುವವರಿಲ್ಲ. ನಿನಗೆ ಜಡ ಜಾಪತ್ತು ಬಂದರೆ ಏನೋ ಗತಿ?' ಎಂದರು ಅಷ್ಟೇ!! ಕಣ್ಣಲ್ಲಿ ನೀರು ಬಂತು ನನಗೆ... ನಾನು ಮಾತನಾಡದೆ ಸುಮ್ಮನಾಗಿ ಬಿಟ್ಟೆ... ಆಮೇಲೆ ಮನೆಗೆ ಹೋದಾಗ ಒಂದು ಯೋಚನೆ ಬಂತು... ಅದು ಹೇಗೆ ತಮ್ಮ ಮಕ್ಕಳ ಹಿತವನ್ನು ಬಲಿಕೊಟ್ಟು , ಬಂದವನಿಗೆ, ಅದೂ ವಾರಕ್ಕೆ ಬಂದವನಿಗೆ ಹೀಗೆ ಉಪಚಾರ ಮಾಡುತ್ತಾರಲ್ಲಾ ಎಂದು ಅನ್ನಿಸಿತು...! ಹಾಗೇ ದೊಡ್ಡವನಾದಂತೆ ಅವರ ಹೃದಯ ವೈಶಾಲ್ಯ, ವಾತ್ಸಲ್ಯ, ಆ ಕಾಳಜಿ ಇನ್ನೂ ದೊಡ್ಡದಾಗಿ ಕಂಡಿತು... ಚಿಕ್ಕ ವಯಸ್ಸಿನಲ್ಲಿ ಅಷ್ಟು ತಿಳುವಳಿಕೆ ಇಲ್ಲದ್ದರಿಂದ ಆಗ ಅರಿವಿಗೆ ಬರದಿದ್ದುದು, ಅನಂತರ ನಮ್ಮ ಸಂಸ್ಕೃತಿ, ನಾಗರಿಕತೆ ಏನು ಅಂತ ತಿಳಿದುಕೊಳ್ಳುವುದಕ್ಕೆ ಪ್ರಾರಂಭಮಾಡಿದ ಮೇಲೆ, ಆ ತಾಯಿಯ ಔದಾರ್ಯ ಸಂಸ್ಕಾರದ ಮಹತ್ತ್ವದ ಅರಿವಾಯಿತು. ನಮ್ಮ ಸಂಸ್ಕೃತಿ ಹೇಗಿದೆ, ಯಾವುದರಲ್ಲಿದೆ ಎನ್ನುವುದು ಗೋಚರವಾಯಿತು!!

ಇನ್ನೊಂದು ಅನುಭವ... ಮಹಾಬಲೇಶ್ವರ ಭಟ್ಟರು ಅಂತ... ಕುಂದಾಪುರದ ಕಡೆಯವರು ಅವರು. ಹೋಟೆಲಿಟ್ಟಿದ್ದರು. ಅವರ ಮನೆಯಲ್ಲಿ ಒಂದು 'ವಾರ' ಕೊಟ್ಟಿದ್ದರು... ಇದು ಹೇಗೆ ಆಯಿತು ಅಂದರೆ, ನಾನು ಮೊದಲೇ ಹೇಳಿದ ಹಾಗೆ, ಕೆಲವು ಮನೆಯಲ್ಲಿ ಅನಾನುಕೂಲ ಆದರೆ, 'ಈ ದಿನ ಬೇಡಪ್ಪ , ಮುಂದಿನ ವಾರ ಬಾ' ಎನ್ನುತ್ತಿದ್ದರು... ಹಾಗೇ ಒಂದು ದಿನ ಆಯಿತು... ಸಂಜೆ ಸ್ಕೂಲು ಮುಗಿಯಿತು. ನಾಲ್ಕು ಘಂಟೆಯ ಸಮಯ... ಹೊಟ್ಟೆ ಹಸಿವು, ಬೆಳಗಿನಿಂದ ಏನೂ ಇಲ್ಲ. ತುಂಬಾ ಹಸಿವು... ಹೌದು... ಬಹಳ ಹಸಿವಾಗಿಬಿಟ್ಟಿತ್ತು , ಚಿಕ್ಕ ವಯಸ್ಸು ಬೇರೆ, ತಡೆಯಲು ಕಷ್ಟ. ಯಾರ ಮನೆಗೂ ಹೋಗುವ ಹಾಗಿಲ್ಲ, ಕೈಯಲ್ಲಿ ಬಿಡಿಗಾಸಿಲ್ಲ, ದುಡ್ಡನ್ನು ಕಂಡೇ ಇರಲಿಲ್ಲ ಅಂದರೆ ಉತ್ಪ್ರೇಕ್ಷೆ ಅಲ್ಲ! ಹಾಗಾಗಿತ್ತು... ಪೇಟೆ ಬೀದಿಯಲ್ಲಿ ಮಹಾಬಲೇಶ್ವರಭಟ್ಟರ ಹೋಟೆಲಿತ್ತು. ನಾನಲ್ಲಿಗೆ ಹೋದಾಗ, ಅವರು ನನ್ನನ್ನ ನೋಡಿದರೆ 'ಒಳಗೆ ಬಾ, ತಿಂಡಿ ತಿನ್ನು'ಎನ್ನುತ್ತಾರೆ ಎಂದು ನನ್ನ ಮನಸ್ಸಿನಲ್ಲಿ! ಆ ಪೇಟೆ ಬೀದಿಯಲ್ಲಿ ಬಂದು ಆ ರಸ್ತೆ ಬದಿಗೆ ಮೆಲ್ಲಗೆ ಹೋದೆ! ನನ್ನ ಉದ್ದೇಶ, ನಾನು ಹಾಗೆ ಹೋದಾಗ ಅವರು ನನ್ನನ್ನು ನೋಡಬೇಕು, ಬಾ ಎಂದು ಕರೆಯಬೇಕು, ಆಮೇಲೇ ನಾನು ಒಳಕ್ಕೆ ಹೋಗಬೇಕು ಅಂತ! ಏನೋ ಅಂಜಿಕೆ-ನಾನಾಗಿಯೇ ಹೋಗುವುದಕ್ಕೆ... ಹಾಗೇ ಮೆಲ್ಲಗೆ ಹೋದಾಗ ಅವರು ಮೊದಲು ನನ್ನನ್ನು ನೋಡಲೇ ಇಲ್ಲ... ಮನಸ್ಸಿಗೆ ತುಂಬ ನಿರಾಸೆಯಾಯಿತು... ಆದರೂ ಬಿಡಲಿಲ್ಲ ನಾನು... ಪುನಃ ಹಿಂದಿನ ಗಲ್ಲಿಯಿಂದ ಹೋಗಿ ತಿರುಗಿ ವಾಪಸ್ಸು ಬಂದು ಪುನಃ ಅಲ್ಲೇ ಬಂದೆ... ಅದೇ ಹೋಟೆಲ್ ಎದುರಿಗೆ ಬಂದು, ನಿಧಾನವಾಗಿ ನಿಂತು... ನಿಂತು... ಹೆಜ್ಜೆ ಹಾಕುತ್ತಿದ್ದೆ. ಈಗ ಅವರು ಗಲ್ಲಾಪೆಟ್ಟಿಗೆ ಹತ್ತಿರ ನಿಂತುಕೊಂಡಿದ್ದರು, ಈ ಸಾರಿ ಅವರು ನನ್ನನ್ನು ನೋಡಿದರು... ಅವರ ಉಡುಗೆ ಅಂದರೆ, ಮಂಡಿಯವರೆಗೆ ಒಂದು ಕಚ್ಚೆ-ಪಂಚೆ, ಹಳ್ಳಿಗಳ ಕಡೆಯಲ್ಲಿ ಕಟ್ಟಿಕೊಳ್ಳುತ್ತಾರಲ್ಲ ಹಾಗೆ... ಹೆಗಲ ಮೇಲೆ ಒಂದು ಅಂಗವಸ್ತ್ರ , ಷರಟೂ ಇರಲಿಲ್ಲ, ತುಂಬಾ ಬೆವರುತ್ತಿದ್ದರು... ಆಗಾಗ ಮುಖ ಒರೆಸಿಕೊಳ್ಳುತ್ತಿದ್ದರು. ಬಂದ ಹಣವನ್ನೂ ಸಹ ತಾವೇ ನೋಡಿಕೊಳ್ಳುತ್ತಿದ್ದರು, ಅವರೇ ತಿಂಡಿ ಸರಬರಾಜನ್ನು ಸಹ ಮಾಡುತ್ತಿದ್ದರು! ಸ್ವಲ್ಪ ಮುಂಗೋಪ ಆದರೂ, ಬಹಳ ಚೆನ್ನಾಗಿ ಹೋಟೆಲ್ ನೋಡಿಕೊಳ್ಳುತ್ತಿದ್ದರು... ನಾನು ಅಲ್ಲೇ ನಿಂತೆ, ಅವರ ಗಮನ ಸೆಳೆಯುವುದಕ್ಕಾಗಿ... ಈ ಸಾರಿ ನಾನು ತೀರ್ಮಾನ ಮಾಡಿದ್ದೆ, ಅವರು ಗಮನಿಸಿ ಕರೆಯುವವರೆಗೂ ನಿಲ್ಲೋಣ ಅಂತ !! ಕೊನೆಗೆ, ಅಂತೂ ಈ ಕಡೆ ನೋಡಿದರು... 'ಯಾರೋ ಅದು ? ಕೃಷ್ಣನೇನೋ?' ಎಂದರು ಕೊನೆಗೂ!! 'ಹೌದು ಸಾರ್' ಎಂದೆ... 'ಯಾಕೋ ಅಲ್ಲೇ ನಿಂತಿದ್ದೀ, ಬಾ ಒಳಗೆ' ಎಂದರು. ನನ್ನ ಮುಖ ಸಪ್ಪಗಾಗಿತ್ತು ಹಸಿವಿನಿಂದ. 'ಯಾಕೋ ಹೀಗಿದ್ದೀ? ಊಟ ಮಾಡಿಲ್ಲವೇನೋ? ವಾರ

ಇಲ್ವಾ ಇವತ್ತು?' ಎಂದರು. ನಾನು 'ಇಲ್ಲಾ ಸಾರ್, ಇವತ್ತು ವಾರ ಇಲ್ಲ, ''ಅನಾನುಕೂಲ, ಬರಬೇಡ'' ಅಂದರು ವಾರದ ಮನೆಯವರು' ಎಂದೆ. ಹಾಗೆಂದ ಕೂಡಲೇ 'ಹಾಗಾದರೆ... ಬೆಳಿಗ್ಗೆಯಿಂದ ಏನೂ ತಿಂದೇ ಇಲ್ಲವೇನಪ್ಪಾ?' ಎಂದರು. 'ಇಲ್ಲಾ ಸಾರ್' ಎಂದೆ... ಹಾಗಾ ಎಂದವರೆ, ಗಲ್ಲಾಪೆಟ್ಟಿಗೆ ಮುಚ್ಚಿ ಈ ಕಡೆಗೆ ಬಂದು 'ಏನೂ ತಿನ್ನಲೇ ಇಲ್ಲವಾಪ್ಪಾ?' ಎಂದರು ಪುನಃ. ಸಾಮಾನ್ಯವಾಗಿ ಅವರು ಆ ಧ್ವನಿಯಲ್ಲಿ ಮಾತನಾಡುವವರಲ್ಲ! ಅವರು ಯಾವಾಗಲೂ 'ಹೋಗೋ ಬಾರೋ, ಏನೋ, ಲೇಯ್' ಹೀಗೇ ಮಾತಾಡುತ್ತಿದ್ದುದು... ನಾನು ಧೈರ್ಯವಾಗಿ 'ಇಲ್ಲಾ ಸಾರ್, ಏನೂ ತಿಂದಿಲ್ಲಾ' ಎಂದೆ. ಕಂಭದ ಹತ್ತಿರ ಹೋದೆ... ಅವರು ನನ್ನ ಕಿವಿ ಹಿಡಿದು, ಹಿಂದೆ ತಿರುಗಿಸಿ, ಕೆಟ್ಟ ಬೈಗುಳ ಬಯ್ದು ಜೋರಾಗಿ ಒಂದು ಲಾತು ಕೊಟ್ಟರು!! ತಲೆ ಗಿರಿಗಿರಿಗಿರಿ... ಎಂದು ತಿರುಗಿಬಿಟ್ಟಿತು... 'ಅಯ್ಯೋ...' ಎಂದೆ ನಾನು... 'ಈ ಮಹಾಬಲೇಶ್ವರಭಟ್ಟ ಸತ್ತು ಹೋದ ಎಂದು ತಿಳ್ಕೊಂಡೆಯೇನೋ? ನೋಡ್ರೋ ಉಪವಾಸ ಇದ್ದಾನೆ ಇವನು-ನಾನು ಸತ್ತುಹೋದೆ ಅಂತ ತಿಳ್ಕೊಂಡು...' ಎಂದು ಹೇಳಿ, ಕಿವಿ ಹಿಡಿದು ದರದರದರ ಅಂತ ನನ್ನ ಎಳೆದುಕೊಂಡು ಅಡುಗೆ ಮನೆಗೆ ಹೋಗಿ, ಕಾಲಲ್ಲಿ ಅಲ್ಲೇ ಇದ್ದ ಮಣೆಯನ್ನು ತಳ್ಳಿ, 'ಕುಕ್ಕರು ಬಡಿಯೋ... ಕೊಡ್ರೋ ಬೇಗ ತಿಂಡೀನ... ಊಟ ಮಾಡಿಲ್ಲವಂತೆ ಇವನು ಬೆಳಿಗ್ಗೆಯಿಂದ...' ಎಂದು ಆರ್ಭಟಿಸಿದರು. ಅಲ್ಲಿದ್ದವರು ತಿಂಡಿಕೊಟ್ಟರು... ನಾನು ಅತ್ತುಕೊಂಡು ಅತ್ತುಕೊಂಡೇ, ಸಂಭಾಳಿಸಿಕೊಂಡು ತಿಂದೆ...!! ಎಲ್ಲಾ ತಿಂದಾದ ಮೇಲೆ ಕೈತೊಳೆದುಕೊಂಡು ಹೊರಗಡೆ ಬಂದೆ... ನನ್ನ ಬಲಗೈ ತೆಗೆದುಕೊಂಡ ಭಟ್ಟರು ತಮ್ಮ ತಲೆಯ ಮೇಲಿಟ್ಟುಕೊಂಡರು. 'ಆಣೆ ಅಂದರೇನೋ?' ಎಂದರು... ನಾನು ಸುಮ್ಮನೆ ಅವರ ಮುಖ ನೋಡಿದೆ, 'ರೂಪಾಯಿ ಆಣೆ ಅಲ್ಲ... ಆಣೆ ಎಂದರೇನು?' ಎಂದರು ಪುನಃ... 'ಆಣೆ ಇಟ್ಟು ಕೊಳ್ಳೋದು' ಎಂದೆ ನಾನು... 'ಆಣೆ ಇಟ್ಟುಕೊಳ್ಳೋದು ಅಂದರೆ, ತಲೆ ಮೇಲೆ ಕೈಯಿಟ್ಟು ಹೇಳಿದರೆ, ಅವನು ಹೇಳಿದ್ದು ಮಾಡದೆ ಹೋದರೆ ಅವನು ಸತ್ತುಹೋಗುತ್ತಾನೆ ಗೊತ್ತಾ? ''ಇನ್ಮೇಲೆ ನಿಮ್ಮಾಣೆ, ನಾನು ಒಂದು ದಿನವೂ ಉಪವಾಸ ಇರೋದಿಲ್ಲ'' ಅಂತ ಬೊಗಳು. ನೀನು ಉಪವಾಸ ಇದ್ದರೆ, ನಾನು ಸತ್ತುಹೋಗಿ ಬಿಡುತ್ತೇನೆ ಗೊತ್ತಾಯ್ತೊ? ಏನು ಹೇಳ್ತೀಯಾ?' ಎಂದರು. ನಾನು ಅಳುವುದಕ್ಕೆ ಪ್ರಾರಂಭಿಸಿದೆ... ನಿಜಕ್ಕೂ ಏನು ಹೇಳಬೇಕೂಂತ ಗೊತ್ತಾಗಲಿಲ್ಲ... ಆಮೇಲೆ ನನ್ನ ಕೆನ್ನೆ ಮುಟ್ಟಿ, 'ಇನ್ನು ಮೇಲೆ ಹಾಗೆಲ್ಲ ಮಾಡಬೇಡ... ಯಾವತ್ತು ವಾರ ಇಲ್ವೋ... ಆದಿನ ಇಲ್ಲಿಗೆ ಬಾ.... ಇದು ನಿನ್ನ ಮನೆ!' ಎಂದರು. ಇವತ್ತು ಅದನ್ನು ಜ್ಞಾಪಕ ಮಾಡಿಕೊಂಡರೆ, ನಮ್ಮ ಧರ್ಮ ನಿಂತಿರುವುದು ಇಂತಹವರಿಂದ ಎನಿಸುತ್ತದೆ!!

ದೋಸೆಯ ಸುಗಂಧ

ಕೊನೆಯದಾಗಿ ಒಂದೇ ಒಂದು ಘಟನೆ... ನಾನು ಯಾರ ಮನೆಯಲ್ಲಿದ್ದೆನೋ, ತಿಮ್ಮಪ್ಪನ ಕೊಪ್ಪಲಿನಲ್ಲಿ, ಅಲ್ಲಿಂದ ಮಾಧ್ಯಮಿಕ ಶಾಲೆಗೆ ಹೋಗುವಾಗ, ಮಲ್ನಾಡಿನವರ ಒಂದು ಹೋಟೆಲಿತ್ತು ದಾರಿಯಲ್ಲಿ... ಒಂದು ಗುಡಿಸಿಲು. ಅಲ್ಲಿ ಬೆಳಗ್ಗೆ ಸುಮಾರು 6-45ರ ಹೊತ್ತಿಗೆ ನಾನು ಹೋಗುತ್ತಿದ್ದೆ. ಸಂಧ್ಯಾವಂದನೆ ಸಮಿಧಾದಾನ ಮಾಡಿ, ತಲೆ ತುದಿಗಂಟು ಹಾಕಿಕೊಂಡಿರುತ್ತಿದ್ದೆ... ಆಗ ನಾನು ಬಹಳ ಚೆನ್ನಾಗಿ ಜುಟ್ಟು ಬಿಟ್ಟಿದ್ದೆ... ಕೂದಲು ಒಳ್ಳೇ ದಟ್ಟವಾಗಿ ಇತ್ತು!! ಖಾಕಿ ಚಡ್ಡಿ, ಷರಟು. ನಿತ್ಯ ಇದೇ ಅಭ್ಯಾಸ. ಅಲ್ಲಿ ಈ ಹೊತ್ತಲ್ಲಿ ಹೋಗುತ್ತಿರಬೇಕಾದರೆ 'ಘಂ' ಅಂತ ತುಂಬಾ ಚೆನ್ನಾಗಿ ದೋಸೆ ವಾಸನೆ ಬರುತ್ತಿತ್ತು... ಆದೂ ಆ ಗುಡಿಸಿಲಿನ ಚಾವಣಿಯ ಮೇಲಿಂದ! ಕೋಣೆಯಿಂದ... ಒಳ್ಳೇ ಪರಿಮಳ ಆಹಾ... ನನಗೆ ಬಹಳ ಇಷ್ಟ ಆಗುತ್ತಿತ್ತು ಅದು !!!

ಹೂಂ... ಅಂತ ಜೋರಾಗಿ ಉಸಿರೆಳೆದುಕೊಂಡು ನಿಂತುಕೊಳ್ಳುತ್ತಿದ್ದೆ ಅಲ್ಲೇ ಒಂದು ನಿಮಿಷ!! ದಿನಾ ಹೀಗೇ ನಡೆಯುತ್ತಿತ್ತು, ಶಾಲೆಗೆ ಹೋಗುವಾಗ! ದೋಸೆ ಮಾಡುವ ಭಟ್ಟನಿಗೆ ಬಹಳ ಹಾಸ್ಯ ಪ್ರಜ್ಞೆಯಿತ್ತು... ಒಂದು ದಿನ ಹೊರಗಡೆ ಬಂದು, ಎಂದಿನಂತೆ ಆ ಕೆಟ್ಟ ಬಯ್ಗಳ ಬಯ್ದು 'ದುಡ್ಡು ಕೊಡದೆ ವಾಸನೆ ತಿನ್ತಿದ್ದೀಯೇನೋ... ದೋಸೆಯ ಸುಗಂಧಾನಾ...? ಲೇ...' ಅಂತ ಗದರಿಸಿದರು. ನಾನು ಚಿಕ್ಕ ಹುಡುಗ... ಹೆದರಿಕೊಂಡು ಓಡಿಹೋಗಿಬಿಟ್ಟೆ. ಆಮೇಲೆ ಆ ಹೆದರಿಕೆಯಿಂದ ಆ ಬೀದಿಯಲ್ಲೇ ಹೋಗುತ್ತಿರಲಿಲ್ಲ!

ಇದಾದ ಮೇಲೆ ಒಂದು ದಿನ ಸಣ್ಣರಾಮಾಶಾಸ್ತ್ರಿಗಳು ಎನ್ನುವ ಅಡಕೆ ವ್ಯಾಪಾರಿಗಳು, ಅವರ ಮನೆಯಲ್ಲಿ ಒಂದು ವಾರ ಸಿಕ್ಕಿತ್ತು ನನಗೆ. ಅವರು ಒಂದು ಸಾರಿ ನಾನು ವಾರಕ್ಕೆ ಅವರ ಮನೆಗೆ ಹೋಗಿದ್ದಾಗ 'ಕೃಷ್ಣಮೂರ್ತಿ, ನಮ್ಮ ಬೀಗರು ಬರುತ್ತಿದ್ದಾರೆ... ಒಂದೆರಡು ದಿನ ನೀನೂ ಇಲ್ಲೇ ಇದ್ದು ಬಿಡಪ್ಪಾ, ನಮ್ಮ ಮನೇಲೇ... ಅವರಿಗೂ ಸ್ವಲ್ಪ ಸೇವೆ ಮಾಡಿದ ಹಾಗಾಗುತ್ತದೆ. ಅವರು ಸಹ ಮೈ-ಕೈ ನೋವು ಅನ್ನುತ್ತಿರುತ್ತಾರೆ... ಮಲಗುವಾಗ ಕೈ ಕಾಲನ್ನು ಒತ್ತು ಅಂತ ಹೇಳಿದರೆ ಪರವಾಗಿಲ್ಲ ತಾನೆ' ಅಂದರು. 'ಅಯ್ಯೋ, ಅದಕ್ಕೇನು ಸಾರ್, ನಮ್ಮ ತಂದೆ ಇದ್ದಹಾಗೆ ಅವರು!' ಅಂದೆ ನಾನು. ಅವರ ಮನೆಯಲ್ಲೇ ಇರುವುದಕ್ಕೆ ಒಪ್ಪಿಕೊಂಡು, ವಾರದ ಮನೆಯವರಿಗೆಲ್ಲಾ ನಾನು ಈ ವಾರ, ವಾರಕ್ಕೆ ಬರುವುದಿಲ್ಲ ಅಂತ ಹೇಳಿ ಬಂದೆ! ಅಂತೂ ಬೀಗರು ಬಂದರು. ಅವರಿಗೆ ಮಂಡಿ, ತೊಡೆ, ಕೈ, ಕಾಲು ಎಲ್ಲವೂ ಬಹಳ ನೋವು ಕೊಡುತ್ತಿದ್ದವು. ಅವರು ಮಲಗುವ ಜಾಗದಲ್ಲಿ ಒಂದು ಹಗ್ಗ ಕಟ್ಟಿ ಎಳೆದಿದ್ದರು. ಆ ಹಗ್ಗ ಹಿಡಿದುಕೊಂಡು ನಾನು ಅವರ ಕಾಲು ತುಳಿಯಬೇಕಿತ್ತು... ಅವರಿಗೋ ಬೇಗ ನಿದ್ದೆ ಬರುತ್ತಿರಲಿಲ್ಲ!

ಹನ್ನೊಂದು ಘಂಟೆ ಆದರೂ ಅವರಿಗೆ ನಿದ್ದೆ ಬರದು... ನನಗೋ ಬಹಳ ನಿದ್ದೆ! 'ಸಾರ್...' ಎಂದರೆ 'ಹೂಂ' ಎನ್ನುತ್ತಿದ್ದರು ಅವರು...!! ಮನಸ್ಸಿನಲ್ಲೇ ಬಯ್ದುಕೊಳ್ಳುತ್ತಿದ್ದೆ ಅವರನ್ನು. ಅವರು ಹೇಳಿದ್ದರು, 'ನೀನು ಕರೆದಾಗ ನಾನು ಹೂಂ ಎನ್ನದೇ ಹೋದರೆ ನನಗೆ ನಿದ್ದೆ ಬಂದಿದೆ ಎಂದು ಅರ್ಥ, ಆಗ ನೀನು ಕಾಲು ಒತ್ತುವುದು ನಿಲ್ಲಿಸಿ ಮಲಗುವುದಕ್ಕೆ ಹೋಗು' ಎಂದು. 'ಆಯ್ತು... ಸರ್' ಎಂದು ನಾನೂ ಹೇಳಿದ್ದೆ... ಆದರೆ ಪ್ರತಿದಿನ ತುಂಬಾ ತಡವಾಗುತ್ತಿತ್ತು... ಹೀಗೇ ಮೂರು ದಿನ ಕಳೆಯಿತು. ನನಗೆ ನೆನಪಿರುವಂತೆ ನಾಲ್ಕನೇ ದಿನ ಅವರು ತೀರ್ಥಹಳ್ಳಿ ಕಡೆಗೆ ಹೊರಟರು. ರೂಪಾಯಿ ನೋಟುಗಳು, ಕಾಗದ ಪತ್ರಗಳೆಲ್ಲ ಇದ್ದ, ಬಲವಾದ ಕಬ್ಬಿಣದ ತಗಡಿನ ಟ್ರಂಕು ಅವರದು... ಆ ದಿನ ಬೆಳಗ್ಗೆ ೮-೮೩೦ಕ್ಕೆ ಅವರನ್ನು ಬಸ್ ಸ್ಟ್ಯಾಂಡಿಗೆ ಬಿಡುವ ಕೆಲಸ ನನ್ನದು. ತಲೆ ಮೇಲೆ ಶಿಂಬಿ ಇಟ್ಟುಕೊಂಡು, ಅದರ ಮೇಲೆ ಪೆಟ್ಟಿಗೆ ಇಟ್ಟುಕೊಂಡು, ನಾನು ಅವರ ಜತೆ ಹೋದೆ... 'ಪೆಟ್ಟಿಗೆಯನ್ನು ಬಸ್ ಮೇಲೆ ಇಡು' ಎಂದರು... ಇಟ್ಟು ಬಂದೆ... 'ನಮಸ್ಕಾರ ಸಾರ್, ಹೋಗಿಬರ್ತೀನಿ' ಎಂದೆ. ಅವರ ಕೈಯಲ್ಲಿ ಒಂದು ಬ್ಯಾಗಿತ್ತು. ನನ್ನನ್ನು ಕರೆದು 'ಬಾ ಇಲ್ಲಿ, ಕೈ ತೋರಿಸು' ಎಂದರು, ಕೈತೋರಿಸಿದೆ. ಕೈಯೊಳಗೆ ಏನೋ ಇಟ್ಟು ಕೈ ಮುಚ್ಚಿದರು... ಅದೊಂದು ನಾಣ್ಯ ಇರಬೇಕು ಎಂದು ನನಗನ್ನಿಸಿತು!! 'ಸರಿ ಸರ್, ಬರ್ತೀನಿ' ಎಂದು ಕೈ ಮುಗಿದು ಹೊರಟು ಬಂದೆ. ಏನಿರಬಹುದು? ಕುತೂಹಲ ನನಗೆ, ದುಡ್ಡು ಎಂದು ಗೊತ್ತಾಯಿತು... ಆದರೂ... ತಾಳಲಾರದೆ ದೀಪದ ಕಂಬದ ಕೆಳಗೆ ನಿಂತು ನೋಡಿದರೆ ಒಂದು ರೂಪಾಯಿನ ಹೊಳೆಯುವ ಬೆಳ್ಳಿ ನಾಣ್ಯ, ವಿಕ್ಟೋರಿಯಾ ರಾಣಿಯ ಚಿತ್ರ ಇದ್ದಂಥದ್ದು!! ಒಂದು ರೂಪಾಯನ್ನು ಮುಟ್ಟಲೂ ಸಹ ಅವಕಾಶವೇ ಇಲ್ಲದ ಕಾಲ ಅದು! ಮನಸ್ಸಿಗೆ ಬಹಳ ಸಂತೋಷವಾಯಿತು. ಮೂರು ದಿನದ ಸೇವೆಗೆ ಸಂದ ಈ ಒಂದು ರೂಪಾಯಿ ಜೀವನದ ಮೊದಲ ಗಳಿಕೆ ಎಂದು ಸಂತೋಷವಾಯಿತು. ಬೇಗ ಬೇಗ ಮನೆಗೆ ಹೋಗಿ, ಸ್ನಾನ ಸಂಧ್ಯಾವಂದನೆ ಎಲ್ಲ ಮುಗಿಸಿ, ಆ ರೂಪಾಯಿಯನ್ನ ಚಡ್ಡಿಯಲ್ಲಿ ಇಟ್ಟುಕೊಂಡರೆ ಎಲ್ಲಿ ಬಿದ್ದು ಹೋಗುತ್ತದೋ ಎಂದು ಹೆದರಿ, ಕೈಯಲ್ಲೇ ಹಿಡಿದುಕೊಂಡು, ಸೀದಾ ಹೋಗಿ ಕುಂದಾಪುರದ ಬ್ರಾಹ್ಮಣರ ಹೋಟೆಲಿಗೆ ಹೋದೆ... ಅದೇ ಯಜಮಾನರು... ದೋಸೆ ಹಾಕುತ್ತಿದ್ದರು. ನನ್ನನ್ನು ನೋಡಿ 'ಲೇ, ಒಳಗೇ ಬಂದೆಯೇನೋ ಇವತ್ತು?' ಎಂದರು. ನಾನು ಠೀಕಾಗಿ 'ದೋಸೆ ಕೊಡಿ ಎರಡು' ಎಂದೆ. ನನ್ನ ಆ ಧಾಟಿ ಗಮನಿಸಿದ ಆತ, 'ಏನೋ ಸಾಹುಕಾರ ಆಗಿಬಿಟ್ಟಿದ್ದೀಯಾ ಇವತ್ತು?' ಎಂದರು... ನಾನು 'ಹೌದು, ಸಾಹುಕಾರ್ನೇ ನಾನೂ' ಎಂದೆ ಗತ್ತಿನಲ್ಲಿ!! ಎರಡು ದೋಸೆ, ಚಟ್ನಿ, ಬೆಣ್ಣೆ, ಪಲ್ಯ... ಅಷ್ಟು ಕೊಟ್ಟರು... ಆಹಾ... ಅದೇನು ರುಚಿ ಅದರಲ್ಲಿ, ಎಂಥದೋ ತೃಪ್ತಿ! ಹೀಗೇ... ಸುಮಾರು ೧೬ ದಿನಗಳು, ಸ್ಕೂಲಿಲ್ಲದ ಭಾನುವಾರದ ದಿನ ಬಿಟ್ಟು, ೧೬ ದಿನಗಳು ಪ್ರತಿದಿನವೂ ಬಿಡದೆ ಎರಡೆರಡು ದೋಸೆ ತಿಂದೆ! ಆಗ ಕಾಲ ಹಾಗಿತ್ತು... ಅಂತೂ ಅನಂತರ ದೋಸೆ ತಿನ್ನುವ ಚಪಲ ಕಡಮೆಯಾಯಿತು ಎಂದರೆ ಉತ್ಪ್ರೇಕ್ಷೆ ಏನಲ್ಲ! ಹೀಗೆ ವಾರಾನ್ನದ ಅನುಭವಗಳು!!

೭. ನೆನ್ನೆ ಇದ್ದವನು

ನಮ್ಮ ದೊಡ್ಡಣ್ಣ ಕಾರಣಾಂತರದಿಂದ ಬಾಂಬೆಗೆ ಹೋಗಿ, ಅಲ್ಲಿ ಎಂಥದೋ ವ್ಯಾಪಾರ ಮಾಡಿ ಅನಂತರ ಮದ್ರಾಸಿಗೆ ಬಂದು ನೆಲೆಸಿದರು... ಎರಡನೆಯ ಅಣ್ಣ ಕೇಶವಮೂರ್ತಿಗಳು ತಂಜಾವೂರಿಗೆ ಹೋಗಿ ವೇದಾಧ್ಯಯನ ಮಾಡಿದ್ದರು. ಯಜುರ್ವೇದ ಕಲಿತಿದ್ದು, ಸಂಧ್ಯಾವಂದನೆ ಅಗ್ನಿಕಾರ್ಯಗಳಲ್ಲಿ ನಿಷ್ಠೆ ಹೊಂದಿದ್ದ ಆಚಾರವಂತರು. ಮೂರನೆಯ ಅಣ್ಣ ಶಂಕರಮೂರ್ತಿಗಳು ಚಂಬೈಗೆ ಹೋಗಿ ಸಂಗೀತ ಕಲಿಯಲು ಪ್ರಾರಂಭ ಮಾಡಿದ್ದರು. ಚಂಬೈ ವೈದ್ಯನಾಥ ಭಾಗವತರ ಹತ್ತಿರ ಪ್ರೌಢಪಾಠಕ್ಕೆ ಹೋಗಿ ಸಂಗೀತ ಕಲಿಕೆಯಲ್ಲಿದ್ದರು. ಅವರು ಮಾಯಾವರಂನಲ್ಲಿ ಕನ್ನಡದವರೇ ಆದ ರಾಮಾಜೋಯಿಸ ಮೇಷ್ಟ್ರ ಹತ್ತಿರ ಬಾಲ್ಯಪಾಠ ಮಾಡಿ ಸರಿಗಮ ಪ್ರಾರಂಭಿಸಿದ್ದು! ಅಲ್ಲಿ ಅವರು ಅವರ ಸೇವೆ ಮಾಡುತ್ತಾ ಸಂಗೀತ ಅಭ್ಯಾಸ ಮಾಡುತ್ತಿದ್ದರು! ನನ್ನ ನಾಲ್ಕನೆಯ ಅಣ್ಣ, ನಾನು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ ದುರ್ಮರಣಕ್ಕೆ ತುತ್ತಾದರು. ಒಂದು ರೀತಿಯಲ್ಲಿ ಇದೊಂದು ಅನಿರೀಕ್ಷಿತ ಆಘಾತ ನಮಗೆಲ್ಲ! ಆ ದುರ್ಘಟನೆಯನ್ನು ನೆನೆದರೆ ಈಗಲೂ ಮೈ ಝುಂ ಎನ್ನುತ್ತದೆ.

ನನ್ನ ನಾಲ್ಕನೆಯ ಅಣ್ಣ ರಾಮಮೂರ್ತಿ, ನನಗಿಂತ ಮೂರು ವರ್ಷ ದೊಡ್ಡವರು, ಅವರು ಏಳನೆಯವರು, ನಾನು ಕೃಷ್ಣಮೂರ್ತಿ, ಎಂಟನೆಯವನು. ನನ್ನ ನಕ್ಷತ್ರ ರೋಹಿಣೀ ನಕ್ಷತ್ರವೇ, ನಾನು ಹುಟ್ಟಿದ್ದು ಶ್ರೀಕೃಷ್ಣಜನ್ಮಾಷ್ಟಮಿಯಂದು!! ರಾಮಕೃಷ್ಣಯ್ಯ ಅಂತಿದ್ದ ನಮ್ಮ ತಂದೆಯವರ ಹೆಸರನ್ನು ನಮ್ಮಿಬ್ಬರಿಗೆ ಇಟ್ಟಿದ್ದುದು ರಾಮ, ಕೃಷ್ಣ ಅಂತ!

ನಮ್ಮ ತಾಯಿಗೆ ಕಾಫಿ ಎಂದರೆ ಸ್ವಲ್ಪ ಆಸೆ. ಮನೆಯಲ್ಲಿ ಕಾಫಿ ಪುಡಿ ಇರಲಿಲ್ಲ... ನಮ್ಮಣ್ಣ ರಾಮು, ಭದ್ರಾವತಿಯಲ್ಲಿ ವಾರಾನ್ನ ಮಾಡಿಕೊಂಡು, ನನ್ನ ಹಾಗೆ, ಓದುತ್ತಿದ್ದ. ಆದರೆ ನನಗಿಂತ ತುಂಬಾ ಪ್ರೌಢ... ನನಗಿಂತ ಕೇವಲ ಮೂರು ವರ್ಷ ದೊಡ್ಡವನಾಗಿದ್ದರೂ, ಅವನಿಗೆ ಬಹಳ ಪ್ರಖರವಾದ ಬುದ್ಧಿವಂತಿಕೆ ಇತ್ತು. ಊರಿಂದ ಹೋಗುವಾಗ ನಾವು ಗೇಣಿ ಮಾಡುತ್ತಿದ್ದ ತೋಟದಿಂದ ಎಂಟು-ಹತ್ತು ನಿಂಬೆಹಣ್ಣುಗಳನ್ನು ತೆಗೆದುಕೊಂಡು ಹೋಗುವುದು, ಅದನ್ನು ನಾಲ್ಕಾರು ಜನಕ್ಕೆ ಮಾರುವುದು, ಬಂದ ನಾಲ್ಕಾಣೆ ಎಂಟಾಣೆ ದುಡ್ಡಿನಲ್ಲಿ ಊರಿಗೆ ಬರುವಾಗ ಎರಡೋ ಮೂರೋ ಔನ್ಸ್ ಕಾಫಿಪುಡಿ ತಂದು

ನಮ್ಮಮ್ಮನಿಗೆ ಕೊಡುವುದು. ಅಣ್ಣ ಹೀಗೆ ಮಾಡಿದಾಗಲೆಲ್ಲಾ ನಮ್ಮಮ್ಮನಿಗೆ ತುಂಬಾ ಸಂತೋಷವಾಗುತ್ತಿತ್ತು!

ಆ ದಿನವೂ ಹಾಗೆ... ಶಿವಮೊಗ್ಗದಲ್ಲಿ ನಮ್ಮಕ್ಕನವರ ದೊಡ್ಡಮಗನಿಗೆ ಚೌಲೋಪನಯನ, ಜುಟ್ಟು ಬಿಡಿಸುವ ಕಾರ್ಯಕ್ರಮ. ನಾಳೆ ಆ ಕಾರ್ಯಕ್ರಮ ಇದೆ ಅನ್ನುವಾಗ, ಅಮ್ಮ ನನ್ನನ್ನು ಕರೆದು 'ರಾಮಣ್ಣನ ಹತ್ತಿರ ಹೋಗಿ ಕಾಫಿ ಪುಡಿ ತೆಗೆದುಕೊಂಡು ಬಾ. ನಾಳೆ ಅವನನ್ನು ಅಲ್ಲಿಗೆ ಆ ಸಮಾರಂಭಕ್ಕೆ ಬಾ ಅಂತ ಹೇಳಿ ಬಾ' ಅಂದರು. ನನಗೆ ಭದ್ರಾವತಿಗೆ ಹೋಗಲು ರೈಲು ಛಾರ್ಜಿಗೆ ದುಡ್ಡಿಲ್ಲ... ಆಗೇನು ಎರಡೂವರಾಣೆಯೋ, ಮೂರಾಣೆಯೋ ಟಿಕೆಟ್ ಛಾರ್ಜು... ಆದರೆ ಅಷ್ಟಾದರೂ ಇರಬೇಕಲ್ಲ... ದುಡ್ಡಿರಲಿಲ್ಲ. ಮಾಡುವುದೇನು? ನಾನೂ ಒಂದು ತೀರ್ಮಾನಕ್ಕೆ ಬಂದು, ಸ್ನಾನ ಮಾಡಿ, ತಿಂಡಿ ತಿಂದು ನಡೆದುಕೊಂಡೇ ಹೊರಟುಬಿಟ್ಟೆ...!! ಸುಮಾರು ಹತ್ತೂವರೆ ಮೈಲಿ ಶಿವಮೊಗ್ಗದಿಂದ ಭದ್ರಾವತಿಗೆ!! ಅಷ್ಟು ದೂರ ಅಂತ ನನಗೆ ಕಲ್ಪನೆಯೂ ಇರಲಿಲ್ಲ... ಆ ವಯಸ್ಸಿಗೆ ಅಷ್ಟು ದೂರದ ನಡಿಗೆ ಬಹಳ ಹೆಚ್ಚಾಗಿತ್ತು... ಒಬ್ಬನೇ ಹೋಗುವುದಕ್ಕೂ ಭಯವಾಯಿತು... ಆದರೂ ಹೊರಟು ಬಿಟ್ಟೆ... ಅದೊಂದು ಅಪೂರ್ವ ಅನುಭವ.

ನಾನು ಭದ್ರಾವತಿಗೆ ಮಧ್ಯಾಹ್ನಕ್ಕೆ ತಲುಪಿರಬೇಕು. ತುಂಬಾ ದೂರದ ದಾರಿ. ಭಯಪಟ್ಟುಕೊಂಡೇ ಹೋಗಿದ್ದೆ... ಸ್ಕೂಲಿಗೆ ಹೋದೆ, ನಮ್ಮಣ್ಣ ಬಂದರು... 'ಅಮ್ಮ ಕಳುಹಿಸಿದರು, ಬಂದೆ' ಎಂದೆ. 'ಹೌದು... ಗೊತ್ತು , ಕಳುಹಿಸುತ್ತೇನೆ ನಿನ್ನನ್ನು ಅಂತ ಅಮ್ಮ ಹೇಳಿದ್ದರು' ಎಂದ ಅವರು ಒಂದು ಪೊಟ್ಟಣ ಕೊಟ್ಟರು. ಬಹುಶಃ ಅದರಲ್ಲಿ ಕಾಲು ಕೆಜಿಯಷ್ಟು ಕಾಫಿಪುಡಿ ಇತ್ತು. ತುಂಬಾ ಬಳಲಿತ್ತು ನನ್ನ ಮುಖ... ನನ್ನ ಮುಖ ನೋಡಿ ರಾಮಣ್ಣ 'ಹಸಿವಾಗಿದೆಯಾ?' ಎಂದರು. ನಾನು 'ಹೌದು' ಎಂದೆ... ಅಲ್ಲೇ ಪಕ್ಕದಲ್ಲೇ ಸೌತೆಕಾಯಿ ಮಾರುತ್ತಿದ್ದರು, ಸೀಳು ಸೀಳು ಮಾಡಿ ಖಾರ ಉಪ್ಪು ಹಚ್ಚಿಸಿಕೊಂಡು ನಾವಿಬ್ಬರೂ ಒಂದು ಸೌತೆಕಾಯಿಯನ್ನು ಅರ್ಧ-ಅರ್ಧ ತೆಗೆದುಕೊಂಡು ತಿಂದೆವು. ನಮ್ಮ ಅಣ್ಣ, 'ಮುಖ ಯಾಕೋ ತುಂಬಾ ಕಂದಿದೆಯಲ್ಲೋ, ನಡೆದುಕೊಂಡು ಬಂದು ಆಯಾಸ ಆಯ್ತಾ?' ಎಂದರು... ನಾನು 'ಹೌದು' ಎಂದೆ... 'ವಾರವಾರವೂ ನಾನು ನಡೆದುಕೊಂಡೇ ಬರ್ತೀನೀ...! ಒಂದು ದಿನಕ್ಕೆ ನಿನಗೆ ಎಷ್ಟು ಆಯಾಸವಾಗಿಬಿಟ್ಟಿದೆ?' ಎಂದು ತಮಾಷೆ ಮಾಡಿದರು!! ಎರಡೂವರೆ ಆಣೆಯ ಟಿಕೆಟನ್ನು ಕೈಯಲ್ಲಿಟ್ಟು 'ರೈಲಲ್ಲೇ ಹೋಗು, ನಡೆಯಬೇಡ... ನಾನು ನಾಳೆ ಬರ್ತೀನಿ...' ಎಂದು ಹೇಳಿದರು. ರೈಲಲ್ಲಿ ಕುಳಿತು ನಾನು ಶಿವಮೊಗ್ಗಕ್ಕೆ ವಾಪಸ್ಸು ಬಂದೆ. ರೈಲಲ್ಲಿ ನಾನು ಕುಳಿತದ್ದೂ ಬಹುಶಃ ಅದೇ ಮೊದಲಿರಬೇಕು. ಸುಮಾರು ೧೪-೧೫ ವರ್ಷಗಳ ತನಕ ನಾನು ಎಲ್ಲೂ ಹೋಗಿಯೇ ಇರಲಿಲ್ಲ! ಖುಷಿಯಿಂದ ರೈಲಲ್ಲಿ ಬಂದೆ.

ಸಾಮಾನ್ಯವಾಗಿ ಭದ್ರಾವತಿಯಿಂದ ರೈಲು ಶಿವಮೊಗ್ಗಕ್ಕೆ ಬೆಳಗ್ಗೆ ಸುಮಾರು ೮.೪೫ರ ಹೊತ್ತಿಗೆ ಬರುತ್ತದೆ. ನಮ್ಮ ದೊಡ್ಡಣ್ಣ ವೇದಾಧ್ಯಯನ ಮಾಡಿದವರು. ೯.೧೫ಕ್ಕೆ ಚೌಲದ ಮುಹೂರ್ತ ಇಟ್ಟಿದ್ದರು. ರೈಲು ಕೂಗಿದ್ದು ಕೇಳಿಸಿತು. ನಾವೆಲ್ಲ ನಮ್ಮ ರಾಮಣ್ಣನಿಗೋಸ್ಕರ ಕಾಯುತ್ತಿದ್ದೆವು. ಒಂದು ಜಟಕಾ ಬಂತು. ಆ ಬೀದಿ ದಾಟಿ ತಿಮ್ಮಪ್ಪನ ಕೊಪ್ಪಲಿಗೇ ಬಂತು. ನಾನು ನಮ್ಮ ರಾಮಣ್ಣ ಬಂದಿದ್ದಾರೆ ಅಂತು ತಿಳಿದುಕೊಂಡು ಗಾಡಿಯ ಹತ್ತಿರ ಹೋದೆ. ನಮ್ಮ ದೊಡ್ಡಣ್ಣನವರು ಚೌಲ ಮಾಡಿಸಿಕೊಳ್ಳುತ್ತಿದ್ದ ಹುಡುಗನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಜಗುಲಿಯ ಮೇಲೆ ಕುಳಿತಿದ್ದರು. ಬಾಕಿಯವರೆಲ್ಲ ಒಳಗಡೆ ಇದ್ದರು. ಬಹಳ ಸಣ್ಣ ಮನೆ ನಮ್ಮ ಭಾವನದು. ಆ ಜಟಕಾದಿಂದ ಯಾರೋ ಒಬ್ಬರು ಇಳಿದರು. 'ನಮಸ್ಕಾರ, ಇದೇ ಏನು ದೊರೆಸ್ವಾಮಿಯವರ ಮನೆ?' ಎಂದು ಕೇಳಿದರು. 'ಹೌದು' ಎಂದೆ. 'ನಾನು ಭದ್ರಾವತಿಯಿಂದ ಬಂದೆ' ಎಂದರು. 'ನಮ್ಮಣ್ಣ ರಾಮಣ್ಣ ಎಲ್ಲಿ? ಅವರೂ ಬರಬೇಕಾಗಿತ್ತಲ್ಲ?' ಎಂದೆ ನಾನು. 'ಅದೇ, ಅದನ್ನೇ ಹೇಳುವುದಕ್ಕೆ ಬಂದೆ...' ಎಂದು ಸ್ವಲ್ಪ ತಡೆದರು. ಅವರು ಮಾತು ನಿಲ್ಲಿಸಿದ್ದಕ್ಕೆ ಜಗುಲಿಯ ಮೇಲೆ ಕುಳಿತಿದ್ದ ನಮ್ಮ ದೊಡ್ಡಣ್ಣ ಗಾಬರಿಯಾಗಿ, 'ಯಾಕೆ, ಏನಾಯಿತು?' ಎಂದು ಕೇಳಿದರು. ಅದಕ್ಕೆ ಬಂದಿದ್ದವರು 'ನಿಮ್ಮಣ್ಣ ರಾತ್ರಿ ತೀರಿಕೊಂಡರು!' ಎಂದು ನನ್ನ ಹತ್ತಿರ ಹೇಳಿದರು. 'ಏನು...??' ಎಂದೆ ನಾನು. ಎಲ್ಲರಿಗೂ ಗಾಬರಿಯಾಯಿತು, ತೊಡೆಯ ಮೇಲೆ ಕೂರಿಸಿಕೊಂಡಿದ್ದ ಮಗುವನ್ನ ಕೆಳಗಿಳಿಸಿ ನಮ್ಮಣ್ಣ ಬಂದರು. ಎಲ್ಲರೂ 'ಏನಾಯ್ತು? ಏನಾಯ್ತು?' ಎಂದು ಗಾಬರಿಯಿಂದ ಓಡಿ ಬಂದರು... ಒಳಗಿನಿಂದ ನಮ್ಮಮ್ಮನೂ ಓಡಿ ಬಂದರು, ಸುದ್ದಿ ಕೇಳಿ ಮೂರ್ಛೆ ಹೋದರು. ಆಗ ನಮ್ಮ ರಾಮಣ್ಣನಿಗೆ ೧೪ ವರ್ಷ, ಆ ವೇಳೆಗೆ ನಮ್ಮ ತಂದೆಯವರೂ ಹೋಗಿ ಸುಮಾರು ಮೂರು ವರ್ಷಗಳಾಗಿದ್ದವು. ನಮ್ಮಮ್ಮನಿಗೆ ಪೂರ್ಣವಾಗಿ ಎಚ್ಚರ ತಪ್ಪಿತ್ತು.ಇಷ್ಟಾದರೂ ಡಾಕ್ಟರ ಹತ್ತಿರ ಹೋಗುವುದಕ್ಕೆ ನಮಗೆ ಗೊತ್ತಿರಲಿಲ್ಲ. ಕೈಯಲ್ಲಿ ದುಡ್ಡೂ ಇರಲಿಲ್ಲ. ಹಾಗೆಯೇ ಚಾಪೆ ಮೇಲೆ ಅಮ್ಮನನ್ನು ಮಲಗಿಸಿ ಗಾಳಿ ಹಾಕಿದೆವು . ಅನಂತರ ಭದ್ರಾವತಿಗೆ ಹೋಗಿ ನಮ್ಮಣ್ಣನ ಮೃತದೇಹ ತಂದು ಸಂಸ್ಕಾರ ಮಾಡಿದೆವು. ಅನಂತರ ಗೊತ್ತಾಯಿತು. ನಮ್ಮಣ್ಣನಿಗೆ ಮೆದುಳಿನಲ್ಲಿ ರಕ್ತಸ್ರಾವವಾಗಿ ರಾತ್ರಿ ಸುಮಾರು ೨.೩೦ರಲ್ಲಿ ಪ್ರಾಣ ಹೋಗಿದೆ ಅಂತ. ಅದು ನಮ್ಮ ಮನೆಯಲ್ಲಿ ನಡೆದ ಅತ್ಯಂತ ಅನಿರೀಕ್ಷಿತ ಆಘಾತ ಮತ್ತು ನಮ್ಮ ತಾಯಿ ಅದರಿಂದಾದ ಆಘಾತದಿಂದ ೩೦-೩೫ ವರ್ಷಗಳ ಕಾಲ ಚೇತರಿಸಿಕೊಳ್ಳಲಿಲ್ಲ. ಇದು ನಡೆದದ್ದು ೧೯೩೯-೪೦ರಲ್ಲಿ. ನಮ್ಮಮ್ಮ ಹೋಗಿದ್ದು ೧೯೭೭ರಲ್ಲಿ. ಸುಮಾರು ೩೭ ವರ್ಷಗಳ ಕಾಲ ಬಹಳ ನೋವು ಅನುಭವಿಸಿದರು. ನೆನಸಿಕೊಂಡ ಕೂಡಲೆ, ಅವರಿಗೆ ಬಹಳ ಸಂಕಟವಾಗುತ್ತಿತ್ತು. ಏಕೆಂದರೆ, ಅದು ನಮ್ಮಣ್ಣನ ಅಕಾಲ ಮರಣವಾಗಿತ್ತು. ಅಮ್ಮ ಎಂದರೆ ಅಮ್ಮ. ಎಲ್ಲಾ ಮಕ್ಕಳೂ ಒಂದೇ ಅವರಿಗೆ. ಎಷ್ಟೇ ಜನ ಮಕ್ಕಳಿರಲಿ ತಾಯಿಯ ಪ್ರೀತಿ ಎಲ್ಲಾ ಮಕ್ಕಳ ಮೇಲೂ ಒಂದೇ ರೀತಿ ತಾನೆ ?

೮. ಮದರಾಸಿಗೆ

ಅಣ್ಣನ ಅಂಗವಸ್ತ್ರ

ನಾನು ಹೈಸ್ಕೂಲಿಗೆ ಹೋಗಬೇಕು. ಒಂದು ಬಿಡಿಗಾಸಿಲ್ಲ ಮನೆಯಲ್ಲಿ... ಉಟ್ಟುಕೊಳ್ಳಲು ಒಂದೇ ಒಂದು ತುಂಡು ಪಂಚೆ ಅಷ್ಟೆ. ನನಗೆ ಹೊದ್ದುಕೊಳ್ಳೋದಕ್ಕೆ ಏನೂ ಇರಲಿಲ್ಲ! ಅಂಗಿ ಇಲ್ಲ. ಹೀಗೆ ನಮ್ಮ ಮನೆ ಪರಿಸ್ಥಿತಿ... ನಮ್ಮ ಅಣ್ಣ ಶಂಕರಮೂರ್ತಿಯವರು, ಸಂಗೀತಗಾರರು, ನಮ್ಮ ತಂದೆಯ ಶ್ರಾದ್ಧಕ್ಕೆಂದೇ ಚಂಬೈನಿಂದ ಬರುತ್ತಿದ್ದರು. ಅವರು ಬರುವುದನ್ನೇ ನಾನು ಆಸೆಯಿಂದ ಎದುರು ನೋಡುತ್ತಿದ್ದೆ. ಅವರು ಸಹ ಒಂದು ತುಂಡು ಪಂಚೆ ಉಡುತ್ತಿದ್ದರು. ಒಂದು ಅಂಗವಸ್ತ್ರವನ್ನು ಹೊದ್ದುಕೊಂಡಿರುತ್ತಿದ್ದರು. ಅವರು ಬರುವುದನ್ನೇ ಕಾದಿದ್ದು ಅವರ ಅಂಗವಸ್ತ್ರವನ್ನು ನಾನು ಕಿತ್ತುಕೊಂಡುಬಿಡುತ್ತಿದ್ದೆ!! ಸುಬ್ರಾಯನ ಷಷ್ಠಿಯಲ್ಲಿ ಒಬ್ಬ ಬ್ರಹ್ಮಚಾರಿಯನ್ನು ಕರೆದು ಊಟ ಹಾಕಿ, ಒಂದು ಪಂಚೆಯನ್ನು ಕೊಡುವುದು ಅಭ್ಯಾಸ. ಹೀಗೆ ಬಂದದ್ದರಲ್ಲಿ, ಒಂದು ಪಂಚೆಯಲ್ಲಿ ಹೇಗೋ ನಿಭಾಯಿಸುತ್ತಿದ್ದೆ. ಅದೂ ಸ್ವಲ್ಪ ಹರಿದುಹೋಗಿತ್ತು. ನಮ್ಮಣ್ಣನ ಅಂಗವಸ್ತ್ರ ನಾನು ತೆಗೆದುಕೊಂಡರೆ, ಪಾಪ, ಅವರು ವಾಪಸ್ಸು ಹೋಗುವಾಗ ಬರೀ ಒಂದು ತುಂಡು ಪಂಚೆಯಲ್ಲೇ ಹೋಗುತ್ತಿದ್ದರು! ಹೊದ್ದುಕೊಳ್ಳೋ ಪಂಚೆಗೆ ನಾನು ಇನ್ನು ಮುಂದಿನ ವರ್ಷದವರೆಗೆ ಕಾಯಬೇಕಾಗುತ್ತಿತ್ತು!! ಹೀಗೆ ಕಡು ದಾರಿದ್ರ್ಯದ ದಿನಗಳು. ಆದರೂ ಒಂದು ಮಾತು ಮಾತ್ರ ಹೇಳಲೇಬೇಕು. ಅದು ಬಡತನ, ನಮಗೆ ಬಹಳ ಕಷ್ಟ ಎಂದೇನೂ ಅನಿಸುತ್ತಿರಲಿಲ್ಲ. ಇದು ಒಂದು ರೀತಿಯ ಜೀವನ. ಜೀವನದ ಅವಿಭಾಜ್ಯ ಅಂಗ ಬಡತನ ಅನ್ನುವುದು ಅಂತ ತಿಳಿದುಕೊಂಡಿದ್ದೆ ನಾನು. ಬಹುಶಃ ಆ ರೀತಿಯ ತಿಳುವಳಿಕೆಯೇ ಆ ಕಷ್ಟಗಳನ್ನು ದಾಟಿ ಬರಲು ಸಹಾಯ ಮಾಡಿತೋ ಏನೋ...!!

ನಮ್ಮ ದೊಡ್ಡಣ್ಣನವರು ಮದ್ರಾಸಿನಲ್ಲಿದ್ದರು ಆಗ. ನಮ್ಮಣ್ಣ ಮದ್ರಾಸಿಗೆ ನನ್ನನ್ನು ಕರೆದರು. 'ಇಲ್ಲಿಗೇ ಬಂದು ಬಿಡು, ಇಲ್ಲೇ ಓದಿಕೊಳ್ಳುವೆಯಂತೆ' ಅಂತ ಹೇಳಿದರು. ನಾನು ಮಾಧ್ಯಮಿಕ ಶಾಲೆಯನ್ನು ಮುಗಿಸಿದಾಗ ನಮ್ಮಕ್ಕನ ಮನೆಯಲ್ಲಿದ್ದೆ. ನಮ್ಮಣ್ಣನವರು ವೇದಾಧ್ಯಯನ ಮಾಡಿದ್ದವರು, ನಾಳೆ ನಾನು ಮದ್ರಾಸಿಗೆ ಹೋಗಬೇಕು ಅನ್ನುವಾಗ ಕ್ಯಾನ್‌ವಾಸ್ ಷೂ ತಂದುಕೊಟ್ಟರು. ಅದಕ್ಕೆ ಅವರು ಎರಡು ರೂಪಾಯಿ ಕೊಟ್ಟಿದ್ದೇನೆಂದು ಅವರೇ ಹೇಳಿದ್ದರು. ಅವರು ಅದನ್ನು ನನಗೆ ತಂದು ಕೊಟ್ಟ ದಿನ ನನ್ನ ಸಂತೋಷಕ್ಕೆ ಪಾರವೇ ಇಲ್ಲ. ಪರಮಾನಂದ ನನಗೆ!! ಆಮೇಲೆ ನಮ್ಮಕ್ಕ ನನಗೆ ಹೇಳಿದರು. ಆ ದಿನ ನಾನು ಆ ಷೂಸನ್ನು ಹಾಕಿಕೊಂಡೇ ಮಲಗಿಬಿಟ್ಟಿದ್ದೆನಂತೆ!! ಅವರು ನನ್ನನ್ನೆಬ್ಬಿಸದೆ ಅದನ್ನು ಕಾಲಿನಿಂದ ತೆಗೆದು, 'ಏನೋ ಇದು, ಷೂನೇ... ತೆಗೆದಿಲ್ಲ, ಹಾಗೇ ಮಲಗಿದ್ದೀಯಾ?' ಅಂತ ತಮಾಷೆ ಮಾಡಿದರಂತೆ. ಆ ಷೂ... ಬಂತಲ್ಲಾ ಅನ್ನುವ ಸಂಭ್ರಮದಲ್ಲಿ ಅದನ್ನ ತೆಗೆಯದೇ ಹಾಗೇ ಮಲಗಿಬಿಟ್ಟಿದ್ದೆ ನಾನು!! ಅಷ್ಟೊಂದು ಸಂತೋಷ ನನ್ನ ಮನಸ್ಸಿಗೆ, ನನ್ನ ಜೀವನದಲ್ಲಿ ಮೊದಲಬಾರಿಗೆ ನನಗೆ ಧರಿಸಿಕೊಳ್ಳಲು ವಸ್ತುವೊಂದು ಬಂದಿತಲ್ಲ ಅಂತ!!

ಮತ್ತೂರಿನಿಂದ ಮದ್ರಾಸಿಗೆ

ಅಲ್ಲಿಂದ ನಾನು ಮದ್ರಾಸಿಗೆ ಬಂದೆ. ನಮ್ಮ ದೊಡ್ಡಣ್ಣನವರು ಎಂ.ಆರ್. ಅನಂತಯ್ಯ ಅಂತ, ಇದು ನಮ್ಮ ತಾತನ ಹೆಸರು. ಎಂ. ಎಂದರೆ ಮುದಲಾಪುರ. ಅವರು ಅಲ್ಲೇ ಹುಟ್ಟಿದ್ದು. ಆರ್ ಎಂದರೆ ರಾಮಕೃಷ್ಣಯ್ಯ. ಆಮೇಲೆ ಅನಂತಯ್ಯ ಅನ್ನುವ ಹೆಸರನ್ನು ನಮ್ಮಣ್ಣನವರು ಅನಂತ್ ಮಾಡಿಕೊಂಡರು. ನಮ್ಮ ಎರಡನೆಯ ಅಣ್ಣ ಕೇಶವಮೂರ್ತಿಯವರು ನನ್ನನ್ನು ಮದ್ರಾಸಿಗೆ ಕರೆದುಕೊಂಡು ಹೋಗಿ ಬಿಟ್ಟರು. ಅಲ್ಲಿ ಸ್ಕೂಲಿಗೆ ಸೇರಿದೆ ನಾನು. ಅಲ್ಲಿಂದ ಒಂದು ದೊಡ್ಡ ಕತೆ...!!

೧೯೪೨-೪೩ ಆಗ ನನಗೆ ೧೪ ವರ್ಷವಾಗಿತ್ತು. ಸ್ವಲ್ಪ ತಡವೇ ಆಗಿತ್ತು , ಕಾರಣ , ಪ್ರಾರಂಭದಲ್ಲಿ ಶಾಲಾ ಶಿಕ್ಷಣ ಸರಿಯಾಗಿ ಕಾಲಕಾಲಕ್ಕೆ ಆಗಿರಲಿಲ್ಲ. ಎಲ್ಲಕ್ಕೂ ಬಡತನವೇ ಕಾರಣ. ನನಗಿಂತ ಚಿಕ್ಕವರು ನನಗಿಂತ ಎರಡು ತರಗತಿ ಮುಂದಕ್ಕೆ ಹೋಗಿದ್ದರು ಆಗಲೇ! ನಾನು ಹೈಸ್ಕೂಲಿಗೆ ಸೇರಬೇಕಿತ್ತು. ತುಂಬಾ ಕಷ್ಟವಾಗಿತ್ತು ಮನೆಯಲ್ಲಿ. ಫೀಸು ಕೊಟ್ಟು , ಬಟ್ಟೆ ತೆಗೆದುಕೊಟ್ಟು ,ಸ್ಕೂಲಿಗೆ ಕಳುಹಿಸುವಷ್ಟು ದುಡ್ಡಿರಲಿಲ್ಲ. ಅನುಕೂಲತೆ ಇರಲಿಲ್ಲ. ಮನೆಯ ಪರಿಸ್ಥಿತಿ ಶೋಚನೀಯವಾಗಿತ್ತು. ಆದುದರಿಂದಲೇ ನಮ್ಮಣ್ಣ ನನ್ನನ್ನು ಮದ್ರಾಸಿಗೆ ಕರೆದರು. ಅವರು ಮದ್ರಾಸಿನಲ್ಲಿ ಕಾಫಿ ಬೆರಕೆಯ ವ್ಯಾಪಾರ ಮಾಡುತ್ತಿದ್ದರು. ಬೇರೆ ಬೇರೆ ಜಾತಿ ಕಾಫಿ ಬೀಜ ತೆಗೆದುಕೊಂಡು, ಹುರಿದು, ಅದನ್ನು ಸರಾಸರಿ ಒಂದು ಅಳತೆಯಲ್ಲಿ ಬೆರಕೆ ಮಾಡಿ, ಒಳ್ಳೆಯ ಸುವಾಸನೆ ಬರುವ ಹಾಗೆ ಮಾಡಿ, ಅದನ್ನು ವ್ಯಾಪಾರ ಮಾಡುತ್ತಿದ್ದರು. ಆಗ ಅದು ತುಂಬಾ ಜನಪ್ರಿಯವಾಗಿತ್ತು. ಈ ವ್ಯಾಪಾರ ಮಾಡಿಯೇ ಮದ್ರಾಸಿನಲ್ಲಿ ನೆಲೆಸಿದ್ದರು. ಈ ಅಣ್ಣನವರ ವೈಶಿಷ್ಟ್ಯ ಅಂದರೆ, ಇವರು ಬಹಳ ಅಂಗಸಾಧನೆ ಮಾಡುತ್ತಿದ್ದರು. ಅವರ ಮೊದಲನೇ ಪತ್ನಿ, ಹಾಸನದ ಹತ್ತಿರದ ಹಳ್ಳಿ, ಮೊಸಳೆಯವರು. ಅಣ್ಣನವರೂ ಹಾಸನದ ಹತ್ತಿರವೇ ಕೆಲಸ ಮಾಡುತ್ತಿದ್ದರು, ಅನಂತರ ಪೆಟ್ರೋಲ್‌ಬಂಕ್ ಇಟ್ಟಿದ್ದರು. ಒಂದು ಗರಡಿ ಮನೆ ಸಹ ಇಟ್ಟಿದ್ದರು ತಿಪಟೂರಿನಲ್ಲಿ!! ತುಂಬಾ ಚೆನ್ನಾಗಿ ವ್ಯಾಯಾಮ ಮಾಡುತ್ತಿದ್ದರು. ಆಗ ನನಗಿನ್ನೂ ಸಣ್ಣ ವಯಸ್ಸು , ನಮ್ಮ ತಂದೆಯವರೂ ಇದ್ದರು.

ನನ್ನ ಅಣ್ಣನವರ ದೇಹದಾರ್ಢ್ಯತೆ ತುಂಬಾ ಚೆನ್ನಾಗಿತ್ತು. ಒಂದು ದಿನ ಅವರು ನನ್ನನ್ನು (ಆರು ವರ್ಷದ ಹುಡುಗ ನಾನು) ಎತ್ತಿಕೊಂಡಾಗ, ನಾನು ಅವರ ತೋಳಿಗೆ ಜೋತು ಬಿದ್ದೆ, ನೆಲಕ್ಕೆ ಕಾಲು ತಾಗಿಸಲಿಲ್ಲ! ಅವರು ನನ್ನನ್ನು ಹಾಗೆಯೇ ಒಂದು ಕೈಲಿ ಎತ್ತಿಕೊಂಡು ತಮ್ಮ ಗರಡಿ ಮನೆಗೆ ಕರೆದುಕೊಂಡು ಹೋದರು. ಸುಮಾರು, ಮನೆಯಿಂದ ಅಲ್ಲಿಗೆ ಒಂದು ಫರ್ಲಾಂಗ್ ದೂರ. ನಾನೂ ಅವರ ತೋಳಿಗೆ ಜೋತು ಬಿದ್ದೇ ಗರಡಿಮನೆ ತಲುಪಿದೆ. ಅದರದ್ದೊಂದು ಫೋಟೋ ಸಹ ಇರಬೇಕು. ಅಷ್ಟು ಶಕ್ತಿಯುತವಾಗಿದ್ದಿತು ಅವರ ಶರೀರ...!! ನಮ್ಮ ಮೊದಲನೆಯ ಅತ್ತಿಗೆಯವರು ಹೋದ ಅನಂತರ ಅವರು ಎರಡನೆಯ ಮದುವೆ ಮಾಡಿಕೊಂಡಿದ್ದರು. ತಮಿಳುನಾಡಿನವರು ಇವರು.

ಹೀಗೆ ಈ ಅಣ್ಣ ಬಹಳ ಸಾಧಕರು, ಯಾವುದನ್ನು ಕೈಗೊಂಡರೂ ಬಹಳ ಚೆನ್ನಾಗಿ ಮಾಡುತ್ತಿದ್ದರು. ಶಂಕರಲಾಲ್ ಜಿಜೋಡಿಯಾ ಅಂತ ಕಲ್ಕತ್ತದ ದೊಡ್ಡ ವ್ಯಾಪಾರಿಗಳ ಜೊತೆ ಅಣ್ಣ ಪಾಲುದಾರರಾಗಿ ಸೇರಿಕೊಂಡು ಕಾಫಿ ಪುಡಿ ವ್ಯಾಪಾರ ಮಾಡುತ್ತಿದ್ದರು.

ನಾನು ಶಾಲೆಗೆ ಹೋದದ್ದು ಸ್ವಲ್ಪ ತಡವಾಗಿಯೇ. ಬಡತನ, ಫೀಸು ಕೊಡಲು ೧೦ ರೂಪಾಯಿ ಇಲ್ಲದಿದ್ದ ಕಾಲ ಅದು. ಹೀಗಾಗಿ ನಾನು ಲೋಯರ್ ಸೆಕೆಂಡರಿ ಆದನಂತರ ಶಾಲೆಗೆ ಹೋಗದೆಯೇ ಒಂದು ವರ್ಷ ಸುಮ್ಮನೆ ಮನೆಯಲ್ಲಿದ್ದುಬಿಟ್ಟೆ! ಮತ್ತೂರಿನಲ್ಲಿ... ಆದರೆ ಓದಬೇಕು ಅಂತ ಬಹಳ ಆಸೆ... ನಮ್ಮ ದೊಡ್ಡಣ್ಣನ ಮೊದಲ ಪತ್ನಿ ಮೊದಲ ಮಗುವಿನ ತಾಯಿಯಾದ ಸಂದರ್ಭದಲ್ಲಿ ಮಗು-ತಾಯಿ ಇಬ್ಬರೂ ತೀರಿ ಹೋದರು. ಆಗ ನಮ್ಮಣ್ಣ ತಮಿಳು ಅಯ್ಯರ ಹೆಣ್ಣ ಮಗಳೊಬ್ಬರನ್ನು ಮದುವೆಯಾದರು. ಮದುವೆಯಾದ ನಂತರ ಮದ್ರಾಸಿನಲ್ಲಿ ನೆಲೆಸಿದ್ದರು. ಆದರೆ ವರ್ಷಕ್ಕೊಮ್ಮೆ ನಮ್ಮ ತಂದೆಯವರ ತಿಥಿಗಾಗಿ ಎಂದು ಮತ್ತೂರಿಗೆ ಬರುತ್ತಿದ್ದರು. ಆ ವರ್ಷವೂ ಹಾಗೆಯೇ, ಅವರು ಬಂದಾಗ ನನ್ನ ಓದುವ ಆಸೆಯನ್ನು ಅವರ ಬಳಿ ಹೇಳಿಕೊಂಡು ಶಾಲೆಗೆ ಹೋಗಲಾಗದ ಪರಿಸ್ಥಿತಿಯನ್ನು ಹೇಳಿ ಬಹಳವಾಗಿ ಅತ್ತೆ. ಅವರಿಗೆ ತುಂಬಾ ಬೇಸರ ಆಯಿತು. ಈ ವಿಷಯ ಕೇಳಿ, ತಕ್ಷಣವೇ ಅವರು, 'ಅದಕ್ಕೆ ಇಷ್ಟು ಬೇಜಾರೇಕೆ ಕೃಷ್ಣಾ... ಅಲ್ಲಿಗೇ ಬಂದುಬಿಡು, ನನ್ನ ಹತ್ತಿರ ಇದ್ದು ಓದುವೆಯಂತೆ. ಬಾ ಮದ್ರಾಸಿಗೆ' ಎಂದರು. ನನಗೆ ಆಗ ಆದ ಆನಂದ ಅಷ್ಟಿಷ್ಟಲ್ಲ. ಅಮ್ಮನೂ ಸಂತೋಷದಿಂದ ಒಪ್ಪಿದರು. ಅಣ್ಣನ ಜತೆ ನಾನು ಮದ್ರಾಸಿಗೆ ಬಂದೆ. ಮದ್ರಾಸಿನಲ್ಲಿ ಎಲ್ಲವೂ ಅಂಥದೇನೂ ಸುವ್ಯವಸ್ಥಿತವಾಗಿರಲಿಲ್ಲ. ಆದರೂ ಅವರು ಬಹಳ ದಯಾಳುವೂ, ಉದಾರಿಯೂ ಆಗಿದ್ದರು. ಅದಕ್ಕೆ ನಾನು ಅಣ್ಣನಿಗೆ ಅದೆಷ್ಟು ಋಣಿಯಾಗಿದ್ದರೂ ಸಾಲದು!

ನಾವು ನಮ್ಮ ತಂದೆ-ತಾಯಿಗೆ ಬಹಳ ವಿಧೇಯರಾಗಿ ಇರುತ್ತಿದ್ದುದಕ್ಕೆ ಕಾರಣ ನಮ್ಮ ದೊಡ್ಡಣ್ಣ , ಅವರ ಪ್ರಭಾವ. ಅವರೇ ನಮಗೆ ಆದರ್ಶವ್ಯಕ್ತಿ! ಅದರಲ್ಲೂ ಈ ವಿಷಯದಲ್ಲಿ ಅವರಿಗೆ ತಾಯಿ-ತಂದೆ ಎಂದರೆ ಪೂಜನೀಯರು ಎನ್ನುವ ಭಾವನೆ. ಎಸ್.ಎಸ್.ಎಲ್.ಸಿ. ಮಾಡಿದ ಮೇಲೆ, ನಮ್ಮ ದೊಡ್ಡಣ್ಣ ಶಿವಮೊಗ್ಗದಲ್ಲಿ ಡೆಪ್ಯುಟಿ ಕಮೀಷನರ್ ಹತ್ತಿರ ಕೆಲಸ ಮಾಡುತ್ತಿದ್ದರು. ಆಗ ಮನೆಗೆ ಅವರಿಂದ ಬಹಳ ಸಹಾಯವಾಗುತ್ತಿತ್ತು. ನನಗಾಗ ಹೆಚ್ಚೆಂದರೆ ಎಂಟು ವರ್ಷಗಳಿದ್ದಿರಬಹುದು... ಸಣ್ಣವನು. ಅಣ್ಣನ ಆ ವ್ಯಕ್ತಿಚಿತ್ರ ಇನ್ನೂ ಚೆನ್ನಾಗಿ ನೆನಪಿದೆ. ಅತಿದೊಡ್ಡದು ಎನ್ನುವಂತಿಲ್ಲದಿದ್ದರೂ ಯೋಗ ಮಾಡುತ್ತಿದ್ದ ಆಕರ್ಷಕ ನಿಲುವಿನ ಅವರದು ಒಳ್ಳೆಯ ರೂಪ. ಸ್ವಸಾಮರ್ಥ್ಯ, ಸ್ವಶಕ್ತಿಯಲ್ಲಿ ಬಹಳ ನಂಬಿಕೆಯುಳ್ಳವರು ಅವರು. ಒಳ್ಳೆಯ ಕ್ರಿಕೆಟಿಗರೂ ಸಹ. ಆದರೆ ಅತ್ಯಂತ ವಿಧೇಯ ಮತ್ತು ಒಳ್ಳೆಯ ಮಗನಾಗಿದ್ದರು. ಎಲ್ಲಕ್ಕಿಂತ ಅದು ಮುಖ್ಯ ಆಗಿತ್ತು... ನಮ್ಮ ತಂದೆ ಈ ಅಣ್ಣನಿಗೆ ಒಂದು ಕಾಗದ ಬರೆದರು. ಅದು ಅವರ ಕೊನೆಯ ಪತ್ರವಾಗಿತ್ತು. ಆ ಪತ್ರದಲ್ಲಿ ನಮ್ಮ ಬಗ್ಗೆ ಬರೆಯುತ್ತಾ ರಾಮ-ಕೃಷ್ಣರು ಆರೋಗ್ಯವಾಗಿ ಇದ್ದಾರಾ? ಎಂದು ನನ್ನ ಹಾಗೂ ನಮ್ಮ ಇನ್ನೊಬ್ಬ ಅಣ್ಣ ರಾಮಣ್ಣನನ್ನು ಕುರಿತು ಮಾಡಿರುವ ಪ್ರಸ್ತಾಪದ ಆ ಪತ್ರ ಬಹಳ ಚೆನ್ನಾಗಿದೆ ಗರಿಯಾಗಿ, ಚಿಕ್ಕದಾಗಿ. ನಾನು ಈಗ ಯಾವುದೇ ವಿಷಯವೂ ಚಿಕ್ಕದಾಗಿ ಚೊಕ್ಕವಾಗಿ ಇರಬೇಕು ಎನ್ನುವುದನ್ನು ಹೇಳುವುದು, ಅದರಂತೆ ಹೇಳಲು, ಬರೆಯಲು ಯತ್ನಿಸುವುದು-ಇದಕ್ಕೆ ಬಹುಶಃ ನನಗರಿವಿಗೇ ಬರದಂತೆ ನಮ್ಮ ತಂದೆಯ ಬರಹದ ಪ್ರಭಾವವು ಸಹ ಆಗಿದೆ ಎನ್ನಬೇಕು.

ಅಲ್ಲಿ ನಾನು ಪ್ರೌಢಶಾಲೆಗೆ ಸೇರಿದೆ. ನಮ್ಮಣ್ಣ ಸಹ ನನ್ನನ್ನು ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ನಮ್ಮ ಈ ಅತ್ತಿಗೆಗೆ ಸಹ ಸಂಕೇತಿ ಬರದು, ತಮಿಳರು ಅವರು, ನನಗೆ ತಮಿಳು ಬರದು. ನಾನು ಸಂಕೇತಿಯಲ್ಲಿ ಕೇಳುವುದು, ಅವರು ತಮಿಳಿನಲ್ಲಿ ಹೇಳುವುದು, ಹೀಗೆ ನಡೆಯುತ್ತಿತ್ತು , ನಮ್ಮ ಸಂಭಾಷಣೆ! ಸಂಕೇತಿಯಲ್ಲಿಯೂ ಬಹಳವಾಗಿ ತಮಿಳು, ಮಲಯಾಳಂ ಮಾತುಗಳು ಬರುವುದರಿಂದ ನನಗೂ ಅವರಿಗೂ ಅಷ್ಟು ಕಷ್ಟವೇನೂ ಆಗುತ್ತಿರಲಿಲ್ಲ. ಆಗ ಅತ್ತಿಗೆಗೆ ಇನ್ನೂ ಮಕ್ಕಳಾಗಿರಲಿಲ್ಲ. ಮನೆಯಲ್ಲಿ ನಾನೊಬ್ಬ ಓಡಾಡಿ ಕೊಂಡಿದ್ದೇನೆ ಎನ್ನುವುದೇ ಖುಷಿ ಅವರಿಗೆ! ಈ ರೀತಿ ನಾನವರ ಪ್ರೀತಿ ವಾತ್ಸಲ್ಯವನ್ನು ಅನುಭವಿಸಿದೆ.

ಮದ್ರಾಸಿನಲ್ಲಿ ಕ್ರಿಶ್ಚಿಯನ್ ಕಾಲೇಜ್ ಹೈಸ್ಕೂಲ್‌ನಲ್ಲಿ ನನಗೆ ಪ್ರವೇಶಾವಕಾಶ ಸಿಕ್ಕಿತು. ಅಲ್ಲಿ ನಾನು ಹೈಸ್ಕೂಲಿಗೆ ಸೇರಿದೆ. ಕುರುವಿಲಾ ಜೇಕಬ್ ಎನ್ನುವವರು ನಮ್ಮ ಮುಖ್ಯೋಪಾಧ್ಯಾಯರು. ಮಾಧ್ಯಮಿಕ ಶಾಲೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸಿದ್ದ ನನಗೆ ಅಲ್ಲಿ ಪ್ರವೇಶ ಸಿಕ್ಕಿದ್ದು ತುಂಬಾ ಸಂತೋಷ ಆಗಿತ್ತು. ಅಲ್ಲೇನು ವೈಶಿಷ್ಟ್ಯ ಅಂದರೆ, ಕ್ರಿಶ್ಚಿಯನ್ ಕಾಲೇಜ್ ಆದುದರಿಂದ ಬೈಬಲ್ ಕೂಡ ಓದುವ ಪುಸ್ತಕಗಳಲ್ಲಿ ಒಂದಾಗಿತ್ತು.

ಹೋದ ಹೊಸತರಲ್ಲಿ ಅದು ಒಂದು ಸಣ್ಣ ಅನುಭವ. ನಾನು ನಮ್ಮೂರಿನಿಂದ ಹೋದಾಗ ಬಹಳ ಉದ್ದಕ್ಕೆ ಜುಟ್ಟುಬಿಟ್ಟಿದ್ದೆ. ಕಪ್ಪಗೆ ದಪ್ಪವಾಗಿತ್ತು ಕೂದಲು!! ಹಾಗೇ ಹೈಸ್ಕೂಲಿಗೂ ಹೋಗುತ್ತಿದ್ದೆ. ಎಲ್ಲರೂ ನನ್ನನ್ನು ನೋಡಿ ನಗುತ್ತಿದ್ದರು. ನನಗೋ ನಾಚಿಕೆ. ಮೂರು ದಿನ ಹಾಗೂ ಹೀಗೂ ನಿಭಾಯಿಸಿದೆ. 'ಪಿಗ್ ಟೇಲ್, ಪಿಗ್ ಟೇಲ್' ಎಂದು ಕರೆದು ಹಾಸ್ಯ ಮಾಡುತ್ತಿದ್ದರು. ನನ್ನ ಕೂದಲು ಸುಮಾರು ನಲವತ್ತು ಅಂಗುಲ ಉದ್ದ ಇದ್ದಿರಬೇಕು. ಮೊಣಕಾಲಿನವರೆಗೂ ಬರುತ್ತಿತ್ತು. ನಮ್ಮಣ್ಣನವರು ಸಹ "ತೆಗೆಸಿಬಿಡು ನಿನ್ನ ಕೂದಲನ್ನ, ಕ್ರಾಪ್ ಮಾಡಿಕೋ ಸಾಕು" ಎಂದರು. ನಾನು ಸಹ ಒಪ್ಪಿಕೊಂಡು, ಹಿಂದಿನ ದಿನವೇ ಕ್ಷೌರಿಕನಲ್ಲಿಗೆ ಹೋಗಿ ನಾಳೆ ಇಷ್ಟು ಹೊತ್ತಿಗೆ ಬರುತ್ತೇನೆ, ಕೂದಲು ತೆಗೆದು ಕ್ರಾಪ್ ಮಾಡಿಕೊಡು ಎಂದು ಹೇಳಿ ಬಂದೆ. ಬೆಳಗ್ಗೆ ನಾನು ಕ್ಷೌರಿಕನಲ್ಲಿಗೆ ಇನ್ನೇನು ಹೋಗಬೇಕು ಎನ್ನುವಾಗ, ನಮ್ಮ ಅತ್ತಿಗೆ, "ತಾಳು, ತಾಳು, ನೀನು ಕ್ಷೌರಿಕನಲ್ಲಿಗೆ ಹೋಗುವುದಕ್ಕೆ ಮುಂಚೆ ನಾನು ನಿನ್ನ ಕೂದಲನ್ನು ಕತ್ತರಿಸಿಕೊಂಡು ಇಟ್ಟುಕೊಳ್ಳುತ್ತೇನೆ, ನಾನು ಅದರಲ್ಲಿ ಚೌರಿ ಮಾಡಿಸಿಕೊಳ್ಳಬಹುದು. ತುಂಬಾ ಚೆನ್ನಾಗಿದೆ ನಿನ್ನ ಕೂದಲು!!" ಎಂತ ಹೇಳಿ ತಾವೇ ಕತ್ತರಿಸಿ ಆ ಉದ್ದದ ಕೂದಲನ್ನು ತೆಗೆದಿಟ್ಟುಕೊಂಡರು. ಸರಿ, ನಾನು ಕ್ಷೌರಿಕನಲ್ಲಿಗೆ ಹೋದೆ. ಹಿಂದಿನ ದಿನ ನನ್ನ ಉದ್ದದ ಕೂದಲನ್ನು ನೋಡಿ, ಖುಷಿಯಿಂದ 'ನಾಳೆ ವಾ, ನಾಳೈ ವಾ' ಎಂದಿದ್ದ ಆ ನಾಪಿತ ತುಂಡಾಗಿದ್ದ ನನ್ನ ಕೂದಲನ್ನು ನೋಡಿ "ನಾನು ನಿನಗೆ ಕ್ರಾಪ್ ಮಾಡುವುದಿಲ್ಲ ಹೋಗು ಎಚ್ಚಲ್, ಎಚ್ಚಲ್" ಎಂದ! (ಹಾಗೆಂದರೆ ಎಂಜಲು, ಯಾರೋ ಈಗಾಗಲೇ ಕತ್ತರಿಸಿದ್ದಾರೆ ಎಂದು ಅರ್ಥ)

ಆಮೇಲೆ ಒಂದೆರಡು ದಿನ ಕಷ್ಟವಾಗಿತ್ತು. ಅನಂತರ ಕ್ರಾಪ್ ಮಾಡಿಸಿಕೊಂಡ ಮೇಲೆ ಎಲ್ಲಾ ಸರಿಹೋಯ್ತು!! ನಮ್ಮ ಅತ್ತಿಗೆಯವರು ಆ ಕೂದಲ ಚೌರಿಯನ್ನು ಬಹಳ ವರ್ಷಗಳ ತನಕ ಇಟ್ಟುಕೊಂಡು ಹಾಕಿಕೊಳ್ಳುತ್ತಿದ್ದರು! ಆದರೆ, ಅದನ್ನು ಕತ್ತರಿಸಿದಾಗಲಂತೂ ನನಗೆ ಬಹಳ ದುಃಖವಾಗಿತ್ತು, ಅಷ್ಟು ಉದ್ದದ ಕೂದಲು ಹೋಯ್ತಲ್ಲಾ ಎಂದು. ಎಲ್ಲದರ ಮೇಲೂ ಒಂದು ರೀತಿಯ ಪ್ರೀತಿ ಬೆಳೆದಿರುತ್ತದೆ ಹಾಗೆ! ಈಗ ಕನ್ನಡಿ ನೋಡಿಕೊಂಡಾಗ ಆ ಜುಟ್ಟು ಜ್ಞಾಪಕಕ್ಕೆ ಬಂದು ಬಹಳ ಸಂಕಟವಾಗುತ್ತದೆ!!

ವಿಶೇಷವಾಗಿ ಆಗ ಸುಮಾರು ಮಂಗಳೂರು ಮತ್ತು ಇತರ ವಿಭಾಗಗಳು ಮದ್ರಾಸ್ ವಿಶ್ವವಿದ್ಯಾಲಯಕ್ಕೆ ಸೇರಿತ್ತಾದ್ದರಿಂದ, ನಮಗೆಲ್ಲಾ ಕನ್ನಡ ಇತ್ತು. ಶಾಮಭಟ್ಟರು ನಮ್ಮ ಕನ್ನಡ ಪಂಡಿತರು. ನಮ್ಮ ಶಿವರಾಮ ಕಾರಂತರ ತಮ್ಮನ ಮಗ ಕೇಶವ ಎನ್ನುವವನು ಕನ್ನಡ ಭಾಷಾ ತರಗತಿಯಲ್ಲಿ ನನ್ನ ಜತೆಗಿದ್ದ. ಇಂಗ್ಲಿಷಿನ ಆ ಶಾಲೆಯಲ್ಲಿ ಕನ್ನಡ ಇದ್ದದ್ದು ನಮಗೆಲ್ಲಾ ತುಂಬ ಸಂತಸ ತಂದಿತ್ತು. ಅಲ್ಲಿ ಬಾಕಿ ವಿಷಯಗಳನ್ನು ಸಹ ತುಂಬಾ ಚೆನ್ನಾಗಿಯೇ ಹೇಳಿಕೊಡುತ್ತಿದ್ದರು. ಸುಮಾರು ಮೂರು ವರ್ಷ ಎಸ್.ಎಸ್.ಎಲ್.ಸಿ.ವರೆಗೂ ಅಲ್ಲಿಯೇ ಓದಿದೆ.

೯. ಲಂಗೋಟಿ ಇಲ್ಲದ ಮೇಲೆ

ನಾನು ಊರಿನಲ್ಲಿ ಓದು ಮುಂದುವರೆಸಲು ಸಾಧ್ಯವಿಲ್ಲ ಎಂದು ಬೇಸರ ಮಾಡಿಕೊಂಡಿದ್ದಾಗ ನನ್ನ ಹಿರಿಯ ಅಣ್ಣನವರು ತಮ್ಮ ಬಳಿಗೆ, ಮದ್ರಾಸಿಗೆ ಬಂದು ಓದುವಂತೆ ಹೇಳಿದರಷ್ಟೇ. ನನ್ನ ಎರಡನೆಯ ಅಣ್ಣ ವೇದಾಧ್ಯಯನ ಮಾಡಿದ ಶ್ರೀ ಕೇಶವಮೂರ್ತಿಯವರು ; ನಮ್ಮ ತಂದೆಯವರು ನನ್ನ ಉಪನಯನಕ್ಕೆ ಲಗ್ನವಿಟ್ಟು ಕಣ್ಮುಚ್ಚಿಕೊಂಡ ನಂತರ, ತಾವೇ ತಂದೆಯ ಸ್ಥಾನದಲ್ಲಿ ಕುಳಿತು ನನ್ನನ್ನು ತಮ್ಮ ತೊಡೆಯ ಮೇಲೆ ಕೂರಿಸಿಕೊಂಡು ನನಗೆ ಬ್ರಹ್ಮೋಪದೇಶ ಮಾಡಿದರು. ಅದಕ್ಕೆ ಅವರಿಗೆ ನನ್ನಲ್ಲಿ ವಿಶೇಷವಾದ ಮಮತೆ-ವಾತ್ಸಲ್ಯ. ಆ ಸಮಯದಲ್ಲಿ ನಮ್ಮ ಅಣ್ಣ ರಾಮಣ್ಣನವರೂ ತೀರಿಕೊಂಡಿದ್ದರು. ನಾನು ಎಲ್ಲರಿಗಿಂತ ಚಿಕ್ಕವನೆಂದು ಅವರಿಗೆ ನನ್ನ ಮೇಲೆ ಕಾಳಜಿ. ನಾನು ಓದು ಮುಂದುವರೆಸಲು ಮದ್ರಾಸಿಗೆ ಹೊರಟಾಗ, ತಾವೇ ನನ್ನನ್ನು ಕರೆದುಕೊಂಡು ಹೋಗಿ ಮದ್ರಾಸಿನ ಹಿರಿಯ ಅಣ್ಣನ ಮನೆಯನ್ನು ಸೇರಿಸಿದರು. 'ತಮ್ಮನು ಇಂಗ್ಲಿಷಿನ ಶಾಲೆಗೆ ಸೇರುತ್ತಿದ್ದಾನೆ, ಇಂಗ್ಲಿಷ್ ಕಲಿಯುತ್ತಾನೆ' ಎಂದು ಎಂಥದೋ ಹೆಮ್ಮೆ ಅವರಿಗೆ. ನಾನು ಶಾಲೆಗೆ ಸೇರಿ ಎರಡು ಮೂರು ದಿನಗಳು ಕಳೆದ ಅನಂತರ, ನನ್ನನ್ನು ತಿರುಗಾಡಿಸಲು ಸಮುದ್ರದ ತೀರಕ್ಕೆ ಕರೆದುಕೊಂಡು ಹೋದರು ಅಣ್ಣನವರು. ಅವರೂ-ನಾನೂ ಕೂಡಿ ಹೋಗುತ್ತಿದ್ದಾಗ ಅಲ್ಲಿ ಒಂದು ಬೋರ್ಡು ಹಾಕಿತ್ತು. ಅದರಲ್ಲಿ ಇಂಗ್ಲಿಷಿನಲ್ಲಿ ಏನೋ ಬರೆದಿತ್ತು. ಆ ಬೋರ್ಡಿನ ಮೇಲೆ ಒಂದು ಬಸ್ಸಿನ ಚಿತ್ರವೂ ಇದ್ದಿತು. ಅಣ್ಣನವರು ನನ್ನನ್ನು "ಕೃಷ್ಣಾ, ಏನು ಬರೆದಿದೆ ಆ ಬೋರ್ಡಿನಲ್ಲಿ ಓದು, ನೋಡೋಣ" ಎಂದರು. ನಾನು ಬೋರ್ಡು ನೋಡಿ "ಬುಶಸ್ ಸ್ಟ್ಯಾಂಡ್ ಹಿಯರ್" ಎಂದೆ! ಅದಕ್ಕೆ ನಕ್ಕ ಅವರು "ಬುಶಸ್ ಅಲ್ಲವೋ ಅದು, ಬಸಸ್... ಬಸ್ಸುಗಳು ಅಂತ ಅರ್ಥ" ಎಂದು ತಿದ್ದಿ ಹೇಳಿಕೊಟ್ಟರು ನನಗೆ!

ಹೀಗೆ ಪ್ರಾರಂಭವಾದ ನನ್ನ ಇಂಗ್ಲಿಷ್ ಕಲಿಕೆ ಸರಿಯಾಗಿ ನಡೆಯುತ್ತಿದೆಯೋ, ಏನೋ ಎಂದು ತಿಳಿಯಲು ಆಗಾಗ ಅವರು ಮದ್ರಾಸಿಗೂ ಬರುವುದಿತ್ತು. ಹೇಗಾದರೂ ಮತ್ತೂರಿನಲ್ಲಿ ಎಲ್ಲರ ಎದುರು ನನ್ನ ಕೈಲಿ ಇಂಗ್ಲಿಷಿನಲ್ಲಿ ಮಾತನಾಡಿಸಬೇಕು, ಭಾಷಣ ಮಾಡಿಸಬೇಕು ಎನ್ನುವ ಮಹದಾಸೆ ಅವರಿಗೆ! ಹೀಗೆ ಅಣ್ಣನವರಿಗೆ ಇಂಗ್ಲಿಷಿನ ಮೇಲೆ ಆಸೆ ಇದ್ದರೂ, ತಾವು ತಮ್ಮ ಆಚಾರ ವಿಚಾರಗಳ

ಬಗೆಗೆ ಮಾತ್ರ ಬಹಳ ನಂಬಿಕೆ ಇಟ್ಟುಕೊಂಡಿದ್ದರು. ಆ ನಂಬಿಕೆಗೆ ಧಕ್ಕೆಯಾಗುವುದನ್ನು ಅವರು ಸೈರಿಸುತ್ತಿರಲಿಲ್ಲ. ವೇದಾಧ್ಯಯನ ಮಾಡಿದ ತಮ್ಮ ನಂಬಿಕೆಗಳಿಗೆ ಸಾವಿರಾರು ವರ್ಷಗಳ ಹಿಂದಿನ ಇತಿಹಾಸ ಇದೆಯೆಂದು ತಿಳಿದಿದ್ದ ಅವರು ಒಮ್ಮೆ ತಮ್ಮ ನಂಬಿಕೆಗೆ ಮೋಸವಾಯಿತೆಂದು ಭ್ರಮಿಸಿ ಮಾಡಿದ ಗಲಾಟೆ ನನಗೆ ಇಂದಿಗೂ, ನೆನ್ನೆ ನಡೆದಂತೆ ಭಾಸವಾಗುತ್ತದೆ...! ನನ್ನ ಓದುಗರಿಗೆ ಇದೊಂದು ಮೋಜಿನ ಪ್ರಸಂಗ ಎನಿಸಿದರೂ, ಅದರ ಹಿಂದಿರುವ ಭಾವನೆಯ ತೀವ್ರತೆಗೆ ಅವರು ಸ್ಪಂದಿಸುತ್ತಾರೆ ಎಂದು ನಂಬಿ ನಾನು ಆ ಪ್ರಸಂಗವನ್ನು ಬಿಚ್ಚಿಡ ಬಯಸುತ್ತೇನೆ!

'ಕೌಪೀನವಂತಃ ಖಲು ಭಾಗ್ಯವಂತಃ' ಎಂದಿದ್ದಾರೆ ಆದಿ ಶಂಕರಾಚಾರ್ಯರು. ಇದೇನು ಇದ್ದಕ್ಕಿದ್ದಂತೆ ಈ ಮಾತು ಎನಿಸುತ್ತಿದೆಯೇನು? ಈ ಪ್ರಸಂಗವೂ ಇದಕ್ಕೆ ಸಂಬಂಧಪಟ್ಟಿರುವುದು. ಬ್ರಹ್ಮೋಪದೇಶವಾದನಂತರ ಬ್ರಹ್ಮಚಾರಿಗಳು ಕೌಪೀನವನ್ನು ಅವರ ಒಳ ಉಡುಪಾಗಿ ಧರಿಸುವುದು ಅನಾದಿಕಾಲದಿಂದಲೂ ಬಂದ ರೂಢಿ. ಅದು ಸಂಪ್ರದಾಯ. ಅದರ ಅರ್ಥ ಇಷ್ಟು... ಬ್ರಹ್ಮಚರ್ಯ ಸ್ವೀಕರಿಸಿದವನು ಗೃಹಸ್ಥಾಶ್ರಮ ಪ್ರವೇಶಿಸುವವರೆಗೆ ತನ್ನ ವಯಸ್ಸಿಗೆ ತಕ್ಕ ಭಾವನೆಗಳ ಉದ್ರೇಕಕ್ಕೆ ಒಳಗಾಗದಿರಲಿ, ತನ್ನ ಬ್ರಹ್ಮಚರ್ಯವನ್ನು, ಶಪಥ ತೆಗೆದುಕೊಂಡುದಕ್ಕೆ ತಕ್ಕಂತೆ ಕಾಪಾಡಿಕೊಳ್ಳಲಿ ಎಂದೇ ಈ ಬಿಗಿ ಒಳ ಉಡುಪು . ಈ ಒಳ ಉಡುಪಿಗೆ ಒಂದು ಚಿಕ್ಕ ಗಂಟು ಉಡಿದಾರ ಬಿಗಿದು ಕೊಂಡು ಕೌಪೀನವನ್ನು ಮುಂದಿನಿಂದ ಹಿಂದಕ್ಕೆ ಸೆಳೆದು ಸೊಂಟದ ಹಿಂದುಗಡೆಗೆ ಕೌಪೀನದ ತುದಿಗಳನ್ನು ಸೇರಿಸಿ ಸಿಕ್ಕಿಸಿಕೊಳ್ಳಬೇಕು. ಕಚ್ಚೆ , ಕಾಚಾ ಎಂದು ಹೇಳುತ್ತಾರೆ. ಪುರಂದರದಾಸರು ಈ ಒಳ ಉಡುಪನ್ನು ಲಂಗೋಟಿ ಎಂದು ಕರೆದು ಒಂದು ಪದವನ್ನೇ ರಚಿಸಿದ್ದಾರೆ...

ಲಂಗೋಟಿ ಬಲು ಒಳ್ಳೆಯದಣ್ಣ,
ಒಬ್ಬರ ಹಂಗಿಲ್ಲದೆ ಮಡಿಗೆ ಒದಗುವುದಣ್ಣ||

ಬಡವರಿಗಾಧಾರವಣ್ಣ ಈ ಲಂಗೋಟಿ, ಬೈರಾಗಿಗಳ ಭಾಗ್ಯವಣ್ಣ
ನಡುಗುವ ಸಮಯಕ್ಕೆ ಮಡಿಗೆ ಒದಗುವಂಥ
ದಿಟಮನ ಸನ್ಯಾಸಿಗಳಿಗಿದೆ ಕೌಪೀನ,
ವ್ರತವುಳ್ಳ ಬ್ರಹ್ಮಚಾರಿಗೆ ಮುಖ್ಯವು
ಅತಿಶಯವಿದು ಆಂಜನೇಯ ನಾರದರಿಗೆ,
ಗತಿ ಇಲ್ಲದವರಿಗೆ ಮಿತವಾಗಿ ಇರುವಂಥ ||

ಮಡಿವಾಳರಿಗೆ ಶತ್ರು, ಮಠದಯ್ಯಗಳ ಮಿತ್ರ
ಪೊಡವಿಯೊಳ್‌ಯಾಚಕರಿಗೆ ನೆರವು ಈ ಲಂಗೋಟಿ
ದೃಢಭಕ್ತ ಬಲಿಚಕ್ರವರ್ತಿಗಾಗಿ ನಮ್ಮ,
ಒಡೆಯ ಶ್ರೀ ಪುರಂದರ ವಿಠಲ ಧರಿಸಿದಂಥ ||
ಲಂಗೋಟಿ ಬಲು ಒಳ್ಳೆಯದಣ್ಣ.

ಇಲ್ಲಿ ಹೇಳಿರುವ ಮಾತೆಲ್ಲವೂ ನಿಜವೇ, ಅರ್ಥಪೂರ್ಣವೇ ಸರಿ. ಈ ವಸ್ತ್ರದ ಬಗ್ಗೆ ಒಂದು ಸಂದೇಶವನ್ನೇ ಕೊಟ್ಟಿರುವ ದಾಸರು, ಹೀಗೆ ಹೇಳಿರುವುದು 'ಸರಿ'ಎನ್ನುವಂತೆ ಇತ್ತೀಚಿನ ಶ್ರೀ ರಮಣಮಹರ್ಷಿಗಳು, ಶ್ರೀ ಪರಮಹಂಸರು ಈ ಕೌಪೀನವನ್ನು ಧರಿಸಿರುವುದನ್ನು ನಾವು ಕಾಣುತ್ತೇವೆ.

ಅಂತೆಯೇ ಅಣ್ಣನವರಿಂದ ಬ್ರಹ್ಮೋಪದೇಶ ಮಾಡಿಸಿಕೊಂಡ ನಾನೂ ಕೌಪೀನವನ್ನೇ ಒಳ ಉಡುಪಾಗಿ ಧರಿಸುತ್ತಿದ್ದೆ. ಆದರೆ ಮದ್ರಾಸಿಗೆ ಹೋದಮೇಲೆ ಶಾಲೆಯ ಸಮವಸ್ತ್ರ ಧರಿಸಿಕೊಳ್ಳಬೇಕಾದಾಗ ಈ ಒಳ ಉಡುಪು ಸರಿಬರುತ್ತಿರಲಿಲ್ಲ. ಮುಜುಗರ ಉಂಟು ಮಾಡುತ್ತಿತ್ತು. ಆಗ ನನ್ನ ಹಿರಿಯಣ್ಣನವರೇ ಅದನ್ನು ಬಿಟ್ಟು ಹೊಸದಾಗಿ ಬಂದಿರುವ ಒಳಚಡ್ಡಿಯನ್ನು ಧರಿಸಲು ನನಗೆ ಸಲಹೆ ಮಾಡಿದರು. ಅನಂತರ ನನಗೆ ಹಳೆಯ ಅಭ್ಯಾಸ ಬಿಟ್ಟುಹೋಗಿ ಈ ಹೊಸ ಒಳ ಉಡುಪಿಗೆ ಬಹಳ ಬೇಗ ಹೊಂದಿಕೊಂಡೆ. ಆದರೆ ಎರಡು ಹೊತ್ತಿನ ಸಂಧ್ಯಾವಂದನೆ, ಬೆಳಗ್ಗೆಯ ಸಮಿದಾಧಾನವನ್ನು ದಿನವೂ ಬಿಡದೆ ಮಾಡುತ್ತಿದ್ದೆ.

ಶ್ರೀ ಕೇಶವಮೂರ್ತಿ ಅಣ್ಣನವರು ಆಗಾಗ ಬಂದು ನನ್ನನ್ನು ನೋಡಿ, ಊರಿಗೆ ಕರೆದುಕೊಂಡು ಹೋಗುವುದಿತ್ತಷ್ಟೇ? ಹಾಗೆಯೇ ಆ ದಿನ ಅವರು ಬಂದಿದ್ದರು. ನನ್ನನ್ನು ಊರಿಗೆ ಕರೆದೊಯ್ದರು. ಈಗ ನಾನು ಕ್ರಿಶ್ಚಿಯನ್ (ಕಾಲೇಜು) ಶಾಲೆಯ ವಿದ್ಯಾರ್ಥಿ. ಇಂಗ್ಲಿಷಿನಲ್ಲಿ ಮಾತನಾಡಬಲ್ಲವನಾಗಿದ್ದೆ! ಆ ದಿನ ರಾತ್ರಿ ಊರಿನಲ್ಲಿ ಸೇರಿದ್ದ ಜನರ ಮುಂದೆ ಪಟಪಟನೆ ಇಂಗ್ಲಿಷಿನಲ್ಲಿ ಮಾತನಾಡಿ, ಭಾಷಣ ಬಿಗಿದು ಅಣ್ಣನವರ ಅಭಿಮಾನ, ಹೆಮ್ಮೆಗೆ ಪಾತ್ರನಾಗಿದ್ದೆ. ಊರವರ ಮುಂದೆ ಸಂತೋಷದಿಂದ ಅಣ್ಣನವರ ಎದೆಯುಬ್ಬಿತ್ತು, ಮನಸ್ಸು ಪ್ರಫುಲ್ಲವಾಗಿತ್ತು.

ಸಾಮಾನ್ಯವಾಗಿ ನಾನು ಊರಿಗೆ ಬಂದಾಗ, ಅಣ್ಣನವರು ಬಹಳ ಪ್ರೀತಿಯಿಂದ ನನ್ನನ್ನು ತಮ್ಮ ಪಕ್ಕದಲ್ಲಿ ಮಲಗಿಸಿಕೊಳ್ಳುವುದಿತ್ತು. ನಾನು ಅವರಿಗಿಂತ ವಯಸ್ಸಿನಲ್ಲಿ ಬಹಳ ಚಿಕ್ಕವನಾದ್ದರಿಂದ ನಾನು ಸಹ ಅಣ್ಣನವರನ್ನು ಅಪ್ಪಿಕೊಂಡೇ ಮಲಗುವುದು ನನ್ನ ಅಭ್ಯಾಸ ಆಗಿತ್ತು. ಆ ದಿನ ರಾತ್ರಿಯೂ ಹಾಗೆಯೇ ನಾನು ಅವರನ್ನಂಟಿಕೊಂಡೇ ಮಲಗಿದ್ದಾಗ ಅವರ ಕೈ ನನ್ನ ಮೇಲಾಡುತ್ತಿತ್ತು. ಪ್ರೀತಿಯಿಂದ ನನ್ನ ತಲೆ , ಮುಖ , ಕೈ , ಮೈಸವರುತ್ತಿತ್ತು. ಆ ದಿನವಂತೂ ಅವರ ವಿಶೇಷ ಪ್ರೀತಿಗೆ ನಾನು ಪಾತ್ರನಾಗಿದ್ದೆ. ಊರವರ ಮುಂದೆ ಇಂಗ್ಲಿಷಿನಲ್ಲಿ ಮಾತನಾಡಿ ಅವರಿಗೆ ಹೆಮ್ಮೆಯಾಗುವಂತೆ ಮಾಡಿದ್ದೆ. ಅವರ ಕೈ ನನ್ನ ಕೈ-ಮೈತಡವಿ ಬೆನ್ನಹಿಂದೆ ಸೊಂಟದಿಂದ ಕೆಳಬಂದು ಏನನ್ನೋ ಹುಡುಕಿತು. ಕೈ ನಿಂತು ನಿಂತು, ಹುಡುಕಿ ಕೊನೆಗೆ ಏನೋ ಸಿಕ್ಕಿ ಆಘಾತವಾದಂತೆ 'ಅಯ್ಯೋ ಅಯ್ಯೋ' ಎಂದು ಕೂಗುತ್ತಾ, ಎದೆಬಡಿದುಕೊಳ್ಳುತ್ತಾ ಎದ್ದು ಕುಳಿತರು. ನಾನು ಗಾಢನಿದ್ರೆಯಲ್ಲಿದ್ದೆ.

ನಮ್ಮಮ್ಮ ಆಗ ತಾನೆ ನಿದ್ದೆಯ ಜೊಂಪು ಹತ್ತಿದ್ದವರು ಅಣ್ಣನವರ ಗಲಭೆ ಕೇಳಿ ಧಿಗ್ಗನೆದ್ದು ಕುಳಿತರು. ನಿದ್ದೆಗಣ್ಣಿನಲ್ಲಿದ್ದ ಅಮ್ಮನಿಗೆ ಮನೆಯೊಳಗೆ ಹಾವು ಬಂದಿರಬೇಕೆಂದು ಭಾಸವಾಯಿತು. ಏಕೆಂದರೆ ನಮ್ಮದು ಗುಡಿಸಲು, ಹಾವು ನುಸುಳಬಹುದಿತ್ತು. ಮಾತ್ರವಲ್ಲ , ಅಟ್ಟದ ಮೇಲೆ ಉದ್ದವಾಗಿ ಇದ್ದ ತೆಂಗಿನಮರದ ತೊಲೆಯೊಳಗೇ ವಾಸವಾಗಿದ್ದು, ಯಾರೂ ಇಲ್ಲದಾಗ ಹೊರಬಂದು ಇಲಿಯನ್ನು ಹಿಡಿದು ನುಂಗುತ್ತಿತ್ತು. ನಮಗೆ ಅದು ಏನೂ ಮಾಡುತ್ತಿರಲಿಲ್ಲ. ನಾವು ಅದಕ್ಕೆ ಏನೂ ಮಾಡುವುದಿಲ್ಲ ಎಂದು ತಿಳಿದಿದ್ದಿತು. ನಮ್ಮ ಅಮ್ಮನಂತೂ ಸಹನೆಯ ಮೂರ್ತಿ. ಸಹನೆ, ಸ್ನೇಹ, ಪ್ರಾಣಿಗಳಿಗೆ ತಿಳಿಯುತ್ತದೆ. ‘‘ಅಯ್ಯೋ ಸತ್ತೆ... ನಾ ಸತ್ತೆ. ಅಮ್ಮ... ನಾನು ನರಕಕ್ಕೆ ಹೋಗುತ್ತೀನಮ್ಮಾ... ನರಕವೇ ಗತಿ ನನಗೆ!’’ ಎಂದು ಎದೆಬಡಿದು ಕೊಂಡು ಅಳತೊಡಗಿದರು. ಅಮ್ಮನಿಗೆ ಏನಾಯಿತು ಎಂದು ತಿಳಿದಿಲ್ಲ. ‘‘ಏನಾಯಿತೋ, ಏನಾಯಿತೋ?’’ ಎನ್ನುತ್ತಿದ್ದರು. ಅಷ್ಟಕ್ಕೇ ನನಗೂ ಎಚ್ಚರವಾಗಿ ಮನೆಯಲ್ಲಿ ಯಾರೋ ಸತ್ತು ಹೋಗಿರಬೇಕು, ಅದಕ್ಕೇ ಅಣ್ಣನವರು ಹೀಗೆ ಮಾಡುತ್ತಿದ್ದಾರೆ ಎಂದು ತಿಳಿದುಕೊಂಡು ನಾನೂ ಅಳಲು ಶುರು ಮಾಡಿದೆ! ಸ್ವಲ್ಪ ಸಮಯವಾದನಂತರ ತಿಳಿಯಿತು, ಅವರ ಕೈ ನನ್ನ ಸೊಂಟ ಸವರಿದಾಗ ಅಲ್ಲಿ ಕೌಪೀನದ ಸಣ್ಣಗಂಟು ಅವರ ಕೈಗೆ ಸಿಕ್ಕದೆ ನಾನು ಹಾಕಿಕೊಂಡಿದ್ದ ಹೊಸ ರೀತಿಯ ಒಳಉಡುಪು ಅವರನ್ನು ಅಷ್ಟು ಕಂಗೆಡಿಸಿ ಗಲಾಟೆ ಮಾಡುವಂತೆ ಮಾಡಿತ್ತು ಎಂದು!! ಬ್ರಹ್ಮೋಪದೇಶವಾದವನು ಶಾಸ್ತ್ರದಲ್ಲಿ ಹೇಳಿರುವಂತೆ ಕೌಪೀನ ಧರಿಸದೆ ಬೇರೆ ರೀತಿಯದ್ದು ಧರಿಸಿದರೆ ಬ್ರಹ್ಮೋಪದೇಶ ಮಾಡಿರುವವರು ನರಕಕ್ಕೆ ಹೋಗುತ್ತಾರೆ ಎಂದು ಹೇಳಿದೆ... ಎಂದು ಅಣ್ಣ ಆ ರಾತ್ರಿ ಅಸಮಾಧಾನಪಟ್ಟು, ಗಲಾಟೆ ಮಾಡಿದ್ದರು. ಅಣ್ಣನ ಈ ರುದ್ರಾವತಾರಕ್ಕೆ ಹೆದರಿದ್ದರೂ ನನಗೆ ಆ ವಿಷಯ ಗೊತ್ತಾಗಿ ನನ್ನ ಅಳು ಇನ್ನೂ ಹೆಚ್ಚಾಯಿತು. ಅಂತೂ ಆ ದಿನ ರಾತ್ರಿ ನಾವಿಬ್ಬರೂ ಎದ್ದು ಪುನಃ ಸ್ನಾನ ಮಾಡಿ, ನಾನು ಹಳೆಯ ರೀತಿಯ ಒಳ ಉಡುಪು ಧರಿಸಿ, ಪಂಚಗವ್ಯ ಪ್ರಾಯಶ್ಚಿತ್ತ ಮಾಡಿಸಿಕೊಂಡು ಸಂಧ್ಯಾವಂದನೆ ಮಾಡಿ ಸಮಿದಾಧಾನ ಮಾಡಿ ‘ದೋಷ ಪರಿಹಾರವಾಯಿತು’ ಎಂದು ಅಣ್ಣನವರಿಗೆ ಸಮಾಧಾನವಾದ ಮೇಲೇ ಮಲಗಿದ್ದು... ಅಷ್ಟರಲ್ಲಿ ಬಹುಶಃ ಬೆಳಗಿನ ಜಾವವಾಗಿತ್ತು.

ಇದು ಓದುಗರಿಗೆ ಒಂದು ಮೋಜಿನ ಪ್ರಸಂಗ ಎನಿಸಿದರೂ, ನಮ್ಮ ಜನರಲ್ಲಿ ತಾವು ಬಹಳ ವರ್ಷಗಳಿಂದಲೂ ಬೆಳೆಸಿಕೊಂಡು ಬಂದಿರುವ ಆಚಾರವಿಚಾರಗಳ ಬಗ್ಗೆ ಅದೆಷ್ಟು ಗಾಢ ನಂಬಿಕೆ ಇರುತ್ತದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. ಹಳೆಯ ಸಂಪ್ರದಾಯಗಳ ಪ್ರತೀಕವಾಗಿ ಅಣ್ಣನವರು ನಿಂತರೆ, ಹೊಸದಕ್ಕೆ ಹೊಂದಿಕೊಂಡು ಹೋಗಲು ಯತ್ನಿಸುವ ನನ್ನಂತಹವರು ಹಿರಿಯರಾದ ಅವರ ಆರ್ಭಟ ನೋಡಿ, ನಾ ಮಾಡಿದುದು ತಪ್ಪು ಎನ್ನುವ ಭೀತಿ ಮೂಡಿ, ಮತ್ತೆ ಹಳೆಯ ಸಂಪ್ರದಾಯಗಳಿಗೆ ಕಟ್ಟಿ ಹಾಕಿಕೊಳ್ಳುವ ಅಪಾಯವೂ ಇದೆ. ಇವೆಲ್ಲ ಸಾಧ್ಯತೆಯ ಪ್ರಶ್ನೆಗಳು ; ಸಾಧ್ಯವೆಂದುಕೊಂಡರೆ ಸಾಧ್ಯ, ಇಲ್ಲವಾದರೆ ಇಲ್ಲ. ಅಂತೂ ಯಾವುದಕ್ಕೇ ಆಗಲಿ ಪರಿಹಾರಮಾರ್ಗವೆಂಬುದೊಂದು ನಮ್ಮ ಶಾಸ್ತ್ರದಲ್ಲಿ ಇದ್ದೇ ಇರುತ್ತದೆ. ಪರಿಹಾರಮಾರ್ಗವು ಮಾಡಿದ ದೋಷವನ್ನು ಪರಿಹಾರ ಮಾಡುವಂತಾದರೆ ಪದೇ ಪದೇ ತಪ್ಪು ಮಾಡಿ, ದೋಷ ಪರಿಹಾರ ಮಾಡಿಕೊಳ್ಳುವುದೂ ಸುಲಭವಾಗುವುದಷ್ಟೇ? ಎಂದರೆ ಅಷ್ಟು ಸುಲಭದಲ್ಲಿ ಕಳೆಯುವಂಥವೇ ಅವು? ಹೀಗೆ ಯೋಚಿಸಿದರೆ ‘ಅದು ಹಾಗಲ್ಲ’, ಎನಿಸುತ್ತದೆ. ಬಲವಾಗಿ ಧರಿಸುವ ಉಡುಪುಗಳು ಹವಾಮಾನ, ಕಾಲ, ಜಾಗ, ದೇಶಗಳ ಮೇಲೆ ನಿರ್ಭರವಾಗಿದ್ದು, ನಿರ್ಧರಿತವಾಗುವಂಥವು! ಅದರ ಬದಲಾವಣೆ ಬಹಳ ಸಹಜ, ಅದರ ಬಗ್ಗೆ ಮೂಢನಂಬಿಕೆ ಅನಗತ್ಯ. ಹಾಗಾದರೆ ಮೌಲ್ಯಗಳು? ಕೆಲವು ಮೌಲ್ಯಗಳು ತರ್ಕಕ್ಕೆ ಸಿಕ್ಕುವಂಥವು, ಅಂತಹ ಮೌಲ್ಯಗಳ ಬಗ್ಗೆ ಯೋಚಿಸಿ, ಸರಿ-ತಪ್ಪು ಎನ್ನುವುದನ್ನು, ವಿಮರ್ಶಿಸಿ ನಾವು ತಿಳಿದುಕೊಳ್ಳಬಹುದು. ಆಧುನಿಕ ರೀತಿಯ ವಿಚಾರವಂತಿಕೆಗೆ ಮೌಲ್ಯಗಳು ಬಹಳ ಅಮೂಲ್ಯ. ಅದಕ್ಕೇ, ತರ್ಕಮಾಡಿದಾಗ ಅದರ ಹಿಡಿತಕ್ಕೆ ಸಿಕ್ಕುವ ಮೌಲ್ಯಗಳು ಬದಲಾವಣೆಗೆ ಅರ್ಹವಾದುವುಗಳೇ!! ಆಗ ನಾವೂ ಆ ಬದಲಾವಣೆಗೆ ಹೊಂದಿಕೊಳ್ಳುವುದು ಸುಲಭ ವಾಗುತ್ತದೆ.

ಇಲ್ಲಿ ಅಣ್ಣನವರಿಗೆ ತರ್ಕವಾಗಲಿ, ನಂಬಿಕೆ ವಿಮರ್ಶೆಯಾಗಲೀ ಮುಖ್ಯವಾಗಿರಲಿಲ್ಲ. ಅವರ ವಿಚಾರ ಆಚರಣೆಯಲ್ಲಿಲ್ಲದಿದ್ದುದು ಅವರಿಗೆ ಆಘಾತ ತಂದಿತ್ತು. ಆ ಘಳಿಗೆಯಲ್ಲಿ ಅವರ ನಂಬಿಕೆಯ ಮೇಲೆ ಆದ ಪ್ರಹಾರಕ್ಕೆ ಉಪಶಮನವೊಂದು ಸಿಕ್ಕಿದ್ದು, ಅದು ತಾತ್ಕಾಲಿಕವಾಗಿ ಯಾದರೂ ಅವರಿಗೆ ನೆಮ್ಮದಿಕೊಟ್ಟಿತ್ತು.

೧೦. ರಾಮಕೃಷ್ಣಾಶ್ರಮ

ಮದ್ರಾಸಿನಲ್ಲಿ ಕೆಲವು ವಿಶೇಷ ಘಟನೆಗಳು ನನ್ನ ಜೀವನದಲ್ಲಿ ನಡೆದವು. ತಮಿಳಿನ ಪರಿಚಯವಾಯಿತು. ಇದೊಂದು ವಿಶೇಷ ಭಾಷೆ. ಕನ್ನಡದ ಹಾಗೆ ಮಹಾಪ್ರಾಣಗಳಿಲ್ಲ. ಅಕ್ಷರಗಳು ಕಡಮೆ. ಉದಾಹರಣೆಗೆ ಕನ್ನಡದಲ್ಲಿ ಕ, ಖ, ಗ, ಘ, ಙ ಅಂತಿದೆ. ತಮಿಳಿನಲ್ಲಿ ಬರೀ ಕ, ಙ ಇಷ್ಟೇ. ಹಾಗೆಯೇ ಚ, ಞ, ಟ, ಣ, ತ, ನ, ಪ, ಮ ಅಂತ. ಆದ್ದರಿಂದಲೇ ತಮಿಳಿನಲ್ಲಿ ಓದುವವರಿಗೆ – ಅನೇಕ ತಮಿಳರಿಗೆ

ಮಹಾಪ್ರಾಣ ಓದುವ ಅಭ್ಯಾಸವಿಲ್ಲ. ಭಾಷೆಯೇ ಬರದೆ, ತಮಿಳು ಅಕ್ಷರಗಳನ್ನು ಕಲಿತು ಭಾಷೆ ಕಲಿಯಬೇಕೆನ್ನುವವರಿಗೆ ತಮಿಳು ಭಾಷೆ ಸ್ವಲ್ಪ ಕಷ್ಟವೆನಿಸುತ್ತದೆ. ಯಾಕೆಂದರೆ ಅಲ್ಲಿನ ಪದ್ಧತಿ ಹಾಗೆ. ಅವರು ಓದುತ್ತಾರೆ – ಕ, ಖ, ಗ, ಘ ನಾಲ್ಕಕ್ಕೂ ಅವರು ಬರೀ 'ಕ' ಅಂತ ಹೇಳಿಬಿಡುತ್ತಾರೆ. 'ಗಣಪತಿ' ಎನ್ನುವಾಗ 'ಕಣಪತಿ' ಎಂದಾಗುತ್ತದೆ ಎಂದು ಮೊದಲೇ ತಿಳಿದುಕೊಂಡುಬಿಟ್ಟಿದ್ದರೆ (ಮಾತನಾಡಿ ಅಭ್ಯಾಸ ಮಾಡಿಕೊಂಡು) ಅದು ನಮಗೆ ಬೇಗ ಅರ್ಥವಾಗುತ್ತದೆ. ಹೀಗೆ ನಾನು ತಮಿಳು ಭಾಷೆ ಕಲಿಯಬೇಕಾಯಿತು. ಇದಕ್ಕೆ ಮುಖ್ಯ ಕಾರಣ ತಮಿಳಿನ ದೊಡ್ಡ ಸಾಹಿತಿ ಕಲ್ಕಿ ಕೃಷ್ಣಮೂರ್ತಿ ಎನ್ನುವವರು!! ಅವರನ್ನು ಭೇಟಿಯಾದ ಸ್ವಾರಸ್ಯಕರ ಸಂದರ್ಭದ ಬಗ್ಗೆ ನಿಮಗೆ ಮುಂದೆ ತಿಳಿಸುತ್ತೇನೆ.

ನಾನು ಮದ್ರಾಸಿನಲ್ಲಿ ಪ್ರೌಢಶಾಲೆಗೆ ಸೇರಿಕೊಂಡಾಗ ನಮ್ಮ ಮನೆಯ ಹತ್ತಿರ ರಾಮಕೃಷ್ಣಾಶ್ರಮ ಇದ್ದು, ಪ್ರತಿದಿನವೂ ರಾಮಕೃಷ್ಣಾಶ್ರಮಕ್ಕೆ ಹೋಗುವ ಅಭ್ಯಾಸ ಮಾಡಿಕೊಂಡೆ. ಅಲ್ಲಿ ಸುಮಾರು ಎಲ್ಲ ಕೆಲಸವನ್ನೂ ನಾನೇ ಮಾಡುತ್ತಿದ್ದೆ. ಕಸ ಗುಡಿಸುವುದು, ಒರೆಸುವುದು, ಧೂಳು ತೆಗೆಯುವುದು ಇತ್ಯಾದಿ. ಇವೆಲ್ಲವನ್ನೂ ಅಲ್ಲಿನ ಸ್ವಾಮೀಜಿಯವರು ಗಮನಿಸುತ್ತಿದ್ದರು. ಅಶೇಷಾನಂದರು, ನಿಶ್ರೇಯಸಾನಂದರು, ಅದ್ವಯಾನಂದರು, ಆದಿದೇವಾನಂದರು, ಈ ಎಲ್ಲಾ ಸ್ವಾಮೀಜಿಗಳ ಪರಿಚಯವಾಯಿತು. ಆದಿದೇವಾನಂದರು ಕನ್ನಡದವರು. ನಾನೂ ಕನ್ನಡಿಗನಾಗಿದ್ದುದರಿಂದ ವಿಶೇಷ ಮಮತೆ ಅವರಿಗೆ ನನ್ನ ಮೇಲೆ. ಸುಮಾರು ಮೂರು ವರ್ಷಗಳ ಕಾಲ ಸಂಜೆ ಶಾಲೆ ಬಿಟ್ಟನಂತರ ಆಶ್ರಮಕ್ಕೆ ಹೋಗುವುದು. ಅಲ್ಲಿ ಆಶ್ರಮದ ಒಳಗೆ ಕೆಲಸ ಮಾಡುತ್ತಿದ್ದ ಸ್ವಯಂಸೇವಕರಲ್ಲಿ ನಾನೂ ಒಬ್ಬನಾದದ್ದರಿಂದ, ನನಗೆ ತೋಚಿದ, ಅವರು ಹೇಳಿದ ಕೆಲವು ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡುವುದು, ಸಂಜೆಯ ಆರತಿ ಸುಮಾರು ೭.೩೦ಕ್ಕೆ ಆದನಂತರ ಮನೆಗೆ ಹೊರಟು ಬರುವುದು. ಭಾನುವಾರ ಮಾತ್ರ ದಿನಪೂರ್ತಿ ಅಲ್ಲೇ ಕಳೆಯುತ್ತಿದ್ದೆ. ಭಾನುವಾರ ಚಿಕಿತ್ಸಾವಿಭಾಗದಲ್ಲಿ ನನ್ನ ಕೆಲಸ, ರೋಗಿಗಳನ್ನು ನೋಡಿಕೊಳ್ಳುವುದು, ಔಷಧ ತಂದುಕೊಡುವುದು, ಅವರ ತೊಂದರೆ ಕೇಳುವುದು ಇತ್ಯಾದಿ ಮಾಡುತ್ತಿದ್ದೆ. ಆಗ ನಾನು ವಹಿಸುತ್ತಿದ್ದ ತಾಳ್ಮೆ, ನನ್ನ ಮೆಲುಮಾತು, ನಗುಮುಖ ಅವರಿಗೆಲ್ಲ ನನ್ನ ಮೇಲೆ ಒಂದು ರೀತಿಯ ಒಳ್ಳೆಯ ಭಾವನೆಯನ್ನು ಬೆಳೆಸಿತ್ತು. ಆ ಮೂರು ವರ್ಷಗಳೂ ಅವರೆಲ್ಲ ನನ್ನನ್ನು ಸಾಕಷ್ಟು ಗಮನಿಸಿದ್ದರು. ನಾನೂ ಅಲ್ಲಿನ ವಾತಾವರಣ, ಬರುವ ಹೋಗುವ ಜನ, ಸ್ವಾಮೀಜಿಗಳು ಭಾಷಣ ಮಾಡುವುದು, ಭಕ್ತರು ಅವರನ್ನು ತದೇಕಚಿತ್ತದಿಂದ ಕೇಳುವುದು ಇದನ್ನೆಲ್ಲ ಒಂದೇ ಸಮನೆ ಗಮನಿಸಿದ್ದು ನನಗರಿವಿಲ್ಲದಂತೆಯೇ ನನ್ನ ಮನಸ್ಸಿನಲ್ಲಿ ನಾನೂ ಸಂನ್ಯಾಸಿಯಾಗಬೇಕು ಎನ್ನುವ ಆಸೆ ಚಿಗುರಿತ್ತು. ಇದಕ್ಕೆ ಕಾರಣ ವೈರಾಗ್ಯವೋ, ಜೀವನದಲ್ಲಿ ಬೇಸರವೋ ಎಂಥದೂ ಅಲ್ಲ. ನನಗಿದ್ದುದು ಇಷ್ಟೇ. ಜನದ ಜತೆಯಲ್ಲಿ ಬೆರೆಯಬೇಕು. ನಾಲ್ಕಾರು ಜನರನ್ನುದ್ದೇಶಿಸಿ ಮಾತಾಡಬೇಕು, ಊರೂರು ತಿರುಗಬೇಕು, ಹೇಗೆ ಈ ಸ್ವಾಮೀಜಿಗಳೆಲ್ಲ ಮಾಡುತ್ತಾರೆ, ಹಾಗೆಯೇ ನಾನೂ ಇರಬೇಕು-ಮಾಡಬೇಕು ಎನ್ನುವುದಷ್ಟೇ ಉದ್ದೇಶ!. ಹೌದು, ಬಡತನ ಮನುಷ್ಯನಿಗೆ ಬಹಳ ಪಾಠ ಕಲಿಸುತ್ತದೆ. ನಮ್ಮ ತಾಯಿಯೇ ಮನೆಯಲ್ಲಿ ನಾವೆಲ್ಲರೂ ಇದ್ದಾಗ ಒಬ್ಬೊಬ್ಬರನ್ನಾಗಿ ಹೊರಗೆ ಕಳುಹಿಸಿದರು. ಹೊರಗಿನ ಪ್ರಪಂಚಜ್ಞಾನ ಇರಬೇಕಾದರೆ ಹೊರಗಿರಬೇಕು. ಸದಾ ತನ್ನವರ ಮಧ್ಯೆ ಕುಳಿತಿದ್ದಾಗ ಆ ಅನುಭವ ಬರದು ಎಂದು! ಅದು ನನಗೆ ಅರ್ಥವಾಗಿತ್ತು. ಮೇಲಾಗಿ ಬಡತನವೂ ಇದ್ದಾಗ ಸಂಸಾರದಲ್ಲಿ ಸಾಕಲು ಒಂದು ಜೀವ ಕಡಮೆಯಾಯಿತು ಎಂದುಕೊಳ್ಳುತ್ತಾರಷ್ಟೆ , ವ್ಯತ್ಯಾಸ ಹೆಚ್ಚಾಗಿರುವುದಿಲ್ಲ.

ಹೀಗೆ, ಈ ಹಿನ್ನೆಲೆಯಲ್ಲಿ , ಜನರ ಆಸೆಯಿಂದ ನಾನೂ ಆಶ್ರಮ ಸೇರುವ ತಯಾರಿ ನಡೆಸಿದೆ.

ಮಾರ್ಚ್ ತಿಂಗಳು. ಪರಮಹಂಸರ ಜನ್ಮದಿನೋತ್ಸವ ನಡೆಯುತ್ತಿದ್ದ ದಿನಗಳು. ಆಗ ಎಲ್ಲರೂ ಕಲ್ಕತ್ತೆಗೆ ಹೊರಡುತ್ತಿದ್ದರು. ಅಲ್ಲಿ ದೀಕ್ಷೆ ಕೊಡುವ ಕಾರ್ಯಕ್ರಮ ನಡೆಯುವುದಿತ್ತು. ಇದು ನನಗೆ ತಿಳಿಯಿತು. ನಾನು ಸ್ವಾಮೀಜಿಯವರನ್ನು ಬಹಳವಾಗಿ ಬೇಡಿಕೊಂಡೆ. 'ಮನೆಯಲ್ಲಿ ಬೇಡ ಎನ್ನುವುದಿಲ್ಲವೆ?' ಎಂದರು ಅವರು. 'ಇಲ್ಲ, ಸ್ವಾಮೀಜಿ, ನಮ್ಮ ತಾಯಿಗೆ ನಾವು ನಾಲ್ವರು ಇದ್ದೇವೆ. ನಾನೊಬ್ಬನು ಸಂನ್ಯಾಸ ತೆಗೆದುಕೊಳ್ಳುತ್ತೇನೆ ಎಂದರೆ ಅವರು ಬೇಡ ಎನ್ನುವುದಿಲ್ಲ. ನೀವು ಮಾತ್ರ ನನ್ನನ್ನು ನಿಮ್ಮ ಜತೆ ಕರೆದುಕೊಂಡು ಹೋಗಲೇಬೇಕು ಸ್ವಾಮೀಜಿ, ನಾನು ಆಶ್ರಮ ಸೇರಿಕೊಳ್ಳಲೇಬೇಕು' ಎಂದು ಬಹಳವಾಗಿ ಬೇಡಿಕೊಂಡೆ. ಆಗ ಅವರು ಸಹ ಸುಮಾರು ಮೂರು ವರ್ಷಗಳಿಂದಲೂ ನನ್ನನ್ನು ನೋಡುತ್ತಿದ್ದ ಕಾರಣ, ನನ್ನ ಆಸೆ ಅವರಿಗೆ ಸಹಜವಾಗಿ ಕಂಡು, ನನ್ನ ಸ್ವಭಾವ ಅದಕ್ಕೆ ಸರಿಹೊಂದುವುದೆನ್ನುವ ಭಾವನೆಯಾಗಿ ಕರೆದುಕೊಂಡು ಹೋಗಲು ಒಪ್ಪಿದರು. ಸಂನ್ಯಾಸ ಕೊಡುವುದರಲ್ಲಿ ಮೊದಲ ಐದು ವರ್ಷಗಳವರೆಗೆ 'ಅರುಮಚಾರಿ' ಎಂದು ಹೆಸರು. 'ಅರುಮಚಾರಿ' ಎಂದರೆ ಬ್ರಹ್ಮಚರ್ಯದ ಮೊದಲ ಐದು ವರ್ಷಗಳ ಜೀವನ. ಆದರೆ ನಮಗೆಲ್ಲ ಉಪನಯನ ಆಗಿದ್ದುದರಿಂದ ಬ್ರಹ್ಮಚರ್ಯಪದವಿಯನ್ನೇ ಕೊಡುತ್ತಾರೆ. ಅದಕ್ಕೆ 'ಅರುಮಚಾರಿ' ಆಶ್ರಮದಲ್ಲಿ ಮಾಡುವ ಕೆಲಸಗಳಲ್ಲಿ ಬಹಳ ಸಾಮಾನ್ಯ ಮಟ್ಟದವು– ಕಸಗುಡಿಸುವುದು, ಸಾರಿಸಿ ಒರೆಸುವುದು, ಬಟ್ಟೆ ಒಗೆಯುವುದು, ಶೌಚಗೃಹಗಳನ್ನು ತೊಳೆಯುವುದು, ಸ್ವಾಮೀಜಿಗಳಿಗೆ ಕ್ಷೌರ ಮಾಡುವುದು, ಅವರ ಚಪ್ಪಲಿ ಕಿತ್ತು ಹೋಗಿದ್ದರೆ ಅದನ್ನು ಹೊಲೆಯುವುದು, ಇಸ್ತ್ರಿ ಮಾಡುವುದು ಹೀಗೆ ಸೇವಕ ವೃತ್ತಿ ಅದು. ಬಿಳಿಯ ಪಂಚೆ, ಮೇಲುವಸ್ತ್ರ ಅರುಮಚಾರಿಯ ಉಡುಪು. ೮-೧೦ ದಿನಗಳು ಬೇರೆ ಊರಿಗೆ ಹೋಗುತ್ತಿದ್ದೇನೆಂದು ಮನೆಯಲ್ಲಿ ಹೇಳಿ ಹೊರಟೆ.

ನಾವೆಲ್ಲರೂ ಕಲ್ಕತ್ತ ತಲುಪಿದೆವು. ಮರುದಿನ ದೀಕ್ಷೆ ಇದೆ ಎನ್ನುವಾಗ ಹಿಂದಿನ ದಿನ ಎಲ್ಲರೂ ಸ್ವಾಮೀಜಿಯನ್ನು ಪರಿಚಯ ಮಾಡಿಕೊಳ್ಳಬೇಕು. ನಾವು ಸ್ನಾನ ಮಾಡಿದೆವು. ಒಬ್ಬರನಂತರ ಒಬ್ಬರು ಸ್ವಾಮೀಜಿಯನ್ನು ಸಂದರ್ಶಿಸಲು ಹೊರಟೆವು. ನನ್ನ ಸರದಿಯೂ ಬಂದಿತು. ನಾನು ಒಳಗೆ ಹೋದೆ. ಸ್ವಾಮಿ ವಿರಜಾನಂದರು ಆಗಿನ ಅಧ್ಯಕ್ಷರು. ಅಗಲವಾದ ಮುಖ, ದಿವ್ಯ ತೇಜಸ್ಸು , ಹೊಳೆಯುವ ಕಣ್ಣುಗಳು, ತಲೆ ತುಂಬಾ ಕೂದಲು, ಹೊಕ್ಕಳವರೆಗೂ ಬಂದಿದ್ದ ಅವರ ಬಿಳಿಯ ಗಡ್ಡ , ಒಳ್ಳೇ ಮೈಕಟ್ಟಿನ ಎತ್ತರವಾದ ಶರೀರ ಎಂದು ಕುಳಿತಿದ್ದ ಭಂಗಿಯಲ್ಲೇ ತಿಳಿಯುತ್ತಿತ್ತು. ಅವರನ್ನು ಮೊದಲಬಾರಿಗೆ ನೋಡಿ ನನಗೆ ಭಯವೇ ಆಯಿತು. ನನ್ನನ್ನು ನೋಡಿದವರೇ 'ಖಮ್... ಖಮ್... ಶಿಟ್ ಡೌನ್... ಶಿಟ್ ಡೌನ್' ಎಂದರು. ಬಂಗಾಲಿ ಶೈಲಿಯ ಇಂಗ್ಲಿಷ್‌ನಲ್ಲಿ. ನಾನು ಗೋತ್ರ ಪ್ರವರ ಹೇಳಿ ಅವರಿಗೆ ನಮಸ್ಕಾರ ಮಾಡಿದೆ. ಇದು ಅವರಿಗೆ ಹೊಸದು, ಗೊತ್ತಿಲ್ಲದ್ದು, ನಾನು ಪ್ರವರ ಹೇಳಿ ನಮಸ್ಕರಿಸಿದ್ದು ಅವರಿಗೆ ಬಹಳ ಸಂತೋಷವಾಯಿತು! "ಎಲ್ಲಿಂದ ಬಂದದ್ದು?" ಎಂದರು. ನಮ್ಮ ಮಾತು ಇಂಗ್ಲಿಷಿನಲ್ಲಿ ಸಾಗಿತು. "ನಾನು ಈಗ ಮದ್ರಾಸಿನಿಂದ ಬಂದಿದ್ದೇನೆ. ಮೂಲತಃ ಬೆಂಗಳೂರಿನವನು" ಎಂದೆ. "ಬೆಂಗಳೂರು? ಕನ್ನಡ ಭಾಷೆ?" ಎಂದರು ತಮಗೆ ಗೊತ್ತು ಎನ್ನುವಂತೆ. "ಹೌದು ಸ್ವಾಮೀಜಿ" ಎಂದೆ ನಾನು. "ನಿನಗೇಕೆ ಆಶ್ರಮ ಇಷ್ಟವಾಗಿದೆ? ನೀನು ಗುರುಮಹಾರಾಜರ ಬಗ್ಗೆ ಓದಿದ್ದೀಯಾ?" ಎಂದರು. ನಾನು ನನಗೆ ಎರಡು-ಮೂರು ವರ್ಷದಿಂದ ಆಶ್ರಮದ ಸಂಪರ್ಕ ಇರುವುದಾಗಿಯೂ ಅದಕ್ಕೇ ನಾನು ಆಶ್ರಮ ಸೇರಬಯಸುತ್ತೇನೆಂದೂ ಕಾರಣ ಹೇಳಿ, ಗುರುಮಹಾರಾಜರ ಒಂದೆರಡು ಪುಸ್ತಕಗಳ ಹೆಸರು ಹೇಳಿದೆ. 'ಹೋಲಿ ಮದರ್'? ಎಂದರು. ಅವೆಲ್ಲವೂ ನನಗೆ ಓದಿ ಓದಿ ಕೇಳಿ ಕೇಳಿ ಕರಗತವಾದಂತಾಗಿತ್ತು. ಆವರೆಗೆ ಕನಸಿನಲ್ಲಿ ಕೇಳಿದರೂ ಎದ್ದು ಹೇಳುತ್ತಿದ್ದೆ. ಅಷ್ಟು ಅವು ಮನಸ್ಸಿನಲ್ಲಿ ಬೇರೂರಿಬಿಟ್ಟಿದ್ದವು. ಆ ಬಗ್ಗೆ ಮೂರು ಸಾಲು ಹೇಳುತ್ತಿದ್ದಂತೆಯೇ ತಡೆದು, "ಗುರುಮಹಾರಾಜರು ಹುಟ್ಟಿದ್ದೆಲ್ಲಿ?" ಎಂದರು. ಕಾಮಾರ್ ಪುಕೂರ್ ಎಂದು ಹೇಳಿದೆ. ದೀಕ್ಷೆ ಕೊಡುವಾಗ ಅವರು ಮಾಡಬೇಕಾದ ಪರೀಕ್ಷೆ ಮಾಡಿದ್ದರು. ಅವರಿಗೆ ಬಹಳ ಮೆಚ್ಚುಗೆಯಾಗಿತ್ತು. ನಾನು ಪರೀಕ್ಷೆಯಲ್ಲಿ ಪಾಸಾಗಿದ್ದೆ!"ನಿಮ್ಮ ಅಮ್ಮನ ಅನುಮತಿ ಪಡೆದಿದೀಯಾ?" ಎಂದು ಕೇಳಿದರು. "ನಮ್ಮ ಅಮ್ಮನಿಗೆ ನಾಲ್ವರು ಗಂಡುಮಕ್ಕಳಿದ್ದೇವೆ. ಆಕ್ಷೇಪಿಸುವುದಿಲ್ಲ ಸ್ವಾಮೀಜಿ" ಎಂದೆ. ಎರಡು-ಮೂರು ಬಾರಿ ಕೇಳಿದರು. ಅದೇ ಉತ್ತರ ಕೊಟ್ಟೆ. ಆಗ ಗದರಿಸಿ, "ಕೇಳಿದ ಪ್ರಶ್ನೆಗೆ ಉತ್ತರ ಕೊಡು" ಎಂದರು. ಹೆದರಿ, "ಇಲ್ಲ" ಎಂದೆ!... ಫೇಲಾದೆ ಎಂದುಕೊಂಡೆ.

ಮಾರನೆಯ ದಿನ ದೀಕ್ಷೆಯ ಸಮಯ... ನನಗೆ ಎಂಥದೋ ಪುಳಕದ ಅನುಭವ, ಹೊಸ ಪ್ರಪಂಚ ಒಂದಕ್ಕೆ ಕಾಲಿಡುತ್ತಿದ್ದೇನೆ ಎನ್ನುವ ಅನುಭವ. ಏನೋ ಕಾತುರ, ಭಯ. ಆದರೂ ಸಂಭ್ರಮ; ನಾನೆಂದು ಕೊಂಡದ್ದು ನಡೆಯುತ್ತಿದೆ ಎನ್ನುವ ತೃಪ್ತಿ. ಈ ನಡುವೆ ಸಂಶಯವೂ ಇದ್ದಿತು. ನಿನ್ನೆ ಸಂಜೆ 'ನಾಪಾಸು' ಆಗಿದ್ದೆನಲ್ಲ! ನನ್ನ ಸರದಿ ಬಂದಿತು. ನಿನ್ನೆಯಂತೆ ಸ್ವಾಮೀಜಿ ನನ್ನನ್ನು ನೋಡಿ ಮುಗುಳ್ನಕ್ಕು "ಖಮ್... ಖಮ್"... ಎಂದರು. ಅವರ ಕೈಯಲ್ಲಿ ಒಂದು ಚೀಟಿ ಇತ್ತು. ಅದನ್ನು ನನ್ನ ಕೈಗೆ ಕೊಟ್ಟು "ಓದು ಇದನ್ನ!" ಎಂದರು. ನಾನು ನಡುಗುವ ಕೈಗಳಿಂದ ಅದನ್ನು ಹಿಡಿದುಕೊಂಡು ಓದಿದೆ. ಅದು ಒಂದು ಟೆಲಿಗ್ರಾಂ. ಇಂಗ್ಲಿಷಿನಲ್ಲಿತ್ತು. 'ನೀನು ತಕ್ಷಣವೇ ಮನೆಗೆ ಹಿಂದಿರುಗಿಬರದಿದ್ದರೆ, ಅಮ್ಮ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ-ಚಿನ್ನಾ' ಎಂದು ಬರೆದಿತ್ತು. ನಮ್ಮಣ್ಣ ಶ್ರೀ ಶಂಕರಮೂರ್ತಿಯವರು ಹೇಗೋ ನನ್ನ ಈ ನಿರ್ಧಾರ ತಿಳಿದುಕೊಂಡು ಸಮಯಕ್ಕೆ ಸರಿಯಾಗಿ ತಲುಪುವಂತೆ ಒಂದು ಟೆಲಿಗ್ರಾಂ ಕೊಟ್ಟಿದ್ದರು - ಆಗುತ್ತಿದ್ದುದನ್ನು ನಿಲ್ಲಿಸುವ ಪ್ರಯತ್ನವಾಗಿ. ನಾನು ಈಗ ನಿಜಕ್ಕೂ ನಡುಗಿದೆ, ಸ್ವಾಮೀಜಿ ನನ್ನನ್ನು ಏನು ಮಾಡುತ್ತಾರೋ ಎಂದು.

ಆಶ್ರಮದ ರೀತಿಯೇ ಹಾಗೆ. ಮೊದಲ ಐದು ವರ್ಷಗಳು ಒಂದು ರೀತಿಯಲ್ಲಿ ಶಿಕ್ಷಣ, ತರಬೇತಿ ಕೊಡುವ ಕಾಲ. ಅನಂತರ ಬ್ರಹ್ಮಚರ್ಯದಲ್ಲಿ ಹತ್ತು ವರ್ಷಗಳು. ಮೊದಲ ಐದು ವರ್ಷಗಳೂ ಮನಸ್ಸು ಬಿಗಿ ಹಿಡಿದು ಮಧ್ಯೆ ಬಿಡದೆ ಮುಂದುವರೆದರೆ ಮತ್ತೆ ಆ ಬಗ್ಗೆ ಯೋಚಿಸಲು ಹತ್ತು ವರ್ಷಗಳ ಅವಕಾಶ. ನಿಜಕ್ಕೂ ಸಂಸಾರದ ಇತರ ಆಕರ್ಷಣೆಗಳನ್ನು ಮೀರಿ ಸಂಯಮ ಸಾಧಿಸಲು ಸಾಧ್ಯವಾದರೆ ಆ ಹತ್ತು ವರ್ಷಗಳು ಸಾಧನೆ ಮಾಡಬಹುದು. ಹಾಗಿಲ್ಲವಾದರೆ ತೆಗೆದುಕೊಂಡ ನಿರ್ಧಾರ ಮನಸ್ಸನ್ನು ದ್ವಂದ್ವಕ್ಕೆ ಸಿಲುಕುವಂತೆ ಮಾಡಿದರೆ ಮಧ್ಯದಲ್ಲಿಯೇ ಆಶ್ರಮಬಿಟ್ಟು ಹೋಗಿ ಮದುವೆ ಆಗಬಹುದು. ಇದರ ಉದ್ದೇಶ ಯಾವ ಆಸೆಯನ್ನೂ ಅದುಮಿಡಬಾರದು, ನೈಸರ್ಗಿಕವಾಗಿ ಬಂದ ಮನುಷ್ಯಸ್ವಭಾವದ ಮೋಹ, ಪಾಶಗಳು ಆಮಿಷ ಒಡ್ಡಿದಾಗ ಅದನ್ನು ಗೆಲ್ಲಲಾಗದೆ ಆಸೆಗೆ ಮನಸ್ಸು ಒಳಪಟ್ಟರೆ ಅದನ್ನು ಯಾವುದೇ ವ್ಯಕ್ತಿ ಹತ್ತಿಕ್ಕಿ, ಬಚ್ಚಿಟ್ಟು ಮೇಲ್ನೋಟಕ್ಕೆ ತನ್ನನ್ನು ಸಂನ್ಯಾಸಿಯೆನ್ನುವ ಹೆಸರಿನಲ್ಲಿ ಬಂಧಿಸಿಕೊಳ್ಳುವ ಅಗತ್ಯ ಇಲ್ಲ. ಅದಕ್ಕಾಗಿಯೇ ಸಂನ್ಯಾಸ ಸ್ವೀಕರಿಸಿದ್ದರೂ ಮನಸ್ಸು ಆ ನಿಬಂಧನೆಗೆ ಒಳಪಡಲು ನಿರಾಕರಿಸಿದರೆ ಸುಮಾರು ೧೦-೧೫ ವರ್ಷಗಳ ಅವಕಾಶ-ಮಧ್ಯೆ ಬಿಟ್ಟುಹೋಗಲು!! ಆದರೆ ನಾನು ಹೀಗೆ ಇದಕ್ಕಾಗಿ ಕಲ್ಕತ್ತೆಗೆ ಬಂದಿರುವುದು ನಮ್ಮಣ್ಣನಿಗೆ ಹೇಗೆ ತಿಳಿಯಿತೋ, ಯಾರು ಹೇಳಿದರೋ ತಿಳಿಯದು. ಮತ್ತೆ ಆ ವಿಷಯವಾಗಿ ನಾನು ಅವರನ್ನು ಕೇಳಲೂ ಇಲ್ಲ!! ಒಟ್ಟಾರೆ ನಾನು ಈಗ ಹೊರಡಬೇಕಾಯಿತು.

ನನ್ನ ಮುಖದಲ್ಲಿ ನನಗಾದ ನಿರಾಸೆ ಸ್ಪಷ್ಟವಾಗಿ ಕಾಣುತ್ತಿತ್ತು. ಬೇಸರ ನಿರಾಸೆಯಿಂದ ಕುಂದಿದ್ದ ನನ್ನ ಮುಖ ನೋಡಿ ಸ್ವಾಮಿ ವಿರಜಾನಂದರಿಗೆ 'ಅಯ್ಯೋ' ಎನಿಸಿತು. ಚಿಕ್ಕ ಹುಡುಗ, ನಿರಾಸೆಯನ್ನು

ಸಹಿಸಲು ಅಶಕ್ತ... ಅವರ ಧ್ವನಿ ಈಗ ಆವಶ್ಯಕತೆಗಿಂತಲೂ ಹೆಚ್ಚು ಮೃದುವಾಯಿತು. ನನ್ನನ್ನು ಹತ್ತಿರಕ್ಕೆ ಕರೆದು, "ಗುರು ಮಹಾರಾಜರಿಗೆ ಎಷ್ಟು ಮಂದಿ ಗೃಹಸ್ಥ ಅನುಯಾಯಿಗಳಿದ್ದಾರೆ ಹೇಳು?" ಎಂದರು, ಇಂಗ್ಲಿಷಿನಲ್ಲಿ. ಅದಕ್ಕೆ ನಾನು ನನಗೆ ತಿಳಿದಂತೆ ಇದ್ದ ೧೨ ಜನರನ್ನು ಹೇಳಿದೆ. "ಅವರ ಹಾಗೆ ನೀನೂ ಒಬ್ಬ . ಹೀಗೆಯೇ ಎಷ್ಟು ಲಕ್ಷಮಂದಿ ಗೃಹಸ್ಥ ಭಕ್ತರಿದ್ದಾರೆ ಗೊತ್ತೇ ನಿನಗೆ? ಅವರು ಗೃಹಸ್ಥರಿರಬಹುದು, ಆದರೂ ಗುರುಮಹಾರಾಜರ ಆಪ್ತ ಭಕ್ತವರ್ಗಕ್ಕೆ ಸೇರಿದವರು. ಹೋಗು, ತಾಯಿ ಕರೆದಮೇಲೆ ಹೋಗಬೇಕು. ನಿರಾಸೆಯಾಗುವುದು ಬೇಡ. ಸೇವೆ ಮಾಡಲು ಸಂನ್ಯಾಸಿಯಾಗಬೇಕೆಂದೇನೂ ಇಲ್ಲ, ಗೃಹಸ್ಥನಾಗಿಯೂ ಸೇವೆ ಮಾಡಬಹುದಲ್ಲ?" ಎಂದು ಸಮಾಧಾನ ಹೇಳಿ ನನ್ನನ್ನು ಹರಸಿ ಮೈದಡವಿ ಕಳುಹಿಸಿದರು.

ನಾನು ಹಿಂದಿರುಗಿ ಬಂದ ಮೇಲೆ ನಮ್ಮಮ್ಮ, "ಯಾಕೋ ಕೃಷ್ಣಾ, ಬಡತನ ; ಸಾಕುವುದಕ್ಕೆ ಶಕ್ತಿ ಇಲ್ಲ ಅಮ್ಮನಿಗೆ, ಎಂದು ಸಂನ್ಯಾಸ ತೆಗೆದುಕೊಳ್ಳುವುದಕ್ಕೆ ಹೋದೆಯೇನಪ್ಪಾ?" ಎಂದರು. ಅಮ್ಮನ ಧ್ವನಿಯಲ್ಲಿದ್ದ ನೋವು , ಅಸಹಾಯಕತೆ ನನಗೆ ತಿಳಿಯಿತು. ನನಗೆ ನಾನೇ ತಪ್ಪಿತಸ್ಥನಂತೆ ಮೆಲ್ಲನೆ, "ಇಲ್ಲಮ್ಮ, ಹಾಗೆಲ್ಲ ಹೇಳಬೇಡ, ಇನ್ನು ಮೇಲೆ ಹಾಗೆಲ್ಲ ಮಾಡುವುದಿಲ್ಲ, ಇದೇ ಕೊನೆ, ಇನ್ನು ಆ ಯೋಚನೆ ಮಾಡುವುದಿಲ್ಲ ನಾನು" ಎಂದೆ ಮಾತುಕೊಡುವವನ ಹಾಗೆ!

ಸ್ವಾಮೀಜಿ ಹೇಳಿದ್ದು ನಿಜ. ರಾಮಕೃಷ್ಣಾಶ್ರಮಕ್ಕೆ ಅದೆಷ್ಟು ಮಂದಿ ಗೃಹಸ್ಥ ಭಕ್ತರಿಲ್ಲ? ಲಕ್ಷಾಂತರ ಮಂದಿ ಇದ್ದಾರೆ, ಅಂತಹವರಲ್ಲಿ ನನಗೆ ಒಬ್ಬರ ನೆನಪಾಗುವುದು. ಇದು ಸಂದರ್ಭೋಚಿತವಾಗಿರುವುದರಿಂದ ನನ್ನ ಓದುಗರು ಇಂತಹ ವ್ಯಕ್ತಿಯೊಬ್ಬರ ವಿಷಯ ತಿಳಿಯಲು ಉತ್ಸುಕರಾಗಿದ್ದಾರೆ ಎಂದೇ ನನ್ನ ನಂಬಿಕೆ! ಬಂಗಾಲದಲ್ಲಿ ಶ್ರೀ ಗಿರೀಶಚಂದ್ರ ಘೋಷ್ ಎನ್ನುವ ಗೃಹಸ್ಥರು, ಜೀವನವನ್ನು ಬಹಳವಾಗಿ ಅನುಭವಿಸಿದವರು. ಅವರು ನಾಟಕಗಳಲ್ಲಿ ಪಾತ್ರ ಮಾಡುತ್ತಿದ್ದರು. ಅದೂ ಈಶ್ವರನ ಪಾತ್ರ , ಆದರೆ ಮಹಾಮದ್ಯವ್ಯಸನಿ! ತೆರೆಯ ಹಿಂಭಾಗಕ್ಕೆ ಹೋದರೆ ಕುಡುಕ ಗಿರೀಶರನ್ನು ಕಾಣಬಹುದಿತ್ತು. ಅದೇ ನಾಟಕರಂಗದ ಮೇಲೆ!! ಅವರು ಈಶ್ವರನ ಪಾತ್ರ ಮಾಡುತ್ತಿದ್ದರೆ ಶ್ರೀ ರಾಮಕೃಷ್ಣ ಪರಮಹಂಸರಿಗೆ ಸಮಾಧಿ ಬಂದುಬಿಡುತ್ತಿತ್ತಂತೆ! ಅಷ್ಟು ತಾದಾತ್ಮ್ಯ ಆ ಪಾತ್ರದಲ್ಲಿ, ಅಷ್ಟು ತಲ್ಲೀನತೆ ಅದನ್ನು ಅಭಿನಯಿಸುವಾಗ. ಒಮ್ಮೆ ನಾಟಕ ನೋಡುತ್ತಾ ಕುಳಿತಿದ್ದ ಶ್ರೀ ಪರಮಹಂಸರು, ನಾಟಕ ಮುಗಿಯುತ್ತಿದ್ದಂತೆ ಶಿವನು ತೆರೆಯ ಹಿಂಭಾಗಕ್ಕೆ ಹೋದ ಕೂಡಲೇ ಧಿಗ್ಗನೆದ್ದು 'ಗಿರೀಶ್, ಗಿರೀಶ್...' ಎಂದು ದನಿ ಎತ್ತರಿಸಿ ಕೂಗುತ್ತಾ ಈಶ್ವರನನ್ನೇ ಹಿಂಬಾಲಿಸುವವರಂತೆ, ತಮ್ಮ ಕೈಗಳೆರಡನ್ನೂ ಮುಂದೆ ಚಾಚಿಕೊಂಡು ಗಿರೀಶರನ್ನು ಹುಡುಕುತ್ತಾ ರಂಗದ ಮೇಲೆ ಪ್ರವೇಶಿಸಿದರು. ತೆರೆಯ ಹಿಂದೆ ಕುಡಿಯುತ್ತ ಕುಳಿತಿದ್ದ ಗಿರೀಶರಲ್ಲಿಗೇ ಶ್ರೀ ಪರಮಹಂಸರು ನೇರವಾಗಿ ಹೋದಾಗ ಗಿರೀಶರಿಗೆ ಆ ಅಮಲಿನಲ್ಲಿದ್ದರೂ ತಡೆಯಲಾಗಲಿಲ್ಲ. ಶ್ರೀ ಪರಮಹಂಸರ ಕಾಲು ಹಿಡಿದು ಅಳಲು ಪ್ರಾರಂಭಿಸಿದರು. 'ನಾನು ಪಾಪಿಷ್ಠ... ನನ್ನನ್ನು ನೋಡಲು ತಾವು... ತಾವು ಇಲ್ಲಿಗೆ ಬರುವುದೇ? ನಾನು ಈ ಸ್ಥಿತಿಯಲ್ಲಿ ನಿಮ್ಮನ್ನು ಹೇಗೆ ನೋಡಲಿ?' ಎಂದು ತಮ್ಮ ಸ್ಥಿತಿಗೆ ತಾವೇ ಅವಮಾನ ಪಟ್ಟುಕೊಂಡು, ನಾಚಿ ಬಿಕ್ಕಿ ಅತ್ತರು (ಈ ಸಂದರ್ಭವನ್ನು ನೆನೆದಾಗ ನನಗೆ ಟಿ.ಪಿ. ಕೈಲಾಸಂರವರು ಗಾಂಧೀಜಿಯನ್ನು ಕಾಣಬೇಕು ಎಂದು ಹೋದಾಗ , ಆಶ್ರಮದ ಹೊರಗೇ ಇದ್ದು , ಹೋಗಲು ನಾಚಿ ತಮಗೆ ಅಳು ಬಂದಿತೆಂದು ಬರೆದುಕೊಂಡಿರುವುದರ ನೆನಪಾಯಿತು!) ಥರ ಥರ ನಡುಗಿ ಹೋದರು. ಭಾವಸಮಾಧಿಯಲ್ಲಿದ್ದ ಶ್ರೀ ಪರಮಹಂಸರ ಕೈ ತಮ್ಮ ಕಾಲಿಗೆ ಬಿದ್ದ ಗಿರೀಶರ ತಲೆಯ ಮೇಲಾಡಿತು. ಆ ಕ್ಷಣದಿಂದಲೇ ಗಿರೀಶರು ಕುಡಿತವನ್ನು ಸಂಪೂರ್ಣವಾಗಿ ಬಿಡಲು ಸಂಕಲ್ಪ ಮಾಡಿದರು. ಗೃಹಸ್ಥ ಭಕ್ತರಲ್ಲೆಲ್ಲ ಪರಮಭಕ್ತರ ಸಾಲಿಗೆ ಸೇರಿದರು. ಇದೇನೂ ಯಾವುದೋ ಕಟ್ಟುಕತೆಯಲ್ಲ. ನಿಜವಾಗಿ ನಡೆದಿರುವುದು. ಮನುಷ್ಯನ ಜೀವನದಲ್ಲಿ ಈ ರೀತಿಯ ಬದಲಾವಣೆಗಳು, ಮಾರ್ಪಾಟುಗಳು ಚಮತ್ಕಾರವೋ ಎನ್ನುವಂತೆ ನಡೆದಿವೆ. ಅದನ್ನು ಮೂಢತನದಿಂದ ನೋಡದೆ ಸರಿಯಾಗಿ ಕಾಣುವ ಕಣ್ಣುಗಳು, ತಿಳಿದುಕೊಳ್ಳುವ ಬುದ್ಧಿ ನಮಗೆ ಬೇಕಷ್ಟೆ-'ಮಾನುಷಾದ್ದೈವ್ಯಮುಪೈಮಿ-' 'ಮನುಷ್ಯತ್ವದಿಂದ ದೈವತ್ವವನ್ನು ಹೊಂದುವಂತಾಗಲಿ' ಇದುವೇ ನಮ್ಮೆಲ್ಲರ ಪ್ರಾರ್ಥನೆ ಅಲ್ಲವೆ?

೧೧. ಗಾಂಧೀಜಿ ಪ್ರಭಾವ

ಸ್ವಯಂ ಸೇವಕನಾದೆ

ನೆನಪಿನ ಮಾಲೆ ಕಟ್ಟುವಾಗ ಯಾವೊಂದು ಹೂವು ಕೆಳಗೆ ಬಿದ್ದರೂ, ಅಥವಾ ಬಿಟ್ಟು ಹೋದರೂ ಅದಕ್ಕೆ ಅನ್ಯಾಯವಾದಂತೆ! ಅದರಲ್ಲೂ ನನ್ನ ಜೀವನದ ಘಟನೆಗಳನ್ನು ಮೆಲುಕು ಹಾಕುವಾಗ ಆ ಹೂವು ಗಾಂಧೀಜಿಯ ಸ್ಮರಣೆಯದ್ದು ಎಂದಾಗ, ನಾನು ಆ ಹೂವನ್ನು ಬಿಡುವ ಮಾತೇ ಇಲ್ಲ.

ಅದು ೧೯೪೪... ನನ್ನ ಜೀವನದಲ್ಲಿ ಒಂದು ಮುಖ್ಯವಾದ ತಿರುವು! ಆಗ ನನಗೆ ಹದಿನಾರು ವರ್ಷ. ಗಾಂಧೀಜಿ ಆಗ ಮದ್ರಾಸ್‌ಗೆ ಬರುವವರಿದ್ದರು. ನನಗೋ ಎಂಥದೋ ಒಂದು ರೀತಿಯ ಕಾತುರ, ಸಂಭ್ರಮ. ನಿಟ್ಟೂರು ಶ್ರೀನಿವಾಸರಾಯರು ಮತ್ತು ಅವರ ಪತ್ನಿ ಶ್ರೀಮತಿ ಪದ್ಮಮ್ಮ, ಗಾಂಧೀಜಿಯ ಆತ್ಮಕಥೆ 'ಸತ್ಯಶೋಧನೆ'ಯನ್ನು ಬರೆದು, 'ಬರೆದವರು ಇಬ್ಬರು ಕನ್ನಡಿಗರು' ಎಂದು ಮಾತ್ರ ಹಾಕಿ ಪುಸ್ತಕ

ಪ್ರಕಟಿಸಿದ್ದರು. ಅವರು ಮಾಡಿದ್ದ ಅನುವಾದ ಅದು. ಅದನ್ನು ನಾನು ನಮ್ಮ ಊರಿನಲ್ಲಿ ಇದ್ದಾಗಲೇ ಓದಿದ್ದೆ. ನನಗೆ ಅದು ಬಹಳ ಇಷ್ಟವಾಗಿತ್ತು. ಆಗ ನಮ್ಮೂರ ಹುಡುಗರನ್ನೆಲ್ಲಾ ಸೇರಿಸಿ ಎಲ್ಲರಿಗೂ ಆ ಬಗ್ಗೆ ಕತೆ ಹೇಳುತ್ತಿದ್ದೆ-'ಗಾಂಧೀಜಿ ಹಾಗೆ-ಹೀಗೆ' ಅಂತ! ಎಲ್ಲರೂ ಸ್ನೇಹಿತರೇ, ಬಹಳ ಆಸಕ್ತಿಯಿಂದ ನಾನು ಹೇಳುವುದನ್ನೆಲ್ಲ ಕೇಳುತ್ತಿದ್ದರು. ಹೇಳುತ್ತ ಹೇಳುತ್ತ ನಾನೇ ಬಹಳವಾಗಿ ಗಾಂಧೀಜಿಯ ಪ್ರಭಾವಕ್ಕೊಳಗಾಗಿದ್ದೆ. ಎರಡನೆಯ ಮಹಾಯುದ್ಧದ ಸಮಯದಲ್ಲು ಸಹ ಗಾಂಧೀಜಿ ನಿಟ್ಲೂರರಿಗೆ ಕಾಗದ ಬರೆದಿದ್ದರು. ಅದನ್ನು ಸಹ ಪೇಪರಿನಲ್ಲಿ ಓದಿ ಹೇಳಿದ್ದೆ , ಎಂತಹ ಕಾಗದ ಅದು! ಅದ್ಭುತ... ಆ ದೂರದೃಷ್ಟಿ , ಆಲೋಚನೆಗಳಲ್ಲಿ ಸ್ಪಷ್ಟತೆ, ಆಶ್ಚರ್ಯಕರ. ನಿಜಕ್ಕೂ, ಆ ಚಿಕ್ಕವಯಸ್ಸಿನಲ್ಲಿ ಅದು ನನ್ನ ಮೇಲೆ ಬಹಳ ಪರಿಣಾಮ ಬೀರಿತ್ತು. ಆಗಿನಿಂದ ಹುಟ್ಟಿದ ಆಸೆ , ಗಾಂಧೀಜಿಯನ್ನು ಒಂದು ಸಾರಿ ನೋಡಬೇಕು ಎನ್ನುವುದು. ಆದರೆ ಗಾಂಧೀಜಿ ಎಲ್ಲಿ? ಹಿಮಾಲಯ ಪರ್ವತವನ್ನು ನೋಡುವುದು ಸಾಧ್ಯವೇ ಎನ್ನುವ ಭಾವನೆ ಮನದಲ್ಲಿ! ಈಗ ಗಾಂಧೀಜಿ ಮದ್ರಾಸಿಗೇ ಬರಲಿದ್ದಾರೆ. ಅವರನ್ನು ನೋಡುವ ನನ್ನ ಬಹಳ ದಿನಗಳ ಆಸೆ ಈಡೇರುವುದೋ, ಇಲ್ಲವೋ, ಎಂದು ಮನದಲ್ಲಿ ಸಂಶಯ. ಆದರೂ 'ಸ್ವಯಂಸೇವಕರು ಬೇಕು' ಎನ್ನುವ ಜಾಹಿರಾತು 'ಹಿಂದೂ' ಪೇಪರ್‌ನಲ್ಲಿ ನೋಡಿ ತಕ್ಷಣವೇ ಅರ್ಜಿ ಹಾಕಿದೆ. ಮಾರನೆಯ ದಿನವೇ ಅವರು ಅಲ್ಲಿ ಹೇಳಿದ್ದ ಸಮಯಕ್ಕೂ ಬಹಳ ಮುಂಚೆ, ಬೆಳಗಿನ ಜಾವವೇ ಹೋಗಿ ಸಾಲಿನಲ್ಲಿ ನಿಂತೆ. ತುಂಬಾ ಜನ, ನನಗೆ ನೆನಪಿರುವಂತೆ ಸುಮಾರು ಮೂರು ಮೈಲಿಯ ತನಕ ಸಾಲಿದ್ದಿತು. ಆ ದಿನ ಸಂದರ್ಶನ ಇದ್ದದ್ದು ಮಾಂಬಲಂನಲ್ಲಿ. ಮಾಂಬಲಂ ಮದ್ರಾಸ್‌ನ ಒಂದು ಬಡಾವಣೆ. ರಾಯ್ ಪೇಟೆಯವರೆಗೂ ಸಾಲು ಮುಂದುವರೆದಿತ್ತು. ಸುಮಾರು ಒಂಬತ್ತು ಗಂಟೆಯ ಹೊತ್ತಿಗೆ ನನ್ನ ಸರದಿ ಬಂತು. ಅಲ್ಲಿ ಒಳಗೆ ಹೋದರೆ ಭಾರಿ ನಿರಾಸೆ ಕಾದಿತ್ತು. ನನಗೆ ಹಿಂದಿ ಮಾತನಾಡಲು ಬರದು ಎಂದು ತಿಳಿದುಕೊಂಡ ಅವರು ಅವಕಾಶ ಕೊಡಲು ಸಾಧ್ಯವಿಲ್ಲ ಎಂದು ಬಿಟ್ಟರು. ನನಗೋ ಅಳುವೇ ಬಂದಿತು. ಅಲ್ಲೇ ಕಛೇರಿ ಹತ್ತಿರ ಕುಳಿತು ಅತ್ತೆ. ಆದರೂ ಅವರಿಗೇನೂ ಕರುಣೆ ಬರಲಿಲ್ಲ. ಕರುಣೆಯಿಲ್ಲದೆ 'ಹೋಗು ಆಚೆ' ಎಂದರು. "ನೀನು ಇಲ್ಲಿ ಕೂರಬೇಡ, ಮೊದಲು ಇಲ್ಲಿಂದ ಹೊರಡು..." ಎಂದು ಹೇಳಿ ಹೊರಗೆ ಕಳುಹಿಸಿದರು. ನನಗೆ ಏನು ಮಾಡುವುದು ಮುಂದೆ ಎಂದು ಯೋಚಿಸಲೂ ಆಗಲಿಲ್ಲ. ದಿಕ್ಕೇ ತೋಚದಾಗಿತ್ತು. ಅತ್ತು ಅತ್ತು ಮುಖವೆಲ್ಲ ಕೆಂಪಗಾಗಿತ್ತು! ಆದರೂ ಕೊನೆಯ ಪ್ರಯತ್ನ ಎನ್ನುವಂತೆ "ನಾನು ಹಿಂದಿ ಕಲಿತುಕೊಂಡು ಬಂದರೆ ನನ್ನನ್ನು ಕೆಲಸಕ್ಕೆ ಸೇರಿಸಿ ಕೊಳ್ಳುತ್ತೀರಾ?" ಎಂದು ಕೇಳಿದೆ. ಹದಿನೈದು ದಿನಗಳಲ್ಲಿ ಹಿಂದಿ ಕಲಿಯಲು ಸಾಧ್ಯವೇ ಎನ್ನುವ ಮುಖಭಾವ ತೋರಿದ ಅವರು ನನ್ನ ಪ್ರಶ್ನೆಗೆ ಉತ್ತರಿಸದೆ 'ಹೋಗು ಹೋಗು' ಎನ್ನುವಂತೆ ಕೈಯ್ಯಾಡಿಸಿದರು. ಅಲ್ಲಿಂದ ಆಚೆ ಬರುತ್ತಿದ್ದ ನನಗೆ ಒಂದು ಯೋಚನೆ ಬಂತು. 'ನಿಜ, ನಾನೇಕೆ ಹಿಂದಿ ಕಲಿಯುವ ಪ್ರಯತ್ನ ಮಾಡಬಾರದು?' ಸರಿ, ಮತ್ತೆ ಆಸೆ ಚಿಗುರಿತು, ನಿರ್ಧಾರ ಮಾಡಿದೆ, ಏನೇ ಆದರೂ ಹಿಂದಿ ಕಲಿಯುವುದು ಎಂದು.

ನಮ್ಮ ಮನೆಯ ಸಾಲಿನಲ್ಲೇ ಐದನೆಯ ಮನೆಯಲ್ಲಿದ್ದ ಶಾರದಮ್ಮ ಎನ್ನುವವರು ಹಿಂದಿ ಹೇಳಿಕೊಡುತ್ತಿದ್ದರು. ಒಂದೂವರೆ ವರ್ಷದಿಂದ ಅಲ್ಲೇ ಇದ್ದ ನಾನು ಹಿಂದಿ ಕಲಿಯಬಾರದಿತ್ತೆ? ಏನೋ ಸೋಮಾರಿತನ, ನನ್ನನ್ನು ನಾನೇ ಬೈದುಕೊಂಡೆ. ಈಗ ತಡ ಮಾಡುವಂತಿರಲಿಲ್ಲ. ನೇರವಾಗಿ ಮನೆಗೆ ಹೋದವನೇ ನಮ್ಮ ಅತ್ತಿಗೆಯ ಹತ್ತಿರ, "ಮನ್ನಿ , ಅಂಜ್ ರೂಪಾಯಿ ಕುಡಂಗೋ, ಒರು ತೇಂಗಾಯಿಕುಡಂಗೋ" (ಅತ್ತಿಗೆ ಐದು ರೂಪಾಯಿ ಕೊಡಿ, ಒಂದು ತೆಂಗಿನಕಾಯಿ ಕೊಡಿ) ಎಂದು ಕೇಳಿ, ಅದನ್ನು ತೆಗೆದುಕೊಂಡು ಶಾರದಮ್ಮನವರ ಮನೆಗೆ ಹೋದೆ. ಅದನ್ನು ಅವರ ಕಾಲಬಳಿ ಇಟ್ಟು, "ಶಾರದಮ್ಮ, ನೀವು ಮೂರು-ನಾಲ್ಕು ದಿನಗಳಲ್ಲಿ ನನಗೆ ಹಿಂದಿ ಕಲಿಸಿಕೊಡಬೇಕು. ಹೇಗೆ ಮಾಡುತ್ತಿರೋ ನನಗೆ ಗೊತ್ತಿಲ್ಲ. ನನಗೆ ಹಿಂದಿ ಬರಬೇಕು" ಎಂದೆ. ಸುಮ್ಮನೆ ನಕ್ಕರು ಅವರು. ಆಗ ದಕ್ಷಿಣಭಾರತ ಹಿಂದೀ ಪ್ರಚಾರ ಸಭಾದ ಐದು ಪುಸ್ತಕಗಳನ್ನು ತಕ್ಷಣವೇ ನನ್ನ ಕೈಯಲ್ಲಿರಿಸಿದರು. ಅವರ ಹತ್ತಿರ ಹೇಳಿಸಿಕೊಂಡು, ಆ ಪುಸ್ತಕಗಳಲ್ಲಿರುವುದನ್ನೆಲ್ಲ ಉರು ಹೊಡೆದುಬಿಟ್ಟೆ! ರಾತ್ರಿ-ಹಗಲೂ ಬರೀ ಅದೇ ಕೆಲಸವೇ, ಇನ್ನೇನೂ ಮಾಡುತ್ತಿರಲಿಲ್ಲ. ನಮ್ಮ ಅತ್ತಿಗೆಗೆ ನಗು "ಎನ್ನ ಇದು, ಎನ್ನಮೋ ಪೈತ್ಯಂ ಮಾದರಿ ಇರಕ್ಕಾನ್" (ಏನಿದು? ಯಾರೋ ಹುಚ್ಚನ ರೀತಿ ಇದಾನೆ)ಎಂದರು. ನನ್ನ ಅಣ್ಣನವರಿಗೆ ಖುಷಿ "ಹೂಂ... ಬಿಡಬೇಡ, ಕಲಿ, ಬರುತ್ತೆ" ಎಂದು ಬಹಳ ಪ್ರೋತ್ಸಾಹಿಸಿದರು. ಉತ್ಸಾಹ ತುಂಬಿದರು! ಸಂಧ್ಯಾವಂದನೆ ಮಂತ್ರ ಹೇಳುವ ಹಾಗೆ ಅದನ್ನೇ ಪಾರಾಯಣ ಮಾಡಿದೆ... ಎಲ್ಲವೂ ನನಗೆ ಅರ್ಥವಾಗತೊಡಗಿತು. *यह क्या है?* ಎಂದರೆ ಇದು ಏನು? *यह कलम है* ಎಂದರೆ ಇದು ಪೆನ್ನು, *यह कौन है?* ಎಂದರೆ ಇವನು ಯಾರು? *यह मोहन है* ಎಂದರೆ ಇವನು ಮೋಹನ. ಹೀಗೆ ಕನ್ನಡಕ್ಕೂ ನಾನೇ ಅನುವಾದ ಮಾಡಿಕೊಂಡು ಓದಿಕೊಂಡೆ. ಆಗ ನನಗೆ ಇಂಗ್ಲಿಷ್ ಅಷ್ಟಾಗಿ ಬರುತ್ತಿರಲಿಲ್ಲ. ಇನ್ನೂ ಒಂಬತ್ತನೇ ತರಗತಿಯಲ್ಲಿ ಕಲಿಯುತ್ತಿದ್ದೆ. ಅದೂ ಮದ್ರಾಸಿಗೆ ಬಂದ ಮೇಲೆ ಇಂಗ್ಲಿಷಿನ ಪರಿಚಯ ಹೆಚ್ಚಾದದ್ದು! ಅದರಿಂದ ಹಿಂದಿ ಕಲಿಕೆ ಕನ್ನಡದಲ್ಲಿ ಸಾಗಿತ್ತು.

ಅವರು ಹೇಳಿದ ದಿನ ಎಲ್ಲರಿಗಿಂತಲೂ ಮೊದಲು ನಾನು ಹೋದೆ. ಹಿಂದಿಯಲ್ಲಿ ಮಾತನಾಡಿದೆ. ಅವರಿಗೆ ಬಹಳ ಖುಷಿಯಾಯಿತು. ಅವರು ಸತ್ಯನಾರಾಯಣ, ಬಹಳ ವರ್ಷಗಳ ಕಾಲ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾದ ಮುಖ್ಯ ಕಾರ್ಯದರ್ಶಿಯಾಗಿದ್ದರು. ಅಸಾಧ್ಯದ ಮನುಷ್ಯ, ಬಹಳ ಪ್ರಭಾವೀ ವ್ಯಕ್ತಿ. ಆ ದಿನ ನನಗೆ ಬೈದಿದ್ದವರು

ಅವರೇ. ನನ್ನ ಮುಖ ನೋಡಿದರು, ಇನ್ನೂ ಚಿಕ್ಕ ಹುಡುಗ, ಅಯ್ಯೋ ಪಾಪ! ಎನಿಸಿದಕೂಡಲೇ, ಅಲ್ಲಿದ್ದ ತಮ್ಮ ಸಹಾಯಕರಿಗೆ ಹಿಂದಿಯಲ್ಲಿ , 'ಈ ಹುಡುಗನಿಗೆ ಬಾಪೂಜಿಯ ಕೋಣೆಯಲ್ಲೇ ಕೆಲಸ ಕೊಡೋಣ' ಎಂದು ಹೇಳಿದರು. ಆ ದಿನ, ಆ ಕ್ಷಣದಲ್ಲಿ ನನಗಾದ ಸಂತೋಷ ಅಷ್ಟಿಷ್ಟಲ್ಲ! ''ನೀನು ಅವರ ಕೋಣೆಯಲ್ಲಿ ಕೆಲಸ ಮಾಡುವ ನಾಲ್ಕು ಹುಡುಗರಲ್ಲಿ ಒಬ್ಬನಾಗಿರುತ್ತೀಯೆ. ನಾನು ಹೇಳಿದ್ದು ನಿನಗೆ ತಿಳಿಯಿತು ತಾನೆ ಕೃಷ್ಣಮೂರ್ತಿ! ಸರಿಯಾಗಿ ಕೆಲಸ ಮಾಡಬೇಕು'' ಎಂದರು. ನಾನು ಖುಷಿಯಿಂದ ತಲೆ ಆಡಿಸಿದೆ. ವಿಶೇಷ ಬ್ಯಾಡ್ಜ್ ಒಂದನ್ನು ಕೊಟ್ಟರು. ಸ್ವಯಂಸೇವಕರು ಹಾಕಿಕೊಳ್ಳುವ, ಗಾಂಧೀಜಿಯ ಚಿತ್ರ ಇದ್ದ ಬ್ಯಾಡ್ಜ್ ಆಗಿತ್ತದು. ನನ್ನ ಆನಂದ ಮಾತುಗಳಲ್ಲಿ ಹೇಳಲು ಬಾರದು. ಗಾಂಧೀಜಿಯನ್ನೇ ನೋಡಿರಲಿಲ್ಲ; ಇನ್ನು, ಅವರ ರೂಮಿನಲ್ಲೇ ಕೆಲಸ, ನನಗೆ ಎಂಥದೋ ಪುಳಕ ಮೈಯಲ್ಲಿ, ಅಲ್ಲಿ ನನಗೆ ಕೆಲಸ ಕೊಟ್ಟರಲ್ಲಾ ಎನ್ನುವ ಧನ್ಯತಾಭಾವ, ಮೈಯೆಲ್ಲ ಕೈಯಾಗಿ ಶ್ರೀ ಸತ್ಯನಾರಾಯಣರಿಗೆ ವಂದಿಸಿದೆ -ಅಂಥ ಮಹಾತ್ಮರನ್ನು ನೋಡಲು ಒಂದು ಅವಕಾಶ ಕೊಟ್ಟರಲ್ಲಾ ಎಂದು! ಆಗ ಇಡೀ ದೇಶವೇ ಗಾಂಧೀಜಿಯವರನ್ನು ಪೂಜಿಸುತ್ತಿತ್ತು , ಪ್ರೀತಿಸುತ್ತಿತ್ತು.

ಎಂತಹ ಮಹಾನ್‌ವ್ಯಕ್ತಿ ಅವರು!

ಆಯ್ಕೆಯಾದ ಮೇಲೆ ಗಾಂಧೀಜಿ ಬರಲಿದ್ದ ದಿನದ ಹಿಂದಿನ ರಾತ್ರಿಯೇ ನಾವೆಲ್ಲ ಅಲ್ಲಿ ಸೇರಿದೆವು. ನಾನಾಗ ಫಿಫ್ತ್ ಫಾರಂನಲ್ಲಿ ಓದುತ್ತಿದ್ದೆ. ಚಿಕ್ಕದಾದ ಬ್ಯಾಗು ನನ್ನ ಕೈಲಿ ಇತ್ತು. ಉತ್ತರದ ಕಡೆಯವರು ಹೆಚ್ಚಾಗಿ ಇದ್ದರು... ಸರಿಯಾಗಿ ಎಲ್ಲರೂ ಹೇಗೆ ನಡೆದುಕೊಳ್ಳಬೇಕೆಂದು ನಮಗೆ ಎಲ್ಲ ಸೂಚನೆಗಳನ್ನೂ ಕೊಟ್ಟರು. ನಾವೆಲ್ಲರೂ ಹಿಂದಿಯಲ್ಲೇ ಮಾತನಾಡುತ್ತಿದ್ದೆವು . ನಾನು ಹಿಂದಿ ಕಲಿತ ಹೊಸಬನಾದರೂ ಅವರೆಲ್ಲರ ಜತೆ ಮಾತನಾಡುತ್ತ ಆಡುತ್ತ, ಹಿಂದಿಯಲ್ಲಿ ಸರಾಗವಾಗಿ ಮಾತನಾಡುವುದನ್ನು ರೂಢಿಸಿಕೊಂಡೆ. ಆ ದಿನ ನಮಗೆಲ್ಲ ಬಹಳ ಸಂಭ್ರಮ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿ ನಾಯಕರೆಲ್ಲರೂ ಬಂದಿಳಿದರು ಮದ್ರಾಸಿನಲ್ಲಿ. ಜವಾಹರಲಾಲ್ ನೆಹರೂ, ಆಚಾರ್ಯ ಕೃಪಲಾನಿ, ರಾಜಾಜಿ, ಆಜಾದ್, ಸರ್ದಾರ್ ಪಟೇಲ್... ಬಹುತೇಕ ಎಲ್ಲರೂ! ಅವರೆಲ್ಲ ನಡೆದುಕೊಂಡು ಬರುವಾಗ ಓರೆಗಣ್ಣಿನಿಂದ ನೋಡುತ್ತ ರೋಮಾಂಚನ ಗೊಳ್ಳುತ್ತಿದ್ದೆ. ರೆಪ್ಪೆ ಬಡಿಯದೆ ಅವರ ಕಡೆ ನೋಡಿ ಸಂತೋಷ ಪಡುತ್ತಿದ್ದೆ. 'ಹಿಂದೂ' ದಿನಪತ್ರಿಕೆಯಲ್ಲಿ ಅಲ್ಲಿಗೆ ಯಾರು ಬಂದಿದ್ದಾರೆ, ಗಾಂಧೀಜಿ ಇರುವ ಆ ದಿನಗಳಲ್ಲಿ ಇನ್ನು ಯಾರ‍್ಯಾರು ಬರುವವರಿದ್ದಾರೆ ಎಂದೂ ತಿಳಿದುಕೊಂಡಿದ್ದೆ. ಅವರೆಲ್ಲರ ಬಗೆಗೆ ವಿವರವಾದ ವರದಿಗಳನ್ನು ಓದಿಕೊಂಡಿದ್ದುದರಿಂದ, ಅವರನ್ನು ನೋಡಿದ ಕೂಡಲೇ ಏನೋ ಒಂದು ರೀತಿಯ ಅನಿರ್ವಚನೀಯ ಆನಂದದ ಅನುಭವ, ಬಂದವರ ಜೊತೆಯಲ್ಲಿರುವ ಪುಣ್ಯ ಸಿಕ್ಕಿತಲ್ಲಾ ಎನ್ನುವ ಭಾವ.

ನನ್ನ ನೆನಪು ಸರಿಯಾಗಿದ್ದರೆ, ಸುಮಾರು ೩೫ ದಿನಗಳು ಗಾಂಧೀಜಿ ಅಲ್ಲಿ ಇದ್ದದ್ದು. ದಿನಾ ಬೆಳಗ್ಗೆ ನಾಲ್ಕು ಗಂಟೆಗೂ ಮುಂಚೆ ಎದ್ದು ಬೆಳಗಿನ ಜಾವ ನಾಲ್ಕು ಗಂಟೆಗೇ ಅವರ ಜತೆ ವಾಯುವಿಹಾರಕ್ಕೆ ಹೋಗುತ್ತಿದ್ದುದು - ಹೋಗುವುದು ಏನು? ಓಡೋಡಿ ಹೋಗುವುದು, ಗಾಂಧೀಜಿಯ ನಡಿಗೆಯ ವೇಗವನ್ನು ನಾವು-ನಮ್ಮ ಓಟದ ವೇಗದಲ್ಲಿಯೂ ಸರಿಗಟ್ಟಲಾಗುತ್ತಿರಲಿಲ್ಲ. ಅಷ್ಟು ವೇಗ ಅವರ ನಡಿಗೆ. ನಮಗೆ ಅವರ ಜತೆ ನಡೆಯಲಂತೂ ಸಾಧ್ಯವಾಗುತ್ತಿರಲಿಲ್ಲ. ಮೇಲಾಗಿ ನಾವೆಲ್ಲ ಸಣ್ಣ ಹುಡುಗರೇ, ಹೀಗೆ ಅವರು ದಾರಿಯಲ್ಲಿ ನಡೆದುಹೊರಟಾಗ ಸುಮಾರು ಜನ ಮಧ್ಯೆ ಮಧ್ಯೆ ಯಾರು ಯಾರೋ ಮಾತನಾಡಿಸುವುದು, ಇವರು ನಿಂತು ನಾಲ್ಕು ಮಾತನಾಡಿ, ಪ್ರತ್ಯುತ್ತರ ಕೊಟ್ಟು ಮುಂದೆ ನಡೆಯುವುದು. ಹಾಗೆ ನಿಂತು-ನಿಂತು ಸಾಗುವಾಗ ಜನರಿಗೆ ಅವರ ಮೇಲೆ ಅದೆಷ್ಟು ಪ್ರೀತಿ, ವಿಶ್ವಾಸ, ಅಭಿಮಾನ... ಅದು ನಿಜಕ್ಕೂ ಊಹಿಸಲೂ ಅಸಾಧ್ಯ ಎನಿಸುತ್ತಿತ್ತು.

ಗಾಂಧೀಜಿಯವರ ಸೇವೆ ಮಾಡಬೇಕಾದವರು ಅವರ ಜತೆಗೆ ಹೇಗೆ ಇರಬೇಕು ಎನ್ನುವುದನ್ನು ಸಹ ಕಲಿಯಬೇಕಿತ್ತು. ಇವೆಲ್ಲವನ್ನೂ ನಾಲ್ಕೈದು ದಿನಗಳ ಹಿಂದೆಯೇ ನಮಗೆ ಹೇಳಿಕೊಟ್ಟು, ಗಾಂಧೀಜಿಯ ದಿನನಿತ್ಯದ ಬಿಡುವಿಲ್ಲದ ಕಾರ್ಯಕ್ರಮಗಳಲ್ಲಿ ನಾವು ಹೇಗೆ ಸಹಕರಿಸಬೇಕು ಎನ್ನುವುದನ್ನು ಕಲಿಸಲಾಗಿತ್ತು. ಹೀಗೆ ಅವರಿದ್ದಷ್ಟು ದಿವಸಗಳೂ ನಮಗೆ ದಿನಗಳು ಕ್ಷಣಗಳಂತೆ ಕಳೆದ ಹಾಗೆ ಅನ್ನಿಸಿತ್ತು. ಅಂತೂ ಕೊನೆಯ ದಿನವೂ ಬಂದಿತು... ಹಾಗೆ ಸೇವೆ ಸಲ್ಲಿಸಿದ ನಮಗೆಲ್ಲ ಒಂದೊಂದು ಚರಕ, ಅದರ ಜತೆಗೆ ಒಂದು ಪ್ರಮಾಣಪತ್ರ ಕೊಟ್ಟರು. ದುರ್ದೈವವಶಾತ್ ಆ ಪ್ರಮಾಣಪತ್ರ ಮದ್ರಾಸಿನಲ್ಲಿದ್ದಾಗ ಎಲ್ಲೋ ಕಳೆದುಹೋಯಿತು.

ಅಂತೂ ನನ್ನ ಜೀವನದಲ್ಲಿ ಇದೊಂದು ಅವಿಸ್ಮರಣೀಯ ಅನುಭವ... ಗಾಂಧೀತನ, ಗಾಂಧಿತ್ವವನ್ನು ಸ್ವಲ್ಪವಾದರೂ ಮೈಗೂಡಿಸಿಕೊಳ್ಳಲು ಅವಕಾಶ ಮಾಡಿಕೊಟ್ಟ , ಸುವರ್ಣಾಕ್ಷರಗಳಲ್ಲಿ ಬರೆದಿಡಬಹುದಾಗಿದ್ದ ದಿನಗಳು ಅವು!!

ಗಾಂಧೀಜಿಗೆ ತಪ್ಪಿನಡೆದೆ

ಹೀಗೆ ನಾನು ಸಂನ್ಯಾಸ ತೆಗೆದುಕೊಳ್ಳಲಾಗದೆ ವಾಪಸ್ಸು ಬಂದೆ. ಪ್ರೌಢಶಾಲಾ ವಿದ್ಯಾಭ್ಯಾಸ ಮುಗಿದಿತ್ತು. ಮುಂದೆ ಕಾಲೇಜಿಗೆ ಸೇರಿಸಲು ೬೦ ರೂಪಾಯಿಗಳ ಫೀಸು ಕೊಡಬೇಕಾಗಿದ್ದಿತು. ನಮ್ಮ ಅಣ್ಣನವರಿಗೆ ಅಷ್ಟಾಗಿ ಇಷ್ಟವಾಗಲಿಲ್ಲ. ಅವರು ವ್ಯಾಪಾರ ಮಾಡುತ್ತಿದ್ದರು. ಅದರಲ್ಲಿ ನೆರವಾಗು ಎಂದರು. ಪದವೀಧರರಿಗೆ ಬರುವ ಸಂಬಳಕ್ಕಿಂತ ಹೆಚ್ಚು ವರಮಾನ ಬರುತ್ತದೆ ಎಂದರು. ವ್ಯಾಪಾರ-ಹಣಕಾಸು ಜವಾಬ್ದಾರಿ-ಚಿಂತೆ ನನಗೆ ಇಷ್ಟವಾಗಲಿಲ್ಲ. ಅವರಿಗೆ ಬೇಸರ ಆಗಿದ್ದಿರಬೇಕು. ಮಾಡಲು ಬೇರೆ ಕೆಲಸವಿರಲಿಲ್ಲ. ನನ್ನ ಜತೆಯ ಹುಡುಗರು

ಆಟವಾಡುತ್ತಿದ್ದರೂ ನನಗೂ ಅಂತಹದೇನೂ ವಯಸ್ಸಾಗಿಲ್ಲದಿದ್ದರೂ ಅವರ ಜತೆ ಆಟವಾಡುವ ಮನಸ್ಸಿರುತ್ತಿರಲಿಲ್ಲ. ನನ್ನ ವಿದ್ಯಾಕಲಿಕೆ ಪ್ರಾರಂಭವಾದದ್ದು ತಡವಾಗಿದ್ದುದರಿಂದ, ಸಹಜವಾಗಿಯೇ ನಾನು ಅವರೆಲ್ಲರಿಗಿಂತ ಎರಡು-ಮೂರು ವರ್ಷಗಳಷ್ಟು ದೊಡ್ಡವನು. ಮೇಲಾಗಿ ಯಾವುದೇ ಆಟದಲ್ಲಿ ಆಸಕ್ತಿಯೂ ಇರಲಿಲ್ಲ. ಮೊದಲು ನಾನೂ ಬಿಲಿಯರ್ಡ್ಸ್, ಟೆನಿಸ್ ಆಟ ಆಡುತ್ತಿದ್ದೆನಾದರೂ ಚಿಕ್ಕವನಾಗಿದ್ದಾಗ ಅದು ಒಂದು ರೀತಿಯಲ್ಲಿ 'ಪಾಪ, ಆಡಿಕೊಳ್ಳಲಿ' ಎನ್ನುವ ಇತರರ ಧೋರಣೆಯಲ್ಲಿ ಕಲಿಕೆ ಸಾಗಿತ್ತು. ನಾನೀಗ ಸಾಕಷ್ಟು ದೊಡ್ಡವನಾಗಿದ್ದೆ. ಈಗ ಆ ಆಟಗಳು ಬಹಳ ದುಬಾರಿಯವು , ಅಷ್ಟು ದುಡ್ಡು ತೆತ್ತು ಆ ಆಟಗಳನ್ನು ಮುಂದುವರೆಸಲು ಸಾಧ್ಯವಿಲ್ಲ ಎಂದು ನನಗೆ ಅರಿವಾಗಿತ್ತು. ಹಾಗಾಗಿ ಯಾವುದೇ ಆಟದ ಕಲಿಕೆ ಅಲ್ಲಿಗೇ ಮುಕ್ತಾಯವಾಗಿತ್ತು.

ಅಣ್ಣನವರು ಒಂದು ಕ್ಯಾಂಟೀನನ್ನು ನಡೆಸುತ್ತಿದ್ದರು. ನನಗೋ ಮೊದಲಿನಿಂದಲೂ ಈ ದುಡ್ಡು-ಕಾಸಿನ ವ್ಯಾಪಾರ ವ್ಯವಹಾರಗಳು ರುಚಿಸವು, ಅವುಗಳ ಮೇಲೆ ಆಸಕ್ತಿಯೇ ಇರಲಿಲ್ಲ. ಆದರೂ ಅಣ್ಣನವರು ನನಗೆ ಕ್ಯಾಂಟೀನನ್ನು ನೋಡಿಕೊಳ್ಳಲು ಹೇಳಿದಾಗ, ಹೇಳಿದ್ದು ಮಾಡುವುದಷ್ಟೇ ಉಳಿದಿದ್ದ ದಾರಿ. ಓದುವ ವಯಸ್ಸಾದರೂ ಮುಂದೆ ಓದಲಾಗದ ಪರಿಸ್ಥಿತಿ. ಬೇರೆ ಕೆಲಸವಿಲ್ಲದ್ದಾಗ ಏನಾದರೂ ಮಾಡಲೇಬೇಕಲ್ಲ.ಸರಿ, (ಯಾವ ಕೆಲಸವನ್ನೂ ಚೆನ್ನಾಗಿ ಮಾಡಬೇಕು ಎಂಬುದನ್ನು ನನ್ನ ತಂದೆಯವರಿಂದ ಕಲಿತಿದ್ದೆ. ಮತ್ತೂರಿಗೆ ಬಂದು ಬಡಗಿ ಕೆಲಸ ಕಲಿತು, ಅವರ ಕೆಲಸದಿಂದ ಭಲಾ ಎನಿಸಿಕೊಂಡಿದ್ದರು!) ಕ್ಯಾಂಟೀನ್ ಕೆಲಸ ಪ್ರಾರಂಭಿಸಿದೆ. ಮಧ್ಯಾಹ್ನ ಒಂದರಿಂದ ಸಂಜೆ ಒಂಬತ್ತರ ತನಕ ಬಿಡುವಿಲ್ಲದ ಕೆಲಸ. ಈ ಕೆಲಸದಿಂದಾಗಿ ಸಂಜೆಯ ವೇಳೆ ರಾಮಕೃಷ್ಣಾಶ್ರಮಕ್ಕೆ ಹೋಗುವ ಅವಕಾಶವೂ ತಪ್ಪಿತ್ತು. ನಿರಾಸೆ ಎನಿಸಿದರೂ ಕೊಟ್ಟ ಕೆಲಸವನ್ನು ನಿಷ್ಠೆಯಿಂದ ಮಾಡುವುದು ಮೈಗೂಡಿದ್ದ ಅಭ್ಯಾಸ, ಹೀಗೆ ಸಾಗಿತ್ತು.

ನಮ್ಮ ಕ್ಯಾಂಟೀನ್‌ಗೆ ಒಬ್ಬ ಗೆಳೆಯ ಬರುತ್ತಿದ್ದ. ಅವನ ಹೆಸರು ರಂಗನಾಥಶರ್ಮ, ಸಾಮಾನ್ಯವಾಗಿ ಪ್ರತಿದಿನ ಅವನ ಹಾಜರಿ ಇರುತ್ತಿತ್ತು. ಬಂದಾಗಲೆ ಅವನು ಯಾವುದಾದರೂ ಮಾತೆತ್ತಿದರೆ ಗಾಂಧೀಜಿಯನ್ನು ಹಳಿಯುವುದಿತ್ತು. ನಾನು ಗಾಂಧೀಜಿಯ ಪರಮಭಕ್ತನೆಂದು ಹೇಗೋ ತಿಳಿದುಕೊಂಡಿದ್ದ ಅವನು ಆಗಾಗ ನನ್ನನ್ನು ಕೆಣಕುವುದೂ ಇತ್ತು. ಆಗ ನಾನೂ ಸುಮ್ಮನೆ ಇರದೆ ಅವನ ಮಾತಿಗೆ ಸೋಲದೆ ಸರಿಯಾದ ಜವಾಬು ಕೊಡುತ್ತಿದ್ದೆ. ಆಗಾಗ ನಮ್ಮಿಬ್ಬರಿಗೂ ಮಾತಿನ ಚಕಮಕಿ ಆಗುತ್ತಿತ್ತು. ಒಂದು ದಿನ ಸಂಜೆ ಎಂದಿನಂತೆ ಕ್ಯಾಂಟೀನಿಗೆ ಹಾಜರಾದ ರಂಗನಾಥನು ನನ್ನನ್ನು ಕಂಡವನೇ ಜೋರಾಗಿ ತಮಿಳಿನಲ್ಲಿ "ಏಯ್ ನಿನ್ನ ಗಾಂಧಿಯನ್ನು ಯಾರೋ ಸುಟ್ಟು ಹಾಕಿದರು ಕಣೋ!" ಎಂದ. ನನ್ನ ಮೈನಡುಗಿತು. ಕೈಕಾಲುಗಳು ಥರಥರ ಅದುರಿದವು. ಮುಖ ಕೆಂಪಾಗಿ ರಕ್ತವೆಲ್ಲಾ ತಲೆಗೆ ಏರಿದಂತೆ ಭಾಸವಾಯಿತು... "ಏನು ಹೇಳುತ್ತಿದ್ದೀಯಾ ನೀನು ರಂಗನಾಥ?" ಎಂದು ಭಾವುಕನಾಗಿ ಹೇಳಿದವನೇ, ಕೈ ಎತ್ತಿ ಶಕ್ತಿಯನ್ನೆಲ್ಲ ಬಿಟ್ಟು ಅವನ ಕಪಾಲಕ್ಕೆ ಫಟೀರೆಂದು ಒಂದೇಟು ಬಿಗಿದೆ! ಈ ಕ್ಷಣದಲ್ಲಿ ನನಗೆ ನಾನೇನು ಮಾಡುತ್ತಿದ್ದೇನೆ ಎಂಬ ಪರಿವೆಯೇ ಇರಲಿಲ್ಲ. ಅಷ್ಟು ಆವೇಶ ಬಂದಿತ್ತು. "ಇನ್ನೆಂದೂ ಇಂತಹ ಮಾತಾಡಬೇಡ" ಎಂದೆ ಎಚ್ಚರಿಸುವವನಂತೆ ತೋರು ಬೆರಳೆತ್ತಿ , ಕಣ್ಣರಳಿಸುತ್ತಾ. ನಾನು ಬಿಗಿದ ಬಲವಾದ ಏಟಿಗೆ ನೋವು ತಿಂದು ತತ್ತರಿಸಿ ಹೋದ ಅವನು ಧೊಪ್ಪನೆ ಕೆಳಗೆ ಬಿದ್ದ. ಅಷ್ಟಾದರೂ ಸಾವರಿಸಿಕೊಂಡು, ಅವನು ಹೇಳಿದ ಸುದ್ದಿಯನ್ನು ನಾನು ನಂಬಿಲ್ಲ ಎಂದು ಅವನಿಗೆ ತಿಳಿದು, ತನ್ನ ಮಾತು ಮುಂದುವರೆಸಿದ, "ನಿಜ ಕಣೋ ಕೃಷ್ಣಮೂರ್ತಿ!! ನಾ ಸುಳ್ಳು ಹೇಳುತ್ತಿಲ್ಲಾ...! ಗಾಂಧೀಗೆ ಗುಂಡಿಕ್ಕಿದ್ದಾರೆ!!" ಎಂದ. ಈಗ ನಾನು ಮೂರ್ಛೆ ಹೋಗುವಂತಾಗಿದ್ದೆ. "ನಿಜವಾಗಿಯೂ ಹೇಳುತ್ತಿದ್ದೀಯಾ ರಂಗನಾಥ್?" ಎಂದೆ. ನನ್ನ ಧ್ವನಿ ನನಗೇ ಪರಿಚಯ ಇಲ್ಲದಂತಾಗಿ, ಕಟ್ಟಿಕೊಂಡಂತಾಗಿತ್ತು. "ಹೌದು... ಕೃಷ್ಣಮೂರ್ತಿ, ನಿಜಕ್ಕೂ" ಎಂದ. ನನಗೆ ಇನ್ನು ತಡೆದುಕೊಳ್ಳಲಾಗಲಿಲ್ಲ. ಅಲ್ಲಿದ್ದವರೊಬ್ಬರನ್ನು ಕೇಳಿ ಅವರ ಸೈಕಲ್ ತೆಗೆದುಕೊಂಡು ಒಂದೇ ಉಸಿರಿಗೆ 'ಹಿಂದೂ' ಆಫೀಸಿಗೆ ಹೋದೆ. ಮೌಂಟ್ ರೋಡಿನ ಆ ಆಫೀಸು ನಮ್ಮ ಕ್ಯಾಂಟೀನಿನಿಂದ ಹತ್ತು ನಿಮಿಷದ ದೂರ... ಆ ದಿನ ನಾನು ಬಹುಶಃ ಮೂರು-ನಾಲ್ಕು ನಿಮಿಷದಲ್ಲಿ ಅಲ್ಲಿದ್ದೆ!

ಅಂತಹ ಉದ್ವೇಗ, ಆವೇಶಕ್ಕೆ ಒಳಗಾಗಿತ್ತು ಮನಸ್ಸು. ಎಂಥದೋ ಭಯ-ಕಳವಳ! ಅಂತೂ ಅಲ್ಲಿಗೆ ಹೋದಾಗ 'ಹಿಂದೂ' ಆಫೀಸಿನ ಗೇಟಿಗೆ 'ಗಾಂಧೀಜಿ ಶಾಟ್ ಡೆಡ್' ಎಂದು ದೊಡ್ಡದಾಗಿ ಬರೆದು ಹಾಕಲಾಗಿತ್ತು! ನನಗೆ ಆಘಾತ ಆಗಿತ್ತು. ಏನನ್ನೋ ಕಳೆದುಕೊಂಡ ಭಾವನೆ. ಅಳು ಒತ್ತರಿಸಿ ಬಂದು ಅಲ್ಲೇ ಕುಸಿದು ಕುಳಿತೆ.

ಗುಂಡಿಟ್ಟು ಕೊಂದ ಹಂತಕನ ಬಗೆಗೆ ಕೋಪಿಸಿಕೊಳ್ಳದ ಮಹಾತ್ಮ ಅವರು!'ನಾನೇ ಗಾಂಧೀಜಿಗೆ ತಪ್ಪು ನಡೆದೆ' ಎಂದುಕೊಂಡು ನೊಂದೆ...

ಮಾರನೆಯ ದಿನ ರಂಗನಾಥ ಕ್ಯಾಂಟೀನಿಗೆ ಬಂದಾಗ ಹಿಂದಿನ ದಿನದ ನನ್ನ ವರ್ತನೆಗೆ ನಾನೇ ಪಶ್ಚಾತ್ತಾಪಪಟ್ಟು, ನಾಚಿ, "ಸಾರಿ, ಕ್ಷಮಿಸು" ಎಂದೆ. ಆ ಎರಡು ಪದಗಳಲ್ಲಿದ್ದ ನನ್ನ ನೋವು ಅರ್ಥವಾದವನಂತೆ ಅವನು "ಇಲ್ಲ... ಇಲ್ಲ... ನನಗೆ ನಿನ್ನ ಭಾವನೆಗಳು ಅರ್ಥವಾಗುತ್ತವೆ. ಗಾಂಧೀಜಿಯ ಬಗೆಗೆ ನಿನ್ನ ಮನಸ್ಸಿನಲ್ಲಿರುವ ಉನ್ನತ ವಿಚಾರಗಳು, ಆ ಬಾಂಧವ್ಯ ನನಗೆ ಗೊತ್ತು! ನನ್ನನ್ನು ನೀನೂ ಕ್ಷಮಿಸು, ನಾನೇ ನಿನಗೆ ಈ ಕೆಟ್ಟ ಸುದ್ದಿ ಕೊಡುವ ಹಾಗಾಯಿತು" ಎಂದು ಹೇಳಿದ. ಅವನ ಧ್ವನಿಯೂ ಸ್ವಲ್ಪ ನಡುಗಿ, ಅವನೂ ಆ ಸುದ್ದಿಯಿಂದ ಬೇಸರವಾದವನಂತೆ ಕಂಡ!

೧೨. ಲೋಕಾನುಭವದ ಮೊದಲ ಹೆಜ್ಜೆ

ರೈಲಿನಲ್ಲಿ ಕೊಲೆ

ಮಾರ್ಚ್ ತಿಂಗಳ ಬಿರುಬಿಸಿಲು, ಮದ್ರಾಸಿಗೆ ಹೊರಟಿದ್ದ ನಾನು, ಮನೆಯಲ್ಲಿಕಟ್ಟಿಕೊಟ್ಟಿದ್ದ ಪೂರಿ ತಿನ್ನುತ್ತಿದ್ದೆ ರೈಲಿನಲ್ಲಿ ಕುಳಿತು. ಆಗ ನನ್ನ ಎದುರಿಗೆ ಕುಳಿತಿದ್ದ ಕುಟುಂಬದ ಪರಿಚಯವಾಯಿತು. ವರದರಾಜನ್ ಹಿರಿಯರು, ದೊರೆಸ್ವಾಮಿ-ಕುಮುದ ಅಣ್ಣ ತಂಗಿಯರು, ಇವರಿಬ್ಬರ ಸೋದರಮಾವ ವರದರಾಜನ್. ಎಲ್ಲರೂ ಅಯ್ಯಂಗಾರರು. ಅವರೆಲ್ಲರೂ ದೊರೆಸ್ವಾಮಿಗೆ ಹುಡುಗಿ ನೋಡಲಿಕ್ಕೆಂದು ಹೊರಟಿದ್ದರು. ನಾವು ಪರಸ್ಪರ ಪರಿಚಯ ಮಾಡಿಕೊಂಡು ಮಾತು ಕತೆಗೆ ಪ್ರಾರಂಭಿಸಿದಾಗ ಈ ವಿಷಯ ತಿಳಿಯಿತು. ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಿದ್ದೆವು. ನಮ್ಮ ಸಂಭಾಷಣೆ ಹೀಗೆಯೇ ಸಾಗುತ್ತಿದ್ದಾಗ ಕಾಟ್ಪಾಡಿಯಲ್ಲಿ ರೈಲು ನಿಂತಿತು. ನಾವೆಲ್ಲ ಊಟ ಮಾಡಿದೆವು, ರೈಲು ಮುಂದಕ್ಕೆ ಹೊರಟಿತು. ರೈಲು ಹೊರಟ ಹದಿನೈದು ನಿಮಿಷಗಳಲ್ಲಿ ಒಬ್ಬ ಇದ್ದಕ್ಕಿದ್ದ ಹಾಗೆ ಕತ್ತಿ ಹಿಡಿದುಕೊಂಡು ಎಲ್ಲರಿಗೂ ಚುಚ್ಚಲು ಪ್ರಾರಂಭಮಾಡಿದ. ಎಲ್ಲರಿಗೂ ಚುಚ್ಚಿ ಚುಚ್ಚಿ ಎಳೆಯುತ್ತಿದ್ದಾನೆ, ಕತ್ತಿಯನ್ನು ಅವರೆಲ್ಲರ ಹೊಟ್ಟೆಯಿಂದೀಚೆಗೆ. ರಕ್ತ ಬುಳು ಬುಳು ಹರಿದು ಬರುತ್ತಿದೆ. ನನಗೋ ಗಾಬರಿಯಾಗಿ ಭಯದಿಂದ ನೋಡುತ್ತಿದ್ದೆ. ಎಲ್ಲರೂ, ಅಯ್ಯೋ ಅಯ್ಯೋ ಎನ್ನುತ್ತಿದ್ದಾರೆ. ಯಾರಿಗೂ ಏನೂ ಮಾಡಲು ತಿಳಿಯುತ್ತಿಲ್ಲ. ನಾನು ಸಹ 'ಅಯ್ಯೋ ಅಯ್ಯೋ' ಎಂದು ಕೂಗುತ್ತಿದ್ದೆ. ಚೈನು ಎಳೆದು ರೈಲು ನಿಲ್ಲಿಸಬೇಕೆಂದೂ ಹೊಳೆಯಲಿಲ್ಲ. ಅವನನ್ನು ಹಿಡಿಯಲೂ ಯಾರೂ ಬರಲಿಲ್ಲ. ಎಲ್ಲರನ್ನೂ ಚುಚ್ಚಿಕೊಂಡು ನಮ್ಮ ಹತ್ತಿರಕ್ಕೆ ಬಂದ. ಕಡೆಗೆ ದೊರೆಸ್ವಾಮಿ ಚೈನು ಎಳೆಯುವುದಕ್ಕೆ ಪ್ರಯತ್ನಿಸಿದ. ಅಷ್ಟರಲ್ಲೇ ಅವನು ದೊರೆಸ್ವಾಮಿ ಹೊಟ್ಟೆಗೂ ಇರಿದ. ಅವನ ತಂಗಿ ಕುಮುದಳಿಗೆ ಈ ಗಲಾಟೆಯಲ್ಲಿ ಒಂದು ಕೈ ಬೆರಳೂ ಹೋಯ್ತು. ಇಷ್ಟಾದರೂ ಅವನು ನನ್ನನ್ನೇನೂ ಮಾಡಲಿಲ್ಲ. ಆಶ್ಚರ್ಯ ನನಗೆ! ಈ ಪ್ರಕರಣದ ವಿಚಾರಣೆ ವೆಲ್ಲೂರಿನಲ್ಲಿ ಆದಾಗ ನಾನೂ ಹೋಗಿದ್ದೆ. ಇವನನ್ನು ಇರಿಯದೆ ಬಿಡಲು ಕಾರಣ ಏನು ಎಂದು ಕೇಳಿದ ಪ್ರಶ್ನೆಗೆ, ಹಾಗೆ ಇರಿದವನು "ನಾನು ಇವನನ್ನು ಮುಸಲ್ಮಾನ ಎಂದೇ ತಿಳಿದೆ, ಅದಕ್ಕೇ ಅವನನ್ನು ಇರಿಯದೆ ಸುಮ್ಮನೇ ಬಿಟ್ಟೆ" ಎಂದ ನನ್ನನ್ನು ನೋಡಿ! ಜುಬ್ಬಾ ಪೈಜಾಮ ಹಾಕಿಕೊಂಡಿದ್ದ ನನ್ನನ್ನು ತನ್ನದೇ ಕೋಮಿನವನು, ಮುಸಲ್ಮಾನ ಎಂದು ತಿಳಿದು, ನನ್ನೊಬ್ಬನನ್ನು ಇರಿಯದೆ ಬಿಟ್ಟು ಹೋದ. ನನಗೋ, ಅಮಾಯಕರಾದ ಅಷ್ಟೂ ಜನರನ್ನು ಇರಿದ ಅವನು ನನ್ನನ್ನೂ ಇರಿದು ಬಿಟ್ಟಿದ್ದರೆ ಚನ್ನಾಗಿಯೇ ಇರುತ್ತಿತ್ತು , ನಾನು ಆಗ ಸತ್ತಿದ್ದರೂ ಪರವಾಗಿರಲಿಲ್ಲ , ಎನಿಸಿತ್ತು. ಯುದ್ಧಕ್ಕೆ ಹೋದವನು ಏನೂ ಮಾಡದೆ ವಾಪಸ್ ಬಂದಂತಾಗಿತ್ತು!

ಏನೇ ಆದರೂ ಯಾರಿಗೇ ಆದರೂ ಈ ಕೋಮುಗಲಭೆ ಎನ್ನುವುದು ಬಹಳ ಕೆಟ್ಟದ್ದು. ಕ್ರೌರ್ಯ ಯಾರ ಪಂಗಡದವರೂ ಕಡಮೆ ಇಲ್ಲ ಎಂದು ತೋರಿಸಿ ಬಿಡುತ್ತದೆ. ಒಬ್ಬರು ಸದ್ದಿಲ್ಲದೇ, ಸವಲತ್ತುಗಳನ್ನು ಒದಗಿಸುತ್ತೇವೆ ಎಂದು ಹೇಳಿ ಮತಾಂತರಿಸಿ ನಮಗೆ ಅನ್ಯಾಯ ಮಾಡುವವರು, ಮತ್ತೊಬ್ಬರು ಮಾತೆತ್ತಿದರೆ ಆಯುಧ ತೆಗೆಯುವವರು! ಯಾರು ನಮಗೆ ಉಪಕಾರ ಮಾಡಿರುವುದೂ ಅಷ್ಟರಲ್ಲೇ ಇದೆ! ಏನೇ ಆದರೂ ದ್ವೇಷಕ್ಕೆ ದ್ವೇಷ ಉತ್ತರವಲ್ಲ...! ಎಂತಹ ಕ್ರೂರಿ ಇರಬಹುದು ಅವರು... ಹಾಗೆ ಕೊಲೆ ಮಾಡುವ ಮನಸ್ಸು ಬಂದಾಗಲೂ 'ನಮ್ಮವರನ್ನು' ಇರಿಯಬಾರದು ಎನ್ನುವ ಪ್ರಜ್ಞೆ ಇರುತ್ತದೆಯಲ್ಲಾ , ಅದು ಇನ್ನೂ ಕ್ರೌರ್ಯ ಎನಿಸಿಕೊಳ್ಳುತ್ತದೆ ನಿಜಕ್ಕೂ.

ಈ ಪ್ರಕರಣ ನಡೆಯುವ ಹೊತ್ತಿಗೆ ನನ್ನ ಮೇಲೆ ಸಾಕಷ್ಟು 'ಗಾಂಧೀಜಿ ಪ್ರಭಾವ' ಆಗಿತ್ತು! ಆ ಸ್ಫೂರ್ತಿಯಲ್ಲೇ ನಾನು ಈ ಇರಿತಕ್ಕೆ ಒಳಗಾಗಿ ಆಸ್ಪತ್ರೆ ಸೇರಿದ್ದ ದೊರೆಸ್ವಾಮಿ, ವರದರಾಜನಿಗೆ ರಕ್ತ ಕೊಟ್ಟಿದ್ದು. ಅವರಿಬ್ಬರೂ ಸಾಕಷ್ಟು ರಕ್ತ ಕಳೆದುಕೊಂಡಿದ್ದು ಗಂಭೀರ ಪರಿಸ್ಥಿತಿಯಲ್ಲಿದ್ದರು. ರಕ್ತವನ್ನು ಪಡೆದ ಇಬ್ಬರಲ್ಲಿ ವಧುವನ್ನು ನೋಡಲು ಹೊರಟಿದ್ದ ದೊರೆಸ್ವಾಮಿ ಬದುಕಲಿಲ್ಲ. ಒಂದು ವಾರದ ಹಿಂದೆ ತಾನೆ ತಂದೆಯಾಗಿದ್ದ ವರದರಾಜನ್ ಬದುಕಿದರು. ಕುಮುದ ಎಡಗಾಲಿನ ಕಿರುಬೆರಳನ್ನು ಕಳೆದುಕೊಂಡಳು.

ಇದಾದ ೨-೩ ತಿಂಗಳಿಗೆ ನನಗೆ ಜಾಂಡೀಸ್ ಆಯಿತು. ಆ ಭಯಂಕರ ಜಾಂಡೀಸ್‌ಗೆ ಪಾರ್ಥನಾರಾಯಣ ಪಂಡಿತರು ಎನ್ನುವ ಆಯುರ್ವೇದಿಕ್ ಡಾಕ್ಟರ್ ನನಗೆ ಔಷಧಿ ಕೊಟ್ಟರು. ಶಿವಮೊಗ್ಗದಲ್ಲಿದ್ದಾಗ ನನಗೆ ಅವರ ಮನೆಯಲ್ಲಿ 'ವಾರ' ಇತ್ತು. ಪರಿಚಯವೂ ಸಾಕಷ್ಟಿದ್ದುದರಿಂದ ಬಹಳ ಮುತುವರ್ಜಿ ವಹಿಸಿ ನನ್ನನ್ನು ನೋಡಿಕೊಂಡು, ಚೆನ್ನಾಗಿ ಔಷಧಿಕೊಟ್ಟು ಜಾಂಡೀಸ್ ವಾಸಿ ಮಾಡಿದರು.

'ಕಲ್ಕಿ' ಕೃಷ್ಣಮೂರ್ತಿ

ತಮಿಳಿನಲ್ಲಿ 'ಕಲ್ಕಿ'ಕೃಷ್ಣಮೂರ್ತಿ ಬಹಳ ಒಳ್ಳೆಯ ಕಾದಂಬರಿ ಕಾರರು. ಒಳ್ಳೆಯ ಪತ್ರಕರ್ತ ಸಹ. 'ಕಲ್ಕಿ' ಎನ್ನುವ ವಾರಪತ್ರಿಕೆಯನ್ನು ಅವರು ಹೊರಡಿಸಿ, ಅದು ಅತ್ಯಂತ ಜನಪ್ರಿಯವಾಗಿ, ಬರೀ ಕೃಷ್ಣಮೂರ್ತಿ ಎನ್ನುವ ಹೆಸರಿದ್ದ ಅವರು 'ಕಲ್ಕಿ ಕೃಷ್ಣಮೂರ್ತಿ' ಆದರು. ಅವರು ಬಹಳ ಒಳ್ಳೆಯ ವಾಗ್ಮಿ, ಬರಹಗಾರ, ಶತಶಃ ಗಾಂಧೀವಾದಿ. ಅವರು ಏನೇ ಬರೆದರೂ ಗಾಂಧೀಜಿಯೇ ಅವರ ಬರವಣಿಗೆಗಳ ಕೇಂದ್ರ ಬಿಂದು. ಗಾಂಧೀಜಿಯ ಜೀವನ ಚರಿತ್ರೆಯನ್ನು ಸಹ ಕಲ್ಕಿ ಕೃಷ್ಣಮೂರ್ತಿ ತಮಿಳಿನಲ್ಲಿ ಬರೆದಿದ್ದಾರೆ. ನನಗೆ ಅವರ

ಬರಹಗಳು ಎಂದರೆ ಬಲುಪ್ರೀತಿ, ಇಷ್ಟ . ನಾನು ಅವರನ್ನು ತುಂಬಾ ಮೆಚ್ಚಿಕೊಳ್ಳುತ್ತಿದ್ದೆ.

ಕಲ್ಕಿ ಪತ್ರಿಕೆಯಲ್ಲಿ 'ಅಲೈ ಓಶೈ' ಎನ್ನುವ ಕಾದಂಬರಿ ಬರೆಯಲು ಪ್ರಾರಂಭಿಸಿದರು. ಅದು ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ರೋಮಾಂಚಕಾರಿ ಕಥೆ! ಬಹಳ ಜನಪ್ರಿಯ ಕಥೆ ಅದು. ನಾನು ಪ್ರತಿವಾರವೂ ಬೆಳಗಿನ ಜಾವವೇ ಎದ್ದು 'ಕಲ್ಕಿ' ಪತ್ರಿಕೆ ತರುತ್ತಿದ್ದೆ. ಆ ಕಥೆ ಓದಬೇಕು ಎಂದು ಆಸಕ್ತಿ. ಇಷ್ಟಾಗಿ ನನಗೆ ತಮಿಳು ಓದುವುದಕ್ಕೆ ಬರುತ್ತಿರಲಿಲ್ಲ. ಮತ್ತೇಕೆ ಈ ಸಂಭ್ರಮ ಎಂದರೆ, ನಮ್ಮ ತಮಿಳು - ಅತ್ತಿಗೆ ನನಗೋಸ್ಕರವಾಗಿ ದಿನವೂ ಆ ಕಥೆಯನ್ನು ಓದಿ ಹೇಳುತ್ತಿದ್ದರು! ಅತ್ತಿಗೆಯನ್ನು ಈ ವಿಷಯದಲ್ಲಿ ನಾನು ಮರೆಯುವ ಹಾಗಿಲ್ಲ. ಬಹಳ ಸ್ವಾರಸ್ಯವಾದ ಕಥೆಯಾದ್ದರಿಂದ ಇಬ್ಬರೂ ಅಷ್ಟೇ ಆಸಕ್ತಿಯಿಂದ ಓದಿ-ಓದಿಸಿಕೊಳ್ಳುತ್ತಿದ್ದೆವು. ಆದರೆ ಅತ್ತಿಗೆಯ ದಿನಚರಿ ಒಂದೇ ರೀತಿ ಇರುತ್ತಿರಲಿಲ್ಲ. ಕೆಲವೊಮ್ಮೆ ಅವರಿಗೆ ಕಥೆ ಓದಿ ಹೇಳಲು ಬೇಸರ ಆಗುತ್ತಿತ್ತು. 'ಅಯ್ಯೋ, ಕೆಲಸವಿದೆ, ಆಮೇಲೆ ನೋಡೋಣ' ಎಂದು ಬಿಡುತ್ತಿದ್ದರು. ನನಗೋ ಭಾರೀ ಕಾತುರ. ಆಮೇಲೆ ದಿನಕಳೆದಂತೆ ಈ ಕೆಲಸ ಅವರಿಗೆ ತೊಂದರೆದಾಯಕ ಆಗಿದೆಯೇನೋ ಎನಿಸತೊಡಗಿತು ನನಗೆ. ಸರಿ, ಅವರಿಗಾದರೂ ನಾನೇಕೆ ತೊಂದರೆಕೊಡಬೇಕು ಎಂದು ನಿಶ್ಚಯಿಸಿ 'ನಾನೇ ತಮಿಳು ಕಲಿತರಾಯಿತು, ಹೇಗಾದರೂ ತಮಿಳು ಮಾತನಾಡುವುದು ಬರುತ್ತದೆ. ೨೬-೨೭ ಅಕ್ಷರಗಳ ಮಾಲೆ ತಮಿಳಿನದು, ಇಂಗ್ಲಿಷ್ ತರಹ! ಅದನ್ನು ನಾನೇ ಕಲಿತರಾಯಿತು, ಕಲಿತು ಓದುವುದು' ಎಂದು ತೀರ್ಮಾನಿಸಿದೆ. ಹಠ ಬಿಡದೆ ಎರಡು ದಿನಗಳಲ್ಲಿ ಕಲಿತೂ ಕಲಿತೆ ! ಆದರೆ ತಮಿಳು ಭಾಷೆಗೂ, ನಮ್ಮ ಭಾಷೆ ಕನ್ನಡಕ್ಕೂ ಬಹಳ ವ್ಯತ್ಯಾಸ... ಅಲ್ಲಿ ಮಹಾಪ್ರಾಣದ ಅಕ್ಷರಗಳಿಲ್ಲ. ಆದ್ದರಿಂದ ಬರೆಯುವುದನ್ನು ಓದಿದಾಗ ನಮಗೆ ಭಾಷೆ ಬರದೆ, ಬರೀ ಅಕ್ಷರ ಗುರುತು ಹಿಡಿಯುವುದು ಮಾತ್ರ ಬಂದರೆ ಅದು ಅಸಂಬದ್ಧ ಅನಿಸೀತು, ಫಜೀತಿ ಅಕ್ಷರಗಳು ಅನಿಸೀತು. ಉದಾಹರಣೆಗೆ 'ಭೀಮ' ಎನ್ನುವುದನ್ನು 'ಪೀಮ' ಎಂದು ಓದಬೇಕಾಗುತ್ತದೆ. ಹಾಗೆಯೇ 'ಗಂಡು' 'ಕಂಟು' ಆಗುತ್ತದೆ, ಗಾಂಧಿ ಎನ್ನುವುದು 'ಕಾಂತಿ' ಎಂದಾಗುತ್ತದೆ. ಹೆಸರುಗಳು, ಅದರಲ್ಲೂ ನಾಮಪದಗಳು ಗೊತ್ತಾಗುವುದಿಲ್ಲ ಸ್ಪಷ್ಟವಾಗಿ. ಆ ಭಾಷೆಯಲ್ಲಿನ ಒಂದು ವ್ಯತ್ಯಾಸ ಎಂದರೆ, ಆ ಭಾಷೆಯನ್ನು ಮಾತಾಡುವುದಕ್ಕೆ ಮೊದಲು ಕಲಿತರೆ ಬಹಳ ಬೇಗನೇ ಬರೆಯುವುದು ಓದುವುದು ನಮ್ಮ ಹಿಡಿತಕ್ಕೆ ಬರುತ್ತದೆ. ಬಾಕಿ ಭಾಷೆಗಳ ಹಾಗಲ್ಲ, ಅದು! ಯಾವುದೇ ಭಾಷೆಯಲ್ಲಿ ನನಗೆ ತಿಳಿದಿರುವಂತೆ, ಆ ಭಾಷೆಯ ಲಿಪಿ ಹೇಗಿರುತ್ತದೆಯೋ ಅದು ಹಾಗೆಯೇ ಓದಿಸಿಕೊಳ್ಳುತ್ತದೆ. ಭಾಷಾಲಿಪಿ ಬಂದರೆ, ಭಾಷೆ ಬಂದಂತೆಯೇ! ಹೀಗಾಗಿ ನನಗೆ ತಮಿಳು ಮಾತು ಬರುವುದು ಅನುಕೂಲವೇ ಆಯಿತು. ತಮಿಳು ಕಲಿತ ನಾನು, ನಿಧಾನವಾಗಿ ಕಥೆಯನ್ನು ನಾನೇ ಓದಿಕೊಳ್ಳಲು ಪ್ರಾರಂಭ ಮಾಡಿದೆ. ಆದರೂ ನಾನು ಮೊದಲೇ ಹೇಳಿರುವಂತೆ ಕೆಲವು ಹೆಸರುಗಳು ನನಗೆ ಗೊತ್ತಾಗುತ್ತಿರಲಿಲ್ಲ. ಕಲಿಯುವಾಗಲೂ ನಾನು ಪಟ್ಟಶ್ರಮ ಅಷ್ಟಿಷ್ಟಲ್ಲ. ಒಂದೊಂದು ಅಕ್ಷರವನ್ನೂ ಹತ್ತು-ಹತ್ತು ಸಲ ಬರೆಯುತ್ತಿದ್ದೆ. ಅದನ್ನು ಓದಿ, ಆಡಿ ಅಭ್ಯಾಸ ಮಾಡುತ್ತಿದ್ದೆ. ಸಂಕೇತಿ ಭಾಷೆಯಲ್ಲೂ ಶೇ. ೫೦ ತಮಿಳಿದ್ದರೂ, ತಮಿಳು ಲಿಪಿ ಕಲಿಯುವಾಗ ಅದರ ಕಷ್ಟ ಗೊತ್ತಾಗಿ ಸಂಕೇತಿಗೆ ಲಿಪಿ ಇಲ್ಲದಿರುವುದು ಒಳ್ಳೆಯದೇ ಆಯಿತು ಎನಿಸಿತು!

ಹೀಗೆ ತಮಿಳು ಲಿಪಿ ಕಲಿತ ನಾನು 'ಅಲೈ ಓಶೈ'ಯನ್ನು ಸ್ವತಂತ್ರವಾಗಿ ಓದ ತೊಡಗಿದೆ. ಕಲ್ಕಿಯವರ ಕೃತಿಗಳನ್ನು ಓದುವುದಕ್ಕಾದರೂ ತಮಿಳು ಕಲಿಯಬೇಕು ಎನ್ನುವ ನನ್ನ ಹಠ, ಆಸೆ, ಪೂರ್ತಿಯಾಗಿತ್ತು. ನಮ್ಮ ಅತ್ತಿಗೆಯವರು ಅದನ್ನು ಓದುತ್ತಿದ್ದು , ನಾನು ಕೇಳುತ್ತಿದ್ದಾಗಲೇ ಅದು ನನ್ನ ಮನಸ್ಸಿಗೆ-ಕನ್ನಡಕ್ಕೆ ಅನುವಾದವಾಗಿಯೇ ಅಂಟುತ್ತಿತ್ತು. ಈಗಲಂತೂ ನಾನೇ ಓದುವಾಗ, 'ಇದು ಕನ್ನಡದಲ್ಲಿದ್ದಿದ್ದರೆ ಹೇಗಿರುತ್ತಿತ್ತು?' ಎನ್ನುವ ತುಡಿತ ಹೆಚ್ಚೇ ಆಯಿತು. ಆದರೆ ನಾಮಪದಗಳ ಪರದಾಟ : ಭಾರತಿ-ಪಾರತಿಯಾಗಿ, ಧಾರಿಣಿ-ತಾರಿಣಿಯಾಗಿ, ಬಾಬಾ-ಪಾಪಾ ಆಗುತ್ತಿತ್ತು. ನಾನೇ ಅನುವಾದ ಮಾಡಬಾರದೇಕೆ ಎನಿಸಿತು ತೀವ್ರವಾಗಿ. ಸರಿ, ಮಾಡಿಯೇ ನೋಡೋಣ ಎಂದು ತೀರ್ಮಾನಿಸಿದೆ. ಧಾರಿಣಿ-ತಾರಿಣಿ ಎರಡೂ ಹೆಸರುಗಳಿರುವಾಗ ಕಾದಂಬರಿಕಾರನು ಉಪಯೋಗಿಸುತ್ತಿರುವ ಹೆಸರು ಯಾವುದು ಎಂದು ತಿಳಿಯಬೇಕಲ್ಲ ನನಗೆ, ಅದಕ್ಕೆ!

'ಅಲೈ ಓಶೈ' ಸಾಮಾನ್ಯದ ಕಾದಂಬರಿಯಲ್ಲ. ನಾನು ಸಾಹಿತ್ಯ-ಕ್ಷೇತ್ರಕ್ಕೆ ಪದಾರ್ಪಣ ಮಾಡಲು ಕಾರಣವಾದ ಆ ಕಾದಂಬರಿಯನ್ನು ಬರೆದ ಕಲ್ಕಿಯವರಿಗೆ ಮರಣೋತ್ತರವಾಗಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಹ ಸಿಕ್ಕಿದೆ. ಸ್ವಾತಂತ್ರ್ಯದ ಹಿನ್ನೆಲೆ ಇರುವ ಈ ಕಾದಂಬರಿಯ ರಚನಕರ್ತ ಮಯೂರಂ ಜಿಲ್ಲೆಯ ಬಡುಕುಟುಂಬದಲ್ಲಿ ೧೮೯೯ರಲ್ಲಿ ಹುಟ್ಟಿದವರು. ತಿರುಚಿರಾಪಳ್ಳಿಯ ನ್ಯಾಷನಲ್ ಕಾಲೇಜ್‌ನ ಜಾಣ ವಿದ್ಯಾರ್ಥಿ, ಶಾಲೆ ಬಿಟ್ಟು, ಅಸಹಕಾರ ಚಳವಳಿಯ ಸಂದರ್ಭದಲ್ಲಿ ಜೈಲು ಸೇರಿದರು. ಅಪ್ಪಟ ಗಾಂಧೀವಾದಿಯೆನಿಸಿದ ಅವರು ಎರಡು ಬಾರಿ ಜೈಲುವಾಸ ಮಾಡಿದರು. ರಾಜಾಜಿಯವರು 'ವಿಮೋಚನಂ' ಪತ್ರಿಕೆ ನಡೆಸುವಾಗ ಅವರಿಗೆ ಸಹಾಯ ಮಾಡುತ್ತಿದ್ದು ಬಿಡುವಿನ ವೇಳೆಯಲ್ಲಿ 'ಆನಂದವಿಕಟನ್' ಪತ್ರಿಕೆಗೆ 'ಕಲ್ಕಿ'ಎನ್ನುವ ತಮ್ಮ ಕಾವ್ಯನಾಮದಿಂದ ಬರೆಯುತ್ತಿದ್ದರು. ೧೯೪೧ರಲ್ಲಿ ಜೈಲು ಸೇರಿದಾಗ ಆನಂದವಿಕಟನ್ ಸಂಪರ್ಕ ಹೋಗಿ, ಬಿಡುಗಡೆಯಾದನಂತರ ತಮ್ಮದೇ ಪತ್ರಿಕೆ 'ಕಲ್ಕಿ' ಪ್ರಾರಂಭಿಸಿದರು. ಕಾದಂಬರಿ, ಸಣ್ಣಕತೆಗಳು, ಸಾಹಿತ್ಯ, ಕಲಾವಿಮರ್ಶೆ, ಪ್ರವಾಸ ಸಾಹಿತ್ಯ, ಕವನ, ರಾಜಕೀಯ ಬರಹ ಇತ್ಯಾದಿಗಳ ನಿರಂತರ ಬೆಳವಣಿಗೆಯಿಂದ ಪ್ರಸಿದ್ಧರಾದರು. ತಮ್ಮ ಹರಿತವಾದ ಲೇಖನಿಯಿಂದ ಬಾಲ್ಯವಿವಾಹ, ಅಸ್ಪೃಶ್ಯತೆ, ಅನಕ್ಷರತೆ ಇಂತಹ ಸಾಮಾಜಿಕ ಪಿಡುಗುಗಳ ವಿರುದ್ಧ ಬರೆದು ಜನಮೆಚ್ಚುಗೆ

ಗಳಿಸಿದರು. ಇಂತಹ ಅಸಾಮಾನ್ಯ ಬರಹಗಾರನ ದರ್ಶನ ಮಾಡುವ ಆಸೆ ತುಂಬಿತ್ತು. ಆದರೆ ಹೇಗೆ, ಎತ್ತ ತಿಳಿದಿರಲಿಲ್ಲ. ಅಂತೂ ಕಷ್ಟಪಟ್ಟು 'ಅಲೈ ಓಶೈ'ಯ ಎರಡು ಅಧ್ಯಾಯಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದೆ, ಆಗ ನನಗೆ ಅವರನ್ನು ಕಾಣುವ ಭಾಗ್ಯ ಲಭಿಸಿತು. ಸಂಘವೊಂದರಲ್ಲಿ ಒಂದು ಶನಿವಾರ ಸಂಜೆ ಗಾಂಧೀಜಿಯ ಬಗೆಗೆ ಕಲ್ಕಿ ಕೃಷ್ಣಮೂರ್ತಿ ಮಾತನಾಡಿದರು. ಅವರ ಮಾತಿನ ಮೋಡಿಗೆ ನಾನು ಬೆರಗಾಗಿದ್ದೆ. ಭಾಷಣ ಮುಗಿದ ಅನಂತರ ಹೋಗಿ ನನ್ನ ಪರಿಚಯ ಮಾಡಿಕೊಂಡೆ.

''ನಮಸ್ಕಾರಂ''

''ಎನ್ನ ಪೆಯರ್''

''ಕೃಷ್ಣಮೂರ್ತಿ''

''ಎನ್ ಪೆಯಿರ್ ಅದ್ ತಾನ್''

''ಪೆಯರ್ ಒಣ್ರೆತಾನ್ ಸರ್

ಆನಾಲುಂ 'ರಂಗನ್ ಮುನ್ನಾಲ್ ಶಿಂಗನಾ'' ಎಂದೆ.

''ಅಪ್ಪಡಿ ಎನ್ರಾಲ್ ಎನ್ನಪ್ಪ?'' ಎಂದರು.

'ನಿಮ್ಮ ಮುಂದೆ ನಾನೇ?' ಎಂದೆ, ಕನ್ನಡದ ಆ ಮಾತನ್ನು ತಮಿಳಿಗೆ ಅನುವಾದಿಸಲು ತೋಚದೆ! ಅವರು ಗಾಂಧೀಜಿಯ ಬಗೆಗೆ ಹೇಳಿದ ಹೊಸದಾದ ಒಂದೆರಡು ಮಾತುಗಳನ್ನು-ಆ ಅಂಶಗಳನ್ನು-ಹೇಳಿ ಅವರಿಂದ ಬೆನ್ನು ತಟ್ಟಿಸಿಕೊಂಡೆ ! ಅದೇ ತಕ್ಕ ಸಮಯ ಎಂದು, ನಿಮ್ಮನ್ನು ಬಂದು ನೋಡಬೇಕು, ಅರ್ಧಘಂಟೆ ಅವಕಾಶಕೊಟ್ಟರೂ ಸಾಕು ಎಂದೆ. ಅದಕ್ಕೆ ''ವಾಯ್ನೋ, ಎಪ್ಪೋ ವರ್ರೆ ?'' ಎಂದರು. ''ನಿಮಗೆ ಬಿಡುವಿರುವಾಗ'' ಎಂದೆ. ''ನಾಳೆ ಬೆಳಗ್ಗೆ ಹತ್ತು ಘಂಟೆಗೆ ನಿನಗೆ ಆಗುತ್ತದೆಯೋ'' ಎಂದರು. ನನಗೋ ಖುಷಿಯೋ ಖುಷಿ. 'ಓಹೋ' ಎಂದು ತಲೆ ಆಡಿಸಿದೆ. 'ಬಾ'ಎಂದು ಪ್ರೀತಿಯಿಂದ ಕರೆದರು. ಅವರ ಸರಳತೆ ಸಜ್ಜನಿಕೆ ನನ್ನ ಮನಸೆಳೆದಿದ್ದವು.

ಮಾರನೆಯ ದಿನ ಬೆಳಗ್ಗೆ ಹತ್ತು ಘಂಟೆಗೆ ಸರಿಯಾಗಿ ಅವರ ಆಫೀಸಿಗೆ ಹೋದೆ, ಅಭಿವಾದಯೇ ಮೂಲಕ ಪ್ರವರ ಹೇಳಿ 'ನಮಸ್ಕಾರ' ಎಂದು ಹೇಳುತ್ತಾ ಅವರ ಕಾಲು ಮುಟ್ಟಿ ನಮಸ್ಕರಿಸಿದೆ. 'ದೀರ್ಘಾಯುಷ್ಮಾನ್ ಭವ' ಎಂದು ಹರಸಿದರು. ನಾನು ಕರ್ನಾಟಕದವನೆಂದು ತಿಳಿದ ಕೂಡಲೆ, ಗಂಗಾಧರರಾವ್ ದೇಶಪಾಂಡೆ, ಹನುಮಂತರಾವ್, ಡಿ.ವಿ.ಜಿ, ಆರ್. ಆರ್. ದಿವಾಕರ್ ಇವರೆಲ್ಲರ ಹೆಸರು ಹೇಳಿ, ಅವರೆಲ್ಲ ನಿನ್ನ ರಾಜ್ಯದ ಪ್ರಸಿದ್ಧರು ಎಂದರು. ಅವರ ಅಗಾಧ ತಿಳುವಳಿಕೆ ನೋಡಿ ಈ ಮಹನೀಯರ ಬಗೆಗೆ ಅಷ್ಟಾಗಿ ತಿಳಿಯದ ನಾನು ಸಾವರಿಸಿಕೊಂಡು 'ಹೌದು, ಹೌದು' ಎಂದೆ. ''ನೀ ಶಿನ್ನ ಪೈಯನ್, ಉನಕ್ಕ ತೆರಿಂಜಿಕ್ಕ ಮುಡಿಯಾದ್'' ಎಂದು ಅವರೇ ಹೇಳಿದರು! ಅನಂತರ 'ಅಲೈ ಓಶೈ' ಕಾದಂಬರಿ ನನಗೇಕೆ ಇಷ್ಟವಾಗಿದೆ ಎಂದು ಹೇಳಿ, ''ಕನ್ನಡಕ್ಕೆ ಅನುವಾದಿಸಲು ಅನುಮತಿ ಕೊಡುತ್ತೀರಾ?'' ಎಂದೆ. ಅವರಿಗೆ ಆಶ್ಚರ್ಯ ಆಗಿ, 'ಬರೆಯಲು ರೂಢಿ ಇದೆಯೇ' ಎನ್ನುವಂತೆ ನೋಡಿದರು. ನನಗೆ ಅರ್ಥ ಆಗಿ, ''ಮೊದಲಿನ ಎರಡು ಅಧ್ಯಾಯಗಳನ್ನು ಮಾಡಿದ್ದೇನೆ, ಓದಲೇ?'' ಎಂದೆ. 'ಹೂಂ, ಓದು ಓದು' ಎಂದರು. ಓದಿದೆ. ತಲೆಯ ಮೇಲೆ ಕೈಯಿಟ್ಟು ಹರಸಿದರು. ''ಕನ್ನಡಮುಂ ತಮಿಳುಂ ಕಿಟ್ಟತಟ್ಟ ಒಣ್ರಾವೇ ಇರುಕ್ಕೆ?'' ಎಂದರು. ''ಒಳ್ಳೆಯದಾಗಲಿ, ಕನ್ನಡಿಸಿ ಪ್ರಕಟಿಸು'' ಎಂದು ಹರಸಿದರು. ಆ ದಿನ ಅವರಿಂದ ಬೀಳ್ಕೊಂಡಾಗ ನನಗಾದ ಸಂತೋಷದ ಅನುಭವ ಮಾತಿನಲ್ಲಿ ವರ್ಣಿಸಲಸಾಧ್ಯ.

ಅದು ೧೯೫೨. ಕಲ್ಕಿಯವರು ಅನಂತರ ಎರಡು ವರ್ಷಗಳಲ್ಲೇ ಅಂದರೆ ೧೯೫೪ರಲ್ಲೇ ನಿಧನರಾದರು. ಆದರೆ ಆ ಕೆಲಸವನ್ನು ಆಗಲೇ ಪೂರ್ತಿ ಮಾಡಲಾಗಲಿಲ್ಲ. ನಾನು ಬರೆದರೂ ಕಲ್ಕಿಯವರೆಂದಂತೆ ಯಾರಾದರೂ ಪ್ರಕಟಣೆ ಮಾಡವವರೂ ಬೇಕಲ್ಲ.ಅಲ್ಲದೆ ನನಗೆ ಆ ವ್ಯವಹಾರಗಳೆಲ್ಲ ಅಷ್ಟಾಗಿ ತಿಳಿಯದು. ಆ ಸಮಯದಲ್ಲಿ ಪತ್ರಿಕೆಗೆ ಸೇರುವ ಆಲೋಚನೆಯೂ ಇದ್ದಿರಲಿಲ್ಲ. ಆ ಪರಿಸ್ಥಿತಿಯಲ್ಲಿ ಅದಕ್ಕೆಲ್ಲ ಅವಕಾಶ ಇರಲಿಲ್ಲ... ಅಲ್ಲೇ ಇದ್ದಿದ್ದರೆ ಕಾಲೇಜಿಗೆ ಸೇರುವಂತಾಗಿದ್ದರೆ, ಸಾಹಿತ್ಯ ಓದುಬಹುದಿತ್ತು. ಆದರೆ ಅದೆಲ್ಲ 'ರೆ'ಪ್ರಪಂಚ.

ಮೋಸದ ಬಲೆಗೆ

೧೯೪೮... ಮದ್ರಾಸಿನಲ್ಲಿ ಎಸ್.ಎಸ್.ಎಲ್.ಸಿ. ಮುಗಿದು ಕಾಲೇಜಿಗೆ ಹೋಗದೆ ಕಷ್ಟಪಡುತ್ತಿದ್ದ ದಿನಗಳು ಅವು. ಆಗ 'ಹಿಂದೂ' ಪತ್ರಿಕೆಯಲ್ಲಿ ಜಾಹಿರಾತು ನೋಡಿ ಕೆಲಸ ಒಂದಕ್ಕೆ ಅರ್ಜಿ ಹಾಕಿದೆ. ಆಗ ನನಗೆ ಫಿಜಿ ರಾಮಕೃಷ್ಣಾಶ್ರಮದ ಶಿಷ್ಯನೊಬ್ಬ ಸಿಕ್ಕಿದ. ಅವನೂ ಆ ಕೆಲಸಕ್ಕೆ ಅರ್ಜಿ ಹಾಕಿದ್ದ. ಕೆಲಸ ಕೊಡುವವರು ಒಂದು ಟೈಪ್‌ರೈಟರ್ ಬೇಕು ಎಂದು ಹೇಳಿದರು. ನಾನು ಪತ್ರಿಕೆಯಲ್ಲಿದ್ದ ನನ್ನ ಸ್ನೇಹಿತನೊಬ್ಬನನ್ನು ಬೇಡಿಕೊಂಡೆ. ಅದನ್ನು ಎರಡು ದಿನಗಳನಂತರವೇ ಹಿಂದಿರುಗಿಸುವುದಾಗಿಯೂ ಹೇಳಿದೆ. ನನ್ನ ಸ್ನೇಹಿತ ತನ್ನ ಕಛೇರಿಯ ಟೈಪ್‌ರೈಟರನ್ನೇ ತೆಗೆದುಕೊಟ್ಟ, ನನಗೆ ಸಹಾಯವಾಗಲಿ ಎಂದು!! ೫೦೦ ರೂಪಾಯಿ ಡಿಪಾಸಿಟ್ ಬೇರೆ ಕೇಳಿದ್ದರು. ಕನೇಮರಾ ಹೋಟೆಲಿನಲ್ಲಿ ಆ ಜನ ತಮ್ಮ ಆಫೀಸ್ ತೆಗೆದಿದ್ದರು. ನಮ್ಮ ಅತ್ತಿಗೆ ತಮ್ಮ ಚಿನ್ನದ ಬಳೆಯನ್ನು ಗಿರವಿ ಇಟ್ಟು ೫೦೦ ರೂಪಾಯಿಗಳನ್ನು ತೆಗೆದುಕೊಟ್ಟರು. ಫಿಜಿದವನೂ ೫೦೦ ರೂಪಾಯಿ ಕೊಟ್ಟ. ಇದೆಲ್ಲ ಆದನಂತರ ನಮ್ಮಿಬ್ಬರಿಗೆ ಕೆಲಸ ಕೊಡುತ್ತೇವೆ ಎಂದು ಹೇಳಿದರು, ಆ ಕಂಪನಿಯವರು. ನನ್ನನ್ನು ಬಹಳ ಚೆನ್ನಾಗಿ ಮಾತನಾಡಿಸಿದ ಆತ, ''ನೀನು ಬಹಳ ಬುದ್ಧಿವಂತನಂತೆ ಕಾಣುತ್ತೀ, ನಾವು ಬೆಂಗಳೂರಿನಲ್ಲಿಯೇ ಒಂದು ಶಾಖೆಯನ್ನು ತೆರೆಯಬೇಕೆಂದಿದ್ದೇವೆ. ನೀವಿಬ್ಬರೂ ಬೆಂಗಳೂರಿಗೆ ಹೋಗಿ ನಮ್ಮ ಆಫೀಸು ತೆರೆಯಲು ಸೂಕ್ತವಾದ ಸ್ಥಳವೊಂದನ್ನು ಹುಡುಕಿ ಬನ್ನಿ. ಮದ್ರಾಸಿಗೆ ಬಂದನಂತರ ನಮ್ಮನ್ನು

ಭೇಟಿಯಾಗಿ'' ಎಂದ. ನನಗೂ ಖುಷಿಯಾಗಿ ಹೋಯಿತು. ಬೆಂಗಳೂರಿನಲ್ಲೇ ಅಣ್ಣ-ಅತ್ತಿಗೆ ಇರುವುದು, ನನಗೆ ಬೆಂಗಳೂರಿನಲ್ಲೇ ಕೆಲಸ ಕೊಟ್ಟರೆ ಆರಾಮವಾಗಿ ಅಣ್ಣನ ಜತೆ ಇರಬಹುದು ಎಂದು ಸಂಭ್ರಮ.

ನಾನೂ ಫಿಜಿಯವನೂ ಇಬ್ಬರೂ ಬೆಂಗಳೂರಿಗೆ ಬಂದೆವು. ನಮ್ಮಣ್ಣ ಶಂಕರಮೂರ್ತಿಯವರು ನಾವು ಬಂದಿದ್ದ ಉದ್ದೇಶ ತಿಳಿದು ಏಕೋ ಮೊದಲೇ ಅಪಸ್ವರ ತೆಗೆದರು. ''ಏನೋ, ಮೋಸ ಇದೆ ಅನ್ಸುತ್ತೆ ಕೃಷ್ಣಾ ಇದರಲ್ಲಿ'' ಎಂದರು. ನಾನು ಮಧ್ಯದಲ್ಲೇ ಬಾಯಿ ಹಾಕಿ ಅಣ್ಣನನ್ನು ತಡೆದೆ. ''ಹಾಗೇನಿಲ್ಲ ಅಣ್ಣ, ಇದೆಲ್ಲಾ ಸಾಮಾನ್ಯ. ನೀನೂ ಎಲ್ಲೂ ನೋಡಿಲ್ವೆ?'' ಎಂದು ವಾದ ಮಾಡಿದೆ. ನನ್ನ ಜೊತೆಗೆ ಫಿಜಿಯವನೂ ಸೇರಿಕೊಂಡ. ಅಣ್ಣ ಮುಂದೆ ಏನೂ ಹೇಳದೆ ಸುಮ್ಮನಾದರು- ನಮ್ಮ ಉತ್ಸಾಹಭಂಗಪಡಿಸುವುದೇಕೆ ಎಂದು. ನಾನು ಬಿಸಿಲಲ್ಲಿ ಸೈಕಲ್ಲೂ ಇಲ್ಲದೆ ಅಲೆಯುವುದೇಕೆ ಎಂದು ಎರಡು ಸೈಕಲ್ಲನ್ನು ಬಾಡಿಗೆಗೂ ಕೊಡಿಸಿದರು — ಆಫೀಸಿಗೆ ಜಾಗ ನೋಡಲು ಸುತ್ತಾಡುವುದಕ್ಕೆ. ನಾನೂ ಫಿಜಿಯವನೂ ಸುಮಾರು ಸುತ್ತಿ ಕೊನೆಗೆ ಕೆಂಪೇಗೌಡ ರೋಡಿನಲ್ಲಿ ಜಾಗವೂ ಸಿಕ್ಕಿತು. ನಮಗೂ ಸಾಕಷ್ಟು ಖುಷಿಯಾಯಿತು. ಅಲ್ಲೇ ಇದ್ದ ನಮ್ಮಮ್ಮನ ಸಂತೋಷ ಹೇಳತೀರದು ಬೆಂಗಳೂರಿನ ಆಫೀಸಿಗೆ ಮಗ ಮ್ಯಾನೇಜರ್ ಆಗಿಬರುತ್ತಾನೆ, ಸಾವಿರ ರೂಪಾಯಿ ಸರದಾರ ಆಗುತ್ತಾನೆ ಅಂತ! ಅವತ್ತಿನ ರಾತ್ರಿ ರೈಲಿಗೆ ನಾವು ಮದ್ರಾಸಿಗೆ ವಾಪಸ್ಸು ಹೋದೆವು. ಮಾರನೆ ಬೆಳಗ್ಗೆ ಆ ಕನೇಮರಾ ಹೋಟೆಲ್‌ಗೆ ಹೋದರೆ, ಅಲ್ಲಿ ಆಗಲೇ ೧೦೦ ಜನಕ್ಕೂ ಮೇಲೆ ಇದ್ದವರು ಸಾಲಾಗಿ ನಿಂತಿದ್ದಾರೆ!! ಆಗ ನಮಗಾದ ಆಘಾತ ಅಷ್ಟಿಷ್ಟಲ್ಲ. ಆ ಜನ ಆಫೀಸನ್ನೇ ಮುಚ್ಚಿಕೊಂಡು ನಮ್ಮೆಲ್ಲರಿಂದ ಸಂಗ್ರಹಿಸಿದ್ದ ೫೦೦ ರೂಪಾಯಿಗಳ ಡಿಪಾಸಿಟನ್ನು ತೆಗೆದುಕೊಂಡು ಓಡಿಹೋಗಿದ್ದರು. ನನಗೆ ಎರಡೂ ನಷ್ಟವೇ. ನನ್ನ ಸ್ನೇಹಿತನಿಂದ ಟೈಪ್‌ರೈಟರ್ ತಂದದ್ದನ್ನು, ಆ ಕಳ್ಳರು ತೆಗೆದುಕೊಂಡು ಹೋಗಿದ್ದರು. ಆ ಟೈಪ್‌ರೈಟರ್‌ನ ಬೆಲೆಯೇ ೬೦೦ ರೂಪಾಯಿ, ಜತೆಗೆ ೫೦೦ ರೂಪಾಯಿಗಳ ಡಿಪಾಸಿಟ್, ಮನೆಯಲ್ಲಿ ಎಲ್ಲರೂ ಅಳುವುದೇ! ಇತ್ತ, ನಮ್ಮ ಅತ್ತಿಗೆ ಶಂಕರಮೂರ್ತಿಯವರ ಪತ್ನಿ ಶ್ರೀಮತಿ ಸೀತಾಲಕ್ಷ್ಮಿ ನಮ್ಮಮ್ಮನಿಗೆ ಸಮಾಧಾನ ಹೇಳುವುದು, ನಮ್ಮಮ್ಮ ನಮ್ಮ ಅಣ್ಣನಿಗೆ ಸಮಾಧಾನ ಹೇಳುವುದು. ಒಂದು ಹೊತ್ತಿನ ಊಟಕ್ಕೂ ಕಷ್ಟವಿದ್ದ ಆ ಕಾಲದಲ್ಲಿ ನನ್ನ ಕಡೆಯಿಂದಾದ ಈ ೧,೧೦೦ ರೂಪಾಯಿಗಳ ಸಾಲದ ಮೊತ್ತ ಹೊರಲಾಗದ ಹೊರೆಯಾಗಿ ತಲೆಯ ಮೇಲೆ ಬಿದ್ದಿತ್ತು... 'ಬ್ರಹ್ಮಾಂಡ' ಎನಿಸಿತ್ತು!! ಆದರೆ ನಾನು ಮೋಸ ಹೋದದ್ದಾಗಿತ್ತು.

ಈಗಲೂ ಹೀಗೆ ಕಛೇರಿ ತೆರೆದು ಎಷ್ಟೋ ಮಂದಿ ಮುಗ್ಧ ತರುಣರನ್ನು ಮೋಸ ಮಾಡುವ ಜನ ಕಡಮೆ ಇಲ್ಲ. ಇದು ನನ್ನ ಈ ಅನುಭವ- ನನಗೆ ಪೇಪರಿನಲ್ಲಿ, 'ಬೇಕಾಗಿದ್ದಾರೆ' ಎನ್ನುವ ಜಾಹೀರಾತು ನೋಡಿದರೆ, 'ಡಿಪಾಸಿಟ್ ಕಟ್ಟಬೇಕು' ಎನ್ನುವ ನಿಯಮ ಇರುವ ಹುದ್ದೆಗಳನ್ನು ನೋಡಿದರೆ ಭಯ ತರಿಸುತ್ತದೆ! ನಾವು ಎಷ್ಟೇ ಜಾಣರಾಗಿದ್ದರೂ ಕೆಲವು ಸಂಸ್ಥೆಗಳು ಈ ರೀತಿಯ ಸಣ್ಣ ಆಸೆಗೆ ಒಳಗಾಗುವಂತೆ ಮಾಡುತ್ತವೆ. ಆಗ ನಾವು ಮೋಸ ಹೋಗುತ್ತೇವೆ. ಹೀಗೆ ಮಾಡುವಾಗ ಅದೆಷ್ಟು ಕೂಲಂಕಷವಾಗಿ ಪರೀಕ್ಷಿಸಿದರೂ ಸಾಲದು. ಹಾಗೆ ಮಾಡಿಯೇ ಒಳಗೆ ಕಾಲಿಡಬೇಕು. ಇಲ್ಲವಾದರೆ ಈ ರೀತಿಯ ಸನ್ನಿವೇಶಗಳನ್ನು ಎದುರಿಸಲಾಗದೆ ಪ್ರಾಣ ಕಳೆದುಕೊಳ್ಳುವ 'ಕಟ್ಟಕಡೆಯ ಹೆಜ್ಜೆ' ತೆಗೆದುಕೊಳ್ಳುವಂತೆ ಆದರೂ ಆಶ್ಚರ್ಯವಿಲ್ಲ.

ಮತ್ತೆ ಮತ್ತೂರಿಗೆ

ಅಂತೂ ಹೇಗೋ ಸಂಭಾಳಿಸಿಕೊಂಡೆವು. ದಿನಗಳು ೧೯೪೪ ರಿಂದ ೧೯೪೭ ಹೆಚ್ಚಿಗೆ ವ್ಯತ್ಯಾಸವಿಲ್ಲದೆ ಉರುಳಿದವು. ಕೆಲವು ದಿನಗಳ ಅನಂತರ ಒಂದು ಸ್ವಾರಸ್ಯಕರ ಘಟನೆ ನಡೆಯಿತು.

೧೯೪೭ರಲ್ಲಿ ಎಸ್‌ಎಸ್‌ಎಲ್‌ಸಿ ಮುಗಿಯಿತು. ಸ್ವಲ್ಪ ತಡವಾಗಿತ್ತು. ಕಾಲೇಜು ಸೇರಲು ವಯೋಮಿತಿ ಅಂತೇನೂ ಇರದಿದ್ದರೂ ಸೇರಲು ಸಾಧ್ಯ ಇರಲಿಲ್ಲ... ಅದು ಕೇವಲ ೬೦ ರೂಪಾಯಿಗಳ ಪ್ರಶ್ನೆಯಾಗಿತ್ತು! ಆಗ ಬೇರೆ ಯಾರನ್ನಾದರೂ ಕೇಳಿ ದುಡ್ಡು ತೆಗೆದುಕೊಳ್ಳುವಾ ಎನ್ನುವ ಯೋಚನೆ, ಬುದ್ಧಿ ಸಹ ಇರಲಿಲ್ಲ. ಅಣ್ಣ ಏಕೋ ಮನಸ್ಸು ಮಾಡಲಿಲ್ಲ! ನಮ್ಮ ಅತ್ತಿಗೆಯದು ಮತ್ತೊಂದು ರೀತಿಯ ಯೋಚನೆ ಆಗಿತ್ತು. ಅವರಿಗೆ, ಹೇಗಾದರೂ ಮಾಡಿ ನನ್ನನ್ನು ಮನೆಯಲ್ಲೇ ಇಟ್ಟುಕೊಳ್ಳಬೇಕು. ನಮ್ಮ ಅಣ್ಣನಿಗೆ ನನ್ನಿಂದ ಸಹಾಯ ಆದೀತು, ಎನ್ನುವ ಅಭಿಪ್ರಾಯ. ಹಾಗಾಗಿ ತಮ್ಮ ತಂಗಿಯನ್ನೇ ನನಗೆ ಕೊಟ್ಟು ಮದುವೆ ಮಾಡಬೇಕು ಎನ್ನುವ ಯೋಜನೆ ಹಾಕಿದರು. ಬಹುಶಃ ಇದರಲ್ಲಿ ಅವರ ತಪ್ಪೇನೂ ಇರಲಿಲ್ಲ. ಅವರು ಅವರದೇ ಧಾಟಿಯಲ್ಲಿ ಯೋಚನೆ ಮಾಡಿದ್ದರು. ಆದರೆ ನನಗೆ ಅವರ ಆ ಯೋಜನೆ ಭಯ ತಂದಿತ್ತು. ಏಕೆಂದರೆ ಕೇವಲ ಕರುಣೆಯಿಂದ - ಅತ್ತಿಗೆಯ ತಂಗಿ ಸ್ವಲ್ಪ ಪೆದ್ದು - ಆ ಹುಡುಗಿಗೆ ನಾನು ಮನೆಕೆಲಸಗಳಲ್ಲಿ ಸಹಾಯ ಮಾಡುತ್ತಿದ್ದೆ. ಅವಳು ಅದಕ್ಕೆ ನನಗೆ ಸ್ವಲ್ಪ ಗಟ್ಟಿ ಹಾಲಿನಲ್ಲಿ ಮಾಡಿದ ಕಾಫಿ ಕೊಡುತ್ತಿದ್ದಳಷ್ಟೆ. ದೊಡ್ಡವರ ಈ ಮಾತುಗಳು ಅವಳ ಕಿವಿಗೆ ಬಿದ್ದಿರಬೇಕು. ಆ ದಿನ ರಾತ್ರಿ ''ಕೃಷ್ಣಾ, ನೀ ನನ್ನ ಮದುವೆ ಯಾಗ್ತೀಯಾ?'' ಎಂದು ಕೇಳಿದಳು. ಆ ಯೋಚನೆಯೇ ಇಲ್ಲದಿದ್ದ ನನಗೆ ಬಹಳ ಭಯ ಆಯಿತು. ಮನಸ್ಸು ಬಹಳ ಕೆಟ್ಟಿತು. ಏನೇನೋ ಕಲ್ಪನೆಗಳು ಗಾಬರಿ ತರಿಸಿದವು. ನನ್ನ ತಾಯಿ, ಅಣ್ಣಂದಿರು, ಬಂಧುಗಳು ಎಲ್ಲರೂ ಈ ಕಡೆ ಇರುವವರು. ಅಲ್ಲಿ ನನ್ನದು ಏನಿದ್ದರೂ ತಾತ್ಕಾಲಿಕ ವಾಸ್ತವ್ಯ. ಓದುವುದಕ್ಕೆಂದು ಹೋದವನು ನಾನು. ಏನೇ ಆದರೂ ನನಗೆ ಹೊಂದಿಕೊಳ್ಳಲು ಆಗುವುದಿಲ್ಲ ಎನ್ನುವ ಭಾವನೆ ಮನಸ್ಸಿನಲ್ಲಿ!

ಎಲ್ಲ ರೀತಿಯಲ್ಲೂ ನಿರಾಸೆ ಆಗಿತ್ತು. ಕೆಲಸ ಇರಲಿಲ್ಲ, ಮುಂದೆ ಓದುವುದು ಸಾಧ್ಯ ಆಗಲಿಲ್ಲ, ಯಾವುದೇ ವ್ಯಾಪಾರದಲ್ಲಿ ಸ್ವಲ್ಪವೂ ಆಸಕ್ತಿ ಇಲ್ಲ , ದುಡ್ಡುಕಾಸಿನ ಆ ವ್ಯಾಪಾರ ವಹಿವಾಟುಗಳ ವಿಷಯದಲ್ಲಿ ಬೇಸರ... ಕನ್ನಡದಲ್ಲಿ ೮೫ ಅಂಕಗಳನ್ನು ತೆಗೆದಿದ್ದೆ ನಾನು, ಆವರೆಗೆ ಅಷ್ಟು ಅಂಕಗಳು ಯಾರಿಗೂ ಬಂದಿರಲಿಲ್ಲ, ನಮ್ಮ ಅಧ್ಯಾಪಕರು ಮತ್ತು ಕನ್ನಡ ಪಂಡಿತರು ಮರಿಯಪ್ಪಭಟ್ಟರು, ನನ್ನ ಬೆನ್ನು ತಟ್ಟಿ 'ಖಂಡಿತಾ ಓದು ಮುಂದುವರೆಸು' ಎಂದು ಪ್ರೋತ್ಸಾಹಿಸಿದರು. ಆದರೆ ನನಗೆ ಬಹಳ ಪ್ರಿಯವಾಗಿದ್ದ ಓದೇ ಸಾಗುವುದು ಸಾಧ್ಯವಿರಲಿಲ್ಲ! ಇದೊಂದು ರೀತಿಯಲ್ಲಿ ನನ್ನ ಜೀವನದಲ್ಲಿ ಅನಿರೀಕ್ಷಿತ ಗೊಂದಲ ತಂದು, ಎಲ್ಲವೂ ಬದಲಾಗಿತ್ತು. ನಾನು ತುಂಬಾ ಕಂಗಾಲಾಗಿದ್ದೆ. ಆ ರಾತ್ರಿಯೇ ತಡಮಾಡದೆ 'ನಾನು ಮನೆಬಿಟ್ಟು ಹೋಗುತ್ತಿದ್ದೇನೆ' ಎಂದು ತಿಳಿಸಿ ಮನೆಬಿಟ್ಟು ಹೊರಟು ರಾತ್ರಿಯೇ ಮತ್ತೂರಿನ ಕಡೆಗೆ ಹೊರಟೆ.

* * *

ಬದುಕು ನಡೆಸುವ ಪ್ರಶ್ನೆ ಬಂದಾಗ, ಎಲ್ಲರಿಗೂ ಸಮಯಕ್ಕೆ ಸರಿಯಾಗಿ ಬೇರೆ ಬೇರೆ ದಾರಿಯಾಗುತ್ತದೆ ಎಂದು ಅನ್ನಿಸುತ್ತದೆ ಅಲ್ಲ! ನಾನು ಓದು ಮುಂದುವರೆಸಲು ಸಾಧ್ಯವಾಗಿದ್ದರೆ, ಈಗ ಯಾವುದಾರೂ ಕಾಲೇಜಿನಲ್ಲಿ ಮೇಷ್ಟ್ರಾಗಿ ಇರುತ್ತಿದ್ದೆನೇನೋ. ಈಗಲೂ ಶ್ರೀ ಜಿ. ವೆಂಕಟಸುಬ್ಬಯ್ಯನವರ ವಿಷಯ ನೆನೆಸಿಕೊಂಡರೆ ಆಶ್ಚರ್ಯ ಆಗುತ್ತದೆ. ಎಲ್ಲೋ ಒಂದು ಕಡೆ ಗುಮಾಸ್ತನ ಕೆಲಸ ಸಿಕ್ಕಿದರೆ ಸಾಕು ಎನ್ನುವಂತಿತ್ತು ಅವರ ಪರಿಸ್ಥಿತಿ. 'ಬೇಕಾಗಿದ್ದಾರೆ' ಎಂದು ಬಂದ ಪ್ರಕಟಣೆ ನೋಡಿ, ಅರ್ಜಿ ಸಲ್ಲಿಸಿ, 'ಕಾಲೇಜು ಉಪನ್ಯಾಸಕರು' ಎನಿಸಿದರು ಅವರು. ಎಂತಹ ಉದ್ದಾಮ ಪಂಡಿತರು, ಸಾಹಿತಿಗಳು! ಅವರು ಡಿಕ್ಷನರಿ ಬರೆದಿರುವಂತಹ ಲೆಕ್ಸಿಕೋಗ್ರಾಫರ್ (Lexicographer). ಯಾವುದಾದರೂ ಗುಮಾಸ್ತನ ಕೆಲಸ ಹಿಡಿದಿದ್ದರೆ ಅವರ ಗತಿ ಏನಾಗುತ್ತಿತ್ತು , ಕನ್ನಡ ಸಾರಸ್ವತಲೋಕಕ್ಕೆ ಅದೆಂಥ ನಷ್ಟವಾಗುತ್ತಿತ್ತು ಅನ್ನಿಸುತ್ತದೆ ನನಗೆ! ಈ ದಿನ ಅವರಂತಹ ವಿದ್ವಾಂಸರಿಂದ ಕನ್ನಡ ಭಾಷೆ ಅದೆಷ್ಟು ಬೆಳೆದಿದೆ. ಅದಕ್ಕೇ, ಯಾವಾಗಲೂ ನಮಗೆ ಕಾಣದ ಒಂದು ಕೈ ಕೆಲಸ ಮಾಡುತ್ತದೆ ಎಂದು ನನಗೆ ತೀವ್ರವಾಗಿ ಅನ್ನಿಸುತ್ತದೆ, ನಮ್ಮನ್ನು ಅದು ನಮ್ಮ ಗುರಿಯತ್ತ ಒಯ್ಯುತ್ತದೆ. ದೇವರ ಕೃಪೆ ಅದು! ನಿಜಕ್ಕೂ ಈ ಮಾತಿನಲ್ಲಿ ನನಗೆ ಅಚಲವಾದ ನಂಬಿಕೆ!

'ಕಬ್ಬು ಕದ್ದವ'ನಿಗೆ ಕನ್ಯಾದಾನ

ಹೀಗೆ ಮದ್ರಾಸು ಬಿಟ್ಟು , ನಾನು ಇಲ್ಲಿಗೆ ಬಂದಾಗ ವೇದಾಧ್ಯಯನ ಮಾಡುತ್ತಿದ್ದ ನಮ್ಮ ಅಣ್ಣ ಶ್ರೀ ಕೇಶವಮೂರ್ತಿಯವರು, ನಮ್ಮ ಇನ್ನೊಬ್ಬರು ಅಣ್ಣ ಶ್ರೀ ಶಂಕರಮೂರ್ತಿಯವರನ್ನು ಅಲ್ಲಿಯೇ ತಂಜಾವೂರು ಹತ್ತಿರ ಚಂಬೈಗೆ ಸಂಗೀತ ಕಲಿಯಲು ಬರುವಂತೆ ಹೇಳಿದ್ದರು. ಊರಿನಲ್ಲಿ ನಮ್ಮ ತಾಯಿ ಇದ್ದರು, ಅವರ ಜತೆಗೆ ನಾನು. ದೊಡ್ಡಣ್ಣ ಮದುವೆಯಾಗಿ ಶಿವಮೊಗ್ಗದಲ್ಲಿದ್ದರು. ನಮ್ಮ ತಾಯಿ ಸಹ, ಊರಿನಲ್ಲೇ ಇದ್ದರೆ ಏನೂ ಬರದು, ಹೊರಗಡೆ ಹೋಗಿ ಕಲಿತರೆ ಅದರ ಬೆಲೆ ಅರಿವಾಗಿ, ಆ ವಿದ್ಯೆ-ಕಲೆ ಬರುವುದು ಎಂದು ಹೇಳಿ, ನಮ್ಮಣ್ಣನನ್ನು ಪ್ರೋತ್ಸಾಹಿಸಿ ತಂಜಾವೂರಿಗೆ ಕಳುಹಿಸಿಕೊಟ್ಟರು.

ನಮ್ಮ ಎರಡನೆಯ ಅಣ್ಣ ತಂಜಾವೂರಿನಲ್ಲಿ ವೇದಾಧ್ಯಯನ ಮುಗಿಸಿ ಹಳ್ಳಿಗೆ ಬಂದಾಗ ಒಂದು ಪ್ರಸಂಗ ನಡೆಯಿತು. ನನ್ನ ನೆನಪಿನಲ್ಲಿ ಅದು ನಿಚ್ಚಳವಾಗಿದೆ. ಒಬ್ಬರು ದೊಡ್ಡ ಮನುಷ್ಯರು, ಸಾಕಷ್ಟು ಉಳ್ಳವರು, ಒಂದು ದಿನ ತೋಟದಿಂದ ಬರುತ್ತಿದ್ದರು. ನಮ್ಮಣ್ಣ ವೇದಾಧ್ಯಯನ ಮಾಡಿದವರು ಕಬ್ಬು ಸಿಗಿಯುತ್ತ ಅವರ ಜತೆಗೇ ಬಂದರು. ಅವರು ಕಬ್ಬು ತಿನ್ನುತ್ತಿದ್ದುದನ್ನು ನೋಡಿದ, ಈ ಗಣ್ಯವ್ಯಕ್ತಿ 'ಎಂಥಾ ಕಳ್ಳ , ಗಾಡಿಯಲ್ಲಿದ್ದ ಕಬ್ಬು ಕದ್ದುಕೊಂಡು ಬಂದೆಯೇನೋ?' ಎಂದು ಕೇಳಿದರು. ನಮ್ಮಣ್ಣನಿಗೆ ೨೧ ವರ್ಷ, ಬಿಸಿರಕ್ತದ ಯುವಕ, ಶ್ರೀ ಸೂರ್ಯನಾರಾಯಣ ಅವಧಾನಿಗಳಲ್ಲಿ ವೇದ ಕಲಿಕೆ ಮುಂದುವರೆಸುತ್ತಿದ್ದ ಅವರಿಗೆ ಈ ಮಾತು ಕೇಳಿ ಒಂದು ರೀತಿ ಶಾಕ್ ಆದಂತೆ ಆಯಿತು. ಅವರೂ ಆಗ ಅಷ್ಟೇ ಹಠದಿಂದ 'ನಾನ್ಯೇಕೆ ಕದಿಯಲಿ, ನಾನೇನೂ ಕಬ್ಬು ಕದ್ದಿಲ್ಲ ,' ಅಂದರು ಒರಟಾಗಿಯೇ, ತಾವು ಮಾಡದ ತಪ್ಪನ್ನು ನನ್ನ ಮೇಲೆ ಏಕೆ ಹೇರಬೇಕು, ಎನ್ನುವ ಧೋರಣೆಯಲ್ಲಿ. 'ಸುಳ್ಳು ಹೇಳ್ತೀಯಾ' ಎಂದರು ಆ ಹಿರಿಯರು. 'ನಾನು ಹಾಗೆಲ್ಲಾ ಸುಳ್ಳು ಹೇಳುವುದಿಲ್ಲ, ನನ್ನ ನಾಲಿಗೆ ಕುಯ್ದರೂ ಸರಿ' ಎಂದರು ಅಣ್ಣ. 'ನಾಲಿಗೆ ಯಾಕೆ ಕುಯ್ಯಬೇಕು, ನನ್ನ ಗದ್ದೇಲಿ ತಗೊಂಡಿದ್ದೀಯಾ ಅದನ್ನು, ನನಗೆ ಗೊತ್ತಿಲ್ಲವೇ?' ಎಂದರು ಹಿರಿಯರು. 'ನಿಮ್ಮ ಗದ್ದೇಲಿ ನಾನ್ಯಾಕೆ ಕಬ್ಬು ತಗೊಳ್ಳಲಿ? ಪ್ರಮಾಣ ಮಾಡಿ ಹೇಳ್ತೀನಿ, ನಿಮ್ಮ ಗದ್ದೆ ಕಬ್ಬಲ್ಲ ಇದು' ಎಂದರು, ಅಣ್ಣ ಸ್ವಲ್ಪ ಜೋರಾಗಿಯೇ. 'ಹೌದು, ಹೌದು, ಈಗ ಎಲ್ಲರೂ ಸುಳ್ಳು ಹೇಳಿದರೂ ಪ್ರಮಾಣ ಮಾಡ್ತೀರಿ, ಗೊತ್ತಿದೆ ನನಗೆ ಎಲ್ಲಾ' ಎಂದು ಹೇಳುತ್ತ ಮುಂದೆ ಮುಂದೆ ನಡೆದು ಹೊರಟುಹೋದರು ಹಿರಿಯರು. ಅವರ ಮನಸ್ಸಿನಲ್ಲಿ 'ಹುಡುಗ ಕಬ್ಬು ಕದ್ದಿದ್ದಲ್ಲದೆ, ಸುಳ್ಳು ಬೇರೆ ಹೇಳುತ್ತಿದ್ದಾನೆ, ಹೇಗಾದರೂ ನಿಜ ಬಾಯಿ ಬಿಡಿಸಬೇಕು' ಎನ್ನುವ ಛಲ!

ಊರಿನ ಒಳಗೆ ಬಂದ ಕೂಡಲೆ ಆ ಹಿರಿಯರು ದುರ್ಗಮ್ಮನ ದೇವಸ್ಥಾನವನ್ನು ದಾಟಿ ನಮ್ಮ ಬೀದಿಗೆ ಬಂದು ನಮ್ಮ ಗುಡಿಸಲು ಮನೆಯ ಹತ್ತಿರ ಜೋರಾಗಿ "ಏನಿದು? ಇಂಥಾ ಮಗನನ್ನು ಹೆತ್ತರೆ!" ಎಂದರು. ಇದು ನಮ್ಮ ತಂದೆಗೆ ತಮಗೇ ಹೇಳುತ್ತಿರಬೇಕು ಎಂದೇ ಅನ್ನಿಸಿತ್ತು. ಅದಕ್ಕೆ ನಮ್ಮ ತಂದೆ, "ಯಾರ ವಿಷಯ? ಯಾರಿಗೆ ಹೇಳುತ್ತಿದ್ದೀರಿ ನೀವು? ಯಾವ ಹುಡುಗ?" ಎಂದು ಕೇಳಿದರು. ಆಗ ಆ ಹಿರಿಯರು "ನಾ ಇನ್ಯಾರನ್ನು ಹೇಳುವುದು, ನಿಮ್ಮ ಮಗನನ್ನೇ..." ಎಂದು ಹೇಳಿ, ಅಲ್ಲಿಂದ ಎರಡು-ಮೂರು ಮಾರು ದೂರ ಇದ್ದ ಅವರ ಮನೆಗೆ ಹೋದರು. ಅಷ್ಟರಲ್ಲೇ ನಮ್ಮಣ್ಣ ಅವರ ಹಿಂದೆಯೇ ಬಂದರು.

ಅಣ್ಣನಿಗೆ ನಮ್ಮ ತಂದೆ, "ಎಲ್ಲಿ ನಿನ್ನ ಕೈ ಕೊಡೋ" ಎಂದರು. ಅಣ್ಣ ವಿನೀತರಾಗಿ ತಮ್ಮ ಎರಡೂ ಕೈಗಳನ್ನು ಮುಂದೆ ಚಾಚಿದರು. ಅಲ್ಲಿಯೇ ಬಿದ್ದಿದ್ದ ಒಂದು ಸೋಗೆಯನ್ನು ತೆಗೆದು ಅವರ ಕೈ ಕಟ್ಟಿದರು. ಬೆಂಕಿ ಹಚ್ಚಿದರು. ಇದನ್ನು ನೋಡಿದ ನಮ್ಮಮ್ಮ, ನಮ್ಮ ಮನೆಯ ಪಕ್ಕದಲ್ಲಿಯೇ ಇದ್ದ ಕೊಟ್ಟಿಗೆಯಲ್ಲಿ ನಾರಾಯಣ ಅವಧಾನಿಗಳಿದ್ದುದು ಕಂಡು ಅವರಿಗೆ, "ಬೆಂಕಿ ಹಚ್ಚಿದ್ದಾರೆ ಬಹಳ ಕೋಪ ಮಾಡಿಕೊಂಡು, ಕೈ ಸುಟ್ಟೇ ಹೋಗುತ್ತದೋ ಏನೋ" ಎಂದರು. 'ಹ್ಞಾಂ ಏನು!!' ಎಂದು ಹೌಹಾರಿದ ನಾರಾಯಣ ಅವಧಾನಿಗಳು ಓಡಿ ಬಂದು ಕೂಗಿದರು, "ಏನೋ ಮಾಡ್ತಿದ್ದೀಯ ನೀನು? ಏನು ಮಾಡ್ತಿದ್ದೀ?" ಎಂದು. ಅವರ ಈ ಮಾತಿಗೆ ನಮ್ಮ ತಂದೆ "ಕದಿಯುವ ಕೈ ಯಾಕಿರಬೇಕು?" ಎಂದು ಉತ್ತರಿಸಿದರು. ಇದನ್ನು ಕಂಡ ಆ ಹಿರಿಯರು ನಮ್ಮ ತಂದೆಗೆ, "ನಾನು ಏನೋ ಹೇಳಿದೆ, ತಗೊಂಡಿದ್ದಾನೆ ಅಂತ... ಅದಕ್ಕೇ ಹೀಗೆ ಮಾಡುವುದೇ" ಎಂದರು. ಇದನ್ನು ಅವರು ಮೊದಲೇ ಹೇಳಬಾರದಿತ್ತೇ? ಅಣ್ಣನ ಕೈಯಂತೂ ಸುಟ್ಟಿತ್ತು , ಸುಟ್ಟಕಲೆ ಕೊನೆಯತನಕವೂ ಉಳಿದಿತ್ತು!

ಈ ಘಟನೆಯಾದ ವರ್ಷಕ್ಕೆ ಆ ಹಿರಿಯರು, ಈ ಘಟನೆಗೆ ಕಾರಣವಾದವರು, ತಮ್ಮ ಮಗಳನ್ನೇ ಅಣ್ಣನಿಗೆ ಕೊಟ್ಟು ಮದುವೆ ಮಾಡಿದರು. ಇಲ್ಲಿಗೆ ಈ ಪ್ರಸಂಗದ ಸುಖಾಂತ್ಯ. ಆರ್ಥಿಕವಾಗಿ ಯಾಗಲಿ, ಶೈಕ್ಷಣಿಕವಾಗಿಯಾಗಲಿ, ಅವರು ನಮಗೆಂದೂ ಸಮಾನರಲ್ಲ. ಅಗಾಧವಾದ ವ್ಯತ್ಯಾಸವಿತ್ತು ನಮ್ಮಿಬ್ಬರ ಕುಟುಂಬಗಳಲ್ಲಿ. ಆದರೂ ಅವರು ತಮ್ಮ ಮಗಳನ್ನು ಕೊಟ್ಟರು... ಎಲ್ಲರೂ ಮನುಷ್ಯಮಾತ್ರರೇ. ಒಬ್ಬರ ಬಗೆಗೆ ತಪ್ಪಾಗಿ ನಡೆದುಕೊಂಡಾಗ, ಆ ನೊಂದ ಜೀವಕ್ಕೆ ತಂಪು ಮಾಡಲು ಅವರೋ ಅವರ ವಂಶದವರೋ ಯಾರಾದರೂ ಯತ್ನಿಸಬಹುದು ತಮ್ಮ ತಪ್ಪಿನ ಅರಿವಾದನಂತರ. ಹಾಗೆ ಮಾಡುವುದೇ ಮನುಷ್ಯ ಧರ್ಮ! ಅದು ಯುಗದಿಂದ ಯುಗಕ್ಕೆ ಮುಂದುವರೆದು ಕೊಂಡೇ ಬಂದಿದೆ.

೧೩. ಚಿನ್ನಣ್ಣ ನನ್ನಣ್ಣ

ಚಿನ್ನಣ್ಣನ ಸಂಗೀತ ಕಲಿಕೆ

ಚಂಬೈಗೆ ಹೋದ ನನ್ನ ಅಣ್ಣನವರ ಅನುಭವ... ಅಬ್ಬ! ನಿಜಕ್ಕೂ ಅವರು ಮೊದಲೆಲ್ಲಾ ನಮ್ಮ ಹತ್ತಿರ ಎಷ್ಟೋ ವಿಷಯಗಳನ್ನು ಹೇಳಿಯೇ ಇರಲಿಲ್ಲ. ಅನಂತರದಲ್ಲಿ ಹೇಳಿದ ಬಹುಮುಖ್ಯ ಸಂಗತಿಗಳು ಹಲವಾರು. ಯಾರೇ ಆದರೂ ಪರಸ್ಥಳಕ್ಕೆ ಹೋದಾಗ, ತನ್ನವರು ಎನ್ನುವವರು ಅಲ್ಲಿ ಇಲ್ಲದಿದ್ದಾಗ ಯಾವ ರೀತಿ ಬಂದ ಕಷ್ಟಗಳು, ಸಂದರ್ಭಗಳನ್ನು ಎದುರಿಸಬೇಕಾದೀತು ಎನ್ನುವುದಕ್ಕೆ ಸಾಕ್ಷಿ ಅವರ ಅನುಭವಗಳು- ಅದೂ ಈಗಿನ ಕಾಲದಲ್ಲಿ.

ಕಡೂರು ಜಿಲ್ಲೆಯ ಲಿಂಗದಹಳ್ಳಿಯ ರಾಮಾಜೋಯಿಸ್ ಎಂಬುವರು ತಂಜಾವೂರಿನಲ್ಲಿ ಸಂಗೀತ ಮೇಷ್ಟ್ರಾಗಿ ನೆಲೆಸಿದ್ದರು. ಅವರು ಸಂಕೇತಿ ಜನಾಂಗದವರು. ರಾಮಾಜೋಯಿಸರ ಬಳಿ ಅಣ್ಣನವರು ಕಲಿತದ್ದು , ಪ್ರಾರಂಭಿಕ ಪಾಠ. ಅಣ್ಣನವರ ಧ್ವನಿ ಬಹಳ ಚೆನ್ನಾಗಿತ್ತು. ದೈವದತ್ತವಾದ ಸಂಸ್ಕಾರ, ಆ ಶಾರೀರಕ್ಕೆ. ಬಹಳ ಕಷ್ಟಪಟ್ಟು ಅಭ್ಯಾಸ ಮಾಡಿ ಅವರು ಆ ಸಂಸ್ಕಾರದ ಛಾಯೆಯನ್ನು ತಮ್ಮ ಧ್ವನಿಯಲ್ಲಿ ರೂಢಿಸಿಕೊಂಡಿದ್ದರು. ಬಹಳ ಪ್ರೌಢವಾಗಿ ಹಾಡುವಂತೆ ಅನಿಸುತ್ತಿತ್ತು. ಆದರೆ ಅವರ ಗುರುಗಳು ರಾಮಾಜೋಯಿಸರು ಅಸಾಧ್ಯ ಕೋಪದವರು. ಅಕಸ್ಮಾತ್ ಒಂದು ಸ್ವರ ತಪ್ಪಿದರೆ ಬಹಳ ಕೂಗಿ , ಕೋಪಬಂದು ಅಸಹನೆಯಿಂದ ಬಹಳವಾಗಿ ಹೊಡೆಯುತ್ತಿದ್ದರಂತೆ! ಇದನ್ನು ಅಣ್ಣನವರು ನಮಗೆ ಬಹಳ ವರ್ಷಗಳು ಹೇಳಿಯೇ ಇರಲಿಲ್ಲ! ಗುರುಗಳು ಹೊಡೆದದ್ದನ್ನು ಹೇಳಿಕೊಂಡು ಹೋಗುವುದು ಶಿಷ್ಯರಿಗೆ ತಕ್ಕುದಲ್ಲ ಎನ್ನುವ ನಂಬಿಕೆ ಇದ್ದ ಶಿಷ್ಯ ಪರಂಪರೆಯವರು ಅವರು!! ರಾಮಾಜೋಯಿಸರಿಗೆ ಇದ್ದ ಅದೊಂದು ರೀತಿಯ ಮನೋರೋಗ ಆ ಪರಿಯ ಉದ್ವೇಗಕ್ಕೆ ಒಳಗಾಗುವಂತೆ ಮಾಡುತ್ತಿತ್ತು. ನಮ್ಮ ವೇದಾಧ್ಯಯನದ ಅಣ್ಣ ತಂಜಾವೂರಲ್ಲಿ ಇದ್ದುಕೊಂಡು ಇವರನ್ನು ನೋಡಿಕೊಳ್ಳುತ್ತಿದ್ದರು. ಆಗ ನಮ್ಮ ದೊಡ್ಡಣ್ಣ ಸಹ ತಿಂಗಳಿಗೆ, ನಮ್ಮ ಶಂಕರಮೂರ್ತಿ ಅಣ್ಣನಿಗೆ ಮೂರು ರೂಪಾಯಿ ಕಳುಹಿಸುತ್ತಿದ್ದರಂತೆ! ಈಗಿನ ಕಾಲದಂತಲ್ಲ ಅದು, ಆ ಮೂರು ರೂಪಾಯಿಗೆ ಸಾಕಷ್ಟು ಬೆಲೆ ಇದ್ದ ಕಾಲ ಅದು!

ಹೀಗೆ ಸಂಗೀತಪಾಠ ನಡೆಯುತ್ತಿದ್ದಾಗ, ಒಮ್ಮೆ ಆ ಊರಿಗೆ ವೈದ್ಯನಾಥ ಭಾಗವತರು ಸಂಗೀತ ಕಛೇರಿಗೆ ಎಂದು ಬಂದರು. ನಮ್ಮಣ್ಣ ಅವರನ್ನು ನೋಡಿ, ಭೇಟಿ ಮಾಡಿ ಕಾಲಿಗೆ ನಮಸ್ಕರಿಸಿ 'ಚಂಬೈಗೆ ಬಂದರೆ ನನಗೆ ಸಂಗೀತ ಹೇಳಿಕೊಡುತ್ತೀರಾ!' ಎಂದರಂತೆ. 'ಆಗಲಿ ಬಾ' ಎಂದರು ಗುರುಗಳು. ಸರಿ, ಅಣ್ಣನವರು ಅಲ್ಲಿ ರಾಮಾಜೋಯಿಸರಿಗೆ ನಮಸ್ಕರಿಸಿ ಚಂಬೈಗೆ ಹೋದರು. ಗುರುಗಳೂ ಅಷ್ಟೆ , ಅವರು ಹೋಗುವುದನ್ನು ವಿರೋಧಿಸಲಿಲ್ಲ. ಬಾಲ್ಯಪಾಠ ಇಲ್ಲಾಯಿತು. 'ಹೋಗು ಇನ್ನು , ಅಲ್ಲಿಗೇ' ಎಂದು ಅವರೇ ಕಳುಹಿಸಿಕೊಟ್ಟರು.

ಇಲ್ಲಿ ಅವರವರ ಊಟದ ವ್ಯವಸ್ಥೆಯನ್ನು ಅವರವರೇ ಮಾಡಿಕೊಳ್ಳಬೇಕು. ಆದ್ದರಿಂದ ಅಣ್ಣನವರು ಸಹ ಭಿಕ್ಷಾನ್ನ ಮಾಡಲು ಪ್ರಾರಂಭಿಸಿದರು. 'ವಾರಾನ್ನ' ಎನ್ನುವುದು ತಮಿಳುನಾಡಿನ ಜನಕ್ಕೆ ತಿಳಿಯದು. ಆದ್ದರಿಂದ ಭಿಕ್ಷಾನ್ನ ಮಾತ್ರ ಅಲ್ಲಿ. ಇವರೊಬ್ಬರೇ ಅಲ್ಲ,

ಎಲ್ಲಾ ಶಿಷ್ಯರದೂ ಅದೇ ಕಥೆ, ಭಿಕ್ಷೆ ಎತ್ತಿಯೇ ಸಂಗೀತ ಕಲಿಯಬೇಕಿತ್ತು. ಆದರೆ ಭಿಕ್ಷೆಗಾಗಿ ಐದಾರು ಮೈಲಿಗಳಾದರೂ ಸುತ್ತಬೇಕಾಗುತ್ತಿತ್ತು. ಅಲ್ಲದೆ, ಗುರುಸೇವೆ ಮಾಡಿ ಅವರವರ ಬಟ್ಟೆಗಳನ್ನು ಅವರವರೇ ಸ್ವಚ್ಛ ಮಾಡಿಕೊಂಡು ಸಂಗೀತ ಅಭ್ಯಾಸ ಮಾಡಬೇಕಾಗುತ್ತಿತ್ತು. ಇದು ಅಲ್ಲಿನ ಸಂಪ್ರದಾಯ.

ಅಣ್ಣ-ಅತ್ತಿಗೆ

೧೯೪೮ರಲ್ಲಿ ತಂಜಾವೂರಿನಿಂದ ಊರಿಗೆ ವಾಪಸ್ಸಾದ ಅಣ್ಣ ನಮ್ಮ ಊರಿನ ಹೆಣ್ಣುಮಗಳಾದ ಸೀತಾಲಕ್ಷ್ಮಿಯನ್ನು ಮದುವೆಯಾದರು. ಅತ್ತಿಗೆ ಸೀತಾಲಕ್ಷ್ಮಿಯವರೂ ಅಂತಹ ಅನುಕೂಲಸ್ಥರಲ್ಲ. ಎಲ್ಲರೂ ಬಡವರೇ. ನಮ್ಮ ಅತ್ತಿಗೆ ಮಾರ್ಕಂಡೇಯ ಅವಧಾನಿಗಳ ಅತ್ತೆಯ ಮಗಳು. ಮದುವೆ ಆಗುವಾಗ ಅತ್ತಿಗೆಗೆ ೧೦೨-೧೦೩ ಡಿಗ್ರಿ ಜ್ವರ. ಬಹುತೇಕ ಪ್ರಜ್ಞೆಯೇ ಇರಲಿಲ್ಲ. ಅವರ ಸೋದರಮಾವ ಇವರನ್ನು ಹಿಡಿದುಕೊಂಡು ತಾಳಿಕಟ್ಟಿಸಿದ್ದು. ನನಗೆ ಇವರನ್ನು ನೋಡಲೇ ಭಯವಾಗಿ , ಗುಡಿಸಲು ಮನೆಗೆ ಓಡಿಹೋಗಿ ಅಳುತ್ತಿದ್ದೆ. ಇವರು ಹೀಗೆ ಇದ್ದರೆ 'ಹರಿ-ಹರಿ' ಎನ್ನುತ್ತಾರೆ ಅಂತ ನನ್ನ ಭಾವನೆ! ಆದರೆ ನಮ್ಮ ಅದೃಷ್ಟ ಚೆನ್ನಾಗಿತ್ತು. ಅಂಥದೇನೂ ಆಗಲಿಲ್ಲ. ಅತ್ತಿಗೆಗೆ ೧೨ ವರ್ಷ, ಅಣ್ಣನಿಗೆ ೨೧ ವರ್ಷ. ೯ ವರ್ಷಗಳ ಅಂತರ ಇಬ್ಬರಿಗೂ. ಅತ್ತಿಗೆಯಿನ್ನೂ ದೊಡ್ಡವರಾಗಿರಲಿಲ್ಲ. ಆಗ ಸುಮಾರು ಎರಡು ವರ್ಷಗಳ ತನಕ ನಮ್ಮಮ್ಮ ಏನಾದರೂ ಕೆಲಸ ಆಗಬೇಕಾದರೆ ಇವರನ್ನು ಕರೆಯುತ್ತಿದ್ದರು. ವೇದಾಧ್ಯಯನ ಮಾಡಿದ ಶ್ರೀ ಕೇಶವಮೂರ್ತಿಯವರ ಪತ್ನಿ, ದೊಡ್ಡತ್ತಿಗೆ ; ಆ ಅತ್ತಿಗೆ ತಿಂಗಳ ರಜೆ ತೆಗೆದುಕೊಂಡಾಗ ಇವರು ನಮ್ಮಮ್ಮನಿಗೆ ತುಂಬಾ ಸಹಾಯ ಮಾಡುತ್ತಿದ್ದರು. ಸಣ್ಣ ಹುಡುಗಿಯಾದರೂ ಈ ಅತ್ತಿಗೆಯೂ ಸಾಕಷ್ಟು ಜಾಣೆ. ನಮ್ಮಣ್ಣನಿಗೆ ಸರಿಯಾದ ಜೊತೆ. ಅವರು ನಮ್ಮ ಮನೆಗೆ ಅದೆಷ್ಟು ಹೊಂದಿಕೊಂಡರೆಂದರೆ ಊರಿನಲ್ಲಿ ಜನ ಹಾಸ್ಯ ಮಾಡುತ್ತಿದ್ದರು, 'ಸದಾ ಅತ್ತೆ ಮನೆಯಲ್ಲೇ ಇರುತ್ತಾಳೆ' ಎಂದು! ಅಷ್ಟು ಹೊಂದಾಣಿಕೆ ನಮ್ಮ ಜತೆಗೆ. ಮದುವೆಯಾದನಂತರ ಅಣ್ಣ ಶಂಕರಮೂರ್ತಿಯವರು ಬೆಂಗಳೂರು ಸೇರಿದರು.

ನಾನೂ ಈಗ ಊರು ಸೇರಿದ್ದೆ. ಅದು ೧೯೫೦... ಊರಿನಲ್ಲೇ ಸುಮ್ಮನೆ ಕುಳಿತು ಕಾಲ ಕಳೆಯುವುದು ಹೇಗೆ? ಆಗ ಕೆಲವು ಮಂತ್ರಗಳನ್ನು ಕಲಿತೆ, ಮೂಲ ಮಂತ್ರಗಳು ಕೆಲವು ಬಂದವು. ನಮ್ಮ ಊರಿನಲ್ಲಿ ಯಾರೂ ಬ್ರಹ್ಮಚರ್ಯವನ್ನು ವ್ಯರ್ಥ ಮಾಡುವುದಿಲ್ಲ. ಸಾಮಾನ್ಯವಾಗಿ ಎಲ್ಲರೂ ಮಂತ್ರ ಹೇಳಿಕೊಡುವವರೇ ಅಲ್ಲಿ. ಆಗ ನನಗೆ ೨೨ ವರ್ಷ...

ಎಷ್ಟು ದಿನ ಹೀಗೆ ಏನೂ ಮಾಡದೆ ಊರಿನಲ್ಲಿರುವುದು ? ಮಂತ್ರಗಳನ್ನು ಕಲಿತು, ಕೊನೆಯತನಕ ಅದನ್ನೇ ಅವಲಂಬಿಸಿ ಇರುತ್ತಿದ್ದವರನ್ನು ಊರಿನಲ್ಲಿ ನೋಡುತ್ತಿದ್ದೆ. ನಮ್ಮ ಊರಿನಲ್ಲಿ ಮಂತ್ರ , ತೋಟ , ಬ್ರಾಹ್ಮಣಾರ್ಥ ಈ ಮೂರೇ ಕೆಲಸವೇನೋ ಅವರಿಗೆ ಎನಿಸಿತ್ತು ನನಗೆ. ತೋಟವಂತೂ ನಮಗಿರಲಿಲ್ಲ. ಮನೆಯಲ್ಲಿ ಎರಡು ಹೊತ್ತಿನ ಊಟಕ್ಕೂ ಕಷ್ಟ. ಬಡತನ ಕಷ್ಟಪಡಿಸುತ್ತದೆ. ಅದನ್ನು ಅನುಭವಿಸಿದವರಿಗೆ ಅದರ ತೀವ್ರತೆ ಗೊತ್ತಾಗುವುದು. ದಿನಗಳು ಅಂತೂ ನಿಧಾನವಾಗಿ ಉರುಳುತ್ತಿದ್ದವು. ಆಗ ನಮ್ಮ ತಾಯಿಯವರು 'ಊರು ಬಿಟ್ಟುಹೊರಗೆ ಹೋದರೆ ಪ್ರಪಂಚಾನುಭವ ಆಗುವುದು' ಎಂದು ನನ್ನನ್ನು ಬೆಂಗಳೂರಿಗೆ ಕಳುಹಿಸಿದರು.

ನಮ್ಮಣ್ಣ ಸಂಗೀತ ವಿದ್ವಾನ್ ಶಂಕರಮೂರ್ತಿಯವರು ಬಹಳ ಸಹನಶೀಲರು. ಪರೋಪಕಾರ ಬುದ್ಧಿ ಇದ್ದವರು. ಸ್ವಾಭಾವಿಕವಾಗಿ ಬಹಳ ಮೃದುಸ್ವಭಾವ ಮತ್ತು ತುಂಬಾ ನಾಚಿಕೆ ಸ್ವಭಾವ ಸಹ. ನನಗೂ ಅವರಿಗೂ ಸುಮಾರು ಆರು ವರ್ಷಗಳ ವ್ಯತ್ಯಾಸ. ನನ್ನನ್ನು ಅವರು ತಮ್ಮ ಮಗನಂತೇ ನೋಡಿಕೊಳ್ಳುತ್ತಿದ್ದರು.

ಈ ಅಣ್ಣ-ಅತ್ತಿಗೆ ನನಗೆ ಮಾಡಿದ್ದು ಒಂದೆರಡು ಪದಗಳಲ್ಲಿ ಹೇಳಿ ಮುಗಿಯದವು ಅವು. ಮೊದಲಿನಿಂದಲೂ ನನಗೆ ಸಹಾಯ ಮಾಡಿದ್ದಾರೆ. ಇವರಿಬ್ಬರೂ ಅವರಿಗೆ ೧೫ ರೂಪಾಯಿ ಟ್ಯೂಷನ್ ಫೀ ಬಂದರೂ ಎರಡು ಪುಸ್ತಕ ತಂದು ನನಗೆ ಓದಿ ಹೇಳುತ್ತಿದ್ದರು– ಓದಲಿಕ್ಕೆ ನನಗೆ ಸಮಯವಿಲ್ಲ ಎಂದು. ಮುಖ್ಯವಾಗಿ ಸಾಹಿತ್ಯದಲ್ಲಿ ನನಗೆ ಆಸಕ್ತಿ ಹುಟ್ಟುವಹಾಗೆ ಮಾಡಿದವರೇ ಅವರು!

ನಮ್ಮಣ್ಣ ಶಂಕರಮೂರ್ತಿಯವರಿಗೆ ಮಲಗಿಕೊಂಡ ಮೇಲೆ, ಕಡಮೆ ಎಂದರೆ ಎರಡು ಗಂಟೆಗಳಾದರೂ ನಿದ್ದೆ ಬರುತ್ತಿರಲಿಲ್ಲ! ಅದು ಅವರ ಪ್ರಕೃತಿ. ಆಗ ಸುಮ್ಮನೆ ಮಲಗಿರದೆ ಅವರು ತಪ್ಪದೆ ಪುಸ್ತಕಗಳನ್ನು ಓದುತ್ತಿದ್ದರು. ಹಾಗೆ ಓದಿದ್ದನ್ನು ನನಗೆ ಹೇಳುತ್ತಿದ್ದರು. ಈ ಅಣ್ಣನವರ ಪ್ರಭಾವ ಬಹಳ ಆಗಿದೆ ನನ್ನ ಮೇಲೆ. 'ತಾಯಿಗೆ ಸದೈವ ಗೌರವ ಸಲ್ಲಿಸಬೇಕು', 'ಅತ್ತಿಗೆಯವರನ್ನು ತಾಯಿಯಂತೆ ಕಾಣಬೇಕು', 'ಯಾರ ಜೊತೆಯೂ ಜೋರಾಗಿ ಮಾತನಾಡಬಾರದು' ಇತ್ಯಾದಿ. ಅವರ ಸ್ವಭಾವವೂ ಹಾಗೆಯೇ ; ಅತ್ಯಂತ ಸಹನೆ ಅವರಿಗೆ! ಹೆಣ್ಣು ಮಕ್ಕಳಿಗೆ ಸಂಗೀತಪಾಠ ಹೇಳುತ್ತಿದ್ದುದರಿಂದ ಅವರೂ ಯಾರ ಮೇಲೂ ಕೋಪಗೊಂಡು ಮಾತನಾಡುತ್ತಿರಲಿಲ್ಲ. ದನಿ ಎತ್ತಿ ಮಾತನಾಡುವುದೇ ಅವರಿಗೆ ತಿಳಿದಿರಲಿಲ್ಲ. ಕಠೋರ ಎನ್ನುವುದೇ ಇರಲಿಲ್ಲ ಅವರಲ್ಲಿ. ಯಾರಾದರೂ ಬಂದರೆ ತಕ್ಷಣವೇ ಮಾತು ಮುಂದುವರೆಸಲು ನಮ್ಮ ಅತ್ತಿಗೆಯವರನ್ನು ಕರೆದುಬಿಡುತ್ತಿದ್ದರು! ನಮ್ಮಣ್ಣ, ಆಗಲೇ ಬೆಂಗಳೂರಿಗೆ ಬಂದ ನಮ್ಮಮ್ಮನನ್ನು ಬಹಳ ಚೆನ್ನಾಗಿ ನೋಡಿ ಕೊಳ್ಳುತ್ತಿದ್ದರು. ಬಡತನ ಅಷ್ಟಿಷ್ಟಲ್ಲ. ನಮ್ಮ ದೊಡ್ಡಣ್ಣ , ಇನ್ನೊಬ್ಬ ಅಣ್ಣ ವೇದಾಧ್ಯಯನದವರು ಇಬ್ಬರೂ ಸುಮಾರಾಗಿ ಅನುಕೂಲ ವಾಗಿಯೇ ಇದ್ದರೂ ಸಹ ನಮ್ಮ ತಾಯಿ, ಅವರ ಜತೆ ಇರುತ್ತಿರಲಿಲ್ಲ. ನಮ್ಮ ಈ ಅಣ್ಣ-ಅತ್ತಿಗೆಯ ಪ್ರೀತಿ ಗೌರವಕ್ಕಾಗಿಯೇ ನಮ್ಮ ತಾಯಿ

ಇವರ ಜತೆಯಲ್ಲೇ ಇರುತ್ತಿದ್ದರು. ಅಣ್ಣನಿಂದಲೇ ನಮ್ಮಮ್ಮನ ಬಗ್ಗೆ ಪ್ರೀತಿ ನನಗೆ ಹೆಚ್ಚಾದದ್ದು. ನಾನು ಕಿರಿಯ ಮಗ ಎಂದೇ ನಮ್ಮಮ್ಮನಿಗೆ ನನ್ನ ಮೇಲೆ ಬಹಳ ಪ್ರೀತಿ. ಬಹುಶಃ ಅದಕ್ಕೇ ನನ್ನ ಹುಟ್ಟಿದ ಹಬ್ಬದ ದಿನದವರೆಗೂ ಉಸಿರು ಹಿಡಿದಿದ್ದು, ಅನಂತರವೇ ನಿಧನರಾದದ್ದು!

ಅಣ್ಣನಾದರೂ ತಮಗೆ ಬರುವ ಸಂಬಳದಲ್ಲೇ ಸಂಸಾರ ತೂಗಿಸಿ, ಎಂಟಾಣೆ, ಹನ್ನೆರಡಾಣೆ ಉಳಿಸಿ ಪುಸ್ತಕ ತಂದು ಇಡುತ್ತಿದ್ದರು. ಅದೇ ಅವರ ಧಾರಾಳಸ್ವಭಾವ. ಲೆಕ್ಕಿಗಿಕ್ಕ ಎಂದು ಬರೆಯುವ ಅಭ್ಯಾಸ ಇರಲಿಲ್ಲ. ಆಮೇಲಿನ ದಿನಗಳಲ್ಲಿ ನಾನು ಕೆಲಸಕ್ಕೆ ಸೇರಿದನಂತರ ನಾವೆಲ್ಲರೂ ಒಟ್ಟಿಗೇ ಇದ್ದರೂ ಅವರಿಗೆ ಬರುವುದಕ್ಕಿಂತ ಎರಡರಷ್ಟು ಸಂಬಳ ನನಗೆ ಬರುತ್ತಿತ್ತು. ಬರೆಯುವುದಕ್ಕೆ ಪ್ರಾರಂಭ ಮಾಡಿದ ಮೇಲೆಯಂತೂ ಲೇಖನಗಳು, ಕಾದಂಬರಿ, ಇತ್ಯಾದಿಗಳಿಂದ ಸಾಕಷ್ಟು ಹಣ ಬರುತ್ತಿದ್ದರೂ, ಒಂದು ದಿನಕ್ಕೂ ನಮ್ಮಲ್ಲಿ ಯಾವ ವ್ಯತ್ಯಾಸವೂ ಬರಲಿಲ್ಲ! ಅವರ ಹಣವನ್ನು ಧಾರಾಳವಾಗಿ ಖರ್ಚು ಮಾಡುತ್ತಿದ್ದರು, ನನ್ನ ಸಂಬಳ ಎಷ್ಟು ಎಂದು ಎಂದೂ ಕೇಳಿದವರಲ್ಲ!

ಒಮ್ಮೆ ಜಾಂಡೀಸ್‌ಗೆ ತುತ್ತಾಗಿದ್ದ ನನಗೆ,ಅದಾದ ಎರಡು ತಿಂಗಳಿಗೆ ಟೈಫಾಯ್ಡ್ ಆಯಿತು. 'ಕಷ್ಟಗಳು ಬಂದರೆ ಒಂದೊಂದಾಗಿ ಬರುವುದಿಲ್ಲ, ಗುಂಪುಗುಂಪಾಗಿ ಬರುತ್ತವೆ' ಎಂದು ಆಂಗ್ಲಕವಿ ಷೇಕ್ಸ್‌ಪಿಯರ್ ಹೇಳಿರುವ ಮಾತು, ಅಕ್ಷರಶಃ ನಿಜ ಆಗಿತ್ತು. ಮೊದಲೇ ಬಡತನ , ಕೆಲಸ ಇಲ್ಲ , ಇದ್ದ ಅಲ್ಪಸ್ವಲ್ಪ ಹಣವೂ ಮೋಸಹೋಗಿ ನೀರು ಪಾಲಾಗಿತ್ತು. ಅದೆಲ್ಲದರ ಜತೆಗೆ ಕಾಯಿಲೆಗಳು. ಒಂದಾದ ಮೇಲೆ ಒಂದರಂತೆ ಕಷ್ಟಗಳ ಪರಂಪರೆಯೇ ಹೌದು ಅದು, ಅಷ್ಟು ಬೇಸರ ಆಗಿತ್ತು , ಮನಸ್ಸಿಗೆ. ಅನುಭವಿಸದೆ ವಿಧಿಯಿಲ್ಲ. ಟೈಫಾಯಿಡ್ ಆದಾಗ ನಾನು ಉಳಿಯುವ ಸಂಭವವೂ ಇರಲಿಲ್ಲ.

ಗಾಂಧೀನಗರದಲ್ಲಿ ದಯಾಳು ನರ್ಸಿಂಗ್ ಹೋಂ ಎನ್ನುವ ಆಸ್ಪತ್ರೆ ಇತ್ತು. ಅಲ್ಲಿನ ಡಾಕ್ಟರೇ ದಯಾಳು ಅವರು. ಆಸ್ಪತ್ರೆಗೆ ಸೇರಿದ್ದ ನನ್ನನ್ನು ಆ ಡಾಕ್ಟರು ಬಹಳ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. 'ಕ್ಲೋರೋ ಮಿಸಿಟಿನ್' ಎನ್ನುವ ಔಷಧಿ ಆಗತಾನೆ ಮಾರ್ಕೆಟ್ಟಿಗೆ ಬಂದಿತ್ತು. ಸುಮಾರಾಗಿ ವಾಸಿಯಾಗಿದ್ದ ನಾನು ಮತ್ತೆ ಟೈಫಾಯಿಡ್‌ಗೆ ತುತ್ತಾದೆ. ಈಗ ಬಹಳ ತೀವ್ರವಾಗಿತ್ತದು. ಆ ತೀವ್ರತೆ ನೋಡಿ ಡಾಕ್ಟರು, "ಕ್ಲೋರೋ ಮಿಸಿಟಿನ್ ಎನ್ನುವ ಔಷಧಿ ಬಂದಿದೆ. ಅದನ್ನು ಎರಡು ಇಂಜೆಕ್ಷನ್ ತರಿಸಿಕೊಟ್ಟರೆ ನಿಮ್ಮ ತಮ್ಮ ಬದುಕುಬಹುದು, ಇಲ್ಲವಾದರೆ ಏನೂ-ಭರವಸೆ ಇಲ್ಲ" ಎಂದರು, ನಮ್ಮಣ್ಣ ಶಂಕರಮೂರ್ತಿಯವರ ಹತ್ತಿರ. ಅಣ್ಣನಿಗೆ ಬಹಳ ದುಃಖ, ಜತೆಗೆ ಆತಂಕ ನನ್ನ ಸ್ಥಿತಿ ನೋಡಿ. ಎಷ್ಟೇ ಬಡತನ ಇದ್ದರೂ, ದುಡ್ಡೇ ಇಲ್ಲ ಎಂದರೂ, ತಮ್ಮನನ್ನು ಕಂಡೂ ಕಂಡೂ ಕೈಬಿಡುವುದು ಅವರಿಗೆ ಸಾಧ್ಯವಾಗಲಿಲ್ಲ. ಅವರ ಮನಸ್ಸಿಗೆ ಆದ ದೊಡ್ಡ ಸಮಾಧಾನ ಎಂದರೆ, ಹೀಗೆ ಈ ಟೈಫಾಯಿಡ್ ಮತ್ತೆ ಬಂದರೂ ಇದಕ್ಕೆ ಒಂದು ಔಷಧಿ ಇದೆಯಲ್ಲ , ಜೀವ ಉಳಿಸುವಂಥದು ಎನ್ನುವ ಮಾತು! 'ಎಷ್ಟೇ ಆದರೂ ಸರಿ ಅದರ ಬೆಲೆ, ಅದನ್ನು ಕೊಡುತ್ತೇನೆ. ನೀವು ಆ ಔಷಧಿ ತರಿಸಿ ನನ್ನ ತಮ್ಮನಿಗೆ ಕೊಡಿ' ಎಂದರು ಅಣ್ಣ. ಆಗಲೇ ನನಗೆ ಖಾಯಿಲೆ ಬಂದು ಮಲಗಿ ೪೮ ದಿನಗಳು ಕಳೆದುಹೋಗಿದ್ದವು. ಅಣ್ಣನಿಗೆ ಅಸಾಧ್ಯವಾದ ಟೆನ್ಷನ್. ಸೈಕಲ್ಲಿತ್ತು. ಅವರು ಸೈಕಲೇರಿದವರೇ ತಮ್ಮ ಟ್ಯೂಷನ್ ಮನೆಗಳಿಗೆ ಹೋಗಿ ಮುಂಗಡವಾಗಿ ಟ್ಯೂಷನ್ ಫೀಸನ್ನು ಪಡೆದು ತಂದರು. ಡಾಕ್ಟರ ಕೈಯಲ್ಲಿಟ್ಟರು. ಆಗ ಆ ಔಷಧಿ ಬಾಂಬೆಯಿಂದ ಬರಬೇಕಿತ್ತು. ಹಣವನ್ನು ಟೆಲಿಗ್ರಾಂ ಮನಿಆರ್ಡರ್ ಮಾಡಿ ೪೮ ಘಂಟೆಗಳಲ್ಲಿ ಆ ಇಂಜೆಕ್ಷನ್ ಬಂದು ಬೆಂಗಳೂರಿನ ಡಾಕ್ಟರ ಕೈ ಸೇರಿತ್ತು. ಆ ಔಷಧಿಯನ್ನೇ ಡಾಕ್ಟರು ನನಗೆ ಕೊಟ್ಟರು... ಅಂತೂ ನಂಬಿದ ದೇವರು ಕೈ ಬಿಡದೆ, ನಮ್ಮಣ್ಣ-ಅತ್ತಿಗೆಯ ಮೊರೆಗೆ ಓಗೊಟ್ಟು ನನ್ನನ್ನು ಉಳಿಸಿ ಕೊಟ್ಟ. ಆ ಸಂದರ್ಭದಲ್ಲಿ ನಮ್ಮಣ್ಣ-ಅತ್ತಿಗೆ ನನಗೆ ಮಾಡಿದ ಶುಶ್ರೂಷೆ , ಆರೈಕೆಯನ್ನು ನಾನು ಮರೆಯುವಂತಿಲ್ಲ. ಅವರು ನನಗೆ ಮಾಡಿದ್ದಕ್ಕೆ ಪ್ರತಿಯಾಗಿ ನಾನು ಸಾಕಷ್ಟು ಅವರಿಗೆ ಮಾಡಲಾಗಲಿಲ್ಲ. ಒಟ್ಟಾರೆ ಇದು ನನ್ನ ಮರುಜನ್ಮವಾಗಿತ್ತು.

ಆಗ ನನಗೆ ವಾಸಿಯಾದರೂ ಆ ಔಷಧಿಗಳು ಲಿವರ್ ಮೇಲೆಯೂ ಸ್ವಲ್ಪ ಪರಿಣಾಮ ಬೀರಿದ್ದವು. ಈಗಲೂ ನಾನು ಆಹಾರದ ವಿಷಯದಲ್ಲಿ ಬಹಳ ಎಚ್ಚರವಾಗಿರಬೇಕು. ಸ್ವಲ್ಪ ಎಚ್ಚರ ತಪ್ಪಿದರೂ ಆರೋಗ್ಯ ತಪ್ಪುತ್ತದೆ. ಬಹಳ ಮಿತವಾದ ಸಾತ್ವಿಕವಾದ ಆಹಾರ ತೆಗೆದುಕೊಳ್ಳಬೇಕು. ಯಾವ ರೀತಿಯಲ್ಲೂ ತೀವ್ರತರ ರುಚಿಯನ್ನು ಹೊಟ್ಟೆ ತಡೆದುಕೊಳ್ಳದು.

೧೪. ಕೆಲಸದ ಹುಡುಕಾಟ

ಕಂಡಕ್ಟರ್ ಕೆಲಸ

ಇದೆಲ್ಲ ಆದನಂತರ ಮತ್ತೆ ಕೆಲಸದ ಬೇಟೆ ಪ್ರಾರಂಭಿಸಿದೆ. ಅಣ್ಣನಿಗೆ ವರಮಾನ ಬಹಳ ಕಡಮೆ. ನಾನೂ ಈಗ ಜತೆಗೆ ಸೇರಿಕೊಂಡಿದ್ದೆ. ಮನೆಯಲ್ಲಿ ಊಟಕ್ಕೆ ಕಷ್ಟ. ದಿನದಲ್ಲಿ ಎರಡು ಸಲ ಊಟ ಮಾಡಿದ್ದೇ ಇಲ್ಲ ಎನ್ನಬಹುದು, ಅಂತಹ ಸ್ಥಿತಿ. ಇದು ೧೯೫೦ರಿಂದಲೂ. ನನಗೊಂದು ಉದ್ಯೋಗದ ಆವಶ್ಯಕತೆ ತೀವ್ರವಾಗಿತ್ತು. ಎಸ್.ಎಸ್.ಎಲ್.ಸಿ. ಸರ್ಟಿಫಿಕೇಟ್ ಜೇಬಿನಲ್ಲಿ ಇಟ್ಟುಕೊಂಡು ಎಲ್ಲ ಕಡೆ ಅಲೆದೆ. ಎಲ್ಲೆಡೆ ಹೋದರೂ, ಯಾವ ಅಂಗಡಿಯಲ್ಲಿಯೂ ಕೆಲಸ ಇಲ್ಲ. ಆವಾಗಲೆಲ್ಲ ಕೆಲಸಕ್ಕೆ ಜನರನ್ನು ತೆಗೆದುಕೊಳ್ಳುತ್ತಲೇ ಇರಲಿಲ್ಲ,

ಮತ್ತೆ ಕೆಲವು ಕಡೆ ಕೆಲಸ ಕೊಡುವವರು ಬ್ರಾಹ್ಮಣೇತರರಾಗಿದ್ದರೆ ಬ್ರಾಹ್ಮಣರಿಗೆ ಕೆಲಸ ಕೊಡುತ್ತಿರಲಿಲ್ಲ. ಹೀಗೆ, ಸ್ವಾತಂತ್ರ್ಯ ಬಂದ ಹೊಸತರಲ್ಲಿ ಕೋಮುಭಾವನೆ ತುಂಬಾ ಇತ್ತು. ಬಹಳ ಕಷ್ಟಪಟ್ಟೆ ಆಗ ನಾನು...

ಶ್ರೀ ಮಾಧವರಾವ್ ಬಿ.ಎ., ಬಿ.ಎಲ್., ಇವರು ಕಾಂಗ್ರೆಸ್ ಕಾರ್ಯಕರ್ತರು, ಶಿವಮೊಗ್ಗದಲ್ಲಿದ್ದರು. ನಾನು ಮಾಧ್ಯಮಿಕ ಶಾಲೆಯಲ್ಲಿದ್ದಾಗ ಅವರ ಮನೆಯಲ್ಲಿ ಮೂರು ವರ್ಷಗಳ ಕಾಲ ವಾರಾನ್ನ ಮಾಡಿದ್ದೆ. ಅವರ ಪತ್ನಿ ಶ್ರೀಮತಿ ರತ್ನಮ್ಮ. ಅವರಿಗೆ ಮಕ್ಕಳಿರಲಿಲ್ಲ. ನಾವು ಮೂವರು ವಾರಾನ್ನದ ಹುಡುಗರಿಗೂ ಬಹಳ ಪ್ರೀತಿಯಿಂದ ಊಟ ಬಡಿಸುತ್ತಿದ್ದರು ಅವರು.

ನಾನು ಹೀಗೆ ಕೆಲಸ ಹುಡುಕಿಕೊಂಡು ಹೋದಾಗ 'ರಾಜಾಮಿಲ್'ನ ಮೂಲೆಯಲ್ಲಿ ಅವರ ಮನೆ ಮುಂದೆ ಬೋರ್ಡು ಶ್ರೀ ಮಾಧವರಾವ್ ಬಿ.ಎ., ಬಿ.ಎಲ್., ಎಂದು! ನಾನು ಶಿವಮೊಗ್ಗದಲ್ಲಿ ನೋಡುತ್ತಿದ್ದ ಬೋರ್ಡಾಗಿತ್ತು ಅದು. ನನ್ನ ಆಶ್ಚರ್ಯಕ್ಕೆ ಮಿತಿ ಇಲ್ಲ. ಶಿವಮೊಗ್ಗದ ಮಾಧವರಾಯರೇ ಇವರು? ಮನದಲ್ಲಿ ಪ್ರಶ್ನೆ , ಅವರೇ ಆಗಿರಲಿ ಎನ್ನುವ ಹಾರೈಕೆ, ನನಗೇನಾದರೂ ದಾರಿ ಕಾಣಿಸಿಯಾರೇ ಎನ್ನುವ ಆಸೆ! ಅಷ್ಟರಲ್ಲಿ ಮನೆಯ ಬಾಗಿಲು ತೆಗೆಯಿತು. ಬೆಳಗ್ಗೆ ೧೦.೩೦ರ ಸಮಯ. ಬಿಸಿಲಿನಲ್ಲಿ ನಾನು ನಿಂತು ನೋಡುತ್ತಿದ್ದೆ. ಮಾಧವರಾಯರು ಒಳಗಿನಿಂದ ಬಂದು ಕಾರು ಹತ್ತಿದರು. ಕಾರು ಹೊರಟುಹೋಯಿತು. ನನಗೆ ಅವರೇ ಇವರು ಎಂದು ಖಚಿತ ಆಯಿತು. ಬಹಳ ಕೋಪಿಷ್ಠರು ರಾಯರು. ಅವರು ನಗುತ್ತಾ ಸಮಾಧಾನವಾಗಿ ಮಾತನಾಡಿದ್ದನ್ನು ನಾನು ನೋಡಿರಲೇ ಇಲ್ಲ. ಈಗ ಮನೆಯೊಳಗೆ ಹೋಗಬೇಕು. ರಾಯರಿಗೆ ಏನು ಕೆಲಸ ಈಗ ಎಂದು ತಿಳಿಯದು ನನಗೆ. ಏನಾದರಾಗಲಿ ಒಂದು ಬಾರಿ ರತ್ನಮ್ಮನವರನ್ನಾದರೂ ಮಾತನಾಡಿಸುವಾ ಎಂದು ಹೋಗಿ ಬಾಗಿಲು ತಟ್ಟಿದೆ. ರತ್ನಮ್ಮ ಬಂದು ಬಾಗಿಲು ತೆರೆದರು. ಆರು ವರ್ಷಗಳಾದ ಮೇಲೆ ನಾನು ಅವರನ್ನು ನೋಡಿದ್ದು. ನೋಡಿದ ಕೂಡಲೆ, "ಕೃಷ್ಣ! ನೀನು?" ಎಂದರು. ನಾನು ಬಗ್ಗಿ ಅವರ ಕಾಲುಮುಟ್ಟಿ ನಮಸ್ಕರಿಸಿದೆ. ನನ್ನನ್ನು ಅಪ್ಪಿಕೊಂಡು ಅಳುವುದಕ್ಕೆ ಶುರು ಮಾಡಿದರು ಅವರು. "ಎಲ್ಲೋ ಹೋಗಿದ್ದೆ ಇಷ್ಟು ದಿನ ನೀನು?" ಎಂದರು. ಆ ತಾಯಿಯ ಪ್ರೇಮ ನನ್ನ ಮೇಲೆ ಬಹಳ! "ಏನು ಮಾಡುತ್ತಿದ್ದೀ ಕೃಷ್ಣಾ ಈಗ ನೀನು? ಯಾವಾಗಲೂ ನಿನ್ನ ಜ್ಞಾಪಕ ಬರುತ್ತಿತ್ತು. ಆಲೂಗೆಡ್ಡೆ ಹುಳಿ ನಿನಗಿಷ್ಟ. ಅದನ್ನು ಮಾಡಿದಾಗಲೆಲ್ಲ ನಿನ್ನ ನೆನಪು ಬಹಳ ಬರುತ್ತಿತ್ತು ನನಗೆ..." ಎಂದರು. ಹುಳಿಯಲ್ಲಿ ದಪ್ಪ ದಪ್ಪ ಆಲೂಗೆಡ್ಡೆ ಹೋಳುಗಳು ನನಗಿಷ್ಟ ಎಂದು ಆ ತಾಯಿ-ಜೀವ ನನ್ನನ್ನು ನೆನಪಿಸಿಕೊಳ್ಳುತ್ತಿತ್ತು ಎಂದು ಕೇಳಿ, ನನಗೂ ಪ್ರೀತಿ ಅಳು ಒತ್ತರಿಸಿ ಬಂದಿತ್ತು. ಹಳೆಯದನ್ನು ಮೆಲುಕು ಹಾಕುವ ಪ್ರೀತಿ ವಿಶ್ವಾಸದ ಮಾತುಗಳು ಮುಗಿದವು. ನಾನು ಈಗ ವಿಷಯಕ್ಕೆ ಬಂದೆ. "ರತ್ನಮ್ಮ, ನನಗೆ ಈಗ ಒಂದು ಕೆಲಸ ಬೇಕಲ್ಲ. ಮಾಧವರಾಯರು ಎಲ್ಲಿದ್ದಾರೆ ಈಗ?" ಎಂದೆ. "ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಜನರಲ್ ಮ್ಯಾನೇಜರ್ ಕಣೋ ಅವರು ಈಗ!" ಎಂದರು ರತ್ನಮ್ಮ. "ರತ್ನಮ್ಮ, ನನಗೊಂದು ಕೆಲಸ ಕೊಡಿಸಿ ಮಾಧವರಾಯರಿಗೆ ಹೇಳಿ"ಎಂದೆ, ಗೋಗರೆಯುವವ ನಂತೆ. ಅದಕ್ಕೆ ಅವರು "ಕೃಷ್ಣಾ, ಅವರ ಸ್ವಭಾವ ನಿನಗೆ ಗೊತ್ತಿಲ್ಲ ವೇನು? ಅವರು ಯಾರಿಗೂ ಏನೂ ಮಾಡುವುದಿಲ್ಲ ಹಾಗೆಲ್ಲಾ , ನನಗೆ ಹೇಳುತ್ತೀಯಲ್ಲಾ ನೀನು? ನಾನು ಹೇಳಿದರಂತೂ ಅವರು ಏನೂ ಮಾಡುವುದಿಲ್ಲ" ಎಂದರು. "ಇಲ್ಲ ರತ್ನಮ್ಮ, ಇದೊಂದು ಪ್ರಯತ್ನ ಮಾಡಿ, ನೀವು ಅವರಿಗೆ ಫೋನು ಮಾಡಿ ಕೃಷ್ಣ ಬಂದಿದ್ದಾನೆ ಎಂದು ಹೇಳಿ", ಎಂದೆ. ಅದಕ್ಕೆ ಅವರು , "ಅದೆಲ್ಲ ಬೇಡ , ನೀನು ಅವರನ್ನು ನೋಡಲು ಹೋದರೂ ಅತ್ತುಕೊಂಡು ಬರುತ್ತೀ ಅಷ್ಟೇ. ಖಂಡಿತಾ ಅವರಲ್ಲಿಗೆ ಹೋಗಬೇಡ, ಅವರು ನಿನಗೇನೂ ಮಾಡುವುದಿಲ್ಲ. ಬೇರೆ ಎಲ್ಲಾದರೂ ಪ್ರಯತ್ನಪಡು. ಅದಾದರೂ ಆದೀತು" ಎಂದರು. ಮುಂದುವರೆದು ನಾನು ಹಟದಿಂದಲೇ "ಇಲ್ಲ ರತ್ನಮ್ಮ, ನಾನು ಹೋಗಿಬರುತ್ತೇನೆ, ಒಮ್ಮೆ ನೋಡುತ್ತೇನೆ, ನೋಡುವಾ ಏನಾಗುತ್ತದೆ" ಎಂದು ಹೇಳಿದೆ. "ನಿನ್ನಿಷ್ಟ , ಸರಿ ಹಾಗಾದರೆ, ನಾನು ಫೋನು ಮಾಡುವುದಿಲ್ಲ. ನೀನೇ ಹೋಗಿ ನೋಡಿ ಬಾ" ಎಂದರು. 'ನೀವು ನನಗೆ ಆಶೀರ್ವದಿಸಿ, ಅಷ್ಟು ಸಾಕು' ಎಂದು ಮತ್ತೊಮ್ಮೆ ಅವರಿಗೆ ನಮಸ್ಕಾರ ಮಾಡಿ, ಮಾಧವರಾಯರ ಆಫೀಸಿನ ವಿಳಾಸ ತೆಗೆದುಕೊಂಡು ಹೊರಟೆ. ಮೂರು ಮೈಲಿ ದೂರ. ಬಸ್ಸಿನಲ್ಲಿ ಹೋಗಲು ಕಾಸಿಲ್ಲ. ಬಿರುಬಿಸಿಲು, ಬೇರೆ ದಾರಿಯಿಲ್ಲ, ಮೂರು ಮೈಲಿಗಳೂ ನಡೆದೇ ಹೋದೆ. ಗೇಟಿನಲ್ಲಿ ನಿಂತಿದ್ದವನಿಗೆ 'ರಾಯರು ನನಗೆ ಗೊತ್ತು' ಎಂದೆ. ಒಳಗೆ ಬಿಟ್ಟ. ಒಳಗಿನ ರೂಮಿನಲ್ಲಿದ್ದರು ರಾಯರು. 'ಮತ್ತೂರಿನ ಕೃಷ್ಣ. ವಾರದ ಹುಡುಗ, ಎರಡು ನಿಮಿಷ ಮಾತ್ರ ಅವಕಾಶ ಕೊಡಿ', ಎಂದು ಚೀಟಿ ಬರೆದು ಮಡಚಿ ಒಳಗೆ ಕಳುಹಿಸಿದೆ. ಐದು-ಹತ್ತು ನಿಮಿಷಗಳು ಕಳೆದವು. ಒಳಗಿದ್ದವರು ಯಾರೋ ಹೊರಗೆ ಹೋದರು. 'ಒಳಗೆ ಕಳುಹಿಸೋ ಅವರನ್ನು' ಎಂದರು ರಾಯರು. ಆ ಆಳು ನನ್ನನ್ನು ಒಳಗೆ ಹೋಗಲು ಹೇಳಿದ. ನನ್ನ ಬಟ್ಟೆಯೂ ಎಂಥದಿತ್ತು? ನಾಲ್ಕು ಮೊಳದ ತುಂಡು ಪಂಚೆ ಒಂದು, ಒಂದು ಅಂಗಿ! ಒಳಗೆ ಹೋದೆ... "ಏನೋ" ಎಂದರು ತಲೆ ಎತ್ತಿ. ನಾನು ಮಾತನಾಡದೆ ಸೀದಾ ಹೋದವನೇ ಅವರ ಕಾಲಿಗೆ ನಮಸ್ಕಾರ ಮಾಡಿದೆ. "ಇರಲಿ, ಇರಲಿ, ಏನೋ ಬಂದೆ?" ಎಂದರು. ನಾನು, "ಸರ್ ಬಹಳ ಕಷ್ಟ ಆಗಿದೆ, ಮನೆಯಲ್ಲಿ ಏನೂ ಇಲ್ಲದಂತಹ ಪರಿಸ್ಥಿತಿ. ನನಗೊಂದು ಕೆಲಸ ಬೇಕಲ್ಲ" ಎಂದೆ. "ಏನು ಕೆಲ್ಸಾನೂ ಇಲ್ಲ, ಹೋಗು ಹೋಗು" ಎಂದರು. ನಾನು "ಇಲ್ಲ ಸರ್ ಹಾಗೆನ್ನಬೇಡಿ, ದಯವಿಟ್ಟು ಏನಾದರೂ ಕೊಡಿ ಸರ್. ಮನೇಲಿ ಊಟಕ್ಕೆ ಕಷ್ಟ ಆಗಿದೆ." ಎಂದು ಅಂಗಲಾಚಿ ದುಃಖದಿಂದ ಕೇಳಿಕೊಂಡೆ. "ಇಲ್ಲೇನೂ ಕೆಲಸ ಇಲ್ಲ ಕಣೋ ನಿನಗೆ...

ಹೋಗು ಹೋಗು'' ಎಂದರು ಪುನಃ. ''ಸರ್, ಸರ್ ಹಾಗೆನ್ನಬೇಡಿ ಸರ್''ಎಂದು ದೈನ್ಯದಿಂದ ಕೇಳಿದೆ. ''ಏನು ಕೆಲಸ ಮಾಡ್ತೀಯೋ ನೀನು?'' ಎಂದರು. ''ಈಗ ನಿಮ್ಮ ಆಫೀಸಿನಲ್ಲಿ ಗುಡಿಸುತ್ತೇನೆ ಸರ್. ಪರವಾಗಿಲ್ಲ, ಗುಡಿಸೋ ಕೆಲಸವನ್ನಾದರೂ ಕೊಡಿ ಸರ್, ಹೋಗು ಅನ್ನಬೇಡಿ ದಯವಿಟ್ಟು''. 'ಹೋಗೋ ಹೋಗೋ, ನಿನಗಲ್ಲ ಆ ಕೆಲಸ. ಇದೆಲ್ಲ ನೀನು ಮಾಡ್ತೀಯಾ?' ಎಂದರು. 'ಸರ್, ಯಾಕೆ ಸರ್ ಹಾಗೆ ಹೇಳುತ್ತೀರಿ? ಯಾವುದು ಸರ್ ನನಗಲ್ಲ? ಯಾವ ಕೆಲಸ ನಾನು ಮಾಡೋಲ್ಲ ಹೇಳಿ?' ಎಂದೆ. 'ಓ ಏನು? ಮಾತಾಡುವುದನ್ನು ಕಲಿತುಬಿಟ್ಟಿದ್ದೀ ನೀನು?' ಎಂದರು. ಅವರು ಬಹಳ ಸಿಟ್ಟಿನ ಮನುಷ್ಯರಾದರೂ, ಕೆಟ್ಟವರಲ್ಲ. ಮನಸ್ಸು ಒಳ್ಳೆಯದು. ಅದು ನಿಜವೇ, ಕಠಿಣವಾಗಿ ಮಾತನಾಡುವವರೆಲ್ಲ ದುಷ್ಟರಾಗಿರುವುದಿಲ್ಲ! ಅವರು ಸಿಟ್ಟು ಮಾಡಿಕೊಂಡರೂ ಅದರಲ್ಲೂ ನನ್ನ ಬಗೆಗೆ ಅನುಕಂಪವಿತ್ತು. ಸಹಾನುಭೂತಿ ಇತ್ತು. ಮನಸ್ಸಿನಲ್ಲಿ, 'ಇವನು ಬ್ರಾಹ್ಮಣ, ಎಸ್.ಎಸ್.ಎಲ್.ಸಿ. ಬೇರೆ ಪಾಸು ಮಾಡಿದ್ದಾನೆ. ಮೇಲಾಗಿ ಮತ್ತೂರ ಹುಡುಗ, ಸಂಪ್ರದಾಯಸ್ಥ ಜನ ಇವರೆಲ್ಲ. ಇಂಥವನಿಗೆ ಯಾವುದೇ ಕೀಳು ದರ್ಜೆಯ ಕೆಲಸ ಕೊಡುವುದು ಹೇಗೆ?' ಎಂದು ನನ್ನನ್ನು ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ ಎಂದೂ ನನಗೆ ಭಾಸವಾಯಿತು. ಅವರ ಉದ್ದೇಶ ಅದೇ ಆಗಿತ್ತು. ಆದರೆ ಅದೃಷ್ಟವಶಾತ್ ನನಗೆ ವಾರ್ಧಾದಲ್ಲಿ ಒಂದು ವರ್ಷ ಗಾಂಧೀಜಿ ಆಶ್ರಮದಲ್ಲಿದ್ದಾಗ ಎಲ್ಲ ರೀತಿಯ 'ಕೆಳದರ್ಜೆ'ಯ ಕೆಲಸಗಳನ್ನು ಮಾಡಿ ಅಭ್ಯಾಸ ಆಗಿತ್ತು. ಹೌದು. ನನ್ನ ಆಶ್ರಮವಾಸದ ಅವಧಿಯ ಉದ್ದಕ್ಕೂ ಎಲ್ಲಾ 'ಕೆಳದರ್ಜೆ'ಯ ಕೆಲಸಗಳನ್ನು ಮಾಡಿದ್ದ ನನಗೆ ಇಂಥದ್ದು ಉತ್ಕೃಷ್ಟ, ಇಂಥದ್ದು ನಿಕೃಷ್ಟ,ಎನ್ನುವ ಭಾವನೆಯೇ ಇರಲಿಲ್ಲ, ಯಾವುದೇ ಕೆಲಸದ ಬಗೆಗೆ! ಅದಕ್ಕೆ ಮೊದಲು ರಾಮಕೃಷ್ಣಾಶ್ರಮದಲ್ಲಿ ಇದ್ದವನು ನಾನು. ನನಗೆ ಯಾವುದೇ ಕೆಲಸ ಆದರೂ ಪರವಾಗಿರಲಿಲ್ಲ. ವ್ಯತ್ಯಾಸ ಇರಲಿಲ್ಲ. ಅದರಿಂದಲೇ ಅವರ ಮನಸ್ಸು ಕರಗುತ್ತಿದ್ದುದನ್ನು ಗಮನಿಸಿ, ನಾನು ಆತ್ಮವಿಶ್ವಾಸದಿಂದ ಅವರನ್ನು ಭಕ್ತಿಪೂರ್ವಕವಾಗಿ ಕೇಳಿಕೊಂಡೆ. ನಾ ಮಾಡಿದ ಪ್ರಯತ್ನ ಅಂತೂ ಫಲ ಕೊಟ್ಟಿತು.

ಅವರು ಅವರ ಕಾರ್ಯದರ್ಶಿಯನ್ನು ಕರೆದು 'ನಮ್ಮ ಮತ್ತೂರ ಹುಡುಗ ಇವನು, ಏನಾದ್ರೂ ಕೆಲಸ ಇದೆಯೇನ್ರಿ ಇವನಿಗೆ?' ಎಂದರು.

ಅದಕ್ಕೆ ಅವರು, 'ಯಾವ ಕೆಲಸ ಸರ್? ಬೇರೆ ಯಾವ ಕೆಲಸವೂ ಇಲ್ಲ , ಕಂಡಕ್ಟರ್ ಕೆಲಸ ಮಾತ್ರ ಇರುವುದು' ಎಂದರು. ನಾನು ತಕ್ಷಣವೇ ಮಾತಿನಲ್ಲೇ ಕಾಲಿಗೆ ಬಿದ್ದವನಂತೆ, 'ಸರ್, ಸರ್, ಬಹಳ ಸಂತೋಷ ಸರ್, ಕೊಡಿ ಸರ್, ಆ ಕೆಲಸವನ್ನೇ ಕೊಡಿ ಸರ್' ಎಂದೆ ಎರಡು ಸಲ. ನನಗಾಗಿದ್ದ ಸಂತೋಷಕ್ಕೆ ನಿಜಕ್ಕೂ ಎಣೆ ಇರಲಿಲ್ಲ. ನಾನು ಸಾಕಷ್ಟು ನಿರಾಶನಾಗಿದ್ದೆ. ತಿನ್ನಲು ಗತಿ ಇಲ್ಲದಿದ್ದವನಿಗೆ ಮೃಷ್ಟಾನ್ನ ಸಿಕ್ಕುತ್ತಿರುವ ಅನುಭವ ಆಯಿತು ಆ ಕ್ಷಣ. ಆ ಮಾತು ನಿಜವೂ ಆಗಿತ್ತಷ್ಟೆ!! ಅದಕ್ಕೆ ರಾಯರು, ನನ್ನ ಆತುರ ನೋಡಿ, 'ಲೋ ಕಂಡಕ್ಟರ್ ಕೆಲಸ ಮಾಡುತ್ತೀಯೇನೋ ನೀನು ನಿಜಕ್ಕೂ?' ಎಂದರು, ಸ್ವಲ್ಪ ಆಶ್ಚರ್ಯದಿಂದಲೇ. ಅವರು ಸ್ವಲ್ಪ ತಮ್ಮ ಮುಖದ ಬಿಗಿ ಸಡಿಲಿಸಿ ಮಾತನಾಡಿದ್ದು ನೋಡಿ ನನಗೂ ಧೈರ್ಯ ಬಂದಿತ್ತು. 'ಸರ್, ತಾವೆಲ್ಲ ಗಾಂಧೀಜಿಯನ್ನು ತಿಳಿದುಕೊಂಡಿರುವವರು. ನನಗೂ ಗಾಂಧೀಜಿ ಜತೆ ಇದ್ದು ಸೇವೆ ಮಾಡುವ ಭಾಗ್ಯ ಲಭಿಸಿತು ಮದ್ರಾಸಿನಲ್ಲಿದ್ದಾಗ. ಅನಂತರ ರಾಮಕೃಷ್ಣಾಶ್ರಮದಲ್ಲಿ ಇದ್ದೆ. ಯಾವ ಕೆಲಸವೂ ಅವಮರ್ಯಾದೆ ಅಲ್ಲ ಸರ್! ನಾನು ಚೆನ್ನಾಗಿ ಮಾಡಿದರೆ ಸರಿ, ಯಾವ ಕೆಲಸವಾದರೇನಂತೆ? ಇಲ್ಲ ಎನ್ನಬೇಡಿ, ಸರ್. ದಯವಿಟ್ಟು ನನಗೆ ಆ ಕೆಲಸವನ್ನೇ ಕೊಡಿ' ಎಂದೆ. ಬಡತನ ಎಲ್ಲಾ ರೀತಿಯ ಪಾಠವನ್ನೂ ಕಲಿಸುತ್ತದೆ. ಆದರೂ ನಮ್ಮ ಸಂಸ್ಕಾರ ಆ ಪಾಠವನ್ನು ಒಪ್ಪಿಕೊಳ್ಳಬೇಕು. ನಮ್ಮ ಮನೋಧರ್ಮ ಕಲಿತ ಪಾಠಕ್ಕೆ ಹೊಂದಿಕೊಳ್ಳುವಂತಿರಬೇಕು. ಈ ಕೆಲಸವನ್ನು ನನಗೆ ಗಾಂಧೀಜಿಯ ಪ್ರಭಾವ, ರಾಮಕೃಷ್ಣಾಶ್ರಮದ ಅನುಭವ ಮಾಡಿಸಿತ್ತು. ಆದ್ದರಿಂದ ನನಗೆ ಅಂತೂ ಕೆಲಸ ಸಿಕ್ಕಿತಲ್ಲ ಎನ್ನುವ ಖುಷಿಯೇ ಬಹಳ ಆಗಿತ್ತು.

ಮಾಧವರಾಯರ ಮುಖದಲ್ಲಿ ಎಂಥದೋ ದುಃಖದ ಛಾಯೆ. ಸಿಗರೇಟು ಸೇದುತ್ತಲೇ ಹೊಗೆ ಬಿಡುತ್ತ , 'ಬ್ರಾಹ್ಮಣರ ಮನೆಯ ಹುಡುಗನಿಗೆ ಈ ಕೆಲಸ ಕೊಡುವಂತಾಯಿತಲ್ಲ' ಎನ್ನುವ ನೋವು ಮುಖದಲ್ಲಿ ತಂದುಕೊಂಡು, ಸ್ವಲ್ಪ ಮುಜುಗರದಿಂದಲೇ, ಅವರ ಕಾರ್ಯದರ್ಶಿಯನ್ನು ನೋಡಿ ''ಏನ್ರೀ, ಶ್ರೀನಿವಾಸರಾವ್ ! ಇವರಿಗೆ ಆ ಕೆಲಸ ಆಗುತ್ತದೆಯೇನ್ರಿ?'' ಎಂದರು. ಮಾಧವರಾಯರಲ್ಲಿದ್ದ ಸಂಸ್ಕಾರ ಅವರಿಂದ ಆ ಮಾತನ್ನಾಡಿಸಿತು. ಆ ಕೆಲಸ ನನಗೆ ಕೊಡಿಸಲು ಅಷ್ಟು ಯೋಚನೆ ಮಾಡಿಸಿತ್ತು!! ನಾನು ಅವರ ಮುಖಭಾವವನ್ನೇ ಗಮನಿಸುತ್ತಿದ್ದವನು ತಕ್ಷಣವೇ 'ದಯವಿಟ್ಟು ಬೇಡ ಎನ್ನಬೇಡಿ' ಎನ್ನುವ ಹಾಗೆ ಅವರನ್ನು ನೋಡಿ , 'ಅಯ್ಯೋ ಪಾಪ ಏನಿಲ್ಲ ಸರ್! ಈ ಕೆಲಸ, ಖಂಡಿತಾ ಆಗುತ್ತದೆ ನನ್ನ ಕೈಲಿ. ನೀವು ಹ್ಞೂಂ ಅನ್ನಿ ಅಷ್ಟು ಸಾಕು. ಬಹಳ ಕಷ್ಟ ಇದೆ ಸರ್ ಮನೆಯಲ್ಲಿ, ಬೇಡ ಎನ್ನಬೇಡಿ. ನಾನು ಖಂಡಿತ ನಿರ್ವಹಿಸುತ್ತೇನೆ. ನನಗೆ ಈ ಕೆಲಸ ಮಾಡುವುದರಲ್ಲಿ ಏನೂ ಅವಮಾನವಿಲ್ಲ, ಸಂತೋಷವಾಗಿ ಮಾಡುತ್ತೇನೆ' ಎಂದು ಬಡಬಡನೆ ಒಂದರೆ ಘಳಿಗೆಯೂ ಬಿಡದೆ ಹೇಳಿದೆ. ಇದನ್ನೇ ಇಷ್ಟೂ ಹೇಳಿದ್ದು ಏಕೆ ಎಂದರೆ, ಕೆಲವು ಸನ್ನಿವೇಶಗಳಲ್ಲಿ ನಮಗೆ ಸಹಾಯ ಮಾಡೋಣ ಎನ್ನುವ ಮನಸ್ಸಿದ್ದವರಿಗೂ, ನಮ್ಮಕುಲಗೋತ್ರಗಳು ನಮ್ಮನ್ನು ಹೇಗೆ ಕಷ್ಟಕ್ಕೆ ಸಿಲುಕಿಸುತ್ತವೆ ಎಂದು ಹೇಳಲು ಬರುವುದಿಲ್ಲ. ಅವರು ಅರೆಕ್ಷಣ ಸುಮ್ಮನಿದ್ದು, 'ಸರಿ, ನೀನು ಹೊರಗೆ ಕುಳಿತಿರು. ಐದು ನಿಮಿಷ ಆದಮೇಲೆ ನಿನ್ನನ್ನು ಕರೆಯುತ್ತೇನೆ ನಾನು' ಎಂದರು. ಹೊರಗಿನ ಬೆಂಚಿನ ಮೇಲೆ ಕಾಯುತ್ತಾ ಕುಳಿತೆ. ಕ್ಷಣಗಳು ಯುಗಗಳಂತೆನಿಸಿದವು. ಹತ್ತು ನಿಮಿಷಗಳಲ್ಲೇ ಕೆಲಸದ ಆದೇಶ ನೀಡಿ ,

ಅದನ್ನೆಲ್ಲ ನನ್ನ ಕೈಯಲ್ಲಿಡುವಾಗ, 'ನೋಡೋಣ, ಒಂದೆರಡು ತಿಂಗಳು ಮಾಡು , ಮನೆಗೆ ಹೋಗುತ್ತೀ ಆಮೇಲೆ ನೀನೇ!' ಎಂದರು. ಹಾಗೆಂದರೆ ಅವರ ಅರ್ಥ,'ನಿನಗಿದು ಸಾಧ್ಯವಿಲ್ಲ' ಎಂದು. ನನಗೋ ಪರಮಸಂತೋಷ. ಖಾಕಿ ಬಟ್ಟೆ, ೩೫೦ ರೂಪಾಯಿ ಸಂಬಳ ತಿಂಗಳಿಗೆ, ಆರು ತಿಂಗಳನಂತರ ಖಾತರಿಯಾದ ಮೇಲೆ ಡಿ.ಎ. ಕೊಡುತ್ತಾರೆ. ಜೀವನಕ್ಕೆ ಸದ್ಯಕ್ಕೆ ಒಂದು ದಾರಿಯಾಯಿತಲ್ಲ ಎನ್ನುವ ಅತೀವ ಸಮಾಧಾನ , ಏನೋ ಸಾಧಿಸಿದ ಅನುಭವ. ಕೆಲಸಕ್ಕೆ ಸೇರುವ ಪತ್ರ ಕೈಗೆ ಕೊಟ್ಟ ಕೂಡಲೇ ಖುಷಿಯಿಂದ ಮನೆಗೆ ಓಡಿಬಂದೆ.

'ಅಮ್ಮಾ! ಕೆಲಸ ಆಯ್ತು' ಎಂದೆ ಜೋರಾಗಿ. 'ಏನು ಕೆಲಸ?' 'ಕಂಡಕ್ಟರ್ ಕೆಲಸ!' ಅಮ್ಮನಿಗೆ ಅದೆಲ್ಲ ಗೊತ್ತಿರಲಿಲ್ಲ. 'ಏನು ಹಾಗೆಂದರೆ? ಏನು ಕೆಲಸ ಅದು?' ಎಂದರು. 'ಟಿಕೆಟು ಕೊಡೋದಮ್ಮ ಅದು. ಬಸ್ಸಿನಲ್ಲಿ ಬಂದವರಿಗೆಲ್ಲ ಟಿಕೆಟ್ಟು ಕೊಡುವ ಕೆಲಸ. ತುಂಬಾ ಜನರು ಬರುತ್ತಾರೆ, ಹೋಗುತ್ತಾರೆ, ಚೆನ್ನಾಗಿರುತ್ತದೆ, ಆ ಕೆಲಸ' ಎಂದೆ. ಮಧ್ಯಾಹ್ನದ ಒಂದು ಘಂಟೆಗೆ ನಮ್ಮ ಅಣ್ಣ ಬಂದರು. 'ಚಿನ್ನ, ಕೆಲಸ ಸಿಕ್ಕಿತು' ಎಂದೆ. (ನಮ್ಮಣ್ಣ ಶಂಕರಮೂರ್ತಿಯವರನ್ನು 'ಚಿನ್ನ'ಎಂದೇ ಕರೆಯುತ್ತಿದ್ದುದು ನಾವು.) 'ಏನು ಕೆಲಸ?' ಎಂದರು ಉತ್ಸಾಹವಾಗಿ. 'ಕಂಡಕ್ಟರ್ ಕೆಲಸ...' 'ಓ ಯಾವ ಬಸ್ಸು?' ಈಗ ಅವರ ಧ್ವನಿಯಲ್ಲಿ ಅಷ್ಟು ಉತ್ಸಾಹ ಇರಲಿಲ್ಲ. 'ಇಲ್ಲೇ ಅಣ್ಣ , ಸಿಟಿ ಬಸ್ಸು' ಎಂದೆ ನಾನು. 'ಹಾಗಾದರೆ ನೀನು ಎಲ್ಲಾದರೂ ಬೇರೆ ಹೋಗು' ಎಂದರು. ಆ ಮಾತಿನ ಅರ್ಥ, 'ನನಗೆ ಅವಮಾನ ನೀನು ಕಂಡಕ್ಟರ್ ಕೆಲಸ ಮಾಡುವುದು, ನಾನು ಸಂಗೀತದ ಮೇಷ್ಟ್ರು , ನೀನು ಈ ತರಹದ ಕೆಲಸ ಮಾಡುವುದೇ ನನ್ನ ತಮ್ಮನಾಗಿ'ಎಂದು! ಅಣ್ಣನ ಮನಸ್ಸಿಗೆ ಸ್ವಲ್ಪ ಪಿಚ್ಚೆನಿಸಿತ್ತು. ಆಮೇಲೆ, 'ಯಾವ ಕೆಲಸ ಆದರೇನು? ಚೆನ್ನಾಗಿ ಮಾಡಿದರಾಯಿತು' ಎಂದರು, ಒಂದು ರೀತಿ ತಮಗೆ ತಾವೇ ಸಮಾಧಾನ ಹೇಳಿಕೊಳ್ಳುವವರ ಹಾಗೆ. ಅಂತೂ ಆ ಕೆಲಸ ನಾನು ಮಾಡುವುದನ್ನು ಅವರು ನೋಡುವ ದೃಷ್ಟಿ ತಾತ್ವಿಕ ಆಗಿತ್ತು ಆ ಕ್ಷಣಕ್ಕೆ. ಅಂತೂ ನಾನು ಕಂಡಕ್ಟರ್ ಕೆಲಸಕ್ಕೆ ಸೇರಿದೆ.

ಒಂದನೇ ತಾರೀಖಿನಿಂದ ಕೆಲಸಕ್ಕೆ ಬಾ ಎಂದು ಹೇಳಿದ್ದರು. ಅಲ್ಲಿಯವರೆಗೆ ಯೂನಿಫಾರಂ ಸಹ ತಯಾರಾಗಿದ್ದಿತು. ಒಂದನೇ ತಾರೀಖು ಹೋದಾಗ ನಾನು ಹೋಗುವ ಬಸ್ಸಿನ ಮಾರ್ಗ ತಿಳಿಯಿತು. ಬಸವನ ಗುಡಿಯಿಂದ, ಶಿವಾಜಿನಗರಕ್ಕೆ ಹೋಗುವ ಬರುವ ಬಸ್ಸಿಗೆ ನಾನು ಕಂಡಕ್ಟರ್ ಆದೆ. ಎರಡು ದಿನ ಟ್ರೈನಿಂಗ್ ಕೊಟ್ಟರು. ತರಬೇತಿ ಕೊಡಲು ಏನಿದೆ ಅಲ್ಲಿ? ದುಡ್ಡು ತೆಗೆದುಕೊಂಡು ಟಿಕೆಟು ಕೊಡುವುದು ಅಷ್ಟೆ. ಈ ಕೆಲಸ ಮಾಡಲು ಪ್ರಾರಂಭಿಸಿ ಮೂರು ತಿಂಗಳು, ಹನ್ನೆರಡು ದಿನಗಳಾಗಿದ್ದವು. ಈ ಮಧ್ಯೆ ಆಗೀಗ ಬಸ್ ಹತ್ತಿ ಬರುವ ಇನ್‌ಸ್ಪೆಕ್ಟರುಗಳು ಆಗಾಗ ದುಡ್ಡು ಕೇಳುವುದು, ನಾನು ಹೆದರದೆ, 'ದುಡ್ಡು ಕೊಡುವುದಿಲ್ಲ' ಎಂದು ಹೇಳುವುದು, ಅವರಿಗೆ ಅನಂತರ ನನ್ನನ್ನು ಕಂಡರೆ ಸ್ವಲ್ಪ ಭಯದ ಭಾವ ಬಂದಿದ್ದು , ಈ ಎಲ್ಲ ನಡೆಯಿತು! ಮೂರು ತಿಂಗಳ ಸಂಬಳ ತೆಗೆದುಕೊಂಡೆ. ಅನಂತರ ಸೋಮವಾರ ಎಂದಿನಂತೆ ಕೆಲಸಕ್ಕೆ ಹೋದೆ. ಅಲ್ಲಿ ನನಗಾಗಿ ಒಂದು ನೋಟ್ ಇತ್ತು, 'ಜನರಲ್ ಮ್ಯಾನೇಜರ್‌ರನ್ನು ಕಾಣುವುದು' ಎಂದು. ಎಂದರೆ, ಮಾಧವರಾಯರನ್ನು. ಕಂಡಕ್ಟರ್ ಕೆಲಸ ಆದ ಮೇಲೆ ನಾನು ಅವರನ್ನು ನೋಡಿಯೇ ಇರಲಿಲ್ಲ. ಅವರನ್ನು ಭೇಟಿಯಾಗಲಾರದು ಎಂದಲ್ಲ, ಆದರೆ ಆ ರೀತಿಯ ಸಂದರ್ಭವೇ ಒದಗಿರಲಿಲ್ಲ. ಕೆಲಸವಾದ ದಿನ ಸಂಜೆ ರತ್ನಮ್ಮನವರನ್ನು ನೋಡುವುದಕ್ಕೆ ಹೋಗಿದ್ದೆ. ವಿಷಯ ಹೇಳಿ ನಮಸ್ಕಾರ ಮಾಡಿದ್ದೆ. ಅವರು, 'ಅಯ್ಯೋ! ಕಷ್ಟ ಅಲ್ಲವೇನೋ ಈ ಕೆಲಸ? ಈ ಕೆಲಸ ಯಾಕೋ ತೆಗೆದುಕೊಂಡೆ ನೀನು?' ಎಂದು ಉದ್ಗಾರ ತೆಗೆದಿದ್ದರು. 'ಏನೂ ಕಷ್ಟವಿಲ್ಲ ರತ್ನಮ್ಮ, ಭರ್ಜರಿಯಾಗಿ ಕೆಲಸ ಮಾಡುತ್ತೇನೆ, ನೋಡುತ್ತಿರಿ' ಎಂದು ಹೇಳಿ ಬಂದಿದ್ದಷ್ಟೆ!

ಒಂದಂತೂ ನಿಜ... ನಾನು ಯಾವುದೇ ಕೆಲಸ ಮಾಡಿದರೂ ಸರಿಯಾಗಿ ಕೆಲಸ ಮಾಡಬೇಕು, ಅಪ್ರಾಮಾಣಿಕತೆ ಎನ್ನುವುದು ಇಣುಕಿಯೂ ನೋಡಬಾರದು ಎನ್ನುವವನು. ಗಾಂಧೀಜಿಯು ನಡೆಸಿದಂತಹ ಜೀವನವನ್ನು ನೋಡಿದಾಗ, ಅವರಂತಹ ಮಹಾತ್ಮರು ಬಟ್ಟೆ-ಮೆಟ್ಟು ಹೊಲೆಯುವುದನ್ನು ಕಲಿತು, ಆ ಕೆಲಸಗಳಿಂದ ಹಿಡಿದು ದೇಶಕಟ್ಟುವ ಕೆಲಸದವರೆಗೂ ಅವಿಶ್ರಾಂತವಾಗಿ ದುಡಿದು, ಮಾಡಿದ್ದಾರೆ. ಗಾಂಧೀಜಿ ಮಹಾತ್ಮರಾದುದರಿಂದ 'ಆಹಾ, ಏನು ಕೆಲಸ ಮಾಡುತ್ತಿದ್ದರು, ಇದನ್ನೆಲ್ಲ ಅವರು ಮಾಡುತ್ತಿದ್ದರೇ? ಬಟ್ಟೆ ಹೊಲೆಯುವುದು, ಮೆಟ್ಟು ಹೊಲೆಯುವುದು, ಕಸಗುಡಿಸುವುದು ಇತ್ಯಾದಿ... ಈ ಕೆಲಸಗಳನ್ನು' ಎಂದು ಅಚ್ಚರಿಪಟ್ಟು ಸಂತೋಷಿಸುತ್ತೇವೆ. ಅದೇ ನಮ್ಮವನೇ ಒಬ್ಬನು ಮಾಡಿದಾಗ 'ಅವನಿಗೆ ಓದು ಎನ್ನುವುದೇನಿದೆ? ಈ ಕೆಲಸ ಬಿಟ್ಟರೆ ಅವನಿಗೆ ಇನ್ನು ಅದ್ಯಾವ ಕೆಲಸ ತಾನೇ ಸಿಕ್ಕೀತು' ಎನ್ನುವುದು ನಮ್ಮಲ್ಲಿ ಬಂದ ಅಭ್ಯಾಸ. ಒಬ್ಬರು ಗೌರವಾನ್ವಿತ ಪದವಿಯಲ್ಲಿದ್ದಾಗ ಅವರು ಮಾಡುವ ಸಣ್ಣ– ಪುಟ್ಟ ಕೆಲಸಗಳೂ ವೈಶಿಷ್ಟ್ಯಪೂರ್ಣವಾಗಿ ಕಾಣುತ್ತವೆ. ಹೆಸರು ಬಂದಾಗ ಅದು ಮತ್ತೂ ಚೆನ್ನಾಗಿ ಕಾಣುತ್ತದೆ. ಅದಕ್ಕೇ ದೊಡ್ಡ-ದೊಡ್ಡವರ ಜೀವನ ಚರಿತ್ರೆ ಓದಬೇಕು. ಅವರು ಸುಮ್ಮನೆ ದೊಡ್ಡವರು ಆಗಿರುವುದಿಲ್ಲ. ಅದಕ್ಕಾಗಿ ಕಷ್ಟಪಟ್ಟರು ಎಂದೂ ಹೇಳಲಾಗದು, ಏಕೆಂದರೆ ಈ ಕಷ್ಟಗಳನ್ನೆಲ್ಲ ದಾಟಿದನಂತರ ನಾನು ದೊಡ್ಡವನಾಗುತ್ತೇನೆ ಎಂದು ಬಹುಶಃ ಯಾರಿಗೂ ಗೊತ್ತಿರುವುದಿಲ್ಲ. ಕಾರಣ, ಪ್ರಪಂಚದಲ್ಲಿ ಬಹಳ ಕಷ್ಟಪಡುವವರೇ ಹೆಚ್ಚು ಮಂದಿ... ಎಲ್ಲರೂ ದೊಡ್ಡವರಾಗಲು ಸಾಧ್ಯವಿಲ್ಲ. ಆದ್ದರಿಂದ ನಾವು ಹೀಗೆ ತಿಳಿದುಕೊಳ್ಳಬಹುದು.. 'ದೊಡ್ಡವರು ಎನಿಸಿಕೊಳ್ಳುವುದು ಅಥವಾ ಆಗುವುದು ಸಾಮಾನ್ಯದ ಸಂಗತಿಯಲ್ಲ , ಆದರೆ ದೊಡ್ಡವರು ಎನಿಸಿಕೊಂಡಿರುವವರು ಬಹಳ ಕಷ್ಟವನ್ನಂತೂ ಪಟ್ಟಿರುತ್ತಾರೆ. ಆ ಅಪರಿಮಿತ ಕಷ್ಟಗಳು, ಬಹುಶಃ

ಅವರನ್ನು ಆ ಸ್ಥಾನಕ್ಕೆ ತಯಾರು ಮಾಡುವ ಭೂಮಿಕೆಯಾಗಿರುತ್ತವೆ. ಅದನ್ನು ದಾಟಿ ಬಂದ ಅನಂತರ ಸಂದರ್ಭ ಸಮಯಗಳು ಅವರು ದೊಡ್ಡವರಾಗುವ ಸನ್ನಿವೇಶಗಳನ್ನು ಒದಗಿಸಿಕೊಡುತ್ತವೆ. ಇದನ್ನೇ ನಾವು ದೈವ ಎನ್ನಬಹುದು, ಅದೃಷ್ಟ ಎಂದೂ ಕರೆಯಬಹುದು.'

ಒಂದು ವಿಷಯದ ಬಗೆಗೆ ಹೇಳುವಾಗ ಹತ್ತು ವಿಷಯಗಳು ಹೆಣೆದುಕೊಂಡು ಬರುತ್ತವೆ... ನಾನು ನಿಂತದ್ದು, ಜನರಲ್ ಮ್ಯಾನೇಜರ್‌ರವರನ್ನು ಬಂದು ಕಾಣುವುದು ಎನ್ನುವ ನೋಟ್ ನೋಡಿ, ಮಾಧವರಾಯರನ್ನು ನೋಡಲು ಅವರ ಕೊಠಡಿಯ ಬಾಗಿಲಿಗೆ ಬಂದು! ಇಲ್ಲಿಯೂ ನನ್ನ ಮನಸ್ಸು ವೇಗವಾಗಿ ಕೆಲಸ ಮಾಡಲು ಪ್ರಾರಂಭಿಸಿತು... ನನಗೆ ಮಾಧವರಾಯರು ಗೊತ್ತು ಎಂದು ನಾನು ಯಾರಲ್ಲೂ ಹೇಳಿರಲಿಲ್ಲ, ಹೌದು ಇದು ಯಾರಿಗೂ ತಿಳಿದಿರಲಿಲ್ಲ. ಅವರು ದೊಡ್ಡ ಅಧಿಕಾರಿಯಾಗಿದ್ದುದರಿಂದ ನಾನು ಇತರರಂತೆ ಕೇವಲ ಒಬ್ಬ ಕಾರ್ಮಿಕ, ಆದ್ದರಿಂದ ನಾವು ಪರಸ್ಪರ ಭೇಟಿಯಾಗುವ ಅವಕಾಶವೇ ಇರಲಿಲ್ಲ. ಹಾಗಾದರೂ ಇದ್ದಕ್ಕಿದ್ದ ಹಾಗೆ ನನ್ನನ್ನು ನೋಡಲು ಕರೆ ಕಳುಹಿಸಿರುವುದು ಏಕೆ ? ಏನಾದರೂ ವ್ಯತ್ಯಾಸ ? ಏನಾಗಿರಲು ಸಾಧ್ಯ ? ಈ ಎಲ್ಲ ಯೋಚನೆಗಳೊಡನೆಯೇ ಅವರ ಬಾಗಿಲಿಗೆ ಕಾಲಿಟ್ಟೆ. ಘಂಟೆ ೧೧, ವಿರಾಮದ ಸಮಯ, ನಮಗೆ ಅದು. ಮಾಧವರಾಯರು ಆಫೀಸಿಗೆ ಬರುವ ಸಮಯವೂ ಅದೇ. ಬಾಗಿಲಲ್ಲಿ ಕುಳಿತಿದ್ದವ ನನ್ನನ್ನು ಕಂಡಕೂಡಲೆ ನನ್ನ ಬಗ್ಗೆ ವಿಚಾರಿಸಿ ಒಳಗೆ ಹೋಗಿ ಹೇಳಿಬಂದ, ನನಗೆ ಈಗ ಒಳಗೆ ಹೋಗಲು ಹೇಳಿದ. ಮಾಧವರಾಯರ ಮುಖ ಒಂದು ರೀತಿಯಾಗಿತ್ತು. ಆದರೆ ಅದು ಅಂತಹ ಗಂಭೀರವಾಗಿರಲಿಲ್ಲ. ಎಂಟೊಂಬತ್ತು ಫೈಲ್‌ಗಳು ಇದ್ದವು ಅವರ ಮುಂದೆ. ನಾ ಒಳಹೋದಾಗ, ನನ್ನನ್ನು ನೋಡಿ 'ಕೂತ್ಕೊಳ್ಳೋ' ಎಂದರು. ನಾನು ಮೆಲ್ಲನೆ ಕುಳಿತೆ. 'ನೋಡು ಈ ಫೈಲ್‌ನ' ಎಂದವರೇ ಆ ಫೈಲ್ ತೆಗೆದು ನನ್ನ ಮುಂದೆ ಹಾಕಿದರು. 'ಏನು ಸಾರ್ ಅದು?' ಎಂದೆ. 'ನೋಡು, ತೆಗೆದು'ಎಂದರು ಮತ್ತೆ. ನಾನು ಸಾವಕಾಶವಾಗಿ ತೆಗೆದು ನೋಡಿದೆ. ಒಳಗೆ ಒಂದು ಪಟ್ಟಿ ಇತ್ತು. 'ಇಂತಹಾ ಕಡೆ ಇಷ್ಟು ಹೊತ್ತು ತಡ. ಇಷ್ಟು ನಿಮಿಷ ತಡ ೨ ನಿಮಿಷ ೪ ನಿಮಿಷ' ಇತ್ಯಾದಿಯಾಗಿ ಉದ್ದಕ್ಕೂ ಬರೆದಿತ್ತು. 'ಈ ಬಸ್ಸು ಹೊರಟನಂತರ ಹೊರಟ ಬಸ್ಸು, ಆ ಬಸ್ಸಿಗಿಂತ ಬೇಗ ಗುರಿ ಮುಟ್ಟಿತು' ಇತ್ಯಾದಿ. 'ಏನು ಸಾರ್, ಏನಿದೆ ಇದರಲ್ಲಿ?' ಎಂದೆ. 'ಏನು ಹಾಗಂದರೆ, ಕಾಣಿಸ್ತಾ ಇಲ್ಲವೇ ನಿನಗೆ ? ಈ ತಡ ಯಾಕಾಯ್ತು ?' ಎಂದರು. ಅದಕ್ಕೆ ನಾನು 'ಹಾಗಂದ್ರೆ ಹೇಗೆ ಸರ್ ? ಟಿಕೆಟ್ ಕೊಡಬೇಕಲ್ಲ ನಾನು, ತಡ ಆಗಿಯೇ ಆಗುತ್ತದೆ. ಒಂದು ನಿಮಿಷ ಸುಮ್ಮನೆ ಕೂರೋದಿಲ್ಲ, ಕೆಲಸ ನಡೆಯಬೇಕೋ ಇಲ್ಲವೋ, ನೀವೇ ಹೇಳಿ ಸರ್?' ಎಂದೆ. 'ಆ ಕಡೆ ನೋಡು', ಎಂದರು, ಇನ್ನೂ ಕೆಲವು ದೂರುಗಳು ಇದ್ದವು. 'ಏನು ಹೇಳಲಿ ಹೀಗಿದೆಯಲ್ಲ?' ಎಂದರು. 'ಮರೆತು ಬಿಡಿ ಸರ್ ಅದನ್ನೆಲ್ಲ' ಎಂದೆ, ಅಷ್ಟು ಧೈರ್ಯ ಬಂದಿತ್ತು ನನಗೆ. ಸ್ವಲ್ಪ ಹೊತ್ತು ಸುಮ್ಮನಿದ್ದು 'ಶ್ರೀನಿವಾಸಮೂರ್ತಿ, ಬನ್ರೀ ಇಲ್ಲಿ', ಎಂದು ಕೂಗಿದರು. ಅವರು ಅಶಾಂತರಾಗಿರಲಿಲ್ಲ, ಸಮಾಧಾನವಾಗಿಯೇ ಇದ್ದರು. ಮಾಧವರಾಯರ ಮಾತುಗಳೂ ಸಹ ಅಷ್ಟೇನೂ ಒರಟು ಆಗಿರಲಿಲ್ಲ! ಒಳಗೆ ಬಂದ ಶ್ರೀನಿವಾಸಮೂರ್ತಿಗಳಿಗೆ, 'ಶ್ರೀನಿವಾಸಮೂರ್ತಿ, ಇವರು ಏನು ಹೇಳುತ್ತಿದ್ದಾರೆ ಕೇಳ್ರೀ' ಎಂದರು. ನಾನು ಅವರಿಗೆ 'ಏನಿಲ್ಲ ಶ್ರೀನಿವಾಸಮೂರ್ತಿಯವರೆ, ಮಧ್ಯೆ ಮಧ್ಯೆ ಬಂದು ಹೋಗುವವರು ನಾವು ಇನ್ಸ್‌ಪೆಕ್ಟರುಗಳು ಎಂದು ದುಡ್ಡು ಕೇಳುತ್ತಾರೆ, ನಾನು ಜೋರು ಮಾಡಿ "ದುಡ್ಡು ಕೊಡೋದಿಲ್ಲ, ಸಾಕು ಸುಮ್ಮನಿರ್ರಿ" ಎಂದೆ. ಅವರಿಗೆ ನನ್ನನ್ನು ಕಂಡರೆ ಭಯ ಸರ್. ಹೀಗೆ ದುಡ್ಡು ಕೇಳ್ತಾರಲ್ಲ, ಹೇಗೆ ಸರ್ ಇವರಿಗೆಲ್ಲ ದುಡ್ಡು ಕೊಡುವುದು? ನಮ್ಮ ಸರ್ಕಾರವೂ ಬದುಕ ಬೇಕುತಾನೆ ? ವಂಚನೆ ಕೂಡದು ಅಲ್ಲವೆ ? ಈ ಲಂಚ ಅನ್ನುವುದೇ ತಪ್ಪಲ್ಲವೇ ? ಸರ್...' ಎಂದೆ. 'ನೋಡ್ರಿ, ಕೇಳಿದಿರಾ?', ಎಂದರು ಮಾಧವರಾವ್. ಅದಕ್ಕೆ ಶ್ರೀನಿವಾಸ ಮೂರ್ತಿ, 'ಸರ್, ಏನೇ ಆದರೂ, ಯಾವಾಗಲೂ ಓದಿದವರು ಓದಿದವರೇ ಸರ್' ಎಂದರು. (ಆಗ ಓದಿದವರು ಈ ಕೆಲಸಗಳಿಗೆ ಹೋಗುತ್ತಿರಲಿಲ್ಲ) 'ಸರಿ, ಈಗ ಆ ಫೈಲ್ ಕೊಡಿ' ಎಂದರು ಮಾಧವರಾವ್. ಆ ಫೈಲನ್ನು ತೆಗೆದು ನನಗೆ ಕೊಟ್ಟರು. ಅದರಲ್ಲಿ ಒಂದು ಕಾಗದ ಇತ್ತು. 'ಈ ಕ್ಷಣದಿಂದಲೇ ನಿಮ್ಮನ್ನು ಸಾರಿಗೆ ಆಯುಕ್ತರನ್ನಾಗಿ ನೇಮಕ ಮಾಡಲಾಗಿದೆ. ಈ ಕೆಳಕಂಡ ವಲಯಗಳು ನಿಮ್ಮ ಅಧಿಕಾರಕ್ಕೆ ಒಳಪಟ್ಟಿವೆ...' ಎಂದು ಬರೆದಿದ್ದು ನನಗೆ ಸೇರಿದ ಕ್ಷೇತ್ರಗಳನ್ನು ಹೆಸರಿಸಲಾಗಿತ್ತು. ನನಗೋ ಮಾತೇ ಹೊರಡಲಿಲ್ಲ. ಒಂದೇ ಸಾರಿಗೆ ೭೫೦ ರೂಪಾಯಿಗಳ ಬಡ್ತಿ ಸಂಬಳದಲ್ಲಿ, ಅದೂ, ಮೂರೇ ತಿಂಗಳಲ್ಲಿ! ಆಶ್ಚರ್ಯ-ಆನಂದದಿಂದ, 'ಏನು ಸರ್ ಇದೂ?' ಎಂದೆ ಮಾಧವರಾಯರಿಗೆ. 'ಹೋಗು, ಹೋಗಿ ಮಾಡು ಹೋಗು, ಇದನ್ನ, ಈ ಕೆಲಸ ನಿನಗಾಗೋದಿಲ್ಲ ಅಂತ ಗೊತ್ತಿತ್ತು ನನಗೆ!' ಎಂದರು. ಅವರ ಮುಖದಲ್ಲಿ 'ನಿನಗೆ ಆ ಕೆಲಸ ಕೊಟ್ಟಿದ್ದಕ್ಕೆ ಕ್ಷಮೆ ಇರಲಿ' ಎನ್ನುವ ಭಾವ ನನಗೆ ಕಾಣಿಸಿತು. ಪ್ರಸನ್ನತೆ ಕಾಣಿಸಿತು. ನನಗೆ ಇನ್ನು ತಡೆಯಲಾಗಲಿಲ್ಲ. ಅವರ ಕಾಲು ಹಿಡಿದೆ, ಕಣ್ಣೀರು ಹಾಕಿದೆ. 'ಹೋಗೋ... ಹೋಗೋ... ಸಾಕು ಕಣೋ... ನನಗೆ ಇಷ್ಟ ಇರಲಿಲ್ಲ. ನಿನಗೆ ಈ ಕೆಲಸ ಕೊಡುವುದು. ಹೀಗೆ ಏನಾದರೂ ಒಂದು ಆಗುತ್ತದೆ ಎಂದು ನನಗೆ ಗೊತ್ತಿತ್ತು' ಎಂದರು. ಅವರು ಹಾಗೆ ಮಾತನಾಡುವುದನ್ನು ನಾನೆಂದೂ ನೋಡಿರಲಿಲ್ಲ! 'ಸರ್, ಮನೆಗೆ ಹೋಗಿ ರತ್ನಮ್ಮನವರಿಗೆ ಒಂದು ಮಾತು ಹೇಳಿಹೋಗುತ್ತೇನೆ' ಎಂದೆ. 'ಆಯ್ತು ಹೋಗು, ಏನಾದರೂ ಹೇಳು ಹೋಗು' ಎಂದರು ಪ್ರೀತಿಯಿಂದ. ಆ ಖುಷಿಯಲ್ಲಿ ಆ ದಿನ ಪೂರ್ತಿ ರಜಾ ಹಾಕಿದೆ. ಬೇಗ ರತ್ನಮ್ಮನವರನ್ನು ನೋಡಲು ಹೋದೆ-'ಏನೋ ಕೃಷ್ಣ ಬಂದೆ' ಎಂದರು.'ರತ್ನಮ್ಮ... ನಾನು ಇನ್ಸ್‌ಪೆಕ್ಟರ್ ನಾಳೆಯಿಂದ! ನನಗೆ ಆಶೀರ್ವಾದ ಮಾಡಿ' ಎಂದು ಬಗ್ಗಿ

ನಮಸ್ಕರಿಸಿದೆ. 'ನಿಜವಾಗಿಯೂ ಹೌದೇನೋ ಕೃಷ್ಣಾ?' ಎಂದರು, ಬಹಳ ಆಶ್ಚರ್ಯದಿಂದ ಕಣ್ಣರಳಿಸಿ. 'ಹೌದು... ನೋಡಿ ಇಲ್ಲಿ, ಕೆಲಸದ ಆದೇಶ' ಎಂದು ತೋರಿಸಿದೆ . ಅವರಿಗೆ ಬಹಳ ಖುಷಿಯಾಯಿತು. 'ಏನು ದೆಸೆಯೋ ನಿನ್ನದು! ನಿಜಕ್ಕೂ' ಎಂದು ಉದ್ಗರಿಸಿದರು. ಅಲ್ಲಿ ಅವರು ಕೊಟ್ಟ ಕಾಫಿ ಕುಡಿದು ಖುಷಿಯಿಂದ ಹೊರಟೆ.

ರಾಜಾಮಿಲ್‌ನಲ್ಲಿ ಕೆಲಸ

ಸುದೈವವೋ, ದುರ್ದೈವವೋ ನನಗೆ ತಿಳಿಯದು. ಆ ದಿನ ಸಂಜೆ ನಮ್ಮ ಮನೆಯಲ್ಲಿ , ನಾನು ಹೋದಾಗ ನಮ್ಮಣ್ಣನ ಹತ್ತಿರ ಯಾರೋ ಮಾತನಾಡುತ್ತಾ ಕುಳಿತಿದ್ದರು. ಅವರು ಯಾರೆಂದು ಗೊತ್ತಾಯಿತು ನನಗೆ. ಅವರು ಸೀತಾರಾಮಯ್ಯರ್. ಶಿವಮೊಗ್ಗದ ಕೂಡ್ಲಿ ನಾರಾಯಣ ಅವಧಾನಿಗಳು ಮತ್ತೂರಿನಲ್ಲಿ ನಮ್ಮ ಎರಡನೆ ಅಣ್ಣನ ಹತ್ತಿರ ವೇದ ಕಲಿತವರು, ಒಬ್ಬ ದೊಡ್ಡ ಜಮೀನುದಾರರು, ಕೂಡ್ಲಿಯ ಸಾಹುಕಾರರು, ಬಹಳ ಸಂಪ್ರದಾಯಸ್ಥರು, ಇವರಿಗೆ ಹೆಣ್ಣುಕೊಟ್ಟ ಮಾವನವರು ಸೀತಾರಾಮಯ್ಯರ್. ನಾರಾಯಣ ಅವಧಾನಿಗಳು ಕೂಡ್ಲಿ ಮಠದ ಮೇಲ್ವಿಚಾರಕರು; ಬಹಳ ದೈವಭಕ್ತರು. ಅದಕ್ಕೆ ನಮ್ಮಣ್ಣ ಇವರ ಮನೆಗೇ ಹೋಗಿ ಇವರಿಗೆ ಪುರುಷಸೂಕ್ತ , ಶ್ರೀಸೂಕ್ತ , ನಾರಾಯಣಸೂಕ್ತ , ಎಲ್ಲವನ್ನೂ ಹೇಳಿಕೊಟ್ಟಿದ್ದರು.

ಸೀತಾರಾಮಯ್ಯರ್‌ರನ್ನು ಮಾತನಾಡಿಸಿದೆ. ಅಯ್ಯರ್ ನೂಲುವುದರಲ್ಲಿ ಪರಿಣತರು. ಅಣ್ಣನವರಿಗೆ ಈ ವಿಚಾರವಾಗಿ ಹೇಳಿದ್ದಿರಬೇಕು. ಅವರು ನನ್ನ ಬಳಿ ಮಾತನಾಡಿದ ಒಂದೆರಡು ನಿಮಿಷಗಳಲ್ಲೇ 'ಕೃಷ್ಣಮೂರ್ತಿ, ನಾಳೆಯಿಂದ ಈ ಕೆಲಸ ಬೇಡಪ್ಪ , ಬಿಟ್ಟುಬಿಡು. ನಾಳೆಯಿಂದಲೇ ನೀನು ರಾಜಾಮಿಲ್ಲಿಗೆ ಬಂದುಬಿಡು ಕೆಲಸಕ್ಕೆ, ನಾನೇ ನಿನಗೆ ಅಲ್ಲಿ ಕೆಲಸ ಕೊಡಿಸುತ್ತೇನೆ' ಎಂದರು. ನನಗೋ, ತುಂಬಾ ಸಂತೋಷವಾದರೂ ಆಶ್ಚರ್ಯ. ನಾನು, 'ಅದೇನೋ ಸರಿ ಸರ್, ಆದರೆ ಮಾಧವರಾಯರನ್ನು ಬಿಟ್ಟು ಬರುವುದು ಹೇಗೆ? ಅವರು ಅಷ್ಟು ಪ್ರೀತಿಯಿಂದ ನನಗೆ ಈ ಕೆಲಸ ಕೊಟ್ಟಿದ್ದಾರೆ. ಅವರಿಗೆ, "ಈ ಕೆಲಸ ಇಷ್ಟವಿಲ್ಲ ಇವನಿಗೆ" ಎಂದು ಅನ್ನಿಸುವುದಿಲ್ಲವೇ? ಅವರಿಗೆ ಹೇಗೆ ಹೇಳುವುದು, ನೀವೇ ಹೇಳಿ' ಎಂದೆ. ಇವರಿಬ್ಬರಿಗೂ ಈ ಕೆಲಸ ಇಷ್ಟವಿಲ್ಲ. ಇಲ್ಲಿ ಇಬ್ಬರಲ್ಲೂ ಭಾವ-ದೃಷ್ಟಿಗಳು ಭೇದ! 'ಆದರೂ ಏನು ಕೆಲಸ ಅಂತ ಮಾಡುತ್ತಿಯಾ ನೀನು ಅದನ್ನು ?' ಎಂದರು ಸೀತಾರಾಮಯ್ಯರ್. 'ಇಲ್ಲವಲ್ಲಾ, ನಾಳೆಯಿಂದ ಇನ್ಸ್‌ಪೆಕ್ಟರು ಕೆಲಸ ಮಾಡುತ್ತೇನಲ್ಲ; ನೋಡಿ ಇಲ್ಲಿ, ಇನ್ಸ್‌ಪೆಕ್ಟರ್ ಕೆಲಸ ಕೊಟ್ಟಿದ್ದಾರೆ ನನಗೆ ಅವರು' ಎಂದೆ. 'ಏನೋಪ್ಪ, ಇದೆಲ್ಲ ನಮ್ಮಂಥವರಿಗಲ್ಲ' ಎಂದರು. ಅವರರ್ಥ ಬ್ರಾಹ್ಮಣರಿಗೆ ಈ ಕೆಲಸವಲ್ಲ ಎನ್ನುವುದು. 'ಸರಿ, ನಾ ಬಂದು ಮಾಧವರಾವ್‌ಗೆ ಹೇಳುತ್ತೇನೆ' ಎಂದರು ಅವರು! 'ಸರಿ'ಎಂದೆ ನಾನು!

ಅಣ್ಣನಿಗೂ ಮನಸ್ಸಿನಲ್ಲಿ ಈ ಕೆಲಸದ ಬಗ್ಗೆ ಇಷ್ಟ ಇರಲಿಲ್ಲ. ನಾನು ಸೀತಾರಾಮಯ್ಯರ್ ಇಬ್ಬರೂ ಮಾಧವರಾಯರನ್ನು ನೋಡಲು ಹೋದೆವು. ಆಫೀಸಿಗೆ ಹೋಗದೆ ನಾವು ಮನೆಗೇ ಹೋದೆವು ನೇರವಾಗಿ. ನಾನು ಮಾಧವರಾಯರಿಗೆ ನಮಸ್ಕಾರ ಮಾಡಿದೆ. ಸೀತಾರಾಮಯ್ಯರು ಮಾಧವರಾಯರಿಗೆ 'ನಮ್ಮ ಕೃಷ್ಣಮೂರ್ತಿಯನ್ನು ಬಹಳ ಚೆನ್ನಾಗಿ ನೋಡಿಕೊಂಡಿದ್ದೀರಿ. ಇನ್ಸ್‌ಪೆಕ್ಟರ್ ಬೇರೆ ಮಾಡಿದ್ದೀರಿ. ಆದರೂ ನನಗೆ ಯಾಕೋ ಈ ಕೆಲಸ ಇಷ್ಟ ಇಲ್ಲ. ನಾಳೆ ಯಾರಾದರೂ ಹೆಣ್ಣು ಕೊಡುವವರು ಬಂದರೆ, ಹುಡುಗ ಎಲ್ಲಿದ್ದಾನೆ? ಏನು ಕೆಲಸ? ಎಂದು ಕೇಳಿದರೆ, ಹುಡುಗ ಬಸ್ಸಿನಲ್ಲಿದ್ದಾನೆ ಎನ್ನುವುದು ಅಷ್ಟು ಚೆನ್ನಾಗಿರುವುದಿಲ್ಲ , ಹಾಗೆಂದರೆ ಯಾರೂ ಹೆಣ್ಣು ಕೊಡುವುದಿಲ್ಲ!! ಅದಕ್ಕೆ ನಾಳೆಯಿಂದ ನಾನು ರಾಜಾಮಿಲ್‌ನಲ್ಲಿ ಗುಮಾಸ್ತನ ಕೆಲಸ ಕೊಡಿಸುತ್ತೇನೆ' ಎಂದರು! ಇದನ್ನು ಕೇಳಿದ ತಕ್ಷಣವೇ ಮಾಧವ ರಾಯರು 'ಬಹಳ ಸಂತೋಷ, ಸೀತಾರಾಮಯ್ಯರ್, ನನಗೂ ಮನಸ್ಸಿಗೆ ಬಹಳ ಕಷ್ಟ ಆಗಿತ್ತು , ಇವನಿಗೆ ಈ ಕೆಲಸ ಕೊಡಬೇಕಲ್ಲ ಅಂತ! ಆದರೆ ಇವನು ಎಲ್ಲಿಗೆ ಹೋದರೂ ಬದುಕುತ್ತಾನೆ ಮುಂದೆ! ಆ ವಿಷಯ ನಾವು ಯಾರೂ ಯೋಚಿಸುವುದು ಬೇಕಿಲ್ಲ, ಇವನ ಬಗ್ಗೆ. ಕಂಡಕ್ಟರ್ ಕೆಲಸದಲ್ಲಿದ್ದು ಲಂಚ ಕೊಡೋದಿಲ್ಲ ಅನ್ನುವ ದೂರು ತೆಗೆದು ಕೊಂಡಿದ್ದಾನೆ ಇವನು, ಎರಡು-ಮೂರು ಸಾರಿ ಗಲಾಟೆಯಾದರೂ! ನಿಶ್ಚಿಂತೆಯಿಂದ ಆ ಕೆಲಸ ಮಾಡಲಿ ಇವನು', ಎಂದು ಹೇಳಿ, ಮನಸಾ ನನ್ನನ್ನು ಆಶೀರ್ವದಿಸಿ ಕಳುಹಿಸಿಕೊಟ್ಟರು ಶ್ರೀ ಮಾಧವರಾಯ ದಂಪತಿಗಳು!!

ರಾಜಾಮಿಲ್‌ನಲ್ಲಿ ಲೇಬರ್ ಆಫೀಸಿನ ಗುಮಾಸ್ತ ಆಗಿದ್ದೆ. ಅಂದ್ರಾಡೆ ಎನ್ನುವ ಒಬ್ಬ ಕ್ರೈಸ್ತ ಮತಸ್ಥರು ನನ್ನ ಬಾಸ್. ಈ ಹೊತ್ತಿಗಾಗಲೇ ನಾನು ಆಗಾಗ ಪೇಪರಿಗೆ ಬರೆಯುವ ಅಭ್ಯಾಸ ರೂಢಿಸಿಕೊಂಡಿದ್ದೆ. ಅಲ್ಲಿನ ಮಿಲ್‌ನಲ್ಲಿ ಸುಮಾರು 5,500 ಜನ ಕೆಲಸಗಾರರು. ಅವರಿಗೆ ಸಂಬಂಧಪಟ್ಟ 5,500 ಕಾರ್ಡುಗಳು. ಅದು ಒಂದು ರೀತಿ ಕಾರ್ಮಿಕರ ವರದಿ. ಪ್ರತಿ ತಿಂಗಳೂ ಅವರುಗಳ ಕಾರ್ಡನ್ನು ಭರ್ತಿ ಮಾಡಬೇಕಿತ್ತು. ಅವರ ಸಂಬಳ, ಅವನು ಜಗಳ ಮಾಡಿದನೇ ಇಲ್ಲವೇ, ಪಿಎಫ್ ಎಷ್ಟು , ಅವನಿಗೆ ಎಚ್ಚರಿಕೆ ಬಂದಿತ್ತೆ, ಈ ಎಲ್ಲ ನಡವಳಿಕೆಗೆ ಸಂಬಂಧಪಟ್ಟ ವಿವರಗಳನ್ನು ಅಲ್ಲಿ ೧೩ ಕಾಲಂಗಳಲ್ಲಿ ತುಂಬಿಸಬೇಕಿತ್ತು. ದೂರೇನಾದರೂ ಇದ್ದರೆ ಕೆಂಪುಶಾಯಿಯಲ್ಲಿ ಬರೆಯಬೇಕು. ಹಿಂದೆ ಇಲ್ಲಿ ಕೆಲಸ ಮಾಡಿದ ಗುಮಾಸ್ತರುಗಳು ಯಾವುದನ್ನೂ ಸರಿಯಾಗಿ ಬರೆಯದೆ ಬಹಳವಾಗಿ ಬಾಕಿ ಇಟ್ಟಿದ್ದರು, ಸೋಮಾರಿತನದಿಂದ ಬರೆಯದೆ ಇದ್ದದ್ದು ಆ ಕೆಲಸಕ್ಕೆ ಈಗ ಸಾಕಷ್ಟು ಹೆಚ್ಚು ಸಮಯ ಬೇಕಾಗುವಂತಾಗಿತ್ತು.

ನಿಜಕ್ಕೂ ಇದನ್ನೆಲ್ಲ ಬರೆಯುವ ಕೆಲಸ ಬಹಳ ಚೆನ್ನಾಗಿತ್ತು. ಈ ಮಿಲ್ ಮನೆಗೂ ಹತ್ತಿರವಿದ್ದು, ನನ್ನ ಬಳಿ ಸೈಕಲ್ ಇದ್ದುದರಿಂದ ನಾನು ಹೋಗಲು-ಬರಲು ಹೆಚ್ಚಿನ ಸಮಯ ವ್ಯರ್ಥ ಮಾಡದೆ,

ಕಚೇರಿಯಲ್ಲಿದ್ದಾಗ ಒಂದು ನಿಮಿಷವೂ ಸುಮ್ಮನೆ ಕೂರದೆ ಬಹಳ ಬೇಗಬೇಗ ಎಲ್ಲವನ್ನು ಬರೆದು ಮುಗಿಸಿದೆ. ನಾನು ಬರೆಯುವುದು ಸ್ವಲ್ಪ ವೇಗವಾಗಿ. ನಮ್ಮ ಮನೆ ಶ್ರೀರಾಮಪುರದಲ್ಲಿದ್ದು ಮನೆಯಿಂದ ಇಲ್ಲಿಗೆ ಬರಲು ೧೦ ನಿಮಿಷಗಳು ಸಾಕಾಗಿದ್ದವು. ಸೈಕಲ್ಲಿದ್ದುದು ಇನ್ನೂ ಸಹಾಯವಾಗಿತ್ತು. (ಆಗೆಲ್ಲ ಸೈಕಲಿದೆ ಎಂದು ಹೇಳಿಕೊಳ್ಳುವುದೇ ಒಂದು ರೀತಿಯ ಹೆಮ್ಮೆ! ಒಂದು ಹೆಚ್ಚುಗಾರಿಕೆಯ ವಿಷಯ) ಹೀಗಾಗಿ, ನಾನು ಮಿಲ್ಲಿನ ಕೆಲಸಕಾರ್ಯಗಳ ಬಗೆಗೆ ಆಸಕ್ತಿ ವಹಿಸಿ ಕೆಲಸವನ್ನು ಚೆನ್ನಾಗಿ ಕಲಿತದ್ದೆ ಅಲ್ಲದೆ, ಆಗಾಗ ಸಿಗುತ್ತಿದ್ದ ಬಿಡುವಿನ ವೇಳೆಯಲ್ಲಿ ನನ್ನ ಬರವಣಿಗೆಯನ್ನು ಮುಂದುವರಿಸಿದೆ. ಕಾರ್ಡುಗಳ ಬರವಣಿಗೆಯ ಜತೆಗೆ ಸುಮಾರು ೩-೪ ಕಾದಂಬರಿಗಳನ್ನು ಅಲ್ಲೇ ನಾನು ಬರೆದದ್ದು, ನನ್ನ 'ಅಲೆಯೊಸಗೆ' ಪ್ರಜಾಮತದಲ್ಲಿ ಧಾರಾವಾಹಿಯಾಗಿ ಬಂದಾಗ, ಅದು ಸಾಕಷ್ಟು ಜನಪ್ರಿಯ ಆಯಿತು.

ಸಣ್ಣ ಕೆಲಸ ಆದರೂ ನಾಲ್ವರ ಸಂಸಾರಕ್ಕೆ ಸಾಲದು. ಪಪ್ಪಾಯಿ ಹಣ್ಣು, ರಾಗಿ ಮುದ್ದೆಯಲ್ಲೇ ದಿನ ಕಳೆಯುತ್ತಿತ್ತು.ಮತ್ತೂರಿನಲ್ಲೆ ನಮ್ಮ ಸೋದರ ಮಾವನ ಮನೆ. ಅವರ ದೊಡ್ಡ ಮಗನಿಗೆ ನಮ್ಮ ಅಮ್ಮನ ಮೇಲೆ ಭಕ್ತಿ. ಸೋದರತ್ತೆ "ಒಮ್ಮೆ ಊರಿಗೆ ಹೋಗು. ನನ್ನ ಅಣ್ಣನ ಮಗ ಅಮಾಲಂಬಿ, ಭತ್ತ ಕೊಡುತ್ತಾನೆ. ೧೦ ಸೇರು ಸಾಕು ಅನ್ನು, ಹೋಗಿ ತಾ" ಎಂದರು. ಶಿವಮೊಗ್ಗೆಗೆ ಹೋಗಿ ನಮ್ಮ ಅಕ್ಕನ ಮನೆಯಲ್ಲಿ ಸ್ನಾನ, ಸಂಧ್ಯಾದಿಗಳನ್ನು ಮುಗಿಸಿಕೊಂಡು ಊರಿಗೆ ಹೋದೆ. ಮಾವನ ಮಗ ಆದರದ ಸ್ವಾಗತ ನೀಡಿದರು. ಊಟ ಮಾಡಿದೆ. ೧೦ ಸೇರು ಭತ್ತವನ್ನು ಕೊಟ್ಟರು. ಹೊರಟು ನದೀ ದಾಟಿ ಮರಳಿನ ಮೇಲೆ ನಡೆದು ಬರುತ್ತಿದ್ದೆ. ಎದುರಿಗೆ ಒಬ್ಬ ಹುಡುಗಿ. ೧೩-೧೪ ವರ್ಷವಿದ್ದೀತು. ಸಾಮಾನ್ಯವಾಗಿ ನಮ್ಮ ಊರಿನ ಮಕ್ಕಳು ಯಾರ ಮನೆಯವರು ಎಂದು ತಿಳಿಯುತ್ತದೆ. ಆದರೆ ಊರು ಬಿಟ್ಟು ನಾಕು ವರ್ಷಗಳಾಗಿದ್ದವು. ಅಲ್ಲದೆ ಹೆಣ್ಣು ಮಕ್ಕಳು ಬೇಗ ಬೆಳೆಯುತ್ತಾರೆ. ತಿಳಿದವರನ್ನು ಕಂಡರೆ ಸುಮುಖರಾಗಿ ನೋಡಿ ಕುಶಲಪ್ರಶ್ನೆ ಮಾಡುವುದು ರೂಢಿ. ಹಾಗೆ ಮಾಡದೆ ಇದ್ದರೆ 'ಇವರಿಗೆ ಅಹಂಕಾರ' ಎಂದು ಕೊಳ್ಳುತ್ತಾರೆ ಎಂಬ ಭೀತಿ !.... ತಿಳಿಯಲಿಲ್ಲ ನನಗೆ. ಯಾರ ಮನೆಯವಳು ಇರಬಹುದು ಎಂದು ಯೋಚಿಸುತ್ತ ನಡೆದೆ. ನನಗೇ ತಿಳಿಯದೆ ಕತ್ತು ಹಿಂದಕ್ಕೆ ಹೊರಳಿತು. ನೋಡಿದೆ. ಏಕಕಾಲದಲ್ಲಿ, ಬಹುಶಃ ಆ ಹುಡುಗಿಯೂ, ಯಾರು ಈತ ಎಂಬ ಸಂಶಯದಿಂದ ನನ್ನ ಕಡೆ ನೋಡಿ ನಾ ನೋಡಿದ್ದನ್ನು ಕಂಡು ಬೆಚ್ಚಿಬಿದ್ದವಳಂತೆ ಬಲಗಾಲಿನ ಹೆಜ್ಜೆಯ ಬಲಭಾಗವನ್ನು ಸೀರೆಯ ಸೆರಗಿನಿಂದ ಮುಚ್ಚಿಕೊಂಡಳು. ಸೀರೆ ಹರಿದಿದ್ದಂತೆ ಕಂಡಿತು. ನನಗೆ ನೋವಾಯಿತು. 'ತಮ್ಮ ಬಡತವನ್ನು ನಾನು ನೋಡಿಬಿಟ್ಟೆ' ಎಂದು ಆಕೆಗೆ ಅನಿಸಿ ಮನಸ್ಸು ಅಳುಕಿ ನಾಚಿಕೆಯಾಗಿದ್ದೀತು... ನಾನು ತಪ್ಪು ಮಾಡಿದೆ ಎನ್ನಿಸಿತು ನನಗೆ. ... ಪುನಃ ತಿರುಗಿ ನೋಡಲಿಲ್ಲ. ಮುಂದೆ ನಡೆದು, ತುಂಗೆಯ ದಂಡೆಯ ಮೇಲಿದ್ದ ಮಾವಿನ ತೋಪಿಗೆ ಬಂದೆ.

ಅಲ್ಲಿಗೆ, ಅದೇ ಸಮಯದಲ್ಲಿ ಹೊಸಹಳ್ಳಿಯಿಂದ ನನ್ನ ಸಹಪಾಠಿ ಕೃಷ್ಣನ ತಾಯಿ ಬಂದರು. ಅವರ ಹೆಸರು ಸೀತಾಂಗನೆ. ಕೃಷ್ಣನ ತಂದೆ ವೆಂಕಟೇಶಶಾಸ್ತ್ರಿಗಳು. ಶಾಸ್ತ್ರಿಗಳು, ನಮ್ಮ ತಂದೆ ಒಂದೇ ವಯಸ್ಸಿನವರು. ದೃಢಕಾಯರು ಇಬ್ಬರೂ. ಆಪ್ತರು. ನಮ್ಮ ಊರಿನಲ್ಲಿ ಗಣೇಶನ ಹಬ್ಬದಲ್ಲಿ ತೆಂಗಿನಕಾಯನ್ನು ನೆಲದ ಮೇಲೆ ಇಟ್ಟು ಮುಂಗೈಯಿಂದ ಟಪ್ಪೆಂದು ಹೊಡೆದು ಒಡೆಯುತ್ತ ಇದ್ದರು ಇವರುಗಳು!

ಇವರ ಮನೆಯಲ್ಲಿ ಧನುರ್ಮಾಸದಲ್ಲಿ ಊರಿನ ಹುಡುಗರೆಲ್ಲ ಸೇರಿ ಒಂದು ದಿನ ಕಾಫಿ... ತಿಂಡಿ ತಿನ್ನುತ್ತಿದ್ದೆವು. ವೆಂಕಟೇಶಶಾಸ್ತ್ರಿಗಳ ಸೋದರಿ ವೆಂಕಮ್ಮ ಎಂದು. ಊರಿನವರಿಗೆಲ್ಲ ವೆಂಕಮ್ಮತ್ತೆ ಆಗಿದ್ದರು ಇವರು. ೬-೭ನೇ ವರ್ಷಕ್ಕೇ ಮದುವೆಯಾದರಂತೆ. ೧-೨ ವರ್ಷದಲ್ಲಿ ಮಹಾಮಾರಿಯಾದ ಪ್ಲೇಗಿಗಿಂತ ಘೋರಕೃತ್ಯಕ್ಕೆ ವೆಂಕಮ್ಮತ್ತೆ ಬಲಿಯಾದರು. ತಲೆಕೂದಲನ್ನು ಮುಂಡನ ಮಾಡುವ ಪದ್ಧತಿಗೆ ತಲೆಕೊಟ್ಟರು. ೮-೯ನೆಯ ವಯಸ್ಸಿನಿಂದ ಎಂಭತ್ತರ ವಯಸ್ಸಿನ ತನಕ ಈ ಘೋರ ಶಿಕ್ಷೆ, ಬಾಲ್ಯದಲ್ಲಿ ಪತಿಯನ್ನು ಕಳೆದುಕೊಂಡ 'ಅಪರಾಧಕ್ಕೆ!' ಈ ವೆಂಕಮ್ಮನವರ ಕೈಯ ಅಡುಗೆಯನ್ನು ಸವಿಯದವರೊಬ್ಬರೂ ನಮ್ಮ ಎರಡೂ ಊರುಗಳಲ್ಲಿ ಇರಲಿಲ್ಲ. ಅವರ ಕೈಯ 'ಸಾರು' ಮಾತಾಡುವಂತೆಇದ್ದಿತು. ಕ್ಷೀರಾನ್ನವನ್ನು ಸವಿದ ನಾಲಗೆಗೆ ಬೇರಾವ ಸವಿಯೂ ಸೊಗಸದು ಹೇಗೋ ಹಾಗೆಯೇ ವೆಂಕಮ್ಮತ್ತೆಯ ಕೈಯ ಸಾರು ಸವಿದವರಿಗೆ ಇಂದಿಗೂ ಬೇರೆ ಯಾರು ಮಾಡಿದ ಸಾರೂ ಸೊಗಸದು ಎಂಬ ಮಾತು ನಮ್ಮೆರಡು ಊರಲ್ಲಿ 'ನಾಣ್ಣುಡಿ'ಯಾಗಿಬಿಟ್ಟಿತು!

ಸೀತಾಂಗನೆಯವರ ಪತಿ, ನಮ್ಮ ತಂದೆ ಇಬ್ಬರೂ ಆಪ್ತಮಿತ್ರರು ಆಗಿದ್ದರು ಹೇಗೋ ಹಾಗೆಯೇ ಇಹಲೋಕವನ್ನು ಬಿಟ್ಟಾಗಲೂ ಆಪ್ತರೇ ಆಗಿ ನಿರ್ಗಮಿಸಿದರು. ಎರಡೇ ವರ್ಷದ ಅಂತರದಲ್ಲಿ ಇಬ್ಬರೂ ಕಣ್ಣು ಮುಚ್ಚಿದರು.

'ಕೃಷ್ಣಾ! ಏನು ಸಮಾಚಾರ? ಬಹಳ ದಿನಗಳಾದವು. ಏಕೆ? ಮೂರು ನಾಲ್ಕು ವರ್ಷಗಳೇ ಆದುವು. ಊರುಬಿಟ್ಟು ಹೋದವನು ಬಂದೇ ಇಲ್ಲವೆಂದು ತೋರುತ್ತದೆ. ಎಲ್ಲಿದ್ದೀಯಾ? ಏನು ಮಾಡುತ್ತಿದೀಯಾ? ಓದು ಸಾಗುತ್ತಿದೆಯೋ ಹೇಗೆ?' ಎಂದೆಲ್ಲ ಕೇಳಿದರು ಸೀತಾಂಗನೆ.

ತಾವೂ ಒಂದು ಕಲ್ಲಿನ ಮೇಲೆ ಕುಳಿತು ನನ್ನನ್ನೂ ಕೂರಲು ಹೇಳಿದರು. ಅವರ ಪಾದಗಳಿಗೆ ನಮಸ್ಕರಿಸಿದೆ. ನಮ್ಮ ಅಮ್ಮನ ಆತ್ಮೀಯರು ಅವರು.

ವಿವಾಹ

'ಮದುವೇ ಗಿದುವೇದು ಯೋಚನೆ ಮಾಡಿದೀಯೋ ಹೇಗೆ?' ಎಂದು ಕೇಳಿದರು. ಘೊಳ್ಳೆಂದು ನಕ್ಕೆ. 'ಒಪ್ಪೊತ್ತಿಗೇ ಇಲ್ಲ... ಮದುವೆಯೇ?' ಎಂದೆ.

"ಆಗಬೇಕು ಅಲ್ಲವೇ? ನಿನಗೂ ೨೪-೨೫, ಕೃಷ್ಣನ ಜತೆಯೇ ನೀನೂ ಅಲ್ಲವೇ?" ಎಂದರು. "ಕೃಷ್ಣನಿಗೇ ಆಗಿಲ್ಲವಲ್ಲಾ?" ಎಂದು ಕೇಳಿದೆ. "ಕೃಷ್ಣನು ಹುಡುಗ. ಮಗಳು ದೊಡ್ಡವಳಾಗುವ ಮುನ್ನ ಮದುವೆ ಮಾಡಿದರೆ ನಮ್ಮ ಚಿಂತೆ ನೀಗುತ್ತದೆಯಪ್ಪಾ... ಅದಕ್ಕೇ ಕೇಳಿದೆ" ಎಂದರು. ಸುಮ್ಮನಿದ್ದೆ.

ಅರೆಕ್ಷಣ ಬಿಟ್ಟು , "ಹುಡುಗೀನ ಮಾಡಿಕೋಬಾರದೆ? ನೀವೂ ಬಡವರು ನಾವೂ ಬಡವರು..." ಎಂದರು. ನನ್ನ ಕಣ್ಣು ತೇವವಾಯಿತು. ಸುಮ್ಮನಿದ್ದೆ.

"ನಿಮ್ಮ ಹುಡುಗಿ ಯಾರು?" ಎಂದು ಕೇಳಿದೆ. "ಅದೋ ಅಲ್ಲಿ... ನಿನ್ನೆದುರಿಗೆ ಹೋದಳಲ್ಲ!" ಎಂದರು. ಆಶ್ಚರ್ಯ, ಮರೆವು, ನಾಚಿಕೆ, ಗೌರವ ಎಲ್ಲವೂ ಒಟ್ಟಾಗಿ ಬಂದು ಕವಿದವು... ಏನೂ ಹೇಳಲು ತೋಚಲಿಲ್ಲ.

"ನಮ್ಮ ಹುಡುಗಿಯನ್ನು ಓದಿಸಲು ಆಗಲಿಲ್ಲ. ಇರುವವಳು ಒಬ್ಬಳೇ ಮಗಳು. ಬೇಗ ಮದುವೆಯಾದರೆ ಜವಾಬ್ದಾರಿ ಕಳೆಯುತ್ತದೆ..." ಎಂದರು.

ಏನು ಹೇಳಲೂ ತೋಚಲಿಲ್ಲ. "ನಿನಗೆ ಇಷ್ಟವಾಗುವುದೋ ಇಲ್ಲವೋ ಹೇಳು..." ಎಂದೇ ಕೇಳಿಬಿಟ್ಟರು. ತಬ್ಬಿಬ್ಬಾದೆ.

"ಇಷ್ಟವಿಲ್ಲ ಎನ್ನುವ ಸ್ವಾತಂತ್ರ್ಯ ನನಗಿಲ್ಲ ಸೀತಾಂಚಿಕ್ಕು. ಮದುವೆಯ ಬಗೆಗೆ ಯೋಚಿಸುವವರು, ಮಾಡುವವರು ನಮ್ಮ ಅಣ್ಣಂದಿರು. ನಾನು ಏನು ಹೇಳ್ಲಿ... ನೀವು ತಪ್ಪಾಗಿ ತಿಳಿಯಬೇಡಿ..." ಎಂದೆ.

"ಯಾವ ಅಣ್ಣ?" ಎಂದು ಕೇಳಿದರು. "ಇಲ್ಲಿ ಊರಲ್ಲಿ ಇರುವ ಅಣ್ಣಯ್ಯ"ಎಂದೆ.

"ಇವರು ನಮ್ಮ ದೊಡ್ಡಣ್ಣನವರು. ಅಮ್ಮನಿಗೆ ಎರಡನೆಯ ಮಗ. ವೇದಾಧ್ಯಯನಸಂಪನ್ನರು, ಆಚಾರನಿಷ್ಠರು. ನನಗೆ ಎಂಟನೆಯ ವಯಸ್ಸಿನಲ್ಲಿ ಉಪನಯನಕ್ಕೆ ಮುಹೂರ್ತ ಇಡಲಾಗಿತ್ತು. ನಮ್ಮ ತಂದೆಯವರು ಜ್ವರ ಬಂದ ಎರಡನೇ ದಿನದಲ್ಲಿ ನಮ್ಮನ್ನೆಲ್ಲ ಅಗಲಿ ಹೋದರು. ಒಂದು ವರ್ಷದ ನಂತರ ನನಗೆ ಬ್ರಹ್ಮೋಪದೇಶವನ್ನು ಕೊಟ್ಟವರು ಈ ಅಣ್ಣನವರೇ. ಇವರ ಹೆಸರು ವೇದಮೂರ್ತಿ ಶ್ರೀಕೇಶವ ಮೂರ್ತಿ ಅವಧಾನಿಗಳು" ಎಂದೆ.

"ಹಾಗಾದರೆ ಅವರನ್ನೇ ಕೇಳಲೆ ನಾನು?" ಎಂದರು ಶ್ರೀಮತಿ ಸೀತಾಂಗನೆಯವರು.

"ನಾ ಏನು ಹೇಳಲಿ...?" ಎಂದೆ.

"ಹಾಗಲ್ಲ , ನಿನ್ನ ಅಕ್ಷೇಪವಿರುವುದಿಲ್ಲ ತಾನೆ ಎಂದು ಕೇಳಿದೆ ಕೃಷ್ಣ... ಬೇಜಾರು ಮಾಡಿಕೋಬೇಡಪ್ಪಾ... ಹೆಣ್ಣು ಹೆತ್ತವರ ಕಷ್ಟ ನೀ ಕಾಣದ್ದಲ್ಲಾ... ತಬ್ಬಲಿ ಮಕ್ಕಳು..." ಎಂದರು.

ಅವರ ಕಂಗಳಿಂದ ನೀರು ಉಕ್ಕಿ ಹರಿಯಿತು. ಲಜ್ಜಿತನಾಗಿ ಕತ್ತೆತ್ತಿ ಅವರನ್ನು ನೋಡಿದೆ. ಹರಿಯುತ್ತಿದ್ದ ಕಣ್ಣೀರನ್ನು ಒರೆಸಿ ಕೊಳ್ಳುತ್ತಿದ್ದುದನ್ನು ಕಂಡೆ... ಅವರ ಮನನೋಯಿಸಿಬಿಟ್ಟೆನೋ ಎನಿಸಿತು...

ಅವರ ಪಾದಗಳಿಗೆ ನಮಸ್ಕಾರ ಮಾಡಿ "ನಾ ಹೋಗಿ ಬರುತ್ತೇನೆ" ಎಂದೆ.

"ದೀರ್ಘಾಯುಷಿಯಾಗಿರಪ್ಪಾ" ಎಂದರು. ಹೊಳೆಯ ಕಡೆ ನೋಡಿದರು. ಅವರ ಮಗಳು ಇವರಿಗಾಗಿ ಕಾಯುತ್ತಿದ್ದಳು.

ಬೆಂಗಳೂರಿಗೆ ಮರಳಿದೆ. ಅಂದು ಭಾನುವಾರ. ಮಂಗಳವಾರ ಊರಿಂದ ನಮ್ಮ ಅಣ್ಣಯ್ಯನವರು ಕಳಿಸಿದ ತಂತಿ ಬಂದಿತು.

'ನಿನ್ನ ಮದುವೆ ಮುಂದಿನ ಬುಧವಾರ ಫೆಬ್ರವರಿ ೨೩. ಅಮ್ಮ ಚಿನ್ನ ಸೀತಮ್ಮ ಆದಿಯಾಗಿ ಎಲ್ಲರೂ ಎರಡು ದಿನ ಮುಂಚಿತವಾಗಿಯೇ ಬನ್ನಿ!-ಅಣ್ಣಯ್ಯ...'

ಗೊತ್ತಾದ ಮುಹೂರ್ತದಲ್ಲಿ ಮದುವೆ ನಡೆಯಿತು. ಎಲ್ಲವೂ ನಿನ್ನೆ ನಡೆದ ಹಾಗೆ ಇದೆ. ದಶಕಗಳು ಕಳೆದವು. ಅಂದು ಇದ್ದ ಸ್ನೇಹವೇ ಇಂದಿಗೂ ಇದೆ.

ಈಶ್ವರಾನುಗ್ರಹ, ಹಿರಿಯರ ಆಶೀರ್ವಾದ. ಶ್ರೀಮತಿ ಸೀತಾಂಗನೆಯರು ಕರುಣಿಸಿದ ಸೌಭಾಗ್ಯ.

ಸರಳವಾಗಿ ನಡೆದ ಮದುವೆ ಸಮಾರಂಭದಲ್ಲಿ ಒಂದು ರೀತಿ ಬಡತನಕ್ಕೆ ಬಡತನವೇ ಜತೆಯಾಗಿ ಬಂದಂತಿತ್ತು. ಇವಳೂ ಅಂತಹದೇನೂ ಸುಖವಾಗಿ ಬೆಳೆದವಳಲ್ಲ. ನಮ್ಮ ಮನೆಯಲ್ಲೂ ಕಷ್ಟದ ಹೊರತಾಗಿ ಬೇರೆ ಏನನ್ನೂ ನಿರೀಕ್ಷಿಸುವಂತಿರಲಿಲ್ಲ. ಅಂತೂ ಸಂಸಾರದ ಬಂಡಿ ಉರುಳಲಾರಂಭಿಸಿತು.

ಇವಳನ್ನು ಕರೆದುಕೊಂಡು ನಾನು ಬೆಂಗಳೂರಿನ ಕಡೆ ಹೊರಟೆ. ಜೊತೆಯಲ್ಲಿ ನಮ್ಮ ಅತ್ತೆಯೂ ಇದ್ದರು. ಇವಳು ಜೀವನದಲ್ಲಿ ಮೊದಲ ಬಾರಿಗೆ ರೈಲನ್ನು ಹತ್ತಿದ್ದುದು. ನಾವು ರೈಲಿನಲ್ಲಿ ಕುಳಿತಾಗ ಇದ್ದಕ್ಕಿದ್ದಂತೆ ಇವಳು ಮುಸಿಮುಸಿ ನಗಲು ಪ್ರಾರಂಭಿಸಿದಳು. ನನಗೋ ಆಶ್ಚರ್ಯ!'ಇವಳೇಕೆ ಹೀಗೆ ನಗುತ್ತಿದ್ದಾಳೆ?' ಎಂದು. ಇವಳ ನಗು ನಿಲ್ಲಲಿಲ್ಲ. ನಾವಿಬ್ಬರೂ ಇನ್ನೂ ಮಾತನಾಡಿರಲಿಲ್ಲ. ಅದಕ್ಕೇ ನಮ್ಮ ಅತ್ತೆಗೆ , "ಇವಳು ಏಕೆ ಹೀಗೆ ನಗುತ್ತಿದ್ದಾಳೆ?" ಎಂದು ಕೇಳಿದೆ. ಅತ್ತೆಗೂ ಆಶ್ಚರ್ಯ. ಅತ್ತೆಯವರು ಇವಳ ನಗುವಿಗೆ ಕಾರಣ ಕೇಳಿದಾಗ, ಇವಳು, ತನ್ನ ಎದುರಿನಲ್ಲಿ ಕುಳಿತಿದ್ದ ಒಬ್ಬ ವ್ಯಕ್ತಿ ತೂಕಡಿಸುತ್ತಿದ್ದುದನ್ನು ನೋಡಿ ನಗುತ್ತಿದ್ದಳು! 'ರೈಲಿಗೆ ಬಂದರೂ ನಿದ್ದೆ ಮಾಡುತ್ತಾರೇನು?' ಎನ್ನುವುದು ಇವಳ ನಗುವಿಗೆ ಕಾರಣವಾಗಿತ್ತು. ಹೀಗೆ, ಇವಳಂತೆಯೇ ನಮ್ಮಹಳ್ಳಿಯ ಹೆಣ್ಣುಮಕ್ಕಳು. ಹೊರಪ್ರಪಂಚ ಕಂಡವರಲ್ಲ. ಮದುವೆಯಾಗಿ ಗಂಡನ ಜೊತೆಗೆ ಊರುಬಿಟ್ಟು ಬೇರೆ ಊರಿಗೆ ಹೋದಾಗಲೇ ಅವರು ಇನ್ನೊಂದು ಊರನ್ನು ನೋಡುತ್ತಿದ್ದುದು. ಹಾಗೆಯೇ ಇವಳು ನನ್ನ ಜೊತೆಗೆ ಈಗ ಬೆಂಗಳೂರಿಗೆ ಬರುತ್ತಿದ್ದುದು.

ಹೆಚ್ಚು ಬದಲಾವಣೆ ಇಲ್ಲದ ದಿನಚರಿಯಲ್ಲಿ ಕೆಲಸಗಳು ನಡೆಯುತ್ತಿದ್ದವು. ಒಂದು ಎರಡು ತಿಂಗಳಾದರೂ ಇವಳು ಹೆಚ್ಚಿಗೆ ಮಾತನ್ನೇ ಆಡುತ್ತಿರಲಿಲ್ಲ. ನಾನು ನಮ್ಮ ಅತ್ತೆಯವರಲ್ಲಿ, 'ಇವಳಿಗೇನು ಮಾತು ಬರುವುದಿಲ್ಲವೇ, ಮೂಕಿಯೇ?' ಎಂದು ಕೇಳುತ್ತಿದ್ದೆ. ಸ್ವಭಾವತಃ ನಾಚಿಕೆ ಇವಳಿಗೆ. ಅಂತೂ, ದಿನಕಳೆದಂತೆ ಮನೆಯವರೆಲ್ಲರ ಜೊತೆ ಹೊಂದಿಕೊಂಡು, ಮನೆ ಕೆಲಸಗಳಲ್ಲಿ ತನ್ನನ್ನು ತೊಡಗಿಸಿಕೊಂಡ ಇವಳು, ನಮ್ಮ ಅಮ್ಮನ ಮೆಚ್ಚಿನ ಸೊಸೆಯೂ, ಅತ್ತಿಗೆಯ ಮೆಚ್ಚಿನ ತಂಗಿಯೂ ಆದಳು.

ಶಿಸ್ತು ಪಾಲಿಸಿದ್ದಕ್ಕೆ ಏಟು

ರಾಜಾಮಿಲ್ಲಿನಲ್ಲಿ ಕೆಲಸಕ್ಕೆ ಹೋಗುತ್ತಿದ್ದಾಗ, ಬಿಡುವಾದ ವೇಳೆಯಲ್ಲಿ ನಾನು ಅನುವಾದದ ಕೆಲಸವನ್ನು ಮಾಡುತ್ತಿದ್ದೆ. ಒಂದು ದಿನ ಅಂದ್ರಾಡೆಯವರು ಸಾಮಾನ್ಯವಾಗಿ ಬೆಳಗಿನ ಎಂಟು ಘಂಟೆಗೆ ಬರುವವರು, ಆ ದಿನ ಹತ್ತು ಘಂಟೆಗೆ ಬಂದರು. ನಾನು ಆಗ ಯಾವುದನ್ನೋ ಅನುವಾದ ಮಾಡುತ್ತಿದ್ದೆ. ಬಹುಶಃ ಆ ದಿನದ ತಾರೀಖು ೧೯ ಇರಬೇಕು. ನಮಗೆಲ್ಲ ಮಿಲ್‌ನಲ್ಲಿ ಹತ್ತರ ಅನಂತರ ತಿಂಗಳ ಪ್ರಾರಂಭ.

ನಾನು ಅನುವಾದ ಮಾಡುತ್ತಿರುವುದನ್ನು ಶ್ರೀ ಅಂದ್ರಾಡೆಯವರು ನೋಡಿದರು. ಮಿಲ್ಲಿನ ಕೆಲಸ ಮುಗಿಸದೆ ನಾ ಮಾಡುತ್ತಿದ್ದ ಕೆಲಸಕ್ಕೆ ಆತುರ ಏನು? ಎನಿಸಿತು ಅವರಿಗೆ. ಅವರು ಹಾಗೆ ಕೇಳಿದಾಗ ನಾನು ಕೆಲಸಗಾರರ ಕಾರ್ಡುಗಳನ್ನು ಅದಾಗಲೇ ಬರೆದು ಮುಗಿಸಿದ್ದು, ಈ ಕೆಲಸ ಮಾಡುತ್ತಿರುವುದಾಗಿ ಹೇಳಿದೆ. ಅನಂತರ ಅವರಿಗೆ ಅದನ್ನು ತೋರಿಸಿದಾಗ ಸಮಾಧಾನವಾಯಿತು.

ಇಲ್ಲಿಂದ ನನ್ನನ್ನು ಮಿನರ್ವ ಮಿಲ್ಲಿಗೆ ವರ್ಗಾವಣೆ ಮಾಡಲಾಯಿತು. ಈಗ ನಾನು ಟೈಂ ಆಫೀಸು ಗುಮಾಸ್ತ . ಸಂಬಳ ಸ್ವಲ್ಪ ಹೆಚ್ಚು. ಒಮ್ಮೆ ನೌಕರರೆಲ್ಲ ಸಮಯಕ್ಕೆ ಸರಿಯಾಗಿ ಒಳ ಬಂದನಂತರ ಮಿಲ್ಲಿನ ಬಾಗಿಲನ್ನು ಮುಚ್ಚಿಸುವುದು ನನ್ನ ಕೆಲಸ. ಒಂದು ದಿನ ತಡವಾಗಿ ಬಂದ ಇಬ್ಬರು ನೌಕರರು, ನಾನು ಬಾಗಿಲು ತೆರಸದೆ ಇದ್ದುದಕ್ಕೆ ಮಿಲ್ಲಿನ ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದಾಗ ನನ್ನನ್ನು ಹೊಡೆಸಿದರು. ಆಸ್ಪತ್ರೆಗೆ ದಾಖಲಾಗಿದ್ದ ನನ್ನನ್ನು ನೋಡಲು ಬಂದ ಕಾರ್ಮಿಕರ ಕಾನೂನು ಅಧಿಕಾರಿಯಾಗಿದ್ದ ಶ್ರೀ ಪಾವರಿಯವರು 'ಮಿಲ್ಲಿನ ಒಳಾವರಣದಲ್ಲಿ ಹೊಡೆದಾಟವಾದರೆ ಮಾತ್ರ ಮಿಲ್ಲು ಹೊಣೆ ಆಗುತ್ತದೆ', ಎನ್ನುವ ಕಾನೂನನ್ನು ಬದಲಿಸಿ 'ಮಿಲ್ಲಿನ ಕೆಲಸಗಾರರು ಮಿಲ್ಲಿನ ಕೆಲಸಗಾರರಿಗೆ ಹೊಡೆದಾಗ, ಹೊಡೆದಾಟ ಎಲ್ಲಾದರೂ ಸರಿ, ಮಿಲ್ಲು ಹೊಣೆಯಾಗುತ್ತದೆ' ಎಂದು ಮಾಡಿ ನನಗೆ ನ್ಯಾಯ ದೊರಕಿಸಿದರು. ಹೀಗೆ ನನ್ನನ್ನು ಹೊಡೆದವರು ಕೆಲಸದಿಂದ ತೆಗೆದು ಹಾಕಲ್ಪಟ್ಟರು. ಅನಂತರ ನಾ ಅವರನ್ನು ನೋಡಿದಾಗ, ಒಬ್ಬ ಸೌದೆ ಒಡೆಯುತ್ತಿದ್ದ, ಮತ್ತೊಬ್ಬ ಪೆಟ್ಟಿಗೆ ಅಂಗಡಿ ಇಟ್ಟುಕೊಂಡಿದ್ದ. ಯಾರದೋ ದ್ವೇಷಕ್ಕೆ ಯಾರದೋ ಜೀವನವು ಬಲಿಯಾಗಿತ್ತು. ವಿವೇಕವಿಲ್ಲದೆ ಇತರರ ಮಾತು ಕೇಳಿದರೆ ಹೀಗೆ ಅನುಭವಿಸಬೇಕಾಗುತ್ತದೆ.

ಈ ಪ್ರಕರಣವಾದನಂತರ ಮತ್ತೆ ನನ್ನನ್ನು ರಾಜಾಮಿಲ್‌ಗೇ ವರ್ಗಾವಣೆ ಮಾಡಿದರು. ಹೀಗೆ ರಾಜಾಮಿಲ್ಲಿನಲ್ಲಿ ಕೆಲಸ ಮಾಡುತ್ತಿದ್ದಾಗ ಕಲ್ಕಿಯವರ 'ಅಲೆಯೊಸಗೆ', ಅಖಿಲನ್ ಅವರ 'ದೀಪಧಾರಿಣಿ', ಕೌಸಲ್ಯ ನಾರಾಯಣ್ ಅವರ 'ಡಾ. ಅಖಿಲಾ', ಮತ್ತು ಅನುತ್ತಮಾರವರ 'ಒಂದೇ ಒಂದು ಮಾತು'- ಈ ನಾಲ್ಕು ಕಾದಂಬರಿಗಳ ಅನುವಾದವನ್ನು ಮುಗಿಸಿದೆ. 'ಅಲೆಯೊಸಗೆ'ಯು ಪ್ರಜಾಮತದಲ್ಲಿಯೂ, 'ದೀಪಧಾರಿಣಿ'ಯು ಕರ್ಮವೀರದಲ್ಲಿಯೂ ಧಾರಾವಾಹಿಗಳಾಗಿ ಬಂದವು. ಮನಸ್ಸು ನಿಧಾನವಾಗಿ ಓದಿ ಬರೆಯುವುದರತ್ತಲೇ ವಾಲತೊಡಗಿತ್ತು, ಆ ಕೆಲಸವನ್ನು ಇಷ್ಟಪಡುತ್ತಿತ್ತು.

೧೫. ಸಾರಸ್ವತ ಲೋಕ

ಪತ್ರಿಕೋದ್ಯಮಕ್ಕೆ ಪ್ರವೇಶ

'ಸಂಯುಕ್ತ ಕರ್ನಾಟಕ'ದಲ್ಲಿ ಬೆಂಗಳೂರಿನ ಆಫೀಸಿನಲ್ಲಿ ಕೆಲಸ ಮಾಡಲು ವರದಿಗಾರರು ಬೇಕು ಎನ್ನುವ ಜಾಹಿರಾತು ಬಂದಾಗ, ನಾನು ನನ್ನ ಅರ್ಜಿ ಹಾಕಿದೆ. ಸಂದರ್ಶನಕ್ಕೆ ಕರೆಬಂದಾಗ, ನಾ ಹೋದರೆ ಅಲ್ಲಿ ಶ್ರೀ ಆರ್.ಆರ್. ದಿವಾಕರರು, ಶ್ರೀ ಕೌಜಲಗಿಯವರು, ಶ್ರೀ ಶಾಮರಾಯರು ಇದ್ದರು. ನನ್ನ ಪರಿಚಯ ಹೇಳಿಕೊಂಡು, "ನಾನು ನೀವು ಕೇಳಿರುವಂತಹ ವಿದ್ಯಾಭ್ಯಾಸದ ಅರ್ಹತೆ ಇಲ್ಲದವನು" ಎಂದೆ. ನನ್ನ ಪರಿಚಯ ತಿಳಿದ ಅವರು "ನಮಗೆ ಕ್ವಾಲಿಫಿಕೇಶನ್ ಮುಖ್ಯ ಅಲ್ಲವಲ್ಲ , ಬರೆಯೋರು ಬೇಕಾಗೇದ" ಎಂದರು, ತಮ್ಮದೇ ಶೈಲಿಯ ಕನ್ನಡದಲ್ಲಿ. ಅವರಿಗೆ ನಾನು ಇಷ್ಟವಾದೆ, 'ಸಂಯುಕ್ತ ಕರ್ನಾಟಕ'ದ ವರದಿಗಾರನ ಕೆಲಸಕ್ಕೆ ಆಯ್ಕೆಯಾದೆ!

ರಾಜಾಮಿಲ್ಲಿನ ಕೆಲಸ ಬಿಡಬೇಕಾಯಿತು. ನಾನು ಅಲ್ಲಿ ಕೆಲಸ ಬಿಟ್ಟು ಹೊರಡುವಾಗ ಮಿಲ್ಲಿನಲ್ಲಿ ನನಗೆ 'ಬೀಳ್ಕೊಡುಗೆ' ಕಾರ್ಯ ಕ್ರಮವನ್ನೇರ್ಪಡಿಸಿ ಬಹಳ ಆತ್ಮೀಯತೆಯಿಂದಲೇ ಬೀಳ್ಕೊಟ್ಟರು. ಮಿಲ್ಲಿನ ಸಾಮಾನ್ಯ ಕೆಲಸಗಾರರಿಗೆ ಈ ರೀತಿಯ ಬೀಳ್ಕೊಡುಗೆಯ ರೂಢಿ ಇಲ್ಲ. ಆದರೆ ನನ್ನೊಂದಿಗೆ ಮಿಲ್ಲಿನವರ ಆತ್ಮೀಯ ಸಂಪರ್ಕ

ಈ 'ಬೀಳ್ಕೊಡುಗೆ'ಗೆ ಕಾರಣವಾಗಿತ್ತು! ನಾವು ಎಲ್ಲಿಯೇ ಕೆಲಸ ಮಾಡಲಿ, ಸೌಹಾರ್ದತೆಯಿಂದ, ಆತ್ಮೀಯತೆಯಿಂದ ಆ ಕೆಲಸದಿಂದ ಬೀಳ್ಕೊಳ್ಳಬೇಕು. ಈ ಪ್ರಪಂಚ ಬಹಳ ಚಿಕ್ಕದು, ನಾವು ಯಾರನ್ನು ಎಲ್ಲಿ ನೋಡುತ್ತೇವೆ ಎಂದು ಹೇಳಲು ಬರದು, ಯಾರನ್ನು ಎಲ್ಲೇ ನೋಡಿದರೂ ಹೃದಯಪೂರ್ವಕವಾಗಿ ಮಾತುಕತೆ ನಡೆಸುವಂತೆ ಇರಬೇಕು ಎಂದು ನನ್ನ ನಂಬಿಕೆ! ಇದನ್ನು ನಾನು ಒಂದು 'ನಿಯಮ' ಎನ್ನುವಂತೆ ಪಾಲಿಸುತ್ತಿದ್ದೆ.

ಹೀಗೆ ರಾಜಾಮಿಲ್ಲಿನ ಕೆಲಸದ ಅವಧಿ ಮುಗಿದು 'ಸಂಯುಕ್ತ ಕರ್ನಾಟಕ' ಸೇರಿದ ನಾನು ನನಗೆ ಬಹಳ ಇಷ್ಟವಾದ ಬರೆಯುವ, ಓದುವ ಕೆಲಸದಲ್ಲಿ ತೊಡಗಿಕೊಂಡೆ.

ಕೃಷ್ಣಶರ್ಮರ ಗರಡಿ

ಹೀಗೆ ಬೆಂಗಳೂರಿನಲ್ಲಿ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ವರದಿಗಾರನಾಗಿ ಕೆಲಸ ಪ್ರಾರಂಭ ಮಾಡಿದ ನಾನು, ಈ ಕೆಲಸದಲ್ಲಿ ಸಫಲತೆಯನ್ನು ಸಾಧಿಸಬೇಕಿತ್ತು. ಅದಕ್ಕೆ ಸಾಕಷ್ಟು ಶ್ರಮ ಹಾಗೂ ಸಾಧನೆಯ ಅಗತ್ಯ ಇತ್ತು. ಮೊದಲಿನಿಂದಲೂ ಗಾಂಧೀಜಿಯ ಪ್ರಭಾವಕ್ಕೆ ಒಳಗಾಗಿದ್ದ ನಾನು ಈಗ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರ ಗಾಂಧೀ ಸಾಹಿತ್ಯ ಸಂಘಕ್ಕೆ ನಿಯತವಾಗಿ ಹೋಗತೊಡಗಿದೆ. ಅಲ್ಲಿ ನನ್ನ ಅನೇಕ ಮಿತ್ರರು ಇದ್ದರು. ಪ್ರತಿದಿನವೂ ಸಾಮಾನ್ಯವಾಗಿ ಸೇರುತ್ತಿದ್ದ ನಾವು ಗಾಂಧೀ ಸಾಹಿತ್ಯವನ್ನು ನಿರಂತರವಾಗಿ ಓದುತ್ತಿದ್ದೆವು , ಅವರ ತತ್ತ್ವಗಳನ್ನು ಶ್ರೀ ಶರ್ಮರ ಮಾರ್ಗದರ್ಶನದಲ್ಲಿ ವಿಮರ್ಶೆ ಮಾಡುತ್ತಿದ್ದೆವು . ಶ್ರೀ ಶರ್ಮರು ಗಾಂಧೀಜಿಯ ಸಾಹಿತ್ಯವನ್ನು ಸಾಕಷ್ಟು ನಮಗೆ ಒದಗಿಸಿಕೊಡುತ್ತಿದ್ದರು. ಹೀಗೆ ಗಾಂಧೀಜಿಯ ಬಗೆಗಿನ ಸಾಹಿತ್ಯವನ್ನೋದುತ್ತ , ಶ್ರೀ ಶರ್ಮರ ಮಾತುಗಳನ್ನು ಕೇಳುತ್ತ ನಾನು ಬಹಳವಾಗಿ ಶ್ರೀ ಶರ್ಮರ ಪ್ರಭಾವಕ್ಕೆ ಒಳಗಾದೆ.

ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರದ್ದು ಬಹಳ ತಿಳಿಯಾದ ಭಾಷೆ. ಯಾವುದೇ ವಿಷಯವನ್ನು ಸಾಮಾನ್ಯ ಓದುಗನೂ ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಬರೆಯುತ್ತಿದ್ದವರು ಅವರು. ನಾನು 'ಸಂಯುಕ್ತ ಕರ್ನಾಟಕ' ವನ್ನು ಸೇರಿದನಂತರ ಶ್ರೀ ಶರ್ಮರ ಶೈಲಿಯ ಪ್ರಭಾವಕ್ಕೆ ಒಳಗಾಗಿದ್ದೆ. ಯಾವ ವಿಷಯವನ್ನೇ ಬರೆದರೂ ಅದರ ಸಾರ-ಸಂದೇಶ ಪ್ರತಿಯೊಬ್ಬರನ್ನೂ ತಲುಪಬೇಕು ಎನ್ನುವುದೇ ನನ್ನ ಬರವಣಿಗೆಯ ಮುಖ್ಯ ಉದ್ದೇಶವಾಗಿತ್ತು. ಗಾಂಧೀಜಿಯನ್ನು ಓದಿದ ಮೇಲಂತೂ ಈ ಸರಳಭಾಷಾ ಸೂತ್ರಕ್ಕೆ ಮೇಲ್ಪಂಕ್ತಿ ಹಾಕಿರುವವರು ಅವರೇ ಎಂದೂ ಸ್ಪಷ್ಟವಾಯಿತು. ಸರಳತೆಯಲ್ಲಿ ಸರಳ, ಗಾಂಧೀಜಿಯ ಭಾಷೆ. ಅದೇ ದಾರಿಯನ್ನು ಅನುಸರಿಸಿದವರು ನಮ್ಮ ಶ್ರೀ ಶರ್ಮಾಜಿ. ಇಷ್ಟಾದರೂ ಕಾಲೇಜು ಶಿಕ್ಷಣ ನನಗೆ ಸಿಗದಿದ್ದುದು, ಆಗ ಒಂದು ಕೊರತೆ ಎನಿಸಿಯೇ ಆಗಾಗ ಕಾಡುತ್ತಿತ್ತು. ಹಾಗೆಂದು ನನಗೆ ಇಂಗ್ಲಿಷ್ ಬರುತ್ತಿರಲಿಲ್ಲ ಎಂದು ಬೇಸರ ಇರಲಿಲ್ಲ. ಏಕೆಂದರೆ ನನಗೆ ಕಾಲೇಜಿಗೆ ಹೋಗಲು ಸಾಧ್ಯವಾಗಲಿಲ್ಲವೇ ವಿನಾ ಕಾಲೇಜಿನ ಮಟ್ಟದಲ್ಲಿ ಓದಬಲ್ಲಂತಹ, ತಿಳಿದುಕೊಳ್ಳಬಲ್ಲಂತಹ, ಇಂಗ್ಲಿಷ್ ಭಾಷೆಯನ್ನು ಕಲಿತಿದ್ದೆ, ಅಭ್ಯಾಸದಲ್ಲಿಟ್ಟುಕೊಂಡಿದ್ದೆ. ಪ್ರೌಢಶಾಲೆಯನ್ನು ಕ್ರಿಶ್ಚಿಯನ್ ಕಾಲೇಜು ಶಾಲೆಯಲ್ಲಿ ಪೂರೈಸುವವರೆಗೆ, (ನಮ್ಮ ಹೆಡ್‌ಮಾಸ್ಟರು ಕುರುವಿಲ್ಲ ಜೇಕಬ್ 'ಇಂಗ್ಲಿಷ್ ಇನ್ಸ್ಟಿಟ್ಯೂಟ್ ಆಫ್ ಹೈದರಾಬಾದ್'ನಲ್ಲಿ ಪ್ರಿನ್ಸಿಪಾಲರಾಗಿ ಕೆಲಸ ಮಾಡಿದವರು) ಆ ಶಾಲೆಯಲ್ಲಿ ಇಂಗ್ಲಿಷ್ ಕಲಿಕೆಗೆ ಬಹಳ ಆದ್ಯತೆ ಕೊಟ್ಟಿದ್ದುದರಿಂದ ಇಂಗ್ಲಿಷ್ ಭಾಷೆಯ ವ್ಯಾಕರಣ, ಶೈಲಿ, ಭಾಷೆಯ ವೈಶಿಷ್ಟ್ಯವನ್ನು ತಿಳಿದುಕೊಂಡಿದ್ದೆ. ಆ ಶಾಲೆಯಲ್ಲಿ ನಮಗೆ ಬೈಬಲ್‌ನ ಭಾಗಗಳು ಪಠ್ಯ ವಿಷಯಗಳಾಗಿದ್ದವು. ಆ ಕಥೆಗಳು ನಮ್ಮಲ್ಲಿರುವ ದೃಷ್ಟಾಂತ ಕಥೆಗಳಂತೆಯೇ. ಅದಕ್ಕೇ ಅವು ನನಗೆ ಬಹಳ ಇಷ್ಟವಾದವು. ವಿಷಯಗಳು ನಮಗೆ ಇಷ್ಟವಾದಾಗ ಓದಲು, ಅರ್ಥಮಾಡಿಕೊಂಡು ಅನುಭವಿಸಲು ಸಹಜವಾಗಿಯೇ ನಾವು ಪ್ರಯತ್ನ ಪಡುತ್ತೇವಲ್ಲವೇ? ಹಾಗೆಯೇ ನಾನೂ ಆ ಕಥೆಗಳನ್ನು ಓದಿ ಅರ್ಥಮಾಡಿಕೊಳ್ಳಬೇಕೆಂಬ ಆಸೆಯಿಂದ ಇಂಗ್ಲಿಷ್ ಕಲಿಕೆಯ ಬಗ್ಗೆ ಸಾಕಷ್ಟು ಗಮನ ವಹಿಸಿದೆ, ಅಂತೆಯೇ ಕಲಿತೆ. ಇದರ ಜತೆಗೆ ಆಗ ಇಂಗ್ಲಿಷ್ ಚಲನಚಿತ್ರಗಳನ್ನು ನೋಡುತ್ತಿದ್ದೆ. ಆಗಿನಿಂದಲೂ ಇಂಗ್ಲಿಷ್ ಚಿತ್ರಗಳೆಂದರೆ ನನಗೆ ಎಂಥದೋ ಆಕರ್ಷಣೆ. ಅವರು ಮಾಡುವ ಚಿತ್ರಗಳ ಪಾತ್ರಗಳಲ್ಲಿ ನಟಿಸುವಾಗ ಅಲ್ಲಿನ ನಟ-ನಟಿಯರು ಅದೊಂದು ತಪಸ್ಸೋ ಎನ್ನುವಂತೆ ಅಭ್ಯಾಸ ಮಾಡಿ ಅಭಿನಯಿಸಿ, ಪ್ರೇಕ್ಷಕರನ್ನು ಆ ಚಿತ್ರದಲ್ಲಿ ತಲ್ಲೀನರಾಗಿಬಿಡುವಂತೆ ಮಾಡುವುದು, ನನಗೆ ಅದ್ಭುತವಾದ ಕೆಲಸವಾಗಿ ಕಂಡಿತು. ನನಗೆ ತಿಳಿಯದೆಯೇ ಆ ಸನ್ನಿವೇಶಗಳಲ್ಲಿ ನಾನೇ ಪಾತ್ರವಾಗಿರುವೆನೇನೋ ಎನ್ನುವಷ್ಟರ ಮಟ್ಟಿಗೆ ತಲ್ಲೀನತೆ ಬರುತ್ತಿತ್ತು. ಹೀಗೆ ಇಂಗ್ಲಿಷ್ ಚಿತ್ರಾಭಿಮಾನಿಯಾದ ನಾನು ಎಷ್ಟೋ ಬಾರಿ, ಒಂದೇ ದಿನದಲ್ಲಿ ಎರಡು - ಮೂರು ಚಿತ್ರಗಳನ್ನು ನೋಡಿಬಿಡುತ್ತಿದ್ದೆ. ಆ ಸಂಭಾಷಣೆಗಳನ್ನು ಅರ್ಥ ಮಾಡಿಕೊಳ್ಳಲು ಹೀಗೆ ನಿಧಾನವಾಗಿ ಯತ್ನಿಸುತ್ತಿದ್ದೆ. ಇಂಗ್ಲಿಷ್ ಭಾಷೆ ಮಾತಾಡಲೂ-ಬರೆಯಲೂ ಅಭ್ಯಾಸಕ್ಕೆ ಬಂದು, ನನ್ನ ಹತೋಟಿಗೆ ಬಂದಿತು. ಇದೊಂದು ಮುಖವಾದರೆ, ಇಂಗ್ಲಿಷ್ ಕಲಿಕೆಯ ಮತ್ತೊಂದು ಮುಖವಾಗಿತ್ತು , ನನ್ನ ರಾಮಕೃಷ್ಣಾಶ್ರಮದ ಸಂಪರ್ಕ. ಅಲ್ಲಿಗೆ ಪ್ರತಿನಿತ್ಯ ಹೋಗುತ್ತಿದ್ದ ನಾನು ರಾಮಕೃಷ್ಣಾಶ್ರಮದ ಸಾಹಿತ್ಯವನ್ನೆಲ್ಲಾ ಇಂಗ್ಲಿಷ್‌ನಲ್ಲೇ ಓದಿದ್ದು. ಸ್ವಾಮಿ ಮಾಧವಾನಂದರು, ಆದಿದೇವಾನಂದರು ಮಾಡುತ್ತಿದ್ದ ಇಂಗ್ಲಿಷ್ ಭಾಷೆಯ ಭಾಷಣಗಳನ್ನು ಮೈಯೆಲ್ಲಾ ಕಿವಿಯಾಗಿ ಕುಳಿತು ಕೇಳಿಸಿಕೊಳ್ಳುತ್ತಿದ್ದೆ. ಇಂಗ್ಲಿಷಿನಲ್ಲಿ ಎಷ್ಟು ಸರಳವಾಗಿ-ನೇರವಾಗಿ ವಿಷಯಗಳನ್ನು ಹೇಳಲು ಸಾಧ್ಯವಿದೆ ಎಂದು ತಿಳಿಯಿತು ಆಗ. ರಾಮಕೃಷ್ಣಾಶ್ರಮದಲ್ಲಿ ನಾನು ಓದಿದ ರಾಮಕೃಷ್ಣ ಪರಮಹಂಸರ-ವಿವೇಕಾನಂದರ 'ಫಿಲಾಸಫಿ'

ಸಾಮಾನ್ಯವಾದದ್ದಲ್ಲ...ಕಷ್ಟಪಟ್ಟು ಅರ್ಥಮಾಡಿಕೊಳ್ಳಬೇಕಾದಂಥವು. ಅವುಗಳನ್ನು ಓದಿದಾಗ ಅವು ನನ್ನ ಮೇಲೆ ಗಾಢವಾದ ಪ್ರಭಾವ ಬೀರಿದವು. ಅನಂತರ ಗಾಂಧೀಜಿಯ ಬರಹಗಳ ಪ್ರಭಾವವಾದದ್ದು. ಹೀಗೇ ಅದು ಮುಂದುವರೆದು, ನಾನು 'ಸಂಯುಕ್ತ ಕರ್ನಾಟಕ'ಕ್ಕೆ ಸೇರಿದಾಗ ಶ್ರೀ ಶರ್ಮರ ಆಸರೆ ನನಗೆ ಸಿಕ್ಕಿದ್ದು, ಪೂರ್ವಜನ್ಮ ಸುಕೃತದ ಫಲವೆಂದೇ ಹೇಳಬೇಕು ನಾನು! ಶ್ರೀ ಶರ್ಮರ ಬರವಣಿಗೆಯಂತೆಯೇ ಅವರ ವ್ಯಕ್ತಿತ್ವ, ಅವರ ಉಡುಗೆ-ತೊಡುಗೆ, ಅವರ ಮಾತು-ರೀತಿಗಳು ಎಲ್ಲವೂ ಸರಳ. ಸರಳ ಸಜ್ಜನಿಕೆಯ ಸಾಕಾರಮೂರ್ತಿ ಅವರು! ಅವರು ಕಾಲಿಗೆ ಚಪ್ಪಲಿಯನ್ನೂ ಹಾಕದೆ ಬರಿಗಾಲಲ್ಲೇ ನಡೆಯುವುದಿತ್ತು! 'ಏಕೆ ಸಾರ್ ಹೀಗೆ?' ಎಂದು ನಾವು ಕೇಳಿದರೆ, 'ನಾನು ಬರಿಗಾಲಲ್ಲಿ ನಡೆಯುವ ವ್ರತ ತೆಗೆದುಕೊಂಡಿದ್ದೇನೆ' ಎಂದು ನಗಾಡುತ್ತಿದ್ದರು. ಶ್ರೀ ಶರ್ಮರು ನನ್ನನ್ನು ಬಹಳ ತಿದ್ದಿದರು. ಎಷ್ಟೋ ಬಾರಿ ನಾನು ಬರೆದಿದ್ದುದರಲ್ಲಿ ಒಂದೆರಡು ವಾಕ್ಯಗಳನ್ನು ಬಿಟ್ಟು (ಕೆಲವೊಮ್ಮೆ ಒಂದೆರಡು ಪದಗಳಷ್ಟನ್ನು ಮಾತ್ರವೇ ಬಿಟ್ಟು) ಮಿಕ್ಕವುಗಳನ್ನೆಲ್ಲ ಹೊಡೆದು ಹಾಕುವಷ್ಟು ನಿರ್ದಾಕ್ಷಿಣ್ಯ ತೋರುತ್ತಿದ್ದರು. ಅದು, ಸರಿಯಾಗಿ ಕಲಿಯಲಿ ಎಂದು!! ಹೀಗೆ ಶ್ರೀ ಶರ್ಮರಿಂದ ನಾನು ಪ್ರಭಾವಿತನಾದದ್ದು. ಆ ಸಮಯದಲ್ಲಿ ಉದ್ದಾಮ ಸಾಹಿತಿಗಳು ಅನೇಕರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿದ್ದರೂ, ಅವರ ಶೈಲಿಯಲ್ಲಿ ನನಗೆ ಸೆಳೆತ ಬರದೆ ಹೋಯಿತು. ಶ್ರೀ ಶರ್ಮರ ಪ್ರಭಾವ ನನ್ನ ಗಾಂಧೀಪ್ರೇಮ ಇಮ್ಮಡಿಸುವಂತೆ ಮಾಡಿ ಸರಳತೆ ಸಜ್ಜನಿಕೆಯನ್ನು ವ್ಯಕ್ತಿತ್ವದಲ್ಲೂ , ಬರಹದಲ್ಲೂ ತುಂಬಿತುಳುಕುವಂತೆ ಮಾಡಿತು!!

ಪ್ರೊ|| ವಿ. ಸೀ. ಅವರ ಪ್ರಭಾವ

ಹೀಗೆ ಬರವಣಿಗೆಯಲ್ಲಿ ಶ್ರೀ ಶರ್ಮರ ಪ್ರಭಾವವಾದರೆ ಸಾಹಿತ್ಯಕ್ಷೇತ್ರದಲ್ಲಿ ಅನಿರೀಕ್ಷಿತವಾಗಿ ನನಗೆ ಗುರುಗಳಾಗಿ ಸಿಕ್ಕಿದವರು ಪ್ರೊ|| ವಿ. ಸೀತಾರಾಮಯ್ಯನವರು. ನಾನು 'ಸಂಯುಕ್ತ ಕರ್ನಾಟಕ' ದಲ್ಲಿದ್ದಾಗ ನ್ಯಾಷನಲ್ ಬುಕ್ ಟ್ರಸ್ಟ್ ಪ್ರಕಟಿಸಿದ್ದ ಶ್ರೀ ವಿ.ಕೆ.ಆರ್.ವಿ. ರಾವ್‌ರವರು ಬರೆದಿದ್ದ 'ಮ್ಯಾನ್ ಪವರ್ ಅಂಡ್ ಹ್ಯೂಮನ್ ರಿಸೋರ್ಸ್ ಡೆವೆಲಪ್‌ಮೆಂಟ್' ಎನ್ನುವ ಪುಸ್ತಕದ ಅನುವಾದ ಮಾಡಲು ನನ್ನನ್ನು ಕೇಳಲಾಯಿತು. ಈಗ ಅವರು ದೆಹಲಿಯಲ್ಲಿ 'ಸ್ಕೂಲ್ ಆಫ್ ಇಕನಾಮಿಕ್ಸ್'ನ ಪ್ರಿನ್ಸಿಪಾಲರಾಗಿದ್ದರು. ಅವರ ಸಹಾಯ ನನಗೆ ಈ ವಿಷಯದಲ್ಲಿ ಅಷ್ಟು ಸುಲಭವಾಗಿ ಸಿಗುವಂತಿರಲಿಲ್ಲ. ಅದೇನು ಸಾಮಾನ್ಯದ ವಿಷಯವೇ? ಆಗ ನನಗೆ ಅರ್ಥಶಾಸ್ತ್ರವನ್ನು ಚೆನ್ನಾಗಿ ತಿಳಿದ ತಜ್ಞರೊಬ್ಬರನ್ನು ಪರಿಚಯ ಮಾಡಿಕೊಂಡು, ಅವರ ಸಹಾಯ ಪಡೆಯಬೇಕಾದ ಅಗತ್ಯವಿತ್ತು. ಆಗ ನಾನು ಪರಿಚಯ ಮಾಡಿಕೊಂಡದ್ದು ಶ್ರೀ ವಿ. ಸೀತಾರಾಮಯ್ಯ ನವರನ್ನು.

ಚಿಕ್ಕಂದಿನಿಂದಲೂ ನಮ್ಮೂರಿನಲ್ಲಿ ನಾನು ನೋಡುತ್ತಿದ್ದುದು ಸಂಪ್ರದಾಯಕ್ಕೆ ಕಟ್ಟುಬಿದ್ದಿದ್ದ , ಆಚಾರ-ವಿಚಾರ ಮಡಿವಂತಿಕೆಗಳಲ್ಲಿ ಅನನ್ಯಭಕ್ತಿ , ಭಯ , ಗೌರವ ಇದ್ದ ನನ್ನ ಜನರನ್ನು. ನಾನು ಹುಟ್ಟಿ ಬೆಳೆದ ಪರಿಸರದಲ್ಲಿ ವೇದ ಕೋವಿದರ ಪ್ರಭಾವ ಬಹಳ. ಹೆಣ್ಣುಮಕ್ಕಳು ವೇದ ಹೇಳುವಂತಿಲ್ಲ ಎಂದರೆ ಅವರು ಹೇಳುವಂತಿರಲಿಲ್ಲ ಅಷ್ಟೇ. ಅದರ ಪರಾಮರ್ಶೆ ಮಾಡುವಂತಿಲ್ಲ. ಯಾಕೆ , ಏನು ಎಂದು ಪ್ರಶ್ನಿಸುವಂತಿಲ್ಲ. ಆದರೆ ಮನೆಮನೆಯಲ್ಲಿ ವೇದಪಾಠ ನಡೆಯುತ್ತಲೇ ಇರುತ್ತಿತ್ತು. ಗುರುಗಳು ಒಂದು ಸಾರಿ ಹೇಳಿದ್ದನ್ನು, ಎರಡು ಸಾರಿ ಪುನರುಚ್ಚರಿಸುವ ಶಿಷ್ಯರನ್ನು ಕೇಳಿ ಕೇಳಿ, ಮನೆಯ ಹೆಣ್ಣುಮಕ್ಕಳಿಗೆ ವೇದ ಸುಲಲಿತವಾಗಿ ಬರುತ್ತಿತ್ತು. ಶಿಷ್ಯರು ತಪ್ಪಿದರೆ ಮನೆಯ ಹೆಣ್ಣು ಮಕ್ಕಳಿಗೆ ಅದು ತಿಳಿಯುತ್ತಿತ್ತು. ಎಷ್ಟೋ ಬಾರಿ ವೇದ, ವಿಷ್ಣು ಸಹಸ್ರನಾಮ ಇವುಗಳನ್ನು ಹೇಳುವಾಗ, ಮರೆತು ಹೋಗಿ ನಿಂತ ಕಡೆಯಿಂದ ಮುಂದಕ್ಕೆ ಹೆಣ್ಣುಮಕ್ಕಳು ಹೇಳಿಕೊಡುವುದಿತ್ತು! ಆದರೆ ಅವರು ಹೇಳಲು ಅಪ್ಪಣೆಯಿಲ್ಲ. ನನಗೆ ಇದೆಲ್ಲ ಮೊದಲು ಸ್ವಾಭಾವಿಕ ಎನ್ನಿಸಿದ್ದರೂ ವರ್ಷಗಳು ಕಳೆಕಳೆದಂತೆ ಇದೇಕೆ ಹೀಗೆ ? ಎನ್ನುವ ಪ್ರಶ್ನೆ ಕಾಡತೊಡಗಿತು... ಇದರ ಜತೆಗೆ, ನಾನು ಚಿಕ್ಕಂದಿನಿಂದಲೂ ನಮ್ಮ ಊರಿನಲ್ಲಿ ನಡೆಯುತ್ತಿದ್ದ ಕಾವ್ಯವಾಚನ, ವ್ಯಾಖ್ಯಾನಗಳನ್ನು ಬಹು ಆಸಕ್ತಿಯಿಂದ ಕೇಳುತ್ತಿದ್ದೆ. ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳು, ಶ್ರೀ ರಾಮಶಾಸ್ತ್ರಿಗಳು ಎನ್ನುವ ವಿದ್ವಾಂಸರು ವಾಚನ-ವ್ಯಾಖ್ಯಾನ ಕಾರ್ಯಕ್ರಮಗಳನ್ನು ನಡೆಸುವುದಿತ್ತು. ಆಗ ಅಲ್ಲಿ ಬರುವ ಕಥೆ, ಉಪಕಥೆಗಳು ಮನರಂಜನೆ ಕೊಡುತ್ತಿದ್ದವಾದರೂ ದಿನಗಳೆದಂತೆ ಇದು ಹೀಗೆ ಸರಿಯೇ? ಎನ್ನುವ ಪ್ರಶ್ನೆ ಹೇಗೋ ಮನಸ್ಸಿನಲ್ಲಿ ಹುಟ್ಟಿ ಕೊಳ್ಳುತ್ತಿತ್ತು. ಆದರೆ ನಾನೇನು ಯೋಚನೆ ಮಾಡುತ್ತಿದ್ದೇನೆ, ನನ್ನ ಯೋಚನೆಯ ದಿಕ್ಕು ಯಾವುದು ಎಂದು ನನಗೆ ಸ್ಪಷ್ಟವಾಗಿ ತಿಳಿದಿರಲಿಲ್ಲ. ಆದರೆ ಇಷ್ಟು ಮಾತ್ರ ನಿಜ- ನನಗೆ ನಮ್ಮ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳ ನಾಯಕರು ಗಳಾದ ಶ್ರೀರಾಮ, ಶ್ರೀಕೃಷ್ಣರು ಕವಿಗಳು ಚಿತ್ರಿಸಿರುವಂತೆಯೇ ಕಾಣದೆ, ಏನೋ ಒಂದು ರೀತಿಯ ಭಿನ್ನ ಮಹತ್ತ್ವ ಅವರಲ್ಲಿದೆ ಎಂದು ಬಹಳವಾಗಿ ಅನ್ನಿಸತೊಡಗಿತು. ಆದರೆ ಇದಕ್ಕೂ ಹಾಗೆಯೇ ನನ್ನಲ್ಲಿಯೇ ಯಾವುದೇ ಸ್ಪಷ್ಟ ಪರಿಕಲ್ಪನೆ ಇರಲಿಲ್ಲ. ಇದು ಕೆಲವು ವರ್ಷಗಳವರೆಗೆ ನನ್ನೊಳಗೇ ಸುಪ್ತವಾಗಿದ್ದುದು ಶ್ರೀ ಶರ್ಮರವರ ಸಂಪರ್ಕಕ್ಕೆ ಬಂದಾಗ, ಅವರ ಕಣ್ಣುಗಳಿಂದ ಗಾಂಧೀಜಿಯನ್ನು ನೋಡತೊಡಗಿದಾಗ'ನಮ್ಮ ರಾಮ-ಕೃಷ್ಣರನ್ನು ನಾನು ಹೀಗೆ ನೋಡಬಯಸುತ್ತೇನೆಯೇ?' ಎನ್ನುವ ಯಾವುದೋ ಮಿಂಚಿನಂತಹ ಯೋಚನೆ ನನ್ನಲ್ಲಿ ಬಂದಿತು! ಆದರೆ ಗಾಂಧೀಜಿ ಮನುಷ್ಯರು, ರಾಮಕೃಷ್ಣರು ನಾವು ದೇವರೆಂದು ಪೂಜಿಸುವಂಥವರು... ಸಾಮ್ಯತೆ ಮನುಷ್ಯತ್ವಕ್ಕೂ, ದೈವತ್ವಕ್ಕೂ ಸಾಧ್ಯವೇ ಎನ್ನುವ ಪ್ರಶ್ನೆ ಮತ್ತೆ

ಬಾಧಿಸಿತು.... ಹೀಗೆ ಈ ದ್ವಂದ್ವದಲ್ಲಿದ್ದಾಗಲೇ ನನಗೆ ಶ್ರೀ ವಿ.ಸೀ.ಯವರ ಪರಿಚಯವಾದದ್ದು! ನಮ್ಮ ಊರಿನಲ್ಲಿ ವಿದ್ವಾಂಸರು ಅನೇಕರಿದ್ದರೂ ಯಾರನ್ನೂ ಏನನ್ನೂ ಕೇಳಲಾಗದು. ಕೇಳುವುದು ಸೂಕ್ತವೋ ಅಲ್ಲವೋ ಎನ್ನುವುದು ಮೊದಲು. ಸಾವಿರಾರು ವರ್ಷಗಳಿಂದ ತಲೆಮಾರುಗಳು ಉಳಿಸಿಕೊಂಡು ಬಂದಿರುವ ಆ ಭಕ್ತಿ , ಆ ನಂಬಿಕೆಯನ್ನು ಪ್ರಶ್ನೆ ಮಾಡುವುದು ಅಷ್ಟು ಸುಲಭವಾಗಿರಲಿಲ್ಲ. ಹಾಗೆ ಪ್ರಶ್ನೆ ಮಾಡಿದರೂ ಆಧುನಿಕ ರೀತಿಯ ಯೋಚನಾಧಾಟಿ ಅವರಲ್ಲಿ ಯಾರಿಗೂ ಇಲ್ಲದಿದ್ದುದು ನನಗೇ ತಿಳಿದಿತ್ತಾದ್ದರಿಂದ ನನ್ನ ಪ್ರಶ್ನೆಯನ್ನು ಅವರು ಸರಿಯಾಗಿ ವಿಮರ್ಶಿಸಿ ಉತ್ತರ ಹೇಳುವ ಸಾಧ್ಯತೆಗಳೂ ಬಹಳ ಕಡಮೆ ಎನಿಸಿತ್ತು. ಮನೆಯಲ್ಲಿ ಕಡು ಬಡತನವಿದ್ದರೂ ಮನೆತುಂಬಾ ಮಕ್ಕಳು ಇರುತ್ತಿದ್ದವು. ಕುಟುಂಬ ಯೋಜನೆ ಮಾಡಬೇಕೆನ್ನುವ ಯೋಚನೆ ಇಲ್ಲದೆ, ದೇವರು ಕೊಟ್ಟದ್ದನ್ನು ಸ್ವೀಕರಿಸಬೇಕು ಎನ್ನುವ ಮನೋಭಾವದವರು. ಕಾಲವು ಎಷ್ಟೇ ಬದಲಾದರೂ, ಅನಾದಿಕಾಲದಿಂದ ಬಂದಿರುವ ಈ ಸಂಪ್ರದಾಯ ವಿಚಾರಗಳು ಬದಲಾಗವು. ಅದಕ್ಕಿರುವ ಮೌಲ್ಯ ಎಂದಿಗೂ ಅಪಮೌಲ್ಯವಾಗದು ಎನ್ನುವ ಅವರು, ಮನುಷ್ಯನ ಯೋಚನಾ ಶಕ್ತಿ ಹೆಚ್ಚಾಗಿದ್ದು ವಿಮರ್ಶೆ ಮಾಡುವ, ತರ್ಕಮಾಡುವ ಪ್ರವೃತ್ತಿಯನ್ನು ಸ್ವಾಭಾವಿಕ ಎಂದು ಒಪ್ಪಿಕೊಳ್ಳುತ್ತಿರಲಿಲ್ಲ. ಅಂದಿನಿಂದ ಬಂದಿರುವ ನಂಬಿಕೆಗಳನ್ನೇ ಈಗ ಬಿಡಿಸಿ ಹಿಂಜಿ ನೋಡಲು ಅವೇನು ಅರ್ಥ ವಿಲ್ಲದವುಗಳೇ? ಹಾಗೆ ಅರ್ಥ ವಿಲ್ಲದವುಗಳಾಗಿದ್ದರೆ, ಅವುಗಳನ್ನು ಅಂದಿನಿಂದ ಇಂದಿನವರೆಗೆ, ನಾವು ನಡೆಸಿಕೊಂಡು ಬರುತ್ತಿದ್ದೆವೆ? ಎನ್ನುವ ದೃಢಾಭಿಪ್ರಾಯ ಹೊಂದಿದ್ದರು. ಕಾಲ ಬದಲಾದರೂ ನಂಬಿಕೆಗಳು ಬದಲಾಗವು, ಅವು ಅಚಲ ಎಂದೇ ತಿಳಿದಿದ್ದ ಹಿರಿಯರಲ್ಲಿ ನನ್ನ ಪ್ರಶ್ನೆಗಳಿಗೆ ಯಾವುದೇ ಮಾನ್ಯತೆ ಇರಲಿಲ್ಲ. ಅದರಿಂದಾಗಿಯೇ ನಾನೂ ಅವರಲ್ಲಿ ಆ ಬಗ್ಗೆ ಏನೂ ಪ್ರಶ್ನಿಸುತ್ತಿರಲಿಲ್ಲ, ಅಲ್ಲದೆ ಅವರಲ್ಲಿ ಪ್ರತಿವಾದ ಹೂಡುವುದಕ್ಕೆ ನನ್ನ ಯೋಚನೆಗಳ ರೂಪ-ರೇಖೆಗಳು ನನಗೂ ಸ್ಪಷ್ಟವಿರಲಿಲ್ಲವಷ್ಟೇ ?

ಅರ್ಥಶಾಸ್ತ್ರದಲ್ಲಿ ಅಗಾಧ ಜ್ಞಾನವಿದ್ದ, ಪ್ರಸಿದ್ಧ ಸಾಹಿತಿ, ಮನಮಿಡಿಸುವ ಕವಿ ಎನಿಸಿ ಖ್ಯಾತರಾಗಿದ್ದ ಪ್ರೊ|| ವಿ. ಸೀ.ಯವರ ಪರಿಚಯವಾಗಿ ಅವರ ನಿಕಟ ಸಂಪರ್ಕಕ್ಕೆ ಬಂದ ಮೇಲೆ ನನ್ನ ಒಂದೊಂದು ಪ್ರಶ್ನೆಗಳಿಗೂ ಅವರಲ್ಲಿ ಸ್ಪಷ್ಟವಾದ, ನಿಷ್ಪಕ್ಷವಾದ, ನಿಖರವಾದ ಉತ್ತರ ದೊರಕಲಾರಂಭಿಸಿತು. ಈಗ ನನಗೆ ನಾನು ಯೋಚನೆ ಮಾಡುತ್ತಿದ್ದುದು ಸರಿ ಎನ್ನಿಸತೊಡಗಿತು. ಹೀಗೆ ನನ್ನೀ ಯೋಚನೆಗಳು ಸರಿಯಾದ ದಿಕ್ಕಿನಲ್ಲಿ ದೃಢವಾಗಿ ಸಾಗಲು ಸಹಾಯ ಮಾಡಿದವರು ಪ್ರೊ|| ವಿ.ಸೀ.ಯವರು. 'ಮಾನುಷಾದ್ದೈವಮುಪೈಮಿ'- ಮನುಷ್ಯತ್ವದಿಂದ ದೈವತ್ವದ ಕಡೆಗೆ ನಡೆದವರು ನಮ್ಮ ನಾಯಕರು ಶ್ರೀರಾಮ, ಶ್ರೀಕೃಷ್ಣರು! ಅದು ಹೇಗೆ? ಅವರ ಕರ್ಮದಿಂದ ; ಅವರ ಧರ್ಮ ಎಂದರೆ ಕರ್ತವ್ಯದಿಂದ. ಅವರ ಕರ್ಮ ಎಂದರೆ ಕೆಲಸಗಳಿಂದ ಮನುಷ್ಯ ಸ್ಥಾನದಿಂದ ದೈವತ್ವಕ್ಕೆ ಏರಿದವರು ಅವರು ಎನ್ನುವುದು ಈಗ ನನಗೆ ಸ್ಪಷ್ಟವಾಗತೊಡಗಿತು. ಹಾಗಾದರೆ ದೈವತ್ವದ ಚಮತ್ಕಾರಕ್ಕೆ, ಪವಾಡಕ್ಕೆ ಬೆಲೆ ಇಲ್ಲವೇ ಎಂದರೆ, ಅದನ್ನೇ ನಾವು ಕವಿಸಮಯ ಎನ್ನಬಹುದು... ಹೌದು, ಆ ರೀತಿಯ ಚಮತ್ಕಾರಗಳು ಕವಿಯ ಪದಗಳಲ್ಲಿ ಆಗಿರುವಂಥವು. ಅದು ನಮಗೆ ರೋಮಾಂಚನ ಉಂಟು ಮಾಡಬಹುದು, ಪವಾಡ ಎನಿಸಿ ದಿಗ್ಭ್ರಮೆ ಹಿಡಿಸಬಹುದು. ಆದರೆ ಅವುಗಳಲ್ಲಿ ನಂಬಿಕೆ ಇಟ್ಟು , ನಮ್ಮ ಕೆಲಸ ನಾವು ಮಾಡದೆ ಕೇವಲ ದೇವರಿಗೆ ಮೊರೆ ಇಟ್ಟರೆ ಆ ರೀತಿ ಪವಾಡಗಳು ನಡೆಯುವುದಿಲ್ಲ! ಅದೂ ನಿಜವಷ್ಟೇ? ಸತ್ಯಪರಾಕ್ರಮಿ ಎನಿಸಿಕೊಳ್ಳುವ ರಾಮ, ಮನುಷ್ಯನಾಗಿ ಎಲ್ಲ ರೀತಿಯ ಕಷ್ಟಗಳನ್ನೂ ಅನುಭವಿಸಿ ಆದರ್ಶಪುತ್ರ , ಪತಿ, ಸೋದರ, ರಾಜ ಎನಿಸಿಕೊಳ್ಳುವುದಿಲ್ಲವೇ? ಅವನು ದೇವರಾದರೆ ಕಷ್ಟಗಳೇಕೆ ಬರಬೇಕಿತ್ತು ಅವನಿಗೆ ಎನಿಸದೆ? ಹಾಗೆಯೇ ಕೃಷ್ಣನೂ... ಚಿಕ್ಕಂದಿನಿಂದಲೂ ತನ್ನ ಬುದ್ಧಿವಂತಿಕೆಯಿಂದ, ಸಮಯ ಪ್ರಜ್ಞೆಯಿಂದ ದುಷ್ಟರನ್ನು ತಾನೊಬ್ಬನೇ ಎದುರಿಸಿ ಸದೆಬಡಿದವನು, ತನ್ನ ಲೋಕಸಂಗ್ರಹ ಕಾರ್ಯಕ್ಕೆ ಪಣತೊಟ್ಟು ನಿಂತವನು. ಶ್ರೀಕೃಷ್ಣ ಕರ್ಮಯೋಗಿ, ಕಡಮೆ ನಷ್ಟದಲ್ಲಿ ಹೆಚ್ಚು ಲೋಕಕಲ್ಯಾಣ ಕಾರ್ಯ ಮಾಡಿದಂಥವನು... ಬಹಳ ಎತ್ತರಕ್ಕೆ ಬೆಳೆದವನು, ಅವನ ಸಾಹಸಗಳಲ್ಲಿ ಅಮಾನುಷ ಎನ್ನುವಂಥದಿಲ್ಲ , ಒಂದು ವೇಳೆ ಹಾಗೆ ಚಿತ್ರಿಸಿದ್ದರೆ ಅದು 'ಕವಿಸಮಯ'ದ ಪ್ರಭಾವವಷ್ಟೇ... ಹೀಗೆ ನನ್ನ ಯೋಚನೆಗಳು ಸಾಗುತ್ತಿದ್ದುದಕ್ಕೆ ಪ್ರೋತ್ಸಾಹದ ಪುಷ್ಟಿಕೊಟ್ಟು , ತಮ್ಮ ಜ್ಞಾನಸಂಪತ್ತಿನ ಧಾರೆ ಎರೆದು, ಅರಿವಿನ ಬೆಳಕು ನೀಡಿ ನನ್ನ ವಿಚಾರಶಕ್ತಿಯನ್ನು ಪೋಷಿಸಿದವರು ಪ್ರೊ|| ವಿ. ಸೀ. ಯವರು. ಅವರ ಜತೆ ಬೆರೆಯುತ್ತ , ಅವರನ್ನು ಕೇಳುತ್ತ ಹೋದಂತೆ ನನ್ನ ಪ್ರಪಂಚವೂ ವಿಸ್ತಾರವಾಗುತ್ತ ಹೋಯಿತು. ನನ್ನ ಅರ್ಥಶಾಸ್ತ್ರದ ಪುಸ್ತಕದ ಅನುವಾದದ ಜತೆ ಜತೆಗೆ ಈ ವಿಚಾರಗಳ ಮಂಥನವೂ ನಡೆದು, ಅನುವಾದ ಮುಗಿದರೂ, ಹೀಗೆ ಕಲೆಯುವುದು- ವಿಚಾರ ವಿನಿಮಯ ಮಾಡಿಕೊಳ್ಳುವುದು ಸದೈವ ಮುಂದುವರೆಯಿತು. 'ಭಾಗವತ'ದಲ್ಲಿ ಚಿತ್ರಿತವಾದ ಕೃಷ್ಣನಿಂದ, ಬಂಕಿಮಚಂದ್ರರು ತಮ್ಮ 'ಶ್ರೀ ಕೃಷ್ಣ ಚರಿತ'ದಲ್ಲಿ ಚಿತ್ರಿಸಿರುವ ಕೃಷ್ಣನ ತನಕ ನನ್ನನ್ನು ಕೈಹಿಡಿದು ಕರೆದೊಯ್ದವರು ಶ್ರೀ ವಿ.ಸೀ.ಯವರು. ಅಲ್ಲಿ ಅವನ ಸಾಕ್ಷಾತ್ಕಾರ ಮಾಡಿಸಿದವರು ಅವರು! ಆಗ ನಾನು ಯೋಚಿಸುತ್ತಿದ್ದುದು 'ಸರಿ'ಎನಿಸಿ ನನ್ನಲ್ಲಿ ಅದಮ್ಯ ಆತ್ಮವಿಶ್ವಾಸ ಮೂಡುವಂತೆ ಮಾಡಿದವರು ಪ್ರೊ|| ವಿ.ಸೀ.ಯವರು.

ಇಂತಹ ಶ್ರೀ ವಿ.ಸೀ.ಯವರು ನಾನು ಲಂಡನ್ನಿನಲ್ಲಿದ್ದಾಗ ನನ್ನ ಆಹ್ವಾನಕ್ಕೆ ಮನ್ನಣೆಕೊಟ್ಟು ಅಲ್ಲಿಗೆ ಬಂದಾಗ , ಅವರಿಗೆ , ಬಂದ ಮಾರನೆಯ ದಿನವೇ ಅನಾರೋಗ್ಯವಾಗಿ ಪಾರ್ಶ್ವವಾಯು ಪೀಡಿತರಾಗಿ

ಮಲಗಿದರು. ಒಂದು ತಿಂಗಳ ಕಾಲ ಅವರ ಸೇವೆ ಮಾಡುವ ಅವಕಾಶ ನನ್ನದೂ-ನನ್ನ ಪತ್ನಿಯದೂ ಆಗಿತ್ತು. ಪ್ರೊ|| ವಿ.ಸೀ.ಯವರ ಪಾಂಡಿತ್ಯಕ್ಕೆ ಬೆರಗು ಬಡಿದವರಾದರು ಇಂಗ್ಲಿಷಿನ ಜನ! ಅಂಥ ಪಾಂಡಿತ್ಯದ ಜತೆಗೆ ಸಜ್ಜನಿಕೆ, ವಿನಯ, ಸಹೃದಯತೆ! ಶ್ರೀ ವಿ.ಸೀ.ಯವರು ಹಲವು ಸದ್ಗುಣಗಳ ಸಂಗಮರೂಪ! ಅವರಿಂದ ನಾನು ಕಲಿತದ್ದು ಎಷ್ಟೋ... ಪುಣ್ಯವಶಾತ್ ಯೋಗ ಅವರಂಥ ಗುರುಗಳು ಸಿಕ್ಕುವುದು!!

ಶ್ರೀ ಎಂ.ವಿ. ಚಕ್ರವರ್ತಿಯವರು

ಹೌದು, ಈಗ ಮಹಾಕಾವ್ಯಗಳ ನಾಯಕರುಗಳ ಸ್ಪಷ್ಟ ಚಿತ್ರ ಕಣ್ಣಮುಂದಿತ್ತು. ಹೃದಯದಲ್ಲಿ ಮನೆ ಮಾಡಿತ್ತು, ಮನಸ್ಸಿನಲ್ಲಿ ಆ ಆಕಾರ ಸ್ಥಿರವಾಗಿತ್ತು. ಆದರೆ ಇದನ್ನು ಹೇಳುವುದು ಹೇಗೆ? ಎಲ್ಲಿ? ಯಾರಿಗೆ?...ಯಾರಿಗೆ? ಎಲ್ಲರಿಗೂ!! ಹೇಳಲು ಮಾಧ್ಯಮ?... 'ವ್ಯಾಖ್ಯಾನ' 'ಪ್ರವಚನ!...?' ಬಹುಶಃ ನನ್ನಲ್ಲಿ ದ್ವಂದ್ವ ಗಳನ್ನೆಬ್ಬಿಸಿದ್ದೂ ಮಹಾಕಾವ್ಯಗಳ ವಾಚನ ವ್ಯಾಖ್ಯಾನಗಳೇ. ಈಗ ವ್ಯಾಖ್ಯಾನದ ಬಗ್ಗೆ ನನ್ನ ಆಸಕ್ತಿ ಹೆಚ್ಚಾಯಿತು... ಈ ಸಂದರ್ಭದಲ್ಲಿ ನನಗೆ ಪರಿಚಯವಾದವರು ಶ್ರೀ ಎಂ.ವಿ. ಚಕ್ರವರ್ತಿಯವರು.

ಶ್ರೀ ಎಂ.ವಿ. ಚಕ್ರವರ್ತಿ ಹೆಸರಿಗೆ ತಕ್ಕಂತೆ, ಸಂಸ್ಕೃತ-ಕನ್ನಡದ ಪಾಂಡಿತ್ಯ ಚಕ್ರವರ್ತಿಗಳೇ...! ಉಭಯಭಾಷಾ ವಿಶಾರದರಾದ ಇವರು ಮೂಲತಃ ಮೇಲುಕೋಟೆಯವರು. ಏನು ಕಾರಣವೋ ಉಟ್ಟಬಟ್ಟೆಯಲ್ಲಿ ಮೇಲುಕೋಟೆ ಬಿಟ್ಟು ಬಂದ ಇವರು ನೇರವಾಗಿ ಹೋದದ್ದು ಬೆಂಗಳೂರಿನ ಗಾಂಧೀನಗರದ ಹೈಸ್ಕೂಲಿಗೆ. ಅಲ್ಲಿ ಆಗಿನ ಹೆಡ್‌ಮಾಸ್ಟರು ಶ್ರೀ ಎಂ.ಪಿ.ಎಲ್. ಶಾಸ್ತ್ರಿಯವರು. ಪ್ರೌಢಶಾಲೆಯ ಜಗುಲಿಯ ಮೇಲೆ ಕೊಳಕಾದ ಮುಂಡುಪಂಚೆ ಉಟ್ಟು ಕುಳಿತಿದ್ದ ಇವರು ಪ್ರಿನ್ಸಿಪಾಲರನ್ನು ಕಂಡಕೂಡಲೇ ಅವರನ್ನು ನೋಡಲು ಒಳಗೆ ಹೋದರು. ಹಣೆಯಲ್ಲಿ ಭರ್ಜರಿಯಾದ ಮೇಲುಕೋಟೆ ನಾಮ, ಮಲಿನವಾದ ಬಟ್ಟೆಗಳ ಬಹಳ ಸಾಧಾರಣ ರೂಪಿನ ನಸುಗಪ್ಪು ಬಣ್ಣದ ತೆಳುಕಾಯದ ಈ ವ್ಯಕ್ತಿಯ ಹಾವಭಾವಗಳು ಶ್ರೀ ಎಂ.ಪಿ.ಎಲ್. ಶಾಸ್ತ್ರಿಯವರಿಗೆ ವಿಚಿತ್ರವಾಗಿ ಕಂಡು, ಆ ವ್ಯಕ್ತಿಯ ಬಾಯಿಂದ ಹೊರಟ ಮಾತುಗಳು, ಆ ಗಂಭೀರ ಧ್ವನಿ ಅವರನ್ನು ಅವಾಕ್ಕಾಗಿಸಿತು. 'ನಾನು ಎಂ.ವಿ. ಚಕ್ರವರ್ತಿ, ಮೇಲುಕೋಟೆಯಿಂದ ಬಂದಿದ್ದೇನೆ. ನನಗೊಂದು ಕೆಲಸ ಕೊಡಲು ಸಾಧ್ಯವೋ ತಮಗೆ?' ಎಂದರು ನೇರವಾಗಿ. ಇದನ್ನು ಕೇಳಿ ಪ್ರಿನ್ಸಿಪಾಲರಿಗೆ ಇರಸು-ಮುರಸು, 'ಈಗಲೇ ಏನೂ ಹೇಳಲು ಸಾಧ್ಯವಿಲ್ಲ. ನಾಳೆ ಬನ್ನಿ' ಎಂದರು. 'ನೀವು ನಾಳೆ ಬನ್ನಿ ಎಂದರೆ ನನಗೆ ಇಲ್ಲಿ, ಈ ಊರಲ್ಲಿ ಹೋಗಿ ತಂಗಲು ಯಾರೂ ತಿಳಿದಿಲ್ಲ. ಇಲ್ಲೇ ನಿಮ್ಮ ಶಾಲೆಯ ಜಗುಲಿಯ ಮೇಲೆ ಈ ರಾತ್ರಿ ಕಳೆಯಬಹುದೋ ನಾನು?' ಎಂದರು! 'ಒಳ್ಳೇ ಆಸಾಮಿ ಇವರು' ಎಂದುಕೊಂಡ ಪ್ರಿನ್ಸಿಪಾಲರು, 'ಕೆಲಸ ಕೊಡುವುದಕ್ಕೆ ತಮಗೆ ಏನು ಬರುತ್ತದೆ?' ಎಂದರು. 'ಕ್ಲಾಸಿನಲ್ಲಿ ಪಾಠ ಮಾಡುವ ಮೇಷ್ಟ್ರು ಕೆಲಸ ಮಾಡಲು ಸಾಧ್ಯವೋ? ಸಂಸ್ಕೃತ ಕನ್ನಡಗಳು ನನಗೆ ಬರುತ್ತವೆ' ಎಂದರು ಚಕ್ರವರ್ತಿಗಳು. 'ಸರಿ, ಈತ ನನ್ನನ್ನು ಬಿಡುವವನಲ್ಲ'ಎನಿಸಿ ಶ್ರೀ ಎಂ.ಪಿ.ಎಲ್. ಶಾಸ್ತ್ರಿಗಳು, 'ತಾವು ಸದ್ಯಕ್ಕೆ ಇಲ್ಲೇ ಇರಿ, ನನಗೆ ಒಂದು ಘಂಟೆಯ ಕೆಲಸವಿದೆ, ಹೊರಗೆ ಹೋಗಿ ಬರುತ್ತೇನೆ. ಅನಂತರ ಮಾತನಾಡುವಾ' ಎಂದು ಹೇಳಿ ಹೊರಹೊರಟರು. ಅಷ್ಟರಲ್ಲಿ ಎಸ್.ಎಸ್.ಎಲ್.ಸಿ. ಕ್ಲಾಸಿನ ಒಂದು ತರಗತಿಯ ಸಂಸ್ಕೃತ ಪಾಠ ಮಾಡುವ ಮೇಷ್ಟ್ರು ಅಂದು ರಜೆ ಹಾಕಿದ್ದಾರೆ ಎಂದು, ಗುಮಾಸ್ತ ರೊಬ್ಬರು ಶಾಸ್ತ್ರಿಗಳಿಗೆ ಹೇಳಿದರು. 'ಈ ಮೇಲುಕೋಟೆಯವನಿಗೆ ಯಾಕೆ ಹೇಳಬಾರದು' ಎಂದು ಯೋಚಿಸಿ, 'ರೀ ಚಕ್ರವರ್ತಿಗಳೇ! ನಾನು ಬರುವವರೆಗೆ ಒಂದು ಕ್ಲಾಸಿನಲ್ಲಿ ಕೂತಿರಿ. ಹುಡುಗರು ಗಲಾಟೆ ಮಾಡದಂತೆ ನೋಡಿಕೊಳ್ಳಿ ನೋಡೋಣ...' ಎಂದರು. 'ಆಗಲಿ' ಎಂದರು ಚಕ್ರವರ್ತಿಗಳು. ತರಗತಿಗೆ ಬಂದರು. ಹುಡುಗರೆಲ್ಲ ಘೊಳ್ಳೆಂದು ನಕ್ಕರು. ಆ ಸಮಯದಲ್ಲಿ ಅವರಿಗೆ ಯಾವ ಪಾಠ ಇರುವುದು ಎಂದು ವಿದ್ಯಾರ್ಥಿಗಳನ್ನು ಕೇಳಿದರು. ಮಕ್ಕಳು ಅದು ಸಂಸ್ಕೃತ ಕ್ಲಾಸು, ಕಾಳಿದಾಸನ 'ಶಾಕುಂತಲಂ' ತಮಗಿರುವ ಪಾಠ - ಎಂದು ಹೇಳಿದರು. ಮಕ್ಕಳಿಂದ ಪುಸ್ತಕ ತೆಗೆದುಕೊಂಡ ಶ್ರೀ ಎಂ.ವಿ. ಚಕ್ರವರ್ತಿಗಳು ಪಾಠ ಮಾಡಲು ಪ್ರಾರಂಭಿಸಿದರು. ಪಾಠ ಕೇಳುತ್ತಿದ್ದ ಮಕ್ಕಳಿಗೆ ಸಮಯ ಸರಿದದ್ದೇ ತಿಳಿದಿರಲಿಲ್ಲ. ಬಾಯಿಬಿಟ್ಟು ಕಣ್ಣರಳಿಸಿ ಅವರನ್ನೇ ಕೇಳುತ್ತಿದ್ದ ವಿದ್ಯಾರ್ಥಿಗಳು ನಿಶ್ಚಲವಾಗಿ ತಮ್ಮನ್ನೇ ತಾವು ಮರೆತರು. ಅನಂತರ ಮುಖ್ಯೋಪಾಧ್ಯಾಯರು ಶ್ರೀ ಎಂ.ಪಿ.ಎಲ್. ಶಾಸ್ತ್ರಿಗಳು ಕ್ಲಾಸಿಗೆ ಬಂದಾಗ 'ಆ ಮೇಷ್ಟ್ರು ಬರಲಿ ಸಾರ್, ಅಂಗಿ ಇಲ್ಲದೆ ನಾಮ ಧರಿಸಿದ್ದ ಮೇಷ್ಟ್ರು ಬರಲಿ' ಎಂದು ಕೇಳಿದರು ವಿದ್ಯಾರ್ಥಿಗಳು. ಅರ್ಧ ಘಂಟೆಯಲ್ಲೇ ಮೇಷ್ಟ್ರು ಕೆಲಸದ ಆರ್ಡರ್ ಚಕ್ರವರ್ತಿಗಳ ಕೈಗೆ ಬಂದಿತು. ಆರ್ಡರ್ ಕೊಟ್ಟು ನಮಸ್ಕರಿಸಿದರು ಶಾಸ್ತ್ರಿಗಳು! ಹೀಗೆ ಕೆಲಸ ಪಡೆದವರು ಶ್ರೀ ಎಂ.ವಿ.ಚಕ್ರವರ್ತಿಯವರು!

ಇಂಥ ಘನವಿದ್ವಾಂಸರ ಪರಿಚಯ ನನಗಾದದ್ದು ನನ್ನ ಸುಕೃತದ ಫಲವೇ. ರಾಮಾಯಣ, ಮಹಾಭಾರತಗಳ ಮೇಲೆ ಅವರಿಗಿದ್ದ ಹತೋಟಿಯನ್ನು ಬಹುಶಃ ನಾನು ಮತ್ತೆ ಯಾರಲ್ಲೂ ಕಾಣಲು ಸಾಧ್ಯವಾಗಿರಲಿಲ್ಲ! ನಾನು ದಿನಾ ಬೆಳಗ್ಗೆ ಅವರ ಮನೆಗೆ ಹೋಗುತ್ತಿದ್ದೆ. ಅವರ ಜತೆ ಮಾತನಾಡುತ್ತಿದ್ದೆ. ಅವರ ಮಾತುಗಳನ್ನು ಶ್ರದ್ಧೆಯಿಂದ ಒಂದಕ್ಷರವೂ ಬಿಡದೆ ಕೇಳುವುದು ನನ್ನ ಕೆಲಸ ಹಾಗೂ ಉದ್ದೇಶವಾಗಿತ್ತು. ಬರಿಯ ಮಾತುಗಳೇ ಅವು? ಪ್ರಕಾಂಡ ಪಾಂಡಿತ್ಯದ ಪ್ರಖರ ಕಿಡಿಗಳು!! ಅವರ ಆಳವಾದ ಜ್ಞಾನದ ವಿಚಾರಶಕ್ತಿ!! ಸಂಸ್ಕೃತ ಮೂಲಕಾವ್ಯಗಳ ಜತೆಜತೆಗೆ ಕುಮಾರವ್ಯಾಸನ ಭಾರತವನ್ನು ಆದ್ಯಂತವಾಗಿ ವಿಮರ್ಶಿಸಿ , ಹೋಲಿಸಿ ತಿಳಿಸಿಕೊಟ್ಟ ಮಹನೀಯರು ಅವರು. ಪ್ರವಚನಕಾರನಾಗಬೇಕು ಎನ್ನುವ ನನ್ನ ಸುಪ್ತ ಆಸೆಯ ಬಳ್ಳಿಗೆ

ತಮ್ಮ ಜ್ಞಾನಧಾರೆ ಎರೆದು ಪ್ರೋತ್ಸಾಹಿಸಿದರು. ಕುಮಾರವ್ಯಾಸನ ಮೇಲೆ, ಅವನ ಕಾವ್ಯದ ಮೇಲೆ ಅವರು ನನಗೆ ಹೇಳಿಕೊಟ್ಟಿರುವುದಕ್ಕೆ ನಾನು ಅವರಿಗೆ ಏನು ಕೊಟ್ಟರೂ ಸಾಲದು. ಅಂತಹ ವ್ಯಕ್ತಿತ್ವದ ವ್ಯಕ್ತಿಯ ಉಡುಪು ಧರಿಸುವಿಕೆ, ಭಾವಭಂಗಿಗಳನ್ನು ಸುಮ್ಮನೆ ನೋಡಿದವರಿಗೆ, 'ಇವರಿಗೆ ಅಷ್ಟು ಪಾಂಡಿತ್ಯವಿದೆಯೇ?' ಎನ್ನುವ ಸಂಶಯ ಬರುತ್ತಿತ್ತು. ಆದರೆ ಇಂತಹ 'ಸ್ಪರ್ಶಮಣಿ'ಯ ಸಂಪರ್ಕ ನನಗಾಗಿ, ನನ್ನ ಬಯಕೆಯ ಪೂರೈಕೆಗೆ ಭೂಮಿಕೆ ಸಿದ್ಧವಾಗುವಂತಾಯಿತು. ನೂರಾರು ಜನರನ್ನು ಉದ್ದೇಶಿಸಿ, ಮಹಾಕಾವ್ಯವನ್ನು ವಾಚನ ಮಾಡುವವರೊಡನೆ ವ್ಯಾಖ್ಯಾನ ಮಾಡುತ್ತ ನನ್ನ ಅರಿವಿಗೆ ಬಂದದ್ದನ್ನು, ನಾನು ತಿಳಿದುಕೊಂಡದ್ದನ್ನು ಹೇಳಬೇಕು. ಅದು ಇಂದಿನ ದಿನಗಳಲ್ಲಿ ನಡೆಯುವ ಘಟನೆಗಳಿಗೆ, ಪ್ರಸಂಗಗಳಿಗೆ, ಆ ಪರಿಸ್ಥಿತಿಗೆ ಸಾಮ್ಯ ಇರುವಂಥದ್ದು ಆಗಿರಬೇಕು; ಹಾಗಾದರೆ ಅದು ಎಲ್ಲ ಶ್ರೋತೃಗಳನ್ನೂ ಒಳಹೊಕ್ಕು ಅವರನ್ನು ಚಿಂತನೆಗೆ ಹಚ್ಚುವಂತಾಗುತ್ತದೆ ಎಂಬ ನನ್ನ ನಂಬಿಕೆ ಬಲವಾಯಿತು. ಹಾಗಾದರೆ ನಾನು ಕಾವ್ಯವನ್ನು ಬಹಳ ಗಮನವಿಟ್ಟು ಓದಿ ಪ್ರತಿಯೊಂದು ಪಂಕ್ತಿಯನ್ನು , ಅದರಲ್ಲಿ ಕವಿಯ ಕಾವ್ಯ ಶೈಲಿಯ ಸೊಬಗನ್ನು, ಅವನ ಸಂದೇಶವನ್ನು ತಿಳಿದುಕೊಂಡು ಹೇಳುವುದು ಅನಿವಾರ್ಯವಾಗಿ ಕಂಡಿತು. ಅಷ್ಟೇ ಅಲ್ಲದೆ ಆ ಪದ್ಯದ ಭಾವ, ಅದಕ್ಕೆ ತಕ್ಕ ರಾಗದ ಜ್ಞಾನ, ಅದನ್ನು ಅನುಭವಿಸುವ ರೀತಿ, ಇವುಗಳನ್ನು ತಿಳಿದು ಕೊಳ್ಳುವುದೂ ಅವಶ್ಯವಾಗಿತ್ತು. ಹೀಗೆ ಕಾವ್ಯದ ಮೇಲೆ ಹತೋಟಿ ಸಾಧಿಸಲು ಅತೀವ ಕಷ್ಟವಾಗಿದ್ದರೂ ಅದರ ಬೃಹತ್ತು ಮಹತ್ತುಗಳು ನನ್ನನ್ನು ಕಂಗೆಡಿಸಲಿಲ್ಲ. ನನ್ನ ಉತ್ಸಾಹವನ್ನು ಕುಂದಿಸಲಿಲ್ಲ. ಶ್ರೀ ಎಂ.ವಿ. ಚಕ್ರವರ್ತಿಯವರ ದಕ್ಷ ಮಾರ್ಗದರ್ಶನದಲ್ಲಿ ನಾನು ಓರ್ವ ಪ್ರವಚನಕಾರನಾಗಿ ರೂಪುಗೊಂಡೆ. ಈ ದಿನ ನಾನು ಬಹಳ ಅಭಿಮಾನಿಗಳನ್ನು ಹೊಂದಿರುವ, ಜನಮೆಚ್ಚಿರುವ ಪ್ರವಚನಕಾರ ನೆನಿಸಿದ್ದರೆ ಅದರ ಬಹುಪಾಲು ಶ್ರೇಯಸ್ಸು ಶ್ರೀ ಎಂ.ವಿ. ಚಕ್ರವರ್ತಿ ಯವರಿಗೆ ಸಲ್ಲುತ್ತದೆ ಎಂದರೆ ಉತ್ಪ್ರೇಕ್ಷೆಯಲ್ಲ.

ಒಮ್ಮೆ ಭಾಸನ ನಾಟಕವೊಂದನ್ನು ಅನುವಾದ ಮಾಡಬೇಕೆಂದು (ಅದನ್ನು ರಂಗದ ಮೇಲೆ ತರುವುದಕ್ಕೋಸ್ಕರವಾಗಿಯೇ) ನನ್ನನ್ನು ಕೇಳಲಾಯಿತು. ಆಗ ನಾನು ಮೂಲ ನಾಟಕವನ್ನು ತೆಗೆದುಕೊಂಡು ಶ್ರೀ ಚಕ್ರವರ್ತಿಯವರ ಮನೆಗೆ ಒಂದು ಭಾನುವಾರ ಬೆಳಿಗ್ಗೆ ೯.೩೦ಕ್ಕೆ ಹೋದೆ. ಆಗ ನನ್ನ ಜತೆ ಕುಳಿತ ಶ್ರೀ ಚಕ್ರವರ್ತಿಗಳು, ಸುಮಾರು ೧೨.೩೦ರ ವರೆಗೆ ಇಡೀ ನಾಟಕವನ್ನು ಸಂಸ್ಕೃತದಿಂದ ಕನ್ನಡಕ್ಕೆ ಹೇಳಿದರು...! ನಾನು ಸಂಸ್ಕೃತದಲ್ಲಿ ಓದುವುದು, ಅವರು, ಅದನ್ನು ಕನ್ನಡದಲ್ಲಿ ಹೇಳುತ್ತ ಹೋಗುವುದು, ನಾನು ಅದನ್ನು ಬರೆದು ಕೊಳ್ಳುವುದು! ಹೀಗೆ ಅವರು ಮೂರು ಗಂಟೆಗಳಲ್ಲಿ ಭಾಸನ ನಾಟಕದ ಅನುವಾದ ಮುಗಿಸಿದರು. ಅಂತಹ ವಿದ್ವಾಂಸರು ಅವರು!

ಮತ್ತೊಮ್ಮೆ ಶ್ರೀ ಮಾಸ್ತಿಯವರು ಇದ್ದ ವೇದಿಕೆಯೊಂದರಲ್ಲಿ ಕನ್ನಡದ ಪ್ರಸಿದ್ಧ ನಾಟಕಕಾರರೆನಿಸಿದ್ದ ಮಹನೀಯರೊಬ್ಬರು, 'ಶಾಕುಂತಲ'ದ ವಿಷಯ ಮಾತನಾಡುತ್ತ 'ಶಾಕುಂತಲ'ದಲ್ಲಿ ವ್ಯಭಿಚಾರೀ ಭಾವವಿದೆ ಎಂದೇನೋ ಹೇಳಲು ಪ್ರಾರಂಭಿಸಿದರು. ಸಭಿಕರ ನಡುವೆ ಕುಳಿತಿದ್ದ ಶ್ರೀ ಎಂ.ವಿ. ಚಕ್ರವರ್ತಿಯವರು ಎದ್ದು ನಿಂತು ಆ ಮಹನೀಯರಿಗೆ ನೇರವಾಗಿ 'ತಾವು ದಯವಿಟ್ಟು ಈ ಮಾತನ್ನು ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ ಎಂದು ಈಗಲೇ ಈ ಸಭೆಯಲ್ಲಿ ಘೋಷಿಸಬೇಕು. ಇಲ್ಲವಾದರೆ ನಾವು ಆ ಮಾತನ್ನು ನೀವು ವಾಪಸ್ಸು ತೆಗೆದುಕೊಳ್ಳುವಂತೆ ಮಾಡಬೇಕಾಗುತ್ತದೆ' ಎಂದರು, ತಮ್ಮ ಎಂದಿನ ಗಂಭೀರ ಧ್ವನಿಯಲ್ಲಿ. ಶ್ರೀ ಮಾಸ್ತಿಯವರು ಕೂಡಲೇ ಆ ಮಹನೀಯರಿಗೆ, 'ಮಾನ್ಯರೇ, ತಾವು ತಮ್ಮ ಮಾತು ವಾಪಸ್ಸು ತೆಗೆದುಕೊಳ್ಳುವೆ ಎಂದು ಬಿಡಿ...! ಇಲ್ಲವಾದರೆ ಈ ವ್ಯಕ್ತಿ ನಿಮ್ಮನ್ನು ಆಪತ್ತಿಗೆ ತಂದಾರು ಅವರು ಹೇಳಿದಂತೆ! ಆ ಸಾಮರ್ಥ್ಯ ಅವರಲ್ಲಿದೆ !' ಎಂದು ಆ ಮಹನೀಯರು ತಮ್ಮ ಮಾತನ್ನು ಕೂಡಲೇ ವಾಪಸ್ಸು ತೆಗೆದುಕೊಳ್ಳುವಂತೆ ಮಾಡಿದರು. ಅಂಥ ಮಹಾನ್ ಸಾಹಿತ್ಯ ದಿಗ್ಗಜಗಳ ಗೌರವಕ್ಕೂ ಪಾತ್ರರಾಗಿದ್ದಂತಹದು, ಶ್ರೀ ಎಂ.ವಿ.ಯವರ ಪ್ರತಿಭೆ-ಪಾಂಡಿತ್ಯ.

ಇಂತಹ ಎಂ.ವಿ.ಚಕ್ರವರ್ತಿಗಳ ಮನೆಗೆ ನಾನು ಲಂಡನ್ನಿನಿಂದ ಭಾರತಕ್ಕೆ ಬಂದಾಗಲೆಲ್ಲ ತಪ್ಪದೆ ಹೋಗುತ್ತಿದ್ದೆ. ಏನಾದರೂ ಕಿರುಕಾಣಿಕೆ ಕೊಟ್ಟು ನಮಸ್ಕರಿಸಿ ಬರುತ್ತಿದ್ದೆ. ಒಮ್ಮೆ ಒಂದು ಪಾರ್ಕರ್‌ಪೆನ್ನು, ಮತ್ತೊಮ್ಮೆ ಒಂದು ಶಾಲು, ಇನ್ನೊಮ್ಮೆ ಒಂದು ಚಾಕು (ಅವರೇ'ಷೇಫೀಲ್ಡ್ ಚಾಕು ಒಂದನ್ನು ತಂದುಕೊಡು ಮತ್ತೂರು', ಎಂದಿದ್ದರು, ಅದಕ್ಕೆ)ಹೀಗೆ ನನಗೆ ತೋಚಿದುದನ್ನು ಅವರಿಗೆ ಅರ್ಪಿಸಿ ಬರುತ್ತಿದ್ದೆ. ಅವರು ಸಹ ಅದನ್ನು ಅತ್ಯಂತ ಪ್ರೀತಿಯಿಂದ ಸ್ವೀಕರಿಸುತ್ತಿದ್ದರು. ನಾನು ಮೊದಲೇ ಹೇಳಿರುವ ಹಾಗೆ, ನಾನೇನು ಕೊಟ್ಟರೂ ಅವರು ನನಗೆ ಧಾರೆ ಎರೆದ ಜ್ಞಾನದ ಋಣ ತೀರಿಸಲಾರೆ... ಅಂತಹ ಕೃಪೆ ನನ್ನ ಮೇಲೆ ಅವರದು!

೧೨-೧೩ ವರ್ಷಗಳ ಸಂಪರ್ಕದಲ್ಲಿ ಒಮ್ಮೆಯಾದರೂ ಚಕ್ರವರ್ತಿಗಳು ತಾವು ಒಬ್ಬರೇ ಏನನ್ನೂ ತಿಂದದ್ದನ್ನು ನಾನು ಕಾಣಲಿಲ್ಲ. ಬಂದದ್ದನ್ನೆಲ್ಲಾ ಹಂಚುತ್ತಿದ್ದ ಅವರ ಮನಸ್ಸು ಸಾಗರದಷ್ಟು ವಿಶಾಲ, ಬುದ್ಧಿ ಮುಗಿಲಿನಷ್ಟು ಎತ್ತರ !

ಶ್ರೀ ಶಾಮರಾಯರ ತರಬೇತಿ

ಈ ಕ್ಷೇತ್ರದಲ್ಲಿ ನನ್ನನ್ನು ತಯಾರು ಮಾಡಿದವರು ಶ್ರೀ ಚಕ್ರವರ್ತಿ ಗಳಾದರೆ, ಪತ್ರಿಕೋದ್ಯಮದ ಕ್ಷೇತ್ರದಲ್ಲಿ ನನ್ನನ್ನು ಪಳಗಿಸಿದವರು ಶ್ರೀ ಶಾಮರಾಯರು. ಪತ್ರಿಕೋದ್ಯಮ ಎನ್ನುವುದು ಸಾಮಾನ್ಯ ಕೆಲಸಗಳ ಹಾಗಲ್ಲ. ಸಾಹಿತ್ಯವನ್ನು ಎಷ್ಟೇ ಓದಿದ್ದರೂ ಅಭಿವ್ಯಕ್ತಿ ಎನ್ನುವುದು ಇಲ್ಲದಿದ್ದರೆ ಈ ಕ್ಷೇತ್ರದಲ್ಲಿ ಕೆಲಸ ಮಾಡುವುದು ಕಷ್ಟ . 'ಸಂಯುಕ್ತ

ಕರ್ನಾಟಕ' ಸೇರಿದ ಮೊದಲ ದಿವಸಗಳಲ್ಲಿ ನಾನು ಬರೆಯುತ್ತಿದ್ದ ಸುದ್ದಿಗಳ ಒಂದೊಂದು ಕಾಲಮನ್ನೂ ಬರೆದು ಶ್ರೀ ಶಾಮರಾಯರಿಗೆ ತೋರಿಸಬೇಕಾಗುತ್ತಿತ್ತು. ಅವರು ಅದನ್ನು 'ಸರಿ' ಎಂದನಂತರ ಅದು ಅಚ್ಚಿಗೆ ಹೋಗುವುದಿತ್ತು. ಕೆಲವು ವೇಳೆ ಅವರು ಪೆನ್ಸಿಲಿನಲ್ಲಿ ಬಹಳ ಭಾಗವನ್ನು ಹೊಡೆದುಹಾಕಿ 'ಹೀಗೇ ಏನು ನ್ಯೂಸ್ ಬರೆಯೋದು?' ಎಂದು ಹೇಳಿ ತಿದ್ದುತ್ತಿದ್ದರು. ಅನಂತರ ನಾನದನ್ನು ಪೂರ್ತಿ ಬರೆದು ಮತ್ತೆ ಅವರಿಗೆ ತೋರಿಸಿ ಅಚ್ಚಿಗೆ ಕಳುಹಿಸುತ್ತಿದ್ದೆ. ಅವರು ಹಾಗೆ ಹೊಡೆದು ಹಾಕಿದರೂ ನನಗೇನೂ ಬೇಸರ ಆಗುತ್ತಿರಲಿಲ್ಲ. ಏಕೆಂದರೆ ನನಗೆ ಆ ಕೆಲಸ ಸರಿಯಾಗಿ ಮಾಡಬೇಕೆಂದು ಬಹಳ ಆಸೆ. ಆ ಕ್ಷೇತ್ರ ನನಗೆ ಇಷ್ಟವಾಗಿತ್ತು. ಆದ್ದರಿಂದ ನನಗೇನೂ ಉತ್ಸಾಹ ಕಡಮೆಯಾಗುತ್ತಿರಲಿಲ್ಲ. ಬದಲಾಗಿ ಇನ್ನೂ ಸರಿಯಾಗಿ ಬರೆಯಬೇಕು, ಇನ್ನೊಮ್ಮೆ ಬರೆದಾಗ ಬಹಳ ಕಡಮೆ ತಪ್ಪುಗಳಿರಬೇಕು ಎನ್ನಿಸಿ ಹಿಂದೆ ಅವರು ಹೇಳಿಕೊಟ್ಟಿದ್ದ ರೀತಿಯನ್ನನುಸರಿಸಿ ಬರೆಯಲು ಯತ್ನಿಸುತ್ತಿದ್ದೆ. ಯಾವುದೇ ಕೆಲಸ ಕಲಿಯುವಾಗ ನಾವು ತಿಳಿದವರಿಂದ ತಿದ್ದಿಸಿಕೊಳ್ಳಬೇಕು, ಹಾಗೆ ಸರಿಯಾಗಿ ತಿದ್ದಿಕೊಂಡಾಗ ನಮ್ಮ ಕೆಲಸ ಉತ್ತಮ ಕೆಲಸ ಎನ್ನಿಸಿಕೊಳ್ಳುತ್ತದೆ. ಅದರಲ್ಲೂ ಪತ್ರಿಕೋದ್ಯಮ... ನಿಜಕ್ಕೂ ಇದೊಂದು ಕಲೆ, ಬರೆಯುವ ಕಲೆ! ಅಭಿವ್ಯಕ್ತಿ ಸ್ವಾತಂತ್ರ್ಯವಿರುವ ಇಲ್ಲಿನ ಬರಹದಲ್ಲಿ ಬಳಸುವ ಭಾಷೆ ಒಂದೇ ಆದರೂ, ಒಂದು ರೀತಿಯ ಲೇಖನಕ್ಕೆ ತೀಕ್ಷ್ಣವಾದ ಶೈಲಿ, ಮತ್ತೊಂದು ರೀತಿಯ ಬರಹಕ್ಕೆ ಮೃದುವಾದ ಶೈಲಿ, ಕಥೆಗಳನ್ನು ಹೆಣೆಯುವಾಗ ರಂಜನೀಯ ಶೈಲಿ, ಶ್ರದ್ಧಾಂಜಲಿಗೆಂದು ಬರೆಯುವಾಗ ಓದಿದವರ ಮನಮಿಡಿಸುವ ಶೈಲಿ, ವಿಮರ್ಶೆ ಮಾಡುವಾಗ ಮಾರ್ಮಿಕ ಶೈಲಿ, ರಾಜಕೀಯದ ವಿಷಯ ಬರೆಯುವಾಗ ನಿರ್ಲಿಪ್ತಶೈಲಿ, ಪುಸ್ತಕಗಳ ಬಗೆಗೆ , ಸಾಹಿತ್ಯದ ಇತರ ಪ್ರಕಾರಗಳಲ್ಲಿ ಬರುವ ಪುಸ್ತಕಗಳ ಬಗೆಗೆ ಬರೆಯುವಾಗ ಗಂಭೀರ ಶೈಲಿ, ಒಂದೇ ಎರಡೇ! ಭಾಷೆಯನ್ನು ನಾನಾ ರೀತಿಯಲ್ಲಿ ದುಡಿಸಿಕೊಳ್ಳುವ ಕಲೆ ಕರಗತಮಾಡಿಕೊಂಡಾಗ ಅವನು ಒಬ್ಬ ಯಶಸ್ವೀ ಪತ್ರಕರ್ತನೆನಿಸಿಯಾನು. ಯಾವುದನ್ನೇ ಬರೆದರೂ ಆ ಲೇಖನದ್ದೇ ಆದ ಒಂದು ಛಾಪು ಆ ಶೈಲಿಯಲ್ಲಿ ವಿಶೇಷವಾಗಿ ಇರುವಂತೆ ರೂಢಿಸಿಕೊಳ್ಳುವ ಕಲೆಯನ್ನು ಕಲಿಸುವಂತಹ ಈ ಕೆಲಸ ನಿಜಕ್ಕೂ ಅಸಾಮಾನ್ಯ!'Brevity is the breath of expression' ಅರ್ಥಾತ್ 'ಯಾವುದನ್ನೇ ಆದರೂ ಚಿಕ್ಕದ್ದನ್ನಾಗಿ ಮಾಡಿ ಹೇಳುವುದೇ ಅಭಿವ್ಯಕ್ತಿಯ ಜೀವಾಳ' ಎನ್ನುವ ಇಂಗ್ಲಿಷಿನ ಮಾತು ಪತ್ರಕರ್ತನಾದವನಿಗೆ ಒಂದು ಪರಮಮಂತ್ರದಂತೆ! ಇಂತಹ ವೈಶಿಷ್ಟ್ಯಪೂರ್ಣ ಕೆಲಸವನ್ನು, ಹಲವು ಸವಾಲುಗಳನ್ನೊಡ್ಡಿ ನನಗೆ ಕಲಿಸಿದವರು ಶ್ರೀ ಶಾಮರಾಯರು... ದಿನಗಳು ... ತಿಂಗಳುಗಳು ಕಳೆದಂತೆ ಶ್ರೀ ಶಾಮರಾಯರು ನನಗೆ ಎಲ್ಲ ವಿಷಯಗಳ ಮೇಲೂ ಬರೆಯಲು ಹೇಳಲಾರಂಭಿಸಿದರು. ಹಲವು ಹತ್ತಾರು ವಿಭಿನ್ನ ವಿಷಯಗಳು! ಒಮ್ಮೆ ಸಂಗೀತಶಾಲೆಯ ಮೇಲೆ, ಮತ್ತೊಮ್ಮೆ ವೃದ್ಧಾಶ್ರಮದ ಮೇಲೆ, ಅನಾಥಾಶ್ರಮದ ಮೇಲೆ, ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡಿರುವ ವ್ಯಕ್ತಿಗಳ ಮೇಲೆ, ಮಹಾಕಾವ್ಯಗಳ ಮೇಲೆ, ಹೀಗೇ ಪಟ್ಟಿ ಬೆಳೆದು , ಎಲ್ಲದರ ಮೇಲೂ ಲೇಖನಗಳನ್ನು ಬರೆದುಕೊಡುವಂತೆ ಕೇಳಿ ಪ್ರೋತ್ಸಾಹಿಸುತ್ತಿದ್ದರು. ನಾನು ಉತ್ಸಾಹದಿಂದಲೇ ಆ ಜಾಗಗಳಿಗೆಲ್ಲ ಭೇಟಿಕೊಟ್ಟು, ಸ್ವಲ್ಪ ಸಂಶೋಧನೆಯನ್ನು ಮಾಡಿ ಅವರಿಗೆ ತೃಪ್ತಿಯಾಗುವ ಮಟ್ಟಕ್ಕೆ ಅದನ್ನು ಬರೆಯಲು ಪ್ರಯತ್ನಿಸಿದ್ದೆ. ಒಮ್ಮೆ 'ನಮ್ಮ ಶಾಸಕರು' ಎನ್ನುವ ಶೀರ್ಷಿಕೆಯಡಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ, ಪ್ರತಿಯೊಬ್ಬ ಎಂ.ಎಲ್.ಎ.ಯನ್ನು ವೈಯಕ್ತಿಕವಾಗಿ ನಾನು ಹೋಗಿ, ಕಂಡು ಸಂದರ್ಶನ ಮಾಡಿ ಅವರ ಬಗ್ಗೆ ಜನರಿಗೆ ತಿಳಿದಿದ್ದ , ತಿಳಿಯದಿದ್ದ ಕುತೂಹಲಕಾರಿ ವಿಷಯಗಳನ್ನು ಸಂಗ್ರಹಿಸಿ , ಅವರು ಮಾಡಿರುವ ಕೆಲಸ-ಕಾರ್ಯಗಳ ಬಗ್ಗೆ ಮಾಹಿತಿ ಕೊಟ್ಟು ಸವಿವರವಾಗಿ ಬರೆದೆ. ಅವು ಸಾಕಷ್ಟು ಜನಪ್ರಿಯವೂ ಆದವು. ಹೀಗೆ , ಒಂದು ಪತ್ರಿಕೆಯ ಪತ್ರಕರ್ತನಾಗಬೇಕಾದವನಿಗೆ ಏನೇನೆಲ್ಲ ಕೊಡಬಹುದೋ ಆ ಅನುಭವಗಳನ್ನೆಲ್ಲ ಶ್ರೀ ಶಾಮರಾಯರು ನನಗೆ ಕೊಡಿಸಿದರು. ಅವರಿಗೆ ನಾನು ಸದೈವ ಋಣಿ. ಅಂತೂ 'ಸಂಯುಕ್ತ ಕರ್ನಾಟಕ' ಸೇರಿದ ನಾನು ಪತ್ರಿಕೋದ್ಯಮದಲ್ಲಿ ಪದವಿ ಪಡೆದಷ್ಟೇ ತರಬೇತಿಯನ್ನೂ ತೃಪ್ತಿಯನ್ನೂ ಪಡೆದೆ. ಇದು ಬಹುಶಃ ಎಲ್ಲರಿಗೂ ಸಿಗುವ ಅವಕಾಶವಲ್ಲ. ಈ ಅನುಭವ ನನಗೆ ಆಕಾಶವಾಣಿಯಲ್ಲಿ ಕೆಲಸ ಮಾಡುವಾಗಲೂ ಬಹಳ ಸಹಾಯ ಮಾಡಿತ್ತು.

ವಿಭಿನ್ನ ವಿಷಯಗಳು

ಹೀಗೆ ನಾನು 'ಸಂಯುಕ್ತ ಕರ್ನಾಟಕ'ದಲ್ಲಿ ಸೇವೆ ಸಲ್ಲಿಸುತ್ತಿರುವಂತೆಯೇ ಬಹಳ ಬೇಗ ನನ್ನನ್ನು ಪಾಳಿಯ ಮುಖ್ಯಸ್ಥನನ್ನಾಗಿ ಮಾಡಿದರು. ಆ ಪಾಳಿಯಲ್ಲಿ ಮಿಕ್ಕವರೆಲ್ಲ ನನ್ನ ಕೈ ಕೆಳಗೆ ಕೆಲಸ ಮಾಡಬೇಕಿತ್ತು. ಈ ತರಹದ ಬಡ್ತಿಗೆ ಸಾಕಷ್ಟು ಅರ್ಹತೆ (ವಿದ್ಯಾರ್ಹತೆ, ಅನುಭವಾರ್ಹತೆ) ಇರಬೇಕು, ಸುಮ್ಮನೆ ಇವು ಬರುವಂಥವಲ್ಲ. ಆಗ ನಾನು ಸಹ ೩೫-೩೬ರ ಹರೆಯದವನು. ಅಷ್ಟು ಜವಾಬ್ದಾರಿಯುತ ಕೆಲಸವನ್ನು ಅವರು ನನಗೆ ವಹಿಸಿದ್ದರು - ಕೆಲಸದಲ್ಲಿ ನನ್ನ ಕಾಳಜಿ, ನಿಷ್ಠೆ ನೋಡಿ...! ಕಸಗುಡಿಸಿದರೂ ಸಹ ಅದನ್ನು ಶುಚಿಯಾಗಿ ಮಾಡಬೇಕು ಎನ್ನುವುದನ್ನು ನಾನು ರಾಮಕೃಷ್ಣಾಶ್ರಮದಲ್ಲಿ ಕಲಿತಿದ್ದೆ. ಇದು ಹೀನ ಕೆಲಸ, ಇದು ದೊಡ್ಡ ಕೆಲಸ, ಎನ್ನುವ ಭೇದಭಾವ ಎಂದೂ ನನ್ನಲ್ಲಿರಲಿಲ್ಲ. ಬಹುಶಃ ಕೆಲಸವನ್ನು ನಾವು ಯಾರೇ ಆದರೂ ಆ ಭಾವನೆಯಿಂದ ಮಾಡಿದಾಗ ಯಶಸ್ಸು ತಾನಾಗಿಯೇ ಬರುತ್ತದೆ. ಆ ಯಶಸ್ಸು ನಮಗೆ ಬಂದಿದೆ ಎನ್ನುವ ಮಾತು ಆಗ ತಪ್ಪಾಗುತ್ತದೆ. ನಮ್ಮ ಪರಿಸರ, ನಮ್ಮ ಸುತ್ತಮುತ್ತಲಿರುವ ಜನ, ಆ ಯಶಸ್ಸು ನಮಗೆ ಬರುವ ಹಾಗೆ ಮಾಡುತ್ತಾರೆ. ಇದು ನನ್ನ ನಂಬಿಕೆ. ಅದಕ್ಕೇ ನನಗೆ 'ಸೋಮೇಶ್ವರ

ಶತಕ'ದ ಈ ಪದ್ಯ ಬಲು ಮೆಚ್ಚು. ಇಷ್ಟ. "ಕೆಲವಂ ಬಲ್ಲವರಿಂದ ಕಲ್ತು, ಕೆಲವಂ ಮಾಳ್ಪವರಿಂದ ಕಂಡು, ಕೆಲವಂ ಸುಜ್ಞಾನದಿಂ ನೋಡುತಂ." ಅಲ್ಲವೇ ಮತ್ತೇ? ನಮಗೆ ಏನು ಮಹಾತಾನೆ ಗೊತ್ತಿದ್ದೀತು? ಎಷ್ಟೇ ಕಲಿತಿದ್ದರೂ ನಾವು ಕಲಿಯಬೇಕಾದದ್ದು, ಹಿಮಾಲಯ ಪರ್ವತದಷ್ಟಿರುತ್ತದೆ. ಅಂತೆಯೇ ಎಲ್ಲವನ್ನೂ ಪುಸ್ತಕವನ್ನೇ ಓದಿ ಕಲಿಯಲಾಗದು, ಅದಕ್ಕೆ ಅದರದೇ ಆದ ಮಿತಿ ಇರುತ್ತದೆ. ಹತ್ತು ಜನಗಳಿಗೆ ಹತ್ತು ವಿಷಯಗಳ ತಿಳಿವಿರುತ್ತದೆ. ನಾವು ಅವರ ಸಂಪರ್ಕಕ್ಕೆ ಬಂದಾಗ ನಮಗೆ ವಿಷಯಗಳು ಹೊಸದಾಗಿ ಹತ್ತು ತಿಳಿಯುತ್ತವೆ. ಇದು ತಿಳಿಯುವುದರ ಹಿಂದಿರುವ ರಹಸ್ಯ! ಅದಕ್ಕೇ ಡಿ.ವಿ.ಜಿ. ಯವರು,

ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ|
ಚಿತ್ತದೊಳು ಬೆಳೆದರಿವು ತರು ತಳೆದ ಪುಷ್ಪ||
ವಸ್ತು ಸಾಕ್ಷಾತ್ಕಾರ ಅಂತರೀಕ್ಷಣೆಯಿಂದ|
ಶಾಸ್ತ್ರಿತನದಿಂದಲ್ಲ, ಮಂಕುತಿಮ್ಮ||

ಎಂದು ಹೇಳಿರುವುದು. ಈ ಮಾತು ಅಕ್ಷರಶಃ ನಿಜ!! ಇದು ನನ್ನ ಅನುಭವ!!

ಹೀಗೆ ಪತ್ರಿಕಾ ಸಂಪರ್ಕಕ್ಕೆ ಬಂದ ಮೇಲೆ ಚೆನ್ನಾಗಿ ಓದುವುದೂ ಪ್ರಾರಂಭವಾಯಿತು...

ಓದುವುದು... ಓದುವುದು...! ಓದುವುದು... ಮುಂದುವರೆಯಿತು. ಆಗ ನನಗೆ ಬಹಳ ಇಷ್ಟವಾದ ಆತ್ಮಕಥೆಗಳು, ವ್ಯಕ್ತಿಚಿತ್ರಗಳು ಇವುಗಳನ್ನು ಓದಿದೆ. ಇದು ನನಗೆ ಚಿಕ್ಕಂದಿನಿಂದಲೂ ಬಂದ ಅಭ್ಯಾಸ. ಹಲವಾರು ಪ್ರಸಿದ್ಧ ವ್ಯಕ್ತಿಗಳ ಜೀವನದರ್ಶನವಾದ ಮೇಲೆ ತಿಳಿಯಿತು, ಅವರೇಕೆ ಮಹಾನ್ ಎನಿಸಿಕೊಳ್ಳುತ್ತಾರೆ ಎಂದು! ಅವರು ಮಹಾನ್ ಆಗಬೇಕೆಂದು ಮೊದಲಿನಿಂದಲೂ ಕೆಲಸ ಮಾಡಿರುವುದಿಲ್ಲ. ಅವರ ಹುಟ್ಟು , ಬಾಲ್ಯ , ಯೌವನ , ಜೀವನದಲ್ಲಿ ಬರುವ ಪರಿಸ್ಥಿತಿಗಳು, ನಡೆಯುವ ಘಟನೆಗಳು, ಅವುಗಳನ್ನು ಅವರು ಎದುರಿಸಿದ ಬಗೆ, ಅವುಗಳ ಮೇಲೆ ವಿಜಯ ಸಾಧಿಸಿದ ರೀತಿ ಅವರನ್ನು ಮಹಾನ್‌ರನ್ನಾಗಿ ಮಾಡುತ್ತವೆ ಎನ್ನುವ ವಿಷಯ ನನ್ನ ಮನಸ್ಸಿನ ಮೇಲೆ ಅಗಾಧ ಪರಿಣಾಮವನ್ನುಂಟು ಮಾಡಿತು. 'ಅದಕ್ಕೇ ಹೇಳುವುದು, ದೊಡ್ಡವರ ಸಹವಾಸ ಮಾಡಬೇಕು', ಎಂದು. ಈ ಮಾತು ಸುಮ್ಮನೆ ಬಂದಿಲ್ಲ. ದೊಡ್ಡವರನ್ನು ನಾವು ಓದಿದಾಗ-ಕೇಳಿದಾಗ ಅವರ ಸಂಪರ್ಕಕ್ಕೆ ಬಂದಾಗ, ಅವರು ಹೇಗೆ ದೊಡ್ಡವರಾದರು ಎನ್ನುವ ವಿಷಯ ನಮ್ಮ ಅರಿವಿಗೆ ಬಂದು, ನಾವು ಅವರಿಂದ ಬಹಳ ಕಲಿಯುತ್ತೇವೆ, ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಯತ್ನಿಸುತ್ತೇವೆ, ಅವರ ಪದಹತಿಯಲ್ಲಿ ನಡೆಯುವ ಎಂದು ಪ್ರಯತ್ನಿಸುತ್ತೇವೆ. ಪ್ರಯತ್ನ ಪ್ರಾಮಾಣಿಕವಾಗಿದ್ದಲ್ಲಿ ನಮ್ಮಲ್ಲಿ ಪರಿವರ್ತನೆಯಾಗುವುದು ಖಂಡಿತ. ಅದು ಆ ಮಹಾನ್ ವ್ಯಕ್ತಿಗಳಿಗೆ ನಾವು ಸಲ್ಲಿಸುವ ಗೌರವ.

ಡಾ.ಎಚ್.ಕೆ. ರಂಗನಾಥ್

ಶ್ರೀ ಎಚ್.ಕೆ. ರಂಗನಾಥ್‌ರ ಕೈ ಕೆಳಗೆ ಸಹಾಯಕನಾಗಿ ಕೆಲಸ ಮಾಡಲು ಆಯ್ಕೆಯಾದ ಸಂದರ್ಭದಲ್ಲಿ ನನಗಾದ ಅನುಭವವೂ ಅವರ್ಣನೀಯ. ನಾಟಕ, ಅದರಲ್ಲೂ 'ಕಾವ್ಯೇಷು ನಾಟಕಂ ರಮ್ಯಮ್' ಎನ್ನುವ ಮಾತಿದೆ. ಸಾಹಿತ್ಯದ ಇತರ ಎಲ್ಲ ಪ್ರಕಾರಗಳಿಗಿಂತ ನಾಟಕವೇ ಶ್ರೇಷ್ಠತಮವಾದ, ರಮ್ಯವಾದ ಪ್ರಕಾರ ಎಂದು ಹೇಳಿದೆ. ಆದರೆ ರೇಡಿಯೋ ನಾಟಕ ಇತರ ನಾಟಕಗಳಂತಲ್ಲ. ಇತರ ನಾಟಕಗಳಲ್ಲಿ ಪಾತ್ರಧಾರಿಯನ್ನು ಪ್ರೇಕ್ಷಕನು ನೋಡುತ್ತಿರುತ್ತಾನೆ. ಒಂದು ವೇಳೆ ಅವನ ಸಂಭಾಷಣೆ ಕೇಳದಿದ್ದರೂ ಪಾತ್ರಧಾರಿಯ ಮುಖಭಾವ ನೋಡಿ ಅವನು ಹೇಳಿರುವ ಮಾತು ಇದಿರಬಹುದು ಎಂದು ಊಹೆಯನ್ನಾದರೂ ಮಾಡಲು ಸಾಧ್ಯವಿದೆ. ಆದರೆ ಇಲ್ಲಿ ಅದಕ್ಕೆ ಅವಕಾಶವಿಲ್ಲ. ಅದು ಶ್ರವ್ಯನಾಟಕ, ಶ್ರೋತೃಗಳು ನಮ್ಮನ್ನು ಕೇಳುತ್ತಿರುತ್ತಾರಷ್ಟೇ. ಎಲ್ಲ ಭಾವಗಳನ್ನೂ ಹೊರಹೊಮ್ಮಿಸುವ ಧ್ವನಿಯೇ ಜೀವಾಳ ಇಲ್ಲಿ. ಆ ಧ್ವನಿಯ ಏರಿಳಿತಗಳಲ್ಲೇ ಪಾತ್ರದ ಭಾವ ಶ್ರೋತೃವಿಗೆ ತಿಳಿಯಬೇಕು. ಹಾಗೇ ಧ್ವನಿ ಮಾರ್ಪಡಬೇಕು. ಶ್ರೀ ಎಚ್. ಕೆ. ರಂಗನಾಥರದ್ದು ಈ ವಿಷಯದಲ್ಲಿ ಎತ್ತಿದ ಕೈ , ಆ ಧ್ವನಿಪರಿವರ್ತನೆಯನ್ನು ನನಗೆ ಕಲಿಸಿದ ಗುರುಗಳು ಅವರು! ನಾನು ಹಲವಾರು ಇಂಗ್ಲಿಷ್ ಚಿತ್ರಗಳನ್ನು ನೋಡಿ ತಿಳಿದಿದ್ದೆ , ಕೇಳಿದ್ದೆ. ಆಗ ಇದು ಇಷ್ಟು ಕಷ್ಟಕರವೆಂದು ನನಗನ್ನಿಸಿರಲಿಲ್ಲ. ಆ ಧ್ವನಿ ಮಾರ್ಪಡಿಸುವಿಕೆಗೆ ಅವರು ವಹಿಸುತ್ತಿದ್ದ ಕಾಳಜಿ, ತೆಗೆದುಕೊಳ್ಳುತ್ತಿದ್ದ ಶ್ರಮ ಅಷ್ಟಿಷ್ಟಲ್ಲ. ಅವರನ್ನು ಗಮನಿಸಿ, ಅವರಿಂದ ತಿದ್ದಿಸಿಕೊಂಡು ನಾನು ಕಲಿತದ್ದು ಬಹಳ. ಅವರಿಗೆ ನಾನು ಈ ವಿಷಯದಲ್ಲಿ ಎಂದಿಗೂ ಋಣಿ.

೧೬. ಮಹಾತ್ಮನಿಗೆ ನೂರು

ಗಾಂಧೀ ಶತಾಬ್ದಿ

ಮಹಾಭಾರತದಲ್ಲಿ ೨೪ ಮಂದಿ ಗುರುಗಳು ಇರುತ್ತಾರೆಂದು ಹೇಳಿದೆ. ಒಬ್ಬೊಬ್ಬರಿಂದ ಒಂದೊಂದು ಕಲಿತರೂ ೨೪ ವಿದ್ಯೆಗಳು ಬಂದಂತೆಯೇ! ಹಾಗೇ ನನಗೆ ಎಲ್ಲ ವಿಷಯಗಳನ್ನೂ ಕಲಿಯಲು ಸಮರ್ಥ ಗುರುಗಳು ಸಿಕ್ಕಿದರು. ಅವರೆಲ್ಲ ಇಂದಿಗೂ ನನಗೆ ಪ್ರಾತಃ ಸ್ಮರಣೀಯರು. ನಾನು ಆ ಗುರುಗಳೆಲ್ಲರ ಮಟ್ಟಕ್ಕೇರದೆ ಹೋದರೂ ನಾನು ಅವರ ಶಿಷ್ಯ ಎಂದು ಅವರಿಂದ ಗುರುತಿಸಿಕೊಳ್ಳುವುದರಲ್ಲೇ ನನಗೆ ಬಹಳ ಹೆಮ್ಮೆ ಇದೆ. ಹಾಗೆಯೇ ಆ ಗುರುಗಳೆಲ್ಲರಿಗೂ ಇವನು ನಮ್ಮ ಶಿಷ್ಯನೆಂದು ಪ್ರೀತಿಯೂ ಇದೆ, ಅಷ್ಟು ಸಾಕು.

ಈ ಹಿಂದೆಯೇ ನಾನು ಹೇಳಿರುವಂತೆ 'ರಾಮಾಯಣ' 'ಮಹಾಭಾರತ'ಗಳ ಮೇಲೆ ನನಗೆ ವಿಶೇಷ ಒಲವು. ಶ್ರೀ ಕೆ.ಎಂ.ಮುನ್ಷಿಯವರು ಭವನ್ಸ್ ಜರ್ನಲ್‌ನಲ್ಲಿ 'ಕೃಷ್ಣಾವತಾರ' ವನ್ನು ಬರೆಯಲು ಪ್ರಾರಂಭ ಮಾಡಿದ ಮೇಲೆ, ನಾನು ಮೊದಲು ಭವನದ ಆಫೀಸಿಗೆ ಹೋಗಿ, 'ಕೃಷ್ಣಾವತಾರ'ದ ಮೊದಲ ಪ್ರತಿಯನ್ನು ತೆಗೆದುಕೊಂಡು ಓದುತ್ತಿದ್ದೆ. ನನ್ನ ಮನಸ್ಸಿನ ಕೃಷ್ಣನೇ ಅವನೂ ಸಹ ಎಂದು, ಓದುತ್ತ ಹೋದಂತೆ ತಿಳಿದು ನನ್ನ ತಿಳುವಳಿಕೆಯಲ್ಲಿ ನನಗೆ ಮತ್ತಷ್ಟು ವಿಶ್ವಾಸ ಮೂಡಿತು. ಅಖಿಲನ್, ದೇವನ್, ಕಲ್ಕಿ, ಅನುತ್ತಮಾ, ಇವರನ್ನೆಲ್ಲ ಅನುವಾದ ಮಾಡಿದನಂತರ 'ಕೃಷ್ಣಾವತಾರ' ಓದಿದುದು ನನಗೆ ಅರಿವಿಲ್ಲದಂತೆ ನನ್ನ ಜೀವನದಲ್ಲಿ ಒಂದು ಮುಖ್ಯವಾದ ತಿರುವು ಕೊಟ್ಟಿತು.

ಕುಮಾರವ್ಯಾಸ ಭಾರತ ವಾಚನ - ವ್ಯಾಖ್ಯಾನ ಕಾರ್ಯಕ್ರಮವು ಜನಪ್ರಿಯವಾಗಿ ಸಹಸ್ರಾರು ಜನ ಸೇರುತ್ತಿದ್ದರು. ರಾಜಾಜಿನಗರದಲ್ಲಿ ಅದು ಮನೆಮಾತಾಗಿಬಿಟ್ಟಿತು. ಅಲ್ಲಿಗೆ ಪ್ರಮುಖ ಸಾಹಿತಿಗಳು, ಕವಿಗಳು, ರಾಜಕಾರಣಿಗಳು ಬರುತ್ತಿದ್ದರು. ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲ್, ಶ್ರೀ ರಾಮಕೃಷ್ಣ ಹೆಗಡೆ , ಶ್ರೀ ನಿಜಲಿಂಗಪ್ಪ , ಶಿಕ್ಷಣ ಮಂತ್ರಿ ಶ್ರೀ ಶಂಕರೇಗೌಡರು ಮೊದಲಾದ ಹಲವರು ಬರುತ್ತಿದ್ದರು.

ಮೋಹನ ತರಂಗಿಣಿ

೧೯೬೮ರ ಏಪ್ರಿಲ್ ತಿಂಗಳು. ಶಂಕರೇಗೌಡರು, ವೀರೇಂದ್ರ ಪಾಟೀಲರು ಕತೆ ಕೇಳಲು ಬಂದರು. ಕತೆ ಮುಗಿಸಿದ ಅನಂತರ ತಮ್ಮ ಸಂತಸ ವ್ಯಕ್ತಪಡಿಸಿದರು. ಹೊಸಹಳ್ಳಿ ಶ್ರೀ ರಾಮಶಾಸ್ತ್ರಿ ನನಗೆ ವಾಚನ ಮಾಡುತ್ತಿದ್ದರು. ಗಮಕ ವಿದ್ವಾನ್ ಶ್ರೀ ಕೇಶವಮೂರ್ತಿಯ ಅಣ್ಣಂದಿರು ಇವರು.

"ಮತ್ತೂರರೇ? ಕುಮಾರವ್ಯಾಸ, ಲಕ್ಷ್ಮೀಶ, ರಾಘವಾಂಕ ಇವರುಗಳ ಕಾವ್ಯಕ್ಕೆ ಪ್ರವಚನ ಮಾಡುತ್ತೀರಿ. ಹೀಗೆ ಗಾಂಧೀಜಿಯ ಬಗೆಗೂ ಮಾಡಬಾರದು ಏಕೆ ? ಈ ವರ್ಷದ ಅಕ್ಟೋಬರ್ ೨ ರಿಂದ ೧೯೬೯- ಅಕ್ಟೋಬರ್ ೨ರ ವರೆಗೆ ಗಾಂಧೀ ಶತಾಬ್ದಿಯನ್ನು ಆಚರಿಸಬೇಕೆಂದಿದ್ದೇವೆ" ಎಂದರು. "ಗಾಂಧೀಜಿಯ ಬಗೆಗೆ ಕಾವ್ಯ ಇಲ್ಲ , ಇದ್ದಿದ್ದರೆ ಮಾಡಿಸ ಬಹುದಿತ್ತು" ಎಂದೆ. "ಯಾರಿಗಾದರೂ ಹೇಳಿ ಬರೆಯಿಸಿರಿ" ಎಂದರು. "ಆಗಲಿ, ನೋಡುತ್ತೇನೆ" ಎಂದೆ.

ಮರುಕ್ಷಣವೇ ನನ್ನ ಮನಸ್ಸು ಬೀರೂರಿಗೆ ಹಾರಿ ಹೋಯಿತು. ಅಲ್ಲಿ ನಮ್ಮ ಹತ್ತಿರದ ಬಂಧು ಬೀರೂರು ಶ್ರೀ ಚಿದಂಬರ ಜೋಯಿಸರು ಇದ್ದರು. ಅವರು ಸಂಸ್ಕೃತ-ಕನ್ನಡ ಭಾಷೆಗಳಲ್ಲಿ ಅದ್ವಿತೀಯ ಪಾಂಡಿತ್ಯ ಪಡೆದಿದ್ದರು. ಆಶುಕವಿ ಬೇರೆ. ಅನೇಕ ಹಾಡುಗಳು, ಭಜನೆ, ಸ್ತೋತ್ರಗಳನ್ನು ರಚಿಸಿದ್ದಾರೆ. ಆದರೆ ಗಾಂಧೀ ವಿಚಾರ ಅಷ್ಟಾಗಿ ಅವರಿಗೆ ತಿಳಿಯದು.

ಗಾಂಧೀಜಿಯ ಮೇಲಿನ ಕನ್ನಡದಲ್ಲಿನ ೨೦-೨೫ ಪುಸ್ತಕಗಳೊಂದಿಗೆ ಬೀರೂರಿಗೆ ಹೋದೆ. ಎರಡು-ಮೂರು ದಿನ ಇದ್ದು ಗಾಂಧೀಜಿಯ ಜೀವನ-ಕೆಲಸಗಳೆಲ್ಲವನ್ನೂ ವಿವರಿಸಿದೆ. ಪುಸ್ತಕಗಳೆಲ್ಲವನ್ನೂ ಕೊಟ್ಟು , 'ಕಾವ್ಯರೂಪದಲ್ಲಿ ಬರೆದು ಕೊಟ್ಟು ಉಪಕರಿಸಬೇಕು' ಎಂದು ಹೇಳಿ ಅವರ ಪಾದಮುಟ್ಟಿ ನಮಿಸಿದೆ.

'ಯಾವಾಗ ಬೇಕು ?' ಎಂದು ಕೇಳಿದರು. 'ಜುಲೈ ೩೧ ರೊಳಗೆ ಕೊಡಲಾದೀತೆ ?' ಎಂದೆ. 'ಪ್ರಯತ್ನಿಸುತ್ತೇನೆ' ಎಂದರು.

ಜುಲೈ 20ಕ್ಕೆ ಅವರಿಂದ ಪತ್ರ ಬಂದಿತು.

'ಕೃಷ್ಣಾ , ಬಾ! ಬಂದು ನೋಡು. ಇಷ್ಟವಾದರೆ ಒಯ್ಯಿ'ಎಂದು ಬರೆದರು. ಹೋಗಿ ನೋಡಿದೆ. ನನ್ನ ಕಂಗಳನ್ನು ನಂಬದಾದೆ. 'ಮೋಹನ ತರಂಗಿಣಿ' ಎಂದು ಹೆಸರುಕೊಟ್ಟು ಷಟ್ಪದಿ, ಚೌಪದಿ, ತ್ರಿಪದಿ, ದ್ವಿಪದಿ ಶೈಲಿಯಲ್ಲಿ ಸುಮಾರು ४೦೦ ಪುಟಗಳಷ್ಟು ಗಾಂಧೀಜಿಯ ಜೀವನ, ಸಾಧನೆ, ತತ್ತ್ವ, ಧ್ಯೇಯ ಎಲ್ಲವನ್ನೂ ಒಳಗೊಂಡ ಕಾವ್ಯ ರಚಿಸಿದ್ದರು. ಅವರ ಪಾದಗಳಿಗೆ ನಮಸ್ಕರಿಸಿದೆ. ಕೃತಜ್ಞತೆ ಸಮರ್ಪಿಸಿ ಮರಳಿದೆ.

ಮಂತ್ರಿಗಳಿಗೆ ತಿಳಿಸಿದೆ. ಹೊಸಹಳ್ಳಿ ಶ್ರೀ ರಾಮಶಾಸ್ತ್ರಿ ಮತ್ತು ನಾನು, "ಸೆಪ್ಟೆಂಬರ್ ೨ ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಗಾಂಧೀಜಿಯ ಜೀವನ ಚರಿತ್ರೆಯ ಕೆಲ ಭಾಗಗಳನ್ನು ವಾಚನ ವ್ಯಾಖ್ಯಾನರೂಪದಲ್ಲಿ ನೀಡಲಾಗುವುದು" ಎಂದು ತಿಳಿಸಿದೆ.

ಸರ್ವಶ್ರೀ ನಿಜಲಿಂಗಪ್ಪನವರು, ವೀರೇಂದ್ರ ಪಾಟೀಲರು, ಶಂಕರೇಗೌಡರು, ಹೆಗ್ಗಡೆಯವರು, ಗಾಂಧೀ ಶತಾಬ್ದಿ ಸಮಿತಿಯ ಸಂಪದ್ಗಿರಿರಾಯರು, ರಾಜನ್, ನಾರಾಯಣಸ್ವಾಮಿ ಮೊದಲಾದ ಹಲವರು ಬಂದಿದ್ದರು. ಎಲ್ಲರೂ ಮೆಚ್ಚಿ 'ಶಹಬಾಸ್' ಎಂದರು.

"೧೯೬೮ ಅಕ್ಟೋಬರ್ ೨ ರಿಂದ ೧೯೬೯ಅಕ್ಟೋಬರ್ ೨ರವರೆಗೆ ಕರ್ನಾಟಕ ರಾಜ್ಯದಾದ್ಯಂತ 'ಮೋಹನ ತರಂಗಿಣಿ'ಯ ವಾಚನ-ವ್ಯಾಖ್ಯಾನ ಕಾರ್ಯಕ್ರಮಗಳನ್ನು ನಡೆಸಬೇಕು; ಜಿಲ್ಲೆಗಳ ಕಮೀಷನರು ಸಕಲ ವಿಧ ಏರ್ಪಾಡುಗಳನ್ನು ಮಾಡಬೇಕು ಎಂದು ಶಿಕ್ಷಣ ಸಚಿವ ಶ್ರೀ ಶಂಕರೇಗೌಡರು ಅಪ್ಪಣೆ ಕೊಡಿಸಿದರು. ಶ್ರೀ ರಾಮಶಾಸ್ತ್ರಿ-ನಾನು ಇಬ್ಬರೂ ಕಾರ್ಯದಲ್ಲಿ ತೊಡಗಲು ನಿರ್ಧರಿಸಿದೆವು. ನಾನು ಕೆಲಸ ಮಾಡುತ್ತಿದ್ದ 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಸಂಪಾದಕರೂ, ಮಾಲೀಕರೂ ಆದ ಶ್ರೀ ಆರ್.ಆರ್. ದಿವಾಕರ ಸಂಬಳ ಸಹಿತದ ರಜೆ ಕೊಟ್ಟರು. ಒಂದು ವರ್ಷ ಕಾಲ ೧೬೦-೧೮೦ ಊರುಗಳಲ್ಲಿ ಮೋಹನ ತರಂಗಿಣಿಯ ವಾಚನ-ವ್ಯಾಖ್ಯಾನ ನಡೆದು ಜನಪ್ರಿಯವಾಯಿತು. ನಿಜಕ್ಕೂ ಯಶಸ್ವಿಯಾಯಿತು. ಗಾಂಧೀಜಿಗೆ ನಮ್ಮ ಸೇವೆ ಸಲ್ಲಿಸಿದಂತಾಯಿತು ಎಂಬ ತೃಪ್ತಿ ಆಯಿತು.

ಶ್ರೀ ಚಿದಂಬರ ಜೋಯಿಸರಿಗೆ , ಶ್ರೀ ರಾಮಶಾಸ್ತ್ರಿಗೆ ಹಾಗೂ ನನಗೆ ಚಿನ್ನದ ಪದಕ, ಸಂಭಾವನೆ, ಮಾನಪತ್ರ ನೀಡಿ ಗೌರವಿಸಲಾಯಿತು.

ಶ್ರೀ ಶಂಕರೇಗೌಡರಂತೂ ಹೆಮ್ಮೆಯಿಂದ ತಬ್ಬಿಕೊಂಡು "ಜೋಯಿಸರ ಕಾವ್ಯವು ಅತ್ಯದ್ಭುತವಾಗಿದೆ ಮತ್ತೂರರೇ, ಎಲ್ಲಿದ್ದಾರೆ ಇವರು? ಏನು ಮಾಡುತ್ತಾರೆ ? ಇಂಥ ಮಹನೀಯರು ನಮ್ಮಲ್ಲಿದ್ದಾರೆ ಎಂದು ನೋಡಿ ಹೆಮ್ಮೆಯಾಯಿತು. ನನ್ನಿಂದ ಏನಾದರೂ ಆಗಬೇಕಿದ್ದರೆ ಸಂಕೋಚಪಡದೇ ಹೇಳಿ"ಎಂದರು.

ದೈವವೇ ಈ ಮಾತನ್ನು ಇವರ ಮುಖದಿಂದ ಹೇಳಿಸಿತೋ ಎನಿಸಿತು ನನಗೆ.

"ಸಾರ್! ಚಿದಂಬರ ಜೋಯಿಸರಿಗೆ ಹತ್ತು ಮಕ್ಕಳು. ಸಂಸ್ಕೃತ-ಕನ್ನಡದಲ್ಲಿ ಅಗಾಧ ಪಾಂಡಿತ್ಯ. ಆದರೆ ಎಸ್.ಎಸ್.ಎಲ್.ಸಿ. ಆಗಿಲ್ಲ ಎಂಬ ಕಾರಣದಿಂದ ನೌಕರಿ ಇಲ್ಲ , ಕಡುಬಡತನ!" ಎಂದೆ.

ತಕ್ಷಣವೇ, 'ನಾಳೆ ಆಫೀಸಿಗೆ ಬನ್ನಿ' ಎಂದರು. ಅವರ ಕಂಗಳು ತೇವವಾದದ್ದನ್ನು ಗಮನಿಸಿದೆ.

ಮರುದಿನ ಹೋಗಿ ಶ್ರೀ ಶಂಕರೇಗೌಡರನ್ನು ಕಂಡೆ. ಅವರು ಜೋಯಿಸರ ವಿಳಾಸ ಪಡೆದರು. ಶಿವಮೊಗ್ಗ ಹೈಸ್ಕೂಲಿನಲ್ಲಿ ಸಂಸ್ಕೃತ-ಕನ್ನಡ ಅಧ್ಯಾಪಕ ವೃತ್ತಿಗೆ ನೇಮಿಸಿದ ಪತ್ರ ಕೊಟ್ಟರು!

ಹತ್ತಾರು ವರ್ಷ ಈ ಉದ್ಯೋಗವನ್ನು ಸಮರ್ಪಕವಾಗಿ ನೆರವೇರಿಸಿ ನಿವೃತ್ತರಾದರು ಶ್ರೀ ಚಿದಂಬರ ಜೋಯಿಸರು. "ಗಾಂಧೀಜಿಗೆ ಮಾಡಿದ ಸೇವೆಗೆ ಕೈಮೇಲೆ ಫಲ ಬಂದಿತು ಕೃಷ್ಣಾ. ನೀ ಚೆನ್ನಾಗಿ ಬಾಳಿ ಕೀರ್ತಿಗಳಿಸೋ..." ಎಂದು ಹೇಳಿ ಹರಸಿದರು.

೧೭. ಸವಾಲುಗಳು

ಆಂಡವನ್ ಸ್ವಾಮಿಗಳು

ಆಂಡವನ್ ಸ್ವಾಮಿಗಳು, ಶ್ರೀವೈಷ್ಣವರು, ೧೯೬೫ರಲ್ಲಿ ಒಮ್ಮೆ ಅವರು ಬೆಂಗಳೂರಿಗೆ ಬಂದರು. ಅವರನ್ನು 'ತೇರ್ ಎಳಂದೂರು ಸ್ವಾಮಿ' ಎಂದೂ ಕರೆಯುತ್ತಿದ್ದರು. 'ತಿರುವೆಂಬಾವೈ', 'ತಿರುಪ್ಪಾವೈ' ಎನ್ನುವ ಎರಡು ವಿಶೇಷವಾದ ತಮಿಳು ಕೃತಿಗಳನ್ನು ಬರೆದ ಆಂಡಾಳ್ ಆಳ್ವಾರಳ ಊರಿನವರು ಅವರು. ಬಹಳ ಒಳ್ಳೆಯ ವಾಗ್ಮಿ, ಜ್ಞಾನಿ. ಆ ಸಮಯದಲ್ಲಿ ಸುಂದರಂ ಮೋಟಾರ್ಸ್‌ನ ಶ್ರೀ ಟಿ.ಎಸ್. ರಾಜಂ ಅವರ ಮನೆಗೆ ನಾನು ಪ್ರತಿದಿನವೂ ಹೋಗಿ ರಾಮಾಯಣ, ಮಹಾಭಾರತಗಳ ಕತೆಗಳನ್ನು ಹೇಳುತ್ತಿದ್ದೆ. ಅವರ ಶ್ರೀಮತಿಯವರಾದ ಪಂಕಜಂ ಅವರು ಬಹಳ ಆಸಕ್ತಿಯಿಂದ ಕತೆಗಳನ್ನು ತಪ್ಪದೆ ಕೇಳುತ್ತಿದ್ದರು. ನನ್ನ-ಅವರ ಸ್ನೇಹ ಸುಮಾರು ೧೫ ವರ್ಷಗಳಷ್ಟು ಹಳೆಯದು. ಶ್ರೀ ರಾಜಂರವರು ಅನಂತರ ಭಾರತೀಯ ವಿದ್ಯಾಭವನ ಕೇಂದ್ರದ ಅಧ್ಯಕ್ಷರೂ ಆಗಿದ್ದರು. ಆಂಡವನ್ ಸ್ವಾಮಿಗಳು ಬೆಂಗಳೂರಿಗೆ ಬರಲು ಮುಖ್ಯ ಕಾರಣರು ಶ್ರೀ ರಾಜಂರವರು. ಆಂಡವನ್ ಸ್ವಾಮಿಗಳು ಬಂದಿದ್ದಾಗ ಸುಮಾರು ಒಂದು ತಿಂಗಳ ಕಾಲ ಮಲ್ಲೇಶ್ವರಂ ರಾಮಮಂದಿರದಲ್ಲಿ ಅವರ ಪ್ರವಚನಗಳಾದವು. ಆಗ ಶ್ರೀ ರಾಜಂ ಅವರು ನನಗೆ, 'ಹಿಂದೂ ಪೇಪರಿನಲ್ಲಿ "ರಿಲಿಜನ್" (ಧರ್ಮ) ಎನ್ನುವ ಕಾಲಮ್ಮಿನಲ್ಲಿ ಬರೆಯಲು ಈ ಭಾಷಣಗಳು ಬಹಳ ಸೊಗಸಾಗಿವೆ. ನೀವು ಸ್ವಾಮಿಗಳ ಭಾಷಣಗಳನ್ನು ಇಂಗ್ಲಿಷಿಗೆ ಮಾಡಿ ಕಳುಹಿಸಿಕೊಡಿ. ನಾನು ಹೇಳುತ್ತೇನೆ, ಅವರು ಹಾಕುತ್ತಾರೆ' ಎಂದರು. ಅವರ ಈ ಯೋಚನೆ ನನಗೂ ಒಂದು ಸವಾಲಾಗಿತ್ತು.

ಇದಕ್ಕೆ ಒಪ್ಪಿದ ನಾನು ಪ್ರತಿನಿತ್ಯ ಸ್ವಾಮೀಜಿಯ ಪ್ರವಚನ ಕೇಳಿ, ಅದನ್ನು ಇಂಗ್ಲಿಷಿಗೆ ಮಾಡಿ ಬರೆದು ಕಳುಹಿಸಲು ಪ್ರಾರಂಭಿಸಿದೆ. ಬೆಳಗ್ಗೆ ಪೇಪರಿನಲ್ಲಿ ಬಂದದ್ದನ್ನು ರಾತ್ರಿ ಸ್ವಾಮೀಜಿಯ ಶಿಷ್ಯರು, ಸ್ವಾಮೀಜಿಗೆ ಹೇಳುತ್ತಿದ್ದರು. ಸ್ವಾಮೀಜಿಯವರಿಗೆ ಇದು ಬಹಳ ಇಷ್ಟವಾಯಿತು. ಹೀಗೆ ಒಂದು ತಿಂಗಳ ಕಾಲ ನಡೆಯಿತು. ಇದಾದ ಅನಂತರವೇ ಸ್ವಾಮೀಜಿಯ ಭಕ್ತರೆಲ್ಲರೂ 'ಆಂಡವನ್ ಸ್ವಾಮಿಗಳು ರಾಮಾಯಣವನ್ನು ಬಹಳ ಸೊಗಸಾಗಿ ಹೇಳಿದ್ದಾರೆ. ಅದನ್ನು ನೀವೇಕೆ ಕನ್ನಡದಲ್ಲಿ ಮಾಡಬಾರದು?' ಎಂದು ಕೇಳಿದರು. ನನಗೆ ಈಗ ನಿಜಕ್ಕೂ ಗಾಬರಿಯಾಯಿತು. ಶ್ರೀ ಆಂಡವನ್ ಸ್ವಾಮಿಗಳು ಬಹಳ ವಿಶಾಲವಾದ ಮನೋಭಾವವುಳ್ಳವರು. ಅವರ ವಿಚಾರ ವೈಶಾಲ್ಯತೆಯೂ ಅಗಾಧವೇ ನಿಜ. ಅವರು 'ದಕ್ಷಯಜ್ಞ'ವನ್ನು ಹೇಳಿದಾಗ ನನಗೆ ಆಶ್ಚರ್ಯವೇ ಆಗಿ, ಅವರ ಮೇಲಿನ ಗೌರವ ಭಕ್ತಿಗಳು ಮತ್ತೂ ಹೆಚ್ಚಾದವು. ಅವರ ಪಾಂಡಿತ್ಯಪೂರ್ಣ ಪ್ರವಚನಗಳನ್ನು ಕನ್ನಡಕ್ಕೆ ತರುವ ವಿಷಯ ಸಾಮಾನ್ಯವಾದದ್ದಾಗಿರಲಿಲ್ಲ. ಒಂದೊಂದು ಗಂಟೆಯ ಟೇಪನ್ನು ಕೇಳಿಕೇಳಿ ಬರೆಯಬೇಕಿತ್ತು. ಕೆಲಸ ಬಹಳ. ಅಷ್ಟಾದರೂ ಸ್ವಾಮೀಜಿಯ ಭಕ್ತರು ನನ್ನನ್ನು ಬಿಡಲಿಲ್ಲ. ಅವರ ಒತ್ತಾಯಕ್ಕೆ ಮಣಿದು, ದೇವರಿಗೆ ವಂದಿಸಿ ಈ ಕೆಲಸ ಶುರು ಮಾಡಿಯೇ ಬಿಟ್ಟೆ. ಅವರ ಭಾಷೆಯೋ, ಶುದ್ಧವಾದ ತಮಿಳು, ಸಂಸ್ಕೃತಮಯ. ಅಸ್ಖಲಿತ ಶೈಲಿಯ ಆ ಭಾಷಾ ವೇಗವನ್ನು ಸರಿಗಟ್ಟಿ ಬರೆಯುವುದು ಬಹಳ ಕಷ್ಟದ ಕೆಲಸವೇ ಆಗಿತ್ತು.

ಈ ಸಮಯದಲ್ಲಿ ನನಗೆ ಸಂಭಾವಿತ ಶ್ರೀವೈಷ್ಣವ ಕುಟುಂಬ ವೊಂದರ ಪರಿಚಯವಾಯಿತು. ಒಬ್ಬ ತಾಯಿ-ಐದು ಜನ ಹೆಣ್ಣುಮಕ್ಕಳು. ಅವರಲ್ಲಿ ಮಧ್ಯಮ ಹುಡುಗಿಯೇ ವೇದವಲ್ಲಿ. ವೇದವಲ್ಲಿ ಕುಶಾಗ್ರಮತಿ, ಅಸಾಧ್ಯದ ನೆನಪಿನ ಶಕ್ತಿ ಇದ್ದ ಪ್ರಬುದ್ಧೆ. ನಾನು ಶ್ರೀ ಟಿ.ಎಸ್. ರಾಜಂರವರ ಮನೆಗೆ ಹೋಗಲು ಪ್ರಾರಂಭಿಸಿದಂದಿನಿಂದಲೂ ನಮ್ಮ ಸಂಪರ್ಕಕ್ಕೆ ಬಂದ ಈ ಕುಟುಂಬದ ಎಲ್ಲ ಹೆಣ್ಣುಮಕ್ಕಳೂ ನಮ್ಮ ಮನೆಯ ಮಕ್ಕಳಂತೆಯೇ ಆದರು. ತಂದೆ ಇಲ್ಲದ ಮನೆಯಲ್ಲಿ ಹುಡುಗಿಯರಿಗೆ ತಮ್ಮ ಓದು ಮುಂದು

ವರೆಸುವುದು ಕಷ್ಟವಾಗಿತ್ತು. ನನ್ನ ಜನಸಂಪರ್ಕ ನೋಡಿದ ವೇದವಲ್ಲಿ ತಾವು ಬಿ.ಎಡ್., ಮಾಡಿರುವುದಾಗಿ ಹೇಳಿ, ತಾವು ಮುಂದಕ್ಕೆ ಎಂ.ಎ. ಮಾಡಲು ಆಸೆ ಇರುವುದಾಗಿ ಹೇಳಿದರು. ದೇವರು ಯಾರಿಗೆ ಯಾವಾಗ ಯಾರ ರೂಪದಲ್ಲಿ ಸಹಾಯ ಒದಗಿಸುತ್ತಾನೆಂದು ಯಾರಿಗೆ ಹೇಳಲು ಸಾಧ್ಯ? ನನಗೆ ಈ ಅವಕಾಶ ಕೊಟ್ಟಿದ್ದ , ಈಗ ! ಮೊದಲಿನಿಂದಲೂ ನಾನು ಹೆಚ್ಚಿಗೆ ಓದಲಾಗಲಿಲ್ಲವೆನ್ನುವ ಕೊರಗು ನನ್ನೊಳಗೇ ಇದ್ದು, ಯಾರೇ ಆದರೂ ಓದುತ್ತೇನೆ, ಎಂದಾಗ ಅವರಿಗೆ ನನ್ನ ಕೈಲಾದಷ್ಟು ಸಹಾಯ ಮಾಡಬೇಕು ಎನಿಸುತ್ತಿತ್ತು. ದೆಹಲಿಯ 'ಸ್ಕೂಲ್ ಆಫ್ ಇಕನಾಮಿಕ್ಸ್'ನಲ್ಲಿ ಪ್ರಿನ್ಸಿಪಾಲರಾಗಿದ್ದವರು ಶ್ರೀ ವಿ.ಕೆ.ಆರ್.ವಿ. ರಾವ್. ಇವರ ಪುಸ್ತಕವೊಂದನ್ನು ನಾನು ಕನ್ನಡಕ್ಕೆ ಅನುವಾದ ಮಾಡಿದ್ದನ್ನು ಈ ಹಿಂದೆಯೇ ಹೇಳಿದ್ದೇನಷ್ಟೆ? ಆಗ ಪರಿಚಯವಾದ ಅವರ-ನನ್ನ ಸ್ನೇಹ ಬಹಳ ಚೆನ್ನಾಗಿಯೇ ಮುಂದುವರೆದಿತ್ತು. ಶ್ರೀ ವೆಂಕಟಗಿರಿಗೌಡರೂ ಆಗ ಸೆಂಟ್ರಲ್ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಅವರಿಬ್ಬರ ಸಹಾಯವನ್ನು ಪಡೆದು ವೇದವಲ್ಲಿಗೆ ದೆಹಲಿಯ ಇಕನಾಮಿಕ್ಸ್ ಸ್ಕೂಲ್‌ನಲ್ಲಿ ಸೀಟು ಕೊಡಿಸಿದೆ. ಹಾಗೆ ಸೀಟು ತೆಗೆದುಕೊಂಡ ವೇದವಲ್ಲಿ ಉನ್ನತ ದರ್ಜೆಯಲ್ಲಿ ಎಂ.ಎ., ಪದವಿ ಪಡೆದು, ಬಹಳ ಕಡಮೆ ಸಮಯದಲ್ಲೇ ಪಿಎಚ್.ಡಿ., ಯನ್ನು ಪೂರೈಸಿದ ದಾಖಲೆ ಮಾಡಿದರು. ಅನಂತರ 'ವರ್ಲ್ಡ್‌ಬ್ಯಾಂಕಿ'ನಲ್ಲಿ ಕೆಲಸವನ್ನು ಗಳಿಸಿಕೊಂಡರು. ಆಮೇಲೆ ತಮ್ಮ ತಂಗಿಯರಿಗೆ ತಾವು ಸಹಾಯ ಮಾಡಿ, ಎಲ್ಲರನ್ನೂ ಮುಂದೆ ತಂದರು. ಇಂದಿಗೂ ಈ ಮಕ್ಕಳು ಅಂದಿನಂತೆಯೇ ನಮ್ಮ ಮೇಲೆ ಅಭಿಮಾನವಿಟ್ಟಿರುವುದು ನೋಡಿದಾಗ ನಿಜಕ್ಕೂ ನಮ್ಮ ಕಿಂಚಿತ್ ಸಹಾಯ ಸಾರ್ಥಕವಾಯಿತು ಎಂದೇ ಭಾವನೆಯಾಗುತ್ತದೆ.

ಏನನ್ನಾದರೂ ನೆನಪಿಸಿಕೊಂಡು ಹೇಳುತ್ತಾ ಹೋದಾಗ ಆ ನೆನಪುಗಳ ಸುರುಳಿ ಬಿಚ್ಚಿಕೊಳ್ಳುತ್ತ ಸಿನಿಮಾ ರೀಲಿನಂತೆ ಬಹಳ ಮುಂದಕ್ಕೆ ಓಡಿಬಿಡುತ್ತದೆ. ಒಂದು ಘಟ್ಟ ಬರುವ ತನಕ ಆ ಸುರುಳಿಯನ್ನು ನಿಲ್ಲಿಸಲಾಗದು. ಈಗ ನಿಂತ ವೇದವಲ್ಲಿ ಕುಟುಂಬದ ನೆನಪಿನ ಸುರುಳಿ, ನಾನು ನನ್ನ ಓದುಗರನ್ನು ನಿಲ್ಲಿಸಿದ್ದೆಲ್ಲಿ ಎಂದು ಹೇಳಬೇಕಿದೆ... ಹೌದು ವೇದವಲ್ಲಿ ಕುಟುಂಬದ ಪರಿಚಯವಾದ ಹೊಸದು. ಶ್ರೀ ಆಂಡವನ್ ಸ್ವಾಮಿಗಳ ರಾಮಾಯಣ ಪ್ರವಚನದ ಧ್ವನಿಸುರುಳಿಗಳನ್ನು ಕೇಳಿ ಕನ್ನಡಕ್ಕೆ ಮಾಡುತ್ತಿದ್ದ ದಿನಗಳಲ್ಲಿದ್ದೆ ನಾನು! ಹಾಗೆ ಮಾಡುವಾಗ ಸ್ವಾಮೀಜಿಯವರು ಮಧ್ಯೆ ಮಧ್ಯೆ ತಮಿಳಿನ ಪಾಶುರಗಳನ್ನು ಹೇಳಿದ್ದು ನನಗೆ ಅವುಗಳನ್ನು ಅನುಸರಿಸಿ ವೇಗವಾಗಿ ಬರೆದುಕೊಳ್ಳಲು ಕಷ್ಟವಾಗುತ್ತಿತ್ತು. 'ಪಾಶುರ' ಎಂದರೆ ಸೂಕ್ತಿಗಳು ಎಂದರ್ಥ. ಅವು ಹಾಡುಗಳ ರೂಪದಲ್ಲಿ ಇರುತ್ತವೆ. ವೇದವಲ್ಲಿಗೆ ತಮಿಳು ಪಾಶುರಗಳು ಬರುತ್ತಿದ್ದವು. ಆಗ ವೇದವಲ್ಲಿ ಆ ಪಾಶುರಗಳನ್ನು ಬರೆದುಕೊಳ್ಳಲು ನನಗೆ ಬಹಳ ಸಹಾಯ ಮಾಡಿದರು. ಅವರು ಮಾಡಿದ ಸಹಾಯವೇ ಆ ಸೂಕ್ತಿಗಳು ಕನ್ನಡದಲ್ಲಿಯೂ ಸೊಗಸಾಗಿ ಬಂದಿರುವುದಕ್ಕೆ ಕಾರಣ. ಇದನ್ನು ನಾನು ಮರೆಯುವಂತಿಲ್ಲ.

ನೋ ಪಾಸ್ ನೋ ಫೀಸ್

ಯಾವುದೇ ಕೆಲಸವನ್ನು ಸವಾಲಾಗಿ ತೆಗೆದುಕೊಂಡು ಸಾಹಸಕ್ಕೆ ಇಳಿಯುವುದು ನನ್ನ ಸ್ವಭಾವ. ಅದರ ಆಗು-ಹೋಗುಗಳ ಬಗ್ಗೆ ಯೋಚಿಸಿದಾಗ ನನಗೆ ಯಾವಾಗಲೂ ಧನಾತ್ಮಕ ಅಂಶಗಳೇ ಹೆಚ್ಚಾಗಿ ಹೊಳೆಯುವುದು. ನನ್ನ ಈ ಸ್ವಭಾವಕ್ಕೆ ಪೂರಕವಾಗಿ ತೆಗೆದುಕೊಂಡಂತಹ ಒಂದು ಸಾಹಸದ ಬಗ್ಗೆ ನಿಮಗೆ ನಾನೀಗ ಹೇಳಬೇಕಿದೆ.

ಮಲ್ಲೇಶ್ವರಂನಲ್ಲಿ ನಾವು ಇದ್ದ ಮನೆ ಚಿಕ್ಕದಾಗಿದ್ದರೂ ನಮ್ಮ ಮನೆಗೆ ಬರು-ಹೋಗುವ ನನ್ನ ಮಿತ್ರರು, ನಮ್ಮೂರಿನವರು, ಸಂಬಂಧಿಗಳು ಕಡಮೆ ಇರಲಿಲ್ಲ. ನಾನು ಹಾಗೂ ನನ್ನ ಗೆಳೆಯರು ನಮ್ಮ ಗುರುಗಳಾದ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರು ನಡೆಸುತ್ತಿದ್ದ ಗಾಂಧೀಸಾಹಿತ್ಯ ಸಂಘಕ್ಕೆ ತಪ್ಪದೇ ಹೋಗುತ್ತಿದ್ದೆವು. ಆಗ ಒಮ್ಮೆ ನಾವೆಲ್ಲರೂ ಮಾತಿಗೆ ಕುಳಿತಿದ್ದಾಗ ಎಸ್.ಎಸ್.ಎಲ್.ಸಿ.ಯಲ್ಲಿ ಫೇಲಾದ ವಿದ್ಯಾರ್ಥಿಗಳ ಬಗೆಗೆ ಮಾತು ಬಂದಿತು. ನನ್ನ ಮಿತ್ರನೂ, ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದ ತರುಣ ರಾಜಕಾರಣಿಯೂ ಆಗಿದ್ದ ರಾಂದೇವ್ ಪರೀಕ್ಷೆ ತೆಗೆದುಕೊಳ್ಳುವ ಹುಡುಗರ ದಡ್ಡತನವೇ ಅದಕ್ಕೆ ಕಾರಣವೆಂದು ವಾದಿಸಿದ. ಯಾರೇ ಆದರೂ, ಬುದ್ಧಿ ಎನ್ನುವುದು ಎಲ್ಲರಿಗೂ ಇರುವಂಥದ್ದು, ಅದು ಒಬ್ಬರ ಸ್ವತ್ತಲ್ಲ, ಯಾವ ಹುಡುಗನೂ ಸ್ವಭಾವತಃ ದಡ್ಡನಲ್ಲ. ಸರಿಯಾಗಿ ಶಿಕ್ಷಣ ಕೊಟ್ಟಲ್ಲಿ ಪಾಸು ಮಾಡುವುದು ಕಷ್ಟವಲ್ಲ ಎನ್ನುವುದು ನನ್ನ ವಾದವಾಗಿತ್ತು. ನನ್ನ ಈ ವಾದವು , ನಾನೂ, ನನ್ನ ಗೆಳೆಯರೂ ಸೇರಿ ಒಂದು ಟ್ಯೂಟೋರಿಯಲ್ಸ್‌ನ್ನು ಪ್ರಾರಂಭಿಸುವ ಉತ್ಸಾಹಕ್ಕೆ ದಾರಿಮಾಡಿತು. ಆಗ ನಾನು ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್‌ನ ಸದಸ್ಯನಾಗಿದ್ದೆ. ನನ್ನ ಜನಸಂಪರ್ಕವೂ ಸಾಕಷ್ಟು ಚೆನ್ನಾಗಿದ್ದಿತು. ನಾನೂ, ನನ್ನ ಮಿತ್ರರೆಲ್ಲರೂ ಸೇರಿ ಒಂದು ದಿನ ನಮ್ಮ ಮನೆಯಲ್ಲೇ 'ಮಲ್ಲೇಶ್ವರಂ ಟ್ಯುಟೋರಿಯಲ್ಸ್' ಅನ್ನು ಪ್ರಾರಂಭ ಮಾಡಿಯೇಬಿಟ್ಟೆವು. ಪಠ್ಯ ವಿಷಯಗಳ ಪರಿಚಯವಿದ್ದ ನನ್ನ ಮಿತ್ರರು ಒಬ್ಬೊಬ್ಬರು ಒಂದೊಂದು ವಿಷಯವನ್ನು ಬೋಧಿಸುವುದಾಗಿ ಒಪ್ಪಿಕೊಂಡರು. ನಾನು ಹಿಂದೆ ಹೇಳಿರುವ ಹೆಣ್ಣುಮಗಳು ವೇದವಲ್ಲಿಯೂ ನಮಗೆ ಸಹಾಯ ಮಾಡುವುದಾಗಿ ಹೇಳಿದಳು. ಬಂದಷ್ಟು ಲಾಭವನ್ನು ಎಲ್ಲರೂ ಹಂಚಿಕೊಳ್ಳುವುದಾಗಿ ಮಾತಾಯಿತು. ಇಲ್ಲಿ ನಮಗೆ ಯಾರಿಗೂ ಲಾಭದ ಮೇಲೆ ದೃಷ್ಟಿ ಇರಲಿಲ್ಲ. ನಮ್ಮ ಉದ್ದೇಶ ನಮ್ಮ ಟ್ಯುಟೋರಿಯಲ್ಸ್‌ಗೆ ಸೇರಿದ ವಿದ್ಯಾರ್ಥಿಗಳು ಸರಿಯಾಗಿ ತರಬೇತಿ ಪಡೆದು

ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಬೇಕು ಎನ್ನುವುದಷ್ಟೇ ಆಗಿತ್ತು. ಆಗ ನಮ್ಮ ಮಿತ್ರ ಶ್ರೀ ಕೇಶವಮೂರ್ತಿಯವರು ಒಂದು ಅಮೂಲ್ಯ ಸಲಹೆ ನೀಡಿದರು. "ನಮ್ಮ ಈ ಉದ್ದೇಶ ಸಫಲ ಆಗಬೇಕಾದರೆ ಸಾಕಷ್ಟು ವಿದ್ಯಾರ್ಥಿಗಳು ನಮ್ಮಲ್ಲಿಗೆ ಬಂದು ಸೇರಬೇಕು. ಅದಕ್ಕೆ ಒಂದು ಆಕರ್ಷಣೆಯಾಗಿ ನಾವು 'ನೋ ಪಾಸ್, ನೋ ಫೀಸ್', ಎಂದರೆ ಪಾಸಾಗದಿದ್ದಲ್ಲಿ ವಿದ್ಯಾರ್ಥಿಗೆ ಅವನ ಫೀಸನ್ನು ವಾಪಸ್ಸು ಮಾಡಲಾಗುವುದು ಎಂದು ಹೇಳೋಣ. ಆಗ ಖಂಡಿತ ವಾಗಿಯೂ ವಿದ್ಯಾರ್ಥಿಗಳ ನೋಂದಣಿ ಸಾಕಷ್ಟು ಸಂಖ್ಯೆಯಲ್ಲಿ ಆಗುವುದು" ಎಂದರು.

ಟ್ಯುಟೋರಿಯಲ್ಸ್ ಪ್ರಾರಂಭ ಮಾಡುವುದಕ್ಕೆ ಅಗತ್ಯವಾಗಿದ್ದ ಬೆಂಚು, ಕುರ್ಚಿಗಳನ್ನು ತರುವುದಕ್ಕೆ ಈಗ ಸರಿಯಾದ ಏರ್ಪಾಡು ಮಾಡಬೇಕಿತ್ತು. ನಾನು ಎನ್.ಎಂ.ಕೆ. ಆರ್.ವಿ. ಕಾಲೇಜಿನ ಆಡಳಿತಾಧಿಕಾರಿಯಾಗಿದ್ದ ಶ್ರೀ ಶಿವಾನಂದ ಶರ್ಮಾರನ್ನು ಭೇಟಿಯಾಗಿ ಕಡಮೆ ಬೆಲೆಯಲ್ಲಿ ನಮಗೆ ಬೆಂಚು, ಕುರ್ಚಿಗಳನ್ನು ಕೊಡಲು ವಿನಂತಿಸಿಕೊಂಡೆ. ಬಹಳ ಸಂತೋಷದಿಂದ ಒಪ್ಪಿಕೊಂಡ ಅವರು ಸಾಕಷ್ಟು ಕಡಮೆ ಬೆಲೆಗೆ ನಮ್ಮ ಟ್ಯುಟೋರಿಯಲ್ಸ್‌ಗೆ ಬೇಕಾಗಿದ್ದ ಬೆಂಚು, ಕುರ್ಚಿಗಳನ್ನು ಕೊಟ್ಟರು. ನಮ್ಮ ಆ ಚಿಕ್ಕ ಮನೆಯಲ್ಲೇ, ಇದ್ದ ಹಜಾರ ಮತ್ತು ಒಂದು ರೂಮಿನಲ್ಲೇ ಅವುಗಳನ್ನು ಹಾಕಿ ತರಗತಿಗಳನ್ನು ಪ್ರಾರಂಭ ಮಾಡಿದೆವು.

ನಿರೀಕ್ಷೆಯಂತೆ ತರಗತಿಗಳು ಬಹಳ ಚೆನ್ನಾಗಿ ನಡೆದು, ಫಲಿತಾಂಶವೂ ನಮ್ಮ ನಿರೀಕ್ಷೆಯ ಮಟ್ಟಕ್ಕೇರಿತು. ಈ ಟ್ಯುಟೋರಿಯಲ್ಸ್ ಬಹಳ ವ್ಯವಸ್ಥಿತವಾಗಿ ಸುಮಾರು ಎರಡೂವರೆ ವರ್ಷಗಳ ಕಾಲ ನಡೆಯಿತು. ಈ ಸಮಯದಲ್ಲಿ ಯಾವ ವಿದ್ಯಾರ್ಥಿಗೂ ನಾವು ಅವನು ಫೇಲಾದನೆಂದು ಫೀಸನ್ನು ವಾಪಸು ಕೊಡುವ ಸಂದರ್ಭವೇ ಒದಗಲಿಲ್ಲ!

ಅನಂತರ, ಅವರವರ ಕಾರ್ಯಕ್ಷೇತ್ರಗಳು ಬದಲಾಗಿ , ಕಾರ್ಯಭಾರ ಹೆಚ್ಚಾದುದರ ಪರಿಣಾಮವಾಗಿ ನಾವು ಮಿತ್ರರು ಬೇರೆಬೇರೆಯಾದೆವು. ಸ್ನೇಹ ಉಳಿದರೂ ಒಟ್ಟಾಗಿ ಸೇರಿ ಟ್ಯುಟೋರಿಯಲ್ಸನ್ನು ಮುಂದುವರಿಸಲು ಆಗದಂತಾಯಿತು. ಹೀಗೆ ಟ್ಯುಟೋರಿಯಲ್ಸನ್ನು ನಿಲ್ಲಿಸಬೇಕಾಯಿತು. ಆದರೂ, ನಡೆದ ಎರಡೂವರೆ ವರ್ಷಗಳು ಬಹಳ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ನನ್ನ ಟ್ಯುಟೋರಿಯಲ್ಸ್ ಸಾಹಸ ಇಂದಿಗೂ ನೆನೆಯುವಂಥದು!

ಆಕಾಶವಾಣಿ

ಆಂಡವನ್ ಸ್ವಾಮಿಗಳ ರಾಮಾಯಣವನ್ನು ಕನ್ನಡಕ್ಕೆ ನಾನು ಮಾಡಿದ್ದು ಬಹಳ ಜನರ ಮೆಚ್ಚುಗೆ ಗಳಿಸಿತು. ಈವರೆಗೆ ಸುಮಾರು ಮೂರು ಬಾರಿ ಪ್ರಕಟಣೆಯನ್ನು ಕಂಡಿದೆ ಆ ಪುಸ್ತಕ! ಇದಾದನಂತರ ಶ್ರೀ ಸುದರ್ಶನ ಅಯ್ಯಂಗಾರರು, ('ಆಂಡವನ್ ರಾಮಾಯಣ'ವನ್ನು ಪ್ರಕಟಿಸಿದವರು) ನನಗೆ 'ಜವಹರಲಾಲ್ ನೆಹರೂ, ಲಾಲ್‌ಬಹದ್ದೂರ್ ಶಾಸ್ತ್ರಿ , ರಾಜೇಂದ್ರಪ್ರಸಾದ್, ಕಾಮರಾಜನಾಡಾರ್ ಮಹನೀಯರುಗಳ ಜೀವನ ಚರಿತ್ರೆ (ಬಯಾಗ್ರಫಿ)ಯನ್ನು ಬರೆದುಕೊಡಿ' ಎಂದರು. ನಾನು ವಿಷಯ ಸಂಗ್ರಹಿಸಿ ಅವನ್ನು ಬರೆದೆ. ಸಣ್ಣ ಸಣ್ಣ ಪುಸ್ತಕಗಳ ರೂಪದಲ್ಲಿ ಪ್ರಕಟಿಸಿದರು.

'ಸಂಯುಕ್ತ ಕರ್ನಾಟಕ'ದಲ್ಲಿ ಕೆಲಸ ಮಾಡುತ್ತಿದ್ದಾಗ ಒಮ್ಮೆ ನಾನು 'ಆಕಾಶವಾಣಿ'ಗೆ ಹೋದೆ. ನಾನು ಮೊದಲೇ ಹೇಳಿರುವಂತೆ ನಾಟಕಗಳಲ್ಲಿ ನನಗೆ ಬಹಳ ಆಸಕ್ತಿ. ರೇಡಿಯೋದಲ್ಲಿ ಬರುವ ಸಿಂಹ, ಹುಲಿಯ ಗರ್ಜನೆ, ಸುಂಟರಗಾಳಿಯ ಶಬ್ದ , ರಾತ್ರಿಯ ನೀರವತೆ, ಬೆಕ್ಕಿನ , ನಾಯಿಯ ಕೂಗುಗಳು ಇವೆಲ್ಲ ನನಗೆ 'ಇದು ಹೇಗೆ?'ಎನ್ನುವ ಕುತೂಹಲ. ನಾನು ನನ್ನ ಸೈಕಲ್ ನಿಲ್ಲಿಸಿ ಹೋಗುವಾಗ ಹೊರಬರುತ್ತಿದ್ದ ಒಬ್ಬ ಹೆಂಗಸು 'ಯಾರು ನೀವು? ಏನು ವಿಷಯ?' ಎಂದರು. ನಾನು 'ಈ ಆಕಾಶವಾಣಿಯಲ್ಲಿ ಹುಲಿ, ಸಿಂಹಗಳೆಲ್ಲ ಗರ್ಜಿಸುವುದು, ಹಕ್ಕಿಗಳು ಕೂಗುವುದು ಇವೆಲ್ಲಾ ಹೇಗೆ ಎಂದು ಕುತೂಹಲ. ಅದಕ್ಕೆ ನೋಡೋಣ ಎಂದು ಬಂದೆ' ಎಂದೆ. 'ಅದಕ್ಕೇ ಬಂದಿರಾ? ಆದರೆ ಈಗ ಬೆಳಗ್ಗೆ ಅವೆಲ್ಲಾ ಮಲಗಿರುತ್ತವೆ!' ಎಂದರು. ನಾನು ಏನೂ ಗೊತ್ತಿಲ್ಲದವನಂತೆ 'ಹೌದಾ?' ಎಂದೆ. 'ಅದು ಸರಿ, ನೀವು ಯಾರು?' ಎಂದರು. ಪುನಃ ನಾನು ನನ್ನ ಪರಿಚಯ ಹೇಳಿದೆ. ಆಗ ಪ್ರಜಾಮತದಲ್ಲಿ ನನ್ನ ಅನುವಾದಿತ ಕಾದಂಬರಿ 'ಅಲೆಯೊಸಗೆ' ಧಾರಾವಾಹಿಯಾಗಿ ಬರುತ್ತಿತ್ತು. 'ಓ... ವಾರವಾರವೂ ಉಸಿರು ಬಿಗಿ ಹಿಡಿದು ಅದಕ್ಕಾಗಿ ಕಾಯುವಂತೆ ಮಾಡುವವರು ನೀವೇ ಏನ್ರೀ?' ಎಂದರು ಬಹಳ ಮೆಚ್ಚುಗೆಯಿಂದ, 'ಹೌದು...' ಎಂದೆ ನಾನು ನಗುತ್ತ. ಈಗ ಒಂದು ರೀತಿಯ ಆತ್ಮೀಯ ಭಾವ ಅವರಲ್ಲಿ. ನನ್ನನ್ನು ಒಳಗೆ ಕರೆದೊಯ್ದು ರೇಡಿಯೋದ ರೆಕಾರ್ಡಿಂಗ್ ಸ್ಟುಡಿಯೋದ ಒಳಗೆಲ್ಲಾ ತೋರಿಸಿದರು. ನನಗೋ ಒಂದು ರೀತಿಯ ಹೊಸಲೋಕಕ್ಕೆ ಪ್ರವೇಶ ಮಾಡಿದ ಅನುಭವ. ನನಗೋ ರೇಡಿಯೋದಲ್ಲಿ ಮಾತನಾಡಬೇಕು, ನಾಟಕ ಮಾಡಬೇಕು ಎನ್ನುವ ಆಸೆ. "ನಾಟಕ ಏನಾದರೂ ಮಾಡಿದ್ದೀರೋ?" ಎಂದರು. "ಹೂಂ..." ಎಂದೆ. ವಿಕ್ಟರ್ ಹ್ಯೂಗೋನ 'ಲೇ ಮಿಸರಬಲ್ಸ್'ನ್ನು ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ನಾಟಕ ಮಾಡಿದ್ದೆ. ಆ ನಾಟಕ ನೋಡಿ ಕಣ್ಣಲ್ಲಿ ನೀರು ಹಾಕಿದ ಗ್ರಾಮದ ಮುಖ್ಯಸ್ಥ , ನಮಗೆ ಆ ಹಳ್ಳಿಯಲ್ಲಿನ ಒಂದು ಜಾಗವನ್ನೇ ಕೊಡುವುದಾಗಿ ಹೇಳಿದ್ದ!! ಅಷ್ಟು ಪ್ರಭಾವಶಾಲಿಯಾಗಿತ್ತು ಅದು. ಆದ್ದರಿಂದಲೇ ನಾನು ಧೈರ್ಯವಾಗಿ 'ಹೌದು' ಎಂದಿದ್ದೆ! ನಾನು ಬರಹಗಾರ ಎಂದು ತಿಳಿದು ಮೃದುವಾಗಿದ್ದ ಆಕೆ "ಸರಿ, ಬನ್ನಿ ಹಾಗಾದರೆ ಒಳಗೆ!" ಎಂದರು. ನಾನು ಅವರನ್ನನುಸರಿಸಿದೆ. ಅವರ ಹೆಸರು ಪುಟ್ಟತಾಯಮ್ಮ. ಸ್ವಲ್ಪ ಹಲ್ಲು ಮುಂದಾಗಿದ್ದುದರಿಂದ ಅವರ ಮುಖಭಾವವು ಸದಾ ನಗುತ್ತಿರುವಂತೆಯೇ ಕಾಣುತ್ತಿತ್ತು. ಸ್ವಭಾವತಃ

ಸ್ನೇಹಮಯಿ ಎಂದೇ ನನಗೆ ತಿಳಿಯಿತು. "ನಾಟಕ ಮಾಡಲು ಏನು ಮಾಡಬೇಕು?" ಎಂದೆ ನಾನು. "ಏನು ಮಾಡಬೇಕು ಎಂದರೆ ಅರ್ಜಿ ಹಾಕಿಕೊಳ್ಳಬೇಕು. ಆಡಿಷನ್‌ಗೆ ಕರೆಯುತ್ತಾರೆ. ಧ್ವನಿಪರೀಕ್ಷೆ ಆಗಬೇಕು. ಪಾಸಾದರೆ ಅವಕಾಶ ಕೊಡುತ್ತಾರೆ!" ಎಂದರು. "ಓ..." ಎಂದೆ. ಅಷ್ಟೆಲ್ಲಾ ಆಗುವ ಮಾತೇ ಎನ್ನುವ ನಿರಾಸೆ ನನ್ನದಾಗಿತ್ತು. "ಬನ್ನಿ ನೋಡೋಣ, ಇದೋ ಇಲ್ಲಿ ಒಂದು ನಾಟಕ ಸಂಭಾಷಣೆಯ ಭಾಗವಿದೆ. ಇದನ್ನು ಚೆನ್ನಾಗಿ ಓದಿ, ಅಭ್ಯಾಸ ಮಾಡಿಕೊಳ್ಳಿ. ೨೦ ನಿಮಿಷದಲ್ಲಿ ವಾಪಸ್ಸು ಬರುತ್ತೇನೆ ನಾನು" ಎಂದು ಒಳಗೆ ಹೋದರು. ಅದನ್ನು ತೆಗೆದು ನೋಡಿದರೆ ಅದು ಬಿ.ಪುಟ್ಟಸ್ವಾಮಯ್ಯನವರ 'ಟಿಪ್ಪುಸುಲ್ತಾನ್' ನಾಟಕದ ಒಂದು ಭಾಗ. ನಾನು ಈಗಾಗಲೇ ಮೂರ್‍ನಾಲ್ಕು ಬಾರಿ ಆ ನಾಟಕವನ್ನು ಆಡಿದ್ದೆನಾದ್ದರಿಂದ ಅಲ್ಲಿದ್ದ ಸಂಭಾಷಣೆಗಳು ನನಗೆ ಸಾಕಷ್ಟು ಪರಿಚಿತವಾಗಿದ್ದವು. ಎರಡು ನಿಮಿಷಗಳಲ್ಲಿ ಓದಿ ಪುಟ್ಟತಾಯಮ್ಮನವರಿಗಾಗಿ ಕಾಯುತ್ತಾ ಕುಳಿತೆ. ಒಳ ಹೋಗಿದ್ದ ಅವರು ಯಾವುದೋ ರೆಕಾರ್ಡಿಂಗ್ ಮುಗಿಸಿ, ೨೦ ನಿಮಿಷಗಳನಂತರ ಬಂದರು. ನಾನು ಸಂಭಾಷಣೆಯನ್ನು ನೋಡಿದ ನಂತರ ಸುಮ್ಮನೆ ಕುಳಿತಿರಲು ಬೇಸರವಾಗಿ ಅಲ್ಲಿ ಇದ್ದ ಫೋಟೋಗಳು, ಚಿತ್ರಗಳು, ಅಲ್ಲಿನ ವ್ಯವಸ್ಥೆ ಇವುಗಳನ್ನೆಲ್ಲ ನೋಡುತ್ತಾ ನಿಂತಿದ್ದೆ. "ಇದೇನ್ರಿ? ನೋಡಿಕೊಳ್ಳಿ ಎಂದರೆ ಇಲ್ಲಿ ಬಂದು ನಿಂತಿದ್ದೀರಿ?" ಎಂದರು. "ಅಲ್ಲೇನಿದೆ ಮೇಡಂ ನೋಡಲಿಕ್ಕೆ, ಆಯ್ತು ನೋಡಿ" ಎಂದೆ ನಾನು. "ಓ... ಬನ್ನಿ...ರೆಕಾರ್ಡಿಂಗ್ ರೂಮಿಗೆ ಹೋಗೋಣ. ಸ್ಕ್ರಿಪ್ಟ್ ತೆಗೆಯಿರಿ, ನೀವು ಟಿಪ್ಪು, ನಾನು ನಿಮ್ಮ ಹೆಂಡತಿ! ನಿಜವಾದ ಹೆಂಡತಿಯಲ್ಲಾ!! ನಾಟಕದ ಹೆಂಡತಿ" ಎಂದು ನಕ್ಕರು. "ಓ... ಗೊತ್ತು. ನಿಜವಾದ ಹೆಂಡತಿ ಮನೆಯಲ್ಲಿದ್ದಾಳೆ ಮೇಡಂ" ಎಂದೆ. ಆಡಿಷನ್ ಪ್ರಾರಂಭವಾಯಿತು. "ಖಾವಂದ, ನಮ್ಮ ಮಕ್ಕಳನ್ನು ಬ್ರಿಟಿಷರು ಹಿಡಿದುಕೊಂಡು ಹೋಗಿದ್ದಾರೆ... ಮತ್ತೆ ಹೇಗೆ ಕಾಣುವುದು?" ಎಂದು ದಪ್ಪದ ಧ್ವನಿಯಲ್ಲಿ ಓದಿ ನಿಲ್ಲಿಸಿದ ಅವರು, ನನಗೆ ಮುಂದುವರೆಸುವಂತೆ ಸನ್ನೆ ಮಾಡಿ ಹೇಳಿದರು. ನಾನು, "ಬೇಗಂ ಸಾಹಿಬಾ... ಬ್ರಿಟಿಷರು ಮಕ್ಕಳನ್ನು ಕರೆದುಕೊಂಡು ಹೋದ ಮೇಲೆ, ಅವರನ್ನು ನಾವು ನೋಡುವುದೆಲ್ಲಿ ಇನ್ನು? ಆ ಭಾಗ್ಯ ನಮಗಿಲ್ಲ... ನಾವು... ನಾವು ನಮ್ಮ ಮಕ್ಕಳನ್ನು ಮರೆತು ಬಿಡಬೇಕು" ಎಂದೆ ಗದ್ಗದಿತ ಸ್ವರದಿಂದ. ನಾನು ಹಾಗೆ ಹೇಳಿ ಮುಗಿಸಿದ ಕೂಡಲೆ, "ರೀ... ರೀ... ಏನ್ರೀ ನೀವು ಅಳೋದಕ್ಕೆ ಷುರು ಮಾಡಿದಿರಿ?" ಎಂದು ಕೇಳಿದರು ಪುಟ್ಟತಾಯಮ್ಮನವರು. ಈಗ ಅವರ ಧ್ವನಿಯಲ್ಲಿ ಬಹಳ ಮೆಚ್ಚುಗೆ ಇತ್ತು! "ಅಲ್ಲವೇ ಮತ್ತೆ ಮೇಡಂ, ಮಕ್ಕಳನ್ನು ಕಳೆದುಕೊಂಡವರು ಅಳುವುದು ಬೇಡವೇ!" ಎಂದೆ. ಪುಟ್ಟತಾಯಮ್ಮನವರು ಜೋರಾಗಿ ನಕ್ಕರು. ನಾನು ಆಕಾಶವಾಣಿ ಕಲಾವಿದನಾಗಲು ಒಂದು ರೀತಿಯಲ್ಲಿ ಆಯ್ಕೆಯಾಗಿದ್ದೆ!

'ಸಂಯುಕ್ತ ಕರ್ನಾಟಕ'ದಲ್ಲಿ, ಶ್ರಮವಹಿಸಿ ಮಾಡುತ್ತಿದ್ದ ಕೆಲಸದ ಪರಿಣಾಮವಾಗಿ, ನಾನು ರಾತ್ರಿಯ ಪಾಳಿಯ ಕೆಲಸದ ಮುಖ್ಯಸ್ಥನಾಗಿ ಬಡ್ತಿಯನ್ನೂ ಪಡೆದೆ. ಹಾಗೆಲ್ಲಾ ಸುಲಭದಲ್ಲಿ ಸಿಗುವ ಬಡ್ತಿಯಾಗಿರಲಿಲ್ಲ ಅದು. ಆದರೆ ವಿದ್ಯಾರ್ಹತೆ, ದಕ್ಷ ಕೆಲಸ, ಜಾಗರೂಕತೆ, ಕರಾರುವಾಕ್ಕು ಸಮಯ ನಿರ್ವಹಣೆ ಎಲ್ಲವೂ ಬೇಕಾಗಿದ್ದಿತು. ಇಲ್ಲಿ ಬಡ್ತಿಗೆ ಸಂಬಂಧಿಸಿದ ವಿದ್ಯಾರ್ಹತೆಯೊಂದನ್ನು ಹೊರತುಪಡಿಸಿ , ಮಿಕ್ಕೆಲ್ಲವೂ ನನ್ನ ಕೆಲಸದಲ್ಲಿ ಸ್ಪಷ್ಟವಾಗಿತ್ತು. ಅದಕ್ಕೇ ನಾನು ಬೇಗನೆ ಬಡ್ತಿಯನ್ನೂ ಪಡೆದೆ. ಬಿಡುವಿಲ್ಲದ ಕೆಲಸದ ನಡುವೆ, ಆಗಾಗ ಶ್ರೀಮತಿ ಪುಟ್ಟತಾಯಮ್ಮನವರೂ ನೆನಪಾಗುತ್ತಿದ್ದರು. ಅಂತೂ ಒಂದೆರಡು ವರ್ಷಗಳ 'ಬ್ರೇಕ್' ಬೇಕಾಗಿತ್ತು. ಕೆಲಸಕ್ಕಾಗಿ ಆಕಾಶವಾಣಿಗೆ ಅರ್ಜಿ ಹಾಕಿದೆ.

ಅಲ್ಲಿ ಶ್ರೀ ಎಚ್.ಕೆ. ರಂಗನಾಥ್‌ರವರು ನಾಟಕಗಳ ನಿರ್ದೇಶಕರಾಗಿದ್ದರು. ನಾನು ಅವರ ಸಹಾಯಕನಾಗಿ ಆಕಾಶವಾಣಿಗೆ ಪ್ರವೇಶಾವಕಾಶ ಪಡೆದೆ. ಆಗೀಗ ಮಕ್ಕಳ ನಾಟಕಗಳನ್ನೂ ನಿರ್ದೇಶಿಸಲು ಕಲಿತೆ. ಈ ಸಮಯದಲ್ಲಿ ಶ್ರೀ ಎಚ್.ಕೆ. ರಂಗನಾಥರಿಂದ ನಾನು ಕಲಿತದ್ದು ಬಹಳ! ನಾಟಕಗಳನ್ನು ಮಾಡುವಾಗ ಧ್ವನಿ ಬದಲಾವಣೆ, ಭಾವಗಳ ಏರಿಳಿತ , ಇರಬೇಕು ; ಭಾವನೆಗಳನ್ನು ಸರಿಯಾಗಿ ಹೊರಗೆಡಹಿ ಆ ಸಂದರ್ಭವನ್ನು ಶ್ರೋತೃವಿಗೆ ಚೆನ್ನಾಗಿ ಅರ್ಥವಾಗುವಂತೆ ಮಾಡಿಕೊಡುವಂತಿರಬೇಕು. ಶ್ರೀ ಎಚ್.ಕೆ. ರಂಗನಾಥರು ಯಾವುದನ್ನೂ ಸುಲಭಕ್ಕೆ ಒಪ್ಪುತ್ತಿರಲಿಲ್ಲ. ಅವರು ಆ ಸಂದರ್ಭಕ್ಕೆ ನಿರೀಕ್ಷಿಸಿದ್ದ ಭಾವ ಧ್ವನಿಯಲ್ಲಿ ಬಂದಾಗಲೇ ಮುಂದಕ್ಕೆ ಹೋಗುತ್ತಿದ್ದುದು, ಇಲ್ಲವಾದರೆ ಅದನ್ನು ಸರಿಯಾಗಿ ಅಭ್ಯಾಸ ಮಾಡಿಸಿ, ಅದು 'ಸರಿ' ಎನಿಸಿದ ಅನಂತರವೇ ಮುಂದಿನ ಮಾತು! ಅಷ್ಟು ದಕ್ಷತೆ, ನಿಖರವಾದ ಕಾರ್ಯರೀತಿ ಅವರದು. ಇದನ್ನೆಲ್ಲಾ ಬಹಳ ಸೂಕ್ಷ್ಮವಾಗಿ ಗಮನಿಸುತ್ತಿದ್ದ ನಾನು ಸಹ ನಿಧಾನವಾಗಿ ಎಲ್ಲವನ್ನೂ ಕಲಿತೆ. ಹಿಂದಿನಿಂದ ಇಂಗ್ಲಿಷ್ ಚಲನಚಿತ್ರಗಳನ್ನು ನೋಡುತ್ತಿದ್ದು ಅವರ ಪಾತ್ರ ನಿರ್ವಹಣೆಯನ್ನೂ, ಸಂಭಾಷಣಾ ಶೈಲಿಯನ್ನೂ ಬಹಳವಾಗಿ ಮೆಚ್ಚಿಕೊಳ್ಳುತ್ತಿದ್ದ ನಾನು ಅವರು ಪಾತ್ರಗಳಲ್ಲಿ ತೋರುತ್ತಿದ್ದ ತಾದಾತ್ಮ್ಯವನ್ನು ಕಂಡು ಬೆರಗಾಗುತ್ತಿದ್ದೆ. ಈಗ ಅದನ್ನೆಲ್ಲಾ ನಾನು ಸರಿಯಾಗಿ ಕನ್ನಡ ನಾಟಕಗಳಲ್ಲೇ ಬಳಸಿಕೊಳ್ಳುವ ಅವಕಾಶವನ್ನು ಪಡೆದಿದ್ದೆ. ಕೆಲವು ತಿಂಗಳನಂತರ ಸ್ವತಂತ್ರವಾಗಿ ನಾನೇ ನಾಟಕಗಳನ್ನು ನಿರ್ದೇಶಿಸತೊಡಗಿದಾಗ ಆದಷ್ಟೂ ಇವನ್ನೆಲ್ಲಾ ಗಮನಿಸಿ ನಾಟಕಗಳು ರೇಡಿಯೋದಲ್ಲಿ ಚೆನ್ನಾಗಿ ಮೂಡಿಬರುವಂತೆ ಮಾಡಲು ಶ್ರಮಿಸುತ್ತಿದ್ದೆ. ಮುಖ್ಯವಾಗಿ ಮಕ್ಕಳ ನಾಟಕಗಳ ವಿಷಯದಲ್ಲಿ ನನಗೆ ಆಸಕ್ತಿ ಹೆಚ್ಚಾಗಿದ್ದಿತು. ಒಮ್ಮೆ 'ಮಹಾವೀರ ಜಯಂತಿ'ಯ ಸಂದರ್ಭದಲ್ಲಿ ಮಕ್ಕಳಿಂದಲೇ 'ಬಾಹುಬಲಿ ವಿಜಯ'ನಾಟಕ ಮಾಡಿಸಿದಾಗ ಆ ನಾಟಕ ರೇಡಿಯೋದಲ್ಲಿ ಬಂದ ಇಪ್ಪತ್ತು ನಿಮಿಷಗಳಲ್ಲೇ ಮಾರ್ವಾಡಿಯೊಬ್ಬ

ಒಂದು ಬುಟ್ಟಿಯ ತುಂಬ ಹಣ್ಣುಗಳನ್ನು ತಂದು, ಒಳಗೆ ಬಂದವನೇ, 'ಈ ನಾಟಕ ಆಡಿಸಿದವರು ಯಾರು ?' ಎಂದು ಕೇಳಿ ತಿಳಿದುಕೊಂಡು, ನನ್ನ ಗುರುತು ಮಾಡಿಕೊಂಡು ಹತ್ತಿರ ಬಂದು ಕಾಲಿಗೆ ನಮಸ್ಕಾರ ಮಾಡಿದ. "ಏನು ಮಾಡಿದಿರಿ ನೀವು? ಅದು ಹೇಗೆ ಅಷ್ಟು ಚೆನ್ನಾಗಿ ಬಂತು ಆ ನಾಟಕ? ಅಣ್ಣ ತಮ್ಮಂದಿರ ನಡುವಿನ ಯುದ್ಧ , ಅಣ್ಣನ ಅಹಂಕಾರದ ಮೇಲೆ ತಮ್ಮನ ವಿಜಯವನ್ನು ಅದೆಷ್ಟು ಚೆನ್ನಾಗಿ ಮಕ್ಕಳ ಕೈಲಿ ಹೇಳಿಸಿದಿರಿ?" ಎಂದು ಬಡಬಡನೆ ಒಂದೇ ಉಸಿರಿಗೆ ಹೇಳಿ, ಬುಟ್ಟಿಯಲ್ಲಿದ್ದ ಹಣ್ಣುಗಳನ್ನೆಲ್ಲಾ ಅಲ್ಲಿದ್ದ ಮಕ್ಕಳಿಗೆ ಹಂಚಿದ. ಅವನ ಸಂತೋಷ ನೋಡಿ ನನಗೆ ನನ್ನ ಶ್ರಮದ ಸಾರ್ಥಕವಾದ ತೃಪ್ತಿಯಾಯಿತು.

ಆಕಾಶವಾಣಿಯ ಕೆಲಸಗಳ ಹೊರೆ ಸಾಕಷ್ಟಿದ್ದಿತು. ಸುಪ್ರಸಿದ್ಧ ಸಂಗೀತಗಾರ ಶ್ರೀ ಅರಿಯಾಕುಡಿ ರಾಮಾನುಜ ಅಯ್ಯಂಗಾರರು ನಿಧನರಾದಾಗ, ಅವರ ಬಗ್ಗೆ ಕೆಲವು ಮಾತುಗಳ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ರೇಡಿಯೋದಲ್ಲಿ ಪ್ರಸಾರ ಮಾಡಬೇಕಾಗಿದ್ದಿತು. ಶ್ರೀ ಮಾಸ್ತಿಯವರ ಮಗಳು ಶ್ರೀಮತಿ ವಸಂತಶ್ರೀ ಅವರು ಕಾರ್ಯಕ್ರಮ ನಿರ್ದೇಶಕರಾಗಿದ್ದರು. ಅವರು ನನಗೆ ಈ ಶ್ರದ್ಧಾಂಜಲಿಯನ್ನು ಬರೆದು ತರಲು ಹೇಳಿದರು. ಈ ಶ್ರದ್ಧಾಂಜಲಿಯನ್ನು ಬರೆದುಕೊಂಡು ಮನೆಯಿಂದ ಆಕಾಶವಾಣಿಗೆ ನಾನು ಹೋಗಬೇಕಾಗಿದ್ದಿತು. ಆ ದಿನ ಭಾರೀ ಮಳೆ. ಪ್ರಳಯವೇ ಆಗಿದೆಯೋ ಎನ್ನುವಂತೆ ಬೆಂಗಳೂರಿನ ಬೀದಿಗಳಲ್ಲಿ ನೀರು 'ಧೋ' ಎಂದು ಹರಿಯುತ್ತಿತ್ತು. ಏನೇ ಆದರೂ ನಾನು ತಡ ಮಾಡುವಂತಿರಲಿಲ್ಲ. ಕಾರ್ಯಕ್ರಮ ಐದು ಘಂಟೆಗೆ ಪ್ರಸಾರವಾಗಬೇಕಾಗಿತ್ತು. ಧೈರ್ಯವಹಿಸಿ ಲೇಖನವನ್ನು ತೆಗೆದುಕೊಂಡು ಸ್ಕೂಟರಿನಲ್ಲಿ ಆ ಮಳೆಯಲ್ಲೇ ಆಕಾಶವಾಣಿಯತ್ತ ಹೊರಟೆ. ಆಕಾಶವಾಣಿ ತಲುಪಿದಾಗ ವಸಂತಶ್ರೀಯವರು ಮನೆಗೆ ಹೊರಟಿದ್ದರು. ನನ್ನನ್ನು ಕಂಡ ಕೂಡಲೇ, "ಮತ್ತೂರರೇ, ನೀವು ಹೇಗೂ ಬಂದಿದೀರಲ್ಲಾ! ಕಾರ್ಯಕ್ರಮ ಐದು ಘಂಟೆಗೆ ಪ್ರಸಾರವಾಗಬೇಕಿದೆ. ನೀವೇ ಆ ಶ್ರದ್ಧಾಂಜಲಿಯನ್ನು ಓದಿಬಿಡಿ. ನಾನು ಈಗ ಮನೆಗೆ ಹೊರಡುತ್ತಿದ್ದೇನೆ" ಎಂದು ಹೇಳಿ ಹೊರಟರು. ಆ ದಿನ ಶ್ರೀ ಅರಿಯಾ ಕುಡಿಯವರ ನಿಧನಕ್ಕೆ ಶ್ರದ್ಧಾಂಜಲಿಯನ್ನು ರೇಡಿಯೋ ಮೂಲಕ ನಾನೇ ಅರ್ಪಿಸಿದೆ.

'ಸಂಯುಕ್ತ ಕರ್ನಾಟಕ'ಕ್ಕೆವಾಪಸ್ಸು

ದಿನಕಳೆದಂತೆ ಕೆಲಸದ ಜವಾಬ್ದಾರಿ ಹೆಚ್ಚುತ್ತಿತ್ತು. ಒಮ್ಮೆ ಶ್ರೀ ಆರ್.ಆರ್. ದಿವಾಕರರ ಭಾಷಣವನ್ನು ರೆಕಾರ್ಡಿಂಗ್ ಮಾಡುವ ಕೆಲಸ ನನ್ನ ಪಾಲಿಗಿತ್ತು. ಶ್ರೀ ದಿವಾಕರರು ನನಗೇನೂ ಹೊಸಬ ರಾಗಿರಲಿಲ್ಲ. ಅವರ ಭಾಷಣವನ್ನು ನಾನು ರೆಕಾರ್ಡ್ ಮಾಡಿದನಂತರ, ನಾವಿಬ್ಬರೂ ಮಾತಿಗಾರಂಭಿಸಿದೆವು. ಶ್ರೀ ದಿವಾಕರರು "ಏನ್ರೀ ಮತ್ತೂರರೇ, ಹ್ಯಾಂಗಿದ್ದೀರಿ ಈಗ ? ಕೆಲಸ ಆರಾಮ ಇದೆಯೇನೂ?" ಎಂದರು. ನಾನು, "ಕೆಲಸವೇನೋ ಹೆಚ್ಚಾಗಿಯೇ ಇದೆ ಸರ್, ಆದರೆ ಆರಾಮಿಲ್ಲ ನೋಡಿ" ಎಂದೆ. "ಹಾಂಗಿದ್ರೆ ಬರ್ರಲಾ ವಾಪಸ್ಸು 'ಸಂಯುಕ್ತ ಕರ್ನಾಟಕ'ಕ್ಕೆ ! ಛಲೋ ಆಗ್ತದೆ" ಎಂದರು. ಅವರ ಈ ಪ್ರಸ್ತಾಪ ನನಗೆ ಬಹಳ ಅನಿರೀಕ್ಷಿತವಾಗಿದ್ದಿತು. ಏನೂ ಹೇಳಲು ತೋರಲಿಲ್ಲ. ಆದರೂ ಸಾವರಿಸಿಕೊಂಡು "ಈಗ ಹೇಗೆ ಸಾರ್? ನಾನು ಅಲ್ಲಿ ಬಿಟ್ಟು ಈಗಾಗಲೇ ಎರಡು ವರ್ಷಗಳಾಗಿವೆ. ಈಗ ನಾ ಮತ್ತೆ ವಾಪಸು ಬಂದರೆ ಅಲ್ಲಿ ನನಗೆ ಸೀನಿಯಾರಿಟಿ ಹೋಗುತ್ತದೆ. ಆಗ ಕೆಲಸ ನಿರ್ವಹಿಸಲು ಕಷ್ಟ ಎನಿಸುತ್ತದೆ." ಎಂದೆ. ನನ್ನ ಮನಸ್ಸಿನಲ್ಲಿದ್ದುದನ್ನು ನೇರವಾಗಿ ಅವರಿಗೆ ಹೇಳಿದ್ದೆ. ಪತ್ರಿಕೆಗೆ ವಾಪಸಾಗಬೇಕೆಂದು ನನಗೇ ಇಷ್ಟವಿದ್ದರೂ ಈ ಅಂಶ ನನ್ನನ್ನು ಬಾಧಿಸಿತ್ತು. ನಾನು ಹೀಗೆಂದ ಕೂಡಲೇ ಶ್ರೀ ದಿವಾಕರರು "ಬರ್ರಲಾ ನೋಡುವ, ಏನಾದರೂ ಸರೀ ಏರ್ಪಾಡು ಮಾಡುವಾ" ಎಂದರು, ಭರವಸೆ ಕೊಡುವವರಂತೆ. ಆ ಕ್ಷಣದಲ್ಲೇ ನಾನೂ ನಿರ್ಧರಿಸಿಯಾಗಿತ್ತು.

ಹೀಗೆ ಆಕಾಶವಾಣಿಯಲ್ಲಿ ಎರಡು ವರ್ಷಗಳು ಕಳೆದ ನಂತರ ಮತ್ತೆ ನಾನು 'ಸಂಯುಕ್ತ ಕರ್ನಾಟಕ' ಪತ್ರಿಕೆಗೆ ಅದೇ ಹುದ್ದೆಗೆ ವಾಪಸ್ಸಾದೆ.

ಸಂಯುಕ್ತ ಕರ್ನಾಟಕದಲ್ಲಿ ಕೆಲಸ ಮುಂದುವರಿಸುತ್ತಿದ್ದಂತೆ, ಈಗ ಬೆಂಗಳೂರಿನಲ್ಲಿಯೇ ನನ್ನ ವಾಸ್ತವ್ಯ ಇದ್ದು ಕುಮಾರವ್ಯಾಸ ಭಾರತದ ವಾಚನ-ವ್ಯಾಖ್ಯಾನ ಕಾರ್ಯಕ್ರಮಗಳನ್ನು ಎಡೆಬಿಡದೆ ಅಲ್ಲಲ್ಲಿ ಕೊಡುವುದೂ ಪ್ರಾರಂಭವಾಯಿತು.

ಹೀಗೆ 'ಸಂಯುಕ್ತ ಕರ್ನಾಟಕ'ದಲ್ಲಿ ದಿನಗಳು ಸಾಗಿ ಸುಮಾರು ಹನ್ನೆರಡು ವರ್ಷಗಳು ಕಳೆದವು. ಮಧ್ಯದಲ್ಲಿ ಎರಡು ವರ್ಷ ಆಕಾಶವಾಣಿಗೆ ಸೇರಿ, ಅಲ್ಲಿ ಎಲ್ಲಾ ವಿಭಾಗಗಳಲ್ಲಿ ಕೆಲಸ ಮಾಡಿದೆ. ಮಕ್ಕಳ ಕಾರ್ಯಕ್ರಮ, ಮಹಿಳೆಯರಿಗಾಗಿ ಕಾರ್ಯಕ್ರಮ, ನಾಟಕಗಳು, ವೀಕ್ಷಕ ವಿವರಣೆ ಹೇಳುವುದು; ದಸರೆ, ಮಹಾಮಸ್ತಕಾಭಿಷೇಕ, ಪ್ರಧಾನಿ ನೆಹರೂರವರು ದಿವಂಗತರಾದಾಗ ಅವರ ಚಿತಾಭಸ್ಮವನ್ನು ಮೈಸೂರಿನ ಹತ್ತಿರದ ಪಶ್ಚಿಮವಾಹಿನಿಯಲ್ಲಿ ವಿಲೀನಮಾಡಿದಾಗ, ಇತ್ಯಾದಿ ಕಾರ್ಯಕ್ರಮಗಳ ವೀಕ್ಷಕ ವಿವರಣೆ ಕೊಟ್ಟು ರೇಡಿಯೋ ವರದಿ ಮಾಡುವುದು ಇತ್ಯಾದಿ ಹಲವು ಹತ್ತಾರು ಕೆಲಸಗಳನ್ನು ಆಕಾಶವಾಣಿ ಕಲಾವಿದನೆನಿಸಿ ಉತ್ಸಾಹದಿಂದ ಮಾಡಿದೆ. ಆಗ ನಾವು ಬೇರೆ ಕಡೆ ಕೆಲಸ ಮಾಡುತ್ತಿದ್ದರೂ ಕಲಾವಿದರಿಗೆ ಕಾಂಟ್ರಾಕ್ಟ್ ಆಧಾರದ ಮೇಲೆ ಈ ರೀತಿಯ ಕೆಲಸಗಳನ್ನು ತೊಡಗಿಸಿಕೊಳ್ಳಲು ಅವಕಾಶವಿರುತ್ತಿತ್ತು. ಆ ಎರಡು ವರ್ಷಗಳ ಅನುಭವವೂ ಅಷ್ಟೆ . ದಿನವಿಡೀ ಒಂದು ನಿಮಿಷವೂ ಬಿಡುವಿಲ್ಲದಂತೆ ದುಡಿಯುವುದರ ಜತೆಗೆ ಅಲ್ಲಿ ಕಲಿತದ್ದು ಅಷ್ಟೇ ಬಹಳವಾಗಿತ್ತು.

೧೮. ವಿದ್ಯಾಭವನಕ್ಕೆ ಪ್ರವೇಶ

ಭಾರತೀಯ ವಿದ್ಯಾಭವನಕ್ಕೆ

ಗಾಂಧೀ ಶತಾಬ್ದಿಯು ಮುಗಿದು ಏಳು-ಎಂಟು ತಿಂಗಳೂ ಕಳೆದಿಲ್ಲ. ೧೯೭೦ರ ಜೂನ್ ಆರನೇ ತಾರೀಖು ರಾಜಾಜೀ ನಗರದಲ್ಲಿ ಕುಮಾರವ್ಯಾಸ ಭಾರತದ ವಾಚನ-ವ್ಯಾಖ್ಯಾನ ನಡೆಯುತ್ತಿತ್ತು. ಪ್ರವಚನ ಮುಗಿದ ಕೂಡಲೇ, ವಿದ್ಯಾಭವನದ ಬೆಂಗಳೂರು ಕೇಂದ್ರದ ಗೌರವ ಕಾರ್ಯದರ್ಶಿ ಶ್ರೀ ಕೃಷ್ಣಮೂರ್ತಿಯವರು ಭವನದ ಡೈರೆಕ್ಟರ್ ಜನರಲ್ ಶ್ರೀ ರಾಮಕೃಷ್ಣನ್ ಅವರೊಂದಿಗೆ ಬಂದು ಅಭಿನಂದಿಸಿದರು. ಶ್ರೀ ರಾಮಕೃಷ್ಣನ್‌ರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದೆ. ಬೆನ್ನು ತಡವಿ "ಬಹಳ ಚೆನ್ನಾಗಿ ವ್ಯಾಖ್ಯಾನ ಮಾಡುತ್ತೀರಿ... ಎರಡು ದಿನ ಸರಕಾರೀ ಅತಿಥಿ ಗೃಹದಲ್ಲಿ ಇರುತ್ತೇನೆ. ಬಿಡುವು ಮಾಡಿಕೊಂಡು ಬನ್ನಿ!" ಎಂದರು. ಪುಳಕಿತನಾದೆ. ಮರುದಿನ ಬೆಳಗ್ಗೆ ಹೋಗಿ ಕಂಡೆ.

ಹಿಂದಿನ ದಿನದ ಕಾರ್ಯಕ್ರಮದ ಯಶಸ್ಸಿನ ಬಗ್ಗೆ ಮಾತನಾಡಿದ ಶ್ರೀ ರಾಮಕೃಷ್ಣನ್‌ಜೀ ನನ್ನ ಬಗೆಗೆ ವಿಚಾರಿಸಿದರು. "ನೀವು ಏನು ಕೆಲಸ ಮಾಡುತ್ತಿದ್ದೀರಿ?" ಎಂದರು. "'ಸಂಯುಕ್ತ ಕರ್ನಾಟಕ'ದಲ್ಲಿ ಉಪಸಂಪಾದಕನಾಗಿದ್ದೇನೆ" ಎಂದೆ. "ನೀವೇಕೆ ವಿದ್ಯಾಭವನಕ್ಕೆ ಸೇರಿಕೊಳ್ಳಬಾರದು?" ಎಂದು ಕೇಳಿದರು. ನಾನು ತಬ್ಬಿಬ್ಬಾದೆ. ನಮ್ಮ ಪತ್ರಿಕೆಯ ಆವರಣದಲ್ಲೇ ಇದ್ದ ಭಾರತೀಯ ವಿದ್ಯಾಭವನದ ಬಗೆಗೆ ನಾನು ಹೆಚ್ಚಾಗಿ ತಿಳಿದುಕೊಂಡಿರಲಿಲ್ಲ. ಭಾರತೀಯ ಸಂಸ್ಕೃತಿಯ ಪ್ರಚಾರ ಕಾರ್ಯದಲ್ಲಿ ತೊಡಗಿರುವ ವಿದ್ಯಾಭವನದ ಕೆಲಸ ಕಾರ್ಯಗಳ ಪರಿಚಯ ಅಷ್ಟಾಗಿ ನನಗೆ ಇರಲಿಲ್ಲ. ಅದಕ್ಕೆ ಅಲ್ಲಿ ಕೆಲಸ ಮಾಡುವುದಾದರೂ ಯಾವ ಹುದ್ದೆಯಲ್ಲಿ ಎನ್ನುವುದು ನನಗೆ ಗೊತ್ತಾಗಬೇಕಿದ್ದಿತು. ಅದಕ್ಕೆ "ವಿದ್ಯಾಭವನ ಸೇರುವುದಾದರೂ ಹೇಗೆ?" ಎಂದು ಕೇಳಿದೆ. "ಬೆಂಗಳೂರು ಕೇಂದ್ರದ ರೆಜಿಸ್ಟ್ರಾರ್ ಆಗಿ" ಎಂದರು. ಪತ್ರಿಕೆಯಲ್ಲಿ ಬರೆದುಕೊಂಡು ಪ್ರವಚನದಲ್ಲಿ ತೊಡಗಿ ಕೊಂಡಿದ್ದ ನಾನು ಆಡಳಿತ ಕಾರ್ಯದಲ್ಲಿ ಪಳಗಿರಲಿಲ್ಲ. ಅದಕ್ಕೆ "ಆಡಳಿತ ಕಾರ್ಯದಲ್ಲಿ ಅನುಭವವಿಲ್ಲ. ಕ್ಷಮಿಸಿರಿ!" ಎಂದೆ. "ಸಂಸ್ಕೃತಿ-ಸಾಹಿತ್ಯ-ಪ್ರವಚನ ಇವುಗಳಲ್ಲಿ ಅನುಭವ ಇರುವವರು ನಮಗೆ ಬೇಕಾಗಿದೆ. ನಿಮ್ಮಂಥವರು ಬಂದರೆ ಚೆನ್ನಾಗಿರುತ್ತದೆ" ಎಂದರು. "ದಿವಾಕರರಿಗೆ ನನ್ನ ಮೇಲೆ ಬಹಳ ಪ್ರೀತಿ, ವಾತ್ಸಲ್ಯ. ಒಮ್ಮೆ ಪತ್ರಿಕೆಯಿಂದ ಹೊರ ಹೋಗಿದ್ದವನನ್ನು ಮತ್ತೊಮ್ಮೆ ಅಭಿಮಾನದಿಂದ ಬರಮಾಡಿಕೊಂಡಿದ್ದಾರೆ ಅವರು. ಈಗ ಬಿಡುವುದಕ್ಕೆ ಕಷ್ಟ..." ಎಂದೆ. "ಅವರು ವಿದ್ಯಾಭವನದ ಸಂಪಾದಕೀಯದಲ್ಲಿದ್ದಾರೆ. ನಾನು ಅವರಿಗೆ ಹೇಳಿ ಒಪ್ಪಿಸುತ್ತೇನೆ" ಎಂದರು. ತಮ್ಮ ಜತೆಯಲ್ಲಿ ಸದಾಶಿವ ನಗರದಲ್ಲಿರುವ ಶ್ರೀ ದಿವಾಕರರ ಮನೆಗೆ ಕರೆದುಕೊಂಡು ಹೋದರು. ತಾವು ಕಾರಿನಿಂದಿಳಿದು "ಕಾರಿನಲ್ಲೇ ಇರಿ, ಕರೆಯುತ್ತೇನೆ" ಎಂದು ಒಳಗೆ ಹೋದರು. ಸ್ವಲ್ಪ ಹೊತ್ತಾದ ನಂತರ ಒಳಕ್ಕೆ ಕರೆದರು.

ಶ್ರೀ ರಾಮಕೃಷ್ಣನ್‌ಜೀ ಅವರಿಂದ ವಿಷಯ ತಿಳಿದಿದ್ದ ಶ್ರೀ ದಿವಾಕರರು ಏನೂ ಮಾತಾಡದೆ ಸುಮ್ಮನೆ ಕುಳಿತಿದ್ದರು. ಅಷ್ಟರಲ್ಲೇ ಒಳಗೆ ಹೋದ ನನ್ನನ್ನೊಮ್ಮೆ ದೀರ್ಘವಾಗಿ ನೋಡಿದರು. ಅವರ ಮೌನ ನನ್ನ ಎದೆಬಡಿತ ಹೆಚ್ಚಿಸಿತು. ನಾನು ಅವರತ್ತ ಕುತೂಹಲ ಬೆರಸಿದ ವಿನಯದ ದೃಷ್ಟಿಬೀರಿ ಸುಮ್ಮನೆ ನಿಂತೆ. ಕ್ಷಣ ಕಳೆದನಂತರ "ಮತ್ತೂರರೇ! ನಮ್ಮ ಮಗಳಿಗೆ ಛಲೋ ವರ ಸಿಕ್ಯಾನೆ. ನನ್ನ ಮಗಳನ್ನು ಕೊಡುದಿಲ್ಲ ಅಂಬೋದು ಹ್ಯಾಂಗೇ?" ಎಂದು ನನ್ನನ್ನು ಕೇಳಿದರು. ಮೂಕನಾಗಿ ನಿಂತೆ. ಅವರ ದೃಷ್ಟಿಯಲ್ಲಿ ನಾನು ಅವರ 'ಮಗಳಾ'ಗಿದ್ದೆ! ವಿದ್ಯಾಭವನದ ಕೆಲಸ ನನಗೆ ಬಂದ 'ವರ'ನಾಗಿತ್ತು! ಅವರ ವಾತ್ಸಲ್ಯ ಕಂಡ ನನ್ನ ಕಂಗಳಲ್ಲಿ ನೀರು. ಶ್ರೀ ದಿವಾಕರರಾಯರಿಗೆ, ಶ್ರೀರಾಮಕೃಷ್ಣನ್‌ಜೀಗೆ ಪಾದಮುಟ್ಟಿ ನಮಿಸಿದೆ. ಮನೆಗೆ ಬಂದು ಅಣ್ಣ ಶಂಕರಮೂರ್ತಿಯವರಿಗೆ, ಅತ್ತಿಗೆ ಸೀತಾಲಕ್ಷ್ಮಿಯವರಿಗೆ ತಿಳಿಸಿದೆ. ಎಲ್ಲರಿಗೂ ಸಂತೋಷವಾಯಿತು.

ಜೂನ್ ೧೦, ೧೯೭೦ ಶ್ರೀ ದಿವಾಕರರಾಯರು 'ಸಂಯುಕ್ತ ಕರ್ನಾಟಕ'ದಲ್ಲಿ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಿದರು. ನನ್ನನ್ನು ಹರಸಿ ಭಾರತೀಯ ವಿದ್ಯಾಭವನದ ಶ್ರೀ ರಾಮಕೃಷ್ಣನ್‌ಜೀಗೆ ಒಪ್ಪಿಸಿದರು. ಶ್ರೀ ಕೌಜಲಗಿಯವರು, ಶ್ರೀ ಶಾಮರಾಯರು "ಇಲ್ಲಿಂದ ಹೋದರೂ ಪತ್ರಿಕೆಗೆ ಬರೆಯುತ್ತ ಇರಬೇಕು" ಎಂದು ಹೇಳಿ ಹರಸಿದರು. ಅಂದಿನಿಂದ ನನ್ನ ಬಾಳುವೆಯು ಒಂದು ಹೊಸ ತಿರುವನ್ನು ಕಂಡಿತು.

ಬೆಂಗಳೂರು ಕೇಂದ್ರದ ಭಾರತೀಯ ವಿದ್ಯಾಭವನದ ರೆಜಿಸ್ಟ್ರಾರ್ ಆಗಿ ಕೆಲಸ ವಹಿಸಿಕೊಂಡಾಗಿನಿಂದ ಭವನದ ಪ್ರತಿಯೊಂದು ಕೆಲಸವೂ ಹೇಗೆ ಸಾಗುತ್ತದೆ , ಭವನದ ಕಾರ್ಯಚಟುವಟಿಕೆಯ ಹರಹು ಎಂಥದು ಎಂದು ಗಮನಿಸಿ , ಬೆಂಗಳೂರಲ್ಲದೆ ಇತರ ಕೇಂದ್ರಗಳು ನಿರ್ವಹಿಸುತ್ತಿರುವ ಅನೇಕ ಜವಾಬ್ದಾರಿಯುತ ಕಾರ್ಯಕ್ರಮಗಳು, ಭವನ ನಡೆಸುತ್ತಿರುವ ವಸತಿ ಶಾಲೆಗಳು, ಭವನದ ಆಶ್ರಯದಲ್ಲಿ 'ಸಂಸ್ಕೃತಿ ಪ್ರಚಾರ' ಎನ್ನುವುದರ ಮೂಲಕ ನಡೆಯುತ್ತಿದ್ದ ಲಲಿತ ಕಲೆಗಳ ತರಗತಿಗಳು, ಹೀಗೆ ಚಿತ್ರಗೀತೆ, ನೃತ್ಯ, ಸಂಗೀತ, ನಾಟಕ ಇತರ ವಿಷಯಗಳ ತರಗತಿಗಳನ್ನು ನಡೆಸಿ ಈ ಕಲೆಗಳಿಗೆ ಭವನವು ಕೊಡುತ್ತಿದ್ದ ಪ್ರೋತ್ಸಾಹ ಈ ಎಲ್ಲವೂ ನನ್ನನ್ನು ಒಂದು ರೀತಿಯ ಬೆರಗಿನ ಲೋಕಕ್ಕೆ ಕೊಂಡೊಯ್ದಿದ್ದವು! ದೂರದಿಂದ, ಹೊರಗೆ ನಿಂತು ಕಾಣುತ್ತಿದ್ದ , ಭವನ , ಬೆಂಗಳೂರಿನ ಆಗಿನ ಕಟ್ಟಡದಷ್ಟೇ ಚಿಕ್ಕದೆನಿಸಿದ್ದು , ಈಗ ಅದರ ಒಳಹೊಕ್ಕ ಮೇಲೆ ಸಮುದ್ರದಷ್ಟು ಆಳ, ವಿಶಾಲವಾಗಿ ಕಂಡುಬಂದಿತು. ಈ ಸಾಗರದಲ್ಲಿ ಒಂದು ಹನಿಯಾಗಿ ಸೇರಿರುವ ನನ್ನ ಪಾತ್ರ ಏನು? ನನಗೇ ಇನ್ನೂ ಸ್ಪಷ್ಟವಾಗಿ ತಿಳಿದಿರಲಿಲ್ಲ... ಆದರೂ

ಒಟ್ಟಾರೆ ಎಂಥದೋ ಒಂದು ಸಾಹಸಕ್ಕೆ ಒಂದು ಭೂಮಿಕೆಯನ್ನು ದೇವರು ಸಿದ್ಧಪಡಿಸಿದ್ದನೆನ್ನುವುದು ಬಹುಶಃ ಆ ಗಳಿಗೆಯಲ್ಲಿ ಅವನಿಗೆ ಮಾತ್ರ ತಿಳಿದಿದ್ದ ಸತ್ಯವಾಗಿತ್ತು...! ಯಾವ ಸಾಹಸ ? ಎಂಥ ಭೂಮಿಕೆ...??

ಲಂಡನ್‌ಗೆ

೧೯೭೨ ಜೂನ್ ೪-೫ನೇ ತಾರೀಖು ಬಾಂಬೆಯಿಂದ ಒಂದು ಡೆಲಿಗೇಷನ್ ಲಂಡನ್ನಿಗೆ ಹೋಯಿತು. ಆ ಡೆಲಿಗೇಷನ್ನಿನಲ್ಲಿ ನಮ್ಮ ಕಾರ್ಯಕಾರಿ ಸಮಿತಿಯ ಮುಖ್ಯಸ್ಥರಾದ ಶ್ರೀ ರಾಮಕೃಷ್ಣನ್‌ರವರು ಹಾಗೂ ಅಂದಿನ ಕ್ಯಾಬಿನೆಟ್ ಮಂತ್ರಿಗಳಾಗಿದ್ದು, ಭಾರತೀಯ ವಿದ್ಯಾಭವನದ ಉಪಾಧ್ಯಕ್ಷರೂ ಆಗಿದ್ದ (ಅನಂತರ ಇವರು ಅಧ್ಯಕ್ಷರೂ ಆದರು) ಶ್ರೀ ಜಯಶುಖ್‌ಲಾಲ್ ಹಾಥಿಯವರು ಇದ್ದರು. ಇವರ ಜತೆ ಬೆಂಗಳೂರಿನ ವಿಜಯಾಬ್ಯಾಂಕ್ ಛೇರ್ಮನ್ ಶ್ರೀ ಸುಂದರ ರಾಮಶೆಟ್ಟಿ, ಡಾ|| ಕರಣ್‌ಸಿಂಗ್, ಕಲ್ಕತ್ತದ ಪ್ರಸಿದ್ಧ ವಾಣಿಜ್ಯ ಉದ್ಯಮಿ ಶ್ರಿ ಗಿರಿಧಾರಿಲಾಲ್ ಮೆಹತಾ, ವಿದ್ಯಾಭವನದ ರೆಜಿಸ್ಟ್ರಾರ್ ಶ್ರೀ ಮಾಧವನ್ ಇವರು ಇದ್ದರು. ನಾಲ್ಕು ದಿನಗಳನಂತರ ಡೆಲಿಗೇಷನ್ ವಾಪಸಾಯಿತು. ಜೂನ್ ೯ರ ರಾತ್ರಿ ನನ್ನ ಮನೆ ಫೋನ್ ಟ್ರೀ...ಣ್ ಎಂದು ಕೂಗಿತು. ಹೌದು, ಫೋನು ಕೂಗುವುದರಲ್ಲಿ ಅಂತಹ ವಿಶೇಷವೇನು? ಎನ್ನಿಸಿದ್ದೀತು ನನ್ನ ಓದುಗರಿಗೆ! ನಿಜಕ್ಕೂ ಆ ದಿನದ ಫೋನಿನ ಕರೆಯಲ್ಲಿ ವಿಶೇಷವಿತ್ತು! ಅತ್ತಲಿಂದ ರಾಮಕೃಷ್ಣನ್‌ರವರು "ನಾವು ನೆನ್ನೆ ಲಂಡನ್ನಿನಿಂದ ಬಂದೆವು ಮತ್ತೂರ್‌ಜೀ" ಎಂದರು. "ತಿಳಿಯಿತು ಸಾರ್, ನಾನು ಸುದ್ದಿ ಓದಿದೆ" ಎಂದೆ. ಅವರ ಮಾತು ಮುಂದುವರೆಯಿತು. ಅಲ್ಲಿ ಹೈಕಮಿಷನ್‌ನಲ್ಲಿ ಮೊದಲ ಸುತ್ತಿನ ಮಾತುಕತೆ ನಡೆದ ಮೇಲೆ ವಿದ್ಯಾಭವನದ ಕೇಂದ್ರವೊಂದನ್ನು ಇಲ್ಲಿ ತರಬೇಕು, ಪ್ರಾರಂಭಿಸಬೇಕು ಎಂದು ನಿಶ್ಚಯ ಮಾಡಿದ್ದರು. ಇದು ನಮಗೆಲ್ಲ ಹೆಮ್ಮೆ ತರುವ ವಿಷಯ (ನಿಜಕ್ಕೂ ಈ ವಿಷಯ ಕೇಳಿ ಆ ದಿನ ನಾನೂ ಬಹಳ ಹೆಮ್ಮೆಪಟ್ಟಿದ್ದೆ... ಲಂಡನ್ನಿನಲ್ಲಿ ಭವನದ ಪ್ರಾರಂಭೋತ್ಸವ ಆಗಲಿದೆ ಎಂದು)! ಇದು ನಮ್ಮಲ್ಲಿ ಸಾಗರ ದಿಂದಾಚೆಯಲ್ಲಿ ಪ್ರಾರಂಭ ಆಗುತ್ತಿರುವ ಮೊಟ್ಟ ಮೊದಲ ಕೇಂದ್ರ. ಇದು ಮುನ್ಷಿಯವರ ಬಹಳ ದೊಡ್ಡ ಕನಸೂ ಆಗಿತ್ತು. (ಶ್ರೀ ಮುನ್ಷಿಯವರು ನಿಧನರಾದಾಗ ನಾನು ಬೆಂಗಳೂರಿನಿಂದ ಬಾಂಬೆಗೆ ಹೋಗಿದ್ದೆ, ಆಗಲೇ ಶ್ರೀ ರಾಮಕೃಷ್ಣನ್ ಈ ಮಾತನ್ನು ನನಗೆ ಹೇಳಿದ್ದರು... ಅದು ೧೯೭೧ರ ಪ್ರಾರಂಭದಲ್ಲಿ.) "ಈಗ ಕೃಷ್ಣಮೂರ್ತಿ, ನೀವು ಸಿದ್ಧತೆಮಾಡಿಕೊಳ್ಳಬೇಕಾಗಿದೆ. ನೀವು ಲಂಡನ್ನಿನಲ್ಲಿ ತೆರೆಯಲಿರುವ ಭವನದ ಕೇಂದ್ರದ ರೆಜಿಸ್ಟ್ರಾರ್ ಆಗಿ ಲಂಡನ್ನಿಗೆ ಹೋಗಲಿದ್ದೀರಿ!!" ಎಂದರು. ಅವರು ಬಹುಶಃ ನನ್ನ ಪ್ರತಿಕ್ರಿಯೆಗಾಗಿ ಅರೆಗಳಿಗೆ ತಮ್ಮ ಮಾತನ್ನು ನಿಲ್ಲಿಸಿದರು. ನನಗೆ ದಿಗ್ಭ್ರಮೆ ಯಾದಂತಾಗಿತ್ತು. ಅದಕ್ಕೇ ನಾನು 'ಏನು ಸಾರ್??' ಎಂದೆ. ನನ್ನ ಮಾತಿನಲ್ಲಿದ್ದ ಅಚ್ಚರಿ, ಅನಿರೀಕ್ಷಿತ ಸಂತೋಷ, ಬೆರಗು, ಜತೆಗೆ ಹಲವಾರು ಪ್ರಶ್ನೆಗಳು ಎಲ್ಲವೂ ಅವರಿಗೆ ಅರ್ಥವಾದಂತೆ, ಅವರು 'ಹೌದು... ಹೌದು... ನೀವು ಹೋಗಬೇಕು... ಆದರೆ ಈಗಲೇ ಈ ವಿಷಯವನ್ನು ಯಾರಲ್ಲೂ ಹೇಳುವುದು ಬೇಡ. ಎಲ್ಲವೂ ಒಂದು ರೀತಿಯಲ್ಲಿ ವ್ಯವಸ್ಥೆಯಾಗಬೇಕಿದೆ. ಅದು ಮುಗಿದ ಮೇಲೆ ಹೇಳೋಣ. ನಾನು ಈ ದಿನ ಭವನದ ಅಧ್ಯಕ್ಷರ ಜತೆಗೂ ಮಾತನಾಡುತ್ತೇನೆ...' ಎಂದು ತಮ್ಮ ಮಾತು ಮುಗಿಸಿದರು. ನನಗೋ ಎಂಥದೋ ಅನುಭವ, ಹುಚ್ಚು ಹಿಡಿದಂತೆಯೇ ಆಗಿತ್ತು. ನಾನು... ನಾನು... ಲಂಡನ್ನಿಗೆ ಹೋಗುವವನಿದ್ದೇನೆಯೇ? ಇದು ನಿಜವೇ? ಹಾಗಿದ್ದರೆ ಅವರು ಇದನ್ನು ಯಾರಲ್ಲೂ ಹೇಳಬೇಡ ಎಂದದ್ದೇಕೆ ? ಅಣ್ಣನಿಗೂ ಹೇಳಬಾರದೆ? ಪ್ರಶ್ನೆಗಳು ತಲೆಯಲ್ಲಿ ಸುಳಿದು ನರ್ತನ ಮಾಡಿದವು . ಇಲ್ಲ ಅಣ್ಣನಿಗೆ ಹೇಳದೆ ಇರಲಾಗದು... ಎನಿಸಿತು ತೀವ್ರವಾಗಿ.

ರಾತ್ರಿ ೧೧.೩೦ರ ಸಮಯ. ಆದರೇನಂತೆ ? ಸೈಕಲೇರಿ ಒಂದೇ ಉಸಿರಿಗೆ ತುಳಿಯುತ್ತ ಬಿಟ್ಟಬಾಣದಂತೆ , ಅಣ್ಣನ ಮನೆಗೆ ಹೊರಟೆ. ನಾವಿದ್ದುದು ಮಲ್ಲೇಶ್ವರಂ ಎಂಟನೇ ಕ್ರಾಸಿನಲ್ಲಿ , ಅಣ್ಣ ಇದ್ದದ್ದು ನಾಗಪ್ಪ ಬ್ಲಾಕ್ ಶ್ರೀರಾಮಪುರದಲ್ಲಿ. ರಸ್ತೆಯಲ್ಲಿ ಅದು ಹೇಗೆ ಹೋದೆನೋ ನನ್ನ ಮೈಮೇಲೆ ನನಗೆ ಪರಿವೆಯೇ ಇರಲಿಲ್ಲ. ಬಹುಶಃ ಹನುಮಂತ ಹಾರಿದಹಾಗೆ ಎನ್ನಬಹುದು! ಶ್ರೀಶಂಕರಮೂರ್ತಿ ಅಣ್ಣನಿಗೆ ಆ ವೇಳೆಯಲ್ಲಿ ನನ್ನನ್ನು ಕಂಡು ಆಶ್ಚರ್ಯ, ಆತಂಕ, ಗಾಬರಿ. 'ಚಿನ್ನ!' ಎಂದೆ ಉದ್ವೇಗದಿಂದ! 'ಅತ್ತಾ ಆಚ್ ಕೃಷ್ಣ?' (ಏನಾಯಿತೋ?) ಎಂದರು. ಶ್ರೀರಾಮಕೃಷ್ಣರು ಫೋನಿನಲ್ಲಿ ಹೇಳಿದ ಪ್ರತಿಯೊಂದು ಮಾತನ್ನೂ ತಪ್ಪದೆ ಹೇಳಿದೆ. ಅಣ್ಣನ ಸಂತೋಷಕ್ಕೆ ಈಗ ಪಾರವಿರಲಿಲ್ಲ. ನನ್ನನ್ನು ಬಲವಾಗಿ ಅಪ್ಪಿಕೊಂಡರು. ನನ್ನ ಸಂತಸದಲ್ಲಿ ಅಣ್ಣ-ಅತ್ತಿಗೆ ಹೀಗೆ ಸಹಭಾಗಿಯಾಗಿದ್ದು ಆ ದಿನ. ಆ ದಿನ ಮರೆಯಲಾಗದಂಥ ದಿನ.

'Other side of the grass is always green' ಎನ್ನುವ ಮಾತೊಂದಿದೆ, ಇಂಗ್ಲಿಷಿನಲ್ಲಿ...! ನಮ್ಮ ಕಣ್ಣಿಗೆ ಕಾಣುವ ಆ ಕಡೆಯ ಹುಲ್ಲು ಹಸಿರಾಗಿಯೇ ಯಾವಾಗಲೂ ಕಾಣುತ್ತದೆ ಎಂದು ಈ ಮಾತಿನ ಅರ್ಥ. ಇದರ ಭಾವವನ್ನೇ ಹೋಲುವ ನಮ್ಮ ಕನ್ನಡದ ಮಾತೆಂದರೆ 'ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ' ಎಂದು. ಇದೂ ಹಾಗೆಯೇ. ಲಂಡನ್ ಎಂದರೆ ಎಂತಹ ಸ್ಥಳ! ಸೂರ್ಯಮುಳುಗದ ಸಾಮ್ರಾಜ್ಯ ಎಂದು ಹೆಸರು ಪಡೆದಿದ್ದ ಬ್ರಿಟಿಷರ ಕೇಂದ್ರ ಕಾರ್ಯಸ್ಥಾನ! ನಮಗೆ ಅದು ಸ್ವರ್ಗದ ಬಾಗಿಲು ಎನಿಸುತ್ತದೆ. ಅಂತಹ ಜಾಗಕ್ಕೆ ಸಾಮಾನ್ಯರು, ಅದೂ ನನ್ನಂತಹ ಸಾಮಾನ್ಯರು ಹೋಗಲಾದೀತೆ ಎಂದುಕೊಳ್ಳುತ್ತಿದ್ದವರು ನಾವು, ಆದರೆ ಈಗ ಹೀಗೆ ಬಂದಿರುವ ಅನಿರೀಕ್ಷಿತ ಅವಕಾಶಕ್ಕೆ ದೇವರು ತಾನೆ ಕಾರಣ ಎನಿಸಿತು ತೀವ್ರವಾಗಿ!!

ಮಾರನೆಯ ದಿನ ಶ್ರೀರಾಜಂ ಅವರ ಮನೆಗೆ ಕಥೆ ಹೇಳಲು ಹೋದಾಗ ನಾನು ಹಿಂದಿನ ರಾತ್ರಿ ಶ್ರೀರಾಮಕೃಷ್ಣನ್‌ರವರು ಫೋನ್ ಮಾಡಿದ ವಿಷಯವನ್ನು ಹೇಳಲಿಲ್ಲ.

ಆದರೆ ಅವರು ಈ ವಿಷಯವನ್ನು ನನ್ನಲ್ಲಿ ಪ್ರಸ್ತಾಪಿಸಿ, ಅವರು ಸಹ 'ಈ ವಿಷಯವನ್ನು ಮತ್ತಾರಿಗೂ ಹೇಳುವುದು ಬೇಡ... ಎಲ್ಲವೂ ತೀರ್ಮಾನ ಆಗುವವರೆಗೆ' ಎಂದರು. ಟಿ.ವಿ.ಎಸ್. ಸೆಕ್ರೆಟರಿ ಶ್ರೀ ರಾಮಚಂದ್ರನ್ ಅವರಿಗೆ ಹೇಳಿ (ಶ್ರೀ ರಾಮಚಂದ್ರನ್ ಭಾರತೀಯ ವಿದ್ಯಾಭವನದ ಸದಸ್ಯರು ಹಾಗೂ ಕಾರ್ಯದರ್ಶಿಗಳಾಗಿದ್ದರು) ನನಗೆ ರೂ. ೫,೦೦೦/- ಕೊಡಿಸಿದರು- ಬಟ್ಟೆಹೊಲಿಸಿಕೊಳ್ಳಲಿಕ್ಕೆಂದು. ನನ್ನ ಉಡುಪಾದರೂ ಆ ದಿನಗಳಲ್ಲಿ ಅಷ್ಟು ದುಬಾರಿಯದ್ದೋ, ಬಹಳ ಚಂದದ್ದೋ ಆಗಿರಲಿಲ್ಲ. ಅಂಥ ಆರ್ಥಿಕ ಅನುಕೂಲತೆಯೂ ಇರಲಿಲ್ಲವಷ್ಟೇ. ಒಂದು ದೊಗಲೆ ಪೈಜಾಮ, ಒಂದು ತುಂಬು ತೋಳಿನ ಅಂಗಿ, ಅದೂ ಖಾದಿಯದ್ದು , ಒರಟಾದ ಬಟ್ಟೆ... ಆದರೆ ಬಹಳ ಶುಭ್ರವಾಗಿರುತ್ತಿತ್ತು. ನನ್ನ ಈ ಉಡುಪುಗಳನ್ನು ನೋಡಿದ್ದ ಅವರು, ಲಂಡನ್ನಿಗೆ ನಾನು ಹೊರಡಲು ಮೊದಲ ತಯಾರಿಯಾಗಿ ಬಟ್ಟೆ ಹೊಲಿಸಿಕೊಳ್ಳುವಂತೆ ಹೇಳಿದುದರಲ್ಲಿ ನನಗೇನೂ ಆಶ್ಚರ್ಯ ವಾಗಲಿಲ್ಲ! ಆಗಲೇ ನಾನು ಜೀವನದಲ್ಲಿ ಮೊದಲ ಬಾರಿಗೆ ಫುಲ್‌ಕಾಲರಿನ ಸೂಟನ್ನು ಹೊಲೆಸಿಕೊಂಡದ್ದು. ನಾನು ಹೊರಡುತ್ತಿದ್ದ ತಿಂಗಳು ಜುಲೈ . ಅಲ್ಲಿನ ವಾತಾವರಣಕ್ಕೆ ಸಾಕಷ್ಟು ಬೆಚ್ಚಗಿನ ಬಟ್ಟೆಗಳು ಅಗತ್ಯವಾಗಿದ್ದವು. ಆಗಸ್ಟ್‌ನಿಂದ ಅಲ್ಲಿ ಬೇಸಗೆ ಪ್ರಾರಂಭ ವಾಗುವುದಿತ್ತು. ಸಂತೋಷ , ಎಂಥದೋ ಕಾತರ, ಉದ್ವೇಗ, ಒಂದು ರೀತಿಯ ಭಯ, ಈ ಎಲ್ಲ ಸಮ್ಮಿಶ್ರ ಭಾವನೆಗಳ ಮಂಥನದಲ್ಲೇ ನಾನು ಲಂಡನ್ನಿಗೆ ಹೋಗುವ ಸಿದ್ಧತೆ ಮಾಡಿಕೊಳ್ಳತೊಡಗಿದೆ.

ಜುಲೈ ೨೨ ರಂದು ಬಾಂಬೆಗೆ ಹೋದೆ. ವೀಸಾ ಮಾಡಿಸಿಕೊಂಡೆ. ಇತರ ದಾಖಲೆಗಳೂ ಸಿದ್ಧವಾದವು. ಇವಳು (ನನ್ನಾಕೆ ಶ್ರೀಮತಿ ರಾಜಲಕ್ಷ್ಮಿ) ನನ್ನ ಜತೆ ಹೊರಟಿರಲಿಲ್ಲ. ನಾನು ಅಲ್ಲಿಗೆ ಹೋಗಿ , ಅಲ್ಲಿನ ಪರಿಸ್ಥಿತಿ ನೋಡಿಕೊಂಡು ಅನಂತರ ಇವಳನ್ನು ಅಲ್ಲಿಗೆ ಕರೆಸಿಕೊಳ್ಳುವುದು ಎಂದಾಗಿತ್ತು...

ಮನೆಯಲ್ಲಿ ಬಡತನದ ಕಷ್ಟಗಳನ್ನು ನನ್ನ ಜತೆ ಇದ್ದುಕೊಂಡು ಮೂಕಿಯಂತೆ ಒಂದೂ ಮಾತನಾಡದೆ ಸಹಿಸಿದ ಇವಳ ಸಹನೆಯ ಬಗ್ಗೆ ನನಗೆ ವಿಶ್ವಾಸವಿತ್ತು. ಕಂಡು ಕೇಳಿದವರ ಮಧ್ಯೆ ಇರುವುದು ತಿಳಿದಿದ್ದ ಇವಳಿಗೆ ಶಾಲಾಶಿಕ್ಷಣವೂ ಬಹುಶಃ ಐದಾರನೇ ತರಗತಿಗಿಂತ ಮುಂದೆ ಹೋಗಿದ್ದಿಲ್ಲ. ಅಂಥದರಲ್ಲಿ ಹೊಸದೇಶ, ಹೊಸಜನ, ಹೊಸಭಾಷೆ, ಹೊಸ ವಾತಾವರಣ, ನಮ್ಮವರೆಲ್ಲರಿಂದ ದೂರ ಬಲುದೂರ ನನ್ನ ಜತೆ ಇರುವ ಇವಳು ಸಹ ಮಾಡಿಕೊಳ್ಳಬೇಕಾದ ಸಿದ್ಧತೆ ಒಂದಿತ್ತು. ಅದು ಇಂಗ್ಲಿಷ್! ಇಂಗ್ಲಿಷ್ ಬರದು-ಇವಳಿಗೆ. ಅದೃಷ್ಟವಶಾತ್ ಅದಕ್ಕೂ ಒಂದು ದಾರಿ ಸಿಕ್ಕಿತ್ತು. ನಮ್ಮ ಭವನದಲ್ಲಿ ೧೯೭೨ರ ಜನವರಿ ಒಂದನೇ ತಾರೀಖಿನಿಂದ 'ಸ್ಪೋಕನ್ ಇಂಗ್ಲಿಷ್ ಕೋರ್ಸು' ಪ್ರಾರಂಭವಾಗಿತ್ತು. ಇಂಗ್ಲಿಷ್‌ನಲ್ಲಿ ಮಾತನಾಡಲು ಕಲಿಯುವ ಶಿಕ್ಷಣ ಅದು. ಅಲ್ಲಿಗೆ ಇವಳನ್ನು 'ಸೇರಿಕೋ' ಎಂದು ಸಲಹೆ ಮಾಡಿದ್ದೆ. ಇವಳು ಹಾಗೆಯೇ ಮಾಡಿದ್ದಳು. ಶ್ರೀಮತಿ ಮಧುರಾ ಎಂಬಾಕೆ ಇವಳ ಶಿಕ್ಷಕಿ. ಬಹಳ ಚೆನ್ನಾಗಿ ಕಲಿಸುತ್ತಿದ್ದರು. ಇವಳು ಸೇರಿಕೊಂಡಾಗ ಈ ವಿಷಯದ ಗಂಧವೂ ನಮ್ಮನ್ನು ಸೋಕಿರಲಿಲ್ಲ. ಹಾಗೆ ಪ್ರೇರಣೆ ಮಾಡಿದ್ದು ಸಹ ದೇವರೇ ಎಂದು ಹೇಳದೆ, ಮತ್ತೇನೂ ಹೇಳಲು ಸಾಧ್ಯವಿಲ್ಲ. ಅವನೇ ಇವಳು ಹೊರಡಲು ಮುಂಚಿತವಾಗಿಯೇ ಆಂಗ್ಲಭಾಷಾಜ್ಞಾನದ ಪರಿಚಯ ಮಾಡಿಕೊಳ್ಳುವಂತೆ ಮಾಡಿದ್ದ.

ಹೊರಡುವ ದಿನ ಬಂದಿತು...ಇವಳು, ಅಣ್ಣ ಶಂಕರಮೂರ್ತಿ ಯವರು, ಅತ್ತಿಗೆ, ಇತರ ಮಿತ್ರರು, ಭವನದ ಅಧಿಕಾರಿಗಳು ಶ್ರೀರಾಮಕೃಷ್ಣನ್‌ರೂ ಸೇರಿದಂತೆ ಎಲ್ಲರೂ ಏರ್‌ಪೋರ್ಟಿನಲ್ಲಿ (ವಿಮಾನ ನಿಲ್ದಾಣದಲ್ಲಿ) ನನ್ನನ್ನು ಬೀಳ್ಕೊಡಲು ಬಂದಿದ್ದರು. ಈಗ ಮನಸಿನಲ್ಲಿ ಸಂತೋಷ ಸಂಭ್ರಮಕ್ಕಿಂತ, ಭೀತಿ, ಕಳವಳ, ಆತಂಕ ಹೆಚ್ಚಾಗಿ ಕವಿದಿತ್ತು. ಒಬ್ಬನೇ ಹೋಗುತ್ತಿದ್ದುದು, ಅದೂ ಎಲ್ಲ ಆಪ್ತರನ್ನು ಬಿಟ್ಟು ಕಾಣದ ದೇಶಕ್ಕೆ ಹೊರಟಿದ್ದುದು, ಇದ್ದಕ್ಕಿದ್ದಂತೆ ಏಕಾಕಿತನದ ಭಾವನೆಯನ್ನು ತಂದಿತ್ತು. ಆಗ ನನಗೆ 'ಬರುತ್ತದೆ' ಎಂದು ಭಾವಿಸಿದ ಇಂಗ್ಲಿಷ್ ಭಾಷೆಯೂ ಮರೆತೇ ಹೋದಂತೆ ತೀವ್ರವಾಗಿ ಭಾಸವಾಗತೊಡಗಿತ್ತು. ಇಲ್ಲ... ಇಲ್ಲ... ಇಂಗ್ಲಿಷ್ ಸಹ ನನಗೆ ಸರಿಯಾಗಿ ಬರುವುದಿಲ್ಲ. ಅಲ್ಲಿ ಹೋಗಿ ಏನು ಮಾಡಲಿ, ಹೇಗೆ ಮಾಡಲಿ? ಹೊಸಜನರ ಜತೆ ಹೊಸ ಪರಿಸರದಲ್ಲಿ ಹೇಗಿರಲಿ?? ಎನ್ನುವ ಗಾಬರಿ ಹೆಚ್ಚಾಗಿ, ಅದೇ ಭಾವದಲ್ಲಿಯೇ ಶ್ರೀರಾಮಕೃಷ್ಣನ್‌ರ ಪಾದಗಳಿಗೆ ನಮಸ್ಕರಿಸಿದೆ , ಇನ್ನು ತಡೆಯಲಾಗಲಿಲ್ಲ , 'ಸರ್ ಏನಾದರೂ ಹೇಳಿ ಸಾರ್, ನನಗೆ ಹೀಗೆ ಸುಮ್ಮನೆ ಕಳುಹಿಸಿಬಿಡಬೇಡಿ... ಅಲ್ಲಿ ಹೇಗಿರಬೇಕು ಎಂದು ಹೇಳಿ ಸಾರ್...' ಎಂದೆ. ಧ್ವನಿ ಗದ್ಗದ ಆಗಿತ್ತು. ನನ್ನೆಲ್ಲ ದುಗುಡುವನ್ನು ಅರ್ಥಮಾಡಿಕೊಂಡವರಂತೆ ಅವರು, ಮುಗುಳ್ನಗುತ್ತಾ, ಧೈರ್ಯ ತುಂಬುವ ಧ್ವನಿಯಲ್ಲಿ , 'ಮತ್ತೂರ್‌ಜೀ, ನಿಮ್ಮ ಆತ್ಮಸಾಕ್ಷಿಯೇ ಸದಾ ನಿಮ್ಮ ಮಾರ್ಗದರ್ಶಕನಾಗಿರಲಿ. ನಿಮಗೆ ಈ ಮಾತು ಸದೈವ ನೆನಪಿದ್ದರೆ ಸಾಕು' ಎಂದರು. ಅವರ ಆ ಒಂದು ಸಾಲಿನ ಮಾತಿನಲ್ಲಿ ಅದೆಷ್ಟು ಶಕ್ತಿ ಇತ್ತೆಂದು ನಾನು ಪದಗಳಲ್ಲಿ ವರ್ಣಿಸಲಾರೆ! ರಾಮ-ಲಕ್ಷ್ಮಣರು ಕಾಡಿಗೆ ಹೊರಟಾಗ, ರಾಮನು ಕೌಸಲ್ಯೆಗೂ, ಲಕ್ಷಣನು ಸುಮಿತ್ರೆಗೂ ನಮಸ್ಕರಿಸುತ್ತಾರೆ. ಆಗ ಕೌಸಲ್ಯೆ ರಾಮನಿಗೆ,

ಯಂ ಪಾಲಯಸಿ ಧರ್ಮಂ ತ್ವಂ ಧೃತ್ಯಾ ಚ ನಿಯಮೇನ ಚ |
ಸ ವೈ ರಾಘುವ ಶಾರ್ದೂಲ ಧರ್ಮಃ ತ್ವಾಮ್ ಅಭಿರಕ್ಷತು ||

ಎನ್ನುತ್ತಾಳೆ. ಅದರ ತಾತ್ಪರ್ಯ, 'ಯಾವ ಧರ್ಮವನ್ನು ನೀನು ಚಾಚೂ ತಪ್ಪದೆ ರಕ್ಷಣೆ ಮಾಡಿಕೊಂಡು ಬಂದಿದ್ದೇಯೋ, ಆ ಧರ್ಮವೇ

ನಿನ್ನನ್ನು ದಾರಿಯುದ್ದಕ್ಕೂ ಕಾಪಾಡಲಿ' ಎಂದು. ಹಾಗೆಯೇ ಸುಮಿತ್ರೆ, ಲಕ್ಷ್ಮಣನಿಗೆ ಇನ್ನೂ ಚೆನ್ನಾಗಿ ಆಶೀರ್ವಾದ ಮಾಡುತ್ತಾಳೆ.

ರಾಮಂ ದಶರಥಂ ವಿದ್ಧಿ ಮಾಂ ವಿದ್ಧಿ ಜನಕಾತ್ಮಜಾಮ್|
ಅಯೋಧ್ಯಾಮ್ ಅಟವೀಂ ವಿದ್ಧಿ ಗಚ್ಛ ತಾತ ಯಥಾಸುಖಮ್||

ಅರ್ಥಾತ್, 'ರಾಮನೇ ನಿನಗೆ ಇನ್ನು ದಶರಥ (ತಂದೆ) ಜಾನಕಿಯೆ ನಾನು (ತಾಯಿ) ಅವರು ಇರುವ ಕಡೆ ಅಯೋಧ್ಯೆ, ನಿನಗೆ ಅದೇ ಸುಖತರುವಂಥದಾಗಲಿ' ಎಂದು. ಮೊದಲಿನಿಂದ ನಾನು ರಾಮಾಯಣ ವನ್ನು ಓದಿದಾಗ, ವ್ಯಾಖ್ಯಾನ ಮಾಡಿದಾಗ, ಈ ಎರಡು ಆಶೀರ್ವಾದಗಳಲ್ಲಿ ಅದೆಷ್ಟು ಶಕ್ತಿ ಇದೆ. ಅದೆಷ್ಟು ಅರ್ಥಪೂರ್ಣವಾಗಿದೆ ಎಂದುಕೊಳ್ಳುವುದಿತ್ತು. ನನ್ನ ಶ್ರೋತೃಗಳಿಗೆ ಅದರ ಮಹತ್ತ್ವದ ಬಗ್ಗೆ ವಿವರಿಸಿ ಹೇಳುವುದಿತ್ತು. ಆದರೆ ಆ ದಿನ ಶ್ರೀರಾಮಕೃಷ್ಣನ್‌ರ ಆ ಎರಡು ಮಾತುಗಳು ನನ್ನದೇ ಮಾತುಗಳು ಅದೆಷ್ಟು ಸತ್ಯವೆಂದು ಸ್ವಾನುಭವ ದಿಂದ ನಾನೇ ಇಂದು ಅರಿಯುವಂತೆ ಮಾಡಿತ್ತು. ಅಷ್ಟು ಶಕ್ತಿ ಇತ್ತು ಅವರ ಆ ಮಾತುಗಳಲ್ಲಿ!! ಆ ಮಾತುಗಳಷ್ಟೇ ನನ್ನ ಕಿವಿಯಲ್ಲಿ ಗುಂಯ್‌ಗುಡುತ್ತಿದ್ದುದು, ಮನಸ್ಸಿನಲ್ಲಿ ಮುದ್ರೆಯೊತ್ತಿದುದು.

ಸುತ್ತಮುತ್ತಲಿನ ಹೊಸ ಜನದ ಜತೆ ವಿಮಾನದಲ್ಲಿ ಸದ್ದಿಲ್ಲದೆ ಕುಳಿತಿದ್ದ ನನ್ನ ಯೋಚನೆಗಳೂ ವಿಮಾನದಷ್ಟೇ ವೇಗವಾಗಿ ಹಾರುತ್ತಿದ್ದವು, ಆದರೆ ಒಳಗೆ ಕುಳಿತಿದ್ದವರಿಗೆ ಅದರ, ಆ ವೇಗದ ಅನುಭವವಾಗದಂತೆ. ನನ್ನ ಆ ಯೋಚನೆಗಳ ವಾಯುವೇಗದ ಅನುಭವವೂ ನನಗೇ ಆಗುತ್ತಿರಲಿಲ್ಲ! ದೂರದಲ್ಲಿರುವ ಆ ಸುಂದರ ದ್ವೀಪ, ಭೂಪಟದಲ್ಲಿ ಇಷ್ಟು ಚಿಕ್ಕದಾಗಿ, ಒಂದು ಹೆಬ್ಬೆರಳಿನ ಅಗಲವೂ ಇಲ್ಲದೆ, ಅತ್ತಿತ್ತ ಒಂದೆರಡು ತುಂಡುಗಳನ್ನು ಹರಡಿಕೊಂಡಿರುವ, ಆ ದ್ವೀಪ ಹೇಗಿದ್ದೀತು? ಮುನ್ನೂರು ವರ್ಷಗಳ ಕಾಲ ಭಾರತೀಯರನ್ನು ಉಸಿರುಗಟ್ಟಿಸಿ ಆಳಿದ ಆ ಕೆಂಪುಜನ ಹೇಗಿದ್ದಾರು? ತಮ್ಮ ರಾಜ-ರಾಣಿಯರು ತಮ್ಮ ಸಂಸ್ಕೃತಿಯ ಮತ್ತು ನಾಡಿನ ಹಿರಿಮೆಯ ಪ್ರತೀಕ ಎಂದು ಹೆಮ್ಮೆಪಟ್ಟು , ಬಿಳೀ ಆನೆಗಳನ್ನು ಸಾಕುತ್ತಿರುವಂತೆ, ಅವರನ್ನು ಪೋಷಿಸುತ್ತಿರುವ ಆ ಜನದ ಸಾಮರ್ಥ್ಯ ಏನು? ನಾಗರಿಕತೆಯಲ್ಲಿ, ನವಿರು ನಾಣ್ಯತೆಯಲ್ಲಿ, ಅಂತೆಯೇ ಆಧುನಿಕತೆಯಲ್ಲಿ ಪ್ರಪಂಚದಲ್ಲಿ ಮೊದಲಿಗರು ಎನಿಸಿರುವ ಆ ಜನದ ಮಧ್ಯೆ ಇದ್ದು , ನಮ್ಮ ಭಾರತೀಯ ಸಂಸ್ಕೃತಿಯ ಪ್ರಚಾರಕಾರ್ಯದ ಜವಾಬ್ದಾರಿಯನ್ನು ನಿಭಾಯಿಸಲು ನನ್ನಿಂದ ಸಾಧ್ಯವೇ? ಅವರಲ್ಲಿ ಇದಕ್ಕೆಲ್ಲ ಮನ್ನಣೆ ಇದೆಯೇ? ಆದರ ಸಿಕ್ಕೀತೆ? ನಾನು ಪ್ರಯತ್ನದಲ್ಲಿ ಸಫಲನಾಗಲು ಸಾಧ್ಯವೇ? ಹೀಗೆ ನೂರಾರು ಯೋಚನೆಗಳು, ದ್ವಂದ್ವದಲ್ಲಿ ಸಮಯ ಸರಿದಿದ್ದುದರ ಪರಿವೆಯೇ ಇರಲಿಲ್ಲ.

ವಿದೇಶದ ಮೊದಲನೇ ಪ್ರಯಾಣ ಬೆಳಗ್ಗೆ ೬.೧೫ರ ವೇಳೆಗೆ ನಾನು ಲಂಡನ್‌ನಗರದ ಏರ್‌ಪೋರ್ಟಿನಲ್ಲಿ ಕಾಲಿಡುವ ಸಮಯಕ್ಕೆ ಮುಗಿದಿತ್ತು. ಸೂರ್ಯ ೪.೧೫ಕ್ಕೆ ಹುಟ್ಟಿ ೬.೧೫ಕ್ಕೆ ಒಳ್ಳೆ ಮಧ್ಯಾಹ್ನದ ಬಿಸಿಲಿನಂತಿತ್ತು ಆ ಬೆಳಕು. ಲಂಡನ್‌ನಲ್ಲಿ ಈಗಾಗಲೇ ಹೆಸರಿಗೆ ಮಾತ್ರ ಎನ್ನುವಂತೆ ಇದ್ದ ವಿದ್ಯಾಭವನದ ಕೇಂದ್ರಕ್ಕೆ ಭಾರತದ ರಾಯಭಾರಿ ಶ್ರೀ ಮಾಧವನ್‌ರು ಮೊದಲ ರೆಜಿಸ್ಟ್ರಾರ್ ಆಗಿದ್ದರು ; ಅವರೂ, ನನ್ನನ್ನು ಸ್ವಾಗತಿಸಲು ಅಲ್ಲಿಗೆ ಬಂದಿದ್ದರು. ಅವರ ಜತೆ ಶ್ರೀ ರಮೇಶ್ ಪಟೇಲ್ ಎನ್ನುವವರೂ ಇದ್ದರು (ಇವರು ಗೌರವ ಕಾರ್ಯದರ್ಶಿ ಗಳಾಗಿದ್ದರು.) ಶ್ರೀ ಮಾಧವನ್‌ರು ಭಾರತೀಯ ವೈ.ಎಂ.ಸಿ.ಎ. ನಲ್ಲಿದ್ದರು (ವೈ.ಎಂ.ಸಿ.ಎ. ಎಂದರೆ 'ಯಂಗ್ ಮೆನ್ಸ್ ಕ್ರಿಶ್ಚಿಯನ್ ಅಸೋಸಿಯೇಷನ್' ಎಂದು.)

ನಮ್ಮವರೆನಿಸಿದ್ದ ಶ್ರೀ ಮಾಧವನ್ ಅವರ ನಗೆ ಮುಖದ ಸ್ವಾಗತ, ಆ ಬಿಸಿಲಿನ ವಾತಾವರಣದಲ್ಲಿ ತಂಪಾದ ಗಾಳಿ ಬೀಸಿದಂತಾಗಿತ್ತು ನನಗೆ! ಆತ್ಮೀಯತೆ ಸೂಸುವ ಅವರ ಕಣ್ಣುಗಳು ಸ್ವಲ್ಪ ಧೈರ್ಯ ಕೊಟ್ಟವು. ನಾವು ಕಾರಿನಲ್ಲಿ ಹೋಗುತ್ತಿದ್ದಂತೆ ಶ್ರೀ ಮಾಧವನ್‌ರು ಕೆಲವು ವಿವರಗಳನ್ನು ಕೊಟ್ಟರು. ವಿದ್ಯಾಭವನಕ್ಕಾಗಿ ಒಂದು ಸಣ್ಣ ರೂಮನ್ನು ಬಾಡಿಗೆಗೆ ತೆಗೆದುಕೊಳ್ಳಲಾಗಿತ್ತು. ೧೦'x೧೦'ರ ಕೋಣೆ ಅದು. ೩೫, ಗ್ರೇಟ್ ರೆಸೆಲ್ಸ್ ಸ್ಟ್ರೀಟ್ - ಇದು ಭವನದ ವಿಳಾಸ. ಕಾರಿನಲ್ಲಿ ಸ್ವಲ್ಪ ದೂರ ಬಂದ ಮೇಲೆ ನಾನು ಲಂಡನ್ನಿನಲ್ಲಿ ನೋಡಿದ ಮೊದಲ ಬೋರ್ಡು 'ಟಾಯ್ಲೆಟ್ಸ್ ೨೪ ಕಿ.ಮೀ.' ಎನ್ನುವುದು. (ಶೌಚಾಲಯಗಳು ಇಲ್ಲಿಂದ ೨೪.೩ ಕಿ.ಮೀ ದೂರದಲ್ಲಿದೆ) ಅಲ್ಲಿಂದ ಮುಂದೆ ಪೆಟ್ರೋಲ್ ಬಂಕ್ ೭೫ ಕಿ.ಮೀ ಎನ್ನುವುದು! ನನಗೋ ಪರಮಾಶ್ಚರ್ಯ! ದಾರಿಯಲ್ಲಿ ಸಾಗುವ ಪ್ರಯಾಣಿಕರ ಬಗ್ಗೆ ಅದೆಷ್ಟು ಕಾಳಜಿ ಈ ಜನಕ್ಕೆ!! ನಮ್ಮಲ್ಲಿ...? ಎಷ್ಟು ದೂರದಿಂದ ಎಷ್ಟು ದೂರಕ್ಕೆ ಪ್ರಯಾಣ ಮಾಡಿದರೂ ಶೌಚಾಲಯಗಳಿರುವುದಿಲ್ಲ. ಇದ್ದರೂ ಅದು ಉಪಯೋಗಿಸಲಾಗದಷ್ಟು ಗಲೀಜಾಗಿದ್ದು ತಲೆತಿರುಗುವಂತಿರುತ್ತದೆ! ನಮ್ಮಲ್ಲಿನ ಹೆಂಗಸರ ಬಗೆಗಂತೂ ನಮಗೆ ದಿವ್ಯ ನಿರ್ಲಕ್ಷ್ಯ! ಗಂಡಸರಿಗೆ ಯಾವುದೇ ಗೋಡೆ ಶೌಚಾಲಯ ಆಗಿಬಿಡುತ್ತದೆ. ಆದರೆ ಹೆಂಗಸರ ಪಾಡು ? ಅದರ ವಿಷಯವಾಗಿ ಯೋಚಿಸುವವರು ಯಾರು? ನಮ್ಮ ಜನರ ಬಗ್ಗೆ ನಮಗಿರುವ ಈ ದಿವ್ಯ ನಿರ್ಲಕ್ಷ್ಯವನ್ನು ಸದುಪಯೋಗ ಪಡಿಸಿಕೊಂಡೇ ಅಲ್ಲವೇ ಆ ಸಣ್ಣ ದ್ವೀಪವೊಂದು ೩೦೦ ವರ್ಷಗಳ ಕಾಲ ಕಾಲಿನಲ್ಲಿ ಮೆಟ್ಟಿ ಆಳಿದ್ದು! ರಾಮ, ಕೃಷ್ಣ ಎಂದು ಕುಳಿತು ನನ್ನ ಪಕ್ಕದವನ ಕಷ್ಟ ನನ್ನದಲ್ಲ ಎನ್ನುವ ನಿರ್ಲಿಪ್ತತೆಗೆ ಆರ್ಯ ಸಂಸ್ಕೃತಿಯ ಗುಣ-ಎಲ್ಲರೂ ನಮ್ಮಲ್ಲಿಗೇ ಬರಲಿ ಎನ್ನುವುದು ಸೇರಿ ತಾನೆ ಈ ಪರಕೀಯರು ಬಂದು ಡೇರೆ ಹಾಕಲು ಸಾಧ್ಯವಾದದ್ದು, ಒಡೆದು ಆಳುವ ನೀತಿಯಲ್ಲಿ ಪ್ರಚಂಡ ಯಶಸ್ಸು ಸಾಧಿಸಿದ್ದು! ದೂರದಲ್ಲಿ ಕುಳಿತು ರಿಮೋಟ್ ಉಪಯೋಗಿಸಿ ಇಂದಿನ ಟಿ.ವಿ.ಯನ್ನು ಚಾಲೂ ಮಾಡಿ, ಬೇಕಾದ ಚಾನೆಲ್‌ನ್ನು ಹಾಕುವ ಹಾಗೆಯೇ ಅಲ್ಲವೇ ಅಂದು ೬,೦೦೦ ಮೈಲಿಗಳ ದೂರದಲ್ಲಿರುವ ಈ ಲಂಡನ್ ನಗರದ ರಿಮೋಟ್‌ನಿಂದ ನಮ್ಮ ದೇಶದ ಆಳ್ವಿಕೆ ನಡೆಯುತ್ತಿದ್ದುದು, ಭಾರತದಲ್ಲಿ ಕೆಳಗೆ ಬಿದ್ದ

ಒಂದು ಚಮಚದ ಸದ್ದು ಈ ಲಂಡನ್ನಿಗೆ ಕೇಳುತ್ತಿದ್ದುದು!! ಎಂತಹ ಸೋಜಿಗ! ಇದೇ ಪ್ರದೇಶಕ್ಕೆ ಈಗ ನಾನು ನಮ್ಮ ಸಂಸ್ಕೃತಿ ಪ್ರಚಾರ ಮಾಡುವ ಸಾಹಸದ ಕನಸು ಹೊತ್ತು ಬಂದಿರುವುದು. If I were young enough to build a new India, I would have built it- ಇದು ಗಾಂಧೀಜಿ ಹೇಳಿದ ಮಾತು. 'ನಾನು ಒಂದು ನವಭಾರತವನ್ನು ಕಟ್ಟುವಷ್ಟು ಚಿಕ್ಕವನಾಗಿದ್ದರೆ, ಆ ನವಭಾರತ ನಿರ್ಮಾಣ ಮಾಡುತ್ತಿದ್ದೆ' ಇದು ಒಂದು ರೀತಿಯಲ್ಲಿ ಅವರ ಘೋಷಣೆ. ದೇಶದ ಸಂಪತ್ತು ಲೂಟಿಯಾಗಿ ಹೋಗಿರುವಾಗಲೂ ಒಂದು ವೇಳೆ ಅವರು ಯುವಕರಾಗಿದ್ದಿದ್ದರೆ ಅವರು ಹೇಳಿದಂತೆಯೇ ನವಭಾರತದ ನಿರ್ಮಾಣ ಮಾಡುತ್ತಿದ್ದರು. ಬಹುಶಃ ಆಗ ನಾನು ಇಲ್ಲಿಗೆ ಬರುವುದು ಅವಶ್ಯವಿರುತ್ತಿರಲಿಲ್ಲ. ಇವರೇ, ಈ ಜನರೇ ನಮ್ಮ ಸಂಸ್ಕೃತಿಯನ್ನು ಕಲಿಯಲು ಬೇಡಿ ಬರುವ ಪರಿಸ್ಥಿತಿ ಇರುತ್ತಿತ್ತೇನೋ... ಮತ್ತೆ ನಾನು ನನ್ನ ಈ ಯೋಚನೆಗಳಲ್ಲಿ ಕಳೆದು ಹೋಗುವುದಕ್ಕೆ ಮುಂಚೆ, ಬೋರ್ಡನ್ನು ಓದಿ ಅಚ್ಚರಿಯಂತೆ ಅರಳಿದ ನನ್ನ ಮುಖ ನೋಡಿ ನನ್ನ ಮನಸ್ಸು ಗ್ರಹಿಸಿದ ಶ್ರೀ ಮಾಧವನ್‌ರು 'ನೀವು ಈ ರೀತಿಯ ಇನ್ನೂ ಹಲವಾರು-ಅದ್ಭುತಗಳನ್ನು ಇಲ್ಲಿ ನೋಡಲಿದ್ದೀರಿ ಮತ್ತೂರ್‌ಜೀ' ಎಂದರು. ಹೌದಲ್ಲವೇ? ಮಾಯಾನಗರಿಗೆ ಬಂದಂತಿದೆ ನನಗೆ! ಇಲ್ಲೇ ತಾನೇ ನಾನು ಅದ್ಭುತಗಳನ್ನು ನೋಡಲಾಗುವುದು !

ಲಂಡನ್ ಸಮಿತಿ

ಇಲ್ಲಿ ಭಾರತೀಯ ವಿದ್ಯಾಭವನದ ಒಂದ ಸಣ್ಣ ಕಮಿಟಿ ಇದ್ದಿತು. ಯಹೂದಿ ಮೆನ್ಯೂಹನ್ ಇಲ್ಲಿನ ಅಧ್ಯಕ್ಷರು, ಮಣೇಕ್ ದಲಾಲ್, ಚಂದ್ರಕಾಂತ ಮಾಸ್ಟರ್, ಎಮ್.ಜೆ. ನಾಗ್ರಾ, ಜೆ.ಕೆ. ಗೋಹೆಲ್, ರತೀಭಾಯಿ ಚಂದರಿಯಾ ಇವರುಗಳು ಉಪಾಧ್ಯಕ್ಷರು (Vice-chairman). ಇನ್ನೂ ಆರುಮಂದಿ ಕಮಿಟಿ ಸದಸ್ಯರು. ದಲಾಲ್‌ಜೀಯವರು ವೈ.ಎಂ.ಸಿ.ಎ. ದ ಅಧ್ಯಕ್ಷರು, ನಾನು ಸಹ ೧೯೬೯ ವೈ.ಎಂ.ಸಿ.ಎ ನಲ್ಲಿಯೇ ಇಳಿದುಕೊಂಡೆ. ಶ್ರೀ ಮಾಧವನ್, ನಾನು ಹೋದನಂತರ ಸುಮಾರು ೨೨ ದಿನ ನನ್ನ ಜತೆಗಿದ್ದು ಸಮಿತಿಯ ಎಲ್ಲರನ್ನೂ ಪರಿಚಯ ಮಾಡಿಸಿ 'ಇಂದಿನಿಂದ ಇವರು ಇಲ್ಲಿನ ರೆಜಿಸ್ಟ್ರಾರರು, ನಾನಲ್ಲ' ಎಂದು ಹೇಳಿದರು. ಅವರು ಆಗ ಬಾಂಬೆ ಕೇಂದ್ರದ ರೆಜಿಸ್ಟ್ರಾರ್, ಆಗಿದ್ದರು. ಅಲ್ಲಿನ ಅಂದಿನ ಪರಿಸ್ಥಿತಿಯನ್ನು ಕುರಿತು ಸೂಕ್ಷ್ಮವಾಗಿ ಹೇಳಿ, ಸಂಪೂರ್ಣ ಜವಾಬ್ದಾರಿಯನ್ನು ನನಗೆ ಒಪ್ಪಿಸಿ, ನನಗೆ ಈ ಪ್ರಯತ್ನದಲ್ಲಿ ಯಶಸ್ಸು ಕೋರಿ ಭಾರತಕ್ಕೆ ವಾಪಸಾದರು. ಅವರು ವಾಪಸಾದ ಮೇಲೆ ನನಗೆ ಮತ್ತೆ ಏಕಾಕಿತನದ ಅನುಭವ. ಹೇಳಿಕೊಳ್ಳಲೂ ಯಾರೂ ಇಲ್ಲ. ಒಬ್ಬರಾದರೂ ದಕ್ಷಿಣ ಭಾರತೀಯರಿಲ್ಲ ಅಲ್ಲಿ; ಸಿಂಧಿ, ಪಂಜಾಬಿ, ಗುಜರಾತಿ, ಮಾರ್ವಾಡಿ, ಬಂಗಾಲಿ, ರಾಜಸ್ಥಾನಿ, ಎಲ್ಲರೂ ಇದ್ದರು. ಎಲ್ಲರನ್ನೂ ನಾನೇ ನಿಧಾನವಾಗಿ ಪರಿಚಯ ಮಾಡಿಕೊಂಡೆ. ಯಹೂದಿ ಮೆನ್ಯುಹಿನರು ಒಂದು ರೀತಿಯ ಒಪ್ಪಂದದ ಮೇಲೆ ಭಾರತೀಯ ವಿದ್ಯಾಭವನದ ಅಧ್ಯಕ್ಷರಾಗಿದ್ದರು. ಅವರು ಮೀಟಿಂಗ್‌ಗಳಿಗೂ ಬರುವುದಿಲ್ಲ ಎಂದು ಹೇಳಿದ್ದರು. ಅಂತೆಯೇ ಅವರು ಬರಲೂ ಇಲ್ಲ, ಅದಕ್ಕೇ ಸಾಮಾನ್ಯವಾಗಿ ಮೀಟಿಂಗುಗಳ ಅಧ್ಯಕ್ಷತೆಯನ್ನು ಉಪಾಧ್ಯಕ್ಷರಾದ ಚಂದ್ರಕಾಂತ ಮಾಸ್ಟರರೇ ವಹಿಸುತ್ತಿದ್ದರು. ಭವನದ ಬಳಗ ಎನಿಸಿಕೊಂಡ ಈ ಜನರ ನಾಡಿ ನೋಡಬೇಕಿತ್ತು ನಾನು. ಇದು ನನಗೆ ಬಹಳ ಕಷ್ಟದ ಕೆಲಸವಾಯಿತು. ಆದರೂ ಆ ಜನ ನನ್ನನ್ನು ತಮ್ಮ ಸೋದರನೆನ್ನುವಂತೆ ಕಂಡರು ಎಂದು ಹೇಳಿದರೆ ತಪ್ಪಿಲ್ಲ. ಅವರಿಗೂ ನನ್ನನ್ನು ನೋಡಿ-ತಿಳಿಯಲು ಸ್ವಲ್ಪ ಸಮಯ ಬೇಕಾಗಿತ್ತು. ಹೀಗೆ ೫-೬ ತಿಂಗಳುಗಳು ಕಳೆದವು.

ಎಲ್ಲ ಮೀಟಿಂಗ್‌ಗಳೂ ಚಂದ್ರಕಾಂತ ಮಾಸ್ಟರರ ಆಫೀಸಿನಲ್ಲೇ ನಡೆಯುತ್ತಿದ್ದವು (ಚಂದ್ರಕಾಂತರ ಹೆಸರಿನ ಜತೆಗಿರುವ'ಮಾಸ್ಟರ' ಕಥೆಯ ಸ್ವಾರಸ್ಯವೆಂದರೆ, ಅವರ ತಂದೆ, ಮನೆಯಲ್ಲಿ ಪಾಠ ಮಾಡುವ ಮಾಸ್ಟರ್ ಎಂದು ಕರೆಸಿಕೊಳ್ಳುವ ಶಿಕ್ಷಕರಾಗಿದ್ದರು. ಸುಮತಿ ಮುರಾರ್ಜಿಯವರ ಮನೆಯಲ್ಲಿ ಪಾಠ ಹೇಳುತ್ತಿದ್ದವರ ಮಗ. ಮೇಷ್ಟ್ರು ಎನ್ನುವುದಕ್ಕೆ 'ಮಾಸ್ಟರ್' ಎನ್ನುತ್ತಿದ್ದರು. ಹೀಗಾಗಿ ಅದೊಂದು ಹೆಸರೇ ಆಯಿತು. ಅವರು ಗುಜರಾತಿನವರು! ಅವರಿಗೆ ಅವರ ವಿದ್ಯಾರ್ಥಿಗಳಿತ್ತ ಮಾಸ್ಟರ್ ಎನ್ನುವ ಹೆಸರೇ ಕುಟುಂಬದ ಹೆಸರೂ ಆಗಿ ಉಳಿಯಿತು.) ಚಂದ್ರಕಾಂತ ಮಾಸ್ಟರರೇ ಮೀಟಿಂಗ್‌ಗಳೆಲ್ಲದರ ಅಧ್ಯಕ್ಷತೆ ವಹಿಸುತ್ತಿದ್ದರಷ್ಟೆ? ಮಾಸ್ಟರರು ಬಹಳವಾಗಿ ಪಾಶ್ಚಾತ್ಯರಂತೆಯೇ ಆಗಿಬಿಟ್ಟಿದ್ದರು! ಭಾರತೀಯತೆ ಅವರಲ್ಲಿ ಇರಲೇ ಇಲ್ಲವೆಂದೇ ಹೇಳಬಹುದಾಗಿತ್ತು. ಯಾವಾಗಲೂ ಇಂಗ್ಲಿಷಿನಲ್ಲೇ ಮಾತುಕತೆ, ಆ ಕಡೆಯಾಕೆಯೇ ಹೆಂಡತಿ. ಅವರದೇ ಅನ್ನಪಾನಾದಿಗಳು, ಹವ್ಯಾಸಗಳು. ಮೂರು ಮೀಟಿಂಗುಗಳಾದವು. ಯಾವ ರೀತಿಯಲ್ಲೂ ಏನೂ ಮುಂದುವರೆದಂತೆ ಕಾಣುತ್ತಿರಲಿಲ್ಲ. ಕಷ್ಟಪಟ್ಟು ನಾನು ಪ್ರತಿ ಮೀಟಿಂಗ್‌ಗೂ ತಯಾರಿ ಮಾಡಿಕೊಳ್ಳುತ್ತಿದ್ದೆ. ಒಂದು ತಮಾಷೆಯ ವಿಷಯ...

'ಇದೇನು? ಇಲ್ಲೇಕೆ ತಮಾಷೆ ?' ಎಂದು ನನ್ನ ಓದುಗರ ಹುಬ್ಬೇರಿದ್ದೀತು? ನಾನು ಲಂಡನ್‌ನಲ್ಲಿ ಪರದಾಡುತ್ತಿರುವುದು ನಿಮಗೆ ತಿಳಿಯುತ್ತಿದ್ದೆಯಷ್ಟೇ. ಏನೂ ಕೆಲಸವಾಗುತ್ತಿಲ್ಲ ಎಂದು ಟೆನ್ಶನ್ ಪಡುತ್ತಿದ್ದೆನಷ್ಟೆ? ಇಂಗ್ಲಿಷಿನ ನಾಟಕಗಳಲ್ಲಿ , ಅದೂ ಷೇಕ್ಸ್‌ಪಿಯರ್ ನಾಟಕಗಳಲ್ಲಿ 'ಡ್ರಮ್ಯಾಟಿಕ್ ಟೆನ್ಶನ್' ಹೆಚ್ಚಾದಾಗ, ಅಂದರೆ ಪಾತ್ರಗಳಲ್ಲಿ ಆ ಸನ್ನಿವೇಶದಲ್ಲಿ ಬಹಳ ಗಂಭೀರತೆ ಇದ್ದಾಗ , ಪ್ರೇಕ್ಷಕನು ಅದರಲ್ಲಿ ತಾನೂ ತಲ್ಲೀನನಾಗಿ ತನ್ನ ಹೃದಯದ ಬಡಿತ ಹೆಚ್ಚಿಸಿಕೊಳ್ಳುವಂತಾಗಬಾರದು ಎಂದು, ನಾಟಕಕಾರ ಒಂದು ತಿಳಿಹಾಸ್ಯದ ಸನ್ನಿವೇಶವನ್ನು ಸೃಷ್ಟಿಸಿ ಅದನ್ನು ಮಧ್ಯಕ್ಕೆ ತಂದು,

ಪ್ರೇಕ್ಷಕನಿಗೆ ಉಸಿರು ಬಿಗಿಬಿಟ್ಟು ಸರಾಗವಾಗಿ ಉಸಿರಾಡುವಂತೆ ಮಾಡುತ್ತಾನೆ! ಇದನ್ನು 'ಕಾಮಿಕ್ ರಿಲೀಫ್' ಎನ್ನುತ್ತಾರೆ ಇಂಗ್ಲಿಷಿನಲ್ಲಿ. ಈ ಸನ್ನಿವೇಶ ಪ್ರೇಕ್ಷಕನನ್ನು ನಗಿಸಿ ಅವನು ನಾಟಕದ ಗಾಂಭೀರ್ಯ ಅನುಭವಿಸಿ ಆಯಾಸಗೊಳ್ಳದ ಹಾಗೆ ಮಾಡುವ ಚಮತ್ಕಾರ ಇದು!! ಹಾಗೆ ನಾನು ನಿಮಗೆ ಈಗ ಹೇಳುವ ವಿವರವೂ ಸಹ...

ಬಟ್ಟೆ ಬರೆಯ ವಿವರ!! ಇಲ್ಲಿ 'ಸಂಯುಕ್ತ ಕರ್ನಾಟಕ' ದಲ್ಲಿದ್ದಾಗ, ನಂತರ ಭವನಕ್ಕೆ ಸೇರಿದ ಮೇಲೆಯೂ ನನ್ನ ಉಡುಪು ಪಂಚೆ, ಅಂಗಿಯಷ್ಟೆ? ಆದರೆ ಲಂಡನ್‌ನಲ್ಲಿ ನಿಜಕ್ಕೂ ಅದೆಂಥ ಬಟ್ಟೆಯ ಫಜೀತಿ ಅದು? ಸೂಟು, ಬೂಡ್ಸು , ಎಲ್ಲವೂ ಬಿಗಿ-ಬಿಗಿ ಎಂದು ಮೈಗೆ ಅಂಟಿಕೊಂಡಿರುವಂತೆ! ಆಗಲಂತೂ ಸ್ವಲ್ಪ ಚಳಿ ಪ್ರಾರಂಭವಾಗಿದ್ದ ಸಮಯ - ಮೈಮೇಲೆ ಎಂಟು-ಒಂಬತ್ತು ಬಟ್ಟೆಗಳು, ಅದನ್ನು ಹಾಕಿಕೊಳ್ಳಲು, ಅನಂತರ ತೆಗೆಯಲು ಅರ್ಧಘಂಟೆಯ ಸಮಯ ಹಾಳು! ನಿಜ... ಒಳಬಿಗಿ ಉಡುಪು (ಅದನ್ನು 'ಟೈಟ್ಸ್'ಎನ್ನುತ್ತಾರೆ ಅಲ್ಲಿ) ಅದು ಚರ್ಮಕ್ಕೆ ಅಂಟಿಕೊಂಡಂತೆ, ಅದರ ಮೇಲೆ ಬನಿಯನ್, ಅದರ ಮೇಲೆ ಜುಬ್ಬಾ , ಸ್ವೆಟರು, ಕೋಟು, ಟೈ, ಒಂದೇ ಎರಡೇ. ನಾನು ಪ್ರಾರಂಭದಲ್ಲಿ ಈ ಬಟ್ಟೆಗಳ ವಿಷಯದಲ್ಲಿ ಪಟ್ಟ ಕಷ್ಟ ಅಷ್ಟಿಷ್ಟಲ್ಲ! ಯಾವ ಮೀಟಿಂಗಿದ್ದರೂ ಇದೇ ಥರ, ಅಲ್ಲಿಗೆ ಬರುವ ಜನರ ಘನತೆ-ಗೌರವಕ್ಕೆ ತಕ್ಕಂತೆ ನನ್ನ ಉಡುಪೂ ಇರಬೇಕಿತ್ತು. ಅಲ್ಲದೆ ಅದು ಬ್ರಿಟನ್ನಿನ ಲಂಡನ್ ಭವನ ಕೇಂದ್ರ! ನನಗೋ! ಇದನ್ನೆಲ್ಲ ಹಾಕಿಕೊಂಡು ಬಹಳ ಕಸಿವಿಸಿ. ಬೂಡ್ಸಿನ ಕಾಲನ್ನು ಎತ್ತಿಎತ್ತಿ ಇಡಲೇ ಆಗದಷ್ಟು ನಿಶ್ಶಕ್ತಿ ಎನಿಸಿ ಬಿಡುತ್ತಿತ್ತು. ಒಮ್ಮೊಮ್ಮೆ ಈ ಬಟ್ಟೆಗಳ ಒಳಗೆ ಇದ್ದ ನಾನು, ನನ್ನ ಮೇಲೆ ಒಂದು ಮೊಬೈಲ್ ಚಿಕ್ಕ ಪರ್ವತವನ್ನು ಸುತ್ತಿಕೊಂಡು ಓಡಾಡುತ್ತಿದ್ದೇನೇನೋ ಎನ್ನುವಂತಹ ಅನುಭವ! ಆದರೆ ವಿಧಿ ಇಲ್ಲ. ನಾನು ಹೊಂದಿಕೊಳ್ಳಲೇಬೇಕಿತ್ತು... ಮನೆಗೆ ಬಂದು ಅದನ್ನೆಲ್ಲ ತೆಗೆದು ಪಂಚೆ ಉಟ್ಟರೆ, ಎಂಥದೋ ಶರೀರ ಹಗುರವಾಗಿ ಗಾಳಿಯಲ್ಲಿ ಹೆಜ್ಜೆಹಾಕುತ್ತಿರುವಂತಹಾ ಅನುಭವ! ಹೌದು, ನಾನು ಹೀಗೆ ಅಲ್ಲಿನ ಹವಾಮಾನ ಪರಿಸ್ಥಿತಿಗೆ ಹೊಂದಿಕೊಂಡಂತೆ, ಅಲ್ಲಿನ ಪರಿಸ್ಥಿತಿ ಇನ್ನೂ ನನ್ನನ್ನು ಹೊಂದಿಕೊಂಡು ಒಳಗೊಂಡಿರಲಿಲ್ಲ!

ನಾಲ್ಕನೆಯ ಮೀಟಿಂಗ್‌ನಲ್ಲಿ ಮಾಸ್ಟರರು "ಮಿಸ್ಟರ್ ಮತ್ತೂರ್, ನಾವು ಇನ್ನು ಮೇಲೆ ನಮ್ಮ ಮೀಟಿಂಗ್‌ಗಳಲ್ಲಿ ಮದ್ಯಪಾನವನ್ನು ಸೇರಿಸಿಕೊಳ್ಳಬೇಕು. ನಾವು ಮುಂಚೆಯೇ ಪಾನ ಮಾಡಿ ಬರುವುದಕ್ಕಿಂತ, ಇಲ್ಲಿಯೇ ಮಾಡಿದರಾಗದೆ?" ಎಂದರು, ಎಂದಿನಂತೆ ತಮ್ಮದೇ ಗತ್ತಿನ ಇಂಗ್ಲಿಷಿನಲ್ಲಿ ! ನನಗೆ ಎದೆ ಧಸಕ್ಕೆಂದಿತು! ಇದೇನು ಹೇಳುತ್ತಿದ್ದಾರೆ ಇವರು? ಎಂದು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿರುವಂತೆಯೇ ಅಂತರ ರಾಷ್ಟ್ರೀಯ ಖ್ಯಾತಿಯ ಹಿನ್ನೆಲೆ ಇದ್ದು ವ್ಯಾಪಾರ-ವ್ಯವಹಾರ ನಡೆಸುತ್ತಿದ್ದ ಭಾರತೀಯ ಸೇಥಿಯಾ ಎನ್ನುವವರು ಕೂಡಲೆ ಒಂದು ಚೀಟಿಯಲ್ಲಿ "ಅಧ್ಯಕ್ಷರೇ, ಹಾಗೆ ನೀವು ಇಲ್ಲಿ ಮದ್ಯಪಾನವನ್ನು ಸೇವಿಸುವವರಾದರೆ, ಇಲ್ಲಿದೆ ನನ್ನ ರಾಜಿನಾಮೆ" ಎಂದು ಬರೆದು ಹೆಚ್ಚುಕಡಮೆ ಅಧ್ಯಕ್ಷರ ಮುಖಕ್ಕೆ ಬಿಸಾಡಿದಂತೆ ಎಸೆದರು! ನನಗೆ ಆ ಕ್ಷಣ ಅವರ ಕಾಲಿಗೆ ನಮಸ್ಕರಿಸಬೇಕು ಎನ್ನಿಸಿತು! 'ಮಹಾರಾಯರೇ, ನೀವಾದರೂ ನನ್ನನ್ನು ಕಾಪಾಡಿದಿರಲ್ಲಾ' ಎಂದು ಅವರ ಕೈ ಹಿಡಿದುಕೊಳ್ಳಬೇಕೆನಿಸಿತು! ಭಯವೂ ಆಯಿತು. 'ಯಾರ ಮಾತೂ ಕೇಳದೆ ಅವರು ಮದ್ಯಪಾನವನ್ನು ಇಲ್ಲಿ ತಂದರೆ ಗತಿ ಏನು' ಎನಿಸಿ ಜೀವ ನಡುಗಿತು. ಅಷ್ಟರಲ್ಲೇ ಆವರೆಗೆ ಸುಮ್ಮನಿದ್ದ ಶ್ರೀ ಮಣೆಕ್‌ದಲಾಲರು, "ಅಧ್ಯಕ್ಷರೆ, 'ರೋಮಿನಲ್ಲಿದ್ದಾಗ ರೋಮನ್ನರಂತೆ ಇರು' ಎನ್ನುವುದನ್ನು ಯಾರೂ ನಮ್ಮಿಂದ ನಿರೀಕ್ಷಿಸುವುದಿಲ್ಲ. ನನಗೆ ಹಾಗನ್ನಿಸದು. ರೋಮನ್ನರು ನಮ್ಮನ್ನು ಭಾರತೀಯರಾಗಿಯೇ ಇರಬೇಕೆಂದು ಬಯಸುತ್ತಾರೆ. ಯಾರೇ ಆದರೂ ತಮ್ಮನ್ನು ಇತರರು ಅನುಕರಿಸಲಿ ಎಂದು ಬಯಸುವುದಿಲ್ಲ. ಭಾರತೀಯ ವಿದ್ಯಾಭವನಕ್ಕೆ ತನ್ನದೇ ಆದ ಧ್ಯೇಯೋದ್ದೇಶಗಳಿವೆ, ನಿಯಮಗಳಿವೆ. ತಾವು ಅದನ್ನು ಅನುಸರಿಸಿರಿ" ಎಂದರು. ಶ್ರೀ ದಲಾಲರ ಧ್ವನಿಯಲ್ಲಿದ್ದ ಗಾಂಭೀರ್ಯ, ಒಂದೊಂದು ಮಾತನ್ನೂ ಅವರು ನಿಖರವಾಗಿ ಹೇಳಿದ ರೀತಿ, ನನಗೆ ಅವರ ಮೇಲೆ ಬಹಳ ಭಕ್ತಿ ತರಿಸಿತು. 'ಗುರುಭಾವನೆ ಸಂಜನಿಸಿತು' ಎನ್ನುತ್ತಾಳೆ ದ್ರೌಪದಿ, ಕೃಷ್ಣನನ್ನು ಮೊದಲು ಕಂಡಾಗ! ಹಾಗೆ ನನಗೆ ಶ್ರೀ ದಲಾಲರ ಮೇಲೆ ಗೌರವ-ಪ್ರೀತಿಗಳು ಮೂಡಿದವು. ಅಷ್ಟು ಹೇಳಿದರೂ ಅವರ ಧ್ವನಿಯಲ್ಲಿ ಕಸಿವಿಸಿಗೊಂಡ ಭಾವವಿರಲಿಲ್ಲ. ಬದಲಾಗಿ ಬಹಳಷ್ಟು ಶಾಂತತೆ ಇತ್ತು. ಶ್ರೀ ದಲಾಲರ ಗಂಭೀರವಾದ ಆ ಮಾತುಗಳಲ್ಲಿ ಅದೆಷ್ಟು ಶಕ್ತಿ ಇತ್ತೋ ... ತಕ್ಷಣವೇ ಶ್ರೀ ಚಂದ್ರಕಾಂತ ಮಾಸ್ಟರರು, "ಆಯ್ತು, ಆಯ್ತು , ಹಾಗೇ ಆಗಲಿ, ನಿಮಗೆ ಇಷ್ಟವಿಲ್ಲದಿದ್ದರೆ ಈ ವಿಷಯವನ್ನು ಅಲ್ಲಿಗೇ ಬಿಡೋಣ, ನಾವು ಮದ್ಯಪಾನ ಮಾಡಿಯೇ ಮೀಟಿಂಗ್‌ಗೆ ಬಂದರಾಯಿತು?" ಎಂದರು ಬಿಗುವಿನಿಂದ. 'ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್' ಎನ್ನುವಂತೆ ಸತ್ಯವನ್ನೇ ಪ್ರಿಯವಾಗಿ ಹೇಳಿದ ದಲಾಲಜೀಯವರು ಆವರೆಗೆ ಯಾವುದೇ ಮೀಟಿಂಗ್‌ಗೆ ಬಂದಿರಲಿಲ್ಲ. ಇದಾದ ಅನಂತರ ಸುಮಾರು ಎರಡು ತಿಂಗಳ ಕಾಲ ಮತ್ತೆ ಯಾವ ಮೀಟಿಂಗ್‌ಗೂ ಬರಲೂ ಇಲ್ಲ. ನನಗೋ ಮನಸಲ್ಲಿ ಆಸೆ 'ದಲಾಲ್ ಮೀಟಿಂಗಿಗೆ ಬರಲಿ' ಎಂದು! ತಪ್ಪದೆ ಆಗಾಗ ಫೋನು ಮಾಡುತ್ತಿದ್ದೆ , ಆದರೆ ಬಹಳ ಕೆಲಸಗಳ ಒತ್ತಡದಲ್ಲಿದ್ದರು. ನಮ್ಮಲ್ಲಿಗೆ ಬರಲು ಅವರಿಗೆ ಬಿಡುವೇ ಆಗುತ್ತಿರಲಿಲ್ಲ.

೧೯. ಆತ್ಮಹತ್ಯೆಯವರೆಗೆ

ಭವನದ ಸದಸ್ಯತ್ವ

ಇತ್ತ ನಾನು ನಿಧಾನಕ್ಕೆ ಒಬ್ಬೊಬ್ಬರನ್ನೇ ಪರಿಚಯ ಮಾಡಿಕೊಂಡು ಭವನದ ಸದಸ್ಯರನ್ನಾಗಿ ಮಾಡುತ್ತಿದ್ದೆ. ಶ್ರೀ ಕೃಷ್ಣಜನ್ಮಾಷ್ಟಮಿ ಆದನಂತರ ಸೌತ್ ಆಂಪ್ಟನ್‌ರವರು ನನ್ನನ್ನು ಭಾಷಣ ಮಾಡಲು ಆಹ್ವಾನಿಸಿದರು. ಅಲ್ಲಿ ಆ ಭಾರತೀಯರು ಬಹಳ ಜನ ಉತ್ತರ ಭಾರತದವರಾಗಿದ್ದುದರಿಂದ ನಾನು ಹಿಂದಿಯಲ್ಲಿಯೇ ಮಾತಾಡಿದೆ. ಅವರಿಗೆ ನನ್ನ ಮಾತು ಇಷ್ಟವಾಗಿ 'ಪ್ರತಿ ವಾರವೂ ಬನ್ನಿ' ಎಂದು ಹೇಳಿದರು. ಹೀಗೆ ನಾನು ವಾರವಾರವೂ ಆರೇಳು ತಿಂಗಳವರೆಗೆ ಪ್ರವಚನಕ್ಕೆಂದು ಅಲ್ಲಿಗೆ ಹೋದೆ. ಹೀಗೆ ಇದು ನಿಧಾನವಾಗಿ ಪ್ರಚಾರವಾಯಿತು. 'ಭಾರತದ ಋಷಿಗಳು ಹಾಗೂ ಸಾಧುಗಳು' ಎನ್ನುವ ಈ ವಿಷಯದ ಮೇಲೆ ನೀಡಿದ ೫೨ ಭಾಷಣಗಳು ಬಹಳ ಜನರಿಗೆ ಹಿಡಿಸಿ, ಭಾರತೀಯ ವಿದ್ಯಾಭವನದ ಮೇಲೆ ಒಂದು ಒಳ್ಳೆಯ ಅಭಿಪ್ರಾಯ ಮೂಡಿ ಸುಮಾರು ೨೦-೩೦ ಮಂದಿ ಭವನದ ಆಜೀವ ಸದಸ್ಯರಾದರು. ಆಗ ವಿದ್ಯಾಭವನದ ಆ ಒಬ್ಬರ ಆಜೀವ ಸದಸ್ಯತ್ವಕ್ಕೆ ೧೦೦ ಪೌಂಡುಗಳು.

ಭಾರತೀಯ ವಿದ್ಯಾಭವನದ ಆಜೀವ ಸದಸ್ಯತ್ವದ ಬಗ್ಗೆ ನನ್ನ ಓದುಗರಿಗೆ ವಿವರವಾಗಿ ಹೇಳಬೇಕೆಂದರೆ, ಭವನದ ಆಜೀವ ಸದಸ್ಯತ್ವವನ್ನು ೨೦ ವರ್ಷದ ಯುವಕನೊಬ್ಬನು ತೆಗೆದು ಕೊಳ್ಳುತ್ತೇನೆಂದರೆ ಅವನಿಗೆ ನಾವು ಅವನು ಕೊಟ್ಟ ದುಡ್ಡಿಗೆ ಸುಮಾರು ಹತ್ತು ವರ್ಷಗಳ ತನಕ 'ಭವನ್ಸ್ ಜರ್ನಲ್' ಪಾಕ್ಷಿಕ ಪತ್ರಿಕೆಯನ್ನು ಕಳುಹಿಸಬಹುದು. ಅಷ್ಟರಲ್ಲೇ ಅವನು ನಮಗೆ ಕೊಟ್ಟ ಹಣ ಮುಗಿಯುತ್ತದೆ. ಅಲ್ಲಿಗೆ ಅವನಿಗೆ ೩೦ ವರ್ಷ ಆಗಿರುತ್ತದೆ. ಅದಕ್ಕೆ ಭವನವು ಅವನು ಕೊಟ್ಟ ಹಣವನ್ನು ಬ್ಯಾಂಕಿನಲ್ಲಿ ಇಡುತ್ತದೆ. ಅದು ವರ್ಷಕ್ಕೆ ೧೦೦ ಪೌಂಡ್ ಇದ್ದದ್ದು ೧೦ ವರ್ಷದಲ್ಲಿ ೫೦೦ ಪೌಂಡುಗಳಷ್ಟು ಆಗುತ್ತದೆ. ಆ ಯುವಕ ೧೦೦ ವರ್ಷಗಳವರೆಗೂ ಜೀವಿಸಿದರೆ, ಇನ್ನು ೭೦ ವರ್ಷಗಳೂ ಅವನಿಗೆ ಕಳುಹಿಸುವ ಪತ್ರಿಕೆಯ ಲೆಕ್ಕ ಭವನದ ಖರ್ಚಿಗೇ ಬೀಳುತ್ತದೆ. ಏಕೆಂದರೆ ಭವನ್ಸ್ ಜರ್ನಲ್‌ದ ಅಂಚೆವೆಚ್ಚ, ಪ್ರಕಟಣೆಗೆ-ಮುದ್ರಣಕ್ಕಾಗುವ ವೆಚ್ಚ, ಇದರ ಜತೆಗೆ ಅವನು ಆಜೀವ ಸದಸ್ಯತ್ವ ತೆಗೆದುಕೊಂಡದ್ದಕ್ಕಾಗಿ ಅವನಿಗೆ ಭವನದ ಪ್ರಕಟಣೆಯ ಪುಸ್ತಕಗಳ ಮೇಲೆ ಸುಮಾರು ೨೫ ರಷ್ಟು ರಿಯಾಯಿತಿ! ಇದೆಲ್ಲವನ್ನೂ ಭವನವೇ ಭರಿಸಬೇಕಾಗುತ್ತದೆ. ಅದಕ್ಕೇ ಹತ್ತು ವರ್ಷಗಳನಂತರ ಆದ ೫೦೦ ಪೌಂಡನ್ನು ಅಲ್ಲಿಯೇ ಬಿಟ್ಟರೆ ಸುಮಾರು ೯%ರಷ್ಟು ನಮಗೆ ಬಡ್ಡಿ ಬರುತ್ತದೆ. ಅಂದರೆ ಸುಮಾರು ೯೦ ಪೌಂಡುಗಳಷ್ಟು ಭವನಕ್ಕೆ ಬಂದಂತೆ. ೫೦೦ ಪೌಂಡನ್ನು ಹಾಗೆ ಉಳಿಸಿಕೊಂಡು, ಅದಕ್ಕೆ ಬರುವ ಬಡ್ಡಿಯ ೯೦ ಪೌಂಡಿನಲ್ಲಿ ಆ ಯುವಕನ ಆಜೀವ ಸದಸ್ಯತ್ವದ ಭವನ್ಸ್ ಜರ್ನಲ್‌ನ ಖರ್ಚನ್ನು ಭವನವೇ ನಿಭಾಯಿಸಬೇಕು. ಇಲ್ಲಿ ಇನ್ನೊಂದು ವಿಷಯ. ಭವನಕ್ಕೆ ಇನ್ನೊಂದು ರೀತಿಯಲ್ಲಿ ಸದಸ್ಯತ್ವ ತೆಗೆದುಕೊಳ್ಳುವ ಸಾಧ್ಯತೆ ಇದೆ. ಇದು ವಾರ್ಷಿಕ ರೀತಿಯದ್ದು , ಅದಕ್ಕೆ Associate Membership ಎನ್ನುತ್ತೇವೆ. ಒಂದು ವರ್ಷಕ್ಕೆ ಸದಸ್ಯತ್ವ ತೆಗೆದುಕೊಂಡರೆ ವರ್ಷ ಮುಗಿಯುವವರೆಗೆ ಭವನ್ಸ್ ಜರ್ನಲ್, ಭವನ ಕೊಡುವ ಪುಸ್ತಕದ ರಿಯಾಯಿತಿ ಇರುತ್ತದೆ. ವರ್ಷ ಮುಗಿದ ಅನಂತರ ಮತ್ತೆ ಅದನ್ನು ನವೀಕರಿಸಿಕೊಳ್ಳಬಹುದು.

ಹೀಗೆ ವಾರವಾರವೂ ಇಬ್ಬರು ಮೂವರನ್ನು ಆಜೀವ ಸದಸ್ಯತ್ವ ತೆಗೆದುಕೊಳ್ಳುವಂತೆ ಮಾಡಿತು, ನನ್ನ ವಾರಾಂತ್ಯದ ಭೇಟಿಯ ಕಾರ್ಯಕ್ರಮ. ಆ ಜನರು ನನ್ನನ್ನು ಊಟಕ್ಕೆ ಕರೆಯಲಾರಂಭಿಸಿದರು. 'ಮತ್ತೂರ್‌ಜೀ ಬರುತ್ತಿದ್ದಾರೆ, ಈರುಳ್ಳಿ-ಬೆಳ್ಳುಳ್ಳಿ ಉಪಯೋಗಿಸು ವಂತಿಲ್ಲ' ಎನ್ನುವ ಮಾತು ಜನಜನಿತ ಆಯಿತು!! ಸುಮಾರು ಜನ ಭಾರತೀಯರಿಗೆ ನಾನು ಕೇಳಿ-ನೋಡಿ ಪರಿಚಿತನಾದೆ. ಪ್ರತಿ ಭಾನುವಾರ ಹತ್ತು ಘಂಟೆಯ ರೈಲಿಗೆ ಹೊರಡುತ್ತಿದ್ದೆ. ೧೧.೧೫ಕ್ಕೆ ಅಲ್ಲಿ ಹೋಗಿ ಸೇರುತ್ತಿದ್ದೆ. ಯಾರ ಮನೆಯಲ್ಲಿ ಊಟಕ್ಕೆ ಆಹ್ವಾನಿಸುತ್ತಿದ್ದರೋ, ಅವರ ಮನೆಗೆ ನೇರವಾಗಿ ಹೋಗಿ ಸ್ನಾನ ಮಾಡಿ, ಮಾಧ್ಯಾಹ್ನಿಕ ಮಾಡಿ, ಪೂಜೆ ಮಾಡಿ ಅಲ್ಲಿಂದ ಹೊರಟು ಭಾಷಣ ನಡೆಯುವ ಸ್ಥಳ ಸೇರುತ್ತಿದ್ದೆ. ೧೨.೩೦ ರಿಂದ ೧.೩೦ರವರೆಗೆ ಭಾಷಣ, ಅಲ್ಲಿ ಶ್ರೀ ಕೃಷ್ಣನ ದೇವಸ್ಥಾನವಿತ್ತು. ಸುಮಾರು ೨೦೦ ರಿಂದ ೨೫೦ ರಷ್ಟು ಮಂದಿ ಸೇರುತ್ತಿದ್ದರು. ನಾನು ಅವರಿಗೆ ಹಿಂದಿ-ಇಂಗ್ಲಿಷ್ ಎರಡು ಭಾಷೆಗಳಲ್ಲಿಯೂ ಹೇಳುತ್ತಿದ್ದೆ. ಆಮೇಲೆ ದೇವಸ್ಥಾನದಲ್ಲಿ ಮಂಗಳಾರತಿಯಾದ ಅನಂತರ ನಾನು ಇಳಿದುಕೊಂಡಿದ್ದವರ ಮನೆಗೆ ಬಂದು ಊಟ ಮಾಡಿ ಲಂಡನ್‌ಗೆ ವಾಪಸ್ಸಾಗುತ್ತಿದ್ದೆ. ಹೀಗೆ ಈ ಭಾಷಣಗಳು ಲಂಡನ್-ಸೌತ್ ಆಂಪ್ಟನ್ ನಡುವೆ ಒಂದು ಸೇತುವೆಯನ್ನೇರ್ಪಡಿಸಿದವು. ಅದು ಸ್ನೇಹ-ಸೇತು!! ಅಲ್ಲಿಯೇ ಒಂದು ಭವನದ ಕೇಂದ್ರ ತೆರೆಯಿರಿ ಎನ್ನುವ ಉತ್ಸಾಹ ತೋರಿದರು ಅಲ್ಲಿಯ ಜನ. ಆದರೆ ಲಂಡನ್ ಕೇಂದ್ರದ ಕಾರ್ಯಕ್ಷೇತ್ರವೇ ದೊಡ್ಡದಾಗದೆ ಬೇರೆ ಯಾವ ಸಾಹಸಕ್ಕೂ ತೊಡಗುವುದರಲ್ಲಿ ಅರ್ಥವಿರಲಿಲ್ಲ.

ಅಲ್ಲಿ ಬಹಳ ಜನ ಪಂಜಾಬಿಗಳು, ಗುಜರಾತಿಗಳು, ದೈವಭಕ್ತರು. ಅಲ್ಲಿ , ಅವರು ದೇವಸ್ಥಾನ ಕಟ್ಟಿದಾಗ ಮೂರ್ತಿಯ ಪ್ರತಿಷ್ಠಾಪನೆಗೆ ಪ್ರಾಣಪ್ರತಿಷ್ಠೆ ಮಾಡುವುದು, ಹವನ-ಹೋಮಗಳನ್ನು ನಡೆಸುವುದು, ಪೂಜೆಗಳನ್ನು ಮಾಡುವುದು-ಇದನ್ನೆಲ್ಲ ಮಾಡುತ್ತಿದ್ದ ನಾನು ಸುಮ್ಮನೆ ಮಂತ್ರಗಳನ್ನು ಪಠಿಸುತ್ತಾ ಹೋಗದೆ, ಆ ಮಂತ್ರಗಳ ಅರ್ಥವನ್ನು, ಅವು ನಮಗೇನು ಸಂದೇಶ ಕೊಡುತ್ತವೆ ಎಂದು ವಿವರಿಸಿ ಹೇಳ

ತೊಡಗಿದೆ. ಅದು ಅವರಿಗೆ 'ಭಾರತೀಯರಾದ ನಾವು ಈ ರೀತಿ ಶಾಸ್ತ್ರಸಂಬಂಧವಾಗಿ, ಸಂಪ್ರದಾಯಬದ್ಧರಾಗಿ ಏನು ಮಾಡಿದರೂ, ಅದಕ್ಕೆಲ್ಲ ಒಂದು ಅರ್ಥವಿದೆ. ಅದು ಬರೀ ಮೂಢ ಆಚರಣೆಯಲ್ಲ' ಎನ್ನುವ ವಿಷಯವನ್ನು ಮನದಟ್ಟು ಮಾಡಿತು. ಅವರಿಗೆ ನನ್ನ ಬಗೆಗೆ ಬಹಳ ಒಳ್ಳೆಯ ಭಾವನೆ, ಗೌರವ ಬೆಳೆಯುತ್ತ ಹೋಯಿತು. ಅವರ ಆಸ್ತಿಕತೆ, ನನ್ನ ತಿಳುವಳಿಕೆ ಒಂದಕ್ಕೊಂದು ಕೊಂಡಿಯಂತೆ ಬೆಸೆದುಕೊಂಡು ಭಕ್ತಿಯಲ್ಲಿ ಮೂಢತೆ ಇರಬಾರದು, ಭಕ್ತಿಯಲ್ಲಿ ಪ್ರೀತಿ-ನಿರ್ಭಯತೆ ಇರಬೇಕು ಎನ್ನುವ ಮಾತಿನಲ್ಲಿ ವಿಶ್ವಾಸ ಮೂಡಿ, ಅವರೂ ಗಣಪತಿ, ಸರಸ್ವತಿ, ಸತ್ಯನಾರಾಯಣ ಪೂಜೆಗಳನ್ನು ಮನೆ ಮನೆಗಳಲ್ಲಿ ನಡೆಸಲು ಪ್ರಾರಂಭಿಸಿ, ಅದಕ್ಕೆ ನನ್ನನ್ನು ಆಹ್ವಾನಿಸುತ್ತಿದ್ದರು. ನಾನು ಹೋದಾಗಲೆಲ್ಲ ನನಗೆ ದಕ್ಷಿಣೆಯನ್ನು ಕೊಡುತ್ತಿದ್ದರು.

ನಾನು ಆಗ ನಡೆದ ಒಂದು ಮೀಟಿಂಗ್‌ನಲ್ಲಿ 'ಯಾರೇ ನನ್ನನ್ನು ಪೂಜೆಗಾಗಲಿ, ಭಾಷಣಕ್ಕಾಗಲಿ ಕರೆದರೂ ಹೋಗಿ, ಅಲ್ಲಿ ಬಂದ ಯಾವುದೇ ಆದಾಯವನ್ನು ಭವನಕ್ಕೆ ಸಮರ್ಪಿಸುತ್ತೇನೆ. ಭವನದ ಕೆಲಸವೆಂದೇ ಮಾಡುತ್ತೇನೆ. ಆದ್ದರಿಂದ ಅದು ಭವನದ ಕೆಲಸವೆನಿಸದೆ ಹೋದರೆ ನಾನು ಅಲ್ಲಿಗೆ ಹೋಗುವುದಿಲ್ಲ' ಎಂದು ಹೇಳಿದ್ದೆ. ಅಂತೆಯೇ ಕಾರ್ಯಕಾರಿ ನಿರ್ದೇಶಕನ ಆದಾಯ - ಭವನಕ್ಕಾಗಿ ಎನ್ನುವುದೂ ಪ್ರಾರಂಭವಾಯಿತು!

ಭಾರತೀಯ ವಿದ್ಯಾಭವನದ ಕೆಲಸಗಾರ ೨೪ ಘಂಟೆಗಳೂ ಕೆಲಸ ಮಾಡುವ ಕೆಲಸಗಾರ. ಸ್ವಂತ ಸಂಪಾದನೆಗೆ ನಮಗೆ ಅಧಿಕಾರವಿಲ್ಲ- ಅದು ನಮ್ಮ ಹಕ್ಕು ಅಲ್ಲ. ಭವನದ ಕೆಲಸ ನನ್ನ ಕೆಲಸ ಎನ್ನುವ ತಾದಾತ್ಮ್ಯದಿಂದ ಕೆಲಸ ಮಾಡುವುದು ಮಾತ್ರ ನಮ್ಮ ಹಕ್ಕು. ನಾವು ಬೇರೆ ಅಲ್ಲ, ಭವನ ಬೇರೆಯಲ್ಲ... ಇದೇ ಭವನದಲ್ಲಿ ಕೆಲಸ ಮಾಡುವವರ ಧ್ಯೇಯ!!!

ಹೀಗೆ ಸೌತ್ ಆಂಪ್ಟ್‌ನಲ್ಲಿ ಸ್ವಲ್ಪ ಗೆಲುವು ಕಂಡ ಮೇಲೆ ('ಪೂರ್ತಿ'ಎನ್ನಲಾರೆ, ಏಕೆಂದರೆ ಲಂಡನ್ ಕೇಂದ್ರ ಇನ್ನೂ ತೊಟ್ಟಿಲ ಶಿಶುವಾಗಿಯೇ ಇದ್ದಿತಷ್ಟೇ? ಅದಕ್ಕೆ!) ಲೆಸ್ಟರ್ ಜನದ ಸರದಿ! ನನ್ನ ಬಗೆಗೆ ಈಗಾಗಲೇ ಕೇಳಿ ತಿಳಿದಿದ್ದ ಲೆಸ್ಟರ್ ಜನ ಅಲ್ಲಿ ಭಾಷಣಗಳನ್ನು ಮಾಡಲು ನನ್ನನ್ನು ಆಹ್ವಾನಿಸಿದರು. ಇಲ್ಲಿ ಒಂದು ಸ್ವಾರಸ್ಯವೆಂದರೆ ಬರ್ಮಿಂಗ್‌ಹ್ಯಾಮ್, ಮ್ಯಾಂಚೆಸ್ಟರ್, ಎಡಿನ್‌ಬರಾ, ಲೆಸ್ಟರ್, ಸೌತ್ ಆಂಪ್ಟನ್ ಈ ನಗರಗಳಲ್ಲೆಲ್ಲಾ ಹಿಂದೂ ಸಂಘಗಳು ಒಂದು ಸರಪಳಿಯಂತೆ, ಒಂದಕ್ಕೊಂದು ಬೆಸೆದುಕೊಂಡು ಸಂಬಂಧವಿರಿಸಿ ಕೊಂಡಿರುವಂಥವು. ಒಂದೆಡೆ ಒಂದು ಕಾರ್ಯಕ್ರಮ ಯಶಸ್ವಿಯಾದರೆ, ಆ ಕಾರ್ಯಕ್ರಮದ ವಿವರ ಮಿಕ್ಕ ನಗರಗಳ ಹಿಂದೂ ಸಂಘಗಳಿಗೆ ಹೋಗುತ್ತದೆ. ಅನಂತರ ಆ ನಗರಗಳ ಹಿಂದೂ ಬಳಗಗಳು ತಮ್ಮಲ್ಲಿ ಆ ಕಾರ್ಯಕ್ರಮಗಳನ್ನೇರ್ಪಡಿಸಿ ಅದರ ಲಾಭ-ಸಂತೋಷ ಪಡೆಯುವುದು ಅಲ್ಲಿನ ಅಭ್ಯಾಸ . ಹೀಗಾಗಿ ನನ್ನ ಪರಿಚಯ ಬ್ರಿಟನ್ನಿನಲ್ಲಿ ಎಲ್ಲ ನಗರಗಳ ಭಾರತೀಯರಿಗೂ ಬಹಳ ಚೆನ್ನಾಗಿಯೇ ಆಯಿತು. ಸ್ನೇಹ ಸಂಪಾದನೆಯಾಯಿತು. ಇಲ್ಲಿ ಒಂದು ಮಾತನ್ನು ನನ್ನ ಓದುಗರು ಗಮನಿಸಬೇಕು. ಇನ್ನೂ ಲಂಡನ್ ಜನಕ್ಕೆ ನಾನು ಅಷ್ಟಾಗಿ ತಿಳಿದಿರಲಿಲ್ಲ! ಲಂಡನ್‌ನಿಂದ ಹೊರಗಡೆಯ ಜನ ಹೆಚ್ಚಾಗಿ ಚೆನ್ನಾಗಿ ನನ್ನನ್ನು ತಿಳಿದುಕೊಂಡಿದ್ದರು!!!

ಲಂಡನ್‌ಗೆ ಹೋದಾಗ ಅಲ್ಲಿ ಪ್ರಾಂತೀಯ ಭಾಷಾ ಬಳಗಗಳು ಬಹಳ ಹೆಚ್ಚಾಗಿದ್ದುದು ನನಗೆ ತಿಳಿಯಿತು. ೧೭ಬೇರೆ ಬೇರೆ ಭಾಷೆಯ, ಪ್ರಾಂತೀಯ ಬಳಗಗಳಿದ್ದವು. ಗುಜರಾತಿಯವರದು ಹತ್ತು ಬಳಗಗಳು... ಇಕ್ಕೀಸ್‌ಗಾಂವ್ ಪಾಟಿಯರ್ ಸಮಾಜ್, ತೀಸ್‌ಗಾಂವ್ ಪಾಟಿಯರ್ ಸಮಾಜ್... ಹೀಗೆ (೨೨ ಹಳ್ಳಿ-೩೦ ಹಳ್ಳಿಗಳ ಸಮಾಜ ಎನ್ನುವ ಅರ್ಥ ಅದು ಬಹುಶಃ) ಇದಲ್ಲದೆ ಬಂಗಾಳಿ, ತಮಿಳು, ತೆಲುಗು, ಅಸ್ಸಾಮಿ, ಮರಾಠಿ- ಇವೆಲ್ಲಾ ಭಾಷಾ ಪ್ರಾಂತ್ಯದ ಬಳಗಗಳಿದ್ದವು. ನಾನು ಹೋದಾಗ ಈ ಜನಕ್ಕೆ ನನ್ನ ಆಗಮನ ಅಷ್ಟು ಹಿತವಾಗಿ ಕಂಡಿರಲಿಲ್ಲ. ಎಂಥದೋ ಸಂಶಯ ಭಾವನೆ 'ಇವನು ಬಂದು ಮಾಡುವುದೇನು? ನೋಡುವಾ?' ಎನ್ನುವ ಕುತೂಹಲ. 'ಏನಿದು? ಭಾರತೀಯ ವಿದ್ಯಾಭವನ, ಇದು ಮಾಡುವ ಕೆಲಸ ಏನೋ ನೋಡೋಣ' ಎನ್ನುವ ಧೋರಣೆ. ಅಷ್ಟಾದರೂ, ಒಮ್ಮೆ ಇವರ ಬಳಗವೂ ನನ್ನನ್ನು ಭಾಷಣಕ್ಕೆ ಕರೆಯಿತು. ಅವರಿಗೆ ಅವರದ್ದೇ ಬಳಗ ಇರಬೇಕಾದರೆ, ನಮ್ಮ ಭವನಕ್ಕೆ ಅವರು ದುಡ್ಡು ಕೊಡುವ ಸಾಧ್ಯತೆ ಕಡಮೆ ಅಥವಾ ಇಲ್ಲ ಎಂದೇ ಹೇಳಬೇಕು. ಈ ವಿಷಯ ನನಗೆ ಅರ್ಥವಾಗಿದ್ದರೂ ನಮ್ಮ ಜನ- ಭಾರತೀಯರ ಪರಿಚಯ ನನಗಾಗಬೇಕು, ಅದೂ ಲಂಡನ್‌ನಲ್ಲಿ ಇರುವ ನನ್ನ ದೇಶದ ಮಂದಿ ಅದೇನು ಮಾಡುತ್ತಿದ್ದಾರೆ, ಹೇಗಿದ್ದಾರೆ ಇಲ್ಲಿ, ನೋಡಬೇಕೆನಿಸಿ ನಾನೂ ಭಾಷಣ ಮಾಡಲು ಒಪ್ಪಿಕೊಂಡೆ. ಅಲ್ಲಿ ದುಡ್ಡಿರುವವರು ಇದ್ದರೇ ವಿನಾ ಭಾಷಣಕಾರರು ಇರಲಿಲ್ಲ. ಸರಿಯಾಗಿ ವಿಷಯ ತಿಳಿದುಕೊಂಡು, ತಾವು ತಿಳಿದುಕೊಂಡದ್ದನ್ನು ಇತರರಿಗೆ ಅರ್ಥವಾಗುವ ರೀತಿಯಲ್ಲಿ ಹೇಳಿ, ಅರ್ಥವಾಗದ ವಿಷಯಗಳ ಬಗ್ಗೆ ಖಚಿತವಾದ ಮಾಹಿತಿಕೊಟ್ಟು ಮನಮುಟ್ಟುವಂತೆ ಮಾತನಾಡುವ ಜನ ಅವರಲ್ಲಿ ಇರಲಿಲ್ಲ. ನಾನು ರೂಢಿಸಿಕೊಂಡಿದ್ದ ಮಾತಿನ ಶೈಲಿ-ಕಲೆ ಅವರಿಗೆ ಬಹಳ ಇಷ್ಟವಾಯಿತು. ಅಲ್ಲದೆ ನಾನು ನಮ್ಮ 'ಭವನ'ಕ್ಕಾಗಿ ಅವರನ್ನು ಯಾವ ರೀತಿಯಲ್ಲೂ ಹಣ ಕೇಳುತ್ತಿರಲಿಲ್ಲ. ಬದಲಾಗಿ 'ನಿಮ್ಮ ನಿಮ್ಮ ಬಳಗಗಳಿಗೇ ನೀವು ಧನ ಸಹಾಯ ಮಾಡಿ, ಪ್ರಾಂತೀಯ ಬಳಗಗಳು ಬೆಳೆಯಬೇಕು. ನಾವು ಪರದೇಶದಲ್ಲಿದ್ದಾಗ ಅದರ ಆವಶ್ಯಕತೆ ಬಹಳವಾಗಿರುತ್ತದೆ' ಎಂದೇ ಹೇಳುತ್ತಿದ್ದೆ! ಇದು ಅವರೆಲ್ಲರ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿತು, 'ಈತ ಬಂದಿರುವುದು ನಮ್ಮನ್ನು ಕೇಳುವುದಕ್ಕಲ್ಲ' ಎನ್ನುವ ದೃಢ ವಿಶ್ವಾಸ ಮೂಡಿತು, ಈ ವಿಶ್ವಾಸವೇ ನನ್ನ ತಲೆ ಕಾಯ್ದದ್ದು!!!!

ನನ್ನ ಮಾತುಗಳು ಅವರ ಮೇಲೆ ಪರಿಣಾಮವಾದುದು, ಅವರ ಬಳಗಗಳಿಗೆ ಅವರ ಜನಗಳೇ ಧಾರಾಳವಾಗಿ ದುಡ್ಡು ಕೊಡು ವಂತಾಯಿತು. 'ಮತ್ತೂರ್‌ಜೀ ಹೇಳಿದರೆ ಜನ ದುಡ್ಡು ಕೊಡುತ್ತಾರೆ' ಎನ್ನುವ ಅಭಿಪ್ರಾಯ ಬಂದಿತು. ಹೀಗೆ ಆ ಪ್ರಾಂತೀಯ ಬಳಗಗಳೂ ನನಗೆ ಬಹಳ ಸ್ನೇಹಪರವಾದವು... ಎಷ್ಟೆಂದರೆ ವಿದ್ಯಾಭವನದ ಜತೆಗೇ ಸೇರಿಕೊಂಡುಬಿಡುವ ಮಟ್ಟಕ್ಕೆ!! ವಿದ್ಯಾಭವನ-ಮರಾಠಿ ಬಳಗ, ವಿದ್ಯಾಭವನ-ಗುಜರಾತಿ ಬಳಗ, ವಿದ್ಯಾಭವನ-ಪಂಜಾಬಿ ಬಳಗ ಹೀಗೆ ಜೊತೆ ಜೊತೆಯಾಗಿ ಹೆಸರು ಕೇಳಿ ಬರತೊಡಗಿತು!!

ಸಹೃದಯರೇ, ಇಲ್ಲಿ ಬಹಳಷ್ಟು ವಿಚಾರಗಳನ್ನು ನಾನು-ನಾನು ಎಂದೇ ಪ್ರಾರಂಭಿಸಬೇಕಾದ ಅಗತ್ಯ ಇದೆ. ನಾನು ಅಲ್ಲಿ ಏಕಾಂಗಿ ಯಾಗಿದ್ದೆ ಎನ್ನುವುದು ಸದೈವ ನಿಮ್ಮ ನೆನಪಿನಲ್ಲಿರಲಿ... ಅಭಿಮನ್ಯುವು ಚಕ್ರವ್ಯೂಹವನ್ನು ಭೇದಿಸಿ ಒಳಹೋಗುವ ತಂತ್ರವನ್ನು ಮಾತ್ರ ತಿಳಿದಿದ್ದಂತೆ, ಲಂಡನ್‌ನಲ್ಲಿ ನಮ್ಮ ಜನದ- ಆ ದೇಶದ ಜನದ ಮನಸ್ಸಿನ ಒಳಹೋಗುವ ತಂತ್ರವಾಗಿ ನನಗೆ ತಿಳಿದಿದ್ದುದು ಒಂದೇ-ಮಾತಿನ ಕಲೆ! ಅದರ ಜತೆಗೆ ನಾನು ಚಿಕ್ಕಂದಿನಿಂದಲೂ ಭಕ್ತಿ-ಪ್ರೀತಿ-ವಿಶ್ವಾಸ ಇರಿಸಿದ್ದ ವೇದ-ವಾಙ್ಮಯಗಳು, ರಾಮಾಯಣ-ಮಹಾಭಾರತ ಕಾವ್ಯಗಳ ಜ್ಞಾನ, ಭಾರತೀಯ ಸಂಸ್ಕೃತಿಯ ಬಗ್ಗೆ ನನಗಿದ್ದ ಕಿಂಚಿತ್ ಅರಿವು... ಇವೆಲ್ಲವನ್ನೂ ಸೇರಿಸಿಕೊಂಡು ಪದಗಳಲ್ಲಿ ಕಟ್ಟಿ , ಅದನ್ನು ಭಾಷಣಗಳ ಹಾರ ಮಾಡಿ ಅವರ ಮನಸ್ಸು ಗೆಲ್ಲುವುದಲ್ಲದೆ ನನಗೆ ಬೇರೆ ಯಾವ ದಾರಿಯೂ ಇರಲಿಲ್ಲ. ಆದ್ದರಿಂದ ತಾವು ಅನ್ಯಥಾ ಭಾವಿಸದೆ, ಪರದೇಶದಲ್ಲಿ ಸಾಕಷ್ಟು ಸವಾಲು ಹಾಕಿದ 'ಯಶ' ಎನ್ನುವ ಮರೀಚಿಕೆಯ ಹಿಂದೆ ಓಡುತ್ತಿದ್ದ ನಿಮ್ಮವನೊಬ್ಬನ ಕುತೂಹಲಕಾರಿ ಕತೆ ಕೇಳುವಾಗ 'ನಾನು' ಎನ್ನುವ ಪದವನ್ನು ಸೈರಿಸಿಕೊಳ್ಳುವ ಸಹನೆ ತೋರುತ್ತಿದ್ದೀರೆಂದು ಆಶಿಸುತ್ತೇನೆ, ನಂಬುತ್ತೇನೆ. ಇದರಲ್ಲಿ ಬರುವ 'ನಾನು' ನಾನೊಬ್ಬನೆಂದಲ್ಲ , ನನ್ನಂತೆ ಏಕಾಂಗಿಯಾಗಿ ಪರದೇಶಕ್ಕೆ ಹೋಗಿ ಕಾರ್ಯಸಾಧನೆ ಮಾಡುವ ಉತ್ಸಾಹೀ ಸಾಹಸಿಗರೆಲ್ಲರನ್ನೂ ಸೂಚಿಸುವಂಥದು. ಇನ್ನು ಮುಂದುವರೆಯೋಣವಷ್ಟೆ?

ಹೀಗೆ ಈ ಸಂಸ್ಥೆ ಬಳಗಗಳೆಲ್ಲಾ ಸೇರಿಕೊಂಡಾಗ ಒಂದು ನಾಟಕದ ಸಂಸ್ಥೆಯನ್ನು ಪ್ರಾರಂಭಿಸಿದೆವು. ಗುಜರಾತಿನ ಜನರ ಜತೆ ಸೇರಿ ಗುಜರಾತಿ ನಾಟಕ ಆಡಿದೆವು. ಚಟುವಟಿಕೆಗಳು ಮುಂದುವರೆದವು. ಏನೇ ಆದರೂ ನಾವು ಪ್ರಾಂತೀಯರನ್ನು ಒಳಗೊಳ್ಳುವೆವು. ಏಕೆಂದರೆ, ನಮ್ಮದು ಪ್ರಾಂತೀಯ ಅಲ್ಲ , ಭವನ್ ಎಂದರೆ ಅದಕ್ಕೆ ರಾಷ್ಟ್ರೀಯ ಸಂಸ್ಥೆಯ ಸ್ಥಾನಮಾನವಿದೆ. ಆದ್ದರಿಂದ ಭವನ ಪ್ರಾಂತೀಯವಾಗಲು ಅಸಾಧ್ಯ. ಪ್ರಾಂತೀಯ ಬಳಗ ಅಥವಾ ಸಂಸ್ಥೆಯಾದಾಗ ಅಲ್ಲಿಗೆ ಬರುವ ಹಣದ ಪ್ರಮಾಣವೂ ಹೆಚ್ಚು. ಆಯಾ ಪ್ರಾಂತ್ಯದ ಜನ, ತಮ್ಮ ಪ್ರಾಂತ್ಯದ ಜನ ತಮ್ಮ ದೇಶದಲ್ಲಿ ಬವಣೆ ಪಡುತ್ತಿದ್ದಾರೆಂದರೆ, ವಿದೇಶದಲ್ಲಿದ್ದರೂ, ತಮ್ಮ ಬಳಗದ ಮೂಲಕ ಹೇರಳವಾಗಿ ಹಣ ಕಳುಹಿಸುತ್ತಾರೆ. ಹಾಗೆಯೇ ಗುಜರಾತ್‌ನಲ್ಲಿ ಆದ ಭೂಕಂಪದ ಸಮಯದಲ್ಲಿ ಆದುದು. ಹಣ ಸಹಾಯ, ದವಸಧಾನ್ಯ , ಬಟ್ಟೆಗಳ ಸಹಾಯದ ಮಹಾಪೂರವೇ ಗುಜರಾತಿನ ಕಡೆ ಹರಿಯಿತು. ಆದರೆ ಅದನ್ನೆಲ್ಲ ನೋಡಿಕೊಂಡು, ಜವಾಬ್ದಾರಿ ಹೊತ್ತು ನಿಂತು, ಎಲ್ಲರಿಗೂ ಸರಿಯಾಗಿ ಹಂಚಿಸುವ ದಕ್ಷತೆ ಯಾರಲ್ಲೂ ಇರಲಿಲ್ಲ. ಅಂತಹ ಸಂದರ್ಭಗಳಲ್ಲಿ ಇತರ ಮಧ್ಯಮನುಷ್ಯರ ಪಾಲಾಗಿಬಿಡುವ ಸಾಧ್ಯತೆ ಇರುತ್ತದೆ. ಕೊಟ್ಟವರಿಗೆ ಕೊಟ್ಟ ಲೆಕ್ಕ , ಪಡೆದುಕೊಳ್ಳಬೇಕಾದವರಿಗೆ ಸಿಕ್ಕುವುದೇ ಇಲ್ಲ, ಮಧ್ಯದವರಿಗೆ ಮಹಾಲಾಭ – ಹಾಗೆ ಈ ವ್ಯವಹಾರ. ಇದು ಪ್ರಾಂತೀಯರ ಕತೆಯಾದರೆ, ರಾಷ್ಟ್ರೀಯ ಸಂಸ್ಥೆ ಎನಿಕೊಂಡಂಥದಕ್ಕೆ ಎಲ್ಲರೂ 'ಅದು ರಾಷ್ಟ್ರೀಯ, ಅವರು ಹಾಗಿದ್ದಾರೆ, ಅವರೇ ಕೊಡಲಿ, ಇವರ ಗತಿ ಹೀಗಿದೆ. ಇವರು ಕೊಡದಿದ್ದರೆ ಹೋಗಲಿ' ಎಂದುಬಿಡುವ ಸ್ವಭಾವ ಸಹಜವಾದ್ದದರಿಂದ, ಹಣ ಬರುವುದು ಸ್ವಲ್ಪ ಕಡಮೆ ಪ್ರಮಾಣದಲ್ಲಿಯೇ! ನಮ್ಮವರೇ ವಿದೇಶದಲ್ಲಿದ್ದರೂ ನಮ್ಮನ್ನೇ ಸಂಶಯದ ದೃಷ್ಟಿಯಿಂದ ನೋಡುವುದು ನಿಜಕ್ಕೂ ವಿಪರ್ಯಾಸ. ಆದರೆ ಇದು ಅಷ್ಟೇ ನಿಜವೂ ಸಹ! ಒಬ್ಬರ ಕಾಲೆಳೆಯಲು ಮತ್ತೊಬ್ಬರ ಪ್ರಯತ್ನ. ಅದೂ ತಮ್ಮ ದೇಶದವರ ಕಾಲನ್ನು ಎಳೆಯುವುದು! ಇದು ನನಗೆ ಅಲ್ಲಿ , ಬಹಳ ಅನುಭವಕ್ಕೆ ಬಂದಿತು. ಎಲ್ಲರ ಸ್ನೇಹ-ವಿಶ್ವಾಸ ಪ್ರೀತಿಗಳಿಸಿ, ಆ ನಂಬಿಕೆಯನ್ನು ಪಡೆದು ಒಂದು ಹಂತಕ್ಕೆ ಬರುವಷ್ಟರಲ್ಲಿ ನಾನು ಅನುಭವಿಸಿದ ಬವಣೆ ಅಷ್ಟಿಷ್ಟಲ್ಲ.

ಎಂಟು-ಹತ್ತು ತಿಂಗಳುಗಳು ಕಳೆದವು – ನಾನು ಲಂಡನ್ನಿಗೆ ಕಾಲಿಟ್ಟು. ವಿದ್ಯಾಭವನಕ್ಕೆ ಬೇರೆ ಜಾಗವೇ ಸಿಕ್ಕಲಿಲ್ಲ. ರಸಲ್ ಸ್ಟ್ರೀಟ್‌ನ ವೈ.ಎಂ.ಸಿ.ಎ. ದಲ್ಲಿಯೇ ನಾನು ಮುಂದುವರೆದೆ. ಅಲ್ಲಿ ದುಡ್ಡು ಹೆಚ್ಚು , ನಿಭಾಯಿಸುವುದು ಕಷ್ಟ ಎನಿಸುತ್ತಿದ್ದಾಗ ಅಲ್ಲಿದ್ದ ಸಹೃದಯರೊಬ್ಬರು 'ನಮ್ಮಲ್ಲಿಯೇ ನೀವು ಪೇಯಿಂಗ್ ಗೆಸ್ಟ್ ಆಗಿರಿ' ಎಂದು ಹೇಳಿ ಆಹ್ವಾನಿಸಿದರು. ಆ ಮನೆಯ ಯಜಮಾನರು ಬಲು ಉದಾರಿ.

ಸಾಮಾನ್ಯವಾಗಿ ವೈ.ಎಂ.ಸಿ.ಎ.ಯ ವೆಚ್ಚ ಬಹಳ ಕಡಮೆ. ಆದರೆ ಯಾವುದೇ ಆದಾಯ ಇಲ್ಲದಿದ್ದಾಗ ಹತ್ತು ಪೈಸೆಯೂ ದುಬಾರಿ ಎನಿಸುತ್ತದೆ. ನನಗೆ ನನ್ನದು ಎನ್ನುವ ಸಂಬಳ ಬರುತ್ತಿರಲಿಲ್ಲ. ರೆಜಿಸ್ಟ್ರಾರ್ ಜೀವನ ನಿರ್ವಹಣೆಗೆ ಎಂದು ಊಟ-ತಿಂಡಿಯ ವೆಚ್ಚವನ್ನು ನಾನು ಬಿಲ್ ಕೊಟ್ಟಾಗಲೇ, ಆ ಬಿಲ್ಲಿಗೆ ಹಣವನ್ನು ಭವನವೇ ಕಳುಹಿಸಿಬಿಡುತ್ತಿತ್ತು. ಹಾಗಾಗಿ ವೈ.ಎಂ.ಸಿ.ಎ. ಯಲ್ಲಿ ನನ್ನ ಊಟ ತಿಂಡಿಯ ಖರ್ಚು ಅಲ್ಲಿಗಲ್ಲಿಗೆ ಸರಿದೂಗುತ್ತಿತ್ತು. ನಾನು ಭಾಷಣಕ್ಕಾಗಿ ಅಲ್ಲಿ-ಇಲ್ಲಿ ತಿರುಗಾಡಲು, ಬೇರೆ ಊರುಗಳಿಗೆ ಹೋಗಲು ರೈಲು ಪಾಸನ್ನು ಮಾಡಿಸಿಕೊಳ್ಳುವ ಖರ್ಚನ್ನು ಭವನವೇ ಕೊಡುತ್ತಿತ್ತು. ಇನ್ನು ನನ್ನ ಕೈ ಖರ್ಚಿಗೆ ಎಂದು, ಎಂದರೆ ಈಗಿನ ಕಾಲದಲ್ಲಿ ಹೇಳುವ ಹಾಗೆ 'ಪಾಕೆಟ್ ಮನಿ' ಎಂದು ಹತ್ತು ಪೌಂಡುಗಳನ್ನು ತಿಂಗಳಿಗೆ

ಕೊಡಲಾಗುತ್ತಿತ್ತು. ಹತ್ತು ಪೌಂಡಿನಲ್ಲೇ ನಾನು ನನ್ನ ಇತರೆ ಖರ್ಚುಗಳನ್ನೂ ಮಾಡಿಕೊಳ್ಳಬೇಕಿತ್ತು. ಜತೆಯಲ್ಲಿ ನನ್ನಾಕೆಯೂ ಇರದಿದ್ದ ಕಾರಣ ಹೇಗೋ ಅಷ್ಟರಲ್ಲೇ ಕಳೆಯುತ್ತಿತ್ತು.

ವೈ.ಎಂ.ಸಿ.ಎ.ಯಲ್ಲಿ ಶಾಕಾಹಾರ, ಮಾಂಸಾಹಾರ, ಎಲ್ಲವನ್ನೂ ಒಂದೇ ಬಾರಿಗೆ, ಒಂದೇ ಸಮಯದಲ್ಲಿ ಬಡಿಸಲಾಗುತ್ತಿತ್ತು. ನಮಗೆ ನಾವು ಬೆಳೆದು ಬಂದ ವಾತಾವರಣಕ್ಕೂ , ಈ ಆಹಾರ ಪದ್ಧತಿಗೂ ಒಂದಕ್ಕೊಂದು ಪರಸ್ಪರ ನೇರ ವಿರುದ್ಧ ಇದ್ದದ್ದು ಅಲ್ಲಿ ಹೊಂದಿಕೊಳ್ಳಲು ಬಹಳ ಕಷ್ಟವಾಗುವಂತಾಗಿತ್ತು. ಆದರೂ ಪರಸ್ಥಳದಲ್ಲಿ ಆಶ್ರಯ ಸಿಕ್ಕಾಗ, ಬಿಟ್ಟು ಎಲ್ಲಿಗೆ ಹೋಗುವುದು ಎನ್ನುವ ಪ್ರಶ್ನೆ ದೊಡ್ಡದಾಗಿತ್ತು. ಯಾರೂ ಮನೆಯಲ್ಲಿಟ್ಟುಕೊಂಡು ಅನ್ನ ಹಾಕುವಷ್ಟು ಪರಿಚಿತರಲ್ಲದಾಗ ಯಾರಲ್ಲಿಗೆ ಹೋಗುವುದು? ಅದೂ ಸಮಸ್ಯೆಯೇ ತಾನೇ? ಆದರೆ ಹೇಗೋ ಒಬ್ಬ ಉದಾರಿಗಳ ಮನೆಯಲ್ಲಿ ನನಗೆ ಪೇಯಿಂಗ್ ಗೆಸ್ಟ್ ಆಗಿರುವ ಅವಕಾಶ ದೊರಕಿತು. ಅದೂ ದೈವ ಸಹಾಯವೇ ಎನ್ನಬಹುದು.

ವೈ.ಎಂ.ಸಿ.ಎ.ಯಲ್ಲಿದ್ದಾಗ ಒಮ್ಮೆ ಹೊಟ್ಟೆ ಹಸಿವು ತಾಳಲಾಗದೆ ಅಲ್ಲಿದ್ದ ಒಂದು ಬ್ರೆಡ್ಡಿನ ಅಂಗಡಿಗೆ ಹೋಗಿ ಅಲ್ಲಿ ಒಂದು ತುಂಡು ಟೋಸ್ಟ್ ಕೊಡಲು ಹೇಳಿದೆ. ನನ್ನ ಮುಖವನ್ನೇ ಒಂದು ರೀತಿಯಾಗಿ ನೋಡಿದ ಅಂಗಡಿಯವನು ಒಂದು ಟೋಸ್ಟ್ ತೆಗೆದ, ತೆಗೆಯುವಾಗ ನನ್ನ ಕಣ್ಣಿಗೆ ಬಿದ್ದದ್ದು ಎರಡು ಬ್ರೆಡ್ಡು ತುಂಡುಗಳ ಮಧ್ಯದಲ್ಲಿದ್ದ ಒಂದು ತುಂಡು ಮಾಂಸದ ಚೂರು. ನಾನು ಅವನಿಗೆ ತಕ್ಷಣವೇ 'ಐ ಆಮ್ ವೆಜಿಟೇರಿಯನ್ ಪ್ಲೀಸ್' ಎಂದೆ (ನಾನು ಸಸ್ಯಾಹಾರಿ ಸ್ವಾಮಿ) 'ಓ', ಎಂದವನೇ ಆ ಮಾಂಸದ ತುಂಡನ್ನು ಇಕ್ಕಳದಿಂದ ತೆಗೆದು ಈಚೆ ಹಾಕಿ, ಆ ಜಾಗಕ್ಕೆ ಒಂದು ಟೊಮೆಟೊದ ದೊಡ್ಡ ದುಂಡು ಬಿಲ್ಲೆಯೊಂದನ್ನಿಟ್ಟು ಒಂದು ಚಿಕ್ಕ ಕವರಿಗೆ ಹಾಕಿಕೊಟ್ಟ! ನಾನು ಅದನ್ನು ಹೇಗೋ ಸಾಹಸ ಮಾಡಿ ಹೊರತಂದು ಅಲ್ಲೇ ಇದ್ದ ಕಸದ ಬುಟ್ಟಿಗೆ ಹಾಕಿ ಬಂದೆ. ಇದು ಮಾಂಸಾಹಾರ ತಿನ್ನುವವರ ಮನನೋಯಿಸಲು ಹೇಳಿರುವ ಮಾತಲ್ಲ. ನಮಗೆ ಅಭ್ಯಾಸವಿಲ್ಲದ ಆಹಾರವನ್ನು ಹೇಗೂ ಅದೆಷ್ಟು ಹಸಿವಿನಿಂದ ನಾವು ನರಳುತ್ತಿದ್ದರೂ ತಿನ್ನಲಾಗದು. ಅದು ಬಹುಶಃ ನಮ್ಮ ಶರೀರದ ಧರ್ಮ. ಹಾಗೆ ತಿಂದರೆ ಒಳ್ಳೆಯದಾಗುವುದಕ್ಕಿಂತ ಕೆಟ್ಟದ್ದಾಗಿ ಆರೋಗ್ಯ ಕೆಡುವುದೇ ಹೆಚ್ಚು. ಆರೋಗ್ಯ ಕೆಡಿಸಿಕೊಳ್ಳುವುದಕ್ಕಿಂತ ಅದನ್ನು ತಿನ್ನದೇ ಉಪವಾಸವಿರುವುದೇ ಸರಿ ಎನಿಸುತ್ತದೆ.

ಗಾಂಧೀಜಿಯವರಿಗೂ ಈ ಆಹಾರ ಪದ್ಧತಿಯ ಅಭ್ಯಾಸವಿರಲಿಲ್ಲ. ಮಾಂಸಾಹಾರ ಮಾಡುವುದಿಲ್ಲ, ಮದ್ಯ ಸೇವಿಸುವುದಿಲ್ಲ, ಪರಸ್ತ್ರೀ ಸಹವಾಸ ಮಾಡುವುದಿಲ್ಲ - ಎಂದು ಅವರು ತಮ್ಮ ತಾಯಿಗೆ ಮಾತು ಕೊಟ್ಟು ಪರದೇಶಕ್ಕೆ ಹೋಗಿದ್ದರಷ್ಟೆ. ಅದನ್ನವರು ಉಳಿಸಿಕೊಂಡರು...! ಇಲ್ಲಿ ಗಾಂಧೀಜಿಗೂ ಇತರರಿಗೂ ಹೋಲಿಸಲು ನಾನು ಹೇಳುತ್ತಿಲ್ಲ. ನನ್ನಂತಹ ಶಾಕಾಹಾರಿಗಳು ಎಷ್ಟೋ ಮಂದಿಯ ಪ್ರತಿನಿಧಿ ಅವರು! ಅಷ್ಟೆ.

ಆ ದೇಶದಲ್ಲಿ ಹೀಗೆಯೇ, ಬಹಳ ವಿರಳವಾಗಿ ನಾವು ಸಸ್ಯಾಹಾರದ ಅಂಗಡಿಗಳನ್ನೋ ಹೋಟೆಲುಗಳನ್ನೋ ನೋಡುತ್ತೇವೆ. ಅಲ್ಲಿನ ಶೀತ ಪರಿಸರಕ್ಕೆ ಆ ಜನ ಮಾಂಸಾಹಾರ, ಮದ್ಯ ಇವುಗಳನ್ನು ನಿಯತವಾಗಿ ಸೇವಿಸಿಕೊಂಡು ಶರೀರ ಬೆಚ್ಚಗಿಟ್ಟುಕೊಳ್ಳುವುದರತ್ತ ಹೆಚ್ಚು ಗಮನ ಹರಿಸುತ್ತಾರೆ. ನನ್ನಂಥವರು ಬಹಳ ಕಡಮೆ ಅಲ್ಲಿ. ಅವರವರ ದೇಶ, ಕಾಲ, ವಾತಾವರಣಕ್ಕೆ ತಕ್ಕಂತಿರುವುದು ಅವರವರ ಆಹಾರ ಪದ್ಧತಿ ಕೂಡ. ನಾವು ನಮ್ಮ ಆಹಾರ ಪದ್ಧತಿಯನ್ನು ಅದಕ್ಕಾಗಿ ಮಾರ್ಪಡಿಸಿಕೊಳ್ಳಲಸಾಧ್ಯ. ೧೫-೧೮ ಗಂಟೆಗಳ ಕಾಲ ಹೀಗೆ ನಾನು ಉಪವಾಸವಿರುವುದು, ತಿನ್ನದೇ ಸುಮ್ಮನೆ ಕೆಲಸ ಮಾಡುವುದು ನಡೆದು ಅಲ್ಸರ್ ಬಂದಿತ್ತು. ನಾನು ತಕ್ಷಣವೇ ಆಪರೇಷನ್ ಮಾಡಿಸಿಕೊಳ್ಳಬೇಕಾಯಿತು. ಮನೆಯಲ್ಲಿ ಯಾರೂ ಇಲ್ಲ, ನನ್ನನ್ನು ನೋಡಿಕೊಳ್ಳಲು. ಅಂತೂ ದೇವರು ಯಾರದೋ ರೂಪದಲ್ಲಿ ಬಂದು ಸಹಾಯ ಮಾಡುತ್ತಾನೆ ಎನ್ನುವುದು ಸುಳ್ಳಲ್ಲ. ಶ್ರೀ ನಿಜಲಿಂಗಪ್ಪನವರ ಅಳಿಯ ಮುದ್ದಪ್ಪನವರು ಆ ಸಮಯದಲ್ಲಿ ನನ್ನ ಸಹಾಯಕ್ಕೆ ಬಂದರು. ನಾನು ಲಂಡನ್ನಿಗೆ ಬರುವಾಗಲೇ ಶ್ರೀ ನಿಜಲಿಂಗಪ್ಪನವರು ತಮ್ಮ ಅಳಿಯನನ್ನು ಪರಿಚಯ ಮಾಡಿಕೊಳ್ಳಲು ನನಗೆ ಹೇಳಿ ಒಂದು ಕಾಗದವನ್ನು ಬರೆದುಕೊಟ್ಟಿದ್ದರು. ನಾನು ಶ್ರೀ ಮುದ್ದಪ್ಪನವರ ಪರಿಚಯವನ್ನು ಮಾಡಿಕೊಂಡಿದ್ದೆ. ಅವರು ಭಾರತದ ಟ್ರೇಡ್ ಕಮಿಷನರ್ ಆಗಿದ್ದರು. ಆಪರೇಷನ್ ಆಗಿದ್ದ ನನ್ನನ್ನು ನೋಡಲು ಶ್ರೀ ಮುದ್ದಪ್ಪನವರು ಬಂದರು. ನನ್ನನ್ನು ವಿಶ್ರಾಂತಿಗಾಗಿ ತಮ್ಮ ಮನೆಯಲ್ಲಿ ಬಂದಿರಲು ಆಹ್ವಾನಿಸಿದರು. ನನಗೋ, ಅವರಿಗೆ ತೊಂದರೆ ಕೊಡಬೇಕಲ್ಲ ಎನ್ನುವ ಸಂಕೋಚ. ಆದರೆ ಬೇರೆ ದಾರಿಯಿಲ್ಲ. ಎಷ್ಟು ದಿನ ಆಸ್ಪತ್ರೆಯಲ್ಲಿರುವುದು? ಅದೂ ಆಗದು... ಅಂತೂ ಆಸ್ಪತ್ರೆ ಬಿಟ್ಟು ಅವರ ಮನೆಗೆ ಹೋದಾಗ ನನಗೆ ಅಚ್ಚರಿ! ಈರುಳ್ಳಿ, ಬೆಳ್ಳುಳ್ಳಿಗಳ ವಾಸನೆಯೂ ಇಲ್ಲದ ಪರಿಸರ, ಅಂತೆಯೇ ಜನ, ಅಂತೆಯೇ ಅಡುಗೆ-ತಿಂಡಿ! ನಾನು ಕುತೂಹಲ ತಡೆಯಲಾರದೆ ಕೇಳಿದಾಗ, 'ಮತ್ತೂರ್‌ಜೀ, ನೀವು ನಮ್ಮ ಮನೆಯಲ್ಲಿ ಇರಲು ಬರುತ್ತೀರಿ ಎಂದ ಮೇಲೆ ನಾವು ಅದನ್ನೆಲ್ಲ ಉಪಯೋಗಿಸುತ್ತೇವೆಯೇ! ನಮ್ಮ ಅತಿಥಿಗಳು ನಮಗೆ ಮುಖ್ಯ. ನಮ್ಮ ಆಹಾರದಲ್ಲಿ ಅವರಿಗಾಗಿ ಒಂದೆರಡು ಪದಾರ್ಥಗಳ ಉಪಯೋಗ ಕಡಮೆಯಾದರೆ ನಮಗೇನೂ ನಷ್ಟವಿಲ್ಲ ಅದರಿಂದ! ಈಗ ಸದ್ಯಕ್ಕೆ ನಿಮ್ಮ ಆರೋಗ್ಯ ನಮಗೆ ಮುಖ್ಯ. ಅದು ಸುಧಾರಿಸಲಿ!' ಎಂದರು. ವಿಶ್ವಾಸದಿಂದ, ಪ್ರೀತಿಯಿಂದ ಆಡಿದ ಈ ಮಾತು ನನ್ನನ್ನು ಮೂಕನನ್ನಾಗಿಸಿತು. ನಾನು ಸುಮ್ಮನೆ ನಕ್ಕು ತಲೆಯಾಡಿಸಿದೆ! ಇಂತಹ ಎಷ್ಟೋ ಮಂದಿ ಸಜ್ಜನರ ಪ್ರೀತಿಯೇ ಅಲ್ಲಿ ನನ್ನನ್ನು ಕಾಪಾಡುತ್ತಿತ್ತು.

ಶ್ರೀ ಮುದ್ದಪ್ಪನವರ ಮನೆಯಲ್ಲಿ ಸುಮಾರು ಹದಿನೈದು ದಿನಗಳ ವಿಶ್ರಾಂತಿ ಪಡೆದು ನಾನು ಭವನದ ಕೆಲಸಕ್ಕೆ ತೊಡಗಲು ನನ್ನ ವಾಸ್ತವ್ಯಕ್ಕೆ ವಾಪಸ್ಸಾದೆ. ಹಾಗೆ ಬರುವ ಮುನ್ನ ಶ್ರೀ ಮುದ್ದಪ್ಪನವರಿಗೆ ನನ್ನ ಕೃತಜ್ಞತೆಗಳನ್ನು ತಿಳಿಸುತ್ತ, 'ನೀವು ನನಗಾಗಿ ಇಷ್ಟೆಲ್ಲಾ ತೊಂದರೆ ತೆಗೆದುಕೊಂಡಿದ್ದೀರಿ, ನಿಮಗಾಗಿ ನಾನು ಏನು ಮಾಡಬಲ್ಲೆ?' ಎಂದೆ. ನನ್ನನ್ನು ಆಳವಾಗಿ ನೋಡಿದ ಶ್ರೀ ಮುದ್ದಪ್ಪನವರು ಕಿರುನಕ್ಕು, 'ಆಗಲಿ ಸ್ವಾಮಿ, ನೋಡೋಣ. ಅಂತಹ ಪರಿಸ್ಥಿತಿ ಬಂದಾಗ ನಿಮ್ಮನ್ನೇ ಕೇಳುತ್ತೇನೆ' ಎಂದರು. ನಾನು ಮತ್ತೆ ಮಾತನಾಡದೆ ಸುಮ್ಮನಾದೆ.

ಭವನದ ಆಫೀಸಿನಲ್ಲಿ ಕುಳಿತಿದ್ದಾಗ ಆ ದಿನ ಶ್ರೀಮತಿ ಮುದ್ದಪ್ಪನವರ ಫೋನು ಬಂದಿತು. ಮತ್ತೂರ್‌ಜೀ 'ಈ ದಿನ ಸಂಜೆ ನೀವು ನಮ್ಮ ಮನೆಗೆ ಊಟಕ್ಕೆ ಬನ್ನಿ' ಎಂದರು. 'ನಾನು ಏನು ವಿಶೇಷ ?' ಎಂದೆ. 'ಈ ದಿನ ಇವರ ಹುಟ್ಟುಹಬ್ಬ. ಅದಕ್ಕೆ ಸ್ವಲ್ಪ ಸಿಹಿ ಮಾಡುತ್ತೇನೆ. ನೀವು ನಮ್ಮ ಜೊತೆ ಊಟ ಮಾಡಿದರೆ ನಮಗೆ ಸಂತೋಷ' ಎಂದರು.

ಅಂತೂ ನಾನು ಕಾದಿದ್ದ ಅವಕಾಶ ಬಂದಿತು. ಆ ಸಂಜೆ, ಅವರಿಗಾಗಿ 'ಗೋಲ್ಡ್ ಕೋಟೆಡ್ ಪಾರ್ಕರ್ ಪೆನ್' ಒಂದನ್ನು ಖರೀದಿಸಿದೆ. ಉಡುಗೊರೆಯೊಡನೆ ಅವರ ಮನೆಗೆ ಹೋದೆ. ಸಂಜೆ ಊಟ ಮುಗಿದ ನಂತರ ಶ್ರೀ ಮುದ್ದಪ್ಪನವರಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ತಿಳಿಸಿ, ಪೆನ್ನಿನ ಉಡುಗೊರೆಯನ್ನು ಅವರ ಕೈಗಿತ್ತೆ. ಪೆಟ್ಟಿಗೆಯೊಳಗಿದ್ದ ಸುಂದರವಾದ ಹೊಳೆಯುವ ಪೆನ್ನನ್ನು ನೋಡಿದ ಶ್ರೀ ಮುದ್ದಪ್ಪನವರು ಕಣ್ಣು ಕಿರಿದಾಗಿಸಿ 'ಅಂತೂ ತೋರಿಸಿಬಿಟ್ಟಿರಲ್ಲಾ ನಿಮ್ಮ ಬ್ರಾಹ್ಮಣರ ಬುದ್ಧಿಯನ್ನು!' ಎಂದರು. ಅವರ ಮುಖದಲ್ಲಿ ಮೆಚ್ಚುಗೆ ಮಿನುಗಿತ್ತು.

ಶ್ರೀ ಕೊಣ್ಣೂರ್

ಇದಾದನಂತರ ನನ್ನ ಆಹಾರ ಬಹಳ ಮಿತವಾಯಿತು. ಹೆಚ್ಚಿಗೆ ಏನನ್ನೂ ತಿನ್ನಲಾಗುತ್ತಿರಲಿಲ್ಲ. ಶ್ರೀ ಬಿ.ಬಿ. ಕೊಣ್ಣೂರವರ ಜತೆ ಪ್ರತಿದಿನ ಒಂದು ಅಂಗಡಿಯಲ್ಲಿ ಒಂದು ಕಪ್ಪು ಥೇಂಡಿ ಮೊಸರು, ಮತ್ತೊಂದು ಕಪ್ಪು ಒಣದ್ರಾಕ್ಷಿ ಹೆಚ್ಚಿದ್ದು, ಗೋಡಂಬಿ, ಬಾದಾಮಿ, ಖರ್ಜೂರ, ಆಕ್ರೋಟು ತೆಗೆದುಕೊಂಡು ಮೊಸರಿಗೆ ಅದನ್ನು ಹಾಕಿಕೊಂಡು ತಿಂದು ಬರುವ ಅಭ್ಯಾಸ ಮಾಡಿಕೊಂಡೆ! ಒಂದು ಗಂಟೆಗೆ ಸರಿಯಾಗಿ ಭವನದ ಬುಕ್‌ಷಾಪನ್ನು ಮುಚ್ಚಿ ನಾನೂ ಕಾಲ್ನಡಿಗೆಯಲ್ಲಿ ಹೊರಡುವುದು. ಶ್ರೀ ಕೊಣ್ಣೂರ್ ಅವರೂ ಅವರ ಆಫೀಸಿನಿಂದ ಕಾಲ್ನಡಿಗೆಯಲ್ಲಿಯೇ ಹೊರಟು, ಇಬ್ಬರೂ ಒಂದೂ ಕಾಲರ ವೇಳೆಗೆ ಆ ಅಂಗಡಿಯ ಬಳಿ ಸೇರುತ್ತಿದ್ದೆವು. ಅವರು ಪ್ರತಿ ದಿನವೂ ನನಗೆ ಹೀಗೆ ಮೊಸರು ಮತ್ತು ದ್ರಾಕ್ಷಿ-ಗೋಡಂಬಿಗಳ ಮಿಶ್ರಣದ ಎರಡು ಕಪ್ಪುಗಳನ್ನು ಬಹಳ ಪ್ರೀತಿಯಿಂದ ಕೊಡಿಸುತ್ತಿದ್ದರು. ಇದಕ್ಕಾಗಿ ನಾನು ಒಂದು ದಿನವೂ ಹಣ ಕೊಟ್ಟಿದ್ದಿಲ್ಲ...! ಅವರ ಈ ವಿಶ್ವಾಸ-ಋಣ ಎಂದಿಗೂ ನಾನು ತೀರಿಸಲಾಗದಂಥದ್ದು!!

ಭಾರತಕ್ಕೆ ಹೋಗು

ದಿನಗಳು ಹಾರುತ್ತಿದ್ದವು. ಎಂಟು-ಹತ್ತು ತಿಂಗಳು ಕಳೆದಿದ್ದವು. ಭವನದಲ್ಲಿ ಯಾವ ಚಟುವಟಿಕೆಗಳನ್ನೂ ಈವರೆಗೆ ನಡೆಸಲು ಸಾಧ್ಯವಾಗಲಿಲ್ಲ. ನಿಲ್ಲುವುದಕ್ಕೆ ಸರಿಯಾದ ನೆಲೆ ಇರಲಿಲ್ಲ... ಯಾವುದೇ ಬೇರೆ ದಾರಿ... ಕಾಣುತ್ತಿರಲಿಲ್ಲ...

ಆ ದಿನ ಬೆಳಗ್ಗೆ ಒಂಬತ್ತರ ಸಮಯ. ಬದಲಾಗದ ಈ ದಿನಚರಿಯಿಂದ ಕಂಗಾಲಾಗಿದ್ದ ನಾನು ಬಹಳ ಬೇಸರ, ಅಸಹಾಯಕತೆ, ಆತಂಕಗಳಿಂದಲೇ ಶ್ರೀ ಚಂದ್ರಕಾಂತ ಮಾಸ್ಟರರ ಬಳಿ ಹೋದೆ. ಅವರು ಕಾರ್ಯಕಾರೀ ಸಮಿತಿಯ ಸದಸ್ಯರು, ಉಪಾಧ್ಯಕ್ಷರು, ವಯಸ್ಸಿನಲ್ಲಿ ಹಿರಿಯರು. ಮೀಟಿಂಗಿನ ಅಧ್ಯಕ್ಷತೆ ವಹಿಸುತ್ತಿದ್ದರು. ಅವರನ್ನು ಕೇಳಿ ಏನಾದರೂ ಹೊಸದಾಗಿ ಪ್ರಯತ್ನ ಮಾಡಬೇಕೆನ್ನುವುದು ನನ್ನ ಆಶಯವಾಗಿತ್ತು. ಹೋದವನೇ ಪರಸ್ಪರ ನಮಸ್ಕಾರಗಳ ವಿನಿಮಯ ವಾದ ಮೇಲೆ, ಮೆಲ್ಲಗೆ ಮಾತು ಪ್ರಾರಂಭಿಸಿದೆ. 'ಮಾಸ್ಟರ್, ಇಷ್ಟು ದಿನಗಳಾದವು; ಯಾವುದೇ ಬೆಳವಣಿಗೆ ಕಾಣುತ್ತಿಲ್ಲ. ಏನು ಮಾಡುವುದು ಒಂದೂ ತಿಳಿಯುತ್ತಿಲ್ಲ. ಆದರೂ...ಆದರೂ ಏನಾದರೂ ಮಾಡಬೇಕಲ್ಲ...'ಎಂದು ತಡೆದು ನಿಲ್ಲಿಸಿದೆ. ಅದಕ್ಕೆ ನಿರ್ವಿಕಾರವಾಗಿ ತಣ್ಣಗೆ ನನ್ನ ಕಡೆನೋಡಿದ ಅವರು ತಮ್ಮ ಡ್ರಾದಿಂದ ಟಿಕೆಟ್ ತೆಗೆದು ನನ್ನ ಮುಂದೆ ಹಾಕಿದರು. 'ಮಾಥೂರ್, ಇದೋ ಭಾರತಕ್ಕೆ ವಾಪಸಾಗಲು ಟಿಕೆಟ್ಟು ನಿನಗೆ ಇಲ್ಲಿ' ಎಂದರು, ಇಂಗ್ಲಿಷ್‌ನಲ್ಲಿ. ಕೈಗೆ ತೆಗೆದುಕೊಂಡು ನೋಡಿದೆ ಏರ್‌ಇಂಡಿಯಾದ ಟಿಕೆಟ್ಟು ಅದು! ನನಗೋ ಪರಮಾಶ್ಚರ್ಯ, ಅವರು ಹೇಳಿದ್ದುದನ್ನು ಕೇಳದವನಂತೆ, ಕೇಳಿದುದನ್ನು ನಂಬಲಾಗದವನಂತೆ ನಾನು, ಅಷ್ಟೇ ಆಶ್ಚರ್ಯದಿಂದ, 'ಮಾಸ್ಟರ್, ಯಾರಿಗಾಗಿ ಈ ಟಿಕೆಟ್ಟು?' ಎಂದು ಕೇಳಿದೆ. ಅದಕ್ಕೆ ಅವರು 'ನಿನಗೇ! ನಿನಗೆ ನಿನ್ನ ಹೆಂಡತಿ-ಮಕ್ಕಳನ್ನು ನೋಡಬೇಕೆನಿಸಿದ್ದರೆ, ನೀನು ಕೂಡಲೇ ಹೊರಡಬಹುದು!' ಎಂದರು ನಿರ್ಲಿಪ್ತರಾಗಿ. ನಮಗೆ ಮಾಸ್ಟರರ ಮದ್ಯಪಾನದ ದೌರ್ಬಲ್ಯ ಗೊತ್ತಾಗಿ, 'ಇದೇನಿದು ಹೀಗೆ ಹೇಳುತ್ತಿದ್ದಾರೆ? ಇದೇನು ? ಈ ದಿನ ಬೆಳಗ್ಗೆಯೇ ಕುಡಿದು ಬಂದಿದ್ದಾರೋ ?' ಎಂದು ಸಂಶಯವೇ ಆಯಿತು. ಹೀಗೇಕೆ ಮಾಡುತ್ತಿದ್ದಾರೆ ಇವರು ಎನಿಸಿ ಮನಸ್ಸು ಬಹಳ ಚಿಕ್ಕದಾಯಿತು. ಮನ ಮುದುರಿದ್ದು ಮುಖದಲ್ಲಿ ನೋವಾಗಿ ಕಂಡಿತು. ಆದರೆ ಅವರು ನನ್ನನ್ನು ಗಮನಿಸುವ ಸ್ಥಿತಿಯಲ್ಲಿರಲಿಲ್ಲ. ಕೊನೆಗೆ ನಾನೇ 'ಮಾಸ್ಟರ್, ನೀವು ನಿಜವಾಗಿಯೂ ಈ ಮಾತು ಹೇಳುತಿದ್ದೀರಾ?' ಎಂದೆ. ನನಗೆ ಆಕಾಶ ತಲೆಯ ಮೇಲೆ ಬಿದ್ದಂತಾಗಿ, ನನ್ನ ಧ್ವನಿಯೇ ನನಗೆ ಅಪರಿಚಿತವಾಗಿ ಕಂಡಿತು. 'ಹೌದು, ನೀನೇನು ತಿಳಿದುಕೊಂಡೆ ಮತ್ತೆ? ನಾನು ಗಂಭೀರವಾಗಿಯೇ ಈ ಮಾತು ನಿನಗೆ ಹೇಳಿದ್ದು' ಎಂದರು ತಮ್ಮದೇ ಗತ್ತಿನ ಇಂಗ್ಲಿಷ್‌ನಲ್ಲಿ. ನಾನು ಟಿಕೆಟ್ಟನ್ನು ತೆಗೆದುಕೊಳ್ಳಲಿಲ್ಲ, ಅವರ

ಮುಂದಕ್ಕೆ ಅದನ್ನು ಸರಿಸಿ, ಎದ್ದು ನಿಲ್ಲಲೂ ತ್ರಾಣವಿಲ್ಲದವನಂತಾಗಿದ್ದರೂ, ಪ್ರಯಾಸದಿಂದ ಎದ್ದು ಅದೇ ಗಂಭೀರ ಧ್ವನಿಯಲ್ಲಿ ನಾನೂ ಅವರಿಗೆ ಹೇಳಿದೆ.

'ಮಾಸ್ಟರ್, ನಾನಿಲ್ಲಿಗೆ ಬಂದದ್ದು ಖಾಲಿ ಕೈಯಲ್ಲಿ, ಏನನ್ನೂ ಸಾಧಿಸದೆ, ಹಿಂದಿರುಗಿ ಹೋಗುವುದಕ್ಕಲ್ಲ. ನಾವು ಹೇಗಾದರೂ ಭವನವನ್ನು ಪ್ರಾರಂಭಿಸಬೇಕಿದೆ ಇಲ್ಲಿ. ಹಾಗೆ ಪ್ರಾರಂಭಿಸಿದ ಭವನದಲ್ಲಿ ಕೆಲಸ ಮಾಡಲು ಇಲ್ಲಿ ಬಂದಿದ್ದೇನೆ. ನಾನು, ಸುಮ್ಮನೆ ಭಾರತಕ್ಕೆ ವಾಪಸಾಗಲು ಬರಲಿಲ್ಲ. ಅಲ್ಲಿಗೆ ಹೋಗಿ, ನನ್ನ ಮೇಲೆ ಭರವಸೆ ಇಟ್ಟು ನನ್ನನ್ನು ಇಲ್ಲಿಗೆ ಕಳುಹಿಸಿದ ಜನರಿಗ ನಾನು ಹೇಗೆ ಮುಖ ತೋರಿಸಲಿ? ಅದನ್ನು ನೀವಾದರೂ ಹೇಗೆ ನಿರೀಕ್ಷಿಸಿದಿರಿ?' ಇಷ್ಟು ಹೇಳುವುದರಲ್ಲಿ ನನ್ನ ಸಹನೆಯ ಕಟ್ಟೆಯೊಡೆದಿತ್ತು. ನಾನು ಭಾವೋದ್ವೇಗದಿಂದ ನಡುಗಿ ಹೇಗೋ ಹೊರಗಡೆ ಬಂದು ಅಲ್ಲೇ ಇದ್ದ ಬೆಂಚಿನ ಮೇಲೆ ಕುಸಿದು ಕುಳಿತೆ. ಕೈಗಳೆರಡೂ ತಾವಾಗಿಯೇ ಮುಖವನ್ನು ಮುಚ್ಚಿಕೊಂಡವು. ತಡೆಯಲಾಗದೆ ಅಳಲು ಪ್ರಾರಂಭಿಸಿದೆ. ಅಲ್ಲಿ ಕೆಲಸ ಮಾಡುತ್ತಿದ್ದ ಜನರೆಲ್ಲರಿಗೂ ನನ್ನ ಪರಿಚಯ ಇದ್ದುದರಿಂದ, ನಾನು ಹೀಗೆ ಕಣ್ಣೀರಿಡುವುದನ್ನು ಗಮನಿಸಿದ ಅವರುಗಳು ಓಡಿ ನನ್ನ ಹತ್ತಿರ ಬಂದು 'ಮಾಥೂರ್‌ಜೀ ಏನಾಯಿತು? ಏನಾಯಿತು' (ಕ್ಯಾ ಹೋಗಯಾ?) ಎಂದರು. ಅವರೆಲ್ಲರಿಂದ ಹೇಗೋ ಸಾವರಿಸಿಕೊಡು, ಬಿಡಿಸಿಕೊಂಡು ಹೊರ ಬಂದ ನಾನು ಈಗ ನಿಜಕ್ಕೂ ಪರದೇಶದಲ್ಲಿ ಏಕಾಕಿಯಾಗಿದ್ದೆ... ಇನ್ನು ಬದುಕಿ ಉಳಿಯುವುದರಲ್ಲಿ ಅರ್ಥವಿಲ್ಲ ಎನಿಸತೊಡಗಿತು. ನಂಬಿ ಒಪ್ಪಿಸಿದ ಕೆಲಸವನ್ನು ಮಾಡಲಾಗದೆ, ಸೋತ ಮುಖ ಹೊತ್ತು ಹೋದವರನ್ನು ಹೆಂಡತಿ ಯಾದರೂ ಆದರಿಸಿಯಾಳೆ ?

ಆತ್ಮಹತ್ಯೆಗೆ ಯತ್ನ

ಯುದ್ಧಕ್ಕೆ ಹೋದ ಪತಿ ರಣರಂಗ ಬಿಟ್ಟು ಓಡಿಬಂದಾಗ ಅವನನ್ನು ತನ್ನ ಗೆಳತಿಯರ ಜತೆ ಬಾವಿಯಲ್ಲಿ ನೀರು ಸೇದಲು ಬಂದಿದ್ದ ಪತ್ನಿ ಎದುರುಗೊಂಡು, ರಣರಂಗದಿಂದ ಬದುಕಿಬಂದನಲ್ಲಾ ಎನ್ನುವ ಸಂತೋಷ ವ್ಯಕ್ತಪಡಿಸದೆ, ಗಂಭೀರ ಮುಖಭಾವದಿಂದ, 'ಬಂದು ದಣಿವಾಗಿರಬಹುದು ನಿಮಗೆ, ಅದೋ ಅಲ್ಲಿದೆಯಲ್ಲ ನಾವುಗಳು ಸ್ನಾನ ಮಾಡುವ ನೀರಿನ ಬಾವಿ. ಅಲ್ಲಿ ಸ್ನಾನ ಮಾಡಿ ಮನೆಗೆ ಬನ್ನಿ' ಎಂದಳಂತೆ! ಅರ್ಥಾತ್ 'ಹೆಂಗಸರಾದ ನಾವುಗಳು ಸ್ನಾನ ಮಾಡುವ ಜಾಗ' ಎಂದು. ಇದನ್ನು ಕೇಳಿದ ಕೂಡಲೇ ಅವಳ ಪತಿ ಯುದ್ಧಭೂಮಿಗೆ ವಾಪಸಾದನಂತೆ, ಹಳ್ಳಿಯೊಳಗೆ ಕಾಲನ್ನೂ ಇಡದೆ! ಹಾಗೆ ನಮ್ಮ ದೇಶದ ನಾರಿಯರು!! ನಾರಿಯರಿಗೇ ಅಷ್ಟು ಸ್ವಾಭಿಮಾನ ಇರುವ ಭೂಮಿಯಲ್ಲಿ ಹುಟ್ಟಿ, ಇಲ್ಲಿಯ ತನಕ ಬಂದಿರುವ ನಾನು ಸೋತ ಮುಖ ಹೊತ್ತು ಹೋಗಲೆ? ಮನಸ್ಸು 'ಇಲ್ಲ ಹೋಗಲಾರೆ. ಹಾಗೆ ಹೋಗುವುದಿಲ್ಲ' ಎಂದು ಚೀರಿತು.

ಅಲ್ಲಿನ ಮೆಡಿಕಲ್ ಸ್ಟೋರ್ಸ್‌ಗಳಲ್ಲಿ ಒಬ್ಬರಿಗೆ ಎರಡೇ ನಿದ್ರೆ ಮಾತ್ರೆಗಳನ್ನು ಕೊಡುವುದು. ಹೆಚ್ಚಿಗೆ ಕೊಡುವುದಿಲ್ಲ. ೧೨ ಅಂಗಡಿಗಳಿಗೆ ಹೋಗಿ ೨೪ ನಿದ್ರೆಮಾತ್ರೆಗಳನ್ನು ಸಂಗ್ರಹಿಸಿಕೊಂಡೆ. ಮನುಷ್ಯನ ಪ್ರಾಣ ಹೋಗಲು ೨೪ ಮಾತ್ರೆಗಳು ಸಾಕು ಎಂದೂ ನನಗೆ ತಿಳಿದಿತ್ತು. ನೇರವಾಗಿ ವೈ.ಎಂ.ಸಿ.ಎ.ದ ರೂಮಿಗೆ ಹೋದವನೇ ಸಾಯಲು ಸಿದ್ಧತೆ ಮಾಡಿಕೊಂಡೆ. ವೈ.ಎಂ.ಸಿ.ಎ.ಯ ರೂಮು, ನಾನು ಬಾಗಿಲು ಹಾಕಿಕೊಂಡು ಪ್ರಾಣ ಬಿಟ್ಟರೆ ಯಾರಿಗೂ ತಿಳಿಯದೆ ನನ್ನ ಹೆಣವೂ ಕೊಳೆಯಬಹುದಷ್ಟೆ? ಅದಕ್ಕೇ ಬಾಗಿಲನ್ನು ಚಿಲುಕ ಹಾಕದೆ ಹಾಗೆಯೇ ಮುಚ್ಚಿದೆ. 'ನನ್ನ ಸಾವಿಗೆ ಯಾರೂ ಕಾರಣರಲ್ಲ. ಜೀವನದಲ್ಲಿ ನಿರಾಸೆಯಾಗಿ ನಾನೇ ಆತ್ಮಹತ್ಯೆ ಮಾಡಿಕೊಂಡಿದ್ದೇನೆ' ಎಂದು ಒಂದು ಕಾಗದದಲ್ಲಿ ಬರೆದು ನನ್ನ ಸಹಿ ಹಾಕಿ ಟೇಬಲ್ಲಿನ ಮೇಲಿಟ್ಟೆ-ಮರಣಪತ್ರವಾಗಿ. 'ರಾತ್ರಿ ೧೨ ಘಂಟೆಗೆ ಸರಿಯಾಗಿ ಸಾಯೋಣ' ಎಂದು ಮುಹೂರ್ತ ಇಟ್ಟುಕೊಂಡೆ. ಸುತ್ತಮುತ್ತ ಎಲ್ಲವನ್ನೂ ನೋಡಿದೆ. ವೈ.ಎಂ.ಸಿ.ಎ.ಯ ಸಣ್ಣ ರೂಮು ೧೦'x೧೨'; ಒಂದು ಮಂಚ, ಒಂದು ಟೇಬಲು, ಒಂದು ಕುರ್ಚಿ, ಒಂದು ಕಸದ ಬುಟ್ಟಿ, ಒಂದು ಬೀರು. ಇಷ್ಟೂ ಅನುಕೂಲಗಳು ಅಲ್ಲಿ ಉಳಿದುಕೊಳ್ಳಲಿಕ್ಕೆ... ಇವು ಯಾವುದೂ ಬದುಕಲು ಆಸೆ ಹುಟ್ಟಿಸಲಿಲ್ಲ... ನನ್ನ ನಿರ್ಧಾರವನ್ನು ಮತ್ತೊಮ್ಮೆ ಪರಿಶೀಲಿಸುವಾ ಎಂದುಕೊಳ್ಳುವಂತೆ ಮಾಡಲಿಲ್ಲ. ಅನ್ನ ನೀರು ಸೇವಿಸಲಿಲ್ಲ. ಬದಲಾಗಿ ಎಲ್ಲವೂ ನೀರಸವಾಗಿ ಕಂಡಿತು. ಗಡಿಯಾರ ಓಡುತ್ತಿತ್ತು. ಮನಸ್ಸು ಸಿದ್ಧವಾಗಿತ್ತು. ಸಮಯ ೧೧.೪೦ ; ಇನ್ನೂ ೨೦ ನಿಮಿಷಗಳಿದ್ದವು - ಸಾವಿಗೆ ನಾನಿಟ್ಟ ಮುಹೂರ್ತಕ್ಕೆ! ೨೦ ನಿಮಿಷಗಳು ವ್ಯರ್ಥ ಮಾಡಬೇಕಾದರೂ ಏಕೆ? ಎಂದು, ಒಂದು ಪುಸ್ತಕವನ್ನಾದರೂ ಓದುತ್ತ ಕುಳಿತಿರುವಾ ಎಂದುಕೊಂಡು ಅಲ್ಲಿ ಟೇಬಲ್ಲಿನ ಮೇಲೆ ಜೋಡಿಸಿದ್ದ ಪುಸ್ತಕಗಳಿಗೆ ಕೈ ಹಾಕಿದಾಗ ಸಿಕ್ಕಿದ್ದು ರಾಮಾಯಣ. 'ರಾಮಾಯಣ', 'ಮಹಾಭಾರತ', 'ಗೀತೆ' ಪುಸ್ತಕಗಳಿದ್ದವು ನನ್ನ ಬಳಿ. ಅದರಲ್ಲಿ ಈಗ, ಈ ಸಾಯುವ ಸಮಯದಲ್ಲಿ ರಾಮಾಯಣವೇ ಕೈಗೆ ಬಂದಿತ್ತು! ಮನಸ್ಸು ದೃಢವಾಗಿತ್ತು. ಪುಸ್ತಕವನ್ನು ಸುಮ್ಮನೆ ತೆರೆದಾಗ ಕಣ್ಣಿಗೆ ಬಿದ್ದ ಶೀರ್ಷಿಕೆ 'ಹನುಮಂತನ ಆತ್ಮಹತ್ಯೆ'ಯ ಪ್ರಯತ್ನ! ಅದೆಷ್ಟು ಸಲ ಅನುಭವಿಸಿ, ಅನುಭವಿಸಿ ನಾನು ಈ ಅಧ್ಯಾಯವನ್ನು ಓದಿರಲಿಲ್ಲ? ಇಂದೆಂಥ ಸಂಯೋಗ? ನಾನೂ ಆತ್ಮಹತ್ಯೆಗೇ ಸಿದ್ಧನಾಗುತ್ತಿದ್ದೇನೆ. ಇಲ್ಲಿ ಬಂದಿರುವುದೂ ಆತ್ಮಹತ್ಯೆಯ ಪ್ರಯತ್ನದ ಪ್ರಕರಣವೇ? ಅನ್ಯ ಮನಸ್ಕನಾಗಿ ಓದತೊಡಗಿದೆ. ಹಾಗಾದರೂ ನಾನು ಓದುತ್ತಿದ್ದೆ. ಅಲ್ಲಿನ ಪದಗಳು, ವಿಷಯ ನನ್ನ ತಲೆಗೆ ಹೋಗುತ್ತಿತ್ತು. ಬುದ್ಧಿ ಆ ಪರಿಸ್ಥಿತಿಯನ್ನು ಕುರಿತೇ ಯೋಚಿಸುತ್ತಿತ್ತು.

'ನಾನು ವಾಪಸ್ಸು ಅಲ್ಲಿ ಹೋಗಿ ಸೀತೆಯನ್ನು ಕಾಣಲಿಲ್ಲ ಎಂದರೆ ರಾಮ 'ಹಾ ಸೀತೆ' ಎಂದು ಪ್ರಾಣ ಬಿಡುತ್ತಾನೆ. ಇದು ನಿಶ್ಚಯ,

ಲಕ್ಷ್ಮಣ ಅವನನ್ನು ಅನುಸರಿಸುತ್ತಾನೆ. ಭರತ ಅಗ್ನಿಯಲ್ಲಿ ಹಾರಿಕೊಳ್ಳುತ್ತಾನೆ. ಶತ್ರುಘ್ನ ಭರತನನ್ನು ಅನುಸರಿಸುತ್ತಾನೆ! ನಾನು ಹೋಗಿ ಇಷ್ಟೆಲ್ಲ ಅನಾಹುತ ಆಗುವುದಕ್ಕಿಂತ ನಾನು ಅಲ್ಲಿಗೆ ವಾಪಸಾಗದಿರುವುದೇ ಕ್ಷೇಮ. ಒಂದಲ್ಲ ಒಂದು ದಿನ ಬಂದೇ ಬರುತ್ತಾನೆ ಎಂದು, ನನ್ನನ್ನು ನಿರೀಕ್ಷಿಸಿ ಎಲ್ಲರೂ ಜೀವದಿಂದಿರುತ್ತಾರೆ... ಹೌದು, ಆತ್ಮಹತ್ಯೆ ಕೊನೆಯ ಚರಣ... ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕಾದರೆ ನನ್ನ ಪ್ರಯತ್ನಗಳೆಲ್ಲಾ ಮುಗಿದಿರಬೇಕು. ಮಾಡಿದ ಎಲ್ಲ ಪ್ರಯತ್ನಗಳೂ ವಿಫಲ ಆಗಿರಬೇಕು. ಹಾಗಾದರೆ ನಾನು ಎಲ್ಲ ಸ್ಥಳಗಳನ್ನೂ ಸರಿಯಾಗಿ ಹುಡುಕಿದ್ದೇನೆಯೇ? ನನ್ನ ಪ್ರಯತ್ನದಲ್ಲಿ ಕೊರತೆಯೇ ಇಲ್ಲವೇ?...' ಹನುಮಂತನ ವಿಚಾರ ಲಹರಿ ಹೀಗೆ ಹರಿಯುತ್ತಿದ್ದಂತೆ ತಲೆ ಎತ್ತಿ ನೋಡಿದಾಗ ಅಲ್ಲಿ, ದೂರದಲ್ಲಿ ಒಂದು ದೊಡ್ಡ ವನ ಕಾಣಿಸಿತು. ತಕ್ಷಣವೇ 'ಅರೇ! ಈ ವನವನ್ನು ನಾನು ನೋಡಲೇ ಇಲ್ಲವಲ್ಲ! ಅಲ್ಲಿಗೆ ಹೋಗಿ ಹುಡುಕುತ್ತೇನೆ. ಸೀತೆ ಖಂಡಿತವಾಗಿಯೂ ಸಿಗುತ್ತಾಳೆ.'

೨೦. ಅಮೃತ ಘಳಿಗೆ

ದಲಾಲ್‌ಜೀ

ನನ್ನ ಓದು ನಿಂತಿತು. ಹೌದು... ನನ್ನ ಪ್ರಯತ್ನಗಳೆಲ್ಲವೂ ಮುಗಿದುವೇ, ಎಲ್ಲದರಲ್ಲೂ ನಾನು ವಿಫಲನಾದೆನೇ? ಹಾಗಾದರೆ ನಾನೀಗ ಆತ್ಮಹತ್ಯೆ ಮಾಡಿಕೊಳ್ಳಬಹುದೇ? ಈ ಯೋಚನೆ ನನ್ನ ಮನಸ್ಸಿನಲ್ಲಿ ಬರುತ್ತಿದ್ದಂತೆಯೇ ನನ್ನ ದೃಷ್ಟಿಗೆ ಶ್ರೀ ಮಾಣೇಕ್ ದಲಾಲರು ಪುಸ್ತಕದ ಅಂಚಿನಲ್ಲಿ ನಡೆದು ಕೊಂಡು ಹೋದ ಹಾಗೆ ಭ್ರಮೆಯಾಯಿತು. ಕಣ್ಮುಚ್ಚಿಕೊಂಡು ನೋಡಿದೆ. ಹೌದು ಅವರು ದಲಾಲ್‌ಜೀಯೇ! ನಡೆದುಕೊಂಡು ಹೋಗುತ್ತಿದ್ದಾರೆ! ಇದು ಯಾವುದಕ್ಕೆ ಸೂಚನೆ? ಎಂಥದೋ ಒಂದು ರೀತಿಯಲ್ಲಿ ಧೈರ್ಯ ತುಂಬುವ ಹಾಗೆ ಅವರ ಆ ನಡಿಗೆ!! ದಲಾಲ್‌ಜೀ ಹನುಮಂತ... ಅಲ್ಲೇ, ದಲಾಲ್‌ಜೀ ಯನ್ನು ಕಂಡೆ... ಅಲ್ಲೇ ಹನುಮಂತನನ್ನೂ ಕಂಡೆ... ಬುದ್ಧಿಗೆ ಮಿಂಚಿನ ಸಂಚಾರವಾದಂತಾಯಿತು. ಎಲ್ಲ ಪ್ರಯತ್ನ ಮಾಡಿದ್ದೇನೆಯೇ ನಾನು...? ದಲಾಲ್‌ಜೀಯನ್ನು ಕೇಳಿದ್ದೇನೆಯೇ, ಅವರಲ್ಲಿ ಮಾತಾಡಿದ್ದೇನೆಯೇ?

ಉತ್ತರ 'ಇಲ್ಲ!' ಏಕಾಗಬಾರದು? ದಲಾಲ್‌ಜೀಯನ್ನು 'ವಿದ್ಯಾಭವನದ ಅಧ್ಯಕ್ಷರಾಗಿ' ಎಂದು ಕೇಳಬಾರದೇಕೆ? ಅವರು ಏನೆನ್ನುತ್ತಾರೋ ಅದು ಮುಂದಿನ ವಿಷಯ. ಆದರೆ ಅವರನ್ನು ನಾ ಕೇಳಿಲ್ಲ... ಮನಸ್ಸು ಏಕೋ ಹಗುರವಾಗಿ ಸ್ವಲ್ಪ ಪ್ರಫುಲ್ಲವಾಯಿತು, ಅವರ ನೆನಪಿನಿಂದ! ಅವರ ಮಂದಹಾಸ, ಮೃದುಮಾತು, ಶಾಂತ ಮುಖಭಾವ, ಗಂಭೀರ ನಿಲುವು ಮನದಲ್ಲಿ ತೇಲಿಬಂದಿತು. ಇದೊಂದು ಕಡೆಯ ಪ್ರಯತ್ನ... ಹೌದು...! ಇದೂ ವಿಫಲ ಆದರೆ ಈ ದಿನ ಸಾಯುವ ಬದಲು ನಾಳೆ ಸತ್ತರಾಯಿತು! ಎಂದುಕೊಂಡವನೇ, ಆತ್ಮಹತ್ಯೆಯ ನಿರ್ಧಾರವನ್ನು ಮಾರನೆಯ ದಿನಕ್ಕೆ ಮುಂದಕ್ಕೆ ಹಾಕಿ, ದೀಪ ಆರಿಸಿ ಮಲಗಿದೆ... ಆ ರಾತ್ರಿ ಮನಸ್ಸಿನ ತುಂಬಾ ದಲಾಲ್‌ಜೀಯ ಚಿತ್ರವೇ!!

ಬೆಳಗ್ಗೆ ದಲಾಲ್‌ಜೀಯವರ ಸಮಯ ಕೇಳಿ, ಅವರನ್ನು ಭೇಟಿಯಾಗಲು ಅನುಮತಿ ತೆಗೆದುಕೊಂಡೆ. ಅವರು ಹೇಳಿದ ಸಮಯಕ್ಕೆ ಸರಿಯಾಗಿ ಅಪರಾಹ್ನ ೨.೧೫ಕ್ಕೆ ಅವರ ಆಫೀಸಿಗೆ ಹೋದೆ... ಸರಳವಾದ ಮಾತುಗಳಲ್ಲಿ ನನ್ನ ಬೇಡಿಕೆಯನ್ನು ಬಹಳ ವಿನಯದಿಂದ ಅವರ ಮುಂದಿಟ್ಟೆ. ಮೊದಲು ಅವರು ಅದಕ್ಕೆ ಅಷ್ಟು ಸುಲಭವಾಗಿ ಒಪ್ಪಲಿಲ್ಲ. ಕಾರಣ ಅವರ ಕಾರ್ಯಭಾರವೇ ಅಂಥದು. ಅಷ್ಟು ಬಿಡುವಿಲ್ಲದ ಕೆಲಸಕಾರ್ಯಗಳು, ಅನೇಕ ಜವಾಬ್ದಾರಿಗಳು ಅವರಿಗೆ ಇದ್ದು, 'ಭವನದ ಕೆಲಸವನ್ನೂ ಹೆಗಲಿಗೇರಿಸಿಕೊಂಡರೆ, ನಾನು ಅದಕ್ಕೆ ನ್ಯಾಯ ಸಲ್ಲಿಸಲು ಆಗುವುದೋ ಇಲ್ಲವೋ' ಎನ್ನುವ ಆತಂಕದಿಂದ ಅವರು ಸ್ವಲ್ಪ ಅನುಮಾನಿಸಿದರು. ಅವರ ಈ ಆತಂಕ ನನಗೆ ಅರ್ಥವಾದ ಕೂಡಲೇ ನಾನು ಅವರಿಗೆ ಈ ಜವಾಬ್ದಾರಿ ಹೊರಲು ಅನುಮತಿ ಕೊಟ್ಟರೆ ಸಾಕು ಎಂದೂ, ನಾನು ಅವರಿಗೆ ಸರ್ವವಿಧದಲ್ಲೂ ಸಹಾಯಕನಾಗಿ ಅವರು ಈ ಜವಾಬ್ದಾರಿ ನಿರ್ವಹಿಸಲು ಶಕ್ತಿಮೀರಿ ಸಹಾಯ ಮಾಡುತ್ತೇನೆ ಎಂದೂ ಭರವಸೆ ಕೊಟ್ಟೆ. ತೆಗೆದುಕೊಂಡ ಕೆಲಸವನ್ನು ಚೆನ್ನಾಗಿ ಮಾಡಬೇಕು, ಇಲ್ಲವಾದರೆ ಆ ಕೆಲಸ ತೆಗೆದುಕೊಳ್ಳಲೇಬಾರದು ಎಂದು ನಾನು ಯೋಚಿಸುವಂತೆಯೇ ಅವರೂ ಯೋಚಿಸಿದ್ದರು. ಈಗ ಅವರನ್ನು ಹೇಗೂ ಬಿಟ್ಟುಕೊಡಲು ನಾನು ತಯಾರಿರಲಿಲ್ಲ. ಹೇಗಾದರೂ ಮಾಡಿ ಅವರನ್ನು ಒಪ್ಪಿಸಿಯೇ ಮುಂದುವರೆಯಬೇಕಿತ್ತು. ಕೊನೆಗೆ ಚಂದ್ರಕಾಂತ ಮಾಸ್ಟರರು ನನಗೆ ಹೇಳಿದುದನ್ನು, ನಾನು ಅವರಿಗೆ ಬದಲು ಹೇಳಿದುದನ್ನು ಹೇಳಿ, ನಾನು ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಾರ ಮಾಡುವವರೆಗೂ ಯೋಚನೆ ಮಾಡಿದ್ದಾಗಿ ಹೇಳಿ, ನನ್ನ ಕಟ್ಟಕಡೆಯ ಪ್ರಯತ್ನವಾಗಿ, ನಾನು ಅವರಲ್ಲಿಗೆ ಬಂದಿರುವುದಾಗಿ ಹೇಳಿದೆ. ಇದನ್ನೆಲ್ಲ ಬಹಳ ಸಹನೆಯಿಂದ ಕೇಳಿದ ದಲಾಲ್‌ಜೀ, 'ಆಯಿತು ಮತ್ತೂರ್‌ಜೀ, ನೀವು ಹೇಳಿದಂತೆಯೇ ಆಗಲಿ, ನಾನು ಭವನದ ಲಂಡನ್ ಕೇಂದ್ರದ ಅಧ್ಯಕ್ಷನಾಗಲು ತಯಾರಿದ್ದೇನೆ. ಆದರೆ ಈ ಪ್ರಯತ್ನ ಒಂದು ವರ್ಷದವರೆಗೆ ಮಾತ್ರ...! ನೋಡೋಣ ಒಂದು ವರ್ಷ... ಏನಾಗುತ್ತದೆ ಎಂದು!' ಎಂದರು. ನನಗೆ ಬೇಕಾಗಿದ್ದದ್ದೂ ಅಷ್ಟೇ!! ಅವರ ಬಾಯಿಂದ ಬಂದ ಆ ಮಾತುಗಳು ಆ ಕ್ಷಣ... ಭವನದ, ಲಂಡನ್ ಕೇಂದ್ರದ 'ಅಮೃತ ಘಳಿಗೆ'ಯಾಗಿತ್ತು!!!

ರೆಜಿಸ್ಟ್ರಾರ್ ಎನಿಸಿದವರಿಗೆ ಅಥವಾ ಕಾರ್ಯಕಾರಿ ನಿರ್ದೇಶಕ ಎನಿಸಿದವರಿಗೆ ಯಾರನ್ನೂ 'ಅಧ್ಯಕ್ಷರನ್ನಾಗಿ ಮಾಡಿ', ಅಥವಾ 'ಇಂಥವರು ಅಧ್ಯಕ್ಷರಾಗಲಿ' ಎಂದು ಕೇಳುವ ಅಥವಾ ಭವನಕ್ಕೆ ಹೇಳುವ ಅಧಿಕಾರ ಇಲ್ಲ. ಆದರೆ ಭವನದ ಬೆಳವಣಿಗೆಗೆ ಅವಶ್ಯ ಎನಿಸುವಂತಹಾ ದಕ್ಷರು ಸಿಕ್ಕಾಗ ಅವರ ಅಭಿಪ್ರಾಯವನ್ನೇ ಸೂಕ್ಷ್ಮವಾಗಿ ತಿಳಿದು, ಅದು ಸಾರ್ಥಕವಾಗಿದ್ದರೆ 'ಇಂತಹ ವ್ಯಕ್ತಿ ಆ ಸ್ಥಾನಕ್ಕೆ ಅರ್ಹರು' ಎಂದು ಕಾರ್ಯಕಾರಿ ನಿರ್ದೇಶಕರು ಬಾಂಬೆಯ ಮುಖ್ಯಭವನದ ಕಛೇರಿಗೆ ಸೂಚನೆ ಕೊಡಬಹುದು. ಆಗ, ಕೂಡಲೆ ಅಂಥ ವ್ಯಕ್ತಿಯನ್ನು ತನ್ನಲ್ಲಿ ಒಳಗೊಳ್ಳಲು ಭವನ ಕಾರ್ಯೋನ್ಮುಖ ವಾಗುತ್ತದೆ. ಅದಕ್ಕಾಗಿ ಚಾಕಚಕ್ಯತೆಯಿಂದ ಹೀಗೆ, ಕೆಲಸ ಮಾಡಬೇಕು! ಯಾವುದೇ ಮಹತ್ಕಾರ್ಯ ಸಾಧನೆಗೆ ಅಗತ್ಯವಾದ 'ಭೂಮಿಕೆ' ಯೊಂದನ್ನು ಸಿದ್ಧ ಮಾಡಬೇಕಷ್ಟೆ? ಅಂತಹುದೇ, ಅಷ್ಟೇ ಪ್ರಾಮುಖ್ಯತೆ ಯುಳ್ಳ ಕೆಲಸ ಇದು!

ಹೀಗೆ ದಲಾಲ್‌ಜೀ ಭಾರತೀಯ ವಿದ್ಯಾಭವನದ ಲಂಡನ್ ಕೇಂದ್ರದ ಅಧ್ಯಕ್ಷರಾಗಲು ಒಪ್ಪಿಕೊಂಡನಂತರ ಎರಡೇ ತಿಂಗಳಲ್ಲಿ ಭವನಕ್ಕೆ ಹೊಸ ಕಟ್ಟಡವೊಂದು ೩೭, ನ್ಯೂ ಆಕ್ಸ್‌ಫರ್ಡ್ ರಸ್ತೆಯಲ್ಲಿ ಸಿಕ್ಕಿತು. ಈ ಕಟ್ಟಡವನ್ನು ಐದು ವರ್ಷಕ್ಕೆ ಭೋಗ್ಯಕ್ಕೆ ತೆಗೆದುಕೊಳ್ಳಲಾಯಿತು.

ಫೆಬ್ರವರಿಯಲ್ಲಿ ದಲಾಲ್‌ಜೀಯವರು ತಮ್ಮ ಹೆಗಲಿಗೇರಿಸಿ ಕೊಂಡ ಜವಾಬ್ದಾರಿಯ ಮೊದಲ ಫಲಶ್ರುತಿಯಾಗಿ ೧೯೭೩ರ ಜೂನ್ ಮೂರನೇ ತಾರೀಖು, ೩೭, ನ್ಯೂ ಆಕ್ಸ್‌ಫರ್ಡ್ ರಸ್ತೆಯಲ್ಲಿದ್ದ ಕಟ್ಟಡದಲ್ಲಿ ಭವನದ ಕಾರ್ಯಚಟುವಟಿಕೆಗಳ ವಿಧ್ಯುಕ್ತ ಪ್ರಾರಂಭೋತ್ಸವವಾಯಿತು. ಇದು ನನ್ನ ಜೀವನದಲ್ಲಿನ ಒಂದು ಮೈಲಿಗಲ್ಲು...! ಭವನದ ಇತಿಹಾಸದಲ್ಲಿ ಒಂದು ಹೆಗ್ಗುರುತು!! ಆ ದಿನ ನನಗಾದ ಸಂತೋಷ ಅಷ್ಟಿಷ್ಟಲ್ಲ. ಐದು ಮಹಡಿಗಳು, ಒಂದರ ಮೇಲೆ ಒಂದರಂತೆ ಕಡ್ಡಿಪೆಟ್ಟಿಗೆಯನ್ನು ಜೋಡಿಸಿಟ್ಟಂತಿದ್ದ ಕಟ್ಟಡವದು! ಎಲ್ಲೂ ದೊಡ್ಡದಾದ ಹಾಲ್ ಇದೆ ಎನ್ನುವಂತಿರಲಿಲ್ಲ. ನಮ್ಮ ವಾಸಕ್ಕಾದರೂ ಪ್ರತ್ಯೇಕವಾದ ಒಂದು ವ್ಯವಸ್ಥೆ ಇದೆ ಎನ್ನುವಂತೆಯೂ ಇರಲಿಲ್ಲ. ಲಿಫ್ಟ್ ಇಲ್ಲದೆ ಪ್ರತಿಯೊಂದಕ್ಕೂ ಹತ್ತಿ ಇಳಿದು ಮಾಡಬೇಕಾದಂತಹ ಕಟ್ಟಡ. ಕೆಳಗೆ ಬುಕ್‌ಷಾಪು, ಬುಕ್‌ಷಾಪಿನ ಬೀರುಗಳನ್ನು ಹಿಂದೆ ಸರಿಸಿ ಮುಂದೆ ಪರದೆಗಳನ್ನು ಎಳೆದರೆ ದೊಡ್ಡದಾಗುತ್ತಿದ್ದ ಆ ಜಾಗವೇ ಮೀಟಿಂಗ್ ಹಾಲ್ ಎನಿಸುತ್ತಿತ್ತು. ಮೇಲೆ ಮೇಲಿನ ಅಂತಸ್ತುಗಳನ್ನು ನಾನು ಸರಿಯಾಗಿ ಬಳಸಿಕೊಳ್ಳಬೇಕಿತ್ತು. ಎಲ್ಲಕ್ಕಿಂತ ಮೇಲಿನ ಅಂತಸ್ತಿನಲ್ಲಿ ನಮ್ಮ ವಾಸ್ತವ್ಯ , ಎಂದರೆ ಮೇಲ್ವಿಚಾರಕರ ವಾಸ್ತವ್ಯ ಎಂದಾಗಿತ್ತು.

ಹೀಗೆ ದಲಾಲ್‌ಜೀ ಅಧ್ಯಕ್ಷರಾದ ಅನಂತರ, ವಿದ್ಯಾಭವನಕ್ಕೆ ಶುಕ್ರದೆಸೆ ಪ್ರಾರಂಭವಾಯಿತು ಎಂದರೆ ಉತ್ಪ್ರೇಕ್ಷೆಯಲ್ಲ. ದಲಾಲ್‌ಜೀ ದಕ್ಷ ನಿರ್ವಾಹಕರು.

ಮಾಣೆಕ ಅರ್ದೆಶಿರ್ ಸೊಹ್ರಾಬ್ ದಲಾಲ್- ದಲಾಲ್‌ಜೀಯ ಪೂರ್ಣ ಹೆಸರು. ಸೆಪ್ಟೆಂಬರ್ ೨೪, ೧೯೧೮ರಂದು ಮುಂಬಯಿಯಲ್ಲಿ ಪಾರ್ಸಿ ಕುಟುಂಬದಲ್ಲಿ ಹುಟ್ಟಿದ ದಲಾಲ್‌ಜೀ ಟ್ರಿನಿಟಿ ಹಾಲ್ ಕೇಂಬ್ರಿಜ್‌ನಲ್ಲಿ ಎಂ.ಎ. ಪದವಿ ಪಡೆದು ೧೯೪೫ರಲ್ಲಿ ಮಿಡ್ಲ್ ಟೆಂಪಲ್ ಬಾರ್ ಸೇರಿದರು. ಸ್ವಾತಂತ್ರ್ಯ ಬರುವುದಕ್ಕೆ ಒಂದು ವರ್ಷದ ಮೊದಲೇ ಏರ್ ಇಂಡಿಯಾದ ಆಫೀಸನ್ನು ಲಂಡನ್ನಿನಲ್ಲಿ ಪ್ರಾರಂಭಿಸಿದವರು ದಲಾಲ್‌ಜಿ. ಆಗ ಟಾಟಾದವರು ದಲಾಲ್‌ಜೀಯವರನ್ನು ಲಂಡನ್ನಿಗೆ ಅಲ್ಲಿ ಏರ್‌ಇಂಡಿಯಾದ ಆಫೀಸು ತೆರೆಯಲೆಂದೇ ಕಳುಹಿಸಿದರು. ಅಲ್ಲಿ ಏರ್ ಇಂಡಿಯವನ್ನು ಕಟ್ಟಿದವರು ದಲಾಲ್‌ಜೀ. ಅವರು ಅಲ್ಲಿ ಕೆಲಸ ಪ್ರಾರಂಭಿಸಿದ ಅನಂತರ ಎ.ಐ., 'ನ್ಯಾಷನಲ್ ಕ್ಯಾರಿಯರ್' ಎಂದಾಯಿತು. ಮಾತು-ಕತೆ ನಡೆನುಡಿಯಲ್ಲಿ ನಯ, ವಿನಯುಗಳೇ ಮೈವೆತ್ತಿದಂತಿದ್ದ ದಲಾಲ್‌ಜೀ ಬುದ್ಧಿವಂತಿಕೆಯಲ್ಲಿ ಯೂರೋಪಿಯನ್ ನಾಗರಿಕತೆಯನ್ನೂ ಜಾಣ್ಮೆಯನ್ನೂ ಹೊಂದಿದ್ದು , ಹೃದಯವಂತಿಕೆಯಲ್ಲಿ ಭಾರತೀಯ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದುದು ಅವರ ವೈಶಿಷ್ಟ್ಯ!! ಅವರ ದಕ್ಷತೆ, ಪ್ರಾಮಾಣಿಕತೆ, ದೂರದೃಷ್ಟಿ, ವ್ಯಾವಹಾರಿಕತೆಯ ಚುರುಕುತನ, ವಿವೇಕಪೂರ್ಣವಾದ ಅರ್ಥಪೂರ್ಣ ನಿರ್ಧಾರಗಳು ಅವರನ್ನು ಸಾಕಷ್ಟು ಜನಪ್ರಿಯರನ್ನಾಗಿ ಮಾಡಿದ್ದವು. ಟೆನಿಸ್ ಆಟಗಾರರಾಗಿದ್ದ ಗೋಧಿ ಮೈಬಣ್ಣದ, ಎತ್ತರದ ನಿಲುವಿನ, ಮಂದಸ್ಮಿತ, ಆದರೂ ಗಂಭೀರ ಮುಖಮುದ್ರೆಯ ಆ ಆಜಾನುಬಾಹು ದಲಾಲ್‌ಜೀಯನ್ನು ನೋಡಿದರೆ ಯಾರಿಗೂ 'ಅವರಿಗೆ ವಂದಿಸೋಣ, ಅವರನ್ನು ಮಾತನಾಡಿಸೋಣ' ಎನಿಸುತ್ತಿತ್ತು. ಅವರ ಜತೆ ಮಾತು ಪ್ರಾರಂಭಿಸಿದರೆ ಅವರಿಗಿದ್ದ ಅಗಾಧ ಪ್ರಪಂಚಜ್ಞಾನದ ಬಗ್ಗೆ ನಮಗೂ ತಿಳಿದು ನಾವು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತಾಗುತ್ತಿತ್ತು. ಇಂತಹ 'ವಿಶ್ವಪ್ರೇಮಿ'ಗೆ ತಕ್ಕ ಪತ್ನಿ ಕ್ಯಾಥರೀನ್ ಜೆಟ್ರ್ಯೂಡ್ ರಿಚರ್ಡ್‌ಸನ್. ಮೃದು ಮಾತಿನ, ಆತ್ಮೀಯ ಸ್ವಭಾವದ ದಲಾಲ್‌ಜೀ, ಯಶಸ್ವಿ ಆಡಳಿತಗಾರ, ಲಂಡನ್ ಟಾಟಾ ಲಿಮಿಟೆಡ್‌ನಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್, ಏರ್ ಇಂಡಿಯಾದ ಡೈರೆಕ್ಟರ್, ಲಂಡನ್ ಭಾರತೀಯ ಹೈಕಮಿಷನ್‌ನಲ್ಲಿ ಪ್ರವಾಸ ಮತ್ತು ವಿಮಾನಯಾನದ ಸಚಿವರು, ಹೀಗೆ ಹತ್ತು ಹಲವಾರು ಸಂಸ್ಥೆಗಳಲ್ಲಿ ಶಿಕ್ಷಣಸಂಸ್ಥೆಯಿಂದ ಮೊದಲ್ಗೊಂಡು, ಮ್ಯಾನೇಜ್‌ಮೆಂಟ್‌ವರೆಗೆ ಗೌರವ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಾ ಇದ್ದ ದಲಾಲ್‌ಜೀಯ ಸೇವಾಸೌಲಭ್ಯ ಭಾರತೀಯ ವಿದ್ಯಾಭವನಕ್ಕೆ ಸಿಕ್ಕಿದುದೂ ಒಂದು ವಿಶೇಷವೇ ಸರಿ! ಭಾರತದ ಮೊದಲ ಪ್ರಧಾನಿ ಜವಹರಲಾಲ್ ನೆಹರೂವರು ಲಂಡನ್ನಿಗೆ ಹೋಗಿ ಬರುತ್ತಿದ್ದ ಕಾಲದಿಂದಲೂ, ಅವರೂ ಅವರ ಜತೆಗೆ ಇನ್ನಿತರ ರಾಷ್ಟ್ರೀಯ ನಾಯಕರುಗಳೆಲ್ಲರ ಬರುಹೋಗುವಿಕೆಯಿಂದ ದಲಾಲ್‌ಜೀಯವರಿಗೆ ಅವರೆಲ್ಲರ ಸಂಪರ್ಕ-ಸ್ನೇಹ ಇರುವಂತಾಗಿತ್ತು. ಅಷ್ಟೇ ಅಲ್ಲದೆ, ಭಾರತೀಯ

ವೈ.ಎಂ.ಸಿ.ಎ.ಗೂ ಅವರೇ ಅಧ್ಯಕ್ಷರು ಸಹ ಆಗಿದ್ದುದು ಭಾರತೀಯ ಜನಗಳ ಪರಿಚಯ ಸಂಪರ್ಕದಲ್ಲಿ ಕೊರತೆಯೂ ಇರಲಿಲ್ಲ. ಹೀಗೆ ಭಾರತೀಯರಾಗಿದ್ದು, ಪೂರ್ವ-ಪಶ್ಚಿಮಗಳ ಎಲ್ಲ ಒಳ್ಳೆಯ ಗುಣಗಳ 'ಅಪೂರ್ವ - ಸಂಗಮ' ದಲಾಲ್‌ಜೀಯಲ್ಲಿ !! ಕಾರ್ಡಿನಲ್ ನ್ಯೂಮನ್ ಹೇಳುವ ಹಾಗೆ... 'a gentle man' (ಸಭ್ಯ ಮನುಷ್ಯ!) 'ನೀನು ಏನಾದರೂ ಆಗಬಹುದು ಆದರೆ ಮಾನವನಾಗಿರಲು ಕಷ್ಟಸಾಧ್ಯ' (you can be anything, but not human) ಎನ್ನುವ ಮಾತನ್ನು ಸುಳ್ಳಾಗಿಸಿದ್ದರು ದಲಾಲ್‌ಜೀ... ಹಿರಿಯ ಸ್ಥಾನಗಳನ್ನು ಅಲಂಕರಿಸಿ ಒಂದು ರೀತಿಯಲ್ಲಿ 'ವಿಶ್ವಮಾನವ' ಎಂದೇ ಎನ್ನಿಸಿದರು ಅವರು, ಎಂದರೆ ತಪ್ಪಿಲ್ಲ. ಇಂತಹ ದಲಾಲ್‌ಜೀ ಭವನದ ಅಧ್ಯಕ್ಷರಾಗಲು ಸಮ್ಮತಿಸಿದುದು ನಮ್ಮ ಪುಣ್ಯವೇ ಸರಿ!!

ತರಬೇತಿಗಳು

ದಲಾಲ್‌ಜೀ ಭವನದ ಆಡಳಿತದ ನೇತೃತ್ವ ವಹಿಸಿಕೊಂಡ ಮೇಲೆ ಕೆಲಸ ಭರದಿಂದ ನಡೆಯಲು ಪ್ರಾರಂಭಿಸಿತು. ಅನುಭವಿ ದಲಾಲ್‌ಜೀಯವರ ಯಾವುದೇ ಅಭಿಪ್ರಾಯಗಳು ಖಚಿತ, ನೇರ. ಅವರು ಬಂದ ಕೂಡಲೇ ನನಗೆ 'ಮತ್ತೂರ್‌ಜೀ, ನೀವು ಆಡಳಿತ ನಡೆಸುವುದರಲ್ಲಿ (ತರಬೇತಿ) ಶಿಕ್ಷಣ ತೆಗೆದುಕೊಳ್ಳಿ' ಎಂದರು. ಅವರ ಈ ಸೂಚನೆ ನನಗೂ ಇಷ್ಟವಾಯಿತು. ನಾನು ಮೊದಲೇ ಹೇಳಿದ್ದಂತೆ ಆಡಳಿತದಲ್ಲಿ ನನಗೇನೂ ಯಾವುದೇ ತರಬೇತಿ ಇರಲಿಲ್ಲ. ಆದರೂ ಹೇಗೋ ನಿಭಾಯಿಸುತ್ತಿದ್ದೆ. ಈಗ ಅದು ನಿಜಕ್ಕೂ ಸರಿ ಎನ್ನಿಸಿತು. ನಾನು ಆಡಳಿತದ ತರಬೇತಿಯ ತರಗತಿಗಳಿಗೆ ಸೇರಿಕೊಂಡೆ. ಗ್ರೇಟ್ ಬ್ರಿಟನ್‌ನಲ್ಲಿ ಎಲ್ಲದಕ್ಕೂ ತರಬೇತಿ ತರಗತಿಗಳಿದ್ದು ಅವರು ನಿಧಾನವಾಗಿ ಚೆನ್ನಾದ ತರಬೇತಿ ಕೊಡುತ್ತಾರೆ. ಹಾಗೆ ಮಾಡುವಾಗ ಆ ವಿಷಯದ ಬಗ್ಗೆ ಸಾಕಷ್ಟು ವಿಚಾರಗಳನ್ನು ನಮಗೆ ತಿಳಿಸಿ ಹೇಳುತ್ತಾರೆ. ಹಾಗೆ ಶಿಕ್ಷಣ ತೆಗೆದುಕೊಳ್ಳದವರಿಗೆ ಅಲ್ಲಿ ಮಾನ್ಯತೆ ಇಲ್ಲ. ಅವಕಾಶ ಇರುವಾಗ ಅದನ್ನು ಉಪಯೋಗಿಸಿಕೊಂಡು, ಚೆನ್ನಾಗಿ ಕಲಿತು, ಚೆನ್ನಾಗಿ ಕೆಲಸ ಮಾಡಲಿ ಎನ್ನುವುದು ಈ ತರಬೇತಿ ತರಗತಿಗಳನ್ನು ನಡೆಸುವ ಉದ್ದೇಶ. ಒಂದು ವೇಳೆ ಅಭ್ಯರ್ಥಿಗೆ ಆ ವಿಷಯದಲ್ಲಿ ತರಬೇತಿ ಇಲ್ಲ ಎಂದರೆ, ಅವರು ಖಂಡಿತವಾಗಿಯೂ ಅಂಥವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ, ಅದು ಅವರ ನಿಯಮ!

ನಾನು ಅಲ್ಲಿಗೆ ಹೋದ ಮೇಲೆ ಮಾತನಾಡುವ ಕಲೆಯ ತರಬೇತಿ (speech training), ಆಡಳಿತ ತರಬೇತಿ (administration), ಅಭಿನಯ ತರಬೇತಿ (Acting training) ತೆಗೆದುಕೊಂಡೆ. ಆಡಳಿತ ತರಬೇತಿ ಒಂದು ವರ್ಷ, ಮಿಕ್ಕೆರಡು ತರಬೇತಿಗಳು ಆರು-ಆರು ತಿಂಗಳುಗಳು. ಮಾತಿನ ತರಬೇತಿಯಲ್ಲಿ ಎರಡು-ಮೂರು ತರಗತಿಗಳು ಮುಗಿದನಂತರ, 'ನಿಮ್ಮ ಭಾಷೆ, ಮಾತಿನ ಶೈಲಿ, ಎಲ್ಲವೂ ಸರಿಯಾಗಿಯೇ ಇದೆ. ನಿಮಗೆ ಈ ತರಬೇತಿಯು ಅಗತ್ಯವಿಲ್ಲ' ಎಂದು ಅವರೇ ನನ್ನ ಫೀಸನ್ನು ವಾಪಸ್ಸು ಕೊಟ್ಟುಕಳುಹಿಸಿದರು. ಅಭಿನಯದ ತರಬೇತಿ ತೆಗೆದುಕೊಂಡೆ. ನನಗೆ ಬಹಳ ಆಸೆ, ನಾಟಕದಲ್ಲಿ ಅಭಿನಯಿಸಬೇಕು ಎಂದು.

ಲಂಡನ್ನಿಗೆ ಹೋದ ಹೊಸತರಲ್ಲಿ ಕರ್ನಾಟಕದ ಟ್ರೇಡ್ ಕಮಿಷನರ್ ಆಗಿದ್ದ ಶ್ರೀ ಮುದ್ದಪ್ಪನವರನ್ನು ಕಂಡು ಪರಿಚಯ ಮಾಡಿಕೊಂಡೆ. ಕ್ರಮೇಣ ನಮ್ಮ ಸ್ನೇಹ ನಿಕಟವಾಯಿತು. ಕನ್ನಡಿಗರ ಸಂಘವನ್ನು ಪ್ರಾರಂಭಿಸಿದೆವು. ಕನ್ನಡಿಗರ ಈ ಸಂಘ ಗ್ರೇಟ್ ಬ್ರಿಟನ್ನಿನಲ್ಲಿರುವ ಕನ್ನಡ ಕುಟುಂಬಗಳ ಲೆಕ್ಕ ಹಾಕಿತು. ಸುಮಾರು ೪೭೩ ಕುಟುಂಬಗಳು. ಆ ಸಮಯಕ್ಕೆ ಬಹಳ ಮಂದಿ ಸದಸ್ಯರುಗಳೂ ಆದರು. ಆದರೆ ಅಲ್ಲಿಯ ಕನ್ನಡಮ್ಮನ ಮಕ್ಕಳು ಬಹುತೇಕ ಇಂಗ್ಲಿಷ್ ಮಕ್ಕಳುಗಳಾಗಿವೆ! ಹುಟ್ಟಿ ಬೆಳೆದದ್ದು ಅಲ್ಲಿಯೇ ಆದುದರಿಂದ ಅದೇ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿವೆ. ಅದು ಯಾರದೂ ತಪ್ಪೆಂದು ನಾನು ಹೇಳುವುದಿಲ್ಲ. ಆದರೆ ತಾಯಿನಾಡ ಸಂಸ್ಕೃತಿ-ಸಂಸ್ಕಾರ ಕಲಿಸಲು-ಕಲಿಯಲು ಯಾರಿಗೇ ಆದರೂ ಆಸಕ್ತಿ ಇರಬೇಕು. ಆಗ ತನ್ನ ತಾಯಿನಾಡಿನ ಮೂಲ ಸಂಸ್ಕೃತಿಯ ಬಗ್ಗೆ ಆದರ-ಗೌರವ ತಾನಾಗಿಯೇ ಬೆಳೆಯುತ್ತದೆ. ಕನ್ನಡ ಸಂಘ ಈಗ ಅಲ್ಲಿ ಸಾಕಷ್ಟು ದೊಡ್ಡದಾಗಿ ಬೆಳೆದಿದೆ.

ಆದರೂ ನಾನು ತರಬೇತಿ ತರಗತಿಗಳಿಗೆ ಸೇರಿಕೊಂಡ ಕೆಲವು ದಿವಸಗಳಲ್ಲೇ, ನಾನು ಕೊಟ್ಟಿದ್ದ ಫೀಸಿನ ಚೆಕ್ಕನ್ನು ನನಗೇ ವಾಪಸ್ಸು ಕೊಟ್ಟು, ಅವರು 'ನೀವೇಕೆ ನಮ್ಮಲ್ಲಿನ ಶಿಕ್ಷಣಾರ್ಥಿಗಳಿಗೆ ಒಂದು ತರಗತಿಯನ್ನು ನಿಯತವಾಗಿ ನಡೆಸಿಕೊಡಬಾರದು? ನಿಮಗೆ ಸಮಯವಿದೆಯೇ?' ಎಂದು ಕೇಳಿದರು. ನನಗೋ ಪರಮ ಸಂತೋಷ, ಇದು ರೋಗಿ ಬಯಸಿದ್ದ, ವೈದ್ಯನೂ ಹೇಳಿದ್ದ ಹಾಲು-ಅನ್ನವಾಗಿತ್ತು ನನ್ನ ಪಾಲಿಗೆ!! 'ಸರಿ' ಎಂದು ತಲೆಯಾಡಿಸಿದೆ. ತರಗತಿಗಳನ್ನು ನಡೆಸಿಕೊಟ್ಟೆ. ಇದರಲ್ಲೂ ಒಂದೆರಡು ಪಾಠ ಆದ ಮೇಲೆ "ನಿಮಗೆ ಇದರ ಅಗತ್ಯ ಇಲ್ಲ. ಬಿ.ಬಿ.ಸಿ. ರೇಡಿಯೋ ನಾಟಕಗಳಲ್ಲಿ ಭಾಗವಹಿಸಿರಿ" ಎಂದು ಶಿಫಾರಸ್ಸು ಪತ್ರ ಕೊಟ್ಟರು. ಅಲ್ಲಿ ನಾನು ಅವರಿಗೆ ಕಲಿಸುವಾಗ ನಾನೇ ಕಲಿತದ್ದು ಬಹಳ! ಹೀಗೆ ಕಲಿಸುವ ಕೆಲಸದಿಂದ ನನಗೆ ಹೆಚ್ಚು ಒಳ್ಳೆಯದೂ, ಉಪಯೋಗವೂ ಆಯಿತು... ನಿಜಕ್ಕೂ ಅದೊಂದು ಅನುಭವ!!

ಆದರೆ ಆಡಳಿತದ ಶಿಕ್ಷಣ ಬಹಳ ಕಷ್ಟಕರವಾಗಿಯೇ ಇತ್ತು. ಒಂದೆಡೆ ಈ ತರಬೇತಿಯನ್ನು ಪಡೆಯುತ್ತಾ ನಾನು ಓದುತ್ತಿದ್ದೆನಾದರೆ, ಮತ್ತೊಂದೆಡೆ ದಲಾಲ್‌ಜೀಯವರ ಆಡಳಿತದ ರೀತಿ-ನೀತಿಗಳನ್ನು ಗಮನಿಸಿಕೊಳ್ಳುತ್ತಾ ಪ್ರಾಯೋಗಿಕ ತರಬೇತಿಯನ್ನು ಪಡೆದೆ. ಹಾಗೆ ತಿದ್ದಿ ಹೇಳಿಕೊಟ್ಟು ಕಲಿಸುವುದರಲ್ಲಿ ದಲಾಲ್‌ಜೀ ನಿಪುಣರು. ಅದಕ್ಕೆ ಅವರು ಬಹಳ ಲಕ್ಷ್ಯ ಕೊಡುತ್ತಿದ್ದರು. ಥಿಯರಿ-ಪ್ರಾಕ್ಟಿಕಲ್ ಎನ್ನುತ್ತಾರೆ

ಇಂಗ್ಲಿಷಿನಲ್ಲಿ (ವಿಚಾರಕಲಿಕೆ-ಪ್ರಯೋಗಶೀಲತೆ) ಈ ಎರಡೂ ಭಾಗಗಳಲ್ಲಿ ಶಿಕ್ಷಣ ಪಡೆದ ನಾನು, ದಲಾಲ್‌ಜಿ ನೇತೃತ್ವದಲ್ಲಿ ಅವರ ಮಾರ್ಗದರ್ಶನದಲ್ಲಿ ಸರಿಯಾಗಿ, ಸಮರ್ಪಕವಾಗಿ, ತೃಪ್ತಿಕರವಾಗಿ ಕೆಲಸ ಮಾಡುವ ಅರ್ಹತೆ ಪಡೆದೆ. ಅದು ಬಹಳ ಮುಖ್ಯ ಆಗಿತ್ತು. ಏಕೆಂದರೆ ಅಧಿಕಾರ ವಹಿಸಿಕೊಳ್ಳಿ - ಎಂದು ನಾನು ಅವರನ್ನು ವಿನಂತಿಸಿಕೊಳ್ಳಲು ಹೋದಾಗ, 'ನಾನು ನಿಮಗೆ ನಿಷ್ಠೆಯಿಂದ ಇರುತ್ತೇನೆ' ಎಂದಿದ್ದೆ. ಅದಕ್ಕೆ ಅವರು 'ನಾನು ನಿಮ್ಮ ಈ ವಿಶ್ವಾಸಕ್ಕೆ ಪಾತ್ರನಾಗಿರುತ್ತೇನೆ' ಎಂದಿದ್ದರು ನಗುತ್ತಾ. 'ಒಂದು ವರ್ಷದ ಮಟ್ಟಿಗೆ ಈ ಜವಾಬ್ದಾರಿ ತೆಗೆದು ಕೊಳ್ಳುವುದು ಸಾಧ್ಯ. ಅನಂತರ ನನ್ನನ್ನು ಬಿಡುಗಡೆ ಮಾಡಬೇಕು' ಎಂದಿದ್ದ ದಲಾಲ್‌ಜೀ ಅಂದಿನಿಂದ-ಇಂದಿನವರೆಗೂ ಭವನದ ಲಂಡನ್ ಕೇಂದ್ರದಲ್ಲಿ ಅವಿಶ್ರಾಂತರಾಗಿ ದುಡಿಯುತ್ತಿರುವ ಅದ್ವಿತೀಯ ಅಧ್ಯಕ್ಷರು. ಅಲ್ಲಿನ ಎಲ್ಲ ಜನರ ವಿಶ್ವಾಸಕ್ಕೆ ಪಾತ್ರರಾಗಿರುವವರು. ಅಪ್ರತಿಮ ಆಡಳಿತ ದಕ್ಷತೆಯ ಮೂರ್ತರೂಪ ಎನಿಸಿರುವವರು!!!

ಹೀಗೆ ದಲಾಲ್‌ಜೀ ತಮ್ಮನ್ನು ಭವನದಲ್ಲಿ ತೊಡಗಿಸಿ ಕೊಂಡ ಅನಂತರ ಬ್ರಿಟನ್ನಿನ ಹಲವಾರು ಗಣ್ಯರ ಸಂಪರ್ಕ ಆಯಿತು. ದಲಾಲ್‌ಜೀಗೆ ಪಾಶ್ಚಾತ್ಯ ಪ್ರಮುಖರು, ಉನ್ನತ ಹುದ್ದೆಗಳಲ್ಲಿ ಇರುವವರು, ಅಂತರರಾಷ್ಟ್ರೀಯ ವ್ಯಾಪಾರೋದ್ಯಮಿಗಳು ಎಲ್ಲರ ನಿಕಟ ಪರಿಚಯವಿತ್ತು. ಅವರುಗಳನ್ನೆಲ್ಲ ದಲಾಲ್‌ಜೀ ವಿದ್ಯಾಭವನಕ್ಕೆ , ಅದರ ಕಾರ್ಯಚಟುವಟಿಕೆಗಳಿಗೆ ತೊಡಗಿಸಿಕೊಂಡರು. ಆದು ಭವನದ ಬೆಳವಣಿಗೆಗೆ ಒಳ್ಳೆಯ ಪುಷ್ಟಿಕರ ಪೋಷಕಾಂಶಗಳನ್ನು ನೀಡುವುದರಲ್ಲಿ ಸಹಾಯ ಮಾಡಿತು. ಆ ಗಣ್ಯರಲ್ಲಿ ಕೆಲವರನ್ನು ಇಲ್ಲಿ ಓದುಗರಿಗಾಗಿ ಹೇಳಬೇಕೆಂದರೆ ಲಾರ್ಡ್ ಮೌಂಟ್ ಬ್ಯಾಟನ್, ರಾಜಮನೆತನದ ರಾಜಕುವರ ಚಾರ್ಲ್ಸ್, ಹೆರಾಲ್ಡ್ ಮ್ಯಾಕ್‌ಮಿಲನ್, ಲಾರ್ಡ್ ಕೆಲಹನ್ ಬ್ರಾಕ್ವೆ, ರಿಚರ್ಡ್ ಅಟೆನ್‌ಬರೋ ಇವರೆಲ್ಲರೂ ದಲಾಲ್‌ಜೀಯವರ ಮೂಲಕವೇ ವಿದ್ಯಾಭವನದ ಸಂಪರ್ಕಕ್ಕೆ ಬಂದುದು. ಅಷ್ಟೇ ಅಲ್ಲದೆ ಮಾರ್ಗರೇಟ್ ಥ್ಯಾಚರ್ ಅವರು ತಮ್ಮ ೧೬ ವರ್ಷಗಳ ಪ್ರಧಾನಿ ಅಧಿಕಾರಾವಧಿಯಲ್ಲಿ ಸುಮಾರು ಮೂರು ಸಲ ಭವನಕ್ಕೆ ಭೇಟಿ ನೀಡಿದರು. ರಾಜಕುವರ ಚಾರ್ಲ್ಸ್ ಭೇಟಿ ನೀಡಿದರು. ಹೀಗೆ ಇಂಥವರ ಭೇಟಿಯಿಂದ ಭವನದ ಘನತೆ ಬಹಳ ಹೆಚ್ಚಿತು. ಭವನ ಪ್ರಸಿದ್ಧಿಗೂ ಬಂತು... ನಿಜಕ್ಕೂ ಭಾರತೀಯ ವಿದ್ಯಾಭವನ ಲಂಡನ್ನಿನಲ್ಲಿ... ಪರದೇಶದ , ಪರಜನರಲ್ಲಿ , ಅವರ ಪ್ರೀತಿ ಸಂಪಾದಿಸಿ ಬಲವಾಗಿ ಬೇರೂರಲು ಕಾರಣರಾದವರು ದಲಾಲ್‌ಜೀ ಎಂದರೆ ಅತಿಶಯೋಕ್ತಿ ಯೇನಲ್ಲ!!

ವಿಶ್ವಾಸಕ್ಕೆ ಪಾತ್ರ

ಸಂತೋಷದ ಸುದ್ದಿ ಕೊಡುವಾಗ ನಾವು ಯಾರನ್ನೂ ಕಾಯಿಸುವುದಿಲ್ಲ ಹೇಗೋ ಹಾಗೆಯೇ ಇಲ್ಲಿ , ಮೇಲೆ ನಾನು ನನ್ನ ಓದುಗರಿಗೆ ತಿಳಿಸಿರುವ ವಿಷಯಗಳು. ಮೇಲೆ ನಾನು ಹೇಳಿದ ಇವೆಲ್ಲ ನಡೆಯಲು ಇನ್ನೂ ಅನೇಕ ವರ್ಷಗಳು ಬೇಕಿದೆ. ನಾನಿನ್ನೂ ದಲಾಲ್‌ಜೀ ಆಡಳಿತದ ಪ್ರಥಮ ವರ್ಷದಲ್ಲಿದ್ದೇನಷ್ಟೆ? ನಿಮಗೆ ಅದು ನೆನಪಿದೆ ತಾನೆ? ನಾವಿನ್ನೂ ಸಾಗಬೇಕಾದ ದಾರಿ ಬಹಳ ಇದೆ. ನನಗೂ ನನ್ನ ಓದುಗರಿಗೂ ಭಾರತದ ಸಂಸ್ಕೃತಿಯ ಪ್ರತೀಕವಾಗಿ ನಿಂತು, ಬೆಳೆದು, ಜನಮೆಚ್ಚುಗೆಗೆ ಪಾತ್ರವಾದ ಭಾರತೀಯ ವಿದ್ಯಾಭವನ ಲಂಡನ್ ಕೇಂದ್ರದ ಯಶೋಗಾಥೆಯನ್ನು ವಿವರವಾಗಿ ತಿಳಿಸುವ ಆಸೆ ಇದೆ. ಆಂಗ್ಲ ಕವಿ ರಾಬರ್ಟ್ ಫ್ರಾಸ್ಟ್‌ನ 'Stopping by the woods' ಎನ್ನುವ ಒಂದು ಪದ್ಯದಲ್ಲಿ ಕವಿ ಪ್ರಯಾಣ ಮಾಡಿಕೊಂಡು ಬರುವಾಗ ಸುಂದರವಾದ ತೋಟವೊಂದರ ಪಕ್ಕದಲ್ಲಿ ಬಂದು ನಿಂತು ಅದರ ಸೌಂದರ್ಯವನ್ನು ಆಸ್ವಾದಿಸುವಾಗ ಕತ್ತಲಾಗುತ್ತಿದ್ದುದನ್ನು ನೋಡಿ,

'The woods are lovely dark and deep
But I have promises to keep,
And miles to go before I sleep
And miles to go before I sleep!'

ಎಂದು ಹೇಳಿಕೊಳ್ಳುತ್ತಾ , ಅಲ್ಲಿಯೇ ನಿಲ್ಲದೆ ಹೊರಡುತ್ತಾನೆ. ಈ ಮರಗಿಡಗಳ ದೃಶ್ಯ ಮೋಹಕವಾಗಿದ್ದರೂ ನನಗೆ ನನ್ನದೇ ಆದ , ನಾನು ಕೊಟ್ಟಿರುವ ಪ್ರಮಾಣಗಳಿವೆ. ಅವುಗಳನ್ನು ಉಳಿಸಿಕೊಳ್ಳಬೇಕು ನಾನು. ಅದಕ್ಕೇ 'ಮಲಗುವ ಮುನ್ನ ಅನೇಕ ಮೈಲಿಗಳು ಸಾಗಬೇಕು' ಎನ್ನುವ ಕವಿಯ ಮಾತು ಅದೆಷ್ಟು ಅರ್ಥಪೂರ್ಣವೋ , ಹಾಗೆಯೇ ಅವನಂತೆಯೇ ಇಲ್ಲಿ ನಾನು ನಿಲ್ಲದೆ ಬೆಳೆಯುತ್ತಿರುವ ಭವನದ ಇಂಚಿಂಚಿನ ಬೆಳವಣಿಗೆಯನ್ನು ನಿಮಗೆ ತೋರಿಸಲು ನಿಮ್ಮನ್ನು ನನ್ನ ಜತೆ ಕರೆದೊಯ್ಯಬೇಕಿದೆ!

ಹೀಗೆ ಅನೇಕರು ಬಂದವರು ಭವನದ ಚಟುವಟಿಕೆಗಳನ್ನು ನೋಡಿ ಸಂತೋಷ ಪಡುತ್ತಿದ್ದರು. ದಲಾಲ್‌ಜೀಯವರ ಅಧ್ಯಕ್ಷತೆಯಲ್ಲಿ ಒಂದು ಒಳ್ಳೆಯ ಕಾರ್ಯಕಾರಿ ಸಮಿತಿಯ ರಚನೆಯೂ ಆಯಿತು.

ಒಂದು ಮಾತಂತೂ ಶತಶಃ ನಿಜ. ವಿದ್ಯಾಭವನಕ್ಕಾಗಿ ಕೆಲಸ ಮಾಡುವಾಗ ನಾವು ನಮ್ಮ ಸಂಸ್ಕೃತಿಗಾಗಿ, ದೇಶಕ್ಕಾಗಿ ದೇಶಸೇವೆಯ ರೂಪದಲ್ಲಿ ಈ ಕೆಲಸ ಮಾಡುತ್ತಿದ್ದೇವೆ ಎನ್ನುವ ಮನೋಭಾವ ಮುಖ್ಯ. ಯಾವುದೇ ಸ್ಥಾನದ ಆಸೆಗಾಗಿ ಕೆಲಸ ಮಾಡುವವರು ಅಲ್ಲಿ ಉಳಿಯಲು ಸಾಧ್ಯವಿಲ್ಲ! ಆಮಿಷ ಇಲ್ಲದೆ ಪ್ರೀತಿಯಿಂದ ಯಾವ ರೀತಿಯ ಸೇವೆ ಮಾಡಿದರೂ ಅದನ್ನು ವಿದ್ಯಾಭವನ ಗೌರವದಿಂದ ಸ್ವೀಕರಿಸುತ್ತದೆ, ಮೆಚ್ಚುಗೆ ಸಲ್ಲಿಸುತ್ತದೆ. ಇಂತಹ ಕೆಲಸಗಳಲ್ಲಿ ತೊಡಗುವುದೂ ಒಂದು ಪುಣ್ಯವಿಶೇಷ ತಾನೆ? ಹೀಗೆ ಮಾಡಿದ ಒಳ್ಳೆಯ ಕೆಲಸಗಳೂ ಒಂದಲ್ಲ , ಒಂದು ದಿನ , ಒಂದಲ್ಲ ಒಂದು ರೂಪದಲ್ಲಿ ನಮಗೆ ಒಳ್ಳೆಯ ಫಲವನ್ನು ಕೊಟ್ಟಾವು. ಹಾಗೆಂದು ಭಗವದ್ಗೀತೆಯಲ್ಲಿ ಹೇಳಿದೆ.

ಆ ಸಣ್ಣ ಜಾಗದಲ್ಲಿ ಕಳೆಯುತ್ತಿದ್ದ ದಿನಗಳು ಕೆಲಸದ ಒತ್ತಡದಲ್ಲಿ ಗಮನಕ್ಕೇ ಬರುತ್ತಿರಲಿಲ್ಲ. ಆ ಜಾಗಕ್ಕೆ ಬ್ರಿಟಿಷ್ ಮ್ಯೂಸಿಯಂ ಬಹಳ ಹತ್ತಿರ ಇತ್ತು. ನಮಗೆ ಬರುತ್ತಿದ್ದ ಆದಾಯವೂ ಬುಕ್‌ಷಾಪಿನಲ್ಲಿನ ಪುಸ್ತಕಗಳ ಮಾರಾಟದಿಂದ ಮಾತ್ರ. ಮಾರಾಟ ಸಾಕಷ್ಟು ಚೆನ್ನಾಗಿಯೇ ಆಗುತ್ತಿತ್ತು. ಆಗ ವಿದ್ಯಾಭವನದ ಪ್ರಕಟಣೆಗಳೇ ಸುಮಾರು ೫೦೦-೬೦೦ ಇದ್ದವು. ನ್ಯಾಶನಲ್ ಬುಕ್ ಟ್ರಸ್ಟಿನವರೂ ಅವರ ಪುಸ್ತಕಗಳನ್ನು ಮಾರಾಟ ಮಾಡಲು ನಮಗೆ ಕೊಟ್ಟಿದ್ದರು. ಭವನದ ನಿಯತ ಆದಾಯಕ್ಕೆ ಪುಸ್ತಕಗಳ ಮಾರಾಟವೇ ಗತಿಯಾಗಿತ್ತು. ಈ ಪುಸ್ತಕಗಳ ಮಾರಾಟ ಮಾಡುವುದು ನನ್ನದೇ ಕೆಲಸ. ಆಗ ಬೇರೆ ಯಾರೂ ಆಫೀಸಿನ ಸಹಾಯಕರಿರಲಿಲ್ಲ. ನಾನೊಬ್ಬನೇ ಇದ್ದದ್ದು. ಬೆಳಗ್ಗೆ ಐದು ಘಂಟೆಗೆ ಎದ್ದರೆ ಕಸ ತೆಗೆಯುವುದು, ಬುಕ್‌ಷಾಪು ತೆಗೆಯುವುದು, ದಿನವಿಡೀ ಅದೆಷ್ಟು ಕೆಲಸಗಳೋ... ಬೇರೆ ಕೆಲವರು ಸಹ ಬಂದು ಸಹಾಯ ಮಾಡುತ್ತಿದ್ದರಾದರೂ, ಅದು ಸಂಜೆ ವೇಳೆ ಮಾತ್ರ... ಮತ್ತೆ ರಾತ್ರಿ ಊಟಮುಗಿಸಿ ಪತ್ರಗಳಿಗೆ ಉತ್ತರ ಬರೆಯಲು ಕುಳಿತರೆ, ಸದಸ್ಯರುಗಳಿಗೆ ಪತ್ರ, ಬರುತ್ತಿದ್ದ ಪತ್ರಗಳಿಗೆ ಉತ್ತರ , ಎಷ್ಟೋ ಮಂದಿ ಇತರರು ಭವನದ ಬಗ್ಗೆ ಕೇಳಿರುವ ವಿಷಯಗಳಿಗೆ ಉತ್ತರ, ಮುಖ್ಯ ಕಛೇರಿಗೆ ಇಲ್ಲಿನ ಆಗು-ಹೋಗುಗಳನ್ನು ತಿಳಿಸಿ ಪತ್ರ, ಮುಖ್ಯ ಕಛೇರಿಯಿಂದ ಬಂದ ಪತ್ರಗಳಿಗೆ ಉತ್ತರ - ಹೀಗೆ ಎಲ್ಲವನ್ನೂ ಬರೆದು ಅನಂತರ ಟೈಪು ಮಾಡಿ ಅದನ್ನು ಕವರುಗಳಿಗೆ ಹಾಕಿ ಪೋಸ್ಟ್ ಡಬ್ಬಾಕ್ಕೆ ಹಾಕುವಷ್ಟರಲ್ಲಿ ರಾತ್ರಿ ೨.೩೦ರ ವೇಳೆ. ಲಂಡನ್ನಿನಲ್ಲಿ ಕೊನೆಯ ಪೋಸ್ಟ್ ಬೆಳಗಿನ ಜಾವ ೨.೩೦ಕ್ಕೆ. ಆಗ ಪತ್ರಗಳನ್ನು ಪೋಸ್ಟು ಮಾಡಿದರೆ ಬೆಳಗ್ಗೆಯೇ ಅದು ಅವರವರಿಗೆ ತಲುಪುತ್ತಿತ್ತು. ಆಗ ಪೋಸ್ಟು ಮಾಡಿ ಬಂದು ಮಲಗುತ್ತಿದ್ದದು ರಾತ್ರಿ ಮೂರು ಘಂಟೆಗೆ. ಮತ್ತೆ ಬೆಳಗ್ಗೆ ಐದು ಘಂಟೆಗೆ ಏಳುವುದು. ಇದು ನನ್ನ ದಿನಚರಿಯಾಗಿತ್ತು.

ಹೀಗಿರಬೇಕಾದರೆ ಒಮ್ಮೆ ಮೂಲ್ಜಿಭಾಯಿ ಎನ್ನುವವರು ಭವನಕ್ಕೆ ಬಂದರು. ಆಗ ಬಹಳ ಚಳಿ, ಅಕ್ಟೋಬರ್‌ಗೆ ಚಳಿ ಶುರುವಾದರೆ ಮುಂದಿನ ಏಪ್ರಿಲ್ ತನಕವೂ ಬಹಳ ಚಳಿ ಅಲ್ಲಿ. ಮೈ ಕಟಕಿಸುವ, ಶರೀರ ಗಡಗಡಿಸುವ ಚಳಿ ಅದಾಗಿತ್ತು. ಮೂಲ್ಜಿಭಾಯಿಯವರು ಭವನದ ಉಪಾಧ್ಯಕ್ಷರುಗಳಲ್ಲೊಬ್ಬರು. ಗುಜರಾತಿಯಾದ ಅವರು ಲಂಡನ್ನಿನಲ್ಲಿ ಬಹಳ ಪ್ರಭಾವಶಾಲಿ ವ್ಯಕ್ತಿ. ನಮ್ಮ ಭವನದಲ್ಲಿ ಹೀಟರುಗಳಿರಲಿಲ್ಲ. ಅಲ್ಲಿ ಹೀಟರುಗಳು ಎಲ್ಲರ ಮನೆಯಲ್ಲಿ ಇರುತ್ತವೆ. ಅವು ಇಲ್ಲವಾದರೆ ಆ ಚಳಿ ತಡೆಯಲಾಗದು. ಮೂಲ್ಜಿಭಾಯಿ ಬಂದವರೇ ಚಳಿಯಲ್ಲಿ ಗಡಗಡ ನಡುಗುತ್ತಿದ್ದ ನನ್ನನ್ನು ನೋಡಿ 'ಮತ್ತೂರ್‌ಜೀ, ಏನಿದು ನೀವು ಹೀಗೆ ನಡುಗುತ್ತಿದ್ದೀರಿ ಈ ಚಳಿಯಲ್ಲಿ? ಹೀಟರುಗಳೆಲ್ಲಿ?' ಎಂದು ಸುತ್ತಮುತ್ತ ಕಣ್ಣಾಡಿಸಿದರು. ನಾನು ನಡುಗುತ್ತಲೇ 'ಹೀಟರುಗಳಿಲ್ಲ ಸರ್ ಇಲ್ಲಿ. ಹೀಗೆಯೇ ದಿನ ತಳ್ಳಬೇಕಷ್ಟೆ' ಎಂದೆ.

ಈ ರೇಡಿಯೇಟರ್ಸ್‌ನ್ನು ಗೋಡೆಯ ಪಕ್ಕದಲ್ಲಿಟ್ಟರೆ, ಆ ಕೋಣೆ ಬೆಚ್ಚಗೆ ಇರುತ್ತದೆ. ಆದರೆ ಭವನಕ್ಕೆ ರೇಡಿಯೇಟರ್ಸ್‌ನ್ನು ಕೊಳ್ಳುವ ಅನುಕೂಲಾರ್ಹತೆಗಳಿರಲಿಲ್ಲ. ಆಗ ಮೂಲ್ಜಿಭಾಯಿಯವರು 'ಮತ್ತೂರ್‌ಜೀ, ರೂಂ ಹೀಟರ್ಸ್ ಇಲ್ಲದೆ ಹೋದರೆ ನೀವು ಸತ್ತು ಹೋಗುತ್ತೀರಷ್ಟೆ ಈ ಚಳಿಯಲ್ಲಿ ನಡುಗಿ ನಡುಗಿ...! ನಿಮಗೆ ತಿಳಿಯದೆ ಇಲ್ಲಿನ ಚಳಿ ಎಂಥದು ಎಂದು' ಎಂದವರೇ, ತಾವೇ ಭವನವನ್ನು ಸುತ್ತುಹಾಕಿ 'ಎಷ್ಟು ರೂಮುಗಳಿವೆ ಇಲ್ಲಿ?' ಎಂದರು. ನಾನು 'ಹನ್ನೊಂದು ರೂಮುಗಳಿವೆ ಸರ್'ಎಂದೆ. 'ಸರಿ, ಒಂದೊಂದು ರೂಮಿಗೂ ಒಂದೊಂದು ಹೀಟರು ಹಾಕಿದರೆ ಎಷ್ಟು ಖರ್ಚು ಬೀಳುತ್ತದೆ ಎನ್ನುವುದನ್ನು ಆಫೀಸಿನಲ್ಲಿ ವಿಚಾರಿಸಿ ನನಗೆ ಹೇಳಿ' ಎಂದು ಹೊರಟರು! ನಾನು ಹನ್ನೊಂದು ರೂಮುಗಳಿಗೂ ಹೀಟರುಗಳನ್ನಿಟ್ಟರೆ ಆಗುವ ವೆಚ್ಚದ ಪಟ್ಟಿಯನ್ನು ಅವರಿಗೆ ಕಳುಹಿಸಿಕೊಟ್ಟೆ. ಕೂಡಲೇ ಅವರು ಅಷ್ಟು ಹಣವನ್ನು ಭವನದ ರೂಮು ಹೀಟರುಗಳಿಗೆ ಎಂದು ದಾನವಾಗಿ ಕೊಟ್ಟರು!!! ಆ ಹೀಟರುಗಳು ಎರಡು ಮೂರು ದಿನಗಳಲ್ಲೇ ರೂಮುಗಳಿಗೂ ಹಾಕಲ್ಪಟ್ಟವು!! ಹೀಗೆ ಸಹಾಯ ಮಾಡಿದ ಮೂಲ್ಜಿಭಾಯಿಯಿಂದ ಭವನದ ರೂಮುಗಳು ಬೆಚ್ಚಗಾದವು , ನನ್ನನ್ನು ಆ ಭಯಂಕರ ಚಳಿಯಿಂದ ಉಳಿಸಿ ಕಾಪಾಡಿದವು!

ಆಪತ್ಕಾಲದಲ್ಲಿ ಭಗವಂತ ಯಾರ ಮೂಲಕ ಸಹಾಯ ಕಳುಹಿಸುತ್ತಾನೆ ಎನ್ನುವುದು ಯಾರಿಗೂ ತಿಳಿಯದ ವಿಷಯ. ಒಮ್ಮೆ ಖಿಮ್ಜಿಭಾಯಿ ನಾನ್‌ಜೀ ಕಾಳಿದಾಸ್ ಮೆಹ್ತಾ ಮತ್ತು ಅವರ ಪತ್ನಿ ಸರಸ್ವತಿ ಬೆಹನ್-ಈ ದಂಪತಿಗಳು ಲಂಡನ್‌ಗೆ ಬಂದರು. ೧೯೭೭ರ ಸಮಯ. ನಾನೇ ಸರಿಯಾಗಿ ಇನ್ನೂ ಅಲ್ಲಿ ನೆಲೆಯೂರಲು ಸಾಧ್ಯವಾಗಿರಲಿಲ್ಲ. ಆ ದಂಪತಿಗಳು ಈಸ್ಟ್ ಆಫ್ರಿಕಾದವರು. ಆಗ ಭವನವೂ ಬಹಳ ಕಷ್ಟದಲ್ಲಿತ್ತು. ಟೆಲಿಫೋನಿನ ಬಿಲ್ ಭರಿಸಲೂ ಅಸಾಧ್ಯವಾಗಿದ್ದ ಸ್ಥಿತಿಯದು. ನಾನು ಹೋಗಿ ಒಂದೆರಡು ವರ್ಷ ಆಗಿದ್ದಿರಬಹುದು. ವಿದ್ಯಾಭವನದ ಪ್ರಾರಂಭಿಕ ದಿನಗಳು ಅವು. ಯಾರನ್ನೂ ನಾವು ದಾನ ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ದಾನ ಕೇಳಿದರೆ 'ನೀವೇನು ಮಾಡುತ್ತಿದ್ದೀರಿ?' ಎನ್ನುವ ಪ್ರಶ್ನೆ ಎದುರಿಸ ಬೇಕಾಗುತ್ತಿತ್ತು... ಸಹಜವೇ ಅಲ್ಲವೇ?... ದಾನ ಕೊಡುವವರು ಸುಮ್ಮನೆ ಕೊಡುತ್ತಾರೆಯೇ ಮತ್ತೆ? 'ಎಂತಹ ಸಂಸ್ಥೆ, ಏನು ಮಾಡುತ್ತಿದೆ, ಮಾಡುತ್ತಿರುವುದು ಸರಿಯಾಗಿದೆಯೇ?' ಇದನ್ನೆಲ್ಲ ಕೇಳಿ ತಿಳಿದುಕೊಂಡೇ ತಾನೆ, ಅವರೂ ದಾನಕೊಡುವುದು. ದಾನ ಮಾಡುವವರು ಪಂದ್ಯ ಕಟ್ಟುವವರ ಹಾಗೆ... ಯಾವಾಗಲೂ ಗೆಲ್ಲುವ ಕುದುರೆಯ ಮೇಲೆ ಪಂದ್ಯ ಕಟ್ಟಬೇಕು ಎನ್ನುವ ಅಭಿಪ್ರಾಯ ಇರುವವರು. ದಾನಕ್ಕೆ ಒಂದು ಭದ್ರತೆ ಬೇಡವೇ? ಅದಕ್ಕೆ ಒಂದು ಮಾನ್ಯತೆ ಬೇಡವೇ? ಅದರಲ್ಲೂ ಪರದೇಶದ ಒಂದು ಸಂಸ್ಥೆ , ನನಗೆ ನಿಲ್ಲಲು, ನೆಲೆಯಾಗಲು, ಚಟುವಟಿಕೆಗಳನ್ನು ನಡೆಸಲು,

ಮುಂದುವರಿಯಲು ಎಲ್ಲಕ್ಕೂ ನೀವೇ ದುಡ್ಡು ಕೊಡಿ ಎಂದು ಕೇಳಲಾದೀತೆ ? ಕಡಮೆ ಎಂದರೆ ನೆಲೆಯಾಗುವುದಕ್ಕೆ , ತನ್ನ ಕೆಲಸ ತಾನು ಪ್ರಾರಂಭಿಸಿಕೊಳ್ಳುವುದಕ್ಕೆ ಪ್ರಥಮತಃ ಪ್ರಯತ್ನಗಳನ್ನು ತಾನೇ ಸ್ವಾವಲಂಬಿಯಾಗಿಯೇ ಮಾಡಿಕೊಂಡಿರಬೇಕು. ಅಥವಾ ಮಾಡಿ ಕೊಳ್ಳಬೇಕು. ಅದರ ಪೂರ್ವಸಿದ್ಧತೆಗಳಿಗೂ ವಿದೇಶೀಯರನ್ನು ಕೇಳುತ್ತಾರೆ ಎನ್ನುವ ಮನೋಭಾವ ಸಾಮಾನ್ಯವಾಗಿ ಎಲ್ಲರಲ್ಲೂ ಇರುವಂಥದು. ಅವರ ಮನೋಭಾವ ಹೇಗೇ ಇರಲಿ, ಭವನವು ಹುಟ್ಟಿಯಾಗಿತ್ತು. ಹಣದ ಅಪೌಷ್ಟಿಕತೆಯಿಂದ ದಿನದಿನಕ್ಕೆ ಕೃಶವಾಗತೊಡಗಿದ್ದುದಂತೂ ನಿಜಾಂಶವೇ ಆಗಿದ್ದಿತು. ಅದನ್ನು ಆ ದೇಶದ ಜನರೇ ಕೊಟ್ಟು, ಸಹಾಯಮಾಡಿ ಅದು ತಕ್ಕಮಟ್ಟಿಗೆ ಸುಧಾರಿಸಿಕೊಳ್ಳುವಂತೆ ಮಾಡಬೇಕಿತ್ತು. ಅದು ಆ ಸಮಯದ ಅತ್ಯಗತ್ಯ, ಅವಶ್ಯ ಅಂಶವಾಗಿದ್ದಿತು. ಆದರೆ ಅದನ್ನು ಯಾರು ಹೇಳುವುದು?

ನನಗೆ ಬಸ್‌ಪಾಸಿನ ಸೌಕರ್ಯ ಬಿಟ್ಟರೆ ಬೇರೆ ಅನುಕೂಲ ವಾಗಿರಲಿಲ್ಲ. ದಲಾಲ್‌ಜೀಯವರಿಗೂ ಭವನದ ಬೆಳವಣಿಗೆ ಬಹಳ ನಿಧಾನಕ್ಕೆ ಸಾಗುತ್ತಿರುವುದು ತುಸು ಚಿಂತೆಯನ್ನು ತಂದಿತ್ತು. ಈ ಪರಿಸ್ಥಿತಿಯಲ್ಲೇ ಮುಂಬಯಿಯಿಂದ ಪತ್ರ ಬಂದಿತ್ತು. 'ಬಹಳ ಮುಖ್ಯ ಅತಿಥಿಗಳೊಬ್ಬರು ಅಲ್ಲಿಗೆ ಬರಲಿದ್ದಾರೆ. ಅವರನ್ನು ಸರಿಯಾಗಿ ನೋಡಿಕೊಳ್ಳಿ' ಎಂದು. ಇದಲ್ಲದೆ ದೆಹಲಿಯಿಂದ ಹಾಥೀಜಿಯವರ ಫೋನೂ ಬಂದಿತ್ತು. 'ನನ್ನ ಮಿತ್ರರೊಬ್ಬರು ಅಲ್ಲಿಗೆ ಬರುತ್ತಿದ್ದಾರೆ. ಸರಿಯಾಗಿ ಗಮನಿಸಿಕೊಳ್ಳಿ' ಎಂದು. ಅದು ನನ್ನ ಕರ್ತವ್ಯ ತಾನೆ ?

ಆ ದಂಪತಿಗಳು ಬಂದರು. ಆತನಿಗೆ ೭೫, ಆಕೆಗೆ ೬೫ ವಯಸ್ಸು. ಅವರದ್ದೇ ಕಾರು ಇದ್ದುದರಿಂದ ಓಡಾಟಕ್ಕೆ ತೊಂದರೆ ಇರಲಿಲ್ಲ. ಲಂಡನ್‌ನಲ್ಲಿ ಬಹಳ ಚೆನ್ನಾಗಿ ಅವರ ದಿನ ಕಳೆದವು. ಹೊರಡುವ ದಿನವೂ ಬಂದಿತು. "ಇಷ್ಟು ಹೊತ್ತಿಗೆ ಏರ್‌ಪೋರ್ಟಿಗೆ ಬನ್ನಿ, ನಾವು ಹೊರಡುವರಿದ್ದೇವೆ" ಎಂದರು. ನಾನು ಅಲ್ಲಿಗೆ ಹೋದೆ. ಅವರ ಬಳಿ ಮೂರು ಭಾರಿ ಪೆಟ್ಟಿಗೆಗಳಿದ್ದವು. ಲಂಡನ್‌ನಿಂದ ಏನೇ ತೆಗೆದುಕೊಂಡು ಹೋಗುತ್ತೇವೆ ಎಂದರೂ, ೨೨ ಕೆಜಿಯಷ್ಟು ತೂಕದಷ್ಟಕ್ಕೆ ಮಾತ್ರ ಅನುಮತಿ ಇರುವುದು, ಅದಕ್ಕಿಂತ ಹೆಚ್ಚಾದರೆ ಪರವಾನಗಿ ಇಲ್ಲ , ಹೆಚ್ಚಾಗಿ ದುಡ್ಡುಕೊಡಬೇಕಾಗುತ್ತದೆ. ಏರ್ ಇಂಡಿಯಾದಲ್ಲಿ ಅವರು ಹೊರಟಿದ್ದರು. ಏರ್ ಇಂಡಿಯಾ ವಿಮಾನದಲ್ಲಿ 'ಭಾರತೀಯ ವಿದ್ಯಾಭವನ'ದವರಿಗೆ ಸ್ವಲ್ಪ ರಿಯಾಯಿತಿ ಇದೆ ಎಂದು ಅವರ ಭಾವನೆ. ಏಕೆಂದರೆ ವಿದ್ಯಾಭವನದ ಅಧ್ಯಕ್ಷರಾಗಿದ್ದ ದಲಾಲ್‌ಜೀ ಏರ್ ಇಂಡಿಯಾದಲ್ಲಿ ಅಧ್ಯಕ್ಷರಾಗಿದ್ದರಷ್ಟೆ? ಅದಕ್ಕೆ! ಆತ ನನ್ನ ಜತೆ "ಒಂದು ಪೆಟ್ಟಿಗೆ ಇದೆ ಮಾಥೂರ್‌ಜೀ... ಎರಡು ಪೆಟ್ಟಿಗೆಗಳನ್ನು ನಮ್ಮ ಜತೆಗೆ ನಾವೇ ತೆಗೆದುಕೊಂಡು ಹೋಗುತ್ತೇವೆ. ಆ ಇನ್ನೊಂದನ್ನು ನೀವು ಅನ್‌ಅಕಂಪನೀಡ್ ಬ್ಯಾಗೇಜ್ ಎಂದು (ಹಾಗೆಂದರೆ ಆ ಪೆಟ್ಟಿಗೆಯು ಅದರ ವಾರಸುದಾರರ ಜತೆಗೆ ಹೋಗುತ್ತಿಲ್ಲ ಎಂದರ್ಥ) ಕಳುಹಿಸಿಬಿಡಿ ನಮ್ಮ ವಿಳಾಸಕ್ಕೆ' ಎಂದರು. ನಾನು 'ಹೂಂ' ಎಂದುಬಿಟ್ಟೆ. ಅದಕ್ಕೂ ಟಿಕೆಟ್ಟಿನ ಬೆಲೆ ಇದೆಯೆಂದು ನನಗೆ ತಿಳಿಯದು. ಹೀಗೆಂದ ಅವರು ಅವರ ವಿಮಾನ ಹತ್ತಿ ಹೋಗಿಯೂ ಆಯಿತು. ಅನಂತರ ನಾನು ಬಂದು ಕೌಂಟರ್‌ನಲ್ಲಿ ವಿಚಾರಿಸಿದಾಗ 'ಆ ಪೆಟ್ಟಿಗೆಯನ್ನು ಕಳುಹಿಸಬೇಕು, ಬೇರೆಯಾಗಿ' ಎಂದು ಕೇಳಿದಾಗ ಆ ಸಿಬ್ಬಂದಿಯವರು ಅದನ್ನೇ ತೂಕಹಾಕಿ ನೋಡಿ "ಮಥೂರ್‌ಜೀ, ೫೨ ಪೌಂಡುಗಳಷ್ಟು ಬೆಲೆಯಾಗುತ್ತದೆಯಲ್ಲಾ" ಎಂದರು. ಆಗ ನಿಜಕ್ಕೂ ನನ್ನೆದೆ ಧಸಕ್ಕೆಂದಿತು! ನನ್ನ ಜೇಬಿನಲ್ಲಿ ಬಿಡಿಗಾಸಿರಲಿಲ್ಲ. ಏರ್ ಇಂಡಿಯಾದವರೂ ಆಗಷ್ಟೇ ಹೊಸದಾಗಿ ಪರಿಚಯದವರಾಗಿದ್ದವರು. ಸಲಿಗೆ ಇರಲಿಲ್ಲ. ದುಡ್ಡಿಲ್ಲ ಎಂದು ಅವರಲ್ಲಿ ಹೇಳುವುದಾದರೂ ಹೇಗೆ? "ಈ ವಿಷಯ ನನಗೆ ತಿಳಿದಿರಲಿಲ್ಲವಲ್ಲ" ಎಂದೆ ನಾನು. ಅದಕ್ಕೆ ಅವರು "ಅದರಲ್ಲಿ ತಿಳಿಯದ್ದು ಏನಿದೆ ಮಾಥೂರ್‌ಜೀ, 'ಅನ್‌ಅಕಂಪನೀಡ್ ಬ್ಯಾಗೇಜ್' ಎಂದರೆ ವಾರಸುದಾರರ ಜತೆಯಲ್ಲಿ ಹೋಗದೆ ಬೇರೆ ವಿಮಾನದಲ್ಲಿ ಆ ಪೆಟ್ಟಿಗೆ ಹೋಗುತ್ತಿದೆ ಎಂದಷ್ಟೇ ಅರ್ಥ. ಆದರ ತೂಕಕ್ಕೆ ಬೆಲೆಕಟ್ಟಿ ಅದನ್ನು ಬೇರೆ ವಿಮಾನದಲ್ಲಿ ಕಳುಹಿಸಬೇಕು ಅಷ್ಟೆ?" ಎಂದರು ಆ ಸಿಬ್ಬಂದಿಯವರು. 'ಅಷ್ಟೆ' ಎನ್ನುವಷ್ಟು ಸಾಮಾನ್ಯದ ವಿಷಯವಾಗಿರಲಿಲ್ಲ ಅದು ನನ್ನ ಪಾಲಿಗೆ. ನನ್ನ ರೂಢಿಯಂತೆ ನಾನು ಏನು ಮಾಡಬೇಕಾದರೂ, ಏನು ಮಾಡಿದರೂ ದಲಾಲ್‌ಜೀಯವರನ್ನು ಕೇಳಿ-ಹೇಳಿ ಮಾಡಬೇಕು. ಆದಿನ ಅದೇಕೋ ದಲಾಲ್‌ಜೀಗೂ ಹೇಳುವುದು ಬೇಡ ಎನಿಸಿತ್ತು. ಇದು ನಾನು ತೆಗೆದುಕೊಂಡ ಜವಾಬ್ದಾರಿ , ನನ್ನ ಹೊಣೆ. ದಲಾಲ್‌ಜೀ ಹೇಳಿದರೂ ಅವರೇನು ಮಾಡಿಯಾರು? 'ಭವನದಿಂದ ಹಣ ತೆಗೆದುಕೊಳ್ಳಿ' ಎಂದರೂ ಭವನದಲ್ಲಿ ಹಣವಿಲ್ಲ ಎಂದು ನನಗೇ ಚೆನ್ನಾಗಿ ಗೊತ್ತಿದೆ ಯಲ್ಲಾ! ಇನ್ನು ದಲಾಲ್‌ಜೀಯನ್ನು 'ಹಣಕೊಡಿ' ಎಂದು ಕೇಳಲಾದೀತೆ ? ಏಕೋ ಸರಿಕಾಣಲಿಲ್ಲ. ಅವರಾದರೂ ಇದನ್ನು ಹಾಗೇಕೆ ಕಳುಹಿಸಿಕೊಡಿ ಎಂದರು ? ಎಂದರೆ, ಅವರ ಜತೆಯಲ್ಲಿ ಅದು ಹೋಗಿದ್ದರೆ ಸುಮಾರು ೨೫೦ ಪೌಂಡುಗಳ ಬೆಲೆಯಾಗುತ್ತಿತ್ತು. ಹೀಗೆ ಬೇರೆಯಾಗಿ ಹೋಗುತ್ತಿರುವುದರಿಂದ ಅಷ್ಟೇ ತೂಕದ ಈ ಪೆಟ್ಟಿಗೆಗೆ ಕೇವಲ ೫೨ ಪೌಂಡುಗಳ ಬೆಲೆಯಾಗಿದೆ ಅಷ್ಟೆ. ಹಾಗೆಂದು ಕಡಮೆ ಖರ್ಚಿನಲ್ಲಿ ಪೆಟ್ಟಿಗೆ ಬರಲಿ ಎಂದುಕೊಂಡು ಕೇಳಿದ್ದಾರೆ ಎನ್ನಲೂ ಆಗದು. ಮುಂಬಯಿಯಲ್ಲಿನ ಬಹಳ ಶ್ರೀಮಂತರು, ದೊಡ್ಡ ಮನುಷ್ಯರು ಎನಿಸಿಕೊಂಡಿರುವವರು... ಯೋಚನೆಗಳು ಹೀಗೆ ಸಾಗಿದರೂ ದುಡ್ಡಿಲ್ಲದೆ ಸಮಸ್ಯೆಯಿಂದ ಹೊರಬರಲು ಹೇಗೂ ಸಾಧ್ಯವಿರಲಿಲ್ಲ. ತರ್ಕಗಳಿಗೆ ಸಿಕ್ಕದ ಬೆಲೆಯನ್ನು ನಾನೀಗ ತೆರಬೇಕಾಗಿದ್ದಿತು! ನನ್ನ ವೈಯಕ್ತಿಕ ಖಾತೆಯಲ್ಲಿ ೭೦-೮೦ ಪೌಂಡುಗಳಷ್ಟು ಮಾತ್ರ ಇದ್ದಿತು. ಬೇರೆ ದಾರಿಯಿಲ್ಲ ಈಗ, ಅದನ್ನೇ ತೆಗೆಯಬೇಕಿತ್ತು. ನಾವು ಯಾರ ಕೈಕೆಳಗೆ ಕೆಲಸ ಮಾಡುತ್ತಿದ್ದರೂ,

ಅವರು ಎಷ್ಟೇ ದಕ್ಷರಾಗಿದ್ದರೂ ಎಲ್ಲವನ್ನೂ ಅವರಿಗೆ ಹೇಳಿ ಪರಿಹಾರ ಕೇಳಲಾಗದು. ಕೆಲವೊಮ್ಮೆ ನಾವೇ ಸ್ವತಂತ್ರವಾಗಿ ಯೋಚಿಸಿ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಅದು ಸಾಧ್ಯವಾದಷ್ಟು ಸರಿಯಾಗಿರಬೇಕು. ಇಲ್ಲವಾದರೆ ತಪ್ಪೋ ಸರಿಯೋ ಅನಂತರ ನೋಡಿಕೊಂಡರಾಯಿತು, ಮೊದಲು ಸಮಸ್ಯೆ ಬಗೆಹರಿದರೆ ಸರಿ ಎಂದು ಆ ಸಮಯದಲ್ಲಿ ಯೋಚಿಸಿ ತಕ್ಕ ನಿರ್ಧಾರ ತೆಗೆದುಕೊಂಡು ಕೂಡಲೇ ಕಾರ್ಯೋನ್ಮುಖರಾಗಬೇಕು. ಈಗ ಆ ಪರೀಕ್ಷೆ ನನಗೆ ಬಂದಿತ್ತು. ನಾನೂ ಅರ್ಧಘಂಟೆ ಯೋಚಿಸಿದೆ!! ದುಡ್ಡು ಎನ್ನುವುದು ಇಲ್ಲದಾಗ ಅದೆಷ್ಟು ಯೋಚಿಸುವಂತೆ ಮಾಡುತ್ತದೆ, ಹೇಗೆ ಕಾಡಿಸುತ್ತದೆ ಎಂದು ನಿಮಗೂ ಈಗ ತಿಳಿದಿರಬೇಕು. ಏಕೆಂದರೆ ಅಷ್ಟು ಹೊತ್ತಿನಿಂದಲೂ ನಾನು ಇದನ್ನೇ ಹೇಳುತ್ತಿದ್ದೇನೆಯೇ ಹೊರತು ಏನು ಮಾಡಿದೆ ಎಂದು ನಿಮಗಿನ್ನೂ ನಾ ಹೇಳಿಲ್ಲ! ನಿಮ್ಮ ಸಹನೆಯನ್ನು ಇನ್ನು ಪರೀಕ್ಷಿಸುವುದಿಲ್ಲ. ನೀವೆಲ್ಲ ಈಗಾಗಲೇ ಊಹಿಸಿರುವಂತೆ, ನಾನು ನನ್ನ ವೈಯಕ್ತಿಕ ಖಾತೆಯಲ್ಲಿ ಹಣ ತೆಗೆಯುವುದೆಂದು ನಿರ್ಧರಿಸಿ ನನ್ನ ಬ್ಯಾಂಕಿನ ಕಾರ್ಡನ್ನು ಸಿಬ್ಬಂದಿಯವರಿಗೆ ಕೊಟ್ಟು , ನನ್ನ ಖಾತೆಯಲ್ಲಿನ ಹಣ ತೆಗೆದುಕೊಳ್ಳಬಹುದೆಂದು ಸಮ್ಮತಿ ಸೂಚಿಸಿ ಸಹಿ ಹಾಕಿ ಆ ಪೆಟ್ಟಿಗೆಯನ್ನು ಕಳುಹಿಸಿಬಿಟ್ಟೆ! ಏನಾದರೂ ಆಗಲಿ, ಹಿರಿಯರು ಹೇಳಿದ್ದಾರೆ, ಅನಂತರ ನೋಡಿಕೊಂಡರಾಯಿತು ಎಂದು. ಒಂದೆರಡು ದಿನ ಒದ್ದಾಡಿದೆ. ಯಾವುದನ್ನೂ ಸರಿಯಾಗಿ ತಿಳಿದುಕೊಳ್ಳದೆ ಆತುರದಲ್ಲಿ ಯಾರಿಗೂ ಮಾತುಕೊಡಬಾರದು ಎಂದುಕೊಂಡೆ. ಒಂದೊಂದು ಸನ್ನಿವೇಶವೂ ಬದುಕಿನಲ್ಲಿ ನಮಗೆ ಪಾಠ ಕಲಿಸುತ್ತದೆಯಲ್ಲವೇ? ಅನಂತರ ಆ ವಿಷಯವನ್ನು ದಲಾಲ್‌ಜೀಯಲ್ಲೂ ಪ್ರಸ್ತಾಪಿಸಲಿಲ್ಲ. ನಾನು ಹೆಚ್ಚೂ-ಕಡಮೆ ಅದನ್ನು ಮರೆತೇಬಿಟ್ಟೆ.

ಇದಾಗಿ ಒಂದು ವರ್ಷ ಕಳೆಯಿತು. ವಿದ್ಯಾಭವನದಲ್ಲಿ ಈಗಲೂ ಇನ್ನೂ ಯಾವುದೇ ಪ್ರಗತಿ ಕಂಡಿರಲಿಲ್ಲ. ಒಂದೊಂದು ಪೌಂಡಿಗೂ ಕಷ್ಟವಾಗುವ ಸ್ಥಿತಿ ಬಂದೊದಗಿತ್ತು. ಈಗ ನನಗೆ 'ವಿದ್ಯಾಭವನ' ಮುಳುಗಿಹೋಗದಂತೆ ಮೇಲೆತ್ತಲು ಯಾರದಾದರೂ ಬಲವಾದ ಸಹಾಯಹಸ್ತ ಅವಶ್ಯವಾಗಿ ಬೇಕಾಗಿದ್ದಿತು. ನಾನು ಅಸಹಾಯಕನಾಗಿದ್ದೆ, ಕಂಗಾಲಾಗಿದ್ದೆ, ಜಯಶುಕಲಾಲ್ ಹಾಥೀಜಿ ಹಾಗೂ ರಾಮಕೃಷ್ಣನ್‌ಜೀಗೆ ಲಂಡನ್ ಭವನ ಕೇಂದ್ರದ ಪ್ರಸಕ್ತ ಪರಿಸ್ಥಿತಿಯ ಬಗ್ಗೆ ಹೇಳಿ ಅವರನ್ನು ಅಲ್ಲಿಗೆ ಬರಬೇಕೆಂದು ವಿನಂತಿಸಿದೆ. "ನೀವು ಬೇಗ ಬಂದು ಏನಾದರೂ ಮಾಡಬೇಕು, ಇಲ್ಲವಾದರೆ ನಾವಿಲ್ಲಿ ಮುಳುಗಿ ಹೋಗುತ್ತೇವೆ" ಎಂದೇ ಹೇಳಿದೆ. ಹಾಥೀಜಿಯವರು ಕ್ಯಾಬಿನೆಟ್ ಮಂತ್ರಿಗಳು, ಅವರು ಬಂದರೆ ಏನಾದರೂ ಆಗಿಯೇ ಆಗುತ್ತದೆ ಎನ್ನುವ ವಿಶ್ವಾಸ ನನಗೆ. ನನ್ನ ವಿನಂತಿಯನ್ನು ಮನ್ನಿಸಿ ಬಂದ ಅವರಿಬ್ಬರೂ ಹಿರಿಯರು, "ಮತ್ತೂರ್‌ಜೀ, ಒಂದು ಟ್ಯಾಕ್ಸಿಯನ್ನು ಗೊತ್ತುಮಾಡಿ. ನಾವು ಇಡೀ ಗ್ರೇಟ್‌ಬ್ರಿಟನ್ ಸುತ್ತಿ ಬರೋಣ. ಎಲ್ಲವೂ ಸರಿಯಾಗುತ್ತದೆ ಆಗ!" ಎಂದರು. ಅಂತೆಯೇ ನಾವು ಒಂದು ಟ್ಯಾಕ್ಸಿಯನ್ನು ಗೊತ್ತು ಮಾಡಿಕೊಂಡೆವು. ಹ್ಯಾರಿ ಎನ್ನುವ ಇಂಗ್ಲಿಷಿನವ ನಮ್ಮ ಡ್ರೈವರ್ ಆಗಿದ್ದ. ಅವನಿಗೆ ಹಾಥೀಜಿ ಅವನ ಪಕ್ಕದಲ್ಲಿ ಕುಳಿತಿದ್ದುದು ಬಹಳ ಹೆಮ್ಮೆ ಎನಿಸಿತ್ತು. ನಮ್ಮ ಮೂವರನ್ನೂ ತಿಳಿದುಕೊಂಡ ಅವನು, "ಓಹೋ, ಭಾರತದ ಮಂತ್ರಿಯೊಬ್ಬರು ನನ್ನ ಪಕ್ಕದಲ್ಲಿ ಕುಳಿತಿದ್ದಾರೆಂದರೆ, ಅದೇನು ಸಾಮಾನ್ಯ ವಿಷಯವೇ?" ಎಂದು ಬಹಳ ಸಂಭ್ರಮಿಸಿದ! ಸುಮಾರು ಹತ್ತು ದಿನಗಳ ಕಾಲ ಸುತ್ತಿದೆವು. ಹಣ ಎಂಟು-ಹತ್ತು ಸಾವಿರ ಪೌಂಡುಗಳಷ್ಟು ಸಂಗ್ರಹವಾಯಿತು! ನಾನು ಹೋದಲೆಲ್ಲಾ ನಮ್ಮ ಜತೆ ಹಾಥೀಜಿಯವರನ್ನು ಕಂಡು ಗುಜರಾತಿ, ಸಿಂಧಿ, ಪಂಜಾಬಿ ಜನರು ಬಹಳ ಮರ್ಯಾದೆಯಿಂದ ಕಂಡರು, ಉದಾರವಾಗಿ ಸಹಾಯವನ್ನು ಮಾಡಿದರು. ಹೀಗೆ ನಾವು ಎಲ್ಲ ಕಡೆಗೂ ಹೋಗಿ ಬಂದನಂತರ ಹಾಥೀಜಿ ದೆಹಲಿಗೆ ಫೋನು ಮಾಡಿದರು. 'ಖಿಮ್ಜಿಭಾಯಿಯವರಿದ್ದಾರೆಯೇ?" ಎಂದು ಗುಜರಾತಿಯಲ್ಲಿ ಕೇಳಿದರು. ಖಿಮ್ಜಿಭಾಯಿಯವರು ಸದ್ಯಕ್ಕೆ ಲಂಡನ್‌ನಲ್ಲಿಯೇ ಇದ್ದಾರೆಂದು ದೆಹಲಿಯ ಕಡೆಯಿಂದ ಉತ್ತರ ಬಂದಿತು. ಹಾಥೀಜಿ, "ಮಾಥೂರ್‌ಜೀ, ಖಿಮ್ಜಿಭಾಯಿಯವರು ಇಲ್ಲೇ ಇದ್ದಾರಂತೆ. ನಿಮಗೆ ಗೊತ್ತಿದೆಯಲ್ಲ ಅವರು, ಕಳೆದ ವರ್ಷತಾನೆ ಇಲ್ಲಿಗೆ ಬಂದಿದ್ದರಲ್ಲಾ? ನೆನಪಿದೆಯೇ? ಅವರು ಎಲ್ಲಿದ್ದಾರೆಂದು ತಿಳಿದಿದೆಯೇ ನಿಮಗೆ, ಸ್ವಲ್ಪ ನೋಡಿ" ಎಂದರು. ನನಗೆ ಈಗ ನೆನಪಾಯಿತು. ಹೌದು, ಅದೇ ಖಿಮ್ಜಿಭಾಯಿ, 'ಅನ್‌ಅಕಂಪನೀಡ್ ಬ್ಯಾಗೇಜ್ ಖಿಮ್ಜಿಭಾಯಿ' ಎಂದೇ ಬಂದಿತು ನನ್ನ ಮನಸ್ಸಿನಲ್ಲಿ!"ಹೌದು ಹಾಥೀಜಿ, ಕಳೆದ ವರ್ಷ ಅವರಿಲ್ಲಿಗೆ ಬಂದಿದ್ದರು, ನೀವೂ ಫೋನು ಮಾಡಿದ್ದಿರಿ. ಆಗ ಅವರು ಕಳೆದ ಬಾರಿ ಬಂದಾಗ ಉಳಿದುಕೊಂಡಿದ್ದ ಜಾಗ ನನಗೆ ಗೊತ್ತಿದೆ. ನೋಡೋಣ ತಾಳಿ. ಅದೋ ಅವರು ಈಗಲೂ ಅಲ್ಲೇ ಉಳಿದಿದ್ದರೆ ನಮಗೆ ಸಿಗುತ್ತಾರೆ" ಎಂದು ಹೇಳಿ ಫೋನು ಮಾಡಿದೆ. ಖಿಮ್ಜಿಭಾಯಿ ಸಿಕ್ಕಿದರು. ಹಾಥೀಜಿ ಅವರ ಬಳಿ ಮಾತನಾಡಿದರು. "ಜೈಶುಕ್‌ಲಾಲ್‌ಭಾಯಿ... ಆಯಿಯೇ ಆಯಿಯೇ ಆಪ್... " ಎಂದು ಪ್ರೀತಿಯಿಂದ ನಮ್ಮನ್ನು ಭೇಟಿಮಾಡಲು ಅನುಮತಿಕೊಟ್ಟರು. ಮಧ್ಯಾಹ್ನ ಮೂರು ಘಂಟೆಯ ಸಮಯ. ನಾನು, ಹಾಥೀಜಿ, ರಾಮಕೃಷ್ಣನ್‌ಜೀ ಮೂವರೂ ಖಿಮ್ಜಿಭಾಯಿಯವರಲ್ಲಿಗೆ ಹೋದೆವು. ಹಾರ್ದಿಕವಾಗಿ ಅವರು ನಮ್ಮನ್ನು ಸ್ವಾಗತಿಸಿದರು. ಅವರ ಪತ್ನಿ ಸರಸ್ವತಿಬೆನ್ ಒಳಗಿನಿಂದ ಬಂದರು. ನನ್ನನ್ನು ನೋಡಿದವರೆ "ನಮಸ್ತೆ" ಎಂದು ಹೇಳಿ ಹಾಥೀಜಿಯತ್ತ ತಿರುಗಿ, "ಜೈಶುಕ್‌ಲಾಲ್‌ಭಾಯಿ, ನೀವು ಎಂತಹಾ ವ್ಯಕ್ತಿಯನ್ನು ಕೆಲಸಕ್ಕೆ ಇಟ್ಟು ಕೊಂಡಿದ್ದೀರಿ? ನಿಜಕ್ಕೂ...!! ಕಳೆದ ಸಾರಿ ನಾವಿಲ್ಲಿಗೆ ಬಂದಿದ್ದಾಗ ಒಂದು ಪೆಟ್ಟಿಗೆಯನ್ನು ಅನ್‌ಅಕಂಪನೀಡ್ ಬ್ಯಾಗೇಜ್ ಆಗಿ ಕಳುಹಿಸಿಕೊಡಿ ಎಂದು ಮಾಥೂರ್‌ಜೀಯಲ್ಲಿ ಹೇಳಿ

ಹೋದೆವು. ನಾವು ಹೋದರೆ ಅಲ್ಲಿಗೆ ನಮ್ಮ ಹಿಂದೆಯೇ ಬಂದಿತ್ತು ನಮ್ಮ ಪೆಟ್ಟಿಗೆಯೂ ಸಹ! ಜೈಶುಕ್‌ಲಾಲ್‌ಭಾಯಿ, ಇಂತಹ ಜನರನ್ನೇ ನೀವು ಕೆಲಸಕ್ಕಿಟ್ಟುಕೊಂಡರೆ ವಿದ್ಯಾಭವನಕ್ಕೆ ಬಹಳ ಒಳ್ಳೆಯ ದಾಗುವುದು, ಭವನ ಬಹಳ ಬೇಗನೆ ಮೇಲಕ್ಕೆ ಬರುವುದು...'' ಎಂದರು ಪಟಪಟನೆ!

ನನಗೋ ಆಶ್ಚರ್ಯ, ಜತೆಗೆ ಸಂತೋಷ. 'ಅಬ್ಬಾ ಭಗವನ್, ಅಂತೂ ನಾ ತೆಗೆದುಕೊಂಡ ನಿರ್ಧಾರ ಅದೆಷ್ಟು ಸರಿಯಾಗಿತ್ತು! ಈಕೆಗೆ ಅದೆಷ್ಟು ಸಂತೋಷವಾಗಿದೆ ಅವತ್ತು ಮಾಡಿದ್ದಕ್ಕೆ. ಈ ದಿನ ಒಳ್ಳೆಯ ಮಾತು ಬಂದಿದೆ! ಬದುಕಿಸಿದೆ ತಂದೆ!!' ಎಂದುಕೊಂಡೆ ಮನಸ್ಸಿನಲ್ಲೇ. ಹಾಗೆಂದ ಆಕೆ ನಾಕಾರು ಮಾತಾಡಿ ಟೀ ತರಲೆಂದು ಒಳಗೆ ಹೋದರು. ಆಗ ಹಾಥೀಜಿ ನನಗೆ ''ನೋಡಿದಿರಾ ಮಾಥೂರ್‌ಜೀ, ಸರಸ್ವತಿಬೆನ್‌ಗೆ ಎಷ್ಟು ಸಂತೋಷವಾಗಿದೆ ಅಂತ! ಹೇಗೆ ಮಾಡಿದಿರಿ? ಏನು ಮಾಡಿದಿರಿ?'' ಎಂದರು. ಅದಕ್ಕೆ ನಾನು, ''ಹೌದು ಸರ್, ೫೨ ಪೌಂಡುಗಳ ಬೆಲೆ ಕಟ್ಟಬೇಕಿತ್ತು. ಅದನ್ನು ಕೊಟ್ಟು ನಾನು ಕೂಡಲೇ ಆ ಪೆಟ್ಟಿಗೆಯನ್ನು ಕಳುಹಿಸಿಕೊಟ್ಟಿದ್ದೆ!'' ಎಂದೆ.ಅದಕ್ಕೆ ಹಾಥೀಜಿ, ''ಹೌದಾ? ಹಾಗೆ ಕಳುಹಿಸಿದಿರಾ ನೀವು?'' ಎಂದು ಅಚ್ಚರಿಪಟ್ಟು , ಪ್ರಶಂಸೆ ಮಾಡಿದರು. ಟೀ ತಂದ ಸರಸ್ವತಿ ಬೆನ್ ಅವರ ಬಳಿ ಹಾಥೀಜಿ ಅವರು ಮಾತು ಮುಂದುವರೆಸಿ, ''ಭವನಕ್ಕೆ ಒಳ್ಳೆಯದಾಗುತ್ತದೆ ಎಂದಿರಿ, ಏನು ಒಳ್ಳೆಯದಾಗುತ್ತದೆಯೋ ಏನೋ...? ಒಂದು ಪೈಸೆಯೂ ಇಲ್ಲ ಭವನದಲ್ಲಿ ಈಗ...'' ಎಂದರು. ಹಾಥೀಜಿಯವರ ಹಾಸ್ಯ ಪ್ರವೃತ್ತಿ ಬಹಳ ಚೆನ್ನು. ತುಂಬ ಸರಳವಾದ ವ್ಯಕ್ತಿತ್ವದ ಅವರು ತಾವೆಲ್ಲೇ ಹೋದರೂ ತಮ್ಮ ಹಾಸ್ಯದಿಂದ ಇಡೀ ವಾತಾವರಣವನ್ನು ನಗುವಿನಲ್ಲಿ ತೇಲಿಸುತ್ತಿದ್ದರು. ಈಗ ಖಿಮ್ಜಿಭಾಯಿಯವರನ್ನು ನೋಡಿ, ''ಖಿಮ್ಜಿಭಾಯಿ, ನೋಡಿ ಈಗ, ನಾವು ಮೂವರು ಬ್ರಾಹ್ಮಣರು ನಿಮ್ಮಲ್ಲಿಗೆ ಬಂದಿದ್ದೇವೆ. ನೀವು ವೈಶ್ಯರು (ಎಂದರೆ ವ್ಯಾಪಾರಸ್ಥರು). ಬ್ರಾಹ್ಮಣರು ವೈಶ್ಯರ ಹತ್ತಿರ ದುಡ್ಡು ಕೇಳುತ್ತಾರೆ. ಹಾಗೆ ಕೇಳಬಹುದು ಎಂದು ಧರ್ಮವೇ ಹೇಳುತ್ತದೆ!'' ಎಂದರು. ಅವರ ಈ ಮಾತಿಗೆ ನಾವೆಲ್ಲ ನಕ್ಕೆವು. ಖಿಮ್ಜಿಭಾಯಿಯೂ ನಕ್ಕು ಒಳಹೋದರು. ನಾವು ಹಾಥೀಜಿಯು ಮಾಡಿದ ತಮಾಷೆಯನ್ನು ನೆನೆದು ನಗುತ್ತಲೇ ಇದ್ದೆವು. ಖಿಮ್ಜಿಭಾಯಿಗೆ ನಾವು ದಾನ ಕೇಳಲು ಬಂದಿದ್ದೇವೆ ಎಂದು ತಿಳಿಯಿತು. ಏನಾದರೂ ಕೊಡಬೇಕಲ್ಲ ಈಗ. ಅದಕ್ಕೆ ಅವರು ಎದ್ದು ಒಳಹೋಗಿ ಅವರ ಪತ್ನಿಯನ್ನು ಒಂದು ಮಾತು ಕೇಳಿ-ಹೇಳಿ ಮತ್ತೆ ಹೊರಬಂದರು. ''ಜೈಶುಕ್‌ಲಾಲ್ ಭಾಯಿ, ನಾವು ನಮ್ಮ ಮಗಳು ಶೋಭನಾಳ ಹೆಸರಿನಲ್ಲಿ ೧೦,೦೦೦ ಪೌಂಡುಗಳನ್ನು ಕೊಡುತ್ತೇವೆ'' ಎಂದರು. ನಮಗೆಲ್ಲ ಆಗ ಆದ ಸಂತೋಷ ಅಷ್ಟಿಷ್ಟಲ್ಲ! ಹಾಥೀಜೀ ''ನೋಡಿ ಮಾಥೂರ್‌ಜೀ, ನೀವು ಕೊಟ್ಟ ೫೦ ಪೌಂಡು ಈಗಿನ ೧೦,೦೦೦ ಪೌಂಡುಗಳನ್ನು ಕೊಡಿಸಿದೆ. ಖಿಮ್ಜಿಭಾಯಿಯವರಿಂದ!!'' ಎಂದು ನನಗೇ ಆ ಹಣದ ಶ್ರೇಯವನ್ನು ಕೊಟ್ಟರು. ''ಹಾಥೀಜಿ, ಅದು ನನ್ನಿಂದಾದದ್ದು ಎಂದು ನಾನೇನೂ ಅಂದುಕೊಳ್ಳಲಿಲ್ಲ. ಅವರೂ ಸಹ 'ಏಯರ್ ಇಂಡಿಯಾ'ದವರು ಇವರಿಗೆ ಚೆನ್ನಾಗಿ ಗೊತ್ತಿದೆ. ಕಳುಹಿಸಿಕೊಡುತ್ತಾರೆ ಎಂದಷ್ಟೇ ಅವರು ಯೋಚಿಸಿದ್ದುದು, ವಿಷಯ ಅಷ್ಟೇ ಸರಳವಾಗಿದ್ದುದು. ಅಂತೂ ಈ ದಿನ ಈ ಪ್ರತಿಫಲ ತಂದುಕೊಟ್ಟಿತು!'' ಎಂದೆ ನಾನು ಮೆಲ್ಲಗೆ.

''ನ ಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತಿ'' ಎನ್ನುವ ಮಾತೊಂದಿದೆ.

ನಾನು ಹಾಥೀಜಿಯವರ ಕಾಲು ಮುಟ್ಟಿ ನಮಸ್ಕರಿಸುತ್ತಾ ''ಹಾಥೀಜಿ, ಹಾಗೆನ್ನ ಬೇಡಿ, ಈಗ ನೀವಿಲ್ಲದಿದ್ದರೆ 'ವಿದ್ಯಾಭವನ'ವು ಮುಳುಗಿಹೋಗುತ್ತಿತ್ತು. ನೀವು ಅದರ ಕೈಹಿಡಿದು ಎತ್ತಿದಿರಿ...'' ಎಂದೆ. ನನ್ನ ಕೃತಜ್ಞತೆ ಕಣ್ಣಿನಲ್ಲಿ ನೀರಾಗಿ ಇಳಿದಿತ್ತು. ಅದನ್ನು ಕಂಡ ಹಾಥೀಜಿ, ನನ್ನನ್ನು ಭುಜಹಿಡಿದು ಮೇಲೆತ್ತಿ ''ಚಿಂತೆ ಮಾಡಬೇಡಿ ಮಾಥೂರ್‌ಜೀ, ಎಲ್ಲವೂ ಸರಿಯಾಗುತ್ತದೆ. ನೀವು ಯೋಚಿಸಬೇಡಿ'' ಎಂದು ಭರವಸೆ ಕೊಟ್ಟು ಧೈರ್ಯ ತುಂಬಿದರು. ಖಿಮ್ಜಿಭಾಯಿಯವರು ಚೆಕ್‌ತರಲು ಒಳಗೆ ಹೋಗಿದ್ದಾಗ, ಈಚೆ ನಾವು ಮೂವರೂ ಕುಳಿತಿದ್ದೆವಷ್ಟೆ . ಆಗ ನಾನೊಂದು ಉಪಾಯಮಾಡಿದೆ. ''ಹಾಥೀಜಿ , ಖಿಮ್ಜಿಭಾಯಿಯವರ ಅಳಿಯ ಚಾರ್ಟರ್ಡ್ ಅಕೌಂಟೆಂಟ್, ಕಿಶೋರ್‌ದೇವಾನಿ, ಬಹಳ ಬುದ್ಧಿಶಾಲಿಗಳು. ಅವರನ್ನು ಭವನದ ಬಳಗಕ್ಕೆ ಸೇರಿಸಿಕೊಳ್ಳಬಾರದೇಕೆ? ಭವನದಲ್ಲಿ ಈಗ ಒಬ್ಬ ಒಳ್ಳೆಯ ಕೋಶಾಧಿಕಾರಿಯ (ಟ್ರೆಷರರ್) ಅಗತ್ಯವಿದೆ'' ಎಂದೆ. ಅದಕ್ಕೆ ಹಾಥೀಜಿ ''ಹೌದೇನು? ಸರಿ ಹಾಗಾದರೆ, ಪ್ರಯತ್ನಿಸೋಣ ತಾಳಿ'' ಎಂದರು. ಚೆಕ್ ಹಿಡಿದು ಬಂದ ಖಿಮ್ಜಿಭಾಯಿಯವರಿಂದ ಚೆಕ್ ತೆಗೆದುಕೊಂಡ ಹಾಥೀಜಿ, ''ನೀವೇನೋ ಉದಾರವಾಗಿ ದಾನಕೊಡುತ್ತಿದ್ದೀರಿ. ಅದನ್ನು ನೋಡಿಕೊಳ್ಳುವವ ರೊಬ್ಬರು ಬೇಕಲ್ಲ ಈಗ'' ಎಂದು ನಿಲ್ಲಿಸಿದರು. ಖಿಮ್ಜಿಭಾಯಿಯವರಿಗೆ ಅರ್ಥವಾಗದೆ ''ಹಾಗೆಂದರೆ?'' ಎಂದರು. ಅದಕ್ಕೆ ಹಾಥೀಜಿ ''ನಿಮ್ಮ ಅಳಿಯಂದಿರೇ ಇದ್ದಾರೆ ಕಿಶೋರ್‌ಜೀ, ಅವರೂ ಚಾರ್ಟರ್ಡ್ ಅಕೌಂಟೆಂಟ್. ಅವರು ಕಮಿಟಿಗೆ ಬರಲಿ, ಕೋಶಾಧಿಕಾರಿಯಾಗಲಿ... ಅವರೇ ನೋಡಿಕೊಳ್ಳಲಿ... ಆಗ ನೋಡಿ, ಎಲ್ಲವೂ ಸರಿಯಾಗುತ್ತದೆ!'' ಎಂದರು. ನಿಮ್ಮ ಅಳಿಯನನ್ನೂ ಭವನಕ್ಕೆ ಸೇರಿಸಿ ಎನ್ನುವ ಹಾಥೀಜಿಯ ಮಾತಿಗೆ ಖಿಮ್ಜಿಭಾಯಿ ಘೊಳ್ಳೆಂದು ನಕ್ಕರು. ಅವರು ನಕ್ಕಿದ್ದು ನನಗಿನ್ನೂ ಚೆನ್ನಾಗಿ ನೆನಪಿದೆ. ಆ ಕ್ಷಣದಲ್ಲಿ ಕೈಯಲ್ಲಿ ಕ್ಯಾಮರಾ ಇದ್ದಿದ್ದರೆ ಅವರದೊಂದು ಫೋಟೋ ತೆಗೆಯಬಹುದಿತ್ತು! ಅಂತಹ ಮನತುಂಬಿದ ಸಂತೋಷದ ನಗುವಾಗಿತ್ತು ಅದು! ಅನಂತರ ಶ್ರೀ ಕಿಶೋರ್‌ದೇವಾನಿ ಭವನವನ್ನು ಸೇರಿದರು.

ಇವತ್ತಿಗೂ ಶ್ರೀ ಕಿಶೋರ್ ದೇವಾನಿಯವರೇ ವಿದ್ಯಾಭವನ, ಲಂಡನ್ ಕೇಂದ್ರದ ಕೋಶಾಧಿಕಾರಿಗಳು. ಅವರ ಸೇವೆಗೆ ೨೦ ವರ್ಷಗಳು

ಸಂದಿವೆ! ಅವರು ಬಹಳ ಒಳ್ಳೆಯ ವ್ಯಕ್ತಿ. ''ಮಾಥೂರ್‌ಜೀ ನೀವು ನನ್ನನ್ನು ಸಿಕ್ಕಿಸಿದಿರಿ...!!''ಎಂದು ಅವರು ನಗುತ್ತಾರೆ. ಈ ಬಗ್ಗೆ ಅವರೆಲ್ಲರಿಗೂ ಬಹಳ ಸಂತೋಷವೂ ಇದೆ. ಅವರು ತಾವು ಕೆಲಸ ಮಾಡುತ್ತಿರುವುದೇ ಅಲ್ಲದೆ, ತಮ್ಮ ಪರಿಚಿತರು, ಅವರ ಬಳಿಗೆ ಅಕೌಂಟ್ಸ್ ತರುವ ಕಕ್ಷಿದಾರರು ಎಲ್ಲರನ್ನೂ ಒಂದಲ್ಲ ಒಂದು ರೀತಿಯಲ್ಲಿ ಭವನದ ಕೆಲಸಕ್ಕೆ ತೊಡಗಿಸಿಕೊಳ್ಳುತ್ತಾರೆ, ದಾನಿಗಳನ್ನು ಕರೆದುತರುತ್ತಾರೆ. ಈ ೨೦ ವರ್ಷಗಳಿಗೂ ಮೀರಿದ ಅವರ ಸೇವೆಯಲ್ಲಿ ಭವನವು ಶ್ರೀ ಕಿಶೋರ್ ದೇವಾನಿಯವರಿಂದ ಬಹಳ ಉಪಕೃತವಾಗಿದೆ. ಅದೇ ಕಾಯಕವನ್ನು ಅವರು ಇಂದಿಗೂ ಮುಂದುವರೆಸಿದ್ದಾರೆ. ಆ ನೆನಪುಗಳೇ ಚಂದ... ಭವನದ ಲೆಕ್ಕ ನೋಡಲು ಪ್ರತಿ ಶನಿವಾರ ಬರುತ್ತಿದ್ದ ಅವರು, ಪಕ್ಕದಲ್ಲೇ ಇದ್ದ ನಮ್ಮ ಮನೆಗೆ ಬರುವುದನ್ನು ತಪ್ಪಿಸುತ್ತಿರಲಿಲ್ಲ. ''ಲಕ್ಷ್ಮೀಜಿ, ನಿಮ್ಮ ಕೈ ದೋಸೆ ತಿನ್ನಲು ಬಂದಿದ್ದೇನೆ!'' ಎಂದು ಬಹಳ ಪ್ರೀತಿಯಿಂದ ನನ್ನವಳಿಗೆ ಹೇಳುತ್ತಿದ್ದರು. ದೋಸೆಯೇ ಅಲ್ಲಿರದಿದ್ದರೂ ಏನನ್ನು ಕೊಟ್ಟರೂ ಬಹಳ ಪ್ರೀತಿಯಿಂದ ತಿಂದು ಹೋಗುತ್ತಿದ್ದರವರು.

ಖಿಮ್ಜಿಭಾಯಿಯವರು ನಿಧನರಾದಾಗ ನಾನೇ ಅವರ ಅಂತ್ಯಕ್ರಿಯೆ ಮಾಡಿಸಿದೆ. ಆಗಲೂ ಆ ಕುಟುಂಬದವರು ೩,೦೦೦ ಪೌಂಡುಗಳನ್ನು ಭವನಕ್ಕೆಂದೇ ಕೊಟ್ಟರು. ಹೀಗೆ ನನ್ನ ಸಂಪರ್ಕ ಬೆಳೆಯಿತು...

ಪ್ರೊ|| ಬರ್ಕ್

೧೯೭೬-೭೭ರಲ್ಲಿ ನಡೆದ ಒಂದು ಸಂಗತಿ ಇದು. ಭವನ ೩೭, ನ್ಯೂ ಆಕ್ಸ್‌ಫರ್ಡ್ ರಸ್ತೆಯಲ್ಲಿ ತನ್ನ ಕೆಲಸ ನಿರ್ವಹಿಸುತ್ತಿತ್ತು. ಭವನವು ಒಂದು ಲೈಬ್ರರಿಯನ್ನು ಹೊಂದಿತ್ತು. ಅದು ಎಂ.ಪಿ.ಷಾ ಲೈಬ್ರರಿ. ಅಲ್ಲಿ ಅಂಥ ಹೆಚ್ಚಿನ ಸಂಖ್ಯೆಯಲ್ಲಿ ಪುಸ್ತಕಗಳಿಲ್ಲದಿದ್ದರೂ ಬಹಳ ಉಪಯುಕ್ತವಾದ, ಹಿಂದೂ ಧರ್ಮದ ಮೇಲೆ, ವೇದ ಉಪನಿಷತ್ತುಗಳ ಮೇಲೆ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ ತತ್ತ್ವಗಳ ಮೇಲೆ ಹಲವಾರು ಪುಸ್ತಕಗಳಿದ್ದವು. ಆ ಪುಸ್ತಕಗಳನ್ನು ಸುಮಾರು ೪೦-೫೦ ಜನ ಲೇಖಕರು ತಮ್ಮದೇ ಆದ ರೀತಿಯಲ್ಲಿ ಅಧ್ಯಯನ ಮಾಡಿ ವಿಶ್ಲೇಷಿಸಿ ಬರೆದಿದ್ದರು. ಆದ್ದರಿಂದ ವಿಷಯಗಳ ಮೂಲ ಒಂದೇ ಆದರೂ ಬರೆದಿದ್ದ ಲೇಖಕರ ವೈಶಿಷ್ಟ್ಯದಿಂದಾಗಿ ಅವು ಸಾಕಷ್ಟು ಮಹತ್ತ್ವವುಳ್ಳದ್ದಾಗಿದ್ದವು. ಎಲ್ಲರಿಗೂ ಆ ಪುಸ್ತಕಗಳ ಉಪಯೋಗ ಆಗುತ್ತಿರಲಿಲ್ಲವಾದರೂ, ಈ ರೀತಿಯ ತತ್ತ್ವಗಳ ಬಗೆಗೆ ವಿಶೇಷ ಆಸಕ್ತಿ ಇದ್ದು, ಹೆಚ್ಚು ತಿಳಿದುಕೊಳ್ಳಬೇಕೆನ್ನುವವರಿಗೆ ಅವು ನಿಜಕ್ಕೂ ಬಹಳ ಪ್ರಯೋಜನಕಾರಿಯಾಗಿದ್ದವು.

ಒಂದು ದಿನ ಬೆಳಗಿನ ಸಮಯ - ನಾನು ಆಫೀಸಿನಲ್ಲಿ ಕುಳಿತಿದ್ದಾಗ ಸುಮಾರು ೬೫-೬೭ರ ಹರೆಯದ, ತೇಜಸ್ವೀ ಕಣ್ಣಿನ ಗಂಭೀರ ಮುಖಭಾವದ ಇಂಗ್ಲಿಷ್ ವ್ಯಕ್ತಿಯೊಬ್ಬರು ಬಂದರು. ಅವರನ್ನು ನೋಡಿದ ಕೂಡಲೇ ನನ್ನ ಕೈಗಳು ತಾನಾಗಿ ಮುಗಿದವು! ಅವರು ಪ್ರೊ|| ಬರ್ಕ್... ಬಹಳ ಓದಿದ್ದರು. ವೇದದ ಮೇಲೆ ಮ್ಯಾಕ್ಸ್‌ಮುಲ್ಲರರು ಬರೆದಿದ್ದುದನ್ನೂ, ತಿಲಕರು ಬರೆದಿರುವ 'ಗೀತಾರಹಸ್ಯ' ವನ್ನೂ ಅವರು ಓದಿದ್ದರು ಎಂದು ತಿಳಿದಾಗ ಅವರಿಗಿದ್ದ ಆಸಕ್ತಿ , ಆ ಪಾಂಡಿತ್ಯದ ಬಗೆಗೆ ಯಾರಿಗಾದರೂ ತಿಳಿವು ಮೂಡೀತು! ನನಗೆ ಬಹಳ ಸಂತೋಷವಾಗಿ , ಅವರ ವ್ಯಕ್ತಿತ್ವದ ಬಗೆಗೆ ಬಹಳ ಗೌರವ ಹುಟ್ಟಿತು. ಅವರು ನನ್ನಲ್ಲಿ ಅವರ ಬೇಡಿಕೆಯೊಂದನ್ನಿಟ್ಟರು! ಜರ್ಮನಿಯಿಂದ ಬಂದಿದ್ದ ಪ್ರೊ|| ಬರ್ಕ್‌ರು ನಮ್ಮಲ್ಲಿದ್ದ ಲೈಬ್ರರಿಯಲ್ಲಿರುವ ಪುಸ್ತಕಗಳನ್ನು ಓದಿ, ತಮಗೆ ಬೇಕಾದ ಮಾಹಿತಿಯನ್ನು ಸಂಗ್ರಹಿಸಿ, ಆ ಅಂಶಗಳನ್ನು ಗುರುತು ಹಾಕಿಕೊಂಡು ಹೋಗಲು ಬಂದಿರುವುದಾಗಿ ಹೇಳಿದರು.

ಅದಕ್ಕೆ ನಾನು ಅಲ್ಲಿ ಅವಕಾಶ ಮಾಡಿಕೊಡಬೇಕೆನ್ನುವುದು ಅವರ ಬೇಡಿಕೆ ಆಗಿದ್ದಿತು. ನನಗೂ ಸಂತೋಷವೇ ಆಯಿತು... ''ಧಾರಾಳವಾಗಿ ಬನ್ನಿ, ಆ ಪುಸ್ತಕಗಳು ಇರುವುದೂ ತಮ್ಮಂತಹವರಿಗಾಗಿಯೇ, ಅದನ್ನು ಉಪಯೋಗಿಸಿಕೊಳ್ಳಿ!'' ಎಂದೆ.

ಎಲ್ಲಿಂದೆಲ್ಲಿಗೆ ಸಂಬಂಧ? ಹಿಟ್ಲರನ ನಾಡಿನಲ್ಲಿ ಹುಟ್ಟಿ ಬೆಳೆದು ಜೀವನ ಸವೆಸಿರುವ ಈತ , ಬದುಕಿನ ಸಂಜೆಯಲ್ಲಿ ಭಾರತೀಯ ಸಂಸ್ಕಾರ ತತ್ತ್ವಗಳ ವಿಷಯವಾಗಿ ತಿಳಿದುಕೊಳ್ಳಬೇಕೆಂದು ಬಂದಿರುವುದು, ಅದಕ್ಕೆ ಪೂರ್ವಸಿದ್ಧತೆಯಾಗಿ ತಿಲಕರನ್ನು, ಮ್ಯಾಕ್ಸ್‌ಮುಲ್ಲರರನ್ನು, ಗೀತೆ-ವೇದಗಳನ್ನು ತಿಳಿದುಕೊಳ್ಳಲು ಓದಿ, ಈಗ ನಮ್ಮಲ್ಲಿಗೆ ಬಂದಿರುವುದು ನನಗೆ ಬಹಳ ಆಶ್ಚರ್ಯ ಉಂಟುಮಾಡಿತ್ತು. ಜತೆಗೆ ಅವರ ಬಗ್ಗೆ ಸಾಕಷ್ಟು ಕುತೂಹಲವೂ ಮೂಡಿತು.

ಭವನದ ಹತ್ತಿರದಲ್ಲೇ ಇದ್ದ ಒಂದು ರೂಮನ್ನು ಬಾಡಿಗೆಗೆ ತೆಗೆದುಕೊಂಡ ಪ್ರೊ|| ಬರ್ಕ್‌ರವರು ಅವರು ಅಲ್ಲಿ ತಮ್ಮ ವಾಸ್ತವ್ಯ ಮಾಡಿಕೊಂಡು ದಿನವೂ ಬೆಳಗ್ಗೆ ಒಂಬತ್ತಕ್ಕೆ ಭವನಕ್ಕೆ ಬರುತ್ತಿದ್ದರು ''ಒಂದೆರಡು ತಿಂಗಳುಗಳು ನಿಮಗೆ ತೊಂದರೆ ಕೊಡುತ್ತೇನೆ'' ಎಂದರು. ''ತೊಂದರೆ ಎಂಥದ್ದು? ನೀವು ಬರುವುದೇ ನಮ್ಮ ಪುಣ್ಯ! ನಿಮ್ಮಂತಹವರು ಇದನ್ನೆಲ್ಲ ಓದಲು ಬರುತ್ತೇನೆ ಎನ್ನುವುದೇ ಒಂದು ವಿಶೇಷ ಸಂಗತಿ!'' ಎಂದೆ. ಹೆಚ್ಚಿಗೆ ಮಾತನಾಡದ ಅವರು ಬೆಳಗ್ಗೆ ಬಂದ ಕೂಡಲೇ ''ಗುಡ್‌ಮಾರ್ನಿಂಗ್'' ಎಂದು ಹೇಳಿ ಮೇಲೆ ಲೈಬ್ರರಿಗೆ ಹೋದರೆ, ಮಧ್ಯಾಹ್ನ ಒಂದರ ವೇಳೆ ಒಂದು ಟೋಸ್ಟ್ ಅಥವಾ ಸ್ಯಾಂಡ್‌ವಿಚ್ ತಿಂದು ಮತ್ತೆ ಎರಡು ಘಂಟೆಯಿಂದ ಆರು ಘಂಟೆಯವರೆಗೂ ಓದಿ, ತಮಗೆ ಬೇಕಾದುದನ್ನು ನೋಟ್ಸ್ ಬರೆದು ಕೊಂಡು ಸಂಜೆ ಆರಕ್ಕೆ ಹೊರಡುತ್ತಿದ್ದರು. ಹೀಗೆ ಒಮ್ಮೆ ಅವರು ಎರಡು ಮಾತು ಹೆಚ್ಚು ಆಡಿದಾಗ, ''ನಾನು ಬಹಳ ಚಿಕ್ಕವಯಸ್ಸಿನಲ್ಲೇ ಮದ್ಯಪಾನ, ಧೂಮಪಾನ, ಪರಸ್ತ್ರೀಸಂಗ, ಯಾವುದೇ ರೀತಿಯ ಜೂಜು ಇವುಗಳನ್ನು ಮಾಡುವುದಿಲ್ಲವೆಂದೂ, ಸತ್ಯವನ್ನೇ ಹೇಳುತ್ತೇನೆ ಎಂದೂ ವ್ರತ ತೊಟ್ಟೆ'' ಎಂದರು!

ಕೇಳಿ ಗರಬಡಿದವನಂತಾದ ನಾನು, “ನಿಜವೇ? ಅದನ್ನು ಈವರೆಗೆ ಪಾಲಿಸಿಕೊಂಡು ಬಂದಿದ್ದೀರಾ?” ಎಂದೆ, ನಂಬದವನಂತೆ. ಅದಕ್ಕೆ ನಕ್ಕ ಅವರು “ಓ… ಟಚ್ ಉಡ್! (‘ದೃಷ್ಟಿ ಯಾರದೂ ತಾಗದಿರಲಿ’ ಎನ್ನುವುದಕ್ಕೆ ಇಂಗ್ಲಿಷಿನಲ್ಲಿ ಹಾಗೆ ಹೇಳುತ್ತಾರೆ) ಹೌದು, ಉಳಿಸಿಕೊಂಡು ಬಂದಿದ್ದೇನೆ!” ಎಂದರು. ನನಗೆ ಈಗ ಅವರ ಮೇಲಿದ್ದ ಗೌರವ ಇಮ್ಮಡಿಸಿತು!

ಅವರ ಮಿತಾಹಾರ ತಿಳಿದಿದ್ದೆ. ನಾನು ಒಮ್ಮೊಮ್ಮೆ ನಮ್ಮ ಮನೆಗೆ ಊಟ ತಿಂಡಿಗೆ ಬರಲು ಆಹ್ವಾನಿಸಿದರೆ, ಬಂದು ಸ್ವಲ್ಪವೇ ತಿಂದು “ಈ ದಿನ ಬಹಳ ತಿಂದದ್ದಾಯಿತು!” ಎಂದು ಉದ್ಗರಿಸಿ ಹೋಗುವುದಿತ್ತು. ಹೀಗೆಯೇ ಸುಮಾರು ಒಂದೂವರೆ ತಿಂಗಳು ಎಂದಿದ್ದುದು ಮೂರು ತಿಂಗಳವರೆಗೆ ನಡೆಯಿತು. ಮಧ್ಯೆ ಒಂದು ದಿನವೂ ತಪ್ಪದ ಅವರ ಭವನದ ಭೇಟಿ , ಅಧ್ಯಯನದಲ್ಲಿ ಅವರ ನಿಷ್ಠೆ , ಏಕಾಗ್ರತೆ , ಆಸಕ್ತಿ ಬೇರೆ ಯಾರಲ್ಲೂ ಕಾಣುವುದು ಬಹಳ ಕಷ್ಟ! ಅಂತೂ ಮೂರು ತಿಂಗಳು ಕಳೆದಾಗ ಭವನಕ್ಕೆ ತಮ್ಮ ಕಿರುಕಾಣಿಕೆ ಎಂದು ೧೫೧ ಪೌಂಡುಗಳ ಚೆಕ್ ಒಂದನ್ನು ಕೊಟ್ಟ ಪ್ರೊ|| ಬರ್ಕ್‌ರು “ಎಲ್ಲಕ್ಕೂ ಕೊನೆ ಎನ್ನುವುದು ಇದೆಯಷ್ಟೆ. ನಾಳೆ ನಾಳಿದ್ದರಲ್ಲಿ ನಾನು ನನ್ನ ದೇಶಕ್ಕೆ ವಾಪಸಾಗುತ್ತಿದ್ದೇನೆ. ಇನ್ನು ನಿಮ್ಮಲ್ಲಿಗೆ ಬರುವುದಿಲ್ಲ” ಎಂದರು. “ಹಾಗಾದರೆ ನೀವು ನಾಳೆ ರಾತ್ರಿ ನಮ್ಮಲ್ಲೇ ಉಪಾಹಾರ ಮಾಡಿ, ನಮ್ಮೆಲ್ಲರ ಜತೆ” ಎಂದೆ. ನಿಜಕ್ಕೂ ಅವರು ಇನ್ನು ಬರುವುದಿಲ್ಲ ಎಂದು ತಿಳಿದು ನನ್ನ ಮನಸಿಗೆ ಬೇಸರ ಆಗಿತ್ತು. ಒಂದು ರೀತಿಯ ಕಸಿವಿಸಿಯಾಗಿತ್ತು. ಅದನ್ನು ನಾನು ಅವರಲ್ಲಿಯೇ ಹೇಳಿದೆ. ಅದಕ್ಕೆ ಅವರು ಸುಮ್ಮನೆ ನಕ್ಕರು. ಯಾವುದನ್ನೂ ಭಾವೋದ್ವೇಗಕ್ಕೆ ಒಳಗಾಗಿ ತೋರಿಸುವವರಲ್ಲ ಅವರು. ಈ ರೀತಿಯ ಭಾವನೆಗಳೇ ಅವರಲ್ಲಿ ಕಡಮೆ, ಇಲ್ಲ ಎಂದೇ ಹೇಳಬಹುದು.

ಮಾರನೆಯ ದಿನ ನಮ್ಮಲ್ಲಿಗೆ ರಾತ್ರಿ ಊಟಕ್ಕೆ ಬಂದ ಅವರು ನನ್ನ ಪತ್ನಿಗೆ “ನಿಮ್ಮ ಲೈಬ್ರರಿಯಿಂದ ಈ ದಿನಗಳಲ್ಲಿ ನಾನು ಪಡೆದ ಲಾಭ ಬಹಳ. ನಿಮಗೂ ನಿಮ್ಮ ಪತಿಯವರಿಗೂ ನನ್ನ ಧನ್ಯವಾದಗಳು” ಎಂದು ಕೈಮುಗಿದರು. ಅವರಿಗೆ ನಮ್ಮ ನೆನಪಿನ ಕಾಣಿಕೆಯಾಗಿ ಕೃಷ್ಣನ ವಿಗ್ರಹವೊಂದನ್ನು ನಾನು ಕೊಟ್ಟಾಗ, ಅದನ್ನು ತಮ್ಮ ಎದೆಗೆ ಅಪ್ಪಿಕೊಂಡ ಅವರು “ಈ ಮಹಾಪುರುಷನನ್ನು ನಾನು ಸದಾ ನನ್ನ ಬಳಿಯಲ್ಲಿಯೇ ಇಟ್ಟುಕೊಳ್ಳುತ್ತೇನೆ… ನಿಮ್ಮನ್ನೆಂದೂ ಮರೆಯುವುದಿಲ್ಲ” ಎಂದರು. ಅವರ ಈ ಮಾತುಗಳನ್ನು ಕೇಳಿ ನನಗೂ ಸ್ವಲ್ಪ ಧೈರ್ಯ ಬಂದು, “ಸರ್, ನಾನು ನಿಮ್ಮನ್ನೊಂದು ಪ್ರಶ್ನೆ ಕೇಳಬಹುದೇ?” ಎಂದೆ. “ಓ, ಕೇಳಿ” ಎಂದರವರು. “ಇಷ್ಟು ದಿನಗಳೂ ನೀವು ನಮ್ಮಲ್ಲಿಗೆ ಬಂದು ಅನೇಕ ಗ್ರಂಥಗಳನ್ನು ಓದಿದ್ದೀರಿ. ನಿಮ್ಮದೇ ಮಾಹಿತಿಯ ಪ್ರಕಾರ ಹಿಂದೂ ಧರ್ಮದ ಮೇಲೆ ನಿಮ್ಮ ಅಧ್ಯಯನ ನಡೆದಿದೆ. ನೀವು ಬೈಬಲನ್ನೂ ಇತರ ಪಾಶ್ಚಾತ್ಯ ಧರ್ಮಗಳ ಗ್ರಂಥಗಳನ್ನೂ ಸಾಕಷ್ಟು ಓದಿ ಜ್ಞಾನ ಸಂಗ್ರಹ ಮಾಡಿಕೊಂಡಿದ್ದೀರಿ. ಇಷ್ಟು ಜ್ಞಾನ ಸಂಪಾದಿಸಿರುವ ನಿಮಗೆ, ಈ ಪುಸ್ತಕಗಳಲ್ಲಿ ಕಂಡಂತೆ, ನಿಮ್ಮ ಅನುಭವಕ್ಕೆ ಬಂದಂತೆ, ಈಗ ಇದೆಲ್ಲದರ ಬಗೆಗೆ ನಿಮಗೇನು ಅನಿಸುತ್ತದೆ. ನಿಮ್ಮ ಅಭಿಪ್ರಾಯವೇನು?” ಎಂದೆ. ಅಲ್ಲವೇ ಮತ್ತೆ? ಅವರ ಈ ಎಲ್ಲ ಅಧ್ಯಯನದ ಸಾರಸಂಗ್ರಹಕ್ಕೆ ಯಾವುದಾದರೂ ನಿಶ್ಚಿತರೂಪದ ಪರಿಕಲ್ಪನೆ ಅಥವಾ ಆಕಾರ ಇರುವುದಲ್ಲಾ , ಅದು ಏನು ಎನ್ನುವುದು ನನ್ನ ಕುತೂಹಲ. ಈ ಅಧ್ಯಯನದ ಅಂತಿಮ ಹಂತದಲ್ಲಿ (ನನಗೆ ಆ ಗಳಿಗೆಗೆ ಹಾಗೆನಿಸಿತು!) ಅವರ ತಿಳಿವಿಗೆ ನಿಲುಕಿದ ನಿರ್ಣಯ ಏನು ಎನ್ನುವುದನ್ನು ತಿಳಿದುಕೊಳ್ಳಬೇಕಿತ್ತು ನಾನು.

ನಾನು ಹೀಗೆ ಅವರನ್ನು ಕೇಳಿದ ಕೂಡಲೆ, ಅವರು ಸುಮಾರು ಎರಡು-ಮೂರು ನಿಮಿಷಗಳ ಕಾಲ ತಮ್ಮ ಕಣ್ಣು ಮುಚ್ಚಿಕೊಂಡರು. ಧ್ಯಾನ ಮಾಡುವವರಂತೆ ಅವರು ಕುಳಿತಿದ್ದ ಭಂಗಿಯನ್ನು ನಾನು ನನ್ನವಳಿಗೆ ತೋರಿಸಿ , “ನೋಡು ಇವರನ್ನು, ನಾವು ವಸಿಷ್ಠರು, ವ್ಯಾಸರು ಎಂದೆಲ್ಲ ಋಷಿಗಳನ್ನು ಹೀಗಿರುತ್ತಾರೆ ಎಂದು ಹೇಳುತ್ತೇವೆಯಲ್ಲಾ , ಇವರ ಮುಖದಲ್ಲಿರುವ ತೇಜಸ್ಸು ಯಾವ ಮಹರ್ಷಿಯ ಮುಖದಲ್ಲಿನ ತೇಜಸ್ಸಿಗೂ ಕಡಮೆ ಇಲ್ಲ ಎನಿಸುವುದಿಲ್ಲವೇ?” ಎಂದೆ. “ಹೌದು… ಹೌದು” ಎನ್ನುವಂತೆ ಇವಳೂ ಮೌನವಾಗಿ ತಲೆಯಾಡಿಸಿದಳು. ಅವರನ್ನೇ ನೋಡುತ್ತಿದ್ದೆ ನಾನು. ಮೂರು ನಿಮಿಷಗಳ ಅನಂತರ ಕಣ್ಣುಬಿಟ್ಟ ಅವರು, “ಮಾಥೂರ್‌ಜೀ, ಬಹಳ ವರ್ಷಗಳ ದೀರ್ಘ ಕಾಲದ ಅಧ್ಯಯನದಿಂದ, ಅದೂ ಗಂಭೀರ ಅಧ್ಯಯನದಿಂದ ಒಂದು ವಿಷಯ ಸ್ಪಷ್ಟವಾಗಿದೆ. ಅದಕ್ಕೆ ನಾನು ಈ ನಿರ್ಧಾರಕ್ಕೆ ಬಂದಿದ್ದೇನೆ. ಅದೇನೆಂದರೆ, ಪ್ರಪಂಚದ ಎಲ್ಲ ರೀತಿಯ ಸಮಸ್ಯೆಗಳಿಗೆ ಒಂದೇ ಉತ್ತರ ಅದ್ವೈತ ; ಭಗವದ್ಗೀತೆಯಲ್ಲಿ ವಿವರವಾಗಿ ಹೇಳಲಾಗಿರುವುದೂ ಇದನ್ನೇ!!” ಎಂದರು. ಆ ಗಳಿಗೆಯಲ್ಲಿ ನಿಜಕ್ಕೂ ಅದೊಂದು ಋಷಿವಾಣಿಯಂತೆಯೇ ನನಗನ್ನಿಸಿತು! ಅಷ್ಟು ಖಚಿತವಾದ ನಿಲುವು, ಕರಾರುವಾಕ್ಕಾದ ಮಾತುಗಳು ಅವು . ಮಾತೆತ್ತಿದರೆ ಗೀತೆಯ, ರಾಮಾಯಣ, ಮಹಾಭಾರತ, ವೇದ, ಉಪನಿಷತ್ತು ಎಂದು ಅಲ್ಲಿನ ಮಾತುಗಳನ್ನು ಉದ್ಧರಿಸಿ ಹೇಳುವ ನಾವು ಇವುಗಳನ್ನೆಲ್ಲ ಎಷ್ಟು ಓದಿದ್ದೇವೆ, ಇವುಗಳಲ್ಲಿರುವುದನ್ನು ಎಷ್ಟರ ಮಟ್ಟಿಗೆ ಅರಗಿಸಿಕೊಂಡಿದ್ದೇವೆ, ಅವುಗಳನ್ನು ನಿಜಜೀವನದಲ್ಲಿ ಎಷ್ಟು ಅಳವಡಿಸಿಕೊಂಡಿದ್ದೇವೆ ಎಂದು ನಮಗೆ ನಾವೇ ಕೇಳಿಕೊಳ್ಳ ಬೇಕು! ಪ್ರೊ|| ಬರ್ಕ್‌ರ ಮಾತಿನಲ್ಲಿದ್ದ ಖಚಿತತೆ , ನಾವು ಇನ್ನೆಷ್ಟು ಅವುಗಳನ್ನು ಉದ್ಧರಿಸಿ ಹೇಳಿದರೂ ಬಹುಶಃ ಬರದು ಎನ್ನಿಸಿತು ನನಗೆ! ಅಂತೂ ಒಬ್ಬ ಅಪರೂಪದ ವ್ಯಕ್ತಿಯನ್ನು ನೋಡುವ , ಕೇಳುವ , ಭಾಗ್ಯ ನನಗೆ ಒದಗಿದ್ದುದು ನನ್ನ ಸುಕೃತವೇ ಸರಿ!

೨೧. ಸುಧಾರಣೆ

ನಿಧಿಸಂಗ್ರಹ

ಭವನವನ್ನು ನಡೆಸಲು ನಿಧಿ ಸಂಗ್ರಹಿಸಬೇಕಿತ್ತು. ನಾವು ಯೋಚಿಸಿ, ಎರಡು ವಿಧದಲ್ಲಿ ನಿಧಿ ಸಂಗ್ರಹ ಮಾಡೋಣ ಎಂದು ತೀರ್ಮಾನಿಸಿದೆವು. ಒಂದು ವಿಧ ಎಂದರೆ... ವೈಯಕ್ತಿಕವಾಗಿ ದಾನ ಕೇಳುವುದು. ಇನ್ನೊಂದು ವಿಧ ನಮ್ಮ ಸಂದೇಶಗಳನ್ನು ಮಾರುವುದು, ಅರ್ಥಾತ್ ನಮ್ಮ ಸಂಸ್ಕೃತಿ ಯನ್ನು ಆ ಜನದ ಮುಂದಿಟ್ಟು , ಅದಕ್ಕೆ ಒಂದು ಬೆಲೆ ಇಟ್ಟು ಅದನ್ನು ಸಂಗ್ರಹಿಸುವುದು. ಇದಕ್ಕಿದ್ದ ಒಂದೇ ಮಾರ್ಗ ಎಂದರೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದು. ಸಂಗೀತ, ನಾಟಕ, ನಾಟ್ಯ ಇತ್ಯಾದಿಗಳ ಪ್ರದರ್ಶನ. ಈಗ ಅಲ್ಲಿನ ಹಾಗೂ ಭಾರತದಲ್ಲಿನ ಜನ ವಿದ್ಯಾಭವನದ ಹೆಸರನ್ನು ಸಾಕಷ್ಟು ಕೇಳಿದ್ದರು. ಕಲಾವಿದರುಗಳಿಗೆ ಭಾರತದ ಭೂಮಿಯಲ್ಲಿ ಕೊರತೆ ಇರಲಿಲ್ಲ. ನಾನು ಅವರ ಸಂಪರ್ಕ ಸಾಧಿಸಿ ಭವನದ ಸಹಾಯಾರ್ಥ ಕಾರ್ಯಕ್ರಮಗಳನ್ನು ಕೊಡಲು ಕೇಳಿದಾಗ ಆ ಕಲಾವಿದರುಗಳು ಬಹಳ ಸಂತೋಷದಿಂದಲೇ ಒಪ್ಪಿಕೊಂಡರು. 'ಭವನ' ಅವರು ಯಾರಿಗೂ ಹೊಸದಾಗಿರಲಿಲ್ಲ. ಹೀಗೆ ಬಂದವರಲ್ಲಿ ಕರ್ನಾಟಕದ ಶ್ರೀ ಬಿ.ಕೆ.ಎಸ್. ಅಯ್ಯಂಗಾರರು ಮೊದಲಿಗರು. ಅವರು ಬಂದು ಬಹಳ ಒಳ್ಳೆಯದಾದ ಯೋಗ ಪ್ರದರ್ಶನಗಳನ್ನು ಕೊಟ್ಟರು. ಶ್ರೀ ಬಿ.ಕೆ.ಎಸ್. ರವರು ಪೂನಾದಲ್ಲಿ ಬಹಳ ದೊಡ್ಡದಾದ ಯೋಗಕೇಂದ್ರವೊಂದನ್ನು ನಡೆಸುತ್ತಿದ್ದಾರೆ. ಗ್ರೇಟ್ ಬ್ರಿಟನ್ನಿನಲ್ಲಿಯೇ ಶ್ರೀ ಬಿ.ಕೆ.ಎಸ್. ರವರ ಸುಮಾರು ೨೫೦ ಯೋಗಶಾಲೆಗಳಿವೆ! ಎಲ್ಲ ಶಾಲೆಯಲ್ಲಿ ೧೫೦ ರಿಂದ ೨೫೦ ಜನ ಶಿಷ್ಯರಿದ್ದಾರೆ. ಬಹಳ ಕಟ್ಟುನಿಟ್ಟಾದ ನಿಯಮಪಾಲಕ , ಕಠಿಣ ಸ್ವಾಮಿ, ಶಿಸ್ತುಬದ್ಧ ಅತ್ಯುತ್ತಮ ಯೋಗಾಚಾರ್ಯರು ಶ್ರೀ ಬಿ.ಕೆ.ಎಸ್. ಅಯ್ಯಂಗಾರರು. ಅವರಿಗೆ ಭವನದ ಮೇಲೆ ಬಹಳ ಅಭಿಮಾನ. ಅವರು ಬಂದು ತಮ್ಮ ಮೊಟ್ಟಮೊದಲ ಸಹಾಯಾರ್ಥ ಪ್ರದರ್ಶನ ಕೊಟ್ಟಾಗ, ಲಂಡನ್‌ನ ಜನ ಬಹಳ ಚೆನ್ನಾಗಿ ಪ್ರತಿಸ್ಪಂದಿಸಿದರು. ಅದರಲ್ಲಿ ನಮಗೆ (೧೯೭೪) ಸುಮಾರು ೨,೨೦೦ ಪೌಂಡುಗಳ ಸಹಾಯ ಬಂದಿತು. ಶ್ರೀ ಅಯ್ಯಂಗಾರರು ಕೊಟ್ಟ ಈ ಕಾರ್ಯಕ್ರಮದಲ್ಲಿ ನಮ್ಮ ಕಮಿಟಿಯ ಸದಸ್ಯರುಗಳೆಲ್ಲರೂ ಭಾಗವಹಿಸಿದ್ದರು. ಬಹಳ ಮಂದಿ ಇಂಗ್ಲಿಷರೂ ಬಂದರು.

ಇಲ್ಲಿ ಒಂದು ಗುಟ್ಟಿನ ವಿಷಯ ನಿಮಗೆ ಹೇಳಬೇಕೆಂದರೆ, ನಾವು ಹೊರದೇಶದಲ್ಲಿದ್ದಾಗ ಯಾವುದೇ ಕಾರ್ಯಕ್ರಮ ಕೊಟ್ಟರೂ ನಮ್ಮ ಕಾರ್ಯಕ್ರಮ ಆತಿಥೇಯ ದೇಶದ ಜನರನ್ನೂ ನಮ್ಮ ಕಮಿಟಿಯಲ್ಲಿರುವ ಅಲ್ಲಿನ ಜನರನ್ನೂ ಅದು ಆಕರ್ಷಿಸುವಂತಿರಬೇಕು. ಯಾವುದೇ ಕಾರ್ಯಕ್ರಮಕ್ಕೆ ಅವರುಗಳು ಬರುವುದು ಮುಖ್ಯ. ಹಾಗೆ ಅಲ್ಲಿಯವರು ಬರದೆ ನಮಗೆ ಯಾವುದೇ ರೀತಿಯ ಪ್ರೋತ್ಸಾಹ, ಬೆಂಬಲ ಸಿಗುವುದಿಲ್ಲ. ನಮ್ಮ ಕಾರ್ಯಕ್ರಮಕ್ಕೆ ಅಲ್ಲಿಯ ಜನರೂ ಬಂದರು, ಮೆಚ್ಚಿಕೊಂಡರು, ಬೆಂಬಲ ಕೊಟ್ಟರು.

ಇದಾದ ಅನಂತರ ನಾವು ಒಂದು ಸಾಂಸ್ಕೃತಿಕ ಕಾರ್ಯಕ್ರಮವನ್ನು ಕೊಡಬೇಕು ಎಂದು,ಪ್ರಸಿದ್ಧ ಭರತನಾಟ್ಯ ಕಲಾವಿದೆ ಶ್ರೀಮತಿ ಯಾಮಿನೀ ಕೃಷ್ಣಮೂರ್ತಿಯವರನ್ನು ಕೇಳಿಕೊಂಡೆವು . ಸಂತೋಷದಿಂದ ಬಂದರು.

ಸಾಮಾನ್ಯವಾಗಿ ವಿದೇಶಕ್ಕೆ ಬರುವ ಕಲಾವಿದರು ಕಾರ್ಯಕ್ರಮದ ನಿರ್ವಾಹಕರು ವೆಚ್ಚವನ್ನು ಭರಿಸುತ್ತಾರೆಂದರೆ ಹೆಚ್ಚು ಹಣ ಕೇಳುವುದು ರೂಢಿಯಲ್ಲಿದೆ. ಟಿಕೆಟನ್ನು ಕಳುಹಿಸಿದರೂ ಹಣ ಕೇಳುವುದು ತಪ್ಪುವುದಿಲ್ಲ. ಆದರೆ ಯಾಮಿನೀ ಕೃಷ್ಣಮೂರ್ತಿಯವರು ಬಹಳ ವಿನಯದಿಂದ ನಮ್ಮ ಈ ಸಲಹೆಯನ್ನು ಒಪ್ಪಿ ಪ್ರೀತಿಯಿಂದ ಇಲ್ಲಿ ಕಾರ್ಯಕ್ರಮ ಕೊಡಲು ಆಗಮಿಸಿದರು. ಅವರಿಂದ ನಮಗೆ ಬಹಳ ಉಪಕಾರವಾಯಿತು. ಕಾರ್ಯಕ್ರಮಗಳು ನಡೆದವು – ಲಂಡನ್, ಬರ್ಮಿಂಗ್ ಹ್ಯಾಂ, ಲೆಸ್ಟರ್, ಮ್ಯಾಂಚೆಸ್ಟರ್, ಎಡಿನ್‌ಬೆರಾ ನಗರಗಳಲ್ಲಿ ನಡೆದವು. ಬಹಳ ಉತ್ತಮ ಕಲಾವಿದೆಯಾದ ಯಾಮಿನಿಯವರ ತಂದೆ ಕೃಷ್ಣಮೂರ್ತಿಯವರೇ ನಾಟ್ಯದ ಪ್ರತಿ ಭಾಗವನ್ನೂ ಪ್ರೇಕ್ಷಕರಿಗೆ ಪರಿಚಯಿಸಿಕೊಡುತ್ತಿದ್ದರು. ನಮ್ಮ ಭವನದ ಗೆಳೆಯರು-ಹಿತೈಷಿಗಳೇ ಕಲಾವಿದರಿಗೆ, ಇಳಿದುಕೊಳ್ಳಲು ವ್ಯವಸ್ಥೆ ಮಾಡಿಕೊಟ್ಟರು. ಶ್ರೀಮತಿ ಯಾಮಿನಿಯವರ ಒಂದು ಕಾರ್ಯಕ್ರಮಕ್ಕೆ ೨,೫೦೦ ಪೌಂಡ್ ಸಹ ಕಡಮೆ! ಆದರೆ ನಮ್ಮಿಂದ ಕೇವಲ ೭೫ ಪೌಂಡುಗಳನ್ನು ಮಾತ್ರ ತೆಗೆದುಕೊಂಡು ಕಾರ್ಯಕ್ರಮ ನೀಡಿದರು!! ಆ ಸಮಯದಲ್ಲಿ ನಾವು ಸುಮಾರು ಆರು-ಏಳು ಸಾವಿರ ಪೌಂಡುಗಳನ್ನು ಸಂಗ್ರಹಿಸಿದೆವು!

ಹೀಗೆ... ನಡೆದ ಅನೇಕ ಕಾರ್ಯಕ್ರಮಗಳಲ್ಲಿ ಭಾರತದಿಂದ ಲಂಡನ್ನಿಗೆ ಬರದ ಕಲಾವಿದರುಗಳೇ ಇಲ್ಲ ಎನ್ನಬಹುದು! ಹಾಗೆ ಸಂಗೀತಗಾರರು, ನಾಟ್ಯ ವಿಶಾರದರು, ನಾಟಕ ತಂಡಗಳವರು, ಎಲ್ಲರೂ ನಮ್ಮಲ್ಲಿಗೆ ಬಂದರು. ಭಾರತದಿಂದ ಅಲ್ಲಿಗೆ ಬರದ ಏಕೈಕ ಮಹಾನ್ ಸಂಗೀತಗಾರರೆಂದರೆ ಶ್ರೀ ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್! ಏಕೆಂದರೆ ಅವರ ತಂದೆ ತಾವು ಕೊನೆಯುಸಿರು ಎಳೆಯುವಾಗ ಸಮುದ್ರ ದಾಟಿ ಹೋಗಬೇಡ ಎಂದು ಅವರಿಂದ ಮಾತು ತೆಗೆದುಕೊಂಡಿದ್ದರಂತೆ. ಬಂದ ಎಲ್ಲರೂ ತಮ್ಮಿಂದಾದ ಸಹಾಯವನ್ನು ಮಾಡಿದ್ದಾರೆ. ನಾವೂ ಅವರ ಕಾರ್ಯಕ್ರಮಗಳನ್ನೇರ್ಪಡಿಸಿ ಅದಕ್ಕೆ ಸಂಭಾವನೆ ಕೊಟ್ಟಿದ್ದೇವೆ - ಹಾಗೆಯೇ ಅವರ ಕಾರ್ಯಕ್ರಮಗಳಿಗೆ ಟಿಕೆಟುಗಳನ್ನಿಟ್ಟು , ಆ ಟಿಕೆಟುಗಳನ್ನು ಮಾರಿ ನಿಧಿ ಸಂಗ್ರಹಣೆಯನ್ನೂ ಮಾಡಿದ್ದೇವೆ. ಇದೊಂದು ರೀತಿಯಲ್ಲಿ ಪರಸ್ಪರ ಸಹಾಯ. ಏನೆಂದರೂ

ಪರದೇಶದಲ್ಲಿ, ಅದರಲ್ಲೂ ತಮ್ಮದೊಂದು ಪ್ರದರ್ಶನವಾಗಬೇಕು ಎನ್ನುವ ಆಸೆ ಕಲಾವಿದರಿಗೂ ಇರುತ್ತದೆ. ನಮಗೆ ಅವರ ಕಾರ್ಯಕ್ರಮದ ಮೂಲಕ ನಮ್ಮ ಭಾರತೀಯ ಸಂಸ್ಕೃತಿಯ ತುಣುಕೊಂದನ್ನು ಆ ವಿದೇಶಿಯರ ಮುಂದಿಟ್ಟು ಅವರ ಮೆಚ್ಚುಗೆ ಗಳಿಸುವ ಆಸೆ. ಇವೆರಡು ಉದ್ದೇಶಗಳೂ ಈ ರೀತಿ ನೆರವೇರುತ್ತಿದ್ದವು. ಉದಯೋನ್ಮುಖ ಕಲಾವಿದರುಗಳನ್ನು ಕರೆದು ಅವರಿಗೂ ಅವರ ಕಲಾಪ್ರದರ್ಶನಕ್ಕೂ ಮೊದಲ ಬಾರಿಗೆ ವಿದೇಶದಲ್ಲಿ ವೇದಿಕೆ ಕೊಟ್ಟ ಹೆಗ್ಗಳಿಕೆ ವಿದ್ಯಾಭವನದ್ದು! ಅವರಲ್ಲಿ ಮ್ಯಾಂಡೋಲಿನ್ ಶ್ರೀನಿವಾಸ್, ಕೊಳಲಿನ ಶಶಾಂಕ್, ವಿದುಷಿ ಸುಧಾರಘುನಾಥನ್ ಇತರರು ಪ್ರಮುಖರು. ಇವರೆಲ್ಲ ಭಾರತೀಯ ವಿದ್ಯಾಭವನದಲ್ಲೇ ಮೊದಲು ತಮ್ಮ ಕಾರ್ಯಕ್ರಮವನ್ನು ನೀಡಿದುದು. ಈ ಮಾತನ್ನು ಆ ಕಲಾವಿದರೂ ವಿನಯಪೂರ್ವಕವಾಗಿಯೇ ಇಂದಿಗೂ ಸ್ಮರಿಸುತ್ತಾರೆ.

ಅತ್ತ ಭವನ ಬೆಳೆದಂತೆ, ಇತ್ತ ಬಾಂಬೆಯಲ್ಲಿನ ಭವನದ ಮುಖ್ಯ ಕಛೇರಿಯ ಜತೆಗೂ ಲಂಡನ್‌ಕೇಂದ್ರದ ಸೌಹಾರ್ದ ಸ್ನೇಹದ ಸಂಬಂಧ ಬೆಳೆಯಿತು. ಲಂಡನ್ನಿಗೆ ಕಲಾವಿದರುಗಳು ಬರಬೇಕು ಎಂದು ನಾವು ಕೇಳಿಕೊಂಡರೆ, ತಕ್ಷಣ ಅದಕ್ಕೆ ಅನುಮತಿ ಸಿಗುತ್ತಿತ್ತು. ಕಲಾವಿದರಿಗೆ ಪರವಾನಗಿ ನೀಡಲಾಗುತ್ತಿತ್ತು. ಏಕೆಂದರೆ ಯಾವುದೇ ಸೌಲಭ್ಯವನ್ನಾಗಲೀ ಸದುಪಯೋಗಪಡಿಸಿಕೊಳ್ಳುವುದು - ದುರುಪಯೋಗಪಡಿಸಿಕೊಳ್ಳುವುದು ಎರಡು ರೀತಿಯೂ ಇರುತ್ತದೆ. ಹಾಗೆಯೇ ಕಲಾವಿದರಲ್ಲಿ ಅದೊಂದು ದೌರ್ಬಲ್ಯವೂ ಹೌದು. ಒಂದು ಕಾರ್ಯಕ್ರಮಕ್ಕೆ ಅಥವಾ ಕಛೇರಿಗೆ ಎಂದು ಭಾರತದಿಂದ ಅಲ್ಲಿಗೆ ಬಂದರೆ ನಾಲ್ಕು ಕಡೆಗಳಲ್ಲಿ ತಮ್ಮ ಕಾರ್ಯಕ್ರಮವನ್ನು ಕೊಡುವುದು. ಒಂದು ಕಾರ್ಯಕ್ರಮದ ಹಣದ ವಹಿವಾಟಿನ ಲೆಕ್ಕ ತೋರಿಸುವುದು, ಮಿಕ್ಕ ಕಾರ್ಯಕ್ರಮಗಳ ಆದಾಯವನ್ನೇ ತೋರಿಸದೆ ಇರುವುದು ಇವೆಲ್ಲವೂ ನಡೆಯುವ ಸಾಧ್ಯತೆಗಳಿದ್ದವು. ಇವೆಲ್ಲ ಸಾಮಾನ್ಯ ಸಹ. ಆದರೆ ಭವನದಲ್ಲಿ ಮಾತ್ರ ಹಾಗಿರಲಿಲ್ಲ. ಏರ್ಪಡಿಸಿದ ಕಾರ್ಯಕ್ರಮಗಳು, ಅವುಗಳಿಂದ ಭವನಕ್ಕೆ ಬಂದ ಹಣ, ಕಲಾವಿದರಿಗೆ ಭವನ ಕೊಟ್ಟ ಹಣ–ಅವರಿಗಾಗಿ ಮಾಡಿದ ವೆಚ್ಚ , ಈ ಎಲ್ಲದರ ಪೈಸೆ ಪೈಸೆಯ ಲೆಕ್ಕವನ್ನೂ ನಾವು ತಪ್ಪದೆ ಇಡುತ್ತಿದ್ದೆವು. ಯಾವುದೇ ರೀತಿಯಲ್ಲೂ ತೆರಿಗೆ ಕಟ್ಟುವುದನ್ನು ತಪ್ಪಿಸಿಕೊಳ್ಳಲು ಬಿಡುತ್ತಿರಲಿಲ್ಲ. ಆ ಬಗ್ಗೆ ಬಹಳ ಎಚ್ಚರ ವಹಿಸುತ್ತಿದ್ದೆವು . ಹೀಗಾಗಿ ಭಾರತ-ಬ್ರಿಟನ್ ಸರ್ಕಾರಕ್ಕೆ ಭವನದ ಕಾರ್ಯಕ್ರಮಗಳಿಂದಾಗಿ ಆ ರೀತಿಯ ಯಾವುದೇ ತೊಂದರೆ ಉದ್ಭವಿಸಲಿಲ್ಲ. ಅದಕ್ಕಾಗಿಯೇ ಬಾಂಬೆಯ ಭವನದ ಮುಖ್ಯ ಕಛೇರಿಗೆ ಹಾಗೂ ಬ್ರಿಟನ್ ಸರ್ಕಾರಕ್ಕೆ ಭವನದ ಮೇಲೆ ನಂಬಿಕೆ, ಮೆಚ್ಚುಗೆ, ಒಳ್ಳೆಯ ಅಭಿಪ್ರಾಯ, ಗೌರವ ಮೂಡಿತು!!

ಅದರಲ್ಲಿ ಒಂದು ಆಶ್ಚರ್ಯದ ವಿಷಯವೆಂದರೆ, ೩೭, ನ್ಯೂ ಆಕ್ಸ್‌ಫರ್ಡ್ ರಸ್ತೆಯಲ್ಲಿನ ೨,೨೦೦ ಚದರಡಿಯ ಆ ಜಾಗದಲ್ಲಿಯೇ ಬುಕ್‌ಷಾಪು (ನಾನು ಮೊದಲೇ ಹೇಳಿರುವ ಹಾಗೆ!) ಮೀಟಿಂಗ್ ಹಾಲ್, ಕಲಾವಿದರ ವೇದಿಕೆ ಎಲ್ಲವೂ ಅಲ್ಪಸ್ವಲ್ಪ ಮಾರ್ಪಾಟಾಗಿ ರೂಪುಗೊಳ್ಳುತ್ತಿತ್ತು. ಬ್ರಿಟನ್ನಿನಲ್ಲಿ ನಾವು ಸ್ವಲ್ಪ ಸ್ಥಳವನ್ನೂ ಹಾಗೆ ವ್ಯರ್ಥ ಮಾಡುವಂತಿಲ್ಲ. ಇರುವ ಜಾಗವನ್ನು ಸಾಧ್ಯವಾದ ಎಲ್ಲ ರೀತಿಯಲ್ಲೂ ಚೆನ್ನಾಗಿ ಬಳಸಿಕೊಳ್ಳಬೇಕು. ನಾನು ಸಹ ಈಗ ಲಂಡನ್ನಿನಲ್ಲಿಯೇ ರಾಮಾಯಣ, ಮಹಾಭಾರತ, ಗೀತೆ, ಉಪನಿಷತ್ತುಗಳ ಮೇಲೆ ಭಾಷಣಗಳನ್ನು ಮಾಡಲು ತಯಾರಿ ನಡೆಸಿದೆ. ಭವನದಲ್ಲಿಯೇ ವೇದ ಹೇಳಿಕೊಡಲು ಪ್ರಾರಂಭಿಸಿದೆ. ಪುರುಷಸೂಕ್ತ, ಶ್ರೀಸೂಕ್ತ, ನಾರಾಯಣ ಸೂಕ್ತಗಳನ್ನು ಹೇಳಿಕೊಟ್ಟೆ . ಇದಕ್ಕೆಲ್ಲ ಇಂಗ್ಲಿಷಿನ ಜನ ಬರುತ್ತಿದ್ದರು. ಅವರಿಗೆ ಇದರಲ್ಲೆಲ್ಲ ಬಹಳ ಆಸಕ್ತಿ , ಅವರಿಗೆ ಬಹಳ ಆಶ್ಚರ್ಯವೂ ಆಯಿತು. "ನಮ್ಮನ್ನು ಮ್ಲೇಚ್ಛರು ಎನ್ನುತ್ತಾರಲ್ಲಾ, ನಾವು ವೇದ ಕಲಿಯಬಹುದೇ? ನಮಗೂ ಇದನ್ನೆಲ್ಲ ಹೇಳಿಕೊಡುತ್ತೀರಾ ನೀವು?" ಎಂದು ನನ್ನನ್ನು ಕೇಳಿದರು. ಸಾವಿರಾರು ವರ್ಷಗಳ ಹಿಂದೆ ಸಮಾಜದಲ್ಲಿ ಸರಿಯಾಗಿ, ಕ್ರಮಬದ್ಧವಾಗಿ ಎಲ್ಲ ಕೆಲಸಗಳೂ ನಡೆಯಲಿ ಎನ್ನುವ ಕಾರಣಕ್ಕಾಗಿಯೇ ರೂಪುಗೊಂಡಿದ್ದು ವರ್ಣಾಶ್ರಮ ಧರ್ಮ. ಈಗ ನಿಯಮ ಎಂದೇನೂ ಇಲ್ಲ. ಯಾರು ಯಾವುದೇ ಕೆಲಸ ಮಾಡಬಹುದು. ಯಾವ ಕೆಲಸವು ಯಾರಿಗೂ ಇಂಥವರಿಗೇ ಈ ಕೆಲಸ ಎಂದೇನೂ ಇಲ್ಲ , ಇನ್ನು ಈ ಜನಕ್ಕೆ ವೇದ ಹೇಳಿಕೊಡುವುದು ಮಾತ್ರ ಧರ್ಮಸಮ್ಮತ ಅಲ್ಲ ಎನ್ನುವುದು ಹೇಗೆ ಸಾಧ್ಯ? ಕಾಲಕಾಲಕ್ಕೆ ಎಲ್ಲವೂ ನಿಧಾನವಾಗಿಯಾದರೂ ಬದಲಾಗುತ್ತಾ ಹೋಗುತ್ತದೆ. ಆ ಬದಲಾವಣೆಗೆ ನಾವು ಸರಿಯಾಗಿ ಹೊಂದಿಕೊಳ್ಳಬೇಕಷ್ಟೆ... ಹೀಗೆ ತರ್ಕಿಸಿದ ನಾನು ಭವನದಲ್ಲಿ ವಿದೇಶೀಯರಿಗೂ ಸಂಸ್ಕೃತ, ವೇದ ಕಲಿಸಲು ಪ್ರಾರಂಭಿಸಿದೆ. ಅನಂತರ ಈ ವಿಷಯದಲ್ಲಿ ಆ ಜನಕ್ಕೆ ಬಹಳ ಆಸಕ್ತಿ , ಕುತೂಹಲ ಮೂಡಿತು. ಈ ತರಗತಿಗಳು ತ್ವರಿತಗತಿಯಲ್ಲಿ ನಡೆಯತೊಡಗಿದವು.

ಮೊದಲ ಉಪನ್ಯಾಸ

ನಾನು ಅಲ್ಲಿಗೆ ಹೋದ ಒಂದು ವರ್ಷದ ಅನಂತರ ನನ್ನಾಕೆ ರಾಜಲಕ್ಷ್ಮಿ ಅಲ್ಲಿಗೆ ಬಂದಳು. ಅವಳಾದರೂ ನಾನಿಳಿದು ಕೊಂಡಿದ್ದಲ್ಲಿಯೇ ಹೇಗೋ ಸಂಭಾಳಿಸಿಕೊಂಡು ಇರಬೇಕಿತ್ತು. ಅಲ್ಲಿ ಯಾರೂ ಕೆಲಸದವರು ಸಿಗುವುದಿಲ್ಲ. ಎಲ್ಲ ಕೆಲಸವನ್ನೂ ನಾವೇ ಮಾಡಿಕೊಳ್ಳಬೇಕಿತ್ತು. ಬೆಳಗ್ಗೆ ನಾಲ್ಕು ಘಂಟೆಗೆ ಎದ್ದರೆ ಕಸಗುಡಿಸುವುದರಿಂದ ಮೊದಲಾಗಿ ಎಲ್ಲವನ್ನೂ ಮಾಡಿಕೊಂಡು, ಬಂದವರನ್ನು ಸತ್ಕರಿಸಿ , ಭವನದಲ್ಲಿನ ಕೆಲಸಕ್ಕೆ ನನಗೂ ಸಹಾಯ ಮಾಡುತ್ತ , ಬಿಡುವಿಲ್ಲದ ದಿನಚರಿಗೆ ಹೊಂದಿಕೊಂಡಳು. ಅವಳು ಬಂದನಂತರ ನಮ್ಮ ಮನೆಗೆ ಬರು-ಹೋಗುವವರು ಹೆಚ್ಚಾದರು. ಪ್ರತಿದಿನವೂ ನಾಲ್ಕು ಮಹಡಿಗಳನ್ನು ಹತ್ತಿ ಇಳಿಯುತ್ತಾ ಅವಳು

ಮಾಡುತ್ತಿದ್ದ ಕೆಲಸಗಳಲ್ಲಿ ಅವಳಿಗೆ ಸಹಾಯಕರು ಯಾರೂ ಇರಲಿಲ್ಲ!! ಹಾಗೆ ಅವಳಿಗೆ ಬಿಡುವಾದಾಗ ಅವಳೇ ತನಗೆ ತಿಳಿದಂತೆ ನನಗೆ ಸಹಾಯ ಮಾಡುವುದಿತ್ತು. ಅಂತೂ ನಮ್ಮ ಜೀವನ ಹೆಚ್ಚಿನ ಏರುಪೇರಿಲ್ಲದೆ ಭವನಕ್ಕೆ ಹೊಂದಿಕೊಂಡು ನಡೆಯತೊಡಗಿತು.

ನಾನು ಮೊದಲೇ ಹೇಳಿರುವಂತೆ ಅಲ್ಲಿನ ಜನದ ಆಸಕ್ತಿ ನೋಡಿ ರಾಮಾಯಣ, ಮಹಾಭಾರತ, ಭಾಗವತ ಇತ್ಯಾದಿಗಳ ಮೇಲೆ ಭಾಷಣ ಮಾಡಲು ಸಿದ್ಧತೆ ಮಾಡಿಕೊಂಡಿದ್ದೆನಷ್ಟೆ? ಲಂಡನ್ನಿನಿಂದ ಹೊರಗೆ ಭಾಷಣಗಳನ್ನು ಮಾಡಿ ಅಭ್ಯಾಸವಿತ್ತು. ಆದರೆ ಇಲ್ಲಿ ಅದರ ಪ್ರಾರಂಭೋತ್ಸವವಾಗಿರಲಿಲ್ಲ. ಇವಳು ಬಂದ ಅನಂತರ, ರಾಮಾಯಣದ ಉಪನ್ಯಾಸಗಳನ್ನು ಪ್ರಾರಂಭ ಮಾಡಿದೆ. ಸಂಜೆ ೬ ರಿಂದ ೭.೩೦ ರವರೆಗೆ ಎಂದು ಗೊತ್ತು ಮಾಡಿ ಪ್ರಕಟಿಸಿದೆ. ಭವನದ ಬುಕ್‌ಷಾಪೇ ಉಪನ್ಯಾಸ ಸಭಾಂಗಣ. ಬೇರೆ ಸಭಾಂಗಣ ಇಲ್ಲ. ಮೊದಲ ದಿನ ಆರಕ್ಕೆ ಸರಿಯಾಗಿ ಪ್ರಾರಂಭಮಾಡಿದೆ! ಇವಳಿಗೂ ಇವಳ ಕೆಲಸಗಳನ್ನೆಲ್ಲ ಮುಗಿಸಿ ಆರು ಘಂಟೆಗೆ ಸರಿಯಾಗಿ ಕೆಳಗೆ ಬಂದು ಭಾಷಣದ ಸಭಾಂಗಣದಲ್ಲಿ ಕುಳಿತುಕೊಳ್ಳಬೇಕೆಂದು ಹೇಳಿದೆ. ಸಂಭ್ರಮ ಕಾತರದಿಂದ ಎದುರು ನೋಡುತ್ತಿದ್ದ ಆರು ಘಂಟೆ ಬಂದಿತು. ಇನ್ನೂ ಯಾವುದೇ ಸಭಿಕರ ಸುಳಿವಿರಲಿಲ್ಲ. ಆದರೂ ಧೈರ್ಯಗೆಡಲಿಲ್ಲ ನಾನು. ಎಂದಿನಿಂದಲೂ ಸಮಯಪಾಲನೆ ಎನ್ನುವುದು ನನಗೆ ಮೈಗೂಡಿ ಬಂದಿದ್ದ ಅಭ್ಯಾಸವಾಗಿದ್ದುದರಿಂದ ಸರಿಯಾಗಿ ಆರು ಘಂಟೆಗೆ ವೇದಿಕೆ ಮೇಲೆ ಕುಳಿತು, ಪುಸ್ತಕವನ್ನು ಮುಂದಿಟ್ಟುಕೊಂಡು ಕಣ್ಣುಮುಚ್ಚಿ ಪ್ರಾರ್ಥನಾ ಶ್ಲೋಕ ಹೇಳಿ ಮೂರು ನಿಮಿಷಗಳ ಅನಂತರ ಕಣ್ಣುಬಿಟ್ಟೆ. ಕಣ್ಣುಬಿಟ್ಟರೆ ನನ್ನ ಮಾತನ್ನು ತಪ್ಪದೆ ಪಾಲಿಸಿ ಆರು ಘಂಟೆಗೆ ಸರಿಯಾಗಿ ಬಂದು ಕುಳಿತಿದ್ದವಳು ಇವಳೊಬ್ಬಳೇ ನನ್ನೆದುರಿಗೆ!!

ನನ್ನ ಓದುಗರಿಗೆ ನಗು ಬಂದಿರಬಹುದು! ಹೌದು, ಇದು ನಗು ತರಿಸುವಂತಹಾ ಸಾಹಸವೇ ಆಗಿತ್ತು. ಆ ಆರು ದಿನ... ಆ ಮೊದಲ ದಿನ ಮಾತ್ರ ಆರು ಘಂಟೆಗೆ ಹಾಗಾಗಿತ್ತು. ಅನಂತರ ಸಮಯ ಕಳೆದಂತೆ ಜನ ಸೇರುತ್ತಿದ್ದರು. ಭಾಷಣ ಮುಗಿಯುವ ವೇಳೆಗೆ ಸುಮಾರು ೬೦-೭೦ ಮಂದಿ ಸಭಾಂಗಣದಲ್ಲಿದ್ದರು!! ಹೀಗಾದದ್ದು ನನ್ನ ಮೊದಲ ಭಾಷಣದ ಸ್ವಾರಸ್ಯ! ಅನಂತರ ಎಂದೂ ಹಾಗಾಗಲಿಲ್ಲ, ಸಮಯಕ್ಕೆ ಸರಿಯಾಗಿ ಜನ ಬರುತ್ತಿದ್ದರು. ಶ್ರದ್ಧೆಯಿಂದ ಕೇಳುತ್ತಿದ್ದರು!!

ಹಳೆಯದನ್ನು ನೆನಪಿಸಿಕೊಳ್ಳುವಾಗ ಒಂದೊಂದು ಮಧ್ಯದಲ್ಲಿ ಬಿಟ್ಟುಹೋದರೂ ಅಂಥ ನಷ್ಟ ಎಂದೇನೂ ಅನಿಸದು. ಆದರೆ ಆ ಒಂದೊಂದರಲ್ಲಿ ಸ್ವಾರಸ್ಯ ಇದ್ದು , ಅದು ನಗೆ ಪ್ರಸಂಗವಾದಾಗ ಓದುಗರಿಗೆ ಹೇಳಿ, ಅವರಿಗೂ ನಗೆ ತರಿಸುವಾ ಎನಿಸುವುದೂ ಸಹಜ...! ಡಿ.ವಿ.ಜಿ.ಯವರು ಹೇಳಿರುವಂತೆ 'ನಗುವುದು ಸಹಜ ಧರ್ಮ, ನಗಿಸುವುದು ಪರಧರ್ಮ'ತಾನೆ?

ರಾತ್ರಿ ಕ್ಲೀನರ್

ನನ್ನವಳು ಬರುವುದಕ್ಕೆ ಮೊದಲು ನನಗೆ ಸಹಾಯ ಮಾಡಬೇಕೆಂದು ಬಾಂಬೆಯಿಂದ ವೆಂಕಟಾಚಲಂ ಎನ್ನುವರೊಬ್ಬರು ಬಂದರು. ಆದರೆ ಅವರಿಗೆ ಅಲ್ಲಿ ಹೊಂದಿಕೆಯಾಗದೆ ಒಂದೇ ವರ್ಷದಲ್ಲೇ ಬಾಂಬೆಗೆ ವಾಪಸಾದರು. ನಾನೊಬ್ಬನೇ ಇದ್ದ ಸಮಯದಲ್ಲಿ ನನಗೆ ಸಹಾಯ ಮಾಡುತ್ತಿದ್ದರು. ಆ ಒಂದು ವರ್ಷದಲ್ಲಿ ವೆಂಕಟಾಚಲಂ ಆಫೀಸಿನ ಕೆಲಸದ ಜತೆಗೆ ಅಡುಗೆ ಮಾಡಿ ಹಾಕುತ್ತಿದ್ದರು. ನನಗೋ ಸರಿಯಾಗಿ ಸ್ಟೋವ್ ಹತ್ತಿಸುವುದೂ ಬರುತ್ತಿರಲಿಲ್ಲ. ಅವರು ಅಡುಗೆ ಮಾಡಿದರೆ, ರಾತ್ರಿ ಊಟ ಮಾಡಿದ ಅನಂತರ ಬೆಳಗ್ಗೆ ವಿದ್ಯಾಭವನದ 'ರೆಜಿಸ್ಟ್ರಾರ್' ಕೆಲಸ ಮಾಡುತ್ತಿದ್ದ ನಾನು ರಾತ್ರೀ ಕ್ಲೀನರ್ ಆಗುತ್ತಿದ್ದೆ! ಅಡುಗೆ ಮನೆಯನ್ನು ಶುಭ್ರವಾಗಿ ಸಾರಿಸಿ, ಪಾತ್ರೆಗಳನ್ನು ತೊಳೆದಿಡುತ್ತಿದ್ದೆ. ಇದು ನಮ್ಮಿಬ್ಬರ ನಡುವೆ ಆಗಿದ್ದ ಒಪ್ಪಂದ! ಅವರಿಗೆ ಚೆನ್ನಾಗಿ ತಿಳಿದಿತ್ತು. ನನಗೆ ಅಡುಗೆ ಮಾಡಿಕೊಳ್ಳುವುದು ಬರದು ಎಂದು. ಹೀಗಿದ್ದಾಗ ಒಮ್ಮೆ ಅವರನ್ನು ಭವನದ ಗೌರವ ಖಜಾಂಚಿಯ ಮನೆಗೆ ಲೆಕ್ಕಪತ್ರ ಹೇಳಿಕೆ (ಅಕೌಂಟ್ಸ್ ಸ್ಟೇಟ್‌ಮೆಂಟ್) ಸಿದ್ಧಪಡಿಸುವ ಕೆಲಸಕ್ಕೆ ಕಳುಹಿಸಬೇಕಾಯಿತು. ಅಲ್ಲಿ ಹೊತ್ತಾದ್ದರಿಂದ ಅವರು ಊಟಕ್ಕೆ ಅಲ್ಲಿಯೇ ನಿಂತರು. ನಾನು ಕೆಲಸ ಮುಗಿಸಿ ಆಫೀಸಿನಿಂದ ಮೇಲೆ ಮನೆಗೆ ಹೋದಾಗ ಮನೆಯಲ್ಲಿ ತಿನ್ನಲು ಏನೂ ಇರಲಿಲ್ಲ. ಭಯಂಕರ ಹಸಿವು , ಹೇಗೋ ಗಂಜಿ ಜಾಸ್ತಿಯಾದರೂ ಅನ್ನ ಮಾಡಿಕೊಂಡೆ. ಅದರ ಜತೆಗೆ ತಿನ್ನಲು ಏನಾದರೂ ಬೇಕಲ್ಲ. ಚಟ್ನಿ ಮಾಡಿಕೊಳ್ಳುವ ಎನ್ನುವ ಯೋಚನೆ ಬಂದಿತು. ತಕ್ಷಣವೇ ರಾಮಯ್ಯರ್‌ರ ಮನೆಗೆ ಫೋನು ಮಾಡಿ ಚಟ್ನಿ ಮಾಡುವುದು ಹೇಗೆ ಎಂದು ಕೇಳಿದೆ. ರಾಮಯ್ಯರ್ ತಮಿಳುನಾಡಿನವರು. ಅನೇಕ ವರ್ಷಗಳಿಂದ ಲಂಡನ್ನಿನಲ್ಲೇ ಉಳಿದಿದ್ದ ಅವರೂ - ಅವರ ಪತ್ನಿ ರಾಜಮ್ಮನವರೂ ಭವನಕ್ಕೆ ಬಂದು ಸಂಸ್ಕೃತವನ್ನೂ ಹಿಂದಿಯನ್ನೂ ಹೇಳಿಕೊಡುತ್ತಿದ್ದರು.

ಅವರು ಹೇಳಿದಂತೆಯೇ ಚಟ್ನಿ ಮಾಡಲು ಪ್ರಾರಂಭಿಸಿದೆ. ಸಿದ್ಧ ಮಾಡಿ ತುರಿದ ಕಾಯಿ ಲಂಡನ್ನಿನಲ್ಲಿ ಪೊಟ್ಟಣಗಳಲ್ಲಿ ಸಿಗುತ್ತದೆ. ಅದನ್ನೂ , ಚಟ್ನಿಗೆ ಬೇಕಾದ ಇತರ ಪದಾರ್ಥಗಳನ್ನೂ ಮಿಕ್ಸಿಗೆ ಹಾಕಿದೆ. ಎರಡು ಲೋಟ ನೀರನ್ನು ತುಂಬಿದೆ. ಮಿಕ್ಸಿ ತಿರುಗಿಸಿ ಅನಂತರ ನಿಲ್ಲಿಸಿ ತೆಗೆದಾಗ, ಅದು ಚಟ್ನಿ ನೀರಾಗಿತ್ತು!! ನನಗೆ ನಾನು ಮೊದಲ ಬಾರಿಗೆ ಮಾಡಿದ ಚಟ್ನಿ ಸ್ವರೂಪ ಬದಲಾಗಿರುವುದು ನೋಡಿ ನಿರಾಸೆಯಾದರೂ, ಹೊಟ್ಟೆ ಕೇಳಬೇಕಲ್ಲ. ಆ ದಿನ ಆ ನೀರುಚಟ್ನಿಯೇ ಅನ್ನದ ಜತೆಗೆ ಅಮೃತ ಸಮಾನವಾಗಿ ಬೆರೆತು, ಹೊಟ್ಟೆಯ ಜಠರಾಗ್ನಿಯನ್ನು ಆರಿಸಿ ತಣ್ಣಗೆ ಮಾಡಿತು! ಅದೇ ಮೊದಲು ಅದೇ ಕೊನೆ, ಮತ್ತೆಂದೂ ನಾನು ಪಾಕಶಾಲೆಗೆ ಪ್ರಯೋಗಕ್ಕೆಂದು ಹೋದದ್ದಿಲ್ಲ!!

ಸುಪ್ರಸಿದ್ಧ ವಯೋಲಿನ್ ವಾದಕ ಯಹೂದಿ ಮೆನ್ಯುಹಿನ್‌ರು ಭವನದ ಪ್ರಥಮ ಅಧ್ಯಕ್ಷರಾಗಿದ್ದವರು. ಅನಂತರದಲ್ಲಿ 'ಪೋಷಕ' ಆದರು. ಅಧ್ಯಕ್ಷರಾಗಬೇಕು ಎಂದು ಕೇಳಿದಾಗ ಮೀಟಿಂಗ್‌ಗಳಿಗೆ ಬರಲಾಗುವುದಿಲ್ಲ ಎಂಬ ಷರತ್ತಿನ ಮೇಲೆ ಆದರು. ಒಮ್ಮೆಯೂ ಬರಲಿಲ್ಲ. ಹೆಸರಿಗೆ ಅಧ್ಯಕ್ಷರಾಗಿದ್ದರು. ಆಮೇಲೆ ಮೆನ್ಯುಹಿನ್‌ರ ವಯೋಲಿನ್, ಲಕ್ಷ್ಮೀಶಂಕರರ ಹಾಡುಗಾರಿಕೆ, ಪಂಡಿತ ರಾಮನಾರಾಯಣ ಸಾರಂಗಿ ಈ ಮೂವರು ಮಹಾನ್ ಕಲಾಕಾರರ ತ್ರಿವೇಣಿ ಸಂಗಮವಾಗಿದ್ದ ಒಂದು ಅದ್ಭುತ ಕಾರ್ಯಕ್ರಮ ಭವನದ ನಿಧಿ ಸಂಗ್ರಹಕ್ಕಾಗಿ ನಡೆಯಿತು! ನಡೆದದ್ದು ಹೆಸರಾಂತ ವೆಸ್ಟ್‌ಮಿನಿಸ್ಟರ್ ಹಾಲ್‌ನಲ್ಲಿ. ಆ ದಿನ ಮೆನ್ಯುಹಿನ್‌ರ ಪತ್ನಿಯೂ ಭವನಕ್ಕೆ ಆಗಮಿಸಿದ್ದರು. ಅನಂತರ ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿಯವರು ಭವನಕ್ಕಾಗಿ ಸುಮಾರು ಎರಡು ಮೂರು ಸಹಾಯಾರ್ಥ ಕಛೇರಿಗಳನ್ನು ನಡೆಸಿಕೊಟ್ಟರು. ಪಂಡಿತ್ ಶ್ರೀ ರವಿಶಂಕರ್‌ರ ಸಿತಾರ್‌ವಾದನವನ್ನು ಸಹಾಯಾರ್ಥ ಕಾರ್ಯಕ್ರಮವಾಗಿ ಭವನವು ಏರ್ಪಡಿಸಿದಾಗ, ನಾನು ಶ್ರೀರವಿಶಂಕರರಿಗೆ, 'ಕಾರ್ಯಕ್ರಮಕ್ಕೆ ಹೊರಡಲು ಸಮಯಕ್ಕೆ ಸರಿಯಾಗಿ ಕಾರು ಬರುವಂತೆ ಏರ್ಪಾಡು ಮಾಡಿದ್ದೇನೆ. ತಾವು ಅದರಲ್ಲಿ ಹೊರಟು ಬನ್ನಿ', ಎಂದೆ. ಆಗ ಅವರು 'ಮತ್ತೂರ್‌ಜೀ, ನಾನು ಈಗ ಕೊಡುತ್ತಿರುವುದು ಸಹಾಯಾರ್ಥ ಕಾರ್ಯಕ್ರಮ. ನೀವು ನನಗೆ ಟ್ಯಾಕ್ಸಿ ಕಳುಹಿಸಬಾರದು. ಅದನ್ನು ನಾನೊಪ್ಪುವುದಿಲ್ಲ' ಎಂದರು. ನಮ್ಮಿಂದ ಬಿಡಿಗಾಸೂ ಖರ್ಚು ಮಾಡಿಸದೆ ಕಾರ್ಯಕ್ರಮ ಕೊಟ್ಟರು! ಶ್ರೀಮತಿ ಲತಾಮಂಗೇಶ್ಕರರೂ ಅಷ್ಟೇ...೧೯೮೦ರ ಮೊದಲ ತಿಂಗಳುಗಳಲ್ಲಿ ಲಂಡನ್ನಿನ ರಾಯಲ್ ಆಲ್ಬರ್ಟ್ ಹಾಲಿನಲ್ಲಿ ಒಂದು ದೊಡ್ಡ ಸಹಾಯಾರ್ಥ ಕಾರ್ಯಕ್ರಮ ಕೊಟ್ಟರು. ಆಗ ಸುಮಾರು ಒಂದು ಲಕ್ಷ ಪೌಂಡುಗಳಷ್ಟು ಹಣ ಸಂಗ್ರಹವಾಗಿ, ಅದರಲ್ಲಿ ೧೦,೦೦೦ ಪೌಂಡುಗಳನ್ನು ಭವನಕ್ಕೆಂದು ಕೊಟ್ಟರು! ಅವರ ಸೋದರಿ ಆಶಾಭೋಂಸ್ಲೆಗೆ ಭವನದ ವತಿಯಿಂದ ಒಂದು ಸ್ವಾಗತ ಕಾರ್ಯಕ್ರಮ ಕೊಟ್ಟು ಗೌರವಿಸಿದೆವು... ಹೀಗೆ ಈ ಹಿರಿಯ ಕಲಾವಿದರು ತಾವು ಭವನಕ್ಕೆ ನೀಡಿದ ಸಹಾಯಾರ್ಥ ಕಾರ್ಯಕ್ರಮಗಳಲ್ಲಿ ಭವನದ ಏಳಿಗೆಯನ್ನೇ ಗಮನದಲ್ಲಿರಿಸಿಕೊಂಡು, ತಮ್ಮಿಂದ-ತಮ್ಮ ವಾಸ್ತವ್ಯದಿಂದ ಭವನದ ವ್ಯವಹಾರಕ್ಕೆ ಹೊರೆಯಾಗದಂತೆ, ಬಹಳ ಪ್ರೀತಿಯಿಂದ, ವಿನಯದಿಂದ ನಡೆದುಕೊಂಡದ್ದು, ನಾನು ಮರೆಯುವಂತಿಲ್ಲ!!

ಬಿರ್ಲಾ ಕುಟುಂಬ

ಆ ಸಣ್ಣ ಜಾಗದಲ್ಲೇ ಐದು ವರ್ಷಗಳು ನಿಧಾನವಾಗಿ ಕಳೆಯುತ್ತಿರುವಾಗಲೇ , ಒಂದು ದಿನ ಭಾರತದಿಂದ ಬಂದ ಪ್ರಮುಖರಲ್ಲಿ ಒಬ್ಬರಾದ ಜಿ.ಡಿ. ಬಿರ್ಲಾರು ತಮ್ಮ ಅಣ್ಣನ ಮಗ ಮಾಧವ ಪ್ರಸಾದ್ ಬಿರ್ಲಾರವರೊಡನೆ ಭವನಕ್ಕೆ ಭೇಟಿಕೊಟ್ಟರು. ಆಗ ಇಡೀ ಬಿರ್ಲಾ ಕುಟುಂಬ ಅಲ್ಲಿಗೆ ಭೇಟಿ ನೀಡಿತ್ತು. ನಾವು ಆದರದ ಸ್ವಾಗತ ನೀಡಿದೆವು. ಭವನದ ಸಂಸ್ಥಾಪಕ ಡಾ|| ಕೆ.ಎಂ. ಮುನ್ಷಿಯವರಿಗೂ, ಜಿ.ಡಿ. ಬಿರ್ಲಾ ಅವರಿಗೂ ನಿಕಟ ಸಂಪರ್ಕವಿದ್ದಿತು. ಭಾರತದಲ್ಲಿ ವಿದ್ಯಾಭವನದ ಕೆಲಸಕಾರ್ಯಗಳಿಗೆ ಜಿ.ಡಿ.ಬಾಬು ಹೆಚ್ಚಿನ ನೆರವು ನೀಡಿದ್ದರು. ಲಂಡನ್ನಿನಲ್ಲಿ ನಡೆಯುತ್ತಿದ್ದ ಕಾರ್ಯ ಚಟುವಟಿಕೆಗಳನ್ನು ನೋಡಿ ಮೆಚ್ಚುಗೆಯಾಯಿತು ಅವರಿಗೆ. ಮೇಲಾಗಿ ಭವನದ ಛೇರ್‌ಮನ್ ಮಣೇಕ್‌ದಲಾಲರು ಅವರ ಆತ್ಮೀಯರಲ್ಲಿ ಒಬ್ಬರಾಗಿದ್ದರು. ಏರ್ ಇಂಡಿಯಾದಲ್ಲೇ ಪ್ರಯಾಣ ಮಾಡುತ್ತಿದ್ದ ಜಿ.ಡಿ. ಬಿರ್ಲಾ ಹಾಗೂ ಬಿರ್ಲಾ ಕುಟುಂಬದ ಎಲ್ಲರಿಗೂ ದಲಾಲ್‌ಜೀಯ ದಕ್ಷತೆಯು ಇಷ್ಟವಾಗಿದ್ದಿತು. ಇಂಥವರ ನೇತೃತ್ವದಲ್ಲಿ ಭವನವು ಖ್ಯಾತಿ ಗಳಿಸುತ್ತದೆ ಎಂದು ಅನ್ನಿಸಿತು ಅವರಿಗೆ.

ಸಣ್ಣ ಕಟ್ಟಡದ ಲೀಸ್-ಐದು ವರ್ಷದ ಭೋಗ್ಯದ ಅವಧಿಯು - ಮುಗಿಯುತ್ತ ಬಂದಿತು. ಭವನದ ಕಾರ್ಯ ಚಟುವಟಿಕೆಗಳು ಹೆಚ್ಚು ಹೆಚ್ಚಾಗುತ್ತಾ ಹೋಗಿದ್ದವು. ಬೇರೆ ದೊಡ್ಡ ಕಟ್ಟಡವು ಅತ್ಯಗತ್ಯ ವಾಯಿತು.

"ಬೇರೆ ದೊಡ್ಡ ಜಾಗ ನೋಡಿ, ಎಷ್ಟಾಗುತ್ತದೆ ತಿಳಿಸಿ. ಎಷ್ಟೇ ಆಗಲಿ, ಅದರ ಬೆಲೆಯಷ್ಟನ್ನು ನೀವು ಸಂಗ್ರಹಿಸಿರಿ. ಕಟ್ಟಡ ಕೊಳ್ಳಲು ಬೇಕಾದ ಧನವನ್ನು ನಾವು ಕೊಡುತ್ತೇವೆ" ಎಂದು ಹೇಳಿ, ಪಕ್ಕದಲ್ಲೇ ಇದ್ದ ಅವರ ಅಣ್ಣನ ಮಗ ಶ್ರೀ ಮಾಧವ ಪ್ರಸಾದ್ ಬಿರ್ಲಾರಿಗೆ 'ಮಾಧವ್, ಇಂತಜಾಮ್ ಕರ್ನಾ' (ಏರ್ಪಾಡು ಮಾಡು) ಎಂದರು.

ಅವಿಸ್ಮರಣೀಯ ದಿನ ಆ ದಿನ, ಭವನದ ಇತಿಹಾಸದಲ್ಲಿ.

ನಾನು ವಿದೇಶಕ್ಕೆ ಹೋದಾಗ ಅಲ್ಲಿನ ಜನ-ಮನ, ಅವರ ಅಭ್ಯಾಸಗಳು, ಅಲ್ಲಿನ ರೀತಿ-ನೀತಿ ತಿಳಿದಿರಬೇಕಾದುದ್ದು ಬಹಳ ಮುಖ್ಯ ಅನಿಸಿತು. ನಾನು ಹೋಗಿ ಎಂಟು-ಹತ್ತು ತಿಂಗಳಾದ ಅನಂತರ ಭವನವು ೩೫ ಗ್ರೇಟ್ ರಸೆಲ್ ಸ್ಟ್ರೀಟ್‌ನ ೧೦'x೧೦' ಅಡಿಯ ಕೋಣೆಯಲ್ಲಿ ಕೆಲಸ ಮಾಡಲು ಪ್ರಾರಂಭಿಸಿತು. ಇಲ್ಲಿ ಆರು-ಎಂಟು ತಿಂಗಳು ಇದ್ದು ಅನಂತರ ಸಮೀಪದಲ್ಲೇ ಇರುವ ನ್ಯೂ ಆಕ್ಸ್‌ಫರ್ಡ್ ಸ್ಟ್ರೀಟಿನ ೩೭ನೇ ನಂಬರಿನ ಕಟ್ಟಡಕ್ಕೆ ಹೋದೆವು. ೨೨೦೦ ಚದರಡಿ ವಿಸ್ತಾರ, ಮೂರು ಮಹಡಿಗಳು ಇದ್ದ ಕಟ್ಟಡ. ಭವನದ ಪಕ್ಕದಲ್ಲೇ ಒಂದು ಕಟ್ಟಡ; 'ಬುಕಿಂಗ್ ಆಫೀಸ್' ಎಂಬ ಫಲಕವು ಇದ್ದಿತು. ನಾನು ಇಲ್ಲಿ ಪುಸ್ತಕಗಳನ್ನು ಬೈಂಡ್ ಮಾಡಿಸಿದರೆ ಬಹಳ ಚೆನ್ನಾಗಿರುತ್ತದೆ ಎಂದು, ಒಂದಷ್ಟು ಪುಸ್ತಕಗಳನ್ನೂ, ಬರೆದಿಟ್ಟಿದ್ದ ಹಾಳೆಗಳನ್ನೂ ತೆಗೆದುಕೊಂಡು ಹೋದೆ. ಒಳಗೆ ಹೋದಾಗ ಅಲ್ಲಿ ಕೆಲವು ಕುದುರೆಗಳ ಚಿತ್ರಗಳಿದ್ದವು . ಒಂದಿಬ್ಬರು ಸಿಗರೇಟು ಸೇದುತ್ತ ನಿಂತಿದ್ದರು. ಒಂದು ರೀತಿಯ ವಿಚಿತ್ರ ವಾತಾವರಣ. ಅಲ್ಲಿ ಹೋದ ಅನಂತರ ನನಗೆ ಎಂಥದೋ ಅನುಮಾನ ಬಂದು ಅಲ್ಲಿ ನಿಂತಿದ್ದವರನ್ನು 'ಹಲೋ, ಗುಡ್ ಮಾರ್ನಿಂಗ್,

ಯಾವುದು ಈ ಜಾಗ?' ಎಂದು ಕೇಳಿದೆ ಇಂಗ್ಲಿಷಿನಲ್ಲಿ. ಅವರೂ ನನ್ನ ವೇಷ, ನನ್ನ ಕೈಯಲ್ಲಿದ್ದ ಪುಸ್ತಕ ಹಾಳೆಗಳ ಕಂತೆಯನ್ನು ನೋಡಿ ವಿಚಿತ್ರವಾಗಿ ನನ್ನ ಕಡೆ ನೋಡುತ್ತಿದ್ದರು. ಅವರು ನಾನು ಹಾಗೆ ಕೇಳಿದ ಕೂಡಲೆ 'ಇದು ರೇಸಿಂಗ್ ಬುಕ್ಕಿಂಗ್ ಆಫೀಸು' ಎನ್ನಬೇಕೆ!! ನನಗೆ ಬಹಳ ಗಾಬರಿಯಾಗಿ ಕೂಡಲೆ ಹೊರಬಂದೆ… ನನ್ನನ್ನು ತಿಳಿದವರು ಯಾರಾದರೂ ಅಲ್ಲಿ ನನ್ನನ್ನು ನೋಡಿದರೆ ಏನೆಂದು ಕೊಂಡಾರು? ಸರಿಯಾಗಿ ತಿಳಿದುಕೊಳ್ಳದೆ ಹೋದದ್ದು ನನ್ನ ತಪ್ಪಾದರೂ ಅಕಸ್ಮಾತ್ತಾಗಿಯಾದರೂ ಅಲ್ಲಿ ನನ್ನನ್ನು ನೋಡಿದವರು ನಾಳೆ ವಿದ್ಯಾಭವನಕ್ಕೆ ನಾನು ಹಣ ಕೇಳಲು ಹೋದರೆ ದಾನ ಕೊಟ್ಟಾರೋ?? ಅಲ್ಲಿಂದ ಬೇಗ ಬೇಗ ಹೊರಗೆ ಬಂದು ಸಾವರಿಸಿಕೊಂಡು ಎರಡು ಮಾರು ದೂರ ಹೆಜ್ಜೆ ಹಾಕಿದ ಅನಂತರ 'ಬದುಕಿದೆಯಾ ಬಡಜೀವವೇ' ಎನಿಸಿತು! ನಾಲ್ಕಾರು ದಿನಗಳಲ್ಲೇ ನಡೆದ ತಿಂಗಳ ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ಈ ಸಂಗತಿಯನ್ನು ತಿಳಿಸಿದೆ. ಛೇರ್ಮನ್ ಆದಿಯಾಗಿ ಎಲ್ಲರೂ ನಕ್ಕರು

ಇಪ್ಪತ್ತು ಪೌಂಡಿನ ನೋಟುಗಳು

ಬ್ರಿಟನ್ನಿನ ಜನಜೀವನವೂ ಅಷ್ಟೆ, ಬಹಳ ಶಿಸ್ತು. ಯಾವುದೇ ಕೆಲಸದಲ್ಲೂ ಆ ಜನ ಅಚ್ಚುಕಟ್ಟು, ಅಂತೆಯೇ ನಿಷ್ಠೆ. ಅವರು ಸುಳ್ಳಿನಾಶ್ರಯ ಮಾಡುವುದು ಬಹಳ ಕಡಮೆ. ನನ್ನವಳು ಬಂದನಂತರ ಒಮ್ಮೆ ನಮಗೆ ಬಹಳ ತಿಳಿದವರ ಮನೆಗೆ ನನ್ನನ್ನೂ ಇವಳನ್ನೂ ಊಟಕ್ಕೆ ಕರೆದಿದ್ದರು. ನಾವಿಬ್ಬರೂ ತಯಾರಾಗಿ ಹೊರಟು ಮನೆಯಿಂದ ಹೊರಬಂದು ಹತ್ತು ಹೆಜ್ಜೆ ಹಾಕಿದ್ದೇವಷ್ಟೆ. ಮುದುರಿಕೊಂಡ ಕಾಗದದ ರೀತಿ, ಎಂಥದೋ ಬಣ್ಣದ ಚೀಟಿಯಂತೆ ಪೇವ್‌ಮೆಂಟ್ (ನಡೆದು ಮೇಲೆ ಹೋಗುವ ಪಾರ್ಶ್ವ) ಬಿದ್ದಿತ್ತು. ನಾನು ಬಗ್ಗಿ ಕೈಗೆತ್ತಿಕೊಂಡು ನೋಡಿದರೆ ಅದು ಹಣ ! ೨೦ ಪೌಂಡಿನ ನಾಲ್ಕು ನೋಟುಗಳು. ಸುತ್ತಮುತ್ತ ನೋಡಿದೆ. ಯಾರೂ ಕಾಣಲಿಲ್ಲ. ನಮ್ಮ ಮನೆಯಿಂದ ಮುಂದೆ ಸ್ವಲ್ಪ ಪಕ್ಕದಲ್ಲಿ ಒಂದು ಕಟ್ಟಡ ಕಟ್ಟುವ ಕೆಲಸ ನಡೆದಿತ್ತು. ಆ ನೋಟುಗಳನ್ನು ಮಡಚಿದ್ದ ರೀತಿ ನೋಡಿ, ಅಲ್ಲಿ ಕೆಲಸ ಮಾಡಲು ಬಂದಿದ್ದ ಗಾರೆ ಕೆಲಸಗಾರರ ದುಡ್ಡು ಇದಾಗಿರಬಹುದೆಂದು ನನಗೆ ಅನುಮಾನವಾಯಿತು. ಹತ್ತಿರದಲ್ಲೇ ಇದ್ದ ಪೊಲೀಸ್ ಸ್ಟೇಷನ್ನಿಗೆ ಹೋದೆವು. ನನ್ನನ್ನು ನೋಡಿದ ಆ ಇನ್‌ಸ್ಪೆಕ್ಟರು ನಮಸ್ಕಾರ ಹೇಳಿ ಕುಳಿತುಕೊಳ್ಳಲು ಸೂಚಿಸಿದ. ನಾವಿಬ್ಬರೂ ಅವನೆದುರಿಗೆ ಕುಳಿತೆವು. ನಮ್ಮ ಮನೆಯ ಹತ್ತಿರವೇ ನಮಗೆ ಸಿಕ್ಕ ಆ ಹಣವನ್ನು ಪೊಲೀಸರಿಗೆ ಕೊಟ್ಟುಹೋಗುವುದಕ್ಕಾಗಿ ಬಂದೆವೆಂದು ಹೇಳಿದೆ. ಅದಕ್ಕೆ ಅವನು 'ಆಯ್ತು, ನೀವು ಆ ಹಣವನ್ನು ಇಲ್ಲಿ ಕೊಡಬಹುದು. ಆದರೆ ಆ ಹಣದ ವಾರಸುದಾರರು ಬಂದು ತೆಗೆದುಕೊಂಡು ಹೋಗಬೇಕು. ಈವರೆಗೆ ಯಾರೂ ಹಾಗೆ ದೂರು ಕೊಟ್ಟಿಲ್ಲ… ಆದರೂ ನೋಡೋಣ. ೨೧ ದಿನಗಳ ತನಕ ಸಮಯವಿದೆ. ನಾವು ಕಾಯಬಹುದು. ಅವರು ಬಂದರೆ ಸರಿ, ಇಲ್ಲವಾದರೆ ನಿಮಗೇ ಮತ್ತೆ ನಾನು ಫೋನು ಮಾಡಬೇಕಾಗುತ್ತದೆ, ಆಗ ನೀವು ಇಲ್ಲಿಗೆ ಬರಬೇಕಾಗುತ್ತದೆ' ಎಂದ. ನಾನು 'ಸರಿ' ಎಂದು ಹೇಳಿ ಆ ಹಣವನ್ನು ಅವನ ಕೈಗಿತ್ತು ಅವನು ಕೊಟ್ಟ ರಶೀದಿಯನ್ನು ಪಡೆದೆ. ನಾವಿಬ್ಬರೂ ಅವನಿಗೆ ವಂದಿಸಿ ಅಲ್ಲಿಂದ ಹೊರಟೆವು.

ಇದಾದನಂತರ ೧೫-೨೦ ದಿವಸಗಳು ಕಳೆದಿದ್ದವು. ನನಗೆ ಇತರ ಕೆಲಸದ ಒತ್ತಡದಲ್ಲಿ ಆ ವಿಷಯವೇ ಮರೆತು ಹೋದಂತಾಗಿತ್ತು. 22ನೇ ದಿನ ನನ್ನ ಹೆಸರಿಗೆ ಒಂದು ಪತ್ರ ಬಂದಿತ್ತು, ಪೊಲೀಸು ಠಾಣೆಯಿಂದ. ಅದರಲ್ಲಿ ಹೀಗೆ ಬರೆಯಲಾಗಿತ್ತು. 'ಮಾನ್ಯರೆ, ನೀವು ಆ ದಿನ ತಮಗೆ ಸಿಕ್ಕ ಹಣವನ್ನು ಬೇರೆ ಯಾರದೋ ಬಿದ್ದು ಹೋಗಿರಬಹುದು ಎಂದು ಹೇಳಿ ನಮ್ಮಲ್ಲಿಗೆ ಬಂದು ಕೊಟ್ಟಿರಷ್ಟೆ? ಇಪ್ಪತ್ತೊಂದು ದಿನಗಳು ಕಳೆದರೂ ಈ ಹಣದ ವಾರಸುದಾರರು ಯಾರೂ ಬರಲಿಲ್ಲ. ಆದ್ದರಿಂದ ನೀವು ಕೂಡಲೇ ಬಂದು ಆ ಹಣವನ್ನು ವಾಪಸು ತೆಗೆದುಕೊಂಡು ಹೋಗಬೇಕು.' ನನಗೆ ಆಶ್ಚರ್ಯದಿಂದ ಎರಡು ನಿಮಿಷಗಳ ಕಾಲ ಮಾತೇ ಹೊರಡಲಿಲ್ಲ. 'ಅಲ್ಲಾ… ಹೀಗೂ ಉಂಟೆ ? ಇನ್ನೂ ಇಂಥವರು ಇದ್ದಾರೆಯೇ ?' ಎನಿಸಿತು. ತಡಮಾಡುವಂತಿಲ್ಲ. ಕೂಡಲೆ ಪೊಲೀಸ್ ಸ್ಟೇಷನ್ನಿಗೆ ಹೋದೆ. ಅಲ್ಲಿ ಆ ಇನ್ಸ್‌ಪೆಕ್ಟರು ನನಗಾಗಿಯೇ ಕಾದಿದ್ದವನಂತೆ, ನನಗೆ ವಂದಿಸಿ ನಾನು ನನ್ನ ಹೆಸರು ಹೇಳಿದ ಕೂಡಲೆ ಅವನ ಹತ್ತಿರವಿದ್ದ ಟೇಬಲ್ ಡ್ರಾದಿಂದ ಎಳೆದ ಒಂದು ಕವರನ್ನು ನನ್ನ ಕೈಗೆ ಕೊಟ್ಟು 'ಇದನ್ನು ಕೇಳಿಕೊಂಡು ಈವರೆಗೆ ಯಾರೂ ಬರಲಿಲ್ಲ. ಹಣ ಕಳೆದುಹೋಗಿದೆ ಎಂದು ಯಾರೂ ದೂರನ್ನೂ ಕೊಟ್ಟಿಲ್ಲ. ಆದ್ದರಿಂದ ಈ ಹಣವನ್ನು ನೀವೇ ವಾಪಸು ತೆಗೆದುಕೊಂಡು ಹೋಗಿರಿ' ಎಂದು ಹೇಳಿದ. 'ಈ ಹಣವನ್ನು ಏನು ಮಾಡಬೇಕು?' ಎಂದು ಕೇಳಿದೆ. ಅದಕ್ಕೆ ಅವನು 'ನೀವು ತೆಗೆದುಕೊಳ್ಳಿ, ಇಲ್ಲವಾದರೆ ಯಾವುದಾದರೂ ಸಂಸ್ಥೆಗೆ ದಾನವಮಾಡಿಬಿಡಿ' ಎಂದ, ನನ್ನ ಸಮಸ್ಯೆಯನ್ನು ಪರಿಹರಿಸುವಂತೆ. ನಾನು ಯೋಚಿಸಿದೆ, 'ಅರೆ… ಹೌದಲ್ಲ… ಇದನ್ನು ನಮ್ಮ ಭವನಕ್ಕೇ ಏಕೆ ತೆಗೆದುಕೊಳ್ಳ ಬಾರದು? ಯಾರೋ ಅನಾಮಧೇಯರು ಭವನಕ್ಕೆಂದು ದಾನ ಕೊಟ್ಟಿದ್ದಾರೆ' ಎಂದು ಭವನಕ್ಕೆ ಬಂದ ದಾನದ ಪಟ್ಟಿಗೆ ಸೇರಿಸಿದರಾಯಿತು' ಎಂದು ಕೊಂಡೆ. ಅದನ್ನೇ ಆ ಇನ್‌ಸ್ಪೆಕ್ಟರ್‌ನಿಗೂ ಹೇಳಿದೆ. ಅವನಿಗೂ ಸೋಜಿಗ, ನಾನು ಆ ದುಡ್ಡು ತೆಗೆದುಕೊಳ್ಳಲು ಪರದಾಡುತ್ತಿದ್ದುದನ್ನು ನೋಡಿದ. ಅವನು ಅದನ್ನು ಒಪ್ಪುವವನಂತೆ 'ಅದು ನಿಜಕ್ಕೂ ಒಳ್ಳೆಯ ಕೆಲಸ' ಎಂದು ತಲೆಯಾಡಿಸಿದ. ಹೀಗೆ ಆ ಹಣವು ಭವನಕ್ಕೆ ದಾನದ ರೂಪದಲ್ಲಿ ಸೇರಿತು.

ಅನಂತರ ತಿಳಿಯಿತು, ಬ್ರಿಟನ್ನಿನ ಬಹುತೇಕ ಊರುಗಳಲ್ಲಿ 'Lost and found' ('ಕಳೆದುಕೊಂಡದ್ದು ಮತ್ತು ಪತ್ತೆಯಾದದ್ದು') ಎಂಬ

ಹೆಸರಿನ ಸರಕಾರಿ ಡಿಪೋಗಳು ಇವೆ. ಎಲ್ಲಿ ಏನು ಸಿಕ್ಕಿದರೂ ಜನ ಈ ಡಿಪೋಗೆ ಕಳಿಸುತ್ತಾರೆ. ಕಳೆದುಕೊಂಡವರು ಅಲ್ಲಿಗೆ ಹೋಗಿ ವಿಚಾರಿಸುತ್ತಾರೆ. ಒಮ್ಮೆ ನಾನು ನನ್ನ ಟೆಲಿಫೋನ್ ನಂಬರು ಬರೆದಿದ್ದ ಡೈರಿಯೊಂದನ್ನು 'ಟೆಲಿಫೋನ್ ಬೂತ್'ನಲ್ಲಿ ಬಿಟ್ಟುಬಿಟ್ಟಿದ್ದೆ. ಒಂದೆರಡು ವಾರಗಳನಂತರ 'ನಿಮ್ಮದು ನಮ್ಮಲ್ಲಿದೆ, ಬಂದು ತೆಗೆದು ಕೊಂಡು ಹೋಗಿರಿ' ಎಂದು ಕರೆ ಬಂದಿತು! ನಮ್ಮಲ್ಲಿಯೂ ಹೀಗೇ ಆಗಬಾರದೆ ಅನಿಸಿತು!

ದಲಾಲ್‌ಜೀ! ದಲಾಲ್‌ಜೀ!

ನಾನು ಲಂಡನ್‌ಗೆ ಹೋದ ಕೆಲ ವರ್ಷಗಳು ಯಾವುದೇ ವಾಹನ ತೆಗೆದುಕೊಂಡಿರಲಿಲ್ಲ. ಅಷ್ಟು ಅನುಕೂಲವೂ ಇರಲಿಲ್ಲ. ಭವನ ತನ್ನ ಕಾಲ ಮೇಲೆ ನಿಂತರೆ ತಾನೆ ನನಗೆ ಅಲ್ಲಿ ಆಶ್ರಯ ಎನ್ನುವ ಭಾವನೆ. ದಲಾಲ್‌ಜೀ ಭವನದ ಅಧ್ಯಕ್ಷರಾಗಿ ಎರಡು ವರ್ಷಗಳು ಕಳೆದಿದ್ದವು. ಪ್ರತಿತಿಂಗಳೂ ಬರುವಂತೆ ಒಂದು ದಿನ ಭವನ್ಸ್ ಜರ್ನಲ್ ಪಾಕ್ಷಿಕ ಪತ್ರಿಕೆಗಳನ್ನು ಏರ್ ಇಂಡಿಯಾ ಆಫೀಸಿನಿಂದ ವಿದ್ಯಾಭವನಕ್ಕೆ ಹೊತ್ತು ತರುತ್ತಿದ್ದೆ. ೨೨ ಕೆ.ಜಿ. ತೂಕದ ಮೂಟೆ ಅದು.

ಶ್ರಮಪಟ್ಟು ಹೊತ್ತುಕೊಂಡು ಬಹಳ ನಿಧಾನವಾಗಿ ನಡೆದುಕೊಂಡು ಬರುತ್ತಿದ್ದೆ. ಅಲ್ಲಲ್ಲೇ ಇರುತ್ತಿದ್ದ ದೊಡ್ಡ ಕಸದ ಪೆಟ್ಟಿಗೆಗಳ ಮೇಲೆ ಇಳಿಸಿಕೊಂಡು ೧-೨ ನಿಮಿಷ ವಿಶ್ರಮಿಸಿಕೊಂಡು ಮತ್ತೆ ತಲೆಯ ಮೇಲೆ, ಹೆಗಲ ಮೇಲೆ ಇರಿಸಿಕೊಂಡು ಬರುತ್ತಿದ್ದೆ.

ಒಂದು ಸಂಜೆ ಆಕ್ಸ್‌ಫರ್ಡ್ ಸರ್ಕಸ್ ರಸ್ತೆಯಲ್ಲಿ ನಮ್ಮ ಛೇರ್‌ಮನ್ ದಲಾಲ್‌ಜೀ, ಕಾರಿನಲ್ಲಿ ಹೋಗುತ್ತಿದ್ದವರು ನನ್ನನ್ನು ಈ ಸ್ಥಿತಿಯಲ್ಲಿ ರಸ್ತೆಯಲ್ಲಿ ನೋಡಿದ ಕೂಡಲೆ ಹಾರ್ನ್ ಮಾಡಿದರು. ನಾನು ಮೂಟೆಯನ್ನು ಕೆಳಗಿಳಿಸಿದೆ. ಅವರು ಕಾರು ನಿಲ್ಲಿಸಿದರು. ನೆತ್ತಿಯ ಮೇಲೆ ಬೆವರು ಸುರಿಯುತ್ತಿತ್ತು. ಅಂಗವಸ್ತ್ರದಲ್ಲಿ ಒರೆಸಿಕೊಳ್ಳುತ್ತ ನಿಂತೆ. ದಲಾಲ್‌ಜೀಗೆ ಬಹಳ ಕೋಪ ಬಂದಿತ್ತು. ಆ ತನಕ ಮತ್ತು ಬಹುಶಃ ಆಮೇಲೆ, ನಾನು ಅಲ್ಲಿದ್ದ ೨೩ ವರ್ಷಗಳಲ್ಲಿ ಅವರಿಗೆ ಅಂಥ ಕೋಪ ಬಂದದ್ದನ್ನು ನಾನು ನೋಡಿಯೇ ಇರಲಿಲ್ಲ! ನಾನು ಹೀಗೆ ಜರ್ನಲ್‌ಗಳ ಪಾರ್ಸಲನ್ನು ಹೊತ್ತಕೊಂಡು ಬರುತ್ತಿದ್ದನ್ನು ನೋಡಿ ಅವರಿಗೆ ಬಹಳ ನೋವಾಯಿತು. ನನ್ನ ಮೇಲೆ ಅಸಾಧ್ಯ ಮರುಕ ಬಂದಿತು. ಕಾರಿನಿಂದ ಇಳಿದವರೆ 'ಮಾಥೂರ್‌ಜೀ ಏನಿದು? ಏನಿದು, ನೀವು ಮಾಡುತ್ತಿರುವ ಕೆಲಸ? ಹೀಗೂ ಮಾಡುತ್ತಾರೇನು? ಯಾಕೆ ಹೀಗೆಲ್ಲ ಮಾಡುವುದು ನೀವು? ಯಾರ ಸಹಾಯವನ್ನೂ ತೆಗೆದುಕೊಳ್ಳಲಿಲ್ಲ ಏಕೆ? ಛೇ, ಛೇ!' ಎಂದು ಬಹಳ ನೊಂದು ಕೊಂಡರು. ಅವರಿಗಾದ ಆ ನೋವು ನನ್ನ ಮೇಲೆ ಕೋಪವಾಗಿ ಪರಿಣಮಿಸಿತು. ಹಾಗೆಂದವರೇ ಆ ಪುಸ್ತಕಗಳ ಕಟ್ಟನ್ನು ತಮ್ಮ ಕಾರಿನೊಳಗಿಟ್ಟುಕೊಂಡು ನನ್ನನ್ನು ಕುಳಿತುಕೊಳ್ಳಲು ಹೇಳಿ ಭವನಕ್ಕೆ ಕರೆದು ತಂದರು. ನಾನು ಅಲ್ಲಿ ಇಳಿದ ಮೇಲೆ, 'ಮಾಥೂರ್‌ಜೀ, ಇದೇ ಕೊನೆ, ಇನ್ನು ಮೇಲೆ ಹೀಗೆಲ್ಲ ಮಾಡಬಾರದು ನೀವು... ತಿಳಿಯತಲ್ಲ?' ಎಂದರು. ನಾನು ಅವರ ಮನಸ್ಸು, ಭಾವನೆಯನ್ನು ಅರ್ಥಮಾಡಿಕೊಂಡು, ಹಾಗೆ ಮಾಡುವುದಿಲ್ಲ ಎನ್ನುವವನಂತೆ ಕೃತಜ್ಞತೆಯಿಂದ ತಲೆಯಾಡಿಸಿದೆ. ಇದು ದಲಾಲ್‌ಜೀ ತಮ್ಮವರನ್ನು ನೋಡಿಕೊಳ್ಳುತ್ತಿದ್ದ ರೀತಿ!!

'ಮಾಥೂರ್ ಜೀ'

ನಾನು ಮೊದಲಿನಿಂದಲೂ ನನ್ನ ಹೆಸರನ್ನು ಇನಿಷಿಯಲ್ಸ್ ನೊಡನೆ (initials) ಬರೆಯುವುದಿತ್ತು, ಎಂ.ಆರ್. ಕೃಷ್ಣಮೂರ್ತಿ ಎಂದು. ಮತ್ತೂರು ರಾಮಕೃಷ್ಣಯ್ಯ ಕೃಷ್ಣಮೂರ್ತಿ ಎನ್ನುವುದು ಪೂರ್ತಿ ಹೆಸರಾಗಿತ್ತು. ಹಿಂದೆ ನಾನು 'ತಾಯಿನಾಡು'ಪತ್ರಿಕೆಗೆ ಬರೆಯುತ್ತಿದ್ದಾಗ ಇದೇ ಹೆಸರಿನಲ್ಲಿ ಬರೆಯುತ್ತಿದ್ದೆ. ಆಗ 'ಕನ್ನಡದ ಆಸ್ತಿ' ಎನಿಸಿರುವ ಮಾಸ್ತಿಯವರು 'ಜೀವನ' ಪತ್ರಿಕೆ ನಡೆಸುತ್ತಿದ್ದರು. ಅದು ಒಂದು ಮಾಸಪತ್ರಿಕೆಯಾಗಿತ್ತು. ಅದರಲ್ಲಿ ಹಲವಾರು ಕತೆಗಳೂ ಬರುವುದಿತ್ತು. ಪತ್ರಿಕೆ ಜನಪ್ರಿಯವೂ ಆಗಿದ್ದು , ಮಾಸ್ತಿಯವರು ವಿಶೇಷವಾಗಿ ತಾವೇ ಓದಿ ಆರಿಸಿದ ಕುತೂಹಕಾರಿ ಅರ್ಥಪೂರ್ಣ ಕತೆಗಳನ್ನು ಪ್ರಕಟಿಸುತ್ತಿದ್ದರು. ಹೀಗಿರಲು ತಮಿಳಿನ ಸುಬ್ರಹ್ಮಣ್ಯ ಭಾರತಿಯಾರ್ ಅವರು ಒಂದು ಕಾದಂಬರಿಯನ್ನು ಬರೆಯುತ್ತಿದ್ದು, ಅದನ್ನು ಪೂರ್ತಿ ಮಾಡದೆ ಮಧ್ಯದಲ್ಲೇ ವಿಧಿವಶರಾದರು. ಮಾಸ್ತಿಯವರಿಗೆ ಆ ಕಾದಂಬರಿ ಬಹಳ ಹಿಡಿಸಿತ್ತು. ಅವರು ನನಗೆ ಆ ಕಾದಂಬರಿಯನ್ನು ಕನ್ನಡಕ್ಕೆ ಅನುವಾದ ಮಾಡಿ ತರಲು ಹೇಳಿದರು. ಆ ಕಾದಂಬರಿ ಅರ್ಧಭಾಗ ಮಾತ್ರ ಇರುವುದು ನನಗೂ ಗೊತ್ತಿತ್ತು. ಅದಕ್ಕೆ ನಾನು "ಸರ್ ಅದು ಅರ್ಧವೇ ಇರುವುದು. ಅವರು ಪೂರ್ತಿ ಮಾಡಲೇ ಸಾಧ್ಯವಾಗಲಿಲ್ಲ. ಮಧ್ಯದಲ್ಲೇ ಕಾಲವಾದರು" ಎಂದೆ. "ಇರಲಿ, ಆದರೂ ಆ ಕಾದಂಬರಿ ಇರುವ ಅಷ್ಟನ್ನೇ ನೀನು ನನಗೆ ಅನುವಾದ ಮಾಡಿಕೊಡಪ್ಪಾ" ಎಂದರು. ಮಾಸ್ತಿಯವರ ಆಸಕ್ತಿ ಅಂಥದು. ಅದು ಸ್ವಾತಂತ್ರ್ಯ ಸಂಗ್ರಾಮದ ಕಥಾ ಹಂದರ, ಬಹಳ ಕುತೂಹಲಕಾರಿ ಯಾಗಿತ್ತು. ನಾನು ಅದರ ಮೊದಲ ಕಂತನ್ನು ಅನುವಾದ ಮಾಡಿ ಮಾಸ್ತಿಯವರಲ್ಲಿಗೆ ಹೋದಾಗ, ಅವರು ಅಲ್ಲಿ ಎಂ.ಆರ್. ಕೃಷ್ಣಮೂರ್ತಿ ಎನ್ನುವ ನನ್ನ ಹೆಸರಿದ್ದುದನ್ನು ನೋಡಿ "ನಿನ್ನ ಊರು ಮತ್ತೂರು ಅಲ್ಲವೇನಪ್ಪಾ?" ಎಂದರು. ಅದಕ್ಕೆ ನಾನು "ಹೌದು ಸರ್" ಎಂದೆ. "ಸರಿ ಮತ್ತೆ, ಮತ್ತೂರು ಕೃಷ್ಣಮೂರ್ತಿ ಎಂದು ನಿನ್ನ ಹೆಸರು ಇರಲಿ. ಊರಿನ ಹೆಸರು ಸೇರಿಸಿಕೋ" ಎಂದರು. ಯಾವ ಘಳಿಗೆಯಲ್ಲಿ ಅವರ ಬಾಯಿಂದ ಆ ಮಾತು ಬಂದಿತ್ತೋ , ನಾನೂ ಬೇರೆ ಯೋಚಿಸದೆ ಆಗಿನಿಂದಲೇ ಮತ್ತೂರು ಕೃಷ್ಣಮೂರ್ತಿ ಎಂದು ನನ್ನ ಹೆಸರಿಗೆ ನಮ್ಮ ಊರಿನ ಹೆಸರನ್ನು ಸೇರಿಸಿಕೊಂಡೆ.

ಹೀಗೆ 'ಎಂ.ಆರ್.ಕೃಷ್ಣಮೂರ್ತಿ', 'ಮತ್ತೂರು ಕೃಷ್ಣಮೂರ್ತಿ' ಯಾದದ್ದು! ನಾನು ಲಂಡನ್‌ಗೆ ಹೋದಾಗ ಅಲ್ಲಿನ ಸುಮಾರು ಜನ ನನ್ನ ಸಂಪರ್ಕಕ್ಕೆ ಬಂದವರು ಉತ್ತರಭಾರತದವರು. ಅಲ್ಲಿ ದಕ್ಷಿಣದ ಕಡೆಯವರೂ, ಕನ್ನಡದವರೂ ಹೆಚ್ಚಿಗೆ ಇಲ್ಲ. ಬಹುಶಃ ಇದ್ದರೂ ನನಗೆ ತಿಳಿದಿರಲಿಲ್ಲ. ಕನ್ನಡದವರ ವಿನಾ ಯಾರಿಗೂ ನಮ್ಮೂರ ಹೆಸರನ್ನು ಸರಿಯಾಗಿ ಹೇಳಲು ಬರುತ್ತಿರಲಿಲ್ಲ. ಇದರ ಜತೆಗೆ ಇಂಗ್ಲಿಷ್ ಅಕ್ಷರದ ಜೋಡಣೆಯ ಗೊಂದಲ. ನನಗೆ "ಮತ್ತೂರು ಕೃಷ್ಣಮೂರ್ತಿ ಎಂದು ಹೆಸರಿಟ್ಟುಕೋ" ಎಂದ ಮಾಸ್ತಿಯವರೇ ಮತ್ತೂರಿಗೂ ಸ್ಪೆಲಿಂಗ್ಸ್ ಹೇಳಿದ್ದರು 'MATHOORU' ಎಂದು! ನನ್ನ ಹೆಸರಿನ ಇಂಗ್ಲಿಷ್ ಸ್ಪೆಲ್ಲಿಂಗ್ಸ್‌ನ್ನು ಅಲ್ಲಿಯವರು ಸುಲಭವಾಗಿ 'ಮಾಥೂರ್' ಎಂದು ಹೇಳಿಬಿಡುತ್ತಿದ್ದರು. ಉತ್ತರ ಭಾರತದ ಕಾಯಸ್ಥರ ಕಡೆ 'ಮಾಥೂರ್' ಎನ್ನುವವರು ಬಹಳ. ಮೊದಲು ಮೊದಲಲ್ಲಿ ನಾನು ಎಲ್ಲರಿಗೂ ಸ್ಪೆಲ್ಲಿಂಗ್ಸ್ ಹೇಳಿ 'ಮತ್ತೂರು' ಇದು ನಮ್ಮ ಊರಿನ ಹೆಸರು ಎನ್ನುತ್ತಿದ್ದೆ. ಹೀಗೆ ಎಷ್ಟು ಜನಕ್ಕೆ ಎಂದು ಹೇಳುವುದು?? ಯಾರು ಹೆಸರನ್ನು ಓದಿದರೂ 'ಮಾಥೂರ್' ಎಂದು ಓದುತ್ತಿದ್ದರು. ಹಾಗೆಯೇ 'ಮಾಥುರ್'ಗೆ ಮರ್ಯಾದಾ ಸೂಚಕವಾದ 'ಜೀ'ಯನ್ನು ಸೇರಿಸಿ 'ಮಾಥೂರ್‌ಜೀ' ಎಂದು ಕರೆಯಲಾರಂಭಿಸಿದರು. ಅನಂತರ ನಾನು ಯಾರನ್ನೂ ತಿದ್ದುವ ಪ್ರಯತ್ನ ಮಾಡಲಿಲ್ಲ. 'Mathooru' ಸ್ಪೆಲ್ಲಿಂಗ್ಸ್‌ನಲ್ಲಿದ್ದ ಕೊನೆಯ ಅಕ್ಷರ ಯು(U)ವನ್ನು ತೆಗೆದುಹಾಕಿ, ಕೊನೆಗೆ 'Mathoor' ಎಂದು ಮಾಡಿಕೊಂಡೆ. ದಕ್ಷಿಣ ದೇಶದ ಬ್ರಾಹ್ಮಣರು, ಇವರು ಹೇಗೆ 'ಮಾಥೂರ್' ಆಗಲು ಸಾಧ್ಯ ಎಂದು ಕೆಲವರಿಗೆ ಅನ್ನಿಸಿರಲೂ ಬಹುದು. ಅದನ್ನು ಇಲ್ಲ ಎನ್ನಲಾರೆ. ಆದರೆ ಹಾಗೆ ಕೇಳಿದವರೂ ಇದ್ದರು.

ಶ್ರೀ ಬಿ.ಕೆ.ನೆಹರೂ, ನೆಹರೂ ಅವರ ಅಕ್ಕನ ಮಗ. ಅವರು ಬ್ರಿಟನ್ನಿನ ಹೈಕಮಿಷನರ್ ಆಗಿದ್ದರು. ಅವರು ವಿದ್ಯಾಭವನಕ್ಕೆ ಬಂದಾಗ ನಮ್ಮ ದಲಾಲ್‌ಜೀ ನನ್ನನ್ನು ಅವರಿಗೆ ಪರಿಚಯ ಮಾಡಿಕೊಡುತ್ತಾ ಇವರು ಭವನದ ಕಾರ್ಯನಿರ್ವಾಹಕ ನಿರ್ದೇಶಕರು, 'ಮಾಥೂರ್ ಕೃಷ್ಣಮೂರ್ತಿ' ಎಂದು ಹೇಳಿದರು. ಆ ದಿನ ಅವರಿಗೆ ಸ್ವಾಗತ ಕೊಟ್ಟಂತಹ ಆ ಸಂದರ್ಭದಲ್ಲಿ ನಾನು ವೇದ ಹೇಳಿದೆ. ಆಗ ನನ್ನ ಶೈಲಿ ನೋಡಿದ ಅವರು ನಾನು ದಕ್ಷಿಣ ಭಾರತದ ಬ್ರಾಹ್ಮಣನೆಂದು ಗ್ರಹಿಸಿದ್ದಾರೆ, ಅವರು ಅಂತಹ ಕುಶಾಗ್ರಮತಿ. ನಮ್ಮ ದಲಾಲ್‌ಜೀ "ಮಾಥೂರ್ ಕೃಷ್ಣಮೂರ್ತಿ" ಎಂದು ಹೇಳಿದಾಗ ಅವರು , "ಮಾಣೆಕ್, ಮಾಥೂರನು ಕೃಷ್ಣಮೂರ್ತಿಯಾಗಲು ಸಾಧ್ಯವಿಲ್ಲ. ಕೃಷ್ಣಮೂರ್ತಿ ಮಾಥೂರ್ ಆಗಲೂ ಸಾಧ್ಯವಿಲ್ಲ, ಹಾಗಾದರೆ ಇದು ಆದದ್ದು ಹೇಗೆ?" ಎಂದರು! ದಲಾಲ್‌ಜೀಗೂ ಈ ವಿಷಯ ತಿಳಿಯದು. ಅವರು ನನ್ನನ್ನೇ ಕೇಳಿದರು. ಆಮೇಲೆ ನಾನು ದಲಾಲ್‌ಜೀಗೆ ವಿವರಿಸಿದೆ. ನನ್ನ ಊರು ಮತ್ತೂರು, ಅದರ ಸ್ಪೆಲ್ಲಿಂಗ್ಸ್ ಹೀಗೆ. ಆ ಇಂಗ್ಲಿಷ್ ಸ್ಪೆಲ್ಲಿಂಗ್ಸ್‌ನಲ್ಲಿ ಅದನ್ನು ಮಾಥೂರ್ ಎನ್ನಲೂಬಹುದು, ಇಲ್ಲಿಯವರು ಹಾಗೆನ್ನುತ್ತಾರೆ. ಆದರೆ ಉತ್ತರದವರಂತೆ ದಕ್ಷಿಣದಲ್ಲಿ ಮಾಥೂರ್ ಇಲ್ಲವಲ್ಲ ಎಂದು ಶ್ರೀ ಬಿ.ಕೆ. ನೆಹರೂರವರು ತಿಳಿದಿದ್ದಾರೆ. ಅದು ಬಹಳ ಮಟ್ಟಿಗೆ ಸರಿ ಎಂದೆ, ಈ ಗೊಂದಲವನ್ನು ಹೇಳಿದೆ. ಅದನ್ನೇ ಶ್ರೀ ಬಿ.ಕೆ. ನೆಹರೂರಲ್ಲೂ ಹೇಳಿದಾಗ ಅವರು "ಮತ್ತೆ ನೀವೇಕೆ ಆ ಹೆಸರನ್ನು ಸರಿಮಾಡಿ ಹೇಳಲಿಲ್ಲ? ಹೇಳಬೇಕಿತ್ತು ನೀವು!" ಎಂದರು. ಅದಕ್ಕೆ ನಾನು "ಪರವಾಗಿಲ್ಲ ಬಿಡಿ ಸರ್, 'ಮತ್ತೂರು' ಎಂದರೆ ದಕ್ಷಿಣದವರು ದಾನ-ಕಾಣಿಕೆಗಳನ್ನು ಕೊಡುತ್ತಾರೆ. 'ಮಾಥೂರ್' ಎಂದರೆ ಉತ್ತರ ದೇಶದವರೂ ಕಾಣಿಕೆ ಕೊಡುತ್ತಾರೆ, ನಾನು ಉತ್ತರ ಭಾರತದವನೆಂದೇ ಭಾವಿಸಿ! ಹಾಗೆ ನಾನು ಸರಿಪಡಿಸಿ ಹೇಳ ಹೋದರೆ ಉತ್ತರದವರು ಕಾಣಿಕೆಗಳನ್ನು ಕೊಡದೆ ಇರಬಹುದು... ಖಂಡಿತಾ ಕಾಣಿಕೆ ದಾನಗಳನ್ನು ಕೊಡುವುದಿಲ್ಲ!" ಎಂದೆ. ನನ್ನ ಈ ಮಾತು ಅವರಿಗೆ ಬಹಳ ಖುಷಿ ಕೊಟ್ಟಿತು. "ಬಹಳ ಚತುರ ! ಬೇಷ್... ಹಾಗಾದರೆ ಹೆಸರು ಬದಲಿಸುವುದು ಬೇಡ. ಹಾಗೇ ಇರಲಿ ಬಿಡು...!" ಎಂದರು ತೃಪ್ತಿಯಿಂದ ! ಹೀಗೆ ಮಾಥೂರ್‌ಜೀ ಆದದ್ದು ನಾನು! ಅಲ್ಲಿನ ಜನ ಬಹಳ ಬಹಳ ಪ್ರೀತಿಯಿಂದ ಮಾಥೂರ್‌ಜೀ ಎಂದು ನನ್ನನ್ನು ಹಚ್ಚಿಕೊಂಡರು, ಪ್ರೀತಿಸಿದರು, ಒಳಗೊಂಡು ತಮ್ಮವನನ್ನಾಗಿ ಮಾಡಿಕೊಂಡರು, ಬಹಳ ಗೌರವ-ಆದರ ತೋರಿಸಿ ಪರದೇಶದಲ್ಲಿಯೂ ನನಗೆ ಎಲ್ಲರೂ ಇದ್ದಾರೆ ಎಂಬ ನೆಮ್ಮದಿಯಿಂದ ಅಲ್ಲಿ ಸುಮಾರು ೨೩ ವರ್ಷಗಳಷ್ಟು ದೀರ್ಘ ಕಾಲ ನಾನು ವಿದ್ಯಾಭವನದ ಸೇವೆಯಲ್ಲಿ ಬಿಡುವಿಲ್ಲದೆ ತೊಡಗಿಕೊಂಡಿರುವಂತೆ ಮಾಡಿದರು. ಏಕೆಂದರೆ ನಾವು ಎಲ್ಲೇ ಇದ್ದರೂ ಪರಕೀಯ ಭಾವನೆ ಬಂದುಬಿಟ್ಟರೆ ಹೆಚ್ಚಿಗೆ ದಿವಸಗಳು ಅಲ್ಲಿ ಕೆಲಸ ಮಾಡುವುದು ಅಸಾಧ್ಯ. ಭವನದಲ್ಲಿ ನನ್ನ ಬಹಳ ವರ್ಷಗಳ ಸೇವೆಗೆ ಅಲ್ಲಿನವರ ಪ್ರೋತ್ಸಾಹ , ಪ್ರೀತಿ-ವಿಶ್ವಾಸಗಳೇ ಕಾರಣ!!

ಡ್ರೈವಿಂಗ್ ಟೆಸ್ಟ್

ನಾನು ಭಾರತದಲ್ಲಿ ಕಾರು ಡ್ರೈವಿಂಗ್ ಕಲಿತಿದ್ದೆನಾದರೂ, ಲಂಡನ್ನಿಗೆ ಹೋದಾಗ ನಾನು ಡ್ರೈವಿಂಗ್ ಲೈಸೆನ್ಸ್ ಪಡೆಯುವುದು ಅವಶ್ಯವಾಗಿದ್ದಿತು. ನಾನು ಡ್ರೈವಿಂಗ್ ತರಬೇತಿ ತರಗತಿಗೆ ಸೇರಿಕೊಂಡೆ. ಅಲ್ಲಿನ ರಸ್ತೆಗಳಲ್ಲಿ ಪಾಲಿಸಬೇಕಾದ ಟ್ರಾಫಿಕ್ ನಿಯಮಗಳು ಬಹಳ ಶಿಸ್ತಿನವು. ಇಲ್ಲಿನಂತೆ ಅಲ್ಲ. ಹಾಗೆಂದು ನಾನು ನಮ್ಮ ಭಾರತದಲ್ಲಿನ ಟ್ರಾಫಿಕ್ ವ್ಯವಸ್ಥೆಯನ್ನು ಖಂಡಿಸುತ್ತಿದ್ದೇನೆ ಎಂದು ಅರ್ಥವಲ್ಲ. ಆದರೆ ಈ ವಿಷಯದಲ್ಲಿ ನಾವು ಅವರಿಂದ ಕಲಿಯಬೇಕಾದದ್ದು ಬಹಳ ಇದೆ. ನಾನು ಇಲ್ಲಿಯೂ ೪೦ ವರ್ಷಗಳನ್ನು ಸವೆಸಿದ್ದೆನಷ್ಟೆ? ಬ್ರಿಟನ್ನಿನಲ್ಲಿ ೨೪ ವರ್ಷಗಳನ್ನು ಕಳೆದಿದ್ದೇನೆ. ನನಗೆ ಇಲ್ಲಿಯ- ಅಲ್ಲಿಯ ಪರಿಚಯ ಸುಮಾರಾಗಿದೆ. ನಮ್ಮಲ್ಲಿ ಆಗುವ ಟ್ರಾಫಿಕ್ ಧಾವಂತಗಳು ಅಲ್ಲಿಲ್ಲ. ಅಲ್ಲಿ ಬಹಳ ವಿರಳ. ನಿಯಮವನ್ನು ಶಿಸ್ತಾಗಿ ಪಾಲಿಸುವ ಆ ಜನಕ್ಕೆ

ಪಾದಚಾರಿಗಳೆಂದರೆ ಎಲ್ಲಿಲ್ಲದ ಗೌರವ. ತಾವು ಎಷ್ಟೇ ವೇಗದಲ್ಲಿರಲಿ ಅವರ ಬಗ್ಗೆ ಕಾಳಜಿ ಕಡಮೆ ಆಗದು. ಜನ ಓಡಿಯಾಡುವ ಕಡೆ, ಸಿಟಿ ಪ್ರದೇಶದಲ್ಲಿ ಕಾರಿನ ವೇಗದ ಮಿತಿ... ದಾಟುವಂತಿಲ್ಲ. ಪಾದಚಾರಿಗಳು ಜೀಬ್ರಾ ಕ್ರಾಸಿಂಗ್‌ನ ಮೇಲೆ ಕಾಲಿಟ್ಟಕೂಡಲೆ ಕಾರುಗಳು ಥಟ್ಟನೆ ನಿಲ್ಲುತ್ತವೆ. ಅವರು ರಸ್ತೆ ದಾಟಿ ಹೋಗುವ ತನಕ ಕಾದಿದ್ದು, ಅನಂತರ ಮುಂದಕ್ಕೆ ಹೊರಡುತ್ತವೆ. ಅದೇ ನಮ್ಮಲ್ಲಿ, ನಮಗೆ ಪಾದಚಾರಿಗಳು ಎಂದರೆ ಲೆಕ್ಕವೇ ಇಲ್ಲ. ಅವರೆಲ್ಲಿ ದಾಟಲು ಪ್ರಾರಂಭಿಸುವರೋ ಎಂದು ದೂರದಿಂದಲೇ ಹಾರನ್ ಮಾಡಿಕೊಂಡು ನಮ್ಮ ವಾಹನ ನುಗ್ಗಿಸುವ ಜನ ನಾವು. ಅದಕ್ಕೆ ಅಪಘಾತಗಳು ಅಷ್ಟು ಹೆಚ್ಚು ನಮ್ಮಲ್ಲಿ. ಮಾತು ಇತ್ತ ಹೊರಳಿದಾಗ ಈ ಬಗ್ಗೆ ನನಗೆ ಕಾಣುವ ಅಜಗಜಾಂತರವನ್ನು ಹೇಳದೆ ವಿಧಿಯಿಲ್ಲ!

೧೯೯೫ರ ಏಪ್ರಿಲ್ ೨ ರಂದು ಲಂಡನ್ನಿನಿಂದ ಮರಳಿದ ಕೂಡಲೆ ಭವನದ ಬೆಂಗಳೂರು ಕೇಂದ್ರದಲ್ಲಿ ಕೆಲಸ ಮಾಡಬೇಕೆಂದು ಭವನದ ಡೈರೆಕ್ಟರ್ ಜನರಲ್ ಶ್ರೀ ರಾಮಕೃಷ್ಣನ್ ಹೇಳಿದರು. ಶ್ರೇಷ್ಠ ನ್ಯಾಯಾಧೀಶ ಇ.ಎಸ್. ವೆಂಕಟರಾಮಯ್ಯನವರು ಛೇರ್ಮನ್ ಆದರು. ಓಡಾಟಕ್ಕೆಂದು ಕೈನೆಟಿಕ್ ಹೊಂಡಾ ಒಂದನ್ನು ಕೊಂಡೆ. ಎರಡು ವರ್ಷದಲ್ಲಿ ಮೂರು ಅಪಘಾತಗಳಾದವು. ಒಮ್ಮೆ ಆಟೋರಿಕ್ಷಾದವನು ನುಗ್ಗಿ ಬಂದ. ಮತ್ತೊಮ್ಮೆ ಗಮಕ ವಿದ್ವಾನ್ ಕೇಶವಮೂರ್ತಿಯವರೊಡನೆ ನಾನು ಸ್ಟುಡಿಯೋಗೆ ರೆಕಾರ್ಡಿಂಗ್‌ಗೆ ಹೋಗುತ್ತಿದ್ದಾಗ ಸಿಟಿ ಬಸ್ಸೊಂದು ಸಿಗ್ನಲ್ ಕೊಡದೆ ಬಂದು ಬೀಳಿಸಿತು. ಮೂರನೆಯ ಸಾರಿ, ಸದಾಶಿವನಗರದಿಂದ ಭವನಕ್ಕೆ ಹೋಗುತ್ತಿದ್ದಾಗ ಬಳ್ಳಾರಿ ರೋಡಿನ ಬಸ್‌ಸ್ಟ್ಯಾಂಡ್ ಎದುರಿನ ಜೀಬ್ರಾ ಲೈನಿನ ಹತ್ತಿರ ಮೂರು - ನಾಲ್ಕು ಮಂದಿ ದಾಟುತ್ತಿದ್ದರು. ತಕ್ಷಣ ನಿಲ್ಲಿಸಿದೆ. ಹಿಂದಿನಿಂದ ವೇಗವಾಗಿ ಬರುತ್ತಿದ್ದ ಕಾರೊಂದು ಡಿಕ್ಕಿ ಹೊಡೆದು ಉರುಳಿಸಿತು. ಎಚ್ಚರವಾದದ್ದು ವೋಕ್‌ಹಾರ್ಟ್ ಆಸ್ಪತ್ರೆಯಲ್ಲಿ , ಆತ್ಮೀಯ ಡಾ. ಸತೀಶ್ ಅವರು ಪ್ರಥಮಚಿಕಿತ್ಸೆ ಕೊಟ್ಟ ಮೇಲೆ! ಎಲ್ಲರಲ್ಲೂ ದೇವರು ಇದ್ದಾನೆ ಎಂಬುದು ನಮ್ಮ ಧರ್ಮದ ತತ್ತ್ವ . ಯಾರಮೇಲೂ ಗೌರವ, ಕರುಣೆ , ಮೂಡದೆ ಇರುವುದಕ್ಕೆ ಇದುವೇ ಕಾರಣವೋ ಏನೋ ಎಂದು ಒಮ್ಮೊಮ್ಮೆ ಅನಿಸುತ್ತದೆ.

* * *

ನಾನು ಡ್ರೈವಿಂಗ್ ತರಗತಿಗೆ ಸೇರಿಕೊಂಡೆನಷ್ಟೆ! ಆ ಶಿಕ್ಷಣದಲ್ಲಿ ಪಾಸಾಗಬೇಕಿತ್ತು. ನಾನು ಎಷ್ಟು ಚೆನ್ನಾಗಿ ಡ್ರೈವ್ ಮಾಡಿದರೂ ಅವನು ತಲೆಯಾಡಿಸುತ್ತಿದ್ದ , ನಾನು ಫೇಲಾಗುತ್ತಿದ್ದೆ. ಹೀಗೆ ಎರಡು - ಮೂರು ಬಾರಿ ನಡೆಯಿತು. ಇದು ಏಕೆ ಹೀಗಾಗುತ್ತಿದೆ ಎಂದು ನನಗೆ ತಿಳಿಯಲೇ ಇಲ್ಲ . ನಾನು ಎಲ್ಲ ನಿಯಮಗಳನ್ನೂ ಸರಿಯಾಗಿ ಪಾಲಿಸುತ್ತಿದ್ದೆ. ನಿಧಾನವಾಗಿ ಕಾರನ್ನು ಚಲಿಸುತ್ತಿದ್ದೆ , ಹಾಗಾದರೂ ನಾನೇಕೆ ಫೇಲು? ಮನಸ್ಸಿಗೆ ಪೆಚ್ಚೆನಿಸಿತು. ಹೀಗೆ ಆರು ಎಂಟು ತಿಂಗಳುಗಳ ಅಂತರದಲ್ಲಿ ನಡೆದ ಈ ಪರೀಕ್ಷೆ ಮತ್ತೆ ಆರು ತಿಂಗಳನಂತರ ನಾಲ್ಕೈದು ದಿವಸಗಳಲ್ಲೇ ನಡೆಯುವುದಿತ್ತು. ಆಗ ಅಕಸ್ಮಾತ್ ಆ ದಿನ ನಾನು .... ಡಾ. ವಿಜಯಲಕ್ಷ್ಮಿಯವರಿಗೆ ಫೋನು ಮಾಡಿದೆ. ಮಂಗಳೂರಿನವರು ಅವರು. ಒಳ್ಳೆಯ ವೈದ್ಯರು ಎಂದು ಖ್ಯಾತಿ ಗಳಿಸಿದ್ದರು. ಆ ಮಾತು ಈ ಮಾತು ಆಡುತ್ತ ನಾನು ಡ್ರೈವಿಂಗ್ ಪರೀಕ್ಷೆಯಲ್ಲಿ ಎರಡು ಸಲವೂ ಫೇಲಾದುದನ್ನು ಅವರಲ್ಲಿ ಹೇಳಿದೆ. ಆಗ ಅವರಿಗೆ ಬಹಳ ಆಶ್ಚರ್ಯ! 'ಎಂಥದು ಮತ್ತೂರ್‌ಜೀ? ಒಮ್ಮೆ ಹೇಳಿದರೆ ಸಾಕು, ನೀವು ಎಲ್ಲವನ್ನೂ ಅದೆಷ್ಟು ಚೆನ್ನಾಗಿ ಮಾಡುತ್ತೀರಿ, ಡ್ರೈವಿಂಗ್‌ನಲ್ಲಿ ನೀವು ಫೇಲಾಗುವುದೆಂದರೇನು? ಅಂದಹಾಗೆ ಡ್ರೈವ್ ಮಾಡುವಾಗ ರಿಯರ್ ವ್ಯೂ ಮಿರರ್ ಅನ್ನು ಆಗಾಗ ನೋಡುತ್ತೀರಷ್ಟೇ ?' ಎಂದು ಕೇಳಿದರು. (ಹಿಂದೆ ಬರುವ ವಾಹನಗಳನ್ನು ತೋರಿಸುವ, ಡ್ರೈವರ್‌ನ ಮುಂದೆ, ಮೇಲುಗಡೆ ಇರುವ ಕನ್ನಡಿ) 'ಇಲ್ಲ, ಆಗಾಗ ನೋಡಿಕೊಳ್ಳುತ್ತೇನೆ, ಅಷ್ಟೆ' ಎಂದೆ. 'ಅದಕ್ಕೇ ನೀವು ಹೀಗೆ ಫೇಲಾಗುತ್ತಿರುವುದು.... ಸಮಸ್ಯೆ ಇರುವುದೇ ಅಲ್ಲಿ....ಮತ್ತೂರ್‌ಜೀ ನೀವು ಇಲ್ಲಿ ಡ್ರೈವ್ ಮಾಡುವಾಗ ಎಂಟು-ಹತ್ತು ಸೆಕೆಂಡುಗಳಿಗೊಮ್ಮೆ ಆ ಕನ್ನಡಿಯನ್ನು ನೋಡುತ್ತಿರಬೇಕು. ಆ ಅಭ್ಯಾಸ ಹೇಗೂ ತಪ್ಪಬಾರದು. ಇಲ್ಲಿನ ವಾಹನಗಳು ಓಡಿಯಾಡುವ ರೀತಿ, ವೇಗ ನಿಮಗೆ ತಿಳಿದಿದೆ ತಾನೆ? ಹಾಗೆ ವಾಹನಗಳು ನಮ್ಮ ಕಾರಿನ ಹಿಂದೆ, ಆ ವೇಗದಲ್ಲಿ ಬರುವಾಗ ನಾವು ಸದೈವ ಕನ್ನಡಿ ನೋಡಿಕೊಳ್ಳುತ್ತ ಜಾಗರೂಕರಾಗಿ ಕಾರು ಚಲಿಸುವುದು ಆವಶ್ಯಕ. ಈ ದಿನ ನೀವು ಟೆಸ್ಟ್ ತೆಗೆದುಕೊಳ್ಳುವಾಗ ತಪ್ಪದೆ ಆ ಕನ್ನಡಿಯನ್ನೇ ಎಂಟು - ಹತ್ತು ಸೆಕೆಂಡುಗಳಿಗೊಮ್ಮೆ ನೋಡುತ್ತ ಕಾರು ಚಲಿಸಿ, ಪಾಸಾಗದಿದ್ದರೆ ನನಗೆ ಫೋನು ಮಾಡಬೇಡಿ!!' ಎಂದರು ಆಕೆ ಸವಾಲು ಹಾಕುವವರಂತೆ! ಅವರ ಮಾತಿನಲ್ಲಿದ್ದ ದೃಢತೆ, ಅನುಭವದ ಆಳವನ್ನು ನನಗೆ ಅಲ್ಲಗಳೆಯಲಾಗಲಿಲ್ಲ. ಅವರ ಮಾತಿನ ಮೇಲೆ ಸಂಪೂರ್ಣ ನಂಬಿಕೆ ಇಟ್ಟು , ಆ ದಿನ ಡ್ರೈವಿಂಗ್ ಟೆಸ್ಟಿಗೆ ಹೋದೆ. ಅವರು ಹೇಳಿದಂತೆ ಟೆಸ್ಟ್ ತೆಗೆದುಕೊಳ್ಳುವಾಗ ಕಾರಿನಲ್ಲಿ ಎಂಟು-ಹತ್ತು ಸೆಕೆಂಡುಗಳಿಗೊಮ್ಮೆ, ಆ ಕನ್ನಡಿ ನೋಡುತ್ತಿದ್ದೆ. ಎಂಟು-ಹತ್ತು ಸೆಕೆಂಡುಗಳ ಲೆಕ್ಕ ಹಾಕುವುದು ಹೇಗೆ? ಒಂದು ಎರಡು.... ಮೂರು..... ನಾಲ್ಕು..... ಹತ್ತು ಹೇಳುವಷ್ಟರಲ್ಲಿ ಹತ್ತು ಸೆಕೆಂಡುಗಳ ಸಮಯ ಆಗುತ್ತಿತ್ತು. ನನಗೆ ಆಗ ಅನಿಸಿತು ಒಂದು.... ಎರಡು.... ಮೂರು....ಛೇ, ಅದರ ಬದಲು ಒಮ್ಮೆ ಗಾಯತ್ರಿ ಮಂತ್ರವನ್ನು ವೇಗವಾಗಿ ಹೇಳಿಕೊಂಡು ಮುಗಿಸುವಾ ಎಂದು ನಿರ್ಧರಿಸಿ 'ಓಂ... ಭೂರ್ಭುವಸ್ಸುವಃ ತತ್ಸವಿತುರ್ವರೇಣಿಯಂ, ಭರ್ಗೋ ದೇವಸ್ಯ ಧೀಮಹಿ, ಧಿಯೋಯೋನಃ ಪ್ರಚೋದಯಾತ್'-ಒಮ್ಮೆ ಕನ್ನಡಿ ನೋಡುವುದು, ಮತ್ತೊಮ್ಮೆ ಕನ್ನಡಿ ನೋಡುವುದು ಹೀಗೆ ಸಾಗಿತು ನನ್ನ ಡ್ರೈವಿಂಗ್! ನನ್ನ ಪಕ್ಕದಲ್ಲಿ ಕುಳಿತಿದ್ದ ಪರೀಕ್ಷಕ ನಾನು ಹೀಗೆ ಹತ್ತು ಹದಿನೈದು

ನಿಮಿಷ ಕಾರು ಚಲಿಸುವುದನ್ನು ನೋಡಿ ಮೆಚ್ಚುಗೆಯ ನೋಟ ಬೀರುತ್ತ ನನ್ನ ಕಡೆ ನೋಡಿ ನಕ್ಕ.... ಪರೀಕ್ಷೆ ಮುಗಿಯಿತು! ನಾನು ಕಾರಿನಿಂದ ಕೆಳಗಿಳಿಯುವವರೆಗೂ ಕಾಯದೆ, 'ಮಹಾಶಯರೇ! ತಾವು ಪರೀಕ್ಷೆಯಲ್ಲಿ ಪಾಸಾಗಿದ್ದೀರಿ ಎಂದು ಹೇಳಲು ನನಗೆ ಸಂತೋಷ ವಾಗುತ್ತಿದೆ....' ಎಂದ. ಅವನ ಮಾತು ಕೇಳಿ ನನಗೂ ಖುಷಿಯಾಗಿತ್ತು. ಅಂತೂ ಹೀಗೆ ಶ್ರೀಮತಿ ವಿಜಯಲಕ್ಷ್ಮಿಯವರ ಕಿವಿಮಾತು ಸರಿಯಾಗಿ ಕೆಲಸ ಮಾಡಿತ್ತು.

ಲಾರ್ಡ್ ಥಾಮ್ಸನ್ ಆಫ್ ಫ್ಲೀಟ್

ಲಾರ್ಡ್ಸ್ ಥಾಮ್ಸನ್ ಆಫ್ ಫ್ಲೀಟ್ ಎನ್ನುವವರು ಬ್ರಿಟನ್ನಿನ ವಿಖ್ಯಾತರಲ್ಲಿ ಒಬ್ಬರು . 'ಸನ್ ಆಫ್ ಎ ಬಾರ್ಬರ್' ಎಂದೇ ತಮ್ಮನ್ನು ಹೇಳಿಕೊಳ್ಳುವ ಲಾರ್ಡ್ ಥಾಮ್ಸನ್ ಅವರಿಗೆ ಹದಿನಾರನೇ ವಯಸ್ಸಿನಿಂದಲೇ ದೃಷ್ಟಿದೋಷ ಪ್ರಾರಂಭವಾಗಿ ಕೆನಡಾದಲ್ಲಿ ಕೆಲಸ ಸಿಕ್ಕಲಿಲ್ಲ. ವಿಧವೆ ತಾಯಿಯನ್ನು ಬಹಳವಾಗಿ ಗೌರವಿಸುತ್ತಿದ್ದ ಲಾರ್ಡ್ ಥಾಮ್ಸನ್ನರು ತಮ್ಮ ಬಡತನದಲ್ಲಿ ಮಾತುಕೊಟ್ಟರಂತೆ-'ನನ್ನ ಅರುವತ್ತನೇ ವರ್ಷಕ್ಕೆ ನಾನು ಕೋಟ್ಯಧಿಪತಿ ಆಗುವೆ'ಎಂದು! ತಲೆಯ ಮೇಲೆ ಪತ್ರಿಕೆಗಳನ್ನು ಹೊತ್ತು ಮನೆಮನೆಗೆ ಪತ್ರಿಕೆಗಳನ್ನು ಕೊಡುತ್ತಿದ್ದ ಅವರು ತಮ್ಮ ಸತತ ಪ್ರಯತ್ನದಿಂದ ನಲವತ್ತೈದನೆಯ ವಯಸ್ಸಿಗೆ ಹೌಸ್ ಆಫ್ ಲಾರ್ಡ್ಸ್‌ನ ಸದಸ್ಯರಾದರು. ಈ ದಿನ ಅವರು 'ಲಂಡನ್ ಟೈಂಸ್' ಪತ್ರಿಕೆಯ ಮಾಲೀಕರು, ೧೨೨ ವಾರ್ತಾ ಪ್ರಚಾರ ಸಂಸ್ಥೆಗಳ ಮಾಲೀಕರು ಕೆನಡಾದ ಇವರು. ಅಲ್ಲಿ ಲಾರ್ಡ್ ಥಾಮ್ಸನ್ ಆಫ್ ಫ್ಲೀಟ್ ಅಸಾಮಾನ್ಯ ವ್ಯಕ್ತಿ. ದೆಹಲಿಯ ಸುಪ್ರಸಿದ್ಧ ಥಾಮ್ಸನ್ ಪ್ರೆಸ್‌ನ ಮಾಲೀಕರು ಶ್ರೀ ಅರುಣ್‌ಪೂರಿ. ವಿಜಯಬ್ಯಾಂಕಿನ ಛೇರ್‌ಮನ್ ಶ್ರೀ ಸುಂದರರಾಮಶೆಟ್ಟರು ಶ್ರೀ ಪೂರಿಯವರನ್ನು ನಮಗೆ ಪರಿಚಯ ಮಾಡಿಕೊಟ್ಟರು. ಲಂಡನ್‌ನಲ್ಲಿ ನಾವು ಬ್ಯಾಂಕಿನ ಖಾತೆಯನ್ನು ತೆಗೆಯಬೇಕೆಂದರೆ ಯಾರಾದರೂ ನಮ್ಮ ಬಗೆಗೆ ತಿಳಿದವರಿದ್ದು , ಅವರ ಬೆಂಬಲ ನಮಗಿರಬೇಕು. ವಿದ್ಯಾಭವನವು ಅಲ್ಲಿನ ಬ್ಯಾಂಕಿನಲ್ಲಿ ತನ್ನ ಖಾತೆಯನ್ನು ತೆರೆಯಲು, 'ಭಾರತೀಯ ವಿದ್ಯಾಭವನ'ವನ್ನು ಬ್ಯಾಂಕಿನವರಿಗೆ ಪರಿಚಯಿಸಿ, ತಮ್ಮ ಬೆಂಬಲ ಸೂಚಿಸಿದವರು ಸುಂದರರಾಮಶೆಟ್ಟಿಯವರಿಗೆ ಪರಿಚಯವಿದ್ದ ಲಾರ್ಡ್ ಥಾಮ್ಸನ್ ಆಫ್ ಫ್ಲೀಟ್ ಅವರೇ. ೩೫, ಗ್ರೇಟ್ ರೆಸೆಲ್ಸ್ ಸ್ಟ್ರೀಟ್‌ನಲ್ಲಿದ್ದ ಚಿಕ್ಕ ಕೋಣೆಯಲ್ಲಿ ದೀಪ ಬೆಳಗಿಸಿ ಭವನಕ್ಕೆ ಮೊದಲ 'ಬೆಳಕು' ತಂದವರು! ನನಗೆ ಆ ಹಿರಿಯರನ್ನು ನೋಡುವುದೇ ಒಂದು ಭಾಗ್ಯವಾಗಿದ್ದಿತು. ಅಷ್ಟೇ ಅಲ್ಲದೇ ಲಾರ್ಡ್ ಥಾಮ್ಸನ್‌ರು ವಿದ್ಯಾಭವನದ ಪೋಷಕರೂ ಆದರು. ತಾವು ಪೋಷಕರಾದ ಅನಂತರ ಭವನದ ಬಗೆಗೆ ಸಾಕಷ್ಟು ಆಸಕ್ತಿ ವಹಿಸಿದರು, ಕಾಳಜಿ ತೋರಿಸಿದರು. ಭವನವು ೩೭, ನ್ಯೂ ಆಕ್ಸ್‌ಫರ್ಡ್ ರಸ್ತೆಯಲ್ಲಿದ್ದಾಗ ಅವರು ಅಲ್ಲಿಗೆ ಎರಡುಬಾರಿ ಬಂದಿದ್ದರು. ಅಷ್ಟೇ ವಿಶಾಲ ಹೃದಯಿಗಳು ಅವರು! ಅವರು ಅಲ್ಲಿಗೆ ಬರುವುದೆಂದರೆ, ನಮ್ಮ ಪ್ರೀತಿಯ ಪ್ರಧಾನಮಂತ್ರಿಗಳು ನಮ್ಮಂತಹವರ ಮನೆಗೆ ಬಂದಂತೆ! ಅಂಥ ಗೌರವ, ಘನತೆ, ಪ್ರತಿಷ್ಠೆ ಅವರದು !

೩೭, ನ್ಯೂ ಆಕ್ಸ್‌ಫರ್ಡ್ ರಸ್ತೆಯಲ್ಲಿ, ಭವನದ ಪ್ರಗತಿ ಸಾಗುತ್ತಿದ್ದಂತೆ, ಲಾರ್ಡ್ ಥಾಮ್ಸನ್ ಆಫ್ ಫ್ಲೀಟ್ ಪೋಷಕರಾದದ್ದು ನಮಗೆ ಬಹಳ ಸಹಾಯ ಮಾಡಿತ್ತು. ಕೆನಡಾ, ಅಮೇರಿಕಾ, ಹಾಂಗ್‌ಕಾಂಗ್, ಭಾರತ ಎಲ್ಲೆಡೆಯಲ್ಲಿ ತಮ್ಮ ಪತ್ರಿಕೆಗಳ ದೊಡ್ಡ ಜಾಲವನ್ನು ಹೊಂದಿದ್ದ ಇವರು ಸುದ್ದಿ ಪತ್ರಿಕೆಗಳ ಸಂಸ್ಥೆಯ ಅಧ್ಯಕ್ಷರೂ ಆಗಿದ್ದರು. ಲಾರ್ಡ್ ಥಾಮ್ಸನ್‌ರು ತಾವು ಭವನದ 'ಪೋಷಕ'ರಾದನಂತರ, 'ಸಂಡೇ ಟೈಮ್ಸ್' ಪತ್ರಿಕೆಯಲ್ಲಿ ನನ್ನ ಸಂದರ್ಶನ ಮಾಡಿ, ಪ್ರಕಟಿಸಿ, ಭವನದ ಚಟುವಟಿಕೆಗಳಿಗೆಲ್ಲ ಭಾರೀ ಪ್ರಚಾರಕೊಟ್ಟರು. ಅಲ್ಲಿಂದ ನಮ್ಮ ಚಟುವಟಿಕೆಗಳು ತ್ವರಿತಗತಿಯಲ್ಲಿ ಸಾಗತೊಡಗಿದವು. ಅದು ಹೇಗೆ ಎಂದರೆ, ನಾವು ಲಂಡನ್ ನಗರವನ್ನು ಬಿಟ್ಟು, ಹೊರವಲಯಗಳಿಗೆ ಹೋದಾಗ ಅಲ್ಲಿನ ಮೂರು-ನಾಲ್ಕು ಮನೆಗಳಿರುವ ಪ್ರದೇಶಗಳಲ್ಲೂ ಸಹ ನಮ್ಮನ್ನು ನೋಡಿ , 'ಓಹೋ, ನಾವು ನಿಮ್ಮ ಹಾಗೂ ನಿಮ್ಮ ಭವನದ ಬಗ್ಗೆ ಓದಿದ್ದೇವೆ' ಎಂದು ಮುಖವರಳಿಸಿ ಹೇಳುತ್ತಿದ್ದರು. ದುಡ್ಡಿನ ಅಗತ್ಯ ಬಹಳ ಇದ್ದಾಗ ವೈಯಕ್ತಿಕವಾಗಿ ಸಾಕಷ್ಟು ದೊಡ್ಡ ಮೊತ್ತವನ್ನು ದಾನವಾಗಿ ಕೊಟ್ಟಿದ್ದವರು ಶ್ರೀ ರವಿ ಅವರು. ಅವರು ಸುಮಾರು ೫,೦೦೦ ಪೌಂಡುಗಳನ್ನು ಭವನಕ್ಕಾಗಿ ಕೊಟ್ಟ ಮೊದಲಿಗರು!

೧೯೭೫ರಲ್ಲಿ ಎಂ.ಪಿ. ಷಾ ಲೈಬ್ರರಿಯನ್ನು ತೆರೆದ ನಾವು , ಸುಮಾರು ೨೫೦ ಪುಸ್ತಕಗಳನ್ನು ಲೈಬ್ರರಿಯಲ್ಲಿಟ್ಟಿದ್ದು ಸ್ಥಳಾಭಾವ ಹೆಚ್ಚಾಗುವಂತೆ ಮಾಡಿತ್ತು. ಆದರೂ ಐದು ವರ್ಷಗಳು ಕಳೆಯುವ ತನಕ ಮತ್ತೆಲ್ಲೂ ಹೋಗುವಂತಿರಲಿಲ್ಲ. ಆದರೂ ೧೯೭೮ಕ್ಕೆ ಮೂರು ವರ್ಷಗಳು ಮಾತ್ರ ಬಾಕಿ ಇದ್ದುವಷ್ಟೆ? ಈಗ ಇರುವ, ಪುಸ್ತಕ ಚಟುವಟಿಕೆಗಳನ್ನು ನಡೆಸಲೂ ಜಾಗ ಬೇಕಾಗಿತ್ತು. ಆಗ ನೆಹರೂ ಕ್ಯಾಬಿನೆಟ್‌ನಲ್ಲಿ ಮಂತ್ರಿಯಾಗಿದ್ದು , ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡಿದ್ದು, ಸಾಕಷ್ಟು ಜನಪ್ರಿಯರೂ ಪ್ರಸಿದ್ಧರೂ ಆಗಿದ್ದ ಶ್ರೀ ಜಯಶುಕಲಾಲ್ ಹಾಥಿಯವರು ಲಂಡನ್ನಿಗೆ ಬರುವವರಿದ್ದರು. ವಿದ್ಯಾಭವನದ ಉಪಾಧ್ಯಕ್ಷರ ಜತೆಗೆ ಲಂಡನ್ ಕೇಂದ್ರ ತೆರೆಯುವಾಗ, ಭಾರತದಿಂದ ಬಂದ ಡೆಲಿಗೇಷನ್‌ನಲ್ಲಿ ಅವರೂ ಒಬ್ಬರಿದ್ದರು. ಅವರಿಗೆ ನಮ್ಮ ಲಂಡನ್ ಕೇಂದ್ರದ ಬಗ್ಗೆ ವಿಶೇಷ ಪ್ರೀತಿ , ಆಸಕ್ತಿ . ಈಗ ನಾನು ಅವರನ್ನು ಕರೆಸಿಕೊಳ್ಳುವುದು ಅನಿವಾರ್ಯವಾಗಿತ್ತು. ನಿಧಿ ಸಂಗ್ರಹಣೆಗೆ ಅವರ ಸಹಾಯ ಅಗತ್ಯವಾಗಿದ್ದಿತು. ಶ್ರೀ ರಾಮಕೃಷ್ಣನ್‌ಜಿಯು ಮದ್ರಾಸಿನಿಂದ ಬಂದು ನಮ್ಮನ್ನು ಸೇರಿಕೊಳ್ಳುವವರಿದ್ದರು. ನಾವು ಮೂವರೂ ಇಡೀ ಗ್ರೇಟ್ ಬ್ರಿಟನ್ನಿಗೆ ನಿಧಿಸಂಗ್ರಹಣೆಗೆಂದು ಹೊರಡುತ್ತಿದ್ದೆವು. ಆಗ ಕಮಿಷನ್ ಫಾರ್ ರೇಸಿಯಲ್ ಈಕ್ವಾಲಿಟಿ-

ಆಫೀಸಿನಲ್ಲಿ (ಈ ಆಫೀಸಿನಲ್ಲಿ ವಲಸೆ ಬಂದ ಸಂಸ್ಥೆಗಳಿಗೆ ಆತಿಥೇಯ ಸರ್ಕಾರ ದಾನ ಮಂಜೂರಾತಿ ಮಾಡುತ್ತದೆ) ಉನ್ನತ ಅಧಿಕಾರಿಯಾಗಿದ್ದ , ಈಸ್ಟ್ ಆಫ್ರಿಕಾದ ಕಡೆಯವರಾದ ಶ್ರೀ ನವನೀತ ಡೋಲಾಕಿಯಾ ಎನ್ನುವವರು ಭವನದ ಚಟುವಟಿಕೆಗಳಿಂದ ಬಹಳ ಸಂಪ್ರೀತರಾಗಿ ಸುಮಾರು ಹನ್ನೊಂದು ಸಾವಿರ ಪೌಂಡುಗಳ ನಿಧಿಯನ್ನು ಭವನಕ್ಕಾಗಿ ಉದಾರವಾಗಿ ಕೊಟ್ಟರು. ಆಗ ಅದು ಬಹಳ ದೊಡ್ಡ ಮೊತ್ತವಾಗಿತ್ತು. ಅವರಿಂದ ಭವನ ಸ್ವಲ್ಪ ಚೇತರಿಸಿಕೊಂಡಿತು.

'ಜಿ.ಡಿ. ಬಿರ್ಲಾರೊಡನೆ ಗಾಂಧೀಜಿಯ ಪತ್ರ ವ್ಯವಹಾರ'ದ ನಾಲ್ಕನೆಯ ಭಾಗ ಪ್ರಕಟವಾದಾಗ, ಜಿ.ಡಿ. ಬಿರ್ಲಾರು ವಿದ್ಯಾಭವನಕ್ಕೆ ಮತ್ತೂ ಹತ್ತಿರದವರಾದರು. ಆಗಲೂ ಅವರ ಜೊತೆಗಿದ್ದುದು ಅವರ ಅಣ್ಣನ ಮಗ ಮಾಧವ . ಇವರ ನಿಕಟ ಪರಿಚಯ ಆದುದು ೧೯೭೭ರ ಡಿಸೆಂಬರ್ ತಿಂಗಳು ಒಂದನೇ ತಾರೀಖು. ಸುಮಾರು ೨,೨೦೦ ಚದರಡಿಗಳ ೩೭, ನ್ಯೂ ಆಕ್ಸ್‌ಫರ್ಡ್ ರಸ್ತೆಯ ಕಟ್ಟಡದ ಭೋಗ್ಯದ ಅವಧಿ ಮುಗಿದು , ಆ ಭಾಗ ಬಿಟ್ಟು ನಮ್ಮ ವಾಸ್ತವ್ಯಕ್ಕೆ ನಾವು ಬೇರೆ ವ್ಯವಸ್ಥೆ ಮಾಡಕೊಳ್ಳಬೇಕಿತ್ತು. ಬೇರೆ ಜಾಗ ನೋಡುವಾ ಎಂದರೆ ಸಾಕಷ್ಟು ದುಡ್ಡಿರಲಿಲ್ಲ. ಬರುವ ಹಣ , ತಿಂಗಳ ಖರ್ಚನ್ನು ಹೇಗೋ ತೂಗಿಸಿಕೊಂಡು ಹೋಗುವ ಶಕ್ತಿಯನ್ನು ಮಾತ್ರ ಕೊಟ್ಟಿದ್ದಿತು. ಭವನದಲ್ಲಿ ಒಳ್ಳೊಳ್ಳೆಯ ಕಾರ್ಯಕ್ರಮಗಳಾದಾಗ ಜನರು ಬಹಳ ಸಂಖ್ಯೆಯಲ್ಲಿ ಬಂದು ಪಾಲ್ಗೊಳ್ಳುತ್ತಿದ್ದರು... ಆದರೆ ಎಲ್ಲರಿಂದಲೂ ಹಣವನ್ನು ನಿರೀಕ್ಷಿಸಲಾಗುತ್ತಿರಲಿಲ್ಲ. ಏನೇ ಆದರೂ ಪರದೇಶದಲ್ಲಿ ನಾವು ಬೇರೆ ಯಾವ ಹಕ್ಕುಗಳನ್ನೂ ಕೇಳುವ ಹಾಗಿಲ್ಲ , ಏನಿದ್ದರೂ ಅರ್ಹತೆಯನ್ನು ಸಾಬೀತು ಮಾಡಿ 'ನಮಗೆ ದಾನ ಕೊಡಿ' ಎಂದು ಸರ್ಕಾರವನ್ನೇ ಬೇಡಿಕೊಳ್ಳಬೇಕು . ಅಲ್ಲಿ ಅಲ್ಪಸಂಖ್ಯಾತರನ್ನು ಇಲ್ಲಿ ನಾವು ನೋಡಿಕೊಳ್ಳುವಂತೆ ಬಹಳ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ! ಹಾಗೆ ನೋಡುವುದಕ್ಕೆ ನಮಗೆ ನಮ್ಮ ಸಂಸ್ಥೆಯ ಮಾತೃಸರ್ಕಾರದ ಬೆಂಬಲವೂ ಸಾಕಷ್ಟು ಇರಬೇಕು. ಅದು ಅಭಿಮಾನದಿಂದ ನಮಗೆ ಪ್ರೋತ್ಸಾಹ ನೀಡಿದರೆ,'ಈ ಸಂಸ್ಥೆಗೆ ಭಾರತ ಸರ್ಕಾರದ ಕೃಪೆ ಇದೆ' ಎಂದು ಗಮನಿಸಿ , ಅಲ್ಲಿನ ಬ್ರಿಟನ್ನಿನ ಸರ್ಕಾರವು ನಮಗೆ ಸಹಾಯ ಮಾಡುವ ಸಾಧ್ಯತೆಯಿತ್ತು. ವಿದ್ಯಾಭವನದ ಮುಖ್ಯ ಕಛೇರಿ ಭಾರತದಲ್ಲಿದ್ದು , ಅದು ಸಾಕಷ್ಟು ಜನಪ್ರಿಯವಾಗಿದ್ದುದರಿಂದ ಭಾರತದಿಂದ ಬಂದ ಮಂತ್ರಿಗಳೆಲ್ಲರಿಗೂ ವಿದ್ಯಾಭವನದ ಪರಿಚಯ ಸಾಕಷ್ಟಿತ್ತು. ನಮಗೆ ಇದೊಂದು ಧನಾತ್ಮಕ ಅಂಶವಾಗಿತ್ತು. ಆದರೂ ನಾವು ನಿರೀಕ್ಷಿಸಿದಷ್ಟು ಕೃಪಾಪೋಷಣೆ ಸಿಕ್ಕಿರಲಿಲ್ಲ. ಆಗ ಭಾರತ ಸರ್ಕಾರ ವಿದ್ಯಾಭವನದ ಕೇಂದ್ರಕ್ಕೆ ತನ್ನ ಸಹಾಯಹಸ್ತ ನೀಡಿ , 'ಗ್ರಾಂಟ್ಸ್ (ದಾನ) ಕೊಟ್ಟಿತ್ತು. ಜತೆಗೇ ಕರ್ನಾಟಕ ರಾಜ್ಯ ಸರ್ಕಾರವೂ ಕೂಡ!! ಆಗಿನ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು, ವಿಶೇಷ ಅಕ್ಕರೆ ತೋರಿ ಲಂಡನ್ ಕೇಂದ್ರಕ್ಕೆ ಉದಾರವಾಗಿ ದಾನ ಕೊಟ್ಟರು. ಅಲ್ಲಿನ ವ್ಯವಸ್ಥೆ ನೋಡಿಕೊಳ್ಳುತ್ತಿರುವವರು ನಾವು, ಎಂದರೆ ನಮ್ಮ ಕನ್ನಡಿಗರು ಎನ್ನುವ ಅಭಿಮಾನದಿಂದ ಅವರು ಕೊಟ್ಟ ಆ ದಾನದಿಂದ ಸಣ್ಣ ರೂಮನ್ನು 'ಕರ್ನಾಟಕ ಭವನ' ಎಂದು ಹೆಸರಿಟ್ಟು ಕರೆದು, ಸಜ್ಜು ಮಾಡಿದೆವು.

ಭಾರತದಿಂದ ಬಂದವರೂ, ಅಲ್ಲಿ ಇಳಿದುಕೊಳ್ಳಬಹುದಿತ್ತು. ಅದರಲ್ಲೂ ಕರ್ನಾಟಕದಿಂದ ಬಂದವರಿಗೆ ವಿಶೇಷ ಆದ್ಯತೆ ಇರುತ್ತಿತ್ತು. ನಮ್ಮ ರಾಜ್ಯದಿಂದ ಬಂದ ಸಾಹಿತಿಗಳು , ಸರ್ಕಾರಿ ಅಧಿಕಾರಿಗಳು, ಕವಿಗಳು, ಕಲಾವಿದರು, ಯಾರೇ ಬಂದರೂ ನಾವು ಅವರಿಗೆ ಅಲ್ಲಿ ವ್ಯವಸ್ಥೆ ಮಾಡುತ್ತಿದ್ದೆವು. ನಮ್ಮ ಭವನದ ಕಮಿಟಿಯ ಬಹಳ ಗೌರವಾನ್ವಿತ ಸದಸ್ಯರಾದ ಡಾ. ಜಾನ್ ಮಾರ್‌ರವರು ತಾವೇ ಒಂದು ತಗಡಿನ ಮೇಲೆ 'ಕರ್ನಾಟಕ ಭವನ' ಎಂದು ಕೆತ್ತಿ ಆ ಕೋಣೆಗೆ ತೂಗು ಹಾಕಿದ್ದು - ಅದೂ ಬಹಳ ಅಭಿಮಾನಪೂರ್ವಕವಾಗಿ , ಇನ್ನೂ ನನಗೆ ಚೆನ್ನಾಗಿ ನೆನಪಿದೆ.

೨೨. ಮತ್ತಷ್ಟು ಸುಧಾರಣೆ

ಧ್ವನಿ ಸುರುಳಿ

ಕೇಂದ್ರ ರಾಜ್ಯ ಸರ್ಕಾರದ ಜತೆಗೆ , ಸ್ವಲ್ಪವೇ ಮೊತ್ತವಾದರೂ ಬಹಳ ಜನ ನಮ್ಮವರು ಸಹಾಯಾರ್ಥವಾಗಿ ಹಣಕೊಟ್ಟರು. ಪುಸ್ತಕ ವ್ಯಾಪಾರವೂ ಚೆನ್ನಾಗಿ ನಡೆದಿತ್ತು. ಈಗ ನಾನು ಒಂದು ಯೋಜನೆ ಹಾಕಿದೆ. ವೇದಕಾಲದ ಕೆಲವು ಪ್ರಾರ್ಥನೆ ಶಾಂತಿಮಂತ್ರಗಳನ್ನು ಇರಿಸಿ, ಆ ಆಣಿಮುತ್ತುಗಳನ್ನು ಎರಡು ಕ್ಯಾಸೆಟ್‌ಗಳಲ್ಲಿ ತರುವುದು, ಅದನ್ನು ಜನಕ್ಕೆ ಕೊಡುವುದು, ಭಾರತದ ಸಂಸ್ಕೃತಿಯ ಒಂದು ಮುಖದ ಪರಿಚಯ ಮಾಡಿಕೊಡುವುದು ಎಂದು ಯೋಚಿಸಿದೆ. ಹಣದ ಅಗತ್ಯವಿತ್ತು. ಇದೊಂದು ಪ್ರಯೋಗವಾಗಿತ್ತು. ಇದಕ್ಕೆ ಅಲ್ಲಿನ ಜನರ ಪ್ರತಿಕ್ರಿಯೆ ಹೇಗಿರುತ್ತದೆ ಎಂದು ನೋಡುವ ಕುತೂಹಲವೂ ಇತ್ತು. ಈ ಯೋಜನೆಗೆ ಆಗುತ್ತಿದ್ದ ವೆಚ್ಚ ಸುಮಾರು ೫೫೫೫ ಪೌಂಡುಗಳು. ಬಹಳ ಜನರ ಪರಿಚಯ ಅಲ್ಲಿ ನನಗೆ ಇತ್ತು. ಅಲ್ಲಿ ನಡೆದ ಸರ್ವಧರ್ಮ ಸಮ್ಮೇಳನಕ್ಕೆ ನಾನು ಹಿಂದೂ ಧರ್ಮದ ಪ್ರತಿನಿಧಿಯಾಗಿ ಹೋಗಿದ್ದೆ. ಆಗ ಅವರೆಲ್ಲ ವಿದ್ಯಾಭವನದ ಧ್ಯೇಯೋದ್ದೇಶಗಳ ಬಗ್ಗೆ ತಿಳಿದು ಬಹಳ ಸಂತೋಷ ವ್ಯಕ್ತಪಡಿಸಿದ್ದು, ಅದು ಆ ಜನರಿಗೆ ಬಹಳ ಇಷ್ಟವಾಗಿತ್ತು. ನಮ್ಮ ಭವನದಲ್ಲಿ 'ಭವನ್ ಮ್ಯಾನ್ಯುಯಲ್ ಆಫ್ ಫೇತ್' ಎನ್ನುವ ಪುಸ್ತಕ ಒಂದಿದೆ. ಅದರಲ್ಲಿ ಎಲ್ಲ ಧರ್ಮದ ಪ್ರಾರ್ಥನೆಗಳೂ ಇವೆ.

ಆ ಪುಸ್ತಕವನ್ನು ಅಲ್ಲಿ ಬಹಳ ಜನ ಮೆಚ್ಚಿಕೊಂಡರು. ಇದೆಲ್ಲದರ ಪ್ರಭಾವವೇ ನನ್ನ ಕ್ಯಾಸೆಟ್ ಯೋಜನೆಯಲ್ಲಿದ್ದಿತು. ಈ ದಿಶೆಯಲ್ಲಿ ಕೆಲಸ ಪ್ರಾರಂಭಿಸಿದೆ. ಆಯಾ ಧರ್ಮದ ಮುಖ್ಯಸ್ಥರನ್ನು ಅಂದರೆ, ಬುದ್ಧ ಧರ್ಮದ ಭಿಕ್ಷು, ಜ್ಯೂ ಧರ್ಮದ ರಬ್ಬೈ, ಮುಸ್ಲಿಮರ ಮುಲ್ಲಾ, ಜೈನರ ಮುಖ್ಯಸ್ಥರು, ಹಿಂದೂ ಧರ್ಮದ ಬಗ್ಗೆ ರಾಮಕೃಷ್ಣಾಶ್ರಮದ ಸಂನ್ಯಾಸಿಗಳು-ಹೀಗೆ ಅವರವರ ಧರ್ಮದಲ್ಲಿ ಉನ್ನತ ಸ್ಥಾನದಲ್ಲಿದ್ದವರನ್ನು ಭೇಟಿ ಮಾಡಿ, ಅವರಿಂದಲೇ ಅವರ ಧರ್ಮದ ಪ್ರಾರ್ಥನೆಯನ್ನು ಹೇಳಿಸಲು ಒಪ್ಪಿಸಿದೆ. ಮೊದಲು ಅವರು ಆ ಪ್ರಾರ್ಥನೆಯ ಅರ್ಥ ಏನೆಂದು ಚಿಕ್ಕದಾಗಿ ಹೇಳಿ ಅನಂತರ ಪ್ರಾರ್ಥನೆ ಮಾಡುವುದು. ಇಂಥ ಕ್ಯಾಸೆಟ್ಟುಗಳಿಗೆ ಬೆಲೆ ಬರುವುದೇ ಆಗ. ಯಾರು ಯಾರನ್ನೋ ಕರೆಸಿ, ಕಂಠ ಚೆನ್ನಾಗಿದೆ ಎಂದು ಹೇಳಿಸಿದರೆ ಅದು ಪರಿಣಾಮಕಾರಿಯಾಗಿರದು. ಈ ಕೆಲಸವು ಆಯಿತು. ಧ್ವನಿ ಮುದ್ರಣವಾದ ಕ್ಯಾಸೆಟ್ಟುಗಳು ಬಿಡುಗಡೆಗಾಗಿ ಕಾಯತೊಡಗಿದವು. ಸಮಯ ಹೆಚ್ಚಿಗೆ ಇರಲಿಲ್ಲ. ಈಗ ಹಣವನ್ನು ಸರಿ ಹೊಂದಿಸುವ ಕೆಲಸ! ನನ್ನ ಮನಸ್ಸಿನಲ್ಲಿ ವಿದ್ಯಾಭವನದ ಪ್ರತಿಯೊಬ್ಬ ಸದಸ್ಯನೂ '೫೦-೫೦ ಪೌಂಡುಗಳನ್ನಾದರೂ ಕೊಡಿ' ಎಂದು ಕೇಳಿ, ಬೇಕಾದ ಹಣ ಸಂಗ್ರಹಿಸುವುದು ಎನ್ನುವ ಆಲೋಚನೆ. ಅದೇ ಗುಂಗಿನಲ್ಲೇ ನಾನು ಶ್ರೀ ದಾಮೋದರ ಚೆನ್ರಾಯ್ ಎನ್ನುವ ಭವನದ ಸದಸ್ಯರನ್ನು ಕೇಳಿದೆ. ಬಹಳ ಒಳ್ಳೆಯ ವ್ಯಕ್ತಿ ಹಾಗೂ ಉದಾರದಾನಿಯಾದ ಅವರು ಸಿಂಧಿಯವರು. ಆ ಸಂಜೆ ತಮ್ಮ ಮನೆಗೆ ಬರಬೇಕೆಂದು ನನ್ನನ್ನು ಆಹ್ವಾನಿಸಿದರು. ಸಾಯಂಕಾಲ ನಾನು ಹೋದಾಗ ಆ ಮನೆ ಮಂದಿಯೆಲ್ಲ ನನ್ನನ್ನು ಬಹಳ ಪ್ರೀತಿಯಿಂದ, ಸಂತೋಷದಿಂದ ಬರಮಾಡಿಕೊಂಡರು. ಸ್ವಲ್ಪ ಹೊತ್ತಿನ ಮಾತುಕತೆಯ ಅನಂತರ ಅಂಟಿಸಿದ್ದ ಲಕೋಟೆ ಒಂದನ್ನು ನನ್ನ ಕೈಗಿತ್ತರು. ಸಾಕಷ್ಟು ಭಾರವಾಗಿತ್ತದು. ಅವರು ನನಗೆ ಶರಬತ್ತು ತರಲು ಒಳಗೆ ಹೋದಾಗ, ಕುತೂಹಲ ತಡೆಯಲಾಗದೆ ನಾನು ಮೆಲ್ಲನೆ ಕವರು ತೆಗೆದುನೋಡಿದೆ... ೫೫೦ಪೌಂಡ್ ಪೂರ್ತಿ ಇದ್ದವು. ನನ್ನ ಆಶ್ಚರ್ಯ ಸಂತೋಷಕ್ಕೆ ಎಣೆ ಇರಲಿಲ್ಲ. ಬಹಳ ಕೃತಜ್ಞತೆಯಿಂದ 'ಇದೇನ್ ಸರ್, ಇಷ್ಟು ಹಣವನ್ನು ನೀವೇ ಕೊಟ್ಟು ಬಿಟ್ಟಿದ್ದೀರಿ? ಏಕೆ ಸರ್?' ಎಂದೆ. ಅದಕ್ಕೆ ಅವರು, "ಮಾಥೂರ್‌ಜೀ, ಕೊಡಲಿಕ್ಕೆ ನಾನು ಯಾರು? ಕೊಡುವವನು ಮೇಲಿರುವವನು.... ಅವನು ಕೊಟ್ಟಿರುವುದನ್ನು ನಾನು ಕೊಡಬೇಕಷ್ಟೆ...." ಎಂದರು. ಅವರ ಈ ವಿಶಾಲ ಹೃದಯ, ಈ ತಿಳುವಳಿಕೆ ನೋಡಿ ನಾನು ತಲೆಬಾಗಿ ವಂದಿಸಿದೆ. ಅನಂತರ ಬಿಡುಗಡೆಯಾದ ಕ್ಯಾಸೆಟ್ಟುಗಳು ಸರಸರನೆ ಖರ್ಚಾದವು. ಸಾಕಷ್ಟು ಬೇಡಿಕೆ ಬಂದು, ಬೇಡಿಕೆ ಪೂರೈಸುವಷ್ಟು ಕ್ಯಾಸೆಟ್ಟುಗಳು ನಮ್ಮಲ್ಲಿದ್ದವು, ಅಂತೂ ಈ ಯೋಜನೆಯಿಂದ ವಿದ್ಯಾಭವನಕ್ಕೆ ನಿರೀಕ್ಷಿಸಿದ್ದುದಕ್ಕಿಂತ ಹೆಚ್ಚಾಗಿಯೇ ಹಣ ಬಂದಿತ್ತು.

ಪ್ರತಿವಾರ ಜಿನೀವಾಕ್ಕೆ

ಈ ಸಾಹಸ ನಮಗೆ ಮತ್ತಷ್ಟು ಪ್ರೋತ್ಸಾಹ ಕೊಟ್ಟಿತು. ಯಾವಾಗಲೂ ಇನ್ನೊಬ್ಬರನ್ನೇ ಆಶ್ರಯಿಸಿ ಮಾಡುವ ಕೆಲಸ ನಮ್ಮದು. ಯಾವುದಕ್ಕೂ ಧಾರಾಳವಾಗಿ ಖರ್ಚು ಮಾಡುತ್ತೇವೆ ಎನ್ನುವ ಸ್ಥಿತಿಗೆ ಬಂದಿರಲಿಲ್ಲ. ಆಗ ಶ್ರೀಮತಿ ದಮಯಂತಿ ಪೂರಿ ಎನ್ನುವ ಹೆಣ್ಣುಮಗಳು ಬಹಳ ಸಹಾನುಭೂತಿಯಿಂದ ವಿದ್ಯಾಭವನದಲ್ಲಿ ದುಡ್ಡು ತೆಗೆದುಕೊಳ್ಳದೆ ಸಂಗೀತ ತರಗತಿಗಳನ್ನು ನಡೆಸಿಕೊಡುತ್ತೇನೆ ಎಂದು ಮುಂದೆ ಬಂದರು. ಇದು 'ಹಣವೊಂದೇ ಪ್ರಗತಿಯನ್ನು ತರದು, ಪ್ರಗತಿ ತರುವವರು ಅದಕ್ಕಾಗಿ ಕೆಲಸ ಮಾಡುವ ಜನ' ಎನ್ನುವುದನ್ನು ಬಹಳವಾಗಿ ನಂಬುವಂತೆ ಮಾಡಿತು. ಹೀಗೆ ಸಂಗೀತದ ತರಗತಿಗಳು ಪ್ರಾರಂಭವಾದವು . ಜತೆಗೆ ಪ್ರಾರಂಭವಾದ ಯೋಗದ ತರಗತಿಗಳಿಂದ ಆಕರ್ಷಿತರಾದ ಹಲವು ಮಂದಿ ಇಂಗ್ಲಿಷಿನವರು ಈಗ ನಿಯತವಾಗಿ ವಿದ್ಯಾಭವನಕ್ಕೆ ಬರತೊಡಗಿದರು. ಅಲ್ಲಿ ಹಾಡುಗಾರಿಕೆಯನ್ನು ಕಲಿಯ ಬರುವವರು ಬಹಳ ಕಡಮೆ. ಅದರಲ್ಲಿ ಅವರಿಗೆ ಹೆಚ್ಚು ಆಸಕ್ತಿ ಇಲ್ಲ. ಏಕೆಂದರೆ, ಅವರ ಸಂಗೀತದಲ್ಲಿ ನಮ್ಮ ಸಂಗೀತದಲ್ಲಿರುವಂತೆ, ಸ್ವರ ವಿಸ್ತಾರ ಇಲ್ಲ. ಆದುದರಿಂದಲೇ ಅವರಿಗೆ ಹಾಡುಗಾರಿಕೆಗಿಂತ ತಾಳವಾದ್ಯಗಳ ಮೇಲೆ ಮನಸ್ಸು ಹೆಚ್ಚು. ಆದರೆ ಯೋಗವನ್ನು ಅವರು ಬಹಳ ಇಷ್ಟಪಡುತ್ತಾರೆ. ಅದು ವೈಜ್ಞಾನಿಕವಾಗಿದೆ , ಜತೆಗೆ ಶಾರೀರಿಕ ವ್ಯಾಯಾಮದಂತೆ ಅದು ಎನ್ನುವ ಭಾವನೆ ಅವರಲ್ಲಿ. ಅಂತೆಯೇ ಅವರಿಗೆ ತಂತಿವಾದ್ಯದಲ್ಲಿ ಸಿತಾರ್ ಬಹಳ ಇಷ್ಟ! ತಾಳವಾದ್ಯಗಳಲ್ಲಿ ಬಹಳ ಪ್ರೀತಿ ಇದ್ದ ಅವರಿಗೆ ನಮ್ಮಲ್ಲಿ ಕಲಿಯಲು ಬಂದರೆ, ತಬಲಕ್ಕೆ ಹಾಗೂ ಮೃದಂಗಕ್ಕೆ ಬಹಳ ಒಳ್ಳೆಯ ಗುರುಗಳೂ ಇದ್ದರು. ಹೀಗೆ ಭವನದ ತರಗತಿಗಳಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಏರಿದಂತೆ , ೩೭ ನ್ಯೂ ಆಕ್ಸ್‌ಫರ್ಡ್ ರಸ್ತೆಯ ಭವನದಲ್ಲಿ ಸ್ಥಳಾವಕಾಶದ ಅಭಾವವೂ ಹೆಚ್ಚಿತು. ಒಂದೆಡೆ ಭೋಗ್ಯದ ಅವಧಿಯು ಮುಗಿಯುತ್ತ ಬಂದಿತ್ತು. ಆ ಕಟ್ಟಡದವರು ವರ್ಷಕ್ಕೆ ಸಾವಿರ ಪೌಂಡುಗಳ ಬೆಲೆ ಇದ್ದುದನ್ನು ೪,೦೦೦ ಪೌಂಡುಗಳಿಗೆ ಏರಿಸಿದರು. ಹೀಗೆ ನಾಲ್ಕು ಪಟ್ಟು ಹೆಚ್ಚಾದ ಮೇಲೆ ನಮ್ಮ ಕೈಗೆಟುಕುವಂತಿರಲಿಲ್ಲ. ನಮ್ಮ ವಾಸ್ತವ್ಯಕ್ಕೆ ಬಹಳ ಹೆಚ್ಚಾಗಿತ್ತು. ಅಷ್ಟು ಚಿಕ್ಕ ಜಾಗವಾದರೂ ಬಹಳಷ್ಟು ಜನ ಬಂದಿದ್ದರು ನಮ್ಮಲ್ಲಿಗೆ. ಅವರಲ್ಲಿ ಮುಖ್ಯವಾಗಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀ ಪಿ.ವಿ.ನರಸಿಂಹರಾಯರು ಬಂದಿದ್ದು, ಸುಮಾರು ೧೧ದಿನಗಳ ಕಾಲ ನಮ್ಮಲ್ಲಿ ತಂಗಿದ್ದರು. ಅವರು ಬಹಳ ಸರಳತನದಿಂದ ಯಾವುದೇ ಆಡಂಬರವಿಲ್ಲದೆ, ನಮ್ಮಂತೆಯೇ ಇದ್ದು ತಮ್ಮ ಹಿರಿತನವನ್ನು ತೋರಿದ್ದರು. ಸೂಟ್‌ಕೇಸ್ ಒಂದನ್ನು ಹಿಡಿದು ಭವನದ ಒಳಗೆ ಪ್ರವೇಶಿಸಿದ್ದ ಅವರು, ನನ್ನನ್ನು ಕಂಡು, 'ನಾನು ಪಿ.ವಿ. ನರಸಿಂಹರಾವ್, ನೀವು ಮತ್ತೂರು ಕೃಷ್ಣಮೂರ್ತಿಯೇನು?' ಎಂದರು.

ನನಗೆ ಸಂಭ್ರಮದಿಂದ ಮಾತೇ ಹೊರಡಲಿಲ್ಲ. 'ಸರ್, ತಮ್ಮನ್ನು ತಿಳಿಯದವರು ಯಾರು? ಬನ್ನಿ ಸಾರ್, ಕುಳಿತುಕೊಳ್ಳಿ' ಎಂದೆ. ಆಗ ಅವರು ಪ್ರಧಾನಿಯಾಗಿರಲಿಲ್ಲ , ವಿರೋಧಪಕ್ಷದಲ್ಲಿದ್ದರು. 'ನಾನು ಸುಮಾರು ಒಂದು ವಾರದವರೆಗೆ ಲಂಡನ್‌ನಲ್ಲಿ ಇರಬೇಕೆಂದಿದ್ದೇನೆ. ತಾವು ನನಗೆ ಉಳಿದುಕೊಳ್ಳಲು ವ್ಯವಸ್ಥೆ ಮಾಡಿಕೊಡುವಿರಾ?' ಎಂದರು. ಸಂತೋಷದಿಂದ ನಾನು 'ಆಗಲಿ'ಎಂದೆ. ನಿಜಕ್ಕೂ ಅಗಾಧ ಪಾಂಡಿತ್ಯ ಅವರದು. ಸುಮಾರು ೧೩ ಭಾಷೆಗಳನ್ನು ನಿರರ್ಗಳವಾಗಿ ಮಾತನಾಡಬಲ್ಲವರಾಗಿದ್ದ ಅವರು ವೇದವಾಙ್ಮಯವನ್ನೂ ಅನೇಕ ಕಾವ್ಯ ಸಾಹಿತ್ಯವನ್ನೂ ಚೆನ್ನಾಗಿ ತಿಳಿದಿದ್ದವರಾಗಿದ್ದರು. ಅಲ್ಲಿ ನಾನು ರಾಜಕಾರಣಿಯಾಗಿ ಅವರನ್ನು ನೋಡಲಿಲ್ಲ. ಆ ಮುಖ ನನಗೆ ಅಪರಿಚಿತ. ಒಬ್ಬ ಘನ ವಿದ್ವಾಂಸರಾಗಿ, ಬಹುಭಾಷಾ ಪಂಡಿತರಾಗಿ ಅವರು ನಮ್ಮ ಜತೆ ಇದ್ದದ್ದು ವಿಶೇಷ. ಅಂತಹ ಶ್ರೀ ನರಸಿಂಹರಾಯರು ಬಹುಮುಖ ಪ್ರತಿಭೆಯ ವ್ಯಕ್ತಿ ಎಂದು ತಿಳಿಯಿತು. (ಆಗ ನಾನಿನ್ನೂ ಅವರ ಆತ್ಮಕಥೆಯನ್ನು ಭಾಷಾಂತರಿಸಿರಲಿಲ್ಲ. ಬಹುಶಃ ಆಗ ಅವರೇ ಅದನ್ನು ಇನ್ನೂ ಬರೆದಿರಲಿಲ್ಲವೇನೋ. ಆ ಬಗ್ಗೆ ಸ್ಪಷ್ಟವಾಗಿಲ್ಲ.)

ದಿನದ ೧೮-೨೦ ಘಂಟೆಗಳ ಕೆಲಸದ ಜತೆಗೆ, ೧೯೭೪-೭೫ರಲ್ಲಿ ಶ್ರೀ ಓಂಕಾರಾನಂದ ಎನ್ನುವ ಸ್ವಾಮೀಜಿಯವರು ನನಗೆ ಹೊಸದಾದ ಜವಾಬ್ದಾರಿ ಕೊಟ್ಟರು. ಶ್ರೀ ಓಂಕಾರಾನಂದರು ಹಿಮಾಲಯದಲ್ಲಿದ್ದ ಸ್ವಾಮಿಶಾಮಾನಂದರ ಪರಂಪರೆಯವರು. ಅವರು ಜಿನೀವಾದಲ್ಲಿ ಬಹಳ ದೊಡ್ಡದಾದ ಆಶ್ರಮ ಕಟ್ಟಿದ್ದರು. ಅದು ಪ್ರಸಿದ್ಧಿಗೂ ಬಂದಿತ್ತು. ಆ ಸ್ವಾಮಿಗಳು ನನ್ನನ್ನು ಅವರಲ್ಲಿಗೆ ಕರೆಸಿಕೊಂಡು ಗಾಯತ್ರಿಮಂತ್ರ, ಸಂಧ್ಯಾವಂದನೆ, ಸಮಿದಾಧಾನ, ಪುರುಷಸೂಕ್ತ, ಶ್ರೀಸೂಕ್ತ, ನಾರಾಯಣ ಸೂಕ್ತ, ಇಂದ್ರಾಕ್ಷಿಸ್ತೋತ್ರ, ಉಪನಿಷತ್ತು, ಇವುಗಳ ಬಗೆಗೆ ಪುಸ್ತಕಗಳನ್ನು ಬರೆದು ಕೊಡಲು ಕೇಳಿದರು. ನನಗೋ ಈ ಕೆಲಸದಿಂದ ಸಂತೋಷವೇ ಆಗಿತ್ತು, ಸಂಸ್ಕೃತಿ ಪ್ರಚಾರಕ್ಕೆ ಇದೊಂದು ದಾರಿಯಾಯಿತು ಎನ್ನುವ ಸಮಾಧಾನವೂ ಇತ್ತು.

ನಮ್ಮ ಸನಾತನಧರ್ಮ, ಹಿಂದೂ ಧರ್ಮದ ಹಿರಿಮೆ ಎಂಥದು? ಅದರ ಸಂಸ್ಕೃತಿ ಎಂಥದು? ಇದನ್ನು ಹೊರಗಿನವರು ಅರಿಯಬೇಕು. ಎಷ್ಟು ಧಾರ್ಮಿಕ ಸ್ವಾತಂತ್ರ್ಯವಿದೆ ನಮಗೆ? ಹಿಂದೆ ನಮ್ಮ ಧರ್ಮ ಒಂದೇ ಇದ್ದದ್ದು. ಸುಮಾರು ೧೦,೦೦೦ ವರ್ಷಗಳಿಂದಲೂ ನಾವು ಇದ್ದೇವೆ. ಆಗ ಬೇರೆ ಧರ್ಮವೇ ಇರಲಿಲ್ಲ. ಅದಕ್ಕೇ ನಮ್ಮಲ್ಲಿ ಮತಪರಿವರ್ತನೆಗೆ ಯಾವುದೇ ತಂತ್ರವೂ, ದಾರಿಯೂ ಏನೂ ಇಲ್ಲ. ಆ ಉದ್ದೇಶವೇ ಇರಲಿಲ್ಲ. ಆಗ ಇದ್ದುದೇ ಒಂದು ಮತ, ಇನ್ನು ಪರಿವರ್ತನೆ ಆಗುವುದು ಯಾವ ಮತಕ್ಕೆ? ಅನಂತರ ಬಂದಿದ್ದು ಜುಡಾಯಿಸಂ ಎನ್ನಬಹುದು, ಅದರ ಕಾಲ ಸುಮಾರು ಕ್ರಿ. ಪೂ. ೧೬೦೦ ಎಂದು ಹೇಳಲಾಗಿದೆ. ಅನಂತರ ಬಂದವು ಕ್ರೈಸ್ತ , ಇಸ್ಲಾಂ ಇತ್ಯಾದಿ ಮತಗಳು. ಅವು ಬರುವಾಗಲೇ ಮತಾಂತರದ ತಂತ್ರವನ್ನು ಹುಟ್ಟುಹಾಕಿಕೊಂಡು ಬಂದವು. ಅದಕ್ಕೇ ಅವರಲ್ಲಿ ಮತಾಂತರಿಸುವುದು, ಮತಾಂತರ ಮಾಡಿಕೊಂಡು ಹೊರ ಹೋದವರು ಮತ್ತೆ ತಮ್ಮ ಮತವನ್ನು ಸೇರಬಯಸಿದರೆ ಶುದ್ಧಿ ಮಾಡಿ ಮತ್ತೆ ಮತಾಂತರಿಸಿ ಕೊಳ್ಳುವುದು ಇವು , ಧಾರ್ಮಿಕವಾಗಿ ವಿಧಿವತ್ತಾಗಿ ಇವೆ. ಆದರೆ ನಮ್ಮಲ್ಲಿ ಹಾಗಿಲ್ಲ. ಯಾರು ಯಾವ ಮತಕ್ಕಾದರೂ ಹೋಗಬಹುದು, ವಾಪಸ್ಸು ಬರಬೇಕೆಂದರೂ ಬರಬಹುದು, ಅದಕ್ಕೆಂದೇ ಧಾರ್ಮಿಕ ವಿಧಿಗಳಿಲ್ಲ. ಮತಾಂತರದ ಅವಾಂತರ ಹೆಚ್ಚಾಗಿದ್ದಾಗ 'ಆರ್ಯ ಸಮಾಜ' ದವರು ಶುದ್ಧಿ ಚಳವಳಿ ಎಂದು ಮಾಡಿ , ಪರಮತಕ್ಕೆ ಹೋದವರನ್ನು ಮತ್ತೆ ಹಿಂದೂಮತಕ್ಕೆ ಸೇರಿಸಿಕೊಳ್ಳುವ ಧಾರ್ಮಿಕ ವಿಧಿಯನ್ನೇ ಪರಿಚಯಿಸಿದರು. ಅದು ಅಷ್ಟಕ್ಕೇ ನಿಂತಿತು. ಮತ್ತೆ ಅದರ ಆವಶ್ಯಕತೆ ಬೀಳಲಿಲ್ಲ. ಆ ಹೊಸ ವಿಧಿಗಳು ಹೆಚ್ಚು ಕಾಲ ನಿಲ್ಲದೆ ಹೋದವು. ಅಲ್ಲದೆ 'ರಾಮಾಯಣ'ದ ಕಾಲದಲ್ಲೇ ನಮ್ಮಲ್ಲಿ ನಾಸ್ತಿಕರೂ ಇದ್ದರು, ಅವರನ್ನು 'ಚಾರ್ವಾಕ'ರು ಎನ್ನುತ್ತಿದ್ದರು. ಸಾಕಾರನೋ ನಿರಾಕಾರನೋ, ಯಾವುದನ್ನು ಪೂಜಿಸಿದರೂ ಚಾರ್ವಾಕರು ನಿಂದಿಸುತ್ತಿದ್ದರು. ಆದರೂ ಅವರಿಗೆ ಹಾನಿ ಮಾಡದ ವಿಶಾಲ ಮನೋಭಾವದ ಧರ್ಮ ನಮ್ಮದು. ಇಂತಹ ಸನಾತನಧರ್ಮದ ಹಿರಿಮೆಯನ್ನು ಸಾರುವ ಸಂಸ್ಕೃತಿಯ ತುಣುಕುಗಳು ನಮ್ಮ ಗಾಯತ್ರೀ ಮಂತ್ರ, ಸಮಿದಾಧಾನ, ಉಪನಿಷತ್ತು ಇತ್ಯಾದಿಗಳು. ಇಂಥವುಗಳ ಮೇಲೆ ಬರೆದುಕೊಡಿ ಎಂದಾಗ, 'ಅದನ್ನೇ ಪರದೇಶದ ಪರಧರ್ಮ ದವರಿಗೆ ಪರಿಚಯಿಸೋಣ, ಅಂತಹ ಸುವರ್ಣಾವಕಾಶವನ್ನು ಬಿಟ್ಟು ಬಿಡುವುದೇ– ಅದೂ ಸನಾತನ ಧರ್ಮದವನಾಗಿದ್ದು' ಎನಿಸಿತು! ಅದರಲ್ಲೂ ಭಾರತೀಯ ವಿದ್ಯಾಭವನವು ಮೊದಲಿನಿಂದಲೂ ಆರ್ಷೇಯ ಸಂಪ್ರದಾಯವನ್ನು ಅನುಸರಿಸಿಕೊಂಡೇ ಬಂದಿದೆ. ಅದಕ್ಕೆ ಕಷ್ಟವಾದರೂ ಸರಿ, ಸರಿಯಾದ ಸಿದ್ಧತೆ ಮಾಡಿಕೊಂಡು ಆ ವಿಷಯಗಳಿಗೆ ತಕ್ಕ ನ್ಯಾಯ ದೊರಕಿಸುವುದು ನನ್ನ ಕರ್ತವ್ಯ ಎಂದು ಭಾವಿಸಿ ನಾನು ಪ್ರತಿವಾರವೂ ಜಿನೀವಾಕ್ಕೆ ಅವರ ಆಶ್ರಮಕ್ಕೆ ಹೋಗುತ್ತಿದ್ದೆ. ಮೊದಲು ಪುಸ್ತಕಕ್ಕೆ ಬೇಕಾದ ವಿಷ್ಯಗಳನ್ನೆಲ್ಲ ಆವಾಗಲೇ ಧ್ವನಿಮುದ್ರಿಸಿ, ಅದನ್ನೇ ಅನಂತರ ಮುದ್ರಣ ಮಾಡಿ, ಅದನ್ನು ಆಗಲೇ ಪ್ರೂಫ್ ನೋಡಿ, ಸರಿಮಾಡಿ, ಅನಂತರ ಪುಸ್ತಕಗಳು ಅಚ್ಚಾಗಿ ಬಂದು ಬಿಡುತ್ತಿದ್ದವು. ಸುಮಾರು ಎಲ್ಲ ಪುಸ್ತಕಗಳನ್ನೂ ಒಂದು-ಎರಡು ಸಾವಿರದಂತೆ ಮುದ್ರಿಸಿ ಅಲ್ಲಿನ ಜನರಿಗೆಲ್ಲಾ ಉಚಿತವಾಗಿ ಹಂಚುತ್ತಿದ್ದರು ಆ ಆಶ್ರಮದವರು. ಹೀಗೆ ನಮ್ಮ ಧರ್ಮದ ಸಾರಾಮೃತವು ಪುಟ್ಟಪುಟ್ಟ ಪುಸ್ತಕಗಳ ರೂಪದಲ್ಲಿ ಹರಿದು ಆ ವಿದೇಶಿಯರ ಕೈ ಸೇರುತ್ತಿದ್ದುದನ್ನು ನೋಡಿ ನನಗೆ ಪರಮಾನಂದವಾಗುತ್ತಿತ್ತು.

ಹೀಗೆ ಇಂತಹ ಕಾರ್ಯದಲ್ಲಿ ನನ್ನನ್ನು ತೊಡಗಿಸಿ ಒಂದೆಡೆ ಕೂರಿಸಿ ಬರೆಸಿದಂಥ ಆ ಓಂಕಾರಾನಂದ ಸ್ವಾಮೀಜಿಯವರಿಗೆ ನಾನು ಎಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು!

ಜಿ.ಡಿ. ಬಿರ್ಲಾ

ಹುಟ್ಟಿದ ಮಗುವಿಗೆ ನಾಲ್ಕು ವರ್ಷಗಳು ತುಂಬಿದಂತೆ ತೊಟ್ಟಿಲು ಸಾಲದಾಗುತ್ತದೆ. ಹಾಗೆಯೇ ಈಗ ಭವನದ ಸ್ಥಿತಿಯೂ ಆಗಿತ್ತು! ಆಗ ಒಮ್ಮೆ ಶ್ರೀ ಜಿ.ಡಿ. ಬಿರ್ಲಾ ಅವರು ಮಾಧವಪ್ರಸಾದ ಬಿರ್ಲಾರವರ ಜತೆ ಭವನಕ್ಕೆ ಬಂದರು. ಅವರು ನಮ್ಮಲ್ಲಿಗೆ ಬಂದಾಗ ಭವನದ ಆವಶ್ಯಕತೆಗಳ ಬಗ್ಗೆ ಹೇಳಿ, ಭೋಗ್ಯದ ಅವಧಿ ಮುಗಿಯುತ್ತಿರುವುದಾಗಿ ಹೇಳಿದಾಗ, "ನೀವು ಭವನಕ್ಕೆ ಹೊಸ ಕಟ್ಟಡ ತೆಗೆದುಕೊಳ್ಳಿ, ಆ ಬೆಲೆಯನ್ನು ನಾವು ಕೊಡುತ್ತೇವೆ.... ಆದರೆ ಒಂದು ಮಾತಿದೆ. ಭವನದ ಹೊಸ ಕಟ್ಟಡಕ್ಕಾಗುವ ಬೆಲೆಯನ್ನು ನಾವು ಕೊಟ್ಟರೂ, ಅಷ್ಟೇ ಹಣವನ್ನು ನೀವು ನಿಧಿ ಸಂಗ್ರಹ ಮಾಡಿ ಭವನದ ಹೆಸರಿನಲ್ಲಿಡಬೇಕು, ಅದರ ಮುಂದಿನ ಬೆಳವಣಿಗೆಗೆ ಸಹಾಯವಾಗುವಂತೆ" ಎಂದರು. ನಮಗೆ ಆಶ್ಚರ್ಯ, ಸಂತೋಷ! ಆ ವಿಧಾನವನ್ನು matching aid ಎನ್ನುತ್ತಾರೆ. ದಾನಿಗಳು ಎಷ್ಟೇ ಉದಾರಿಗಳಾಗಿದ್ದರೂ ಅಪಾತ್ರದಾನ ಮಾಡುವುದು ಸರಿಯಲ್ಲ. ದಾನಿಗಳಿಂದ ದಾನ ತೆಗೆದುಕೊಳ್ಳುವವರು, ಅದಕ್ಕೆ ಅರ್ಹರೋ ಅಲ್ಲವೋ ನೋಡುವುದು ಅವರ ಧರ್ಮ. ಹಾಗೆ ಅರ್ಹತೆಯನ್ನು ಸಾಬೀತು ಮಾಡಿದರೆ ದಾನಿಗಳಿಗೆ ಒಂದು ನಂಬಿಕೆ - ವಿಶ್ವಾಸ ಮೂಡುತ್ತದೆ. ಆಗ ಅವರೂ ಸಮಾಧಾನ, ನೆಮ್ಮದಿಯಿಂದ ದಾನ ಮಾಡಬಹುದು. ಈ ಕರಾರಿಗೆ ಒಪ್ಪಿ ಆಮೇಲೆ ನಾವು ಭವನಕ್ಕಾಗಿ ಹೊಸ ಕಟ್ಟಡದ ಶೋಧನೆಯನ್ನು ಶುರುಮಾಡಿದೆವು.

೧೯೭೭ರ ದಿನಗಳು, ತಿಂಗಳುಗಳು ಬೇಗ ಉರುಳುತ್ತಿರುವಂತೆ ಭಾಸವಾಗುತ್ತಿತ್ತು. ಆ ಸಂದರ್ಭದಲ್ಲಿ ಲಂಡನ್ನಿನಲ್ಲಿ ಕೆಲವು ಹಳೆಯ ಚರ್ಚುಗಳು ಮಾರಾಟಕ್ಕೆ ಬರುತ್ತಿದ್ದವು. ಅವೆಲ್ಲವೂ ಉಪಯೋಗಿಸದವುಗಳು, ಅವುಗಳಲ್ಲಿ ಪ್ರಾರ್ಥನೆ ನಡೆಯುತ್ತಿರಲಿಲ್ಲ. ನಮ್ಮಲ್ಲಿ ದೇವಸ್ಥಾನಗಳು ಪಾಳುಬಿದ್ದರೆ ಬಹಳ ಕಷ್ಟಪಟ್ಟು ಜೀರ್ಣೋದ್ಧಾರ ಮಾಡಿಸಬೇಕಾಗುತ್ತದೆ. ಹಾಗಿಲ್ಲದಿದ್ದರೆ ಪೂರ್ಣವಾಗಿ ಹಾಳಾಗುತ್ತದೆ. ಆದರೆ ಬ್ರಿಟನ್ನಿನಲ್ಲಿ ಹಾಗಿಲ್ಲ. ಹಾಗೆ ಪಾಳು ಬೀಳಲಿರುವ ಚರ್ಚುಗಳನ್ನು ಮಾರಾಟ ಮಾಡಿಬಿಡುತ್ತಾರೆ. ಹಾಗೆ ಮಾರಾಟ ಮಾಡುವ ಹಕ್ಕು ಕ್ರೈಸ್ತ ಮತಸ್ಥ ಧಾರ್ಮಿಕ ಸಂಸ್ಥೆಯವರದು. ಕಾರಣಾಂತರಗಳಿಂದ ಚರ್ಚಿಗೆ ಜನ ಬರುವುದು ಕಡಮೆಯಾಗುತ್ತದೆ. ಭಾನುವಾರ ತಪ್ಪದೆ ಬರುವ ಭಕ್ತರಿಗಾಗಿ ವಾರದ ಆರು ದಿನಗಳೂ ಅದನ್ನು ನಿರ್ವಹಿಸಿಕೊಂಡು ಹೋಗುವುದು ಕೆಲವೊಮ್ಮೆ ಕಷ್ಟವಾಗುತ್ತದೆ. ಅದರಲ್ಲೂ ಅದು ಚಳಿ ಪ್ರದೇಶ. ಸೆಪ್ಟಂಬರ್‌ನಿಂದ ಏಪ್ರಿಲ್‌ವರೆಗೂ ಚಳಿಯೇ ! ೧೫೦ ಅಡಿ ಎತ್ತರವಿರುವ ಚರ್ಚಿನ ಚಾವಣಿಯಿಂದಾಗಿ ಅಲ್ಲಿ ಬಹಳ ಥಂಡಿಯಾಗುವುದು ಸಹಜ. ಅದನ್ನು ಬೆಚ್ಚಗಿಡಬೇಕಾದರೆ ಆಗುವ ವೆಚ್ಚವೂ ಹೆಚ್ಚು. ಇಷ್ಟೆಲ್ಲ ಮಾಡಿದರೂ, ದಿನೇ ದಿನೇ ಕಡಮೆಯಾಗುತ್ತಿರುವ ಧಾರ್ಮಿಕ ಆಚರಣೆಗಳ ಬಗೆಗಿನ ಆಸಕ್ತಿ, ಯಾವುದೇ ಪ್ರೋತ್ಸಾಹ ನೀಡದು. ಅದಕ್ಕೆ ಅವುಗಳನ್ನು ಮಾರಾಟ ಮಾಡುವ ಚರ್ಚು - ಅಧಿಕಾರದವರು ಎರಡು ಕಾರಣಗಳಿಗಾಗಿ ಮಾತ್ರ ಚರ್ಚನ್ನು ಕೊಡುವರು. ಒಂದು, ಧರ್ಮಕ್ಕೆ ಸಂಬಂಧಿಸಿದಂತೆ ದೇವಸ್ಥಾನ, ಇತ್ಯಾದಿಗಳನ್ನು ಕಟ್ಟಲು, ಇನ್ನೊಂದು ಸಾಂಸ್ಕೃತಿಕ ಸಂಘ ಸಂಸ್ಥೆಗಳಿಗಾಗಿ. ನಮ್ಮದು ಎರಡನೆಯ ಸ್ಥಾನ (ಆದ್ಯತೆ). ಖಾಲಿ ಇರುವ ಜಾಗಗಳಿಗೆ 'ಬಾಡಿಗೆಗೆ ಇದೆ' ಎಂದು ಬೋರ್ಡು ಹಾಕಿದ್ದರೂ ಅವು ನಮಗೆ ಹೊಂದಿಕೆ ಆಗುತ್ತಿರಲಿಲ್ಲ. ಜಾಗಗಳನ್ನು ನೋಡುವುದು ಮುಂದುವರೆಯಿತು.

ಶ್ರೀ ಜಿ.ಡಿ. ಬಿರ್ಲಾರ ಹಣಕಾಸು ದಾನದ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದ ಅವರ ಅಣ್ಣನ ಮಗ ಶ್ರೀ ಎಂ.ಪಿ.ಬಿರ್ಲಾರು ನಮ್ಮ ಅಧ್ಯಕ್ಷರಾದ ಶ್ರೀ ಮಣೆಕ್ ದಲಾಲ್‌ಜೀಗೆ ಒಂದು ಪತ್ರ ಬರೆದರು. ಆ ಪತ್ರದಲ್ಲಿ "ನೀವು ನೋಡುವ ಜಾಗದಲ್ಲಿ ಇಷ್ಟೆಲ್ಲ ಅನುಕೂಲತೆಗಳು ಇರಲೇಬೇಕು. ಒಂದು ಮೀಟಿಂಗ್ ಹಾಲ್, ಕಛೇರಿ ನಡೆಸಲು ಒಂದು ರೂಮು, ವಿದ್ಯಾಭವನದ ತರಗತಿಗಳನ್ನು ನಡೆಸಲು ಐದಾರು ಕ್ಲಾಸ್ ರೂಮುಗಳು, ಸುಮಾರು ೩೦೦-೪೦೦ ಮಂದಿ ಸುಖಾಸೀನರಾಗಿ ಕುಳಿತುಕೊಳ್ಳ ಬಹುದಾದ ಒಂದು ಸಭಾಂಗಣ, ಭವನದ ಕಾರ್ಯಕ್ರಮ ನಡೆಸುವುದಕ್ಕೆ ವಿಶಾಲವಾದ ಒಂದು ವೇದಿಕೆ, ರೆಜಿಸ್ಟ್ರಾರ್‌ರಿಗೆ ಮುಖ್ಯವಾಗಿ ವಾಸಕ್ಕೆ ಇರಲು, ಅಲ್ಲೇ ಇದ್ದು ನೋಡಿಕೊಳ್ಳಲು ಸೌಕರ್ಯವಿರುವಂತಹ ಒಂದು ಮನೆ, ಮುಂದೆ ಭವನವನ್ನು ದೊಡ್ಡದಾಗಿ ಮಾಡಿಕೊಳ್ಳಲು ನಾಲ್ಕೈದು ರೂಮುಗಳನ್ನೋ, ಸಭಾಂಗಣಗಳನ್ನೋ ಕಟ್ಟಿಸಲು ಸುಲಭವಾಗುವಂತೆ ಸ್ಥಳಾವಕಾಶ ಮತ್ತು ಮೇಲೆ ಒಂದು-ಎರಡನೆಯ ಮಹಡಿಗಳನ್ನು ಕಟ್ಟಿಸಲು ಕೆಳಗಿನ ಕಟ್ಟಡದ ಅಡಿಪಾಯ ಸುಭದ್ರವಾಗಿರುವುದು.... ಇಂಥ ಕಟ್ಟಡ ನಗರದಿಂದ ಅತಿದೂರದಲ್ಲಿ, ಹೊರವಲಯದಲ್ಲೆಲ್ಲೋ ಇರಬಾರದು. ಕ್ಲಾಸುಗಳಿಗೆ ಬಹಳ ಜನ ಹೆಣ್ಣುಮಕ್ಕಳೂ ಬರುವವರಿರುತ್ತಾರೆ. ಭವನ ನಗರದ ಮಧ್ಯದಲ್ಲಿಯೇ ಇರಬೇಕಾದುದೂ ಅವಶ್ಯ, ಅಗತ್ಯ ಹಾಗೂ ಸೂಕ್ತ..." ಈ ಸುದೀರ್ಘ ಪತ್ರವನ್ನು ನೋಡಿ ನನಗೆ ಬಹಳ ನಿರಾಸೆಯಾಯಿತು. ಇವರು ದಾನ ಕೊಡದೆ ಇರುವುದಕ್ಕೆ ಈ ಉಪಾಯ ಮಾಡಿದ್ದಾರಷ್ಟೇ. ಇಷ್ಟೆಲ್ಲ ಅನುಕೂಲತೆಗಳಿರುವ ಕಟ್ಟಡ ನಮಗೆಲ್ಲಿ ಸಿಕ್ಕೀತು? ಒಮ್ಮೆಲೇ ನಿರಾಶಾಭಾವ ನನ್ನನ್ನು ಹಿಂಡಿಹಾಕಿತು. ನಾವು ಬಹಳ ದೈನ್ಯಜೀವನ ನಡೆಸಿದ್ದವರಷ್ಟೆ. ಮಧ್ಯಮವರ್ಗದ ನಮ್ಮಂತಹವರಿಗೆ ಮೊದಲು ಅನಿಸುವುದೇ ಹೀಗೆ. ಮಧ್ಯಮವರ್ಗದವರ ದೌರ್ಬಲ್ಯ ಅದು! ಏಕೆಂದರೆ ಈವರೆಗೆ ನಾವು ಹುಡುಕಿದ ಜಾಗದಲ್ಲಿ ಇದರ ಕಾಲುಭಾಗದ ವ್ಯವಸ್ಥೆಯೂ ನಮಗೆ ಕಂಡಿರಲಿಲ್ಲ. ಒಂದೆರಡು ಚರ್ಚುಗಳನ್ನು ನೋಡಿದ್ದೆವಾದರೂ ಅವು ಬಹಳ ಜೀರ್ಣವಾಗಿದ್ದವು. ಅದನ್ನು ತೆಗೆದುಕೊಳ್ಳುವುದರಿಂದ ಯಾವುದೇ ಪ್ರಯೋಜನವಿರಲಿಲ್ಲ. ೩೭, ನ್ಯೂ

ಆಕ್ಸ್‌ಫರ್ಡ್ ರಸ್ತೆಯ ಕಟ್ಟಡವನ್ನು ಬಿಡಲೇಬೇಕಾದ ಪರಿಸ್ಥಿತಿ ಬಂದಿತು.

ದೇವಚಂದ ಚಂದರಿಯಾ

ನಾವು 'ಬಿಲ್ಡಿಂಗ್ ಕಮಿಟಿ'(ಕಟ್ಟಡದ ಸಮಿತಿ) ಎಂದು ಮಾಡಿದಾಗ ಅದಕ್ಕೆ ಅಧ್ಯಕ್ಷರಾದವರು ಶ್ರೀ ದೇವಚಂದ ಚಂದರಿಯಾ ಅವರು. ಚಂದರಿಯಾ ಕುಟುಂಬ ಅಲ್ಲಿ ಬಹಳ ಪ್ರಸಿದ್ಧಿ , ಅವರು ಬಹಳ ದೊಡ್ಡ ವ್ಯಾಪಾರೋದ್ದಿಮೆದಾರರು. ಅವರೆಲ್ಲರೂ ಪೂರ್ವ ಆಫ್ರಿಕಾದವರು. ಲಂಡನ್ನಿನಲ್ಲಿರುವ ಬಹುತೇಕ ಮಂದಿ ಪೂರ್ವ ಆಫ್ರಿಕಾ, ಪಶ್ಚಿಮ ಆಫ್ರಿಕಾ, ಉತ್ತರ ಆಫ್ರಿಕಾ, ಪೋರ್ಚುಗಲ್‌ನಲ್ಲಿದ್ದಂತಹ ಭಾರತೀಯರು ಲಂಡನ್ನಿನಲ್ಲಿ ನೆಲೆಸಿರುವವರು. ಬಹುಮಂದಿ ಹೀಗೆ ಇತರ ದೇಶಗಳಿಂದ ಬಂದಿರುವ ಭಾರತೀಯರು. ನಮ್ಮ ದೇಶದಿಂದ ಹೋಗಿ ಅಲ್ಲಿ ನೆಲೆಸಿರುವವರು ಬಹಳ ಕಡಮೆ. ಹಾಗೆ ನೆಲೆಸಿರುವ ಇತರ ದೇಶಗಳಿಂದ ಬಂದ ಭಾರತೀಯರು ಎಲ್ಲರೂ ವ್ಯಾಪಾರದಾರರು, ಉದ್ದಿಮೆದಾರರು ; ಅಲ್ಲಿ ಕೆಲಸಕ್ಕೆ ಸೇರಿಕೊಂಡಿರುವವರಲ್ಲ. ಈ ವ್ಯಾಪಾರದಾರರು ಸಾಕಷ್ಟು ಹಣಗಳಿಸಿ ಸಮಾಜದಲ್ಲಿ ಬಹಳ ಘನತೆ, ಗೌರವದ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಆದರೆ ಅಲ್ಲಿ ಕೆಲಸಕ್ಕೆ ಸೇರಿಕೊಂಡಿರುವವರು ದುಡ್ಡಿನ ಸಹಾಯ ಮಾಡಲಾರರಾದರೂ, ದೈಹಿಕವಾಗಿ, ಪ್ರತಿಫಲವನ್ನೇನೂ ತೆಗೆದುಕೊಳ್ಳದೆ, ನಮ್ಮ ದೇಶದ ಸಂಸ್ಥೆ ಇದು ಎನ್ನುವ ಪ್ರೀತಿಯಿಂದ ತಮ್ಮ ಕೈಲಾದ ನೆರವು ನೀಡುತ್ತಾರೆ.

ಈ ವ್ಯಾಪಾರೋದ್ಯಮಿಗಳಲ್ಲಿ ನಾವು ಕಾಣುವ ಮಹತ್ತ್ವದ ಅಂಶ ಎಂದರೆ, ಅವರ 'ವ್ಯಾಪಾರ ಧರ್ಮ' ಎನ್ನುತ್ತಾರಲ್ಲ ಅದು ! 'ಇಷ್ಟು ವ್ಯಾಪಾರ ಮಾಡಿ ಲಾಭಗಳಿಸಿದರೆ ಇಷ್ಟನ್ನು ಧರ್ಮ ಮಾಡಬೇಕು' ಎನ್ನುವ ನಿಯಮವನ್ನು ಪಾಲಿಸಿಕೊಂಡು ಬಂದಿರುವವರು ಇವರು. ಪ್ರಪಂಚದಲ್ಲಿ ನಾವು ಈ ರೂಢಿಯನ್ನು ಕಾಣುತ್ತೇವೆ. ಅಂತೆಯೇ ನಮ್ಮಲ್ಲಿ ವೈಶ್ಯ ಜನಾಂಗ. ಅವರಲ್ಲಿ ಇದೇ ನಿಯಮವಿದ್ದು ದುಡ್ಡು ಹೇರಳವಾಗಿದ್ದು, ಅದಕ್ಕೆ ತಕ್ಕಂತೆ ದಾನಧರ್ಮಗಳನ್ನು ಮಾಡುವ ಜನ ಅವರು.

ಕಟ್ಟಡವನ್ನು ಹುಡುಕುವ ಜವಾಬ್ದಾರಿ ದೇವಚಂದ್ ಚಂದರಿಯವರದ್ದೇ ಆಗಿತ್ತು. ಅವರಿಗೆ ನಾವೂ ಸಹಾಯ ಮಾಡುತ್ತಿದ್ದೆವು. ಈ ಕೆಲಸದ ಗತಿಯನ್ನು ಶೀಘ್ರಗೊಳಿಸಲು ಮತ್ತೊಂದು ಉಪಸಮಿತಿ ಮಾಡಿಕೊಂಡೆವು. ಮಾತುಕತೆಗಳೂ ಹುಡುಕಾಟವೂ ನಿರಂತರವಾಗಿ ನಡೆಯುತ್ತಲೇ ಇದ್ದವು. ಡಿಸೆಂಬರ್ ಸಮೀಪಿಸುತ್ತಿತ್ತು. ಡಿಸೆಂಬರ್‌ನ ಅನಂತರ ನಾವು ಅಲ್ಲಿ ಇರಲಾಗದು. ಅನಂತರವೂ ಇದ್ದರೆ ನಮ್ಮನ್ನು ಬೀದಿಯಲ್ಲಿ ನಿಲ್ಲಿಸುತ್ತಾರಷ್ಟೆ. ದಾರಿಯು ಕಾಣದಾಗಿತ್ತು. ಹಲವು ದಿನಗಳ ಮುಂಚೆಯೇ ಆ ಕಟ್ಟಡವನ್ನು ಖಾಲಿ ಮಾಡಬೇಕಾದ ನಮಗೆ ಬೇರೆ ಯಾವ ಭರವಸೆಯ ಬೆಳಕೂ ಆವರೆಗೆ ಕಂಡಿರಲಿಲ್ಲ. ತಲೆಯನ್ನು ನೀರೊಳಗೆ ಮುಳುಗಿಸಿ ಕೊಂಡಿದ್ದು, ಅವನು ಮೇಲೇಳದಂತೆ ಅದುಮಿ ಹಿಡಿದಾಗ, ಅವನು ಮೇಲೆ ಬರಲು ಹೇಗೆ ಸಾಧ್ಯ? ಅಂತೆಯೇ ಆಗಿತ್ತು ನಮ್ಮ ಸ್ಥಿತಿಯೂ.

೧೯೭೭ರ ಮೇ ತಿಂಗಳು ಬಂದೇ ಬಿಟ್ಟಿತು. ಶುಕ್ರವಾರ ಸಂಜೆ ದೇವಚಂದ ಭಾಯಿ ನನಗೆ ಫೋನ್ ಮಾಡಿ "ಮಂಗಳವಾರ ಮೀಟಿಂಗ್ ಇದೆ ಮತ್ತೂರ್‌ಜೀ, ನಾನು ಮೀಟಿಂಗ್‌ಗೆ ಬರಲಾಗುತ್ತಿಲ್ಲ. ನೀವು ಮೀಟಿಂಗನ್ನು ಮುಂದಕ್ಕೆ ಹಾಕಿ, ಇಲ್ಲವೇ ನೀವೇ ಹೇಗಾದರೂ ಎಲ್ಲವನ್ನು ಸಂಭಾಳಿಸಿ" ಎಂದರು. ನನಗೆ ಜಂಘಾಬಲ ಉಡುಗಿತು. ಮಂಗಳವಾರ ಮೀಟಿಂಗಿದೆ. ಇವರು ಹೀಗೆನ್ನುತ್ತಿದ್ದಾರೆ. ಮೀಟಿಂಗ್‌ನಲ್ಲಿ ನಾನು ಇತರರಿಗೆ ಏನು ಜವಾಬು ಕೊಡಲಿ? ನನಗೆ ದಿಕ್ಕೇತೋಚ ದಂತಾಯಿತು. ಪಾತಾಳಕ್ಕೆ ಬಿದ್ದಂತಾಗಿದ್ದೆ. ಸಾವರಿಸಿಕೊಂಡು "ಇಲ್ಲ, ಇಲ್ಲ ದೇವಚಂದಭಾಯಿ, ಹೇಗೆ ಸಾಧ್ಯ? ಮಂಗಳವಾರ ಮೀಟಿಂಗ್ ಇದೆ. ನೀವು ಇರಲೇಬೇಕು, ಏನಾದರೂ ಹೇಳಲೇಬೇಕು. ಇಲ್ಲವಾದರೆ ಮುಂದಿನ ಮೀಟಿಂಗ್‌ಗೆ ಒಂದು ತಿಂಗಳು ಕಾಯಬೇಕಾಗುತ್ತದೆ. ಅದುವರೆಗೆ ಕಟ್ಟಡದ ಸ್ಥಿತಿ?" ಎಂದು ನಿಧಾನವಾಗಿ ಹೇಳಿದೆ. ಅವರು "ಇಲ್ಲ, ಇಲ್ಲ ನಾನು ಹೋಗಲೇಬೇಕು" ಎಂದರು. ನಾನು ಮತ್ತೆ "ಇಲ್ಲ, ನೀವು ಹೋಗುವುದಿಲ್ಲ" ಎಂದೆ. ಅದಕ್ಕೆ ನಕ್ಕ ಅವರು "ಇದೇನು ಭವಿಷ್ಯ ಹೇಳುತ್ತೀರೇನು ನೀವು?" ಎಂದರು. "ಹಾಗಲ್ಲ , ಈಗ ಸಮಯ ಎಲ್ಲಿದೆ ದೇವಚಂದಭಾಯಿ, ನೀವು ಹೊರಟು ಹೋದರೆ ಇಲ್ಲಿ ನಾನೇನು ಮಾಡುವುದು?" ಎಂದೆ. "ನಾನು ಹೋಗಲೇಬೇಕು, ಆಗಲಿ ನೋಡೋಣ" ಎಂದು ರಿಸೀವರನ್ನಿಟ್ಟರು.

ನನ್ನ ಬಾಯಿಂದ ಆ ರೀತಿಯ ಮಾತು ಏಕೆ ಬಂತೋ ನನಗೆ ತಿಳಿಯದು. ಅನೇಕ ವೇಳೆ ದೇವರು ಸಹಾಯ ಮಾಡುವುದು ಹೀಗೆಯೇ. ನನ್ನ ಭಾವುಕತೆಯಲ್ಲಿ ಹೇಳಿದ ಮಾತು ಅದು! ಎಲ್ಲಿ ನಾವು ತ್ರಿಕರಣಶುದ್ಧಿಯಿಂದ, ಪುರುಷಪ್ರಯತ್ನವೆಲ್ಲವನ್ನೂ ಮಾಡುತ್ತೇವೆಯೋ ಅಲ್ಲಿ ಭಗವಂತನೂ ಸಹಾಯ ಮಾಡುತ್ತಾನೆ ಎನ್ನುವ ಮಾತು ಸತ್ಯ. ಇದು ಮೂಢ ನಂಬಿಕೆಯಲ್ಲ, ತರ್ಕಕ್ಕೆ ಸಿಕ್ಕುವುದೂ ಅಲ್ಲ. ಅದಕ್ಕೇ ಅವನು ಹೇಳಿರುವುದು.

> **ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ,**
> **ತತ್ರ ಶ್ರೀಃ ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ||**

ಎಂದು. ಪುರುಷಪ್ರಯತ್ನಕ್ಕೆ ಭಗವಂತನ ಅನುಗ್ರಹದ ಲಗ್ನವಾಗಬೇಕು. ಹಾಗಾದಾಗ ನಮ್ಮ ನಂಬಿಕೆ ಹೆಚ್ಚಾಗುತ್ತದೆ. ಹಾಗೆಯೇ ಆದದ್ದು ಇಲ್ಲಿ.

ಎಷ್ಟೇ ಕಷ್ಟಪಟ್ಟಿದ್ದರೂ ಒಮ್ಮೊಮ್ಮೆ ಕಾರ್ಯಸಿದ್ಧಿಯಾಗದೆಯೂ ಇರಬಹುದು, ನಮ್ಮ ದುರದೃಷ್ಟದಿಂದ. ಎಂದೇ ನನಗೆ ಬಹಳ ನಿರಾಸೆಯಾಯಿತು. ಮಾರನೆಯ ದಿನ ಎಂದರೆ ಶನಿವಾರ ನಮ್ಮ

ಶ್ರೀ ಇ.ಎಸ್. ವೆಂಕಟರಾಮಯ್ಯನವರು (ನಿವೃತ್ತ ಮುಖ್ಯ ನ್ಯಾಯಾಧೀಶರು) ಲಂಡನ್ನಿಗೆ ಬಂದಿದ್ದರು. ಆಗ ಅವರು ಸುಪ್ರೀಂಕೋರ್ಟ್ ನ್ಯಾಯವಾದಿಗಳು. ಅವರು ತಮ್ಮ ೧೫ ದಿನಗಳ ಯೂರೋಪ್ ಪ್ರವಾಸವನ್ನು ಮುಗಿಸಿಕೊಂಡು ಲಂಡನ್ನಿನಲ್ಲಿ ಒಂದು ವಾರ ಇರಲೆಂದು ಬಂದಿದ್ದರು. ಬೆಂಗಳೂರು ವಿದ್ಯಾಭವನದ ಸದಸ್ಯರು. ನಮಗೆ ಬಹಳ ಹಿಂದಿನಿಂದಲೂ ಪರಿಚಯ. ಅವರು ಬಂದಾಗ ಆತ್ಮೀಯರಾದ ಅವರನ್ನು ನೋಡಿ ನನಗೆ ಬಹಳ ಖುಷಿಯಾಯಿತು. ಆದರೂ ಮನಸ್ಸಿನ ಮಂಕು , ಮುಖದಲ್ಲಿ ಅವರಿಗೆ ಕಂಡಿತ್ತು. ಕೂಡಲೆ ಅವರು "ಯಾಕೆ ಮತ್ತೂರ್ ಹೀಗಿದ್ದೀರಿ?" ಎಂದರು. ನಾನು ಇದ್ದ ವಿಷಯ ಹೇಳಿದೆ , "ನೋಡಿ ಸರ್, ಕಟ್ಟಡಕ್ಕಾಗಿ ಬಹಳ ಹುಡುಕಾಟ ನಡೆದಿದ್ದರೂ ಒಂದೂ ಸಿಗುತ್ತಿಲ್ಲ. ಯಾಕೋ ಯಾವುದೂ ಆಗಿಬರುತ್ತಿಲ್ಲ" ಎಂದೆ ಅಸಹಾಯಕನಾಗಿ. ಪಾಪ ಅವರೇನು ಮಾಡಿಯಾರು! ಆದರೂ ಸಮಾಧಾನ ಹೇಳಿದರು. ಅನುಕಂಪ ತೋರಿಸಿದರು. ಭಾನುವಾರ ಅವರನ್ನು ಕರೆದುಕೊಂಡು ಒಂದೆರಡು ಕಟ್ಟಡಗಳನ್ನು ತೋರಿಸಿಕೊಂಡು ಬಂದೆವು , ಹಾಗೆಯೇ ಪೋರ್ಟ್ಸ್‌ಮತ್‌ಗೂ ಹೋಗಿ ಬಂದೆವು. ಅವರಿಗೆ ಪುಟ್ಟ ಪ್ರವಾಸ ಖುಷಿಕೊಟ್ಟಿತು. ದಾರಿಯಲ್ಲಿ ನಾನು ನನ್ನ ನಾಲ್ಕೈದು ವರ್ಷಗಳ ಅನುಭವಗಳನ್ನೆಲ್ಲ ಹೇಳಿದೆ. ನಾನು ಹೇಳಿದ ಅನುಭವಗಳನ್ನೆಲ್ಲ ಬಹಳ ಪ್ರೀತಿಯಿಂದ ಕೇಳಿ ಅನುಭವಿಸಿದರು. ರಾತ್ರಿ ಮನೆಗೆ ಬಂದಾಗಲೂ ಅದೇ ಚಿಂತೆ. ನಾವೊಂದು ರೂಮಿನಲ್ಲಿ, ವೆಂಕಟರಾಮಯ್ಯನವರು ಒಂದು ರೂಮಿನಲ್ಲಿ. ಇದ್ದ ಎರಡು ರೂಮುಗಳಲ್ಲೇ ಕ್ಲಾಸುಗಳು ನಡೆದು, ರಾತ್ರಿ ಅದೇ ಅತಿಥಿ ಗೃಹ, ಮಲಗುವ ಮನೆ ಎಲ್ಲವೂ ಆಗುತ್ತಿತ್ತು. ನಮ್ಮಲ್ಲಿಗೆ ಬಂದವರು ಹಂಸತೂಲಿಕಾತಲ್ಪ ನಿರೀಕ್ಷೆ ಮಾಡಲಾಗುತ್ತಿರಲಿಲ್ಲ. ಹಾಗೆ ನಿರೀಕ್ಷಿಸುವವರು ನಮ್ಮಲ್ಲಿಗೆ ಬರುತ್ತಲೂ ಇರಲಿಲ್ಲ. ನಮ್ಮಲ್ಲಿಗೆ ಬರುತ್ತಿದ್ದವರು ಸರಳರಲ್ಲಿ ಸರಳರು. ನಮ್ಮಲ್ಲಿಗೆ ಬಂದವರು, ನಮ್ಮ ಜತೆ ಇದ್ದವರು, ಎಲ್ಲರೂ ಘನತೆವೆತ್ತ, ಗೌರವಾನ್ವಿತರೇ!! ಪರಿಸ್ಥಿತಿಯ ಬಿಗುವನ್ನು ಸಡಿಲಿಸಲು ಶ್ರೀ ಇ.ಎಸ್.ವಿ.ಯವರು ನನ್ನ ಅನುಭವಗಳನ್ನು ಕೇಳಿಯಾದ ಮೇಲೆ "ಬರೆಯಿರಿ ಮತ್ತೂರ್, ನಿಮ್ಮ ಈ ಅನುಭವಗಳನ್ನೆಲ್ಲ! 'ಮತ್ತೂರ್ ನಿಂದ ಪೋರ್ಟ್ಸ್‌ಮತ್‌ಗೆ' ಎಂದು ಹೆಸರು ಕೊಟ್ಟು. ಒಳ್ಳೇ ಪುಸ್ತಕವಾಗುತ್ತದೆ ಅದು!" ಎಂದು ನಗೆಯಾಡಿದರು.

ಭಾನುವಾರವೂ ಕಳೆಯಿತು. ದೇವಚಂದಭಾಯಿ ಹೊರಗಿದ್ದಾರೆ. ನಾಳೆ ಮಂಗಳವಾರ ಮೀಟಿಂಗಿದೆ. ಕಟ್ಟಡ ಸಿಕ್ಕಿಲ್ಲ ಎನ್ನುವ ನನ್ನ ಯೋಚನೆ ಸಾಗಿತ್ತು. ಅಷ್ಟರಲ್ಲಿ ಟ್ರಿಂಗ್...ಟ್ರಿಂಗ್ ಎಂದು ಫೋನು. ಸೋಮವಾರ ಬೆಳಗ್ಗೆ ದೇವಚಂದ ಭಾಯಿಯವರ ಫೋನು "ನಾನು ಮಾಥೂರ್‌ಜೀ" ಎಂದರು. ನಾನು ಅಚ್ಚರಿಯಿಂದ "ದೇವಚಂದಭಾಯಿ, ಕಹಾಂಸೆ ? (ಎಲ್ಲಿಂದ) ಜಿನೀವಾಸೆ?" ಎಂದೆ. "ಇಲ್ಲ, ಇಲ್ಲ. ಇಲ್ಲೇ ಲಂಡನ್ನಿನಲ್ಲೇ ಇದ್ದೇನೆ. ನಾನು ಹೋಗಲಿಲ್ಲ ಜಿನೀವಾಗೆ, ನಿಮ್ಮ ಭವಿಷ್ಯ ನಿಜವಾಯಿತು. ನೀವು ಹೋಗುವುದಿಲ್ಲ ಎಂದಿರಿ, ನಾನು ಹೋಗಲಿಲ್ಲ" ಎಂದು ನಕ್ಕರು. ನನಗೆ ಒಂದು ಕ್ಷಣ ನಂಬಿಕೆ ಯಾಗಲಿಲ್ಲ. ನನ್ನ ಮೌನ ನೋಡಿ ಮುಂದುವರೆದ ಅವರು, "ಒಂದು ಚರ್ಚು ಮಾರಾಟಕ್ಕಿದೆ, ಬಹಳ ಹಳೆಯ ಕಟ್ಟಡ, ಬರುತ್ತೀರಾ? ನೋಡಿ ಬರೋಣಾ" ಎಂದರು. ಎದುರುಗಡೆ ಶ್ರೀ ಇ.ಎಸ್.ವಿ. ಕುಳಿತಿದ್ದರು. "ಸರ್, ನೀವಿದ್ದೀರಿ ಇಲ್ಲಿ. ಬೆಳಗ್ಗೆಯೇ ಒಂದು ಒಳ್ಳೆಯ ಸುದ್ದಿಯೂ ಬಂದಿದೆ. ಚರ್ಚು ಕಟ್ಟಡ ಮಾರಾಟಕ್ಕಿದೆಯಂತೆ" ಎಂದೆ ಫೋನು ಹಿಡಿದುಕೊಂಡೇ ಶ್ರೀ ಇ.ಎಸ್.ವಿ.ಯವರಿಗೆ. ಅತ್ತಲಿಂದ ದೇವಚಂದಭಾಯಿ "ಮಾಥೂರ್, ನೀವು ಬರುತ್ತೀರಾ?"ಎಂದರು ಮತ್ತೆ. "ಹೌದು ಹೌದು ನಾವು ತಯಾರಿದ್ದೇವೆ" ಎಂದೆ ನಾನು. ಅವರು "ನಾವು ಎಂದರೆ ಯಾರು?" ಎಂದರು. ಅದಕ್ಕೆ "ನಾನು, ಭಾರತದಿಂದ ಬಂದಿರುವ ಸುಪ್ರೀಮ್‌ಕೋರ್ಟ್ ನ್ಯಾಯವಾದಿಗಳು ಶ್ರೀ ಇ.ಎಸ್.ವಿ.ಯವರು. ಅವರೂ ನನ್ನ ಜತೆ ಬರುತ್ತಾರೆ" ಎಂದೆ. "ಹೌದೇನು? ಬನ್ನಿ ಬೇಗ ಹಾಗಾದರೆ, ಒಮ್ಮೆ ಹೋಗಿ ನೋಡಿ ಬರೋಣ" ಎಂದು ದೇವಚಂದಭಾಯಿ ರಿಸೀವರ್ ಇಟ್ಟರು. ನಾನೂ, ಶ್ರೀ ಇ.ಎಸ್.ವಿ.ಯವರೂ ಒಂದು ಟ್ಯಾಕ್ಸಿ ಮಾಡಿಕೊಂಡು ಹೊರಟೆವು. ದೇವಚಂದರ ಆಫೀಸಿಗೆ ಹೋಗಿ ಅಲ್ಲಿ ಟ್ಯಾಕ್ಸಿ ಬಿಟ್ಟು ಅವರ ಕಾರಿನಲ್ಲಿ ಮುಂದುವರೆದೆವು. ನಾನು, ಶ್ರೀ ಇ.ಎಸ್.ವಿ. ಇಬ್ಬರೂ, 'ಮೂವರು ಹೋಗಬಾರದು ಒಳ್ಳೆ ಕೆಲಸಕ್ಕೆ. ಅದಕ್ಕೆ ಕಾರಿನ ಡ್ರೈವರನೂ ಇರುವುದು ಒಳ್ಳೆಯದೇ ಆಯಿತು!' ಎಂದು ಮಾತನಾಡಿಕೊಂಡು ನಕ್ಕೆವು. ಅಷ್ಟು ಕಾತುರ ಮನಸ್ಸಿನಲ್ಲಿ! ಚಂದರಿಯ ಆಫೀಸಿನಿಂದ ಅರ್ಧಘಂಟೆಯ ಪ್ರಯಾಣ. 'ಸರಿಯಾಗಿ ಹೋಗಲಪ್ಪಾ ಭಗವಂತ' ಎಂದು ಪ್ರಾರ್ಥಿಸುತ್ತಿದ್ದೆ ನಾನು.... ನಾವು ಅಲ್ಲಿ ತಲುಪಿದೆವು. ವೆಸ್ಟ್‌ಕೆನ್ಸಿಂಗ್‌ಟನ್‌ನಲ್ಲಿ ಕ್ಯಾಸಲ್‌ಟೌನ್ ರಸ್ತೆ; ಅದು ಭಾರೀ ಚರ್ಚು, ಭವ್ಯವಾದ ಕಟ್ಟಡ! ತಲೆ ಎತ್ತಿ ಆಕಾಶದೆತ್ತರಕ್ಕೂ ನಿಂತಿದ್ದ ಅದನ್ನು ನೋಡಿ ಮೈ ರೋಮಾಂಚನವಾಯಿತು. ೧೮೯೨ರಲ್ಲಿ ನಿರ್ಮಾಣವಾಗಿದ್ದ ಆ ಚರ್ಚಿನ ಮೇಲ್ವಿಚಾರಣೆ ಮಾಡುತ್ತಿದ್ದ ಲಿಲ್ಲಿ ಹ್ಯಾರಿಸನ್ ನಗೆ ಮೊಗದ, ನೀಲಿ ಕಣ್ಣಿನ ಚೆಲುವೆಯಾಗಿದ್ದಳು. ನಗುನಗುತ್ತಲೇ ನಮ್ಮನ್ನು ಒಳಗೆ ಬರಮಾಡಿಕೊಂಡಳು. ಮಾರಾಟಕ್ಕೆಂದು ಇದ್ದ ಆ ಚರ್ಚನ್ನು ಬಹಳ ಶುಚಿಯಾಗಿಟ್ಟಿದ್ದರು. ನ್ಯಾಯವಾದಿಗಳಿರುವ 'ಇನ್ನರ್ ಟೆಂಪಲ್'ನ ಆಫೀಸಿಗೆ ಬಹಳ ಹತ್ತಿರವಾಗಿದ್ದ ಆ ಜಾಗದಲ್ಲಿ ಆ ಚರ್ಚು ಖಾಲಿ ಇರುವುದೇ ಒಂದು ಆಶ್ಚರ್ಯದ ವಿಷಯವಾಗಿತ್ತು. ಇದನ್ನು ಬೇರೆ ಅಂಗಡಿಗಳಿಗೆ, ವ್ಯಾಪಾರ ಮಳಿಗೆಗಳಿಗೆ, ಕ್ಲಬ್‌ಗೆ , ಹೋಟೆಲ್‌ಗೆ ಮಾರುವಂತಿರಲಿಲ್ಲ. ಅದು ದೇವರನ್ನು ಆರಾಧಿಸುತ್ತಿದ್ದ ಪವಿತ್ರ ಸ್ಥಳವಾದುದರಿಂದ, ನಾನು ಮೊದಲೇ ಹೇಳಿರುವಂತೆ ಧಾರ್ಮಿಕ ಉದ್ದೇಶಗಳಿಗೆ ಅಥವಾ ಸಂಸ್ಕೃತಿ ಸಂಸ್ಥೆಗಳಿಗೆ ಮಾತ್ರ ಕೊಡುವಂತಹ ಕಟ್ಟಡವಾಗಿದ್ದಿತು.

ಈ ರೀತಿಯ ಅನೇಕ ಚರ್ಚುಗಳನ್ನು ಇಸ್ಲಾಂ ಧರ್ಮದವರು ತೆಗೆದುಕೊಂಡು ಚರ್ಚನ್ನು ಕೆಡವಿ ಮಾಸ್ಕ್ ಮಾಡಿಕೊಂಡಿದ್ದಾರೆ. ಹಿಂದೂಗಳೂ ದೇವಸ್ಥಾನ ಕಟ್ಟಿಸಿದ್ದಾರೆ. ಬೌದ್ಧ ಭಿಕ್ಷುಗಳು ಚೈತ್ಯಾಲಯ ಮಾಡಿಕೊಂಡಿದ್ದಾರೆ. ಪುರಾತನ ಸಂಸ್ಕೃತಿಯನ್ನು ಅಭಿವ್ಯಕ್ತಿಸುವ ಕಟ್ಟಡಗಳನ್ನು ಬಿಟ್ಟು ಮಿಕ್ಕ ಯಾವುದೇ ಕಟ್ಟಡವನ್ನೂ ನಾವು ತೆಗೆದುಕೊಂಡು ನಮಗೆ ಬೇಕಾದಂತೆ ರೂಪಿಸಿಕೊಳ್ಳಬಹುದು. ಆದರೆ ಚರ್ಚುಗಳನ್ನು ಕೊಳ್ಳುವವರಿಗೆ ಮಾತ್ರ ಈ ಎರಡು ನಿಬಂಧನೆಗಳಿದ್ದವು ಅಷ್ಟೆ. ಇಲ್ಲಿ ಒಂದು ಮಾತು ಹೇಳಬೇಕೆಂದರೆ, ಆ ಜನರ ಮನೋಬಲ ಅದು, ಅವರಿಗೆ ಎಲ್ಲ ಧರ್ಮಗಳೂ ಒಂದೇ. 'ಚರ್ಚನ್ನು ಇವರು ಕೆಡವಿ ತಮ್ಮ ಮಂದಿರ ಕಟ್ಟುತ್ತಾರಲ್ಲ' ಎಂದು ಕೊರಗುವುದಿಲ್ಲ ಅವರು. 'ನಮಗೆ ಅದರಲ್ಲಿ ಪ್ರಯೋಜನ ಇಲ್ಲ. ಇತರರು ಸರಿಯಾದ ರೀತಿಯಲ್ಲಿ ಉಪಯೋಗಿಸಿದರೆ ಸರಿ' ಎನ್ನುವ ಮನೋಭಾವ ಅವರದು. ಈ ರೀತಿಯ ಕೆಲಸಗಳನ್ನು ಅವರು ಶ್ರದ್ಧೆಯಿಂದ, ಶುದ್ಧ ಅಂತಃಕರಣದಿಂದ ನೋಡುತ್ತಾರೆ. ನಾವಲ್ಲಿಗೆ ಕಾಲಿಟ್ಟಾಗಲೂ ಅಷ್ಟೆ, ಮುಖದಲ್ಲಿ ಎಂಥದೋ ಪ್ರಸನ್ನತೆ, ನಮ್ಮನ್ನು ನೋಡಿ ಏನೋ ಸಮಾಧಾನ, 'ಇವರು ಸಭ್ಯರು, ಸಂಭಾವಿತರು' ಎಂದು ತಿಳಿದೇ ಆಕೆ ನಮ್ಮನ್ನು ತುಸು ಹೆಚ್ಚು ಆತ್ಮೀಯವಾಗಿಯೇ ಕಂಡಳು.

ನಾನು ಆ ಆತುರದಲ್ಲಿ ಮರೆಯದೆ ಶ್ರೀ ಎಂ.ಪಿ. ಬಿರ್ಲಾರವರು ದಲಾಲ್‌ಜಿಗೆ ಬರೆದ ಪತ್ರವನ್ನೂ ತೆಗೆದುಕೊಂಡು ಹೋಗಿದ್ದೆ. ನಾವು ನೋಡುವ ಜಾಗದಲ್ಲಿ ಅವರು ಹೇಳಿರುವ ಸೌಕರ್ಯಗಳು ಇವೆಯೋ, ಇಲ್ಲವೋ ನೋಡಲೆಂದು. ಚರ್ಚಿನ ಬಾಗಿಲು ತೆರೆದು ಒಳಗೆ ಕಾಲಿಟ್ಟ ಕೂಡಲೇ ಬಿರ್ಲಾರವರು ಹಾಕಿರುವ ಷರತ್ತಿನಂತೆಯೇ ದೊಡ್ಡ ಪ್ರಾರ್ಥನಾ ಮಂದಿರ (ಇದನ್ನು ನಾವು ನೋಡಿದುದು ಮೇ ತಿಂಗಳಲ್ಲಿ. ಆಗ ಅಲ್ಲಿ ಬಹಳ ಸೆಕೆ) ತಲೆ ಎತ್ತಿ ನೋಡಿದರೆ ಸುಮಾರು ೨೦೦ ಅಡಿಗಳ ಎತ್ತರ! ಆ ಪ್ರಾರ್ಥನಾ ಮಂದಿರವೋ ೩೦೦ ಜನ ಕೂಡಬಹುದಾದಂಥಾದ್ದು. ಅಲ್ಲಿಯೇ ಎದುರಿಗೇ ದೊಡ್ಡದಾದ ವೇದಿಕೆ (ಕಾರ್ಯಕ್ರಮಗಳನ್ನು ಕೊಡಲು) ಅಲ್ಲಿಯೇ ೪೦-೫೦ ಜನ ಕೂರಬಹುದು. ಶ್ರೀ ಇ.ಎಸ್.ವಿ. ಯವರು ಆಗಲೇ "ಮತ್ತೂರ್, ಇಲ್ಲಿ ಕಛೇರಿ ಮಾಡೋಕೆ ಬಹಳ ಚೆನ್ನಾಗಿದೆರೀ..." ಎಂದರು! ಅವರಂತೂ 'ಆಯಿತು, ನಮಗೆ ಈ ಕಟ್ಟಡ ಬಂದಾಯಿತು' ಎನ್ನುವಂತೆಯೇ ಮಾತನಾಡ ತೊಡಗಿದರು! ಅಲ್ಲಿಂದ ಪಕ್ಕಕ್ಕೆ ಶೌಚಾಲಯಗಳನ್ನು ಕಟ್ಟಿಸಲು ಜಾಗ ಇದೆ! ಅದರ ಪಕ್ಕಕ್ಕೆ ಒಂದು ರೂಮು ಆಫೀಸಿಗೆ ಹೇಳಿ ಮಾಡಿಸಿದಂಥ ಸ್ಥಳ! ನಾವು ಈ ರೀತಿ ಮಾತನಾಡಿಕೊಳ್ಳುತ್ತಿದ್ದುದು ಕೇಳಿ, ಲಿಲ್ಲಿ ಹ್ಯಾರಿಸನ್ "ಏನು ಮಾತನಾಡಿಕೊಳ್ಳುತ್ತೀರಿ ನೀವು?" ಎಂದು ನಗುತ್ತಿದ್ದಳು! ದೇವಚಂದಭಾಯಿಯವರೂ "ಮತ್ತೂರ್‌ಜೀ, ಇದು ನಮ್ಮದಾಯಿತು ತಾನೆ?" ಎಂದರು. ಅಲ್ಲಿಂದ ಮುಂದೆ ಹೋದರೆ ಆ ಪಕ್ಕದಲ್ಲಿ ಒಬ್ಬ ಕ್ಷೌರಿಣಿ ಹೆಂಗಸು ಎರಡು ರೂಮುಗಳನ್ನು ತೆಗೆದುಕೊಂಡಿದ್ದಳು, ಈ ಚರ್ಚಿನವರೇ ಅವಳಿಗೆ ಜಾಗ ಕೊಟ್ಟಿದ್ದರು. (ಇಲ್ಲಿ ಕ್ಷೌರಿಣಿ ಎಂದರೆ ಅವಳೇನೂ ಕೇಶಾಲಂಕಾರ ಮಾಡುವವಳಲ್ಲ. ನಮ್ಮಲ್ಲಿ hair stylist ಎನ್ನುತ್ತಾರಲ್ಲ ಹಾಗೆ. ಇವಳು ಕ್ಷೌರಿಣಿಯೇ! ಇವರು ಮನೆ ಮನೆಗೆ ಹೋಗಿ, ಹೆಂಗಸರು ಕೇಳಿದ ರೀತಿ ತಲೆ ಕೂದಲು ಕತ್ತರಿಸಿಕೊಡುವವರು, ಅದಕ್ಕೆ ಅವರಿಗೆ ಕ್ಷೌರಿಣಿಯರು ಎಂದೇ ಹೆಸರು! ಇದು ನಮ್ಮಲ್ಲಿ ಅನೇಕರಿಗೆ ಗೊತ್ತಿಲ್ಲ. ಅದಕ್ಕೆ ಈ ವಿವರಣೆ) ಮತ್ತೆ ಇನ್ನು ಪಕ್ಕಕ್ಕೆ ಹೋದರೆ ಅಲ್ಲಿ ಇನ್ನೊಂದು ಸಭಾಂಗಣ . ಸುಮಾರು ೧೫೦-೨೦೦ ಜನರಿಗೆ ಆಗುವಂಥದು , ಮೀಟಿಂಗ್ ಹಾಲ್‌ಗೆ ಸರಿಯಾಗಿತ್ತು ಅದು! ಅದರ ಪಕ್ಕದಲ್ಲೇ ಇನ್ನೊಂದು ಹಾಲ್, ಪ್ರಾರ್ಥನಾ ಮಂದಿರಕ್ಕೆ ಹೇಳಿ ಮಾಡಿಸಿದಂತಿತ್ತು ಅದು! ಆಮೇಲೆ ೩-೪ ದೊಡ್ಡ ದೊಡ್ಡ ರೂಮುಗಳು, ಕ್ಲಾಸುಗಳನ್ನು ನಡೆಸಲು ಸರಿಯಾಗಿದ್ದವು ಅವು! ಅನಂತರ ಈ ಪಕ್ಕಕ್ಕೆ ಬಂದು ಅಲ್ಲಿ ಬಾಗಿಲು ತೆರೆದು ತೋರಿಸುತ್ತಾಳೆ. ನಾನು ಮೂಕವಿಸ್ಮಿತನಾಗಿ ಹೋಗಿದ್ದೆ! ಅಲ್ಲಿ ರೆಜಿಸ್ಟ್ರಾರ್ ವಾಸ ಮಾಡಲು ತಕ್ಕುದಾದ ಒಳ್ಳೆಯ ಸೊಗಸಾದ ಮನೆ. ಬಲಗಡೆಗೆ ಒಂದು ರೂಮು, ಒಳಗಡೆ ಸಣ್ಣ ರೂಮು, ಎಡಗಡೆಗೆ ಒಂದು ಅಡುಗೆ ಮನೆ, ಅದರ ಪಕ್ಕಕ್ಕೆ ಛಾವಣಿ ಹೊದಿಸಿದ ಶೆಡ್, ಅದರ ಹಿಂದೆ ಗಿಡಗಳಿಂದ ತುಂಬಿದ್ದ ಹಿಂಭಾಗದ ಅಂಗಳ....! ಮತ್ತೆ ಮುಂಭಾಗಕ್ಕೆ ಒಂದು ಮೆಟ್ಟಲೇರಿದರೆ, ಪಾದ್ರಿಯವರಿಗೆ ಎಂದಿದ್ದ ಒಂದು ಕೋಣೆ, ಒಂದು ದೇವರ ಕೋಣೆ, ಮತ್ತೆರಡು ಮಲಗುವ ಕೋಣೆಗಳು! ಅಲ್ಲಿಯೂ ಒಂದು ಕಾಕತಾಳೀಯ, ಧರ್ಮಕರ್ಮ ಸಂಯೋಗ ಎನ್ನುವಂತೆ ನಾವು ಈಗ ಇರುವ ಕಟ್ಟಡದಲ್ಲಿದ್ದ ವಾಲ್‌ಪೇಪರ್ (ಗೋಡೆಗೆ ಅಂಟಿಸಿದ ಕಾಗದ) ಈ ಮನೆಯ ಗೋಡೆಗಳಲ್ಲೂ ಸಹ ! ಎಂತಹ ಸಂಯೋಗ ಎನಿಸಿ, ನನಗೆ ಮಾತೇ ಹೊರಡಲಿಲ್ಲ! ದೇವಚಂದಭಾಯಿ 'ಇದು ಹೇಗಿದೆ?' ಎನ್ನುತ್ತಿದ್ದಾರೆ. ನಾನು ಮಾಧವಪ್ರಸಾದ ಬಿರ್ಲಾರ ಕಾಗದವನ್ನು ಕೈಯಲ್ಲಿಟ್ಟುಕೊಂಡು ಒಂದೊಂದನ್ನೂ ನೋಡಿ , ಪರೀಕ್ಷಿಸಿ ಅದು ತಾಳೆಯಾಗುತ್ತಿರುವುದನ್ನು ಕಂಡು ಬೆರಗಾಗಿಹೋಗಿದ್ದೇನೆ! ಇದೇನು? ಈ ಕಟ್ಟಡ, ಈ ಚರ್ಚು ಮಾಧವ ಭಾಯಿಯವರ ಕನಸಿನಲ್ಲಿ ಬಂದಿತ್ತೇ? ಹೀಗೆ ಇಷ್ಟು ಹೋಲಿಕೆಯಾಗುವ ರೀತಿಯಲ್ಲಿ ಬರೆದಿದ್ದಾರಲ್ಲ! ಅವರ ಕನಸಿನ ಕಟ್ಟಡವೇ ಇದು? ಎಂದು ಮತ್ತೆ ಮತ್ತೆ ನೋಡುತ್ತಿದ್ದೆ. ಇದು ಅವರೇ ಕಟ್ಟಿಸಿ , 'ಅಲ್ಲಿಗೆ ಹೋಗು' ಎನ್ನುವಂತಿದೆ ಎನಿಸಿತು ನನಗೆ! ಅಲ್ಲಿಂದ ಮತ್ತೆ ಮಹಡಿಗೆ ಹೋದರೆ , ಮುಂದೆ ಆವಶ್ಯಕತೆ ಆದಾಗ ಹೊಸದಾಗಿ ಕಟ್ಟಿಸಲು ಸ್ಥಳಾವಕಾಶವಿದೆ! ಮತ್ತೆ ಅಲ್ಲಿಂದ ಕೆಳಗೆ ಬಂದು ನೋಡಿದರೆ ಭರ್ಜರಿಯಾದ, ಬಲವಾದ ಅಡಿಪಾಯದ ಮೇಲೆ ನಿಂತ ಕಂಬಗಳು, ಕಂಬಗಳ ಮೇಲೆ ಚರ್ಚು! ದಿಗ್ಗಜಗಳು ಭೂಮಿಯನ್ನು ಹೊತ್ತಿವೆ ಎನ್ನುವ ಹಾಗೆ! ನಮಗೆ , ನಾವೆಲ್ಲಿದ್ದೇವೆ ಎನ್ನುವುದರ ಪರಿವೆಯೇ ಇರಲಿಲ್ಲ! "ನಿಮಗೆ ಈ ಕಟ್ಟಡ

ಇಷ್ಟವಾಯಿತೇ?'' ಎನ್ನುತ್ತಿದ್ದಾಳೆ ಲಿಲ್ಲಿ ಹ್ಯಾರಿಸನ್! ನನಗೋ, ಮೂರು ಲೋಕ ಕೊಟ್ಟರೂ ಬೇಡ, ಈ ಚರ್ಚು ಒಂದನ್ನು ಕೊಟ್ಟರೆ ಸಾಕು, ಎನ್ನುವಂತಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಆ ಮನೆಯನ್ನು ನೋಡಿ ನಾನು ದಿಙ್ಮೂಢನಾಗಿದ್ದೆ! ಭವನವನ್ನು ನೋಡಿಕೊಳ್ಳುವವರು ಎಲ್ಲೋ ಇದ್ದರಾಗದು, ಅಲ್ಲೇ ಆ ಪ್ರಾಂಗಣದಲ್ಲೇ ಇರಬೇಕು. ಅವರೇ ಅಲ್ಲಿ ಕಾವಲುಗಾರರು, ಆಳುಗಳು ಎಲ್ಲವೂ, ಇದು ಹೇಗೆ ಈ ಮನೆ ಅದೆಷ್ಟು ಹೊಂದಿಕೊಂಡಂತಿದೆ ನಾವು ಇಲ್ಲಿರಲು!

ಶ್ರೀ ಇ.ಎಸ್.ವಿ.ಯವರಂತೂ 'ಮತ್ತೂರ್, ಈ ದಿನ ರಾತ್ರಿ ಅಂಗವಸ್ತ್ರವನ್ನು ಹಾಕಿಕೊಂಡು ನಾವು ಇಲ್ಲೇ ಮಲಗಿಬಿಡೋಣ, ನಾವು ಒಂದು ರಾತ್ರಿ ಮಲಗಿದರೆ, ಇದು ನಮ್ಮದಾಗುತ್ತದೆ. ಹಾಗೆಂದು ಶಾಸ್ತ್ರ ಹೇಳುತ್ತದೆ' ಎನ್ನುವುದೇ? ಅಷ್ಟು ಸಜ್ಜನರು ಅವರು ! ಶ್ರೀ ಇ.ಎಸ್.ವಿ.ಯವರು ಚರ್ಚಿನ ಬೆಲೆ ಗೊತ್ತಿಲ್ಲದಿದ್ದರೂ 'ಹೇಗಾದರೂ ಇದು ಭವನಕ್ಕೆ ಸಿಗಬೇಕು' ಎಂದರು. ದೇವಚಂದಭಾಯಿ ''ನೋಡುವಾ ಏನಾಗುತ್ತದೆ'' ಎಂದು ಹೇಳಿದರು. ಲಿಲ್ಲಿ ಸುಮಾರು ೪೬ ವರ್ಷಗಳಿಂದ ಸ್ಟೆನೋ ಆಗಿ ಆ ಬಿಲ್ಡಿಂಗ್ ಸೊಸೈಟಿಯಲ್ಲಿ ಕೆಲಸ ಮಾಡುತ್ತಿದ್ದಾರೆ. (ಅವರಿಗೆ ಮದುವೆಯಾಗಿರಲಿಲ್ಲ. ಆದರೆ ಒಬ್ಬ ಗೆಳೆಯನಿದ್ದ) ಆಕೆಗೂ ಈ ಚರ್ಚು ನಮಗೆ ಸಿಗಲಿ ಎನ್ನುವ ಭಾವನೆ ಮೂಡಿತ್ತು.

ಶ್ರೀ ಇ.ಎಸ್.ವಿ.ಯವರು ಹೇಳಿದಂತೆಯೇ ಆ ರಾತ್ರಿ ನಾನೂ, ಅವರೂ ಆ ಚರ್ಚಿನ ಹಾಲ್‌ನಲ್ಲಿಯೇ ಮಾತನಾಡುತ್ತ ಮಲಗಿದ್ದು, ಬೆಳಗಾಗುತ್ತಲೇ ಎದ್ದು, ಮುಖ ತೊಳೆದು ಮನೆಗೆ ಬಂದೆವು. ಶ್ರೀ ಇ.ಎಸ್.ವಿ.ಯವರ ಸ್ನೇಹ ಅಷ್ಟು ನಿರ್ಮಲವಾದುದು! ಅವರಿಗೆ ತಾವು ಹಿರಿಯ ನ್ಯಾಯವಾದಿಗಳು ಎನ್ನುವ ಭಾವನೆ ಸ್ವಲ್ಪವೂ ಬಾಧಿಸದೆ, ನನ್ನ ಜೊತೆ ನನ್ನ ಅಣ್ಣನವರಂತೆಯೇ ಇದ್ದು, ಆ ಕಟ್ಟಡವನ್ನು ನೋಡಿ ಸಂಭ್ರಮಿಸಿ, ನನ್ನ ಸಂತೋಷವನ್ನು ಹಂಚಿಕೊಂಡು, ಎಷ್ಟೋ ಆತ್ಮೀಯ ಮಾತುಗಳನ್ನಾಡಿ ನಮ್ಮೊಡನೆ ದಿನಗಳನ್ನು ಕಳೆದರು. ಅಂತಹ ವ್ಯಕ್ತಿಯ ಸ್ನೇಹ ಸಿಗುವುದೂ ಪುಣ್ಯವೇ, ಅಂತಹ ಸಹೃದಯರು, ಸರಳ ಸ್ವಭಾವದವರು ಅವರು!

ನಾನೂ ಶ್ರೀ ಇ.ಎಸ್.ವಿ.ಯವರೂ ಬೆಳಗ್ಗೆ ಚರ್ಚಿನಿಂದ ಎದ್ದು ಬರುವಾಗ ನಾನು ಲಿಲ್ಲಿಗೆ ''ಮಿಸ್ ಲಿಲ್ಲಿ , ನೀವು ನಮ್ಮ ಪರವಾಗಿ ಚರ್ಚಿನ ಆಡಳಿತವರ್ಗದವರಿಗೆ ಒಂದು ಮಾತು ಹೇಳಬೇಕು'' ಎಂದೆ. ಅದಕ್ಕೆ ಆಕೆ ''ಖಂಡಿತವಾಗಿ! ನಾನು ಇಲ್ಲಿನ ಮೇಲ್ವಿಚಾರಕಳು ತಾನೇ? ಅವರು ನನ್ನ ಅಭಿಪ್ರಾಯವನ್ನು ಖಂಡಿತವಾಗಿಯೂ ಕೇಳುವರು! ಆಗ ನಾನು ನಿಮ್ಮ ಬಗ್ಗೆಯೇ ಹೇಳುತ್ತೇನೆ''ಎಂದು ಭರವಸೆ ಕೊಟ್ಟಳು. ಆಕೆಯ ಮಾತಿನಲ್ಲಿ ನಮ್ಮ ಬಗ್ಗೆ ತನಗೆ ಬೆಳೆದ ಗೌರವ ಭಾವನೆ ಸ್ಪಷ್ಟವಾಗಿತ್ತು. ಅನಂತರ ದೇವಚಂದಭಾಯಿಯವರು ನನ್ನನ್ನು ''ಮತ್ತೂರ್‌ಜೀ, ಆ ಚರ್ಚು ನಿಮಗೆ ಇಷ್ಟವಾಯಿತೇ?'' ಎಂದು ಕೇಳಿದರು. ಅದಕ್ಕೆ ನಾನು ''ಏನು ಹೇಳುತ್ತೀರಿ ಸರ್ ನೀವು! ಇಲ್ಲಿ ನೋಡಿ. ಮಾಧವ ಪ್ರಸಾದರು ಹಾಕಿರುವ ಷರತ್ತುಗಳಿಗೆ ಹೇಳಿ ಮಾಡಿಸಿದಂತಿದೆ ಅದು! ನೀವು ಮಾತನಾಡಿ...ಎಷ್ಟಾದರೂ ಸರಿ, ದುಡ್ಡು ಬಂದಿತೆಂದೇ ತಿಳಿಯಿರಿ'' ಎಂದು ಖುಷಿಯಿಂದ ಹೇಳಿದೆ.

ಚರ್ಚಿನ ಆಡಳಿತ ಸಂಸ್ಥೆಗೂ ತಿಳಿಸಿದ್ದಾಯಿತು. ಆ ಮುಂದಿನ ಭಾನುವಾರ ಕಮಿಟಿಯ ಸದಸ್ಯರನ್ನೂ ದಲಾಲ್‌ಜೀಯವರನ್ನೂ ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸಲಾಯಿತು. ಎಲ್ಲರಿಗೂ ಖುಷಿಯಾಗಿತ್ತು. ೧೪,೬೦೦ ಚದರಡಿಯ ಆ ಭಾರಿ ಚರ್ಚು ಎಲ್ಲರ ಮೆಚ್ಚಿಗೆ ಗಳಿಸಿತು. ೨,೨೦೦ ಚದರಡಿಯ ೩೭, ನ್ಯೂ ಆಕ್ಸ್‌ಫರ್ಡ್ ರಸ್ತೆಯಿಂದ ಭವನವನ್ನು ಇಲ್ಲಿಗೆ ಬರ ಮಾಡಿಕೊಳ್ಳಲು ಎಲ್ಲರಲ್ಲೂ ಅಪರಿಮಿತ ಉತ್ಸಾಹ.

ಇಷ್ಟಾದರೂ ಚರ್ಚಿನವರ ಪ್ರಕಾರ ನಮಗೆ ಎರಡನೆಯ ಆದ್ಯತೆ. ನಾವು ಧಾರ್ಮಿಕ ಉದ್ದೇಶಕ್ಕಾಗಿ ತೆಗೆದುಕೊಳ್ಳುತ್ತಿಲ್ಲ. ನನಗೋ 'ಧರ್ಮವೇನು ಸಂಸ್ಕೃತಿ ಏನು? ಎರಡೂ ಒಂದೇ. ಒಂದಕ್ಕೊಂದು ಪರ್ಯಾಯ ಅಷ್ಟೆ' ಎನ್ನುವ ಭಾವನೆ. ಆದರೆ ಆ ಭಾವನೆ ಅವರಲ್ಲೂ ಇರಬೇಕೆಂದೇನೂ ಇಲ್ಲವಲ್ಲ! ನಮ್ಮ ಘನತೆ ಕಡಿಮೆಯದೇನೂ ಆಗಿರಲಿಲ್ಲ. ಲಾರ್ಡ್ ಮೌಂಟ್ ಬ್ಯಾಟನ್ನರು ನಮ್ಮ ಭವನದ ಪ್ರಮುಖ ಆಶ್ರಯದಾತರಾಗಿದ್ದರು. ಲಾರ್ಡ್ ಥಾಮ್ಸನ್ ಆಫ್ ಫ್ಲೀಟ್, ನಮ್ಮ ಆಶ್ರಯದಾತರಲ್ಲಿ ಒಬ್ಬರು, ಯಹೂದಿ ಮೆನ್ಯೂಹಿನ್ ಭವನಕ್ಕೆ ಮೊಟ್ಟಮೊದಲ ಅಧ್ಯಕ್ಷರಾಗಿದ್ದವರು. ಎಲ್ಲರೂ ತಮ್ಮ ಪರವಾಗಿ ಭವನದ ಹಿತಸಾಧನೆಗೆಂದು ಚರ್ಚಿನ ಅಧಿಕಾರ ವರ್ಗದವರಿಗೆ ಒಂದೊಂದು ಪತ್ರವನ್ನು ಕೊಟ್ಟರು. ಅದು ನಮ್ಮ ಪ್ರಬಲಶಕ್ತಿಯಾಗಿದ್ದಿತು. ಇಷ್ಟಲ್ಲದೆ ಸಂಸ್ಕೃತಿ ಸಂಸ್ಥೆಗಳು ಧಾರ್ಮಿಕ ಸಂಸ್ಥೆಗಳಿಂದ ಬೇರೆಯಲ್ಲ. ಭಾರತದಲ್ಲಿ ಬಹಳ ಪ್ರಸಿದ್ಧವಾದ ಸಾಂಸ್ಕೃತಿಕ ಸಂಸ್ಥೆ ಈ ಭವನ, ಇದರ ಅನೇಕ ಶಾಖೆಗಳೂ ಇವೆ. ''ನಿಮ್ಮ ಚರ್ಚನ್ನು ನಮಗೆ ಕೊಟ್ಟರೆ, ಅಲ್ಲಿ ಒಂದು 'ಸರ್ವಧರ್ಮ ಪ್ರಾರ್ಥನಾ ಮಂದಿರವನ್ನೂ' ತೆರೆಯುವ ಉದ್ದೇಶವಿದೆ ನಮಗೆ, ಅಲ್ಲಿ ಪ್ರಾರ್ಥನೆಗಳು ನಡೆಯುತ್ತವೆ'' ಎಂದೆಲ್ಲಾ ಹೇಳಿ ಅವರಿಗೆ ನಾವು, ನಮ್ಮ ಧ್ಯೇಯೋದ್ದೇಶಗಳು ಅರ್ಥವಾಗುವಂತೆ ಮಾಡಿದೆವು. ಅವರಿಗೂ ಈ ವಿಷಯಗಳೆಲ್ಲ ತಿಳಿದು ಸಮಾಧಾನವಾಗಿತ್ತು. ಇದಕ್ಕೆ ಎಷ್ಟು ಬೆಲೆ? ಈ ವಿಷಯ ಮಾತನಾಡುವವರು, ನಮ್ಮ ದಲಾಲ್‌ಜೀ. ದಲಾಲ್‌ಜೀಯ ಸ್ವಭಾವ ನೋಡಿದವರಿಗೆ, ಅವರಿಗೆ 'ಇಲ್ಲ'ಎಂದು ಹೇಳಲು ಸಾಧ್ಯವೇ ಆಗುವುದಿಲ್ಲ. ಅಂತಹ ಉನ್ನತ ಮಟ್ಟದ ಸಂಸ್ಕಾರ ಅವರದು. ಅಲ್ಲದೆ ದಲಾಲ್‌ಜೀಯವರ ಪತ್ನಿ ಆಂಗ್ಲ ಮಹಿಳೆ. ಆಫೀಸಿನ ಕೆಲಸಗಳನ್ನು ಹೊರತುಪಡಿಸಿ, ದಲಾಲ್‌ಜೀ ಎಲ್ಲೇ ಹೋದರೂ ಪತ್ನಿಯವರ ಜತೆಗೇ ಹೋಗುತ್ತಿದ್ದುದು. ಅವರ ಈ ಸಂಸ್ಕೃತಿ ಎಲ್ಲರಿಗೂ ಇಷ್ಟವಾಗಿತ್ತು. ಈಗ ದಲಾಲ್‌ಜೀ ಆ ಬಗ್ಗೆ ಮಾತನಾಡುವವರಿದ್ದರು.

ನಾವು ಇತ್ತ ಗಣಪತಿ ಧ್ಯಾನ ಮಾಡುತ್ತಾ, ಆ ಚರ್ಚು ನಮ್ಮದಾಗಲಿ ಎಂದು ಪ್ರಾರ್ಥಿಸುತ್ತಿದ್ದೆವು. ಶ್ರೀ ಇ.ಎಸ್.ವಿ. ಯವರು ನ್ಯಾಯವಾದಿಗಳಾಗಿದ್ದುದರಿಂದ ಇನ್ನರ್ ಟೆಂಪಲ್‌ಗೆ ಹೋಗಿ ಬಂದರು. ಅವರ ಕೆಲಸ ಕಾರ್ಯಗಳನ್ನು ಮುಗಿಸಿಕೊಂಡರು. ಅಷ್ಟರಲ್ಲಿ ೧೫ ದಿವಸಗಳು ಉರುಳಿಹೋಗಿದ್ದವು. ಈ ಯೋಚನೆಯಲ್ಲಿದ್ದರೂ ಮನೆಯಲ್ಲಿ ಶ್ರೀ ಇ.ಎಸ್.ವಿ.ಯವರು ಇದ್ದುದರಿಂದ ದಿನಗಳು ಸರಿದುದರ ಪರಿವೇ ನಮಗಿರಲಿಲ್ಲ. ಶ್ರೀ ಇ.ಎಸ್.ವಿ. ಯವರು ಪ್ರತಿದಿನವೂ 'ಆಯ್ತಾ, ಆಯ್ತಾ ಮತ್ತೂರ್?' ಎಂದು ತಪ್ಪದೇ ಕೇಳುತ್ತಿದ್ದರು. ಅವರು ಹೊರಡುವ ದಿನ ಬಂದಿತು. ಅವರು ಹೊರಟು ಭಾರತಕ್ಕೆ ಬಂದರು.

ಮೇ ಮೊದಲ ವಾರದಲ್ಲಿ ನೋಡಿದ ಈ ಚರ್ಚಿನ ಬೆಲೆಯನ್ನು, ತಿಂಗಳ ಕೊನೆಯ ವಾರದಲ್ಲಿ ೭೫,೦೦೦ ಪೌಂಡುಗಳು ಎಂದು ಹೇಳಲಾಯಿತು. ಆ ಜಾಗದ ವಾಣಿಜ್ಯ ಬೆಲೆ ಸುಮಾರು ಒಂದು ಲಕ್ಷ ಪೌಂಡುಗಳು. ನಮಗೋ ಖುಷಿಯೋ ಖುಷಿ. ಆದರೂ ಆ ಚರ್ಚಿನ ಆಡಳಿತ ವರ್ಗದವರು ನಮಗೆ ಕೊಡುತ್ತೇವೆ ಎಂದೇನೂ ಹೇಳಲಿಲ್ಲ. ಅದನ್ನು ಹೇಳುವ ತನಕ ಮಾಧವಪ್ರಸಾದರಿಗೆ ದುಡ್ಡಿನ ವಿಷಯವಾಗಿ ನಾವು ಕಾಗದ ಬರೆಯುವಂತಿಲ್ಲ.

ದಿನಗಳು ಕಳೆದವು, ನಾನು ದಿನವೂ ಪೋಸ್ಟ್ ನೋಡುತ್ತಿದ್ದೆ. ಚರ್ಚಿನವರಿಂದ ನಮಗೆ ಕಾಗದ ಬರಲಿಲ್ಲ. ಒಂದು ತಿಂಗಳ ಮೇಲೆಯೂ ದಿನಗಳು ಕಳೆದವು. ಅವರಿಂದ ಯಾವುದೇ ಸುದ್ದಿ ಇಲ್ಲ. ನನಗೆ ಮನಸ್ಸಿನಲ್ಲಿ ಭಯ ಶುರುವಾಯಿತು. ಅಷ್ಟು ಆಸೆಪಟ್ಟು, ಕಾತರಿಸಿ ಕಾದಿರುವುದು ಕೈಬಿಟ್ಟು ಹೋದರೆ? ಎನ್ನುವ ಆತಂಕ ಕಾಡತೊಡಗಿತು. ನಾನು ಚರ್ಚಿಗೆ ಹೋಗಿ ಲಿಲ್ಲಿಯನ್ನು ಕೇಳಿದೆ. ಅವಳಿಗೂ ತಿಳಿಯದು, "ನನಗೇನು ಗೊತ್ತು... ಅವರು ನಿಮಗೆ ಈಗಾಗಲೇ ಬರೆದಿಲ್ಲವೆ? ಏನೂ ವಿಷಯ ತಿಳಿಸಿಲ್ಲವೆ? ತಿಳಿಸಿರಬೇಕಿತ್ತಲ್ಲ?" ಎಂದು ನನ್ನನ್ನೇ ಅವಳು ಕೇಳಿದಳು. ಭವನದಲ್ಲಿ ಮೀಟಿಂಗ್ ಸಹ ಆಯಿತು. ಸದಸ್ಯರೆಲ್ಲರೂ "ಮತ್ತೂರ್‌ಜೀ, ನೀವೇ ಏಕೆ ಒಮ್ಮೆ ಹೋಗಿ ಅವರನ್ನು ನೋಡಿ, ಕೇಳಿಕೊಂಡು ಬರಬಾರದು? ಪೋಸ್ಟಿಗೆ ಕಾಯುವ ಬದಲು..." ಎಂದು ಎಲ್ಲರೂ ಹೇಳಿದರು. ನಾನು ದಲಾಲ್‌ಜೀಗೆ "ದಲಾಲ್‌ಜೀ, ನನಗೆ ಅವರುಗಳ ಜತೆಗಿನ ವ್ಯವಹಾರ ತಿಳಿಯದು, ನೀವು ಜತೆಗೆ ಬಂದರೆ ವಾಸಿ"ಎಂದೆ. ಅಂತೂ ನಮ್ಮ ಕಮಿಟಿಯಲ್ಲಿದ್ದ ಒಬ್ಬ ಆಂಗ್ಲ ಸದಸ್ಯನನ್ನು ಅಲ್ಲಿಗೆ ಕಳುಹಿಸಿ ವಿಷಯ ತಿಳಿದುಕೊಳ್ಳುವುದು ಎಂದುಕೊಂಡೆವು, ಕೆಲವರು ದೇವಚಂದಭಾಯಿಯವರೇ ಹೋಗಿ ಕೇಳಿಬರಲಿ ಎಂದರು. ಯಾರಿಗೂ ಅಲ್ಲಿಗೆ ಹೋಗಲು ಒಂದು ರೀತಿಯ ಭಯ, ಎಲ್ಲಿ ಅವರು 'ಕೊಡುವುದಿಲ್ಲ' ಎನ್ನುವರೋ ಎಂದು. ನಾವು ಯಾರೂ ಮಾತನ್ನು ಕೇಳಲು, ಎದುರಿಸಲು ತಯಾರಿರಲಿಲ್ಲ.... ಅದಕ್ಕೆ!

ಹೀಗೆ ನಿರ್ಧಾರವಾದರೂ ಯಾರೂ ಆ ಕಡೆಗೆ ಹೋಗಲಿಲ್ಲ. ತಡೆಯಲಾರದೆ ನಾನೇ ೨-೩ ದಿನಗಳನಂತರ ದಲಾಲ್‌ಜೀಯವರ ಆಫೀಸಿಗೆ ಹೋದೆ. "ದಲಾಲ್‌ಜೀ, ಅವರು ಬೇರೆಯವರಿಗೆ ಕೊಟ್ಟುಬಿಟ್ಟರೆ ಏನು ಮಾಡುವುದು! ಒಂದು ಬಾರಿ ನೀವು ಫೋನು ಮಾಡಿ ವಿಚಾರಿಸಿ ದಯವಿಟ್ಟು" ಎಂದೆ. ನನ್ನ ದೈನ್ಯತೆ ನೋಡಿ ನಿಜಕ್ಕೂ ದಲಾಲ್‌ಜೀ ಕರಗಿದರು. ತಕ್ಷಣವೇ ಫೋನು ಮಾಡಿದರು. ಅತ್ತಲಿಂದ "ಮಿ.ದಲಾಲ್, ನಮ್ಮನ್ನು ಕ್ಷಮಿಸಿ" ಎಂದ, ಮುಖ್ಯ ಗುಮಾಸ್ತ. "ಏನು ಮಿ. ಮಾರ್ಟಿನ್, ನೀವು ನಮಗೆ ಮಾತು ಕೊಟ್ಟಿದ್ದಿರಲ್ಲಾ? ಈಗ ವಿಷಯ ಏನು ಹೇಳಿ?" ಎಂದು ದಲಾಲ್‌ಜೀ. ಅವರಿಗೂ ಇದೇಕೆ ಇವನು ಹೀಗೆ ಅಪಸ್ವರ ತೆಗೆಯುತ್ತಿದ್ದಾನೆ ಎನ್ನಿಸಿತು. ಅದಕ್ಕೆ ಅವನು "ಏನು ಮಾಡುವುದು ಮಿ. ದಲಾಲ್, ನಾವು ನಿಮಗೆ ಮಾತು ಕೊಟ್ಟಿದ್ದು ನಿಜ. ಆದರೆ ಬೇರೆ ಇನ್ನೊಂದು ಗುಂಪಿನವರು ನಿಮಗಿಂತ ಹೆಚ್ಚು ಬೆಲೆ ಕೊಡುವುದಾಗಿ ಮುಂದೆ ಬಂದಿದ್ದಾರೆ. ಚರ್ಚಿನ ಆಡಳಿತವರ್ಗ ಅವರಿಗೆ ಚರ್ಚನ್ನು ಕೊಡಬೇಕೆಂದು ಮನಸ್ಸು ಮಾಡಿ ನಿರ್ಧರಿಸಿದೆ. ನಾನೇನು ಮಾಡಲಾದೀತು ಹೇಳಿ, ನಾನು ಇಲ್ಲಿ ಗುಮಾಸ್ತನಷ್ಟೇ?" ಎಂದೂ ಸೇರಿಸಿದ. ದಲಾಲ್‌ಜೀ ಫೋನನ್ನು ಹಿಡಿದುಕೊಂಡೇ "ಮತ್ತೂರ್‌ಜೀ, ಯಾರೋ ಬೇರೆಯವರು ಹೆಚ್ಚಿಗೆ ದುಡ್ಡು ಕೊಡುವುದಾಗಿ ಹೇಳಿದ್ದಾರಂತೆ, ಏನು ಮಾಡೋಣ?" ಎಂದರು. ನಾನು "ದಲಾಲ್‌ಜೀ, ಅವರು ಎಷ್ಟು ಜಾಸ್ತಿ ಹಣ ಕೊಡುವುದಾಗಿ ಹೇಳಿದ್ದಾರೆ ಕೇಳಿ ಅವನನ್ನು" ಎಂದೆ. ದಲಾಲ್‌ಜೀ ಕೂಡಲೇ "ಮಿ.ಮಾರ್ಟಿನ್, ನನ್ನ ಕಾರ್ಯಕಾರಿ ನಿರ್ದೇಶಕರು ಇಲ್ಲೇ ನನ್ನೆದುರಿಗೇ ಕುಳಿತಿದ್ದಾರೆ, ಅವರು ಕೇಳುತ್ತಿದ್ದಾರೆ 'ಈ ಗುಂಪಿನವರು ಎಷ್ಟು ಹೆಚ್ಚು ಹಣವನ್ನು ಕೊಡುತ್ತಿದ್ದಾರೆ' ಎಂದು ನಿಮಗೆ ಹೇಳಲು ಸಾಧ್ಯವೇ?" ಎಂದರು. ಅದಕ್ಕೆ ಅವನು "ಮಿ.ದಲಾಲ್, ನಾನು ಹಾಗೆಲ್ಲ ಈ ವಿಷಯಗಳನ್ನು ನಿಮಗೆ ಹೇಳುವ ಹಾಗಿಲ್ಲ. ಆದರೂ ನಿಮಗೆ ಹೇಳಲೇಬೇಕೆನಿಸುತ್ತಿದೆ ನನಗೆ! ಅವರು ೮೦ ಸಾವಿರ ಪೌಂಡುಗಳಿಗೆ ಕೊಳ್ಳುತ್ತೇವೆ" ಎಂದಿದ್ದಾರೆ ಎಂದ. ದಲಾಲ್‌ಜೀಯವರೇ 'ಹೂಂ' ಎನ್ನಬಹುದಿತ್ತು. ಆದರೆ ಅವರು ಹಾಗೆ ಹೇಳುವುದಿಲ್ಲ. ಅದು ಅವರ ಸ್ವಭಾವ ವೈಶಿಷ್ಟ್ಯ! ಅವರು "ಮಾಥೂರ್‌ಜೀ, ಅವರು ೮೦ ಸಾವಿರ ಪೌಂಡುಗಳಿಗೆ ಕೇಳಿದ್ದಾರಂತೆ, ನಮಗಿಂತ ೫,೦೦೦ ಪೌಂಡುಗಳು ಹೆಚ್ಚಿಗೆ ಕೊಡುತ್ತಾರೆ" ಎಂದರು. ಕೂಡಲೇ ನಾನು "ದಲಾಲ್‌ಜೀ, ನೀವು ೮೫ ಸಾವಿರ ಪೌಂಡುಗಳು ಎಂದು ಹೇಳಿ, ನಾವು ೮೫ ಸಾವಿರ ಕೊಡೋಣ" ಎಂದೆ. ಅದಕ್ಕೆ ಅವರು "ಮಾಥೂರ್‌ಜೀ, ಇದು ಸರಿಯಾಗುತ್ತದೆಯೇ? ಕಮಿಟಿಯ ಸದಸ್ಯರುಗಳು ಇದಕ್ಕೆ ಒಪ್ಪುವರೇ?" ಎಂದರು. ಆ ಕಾಳಜಿ ಅವರಿಗೆ. ನಾನು "ದಲಾಲ್‌ಜೀ, ನಾನು ಮನೆಮನೆಗೆ ಹೋಗಿ ಭಿಕ್ಷೆ ಎತ್ತುತ್ತೇನೆ. ಆ ಹಣವನ್ನು ಸಂಗ್ರಹಿಸುತ್ತೇನೆ, ನೀವು ಚಿಂತಿಸಬೇಡಿ.... ೮೫ ಸಾವಿರ ಎಂದು ಹೇಳಿ" ಎಂದೆ ಕಾತರದಿಂದ... ನನಗೆ ಎಂಥದೋ ಭಂಡ ಧೈರ್ಯ,ಅವರು ನನ್ನನ್ನು "ನೀವು ಯಾವಾಗಲೂ ಆಶಾವಾದಿಗಳು"

ಎಂದು ಛೇಡಿಸುತ್ತಿದ್ದರು! ಕೂಡಲೇ ದಲಾಲ್‌ಜೀ.''ಮಿ.ಮಾರ್ಟಿನ್, ನಾವು ೮೫ಸಾವಿರ ಪೌಂಡುಗಳನ್ನು ಕೊಡುತ್ತೇವೆ ಎಂದರೆ ಚರ್ಚಿನ ಆಡಳಿತ ವರ್ಗದವರು ಒಪ್ಪಿಕೊಳ್ಳುತ್ತಾರೆಯೇ? ನಮಗೆ ಅದನ್ನು ಕೊಡುತ್ತಾರೆಯೇ?'' ಎಂದರು. ಅದಕ್ಕೆ ಅವನು ಸಂತಸದಿಂದ ''ಮಿ. ದಲಾಲ್ ಹಾಗೆ ಹೇಳಿ ಮತ್ತೆ....! ಸ್ವಲ್ಪ ಹಣವನ್ನು ಮುಂಗಡವಾಗಿ ಕಳುಹಿಸಿ. ಆ ಚರ್ಚು ನಿಮ್ಮದಾಗುವಂತೆ ಮಾಡುವ ಹೊಣೆ ನನ್ನದು!'' ಎಂದ ವಿಶ್ವಾಸಪೂರ್ವಕವಾಗಿ. ಅವನಿಗೆ ನಿಜಕ್ಕೂ ನಮಗೆ ಮಾತುಕೊಟ್ಟು ಬೇರೆಯವರಿಗೆ ಕೊಡುವುದು ಇಷ್ಟವಿರಲಿಲ್ಲ. ಅಲ್ಲದೆ ನಮ್ಮದು ಬಹಳ ಬೆಂಬಲವಿರುವ ಘನತೆವೆತ್ತ ಸಂಸ್ಥೆ, ಅದನ್ನು ಪಡೆಯಲು ನಾವು ಬಹಳವಾಗಿ ಅರ್ಹರು ಎಂದು ಅವನಿಗೂ ತಿಳಿದಿತ್ತು. ಅದಕ್ಕೇ ಅವನು ಹೆಚ್ಚು ಬೆಲೆಯನ್ನು ಮರೆಮಾಚದೆ ನಮ್ಮಲ್ಲಿ ಹೇಳಿದ್ದುದು! ಈಗ ದಲಾಲ್‌ಜೀ ''ಸರಿ ಹಾಗಾದರೆ, ನಮ್ಮ ನಿರ್ದೇಶಕರು ಸದ್ಯದಲ್ಲೇ ಬಂದು ನಿಮ್ಮನ್ನು ನೋಡುತ್ತಾರೆ'' ಎಂದು ಹೇಳಿ ಫೋನಿಟ್ಟರು. ನನಗೋ ಆಗುವ ಕೆಲಸ ಆ ಕ್ಷಣದಲ್ಲಿ ಆಗಿಬಿಡಬೇಕು. ನನ್ನ ಬಳಿ ದುಡ್ಡಿರಲಿಲ್ಲ. ಭವನದ ಖಾತೆಯಲ್ಲಿ ಸುಮಾರು ೧೦ ಸಾವಿರ ಪೌಂಡುಗಳಿದ್ದವು. ನಾನು ದಲಾಲ್‌ಜೀಯವರ ಆಫೀಸಿಗೆ ಹೋದದ್ದೇ ಮಧ್ಯಾಹ್ನದ ಊಟದ ವೇಳೆಯಲ್ಲಿ. ಊಟದ ವೇಳೆಯಲ್ಲಿ ಬ್ಯಾಂಕೂ ಮುಚ್ಚಿರುತ್ತದೆ. ನಾನು ಕೊನೆಗೆ ತಡೆಯಲಾರದೆ ''ದಲಾಲ್‌ಜೀ, ನಿಮ್ಮ ವೈಯಕ್ತಿಕ ಹಣಕ್ಕೆ ಒಂದು ಚೆಕ್ ಕೊಡಿ ಹತ್ತು ಸಾವಿರ ಪೌಂಡುಗಳಿಗೆ, ಭವನದಲ್ಲಿ ಹಣವಿದೆ. ಅದನ್ನು ನಾನು ನಿಮಗೆ ತಂದುಕೊಡುತ್ತೇನೆ. ಈಗಲೇ ಅವನನ್ನು ಹೋಗಿ ನೋಡಿ ಈ ಚೆಕ್ ಕೊಟ್ಟು ಬರುತ್ತೇನೆ'' ಎಂದೆ. ಸರಿ ಎಂದ ಅವರು ಕೂಡಲೇ ಹತ್ತು ಸಾವಿರ ಪೌಂಡುಗಳಿಗೆ ಅವರದೇ ಒಂದು ಚೆಕ್ ಕೊಟ್ಟರು. ದಲಾಲ್‌ಜೀಯವರು ಕಾರು ಕಳುಹಿಸಿದರು ನನಗಾಗಿ . ಅಲ್ಲಿಗೆ ಹೋದೆ, ಹೋದವನೇ ನೋಡಿದೆ. ಚಹಾ ಕುಡಿಯುತ್ತ ನಿಂತಿದ್ದ ಅವನ ಕೈಗೆ ಹತ್ತು ಸಾವಿರ ಪೌಂಡುಗಳ ಚೆಕ್ ಕೊಟ್ಟ ಕೂಡಲೇ 'ಹತ್ತು ಸಾವಿರ ಪೌಂಡುಗಳಷ್ಟು ಹಣವನ್ನು ಚರ್ಚಿನ ಖರೀದಿಗೆಂದು ಬಂದವರಿಂದ ಮುಂಗಡವಾಗಿ ತೆಗೆದುಕೊಳ್ಳಲಾಗಿದೆ, ಬಾಕಿ ಉಳಿದ ಹಣ ೭೫ ಸಾವಿರ ಪೌಂಡುಗಳು. ಚರ್ಚಿನ ಒಟ್ಟು ಬೆಲೆ ೮೫ ಸಾವಿರ ಪೌಂಡುಗಳು. ಚರ್ಚು, ವೆಸ್ಟ್ ಕೆನ್ಸಿಂಗ್‌ಟನ್‌ನ ೪a ಕ್ಯಾಸಲ್‌ಟೌನ್ ರಸ್ತೆ, ಎಂದು ಅವನು ರಶೀದಿ ಬರೆದು ನನ್ನ ಕೈಗಿಟ್ಟಾಗ ನನಗಾದ ಆನಂದ ಅಷ್ಟಿಷ್ಟಲ್ಲ! ಆ ಘಳಿಗೆಯಲ್ಲಿ ನನಗೆ ಮೂರು ಲೋಕದ ಐಶ್ವರ್ಯ ಕೊಟ್ಟರೂ ಬೇಡವಾಗಿತ್ತು ಈ ಚರ್ಚಿನ ಮುಂದೆ!

ಅನಂತರ ದಲಾಲ್‌ಜೀಯವರ ಹಣವನ್ನು ಅವರಿಗೆ ವಾಪಸ್ಸು ಮಾಡಿದೆವು. ಚರ್ಚು ನಮ್ಮ ಕೈಗೆ ಬಂದ ಮೇಲೆ ದುಡ್ಡಿಗಾಗಿ ಮಾಧವಪ್ರಸಾದರಿಗೆ ಬರೆಯಬೇಕಿತ್ತು. ನಮಗಲ್ಲಿ ಜಾಗ ಸಿಕ್ಕಿತೆಂದು ಕೂಡಲೇ ನಾನು ಶ್ರೀ ಇ.ಎಸ್.ವಿ. ಯವರಿಗೆ ಫೋನ್ ಮಾಡಿ ತಿಳಿಸಿದೆ. ೧೫ ದಿನ ನಮ್ಮೊಡನಿದ್ದ ಅವರು ಭಾರತಕ್ಕೆ ವಾಪಸ್ಸಾಗಿದ್ದರೂ ಸಹ ಎರಡು-ಮೂರು ದಿನಗಳಿಗೊಮ್ಮೆ ಫೋನಿಸಿ, ''ಮತ್ತೂರ್, ಚರ್ಚು ನಿಮಗೆ ಸಿಕ್ಕಿತೇ? ಆ ವಿಷಯ ಎಲ್ಲಿಗೆ ಬಂತು?'' ಎಂದು ತಪ್ಪದೆ ಕೇಳುತ್ತಿದ್ದರು. ನಾನು ಚರ್ಚು ಭವನಕ್ಕೆ ಸಿಕ್ಕ ಸುದ್ದಿ ತಿಳಿಸಿದ ಕೂಡಲೇ, ನಮಗೆ ಅಭಿನಂದನೆಗಳನ್ನು ತಿಳಿಸಿ ತಾವೂ ಬಹಳ ಸಂತೋಷಪಟ್ಟರು.

ಮಾಧವಪ್ರಸಾದರು ಹಣವನ್ನೇನೋ ಕಳುಹಿಸಲು ಸಿದ್ಧರಿದ್ದರು. ಅದಕ್ಕೆ ಮುಂಚಿತವಾಗಿ ನಮ್ಮ ಸದಸ್ಯರಿಂದ ಆದಷ್ಟು ಹಣ ಸಂಗ್ರಹಿಸುವ ಕೆಲಸ ಬಾಕಿ ಇತ್ತಲ್ಲ. ಹೇಗಾದರೂ ನಾವು ಆ ಖರ್ಚಿನ ಬೆಲೆ ೮೫ ಸಾವಿರ ಪೌಂಡುಗಳ ಮೊತ್ತವನ್ನು ಸೇರಿಸಬೇಕು ಎಂದು ಮಾಧವ ಪ್ರಸಾದರ ಕರಾರು ಆಗಿತ್ತಷ್ಟೆ?

ಕೂಡಲೇ ನಾನೇ ಎಲ್ಲ ಸದಸ್ಯರಿಗೂ, ಕಮಿಟಿಯ ಮಂದಿಗೂ ಫೋನು ಮಾಡಿ ಚರ್ಚು ಭವನಕ್ಕೆ ಸಿಕ್ಕಿರುವ ಸಂತೋಷದ ವಿಷಯ ತಿಳಿಸಿ ಮೀಟಿಂಗ್‌ಗೆ ಏರ್ಪಾಡು ಮಾಡಿದೆ. ಕಮಿಟಿಯ ೨೨ ಮಂದಿ ಸದಸ್ಯರುಗಳಲ್ಲಿ ಸುಮಾರು ೧೭-೧೮ ಮಂದಿ ಕೋಟ್ಯಧೀಶ್ವರರು. ಇನ್ನು ಮಿಕ್ಕವರು ಮಾತ್ರ ಸರ್ಕಾರಿ ಸೇವೆಸಲ್ಲಿಸಿದ್ದವರು. ಎಲ್ಲರೂ ಮೀಟಿಂಗ್‌ಗೆ ಬಂದರು. ದಲಾಲ್‌ಜೀಯ ಏರ್‌ಇಂಡಿಯಾ ಆಫೀಸಿನಲ್ಲಿ ಮೀಟಿಂಗ್ ನಡೆಯಿತು. ಎಲ್ಲರಲ್ಲೂ ಉತ್ಸಾಹವೋ ಉತ್ಸಾಹ. ನನಗೋ, 'ದೇವರೇ, ಈ ಮೀಟಿಂಗ್‌ನಲ್ಲಿ ಸಾಕಷ್ಟು ದುಡ್ಡು ಬರುವಂತೆ ಮಾಡಪ್ಪಾ' ಎನ್ನುವುದೊಂದೇ ಪ್ರಾರ್ಥನೆ ಇದ್ದದ್ದು! ನಾವು ಇಲ್ಲಿನ ಚರ್ಚಿನ ಬೆಲೆಯ ಹಣವನ್ನು ಸಂಗ್ರಹಿಸಿರುವುದನ್ನು ಖಚಿತ ಮಾಡಿಕೊಂಡೇ ಮುಂಬೈಯಿಂದ ಮಾಧವ ಪ್ರಸಾದರು ನಮಗೆ ಹಣ ಕಳುಹಿಸುವುದು. ಒಪ್ಪಂದವಾಗಿದ್ದುದೇ ಹಾಗೆ! ಮೀಟಿಂಗ್ ಪ್ರಾರಂಭ ವಾಯಿತು, ಎಲ್ಲರನ್ನೂ ಉದ್ದೇಶಿಸಿ ಮಾತನಾಡಿದ ದಲಾಲ್‌ಜೀ ಚರ್ಚು ಸಿಕ್ಕಿರುವುದಕ್ಕಾಗಿ ದೇವಚಂದಭಾಯಿಗೆ ಕೃತಜ್ಞತೆ ತಿಳಿಸಿ, ಮಿಕ್ಕ ಸದಸ್ಯರಿಗೂ ಕಟ್ಟಡ ಸಿಕ್ಕಿರುವ ಬಗ್ಗೆ ಹೇಳಿ ''ಮಾನ್ಯರೆ, ನಾವೆಲ್ಲ ಇಲ್ಲಿ ಸೇರಿದ್ದೀವಿ . ಶ್ರೀ ಮಾಧವ ಪ್ರಸಾದ್ ಬಿರ್ಲಾರು ಈ ಕಟ್ಟಡಕ್ಕೆ ಹಣ ಕಳುಹಿಸುತ್ತಿರುವರಾದರೂ ಅದರ ಬೆಲೆಯಷ್ಟು ಹಣವನ್ನು ಮೊದಲು ನಾವು ಸಂಗ್ರಹಿಸಿ ಅವರಿಗೆ ತೋರಿಸಬೇಕು. ಅನಂತರವೇ ಅದರ ಬೆಲೆಯ ಹಣವನ್ನು ಕಳುಹಿಸುವುದು. ನನಗೆ ನಿಮ್ಮ ಮೇಲೆ ಸಾಕಷ್ಟು ಭರವಸೆ ಇದೆ. ನೀವೆಲ್ಲರೂ ಘನತೆವೆತ್ತವರು. ಈ ಸತ್ಕಾರ್ಯಕ್ಕೆ ಸುಮಾರು ಒಂದು ಲಕ್ಷ ಪೌಂಡುಗಳನ್ನು ಸಂಗ್ರಹಿಸುವುದರಲ್ಲಿ ಉದಾರವಾಗಿ ದಾನ ಮಾಡಿ ಸಹಾಯ ಮಾಡುವಿರೆಂದು ನಾನು ನಂಬಿದ್ದೇನೆ. ನಾನು ನಿಮ್ಮಗಳ ಹಾಗೆ ವ್ಯಾಪಾರೋದ್ಯಮಿಯಲ್ಲ. ನಾನು ಇಲ್ಲಿನ ಸೇವೆಯಲ್ಲಿರುವವನು. ಆದ್ದರಿಂದ ಈ ಕಟ್ಟಡಕ್ಕೆ ನನ್ನ ಈ ಕಿರುಕಾಣಿಕೆ! ಇದೋ ಇಲ್ಲಿ. ಸಾವಿರ ಪೌಂಡುಗಳು'' ಎಂದು ಹೇಳಿ ಚೆಕ್ ಒಂದನ್ನು ಮೇಜಿನ ಮೇಲಿಟ್ಟರು. ಅವರು ತಮ್ಮ ಮಾತು ಮುಗಿಸಿದ ಕೂಡಲೇ ದೇವಚಂದ್‌ಭಾಯಿ ಚಂದರಿಯ ''ಚಂದರಿಯಾ ಕುಟುಂಬ ವರ್ಗದ ಚಂದರಿಯಾ

ಫೌಂಡೇಷನ್‌ನಿಂದ ೪೦,೦೦೦ ಸಾವಿರ ಪೌಂಡುಗಳು'' ಎನ್ನುವುದೇ! ನನಗೆ ಆಕಾಶದಲ್ಲಿ ತೇಲಾಡಿದ ಅನುಭವ! ಅವರ ನಂತರ ಶ್ರೀ ಭಾಗ್ರಿಯವರು ''ನಮ್ಮ ಕಡೆಯಿಂದ ೧೦,೦೦೦ ಪೌಂಡುಗಳು'' ಎಂದರು. ಶ್ರೀ ಚೋಕ್ಸಿಯವರು ''ನಮ್ಮದು ೨,೦೦೦ ಪೌಂಡುಗಳು'' ಎಂದರು. ಕಟ್ಟಡವನ್ನು ನೋಡಿದ ಕೂಡಲೇ ಚೋಕ್ಸಿಯವರು ''ಇದು ಎಷ್ಟಾದರೂ ಆಗಲಿ, ನಾವೇ ತೆಗೆದುಕೊಳ್ಳಬೇಕು'' ಎಂದು ಬಹಳ ಉತ್ಸಾಹತೋರಿದ್ದರು. ಕೇಜ್ರಿವಾಲಾರು ''೩,೦೦೦ ಪೌಂಡುಗಳು'' ಎಂದರು! ಜೋಗಿಂದರ್ ಸ್ಯಾಂಗರರು ''೧೦,೦೦೦ ಪೌಂಡುಗಳು ನಮ್ಮಿಂದ'' ಎಂದರು. ಹೀಗೆ ನಡೆಯಿತು ಒಬ್ಬರ ಮೇಲೊಬ್ಬರು ಸ್ಪರ್ಧೆಗೆ ಇಳಿದಂತೆ. ತಮ್ಮ ಕೊಡುಗೆಯನ್ನು ಹೇಳುತ್ತ ಬಂದ ಸದಸ್ಯರುಗಳು ಅರ್ಧಘಂಟೆಯ ಒಳಗಾಗಿ ಒಂದು ಲಕ್ಷಪೌಂಡನ್ನು ಎಲ್ಲರೂ ಸೇರಿ ಘೋಷಿಸಿ ಬಿಟ್ಟಿದ್ದರು. ಆ ಸಂತೋಷಕ್ಕೆ ನನ್ನ ಎದೆ ಒಡೆದು ಹೋಗದಿದ್ದುದೇ ಆಶ್ಚರ್ಯ. ನಿಜಕ್ಕೂ! ನಿರೀಕ್ಷಿಸಿದ ಮೊತ್ತ ಸಿಕ್ಕ ಕೂಡಲೆ, ತಕ್ಷಣವೇ ಅಲ್ಲಿಯೇ ದಲಾಲ್‌ಜೀ ''ಮಾನ್ಯರೇ, ಹಾಗಾದರೆ ನಾನು ಶ್ರೀ ಮಾಧವ ಪ್ರಸಾದ್ ಬಿರ್ಲಾರಿಗೆ ಪತ್ರ ಬರೆಸಲೆ?'' ಎಂದು ಕೇಳಿ ಅಲ್ಲಿಯೇ ಪತ್ರದ ಸಾರಾಂಶವನ್ನು ನನಗೆ ಹೇಳಿ, ಕೂಡಲೇ ಪತ್ರ ಸಿದ್ಧ ಮಾಡಲೂ ಹೇಳಿದರು.

ಮಾನ್ಯ ಶ್ರೀ ಮಾಧವಪ್ರಸಾದ್ ಬಿರ್ಲಾ ಅವರಿಗೆ,

ಮಣೆಕ್‌ದಲಾಲ್ ವಂದಿಸಿ ಹೇಳುವುದು, ನೀವು ಲಂಡನ್ ವಿದ್ಯಾಭವನದ ಕೇಂದ್ರದ ಹೊಸ ಕಟ್ಟಡಕ್ಕೆ ಹಣ ಕೊಡುವುದಾಗಿ ಹೇಳಿದ್ದಿರಿ. ನಿಮ್ಮ ಪತ್ರದಲ್ಲಿ ಕಟ್ಟಡದಲ್ಲಿ ಇರಬೇಕಾದ ಅನುಕೂಲತೆಗಳು, ಸೌಕರ್ಯಗಳ ಕುರಿತು ಪ್ರಸ್ತಾಪಿಸಿದ್ದಿರಿ. ನಿಮ್ಮ ಉದ್ದೇಶ ಭವನದ ಚಟುವಟಿಕೆಗಳಿಗೆ ಸಮರ್ಪಕವಾಗಿರಬೇಕು ಭವನ ನಡೆಯುವ ಕಟ್ಟಡ ಎನ್ನುವುದು ನಮಗೂ ಅರ್ಥವಾಗಿದ್ದು , ಅದಕ್ಕಾಗಿ ಬಹಳ ಹುಡುಕಾಟ ನಡೆಸಿದೆವು. ಈಗ ಕಟ್ಟಡ ಸಿಕ್ಕಿದೆ. ಅದೊಂದು ಹಳೆಯ ಚರ್ಚು. ೧೪,೬೦೦ ಚದರಡಿಗಳಷ್ಟು ವಿಶಾಲವಾದ ಕಟ್ಟಡದಲ್ಲಿ ನೀವು ಬಯಸುವ ಎಲ್ಲ ಅನುಕೂಲತೆಗಳೂ ಇವೆ. ನಗರದ ಹೃದಯ ಭಾಗದಲ್ಲಿರುವ ಈ ಚರ್ಚಿನ ಸಮೀಪದಲ್ಲೇ ಎಂದರೆ ಸುಮಾರು ೨೦೦ ಗಜಗಳಷ್ಟು ದೂರದಲ್ಲೇ ಮಹಾತ್ಮಾಗಾಂಧೀಜಿಯೂ ಇದ್ದದ್ದು! ಅಲ್ಲಿ ಅವರು ವಾಸ್ತವ್ಯ ಇದ್ದಾಗ , ಅವರು ಎರಡು-ಮೂರು ಬಾರಿ ಈ ಚರ್ಚಿಗೆ ಪ್ರಾರ್ಥನೆಗಾಗಿ ಬಂದಿದ್ದರು ಎಂದೂ ನಮಗೆ ತಿಳಿದು ಬಂದಿದೆ! ಇದೊಂದು ಧರ್ಮ ಕರ್ಮ ಸಂಯೋಗವಲ್ಲದೆ ಮತ್ತೇನು? ಈ ವಿಷಯ ತಿಳಿದು ನೀವೂ ಬಹಳ ಸಂತೋಷಪಡುತ್ತೀರೆಂದು ನನ್ನ ನಂಬಿಕೆ!

ಅಂತೆಯೇ ನೀವು ಹಾಕಿದ ಕರಾರಿನಂತೆಯೇ ನಮ್ಮ ಕಮಿಟಿಯ ಗೌರವಾನ್ವಿತ ಸದಸ್ಯರುಗಳು ಸಹ ಈಗಾಗಲೇ ಒಂದು ಲಕ್ಷ ಪೌಂಡುಗಳು ಆ ಚರ್ಚಿನ ಬೆಲೆಯಷ್ಟು ಹಣವನ್ನು ಉದಾರವಾಗಿ ದಾನ ಮಾಡಿದ್ದಾರೆ. ಈ ವಿಷಯವೂ ನಿಮ್ಮ ಮನಸ್ಸಿಗೆ ಸಮಾಧಾನ ಕೊಡುತ್ತದೆ ಎಂದು ಭಾವಿಸಿದ್ದೇನೆ! ಈಗ ತಾವು ಹೇಳಿದಂತೆ ಆ ಚರ್ಚಿನ ಬೆಲೆ ೮೫ ಸಾವಿರ ಹಾಗೂ ವ್ಯವಹಾರಕ್ಕಾಗುವ ವೆಚ್ಚ ೧೫ ಸಾವಿರ, ಒಟ್ಟು ಒಂದು ಲಕ್ಷ ಪೌಂಡುಗಳನ್ನು ದಯವಾಡಿ ನಮಗೆ ಕಳುಹಿಸಿಕೊಡುವಿರಿ ಎಂದು ನಂಬಿದ್ದೇವೆ.

ಕೃತಜ್ಞತೆಗಳೊಡನೆ,

ತಮ್ಮ ವಿಶ್ವಾಸಿ

ಮಣೆಕ್‌ದಲಾಲ್

ಅಧ್ಯಕ್ಷರು

ಭಾರತೀಯ ವಿದ್ಯಾಭವನ, ಲಂಡನ್

ಈ ಪತ್ರವನ್ನು ಕಳುಹಿಸಿದೆವು.

ಮೂರು ವಾರದೊಳಗಾಗಿ ಶ್ರೀ ಮಾಧವಪ್ರಸಾದ ಬಿರ್ಲಾರು ಒಂದು ಲಕ್ಷ ಪೌಂಡುಗಳನ್ನು ನಮಗೆ ಕಳುಹಿಸಿಕೊಟ್ಟರು. ಚರ್ಚು ಭವನದ್ದಾಯಿತು!! ಅನಂತರ ಅವರ ಪತ್ನಿ ಶ್ರೀಮತಿ ಪ್ರಿಯಂವದಾದೇವಿ ಬಿರ್ಲಾ, ಗಾಂಧೀಜಿ ಇದ್ದ ಆ ಮನೆಯನ್ನು ತೆಗೆದುಕೊಂಡು ಅಲ್ಲಿ ಒಂದು ಸ್ಮಾರಕ ಮಾಡುವಾ ಎನ್ನುವ ಉತ್ಸಾಹ ತೋರಿದರಾದರೂ, ಆ ಜಾಗ ಬಹಳ ಕಿರಿದಾಗಿದ್ದು, ಅದನ್ನು ಹಾಳುಗೆಡವಿದ್ದರು. ನಾವು ಅದನ್ನು ಕೊಳ್ಳುತ್ತೇವೆ ಎಂದು ವಿಚಾರಿಸಿದಾಗ ೪೫ ಸಾವಿರ ಪೌಂಡುಗಳನ್ನು ಆ ಜಾಗದ ಬೆಲೆಯಾಗಿ ಕೇಳುತ್ತಿದ್ದವರು ಕೂಡಲೆ ಎರಡು ಲಕ್ಷ ಪೌಂಡುಗಳಿಗೆ ಏರಿಸಿದರು. ನಾವು ಮುಂದುವರೆಯದೆ ಆ ವಿಷಯವನ್ನು ಅಲ್ಲಿಗೇ ಬಿಟ್ಟೆವು!

ಮೇ ೨೮, ೧೯೭೮ರಂದು 'ಗೃಹಪ್ರವೇಶ'. ನಿಧಾನವಾಗಿ ೩೭, ನ್ಯೂಆಕ್ಸ್‌ಫರ್ಡ್ ರಸ್ತೆಯಲ್ಲಿರುವ ಭವನವು ವೆಸ್ಟ್‌ಕೆನ್ಸಿಂಗ್‌ಟನ್‌ನ ಚರ್ಚ್‌ಗೆ ಪ್ರವೇಶಿಸುವುದರಲ್ಲಿತ್ತು. ಅಲ್ಲಿಯವರೆಗೆ ಅದನ್ನು ಹೊಂದಿಕೆಯಾಗುವಂತೆ ಸರಿಮಾಡಿಕೊಳ್ಳಬೇಕಿತ್ತು. ಆಫೀಸು ರೂಮಿಗೆ ಸರಿಹೊಂದುವಂತೆ, ಸರ್ವಧರ್ಮ ಪ್ರಾರ್ಥನಾ ಮಂದಿರದ ಸ್ವರೂಪ ಬರುವಂತೆ, ಮೀಟಿಂಗ್ ಹಾಲ್ ಆಗುವಂತೆ, ಕಛೇರಿ ಕಾರ್ಯ ಕ್ರಮಗಳನ್ನು ನಡೆಸಲು ಸೌಕರ್ಯವಾಗುವಂತೆ, ಎಲ್ಲವನ್ನೂ ಸ್ವಲ್ಪ ಮಾರ್ಪಡಿಸಿ ಚಂದದ ರೂಪ ಕೊಟ್ಟೆವಾದರೂ, ಚರ್ಚಿನ ಹೊರ ಮಾಟವನ್ನು ನಾವು ಬದಲಾಯಿಸಲಿಲ್ಲ! ಮೀಟಿಂಗ್‌ನಲ್ಲಿಯೇ ಈ ವಿಚಾರ ತೀರ್ಮಾನವಾಗಿತ್ತು . ಅಂತೆಯೇ ಚರ್ಚಿನ ಸ್ವರೂಪವನ್ನು ಏನೂ ಬದಲಿಸದೆ, ಹಾಗೆಯೇ ಇಟ್ಟುಕೊಂಡು ಭವನವನ್ನು ಅಲ್ಲಿ ನಡೆಸಲು ಪ್ರಾರಂಭಿಸಿದುದು ಅಲ್ಲಿನ ಜನರ ಮೇಲೆ ಬಹಳ ಒಳ್ಳೆಯ ಪರಿಣಾಮ ಬೀರಿತು! ೧೦ ತಿಂಗಳುಗಳ ಕಾಲ ಸತತವಾಗಿ ನಡೆದ ಈ ಸರಿಪಡಿಸಿಕೊಳ್ಳುವ ಕೆಲಸ ಹೊರಭಾಗವನ್ನು ಮುಟ್ಟದೆ, ಒಳಗೆ ಒಂದು 'ಚಿಕ್ಕಭಾರತ'ವನ್ನೇ ಸೃಷ್ಟಿ ಮಾಡಿತು! ಹೊರಗೆ ನೋಡಿದರೆ ಭಾರೀ ಚರ್ಚು, ಒಳಗೆ ಕಾಲಿಟ್ಟ ಕೂಡಲೇ ಆಗುತ್ತಿದ್ದ 'ಭಾರತ ದರ್ಶನ' ಎಲ್ಲ ಸಂದರ್ಶಕರ, ಬಂದು ಹೋಗುವವರ, ಭವನದ ಮಂದಿಯ

ಬಹಳ ಮೆಚ್ಚುಗೆ ಗಳಿಸಿತು. ೧೯೭೮ ರ ಜುಲೈ ೧೯ ರಂದು ಅಧಿಕೃತವಾಗಿ ಈ ಕಟ್ಟಡದಲ್ಲಿ ಭವನ ತನ್ನ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿತು. ಅದೊಂದು ಚರಿತ್ರಾರ್ಹ ದಿನ! ಅದರ ನೆನಪಿನ ಸಂಚಿಕೆಯನ್ನು ನಾವು ಹೊರತಂದೆವು! ಹೀಗೆ ಭವ್ಯವಾಗಿ ತಲೆ ಎತ್ತಿ ನಿಂತ ಭವನವನ್ನು ನೋಡಲು ಲಾರ್ಡ್ ಕೆಲಹನ್, ಹೆರಾಲ್ಡ್ ಮ್ಯಾಕ್ ಮಿಲನ್, ಲಾರ್ಡ್ ಮೌಂಟ್ ಬ್ಯಾಟನ್‌ರಂತಹ ಮಹಾನ್ ವ್ಯಕ್ತಿಗಳು ಬಂದಿದ್ದರು.

ಲಾರ್ಡ್ ಮೌಂಟ್‌ಬ್ಯಾಟನ್ನರ ಹರ್ಷ

ಬಹುಶಃ ವ್ಯಕ್ತಿಗಳು ಮನುಷ್ಯಜೀವನದಲ್ಲಿ ಮೇಲು ಮೇಲಿನ ಅಂತಸ್ತಿಗೆ ಹೋದಂತೆ ಸರಳರಾಗಿಬಿಡುವರೇನೋ ಎನಿಸುತ್ತಿರುತ್ತದೆ, ಕೆಲವು ಮಹಾನ್ ಹಿರಿಯರ, ಪ್ರತಿಷ್ಠಿತರ ನಡವಳಿಕೆಗಳು! ವಿದ್ಯಾಭವನದ ನೂತನ ಕಟ್ಟಡದ ಉದ್ಘಾಟನೆಗೆ ಲಾರ್ಡ್‌ಮೌಂಟ್ ಬ್ಯಾಟನ್‌ರು ಬರುವುದಿತ್ತು.

ಲಾರ್ಡ್ ಮೌಂಟ್‌ಬ್ಯಾಟನ್ನರು ಬಂದಿದ್ದ ಆ ದಿನ, ಆ ಚರ್ಚಿನ ಹೊರಗೆ ಹಾಕಿದ್ದ ಪ್ಲೇಕ್ (ಫಲಕದಲ್ಲಿ)ದಲ್ಲಿ 'ಈ ಚರ್ಚು ೧೮೬೨ರಲ್ಲಿ... ಮಹನೀಯರಿಂದ ಉದ್ಘಾಟನೆ ಯಾಯಿತು' ಎಂದು ಬರೆದಿದ್ದಿತು. ನಾವು ಚರ್ಚಿನ ಹೊರ ಭಾಗವನ್ನು ಏನೂ ಬದಲಿಸದೆ ಇದ್ದ ಕಾರಣ, ಆ ಫಲಕವೂ ಹಾಗೆಯೇ ಇತ್ತು. ನೋಡಿ ಮೌಂಟ್ ಬ್ಯಾಟನ್ನರಿಗೆ ಬಹಳ.... ಬಹಳ... ಸಂತೋಷವಾಯಿತು. ಕಾರಣ, ಆ ಚರ್ಚನ್ನು ೧೮೬೨ರಲ್ಲಿ... ಉದ್ಘಾಟಿಸಿದ್ದವರು ಅವರ ಮುತ್ತಾತನ ಸಹೋದರ! ಬ್ಯಾಟನ್ನರಿಗೆ ಅವರು ಚಿಕ್ಕ ಮುತ್ತಾತ!! ಅದನ್ನು ಬಹಳ ಅಭಿಮಾನದಿಂದ ನಮಗೆ ಹೇಳಿದ ಬ್ಯಾಟನ್ನರು "ನೀವು ಹೀಗೆ ಚರ್ಚಿನ ಹೊರಸ್ವರೂಪವನ್ನು ಯಾವ ರೀತಿಯಲ್ಲೂ ಬದಲಾಯಿಸದೆ, ಹಾಗೆಯೇ ಇಟ್ಟುಕೊಂಡಿರುವುದನ್ನು ನೋಡಿ ನಿಜಕ್ಕೂ ನನಗೆ ಬಹಳ ಸಂತೋಷ ಆಗಿದೆ. ಭವನದ ಮೇಲಿನ ಗೌರವ ಹೆಚ್ಚಿದೆ" ಎಂದರು ಹೃದಯತುಂಬಿ! ಆಗ ಅವರ ಜತೆಗಿದ್ದ ಜೈಶುಕಲಾಲ್ ಹಾಥೀಜಿ "ಇಲ್ಲ, ಇಲ್ಲ...ನಾವೇಕೆ ಅದನ್ನು ಬದಲಾಯಿಸಬೇಕು. ಅದು ಈಗಿರುವಂತೆಯೇ ಬಹಳ ಸೊಗಸಾಗಿದೆ" ಎಂದರು. ರಾಮಕೃಷ್ಣನ್‌ಜೀ ಯವರಂತೂ "ಇಲ್ಲ... ಇಲ್ಲ... ನಾವು ಹಾಗೆ ಬದಲಾಯಿಸಲಾರೆವು, ಏಕೆಂದರೆ ನಮಗೆ ಚರ್ಚು, ನಮ್ಮ ದೇವಸ್ಥಾನ ಎರಡೂ ಒಂದೇ... ಪ್ರಾರ್ಥನೆ ಮಾಡುವ ಸ್ಥಳಗಳು, ಹೆಸರು ಮಾತ್ರ ಬೇರೆ ಅಷ್ಟೆ! ಅದಕ್ಕೇ ನಮಗೆ ಈ ಎರಡರ ಮೇಲೆಯೂ ಬಹಳ ಗೌರವವಿದೆ. ಭಕ್ತಿ ಇದೆ" ಎಂದರು. ಶ್ರೀ ರಾಮಕೃಷ್ಣನ್‌ರ ವಿವರಣೆ ಕೇಳಿ ಮೌಂಟ್‌ಬ್ಯಾಟನ್ನರಿಗೆ ಬಹಳ ಸಂತಸ, ಸಮಾಧಾನ ಆಯಿತು! ಅಲ್ಲಿನ ಕೌನ್ಸಿಲರ್ ವಿಲಿಯಂ ಸ್ಮಿತ್ತರು ಅಲ್ಲಿಂದ ಸ್ವಲ್ಪ ದೂರದಲ್ಲಿಯಷ್ಟೇ ಗಾಂಧೀಜಿ ಇದ್ದ ಜಾಗದ ಬಗ್ಗೆ ಬ್ಯಾಟನ್‌ರಿಗೆ ಹೇಳಿದರು. ಅದಕ್ಕೆ ಬ್ಯಾಟನ್‌ರು "ಓ ! ನನಗೆ ಈ ವಿಷಯ ತಿಳಿದಿರಲಿಲ್ಲ! ಹಾಗೆಂದ ಮೇಲೆ ಈ ಸ್ಥಳದ ಪಾವಿತ್ರ್ಯ ಮತ್ತೆ ಹೆಚ್ಚಿತು" ಎಂದು ಅಂತರಂಗದಿಂದ ಹೇಳಿದರು! ನಮಗೂ ಈ ಮಾತು ಕೇಳಿ ಮೈಪುಳಕಿತವಾಯಿತು, ಅಲ್ಲಿಯೇ, ಗಾಂಧೀಜಿಯವರು ಪಾದ ಬೆಳೆಸಿದ ಪವಿತ್ರ ಸ್ಥಳದಲ್ಲಿ ತಾನೆ ಇಂದು ಭವನ ತನ್ನ ಕೀರ್ತಿಪತಾಕೆಯನ್ನು ಹಾರಿಸಲು ತಲೆ ಎತ್ತಿ ನಿಂತಿರುವುದು! ಇದೆಲ್ಲ ಒಳ್ಳೆಯದಾಗುವ ಶುಭಸೂಚನೆಯಂತಾಗಿತ್ತು, ನಮ್ಮ ಮನಸ್ಸಿಗೆ! ಎಷ್ಟು ದಿನಗಳ ಕನಸು ಈಗ ನನಸಾಗಿತ್ತು !

ಲಾರ್ಡ್ ಮೌಂಟ್‌ಬ್ಯಾಟನ್ನರ ಈ ಭೇಟಿ ಭಾರತ ಹಾಗೂ ಭಾರತೀಯರ ದೃಷ್ಟಿಯಲ್ಲಿ ಬಹಳ ಮಹತ್ವಪೂರ್ಣದ್ದಾಗಿತ್ತು. ಮೌಂಟ್‌ಬ್ಯಾಟನ್ನರು ಸಾಮಾನ್ಯರಲ್ಲ. ತಮ್ಮ ಎಂಟು ತಿಂಗಳ ಅವಧಿಯ ವೈಸ್‌ರಾಯ್ ಪದವಿಯಲ್ಲಿ ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಟ್ಟಂಥವರು. ತಮ್ಮ ಆಕರ್ಷಕ ನಿಲುವಿನ ಮೋಡಿಗೆ ಭಾರತೀಯರನ್ನು ಮರುಳು ಮಾಡಿದ್ದವರು! ಅವರು ಬಂದಾಗ ಭಾರತದಲ್ಲಿ ಎಲ್ಲರೂ 'ಒಳ್ಳೇ ಸಿನಿಮಾ ಹೀರೋನಂತಿದ್ದಾರೆ ನಮ್ಮ ವೈಸ್‌ರಾಯ್‌ರು' ಎಂದು ಮೆಚ್ಚುಗೆಯಿಂದ ಮಾತನಾಡಿಕೊಳ್ಳುತ್ತಿದ್ದರು. ತಮ್ಮ ಸೂಜಿಗಲ್ಲಿನ ಸೆಳೆತವಿರುವ ವ್ಯಕ್ತಿತ್ವದ ಪ್ರಭಾವವನ್ನು ಇತರ ಭಾರತೀಯ ನಾಯಕರ ಮೇಲೂ ಬೀರಿದವರು, ಸೂಕ್ಷ್ಮಮತಿಗಳು, ಸ್ವಾಭಾವಿಕವಾಗಿಯೇ ಅವರು ಬರುತ್ತಾರೆನ್ನುವ ಸುದ್ದಿ ತಿಳಿದು, ಭವನದ ಸದಸ್ಯರುಗಳು ಕಮಿಟಿಯ ಸದಸ್ಯರುಗಳು ಎಲ್ಲರೂ ತಪ್ಪದೇ ಬರುವ ನಿರೀಕ್ಷೆ ಇತ್ತು.

ಭಾರತಿ ಪಂಕಜ್ ಎನ್ನುವ ಗುಜರಾತಿ ಹೆಣ್ಣುಮಗಳು, ಭವನದ ಅಭಿಮಾನಿ, ಸಿಹಿತಿನಿಸುಗಳನ್ನು ಮಾಡುವುದರಲ್ಲಿ ನಿಷ್ಣಾತೆ. ಮೌಂಟ್ ಬ್ಯಾಟನ್‌ರು ಬರುವ ದಿನದಂದು ವಿಧವಿಧವಾದ ಸಿಹಿತಿನಿಸುಗಳನ್ನು ಭವನಕ್ಕೆ ಬರುವ ಅತಿಥಿಗಳಿಗಾಗಿ ತಯಾರಿಸಿಕೊಡಲು ಆಕೆ ಬಹಳ ಆಸಕ್ತಿಯಿಂದ, ಉತ್ಸಾಹದಿಂದ ಮುಂದಾದರು. ಅಂತೆಯೇ ನಾವೆಲ್ಲರೂ ಬಹಳ ಕಾತರದಿಂದ ಸಂಭ್ರಮದಿಂದ, ಕಾದಿದ್ದ ಆ ದಿನ ಬಂತು.

ಲಾರ್ಡ್ ಮೌಂಟ್‌ಬ್ಯಾಟನ್‌ರು ಬಂದರು. ಅಲ್ಲಿ ಅತಿಥಿಗಳೂ ಬಹಳ ಸಡಗರದಿಂದ ಅವರನ್ನು ಸ್ವಾಗತಿಸಿದರು. ಭವನದ ಕುಟುಂಬ ವಾದ ನಾವೆಲ್ಲರೂ ಅವರನ್ನು ಆತ್ಮೀಯವಾಗಿ, ಪ್ರೀತಿಯಿಂದ ಬರಮಾಡಿಕೊಂಡೆವು. ದಲಾಲ್‌ಜೀಯ ಸಂತೋಷ ಅಷ್ಟಿಷ್ಟಲ್ಲ. ನಾನೂ-ಅವರೂ ಒಂದೇ ಸಂತೋಷದ ಅಲೆಯ ಮೇಲೆ ತೇಲುತ್ತಿದ್ದೆವು! ಮೌಂಟ್‌ಬ್ಯಾಟನ್ನರು ಭಾರತದ ಸಂಸ್ಕೃತಿಯ ಪ್ರತೀಕವಾದ ವಿದ್ಯಾಭವನಕ್ಕೆ ಬಂದಿದ್ದಾರೆ. ಅವರು ಮೊದಲೇ ಭಾರತದ ಬಗ್ಗೆ ಸ್ವಲ್ಪ ದಯಾರ್ದ್ರಹೃದಯವಿದ್ದವರು, ಬಹುಶಃ ಅದಕ್ಕೆಂದೇ ನಮಗೂ ಅವರನ್ನು ಕಂಡರೆ ವಿಶೇಷ ಅಭಿಮಾನ!!

ಟೇಬಲಿನ ಮೇಲೆ ಸಾಲಾಗಿ ಜೋಡಿಸಿಟ್ಟಿದ್ದ ಸಿಹಿತಿನಿಸುಗಳತ್ತ ಬ್ಯಾಟನ್ನರ ದೃಷ್ಟಿ ಹರಿದಿತ್ತು. ನೋಡಲು ಆಕರ್ಷಕವಾಗಿ ಜೋಡಿಸಿಟ್ಟಿದ್ದ ಆ ತಿನಿಸುಗಳನ್ನು ನೋಡಿದ ಅವರು "ಗುಡ್...

ಗುಡ್..." ಎಂದರು. ಅವರ ಈ ಮೆಚ್ಚುಗೆಯಿಂದ ಶ್ರೀಮತಿ ಭಾರತಿ ಪಂಕಜರಿಗೆ ಸ್ಫೂರ್ತಿ ಬಂದು ಒಂದು ಸಣ್ಣ ತಟ್ಟೆಯಲ್ಲಿ ಪೇಡೆಯೊಂದನ್ನು ತಂದರು. ಅವರ ಮುಂದೆ ಹಿಡಿದರು. "ಇದು ಬಹಳ ಚೆನ್ನಾಗಿದೆ ಸ್ವಲ್ಪ ರುಚಿ ನೋಡಿ. ಇದು ಬಾದಾಮಿಯ ಪೇಡಾ..." ಎಂದರು. ಅದಕ್ಕೆ "ಓ...." ಎಂದು ಉದ್ಗರಿಸಿದ ಮೌಂಟ್ ಬ್ಯಾಟನ್‌ರು ಭಾರತಿಯವರ ಉತ್ಸಾಹ ನೋಡಿ ಅವರ ಮನನೋಯಿಸಲಾರದೆ ಪೇಡೆಯನ್ನು ಒಂದು ಚೂರು ಮುರಿದು ಬಾಯಲ್ಲಿರಿಸಿಕೊಂಡು ಮತ್ತೆ "ಓ ಬಹಳ ಬಹಳ ಸ್ವಾದಿಷ್ಟವಾಗಿದೆ! ತುಂಬ ಸೊಗಸಾಗಿದೆ" ಎಂದು ಹೇಳಿದರು. ಇದನ್ನು ಕೇಳಿ ಭಾರತಿಯವರ ಉತ್ಸಾಹ ಮತ್ತಷ್ಟು ಹೆಚ್ಚಿತು. "ಇನ್ನೊಂದು ಚೂರನ್ನು ರುಚಿನೋಡಬಹುದಲ್ಲಾ? ತೆಗೆದುಕೊಳ್ಳಿ" ಎಂದರು. "ಓ ಇಲ್ಲಾ ವಂದನೆಗಳು" ಎಂದರವರು. ಭಾರತಿಯವರು ಸುಮ್ಮನಿರದೆ ಮತ್ತೆ "ಒಂದೇ ಒಂದು ಚೂರು ; ಇದು ಬಾದಾಮಿಯ ಪೇಡಾ, ನಾನು ಮಾಡಿರುವುದು!" ಎಂದರು. ಇದನ್ನು ನೋಡುತ್ತಿದ್ದ ನನಗೋ ಇದೇಕೆ ಭಾರತಿಯವರು ಹೀಗೆ ಬ್ಯಾಟನ್‌ರನ್ನು ಒತ್ತಾಯ ಮಾಡುತ್ತಿದ್ದಾರೆ ಎನಿಸಿತು. ಅಲ್ಲಿಯ ಜನರ ಸ್ವಭಾವ ಅದು. ಅವರು ಹಾಗೆಲ್ಲ ಏನನ್ನೂ ಅತಿಯಾಗಿ ತಿನ್ನುವುದಿಲ್ಲ. ಅದು ಎಷ್ಟೇ ರುಚಿಕರವಾಗಿ, ಸ್ವಾದಿಷ್ಟವಾಗಿದ್ದರೂ ಅವರು ಸ್ವಲ್ಪವೇ ಬಾಯಿಗಿಟ್ಟುಕೊಳ್ಳುವುದು. ಸಾಲದ್ದಕ್ಕೆ ಬ್ಯಾಟನ್ನರ ಆಹಾರವೂ ಬಹಳ ಮಿತ. ಆದರೆ ನಾವು ಅಲ್ಲಿ ಹೇಗೆ ಹೇಳುವುದು? ಹಾಗೆಲ್ಲ ಮಧ್ಯೆ ಪ್ರವೇಶಿಸುವಂತಿಲ್ಲ. ಅಷ್ಟರಲ್ಲೇ ಬ್ಯಾಟನ್ನರ ಚಟಾಕಿ ಕೇಳಿ ಬಂತು. "ಓ... ಇದು ಬಾದಾಮಿಯ ಪೇಡಾ, ನೀವು ಮಾಡಿರುವುದು ನಿಜ, ಆದರೆ ಆ ಬಾದಾಮಿಯನ್ನು ಮಾಡಿರುವವರು ಯಾರು? ಯಾರು ಹೇಳಿ?" ಎಂದರು... ಅವರ ಸಮಯಪ್ರಜ್ಞೆ, ಆ ಸೂಕ್ಷ್ಮತೆ, ಕಂಡು ನಮಗೆ ಬೆರಗಾಯಿತು! "ನಿಜ, ಬಾದಾಮಿ ಪೇಡಾ ನೀವು ಮಾಡಿರುವುದು, ಆದರೆ ಆ ಬಾದಾಮಿಯನ್ನೇ ಮಾಡಿದ್ದಾನಲ್ಲಾ ಆ ದೇವರು, ಅವನ ಕುಶಲತೆಗೆ ಏನು ಹೇಳಬೇಕು? ಅದನ್ನು ಹೇಗೆ ಹೊಗಳಬೇಕು?" ಎಂದು ನಯವಾಗಿಯೇ ಅವರ ಒತ್ತಾಯವನ್ನು ನಿರಾಕರಿಸಿದ ಬ್ಯಾಟನ್‌ರ ಕುಶಲಮತಿಗೆ ತಲೆದೂಗದೆ ಇರಲಾಗಲಿಲ್ಲ!! ಅದಕ್ಕೇ ಅಲ್ಲವೇ ಸ್ವಾತಂತ್ರ್ಯ ಕೊಡುವ ಸಮಯದಲ್ಲಿ ಭಾರತದ ನಾಯಕರಿಗೂ, ಗಾಂಧೀಜಿಗೂ ದೇಶ ವಿಭಜನೆಯ ವಿಷಯದಲ್ಲಿ ಭಿನ್ನಾಭಿಪ್ರಾಯ ಬಂದಾಗಲೂ ಅವರನ್ನು ಒಂದಾಗಿ ಸೇರಿಸುವ ಪ್ರಯತ್ನ ಮಾಡಿ ಹೇಗೋ ಒಂದು ನಿರ್ಧಾರಕ್ಕೆ ತರಲು ಅವರು ಸಹಾಯ ಮಾಡಿದರು! ಭಾರತೀಯರ ಭಾವನೆಗಳು, ಭಾರತೀಯರ ನಾಡಿ ತಿಳಿದಿದ್ದವರು ಅವರು. ಇವರು ಹೇಗೂ ಒಂದಾಗಿ ಸುಖವಾಗಿ ಬಾಳಲಾರರು, ತಮ್ಮದೇ ಆದ "ಒಡೆದು ವಿಭಜನೆ ಮಾಡಿ ಆಳು" ಎನ್ನುವ ರಾಜಕೀಯ ಆಡಳಿತ ನೀತಿಗೆ ಸುಮಾರು ಇನ್ನೂರಕ್ಕೂ ಹೆಚ್ಚು ವರ್ಷಗಳಿಂದಲೂ ತಮ್ಮನ್ನೇ ತಾವು ಬದ್ಧರಾಗಿಸಿಕೊಂಡವರು. ಈ ಜನರ ಮನಸ್ಸುಗಳೂ ಪರಸ್ಪರರ ಬಗ್ಗೆ ಒಡೆದಿವೆ ಎನ್ನುವ ಸೂಕ್ಷ್ಮವನ್ನು ಅರಿತು, ಅದನ್ನು ಗಾಂಧೀಜಿಗೂ ಹೇಳುವ ಸಾಹಸ ಮಾಡಿದವರು! ಸಾಧಾರಣರಿಂದ ಇದೆಲ್ಲ ಸಾಧ್ಯವಾಗುತ್ತಿತ್ತೆ? ತಾನು ಸ್ವತಂತ್ರ ಭಾರತದ ಪ್ರಥಮ ವೈಸ್‌ರಾಯ್ ಆದರೆ ಗಾಂಧೀಜಿ ಏನೆನ್ನುವರೋ ಎಂದು ಅಳುಕಿದ ಬ್ಯಾಟನ್‌ರು ಗಾಂಧೀಜಿಯೇ ಸ್ವತಃ ಬಂದು ಅವರನ್ನು 'ವೈಸ್‌ರಾಯ್ ನೀವಾಗಬೇಕು, ಅದಕ್ಕಾಗಿ ಈ ಐಷಾರಾಮುಗಳನ್ನು ತೊರೆಯುವ ಪ್ರಯತ್ನ ಮಾಡಿ' ಎಂದಾಗ ಬಹಳ ಹೆಮ್ಮೆಯಿಂದ ಬೀಗಿ, ಅವರ ಮಾತಿನಂತೆ ಆರಾಮ ಜೀವನಕ್ಕೆ ಸಾಧ್ಯವಾದಷ್ಟೂ ದೂರ ಸರಿದವರು. ಅವರು ಅಂತಹ ಘನ ವ್ಯಕ್ತಿತ್ವದವರಾಗಿಲ್ಲದಿದ್ದರೆ ಗಾಂಧೀಜಿಯಾದರೂ ತಾವೇ ಸ್ವತಃ ಬಂದು ಅವರನ್ನು ಹಾಗೆ ಕೇಳುತ್ತಿದ್ದರೆ? ಎಂಥ ಮಹಾನ್ ವ್ಯಕ್ತಿಗಳು ಇವರು! ಇಂತಹವರನ್ನೆಲ್ಲ ಜೀವನದಲ್ಲಿ ಒಮ್ಮೊಮ್ಮೆಯಾದರೂ ನೋಡುವ, ಸಂಧಿಸುವ ಅವಕಾಶ ನಮ್ಮ ವಿದ್ಯಾಭವನದ ಕೃಪೆಯಿಂದ ಬಂದಿತಲ್ಲ ಎಂದು ಆ ದಿನ ನಾನೂ ಹೆಮ್ಮೆಯಿಂದ ಬೀಗಿದುದು ಸುಳ್ಳಲ್ಲ!!

೨೩. ಕೂಡಿದ ಕೈಗಳು, ಕಳೆದ ಕೈಗಳು

ನಂದಕುಮಾರ

೩೭, ನ್ಯೂ ಆಕ್ಸ್‌ಫರ್ಡ್ ರಸ್ತೆಯಲ್ಲಿ ಭವನದ ಕಾರ್ಯ ಚಟುವಟಿಕೆಗಳು ನಡೆಯಲು ಪ್ರಾರಂಭವಾಗಿ ಮೂರು ವರ್ಷಗಳ ಹತ್ತಿರಕ್ಕೆ ಬಂದಿತ್ತು. ಒಂದು ದಿನ ಸಂಜೆ ನಾನು ವೇದದ , ಉಪನಿಷತ್ತಿನ ತರಗತಿಗಳನ್ನು ನಡೆಸುತ್ತಿರುವುದನ್ನು ಕೇಳಿ ತಿಳಿದುಕೊಂಡಿದ್ದ ಓರ್ವ ಆಂಗ್ಲ ಮಹಿಳೆ ಮೆಲ್ಲಗೆ ಭವನವನ್ನು ಪ್ರವೇಶಿಸಿದಳು. ಅವಳನ್ನು ಕಂಡು ನಾನು ಮುಗುಳು ನಕ್ಕು ವಂದಿಸಿದೆ. ಆಕೆಯೂ ಪ್ರತಿವಂದಿಸಿ ನನ್ನೆದುರಿದ್ದ ಕುರ್ಚಿಯಲ್ಲಿ ಕುಳಿತಳು. ವೇದದ ತರಗತಿಗಳ ಬಗೆಗೆ ವಿಚಾರಿಸಿದಳು. ಆಕೆ ಜೆನಿಸ್ ಮಿಲ್ಲರ್! ವೇದ ಉಪನಿಷತ್ತುಗಳಲ್ಲಿ ಆಕೆಗೆ ಇದ್ದ ಆಸಕ್ತಿ ಬಹಳ! ಸಾಕಷ್ಟು ತಿಳಿದುಕೊಂಡೂ ಇದ್ದ ಆಕೆ ಋಗ್ವೇದದ ಮೇಲೆ ಒಂದು ಪುಸ್ತಕವನ್ನು ಬರೆಯುತ್ತಿದ್ದಳು. ಅದಕ್ಕಾಗಿ ಸಂಶೋಧನೆಯನ್ನು ನಡೆಸುತ್ತಿದ್ದಳು. ಆಕೆ ಗ್ರಂಥಪಾಲಕಿಯಾಗಿ ಕೆಲಸ ನಿರ್ವಹಿಸುತ್ತಿದ್ದಳು. ಆಕೆಗಿದ್ದ ಈ ಆಸಕ್ತಿಯನ್ನು ನಾನು ಪ್ರೋತ್ಸಾಹಿಸಿದೆ. ಅಲ್ಲವೇ ಮತ್ತೆ? ನಮ್ಮ ಸಂಸ್ಕಾರಗಳಿಗೆ ಮಾರುಹೋಗಿ, ಅದರ ಕುರಿತು ಸಂಶೋಧನೆ ನಡೆಸಿ ಕೆಲಸ ಮಾಡುತ್ತಿರುವ ಆ ವಿದೇಶೀ ಮಹಿಳೆಗೆ ನಮ್ಮಿಂದಾದ ಸಹಾಯ ಮಾಡುವಾ, ಅದರಿಂದ ನಮ್ಮ ದೇಶದ ಕೀರ್ತಿ ತಾನೆ ಈ ಪರದೇಶದ ನೆಲದಲ್ಲಿ ಪಸರಿಸುವುದು? ಎನ್ನಿಸಿತ್ತು ನನಗೆ!

ಆಕೆ ತಪ್ಪದೆ ತರಗತಿಗಳಿಗೆ ಬರುತ್ತಿದ್ದಳು. ಆಕೆಯ ಶಾಂತಗುಣ ಸ್ವಭಾವ ನೋಡುತಿದ್ದ ನಾನು, ಆಕೆಯನ್ನು 'ಶಾಂತಿಮಿಲ್ಲರ್' ಎಂದು ಕರೆಯುತ್ತಿದ್ದೆ. ಹೀಗಿರಲು, ಒಮ್ಮೆ ಆಕೆಗೆ ನಮ್ಮ ಊರು ಮತ್ತೂರಿಗೆ ಹೋಗುವ ಮನಸ್ಸಾಯಿತು. ನಾನು ಆಕೆಗೆ 'ನಮ್ಮೂರು ಸಂಸ್ಕೃತಗ್ರಾಮ', ಎಂದೂ ಮತ್ತೂರಿನ ಬಗೆಗೆ ಸಾಕಷ್ಟು ಹೇಳಿದ್ದೆನಾಗಿ ಆಕೆಗೆ ಕುತೂಹಲ ಕೆರಳಿತ್ತು. ಹಾಗಾಗಿ ಆಕೆಯನ್ನು ನಾನು ಒಮ್ಮೆ ನಮ್ಮ ಊರಿಗೆ ಕರೆತಂದೆ. ಅಲ್ಲಿ ಆಕೆಗೆ ನಮ್ಮ ಊರಿನ ಜನ, ಅವರ ಆಚಾರ-ವಿಚಾರ, ಸಂಪ್ರದಾಯಬದ್ಧ ನಡವಳಿಕೆ ಇವೆಲ್ಲ ಹೊಸತೆನಿಸಿದರೂ, ಒಂದು ರೀತಿ ಇಷ್ಟವಾಯಿತು. ಹಿಂದಿನ ಕಾಲದಿಂದಲೂ ನಡೆದು ಬಂದಿರುವಂಥದಷ್ಟೆ ಅದು! ಆಗ ನಮ್ಮ ಊರಿನ ಸುತ್ತಮುತ್ತ ತೋರಿಸಲು ನನ್ನ ಪ್ರೀತಿಯ ಗೌರವಾನ್ವಿತ ಗೆಳೆಯರಾದ ಶ್ರೀ ಮಾರ್ಕಂಡೇಯ ಅವಧಾನಿಗಳ ತಮ್ಮ ಶ್ರೀ ನಂದಕುಮಾರನಿಗೆ ನಾನು ಹೇಳಿದೆ. ನಂದ ಸಂಸ್ಕೃತದಲ್ಲಿ ಬಹಳ ಒಳ್ಳೆಯ ಅಂಕಗಳನ್ನು ಗಳಿಸಿ ಎಂ.ಎ., ಮುಗಿಸಿದ್ದ. ಮುಂದಕ್ಕೆ ಓದುವುದೋ, ಕೆಲಸಕ್ಕೆ ಸೇರುವುದೋ, ಇನ್ನೂ ಇತ್ಯರ್ಥವಾಗಿರಲಿಲ್ಲ. ನಮ್ಮೂರಿನಲ್ಲಿರುವ ವೇದಪಾಠದ ಮನೆಗಳಿಗೆ ಶ್ರೀಮತಿ ಮಿಲ್ಲರಳನ್ನು ಕರೆದೊಯ್ಯುತ್ತ, ಅಲ್ಲಿನ ವೈಶಿಷ್ಟ್ಯಗಳ ಬಗೆಗೆ ಹೇಳುತ್ತಿದ್ದ ನಂದನ ಗುಣ, ಸ್ವಭಾವ, ನಡವಳಿಕೆ, ಸಂಸ್ಕೃತಜ್ಞಾನ, ಚುರುಕುಬುದ್ಧಿ ಶ್ರೀಮತಿ ಮಿಲ್ಲರ್‌ಗೆ ಬಹಳ ಹಿಡಿಸಿತು. ಆಕೆ ಆಗ ಏನನ್ನೋ ನಿರ್ಧರಿಸಿದವಳಂತೆ ನನ್ನಲ್ಲಿ ಬಂದು, 'ಮಾಥೂರ್‌ಜೀ, ನೀವೇನೂ ತಿಳಿದುಕೊಳ್ಳದಿದ್ದರೆ ನಾನೊಂದು ಕೆಲಸ ಮಾಡಲು ಇಷ್ಟಪಡುವೆ! ನೀವು ಒಪ್ಪಿದರೆ ನಂದನಿಗೆ Ph.D., ಮಾಡಲಿಕ್ಕೆ ನಾನು ಸಹಾಯ ಮಾಡುತ್ತೇನೆ. ಅವನನ್ನು ನಾವು ಇಂಗ್ಲೆಂಡಿಗೆ ಕರೆದುಕೊಂಡು ಹೋಗೋಣ...!!' ಎಂದಳು. ನನಗೋ ಆಶ್ಚರ್ಯ ಸಂತೋಷಗಳಿಂದ ಮಾತೇ ಹೊರಡಲಿಲ್ಲ! Ph.D.,ಗೆ ಈಕೆ ಸಹಾಯ ಮಾಡುವುದು ಎಂದರೇನು? ಅದೂ ನಂದನಿಗೆ! ಬ್ರಿಟನ್ನಿನಲ್ಲಿ ಓದಿಸುವುದು ಸಾಮಾನ್ಯವೇ? ನಾನು "ಶ್ರೀಮತಿ ಮಿಲ್ಲರ್, ಸರಿಯಾಗಿ ಯೋಚಿಸಿದ್ದೀರಾ? ಇದೊಂದು ಭಾರೀ ದೊಡ್ಡ ಸಾಹಸ ಎನಿಸುವುದಿಲ್ಲವೆ?" ಎಂದೆ. "ಹೌದು ಮಾಥೂರ್‌ಜೀ, ಸಾಹಸವನ್ನೇ ಮಾಡೋಣ.... ನಂದನನ್ನು ಲಂಡನ್ನಿಗೆ ಕರೆದುಕೊಂಡು ಹೋಗೋಣ" ಎಂದಳು ದೃಢವಾಗಿ, ಅಂದಿಗೆ ನಂದನ ಮತ್ತೂರು ಹಳ್ಳಿಯ ಜೀವನವೂ ಮುಗಿಯಿತು!

ಇದಾದ ಕೆಲವು ತಿಂಗಳಿಗೇ ನಂದ ಲಂಡನ್ನಿಗೆ ಬಂದ. ಬಹಳ ವೈಯಕ್ತಿಕ ಎನಿಸಿದರೂ ಈ ಬಗ್ಗೆ ಒಂದೆರಡು ಮಾತುಗಳನ್ನು ನನ್ನ ಓದುಗರಲ್ಲಿ ಹೇಳುವುದು ಸೂಕ್ತ ಎಂದು ನನ್ನ ಭಾವನೆ! ನನ್ನವಳು ನಮ್ಮ ಮಗಳು ಸೌ.ಜಾನಕಿಯ ಜತೆಗೆ ಲಂಡನ್‌ಗೆ ಬಂದಿದ್ದಳಷ್ಟೆ. ಜಾನಕಿಗೆ ೧೬ ವರ್ಷ, ನಂದನಿಗೆ ೨೪ ವರ್ಷ. ಮನೆಯಲ್ಲಿ ಬೆಳೆದ ಮಗಳನ್ನು ಇರಿಸಿಕೊಂಡು , ಊರಿನ ಹುಡುಗನಿಗೆ ಆಶ್ರಯ ಕೊಡುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಅಲ್ಲದೆ ನಂದ ಬಹಳವಾಗಿ ಬೇಡಿಕೆಯಲ್ಲಿದ್ದ ವರ! ಅನೇಕ ಕನ್ಯೆಯರ ತಂದೆ ತಾಯಿಯರು ನಂದನನ್ನು ಅಳಿಯನನ್ನಾಗಿ ಮಾಡಿಕೊಳ್ಳಬೇಕು ಎನ್ನುವ ಆಶಯ ಹೊತ್ತಿದ್ದರು. ಆದರೆ ಈಗ ನಾನು ಬಯಸದೆಯೇ ನಂದ ನನ್ನ ಮನೆಗೆ ಬರುವವನಿದ್ದ! ಪರಿಸ್ಥಿತಿ ಹೀಗಾದುದರಿಂದ ನಾವು ನಮ್ಮ ಮಗಳು ಸೌ. ಜಾನಕಿಯನ್ನು ಬೆಂಗಳೂರಿನಲ್ಲಿರುವ ನನ್ನ ಅಣ್ಣ ಶ್ರೀ ಶಂಕರಮೂರ್ತಿಯವರ ಮನೆಗೆ ಕಳುಹಿಸಿ , ಅಲ್ಲಿ ಅವಳು ಓದು ಮುಂದುವರೆಸುವಂತೆ ಹೇಳಿದೆವು. ಅನಂತರ ನಂದ ಲಂಡನ್ನಿಗೆ ಬಂದ. ನಂದ ಬಂದ ಮೇಲೆ ನನ್ನೆಲ್ಲ ಕೆಲಸಗಳಿಗೂ ಹೆಗಲಿಗೆ ಹೆಗಲುಕೊಟ್ಟು ಸಹಾಯ ಮಾಡಲಾರಂಭಿಸಿದ. ಅವನದು Ph.D.,ಗೆ ಓದುವುದು, ಭವನದ ಒಳಗೆಲಸಗಳಲ್ಲಿ ನನಗೆ ಸಹಾಯ ಮಾಡುವುದು, ಬುಕ್‌ಷಾಪಿನಲ್ಲಿ ಕುಳಿತುಕೊಂಡು ನೋಡಿಕೊಳ್ಳುವುದು, ನನ್ನಾಕೆಯ ಜೊತೆ ಅಡುಗೆ ಮನೆಯಲ್ಲಿಯೂ ಅದೂ ಇದೂ ಮಾತನಾಡುತ್ತ ಬಂದವರಿಗೆ ಆದರಾತಿಥ್ಯ ನೀಡುವಲ್ಲಿ ನೆರವಾಗುವುದು. ನಂದ ನಮ್ಮ ಮನೆ-ಮನ ತುಂಬಿದ!! ನಾನು ಹೊರಗಡೆ ಭಾಷಣಗಳಿಗೆ ಎಂದು ಹೋದಾಗ ನಂದನೇ ಮನೆ ಭವನ ಎಲ್ಲವನ್ನೂ ನೋಡಿಕೊಂಡು ನಿಭಾಯಿಸುವುದೂ ಇತ್ತು. ಭವನದ ಆವಶ್ಯಕತೆಗಳು, ಚಟುವಟಿಕೆಗಳು, ನನ್ನ ಕಾರ್ಯವೈಖರಿ, ಭವನಕ್ಕೆ ಬರ - ಹೋಗುವ ಜನ, ಭವನದ ಜೀವನಾಡಿಗಳಾಗಿದ್ದ ಧೀಮಂತ ವ್ಯಕ್ತಿಗಳು, ಭವನದ ತರಗತಿಗಳಿಗೆ ಬರುವ ಮಕ್ಕಳು ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತ, ಭವನದಲ್ಲಿ ನಡೆಯುವ ಸಮಾರಂಭಗಳಿಗೆ, ಭಾಷಣಗಳಿಗೆ ಸುಪ್ರಸಿದ್ಧರೂ, ಗಣ್ಯರೂ ಭೇಟಿ ನೀಡಲು ಬರುವ ಸನ್ನಿವೇಶಗಳಿಗೆ ಬೇಕಾದ ಸಿದ್ಧತೆ ನಡೆಸಲು ತನಗೆ ತಿಳಿದ ಸಲಹೆ ಸೂಚನೆಗಳನ್ನು ಕೊಡುತ್ತ ನನ್ನ ಜತೆ ಸಮನಾಗಿ ದುಡಿಯುತ್ತಿದ್ದ... ನಂದ ಬಂದುದು, ಮರಳುಗಾಡಿನಲ್ಲಿ ಏಕಾಂಗಿಯಾಗಿ ನಡೆಯುತ್ತಿರುವವನಿಗೆ ನೀರು ಕೊಡುವವನೊಬ್ಬ ಜತೆಗೆ ಬಂದಷ್ಟೇ ಸಮಾಧಾನ, ನೆಮ್ಮದಿ, ಸಂತೋಷ ನನಗಾಯಿತು! ಆ ಆತ್ಮೀಯತೆ, ಬುದ್ಧಿಶಕ್ತಿ, ಸಮಯಪ್ರಜ್ಞೆ, ಒಳ್ಳೆಯತನ, ಹೊಂದಿಕೊಳ್ಳುವ ಸ್ವಭಾವ ಈ ಎಲ್ಲದರಿಂದ ನಂದ ನಮ್ಮ ಮನಸ್ಸಿನಲ್ಲಿ ನಿಂತ! ಚಿಕ್ಕಂದಿನಿಂದಲೂ ಅವನು ನಾನು ಕಂಡಿದ್ದ ಹುಡುಗನಾದರೂ, ನಾವು ಕಷ್ಟದಿಂದ ಊರುಬಿಟ್ಟು ನಮ್ಮ ಜೀವನಕ್ಕೆ ದಾರಿಮಾಡಿಕೊಳ್ಳಲು ಹಾತೊರೆದು ಬೆಂಗಳೂರಲ್ಲಿ ನೆಲೆನಿಂತು, ಹಾಗೂ ಹೀಗೂ ನೆಲೆಯಾದ ಕೂಡಲೆ ಲಂಡನ್ನಿಗೆ ಬರುವಂತಾದದ್ದು... ಈ ಎಲ್ಲದರಿಂದ ಮತ್ತೂರಿಗೆ ಆಗಾಗ ಹೋಗಿಬರುತ್ತಿದ್ದರೂ ನಂದನ ಪೂರ್ಣಸ್ವಭಾವದ ಪರಿಚಯ ಈಗಲೇ ನನಗೂ ಆದದ್ದು. ಈ ಮಧ್ಯೆ ನಂದ ಭವನದಲ್ಲಿ ಸಂಸ್ಕೃತ ತರಗತಿಗಳಲ್ಲಿ ಪಾಠ ಹೇಳುವುದಕ್ಕೆ ಪ್ರಾರಂಭಿಸಿದ್ದ. ಒಬ್ಬ ಒಳ್ಳೆಯ ಶಿಕ್ಷಕನೆನಿಸಿಯೂ ವಿದ್ಯಾರ್ಥಿಗಳ ಪ್ರೀತಿಗೆ, ಮೆಚ್ಚುಗೆಗೆ ಪಾತ್ರನಾಗಿದ್ದ.

ಎತ್ತರದ ನಿಲುವಿನ, ಆಕರ್ಷಕ ವ್ಯಕ್ತಿತ್ವದ, ಬುದ್ಧಿವಂತಿಕೆ ಸೂಚಿಸುವ ಚುರುಕು ಕಣ್ಣುಗಳ ನಂದ ಆಶುಕವಿ ಸಹ! ಅದೆಲ್ಲಿರುತ್ತಿದ್ದವೋ, ಸಮಯಕ್ಕೆ ತಕ್ಕಂತೆ ಅವನ ಬಾಯಿಂದ ಹೊರಡುತ್ತಿದ್ದ ಚುಟುಕುಗಳು, ಕವನಗಳು! ಆ ಪದಗಳ ಜೋಡಣೆ, ಅದರ ಅರ್ಥವ್ಯಾಪ್ತಿ, ಒಮ್ಮೊಮ್ಮೆ ನವಿರಾದ ಹಾಸ್ಯಭಾವ, ಒಮ್ಮೊಮ್ಮೆ ಗಂಭೀರ ಚಿಂತನಾಭಾವ... ನಂದ ಈಗೊಂದು ಕವನ ಬರಿ, ಈಗೊಂದು ಕವಿತೆ ಹೇಳು ಎಂದ ಕೂಡಲೇ ಅವನಿಂದ ಸ್ಫುರಿಸುತ್ತಿದ್ದವು ಕನ್ನಡ ಸಂಸ್ಕೃತ ಕವಿತೆಗಳು. Poetry is a spontaneous overflow of powerful feelings ಎಂದು ಆಂಗ್ಲಕವಿ ವರ್ಡ್ಸ್‌ವರ್ತ್ ಹೇಳುವುದು ನಿಜ ಎಂದು ಸಾಬೀತು ಮಾಡುತ್ತಿದ್ದ ನಂದ. ಅವನ ಅಭಿವ್ಯಕ್ತಿ ಸಾಮರ್ಥ್ಯ ಅಷ್ಟು ಚೆನ್ನಾಗಿರುತ್ತಿತ್ತು. ಈಗಲೂ ಆ ಶಕ್ತಿ ಇನ್ನೂ ಸತ್ತ್ವಯುತವಾಗಿಯೇ ಇದ್ದರೂ, ಅವಕಾಶ ಕಡಮೆ. ನನ್ನದೇ ಪದಹತಿಯಲ್ಲಿ ನಡೆದು ಬಂದ ನಂದ ಲಂಡನ್ ಕೇಂದ್ರಕ್ಕೆ ನನ್ನ ಉತ್ತರಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡು, ಅಲ್ಲಿನ ಕಾರ್ಯಕಾರಿ ನಿರ್ದೇಶಕನಾಗಿ ಕೆಲಸ ನಿರ್ವಹಿಸುತ್ತಿರುವಾಗ ಒಮ್ಮೊಮ್ಮೆ... ಆಗೀಗ ಓ ನನಗೆ, ನಂದನಲ್ಲಿದ್ದ ಕವಿತಾಶಕ್ತಿಗೆ, ಆ ಪ್ರತಿಭೆಗೆ ಪುಷ್ಟಿಕೊಟ್ಟು, ಪ್ರೋತ್ಸಾಹದ ನೀರೆರೆದು ಬೆಳಸದೆ, ಆಡಳಿತ ಕ್ಷೇತ್ರಕ್ಕೆ ಅವನು ಬರುವ ಹಾಗೆ ಮಾಡಿದುದು ಸರಿಯೇ, ನ್ಯಾಯವಾಯಿತೇ ಎಂದು ಯೋಚಿಸುವಂತಾಗುತ್ತದೆ ಎಂದರೆ ಸುಳ್ಳಲ್ಲ. ಆದರೆ ಅವನ ಹಿತೈಷಿಯಾಗಿ ನಾನು ಅವನಿಗೆ ಮಾಡ ಬಹುದಾದ್ದನ್ನು ಮಾಡಿದೆ ಎನ್ನುವ ಸಮಾಧಾನವೂ ಇದೆ... ಯಾರನ್ನು ಯಾರು ರೂಪಿಸಲು ಸಾಧ್ಯ? ಯಾರ ಕಾರ್ಯಕ್ಷೇತ್ರವನ್ನು ಯಾರು ನಿರ್ಧರಿಸಲು ಸಾಧ್ಯ? ನಮ್ಮೆಲ್ಲರನ್ನೂ ಆಳುವ ಅಗೋಚರ ಶಕ್ತಿಯ ಕೈಯಲ್ಲೇ ಎಲ್ಲಾ ಇರುವುದು, ಅದೇ ಎಲ್ಲರನ್ನೂ ಅವರವರ ಕಾರ್ಯಕ್ಷೇತ್ರಕ್ಕೆ ನಿಯಮಿಸಿ, ಅಂತೆಯೇ ರೂಪಿಸುವುದು ; ಅದಕ್ಕೆ ಸಹಾಯ ಮಾಡಲು ಕೆಲವರನ್ನು ನಿಮಿತ್ತರನ್ನಾಗಿ ಮಾಡುವುದು. ಇಲ್ಲಿಯೂ ನಾನು ನಿಮಿತ್ತ ಮಾತ್ರ. ಆದರೂ ನನ್ನನ್ನು ಚೆನ್ನಾಗಿ ಬಲ್ಲವರು, "ನಂದನಿಗೆ ಅತಿ ಉತ್ತಮವಾದ ಕಾರ್ಯಕ್ಷೇತ್ರದಲ್ಲೇ ಸೇವೆ ಮಾಡುವಂತೆ ಮಾಡಿದ್ದೀರಿ... ಎಲ್ಲರಿಗೂ ಇಂಥ ಅವಕಾಶ ಸಿಗುವುದಿಲ್ಲ... ಕವಿತಾಶಕ್ತಿ ಅವರ ವ್ಯಕ್ತಿತ್ವದಲ್ಲಿ ಅಂತರ್ಗತವಾಗಿದ್ದರೆ, ಲಹರಿ ಬಂದಾಗ ಬರೆದು ತೃಪ್ತಿ ಪಡೆಯಬಹುದು... ಆದರೆ ಲಹರಿ ಬಂದಾಗ ಇಂಥ ಒಳ್ಳೆಯ ಕಾರ್ಯಕ್ಷೇತ್ರ ಕೆಲಸ ಮಾಡಲು ಸಿಗದು..." ಎಂದು ಸಮಾಧಾನ ಹೇಳಿದಾಗ ನನಗೆ ಎಂಥದೋ ತೃಪ್ತಿಯ ಅನುಭವವಾಗುವುದೂ ನಿಜ!!

ಪ್ರಾರಂಭಿಸಿದ ಮಾತೊಂದು ಅರ್ಥಪೂರ್ಣವಾದ ಕೊನೆ ಮುಟ್ಟುವುದು ಸಹಜ, ಅದು ಹೀಗೆಯೇ!! ನಂದ ನಮ್ಮಲ್ಲಿಗೆ ಬಂದದ್ದರಿಂದ ನಾನು ೧೯೭೬ರಿಂದ ನನಗರಿವಿಲ್ಲದೆಯೇ ೧೯೯೫-೯೬ರ ಸಮಯಕ್ಕೆ ಹಾರಿಬಂದೆ ಎಂದು ನನ್ನ ಓದುಗರು ಭಾವಿಸಿದ್ದಾರು... ಇಲ್ಲ. ಅದು ಹಾಗಲ್ಲ! ಈ ವರ್ಷಗಳ ಮಧ್ಯೆ ನಡೆದ ಕೆಲವು ಸಂಗತಿಗಳನ್ನು ನಿಮ್ಮ ಮುಂದಿಡುವ ಮೊದಲು, ನಿಮ್ಮ ಕುತೂಹಲ ಹತ್ತಿಕ್ಕಿಕೊಂಡು ನೀವು 'ಏನಾಯಿತೋ!' ಎಂದು ಕಾಯುವಂತಾಗ ಬಾರದು ಎಂದಷ್ಟೇ 'All is well, that ends well' ಎಂದು ಇಂಗ್ಲಿಷಿನಲ್ಲಿರುವ ಮಾತಿನಂತೆ ಎಲ್ಲವೂ ಆನಂತರ ಸಮರ್ಪಕವಾಗಿ , ಸಂತೋಷಕರವಾಗಿ ನಡೆಯಿತು ಎಂದು ಸೂಚನೆ ಕೊಡುವುದಕ್ಕಾಗಿಯೇ ನಾನು ೧೯೯೫-೯೬ಕ್ಕೆ ಬಂದು ನಿಲ್ಲಿಸಿದುದು!

ಈ ಮಧ್ಯೆ ಬೆಳೆದ ಮಗಳ ಮದುವೆಯ ಯೋಚನೆ ಯಾರಿಗಿರುವುದಿಲ್ಲ? ತಂದೆತಾಯಿಗಳಾದ ನಾವು ನಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಬೇಕಷ್ಟೆ ? ನಮ್ಮ ಮಗಳು ಜಾನಕಿಗೆ ವಿವಾಹ ಮಾಡುವ ಪ್ರಯತ್ನದಲ್ಲಿ ತೊಡಗಿದೆವು. ಭಾರತೀಯ ವಿದ್ಯಾಭವನವೆಂಬ 'ನಾರಿ', ವೆಸ್ಟ್ ಕೆನ್ಸಿಂಗ್‌ಟನ್ ರಸ್ತೆಯಲ್ಲಿನ, ಕೆಥಿಡ್ರಿಲ್ 'ವರ'ನ ಕೈಹಿಡಿದು, ಅವನ ಮನೆಹೊಕ್ಕು ನಮ್ಮೆಲ್ಲರೊಟ್ಟಿಗೆ ತಕ್ಕಮಟ್ಟಿಗೆ, ನೆಮ್ಮದಿಯಿಂದ ಸಂಸಾರ ನಡೆಸುತ್ತಿದ್ದುದು ನಮಗೆ ಒಂದೆಡೆಯ ಚಿಂತೆ ನಿವಾರಣೆಯಾದಂತಾಗಿದೆ. ಅವಳಂತೆಯೇ ನಮ್ಮ ಹುಡುಗಿಯೂ ಅನುರೂಪ ವರನ ಕೈಹಿಡಿದು ಬಾಳಬೇಕೆನ್ನುವ ಆಸೆ ಹುಟ್ಟಿತು. ದೂರದಲ್ಲೆಲ್ಲೋ ಇದ್ದ ಒಂದು ಆಸೆ , ಈಗ ಮನಸ್ಸಿನ ಮೂಲೆಯಲ್ಲೇ ಕುಳಿತು ಪ್ರೇರೇಪಿಸಿ ನನ್ನನ್ನೂ ಇವಳನ್ನೂ ಕಾರ್ಯೋನ್ಮುಖರಾಗುವಂತೆ ಮಾಡಿತು!

ನಂದನನ್ನು ಲಂಡನಿನಲ್ಲಿ ಬಿಟ್ಟು, ಕಾರ್ಯನಿಮಿತ್ತ ಊರಿಗೆ ಬಂದಿದ್ದ ನಾನೂ ಇವಳೂ ಊರಿನಲ್ಲಿರುವ ನಂದನ ಅಣ್ಣ, ನನ್ನ ಪ್ರೀತಿಯ ಗೌರವಾನ್ವಿತ ಗೆಳೆಯ ಶ್ರೀ ಮಾರ್ಕಂಡೇಯ ಅವಧಾನಿಗಳ ಮನೆಯಲ್ಲಿ ಕುಳಿತು ನಂದನಿಗೆ ಬಂದಿರುವ ಕನ್ಯೆಯರ ಅರ್ಜಿಗಳ ಜತೆಗೆ ನಮ್ಮ ಮಗಳದೂ ಒಂದು ಅರ್ಜಿಯನ್ನು ಸೇರಿಸಿಕೊಳ್ಳುವಂತೆ ಕೇಳಲು ಬಂದಿರುವುದಾಗಿ ಹೇಳಿದೆವು. ಮಗಳು, ನಾವು ಹೇಳಿದಂತೆ ನಡೆಯುವವಳು ಎನ್ನುವ ವಿಶ್ವಾಸದಿಂದ ನಾವು ಹೇಳಿದ್ದಾಗಿತ್ತು, ಅವರಿಗೂ ಯೋಚಿಸಲು ಸಮಯ ಬೇಕಿತ್ತು. ನಂದನ ಅಭಿಪ್ರಾಯವೂ ಮುಖ್ಯವಾಗಿತ್ತು.

ದೈವಾನುಕೂಲ, ಋಣಾನುಸಂಬಂಧ ಎರಡೂ ಇದ್ದುದರಿಂದ ನಂದ-ಜಾನಕಿಯರ ವಿವಾಹವು ೧೯೮೦ರಲ್ಲಿ ವಿಜೃಂಭಣೆಯಿಂದ ನಡೆಯಿತು. ಮಗಳು ಅಳಿಯ ನಮ್ಮ ಜತೆಗೆ ಲಂಡನ್ನಿಗೆ ಹಾರಿ ಬಂದರು!

ವರ್ಷಗಳು ಕಳೆದಂತೆ ನಮ್ಮ ಮಮತೆಯ ಬಳ್ಳಿ ಹೂ ಬಿಟ್ಟಿತು... ರಘು-ಸೀತಾಲಕ್ಷ್ಮಿ ನಮ್ಮ ಮುದ್ದು ಮೊಮ್ಮಕ್ಕಳಾಗಿ ಮಡಿಲು ಮನ-ಮನೆ ತುಂಬಿ ಅಸೀಮ ಸಂತೋಷ ತಂದರು.

'ಅರ್ಥಪೂರ್ಣ'ವಾಗಬೇಕು

ನಮ್ಮ ಪ್ರೀತಿಯ ಮಗಳ ಬದುಕು ನೆಲೆಕಂಡ ವಿಷಯವನ್ನು ಹೇಳುತ್ತಾ ನಿಮ್ಮನ್ನು ಬಹಳ ಮುಂದಕ್ಕೆ ಕರೆದೊಯ್ದೆ. ಮೊಮ್ಮಕ್ಕಳ

ನೆನಪು ಹಾಗೆ ಮಾಡಿತ್ತು. ಆದರೆ, ಈಗ ನಾವು ಭವನವು ಹೊಸ ಕಟ್ಟಡವನ್ನು ಪ್ರವೇಶಿಸಿದ ಮೊದಲೆರಡು ವರ್ಷಗಳಿಗೆ ವಾಪಸ್ಸು ಬರಬೇಕಿದೆ.

ಈ ಮಧ್ಯೆ ಅಲ್ಲಿ ನಾನು ಗಮನಿಸಿ ಕಲಿತ ಮತ್ತೊಂದು ಮುಖ್ಯ ಅಂಶ ಎಂದರೆ, ಯಾವುದೇ ಧಾರ್ಮಿಕ ವಿಧಿಗಳು ನಡೆಯುವಾಗ, ಅದನ್ನು ಸದ್ದುಗದ್ದಲ-ಅದು-ಇದು ಮಾತಾಡುವುದು ಇಲ್ಲದೆ ನೋಡುತ್ತಾ ಭಾಗವಹಿಸಬೇಕು ಎನ್ನುವುದು! ಇದನ್ನು ನಾನು ಗಮನಿಸಿದ್ದುದು ರಾಜಕುಮಾರ ಚಾರ್ಲ್ಸ್‌ರ ವಿವಾಹ ಕುಮಾರಿ ಡಯಾನಾ ಜತೆಗೆ ನಡೆದಾಗ. ಆ ವಿವಾಹದ ಧಾರ್ಮಿಕ ವಿಧಿಗಳನ್ನು ಸುಮಾರು ಎರಡೂವರೆ ಗಂಟೆಗಳ ಕಾಲ ಟಿ.ವಿ.ಯಲ್ಲಿ ಪ್ರಸಾರ ಮಾಡಲಾಯಿತು. ಅದನ್ನು ಸ್ವಲ್ಪವೂ ಬಿಡದೆ, ಅಷ್ಟುಹೊತ್ತೂ ಕುಳಿತು ನೋಡಿದೆ. ಅವರು ಮಂತ್ರಗಳ ರೀತಿಯಲ್ಲಿ ಹೀಬ್ರೂ ಭಾಷೆಯಲ್ಲಿ ಏನೋ ಹೇಳುವುದು, ಅದಕ್ಕೆ ಇಂಗ್ಲಿಷಿನಲ್ಲಿ ಅರ್ಥ ಹೇಳುವುದು, ಅಲ್ಲಿದ್ದವರೆಲ್ಲ, ಅಲ್ಲಿ ನಡೆಯುತ್ತಿದ್ದುದನ್ನು ನೋಡು ನೋಡುತ್ತಲೇ, ತದೇಕಚಿತ್ತರಾಗಿ ಅವರು ಹೇಳಿದುದನ್ನು ಕೇಳುತ್ತ ಇರುವುದನ್ನು ಕಂಡ ನಾನು, ನಾವೂ ಹೀಗೆ ಏಕೆ ಮಾಡಬಾರದು? ಎಂದುಕೊಂಡೆ. ನಮ್ಮಲ್ಲಿ ಎಷ್ಟು ಸೊಗಸಾದ ಮಂತ್ರಗಳಿವೆ! ನಮ್ಮಲ್ಲಿ ಧಾರ್ಮಿಕ ವಿಧಿಗಳು ಅದೆಷ್ಟು ಅರ್ಥಪೂರ್ಣ! ಒಂದು ವಿಷಯಕ್ಕೂ ಸಣ್ಣ-ಪುಟ್ಟದು ಎನ್ನುವ ಭೇದವಿಲ್ಲದೆ, ಇರುವ ಮಂತ್ರಗಳ ಬಗೆಗೆ ನಮಗೆ ಆಸಕ್ತಿಯೇ ಇಲ್ಲ. ನಾವು ಯಾವುದೇ ಸಮಾರಂಭ ಮಾಡಿದರೂ ಅಥವಾ ಇತರರು ಮಾಡುವ ಸಮಾರಂಭಗಳಿಗೆ ಹೋದರೂ ಅಲ್ಲಿ ಹೇಳುವ ಯಾವ ಮಂತ್ರವನ್ನೂ ಗಮನವಿಟ್ಟು ಕೇಳುವುದಿಲ್ಲ. ಗದ್ದಲವೋ ಗದ್ದಲ, ಸಮಾರಂಭಗಳು ಎಷ್ಟೋ ಬಾರಿ ಸಮಯಕ್ಕೆ ಸರಿಯಾಗಿ ಪ್ರಾರಂಭ ವಾಗದೆ ತಡವಾಗಿ ಪ್ರಾರಂಭವಾಗುವುವು. ಸಮಾರಂಭಕ್ಕೆ ಬಂದವರು ಅವರವರಿಗೆ ಬೇಕಾದ ದಿಕ್ಕಿನಲ್ಲಿ ಕುರ್ಚಿಗಳನ್ನು ತಿರುಗಿಸಿಕೊಂಡು ಕುಳಿತು ಹರಟೆ ಹೊಡೆಯುವ ನಾವು, ನಮ್ಮ ಜನ ವೇದಿಕೆಯಲ್ಲಿ ಪಠಿಸುವ ಮಂತ್ರಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ತೋರುತ್ತೇವೆ. ನಾವೇ ಅಲ್ಲಿ ನೋಡುತ್ತಿದ್ದು ವೇದಿಕೆಯ ಮೇಲೆ ಕುಳಿತಿದ್ದರೂ, ಆ ಮಂತ್ರಗಳ ಅರ್ಥ ತಿಳಿದುಕೊಳ್ಳದೆ, ಎಂಥದೋ ಮಾಡಬೇಕು, ಮಾಡುವುದು-ಅಷ್ಟೇ, ಎಂದು ನಿರ್ವಿಕಾರವಾಗಿ ಮಾಡಿ ಮುಗಿಸಿ ಶಾಸ್ತ್ರಕ್ಕೆ ಇತಿಶ್ರೀ ಹೇಳುತ್ತೇವೆ. ಇದನ್ನೇ ಸಾಮಾನ್ಯವಾಗಿ ಎಲ್ಲೆಲ್ಲೂ ನೋಡಿದ್ದ ನನಗೆ ಈ ರೀತಿಯು ಬಹಳ ಇಷ್ಟವಾಯಿತು. ನಾನು ಹೀಗೆಯೇ ಮಾಡಿಸಬೇಕು, ಅರ್ಥ ಹೇಳಬೇಕು, ನಮ್ಮದು ಎಂಥ ಉತ್ತಮ ಸಂಸ್ಕೃತಿ, ಸದಾಚಾರಗಳು! ಸದ್ವಿಚಾರಗಳನ್ನು ಹೇಳುವ ಮಂತ್ರಗಳು! ಇವನ್ನೆಲ್ಲ ಅಲ್ಲಿಯ ಜನರಿಗೆ, ನಾನಲ್ಲಿ ಇರುವವರೆಗಾದರೂ ಹೇಳಿ ತಿಳಿಸಬೇಕು ಎಂದು ಬಲವಾಗಿ ಅನ್ನಿಸಿತು.

ನನ್ನಲ್ಲಿ ಮೂಡಿದ ಈ ಯೋಚನೆಯನ್ನು ಕಾರ್ಯಗತ ಮಾಡುವಲ್ಲಿ ನಾನು ತಡ ಮಾಡಲಿಲ್ಲ. ಮೊದಲೇ ಅಲ್ಲಿ ಜನ (ಎಂದರೆ ಅಲ್ಲಿ ವಾಸವಾಗಿದ್ದ ಭಾರತೀಯರು - ಇತರ ಜನಾಂಗದವರಾದರೂ ಸಿಂಧಿ, ಗುಜರಾತಿ, ಮರಾಠಿ, ಪಂಜಾಬಿ ಇತರರು) ನನ್ನನ್ನೇ ಪೂಜೆ, ಮದುವೆಗಳನ್ನು ಮಾಡಿಸಲು ಕರೆಯುತ್ತಿದ್ದರಷ್ಟೆ. ಆ ಅವಕಾಶಗಳನ್ನು ಉಪಯೋಗಿಸಿಕೊಂಡ ನಾನು, ಅಲ್ಲಿ ಸೇರುತ್ತಿದ್ದವರನ್ನೆಲ್ಲ, ಮಾತನಾಡದೆ ಮೌನವಾಗಿದ್ದು, ನಾನು ಪಠಿಸುವ ಮಂತ್ರಗಳನ್ನು ಕೇಳುತ್ತ, ನಾನು ಹೇಳುವ ಅದರ ಅರ್ಥಗಳ ಬಗ್ಗೆ ಗಮನ ಹರಿಸಲು ಕೇಳಿ, ಆನಂತರ ಹಾಗೆಯೇ ಮಾಡುತ್ತಿದ್ದೆ. ಇದು ಅಲ್ಲಿನ ಎಲ್ಲರಿಗೂ ಬಹಳ ಇಷ್ಟವಾಯಿತು. ಅಲ್ಲವೇ? ಸಾವಿರಾರು ವರ್ಷಗಳಿಂದ ಬಂದಿರುವ, ನಮ್ಮ ಜನರಲ್ಲಿ ಇನ್ನೂ ಉಳಿದುಕೊಂಡು ರೂಢಿಯಲ್ಲಿರುವ ಆ ಸಂಪ್ರದಾಯ ಅರ್ಥವಿಲ್ಲದ್ದೇನಲ್ಲ. ಅದರ ಜತೆಗೆ ಸೇರಿಕೊಂಡ ಕೆಲವು ಪ್ರಕ್ಷಿಪ್ತಗಳು ಅರ್ಥವಿಲ್ಲದವುಗಳಾಗಿವೆಯೇ ವಿನಾ, ಹಿಂದಿನಿಂದ ಉಳಿದು, ಬೆಳೆದು ಬಂದಿರುವ ಮುಖ್ಯವಾದ ಮೂಲ ಮಂತ್ರಗಳು, ಅವುಗಳ ಮಹತ್ವ, ಸೊಗಸು ಎಂದೂ ಮಾಸದಂಥದ್ದು! ನಾನು ಹೀಗೆ ಇದನ್ನೇ ಮುಂದುವರೆಸಿದೆ, ಅದಕ್ಕೆ ಅಲ್ಲಿನವರ ಪ್ರತಿಕ್ರಿಯೆ ಅದ್ಭುತವಾಗಿತ್ತು. ಏಕೆಂದರೆ ನಾನು ಅಲ್ಲಿನ ಉದ್ಯಮಿಗಳ ಮಕ್ಕಳ ಮದುವೆ ಮಾಡಿಸಲು ಹಾಂಗ್‌ಕಾಂಗ್‌ಗೆ ಒಮ್ಮೆ, ಬರ್ಮುಡಾಗೆ ಒಮ್ಮೆ, ಅಮೆರಿಕೆಗೆ ಒಮ್ಮೆ ಹೋಗಿದ್ದೆ! ಇದನ್ನು ನಾವೂ ತಪ್ಪದೆ ಕಲಿಯಬೇಕು.

ಸರ್ವಧರ್ಮಪ್ರಾರ್ಥನಾಮಂದಿರ

ಹೀಗೆ ಎಲ್ಲ ಸಜ್ಜನರ ಮನೆಗಳಿಗೆ ಪೂಜೆಗಳಿಗೆಂದು ಹೋಗುತ್ತಿದ್ದ ನನಗೆ , ನಮ್ಮ ವಿದ್ಯಾಭವನದಲ್ಲಿ 'ಸರ್ವಧರ್ಮ ಪ್ರಾರ್ಥನಾ ಮಂದಿರ' ಒಂದನ್ನು ತೆರೆಯಬೇಕು ಎನ್ನುವ ಆಲೋಚನೆ ಹುಟ್ಟಿತು. ಅಲ್ಲಿಗೆ ಎಲ್ಲರೂ, ಎಲ್ಲ ಮತದವರೂ ಪ್ರಾರ್ಥನೆಗೆ ಬರಬೇಕು. ಆ ಜಾಗಕ್ಕೆ ಬಂದ ಕೂಡಲೆ 'ಶಾಂತರಾಗಿ ಕುಳಿತು ಪ್ರಾರ್ಥಿಸುವ' ಎನಿಸುವಂತಹ ಭಾವನೆ ಎಲ್ಲರಲ್ಲೂ ಬರಬೇಕು, ಆ ಜಾಗ ಅಷ್ಟು ಸುಂದರವಾಗಿ, ಸ್ವಚ್ಛವಾಗಿ ಸಮರ್ಪಕವಾಗಿದ್ದು ಅಲ್ಲಿನ ವಾತಾವರಣ ಈ ಭಾವನೆಗೆ ಪುಷ್ಟಿಕೊಡುವಂತಾಗಿದ್ದು 'ಅಂತರ್ಬಹಿಶ್ಚ ತತ್ಸರ್ವಂ, ವ್ಯಾಪ್ಯ ನಾರಾಯಣಃ ಸ್ಥಿತಃ'- ಪ್ರಪಂಚದಲ್ಲಿರುವ ಎಲ್ಲರಲ್ಲೂ, ಒಳ-ಹೊರಗಡೆ ಇರುವವನು ನಾರಾಯಣ, ಎಲ್ಲ ಜೀವಿಗಳಲ್ಲೂ ಅವನು ವಾಸಿಸುತ್ತಾನೆ... ಎನ್ನುವ ಮಾತು, ನಿಜ ಎನಿಸಿ , ಅದರಲ್ಲೂ ಆ 'ಪ್ರಾರ್ಥನಾಮಂದಿರ'ದಲ್ಲಿ ಕುಳಿತು ಪ್ರಾರ್ಥಿಸಿದರೆ ವಿಶೇಷವಾಗಿ ಮನಶ್ಶಾಂತಿ ಸಿಗುತ್ತದೆ ಎನಿಸಬೇಕು-ಹಾಗಿರಬೇಕು ಅದು, ಎನ್ನುವ ಅಭಿಲಾಷೆ ನನ್ನದಾಗಿತ್ತು. ಈ 'ನನ್ನ ಕನಸಿನ ಕೂಸು'ಹೇಗೆ ಮೈ ತಳೆಯುವುದು ಎನ್ನುವುದು ನನಗೂ ಸ್ಪಷ್ಟವಾಗಿರಲಿಲ್ಲ. ಏಕೆಂದರೆ ಇದು ಭಾರತದಲ್ಲಿಯು ಸಹ ಎಲ್ಲಿಯೂ ಇರಲಿಲ್ಲ. ಅದನ್ನು ನಾನು ಎಲ್ಲೂ

ನೋಡಿರಲಿಲ್ಲ. ಆದರೂ ಅದರ ಸ್ವರೂಪ ಹೀಗಿರಬೇಕೆಂದು ಮನಸಿನಲ್ಲಿ ಒಂದು ಕಲ್ಪನೆ ಇತ್ತು... ಬುದ್ಧಿ ಅದಕ್ಕೆ ತಕ್ಕ ಆಕಾರ ಕೊಡಲು ಯತ್ನಿಸುತ್ತಿತ್ತು!

ನನ್ನ ಈ ಆಲೋಚನೆಯನ್ನು ಎಲ್ಲರೂ ಒಪ್ಪಿದರು. ಕಮಿಟಿಯಲ್ಲಿ ನಾನು ಮಂಡಿಸಿದ ಈ ವಿಷಯ ಎಲ್ಲರ ಮೆಚ್ಚುಗೆ ಗಳಿಸಿತು. ಈ ಕೆಲಸವನ್ನು ತಮ್ಮ ಕೈಗೆ ತೆಗೆದುಕೊಂಡು ನಿರ್ವಹಿಸುವ ಸಮರ್ಥರು ಬೇಕಿತ್ತು. ಹೇಗಿದ್ದರೂ ಚರ್ಚಿನ ಒಳ ಆವರಣವನ್ನು, ಭವನದ ಚಟುವಟಿಕೆಗಳಿಗೆ ತಕ್ಕಂತೆ ಮಾರ್ಪಡಿಸುವ ಬಹಳ ದೊಡ್ಡ ಕೆಲಸವೊಂದು ಉಳಿದಿತ್ತು. ಹೊಸದಾಗಿ ಭವನಕ್ಕೆಂದು ಆ ಚರ್ಚನ್ನು ಕೊಂಡಿದ್ದರೂ, ಚರ್ಚು ಸಾಕಷ್ಟು ಹಳೆಯದಾಗಿತ್ತಷ್ಟೆ? ಅದಕ್ಕೂ ಕಾಯಕಲ್ಪ ಆಗಬೇಕಿತ್ತು. ಆದ್ದರಿಂದ ಚರ್ಚಿನ ಒಳಾವರಣದ ಮಾರ್ಪಾಡಿನ (renovation) ಜತೆಗೆ, ಅಲ್ಲಿದ್ದ ಹಾಲ್ ಒಂದನ್ನು ಸರ್ವಧರ್ಮ ಪ್ರಾರ್ಥನಾ ಮಂದಿರವನ್ನಾಗಿ ಸಿದ್ಧಪಡಿಸುವುದು ಎಂದು ತೀರ್ಮಾನವಾಗಿ, ಭವನದ ಕಮಿಟಿಯವರೆಲ್ಲರ ಒಪ್ಪಿಗೆ ಸಿಕ್ಕಿದನಂತರ, ಭವನವು ಈ ಕೆಲಸಕ್ಕೆ ನುರಿತವರು, ಚೆನ್ನಾಗಿ ತಿಳಿದಿರುವವರು, ಸೃಜನಶೀಲತೆಯಿಂದ ಕೆಲಸ ಮಾಡಬಲ್ಲವರು ಅವರು ನಿಗದಿಪಡಿಸುವ ಅಂದಾಜು ವೆಚ್ಚವನ್ನು ನಮೂದಿಸಿ ಅರ್ಜಿ ಹಾಕಿಕೊಳ್ಳಬಹುದೆಂದು, ಟೆಂಡರ್ ಮಾಡಿತು. ಸತೀಶ್‌ದಾವರ್ - ವಸಂತ್‌ಗಜರ್ ಎನ್ನುವ ಇಬ್ಬರು, ವಾಸ್ತುಶಿಲ್ಪದಲ್ಲಿ ಅನುಭವಿಗಳಾಗಿದ್ದು, ಅರ್ಜಿಗಳನ್ನು ಹಾಕಿದರು. ಇವರಲ್ಲಿ ಸತೀಶ್‌ದಾವರ್ ನಮಗೆಲ್ಲ ಬಹಳ ಪರಿಚಿತರು. ಒಳ್ಳೆಯ ವ್ಯಕ್ತಿ. ಅಂತೆಯೇ ಮಹಾನ್ ಬುದ್ಧಿವಂತ, ಪ್ರತಿಭಾನ್ವಿತ ಆರ್ಕಿಟೆಕ್ಟ್ ಆತ. ದಲಾಲ್‌ಜೀ ಸಹ ಸತೀಶರನ್ನು ಮೆಚ್ಚುತ್ತಿದ್ದರು. ಆತ ಈ ವಿಷಯವಾಗಿ ನನ್ನನ್ನು ಕೇಳಿದಾಗ ನಾನು, “ನಿಮ್ಮ ಅಂದಾಜು ಏನಿದೆಯೋ ಅದನ್ನು ಹೇಳಿ ಅರ್ಜಿ ಹಾಕಿ, ಹೇಗಿದ್ದರೂ ಭವನವು ಟೆಂಡರ್ ಕರೆದಿದೆ. ನಿಮ್ಮದೇ ಸರಿಯಾಗಿದ್ದರೆ, ಹೊಂದಿಕೆಯಾದರೆ ಅದು ನಿಮಗೇ ಸಿಗುತ್ತದೆ” ಎಂದೆ. ನಾನೂ ಅಲ್ಲಿ ಕಾರ್ಯಕಾರಿ ನಿರ್ದೇಶಕನಾಗಿದ್ದುದರಿಂದ ಅವರಿಗೆ ಯಾವ ಭರವಸೆಯನ್ನೂ ಆ ಬಗ್ಗೆ ಕೊಡಲು ಸಾಧ್ಯವಿರಲಿಲ್ಲ. ನಿಜ, ನಾವು ಆತನನ್ನು ಚೆನ್ನಾಗಿ ತಿಳಿದಿದ್ದೆವು. ನಮಗೆಲ್ಲ ಆತ ಪ್ರಿಯರೂ ಆಗಿದ್ದರು. ಅಂದ ಮಾತ್ರಕ್ಕೆ ಭವನದ ನಿಯಮವನ್ನು ಮೀರಿ, ನಾವು ಯಾವುದೇ ರೀತಿಯಲ್ಲಿ ಪಕ್ಷಪಾತ ಮಾಡುವಂತಿರಲಿಲ್ಲ. ವಿದ್ಯಾಭವನದ ಉದ್ದೇಶ ನಿಷ್ಪಕ್ಷಪಾತದಿಂದ ಕೂಲಂಕಷವಾಗಿ ಎಲ್ಲರ ಅರ್ಜಿಗಳನ್ನೂ ಪರಿಶೀಲಿಸಿ ಅನಂತರ ಅರ್ಹರಾದವರಿಗೆ ಆ ಕೆಲಸವನ್ನು ನಿರ್ವಹಿಸಲು ಜವಾಬ್ದಾರಿ ಕೊಡುವುದು. ಆ ನಿಯಮಕ್ಕೆ ನಾವು ಹೊರತಾಗಿರಲಿಲ್ಲ. ಆದರೆ ಎಲ್ಲರ ಮನಸಿನಲ್ಲಿಯೂ ಸತೀಶರನ್ನು ನಾವೆಲ್ಲರೂ ಚೆನ್ನಾಗಿ ಬಲ್ಲೆವಾದ್ದರಿಂದ, ಟೆಂಡರು ಸತೀಶ್ ದಾವರರಿಗೆ ಹೋಗುವುದು ಎನ್ನುವ ಅಭಿಪ್ರಾಯ. ವ್ಯಕ್ತಿಗತ ಅಭಿಪ್ರಾಯಗಳು ಏನೇ ಆಗಿರಬಹುದು, ನಮಗೆ ನಿಯಮ ನಿಯಮವೇ! ಹೀಗಾಗಿ ಸತೀಶರೂ ತಮ್ಮ ಅರ್ಜಿಯನ್ನು ಹಾಕಿಕೊಂಡಿದ್ದರು. ವಸಂತ ಗಜರ್‌ನನ್ನು ನಾವು ಕಂಡರಿಯೆವು. ಅವರು ನಮಗೆ ಹೊಸ ಪರಿಚಯ. ಆದರೂ ವಸಂತರಿಗೆ, ನಾವು ಸತೀಶರ ಪರ ವಹಿಸಿ ಮಾಡಿಬಿಡುವುವೇನೋ ಎನ್ನುವ ಸಂಶಯವಿತ್ತು. ನಾನು ಸತೀಶರಿಗೆ ನೇರವಾಗಿಯೇ ಹೇಳಿದ್ದೆ, ‘ಇದಕ್ಕೆಂದೇ ಇರುವ ಪ್ಯಾನೆಲ್ ಒಂದಿದೆ. ಅಲ್ಲಿನ ನಿಶ್ಚಯವೇ ಅಂತಿಮವಾದದ್ದು. ನಿಮಗೆ ಸಿಗಲಿ ಎಂದು ಹಾರೈಸುವುದಷ್ಟೇ ನನ್ನಿಂದಾಗುವುದು!’ ಎಂದು. ಅದಕ್ಕೆ ನಕ್ಕು ಆತ ಸುಮ್ಮನೆ ತಲೆಯಾಡಿಸಿದ್ದರು. ಆದರೆ ಎಲ್ಲರೂ ನಿರೀಕ್ಷಿಸಿದಂತೆ ನಡೆಯದೆ ಟೆಂಡರು ವಸಂತ ಗಜರ್‌ರಿಗೆ ಹೋಯಿತು. ಅದನ್ನು ಸತೀಶರಿಗೆ ತಿಳಿಸುವುದು ಹೇಗೆ ಎನ್ನುವುದೇ ಒಂದು ಸಮಸ್ಯೆಯಾಯಿತು. ಏನೆಂದರೂ ಭಾರತೀಯ ಮನೋಭಾವ ಅದು, ನೋವಾಗುತ್ತದೆ. ನಮ್ಮ ಸ್ನೇಹದ ಭರವಸೆ ಆ ಬಗ್ಗೆ ಆಸೆ ಹುಟ್ಟಿಸಿರುತ್ತದೆ. ಅದನ್ನು ನಾವು ಅಲ್ಲಗಳೆಯುವಂತಿಲ್ಲ. ಆದರೆ ಇದು ನಮ್ಮ ಕೈ ಮೀರಿದ್ದು. ಹಾಗೆಂದು ಸುಮ್ಮನಿರುವಂತಿಲ್ಲ. ಹೇಗಾದರೂ ಹೇಳಲೇಬೇಕು. ಆದರೆ ಸುದ್ದಿ ತಿಳಿದ ಆತ ಒಂದು ಮಾತೂ ಆಡಲಿಲ್ಲ. ನನ್ನ ಬಳಿ “ಮಾಥೂರ್‌ಜೀ-ಹಾಗಾಗುತ್ತದೆ ಬಿಡಿ ಒಮ್ಮೊಮ್ಮೆ, ಅದಕ್ಕೇಕೆ ನಾವು ಚಿಂತೆ ಮಾಡಬೇಕು, ನಮ್ಮ ನಮ್ಮಲ್ಲಿ ಸ್ನೇಹ ಸದೈವ ಚೆನ್ನಾಗಿದ್ದರೆ ಸರಿ. ಅದಕ್ಕೆ ನಾನೇಕೆ ಬೇಸರ ಮಾಡಿಕೊಳ್ಳಬೇಕು. ಆತನಿಗೆ ಹೋದರೂ ಒಳ್ಳೆಯದೇ! ಯಾರಾದರೂ ಸರಿ, ವಿದ್ಯಾಭವನಕ್ಕೆ ಎಂದು ಚೆನ್ನಾಗಿ ಕೆಲಸ ಮಾಡಿಕೊಟ್ಟರೆ ಸರಿ. ಮಿಕ್ಕದ್ದೆಲ್ಲ ಚಿಂತೆ ಮಾಡುವುದು ಅನವಶ್ಯ” ಎಂದು ನಗೆಯಾಡಿದರು. ನನಗೇ ಮನಸ್ಸು ಚಿಕ್ಕದಾಗಿತ್ತು. ಅವರಿಗೆ ನಾನು ಏನು ಹೇಳಲಿ... ‘ಕ್ಷಮಿಸಿ ಸತೀಶ್’ ಎಂದಷ್ಟೇ ಹೇಳಿದೆ.

ಇದಾದ ನಾಲ್ಕು ದಿನಗಳನಂತರ ಆತನ ಕುಟುಂಬವನ್ನು ನಾನು ನಮ್ಮ ಮನೆಗೆ ಊಟಕ್ಕೆ ಆಹ್ವಾನಿಸಿದೆ. ಊಟಕ್ಕೆಂದು ಬಂದ ಅವರ ಜತೆ ಆ ದಿನ ರಾತ್ರಿ ನಾನೂ, ನಮ್ಮ ಮನೆಯವರೆಲ್ಲರೂ ಬಹಳ ಪ್ರೀತಿಯಿಂದ ಲೋಕಾಭಿರಾಮವಾಗಿ ಬಹಳ ಹೊತ್ತು ಕಳೆದೆವು. ಊಟ ಮುಗಿದನಂತರ ನಾನೂ ಅದು-ಇದು ಮಾತನಾಡುತ್ತ ಮತ್ತೆ “ಸತೀಶ್‌ಭಾಯಿ, ದಯವಿಟ್ಟು ಕ್ಷಮಿಸಿ. ಮನಸ್ಸಿಗೆ ಬೇಜಾರು ಮಾಡಿಕೊಳ್ಳಬೇಡಿ” ಎಂದೆ. ಏಕೋ ನನ್ನ ಮನಸಿಗೇ ನಾನು ಅವರಿಗೆ ಎಷ್ಟು ಸಾಂತ್ವನ ಹೇಳಿದರೂ ಸಾಲದು ಎನ್ನುವಂತಾಗಿತ್ತು! ಅಂಥ ಪ್ರಖರ ಬುದ್ಧಿ ಇರುವವರಿಗೇ ಕೆಲಸ ವಹಿಸಬೇಕೆಂದೇ ನಮ್ಮ ಮನಸ್ಸಿನಲ್ಲೂ ಇದ್ದದ್ದು. ಆದರೆ ಇದು ಅದೃಷ್ಟವಾಗಿತ್ತು! ನಾನು ಹಾಗೆಂದ ಕೂಡಲೇ ಆತ “ಮಾಥೂರ್‌ಜೀ, ಏನಿದು? ನೀವೇಕೆ ಇಷ್ಟು ಮನನೊಂದುಕೊಳ್ಳುತ್ತೀರಿ? ಇದೆಲ್ಲ ಒಂದು ರೀತಿಯ ಆಟ ಇದ್ದಂತೆ ಅಷ್ಟೇ! ಒಮ್ಮೆ ನಾನು ಗೆಲ್ಲುತ್ತೇನೆ. ಒಮ್ಮೆ ಸೋಲುತ್ತೇನಷ್ಟೇ! ಅದಕ್ಕೇಕೆ ಬೇಸರ! ಆ ಮಾತು ಬಿಡಿ” ಎಂದರು. ಅವರು ಆ ಮಾತು ಹೇಳಿದ ರೀತಿಯಲ್ಲೇ, ಅವರು ಎಂಥ ಉದಾರ ಮನಸ್ಸಿನವರೆಂದು

ತಿಳಿಯುತ್ತಿತ್ತು. "ಅಬ್ಬಾ!.... ಆದ ನಿರಾಸೆಯನ್ನು ಹೊರ ತೋರ್ಪಡಿಸದೆ ಇರಲು ಅದೆಷ್ಟು ಶಕ್ತಿ ಕೊಟ್ಟಿದ್ದಾನೆ ಈತನಿಗೆ ಆ ಭಗವಂತ....! ಅಷ್ಟಾದರೂ ನಗುನಗುತ್ತ ಸರಳವಾಗಿ ಹೇಳುತ್ತಿದ್ದಾರಲ್ಲ....!" ಎನ್ನಿಸದೆ ಇರಲಿಲ್ಲ ನನಗೆ. ಎಲ್ಲರದೂ ಊಟವಾದನಂತರ ಸತೀಶರನ್ನು ನಾನು ಭವನದ ಒಳಗೆ ಕರೆತಂದೆ. ಭವನಕ್ಕೆ ಸೇರಿದಂತಿದ್ದ ನಮ್ಮ ಮನೆಯಿಂದ ನಾನು ಭವನದ ಚಟುವಟಿಕೆಗಳು ನಡೆಯುವ ಸ್ಥಳಕ್ಕೆ ಬಂದ ಕೂಡಲೆ ಆತನಿಗೆ ಎಂಥದ್ದೋ ಸಂತೋಷದ ಭಾವ. ಅಲ್ಲಿದ್ದ ಒಂದು ಹಾಲನ್ನು ನೋಡಿ ಆತ 'ಮಾಥೂರ್‌ಜೀ, ಇಲ್ಲಿ ಪ್ರಾರ್ಥನಾ ಮಂದಿರ ನಿರ್ಮಿಸಿ ನೋಡ ಬೇಕಿದೆ ನೋಡಿ, ಆಗ ಇದೆಷ್ಟು ಸುಂದರವಾಗಿ ಕಾಣುವುದೋ' ಎಂದು... ಸೊಂಟದ ಮೇಲೆ ಕೈಇಟ್ಟು ಒಂದು ಕಾಲು ಸ್ವಲ್ಪ ಮುಂದಿಟ್ಟು ಸುತ್ತಲೂ ನೋಡುತ್ತ ನಿಂತಿದ್ದ ಸತೀಶ್ ದಾವರರ ಕಲ್ಪನೆ 'ಪ್ರಾರ್ಥನಾ ಮಂದಿರ'ದ ಚಿತ್ರವನ್ನು ರೂಪಿಸಿಕೊಳ್ಳುತ್ತಿದ್ದುದು ನನಗೆ ಅವರ ಮುಖ ನೋಡಿದಾಗ ಸ್ಪಷ್ಟವಾಗಿತ್ತು! 'ಹೌದು, ಈ ಕೆಲಸವನ್ನು ಈತನಿಗೇ ಏಕೆ ಕೊಡಬಾರದು? ಟೆಂಡರು ವಸಂತಗಜರ್‌ಗೆ ಹೋಗಿದೆ ನಿಜ. ಈತನಿಗೆ ಹೇಗೆ ಕೊಡಲಾದೀತು...? ಕೊಟ್ಟರೇನು? "ಪ್ರಾರ್ಥನಾ ಮಂದಿರ"ವನ್ನು ಮಾತ್ರ ಸತೀಶರು ನಿರ್ಮಿಸಲಿ, ಮಿಕ್ಕದ್ದನ್ನು ವಸಂತ್ ಮಾಡಲಿ. ಸತೀಶರಿಗೆ ಈ ಕೆಲಸ ಮಾಡಿದರೆ ದುಡ್ಡು ಕೊಡಬೇಕು, ವಸಂತರಿಗೆ ಕೊಡುವ ದುಡ್ಡಿನಲ್ಲಿ ಈ ಭಾಗದ ಕೆಲಸದ ದುಡ್ಡು ಹಿಡಿದು ಸತೀಶ್‌ರಿಗೆ ದುಡ್ಡು ಕೊಟ್ಟರಾಯಿತು..., ತಪ್ಪೇನು ಅದರಲ್ಲಿ? ಈ ನೊಂದ ಮನಸ್ಸಿನ ನಿರಾಸೆ ಸ್ವಲ್ಪವಾದರೂ ಕಡಿಮೆಯಾಗದೇ ಆಗ? ನನ್ನಿಂದಾದದ್ದು ನಾನೂ ಮಾಡುತ್ತೇನೆ... ದಲಾಲ್‌ಜೀಗೆ ಹೇಳಿ ಪ್ರಾರ್ಥನಾಮಂದಿರದ ನಿರ್ಮಾಣಕಾರ್ಯವನ್ನು ರೂಪಿಸುವ ಹೊಣೆಗಾರಿಕೆಯನ್ನು ಸತೀಶ್‌ರಿಗೇ ಕೊಡೋಣ ಎಂದು ಕೇಳಬೇಕು...' ನನ್ನ ಬುದ್ಧಿ ಮನಸ್ಸುಗಳು ಹೀಗೆ ವೇಗವಾಗಿ ಆಲೋಚಿಸುತ್ತಿದ್ದವು. ಇಬ್ಬಿಬ್ಬರಿಗೂ ದುಡ್ಡು ಕೊಡುವಷ್ಟು ಭವನವು ಶ್ರೀಮಂತವಾಗಿರಲಿಲ್ಲ. ಅದನ್ನು ಹೀಗೆ ಸರಿಹೊಂದಿಸಿದರಾಯಿತು... ನನ್ನ ಈ ಆಲೋಚನೆಗಳ ಮಧ್ಯೆಯೇ ನಾನು "ನಿಮ್ಮ ಕಲ್ಪನೆ ಏನು? ಅದು ಹೇಗಿದ್ದರೆ ಚೆನ್ನ? ಎಲ್ಲ ಮತದವರೂ ಬಂದು ಪ್ರಾರ್ಥಿಸಬಹುದಾದಂಥ ಪವಿತ್ರವಾದ ಪ್ರಶಾಂತಸ್ಥಳ ಇದಾಗಬೇಕು. ನಾವು ಹಾಗೆ ರೂಪಿಸಿದರೆ ಆ ಮಹಿಮೆ-ಮಹತ್ತ್ವ ಆ ಸ್ಥಳಕ್ಕೆ ಬಂದೇ ಬರುತ್ತದೆ" ಎಂದು ಕೇಳಿದೆ ನಾನು. ಈಗ ನನ್ನ ಧ್ವನಿಯಲ್ಲಿಯೂ ಸಾಕಷ್ಟು ಗೆಲುವಿತ್ತು, ಮಾತಿನಲ್ಲಿ ವಿಶ್ವಾಸವಿತ್ತು, ಏಕೆಂದರೆ ನಾನು ಒಂದು ರೀತಿಯಲ್ಲಿ ಯೋಚಿಸಿ ಒಂದು ನಿರ್ಧಾರಕ್ಕೆ ಬಂದಿದ್ದೆ. ನನ್ನ ಉತ್ಸಾಹ, ಕಾತುರ ನೋಡಿದ ಸತೀಶರ ಉತ್ಸಾಹ ಇಮ್ಮಡಿಸಿತು... ಆತ ಹೇಳಲು ಪ್ರಾರಂಭಿಸಿದರು "ಮಾಥೂರ್‌ಜೀ... ಕ್ರೈಸ್ತರ ಪ್ರಾರ್ಥನೆಯಲ್ಲಿ ಫೆಸಿಲಾನ್ ಹೇಳುವ ಮಾತು ಒಂದಿದೆ. 'ಓ ದೇವರೇ... ನಿನ್ನ ಹತ್ತಿರ ಏನು ಬೇಡಿಕೊಳ್ಳುವುದೋ ತಿಳಿಯದು. ಆದರೆ ನನ್ನ ಅಗತ್ಯ ಏನು ಎನ್ನುವುದು ನಿನಗೆ ಮಾತ್ರ ಚೆನ್ನಾಗಿ ಗೊತ್ತಿದೆ. ನಾನು ನನ್ನನ್ನು ಪ್ರೀತಿಸಿಕೊಳ್ಳುವುದಕ್ಕಿಂತ ಚೆನ್ನಾಗಿ ನೀನು ನನ್ನನ್ನು ಪ್ರೀತಿಸುತ್ತೀಯೆ. ಪ್ರಾರ್ಥಿಸುವುದನ್ನು ನನಗೆ ಕಲಿಸಿಕೊಡು... ನನ್ನೊಳಗೆ ಇದ್ದು ನೀನೇ ಪ್ರಾರ್ಥಿಸು...' ಎಂದು... ಹೀಗಿರಬೇಕು ನೋಡಿ ನಮ್ಮ ಪ್ರಾರ್ಥನಾಮಂದಿರ ! ಇಸ್ಲಾಂ, ಜರತುಷ್ಟ, ಬುದ್ಧ, ಕ್ರೈಸ್ತ-ಈ ಎಲ್ಲ ಮತದವರೂ ಇಲ್ಲಿ ಶಾಂತಿಯಿಂದ ಕುಳಿತು ಪ್ರಾರ್ಥಿಸುವಂತಿರಬೇಕು... ಹೀಗೆ... ಆಯಾ ಧರ್ಮವನ್ನು ಪ್ರತಿನಿಧಿಸುವವರನ್ನು ಇಲ್ಲಿ ಹಾಕೋಣ. ಮಧ್ಯದಲ್ಲಿ ಅಲ್ಲಿ ವೇದಮಾತೆ... ಅದು ನೀವು ಹೇಳುವಂತೆ ಸನಾತನ ಧರ್ಮ... ಸಾವಿರಾರು ವರ್ಷಗಳಷ್ಟು ಹಿಂದಿನದಾದ್ದರಿಂದ ಅದಕ್ಕೆ ಮಧ್ಯದಲ್ಲಿ ಸ್ಥಳ ಇರಲಿ. ಅಲ್ಲಿ ಒಂದು ಜ್ಯೋತಿ ಇರಬೇಕು... ಅದು ದಿವ್ಯಜ್ಞಾನವನ್ನು ಸೂಚಿಸುವುದು. ಬೆಳಕು ಎಂದರೆ ಜ್ಞಾನ ತಾನೆ..." ಸತೀಶರ ವಿವರಣೆ ಮುಂದುವರೆಯಿತು. ನನ್ನ ಕಲ್ಪನೆಯ ಕೂಸಿಗೆ ಬಹಳ ಸುಂದರವಾದ ಅಂಗಾಂಗಗಳನ್ನು ಕೊಟ್ಟು ಸರ್ವಾಂಗ ಸುಂದರವಾಗಿ ರೂಪಿಸಿದ್ದರು ಸತೀಶ್ ದಾವರರು! ಅವರ ಮನಸ್ಸಿನಲ್ಲಿದ್ದ ಪ್ರಾರ್ಥನಾ ಮಂದಿರದ ಸ್ಪಷ್ಟ ಚಿತ್ರ ನನ್ನ ಕಣ್ಮುಂದೆ ಬಂದಿತು. ನಾನು ನನ್ನಲ್ಲಿದ್ದ ಕಲ್ಪನೆಯೇ ಸತೀಶರ ಮಾತುಗಳಲ್ಲಿ ಹೊರ ಬಂದದ್ದನ್ನು ಕಂಡು ಮೂಕವಿಸ್ಮಿತನಾಗಿದ್ದೆ! ಅವರ ಬಗ್ಗೆ ಮೆಚ್ಚುಗೆ ತುಂಬಿ ತುಳುಕಿತು... ಎಂತಹ ಕಲಾವಿದ ಈತ, ಎಷ್ಟು ಶಕ್ತಿ ಇದೆ ಈತನ ಕಲ್ಪನೆಗೆ, ಈ ಕಲ್ಪನೆಗಳನ್ನು ಕೆತ್ತಿ ರೂಪಿಸುವ ಸೃಜನಶೀಲತೆಗೆ! ಇನ್ನು ಈತನ ಅಭಿವ್ಯಕ್ತಿಯಲ್ಲಿ 'ಪ್ರಾರ್ಥನಾ ಮಂದಿರ'ವು ಅದೆಷ್ಟು ಸುಂದರವಾಗಿ ಮೂಡಿಬರುವುದೋ? ಇದನ್ನು ನೆನೆದೇ ನಾನು ಪುಳಕಿತನಾದೆ ಹೌದು. ಅವರು ಹೇಳುವಂತೆಯೇ ಕ್ರೈಸ್ತ ಮತದ ಪ್ರಾರ್ಥನೆಯು ನಮ್ಮ ಸನಾತನಧರ್ಮದ ಪ್ರಾರ್ಥನೆಯಲ್ಲಿ ಹೇಳುವುದನ್ನೇ ಹೇಳುತ್ತದೆ. ಸಂತ ಫ್ರಾನ್ಸಿಸನ ಪ್ರಾರ್ಥನೆಯಲ್ಲಿ ಮನುಷ್ಯ ಹೀಗೆ ಹೇಳುತ್ತಾನೆ, "ಓ ಪ್ರಭು... ನನ್ನನ್ನು ನಿನ್ನ ಶಾಂತಿಗೆ ಉಪಕರಣವನ್ನಾಗಿ ಮಾಡಿಕೋ... ಎಲ್ಲಿ ದ್ವೇಷ ಇದೆಯೋ ಅಲ್ಲಿ ಪ್ರೀತಿಯನ್ನು ಬಿತ್ತುವ ಹಾಗೆ, ಅಪರಾಧ ಇರುವ ಕಡೆ ಕ್ಷಮೆಯನ್ನು, ಸಂಶಯ ಇರುವೆಡೆ ಶ್ರದ್ಧೆಯನ್ನು, ನಿರಾಸೆ ಇರುವೆಡೆ ಭರವಸೆಯನ್ನು, ಕತ್ತಲೆ ಇರುವೆಡೆ ಬೆಳಕನ್ನು, ದುಮ್ಮಾನ ಇರುವೆಡೆ ಸುಮ್ಮಾನವನ್ನು ನಾನು ಹರಡುವ ಹಾಗಾಗಲಿ... ನನ್ನ ಗುರುವೇ... ನನ್ನ ದುಃಖಕ್ಕೆ ನಿವಾರಣೆಯ ದಾರಿ ಹುಡುಕುವುದಕ್ಕಿಂತ ಇತರರ ದುಃಖವನ್ನು ನಾನು ಶಮನ ಮಾಡುವಂತೆ, ಸಹಾನುಭೂತಿ ಪಡೆಯುವುದಕ್ಕಿಂತ ಸಹಾನುಭೂತಿಯನ್ನು ಕೊಡುವಂತೆ, ಪ್ರೀತಿಗೆ ಪಾತ್ರನಾಗುವುದಕ್ಕಿಂತ ಪ್ರೀತಿಯನ್ನು ತೋರಿಸುವಂತೆ, ದಾನ ತೆಗೆದುಕೊಳ್ಳುವುದಕ್ಕಿಂತ ದಾನ ನೀಡುವಂತೆ, ಕ್ಷಮೆಗೆ ಗುರಿಯಾಗುವುದಕ್ಕಿಂತ ಕ್ಷಮೆಯನ್ನು ತೋರುವಂತೆ ನನಗೆ ನೀನು ಅನುಗ್ರಹ ಮಾಡು...!" ಅಲ್ಲವೇ? ದೀನರು ಇದಕ್ಕಿಂತ ಹೆಚ್ಚಿಗೆ ಏನು

ಕೇಳಲಾದೀತು? ಹೀಗೆಯೇ ತಾನೆ ಎಲ್ಲ ಧರ್ಮಗಳೂ ಹೇಳುವುದು? ಎಲ್ಲ ಧರ್ಮದ ಸಾರಸರ್ವಸ್ವವೂ ಇಷ್ಟೇ... ಇದೇ ಪ್ರಾರ್ಥನೆಯೆ. ಆದರೆ ಆ ಪ್ರಾರ್ಥನೆಯನ್ನು ಹೇಗೆ ಮಾಡಬೇಕು ಎನ್ನುವುದು ನಮಗೆ ತಿಳಿದಿರಬೇಕು... ಆ ಪ್ರಾರ್ಥನೆ ಅವನಿಗೆ ಸಲ್ಲುವಂತೆ ಯಾವ ರೀತಿ ಕೆಲಸ ಮಾಡಬೇಕು ಎನ್ನುವುದು ನಮಗೆ ತಿಳಿದಿರಬೇಕು... ಅದನ್ನೇ ತಾನೇ ಗಾಂಧೀಜಿಯೂ ಹೇಳಿರುವುದು "ದಿನವು ಮುಗಿದ ಮೇಲೆ ರಾತ್ರಿ ಕುಳಿತು ನಾನು ಪ್ರಾರ್ಥಿಸುತ್ತೇನೆ... ದಿನ ಪೂರ್ತಿ ನಾನು ಏನು ಮಾಡಿದೆ ? ತಪ್ಪುಗಳೆಷ್ಟು-ಸರಿಯಾದವುಗಳೆಷ್ಟು? ತಪ್ಪುಗಳು ಇಷ್ಟಾದುವೇ ? ಭಗವನ್ ಇನ್ನು ಮುಂದೆ... ನಾಳೆಗೆ ಆ ತಪ್ಪುಗಳು ಪುನರಾವರ್ತನೆಯಾಗದಿರುವಂತೆ ನೋಡಿಕೋ. ನನ್ನ ಮೇಲೆ ನಿನ್ನ ಗಮನ ಇರಲಿ, ತಪ್ಪು ಮಾಡುವುದರಿಂದ ರಕ್ಷಿಸುವಂತಾಗಲಿ. ನಿನ್ನ ದೃಷ್ಟಿ ನನ್ನ ಮೇಲಿದ್ದರೆ ನಾನು ತಪ್ಪು ಮಾಡುವುದಿಲ್ಲ" ಎನ್ನುವ ಗಾಂಧೀಜಿ ಪ್ರಾರ್ಥನೆಯ ನಿಜವಾದ ಅರ್ಥವನ್ನು ಸರಿಯಾಗಿ ತಿಳಿದುಕೊಂಡಿದ್ದರು. ಅದು ಅವರಿಗೆ ಹೃದಯಸ್ಥವಾಗಿತ್ತು. "ಯಾರೇ ಆಗಲಿ, ದಿನದ ಸ್ವಲ್ಪ ಹೊತ್ತನ್ನಾದರೂ ಪ್ರಾರ್ಥನೆಗೆ ಮೀಸಲಿಡಬೇಕು. ಅದು ಯಾವ ಹೊತ್ತಾದರೂ ಸರಿ, ಸದೈವ ಅವನ ನಾಮ ಮನಸಿನಲ್ಲಿಯೇ ಪಠಿಸುವುದು ಸರಿ, ಹಾಗಿದ್ದರೂ ಹತ್ತರಿಂದ ಇಪ್ಪತ್ತು ನಿಮಿಷಗಳಷ್ಟು ಹೊತ್ತು ಮೌನವಾಗಿ ಕುಳಿತು ಅವನ ಚಿಂತನೆಯನ್ನು ಮಾಡಬೇಕು. ಅವನನ್ನು ಕುರಿತೇ ಯೋಚಿಸ ಬೇಕು, ಅವನ ಧ್ಯಾನ ಮಾಡಬೇಕು, ಆಗ ಮನಸ್ಸು ತಿಳಿಯಾಗುತ್ತದೆ. ಹೃದಯ ಹಗುರವಾಗುತ್ತದೆ. ಬುದ್ಧಿ ನಿಷ್ಕಲ್ಮಶವಾಗುತ್ತದೆ..." ಗಾಂಧೀಜಿಯು ಹೇಳುವ ಈ ಹತ್ತರಿಂದ ಇಪ್ಪತ್ತು ನಿಮಿಷಗಳ ಪ್ರಾರ್ಥನೆ ಮಾಡುವ ಪ್ರಶಾಂತ ಪ್ರಾಂಗಣ ನಮ್ಮ ಪ್ರಾರ್ಥನಾ ಮಂದಿರವಾಗಬೇಕು ಎನ್ನುವ ನನ್ನ ಆಸೆಗೆ ಈಗ ಸತೀಶರು ಆಕಾರ ಕೊಟ್ಟಿದ್ದರು.

೧೧.೪೫ರ ರಾತ್ರಿಯ ಸಮಯ. ನಾವು ಹೊತ್ತಾದರೂ ಮನೆಯೊಳಗೆ ಬರದಿದ್ದುದನ್ನು ಗಮನಿಸಿ ಅವರ ಪತ್ನಿಯೇ ಅಲ್ಲಿಗೆ ಬಂದರು. ನಾವು ಮಾತಿನಲ್ಲಿದ್ದೆವು... ೧೧.೪೫ ಆಯಿತು. ಹೊತ್ತಾಯಿತಲ್ಲ? ಎಂದರು "ಮನೆಗೆ ಹೋಗಲು ತಡವಾಗುತ್ತದೆ" ಎನ್ನುವಂತೆ. ಸತೀಶರು "ಐದು ನಿಮಿಷ ಬಂದೆ" ಎಂದು ನನ್ನತ್ತ ತಿರುಗಿದರು. ಅವರ ಪತ್ನಿ ಒಳಸರಿದರು. "ಮಾಥೂರ್‌ಜೀ, ನಾನು ಈ 'ಪ್ರಾರ್ಥನಾ ಮಂದಿರ'ವನ್ನು ರೂಪಿಸಲು ಇಷ್ಟಪಡುತ್ತೇನೆ. ನಾನು ಇದನ್ನು ನಿಮಗೆ ಮಾಡಿ ಕೊಡುತ್ತೇನೆ" ಎಂದರು ಏನನ್ನೋ ನಿರ್ಧರಿಸಿದವರಂತೆ. ನನ್ನ ಮನಸ್ಸಿನಲ್ಲಿಯೂ ಅದೇ ಆಲೋಚನೆ ಇತ್ತಲ್ಲ? "ಧಾರಾಳವಾಗಿ ಮಾಡಿ ನೀವೇ ಮಾಡಿರಿ ಅದಕ್ಕೇನಂತೆ? ಬಹಳ ಒಳ್ಳೆಯ ಯೋಚನೆ" ಎಂದೆ ನಾನು ತಕ್ಷಣವೇ. ಅವರು ಒಂದು ನಿಮಿಷ ತಡೆದು, "ಆದರೆ ನನ್ನದೊಂದು ಕಂಡೀಷನ್ ಇದೆ..." ಎಂದರು. ಈಗ ನನಗೆ ಸ್ವಲ್ಪ ಗೊಂದಲವಾಯಿತು. ಇವರು ಹೇಳುವ ಬೆಲೆ ಹೆಚ್ಚಿರಬಹುದು. ಕಲೆಗೆ ಬೆಲೆ ಕಟ್ಟಲಾದೀತೆ? ಸೃಜನಶೀಲತೆ ಎನ್ನುವುದು ಎಲ್ಲರಲ್ಲೂ ಇರುವಂಥದಲ್ಲ , ಅದು ಅಮೂಲ್ಯ! ನಾನೂ ಸ್ವಲ್ಪ ಜಾಗರೂಕನಾಗಿ, ಅವರ ಕಂಡೀಷನ್ ಏನಿರ ಬಹುದು ಎಂದು ಸ್ಪಷ್ಟವಾಗದೆ, "ನಿಮ್ಮ ಕಂಡೀಷನ್ ಏನಿದ್ದರೂ ನಮ್ಮ ನಮ್ಮ ನಡುವಿನ ಪ್ರೀತಿ-ವಿಶ್ವಾಸಕ್ಕೆ, ಕೆಲಸಕ್ಕೆ, ತೊಂದರೆ ಮಾಡುವುದಿಲ್ಲ ಎಂದು ನನಗೆ ನಂಬಿಕೆ ಇದೆ...." ಎಂದೆ ಅಷ್ಟೇ ವಿಶ್ವಾಸದಿಂದ. ಅದಕ್ಕೆ ಸತೀಶರು ಆ ಗಳಿಗೆಯಲ್ಲಿ... "ಮಾಥೂರ್‌ಜೀ, ಈ ಪ್ರಾರ್ಥನಾ ಮಂದಿರಕ್ಕೆ ಆಗುವ ಸಾಮಾನುಗಳು, ಕೆಲಸಗಾರರು ಎಲ್ಲರನ್ನೂ ನಾನೇ ಒದಗಿಸಿಕೊಳ್ಳುತ್ತೇನೆ. ನಾನೇ ನಿಂತು ಈ ಪ್ರಾರ್ಥನಾ ಮಂದಿರವನ್ನು ರೂಪಿಸಿಕೊಡುತ್ತೇನೆ. ವಿದ್ಯಾಭವನವು ಇದಕ್ಕಾಗಿ ಒಂದು ಪೈಸೆಯನ್ನೂ ನನಗೆ ಕೊಡುವುದು ಬೇಡ... ಹೌದು ಮಾಥೂರ್‌ಜೀ, ಇದನ್ನು ನಾನೇ ನಿರ್ಮಿಸಬೇಕು..." ಎಂದರು, ತಮಗೆ ತಾವೇ ತಮ್ಮ ಮಾತನ್ನು ಖಚಿತ ಮಾಡಿಕೊಳ್ಳುವವರಂತೆ! ನಾನು ದಿಙ್ಮೂಢನಾಗಿದ್ದೆ. ಏನು ಮಾತನಾಡಬೇಕು ಎನ್ನುವುದೇ ನನಗೆ ತೋರಲಿಲ್ಲ. ನನ್ನ ಕಣ್ಣು ತುಂಬಿ ದೃಷ್ಟಿ ಮಂಜಾಯಿತು. ಅವರನ್ನು ಅಪ್ಪಿಕೊಳ್ಳುವ ಮನಸ್ಸಾಗಿ , ಮೈಯೆಲ್ಲ ಕೃತಜ್ಞತೆ ಹೇಳುವಂತೆ, ಅವರನ್ನು ಬಾಚಿ ಅಪ್ಪಿಕೊಂಡೆ. ಅವರಿಗೆ ನನ್ನ ಈ ಪ್ರತಿಕ್ರಿಯೆ ಅನಿರೀಕ್ಷಿತ... ಆದರೆ ನನಗಾಗಿದ್ದ ಆನಂದದ ಅನುಭವ ಅವರಿಗಾಯಿತು! ವ್ಯವಹಾರದ ವಿಷಯದಲ್ಲಿ ಅಷ್ಟು ನಿರಾಸೆಯಾಗಿರುವಾಗ, ಬಹಳ ಮಹತ್ತ್ವಪೂರ್ಣವಾದ ಕಾಂಟ್ರಾಕ್ಟ್ ಒಂದು ತಪ್ಪಿ ಹೋಗಿರುವ ಈ ಸಮಯದಲ್ಲಿ ಅದೆಷ್ಟು ಉದಾರತೆ, ಅದೆಷ್ಟು ದೊಡ್ಡ ಮನಸ್ಸು... ಇವೇ ಮಾತುಗಳು ನನಗರಿವಿಲ್ಲದಂತೆಯೇ ನನ್ನ ಬಾಯಿಂದ ಹೊರಟಿತು..."ಸತೀಶ್, ಎಷ್ಟು ಉದಾರಿ ನೀವು, ಎಂತಹ ಮಹಾನ್ ನಿಮ್ಮ ವ್ಯಕ್ತಿತ್ವ... ನಾನು ಹೇಗೆ ನಿಮಗೆ ಕೃತಜ್ಞತೆ ಹೇಳುವುದು?" ಎಂದೆ. ಈ ಮೂರು ಮಾತುಗಳಲ್ಲಿ ನನಗಾದ ಸಂತೋಷ, ಆಶ್ಚರ್ಯ, ಸತೀಶರ ಅಭಿಮಾನ ಎಲ್ಲವೂ ವ್ಯಕ್ತವಾಗಿದ್ದವು. ಇದಕ್ಕಿಂತ ಹೆಚ್ಚಿಗೆ ಹೇಳಲು ನನಗೂ ತಿಳಿಯಲಿಲ್ಲ. 'ಮಾತಿಗೆ ನಿಲುಕದ ಭವ್ಯ ಅಪಾರತೆ, ಮನಸಿಗೆ ನಿಲುಕದ ದಿವ್ಯಾತೀತತೆ' ಎನ್ನುವ ಕವಿಯ ಮಾತೊಂದಿದೆ. ಮಾತಿನಲ್ಲಿ ಕೃತಜ್ಞತೆ ತಿಳಿಸಲು ಸಾಧ್ಯವಾಗದಷ್ಟು, ಆ ಉದಾರತೆ ಅಪಾರವಾಗಿದ್ದು ಭವ್ಯವಾಗಿತ್ತು. ಅಂಥ ಉದಾರತೆ ತೋರಿದ ವ್ಯಕ್ತಿಯ ಆ ಮನೋಭಾವ ಮನಸಿನಲ್ಲಿಯೂ ಊಹಿಸಿಕೊಳ್ಳಲಾಗದಷ್ಟು ದಿವ್ಯವಾಗಿತ್ತು! ಕವಿ ಇದನ್ನು 'ಗಾನವಿಮಾನದಲ್ಲಿ ದೂರಕೆ ಹೋಗುವಾ' ಎಂದು ಹೇಳುವಾಗ ಬರೆದಿರುವುದಾದರೂ ಅದೇಕೋ ಆ ಕ್ಷಣ ನನ್ನ ಮನಸಿಗೆ ಈ ಸಾಲುಗಳೇ ಹೊಳೆದದ್ದು! ಆ ಒಟ್ಟೂ ಕೆಲಸ ಸುಮಾರು ೫೦.೦೦೦ ಪೌಂಡುಗಳದ್ದು, ಅದರಲ್ಲಿ ಪ್ರಾರ್ಥನಾ ಮಂದಿರದ ನಿರ್ಮಾಣಕ್ಕೆಂದೇ ೩-೪ ಸಾವಿರ ಪೌಂಡುಗಳ ಖರ್ಚು (ಸುಮಾರು ಎರಡು ಲಕ್ಷ ರೂಪಾಯಿಗಳು) ಎಂದು ಅಂದಾಜು ಮಾಡಲಾಗಿತ್ತು.

ನಾನು ದುಡ್ಡಿನ ವಿಷಯ ಕೇಳಿದಾಗ, “ಏಕೆ ಮಾಥೂರ್‌ಜೀ, ಹಾಗೆ ಹೇಳುತ್ತೀರಿ? ನಮ್ಮ ದೇಶಕ್ಕಾಗಿ ಇಷ್ಟನ್ನೂ ನಾನು ಮಾಡಲಾರೆನೇ? ಭವನವು ಭಾರತದ ಭವ್ಯ ಪರಂಪರೆಯನ್ನು ಉಳಿಸಿಕೊಂಡು ಬಂದಿದೆ. ಅದಕ್ಕಾಗಿ ನಾವು ಸ್ವಲ್ಪವಾದರೂ ಮಾಡದಿದ್ದರೆ ಹೇಗೆ?” ಎಂದಿದ್ದ ಸತೀಶ್‌ದಾವರ್, ಹೀಗೆ ಹೇಳಿದ ಹನ್ನೊಂದು ದಿನದಲ್ಲೇ ಎಲ್ಲವನ್ನೂ ಚೆನ್ನಾಗಿ ಯೋಚಿಸಿ ಬಹಳ ಸುಂದರವಾದ ಪ್ರಶಾಂತ ಎನಿಸುವ, ದೈವೀಭಾವ ಮೂಡಿಸುವ ಸರ್ವಧರ್ಮ ಪ್ರಾರ್ಥನೆಗೂ ಸಮನ್ವಯ ವಾಗುವ ಪ್ರಾರ್ಥನಾ ಮಂದಿರವನ್ನು ರೂಪಿಸಿದರು. ಚರ್ಚ್‌ನ ಒಂದು ಪ್ರಾಂಗಣ (ಖಾಲಿ ಹಜಾರ) (ಹಾಲ್) ಸರ್ವಧರ್ಮ ಪ್ರಾರ್ಥನಾ ಮಂದಿರವಾಗಿ ಮಾರ್ಪಾಟಾಗಿತ್ತು! ‘ಭಾರತೀಯ ವಿದ್ಯಾಭವನ’ದ ‘ಮಕುಟ ಮಣಿ’ ಆ ‘ಪ್ರಾರ್ಥನಾ ಮಂದಿರ’ ಎನಿಸುವಂತಹ ಸ್ವರೂಪ ಅದರದಾಗಿತ್ತು! ಎಲ್ಲರಿಗೂ ಸತೀಶರ ಈ ಕಲಾವಂತಿಕೆ ಬಹಳ ಮೆಚ್ಚುಗೆಯಾಗಿತ್ತು, ದಲಾಲ್‌ಜೀ ಬಹಳ ಸಂತೋಷಪಟ್ಟು, ಬಲು ಪ್ರೀತಿಯಿಂದ ಸತೀಶರಿಗೆ ತಮ್ಮ ತುಂಬು ಹೃದಯದ ಕೃತಜ್ಞತೆ ಸೂಚಿಸಿ ಪತ್ರ ಬರೆದರು. ಅಲ್ಲೇ ಇದ್ದವರಿಗೆ ಪತ್ರ ಬರೆದದ್ದೇಕೆ? ಎಂದು ಕೊಳ್ಳುವುದು ಓದುಗರಲ್ಲಿ ಸಾಮಾನ್ಯ. ಇದೊಂದು ಅಸಾಮಾನ್ಯದ ಕೆಲಸವಾಗಿತ್ತು. ಅದನ್ನು ಉಚಿತವಾಗಿ ನಿರ್ಮಿಸಿಕೊಟ್ಟ ಆ ಧೀಮಂತ ಸತೀಶರಿಗೆ ವಿದ್ಯಾಭವನದ ಎಲ್ಲರ ಪರವಾಗಿ ದಲಾಲ್‌ಜೀ ಪತ್ರ ಕೊಟ್ಟದ್ದು, ಅದೊಂದು ಲಿಖಿತ ರೂಪದ ಕೃತಜ್ಞತಾ ಸಮರ್ಪಣೆ ಯಾಗಿತ್ತು. ಅದು ಸತೀಶರಿಗೂ ಒಂದು ಅಮೂಲ್ಯವಾದ ಪತ್ರ ಎನಿಸಿತು! ಭವನಕ್ಕೆ ಬಂದು ಹೋಗುವವರೆಲ್ಲರ ಮೆಚ್ಚುಗೆ ತಿಳಿದಾಗ ಎಂಥದೋ ಧನ್ಯತಾಭಾವದಿಂದ ಅವರ ಎದೆ ಉಬ್ಬುತ್ತಿತ್ತು.

ದೇವರು ಯಾವ ಕೆಲಸವನ್ನು ಮಾಡಿಸಬೇಕಾದರೂ ತುರ್ತಾಗಿ ಮನಸು ಮಾರ್ಪಾಡಿಸಿ ಮಾಡಿಸುವುದೇಕೆ ? ಅವನ ಸಂಕಲ್ಪ ಏನಿದ್ದೀತು ಎಂದು ಸಾಮಾನ್ಯರಾದ ನಮಗೆ ತಿಳಿಯಲಾಗದು... ಪಂಪನ ‘ಆದಿ ಪುರಾಣ’ದಲ್ಲಿ ಲಲಿತಾಂಗನೆಂಬ ಸ್ವರ್ಗವಾಸಿಯ ಬಗೆಗೆ ಹೇಳಲಾಗುತ್ತದೆ. ಆ ಸ್ವರ್ಗದಲ್ಲೇ ಇದ್ದ ಸ್ವಯಂಪ್ರಭಾದೇವಿಯೇ ಅವನ ಪ್ರಿಯೆ. ಸುಖದ ತೊಟ್ಟಿಲಲ್ಲಿ ತೂಗುತ್ತಿರುವಾಗ ಲಲಿತಾಂಗನ ಸ್ವರ್ಗದಲ್ಲಿನ ಆಯುಸ್ಸು ಇನ್ನು ಆರು ತಿಂಗಳು ಮಾತ್ರ ಎನ್ನುವುದು ಅವನಿಗೆ ತಿಳಿದು, ಇದನ್ನೆಲ್ಲ ಬಿಟ್ಟು ಹೋಗಬೇಕಲ್ಲಾ ಎಂದು ಹಲುಬಿ ಗೋಳಾಡುವ ಅವನಿಗೆ ದೇವತೆಗಳು ಹೇಳುತ್ತಾರೆ,

“ನಿನಗೊರ್ವಂಗಲ್ಲವಸ್ಥಾಂತರಮಮರಜನಕ್ಕೆಲ್ಲಮೀ ಪಾಂಗೆ ಕಾರು
ಣ್ಯನಿನಾದಂ ನಿನ್ನನಾದಂ ನಗಿಸುಗುಂ... ಜನನಮೃತಿಜರಾತಂಕಶೋಕಾಗ್ನಿಯಿಂದಾ
ವನುಮೀ ಸಂಸಾರದೊಳ್ ಬೇಯದನೊಳನೆ ಶರಣ್ಧರ್ಮದಿಂದೊಂದುಮುಂಟೇ”

ಎಂದು. ‘ನಿನಗೊಬ್ಬನಿಗೇ ಈ ಸ್ಥಿತಿಯಲ್ಲ, ಅಮರರೆನಿಸಿಕೊಂಡ ದೇವತೆಗಳಿಗೂ ಇದು ತಪ್ಪಿದ್ದಲ್ಲ... ತಿಳಿದುಕೋ’ ಎಂದು ಸಮಾಧಾನಿಸಿ ಬುದ್ಧಿ ಹೇಳುತ್ತಾರೆ. ದೇವತೆಗಳನ್ನು ದೊಡ್ಡವರೆಂದೂ, ರಾಕ್ಷಸರನ್ನು ನಿಕೃಷ್ಟರೆಂದೂ ಬಿಡದ ಸಾವು ಈ ಮರ್ತ್ಯರನ್ನು ಬಿಟ್ಟೀತೆ?’ ‘ಕಾಳಿಂಗಸರ್ಪದ ಬಿಲದಲ್ಲಿ ಓಡಾಡುವ ಇಲಿಗಳಂತಿದ್ದೇವೆ ನಾವು!’ ಎಂದು ಕವಿ ಪು.ತಿ.ನ.ರು ಈ ಸಾವಿನ ಬಗ್ಗೆ ಹೇಳಿರುವುದು ಅದೆಷ್ಟು ನಿಜ...!‘ಸಮವರ್ತೀ’ ಎಂದು ಹೆಸರು ಪಡೆದ, ಎಲ್ಲರನ್ನೂ ಸರಿಸಮಾನವಾಗಿ ಮುಗಿಸುವ ಯಮಧರ್ಮ ಸತೀಶರನ್ನೂ ಬಿಡಲಿಲ್ಲ... ನಾನು ಇಷ್ಟೆಲ್ಲ ಏಕೆ ಹೇಳಿದೆನೆಂದು ಈಗ ನನ್ನ ಓದುಗರಿಗೆ ಅರ್ಥವಾಗಿದ್ದೀತು. ಅಷ್ಟು ಒಳ್ಳೆಯ ಕೆಲಸ ಮಾಡಿಕೊಟ್ಟ ಸತೀಶರು ಈ ಕೆಲಸ ಮಾಡಿ ಮುಗಿಸಿದ ಒಂದು ತಿಂಗಳಲ್ಲೇ ವಿಧಿವಶರಾದರು... ೪೩-೪೪ರ ಹರೆಯದ ಸತೀಶದಾವರರ ಸಾವನ್ನು ದಿಢೀರನೆ ನಿಮಗೆ ಹೇಳುವುದು ನನಗೇ ಸಾಧ್ಯ ವಾಗದಾಯಿತು. ಸತೀಶರ ಉದಾರತೆಯನ್ನು ಮೆಚ್ಚಿಕೊಂಡು ಐದು ನಿಮಿಷಗಳೂ ಕಳೆಯದೆ ನೀವು, ಅವರು ನಿಧನರಾದರು ಎಂದು ನಾನು ಹೇಳಿದರೆ ನಂಬುವ ಸ್ಥಿತಿಯಲ್ಲಿ ಇರುವುದಿಲ್ಲ. ಅದಕ್ಕೆ... ಈ ವಿಷಯವನ್ನು ಹೇಳುವುದಕ್ಕೇ ನಾನು ಇಷ್ಟೆಲ್ಲಾ ಪೀಠಿಕೆ ಹಾಕಿ, ನಿಮ್ಮನ್ನು ಈ ಸುದ್ದಿ ಕೇಳಲು ಸಿದ್ಧಮಾಡಿದೆ! ಅಂತೂ ಭವನವು ತನ್ನ ಅಭಿಮಾನಿಯೊಬ್ಬರನ್ನು ಕಳೆದು ಕೊಂಡಿತು. ಸತೀಶರ ಹೆಸರನ್ನು ಫಲಕ ಒಂದರಲ್ಲಿ ಹಿತ್ತಾಳೆಯ ಅಕ್ಷರಗಳಿಂದ ಕೆತ್ತಿಸಿ ಆ ‘ಪ್ರಾರ್ಥನಾ ಮಂದಿರ’ದಲ್ಲಿ ಹಾಕಲಾಯಿತು. ‘ಉದಾರ ಕೊಡುಗೆ-ಶ್ರೀ ಸತೀಶ್ ದಾವರ್’ ಎಂದಿರುವ ಈ ಫಲಕ, ಸತೀಶರನ್ನೆಂದೂ ಮರೆಯದಂತೆ ಮಾಡಿದೆ! ಸತೀಶರಿಗೆ ಅಂತ್ಯ ಸಂಸ್ಕಾರವನ್ನು ನಾನೇ ಮಾಡಿಸಿದೆ. ಆ ಆತ್ಮಕ್ಕೆ ಖಂಡಿತವಾಗಿಯೂ ಸದ್ಗತಿ ದೊರಕಿರುತ್ತದೆ ಎಂದು ನನ್ನ ನಂಬಿಕೆ.

ಹೀಗೆ ವಿದ್ಯಾಭವನದ ಏಳಿಗೆಗೆ ಬಹಳ ಜನ ತಮ್ಮ ಕೈಲಾದ ಕೊಡುಗೆ ಕೊಟ್ಟಿದ್ದಾರೆ. ಕೆಲಸ ಮಾಡಿಕೊಟ್ಟಿದ್ದಾರೆ. ಯಾವನೇ ಒಬ್ಬ ವ್ಯಕ್ತಿಯಿಂದ ಎಲ್ಲವೂ ಸಾಧ್ಯವಾಗುವುದಿಲ್ಲ. ಒಂದೊಂದು ಸಾಧ್ಯವಾಯಿತು ಎಂದು ಆತ ಸರ್ವಾಧಿಕಾರಿಯೂ ಆಗಲು ಸಾಧ್ಯವಿಲ್ಲ. ಶ್ರೀಕೃಷ್ಣ ಒಬ್ಬನಿಂದ ಧರ್ಮಸಂಸ್ಥಾಪನಾ ಕಾರ್ಯ ಸಾಧ್ಯ ವಾಗುತ್ತಿರಲಿಲ್ಲ. ‘ಲೋಕಸಂಗ್ರಹ’ ಕಾರ್ಯಕ್ಕೆ ಅವನಿಗೆ ಪಾಂಡವರ ಸಹಾಯ-ಸಹಕಾರ ಅಗತ್ಯವಾಗಿದ್ದಿತು. ಏಕೆಂದರೆ ಅವರು ಧರ್ಮಮಾರ್ಗಿಗಳು, ಧರ್ಮದ ಗೆರೆದಾಟದವರು. ಧರ್ಮಿಗಳಿಂದ ಧರ್ಮದ ಬಲ ಹೆಚ್ಚುತ್ತದೆಯಷ್ಟೆ? ಅದಕ್ಕೇ ಕೃಷ್ಣನಿಗೆ ಅವರು ಪ್ರಿಯರಾದರು. “ಮಮ ಪ್ರಾಣಾ ಹಿ ಪಾಂಡವಾಃ- ನನ್ನ ಪ್ರಾಣವೇ ಪಾಂಡವರು” ಎಂದ ಕೃಷ್ಣ! ಪ್ರಜಾಪ್ರಭುತ್ವದ ನಿಯಮಗಳ ಜತೆಗೆ ಸಂಧಾನ ಮಾಡಿಕೊಂಡು ಒಳ್ಳೆಯವರಾದ ಎಲ್ಲರನ್ನೂ ಕಟ್ಟಿ, ಸರಿದೂಗಿಸಿಕೊಂಡು ಹೋಗುವುದೇ ನಾಯಕನಾದವನ ಕರ್ತವ್ಯ, ಧರ್ಮ. ಇಲ್ಲಿ ನಮ್ಮ ದಲಾಲ್‌ಜೀ ಕೃಷ್ಣನಂತೆಯೇ ಎಂದರೆ ಅದರಲ್ಲಿ ಉತ್ಪ್ರೇಕ್ಷೆ ಇಲ್ಲ. ಕೃಷ್ಣನ ತತ್ತ್ವಗಳನ್ನೇ ತಮ್ಮ ಆಡಳಿತದಲ್ಲಿ, ತಮ್ಮ ಕೆಲಸಗಾರರ ವರ್ಗದಲ್ಲಿ ಅಳವಡಿಸಿಕೊಂಡ ದಲಾಲ್‌ಜೀಗೆ ಈ ತರಹದ

ಅನೇಕ ಸಜ್ಜನರು ಸಹಾಯ ಮಾಡಿದರು, ಅವರ ಕೈ ಬಲಪಡಿಸಿದರು. 'ವಿದ್ಯಾಭವನ'ವು ಹೆಮ್ಮೆಯಿಂದ ಎಲ್ಲರ ಅಭಿಮಾನ ತುಂಬಿಕೊಂಡು ಬೆಳೆಯುವಂತೆ ಮಾಡಿದರು.

ಶ್ರೀ ಸತ್ಯಸಾಯಿಬಾಬಾ

ಒಳ್ಳೆಯ ಕಾರ್ಯಗಳು ಆದಾಗ ಅದನ್ನು ಪ್ರೋತ್ಸಾಹಿಸುವವರಲ್ಲಿ ಆ ಸ್ಫೂರ್ತಿ ಹೇಗೆ ಸೆಲೆಯೊಡೆಯುತ್ತದೆ ಎನ್ನುವುದಕ್ಕೆ ಒಂದು ನಿದರ್ಶನವೆಂದರೆ, ನಮ್ಮ ಈ ಪ್ರಾರ್ಥನಾ ಮಂದಿರವನ್ನು ಹಲವರು ಮೆಚ್ಚಿದ್ದರಷ್ಟೇ? ಯಾರೇ ಬಂದರೂ ಪ್ರಾರ್ಥನಾ ಮಂದಿರಕ್ಕೆ ಕಾಲಿಟ್ಟ ಕೂಡಲೇ, "ಓಹ್... ಎಷ್ಟು ಚೆನ್ನಾಗಿದೆ?" ಎಂದು ಉದ್ಗಾರ ಮಾಡುತ್ತಿದ್ದರು. ನಾನು ಅಲ್ಲಿನ ಜನರನ್ನು ಕಂಡಂತೆ ಅಲ್ಲಿದ್ದವರಲ್ಲಿ ದೈವಭಕ್ತಿಗೇನೂ ಕೊರತೆ ಇರಲಿಲ್ಲ. ಭಾರತೀಯ ಇತಿಹಾಸದಲ್ಲಿ ಭಕ್ತಿ ಪರಂಪರೆಗೆ ಒಂದು ವಿಶೇಷ ಸ್ಥಾನವಿದೆ. ಆದರೆ ಮೊದಲಿನಿಂದಲೂ ನನ್ನ ಕಾಳಜಿ ಎಂದರೆ, 'ಈ ಭಕ್ತಿ ಮೂಢಭಕ್ತಿ ಆಗಬಾರದು' ಎನ್ನುವುದು. ಅಂತೆಯೇ ಅಲ್ಲಿನವರಿಗೆ ಧಾರ್ಮಿಕ ಆಚರಣೆಗಳಲ್ಲಿಯೂ ಬಹಳ ಶ್ರದ್ಧೆ , ಬಹಳ ಗೌರವ. ಆದರೆ ಇದನ್ನೆಲ್ಲ ಸರಿಯಾಗಿ ನಡೆಸುವ ಆ ಆಚರಣೆಗಳಿಗೆ ಒಂದು ಸರಿಯಾದ ಅರ್ಥ ಕೊಡುವ, ಅವರ ನಂಬಿಕೆಗಳನ್ನು ಸರಿಯಾಗಿ ವಿಶ್ಲೇಷಿಸುವ ಯಾರೂ ಅವರಲ್ಲಿರಲಿಲ್ಲ, ಅಥವಾ ಆ ರೀತಿಯ ಪ್ರಯತ್ನವನ್ನೇ ಯಾರೂ ಮಾಡಿರಲಿಲ್ಲ. ನಾನು ಅಲ್ಲಿಗೆ ಹೋದನಂತರ ಅವರ ಭಕ್ತಿಭಾವಕ್ಕೆ ಸರಿಯಾದ ಅರ್ಥ ಬರಬೇಕಾದರೆ, ಅರ್ಥಪೂರ್ಣವಾದ ಧಾರ್ಮಿಕ ಆಚರಣೆಗಳನ್ನು ನಡೆಸಿದರೆ ಅದಕ್ಕೆ ಪೂರಕ ಆದೀತು ಎನಿಸಿ, ಪೂಜೆ ಮಾಡಿಸುವುದು, ವಿಗ್ರಹಗಳ ಪ್ರತಿಷ್ಠಾಪನೆ ಮಾಡಿಸುವುದು, ಮದುವೆ ಮಾಡಿಸುವುದು, ಯಾರಾದರೂ ಕಾಲವಾದಾಗ ಪ್ರೇತಕರ್ಮಗಳನ್ನು ಮಾಡಿಸುವುದು ಇವುಗಳನ್ನು ಆರಂಭಿಸಿದೆ. ಜೊತೆಜೊತೆಗೆ ನನಗೆ ಸರಿಯಾಗಿ ತಿಳಿದ ಮಟ್ಟದಲ್ಲಿ ಜಾತಕವನ್ನು ನೋಡಿ ಹೇಳುತ್ತಿದ್ದೆ. ಯಾರಿಗೂ ಯಾವತ್ತೂ ಕೆಟ್ಟದ್ದಾಗುತ್ತದೆ ಎಂದು ಹೇಳುತ್ತಿರಲಿಲ್ಲ. 'ಪೂಜೆ ಮಾಡೋಣ, ದೇವರ ಅನುಗ್ರಹ ಇದ್ದರೆ ಎಲ್ಲವೂ ಸರಿಹೋದೀತು. ನಮ್ಮ ಪ್ರಯತ್ನ, ಅಭ್ಯಾಸ ಸಾಗಬೇಕು', ಎಂದೇ ಭರವಸೆ ಕೊಡುತ್ತಿದ್ದೆ. ನನ್ನ ಮಾತುಗಳಲ್ಲಿ ಅವರ ನಂಬಿಕೆ-ನಿಷ್ಠೆ ಹೆಚ್ಚಿದಂತೆ, ಆ ದೇವರಲ್ಲಿ ನನ್ನ ಪ್ರಾರ್ಥನೆಯಲ್ಲಿ ಅವರಿಗೆ ಒಳ್ಳೆಯದಾಗಲಿ ಎನ್ನುವ ಬೇಡಿಕೆಯೂ ಸೇರತೊಡಗಿತು. ಹೀಗೆ ಪ್ರಾರ್ಥನೆಗಳು ನಿಃಸ್ಪೃಹತೆಯಿಂದಿದ್ದಾಗ, ಬಹುಶಃ ದೇವರಿಗೂ 'ಕರುಣೆ ತೋರಿಸದೆ ವಿಧಿಯಿಲ್ಲ' ಎನ್ನುವಂತಾಗಿದ್ದರೂ ಇರಬಹುದು! ಅಲ್ಲಿನ ಜನರ ವಿಶ್ವಾಸಕ್ಕೆ ತಕ್ಕಂತೆ ಅವರಿಗೆ ಸಾಕಷ್ಟು ಒಳ್ಳೆಯದೇ ಆಗುತ್ತಿತ್ತು. ಹಾಗೆ ಒಳ್ಳೆಯದಾದಾಗ ಅದರ ಶ್ರೇಯದಲ್ಲಿ ಕಾಲುಭಾಗವನ್ನು ಅವರು ನನಗೂ ಕೊಡುತಿದ್ದರು! ಅವರು 'ನಿಮ್ಮಿಂದಲೇ ಇಷ್ಟೆಲ್ಲಾ ಒಳ್ಳೆಯದಾದದ್ದು' ಎಂದು ಪೂರ್ಣ ಶ್ರೇಯವನ್ನು ಕೊಡುತ್ತಿದ್ದರೂ ನನಗೆ ನನ್ನ ಪಾಲು ಎಷ್ಟೆಂದು ಅರಿವಿರುತ್ತಿತ್ತಲ್ಲ, ಅದರಿಂದ ನಾನು ಅದನ್ನು ಕಾಲುಭಾಗ ಎಂದು ಕೊಳ್ಳುವುದಿತ್ತು!

ನಾವು ಮಾಡಿದ - ಮಾಡುವ ಒಳ್ಳೆಯ ಕೆಲಸಗಳು ನಮಗೇ ಇಚ್ಛಿಸಿದ ಫಲವನ್ನೇ ಕೊಡಬೇಕೆಂದೇನಿಲ್ಲ. ನಮಗೆ ಬೇಕಾದವರಿಗೆ, ನಾವು 'ಇಂಥವರಿಗೆ ಒಳ್ಳೆಯದಾಗಬೇಕು' ಎಂದುಕೊಂಡವರಿಗೆ ಒಳ್ಳೆಯದಾದರೂ, ಅವರ ಆಸೆ ಪೂರ್ತಿಯಾದರೂ ಅದು ನಮಗೆ ಸಂದಾಯವಾದ ಪ್ರತಿಫಲ ಎಂದುಕೊಳ್ಳಬಹುದು ನಾವು!

ಯಾವುದನ್ನೇ ಮಾಡಿದರೂ ಸಮಯಕ್ಕೆ ಸರಿಯಾಗಿ ಮಾಡಬೇಕು ಎನ್ನುವುದು ಮೊದಲಿನಿಂದಲೂ ನನ್ನ ನಂಬಿಕೆ. ಸಮಯ ಮೀರಿದ ಮೇಲೆ ಎಲ್ಲವೂ ಏರು-ಪೇರು. ಕಾಲಕಾಲಕ್ಕೆ ಆಗುವುದು ಎಂದಿಗೂ ಸರಿಯಾಗಿದ್ದೀತು. ಅದೇ ನಾನು ಪಾಲಿಸಿಕೊಂಡು ಬಂದಿರುವ ನಿಯಮ. ಇದನ್ನು ನಾನು ತಿಳಿದಿದ್ದೆನಾದರೂ, ಅದು ನನ್ನ ಮನದಾಳಕ್ಕೆ ಇಳಿಯುವಂತೆ ಮಾಡಿದವರು ಶ್ರೀ ಸತ್ಯಸಾಯಿಬಾಬ! ನೆನಪು ಹಿಂದಕ್ಕೋಡುತ್ತಿದೆ... ಈಗ ಸದ್ಯಕ್ಕೆ ಲಂಡನ್‌ನಿಂದ ನಿಮ್ಮನ್ನು ನಾನು ಬೆಂಗಳೂರಿಗೆ ಕರೆದುಕೊಂಡು, ಹಿಂದಕ್ಕೆ ಹೋಗಬೇಕಿದೆ!

೧೯೬೧ರ ಸಮಯ. ನಾನು 'ಸಂಯುಕ್ತ ಕರ್ನಾಟಕ'ದಲ್ಲಿ ಕೆಲಸ ಮಾಡುತ್ತಿದ್ದೆ. ಬೆಂಗಳೂರಿನಲ್ಲಿ ಅಲ್ಲಿ-ಇಲ್ಲಿ ಕಥೆ ಹೇಳಲು ಹೋಗುತ್ತಿದ್ದ ನಾನು ಸದಾಶಿವನಗರದಲ್ಲಿ ಶ್ರೀ ಸತ್ಯಸಾಯಿಬಾಬಾ ಸಂಸ್ಥೆಯ 'ಬಾಲವಿಕಾಸ'ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದೆ. ಸಾಯಿಬಾಬಾರಿಗೆ ಶಿಸ್ತು, ಸಮಯಪಾಲನೆ ಬಹಳ ಪ್ರೀತಿ. ಅಂತೆಯೇ ನಾನು ಸಹ, ಭಾನುವಾರ ೪ ರಿಂದ ೪-೪೫ರ ತನಕ ಒಂದು ತರಗತಿ, ೫ ರಿಂದ ೫-೪೫ರ ತನಕ ಮತ್ತೊಂದು ತರಗತಿಯನ್ನು ಸಮಯಕ್ಕೆ ಸರಿಯಾಗಿ ಅಲ್ಲಿಗೆ ಹೋಗಿ, ತಪ್ಪದೆ ನಡೆಸುತ್ತಿದ್ದೆ. ಒಂದು ದಿನ, ಆ ಒಂದೇ ದಿನ ಮಾತ್ರ ಆಟೋರಿಕ್ಷಾ ಸಿಗುವುದು ತಡವಾಗಿ, ನಾನು ಮೂರು ನಿಮಿಷ ತರಗತಿಗೆ ಬರುವುದು ತಡವಾಯಿತು. ಬಂದ ಕೂಡಲೆ ಮರೆಮಾಚದೆ ಆ ಮಕ್ಕಳ ಬಳಿ ನಾನು ತಡವಾಗಿ ಬಂದಿರುವುದನ್ನು ಹೇಳಿಬಿಟ್ಟೆ. ಅಲ್ಲಿದ್ದ ಹುಡುಗರೆಲ್ಲ ಹನ್ನೆರಡು-ಹದಿಮೂರು ವರ್ಷದವರೇ ಆಗಿದ್ದರೂ, ಎಲ್ಲರಲ್ಲೂ ಇರುವವನು ಆ ಪರಮಾತ್ಮ ಒಬ್ಬನೇ ತಾನೆ? ಅದಕ್ಕೇ ನನ್ನ ತಪ್ಪೊಪ್ಪಿಗೆ ನಿಃಸ್ಪೃಹವಾಗಿತ್ತು.

ಇದಾಗಿ ಒಂದು ವಾರ ಕಳೆದನಂತರ ನಮ್ಮ ಸಂಪಾದಕರಾಗಿದ್ದ ಶ್ರೀ ದಿವಾಕರರ ಮೊಮ್ಮಗನಿಗೆ ಉಪನಯನ ಸಮಾರಂಭವಿತ್ತು. ಬಾಬಾ ಅವರ ಭಕ್ತರ ಮಕ್ಕಳ ಉಪನಯನ ಇದ್ದಾಗ ನಾನೇ ಮಂತ್ರಸಿದ್ಧಿ ಹೇಳಿ, ಯಜ್ಞೋಪವೀತವನ್ನು ಅಭಿಮಂತ್ರಿಸಿ ಕೊಡುವುದಿತ್ತು. ಸಿದ್ಧಪುರುಷರಾದ ಬಾಬಾ ವಟುವನ್ನು ಹರಸುವಾಗ ವಟುವಿನ ತಲೆಯ ಮೇಲೆ ಅವರ ವಾತ್ಸಲ್ಯದ ಕೈಯಾಡುತ್ತಿತ್ತು. ಅರೆಕ್ಷಣದಲ್ಲಿ ಅರಿಶಿನ ಪೂಸಿದ ಯಜ್ಞೋಪವೀತವೊಂದು ಅವರಲ್ಲಿ ಸೃಷ್ಟಿಯಾಯಿತು. ಆಗ

ಬಾಬಾ ಅವರೇ ಆ ಮಂತ್ರಗಳ ಅರ್ಥವನ್ನು ಹೇಳುತ್ತಿದ್ದರು. ಹೀಗೆ ಸುಮಾರು ಐದಾರು ಕಡೆಗಳಲ್ಲಿ ಆಗಿತ್ತು. ಆ ದಿನವೂ ಹಾಗೆಯೇ ನಾನೇ ಮಂತ್ರಗಳನ್ನೆಲ್ಲ ಹೇಳಿದೆ, ಬಾಬಾ ಅದರ ಅರ್ಥ ಹೇಳಿದರು. ಕಾರ್ಯಕ್ರಮ ಮುಗಿದನಂತರ ಬಾಬಾ ಎಲ್ಲರನ್ನೂ ಮಾತನಾಡಿಸುತ್ತ ಒಂದು ಸುತ್ತು ಬಂದರು. 'ಬಾಲವಿಕಾಸ' ತರಗತಿಯ ಮಕ್ಕಳೂ ಅಲ್ಲಿದ್ದರು. ಬಾಬಾ ಮಕ್ಕಳ ಬಳಿ ನಿಂತು ಮಾತನಾಡುತ್ತಿದ್ದರು. ಒಬ್ಬ ಹುಡುಗ ಕೈ ಬೆರಳುಗಳನ್ನೆತ್ತಿ ಏನನ್ನೋ ಸನ್ನೆ ಮಾಡಿ ಹೇಳುತ್ತಿದ್ದ. ದೂರದಲ್ಲಿದ್ದು ಇದನ್ನೆಲ್ಲ ಗಮನಿಸುತ್ತಿದ್ದ ನಾನು, "ಓಹೋ... ಈ ಮಗು ನಾನು ಆ ದಿನ ತರಗತಿಗೆ ಮೂರು ನಿಮಿಷಗಳಷ್ಟು ತಡವಾಗಿ ಬಂದದ್ದನ್ನು ಬಾಬಾರಿಗೆ ಹೇಳುತ್ತಿದ್ದಾನೆ" ಎಂದು ಗಟ್ಟಿ ಮಾಡಿಕೊಂಡೆ. ನನ್ನ ಸರದಿ ಬಂದಾಗ ಬಾಬಾ, "ಏನು, ಬಕಾಸುರನ ಕತೆ ಹೇಳುತ್ತಿದ್ದೀಯಂತೆ ನೀನು ಮಕ್ಕಳಿಗೆ? ಕುಂತಿಯ ತ್ಯಾಗದ ಬಗ್ಗೆ ಹೇಳಿದ್ದೀಯೋ ಇಲ್ಲವೋ?" ಎಂದರು... "ಒಬ್ಬ ಮಗ ಹೋದರೂ ಚಿಂತೆ ಇಲ್ಲ , ನನ್ನಿಂದ ಆ ಮನೆಯ ಯಜಮಾನರಿಗೆ-ಯಜಮಾನತಿಗೆ ದುಃಖ ತಪ್ಪಿತಲ್ಲ. ಅವರ ವಂಶದ ಕುಡಿಗೆ ಕೇಡಾಗಲಿಲ್ಲವಲ್ಲ' ಎಂದುಕೊಂಡು, ತನ್ನ ಮಗನನ್ನು ಸಾವಿನ ದವಡೆಗೆ ನೂಕುವ ಕುಂತಿಯ ತ್ಯಾಗವನ್ನೇ ಹೇಳದೆ ಬಕಾಸುರನ ಕಥೆ ಪೂರ್ತಿಯಾದೀತೆ ಬಾಬಾ..." ಎಂದು ನಕ್ಕೆ. "ಓಹೋ... ಅಲಗೇ... (ಪರವಾಗಿಲ್ವೇ, ಚೆನ್ನಾಗಿದೆಯಲ್ಲಾ ಎನ್ನುವ ಭಾವ ಅದು)" ಹಾಗೆಯೇ ಒಂದೆರಡು ನಿಮಿಷ ಅವರ ಮಾತು ಮುಂದುವರೆದು "ಮೂರು ನಿಮಿಷ ತರಗತಿಗೆ ತಡವಾಗಿ ಬಂದೆಯಂತಲ್ಲಾ?" ಎಂದರು. "ಹೌದು, ಬಾಬಾ, ಒಂದೇ ದಿನ, ಕೇವಲ ಮೂರು ನಿಮಿಷಗಳಷ್ಟೇ ತಡ" ಎಂದೆ ಕೈ ಮುಗಿದು. ಅದಕ್ಕೆ ಬಾಬಾ ಗಂಭೀರವಾಗಿ "ಮೂರು ನಿಮಿಷಗಳು ಎಂದು ಹೇಳಬೇಡ. ಮೂರು ನಿಮಿಷಗಳಲ್ಲ, ೭೫ ನಿಮಿಷಗಳು" ಎಂದರು. ಅದಕ್ಕೆ ನಾನು ಅರ್ಥವಾಗದವನಂತೆ "ಇಲ್ಲ, ಬಾಬಾ... ಕೇವಲ ಮೂರು ನಿಮಿಷಗಳಷ್ಟೇ ತಡ..." ಎಂದೆ ಮತ್ತೆ. "ಇಲ್ಲಾ, ಎಪ್ಪತ್ತೈದು ನಿಮಿಷಗಳು... ಒಂದು ಮಗುವಿಗೆ ಮೂರು ನಿಮಿಷಗಳಾದರೆ, ೨೫ ಜನ ಮಕ್ಕಳಿಗೆ ಎಷ್ಟು ಸಮಯ ತಡ?" ಎಂದರು. "ಎಪ್ಪತ್ತೈದು ನಿಮಿಷಗಳು... ಹೌದು ತಾನೇ?" ಎಂದರು. ನಗು ನಗುತ್ತಲೇ ಹೇಳಿದರೂ, ಅಲ್ಲಿ ಬಹಳ ದೊಡ್ಡ ತತ್ತ್ವ ಅಡಗಿರುವುದನ್ನು ತಿಳಿದ ನಾನು , "ಕ್ಷಮಿಸಿ, ಬಾಬಾ ಇನ್ನು ಮೇಲೆ ಹಾಗೆ ತಡಮಾಡುವುದಿಲ್ಲ..." ಎಂದೆ. ಆ ದಿನ ಬಾಬಾ ಕಲಿಸಿದ ಪಾಠವನ್ನು ನಾನು ಎಂದಿಗೂ ಮರೆಯುವಂತಿಲ್ಲ.

ನಾನು ಹಿಂದೆ ಹೇಳಿರುವ ಶ್ರೀ ಮುದ್ದಪ್ಪನವರ ಟ್ರೇಡ್ ಕಮಿಷನ್ ಆಫೀಸಿನಲ್ಲಿ ಒಬ್ಬಳು ಇಂಗ್ಲಿಷ್ ಹುಡುಗಿ. ಅವಳ ಕೆಲಸ ಬಹಳ ಚುರುಕು. ಶ್ರೀ ಮುದ್ದಪ್ಪನವರಿಗಾಗಿ ನಾನು ಆಗಾಗ ಅಲ್ಲಿಗೆ ಫೋನು ಮಾಡುವುದಿತ್ತು. ಬೆಳಗ್ಗೆ ಒಂಬತ್ತು ಗಂಟೆ ಒಂದು ನಿಮಿಷಕ್ಕೆ ಮಾಡಿದರೆ, ಸಂಜೆ ಐದು ಗಂಟೆ ಐವತ್ತೊಂಬತ್ತು ನಿಮಿಷಕ್ಕೆ ಮಾಡಿದರೆ ಆ ಹುಡುಗಿ ಅಲ್ಲಿ ಇರುತ್ತಿದ್ದಳು!! ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ನಿಃಸ್ಪೃಹತೆ ಅಥವಾ 'ಪಂಕ್ಚುಯಾಲಿಟಿ' ಎನ್ನುವುದು ಸ್ವಭಾವ ಜನ್ಯ ಆಗಿರಬೇಕು. ಒಬ್ಬರ ಬಲವಂತಕ್ಕೆ ಬರುವಂಥದಲ್ಲ ಅದು. ಬ್ರಿಟನ್‌ನಲ್ಲಿ ಸಾಮಾನ್ಯವಾಗಿ ಎಲ್ಲರದೂ ಅದೇ ಅಭ್ಯಾಸ, ವಾರಪೂರ್ತಿ ಒಂದು ನಿಮಿಷವನ್ನೂ ವ್ಯರ್ಥಮಾಡದೆ ಚೆನ್ನಾಗಿ ಕೆಲಸ ಮಾಡಿರುತ್ತಾರೆ. ವಾರಾಂತ್ಯದಲ್ಲಿ ಬಿಡುವು ಎರಡು ದಿನಗಳು. ಆಗ ಸಾಕಷ್ಟು ಆರಾಮವಾಗಿದ್ದು ವಿರಾಮವನ್ನು ಪೂರ್ತಿಯಾಗಿ ಅನುಭವಿಸುವ ಅವರು ಆಫೀಸಿನ ಕೆಲಸದ ವಿಷಯವಾಗಿ ಆ ಎರಡು ದಿನಗಳು ಒಂದು ಕ್ಷಣವೂ ಯೋಚಿಸುವುದಿಲ್ಲ! ತಿಂದು ಕುಡಿಯುವುದರಲ್ಲಿ ಬಹಳ ಗಟ್ಟಿಗರು ಅವರು! ಗಾರೆಯ ಕೆಲಸ ಮಾಡುವವನು ಸಹ ತನ್ನ ಕೆಲಸದ ಮಧ್ಯೆ ಒಂದು ಸಿಗರೇಟನ್ನೋ, ಒಂದು ಕಪ್ಪು ಟೀಯನ್ನೋ ಕುಡಿಯುವುದಿಲ್ಲ... ಊಟದ ಸಮಯವಾದ ಒಂದು ಘಂಟೆಯಿಂದ ಎರಡು ಘಂಟೆಯ ತನಕ ಗಡದ್ದಾಗಿ ತಿಂದು ಬಂದು ಮತ್ತೆ ಕೆಲಸದಲ್ಲಿ ತೊಡಗಿಕೊಳ್ಳುತ್ತಾರೆ. ಇಲ್ಲಿ ಇವರ ಯಜಮಾನರು ಸದಾ ಅವರ ಕೆಲಸವನ್ನು ನೋಡುತ್ತ ಇರುವುದಿಲ್ಲ. ಆದರೂ ಅದು ಕೆಲಸದ ನಿಯಮ. ಅದನ್ನವರು ತಪ್ಪದೆ ಪಾಲಿಸುತ್ತಾರೆ.

ಅದನ್ನೇ ನಾನು ಅಭ್ಯಾಸ ಮಾಡಿಕೊಂಡು ಬಂದಿರುವುದರಿಂದ ಯಾರೇ ಆಗಲಿ ಹಾಗೆ ತಡ ಮಾಡಿದರೆ, ಶಿಸ್ತು-ನಿಯಮ ಇಲ್ಲದೇ ಬೇಜವಾಬ್ದಾರಿಯಾಗಿ ನಡೆದುಕೊಂಡರೆ ನನಗೆ ಸಹಿಸಲಾಗದು. ಆಗ ನಾನು ಸಾಕಷ್ಟು ಕಠಿಣವಾಗಿ ಬಿಡುತ್ತೇನೆ. ಆಡಳಿತ ಎನ್ನವುದೇ ಹಾಗೆ. 'ಕೆಲವರು ಆಡಳಿತ ಆಳುವುದಕ್ಕೆ, ಮಾಡಲಿಕ್ಕೆ ಹುಟ್ಟಿರುತ್ತಾರೆ. ಕೆಲವರು ಆಡಳಿತ ಆಳಿಸಿಕೊಳ್ಳುವುದಕ್ಕೆ, ಮಾಡಿಸಿಕೊಳ್ಳಲಿಕ್ಕೆ ಹುಟ್ಟಿರುತ್ತಾರೆ' ಎಂದು ಇಂಗ್ಲಿಷಿನಲ್ಲಿ ಒಂದು ಮಾತಿದೆ. ಹೌದು, ಈ ಹಿಂದೆ ನಾನು ನಿಮಗೆ ಹೇಳಿರುವಂತೆ ಆಡಳಿತದ ಸೂತ್ರ ಹಿಡಿದಾಗ ನಾವು 'ಕಠಿಣ ಪ್ರಭು'ವಾಗಿರಬೇಕಾಗುತ್ತದೆ. ಒಬ್ಬರಿಗಾಗಿ ಕೆಲಸ ಮಾಡಬಹುದು, ಆದರೆ ಒಬ್ಬರಿಂದ ಕೆಲಸ ತೆಗೆಯುವುದು ಅಷ್ಟು ಸುಲಭದ ಮಾತಲ್ಲ! ಹೀಗೆ ಒಮ್ಮೆ ಬೇಜವಾಬ್ದಾರಿಯಿಂದ ನಡೆದುಕೊಂಡ ಒಬ್ಬರಿಗಾದ ಗತಿಯನ್ನು ನಾನು ನಿಮಗೆ ಹೇಳಬೇಕಿದೆ ಈಗ.

ನಟರಾಜನ್ ಎನ್ನುವಾತ ವಿದ್ಯಾಭವನದಲ್ಲಿ ಪುಸ್ತಕಗಳ ಮಾರಾಟ ನೋಡಿಕೊಳ್ಳುತ್ತಿದ್ದರು. ಜತೆಗೆ ಲೈಬ್ರರಿಯನ್ ಸಹ. ಸೇಲ್ಸ್ ಮ್ಯಾನೇಜರ್ ಆಗಿದ್ದ ಅವರು ತೆಗೆದುಕೊಳ್ಳುತ್ತಿದ್ದ ಸಂಬಳವೂ ಸಾಕಷ್ಟು ಹೆಚ್ಚಾಗಿಯೇ ಇತ್ತು. ಒಂದು ದಿನ ಸಂಜೆ ಏನೋ ತಪ್ಪು ಮಾಡಿದರು. ಅದು ನನಗೆ ತಿಳಿದು ಅವರಿಗೆ ಶೋಕಾಸ್ (ಕಾರಣ ಕೇಳುವ) ನೋಟೀಸು ಕೊಟ್ಟು ಮನೆಗೆ ಕಳುಹಿಸುವ ನಿರ್ಧಾರ ಮಾಡಿದೆ. ಹೇಗೇ ಆದರೂ ಆ ರೀತಿ ಜವಾಬ್ದಾರಿ ಇಲ್ಲದೆ ಕೆಲಸ ಮಾಡುವವರನ್ನು ಕಂಡರೆ ನನಗೆ ಸೈರಿಸಲು ಸಾಧ್ಯ ಆಗುತ್ತಿರಲಿಲ್ಲ. ನಂದ ಹಾಗೂ ನಮ್ಮಲ್ಲಿ

ಕಾರ್ಯದರ್ಶಿಯಾಗಿದ್ದ ವೇದ ಇಬ್ಬರೂ ಭವನದಲ್ಲೇ ಕೆಲಸ ಮಾಡುವವರಷ್ಟೇ? ನಂದ ನನ್ನಂತೆ ಕಠಿಣ ಸ್ವಭಾವದವನಲ್ಲ... ಬಹಳ ಮೃದು. ಕಡ್ಡಿ ಮುರಿದಂತೆ ಕಡ್ಡಾಯವಾಗಿ ಹೇಳುವುದು, ಅದರಂತೆ ನಡೆದುಕೊಳ್ಳುವುದು ಅವನಿಗೆ ಬಹಳ ಕಷ್ಟದ ಕೆಲಸ. ಜತೆಗೆ ವೇದಳೂ ಸೇರಿಕೊಂಡಳು. ಇಬ್ಬರೂ ನನಗೆ, 'ಹಾಗೆ ಮಾಡುವುದು ಬೇಡ , ಈ ಬಾರಿ ಕ್ಷಮಿಸಿ. ಮುಂದೆ ಇನ್ನೊಮ್ಮೆ ತಪ್ಪು ಮಾಡಿದರೆ ಶಿಕ್ಷೆ ವಿಧಿಸಬಹುದು' ಎಂದು ಹೇಳಿ, ಬಹಳವಾಗಿ ಕೇಳಿಕೊಂಡರು. 'ಅವನ ಜೀವನದ ಪ್ರಶ್ನೆ... ನೀವು ಕೆಲಸದಿಂದ ಹಾಗೆ ತೆಗೆದುಬಿಡಬೇಡಿ...' ಎನ್ನುವ ಅವರ ಒತ್ತಾಯಕ್ಕೆ, ಬೇಡಿಕೆಗೆ ನಾನೂ ಮಣಿಯಲೇ ಬೇಕಾಯಿತು. ಆದರೂ ನಾನು ಬಿಡಲಿಲ್ಲ. "ಇದೇ ಕೊನೆ, ಇನ್ನು ಮೇಲೆ ಅವನು ಈ ರೀತಿ ತಪ್ಪು ಮಾಡಿದರೆ, ಅವನ ಜತೆಗೆ ನಿಮ್ಮನ್ನೂ ಕೆಲಸದಿಂದ ತೆಗೆಯಬೇಕಾಗುತ್ತದೆ. ಮತ್ತೊಮ್ಮೆ ಅವನ ವಕಾಲತ್ತು ವಹಿಸಿದರೆ ನೀವೂ ನಿಮ್ಮ ಕೆಲಸ ಕಳೆದುಕೊಳ್ಳುತ್ತೀರಿ, ಎಚ್ಚರ ಇರಲಿ!" ಎಂದು ಅವರಿಬ್ಬರಿಗೂ ಎಚ್ಚರಿಕೆ ಕೊಟ್ಟು, ನಟರಾಜರನ್ನು ಕರೆದು ಅವರ ಈ ಬಾರಿಯ ತಪ್ಪನ್ನು ಕ್ಷಮಿಸಿದ್ದೇನೆಂದೂ, ಮುಂದೆ ಹಾಗಾಗದಂತೆ ಜಾಗ್ರತೆ ವಹಿಸಬೇಕೆಂದು ಹೇಳಿ, ಅವನಿಗೂ ಎಚ್ಚರಿಕೆ ಕೊಟ್ಟು ಕಳುಹಿಸಿದೆ. ಕೆಲಸಗಳು ಎಂದಿನಂತೆ ಸಾಗಿದವು.

ಇದಾದ ಒಂದು ವರ್ಷದನಂತರ, ಒಂದು ವಿಶೇಷವಾದ ಕಾರ್ಯಕ್ರಮ ಭವನದಲ್ಲಿ ನಡೆಯವುದಿತ್ತು. ಲಕ್ಷ್ಮೀಜಯನ್ ಎನ್ನುವ ಕಲಾವಿದೆ ಪಿಟೀಲನ್ನು ನುಡಿಸುವವರಿದ್ದರು. ನಂದ ಆ ಸಮಯದಲ್ಲಿ ರಜೆಯ ಮೇಲೆ ಮತ್ತೂರಿಗೆ ಹೋಗಿದ್ದ. ಸಮಯದ ಪರಿಪಾಲನೆ ಮುಖ್ಯವಷ್ಟೇ. ಹಿಂದಿನ ದಿನ ನಾನು ಎಲ್ಲರಿಗೂ ಅವರವರು ನಿರ್ವಹಿಸ ಬೇಕಾದ ಕೆಲಸದ ಬಗ್ಗೆ ಸಾಕಷ್ಟು ಸಲಹೆ-ಸೂಚನೆಗಳನ್ನು ಕೊಟ್ಟಿದ್ದೆ. ನಟರಾಜನ್‌ಗೆ ಧ್ವನಿವರ್ಧಕವನ್ನು ನಿರ್ವಹಿಸುವ ಕೆಲಸ ವಹಿಸಿದೆ. ಆ ದಿನ ಶುಕ್ರವಾರ, ಸಾಮಾನ್ಯವಾಗಿ ಬೇರೆ ಯಾವ ಸಿಬ್ಬಂದಿಯೂ ಇರುವುದಿಲ್ಲ.

ಆ ಸಂಜೆಯ ಕಾರ್ಯಕ್ರಮಕ್ಕೆ ಈ ಪೂರ್ವಸಿದ್ಧತೆಗಳನ್ನು ನಡೆಸುವುದು ಅವಶ್ಯವಿದ್ದಿತು. ಕಾರ್ಯಕ್ರಮ ಪ್ರಾರಂಭವಾಗುವುದಕ್ಕೆ ಮುನ್ನವೇ ಜನ ಬಂದು ಸೇರತೊಡಗಿದರು. ಡಾ. ಜಾನ್‌ಮಾರ್ ಆ ದಿನದ ಕಾರ್ಯಕ್ರಮದ ಬಗ್ಗೆ ನಾಲ್ಕು ಮಾತುಗಳನ್ನು ಹೇಳಿ, ಅತಿಥಿಗಳನ್ನು ಸ್ವಾಗತಿಸುವವರಿದ್ದರು. ಅವರೂ ಬಂದರು. ಕಲಾವಿದೆಯೂ ಬಂದಾಯಿತು. ವೇದ ಸಮಯಪಾಲನೆಯ ಅಭ್ಯಾಸ (time rehearsal) ಮಾಡಿಕೊಳ್ಳುತ್ತಿದ್ದಳು. ನಾನು ಅದನ್ನು ನೋಡುತ್ತಿದ್ದೆ. ಅಷ್ಟರಲ್ಲಿ ಅಲ್ಲಿಗೆ ಬಂದ ಕಲಾವಿದೆಯ ಕಡೆಯವರೊಬ್ಬರು "ಲಕ್ಷ್ಮಿಯವರು ಬಂದಿದ್ದಾರೆ. ಸಾಕಷ್ಟು ಮಂದಿ ಪೋಷಕರೂ ಸೇರಿದ್ದಾರೆ. ಆದರೆ ಧ್ವನಿವರ್ಧಕ ವ್ಯವಸ್ಥೆಯಾಗಿಲ್ಲ. ತಾವು ಬಂದು ಸ್ವಲ್ಪ ನೋಡಬೇಕು" ಎಂದರು. ನನಗೆ ಆಶ್ಚರ್ಯ. "ನಟರಾಜನ್‌ಗೆ ಆ ಕೆಲಸ ವಹಿಸಿದ್ದೆನಲ್ಲ ನಾನು... ಏಕೆ? ನಟರಾಜನ್ ಎನ್ನುವವರು ಬಂದಿಲ್ಲವೆ? ಅವರು ಎಲ್ಲ ಏರ್ಪಾಡು ಮಾಡಿರಬೇಕಲ್ಲಾ?" ಎಂದೆ. "ಇಲ್ಲ... ಅಲ್ಲಿ ಯಾರೂ ಇಲ್ಲ. ಧ್ವನಿವರ್ಧಕ ವ್ಯವಸ್ಥೆಯಾಗಿಲ್ಲ" ಎಂದರು ಅವರು. ನಾನು ಬಂದು ನೋಡಿದರೆ ನಟರಾಜನ್‌ರ ಪತ್ತೆಯೇ ಇಲ್ಲ. ಅವರಿಗೇ ಅದೆಲ್ಲ ಗೊತ್ತಿದ್ದುದು. ವಿದ್ಯಾಭವನದ್ದೇ ಧ್ವನಿವರ್ಧಕ ಇದ್ದುದರಿಂದ, ಭವನದವರೇ ಒಬ್ಬರು ಅದನ್ನು ನಿರ್ವಹಿಸಿ ನಿಯಂತ್ರಿಸಬೇಕಾಗಿತ್ತು. ನಟರಾಜನ್ ಆ ಕೆಲಸ ಮಾಡಬೇಕಿತ್ತು. ಆದರೆ ಅವರು ಬಂದಿರಲಿಲ್ಲ. ಸಮಯ ೬.೨೫... ಕಾರ್ಯಕ್ರಮ ಪ್ರಾರಂಭವಾಗುವುದಕ್ಕೆ ಐದು ನಿಮಿಷಗಳಿವೆ ಅಷ್ಟೆ. ಏನು ಮಾಡುವುದು? ಮಾಡುವುದೇನು... ನಾನು ವೇದಿಕೆಯ ಮೇಲೆ ಹೋಗಿ, ಟಿಕೆಟ್ಟು ತೆಗೆದುಕೊಂಡು ಕಾರ್ಯಕ್ರಮಕ್ಕೆಂದೇ ಬಂದು ಸೇರಿದ್ದ ಸುಮಾರು ೭೦-೮೦ ಪ್ರೇಕ್ಷಕರಿಗೆ ಕೈ ಮುಗಿದು, ಕ್ಷಮೆ ಬೇಡಿ, "ಕಾರಣಾಂತರಗಳಿಂದ ಧ್ವನಿವರ್ಧಕವನ್ನು ನಿರ್ವಹಿಸಬೇಕಾದವರು ಈ ದಿನ ಬಂದಿಲ್ಲ. ಇಲ್ಲಿ ಮತ್ತಾರಿಗೂ ಅದು ಬರದು. ಹೀಗಾದುದಕ್ಕೆ ನಾನು ವಿಷಾದಿಸುತ್ತೇನೆ. ಆದುದರಿಂದ ಈ ದಿನ ಧ್ವನಿವರ್ಧಕ ಇಲ್ಲದೆಯೇ ತಾವೆಲ್ಲ ಸಹನೆಯಿಂದ ಕುಳಿತು ಪಿಟೀಲು ವಾದನವನ್ನು ಕೇಳಬೇಕೆಂದು ಪ್ರಾರ್ಥಿಸುತ್ತೇನೆ. ಈ ಹಾಲ್ ಸಹ ಅಂತಹ ದೊಡ್ಡದಲ್ಲವಾದ್ದರಿಂದ ತಮ್ಮ ಶ್ರವಣಕ್ಕೇನೂ ಬಾಧಕವಾಗುವುದಿಲ್ಲವೆಂದು ನಂಬಿದ್ದೇನೆ. ದಯವಿಟ್ಟು ಕಲಾವಿದರೂ ಇದಕ್ಕೆ ಸಹಕರಿಸಿ ಕಾರ್ಯಕ್ರಮವನ್ನು ನಡೆಸಿಕೊಡಬೇಕೆಂದು ಬೇಡುತ್ತೇನೆ" ಎಂದೆ. ಈ ಸಲಹೆ ನನಗೆ ಹಿತವಾಗಲಿಲ್ಲ. ಆದರೂ ಆಕೆ 'ಸರಿ' ಎಂದು ಒಪ್ಪಿ ಕಾರ್ಯಕ್ರಮ ಪ್ರಾರಂಭಿಸಿದರು. ಸುಮಾರು ಒಂದೂವರೆ ಘಂಟೆಯ ಕಾರ್ಯಕ್ರಮ. ಆ ದಿನ ಧ್ವನಿವರ್ಧಕ ವ್ಯವಸ್ಥೆ ಇಲ್ಲದೆಯೇ ಪಿಟೀಲು ವಾದನಕ್ಕೆ ಒಂದು ರೀತಿಯ ನಾದದ ಮೆರುಗು ಬಂದಿತ್ತು. ಕಾರ್ಯಕ್ರಮ ಧ್ವನಿವರ್ಧಕವಿಲ್ಲದೆಯೇ ಬಹಳ ಚೆನ್ನಾಗಿಯೇ ಆಯಿತು. ಎಲ್ಲರೂ 'ಈ ದಿನ ಧ್ವನಿವರ್ಧಕವಿಲ್ಲದೇ ಇದ್ದುದೇ ಒಂದು ರೀತಿ ವಿಶೇಷವಾಗಿತ್ತು. ಹಾಗೆಯೇ ಕೇಳಲು ಬಹಳ ಹಿತವಾಗಿಯೇ ಇತ್ತು' ಎಂದು ಹೇಳಿ, ನಮ್ಮನ್ನೂ-ಕಲಾವಿದರನ್ನೂ ಅಭಿನಂದಿಸಿ ಹೊರಟರು. ಅಂತೂ ಆ ದಿನದ ಕಾರ್ಯಕ್ರಮದ ಯಶಸ್ಸಿಗೆ ಕುಂದಾಗಲಿಲ್ಲ!

ಶನಿವಾರ-ಭಾನುವಾರ ವಿದ್ಯಾಭವನದಲ್ಲಿ ದಿನಪೂರ್ತಿ ಕೆಲಸ, ಬಿಡುವಿಲ್ಲದಷ್ಟು. ಆ ಎರಡು ದಿನಗಳೂ ನಟರಾಜನ್ ನಾಪತ್ತೆ! ಅವರ ಮನೆಯ ಹತ್ತಿರ ನೋಡಿ ಬರಲು ಒಬ್ಬರನ್ನು ಕಳುಹಿಸಿದ್ದೆ. ಮನೆಗೆ ಬೀಗ ಹಾಕಿತ್ತು. ಪಕ್ಕದವರು 'ಅವರು ಬಂದಿಲ್ಲ' ಎಂದು ಹೇಳಿದ್ದರು. ನನಗೆ ಹೆಚ್ಚು ಕಡಮೆ ಖಾತರಿಯಾಗಿತ್ತು 'ಬಹುಶಃ ನಟರಾಜನ್‌ಗೆ ಎಲ್ಲೋ ಅಪಘಾತವಾಗಿ ಸತ್ತು ಹೋಗಿರಬಹುದು. ಅದಕ್ಕೇ ಪತ್ತೆಯೇ ಇಲ್ಲ' ಎಂದು! ಅದನ್ನು ವೇದಳಲ್ಲಿಯೂ ಹೇಳಿದೆ. ನಟರಾಜನ್‌ರನ್ನು ನಮಗೆ ತಿಳಿದ ಎಲ್ಲ ಕಡೆಯೂ ವಿಚಾರಿಸಿಯಾಯಿತು. ಯಾರಿಗೂ ಅವನ

ಬಗ್ಗೆ ತಿಳಿಯದು. ಏನೇ ಆದರೂ ಸಮಯ ಬರಬೇಕಲ್ಲ. ಆಗ ನಮಗೂ ತಿಳಿಯಲೇ ಬೇಕು ಎಂದು ಸುಮ್ಮನಾದೆವು.

ಸೋಮವಾರ ಬೆಳಗಿನ ಒಂಬತ್ತು ಘಂಟೆ. ನಾನು ಆಫೀಸಿನಲ್ಲಿದ್ದೆ. ಕೆಲಸಗಳು ನಡೆಯುತ್ತಿದ್ದವು. ಹತ್ತು ಘಂಟೆಗೆ ಸರಿಯಾಗಿ ನಟರಾಜನ್ ಬಂದರು! ಬಹಳ ಆರಾಮವಾಗಿದ್ದರು. ನನ್ನೆದುರಿಗಿದ್ದ ರಿಜಿಸ್ಟರಿನಲ್ಲಿ ಸಹಿ ಹಾಕಲು ಬಂದರು. 'ಗುಡ್ ಮಾರ್ನಿಂಗ್ ಮತ್ತೂರ್‌ಜೀ' ಎಂದು ಹೇಳಿದರು. ಅವಾಕ್ಕಾಗಿದ್ದ ನಾನು 'ಗುಡ್‌ಮಾರ್ನಿಂಗ್' ಎಂದೆ. ಸಹಿ ಹಾಕಿದರು. ಯಾವುದರ ಬಗ್ಗೆಯೂ ಮಾತಿಲ್ಲ! ಏನನ್ನೂ ಹೇಳಲೂ ಇಲ್ಲ-ಏನನ್ನೂ ಕೇಳಲೂ ಇಲ್ಲ, ತನ್ನ ಸೀಟಿಗೆ, ಪುಸ್ತಕಗಳ ಭಂಡಾರಕ್ಕೆ ವಾಪಸಾದರು. ಅವರ ಈ ದಿವ್ಯನಿರ್ಲಕ್ಷ್ಯದ ಬಗ್ಗೆ ನನಗೆ ಬಹಳ ಅಚ್ಚರಿ! ಪಾಠ ಕಲಿಸಲು ಸರಿಯಾದ ಸಮಯವಲ್ಲವೇ ಅದು! ಅವರು ಹಿಂದಿರುಗಿ ಹೋಗುವುದನ್ನು ಕಾದ ನಾನು, ಎರಡು ನಿಮಿಷಗಳನ್ನು ಕಳೆದು ಫೋನನ್ನು ರಿಂಗಣಿಸಿ ಅವರನ್ನು ನನ್ನ ಆಫೀಸಿನ ಒಳಗೆ ಬರಹೇಳಿದೆ.

ಒಳಬಂದ ಅವರನ್ನು ನೋಡಿ, "ಈ ದಿನ ನೀವು ನೀವಾಗಿಯೇ ನಿಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟರೆ ನಿಮಗೆ ಬೇರೆ ಎಲ್ಲಾದರೂ ಕೆಲಸ ಸಿಕ್ಕಿದರೂ ಸಿಕ್ಕೀತು. ನಾನಾಗಿಯೇ ನಿಮ್ಮನ್ನು ಕೆಲಸದಿಂದ ವಜಾ ಮಾಡಿದರೆ ನಿಮಗೆ ಬೇರೆ ಯಾವ ಕೆಲಸ ಸಿಗುವ ಭರವಸೆಯೂ ಇಲ್ಲ...! ಏನು ಮಾಡುತ್ತೀರಿ? ನೀವೇ ಯೋಚನೆ ಮಾಡಿ ಎರಡು ನಿಮಿಷಗಳಲ್ಲಿ ನಿಮ್ಮ ನಿರ್ಧಾರ ತಿಳಿಸಿ... ಬೇರೆ ಮಾತು ಬೇಡ!" ಎಂದೆ. ಐದೇ ನಿಮಿಷದಲ್ಲಿ ವಾಪಸಾದ ಅವರು ಮನೆಯಲ್ಲಿ ತೊಂದರೆಯ ಕಾರಣ ತಾನು ಈ ಕೆಲಸದಲ್ಲಿ ಮುಂದುವರೆಯಲು ಸಾಧ್ಯವಾಗುತ್ತಿಲ್ಲವೆಂದೂ, ಅದಕ್ಕಾಗಿ ರಾಜಿನಾಮೆ ಸಲ್ಲಿಸುತ್ತಿರುವುದಾಗಿಯೂ ಹೇಳಿ ಪತ್ರ ಬರೆದು ತಂದರು. ಅದಕ್ಕೆ ಸಹಿ ಮಾಡಿದ ನಾನು ಆ ಕ್ಷಣದಲ್ಲೇ ಅವರನ್ನು ರಿಲೀವ್ ಮಾಡಿ ಕಳುಹಿಸಿದೆ. 'ನಿಮ್ಮ ರಾಜಿನಾಮೆಯನ್ನು ನಾನು ಅಂಗೀಕರಿಸುತ್ತೇನೆ. ನಾಳೆ-ನಾಳಿದ್ದರಲ್ಲಿ ಬಂದು ನಿಮ್ಮ ಸಂಬಳ ತೆಗೆದುಕೊಂಡು ಹೋಗಬಹುದು' ಎಂದು ಹೇಳಿ ಕಳುಹಿಸಿದೆ! ಅನಂತರ ಒಳ ಬಂದ ವೇದ ಒಂದು ಮಾತೂ ಆಡಲಿಲ್ಲ, "ನೀವು ಮಾಡಿದ್ದು ಸರಿಯಾಯಿತು ಮತ್ತೂರ್‌ಜೀ, ಈ ಬಾರಿ ನಾನು ಅವರ ವಕಾಲತ್ತು ವಹಿಸುವುದಿಲ್ಲ!" ಎಂದಳು!ಅಲ್ಲವೇ ಮತ್ತೆ... 'ಅಯ್ಯೋಪಾಪ' ಎಂದು ಕಾರಣ ಕೇಳುತ್ತ ಕುಳಿತರೆ ಅದಕ್ಕೆ ಕೊನೆ ಎಲ್ಲಿದೆ? ಬೇಜವಾಬ್ದಾರಿಗೆ ಸಾವಿರ ಕಾರಣಗಳಿರುತ್ತವೆ. ಅಷ್ಟು ಸುಲಭವಾಗಿ ಕಾರಣಗಳಿಗೆ ನಮ್ಮ ಮನಸ್ಸು ಕರಗಿದರೆ ಕೆಲಸ ಆಗುವುದು ಹೇಗೆ? ಮಾಡಿಸುವುದಾದರೂ ಯಾರಿಂದ? ಎಲ್ಲರಿಗೂ ಒಂದಲ್ಲ ಒಂದು ಕಾರಣವಿರುವುದಷ್ಟೆ? ಇದನ್ನೇ ದಲಾಲ್‌ಜೀಗೆ ಹೇಳಿದೆ. ನನ್ನ ಈ ತೀರ್ಮಾನ ಅವರಿಗೆ ಸಂತೋಷವನ್ನೇ ಉಂಟು ಮಾಡಿತ್ತು. "ಹೌದು ಮತ್ತೂರ್‌ಜೀ, ಕೆಲಸ ತೆಗೆಯುವಾಗ ನಾವು ನಿಷ್ಠುರವಾಗಿ ಇರಬೇಕಾಗುತ್ತದೆ. ಇದಕ್ಕೆ ಯಾರೂ ಹೊರತಾಗಿರಲು ಸಾಧ್ಯವಿಲ್ಲ. ನೀವು ಮಾಡಿದುದು ಒಳ್ಳೆಯದೇ ಆಯಿತು. ಮಿಕ್ಕವರಿಗೆ ಇದೊಂದು ಪಾಠವಾಗುತ್ತದೆ!" ಎಂದು ಹೇಳಿದರು. ನಾನು ಕೆಲಸ ನಿರ್ವಹಿಸುತ್ತಿದ್ದುದು ಹೀಗೆಯೇ! ಇಲ್ಲವಾದರೆ ಆಡಳಿತ ಎನ್ನುವುದು ಕಷ್ಟವಾಗುತ್ತದೆ. ಹೊರಲಾಗದ ಹೊರೆಯಾಗಿಬಿಡುತ್ತದೆ.

೨೪. ಇನ್ನಷ್ಟು ಪುಷ್ಟಿ

ಬೆಳೆದ ಚಟುವಟಿಕೆ

ಭವನ ಬಹಳ ಜನರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಿತ್ತು. ದಿನದಿಂದ ದಿನಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿತ್ತು. ಭವನಕ್ಕೆ ಬರು-ಹೋಗುವವರೂ ಹೆಚ್ಚಿದರು. ಸದುದ್ದೇಶದಿಂದ ಪ್ರಾರಂಭಿಸಿದ ಕೆಲಸದ ಪ್ರತಿಫಲವಾಗಿ ಮೌಂಟ್‌ಬ್ಯಾಟನ್ನರು ನಮ್ಮ ಆಶ್ರಯ ದಾತರಾದರು. ರಾಜಮನೆತನದ ಆಶ್ರಯ ಭವನಕ್ಕೆ ಸಿಕ್ಕಿದಂತಾಗಿತ್ತು. ನಾವು ರಾಜಾಜಿಯವರ ಜನ್ಮಶತಾಬ್ದಿಯ ಸ್ಮರಣಾರ್ಥವಾಗಿ ಸರಣಿ ಭಾಷಣಗಳನ್ನೇರ್ಪಡಿಸಿದಾಗ ಬ್ಯಾಟನ್ನರನ್ನು ಆಹ್ವಾನಿಸಿದೆವು. ಆಗ ಅವರು ಸಂತೋಷದಿಂದ "ರಾಜಾಜಿಯವರು ನನ್ನ ಹಳೆಯ ಗೆಳೆಯರು, ನಾನು ಈ ಆಹ್ವಾನವನ್ನು ಹೇಗೂ ತಿರಸ್ಕರಿಸುವಂತಿಲ್ಲ. ಸ್ವೀಕರಿಸಲೇ ಬೇಕು" ಎಂದು ಬಹಳ ಪ್ರೀತಿಯಿಂದ ಭವನಕ್ಕೆ ಬಂದರು, ಭಾಷಣಗಳನ್ನು ಕೇಳಿದರು. ಹೀಗೆ ಅವರು ಎರಡು-ಮೂರು ಸಾರಿ ಭವನಕ್ಕೆ ಬಂದಿದ್ದರು.

ಇತ್ತ ಭವನದಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿತ್ತಷ್ಟೆ. ಸಿತಾರ್, ವೀಣೆ, ತಬಲ, ಇತ್ಯಾದಿ ತರಗತಿಗಳನ್ನು ನಡೆಸಲು ವಿದ್ವಾಂಸರನ್ನು ಲಂಡನ್ನಿಗೆ ಕಳುಹಿಸಿಕೊಡಲು ಮುಂಬಯಿ ಮುಖ್ಯ ಕಛೇರಿಗೆ ಬರೆದೆವು. ಸಾಮಾನ್ಯವಾಗಿ ಅಷ್ಟು ಸುಲಭದಲ್ಲಿ ಹಾಗೆ ಅನುಮತಿ ಸಿಗುವುದು ಕಷ್ಟ. ಏಕೆಂದರೆ ಅಲ್ಲಿಂದ ಇಲ್ಲಿಗೆ ಕೆಲಸ ಮಾಡಿಸಿಕೊಳ್ಳಲು ನಾವು ಕರೆಸಿದಾಗ ಅವರ ಜೀವನಕ್ಕಾಗುವಷ್ಟು ವೆಚ್ಚವನ್ನು ಅವರಿಗೆ ತುಂಬಿಕೊಡಬೇಕಾಗುತ್ತದೆ. ಹಾಗಾಗಿ ಅಲ್ಲೇ ನೋಡುವ ಎಂದುಕೊಂಡಿದ್ದೆ. ಒಮ್ಮೆ ನನ್ನದೊಂದು ಭಾಷಣಕ್ಕಾಗಿ ನಾನು ಒಂದು ಸ್ಥಳಕ್ಕೆ ಹೊರಟಿದ್ದೆ. ಆಗ ಅಲ್ಲಿಯೇ ಸಂಗೀತ ಕಛೇರಿ ನಡೆಸಿಕೊಡಲು, ಒಬ್ಬಾಕೆಯೂ ತಮ್ಮ ಗಂಡನೊಂದಿಗೆ ಹೊರಟಿದ್ದರು. ನಮ್ಮ ಕಾರ್ಯಕ್ರಮ ಮುಗಿದನಂತರ ಮನೆಗೆ ಮರಳಲು ನನಗೆ, ಸಂಗೀತ ಹಾಡಿದವರು ಮತ್ತು ಅವರ ಗಂಡ ಮೂವರಿಗೂ ಒಂದು ಟ್ಯಾಕ್ಸಿ ಗೊತ್ತು

ಮಾಡಿದರು. ಹಾಡಿದವರು ತಮ್ಮ ಹೆಸರು ಶಿವಶಕ್ತಿ, ತಾವು ಲಂಕೆಯ ತಮಿಳು ಜನ ಎಂದು ಹೇಳಿ, ಇವರ ಇನಿಯನ ಹೆಸರು ಶಿವನೇಶನ್ ಎಂದರು. ಮದ್ರಾಸಿನಲ್ಲಿ ಕರ್ನಾಟಕದ ಸಂಗೀತವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದವರು. ಈಗ ಇಲ್ಲಿ ಇದ್ದರು. ಆಕೆಯ ಉತ್ಸಾಹ ನೋಡಿ, "ಎಲ್ಲಿ, ಒಮ್ಮೆ ಖರಹರಪ್ರಿಯ ರಾಗವನ್ನು ಸ್ವಲ್ಪ ಹಾಡಿ...! ಸಾಧ್ಯವೇ?" ಎಂದೆ. ಅವರಿಗೆ ನನ್ನ ವಿನಂತಿ ಕೇಳಿ ಬಹಳ ಸಂತೋಷವಾಯಿತು. (ಆಕೆಗೆ ನಾನು ಯಾರು ಎಂದೂ ತಿಳಿದಿರಲಿಲ್ಲ.) ತಕ್ಷಣವೇ ಅವರು ಕಾರಿನಲ್ಲಿ, ತಾವು ಪ್ರಯಾಣಿಸುತ್ತಿದ್ದೇವೆ ಎನ್ನುವುದನ್ನೇ ಮರೆತು ಖರಹರಪ್ರಿಯ ರಾಗವನ್ನು ಹಾಡುತ್ತಾ, ಆ ರಾಗದಲ್ಲಿ ತಲ್ಲೀನಳಾದ ಆಕೆ ಸುಮಾರು ೩೦-೪೫ ನಿಮಿಷಗಳ ಕಾಲ ಅಮೋಘವಾಗಿ ರಾಗ ವಿಸ್ತಾರ ಮಾಡಿ, ಕಲ್ಪನಾಸ್ವರಗಳನ್ನು ಹೇಳಿ ಮುಗಿಸಿದರು. ನನಗೆ ಯಾವುದೋ ಬೇರೆಯ ಲೋಕಕ್ಕೆ ಹೋಗಿದ್ದಂತೆ ಭಾಸವಾಗಿತ್ತು! ಅನಂತರ ಕೂಡಲೇ ನಾನು ನನ್ನ ವಿಸಿಟಿಂಗ್ ಕಾರ್ಡ್ ತೆಗೆದು ಆಕೆಯ ಕೈಗಿತ್ತು, ಆದಷ್ಟು ಬೇಗ ಭವನದಲ್ಲಿ ಬಂದು ನನ್ನನ್ನು ನೋಡುವಂತೆ ಹೇಳಿದೆ. ನಾನು ಹೇಳಿದಂತೆಯೇ ಆಕೆ ಮುಂದಿನ ಮೂರು-ನಾಲ್ಕು ದಿನಗಳಲ್ಲಿ ಬಂದು ನನ್ನನ್ನು ಭೇಟಿಯಾದರು. ಭವನದ ಕರ್ನಾಟಕ ಸಂಗೀತದ ತರಗತಿಗಳ 'ಗುರು'ವನ್ನಾಗಿ ನೇಮಿಸಿ ಕೆಲಸದ ಆರ್ಡರನ್ನು ಆಕೆಯ ಕೈಗಿತ್ತೆ! ಆಕೆಗಾದ ಸಂತೋಷ ಅಷ್ಟಿಷ್ಟಲ್ಲ! ಕಣ್ಣುಗಳು ತುಂಬಿ ಬಂದು, ನನ್ನ ಕಾಲಿಗೆರಗಿದ ಆಕೆಯೇ ಇಂದಿಗೂ ಲಂಡನ್ ವಿದ್ಯಾಭವನದಲ್ಲಿ ಕರ್ನಾಟಕ ಸಂಗೀತ ಹೇಳಿಕೊಡುವ ಗುರುವರ್ಯೆ!

ಆದರೆ ಇಂಥವರು ಬಹಳ ಮಂದಿ ಇಲ್ಲ ಅಲ್ಲಿ. ಉನ್ನತ ಮಟ್ಟದ ಪಾಠವನ್ನು ಹೇಳಿಕೊಡಬೇಕಷ್ಟೆ. ಆದ್ದರಿಂದ ಅವರ ಅರ್ಹತೆ ಬಹಳ ಮೇಲ್ಮಟ್ಟದ್ದಾಗಿರಬೇಕು. ಅಷ್ಟರಮಟ್ಟಿನ ಅರ್ಹತೆಯುಳ್ಳವರು ಲಂಡನ್ನಿನಲ್ಲಿ ಸಿಗುವುದು ಕಷ್ಟವಾಗಿತ್ತಾದ್ದರಿಂದ ನಾನು ಮುಂಬಯಿ ಕಛೇರಿಗೆ ಬರೆದೆ. ಅದನ್ನು ಮನ್ನಿಸಿದ ಮುಂಬಯಿಯ ಭವನದ ಕಛೇರಿ ಹಿರಿಯ ವಿದ್ವಾಂಸರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರಿಗೆ ತಿಳಿದ ಅಥವಾ ಅವರದೇ ಉತ್ತಮ ಶಿಷ್ಯರಲ್ಲಿ ಬಹಳ ಪಾಂಡಿತ್ಯವಿರುವವರನ್ನು ಲಂಡನ್ನಿಗೆ ಕಳುಹಿಸಿಕೊಟ್ಟಿತು. ಹಾಗೆ ಪಾಠ ಹೇಳಲು ಸ್ವದೇಶಬಿಟ್ಟು ಲಂಡನ್ನಿಗೆ ಬಂದ ವಿದ್ವಾಂಸರ ದೈನಂದಿನ ಜೀವನ ನೆಮ್ಮದಿಯಿಂದ ನಡೆಯಲು ಭವನ ತಕ್ಕ ವ್ಯವಸ್ಥೆ ಮಾಡಿತ್ತು. ಇದರಿಂದ ಕಲಾವಿದರಿಗೂ ಬಹಳ ಸಮಾಧಾನ ಉಂಟಾಗಿ ಬಹಳ ಮಂದಿ ಉನ್ನತ ಮಟ್ಟದ ಕಲಾಕಾರರು ಭವನದಲ್ಲಿ ಭಾರತೀಯ ಕಲೆಗಳನ್ನು ಕಲಿಸುವ ಗುರುಗಳಾಗಿ ಅಲ್ಲಿಯೇ ಉಳಿದರು.

ನಾವು ಬೇಗನೆ ಡಿಪ್ಲೋಮಾ ಕೋರ್ಸನ್ನು ಪ್ರಾರಂಭಿಸಿದೆವು. ಸಿಲಬಸ್ ತಯಾರಾಯಿತು. ಹೀಗೆ ಡಿಪ್ಲೋಮಾ ಕೋರ್ಸು ಪ್ರಾರಂಭಿಸಿದುದರಿಂದ ವಾರದಲ್ಲಿ ಈಗ ಐದು ದಿನಗಳೂ ಅದಕ್ಕೆ ಸಂಬಂಧಿಸಿದ ವಿಷಯಗಳ ತರಗತಿಗಳು ನಡೆಯುತ್ತಿದ್ದವು . ಶನಿವಾರ, ಭಾನುವಾರ ಪೂರ್ತಿ ತರಗತಿಗಳು, ಶಿಕ್ಷಣ ನಡೆಯಲು ಶುರುವಾಯಿತು. ಭರತನಾಟ್ಯದಲ್ಲಿ ಕ್ರಮವಾಗಿ ಮೂರು-ನಾಲ್ಕು-ಐದು ವರ್ಷಗಳ ಕೋರ್ಸುಗಳಿದ್ದವು . ಐದು ವರ್ಷಗಳು ಪೂರ್ತಿಯಾದ ಮೇಲೆ ಒಂದು ವರ್ಷ ಸ್ನಾತಕೋತ್ತರ ಪದವಿಯ ನಂತರ ಪ್ರೊಫೆಷಿಯನ್ಸಿ ಕೋರ್ಸು (ವೃತ್ತಿ ಕೌಶಲ ತರಗತಿ) ಇದು ಪೂರ್ಣವಾದ ಅನಂತರ ಅರಂಗೇಟ್ರಂಗೆ ಅವಕಾಶ. ತರಬೇತಿಗಳು, ವರ್ಕ್‌ಷಾಪ್‌ಗಳು, ಸೆಮಿನಾರುಗಳು ಎಲ್ಲವೂ ಒಂದಲ್ಲ ಒಂದು ವಿಷಯದ ಮೇಲೆ ನಡೆಯುತ್ತಲೇ ಇರುತ್ತಿದ್ದವು. ಭವನಕ್ಕೆ ಈಗ ಕೆಲಸ ಮಾಡಲು ೨೪ ಘಂಟೆಗಳು ಸಾಲದಾದವು!

ಇಲ್ಲಿ ವಿಶೇಷವಾಗಿ ನಾನು ಓದುಗರಿಗೆ ಹೇಳಬಯಸುವ ವಿಷಯ ಎಂದರೆ, ಸಾಮಾನ್ಯವಾಗಿ ಪರ್‌ಫಾರ್ಮಿಂಗ್ ಆರ್ಟ್ಸ್‌ನಲ್ಲಿ (ಪ್ರದರ್ಶಕ ಕಲೆಗಳು), ಅದರಲ್ಲೂ ಭರತನಾಟ್ಯದಲ್ಲಿ ಉತ್ತಮ ಶಿಕ್ಷಣ ಸಿಕ್ಕಿ, ಅವರು ಆ ಕಲೆಯಲ್ಲಿ ಪರಿಣತರಾದ ನಂತರ ಅರಂಗೇಟ್ರಂ ಮಾಡಿಸುವುದು ಪದ್ಧತಿ. ಇದರ ಅರ್ಥ ಆಮೇಲೆ ಅವರು ವೇದಿಕೆಯ ಮೇಲೆ ಸ್ವತಂತ್ರವಾಗಿ ಕಾರ್ಯಕ್ರಮಗಳನ್ನು ಕೊಡಲು ಅರ್ಹತೆ ಪಡೆದಿದ್ದಾರೆ ಎಂದು. ಹೀಗೆ ವೇದಿಕೆಯ ಮೇಲೆ ಕಾರ್ಯಕ್ರಮ ಕೊಡುವವರಿಗೆ ಬ್ರಿಟನ್ ಸರ್ಕಾರ ಸಹಾಯ ಮಾಡುತ್ತದೆ. ಅವರಿಗೆ (ಆ ಕಲಾವಿದರಿಗೆ) ಯಾವುದಾದರೂ ನೃತ್ಯರೂಪಕವೋ, ಸಮೂಹನೃತ್ಯವೋ ಈ ರೀತಿ, ಒಂದು ಫೀಚರನ್ನು ತಯಾರಿಸಿ ಅದನ್ನು ವೇದಿಕೆಯ ಮೇಲೆ ತನ್ನಿ ಎಂದು ಪ್ರೋತ್ಸಾಹಿಸಿ ಬಹಳ ಹಣ ಕೊಡುತ್ತದೆ ಆ ಸರ್ಕಾರ. ಒಂದು ಅಂಶವನ್ನು ಓದುಗರು ಇಲ್ಲಿ ಗಮನದಲ್ಲಿಟ್ಟು ಕೊಳ್ಳಬೇಕು. ಸರ್ಕಾರ ಸಹಾಯ ಮಾಡಿದರೂ ಈ ರೀತಿಯ ಕೆಲಸ ಎಲ್ಲರ ಕೈಲೂ ಆಗುವಂಥದಲ್ಲ! ಯಾವುದೇ ಕಲೆಯಾಗಿರಬಹುದು, ಸಾಧನೆ ಮಾಡಿದ ಕಲಾವಿದರಿಗೆ ಆ ಕಲೆಗೆ ಬೇಕಾದಂಥ ಅಭಿವ್ಯಕ್ತಿ, ಪುಷ್ಟಿಕೊಡುವ ಸೃಜನಶೀಲತೆ ಎರಡೂ ಇರಬೇಕು. ಅದು ಒಂದು ರೀತಿಯಲ್ಲಿ ಅತ್ಯಗತ್ಯ, ಕಡ್ಡಾಯವಾಯಿತು! ಹಾಗಿದ್ದಾಗ ಅವರು ಆ ಸಹಾಯ ಪಡೆಯುವರು - ಸಾಧನೆ ಮಾಡಿ ತೋರಿಸುವವರು - ಹಾಗೆ ಸಾಧಿಸಿ ತೋರಿಸಲೇಬೇಕು. ಅದು ವಿದೇಶ... ನಮ್ಮ ದೇಶದಲ್ಲಿರುವಂತೆ ಇಲ್ಲ, ಅಲ್ಲಿನ ನಿಯಮಗಳು!! ಆದರೂ... ಆದರೂ ನಾನು ಇದ್ದ ೨೪ ವರ್ಷಗಳಲ್ಲಿ ನಾನು ಕಂಡಂತೆ ಬ್ರಿಟನ್ನಿನಲ್ಲಿ ಸುಮಾರು ಇದೇ ಪ್ರಪಂಚದ ಎಲ್ಲ ಭಾಗವನ್ನು ಪ್ರತಿನಿಧಿಸುವ ೧೫೦ ಪ್ರಾಂತ್ಯಗಳ ಜನ ವಾಸಿಸುತ್ತಿದ್ದಾರೆ. ನಾನೂ ಅಲ್ಲಿ ಸೆಕೆಂಡರಿ ಸ್ಕೂಲ್ ಬೋರ್ಡ್‌ನ ಸದಸ್ಯನಾಗಿದ್ದೆ. ನನ್ನ ಅನುಭವಕ್ಕೆ ಬಂದಂತೆ, ಎಲ್ಲ ಪ್ರಾಂತ್ಯಗಳ ಮಕ್ಕಳಿಗಿಂತ ಭಾರತೀಯ ಮಕ್ಕಳು ಚುರುಕು ಹೆಚ್ಚು! ಸುಮಾರು ೧೫ ವರ್ಷಗಳ ಕಾಲ ನಿರಂತರವಾಗಿ ಭಾರತದ ಮಕ್ಕಳು ಸೆಕೆಂಡರಿ ಸ್ಕೂಲ್‌ನ ಪರೀಕ್ಷೆಗಳಲ್ಲಿ ಪ್ರಥಮ ಸ್ಥಾನಗಳಿಸಿದರು. ಅಲ್ಲಿ ಹುಟ್ಟಿ ಬೆಳೆದ ನಮ್ಮ ದೇಶದ ಮಕ್ಕಳಿಗಾಗಲೀ, ಅಲ್ಲಿನ ಜನರ ಮಕ್ಕಳಿಗೇ ಆಗಲಿ ಜಾತಿ,

ಮತ, ವರ್ಣ ಎನ್ನುವ ಭೇದಭಾವನೆಯೇ ಇಲ್ಲ. ಅದೆಲ್ಲ ಅವರಿಗೆ ಗೊತ್ತೇ ಇಲ್ಲ ಎನ್ನಬಹುದು. ಪ್ರಪಂಚವೆಲ್ಲ ಒಂದೇ ಎನ್ನುವ ಭಾವನೆಯಲ್ಲೇ ಬೆಳೆಯುವ ಮಕ್ಕಳು ಅವು! ಅಲ್ಲಿ ತಂದೆ ತಾಯಿಯರು ಬೆಳೆಸುವ ರೀತಿಯೂ ಹಾಗೆಯೇ. ಕೆಲ ಭಾರತೀಯ ಕುಟುಂಬಗಳು ತಮ್ಮ ಮಕ್ಕಳನ್ನು ಆಗಾಗ ಭಾರತಕ್ಕೆ ಕರೆದುಕೊಂಡು ಬಂದು, ಇಲ್ಲಿನ ಜನ-ಮನವನ್ನು ತೋರಿಸಿ ಮತ್ತೆ ವಾಪಸ್ಸು ಕರೆದುಕೊಂಡು ಬರುವುದಿದೆ, ತಾಯಿನಾಡಿನ ಸಂಪರ್ಕ ಉಳಿಸಬೇಕು ಎನ್ನುವ ಒಂದೇ ಆಸೆಯಿಂದ! ಮತ್ತೆ ಕೆಲವು ಕುಟುಂಬಗಳು ಪೂರ್ಣವಾಗಿ ಪಾಶ್ಚಾತ್ಯ ಸಂಸ್ಕಾರವನ್ನು ರೂಢಿಸಿಕೊಂಡಿವೆ, ಈ ಕಡೆಯ ಸಂಪರ್ಕದ ಬಗ್ಗೆ ಅಷ್ಟು ಕಾಳಜಿ ಇಲ್ಲ... ಹೀಗೆ ಎರಡೂ ರೀತಿಯವರೂ ಇದ್ದಾರೆ ಅಲ್ಲಿ.

ಹಾಗೆಯೇ ಅಲ್ಲಿನ ಮಕ್ಕಳ ತಾದಾತ್ಮ್ಯದ ಬಗ್ಗೆ ಎರಡು ಮಾತು ಹೇಳುವುದಾದರೆ, ಅಲ್ಲಿನ ಮಕ್ಕಳು ತರಗತಿಗಳಿಗೆ ಬಹಳ ನಿಯತವಾಗಿ ಬರುವವರು, ಹೇಳಿಕೊಟ್ಟಿದ್ದನ್ನು ತಪ್ಪದೆ ಅಭ್ಯಾಸ ಮಾಡುವವರು, ಅವರು ತಮ್ಮ ಕಲಿಕೆಯಲ್ಲಿ ಪ್ರಾಮಾಣಿಕತೆ ತೋರಿಸುವವರು, ಮೈಗಳ್ಳತನವಿಲ್ಲ. ಯಾವುದನ್ನೇ ಆದರೂ ಚೆನ್ನಾಗಿ ಕಲಿಯಬೇಕು ಎನ್ನುವ ಶ್ರದ್ಧಾಮನೋಭಾವವುಳ್ಳವರು. ಬೇಕಾಬಿಟ್ಟಿ ಮಾಡುವುದನ್ನೇ ಅವರು ಅರಿಯರು. ಇದೊಂದು ರೀತಿ ರಾಷ್ಟ್ರೀಯ ನಡವಳಿಕೆ. ಅಲ್ಲಿನ ಎಲ್ಲರಲ್ಲಿ ಎಂದರೆ ಸಂಭಾವಿತ ವರ್ಗದಲ್ಲೆಲ್ಲಾ ನಾವು ಇದನ್ನು ಕಾಣುತ್ತೇವೆ. ತಂದೆತಾಯಿಗಳಾದರೂ ಅಷ್ಟೆ. ತಮ್ಮ ಮಕ್ಕಳನ್ನು ತಾವೇ ತರಗತಿಗಳಿಗೆ ಕರೆದು ತಂದು ಬಿಟ್ಟು ಹೋಗುತ್ತಾರೆ. ತರಗತಿಗಳು ಮುಗಿದನಂತರ ತಾವೇ ವಾಪಸ್ಸು ಕರೆದುಕೊಂಡು ಹೋಗುತ್ತಾರೆ. ಎಲ್ಲೂ ಬೇಜವಾಬ್ದಾರಿತನವನ್ನು ನಾವು ಕಾಣುವುದಿಲ್ಲ. ಅಷ್ಟು ಕಾಳಜಿ ಮಕ್ಕಳ ಕಲಿಕೆಯ ಮೇಲೆ ಆ ತಂದೆತಾಯಿಗಳಿಗೆ! ಇದರ ಪರಿಣಾಮವಾಗಿಯೇ ಬಹಳ ಒಳ್ಳೆಯ ಫಲಿತಾಂಶವೂ ಬರುತ್ತಿತ್ತು.

ನಮ್ಮ ವಿದ್ಯಾಭವನದಲ್ಲಿ ಭರತನಾಟ್ಯಕ್ಕೆ ತೀರ್ಥಹಳ್ಳಿ ಕಡೆಯಿಂದ ಬಂದ, 'ಸ್ಕೂಲ್ ಆಫ್ ಡ್ಯಾನ್ಸ್ ಅಂಡ್ ಡ್ರಾಮಾ'ದಲ್ಲಿ ಸರ್ಟಿಫಿಕೆಟ್ ಪಡೆದಿರುವ ಶ್ರೀ ಪ್ರಕಾಶ್ ಎಡಗುಡ್ಡೆ ಎನ್ನುವ ತರುಣ ಬಹಳ ಪ್ರತಿಭಾವಂತ. ಸೃಜನಶೀಲ ಕಲಾಕಾರ. ಈವರೆಗೆ ಬಹಳ ಮಂದಿ ಶಿಷ್ಯ ಶಿಷ್ಯೆಯರನ್ನು ತಯಾರು ಮಾಡಿರುವ ನಾಟ್ಯಾಚಾರ್ಯ! ಅವರಂತೆಯೇ ಶ್ರೀಮತಿ ಶಿವಶಕ್ತಿ. ಈಕೆಯ ವಿದ್ಯಾರ್ಥಿಗಳೂ ಬಹಳ ಜನ. ಎಲ್ಲ ವಿದ್ಯಾರ್ಥಿಗಳನ್ನೂ ಸರಿಯಾಗಿ ರೂಪಿಸಿ ಪ್ರತಿಭಾ ಸಂಪನ್ನರಾಗಿ ಮಾಡಿರುವ ಈಕೆ ಎಲ್ಲರ ಮೆಚ್ಚಿನ ಸಂಗೀತ ಗುರುವರ್ಯೆ! ಇವರಂತೆಯೇ ಅಲ್ಲಿಗೆ ಬಂದವರು ವಿಜಯ ಕುಮಾರ ಜಗವಾರ ಸಿತಾರು ಕಲಿಸಲು, ಶ್ರೀ ಬಾಲಮುರಳೀಕೃಷ್ಣ ಅವರು ಕಳುಹಿಸಿದ ಮೃದಂಗ ವಿದ್ವಾನ್ ಎಂ. ಬಾಲಚಂದರ್, ವಯೋಲಿನ್ ಹೇಳಿಕೊಡಲು ಬಂದ ಶ್ರೀ ಬಿ.ಕೆ. ಚಂದ್ರಶೇಖರ್, ಹೀಗೆಯೇ ತಬಲಾಗೆ, ಹಿಂದೂಸ್ತಾನೀ ಶಾಸ್ತ್ರೀಯ ಗಾಯನಕ್ಕೆ, ಕಥಕ್ ನೃತ್ಯಕ್ಕೆ, ನಾಟಕದಲ್ಲಿ ಅಭಿನಯ ಕಲೆಗೆ (ಇದನ್ನು ಹೇಳಿಕೊಡುವವರು ತುಷಾರ್ ಜೋಷಿ), ಬಂಗಾಲಿ ಸಂಗೀತಕ್ಕೆ ಯೋಗ ಮತ್ತು ಧ್ಯಾನಕ್ಕೆ ಗುರುಗಳಾಗಿ ಭಾರತೀಯ ವಿದ್ಯಾಭವನಕ್ಕೆ ಪದಾರ್ಪಣ ಮಾಡಿರುವ ಪ್ರತಿಭಾವಂತರು ಈಗ ಅಲ್ಲಿನ ಮಕ್ಕಳಿಗೆ ಚೆನ್ನಾಗಿ ಕಲಿಸುತ್ತಾ, ನೆಮ್ಮದಿಯಿಂದ ಲಂಡನ್ನಿನಲ್ಲಿ ನೆಲೆನಿಂತವರಾಗಿದ್ದಾರೆ, ಭವನದ ಸಂಸಾರ ಎನಿಸಿದ್ದಾರೆ!

ವರ್ಷದಲ್ಲಿ ಇಬ್ಬರು ಮೂವರು ಮಂದಿ ಅರಂಗೇಟ್ರಂ ಮಾಡುವ ಭವನದ ವೇದಿಕೆ, ಭಾರತದಲ್ಲಿ ನಡೆಯುವ ಅರಂಗೇಟ್ರಂಗಿಂತ ಯಾವ ರೀತಿಯಲ್ಲೂ ಕಡಮೆ ಇಲ್ಲ ಮತ್ತು ಹೆಚ್ಚುಗಾರಿಕೆಯಿಂದ ಮಾಡಿ ಶಿಷ್ಯರ ತಾಲೀಮನ್ನು ಪ್ರದರ್ಶಿಸುತ್ತದೆ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ. ಹೌದು... ಮಕ್ಕಳು ಎಲ್ಲಿದ್ದರೂ ಮಕ್ಕಳೇ ಹೌದು. ಅವರಿಗೆ ಅವರ ವಯಸ್ಸಿಗೆ ಏನು ಹೇಳಿಕೊಟ್ಟರೂ ಅದು ಚೆನ್ನಾಗಿ ಬರುತ್ತದೆ, ಮೈಗೂಡಿಕೊಳ್ಳುತ್ತದೆ. ಗುಜರಾತ್ ಹುಡುಗಿ ಭರತನಾಟ್ಯ ಮಾಡಿದರೆ, ದಕ್ಷಿಣ ಭಾರತದ ಹುಡುಗ ಕಥಕ್ ನೃತ್ಯ ಕಲಿಯುತ್ತಾನೆ, ಬ್ರಿಟನ್ ಹುಡುಗಿ ಕರ್ನಾಟಕ ಸಂಗೀತ ಕಲಿತರೆ, ಜಿನೀವಾದಿಂದ ಬಂದ ಹುಡುಗ ಸಿತಾರ್ ಕಲಿಯುತ್ತಾನೆ! ಎಲ್ಲ ಮಕ್ಕಳಲ್ಲೂ ಒಂದಲ್ಲ ಒಂದು ಪ್ರತಿಭೆ ಇರುತ್ತದೆ. ಅದು ಬೂದಿ ಮುಚ್ಚಿದ ಕೆಂಡದ ಹಾಗೆ ಇರುತ್ತದೆ. ನಾವು ಅದನ್ನು ತುಸುವೇ ಕೆದರಿದರೆ, ಸ್ವಲ್ಪ ಊದಿಗಾಳಿ ಹಾಕಿದರೆ ಅದು ನಿಗಿನಿಗಿ ಎಂದು ಹೊಳೆಯುವಂತಾಗುತ್ತದೆ! ಭಾರತೀಯ ವಿದ್ಯಾಭವನವು ಮಾಡುತ್ತಿರುವ ಕೆಲಸವೂ ಅದೇ ಈಗ. ಯಾರಲ್ಲಿ ಯಾವ ಪ್ರತಿಭೆ ಇರುತ್ತದೆಯೋ, ಯಾರಿಗೆ ತಿಳಿದಿರುತ್ತದೆ? ಎಲ್ಲರೂ ಗಾಂಧೀಜಿಯಂತೆ ಪರಿಶೋಧಕರಾಗಿರಲು ಸಾಧ್ಯವಿಲ್ಲವಷ್ಟೆ! ಅದಕ್ಕೆ ಅವರ ದೃಷ್ಟಿಗೆ ಪ್ರಸಾದ್, ನೆಹರೂ, ಪಟೇಲ್, ಕೃಪಲಾನಿ, ವಿನೋಬಾ ಎಲ್ಲರೂ ಸಿಕ್ಕಿದರು. ಅವರು ಒರೆಹಚ್ಚುತ್ತಾ ಹೋದಂತೆ ಇವರುಗಳು ಬೆಳಗಿದರು.

ಅಂತರಾತ್ಮನೇ ಸಾಕ್ಷಿ

ಭವನ ಹೊಸಕಟ್ಟಡದಲ್ಲಿ ತನ್ನ ಕೆಲಸ ಪ್ರಾರಂಭಿಸಿದ ಅನಂತರ ಭಾರತದ ಹೈಕಮಿಷನರುಗಳು ಭವನಕ್ಕೆ ಬಂದು ಭೇಟಿ ನೀಡಿದ್ದು, ಭವನಕ್ಕೆ ಭಾರತ ಸರ್ಕಾರದ ಆಶೀರ್ವಾದದ ಶ್ರೀರಕ್ಷೆ ಸಿಕ್ಕಂತಾಯಿತು! ಜವಾಬ್ದಾರಿ ಹೆಚ್ಚಿದಾಗ ನಾವು ನಮ್ಮ ಕೆಲಸವನ್ನು ಕರಾರುವಾಕ್ಕಾಗಿ ಮಾಡಬೇಕು. 'ಯಾರು ನಮ್ಮನ್ನು ಗಮನಿಸುತ್ತಾರೆ' ಎಂದು ಮಾಡದೆ, ನಮ್ಮ ಕೆಲಸಗಳು ನಮ್ಮ ಅಂತರಾತ್ಮದ ಸಾಕ್ಷಿಯಲ್ಲೇ ಯಾವುದೇ ಕೊರತೆಯಿಲ್ಲದೆ ನಡೆಯಬೇಕು. ಇದಕ್ಕೆ ಒಂದು ಉದಾಹರಣೆ... ರಾಮಕೃಷ್ಣಾಶ್ರಮದಲ್ಲಿ 'ಲಿವಿಂಗ್ ಪ್ರೆಸೆನ್ಸ್' (Living Presence) ಎಂದು ಪೂಜೆ ಮಾಡುತ್ತಾರೆ. ಹಾಗೆಂದರೆ ಬದುಕಿರುವವರ ಉಪಸ್ಥಿತಿಯೋ ಪೂಜೆಯೋ ಎಂದು ನನ್ನ ಓದುಗರಿಗೆ ಹುಬ್ಬೇರಿದ್ದೀತು. ಬಹಳ ಜನಕ್ಕೆ ಈ ರೀತಿಯ ಪೂಜೆಯ ವಿಷಯ ಗೊತ್ತಿರಲೂಬಹುದು. ರಾಮಕೃಷ್ಣಾಶ್ರಮದಲ್ಲಿ ಅವರೂ

ಶ್ರೀ ಪರಮಹಂಸರ ಭಾವಚಿತ್ರ (ಫೋಟೋ)ಕ್ಕೇ ಪೂಜೆ ಮಾಡುವುದು, ನಾವು ರಾಮ-ಕೃಷ್ಣ ಎಂದು ಪೂಜೆ ಮಾಡುವಂತೆ.

ರಾಮಕೃಷ್ಣಾನಂದರು ಎನ್ನುವ ಸ್ವಾಮೀಜಿ, ಇವರನ್ನು 'ಶಶಿ ಮಹಾರಾಜ್' ಎಂದು ಕರೆಯುತ್ತಿದ್ದರು. ಬೆಂಗಳೂರಿನಲ್ಲಿ ರಾಮಕೃಷ್ಣಾಶ್ರಮವನ್ನು ಪ್ರಾರಂಭಿಸಿದವರೂ ಇವರೇ. ಇವರೇ ಮದ್ರಾಸಿನಲ್ಲಿಯೂ ಆಶ್ರಮದ ಶಾಖೆಯೊಂದನ್ನು ಪ್ರಪ್ರಥಮವಾಗಿ ತೆರೆದು, ಅಲ್ಲಿ ರಾಮಕೃಷ್ಣಾಶ್ರಮವನ್ನು ಚೆನ್ನಾಗಿ ನೆಲೆಯೂರುವಂತೆ ಮಾಡಿದವರು. ಆಗ ಮದ್ರಾಸ್‌ನ ಐಸೋರ್ಸ್ ರಸ್ತೆಯಲ್ಲಿ ಒಂದು ಸಣ್ಣ ರೂಮು, ೧೦'x೧೦'ರ ಅಳತೆಯದು! ಅಲ್ಲಿ ಮೊದಲ ಬಾರಿ ಶ್ರೀ ಪರಮಹಂಸರ ಒಂದು ಫೋಟೋವನ್ನಿಟ್ಟು ಪೂಜೆ ಪ್ರಾರಂಭಿಸಿದರು. ಪ್ರತಿದಿನ ಬೆಳಗ್ಗೆ ಆ ಫೋಟೋದ ಮುಂದೆ ಹೂವು ಹಣ್ಣುಗಳನ್ನು ನೈವೇದ್ಯ ಇಡುವುದು ಅವರ ಪರಿಪಾಠ. ಸ್ವಾಮೀಜಿಯೂ ಅಲ್ಲೇ ಫೋಟೋದ ಎದುರಿಗೇ ಮಲಗುತ್ತಿದ್ದರು. ಬೇರೆ ಎಲ್ಲೂ ಜಾಗವೇ ಇರಲಿಲ್ಲವಲ್ಲ! ಬರುವ ಭಕ್ತರೂ ಅಲ್ಲೇ ಬಂದು ಕೈಮುಗಿದು ಹೋಗುವುದಿತ್ತು , ಸಂಜೆಯ ವೇಳೆ ಕುಳಿತು ಪ್ರಾರ್ಥಿಸುವುದಿತ್ತು.

ಹೀಗೆ ನಡೆಯುತ್ತಿದ್ದಾಗ ಒಮ್ಮೆ ಮಳೆಗಾಲದಲ್ಲಿ ರಾತ್ರಿ ಜೋರಾಗಿ ಮಳೆಬರಲು ಶುರುವಾಯಿತು. ಅದೂ ಎರಚಲು ಮಳೆ. ಸ್ವಾಮೀಜಿ ಅಲ್ಲೇ ಮಲಗಿದ್ದವರು, ಅವರ ಮೇಲೆ ಹೀಗೆ ಮಳೆ ನೀರು ಎರಚಿದುದರಿಂದ ಎಚ್ಚರಗೊಂಡರು, ಎದ್ದು ಕುಳಿತರು. ಆ ರೂಮಿನಲ್ಲಿ ಶ್ರೀ ಪರಮಹಂಸರ ಫೋಟೋದ ಮೇಲೆ ಮಳೆಯ ನೀರು ತಾರಸಿಯಿಂದ ತೊಟ್ಟಿಕ್ಕುತ್ತಿತ್ತು. ತಕ್ಷಣವೇ ಸ್ವಾಮೀಜಿ ಧಿಗ್ಗನೆ ಎದ್ದವರೇ ಕೊಡೆಯನ್ನು ಬಿಚ್ಚಿ , ಶ್ರೀ ಪರಮಹಂಸರ ಫೋಟೋದ ಮೇಲೆ ಹಿಡಿದು, ರಾತ್ರಿಯಿಂದ ಬೆಳಗಾಗುವರೆಗೂ ಹಾಗೇ ಕುಳಿತಿದ್ದರು!! ಅವರ ಮನಸಿನಲ್ಲಿ ಪರಮಹಂಸರ ಬರಿಯ ಫೋಟೋ ಅದಾಗಿರಲಿಲ್ಲ. ಹಾಗಾಗಿದ್ದರೆ ಫೋಟೋವನ್ನು ಇನ್ನೊಂದೆಡೆ ಎತ್ತಿಡಬಹುದಿತ್ತು, ಇಲ್ಲವೇ ಫೋಟೋ ನೆನೆದರೆ ಏನಾದೀತು? ಎಂದು ಸುಮ್ಮನಿರ ಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಆ ಫೋಟೋದಲ್ಲಿ ಸಾಕ್ಷಾತ್ ಪರಮಹಂಸರೇ ವಿರಾಜಮಾನರಾಗಿದ್ದರು ಅವರ ಕಣ್ಣಿಗೆ! ಅದಕ್ಕೇ ಅವರು ನಿಜವಾಗಿಯೂ ಗುರುಮಹಾರಾಜರು ಮಳೆಯಲ್ಲಿ ನೆನೆಯುತ್ತಾರೆ ಎಂದು ಪ್ರೀತಿಯಿಂದ ಭಕ್ತಿಯಿಂದ ಹಾಗೆ ಮಾಡಿದ್ದರು. ಹೀಗೆ ಇದೇ ಭಾವನೆ ನಮಗೆ ಬರಬೇಕು. ನಾವು ಏನೇ ಮಾಡಿದರೂ 'ಅವನು ನಮ್ಮನ್ನು ನೋಡುತ್ತಾ ಇರುತ್ತಾನೆ' ಎನ್ನುವ ಮನೋಭಾವದಲ್ಲೇ ಕೆಲಸ ಮಾಡಿದರೆ, ಆ ಕೆಲಸ ನಿಜಕ್ಕೂ ಚೆನ್ನಾಗಿ ಆಗುವುದರಲ್ಲಿ ಸಂಶಯವಿಲ್ಲ. ಇಲ್ಲಿ ನಾವು ಕನಕದಾಸರ ಕಥೆಯನ್ನು ನೆನೆಸಿಕೊಳ್ಳಬೇಕು. ಗುರುಗಳು ಯಾರೂ ಕಾಣದ ಜಾಗದಲ್ಲಿ ಹಣ್ಣು ತಿಂದು ಬನ್ನಿ ಎಂದು ಹೇಳಿ, ಕೊಟ್ಟ ಬಾಳೆಹಣ್ಣನ್ನು ತಿನ್ನಲು ಅವನಿಗೆ ಸಾಧ್ಯವೇ ಆಗಲಿಲ್ಲ. ಎಲ್ಲಿ ಹೋದರೂ ಎರಡು ಕಣ್ಣುಗಳು ಅವನನ್ನೇ ನೋಡುತ್ತ ಹಿಂಬಾಲಿಸಿ ಬರುತ್ತಿರುವಂತೆ ಕಾಣಿಸಿತು. ಹಾಗೆ ಭಾಸವಾದಾಗ ಅವನಿಗೆ 'ಹೌದು ಇವೇಕೆ ಈ ಎರಡು ಕಣ್ಣುಗಳು ನನ್ನ ಹಿಂದೆ ಬರುವುದು? ಇವು ದೇವರ ಕಣ್ಣುಗಳಷ್ಟೇ? ಅವನಿಲ್ಲದ ಜಾಗ ಒಂದಿದೆಯೇ? ನಾನು ಅವನಿಲ್ಲದ ಜಾಗದಲ್ಲಿ ಹಣ್ಣು ತಿನ್ನುವುದು ಹೇಗೆ ?' ಎನಿಸಿತು. ಅಲ್ಲವೇ ಮತ್ತೆ? ಎಲ್ಲಿದ್ದರೂ ಆ ಶಕ್ತಿ ನಮ್ಮನ್ನು ನೋಡುತ್ತ ಇರುತ್ತದೆ ಎಂದು ನಾವು ಆದಷ್ಟು ನಿಷ್ಠೆಯಿಂದ, ನಿಃಸ್ಪೃಹತೆಯಿಂದ ಕೆಲಸ ಮಾಡಬೇಕು. ಹಾಗೆ ನಾವು ಕೆಲಸಮಾಡಿದಾಗ ಸಿಗುವ ಫಲ ಅಮೂಲ್ಯವಾಗಿಯೇ ಇರುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ.

ಅಸೂಮಲ್ ದಂಪತಿಗಳು

ದುರೂ ಅಸೂಮಲ್ ಎನ್ನುವ ಸಿಂಧಿ ಹೆಣ್ಣುಮಗಳು. ಅವರು ಬಹಳ ಜನಪ್ರಿಯ ಮಹಿಳೆ. ವಿದ್ಯಾ ಭವನದ ಕಾರ್ಯದರ್ಶಿಯಾಗಿದ್ದರು ಆಕೆ. ನಿಧಿಸಂಗ್ರಹಕ್ಕೆಂದು ಆಕೆ ಒಮ್ಮೆ ರ‍್ಯಾಫೆಲ್ ಲಾಟರಿ ನಡೆಸಿದರು. ರ‍್ಯಾಫೆಲ್ ಎಂದರೆ ಲಾಟರಿಗೆ ಇನ್ನೊಂದು ಹೆಸರು. ನಿಧಿ ಸಂಗ್ರಹಕ್ಕೆ ಚಿಕ್ಕಬೆಲೆಯಲ್ಲಿ ರ‍್ಯಾಫೆಲ್ ಟಿಕೆಟ್ ಮಾಡಿಸಿ ದೊಡ್ಡ ದೊಡ್ಡ ಬಹುಮಾನಗಳನ್ನು ಇಡುವುದು. ಬಹುಮಾನಗಳನ್ನು ದಾನಿಗಳು ಕೊಡುತ್ತಾರೆ. ನಿಧಿ ಸಂಗ್ರಹಕ್ಕೆ ಇದು ಒಂದು ಸಾಧ್ಯಮಾರ್ಗ. ಬಹಳ ಕಡಮೆ ದುಡ್ಡಿಗೆ ಟಿಕೆಟು ಇಟ್ಟು, ಸುಮಾರು ಐದಾರುನೂರುಗಳ ಟಿಕೆಟನ್ನು ಆಕೆಯೇ ಕೊಂಡರೂ ಸಹ ಅದಕ್ಕೆ ಬಹುಮಾನಗಳನ್ನಿಡಲಾಗಿತ್ತು.

ಅಲ್ಲಿಗೆ ಟಿಕೆಟುಗಳನ್ನು ಕೊಂಡು ಬಂದ ಜನರಿಗೆ ಆ ನಂಬರುಗಳಲ್ಲಿ ಲಾಟರಿ ಎತ್ತಿ ಬಹುಮಾನ ಕೊಡಲಾಗುವುದು. ಮೊದಲನೇ ಸಾರಿ ಮೊದಲನೇ ಬಹುಮಾನವಾಗಿ ಏರ್‌ ಇಂಡಿಯಾದ ರಿಟರ್ನ್ ಟಿಕೆಟ್, ಎರಡನೆಯ ಬಹುಮಾನವಾಗಿ ಪ್ಯಾರಿಸ್‌ನಲ್ಲಿ ನಾಲ್ಕು ದಿನಗಳ ರಜೆಗಾಗಿ ಹೋಗಿಬರುವುದು, ಅಲ್ಲಿ ಪಂಚತಾರಾ ಹೋಟೆಲಿನಲ್ಲಿ ಮುಂಗಡವಾಗಿ ಬುಕ್ ಮಾಡಿಸಿರುವುದು, ಮೂರನೆಯದು ಟಿ.ವಿ., ನಾಲ್ಕನೆಯ ಬಹುಮಾನವಾಗಿ ಒಂದು ವಜ್ರದ ಉಂಗುರ - ಹೀಗೆ ನಡೆಯುತ್ತಿತ್ತು. ಇದನ್ನು ಸುಮಾರು ಮೂರು ವರ್ಷಗಳ ಕಾಲ ಪ್ರತಿ ವರ್ಷವೂ ನಡೆಸಿದರು ಭವನಕ್ಕಾಗಿ. ಮೊದಲನೆಯ ವರ್ಷದ ರ‍್ಯಾಫೆಲ್‌ನಲ್ಲಿಯೇ ಸುಮಾರು ೧೧,೦೦೦ ಪೌಂಡುಗಳು ಸಂಗ್ರಹ ವಾದವು!

ಈ ರ‍್ಯಾಫೆಲ್ ನಡೆಸುವಾಗ ವಜ್ರದ ಉಂಗುರದ ಬಹುಮಾನ ಕೊಡುತ್ತಿದ್ದವರು ಚೋಕ್ಸಿ ಎನ್ನುವವರು. ಅವರು ಬಹಳ ದೊಡ್ಡ ವಜ್ರದ ವ್ಯಾಪಾರಿಗಳು. ಶ್ರೀಮತಿ ದುರು ಅಸೂಮಲ್ ಅವರಿಂದ ಸುಮಾರು ನೂರಾರು ಸಿಂಧಿ ಕುಟುಂಬಗಳ ಪರಿಚಯವಾಯಿತು. ಅಸೂಮಲ್ ಅವರ ಐದು ಹೆಣ್ಣು ಮಕ್ಕಳಿಗೂ ನಾನೇ ಮದುವೆಯನ್ನು ಮಾಡಿಸಿದೆ.

ಇತ್ತೀಚೆಗೆ ನಡೆದುದಾದರೂ, ಅಸೂಮಲ್ ಅವರಿಗೆ ಇದು ಸಂಬಂಧಿಸಿರುವುದರಿಂದ ಇಲ್ಲಿ ಒಂದು ಸಂಗತಿಯ ಬಗೆಗೆ ಹೇಳುವುದು ಸೂಕ್ತ ಎನಿಸುತ್ತದೆ. ನಾನು ೧೯೯೫ರಲ್ಲಿ ನಿವೃತ್ತನಾಗಿ ಲಂಡನ್‌ನಿಂದ ಬೆಂಗಳೂರಿಗೆ ಬಂದು, ಬೆಂಗಳೂರು ಭವನ ಕೇಂದ್ರದ ಕಾರ್ಯಕಾರಿ ನಿರ್ದೇಶಕನಾಗಿ ಅಧಿಕಾರ ವಹಿಸಿಕೊಂಡಾಗ ಶ್ರೀ ಛತ್ರು ಅಸೂಮಲ್ (ದುರೂ ಅಸೂಮಲ್‌ರ ಪತಿ) ಭಾರತಕ್ಕೆ ಬಂದರು. ಬೆಂಗಳೂರು ಭವನದ ಸ್ಥಿತಿ ಇನ್ನೂ ಸುಧಾರಣೆಯಾಗಿರಲಿಲ್ಲ. ಅದು ಬಹಳ ದುಃಸ್ಥಿತಿಯಲ್ಲಿತ್ತು. ನನಗೋ ಅವರನ್ನು ಭವನಕ್ಕೆ ಹೇಗೆ ಬರ ಹೇಳುವುದು ಎಂದೇ ಅನಿಸಿ ನಾನು ಅವರನ್ನು ಭವನಕ್ಕೆ ಬನ್ನಿ ಎಂದು ಕರೆಯಲೇ ಇಲ್ಲ. ಆದರೂ ಅವರೇ, ''ಮಾಥೂರ್‌ಜೀ, ಇಲ್ಲಿ ಹೇಗಿದೆ ನಿಮ್ಮ ಭವನ ನೋಡಬೇಕಲ್ಲ ಒಮ್ಮೆ'' ಎಂದರು. ಹಾಗೆ ಅವರೇ ಕೇಳಿದಾಗ 'ಇಲ್ಲ, ಬರಬೇಡಿ' ಎನ್ನಲಾಗಲಿಲ್ಲ. 'ಬನ್ನಿ ಖಂಡಿತವಾಗಿ ಒಮ್ಮೆ ನೋಡಿ' ಎಂದೆ ನಾನು. ಇಲ್ಲಿ ಏನೂ ಇರಲಿಲ್ಲ. ಕೆಲಸಗಳು, ತರಗತಿಗಳು ಯಾವುದೂ ಸರಿಯಾಗಿ ನಿಯತವಾಗಿ ನಡೆಯುತ್ತಿರಲಿಲ್ಲ. ಯಾವುದೂ ವ್ಯವಸ್ಥಿತವಾಗಿ ನಡೆಯದೆ ಇದ್ದುದರಿಂದ ಇಲ್ಲಿನ ಭವನ ಅವರಿಗೆ ಅಂತಹದೇನೂ ಪ್ರಭಾವ ಬೀರಲಿಲ್ಲ. ಶ್ರೀ ಚೋಕ್ಸಿಯವರು ಬಂದರು, ನೋಡಿದರು, ಹೊರಟರು. ೧೯೯೭-೯೮ ರಲ್ಲಿ ಅವರ ಕೊನೆಯ ಮಗಳಿಗೆ ಮದುವೆಯನ್ನು ಮಾಡಿಸಲು ಅವರು ನನ್ನನ್ನು ಆಮಂತ್ರಿಸಿದಾಗ ನಾನು ಲಂಡನ್‌ಗೆ ಹೋಗಿದ್ದೆ. ಆ ಸಮಯದಲ್ಲೇ ಅವರೂ ಬೆಂಗಳೂರಿಗೆ ಬಂದರು. ಆಗ ಭವನ ಸ್ವಲ್ಪ ಮಟ್ಟಿಗೆ ಚೆನ್ನಾಗಿತ್ತು. ಈ ಬಾರಿ ನಾನೇ ಧೈರ್ಯವಾಗಿ ಅವರನ್ನು ಆಹ್ವಾನಿಸಿದೆ. ''ಮಧ್ಯಾಹ್ನ ಭವನಕ್ಕೆ ಬಂದು ನೋಡಿ, ರಾತ್ರಿ ನಮ್ಮ ಮನೆಗೆ ಊಟಕ್ಕೆ ಬನ್ನಿ'' ಎಂದೆ. ಆ ಮಧ್ಯಾಹ್ನ ಶ್ರೀ ಅಸೂಮಲ್‌ರು ಬಂದರು. ಮಹಡಿಯಲ್ಲಿ ತರಗತಿಗಳು ನಡೆಯುವ ರೂಮುಗಳ ಪಕ್ಕದಲ್ಲಿ ಬಹಳ ಶಬ್ದ. ಇದನ್ನು ಕೇಳಿ-ನೋಡಿದ ಅವರು ''ಮಾಥೂರ್‌ಜೀ, ನೀವು ಇಲ್ಲಿ ತರಗತಿಗಳನ್ನು ಹೇಗೆ ನಡೆಸುತ್ತೀರಿ. ಇಷ್ಟು ಶಬ್ದ ಆಗುತ್ತಿದೆಯಲ್ಲಾ?'' ಎಂದರು. ''ಹೌದು, ಬಹಳ ಶಬ್ದ. ಏನು ಮಾಡುವುದು, ಹಣ ಇಲ್ಲ. ಡಬಲ್‌ಗ್ಲೇಸ್ ಮಾಡಿಸಬೇಕು. ಈಗ ನಿಧಾನಕ್ಕೆ ಒಂದೊಂದೇ ಕೆಲಸವಾಗುತ್ತಿದೆ'' ಎಂದೆ. ಆ ರಾತ್ರಿ ನಮ್ಮ ಮನೆಗೆ ಊಟಕ್ಕೆ ಬಂದ ಅವರು, ಊಟ ಮುಗಿಸಿದ ನಂತರ ನನ್ನ ಬಳಿ ಬಂದು, ''ಮಾಥೂರ್‌ಜೀ, ನಿಮಗೆ ಹಣಕೊಟ್ಟರೆ ತೆರಿಗೆ ವಿನಾಯಿತಿ ಇದೆಯೇ?'' ಎಂದರು. ನಾನು ''ಹೌದು ಅಸೂಮಲ್‌ಜೀ, ೫೦೦೦ ರೂಪಾಯಿಗಳ ಮೇಲೆ ಕೊಟ್ಟರೆ ೧೦೦% ತೆರಿಗೆ ರಿಯಾಯಿತಿ ಇದೆ'' ಎಂದೆ. ''ಹಾಗಾದರೆ ನಾನು ಸ್ವಲ್ಪ ಭಾರತೀಯ ಹಣವನ್ನು (ಎಂದರೆ ರೂಪಾಯಿಗಳಲ್ಲಿ) ದಾನವಾಗಿ ಕೊಡಲೇ?'' ಎಂದರು. ''ಧಾರಾಳವಾಗಿ ಕೊಡಬಹುದು. ಆದರೆ ತೆರಿಗೆ ವಿನಾಯಿತಿ ಎನ್ನುವುದು ಮುಂಬಯಿಯಲ್ಲಿ ಆಗುವ ಕೆಲಸ. ನಾವು ಅವರಿಂದ ಅನುಮತಿ ಪಡೆಯಬೇಕು. ಆದ್ದರಿಂದ ನೀವು ಕೊಡುವ ದಾನದಲ್ಲಿ ಕಾಲುಭಾಗ ಮುಂಬಯಿಯ ಕೇಂದ್ರಕ್ಕೂ ಮುಕ್ಕಾಲುಭಾಗ ಬೆಂಗಳೂರಿನ ಕೇಂದ್ರಕ್ಕೂ ಕೊಡುತ್ತಿರುವುದಾಗಿ ನೀವೇ ಅಲ್ಲಿಗೆ ಪತ್ರ ಬರೆದು ತಿಳಿಸಿ ಹಣಕೊಟ್ಟರೆ ಆಗ ಅದು ನಮ್ಮನ್ನು ಸೇರುತ್ತದೆ... ಏಕೆಂದರೆ ಮುಂಬಯಿಯ ಕೇಂದ್ರ ವಿದ್ಯಾಭವನದ ಮಾತೃಸಂಸ್ಥೆ. ಅಲ್ಲಿನ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಅಲ್ಲಿಯೂ ಹಣದ ಅಗತ್ಯ ಇರುವುದರಿಂದ ನಿಮ್ಮೀಹಣ ಅವರು ತೆಗೆದುಕೊಂಡು, ನಮಗೆ ಕೊಡಬೇಕಾದುದೆಷ್ಟು ಎಂದು ಬರೆದು ಅವರಿಗೆ ತಿಳಿಸಿಬಿಟ್ಟರೆ, ನಿಮಗೆ ತೆರಿಗೆ ವಿನಾಯಿತಿಯೂ ಸಿಗುತ್ತದೆ, ಹಣ ಬೆಂಗಳೂರನ್ನೂ ತಲುಪುತ್ತದೆ'' ಎಂದೆ. ಅವರಿಗೆ ಆ ಸೂಕ್ಷ್ಮತೆಯ ಅರಿವಾಯಿತು. ''ಸರಿ ಸರಿ... ನನಗೆ ಅರ್ಥವಾಯಿತು'' ಎಂದ ಅವರು, ''ನಾನು ಹಾಂಗ್‌ಕಾಂಗ್‌ಗೆ ಹೋಗುತ್ತಿದ್ದೇನೆ. ಅನಂತರ ಈ ಬಗ್ಗೆ ನಿಮ್ಮ ಜೊತೆ ಮಾತನಾಡುತ್ತೇನೆ'' ಎಂದರು. ಹಾಂಗ್‌ಕಾಂಗ್‌ಗೆ ಹೋದರು. ನಾನು ಯೋಚಿಸುತ್ತಿದ್ದೆ, 'ಎಷ್ಟು ಕೊಡಬಹುದು ಅಸೂಮಲ್‌ರು? ಒಂದು ಲಕ್ಷ? ಆಹಾ... ಅಷ್ಟು ಕೊಟ್ಟರೆ ನಿಂತುಹೋಗಿರುವ ಭವನದ ಎಷ್ಟೋ ಕೆಲಸಗಳು ಚಾಲನೆಗೆ ಬರುತ್ತವೆ' ಎಂದುಕೊಂಡೆ.

ಅನಂತರ ನಾನು ದೆಹಲಿಗೆ ಕಾರ್ಯನಿಮಿತ್ತ ಹೋಗಬೇಕಾಯಿತು. ಅಲ್ಲಿ ಶ್ರೀ ರಾಮಕೃಷ್ಣನ್‌ಜೀ, ಶ್ರೀ ಸುಬ್ರಹ್ಮಣ್ಯಂಜೀಯವರನ್ನು ಭೇಟಿ ಮಾಡಿದೆ. ಶ್ರೀ ಅಸೂಮಲ್‌ರು ದಾನ ಕೊಡುವುದಾಗಿ ಹೇಳಿರುವುದರ ಬಗ್ಗೆ, ಅದಕ್ಕೆ ನಾನು ಮುಂಬಯಿಯ ಸಂಸ್ಥೆಗೂ ಕಾಲುಭಾಗದ ಹಣ ಕೊಡಲು ಹೇಳಿರುವ ಬಗ್ಗೆ ಎಲ್ಲ ವಿಷಯಗಳನ್ನೂ ಅವರಿಗೆ ತಿಳಿಸಿದೆ. ಶ್ರೀ ಸುಬ್ರಹ್ಮಣ್ಯಂ ಅವರು ನನ್ನ ಈ ಸೂಚನೆಯನ್ನು ಮೆಚ್ಚಿದರು. ''ಒಳ್ಳೆಯ ಕೆಲಸ ಮಾಡಿದಿರಿ ಮತ್ತೂರ್‌ಜೀ. ಮುಂಬಯಿ ಕೇಂದ್ರಕ್ಕೆ ಕಾಲುಭಾಗ ಕೊಡಲು ಹೇಳಿದ್ದೀರಲ್ಲಾ!'' ಎಂದರು. ''ಅಲ್ಲವೇ, ಸರಿ ಮತ್ತೆ , ಅದು ನಮ್ಮ ಮಾತೃಸಂಸ್ಥೆ ; ನಾವು ಅಲ್ಲಿಗೆ ಕೊಡಿಸುವುದು ಬೇಡವೇ?'' ಎಂದೆ. ಆ ಹಿರಿಯರಿಬ್ಬರಿಗೂ ಬಹಳ ಸಂತೋಷ ವಾಯಿತು. ಆ ದಿನವೇ ಹಾಂಗ್‌ಕಾಂಗ್‌ನಿಂದ ಶ್ರೀ ಛತ್ರು ಅಸೂಮಲ್‌ರ ಫೋನು ಬಂದಿತು. ''ಅರೆ... ಮಾಥೂರ್‌ಜೀ, ನೀವು ದೆಹಲಿಯಲ್ಲೇ ಇದ್ದೀರಾ?'' ಎಂದರು. ''ಹೌದು, ಅಸೂಮಲ್‌ಜೀ, ಕೆಲಸದ ಮೇಲೆ ಬಂದಿದ್ದೇನೆ'' ಎಂದೆ. ''ಮಾಥೂರ್‌ಜೀ, ನಾನು ಡ್ರಾಫ್ಟ್ ಕಳುಹಿಸಿದ್ದೇನೆ. ಪತ್ರದಲ್ಲಿ ಮುಂಬಯಿಗೆ ಕಾಲುಭಾಗ , ಬೆಂಗಳೂರಿಗೆ ಮುಕ್ಕಾಲು ಭಾಗ ಎಂದೂ ಹೇಳಿದ್ದೇನೆ'' ಎಂದರು. ''ಬಹಳ ಸಂತೋಷ, ತುಂಬ ವಂದನೆಗಳು ನಿಮಗೆ... ಆ ಹಣದಲ್ಲಿ ಏನು ಮಾಡುವುದು?'' ಎಂದೆ. ''ಏನಾದರೂ ಸರಿ, ನಿಮಗೆ ಮಾಡಬೇಕು ಎನಿಸಿದ್ದನ್ನು ಮಾಡಿರಿ. ನಮ್ಮದೇನಿಲ್ಲ'' ಎಂದು ನಿಲ್ಲಿಸಿದರು. ''ಸರಿ'' ಎಂದೆ ನಾನು. ಅದಕ್ಕೆ ಅವರು ''ಮಾಥೂರ್‌ಜೀ, ಎಷ್ಟು ಕಳುಹಿಸಿದ್ದೇನೆ ಎಂದು ನೀವು ಕೇಳಲೇ ಇಲ್ಲ'' ಎಂದರು. ಅದಕ್ಕೆ ನಾನು ನಕ್ಕು ''ನೀವು ಎಷ್ಟು ಕೊಡುತ್ತೀರೋ ಅಷ್ಟೇ ಸಾಕು ನಮಗೆ'' ಎಂದೆ. ''ಮಾಥೂರ್ ಜೀ, ೨೦ ಲಕ್ಷ ರೂಪಾಯಿ

ಕಳುಹಿಸಿದ್ದೇನೆ. ಮುಂಬಯಿಗೆ ೫ ಲಕ್ಷ, ಬೆಂಗಳೂರಿನ ಕೇಂದ್ರಕ್ಕೆ ಮಿಕ್ಕಿದ್ದು'' ಎಂದರು. ನನಗೋ ಆಶ್ಚರ್ಯ-ಸಂತೋಷ. ಒಂದು ಲಕ್ಷದ ನಿರೀಕ್ಷೆಯಲ್ಲಿದ್ದವನಿಗೆ ೧೫ ಲಕ್ಷ ರೂಪಾಯಿಗಳು ಬರುವುದಾಗಿ ಹೇಳಿದರೆ, ಎಷ್ಟು ಸಂತೋಷವಾಗುತ್ತದೆ!? ೧೫ ಲಕ್ಷ ರೂಪಾಯಿಗಳು ಬೆಂಗಳೂರಿಗೆ ಬಂದ ಕೂಡಲೆ ಭವನದ ತರಗತಿಗಳು ನಡೆಯುತ್ತಿದ್ದ ರೂಮುಗಳಿಗೆ ಡಬಲ್‌ಗ್ಲೇಸ್ ಹಾಕಿಸಿದೆ.

ಇಲ್ಲಿ ಗಮನಿಸಬೇಕಾದ ಒಂದಂಶವೆಂದರೆ, ಅವರು ಮೊದಲ ಬಾರಿ ಬಂದಾಗ ಭವನವನ್ನು ನೋಡಿ ಏನೂ ಹೇಳಲಿಲ್ಲ. ಎರಡು ವರ್ಷಗಳ ಅನಂತರ ಬಂದ ಅವರು ಇಲ್ಲಿ ಎಲ್ಲವೂ ದಿನೇ ದಿನೇ ವ್ಯವಸ್ಥಿತವಾಗುತ್ತಿರುವುದನ್ನು, ಆ ಪ್ರಗತಿಯನ್ನು ಕಣ್ಣಾರೆ ಕಂಡರು. ಆ ಎರಡು ವರ್ಷಗಳಲ್ಲಿ ಭವನ ಸ್ವಲ್ಪ ಬೆಳೆದಿತ್ತು. ಅದನ್ನು ನೋಡಿದ ಅನಂತರ ಅವರಿಗೆ ವಿಶ್ವಾಸ ಹುಟ್ಟಿತು. ಆಗ ಅವರು ಹಣಕೊಡಲು ಮುಂದಾದರು. ನಾವು ಮೊದಲು ಕೆಲಸ ಮಾಡಿ ತೋರಿಸಬೇಕು. ಆಮೇಲೆಯೇ ದಾನಿಗಳು ಕೆಲಸ ನೋಡಿ ಹಣಕೊಡುವುದು. ಅದರಲ್ಲೂ ಒಳ್ಳೆಯ ಕೆಲಸ ಎಂದರೆ ಹೇಗಾದರೂ ದುಡ್ಡು ಒದಗುತ್ತದೆ. ಈಗ ಆದದ್ದೂ ಹಾಗೆಯೇ!

ಭಗವಾನ್ ಮೀರ್ ಚಂದಾನಿ

ಅಸೂಮಲ್ ದಂಪತಿಗಳಿಂದ ಸಾಕಷ್ಟು ಸಿಂಧಿ ಕುಟುಂಬಗಳ ಪರಿಚಯವಾಯಿತೆಂದು ಹೇಳಿದೆನಷ್ಟೆ. ಅಸೂಮಲ್ ದಂಪತಿಗಳ ಸಂಬಂಧದವರು ಭಗವಾನ್ ಮೀರ್‌ಚಂದಾನಿ ಎನ್ನುವವರು. ಭಗವಾನರ ಸೋದರಮಾವ ನಿಧನರಾದರು. ಆಗ ೧೨ ದಿವಸಗಳ ಕ್ರಿಯಾ ಕರ್ಮಗಳನ್ನು ನಾನೇ ಹೋಗಿ ಮಾಡಿಸಿದೆ. ನಮ್ಮಲ್ಲಿ ನಾವುಗಳು ಮಾಡುವುದಕ್ಕಿಂತಲೂ ಹೆಚ್ಚಿನ ನಿಷ್ಠೆ ತೋರಿ ಅಲ್ಲಿಯ ಜನ ಈ ಕೆಲಸಗಳನ್ನು ಮಾಡುತ್ತಾರೆ. ಅವರಿಗೆಲ್ಲ ಇಂಥದರಲ್ಲಿ ಬಹಳ ನಂಬಿಕೆ. ೧೩ನೇ ದಿನ ವೈಕುಂಠ ಸಮಾರಾಧನೆ ಆಗಬೇಕಿತ್ತು. ''ಆ ದಿನ ಏನು ಮಾಡುವುದು?''ಎಂದರು. ಅದಕ್ಕೆ ನಾನು ''ಆ ದಿನ ಸಾಮಾನ್ಯವಾಗಿ ಅನ್ನದಾನ ಮಾಡಬೇಕು. ಯಾವುದಾದರೂ ಬಡಸಂಸ್ಥೆಗಳಿದ್ದರೆ ಅದಕ್ಕೆ ಹೇಳಿಬಿಡಿ, ಅಲ್ಲಿಯೇ ಊಟ ಕೊಡಿಸಿ'' ಎಂದೆ. ಅದಕ್ಕೆ ಅವರು, ''ಮಾಥೂರ್ ಜೀ, ನಾನು ಈಗ ಅದನ್ನೆಲ್ಲ ಹುಡುಕಿಕೊಂಡು ಹೋಗುವುದಾದರೂ ಎಲ್ಲಿಗೆ? ಯಾರಿಗೋ ಮಾಡುವುದನ್ನು ನಿಮ್ಮ ಭವನದವರಿಗೇ ಮಾಡಿದರಾಯಿತು. ಅಲ್ಲಿಯೇ ಊಟಹಾಕಿಸುತ್ತೇನೆ'' ಎಂದರು. ''ಸರಿ ಹಾಗೆಯೇ ಮಾಡಿ (ಭಾನುವಾರವೂ ಆಗಿರುತ್ತದೆ). ಆದಿನ ಸುಮಾರು ೪೦೦ - ೫೦೦ ಮಂದಿ ಹುಡುಗರು ತರಗತಿಗಳಿಗಾಗಿ ಬರುತ್ತಾರೆ. ಆದರೆ ನೀವೇ ಬಂದು ಅಲ್ಲಿ ಹೇಳಬೇಕು. ಶನಿವಾರ ಸಂಜೆ ನೀವು ಬಂದು, 'ನಮ್ಮ ಸಂಬಂಧದವರೊಬ್ಬರು ನಿಧನರಾದರು. ಅವರ ಪುಣ್ಯಸ್ಮರಣೆಗಾಗಿ ನಾಳೆ ಇಲ್ಲಿ ಊಟ ಏರ್ಪಡಿಸಿದೆ. ನೀವೆಲ್ಲರೂ ಬಂದು ನಮ್ಮ ಜತೆ ಊಟ ಮಾಡಬೇಕು ಎಂದು ಹೇಳಿರಿ' ಎಂದೆ. ಅದಕ್ಕೆ ಅವರು, ''ಖಂಡಿತವಾಗಿ ನಾನೇ ಬಂದು ಎಲ್ಲರಿಗೂ ಹೇಳುತ್ತೇನೆ'' ಎಂದರು. ಹೇಳಿದಂತೆಯೇ ಬಂದರು. ಪ್ರತಿ ತರಗತಿಗೂ ತಾವೇ ಹೋಗಿ, ''ನಾಳೆಗೆ ನಮ್ಮ ಮಾವ ತೀರಿಕೊಂಡ ೧೩ನೇ ದಿನ. ದಯವಿಟ್ಟು ನಾಳೆ ಮಧ್ಯಾಹ್ನ ಎಲ್ಲರೂ ಇಲ್ಲಿ ನಮ್ಮೊಂದಿಗೇ ಊಟ ಮಾಡಬೇಕು'' ಎಂದು ಹೇಳಿ ಆಹ್ವಾನಿಸಿದರು. ಹುಡುಗರು (ಎಂದರೆ ಎಲ್ಲ ವಿದ್ಯಾರ್ಥಿಗಳೂ) ಒಪ್ಪಿಕೊಂಡು ಮಾರನೆದಿನ ತಪ್ಪದೆ ಬರುವುದಾಗಿ ಹೇಳಿದರು. ನಾನೂ ಈ ಬಗ್ಗೆ ಎಲ್ಲರಿಗೂ ಒಂದು ಸುತ್ತೋಲೆ (Circular) ಕಳುಹಿಸಿದೆ.

ಮಾರನೆಯ ದಿನ ಆ ಕುಟುಂಬದವರೆಲ್ಲರೂ ಬಂದರು. ಅಡುಗೆಯವರಿಗೆ ಹೇಳಿ ಎಲ್ಲವನ್ನು ಮಾಡಿಸಲಾಗಿತ್ತು. ಮಧ್ಯಾಹ್ನ ಹುಡುಗರೂ ನಾವೂ ಎಲ್ಲರೂ ಊಟ ಮಾಡಿದೆವು. ಆಗ ನಾವು ಆಗತಾನೆ ಹೊಸ ಚರ್ಚ್ ಕಟ್ಟಡಕ್ಕೆ ಬಂದಿದ್ದೆವು. ಕಟ್ಟಡದ ಒಳಗೆ ಮಾರ್ಪಡಿಸುವ ಕೆಲಸ ನಡೆಯುತ್ತಿತ್ತು. ಆಗ ಭಗವಾನ್ ಮೀರ್‌ಚಂದಾನಿಯೂ ಬಂದಿದ್ದರು. ನವತರುಣ, ಬಹಳ ಉತ್ಸಾಹಿ. ನಾನು ಅಲ್ಲಿ ಓಡಾಡುತ್ತಿದ್ದುದನ್ನು ನೋಡಿದ ಅವರು, ''ನೀವೇ ಏನು ಇಲ್ಲಿನ ಮೇಲ್ವಿಚಾರಕರು?'' ಎಂದು ನನ್ನನ್ನು ಕೇಳಿದರು. ನಾನು ''ಹೌದು'' ಎಂದೆ. ''ಆ ದಿನ ನೀವು ಎಲ್ಲ ಧಾರ್ಮಿಕ ಕ್ರಿಯೆಗಳನ್ನೂ ಮಾಡಿಸುತ್ತಿದ್ದಾಗ ನಿಮ್ಮನ್ನು ನೋಡಿದ ನಾನು ನೀವು ಬರೀ ಪುರೋಹಿತರು ಎಂದು ತಿಳಿದೆ'' ಎಂದರು, ತಮ್ಮ ಆಶ್ಚರ್ಯ-ಸಂತೋಷವನ್ನು ವ್ಯಕ್ತಪಡಿಸುತ್ತಾ. ಅದಕ್ಕೆ ನಾನು ''ನಾನು ಇಲ್ಲಿನ ಕಾರ್ಯಕಾರಿ ನಿರ್ದೇಶಕ, ನನಗೆ ಅವುಗಳನ್ನು ಮಾಡಿಸುವುದೂ ತಿಳಿದಿದೆ'' ಎಂದೆ. ''ಹೌದು... ಹೌದು... ನೀವು ಆದಿನ ಬಹಳ ಚೆನ್ನಾಗಿ ಎಲ್ಲವನ್ನೂ ಮಾಡಿಸಿದಿರಿ... ಆದರೆ ನೀವು ಇಲ್ಲಿ ಏನು ಮಾಡುತ್ತಿದ್ದೀರಿ? ಏನು ನಡೆಯುತ್ತದೆ ಇಲ್ಲಿ?'' ಎಂದು ಕೇಳಿದರು. ನಾನು ವಿದ್ಯಾಭವನದ ಬಗ್ಗೆ ಅವರಿಗೆ ಎಲ್ಲವನ್ನೂ ಹೇಳಿ, ನಮ್ಮಲ್ಲಿ ನಡೆಯುವ ಸಾಂಸ್ಕೃತಿಕ ಕಲೆಗಳ ತರಗತಿಗಳ ವಿಷಯವನ್ನು ತಿಳಿಸಿ, ''ಆರೇಳು ವರ್ಷಗಳಿಂದ ಇಲ್ಲಿದ್ದೇವೆ. ಈಗ ಇದು ಹೊಸ ಕಟ್ಟಡ. ಇನ್ನೂ ಇಲ್ಲಿ ಬಹಳ ಕೆಲಸ ನಡೆಯಬೇಕಿದೆ'' ಎಂದೆ. ಆ ಬಗ್ಗೆ ಒಂದು ಪಾಂಪ್ಲೆಟ್ ಅನ್ನು ಕೊಟ್ಟೆ. ಅದನ್ನೆಲ್ಲ ಕೇಳಿ, ತರಗತಿಗಳನ್ನು ನೋಡಿದ ಶ್ರೀ ಭಗವಾನ್ ಮೀರ್‌ಚಂದಾನಿಯವರು ''ಇಂತಹ ಒಂದು ಸಂಸ್ಥೆ ಇರುವುದೆಂದೇ ನಮಗೆ ತಿಳಿದಿರಲಿಲ್ಲ. ಇಲ್ಲಿಗೆ ನಾವೂ ಏನಾದರೂ ಸೇವೆ ಮಾಡಬಹುದೆ?'' ಎಂದರು. ಅವರಿಗೆ ಭವನದ ಕಾರ್ಯ ಚಟುವಟಿಕೆಗಳು, ಧ್ಯೇಯೋದ್ದೇಶಗಳು ಬಹಳ ಇಷ್ಟವಾದವು. ಇಂತಹ ಒಳ್ಳೆಯ ಕೆಲಸ ಮಾಡುತ್ತಿದ್ದ ಭವನದ ಬಗ್ಗೆ ಅವರಿಗೆ ಆಶ್ಚರ್ಯ ಸಂತೋಷ ಆಗಿದ್ದಿತು. ನಾನು ಸಹ ''ಖಂಡಿತವಾಗಿಯೂ, ನೀವು ನಿಮ್ಮ ಕೈಲಾದ ಸೇವೆಯನ್ನು ಸಲ್ಲಿಸ ಬಹುದು'' ಎಂದೆ. ''ಹಾಗಾದರೆ ಮುಂದಿನ ನಾಲ್ಕಾರು ದಿನಗಳಲ್ಲೇ ಆದಾಗ ಬಂದು ನನ್ನನ್ನು ನನ್ನ ಆಫೀಸಿನಲ್ಲಿ

ಕಾಣಿರಿ ನೀವು'' ಎಂದು ತಮ್ಮ ಕಾರ್ಡನ್ನು ಕೊಟ್ಟರು. ಅಲ್ಲಿಯೇ ದುರು ಅಸೂಮಲ್‌ರೂ ಇದ್ದವರು, ''ನಾನು ಈ ಸಂಸ್ಥೆಯ ಕಾರ್ಯದರ್ಶಿ. ಇಲ್ಲಿ ಬಹಳ ಒಳ್ಳೆಯ ಕೆಲಸಗಳು ನಡೆಯುತ್ತಿವೆ. ಮಾಥೂರ್‌ಜೀ ತುಂಬ ಕೆಲಸ ಮಾಡುತ್ತಿದ್ದಾರೆ ಇಲ್ಲಿ'' ಎಂದು ವಿಶ್ವಾಸದಿಂದ ಹೇಳಿದರು.

ಭಾನುವಾರ ಹಾಗೆ ಹೇಳಿಹೋಗಿದ್ದ ಮೀರ್‌ಚಂದಾನಿಗೆ ನಾನು ಮಂಗಳವಾರ ಫೋನು ಮಾಡಿದೆ. ''ಈ ದಿನ ನಾನು ನಿಮ್ಮನ್ನು ನೋಡಲು ಬರಲೇ?'' ಎಂದು ಕೇಳಿದೆ. ಅದಕ್ಕೆ ಅವರು ''ನಾಳೆ ಬನ್ನಿ... ಯಾವ ಸಮಯಕ್ಕೆ ಬರುತ್ತೀರಿ?'' ಎಂದು ಕೇಳಿದರು. ದಾನ ಕೇಳಲು ಹೋಗುವವರು ದಾನಿಗಳ ಅನುಕೂಲದ ಸಮಯ ತಿಳಿದುಕೊಂಡು ಹೋಗಬೇಕು ತಾನೆ? ಅದಕ್ಕೆ ನಾನು, ''ನೀವು ಹೇಳಿದ ಹೊತ್ತಿಗೆ ಬರುತ್ತೇನೆ'' ಎಂದೆ. ''ಹಾಗಾದರೆ ಹತ್ತು ಘಂಟೆಗೆ ಬರುತ್ತೀರಾ? ನಾನು ನಿಮಗಾಗಿ ಕಾಯುತ್ತೇನೆ'' ಎಂದರು. ನಾನು 'ಹೂಂ' ಎಂದೆ.

ಮಾರನೆಯ ದಿನ ಬೆಳಗ್ಗೆ ಹತ್ತು ಘಂಟೆಗೆ ಹೋದೆ. 'ದುಡ್ಡು ಬರುವಂತಾಗಲಿ ಭಗವಾನ್' ಎಂದುಕೊಂಡೇ ಹೋದೆ. ಬಹಳ ದೊಡ್ಡ ಆಫೀಸು ಅವರದು. ಒಳಗೆ ಹೋಗಿ ಕುಳಿತೆ. ಸುತ್ತಮುತ್ತ ಫೋಟೋ ಎಂದು ಕಂಡದ್ದೆಲ್ಲ ಈಶ್ವರನದ್ದಾಗಿತ್ತು. ಈಶನಭಕ್ತರು ಅವರು. ಜಟೆಯೂ, ತಲೆಯ ಮೇಲೆ ಗಂಟೂ ಇದ್ದ ಶಿವನ ಚಿತ್ರ ನೋಡಿ ನಾನು ಅವನ ಮೇಲೆ ಸುಂದರವಾದ ಶ್ಲೋಕವೊಂದನ್ನು ಹೇಳಿದೆ. ಆ ಶ್ಲೋಕವನ್ನು ಕೇಳಿ ಅವರಿಗೆ ಬಹಳ ಸಂತೋಷವಾಯಿತು. ಅನಂತರ ''ನಮ್ಮ ಆಫೀಸನ್ನೆಲ್ಲ ತೋರಿಸುತ್ತೇನೆ, ಬನ್ನಿ'' ಎಂದು ನನ್ನನ್ನು ಕರೆದೊಯ್ದರು. ಮಹಡಿಯ ಮೇಲೆಯೂ ಆಫೀಸು, ಒಂದು ಅತಿಥಿಕೋಣೆ. ಎಲ್ಲ ಕಡೆ ಹೋಗುವಾಗಲೂ ''ಆಶೀರ್ವಾದ ಮಾಡಿ! ಆಶೀರ್ವಾದ ಮಾಡಿ!'' ಎಂದು ಹೇಳುತ್ತಿದ್ದ ಅವರಿಗೆ ಬಹಳ ಸಮಾಧಾನ ಆಗುವಂತೆ ನಾನೂ ನಾರಾಯಣಸೂಕ್ತವನ್ನೇ ಪಠಿಸುತ್ತಾ ಅಲ್ಲೆಲ್ಲ ಹೋಗಿ ಬಂದೆ. 'ಎಲ್ಲವೂ ಚೆನ್ನಾಗಿ ನಡೆಯಲಿ' ಎಂದು ಹೇಳಿದೆ. ನಾವು ಮತ್ತೆ ಕೆಳಗೆ ಆಫೀಸಿಗೆ ಬಂದಾಗ ನನಗಾಗಿ ಟೀ ತರಿಸಿದ ಅವರು, ಆ ಟ್ರೇಯಲ್ಲಿ ಒಂದು ದೊಡ್ಡ ಕವರೊಂದನ್ನಿಟ್ಟಿದ್ದರು. ಅದನ್ನೆತ್ತಿ ನನ್ನ ಕೈಗೆ ಕೊಡುತ್ತಾ ''ಮಾಥೂರ್‌ಜೀ, ನೋಡಿ ಇದೇ ನಮ್ಮ ವಿನಮ್ರ ಕಾಣಿಕೆ. ಮುಂದೆ ಆ ದೇವರು ನಮ್ಮನ್ನು ಇನ್ನಷ್ಟು ಚೆನ್ನಾಗಿ ಮಾಡಿದರೆ, ಆಗಲೂ ಸಾಧ್ಯವಾದುದನ್ನು ಮಾಡುತ್ತೇನೆ'' ಎಂದರು. ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದ ನಾನು ಆ ಕವರಿನಲ್ಲಿದ್ದುದನ್ನು ಹೊರತೆಗೆದೆ.

ಅದು ಅಲ್ಲಿನ ಪದ್ಧತಿ. ಯಾರು ಏನೇ ಕಾಣಿಕೆ ಕೊಟ್ಟರೂ ಅದನ್ನು ಅವರೆದುರಿಗೇ ತೆಗೆದುನೋಡಿ, ನಮ್ಮ ಸಂತೋಷ-ಕೃತಜ್ಞತೆಗಳನ್ನು ಅವರಿಗೆ ಅಲ್ಲೇ ತಿಳಿಸಬೇಕು. ಅದನ್ನೇ ಅವರೂ ನಿರೀಕ್ಷಿಸುವುದು. ಅಂತೆಯೇ ನಾನು ಆ ಕವರನ್ನು ತೆಗೆದಾಗ ಅಲ್ಲಿ ೧೧,೦೦೦ ಪೌಂಡುಗಳ ಚೆಕ್ ಇದ್ದಿತು. ಸಂತೋಷದಿಂದ ನಾನು ಮೂಕನಾದೆ. ಮತ್ತೊಮ್ಮೆ ಅವರಿಗೆ ಕೃತಜ್ಞತೆ ತಿಳಿಸಿದೆ. ಆಗಲೂ ಅವರು ''ಇಲ್ಲ, ಇಲ್ಲ ಇದು ಬಹಳ ಸ್ವಲ್ಪದ ವಿನಮ್ರ ಕಾಣಿಕೆಯಷ್ಟೇ... ವಿದ್ಯಾಭವನಕ್ಕಾಗಿ'' ಎಂದರು.

ಶಿವರಾತ್ರಿಗೆ ಇನ್ನು ಎಂಟು ದಿನಗಳಿವೆ ಎಂದಾಗ ನಾನು ಶ್ರೀ ಮೀರ್‌ಚಂದಾನಿಯವರಿಗೆ ಫೋನು ಮಾಡಿದೆ. ನಾನು ಹಿಂದೆ ಅವರ ಆಫೀಸಿನಲ್ಲಿ ಶಿವನ ವಿಷಯ ಮಾತನಾಡುತ್ತಿದ್ದಾಗ ಅವರು ಶಿವರಾತ್ರಿಗೆ ಒಂದು ವಾರ ಮುಂಚೆ ಅವರಿಗೆ ಫೋನು ಮಾಡಬೇಕೆಂದು ನನಗೆ ಹೇಳಿದ್ದರು. ಆ ಮಾತಿನ ಪ್ರಕಾರ ನಾನು ಅವರಿಗೆ ಫೋನು ಮಾಡಿ, ''ಇನ್ನೆಂಟು ದಿನಗಳಿಗೆ ಶಿವರಾತ್ರಿ ಇದೆ. ನಿಮ್ಮ ಇಷ್ಟದೈವದ ಹಬ್ಬ ಅದು!'' ಎಂದು ಹೇಳಿದೆ. ಅದಕ್ಕೆ ಅವರು ''ಹೌದೇನು? ಹಾಗಾದರೆ ನಾಳೆ ನನ್ನ ಆಫೀಸಿಗೆ ಬರುತ್ತೀರಾ? ಸ್ವಲ್ಪ ಮಾತನಾಡುವುದಿದೆ'' ಎಂದರು. ನಾನು ಬರುತ್ತೇನೆ ಎಂದು ಹೇಳಿದೆ.

ಮಾರನೆಯ ದಿನ ಬೆಳಗ್ಗೆ ಅವರ ಆಫೀಸಿಗೆ ಹೋದಾಗ, ನಮ್ಮ ಭವನದಲ್ಲಿ ಶಿವರಾತ್ರಿಯ ದಿನ ಏನೇನೆಲ್ಲ ಮಾಡುತ್ತೇವೆ ನಾವು, ಎನ್ನುವುದನ್ನು ಹೇಳಲು ಅವರು ಕೇಳಿದರು. ''ಆ ದಿನ ರಾತ್ರಿ ಪೂರ್ತಿ ನಾವು ಪೂಜೆಯನ್ನು ಮಾಡುವುದಿಲ್ಲ, ಎಲ್ಲರಿಗೂ ವಿಶ್ರಾಂತಿಯ ಅಗತ್ಯ ಇರುತ್ತದೆ. ಆದ್ದರಿಂದ ರಾತ್ರಿ ಸ್ವಲ್ಪ ಹೊತ್ತು ಭಜನೆ ಮಾಡಿ, ಎಂಟು ಘಂಟೆಯ ಹೊತ್ತಿಗೆ ರುದ್ರಾಭಿಷೇಕ ಮಾಡಿ ಎಲ್ಲರಿಗೂ ಪ್ರಸಾದ ಕೊಟ್ಟು ಕಳುಹಿಸುತ್ತೇವೆ'' ಎಂದೆ. ''ಏನು ಪ್ರಸಾದ ಕೊಡುತ್ತೀರಿ?'' ಎಂದರವರು. ''ಇನ್ನೇನು ಕೊಡಲು ಸಾಧ್ಯ , ೧೫೦-೨೦೦ ಮಂದಿ ಬರುತ್ತಾರೆ ಪೂಜೆಗೆ. ಸಕ್ಕರೆಯನ್ನೋ, ಪೇಡವನ್ನೋ ಕೊಡುತ್ತೇವೆ ಅಷ್ಟೆ'' ಎಂದೆ. ಅದಕ್ಕೆ ''ಮಾಥೂರ್‌ಜೀ, ಈ ಬಾರಿ ಎಲ್ಲರಿಗೂ ರಾತ್ರಿ ಊಟ ಕೊಟ್ಟರೆ ಹೇಗೆ ?'' ಎಂದರು. ನಕ್ಕು ನಾನು ''ಕೊಡಬಹುದು, ಆದರೆ ಅಡುಗೆಯವರಿಗೆ ಮಾಡಿತರಲು ಹೇಳಬೇಕಾಗುತ್ತದೆ'' ಎಂದೆ. ''ಹೇಳಿ ಹಾಗಾದರೆ, ನಾನು ಅದಕ್ಕೆ ನನ್ನ ಕಾಣಿಕೆ ಎಂದು ಹಣ ಕೊಡುತ್ತೇನೆ. ಬಿಲ್ ನನಗೆ ಕಳುಹಿಸಿಬಿಡಿ'' ಎಂದರು.

ಶಿವರಾತ್ರಿಯ ದಿನ ಬಂದಿತು. ಪೂಜೆಯಾಯಿತು. ಭಗವಾನ್ ಮೀರ್‌ಚಂದಾನಿಯವರು ತಮ್ಮ ಇಷ್ಟದೈವದ ಪೂಜೆ ನೋಡಲು ತಮ್ಮ ಕುಟುಂಬ ವರ್ಗದವರನ್ನೆಲ್ಲ ಕರೆದುಕೊಂಡು ಬಂದಿದ್ದರು. ಅವರ ತಾಯಿ ಸಹ ಬಂದಿದ್ದರು. ಎಲ್ಲರಿಗೂ ಊಟ ನಡೆಯಿತು. ಎಲ್ಲವೂ ಬಹಳ ಚೆನ್ನಾಗಿ ಆಗಿತ್ತು. ಭಾನುಭಾಯಿ ಎನ್ನುವವರಿಗೆ ನಾವು ಊಟ ತಯಾರಿಸಲು ಹೇಳಿದ್ದೆವು. ಒಂದು ಪ್ಲೇಟು ಊಟಕ್ಕೆ ನಾಲ್ಕು ಪೌಂಡುಗಳ ಬೆಲೆ. ೧೫೦ ಜನಕ್ಕೆ ಸುಮಾರು ೬೦೦ ಪೌಂಡುಗಳ ವೆಚ್ಚ. ಊಟವನ್ನು ನಾವು ಪೇಪರಿನ ಪ್ಲೇಟುಗಳಲ್ಲಿ ಕೊಟ್ಟಿದ್ದೆವು. ಅವನ್ನು ಉಪಯೋಗಿಸಿ ಎಸೆಯುವುದು.ಆ ಪ್ಲೇಟುಗಳು ಬಹಳ ಹಗುರ ವಾಗಿದ್ದವು.

ಮಾರನೆಯದಿನ ಮೀರ್‌ಚಂದಾನಿಯವರು ನನಗೆ ಫೋನಿಸಿ "ಮಾಥೂರ್‌ಜೀ, ಊಟದ ಬಿಲ್‌ನ ಹಣ ಸಿದ್ಧವಿದೆ. ನೀವೇ ಬಂದು ತೆಗೆದುಕೊಳ್ಳುತ್ತೀರೋ, ನಾನೇ ಅಲ್ಲಿಗೆ ಬರಲೋ?" ಎಂದು ಕೇಳಿದರು. ಅಲ್ಲಿಂದ ಭವನಕ್ಕೆ ಆರೇಳು ಮೈಲಿಗಳ ದೂರ. ಅವರಿಗೆ ಬರಲು ಕಷ್ಟವಾಗುತ್ತದೆ ಎಂದು, ನನಗೆ ರೈಲಿನ ಪಾಸ್ ಇದ್ದುದರಿಂದ ನಾನೇ ಅವರಲ್ಲಿಗೆ ಬಂದು ದುಡ್ಡು ತೆಗೆದುಕೊಳ್ಳುತ್ತೇನೆ ಎಂದು ಹೇಳಿದೆ. ಅಂತೆಯೇ ಬೆಳಗ್ಗೆ ಅವರಲ್ಲಿಗೆ ಹೋದೆ. ಊಟದ ಹಣಕೊಟ್ಟ ಅವರು, "ಮಾಥೂರ್‌ಜೀ, ನಿನ್ನೆ ಎಲ್ಲವೂ ಬಹಳ ಚೆನ್ನಾಗಿತ್ತು. ನೀವು ಬಹಳ ಚೆನ್ನಾಗಿ ಶಿವರಾತ್ರಿ ಆಚರಿಸಿದಿರಿ. ಆದರೆ ಊಟ ಕೊಟ್ಟ ಪ್ಲೇಟುಗಳು ಪೇಪರಿನದ್ದಾಗಿದ್ದು ಬಹಳ ಹಗುರವಾಗಿತ್ತು. ಅದು ಬಗ್ಗಿಹೋಗುತ್ತಿತ್ತು. ಮಾಥೂರ್‌ಜೀ, ನೀವು ಸ್ಟೀಲ್ ಪ್ಲೇಟುಗಳನ್ನೇಕೆ ತೆಗೆದುಕೊಳ್ಳಬಾರದು?" ಎಂದರು. ನಾನು ಅವಾಕ್ಕಾದೆ "ಸ್ಟೀಲ್ ಪ್ಲೇಟುಗಳೇ?" ಎಂದೆ, ದುಡ್ಡೆಲ್ಲಿದೆ ಅವನ್ನು ತೆಗೆಯಲು ಎನ್ನುವ ಭಾವದಲ್ಲಿ. "ಹೌದು ಮಾಥೂರ್‌ಜೀ, ಭವನಕ್ಕೆ ಬಹಳ ಎಂದರೆ ಎಷ್ಟು ಜನ ಬರಬಹುದು?" ಎಂದು ಕೇಳಿದರು. ನಾನು ಸುಮಾರು ೩೦೦ ಜನ ಎಂದೆ. "ಹೌದಾ... ಹಾಗಾದರೆ ೩೫೦ ಸ್ಟೀಲ್ ಪ್ಲೇಟುಗಳು, ೩೫೦ ಚಮಚಗಳು, ೩೫೦ ಲೋಟಗಳು, ೩೫೦ ಬಟ್ಟಲುಗಳು. ಇವಿಷ್ಟನ್ನು ಭವನಕ್ಕಾಗಿ ಖರೀದಿಸಿ, ಎಲ್ಲವನ್ನೂ ವಿಚಾರಿಸಿ ಒಟ್ಟು ವೆಚ್ಚ ಎಷ್ಟಾಯಿತು ಎಂದು ನನಗೆ ತಿಳಿಸಿ. ನಾನು ಅಷ್ಟು ಹಣ ಕೊಡುತ್ತೇನೆ" ಎಂದರು. ನನ್ನ ಕಿವಿಗಳನ್ನು ನಾನೇ ನಂಬಲಿಲ್ಲ... "ಹೌದು, ಹಾಗೆಯೇ ಮಾಡಬಹುದು. ಆದರೆ ಅದನ್ನು ತೊಳೆಯುವುದು ಒಂದು ದೊಡ್ಡ ಕೆಲಸ. ಯಾರೂ ಕೆಲಸದವರಿಲ್ಲದಿರುವುದರಿಂದ ಅದನ್ನು ಖರೀದಿಸಿದರೂ ಶುಚಿಮಾಡುವ ಕಷ್ಟ ಇದ್ದೇ ಇರುತ್ತದೆ ಅದಕ್ಕೆ ..." ಎಂದು ನಾ ಮಾತು ನಿಲ್ಲಿಸಿದೆ. "ಓಹೋ... ಅದು ನಿಜವೇ. ನೀವು ಹೇಳಿದಂತೆ ಅವುಗಳನ್ನು ಶುಚಿಮಾಡುವುದು ಕಷ್ಟ. ಹಾಗಾದರೆ ಒಂದು ಕೆಲಸ ಮಾಡುವ. ಈ ಪ್ಲೇಟುಗಳನ್ನು 'ಡಿಶ್‌ವಾಷರ್' (ಅದೊಂದು ಮೆಷೀನು. ಅದು ತಟ್ಟೆಗಳನ್ನು ತೊಳೆಯುತ್ತದೆ!) ಒಂದನ್ನು ಮೊದಲು ಖರೀದಿಸುವ. ನೀವು ಅದರ ಬೆಲೆ ವಿಚಾರಿಸಿ ತಿಳಿಸಿ" ಎಂದರು. ನಾನು ಡಿಶ್‌ವಾಷರ್ ವಿಚಾರಿಸಿದಾಗ ಅದರ ಬೆಲೆ ಸುಮಾರು ೭೦೦೦ ಪೌಂಡುಗಳು ಎಂದು ತಿಳಿಯಿತು. ಈ ಸ್ಟೀಲ್ ತಟ್ಟೆ, ಲೋಟ, ಚಮಚ, ಕಪ್ಪುಗಳ ಬೆಲೆ ಸುಮಾರು ೬೦೦೦ ಪೌಂಡುಗಳು ಎಂದೂ ತಿಳಿಯಿತು. ಈ ಎರಡೂ ದೊಡ್ಡ ಖರ್ಚನ್ನೂ ಅವರಿಗೇ ವಹಿಸುವುದು ಸರಿಕಾಣದೆ ನಾನು ಅವರಲ್ಲಿ "ಭಗವಾನ್‌ಜೀ, ಈಗ ಸ್ಟೀಲ್ ತಟ್ಟೆ, ಲೋಟ, ಚಮಚ, ಕಪ್ಪುಗಳನ್ನು ಖರೀದಿಸುವಾ. ಅದನ್ನು ಉಪಯೋಗಿಸಿದಾಗ ನಾವುಗಳು ಹಾಗೂ ಭವನಕ್ಕೆ ಬರುವ ಸ್ವಯಂಸೇವಕರು ಸೇರಿಕೊಂಡು ಅದನ್ನು ಶುಚಿ ಮಾಡಿಕೊಳ್ಳುತ್ತೇವೆ. ಈಗ ಡಿಷ್‌ವಾಷರ್ ಬೇಡ. ಮುಂದೆ ಎಂದಾದರೂ ಖರೀದಿಸಿದರಾಯಿತು" ಎಂದೆ. ಅದಕ್ಕೆ ಸಮ್ಮತಿಸಿದ ಅವರು ಕೂಡಲೇ ಸ್ಟೀಲ್ ಪದಾರ್ಥಗಳ ೬೦೦೦ ಪೌಂಡುಗಳ ಚೆಕ್ಕನ್ನು ನನ್ನ ಕೈಯಲ್ಲಿಟ್ಟರು! ಇಂದಿಗೆ ಈ ಪದಾರ್ಥಗಳು ಭವನಕ್ಕೆ ಬಂದು ಇಪ್ಪತ್ತು ವರ್ಷಗಳಿಗೂ ಹೆಚ್ಚಾಯಿತು!

ಈಗಲೂ ಅಲ್ಲಿ ಪ್ರತಿ ಶಿವರಾತ್ರಿಯ ದಿನ ಮೀರ್ ಚಂದಾನಿಯವರು ಬರುತ್ತಾರೆ. ಬಂದ ಅತಿಥಿಗಳಿಗೆಲ್ಲಾ ನಾವು ಅವರು ಭವನಕ್ಕೆ ಕೊಡಿಸಿದ ಸ್ಟೀಲ್ ತಟ್ಟೆ, ಲೋಟಗಳಲ್ಲಿ ಪಾನೀಯ, ತಿಂಡಿ-ಊಟ ಕೊಡುತ್ತೇವೆ. ಮೀರ್‌ಚಂದಾನಿಯವರ ಈ ಕೊಡುಗೆಯನ್ನು ನಾವು ಎಂದಿಗೂ ಮರೆಯುವಂತಿಲ್ಲ!!

ತಡಾನಿ ದಂಪತಿಗಳು

ಮೋಹನ್ ತಡಾನಿ-ಸರಳಾ ತಡಾನಿ ಬಹಳ ಶ್ರೀಮಂತ, ಸುಂದರ ದಂಪತಿಗಳು. ಮೂವರು ಮಕ್ಕಳು ಅವರಿಗೆ. ಇಬ್ಬರು ಹುಡುಗಿಯರು, ಒಬ್ಬ ಹುಡುಗ. ಯಾರಿಗೂ ಮದುವೆಯಾಗಿರಲಿಲ್ಲ. ಒಮ್ಮೆ ವಿದ್ಯಾಭವನಕ್ಕೆ ಬಂದ ಅವರಿಗೆ ನನ್ನನ್ನು ಕಾಣಬೇಕೆಂಬ ಕುತೂಹಲ. ಆಗರ್ಭ ಶ್ರೀಮಂತರು, ಅವರು ಬಂದಾಗ ವಿದ್ಯಾಭವನಕ್ಕೆ ತಮ್ಮ ಕಾಣಿಕೆ ಎಂದು ಶ್ರೀ ಸತೀಶ್ ದಾವರರು ನಿರ್ಮಿಸಿದ ಸರ್ವಧರ್ಮ ಪ್ರಾರ್ಥನಾ ಮಂದಿರಕ್ಕೆಂದು ೧೫,೦೦೦ ಪೌಂಡುಗಳನ್ನು ಉದಾರವಾಗಿ ಕೊಟ್ಟರು. ಅನಂತರ ನನ್ನನ್ನು ಬಹಳ ಪ್ರೀತಿ-ಗೌರವಗಳಿಂದ ಮನೆಗೆ ಆಹ್ವಾನಿಸಿದರು. ಅವರು ಭವನದ ದಾನಿಗಳಲ್ಲಿ ಒಬ್ಬರು. ಸಾಲದ್ದಕ್ಕೆ ವಿಶ್ವಾಸದಿಂದ ಕರೆದಿದ್ದಾರೆ ಎಂದು ನಾನು ಒಂದು ದಿನ ಅವರ ಮನೆಗೆ ಹೋದೆ. ಅವರಿಗೆ ತಿಳಿದವರು ಯಾರೋ ಅವರಿಗೆ "ಮಾಥೂರ್‌ಜೀ ಬಹಳ ಚೆನ್ನಾಗಿ ಜಾತಕ ನೋಡುತ್ತಾರೆ" ಎಂದು ಹೇಳಿದ್ದರು. ಸಾಧ್ಯವಾದರೆ ನನಗೆ ಒಮ್ಮೆ ತಮ್ಮ ಹುಡುಗಿಯರ ಜಾತಕ ತೋರಿಸಬೇಕೆನ್ನುವ ಹಂಬಲ ಈ ತಂದೆತಾಯಿಗಳ ಮನದಲ್ಲಿ ಮೂಡಿದ್ದಿತು. ಅದಕ್ಕಾಗಿ ನನ್ನನ್ನು ಒಂದು ನೆವದಿಂದ ಕರೆಸಿಕೊಳ್ಳುವ ಪ್ರಯತ್ನವಾಗಿ ಹೀಗೆ ಆಹ್ವಾನಿಸಿದ್ದರು! ನಾನು ಹೋದನಂತರ ಅವರೇ ನನಗೆ ಇದನ್ನು ಹೇಳಿದರು. ಜಾತಕ ನೋಡಿಕೊಡುವಂತೆ ಕೇಳಿದರು. "ಮಾಥೂರ್‌ಜೀ, ಮನೆಯಲ್ಲಿ ಇಬ್ಬರು ಹುಡುಗಿಯರು, ೨೩-೨೫ ವರ್ಷಗಳು ಆದರೂ ಮದುವೆಯಾಗುತ್ತಿಲ್ಲ. ಏನು ತೊಂದರೆಯೋ ತಿಳಿಯದು. ನೀವು ಸ್ವಲ್ಪ ಜಾತಕ ನೋಡಿ, ಪೂಜೆ ಮಾಡಿಸಿ, ಪ್ರಾರ್ಥನೆ ಮಾಡಿ, ನಮಗಾಗಿ 'ಒಳ್ಳೆಯದಾಗಲಿ'ಎಂದು ನೀವೇ ಪ್ರಾರ್ಥನೆ ಮಾಡಿ"ಎಂದರು. ಅವರ ಈ ಕಳಕಳಿ ನೋಡಿ ನನಗೂ ಒಮ್ಮೆ ನೋಡಿ ಪ್ರಯತ್ನಿಸುವಾ ಎನ್ನುವಂತೆ ಮಾಡಿತು. ಮಕ್ಕಳ ಜಾತಕಗಳನ್ನು ನೋಡಿದೆ ; 'ಆಗಬಹುದು' ಎನ್ನುವ ಮುನ್ಸೂಚನೆ ದೊರೆಯಿತು. ಸರಿ 'ದೇವರಿದ್ದಾನೆ' ಎಂದು ಒಂದು ಹೋಮ ಮಾಡಿ, ಸತ್ಯನಾರಾಯಣ ಪೂಜೆ ಮಾಡಿಸಿದೆ. ಅವರೂ ಬಹಳ ಭಕ್ತಿಯಿಂದಲೇ ಮಾಡಿದರು.

'ಧರ್ಮಕರ್ಮಸಂಯೋಗ'ಎನ್ನತ್ತಾರಲ್ಲ ಹಾಗೆ, ಈ ಪೂಜೆ ನಡೆದ ನಾಲ್ಕು ತಿಂಗಳೊಳಗೆ ದೊಡ್ಡ ಹುಡುಗಿಗೆ ಬಹಳ ಒಳ್ಳೆಯ ಕಡೆಯ ಸಂಬಂಧದ ವರ ಸಿಕ್ಕಿ ಮದುವೆ ನಿಶ್ಚಯವಾಯಿತು! ಮದುವೆಯೂ ಆಯಿತು. ಇದಾದ ಎಂಟು ತಿಂಗಳಲ್ಲಿ ಎರಡನೆಯ ಹುಡುಗಿಗೂ ವರ ಸಿಕ್ಕಿ ಮದುವೆಯಾಯಿತು! ಈಗ ತಡಾನಿ ದಂಪತಿಗಳು ನನ್ನಲ್ಲಿ ಬಹಳ ಪೂಜ್ಯಭಾವನೆ ಹೊಂದಿದ್ದು, ಪ್ರತಿವರ್ಷದ ಗುರುಪೂರ್ಣಿಮೆಯ (ವ್ಯಾಸ ಪೂರ್ಣಿಮೆ) ದಿನ ನನ್ನನ್ನು ಅವರ ಮನೆಗೆ ಆಹ್ವಾನಿಸಿ, ಕಾಫಿ ಹಣ್ಣುಗಳನ್ನು ಕೊಟ್ಟು, ಏನಾದರೂ ಪುಟ್ಟ ಕಾಣಿಕೆಯೊಂದನ್ನು ಕೊಡುವ ಅಭ್ಯಾಸ ಮಾಡಿಕೊಂಡರು. ಅವರು ಅಷ್ಟು ಪ್ರೀತಿಯಿಂದ ಬರಹೇಳುವಾಗ ಹೋಗದಿರುವುದೂ ಸರಿ ಇಲ್ಲ ಎನಿಸಿ ನಾನೂ ತಪ್ಪದೆ ಗುರುಪೂರ್ಣಿಮೆಯ ದಿನ ಮಾತ್ರ ಅವರಲ್ಲಿಗೆ ಹೋಗುವುದಿತ್ತು. ಇನ್ನು ಉಳಿದಿದ್ದುದು ಮಗನ ಮದುವೆ. ಹುಡುಗನಿಗೆ ೨೪ ವರ್ಷ, ಆದರೂ ಯಾವುದೂ ಸರಿಹೊಂದುತ್ತಿಲ್ಲ ಎನ್ನುವ ಚಿಂತೆ ಅವರಿಗೆ. ಅವರ ಮಗ ವಿನೋದನ ಜಾತಕ ನೋಡಿದಾಗ ಅಲ್ಲಿ 'ಕೇತು' ಸ್ವಲ್ಪ ತೊಂದರೆ ಕೊಡುತ್ತಿದ್ದಾನೆ ಎಂದು ನನಗೆ ತಿಳಿಯಿತು. ಒಂದು ಗ್ರಹ ಒಂದು ಮನೆಯಲ್ಲಿದ್ದು, ಮತ್ತೊಂದು ಗ್ರಹ ಅಲ್ಲಿಗೆ ಪ್ರವೇಶ ಮಾಡಿದರೆ ಕಿರಿಕಿರಿ ಸಹಜ! ಇಲ್ಲಿ ಹಾಗೆಯೇ ಆಗಿತ್ತು. ಕಿರಿಕಿರಿಗೊಂಡ ಕೇತುವನ್ನು ಸಮಾಧಾನಪಡಿಸಲು ಒಂದು ಶಾಂತಿ ಮಾಡೋಣ ಎಂದು ಶಾಂತಿ ಮಾಡಿಸಿದೆ. 'ಎಲ್ಲವೂ ಸರಿಯಾಗಲಿ ಭಗವಾನ್' ಎಂದು ನಾನೂ ಮನಸಾ ಪ್ರಾರ್ಥಿಸಿದೆ! ಇದಾದ ಮೂರು ತಿಂಗಳಲ್ಲಿ ಬಹಳ ಒಳ್ಳೆಯ ಶ್ರೀಮಂತ ಕುಟುಂಬದ ಹುಡುಗಿಯ ಮನೆಯವರು ತಾವಾಗಿಯೇ ತಡಾನಿ ದಂಪತಿಗಳನ್ನು ಸಂಪರ್ಕಿಸಿ ತಮ್ಮ ಮಗಳನ್ನು ತಡಾನಿ ದಂಪತಿಗಳ ಮಗನಿಗೆ ಕೇಳಿದರು. ಎಲ್ಲವೂ ಸರಿ ಹೊಂದಿ ಮದುವೆಯೂ ಆಯಿತು...

ಇಷ್ಟೆಲ್ಲ ಆಗುವ ಹೊತ್ತಿಗೆ ಸುಮಾರು ಎರಡು-ಮೂರು ವರ್ಷಗಳು ಕಳೆದಿದ್ದವು. ಮದುವೆಯಾಯಿತು. ಮಕ್ಕಳಿಲ್ಲ ಎನ್ನುವ ಚಿಂತೆ ಈಗ ಅವರಿಗೆ! ನನಗೆ ಇದೇಕೋ ಹೀಗೆ ಒಂದಕ್ಕೊಂದು ಹೆಣೆಯುತ್ತ ಎಲ್ಲವನ್ನೂ ಕೇಳಿ-ಹೇಳಿ ಮಾಡುವುದು ಸರಿ ಇಲ್ಲ ಎನಿಸಿ, 'ಇದೆಲ್ಲವೂ ಜಾತಕದಲ್ಲಿ ಇರುವುದಿಲ್ಲ. ನೀವೇ ಪ್ರಾರ್ಥನೆ ಮಾಡಿ, ಎಲ್ಲವೂ ಒಳ್ಳೆಯದೇ ಆಗುತ್ತದೆ' ಎಂದು ಅವರಿಗೆ ಸಮಾಧಾನ ಹೇಳಿದೆ! ಅವರ ಆ ಆಸೆಯೂ ಪೂರ್ತಿಯಾಯಿತು. ವಿನೋದ ದಂಪತಿಗಳು ಸುಂದರ ವಾದ ಗಂಡು ಮಗುವೊಂದರ ತಂದೆ-ತಾಯಿ ಎನಿಸಿದರು. ಹೆಣ್ಣು ಮಕ್ಕಳಿಬ್ಬರಿಗೂ ಎರಡೆರಡು ಮಕ್ಕಳಾದವು. ಆ ವರ್ಷದ ವ್ಯಾಸ ಪೌರ್ಣಮಿಗೆ ಇನ್ನೂ ಮೂರು ದಿನಗಳಿವೆ ಎನ್ನುವಾಗಲೇ ತಡಾನಿ ದಂಪತಿಗಳು ನನಗೆ ಫೋನಿಸಿದರು. ''ಮಾಥೂರ್‌ಜೀ, ಈ ಸಾರಿಯ ಗುರುಪೂರ್ಣಿಮೆಯ ದಿನ ನಾವು ಹೊರಗೆ ಹೋಗಲಿದ್ದೇವೆ. ನೀವು ಹಿಂದಿನ ದಿನವೇ ಬಂದು ನಮ್ಮ ಜತೆ ಸ್ವಲ್ಪ ಹೊತ್ತು ಇದ್ದು ಹೋಗಬೇಕು...'' ಎಂದರು.

ಆ ದಿನ ನಾನು ಅವರ ಮನೆಗೆ ಹೋದಾಗ ಮನೆಯವರೆಲ್ಲ ಸೇರಿದ್ದರು. ಬಹಳ ಸಂಭ್ರಮ ಸಡಗರ... ಮಕ್ಕಳು ಮೊಮ್ಮಕ್ಕಳು ಎಲ್ಲರ ಜೊತೆ ನಗುನಗುತ್ತಿದ್ದ ತಡಾನಿ ದಂಪತಿಗಳನ್ನು ಕಂಡು ನನಗೇ ಬಹಳ ಸಂತಸ ಸಮಾಧಾನ ಆಗಿತ್ತು. ನಾನು ಹೋದ ಸ್ವಲ್ಪ ಹೊತ್ತಿನ ಅನಂತರ, ''ಮಾಥೂರ್‌ಜೀ,, ಈ ಸಾರಿ ನಾವು ನಿಮಗೆ ಒಂದು ವಿಶೇಷವಾದ ಕಾಣಿಕೆ ಕೊಡಬೇಕೆಂದಿದ್ದೇವೆ. ಅದು ಬಹಳ ಒಳ್ಳೆಯದೂ, ನಿಮಗೆ ತುಂಬ ಉಪಯೋಗವಾಗುವಂಥದೂ ಆಗಿರಬೇಕು... ಅಂಥದ್ದು'' ಎಂದರು ಮೋಹನ್ ತಡಾನಿಯವರು. ನಾನು ಯಾವುದೇ ಕಾಣಿಕೆಯನ್ನು ಯಾರಿಂದಲೂ ನಿರೀಕ್ಷಿಸದವನು. ಈಗ ಇವರು ವಿಶೇಷ ಕಾಣಿಕೆ ಕೊಡುತ್ತೇನೆ ಎಂದಾಗ ಅದು ಏನಿರಬಹುದು ಎಂದು ಊಹಿಸಲು ಅಸಮರ್ಥನಾಗಿ ''ಏನದು? ಒಳ್ಳೆಯ ವಸ್ತು. ಆ ಕಾಣಿಕೆ ?'' ಎಂದು ಅವರನ್ನೇ ಕೇಳಿದೆ. ''ಒಂದು ಒಳ್ಳೆಯ ಮೋಟಾರು ಕಾರು, ಹೇಗಿದ್ದರೂ ನಿಮ್ಮ ಬಳಿ ಕಾರು ಇಲ್ಲ. ಅದಕ್ಕೆ ನಾವು ನಿಮಗೆ ಅದನ್ನು ಕಾಣಿಕೆಯಾಗಿ ಕೊಡಬೇಕೆಂದಿದ್ದೇವೆ'' ಎಂದರು. ಸುಮ್ಮನಿರದ ನಾನು ನಗುತ್ತಾ ''ಎಂಥ ಮೋಟರು ಕಾರು, ಆಟದ ಸಾಮಾನೇ?'' ಎಂದೆ. ''ಮಾಥೂರ್‌ಜೀ, ಏನು ಹೇಳುತ್ತೀರಿ? ಆಟದ ಸಾಮಾನಲ್ಲ, ನಿಜವಾದ ಕಾರು. ನಿಮ್ಮ ಓಡಾಟಕ್ಕೆಂದು!! ಆಗಬಹುದೇ!?'' ಎಂದರು.

ತಡಾನಿ ದಂಪತಿಗಳು ಭವನಕ್ಕೆ ಬಂದಿದ್ದಾಗ ಪ್ರಾರ್ಥನಾ ಮಂದಿರ ನೋಡಿ ಬಹಳ ಸಂತೋಷಪಟ್ಟರು. ಎಲ್ಲರೂ ಹೇಳುವಂತೆ 'ವಿದ್ಯಾಭವನದ ಧ್ಯೇಯೋದ್ದೇಶಗಳಿಗೆ ತಕ್ಕಂತೆ ಇದೆ, ವಿದ್ಯಾಭವನದ ಸಂಸ್ಕೃತಿಯ ಪ್ರತೀಕದಂತಿದೆ' ಎಂದು ಪ್ರಾರ್ಥನಾ ಮಂದಿರ ನೋಡಿ ಸಂಭ್ರಮಿಸಿದರು. ಅದನ್ನು ನಿರ್ಮಿಸಿದ ಸತೀಶ್‌ದಾವರರ ಉದಾರಗುಣದ ಬಗ್ಗೆ ಕೇಳಿ ತಿಳಿದುಕೊಂಡ ಅವರು, 'ಈ ಪ್ರಾರ್ಥನಾ ಮಂದಿರ ಎಂದಿಗೂ ಹೀಗೆಯೇ ಇರಬೇಕು. ಇದರ ಸ್ವರೂಪವೇ ಸರ್ವಧರ್ಮ ಸಮನ್ವಯತೆಯನ್ನು ಪ್ರತಿಬಿಂಬಿಸುವಂತಿದೆ. ಈ ಮಂದಿರದ ಮೂಲಕಲ್ಪನೆ ಎಂದಿಗೂ ಹಳತೆನಿಸದು. ಆ ಸೊಬಗು, ಆ ಶೈಲಿ ಎಂದಿಗೂ ನವನವೀನವಾಗಿಯೇ ಇರುವಂಥದು. ಅದು ಹಾಗೆಯೇ ಇರಬೇಕು ಎಂದು ನಮ್ಮ ಆಸೆ. ಅದಕ್ಕೆ ಈ ಪ್ರಾರ್ಥನಾ ಮಂದಿರವನ್ನು ನೀವು ಹೀಗೆಯೇ ನೋಡಿಕೊಳ್ಳಲು, ನಾವು ಹದಿನೈದು ಸಾವಿರ ಪೌಂಡುಗಳನ್ನು ಭವನಕ್ಕೆ ಕೊಡುತ್ತೇವೆ! ಆ ಹಣದಲ್ಲಿ ಈ ಪ್ರಾರ್ಥನಾ ಮಂದಿರದ ಈ ಮೂಲಸ್ವರೂಪ ಎಂದಿಗೂ ಬದಲಾಗದ ರೀತಿಯಲ್ಲಿ ನೋಡಿಕೊಳ್ಳಿ ಮತ್ತೂರ್‌ಜೀ...'' ಎಂದರು. ಆ ದಂಪತಿಗಳ ಹೃದಯ ವೈಶಾಲ್ಯ ಕಂಡು ಮಾತು ಬಾರದವನಾಗಿದ್ದೆ. ಸುಮ್ಮನೆ ತಲೆಯಾಡಿಸಿದ್ದೆ!

ಅಂತೆಯೇ ಆ ದಂಪತಿಗಳಿಗೆ ಉತ್ಸಾಹ ಇನ್ನೂ ಇದ್ದಿತು. ಅವರು ಬಹಳ ಅಭಿಮಾನದಿಂದ ಕಾಣುವ ನಾನೂ ಅವರಿಂದ ಏನನ್ನಾದರೂ ತೆಗೆದುಕೊಳ್ಳಬೇಕೆಂದು ಅವರ ಅಪೇಕ್ಷೆ ಆಗಿದ್ದಿತು. ನನ್ನ ಬಳಿ ಕಾರು

ಇರಲಿಲ್ಲ. ಆಗ ಅದನ್ನು ತಿಳಿದಿದ್ದ ಅವರು "ಮಾಥೂರ್‌ಜೀ, ನೀವು ಒಂದು ಕಾರನ್ನು ತೆಗೆದುಕೊಳ್ಳಿ. ನಾವು ಅದರ ಖರ್ಚು ಕೊಟ್ಟು, ತೆಗೆದುಕೊಡುತ್ತೇವೆ. ಅದು ನಿಮಗಾಗಿಯೇ! ನಿಮ್ಮ ಉಪಯೋಗಕ್ಕಾಗಿಯೇ ಇರಬೇಕು!" ಎಂದರು. ಅದಕ್ಕೆ ನಾನು "ನೀವು ಏನು ಕೊಟ್ಟರೂ ಭವನಕ್ಕೇ ಕೊಡಿ. ನನಗೆ ಕಾರು ಬೇಡ, ಅಷ್ಟೆಲ್ಲ ಭಾರಿ ಉಡುಗೊರೆ ನನಗೆ ಬೇಡ" ಎಂದು ನಯವಾಗಿಯೇ ನಿರಾಕರಿಸಿದೆ. ಆದರೆ ಅವರು ಪಟ್ಟು ಬಿಡಲಿಲ್ಲ. "ನಾವು ಭವನಕ್ಕೆಂದು ಕೊಟ್ಟೆವಲ್ಲಾ? ಪ್ರಾರ್ಥನಾ ಮಂದಿರದ ನಿರ್ವಹಣೆಗೆಂದು ಹದಿನೈದು ಸಾವಿರ ಪೌಂಡುಗಳನ್ನು ಕೊಟ್ಟದ್ದಾಯಿತಲ್ಲ? ಈಗ ನಾವು, 'ನಿಮಗೆ', ಕೊಡಬೇಕೆಂದಿರುವುದು, ನೀವು ದೊಡ್ಡ ಮನಸ್ಸು ಮಾಡಿ ಅದನ್ನು ತೆಗೆದುಕೊಳ್ಳಬೇಕು!" ಎಂದರು. ನನಗೆ ಏನೂ ಹೇಳಲು ತೋಚದೆ, "ಹಾಗಾದರೆ ನಾನು ದಲಾಲ್‌ಜೀಯನ್ನು ಒಂದು ಮಾತು ಕೇಳಿ ನಂತರ ಹೇಳುತ್ತೇನೆ" ಎಂದೆ. 'ಸರಿ' ಎಂದರು ಆ ದಂಪತಿಗಳು. ನಾನು ತಡಾನಿ ದಂಪತಿಗಳ ಈ ಕೋರಿಕೆಯನ್ನು ದಲಾಲ್‌ಜೀಗೆ ಹೇಳಿದೆ. ಅವರು ತಕ್ಷಣವೇ "ಮಾಥೂರ್‌ಜೀ, ಇದು ಬಹಳ ಒಳ್ಳೆಯ ಕೆಲಸ. ನೀವು ಈ ಉಡುಗೊರೆಯನ್ನು ತೆಗೆದುಕೊಳ್ಳಿ. ಅದು ಭವನಕ್ಕೆ ಎಂದೇ ಇರುತ್ತದೆ ಆಗ. ಆ ಕಾರು ನಿಮ್ಮ ಹೆಸರಿನಲ್ಲೇ ಇರಲಿ. ಆ ದಂಪತಿಗಳು ಆಸೆಯಿಂದ 'ನಿಮಗೆ ಕೊಡುತ್ತೇವೆ' ಎಂದದ್ದನ್ನು ನಾವು ಭವನಕ್ಕೆಂದು ಕೇಳುವುದು ನನಗೂ ಸರಿಯಾದುದಲ್ಲ. ನೀವು ಆ ಕಾರನ್ನು ಪಡೆದುಕೊಳ್ಳಿ, ನಿಮಗೆ ಭವನದ ಕೆಲಸ ಬಿಟ್ಟರೆ ಮತ್ತೇನು ಕೆಲಸವಿದೆ? ವ್ಯಾಪಾರ-ವ್ಯವಹಾರವಿದೆ? ಏನೂ ಇಲ್ಲವಷ್ಟೆ? ಹಾಗಾದಾಗ ನೀವು ಆ ಕಾರನ್ನು ನಿರ್ವಹಣೆ ಮಾಡಲು ಸಹ ನಿಮ್ಮಿಂದಾಗದು. ಅದು ನಿಮಗೆ ಕಷ್ಟವಾಗುತ್ತದೆ. ಅದಕ್ಕೆ, ನೀವು ಭವನದ ಕೆಲಸ ಮಾಡುತ್ತಿರುವುದರಿಂದ ವಿದ್ಯಾಭವನವೇ ನಿಮ್ಮ ಕಾರಿನ ವೆಚ್ಚದ ನಿರ್ವಹಣೆಯನ್ನು ನೋಡಿಕೊಳ್ಳುತ್ತದೆ! ನಿಮ್ಮನೆಯಂತೆಯೇ. ಆಗ ಕಾರು ಭವನಕ್ಕೆ ಸೇರಿದಂತೆಯೂ ಆಗುತ್ತದೆ. ತಡಾನಿ ದಂಪತಿಗಳ ಕೋರಿಕೆಯಂತೆ, ಆ ಕಾರನ್ನು ನೀವೇ ಉಪಯೋಗಿಸಿದಂತೆಯೂ ಆಗುತ್ತದೆ!" ಎಂದರು. ದಲಾಲ್‌ಜೀ ಎಂಥ ನಿಶಿತಮತಿ! ನನಗೆ ಅವರ ಸಲಹೆ ಇಷ್ಟವಾಯಿತು. ಅಂತೆಯೇ ತಡಾನಿ ದಂಪತಿಗಳಿಗೆ ನನ್ನ ಒಪ್ಪಿಗೆ ತಿಳಿಸಿ, ದಲಾಲ್‌ಜೀಯ ಈ ಸಲಹೆಯನ್ನು ಹೇಳಿದೆ. ಅವರೂ ಬಹಳ ಸಂತೋಷ ವ್ಯಕ್ತಪಡಿಸಿ, ನಾನು ಒಂದು ಕಾರನ್ನು ಆರಿಸಿಕೊಳ್ಳುವಂತೆ ಹೇಳಿದರು. ನಾನು ಆ ವಿಷಯಗಳನ್ನೆಲ್ಲಾ ಅಷ್ಟು ಬಲ್ಲವನಲ್ಲವಾದ್ದರಿಂದ, ಕಾರನ್ನು ಆರಿಸುವ ಕೆಲಸವನ್ನು ನಮ್ಮ ನಂದನಿಗೇ ಒಪ್ಪಿಸಿದೆ. ನಂದ, ಬಹಳ ಚೆನ್ನಾಗಿದ್ದ ಒಳ್ಳೆಯ ಫೋರ್ಡ್ ಕಾರೊಂದನ್ನು ನನಗಾಗಿ ಆರಿಸಿದ. 'ಗುರು ಪೂರ್ಣಿಮೆ'ಯ ದಿನ ನಮ್ಮನ್ನು ಮನೆಗೆ ಆಹ್ವಾನಿಸಿದ ತಡಾನಿ ದಂಪತಿಗಳು, ಅಲ್ಲಿಯವರೆಗೆ ಆ ಕಾರಿನ ಹಣ ಕಟ್ಟಿ ಬಂದಿದ್ದವರು, ಬಹಳ ಪ್ರೀತಿ-ವಿಶ್ವಾಸದಿಂದ ಕಾರಿನ ಕೀಯನ್ನು ನನಗೆ ಒಪ್ಪಿಸಿದರು! ಅಂದಿನಿಂದ ಕಾರನ್ನು ನಾನು ಉಪಯೋಗಿಸುತ್ತಿದ್ದೆನಾದರೂ ಅದರ ಪೆಟ್ರೋಲ್ ವೆಚ್ಚ, ಇನ್‌ಶೂರೆನ್ಸ್ ವೆಚ್ಚ ಎಲ್ಲವನ್ನೂ ವಿದ್ಯಾಭವನವೇ ಭರಿಸಿ, ನೋಡಿಕೊಳ್ಳುತ್ತಿತ್ತು. (ಆ ಕಾರಿಗೆ ಹತ್ತು ವರ್ಷ ತುಂಬಿತು. ವಿದೇಶಗಳಲ್ಲಿ ನಾಲ್ಕೈದು ವರ್ಷಗಳ ಮೇಲೆ ಕಾರು ಬದಲಾಯಿಸುವುದು ರೂಢಿ. ನಾಲ್ಕು ವರ್ಷವಾದರೆ ಕಾರಿನ ಬೆಲೆ ಸೊನ್ನೆ. ಆ ಕಾರನ್ನು ೧೦೦೦ ಪೌಂಡಿಗೆ ಒಬ್ಬರಿಗೆ ಕೊಟ್ಟು ವಾಲ್ವೋ ಸೆಕೆಂಡ್ ಹ್ಯಾಂಡ್ ಕೊಂಡೆವು. ಆದರೂ ತಡಾನಿಯವರು ಕೊಟ್ಟ ಕಾರಿನ ಮೇಲಿನ ವ್ಯಾಮೋಹವು ಕಡಿಮೆಯಾಗಲಿಲ್ಲ! ತಡಾನಿ ದಂಪತಿಗಳು ಭವನ ಹಾಗೂ ನನ್ನ ಮೇಲೆ ತೋರಿದ ಆದರವನ್ನು ಎಂದಿಗೂ ಮರೆಯಲಾಗದು.)

೨೫. ಎತ್ತರೆತ್ತರದ ನೆಲೆಗಳು

ಟಿವಿಯಲ್ಲಿ ಹಬ್ಬ

ನಮ್ಮ ಆಫೀಸಿಗೆ ಬಿ.ಬಿ.ಸಿ. ಟೆಲಿವಿಷನ್‌ನ ಅಧಿಕಾರಿಯೊಬ್ಬ ಏನೋ ಕೆಲಸದ ಮೇಲೆ ನನ್ನನ್ನು ನೋಡಲು ಬಂದಿದ್ದ. ನಾವು ಮಾತನಾಡುತ್ತ ಕುಳಿತಿದ್ದಾಗ ಭಾರತೀಯ ಯುವಕನೊಬ್ಬ ಬಂದು ನನ್ನನ್ನು ಮಾತನಾಡಿಸಿಕೊಂಡು ಭವನದ ತರಗತಿಯ ಒಳಗೆ ಹೋದ. ಆ ದಿನ ರಾಖೀ ಹುಣ್ಣಿಮೆ. ಅವನ ಬಲದ ಕೈಯಲ್ಲಿದ್ದ ರಾಖಿಯ ದಾರವನ್ನು ನೋಡಿದ ಆತನ ಕುತೂಹಲ ಹೆಚ್ಚಾಯಿತು. "ಮಿಸ್ಟರ್ ಮಾಥೂರ್, ಈಗ ತಾನೆ ನಿಮ್ಮ ಜತೆ ಮಾತನಾಡಿ ಹೋದ ಆ ಯುವಕನ ಕೈಯಲ್ಲಿ ಕಟ್ಟಿದುದು ಏನು? ಏಕೆ ಹಾಗೆ ಅವನು ಕಟ್ಟಿಕೊಂಡಿದ್ದ? ಅದು ವಾಚ್ ಅಂತೂ ಆಗಿರಲಿಲ್ಲ" ಎಂದು ಕೇಳಿದ. ಅದಕ್ಕೆ ನಾನು ಪೂರ್ಣ ವಿವರವನ್ನು ಹೇಳಿದೆ. "ಈ ದಿನ ರಾಖಿ ಹುಣ್ಣಿಮೆ ಎನ್ನುವ ವಿಶೇಷ ಹಬ್ಬ, ಒಡ ಹುಟ್ಟಿದ ಸಹೋದರರು ನಮ್ಮ ರಕ್ಷಣೆಗಾಗಿ ಸದಾ ಇರಲಿ ಎಂದು ಅವರಿಗೆ ನೆನಪು ಮಾಡಿಕೊಡುವಂತೆ ಅಕ್ಕ-ತಂಗಿಯರು ಅವರ ಬಲಗೈಗೆ 'ರಾಖೀ' ಎಂದು ಈ ಬಣ್ಣದ ದಾರವನ್ನು ಕಟ್ಟುತ್ತಾರೆ. ಇದಕ್ಕೆ 'ರಕ್ಷಾಬಂಧನ' ಎಂದು ಹೆಸರು. ಇದೊಂದು ರೀತಿಯಲ್ಲಿ ಸಹೋದರರು ಸಹೋದರಿಯರಿಗೆ 'ನಾನು ನಿನ್ನನ್ನು ಎಂದಿಗೂ ರಕ್ಷಿಸಿಕೊಳ್ಳುತ್ತೇನೆ' ಎಂದು ಪ್ರಮಾಣ ಮಾಡಿದಂತೆ, ಸಹೋದರಿಯರು ಅವರಿಗೆ ಸಿಹಿ ತಿನ್ನಿಸುತ್ತಾರೆ. ಇವರು ಅವರ ರಕ್ಷೆಗೆ ಎಂದು ಸಾಂಕೇತಿಕವಾಗಿ ಏನಾದರೂ ಉಡುಗೊರೆಯನ್ನೋ, ದುಡ್ಡನ್ನೋ ಕೊಡುವುದು ನಮ್ಮ ಸಂಪ್ರದಾಯ" ಎಂದೆ. ನಾನು ಇಷ್ಟು ಹೇಳಿ ನಿಲ್ಲಿಸಿದ್ದೇ, ಅವನ ಕುತೂಹಲ ಇಮ್ಮಡಿಯಾಯಿತು. "ಓಹ್... ಇದೆಷ್ಟು ಕುತೂಹಲಕಾರಿಯಾಗಿದೆ ನಿಜಕ್ಕೂ!! ಮಿಸ್ಟರ್, ಮಾಥೂರ್,

ನಿಮ್ಮಲ್ಲಿ ಹೀಗೆಯೇ ಇರುವ ಹಬ್ಬಗಳು ಎಷ್ಟಿವೆ ? ಅವು ಯಾವುವು?'' ಎಂದ. ಅದಕ್ಕೆ ನಾನು ``ನಮ್ಮಲ್ಲಿ ನಾವು ವರ್ಷದಲ್ಲಿ ಸುಮಾರು ಮೂವತ್ತಕ್ಕೂ ಹೆಚ್ಚು ಹಬ್ಬಗಳನ್ನು ವಿಶೇಷ ದಿನಗಳಲ್ಲಿ ಆಚರಿಸುತ್ತೇವೆ!'' ಎಂದೆ, ``ನಿಜಕ್ಕೂ?'' ಎಂದು ಕಣ್ಣರಳಿಸಿದ ಅವನು, ``ಅವುಗಳಲ್ಲಿ ತುಂಬ ಮುಖ್ಯವಾದವುಗಳು ಎಷ್ಟು? ಅವು ಯಾವುವು ? ಅದರ ವೈಶಿಷ್ಟ್ಯ ಏನು? ಅದನ್ನು ಹೇಗೆ ಆಚರಿಸುತ್ತೀರಿ?'' ಎಂದು ಪ್ರಶ್ನೆಗಳ ಸುರಿಮಳೆ ಕರೆದ. ಅದಕ್ಕೆ ನಾನು ``ನಮ್ಮಲ್ಲಿ ವರ್ಷದ ಪ್ರಾರಂಭದಿಂದ, ಎಂದರೆ ಸಂಕ್ರಾಂತಿ, ಅನಂತರ ಯುಗಾದಿ, ನಾಗರಪಂಚಮಿ, ಶಿವರಾತ್ರಿ, ಗಣೇಶ-ಗೌರಿ, ದೀಪಾವಳಿ ಇತ್ಯಾದಿ-ಹೀಗೆ ವರ್ಷದ ಕೊನೆಯವರೆಗೂ ಹಬ್ಬಗಳಿವೆ'' ಎಂದು ಚುಟುಕಾಗಿ ಅವುಗಳ ವೈಶಿಷ್ಟ್ಯದ ಬಗ್ಗೆ ಹೇಳಿದೆ. ಆಗ ಅವನು ಒಂದು ನಿರ್ಧಾರಕ್ಕೆ ಬಂದಿದ್ದ! ``ಮಿಸ್ಟರ್ ಮಾಥೂರ್, ನೀವು ನಿಮ್ಮ ಈ ಬಹುಮುಖ್ಯ ಹಬ್ಬಗಳ ಮೇಲೆ ಕೆಲವು ಭಾಷಣ ಗಳನ್ನೇಕೆ ಕೊಡಬಾರದು? ಅದನ್ನು ಯಾವಾಗ ಆಚರಿಸುತ್ತೀರಿ? ಏಕೆ ? ಅದರ ವಿಶೇಷವೇನು? ಅದನ್ನು ಆಚರಿಸುವುದು ಹೇಗೆ? ಇತ್ಯಾದಿ ವಿವರಗಳನ್ನು ತಿಳಿಸಿ, ನೀವು ಬಿ.ಬಿ.ಸಿ.ಯಲ್ಲಿ 'ಭಾರತದಲ್ಲಿನ ಹಬ್ಬಗಳು' ಎನ್ನುವ ಶೀರ್ಷಿಕೆಯಲ್ಲಿ ಭಾಷಣ ಗಳನ್ನು ಕೊಡಿ. ಅದನ್ನು ಪ್ರಸಾರ ಮಾಡೋಣ!'' ಎಂದ. ನಾನೂ ಕೂಡಲೇ ಒಪ್ಪಿಕೊಂಡೆ. ಹಬ್ಬಗಳ ಬಗೆಗೆ ವಿವರಗಳನ್ನು ಹುಡುಕಿ, ಅಗತ್ಯವಾದ ವಿವರಗಳನ್ನು ಗುರುತು ಹಾಕಿಕೊಂಡು ಅದರ ವೈಶಿಷ್ಟ್ಯವನ್ನು ಸ್ವಾರಸ್ಯಕರವಾಗಿ ತಿಳಿಸುವಂತೆ ಭಾಷಣಗಳನ್ನು ಸಿದ್ಧಪಡಿಸಿದೆ. ಸುಮಾರು ಭಾಷಣಗಳನ್ನು ಬಿ.ಬಿ.ಸಿ. ಟಿ.ವಿಗಾಗಿ ಸಿದ್ಧಪಡಿಸಿ, ನಾನೇ ಆ ಕಾರ್ಯಕ್ರಮವನ್ನು ಟಿವಿಯಲ್ಲಿ ನಡೆಸಿದೆ. ಆ ಭಾಷಣಗಳು ಅನೇಕ ರಾಷ್ಟ್ರಗಳಲ್ಲಿ ಪ್ರಸಾರವಾಗಿ ಅವು ಬಹಳ ಜನಪ್ರಿಯ ಆದವು!! ಹೀಗೇ ನಾವು ಸಾಹಸ ಮಾಡಲು ಹೊರಟಾಗ ದೇವರ ಕೃಪೆ, ಅದು ಚೆನ್ನಾಗಿ ನಡೆದು ಅರ್ಥಪೂರ್ಣ ಮುಕ್ತಾಯ ಕಾಣುವಂತೆ ಮಾಡುವುದು!!

ಇಂದಿರಾಜೀ

ಅಂದಿನ ಪ್ರಧಾನಮಂತ್ರಿ ಇಂದಿರಾಗಾಂಧಿಯವರು ಸಹ ಭವನಕ್ಕೆ ಬಂದಿದ್ದರು. ಭವನವನ್ನು ನೋಡಿ ತಮ್ಮ ಸಂತೋಷ ವ್ಯಕ್ತಪಡಿಸಿದರು. ಶ್ರೀಮತಿ ಇಂದಿರಾಗಾಂಧಿಯವರ ಪರಿಚಯವೂ ಹಿಂದೆ ಆಗಿತ್ತು. ಎಲೆಕ್ಷನ್ ಸಮಯದಲ್ಲಿ ಒಮ್ಮೆ 'ಸಂಯುಕ್ತಕರ್ನಾಟಕ' ಪತ್ರಿಕೆಯಿಂದ ವರದಿಗಾರನಾಗಿ ಹೋಗಿದ್ದೆ. ಆಗ ಅವರ ಭಾಷಣವನ್ನು ತತ್‌ಕ್ಷಣವೇ ಅನುವಾದ ಮಾಡಬೇಕು ಎನ್ನುವ ಬಹಳ ದೊಡ್ಡ ಜವಾಬ್ದಾರಿ ನನಗೆ ಗಾಬರಿ ತರಿಸುತ್ತಿದ್ದರೂ, ಅವರ ಭಾಷೆ, ಮಾತನಾಡುವ ವೈಖರಿಯ ಬಗ್ಗೆ ಮೆಚ್ಚುಗೆ ಇದ್ದ ನಾನು ಈ ಅವಕಾಶವನ್ನು ಕಳೆದುಕೊಳ್ಳುವುದು ಸರಿಯಲ್ಲ ಎಂದು ಧೈರ್ಯವಾಗಿ ಒಪ್ಪಿಕೊಂಡೆ! ಅವರ ಹಿಂದಿ ಸರಳ, ನನ್ನ ಅನುವಾದವು ಸ್ಪಷ್ಟವಾಗಿಯೇ ಸರಳವಾಗಿಯೇ ಇತ್ತು. ನೆರೆದಿದ್ದ ಅಭಿಮಾನಿಗಳ ಚಪ್ಪಾಳೆಯನ್ನು ಗಮನಿಸಿದ ಇಂದಿರಾಜಿ ನನ್ನ ಅನುವಾದ ಚೆನ್ನಾಗಿದೆ ಎಂದು ಅಭಿಪ್ರಾಯಪಟ್ಟು ಅಭಿನಂದಿಸಿದರು! ಆ ದಿನ ಅವರಿಗೆ ಬಹಳ ಸಂತೋಷ ಆಗಿತ್ತು! ಇಂದಿರಾಜಿ ನಿಧನರಾದಾಗ, ಅವರ ಪಾರ್ಥಿವಶರೀರದ ಅಂತಿಮ ಯಾತ್ರೆಯ ವೀಕ್ಷಕ ವಿವರಣೆಯನ್ನು ಲಂಡನ್ನಿನ 'ಸ್ಕೈ ಟೆಲಿವಿಷನ್'ನಲ್ಲಿ (Sky Television) ನಾನೇ ಹೇಳಿದೆ. ಸುಮಾರು ಆರು ಘಂಟೆಗಳ ಕಾಲ ನಿರಂತರವಾಗಿ ನಡೆದ ಈ ಕಾರ್ಯಕ್ರಮದ ವೀಡಿಯೊ ಟೇಪನ್ನು ಶ್ರೀ ರಾಜೀವಗಾಂಧಿಯವರಿಗೂ ಕೊಟ್ಟೆ. ಆಗ ಅವರು ಅದಕ್ಕೆ ನನ್ನ ವಿವರಣೆ ಇರುವುದನ್ನು ಕೇಳಿ, ``ನಾವು ನಿಮಗೆ ತುಂಬಾ ಕೃತಜ್ಞರಾಗಿದ್ದೇವೆ! ಬ್ರಿಟನ್‌ನಲ್ಲಿ ಈ ಕಾರ್ಯಕ್ರಮಕ್ಕೆ ವಿವರಣೆ ಕೊಟ್ಟದ್ದೇ ಅಲ್ಲದೆ, ಅದನ್ನು ನಮಗೆ ತಲುಪಿಸುವ ಶ್ರಮವನ್ನು ತೆಗೆದುಕೊಂಡಿರುವ ನಿಮಗೆ ನಮ್ಮ ವಂದನೆಗಳು'' ಎಂದು ಪ್ರೀತಿಯಿಂದ ಹೇಳಿದರು. ``ಇದನ್ನು ಅಮೂಲ್ಯ ನಿಧಿಯಂತೆ ಕಾಪಾಡುತ್ತೇವೆ'' ಎಂದು ವೀಡಿಯೋ ಕ್ಯಾಸೆಟ್ಟನ್ನು ನನಗೆ ತೋರಿಸಿ ನಕ್ಕರು! ಶ್ರೀಮತಿ ಸೋನಿಯಾ ಗಾಂಧಿಯವರೂ ದೆಹಲಿಯಲ್ಲಿ ನಾನು ಅವರನ್ನು ಭೇಟಿಯಾಗಿದ್ದಾಗ, ಆ ಸನ್ನಿವೇಶವನ್ನು ನೆನೆದು, ``ನೀವು ಕಳುಹಿಸಿದ್ದ ಕ್ಯಾಸೆಟನ್ನು ಜೋಪಾನದಿಂದ ಇಟ್ಟಿದ್ದೇವೆ'' ಎಂದರು!

ಇದಲ್ಲದೆ ಸುಮಾರು ೧೯೮೪-೮೫ರಲ್ಲಿ ಗುರುದ್ವಾರದಲ್ಲಿ ಭಯೋತ್ಪಾದಕರು ಸೇರಿಕೊಂಡಿದ್ದಾಗ ನೀಲಿ ನಕ್ಷತ್ರ ಕಾರ್ಯಾಚರಣೆ (Blue Star Operation) ಮಾಡಿದ ಶ್ರೀಮತಿ ಇಂದಿರಾಜಿಯ ಈ ನಿರ್ಧಾರದ ಹಿನ್ನೆಲೆಯ ಬಗೆಗಿನ ಚರ್ಚೆಗೆ ಪೀಟರ್ ಉಸ್ತಿನೋವ್ ಎನ್ನುವ ಪಾಶ್ಚಾತ್ಯ ಪತ್ರಕರ್ತ-ಬರಹಗಾರನ ಜತೆಗೆ ನನ್ನನ್ನೂ ಆಹ್ವಾನಿಸಿದ್ದರು. ಈ ಕಾರ್ಯಕ್ರಮ ಎಲ್ಲ ಅಂತರರಾಷ್ಟ್ರೀಯ ಟೆಲಿವಿಷನ್‌ಗಳಲ್ಲೂ ಪ್ರಸಾರವಾಗಿತ್ತು. ಆಗ ನಾನು ಆ ಚರ್ಚೆಯಲ್ಲಿ ಅವರ ಈ ಕಾರ್ಯಾಚರಣೆಯ ನಿರ್ಧಾರದ ಬಗ್ಗೆ ವಿವರಿಸುತ್ತ ``ಶ್ರೀಮತಿ ಇಂದಿರಾಜಿಯವರು ಮಾಡಿದುದನ್ನು ತಪ್ಪು ಅಂದು ಹೇಳಲಾಗದು! ಆ ಗುರುದ್ವಾರದ ಪಾವಿತ್ರ್ಯ ಹಾಳಾಯಿತು ಎಂದುಕೊಳ್ಳುವುದು ಸರಿಯಲ್ಲ. ನಮ್ಮಲ್ಲಿ ದೇವರಿಗೆ ಪ್ರಾರ್ಥನೆಯನ್ನು ಸಲ್ಲಿಸುವ ಸ್ಥಳ ಅತ್ಯಂತ ಪವಿತ್ರವಾದುದು ಎನ್ನುವವರು ನಾವು, ಅಂತಹಾ ಜಾಗದಲ್ಲಿ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿಟ್ಟಿಕೊಂಡಿರುವುದು ಹೇಗೂ ಸರಿಯಲ್ಲ, ಅದು ಪುಣ್ಯತಮ ಕೆಲಸವೇನೂ ಅಲ್ಲ ತಾನೆ? ಅಹಿಂಸೆಯ ತಾಣವಾದ ದೇವಮಂದಿರದಲ್ಲಿ ಹಿಂಸಾಚಾರ ಮಾಡುವ ಶಸ್ತ್ರಾಸ್ತ್ರಗಳು ತುಂಬಿರುವುದೂ ಸರಿಯಲ್ಲ ತಾನೆ?'' ಎಂದು ಹೇಳಿದೆ. ಏನೇ ಆದರೂ ನಮ್ಮ ಸರ್ಕಾರವನ್ನು ಅಷ್ಟು ಸುಲಭದಲ್ಲಿ ಬಿಟ್ಟುಕೊಡಲು ಸಾಧ್ಯವಿಲ್ಲವಷ್ಟೇ? ಆ ಕಾರ್ಯಕ್ರಮವನ್ನು ಭಾರತದಲ್ಲಿ ಇಂದಿರಾಜಿಯವರ ಪರಿವಾರವೆಲ್ಲವೂ ನೋಡಿತ್ತು. ಅದಾದನಂತರ

ನಾನು ಭಾರತಕ್ಕೆ ಬಂದಾಗ, ನನಗೆ ಭೇಟಿಗೆ ಅವಕಾಶಮಾಡಿಕೊಟ್ಟು ಹಸ್ತಲಾಘವಕೊಟ್ಟು, ''ನೀವು ಆ ಮಾತುಗಳನ್ನು ಹೇಳುವಷ್ಟು ಧೈರ್ಯವಹಿಸಿದಿರಿ! ಅದು ನಮಗೆ ಬಹಳ ಸಂತೋಷ ಉಂಟು ಮಾಡಿತು'' ಎಂದು ಹೇಳಿದರು ಶ್ರೀ ರಾಜೀವಗಾಂಧಿಯವರು! ಯಾವ ವಿಷಯದಲ್ಲಿಯೂ 'ಭ್ರಮೆ' ಎನ್ನುವುದು ಇಲ್ಲ ನನಗೆ, ನನಗೆ ಅನ್ನಿಸಿದುದನ್ನು ನೇರವಾಗಿ ಹೇಳುವ ಪ್ರವೃತ್ತಿ, ಅದು ಮೆಚ್ಚುಗೆಗೆ ಪಾತ್ರವಾಗಿತ್ತು.

ಸನಾತನ ಧರ್ಮಕ್ಕೆ ಮಣೆ

ಹೀಗೆ 'ಭಾರತೀಯ ವಿದ್ಯಾಭವನ'ದ ಚಟುವಟಿಕೆಗಳು ಹೆಚ್ಚಿದಂತೆ, ನಮಗೂ ಇತರರ ಎಂದರೆ, ದೇಶೀಯರ, ವಿದೇಶೀಯರ ಬಹಳ ಉನ್ನತ ಮಟ್ಟದಲ್ಲಿದ್ದವರ ಸಂಪರ್ಕವೂ ಹೆಚ್ಚಿತು. ಆ ೨೪ ವರ್ಷಗಳಲ್ಲಿ ಅನೇಕ ಮಹನೀಯರು, ಕಾರ್ಯಸಾಧನೆ ಮಾಡಿದವರು, ತತ್ತ್ವಜ್ಞಾನಿಗಳು, ಸಾಧು-ಸಂತರು, ರಾಜಕೀಯ ಧುರೀಣರು, ಸಮಾಜ ಸೇವಕರು, ಅನೇಕ ಕಲಾವಿದರುಗಳು ಎಲ್ಲರೂ... ಎಲ್ಲರೂ ಪರಿಚಯವಾಗಿ, ಅಂಥವರನ್ನೆಲ್ಲ ನೋಡುವ, ಅವರ ಕೂಡ ಮಾತನಾಡುವ ಅವಕಾಶ ಸಿಕ್ಕಿತು. ವೈಯಕ್ತಿಕವಾಗಿ ಯಾವುದೇ ವ್ಯಕ್ತಿಗೆ ಅವನೊಬ್ಬನಿಗೆ ಈ ಮಟ್ಟದಲ್ಲಿನ ಪರಿಚಯಗಳ ಹರಹು, ವಿಸ್ತಾರ ಇರಲಾರದು, ಅದು ಸಾಧ್ಯವೇ ಇಲ್ಲ ಎಂದೇ ನನ್ನ ಭಾವನೆ. ಇಲ್ಲಿ ವಿದ್ಯಾಭವನದ ''ನಮ್ರಸೇವಕ''ನಾಗಿ ನಾನು ಮಾಡುತ್ತಿದ್ದ ಸೇವೆಗೆ, ಭವನವು ನನಗೆ ಇಷ್ಟು ಮಂದಿ ಖ್ಯಾತಿವೆತ್ತವರನ್ನು ಸಂಪರ್ಕಿಸುವ, ಸಂಧಿಸುವ ಸದವಕಾಶ ಹಾಗೂ ಸೌಭಾಗ್ಯ ಕರುಣಿಸಿತ್ತು! ಅದಕ್ಕಾಗಿ ಭವನಕ್ಕೆ ನಾನೆಂದಿಗೂ ಋಣಿ!

ಭವನವು ಬಹಳ ಬೇಗ ಮೇಲೆ ಬರುತ್ತಿದ್ದಿತು. ಆಗ ಒಮ್ಮೆ ಮಹಾತ್ಮರ ಜನ್ಮದಿನದ ಸಂದರ್ಭದಲ್ಲಿ ನಾನು ಟಿ.ವಿ.ಯಲ್ಲಿ ಸರ್ವಧರ್ಮ ಸಮನ್ವಯದ ಬಗ್ಗೆ ಮಾತನಾಡಿದೆ. ಆ ಭಾಷಣ ಅಲ್ಲಿದ್ದ ಕ್ರೈಸ್ತ ಮತದ ಪಾದ್ರಿಯೊಬ್ಬರಿಗೆ ಬಹಳ ಹಿಡಿಸಿತು. ''ನೀವು ಹೇಳಿದ ಮಾತುಗಳು ಅರ್ಥಪೂರ್ಣವಾಗಿದ್ದವು, ತುಂಬಾ ಚೆನ್ನಾಗಿದ್ದ ಭಾಷಣವದು'' ಎಂದರು.

ಆಗ ''ನೀವೇಕೆ ಹಿಂದೂ ಧರ್ಮದ ಮೇಲೆ ಕೆಲವು ಭಾಷಣಗಳನ್ನು ಬಿ.ಬಿ.ಸಿ.ಗೆ ಕೊಡಬಾರದು?'' ಎಂದು ಟಿ.ವಿ.ಯವರು ಕೇಳಿದರು. ೧೯೮೩ರ ಸಮಯ. ಅಲ್ಲಿಯವರೆಗೆ ಕ್ರೈಸ್ತ ಮತ, ಇಸ್ಲಾಂ, ಜುಡಾಯಿಸಂ, ಸಿಖ್, ಬೌದ್ಧ ಮತ ಇತ್ಯಾದಿ ಮತಗಳ ಮೇಲೆ ಬಹಳ ಜನ ಭಾಷಣಗಳನ್ನು ಮಾಡಿದ್ದರು, ಆದರೆ ಹಿಂದೂ ಮತದ ಬಗ್ಗೆ ಯಾರೂ ಮಾತನಾಡಿರಲಿಲ್ಲ! ಹಿಂದೂ ಮತದ ಪ್ರಸ್ತಾಪವೇ ಬಂದಿರಲಿಲ್ಲ ಅವರೆಗೆ! ಯಾವ ಮತಕ್ಕೆ ಹುಟ್ಟಿದ ತಾರೀಖೇ ಇಲ್ಲವೋ, ಯಾವ ಮತವನ್ನು 'ಸನಾತನ ಧರ್ಮ' ಎಂದು ನಾವು ಹೇಳುತ್ತೇವೆಯೋ, ಯಾವ ಮತದ -ಧರ್ಮದ ಪೋಷಕಾಂಶಗಳನ್ನು ಬಳಸಿಕೊಂಡು ಇತರ ಮತಗಳು ಜನ್ಮವೆತ್ತಿದುವೋ, ಯಾವ ಮತ ಪ್ರಪಂಚವೆಲ್ಲ ಒಂದೇ ಎಂದು ಸಾರುವಷ್ಟು ವೈಶಾಲ್ಯತೆ ತೋರುತ್ತದೆಯೋ, ಅಂತಹ ಮತದ ಬಗ್ಗೆ ೧೯೮೩ರ ತನಕ... ಯಾರೂ ಮಾತನಾಡಿರಲಿಲ್ಲ. ಹಿಂದೂ ಮತಕ್ಕೆ ಆ ಅವಕಾಶವನ್ನೇ ಕೊಡಲಾಗಿರಲಿಲ್ಲ! ಸಾಗರದಾಚೆಯ ಸುಪ್ರಸಿದ್ಧ ಟೆಲಿವಿಷನ್ ಬಿ.ಬಿ.ಸಿ.ಯು ಪ್ರಪಂಚದಾದ್ಯಂತ ಎಲ್ಲ ದೇಶಕ್ಕೂ ತಲುಪುವಂಥ ಪ್ರಸಾರಜಾಲ ಹೊಂದಿರುವಂಥದು, ಅಲ್ಲಿ ಒಂದು ಭಾಷಣವನ್ನು ಕೊಡುವುದು ಸುಲಭದ ಮಾತಾಗಿರಲಿಲ್ಲ, ಅಲ್ಲದೆ ಯಾವುದನ್ನೂ ವಿಸ್ತಾರವಾಗಿ ಹೇಳಿ ವೀಕ್ಷಕರಿಗೆ ಬೇಸರ ತರಿಸುವಂತಿಲ್ಲ. ಮೂರು-ನಾಲ್ಕು ನಿಮಿಷಗಳಲ್ಲಿ ಒಂದು ವಿಷಯದ ಬಗ್ಗೆ ಸಾಧ್ಯವಾದಷ್ಟನ್ನು ಸಮರ್ಪಕವಾಗಿ ಸಂದೇಹಕ್ಕೆ ಅವಕಾಶವಿಲ್ಲದಂತೆ ಹೇಳಬೇಕಾಗಿತ್ತು. ನಾನು ಅಷ್ಟರಮಟ್ಟಿಗೆ ತಯಾರಿ ನಡೆಸಬೇಕಿತ್ತು. ತಯಾರಿಯಲ್ಲಿ ಕಿಂಚಿತ್ ಆಲಸ್ಯವೂ, ಧೋರಣೆಯೂ ತಲೆ ಹಾಕುವಂತಿರಲಿಲ್ಲ. ಪ್ರಪಂಚದಾದ್ಯಂತ ಕೇಳುವ ಮಾತುಗಳು ಅದೆಷ್ಟು ನಿಷ್ಕೃಷ್ಟ (precise) ವಾಗಿದ್ದರೂ ಸಾಲದು... ಅಂತೂ ಒಂದೆರಡು ಭಾಷಣಗಳನ್ನು ಕೊಟ್ಟನಂತರ, ನನ್ನ ಸರಳ ಭಾಷೆ, ಮಾತು, ವಿಷಯ ಹೇಳುವ ರೀತಿ, ಗೊಂದಲವಾಗದಂತೆ ಸ್ವಲ್ಪ ಸಮಯದಲ್ಲೇ ಹೆಚ್ಚು ವಿಷಯಗಳನ್ನು ತಿಳಿಸಲು ಮಾಡುವ ಪ್ರಯತ್ನ, ಇವೆಲ್ಲವೂ ಅವರಿಗೆ ಬಹಳ ಇಷ್ಟವಾಯಿತು.

ಸಹೃದಯ ಓದುಗರೇ... ಬಿ.ಬಿ.ಸಿ.ಯವರು ನನಗೆ ೧೦೪ (ನೂರನಾಲ್ಕು!) ಭಾಷಣಗಳನ್ನು ಕೊಡುವಂತೆ ಕೇಳಿದರು! ಇದು 'ಭಾರತ ಮಾತೆ'ಗೆ ಸಂದ ದೊಡ್ಡ ಗೌರವ, 'ಸನಾತನ ಧರ್ಮ'ಕ್ಕೆ ಸಂದ ಗೌರವ ಎಂದೇ ನನ್ನ ಭಾವನೆ! ಯಾವುದೇ ಒಂದು ಧರ್ಮದ ಮೇಲೆ, ಆ ಧಾರ್ಮಿಕ ಆಚರಣೆಗಳ ಮೇಲೆ, ಆ ಧರ್ಮದ ದೇಶದ ಜನದ ಸಂಸ್ಕೃತಿಯ ಮೇಲೆ ಅಷ್ಟೊಂದು ಭಾಷಣಗಳನ್ನು ಮಾಡುವ ಅವಕಾಶ ಸಿಕ್ಕುವುದು ಅತ್ಯಂತ ಕಷ್ಟಸಾಧ್ಯ, ಅದೂ ವಿದೇಶದ ಟಿ.ವಿ. ಪ್ರಸಾರ ಜಾಲದಲ್ಲಿ! ಅಂತೆಯೇ ಈ ಅವಕಾಶ ನನಗೆ ಸಿಕ್ಕಿದರೂ ನಾನು ಬಹಳ ಎಚ್ಚರಿಕೆಯಿಂದ ಯಾವುದೇ ವಸ್ತು ಪುನರಾವರ್ತನೆಯಾಗದಂತೆ, ವಿಷಯ ವೈವಿಧ್ಯವಿರುವಂತೆ ಹುಡುಕಿ ತೆಗೆದು, ಮೂರು ನಿಮಿಷಗಳಿಗೆ ಅದರ ವ್ಯಾಪ್ತಿಯನ್ನು ಮಿತಿಗೊಳಿಸಿ, ಕುತೂಹಲ ಹುಟ್ಟಿಸುವಂತೆ, ಆಕರ್ಷಣೀಯವಾಗಿರುವಂತೆ, ಆಸಕ್ತಿ ಕೆರಳಿಸುವಂತೆ ವೀಕ್ಷಕರಿಗೆ ಹೇಳಿ, ಅರ್ಥಪೂರ್ಣವಾಗಿ ನಿಲ್ಲಿಸಬೇಕಿತ್ತು! ನನಗೆ ಇದು ಒಂದು ದೊಡ್ಡ ಸವಾಲಾಗಿತ್ತು! ದೈವಸಹಾಯ ಮತ್ತು ಅನುಗ್ರಹ, ನನ್ನನ್ನು ಈ ಸಾಹಸದಲ್ಲಿ ತೊಡಗಿಸಿ ಯಶಸ್ಸು ಜತೆಗೆ ಜನಪ್ರಿಯತೆ ಗಳಿಸುವಂತೆ ಮಾಡಿತು ಎಂದರೆ ತಪ್ಪಿಲ್ಲ!

ಇನ್ನೂ ಒಂದು ಸ್ವಾರಸ್ಯ ನಿಮಗೆ ಹೇಳಬೇಕೆಂದರೆ, ನಾನು ಈ ಭಾಷಣಗಳನ್ನು ಮಾಡುವಾಗ, ಈ ಕಾರ್ಯಕ್ರಮದ ನಿರ್ದೇಶಕ, "ಮಾನ್ಯ ಮಾಥೂರ್, ನೀವು 'ಹಿಂದುವಾಗಿ', 'ನಾನೊಬ್ಬ ಹಿಂದುವಾಗಿ', 'ಹಿಂದೂಮತ ನನ್ನದಾಗಿ' ('as a hindu', 'as I am a hindu','as hindu religion is mine') ಎಂದು ಮಧ್ಯೆ ಮಧ್ಯೆ ಹೇಳಿರಿ! ಹಿಂದು ಧರ್ಮದವರಾಗಿ ನೀವು ನಿಮ್ಮ ಧರ್ಮದ ಭಾಷಣಗಳಲ್ಲಿ ಹಾಗೆ ಹೇಳಬೇಕು" ಎಂದು ಒತ್ತಾಯ ಪಡಿಸುತ್ತಿದ್ದ. ನನಗೋ... 'ವಸುಧೈವ ಕುಟುಂಬಕಂ' ಎನ್ನುವ ಮಹಾನ್ ಸಂದೇಶ ಸಾರುವ ಧರ್ಮದವನಾಗಿ, 'ನಾನು ಒಬ್ಬ ಹಿಂದುವಾಗಿ... ಹಿಂದುವಾಗಿ' ಎಂದೇನು ಹೇಳಿಕೊಳ್ಳುವುದು ? ಎಂದು ಸಂಕೋಚ-ನಾಚಿಕೆ! ಈ ಸಾತ್ತ್ವಿಕತೆ ಇರುವುದೇ ನಮ್ಮ ಧರ್ಮದಲ್ಲಿ ತಾನೇ? ಅದಕ್ಕೇ ನನಗೂ ಹಾಗೇ ಎನಿಸಿ, ನಾನು ಬಹಳ ಸಾರಿ ಅದನ್ನು ಹಾಗೆ ಹೇಳುವ ಸನ್ನಿವೇಶವನ್ನೇ ತಪ್ಪಿಸುತ್ತಿದ್ದೆ, ಹಾಗೆ ಹೇಳುವ ಸಂದರ್ಭ ಹೆಚ್ಚು ಬಾರದಂತೆ ನಿಗಾ ವಹಿಸುತ್ತಿದ್ದೆ. ಆದರೂ ಇವನ್ನು ಗಮನಿಸಿದ ಅವನು ಬಿಡದೆ "ದಯವಿಟ್ಟು ನೀವು ಹಾಗೆ ಹೇಳಬೇಕು, ನಿಮ್ಮ ಧರ್ಮದ ಪ್ರತಿನಿಧಿಯಾಗಿ ನೀವು ಮಾತನಾಡುವಾಗ, ನಿಮ್ಮ ಧರ್ಮದ ಬಗ್ಗೆ ನಿಮಗೆ ಸಂಪೂರ್ಣ ತಿಳಿದಿದ್ದು, ಅದನ್ನು ನೀವು ಆತ್ಮವಿಶ್ವಾಸದಿಂದ ಹೇಳುತ್ತಿದ್ದೀರಿ ಎನಿಸಬೇಕು ವೀಕ್ಷಕರಿಗೆ! ಹಾಗಾದರೆ ನಿಮ್ಮ ಭಾಷಣಗಳು ಜನಕ್ಕೆ ಇಷ್ಟವಾಗಿ ನಿಮ್ಮ ಧರ್ಮದ ಬಗ್ಗೆ ಪ್ರೀತಿ-ಗೌರವ ಮೂಡುವುದು" ಎಂದು ಒತ್ತಾಯ ಮಾಡಿದ. ಅಂತೆಯೇ ನನ್ನನ್ನು ಬಿಡದೆ ಹಲವಾರು ಭಾಷಣಗಳಲ್ಲಿ 'ನಾನೊಬ್ಬ ಹಿಂದೂವಾಗಿ,' 'ಹಿಂದೂಧರ್ಮ ನನ್ನದಾಗಿ' ಎಂದೇ ಹೇಳಿಸಿದ!! ಈ ಭಾಷಣಗಳು ಸುಮಾರು ಒಂದೂವರೆ ವರ್ಷಕಾಲ ಬಿ.ಬಿ.ಸಿ. ಜಾಲದಲ್ಲಿ ಪ್ರಸಾರ ವಾದುದು. ತುಂಬ 'ಜನ ಮೆಚ್ಚುಗೆ' ಪಡೆಯಿತು, ಪ್ರಸಿದ್ಧಿಯೂ ಆಯಿತು. ಅನೇಕ ವೀಕ್ಷಕರು ಹಿಂದೂ ಧರ್ಮದ ಬಗ್ಗೆ, ಬಹಳ ಕುತೂಹಲಿಗಳಾಗಿ ನನ್ನನ್ನು ಹಲವಾರು ಪ್ರಶ್ನೆಗಳನ್ನು ಕೇಳುತ್ತಿದ್ದರು. ತಮ್ಮ ಸಂಶಯಕ್ಕೆ ಸಮಾಧಾನ ಬಯಸಿ ಬರುತ್ತಿದ್ದರು! ನಿಜಕ್ಕೂ ಆ ಸಮಯದಲ್ಲಿ ಅದೊಂದು ಅಪೂರ್ವ ಅನುಭವ ನನಗೆ!

ಮತ್ತೊಂದು ಸುವರ್ಣಾವಕಾಶ

ಈ ೧೦೪ ಭಾಷಣಗಳ ಫಲಶ್ರುತಿಯೋ ಎನ್ನುವಂತೆ, ನನಗೆ ಮತ್ತೊಂದು ಸುವರ್ಣಾವಕಾಶ ಸಿಕ್ಕಿತು!

೧೯೮೨ರಲ್ಲಿ ಬಿ.ಬಿ.ಸಿ.ಯವರು ತಮ್ಮ ಪ್ರಸಾರ ಜಾಲಕ್ಕೆ ಅರುವತ್ತು ವರ್ಷಗಳು ತುಂಬಿದ ಸಂಭ್ರಮದ 'ವಜ್ರ ಮಹೋತ್ಸವ'ವನ್ನು ಸೇಂಟ್ ಪಾಲ್ಸ್ ಚರ್ಚಿನಲ್ಲಿ ವೈಭವದಿಂದ ನಡೆಸಿದರು. ಈ ಕಾರ್ಯಕ್ರಮಕ್ಕೆ ಬ್ರಿಟನ್‌ನ ಎಲಿಜ಼ಬೆತ್ ರಾಣಿಯವರೇ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅವರ ಪತಿ ಹಾಗೂ ಪರಿವಾರದವರೂ ಬಂದಿದ್ದರು. ಸುಪ್ರಸಿದ್ಧ ವಯೋಲಿನ್ ವಾದಕ ಯಹೂದಿ ಮೆನ್ಯುಹಿನ್‌ರ ಏಕವ್ಯಕ್ತಿ ವಯೋಲಿನ್ ವಾದನವೇ ಸಮಾರಂಭಕ್ಕೆ ಪ್ರಾರ್ಥನೆಯಾಗಿತ್ತು. ಸುಮಾರು ೪೦೦೦ ಜನರಿಂದ ಕಿಕ್ಕಿರಿದಿದ್ದ ಆ ಭವ್ಯ ಸಭಾಂಗಣದಲ್ಲಿ, ಗುಂಡುಸೂಜಿ ಕೆಳಗೆಬಿದ್ದರೂ ಆ ಶಬ್ದ ಕೇಳಿಸುವಂತಿದ್ದ ಮೌನ, ಗಾಂಭೀರ್ಯ! ಇಂತಹ ಸಭೆಯಲ್ಲಿ ಎಲ್ಲ ಧರ್ಮಗಳ ಪ್ರಾರ್ಥನೆಯನ್ನು ಮಾಡಲು ಬಿ.ಬಿ.ಸಿ. ಯವರು ಏರ್ಪಾಡು ಮಾಡಿದ್ದರು. 'ಆಯಾ ಧರ್ಮಗಳ ಮುಖಂಡರಿಂದಲೇ ಆ ಪ್ರಾರ್ಥನೆಗಳನ್ನು ಮಾಡಿಸಲು, ಆ ಗುಂಪನ್ನು, ನೀವೇ ಸರಿಯಾದ ಸಮಯದಲ್ಲಿ ಹೇಳುವಂತೆ ಮಾರ್ಗದರ್ಶನ ಮಾಡಿ' ಎಂದು ನನಗೇ ಹೇಳಿದ್ದರು! ಹಾಗೆಯೇ ನಾನು ಆಯಾ ಧರ್ಮಗಳ ಉಗಮದ ಕಾಲವನ್ನು ದೃಷ್ಟಿಯಲ್ಲಿಟ್ಟು ಕೊಂಡು, ಅದರ ಪ್ರಕಾರವಾಗಿ ಸಿಖ್‌ಮತವೇ ಅತ್ಯಂತ ಕಿರಿಯದು, ಅದಾದನಂತರ ಒಂದಾದ ಮೇಲೆ ಒಂದರಂತೆ ಬರುವ ಇಸ್ಲಾಂ, ಕ್ರೈಸ್ತ ಧರ್ಮ, ಬೌದ್ಧಮತ, ಜೈನಮತ, ಯಹೂದ್ಯ ಮತ, ಜುಡಾಯಿಸಂ ಆದನಂತರ ಕೊನೆಯಲ್ಲಿ ನಮ್ಮ ಹಿಂದೂ ಪ್ರಾರ್ಥನೆಯನ್ನು ಮಾಡುವ ವ್ಯವಸ್ಥೆ ಮಾಡಿದ್ದೆ. ನಾನು ಹಿಂದೂ ಪ್ರಾರ್ಥನೆಗಾಗಿ ಋಗ್ವೇದದಿಂದ ಒಂದು ಶ್ಲೋಕವನ್ನು ಆರಿಸಿಕೊಂಡಿದ್ದೆ. 'ಸಂಗಚ್ಛಧ್ವಂ ಸಂವದಧ್ವಮ್' ಎನ್ನುವ ಪ್ರಾರ್ಥನೆಯಾಗಿತ್ತು ಅದು.

ಇದು ಋಷಿಗಳು ಮನುಕುಲಕ್ಕೆ ನೀಡಿರುವ ಕೊನೆಯ, ಕಟ್ಟಕಡೆಯ ಸಂದೇಶ :

ಸಂಗಚ್ಛಧ್ವಂ ಸಂವದಧ್ವಂ
ಸಂ ವೋ ಮನಾಂಸಿ ಜಾನತಾಮ್|
ಸಮಾನೋ ಮಂತ್ರಃ ಸಮಿತಿಸ್ಸಮಾನೀ
ಸಮಾನಂ ಮನಃ ಸಹ ಚಿತ್ತಮೇಷಾಂ
ಸಮಾನೀ ವ ಆಕೂತಿಃ ಸಮಾನಾ ಹೃದಯಾನಿ ವಃ
ಸಮಾನಮಸ್ತು ವೋ ಯಥಾ ವಃ ಸುಸಹಾಸತಿ |
ಓಂ ಶಾಂತಿಃ ಶಾಂತಿಃ ಶಾಂತಿಃ ||

ಮಾನವ ಸೇವೆಗಾಗಿ ಲೋಕಸಂಗ್ರಹ ಕಾರ್ಯಕ್ಕೆ ಒಂದು ಯೋಜನೆಯನ್ನು ಹಾಕಿಕೊಳ್ಳಿರಿ. ಸಭೆ ಸೇರಿ ಚರ್ಚಿಸಿರಿ. ನಿಮ್ಮ ನಿಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರಿ. ಅಭಿಪ್ರಾಯ ಭೇದವಿದೆ ಎಂದ ಮಾತ್ರಕ್ಕೆ ಸಂಕೋಚ ಪಡಬೇಡಿರಿ. ಕೊನೆಗೆ ಒಮ್ಮತಕ್ಕೆ ಬನ್ನಿ. ಲೋಕಸೇವಾ ಕಾರ್ಯದಲ್ಲಿ ನಿಮ್ಮ ಅನಿಸಿಕೆ, ಮನೋಭಾವ, ಕಳಕಳಿ ಒಂದಾಗಿ ಇರಲಿ. ಲೋಕಹಿತವೇ ನಿಮ್ಮ ಪ್ರಥಮ ಕರ್ತವ್ಯವಾಗಿರಲಿ... ಎಲ್ಲರೂ ಶಾಂತಿಗಾಗಿ ಪ್ರಯತ್ನಿಸಿರಿ. ಸಫಲರಾಗಿರಿ...'

ಉದಾರ ಮನಸಿನವರಿಗೆ ಪ್ರಪಂಚವೇ ಒಂದು ಕುಟುಂಬ, "ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್" ಸದ್ವಿಚಾರಗಳು ನಮಗೆ ಎಲ್ಲೆಡೆಯಿಂದಲೂ ಬರಲಿ "ಆನೋ ಭದ್ರಾಃ ಕ್ರತವೋ ಯಂತು ವಿಶ್ವತಃ" ಎಂದು ಹೇಳಿ ಮುಗಿಸಿದೆ.

ಎಲ್ಲರದೂ ಮುಗಿದು ನನ್ನ ಸರದಿ ಬಂದಾಗ, ಆ ನಾಲ್ಕು ಸಾವಿರ ಇಂಗ್ಲಿಷ್ ಜನಸ್ತೋಮವನ್ನು ನೋಡಿ ಮನದಲ್ಲಿ ಮೊದಲು ಹೆದರಿಕೆಯಾದರೂ, ಎದುರಿಗೇ ಮಹಾರಾಣಿಯವರ ಉಪಸ್ಥಿತಿಯು ಇದ್ದು ಕೊಂಚ ಅಧೀರತೆ ಎನಿಸಿದರೂ ಸಾವರಿಸಿಕೊಂಡೆ. ಭಾರತೀಯ ಸಂಪ್ರದಾಯದ ಉಡುಗೆಯಂತೆ ಕಚ್ಚೆಪಂಚೆ, ಜುಬ್ಬಾ, ಹೆಗಲ ಮೇಲೆ ಶಾಲು ಹಾಕಿಕೊಂಡಿದ್ದ ನಾನು ಮೈಕಿನ ಮುಂದೆ ನಿಲ್ಲುವವರೆಗೆ ಅದೆಷ್ಟು ಬಾರಿ ಶ್ರೀ ಗಣೇಶನ, ಮಾಧವನ ನಾಮಸ್ಮರಣೆ ಮಾಡಿದ್ದೆನೋ ತಿಳಿಯದು. ಸರ್ವಧರ್ಮ ಸಮ್ಮೇಳನದ ಅನೇಕ ಕಡೆಗಳಲ್ಲಿ ಮಾತನಾಡಿದ್ದರೂ ನನಗೆ, ಇಂದು ಆಗುತ್ತಿದ್ದ ಅನುಭವ ಅಂದು ಆಗಿರಲಿಲ್ಲ... ಎಂಥದೋ ಬಹಳ ಪ್ರಾಮುಖ್ಯವನ್ನು ಒದಗಿಸಿರುವಂತಹಾ ಸನ್ನಿವೇಶ ಅದಾಗಿತ್ತು. 'ಸಂಗಚ್ಛಧ್ವಂ ಸಂವದಧ್ವಮ್' ಎಂದು ಪ್ರಾರಂಭಿಸಿ, ನಿಧಾನವಾಗಿ ನಾನು ಹೇಳಿದ ಪ್ರಾರ್ಥನೆಯಲ್ಲಿ, ಶ್ಲೋಕಕ್ಕೆ ತಕ್ಕಂತೆ ಇದ್ದ ಧ್ವನಿಯ ಏರಿಳಿತ, ಆ ಪದಗಳ ನಾದ, ಅದರಲ್ಲಿದ್ದ ಭಾವ, ಪ್ರೇಕ್ಷಕ ವರ್ಗವನ್ನು ಬಹಳವಾಗಿ ಪ್ರಭಾವಿತರಾಗಿ ಮಾಡಿತ್ತು. ನನಗರಿವಿಲ್ಲದೆಯೇ ನನ್ನ ಧ್ವನಿಗೆ ಎಂಥದೋ ಶಕ್ತಿ ಬಂದು, ಅಂದು ಆ ಪ್ರಾರ್ಥನೆಯನ್ನು ಬಹಳ ಪರಿಣಾಮಕಾರಿಯಾಗಿ ಹೇಳಲು ಸಾಧ್ಯವಾಗುವಂತೆ ಮಾಡಿತ್ತು! ಹೌದು. ಇದೆಲ್ಲ ಆ ಭಗವಂತನ ಕೃಪೆ! ಇಲ್ಲವಾಗಿದ್ದರೆ, ಮತ್ತೂರಿನಲ್ಲಿ ತುತ್ತು ಅನ್ನಕ್ಕೂ ಕಷ್ಟಪಡುತ್ತಿದ್ದು, ಸರಿಯಾಗಿ ಓದಲೂ ಆಗದೆ, ಜೀವನದಲ್ಲಿ ಏಳು-ಬೀಳುಗಳನ್ನು ಧೈರ್ಯಗೆಡದೆ ನಿಭಾಯಿಸಿಕೊಂಡು... ಇಲ್ಲಿಯ ತನಕ ಬರುವಂತೆ ಮಾಡಿದವನು 'ಅವನೇ!', ಈಗ ೪೦೦೦ಕ್ಕೂ ಹೆಚ್ಚು ವಿದೇಶೀ ಸಮೂಹದ ಮುಂದೆ ಸನಾತನ ಧರ್ಮದ ಪ್ರಾರ್ಥನೆ ಹೇಳಲು ನಿಲ್ಲಿಸಿರುವವನೂ 'ಅವನೇ', ಈಗ ಈ ಪ್ರಾರ್ಥನೆ ಕೇಳಿ ಇವರೆಲ್ಲ ಮೂಕವಿಸ್ಮಿತರಾಗುವಂತೆ ಮಾಡಿರುವವನೂ 'ಅವನೇ!' ಅವರೆಲ್ಲರಲ್ಲೂ ಕುಳಿತು ತನ್ನ ಸ್ತುತಿಯನ್ನು ತಾನೇ ಕೇಳುತ್ತಿರುವವನೂ'ಅವನೇ!!' ಪ್ರಾರ್ಥನೆ ಮುಗಿದನಂತರ ಚಿಕ್ಕದಾಗಿ-ಚೊಕ್ಕದಾದ ಅರ್ಥವನ್ನು ನಾನು ಹೇಳಿದಾಗ... ಆಹಾ... ಆ ಚಪ್ಪಾಳೆಗಳ ನಾದ! ನನ್ನ ಕಿವಿಯಲ್ಲಿ ಇನ್ನೂ ಗುಂಯ್ ಗುಡುವಂತೆ ಭಾಸವಾಗುತ್ತಿದೆ! ಮನಸಿಗೆ ಬಂದಂತೆ ಮಾಡಿದ ಕರತಾಡನವಲ್ಲ ಅದು! ಲಯಬದ್ಧವಾದ ಮೃದಂಗಗಳ ಮೇಲೆ ಒಂದೊಂದೇ ಏಟನ್ನು ಬಡಿದಂತೆ ಬರುವ ಧೀಂ... ಎನ್ನುವ ನಾದ! ವೇದ ಉಪನಿಷತ್ತುಗಳಿಗೆ ಜನ್ಮಕೊಟ್ಟು ಲೋಕಮಾನ್ಯ ಆಗುವಂತೆ ಮಾಡಿದ 'ಭಾರತಮಾತೆ' ನಿಜಕ್ಕೂ ಧನ್ಯಳು! ಅವಳ ಮಡಿಲ ಕಂದನಾಗಿ ನಾನು ಹುಟ್ಟಿದುದು ಅದೆಷ್ಟು ಜನ್ಮಗಳ ಪುಣ್ಯದ ಫಲವೋ! ಆ ವೇದಮಾತೆಯನ್ನು ವಿದೇಶಿಯರ ಮುಂದೆ ಹೇಳುವ ಸೌಭಾಗ್ಯ ಪಡೆದ ನನ್ನ ಸುಕೃತವೇನೋ... ಎಂದೆಲ್ಲ ಎನಿಸಿ ಮೈ ರೋಮಾಂಚನವಾಗುವಂತಾಯಿತು.

ಇದಾದನಂತರ ಸುಮಾರು ಮೂರು ಘಂಟೆಗಳ ಇತರ ಕಾರ್ಯಕ್ರಮಗಳಾದವು. ಸಭೆಯಲ್ಲಿ ಎಲ್ಲರೂ ಬಹಳ ಸಂಯಮದಿಂದ, ಸಜ್ಜನಿಕೆಯಿಂದ ಕುಳಿತಿದ್ದರು. ನಿಶ್ಶಬ್ದ. ಅಲ್ಲಿ ಧರ್ಮವನ್ನು ಪ್ರತಿನಿಧಿಸುವವರನ್ನು 'ಧರ್ಮದ ಮಂತ್ರಿ' (Minister of Religion) ಎನ್ನುತ್ತಾರೆ. ನಾವೆಲ್ಲ ಪ್ರಾರ್ಥನೆ ಹೇಳಿದನಂತರ ನಮ್ಮ ನಮ್ಮ ಸ್ಥಾನದಲ್ಲಿ ಕುಳಿತಿದ್ದೆವು. ಕಾರ್ಯಕ್ರಮ ಮುಗಿದು ಇನ್ನೇನು ಹೊರಡಬೇಕು ಎನ್ನುವಾಗ ಅಲ್ಲಿಗೆ ಬಂದ, ಶಿಸ್ತಿನಿಂದ ಉಡುಪು ಧರಿಸಿದ್ದ ಒಬ್ಬ, "ಮಹಾರಾಣಿಯವರ ಬಳಿಗೆ ನಿಮ್ಮನ್ನು ಕರೆದೊಯ್ಯಲು ಬಂದಿದ್ದೇನೆ. ಹೊರಡೋಣವೇ?" ಎಂದ. ನನ್ನ ಪಕ್ಕದಲ್ಲಿ ರಬ್ಬೈ ಇದ್ದ, ಇಸ್ಲಾಂನ ಮುಲ್ಲಾ ಇದ್ದ, ಕ್ರೈಸ್ತರ ಪಾದ್ರಿ ಇದ್ದರು. ನಾನು ಅವರಾರಿಗೋ ಹೇಳುತ್ತಿದ್ದಾನೆ ಎಂದು ಸುಮ್ಮನಿದ್ದೆ. ನನಗೆ ಬೇರೆ ಯಾವ ನಿರೀಕ್ಷೆಯೂ ಇರಲಿಲ್ಲವಲ್ಲ ಅದಕ್ಕೆ! ಆದರೆ ಅವನು ಮತ್ತೊಮ್ಮೆ "ನಿಮ್ಮನ್ನು, ಹಿಂದೂ ಧರ್ಮದ ಮಂತ್ರಿಗಳೇ, ನಿಮ್ಮನ್ನು ಮಹಾರಾಣಿಯವರ ಬಳಿಗೆ ಕರೆದೊಯ್ಯಲು ಬಂದಿದ್ದೇನೆ. ಹೊರಡೋಣವೇ?" ಎಂದ. ನನಗೋ ಆಶ್ಚರ್ಯ, ಆನಂದ, ಭಯ, ಕಾತರ, ಮೈಪುಳಕ ಎಲ್ಲವೂ ಒಟ್ಟಿಗೇ ಆದ ಅನುಭವ! 'ಮಹಾರಾಣಿ ನನ್ನನ್ನು ಕರೆತರಲು ಹೇಳುವುದು ಎಂದರೆ...' ತಡಬಡಾಯಿಸುವಂತಾದರೂ ಸಭೆಯ ಗಾಂಭೀರ್ಯಕ್ಕೆ ಭಂಗಬಾರದಂತೆ ಮೌನವಾಗಿ ಎದ್ದು ಅವನನ್ನು ಹಿಂಬಾಲಿಸಿದೆ. ನನ್ನನ್ನು ನೋಡಿ ನಿಂತಿದ್ದ ಮಹಾರಾಣಿಯವರು ನನಗೆ ಹಸ್ತಲಾಘವವನ್ನು ಕೊಡಲು ತಮ್ಮ ಕೈಯಲ್ಲಿದ್ದ ಗ್ಲೋವ್ಸ್ (ಕೈಚೀಲ) ತೆಗೆದರು. ನಾನು ಅವರನ್ನು ನೋಡಿದೊಡನೆಯೇ ಬಗ್ಗಿ ವಂದಿಸಿ, ಕೈಗಳೆರಡನ್ನೂ ಜೋಡಿಸಿ ಕೈಮುಗಿದು 'ನಮಸ್ಕಾರ' ಎಂದೆ. ಅವರಿಗೆ ಆಶ್ಚರ್ಯ! 'ಏನಿದರ ಅರ್ಥ?' ಎಂದರು ಅದೇ ಅಚ್ಚರಿಯಲ್ಲಿ. ಅದಕ್ಕೆ ನಾನು "ಮಹಾರಾಣಿಯಲ್ಲಿರುವ ದೇವರೂ, ನನ್ನಲ್ಲಿರುವ ದೇವರೂ ಇಬ್ಬರೂ ಒಂದೇ. ಆದ್ದರಿಂದ ಮಹಾರಾಣಿಯವರಲ್ಲಿರುವ ದೇವರಿಗೆ ನನ್ನ ಪ್ರಣಾಮಗಳನ್ನು ಸಲ್ಲಿಸುತ್ತಿದ್ದೇನೆ ಎಂದು ಅರ್ಥ ಮಹಾರಾಣಿಯವರೇ!" ಎಂದೆ. ಅವರಿಗೆ ನನ್ನ ಈ ವಿವರಣೆ ಕೇಳಿ ಬಹಳ ಸಂತೋಷವಾಯಿತು. "ಹಾಗಾದರೆ ನಾನೂ ಹೀಗೆ 'ನಮಸ್ಕಾರ' ಎನ್ನಬಹುದೇ ನಿಮಗೆ?" ಎಂದು ಕೇಳುತ್ತಾ ತಾವೂ ಕೈಗಳನ್ನು ಜೋಡಿಸಿ, ನನಗೆ ಕೈ ಮುಗಿದು 'ನಮಸ್ಕಾರ' ಎಂದರು! ನನಗೋ ಬಹಳ ಸಂಭ್ರಮ-ಸಂತಸವಾಯಿತು. ಅನಂತರ "ನಿಮ್ಮ ಪ್ರಾರ್ಥನೆ ಬಹಳ ಚೆನ್ನಾಗಿತ್ತು. ನಿಮ್ಮದೇನೂ ಅಭ್ಯಂತರ ಇಲ್ಲದಿದ್ದರೆ ನನಗೆ ನಿಮ್ಮ ಪ್ರಾರ್ಥನೆಯ ಒಂದು ಪ್ರತಿ ಬೇಕಾಗಿತ್ತು. ನನ್ನ ಬಳಿ ಇಟ್ಟುಕೊಳ್ಳುತ್ತೇನೆ. ನನಗೆ ಅದನ್ನು ಕೊಡಲಾಗುವುದೇ?" ಎಂದರು... ಆಗದೇ ಮತ್ತೆ? ಮುನ್ನೂರು ವರ್ಷಗಳು ಆಳಿ, ತಿಳಿದುಕೊಳ್ಳಲಾಗದಿದ್ದುದನ್ನು ಮೂರು ನಿಮಿಷಗಳ ಪ್ರಾರ್ಥನೆ ಕೇಳಿ ತಿಳಿದುಕೊಳ್ಳಬೇಕೆಂದು ಬಯಸಿದವರಿಗೆ ನಮ್ಮ ಧರ್ಮದ ಸಾರವನ್ನು ಹೇಳುವ ಈ ಅರ್ಥಪೂರ್ಣ ಪ್ರಾರ್ಥನೆಯ

ಪ್ರತಿಯನ್ನು ಕೊಡದೆ ಮತ್ತಾರಿಗೆ ಕೊಡುವುದು? ನನಗೆ ಎಂಥದೋ ಯೋಚನೆ ಬಂದು, ಆ ಪ್ರಾರ್ಥನೆಯನ್ನು ಕೆಲವು ಪ್ರತಿ ಮಾಡಿಸಿ ಇಟ್ಟುಕೊಂಡು ಬಂದಿದ್ದೆ. ಈಗ ಅದು ಸದುಪಯೋಗವಾಗುವ ಸಮಯ ಬಂದಿತ್ತು. ತಕ್ಷಣವೇ ಆ ಪ್ರತಿಯನ್ನು ಅವರ ಕೈಗೆ ಕೊಟ್ಟೆ. ಅದನ್ನು ನೋಡಿದ ಅವರು ಆ ಪ್ರಾರ್ಥನೆ ಪೂರ್ಣ ಅರ್ಥವೂ ಇಂಗ್ಲಿಷಿನಲ್ಲಿರುವುದನ್ನು ನೋಡಿ ಬಹಳ ಸಂತೋಷಪಟ್ಟು "ಓ... ನೀವು ಆಗಲೇ ಈ ಪ್ರಾರ್ಥನೆಯ ಪ್ರತಿಯನ್ನು ಮಾಡಿಸಿ ತಂದಿದ್ದೀರಿ? ಒಳ್ಳೆಯ ಆಲೋಚನೆ. ನಿಮ್ಮ ಈ ಮುಂದಾಲೋಚನೆ ನನಗೆ ಹಿಡಿಸಿತು..."ಎಂದು ಆ ಪ್ರಾರ್ಥನೆಯ ಪ್ರತಿಯನ್ನು ತಮ್ಮ ಬಳಿ ಇಟ್ಟುಕೊಂಡರು. "ಈಗ ಹಸ್ತಲಾಘವವನ್ನು ಕೊಡಬಹುದಲ್ಲವೇ?" ಎಂದರು. "ಅಗತ್ಯವಾಗಿ" ಎಂದೆ. ಮೈ ಬೆವರಿತು, ಕೈಯೂ ನಡುಗಿತು, ಮಲ್ಲಿಗೆ ಹೂವನ್ನು ಮುಟ್ಟಿದ ಅನುಭವವಾಯಿತು, ಅವರು ನನಗೆ ಹಸ್ತಲಾಘವವನ್ನು ಕೊಟ್ಟಾಗ! ಮತ್ತೊಮ್ಮೆ ಅವರಿಗೆ ವಂದಿಸಿ ಅಲ್ಲಿಂದ ಬೀಳ್ಕೊಂಡೆ! ಇದು ನನ್ನ ಜೀವನದಲ್ಲಿನ ಅವಿಸ್ಮರಣೀಯ ದಿನವಾಗಿತ್ತು!

ವಿದ್ಯಾಭವನಕ್ಕೆ ಈಗ ಸರ್ಕಾರದ ಮಾನ್ಯತೆ ಸಿಕ್ಕಿತು. ಬ್ರಿಟನ್ ಸರ್ಕಾರ ವಿದ್ಯಾಭವನದಲ್ಲಿ ಮಾಡಿದ ಕೋರ್ಸುಗಳಿಗೆ ಮಾನ್ಯತೆ ನೀಡಿ, ಭವನಕ್ಕೆ ಗೌರವ ಸಲ್ಲಿಸಿತ್ತು. ಸಾರ್ವಜನಿಕ ಸ್ಥಳಗಳಲ್ಲಿ ನಮ್ಮ ಭವನದ ಕಾರ್ಯಕ್ರಮಗಳು ನಡೆದವು. ಭಾರತೀಯ ಸುದ್ದಿಪತ್ರಿಕೆಗಳು, ದಿನಪತ್ರಿಕೆಗಳು, ವಾರಪತ್ರಿಕೆಗಳು ಎಲ್ಲವೂ ನಮಗೆ ಸಾಕಷ್ಟು ಬೆಂಬಲ, ಪ್ರೋತ್ಸಾಹ ಕೊಟ್ಟವು. ಈ ಯಶಸ್ಸಿನ ರಹಸ್ಯ ಏನೆಂದರೆ, ನಾವು ಸಾರ್ವಜನಿಕ ಸೇವಾಕ್ಷೇತ್ರವನ್ನು ನಮ್ಮ ಕಾರ್ಯಕ್ಷೇತ್ರವನ್ನಾಗಿ ಆರಿಸಿಕೊಂಡು, ದುಡಿಯಲು ಪ್ರಾರಂಭಿಸಿದಾಗ, ಯಶಪಡೆಯ ಬೇಕಾದರೆ, ಜನಪ್ರಿಯತೆ ಗಳಿಸಬೇಕಾದರೆ ಎಲ್ಲರ ಜತೆಯಲ್ಲೂ ಬೆರೆತು ಸಹಕರಿಸಿಕೊಂಡು ಹೋಗುವುದನ್ನು ಕಲಿತಿರಬೇಕು, 'ಅನುಕೂಲ ಸಿಂಧು' ವಾಗಿರ ಬೇಕು. ನಮ್ಮ ಸ್ವಭಾವದಲ್ಲಿ ಯಾವುದೇ ರೀತಿಯ ಕಟ್ಟು ಪಾಡುಗಳೂ ಸಲ್ಲದು, ಸಮಯ ಸಂದರ್ಭ, ಸಂಬಂಧಪಟ್ಟ ಜನ ಎಲ್ಲರ ಜತೆಗೂ ಹೊಂದಾಣಿಕೆ ಮಾಡಿಕೊಳ್ಳುವುದು ಅಗತ್ಯ, ಅವಶ್ಯ. ಸಮಾಜದಲ್ಲಿರುವ ಎಲ್ಲ ರೀತಿಯ ಸಾವಿರಾರು ಜನ ಬರುವ-ಹೋಗುವವರಿದ್ದಾಗ ನಾನು ನನ್ನದೇ ನಡೆಯಬೇಕು ಎಂದು ಹಟ ಮಾಡುತ್ತ ಕೂರಲು ಸಾಧ್ಯವಿಲ್ಲ.

ಎಲ್ಲ ತರಹದ ಜನಗಳ ಮಿಶ್ರಣ ನಮ್ಮ ಸಮಾಜ, ಅದರಲ್ಲೂ ಅಲ್ಲಿ , ವಿದೇಶದಲ್ಲಿ ತರ್ಕ ಮಾಡುವವರು, ಅಷ್ಟಾಗಿ ಯೋಚನೆ ಮಾಡದವರು, ಯಾವ ವಿಷಯಕ್ಕೂ ತಲೆ ಹಾಕದವರು, ಚೆನ್ನಾಗಿ ವಿದ್ಯಾಭ್ಯಾಸ ಮಾಡಿರುವ ವಿದ್ವಾಂಸರು, ಅಂಥ ವಿದ್ಯಾಭ್ಯಾಸ ಇಲ್ಲದ ಶ್ರೀಮಂತ ಸಜ್ಜನರು, ವ್ಯಾಪಾರೋದ್ಯಮದವರು ಹೀಗೆ ಸರ್ವಭಾವಗಳ ಸಂಗಮ ಆ ಸಮಾಜ. ಇಂಗ್ಲಿಷಿನವರು, ಅನೇಕ ಮತಧರ್ಮದವರು ಬಂದು-ಹೋಗುವವರಿದ್ದಾಗ ಇಂತಹವರು 'ನನಗಿಷ್ಟವಿಲ್ಲ, ಇಂತಹವರನ್ನು ಕಂಡರೆ ನನಗಾಗದು' ಎಂದು ಯಾರ ಬಗ್ಗೆಯೂ ಹೇಳುವಂತಿಲ್ಲ, ಹೇಳಬಾರದು! ಹಾಗೇನಾದರೂ ಭೇದಭಾವ ತೋರಿಸಿದರೆ ನಾವು ಕೆಲಸಮಾಡುತ್ತಿರುವ ಗೌರವಾನ್ವಿತ ಸಂಸ್ಥೆಗೆ ಕೆಟ್ಟ ಹೆಸರು ಬರುತ್ತದೆ. ಹಾಗೆ ಕೆಲಸ ಮಾಡುವವರು ತಮ್ಮ ಆಸೆ - ಆಕಾಂಕ್ಷೆಗಳನ್ನು ಬದಿಗಿಟ್ಟು, ಬೇರೆಯವರ-ಸಂಸ್ಥೆಯ ಹಿತಕ್ಕೋಸ್ಕರ ತ್ಯಾಗ ಮಾಡುವುದನ್ನು ಕಲಿತಿರಬೇಕು... ಅದು ಸ್ವಭಾವದಲ್ಲಿ ಮೈಗೂಡಿ ಬರಬೇಕು! ವ್ಯಕ್ತಿಗತವಾಗಿ 'ಇದು ನನಗಿಷ್ಟ, ನಾನಿಲ್ಲಿಗೆ ಹೋಗಬೇಕು', 'ಇದರಿಂದ ನನಗೆ ಮನರಂಜನೆ', 'ಇದರಿಂದ ನನಗೆ ಸುಖವಿದೆ-ಸಂತೋಷಸಿಗುತ್ತದೆ' ಎಂದು ಯಾವ ಹವ್ಯಾಸಕ್ಕೂ ಹೋಗುವಂತಿಲ್ಲ, ಇದೊಂದು ರೀತಿಯ ತಪಸ್ಸು! ಇಂಗ್ಲೆಂಡಿನಲ್ಲಿದ್ದ ೨೩ ವರ್ಷ, ೯ ತಿಂಗಳುಗಳು ನಾನು ಹೀಗೆಯೇ ಇದ್ದದ್ದು. ಇದನ್ನು ನಾನು ನನ್ನ ಓದುಗರಲ್ಲಿ ಜಂಭ ಮಾಡಲು ಹೇಳುತ್ತಿಲ್ಲ.

ಕಾಯಕವೇ ಕೈಲಾಸ

'ಕಾಯಕವೇ ಕೈಲಾಸ' ಎಂದು ಕೆಲಸದಲ್ಲಿ ಮುಳುಗಿಹೋದ ನಾನು ನನ್ನ ಕನಸು-ಮನಸಿನಲ್ಲಿಯೂ ವಿದ್ಯಾಭವನದ ಏಳಿಗೆಯನ್ನೇ ತುಂಬಿಕೊಂಡಿದ್ದುದು. ವಿದ್ಯಾಭವನವೇ ನನಗೆ ಸರ್ವಸ್ವವೂ ಆಗಿದ್ದುದು, ವಿದ್ಯಾಭವನದ ಕೆಲಸಗಳೇ ನಾನು ಮಾಡುತ್ತಿದ್ದ ಪೂಜೆ-ಪುನಸ್ಕಾರಗಳು, ವಿದ್ಯಾಭವನಕ್ಕೆ ಬಂದು ಹೋಗುವವರೆಲ್ಲ ನನ್ನ ಪಾಲಿಗೆ ದೇವತೆಗಳು, ವಿದ್ಯಾಭವನವೇ ನನ್ನ ಕೈಲಾಸ-ವೈಕುಂಠಗಳಾಗಿದ್ದುದು, ಅಲ್ಲಿಯೇ ನನ್ನ ಸಾಧನಾ ತಪಸ್ಸುಗಳು ನಡೆಯುತ್ತಿದ್ದುದು! ನನ್ನ ವಿಷಯ ಹಾಗಿರಲಿ, ನನ್ನ ಕೈಹಿಡಿದ ನನ್ನಾಕೆಯನ್ನೂ ಒಮ್ಮೆಯೂ ಎಲ್ಲಿಗೂ ಕರೆದುಕೊಂಡು ಹೋಗಲಿಲ್ಲ, ಅಷ್ಟು ವರ್ಷಗಳೂ ನಾನು. ನನ್ನ ಜತೆ ಅವಳೂ ಭಾರತದ ಹಳ್ಳಿಯಲ್ಲಿ ಮನೆಗೆಲಸ ಮಾಡಿಕೊಂಡಿರುವ ಗೃಹಿಣಿಯಂತೆಯೇ ಇದ್ದದ್ದು. ವ್ಯತ್ಯಾಸ ಇಷ್ಟೇ, ಅವಳು ಅಲ್ಲಿ ಲಂಡನ್ನಿನಲ್ಲಿ, ಭವನಕ್ಕೆ ಹೊಂದಿಕೊಂಡಂತಿದ್ದ ಮನೆಯಲ್ಲಿದ್ದಳು, ಭವನಕ್ಕೆ ಬಂದು ಹೋಗುವವರಿಗೆ ಪ್ರೀತಿಯಿಂದ ಸೇವೆ ಮಾಡುತ್ತಿದ್ದಳು, ನನಗೆ ಕೈಲಾದ ಸಹಾಯ ಮಾಡಿ ನನ್ನನ್ನು ನೋಡಿಕೊಳ್ಳುತ್ತಿದ್ದಳು. ಆದರೆ ಬಿಡುವಿಲ್ಲದ ನನ್ನ ಈ ದಿನಚರಿಯನ್ನು ೨೪ ವರ್ಷಗಳ ಕಾಲ ಒಂದೂ ಮಾತಾಡದೆ ಮೌನವಾಗಿ ಸೈರಿಸಿದಳು. ಒಮ್ಮೆಯೂ ತನ್ನನ್ನು ಎಲ್ಲಿಗೂ ಕರೆದುಕೊಂಡು ಹೋಗಲಿಲ್ಲವಲ್ಲ ಎಂದು ಗೊಣಗಲಿಲ್ಲ, ಬೇಸರ ತೋರಿಸಲಿಲ್ಲ! ಕಾರಣಾಂತರಗಳಿಂದ, ಕೆಲಸಗಳಿದ್ದಾಗ ಆಮ್‌ಸ್ಟರ್ ಡ್ಯಾಂಗೆ ಒಮ್ಮೆ, ಬರ್ಮುಡಾ ದ್ವೀಪಕ್ಕೆ ಒಮ್ಮೆ ಕರೆದೊಯ್ದಿದ್ದೆ ಅಷ್ಟೆ. ಅಷ್ಟು ಬಿಟ್ಟರೆ ಲಂಡನ್ ನಗರ ಸುತ್ತಲೂ, ಬ್ರಿಟನ್ ದ್ವೀಪಗಳನ್ನು ನೋಡಲೂ ಒಮ್ಮೆಯಾದರೂ ಅವಳನ್ನು ಕರೆದುಕೊಂಡು ಹೋದದ್ದಿಲ್ಲ. ಬಹುಶಃ ಅವಳ ಈ ಸಹನಾಶಕ್ತಿಯೇ ನನ್ನನ್ನು ಹೀಗೆ

ನಿರಂತರ ಕೆಲಸಗಳಲ್ಲಿ ನಿರಾತಂಕವಾಗಿ ತೊಡಗಿಕೊಳ್ಳುವಂತೆ ಮಾಡಿದುದು ಎಂದರೂ ತಪ್ಪಿಲ್ಲ!

ಭಾರತೀಯ ಪರಂಪರೆಯಲ್ಲಿ ಪತಿ ಪತ್ನಿಗೆ, ಪತ್ನಿ ಪತಿಗೆ ಸಾಮಾನ್ಯವಾಗಿ ಕೃತಜ್ಞತೆಗಳನ್ನು ತಿಳಿಸುವ ರೂಢಿ ಇಲ್ಲ. ನಾವೇನು ಮಾಡಿದರೂ ಪರಸ್ಪರರ ಸುಖ-ಸಂತೋಷ ಅದರಲ್ಲಿ ಅಡಗಿರುತ್ತದೆ ಎಂದು ತಿಳಿದುಕೊಂಡಿರುವವರು ನಾವು. ಹಾಗಾಗಿ ಈ ವಿಷಯದಲ್ಲಿ ನನ್ನವಳಿಗೆ ನಾನೆಂದೂ Thanks ಎಂದು ಹೇಳದಿದ್ದರೂ, ಆ ಕೃತಜ್ಞತಾಭಾವ ನನ್ನಲ್ಲಿ ಸದೈವ ಜಾಗೃತವಾಗಿದ್ದುದು ಸುಳ್ಳಲ್ಲ! ಅವಳಿಗಿದ್ದ ಒಂದೇ ಒಂದು ಮನರಂಜನೆ ಎಂದರೆ ವಿದ್ಯಾಭವನದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ತಪ್ಪದೆ ಬಂದು ನೋಡಬಹುದಾಗಿದ್ದುದು! ಅದೂ ಅಲ್ಲಿನ ಅತಿಥಿಗಳು ನಮ್ಮ ಮನೆಗೆ ಬಂದು, ಕಾರ್ಯಕ್ರಮ ಮುಗಿದ ನಂತರ ನಮ್ಮಲ್ಲಿಗೇ ರಾತ್ರಿ ಊಟ ಉಪಾಹಾರಕ್ಕೆ ಬರುವವರಾದರೆ, ಆ ತಯಾರಿಯಲ್ಲಿ ತೊಡಗಿಕೊಂಡು ಮನೆಯಲ್ಲಿಯೇ ಇರಬೇಕಾಗುತ್ತಿತ್ತು! ಹೀಗೆ ನನ್ನೊಡನೆ ೨೪ ವರ್ಷಗಳನ್ನು ಲಂಡನ್ನಿನಲ್ಲಿ ಕಳೆದ ಅವಳಿಗೆ ಸಂಪಾದನೆಯಾದದ್ದು ಬಹಳ... ಬಹಳ ಜನರ ಪ್ರೀತಿ-ವಿಶ್ವಾಸ, ಅಕ್ಕರೆ-ಗೌರವಗಳು! 'ಲಕ್ಷ್ಮೀಜಿ', 'ರಾಜಮ್ಮ', 'ಅನ್ನಪೂರ್ಣೇಶ್ವರಿ' ಎಂದು ಕರೆಯುತ್ತಾ, ಅವಳನ್ನು ಸುತ್ತುವರೆದು ಕೊಳ್ಳುತ್ತಿದ್ದರು, ಬಹಳ ಆದರಿಸುತ್ತಿದ್ದರು! ತನ್ನ ಈ 'ಗಳಿಕೆ'ಯ ಬಗ್ಗೆ ಅವಳಿಗೂ ಅಭಿಮಾನವಿದೆ!

ಲಂಡನ್ನಿಗೆ ಬಂದ ತರುಣದಲ್ಲಿಯೇ ನನಗೆ ಆಪರೇಷನ್ ಆದದ್ದನ್ನು ನಾನು ಭಾರತದಲ್ಲಿದ್ದ ಇವಳಿಗೆ ತಿಳಿಸಿರಲಿಲ್ಲ, ಅನವಶ್ಯಕವಾಗಿ ಎಲ್ಲರೂ ಗಾಬರಿಪಡುತ್ತಾರೆ ಎಂದು. ಅಲ್ಲಿಗೆ ಬಂದನಂತರ ಈ ವಿಷಯ ತಿಳಿದುಕೊಂಡ ಇವಳು, ಬಹಳ ನೊಂದುಕೊಂಡರೂ ಪ್ರತಿಯಾಡಲಿಲ್ಲ. ಅಂದಿನಿಂದ ನನ್ನ ಕೆಲಸ ಕಾರ್ಯಗಳನ್ನು ಸರಿಯಾಗಿ ನಿರ್ವಹಿಸುವ ರೀತಿಯಲ್ಲಿ, ನನ್ನ ಹೊಟ್ಟೆಗೆ ಸರಿಹೊಂದುವ ಆಹಾರವನ್ನು ಬಹಳ ಎಚ್ಚರಿಕೆಯಿಂದ ತಯಾರಿಸಿ, ಸದೈವ ನನ್ನ ಆರೋಗ್ಯದ ಬಗ್ಗೆ ಅನನ್ಯ ಕಾಳಜಿ ವಹಿಸುತ್ತಿದ್ದ ಇವಳಿಗೆ, ಆ ಪರಿಧಿಯಿಂದ ಹೊರಬರುವುದೇ ಕಷ್ಟ ಎನಿಸುತ್ತಿತ್ತು, ಕೆಲವು ವರ್ಷಗಳವರೆಗೂ!! ಅನಂತರ ಅಲ್ಲಿನ ಪರಿಸರಕ್ಕೆ ಹೊಂದಿಕೊಂಡ ಇವಳು ನನಗೆ ಬರುವ ಫೋನಿನ ಕರೆಗಳನ್ನು ಕೇಳುವುದು, ನನಗೆ ವಿಷಯಗಳನ್ನು ಹೇಳುವುದು, ನಾನು ಮರೆತ ವಿಷಯಗಳನ್ನು ನೆನಪಿಸುವುದನ್ನು ಅಭ್ಯಾಸ ಮಾಡಿಕೊಂಡಳು. ಅವಳ ಇರುವಿಕೆ ನಮ್ಮ ಮನೆಗೆ ಬಂದು-ಹೋಗುವವರಿಗೆ ಅದೆಷ್ಟು ವಿಶ್ವಾಸ-ಪ್ರೀತಿ ಹೆಚ್ಚಿಸಿತ್ತೆಂದರೆ, ನನಗೆ ಫೋನಿಸಿದವರು ಇವಳ ಜತೆ ಎರಡು ಮಾತಾಡದೆ ಇರುತ್ತಿರಲಿಲ್ಲ!

ಸಂದರ್ಭೋಚಿತವಾಗಿರುವುದರಿಂದ, ಇಲ್ಲಿ ಒಂದು ಸಂಗತಿಯನ್ನು ಹೇಳುವುದು ತಪ್ಪಾಗಲಾರದು ಎಂದು ನನ್ನ ಭಾವನೆ. ನನ್ನ ಬಳಿಗೆ ವೇದ ಕಲಿಯಲು ಬರುತ್ತಿದ್ದ ಶ್ರೀಮತಿ ಜೆನಿನ್ ಮಿಲ್ಲರ್ ಒಮ್ಮೆ ಫೋನಿಸಿದರು. ಬೆಳಗ್ಗೆ ಎಂಟು ಘಂಟೆ, ಆ ವೇಳೆಗಾಗಲೇ ಅವರು ತರಗತಿಗೆ ಬರಬೇಕಿತ್ತು, ನಾನು ಅವರಿಗಾಗಿಯೇ ಕಾಯುತ್ತಿದ್ದೆ. ಫೋನನ್ನು ನಾನೇ ತೆಗೆದುಕೊಂಡೆನಾದರೂ, ಆಕೆ "ಮಾಥೂರ್‌ಜೀ, ದಯವಿಟ್ಟು ಫೋನನ್ನ ಲಕ್ಷ್ಮೀಜಿಗೆ ಕೊಡಿ" ಎಂದಳು. ಏಕೆ ಎಂದು ಅರ್ಥವಾಗದೆ ನಾನು ಇವಳಿಗೆ 'ಜೆನಿನ್ ಫೋನು ಮಾಡಿದ್ದಾರೆ, ನಿನ್ನ ಬಳಿ ಮಾತನಾಡಬೇಕಂತೆ' ಎಂದು ಹೇಳಿ ರಿಸೀವರನ್ನು ಇವಳ ಕೈಗಿತ್ತೆ. ಇವಳು ಎರಡು ನಿಮಿಷ ಅವರ ಜತೆ ಮಾತನಾಡಿ ವಂದನೆಗಳನ್ನು ತಿಳಿಸಿ ಫೋನಿಟ್ಟಳು. ನನ್ನ ಮುಖದಲ್ಲಿದ್ದ ಪ್ರಶ್ನೆ ಅವಳಿಗೆ ಅರ್ಥವಾಗಿತ್ತು. "ಜೆನಿನ್ ಈ ದಿನ ವೇದದ ತರಗತಿಗೆ ಬರುವುದಿಲ್ಲ" ಎಂದಳು, ನನ್ನ ಪ್ರಶ್ನೆಗೆ ಉತ್ತರ ಎನ್ನುವಂತೆ. ಉತ್ತರ ಪೂರ್ತಿಯಾಗಿರಲಿಲ್ಲ... ಮತ್ತೆ ಮುಂದುವರಿಸಿದಳು "ಅವರಿಗೆ ದಿನ ಅನುಕೂಲ ಇಲ್ಲವಂತೆ, ನಾನು ವೇದದ ತರಗತಿಗೆ ಬರುವುದು ಸರಿಯಾಗುತ್ತದೆಯೇ ಎಂದರು, ನಾನೇ 'ಪರವಾಗಿಲ್ಲ ಅನುಕೂಲವಾದ ದಿನವೇ ಬನ್ನಿ' ಎಂದೆ" ಎಂದಳು. ಜೆನಿನ್‌ನಲ್ಲಿದ್ದ ನಂಬಿಕೆ, ವೇದಗಳ ಬಗ್ಗೆ ಅವರಿಗಿದ್ದ ಗೌರವ, ಇವಳಿಗೆ ಜೆನಿನ್ ಮೇಲೆ ಗೌರವ ಹೆಚ್ಚುವಂತೆ ಮಾಡಿತ್ತು. ನನಗೂ ಎಂಥದೋ ಮೆಚ್ಚುಗೆ ಎನಿಸಿತು. ಆಕೆ ಹಾಗೇ ಬಂದಿದ್ದರೂ ನಮಗೇನೂ ತಿಳಿಯುತ್ತಿರಲಿಲ್ಲ. ಆದರೆ ಆಕೆ ಹಾಗೆ ಮಾಡದೆ, ಇದ್ದುದನ್ನು ನೇರವಾಗಿ ಹೇಳಿ, ಇವಳ ಅಭಿಪ್ರಾಯವನ್ನು ತಿಳಿದುಕೊಂಡು, ತಾನು ಕಲಿಯುತ್ತಿರುವ ವೇದಪಾಠಗಳ ಪಾವಿತ್ರ್ಯತೆಯ ಬಗ್ಗೆ ಗೌರವಾದರ ತೋರಿ, ಸಹಜವಾಗಿ ನಡೆದುಕೊಂಡಿದ್ದರು. ತಮ್ಮ ಮೇಲಿನ ನಮ್ಮ ಗೌರವ ಹೆಚ್ಚಿಸಿಕೊಂಡಿದ್ದರು! ನನ್ನಾಕೆ ಈ ತರಹದ ಸ್ವಭಾವ ವೈಶಿಷ್ಟ್ಯ ಹೊಂದಿದ್ದವರ ಪ್ರೀತಿಯನ್ನೇ ಅಲ್ಲಿ ಗಳಿಸಿದ್ದುದು!

ಯಾರೇ ಆದರೂ ಒಂದು ಮಹತ್ಕಾರ್ಯದಲ್ಲಿ ಸಂಪೂರ್ಣವಾಗಿ ತೊಡಗಿಕೊಂಡಾಗ, ಅಥವಾ ವಿಶೇಷ ಜವಾಬ್ದಾರಿಯನ್ನು ಹೊತ್ತಾಗ, ಅವರಿಗೆ ಮನೆಯವರೆಲ್ಲರ ಬೆಂಬಲ, ಪ್ರೋತ್ಸಾಹ, ಒತ್ತಾಸೆ, ಸಹಕಾರ ಇರುತ್ತದೆ. ಇದು ಭಾರತೀಯ ಕುಟುಂಬಗಳು ಎಂದಿನಿಂದಲೂ ನಡೆಸಿಕೊಂಡು ಬಂದಿರುವ ಒಂದು ಸತ್ಸಂಪ್ರದಾಯ, ಸಂಸ್ಕೃತಿ. ಅದನ್ನು ವಿಶೇಷವಾಗಿ ಹೇಳುವುದು ನಮ್ಮಲ್ಲಿಲ್ಲ, ಏಕೆಂದರೆ ಅದು ನಮಗೆ ಅಷ್ಟು ಸಹಜ, ಸ್ವಾಭಾವಿಕ. ಇಲ್ಲಿ ನಾನು ಇವಳ ವಿಷಯವಾಗಿ ಹೇಳಿದುದರ ಉದ್ದೇಶ ಏನೆಂದರೆ ೨೪ ವರ್ಷಗಳು ವಿದೇಶದಲ್ಲಿದ್ದು ಬಂದ ಇವಳಲ್ಲಿ ನಮ್ಮ ದೇಶದ ಬಹಳ ಜನ 'ಏನೂ ಬದಲಾವಣೆಯೇ ಆಗಿಲ್ಲವಲ್ಲ' ಎಂದು ಅಚ್ಚರಿ ವ್ಯಕ್ತಪಡಿಸಿದರು. ನಮಗೆ ತಿಳಿದವರಿಗೆ ಇದೊಂದು ಕುತೂಹಲ ಎಂದೇ ನನ್ನ ಭಾವನೆ. ಅದಕ್ಕೇ ಅವಳಿದ್ದ ಪರಿಸರ, ಅವಳ ದಿನಚರಿ, ಅವಳ ಕೆಲಸ ಕಾರ್ಯ ಇವುಗಳ ಬಗ್ಗೆ ನಾಲ್ಕು ಮಾತುಗಳನ್ನು ಹೇಳುವುದು ಉಚಿತ ಎನ್ನಿಸಿ ಬರೆದಿರುವುದೇ ವಿನಾ ಪ್ರಶಂಸೆ ಮಾಡಬೇಕೆನ್ನುವ ಉದ್ದೇಶವಲ್ಲ. ಇದು ನನ್ನ ಓದುಗರಿಗೂ ಅರ್ಥವಾಗಿದ್ದೀತು ಎಂದು ನನ್ನ ನಂಬಿಕೆ!

ನಾವು ಹೀಗೆ ಅಲ್ಲಿದ್ದು ಬಂದದ್ದಕ್ಕೆ ನಮಗೆ ಯಾವುದೇ ಪಶ್ಚಾತ್ತಾಪ ಇಲ್ಲ. ನಾನು ಮದ್ರಾಸಿನಲ್ಲಿದ್ದಾಗ ರಮೇಶ್ ಕೃಷ್ಣನ್, ಸುಪ್ರಸಿದ್ಧ ಟೆನಿಸ್‌ಪಟು, ಇವರ ತಂದೆ ಕೃಷ್ಣನ್‌ರವರ ಜತೆ ಸುಗುಣ ವಿಲಾಸ ಕ್ಲಬ್‌ನಲ್ಲಿ ಟೆನಿಸ್ ಆಡುತ್ತಿದ್ದೆ, ಟೆನಿಸ್ ಎಂದರೆ ಅಂದಿನಿಂದಲೂ ನನಗೆ ಬಹಳ ಆಸೆ, ಆಸಕ್ತಿ. ಈಗ ವಿಂಬಲ್ಡನ್‌ನಲ್ಲಾಗುತ್ತಿದ್ದ ಟೆನಿಸ್ ಪಂದ್ಯಗಳ ಬಗ್ಗೆ ಪೇಪರುಗಳಲ್ಲಿ ಓದಿ, ಓದಿ ಅಲ್ಲಿಗೊಮ್ಮೆ ಹೋಗಿ ಟೆನಿಸ್ ಆಟವಾಡುವುದನ್ನು ನೋಡಬೇಕಲ್ಲ ಎನ್ನುವ ಆಸೆ. ಆದರೆ ಮತ್ತೂರಿನಿಂದ ಮದ್ರಾಸಿಗೆ ಹೋಗಿದ್ದುದೇ ಒಂದು ಪುಣ್ಯವಿಶೇಷ ಎಂದುಕೊಂಡಿರುವಾಗ, ವಿಂಬಲ್ಡನ್ ನನ್ನ ಕನಸಿನಲ್ಲಿ ಕಾಣುವುದೂ ನಮ್ಮಂತಹ ಬಡವರ್ಗದವರಿಗೆ 'ದುಬಾರಿ ಕನಸು' ಎನ್ನುವಂತಾಗಿತ್ತು! ಆದರೆ ೨೪ ವರ್ಷಗಳ ಕಾಲ ನಿರಂತರವಾಗಿ ಪಕ್ಕದಲ್ಲೇ ಇದ್ದ ವಿಂಬಲ್ಡನ್‌ಗೆ ಒಂದು ವರ್ಷವೂ ಟೆನಿಸ್ ನೋಡಲು ಹೋಗಲಾಗಲಿಲ್ಲ! ಏನೋ ಕೆಲಸ, ಪ್ರತಿ ವರ್ಷ ತಪ್ಪದೆ ಪಾಸುಗಳನ್ನು ಕಳುಹಿಸುತ್ತಿದ್ದರಾದರೂ ನಾನು ಹೋಗಲು ಸಾಧ್ಯವಾಗುತ್ತಿರಲಿಲ್ಲ. ಯಾರನ್ನಾದರೂ ಕಳುಹಿಸುತ್ತಿದ್ದೆನೇ ವಿನಾ ನಾನು ಹೋದದ್ದಿಲ್ಲ... ಭವನದ ಕೆಲಸವನ್ನು ಬಿಟ್ಟು ಇನ್ನೊಂದಕ್ಕೆ ಹೋಗುವುದು ಎನ್ನುವುದು ಮನಸ್ಸಿಗೆ ಒಗ್ಗದ ವಿಷಯವಾಗಿತ್ತು. ಅದೇ ಅಭ್ಯಾಸ ಇಂದಿಗೂ ಸಹ! ಇದನ್ನು 'ಸಿನಿಕಲ್' ಎನ್ನಬಹುದು, ಅಥವಾ ಪೂರ್ಣವಾಗಿ 'ಡೆಡಿಕೇಟೆಡ್' ಎನ್ನಬಹುದು. ಇದರ ಬಗ್ಗೆ ನನಗೆ ಯಾವುದೇ ಪರಿವೆಯೂ ಇಲ್ಲ. ಹೀಗೆ, ಈ ಕೆಲಸ ಎಂದೇ ಕುಳಿತಾಗ ಕೆಲವೊಮ್ಮೆ ಎಷ್ಟೋ ವಿಷಯಗಳನ್ನು ತಿಳಿದುಕೊಳ್ಳುವುದೂ ಸಹ ಸಾಧ್ಯ ವಾಗುವುದಿಲ್ಲ, ಆದರೆ ಎಲ್ಲರಿಗೂ ಒಂದು ಮಿತಿ ಎನ್ನುವುದು ಇರುವುದಷ್ಟೆ. ಪ್ರಪಂಚದಲ್ಲಿರುವ ಎಲ್ಲವನ್ನೂ ತಿಳಿದುಕೊಳ್ಳಲಾಗದಷ್ಟೆ, ಹಾಗೆಯೆ ನನ್ನ ಮಿತಿ ನನಗೆ ಎಂದು ನಾನು ಸಮಾಧಾನ ತಾಳುವುದು, ಎಷ್ಟಾದರೆ ಅಷ್ಟೇ ಸಾಕು ಎನ್ನುವ ಪೂರ್ಣ ತೃಪ್ತಿ ಹೊಂದುವುದು!

ಮಾತುಗಳು ಹೊರಳಿ ಹೊಸಜಾಡು ಹಿಡಿಯುವುದು ಹೀಗೆಯೇ! ೧೯೮೨ರಲ್ಲಿ ನಡೆದ ಬಿ.ಬಿ.ಸಿ.ಯ ವಜ್ರ ಮಹೋತ್ಸವದ ಆಚರಣೆಗೆ ನಿಮ್ಮನ್ನ ಒಯ್ದಿದ್ದುದು ಈಗ ನೆನಪಾಗಿ, ಅಲ್ಲಿಂದ ನಿಮ್ಮನ್ನು ವಾಪಸು ಕರೆತರಬೇಕಿದೆ, ನಾವಿನ್ನೂ ಮುಂದೆ ಸಾಗಬೇಕಾದ ದಾರಿ ಸಾಕಷ್ಟಿದೆಯಷ್ಟೇ!

ಎಷ್ಟೋ ಸಂಘ ಸಂಸ್ಥೆಯವರು ಲಂಡನ್ನಿನಲ್ಲಿಯೇ ಈಗ ಭಾಷಣಗಳಿಗಾಗಿ ನನ್ನನ್ನು ಆಹ್ವಾನಿಸುತ್ತಿದ್ದರು. ಹಾಗೆಂದು ನಾನು ಅಲ್ಲಿಗೆ ಹೋದ ಮಾತ್ರಕ್ಕೆ ಅಥವಾ ಅವರು ನನ್ನನ್ನು ಆಹ್ವಾನಿಸಿದ ಮಾತ್ರಕ್ಕೆ ಅವರು ಭವನದ ಸದಸ್ಯರಾಗಿರಬೇಕು ಅಥವಾ ಸದಸ್ಯತ್ವ ತೆಗೆದುಕೊಳ್ಳಲೇಬೇಕು ಎನ್ನುವ ನಿಯಮ ಇರುತ್ತಿರಲಿಲ್ಲ. ನನ್ನ ಉದ್ದೇಶ ಎಂದರೆ, ವಿದ್ಯಾಭವನದ ಸಂದೇಶ ಆ ಸಮೂಹಕ್ಕೆ ತಲುಪಬೇಕು. ಇವರು ವಿದ್ಯಾಭವನದಿಂದ ಬಂದಿದ್ದಾರೆ ಎಂದು ಜನ ಗುರ್ತಿಸಬೇಕು! ಅಷ್ಟೇ ನನಗೆ ಬೇಕಾಗಿದ್ದುದು... ಹೌದು... ಜನ ಈಗ ಬಹಳ ಚೆನ್ನಾಗಿ ಗುರ್ತಿಸುತ್ತಾರೆ. ಭವನದ ಜನರನ್ನು ಆದರಿಸುತ್ತಾರೆ. ತಲೆ ಎತ್ತಿ ನಿಂತಿರುವ ಭವನ ಯಶಸ್ಸಿನ ರುಚಿ ನೋಡಿದೆ, ಈ ದಿನ ಭಾರತೀಯ ಸಂಸ್ಕೃತಿಯನ್ನು ಕಲಿಸುವ ಗೌರವಾನ್ವಿತ, ಅತ್ಯುತ್ತಮ ಸಂಸ್ಥೆ ಎಂದು ಪ್ರಸಿದ್ಧಿಗೆ ಬಂದಿದೆ! ಈಗ ಅದನ್ನು ನೋಡಿದರೆ, ತೋಳಿನಲ್ಲಿ ಎತ್ತಾಡಿಸಿದ ಮಗ, ಬೆಳೆದು ದೊಡ್ಡವನಾಗಿ ಮೀಸೆ ಹೊತ್ತು ನಗುತ್ತಾ ತಂದೆಯ ಮುಂದೆ ನಿಂತಿರುವಂತೆ ನನ್ನ ಕಣ್ಣಿಗೆ ಕಾಣುತ್ತದೆ!!

ಶ್ರೀ ಮಣೆಕ್ ದಲಾಲ್‌ಜೀ

ವಿದ್ಯಾಭವನದ ಈ ಪ್ರಚಂಡ ಯಶಸ್ಸಿಗೆ ಕಾರಣ ನಮ್ಮ ಅಧ್ಯಕ್ಷರಾದ ಶ್ರೀ ಮಣೆಕ್ ದಲಾಲ್! ಅವರು ನಂಬಿಕೆಯಿಂದ ನನಗೆ ಕೊಟ್ಟಂಥ ಸ್ವಾತಂತ್ರ್ಯ! ನಮ್ಮಿಬ್ಬರ ನಡುವೆ ಬಹಳ ಒಳ್ಳೆಯ ಸಂಬಂಧವಿತ್ತು, ಪರಸ್ಪರರನ್ನು ನಾವು ಬಹಳ ಚೆನ್ನಾಗಿ ಅರ್ಥಮಾಡಿ ಕೊಂಡಿದ್ದೆವು. ಆದರೂ, ನನಗೆನ್ನಿಸುವುದು, ದಲಾಲ್‌ಜೀ ನನ್ನನ್ನು ಹೇಗೆ ನೋಡಿಕೊಳ್ಳುತ್ತಿದ್ದರು ಎಂದರೆ, ಸಿಂಹ ತನ್ನ ಮರಿಯನ್ನು ನೋಡಿ ಕೊಳ್ಳುವ ರೀತಿಯಂತೆ!! ಇದಕ್ಕಿಂತ ಹೆಚ್ಚಿಗೆ ಹೇಳಲು ನನಗೆ ಬರದು! ಅವರ ಎಚ್ಚರ, ಜಾಗರೂಕತೆ, ಜಾಣ್ಮೆ, ಸಜ್ಜನಿಕೆ ಅಸಾಧಾರಣವಾದದ್ದು! ಸದೈವ ನನ್ನನ್ನು ಕಾವಲುಕಾದು ಕೆಲಸಗಳನ್ನು ಹೇಗೆ ನಿಭಾಯಿಸುವುದು ಎನ್ನುವುದನ್ನು ಹೇಳಿಕೊಟ್ಟವರು ಅವರು. ಬಹಳ ನಯವಾಗಿಯೇ ತಿದ್ದಿ-ತೀಡಿ ನನ್ನನ್ನ ಯಶಸ್ವೀ ಆಡಳಿತಗಾರನಾಗಿ ರೂಪಿಸಿದವರು ಅವರು! ಅವರು ಈ ವಿಷಯದಲ್ಲಿ ನನಗೆ ಪರಮಪೂಜ್ಯ ಗುರುಸ್ವರೂಪರು! ನಮ್ಮಿಬ್ಬರ ನಡುವಿನ ಈ ಹೊಂದಾಣಿಕೆ-ಸಾಮರಸ್ಯವೇ ಲಂಡನ್ ಭವನ ಕೇಂದ್ರದ ತ್ವರಿತಗತಿಯ ಬೆಳವಣಿಗೆಗೆ ಸಹಾಯಮಾಡಿದುದು. ಯಾವ ಕೆಲಸವನ್ನೂ ದಲಾಲ್‌ಜೀಗೆ ಹೇಳದೆ ನಾನು ಮಾಡುತ್ತಿರಲಿಲ್ಲ, ಯಾವುದನ್ನೂ ಅವರು 'ಇದನ್ನೇಕೆ ಮಾಡಿದೆ?' ಎಂದು ನನ್ನನ್ನು ಕೇಳುತ್ತಿರಲಿಲ್ಲ! ಆದರೆ ಅವರು ಬಹಳ ಸೂಕ್ಷ್ಮವಾಗಿ ಎಲ್ಲವನ್ನೂ ಗಮನಿಸುತ್ತಿದ್ದರು. ನಮ್ಮಿಬ್ಬರ ಧ್ಯೇಯವೂ ಒಂದೇ-ಅದು ಭವನದ ಏಳಿಗೆ!ಅವರು ನನಗಿಂತ ಸುಮಾರು ಹತ್ತು ವರ್ಷಗಳಷ್ಟು ವಯಸ್ಸಿನಲ್ಲಿ ಹಿರಿಯರಾದರೂ ನನ್ನನ್ನು ಕಂಡರೆ ಬಹಳ ಗೌರವ, ಅಪರಿಮಿತ ವಿಶ್ವಾಸ. ಅವರ ದಕ್ಷ ಮಾರ್ಗದರ್ಶನದಲ್ಲಿ ನಾನು ಕಲಿತದ್ದೆಷ್ಟೋ! ನನ್ನ ಪಾಲಿಗೆ ಅವರೇ ಒಂದು 'ಇನ್ಸ್ಟಿಟ್ಯೂಷನ್', - 'ಶಿಕ್ಷಣ ಸಂಸ್ಥೆ' ಇದ್ದಂತೆ! ಅವರು-ಅವರ ಮಾರ್ಗದರ್ಶನ ಇದ್ದರೆ ಸಾಕು, ಯಾವ ಕೆಲಸದಲ್ಲೂ ಜಯ ಕಟ್ಟಿಟ್ಟಿದ್ದು ಎನ್ನುವ ನಂಬಿಕೆ ನನಗೆ! ಅವರ ಸೂಕ್ಷ್ಮ ಗ್ರಹಿಕೆಗೆ ಒಂದು ಉದಾಹರಣೆ ಎಂದರೆ :

ನಮ್ಮ ಭವನಕ್ಕೆ ಬಂದು ಹೋಗುತ್ತಿದ್ದ ಮಹನೀಯರೊಬ್ಬರು ಭವನದ ಸದಸ್ಯರು, ಕಮಿಟಿಯೊಂದರಲ್ಲಿ ಇದ್ದವರು ಒಮ್ಮೆ ದಲಾಲ್‌ಜೀ ಇದ್ದಾಗ ಅವರೆದುರಿಗೇ 'ಮಾಥೂರ್' ಎಂದು ತುಸು

ಗಡುಸಾಗಿ ಸ್ವಲ್ಪ ರೇಗಿದವರಂತೆ ನನ್ನನ್ನು ಕೂಗಿ ಕರೆದರು. ನಾನು ತಕ್ಷಣವೇ ಅವರ ಬಳಿಗೆ ಹೋಗಿ 'ಏನಾಗಬೇಕು ಸರ್?' ಎಂದು ಅದೇ ವಿನಯದಿಂದ ಕೇಳಿ ಅವರು ಹೇಳಿದುದನ್ನು ಮಾಡಿಬಂದೆ. ಇದನ್ನು ಗಮನಿಸಿದ ದಲಾಲ್‌ಜೀಗೆ ಸ್ವಲ್ಪ ಬೇಸರವೇ ಆಯಿತು. "ಎಂಥದು ಮಾಥೂರ್‌ಜೀ, ನಿಮ್ಮನ್ನು ಹಾಗೆ ದನಿ ಎತ್ತರಿಸಿ ಕರೆಯುವುದು ಆತ? ನನಗೆ ಇದು ಸರಿಕಾಣಲಿಲ್ಲ..." ಎಂದು ತಮಗಾದ ಬೇಸರ ವ್ಯಕ್ತಪಡಿಸಿದರು. ಆಗ ನಾನು "ಪರವಾಗಿಲ್ಲ ಬಿಡಿ ದಲಾಲ್‌ಜೀ, ಒಮ್ಮೊಮ್ಮೆ ಹಾಗಾಗುವುದು ಸಹಜ, ಅದಕ್ಕೇನು?" ಎಂದೆ, ಅದನ್ನು ಉಪೇಕ್ಷೆ ಮಾಡುವವನ ಹಾಗೆ - ದಲಾಲ್‌ಜೀ ಮನಸಿಗೆ ಸಮಾಧಾನವಾಗಲೆಂದು! ಇಷ್ಟಾದನಂತರ, ಯಾವಾಗ ಎಲ್ಲರೂ ಸೇರಿದರೂ ದಲಾಲ್‌ಜೀಯ ಒಂದು ಕಣ್ಣು 'ಅವರ' ಚಲನ-ವಲನದ ಮೇಲಿರುತ್ತಿತ್ತು. ಇದು ಆತನ ಅರಿವಿಗೆ ಬಂದಿರಲಿಲ್ಲವಾದುದರಿಂದ, ಆತ ಮಾತ್ರ ತಮ್ಮ ಧೋರಣೆಯನ್ನು ಎಂದಿನಂತೆಯೇ ಮುಂದುವರಿಸಿದ್ದರು. ಹೀಗೆಯೇ ನಾಲ್ಕಾರು ಕೂಟಗಳಲ್ಲಿ, ಮೀಟಿಂಗ್‌ಗಳಲ್ಲಿ ಅವರನ್ನು ಸರಿಯಾಗಿ ಗಮನಿಸಿಕೊಂಡ ದಲಾಲ್‌ಜೀ, ಭವನದ ಸಂಪ್ರದಾಯದಂತೆ ಆತ ಎರಡು ವರ್ಷಗಳು ಕಳೆದನಂತರ ತನ್ನ ರಾಜೀನಾಮೆಯನ್ನು ಸಲ್ಲಿಸಿದಾಗ ದಲಾಲ್‌ಜೀ ಬೇರೇನೂ ಹೇಳದೆ 'ನಿಮ್ಮ ರಾಜಿನಾಮೆಯನ್ನು ಭವನವು ಅಂಗೀಕರಿಸಿದೆ' ಎಂದು ನಯವಾಗಿಯೇ ಹೇಳಿ, ಭವನಕ್ಕೆ ಆತನ ಸೇವೆ ಇನ್ನು ಸಾಕಾಯಿತು ಎನ್ನುವಂತೆ ಮಾಡಿದರು! ಹೀಗೆ ಸಂಸ್ಕಾರದಲ್ಲಿ, ನಡೆ-ನುಡಿಯಲ್ಲಿ ಒಮ್ಮೆಯಾದರೂ ತಪ್ಪಿ ನಡೆಯುವುದನ್ನು ಅವರು ಸೈರಿಸುತ್ತಿರಲಿಲ್ಲ. ಅಂಥ 'ಋಷಿಸದೃಶ' ಸ್ವಭಾವ ದಲಾಲ್‌ಜೀಯವರದು.

ಅವರ ಉದ್ದೇಶ ಇಷ್ಟೇ. ಯಾವನೇ ಒಬ್ಬ ವ್ಯಕ್ತಿಯಿಂದ ವ್ಯಕ್ತಿಗತ ಸ್ವಭಾವದಿಂದ ನಡವಳಿಕೆಯಿಂದ ಇಡೀ ಸಂಸ್ಥೆಗೆ ಕೆಟ್ಟ ಹೆಸರು ಬರಬಾರದು ಎನ್ನುವುದು. ಒಳ್ಳೆಯದನ್ನು ಸಂಪಾದಿಸ ಬೇಕಾದರೆ ಪ್ರತಿಯೊಂದು ನಿಮಿಷದಲ್ಲೂ ಒಳ್ಳೆಯದನ್ನೇ ಮಾಡುತ್ತಿರಬೇಕು. ಆದರೆ ಕೆಟ್ಟ ಹೆಸರು ಬರುವುದು ಎಷ್ಟುಹೊತ್ತು... ಒಂದು ನಿಮಿಷವೂ ಬೇಕಿಲ್ಲ! ಇವರು ಹೀಗೆಯೇ ಎಂದುಬಿಡುವರು ಜನ! ದಲಾಲ್‌ಜೀ ಬಹಳ ಚೆನ್ನಾಗಿ ಜನರ ನಾಡಿಯನ್ನು ಬಲ್ಲವರು, ಪ್ರಪಂಚ ಸುತ್ತಿದವರು. ಅದಕ್ಕೇ ಅವರಿಗೆ ತಮ್ಮ ತಿಳುವಳಿಕೆಯಲ್ಲಿ ಬಹಳ ವಿಶ್ವಾಸ. ಅವರ ಆ ಆತ್ಮವಿಶ್ವಾಸ ಇತರರಿಗೂ ಅವರ ಬಗ್ಗೆ ವಿಶ್ವಾಸ ಮೂಡುವಂತೆ ಮಾಡುತ್ತಿತ್ತು.

ದಲಾಲ್‌ಜೀಯ ಈ ನಂಬಿಕೆ ನಿಜವೂ ಹೌದು. ೧೯೭೦ರ ಸುಮಾರಿನಲ್ಲಿ ಕೆಲವು ಮಂದಿ ಮದ್ರಾಸಿನವರು ಎಂದು ಹೇಳಿಕೊಂಡು ಬಾಂಬೆಗೆ ಹೋದವರು ನಾಲ್ಕೈದು ತಿಂಗಳಿಗಾಗಿ ಒಂದು ಫ್ಲಾಟನ್ನು ಬಾಡಿಗೆ ಹಿಡಿದರು. ನಾಲ್ಕೈದು ತಿಂಗಳ ವಾಸ ಮುಗಿದನಂತರ ಹೇಳದೆ-ಕೇಳದೆ ಫ್ಲಾಟನ್ನು ಬಿಟ್ಟು, ಬಾಡಿಗೆಯನ್ನೂ ಕೊಡದೆ ಬಾಂಬೆಬಿಟ್ಟು ಹೋದರಂತೆ. ಆಮೇಲೆ ನಾಲ್ಕಾರು ವರ್ಷಗಳ ತನಕ ಆ ಅಪಖ್ಯಾತಿಯೇ ಉಳಿದಿತ್ತು! ಮದ್ರಾಸಿಗಳು ಎಂದು ಹೇಳಿದ ಮಂದಿಗೆ ಜನ ಫ್ಲಾಟನ್ನು ಬಾಡಿಗೆಗೆ ಕೊಡದೆ, 'ಮದ್ರಾಸಿಗಳು ಬಾಡಿಗೆ ಕೊಡದೆ ಓಡಿ ಹೋಗುತ್ತಾರೆ' ಎಂದು ಕಟುವಾಗಿಯೇ ಹೇಳಿ ಕಳುಹಿಸುತ್ತಿದ್ದರಂತೆ! ಹಾಗೆ, ಒಬ್ಬ ತಪ್ಪಿ ನಡೆದರೆ, ಅವನು ಕೆಲಸ ಮಾಡುವ ಸಂಸ್ಥೆ, ಅವನ ದೇಶಕ್ಕೆ, ಅವನ ಊರಿಗೆ ಕೆಟ್ಟ ಹೆಸರು ಬರುವುದು ನಿಜ!

ಕಲಿತದ್ದು ಬಹಳ

ಅಲ್ಲಿ ನಾನು ಕಲಿತದ್ದು... ಬಹಳ ! ಹೀಗೆ, ಅಲ್ಲಿ ಕಳೆದ 24 ವರ್ಷಗಳಲ್ಲಿ ನನ್ನ ನಿಕಟ ಸಂಪರ್ಕಕ್ಕೆ ಬಂದವರು ಅನೇಕರು. ಹಾಗೆ ಹತ್ತಿರಕ್ಕೆ ಬಂದವರಿಂದ, ನಾನು ಹತ್ತಿರದಿಂದ ಕಂಡವರಿಂದ ಆ ವಿದೇಶೀ ಜನದ ಸಂಸ್ಕೃತಿ ಏನು, ಮನೋಭಾವವೇನು, ಅವರ ಅಭ್ಯಾಸಗಳೇನು, ಅವರ ನಂಬಿಕೆಗಳೇನು, ನಿಯಮಗಳೇನು, ಅಲ್ಲಿಯ ಕುಟುಂಬಗಳು ಹೇಗಿವೆ, ಅವುಗಳ ರೀತಿ-ನೀತಿಯೇನು, ಅಲ್ಲಿನ ಸಮಾಜದಲ್ಲಿ ಜನ ಹೇಗೆ ಬದುಕು ನಡೆಸುತ್ತಿದ್ದಾರೆ, ಇದನ್ನೆಲ್ಲ ಸ್ವಲ್ಪವೂ ಬಿಡದೆ ಗಮನಿಸಿಕೊಂಡೆ. ಅವರಲ್ಲಿ ಅತ್ಯುತ್ತಮವಾದ ಗುಣಗಳನ್ನು ಕಲಿತು ಬಂದೆ. ಹಿಂದಿನ ಎಲ್ಲರೂ ಅಷ್ಟೆ... ಗಾಂಧೀಜಿ, ನೆಹರೂ ಎಲ್ಲರೂ ಅಲ್ಲಿಗೆ ಹೋಗಿ ಒಳ್ಳೆಯದನ್ನೇ ಕಲಿತು ಬಂದದ್ದು, ಕೆಟ್ಟದ್ದು ನಮಗೇಕೆ? ಆ ಮಹನೀಯರೇ ನಮಗೆ ತೋರಿಸಿಕೊಟ್ಟಿದ್ದಾರೆ, ನಾವು ಹಾಗೆಯೇ ಮಾಡಬೇಕೆಂದು!

ಏನೇ ಆದರೂ ನಾನು ಕಂಡಂತೆ ಪಾಶ್ಚಾತ್ಯ ಸಂಸ್ಕೃತಿ ನಮ್ಮ ಸಂಸ್ಕೃತಿಗಿಂತ ಬೇರೆಯೇ. ಅಲ್ಲಿಯೂ ನಮ್ಮ ರೀತಿಯಂತೆ, ಬಹಳ ವರ್ಷಗಳ ಹಿಂದೆ ಮದುವೆಯಾಗಿ ಜತೆಯಾಗಿ ಬಾಳು ನಡೆಸುತ್ತಿರುವ ಎಷ್ಟೋ ದಂಪತಿಗಳಿದ್ದಾರೆ. ಅವರ ಜತೆ ಮಕ್ಕಳೂ ಇದ್ದಾರೆ. ಆದರೆ ಪತಿಯೇ ಆಗಲಿ, ಪತ್ನಿಯೇ ಆಗಲಿ, ಅವರವರ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಅಡ್ಡಿ ಬರುವಂತಿಲ್ಲ. ನಮ್ಮ ಹಾಗೆ ಭಾವನಾಜೀವಿಗಳಲ್ಲ ಅವರು! ತಮ್ಮ ಪ್ರೀತಿಪಾತ್ರರ ಸಾವು ಸಂಭವಿಸಿದರೂ, ಕಪ್ಪು ಬಟ್ಟೆತೊಟ್ಟು ಅಂತಿಮ ದರ್ಶನಕ್ಕೆಂದು ಹೋದಾಗ 'ವೆಲ್....' (ಎಲ್ಲವೂ ಅಷ್ಟೇ ಈ ಪ್ರಪಂಚದಲ್ಲಿ ಎನ್ನುವ ಭಾವ!) ಎಂದು ತಮ್ಮ ತಲೆಯ ಮೇಲಿನ ಹ್ಯಾಟು ತೆಗೆದು ಒಂದು ನಿಮಿಷ ಮೌನ ಮಾಡುತ್ತಾರೆ. ಅಷ್ಟಾದರೆ ಆಯಿತು. ವರ್ಷದಲ್ಲಿ ಆ ದಿನ ಸತ್ತವರ ಸಮಾಧಿಗೆ ಹೋಗಿ ಹೂ ಒಂದನ್ನು ಇಟ್ಟು ಐದು ನಿಮಿಷ ಪ್ರಾರ್ಥನೆ ಮಾಡಿದರೆ ಮುಗಿಯಿತು! ಅಂತಹ ನಿರ್ವಿಕಾರ ಮನೋಭಾವ! ಇದನ್ನು ಒಂದು ರೀತಿಯಲ್ಲಿ 'ಪ್ರಾಕ್ಟಿಕಲ್ ಮೈಂಡೆಡ್‌ನೆಸ್' ಎನ್ನಬಹುದು.

ಹಾಗೆಯೇ ಪ್ರೀತಿ-ಪ್ರೇಮದಿಂದ ಯಾವುದನ್ನೂ ಯಾರ ಮೇಲೂ ಹೇರುವುದಿಲ್ಲ. ಪತಿ ತನ್ನ ಗೆಳೆಯರನ್ನು ಮನೆಗೆ ಊಟಕ್ಕೆ ಕರೆದುಕೊಂಡು ಬರುತ್ತೇನೆಂದರೆ, ಪತ್ನಿಗೂ ಬಿಡುವಿದ್ದರೆ ಮನೆಯಲ್ಲಿದ್ದು ಅತಿಥಿ

ಸತ್ಕಾರಮಾಡಿ ಕಳುಹಿಸ ಬಹುದು. ಹಾಗಿಲ್ಲವಾದರೆ ಪತ್ನಿ ನೇರವಾಗಿಯೇ 'ಕ್ಷಮಿಸಿ, ಈ ದಿನ ನನಗೂ ಬೇರೆ ಕಡೆಯಲ್ಲಿ ಕೆಲಸವಿದೆ, ಯಾರನ್ನೋ ಭೇಟಿಯಾಗಲು ಹೋಗಬೇಕು' ಎಂದು ಹೇಳಿದರೆ ಪತಿ ಅವಳ ಮೇಲೆ ತನ್ನ ಅಭಿಪ್ರಾಯವನ್ನು ಹೊರಿಸುವಂತಿಲ್ಲ. ಅವಳನ್ನು 'ನೀನು ಇದ್ದೇ ಇರಬೇಕು' ಎಂದು ಬಲವಂತಪಡಿಸುವಂತಿಲ್ಲ. ಅವನೂ ಅಷ್ಟೇ ತಣ್ಣಗೆ, 'ಪರವಾಗಿಲ್ಲ, ನಿನ್ನ ಕೆಲಸ ನೀನು ನೋಡು, ನಾನು ಅವರನ್ನು ಹೋಟೆಲಿಗೆ ಕರೆದೊಯ್ಯುತ್ತೇನೆ' ಎನ್ನುವನು! ಹೀಗೆ ಅಲ್ಲಿ! ಅಂತೆಯೇ ಪತ್ನಿ ಪತಿಯ ಜತೆ ಮಧ್ಯಾಹ್ನದ ಊಟಕ್ಕೋ, ರಾತ್ರಿಯ ಊಟಕ್ಕೋ ತನಗೆ ಬರಲಾಗದು ಎಂದು ಹೇಳಿದರೆ, ಪತಿ ತನ್ನಷ್ಟಕ್ಕೆ ತಾನು ವ್ಯವಸ್ಥೆ ಮಾಡಿಕೊಳ್ಳಬೇಕು! ನಮ್ಮಲ್ಲಿಯ ಗೃಹಿಣಿಯರಂತೆ, 'ನೀವು ಹೊರಗೆ ತಿನ್ನುವುದೇಕೆ? ಮನೆಗೆ ಬನ್ನಿರಿ, ಮಾಡಿ ಹಾಕುತ್ತೇನೆ' ಎನ್ನುವ ಮಾತುಗಳಿಗೆ ಅಲ್ಲಿ ಅವಕಾಶವೇ ಇಲ್ಲ! ಮದುವೆಯಾಗುವಾಗ ನಮ್ಮಲ್ಲಿ ಪಠಿಸುವ ಮಂತ್ರಗಳೂ ಇದನ್ನೇ, ಈ ನೀತಿಯನ್ನೇ ಹೇಳುತ್ತವೆ, 'ನಿನ್ನ ಸ್ವಾತಂತ್ರ್ಯಕ್ಕೆ ನಾ ಅಡ್ಡಿ ಬರುವುದಿಲ್ಲ. ನಿನ್ನನ್ನು ಕೇಳಿ ಎಲ್ಲವನ್ನೂ ಮಾಡುತ್ತೇನೆ' ಎಂದು ಹೇಳುತ್ತದೆ ಮಂತ್ರ! ನಾವು ಸಂತೆಯಲ್ಲಿ ಕೇಳಿದಂತೆ ಮಂತ್ರ ಕೇಳಿ ನಾವು ಜೋರು ಮಾಡುವುದು ಮಾಡುತ್ತಿರುತ್ತೇವೆ! ಅಲ್ಲಿ ಅವರು ಈ ಮಂತ್ರಗಳ ಗಂಧವೂ ಇಲ್ಲದೆ, ನಮ್ಮ ಮಂತ್ರದಲ್ಲಿ ಹೇಳಿರುವಂತೆಯೇ ಬಹಳ ಸಹಜವಾಗಿ ನಡೆದುಕೊಳ್ಳುತ್ತಾರಷ್ಟೆ! ಅತ್ಯಾಶ್ಚರ್ಯಕರವಾದ ರೀತಿಯಲ್ಲಿ ಅವರು ಪರಸ್ಪರರ ಸ್ವಾತಂತ್ರ್ಯವನ್ನು ಗೌರವಿಸುತ್ತಾರೆ! ಬ್ಯಾಂಕಿನ ಲೆಕ್ಕಗಳೂ ಬೇರೆ ಬೇರೆಯೇ, ಯಾವುದೂ 'ಜಂಟಿಖಾತೆ' ಎನ್ನುವುದಿಲ್ಲ! ಹೀಗೆ... ಭಾವನೆಯ ಬಂಧನಕ್ಕೆ ಸಿಲುಕುವುದಿಲ್ಲ ಅವರು! ಅಥವಾ ಮನಸಿನಾಳದಲ್ಲಿರುವುದೋ ಏನೋ, ನಮಗೆ ಅದು ಹೊರಗೆ ಕಾಣದು. ಅಲ್ಲಿನ ಕತೆ ಕಾದಂಬರಿಗಳಲ್ಲಿ ಪ್ರೇಮಕ್ಕಾಗಿ ಪ್ರಾಣಬಿಡುವ, ಯಾರಾದರೂ ಅದಕ್ಕೆ ಅಡ್ಡಬಂದರೆ ಅವರ ಪ್ರಾಣ ತೆಗೆಯುವಷ್ಟು ಭಾವುಕರು ಎಂದೆಲ್ಲಾ ಚಿತ್ರಿತವಾಗಿರುತ್ತದೆಯಾದರೂ, ಆ ತೀವ್ರತೆ ನಮಗೆ ಕಾಣಿಸದು. ನಮ್ಮವರ ಭಾವನೆಗಳ ತೀವ್ರತೆಯು ಕೆಲವೊಮ್ಮೆ ಸಂಬಂಧವನ್ನು ಕೆಡಿಸುಷ್ಟು ಶಕ್ತಿಶಾಲಿಯಾಗಿರುತ್ತದೆ!

ನಮ್ಮ ದಲಾಲ್‌ಜೀಯವರ ಪತ್ನಿ ಕೇ. ಇಂಗ್ಲಿಷ್ ಹೆಣ್ಣು ಮಗಳು. ದಲಾಲ್‌ಜೀ ಆಫೀಸು ಕೆಲಸಗಳಿಗೆ ಬಿಟ್ಟು, ಮಿಕ್ಕ ಯಾವುದೇ ಕೂಟಗಳಿಗೆ, ಮೀಟಿಂಗ್‌ಗಳಿಗೆ ಪತ್ನಿಯನ್ನು ತಪ್ಪದೆ ಜತೆಯಲ್ಲಿ ಕರೆದೊಯ್ಯುತ್ತಾರೆ. ಅವರು ಸಹ ಅವರ ಪತ್ನಿ ಜತೆ ಭಾನುವಾರದಂದು ಚರ್ಚಿಗೆ ಹೋಗುತ್ತಾರೆ. ಇವರೊಮ್ಮೆ ತಮ್ಮ ಪತ್ನಿಯನ್ನು ಪಾರ್ಸೀ ದೇವಾಲಯಕ್ಕೆ ಕರೆದುಕೊಂಡು ಹೋದಾಗ, ಅಲ್ಲಿದ್ದ ಪೂಜಾರಿಗಳು 'ಇವರು ಇಂಗ್ಲಿಷ್ ಹೆಂಗಸು, ಇವರನ್ನು ನಮ್ಮ ದೇವಸ್ಥಾನಕ್ಕೆ ನೀವು ಕರೆ ತಂದದ್ದೇಕೆ?' ಎಂದರಂತೆ. ಅದಕ್ಕೆ ಬಹಳವಾಗಿ ಮನನೊಂದ ಆಕೆ, ನನ್ನನ್ನು ''ಮಾಥೂರ್‌ಜೀ, ಪತ್ನಿ ವಿವಾಹವಾದನಂತರ ಪತಿಯ ಜನಾಂಗಕ್ಕೆ ಸೇರಿಕೊಳ್ಳುವಳಲ್ಲವೇ? ಅವರೇಕೆ ನನಗೆ ಹಾಗೆಂದರು?'' ಎಂದು ಕೇಳಿದರು. ಅವರ ಈ ಪ್ರಶ್ನೆಗೆ ನನಗೆ ಉತ್ತರ ಹೇಳಲು ಸಂಕೋಚ ಎನಿಸಿತು, ನಿರುತ್ತರನಾದೆ. ಅವರು ತಿಳಿದಿರುವಂತೆ ನಮ್ಮ ಸಂಸ್ಕೃತಿ ಹಾಗೆಯೇ ಹೇಳುತ್ತದೆಯಾದರೂ, ನಮ್ಮವರು ಅನವಶ್ಯಕವಾಗಿ ಆ ಮಹಿಳೆಯನ್ನು ನೋಯಿಸಿದುದನ್ನು ನಾವು ಕ್ಷಮಿಸುವಂತಿಲ್ಲ... ೨೫-೩೦ ವರ್ಷಗಳಿಂದ ಪತಿಯ ಜತೆಯಲ್ಲಿ ಪ್ರೀತಿ-ವಿಶ್ವಾಸದಿಂದ ಜೊತೆಗಾತಿಯಾಗಿದ್ದು, ಪ್ರತಿಯೊಂದರಲ್ಲೂ ಸಹಭಾಗಿ ಆಗುತ್ತಿರುವ ಆ ಆಂಗ್ಲ ಮಹಿಳೆ ಎಂದೋ ದಲಾಲ್‌ಜೀಯ ಧರ್ಮದವಳಾಗಿ ಆಗಿದೆ. ಅದರಲ್ಲೇನು ಸಂಶಯ! ಆದರೆ ಆ ಸೂಕ್ಷ್ಮ ಆ ದೇಗುಲದವರಿಗೆ ತಿಳಿಯದಿದ್ದದ್ದು ವಿಪರ್ಯಾಸವೇ ಸರಿ... ಹೀಗೆಯೇ ನಮ್ಮ 'ಭಾವನಾತೀವ್ರತೆ' ಚೆನ್ನಾಗಿರುವವರನ್ನೂ ಬೇರೆ ಬೇರೆ ಮಾಡಿ ನೋಯಿಸುವುದು!

ಅಲ್ಲಿನವರ ಮತ್ತೊಂದು ಗುಣ ಎಂದರೆ ನಿಯಮಪಾಲನೆ. ಆ ನಿಯಮಕ್ಕೆ ಎಲ್ಲರೂ ಒಳಪಡಲೇಬೇಕು, ಅದರಲ್ಲಿ ವ್ಯತ್ಯಾಸವಿಲ್ಲ. ಒಮ್ಮೆ ದಲಾಲ್‌ಜೀಯವರು ತಮ್ಮ ಕಾರಿನಲ್ಲಿ ಹೋಗದೆ, ಕಾರಣಾಂತರಗಳಿಂದ ತಮ್ಮ ಪತ್ನಿಯ ಕಾರಿನಲ್ಲಿ ಹೊರಟಿದ್ದರು. ದಂಪತಿಗಳು ಹೊರಟಾಗ (ಸಾಮಾನ್ಯವಾಗಿ ಕಾರು ಯಾರದೋ ಅವರೇ ಅದನ್ನು ಚಲಿಸುವುದು ಅಲ್ಲಿಯ ಪದ್ಧತಿ!) ಕೇ ಅವರು ಕಾರನ್ನು ಡ್ರೈವ್ ಮಾಡುತ್ತಿದ್ದರು. ದಲಾಲ್‌ಜೀ ಅವರ ಪಕ್ಕ ಕುಳಿತಿದ್ದರು. ಶ್ರೀಮತಿ ಕೇ ಸ್ವಲ್ಪ ವೇಗವಾಗಿ ಕಾರು ಚಲಾಯಿಸುವಾಕೆ. ಅಂದು ಆಕೆ ಅಲ್ಲಿನ ಪೊಲೀಸನ ಕೈಗೆ ಸಿಕ್ಕಿಬಿದ್ದರು - ಕಾರಿನ ವೇಗ ಹೆಚ್ಚಾಗಿದ್ದುದಕ್ಕೆ! ಅದಕ್ಕೆ ಶ್ರೀಮತಿ ಕೇ ಆ ಪೊಲೀಸಿನವನಿಗೆ, 'ನನ್ನ ಪತಿ ಶ್ರೀ ದಲಾಲ್‌ಜೀ ಸಹ ವೇಗವಾಗಿಯೇ ಕಾರು ಚಲಾಯಿಸುತ್ತಾರೆ. ನೀವು ಅವರನ್ನೆಂದೂ ಹಿಡಿದಿಲ್ಲ?' ಎಂದರು. ಅದಕ್ಕೆ ಅವನು ಅಷ್ಟೇ ಲಘುವಾಗಿ ನವಿರಾಗಿ ಹಾಸ್ಯ ಬೆರಸಿ, 'ಮೇಡಂ, ಅದೇನಾದರೂ ಇರಲಿ, ನಿಯಮ ಎಂದರೆ ನಿಯಮವೇ! ಈ ದಿನ ನಾನು ನಿಮ್ಮನ್ನು ಹಿಡಿದಿದ್ದೇನೆ, ನೀವು ಸಿಕ್ಕಿಬಿದ್ದಿದ್ದೀರಿ... ದಂಡ ಕಟ್ಟದೆ ಬೇರೆ ದಾರಿ ಇಲ್ಲ' ಎಂದ ನಗುತ್ತ! ಅನಂತರ ದಂಪತಿಗಳು ದಂಡಕಟ್ಟಿ ಮುಂದುವರೆದರು! ಅಲ್ಲಿನ ಜನ ಜನರಿಗೆ ತೊಂದರೆ ಮಾಡುವ ನಿಯಮಗಳನ್ನು ಮಾಡಿಲ್ಲ, ಜನರಿಗೆ ಆಗುವ ತೊಂದರೆಗಳನ್ನು ತಪ್ಪಿಸಲೇ ನಿಯಮಗಳನ್ನು ಮಾಡಿರುವುದು.

ಅಂತೆಯೇ ಅಲ್ಲಿ ಯಾವುದೇ ಸಮಾರಂಭಗಳಾಗಲಿ, ಕಾರ್ಯಕ್ರಮಗಳಾಗಲಿ, ಸಮಯಕ್ಕೆ ಸರಿಯಾಗಿ ಪ್ರಾರಂಭವಾಗಬೇಕು ಎನ್ನುವ ನಿಯಮ. ಪ್ರಾರಂಭವಾದ ಅನಂತರ ಆ ಸಭಾಂಗಣದ ಬಾಗಿಲುಗಳನ್ನು ಮುಚ್ಚಿಬಿಡಲಾಗುವುದು. ಅನಂತರ ತಡವಾಗಿ ಬಂದವರು ಹೊರಗಡೆಯೇ ಮೌನವಾಗಿ ನಿಂತಿರಬೇಕು. ಮುಕ್ಕಾಲು ಅಥವಾ ಒಂದು ಘಂಟೆಯ ಅನಂತರ ಕಾರ್ಯಕ್ರಮದಲ್ಲಿ ಐದು ನಿಮಿಷ ಬಿಡುವಾದಾಗ ಬಾಗಿಲುಗಳನ್ನು ತೆರೆಯುವರು. ಆಗ ಸಭಾಂಗಣದಿಂದ ಹೊರಗೆ ಹೋಗುವವರು ಹೋಗಬಹುದು, ಒಳಬರುವವರು ಒಳ

ಬರಬಹುದು ಅನಂತರ ಬಾಗಿಲನ್ನು ಮತ್ತೆ ಮುಚ್ಚಿಬಿಡುವರು. ನಮ್ಮಲ್ಲಿರುವಂತೆ, ಸಭಾಂಗಣದಿಂದ ಬೇಕೆಂದಾಗ ಎದ್ದು ಹೋಗುವುದು, ಬೇಕಾದಾಗ ಬರುವುದು, ಆ ರೀತಿಯ ಅಭ್ಯಾಸ ಅಲ್ಲಿ ಇಲ್ಲವೇ ಇಲ್ಲ. ಅಲ್ಲಿನ ಈ ನಿಯಮ ಯಾವ ಕಾರ್ಯಕ್ರಮಕ್ಕೆ ಯಾವುದೇ ಸಭಿಕರಿಂದ ತೊಂದರೆಯಾಗದಂತೆ, ಕಾರ್ಯಕ್ರಮ ನಿರಾತಂಕವಾಗಿ ನಡೆಯುವಂತೆ ಮಾಡುತ್ತದೆ. ಅದನ್ನು ಎಲ್ಲರೂ ತಪ್ಪದೆ ಪಾಲಿಸುತ್ತಾರೆ.

ಅಲ್ಲಿ ನಾನು ಮೊದಲೇ ಹೇಳಿರುವ ಹಾಗೆ, ಜೀಬ್ರಾ ಕ್ರಾಸಿಂಗ್ ಬಂದಿತೆಂದರೆ ೫೦ ಅಡಿಗಳಷ್ಟು ಹಿಂದೆಯೇ ನಿಲ್ಲಬೇಕು. ಸಿಟಿ ವಲಯಗಳಲ್ಲಿ ನಿಧಾನಕ್ಕೆ ಕಾರು ಚಲಾಯಿಸಬೇಕು. ಅಲ್ಲಿ ಜೀವಕ್ಕೆ ಬಹಳ ಬೆಲೆ. ಇದರ ನಿರಂತರ ಅಭ್ಯಾಸವಿದ್ದ ನಾನು ಲಂಡನ್ನಿನಿಂದ ಬಂದು ಬೆಂಗಳೂರಿನಲ್ಲಿ ನೆಲೆಸಿದ ಮೇಲೆ ೧೯೮೬ರ ಕೊನೆಯಲ್ಲಿ ಸ್ಕೂಟರಿನಲ್ಲಿ ಸಿಟಿಯಲ್ಲಿ ಹೋಗುತ್ತಿದ್ದವನು, ಜೀಬ್ರಾ ಕ್ರಾಸಿಂಗ್‌ಗೆ ಸ್ವಲ್ಪದೂರಕ್ಕೆ ಮುಂಚೆಯೇ, ಒಬ್ಬ ಮಹಿಳೆ,ಇಬ್ಬರು ಹುಡುಗರು ಕ್ರಾಸ್ ಮಾಡುತ್ತಿದ್ದುದನ್ನು ನೋಡಿ ನಿಲ್ಲಿಸಿದೆ. ನನ್ನ ಹಿಂದೆ ಬರುತ್ತಿದ್ದ ಕಾರಿನವನೊಬ್ಬ ಸೀದಾ ಬಂದು ನಿಂತಿದ್ದ ನನ್ನ ಸ್ಕೂಟರಿಗೆ ಡಿಕ್ಕಿಕೊಟ್ಟ. ನಾನು ಸ್ಕೂಟರ್‌ನಿಂದ ಕೆಳಗೆ ಬಿದ್ದೆ! ಪುಣ್ಯವಶಾತ್ ತಲೆಗೆ ಅಂಥ ಪೆಟ್ಟಾಗದೆ, ಪುಣ್ಯಾತ್ಮರೊಬ್ಬರ ಸಹಾಯ ಪಡೆದು, ಸ್ಕೂಟರನ್ನು ಅಲ್ಲಿಯೇ ನಿಲ್ಲಿಸಿ, ಆಟೋ ಹಿಡಿದು ಮನೆಗೆ ಬಂದೆ. ನಮ್ಮಲ್ಲಿ ಹೀಗೆ ! ಭೂಭಾರಹರಣವಾಗಬೇಕೆನ್ನುವ ಸಿದ್ಧಾಂತ ನಮ್ಮದು!

'ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್' ಎನ್ನುವ ಮಾತನ್ನು ಅಕ್ಷರಶಃ ಪಾಲಿಸುವ ಜನ ಅವರು. ನಿನಗೆ ಯಾವುದು ತೊಂದರೆಯಾಗುವುದೋ ಅದರಿಂದ ಇನ್ನೊಬ್ಬರಿಗೂ ತೊಂದರೆಯೇ ಆಗುತ್ತದೆ. ಆದ್ದರಿಂದ ಅದನ್ನು ಮಾಡಬೇಡ ಎನ್ನುವುದು. ನಾನು ಮೇಲೆ ಹೇಳಿರುವ ಶ್ಲೋಕ ಗೊತ್ತಿಲ್ಲದಿದ್ದರೂ, ಬಹಳ ಕಟ್ಟುನಿಟ್ಟಾಗಿ ಆಚರಿಸುವವರು ಅವರು. ಉದ್ದದವನೊಬ್ಬ ಯಾವುದೇ ಸ್ಥಳದಲ್ಲಿ ಕುಳಿತು ಕೊಳ್ಳಲು ಬಂದರೆ, ಹತ್ತು ಬಾರಿ ಹಿಂದಿರುಗಿ ನೋಡುತ್ತಾನೆ. ತನ್ನ ಎತ್ತರದಿಂದ ಇತರರಿಗೆ ತೊಂದರೆಯಾಗುತ್ತಿಲ್ಲವಷ್ಟೆ, ಹಿಂದೆ ಕುಳಿತವರಿಗೆ ಕಾಣದೆ ಕಷ್ಟವಾಗುತ್ತಿಲ್ಲ ತಾನೆ ಎಂದು ಎಚ್ಚರ ವಹಿಸಿ ಕುಳಿತುಕೊಳ್ಳುತ್ತಾನೆ. ಸಿಗರೇಟಿನ ಅಭ್ಯಾಸವಿರುವವನು, ಕೈಗೆ ಸಿಗರೇಟು ತೆಗೆದುಕೊಂಡ ಕೂಡಲೇ ತನ್ನ ಜತೆಯಲ್ಲಿದ್ದವರಿಗೆ ಅಥವಾ ಅಕ್ಕಪಕ್ಕದಲ್ಲಿ ಕುಳಿತಿರುವವರಿಗೆ 'ನಾನು ಧೂಮಪಾನ ಮಾಡಬಹುದೇ?' ಎಂದು ಕೇಳುತ್ತಾನೆ. ನಾವು ಪರವಾಗಿಲ್ಲ ಎಂದರೆ 'ವಂದನೆಗಳು' ಎಂದು ಹೇಳಿ ಅದನ್ನು ಹಚ್ಚುತ್ತಾನೆ. ನಿರಾಕರಿಸುವ ನಗು ನಕ್ಕರೆ ಅಥವಾ ನಮಗೆ ಅದು ಸೇರದು ಎನ್ನುವ ಮುಖಭಾವ ಮಾಡಿದರೂ 'ಕ್ಷಮಿಸಿ' ಎಂದು ಒಳಗಿಟ್ಟುಕೊಳ್ಳುತ್ತಾನೆ. ತನ್ನ ಧೂಮಪಾನದಿಂದ ಪಕ್ಕದವರಿಗೆ ತೊಂದರೆ ಮಾಡುವುದಿಲ್ಲ!

ಅಲ್ಲಿನ ಜನರ ಮತ್ತೊಂದು ನಿಯಮ ಎಂದರೆ, ನಾವು ಒಬ್ಬರಿಗೆ ಭೇಟಿಗೆ ಎಂದು ಸಮಯ ಕೊಟ್ಟರೆ ಯಾವ ಕಾರಣಕ್ಕೂ ತಪ್ಪಿಸುವಂತಿಲ್ಲ, ಹೋಗಲೇಬೇಕು. ಇತರರ ಸಮಯವನ್ನು ಸುಮ್ಮನೆ ಹಾಗೆ ಹಾಳುಮಾಡುವಂತಿಲ್ಲ. ಏಕೆಂದರೆ ಅವರು ನಮಗಾಗಿ ಕಾಯುತ್ತಾರಷ್ಟೆ! ಅದರ ಬಗ್ಗೆ ಬಹಳ ಕಾಳಜಿ. ಯಾರಾದರೂ ಊಟ - ಉಪಾಹಾರಕ್ಕೋ ಇಲ್ಲವೇ ಯಾವುದಾದರೂ ಕಾರ್ಯಕ್ರಮಕ್ಕೋ ಆಹ್ವಾನಿಸಿದ್ದರೆ, ಆಹ್ವಾನಿತರು ಅರ್ಧಘಂಟೆಯ ಮುಂಚೆಯೇ ಆ ಸ್ಥಳದಲ್ಲಿದ್ದು, ಆ ಸಮಯ ಬರುವ ತನಕ ಸುತ್ತ ಮುತ್ತ ತಿರುಗಾಡುತ್ತ 'ವಿಂಡೋ ಶಾಪಿಂಗ್'ಎಂದು ಮಾಡುತ್ತಾರೆ (ಖರೀದಿ ಮಾಡುವುದು. window shopping ಎಂದು ಅದರ ಹೆಸರು.) ಆ ಸಮಯಕ್ಕೆ ಸರಿಯಾಗಿ ಆ ಸ್ಥಳಕ್ಕೆ ಹೋಗುತ್ತಾರೆ.

ಅವರ ಈ ಸಮಯ ಪಾಲನೆಯ ನಿಯಮ ನೋಡಿ, ಭವನದಲ್ಲಿಯೂ ಅದು ಅಭ್ಯಾಸಕ್ಕೆ ಬಂದಿತು. ಮೊದಲಿನಿಂದಲೂ ನಾನೂ ಸರಿಯಾಗಿ ಸಮಯ ಪಾಲಿಸುವವನೇ ಆದರೂ, ಈಗ ಭವನಕ್ಕೆ ಬರ-ಹೋಗುವ ಬಹಳ ಮಂದಿ ಇಂಗ್ಲಿಷ್ ಜನರೇ ಆಗಿದ್ದುದರಿಂದ ಸಮಯಕ್ಕೆ ಸರಿಯಾಗಿ ಏನೇ ಆದರೂ ಕಾರ್ಯಕ್ರಮಗಳು ನಡೆಯಬೇಕಾಗಿತ್ತು. ನಾನೊಬ್ಬನೇ ಇದ್ದಾಗಲೂ ನಾನು ಒಂಬತ್ತು ಘಂಟೆಗೆ ಎಂದರೆ, ಯಾರು ಇರಲಿ-ಇಲ್ಲದಿರಲಿ, ಭವನದ ಆಫೀಸನ್ನು ಒಂಬತ್ತು ಘಂಟೆಗೆ ಸರಿಯಾಗಿ ತೆಗೆದಿರುತ್ತಿದ್ದೆ. ಈ ಅಭ್ಯಾಸ ಮೈಗೂಡಿಬಂದಿರಬೇಕು. ಯಾರೋ ಮೇಲಿನವರು ಬಯ್ಯುತ್ತಾರೆ, ಆಕ್ಷೇಪಣೆ ಮಾಡುತ್ತಾರೆ ಎನ್ನುವ ಭೀತಿಗೆ ಒಳಪಟ್ಟು ಮಾಡುವ ಕೆಲಸವಲ್ಲ, ಪಾಲಿಸುವ ನಿಯಮವಲ್ಲ ಇದು! ಒಮ್ಮೆ ಭವನದಲ್ಲಿ ಒಂದು ಕಾರ್ಯಕ್ರಮ ಸಂಜೆ ಆರು ಘಂಟೆಗೆ ಪ್ರಾರಂಭವಾಗುವುದು ಎಂದಿತ್ತು. ಅಂತೆಯೇ ಶುರುವಾಯಿತು. ನಾವು ಸಭಾಂಗಣದ ಬಾಗಿಲುಗಳನ್ನು ಹಾಕಿದೆವು, ರೂಢಿಯಂತೆ ಕಾರ್ಯಕ್ರಮ ಪ್ರಾರಂಭವಾದ ಕೂಡಲೆ! ಸುಮಾರು ೬.೪೫ರ ಸಮಯ, ಕಾರ್ಯಕ್ರಮ ಮುಗಿಯಲು ಬಂದಿದೆ. ಆಚೆಯಿಂದ ಬಂದವನೊಬ್ಬ "ಏನು ಆಗಲೇ ಕಾರ್ಯಕ್ರಮ ಶುರುವಾಯಿತೇ?" ಎಂದ. ಅಲ್ಲಿಯೇ ಇದ್ದ ನಾನು "ಅಲ್ಲಪ್ಪಾ, ಕಾರ್ಯಕ್ರಮ ಆರು ಘಂಟೆಗೆ ಪ್ರಾರಂಭ ಎಂದಿದೆಯಲ್ಲ, ಕಾರ್ಯಕ್ರಮ ಪಟ್ಟಿಯಲ್ಲಿ. ಇನ್ನೇನು ಮುಗಿಯಲು ಬಂದಿದೆ" ಅಂದೆ. ಅದಕ್ಕೆ ಅವನು (ಭಾರತೀಯ!), "ಅರೆ, ಭಾರತೀಯ ವಿದ್ಯಾಭವನದಲ್ಲೂ ಸಮಯಕ್ಕೆ ಸರಿಯಾಗಿ ಕಾರ್ಯಕ್ರಮ ಪ್ರಾರಂಭವಾಗುತ್ತದೆಯೇ?" ಎಂದ.

ಅವನ ಅಭಿಪ್ರಾಯದಲ್ಲಿ ಭವನ ಭಾರತಕ್ಕೆ ಸೇರಿದುದು, ಅಲ್ಲಿ ಹೀಗೆ ಸಮಯಪಾಲನೆ ಇರಲಿಕ್ಕಿಲ್ಲ ಎನ್ನುವ ಧೋರಣೆ! ಅವನ ಅಚ್ಚರಿಯ ಉದ್ಗಾರ ಕೇಳಿ ನನಗೆ ನಗು ಬಂದಿತು!!

ಅಂತೆಯೇ ಅವರಲ್ಲಿ ಒಂದು ಒಳ್ಳೆಯ ಅಭ್ಯಾಸವೆಂದರೆ, ಯಾವುದೇ ರೀತಿಯಲ್ಲಿ ಇನ್ನೊಬ್ಬರಿಗೆ ಬೇಸರ ಮಾಡದಿರುವುದು. ನಾವು

ಯಾರೊಡನೆಯಾದರೂ ಮಾತನಾಡುತ್ತಿದ್ದರೆ ಅವರು ನಮ್ಮನ್ನು ನೋಡುತ್ತಿರುತ್ತಾರೆ. ಅಪ್ಪಿತಪ್ಪಿಯೂ ಗಡಿಯಾರದತ್ತ ನೋಡುವುದಿಲ್ಲ. ನಾವು ಹಾಗೇ ಮಾಡಬೇಕು. ಒಮ್ಮೆಯಾದರೂ ಅತ್ತಿತ್ತ ನೋಡಿದರೆ, ಗಡಿಯಾರದತ್ತ ನೋಡಿದರೆ, 'ಇವರಿಗೆ ನಮ್ಮ ಮಾತಿನ ಮೇಲೆ ಆಸಕ್ತಿಯಿಲ್ಲ' ಎಂದು ಕೂಡಲೇ 'ಸಾರಿ, ಕ್ಷಮಿಸಿ, ನಾನು ನಿಮ್ಮ ಸಮಯ ಸಾಕಷ್ಟು ತೆಗೆದುಕೊಂಡೆ' ಎಂದು ವಂದಿಸಿ ಹೊರಟು ಹೋಗುತ್ತಾರೆ. ಅಂತೆಯೇ ಯಾರಾದರೂ ಮಾತನಾಡುವಾಗ ಮಧ್ಯೆ ಅವರು ಬಾಯಿಹಾಕುವುದಿಲ್ಲ. ಅವರು ಮಾತು ಪೂರ್ತಿ ಕೇಳಿ ಮುಗಿದನಂತರ ಕೈಯೆತ್ತಿ 'ನಾನೀಗ ಮಾತನಾಡಬಹುದೇ?' ಎಂದು ಕೇಳಿ ಮಾತನಾಡುವರು. ಅದೂ ಅವರು ಪಾಲಿಸುವ ಒಂದು ನಿಯಮವೇ!

ನಾವು ಯಾರನ್ನೇ ಆದರೂ 'ಸಾಧ್ಯವಾದಾಗ ಬನ್ನಿ' ಎನ್ನುತ್ತೇವೆ. ಅವರು ಹಾಗಲ್ಲ, ನಮಗಾಗಿ ಒಂದು ದಿನ ಅಥವಾ ಒಂದು ಸಂಜೆ ಎಂದು ಸಮಯ ಗೊತ್ತುಮಾಡಿ, ನಮಗಾಗಿ ಅತಿಥಿ ಸತ್ಕಾರಕ್ಕೆಂದು ತಕ್ಕದ್ದು ಮಾಡಿಕೊಂಡು ಕಾಯುತ್ತಾರೆ. ನಾವು ಹೋಗದೆ ತಪ್ಪಿಸಿದರೆ, ಒಂದು ಬಾರಿ, ಎರಡು ಬಾರಿ, ಮೂರು ಬಾರಿ ನೋಡುತ್ತಾರೆ, ಕ್ಷಮಿಸುತ್ತಾರೆ. ನಾಲ್ಕನೆಯ ಬಾರಿ ಅವರು ನಮ್ಮನ್ನು ಕರೆಯುವುದೇ ಇಲ್ಲ!! ಇದು ಅವರ ನಿಯಮ! ನಾನು ಒಮ್ಮೆ ಇಂಗ್ಲಿಷಿನ ಗೆಳೆಯನೊಬ್ಬ ತನ್ನ ಮನೆಗೆ ಕರೆದಿದ್ದಾನೆಂದು ಹೋಗಲು ಬಹಳ ಪ್ರಯತ್ನಿಸಿದೆ. ಏನೋ ಕೆಲಸ, ಹೋಗಲು ಸಾಧ್ಯವಾಗಲಿಲ್ಲ. ಎರಡನೆ ಬಾರಿ ನನ್ನನ್ನು ಕರೆದ ಆತ! ಆಗಲೂ ನನಗೆ ಎಂಥದೋ ಕಾರ್ಯಕ್ರಮ. ಹೋಗಲಾಗಲಿಲ್ಲ... ಮೂರನೆಯ ಬಾರಿ ಕರೆದಾಗಲೂ ಏನೋ ಅನಿವಾರ್ಯವಾಗಿ ಹೋಗಲು ಸಾಧ್ಯವೇ ಆಗಲಿಲ್ಲ. ಮಾರನೆಯ ಬೆಳಗ್ಗೆ ಫೋನು ಮಾಡಬೇಕೆಂದು ಅಂದುಕೊಂಡೆ. ಬೆಳಗ್ಗೆ ಏಳಕ್ಕೆ ಅವನು ನಮ್ಮ ಮನೆಯ ಬಾಗಿಲಲ್ಲಿ ಹಾಜರಾದ. ನಾನು ಅವನನ್ನು ನೋಡಿ ಏನನ್ನೂ ಹೇಳುವ ಮೊದಲೇ, ಅವನು "ಮಿಸ್ಟರ್ ಮಾಥೂರ್, ನಾನು ನಿಮ್ಮನ್ನು ಮೂರು ಬಾರಿ ಆಹ್ವಾನಿಸಿದೆ. ನೀವು ಮೂರು ಬಾರಿಯೂ ಬರಲಿಲ್ಲ. ಇನ್ನು ಮುಂದೆ ನಾನು ನಿಮ್ಮನ್ನು ಎಂದಿಗೂ ಆಹ್ವಾನಿಸುವುದಿಲ್ಲ. ತಿಳಿಯಿತಲ್ಲ ನಿಮಗೆ?" ಎಂದ. ಅವಾಕ್ಕಾದ ನಾನು, ಸಾವರಿಸಿಕೊಂಡು ಕಾರಣ ಹೇಳಿದೆ, ನಕ್ಕು ಎಲ್ಲವನ್ನೂ ಕೇಳಿಸಿಕೊಂಡ. ಆದರೆ ಅವನೆಂದಂತೆ ಆಮೇಲೆ ಲಂಡನ್‌ನಲ್ಲಿ ನಾನು ಸುಮಾರು ಹದಿನೈದು ವರ್ಷಗಳ ಕಾಲ ಇದ್ದರೂ ಒಮ್ಮೆಯೂ ಅವನು ನನ್ನನ್ನು ತನ್ನ ಮನೆಗೆ ಆಹ್ವಾನಿಸಲಿಲ್ಲ! ತಾನು ಮಾತ್ರ ನಾನು ಆಹ್ವಾನಿಸಿದಾಗ ತಪ್ಪದೆ ಬರುತ್ತಿದ್ದ. ನಾನೇ ಒಮ್ಮೊಮ್ಮೆ 'ನಾನು ನಿಮ್ಮ ಮನೆಗೆ ಬರುತ್ತೇನೆ' ಎಂದರೂ , 'ಕ್ಷಮಿಸಿ, ನೀವು ನಾನು ಆಹ್ವಾನಿಸಿದ ಮೂರು ಬಾರಿಯೂ ಬರಲಿಲ್ಲ. ಇನ್ನು ನಾನು ನಿಮ್ಮನ್ನು ಆಹ್ವಾನಿಸುವಂತಿಲ್ಲ!' ಎಂದು ಭುಜಹಾರಿಸಿ ನಕ್ಕ!!

ನನ್ನದೊಂದು ಭಾಷಣ ಇದ್ದಾಗ, ನಾನು ಅಲ್ಲಿಗೆ ಹೋಗಿ ಹಿಂದಿಯಲ್ಲಿ ಮಾತನಾಡಬೇಕಿತ್ತು. ಅದು ಗುಜರಾತಿಗಳ ಸಮಾಜ. ಆ ಕಾರ್ಯಕ್ರಮಕ್ಕೆ ಇಬ್ಬರು ಇಂಗ್ಲಿಷಿನವರು ಬಂದಿದ್ದರು. ನಾನು ಮಾತು ಪ್ರಾರಂಭಿಸಿ, ಮುಗಿಸುವ ತನಕವೂ ಒಂದೂ ಮಾತಾಡದೆ, ಯಾವ ಭಾವವನ್ನೂ ವ್ಯಕ್ತಪಡಿಸದೇ ನನ್ನನ್ನೇ ನೋಡುತ್ತಿದ್ದರು. ಅವರಿಬ್ಬರನ್ನೂ ನೋಡಿ ನನಗೆ ಕೊಂಚ ಗಾಬರಿಯೇ ಆಯಿತು. "ಇವರಿಗೆ ಬಹುಶಃ ಹಿಂದಿ ಚೆನ್ನಾಗಿ ಬರಬಹುದು, ನಾನು ಹಿಂದಿ ಮಾತನಾಡಿದುದರಲ್ಲಿ ಅದೆಷ್ಟು ತಪ್ಪಿದ್ದವೋ, ಅದಕ್ಕೆ ಸುಮ್ಮನೆ ನನ್ನನ್ನೇ ನೋಡುತ್ತಿದ್ದರವರು" ಎಂದುಕೊಂಡು, ಭಾಷಣ ಮುಗಿದನಂತರ, "ಮಹನೀಯರೆ, ನನ್ನ ಭಾಷಣ ಹಿಡಿಸಿತೇ ? ಹಿಂದಿ ಬರುವುದೇ ನಿಮಗೆ ?" ಎಂದೆ. ಅದಕ್ಕೆ ಅವರು ಇಂಗ್ಲಿಷಿನಲ್ಲಿ "ಇಲ್ಲ, ಇಲ್ಲ... ನಮಗೆ ಹಿಂದಿಬರದು, ಆದರೂ ನಾವು ಸಭೆಗೆ ಬಂದದ್ದಾಗಿತ್ತು. ಅದಕ್ಕೇ ಕುಳಿತು ಕೇಳಿದೆವು!" ಎಂದರು. ನನ್ನ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ, ನಾನು ಮಾತಾಡಿದ ಒಂದು ಅಕ್ಷರವೂ ಅವರಿಗೆ ಅರ್ಥವಾಗಿಲ್ಲ. ಆಷ್ಟಾದರೂ ಸಭಾಮರ್ಯಾದೆ ಕಾಪಾಡಿದ್ದಾರೆ. ಸಭೆಗೆ ಬಂದಿದ್ದಾರೆ, ಮಾತನಾಡುವವರನ್ನು ನೋಡುತ್ತಾ ಮಾತು ಕೇಳುವುದು ಸಭ್ಯತನ, ಕೇಳಿದ್ದಾರೆ ಅಷ್ಟೆ! ಅದು ಅವರು ಪಾಲಿಸುವ ನಿಯಮ!

ನಮ್ಮ ದಲಾಲ್‌ಜೀಯವರೂ ತಪ್ಪದೆ ಈ ನಿಯಮಗಳನ್ನು ಪಾಲಿಸುವವರು. ಎರಡು ಮೂರು ದಿನಗಳಿಗೊಮ್ಮೆ ಒಂದು ಘಂಟೆ ಮಾತ್ರ ಆಫೀಸಿನಲ್ಲಿರಲು ಅವರು ಭವನಕ್ಕೆ ಬರುತ್ತಿದ್ದುದು. ಆಗ ನಾನು ಯಾವುದೇ ಫೋನನ್ನು ಉತ್ತರಿಸುವುದನ್ನು ಅವರು ಇಷ್ಟಪಡುತ್ತಿರಲಿಲ್ಲ! "ಮಾಥೂರ್‌ಜೀ, ಒಂದು ಘಂಟೆಯ ತನಕ ನೀವು ಫೋನಿಗೆ ಉತ್ತರಿಸುವುದು ಬೇಡ ಎಂದರೆ ನಿಮಗೆ ಬೇಸರ ಆಗುವುದಿಲ್ಲ ತಾನೆ? ಆಮೇಲೆ ಉತ್ತರಿಸಿದರೆ ಆದೀತಲ್ಲ!" ಎಂದು ನಯವಾಗಿಯೇ ಹೇಳಿಬಿಡುತ್ತಿದ್ದರು. ಆಫೀಸಿನ ಕೆಲಸ ಕಾರ್ಯಗಳನ್ನು ಮುಗಿಸಿ, ಭವನದ ಚಟುವಟಿಕೆಗಳನ್ನು ತಿಳಿದುಕೊಂಡು, ಮಾತನಾಡ ಬೇಕಾದುದನ್ನೆಲ್ಲ ಮಾತನಾಡಿ ಹೊರಟಾಗ, 'ಈಗ ನೀವು ನಿಮ್ಮ ಕೆಲಸ ಮುಂದುವರಿಸ ಬಹುದು' ಎಂದು ನಸುನಕ್ಕು ಹೊರಡುತ್ತಿದ್ದರು. ಅಲ್ಲವೇ ಮತ್ತೆ? ವಿದ್ಯಾಭವನದ ಅಧ್ಯಕ್ಷರು ಅವರು ; ಅವರಿಗೆ ಎಂದು, ಅವರು ಬರುತ್ತಾರೆಂದು, ಒಂದು ಗೊತ್ತಾದ ಸಮಯ ಬೇಡವೇ? ಹಾಗೆಯೇ, ಅವರು ನನ್ನ ಮೇಲೆ ಅದೆಷ್ಟು ನಂಬಿಕೆ ಇಟ್ಟಿದ್ದರು ಎನ್ನುವುದಕ್ಕೆ ಒಂದು ನಿದರ್ಶನ ಎಂದರೆ, ಒಮ್ಮೆ ಅವರು ಆಫೀಸಿಗೆ ಬಂದಿದ್ದಾಗ ಊಟದ ಸಮಯವಾಗಿತ್ತು. ಕೆಲಸದಲ್ಲಿ ಮುಳುಗಿದ್ದ ಅವರು,"ಮಾಥೂರ್‌ಜೀ, ನನ್ನ ಪತ್ನಿಗೆ ಹೇಳಿ ನನಗಾಗಿ ಕಾಯುವುದು ಬೇಡ, ನಾನು ಊಟಕ್ಕೆ ಒಂದು ಘಂಟೆ ತಡವಾಗಿ ಬರುತ್ತೇನೆ ಎಂದು. ಈಗಲೆ ಫೋನಿಸಿಬಿಡಿ" ಎಂದರು. ನಾನು "ಆಯಿತು, ದಲಾಲ್‌ಜೀ" ಎಂದು ಹೇಳಿ ಹೊರಬಂದೆ. ಅಷ್ಟರಲ್ಲೇ ಏನೋ ಕೆಲಸವಾಗಿ ಆ ಮಾತು

ಸಂಪೂರ್ಣವಾಗಿ ನನಗೆ ಮರೆತೇಹೋಯಿತು! ನಾನು ಫೋನು ಮಾಡಿ ದಲಾಲ್‌ಜೀಯವರ ಪತ್ನಿಗೆ, ಅವರು ತಡವಾಗಿ ಬರುವ ವಿಷಯವನ್ನು ಹೇಳಲೇ ಇಲ್ಲ. ದಲಾಲ್‌ಜೀ ಕೆಲಸಗಳನ್ನು ಮುಗಿಸಿಕೊಂಡು ಹೊರಟು ಹೋದರು. ನಾನೂ ಮನೆಗೆ ಬಂದು ಇನ್ನೇನು ಊಟ ಮಾಡುವವನಿದ್ದೆ. ಅಷ್ಟರಲ್ಲೇ ಫೋನು ಟ್ರಿಣ್... ಟ್ರಿಣ್ ಎಂದಿತು. ರಿಸೀವರ್ ಎತ್ತಿಕೊಂಡರೆ ಅತ್ತಲಿಂದ ದಲಾಲ್‌ಜೀ! "ಮಾಥೂರ್‌ಜೀ, ನಾನು ನಿಮಗೆ ಮನೆಗೆ ಫೋನು ಮಾಡಿ ನಾನು ತಡವಾಗಿ ಬರುವ ವಿಷಯ ತಿಳಿಸಿ ನನ್ನ ಪತ್ನಿಗೆ ಎಂದು ಹೇಳಲಿಲ್ಲವೆ?" ಎಂದರು. ನನ್ನ ಮುಖದ ಬಣ್ಣ ಇಳಿದುಹೋಗಿತ್ತು! ಎಂಥ ತಪ್ಪು ಮಾಡಿದ್ದೆ ನಾನು, ಆ ವಿಷಯ ನನಗೆ ಆಗಲೇ ನೆನಪಿಗೆ ಬಂದದ್ದು. ಬಹಳ ಕಂಗೆಟ್ಟೆ, "ದಲಾಲ್‌ಜೀ, ದಯವಿಟ್ಟು ಕ್ಷಮಿಸಿ, ನಾನು ಕೆಲಸದ ಒತ್ತಡದಿಂದ ಆ ವಿಷಯವನ್ನೇ ಮರೆತುಬಿಟ್ಟೆ, ನಿಮ್ಮ ಮನೆಗೆ ಫೋನಿಸಲೇ ಇಲ್ಲ. ಕ್ಷಮಿಸಿ-ಕ್ಷಮಿಸಿ ದಲಾಲ್‌ಜೀ"ಎಂದೆ, ನನ್ನ ಧ್ವನಿಯಲ್ಲಿ ಅವರ ಕಾಲಿಗೆ ಬಿದ್ದು ಕ್ಷಮೆ ಬೇಡುತ್ತಿರುವ ದೈನ್ಯವಿತ್ತು. ಅದಕ್ಕೆ ಅವರು "ಛೇ, ಛೇ.. ಅದಕ್ಕಲ್ಲ ಮಾಥೂರ್‌ಜೀ, ಪರವಾಗಿಲ್ಲಬಿಡಿ. ಆದರೆ ನನ್ನ ಪತ್ನಿ 'ನಾನು ನಿಮಗೆ ಹಾಗೆ ಹೇಳಿದ್ದೆ, ಮತ್ತೂರ್‌ಜೀ ಫೋನು ಮಾಡಲು ಮರೆತಿರಬಹುದು' ಎಂದು ಹೇಳಿದರೆ ನಂಬುತ್ತಿಲ್ಲ...!! 'ನೀವು ಮಾಥೂರ್‌ಜೀಗೆ ಹೇಳಿದ್ದರೆ ಅವರೆಂದೂ ಫೋನು ಮಾಡುವುದನ್ನು ತಪ್ಪಿಸುತ್ತಿರಲಿಲ್ಲ' ಎನ್ನುತ್ತಿದ್ದಾಳೆ. ನೀವೊಮ್ಮೆ ಅವಳ ಬಳಿ 'ನಾನು ನಿಮಗೆ ಹೇಳಿದ್ದೆ' ಎಂದು ಒಂದು ಮಾತು ಹೇಳಿ... ದಲಾಲ್‌ಜೀ ನನಗೆ ಹೇಳಿದ್ದರು - ಎಂದು ನೀವು ಹೇಳಿದರೆ ಸಾಕು... ಅದಕ್ಕಷ್ಟೆ ನಿಮಗೆ ಫೋನು ಮಾಡಿದ್ದು!" ಎಂದರು. ನನಗೆ ಬಾಯಿಕಟ್ಟಿತು, ಹೃದಯ ತುಂಬಿ ಬಂದಿತು, ಧ್ವನಿ ಗದ್ಗದಿತವಾಯಿತು. ಈ ನಂಬಿಕೆಗೆ, ಈ ವಿಶ್ವಾಸಕ್ಕೆ ಬದಲಾಗಿ ನಾನೇನು ಕೊಡಲಾದೀತು ಅವರಿಗೆ? ಈ ವಿಶ್ವಾಸಕ್ಕೆ ಧಕ್ಕೆ ಬರುವ ಹಾಗೆ ನಾನು ನಡೆದುಕೊಂಡದ್ದಾದರೂ ಹೇಗೆ? ಈ ನನ್ನ ಮೇಲಿನ ಅವರ ಈ ನಂಬಿಕೆಗೆ ನಾನು ಏನು ಹೇಳಲಾದೀತು? ಅಂತೂ ಫೋನಿನಲ್ಲಿ ಶ್ರೀಮತಿ ದಲಾಲ್‌ಜೀಯವರಿಗೆ ನನ್ನ ತಪ್ಪನ್ನು ಹೇಳಿ, ಕ್ಷಮೆ ಕೇಳುವಷ್ಟರಲ್ಲಿ ಹೃದಯ ಬಾಯಿಗೆ ಬಂದಂತಾಗಿತ್ತು! ಅದೇ ಕೊನೆ, ಅದಾದನಂತರ, ನಾನು ಅಲ್ಲಿರುವವರೆಗೆ ಆ ದಂಪತಿಗಳ ಈ ವಿಶ್ವಾಸಕ್ಕೆ ಎಂದೂ ಚ್ಯುತಿಯಾಗದಂತೆ ಎಚ್ಚರವಹಿಸಿ ನಡೆದುಕೊಳ್ಳುತ್ತಿದ್ದೆ. ಇದನ್ನೇ ಅಲ್ಲಿ ಎಲ್ಲರೂ ನಿರೀಕ್ಷಿಸುವುದು. ಅವರೂ ಹಾಗೆಯೇ ಇರುತ್ತಾರೆ. ಈ ಅಭ್ಯಾಸ-ನಿಯಮ ಅವರಿಗೆ ಸ್ವಭಾವಜನ್ಯ!

ಅವರಿಗೂ ನಮಗೂ ಇರುವ ಒಂದು ವ್ಯತ್ಯಾಸ ಎಂದರೆ, ನಾವು ಏನು ಮಾಡಿದರೂ ನಮಗೆ ಅದರಲ್ಲಿ ಶ್ರದ್ಧೆ ಕಡಮೆ, ಅವರು ಏನು ಮಾಡಿದರೂ ಅವರಿಗೆ ಅದರಲ್ಲಿ ಅಪರಿಮಿತ ಶ್ರದ್ಧೆ! ನಡವಳಿಕೆಯಲ್ಲಿ ಕಾಣಬಹುದಾದ ಈ ಅಜಗಜಾಂತರವನ್ನು ನನ್ನ ಓದುಗರಿಗೆ ತಿಳಿಸಲು, ಅಲ್ಲಿ ನಡೆದ ಸಂದರ್ಭವೊಂದರ ಸ್ವಾರಸ್ಯವನ್ನು ಹೇಳಬೇಕಿದೆ ಈಗ!

ಒಮ್ಮೆ ನಮ್ಮ ಶ್ರೀ ಸಿ.ಎಸ್. ಸುಬ್ರಹ್ಮಣ್ಯಂ ಹಾಗೂ ಶ್ರೀ ರಾಮಕೃಷ್ಣನ್‌ಜೀ ಲಂಡನ್ನಿಗೆ ಬಂದಿದ್ದರು. ವಿದ್ಯಾಭವನದಲ್ಲಿ ಉನ್ನತಸ್ಥಾನದಲ್ಲಿರುವ ಹಿರಿಯರು ಅವರಿಬ್ಬರೂ. ಈ ಹಿರಿಯರನ್ನು ಭೇಟಿ ಮಾಡಲು ಹಲವಾರು ಮಂದಿ ಅಲ್ಲಿದ್ದರು. ಅವರಿಬ್ಬರಿಗೆ ಎಲ್ಲರನ್ನೂ ಭೇಟಿ ಮಾಡುವ ಕುತೂಹಲವೂ ಇದ್ದಿತು. ಒಮ್ಮೆ ನನ್ನ ಕಮಿಟಿ ಸದಸ್ಯರೊಬ್ಬರು ಅವರ ಪರಿಚಿತ ಗಣ್ಯವ್ಯಕ್ತಿ, ಭಾರತೀಯರೊಬ್ಬರನ್ನು ಈ ಹಿರಿಯರಿಗೆ ಭೇಟಿ ಮಾಡಿಸುತ್ತೇನೆ ಎಂದು ಹೇಳಿ ಕರೆದೊಯ್ದರು. ಜತೆಯಲ್ಲಿ ನಾನೂ ಹೊರಟೆ. ನಾವು ಆ ಜಾಗ ತಲುಪಿದಾಗ ಅಲ್ಲಿ ಪಾರ್ಟಿ (ಔತಣಕೂಟ) ನಡೆಯುತ್ತಿತ್ತು. ಎಲ್ಲರೂ ಆಲ್ಕೋಹಾಲು ತೆಗೆದುಕೊಳ್ಳುತ್ತಿದ್ದರು. ನಾವು ಮೂವರೂ ಮದ್ಯಪಾನ ಮಾಡುವವರಲ್ಲ. ಅಷ್ಟಾದರೂ ಅತಿಥಿಗಳು ಬಂದಿದ್ದಾರೆ, ಅವರು ಮದ್ಯಪಾನ ಮಾಡದೆ ಸುಮ್ಮನೆ ಕುಳಿತಿದ್ದಾರೆ ಎನ್ನುವ ಪರಿವೆಯೂ ಇಲ್ಲದೆ ಆ ಜನ ತಮ್ಮಷ್ಟಕ್ಕೆ ತಾವು ನಗುತ್ತಾ ಮಾತಾಡುತ್ತಾ, ಕುಡಿಯುತ್ತಾ ಮೋಜು ನಡೆಸುತ್ತಿದ್ದರು. ನಮಗೆ ಸ್ವಲ್ಪ ಹೊತ್ತು ಕಳೆಯುವುದರಲ್ಲೇ ಬಹಳ ಬೇಸರವಾಯಿತು. ಶ್ರೀ ಸಿ. ಎಸ್. ಸುಬ್ರಹ್ಮಣ್ಯಂರವರಿಗಂತೂ ಬಹಳ ಸಂಕಟವೇ ಆಯಿತು, 'ಎಲ್ಲಿಗೆ ಬಂತು ನಮ್ಮ ದೇಶದ ಸಂಸ್ಕೃತಿ? ಏಕೆ ನಮ್ಮ ಜನ ಹೀಗಾಗಿದ್ದಾರೆ? ಅತಿಥಿ ದೇವೋಭವ ಎನ್ನುವ ನಾಡಿನ ಜನರೇ ಇವರು? ನಾವು ಕುಳಿತಿರುವುದರ ಪರಿವೆಯೇ ಇಲ್ಲದೆ ಹೀಗೆ ಕುಡಿತದಲ್ಲಿ ಮಗ್ನರಾಗಿದ್ದಾರಲ್ಲ?' ಎಂದು ಚಡಪಡಿಸಿಬಿಟ್ಟರು. ಅವರು ಇಂಗಿತ ಅರಿತ ನಾನು 'ನಾವು ಹೊರಟುಬಿಡೋಣ ಸರ್' ಎಂದೆ. ಶ್ರೀ ಸಿ.ಎಸ್. ಸುಬ್ರಹ್ಮಣ್ಯಂ ಸಾಮಾನ್ಯದವರಲ್ಲ. ಎಷ್ಟು ದೊಡ್ಡವರು, ಕ್ಯಾಬಿನೆಟ್ ಮಂತ್ರಿಯಾಗಿದ್ದವರು! ಶ್ರೀ ರಾಮಕೃಷ್ಣನ್‌ಜೀ ಅವರಾದರೂ ಸಾಮಾನ್ಯರಲ್ಲ. ನಾನು ನನ್ನ ಓದುಗರಿಗೆ ಶ್ರೀ ರಾಮಕೃಷ್ಣನ್‌ಜೀ ಬಗ್ಗೆ ಒಂದೆರಡು ಮಾತುಗಳನ್ನು ವಿವರವಾಗಿ ಹೇಳಬಯಸುತ್ತೇನೆ ಇಲ್ಲಿ. ನಾನು ಮೊದಲಿನಿಂದಲೂ ಶ್ರೀ ರಾಮಕೃಷ್ಣನ್‌ಜೀ ಅವರ ಲೇಖನಗಳನ್ನು ಭವನ್ಸ್ ಜರ್ನಲ್‌ನಲ್ಲಿ ಓದಿ ಬಹಳ ಪ್ರಭಾವಿತನಾಗಿದ್ದವನು. ಅವರು ಗಾಂಧೀಜಿಯ ಮೇಲೆ ಸುಮಾರು ನೂರೈವತ್ತಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದರು. ಅವರ ಹದಿನಾರನೇ ವಯಸ್ಸಿನಲ್ಲಿ ಗಾಂಧೀಜಿಯನ್ನು ಎರ್ನಾಕುಲಂನಲ್ಲಿ ಭೇಟಿಯಾದಾಗ, ಗಾಂಧೀಜಿಯ ಭಾಷಣ ಕೇಳಿ ಭಾರೀ ಪ್ರಭಾವಿತರಾದ ಇವರು ತಮ್ಮ ವಯಸ್ಸಿನವರ ಗುಂಪೊಂದನ್ನು ಕಟ್ಟಿಕೊಂಡು ನೂಲುವುದಕ್ಕೆ ಪ್ರಾರಂಭಿಸಿದರು. ೧೯೪೦ರಲ್ಲಿ ಗಾಂಧೀ ಜಯಂತಿಯ ದಿನ ಇವರ ಗುಂಪು ಗಾಂಧೀಜಿಯ ದರ್ಶನ ಮಾಡಲು ಹೋದರು. ಈ ಹುಡುಗರು ಗಾಂಧೀಜಿಗೆ ಇಷ್ಟಿಷ್ಟು ಅಡಿ ನೂಲು ಎಂದು ಚೆನ್ನಾಗಿ ನೂತು, ಸಾವಿರಾರು ಅಡಿ ನೂಲನ್ನು ಅವರಿಗೆ ಉಡುಗೊರೆಯಾಗಿ ಸಮರ್ಪಿಸಿದರು. ಗಾಂಧೀಜಿ ಇವರೆಲ್ಲರ ಜೊತೆ ಮಾತನಾಡುವಾಗ ಶ್ರೀ ರಾಮಕೃಷ್ಣನ್‌ಜೀ, 'ಬಾಪೂಜಿ, ನಾನೂ ನಿಮ್ಮ

ಆಶ್ರಮ ಸೇರಬಯಸುತ್ತೇನೆ' ಎಂದರಂತೆ. ಆಗ ಬಾಪೂ, 'ನೀನು ಆಶ್ರಮ ಸೇರಬೇಕಾದರೆ, ಮೊದಲು ನಿನ್ನ ಕುಟುಂಬದ ಹಿನ್ನೆಲೆಯನ್ನು ವಿವರವಾಗಿ ನನಗೆ ಹೇಳಬೇಕು' ಎಂದರು. ಅದಕ್ಕೆ 'ನನ್ನ ತಂದೆಯಿಲ್ಲ, ವಿಧವೆ ತಾಯಿ...' ಅವರ ಮಾತನ್ನು ಮಧ್ಯಕ್ಕೇ ತಡೆದು ಗಾಂದೀಜಿ 'ಹಾಗಾದರೆ, ನೀನು ಇಲ್ಲಿಗೆ ಬರುವುದು ಬೇಡ. ನೀನು ಬಂದರೆ ನಿನ್ನ ತಾಯಿಯನ್ನು ನೋಡಿಕೊಳ್ಳುವವರು ಯಾರು?'ಎಂದು ದೃಢವಾಗಿ ಹೇಳಿದರು. ಎಲ್ಲರೂ ಬಾಪೂವಿನಿಂದ ಬೀಳ್ಕೊಂಡು ಹೊರಟಾಗ, ಇವರ ಮುಖದಲ್ಲಿ ನಿರಾಶೆಯನ್ನು ಗಮನಿಸಿದ ಬಾಪೂ, 'ನೀನು ಬಿಡದೆ ನೂಲುವುದನ್ನು ಅಭ್ಯಾಸ ಮಾಡು, ವಿಷ್ಣು ಸಹಸ್ರನಾಮ ಮಾಡು, ಖಾದಿ ಧರಿಸು' ಎಂದು ಹೇಳಿ ಆಶೀರ್ವದಿಸಿ ಕಳಿಸಿದರು.

ಇದು ನಡೆದದ್ದು ಬಹಳ ಹಿಂದಾದರೂ ಈವರೆಗೂ ಒಂದು ದಿನವೂ ಅವರು ಈ ಅಭ್ಯಾಸಗಳನ್ನು ಬಿಟ್ಟಿಲ್ಲ. ಸ್ವಾತಂತ್ರ್ಯ ಚಳವಳಿಯ ಸಮಯದಲ್ಲಿ ಜೈಲಿಗೆ ಸಹಾ ಹೋಗಿಬಂದ ಶ್ರೀ ರಾಮಕೃಷ್ಣನ್‌ಜೀ ಶ್ರೀ ಸರದಾರ್ ಪಟೇಲರ ಜೊತೆಯಲ್ಲಿ ಇದ್ದವರು. ಬಹಳ ಚೆನ್ನಾಗಿ ಶೀಘ್ರಲಿಪಿ ಕಲಿತಿದ್ದ ಶ್ರೀ ರಾಮಕೃಷ್ಣನ್‌ಜೀ ಒಮ್ಮೆ ಮೌಂಟ್ ಬ್ಯಾಟನ್‌ರಿಗಾಗಿ ಟೈಪು ಮಾಡಿದ ಪತ್ರವೊಂದನ್ನು ನೋಡಿದ ಅಂದಿನ ಪ್ರಧಾನಿ ನೆಹರೂ, 'ನೀವು ನನ್ನ ಕಾರ್ಯದರ್ಶಿಯಾಗ ಬಾರದೇಕೆ?' ಎಂದರಂತೆ! ಅದಕ್ಕೆ ಇವರು, 'ಸರ್,ನೀವು ತಪ್ಪಾಗಿ ತಿಳಿಯದಿದ್ದರೆ, ನನಗಿಂತಲೂ ಉತ್ತಮರಾದ ಒಬ್ಬರನ್ನು ನಿಮ್ಮ ಕಾರ್ಯದರ್ಶಿ ಯಾಗಲು ಸೂಚನೆ ಕೊಡುತ್ತೇನೆ' ಎಂದರು. ಅದಕ್ಕೆ ನಕ್ಕ ನೆಹರೂ, 'ಓಹ್, ಎಷ್ಟು ವಿನಯವಾಗಿ ಕೆಲಸವನ್ನು ತಿರಸ್ಕರಿಸಿದಿರಿ!' ಎಂದರಂತೆ.

ಇಂತಹ ರಾಮಕೃಷ್ಣನ್‌ಜೀಯವರನ್ನು ಸರದಾರ್‌ರ ಬಳಿ ನೋಡಿದ್ದ ಶ್ರೀ ಕೆ.ಎಂ.ಮುನ್ಷಿಯವರು ಭಾರತೀಯ ವಿದ್ಯಾಭವನವನ್ನು ಪ್ರಾರಂಭ ಮಾಡಿದ ಹೊಸದರಲ್ಲಿ, 'ವಿದ್ಯಾಭವನವನ್ನು ಪ್ರಾರಂಭಿಸಿದ್ದೇನೆ. ಕೆಲಸಗಳು ತೃಪ್ತಿಕರವಾಗಿ ನಡೆಯುತ್ತಿಲ್ಲ. ರಾಮಕೃಷ್ಣನ್‌ರನ್ನು ನನಗೆ ಕೊಡಿ'ಎಂದು ಕೇಳಿದರಂತೆ! ಶ್ರೀ ಸರದಾರರು ಇದಕ್ಕೆ ಸಂತೋಷದಿಂದ ಒಪ್ಪಿದರು. ಹೀಗೆ ವಿದ್ಯಾಭವನಕ್ಕೆ ಪದಾರ್ಪಣ ಮಾಡಿದವರು ಶ್ರೀ ರಾಮಕೃಷ್ಣನ್‌ಜೀ.

ಈ ಮಹನೀಯರುಗಳನ್ನು ತಮ್ಮ ಅತಿಥಿಗಳಾಗಿ ಆಹ್ವಾನಿಸಿದ್ದವರು ಭಾರತೀಯರೇ! ಅವರು ಬಂದವರಿಗೆ ಸ್ವಲ್ಪವೂ ಗೌರವ ತೋರದೆ ಹೋದದ್ದು ನಮ್ಮ ಮನಸ್ಸಿಗೆ ಬಹಳ ನೋವಾಯಿತು. ನಮ್ಮಲ್ಲಿ ಅತಿಥಿಧರ್ಮ ಎಂದರೆ 'ಅತಿಥಿಗಳಿಗೆ ಏನು ಇಷ್ಟವೋ ಅದನ್ನೇ ಮಾಡಬೇಕು. ಅವರಿಗೆ ಇಷ್ಟವಿಲ್ಲದ್ದನ್ನು ನೀನು ಮಾಡಬಾರದು' ಎಂದಿದೆ. ಆದರೆ ಅದನ್ನು ತಿಳಿಸುವವರು ಯಾರು? ಆಚರಿಸುವವರು ಯಾರು? ನಾವು ಮೂವರೂ ಸದ್ದಿಲ್ಲದೇ ಹೊರಟು ಬಂದೆವು. ಕಾರಿನಲ್ಲಿ ಆ ಬಗ್ಗೆ ಮಾತನಾಡಿಕೊಂಡು ಪರಿತಾಪ ಪಟ್ಟೆವು.

ಮತ್ತೆ ನಾವು ನಾಲ್ವರು, ನಾನು, ಶ್ರೀ ಸಿ.ಎಸ್. ಸುಬ್ರಹ್ಮಣ್ಯಂ, ಶ್ರೀ ರಾಮಕೃಷ್ಣನ್‌ಜೀ ಹಾಗೂ ನಮ್ಮ ದಲಾಲ್‌ಜೀ - ನಮ್ಮ ನಾಲ್ವರನ್ನು ಅಲ್ಲಿನ ಪಾರ್ಲಿಮೆಂಟ್ ಸದಸ್ಯ ಮಾರ್ಟಿನ್ ಸ್ಟೀವನ್ಸ್ ಎನ್ನುವಾತ ಆಹ್ವಾನಿಸಿದ್ದರು. ಅವರು ಮದುವೆಯಾಗದ ಬ್ರಹ್ಮಚಾರಿ. ಬ್ರಹ್ಮಚಾರಿಗಳ ಕ್ವಾರ್ಟರ್ಸ್‌ನಲ್ಲಿಯೇ ಅವರ ವಾಸ. ಅಷ್ಟಾದರೂ ಬಹಳ ದೊಡ್ಡದಾದ, ಸುಂದರವಾದ ಮನೆ, ಪಕ್ಕಾ ಇಂಗ್ಲಿಷ್ ಮನುಷ್ಯ. ಹಿಂದಿನ ದಿನ ನನಗೆ ಫೋನು ಮಾಡಿ "ಮಿಸ್ಟರ್ ಮಾಥೂರ್, ನೀವು ನನಗೆ ಸಹಾಯ ಮಾಡಬೇಕು! ನೀವು ನಾಲ್ವರೂ ಏನು ತೆಗೆದು ಕೊಳ್ಳುತ್ತೀರಿ? ಏನು ಆಹಾರ ನಿಮಗೆ ಇಷ್ಟ?" ಎಂದರು. ನಾನು "ಮಿಸ್ಟರ್ ಸ್ಟೀವನ್ಸ್, ಏನೂ ಬೇಡ, ನೀವು ಸುಮ್ಮನೆ ನಮಗಾಗಿ ತೊಂದರೆ ತೆಗೆದುಕೊಳ್ಳುವುದೇಕೆ? ಸ್ವಲ್ಪ ಹಣ್ಣುಗಳನ್ನು ನಮಗಾಗಿ ಕೊಟ್ಟರೆ ಅಷ್ಟೇ ಸಾಕು ನಮಗೆ!" ಎಂದೆ ನಾನು. ನಕ್ಕು ಸುಮ್ಮನಾದರು. ನಮ್ಮನ್ನು ಆಹ್ವಾನಿಸಿದ್ದುದು ರಾತ್ರಿ ೭.೩೦ರ ವೇಳೆಗೆ. ನಾವು ಎಲ್ಲರೂ ಹೋದೆವು. 'ಏನಾದರೂ ಬಿಸ್ಕೆಟ್ಟುಗಳನ್ನು ಇಟ್ಟುಕೊಟ್ಟಾರು, ತಿಂದು ಕಾಫಿ ಕುಡಿದರಾಯಿತು' ಎಂದು ನಮ್ಮ ಭಾವನೆ. ಅಲ್ಲದೆ ಅದೂ ಇದೂ ತಿನ್ನುತ್ತೇವೆ ಎಂದು ನಾನು ಹೇಳಿ, ಆತ ಸಸ್ಯಾಹಾರವನ್ನೇ ಆದರೂ, ಇಂಗ್ಲಿಷಿನವರ ಪದ್ಧತಿಯಂತೆ ಮಾಡಿಸಿಟ್ಟರೆ ನಮಗೆ ತಿನ್ನುವುದೂ ಕಷ್ಟವಷ್ಟೇ? ಅದಕ್ಕಾಗಿ ನಾನು ಆ ಗೊಂದಲವೇ ಬೇಡ ಎಂದು ಅವರಿಗೆ, 'ಏನೂ ಬೇಡ' ಎಂದು ನಿರಾಕರಿಸಿದ್ದೆ!

ನಾವು ಅಲ್ಲಿ ತಲುಪಿ ಅವರ ಮನೆ ಹೊಕ್ಕ ಕೂಡಲೇ ಎಂಥದೋ 'ಘಂ' ಎನ್ನುವ ಪರಿಮಳ! "ಮಿಸ್ಟರ್ ಮಾಥೂರ್, ನಿಮಗೊಂದು ಅಚ್ಚರಿ ಕಾದಿದೆ, ಬನ್ನಿಬನ್ನಿ... ಏನು ಎಂದು ಹೇಳುತ್ತೇನೆ!" ಎಂದು ನನ್ನನ್ನು ಅವರ ಅಡುಗೆ ಮನೆಗೆ ಕರೆದೊಯ್ದರು! ಅಲ್ಲಿ ನೋಡಿದರೆ ಪರಮಾಶ್ಚರ್ಯ...'ಘಂ' ಎನ್ನುವ ರಸಂ, ಕಾಯಿಚಟ್ನಿ, ಮಸಾಲೆ ದೋಸೆ, ವಡೆ, ಉಪ್ಪಿಟ್ಟು, ಪೂರಿ, ಉಪ್ಪಿನಕಾಯಿ ಎಲ್ಲವೂ ಬಿಸಿಬಿಸಿಯಾಗಿ ಹಬೆಯಾಡುತ್ತಿತ್ತು. ಟೇಬಲಿನ ಮೇಲೆ ಸಾಲಾಗಿ ಜೋಡಿಸಿ ಇಡಲಾಗಿದೆ! ನನಗೋ ಆಶ್ಚರ್ಯ ತಡೆಯದೆ, "ಮಾರ್ಟಿನ್, ಇದನ್ನೆಲ್ಲ ಎಲ್ಲಿಂದ ತರಿಸಿದಿರಿ? ಹೇಗೆ ಮಾಡಿದಿರಿ?" ಎಂದೆ. "ಓಹೋ... ನನಗೆ ಗೊತ್ತು ನೀವು ಹೀಗೆಯೇ ಹೇಳುತ್ತೀರೆಂದು..." ಎಂದು ಭುಜ ಕುಣಿಸಿ ನಕ್ಕ ಆತ. ವೈ.ಎಂ.ಸಿ.ಎ. ದಿಂದ ಅಡುಗೆ ಯವರನ್ನು ಕರೆಸಿ, ಎಲ್ಲವನ್ನೂ ತಯಾರು ಮಾಡಿಸಿದ್ದರು. ಮಾರ್ಟಿನ್ ಸ್ಟೀವನ್ಸ್‌ಗೆ ನಾವು ಮೂವರೂ ದಕ್ಷಿಣ ಭಾರತದವರು ಎಂದು ತಿಳಿದಿದ್ದು, ದಲಾಲ್‌ಜೀಗೆ ಸಸ್ಯಾಹಾರವೂ ಪ್ರೀತಿ ಎಂದು ತಿಳಿದೇ ಎಲ್ಲವನ್ನೂ ತಯಾರು ಮಾಡಿಸಿದ್ದರು. ಆ ದಿನವನ್ನು ನಾವು ಮರೆಯು ವಂತಿಲ್ಲ. ಪೂರ್ಣ ಸಸ್ಯಾಹಾರದ ರುಚಿಕಟ್ಟಾದ ಭೋಜನದ ಸವಿಯನ್ನು ನಾಲಗೆ ಮರೆತಿಲ್ಲ! "ಮಹನೀಯರುಗಳೇ, ನೀವು ಯಾರೂ ಮದ್ಯಪಾನ ಮಾಡುವವರಲ್ಲ ಎಂದು ನನಗೆ ತಿಳಿದಿದೆ. ಆದ್ದರಿಂದ ಈ ದಿನ

ನಿಮಗಾಗಿ ನಾನೂ ಮದ್ಯಪಾನ ಮಾಡುವುದಿಲ್ಲ'' ಎಂದರು. ನಮ್ಮ ಜತೆಗೇ ಆಹಾರವನ್ನು ತೆಗೆದುಕೊಂಡರು. ಊಟವಾದನಂತರ ಮತ್ತೆ ''ಮಹನೀಯರೇ (gentlemen), ನನಗೆ ಸಿಗಾರನ್ನು ಸೇದುವ ಅಭ್ಯಾಸವಿದೆ. ಆದರೆ ಈ ದಿನ ನನ್ನ ಅತಿಥಿಗಳಾದ ನೀವು ಯಾರೂ ಸಿಗಾರ ಸೇದದೆ ಇರುವುದರಿಂದ ನಿಮಗಾಗಿ ನಾನು ಈ ದಿನ ಸಿಗಾರನ್ನು ಸೇದುವುದಿಲ್ಲ!'' ಎಂದರು. ಆತನ ಬಗ್ಗೆ ನಮಗಾದ ಮೆಚ್ಚುಗೆಗೆ ನಮಗೆ ಬದಲುಹೇಳಲು ಮಾತೇ ಹೊರಡಲಿಲ್ಲ. ನಮ್ಮ ಜತೆಗೇ ಹಣ್ಣಿನ ರಸ ಕುಡಿದು, ಐಸ್‌ಕ್ರೀಂ ತಿಂದು ಆತ ನಗುನಗುತ್ತಾ ನಮ್ಮನ್ನು ಬೀಳ್ಕೊಟ್ಟರು. ''ಇದಲ್ಲವೇ ಸುಸಂಸ್ಕೃತ ಆತಿಥೇಯರ ಲಕ್ಷಣ!! ಆತ ನಮ್ಮಲ್ಲಿರುವ ಅತಿಥಿ ಸತ್ಕಾರದ ಸಾಹಿತ್ಯವನ್ನು ಓದಿಲ್ಲ. ಆದರೆ ಅದೆಷ್ಟು ಸೌಜನ್ಯ ಇದೆ ನೋಡಿ... ಅದೇ ನಾವು ಆ ದಿನ ನಮ್ಮ ಭಾರತೀಯರೇ ಆಗಿದ್ದವರಲ್ಲಿಗೆ ಹೋಗಿದ್ದೆವು. ಅವರು ನಮ್ಮನ್ನು ಹೇಗೆ ಕಂಡರು? ಈತ ನಮ್ಮನ್ನು ಹೇಗೆ ಕಂಡರು? ಎಷ್ಟು ವ್ಯತ್ಯಾಸ ನೋಡಿ, ಮತ್ತೂರ್'' ಎಂದು ಶ್ರೀ ಸಿ.ಎಸ್. ಸುಬ್ರಹ್ಮಣ್ಯಂರವರು ಹೇಳಿದರು. ಅವರಿಗೆ ಹಾಗೂ ಶ್ರೀ ರಾಮಕೃಷ್ಣನ್‌ಜೀಗೆ ಆ ದಿನ ಖುಷಿಯೋ ಖುಷಿಯಾಗಿತ್ತು!

''ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ'' ಎಲ್ಲೆಲ್ಲಿಯೂ ಪರಮಾತ್ಮನೇ ಇದ್ದಾನೆ ಎನ್ನುವ ಈ ಮಾತನ್ನು ಅವರು ಶಾಸ್ತ್ರ ಹೇಳಿದೆ ಎಂದು ತಿಳಿದುಕೊಂಡಿಲ್ಲದಿದ್ದರೂ ವ್ಯಕ್ತಿಗಳಿಗೆ ಗೌರವ ಕೊಡುವುದರಲ್ಲಿ ಅದನ್ನು ಅಕ್ಷರಶಃ ಪಾಲಿಸುವ ಜನ ಅವರು! ಯಾವುದೇ ಕಾರ್ಯಕ್ರಮಕ್ಕೆ ಬಂದರೂ ಮುಖ್ಯ ಅತಿಥಿಗಳು ಬರುವ ಕಾಲುಘಂಟೆ ಮುಂಚೆಯೇ ಬಂದು ಸಭಾಂಗಣದಲ್ಲಿ ಆಸೀನ ರಾಗಿರುತ್ತಾರೆ. ಕಾರ್ಯಕ್ರಮ ಮುಗಿದು ಅತಿಥಿಗಳು ಹೊರಟ ಮೇಲೆ ತಾವೂ ಹೊರಡುತ್ತಾರೆ. ಅತಿಥಿಗಳು ಹೋಗುವಾಗ ಎದ್ದು ನಿಂತು ಅವರಿಗೆ ತಮ್ಮ ಗೌರವ ಸೂಚಿಸುತ್ತಾರೆ. ಯಾವುದೇ ಸಭೆಯಲ್ಲಿ ಅನವಶ್ಯಕ ಗಲಭೆ, ಗುಜುಗುಜು ಇರುವುದಿಲ್ಲ.

ನಾನು ಒಮ್ಮೆ ಮೀಟಿಂಗ್‌ಗೆ ಹೋಗಿದ್ದೆ. ಆ ಮೀಟಿಂಗ್‌ನಲ್ಲಿ ಎಲ್ಲರೂ ಮಾತನಾಡಬೇಕಿತ್ತು. ಅವರವರ ಅಭಿಪ್ರಾಯ ತಿಳಿಸಬೇಕಿತ್ತು. ಮಾತುಗಳು ಸ್ಪಷ್ಟವಾಗಿದ್ದವು. ಗುಜುಗುಜು, ಒಬ್ಬರ ಜತೆಗಿನ್ನೊಬ್ಬರು ಮಾತನಾಡುವುದು ಇವೆಲ್ಲ ಇರಲಿಲ್ಲ. ಒಬ್ಬರಾದನಂತರ ಮತ್ತೊಬ್ಬರು ನಿಧಾನವಾಗಿ ಮಾತನಾಡುತ್ತಿದ್ದರು. ಯಾವುದೋ ಒಂದು ಹಂತದಲ್ಲಿ ಅಲ್ಲಿದ್ದ ಸದಸ್ಯರೊಬ್ಬರಿಗೆ ಸ್ವಲ್ಪ ಕೋಪ ಬಂದು ಸ್ವಲ್ಪ ಜೋರಾಗಿ ಮಾತನಾಡಿದರು. ಮೀಟಿಂಗನ್ನು ನಡೆಸುತ್ತಿದ್ದ ಅಧ್ಯಕ್ಷರು ತಮ್ಮ ಮುಂದಿದ್ದ ಪೇಪರ್ ಪ್ಯಾಡಿನ ಮೇಲೆ ಏನನ್ನೋ ಬರೆದುಕೊಂಡರು. ಮತ್ತೆ ಕೆಲವು ನಿಮಿಷಗಳನಂತರ ಅದೇ ವ್ಯಕ್ತಿ ಸ್ವಲ್ಪ ದನಿ ಎತ್ತರಿಸಿ ಮಾತನಾಡಿದರು. ಮತ್ತೆ ಅಧ್ಯಕ್ಷರು ಏನನ್ನೋ ಆ ಪ್ಯಾಡಿನಲ್ಲಿ ಬರೆದುಕೊಂಡರು. ಎರಡು ಬಾರಿಯೂ ಇದನ್ನು ಗಮನಿಸಿದ ನಾನು, ಮೀಟಿಂಗು ಮುಗಿದ ಮೇಲೆ ನನ್ನ ಕುತೂಹಲ ತಡೆಯಲಾರದೆ ''ಮಾನ್ಯರೇ, ನೀವು ಅದೇನು ನಿಮ್ಮ ಪ್ಯಾಡಿನಲ್ಲಿ ಬರೆದುಕೊಂಡದ್ದು? ಹೇಳಬಹುದಾದರೆ ಹೇಳುವಿರಾ?'' ಎಂದೆ. ಅಲ್ಲಿ ನಾವು ಯಾರನ್ನೂ ನೀವು ಹೇಳಲೇಬೇಕು ಎಂದು ಒತ್ತಾಯಿಸುವಂತಿಲ್ಲ. ಹೇಳುವುದಾದರೆ ಹೇಳಿ ಎನ್ನಬೇಕಷ್ಟೆ. ಅದಕ್ಕೆ ಆ ಅಧ್ಯಕ್ಷರು ''ಅದರಲ್ಲೇನಿಲ್ಲ, ಮಿಸ್ಟರ್ ಮಾಥೂರ್, ಮೀಟಿಂಗ್‌ನಲ್ಲಿ ಯಾರೂ ಹಾಗೆ ದನಿ ಎತ್ತರಿಸಿ ಮಾತನಾಡುವಂತಿಲ್ಲ. ಅದು ಸಭ್ಯತೆಯಲ್ಲ. ಅದು ಹಲವರು ಅಭಿಪ್ರಾಯಗಳನ್ನು ಹೇಳಿ ಚರ್ಚೆ ಮಾಡಲು ಕುಳಿತಿರುವುದು. ಆಗ ನಾನು ನಮ್ಮ ಅಭಿಪ್ರಾಯವನ್ನು ಜೋರಾಗಿ ಹೇಳಿ ಇತರರ ಮೇಲೆ ಹೇರುವಂತಿಲ್ಲ. ನಮ್ಮ ಅಭಿಪ್ರಾಯವು ಒಪ್ಪುವ ಹಾಗಿದ್ದರೆ ನಾವು ಮೆಲ್ಲಗೆ ಹೇಳಿದರೂ ಎಲ್ಲರೂ ಒಪ್ಪಿಯೇ ಒಪ್ಪುವರು ತಾನೇ? ಹಾಗೆ ಜೋರಾಗಿ ಕೂಗಿದರೆ, ದನಿ ಎತ್ತರಿಸಿ ಹೇಳಿದರೆ ಅವರಿಗೆ ಅಂಕಗಳು ಕಡಮೆಯಾಗುತ್ತವೆ. ಅವರ ಅಭಿಪ್ರಾಯದ ಬೆಲೆ ಕಡಮೆಯಾಗುತ್ತದೆ'' ಎಂದರು. ಅಬ್ಬಾ! ಎಂತಹ ತಿಳುವಳಿಕೆ. ಎಷ್ಟು ಖಚಿತವಾದ ಅಭಿಪ್ರಾಯ? ಅದರಲ್ಲೂ ಅದೆಷ್ಟು ಆತ್ಮವಿಶ್ವಾಸ. ಸಭಾಮರ್ಯಾದೆ ಎನ್ನುವುದನ್ನು ಹೇಗೆ ಪಾಲಿಸುತ್ತಾರೆ...!! ನನ್ನ ಅಚ್ಚರಿಗೆ ಮಿತಿ ಇರಲಿಲ್ಲ!

ಸಹೃದಯ ಓದುಗರೇ, ಈ ಪ್ರಸಂಗಗಳಲ್ಲಿ, ನಾನಿದ್ದ ಪರಿಸರದಲ್ಲಿ, ನಾನು ಭೇಟಿಯಾಗುತ್ತಿದ್ದ ಜನಗಳಲ್ಲಿ, ನಾನು ಕಂಡ ಇಂಗ್ಲಿಷಿನ ಜನರಲ್ಲಿ ಈ ಸದ್ಗುಣಗಳನ್ನು, ಸಭ್ಯತೆ, ಸಜ್ಜನಿಕೆಯನ್ನು ಕಂಡಿರುವುದನ್ನು ನಾನು ನಿಮಗೆ ಹೇಳಿರುವುದು. ಎಲ್ಲಿಯೂ ಅಪವಾದಗಳು (exceptions) ಇದ್ದೇ ಇರುವುವು. ಹೌದು ತಾನೇ? ಹಾಗೆಂದು ನನ್ನನ್ನು 'ಆಂಗ್ಲ- ಪ್ರೇಮಿ'(anglophil) ಎಂದು ತಾವು ದಯವಿಟ್ಟು ತಪ್ಪಾಗಿ ಭಾವಿಸಿ, ಭಾರತೀಯರಿಗೂ ಅವರಿಗೂ ತಾಳೆ ಹಾಕಿ, ನಮ್ಮನ್ನು ಹಳಿದು, ಅವರನ್ನ ಹೊಗಳುತ್ತಿದ್ದೇನೆ ಎನ್ನುವ ಭಾವನೆ ನಿಮ್ಮಲ್ಲಿ ಖಂಡಿತ ಬರದಿರಲಿ. ಅದು ನನ್ನ ಸವಿನಯ ಪ್ರಾರ್ಥನೆ ನಿಮ್ಮಲ್ಲಿ. ನಾನು ಕಂಡಿರುವ ಭಾರತವನ್ನು ನೀವೂ ಕಂಡಿರುವಿರಷ್ಟೆ? ಆದರೆ ನನ್ನ ಓದುಗರು ಹಲವರಿಗೆ ಕಾಣದ ಆ ವಿದೇಶೀ ಜನದ ರೀತಿ, ನೀತಿ, ನಡವಳಿಕೆಗಳನ್ನು ಪರಿಚಯಿಸುವುದು ತಪ್ಪಲ್ಲವಲ್ಲ. ಇದೆಲ್ಲ ನಾನು ಕಂಡಿರುವುದೇ, ಯಾವುದರಲ್ಲೂ ಸ್ವಲ್ಪವೂ ಉತ್ಪ್ರೇಕ್ಷೆ ಇಲ್ಲ. ಗುಣಗಳು ಯಾರಲ್ಲಿದ್ದರೇನು, ನಾವು ಅದನ್ನು ಒಪ್ಪಿಕೊಂಡು, ಮೆಚ್ಚುಗೆ ವ್ಯಕ್ತಪಡಿಸಬೇಕಷ್ಟೆ? ಅದನ್ನು ನಮ್ಮ ಜೀವನದಲ್ಲಿಯೂ ಸಾಧ್ಯವಾದರೆ ಅಳವಡಿಸಿಕೊಳ್ಳಬೇಕಷ್ಟೆ? ಇಂಗ್ಲಿಷಿನಲ್ಲಿ 'ಫಾರ್ ಯುವರ್ ಇನ್‌ಫರ್ಮೇಶನ್' ಎನ್ನುತ್ತಾರೆ. ನಿಮ್ಮ ಮಾಹಿತಿಗಾಗಿ ಎಂದು ಇಲ್ಲಿಯೂ ನನ್ನ ಉದ್ದೇಶ ಅಷ್ಟೆ. ಅಲ್ಲಿನ ರೀತಿ ನೀತಿಯನ್ನು ತಿಳಿಸುವುದಕ್ಕಾಗಿ ಹೇಳಿರುವುದು.

೨೬. ವಿಜಯದ ತೇರು

ರಾಜಕುಮಾರ ಚಾರ್ಲ್ಸ್‌ರ ಭೇಟಿ

೧೯೮೮ರ ಮೇ ಸರಿಯುತ್ತಿದ್ದಂತೆಯೇ ಈ ಬಾರಿಯ ಮಹಾಪೋಷಕರಾಗಿದ್ದ ರಾಜಕುಮಾರ ಚಾರ್ಲ್ಸ್‌ರು ವಿದ್ಯಾಭವನಕ್ಕೆ ಆಗಮಿಸಲಿದ್ದಾರೆ ಎನ್ನುವ ಸಂಭ್ರಮ ಪ್ರಾರಂಭವಾಯಿತು. ಅವರನ್ನು ಆಹ್ವಾನಿಸಿ ಅವರಿಗೆ ಒಂದು ಒಳ್ಳೆಯ ಔತಣ ಕೊಡುವುದು ಎಂದು ತೀರ್ಮಾನವಾಯಿತು. ಲಾರ್ಡ್ ಮೌಂಟ್‌ಬ್ಯಾಟನ್‌ರು ರಾಜಕುಮಾರ ಚಾರ್ಲ್ಸ್‌ರ ಸೋದರಮಾವ. ಮೌಂಟ್‌ಬ್ಯಾಟನ್‌ರ ಕಾಲಾನಂತರ ನಾವು ರಾಜಕುಮಾರ ಚಾರ್ಲ್ಸ್‌ರಲ್ಲಿಗೆ ಹೋಗಿ "ನಿಮ್ಮ ಸೋದರಮಾವ ಲಾರ್ಡ್ ಮೌಂಟ್‌ಬ್ಯಾಟನ್‌ರು ವಿದ್ಯಾಭವನದ ಮಹಾಪೋಷಕರಾಗಿದ್ದರು. ಈಗ ತಾವು ಈ ಸ್ಥಾನವನ್ನು ತುಂಬಬೇಕು" ಎಂದು ವಿನೀತರಾಗಿ ಕೇಳಿಕೊಂಡೆವು. ಆಗ ಅವರು ಬಹಳ ಸಂತೋಷದಿಂದ ಒಪ್ಪಿಕೊಂಡರು. ಅಂತೆಯೇ ಆ ಸ್ಥಾನದಲ್ಲಿ ಮುಂದುವರೆದರು. ಈ ಹಿಂದೆ ಅವರು ೧೯೮೦ರಲ್ಲಿ ಒಮ್ಮೆ ವಿದ್ಯಾಭವನಕ್ಕೆ ಭೇಟಿ ನೀಡಿದ್ದರು. ಆಗ ಭವನವು ಚರ್ಚಿನ ಹೊಸ ಕಟ್ಟಡದಲ್ಲಿ ಪ್ರಾರಂಭವಾಗಿದ್ದ ಹೊಸತು... ಒಂದೆರಡೇ ವರ್ಷಗಳಾಗಿದ್ದುವಷ್ಟೆ. ಈಗ ಎಂಟು ವರ್ಷಗಳನಂತರ ಮತ್ತೆ ಅವರು ನಮ್ಮಲ್ಲಿಗೆ ಬರಲಿದ್ದರು. ಈಗಲೂ ಅವರು ಭವನದ ಗೌರವ ಸದಸ್ಯರಾಗಿದ್ದಾರೆ. ಹತ್ತು ವರ್ಷಗಳನಂತರ ಅಲ್ಲಿ 'ಮಹಾಪೋಷಕ'ರಾಗಿ ಮುಂದುವರೆಯುವಂತಿಲ್ಲ. ಅದು ಅಲ್ಲಿನ ನಿಯಮ. ಅದಕ್ಕೆ ಅವರನ್ನು ನಾವು ಗೌರವ ಸದಸ್ಯರಾಗಿಯೇ ಮುಂದುವರೆಯಿರಿ ಎಂದು ಕೇಳಿಕೊಂಡೆವು. ಅದಕ್ಕೂ ಅವರು ಒಪ್ಪಿ ಈಗ ಭವನದ ಗೌರವ ಸದಸ್ಯರಾಗಿ ಭವನದ ಪ್ರತಿಷ್ಠೆಯನ್ನು ಹೆಚ್ಚಿಸಿದ್ದಾರೆ!

ಬರುತ್ತಿರುವ ವಿಶೇಷ ಅತಿಥಿ, ಬ್ರಿಟನ್ ರಾಜಮನೆತನದ ರಾಜಕುಮಾರ. ಅವರಿಗೆ ಸ್ವಾಗತ ನೀಡುವುದು ಎಂದರೆ ಸಾಮಾನ್ಯದ ವಿಷಯವಲ್ಲ. ನಮ್ಮಲ್ಲಿ ಎಲ್ಲ ಸೌಕರ್ಯಗಳಿದ್ದರೂ ಅವರನ್ನು ಸ್ವಾಗತಿಸಿ, ಬಂದ ಅತಿಥಿಗಳನ್ನು ಸೇರಿಸಿ ಸಮಾರಂಭ ನಡೆಸಬಹುದಾದದ್ದು ಸಾಧ್ಯವಾಗುತ್ತಿದ್ದುದು ಕೇವಲ ಮೌಂಟ್‌ಬ್ಯಾಟನ್ ಹಾಲ್‌ನಲ್ಲಿ. ಅದೇ ಬಹಳ ದೊಡ್ಡ ಹಾಲ್. ಸುಮಾರು ೩೫೦-೪೦೦ ಜನ ಕುಳಿತುಕೊಳ್ಳಬಹುದಾದಂತಹ ಸ್ಥಳ. ಆ ಹಾಲ್‌ನ ನೆಲ ಸಮತಟ್ಟಾಗಿತ್ತು. ಅಲ್ಲಿದ್ದ ವೇದಿಕೆಯೂ ಬಹಳ ಹಳೆಯದು. ಹಾಲ್ ಸಮತಟ್ಟಾಗಿದ್ದ ಕಾರಣ ಯಾವ ಸಮಾರಂಭ ನಡೆದರೂ ಹಿಂದಿನ ಸಾಲುಗಳಲ್ಲಿ ಕುಳಿತವರಿಗೆ ವೇದಿಕೆಯ ಮೇಲೆ ನಡೆಯುವ ಸಮಾರಂಭವನ್ನು ವೀಕ್ಷಿಸಲು ಬಹಳ ಕಷ್ಟವೇ ಆಗುತ್ತಿದ್ದಿತು. ಮುಂದಿನ ಕುರ್ಚಿಯಲ್ಲಿ ಯಾರಾದರೂ ಉದ್ದದವರು ಕುಳಿತರೆಂದರೆ, ಕಣ್ಣ ಮುಂದೆ ಗೋಡೆಯೊಂದನ್ನು ಕಟ್ಟಿದಂತೆಯೇ ಎನ್ನಬಹುದು! ಅಂಥ ಸ್ಥಿತಿ. ಅದಕ್ಕಾಗಿ ಆ ಹಾಲನ್ನು ಇಳಿಜಾರು ಮಾಡಿಸಬೇಕಾಗಿತ್ತು. ವೇದಿಕೆಯನ್ನು ಎತ್ತರಕ್ಕೆ ಮಾಡಿ ಸರಿಪಡಿಸ ಬೇಕಿತ್ತು. ಆ ಹಾಲ್‌ನಲ್ಲಿ ಹಾಕಿದ್ದ ಕಾರ್ಪೆಟ್ಟು ಅಲ್ಲಲ್ಲಿ ಹರಿದು ಹೋಗಿತ್ತು. ಅದು ೧೯೭೮ರಲ್ಲಿ ಬಂದ ತರುಣದಲ್ಲಿ ಹಾಕಿಸಿದ್ದುದು. ಹತ್ತು ವರ್ಷಗಳು ಸಂದಿವೆ. ಸಹಜವಾಗಿಯೇ ಅದು ಸಾಕಷ್ಟು ಜೀರ್ಣವೂ ಆಗಿತ್ತು. ಆದರೂ ನಾನು ಅದನ್ನು ಅದಕ್ಕೆ ತಕ್ಕ ಬಣ್ಣದ ಪೇಪರುಗಳನ್ನು ಹುಡುಕಿ ತಂದು ಕೆಳಕ್ಕೆ ಅಂಟಿಸಿ, ಆ ಹರುಕುಗಳು ಅಷ್ಟಾಗಿ ಕಾಣದಂತೆ ಮಾಡಿದ್ದೆ. ಆದರೂ ಹರುಕು-ಹರುಕೇ ತಾನೇ? ಯಾರಾದರೂ ನೆಲನೋಡಿದರೆ ಆ ಹರುಕು ಕಂಡು ಅದರ ಕೆಳಗೆ ಅಂಟಿಸಿದ್ದ ಪೇಪರೂ ಕಾಣಸಿಗುತ್ತಿತ್ತು. ಮಾಡುವುದೇನು? ಅದೆಲ್ಲ ದೊಡ್ಡ ಕೆಲಸ, ಮುಟ್ಟಿದರೆ 'ಮನಿ' ಕೇಳುವಂಥದು! ಅದಕ್ಕೇ ಅದು ಸಾಕಷ್ಟು ತಿಂಗಳುಗಳಿಂದ ಮುಂದೆ ಮುಂದಕ್ಕೆ ಬಂದಿತ್ತು. ಆದರೆ ಈಗ ಆ ಕೆಲಸವನ್ನು ಹೇಗೂ ಮುಂದೆ ಹಾಕುವಂತಿರಲಿಲ್ಲ. ರಾಜಕುಮಾರ ಚಾರ್ಲ್ಸ್‌ರು ಬರುವ ದಿನಕ್ಕೆ ಈ ಹಾಲ್ 'ಜಗಜಗ' ಎಂದು ತಯಾರಾಗ ಬೇಕಿತ್ತು. 'ದುಡ್ಡು ಹೇಗೆ ಹೊಂದಿಸುವುದು' ಎನ್ನುವ ಡೋಲಾಯ ಮಾನದಲ್ಲಿತ್ತು ಮನಸ್ಸು!

ಮನಸ್ಸಿಗೆ ಬೇಸರ, ಏನು ಮಾಡುವುದು ಎನ್ನುವ ಯೋಚನೆ. ಇವುಗಳ ಮಧ್ಯೆಯೇ ನನ್ನ ಚಿಂತನೆಯನ್ನು ಮೀಟಿಂಗ್ ಆದಾಗ ಕಮಿಟಿಯ ಮುಂದೆ ಇಟ್ಟೆ. ಮುಖ್ಯವಾಗಿ ಆ ಸದಸ್ಯರುಗಳ ಅಪ್ಪಣೆ ಎನ್ನುವುದು ಬೇಕಷ್ಟೆ? ಅವರೆಲ್ಲರೂ "ಹೌದು, ಈ ಕೆಲಸ ಮಾಡಿಸುವುದು ಸರಿ, ಮಾಡಿಸಿ" ಎಂದೇನೋ ಹೇಳಿದರು. ಆದರೆ ದುಡ್ಡು...? ಶ್ರೀ ರಾಜರತ್ನಂ ಅವರ 'ಮಹಾಕವಿ ಪುರುಷ ಸರಸ್ವತಿ'ಯಲ್ಲಿ ಕಾರ್ಯದರ್ಶಿಯೊಬ್ಬ ಸಂಘಕ್ಕೆ ದಾನವಾಗಿ ಬಂದ ಚಿತ್ರಗಳನ್ನು ಸ್ವೀಕರಿಸುತ್ತಾ "ಗೋಡೆಗಳು ಸಾಲದು, ಗೋಡೆ ಕಟ್ಟಿಸಿಕೊಡಿ, ಮೊಳೆಗಳು ಸಾಲವು ಮೊಳೆಗಳ ದಾನಮಾಡಿ, ಸುತ್ತಿಗೆ ಸವೆದುಹೋಗಿದೆ, ಹೊಸಸುತ್ತಿಗೆ ಕೊಡಿ" ಎಂದು ಕೇಳುತ್ತಾನೆ...!! ದಾನವಾಗಿ ಬಂದ ಚಿತ್ರಗಳನ್ನು ಹಾಕಲು ದಾನದ ಗೋಡೆ, ಮೊಳೆ, ಸುತ್ತಿಗೆ ಬೇಕು! ಹೀಗೆ ಎಲ್ಲವೂ ದಾನದಲ್ಲೇ ನಡೆಯಬೇಕಾದಾಗ ಆಗುವ ಕಷ್ಟ ಅಷ್ಟಿಷ್ಟಲ್ಲ. ಅದೂ - ಇದು ಮೊಳೆ, ಸುತ್ತಿಗೆಗೆ ಬೇಡುವಷ್ಟು ಸಣ್ಣ ಮೊತ್ತವೂ ಅಲ್ಲ. ಅದು ಇರುವೆಯ ಸಮಾನ, ನಮಗೆ ಬೇಕಾಗಿರುವುದು 'ಆನೆ'ಯಷ್ಟರ ಮೊತ್ತ!

ಇತ್ತೀಚೆಗೆ ನಾನು ಕಮಿಟಿಯ ಸದಸ್ಯರುಗಳಿಗೆ ಹೆಚ್ಚಿಗೆ ತೊಂದರೆ ಕೊಡುತ್ತಿರಲಿಲ್ಲ. ಸಾಧ್ಯವಾದಷ್ಟು, ಕೈಲಾದಷ್ಟರ ಮಟ್ಟಿಗೆ ಪ್ರಯತ್ನಿಸಿ ನಾನೇ ದಾನಕ್ಕಾಗಿ ದಾನಿಗಳನ್ನು ಸಂಧಿಸಿ, ವಿಷಯ ತಿಳಿಸಿ 'ಉದಾರ ದಾನ'ಗಳನ್ನು ಪಡೆಯುವುದಿತ್ತು. ಏಕೆಂದರೆ ಈಗ ಲಂಡನ್‌ನಲ್ಲಿ ನಾನು ಸಾಕಷ್ಟು ಪರಿಚಿತನೆನಿಸಿದ್ದೆ. ನನ್ನ ಸಂಪರ್ಕಕ್ಕೆ ಬಹಳ ಜನ ಬಂದಿದ್ದರು. ಎಲ್ಲರಲ್ಲೂ ಒಂದೇ ರೀತಿಯ ಪ್ರೀತಿಯ-ಸ್ನೇಹದ ಒಡನಾಟ

ಇದ್ದುದರಿಂದ ಎಲ್ಲರೂ ನನ್ನನ್ನು ಬಹಳ ಆತ್ಮೀಯತೆಯಿಂದ, ಪ್ರೀತಿಯಿಂದ ಕಾಣುತ್ತಿದ್ದರು, ತುಂಬ ಗೌರವವನ್ನು ಕೊಡುತ್ತಿದ್ದರು. ಎಂಥದೋ ವಿಶ್ವಾಸ, ಈ ಕೆಲಸ ಮಾಡಿಸಲು ದೇವರು ಸಹಾಯ ಮಾಡಿಯೇ ಮಾಡುತ್ತಾನೆ ಎನ್ನುವ ನಂಬಿಕೆ. ಮನಸ್ಸು ಯಾರನ್ನು ಕೇಳುವುದು? ಯಾರನ್ನು ಕೇಳುವುದು? ಎಂದು ಪರಿತಪಿಸುತ್ತಿತ್ತು. ಕೊಟ್ಟವರನ್ನೇ ಮತ್ತೆ ಮತ್ತೆ ಕೊಡಿ ಎಂದು ಕೇಳಲಾಗದು.

ಎಲ್ಲರೂ ಸಾಧ್ಯವಾದಷ್ಟು ಕೊಟ್ಟಿದ್ದರು. ಹೊಸ ದಾನಿಗಳಿಗಾಗಿ ಹುಡುಕಬೇಕಿತ್ತು. ಹೇಗೆ? ಎಲ್ಲಿ? ತಿಳಿದಿರಲಿಲ್ಲ. ಒಂದು ಉಪಾಯ ಹೊಳೆಯಿತು. ಈ ಮೌಂಟ್‌ಬ್ಯಾಟನ್ ಹಾಲ್‌ನ ಇಳಿಜಾರು ಮಾಡಿಸಲು, ವೇದಿಕೆ ಸರಿಪಡಿಸಲು, ಈ ಹಾಲ್‌ಗೆ ಕಾರ್ಪೆಟ್ ಹಾಕಿಸಲು ಹಣ ಬೇಕಿದ್ದುದು ಎಲ್ಲವನ್ನು ಸೇರಿಸಿ ಲೆಕ್ಕಾಚಾರ ಹಾಕಿಸಿ ಸರಿಸುಮಾರು ಎಷ್ಟು ಹಣ ಬೇಕಾಗುತ್ತದೆ ಎನ್ನುವುದನ್ನಂತೂ ಮಾಡಲೇಬೇಕಿತ್ತು. ಹಾಗೆ ಲೆಕ್ಕ ಹಾಕಿಸುವಾಗ ವೇದಿಕೆ ಸರಿಪಡಿಸಲು ೧೨,೦೦೦ ಪೌಂಡುಗಳು, ಕಾರ್ಪೆಟ್ ಹಾಕಿಸಲು ೧೨,೦೦೦ ಪೌಂಡುಗಳು, ಆ ಸಮತಟ್ಟಾದ ಹಾಲನ್ನು ಇಳಿಜಾರು ಮಾಡಿಸಲು ೧೮,೦೦೦ ಪೌಂಡುಗಳು ಎಂದು ತಿಳಿದು ಬಂದಿತು. ಇದಿಷ್ಟು ಖರ್ಚನ್ನು ಒಟ್ಟು ಮಾಡಿದರೆ ೪೨,೦೦೦ ಪೌಂಡುಗಳು ಆಗುತ್ತಿತ್ತು. ಅಷ್ಟೊಂದು ಹಣವನ್ನು ಒಬ್ಬರನ್ನೇ ಕೇಳಲು ಸಾಧ್ಯವಿಲ್ಲ. ಒಬ್ಬೊಬ್ಬ ದಾನಿಯನ್ನು ಒಂದೊಂದು ಖರ್ಚನ್ನು ಭರಿಸಿಕೊಡಿ ಎಂದು ಕೇಳುವುದು ಎಂದು ಯೋಚಿಸಿದೆ.... ಆಗ ದಾನಿಗಳಿಗೂ ಇದೊಂದು 'ಹೊರೆ'ಎನಿಸದು, ಒಬ್ಬರು... ಒಬ್ಬರೇ ಒಬ್ಬರು ಮೊದಲು ಒಂದು ಖರ್ಚನ್ನು ವಹಿಸಿಕೊಂಡರೆ ಸಾಕು ಮಿಕ್ಕವುಗಳು ಬರುತ್ತವೆ ಎಂದು ಧೈರ್ಯ ಬಂದಿತು. ಆದರೆ ಈ ಒಬ್ಬರು... ಮೊದಲಿನ ಒಬ್ಬರು ಯಾರು...? ಎಲ್ಲಿದ್ದಾರೆ...?

ಸಾಮಾನ್ಯವಾಗಿ ದಾನಕೇಳಬೇಕಾದರೇ ಹಾಗೆ, ಹಂತ ಹಂತವಾಗಿ ಖರ್ಚುಗಳನ್ನು ಲೆಕ್ಕಹಾಕಿ ಒಬ್ಬೊಬ್ಬರನ್ನು ಕೇಳುವ ರೂಢಿ ಇಂದಿನದಲ್ಲ. ಹಿಂದಿನಿಂದಲೂ ಬಂದಿರುವಂಥದು. ದಾನಿಗಳನ್ನು ಸಂಪರ್ಕಿಸುವವರಿಗೆ ಒಂದು ವಿಶ್ವಾಸ! ಏನೆಂದರೆ,

'ಯದ್ಯದಾಚರತಿ ಶ್ರೇಷ್ಠಃ, ತತ್ತದೇವೇತರೋ ಜನಃ' ಎಂದು, ಅರ್ಥಾತ್ 'ಶ್ರೇಷ್ಠರಾದವರು ಹೇಗೆ ಹೇಗೆ ನಡೆದುಕೊಳ್ಳುತ್ತಾರೋ ಇತರರು ಅವರನ್ನು ನೋಡಿ ಹಾಗೆ ಹಾಗೆಯೇ ನಡೆದುಕೊಳ್ಳುತ್ತಾರೆ' ಎಂದು! ನನಗೂ ಈ ಮಾತಿನಲ್ಲಿ ಸಾಕಷ್ಟು ನಂಬಿಕೆ! ನೋಡೋಣ...

ಸೆಪ್ಟೆಂಬರ್‌ನಲ್ಲಿ ತೆಗೆದುಕೊಂಡ ನಿರ್ಣಯ ಇದು. ಡಿಸೆಂಬರ್ ೨೧ರಂದು ರಾಜಕುಮಾರರು ಬರುವುದು, ದಿನಗಳು ಬೇಗ ಉರುಳುತ್ತಿರುವಂತೆ ನನಗೆ ಭಾಸವಾಗುತ್ತಿತ್ತು.

ಸೆಪ್ಟೆಂಬರ್ ತಿಂಗಳ ಮೊದಲ ಭಾನುವಾರ ಭಾರತೀಯ ಹುಡುಗಿಯೊಬ್ಬಳ ನೃತ್ಯಕಾರ್ಯಕ್ರಮ ಏರ್ಪಾಡಾಗಿತ್ತು. ಆ ಸಂಜೆ ಆ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಲಾರ್ಡ್ ಸ್ವರಾಜ್ ಪಾಲ್ ಬರುವವರಿದ್ದರು. ಈಗ ಅವರು ಹೌಸ್ ಆಫ್ ಲಾರ್ಡ್ಸ್ ಸದಸ್ಯರು. ಆ ದಿನ ಅವರು ತಮ್ಮ ಪತ್ನಿ ಅರುಣಾರನ್ನು ಕರೆದುಕೊಂಡು ಕಾರ್ಯಕ್ರಮಕ್ಕೆ ಬಂದರು. ನೃತ್ಯಕಾರ್ಯಕ್ರಮ ನಡೆಯುವಾಗ ಮಧ್ಯದಲ್ಲಿ ಒಂದು ಟೀ ವಿರಾಮ ಸಮಯ ಇರುತ್ತದೆ. ಇದು ಇದೊಂದೇ ಕಾರ್ಯಕ್ರಮಕ್ಕೆ ಎಂದಲ್ಲ. ಟೀ ವಿರಾಮ ಎನ್ನುವುದು ಯಾವುದೇ ಕಾರ್ಯಕ್ರಮಗಳು ನಡೆದರೂ ಅರ್ಥಪೂರ್ಣವಾಗಿ ಒಂದು ಹಂತದಲ್ಲಿ ಕಾರ್ಯಕ್ರಮವನ್ನು ಸ್ವಲ್ಪ ಹೊತ್ತು ನಿಲ್ಲಿಸಿ, ಬಂದವರಿಗೆಲ್ಲ ಟೀ ಕೊಟ್ಟು ಅನಂತರ ಕಾರ್ಯಕ್ರಮ ಮುಂದುವರೆಸುವುದು ಭವನದ ಸಂಪ್ರದಾಯ. ಆ ದಿನ ಟೀ ಸಮಯದಲ್ಲಿ ನಾವೆಲ್ಲ 'ಹಾಥೀ ಹಾಲ್'ಗೆ ಹೋದೆವು. ಟೀ ಸಮಯ ಸಾಮಾನ್ಯವಾಗಿ ಹಾಥಿಹಾಲ್‌ನಲ್ಲಿ, ಅದು ಸ್ವಲ್ಪ ಚಿಕ್ಕದಾಗಿದ್ದು, ಸಣ್ಣ ಪುಟ್ಟ ಕಾರ್ಯಕ್ರಮಗಳಿಗೆ ಸರಿಹೊಂದುವಂಥದು. ಬಂದ ಮುಖ್ಯ ಅತಿಥಿಗಳನ್ನು ನಾನೇ ಸ್ವತಃ ವಿಚಾರಿಸಿಕೊಳ್ಳುವುದು. ಅವರ ಬೇಕು-ಬೇಡಗಳನ್ನು ಗಮನಿಸಿ ಕೊಳ್ಳುವುದು. ನಂದ ನನ್ನ ಜತೆಗಿದ್ದರೂ ಇತರ ಪರಿಚಿತರನ್ನು ವಿಚಾರಿಸಿ ಕೊಳ್ಳುವ ಕೆಲಸ ಅವನದಾಗಿರುತ್ತಿತ್ತು. ಹೀಗಾಗಿ ಸ್ವರಾಜ್‌ಪಾಲ್ ದಂಪತಿಗಳ ಜತೆಗೆ ನಾನು ಇದ್ದೆ. ಟೀ ಕುಡಿಯುತ್ತಾ ಶ್ರೀ ಸ್ವರಾಜ್ ಪಾಲ್‌ರು, "ಮತ್ತೂರ್‌ಜೀ, ರಾಜಕುಮಾರ ಚಾರ್ಲ್ಸ್ ಬರಲಿದ್ದಾರಂತೆ ಭವನಕ್ಕೆ? ನಾನು ಹಾಗೆ ಕೇಳಿದೆ..." ಎಂದರು. ಅವರ ಮಾತಿನಲ್ಲಿ ಆಶ್ಚರ್ಯ ಸಂತೋಷಗಳು ಇದ್ದವು. ನಾನು "ಹೌದು"ಎಂದೆ. "ಈ ವೇದಿಕೆ ಅಷ್ಟೇನೂ ಚೆನ್ನಾಗಿಲ್ಲವಲ್ಲ..." ಎಂದರು ಸ್ವರಾಜ್‌ಪಾಲ್. "ಹೌದು, ಬಹಳ ರಿಪೇರಿಯಾಗಬೇಕಿದೆ. ಖರ್ಚೂ ಸಾಕಷ್ಟಾಗುತ್ತದೆ" ಎಂದೆ ನಾನು ನಿಧಾನವಾಗಿ. "ಹೌದು, ಹೌದು ರಾಜಕುಮಾರರು ಬರುತ್ತಿದ್ದಾರೆ. ಅದೇನು ಸಾಮಾನ್ಯವೇ? ಎಲ್ಲ ಸರಿಯಾಗಿರಬೇಕು... ಖರ್ಚು ಅಂದಾಜು ಎಷ್ಟಾಗಬಹುದೆಂದು ಲೆಕ್ಕ ಹಾಕಿದ್ದೀರಾ?" ಎಂದರು. "ಹೌದು ಎಲ್ಲವನ್ನೂ ಲೆಕ್ಕ ಹಾಕಿಯಾಗಿದೆ" ಎಂದೆ. "ವೇದಿಕೆ ಸರಿಮಾಡಿಸಲು ಎಷ್ಟು? ಸುಮಾರು ಎಷ್ಟಾಗುತ್ತದೆ?" ಎಂದರು. ನಾನು"ವೇದಿಕೆ ಸರಿಮಾಡಿಸಲು ೧೨,೦೦೦ ಪೌಂಡುಗಳು ಬೇಕಾಗಿವೆ" ಎಂದು ನಿಲ್ಲಿಸಿದೆ. ಕೂಡಲೇ ತಮ್ಮ ಪತ್ನಿಯ ಕಡೆಗೆ ತಿರುಗಿದ ಅವರು "ಏನು ಅರುಣ?" ಎಂದರು. ಅವರ ಆ ಮಾತನ್ನು ಕೂಡಲೆ ಗ್ರಹಿಸಿದ ಅವರ ಪತ್ನಿ... "ಆಯ್ತು, ಕೊಡಿ ಕೆಲಸ ಆಗಲಿ ಅದಕ್ಕೇನು?!" ಎಂದರು ಒಂದೇ ಮಾತಿನಲ್ಲಿ. "ಸರಿ, ಮತ್ತೂರ್‌ಜೀ, ನೀವು ಕೆಲಸ ಶುರುಮಾಡಿಸಿ, ಕೊಡೋಣ" ಎಂದೇಬಿಟ್ಟರು!! ಅಂತೂ ಹಿಂದೆ ನಾನು ಹೇಳಿದಂತೆ, ಅವರು ಮೊದಲಿಗರಾದರು!! "ಥ್ಯಾಂಕ್ಯು... ತುಂಬಾ...ತುಂಬಾ ವಂದನೆಗಳು!" ಎಂದೆ ನಾನು. ನನಗೆ ನಿಜಕ್ಕೂ ತುಂಬಾ ಸಂತೋಷ ಆಗಿತ್ತು. ದೇವರಿಗೆ ಮನಸ್ಸಿನಲ್ಲೇ ವಂದಿಸಿದೆ. ಅವನು ಹೇಗೆ ಒಳ್ಳೆಯ ಕೆಲಸಕ್ಕೆ ಸಹಾಯ ಒದಗಿಸುತ್ತಾನೆ ಎನ್ನುವುದು ಯಾರಿಗೂ ತಿಳಿಯದು!!

ಸ್ವರಾಜ್‌ಪಾಲ್ ದಂಪತಿಗಳು ಹೀಗೆ ಒಪ್ಪಿಕೊಂಡದ್ದು ಭಾನುವಾರ ದಂದು... ನಿಜಕ್ಕೂ ನಮ್ಮಲ್ಲಿ ಮಹಿಳೆಯರ ಒಂದು ಮಾತಿಗೆ ಅದೆಷ್ಟು

ಬೆಲೆ ಇರುತ್ತದೆ!'ಕ್ರಿಯಾಣಾಂ ಖಲು ಧರ್ಮ್ಯಾಣಾಂ ಸತ್ಪತ್ನ್ಯೋ ಮೂಲಕಾರಣಂ' ಧರ್ಮಕೆಲಸಗಳಿಗೆ ಸ್ತ್ರೀಯರೇ ಮುಖ್ಯ ಕಾರಣ ಎಂಬ ಕಾಳಿದಾಸನ ಮಾತು ಇವರಲ್ಲಿ ಸಾರ್ಥಕತೆಯನ್ನು ಪಡೆಯಿತು ಎಂದೆನ್ನಿಸಿತು. ಪ್ರಾಸಂಗಿಕವಾಗಿ ಬಂದಿರುವುದರಿಂದ ಇಲ್ಲಿ ಒಂದು ಸನ್ನಿವೇಶದ ಬಗೆಗೆ ಹೇಳಿದರೆ ಸರಿಯಾದೀತು. ಒಮ್ಮೆ ದಲಾಲ್‌ಜೀ ಭವನಕ್ಕೆ ಬಂದಿದ್ದಾಗ ಅನಿರೀಕ್ಷಿತವಾಗಿ ಕೆಲವು ಮಂದಿ ಅತಿಥಿಗಳು ಬರುತ್ತಿರುವುದಾಗಿ ಅವರಿಗೆ ತಿಳಿಯಿತು. ಸಾಮಾನ್ಯವಾಗಿ ಅವರು ಮಧ್ಯಾಹ್ನದ ಊಟಕ್ಕೆ ಮನೆಗೆ ಹೋಗುವುದನ್ನು ತಪ್ಪಿಸುತ್ತಿರಲಿಲ್ಲ. ಅವರ ಪತ್ನಿ ಶ್ರೀಮತಿ ಕೇ ಅವರಿಗಾಗಿ ಕಾಯುತ್ತಿದ್ದರು. ಈ ಹಿಂದೆಯೇ ನಾನು ಆ ಬಗ್ಗೆ ಹೇಳಿದ್ದೇನಷ್ಟೆ? ಆ ದಿನವೂ ಅವರಿಗೆ ಈ ಅತಿಥಿಗಳ ಆಗಮನ ಮನೆಗೆ ಊಟಕ್ಕೆ ಹೋಗದಂತೆ ಮಾಡಿತ್ತು. ಜತೆಗೆ ನಾನೂ ಸಹ, "ದಲಾಲ್‌ಜೀ, ನೀವಿದ್ದರೆ ಬರುವ ಅವರು ಏನಾದರೂ ಭವನಕ್ಕೆಂದು ಮಾಡಿಯಾರು. ನೀವು ಸಾಧ್ಯವಾದರೆ ಈ ಮಧ್ಯಾಹ್ನ ಇಲ್ಲೇ ಇರಲು ಪ್ರಯತ್ನಿಸಿ" ಎಂದೆ. ಅವರು ಅವರ ಪತ್ನಿಗೆ ಫೋನುಮಾಡಿ ತಾವು ಊಟಕ್ಕೆ ಮನೆಗೆ ಬರದಿರುವ ಬಗ್ಗೆ ಹೇಳಬೇಕಿತ್ತು. ಅವರ ಮನಸ್ಸನ್ನು ನೋಯಿಸಬಾರದು ತಾನೆ? ದಲಾಲ್‌ಜೀಯ ಸ್ವಭಾವ ಅದು. ಅವರು ಯಾರನ್ನೂ ಹೇಗೂ ನೋಯಿಸಲಾರರು. ಅಷ್ಟು ಕಾಳಜಿ ಅವರಿಗೆ ಇತರರ ಬಗ್ಗೆ! ಸರಿ, ಫೋನಿಸಿದರು. ಆ ಕಡೆಯಿಂದ ಅವರ ಪತ್ನಿ ಮಾತನಾಡಿದ ಕೂಡಲೆ ಇಲ್ಲಿನ ಸಂದರ್ಭ ಹೇಳಿ "ಈ ಮಧ್ಯಾಹ್ನ ಊಟಕ್ಕೆ ಬರಲಾಗುತ್ತಿಲ್ಲ. ದಯವಿಟ್ಟು ಕ್ಷಮಿಸು" ಎಂದರು. ಅದಕ್ಕೆ ಅವರು ಬಹುಶಃ ಮನೆಗೆ ಬರಲು ಒತ್ತಾಯಿಸಿದರು ಎಂದು ನನ್ನ ಭಾವನೆ. ಆದರೂ ಎದುರಿಗಿದ್ದ ನನಗೆ ಅನಪೇಕ್ಷಿತವಾಗಿಯಾದರೂ ದಲಾಲ್‌ಜೀಯ ಮಾತುಗಳು ಕಿವಿಗೆ ಬೀಳುತ್ತಿದ್ದವು. ಅವರು ಅದನ್ನು ತಿಳಿದು "ಮಾಥೂರ್‌ಜೀ, ನಾವು ಹೆಂಗಸರಿಗೆ ಎಷ್ಟು ಸ್ವಾತಂತ್ರ್ಯ ಕೊಡುತ್ತೇವೆ. ಹಾಗೆ ಕೊಡಬಾರದು! ನೋಡಿ ಇಲ್ಲಿ ನನಗೆ ಒತ್ತಾಯ ಮಾಡುತ್ತಿರುವುದನ್ನು!!" ಎಂದರು ವಿನೋದದಿಂದ. ಫೋನಿನ ಮೌತ್‌ಪೀಸ್‌ನ ಮೇಲೆ ಕೈ ಅದುಮಿ! ನಾನು ನಕ್ಕೆ. "ಇಲ್ಲ ಕೇ, ದಯವಿಟ್ಟು ಅರ್ಥಮಾಡಿಕೋ. ಯಾರೋ ಅತಿಥಿಗಳು ಬಂದಿದ್ದಾರೆ. ಅವರ ಜತೆ ನಾನಿರದಿದ್ದರೆ ಹೇಗೆ? ಈ ಒಂದು ದಿನ... ಆಗದೇ?" ಎಂದರು ಮತ್ತೆ ರಮಿಸುವ ಧ್ವನಿಯಲ್ಲಿ. ಅಂತೂ ಶ್ರೀಮತಿ ದಲಾಲ್‌ಜೀ ಒಪ್ಪಿಗೆ ಕೊಟ್ಟರೆಂದು ತೋರುತ್ತದೆ... "ಥ್ಯಾಂಕ್ಯೂ... ಥ್ಯಾಂಕ್ಯೂ" ಎಂದು ಹೇಳಿ ರಿಸೀವರ್ ಇಟ್ಟ ದಲಾಲ್‌ಜೀ ಮುಖದಲ್ಲಿ ನಗು, ಪ್ರಸನ್ನತೆ! ಅನಂತರವೇ ಅವರು ನಿರಾಳವಾಗಿ ಮಾತು-ಕತೆಯಲ್ಲಿ ಭಾಗಿಯಾಗಿ ಅತಿಥಿಗಳೊಡನಿದ್ದುದು! ಇದು ಅಲ್ಲಿನವರು ರೂಢಿಸಿಕೊಂಡು ಬಂದಿರುವುದು! ಪರಸ್ಪರ ಗೌರವಕೊಡಬೇಕು ಎಂದರೆ ಕೊಡಬೇಕು. ಅದು ಹೆಂಡತಿಯಾದ ಮಾತ್ರಕ್ಕೆ ಮನಬಂದಂತೆ ಮಾಡ ಬಹುದು ಎನ್ನುವ ನಿರ್ಲಕ್ಷ್ಯವಿಲ್ಲ ಅವರಲ್ಲಿ!

ಅಂತೂ ಶ್ರೀಮತಿ ಅರುಣ ಸ್ವರಾಜ್‌ಪಾಲ್‌ರಿಂದ "ಕೆಲಸ ನಡೆಯಲಿ... ಕೊಡಿ" ಎನ್ನುವ ಮಾತು ಬಂದದ್ದು ಕೆಲಸದ ಶುಭಾರಂಭಕ್ಕೆ ನಾಂದಿಹಾಡಿತ್ತು! ಭಾನುವಾರ ವೇದಿಕೆ ಸರಿಪಡಿಸುವ ಖರ್ಚಿನ ಬಗೆಗೆ ನಿಶ್ಚಿಂತೆಯಾಯಿತು. ಸಾಮಾನ್ಯವಾಗಿ ಪ್ರತಿ ಗುರುವಾರದಂದು ವಿದ್ಯಾಭವನದಲ್ಲಿ ಸಾಯಿಬಾಬಾ ಭಜನೆ ಯಾಗುತ್ತಿತ್ತು. ಮಂಗತ್ ರಾಂಕುಂದ್ರ ಎನ್ನುವ ಸಿರಿವಂತರು ಸಿದ್ಧ ಉಡುಪುಗಳ ವ್ಯಾಪಾರ ಹೊಂದಿದ್ದವರು ಬಹಳ ದೊಡ್ಡ ಅಂಗಡಿಯ ಮಾಲೀಕರು. ಅವರು ಸಹ ಭವನದ ಕಮಿಟಿಯ ಸದಸ್ಯರು. ಆದರೆ ಯಾವುದೇ ಮೀಟಿಂಗ್‌ಗೆ ಸಾಮಾನ್ಯವಾಗಿ ಅವರು ಬರುತ್ತಿರಲಿಲ್ಲ. ಅವರು ಸತ್ಯ ಸಾಯಿಬಾಬಾ ಅವರ ಪರಮ ಭಕ್ತರು. ವಾರಕ್ಕೊಮ್ಮೆ ಬಾಬಾರು ಇರುವಲ್ಲಿಗೆ ಹೋಗಿ ಬರುತ್ತಿದ್ದ ಅವರನ್ನು ನಾನು "ನೀವು ಮೀಟಿಂಗ್‌ಗೇ ಬರುವುದಿಲ್ಲವಲ್ಲ ಏಕೆ?" ಎಂದು ಕೇಳಿದರೆ "ಏನು ಮಾಡುವುದು ಮಾಥೂರ್‌ಜೀ... ಇಲ್ಲಿ ಮೀಟಿಂಗ್ ಇದ್ದಾಗ ನಾನಲ್ಲಿ ಬಾಬಾರ ಜೊತೆಗಿರುತ್ತೇನೆ! ಅದಕ್ಕೆ ಬರಲು ಸಾಧ್ಯವಾಗುವುದಿಲ್ಲ" ಎಂದು ನಗುತ್ತಿದ್ದರು. ಆ ಗುರುವಾರ ಹೊರಗೆ ಎಲ್ಲೂ ಹೋಗದೆ ಲಂಡನ್‌ನಲ್ಲೇ ಇದ್ದ ಅವರು ಸಾಯಿಬಾಬಾ ಭಜನೆಯ ಸಮಯಕ್ಕೆ ಸರಿಯಾಗಿ ಭವನಕ್ಕೆ ಬಂದರು. ಅವರ ಪತ್ನಿ ಶಾರದ ಅವರೂ ಜತೆಗಿದ್ದರು. ನಾನೂ ಅವರ ಮನೆಗೆ ಆಗಾಗ ಹೋಗಿಬರುವುದಿತ್ತು. ನಮ್ಮಿಬ್ಬರಲ್ಲಿ ಬಹಳ ಪ್ರೀತಿ-ವಿಶ್ವಾಸಗಳ ಬಾಂಧವ್ಯ. ಅಣ್ಣ-ತಮ್ಮಂದಿರಂತೆ ನಾವು ಒಡನಾಡುತ್ತಿದ್ದುದು!

ಆ ದಿನದ ಸಾಯಿಬಾಬಾ ಭಜನೆಗೆ ಕುಂದ್ರಾ ಮುಖ್ಯ ಅತಿಥಿಗಳಾಗಿದ್ದರು. ಭಜನೆಯ ಮಧ್ಯೆ ಟೀ ಸಮಯದಲ್ಲಿ ಅಂದು ಸ್ವರಾಜ್‌ಪಾಲ್ ದಂಪತಿಗಳಂತೆ, ಇವರೂ ಟೀ ತೆಗೆದುಕೊಳ್ಳುತ್ತಾ ಭವನದ ಚಟುವಟಿಕೆಗಳ ಬಗ್ಗೆ ವಿಚಾರಿಸಿದರು. ನಾನು ಎಂದಿನಂತೆ ಎಲ್ಲ ವಿವರಗಳನ್ನೂ ಹೇಳುತ್ತಾ, "ಯಾವುದು ಹೇಗೇ ಇರಲಿ, ಈ ವರ್ಷದ ಕೊನೆಯಲ್ಲಿ ಡಿಸೆಂಬರ್ ೨೦ನೇ ತಾರೀಖಿನಂದು ಮಾತ್ರ ನೀವು ತಪ್ಪದೆ ವಿದ್ಯಾಭವನಕ್ಕೆ ಬರಬೇಕು" ಎಂದೆ. "ಅದೇನು ವಿಶೇಷ?" ಎಂದರವರು. "ನಿಮಗೆ ಗೊತ್ತಿಲ್ಲವೇ? ರಾಜಕುಮಾರ ಚಾರ್ಲ್ಸ್ ಆ ದಿನ ಭವನಕ್ಕೆ ಆಗಮಿಸಲಿದ್ದಾರೆ. ನೀವು ಈ ದಿನವೇ ನಿಮ್ಮ ಡೈರಿಯಲ್ಲಿ ಬರೆದುಕೊಳ್ಳಿ. ಯಾವ ಕಾರಣಕ್ಕೂ ತಪ್ಪಿಸಬೇಡಿ" ಎಂದೆ. "ಓ... ರಾಜಕುಮಾರ ಚಾರ್ಲ್ಸ್ ಬರುತ್ತಿದ್ದಾರೆಯೇ? ಹಾಗಾದರೆ ಬಹಳವೇ ವಿಶೇಷ... ಖಂಡಿತ ನಾವಿಬ್ಬರೂ ಆ ದಿನ ಬರುತ್ತೇವೆ" ಎಂದರು ಪತ್ನಿಯನ್ನು ತಿರುಗಿ ನೋಡುತ್ತ. ಹಾಗೆಯೇ ಕೆಳಗೆ ಹರಿದ ಅವರ ದೃಷ್ಟಿ ಹರಿದ ಕಾರ್ಪೆಟ್‌ನ ಮೇಲೆ ಬಿತ್ತು. "ಮತ್ತೂರ್‌ಜೀ ಈ ಕಾರ್ಪೆಟ್ ಹಳೆಯದಾಗಿದೆ, ಹರಿದು ಹೋಗಿದೆ, ರಾಜಕುಮಾರ ಚಾರ್ಲ್ಸ್ ಬಂದು ಕುಳಿತರೆ ವೇದಿಕೆಯ ಮೇಲಿಂದಲೇ ಎದುರಿಗೇ ಈ ಹರಿದು ಹೋಗಿರುವುದು, ಅದಕ್ಕೆ ಪೇಪರು ಅಂಟಿಸಿರುವುದು ಚೆನ್ನಾಗಿ ಕಾಣುತ್ತದೆ" ಎಂದರು. ಅವರ ಧ್ವನಿಯಲ್ಲಿ ಕಳಕಳಿ ಇತ್ತು, ವ್ಯಸನ

ಇತ್ತು. "ಹೌದು ಹರಿದ ಕಡೆಗೆ ಪೇಪರು ಅಂಟಿಸಿರುವುದಂತೂ ಸ್ವಲ್ಪವೂ ಚೆನ್ನಾಗಿ ಕಾಣುವುದಿಲ್ಲ. ವೇದಿಕೆಯೂ ಸರಿ ಇಲ್ಲವಲ್ಲ. ಅದಕ್ಕೆ ಅದನ್ನು ಸರಿಪಡಿಸಿ ಎಂದು ಲಾರ್ಡ್ ಸ್ವರಾಜ್‌ಪಾಲ್‌ರು ೧೨,೦೦೦ ಪೌಂಡು ಗಳನ್ನು ತಾವು ಕೊಡುವುದಾಗಿ ಹೇಳಿದ್ದಾರೆ..." ಎಂದೆ ನಾನು. ನಾನು ಈ ಸಮಯಕ್ಕೇ, ಈ ಅವಕಾಶಕ್ಕೇ ಕಾದಿದ್ದೆನಷ್ಟೇ? ಈಗ ಸುಮ್ಮನಿರಲು ಸಾಧ್ಯವೇ? ಸುಮ್ಮನಿದ್ದರೆ, ನಮ್ಮಲ್ಲಿ ಒಂದು ಗಾದೆ ಮಾತೆಯಿದೆಯಲ್ಲ, "ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡರು" ಎಂದು, ಹಾಗಾದೀತು! "ಇಲ್ಲಿಗೆಲ್ಲ ಪೂರ್ತಿ ಕಾರ್ಪೆಟ್ ಹಾಕಿಸಲು ಎಷ್ಟಾದೀತು" ಎಂದು ಕೇಳಿದರು. ನಾನು "೧೨,೦೦೦ ಪೌಂಡು ಬೇಕಿದೆ" ಎಂದೆ. ಅದಕ್ಕೆ ತಕ್ಷಣವೇ "ಆಯ್ತು, ಮಾಥೂರ್‌ಜೀ ನೀವು ಹಾಕಿಸಿಬಿಡಿ, ಅದರ ಬಿಲ್ಲು ನಮಗೆ ಕಳುಹಿಸಿ" ಎಂದು ಹೇಳಿಯೇ ಬಿಟ್ಟರು. 'ಇದೇನು ಕುಂದ್ರಾಜಿ' ಎಂದೆ. 'ಬಾಬಾಪ್ರೇರಣೆ' ಎಂದರು. ನನಗೋ ಆಹಾ! ಮೋಡಗಳ ಮೇಲೆ ತೇಲುತ್ತಿರುವ ಅನುಭವ... ಹೀಗೆ ಒಬ್ಬರ ಮೇಲೆ ಮತ್ತೊಬ್ಬರು ಸ್ಪರ್ಧೆಯಂತೆ ನಾಲ್ಕು ದಿನಗಳಲ್ಲಿ ಎರಡು ಖರ್ಚುಗಳನ್ನು ವಹಿಸಿಕೊಳ್ಳುವ ದಾನಿಗಳು ಸಿಕ್ಕಿದ್ದರು!

ಆ ದಿನವೇ ದಲಾಲ್‌ಜೀಗೆ ಈ ವಿಷಯ ತಿಳಿಸಿದೆ. ಅವರಿಗೂ ಅಷ್ಟೇ, ಆದ ಸಂತೋಷ ಅಷ್ಟಿಷ್ಟಲ್ಲ! "ಮಾಥೂರ್‌ಜೀ, ನಿಮ್ಮ ಹಾಗೆ ದಾನಿಗಳನ್ನು ಹಿಡಿಯುವವರಿಲ್ಲ, ನಿಮ್ಮ ಹಾಗೆ ಧನಸಂಗ್ರಹಿಸುವವರೂ ಇಲ್ಲ..." ಎಂದು ಮನತುಂಬಿ ಹೊಗಳಿದರು. ಅವರಿಗೂ 'ಹೇಗಾದರೂ ಈ ಕೆಲಸ ಆಗಬೇಕು. ರಾಜಕುಮಾರರು ಆಗಮಿಸುವ ದಿನದವರೆಗೆ ವಿದ್ಯಾಭವನ ಸರ್ವರೀತಿಯಲ್ಲಿಯೂ ಸಿದ್ಧವಾಗಿರಬೇಕು' ಎನ್ನುವ ಹಂಬಲ! ಆದರೂ ಮೂರನೆಯ ಖರ್ಚು, ೧೮,೦೦೦ ಪೌಂಡುಗಳದ್ದು? ಅದು ಬಾಕಿ ಇದೆಯಲ್ಲ!

ಈಗ ಕಳೆದ ಮೂರು ತಿಂಗಳ ಹಿಂದೆ, ಅಂದರೆ ಜೂನ್‌ನಲ್ಲಿ ಒಂದು ಪ್ರಸಂಗ ನಡೆಯಿತು. ರಾಯ್‌ಸಂಧು ಎನ್ನುವ ಸಿದ್ಧ ಉಡುಪುಗಳ ವ್ಯಾಪಾರಿಗಳು, ವಿದ್ಯಾಭವನದ ಕಮಿಟಿಯ ಸದಸ್ಯರು. ಅವರು ನಮ್ಮ ಮನೆಗೆ ಬಂದರು. "ಮಥೂರ್‌ಜೀ, ಏಕೋ ವ್ಯಾಪಾರದಲ್ಲಿ ಸ್ವಲ್ಪ ನಷ್ಟವಾಗಿದೆ. ತೊಂದರೆಯಾಗಿದೆ. ಅದಕ್ಕೆ ಕಸಿವಿಸಿ ಎನಿಸಿದೆ. ಎಲ್ಲವೂ ಒಳ್ಳೆಯದಾಗಲಿ ಎಂದು ಹಾರೈಸಿ, ನೀವು ನಮಗೆ ಒಂದು ಪೂಜೆ ಮಾಡಿಸಿ..." ಎಂದು ಕೇಳಿದರು. "ಸರಿ, ಆಗಲಿ, ಮಾಡಿಸೋಣ. ದೇವರ ಪೂಜೆ ಮಾಡುವುದು ಎಂದೂ ಒಳ್ಳೆಯದೇ. ಸಂಧೂಜೀ, ಪೂಜೆ ಮಾಡುವುದರಿಂದ ತುಂಬಾ ಒಳ್ಳೆಯದೇ ಆಗದಿದ್ದರೂ ಕೆಟ್ಟದಂತೂ ಆಗುವುದಿಲ್ಲ. ಅದಂತೂ ನಿಜ! ಖಂಡಿತಾ ಪೂಜೆ ಮಾಡೋಣ" ಎಂದು ಅವರಿಗೆ ಸಾಂತ್ವನ ಹೇಳಿದ ನಾನು, ಒಂದು ಪೂಜೆ ಮಾಡಿಸಿದೆ. ಬಹಳ ಭಯಭಕ್ತಿಯಿಂದ ಪೂಜೆ ನೆರವೇರಿಸಿದ ಅವರು, ನನಗೆ ನಮಸ್ಕಾರಮಾಡಿ ಹೊರಟರು. ಅಲ್ಲಿಗೆ ನನಗೆ ಆ ವಿಷಯವೂ ಮರೆಯಿತು, ಏಕೆಂದರೆ ಕಮಿಟಿಯ ಸದಸ್ಯರಾಗಿದ್ದರೂ ಅವರು ಒಮ್ಮೆಯೂ ಒಂದೂ ಮೀಟಿಂಗ್‌ಗೆ ಬಂದವರಲ್ಲ.

ಅದೇ ರಾಯ್‌ಸಂಧು ನಾಲ್ಕು ತಿಂಗಳನಂತರ ಈಗ ಫೋನು ಮಾಡಿದರು! ಈ ಶ್ರೀಮಂತರದು ಒಂದು ಬಗೆ. ಅವರುಗಳು ಮೀಟಿಂಗ್‌ಗಳಿಗೆ ಬರದಿದ್ದರೂ ಪರವಾಗಿಲ್ಲ, ಏನಾದರೂ ಕೆಲಸ ಆಗಬೇಕಾದಾಗ ಅವರನ್ನು ಕೇಳಿದರೆ ಕೊಡುವುದು ಅವರ ಸ್ವಭಾವ! ಆ ದಿನ ಫೋನು ಮಾಡಿದ ಅವರು "ಮಾಥೂರ್‌ಜೀ, ನಿಮ್ಮನ್ನು ನಾವು ಕಾಣಬೇಕಿದೆ ಈಗ, ನೀವು ನಮಗೆ ಭೇಟಿಯಾಗಬೇಕು. ನೀವು ಆ ದಿನ ಪೂಜೆ ಮಾಡಿಸಿದಿರಿ. ಈಗ ನಮಗೆ ಎಲ್ಲವೂ ಬಹಳ ಒಳ್ಳೆಯದೇ ಆಗಿದೆ. ಎಲ್ಲ ಚೆನ್ನಾಗಿದೆ ಈಗ. ಈಗ ನಾವು ನಿಮ್ಮ ಬಳಿ ಬಂದು ಇನ್ನೊಂದು ಪೂಜೆ ಮಾಡಿಸಬೇಕಿದೆ, ಸಿಗುತ್ತೀರಷ್ಟೆ?" ಎಂದು ಕೇಳಿದರು. ಕೂಡಲೇ ನಾನು "ಖಂಡಿತಾ ಬನ್ನಿ, ನಾನು ಸಿಗುತ್ತೇನೆ, ಪೂಜೆ ಮಾಡೋಣ!" ಎಂದೆ. ಮನಸಿನಲ್ಲೇ ದೇವರಿಗೆ ವಂದನೆಗಳನ್ನು ಹೇಳಿದೆ, "ಭಗವಂತಾ ಆ ದಿನ ನಾನು ಪೂಜೆ ಮಾಡಿದ್ದು, ಅವರಿಗೆ ಎಲ್ಲವನ್ನೂ ಸರಿಯಾಗಿ ಆಗುವಂತೆ ನೀನು ಮಾಡಿಸಿದ್ದೀ! ಈ ದಿನ ಅವರು ಬರುತ್ತಿದ್ದಾರೆ. ಅವರಿಂದಲೂ ಏನಾದರೂ ಸಹಾಯ ಆಗುವಂತೆ ಮಾಡಿಸು ಮಹರಾಯ!!" ಎಂದುಕೊಂಡೆ. ಆ ಹಿಂದಿನ ದಿನವಷ್ಟೇ ನಮ್ಮ ಭವನದ ಕೋಶಾಧಿಕಾರಿಗಳಾದ ಶ್ರೀ ಕಿಶೋರ್‌ದೇವಾನಿಯವರಲ್ಲಿ ನಾನು ಮಾತನಾಡಿದ್ದೆ "ಹೇಗಾದರೂ ಎರಡು ಕೆಲಸದ ವೆಚ್ಚಕ್ಕೆ ದಾನಿಗಳು ಸಿಕ್ಕಿದ್ದಾರೆ. ಈ ಮೂರನೆಯದಕ್ಕೆ ನೀವೇ ಏನಾದರೂ ಮಾಡಬೇಕು. ಓವರ್‌ಡ್ರಾಫ್ಟ್ ಮಾಡೋಣವೇ ಬ್ಯಾಂಕಿನಲ್ಲಿ? ಹೇಗೆ? ನೀವು ಸಾಧ್ಯವಾದಷ್ಟು ಪ್ರಯತ್ನಿಸಬೇಕು" ಎಂದು ಹೇಳಿದ್ದೆ. ಅದಕ್ಕೆ ಅವರು ನನಗೆ "ಮಾಥೂರ್‌ಜೀ, ನಿಮಗೆ ಸಾಧ್ಯವಾಗದ್ದು ನಮಗೆ ಸಾಧ್ಯವೇ? ನಾನು ಹೇಗೆ ಮಾಡುವುದು? ನೀವು ಮಾತ್ರ ಹಣ ಸಂಗ್ರಹಿಸಬಲ್ಲಿರಿ, ನಾವೆಲ್ಲಿಂದ ಸಂಗ್ರಹಿಸಲಾದೀತು ಹೇಳಿ?" ಎಂದು ಅವರು ನಕ್ಕಿದ್ದರು. ಆದರೂ ಸಮಸ್ಯೆಯೇನೂ ಬಗೆಹರಿದಿರಲಿಲ್ಲವಲ್ಲ.

ಮಾರನೆಯ ಬೆಳಿಗ್ಗೆ ರಾಯ್‌ಸಂಧು ಬಂದರು. ಜೊತೆಯಲ್ಲಿ ಅವರ ಪತ್ನಿಯೂ ಇದ್ದರು. ಹೂವು-ಹಣ್ಣುಗಳನ್ನೆಲ್ಲ ತಂದಿದ್ದರು. ಸಾಮಾನ್ಯವಾಗಿ ನನ್ನ ಮನೆಯಲ್ಲಿ ಹಾಗೆ ಪೂಜೆ ನಡೆಸಿದರೆ ಬಂದ ಅತಿಥಿಗಳಿಗೆ ನನ್ನಾಕೆಯೇ ಬೆಳಗಿನ ತಿಂಡಿ ಮಾಡಿಕೊಡುವುದಿತ್ತು. ಅವರು ನಮ್ಮಲ್ಲಿಯೇ ಉಪಾಹಾರ ಮುಗಿಸಿ ಪ್ರಸಾದ ತೆಗೆದುಕೊಂಡು ಹೊರಡುತ್ತಿದ್ದರು. ಆ ದಿನವೂ ಹಾಗೆಯೇ ಇವಳು ತಿಂಡಿ ಮಾಡಿದ್ದಳು. ಪೂಜೆ ಎಲ್ಲವೂ ಮುಗಿಯಿತು. ಅತಿಥಿಗಳು ತಿಂಡಿ ತಿಂದರು. ನಾನಾದರೂ ಬಹಳ ಭಕ್ತಿಯಿಂದ ಅವರಿಗೆ ಬೇಕಾದ ಪೂಜೆ ಮಾಡಿಕೊಡುತ್ತಿದ್ದೆನೇ ವಿನಾ ಅವರಿಂದ ನಾನೇನನ್ನೂ ಬಯಸುತ್ತಿರಲಿಲ್ಲ... ದುಡ್ಡಿನ ಲೆಕ್ಕಕ್ಕೆ ಸಿಗದಷ್ಟು ಶ್ರೀಮಂತ ಜನ ಅವರೆಲ್ಲ. ಆದರೂ ಬಹಳ ಸರಳವಾಗಿ ಇರುತ್ತಾರೆ. "ದೇವರು ಒಳ್ಳೆಯದನ್ನು ಮಾಡಲಿ" ಎಂದು ನಾನು ಮಾಡಿಸುವ ಪೂಜೆಗೆ, ಅವರು ಪ್ರತಿಯಾಗಿ ಭವನಕ್ಕೆ ಏನಾದರೂ ಸೇವೆಮಾಡಲಿ ಎಂದಷ್ಟೇ ನನ್ನ ಆಶಯ. ಪೂಜೆ ಮುಗಿದನಂತರ ಬಹಳ ಖುಷಿಯಲ್ಲಿದ್ದ ಅವರು "ಮಾಥೂರ್‌ಜೀ, ನಿಜಕ್ಕೂ ಎಲ್ಲ ನಿಮ್ಮ

ಆಶೀರ್ವಾದ. ಆ ದಿನ ನೀವು ಮಾಡಿಸಿದ ಪೂಜೆಯಿಂದ ಎಲ್ಲವೂ ಸರಿಯಾಯಿತು. ಈಗ ನಾವು ಹೀಗಿರುವಂತಾಯಿತು!" ಎಂದರು. ನಾನು ಅದೇ ನಮ್ರ ಭಾವದಿಂದ "ನಾನು ಮಾಡಿಸಿದ್ದೇನು? ನೀವು ಹಾಗೆ ಭಕ್ತಿಯಿಂದ 'ತೊಂದರೆ ನಿವಾರಣೆಯಾಗಲಿ' ಎಂದು ದೇವರಲ್ಲಿ ಪ್ರಾರ್ಥಿಸಿದ್ದೀರಿ. ಅದು ನಿವಾರಣೆಯಾಗಿದೆ ಅಷ್ಟೇ?" ಎಂದು ಹೇಳಿ,"ಬನ್ನಿ, ಭವನವನ್ನೊಮ್ಮೆ ನೋಡಿಬರುವಿರಂತೆ. ಕಮಿಟಿಯ ಸದಸ್ಯರು ನೀವು ಯಾವ ಮೀಟಿಂಗ್‌ಗೆ ಬರದಿದ್ದರೂ, ಬಂದಾಗ ಲಾದರೂ ಭವನ ಈಗ ಹೇಗಿದೆ ಎಂದು ನೋಡಬಹುದಲ್ಲಾ" ಎಂದು ಹೇಳಿ ಮನೆಯಿಂದ ಅವರನ್ನು ಭವನಕ್ಕೆ ಕರೆದುಕೊಂಡು ಹೋದೆ. ಭವನದ ಒಳಗೆ ಎಲ್ಲವನ್ನು ತೋರಿಸಿದೆ. ಆವರೆಗೆ ಆಗಿರುವ ಕೆಲಸಗಳ ಬಗ್ಗೆ, ನಡೆಯುತ್ತಿರುವ ಚಟುವಟಿಕೆಗಳ ಬಗ್ಗೆ ವಿವರವಾಗಿ ಹೇಳಿದೆ. "ನಿಮಗೆ ಗೊತ್ತಿಲ್ಲವೇ ಸಂಧೂಜೀ, ಈ ಡಿಸೆಂಬರ್ ೨೦ನೇ ತಾರೀಖಿನಂದು ರಾಜಕುಮಾರ ಚಾರ್ಲ್ಸ್ ಭವನಕ್ಕೆ ಆಗಮಿಸಲಿದ್ದಾರೆ!" ಎಂದೆ. "ಓಹ್... ಹೌದೇನು? ರಾಜಕುಮಾರರು ಬರುತ್ತಿದ್ದಾರೆಯೇ?" ಎಂದು ಉದ್ಗರಿಸಿದರು. ಈಗ ಸ್ವಲ್ಪ ತಗ್ಗಿದ ದನಿಯಲ್ಲಿ ನಾನು, "ಹೌದು, ಬರುತ್ತಿದ್ದಾರೆ. ಆದರೆ ಅವರನ್ನು ಸ್ವಾಗತಿಸಲು ಮೌಂಟ್ ಬ್ಯಾಟನ್ ಹಾಲನ್ನು ಸಿದ್ಧಪಡಿಸಬೇಕಿದೆ. ಖರ್ಚುಗಳು ಮೂರು ರೀತಿಯವು. ಒಂದು ವೇದಿಕೆ ಸರಿಪಡಿಸುವುದು-ಈ ಖರ್ಚುಗಳನ್ನು ಲಾರ್ಡ್ ಸ್ವರಾಜ್‌ಪಾಲ್ ತಾವು ಕೊಡುವುದಾಗಿ ಹೇಳಿದ್ದಾರೆ. ಎರಡನೆಯದು ಬ್ಯಾಟನ್‌ಹಾಲ್‌ಗೆ ಪೂರ್ತಿಯಾಗಿ ಕಾರ್ಪೆಟ್ ಹಾಕುವುದು, ಕಾರ್ಪೆಟ್‌ಗಾಗಿ ಮಂಗತ್‌ರಾಂ ಕುಂದ್ರಾಜೀ ತಾವು ೧೨,೦೦೦ ಪೌಂಡುಗಳು ಕೊಡುವುದಾಗಿ ಹೇಳಿದ್ದಾರೆ. ಆದರೆ ಈಗ ಈ ಸಮತಟ್ಟಾದ ನೆಲವನ್ನು ಇಳಿಜಾರು ಮಾಡಿಸಬೇಕಿದೆ. ಅದರ ಖರ್ಚಿನ ಅಂದಾಜು ಸುಮಾರು ೧೮,೦೦೦ ಪೌಂಡು ಗಳಾಗುತ್ತವೆ..." ಹೀಗೆ ಹೇಳುತ್ತಲೇ ನಾನೂ ಅವರೂ ಆಫೀಸಿನ ಒಳಗೆ ಬಂದಿದ್ದೆವು. ನಾನು ಮಿಕ್ಕ ವಿಷಯ ಇಲ್ಲಿದೆ ಎನ್ನುವಂತೆ ಆ ಬಗೆಗೆ ಇದ್ದ ಒಂದು ಪಾಂಪ್ಲೆಟ್ಟನ್ನು ಅವರಿಗೆ ಕೊಟ್ಟೆ. ಅಲ್ಲಿ ಒಂದನೆ ಮತ್ತು ಎರಡನೆಯ ಖರ್ಚಿನ ಮೊತ್ತಕ್ಕೆ ನಾನು 'ಆಗಿದೆ' ಎಂದು ಟಿಕ್ ಮಾರ್ಕ್‌ನ್ನು ('ಸರಿ'ಗುರುತನ್ನು) ಹಾಕಿದ್ದೆ. ನನ್ನಿಂದ ಆ ಪಾಂಪ್ಲೆಟ್ ಪಡೆದ ರಾಯ್‌ಸಂಧೂಜೀ ಮಾತಿಲ್ಲದೇ ತಾವೇ ಪೆನ್ನು ತೆಗೆದುಕೊಂಡವರೇ ಮೂರನೆಯ ಖರ್ಚಿನ ಮೊತ್ತ ೧೮,೦೦೦ ಪೌಂಡುಗಳ ಮುಂದೆ ತಾವೇ ಸರಿ ಗುರುತನ್ನು ಹಾಕಿದರು. ನಾನು ಇದನ್ನು ನೋಡಿ ನಂಬಲಾಗದವ ನಂತೆ "ಸಂಧೂಜೀ, ಇದೇನಿದು? ನನಗೆ ನಂಬಲು ಸಾಧ್ಯ ವಾಗುತ್ತಿಲ್ಲ..." ಎಂದು ಉದ್ಗಾರ ತೆಗೆದೆ. "ಮತ್ತೇನು ಮಾಥೂರ್‌ಜೀ, ಎಷ್ಟು ದೊಡ್ಡ ಕೆಲಸ ನಡೆಯುತ್ತಿದೆ. ಎಲ್ಲರೂ ಕೈಸೇರಿಸುತ್ತಿದ್ದಾರೆ. ಕೊಡುವವರು ಯಾರು ಹೇಳಿ? ಇಲ್ಲಿ ನಮ್ಮದೇನು?" ಎಂದರು!! ಅವರ ಆ ಮಾತು ಕೇಳಿ ನನಗಾದ ಸಂತೋಷವನ್ನು ವರ್ಣಿಸಲು ಪದಗಳು ಸಾಲವು, ಬರೆಯಲು ಸಾಹಿತ್ಯ ಸಿಗದು!! ಇದು ನಡೆಯುತ್ತಿರು ವಂತೆಯೇ ದಲಾಲ್‌ಜೀ ಬಂದರು. ಆ ದಿನ ಶನಿವಾರವಾದ್ದರಿಂದ ದಲಾಲ್‌ಜೀ ಆಫೀಸಿಗೆ ಬರುವರು. ಅದು ಅವರ ನಿಯಮ, ಅಭ್ಯಾಸ. ದಲಾಲ್‌ಜೀಗೆ ಸಂಧೂಜೀಯನ್ನು "ಇವರು ಕಮಿಟಿಯ ಸದಸ್ಯರು" ಎಂದು ನಾನೇ ಪರಿಚಯ ಮಾಡಿಸಿದೆ. "ಇವರು ಉದಾರವಾಗಿ ೧೮,೦೦೦ ಪೌಂಡುಗಳ ವೆಚ್ಚವನ್ನು ಭರಿಸುವುದಾಗಿ ಈಗ ತಾನೇ ಹೇಳಿದರು!" ಎಂದೂ ದಲಾಲ್‌ಜೀಗೆ ಹೇಳಿದೆ. "ಓ... ನಾನು ನಿಮ್ಮನ್ನೆಂದೂ ನೋಡೇ ಇರಲಿಲ್ಲ" ಎಂದು ಅವರ ಕೈಕುಲುಕಿದ ದಲಾಲ್‌ಜೀ ಅವರ ಉದಾರತೆಯನ್ನು ಶ್ಲಾಘಿಸಿ ಬಹಳ ಸುಂದರವಾದ ಪತ್ರವೊಂದನ್ನು ಬರೆದುಕೊಟ್ಟರು. ದಲಾಲ್‌ಜೀಗೂ ನನ್ನಂತೆಯೇ ಬಹಳ ಖುಷಿಯಾಗಿತ್ತು. ಭವನದ "ವಿಜಯದ ತೇರು" ಎಳೆಯುವಲ್ಲಿ ಹಗ್ಗ ಹಿಡಿದು ಮುಂಚೂಣಿಯಲ್ಲಿ ನಿಂತಿದ್ದವರು ನಾನು - ಅವರು ತಾನೆ? ಅವರು ಸಂತೋಷದಲ್ಲಿ ತಮ್ಮ ಭಾವೋದ್ವೇಗವನ್ನು ನನ್ನಂತೆ ತೋರದಿದ್ದರೂ ಅವರು ಹಾಗೆ ಸಂತೋಷ ಅನುಭವಿಸುತ್ತಾ ಸುಮ್ಮನಿರುವ ರೀತಿಯೇ ನೋಡಲು ಚಂದ - ಒಂದು ಸೊಗಸು!!

ಇಷ್ಟಾದನಂತರ ನಾವೆಲ್ಲ ನೆಮ್ಮದಿಯಾಗಿ ಕೆಲಸ ಪ್ರಾರಂಭಿಸಿದೆವು. ಕೆಲಸಗಳು ಪಟಪಟನೆ ನಡೆಯತೊಡಗಿದವು. ರಾಯ್‌ಸಂಧುರವರು "ಮಾಥೂರ್‌ಜೀ, ನಾನು ಡಿಸೆಂಬರ್ ೧೩ನೇ ತಾರೀಖಿನಂದು ಚೆಕ್ ಕಳುಹಿಸುತ್ತೇವೆ. ರಾಜಕುಮಾರರು ಬಂದಾಗ ನಾನೂ ನನ್ನಾಕೆಯೂ ಸಮಾರಂಭಕ್ಕೆ ಬರುತ್ತೇವೆ!" ಎಂದರು. ಕೆಲಸಗಳು ತ್ವರಿತಗತಿಯಲ್ಲಿ ಸಾಗಿ ಮುಗಿದವು. ಡಿಸೆಂಬರ್ ೧೩ಕ್ಕೆ ಅವರ ಚೆಕ್ ಬರಬೇಕಾದದ್ದು ಬರಲಿಲ್ಲ. 'ಅವರು ಚಿಕಾಗೋಗೆ ಹೋಗಿದ್ದಾರೆ. ಡಿಸೆಂಬರ್ ೧೯ರಂದು ಲಂಡನ್‌ಗೆ ವಾಪಸಾಗುತ್ತಾರೆ. ೨೦ರ ಸಮಾರಂಭಕ್ಕೆ ಅವರು ಬಂದು ಭಾಗವಹಿಸುತ್ತಾರೆ' ಎಂದು ಅವರ ಕಾರ್ಯದರ್ಶಿ ನಮಗೆ ಸುದ್ದಿ ಕೊಟ್ಟರು. ಹಣ ಬರುತ್ತದೆ, ಒಪ್ಪಿಕೊಂಡ ಮೇಲೆ ಒಂದೆರಡು ದಿನ ತಡವಾದೀತು ಅಷ್ಟೆ, ಎಂದು ನಾವೂ ಸುಮ್ಮನಾದೆವು.

ಡಿಸೆಂಬರ್ ೧೯ರ ಬೆಳಗ್ಗೆ ರಾಯ್‌ಸಂಧೂಜೀ ಭವನಕ್ಕೆ ಬಂದರು. ೧೯,೦೦೦ ಪೌಂಡುಗಳ ಚೆಕ್ಕನ್ನು ಹಿಡಿದೇ ಬಂದರು. ನನಗೋ ಆಶ್ಚರ್ಯ! "ಸಂಧೂಜೀ, ನೀವು ಬಿಲ್ ನೋಡಿದಿರಷ್ಟೆ? ಆಗಿರುವುದು ೧೮,೦೦೦ ಪೌಂಡುಗಳಷ್ಟೇ. ೧೯,೦೦೦ ಪೌಂಡುಗಳು ಏಕೆ?" ಎಂದೆ ನಾನು. "ಮಾಥೂರ್‌ಜೀ, ನಾನು ಹೇಳಿ ಮಾತುಕೊಟ್ಟಿರುವ ಸಮಯಕ್ಕಿಂತ ಒಂದು ವಾರ ತಡವಾಗಿದೆ! ಅದಕ್ಕೆ ಇದು ಶುಲ್ಕ ಅಷ್ಟೆ!" ಎಂದು ನಕ್ಕು ಆ ಚೆಕ್ಕನ್ನು ನನ್ನ ಕೈಗಿಟ್ಟ ಅವರನ್ನು ಕೃತಜ್ಞತೆ ತುಂಬಿದ ಕಣ್ಣುಗಳಲ್ಲಿ ನೋಡಲು ಮಾತ್ರ ಸಾಧ್ಯವಾಯಿತು ನನಗೆ! ಅವರ ಈ ಔದಾರ್ಯಕ್ಕೆ ನಾನು ಏನು ತಾನೆ ಹೇಳುವುದಿತ್ತು?

ಆ ದಿನ ಡಿಸೆಂಬರ್ ೨೦ರಂದು, ಎಲ್ಲರೂ ಕಾದಿದ್ದ ಆ ಚರಿತ್ರಾರ್ಹ ಸಮಯ ಬಂದೇ ಬಂದಿತು. ರಾಜಕುಮಾರ ಚಾರ್ಲ್ಸ್‌ರು ಬಹಳ ಪ್ರೀತಿಯಿಂದ ವಿದ್ಯಾಭವನಕ್ಕೆ ಬಂದು ನಮ್ಮೆಲ್ಲರ ಪ್ರೀತಿ ಸ್ವಾಗತವನ್ನು ಸ್ವೀಕರಿಸಿ, ನಮ್ಮೆಲ್ಲರ ಜತೆ ತಮ್ಮ ಅಮೂಲ್ಯ ಸಮಯವನ್ನು ಕಳೆದರು.

ಭವನದ ಕುಟುಂಬ ವರ್ಗವೆಲ್ಲಾ ಆ ದಿನ ಅಲ್ಲಿ ಹಾಜರಿತ್ತು. ಸಂಭ್ರಮ-ಸಂತೋಷಗಳ ನಡುವೆ ನಡೆದ ಸಮಾರಂಭ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ... ನಡೆದದ್ದು ನೆನ್ನೆಯೋ ಎನಿಸುವಂತಿದೆ. ಅಷ್ಟು ಅವಿಸ್ಮರಣೀಯ ಅದು!!

ಸಾಮಾನ್ಯದ ಕೆಲಸ ಅಲ್ಲ

ದೇವರ ಕೃಪೆ ಎನ್ನುವುದು ಒಳ್ಳೆಯ ಕೆಲಸಕ್ಕೆ ತೊಡಗಿದಾಗ ಇದ್ದೇ ಇರುತ್ತದೆ ಎನ್ನುವ ನಂಬಿಕೆ ನಿಜವಾದದ್ದು ಹೀಗೆ...

ರಾಜಕುಮಾರ ಚಾರ್ಲ್ಸ್‌ರು ಬರುವ ಕಾರ್ಯಕ್ರಮಕ್ಕೆ ಇನ್ನು ಎರಡು ತಿಂಗಳಿದೆ ಎನ್ನುವ ಸಮಯದಲ್ಲಿ ನಾವು ಎಂದರೆ "ಭಾರತೀಯ ವಿದ್ಯಾಭವನ"ವು ಆ ಖರ್ಚಿನ ನಿರ್ವಹಣೆಗೆ ತಕ್ಕಂತೆ 'ಕಾರ್ಪಸ್ ಫಂಡ್' ಅನ್ನು ಸಂಗ್ರಹಿಸಬೇಕು ಎನ್ನುವ ತೀರ್ಮಾನವಾಯಿತು. 'ಕಾರ್ಪಸ್ ಫಂಡ್' ಎಂದರೆ 'ಕಾಯ್ದಿಟ್ಟ ಹಣ' ಎನ್ನುವ ಅರ್ಥ, ಆ ಖರ್ಚನ್ನು ಸರಿದೂಗಿಸಲು, ಅಷ್ಟೇ ಹಣವನ್ನು ನಾವು ಸಂಗ್ರಹಿಸಿ ಇಟ್ಟು ಕೊಳ್ಳುವುದು- ಆ ಖರ್ಚಿನ ಹೊರೆ ವಿದ್ಯಾಭವನಕ್ಕೆ ಭಾರವಾಗದಂತೆ ಮಾಡುವುದು. ಇದನ್ನು ಸಂಗ್ರಹಿಸುವುದಾದರೂ ಸಾಮಾನ್ಯದ ಕೆಲಸವಾಗಿರಲಿಲ್ಲ. ಹೊಸ ದಾನಿಗಳನ್ನು ಹುಡುಕಬೇಕು. ಮೌಂಟ್ ಬ್ಯಾಟನ್ ಹಾಲನ್ನು ಈ ಕಾರ್ಯಕ್ರಮಕ್ಕಾಗಿ ಸಿದ್ಧ ಮಾಡುವುದಕ್ಕೆ ಆಗುವ ಖರ್ಚನ್ನು ನಿಭಾಯಿಸಲು ದಾನಿಗಳನ್ನು ಕಂಡುಹಿಡಿಯುವುದರಲ್ಲಿ ನನಗೆ ನನ್ನ ಶಕ್ತಿಯ ಆಗರ ಬರಿದಾದಂತೆ ಅನಿಸಿತ್ತು! ಹಾಗೆಂದು ಈಗ ಸುಮ್ಮನಿರಲಾಗದು, ಆ 'ಶಕ್ತಿಯ ಆಗರ'ವನ್ನು ಬ್ಯಾಟರಿ ರೀಚಾರ್ಜ್ ಮಾಡುವಂತೆ ಮಾಡಿಕೊಳ್ಳಬೇಕಿತ್ತು. ಹೊಸದಾನಿಗಳ ಅನ್ವೇಷಣೆಗೆ ಹೊರಡಬೇಕಿತ್ತು. ಮನಸ್ಸು ಇದನ್ನೇ ಕುರಿತೇ ಯೋಚಿಸುತ್ತಿದ್ದಾಗ....

ಈಸ್ಟರ್ ರಜೆ ಆ ದಿನ. ಸಾಮಾನ್ಯವಾಗಿ ನಾನು ಯಾವ ರಜೆ ದಿನವಾದರೂ ಎಲ್ಲಿಗೂ ಹೋಗುವುದಿಲ್ಲ. ಭವನದ ಬಾಗಿಲು ತೆಗೆಯದಿದ್ದರೂ, ಯಾರಾದರೂ 'ರಜೆ'ಎಂದು ಭವನಕ್ಕೆ ಬರುವ ಕಾರ್ಯಕ್ರಮ ಹಾಕಿಕೊಂಡು ಬಂದರೆ ಅವರನ್ನು ಸ್ವಾಗತಿಬೇಕಾಗುತ್ತದೆ. ಅಲ್ಲಿ ನನ್ನ ಕೆಲಸ '೨೪ ಗಂಟೆಗಳು' ಎಂದು ನಾನು ಮೊದಲೇ ಹೇಳಿದ್ದೇನಲ್ಲಾ! ನಾನು ಮನೆಯಲ್ಲಿ ಉಳಿಯುತ್ತೇನೆ ಎಂದೆ, ಕಾರಣ ಎಲ್ಲರೂ 'ಈದಿನ ರಜೆ, ಹೊರಗೆ ಎಲ್ಲಾದರೂ ಸುತ್ತಿಬರೋಣ,' ಎಂದು ಹೊರಟರು. ನಂದ, ಜಾನಕಿ, ರಘು-ಸೀತಾ, ಇವಳು ಎಲ್ಲರೂ ಹೊರಟು, ನಾನು ಅವರ ಜತೆ ಬರಲು ಸಿದ್ಧನಿಲ್ಲ ಎಂದು ಸ್ವಲ್ಪ ಮುನಿಸಿಕೊಂಡರು. ಮಗಳು ಜಾನಕಿಗೆ ಈ ದಿನ ಕೋಪ ಸ್ವಲ್ಪ ಹೆಚ್ಚಾಗಿಯೇ ಇತ್ತು. ಅವಳ ಸ್ವಭಾವವೇ ಹಾಗೆ, ಅವಳು ಹೆಚ್ಚಿಗೆ ಮಾತನಾಡುವವಳಲ್ಲ, ನನ್ನ ಕೆಲಸ ಕಾರ್ಯಗಳ ಭರಾಟೆಯಲ್ಲಿ ನಮ್ಮ ಮನೆಯಲ್ಲಿ ನಾವು ಎಲ್ಲರೂ ಸೇರಿ ಘಂಟೆಗಟ್ಟಲೆ ಮಾತನಾಡುತ್ತಾ ಕೂರುವುದೂ ಅಪರೂಪವೇ! ಎಷ್ಟು ಬೇಕೋ ಅಷ್ಟು ಮಾತು, ನಗು, ಮತ್ತೆ ಕೆಲಸ. ಮನೆಯ ಎಲ್ಲರೂ ಭವನದ ಅತಿಥಿಗಳನ್ನು ಸ್ವಾಗತಿಸಿ-ಅವರ ಸತ್ಕಾರದಲ್ಲಿ ತೊಡಗುವುದೇ ಹೆಚ್ಚು. ನಮ್ಮ ಮನೆಯಲ್ಲಿ ಅದು ರೂಢಿಯಾಗಿಬಿಟ್ಟಿತ್ತು.

ಈ ದಿನ ಏಕೋ, ಜಾನಕಿಗೆ ನಾನು ಮಕ್ಕಳ ಜತೆಯಲ್ಲಿ ಬರಲಿ ಎಂದು ಮನಸ್ಸಾಗಿತ್ತು. ಅವಳು ಎಂದೂ ಹೆಚ್ಚಾಗಿ ಎರಡು ಮಾತಾಡದವಳು ಆದಿನ "ನೀವು ಯಾವಾಗಲೂ ಹೀಗೆಯೇ, ಈ ದಿನವಾದರೂ ಹುಡುಗರ ಜತೆಯಲ್ಲಿ ಹೊರಡಬಾರದೇನು? ಎಲ್ಲರೂ ನಾವು ಹೊರಗೆ ಹೋಗುವುದೇ ಇಲ್ಲ. ಯಾವಾಗಲೂ ನಿಮಗೆ ಕೆಲಸವೇ... ಕೆಲಸವಿಲ್ಲದ ದಿನ ಯಾವುದಿದೆ?" ಅವಳ ಕೋಪದಲ್ಲೂ ಅವಳು ವಹಿಸಿದ ತಾಳ್ಮೆಗೆ ನಾನು ತೀರಾ ಕಠಿಣವಾಗಿ, ಬರುವುದೇ ಇಲ್ಲ ಎನ್ನುವುದು ಅಸಾಧ್ಯವಾಯಿತು! ನಾನೇ ಸ್ವಲ್ಪ ಮೆತ್ತಗಾದೆ, "ಸರಿಯಮ್ಮ, ನಡೆ ಎಲ್ಲಾದರೂ ಹೋಗಿಬರೋಣ. ಅದಕ್ಕೇಕೆ ಇಷ್ಟು ಬೇಸರ ಮಾಡಿಕೊಳ್ಳುವುದು ನೀನು? ಆದರೆ ಮೂರು-ನಾಲ್ಕು ಘಂಟೆಗಳು ಮಾತ್ರವೇ ನನಗೆ ಬರಲು ಸಾಧ್ಯ. ಅಷ್ಟು ಸಮಯಕ್ಕೆ ನಿಮ್ಮ ಕಾರ್ಯಕ್ರಮವನ್ನು ನೀವು ರೂಪಿಸಿಕೊಳ್ಳಿರಿ. ಅಷ್ಟಾದರೂ ನೀವು ಮತ್ತೆಲ್ಲಾದರೂ ಹೋಗಬೇಕೆಂದರೆ ನಾನು ನಾಲ್ಕು ಘಂಟೆಗಳ ಅನಂತರ ವಾಪಸಾಗುತ್ತೇನೆ. ನೀವು ಅಲ್ಲಿಂದ ಮುಂದುವರೆಯಿರಿ... ಅದು... ಸರಿ ಈಗ ಎಲ್ಲರೂ ಎಲ್ಲಿಗೆ ಹೋಗುವುದು?" ಎಂದೆ. ನಾನೂ ಹೊರಡುವ ಉತ್ಸಾಹ ತೋರಿದ್ದು ನಮ್ಮ ಜಾನಕಿಯ ಮುಖದಲ್ಲಿ ಹರ್ಷ ತಂದಿತ್ತು. "ಮಕ್ಕಳೆಲ್ಲ ವಿಂಡ್ಸರ್ ಸಫಾರಿಗೆ ಹೋಗೋಣ ಎಂದಿದ್ದಾರೆ. ಅಲ್ಲಿಗೇ ಹೋಗೋಣವಾ?" ಎಂದಳು. "ನನಗೇನು, ಎಲ್ಲಾದರೂ ಸರಿ" ಎಂದ ನಾನು ಏನೋ ಹೊಳೆದಂತಾಗಿ "ಎಲ್ಲಿಗೆ ಎಂದೆ ಜಾನಕಿ ನೀನು?" ಎಂದೆ. "ವಿಂಡ್ಸರ್ ಸಫಾರಿಗೆ" ಎಂದಳು ಮತ್ತೆ ಜಾನಕಿ, "ಅಲ್ಲಿ ಎಲ್ಲಾ ಪ್ರಾಣಿಗಳೂ ಇರುತ್ತವೆ. ನೋಡುವುದಕ್ಕೆ ಬಹಳ ಚೆನ್ನಾಗಿರುತ್ತದೆ" "ಅದೆಲ್ಲಿದೆ?" ಎಂದೆ ನಾನು. "ವಿಂಡ್ಸರ್ ಸಫಾರಿ ವಿಂಡ್ಸರ್‌ನಲ್ಲಿದೆ!" ಎಂದಳು ಜಾನಕಿ. "ವಿಂಡ್ಸರ್‌ನಲ್ಲೇ?!" ಎಂದೆ.

ಮನಸು ಬಹಳ ವರ್ಷಗಳ ಹಿಂದಕ್ಕೋಡಿತು. ನೆನಪುಗಳು ಒಂದೊಂದಾಗಿ ಮನದಲ್ಲಿ ಸುಳಿದವು. ನವೀನ-ದೀಪ್ತಿ ಇಬ್ಬರು ಮಕ್ಕಳು. ೧೧ ವರ್ಷ, ೯ ವರ್ಷದ ಈ ಮಕ್ಕಳು, ಭವನವು ೩೧ ನ್ಯೂ ಆಕ್ಸ್‌ಫರ್ಡ್ ರಸ್ತೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಪ್ರತಿದಿನ ಸಂಜೆ ಬಂದು, ನಮ್ಮ ಬುಕ್‌ಶಾಪಿನಲ್ಲಿ ನಮಗೆ ಸಹಾಯ ಮಾಡುತ್ತಿದ್ದರು. ಬಹಳ ಲಕ್ಷಣವಾಗಿದ್ದ ಈ ಮಕ್ಕಳ ತಂದೆ-ತಾಯಿ ಛತ್ರು ಖಿಲ್ನಾನಿ-ಜನಕ್ ಖಿಲ್ನಾನಿ. ಇವರು ಸಿಂಧ್ ಪ್ರಾಂತ್ಯದವರು. ಸ್ವಾತಂತ್ರ್ಯ ಪೂರ್ವದಲ್ಲಿ ಒಂದಾಗಿದ್ದ ಸಿಂಧ್ ಪ್ರಾಂತ್ಯವು ಸ್ವಾತಂತ್ರ್ಯಾನಂತರ ಎರಡು ಭಾಗವಾಗಿ ಭಾರತಕ್ಕೆ ಅರ್ಧ, ಪಾಕಿಸ್ತಾನಕ್ಕೆ ಅರ್ಧ ಸೇರಿತಷ್ಟೆ?

ಆಗ ಅಲ್ಲಿಗೆ ಸೇರಿದ್ದು ಸಿಂಧ್‌ನ ಹರಪ್ಪ-ಮೊಹೆಂಜೊದಾರೊ ಸಹಾ. ಆಗ ಈ ಕುಟುಂಬ ಇದ್ದ ಪ್ರದೇಶವೂ ಪಾಕಿಸ್ತಾನಕ್ಕೆ ಸೇರಿ, ಕರಾಚಿಯಲ್ಲಿ ಈ ಜನ ವ್ಯಾಪಾರ ವಹಿವಾಟು ನಡೆಸಲಾರಂಭಿಸಿದ್ದರು. ಅಲ್ಲಿ ಏಳಿಗೆ ಕಂಡನಂತರ ಈ ವ್ಯಾಪಾರ ಹಾಂಗ್‌ಕಾಂಗ್‌ಗೂ ವಿಸ್ತರಿಸಿತು. ಆಮೇಲೆ ಆ ಜಾಗ ಬಿಟ್ಟು ಲಂಡನ್‌ನಲ್ಲಿ ನೆಲೆನಿಲ್ಲುವ ನಿರ್ಧಾರ ಮಾಡಿದ ಈ ಕುಟುಂಬ ತಮ್ಮ ವ್ಯಾಪಾರದ ವ್ಯಾಪ್ತಿಯನ್ನು ಲಂಡನ್‌ನಲ್ಲೂ ಹೆಚ್ಚಿಸಿಕೊಂಡು, ಬಹಳ ಚೆನ್ನಾಗಿ ಲಂಡನ್ ಜನರನ್ನು ಒಗ್ಗಿಕೊಂಡು, ಅವರಲ್ಲಿ ಬೆರೆತು ಅಲ್ಲೇ ಶಾಶ್ವತವಾಗಿ ನೆಲೆ ನಿಲ್ಲುವ ನಿರ್ಧಾರ ಮಾಡಿತ್ತು. ಛತ್ರು ಖಿಲ್ನಾನಿಯವರು ರಾಮಕೃಷ್ಣಾಶ್ರಮದ ಗೃಹಸ್ಥ ಭಕ್ತ. (ಹೌಸ್‌ಹೋಲ್ಡ್ ಡಿವೋಟೀ ಎನ್ನುತ್ತಾರೆ ಇಂಗ್ಲಿಷಿನಲ್ಲಿ, ಹಾಗೆ.) ಆಶ್ರಮದ ಭವ್ಯಾನಂದ ಸ್ವಾಮೀಜಿಯವರು ಛತ್ರು ಖಿಲ್ನಾನಿಯವರಿಗೆ ಬಹಳ ಪರಿಚಯ, ತುಂಬ ಬೇಕಾದವರು. ಸ್ವಾಮಿ ಭವ್ಯಾನಂದರು ಈ ಕುಟುಂಬವನ್ನು ನನಗೆ ಪರಿಚಯ ಮಾಡಿಸಿ, ಆ ಮಕ್ಕಳಿಗೆ ನಾನೇ ಉಪನಯನವನ್ನು ಮಾಡಿಸುವಂತೆ ನನಗೆ ಹೇಳಿದರು. ಆ ಪರಿಚಯ ಗಾಢವಾಗಿ ಆ ಮಕ್ಕಳೂ ಸಹ ಶಾಲೆ ಬಿಟ್ಟ ಕೂಡಲೇ ಭವನಕ್ಕೆ ಬಂದು ಪುಸ್ತಕ ಮಳಿಗೆಯಲ್ಲಿ ನಮ್ಮ ಜತೆಗೆ ನಿಲ್ಲುತ್ತಿದ್ದರು. ಸ್ವಾಮೀಜಿಯ ಮಾತಿನಂತೆ ನಾನೇ ಆ ಮಕ್ಕಳಿಗೆ ಉಪನಯನವನ್ನು ಮಾಡಿಸಿದೆ. ಆದಿನ ಉಪನಯನಕ್ಕೆ ಸ್ವಾಮೀಜಿಯೂ ಬಂದಿದ್ದರು. ಸಮಾರಂಭವೆಲ್ಲ ಚೆನ್ನಾಗಿ ನಡೆದಿತ್ತು. ಆ ದಂಪತಿಗಳು ನಮ್ಮ ಮೇಲೆ ಬಹಳ ವಿಶ್ವಾಸ ಇಟ್ಟಿದ್ದರು. ಅದಾದನಂತರ ನಾವೂ ಹೊಸ ಕಟ್ಟಡಕ್ಕೆ ಬಂದೆವು. ಆ ಮಕ್ಕಳೂ ಬಹಳ ಚೆನ್ನಾಗಿ ಓದಿದರು ಎಂದು ಕೇಳಿದೆನು. ಇಷ್ಟು ನಡೆದಿತ್ತು. ಈ ಖಿಲ್ನಾನಿ ಕುಟುಂಬ ಇದ್ದದ್ದು ವಿಂಡ್ಸರ್‌ನಲ್ಲಿ! ನನಗೆ ಬಹಳ ಹಿಂದಿನಿಂದಲೂ ತಿಳಿದವರು, ಅವರನ್ನು ಒಮ್ಮೆ ನೋಡಿ ಬರಬಹುದಷ್ಟೆ? ಹೇಗಿದ್ದರೂ ಅಲ್ಲೇ ಹೋಗುತ್ತಿದ್ದೇವಲ್ಲಾ? ಎನಿಸಿತು. ಇಲ್ಲಿಯವರೆಗೆ ಹತ್ತು-ಹನ್ನೆರಡು ವರ್ಷಗಳಾಗಿತ್ತು ಅವರನ್ನೆಲ್ಲ ನಾವು ನೋಡಿ. ೧೯೭೪ರಲ್ಲಿ ಆದ ಉಪನಯನದಲ್ಲಿ ನೋಡಿದ್ದುದು. ಎಲ್ಲೋ ಅವರ ಫೋನು ನಂಬರಿದೆ ಎನಿಸಿತು. ಹುಡುಕಿದೆ. ಸಿಕ್ಕಿತು. ಸರಿ, ಫೋನಿಸಿದೆ.

''ಹಲೋ'' ಎಂದು ನಾನು ಹೇಳುತ್ತಿರುವಂತೆಯೇ ಅತ್ತಲಿಂದ ''ಹಲೋ'' ಎಂದ ಧ್ವನಿ ''ಮಾಥೂರ್‌ಜೀ, ನೀವು ? ಇದೇನಿದು ನೀವು ಫೋನು ಮಾಡಿದ್ದೀರಿ? ನಮ್ಮ ನೆನಪು ಹೇಗಾಯಿತು ನಿಮಗೆ? ನೀವು ಹೇಗಿದ್ದೀರಿ? ಲಕ್ಷ್ಮೀಜಿ ಹೇಗಿದ್ದಾರೆ? ಎಷ್ಟು ವರ್ಷಗಳ ಮೇಲೆ ನೀವು ನಮಗೆ ಫೋನು ಮಾಡಿರುವುದು?'' ಫೋನು ಎತ್ತಿದ್ದ ಛತ್ರು ಖಿಲ್ನಾನಿಯವರು ನನ್ನ ಧ್ವನಿ ಕೇಳಿದ ಕೂಡಲೇ ನನ್ನನ್ನು ಗುರುತಿಸಿ, ಪ್ರಶ್ನೆಗಳ ಸುರಿಮಳೆಯನ್ನೇ ಕರೆದರು. ಅವರ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಿದ ನಾನು ''ಇದೇನು? ನೀವು ಇನ್ನೂ ಅದೇ ಮನೆಯಲ್ಲಿದ್ದೀರೇನು? ಫೋನು ನಂಬರೂ ಅದೇ ಇದೆ?'' ಎಂದೆ, ಅವರೆಲ್ಲರನ್ನೂ ವಿಚಾರಿಸಿದನಂತರ. ''ಓ, ಮಾಥೂರ್‌ಜೀ, ಮತ್ತೆಲ್ಲಿಗೆ ಹೋಗುವುದು ನಾವು? ನಮ್ಮ ಮನೆ ಇದು. ಬೇರೆ ಯಾರು ನಮಗೆ ಮನೆ ಕೊಡುತ್ತಾರೆ, ನಾವು ಹೋಗಬೇಕೆಂದರೂ ಸಹ?... ಜನಕ್... ಮಾಥೂರ್‌ಜೀ ಫೋನು ಮಾಡಿದ್ದಾರೆ, ಬಾ...'' ಎಂದು ಛತ್ರೂಜೀ ಅವರ ಪತ್ನಿಯನ್ನೂ ಫೋನಿಗೆ ಕರೆದರು. ಮತ್ತೆ ಒಮ್ಮೆ ಉಭಯ ಕುಶಲೋಪರಿಯಾದ ಅನಂತರ ಜನಕ್‌ಜೀ ''ಮಾಥೂರ್‌ಜೀ, ಏನಿದು ಈಸ್ಟರ್ ರಜೆಯ ದಿನ ನಮ್ಮ ನೆನಪು ಹೇಗಾಯ್ತು ನಿಮಗೆ?'' ಎಂದರು. ಅವರ ಧ್ವನಿಯಲ್ಲಿ ಬಹಳ ಸಂತೋಷವಿತ್ತು. ನನಗೂ ಬಹಳ ವರ್ಷಗಳನಂತರ ಆ ದಂಪತಿಗಳ ಜತೆ ಮಾತನಾಡಿದ್ದು ಹರ್ಷ ಎನಿಸಿತ್ತು. ಕೂಡಲೆ ನಮ್ಮ ಕಾರ್ಯಕ್ರಮವನ್ನು ಹೇಳಿ ''ಈ ದಿನ ನಾನು ನಿಮ್ಮ ಮನೆಗೆ ಬರೋಣ ಎಂದಿದ್ದೇನೆ, ಜನಕ್‌ಜೀ... ನಿಮಗೆ ತೊಂದರೆ ಏನೂ ಇಲ್ಲವಷ್ಟೆ?'' ಎಂದೆ. ''ಬಾಪರೇ ಬಾಪ್ ನೀವು ? ನೀವು ನಮ್ಮ ಮನೆಗೆ ಬರುತ್ತಿದ್ದೀರಾ? ಮಾಥೂರ್‌ಜೀ... ಈ ದಿನ ನಿಜಕ್ಕೂ ಮಳೆ ಬರುತ್ತದೆ ಎಂದು ಕಾಣುತ್ತದೆ. ಎಲ್ಲೋ ಆಕಾಶದಿಂದ ನೀವು ಇಳಿದು ಬರುತ್ತಿದ್ದೀರೇನೋ ಎಂದು ನಮಗೆ ಭಾಸವಾಗುತ್ತಿದೆ... ಮಾಥೂರ್‌ಜೀ ನಿಜಕ್ಕೂ ನೀವು ಈ ದಿನ ನಮ್ಮ ಮನೆಗೆ ಬರುತ್ತಿದ್ದೀರಾ?'' ಎಂದರು ಮತ್ತೊಮ್ಮೆ ಜನಕ್‌ಜೀ. ''ಹೌದು, ಹೌದು, ಖಂಡಿತ ಬರುತ್ತೇನೆ'' ಎಂದ ನಾನು ನಮಸ್ಕಾರ ಹೇಳಿ ಫೋನ್ ಇಟ್ಟೆ.

೧೪ ವರ್ಷಗಳಾದುವಲ್ಲಾ ಈ ದಂಪತಿಗಳನ್ನು ನೋಡಿ! ಇದೆಷ್ಟು ಪ್ರೀತಿ ಅಕ್ಕರೆ ಅವರಿಗೆ ನನ್ನ ಮೇಲೆ, ಅದೆಷ್ಟು ವಿಶ್ವಾಸ! ವರ್ಷಗಳು ಉರುಳಿದುದೇ ತಿಳಿಯದೇ ಹೋಗಿತ್ತು. ಕೆಲಸದಲ್ಲಿ ಮಗ್ನನಾಗಿದ್ದ ನನಗೆ ಒಂದೊಂದು ವರ್ಷ ಕಳೆದದ್ದೂ ಅರಿವಿಗೇ ಬಂದಂತಿರಲಿಲ್ಲ. ನಿಜಕ್ಕೂ!! ಅವರ ಮಕ್ಕಳಿಗೆ ನಾನು ಉಪನಯನ ಮಾಡಿಸಿದ ಸಂದರ್ಭದಲ್ಲಿ ನಂದ ಇರದಿದ್ದರೂ ಅನಂತರ ಒಮ್ಮೆ ಭೇಟಿಯಾದಾಗ ನಾನು ಅವರಿಗೆ ಅವನ ಪರಿಚಯ ಮಾಡಿಸಿದ್ದೆ. ನಂದ ಅವರ ಮನೆ ಎಲ್ಲಿದೆ ಎಂದೂ ತಿಳಿದುಕೊಂಡಿದ್ದ. ವಿಂಡ್ಸರ್ ಸಫಾರಿ ಮುಗಿದನಂತರ ಅವರ ಮನೆಗೆ ಹೋಗುವುದೆಂದು ತೀರ್ಮಾನವಾಗಿ ಮನೆಯಿಂದ ಹೊರಟೆವು.

ಬೆಳಗಿನ ಒಂಬತ್ತು ಘಂಟೆಗೆ ಮನೆಯಿಂದ ಹೊರಟ ನಾವು ವಿಂಡ್ಸರ್‌ಗೆ ಹೋಗಿ ಅಲ್ಲಿ ಹುಲಿ, ಸಿಂಹ ಎಲ್ಲ ಪ್ರಾಣಿಗಳನ್ನೂ ನೋಡಿದೆವು. ನನಗೋ ಇದ್ಯಾವುದರತ್ತಲೂ ಗಮನವಿರಲಿಲ್ಲ. ದೇಹ ಯಾಂತ್ರಿಕವಾಗಿ ಮಕ್ಕಳು-ಮೊಮ್ಮಕ್ಕಳ ಜತೆಯಲ್ಲಿ ಸಾಗುತ್ತಿತ್ತು. ಅಂತೆಯೇ ಮಾತು-ಕತೆ-ನಗು ! ಮನಸ್ಸು ಮಾತ್ರ ಖಿಲ್ನಾನಿ ದಂಪತಿಗಳ ವಿಷಯವನ್ನೇ ಮತ್ತೆ ಮತ್ತೆ ಮೆಲುಕು ಹಾಕುತ್ತಿತ್ತು. ಖಿಲ್ನಾನಿಯವರು ಹೇಗಿರಬಹುದು ಈಗ? ಅವರ ಆಳ ಏನಿದ್ದೀತು? ಬಹಳ ಸಿರಿವಂತರೇ? ಈಗ ಅವರ ವ್ಯಾಪಾರ ವ್ಯವಹಾರ ಹೇಗೆ ಸಾಗಿದ್ದೀತು? ನಾನಾದರೂ ಅಲ್ಲಿಗೆ ಹೋದರೆ ವಿದ್ಯಾಭವನಕ್ಕೆ ಅವರಿಂದ ಏನಾದರೂ ಸಹಾಯ

ಕೇಳಲು ಸಾಧ್ಯವಾದೀತೇ ? ನಾನು ಸಹಾಯ ಕೇಳಿದರೂ, ಅವರು ಸಹಾಯ ಮಾಡುವ ಸ್ಥಿತಿಯಲ್ಲಿದ್ದಾರೆಯೇ? ಆ ಮಕ್ಕಳು ಹೇಗಿದ್ದಾರೋ? ಈ ಪ್ರಶ್ನೆಗಳ ಸರಮಾಲೆಗೆ ಉತ್ತರವೊಂದೂ ನನ್ನ ಬಳಿ ಇರಲಿಲ್ಲ. ಎಲ್ಲಕ್ಕೂ ಈಗ ಹೋಗಿ ನೋಡ ಬೇಕಾಗಿತ್ತಷ್ಟೆ!! ಬೋನಿನಲ್ಲಿ ಬೇಸರದಿಂದ ಸೋಮಾರಿಗಳಾಗಿ ಬಿದ್ದುಕೊಂಡಿದ್ದ ಪ್ರಾಣಿಗಳನ್ನು ಬಲವಂತವಾಗಿ ಎಬ್ಬಿಸಿ ಕಡಲೇಕಾಯಿ ಕೊಟ್ಟು, ಅದಕ್ಕೆ ಲವಲವಿಕೆ ತುಂಬಿಸುವ ಪ್ರಯತ್ನದಲ್ಲಿ ತೊಡಗಿದ್ದರು ಮಕ್ಕಳು!! ನನಗೋ ಸಮಯ ಸರಿಯುತ್ತಿದೆಯಲ್ಲಾ ಎನ್ನುವ ತವಕ. ಅಂತೂ ಅಲ್ಲಿನ ನೋಟ ಮುಗಿದು ನಮ್ಮ ಕಾರು ಖಿಲ್ನಾನಿ ಮನೆಯಕಡೆಗೆ ಸಾಗಿತು. ನಂದ ಸೊಗಸಾಗಿ ಕಾರು ನಡೆಸುವವ! ಫೋನಿನಲ್ಲಿ ಸರಿಯಾಗಿ ಅವರ ವಿಳಾಸ ತಿಳಿದುಕೊಂಡಿದ್ದ. ಅವನು ನೇರವಾಗಿ ಅವರ ಮನೆಯ ಮುಂದಕ್ಕೇ ಕಾರು ತೆಗೆದುಕೊಂಡು ಹೋಗಿ ನಿಲ್ಲಿಸಿದ. ನನ್ನ ಮೊಮ್ಮಗನಿಗೆ ತನ್ನ ಅಪ್ಪ, ಅಜ್ಜನಿಗಿಂತ ಕಾರು ಬಲು ಚೆನ್ನಾಗಿ ಓಡಿಸುತ್ತಾನೆಂದು ಬಲು ಜಂಭ!! ಅಲ್ಲದೆ ಅಪ್ಪನಿಗೆ ಅಡ್ರೆಸ್ಸುಗಳು ಬಹಳ ಸುಲಭವೆಂದೂ, ಕಾರು ಓಡಿಸುವ ರೀತಿಯೂ ಕರಾರುವಾಕ್ಕೆಂದೂ ಅವನಿಗೆ ಅಪ್ಪನ ಬಗ್ಗೆ ಹೆಮ್ಮೆ! ಇದನ್ನು ಆಗಾಗ ನನ್ನಲ್ಲಿ ಹೇಳಿ ನನ್ನನ್ನು ತಮಾಷೆ ಮಾಡುವುದಿತ್ತು. ನಮ್ಮ ರಘು... ಹೌದಲ್ಲವೇ? ಹಣ್ಣೆಲೆ ನೋಡಿ ಚಿಗುರೆಲೆ ನಗುವುದು ಸಹಜ ತಾನೇ? ನಾನೂ ಸುಮ್ಮನಿರುತ್ತಿರಲಿಲ್ಲ. ಅವನಿಗೆ ಸವ್ವಾಸೇರು ಎನ್ನುವಂತೆ ಜವಾಬುಕೊಡುವುದಿತ್ತು. ಆದರೂ ನಾನು ಸಹ ನನ್ನ ಆಳಿಯನನ್ನು ಮೆಚ್ಚುವವನಾಗಿದ್ದೆನಷ್ಟೇ? ನಾನು ಸಹ "ನಂದಾಭಿಮಾನಿಯೇ!!"

ವಿಂಡ್ಸರ್ ಸಫಾರಿಗೆ ಕೇವಲ ಎರಡು ಮೂರು ಮೈಲಿ ದೂರದಲ್ಲಿದೆ ಖಿಲ್ನಾನಿಯವರ ಮನೆ, ಭವ್ಯವಾದ ಬಂಗಲೆ!! ಸುಮಾರು ಎರಡು ಎಕರೆ ಭಾಗದ ರಮ್ಯ ಪ್ರಕೃತಿಯ ಹಸಿರು ಸಿರಿಯ ಮಡಿಲಿನ ಮಧ್ಯದಲ್ಲಿದ್ದ ಈ ಅಂದವಾದ, ಸಿರಿವಂತ ಕಟ್ಟಡ ನೋಡಿದ ನನ್ನ ಒಳಗೆ ಏನೋ ಲೆಕ್ಕಾಚಾರ. ಖಿಲ್ನಾನಿಯವರು ದೇವರು ಕರುಣಿಸಿರುವಂತೆ ಸಾಕಷ್ಟು ಚೆನ್ನಾಗಿಯೇ ಇದ್ದಾರೆ, 'ವಿದ್ಯಾಭವನ'ಕ್ಕೆ ಇವರಿಂದ ಏನಾದರೂ ಉಪಕಾರವಾದರೆ... ಆದರೆ ... ಎಷ್ಟು ಚೆನ್ನಾಗಿರುತ್ತದೆ ಎನ್ನುವ ಭಾವ!!

ನಾನು ಹೋದಕೂಡಲೇ ಬಾಗಿಲಿಗೇ ಬಂದು ನಮ್ಮನ್ನು ಬಹಳ ಪ್ರೀತಿ-ಆದರಗಳಿಂದ ಒಳಗೆ ಕರೆದೊಯ್ದರು ಖಿಲ್ನಾನಿ ದಂಪತಿಗಳು. ಒಳಗೆ ಹೋಗಿ ಕುಳಿತನಂತರ ಛತ್ರೂಜಿ ತಮ್ಮ ಮಾತು ಪ್ರಾರಂಭಿಸಿದರು. ಏನೋ ಸಂಭ್ರಮ ಅವರಿಗೆ! "ಮಾಥೂರ್‌ಜೀ, ಎಷ್ಟು ವರ್ಷಗಳಾದವು ನಿಮ್ಮನ್ನು ನೋಡಿ? ನೀವು ಉಪನಯನ ಮಾಡಿಸಿದ ಮಕ್ಕಳು ತಪ್ಪದೇ ಗಾಯತ್ರಿ ಜಪ ಮಾಡುತ್ತಾರೆ. ದೊಡ್ಡವನು ನವೀನ್ ಎಂ.ಬಿ.ಎ. ಮಾಡಿದ, ಚಿಕ್ಕವನು ದೀಪ್ತಿ ಸಿ.ಎ. ಮಾಡಿದ್ದಾನೆ. ನೀವು ಈಗ ಹನ್ನೆರಡು ವರ್ಷಗಳ ಅನಂತರ ನಮ್ಮ ಮನೆಗೆ ಬಂದಿದ್ದೀರಿ. ಎಲ್ಲ ನೀವು ಮಾಡಿಸಿದ ಪೂಜೆಯ ಫಲ, ದೇವರು ನಮ್ಮನ್ನು ಇಷ್ಟು ಚೆನ್ನಾಗಿಟ್ಟಿದ್ದಾನೆ. ಈಗ ಮಗಳು ರೇಣು ಇದ್ದಾಳೆ, ಅವಳಿಗೊಂದು ಮದುವೆ ಆಗಬೇಕಿದೆ. ಮಾಥೂರ್‌ಜೀ, ನೀವು ಒಮ್ಮೆ ಅವಳ ಜಾತಕ ನೋಡಿ ಕೊಡುತ್ತೀರಾ?" ಎಂದರು. "ಓ ಅದಕ್ಕೇನಂತೆ? ಖಂಡಿತ ನೋಡುತ್ತೇನೆ... ನನಗೂ ಸಂತೋಷ ಛತ್ರೂಜಿ, ದೇವರು ನಿಮ್ಮನ್ನು ಚೆನ್ನಾಗಿ ಇಡಲಿ ಎಂದೇ ನಾನೂ ಸದೈವ ಪ್ರಾರ್ಥಿಸುತ್ತೇನೆ" ಎಂದೆ. "ಅದು ಸರಿ ಮಾಥೂರ್‌ಜೀ, ಈಗ ನೀವು ಏನು ಮಾಡುತ್ತಿದ್ದೀರಿ? ವಿದ್ಯಾಭವನ ಹೇಗೆ ಇದೆ ಈಗ? ಎಲ್ಲಾ ಚೆನ್ನಾಗಿಯೇ ನಡೆಯುತ್ತಿದೆಯೇ?" ಎಂದರು ಛತ್ರೂಜಿ. "ಹೌದು ಚೆನ್ನಾಗಿ ನಡೆಯುತ್ತಿದೆ... ಈಗ ಇನ್ನೆರಡು ತಿಂಗಳಲ್ಲೇ ರಾಜಕುಮಾರ ಚಾರ್ಲ್ಸ್ ವಿದ್ಯಾಭವನಕ್ಕೆ ಭೇಟಿಕೊಡಲಿದ್ದಾರೆ, ಡಿಸೆಂಬರ್ ತಿಂಗಳಲ್ಲಿ. ಅದಕ್ಕಾಗಿ ಸ್ವಲ್ಪ ಹಣದ ಆವಶ್ಯಕತೆ ಇದೆ. ನಿಧಿ ಸಂಗ್ರಹಣೆ ಮಾಡುತ್ತಿದ್ದೇವೆ" ಎಂದು ನಾನು ಏಕೋ ನಿಲ್ಲಿಸಿದೆ. ನಂದನ ಮುಖ ನೋಡಿದೆ.

ನನಗೆ ಗೊತ್ತು ನಂದ ತನ್ನ ಮುಖವನ್ನು ಹುಳಿಹುಳಿ ಮಾಡಿ ಕಿವುಚುತ್ತಾನೆಂದು! ಅವನು ಎಷ್ಟಾದರೂ ಶ್ರೀಮಂತರ ಮನೆಯಲ್ಲಿ ಹುಟ್ಟಿರುವ ಹುಡುಗ. ಯಾರನ್ನೂ ಕೇಳಿ ಅರಿಯದವ, ಕೊಟ್ಟು ಅಭ್ಯಾಸ ಅವನಿಗೆ! ಮೇಲಾಗಿ ಬಹಳ ನಾಚಿಕೆ ಸ್ವಭಾವ. ಮೇಷ್ಟ್ರಾಗಬೇಕೆಂದಿದ್ದ ಅವನನ್ನು ಭವನಕ್ಕೆ ಬಂಧಿಸಿಟ್ಟಿದ್ದವನು ನಾನೇ! ಅಲ್ಲಿನ ಆಡಳಿತಾಧಿಕಾರಿಯಾಗಿದ್ದ ನಾನು ಬಹಳ ಹೆಚ್ಚಾಗಿ ಕಟ್ಟುನಿಟ್ಟಾಗಿ ಇರುತ್ತಿದ್ದುದು ನಂದನ ವಿಷಯದಲ್ಲೇ! ಅವನು ನಮ್ಮ ಹುಡುಗ ಎಂದು ನಾನು ಯಾವ ರೀತಿಯಲ್ಲೂ ತಾರತಮ್ಯ ಮಾಡುತ್ತೇನೆಂದು ಇತರರು ಎಂದೂ ಬೆರಳೆತ್ತಿ ತೋರಬಾರದೆಂದು ನಾನು ಬಹಳ ಜಾಗ್ರತೆ ವಹಿಸುತ್ತಿದ್ದೆ. ನಂದನಿಗೂ ಆಗಾಗ ಆ ಬಿಸಿ ತಟ್ಟುತ್ತಿತ್ತು! ನನ್ನನ್ನು ಎಲ್ಲ ವಿಷಯಗಳಲ್ಲೂ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದ ನಂದ, ಅವನ ತೀಕ್ಷ್ಣ ಬುದ್ಧಿಗೆ ತಕ್ಕಂತೆ ನನ್ನನ್ನು ಅನುಸರಿಸಿಕೊಂಡು ಚುರುಕಾಗಿ ಎಲ್ಲ ಕೆಲಸವನ್ನೂ ನಿರ್ವಹಿಸಿ, ನನ್ನ ಸಂಪರ್ಕಕ್ಕೆ ಬಂದ ಎಲ್ಲರಲ್ಲೂ ತನಗೇ ಒಂದು ವಿಶೇಷ ಸ್ಥಾನವನ್ನು ಗಳಿಸಿಕೊಂಡಿದ್ದನಾದರೂ, ಈ ನಿಧಿಸಂಗ್ರಹಣೆಯ ವಿಷಯದಲ್ಲಿ ನಾನು ಪೀಠಿಕೆ ಹಾಕುವಂತೆ, ನಾನು ಕೇಳಿಬಿಡುವಂತೆ ಕೇಳಲು ಮಾತ್ರ ಅವನಿಗೆ ಸಾಧ್ಯವಾಗುತ್ತಿರಲಿಲ್ಲ. ಅವನ ಸ್ವಭಾವವಲ್ಲ ಅದು. ಅದೇನೋ ಹಿಂಜರಿತ, ಹೇಗೆ ಕೇಳುವುದು ಎನ್ನುವ ನಾಚಿಕೆ– ಇದೆಲ್ಲ ಅವನನ್ನು ಬಾಧಿಸುತ್ತಿತ್ತು. ಈ ವಿಷಯದಲ್ಲಿ ಮಾತ್ರ ಅವನು ನನ್ನನ್ನು ಸರಿಗಟ್ಟಲಾಗಿರಲಿಲ್ಲ! 'ಅದು ಬೇಡವೂ ಬೇಡ' ಎಂದು ಅವನ ಅಭಿಪ್ರಾಯವೂ ಆಗಿತ್ತು!

ನಂದನ ಮುಖದಲ್ಲಿ ಎಂಥದೋ ಅಸಹನೆ ಸ್ಪಷ್ಟವಾಗಿತ್ತು. ಇಲ್ಲೂ ನೀವು ಈ ವಿಚಾರ ತೆಗೆದಿದ್ದೀರಲ್ಲಾ ಎನ್ನುವ ಅಭ್ಯಂತರ ಇತ್ತು ಅಲ್ಲಿ! ಓದುಗರೇ, ಇದು ಬಹಳ ವೈಯಕ್ತಿಕವಾದರೂ ನಿಮಗೆ ಇದನ್ನು ತಿಳಿಸುತ್ತಿರುವ ಉದ್ದೇಶ ಇಷ್ಟೇ. ನಾನು-ನಂದ, ಮಾವ-ಅಳಿಯ ನಾದರೂ ವ್ಯಕ್ತಿಗಳಾಗಿ ಬೇರೆ ಬೇರೆಯೇ, ನಮ್ಮ ಸ್ವಭಾವಗಳೂ ಬೇರೆ

ಬೇರೆ. ಆದರೆ ನಾವಿಬ್ಬರೂ 'ಭವನ'ದ ಸೇವಕರು. ಒಂದೇ ಸೂರಿನಡಿಯಲ್ಲಿ ಬಹಳ ಜನಗಳ ಜತೆಗೆ ಸೇರಿ ಕೆಲಸ ಮಾಡುತ್ತಿರುವವರು. ಹೀಗೆ ಸ್ವಭಾವಗಳು ಬೇರೆ ಬೇರೆ ಆದಾಗ ಕೆಲಸಗಳ ನಿರ್ವಹಣೆ ಹೇಗಾದೀತು ? ಎನ್ನುವ ಸಂಶಯ ಮೂಡಿರಬಹುದು ನಿಮ್ಮ ಮನಸಿನಲ್ಲಿ. ಅದಕ್ಕೆ ಉತ್ತರ ಕೊಡಬೇಕುತಾನೆ ನಾನು ? ಹೌದು... ಸ್ವಭಾವಗಳು ಬೇರೆ ಬೇರೆಯಾದರೂ ನಾವು ಮಾಡುವ ಕೆಲಸವನ್ನು ನಮ್ಮದೇ ಆದ ರೀತಿಯಲ್ಲಿ ಮಾಡಿದಾಗ, ಅದು ಸಫಲವೂ ಆದಾಗ ಅಲ್ಲಿ ಸ್ವಭಾವವ್ಯತ್ಯಾಸಕ್ಕೆ ಅಷ್ಟು ಪ್ರಾಮುಖ್ಯತೆ ಇರದು. ಪರಸ್ಪರರನ್ನು ನಾವು ಸರಿಯಾಗಿ ಅರ್ಥ ಮಾಡಿಕೊಂಡಿರಬೇಕಷ್ಟೆ. ನಾನೂ-ನಂದನೂ ಪರಸ್ಪರರನ್ನು ಚೆನ್ನಾಗಿಯೇ ಅರ್ಥಮಾಡಿಕೊಂಡಿದ್ದರೂ ನಮಗೆ ಮುಜುಗರವಾದುದನ್ನು ನಮ್ಮಿಬ್ಬರಲ್ಲಿ ಒಬ್ಬರು ಮಾಡಿದಾಗ, ಯಾವುದೇ ಸಂಕೋಚವಿಲ್ಲದೆ ಅದನ್ನು ಹೊರಗೆಡಹುವಷ್ಟು ಸಲಿಗೆ ಸ್ವತಂತ್ರ ನಮ್ಮಲ್ಲಿತ್ತು. ಇದರಲ್ಲಿ ಮಾವ-ಅಳಿಯನ ಸಂಬಂಧವಾಗಲಿ ಆಡಳಿತಾಧಿಕಾರಿ ಕೈಕೆಳಗೆ ಕೆಲಸ ಮಾಡುವವ ಎನ್ನುವ ಭಾವನೆಗಳಾಗಲಿ ಎಂದೂ ಅಡ್ಡ ಬರುತ್ತಿರಲಿಲ್ಲ. ಅದಕ್ಕೇ ಈಗ ನಂದನ ಮುಖ ಹಿಂಡಿಹೋಗಿದ್ದುದು!!

ನಾನು ಮಾತು ನಿಲ್ಲಿಸಿದ ಸಂದರ್ಭ ಕಾದ ಖಿಲ್ನಾನಿಯವರು ನಮಗೆ ಏನಾದರೂ ಪಾನೀಯ ತರಲೆಂದು ಒಳ ಸರಿದಾಗ, ನಂದ ಮೆಲ್ಲನೆ ಸಿಡಿಸಿಡಿದ... "ಎಲ್ಲಿ ಬಂದರೂ ನೀವು ಈ ವಿಷಯಕ್ಕೆ ಅದು ಹೇಗೆ ಪೀಠಿಕೆ ಹಾಕುತ್ತೀರೋ? ನನಗಂತೂ ತಿಳಿಯದು..." ಎಂದು. ಅದಕ್ಕೆ ನಾನು ಅಷ್ಟೇ ಶಾಂತನಾಗಿ "ನಿನಗೇನು? ಅವರು ಕೊಟ್ಟರೆ ಕೊಡಲಿ, ಇಲ್ಲದಿದ್ದರೆ ಇಲ್ಲ. ಬಂದಿದ್ದೇವೆ, ಜ್ಯೂಸ್ ಕುಡಿದು ಆಶೀರ್ವಾದ ಮಾಡಿ ಹೊರಟರಾಯಿತು. ಅದಕ್ಕೆ ನಿನಗೇಕೆ ಹೀಗೆ ತಳಮಳ ಆಗಬೇಕು..." ಎಂದೆ. ನಾನು ಹೀಗೆ ನಮ್ಮ ಸಂಕೇತಿ ಭಾಷೆಯಲ್ಲಿ ಮಾತನಾಡಿಕೊಂಡದ್ದು ಅವರಿಗೆ ತಿಳಿಯುವ ಸಾಧ್ಯತೆಯೂ ಇರಲಿಲ್ಲ!

ಜ್ಯೂಸ್ ತಂದ ಖಿಲ್ನಾನಿಯವರು, "ಮಾಥೂರ್‌ಜೀ, ನೀವು ಈ ದಿನ ಊಟ ಮಾಡಿ ಹೋಗಬಾರದೇ? ಜನಕ್ ಹೇಳುತ್ತಿದ್ದಾಳೆ ಬ್ರಾಹ್ಮಣರು ಬಂದಿದ್ದೀರಿ, ಸ್ವಲ್ಪ ಭೋಜನ ಮಾಡಿ... ಎಂದು!" ಎಂದರು. ಸುಮ್ಮನಿರದ ನಾನು "ಛತ್ರೂಜೀ, ಬ್ರಾಹ್ಮಣರು ಬರೀ ಊಟ ಮಾಡಿ ಹೋಗುವವರಲ್ಲ... ದಕ್ಷಿಣೆಯನ್ನೂ ತೆಗೆದುಕೊಡು ಹೋಗುವವರು..." ಎಂದು ನಕ್ಕೆ. ನಮ್ಮ ಜತೆಯಲ್ಲಿ ತಮ್ಮ ನಗುವನ್ನು ಬೆರೆಸಿದ ದಂಪತಿಗಳು "ಅಚ್ಛಾ ಅದಕ್ಕೇನು?" ಎಂದರು. ಅಡುಗೆ ತಯಾರಿಸಲು ಪ್ರಾರಂಭಿಸಿದರು.

ನಂದನಿಗೆ ಈಗ ಸಿಟ್ಟೇ ಬಂದಿತ್ತು!"ನೀವು ಏನಾದರೂ ಮಾಡಿ, ನಾನಂತೂ ಇಲ್ಲಿಂದ ಹೊರಡುವವ ಈಗ..." ಎಂದು ಎದ್ದೇನಿಂತ. ಅವನನ್ನು ಮಗಳು ಜಾನಕಿ ಒಮ್ಮೆ ನೋಡಿದಾಗ ಮೆತ್ತಗಾಗಿ ಕುಳಿತ! ನನಗೋ ಅವನ ಅವಾಂತರ ನೋಡಿ ನಗು "ಭಲಾ...ಮಗಳೇ...!" ಎಂದುಕೊಂಡೆ. ಕುಮಾರವ್ಯಾಸನ ಪದ್ಯದ ಸಾಲುಗಳು ನೆನಪಾದವು. ಭೀಮ ಹೀಗೆಯೇ ಒಮ್ಮೆ ಸಿಡಿದೆದ್ದಾಗ "ಹುಬ್ಬಿನಲಿ ನಿಲಿಸಿದನು ಭೀಮನುಬ್ಬಟೆಯಾ" ಎನ್ನುವ ಕುಮಾರವ್ಯಾಸ, ಧರ್ಮರಾಜನ ಹುಬ್ಬುಗಳ ಚಲನೆ ಭೀಮನನ್ನು ಹೇಗೆ ಮೆತ್ತಗೆ ಮಾಡಿದವು ಎಂದು ಅದೆಷ್ಟು ಸುಂದರವಾದ ಸಾಹಿತ್ಯದಲ್ಲಿ ಅಲ್ಲಲ್ಲಿ ಕಾವ್ಯದ ಸಾಲಿನಲ್ಲಿ ಹೇಳಿದ್ದಾನೆ! ಎನಿಸಿತು ಆಗ!

ಟೇಬಲಿನ ಮೇಲೆ ಸಾಲಾಗಿ ಇರಿಸಿದ್ದ ಬಗೆ ಬಗೆಯ ತಿಂಡಿ-ತಿನಿಸುಗಳಲ್ಲಿ ಎಲ್ಲವೂ 'ಘಂ' ಎಂದು ಪರಿಮಳ ಬೀರುತ್ತಿದ್ದವು. ಜನಕ್‌ಜೀ, "ಮಾಥೂರ್‌ಜೀ, ನೀವು ಈರುಳ್ಳಿ-ಬೆಳ್ಳುಳ್ಳಿ ತಿನ್ನುವುದಿಲ್ಲ ಎಂದು ತಿಳಿದೇ ನಾವು ಎಲ್ಲವನ್ನೂ ತರಕಾರಿಗಳನ್ನುಪಯೋಗಿಸಿ ಮಾಡಿದ್ದೇವೆ. ಈ ಸಿಹಿ ಮಾಡಿರುವುದೂ ನಿಮಗಾಗಿಯೇ... ಎಲ್ಲರೂ ಸಂಕೋಚವಿಲ್ಲದೆ ಊಟ ಮಾಡಿ" ಎಂದು ಬಹಳ ಪ್ರೀತಿಯಿಂದ ನಮ್ಮನ್ನೆಲ್ಲ ಉಪಚರಿಸಿದರು. ಒಬ್ಬರಿಗೊಬ್ಬರು ಉಪಚರಿಸಿಕೊಳ್ಳುತ್ತಾ, ಮಾತಾಡುತ್ತಾ ನಗುತ್ತಾ ಊಟ ಸಾಗಿತು.

ಊಟವಾದನಂತರ ನಾವುಗಳು ಅವರಿಗೆ ವಂದನೆಗಳನ್ನು ಹೇಳಿ ಹೊರಡಲು ಸಜ್ಜಾದೆವು. ಎಲ್ಲರೂ ನನಗೆ-ಇವಳಿಗೆ ನಮಸ್ಕಾರ ಮಾಡಿದರು. ನಾವೂ ಹೃದಯ ತುಂಬಿ ಆಶೀರ್ವದಿಸಿದೆವು. ಅದೆಷ್ಟು ಆತ್ಮೀಯತೆ ಅವರಿಗೆ, ಅದೆಷ್ಟು ಪ್ರೀತಿಯ ಉಪಚಾರ ನಮಗೆ! ಆ ದಿನವನ್ನು ನಾವು ಮರೆಯುವಂತಿಲ್ಲ. ಛತ್ರೂಜಿ ಟ್ರೇ ಒಂದನ್ನು ಹಿಡಿದರು. ಅದರಲ್ಲಿ ವಿಧವಿಧದ ಹಣ್ಣುಗಳು, ಜೊತೆಗೇ ಒಂದು ಕವರು "ಮಾಥೂರ್‌ಜೀ, ಇದೋ ನೋಡಿ ಇಲ್ಲಿದೆ, ನಿಮ್ಮ ವಿದ್ಯಾಭವನ ಬಹಳ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ. ಅದಕ್ಕಾಗಿ ನಮ್ಮ ಈ ಕಿರುಕಾಣಿಕೆ. ದಯವಿಟ್ಟು ಸ್ವೀಕರಿಸಿ" ಎಂದರು ಛತ್ರೂಜಿ. ಹಣ್ಣುಗಳ ತಟ್ಟೆಯನ್ನು ಪಕ್ಕಕ್ಕಿಟ್ಟು, ಕವರನ್ನು ಮೆಲ್ಲನೆ ತೆಗೆದು ಅದರಲ್ಲಿದ್ದುದನ್ನು ಹೊರತೆಗೆದು ನೋಡಿದೆ...! ನನ್ನ ಕಣ್ಣುಗಳನ್ನೇ ನಂಬದಾದೆ ! ಮತ್ತೆ ಮತ್ತೆ ಅಲ್ಲಿ ಸಾಲಾಗಿ ಜೋಡಿಸಿದ್ದ ಸೊನ್ನೆಗಳನ್ನು ಎಣಿಸಿದೆ! ಒಂದು...ಎರಡು... ಮೂರು... ನಾಲ್ಕು ....೭೫,೦೦೦ ಡಾಲರುಗಳು!! ಅದನ್ನು ಬರೆದಿದ್ದ ಚೆಕ್!! ನನಗರಿವಿಲ್ಲದಂತೆಯೇ ನನ್ನ ಬಾಯಿಂದ ಉದ್ಗಾರ ಹೊರಟಿತು "ಛತ್ರೂಜೀ... ಇದೇನಿದು? ಇಷ್ಟೊಂದು?" ಎಂದೆ. ನಿಜಕ್ಕೂ, ಖಿಲ್ನಾನಿ ದಂಪತಿಗಳು ಉದಾರವಾಗಿ ಏನಾದರೂ ಭವನದ ಕೆಲಸಕ್ಕೆ ಕೊಡಲಿ ಎಂದು ನನ್ನ ಮನಸ್ಸಿನಲ್ಲಿತ್ತು. ಆದರೆ ಅದಕ್ಕೂ ಒಂದು ಮಿತಿ ಇತ್ತು. ಇಷ್ಟು ದೊಡ್ಡ ಮೊತ್ತವನ್ನು ನಾನು ಕನಸಿನಲ್ಲೂ ನೆನಸಿರಲಿಲ್ಲ, ನಿರೀಕ್ಷಿಸಿರಲಿಲ್ಲ. ನನ್ನ ನಿರೀಕ್ಷೆಗೆ ಮೀರಿದ ಬಹಳ ದೊಡ್ಡ ಕಾಣಿಕೆಯಾಗಿತ್ತದು. ಹೌದು, 'ಕಾರ್ಪಸ್ ಫಂಡ್'ನ ಪೂರ್ತಿ ಹಣ ಅಲ್ಲಿತ್ತು!! ನನ್ನ ಮಾತನ್ನು ಮಧ್ಯದಲ್ಲೇ ತಡೆದ ಛತ್ರೂಜಿಯವರು,"ಏನು ಮಾಥೂರ್‌ಜೀ ಮತ್ತೆ... ಇದೆಲ್ಲಾ ಏನು? ಇದೇನು ಮಹಾ? ನಮ್ಮ ಹುಡುಗರಿಗೆ ಆಶೀರ್ವಾದ ಮಾಡಿ ಇಷ್ಟರಮಟ್ಟಕ್ಕೆ ಮೇಲೆ ಬರುವ ಹಾಗೆ ಮಾಡಿರುವವರು ನೀವು!!" ಎಂದರು. ಅವರು ಮಾಡಿದ ಪುಣ್ಯದ ಫಲದಿಂದ ಅವರು ಈ ದಿನ ಈ

ಸುಸ್ಥಿತಿಯಲ್ಲಿರುವುದು, ಅದು ನನಗೆ ತಿಳಿಯದೇ? ಇದಕ್ಕೆ ನಾನು ಕಾರಣ ಎಂದು ಅವರು ಅಂದುಕೊಂಡಿರುವುದು ಅವರ ಔದಾರ್ಯ ಅಷ್ಟೆ. ನಾನು ಮಕ್ಕಳಿಗೆ ಉಪನಯನ ಮಾಡಿಸಿ 'ಗಾಯತ್ರೀ' ಜಪಿಸುವ ಹಾಗೆ ಮಾಡಿದುದೇ ಈ ಉನ್ನತಿಗೆ ಕಾರಣ ಎಂದು ಅವರ ನಂಬಿಕೆ ! ನಮ್ಮ ಭಾರತೀಯರು ಪ್ರಪಂಚದ ಯಾವ ಮೂಲೆಯಲ್ಲೇ ಇದ್ದರೂ ಆ ಸ್ವಭಾವ ಮನೋಭಾವ ಒಂದೇ. ನಮಗೆ ನಂಬಿಕೆಯೇ ದೇವರು! ಅವರ ಈ ಮಾತನ್ನು ನಾನು ಅಲ್ಲಿಯೇ ಮನಸ್ಸಿನಲ್ಲೇ 'ಮಾಧವ'ನಿಗೆ ಅರ್ಪಿಸಿದೆ. 'ಇದಕ್ಕೆಲ್ಲ ನೀನು ಕಾರಣ ಮಹರಾಯ! ನಾನಲ್ಲ! ಅವರು ನನ್ನನ್ನು ಕಾರಣ ಎನ್ನುತ್ತಿರುವುದಕ್ಕೂ ನೀನೇ ಕಾರಣ...!!' ಎಂದು ವಿನೀತನಾಗಿ ನಿವೇದಿಸಿದೆ. ಅದನ್ನೇ ಅವರಿಗೆ ಹೇಳಿದೆ. "ಇದಕ್ಕೆಲ್ಲ ದೇವರೇ ಕಾರಣ, ನಾವು ಮನುಷ್ಯಮಾತ್ರರಷ್ಟೇ? ನೀವು ಹಾಗೆ ತಿಳಿದುಕೊಂಡಿರುವುದಕ್ಕೆ 'ವಂದನೆಗಳು' ಎಂದು ಮಾತ್ರ ನನಗೆ ಹೇಳಲು ಸಾಧ್ಯವಾಗುವುದು. ನಿಮ್ಮ ಈ ಔದಾರ್ಯಕ್ಕೆ 'ವಂದನೆಗಳು' ಎಂದು ಹೇಳಲೂ ನನಗೆ ಸಂಕೋಚವಾಗುತ್ತಿದೆ. ಛತ್ರೂಜೀ, 'ಭಾರತ ಮಾತೆ' ಎಂದಿಗೂ ಬಂಜೆಯಲ್ಲ ಎಂದು ನೀವು ನಿರೂಪಿಸಿ ತೋರಿಸಿದಿರಿ. ಇಂದಿಗೂ ನಿಮ್ಮಂತಹ ಉದಾರಿ ಮಕ್ಕಳು ಅವಳ ಮಡಿಲಿನವರು ಎಂದು ಅವಳು ಹೆಮ್ಮೆ ಪಡುತ್ತಾಳೆ. ಅದು ಖಂಡಿತಾ..." ಎಂದು ಮನತುಂಬಿ ಹೇಳಿದೆ. "ಭಾರೀ ಮೊತ್ತವನ್ನೇ ಕೊಟ್ಟಿದ್ದೀರಿ ಛತ್ರೂಜಿ, ಜನಕ್‌ಬೆನ್!" ಎಂದೆ. ಅದಕ್ಕೆ ಅವರು ಸಹಜ ವಿನಯದಿಂದ "ಮಾಥೂರ್‌ಜೀ! ಐಸಾ ಮತ್ ಕಹಿಯೇ... ದೇನಾವಾಲಾ ತೋ ಊಪರ್‌ವಾಲಾ ಹೈ!..." ಎಂದರು.

ಅವರೆಲ್ಲರಿಂದ ಬೀಳ್ಕೊಂಡು ಕಾರು ಹತ್ತಿ ಹೋಗುವಾಗ ನಂದನ ಮುಖ ನೋಡಿದೆ ನಾನು. ನನ್ನ ಬಗೆಗೆ ಮೆಚ್ಚುಗೆ ಅಭಿಮಾನಗಳ ಭಾವ ಅಲ್ಲಿ ಸ್ಪಷ್ಟವಾಗಿತ್ತು. ನಾನು ಮಾತೇನನ್ನೂ ಆಡದಿದ್ದರೂ, 'ನೋಡಿದೆಯಾ ಅಷ್ಟು ತಳಮಳಿಸಿದೆಯಲ್ಲಾ? ಸುಮ್ಮನೆ ಬಾಯಿ ಬಿಗಿದುಕೊಂಡಿದ್ದರೆ ಈಗ ಈ ಕಾಣಿಕೆ ಭವನಕ್ಕೆ ಸಿಗುತ್ತಿತ್ತೇನು?' ಎನ್ನುವ ಭಾವ ನನ್ನಲ್ಲಿ! ನಮ್ಮಿಬ್ಬರ ಮನಸನ್ನು ಅರ್ಥಮಾಡಿ ಕೊಂಡವಳಂತೆ ಜಾನಕಿ ಹೇಳಿದಳು, "ನೋಡಿದಿರಾ, ಈ ದಿನ ನೀವು ಬರುವುದಿಲ್ಲಾ ಎನ್ನುತ್ತಿದ್ದಿರಿ... ಈಗ ಹೇಗಾಯ್ತು? ನನಗೆ ನೀವು ಬರೀ ಥ್ಯಾಂಕ್ಸ್ ಹೇಳಿದರೆ ಸಾಲದು, ಏನಾದರೂ ಉಡುಗೊರೆಯನ್ನೇ ತೆಗೆದುಕೊಡಬೇಕಿದೆ, ಆಯ್ತಾ?" ಎಂದಳು. ಹೌದು, ಆದಿನದ ಕಾಣಿಕೆಯ ಶ್ರೇಯ ಮಗಳು ಜಾನಕಿಗೆ ಸಲ್ಲುತ್ತದೆ, ಎನಿಸಿತು ನನಗೆ. "ಹೌದು, ನಿನಗೆ ಬೇಕಾದದ್ದನ್ನು ಕೊಡಿಸುತ್ತೇನೆ. ಈ ದಿನದ ಕಾಣಿಕೆ ಲಭ್ಯವಾದದ್ದು ನಿನ್ನಿಂದಲೇ ಎನ್ನುವುದಂತೂ ನಿಜ" ಎಂದು ನಾನೂ ಒಪ್ಪಿಕೊಂಡೆ. ಅವಳಿಗೆ ಥ್ಯಾಂಕ್ಸ್ ಹೇಳಿದೆ!

ಅನಂತರವಾದರೂ ನಾನೇನೂ ಸುಮ್ಮನಿರಲಿಲ್ಲ. ನಂದನಿಗೆ ಚೆನ್ನಾಗಿ ಚುಡಾಯಿಸಿದೆ , "ನೀನೇನೋ ಹೇಳಬೇಡಾ ಎಂದೆ. ಸುಮ್ಮನಿದ್ದಿದ್ದರೆ ಹೀಗೆ 'ಕಾರ್ಪಸ್ ಫಂಡ್'ಗೆ ಧನಸಂಗ್ರಹ ಆಗುತ್ತಿತ್ತೇನು?" ಎಂದು. ಅವನು ಸುಮ್ಮನೆ ನಕ್ಕನಾದರೂ, ಈಗ ಅವನೂ ನನ್ನ ಹಾಗೆಯೇ ಮಾಡಬೇಕಿದೆ. ನನ್ನ ಸ್ಥಾನದಲ್ಲಿ ತನ್ನ ಕರ್ತವ್ಯ ನಿರ್ವಹಿಸುತ್ತಿರುವ ನಂದ ಈಗೀಗ ನನ್ನ ಈ ಸ್ವಭಾವವನ್ನು ತಾನೂ ರೂಢಿಸಿಕೊಳ್ಳುತ್ತಿದ್ದಾನೆ. ಇಲ್ಲದಿದ್ದರೆ ವಿದ್ಯಾಭವನ ನಡೆಯುವುದು ಹೇಗೆ? ಆದರೆ ವ್ಯತ್ಯಾಸ ಇಷ್ಟೇ-ನಾನು ಅಲ್ಲಿಗೆ ಹೋಗಿ 'ವಿದ್ಯಾಭವನ'ವನ್ನು ಮೊಳಕೆಯಿಂದಲೂ ಬೆಳೆಸಿ ನಡೆಸಿದವನು. ಆಗ ನನ್ನನ್ನು ನೋಡುತ್ತಿದ್ದ, ನನ್ನ ಜತೆಗಿದ್ದು ಸಹಾಯ ಮಾಡಿದ ಎಲ್ಲರೂ ನನ್ನ ಸರಿಸಮದ ವಯಸ್ಸಿನವರು. ಅವರಲ್ಲಿ - ನನ್ನಲ್ಲಿ ಎಂದಿಗೂ ಭೇದಭಾವ ಎನ್ನುವುದೇ ಇರಲಿಲ್ಲ. 'ವಿದ್ಯಾಭವನಕ್ಕಾಗಿ ಕೆಲಸ ಮಾಡುವವನು ಇವನು, ವಿದ್ಯಾಭವನಕ್ಕಾಗಿ ಕೊಡುವವರು ನಾವು'ಎಂದು ಅವರೆಂದೂ ನನ್ನನ್ನು ನೋಡಿದ್ದಿಲ್ಲ. ನಾನೂ ಹಾಗೆಂದೂ ನಡೆದುಕೊಂಡಿದ್ದಿಲ್ಲ.... ನಾವೆಲ್ಲರೂ ಒಂದೇ ಕುಟುಂಬದವರಂತೆ ಪರಸ್ಪರ ಮರ್ಯಾದೆ, ಸ್ನೇಹ, ವಿಶ್ವಾಸ, ಪ್ರೀತಿ ಇವುಗಳನ್ನು ಹಂಚಿಕೊಂಡು ಜೊತೆಜೊತೆಯಾಗಿ ಬಂದವರು. ಅವರೆಲ್ಲರೂ ನಂದನಿಗೆ ಈಗ ಹಿರಿಯರು, ಇವನು ಅಲ್ಲಿ ಕಿರಿಯವ. ಸ್ವಾಭಾವಿಕವಾಗಿ ನನಗೆ ಇದ್ದ ಸಲಿಗೆ ಅವನಿಗೆ ಅವರಲ್ಲಿ ಇಲ್ಲ, ಹಾಗಿರಲು ಸಾಧ್ಯವಿಲ್ಲ. ಆದರೂ ಅವರೆಲ್ಲ ಇಂದಿಗೂ ನಂದನನ್ನು ತಮ್ಮ ಹುಡುಗನಂತೆಯೇ ಪ್ರೀತಿಸಿ, ಬೆಂಬಲಿಸುವುದನ್ನು ಕಂಡಾಗ ನನಗೂ ಹೃದಯ ತುಂಬಿ ಬರುತ್ತದೆ!!

ಹೀಗೆ ಭವನಕ್ಕೆ ಭರ್ಜರಿ ಕಾಣಿಕೆ ಕೊಟ್ಟ ಖಿಲ್ನಾನಿಯವರು ನಿಧನರಾದಾಗ ನನಗೆ ಬಹಳ ದುಃಖವಾಯಿತು. ಆದರೇನು ರತ್ನಾಕರವರ್ಣಿ ತನ್ನ ಒಂದು ಶತಕದಲ್ಲಿ ಹೇಳುವಂತೆ "ದಾನಂಗೈದು, ತಪಕ್ಕೆ ಪಾಯ್ದು, ಮರಣಂಗಾಣ್ಬಂದು, ನಿಮ್ಮಕ್ಷರಧ್ಯಾನಂಗೈದಳಿದಂಗೆ ಶೋಕಿಪರದೇಂ ರತ್ನಾಕರಾಧೀಶ್ವರಾ" ಎಂದು, ಬಾಳಿದವರು ಅವರು. ಮನದಣಿಯೆ ದಾನ ಮಾಡಿ, ತಪಸ್ಸು ಎನ್ನುವಂತೆ ಗೃಹಸ್ಥ ಜೀವನವನ್ನು ಚೆನ್ನಾಗಿ ನಡೆಸಿ, ಗಾಯತ್ರೀ ಮಂತ್ರದ ಬಗ್ಗೆ ಅನನ್ಯ ಭಕ್ತಿ ಭಾವ ಹೊಂದಿ ಈಗ ಸ್ವರ್ಗಸ್ಥರಾಗಿದ್ದ ಅವರಿಗಾಗಿ ಶೋಕಿಸುವುದೇ? ಸಾರ್ಥಕ ಜೀವನ ನಡೆಸಿದ ಪುಣ್ಯಜೀವ ಅದು! ಅನಂತರ ಅವರ ಪತ್ನಿ ಜನಕ್ ಖಿಲ್ನಾನಿ ನಮ್ಮ ವಿದ್ಯಾಭವನದ ಉಪಾಧ್ಯಕ್ಷೆಯಾದರು. ಸುಮಾರು ೬,೦೦೦ ಪೌಂಡುಗಳ ವೆಚ್ಚವನ್ನು ಭರಿಸಿ ಭವನದ ಎಲ್ಲ ಚಟುವಟಿಕೆಗಳನ್ನೂ ವಿವರಿಸಿರುವ ಫೋಲ್ಡರ್ ಒಂದನ್ನು ಪ್ರಕಟಿಸುವುದಕ್ಕೆ ನೆರವಾದರು. ಅವರ ಮಗಳು ರೇಣುವಿಗೆ ಮದುವೆ ಮಾಡಿಸಿದೆ. ಈಗ ಆಕೆ ಒಂದು ಮುದ್ದು ಮಗುವಿನ ತಾಯಿಯಾಗಿದ್ದಾಳೆ. ಬಹಳ ಪ್ರೀತಿಯಿಂದ ನಮ್ಮನ್ನೆಲ್ಲ ಮಗುವಿನ ನಾಮಕರಣಕ್ಕೆಂದು ಆಹ್ವಾನಿಸಿದ್ದರು.... ಹೀಗೇ ಸಂಪರ್ಕ ಮುಂದುವರೆದಿದೆ. ಪ್ರತಿವರ್ಷವೂ ನವಂಬರ್ ತಿಂಗಳ ಚಳಿಯಲ್ಲಿ ನಾವು ಹಾಕಿಕೊಳ್ಳಲಿ ಎಂದು, ನನಗೆ - ನನ್ನವಳಿಗೆ ಒಂದೊಂದು ಒಳ್ಳೆಯ ಸುಂದರ ಸ್ವೆಟರನ್ನು ಕೊಡಿಸುವ ಶ್ರೀಮತಿ ಜನಕ್ ಖಿಲ್ನಾನಿಯವರ ವಿಶ್ವಾಸ ಸೋದರಿ ವಾತ್ಸಲ್ಯವನ್ನು ನೆನಪಿಗೆ ತರುವಂಥದು!

೨೭. ಬೆಳಕು, ಮತ್ತಷ್ಟು ಬೆಳಕು

ಸಾರ್ವಜನಿಕ ಜೀವನ

ಆ ದೇಶದಲ್ಲಿ ನಾನು ಕಂಡಂತೆ ಸಾರ್ವಜನಿಕರ ಬಗ್ಗೆ ಸರ್ಕಾರದ ಕಾಳಜಿ ಬಹಳ. ನಮ್ಮ ವಿದ್ಯಾಭವನದ ೩೭, ನ್ಯೂ ಆಕ್ಸ್‌ಫರ್ಡ್ ರಸ್ತೆಯಲ್ಲಿದ್ದಾಗ ಒಂದು ದಿನ ಒಬ್ಬ ಮಹಿಳೆ, ಸುಮಾರು ೫೦-೬೦ ವರ್ಷ ವಯಸ್ಸಿನಾಕೆ, ನಮ್ಮ ಭವನದ ಎದುರು ಕಲ್ಲೊಂದನ್ನು ಎಡವಿಬಿದ್ದಳು. ನಾನೂ ನನ್ನವಳೂ ಕೂಡಲೇ ಹೋಗಿ ಅವಳನ್ನು ಎತ್ತಿ, ಸುಧಾರಿಸಿ ಅವಳಿಗೆ ಆ ತಕ್ಷಣಕ್ಕೆ ಬೇಕಾದ ಉಪಚಾರ ಮಾಡಿದೆವು. ಸ್ವಲ್ಪ ಹೊತ್ತು ನಮ್ಮಲ್ಲಿದ್ದು ಆಕೆ ಹೊರಟಳು. ಹೊರಡುವಾಗ ತಾನು ಎಡವಿಬಿದ್ದ ಜಾಗ ನೋಡಿದಳು. ಅಲ್ಲಿ ನೆಲಕ್ಕೆ ಹಾಕಿ ಜಡಿದಿದ್ದ ಒಂದೇ ಒಂದು ಕಲ್ಲು ಸ್ವಲ್ಪ ಮೇಲೆ ಎದ್ದಿತ್ತು. ಆ ಕಲ್ಲನ್ನು ಎಡವಿಯೇ ಆಕೆ ಬಿದ್ದಿದ್ದುದು. “ಓ ! ಹೀಗೆ ಕಲ್ಲು ಮೇಲೆದ್ದರೆ ಬೀಳುವುದಲ್ಲದೆ ಸರಿಯಾಗಿ ಕ್ಷೇಮವಾಗಿ ನಡೆದು ಹೋಗಲಾಗದು. ನಾನು ಈ ಬಗ್ಗೆ ಈಗಲೇ ದೂರು ಕೊಡುತ್ತೇನೆ. ಸುಮ್ಮನಿರುವುದಿಲ್ಲ. ನೋಡಿ... ಈಗ ನನಗೆ ಎಷ್ಟು ನೋವಾಯಿತು?” ಎಂದು ಹೇಳಿ ಹೊರಟಳು. ನಾನೂ ನನ್ನವಳೂ ಮುಖ ಮುಖ ನೋಡಿಕೊಂಡೆವು! ನಮ್ಮಲ್ಲಿ ಹೇಳುವವರಿಲ್ಲದೇ ಕೇಳವವರಿಲ್ಲದೇ ಬೀದಿಯಲ್ಲಿ ಬಿದ್ದಿರುವ ಕಲ್ಲುಗಳೆಷ್ಟೋ, ಓಡಾಡುವ ವಾಹನಗಳ ಮಧ್ಯೆ ತಿರುಗಾಡುವ ಹಸು-ಕರುಗಳೆಷ್ಟೋ, ನಾಯಿಗಳೆಷ್ಟೋ!ತೆರೆದ ಮ್ಯಾನ್ ಹೋಲ್‌ಗಳ ಬಾಯಿ ಮುಚ್ಚುವುದು ಅದೆಷ್ಟು ದಿನಕ್ಕೋ, ರಸ್ತೆಯಲ್ಲಿರುವ ಹಳ್ಳ-ಕೊಳ್ಳ, ಪಾಟ್‌ಹೋಲಿಗೆ ಸಿಕ್ಕಿ ದ್ವಿಚಕ್ರ ವಾಹನಗಳ ಸವಾರರು ಬೀಳುತ್ತ ಏಳುವುದು ಅದೆಷ್ಟೋ, ಕೆಲವೊಮ್ಮೆ ಪ್ರಾಣವನ್ನೇ ಕಳೆದುಕೊಳ್ಳುವವರೆಷ್ಟೋ... ಯಾರು ಎಷ್ಟೇ ಕೂಗಿಕೊಂಡರೂ, ಆಗುವ ಕೆಲಸಗಳು ಅದನ್ನು ಮಾಡುವವರಿಗೆ ಬಿಡುವಾಗಿ, ಮನಸು ಬಂದಾಗಲೇ ಆಗುವುದು, ಅಲ್ಲಿಯವರೆಗೆ ನಮ್ಮದು ಬರೀ ಅರಣ್ಯರೋದನ. ಜೀವಿಗಳನ್ನು, ಅವರಿಗಾಗುವ ಹಾನಿಯನ್ನು ಕ್ಷುಲ್ಲಕವಾಗಿ ನೋಡುವ ನಮ್ಮವರ ಕಣ್ಣಿಗೆ, ಪ್ರಾಣಿಗಳಿಗೂ ಮನುಷ್ಯರಿಗೂ ವ್ಯತ್ಯಾಸವೇ ಇಲ್ಲ. ಎಲ್ಲರೂ ಒಂದೇ ನಮಗೆ!! ಅಂಥ ಸಮಭಾವ ನಮ್ಮಲ್ಲಿ!!

‘ನೋಡೋಣ, ಈಕೆ ಏನು ಮಾಡುತ್ತಾಳೆ’ ಎಂದುಕೊಂಡು ಒಳ ನಡೆದೆವು. ಮಾರನೆಯ ಬೆಳಿಗ್ಗೆ ಮನೆಯ ಮುಂದೆ ಠಣ್ ಠಣ್ ಎನ್ನುವ ಶಬ್ದ! ಬಾಗಿಲು ತೆರೆದು ಹೊರಬಂದು ನೋಡಿದರೆ, ನೆನ್ನೆ ಸ್ವಲ್ಪ ಮೇಲೆದ್ದುಕೊಂಡು ಆ ಮಹಿಳೆಯನ್ನು ಬೀಳಿಸಿ ಜಂಭ ಮಾಡಿದ್ದ ಕಲ್ಲು ಈಗ ನೆಲಕ್ಕೆ ಹೂತು ಹೋಗಿತ್ತು!! ಆ ಜಾಗ ಸಮತಟ್ಟಾಗಿ, ಎಲ್ಲೂ ಯಾವ ಕಲ್ಲೂ ಎದ್ದುಕೊಂಡಿಲ್ಲದ ಹಾಗೆ ಜಡಿದು, ನೆಲವನ್ನು ಹದಮಾಡಲಾಗಿತ್ತು! ಅಲ್ಲಿಬಿದ್ದು ನೋವಾದ ಆಕೆ ಆ ಬಗ್ಗೆ ದೂರುಕೊಟ್ಟು, ಅವಳಿಗೆ ೭೫ ಪೌಂಡುಗಳಷ್ಟು ಹಣವನ್ನು ಲಂಡನ್ ನಗರದ ಕಾರ್ಪೊರೇಷನ್ ಕಾಂಪೆನ್ಸೇಷನ್ (Compensation) ಎಂದು ಕೊಟ್ಟಿತು!! ಹೀಗೆ ಅಲ್ಲಿನ ಸರ್ಕಾರ ತನ್ನ ಜನರನ್ನು ಕಾಳಜಿ ವಹಿಸಿ ನೋಡಿಕೊಳ್ಳುವುದು!

* * *

ಅಂತೆಯೇ ಸಾರ್ವಜನಿಕರ ಸಣ್ಣಪುಟ್ಟ ಸ್ವತ್ತಿನ ಬಗೆಗೂ ಅವರ ಕಾಳಜಿ ಅನನ್ಯ! ಹಾಗೆಂದರೆ ಅವರೇ ಬಂದು ಎಲ್ಲವನ್ನೂ ಕಾಯುತ್ತಾರೆ ಎಂದರ್ಥವಲ್ಲ. ಅಲ್ಲಿನ ವ್ಯವಸ್ಥೆಯೇ ಹಾಗೆ, ಅಷ್ಟು ಸುರಕ್ಷಿತ. ಒಮ್ಮೆ ನಾನು ಪಬ್ಲಿಕ್ ಟೆಲಿಫೋನ್ ಬೂತ್ ಒಂದರಲ್ಲಿ ಯಾರಿಗೋ ಫೋನ್ ಮಾಡುವಾಗ, ಆ ನಂಬರುಗಳು ಸ್ಪಷ್ಟವಾಗಿ ಕಾಣಲಿ ಎಂದು ಅನೇಕರ ನಂಬರುಗಳನ್ನು ಗುರುತು ಹಾಕಿಟ್ಟುಕೊಂಡಿದ್ದ ಪುಟ್ಟಡೈರಿಯೊಂದನ್ನು ಟೆಲಿಫೋನು ಡಬ್ಬದ ಮೇಲೆ ಇಟ್ಟಿದ್ದೆ. ಫೋನು ಮಾಡಿ ಮಾತನಾಡಿದ ಮೇಲೆ ಮನೆಗೆ ಬಂದೆ. ಅನಂತರ ರಾತ್ರಿ ನನಗೆ ತಿಳಿದವರೊಬ್ಬರಿಗೆ ಫೋನು ಮಾಡಬೇಕು ಎಂದು ನನ್ನ ಡೈರಿ ಹುಡುಕಿದೆ. ಎಲ್ಲೂ ಇರಲಿಲ್ಲ. ನಿಧಾನಕ್ಕೆ ಯೋಚಿಸಿಕೊಂಡಾಗ ಅದನ್ನು ಟೆಲಿಫೋನು ಬೂತಿನಲ್ಲಿ ಮರೆತುಬಂದದ್ದು ನೆನಪಾಯಿತು. ನನಗೋ ಬಹಳ ಸಂಕಟವಾಯಿತು. ಬಹಳ ಮಂದಿಯ ಟೆಲಿಫೋನು ನಂಬರುಗಳಿದ್ದವು ಆ ಡೈರಿಯಲ್ಲಿ, ಅದು ನನಗೆ ಅತ್ಯಂತ ಅವಶ್ಯವಿದ್ದ ಡೈರಿಯಾಗಿತ್ತು. ಹೇಗಾದರೂ ಅದು ಸಿಗಬೇಕು ಎನ್ನುವ ಹಂಬಲ. ಆ ದಿನ ನಮ್ಮ ಮನೆಗೆ ನನ್ನ ಮಿತ್ರರಾದ ರಾಮಹಿತ್ ಅವರು ಫೋನು ಮಾಡಿದಾಗ, ನನ್ನ ಮರೆವಿನಿಂದಾದ ಡೈರಿಯ ನಷ್ಟವನ್ನು ನಾನು ಅವರಲ್ಲಿ ಹೇಳಿದೆ. ಅದಕ್ಕೆ ಅವರು ಅವರ ಧ್ವನಿಯಲ್ಲಿ ಯಾವ ಏರಿಳಿತವನ್ನೂ ತಾರದೆ, ಬಹಳ ಶಾಂತವಾಗಿ, “ಅದಕ್ಕೇಕೆ ಚಿಂತೆ ಮಾಥೂರ್‌ಜೀ,ಇಂತಹ ನಂಬರಿಗೆ ಫೋನು ಮಾಡಿ, ಅದು ‘ಲಾಸ್ಟ್ ಅಂಡ್ ಫೌಂಡ್ ಪ್ರಾಪರ್ಟಿ’ ಎನ್ನುವವರ ನಂಬರು. ಕಳೆದುಹೋದ, ಸಿಕ್ಕಿದಂಥ ವಸ್ತುಗಳ ಮಾಹಿತಿ ಅಲ್ಲಿ ಇರುತ್ತದೆ. ಆ ಫೋನು ದೂರುಗಳನ್ನು ತೆಗೆದುಕೊಳ್ಳುತ್ತದೆ. ನೀವು ಯಾವ ಬೂತಿನಿಂದ ಫೋನು ಮಾಡಿದ್ದಿರಿ, ಎಷ್ಟು ಹೊತ್ತಿಗೆ, ಯಾರಿಗೆ ಮಾಡಿದ್ದಿರಿ ಎನ್ನುವ ವಿವರದ ಜತೆಗೆ, ನೀವು ನಿಮ್ಮ ಡೈರಿ ಇಟ್ಟ ಜಾಗವನ್ನು ಹೇಳಿ, ನಿಮ್ಮ ಫೋನು ನಂಬರನ್ನು ಹೇಳಿಬಿಡಿ. ಅಲ್ಲಿ ಹಾಗೆ ಕಳೆದುಹೋಗಿದ್ದು ಸಿಕ್ಕಿದುದರ ಪಟ್ಟಿ ಇರುತ್ತದೆ. ಅದರಲ್ಲಿ ಖಂಡಿತವಾಗಿಯೂ ನಿಮ್ಮ ಡೈರಿ ಇರುತ್ತದೆ. ಬರೇ ಡೈರಿಯೇ ಅಲ್ಲ, ಹಾಗೆ, ಕಳೆದುಹೋದ ಅನೇಕ ಅಮೂಲ್ಯ ಪದಾರ್ಥಗಳೂ ಸಿಗುತ್ತವೆ. ಚಿಂತೆ ಮಾಡುವುದು ಬೇಡ. ಕೂಡಲೆ ಈ ನಂಬರಿಗೆ ಫೋನಿಸಿ” ಎಂದರು. ನನಗೆ ನೆಮ್ಮದಿ ಎನಿಸಿತು. ಸ್ವಲ್ಪ ನಿರಾಳವಾಯಿತು. ಉತ್ಸಾಹದಿಂದ ಅವರು ಕೊಟ್ಟ ನಂಬರಿಗೆ ಫೋನಿಸಿ ನಾನು ಕಳೆದುಕೊಂಡ ಡೈರಿಯ ಬಗೆಗಿನ ವಿವರಕೊಟ್ಟೆ. ಇದಾಗಿ ಮೂರು ದಿವಸಗಳು ಕಳೆದಿದ್ದವು. ನಾಲ್ಕನೆಯದಿನ ನನಗೆ ಫೋನು

ಬಂದಿತು. "ನೀವು ಮಾಥೂರ್‌ಜೀ ಏನು? ಹಾಗಾದರೆ ನಿಮ್ಮ ಡೈರಿ ಸಿಕ್ಕಿದೆ. ಈ ಆಫೀಸಿನಲ್ಲಿ ಅದನ್ನು ಇಡಲಾಗಿದೆ. ನಿಮ್ಮ ಗುರುತನ್ನು ಸರಿಯಾಗಿ ಹೇಳಿ, ಅದಕ್ಕೆ ಪುರಾವೆ ಒದಗಿಸಿ ನಿಮ್ಮ ಡೈರಿಯನ್ನು ನೀವು ಪಡೆದುಕೊಳ್ಳಿ" ಎಂದರು. ಆ ದಿನ ನನಗಾದ ಸಂತೋಷ ಅಷ್ಟಿಷ್ಟಲ್ಲ. 'ಭಗವನ್ ! ಅಷ್ಟು ನಂಬರುಗಳನ್ನು ಈಗ ಮತ್ತೆ ಬರೆದುಕೊಳ್ಳುವುದು ಹೇಗಪ್ಪಾ?' ಎನಿಸಿ ಅಸಾಧ್ಯ ಬೇಸರದಿಂದಿದ್ದ ನನಗೆ ಡೈರಿ ಸಿಕ್ಕ ವಿಷಯ ತಿಳಿದು ಬಹಳ ಖುಷಿಯಾಗಿತ್ತು. ಅನಂತರ ಅವರ ಸೂಚನೆಯಂತೆಯೇ ನನ್ನ ಬಗೆಗೆ ತಿಳಿಸಿ, ಡೈರಿ ತೆಗೆದುಕೊಂಡುಬಂದೆ. ಇಂತಹ ಸುವ್ಯವಸ್ಥೆ ಯನ್ನು ಅಲ್ಲಿ ಕಾಣಬಹುದು!

* * *

ಅಲ್ಲಿನ ಕಾನೂನು ವ್ಯವಸ್ಥೆಗೆ ಯಾರೂ ಹೊರತಲ್ಲ. ಲಾರ್ಡ್ ಮೌಂಟ್‌ಬ್ಯಾಟನ್‌ರ ಯಜಮಾನಿಕೆಯಲ್ಲಿ ಲಂಡನ್‌ನಲ್ಲಿ ಒಂದು ದೊಡ್ಡ ಹಾಲಿನ ಡೈರಿ ಇತ್ತು. ಈ ಹಾಲಿನ ಡೈರಿಯಲ್ಲಿ ಕೊಂಡ ಹಾಲಿನಲ್ಲಿ ನೀರಿನ ಅಂಶ ಹೆಚ್ಚಾಗಿ ಇದೆ ಎಂದು ಪರೀಕ್ಷಿಸಿ ತಿಳಿದ ಒಬ್ಬ ಮಹಿಳೆ ಸರ್ಕಾರಕ್ಕೆ ದೂರುಕೊಟ್ಟಳು. ಆಗ ಅದು ನಿಜವೆಂದು ಸಾಬೀತಾಗಿ, ಸರ್ಕಾರ ಮೌಂಟ್‌ಬ್ಯಾಟನ್‌ರಿಗೆ ೨೦ ಪೌಂಡುಗಳು ಶುಲ್ಕ ವಿಧಿಸಿತು!

ಇನ್ನೊಮ್ಮೆ ರಾಜಕುಮಾರ ಚಾರ್ಲ್ಸ್‌ರ ಅಕ್ಕ ರಾಜಕುಮಾರಿ ಆನಿಯವರು ಬಹಳ ವೇಗವಾಗಿ ಕಾರು ನಡೆಸುತ್ತಿದ್ದುದಕ್ಕೆ ಆಕೆಗೆ ದಂಡವಿಧಿಸಿ, ಕಾನೂನಿನಂತೆ ಆಕೆ ಆ ದಂಡ ಕಟ್ಟಿದರು. ಅಲ್ಲಿ ಮಹಾರಾಣಿಯವರೊಬ್ಬರ ಹೊರತು ಪಡಿಸಿ ಬೇರೆ ಎಲ್ಲರಿಗೂ ಒಂದೇ ಕಾನೂನು. ಮಹಾರಾಣಿಯವರು ಆ ರೀತಿ ತಪ್ಪಿಗೆ ಅವಕಾಶ ಕೊಡುವುದಿಲ್ಲ. ಅದಕ್ಕೆ ಅವರು ಆ ಗುಂಪಿಗೆ ಸೇರುವುದಿಲ್ಲ. ಅಂತೆಯೇ ಮಹಾರಾಣಿಯವರನ್ನು ಯಾರೂ ನಿಂದಿಸುವಂತಿಲ್ಲ.

ಅಲ್ಲಿ ಕಾನೂನು ಎಂದರೆ ಕಾನೂನು, ಅದಕ್ಕೆ ಯಾರೂ ಹೊರತಲ್ಲ ಎಂದಿದ್ದರೂ ಲಂಡನ್‌ನಲ್ಲಿರುವ 'ಹೈಡ್ ಪಾರ್ಕ್' ಎನ್ನುವ ಸ್ಥಳದಲ್ಲಿ ಸಾರ್ವಜನಿಕ ನಿಂದನೆಗೆ ಮುಕ್ತ ಅವಕಾಶ ಉಂಟು. ವಾರದಲ್ಲಿ ಒಂದು ದಿನ, ಭಾನುವಾರ ಬೆಳಿಗ್ಗೆ ೯ ರಿಂದ ಸಂಜೆ ೪ ರತನಕ ಅಲ್ಲಿರುವ ವೇದಿಕೆಯಲ್ಲಿ ನಿಂತು ಯಾರು ಯಾರನ್ನಾದರೂ ಮನಸ್ಸಿಗೆ ಬಂದಂತೆ ಹೀಯಾಳಿಸಬಹುದು. ಇದೊಂದು ವಿಚಿತ್ರ ರೀತಿಯ ಸ್ವತಂತ್ರ. ತೀವ್ರತರ ಭಾವನೆಗಳು ಮನಸ್ಸಿನಲ್ಲಿ ಸಮಾಧಿಯಾದಾಗ, ಅದು ಹೊರಬರಲೇ ಬೇಕು, ಅದಕ್ಕೆ ಒಂದು ದಾರಿಯೂ ಬೇಕು. ಅದಕ್ಕೆ ಬಹುಶಃ ಹೆಚ್ಚಿಗೆ ಭಾವುಕರಲ್ಲದ ಆ ಜನ ಇದೊಂದು ದಾರಿಯನ್ನು ಕಂಡುಕೊಂಡಿದ್ದಾರೆ. ಇದೊಂದು ರೀತಿಯ ಅಗ್ನಿಪರ್ವತದ ಸಿಡಿತದಂತೆ! ಹೀಗೆ ದೂಷಿಸುವುದನ್ನು ಕೇಳಲು ಅಲ್ಲಿನ ಜನ ಕಿಕ್ಕಿರಿದು ಸೇರುತ್ತಾರೆ. ಭಾರತದ ಶ್ರೀ ವಿ.ಕೆ. ಕೃಷ್ಣಮೆನನ್ ಅವರು ಬ್ರಿಟಿಷ್ ಸರ್ಕಾರವು ಭಾರತವನ್ನು ಆಳಿದುದರ ಬಗೆಗೆ ಬಹಳವಾಗಿ ಅಲ್ಲಿ ಹೀಯಾಳಿಸುತ್ತಿದ್ದರು! ನನಗೆ ನಿಜಕ್ಕೂ ಈ ವಿಷಯದ ಬಗ್ಗೆ ಒಂದು ರೀತಿಯ ಕುತೂಹಲ ಇತ್ತು. ಲಂಡನ್‌ಗೆ ಹೋದ ಮೇಲೆ ಈ ಕುತೂಹಲ ತಣಿಯಿತು. ಅಂತೂ ಇದೊಂದು ರೀತಿಯ ವಿಚಿತ್ರ ವಾಕ್‌ಸ್ವಾತಂತ್ರ್ಯ! ಅಲ್ಲಿನ ಸರ್ಕಾರ ಇದರ ಬಗ್ಗೆ ಏನೂ ಹೇಳುವುದಿಲ್ಲ, ಚಕಾರ ಎತ್ತುವುದಿಲ್ಲ!

ಇದರ ಜತೆಗೇ ಅಲ್ಲಿನ ಜನ ಸರ್ಕಾರ ತಮ್ಮನ್ನು ಹೇಗೆ ನೋಡಿಕೊಳ್ಳುತ್ತದೆ ಎಂದೂ ಗಮನ ಇಟ್ಟಿರುತ್ತಾರೆ. ನಾವು ನೀತಿ-ನಿಯಮಗಳನ್ನು ಅನುಸರಿಸಿದರೆ, ಸರ್ಕಾರವೂ ನಮ್ಮ ಹಿತಾಸಕ್ತಿಗಳ ಬಗ್ಗೆ ಗಮನ ವಹಿಸಬೇಕಲ್ಲವೇ ಎನ್ನುತ್ತಾರೆ. ಯಾವ ರೀತಿಯಲ್ಲೂ ನಿರ್ಲಕ್ಷ್ಯವನ್ನು ಅವರು ಸಹಿಸರು. ಅದು ನಿಜ, ನೀತಿನಿಯಮಗಳ ಪಾಲನೆಯಲ್ಲಿ ನಾವು ಸರ್ಕಾರವನ್ನು ಅನುಸರಿಸಿದರೆ ನಮ್ಮ ಹಿತಾಸಕ್ತಿಗಳ ಬಗೆಗೆ ಸರ್ಕಾರಕ್ಕೂ ಹೆಚ್ಚಿನ ಆಸಕ್ತಿ ಇರುತ್ತದೆ. ಅದು ನಮ್ಮನ್ನು ರಕ್ಷಿಸುತ್ತದೆ.

ಇದನ್ನೆಲ್ಲ ನಾನು ಕೇವಲ ಹೊಗಳಿಕೆಗಾಗಿ ಬರೆಯುತ್ತಿಲ್ಲ. ಪ್ರಪಂಚದಲ್ಲಿ ಎಲ್ಲೇ ಆಗಲಿ ಯಾವುದೇ ಒಳ್ಳೆಯದು ಕಂಡುಬಂದರೂ ಅದನ್ನು ನಾವೂ ಅನುಸರಿಸಲು ಪ್ರಯತ್ನಿಸ ಬೇಕು. ನಮ್ಮ ಮನೋಭಾವ 'ಹಂಸ-ಕ್ಷೀರ' ನ್ಯಾಯದಂತಿರಬೇಕು. ಒಳ್ಳೆಯದನ್ನು ಯಾರು ಮಾಡಿದರೇನು, ಅದನ್ನು ನಾವೂ ಅನುಸರಿಸಿದರಾಯಿತು, ಅದರಲ್ಲಿ ತಪ್ಪೇನು ಎನ್ನುವುದು ನನ್ನ ದೃಢ ಅಭಿಪ್ರಾಯ. ಎಲ್ಲವೂ ನಮಗೆ ಗೊತ್ತಿರುವುದಿಲ್ಲವಷ್ಟೆ? ಆದರೆ ನಾವು ಕಲಿಯುವುದು ಎಂದು? ದಿನೇ ದಿನೇ ಬೆಳೆಯುತ್ತಿರುವ ಜನಸಂಖ್ಯೆಯನ್ನು ನೋಡಿದಾಗ, ನಮ್ಮ ಮುಂದಿನ ಪೀಳಿಗೆಗೆ ನಾವು ಏನು ಸಿದ್ಧ ಮಾಡಿಟ್ಟಿದ್ದೇವೆ ಎಂದು ನಮ್ಮನ್ನು ನಾವೇ ಪ್ರಶ್ನಿಸಿಕೊಂಡರೆ, ಸಿಗುವ ಉತ್ತರ ವರ್ಣದ್ವೇಷ, ಅವ್ಯವಸ್ಥೆ, ಅಶಿಸ್ತು, ಲಂಚ, ಪರಸ್ಪರ ಅಪನಂಬಿಕೆ ಇತ್ಯಾದಿ ಇತ್ಯಾದಿ. ಒಟ್ಟಾರೆ ನೆಮ್ಮದಿ ಇಲ್ಲದ ಬಾಳ್ವೆ!! ಎಷ್ಟು ವಿಷಾದನೀಯ ಇದು!!

ಎಲ್. ಎಂ. ಸಿಂಘ್ವಿ

ಪ್ರತಿಭಾನ್ವಿತ ವ್ಯಕ್ತಿಗಳು ಯಾವ ಕಾರ್ಯಕ್ಷೇತ್ರಕ್ಕಿಳಿದರೂ ಅವರ ಕ್ಷಮತೆ, ಕಾರ್ಯದಕ್ಷತೆಯಲ್ಲಿ ವ್ಯತ್ಯಾಸ ಇರುವುದಿಲ್ಲ. ಅದಕ್ಕೇ ಬಹುಶಃ ಅಂತಹ ಪ್ರಖರ ಬುದ್ಧಿ ಇರುವವರಿಗೆ ವಿವಿಧ ಕಾರ್ಯಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವ ಅವಕಾಶ ಸಿಕ್ಕುವುದು. ಅರ್ಹತೆ ಇದ್ದಾಗ ಅವಕಾಶಗಳು ಹುಡುಕಿಕೊಂಡು ಬರುವುವು. ಅಂತಹ ಪ್ರತಿಭಾವಂತರಲ್ಲಿ ಶ್ರೀ ಎಲ್.ಎಂ. ಸಿಂಘ್ವಿಯವರೂ ಒಬ್ಬರು. ಅಪರೂಪ ವ್ಯಕ್ತಿತ್ವದ ಶ್ರೀ ಎಲ್.ಎಂ. ಸಿಂಘ್ವಿಯವರು ಶ್ರೀ ಕೆ.ಎಂ. ಮುನ್ಷಿಯವರಿಗೆ ಬಹಳ ಬೇಕಾಗಿದ್ದವರು, ಮುನ್ಷಿಯವರ ಜತೆ ಕೆಲಸ ಮಾಡಿದ್ದವರು. ಶ್ರೀ ಸಿಂಘ್ವಿಯವರು ಬಹಳ ದಕ್ಷ ವಕೀಲರು, ಸಾಮಾನ್ಯವಾಗಿ ಐ.ಎ.ಎಸ್. ಮಾಡಿದ ಆ ಶ್ರೇಣಿಯವರು ಮಾತ್ರ

ಹೈ ಕಮಿಷನರ್ ಆಗುವುದು. ಆದರೆ ಶ್ರೀ ಸಿಂಘ್ವಿಯವರು ಘನ ವಿದ್ವಾಂಸರು, ಭಾರತೀಯ ಸಂಸ್ಕೃತಿಯನ್ನು ಬಹಳ ಚೆನ್ನಾಗಿ ಅರ್ಥಮಾಡಿಕೊಂಡು, ತಿಳಿದುಕೊಂಡಿರುವವರು. ಅದಕ್ಕೇ ಅವರ ಈ ಅರ್ಹತೆಯನ್ನು ಗಮನಿಸಿ, ಅವರನ್ನು ಬ್ರಿಟನ್‌ಗೆ ಹೈ ಕಮಿಷನರ್ ಆಗಿ ನೇಮಕ ಮಾಡಲಾಯಿತು. ವಿದ್ಯಾಭವನದ ಬಗ್ಗೆ ಅವರಿಗೆ ವಿಶೇಷ ಪ್ರೀತಿ. ಮುಂಚಿನಿಂದಲೂ ಮುನ್ಷಿಯವರ ಜತೆ ಕೆಲಸ ಮಾಡಿ ಸಿಂಘ್ವಿಯವರಿಗೆ ವಿದ್ಯಾಭವನ ಬಲು ಪ್ರಿಯ. ಅಲ್ಲಿನ (ಲಂಡನ್‌ನ) ಹೈ ಕಮಿಷನರೇ ಅಲ್ಲಿನ ಭವನ ಕೇಂದ್ರದ ಮಹಾಪೋಷಕರು. ಶ್ರೀ ಸಿಂಘ್ವಿಯವರು ಹೈ ಕಮಿಷನರಾದ ಮೇಲಂತೂ ಭವನಕ್ಕೂ ಅವರಿಗೂ ಬಲು ಹೆಚ್ಚಿನ ನಂಟಾಯಿತು. ವೈಯಕ್ತಿಕವಾಗಿಯೇ ನಮಗೂ ಶ್ರೀ ಸಿಂಘ್ವಿಯವರಿಗೂ ಬಹಳ ಸ್ನೇಹ-ವಿಶ್ವಾಸ; ಅವರು ಲಂಡನ್‌ಗೆ ಹೈ ಕಮಿಷನರ್ ಆಗಿ ಬಂದ ಮೇಲೆ ಮತ್ತೂ ಹೆಚ್ಚಾಯಿತು.

ಶ್ರೀ ಸಿಂಘ್ವಿಯವರು ಆಶುಕವಿ. ಹಲವಾರು ಕವಿತೆಗಳನ್ನು ಬರೆದು, ಸುಮಾರು ಹತ್ತು-ಹನ್ನೆರಡು ಸಂಕಲನಗಳನ್ನು ಹೊರತಂದಿರುವವರು. ಅವರ ಪತ್ನಿ ಕಮಲಾಸಿಂಘ್ವಿಯವರೂ ಕವಯಿತ್ರಿ. ಬಹಳ ಉತ್ತಮ ವಾಗ್ಮಿಯಾಗಿದ್ದ ಸಿಂಘ್ವಿಯವರ ಪೋಷಕತ್ವ ಅಲ್ಲಿ ನಮಗೆ ಒಂದು ದೊಡ್ಡ ಬಲವಾಯಿತು. ಅವರು ಸುಮಾರು ಆರು ವರ್ಷ, ಮೂರು ತಿಂಗಳ ಕಾಲ ಹೈ ಕಮಿಷನರಾಗಿ ಅಲ್ಲಿದ್ದದ್ದು. ಪ್ರತಿಸಾರಿಯೂ ಗಣರಾಜ್ಯೋತ್ಸವ ಹಾಗೂ ಸ್ವತಂತ್ರ ದಿನಾಚರಣೆಯನ್ನು ಆಚರಿಸುವುದಕ್ಕಾಗಿ ಅವರು ವಿದ್ಯಾಭವನಕ್ಕೇ ಬರುತ್ತಿದ್ದರು! ಅಂತೆಯೇ ವಿದ್ಯಾಭವನದ ಚಟುವಟಿಕೆಗಳು, ಅಲ್ಲಿಗೆ ಬರುತ್ತಿದ್ದ ಮಕ್ಕಳು, ಭವನದ ಕಮಿಟಿಯ ಸದಸ್ಯರುಗಳು, ದಾನಿಗಳು ಇವರನ್ನೆಲ್ಲ ನೋಡಿದ ಸಿಂಘ್ವಿಯವರು "ಇಲ್ಲಿನ ವಿದ್ಯಾಭವನಕ್ಕೆ ಇರುವ ಜನಬಲವೇ ಒಂದು ದೊಡ್ಡ ಸಂಪತ್ತು. ಅವರ ಸ್ನೇಹವೇ ವಿದ್ಯಾಭವನಕ್ಕೆ ಸಿರಿತನ" ಎಂದು ಕೊಂಡಾಡಿದರು.

ಅಂತೆಯೇ ಅವರೂ ಭವನದ ಕಾರ್ಯಕ್ರಮಗಳಿಗೆ ಪೂರಕ ವಾಗುವಂಥ ಕಾರ್ಯಕ್ರಮಗಳನ್ನು ಮಾಡುತ್ತಿದ್ದರು. ತಮ್ಮ ಹೈಕಮಿಷನರ್ ನಿವಾಸದಲ್ಲಿ ಸರ್ವಧರ್ಮದ ಬಗೆಗೆ ಸೆಮಿನಾರನ್ನು ನಡೆಸುತ್ತಿದ್ದರು. ಸ್ವತಃ ಸಿಂಘ್ವಿಯವರಿಗೇ ಬಂಗಾಲಿ-ಗುಜರಾತಿ ಭಾಷೆಗಳು ಬಹಳ ಚೆನ್ನಾಗಿ ಬರುತ್ತಿದ್ದವು. ಮಧ್ಯಪ್ರದೇಶದ ಸಥ್ನಾ ಕಡೆಯ ಮಾರ್ವಾಡೀ ಜನಾಂಗಕ್ಕೆ ಸೇರಿದ ಶ್ರೀ ಲಕ್ಷ್ಮಿಮಲ್ ಸಿಂಘ್ವಿಯವರಿಗೆ ಹಿಂದಿ, ಇಂಗ್ಲಿಷ್ ಭಾಷೆಗಳ ಮೇಲೂ ಸಾಕಷ್ಟು ಹಿಡಿತವಿದ್ದು , ಬಹಳ ಒಳ್ಳೆಯ ಭಾಷಣಗಳನ್ನು ಕೊಡುತ್ತಿದ್ದರು. ಅವರ ಭಾಷಣಗಳಿಗೆ ಲಂಡನ್‌ನಲ್ಲಿ ಬಹಳ ಜನರೂ ಸೇರುತ್ತಿದ್ದರು.

ಶ್ರೀ ಸಿಂಘ್ವಿಯವರು ಮಾಡಿದ ಮತ್ತೊಂದು ಸಾಧನೆ ಎಂದರೆ, ಅವರು ಅಲ್ಲಿ ಹೈ ಕಮಿಷನರಾಗಿ ಇದ್ದಾಗ ಗಾಂಧೀಜಿಯ ೧೨೫ನೇ ವರ್ಷದ ಹುಟ್ಟು ಹಬ್ಬ ಬಂದಿತು. ಆಗ ಶ್ರೀ ಸಿಂಘ್ವಿಯವರು ಈ ಸಂದರ್ಭವನ್ನು ಉಪಯೋಗಿಸಿಕೊಂಡು 'ಗಾಂಧೀ ತತ್ತ್ವ'ವನ್ನೂ, 'ಗಾಂಧೀ ಸಂದೇಶ'ವನ್ನೂ ಎಲ್ಲೆಡೆಗೆ ಹರಡುವ ಉದ್ದೇಶದಿಂದ ಗಾಂದೀಜಿಯ ೧೨೫ ಪ್ರತಿಮೆಗಳನ್ನು (ಒಂದೊಂದು ಮರವಾಗುವ ಸಸಿ ನೆಟ್ಟು, ಅದರ ಜತೆಗೆ ಮೂರ್ತಿಯನ್ನು) ೧೨೫ ಕಡೆಗಳಲ್ಲಿ ಪ್ರತಿಷ್ಠಾಪನೆ ಮಾಡಿದರು!! ಈ ಪ್ರತಿಮೆ ಸುಮಾರು ೧೫ ಇಂಚಿನದಾಗಿದ್ದಿತು. ಈ ಪ್ರತಿಮೆಗಳನ್ನು ಭಾರತದವರೇ ಆದ ಶ್ರೀ ರಘುವೀರ್ ಎನ್ನುವವರು ಈ ದೊಡ್ಡ ಕಾರ್ಯಕ್ರಮಕ್ಕಾಗಿ ತಾವೇ ಮಾಡಿಸಿಕೊಟ್ಟರು. ಒಂದೊಂದು ಪ್ರತಿಮೆಗೂ ಸುಮಾರೂ ೧೫೦£ ಎಂದರೆ ಸುಮಾರು ೧೦,೦೦೦ ರೂಪಾಯಿಗಳಾಗಿದ್ದಿತು. ಹೀಗೆ ಮರ ನೆಟ್ಟು ಗಾಂಧೀಜಿಯ ಪ್ರತಿಮೆಯನ್ನು ೧೨೫ ವಿವಿಧ ಕಡೆಗಳಲ್ಲಿ ಪ್ರತಿಷ್ಠಾಪಿಸುವ ಪ್ರತಿಯೊಂದು ಕಾರ್ಯಕ್ರಮಕ್ಕೂ ಬ್ರಿಟನ್ನಿನ ರಾಜಮನೆತನದವರು ಒಬ್ಬೊಬ್ಬರು ಒಂದೊಂದು ಕಾರ್ಯಕ್ರಮಕ್ಕೆ ಬಂದು ಉಪಸ್ಥಿತರಿದ್ದರು! ನಿಜಕ್ಕೂ ಇದೊಂದು ಚರಿತ್ರಾರ್ಹ ಸಂದರ್ಭ ಎನಿಸಿತ್ತು! ಆ ದಿನ ಭವನದ ಎಲ್ಲ ಸದಸ್ಯರುಗಳನ್ನೂ ಬರ ಮಾಡುತ್ತಿದ್ದರು. ಗಾಂಧೀಜಿ ಲಂಡನ್‌ನಲ್ಲಿದ್ದ ಜಾಗದಲ್ಲೂ ಒಂದು ಮೂರ್ತಿಯನ್ನಿಟ್ಟು ಗಿಡವನ್ನು ನೆಡಲಾಯಿತು. ಅಂತೂ ಶ್ರೀ ಸಿಂಘ್ವಿಯವರು ತಮ್ಮ ಅಧಿಕಾರಾವಧಿಯಲ್ಲಿ ಭವನಕ್ಕೆ ಮಾಡಿದ ಸಹಾಯ, ತೋರಿದ ಅಕ್ಕರೆ ಬಹಳ. ಅಲ್ಲವೇ ಮತ್ತೆ? ಭವನದ ನಿರ್ಮಾತೃವಾದರೂ ಯಾರು? ಕಾನ್ಸ್ಟಿಟ್ಯೂಷನ್ ಎಸೆಂಬ್ಲಿಯಲ್ಲಿ ರಿಫಾರ್ಮ್ ಮಾಡಿದಾಗ ಶ್ರೀ ಸಿಂಘ್ವಿಯವರು ಶ್ರೀ ಕೆ.ಎಂ. ಮುನ್ಷಿಯವರ ಮಾರ್ಗದರ್ಶನದಲ್ಲಿ ಕೆಲಸ ಮಾಡಿದವರು! ಶ್ರೀ ಮುನ್ಷಿಯವರನ್ನು ಶ್ರೀ ಸಿಂಘ್ವಿಯವರು 'ತಮ್ಮ ಪೂಜ್ಯ ಗುರುಗಳು' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಭವನದ ಮೇಲಿನ ಅವರ ವಿಶೇಷ ಮಮತೆಗೆ ಇದೂ ಒಂದು ಮುಖ್ಯ ಕಾರಣ. ಜತೆಗೆ, ಅವರಾದರೂ ಎಂಥ ವ್ಯಕ್ತಿ? ನಾನು ಮೊದಲೇ ಹೇಳಿರುವ ಹಾಗೆ ಐ.ಎ.ಎಸ್. ಅಲ್ಲದ ವ್ಯಕ್ತಿಯೊಬ್ಬರು, ಬಹಳ ಪ್ರಾಮುಖ್ಯ ಗಳಿಸಿರುವ ಪ್ರಮುಖ ದೇಶಗಳಲ್ಲಿ ಒಂದಾದ ಬ್ರಿಟನ್‌ಗೆ, ಭಾರತದ ಎಲ್ಲ ಪಕ್ಷಗಳೂ ಬೆಂಬಲಿಸಿ, ಸರ್ವಾನುಮತದಿಂದ ಹೈ ಕಮಿಷನರನ್ನಾಗಿ ಮಾಡಲು ಒಪ್ಪಿದುದು ಸಾಮಾನ್ಯ ಸಂಗತಿಯಲ್ಲ! ಅಂಥ ಉನ್ನತ ಮಟ್ಟದ ಅರ್ಹತೆ ಗಳಿಸಿದ್ದವರು! ಈಗ ಶ್ರೀ ಎಲ್.ಎಂ. ಸಿಂಘ್ವಿಯವರು ಅಂತರರಾಷ್ಟ್ರೀಯ ವಿದ್ಯಾಭವನ ಕೇಂದ್ರಗಳ ಅಧ್ಯಕ್ಷರು, ಅವರು ಎಲ್ಲೇ ಹೋದರೂ ವಿದ್ಯಾಭವನದ ಸಂದೇಶಗಳನ್ನು ಹೇಳುವವರು, ಭವನದ ನಮ್ಮ ಬಳಗಕ್ಕೆ ಶ್ರೀ ಸಿಂಘ್ವಿಯವರು ಹಿರಿಯಣ್ಣನಿದ್ದಂತೆ!! ಇಂಥ ಸಿಂಘ್ವಿಯವರ ಪರಿಚಯ, ಸ್ನೇಹವಾಗಿ ಅವರ ವಿಶ್ವಾಸಗಳಿಸಿದುದೂ ಭವನದಿಂದಲೇ ಎಂದು ನನ್ನ ನಂಬಿಕೆ! ಅದಕ್ಕೆ ನನಗೆ 'ಭವನ' ಹಾಗೂ ಶ್ರೀ 'ಸಿಂಘ್ವಿ', ಇಬ್ಬರ ಮೇಲೆಯೂ ಬಹಳ ಹೆಮ್ಮೆ.

ಒಬ್ಬರನ್ನೊಬ್ಬರು ಹೋಲಿಸಲು ಹೇಳುವುದಲ್ಲ, ಈಗ ನಾನು ಹೇಳುವ ಸಮಾಚಾರ. ಯಾರಿಗೆ ಯಾರೂ ಹೋಲಿಕೆಯಲ್ಲ. ಅವರವರ ವೈಶಿಷ್ಟ್ಯ ಅವರವರಿಗೆ! ಆದರೂ ಸಂದರ್ಭೋಚಿತವಾಗಿ, ಅಲ್ಲಿ ನಡೆದ ಒಂದು ಘಟನೆಯ ಬಗೆಗೆ ಹೇಳಿದರೆ ಇಲ್ಲಿ ತಪ್ಪಾಗಲಾರದು. ನಿಜವಾಗಿಯೂ ನಡೆದುದಾದ್ದರಿಂದ ನನ್ನ ಓದುಗರಿಗೆ ಹೇಳಿಕೊಳ್ಳುವ ಮನಸ್ಸು ಅಷ್ಟೆ. ಶ್ರೀ ಸಿಂಘ್ವಿಯವರು ಹೈ ಕಮಿಷನರಾಗಿ ಬರುವ ಮುನ್ನಾವರ್ಷಗಳಲ್ಲಿ ಇತರ ಮತದ ವ್ಯಕ್ತಿಯೊಬ್ಬರು ಲಂಡನ್ ಕಮಿಷನರಾಗಿ ಬಂದರು. ಅವರು ಬಂದು ಬಹಳ ದಿನಗಳಾದರೂ ಭವನಕ್ಕೆ ಒಮ್ಮೆಯೂ ಭೇಟಿ ನೀಡಲಿಲ್ಲ. ಹೈ ಕಮಿಷನರೇ ಭವನದ ಪೋಷಕರು, ಅಂಥದರಲ್ಲಿ ಅವರು ಒಮ್ಮೆಯೂ ವಿದ್ಯಾಭವನಕ್ಕೆ ಬರದೆ ಇದ್ದುದು ನನಗೂ, ನಮ್ಮ ದಲಾಲ್‌ಜೀಗೂ ಸ್ವಲ್ಪ ಕಸಿವಿಸಿ ಉಂಟು ಮಾಡಿತು. ನಾವೇ ಕೊನೆಗೆ ಒಂದು ತೀರ್ಮಾನಕ್ಕೆ ಬಂದೆವು. ನಾವೇ ಹೋಗಿ ಅವರನ್ನು ಮತ್ತೊಮ್ಮೆ ಕೇಳಿ ಆಹ್ವಾನಿಸುವಾ ಎಂದು. (ಸಾಮಾನ್ಯವಾಗಿ ಹೈ ಕಮಿಷನರುಗಳು ಬಂದರೆ ನಾನು, ದಲಾಲ್‌ಜೀ ಹೋಗಿ ಅವರನ್ನು ಅಭಿನಂದಿಸಿ, ಭವನಕ್ಕೆ ಆಹ್ವಾನಿಸಿ ಬರುವುದು ರೂಢಿ. ನಾವು ನಮ್ಮ ಕರ್ತವ್ಯಕ್ಕೆ ಚ್ಯುತಿಯಾಗದಂತೆ ಹೋಗಿ ಆಹ್ವಾನಿಸಿದ್ದರೂ ಆತ ಬಂದಿರಲಿಲ್ಲ. ವಿದ್ಯಾಭವನದ ಯಾವ ಕಾರ್ಯಕ್ರಮಕ್ಕೆ ಆಹ್ವಾನಿಸಿದರೂ ಆತ ಬರುತ್ತಿರಲಿಲ್ಲ. ಸ್ವಾಭಾವಿಕ ವಾಗಿಯೇ ಅವರ ಈ ವರ್ತನೆ ನನಗೆ, ದಲಾಲ್‌ಜೀಗೆ ಚಿಂತೆ ಉಂಟು ಮಾಡಿತ್ತು!) ನಾವು ಅನುಮಾನದಿಂದಲೇ ಹೈ ಕಮಿಷನರ ನಿವಾಸಕ್ಕೆ ಹೋದೆವು. "ನಮ್ಮದೊಂದು ಕಾರ್ಯಕ್ರಮ ಇದೆ. ಖಂಡಿತಾ ತಾವು ಬರಬೇಕು" ಎಂದು ಆಹ್ವಾನಿಸಿದೆವು. ಆತ ಬಿಗುವಾಗಿಯೇ "ಆಗಲೀ, ನೋಡುವಾ" ಎಂದರು. ಕೊನೆಗೆ ತಡೆಯಲಾರದೆ ನಾನು, "ಸರ್, ತಾವೇಕೆ ಹೀಗೆನ್ನುತ್ತೀರಿ? ತಾವೇ ಭವನದ ಮಹಾಪೋಷಕರು. ಅಂಥದರಲ್ಲಿ ತಾವು ಒಮ್ಮೆಯೂ ಈವರೆಗೆ ವಿದ್ಯಾಭವನಕ್ಕೆ ಭೇಟಿ ನೀಡಿಲ್ಲ. ನಾವು ಕಾರಣ ತಿಳಿದುಕೊಳ್ಳಬಹುದೇ?" ಎಂದು ಪ್ರಶ್ನಿಸಿಯೇ ಬಿಟ್ಟೆ. ಏಕೆಂದರೆ ಅವರ ವರ್ತನೆಯಲ್ಲಿಯೇ ತಿಳಿಯುತ್ತಿತ್ತು, ಅವರಿಗೆ ಭವನದ ಮೇಲೆ ಪ್ರೀತಿ ಇಲ್ಲ ಎಂದು. ಅದಕ್ಕೆ ಆ ಕಮಿಷನರು, "ಏನಿದು? ನಿಮ್ಮ ಕಮಿಟಿಯಲ್ಲಿ ಒಬ್ಬರಾದರೂ ನಮ್ಮ ಮತಕ್ಕೆ ಸೇರಿದ ವ್ಯಕ್ತಿ ಇಲ್ಲವಲ್ಲ?" ಎನ್ನುವುದೇ? ಕೂಡಲೆ ಅವರ ಈ ಅಸಮಾಧಾನಕ್ಕೆ ಕಾರಣ ತಿಳಿಯಿತು. ತಕ್ಷಣವೇ ನಾನು ನಮ್ಮ ಎಕ್ಸಿಕ್ಯೂಟಿವ್ ಕಮಿಟಿಯ ಸದಸ್ಯರುಗಳ ಪಟ್ಟಿಯಲ್ಲಿದ್ದ ಒಬ್ಬರ ಹೆಸರನ್ನು ತೋರಿಸಿ, "ನೋಡಿ ಸರ್, ಇವರು ನಿಮ್ಮ ಮತದವರೇ. ಇನ್ನೂ ಬೇರೆ ಕಮಿಟಿಗಳಲ್ಲಿ ಒಬ್ಬಿಬ್ಬರು ಇದ್ದಾರೆ!" ಎಂದೆ. ನಮ್ಮ ದಲಾಲ್‌ಜೀಗೆ ಅವರ ಈ ಪ್ರಶ್ನೆ ಬಹಳ ನಿರಾಸೆಯನ್ನುಂಟು ಮಾಡಿತ್ತು. "ಏನಿವರು, ಈ ಪ್ರಶ್ನೆಯನ್ನು ಕೇಳುತ್ತಾರಲ್ಲ? ಭವನ ಪ್ರತಿನಿಧಿಸುವುದು ಇಡೀ ಭಾರತವನ್ನು ತಾನೇ? ಅದರಲ್ಲಿ ಆ ಮತ-ಈ ಮತ ಎಂದು ಇವರಿಗೇಕೆ ಚಿಂತೆ? ಸಂಸ್ಕೃತಿಯನ್ನು ಸಾರುವ ಸಂಸ್ಥೆಯೊಂದು ಅಂತರರಾಷ್ಟ್ರೀಯ ಖ್ಯಾತಿಗಳಿಸಿದ್ದರೂ ಈ ಸಣ್ಣಪುಟ್ಟ ಪ್ರಶ್ನೆಗಳನ್ನು ಎದುರಿಸುವುದು ಎಂತಹ ನ್ಯಾಯ?" ಎಂದು ಪೇಚಾಡಿಕೊಂಡರು. ಉನ್ನತ ಸ್ಥಾನಗಳನ್ನು ಅಲಂಕರಿಸುವವರು ಹೀಗೂ ಇರುತ್ತಾರೆ!!

ದಲಾಲ್‌ಜೀ

ಹೀಗೆ, ನಮ್ಮ ದಲಾಲ್‌ಜೀ, ಅದೆಷ್ಟೋ ಬೇಸರವಾದರೂ, ಎಂದೂ ಸಂಯಮ ಮೀರಿ ಒಂದೂ ಹೆಚ್ಚಿಗೆ ಮಾತಾಡಿದವರಲ್ಲ! ಅವರ ಸಂಪರ್ಕ ನನಗೆ ಬಹಳ ವಿಷಯಗಳನ್ನೇ ಕಲಿಸಿತು ಎಂದು ನಾನು ಈ ಹಿಂದೆಯೇ ಹೇಳಿರುವೆನಷ್ಟೇ? ಆದರೂ ದಲಾಲ್‌ಜೀಯ ವಿಷಯದಲ್ಲಿ ನಾನು ಯಾವುದಾದರೂ ಒಂದನ್ನು ಹೇಳದೇ ಹೋದರೂ ನನಗೆ ಅದು ಸಮಾಧಾನ ತರದು ! ಏಕೆಂದರೆ ಅವರದು ಅದ್ಭುತ ಆದರ್ಶ! ಯಾರನ್ನು ಸಂತೋಷಪಡಿಸಲೂ ಎಂದೂ ಸುಳ್ಳು ಹೇಳುವುದು ಅವರಿಗೆ ಹಿಡಿಸದು. ಉತ್ಪ್ರೇಕ್ಷೆ, ಅತಿಶಯೋಕ್ತಿಯನ್ನೇ ಅವರು ಅರಿಯರು. ಯಾವುದಾದರೂ ಸಮಾರಂಭವಾದಾಗ 'ಸಭಾಂಗಣ ಪೂರ್ತಿ ತುಂಬಿತ್ತು' ಎಂದು ನಾವು ಸಂತೋಷದಿಂದ ಹೇಳಿಕೊಂಡರೆ, ದಲಾಲ್‌ಜೀ "ಇಲ್ಲ, ಮಾಥೂರ್‌ಜೀ, ಇನ್ನೂ ೫೦-೬೦ ಮಂದಿ ಕುಳಿತುಕೊಳ್ಳ ಬಹುದಾದಷ್ಟು ಸ್ಥಳಾವಕಾಶ ವಿದ್ದಿತು!" ಎನ್ನುವಷ್ಟು ಸತ್ಯನಿಷ್ಠರು! ಯಾರಿಗೇ ಆಗಲಿ ಏನನ್ನು ಹೇಳಿಕೊಡಬೇಕಾದರೂ ಅವರಿಗೆ ಕೋಪ ಬರದ ರೀತಿಯಲ್ಲಿ ಹೇಳಿಕೊಟ್ಟು ಕಲಿಸುವುದು ಅವರದೇ ವಿಶೇಷ ! ತಾವು ಎಷ್ಟೋ ಸಂಸ್ಥೆಗಳ ನಾಯಕರಾಗಿ ಜವಾಬ್ದಾರಿ ಹೊತ್ತು ಕೆಲಸ ಮಾಡುತ್ತಿದ್ದರೂ ಒಂದು ದಿನವೂ ಯಾವ ವಿಷಯಕ್ಕೂ ಉದ್ವೇಗಕ್ಕೆ ಒಳಗಾದವರಲ್ಲ. ಒಂದಕ್ಕೆ ಮತ್ತೊಂದು ಸಂಸ್ಥೆಯ ವಿಷಯವನ್ನು ಬೆರೆಸುತ್ತಿರಲಿಲ್ಲ. ಅಷ್ಟೆಲ್ಲ ಕೆಲಸಗಳ ಒತ್ತಡವಿದ್ದರೂ ಮನೆಯಲ್ಲಿ ಶ್ರೀಮತಿ ಕೇ ಅವರ ಪ್ರೀತಿಯ ಪತಿ ಅವರು ! ಒಮ್ಮೆ ಅವರು ಮನೆಯಲ್ಲಿ ತಮ್ಮ ಪತ್ನಿಗೆ ಸಹಾಯ ಮಾಡುವುದಾಗಿ ಹೇಳಿದಾಗ, ನಾನು ಆಶ್ಚರ್ಯದಿಂದ ಮೂಕನಾಗಿದ್ದೆ! "ಇಲ್ಲ ಮಾಥೂರ್‌ಜೀ, ಅವಳಿಗೂ ಇತರ ಕೆಲಸಗಳಿವೆ ಅಲ್ಲವೇ? ಅತಿಥಿಗಳು ಬಂದಾಗ ನಾನು ಅವಳಿಗೆ ಪಾತ್ರೆಗಳನ್ನು ಶುಚಿ ಮಾಡುವುದರಲ್ಲಿ ಸಹಾಯ ಮಾಡುತ್ತೇನೆ. ಅದು ನಮ್ಮ ಮನೆಯಲ್ಲವೇ?" ಎನ್ನುತ್ತಿದ್ದ ಅವರ ಸರಳತೆ ನನಗೆ ಮೋಡಿ ಹಾಕಿತ್ತು. ಅವರ ಸಹನಾಶೀಲತೆಗೆ ಒಂದು ಉದಾಹರಣೆಯನ್ನು ಇಲ್ಲಿ ಹೇಳಬೇಕು...

ಒಮ್ಮೆ ಏರ್ ಇಂಡಿಯಾದವರು ಧರಣಿ ಹೂಡಿದರು. ಸುಮಾರು ಏಳು-ಎಂಟು ದಿನಗಳ ಕಾಲ ನಡೆದ ಧರಣಿಯಲ್ಲಿ ಸುಮಾರು ಕೋಟಿ ರೂಪಾಯಿಗಳು ನಷ್ಟವಾಗಿದ್ದಿತು. ನಮ್ಮ ದಲಾಲ್‌ಜೀ ಏರ್ ಇಂಡಿಯಾದ ಅಧ್ಯಕ್ಷರಾಗಿದ್ದರಷ್ಟೇ? ನಾನು ದಿನವೂ ಪೇಪರೋದುವುದು, 'ದಲಾಲ್‌ಜೀಗೆ ಅದೆಷ್ಟು ಟೆನ್ಷನ್ ಇರುತ್ತದೆ,

ನಾನೇಕೆ ಅವರಿಗೆ ತೊಂದರೆ ಕೊಡುವುದು,' ಎಂದುಕೊಳ್ಳುವುದು, ಸುಮ್ಮನಾಗುವುದು. ಹೀಗೆ ಏಳು-ಎಂಟು ದಿನಗಳು ಕಳೆದವು. ನಾನು ಫೋನನ್ನೂ ಮಾಡಿರಲಿಲ್ಲ. ಸಾಮಾನ್ಯವಾಗಿ ನಾನು ಏನು ಮಾಡಿದರೂ ದಲಾಲ್‌ಜೀಗೆ ಹೇಳಿಯೇ ಮಾಡುವುದು ನನ್ನ ಅಭ್ಯಾಸ. ನಾನು ಏನು ಮಾಡಿದರೂ'ಏಕೆ ಮಾಡಿದಿರಿ ?' ಎಂದು, ಎಂದೂ ಕೇಳದೆ ಇರುವುದು ದಲಾಲ್‌ಜೀಯ ಅಭ್ಯಾಸ !! ಆದರೆ ಅವರು ಸದೈವ ನನ್ನನ್ನು ಗಮನಿಸುತ್ತಿದ್ದುದಂತೂ ಹೌದು.

ಅಂತೂ ಈ ಮೌನ ಸಾಕು ಎನಿಸಿ, ಏನಾದರೂ ಆಗಲಿ ಎಂದು ನಾನೇ ಆ ಬೆಳಗ್ಗೆ ಅವರಿಗೆ ಫೋನು ಮಾಡಿದೆ. "ಅರೆ, ಮಾಥೂರ್‌ಜೀ! ಇಷ್ಟು ದಿನ ನೀವು ನನ್ನ ಕೂಡ ಮಾತನಾಡಲಿಲ್ಲ? ಏನು ಸಮಾಚಾರ? ನೀವು ಆರಾಮವಾಗಿದ್ದೀರಿ ತಾನೆ?" ಎಂದು ನನ್ನನ್ನೇ ಕೇಳಿದರು ದಲಾಲ್‌ಜೀ! ನಮ್ಮ ಸ್ವಭಾವ ಸಾಮಾನ್ಯವಾಗಿ ಅದಲ್ಲ, ನಾವು ಇನ್ನೊಬ್ಬರು ಯಾವುದೇ ಪರಿಸ್ಥಿತಿಯಲ್ಲೇ ಹೇಗೆ ಇರಲಿ, ಹೋಗುತ್ತೇವೆ, ಭೇಟಿ ಮಾಡುತ್ತೇವೆ, ಮಾತನಾಡಿಸಿ ಬರುತ್ತೇವೆ. ಅದು ಅವರಿಗೆ ಹಿಡಿಸುವುದೋ ಇಲ್ಲವೋ ಅದನ್ನೂ ನಾವು ಯೋಚಿಸುವುದಿಲ್ಲ. ಆದರೆ ಅಲ್ಲಿ ಹಾಗಲ್ಲ. ನಾವು ಇತರರ ವಿಷಯದಲ್ಲಿ ತಲೆ ಹಾಕುವಂತಿಲ್ಲ, ಅವರೂ ನಮ್ಮ ವಿಷಯಕ್ಕೆ ಮೂಗು ತೂರಿಸುವುದಿಲ್ಲ. ಅದು ಅಲ್ಲಿನ ನಿಯಮ. ಈ ನಿಯಮಕ್ಕೆ ಕಟ್ಟುಬಿದ್ದೇ ನಾನೂ ದಲಾಲ್‌ಜೀಗೆ ಫೋನು ಮಾಡಿರಲಿಲ್ಲ. ಅಂತೂ ಅವರ ಸಮಯ ಕೇಳಿ, ಅವರನ್ನು ಭೇಟಿ ಮಾಡಲು ಅವರ ಮನೆಗೆ ಹೋದೆ. ಅವರನ್ನು ನೋಡಿ ಬಹಳ ದಿನಗಳಾಗಿದ್ದುದರಿಂದ ಭವನದ ಕೆಲವು ವಿಷಯಗಳನ್ನು ಸಹ ಅವರ ಜತೆ ಚರ್ಚಿಸಬೇಕಿತ್ತು. ನಾನು ಹೋದಾಗ ದಲಾಲ್‌ಜೀ ಎಂದಿನಂತೆಯೇ ನಗುನಗುತ್ತಾ ಸ್ವಾಗತಿಸಿದರು. ಅವರ ಮುಖದಲ್ಲಿ ಏರ್‌ಇಂಡಿಯಾದಲ್ಲಿ ಆಗುತ್ತಿದ್ದ ಮುಷ್ಕರದ ಟೆನ್ಷನ್ ಸ್ವಲ್ಪವೂ ಇರಲಿಲ್ಲ. ಶಾಂತವಾಗಿದ್ದ ಮುಖಭಾವ, ಮಂದಸ್ಮಿತ ನೋಡಿ ನನಗೆ ಸಮಾಧಾನವಾಯಿತು. ನಾನು "ದಲಾಲ್‌ಜೀ, ನನಗೆ ಆಶ್ಚರ್ಯಕ್ಕಿಂತಲೂ, ನಿರಾಸೆಯಾಯಿತು ನಿಮ್ಮನ್ನು ನೋಡಿ!" ಎಂದೆ ವಿನೋದದಿಂದ. "ಏಕೆ ಮಾಥೂರ್‌ಜೀ?" ಎಂದರು ಅವರು. "ದಲಾಲ್‌ಜೀ, ಅಷ್ಟು ದಿನದಿಂದ ಮುಷ್ಕರ ನಡೆಯುತ್ತಿದೆ. ನಾನು ನಿಮಗೆ ಬಹಳ ಒತ್ತಡ ಇರುತ್ತದೆ ಎಂದು ಹೆದರಿಯೇ ಫೋನನ್ನು ಮಾಡಿರಲಿಲ್ಲ. ನೀವು ಇದನ್ನು ಬಹಳ ಸಹಜವಾಗಿ ತೆಗೆದುಕೊಂಡಿದ್ದೀರಿ ಎಂದು ನಂಬಲೇ ಸಾಧ್ಯವಾಗುತ್ತಿಲ್ಲ" ಎಂದೆ. "ಮಾಥೂರ್‌ಜೀ, ಸುಮ್ಮನೆ ಉದ್ವೇಗಕ್ಕೆ ಒಳಗಾದರೆ, ಮನಸ್ಸಿನ ಮೇಲೆ ಒತ್ತಡ ಹಾಕಿದರೆ ಏನು ಪ್ರಯೋಜನ ಹೇಳಿ? ಆಗುವುದು ತಪ್ಪುವುದಿಲ್ಲವಲ್ಲಾ!" ಎಂದರು. 'ಭಗವದ್ಗೀತೆ'ಯಲ್ಲಿ ಶ್ರೀ ಕೃಷ್ಣ ಹೇಳಿರುವುದನ್ನು ಸ್ಪಷ್ಟವಾಗಿ, ಸರಳವಾಗಿ ಹೇಳಿದ್ದರು ನಮ್ಮ ದಲಾಲ್‌ಜೀ!! ಅದೇ ಅವರ ಸ್ವಭಾವ ವೈಶಿಷ್ಟ್ಯ...!! ಇಂದಿಗೆ ದಲಾಲ್‌ಜೀಗೆ ೮೩ ವರ್ಷ. ಇನ್ನೂ ಹರೆಯದ ಪ್ರಾಯದವರಂತೆ ಉತ್ಸಾಹದ ಚಿಲುಮೆಯಾಗಿ, ಚಟುವಟಿಕೆಯ ಬುಗ್ಗೆಯಾಗಿ ಓಡಾಡುವ ದಲಾಲ್‌ಜೀಯವರನ್ನು ನೋಡಿದರೆ, ಹದಿಹರೆಯದ ಹುಡುಗರೂ ನಾಚಬೇಕು, ಹಾಗಿದೆ ಅವರ ಜೀವನೋತ್ಸಾಹ!

ಅಲ್ಲವೇ...? ಅವರು ಎಂತಹಾ ವ್ಯಕ್ತಿ...? ೩೦ ವರ್ಷಗಳಷ್ಟು ದೀರ್ಘಕಾಲ ಭವನವನ್ನು ತಮ್ಮ ಹೆಗಲಿಗೇರಿಸಿಕೊಂಡು, ಮಹಾಮಹಾ ಸಿರಿವಂತ ದಿಗ್ಗಜಗಳನ್ನು ಕಮಿಟಿಯಲ್ಲಿ ಹೊಂದಿದ್ದು, ಎಲ್ಲರ ಮನೋಭಾವವನ್ನೂ ತಿಳಿದು ಅವರನ್ನೆಲ್ಲ ಹೊಂದಿಸಿಕೊಂಡು, ಎಲ್ಲರನ್ನೂ ಒಟ್ಟಿಗೆ ಸೇರಿಸಿ ಕಟ್ಟಿಕೊಂಡು, ಸರಿ ತೂಗಿಸಿಕೊಂಡು ವಿದ್ಯಾಭವನದ ಲಂಡನ್ ಕೇಂದ್ರವನ್ನು ಇಂದಿಗೂ ಕೀರ್ತಿ-ಪ್ರತಿಷ್ಠೆಯ ಪರಾಕಾಷ್ಠೆಯಲ್ಲಿ ಇರುವಂತೆ ಮಾಡಿರುವವರು! ಎಲೆಕ್ಟ್ರಾನಿಕ್ ವೇಗದಲ್ಲಿ ಯೋಚಿಸುವ ಅವರು, ಈ ಮೂವತ್ತು ವರ್ಷಗಳಲ್ಲಿ ತೆಗೆದುಕೊಂಡ ನಿರ್ಧಾರಗಳು ಸಾವಿರಾರು, ಅವುಗಳಲ್ಲಿ ಒಂದೂ ತಪ್ಪಿಲ್ಲ, ಅವರ ಲೆಕ್ಕಾಚಾರ ಎಂದೂ ತಲೆಕೆಳಗಾದದ್ದಿಲ್ಲ! ಅಂಥ ನಿಶಿತಮತಿ! ಗಾಂಧೀಜಿಯ ನಂಬಿಕೆಯಂತೆ ಅವರದು ಸಹ. ಸತ್ಯದ ದಾರಿಯಲ್ಲಿ ನಡೆದರೆ ಅಪಜಯ ಇಲ್ಲ ಎನ್ನುವ ಮೂಲ ಮಂತ್ರದಲ್ಲಿ ನಂಬಿಕೆ ಇಟ್ಟಿರುವ ದಲಾಲ್‌ಜೀಯಲ್ಲಿ ಆ ವಿನಯ, ಸಜ್ಜನಿಕೆಯನ್ನು ಕಂಡ ಯಾರೂ ಅವರಿಂದ ವಿಮುಖರಾಗುವುದಿಲ್ಲ. ಗಟ್ಟಿಯಾಗಿ ಒಂದು ಮಾತನ್ನೂ ಆಡದ ದಲಾಲ್‌ಜೀಯ ಯಶಸ್ಸಿನ ಗುಟ್ಟು ಏನೆಂದು ನಾನು ಕೇಳಿದಾಗ ಅವರು ನನಗೆ ಹೇಳಿಕೊಟ್ಟ ಮಂತ್ರ: "ಮಾಥೂರ್‌ಜೀ, 'ಬಿ ಪೊಲೈಟ್, ಬಟ್ ಬಿ ಫರ್ಮ್'(be polite, but be firm) ಆಗ ಯಾರೂ ನಿಮ್ಮನ್ನು ಏನೂ ಮಾಡಲಾರರು!" ಎಂದು. ಅರ್ಥಾತ್, "ವಿನಯದಿಂದ ಇರಿ, ಎಂದರೆ ನೀವು ಮಾಡುವುದರಲ್ಲಿ ನಿಮಗೆ ಅನನ್ಯ ವಿಶ್ವಾಸ ಇರಲಿ, ಆಗ ತಪ್ಪಾಗುವ ಸಾಧ್ಯತೆಯೇ ಇರುವುದಿಲ್ಲ" ಎಂದರು!! ಯಾವ ಸಣ್ಣ ವಿಷಯವನ್ನು ಕೇಳಿದರೂ, ಆ ವಿಷಯದ ಪೂರ್ವಾಪರಗಳನ್ನೆಲ್ಲ ನಮಗೆ ಹೇಳುವ ದಲಾಲ್‌ಜೀ ಓದಿಲ್ಲದ ವಿಷಯಗಳಿಲ್ಲ, ತಿಳಿದುಕೊಳ್ಳದ ಮಾಹಿತಿಗಳಿಲ್ಲ! ಪ್ರತಿದಿನ ರಾತ್ರಿ ಅವರು ಓದದೆ ಮಲಗುವುದಿಲ್ಲ. ದೇವರು-ಧರ್ಮ ಇದನ್ನೆಲ್ಲ ಅವರು ಚಿಂತಿಸುವುದಿಲ್ಲ. ಆದರೆ ಯಾವುದೋ ಒಂದು ಕಾಣದ ಕೈ ನಮ್ಮನ್ನು ನಡೆಸುತ್ತದೆ ಎನ್ನುವ ನಂಬಿಕೆ ಇದೆ ಅವರಿಗೆ. ಇನ್ನೊಬ್ಬರನ್ನು ಖಂಡಿಸಿ ಮಾತನಾಡಿಯೇ ತಿಳಿಯದ ದಲಾಲ್‌ಜೀ ಬಹಳ ಸಂಯಮದಿಂದ, ಎಲ್ಲರನ್ನೂ ಪ್ರೀತಿಯಿಂದ ನೋಡುತ್ತಾರೆ. ಪಾರ್ಸಿಗಳು ಭಾರತಕ್ಕೆ ಬಂದು ಭಾರತದ ಮಹಾರಾಜನನ್ನೇ ತಮಗೆ ಸ್ಥಳಕೊಡಬೇಕೆಂದು ಕೇಳಿದಾಗ, ಆ ಬುದ್ಧಿವಂತ ರಾಜ ಒಂದು ಬಟ್ಟಲು ತುಂಬಾ ಹಾಲು ತರಿಸಿ, ಆ ಪಾರ್ಸಿಯವರ ನಾಯಕನ ಮುಂದಿಟ್ಟು "ಈಗಲೇ ನಮ್ಮ ದೇಶ ಹೀಗಿದೆ, ನಿಮಗೆ ನಾನು ಎಲ್ಲಿ ಸ್ಥಳಕೊಡಲಿ?" ಎಂದನಂತೆ. ಆಗ ಆ ಪಾರ್ಸಿ ನಾಯಕ ಸಕ್ಕರೆಯನ್ನು ಅದರಲ್ಲಿ ಬೆರೆಸಿ, "ಮಹಾರಾಜ, ಈಗ

ನೋಡಿ, ಹಾಲೂ ಚೆಲ್ಲಲಿಲ್ಲ, ಸಕ್ಕರೆಯೂ ಹಾಲಿನಲ್ಲಿ ಬೆರೆತಿತು...!! ನಾವೂ ಹೀಗೆಯೇ ನಿಮ್ಮ ನೆಲದಲ್ಲಿ ನಿಮ್ಮ ಜನದ ಜತೆ ಬೆರೆತು ಹೀಗಿರುತ್ತೇವೆ" ಎಂದು ಆಶ್ವಾಸನೆ ಕೊಟ್ಟನಂತೆ. ಈ ಕತೆಯ ಸತ್ಯಾಸತ್ಯತೆಗಳು ನಮಗೆ ಬೇಕಿಲ್ಲ. ಆದರೆ ಕೇಳುಗರನ್ನು ಯೋಚಿಸುವಂತೆ ಮಾಡುವ ಈ ಕತೆಯ ನಾಯಕ ಪಾರ್ಸಿ... ಅವನ ಜನಾಂಗಕ್ಕೆ ಸೇರಿದ ದಲಾಲ್‌ಜೀ ಯಾರೊಡನೆಯೂ ಹಾಗೆ ಬೆರೆತು ಇರುವವರು, ಅಂತೆಯೇ ಅವರ ಸ್ವಭಾವ-ಸಕ್ಕರೆಯಂತೆ ಸವಿ, ಅವರಲ್ಲಿ ಬೆರೆತವರು ಅವರ ವ್ಯಕ್ತಿತ್ವದ ಮೋಡಿಗೆ ಒಳಗಾಗದೆ ಇರಲು ಸಾಧ್ಯವಿಲ್ಲ. ಅವರ ಪ್ರಭಾವ ನನ್ನ ಮೇಲೆ ಸಾಕಷ್ಟು ಆಗಿದೆ !! ನಿಜಕ್ಕೂ, ನಮ್ಮ ದಲಾಲ್‌ಜೀಯಲ್ಲಿ ನಾನು ನಮ್ಮ ಸನಾತನ ಧರ್ಮದ ಆಚರಣೆಯನ್ನು ನೋಡುತ್ತೇನೆ ಎಂದರೆ ಎಳ್ಳಷ್ಟೂ ಉತ್ಪ್ರೇಕ್ಷೆಯಲ್ಲ!!

ಇನ್ನೂ ಹಲ ವಿಚಾರಗಳು

ನೆನಪುಗಳನ್ನು ನೆನೆನೆನೆದು ಬರೆಯುವಾಗ ಅವು ಸ್ವಲ್ಪ ಏರುಪೇರಾದರೂ ಓದುಗರ ಓದುವಿಕೆಯ ಓಘಕ್ಕೆ ತೊಂದರೆ ಯಾಗುವುದಿಲ್ಲ ಎಂದು ನನ್ನ ನಂಬಿಕೆ. ಲಂಡನ್‌ನಲ್ಲಿದ್ದಾಗ ನಾನು ಗಮನಿಸಿದ ಸಣ್ಣ ಪುಟ್ಟ ಅಂಶಗಳನ್ನೂ ಬಿಡದೆ ನನ್ನ ಓದುಗರಿಗೆ ಹೇಳಬೇಕೆನ್ನುವುದು ನನ್ನ ಆಸೆ. ನಾನು ಹಿಂದೆ ಹೇಳಿದಂತೆ, ಅಲ್ಲಿನ ಜನ ಇತರರ ವ್ಯವಹಾರಗಳಿಗೆ ತಲೆಹಾಕುವುದಿಲ್ಲ. ಹಾಗೆಯೇ ಅವರ 'ಏಕಾಂತ'ವು ಸಹ. ಅವರ ಏಕಾಂತಭಂಗ ಆಗುವುದನ್ನು ಅವರು ಸಹಿಸರು. 'ಪ್ರೈವೆಸಿ' ಎಂದರೆ ಕಟ್ಟುನಿಟ್ಟಾಗಿ ಅದು 'ಪ್ರೈವೆಸಿ'ಯೇ. ಯಾರೂ ಆಗ ಅವರನ್ನು ತೊಂದರೆಪಡಿಸುವಂತಿಲ್ಲ. ಅಂತೆಯೇ ಅಲ್ಲಿ ಚಿಕ್ಕಮಗುವಿಗೂ ಪ್ರತ್ಯೇಕವಾದ ರೂಮಿನ ವ್ಯವಸ್ಥೆ ಇರುತ್ತದೆ. ಚಿಕ್ಕದೋ-ದೊಡ್ಡದೋ, ಒಟ್ಟಾರೆ ಪ್ರತ್ಯೇಕವಾದ ಮಲಗುವ ಕೋಣೆಯಲ್ಲಿಯೇ ಮಕ್ಕಳು ಮಲಗುವುದು.

ಇಲ್ಲಿ ಒಂದು ತಮಾಷೆಯ ವಿಷಯ ಹೇಳಲಿದೆ. ನಾನು ನಿಮಗೆ ಹೇಳಿದೆನಲ್ಲ, ಜೆನಿನ್ ಮಿಲ್ಲರ್ ಎನ್ನುವ ಆಂಗ್ಲ ಮಹಿಳೆ ನಮ್ಮಲ್ಲಿಗೆ ವೇದ ಕಲಿಯಲು ಬರುತ್ತಿದ್ದುದು ? ಆಕೆ ನಮ್ಮ ಊರಿಗೂ ಬಂದಿದ್ದಳಷ್ಟೇ. ಅವರು ನಮ್ಮ ಊರಿಗೆ (ಮತ್ತೂರಿಗೆ) ಬಂದಿದ್ದಾಗ ಆ ಸಂದರ್ಭದಲ್ಲಿ ಯಾವುದೋ ಸಮಾರಂಭವಿತ್ತು. ನಮ್ಮ ಮನೆಗಳಲ್ಲಿ ಬಹಳ ಜನ ಸೇರಿದ್ದರು. ಅವರಿಗಾಗಿ ನಾವು ಒಂದು ಕೋಣೆಯನ್ನು ಸಿದ್ಧವಾಗಿಟ್ಟಿದ್ದೆವು. ಅದು ಆಕೆಗೆ ತಿಳಿದಿರಲಿಲ್ಲ. ಆ ರಾತ್ರಿ ತನ್ನ ಕೆಲಸಗಳನ್ನು ಮುಗಿಸಿ ಮಲಗಲು ನಮ್ಮ ಊರ ಮನೆಯ ಒಳಗೆ ಹೊರಟ ಆಕೆ ನಮ್ಮ ಮನೆಯ ಹಜಾರದಲ್ಲಿ ಹೆಂಗಸರು ಒಂದು ಕಡೆ, ಗಂಡಸರು ಒಂದು ಕಡೆ ಸಾಲಾಗಿ ಜಮಖಾನವನ್ನು ಹಾಸಿಕೊಂಡು, ಮಕ್ಕಳನ್ನು ಮಧ್ಯೆ ಹಾಕಿಕೊಂಡು ಮಲಗಿದ್ದುದನ್ನು ನೋಡಿ ಮೆಲ್ಲನೆ ಚೀರಿಯೇ ಬಿಟ್ಟರು! "ಓವ್! ಮಾಥೂರ್‌ಜೀ, ಇದೇನಿದು ? ಎಲ್ಲರೂ ಹೀಗೆ ಸಾಲಾಗಿ ಮಲಗುವುದು ? ಇದು ಯಾವ ರೀತಿಯ ಅಭ್ಯಾಸ?" ಎಂದರು. ಆಕೆಯ ಧ್ವನಿಯಲ್ಲಿ ಒಂದು ರೀತಿಯ ಆಶ್ಚರ್ಯ, ಭಯ! ಹೀಗೂ ಎಲ್ಲರೂ ಒಟ್ಟಿಗೇ ಮಲಗುವುದು ಉಂಟೇ ಎನ್ನುವ ದಿಗ್ಭ್ರಮೆ! ನಾನು ಅವರಿಗೆ, ಅವರು ಮಲಗಲು ಬೇರೆ ಕೋಣೆಯ ವ್ಯವಸ್ಥೆಯಾಗಿದೆ ಎಂದು ಕರೆದೊಯ್ದು ಆ ಕೋಣೆಯನ್ನು ತೋರಿಸಿದಾಗಲೇ ಆಕೆಗೆ ನೆಮ್ಮದಿಯಾದದ್ದು! ಅಷ್ಟು ಏಕಾಂತಪ್ರಿಯತೆ ಅವರದು !

ನನ್ನ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ ಒಬ್ಬಾಕೆ. ಅವಳಿಗೆ ನಾನು ಕೊಡುತ್ತಿದ್ದ ಸಂಬಳ ಅವಳು ಮಾಡುವ ಕೆಲಸಕ್ಕೆ ನ್ಯಾಯವಾಗಿಯೇ ಇದ್ದಿತು. ಭವನಕ್ಕೆ ಸೇರಿದ ಅವಳಿಗೆ ಸ್ವಲ್ಪ ಸ್ವಲ್ಪವಾಗಿ ನಮ್ಮ ಭಾರತೀಯ ರೀತಿ - ನೀತಿಗಳು, ಸಂಸ್ಕೃತಿಗಳ ಅರ್ಥ ಆಗತೊಡಗಿತ್ತು. ಅದಕ್ಕೇ ಅವಳಿಗೆ ನಮ್ಮ ಮೇಲೆ ಒಂದು ರೀತಿಯ ಗೌರವಭಾವನೆಯು ಬೆಳೆದಿತ್ತು. ಅವಳು ಸಾಮಾನ್ಯವಾಗಿ ಏನನ್ನೂ ಕೇಳುವವಳಲ್ಲ, ನಿಃಸ್ಪೃಹವಾಗಿ ತನ್ನ ಕೆಲಸವನ್ನು, ಒಂದನ್ನೂ ತಪ್ಪಿಸದೆ ಮೌನವಾಗಿ ಮಾಡಿಕೊಂಡು ಹೋಗುವ ಅಭ್ಯಾಸವಿದ್ದವಳು. ಒಂದು ದಿನ ಬೆಳಗ್ಗೆ ಆಫೀಸಿನಲ್ಲಿ ನನ್ನನ್ನು ಕಾಣಲು, ಆಫೀಸ್ ರೂಮಿನ ಒಳಬಂದ ಅವಳು ನನ್ನ ಜೊತೆ ಏನೋ ಹೇಳಬೇಕೆಂದು ತವಕಿಸಿದಳು. ಆದರೆ ಅವಳಿಂದ ಹೇಳಲಾಗುತ್ತಿಲ್ಲ. ನನಗೆ ಅವಳ ಆತಂಕ ಅರ್ಥವಾಯಿತು. ನಾನೇ ಅವಳಿಗೆ ಧೈರ್ಯತುಂಬಿ, ವಿಷಯ ಏನೆಂದು ತಿಳಿದುಕೊಳ್ಳಲು ಉತ್ಸಾಹ ತೋರಿಸಿ ಅವಳನ್ನು ಹೇಳುವಂತೆ ಪ್ರೋತ್ಸಾಹಿಸಿದೆ. ಅದಕ್ಕೆ ಅವಳು, "ಮಾಥೂರ್‌ಜೀ... ನೀವು ನನ್ನ ಸಂಬಳದಲ್ಲಿ ೫£ಗಳಷ್ಟನ್ನು ಹೆಚ್ಚು ಮಾಡಲು ಆಗುವುದೇ? ಅದು ಸಾಧ್ಯವೇ?" ಎಂದಳು. ನನಗೆ ಆಶ್ಚರ್ಯ "ಏಕೆ? ನಿನಗೆ ಈಗ ನೀನು ಮಾಡುತ್ತಿರುವ ಕೆಲಸಕ್ಕೆ ಕಡಮೆ ಸಂಬಳ ಸಿಗುತ್ತಿದೆ ಎನ್ನುವ ಭಾವನೆಯೇ?" ಎಂದೆ ನಾನು. ಅದಕ್ಕೆ ಕೂಡಲೇ ಅವಳು "ಇಲ್ಲ... ಇಲ್ಲ... ಇಲ್ಲ... ಹಾಗಲ್ಲ. ನಾನು ನಮ್ಮ ತಂದೆಯು ನನಗೆ ಬಾಡಿಗೆಗೆ ಕೊಟ್ಟಿರುವ ರೂಮಿನಲ್ಲಿದ್ದೇನೆ. ಅಲ್ಲಿ ಈವರೆಗೂ ಕಪ್ಪು – ಬಿಳುಪು ಟಿ.ವಿ. ಇದ್ದಿತು. ಈಗ ನನ್ನ ತಂದೆ ಬಣ್ಣದ ಟಿ.ವಿ. ತಂದಿದ್ದಾರೆ. ಬಣ್ಣದ ಟಿ.ವಿ. ನೋಡುವುದಕ್ಕೆ ೨೦£ಗಳಷ್ಟು ಹೆಚ್ಚು ಬಾಡಿಗೆ ಕೊಡಬೇಕಾಗುತ್ತದೆ ಎಂದಿದ್ದಾರೆ. ನಾನೂ ನನ್ನ ಇಬ್ಬರು ಸೋದರಿಯರೂ ಮೂರು ರೂಮುಗಳಲ್ಲಿದ್ದೇವೆ. ನಮ್ಮ ತಾಯಿತಂದೆಯರು ನಾವು ಮೂವರೂ ಈ ಹೆಚ್ಚಿನ ೨೦£ಗಳನ್ನು ಕೊಡಬೇಕು ಎಂದಿದ್ದಾರೆ. ಅದಕ್ಕೆ ನಾನು ನಿಮ್ಮನ್ನು ಕೇಳುತ್ತಿರುವುದು" ಎಂದಳು ಸಂಕೋಚದಿಂದ... "ಬೇಕಾದರೆ ನಾನು ಸ್ವಲ್ಪ ಹೊತ್ತು ಹೆಚ್ಚಿಗೆ ಕೆಲಸ ಮಾಡುತ್ತೇನೆ..." ಎಂದೂ ಸೇರಿಸಿದಳು. ಅವಳ ಮಾತು ಕೇಳಿ ನಾನು ಅವಾಕ್ಕಾದೆ, ಮಾತೇ ಹೊರಡಲಿಲ್ಲ. ತಂದೆಯೇ ಮಗಳಿಗೆ ಮನೆಯ ಒಂದು ರೂಮನ್ನು ಬಾಡಿಗೆಗೆ ಕೊಡುವುದು. ಮಗಳು ಬಾಡಿಗೆ ಕೊಟ್ಟು ಆ ರೂಮಿನಲ್ಲಿರುವುದು. ಬಣ್ಣದ ಟಿ.ವಿ. ನೋಡಬೇಕಾದರೆ ೨೦£ಗಳಷ್ಟು ಹೆಚ್ಚಿಗೆ ಬಾಡಿಗೆ ಕೊಡಬೇಕಾದೀತೆಂದು ತಂದೆಯೇ

ಹೇಳುವುದು...!! ಓದುಗರೇ, ಈ ರೀತಿ ಇರುವ ಜನರು ನಮ್ಮಲ್ಲಿದ್ದಾರೆಯೇ ? ಆದರೆ ಅಲ್ಲಿದ್ದಾರೆ ! ಅಷ್ಟು ನಿರ್ಮೋಹ ಅವರದು ! ನಾನು ಮರು ಮಾತಾಡದೆ ಆ ಹುಡುಗಿಗೆ ೨೦£ಗಳಷ್ಟು ಸಂಬಳ ಹೆಚ್ಚು ಮಾಡಿದೆ. ಹೆಚ್ಚಾಗಿ ಕೆಲಸ ಮಾಡುವ ಆವಶ್ಯಕತೆ ಇಲ್ಲವೆಂದು ಹೇಳಿ ಕಳುಹಿಸಿದೆ. ಅವಳ ಮಾತು ಕೇಳಿ, ಆ ಹುಡುಗಿಯನ್ನು ನೋಡಿ ನನಗೆ ನನ್ನೊಳಗಿದ್ದ ಪಿತೃಭಾವ ಜಾಗೃತ ವಾಗಿದ್ದಿತು. ಅದಕ್ಕೆ ಅವಳ ಸಕಾರಣವಾದ ಬೇಡಿಕೆಯನ್ನು ನಿರಾಕರಿಸಲು ನನ್ನಿಂದ ಸಾಧ್ಯವಾಗಲಿಲ್ಲ!

ಇನ್ನೊಂದು ಸಣ್ಣ ಅನುಭವ, ಇದೂ ಸಹ ಅಲ್ಲಿನವರ ನಿರ್ಭಿಡೆಯ ಅಭ್ಯಾಸದ ಬಗೆಗೆ ತಿಳಿಸುವಂಥದು.

ಒಮ್ಮೆ ನನ್ನ ಗೆಳೆಯನೊಬ್ಬ 'ಸವನಾಬಾತ್' ಸ್ನಾನ ಮಾಡಿದರೆ ಚೆನ್ನಾಗಿರುತ್ತದೆ ಎಂದು ಬಹಳವಾಗಿ ಹೊಗಳುತ್ತಿದ್ದ. ನನಗೂ ಕುತೂಹಲ, ಆ ಜಾಗ ಹೇಗಿದೆ ಎಂದು. ಅವನು ಬಹಳ ಒತ್ತಾಯ ಮಾಡಿ ಒಂದು ದಿನ ನನ್ನನ್ನು ಅಲ್ಲಿಗೆ ಸ್ನಾನ ಮಾಡಿ ಬರೋಣ ಎಂದು ಹೊರಡಿಸಿದ. ಎಂದಿನಂತೆ ನಾನು ಸ್ನಾನಕ್ಕೆ ಬೇಕಾಗುವ ವಸ್ತುಗಳನ್ನು ತೆಗೆದುಕೊಂಡು ಹೊರಟೆ. ಎಂಟು-ಹತ್ತು ಮೈಲಿಗಳ ದೂರದಲ್ಲಿದ್ದ ಅಲ್ಲಿಗೆ ಹೋದೆ. ಅಲ್ಲಿ ನಾನು ಹೋಗಿ ನೋಡುತ್ತೇನೆ... ಅಲ್ಲಿದ್ದ ಪುರುಷರಾರೂ ಬಟ್ಟೆಯನ್ನು ಧರಿಸಿಲ್ಲ!! ಎಲ್ಲರೂ ನಿರ್ವಾಣದಲ್ಲೇ ಸ್ನಾನ ಮಾಡುತ್ತಿದ್ದಾರೆ! ಯಾರಿಗೂ ಯಾವುದೇ ವಿಧವಾದ ಸಂಕೋಚವೂ, ನಾಚಿಕೆಯೂ ಏನೂ ಆಗುತ್ತಿಲ್ಲ! ಎಲ್ಲವೂ ಸಾಮಾನ್ಯ ಎನ್ನುವಂತಿದೆ ಅವರ ಭಾವ! ಇದನ್ನು ನೋಡಿದ ನನ್ನ ಪೇಚಾಟ ಅಷ್ಟಿಷ್ಟಲ್ಲ. ನಾನು ಏಕಾದರೂ ಕುತೂಹಲ ತಳೆದೆನೋ, ಏಕಾದರೂ ಇಲ್ಲಿಗೆ ಬಂದೆನೋ, ಇಲ್ಲಿ ಹೇಗಪ್ಪಾ ಭಗವಂತ ಸ್ನಾನ ಮಾಡುವುದು? ಎಂದು ಚಡಪಡಿಸಿದೆ. ಬಂದದ್ದಾಗಿದೆ. ಇನ್ನು ಒದರಿಕೊಂಡು ಹೋಗುವಂತಿಲ್ಲ. 'ಏನಾದರೂ ಸರಿ' ಎಂದು ನನ್ನ ಬಟ್ಟೆಗಳನ್ನು ತೆಗೆದು ನಾನು, ಒಳ ಉಡುಪು ಒಂದನ್ನು ಮಾತ್ರ ತೆಗೆಯುವುದಿಲ್ಲ ಎಂದು ಹೇಳಿದೆ. ಅಲ್ಲಿ ಎಲ್ಲರನ್ನೂ ನೋಡಿಕೊಳ್ಳುವ ಗಾರ್ಡ್‌ನಂತಿದ್ದವನು, "ಹೀಗೆಲ್ಲ ನೀವು ಒಳ ಉಡುಪು ಧರಿಸಿ ಸ್ನಾನ ಮಾಡುವಂತಿಲ್ಲ"ಎಂದ. ಅದಕ್ಕೆ ನಾನು "ನಮ್ಮ ಧರ್ಮದಲ್ಲಿ ಹೇಳಿರುವುದೇ ಹಾಗೆ. ನಾವು ಹಾಗೆಲ್ಲ ಮೈಮೇಲೆ ಯಾವುದೇ ಬಟ್ಟೆ ಇಲ್ಲದೆ ಬರಿ ಮೈಯಲ್ಲಿ ನಿಂತು ಸ್ನಾನ ಮಾಡುವಂತಿಲ್ಲ. ನೀನು ನನಗೆ ಇಲ್ಲಿ ಸ್ನಾನ ಮಾಡಲು ಬಿಡದಿದ್ದರೆ ಬೇಡ. ನಾನು ಮನೆಗೆ ಹೋಗಿ, ನಮ್ಮ ಮನೆಯಲ್ಲಿಯೇ ಸ್ನಾನ ಮಾಡುತ್ತೇನೆ. ನಿಮ್ಮಲ್ಲಿ ಸ್ನಾನ ಮಾಡುವುದೇ ಬೇಡ!" ಎಂದೆ ಖಂಡಿತವಾಗಿ. ನನ್ನ ಮಾತಿನಲ್ಲಿದ್ದ ಖಚಿತತೆಯನ್ನೂ ನಿಷ್ಠುರತೆಯನ್ನೂ ನೋಡಿ ಮೆತ್ತಗಾದ ಅವನು, "ಪರವಾಗಿಲ್ಲ, ಬೇಸರ ಮಾಡಬೇಡಿ, ನಿಮ್ಮ ಒಳ ಉಡುಪು ಧರಿಸಿಯೇ ಸ್ನಾನ ಮಾಡಿ ಬನ್ನಿ" ಎಂದ. 'ಬದುಕಿದೆಯಾ ಬಡಜೀವವೇ' ಎಂದು ಆ ದಿನ ಅಲ್ಲಿ ಸ್ನಾನ ಮಾಡಿ ಬಂದ ನಾನು, ಮತ್ತೊಮ್ಮೆ ಆ ಜಾಗದ ಬಗ್ಗೆ ಯಾರಲ್ಲೂ ಚಕಾರವೆತ್ತಲಿಲ್ಲ...!!!! ಅಲ್ಲಿನ ಜನರ ಒಂದೊಂದು ಅಭ್ಯಾಸಗಳು ಹೀಗೆ, ನಮಗೆ ಮೋಜು ಎನಿಸುವಂಥದು!!

ಶ್ರೀಮತಿ ಕೌಶಲ್ಯ ಹಾರ್ವೆಲ್

ಥಾಮ್ಸನ್ ಪ್ರೆಸ್ ಎನ್ನುವುದು ದೆಹಲಿಯಲ್ಲಿ ಪ್ರತಿಷ್ಠಿತ ಪ್ರೆಸ್. 'ಇಂಡಿಯಾ ಟುಡೇ' ಪತ್ರಿಕೆಯ ಪ್ರೆಸ್ ಆದ ಥಾಮ್ಸನ್ ಪ್ರೆಸ್‌ನ ಮಾಲಿಕರು ಅರುಣ್‌ಪೂರಿ. ಅರುಣ್ ಪೂರಿಯವರ ಸೋದರಿ (ಅಕ್ಕ) ಶ್ರೀಮತಿ ಕೌಶಲ್ಯ ಪೂರಿ. ಲಂಡನ್‌ನಲ್ಲಿ ಬಹಳ ಒಳ್ಳೆಯ ಬ್ಯಾರಿಸ್ಟರ್ ಆಗಿರುವ ಈಕೆಯ ಪತಿ ಶ್ರೀ ಜಾನ್ ಹಾರ್ವೆಲ್. ಶ್ರೀ ಹಾರ್ವೆಲ್‌ರು ಸ್ಕಾಟ್‌ಲ್ಯಾಂಡಿನವರು. ಲಂಡನ್‌ಗೆ ೨೦ ಮೈಲಿ ದೂರದಲ್ಲಿ ಕಂಟ್ರಿಸೈಡ್ ಎಂದು ಕರೆಸಿಕೊಳ್ಳುವ ಹಳ್ಳಿಗಾಡಿನ ಕಡೆ ವಾಸಿಸುವ ಇವರು, ಅಲ್ಲಿ ಬಹಳ ದೊಡ್ಡ, ಸುಂದರವಾದ ಬಂಗಲೆಯೊಂದನ್ನು ಹೊಂದಿದ್ದು, ಲಂಡನ್‌ನಲ್ಲಿ ಬಹಳ ಕೆಲಸಗಳನ್ನು ನಿರ್ವಹಿಸುತ್ತಿರುವುದರಿಂದ ಸಾಮಾನ್ಯವಾಗಿ ಲಂಡನ್‌ನಲ್ಲಿಯೇ ಇರುವ ಕೌಶಲ್ಯ ಹಾರ್ವೆಲ್ ವಿದ್ಯಾಭವನಕ್ಕೆ (ಲಂಡನ್ ಕೇಂದ್ರಕ್ಕೆ!) ಮೊಟ್ಟಮೊದಲ ಆಜೀವ ಸದಸ್ಯತ್ವ ತೆಗೆದುಕೊಂಡವರು. ಅವರ ಪತಿ ಜಾನ್ ಹಾರ್ವೆಲ್ಲರು ಬಹಳ ಒಳ್ಳೆಯ ಆರ್ಕಿಟೆಕ್ಟ್ (ವಾಸ್ತುಶಿಲ್ಪಗಾರ). ಈ ದಂಪತಿಗಳದು ಬಹಳ ಒಳ್ಳೆಯ ಸ್ವಭಾವ, ಒಳ್ಳೆಯ ಹೊಂದಾಣಿಕೆ. ಬುದ್ಧಿವಂತವರ್ಗಕ್ಕೆ ಸೇರಿದ ಈ ದಂಪತಿಗಳಿಗೆ ಭಾರತೀಯ ಸಂಸ್ಕೃತಿಯ ಮೇಲೆ ವಿಶೇಷ ಒಲವು. ನಾವು ಅವರನ್ನು ನಮ್ಮ ಕಮಿಟಿಯನ್ನು ಸೇರಲು ಆಹ್ವಾನಿಸಿದಾಗ ಬಹಳ ಪ್ರೀತಿಯಿಂದ ಒಪ್ಪಿ ಭವನದ ಗೌರವ ಕಾರ್ಯದರ್ಶಿಗಳಾದರು.

ಸುಖ-ದುಃಖ, ಅನುಕೂಲ-ಪ್ರತಿಕೂಲ ಎಲ್ಲ ಕಾಲದಲ್ಲಿಯೂ ಜಿಡ್ಡಿನ ಹಾಗೆ ಅಂಟಿಕೊಂಡಿರುವವರಿಗೆ 'ಮಿತ್ರ' ಎನ್ನುತ್ತಾರೆ. 'ಮಿತ್ರ' ಈ ಎರಡಕ್ಷರ ಅಮೃತಸಮಾನ ಎನ್ನುತ್ತಾರೆ ಹಿರಿಯರು. ಕೌಶಲ್ಯ ಹಾರ್ವೆಲ್ ಅಂಥ ಸನ್ಮಿತ್ರರು ನಮಗೆ! ನಾನು ಲಂಡನ್‌ಗೆ ಹೋದಂದಿನಿಂದಲೂ ನನ್ನ ಬಗೆಗೆ ಪ್ರೀತಿ, ವಿಶ್ವಾಸ, ಸ್ನೇಹ ತೋರಿದ ಶ್ರೀಮತಿ ಕೌಶಲ್ಯ ಭವನದ ಹಲವಾರು ಕೆಲಸಗಳಲ್ಲಿ ನಮಗೆ ಜೊತೆಯಾಗಿ ದುಡಿದಿದ್ದಾರೆ. ನನ್ನ ಹಾಗೂ ನನ್ನ ಆರೋಗ್ಯದ ಮೇಲೆ ಅವರಿಗೆ ಬಹಳ ಕಾಳಜಿ. ಭವನದ ಕಟ್ಟಡ ಹುಡುಕುವ ಯಾತ್ರೆ ಪ್ರಾರಂಭಿಸಿದಾಗ ಮೊದಲಿನಿಂದ ಕೊನೆಯ ತನಕ ಶ್ರೀಮತಿ ಕೌಶಲ್ಯ ನಮ್ಮ ಜೊತೆಗಿದ್ದರು. ಅವರೂ ಹುಡುಕಲು ಪಟ್ಟ ಪ್ರಯತ್ನ ಅಷ್ಟಿಷ್ಟಲ್ಲ.

ನಾನು ಆಗ ತಾನೆ ಹೋದ ಹೊಸತು. ಭವನದ ಚಟುವಟಿಕೆಗಳು ಇನ್ನೂ ಬಿರುಸಾಗಿ ಪ್ರಾರಂಭವಾಗಿರಲಿಲ್ಲ. ನನ್ನಾಕೆಯೂ ಆಗಾಗ ಊರಿಗೆ ಹೋಗಿಬರುವುದಿತ್ತು, ಸ್ವಂತದವರನ್ನು ಹೆಚ್ಚಿಗೆ ದಿನ ಬಿಟ್ಟಿದ್ದು ಅಭ್ಯಾಸವಿರದಿದ್ದ ಇವಳ ಮನದಿಂಗಿತ ನನಗೆ ಅರ್ಥವಾಗಿ ನಾನೇ ಆಗಾಗ

ಅವಳನ್ನು ಊರಿಗೆ ಕಳುಹಿಸುವುದಿತ್ತು. ಆಗ ನಾನು ಊಟ-ತಿಂಡಿಗೆ ಕಷ್ಟಪಡುತ್ತೇನೆ ಎಂದು ಶ್ರೀಮತಿ ಕೌಶಲ್ಯಗೆ ತಿಳಿದಿತ್ತು. ಹೋಟೆಲಿಗೆ ಹೋಗಿ ಅಭ್ಯಾಸ ಇಲ್ಲದಿದ್ದ ನನಗೆ ಕೌಶಲ್ಯ ಮಾಡುತ್ತಿದ್ದ ಉಪಚಾರ, ಯಾವುದೇ ತಾಯಿ ತನ್ನ ಹೊಟ್ಟೆ ಯಲ್ಲಿ ಹುಟ್ಟಿದ ಮಗನಿಗೆ ಮಾಡುವ ಉಪಚಾರಕ್ಕಿಂತಲೂ ಕಡಮೆಯದಾಗಿರಲಿಲ್ಲ! ಅಂಥ ವಾತ್ಸಲ್ಯ ಆಕೆಯದು. ತಾವು ಮನೆಯಿಂದ ಲಂಡನ್‌ಗೆ ಬರುವಾಗಲೇ ಚಪಾತಿ, ಪಲ್ಯ, ಉಪ್ಪಿನಕಾಯಿ ತಂದು – ಅವರಿಗೆ ಲಂಡನ್‌ನಲ್ಲಿ ಒಂದು ಮನೆ ಇತ್ತು-ಅಲ್ಲಿ ಅದನ್ನಿಟ್ಟು ನನ್ನನ್ನು ಬಂದು ಊಟ ಮಾಡಿ ಹೋಗುವಂತೆ ಆಹ್ವಾನಿಸುತ್ತಿದ್ದರು! ಹಾಗೆ ನಾನು ಅವರ ಕೈನ ಅಡುಗೆ ಊಟ ಮಾಡಿದ ದಿನಗಳೆಷ್ಟೋ? ಅವರ ಪರಿಚಯ ನನಗೆ ಅದೆಷ್ಟು ಚೇತೋಹಾರಿ ಯಾಗಿತ್ತು ಎಂದರೆ, ನಾನು ಬಹಳ ಒದ್ದಾಡಿ, ಅವರಿವರನ್ನು ದಾನಿಗಳಾಗಿ ಹುಡುಕಿ ಹಣ ಕೇಳಲು ಹೋಗಬೇಕು ಎಂದರೆ ಅವರೂ-ಅವರ ಕಾರೂ ನನ್ನ ಪ್ರಯಾಣಕ್ಕೆ ಸಿದ್ಧ. ನನ್ನನ್ನು ಆ ದಾನಿಗಳ ಬಳಿಗೊಯ್ದು ಕೆಲಸ ಮುಗಿದನಂತರ ನನ್ನ ಮನೆಬಾಗಿಲಿಗೆ ಕರೆದುತಂದುಬಿಟ್ಟು ಹೋಗುತ್ತಿದ್ದ ಕೌಶಲ್ಯ, ನಾನು ಭವನವನ್ನು ಬೆಳೆಸಲು ಪಡುತ್ತಿದ್ದ ಕಷ್ಟ ನೋಡಿ, ಬಹಳ ದುಃಖಪಟ್ಟು ಮರುಗುತ್ತಿದ್ದರು! ಅವರ ಕಾಳಜಿಗೆ ಒಂದು ಒಳ್ಳೆಯ ಉದಾಹರಣೆ ಇದೆ.

ಲಂಡನ್‌ನಲ್ಲಿ ಡರ್ಬಿರೇಸ್ ಎಂದು ಒಂದು ಕುದುರೆಯ ರೇಸು ನಡೆಯುತ್ತದೆ. ಡರ್ಬಿ ಎನ್ನುವುದು ಒಂದು ಜಾಗದ ಹೆಸರು, ಅಲ್ಲಿ ನಡೆಯುವ ರೇಸಿಗೆ 'ಡರ್ಬಿರೇಸ್' ಎಂದು ಹೆಸರು. ಈ 'ಡರ್ಬಿರೇಸಿ'ಗೆ ಬ್ರಿಟನ್‌ನ ಮಹಾರಾಣಿಯರೂ ಆಗಾಗ ಬಂದು ನೋಡಿ ಹೋಗುವುದಿದೆ. ಅಷ್ಟು ಪ್ರಸಿದ್ಧ ಈ ಡರ್ಬಿರೇಸು! 'ವಿದ್ಯಾಭವನ'ವು ೩೭, ನ್ಯೂ ಆಕ್ಸ್‌ಫರ್ಡ್ ರಸ್ತೆಯಲ್ಲಿ ಇದ್ದು, ನಾನು ಆಫೀಸಿನ ಕೆಲಸದಲ್ಲಿ ನಿರತನಾಗಿದ್ದೆ ಆದಿನ. ಕೌಶಲ್ಯ ಆ ಬೆಳಗ್ಗೆ ಬಂದರು. ಬಂದವರೇ ಕೈಯಲ್ಲಿ ಒಂದು ಫಾರ್ಮ್ ಹಿಡಿದು ಬಂದಿದ್ದವರು, "ಈ ಫಾರಮ್‌ನ್ನು ನೋಡಿ ಸಹಿಹಾಕಿ ಮಾಥೂರ್‌ಜೀ!" ಎಂದರು. ನನಗೆ ಆಶ್ಚರ್ಯ ; ಯಾವ ಫಾರ್ಮ್, ಏನು ವಿಷಯ, ನನಗೆ ಯಾವುದೂ ತಿಳಿದಿರಲಿಲ್ಲ. "ನೀವು ಹೀಗೆ ದಾನ ಕಾಣಿಕೆಕೊಡಿ ಎಂದು ಮನೆಯಿಂದ ಮನೆಗಳಿಗೆ ಅಲೆಯುವುದು ಇನ್ನು ಸಾಕು. ಈಗ ನಾನು ನಿಮಗೆ ಒಂದು ದೊಡ್ಡ ಅದೃಷ್ಟ ತರಬೇಕೆಂದಿದ್ದೇನೆ! ರಾತ್ರಿಬೆಳಗಾಗುವುದರಲ್ಲಿ ನೀವು ವಿದ್ಯಾಭವನಕ್ಕೆ ಬೇಕಾದ ನಿಧಿಯೆಲ್ಲವನ್ನೂ ಪಡೆಯಬಹುದು!" ಎಂದರು. ನನಗೆ ನಿಜವಾಗಿಯೂ ಇವರು ಏನೋ ತಂದಿದ್ದಾರೆ, ಯಾವ ಅದೃಷ್ಟವಪ್ಪಾ ಭಗವಂತ ಅದು? ನನ್ನ ಶ್ರಮ ಕಡಮೆ ಮಾಡುವಂಥದು ಎಂದು ಕುತೂಹಲ! "ನೋಡಿ ಇಲ್ಲಿ, ಇದು ಕುದುರೆಗಳ ಪಟ್ಟಿ ; ಇಲ್ಲಿ ೧೨-೧೩ ಕುದುರೆಗಳಿವೆ. ಅದರಲ್ಲಿ ಯಾವುದಾದರೂ ಮೂರು ಕುದುರೆಗಳ ಮುಂದೆ "'ಸರಿ' (✓) ಎಂದು ಗುರುತು ಹಾಕಿ. ನೀವು ಮೊದಲೇ ಬ್ರಾಹ್ಮಣರು, ನಿಮ್ಮ ಕೈಲಿ ಸರಿಗುರುತು ಹಾಕಿದರೆ ಅದು ಬಂದೇ ಬರುತ್ತದೆ. ಈಗ ರೇಸ್ ಇದೆ, ನೀವು ಮೂರು ಕುದುರೆಗಳ ಮುಂದೆ ಗುರುತು ಹಾಕಿ, ಅಕಸ್ಮಾತ್ ಅವು ಗೆದ್ದರೆ ಲಕ್ಷಾಂತರ ಪೌಂಡುಗಳು ಬರುತ್ತವೆ" ಎಂದರು. "ಹೇಗೆ ಬರುತ್ತೆ?" ಎಂದೆ ನಾನು. ನನಗೆ ರೇಸು ಎಂದರೇನು ಎಂದೇ ತಿಳಿಯದು. "ರೇಸು ಎಂದರೆ ಏನು ಎಂದು ಗೊತ್ತಾ?" ಎಂದರು. 'ಇಲ್ಲ' ಎಂದೆ ನಾನು! "ಒಂದಷ್ಟು ಕುದುರೆಗಳು ರೇಸ್‌ನಲ್ಲಿ ಓಡುತ್ತವೆ. ಇಂತಹಾ ಕುದುರೆ ಬರುತ್ತದೆ ಎಂದು ಊಹಿಸಿ ಈ ಫಾರ್ಮಿನಲ್ಲಿ 'ಸರಿ'(✓)ಗುರುತನ್ನು ಮೂರು ಕುದುರೆಗಳ ಮುಂದೆ ಹಾಕಿದ್ದು, ಆ ಮೂರು ಕುದುರೆಗಳೇ ಗೆದ್ದರೆ, ಈ ಮೂರು ಕುದುರೆಗಳಲ್ಲದೆ ಇತರ ಕುದುರೆಗಳ ಮೇಲೆ ಹಣಕಟ್ಟಿರುತ್ತಾರಲ್ಲಾ ಆ ಕುದುರೆಗಳು ಸೋತಿರುತ್ತವೆ ತಾನೆ, ಆ ಕುದುರೆಗಳ ಮೇಲಿನ ಹಣವನ್ನೂ ಈ ಗೆದ್ದ ಕುದುರೆಗಳ ಮೇಲೆ ಯಾರು ಹಣ ಕಟ್ಟಿ, ಊಹಿಸಿ ಗೆಲ್ಲುತ್ತದೆ ಎಂದು ಗುರುತು ಹಾಕಿರುತ್ತಾರೆಯೋ ಆ ಹಣವನ್ನೆಲ್ಲ ಇವರಿಗೆ ಹಂಚಿಬಿಡುತ್ತಾರೆ! ಮತ್ತೂರ್‌ಜೀ, ಅವು ಒಂದೆರಡು ಪೌಂಡುಗಳಲ್ಲ, ಸಾವಿರವೂ ಅಲ್ಲ. ಲಕ್ಷಾಂತರ ಪೌಂಡುಗಳು ಗೊತ್ತೇ??" ಎಂದು ಉದ್ಗಾರ ತೆಗೆದರು ಕೌಶಲ್ಯ! ನನಗೆ ಆಶ್ಚರ್ಯದಿಂದ ಗರ ಬಡಿದಂತಾಯಿತು! ಸಹಾಯ ಮಾಡಬೇಕು ಎನ್ನುವ ಹಂಬಲ ಕೌಶಲ್ಯರನ್ನು ಈ ಮಟ್ಟಕ್ಕೆ ಯೋಚಿಸುವಂತೆ ಮಾಡಿದೆಯಲ್ಲಾ, ಅದೆಷ್ಟು ಕಾಳಜಿ, ಅದೆಷ್ಟು ಕಳಕಳಿ ನನ್ನ ಬಗ್ಗೆ! ನಾನು ಕಷ್ಟಪಟ್ಟು ಮಾಡುತ್ತಿರುವ ಕೆಲಸದ ಬಗ್ಗೆ ಅವರ ಉತ್ಸಾಹ ಕಂಡು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತಾಯಿತು. ಇನ್ನೂ ಸ್ವಲ್ಪ ನೋಡೋಣ ಎಂದು ಬೇಕೆಂತಲೇ ಹಾಗಾದರೆ ಈ ಫಾರ್ಮಿನ ಐದು ಪೌಂಡು ಹಣವನ್ನು ನಾನೇ ಕಟ್ಟುತ್ತೇನೆ ಎಂದೆ. ಕೂಡಲೇ ಆಕೆ, "ಬೇಡ... ಬೇಡ.... ಬೇಡ ನೀವು ಕಟ್ಟುವುದು ಬೇಡ. ನೀವು ಕಟ್ಟಿದರೆ ಸರಿಹೋಗದು. ನೀವು ಕಷ್ಟಪಟ್ಟು ಸಂಪಾದಿಸಿದ ಹಣ ಪವಿತ್ರವಾದದ್ದು, ಅದು ಅಪವಿತ್ರ ಆಗುವುದು ಬೇಡ!! ಇದಕ್ಕೇ ನಾನೇ ಹಣಕಟ್ಟುತ್ತೇನೆ. ರೇಸ್ ಗೆದ್ದು ಹಣ ಬಂದರೆ ಅದನ್ನು ಮಾತ್ರ ನಿಮ್ಮ ವಿದ್ಯಾಭವನದ ನಿಧಿಗೆ ಎಂದು ತೆಗೆದುಕೊಳ್ಳಿ ಅಷ್ಟು ಸಾಕು!" ಎಂದರು. ನನಗೆ ತುಂಬ ನಗು ಬಂದಿತು. "ಕೌಶಲ್ಯಜೀ, ನೀವು ಆ ಫಾರ್ಮಿಗೆ ಕಟ್ಟುವ ಐದು ಪೌಂಡುಗಳನ್ನು ನನಗೆ ಕೊಡಿ ಸಾಕು, ನಾನು ತೆಗೆದುಕೊಳ್ಳುತ್ತೇನೆ. ಆದರೆ ಈ ರೇಸು... ಇವೆಲ್ಲ ಬೇಡ" ಎಂದೆ. "ಏಕೆ ?" ಎಂದರು ಕೌಶಲ್ಯ. "ಕೌಶಲ್ಯಜೀ, ಎಷ್ಟೋ ಜನ ಸಾಲಸೋಲ ಮಾಡಿ, ಏನೋ ಲೆಕ್ಕಾಚಾರ ಹಾಕಿ ಕಟ್ಟಿದ ಹಣವು ಗೆದ್ದ ಬರೇ ಮೂರು ಜನಕ್ಕೆ ಮಾತ್ರ ಹಂಚಿಕೆಯಾಗುತ್ತದೆ ಎಂದರೆ ಇದು ಯಾವ ಆಟ ? ಹಾಗೆ ಹಣ ಕಟ್ಟಿದವರು ಅದೆಷ್ಟು ಕಷ್ಟಪಟ್ಟು ನಾವೂ ಗೆಲ್ಲುತ್ತೇವೆ ಎನ್ನುವ ಆಸೆ ಇಟ್ಟುಕೊಂಡು ತಾನೇ ಹಣ ಕಟ್ಟಿರುತ್ತಾರೆ? ಅಕಸ್ಮಾತ್ ಅವರು ಸೋತರೆ ಅವರಿಗೆ ಆಗುವ ನಷ್ಟ, ನಿರಾಸೆ, ನೋವು ಗೆದ್ದವರು

ತೆಗೆದುಕೊಳ್ಳುವ ಹಣದಲ್ಲಿ ಸೇರಿರುವುದಿಲ್ಲವೆ? ಅಂತಹಾ ಹಣದಿಂದ 'ವಿದ್ಯಾಭವನ' ಬೆಳೆಯುವುದು ಬೇಡ. ಈ ಹಣ ಇಲ್ಲದಿದ್ದರೆ ಇಲ್ಲ, ಹೀಗೆ ದಿಢೀರ್ ಸಂಪಾದನೆಯಿಂದ ವಿದ್ಯಾಭವನವು ಬೆಳೆದರೂ ನೊಂದವರ ಶಾಪ ಭವನವನ್ನು ತಟ್ಟದೇ ಇರುವುದಿಲ್ಲ! ಅದಕ್ಕೆ ಈ ಹಣವೂ ಬೇಡ, ಈ ರೇಸ್ ಸಹ ಬೇಡ...! ಕೌಶಲ್ಯಜೀ, ನನಗೆ ಗೊತ್ತು, ನೀವು ನನಗಾಗಿ ಅದೆಷ್ಟು ಮರುಗುತ್ತೀರಿ ಎಂದು! ನಿಮ್ಮ ಕಾಳಜಿ ನಿಮ್ಮನ್ನು ಇಷ್ಟು ದೂರ ಆಲೋಚಿಸುವಂತೆ ಮಾಡಿದೆ ಎಂದರೆ ನಿಮ್ಮ ಸ್ನೇಹಪರತೆಗೆ ಬದಲು ಹೇಳಲು ನನ್ನಲ್ಲಿ ಮಾತುಗಳಿಲ್ಲ!! ಅದಕ್ಕಾಗಿ ನಾನು ಬಹಳ ಕೃತಜ್ಞನಿದ್ದೇನೆ. ಆದರೆ ನೀವೂ ನನ್ನ ಈ ಮಾತುಗಳನ್ನು ತಪ್ಪು ತಿಳಿಯಬೇಡಿ, ಕೌಶಲ್ಯಜೀ, ಈ ರೀತಿಯಲ್ಲಿಹಣ ಸಂಗ್ರಹಿಸುವುದು ಬೇಡ. ನಿಮಗೆ ಅರ್ಥವಾಯಿತಲ್ಲ?" ಎಂದೆ ನಾನು ಗಂಭೀರವಾಗಿಯೇ. ಕೌಶಲ್ಯಗೆ ಈಗ ನನ್ನ ಬಗ್ಗೆ ಮೆಚ್ಚುಗೆ ಹೆಚ್ಚಾಗಿ, ಗೌರವಭಾವನೆ ಬಹಳವಾಯಿತು. ಆ ಪ್ರೀತಿಯಲ್ಲೇ ಅವರು "ನೀವು ಮನುಷ್ಯರಲ್ಲ, ಪ್ರಯೋಜನವಿಲ್ಲದವರು! ಇಷ್ಟು ಒಳ್ಳೆಯತನವಾದರೆ ಬದುಕುವುದೂ ಕಷ್ಟ ಆದೀತು. ಏನು ಹೇಳಲಿ ನಿಮಗೆ ನಾನು? ಕಷ್ಟಪಡಿ, ಚೆನ್ನಾಗಿ ಕಷ್ಟಪಡಿ!!" ಎಂದು ಗದರಿಸಿ ಹೊರಟರು.

ನ ಜಾತು ಕಾಮಾನ್ನ ಭಯಾನ್ನ ಲೋಭಾತ್
ಧರ್ಮಂ ತ್ಯಜೇತ್ ಜೀವಿತಸ್ಯಾಪಿ ಹೇತೋಃ
ಜೀವೋ ನಿತ್ಯಃ ಹೇತುರಸ್ಯ ತ್ವನಿತ್ಯಃ

ಭಾರತ ಸಾವಿತ್ರಿಯಲ್ಲಿ ವೇದವ್ಯಾಸರು ಐದು ಶ್ಲೋಕ ಹೇಳಿದ್ದಾರೆ. ಅದರಲ್ಲಿನ ಒಂದು ಶ್ಲೋಕ ಇದು. ಆ ಐದು ಶ್ಲೋಕಗಳಲ್ಲಿ ಮಹಾಭಾರತದಲ್ಲಿರುವುದೆಲ್ಲಾ ಇದೆ ಎಂದಿದ್ದಾರೆ ಅವರು. ಈ ಮೇಲಿನ ಶ್ಲೋಕದ ಪ್ರಕಾರ ಮನುಷ್ಯನಿಗೆ ಧರ್ಮಮಾರ್ಗದಲ್ಲಿ ನಡೆದರೆ ಸಕಲವೂ ಪ್ರಾಪ್ತವಾಗುತ್ತದೆ. ಹಾಗಿದ್ದರೂ ಅಧರ್ಮಮಾರ್ಗಕ್ಕೆ ಏಕೆ ಹೋಗಬೇಕು? ಇದು ಒಂದು ರೀತಿಯಲ್ಲಿ ಕಾಸುಕೊಟ್ಟು ಕಷ್ಟಕೊಂಡ ಹಾಗಲ್ಲವೇ? ಎನ್ನುವುದು ಇದರ ಭಾವಾರ್ಥ!

ಯಾವತ್ತೂ, ಅದೆಷ್ಟೇ ಹಣದ ಆವಶ್ಯಕತೆ ಇದ್ದರೂ ಈ ರೀತಿಯಲ್ಲಿ ಸಂಪಾದಿಸಬೇಕು ಅನ್ನುವ ಭಾವನೆಯೇ ಇಲ್ಲ. ಕಷ್ಟ ಪಡುವುದು, ನ್ಯಾಯವಾಗಿ, ಧರ್ಮವಾಗಿ ಬಂದ ದುಡ್ಡು ಎಷ್ಟಾದರೆ ಅಷ್ಟೇ ಸಾಕು ಎನ್ನುವ ರೀತಿಯನ್ನನುಸರಿಸಿಯೇ ಬೆಳೆದು ಬಂದವರು ನಾವು. ನಮ್ಮಂತೆ ಇರುವ ಭಾರತದ ಹಲವು ಕುಟುಂಬಗಳು ಹಾಗೆಯೇ ಯೋಚಿಸುವುದು, ಅನ್ಯಾಯದ ಹಣ ಬೇಡ ಎಂದು. ಏನೇ ಆದರೂ ನಮ್ಮೊಳಗಿನ 'ಅಂತರಾತ್ಮ'ನ ಪ್ರಶ್ನೆಗೆ ನಾವು ಉತ್ತರ ಹೇಳ ಬೇಕಾಗುವುದಷ್ಟೇ ? ಇನ್ನಿತರ ಪ್ರಾಪಂಚಿಕವೆಲ್ಲ ಅನಿತ್ಯ ಎನ್ನವುದು ತಿಳಿದಿಲ್ಲವೇ ? ಎಂದಿಗೂ 'ಸತ್ಯ' ಎನ್ನುವುದು ತಾನೆ ನಿಲ್ಲುವುದು. 'ಯಾವುದೇ ಕಾರಣಕ್ಕೂ ಅನೀತಿ, ಅನ್ಯಾಯ, ಅಧರ್ಮಕ್ಕೆ ಇಳಿಯಬೇಡ, ಅದರ ಫಲ ನಿನ್ನ ಜತೆಗೇ ಬರುವಂಥದು' ಎಂದು ನಾವು ಓದಿರುವುದು-ಕೇಳಿರುವುದು ಸುಳ್ಳಾಗಲು ಸಾಧ್ಯವೇ? 'ಮಹಾಭಾರತ'ದಲ್ಲಿ 'ಆಚಂದ್ರಾಯತವೇ ತನು'ಎಂದು ಪರಮ ನೀಚನೆನಿಸಿದ ಕೌರವನೇ ಹೇಳುತ್ತಾನೆ! ಅವನು ಹೇಳುವ ಹಾಗೆ ಆಚಂದ್ರಾರ್ಕವಾಗಿ ನಿಲ್ಲುವುದೇ ಈ ಶರೀರ? ಇಲ್ಲ.'ಅದಕ್ಕೆ ಪ್ರಾಣಬಿಡಬೇಕೆಂದರೂ ಬಿಡು, ಅಧರ್ಮಕ್ಕೆ ಮಾತ್ರ ಹೋಗುವುದು ಬೇಡ' ಎನ್ನುವ ನೀತಿವಾಕ್ಯ ಎಂದೂ ಅನುಕರಣೀಯ, ನಿತ್ಯಸತ್ಯ.

ಅಂತೂ ನನ್ನ ಈ ವಿಚಾರವನ್ನು ಕೌಶಲ್ಯಜೀಗೆ ನಾನು ಮರುದಿನ ವಿವರಿಸಿ ಹೇಳಿದಾಗ ನಕ್ಕ ಅವರು, "ಅದಕ್ಕೇ ನನ್ನ ಪತಿ ಜಾನ್ ಸಹ ನಿಮ್ಮನ್ನು ಬಹಳ ಮೆಚ್ಚುತ್ತಾರೆ. ಅವರಿಗೆ ನಿಮ್ಮ ಮಾತು, ನಡವಳಿಕೆ, ಕೆಲಸದ ರೀತಿ ಎಲ್ಲವೂ ಬಹಳ ಇಷ್ಟ!" ಎಂದು ಮತ್ತೊಂದು 'ಪ್ರಶಸ್ತಿರತ್ನ'ವನ್ನೇ ಕೊಟ್ಟರು! ಶ್ರೀ ಜಾನ್ ಹಾರ್ವೆಲ್‌ರನ್ನು ನಾನೂ ತುಂಬ ಇಷ್ಟ ಪಡುತ್ತಿದ್ದೆ. ಒಳ್ಳೇ ಎತ್ತರದ ವ್ಯಕ್ತಿ, ಶಾಂತಮುಖಭಾವ, ಮೌನಿ. ಅವರ ಧೀರ-ಗಂಭೀರ ನಿಲುವು ನನಗೆ ಯಾವಾಗಲೂ ಟಾಲ್‌ಸ್ಟಾಯ್‌ರ ಚಿತ್ರವನ್ನೇ ನೆನಪಿಗೆ ತರುತ್ತಿತ್ತು. ಅವರು ಎಷ್ಟು ಮೌನಿಯೋ, ಕೌಶಲ್ಯ ಅಷ್ಟೇ ಮಾತುಗಾರ್ತಿ! ಅವರ ಮಾತುಗಾರಿಕೆ ಬಹಳ ತೀಕ್ಷ್ಣ! ಹೇಳುವುದು ನಿಜವಾಗಿಯೇ ಇದ್ದರೂ ಅದನ್ನು ಪ್ರಿಯವಾಗಿ ಹೇಳಬೇಕು ಎಂದಿದೆಯಲ್ಲವೇ? 'ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್' ಎಂದು ! ಕೌಶಲ್ಯ ಕಡ್ಡಿ ಎರಡು ತುಂಡು ಮಾಡಿದಂತೆ, ಮುಖಕ್ಕೆ ರಾಚಿದಂತೆ ಮಾತನಾಡುತ್ತಿದ್ದರು. ಅದು ಹಲವರು ಅವರ ಬಗ್ಗೆ ಬೇಸರ ಪಡುವಂತೆ ಮಾಡಿತ್ತು. ನಾನು ಒಳ್ಳೆಯ ಮಾತುಗಳಲ್ಲೇ ಅವರಿಗೆ ಹಾಗೆ ಮಾತನಾಡಬೇಡಿರೆಂದು ತಿಳಿಸಿ ಹೇಳುತ್ತಿದ್ದೆ. ಆದರೆ ಆಕೆಯ ಸ್ವಭಾವ ಅದು. ಬದಲಾಯಿಸಿ ಕೊಳ್ಳಲಾಗಲಿಲ್ಲ! ಒಮ್ಮೆ ಯಾರೋ 'ಪಂಜಾಬಿಗಳೇ ಹಾಗೆ' ಎಂದು ವಿನೋದಕ್ಕೆ ಹೇಳಿದ ಮಾತಿಗೆ ಪಂಜಾಬಿಯವರಾದ ಕೌಶಲ್ಯ ರೌದ್ರಾವತಾರ ತಾಳಿದುದನ್ನು ಮರೆಯಲಾರೆ ! ಆ ದಿನ ಅವರನ್ನು ಸಮಾಧಾನ ಪಡಿಸುವುದರಲ್ಲಿ ಸಾಕಾಯಿತು. ಆದರೂ ಅಂತರಾಳದಲ್ಲಿ ಆಕೆ ಬಹಳ ಒಳ್ಳೆಯವರು! ಅಂತೂ ಈ ದಂಪತಿಗಳು ನನ್ನನ್ನು ಆದರಿಸಿದುದನ್ನು ನಾನು ಎಂದಿಗೂ ಮರೆಯುವಂತಿಲ್ಲ. ಆ ಪರದೇಶದಲ್ಲಿ ಕೌಶಲ್ಯಜೀ ನನ್ನ ಎಲ್ಲವೂ ಆಗಿದ್ದರು ! ನನ್ನ ಆರೋಗ್ಯದ ಬಗೆಗೆ ಅವರ ಕಾಳಜಿಯನ್ನು ನೋಡಿ ನನಗೇ ಆಶ್ಚರ್ಯ ವಾಗುತ್ತಿತ್ತು. ಒಮ್ಮೆ ಅವರು ತಂದ ಚಪಾತಿ-ಪಲ್ಯೆಯನ್ನು ತಿಂದನಂತರ, "ಅದು ಹಿಡಿಸಿತೇ? ನಿಮ್ಮ ಆರೋಗ್ಯಕ್ಕೆ ಸರಿ ಹೊಂದುವುದಷ್ಟೇ? ತೊಂದರೆಯಾಗುವುದಿಲ್ಲ ತಾನೇ?" ಎಂದು ಪಟಪಟನೆ ಅವರು ಕೇಳಿದ ಪ್ರಶ್ನೆಗಳಿಗೆ ನಕ್ಕ ನಾನು, "ಕೌಶಲ್ಯಜೀ, ಸಂಸ್ಕೃತದಲ್ಲಿ ಒಂದು ಮಾತಿದೆ:

ಅನೇಕದೋಷದುಷ್ಟಸ್ಯ
ದೇಹಸ್ಯೈಕೋ ಮಹಾನ್ ಗುಣಃ |
ಯೋ ಯಥಾಯಂ ಪ್ರವರ್ತಂತೇ
ತಂ ತಥಾಹ್ಯನುವರ್ತತೇ || ಎಂದು.

"ಈ ದೇಹ ಎನ್ನುವುದು, ಅದೆಷ್ಟೋ ದೋಷಗಳಿಂದ ದುಷ್ಟವಾದದ್ದಾದರೂ, ಇದಕ್ಕೆ ಒಂದು ಒಳ್ಳೆಯ ಮಹತ್ತ್ವಪೂರ್ಣ ಗುಣವೂ ಇದೆ. ಅದೇನೆಂದರೆ, ಆ ಗುಣ ಯಾವುದು ಎಂದರೆ, ಯಾರು ಇದನ್ನು ಹೇಗೆ ನಡೆಸುತ್ತಾರೆಯೋ ಅವರನ್ನು ಈ ದೇಹ ಹಾಗೆಯೇ ಅನುಸರಿಸುತ್ತದೆ" ಎಂದು. "ದಿನಕ್ಕೆ ಹತ್ತು ಸಲ ಕಾಫಿ ಕುಡಿದು ಅಭ್ಯಾಸ ಇದ್ದವರಿಗೆ ಏನೂ ವ್ಯತ್ಯಾಸ ಆಗುವುದಿಲ್ಲ. ಒಂದು ಸಲ ಕಾಫಿ ಕುಡಿಯುವವರಿಗೆ ಎರಡನೇ ಕಾಫಿ ಒಳಗೆ ಹೋದರೆ ಶರೀರಕ್ಕೆ ಸರಿಯಾಗಿರುವುದಿಲ್ಲ! ಹಾಗೆ ಇದನ್ನು ಅಭ್ಯಾಸಗಳು ಸಂಭಾಳಿಸುವುದು! ಅರ್ಥಾತ್ ಒಳಗಿರುವ ಆ ಮನಸ್ಸು, ಅವರವರ ಮೈಗಳನ್ನು ಆಳುವುದು ಆ ಮನಸ್ಸು, ಅದೇ ಮೈನ ಯಜಮಾನ! ಮನಸ್ಸಿಗೆ ಒಗ್ಗದ್ದು ಮೈಗೂ ವಿಷವಾದೀತು! ಹಾಗೆ ಕೌಶಲ್ಯಜೀ ನೀವು ಇಷ್ಟು ಪ್ರೀತಿಯಿಂದ ಮಾಡಿಕೊಡುವ ಯಾವುದೂ ನನ್ನ ಮನಸ್ಸಿಗೆ ಒಗ್ಗುತ್ತದೆ. ಆದ್ದರಿಂದ ಸ್ವಾಭಾವಿಕವಾಗಿಯೇ ನನ್ನ ಮೈಗೂ ಹಾಗೆ ತಿಂದದ್ದೆಲ್ಲಾ ಒಗ್ಗುತ್ತದೆ" ಎಂದೆ. ನಾನು ಹೇಳಿದ ಈ ಮಾತುಗಳು ಆ ದಂಪತಿಗಳಿಗೆ ಬಹಳ ಸಮಾಧಾನ, ಸಂತೋಷ ಉಂಟು ಮಾಡಿತ್ತು. ಮೂರು-ನಾಲ್ಕು ವರ್ಷಗಳು ನಮ್ಮ ಭವನದ ಗೌರವಕಾರ್ಯದರ್ಶಿಯಾಗಿ ಕೆಲಸ ಮಾಡಿದ ಕೌಶಲ್ಯಜೀ ಒಂದು ಪೈಸೆಯನ್ನೂ ಭವನದಿಂದ ನಿರೀಕ್ಷಿಸದೆ ಕೇವಲ ಸೇವಾಮನೋಭಾವದಿಂದ ಭವನಕ್ಕಾಗಿ ದುಡಿದರು. ಅವರ ಈ ಸೇವೆಗೆ ವಿದ್ಯಾಭವನ ಎಂದಿಗೂ ಋಣಿ! ನಾನು ಭಾರತಕ್ಕೆ ಹೊರಟು ಬರುವ ವರ್ಷದಲ್ಲಿ ಎಂದರೆ ೧೯೮೪-೮೫ರಲ್ಲಿ ಅವರು ಸ್ಕಾಟ್‌ಲೆಂಡಿನ ಆಶ್ರಮವೊಂದಕ್ಕೆ ಹೋಗಿ ಸೇರಿಕೊಂಡರು. ನನ್ನನ್ನು ಅಲ್ಲಿಗೆ ಬಂದು ಹೋಗಲು ಹೇಳಿದ್ದರು. ಕಾರ್ಯಬಾಹುಳ್ಯದಿಂದ ನನಗೆ ಹೊರಡುವ ದಿನದವರೆಗೂ ಲಂಡನ್ ಬಿಟ್ಟು ಹೊರಹೋಗಲು ಸಾಧ್ಯವೇ ಇರಲಿಲ್ಲ. ಅವರನ್ನು ಸ್ಮರಿಸುವುದಷ್ಟೇ ಆಗಿತ್ತು. ಅವರ ಕಂಟ್ರಿಸೈಡ್ ದೊಡ್ಡ ಬಂಗಲೆಯನ್ನು ಭವನಕ್ಕೆ ತೆಗೆದುಕೊಳ್ಳುವಂತೆ ಹೇಳಿದರು. ಆದರೆ ಅವರ ಔದಾರ್ಯ ಕಂಡು ನಾವು ಮೂಕರಾದೆವಾದರೂ, ಅದನ್ನು ತೆಗೆದುಕೊಂಡು ಮಾಡುವುದೇನು ಎನ್ನುವ ಪ್ರಶ್ನೆಗೆ ಉತ್ತರ ಇರದ ಕಾರಣ ನಾವು 'ಬೇಡ' ಎಂದು ನಿರಾಕರಿಸಬೇಕಾಯಿತು. ೧೯೯೭ರಲ್ಲಿ ಶ್ರೀಮತಿ ಕೌಶಲ್ಯ ಹಾರ್ವೆಲ್ ನಮ್ಮನ್ನೆಲ್ಲ ಬಿಟ್ಟು ಆಸ್ಕಾಟ್ ಆಶ್ರಮದಲ್ಲಿ ವಿಧಿವಶರಾದರು. ಅವರನ್ನು ನಾನು ನನ್ನ ಉಸಿರಿರುವ ತನಕ ಮರೆಯುವಂತಿಲ್ಲ!

ಹೀಗೆ ಭವನಕ್ಕೆ ತಮ್ಮ ಸೇವೆ ಸಲ್ಲಿಸಿದವರು ಅದೆಷ್ಟೋ ಮಂದಿ. ಅವರು ಭವನದಿಂದ ಏನನ್ನೂ ನಿರೀಕ್ಷಿಸುತ್ತಿರಲಿಲ್ಲ. ಆದರೆ ಭವನ ಹಾಗೆ ಸುಮ್ಮನೆ ಸೇವೆಯನ್ನು ತೆಗೆದುಕೊಳ್ಳುವುದು ಭವನಕ್ಕೂ ಸರಿ ಕಾಣಲಿಲ್ಲ. ಅದಕ್ಕೆ ಭವನದ ಪ್ರತಿನಿಧಿಯಾದ ನಾನು ಹಾಗೆ ಸೇವೆ ಸಲ್ಲಿಸಿದವರ ಮನೆಗಳಲ್ಲಿ ಮಾಡುವ ಪೂಜೆ, ಭಜನೆ-ಇತ್ಯಾದಿಗಳ ಜವಾಬ್ದಾರಿ ವಹಿಸಿಕೊಂಡು ಅವರ ಮನಸ್ಸಿಗೆ ನೆಮ್ಮದಿಯಾಗುವಂತೆ ಚೆನ್ನಾಗಿ ಮಾಡಿಸುತ್ತಿದ್ದೆ.

ಸರ್ವಂ ಖಲ್ವಿದಂ ಬ್ರಹ್ಮ

ಅಲ್ಲಿ ಎಲ್ಲರೂ ಕೆಲಸಕ್ಕೆ ಹೋಗುವವರು. ಯಾರಿಗೂ ಮಡಿ-ಮೈಲಿಗೆ ಎನ್ನುವುದರ ಕಾಳಜಿ ಇಲ್ಲ. ಈಗ ನಾವು 'ಮಡಿ' ಎಂದು ಆಚರಿಸುವುದಾದರೂ ಏನು ? ಎಲ್ಲವೂ ಶುಚಿಯಾಗಿ ಇರಲಿ ಎಂದು ತಾನೆ ? ಅದನ್ನು ಅವರು 'ಮಡಿ' ಎನ್ನದೆ ಆಚರಿಸುತ್ತಾರೆ. ಅಲ್ಲಿ ಆಹಾರ - ಮನೆಯ ವಾತಾವರಣ ಎಲ್ಲವೂ ಬಹಳ ಶುಚಿಯೇ. ಆದರೆ ವಿಶೇಷವಾಗಿ ಹಬ್ಬ-ಹರಿದಿನಗಳಲ್ಲಿ ಇಲ್ಲಿ ನಮ್ಮ ಹೆಣ್ಣುಮಕ್ಕಳು ಬಹಳ ಶ್ರಮಪಟ್ಟು ಶುಚಿ ಕೆಲಸ ಮಾಡುವಂತೆ ಅವರು ಮಾಡುವುದಿಲ್ಲ. ಯಾವ ದಿನವೂ ಅವರಿಗೇ ಒಂದೇ. ಅದಕ್ಕೇ ಅವರೆಲ್ಲರೂ ಆ ಹಬ್ಬಗಳನ್ನು ಆಚರಿಸಲು ವಿದ್ಯಾಭವನಕ್ಕೇ ಬಂದು ಸೇರುತ್ತಿದ್ದರು. ವಿದ್ಯಾಭವನ ಎಲ್ಲ ಹಬ್ಬಗಳನ್ನೂ ಆಚರಿಸುತ್ತಿತ್ತು. ಸಾಮಾನ್ಯವಾಗಿ ಪ್ರತಿ ಶನಿವಾರ ನಾನು ಗೀತೆ, ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ, ಇತ್ಯಾದಿಗಳ ಮೇಲೆ ಭಾಷಣ ಮಾಡುತ್ತಿದ್ದೆ. ಹೀಗೆ ಹಬ್ಬಗಳು ಬಂದಾಗಲೂ ಆ ಹಬ್ಬ ಯಾವುದೇ ದಿನ ಬಂದರೂ ಆ ದಿನ ನಾನು ಅಲ್ಲಿ ಆ ಹಬ್ಬದ ಬಗೆಗೆ ಒಂದಷ್ಟು ಮಾಹಿತಿ ನೀಡಿ ಆಚರಣೆಯ ವಿಷಯವಾಗಿ ಭಾಷಣ ಮಾಡುತ್ತಿದ್ದೆ.

ಸಂಜೆ ಎಲ್ಲರ ಆಫೀಸಿನ ಕೆಲಸಗಳು, ಭವನದ ಕೆಲಸಗಳು ಮುಗಿದ ನಂತರ ನಾವು ಹಬ್ಬ ಆಚರಿಸುತ್ತಿದ್ದೆವು. ಶುಭ್ರವಾಗಿ ಮಡಿಯುಟ್ಟು, ಶ್ರದ್ಧೆಯಿಂದ ಹೂವು, ಹಣ್ಣು, ಪ್ರಸಾದಕ್ಕೆ ಸಿಹಿ ಎಂದು ಎಲ್ಲವನ್ನೂ ತರುತಿದ್ದ ಆ ಕುಟುಂಬಗಳು ತಮ್ಮ ಮನೆಯ ಎಲ್ಲ ಸದಸ್ಯರನ್ನೂ ಕರೆದುಕೊಂಡು ಸಂಜೆ ಭವನಕ್ಕೆ ಬರುವುದಿತ್ತು. ನಾನೂ ನಮ್ಮ ಮನೆಯವರೂ ಸೇರಿ ಅಲ್ಲಿಯವರೆಗೆ ಎಲ್ಲವನ್ನೂ ಸಿದ್ಧ ಮಾಡಿರುತ್ತಿದ್ದೆವು. ಕೃಷ್ಣನ ವಿಗ್ರಹವಂತೂ ಅಲ್ಲಿಯೇ ಇರುತ್ತಿತ್ತು. ಎಲ್ಲ ರೀತಿಯ ಪೂಜೆಯನ್ನೂ ಅವನಿಗೆ ನಾವು ಸಲ್ಲಿಸುವುದಿತ್ತು. ಶಿವರಾತ್ರಿಯ ದಿನ ರುದ್ರಾಭಿಷೇಕ ಮಾಡುತ್ತಿದ್ದೆ. ಗಣಪತಿ ಚತುರ್ಥಿಯ ದಿನ, ಗಣಪತಿ ಪೂಜೆ. ಹೀಗೆ ಮಾಡುತ್ತಿದ್ದ ಎಲ್ಲಾ ಪೂಜಾ ವಿಧಿಗಳಲ್ಲೂ ಅವರನ್ನು ಭಾಗಿಗಳಾಗುವಂತೆ ಮಾಡುತ್ತಿದ್ದೆ. ಎಲ್ಲರ ಕೈಯಲ್ಲಿ ಹೂವು-ಮಂತ್ರಾಕ್ಷತೆ ಕೊಟ್ಟು 'ಅಸ್ಮಾಕಮ್' ಎಂದು ಹೇಳಿಕೊಳ್ಳಿ ಎಂದು ಅವರಿಗೆಲ್ಲ ಹೇಳಿ, ಆ ಮಂತ್ರದ ಅರ್ಥ ಹೇಳಿ "ಇಲ್ಲಿ ನಿಮ್ಮ ಪ್ರತಿನಿಧಿಯಾಗಿ ನಾನು ಪೂಜೆ ಮಾಡಿದರೂ ನೀವೆಲ್ಲರೂ ಪೂಜೆ ಮಾಡಿದಂತೆಯೇ, ಹೀಗೆ 'ಅಸ್ಮಾಕಮ್' ಎಂದು ಹೇಳಿಕೊಂಡಾಗ. 'ಸರ್ವಂ ಖಲಿದ್ವಂ ಬ್ರಹ್ಮ' ಎಲ್ಲರಲ್ಲೂ ದೇವರಿದ್ದಾನೆ. ಅಂತೆಯೇ

ನನ್ನಲ್ಲೂ, ನಿಮ್ಮಲ್ಲೂ ಇದ್ದಾನೆ. ಅದಕ್ಕೇ 'ನಾನು' ಪೂಜಿಸುತ್ತಿದ್ದೇನೆ ಎಂದು ಹೇಳಿದಂತೆ ಅದರರ್ಥವಾಗುತ್ತದೆ. ಏಕೆಂದರೆ 'ಆತ್ಮಾವೈ ಬ್ರಹ್ಮ' ಎಂದು ಹೇಳಿದೆ, ಅರ್ಥಾತ್, 'ನಾನೇ ದೇವರು' ಎಂದು, 'ವಿಷ್ಣವೇ ನಮಃ, ಮಧುಸೂದನಾಯ ನಮಃ' ಎಂದು. ಹೇಳುವಾಗ ಈ ಶರೀರದೊಳಗೆಲ್ಲ ಕುಳಿತಿರುವವನು ಅವನೇ! ಅವನು ನಮಗೆ 'ಗುಡ್‌ಬೈ' ಹೇಳಿದರೆ ಈ ಭೂಮಿಯಲ್ಲೇ ನಮಗೆ ಸ್ಥಳವಿಲ್ಲ... ಕೈ ಹಿಡಿದವಳೂ ಹತ್ತಿರ ಸುಳಿಯಲೂ ಹೆದರುತ್ತಾಳೆ ಆಗ. 'ಅವನು' ನಮ್ಮೊಳಗೆ ಇರುವವರೆಗೆ ಮಾತ್ರ ನಮಗೆ ಬೆಲೆ, ಇಲ್ಲದಿದ್ದರೆ ನಮ್ಮನ್ನು (ಶರೀರವನ್ನು) ಬೆಂಕಿಗೋ, ಭೂಮಿಗೋ ಹಾಕಿಬಿಡುತ್ತಾರೆ! ಅದಕ್ಕೇ ಹಾಗೆ ಹೇಳಿಕೊಂಡು ನಾವು ಪೂಜೆ ಮಾಡುವಾಗ ಕೆಟ್ಟದ್ದು ಯೋಚಿಸದೆ, ಕೆಟ್ಟದ್ದು ಮಾಡುವುದಿಲ್ಲ ಎಂದು ವ್ರತ ತೊಟ್ಟು, ಒಳ್ಳೆಯ ಮನಸ್ಸಿನಿಂದ ಪೂಜೆ ಮಾಡುವುದಕ್ಕೆ ಪ್ರೇರೇಪಣೆಯಾಗುತ್ತದೆ. 'ನಮ್ಮಲ್ಲಿ ದೇವರಿದ್ದಾನೆ, ನಾನೇ ದೇವರು' ಎಂದಾಗ ಕೆಟ್ಟದ್ದು ಮಾಡುವ ಅವಕಾಶವೇ ಇರುವುದಿಲ್ಲ ತಾನೆ? ಅದಕ್ಕೇ ಹಾಗೆ ಹೇಳಿ ಮಾಡುವುದು!" ಎಂದು ಹೇಳುತ್ತಿದ್ದೆ.

ಹೀಗೆ ನಾನು ಅವರಿಗೆ ಹೇಳುವ ಮಾತುಗಳು ಅವರ ಮೇಲೆ ತುಂಬ ಪ್ರಭಾವ ಬೀರುತ್ತಿದ್ದವು. ಬಹಳ ಶ್ರದ್ಧೆಯಿಂದ ನಾನು ಹೇಳುವ ಮಾತುಗಳನ್ನು ಕೇಳುತ್ತ ಅಂತೆಯೇ ಪೂಜಾವಿಧಿಗಳಲ್ಲಿ ಭಾಗವಹಿಸುತ್ತಿದ್ದ ಅವರ ಅನನ್ಯಭಕ್ತಿ ಕಾಳಜಿ ನೋಡಿ ನನಗೆ ಹೃದಯ ತುಂಬಿ ಬರುತ್ತಿತ್ತು. ಎಲ್ಲವನ್ನೂ ಸಾಧ್ಯವಾದಷ್ಟೂ ಸರಳವಾಗಿ ಮನಸಿಗೆ ಮುಟ್ಟುವಂತೆ ನಾನು ಹೇಳುತ್ತಿದ್ದುದನ್ನು ಅವರು ಇಷ್ಟಪಡುತ್ತಿದ್ದರು. ಹಾಗಾಗಿ 'ಭಕ್ತಿಯಲ್ಲಿ ಭಯ ಬೇಕಿಲ್ಲ. ಪ್ರೀತಿಯಿಂದ ಭಕ್ತಿ ಹುಟ್ಟಬೇಕು' ಎಂದು ಹಲವಾರು ದೃಷ್ಟಾಂತಗಳನ್ನು ಕೊಟ್ಟು, ಹೇಳುವಾಗ ತಾದಾತ್ಮ್ಯದಿಂದ ನನ್ನ ಮುಖವನ್ನೇ ನೋಡುತ್ತಿದ್ದ ಅವರ ಮುಖಗಳು-ಕಣ್ಣುಗಳು ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿವೆ ! ಅವರು ಭವನಕ್ಕೆ ಮಾಡುವ ಪ್ರೀತಿಯ ಸೇವೆಗೆ ನನ್ನಿಂದಾದ 'ಯತ್ ಕಿಂಚಿತ್ ಸೇವೆ' ಎಂದು ಹೀಗೆ ಮಾಡುವುದು ನನ್ನ ಕರ್ತವ್ಯವೇ ಆಗಿದ್ದಿತು.. ರಾತ್ರಿ ಎಲ್ಲರೂ ಸ್ವಲ್ಪ ಹೊತ್ತು ಭಜನೆ ಮಾಡಿ, ಪ್ರಸಾದ ಸ್ವೀಕರಿಸಿ ಅವರವರ ಮನೆಗಳಿಗೆ ಹೊರಡುವಾಗ ಎಂಥದೋ ಧನ್ಯತಾಭಾವ ಅವರಲ್ಲಿದ್ದುದು ನನಗೆ ಗೋಚರವಾಗುತ್ತಿತ್ತು. ಹಾಗೆಯೇ ನಾನು ಮಾಡಿಸಿದ ಪೂಜೆ ಸಾರ್ಥಕತೆಯನ್ನು ಪಡೆಯಿತು ಎಂದೂ ಅನ್ನಿಸುತ್ತಿತ್ತು. ಆದರೆ ಇವೆಲ್ಲ ಕೇವಲ ಒಂದೂವರೆ ಘಂಟೆಯ ಕಾಲದ ಮಿತಿಯೊಳಗೆ ನಡೆಯುತ್ತಿತ್ತು. ಎಲ್ಲರಿಗೂ ಬಂದು ಹೋಗಲು ಅನುಕೂಲವಾಗಲಿ ಎನ್ನುವ ಹಿತದೃಷ್ಟಿಯಿಂದ! ಆದರೆ ಅದನ್ನೂ ಅವರು 'ತಮಗೆ ಮತ್ತೂರ್‌ಜೀ ಏನೋ ಬಹಳ ಮಾಡುತ್ತಾರೆ' ಎಂದುಕೊಂಡು, ನಮ್ಮತ್ತ - ಭವನದತ್ತ ತಮ್ಮ ಪ್ರೀತಿ-ಗೌರವವನ್ನು ಇನ್ನೂ ಚೆನ್ನಾಗಿ ಬೆಳೆಸಿಕೊಂಡರು. ಈ 'ಪ್ರೀತಿ' ಎನ್ನುವುದೇ ಹೀಗೆ, ಸ್ವಲ್ಪ ಕೊಟ್ಟರೆ ಹೆಚ್ಚು ಲಾಭ ತರುವಂಥದು! ವಿದ್ಯಾಭವನದಲ್ಲಾಗುತ್ತಿದ್ದ ಈ ರೀತಿಯ ಕಾರ್ಯಕ್ರಮಗಳಿಗೆ ಹೈ ಕಮಿಷನರುಗಳೂ ಬರುತ್ತಿದ್ದರು. 'ಭವನ' ಎಲ್ಲರ ಪ್ರೀತಿಯ ಮನೆಯಾಗಿದ್ದಿತು.

ಪ್ರೇಮಾ ತೋತಾದ್ರಿ

ಅಂಥ ಸಹೃದಯರಲ್ಲಿ ಪ್ರೇಮಾ ತೋತಾದ್ರಿ ಒಬ್ಬರು. ಶ್ರೀ ತೋತಾದ್ರಿಯವರು ಎಲ್.ಐ.ಸಿ. ಯ ಡೆಪ್ಯೂಟಿ ಜನರಲ್ ಮ್ಯಾನೇಜರ್‌ರು. ಅವರ ಪತ್ನಿ ಪ್ರೇಮಾ, ಲಂಡನ್‌ನಲ್ಲಿ ಗೃಹಿಣಿ. "ಲಂಡನ್‌ನಲ್ಲಿ ಭವನವೆನ್ನುವ 'ಮಗು'ವಾದಾಗ ಪ್ರೇಮಾ ಅದರ ದಾದಿಯಾಗಿ, ಅದರ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಂಡು ಸಲಹಿದರು" ಎನ್ನುವುದು ಸೂಕ್ತ ಆದೀತು ಎಂದು ನಾನು ಹೇಳಿದರೆ, ನನ್ನ ಓದುಗರಿಗೆ ಶ್ರೀಮತಿ ಪ್ರೇಮಾ ತೋತಾದ್ರಿ ಎಷ್ಟರ ಮಟ್ಟಿಗೆ ಭವನಕ್ಕೆ ತಮ್ಮ ನಿಃಸ್ವಾರ್ಥ ಸೇವೆ ಸಲ್ಲಿಸಿದ್ದಾರೆ ಎನ್ನುವುದರ ಅಂದಾಜು ಆದೀತು!! ತಮ್ಮ ಪತಿಯನ್ನು ಆಫೀಸಿಗೆ ಕಳುಹಿಸಿದ ಅನಂತರ ಪ್ರೇಮಾ ತೋತಾದ್ರಿ ಸುಮಾರು ಹತ್ತು ಮೈಲಿ ದೂರದಲ್ಲಿದ್ದ ತಮ್ಮ ಮನೆಯಿಂದ ಹೊರಟು, ರೈಲಿನಲ್ಲಿ ತಾವೇ ದುಡ್ಡು ತೆತ್ತು ಟಿಕೇಟು ತೆಗೆದುಕೊಂಡು ಭವನಕ್ಕೆ ಬರುತ್ತಿದ್ದರು! 'ವಿದ್ಯಾಭವನ'ವು ಎಂದೂ ಅವರಿಗೆ ಆ ಖರ್ಚನ್ನು ಕೊಟ್ಟಿದ್ದಿಲ್ಲ. ಬಂದ ಗಳಿಗೆಯಿಂದಲೂ ನನಗೆ ಬುಕ್‌ಶಾಪಿನಲ್ಲಿ ಸಹಾಯ ಮಾಡುವುದು, ಭವನಕ್ಕೆ ಬರುವ ಕುತೂಹಲಿಗಳಿಗೆ ಸೂಕ್ತ ಮಾಹಿತಿ ನೀಡುವುದು, ಅವರ ಪರಿಚಯ ಮಾಡಿಕೊಂಡು ಭವನದ ಬಗ್ಗೆ ಇತರರಿಗೆ ಹೇಳಿ ಎನ್ನುವುದು, ಭವನದ ಒಳಾವರಣವನ್ನು ಧೂಳು ಹೊಡೆದು ಶುಚಿಯಾಗಿ ಇಡುವುದು, ಪುಸ್ತಕಗಳನ್ನು ಸರಿಯಾಗಿ ಕ್ರಮವಾಗಿ ಇರಿಸುವುದು, ಸಣ್ಣ ಪುಟ್ಟ ಸಮಾರಂಭಗಳಾದರೆ ಪುಸ್ತಕದ ಬೀರುಗಳನ್ನು ಹಿಂದೆ ತಳ್ಳಿ ಸಭಾಂಗಣವನ್ನು ಸಿದ್ಧಗೊಳಿಸುವುದು, ಮನೆಯಲ್ಲಿರುವ ನನ್ನಾಕೆಯನ್ನು ಆಗೀಗ ಮಾತನಾಡಿಸಿಕೊಂಡು ಬರುವುದು, ನಾನು ಭಾಷಣಕ್ಕೆಂದು ಹೊರ ಹೋದಾಗ ಬುಕ್‌ಶಾಪಿನಲ್ಲಿ ತಾವೇ ಕುಳಿತು ಪುಸ್ತಕ ವ್ಯಾಪಾರ ನೋಡಿಕೊಳ್ಳುವುದು... ಹೀಗೆ... ಏನೇನು ಕೆಲಸಗಳನ್ನು ಮಾಡಲು ಸಾಧ್ಯವಾಗುತ್ತಿತ್ತೋ ಅವುಗಳನ್ನೆಲ್ಲ ಪ್ರೇಮ ಮಾಡಿಕೊಡುತ್ತಿದ್ದರು. ಇವಿಷ್ಟೂ ಕೆಲಸಗಳಿಗೆ ಪ್ರತಿಯಾಗಿ ಪ್ರತಿದಿನ ಒಂದು ಕಪ್ ಕಾಫಿ ಮಾತ್ರ ತೆಗೆದುಕೊಳ್ಳುತ್ತಿದ್ದ ಪ್ರೇಮಾ, ತಮ್ಮ ಪತಿ ಮನೆಗೆ ಹಿಂದಿರುಗುವ ವೇಳೆಗೆ ಮನೆಗೆ ಹಿಂದಿರುಗುತ್ತಿದ್ದರು. ಅವರ ಈ ಸೇವೆಗೆ ವಿದ್ಯಾಭವನ ಎಂದಿಗೂ ಋಣಿ!

ಹೀಗಿದ್ದ ಪ್ರೇಮಾ ಒಂದು ದಿನ ತಾವು ಬರದೆ ಫೋನು ಮಾಡಿದರು. "ತೋತಾದ್ರಿಯವರಿಗೆ ಹುಷಾರಿಲ್ಲ, ನೀವು ಒಮ್ಮೆ ಮನೆಗೆ ಬಂದು ನೋಡಿ ಮತ್ತೂರ್‌ಜೀ" ಎಂದ ಅವರ ಧ್ವನಿಯಲ್ಲಿದ್ದ ನೋವು, ಆತಂಕ, ಗಾಬರಿಗಳು ನನಗೂ ಸಾಕಷ್ಟು ಯೋಚನೆ

ಮಾಡುವಂತಾಗಿದ್ದವು. ನಾನು, ನನ್ನಾಕೆ ಕೂಡಲೆ ಅವರ ಮನೆಗೆ ಹೋದೆವು. ಬಹಳ ಚುರುಕಾಗಿರುತ್ತಿದ್ದ ಕಣ್ಣುಗಳು ಮಂಕಾಗಿದ್ದು, ತೋತಾದ್ರಿಯವರ ಮುಖದಲ್ಲಿ ಏನೂ ಸಾರವೇ ಇಲ್ಲ ಎನ್ನುವಂತೆ ಕಾಣುತ್ತಿತ್ತು. ಪ್ರೇಮಾ ನನ್ನ ಕಾಲಿಗೆ ನಮಸ್ಕರಿಸಿ, "ಮತ್ತೂರ್‌ಜೀ, ನೀವು ಏನು ಮಾಡುತ್ತೀರೋ ನನಗೆ ತಿಳಿಯದು. ಇವರು ಹುಷಾರಾಗಿ ಮೊದಲಿನಂತೆ ಆಗಬೇಕು. ನೀವು ಇವರನ್ನು ನನಗೆ ವಾಪಸು ಕರೆತಂದು ಕೊಡಬೇಕು" ಎಂದು ಕಣ್ಣೀರಿಟ್ಟರು. ನನಗೆ ಬಹಳ ಕೆಡುಕೆನಿಸಿತು. 'ಎಷ್ಟು ಒಳ್ಳೆಯ ಹೆಣ್ಣುಮಗಳು, ಭವನಕ್ಕಾಗಿ ಅದೆಷ್ಟು ಉತ್ಸಾಹದಿಂದ ಬರುತ್ತಿದ್ದರು, ಅವರ ಪತಿ ಅದೆಷ್ಟು ಪ್ರೀತಿಯಿಂದ ನನ್ನನ್ನೂ, ಭವನವನ್ನೂ ಕಂಡು,ಇವರನ್ನು ಅಲ್ಲಿಗೆ, ನನಗೆ ಸಹಾಯ ಮಾಡಲು ಕಳುಹಿಸುತ್ತಿದ್ದರು! ಇಂತಹಾ ಒಳ್ಳೆಯ ದಂಪತಿಗಳಿಗೆ ಏಕಪ್ಪಾ ಈ ಗ್ರಹಚಾರ? ದೇವರೇ, ನೀನಾದರೂ ನನ್ನನ್ನು ಏಕೆ ಹೀಗೆ ಪರೀಕ್ಷಿಸುತ್ತೀಯ?' ಎಂದು ಮನಸ್ಸಿನಲ್ಲೇ ನಾನು ಹಲುಬಿದೆ... ಹೌದು. ಗ್ರಹಚಾರ! ಮನಸ್ಸಿಗೆ ಏನೋ ಹೊಳೆಯಿತು. ಪ್ರೇಮಾರಿಂದ ತೋತಾದ್ರಿಯ ಜಾತಕ ತೆಗೆದುಕೊಂಡು ನೋಡಿದೆ. ದೇವರ ಮುಂದಿಟ್ಟು ಹನುಮಂತನಿಗೆ ಒಂದು ಪೂಜೆ ಮಾಡಿದೆ, ಜಪ ಮಾಡಿದೆ. ನನ್ನ ಕೈಲಾಗುವ ಪ್ರಯತ್ನವನ್ನು ನಿಃಸ್ಪೃಹವಾಗಿ ಮಾಡಿ ಆ ದೇವರಲ್ಲಿ ನನ್ನ ಬೇಡಿಕೆ ಸಲ್ಲಿಸುವುದಷ್ಟೇ ನನಗೂ ಆಗುತ್ತಿದ್ದುದು. ನೋಡೋಣ... "ನಂಬಿದವರಿಗೆ ತನ್ನ ತೆತ್ತಿಹನು ಎಂಬ ಬಿರುದನು ಮೆರೆದು" ಎಂದು ಕುಮಾರವ್ಯಾಸ ಶ್ರೀ ಕೃಷ್ಣನನ್ನು ಕೊಂಡಾಡುವ ಹಾಗೆ, ನಾನೂ ಮನಸಾ ಕೃಷ್ಣನನ್ನು ನಂಬಿ ತೋತಾದ್ರಿಯವರನ್ನು ಅವನಿಗೆ ಒಪ್ಪಿಸಿದೆ! 'ಕಾವವನೂ-ಕೊಲುವವನೂ ಅವನೇ ತಾನೆ?' ಆದರೆ ಅವನು ಈಗ ಅವರನ್ನು ಕಾಯಬೇಕಾಗಿತ್ತು... ನನ್ನ, ಪ್ರೇಮಾರ ಪ್ರಾರ್ಥನೆಗಳನ್ನು ಫಲಿಸಬೇಕಿದ್ದಿತು.

ಅಷ್ಟರಲ್ಲೇ ಇತ್ತ ತೋತಾದ್ರಿಯವರ ಆಫೀಸಿನಲ್ಲಿ ಅವರ ಅನಾರೋಗ್ಯದ ಸಮಾಚಾರ ತಿಳಿದು ಅವರನ್ನು ಸೇವೆಯಿಂದ ನಿವೃತ್ತರಾಗಿಸಿ ಇನ್ನೊಬ್ಬರನ್ನು ಆ ಜಾಗದಲ್ಲಿ ನೇಮಕ ಮಾಡುವ ಸಿದ್ಧತೆ ನಡೆದಿತ್ತು. ಇದು ನನ್ನ ಕಿವಿಗೆ ಬಿದ್ದಿತು. ಶ್ರೀ ತೋತಾದ್ರಿಯವರ ಅಧಿಕಾರಿ ನನಗೆ ತಿಳಿದವರು. ಅವರ ಜನರಲ್ ಮ್ಯಾನೇಜರ್ ಸತ್ಯಸಾಯಿಬಾಬಾರ ಭಕ್ತ, ಶ್ರೀ ಬಲರಾಂ ಪೂರಿಯವರು, ಇವರ ಪತ್ನಿಯೇ ಶ್ರೀಮತಿ ದಮಯಂತಿ ಪೂರಿ. ದಮಯಂತಿ ಪೂರಿಯೂ ಭವನದ ಬಳಗದವರೇ. ಶ್ರೀ ಪೂರಿಯವರ ಕುಟುಂಬದಲ್ಲಿ ಹಿಂದೆ ನಾನು ಹೇಳಿದ್ದ ಕೆಲವು ವಿಚಾರಗಳು ಸರಿಯಾಗಿ ನಡೆದಿದ್ದು ಅವರಿಗೆ ನನ್ನ ಮೇಲೆ ಆದರ-ಅಭಿಮಾನ, ಪ್ರೀತಿ-ಗೌರವಗಳು ಇದ್ದವು. ನಾನು ಈಗ ಒಂದು ಸಾಹಸವನ್ನೇ ಮಾಡಬೇಕಿತ್ತು. ಅದನ್ನು ನಾನು ನಿಶ್ಚಯಿಸಿದೆ... ಶ್ರೀ ಪೂರಿಯವರಲ್ಲಿ 'ತೋತಾದ್ರಿಯವರನ್ನು ಹಾಗೆ ನಿವೃತ್ತರಾಗಿಸಬಾರದೆಂದೂ, ಬೇರೆ ಯಾರನ್ನೂ ಸದ್ಯಕ್ಕೆ ಅವರ ಜಾಗಕ್ಕೆ ನೇಮಕ ಮಾಡಬಾರದೆಂದೂ, ಇನ್ನು ಕೆಲವಾರು ದಿನಗಳ ಸಮಯವನ್ನು ವಾಯಿದೆಯಾಗಿ ತೋತಾದ್ರಿಯವರಿಗೆ ಕೊಡಬೇಕೆಂದೂ' ಅವರಲ್ಲಿ ಕೇಳಿಕೊಂಡೆ. ನನಗೆ ಎಂಥದೋ ನಂಬಿಕೆ, ಅಷ್ಟು ದಿನಗಳಲ್ಲಿ ಅವರ ಆರೋಗ್ಯ ಸರಿಯಾಗಲೇಬೇಕೆಂದು...! ಅದನ್ನು ನಾನು ಅವರಲ್ಲಿ ಹೇಳಿದೆ. ನನ್ನ ಮಾತಿನಲ್ಲಿ ನಂಬಿಕೆ ಇದ್ದ ಶ್ರೀ ಪೂರಿಯವರು, ನನ್ನ ಈ ಬೇಡಿಕೆಗೆ ಬೆಲೆ ಕೊಟ್ಟು, ನಾ ಹೇಳಿದಂತೆ ನಡೆಯುವುದಾಗಿ ಹೇಳಿದರು. ಅವರಿಂದ ಹೀಗೆ ಮಾತು ಪಡೆದನಂತರ ನನಗೆ ಸಮಾಧಾನ ಆಯಿತಾದರೂ, ಮನದಲ್ಲಿ ತೋತಾದ್ರಿಯವರನ್ನು ದೇವರು ಹೇಗೆ ದಡ ಮುಟ್ಟಿಸುತ್ತಾನೋ ನನಗೂ ತಿಳಿಯದಲ್ಲಾ ಎಂದು ಚಿಂತಿಸುತ್ತಲೇ ಇದ್ದೆ. ಅಂತೂ 'ನಂಬಿ ಕೆಟ್ಟವರಿಲ್ಲವೋ ರಂಗಯ್ಯನ' ಎಂದು ದಾಸರು ಹೇಳಿರುವಂತೆ ಐದು-ಆರು ದಿನಗಳಲ್ಲಿ ಶ್ರೀ ತೋತಾದ್ರಿಯವರ ಆರೋಗ್ಯ ಸುಧಾರಿಸಿತು. ಅವರು ಎಂದಿನಂತೆ ಆದರು. ಆಗ ಪ್ರೇಮಾಗೆ ಆದ ಸಂತೋಷ ಅಷ್ಟಿಷ್ಟಲ್ಲ. ಅಂತೂ ಆ ಹೆಣ್ಣುಮಗಳ ಬಾಳು ಸರಿಯಾಯಿತು ಎಂದು ನಮಗೂ ಬಹಳ ಸಮಾಧಾನವಾಯಿತು. ಈ ಘಟನೆಯ ನಂತರ ಆ ಕುಟುಂಬ ನಮಗೆ ಬಹಳ ಬಹಳ ಹತ್ತಿರವಾಯಿತು. ನಾನು ಪೂಜೆ ಮಾಡಿ ಕೊಟ್ಟ ಪ್ರಸಾದ ತಮ್ಮನ್ನು ಉಳಿಸಿತು ಎಂದು ತಿಳಿದಿರುವ ಆ ದಂಪತಿಗಳ ಪುಣ್ಯಫಲವೇ ಅವರನ್ನು ಕಾಯ್ದಿದೆ ಎನ್ನುವುದನ್ನು ತಿಳಿದಿರುವ ನಾನು, ಅವರ ಕೃತಜ್ಞತೆಯನ್ನು ಆ ದೇವರಿಗೇ ಅರ್ಪಿಸಿದ್ದೇನೆ!

'ಹೆಮ್ಮೆಯ ಕೂಸು' ವಿದ್ಯಾಭವನ

ಹೀಗೆ ಭವನದ ದಾದಿಯರು ಹಲವು ಮಂದಿ! ಭವನವನ್ನು ಪ್ರೀತಿಯಿಂದ ಸಲಹಿದ ಅಣ್ಣಂದಿರು ಹಲವರು! ದುಲಾರಿ, ರಾಮ್‌ಹಿತ್, ಶಾಮಲಾ, ಪದ್ಮನಾಭನ್, ರಾಧಾ, ನಟರಾಜನ್, ರಾಜೀ ರಾಜಗೋಪಾಲ್ ಇವರೆಲ್ಲ ಭವನದ ಸ್ವಯಂಸೇವಕರು. ವಿದ್ಯಾಭವನದ ಕೆಲಸವೆಂದರೆ ಪ್ರತಿಯಾಗಿ ಏನೂ ನಿರೀಕ್ಷಿಸದೆ ಪ್ರೀತಿಯಿಂದ ಬಂದು ಸಹಾಯ ಮಾಡುತ್ತಿದ್ದರು. ಇವರೆಲ್ಲರ ಹೆಮ್ಮೆಯ ಕೂಸು 'ಲಂಡನ್ ವಿದ್ಯಾಭವನ ಕೇಂದ್ರ' ಎಂದರೆ ತಪ್ಪಿಲ್ಲ!

ಇವರಲ್ಲಿ ವಿಶೇಷವಾಗಿ ನಾನು ಇಲ್ಲಿ ಹೇಳಬಯಸುವುದು ಶ್ರೀಮತಿ ರಾಜೀರಾಜಗೋಪಾಲನ್‌ರ ಸೇವೆಯನ್ನು! ಭವನದ ಹತ್ತಿರದಲ್ಲಿದ್ದ ಅಂಧರ ಸಂಸ್ಥೆಯಲ್ಲಿ ಬ್ರೈಲ್‌ಲಿಪಿಯನ್ನು ಕಲಿತು ನಿಷ್ಣಾತರಾಗಿದ್ದ ಶ್ರೀಮತಿ ರಾಜೀರಾಜಗೋಪಾಲನ್ ಆ ಸಂಸ್ಥೆಗೆ ಬೇಕಾದ ಸಾಹಿತ್ಯವನ್ನು ಮಾಡಿಕೊಡುತ್ತಿದ್ದರು. ೧೯೭೪-೭೫ರಲ್ಲಿ ಶಾರ್ಟ್‌ಹ್ಯಾಂಡ್ ಬರುತ್ತಿದ್ದು, ಆ ಬ್ರೈಲ್ ಲಿಪಿಯನ್ನೂ ಶಾರ್ಟ್‌ಹ್ಯಾಂಡ್‌ನಲ್ಲೇ ತೆಗೆದುಕೊಂಡು ಸೊಗಸಾಗಿ ಟೈಪು ಮಾಡಿಕೊಡುತ್ತಿದ್ದ ಶ್ರೀಮತಿ ರಾಜೀ ಬಹಳ ಚುರುಕು ಶೀಘ್ರಲಿಪಿಕಾರ್ತಿ, ಬೆರಳಚ್ಚುಗಾರ್ತಿ! ನಮ್ಮ ವಿದ್ಯಾಭವನದಲ್ಲಿ ಆಗ ಯಾರೂ 'ಸೆಕ್ರೆಟರಿ' ಎಂದು ಇರಲಿಲ್ಲ.

ಹೀಗಾಗಿ ಟೈಪು ಮಾಡುವುದನ್ನೆಲ್ಲ ನಾನೇ ಟೈಪು ಮಾಡಿಕೊಳ್ಳಬೇಕಿತ್ತು. ಶ್ರೀಮತಿ ರಾಜೀಯವರ ಪರಿಚಯವಾದನಂತರ, ನನ್ನ ಕೆಲಸಗಳ ಒತ್ತಡವನ್ನು ಗಮನಿಸಿದ ಆಕೆ, ನಾನು ಹೀಗೆ ಟೈಪು ಮಾಡುವುದು ನನ್ನ ಬಹಳಷ್ಟು ಸಮಯವನ್ನು ತೆಗೆದುಕೊಂಡು ಬಿಡುತ್ತಿದೆ ಎನ್ನುವುದನ್ನು ಅರಿತು, "ಮತ್ತೂರ್‌ಜೀ, ನೀವು ಹೀಗೆ ಟೈಪು ಮಾಡುತ್ತಾ ಕೂರುವುದು ಬೇಡ. ನಾನು ಮಧ್ಯಾಹ್ನ ನನ್ನ ಊಟವನ್ನು ಬೇಗ ಮುಗಿಸಿ ನಿಮ್ಮ ಭವನಕ್ಕೆ ಬಂದು ಆದಷ್ಟು ಟೈಪು ಮಾಡಿಕೊಡುತ್ತೇನೆ. ಹಾಗೂ ಪತ್ರಗಳು ಉಳಿದರೆ ನನ್ನ ಆಫೀಸಿನ ಕೆಲಸಗಳು ಮುಗಿದ ಕೂಡಲೆ ಅಲ್ಲೇ ಇವುಗಳನ್ನೂ ಟೈಪು ಮಾಡಿ ಸಂಜೆ ಮನೆಗೆ ಹೋಗುವಾಗ ನಿಮಗೆ ತಂದುಕೊಟ್ಟು ಹೋಗುತ್ತೇನೆ. ಆಗದೇ?" ಎಂದರು! ಇದೆಂತಹ ಸಹೃದಯತೆ! ನಾನು ಮೂಕನಾಗಿ ತಲೆ ಅಲ್ಲಾಡಿಸಿದೆ. ನಿಜ, ನನಗೂ ಯಾರಾದರೂ ಸಹಾಯಕರ ಆವಶ್ಯಕತೆ ಇದ್ದಿತು. ಎಲ್ಲ ಕೆಲಸಗಳ ಹೊರೆಯನ್ನೂ ನಾನೊಬ್ಬನೇ ಹೊರಲಾರದವನಾಗಿದ್ದೆ. ಆದರೂ ಭಂಡತನದಿಂದ ಮೊಂಡು ಹಿಡಿದ ರಾಕ್ಷಸನಂತೆ ಎಲ್ಲ ಕೆಲಸ ಮಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದೆ. ಒಮ್ಮೊಮ್ಮೆ ಬಹಳ ದಣಿದ ದೇಹಕ್ಕೆ, 'ಯಾರಾದರೂ ಸಹಾಯ ಮಾಡಿಕೊಡುವವರಿದ್ದರೆ' ಎನ್ನಿಸುತ್ತಿದ್ದುದು ಸುಳ್ಳಲ್ಲ! ಈಗ ರಾಜೀರಾಜಗೋಪಾಲನ್‌ರ ರೂಪದಲ್ಲಿ ಆ ದೇವರೇ ನನಗೆ ಸಹಾಯ ಕಳುಹಿಸಿದ್ದ ! ಮಧ್ಯಾಹ್ನದ ವಿರಾಮದ ಸಮಯ ಒಂದು ಘಂಟೆಯಲ್ಲಿ, ಅವರ ಆಫೀಸಿನಿಂದ ನಮ್ಮ ಆಫೀಸಿಗೆ ಬರಲು ಐದು ನಿಮಿಷ, ನಮ್ಮ ಆಫೀಸಿನಿಂದ ಮತ್ತೆ ಅವರ ಆಫೀಸಿಗೆ ಹಿಂದಿರುಗಲು ಐದು ನಿಮಿಷ, ಆಕೆ ಆಫೀಸಿನಿಂದ ಹೊರಡುವ ಮುನ್ನ ಊಟ ಮಾಡಿ ಹೊರುಡುತ್ತಿದ್ದುದು, ಆ ಊಟ ಮಾಡಲು ಐದು ನಿಮಿಷ, ಹೀಗೆ ೧೫ ನಿಮಿಷಗಳನ್ನುಳಿದು ಮಿಕ್ಕ ೪೫ ನಿಮಿಷಗಳಲ್ಲಿ ಭವನದಲ್ಲಿ ಇರುತ್ತಿದ್ದ ಎಲ್ಲ ಟೈಪಿಂಗ್ ಕೆಲಸಗಳನ್ನೂ ಮುಗಿಸಿಟ್ಟು ಹೋಗುತ್ತಿದ್ದರು!! ಇನ್ನು ಕೆಲವು ಮಿಕ್ಕಿದರೆ ಅವರು ತಾವು ಹಿಂದೆ ಹೇಳಿದಂತೆ, ತಮ್ಮ ಆಫೀಸಿಗೆ ತೆಗೆದುಕೊಂಡು ಹೋಗಿ ಟೈಪು ಮಾಡಿ ತಂದು ಕೊಡುತ್ತಿದ್ದರು!!

ಇದು ಪೂರ್ತಿಯಾಗಿ ಅವರು ಪ್ರೀತಿಯಿಂದ ಮಾಡಿ ಕೊಡುತ್ತಿದ್ದ ಕೆಲಸ. ಭವನ ಅವರ ಸೇವೆಗೆ ಪ್ರತಿಯಾಗಿ ಏನೂ ಕೊಟ್ಟದ್ದಿಲ್ಲ, ಹಣದ ರೂಪದಲ್ಲಿ. ಹೀಗೆ, ವಿಶ್ರಾಂತಿ ತೆಗೆದುಕೊಳ್ಳದೆ ವಿದ್ಯಾಭವನಕ್ಕೆ ಬಂದು ಪತ್ರಗಳನ್ನು ಟೈಪು ಮಾಡಿಕೊಡುವಂತೆ ಮಾಡಿದುದು ಯಾವುದು? ಇನ್ನಾವುದು...? ನಮ್ಮ ಭಾರತೀಯ ಸಂಸ್ಕೃತಿ! ನಮ್ಮ ಸಂಸ್ಕಾರ ಅದು! ನಮ್ಮವರು ಕಷ್ಟಪಡುವಾಗ ನಮಗೆ ಕಷ್ಟವಾದರೂ, ಅವರ ಕೈಗೆ ಕೈ ಸೇರಿಸಿ ಕಷ್ಟ ಹಂಚಿಕೊಂಡು ಕೆಲಸ ಮುನ್ನಡೆಸುವುದು ಭಾರತೀಯರ ಸಂಪ್ರದಾಯ, ರೀತಿ-ನೀತಿ!! ಆ ಮನೋಭಾವ ಮಾತ್ರ ನಮ್ಮವರಲ್ಲಿ ಮಾತ್ರವೇ ನಾವು ಕಾಣುವುದು. ಅಲ್ಲಿನ ಜನರಿಗೆ ಈ ಪರಿಯ ಕಾಳಜಿ ಇಲ್ಲ. ಬಂಧನ ಎಂದು ಯಾವುದಕ್ಕೂ, ಯಾರಿಗೂ ಅವರನ್ನು ಅವರು ಬಂಧಿಸಿಕೊಂಡವರಲ್ಲ. ಅವರಿಗೆ ಮೊದಲು ತಮ್ಮ ಸಮಯ, ತಮ್ಮ ಆರಾಮ, ತಮ್ಮ ಕೆಲಸ ಕಾರ್ಯ, ಅನಂತರ ಇತರರದು. ಅವರಿಂದ ಅದೂ ಸಾಧ್ಯವಾಗುವುದಾದರೆ ಮಾತ್ರ ; ಇಲ್ಲವಾದರೆ ದಾಕ್ಷಿಣ್ಯವೇ ಇಲ್ಲ, "ಸಾರಿ, ಕ್ಷಮಿಸಿ, ನನ್ನಿಂದ ಮಾಡಲಾಗದು..." ಎಂದು ಹುಬ್ಬೇರಿಸಿ, ಭುಜ ಕುಣಿಸಿ ಸುಮ್ಮನಾಗುವ ಜನ ಅವರು!

ಶ್ರೀಮತಿ ಪ್ರೇಮರ ಹಾಗೆಯೇ, ರಾಜೀ ರಾಜಗೋಪಾಲನ್‌ರ ಹಾಗೆಯೇ ನನಗೆ ಸಹಾಯ ಮಾಡುತ್ತಿದ್ದವರು ಶ್ರೀಮತಿ ಸಿಲ್ವ ಮೆಹ್ತಾ. ಶ್ರೀ ಮೆಹ್ತಾ ಪಾರ್ಸಿಯವರು. ಈ ದಂಪತಿಗಳ ಮಕ್ಕಳು ಮೀರಾ, ಶ್ಯಾಮ್, ಈ ಇಬ್ಬರಿಗೂ ನಾನೇ ಮದುವೆಯನ್ನು ಮಾಡಿಸಿದೆ. ಸಿಲ್ವ ಮೆಹ್ತಾ ಭಾರತದ ಶ್ರೀ ಕೆ.ಎಸ್. ಅಯ್ಯಂಗಾರ್‌ರ ಶಿಷ್ಯೆ. ಈಕೆಯೂ ಬಂದು ನನಗೆ ಟೈಪು ಮಾಡಿಕೊಡುವುದಿತ್ತು. ಹೀಗೆ ನಾನು ಬರೆಯುತ್ತಾ ಹೋದರೆ ಪಟ್ಟಿ ಬೆಳೆಯುತ್ತದೆ. ಇವರೆಲ್ಲರ ಸಹಕಾರ, ಸಹಾಯ ನನ್ನ ನೈತಿಕ ಬಲವನ್ನು ಬಹಳವಾಗಿ ಹೆಚ್ಚಿಸುತ್ತಿತ್ತು. ಈ ಕೆಲಸ ಮಾಡಬಲ್ಲೆ ಎನ್ನುವ ಆತ್ಮವಿಶ್ವಾಸ ತುಂಬುತ್ತಿತ್ತು. ಆರಂಭದ ದಿನಗಳಲ್ಲಿ ತಮ್ಮ ಸಹಾಯಹಸ್ತ ನೀಡಿದ ಈ ಮಹನೀಯರು-ಮಾನ್ಯೆಯರು ಪರದೇಶದಲ್ಲಿ ನಾನು ಮಾಡಲು ಹೊರಟಿದ್ದ ಸಾಹಸಕ್ಕೆ ಪ್ರೋತ್ಸಾಹ ಕೊಟ್ಟರು... ಯಾವುದೇ ಒಂದು ಕೆಲಸ ಎಲ್ಲಾ ರೀತಿಯಲ್ಲೂ ಸರಿಯಾಗಿದ್ದು ನ್ಯಾಯವಾಗಿದ್ದುದೇ ಆದರೆ ಸಹೃದಯರ ಸಹಾಯ ಇದ್ದೇ ಇರುತ್ತದೆ. ಅದರಲ್ಲೂ ದೇಶವನ್ನೇ ಪ್ರತಿನಿಧಿಸುವ ಚಟುವಟಿಕೆಗಳನ್ನು ಹಮ್ಮಿಕೊಂಡು 'ವಿದ್ಯಾಭವನ'ದ ಮೂಲಕ ನಡೆಸುವಾಗ ನಮ್ಮವರ ಉತ್ತೇಜನ, ಸಹಾಯ, ಜತೆ ಸೇರಿಕೊಳ್ಳುವಿಕೆ ಏಕಾಕಿತನವನ್ನು ಓಡಿಸಿ ಎದೆಯಲ್ಲಿ ಧೈರ್ಯ ತುಂಬಿ, ಉತ್ಸಾಹ ಹೆಚ್ಚಿಸಿತ್ತು. ಭವನದ ಬೆಳವಣಿಗೆ ಭರದಿಂದ ಮುಂದುವರೆದಿತ್ತು!

ಪತ್ನಿಗೆ ತಿಳಿಸದೆ ಮನೆ ಮಾರಿದ್ದು

ಒಂದೆಡೆ ಈ ರೀತಿಯ ಜನ... ಮತ್ತೊಂದೆಡೆ ತಾನೇ ಭಾರತದಲ್ಲಿ ತನ್ನ ತಂದೆ - ತಾಯಿ, ಬಂಧು - ಬಳಗದ ಸಮಕ್ಷಮದಲ್ಲಿ ಮದುವೆ ಯಾದ ಹುಡುಗಿಯನ್ನು, ತನ್ನ ತಂದೆ-ತಾಯಿಗಳೇ ಕರೆದುಕೊಂಡು ಬಂದು 'ಅವಳ ಜತೆ ಬಾಳುವೆ ನಡೆಸು' ಎಂದಾಗ ಬೇಡವೆಂದು ದೂರ ಸರಿದು ಡೈವೋರ್ಸ್ ಕೊಟ್ಟು ಲಂಡನ್‌ನಲ್ಲಿ ತನ್ನದೇ ಕ್ಲಿನಿಕ್ ಹೊಂದಿದ್ದ ಡಾಕ್ಟರು! ಅವನಂತೆಯೇ ಇನ್ನೊಬ್ಬ ಮಹಾಶಯರು ತಮ್ಮ ಪತ್ನಿಗೆ ತಿಳಿಯದಂತೆ, ಇದ್ದ ಒಂದು ಮನೆಯನ್ನು ಮಾರಿ, ಕೋರ್ಟಿನಲ್ಲಿ ಡೈವೋರ್ಸ್‌ಗೆ ಬೇರೆ ಅರ್ಜಿ ಹಾಕಿದ್ದರು. ಆಕೆಯ ಪರ ವಕಾಲತ್ತು ವಹಿಸಿದ್ದ ವಕೀಲರು ಇಂಗ್ಲಿಷಿನವರು. ಅವರು ನನ್ನ ಪರಿಚಯದವರು. ಅವರು ಎಲ್ಲ ವಿಷಯವನ್ನೂ ನನಗೆ ಹೇಳಿ, "ಮಾಥೂರ್‌ಜೀ, ಹೇಗಾದರೂ ಮಾಡಿ ಆಕೆಯನ್ನು ರಕ್ಷಿಸಬೇಕಿದೆ, ಮಕ್ಕಳೂ ಇದ್ದಾರೆ ಆಕೆಗೆ, ನನ್ನ ವಾದಕ್ಕೆ ಪುಷ್ಟಿ ಕೊಡುವಂಥ ಅಂಶ ಏನಾದರೂ ನಿಮ್ಮ

ಧರ್ಮದಲ್ಲಿದೆಯೇ? ನೋಡಿ ಹೇಳಿ'' ಎಂದರು. ಕೂಡಲೇ ನಾನು ''ಅದೇಕಿಲ್ಲ? ನಮ್ಮಲ್ಲಿ 'ಧರ್ಮೇಚ, ಅರ್ಥೇಚ, ಕಾಮೇಚ ನಾತಿಚರಾಮಿ' ಎಂದು ಹೇಳಿ ಸತಿ-ಪತಿಯರು ಒಬ್ಬರಿಗೊಬ್ಬರು ಪ್ರಮಾಣ ಮಾಡುತ್ತೇವೆ. ಈ ಮಂತ್ರದಲ್ಲಿ ಹೇಳಿರುವಂತೆ 'ಧರ್ಮದಲ್ಲಿ ಎಂದರೆ ನನ್ನ ಕರ್ತವ್ಯವನ್ನು ಮಾಡುವುದರಲ್ಲಿ, ಅರ್ಥದಲ್ಲಿ, ಎಂದರೆ ಹಣಕಾಸು ಇತ್ಯಾದಿ ವ್ಯವಹಾರ ಮಾಡುವುದರಲ್ಲಿ, ಕಾಮದಲ್ಲಿ ಎಂದರೆ ನನ್ನ ಇಷ್ಟಾರ್ಥವನ್ನು ಪೂರೈಸಿಕೊಳ್ಳುವುದರಲ್ಲಿ, ''ನಾತಿ ಚರಾಮಿ'', ಎಂದರೆ ನಿನ್ನ ಮಾತನ್ನು ಮೀರಿ ಹೋಗುವುದಿಲ್ಲ, ನಿನ್ನನ್ನು ಕೇಳಿಯೇ ಮಾಡುತ್ತೇನೆ' ಎಂದು ಹೇಳುತ್ತೇವೆ. ಇದೇ ಒಂದು ದೊಡ್ಡ ಆಧಾರ ನಮಗೆ. ಈ ಮಾತಿನ ನಂಬಿಕೆಯ ಮೇಲೆಯೇ ಹಲವಾರು ವರ್ಷಗಳು ನಾವು ಒಬ್ಬರನ್ನೊಬ್ಬರು ಬಿಡದೆ, ಕೊನೆಯತನಕ ಕೂಡಿ ಬಾಳುವುದು. ಅಷ್ಟು ಪಾವಿತ್ರ್ಯ ಇದೆ ಆ ಮಂತ್ರಕ್ಕೆ. ಅಷ್ಟು ಶ್ರದ್ಧೆ ನಮಗೂ ಆ ಮಂತ್ರದ ಮೇಲಿದೆ!! ಇದನ್ನು ನೀವು ನಿಮ್ಮ ವಾದದಲ್ಲಿ ಮಂಡಿಸ ಬಹುದು'' ಎಂದು ಸಲಹೆ ಮಾಡಿದೆ. ಅವರಿಗೆ ಈಗ ನಿಜಕ್ಕೂ ಖುಷಿಯಾಗಿದ್ದಿತು. ''ಮಾಥೂರ್‌ಜೀ, ಅಕಸ್ಮಾತ್ ನಿಮ್ಮನ್ನು ಸಾಕ್ಷಿ ಹೇಳಿ ಎಂದು ಕರೆದರೆ ಬಂದು ಕೋರ್ಟಿನಲ್ಲಿ ಹೇಳುತ್ತೀರಷ್ಟೆ?'' ಎಂದರು. ''ಓಹೋ... ಅಗತ್ಯವಾಗಿ, ಅದಕ್ಕೇನಂತೆ? ಇರುವುದನ್ನು ಹೇಳಲು ಹಿಂಜರಿಕೆ ಏಕೆ? ಖಂಡಿತಾ ಹೇಳುತ್ತೇನೆ!'' ಎಂದು ಹೇಳಿಬಿಟ್ಟೆ. ಅಂತೆಯೇ ನಾನು ಕೋರ್ಟಿಗೆ ಸಾಕ್ಷಿ ಹೇಳಲು ಹೋಗಬೇಕಾಯಿತು.

ಕೋರ್ಟಿನಲ್ಲಿ ಮಕ್ಕಳೊಡನೆ ನಿಂತಿದ್ದ ಆ ಹೆಂಗಸನ್ನು ನೋಡಿ ನನ್ನ ಕರುಳು ಚುರ್ರೆಂದಿತು. ಅವಳ ಗಂಡನನ್ನು ನೋಡಿದ ನಾನು ''ಅಮ್ಮಾ, ಭಾರತಮಾತೆ, ಇಂತಹವರೂ ನಿನ್ನ ಮಕ್ಕಳಾಗಿರಬೇಕೆ? ಛೇ...!!'' ಎಂದುಕೊಂಡೆ. ನನ್ನ ಪರಿಚಯದ ವಕೀಲರು ತಮ್ಮ ವಾದ ಮುಂದುವರೆಸಿ, ನಾನು ಅವರಿಗೆ ಹೇಳಿದುದನ್ನೇ ಮ್ಯಾಜಿಸ್ಟ್ರೇಟರಿಗೆ ಹೇಳಿ, 'ಇವರು ಹಿಂದೂ ಧರ್ಮದವರು. ಇವರನ್ನೇ ಕೇಳಿ ಅಂತಹ ಒಂದು ಪ್ರತಿಜ್ಞೆ ಇದೆಯೋ ಇಲ್ಲವೋ ಎಂದು' ಎಂದರು. ನ್ಯಾಯಾಧೀಶರು ನನ್ನನ್ನು ಕೇಳಿದಾಗ ನಾನು, ''ಹೌದು, ಯುವರ್ ಆನರ್, ಹೀಗೆ ಒಂದು ವಾಗ್ದಾನ ಇದೆ. ಮದುವೆಯಾದಾಗ ನಾವು ಪತಿ-ಪತ್ನಿಯರು ಅದನ್ನು ಮಾಡುತ್ತೇವೆ!'' ಎಂದೆ, ನಾನು. ಅದಕ್ಕೆ ಬಹಳ ಮೆಚ್ಚುಗೆಯನ್ನು ಸೂಚಿಸಿದ ನ್ಯಾಯಾಧೀಶರು, ಆಕೆಯ ಪತಿಯ ಕಡೆಗೆ ತಿರುಗಿ ಕಟಕಟೆಯಲ್ಲಿ ನಿಂತಿದ್ದ ಆತನನ್ನು, ''ನೋಡಿದೆಯಾ? ನೀನೂ ಅದೇ ಧರ್ಮದವನು ತಾನೇ? ಅವರು ಹೇಳಿದ್ದು ನಿಜ ತಾನೇ? ನೀನು ಹಾಗೆ ಪ್ರಮಾಣ ಮಾಡಿ ನಿನ್ನ ಪತ್ನಿಗೆ ಹೇಳಿಲ್ಲವೇ?'' ಎಂದರು. ಓದುಗರೇ, ಅದಕ್ಕೆ ಆ ಮಹಾಶಯ ಏನೆಂದಿರಬಹುದು, ಊಹಿಸಬಲ್ಲಿರಾ? ಊಹೂಂ... ನಿಮ್ಮಿಂದ ಅದನ್ನು ಊಹಿಸಲಾಗದು. ಅಷ್ಟು ದುಷ್ಟತನ ಇದೆ ಆತನ ಉತ್ತರದಲ್ಲಿ! ಆ ರೀತಿ ದುಷ್ಟರಲ್ಲ ನಾವು. ಅದಕ್ಕೆ ಊಹಿಸಲಾರೆವು! ಆತ ''ಇಲ್ಲ ಯುವರ್ ಆನರ್, ನಾನು ಹಾಗೆ ಪ್ರಮಾಣ ಮಾಡಿಲ್ಲ ಅವಳಿಗೆ, ಬಹುಶಃ ನನ್ನ ಮದುವೆ ಮಾಡಿಸಿದ ಪುರೋಹಿತ ಹಾಗೆ ಪ್ರಮಾಣ ಮಾಡಿದ್ದಾನು!'' ಎನ್ನುವುದೇ? ಇದಕ್ಕಿಂತ ಕ್ರೂರತನದ ಉದಾಹರಣೆ ಬಹುಶಃ ಮತ್ತೆಲ್ಲೂ ಸಿಕ್ಕಲಾರದು!!

ಪುರುಷವರ್ಗದಲ್ಲಿ ಮಾತ್ರ ಈ ರೀತಿ ಇರುತ್ತಾರೆ ಎಂದು ಕೊಳ್ಳುವಂತಿಲ್ಲ. ಕೆಲವು ಸ್ತ್ರೀಯರೂ ಪುರುಷರಿಗೆ ಕಡಮೆ ಏನಿಲ್ಲ! ನಾವು ಲಂಡನ್‌ಗೆ ಹೋದ ಹೊಸದರಲ್ಲಿ ಪರಿಚಯವಾದ ತರುಣ ಕಾಂತಿ... ಎಲ್.ಐ.ಸಿ.ಯಲ್ಲಿ ಕೆಲಸ ಮಾಡುತ್ತಿದ್ದ. ಅವನು ನಮ್ಮ ಮನೆಯ ಹುಡುಗನಂತೆಯೇ ಇದ್ದ. ತಂದೆ-ತಾಯಿಗಳ ಜತೆ ಖುಷಿಯಿಂದಿದ್ದ ಹುಡುಗ ಆಗಾಗ ವಿದ್ಯಾಭವನಕ್ಕೆ ಬಂದು ಹೋಗುವುದಿತ್ತು. ಅಗತ್ಯ ಬಿದ್ದಾಗ ತನ್ನ ಕೈಲಾದ ಸಹಾಯವನ್ನೂ ಮಾಡುತ್ತಿದ್ದ. ಕಾಂತಿ ಗುಜರಾತಿ ತರುಣ. ಕಾಂತಿಗೆ ಮದುವೆಯಾಯಿತು. ಹಿರಿಯರೆಲ್ಲರೂ ಒಪ್ಪಿ ಮಾಡಿದ ಮದುವೆ ಅದು. ಮದುವೆಯಾಗಿ ವಾರಗಳು ಕಳೆದರೂ ಪತಿಯ ಜತೆಗೆ ಮನೆಗೆ ಬಾರದ ಮದುಮಗಳಿಂದ ಕಾಂತಿಗೆ ಇರುಸುಮುರುಸಾಗಿತ್ತು. ಕಾಂತಿ ಇದನ್ನೆಲ್ಲ ನನ್ನಲ್ಲಿ ಹೇಳಿರಲಿಲ್ಲ. ಹೀಗೆಯೇ ಕೆಲವು ದಿನಗಳು ಕಳೆದಿದ್ದವು . ಕಾಂತಿಯ ಮುಖ ಈಗ ಕಾಂತಿಹೀನ ಆಗಿದ್ದುದು ನನ್ನ ಗಮನಕ್ಕೂ ಬಂದಿತು. ಸದಾ ನಸುನಗುತ್ತಿದ್ದ ಅವನು ಇತ್ತೀಚೆಗೆ ಉದಾಸೀನವಾಗಿದ್ದುದನ್ನು ನೋಡಿ ನಾನು ಒಮ್ಮೆ ಅವನನ್ನೇ ಕೇಳಿದೆ... ''ಏನು ಮಾಡುವುದು ಮಾಥೂರ್‌ಜೀ, ಮದುವೆಯಾದಂದಿನಿಂದಲೂ ನನ್ನ ಪತ್ನಿ ನನ್ನ ಜತೆಗೆ ನಮ್ಮ ಮನೆಗೆ ಬರುವುದಿಲ್ಲ ಎನ್ನುತ್ತಿದ್ದಾಳೆ. ಅವಳಿಗೆ ಮಹಡಿಯ ಮನೆ ಬೇಕು ಎಂದಾಗ, ಬೇರೆ ಮನೆ ನೋಡೋಣ ಎಂದೂ ಹೇಳಿದೆ. ಆದರೂ ನಮ್ಮ ತಂದೆ ತಾಯಿಗೆ ಮಹಡಿ, ಹತ್ತಿ ಇಳಿಯುವುದು ಕಷ್ಟ... ಏನೋ ಯಾವುದೂ ಸರಿ ಎನಿಸುತ್ತಿಲ್ಲ!'' ಎಂದು ತನ್ನ ಸಂಕಟ ಹೇಳಿಕೊಂಡ. ಹೊಸದಾಗಿ ಮದುವೆಯಾಗಿ ಖುಷಿಯಿಂದ ಇರಬೇಕಾದ ಆ ತರುಣನ ಮುಖದಲ್ಲಿ ಬೇಸರದ ಛಾಯೆ ಕಂಡು ನನಗೂ 'ಅಯ್ಯೋ' ಎನಿಸಿತು. ನನಗೆ ಈಗ ಕಾರಣವೂ ಗೊತ್ತಾಗಿತ್ತು! ''ಕಾಂತಿ... ಏನೂ ತಿಳಿಯದಿದ್ದರೆ ನಾನು ನಿನಗೊಂದು ಮಾತು ಹೇಳಲೇ? ಆ ಹುಡುಗಿ ನಿನ್ನನ್ನು ಪ್ರೀತಿಸುತ್ತಿಲ್ಲ. ಅವಳಿಗೆ ನೀನು ನಿನ್ನ ತಂದೆ-ತಾಯಿಯ ಜತೆಗಿರುವುದೂ ಹಿಡಿಸುತ್ತಿಲ್ಲ. ಅದಕ್ಕೇ ಅವಳು ನಿನಗೆ ಹೀಗೆ ತೊಂದರೆ ಕೊಡುತ್ತಿದ್ದಾಳೆ. ನೀನು ಅವಳನ್ನು ಸಹಿಸಿಕೊಳ್ಳುತ್ತಿರುವುದಾದರೂ ಹೇಗೆ ? ಕಾಂತಿ , ಅವಳು ನಿನ್ನನ್ನು ನಿಜವಾಗಿಯೂ ಪ್ರೀತಿಸುತ್ತಿದ್ದರೆ ಅವಳು ನಿನಗೆ ಹೀಗೆ ಕಿರುಕುಳ ಕೊಡುತ್ತಿರಲಿಲ್ಲ. ನೀನು ಅವಳನ್ನು ಅವಳ ಇಷ್ಟದಂತೆ ಬಿಟ್ಟುಬಿಡು, ಬೇರೆ ಮದುವೆಯಾಗು!'' ಎಂದೆ. ಕಾಂತಿಗೆ ಆಶ್ಚರ್ಯ ಎನಿಸಿದರೂ ಯೋಚಿಸುತ್ತಾ ಅಲ್ಲಿಂದ ನಡೆದ. ನಾನು ಹೇಳಿದಂತೆ, ಅವನು ಆ ಹುಡುಗಿಯನ್ನು ತಾನು ಬಿಡುತ್ತೇನೆ ಎಂದು ಹೇಳಿದಾಗ ಆ ಹುಡುಗಿಯೂ ಮರುಮಾತಾಡದೆ ಅವನಿಂದ

ಬೇರೆಯಾಗಲು ಒಪ್ಪಿದಳು!! ಹೀಗೆ ಅವಳನ್ನು ಡೈವೋರ್ಸ್ ಮಾಡಿದ ಕಾಂತಿಗೆ, ಗುಜರಾತಿಯ ಹುಡುಗಿಯೊಬ್ಬಳ ಜೊತೆ ಮದುವೆಯೂ ಆಯಿತು. ಎರಡು ಮುದ್ದಾದ ಮಕ್ಕಳಿರುವ ಕಾಂತಿಯ ಸುಖದ ಸಂಸಾರ ನೋಡಿದಾಗ ನನಗೇ ಬಹಳ ಸಂತೋಷ-ನೆಮ್ಮದಿ ಎನಿಸುತ್ತದೆ. ಹೀಗೆ, ಈ ರೀತಿ ಇರುವ ಹೆಣ್ಣುಮಕ್ಕಳೂ ಇರುತ್ತಾರೆ.

ನಾವು ಭಾರತೀಯ ಮೂಲದವರೇ ಆದರೂ, ನಮ್ಮಲ್ಲೂ 'ಅಪವಾದ' ಎನಿಸುವವರು ಇರುತ್ತಾರಷ್ಟೆ? ಅಂತಹವರ ಪೈಕಿ ಈ ತರುಣ-ತರುಣಿಯರು! ಹೀಗೆ... ಇಂತಹವರನ್ನು ನಾನು ಅಲ್ಲಿ ನೋಡಿದೆ!!

ಹಿಂದೂ ಖೈದಿಗಳ ಸಂಖ್ಯೆ ಕಡಮೆ ಏಕೆ ?

ಎಂಥ ಧರ್ಮ ನಮ್ಮದು, ಅದಕ್ಕಿರುವ ಸಚ್ಚಾರಿತ್ರ್ಯ ಎಂಥದು, ನಾವು ಹುಟ್ಟಿ ಬಂದ ಮಣ್ಣಿನ ಮಹಿಮೆ ಏನು? ಯಾವುದರ ಮಹತ್ತ್ವವನ್ನೂ ಅರಿಯದೆ ಹೀಗೆ ಮೃಗಗಳಂತೆ ವರ್ತಿಸುವವರೂ ಇದ್ದಾರೆ ಅಲ್ಲಿ. ನಮ್ಮ ಧರ್ಮ, ಸನಾತನ ಧರ್ಮ ಎನ್ನುವಾಗ ನನ್ನ ಓದುಗರಿಗೆ ಕುತೂಹಲಕಾರಿ ವಿಷಯವೊಂದನ್ನು ಹೇಳಬೇಕೆಂದು ನನ್ನ ಮನಸ್ಸು ತವಕ ಪಡುತ್ತಿದೆ. ಅದು ಏನೆಂದು ಕೇಳಲು ನೀವೂ ಉತ್ಸುಕರಾಗಿರುವಿರಷ್ಟೇ ? ನಿಮ್ಮ ಕುತೂಹಲವೂ ಕೆರಳಿರಬೇಕು ಈಗ ?!

ಅಲ್ಲಿ ಬ್ರಿಟನ್‌ನಲ್ಲಿ, 'ಹರ್ ಮ್ಯಾಜೆಸ್ಟೀಸ್ ಪ್ರಿಸನ್ ಸರ್ವೀಸಸ್' ಎಂದು ಒಂದು ನಿಯಮ ಅಥವಾ ಪರಿಪಾಠ ಇದೆ. ಯಾವುದೇ ದೇಶವಾಗಲೀ ಯಾರೇ ಜನಾಂಗವಾಗಲೀ, ಸಮಾಜ ಎಂದ ಮೇಲೆ ಒಳ್ಳೆಯದು-ಕೆಟ್ಟದ್ದು ಎರಡರದೂ ಮಿಶ್ರಣ ತಾನೆ ? ಅಲ್ಲಿಯೂ ಹಾಗೆ, ಅಲ್ಲೇನೂ ಅದು ಹೊರತಲ್ಲ. ಅಲ್ಲಿಯೂ ಅಪರಾಧಗಳು ನಡೆಯುತ್ತವೆ. ಅಪರಾಧಿಗಳು ಜೈಲಿಗೆ ಹೋಗುತ್ತಾರೆ, ಅವರನ್ನು ಬಂಧನದಲ್ಲಿ ಇಡಲಾಗುತ್ತದೆ. ನಡವಳಿಕೆಯಲ್ಲಿ ಒಳ್ಳೆಯತನಕ್ಕೆ ಬದಲಾವಣೆ ಹೊಂದಿದರೆ ಅಂತಹ ಅಪರಾಧಿಗೆ, ನಮ್ಮ ದೇಶದಲ್ಲಿರುವಂತೆಯೇ, ಬೇಗ (ವಾಯಿದೆಗಿಂತಲೂ ಮುಂಚೆಯೇ) ಬಿಡುಗಡೆಯೂ ಆಗುತ್ತದೆ. ಹಾಗೆ ಅಪರಾಧ ಮಾಡಿ ಜೈಲಿಗೆ ಹೋಗುವ ಅಪರಾಧಿಗಳಿಗೆ, ಮಹಾರಾಣಿಯವರ ವತಿಯಿಂದ 'ಮಿನಿಸ್ಟರ್ ಆಫ್ ರಿಲಿಜನ್' ಎಂದು ನೇಮಕವಾಗಿರುವನು ಆಯಾ ಧರ್ಮದ ಮಂತ್ರಿಗಳು ಜೈಲಿಗೆ ಹೋಗಿ, ವಿಶೇಷವಾದ ಹಬ್ಬ ಹರಿದಿನಗಳಂದು, ಅಪರಾಧಿಗಳಿಂದ ಪೂಜೆ ಮಾಡಿಸಿ, ದೇವರ ಪ್ರಾರ್ಥನೆ ಮಾಡಿಸಿ ಬರುವುದು ಒಂದು ರೂಢಿ, ನಿಯಮ. ೧೯೮೨-೯೫ರವರೆಗೆ ಅಲ್ಲಿ ನಾನು ಹಿಂದೂ ಧರ್ಮದ 'ಧಾರ್ಮಿಕ ಮಂತ್ರಿ'ಯಾಗಿದ್ದೆ. ಆಗ ನಾನು ಅಲ್ಲಿನ ನ್ಯಾಯಾಧೀಶರನ್ನು ಒಮ್ಮೆ ಅಪರಾಧಿಗಳ ವಿಚಾರವಾಗಿ ಕೇಳಿದ್ದೆ. ಆಗ ಜೈಲಿನಲ್ಲಿದ್ದ ಅಪರಾಧಿಗಳ ಪಟ್ಟಿ ನೋಡಿ, ನನಗೆ ಹಿಂದೂ ಖೈದಿಯೊಬ್ಬನ ಬಗ್ಗೆ (ಅಪರಾಧಿಯೊಬ್ಬನ ಬಗ್ಗೆ) ಹೇಳಿ, ತಾವೇ ಕುತೂಹಲ ತಡೆಯಲಾರದೆ, "ಮಿಸ್ಟರ್ ಮಾಥೂರ್, ನಾನು ಬಹಳ ವರ್ಷಗಳಿಂದ ನೋಡುತ್ತಿದ್ದೇನೆ. ಎಲ್ಲ ಜನಾಂಗಗಳಲ್ಲೂ ಹಾಗಿಲ್ಲ, ಆದರೆ ನಿಮ್ಮ ಹಿಂದು ಧರ್ಮದವರಲ್ಲಿನ ಖೈದಿಗಳು ಮಾತ್ರ ಬಹಳ ಕಡಮೆ, ಅದೇಕೆ ಹಾಗೆ?" ಎಂದು ಪ್ರಶ್ನಿಸಿದರು.

ಇಲ್ಲಿ ನಾನು ಅವರಿಗೆ ಹೇಳಿದ ಉತ್ತರವನ್ನು ಕೇಳಿ-ಓದಿ ಇತರ ಧರ್ಮ-ಮತಗಳ ಮಂದಿ ನನ್ನನ್ನು ತಪ್ಪಾಗಿ ತಿಳಿಯ ಬೇಕಿಲ್ಲ. ನಮ್ಮ ಧರ್ಮದಲ್ಲಿ ಇರುವಂತೆಯೇ ಇತರ ಧರ್ಮಗಳೂ ಹೇಳುತ್ತವೆ. ಆದರೆ ನಮ್ಮಲ್ಲಿ ಅದಕ್ಕೆ ಹೆದರುವವರು ನಾ ಕಂಡಂತೆ ಹೆಚ್ಚು. ಅದಕ್ಕೇ ನಾನು ಅವರಿಗೆ ಹೀಗೆ ಹೇಳಿದೆ. "ಯುವರ್ ಆನರ್ (ಮಹಾಸ್ವಾಮಿಯವರೇ), ನಮ್ಮ ಧರ್ಮದಲ್ಲಿ ಯಾರೇ ಆದರೂ ಅಪರಾಧ ಮಾಡಿ ಜೈಲಿಗೆ ಹೋದರೆ ಅಂಥವರ ಮನೆಯ ಹೆಣ್ಣು ಮಕ್ಕಳನ್ನು ಇತರರು ಮದುವೆಯಾಗುವುದಿಲ್ಲ. ತಮ್ಮ ಮನೆಯ ಹೆಣ್ಣು ಮಕ್ಕಳನ್ನೂ ಅವರ ಮನೆಯ ಹುಡುಗರಿಗೆ ಕೊಡುವುದಿಲ್ಲ. ಇದು ಬಹಳ ಹಿಂದಿನಿಂದಲೂ ನಡೆದು ಬಂದಿರುವಂಥದು, ಇಂದಿನದಲ್ಲ! ಅದಕ್ಕೇ ಪಾಪ ಭೀರುಗಳಾಗಿದ್ದವರು ಸಾಮಾನ್ಯವಾಗಿ ಅಪರಾಧಗಳನ್ನು ಮಾಡುವುದಿಲ್ಲ, ಸಮಾಜದಲ್ಲಿ ತಮಗೆ ತಲೆ ಎತ್ತಲಾಗದಷ್ಟು ಅಪಮಾನವಾಗುತ್ತದೆ, ತಮ್ಮ ಜನರು ಬಹಿಷ್ಕಾರ ಹಾಕಿಬಿಡುತ್ತಾರೆ, ಸಮಾಜವನ್ನು ಬಿಟ್ಟು ತಾನೊಬ್ಬನೇ ಬಾಳಲಾಗದು ಎನ್ನುವ ಅರಿವು ಅವರಲ್ಲಿ ಜಾಗೃತವಾಗಿರುತ್ತದೆ. ಅದರ ಜೊತೆಗೆ ಅಸಾಧ್ಯದ ಸಾಲ ಮಾಡಿ 'ಪಾಪರ್‌ಚೀಟಿ' (ಇನ್‌ಸಾಲ್ವೆನ್ಸಿ) ತೆಗೆದುಕೊಳ್ಳುವುದೂ ಸಹ ನಮ್ಮಲ್ಲಿ ಬಹಳ ಕಡಮೆ... ಇಲ್ಲವೇ ಇಲ್ಲ ಎನ್ನಬಹುದು! ಏಕೆಂದರೆ ಅದು ಅಪರಾಧ ಮಾಡಿ ಜೈಲಿಗೆ ಹೋಗುವುದಕ್ಕಿಂತಲೂ ಹೆಚ್ಚಿನ ಅವಮಾನ ಎನ್ನುವುದು ನಮ್ಮವರ ಅಭಿಪ್ರಾಯ! ಇರುತ್ತದೆಯಷ್ಟೆ? ಹಾಗೆ 'ಅಪವಾದ' ಎನಿಸಿರುವವರೂ ಇದ್ದಾರೆ. ನಾನು ಇಲ್ಲ ಎನ್ನುವುದಿಲ್ಲ... ಬಹುಶಃ ಅದಕ್ಕೇ ನಮ್ಮಲ್ಲಿ ಅಪರಾಧಿಗಳ ಸಂಖ್ಯೆ ಕಡಮೆ" ಎಂದೆ. ನಾನು ಹೀಗೆ ಹೇಳಿದ ಉತ್ತರ ನ್ಯಾಯಾಧೀಶರಿಗೆ ಸರಿ ಎನಿಸಿತು. "ಹೌದೇನು? ಹಾಗೆ ನಿಜಕ್ಕೂ ಧರ್ಮದ ನಿಯಮವನ್ನು ಅನುಸರಿಸಿ ನಡೆಯುವುದು ಎಷ್ಟು ಒಳ್ಳೆಯದು ಅಲ್ಲವೇ?" ಎಂದರು ತಮಗೆ ತಾವೇ ಕೇಳಿಕೊಳ್ಳುವರಂತೆ!

ಜೈಲಿನಲ್ಲಿ ಶಿವರಾತ್ರಿ

ಹೀಗೆ ನನ್ನನ್ನು ಹಿಂದೂ ಧರ್ಮದ ಮಂತ್ರಿಯನ್ನಾಗಿ ಮಾಡಿದ ಮೇಲೆ ಜೈಲಿಗೆ ಹೋಗಿ ಆ ಹಿಂದೂ ಖೈದಿಗಳಿಗೆ ವಿಶೇಷವಾದ ಹಬ್ಬ ಹರಿದಿನಗಳಲ್ಲಿ ಪೂಜೆ ಮಾಡಿಸುವ ಕೆಲಸ ನನ್ನದಾಗಿತ್ತು. ನಾನು ಮೊದಲೇ ಹೇಳಿರುವ ಹಾಗೆ ಹಿಂದೂ ಖೈದಿ ಅಲ್ಲಿನ ಸೆರೆಮನೆಯಲ್ಲಿ ಕೇವಲ ಒಬ್ಬನೇ ಒಬ್ಬನಿದ್ದ! ಒಮ್ಮೆ 'ಶಿವರಾತ್ರಿ' ಹಬ್ಬ ಬಂದಾಗ

ನಾನು ಎಲ್ಲಾ ಪೂಜಾ ಸಾಮಗ್ರಿಗಳನ್ನೂ ತೆಗೆದುಕೊಂಡು ಹೋಗಿ , ರಾತ್ರಿ ಅಲ್ಲಿ... ಆ ಜೈಲಿನಲ್ಲಿ ಅವನಿದ್ದ ರೂಮಿನಲ್ಲಿ ರುದ್ರಾಭಿಷೇಕ ಮಾಡಿಸಿ, ಪೂಜೆ ಮಾಡಿಸಿ, ಶಾಂತಿ ಮಂತ್ರಗಳನ್ನು ಹೇಳಿ, 'ಅವನು ಬೇಗ ಪರಿವರ್ತನೆ ಹೊಂದಿ, ಅವನ ದೋಷಗಳು ಕಳೆದು, ಪಾಪ-ಅಪರಾಧ ಮಾಡಿದುದಕ್ಕೆ ಪಶ್ಚಾತ್ತಾಪಪಡುವಂತಾಗಿ, ಅವನು ಬೇಗ ಜೈಲಿನಿಂದ ಹೊರಬರುವಂತಾಗಿ, ಎಂದಿನಂತೆ ಜೀವನ ನಡೆಸುವಂತಾಗಲಿ' ಎಂದು ಪ್ರಾರ್ಥಿಸಿ, ಅನಂತರ ವಾಪಸಾದೆ. ಅವನಿಗೆ ನನ್ನ ಈ ಪ್ರಾರ್ಥನೆಯ ಬಗೆಗೂ ಹೇಳಿದೆ. ಸುಮ್ಮನೆ ನಕ್ಕು ಅವನು ತಲೆಯಾಡಿಸಿದ.

ಅದೇನು ಪರಿಣಾಮ ಬೀರಿತೋ ಅವನ ಮೇಲೆ ಆ ಮಾತುಗಳು, ನಮಗೂ ತಿಳಿಯದು. ಅವನಿಗಿದ್ದ ಶಿಕ್ಷೆಯ ಅವಧಿಯಲ್ಲಿ ಎಂಟು ತಿಂಗಳ ಕಾಲದ ಶಿಕ್ಷೆ ಕಡಮೆಯಾಗಿ ಎಂಟು ತಿಂಗಳ ಮೊದಲೇ ಅವನು ಜೈಲಿನಿಂದ ಹೊರಬಂದ. ನನಗೆ ಈ ವಿಷಯ ತಿಳಿಸಿದ ನ್ಯಾಯಾಧೀಶರು, ನನ್ನ ಮಾತಿನಲ್ಲಿ ತಥ್ಯ ಇರುವುದಾಗಿ ಹೇಳಿ, ನನ್ನನ್ನು ಅಭಿನಂದಿಸಿದರು! ಅವನಿಗೆ ಹಾಗೆ ಒಳ್ಳೆಯ ಬುದ್ಧಿ ಕೊಟ್ಟವ್ರಾದರೂ ಯಾರು? ಅವನ ಒಳಗೆ ಕುಳಿತಿರುವ ಪರಮಾತ್ಮನೇ ತಾನೇ, ಮತ್ತಾರು ; ಎನಿಸಿತು ನನಗೆ. ಅಷ್ಟಲ್ಲದೆ 'ಸರ್ವ ಅಪರಾಧವ ಕ್ಷಮಿಸಯ್ಯಾ ಎನ್ನ ಗರ್ವ-ಅಂಧಕಾರವ ಬಿಡಿಸಿ ರಕ್ಷಿಸಯ್ಯಾ' ಎಂದು ದಾಸವರೇಣ್ಯರು ಸುಮ್ಮನೇ ಹಾಡಿದರೇ?

ಕುಮಾರಿ ಘೀರಾವೋ

ಹೀಗೆ ಆಗುವ ಪರಿಣಾಮ-ಪ್ರಭಾವಗಳನ್ನು ನಾವು ನಂಬುವಂತೆ ಮಾಡುವ, ನಮ್ಮ ನಂಬುಗೆಗೆ ಪುಷ್ಟಿ ಕೊಡುವ ಘಟನೆಯೊಂದನ್ನು ನಿಮ್ಮಲ್ಲಿ ಹೇಳಬೇಕಿದೆ ಈಗ. ಈ ಹಿಂದೆಯೇ ನಾನು ನಿಮಗೆ ಹೇಳಿದ್ದೇನಲ್ಲ, ಪ್ರತಿ ಶನಿವಾರದಂದು ನಾನು ವಿದ್ಯಾಭವನದಲ್ಲಿ ಭಾಷಣಗಳನ್ನು ಮಾಡುತ್ತಿದ್ದೆ ಎಂದು. ಆಗ ಆ ಭಾಷಣಗಳಿಗೆ ಮುನ್ನ ಆಗುವ ಪ್ರಾರ್ಥನೆಯನ್ನು ಮಾಡುತ್ತಿದ್ದುದು ಪದ್ಧತಿ. ಈ ಪದ್ಧತಿ ಎಂದೂ ತಪ್ಪುತ್ತಿರಲಿಲ್ಲ. ಆ ದಿನಗಳಲ್ಲಿ ಕುಮಾರಿ ಘೀರಾವೋ ಎಂಬಾಕೆ ವೇದಮಂತ್ರ ಹೇಳಿಸಿಕೊಳ್ಳಲು ತರಗತಿಯನ್ನು ಸೇರಿದಳು. ಪ್ರತಿಶನಿವಾರ ನಡೆಯುತ್ತಿದ್ದ 'ರಾಮಾಯಣ'ದ ಉಪನ್ಯಾಸದಲ್ಲಿ ಪ್ರಾರ್ಥನೆ ಮಾಡುತ್ತಿದ್ದಳು. ತಾಯಿಯಾಗಲಿದ್ದ ಅವಳು ಮೂವತ್ತು ವಾರಗಳ ಉಪನ್ಯಾಸ ನಡೆದ ಮೇಲೆ, ನಾಳೆ ರಾಮನವಮಿ ಎಂದಿದ್ದಾಗಲೂ ಆದಿನ ಸಂಜೆ ಉಪನ್ಯಾಸಕ್ಕೆ ಮೊದಲು ಪ್ರಾರ್ಥನೆ ಮಾಡಿದಳು. ಮರುದಿನ ರಾಮನವಮಿ. ಬೆಳಗ್ಗೆ ೭.೩೦ಕ್ಕೆ ಗಂಡು ಮಗುವಿಗೆ ಜನ್ಮಕೊಟ್ಟಳು. 'ರಾಮ' ಎಂದೇ ಹೆಸರಿಟ್ಟಳು. ತಾನು ರಾಮಾಯಣವನ್ನು ಎಡೆಬಿಡದೆ ಕೇಳಿದ ಪರಿಣಾಮವಾಗಿ ಎಲ್ಲವೂ ಸುಖಾಂತ್ಯವಾಯಿತು ಎಂದು ನಂಬಿರುವ ಅವಳ ವಿಶ್ವಾಸವನ್ನು ಅಲ್ಲಗಳೆಯಲಾಗದು.

ನೆನಪು

'ನೆನಪುಗಳು' ಎನ್ನುವುದು ಮರವೊಂದು ಇದ್ದ ಹಾಗೆ. ಅದರ ಕಾಂಡದಿಂದ ಮೇಲೆದ್ದು ಅದು ಕೊಂಬೆರೆಂಬೆಗಳಾಗಿ ಕವಲೊಡೆದ ಹಾಗೆ. ಅಲ್ಲಿ ಹತ್ತಾರು, ನೂರಾರು ಕವಲುಗಳು... ಒಂದರೊಡನೆ ಒಂದಕ್ಕೆ ಸಂಬಂಧ, ಯಾವುದನ್ನೂ ಬೇರೆ ಮಾಡಲಾಗದು, ಎಲ್ಲವೂ ಒಂದೇ ಮರದ ಕವಲುಗಳೇ, ಕೊಂಬೆ-ರೆಂಬೆಗಳೇ! ಇಂಥ ನನ್ನ ನೆನಪಿನ ಮರವೊಂದರ ಪ್ರತಿ ಕವಲುಗಳನ್ನೂ ನನ್ನ ಓದುಗರಿಗೆ ತೋರಿಸಿ, ಭಾರತದ ಮಣ್ಣಿನಲ್ಲಿ ತನ್ನ ಮೂಲದ ಬೇರು ಬಿಟ್ಟಿದ್ದ ನನ್ನ ಜೀವನದ ಪರಿಚಯ ಮಾಡಿಕೊಡುವುದೇ ನನ್ನ ಉದ್ದೇಶ. ಹೀಗಾಗಿ ಸಣ್ಣದು - ದೊಡ್ಡದು ಎನ್ನುವ ಭೇದ ಇಲ್ಲದೆ ನಡೆದುದೆಲ್ಲವನ್ನೂ ಸಹೃದಯ ಓದುಗರ ಮುಂದಿಡಬೇಕೆನ್ನುವುದು ನನ್ನ ಹಂಬಲ.

'ನೆನಪು' ಬಂದಾಗ ನನಗೆ ನೆನಪು ಬರುವುದು ಬಹು ಭಾಷೆಗಳ ಉದ್ದಾಮ ಪಂಡಿತ ಶ್ರೀ ಡಿ.ವಿ.ಜಿ.ಯವರದು. ಬೆಂಗಳೂರಿನಲ್ಲಿದ್ದಾಗ ಆಗಾಗ ನಾನು ಅವರ ಮನೆಗೆ ಹೋಗುವುದಿತ್ತು. ನಿರರ್ಗಳವಾಗಿ ಅವರು ಆಡುತ್ತಿದ್ದ ಮಾತುಗಳನ್ನು ಸುಮ್ಮನೆ ಕಿವಿನಿಮಿರಿಸಿ ಕುಳಿತು, ಕಣ್ಣು ರೆಪ್ಪೆ ಮುಚ್ಚದೇ ಅವರನ್ನೇ ಕೇಳುತ್ತ ಕುಳಿತುಕೊಳ್ಳುವುದು ನನ್ನ ಪರಿಪಾಠವಾಗಿತ್ತು! ಏನು ಹೇಳುವುದು ಆ ಪಾಂಡಿತ್ಯಕ್ಕೆ? ಹೇಗೆ ವಿವರಿಸುವುದು – ಅದು ಎಂತಹ ಪಾಂಡಿತ್ಯವೆಂದು? ನನ್ನ ಮನದಲ್ಲಿ ಒಂದು ಸಂಶಯ, ಇಷ್ಟು ಅಗಾಧವಾದ ನೆನಪಿನ ಶಕ್ತಿ ಸಾಧಿಸುವುದು ಹೇಗೆ ಸಾಧ್ಯ? ಇದೇನು ಈ ನೆನಪಿನ ಶಕ್ತಿಯ ರಹಸ್ಯ? ಯಾವುದು ನೆನೆದರೆ ಅದು ಆ ಗಳಿಗೆಯಲ್ಲಿ ನಾಲಗೆಯ ತುದಿಯಲ್ಲಿ ಹಾಜರು ! ಕುಮಾರವ್ಯಾಸ ತನ್ನ ಕಾವ್ಯದ ತೋರಣ ನಾಂದಿ ಪದ್ಯದಲ್ಲಿ ವಿದ್ಯಾಧಿದೇವತೆ ಶಾರದೆಯ ಮೇಲೆ ಬರೆಯುವಾಗ ''ಶೌರಿ, ಸುರಪತಿ, ಸಕಲ ಮುನಿಜನ ಸೂರಿಗಳಿಗೆ, ಅನುಪಮದ ಯುಕುತಿಯೆ, ಶಾರದೆಯೆ ನರ್ತಿಸುಗೆ ನಲಿದು-ಒಲಿದು ಎನ್ನ ಜಿಹ್ವೆಯಲಿ'' ಎನ್ನುತ್ತಾನೆ. ಹಾಗೆ ಸಾಕ್ಷಾತ್ ಶಾರದೆ ಶ್ರೀ ಡಿ.ವಿ.ಗುಂಡಪ್ಪನವರ ನಾಲಗೆಯಲ್ಲಿ ನಲಿದು, ಒಲಿದು ನರ್ತಿಸುವಳೋ ಎನ್ನುವ ವಾಗ್ಝರಿ ಅವರದು !! ಒಂದು ದಿನ ನನ್ನ ಕುತೂಹಲ ತಡೆಯಲಾರದೆ ನಾನು ಅವರನ್ನು ಕೇಳಿಯೇ ಬಿಟ್ಟೆ, ''ಸರ್, ಇದು ಹೇಗೆ ಸರ್... ನೀವು ಯಾವುದನ್ನೂ ಮನಸ್ಸಿಗೆ ಬಂದ ತಕ್ಷಣ ಹೇಳಿಬಿಡುತ್ತೀರಲ್ಲ? ಎಲ್ಲ ವಿಷಯಗಳೂ ಹೇಗೆ ನೆನಪಿರುತ್ತವೆ? ಒಂದೇ ಎರಡೇ? ಹೀಗೆ ನೆನಪಿಟ್ಟುಕೊಳ್ಳಲು ನೀವು ಏನು ಮಾಡುತ್ತೀರಿ?'' ಎಂದು !! ಶ್ರೀ ಡಿ.ವಿ.ಜಿ.ಯವರು ನನ್ನ ಪಿತೃ ಸಮಾನರು. ಅವರ ಶುಚಿಯಾದ ಮಡಿಯಾದ ಗರಿಗರಿ ಎನ್ನುವ ಉಡುಗೆ, ಅವರ ಪಂಪ್ ಶೂ ಬಗೆಗೆ, ಅವರ ವಾಕಿಂಗ್ ಸ್ಟಿಕ್ ಬಗೆಗೂ ಮಾತನಾಡುತ್ತಿದ್ದ ನನಗೆ ಅವರಲ್ಲಿ ಸ್ವಲ್ಪ ಚೆನ್ನಾಗಿಯೇ ಸಲಿಗೆ ಇತ್ತು. ಅದಕ್ಕೇ ನಾನು ಈ ಪ್ರಶ್ನೆ ಕೇಳುವ ಧೈರ್ಯ ಮಾಡಿದೆ. ನಾನು ಆಗ

ಇನ್ನೂ ಯುವಕನಷ್ಟೇ, ತಿಳಿದುಕೊಳ್ಳಬೇಕೆಂಬ ಆಸೆ, ಸಾಧ್ಯವಾದರೆ ಅವರು ಮಾಡುವಂತೆಯೇ ಮಾಡಿ ನಾನೂ ಎಲ್ಲವನ್ನೂ ಹೀಗೆಯೇ ನೆನಪಿಟ್ಟುಕೊಳ್ಳುವಂತಾಗಬೇಕು ಎನ್ನುವ ಬಯಕೆ - ಉತ್ಸಾಹ! ಅವರು ಒಂದರೆಕ್ಷಣ ನನ್ನ ಮುಖವನ್ನೇ ನೋಡಿ, ತಮ್ಮ ಕನ್ನಡಕ ಸರಿಪಡಿಸಿಕೊಂಡು, ಇದ್ದಕ್ಕಿದ್ದಂತೆ "ನಿನ್ನ ಹೆಂಡತಿ ಹೆಸರೇನಯ್ಯಾ?" ಎಂದರು. ಈಗ ನಾನು ಅವಾಕ್ಕಾದೆ. ಈಗ ಯಾಕೆ ಅವಳ ಹೆಸರಿನ ಪ್ರಸ್ತಾಪ? ತಿಳಿಯಲಿಲ್ಲ. ಆದರೂ ಗುರುಗಳು ಕೇಳುತ್ತಿದ್ದಾರೆ. ಹೇಳಬೇಕು. "ಸರ್, ಅವಳ ಹೆಸರು ರಾಜಲಕ್ಷ್ಮಿ" ಎಂದೆ. "ಓ... ರಾಜಲಕ್ಷ್ಮಿ! ಇದು ಹೇಗೆ ನಿನ್ನ ನೆನಪಿನಲ್ಲಿತ್ತು?" ಎಂದರು. ನಾನು "ಹಾಗೆಂದರೇನು ಸರ್? ಅವಳು ನನ್ನ ಪತ್ನಿ, ನನ್ನ ಹೃದಯಕ್ಕೆ ಹತ್ತಿರವಾದವಳು, ಪ್ರಿಯವಾದವಳು..." ಇನ್ನು ಅದೇನೇನು ಬಡಬಡಿಸುತ್ತಿದ್ದೆನೋ, (ಅಲ್ಲವೇ? ಬಿಸಿರಕ್ತ! ಪತ್ನಿಯ ಬಗ್ಗೆ ಹೇಳಲು ಬರದೇ ಮತ್ತೆ!) ಅವರು ಮಧ್ಯದಲ್ಲೇ ನನ್ನನ್ನು ತಡೆದು, ತಾವು ಕುರ್ಚಿಯಿಂದ ಎದ್ದವರೇ, "ಸರಿ, ಹೊರಡು ಇನ್ನು, ಹೋಗಿ ಬಾ...!!" ಎಂದರು. ಒಂದೆರಡು ನಿಮಿಷ ನನಗೆ ಅವರು ಏಕೆ ಹಾಗೆ ಹೇಳುತ್ತಿದ್ದಾರೆ ಎನ್ನುವುದೇ ತಿಳಿಯಲಿಲ್ಲ... "ಆಂ...!" ಎಂದು ಅವರತ್ತ ನೋಡಿದಾಗ, ಅವರು ಅದಾಗಲೇ ಕನ್ನಡಕ ತೆಗೆದು ಒರೆಸಿಕೊಳ್ಳುತ್ತ ಮತ್ತೆ ಕುಳಿತಿದ್ದರು!

ಈಗ ನನಗೆ ಅರ್ಥವಾಗಿತ್ತು, 'ನಿನ್ನ ಹೆಂಡತಿ ನಿನಗೆ ಪ್ರಿಯ, ಅದಕ್ಕೆ ಅವಳ ಹೆಸರು ನಿನ್ನ ನೆನಪಿನಲ್ಲಿರುತ್ತದೆ! ಹಾಗೆಯೇ ಇತರ ವಿಷಯಗಳೂ ಪ್ರಿಯವಾದಾಗ, ಹೃದಯಕ್ಕೆ ಹತ್ತಿರವಾದಾಗ, ಅವೂ ಎಲ್ಲೂ ಹೋಗದೆ, ಎಲ್ಲವೂ ನೆನಪಿನಲ್ಲಿರುತ್ತವೆ' ಎನ್ನುವುದು ಅವರ ಉತ್ತರವಾಗಿತ್ತು. ಹಾಗಾದರೆ ಡಿ.ವಿ.ಜಿ.ಯವರಿಗೆ ಪ್ರಿಯ ಅಲ್ಲದ್ದು ಯಾವುದು? ಈ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯಿತು!!ಹಾಗೆ ನನಗೆ ಮಾರ್ಮಿಕವಾಗಿ ಉತ್ತರಿಸಿ, ಎಂಥದು ನೆನಪಿನಲ್ಲಿರುತ್ತದೆ ಎನ್ನುವುದನ್ನು ಕಲಿಸಿದವರು ಶ್ರೀ ಡಿ.ವಿ.ಜಿ.

ಭವನದಲ್ಲಿ ಕಾರಂತರು

ದೊಡ್ಡವರು, ಎಂದೂ ದೊಡ್ಡವರೇ ಹೌದು. ಅವರ ಸಹವಾಸದಿಂದ ನಾವು ಕಲಿಯುವುದು ಬಹಳಷ್ಟು ಇರುತ್ತದೆ. ಅವರು ಮಾಡುವ ಪ್ರತಿಯೊಂದರಲ್ಲಿಯೂ ಒಂದೊಂದು ಪಾಠ ಕಲಿಯಬಹುದು ನಾವು. ಅವರನ್ನು ನಾವು ಸೂಕ್ಷ್ಮವಾಗಿ ಗಮನಿಸಿಕೊಳ್ಳುತ್ತಿರಬೇಕಷ್ಟೆ.

ಶ್ರೀ ಶಿವರಾಮಕಾರಂತರು ಎರಡು ಮೂರು ಬಾರಿ ಲಂಡನ್‌ಗೆ ಬಂದಿದ್ದರು. ಅವರ ತಂಡದ ಯಕ್ಷಗಾನ ಪ್ರದರ್ಶನವನ್ನು ನಾವು ಏರ್ಪಡಿಸಿದ್ದೆವು. ಅವರು ಬಂದಾಗ ನಮ್ಮ ಮನೆಯಲ್ಲಿ ಉಳಿಯುತ್ತಿದ್ದರಷ್ಟೆ? ಒಮ್ಮೆ ಅವರು ಬಿಡುವಾಗಿದ್ದಾಗ ನಾನು ಮಾತನಾಡುತ್ತ ಕುಳಿತೆ. ಅದೂ ಇದೂ ಮಾತನಾಡುವಾಗ ಪತ್ರ ಬರೆಯುವ ವಿಷಯ ಬಂದಿತು. ಕಾರಂತರು ಪತ್ರ ಬರೆಯುವುದರಲ್ಲಿ ಕರಾರುವಾಕ್ಕು. ನಾನು, "ಸರ್, ನೀವು ಏನೇ ಹೇಳಿ, ಆದರೂ ನಮ್ಮ ಜನ ಪತ್ರ ಬರೆಯುವುದಿಲ್ಲ! ನಾವೇ ಪತ್ರ ಬರೆದರೂ ಉತ್ತರಿಸುವುದು ಯಾವಾಗಲೋ! ಇಲ್ಲವೇ... ಉತ್ತರಿಸದಿದ್ದರೂ ಆದೀತು ಎನ್ನುವ ಮನೋಭಾವ! ಅದೇಕೆ ಹೀಗೆ?" ಎಂದೆ. ಕಾರಂತರು ತಕ್ಷಣ ಉತ್ತರಿಸಲಿಲ್ಲ. ಎರಡು ನಿಮಿಷ ಕಣ್ಣಗಲಿಸಿ ನನ್ನನ್ನೇ ನೋಡಿದರು. ಅನಂತರ ನಾನು ಮತ್ತೆ ಅದೇ ಪ್ರಶ್ನೆ ಕೇಳಿದೆ, ಅವರನ್ನು ನಾ ಕೇಳಿದುದು ಅವರಿಗೆ ಸರಿಯಾಗಿ ಕೇಳಿಸಿತೋ ಇಲ್ಲವೋ ಎಂದು. ಈಗ ಅವರು, "ಮತ್ತೂರರೇ, ನಿಮಗೆ ಗೊತ್ತಿಲ್ಲವೋ ? ನಾವು ಹಿಂದೂಗಳು ಪುನರ್ಜನ್ಮದಲ್ಲಿ ನಂಬಿಕೆ ಇರುವವರು." ನನಗೆ ಉಕ್ಕಿ ಬಂದ ನಗುವನ್ನು ತಡೆಯಲಾಗಲಿಲ್ಲ, ಘೊಳ್ಳೆಂದು ನಾನು ನಕ್ಕಾಗ ನನ್ನ ನಗುವಿನಲ್ಲಿ ತಮ್ಮ ನಗುವನ್ನು ಬೆರೆಸಿದ ಕಾರಂತರ ಆ ಉತ್ತರವನ್ನೂ ಆ ಉತ್ತರ ಹೇಳಿದ ರೀತಿಯನ್ನೂ ನಾನು ಎಂದಿಗೂ ಮರೆಯುವಂತಿಲ್ಲ!

ಒಮ್ಮೆ ನನ್ನ ಪತ್ನಿ ಬಹಳ ಚೆನ್ನಾಗಿ ಇಡ್ಲಿ ಮಾಡಿದ್ದಳು. (ಒಮ್ಮೊಮ್ಮೆ ಮಾತ್ರವೇ ನಿಮ್ಮ ಪತ್ನಿಗೆ ಚೆನ್ನಾಗಿ ಇಡ್ಲಿ ಮಾಡುವುದು? ಎಂದು ಕೇಳಬೇಡಿ!) ಕಾರಂತರಿಗೆ ಬೆಳಗಿನ ತಿಂಡಿಗಾಗಿ ಮಾಡಿದ್ದುದು ಅದು. ನಾನೂ, ಅವರೂ ತಿಂಡಿಗೆ ಕುಳಿತೆವು. ಅವರು ಒಂದು... ಎರಡನೆ ಇಡ್ಲಿ ತಿಂದ ಕೂಡಲೆ 'ಸಾಕು, ಬೇಡಿ' ಎಂದುಬಿಟ್ಟರು. ನನ್ನವಳಿಗೆ ಸ್ವಲ್ಪ ನಿರಾಸೆಯಾಯಿತು. ಅವಳು ಅತಿಥಿಗಳಿಗೆ ಸಂಕೋಚವಾಗಿರಬೇಕು ಎಂದು ಸ್ವಲ್ಪವೇ ಒತ್ತಾಯ ಮಾಡಿದಳು. "ಇಡ್ಲಿ ಚೆನ್ನಾಗಿಲ್ಲವೇ ನಾನು ಮಾಡಿರುವುದು? ಒಂದೇ ಒಂದು ತೆಗೆದುಕೊಳ್ಳಿ"ಎಂದು. ಅದಕ್ಕೆ ಅವರು, "ಇಡ್ಲಿ ಚೆನ್ನಾಗಿ ಮಾಡಿರುವುದು ನೀವು ಹೌದಾದರೂ ಹೊಟ್ಟೆ ನನ್ನದಲ್ಲವೋ?" ಎಂದರು. ಇವಳು ಮುಂದಕ್ಕೆ ಮಾತಾಡಲಿಲ್ಲ! ಆಗಿನಿಂದ ಇವಳಿಗೆ ಯಾರಿಗೂ ಒತ್ತಾಯ ಮಾಡಲು ಒಂದು ರೀತಿ ಭಯವೇ ಆಗಿಬಿಟ್ಟಿದೆ! ಕಾರಂತರದು ಮಾತು ತೀಕ್ಷ್ಣ ಆದರೂ ಹೃದಯ ಮಾತ್ರ ಮೃದು...

ಅಂತೂ ಕಾರಂತರು, ತಮ್ಮ ಯಕ್ಷಗಾನ ತಂಡದೊಡನೆ ನಮ್ಮಲ್ಲಿಗೆ ಬಂದಿದ್ದುದು, ನಮ್ಮೊಡನೆ ಇದ್ದುದು, ಕಾರ್ಯಕ್ರಮಗಳನ್ನು ಕೊಟ್ಟದ್ದು, ನಾವು ಕಲೆತು ಮಾತನಾಡುತ್ತಿದ್ದುದು, ಇವೆಲ್ಲ ನನ್ನ ಬದುಕಿನಲ್ಲಿ ಅವಿಸ್ಮರಣೀಯ. ಕಾರಂತರಂಥ ಮಹಾನ್ ವ್ಯಕ್ತಿಯ ಸಂಪರ್ಕದಲ್ಲಿದ್ದವರಲ್ಲಿ ನಾನೂ ಒಬ್ಬ ಎಂದು ಹೇಳುವುದು ನನಗೆ ಬಹಳ ಹೆಮ್ಮೆಯ ವಿಷಯ ಎನಿಸುತ್ತದೆ!!

ಬಡೀಮಾ - ಮಾಧವಪ್ರಸಾದರ ಮೆಚ್ಚುಗೆ

೧೯೭೮ರಲ್ಲಿ ಭವನದ ಹೊಸ ಕಟ್ಟಡಕ್ಕೆ ಹಣ ಕೊಟ್ಟನಂತರ ಶ್ರೀ ಮಾಧವ ಪ್ರಸಾದ್ ಬಿರ್ಲಾ ಹಾಗೂ ಅವರ ಪತ್ನಿ ಪ್ರಿಯಂವದಾದೇವಿ ಬಿರ್ಲಾರು ವಿದ್ಯಾಭವನಕ್ಕೆ ಬಹಳ ಹತ್ತಿರದವ

ರಾದರು. ಪ್ರತಿವರ್ಷ ಎರಡು ಬಾರಿ ಒಂದೊಂದು ತಿಂಗಳು ಲಂಡನ್‌ಗೆ ಬರುತ್ತಿದ್ದ ಈ ದಂಪತಿಗಳಿಗೆ ಹಗಲೆಲ್ಲ ಬಿಡುವಿಲ್ಲದ ಕಾರ್ಯ ಕ್ರಮಗಳು ಇರುತ್ತಿದ್ದವು. ಒಂದು ಶನಿವಾರ ನಾನು ವಿದ್ಯಾಭವನದಲ್ಲಿ 'ಗೀತೆ'ಯ ಮೇಲೆ ಮಾಡುವ ಭಾಷಣ ಕೇಳಲು ಬಂದ ಈ ದಂಪತಿಗಳು ಮಾರನೆಯ ದಿನವೇ ನನಗೆ ಫೋನಿಸಿದರು. "ಮತ್ತೂರ್‌ಜೀ, ನೀವು ಸ್ವಲ್ಪ ಹೊತ್ತು ನಮ್ಮಲ್ಲಿಗೆ ಬಂದು ಹೋಗುವಿರಾ?" ಎಂದು ಕೇಳಿದಾಗ, ನಾನು ಅವರು ಹೇಳಿದ ಸಮಯಕ್ಕೆ ಬಂದು ಅವರನ್ನು ನೋಡುವುದಾಗಿ ಹೇಳಿದೆ. ಆ ದಿನವೇ ಸಂಜೆ ಬಂದು ಅವರನ್ನು ನೋಡಲು ಹೇಳಿದರು. ನಾನು ಆ ಸಮಯಕ್ಕೆ ಹೋದೆ. ಅವರು ಲಂಡನ್‌ಗೆ ಬಂದಾಗಲೆಲ್ಲ 'ಗ್ರೊವೆನರ್ ಹೌಸ್' ಎನ್ನುವ ದೊಡ್ಡ, ಸಿರಿವಂತರ ಹೋಟೆಲ್‌ನಲ್ಲಿ ಉಳಿದುಕೊಳ್ಳುತ್ತಿದ್ದರು. ಅಲ್ಲಿಗೇ ನಾನು ಅವರನ್ನು ನೋಡಲು ಹೋದದ್ದು. ಹಾರ್ದಿಕವಾಗಿ ನನ್ನನ್ನು ಸ್ವಾಗತಿಸಿ, "ಮತ್ತೂರ್‌ಜೀ, ನಿನ್ನೆ ನೀವು ಶ್ರೀಕೃಷ್ಣನ ಮೇಲೆ ಮಾಡಿದ ಭಾಷಣ ಬಹಳ ಚೆನ್ನಾಗಿತ್ತು. ನಾವು ಇಲ್ಲಿಗೆ ಬಂದಾಗ ನಾವು ಇಲ್ಲಿರುವ ತನಕ ನೀವೂ ದಿನವೂ ಒಂದು ಘಂಟೆಯ ಕಾಲ ನಮಗೆ ಭಾಷಣಗಳನ್ನು ಮಾಡಲಾಗುತ್ತದೆಯೇ? ವೇದ, ಉಪನಿಷತ್ತು, ಗೀತೆ, ರಾಮಾಯಣ, ಮಹಾಭಾರತ, ಇವುಗಳನ್ನು ಕುರಿತು ಮಾತನಾಡುವಿರಾ? ನಮಗೆ ಕೇಳಲು ಬಹಳ ಆಸೆ ಇದೆ!" ಎಂದರು. ಅವರ ಮಾತು ಕೇಳಿ ಪುಳಕಿತನಾದೆ. ಅವರ ಹೆಸರು ಮಾಧವಪ್ರಸಾದ್ ಬಿರ್ಲಾ. ಅವರ ಸ್ನೇಹ ನನ್ನ ಭವಿಷ್ಯಕ್ಕೆ ಹೊಸ ತಿರುವು ಕೊಟ್ಟಿತು. ಶ್ರೀಕೃಷ್ಣನೇ ಮಾಧವನಾಗಿ ಕೃಪೆ ಮಾಡಿದ ಎಂದುಕೊಂಡೆ. ಅವರು ನನಗೆ ಅಪ್ಪಣೆಯನ್ನೇ ಮಾಡಬಹುದಿತ್ತು. 'ನಾವು ಇಲ್ಲಿ ಇರುತ್ತೇವೆ, ನೀವು ಬಂದು ನಮಗೆ ನಿಮ್ಮ ಪ್ರವಚನಗಳನ್ನು ಕೊಡಿ' ಎಂದೇ ಹೇಳಬಹುದಿತ್ತು. ಆದರೆ ಅವರ ಸ್ವಭಾವ ಅದಲ್ಲ. ದಂಪತಿಗಳಿಬ್ಬರೂ ತುಂಬಿದ ಕೊಡದಂತೆ, ಜೀವನದಲ್ಲಿ ಬಹಳ ತೃಪ್ತರು, ಲಂಡನ್‌ಗೆ ಬಂದಿದ್ದರೂ ಮಾಯಾನಗರಿಯಂತಿರುವ ಆ ನಗರದಲ್ಲಿ ಸುತ್ತಬೇಕು ತಿರುಗಬೇಕು ಎನ್ನುವ ಮೋಹ ಇಲ್ಲದವರು. ಲಂಡನ್ ನಗರದಲ್ಲೇ ಅಲ್ಲದೆ, ಅದರ ಸುತ್ತ-ಮುತ್ತಲೂ ನೋಡ ಬೇಕಾದ ಸ್ಥಳಗಳು ಬಹಳ ಇವೆ. ಅಲ್ಲಿಗಾದರೂ ಹೋಗುವವರಲ್ಲ. ತಮ್ಮ ಕೆಲಸ ಮುಗಿದ ಕೂಡಲೆ ಹೋಟೆಲಿಗೆ ವಾಪಸ್ಸಾಗುವರು. ಸಂಜೆ ಕಳೆಯಲು ಯಾವುದಾದರೂ ಒಳ್ಳೆಯ ಕಾರ್ಯಕ್ರಮದ ಆವಶ್ಯಕತೆ ಇದ್ದಿತು ಅವರಿಗೆ. ಅದು ನೀತಿಬೋಧಕವೋ, ಮಹಾಕಾವ್ಯಗಳೋ, ಗೀತೆಯೋ... ಯಾವುದಾದರೂ ಸರಿ, 'ಪುಣ್ಯಶ್ರವಣ' ಆಗಬೇಕೆಂದು ಅವರ ಉದ್ದೇಶ-ಆಸೆ. ಆ ದಿನ ನಾನು 'ಗೀತೆ'ಯ ಬಗೆಗೆ ಮಾತನಾಡುತ್ತ ಶ್ರೀಕೃಷ್ಣನ ಕುರಿತು ಹೇಳಿದ ಮಾತುಗಳು ಅವರಿಗೆ ಬಹಳ ಪ್ರಿಯವಾಗಿದ್ದುವು. ಆ ದಂಪತಿಗಳ ಆರಾಧ್ಯದೈವವೂ ಶ್ರೀಕೃಷ್ಣನೇ! ಅದಕ್ಕೆ ಅವರು ನನ್ನ ಮುಂದೆ ತಮ್ಮ ಈ ಬೇಡಿಕೆಯನ್ನಿಟ್ಟಿದ್ದರು. ಭವನಕ್ಕಾಗಿ ಅಷ್ಟು ಹಣಕೊಟ್ಟು, ಅದು ಸರಿಯಾಗಿ ಕೆಲಸ ನಿರ್ವಹಿಸುತ್ತಿದೆಯೋ, ಇಲ್ಲವೋ? ಎಂದು ಆಗಾಗ ಬಂದು ನೋಡಿಕೊಂಡು, 'ವಿದ್ಯಾಭವನ'ದ ಬೆಳವಣಿಗೆಗೆ ಆರ್ಥಿಕ ಸಹಾಯ ಮಾಡುವುದರ ಮೂಲಕ ನೈತಿಕ ಬಲ ನೀಡಿ ಮುನ್ನಡೆಸುತ್ತಿದ್ದ ಆ ಸಜ್ಜನ ದಂಪತಿಗಳಿಗೆ ನಾನು 'ಇಲ್ಲ' ಎನ್ನಲಾದೀತೆ? ಅಲ್ಲದೆ ಅದರಿಂದ ನನಗೆ ಬಹಳ ಸಂತೋಷವೇ ಆಗಿತ್ತು. ಇದು ಒಂದು ರೀತಿಯಲ್ಲಿ 'ರೋಗಿ ಬಯಸಿದುದು, ವೈದ್ಯ ಹೇಳಿದುದು ಎರಡೂ ಒಂದೇ' ಎನ್ನುವಂತಾಗಿದ್ದಿತು.

ಇಲ್ಲಿ ಒಂದು ಅಂಶವನ್ನು ನನ್ನ ಓದುಗರು ಗಮನಿಸುವುದು ಆವಶ್ಯಕ. ನಾನು ಲಂಡನ್‌ನಲ್ಲಿ ಭಾಷಣಗಳನ್ನು ಕೊಡುವಾಗ ಅವೆಲ್ಲವೂ ಇಂಗ್ಲಿಷಿನಲ್ಲಿಯೇ ಇರುತ್ತಿದ್ದುದು. ಕನ್ನಡವೋ, ಸಂಸ್ಕೃತವೋ ಅಲ್ಲಿ ಇರುತ್ತಿರಲಿಲ್ಲ. ಆಗೀಗ ಸಿಂಧಿ, ಗುಜರಾತಿ ಸಮಾಜಗಳಿಗೆ ಹೋದಾಗ ಭಾಷಣಗಳನ್ನು ಹಿಂದಿಯಲ್ಲಿ ಮಾಡುತ್ತಿದ್ದೆನಾದರೂ, ಇಂಗ್ಲಿಷಿನಲ್ಲಿ ಮಾಡಿದಂತೆ ಇರುತ್ತಿರಲಿಲ್ಲ. ಇಂಗ್ಲಿಷಿನಲ್ಲಿ ಮಾಡಿದ ಭಾಷಣಗಳು ಕನ್ನಡದಲ್ಲಿ ಮಾಡಿದಾಗ ಕಳೆ ಕಟ್ಟುವಂತೆ ಆಗುತ್ತಿರಲಿಲ್ಲ. ಏನೆಂದರೂ ಅದು ನಮಗೆ ಪರಕೀಯ ಭಾಷೆ. ನಮ್ಮ ತಾಯಿ ಭಾಷೆಯಲ್ಲಿ ನಮಗಿರುವ ಜ್ಞಾನ, ಶಬ್ದಸಂಪತ್ತು ನಾವು ಕಲಿಯುವ ಹೊರಗಿನ ಭಾಷೆಯಲ್ಲಿರುವುದಿಲ್ಲ. ಈ ಎಲ್ಲವನ್ನೂ ಇಂಗ್ಲಿಷಿನಲ್ಲಿ ನಾವು ಕಲಿತು, ನಮ್ಮ ಬುದ್ಧಿಗೆ ತೋರುವ ಭಾವಾರ್ಥ ವನ್ನು ಹೇಳುವುದು ಬಹಳ ಕಷ್ಟವೇ ಸರಿ... ಹಾಗೆ ಹೇಳುತ್ತಿದ್ದವರು ಮಾನ್ಯರಾದ ರೈಟ್‌ಆನರಬಲ್ ಶ್ರೀನಿವಾಸಶಾಸ್ತ್ರಿಯವರು, ರಾಜಾಜಿಯವರು, ಇವರೆಲ್ಲ ಜ್ಞಾನದ ಮೂರ್ತಸ್ವರೂಪರಾಗಿದ್ದವರು. ಇಂಗ್ಲಿಷಿನ ಜನವೂ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಇಂಗ್ಲಿಷ್ ಭಾಷೆಯನ್ನು ಕಲಿತು ಕರಗತ ಮಾಡಿಕೊಂಡಿದ್ದವರು ಅವರು. ಆ ಮಹನೀಯರೆಲ್ಲಿ? ನಾವೆಲ್ಲಿ? 'ವಿದ್ಯಾಭವನ'ಕ್ಕೆ ಜನರು ಬರಬೇಕಿದ್ದಿತು. ಹೆಚ್ಚಿನ ಸಂಪರ್ಕಗಳು ಬೇಕಾಗಿತ್ತು. ಅದಲ್ಲದೆ ನನ್ನ ಕೆಲಸವೇ ನಮ್ಮ ಸಂಸ್ಕೃತಿಯನ್ನು ಪ್ರಚಾರ ಮಾಡುವುದು ತಾನೆ? ನಾನು ಇಂಗ್ಲಿಷನ್ನು ಕಾಲೇಜು ಮಟ್ಟದಲ್ಲಿ ಓದಿ ಕಲಿತವನಾಗಿರಲಿಲ್ಲ. ಕಾಲೇಜು ಓದಿದವರಿಗೆ ಒಂದು ವ್ಯವಸ್ಥಿತ ಕಲಿಕೆಗೆ ಅವಕಾಶವಿರುತ್ತದೆ. ಆದರೆ ನನಗೆ ಆ ಅವಕಾಶ ಇರಲಿಲ್ಲ. ಆದರೂ ಈಗ ನನ್ನ ಮಾಧ್ಯಮ ಇಂಗ್ಲಿಷೇ ಆಗಬೇಕಿತ್ತು. ಸಂದರ್ಭ ಹಾಗಿತ್ತು. ನಾನು ಇಂಗ್ಲಿಷನ್ನು ಬಹಳ ಮಟ್ಟಿಗೆ ಉತ್ತಮ ಪಡಿಸಿಕೊಳ್ಳಬೇಕಿತ್ತು. ಹಾಗೆ ಮಾಡದೆ ಈ ಸಾಹಸಕ್ಕೆ ಕೈ ಹಾಕುವಂತಿರಲಿಲ್ಲ. ಆದರೆ ನಾನು ಕೈ ಹಾಕಿದನಂತರವೇ ಕಲಿಕೆಗೆ ಪ್ರಾರಂಭಿಸಿದ್ದು! ಏನೇ ಆದರೂ ಮಾತೃಭಾಷೆಯಲ್ಲಿರುವ ಪ್ರಭುತ್ವ, ಅಭಿವ್ಯಕ್ತಿ ಸ್ವಾತಂತ್ರ್ಯ ನಾವು ಪರಭಾಷೆಯಲ್ಲಿ ಏನನ್ನಾದರೂ ಹೇಳುವಾಗ ಇರದು! ಅದು ಒಂದು ಮಿತಿಗೆ ಒಳಪಟ್ಟಿರುತ್ತದೆ. ಹೀಗಾಗಿ ನನ್ನ ಇಂಗ್ಲಿಷ್ ಕಲಿಕೆ ಮುಂದುವರೆದು , ಇಂಗ್ಲಿಷ್ ಭಾಷಣಗಳು ಹೆಚ್ಚು ನನ್ನ ಮನಸ್ಸನ್ನಾವರಿಸದೆ ಸ್ವಲ್ಪ ಯಾಂತ್ರಿಕವಾಗಿಯೇ ಇದ್ದವು!!

ಆದರೆ ನಿಧಾನವಾಗಿ ಭಾಷಣಗಳ ವಿಷಯಗಳ ಮೇಲೆ ಹತೋಟಿ ಬರಲಾರಂಭಿಸಿತ್ತು. ಎಲ್ಲಕ್ಕೂ ಸಾಕಷ್ಟು ಪೂರ್ವಸಿದ್ಧತೆ, ಕಾಲದ ಮಿತಿಯನ್ನನುಸರಿಸುವುದು, ಅದಕ್ಕೆ ತಕ್ಕಂತೆ ವಿಷಯವ್ಯಾಪ್ತಿಯನ್ನು ಹೆಚ್ಚು-ಕಡಮೆ ಮಾಡಿಕೊಳ್ಳುವುದು, ಅಲ್ಲಿನ ಜನರ ಮನೋಭಾವಕ್ಕೆ, ಯೋಚನಾಧಾಟಿಗೆ ತಕ್ಕಂತೆ ಗಹನವಾದ ವಿಷಯಗಳನ್ನು ಕ್ಲಿಷ್ಟವಾಗಿ ಹೇಳಿ ಹೆದರಿಸದೆ, ಆದಷ್ಟೂ ಸರಳವಾಗಿ, ಸ್ಪಷ್ಟವಾಗಿ ಹೇಳುವುದು, ಹಾಗೆ ಹೇಳುವಾಗ ಆಧುನಿಕ ಯುಗದ, ನನ್ನ-ಅವರ ನಡುವೆ ನಡೆಯುವ, ನಮ್ಮ ನಮ್ಮಲ್ಲಿ ಒದಗುವ ಸಂದರ್ಭ ಸನ್ನಿವೇಶಗಳ ಜತೆಗೆ ವಿಷಯದ ಸಾರವನ್ನು ತಾಳೆ ಹಾಕಿ, ಅವರಿಗೆ ಮನದಟ್ಟಾಗುವಂತೆ ಅರ್ಥೈಸುವಾಗ ಭಾರತೀಯ ಸಂಸ್ಕೃತಿಯ ನೆಲೆಗಟ್ಟಿನ ಬಗೆಗೆ ವಿವರಿಸುವುದು-ಇವೆಲ್ಲವೂ ಅವರ ಮನಸ್ಸಿನಲ್ಲಿ ಭಾರತದ ಬಗ್ಗೆ ಒಂದು ಉನ್ನತವಾದ ಭಾವನೆ ಬರುವಂತೆ ಮಾಡುತ್ತಿದ್ದವು. ಆದರೆ ಇಷ್ಟರ ಮಟ್ಟಿಗೆ ಅವರ ಮುಂದೆ ವಿಷಯಗಳನ್ನು ಹೇಳಲು ನಾನು ಸಾಕಷ್ಟು ತಯಾರಿ ನಡೆಸಬೇಕಿತ್ತಷ್ಟೆ? ನನ್ನ ಈ ಶ್ರಮದ ಸಾರ್ಥಕತೆ ಕಂಡದ್ದು, ನಾನು ಬಿ.ಬಿ.ಸಿ.ಯಲ್ಲಿ ಸನಾತನ ಧರ್ಮದ ಬಗೆಗೆ, ಭಾರತೀಯ ಹಬ್ಬಗಳ ಬಗೆಗೆ ನಾಲ್ಕು ನಿಮಿಷಗಳ, ಸುಮಾರು ನೂರು ಭಾಷಣಗಳನ್ನು ಕೊಟ್ಟಾಗ! ನಿಜಕ್ಕೂ, ವಿದ್ಯಾಭವನದ ಬಿಡುವಿಲ್ಲದ ಕೆಲಸ ಕಾರ್ಯಗಳ ಮಧ್ಯೆಯೇ ನಾನು ಭಾಷಣದಲ್ಲಿ ಪ್ರಾವೀಣ್ಯ ಹೊಂದಬೇಕೆನ್ನುವ ಹಂಬಲದಿಂದಲೇ ಕಲಿತ ಇಂಗ್ಲಿಷ್ ಭಾಷೆಯ ಉಪಯೋಗ ಕೇವಲ ಒಂದೆರಡು ಕಡೆಗಳಲ್ಲಿ ಮಾತ್ರವಲ್ಲ, ಸುಮಾರು ಎಲ್ಲ ಕಡೆಯಲ್ಲೂ ಇದ್ದೇ ಇರುತ್ತಿತ್ತು. ಇರದೇ ಮತ್ತೆ? ಇಂಗ್ಲಿಷರ ನಾಡಿಗೇ ಹೋಗಿ ಅಲ್ಲಿ ಅವರ ಭಾಷೆಯಲ್ಲಿ ತಾನೆ ನಾವು ಅವರೊಡನೆ ಸಂಪರ್ಕಿಸಬೇಕು. ನಮ್ಮ ಭಾಷೆ ಅಲ್ಲಿ ಹೇಗೆ ನಡೆದೀತು? ಅಂತೂ ಸರಳೀಕೃತ ಇಂಗ್ಲಿಷ್ ಬಳಸುವುದರಲ್ಲಿ ನನಗೆ ಯಾವುದೇ ಕಷ್ಟವಾಗುತ್ತಿರಲಿಲ್ಲ. ಭಾಷಾಡಂಬರವನ್ನು ನಾನು ಎಂದಿಗೂ ಇಷ್ಟಪಡುತ್ತಾ ಇರಲಿಲ್ಲ ವಾದ್ದರಿಂದ 'Rhetorical' ಆಗಿ ನಾನೆಂದೂ ಯಾವ ಭಾಷಣವನ್ನೂ ಮಾಡಿದ್ದಿಲ್ಲ.

ಅಂತೂ ನನ್ನ ಸರಳ ಭಾಷಾಪ್ರಯೋಗ ಅಲ್ಲಿ ಅದ್ಭುತ ಯಶಸ್ಸನ್ನೇ ಸಾಧಿಸಿತು! ಎಲ್ಲರಿಗೂ ಅದು ಇಷ್ಟವಾದಂತೆ ಬಡೀಮಾ-ಮಾಧವಬಾಬು ಅವರಿಗೆ ಬಹಳ ಇಷ್ಟವಾಗಿದ್ದಿತು. ವಿಷಯ ಗಹನ ಆಗಿರುವಾಗ ಅದನ್ನು ಗಹನವಾಗಿಯೇ ಹೇಳಿದರೆ ಅದು ರುಚಿಸದು. ಅದನ್ನು ಸಾಧ್ಯವಾದಷ್ಟೂ ಸಾಮಾನ್ಯ ಎನ್ನುವಂತೆ ಹೇಳಿದರೆ ಅದರಲ್ಲಿ ಆಸಕ್ತಿ ಮೂಡೀತು, ಕೇಳುವುದರಲ್ಲಿ ಕುತೂಹಲ ಹುಟ್ಟೀತು. ಅದಕ್ಕೇ ನಮ್ಮ ಸಂಸ್ಕೃತಿಯ ಬಗೆಗೆ ಹೇಳುವಾಗ (ನಮ್ಮ ದೇಶದವರೇ ಅಲ್ಲಿ ಅನೇಕರು ಇದ್ದರೂ ಅವರಿಗೇ ನಮ್ಮ ಸಂಸ್ಕೃತಿಯ ಬಗೆಗೆ ಹೆಚ್ಚಿಗೆ ಏನೂ ತಿಳಿದಿರಲಿಲ್ಲ) ನಾನು ಆ ಜನರ ಹತ್ತಿರಕ್ಕೆ ಹೋಗುವುದು ಸಾಧ್ಯವಾಯಿತು.

ಬಡೀಮಾ ಮಾಧವಬಾಬು ಅವರ ಈ ಕೋರಿಕೆಗೆ ನಾನು ಸಂತೋಷದಿಂದಲೇ ತಯಾರಿ ನಡೆಸಿದೆ. ಶ್ರೋತೃಗಳು ಇಬ್ಬರೇ ಆದರೇನು? ಅವರು ೨೦೦ ಜನಕ್ಕೆ ಸಮ ಎನಿಸಿದಂಥವರು ! ಆ ತಾದಾತ್ಮ್ಯ, ಆ ಕುತೂಹಲ, ಮಕ್ಕಳಂತಹ ಮುಗ್ಧಭಾವ, ವಿಷಯದಲ್ಲಿ ಆಸಕ್ತಿ ಇವೆಲ್ಲದರ ಮೇಳೈಸುವಿಕೆಯನ್ನು ಅವರ ಮುಖಗಳಲ್ಲಿ ಕಾಣುವುದೇ ಒಂದು ಚಂದ ಎನಿಸಿತ್ತು ನನಗೆ! ನನಗೂ ಈ ಬಗೆಗೆ ಭಾಷಣ ಕೊಡುವಾಗ ಸಾಕಷ್ಟು ತಯಾರಿ ನಡೆಸುವುದರಿಂದ ಆ ವಿಷಯಗಳ ಸಂಪರ್ಕ-ಸಂಬಂಧ ಹೋಗುವುದಿಲ್ಲ. ಅವುಗಳನ್ನು ಕುರಿತು ಮತ್ತೆ ಮತ್ತೆ ಹೇಳಿದಂತೆ ಹೊಸ ಹೊಸ ವಿಚಾರಗಳು ಹೊಳೆಯುತ್ತಿದ್ದವು. ವಿಷಯ ಒಂದೇ ಆದರೂ ಅದರ ಮಂಡನೆ, ಹೊಳಹು ಬೇರೆಯಾಗಿರುತ್ತಿತ್ತು. ಗೀತೆ, ರಾಮಾಯಣ, ಮಹಾಭಾರತ, ಭಾಗವತ, ವೇದ, ಉಪನಿಷತ್ತು ಇವೆಲ್ಲ ಸಾಮಾನ್ಯದ ವಿಷಯಗಳೇ? ಅವುಗಳ ಹರಹು ಏನು ಎನ್ನುವುದನ್ನು ವಿವರಿಸುವಾಗ ಭಾಷಣದಿಂದ ಭಾಷಣಕ್ಕೆ ನನ್ನ ತಿಳಿವೂ ಉತ್ತಮಗೊಳ್ಳುತ್ತಿತ್ತು. ಅಂತೂ ಹೀಗೇ ಬಿರ್ಲಾ ದಂಪತಿಗಳು ಅಲ್ಲಿದ್ದ ಒಂದು ತಿಂಗಳ ಕಾಲ ನಾನು ಪ್ರತಿದಿನವೂ ಅವರಿದ್ದಲ್ಲಿಗೆ ಹೋಗಿ ಭಾಷಣಗಳನ್ನು ಕೊಡುತ್ತಿದ್ದೆ.

ನಾನು ಹೀಗೆ ಮಾತನಾಡುವಾಗ, ಅವರು ಅದನ್ನು ಕೇಳುವಾಗ ನಮ್ಮ ನಮ್ಮ ನಡುವೆ ಆಗುವ, ಸಂದರ್ಭೋಚಿತ ವಾದ ಇತರ ಮಾತು-ಕತೆಗಳಿಂದ ನಾವು ಪರಸ್ಪರ ಬಹಳ ಹತ್ತಿರವಾದೆವು. ನನ್ನ ಅಂತರಂಗದಲ್ಲಿ ಅವರು ಭವನಕ್ಕೆ ಒಂದು ಲಕ್ಷ ಪೌಂಡುಗಳನ್ನು ಕೊಟ್ಟು ಅತಿ ದೊಡ್ಡ ಸಹಾಯ ಮಾಡಿದ್ದಾರೆ. ನನ್ನಿಂದಾಗುವುದನ್ನು ಅವರಿಗೆ ಸ್ವಲ್ಪವಾದರೂ ಮಾಡಿ ಅವರ ಮನಸ್ಸಿಗೆ ಸಂತೋಷ, ಸಮಾಧಾನ ಕೊಡಬೇಕು ಎನ್ನುವ ಆಸೆ! ನನ್ನ ಈ ಪ್ರಯತ್ನಕ್ಕೆ ಅವರ ಪ್ರತಿಕ್ರಿಯೆಯೂ ಅದ್ಭುತವಾಗಿ ಇದ್ದಿತು. ಅಲ್ಲಿಯವರೆಗೆ ತುಳಸೀ ರಾಮಾಯಣದ 'ಕಥಾಜಾಲ' ದಲ್ಲಿದ್ದವರು. ಈಗ ವಾಲ್ಮೀಕಿ ರಾಮಾಯಣವನ್ನು ಪೂರ್ತಿಯಾಗಿ ಕೇಳಿ, ಆ ರಾಮಾಯಣದ ಕಥೆಯ ವಾಸ್ತವ ನೆಲೆ ಏನು ಎನ್ನುವುದನ್ನು ಅರಿತು ಬಹಳ ಸಂತೋಷ ವ್ಯಕ್ತಪಡಿಸಿದರು. ಅವರು ಹಾಗೆ ಸಂತೋಷ ಪಡುವುದನ್ನು ಕಂಡಾಗ, ನನಗೆ ನನ್ನ ಪ್ರಯತ್ನ ಸಾರ್ಥಕ ಎನ್ನುವ ಭಾವ!

ಇದು ಹೀಗೆಯೇ ಮುಂದುವರೆದು, ಪ್ರತಿವರ್ಷ ಅವರು ತಮ್ಮ ವಿಶ್ರಾಂತಿಧಾಮವಾದ, ಅಲಹಾಬಾದಿನಲ್ಲಿ ಇರುವ ಆನಂದಕಾನನಕ್ಕೆ ನನ್ನನ್ನು ಬರಮಾಡಿಕೊಳ್ಳಲು ಇಚ್ಛಿಸಿದರು. ಅವರ ಪ್ರೀತಿಯ ಆಹ್ವಾನ, ನನಗೆ ಆದೇಶ ಎನ್ನುವಂತೆ ನಾನೂ ಅದನ್ನು ಒಪ್ಪಿ ಅಲಹಾಬಾದ್‌ನಲ್ಲಿ ಆ ದಂಪತಿಗಳು ಇದ್ದಾಗ ಹತ್ತು-ಹದಿನೈದು ದಿವಸಗಳು ವರ್ಷಕ್ಕೆ ಒಮ್ಮೆ ಹೋಗಿ, ಅಲ್ಲಿ ಅವರು ಇಷ್ಟ ಪಟ್ಟು ಹೇಳಿದ ಯಜ್ಞ, ಹವನ, ಹೋಮಗಳನ್ನು ಮಾಡಿಸಿ ಭಾಷಣಗಳನ್ನು ಕೊಟ್ಟು ಲಂಡನ್‌ಗೆ ವಾಪಸ್ಸಾಗುತ್ತಿದ್ದೆ.

ಈ ರೀತಿಯ ಸಂಪರ್ಕ ಶ್ರೀ ಮಾಧವಬಾಬು ದೈವಾಧೀನರಾದ ಅನಂತರವೂ ಮುಂದುವರೆಯಿತು. ಬಡೀಮಾ ನನ್ನನ್ನು ತಮ್ಮ 'ಮಗನೋ' ಎನ್ನುವಷ್ಟು ಅಕ್ಕರೆಯಿಂದ ಕಾಣುತ್ತಿದ್ದುದು, ಅವರಲ್ಲಿ ನಾನೂ ನನ್ನ 'ಮಾತೃಸ್ವರೂಪ'ವನ್ನು ಕಾಣುವಂತೆ ಮಾಡಿತ್ತು. ಅನಂತರವೂ ಬಡೀಮಾ ಲಂಡನ್‌ಗೆ ಬರುವುದು, ನಾನು ಅವರಿಗಾಗಿ ಕಥೆ ಹೇಳುವುದು ನಡೆಯಿತು. ಅವರ ಹಿರಿಯರಾದ ಶ್ರೀ ಜಿ.ಡಿ. ಬಿರ್ಲಾರವರು ಸಹ ಲಂಡನ್‌ನಲ್ಲಿಯೇ ಇದ್ದರಷ್ಟೆ? ಅವರು ಕಾಲವಾದಾಗ ನನ್ನನ್ನೇ ಕರೆದ ಬಿರ್ಲಾ ಕುಟುಂಬ ಅವರ ಅಂತ್ಯಕ್ರಿಯಾದಿಗಳನ್ನೂ ಪಿತೃಕಾರ್ಯವನ್ನೂ ನಾನೇ ಮಾಡಿಸಬೇಕೆಂದು ತಮ್ಮ ಅಪೇಕ್ಷೆ ವ್ಯಕ್ತಪಡಿಸಿದರು. ಆಗ ಇಡೀ ಬಿರ್ಲಾ ಕುಟುಂಬವೇ ಸೇರಿತ್ತು. ನಾನು ಸಹ ಅವರ ಈ ಅಪೇಕ್ಷೆಯನ್ನು ನಡೆಸಿಕೊಡುವುದಾಗಿ ಹೇಳಿ, ನಾನೇ ನಿಂತು ಅವರೆಲ್ಲರ ಮನಸ್ಸಿಗೆ ಸಮಾಧಾನ ಆಗುವ ರೀತಿಯಲ್ಲಿ ಸಾಂಗವಾಗಿ ಎಲ್ಲವೂ ನೆರವೇರುವಂತೆ ಮಾಡಿದೆ. ಶ್ರೀ ಜಿ.ಡಿ. ಬಿರ್ಲಾರ 'ಬಾಪೂ ಹಾಗೂ ಇತರರೊಡನೆ ಪತ್ರವ್ಯವಹಾರ'' (ಕರೆಸ್ಪಾಂಡೆನ್ಸ್ ವಿದ್ ಬಾಪೂ ಅಂಡ್ ಅದರ್ಸ್) ಪುಸ್ತಕದ ನಾಲ್ಕು ಭಾಗಗಳೂ ಲಂಡನ್‌ನಲ್ಲಿ ಸರ್ ಫಿಲಿಪನೋಯಲ್ ಬೇಕರರ ಉಪಸ್ಥಿತಿಯಲ್ಲಿ ವಿದ್ಯಾಭವನದಲ್ಲೇ ಬಿಡುಗಡೆ ಆದವು. ಲಂಡನ್ ಕೇಂದ್ರದ ಪ್ರಗತಿ ಬಡೀಮಾರವರಿಗೆ ಬಹಳ ಸಂತೋಷ ಸಮಾಧಾನ ತಂದಿದ್ದಿತು. ವಿನೋಬಾಜಿಗೆ ಹಲವು ವರ್ಷಗಳ ಕಾಲ ತಮ್ಮಿಂದಾದ ಸೇವೆ ಮಾಡಿದ ಬಡೀಮಾ ಅವರು ಗಾಂಧೀಜಿ, ವಿನೋಬಾಜಿ, ಇಬ್ಬರ ವ್ಯಕ್ತಿತ್ವದಿಂದಲೂ ಬಹಳ ಪ್ರಭಾವಿತರಾಗಿದ್ದಾರೆ. ವಿನೋಬಾಜಿಗೆ ಮೊಟ್ಟ ಮೊದಲಿಗೆ ಬಡೀಮಾರನ್ನು ನೋಡಿದಾಗ "ನಿಮ್ಮ ಹೆಸರೇನು?'' ಎಂದರಂತೆ, ಆಗ ಬಡೀಮಾ "ಪ್ರಿಯಂವದಾ'' ಎಂದಾಗ, "ಸತ್ಯಂವದಾ ಸಹ ಆಗಬೇಕು ನೀವು!!'' ಎಂದು ನಕ್ಕರಂತೆ! ಬಡೀಮಾ ಇದನ್ನು ನೆನೆಯುತ್ತ ನನ್ನಲ್ಲಿ ಹೇಳುವಾಗ ಕಣ್ಣುಗಳು ಹನಿಗೂಡಿದ್ದವು. 'ಅಂತಹಾ ಮಹಾತ್ಮರ ನಿರೀಕ್ಷೆಯಂತೆ ನಡೆಯಲು ಸಾಧ್ಯವಾಗಬೇಕು ಮತ್ತೂರ್‌ಜೀ' ಎನ್ನುವ ಬಡೀಮಾ ಅವರ ಮಾತಿನಲ್ಲಿ ನಿಷ್ಠೆ, ಅನನ್ಯ ಆತ್ಮವಿಶ್ವಾಸ ಕಾಣುತ್ತದೆ! ಲಂಡನ್ ಭವನಕ್ಕೆಂದು ಒಂದು ಲಕ್ಷ ಪೌಂಡು, ಅದರ ಮಾರ್ಪಾಡಿಗೆ ಒಂದು ಲಕ್ಷ ಪೌಂಡು, ಅದರ ನಿರ್ವಹಣೆಗೆಂದು ಒಂದು ಲಕ್ಷ ಪೌಂಡು... ಹೀಗೆ ಬಡೀಮಾ ಸುಮಾರು ಐದು ಲಕ್ಷ ಪೌಂಡುಗಳನ್ನು ಉದಾರವಾಗಿ ಕೊಟ್ಟಿದ್ದಾರೆ (ಅರ್ಧ ಮಿಲಿಯನ್ ಪೌಂಡುಗಳು!) ಅವರ ಸಹಾಯವಿಲ್ಲದೆ ನಾವು ಏನೂ ಮಾಡಲು ಸಾಧ್ಯವಾಗುವುದಿಲ್ಲ. ಅವರು ಅಲ್ಲೆಲ್ಲೋ ಇದ್ದರೂ, ಅವರು ಇದ್ದಾರೆ ಎನ್ನುವ ಒಂದೇ ಧೈರ್ಯ ನಾವು ಹಲವು ಸಾಹಸಗಳಲ್ಲಿ ತೊಡಗುವಂತೆ ಮಾಡುತ್ತದೆ!

ಅಷ್ಟೈಶ್ವರ್ಯದ ಒಡತಿಯಾದರೂ ಸಂನ್ಯಾಸಿನಿಯಂತೆ ಬಹಳ ಸರಳ ಜೀವನ ನಡೆಸುವ ಬಡೀಮಾ ವ್ಯವಹಾರವನ್ನು ಅಷ್ಟೇ ಚೆನ್ನಾಗಿ ತಿಳಿದುಕೊಂಡಿದ್ದಾರೆ. ಆ ದಂಪತಿಗಳು ಯಾವಾಗಲೂ ಒಂದು ಮಾತು ಹೇಳುವುದಿತ್ತು. 'ಸಂಸ್ಕೃತಿ ಹಾಗೂ ವಾಣಿಜ್ಯ ವ್ಯವಹಾರ, ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಸಾಂಸ್ಕೃತಿಕ ದೃಷ್ಟಿಯಿಂದ ಮಾಡುವ ವಾಣಿಜ್ಯ ವ್ಯಾಪಾರವನ್ನು ಎಂದಿಗೂ ಪ್ರೋತ್ಸಾಹಿಸಬೇಕು. ವಾಣಿಜ್ಯ ವ್ಯವಹಾರದ ಬೆಂಬಲವಿಲ್ಲದೆ ಸಂಸ್ಕೃತಿಯ ಪ್ರಾಧಾನ್ಯದ ಪ್ರಸಾರ ಮಾಡಲಾಗದು!' ಹೀಗೆ ಹೇಳಿದಂತೆ ಮಾಡಿಯೂ ತೋರಿಸಿದ ಮಹಾನ್ ದಂಪತಿಗಳು ಅವರು! ಅದಕ್ಕೇ ಅವರಿಗೆ 'ವಿದ್ಯಾಭವನ'ದ ಮೇಲೆ ಅನನ್ಯ ಪ್ರೇಮ, ಅಸೀಮ ಅಭಿಮಾನ. ಮಗಳನ್ನು ಮದುವೆ ಮಾಡಿ ಕಳುಹಿಸಿದ ಮೇಲೂ ತಾಯಿಯ ದೃಷ್ಟಿ ಮಗಳ ಬಾಳುವಿಕೆಯ ಮೇಲೆ ಹೇಗೆ ಸದೈವ ನೆಲೆಸಿರುವುದೋ ಹಾಗೆಯೇ 'ವಿದ್ಯಾಭವನ'ದ ಮೇಲೆ ಬಡೀಮಾರ 'ಮಾತೃಛಾಯೆ' ನೆಲೆಸಿರುವುದು ಎಂದರೆ ಉತ್ಪ್ರೇಕ್ಷೆ ಅಲ್ಲ!!

ನಾನು ಅಲ್ಲಿ ನಿವೃತ್ತನಾಗಬೇಕೆಂದು ನಿಶ್ಚಯಿಸಿದ ಮೇಲೆ, ಬಡೀಮಾ ನನಗಾಗಿ ಹಲವಾರು ಯೋಜನೆಗಳನ್ನೇ ಸಿದ್ಧಪಡಿಸಿದ್ದರು! ಅಷ್ಟು ವಾತ್ಸಲ್ಯ ಅವರಿಗೆ ನನ್ನ ಮೇಲೆ!

೨೮. ತಾಯಿನಾಡಿನ ಸೆಳೆತ

ನಿವೃತ್ತಿಯ ಆಸೆ

೧೯೯೩ರ ರಿಂದಲೇ ನನ್ನ ಮನಸ್ಸಿನಲ್ಲಿ ನಿವೃತ್ತನಾಗುವ ಯೋಚನೆ ಪ್ರಾರಂಭವಾಯಿತು. ೨೩ ವರ್ಷಗಳ ಸುದೀರ್ಘ ಕಾಲದ ಲಂಡನ್‌ವಾಸ, ಭವನದ ಜೊತೆಯಲ್ಲಿರುವಾಗ ಬೇಸರ ಎನಿಸದಿದ್ದರೂ, ನಾನು ಅಲ್ಲೇ ನೆಲೆಯಾಗಿ ನಿಲ್ಲಲು ಹೋದವನಲ್ಲ. ಏನೇ ಆದರೂ ನಾನು ಹೋಗಿ ಪ್ರಾರಂಭಿಸಿದ ಲಂಡನ್ ವಿದ್ಯಾಭವನಕೇಂದ್ರದ ಕೆಲಸ ಒಂದು ಹಂತಕ್ಕೆ ಬಂದ ಮೇಲೆ, ನಿವೃತ್ತನಾಗಿ ಸ್ವದೇಶಕ್ಕೆ ಮರಳಿ ನನಗೆ ಬಹಳ ಇಷ್ಟವಾದದ್ದನ್ನು ಓದಿಕೊಂಡು, ಬರೆದುಕೊಂಡು ನಮ್ಮ ಮಣ್ಣಿನ ಪರಿಮಳ ಹೀರುತ್ತಾ, ಬದುಕು ಸಾಗಿಸಬೇಕು ಎನ್ನುವ ಯೋಚನೆ ಎಂದಿಗೂ ನನ್ನೊಳಗೆ ಇದ್ದದ್ದೇ. ಡಾಕ್ಟರೇಟ್ ಮಾಡಲು ಬಂದ ನಂದ, ಅಳಿಯನೂ ಆಗಿ ನನ್ನೊಡನೆ ಹೆಗಲಿಗೆ ಹೆಗಲು ಕೊಟ್ಟು ಭವನದ ಉನ್ನತಿಗಾಗಿ ದುಡಿದಿದ್ದ. ಅವನದೇ ರೀತಿಯಲ್ಲಿ ಒಂದು ವಿಧದಲ್ಲಿ ನನ್ನ ಉತ್ತರಾಧಿಕಾರಿಯಾಗಲು ಪೂರ್ಣವಾಗಿ ಅರ್ಹನಾಗಿದ್ದ. ಬೀಜ ನೆಟ್ಟನಂತರ, ಮೊಳಕೆ ಒಡೆಯುವುದರ ಕಾಲದಿಂದಲೂ ಅದರ ಆರೈಕೆ ಮಾಡಿ, ಪೋಷಣೆ ಮಾಡಿ, ಕಷ್ಟಪಟ್ಟು, ಬೆವರು ಸುರಿಸಿ, ಅವರಿವರ ಕೃಪಾಶ್ರಯದಲ್ಲಿ ಭವನವನ್ನು ಕಟ್ಟಿ ಬೆಳೆಸಿದ ನನ್ನ ಶ್ರಮ ಅದನ್ನು

ಬಹಳ ಜೋಪಾನವಾಗಿ ನೋಡಿಕೊಂಡು, ತಲೆ ಎತ್ತಿ ನಿಂತಿರುವ ಅದರ ಕೀರ್ತಿ-ಪ್ರತಿಷ್ಠೆ ಎಂದಿಗೂ ಬಾಡದಂತೆ ನಿಗಾ ವಹಿಸಿ ಅದರ ಸೇವೆ ಮಾಡುವ, ನಾನು ಹೇಗೆ 'ಭವನದ ಕೆಲಸ ನನ್ನ ಉಸಿರು' ಎಂದುಕೊಂಡು ಮಾಡುತ್ತಿದ್ದೆನೋ ಹಾಗೆಯೇ ಭವನದ ಕೆಲಸಗಳನ್ನು ಮಾಡಿಕೊಂಡು ಮುನ್ನಡೆಸುವ ಚೈತನ್ಯವಿದ್ದ ನಂದನ ನಾಯಕತ್ವದಲ್ಲಿ ಸಾರ್ಥಕತೆ ಕಾಣುವುದು ಬೇಕಿತ್ತು!!

ನಾನು ಇಲ್ಲಿ 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಪ್ರತಿನಿಧಿಯಾಗಿದ್ದೆ. 'ಸಂಯುಕ್ತ ಕರ್ನಾಟಕ' ಪತ್ರಿಕೆಯನ್ನು ಬಿಟ್ಟು ಭವನವನ್ನು ಸೇರಿದಂದಿನಿಂದಲೂ, ಆಗಾಗ ಆ ಪತ್ರಿಕೆಗೆ ಬರೆಯುವುದಿತ್ತು – ಲಂಡನ್‌ನಲ್ಲಿಯೂ. 'ಸಂಯುಕ್ತ ಕರ್ನಾಟಕ'ದಲ್ಲಿ ನನಗೆ ಪತ್ರಿಕೋದ್ಯಮದ ಗುರುಗಳಾಗಿದ್ದ ಶ್ರೀ ಶಾಮರಾಯರು ಲಂಡನ್‌ಗೆ ನಮ್ಮಲ್ಲಿಗೆ ಬಂದಿದ್ದಾಗ, ನಾನು ನಿವೃತ್ತನಾಗುವ ಅಭಿಪ್ರಾಯ ಹೊಂದಿರುವುದನ್ನು ತಿಳಿದ ಅವರು, 'ಭಾರತಕ್ಕೆ ಬಂದ ಮೇಲೆ ನಮ್ಮಲ್ಲಿಗೇ ಮತ್ತೆ ಬನ್ನಿ ನೀವು' ಎಂದು ಆಹ್ವಾನಿಸಿದರು, ಬರೆಯುವುದರಲ್ಲಿ ನನಗಿದ್ದ ಆಸಕ್ತಿ ಅವರಿಗೆ ಚೆನ್ನಾಗಿಯೇ ತಿಳಿದಿತ್ತಾದ್ದರಿಂದ. ಇತ್ತ ಕಂಚಿ ಪರಮಾಚಾರ್ಯರಾದ ಶ್ರೀ ಜಯೇಂದ್ರ ಸರಸ್ವತಿ ಮಹಾಸ್ವಾಮಿಯವರು ಕಂಚಿಯಲ್ಲಿ ಒಂದು ಗೌರವಾನ್ವಿತ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸಿದ್ದರು. ಅದು ಅಷ್ಟೇ ಚೆನ್ನಾಗಿ ನಡೆಯುತ್ತಿದ್ದು 'ಗೌರವಾನ್ವಿತ ವಿಶ್ವವಿದ್ಯಾನಿಲಯ' (ಡೀಮ್ಡ್ ಯೂನಿವರ್ಸಿಟಿ) ಎಂದೇ ಹೆಸರು ಮಾಡಿತ್ತು. ಕಂಚಿ ಶ್ರೀಗಳಿಗೆ ನಾನು ಅಲ್ಲಿಗೆ ಹೋಗಿ ಸೇರಬೇಕು ಎನ್ನುವ ಆಶಯವಿತ್ತು. "ನೀನು ಭಾರತಕ್ಕೆ ಬಂದ ಕೂಡಲೆ ಬಂದು ನನ್ನನ್ನು ನೋಡು" ಎಂದು ಹೇಳಿದ್ದ ಶ್ರೀಗಳ ಇಂಗಿತ ನನಗೂ ಅರ್ಥವಾಗಿತ್ತು. ಆ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ನನ್ನನ್ನು ನೇಮಕ ಮಾಡಬೇಕೆನ್ನುವುದು ಅವರ ಉದ್ದೇಶವಾಗಿತ್ತು. ನನಗಾದರೂ ಸುಮ್ಮನೆ ಕುಳಿತು ಅಭ್ಯಾಸವಿರಲಿಲ್ಲ. ಯಾವತ್ತೂ, ಯಾವಾಗಲೂ, ಯಾವುದಾದರೂ ಕೆಲಸ ಮಾಡುತ್ತಲೇ ಇರುವುದು ನನಗೆ ಮೈಗೂಡಿ ಬಂದ ಅಭ್ಯಾಸ. ನಿವೃತ್ತನಾದ ಮೇಲೆ ನಾನು ಏನು ಮಾಡಬೇಕು ಎನ್ನುವುದು ಇನ್ನೂ ಸ್ಪಷ್ಟವಾಗಿ ನಿರ್ಧಾರವಾಗಿರಲಿಲ್ಲ. ಆಗಲೇ ನಾನು ನಿವೃತ್ತಿ ಹೊಂದಿ, ನನಗೆ ಲಂಡನ್ ಕೇಂದ್ರದವರೂ, ನನ್ನ ಮಿತ್ರರು, ಅಭಿಮಾನಿಗಳು, ಹಿರಿಯರು-ಕಿರಿಯರು ಎಲ್ಲರೂ ಸೇರಿ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಿದ್ದ ದಿನವೂ ಬಂದಿತು.

೨೩ ವರ್ಷಗಳ ಕಾಲ ನನ್ನ ಒಡನಾಡಿದವರು, ಹಿರಿಯರು, ಕಿರಿಯರು, ಭವನದ ಬಂಧು-ಬಳಗ ಅಭಿಮಾನಿಗಳು ಎಲ್ಲರೂ ಹೃದಯ ತುಂಬಿ ಬಹಳ ಒಳ್ಳೆಯ ಮಾತುಗಳನ್ನಾಡಿ, ನನ್ನ ನಿವೃತ್ತ ಜೀವನವನ್ನು ದೇವರು ಸುಖಮಯವಾಗಿಸಲಿ ಎಂದು ಮನಸಾ ಹಾರೈಸಿ ನನಗೂ-ನನ್ನಾಕೆಗೂ ನೆನಪಿನ ಕಾಣಿಕೆಗಳನ್ನು ಕೊಟ್ಟು ಶುಭ ಕೋರಿದರು. ಶ್ರೀ ಜೆ.ಕೆ. ಗೋಹೆಲ್‌ರು ಭವನದ ಹಿರಿಯ ಉಪಾಧ್ಯಕ್ಷರು, ನನ್ನ ಸೇವೆಯ ಬಗೆಗೆ ಮಾತನಾಡುವಾಗ, 'Mathoorji is a professional beggar' ಎಂದು ಹೇಳಿ,'ನಾನು ಬಹಳ ಮಂದಿ ನಿಧಿ ಸಂಗ್ರಹಿಸಿರುವುದನ್ನು ನೋಡಿದ್ದೇನೆ. ಆದರೆ, ಈ ರೀತಿಯಲ್ಲ. ನಾವು ಹೇಗೆ ನಮ್ಮ ವ್ಯಾಪಾರ, ವ್ಯವಹಾರ ಮಾಡುತ್ತೇವೆಯೋ, ನಮ್ಮನ್ನು ವೃತ್ತಿಪರರು ಎಂದುಕೊಳ್ಳುತ್ತೇವೆಯೋ, ಹಾಗೆಯೇ ಮಾಥೂರ್‌ಜೀ ಸಹ ಅವರ ಕಾರ್ಯಕ್ಷೇತ್ರದ ವೃತ್ತಿಪರ ಭಿಕ್ಷುಕರು!' ಎಂದಾಗ ಅವರ ಮಾತಿನಲ್ಲಿದ್ದ ತಿಳಿಹಾಸ್ಯದ ಲೇಪವನ್ನು ಕಂಡು ಇಡೀ ಸಭಾಂಗಣ ಮೆಚ್ಚುಗೆಯಿಂದ ಕರತಾಡನ ಮಾಡಿ ನಕ್ಕಿದುದ್ದನ್ನು ನಾನು ಮರೆಯುವಂತಿಲ್ಲ. ಅವರ ಅಭಿಮಾನ ಅದಾಗಿತ್ತು.

ಭವನದ ಬಳಗ ಅದೆಷ್ಟು ದೊಡ್ಡದಾಗಿತ್ತು ಎಂದರೆ, ನನ್ನ ಬೀಳ್ಕೊಡುಗೆಯ ಕಾರ್ಯಕ್ರಮ ಎರಡು ದಿನಗಳಿಗೆ ವಿಸ್ತರಿಸಿ, ಎಲ್ಲರೂ ಪಾಲ್ಗೊಳ್ಳಲು ಅವಕಾಶವಾಗುವಂತೆ ಆಯಿತು. ಅವರೆಲ್ಲರ ಹಾರೈಕೆ ಈ ದಿನ ನನ್ನನ್ನು ಚೆನ್ನಾಗಿ ಇರಿಸಿದೆ ಎಂದು ನನ್ನ ನಂಬಿಕೆ !!

ತನ್ನ ನೆಲದಲ್ಲಿ ನನ್ನ ೨೩ ವರ್ಷಗಳ ಸೇವೆಯನ್ನು ಗುರ್ತಿಸಿ, ಗೌರವಿಸಿ, ಬ್ರಿಟನ್ ಸರ್ಕಾರ ನನಗೆ-ನನ್ನವಳಿಗೆ ನಿವೃತ್ತಿ ಹೊಂದಿದ ನಂತರ ಕೊಡುವ ಮಾಸಾಶನವನ್ನು ಕೊಡುವುದಾಗಿ ಹೇಳಿತು. ಅಂತೆಯೇ ಇಂದಿನವರೆಗೂ ನಡೆಸಿಕೊಂಡು ಬರುತ್ತಿರುವ ಬ್ರಿಟನ್ ಸರ್ಕಾರಕ್ಕೆ ನಾನೂ-ನನ್ನವಳೂ ಬಹಳ ಋಣಿಗಳು!

ಲಂಡನ್ ಬಿಟ್ಟು ಹೊರಡುವಾಗ ನಿಜಕ್ಕೂ ಹೃದಯ ಭಾರವಾಗಿತ್ತು! ದುಗುಡ, ಆತಂಕ, ಭಯ, ಕಾತರ, ಕುತೂಹಲ ಹೊತ್ತು ಬಂದಿದ್ದ ಮನಸ್ಸು, ದೊಡ್ಡ ಜವಾಬ್ದಾರಿಯೊಂದನ್ನು ಸರಿಯಾಗಿ ನಿರ್ವಹಿಸಿದ ತೃಪ್ತಿಯಿಂದ ಹಗುರವಾಗಿತ್ತಾದರೂ ಆ ನಗರವನ್ನು ಬಿಟ್ಟು ಹೊರಡುವಾಗ ಕಣ್ಣು ಹನಿಗೂಡಿತ್ತು.

ನನ್ನ ಅನೇಕ ಸ್ನೇಹಿತರು, 'ಮತ್ತೂರ್‌ಜೀ, ಇಷ್ಟು ವರ್ಷ ನೀವು ಇಲ್ಲಿ ಇದ್ದಿರಿ. ಇಲ್ಲಿಯ ಸುಖ ಸೌಕರ್ಯಗಳಿಗೆ ಹೊಂದಿಕೊಂಡಿದ್ದಿರಿ. ಭಾರತಕ್ಕೆ ಮರಳಿದರೆ ಅಲ್ಲಿ ಇದನ್ನೆಲ್ಲಾ ನಿರೀಕ್ಷಿಸುವಂತಿಲ್ಲ. ಲಂಚ, ರುಷುವತ್ತು, ಅವ್ಯವಸ್ಥೆ, ಗೊಂದಲಗಳ ಆಗರ ಅದು. ಆದರೆ, ಬ್ರಿಟನ್ ಸ್ವರ್ಗಸದೃಶ... ಹಾಗೆ ಎನಿಸುವುದಿಲ್ಲವೇ?' ಎಂದರು. ಅವರ ಈ ಪ್ರಶ್ನೆ ನನ್ನನ್ನು ಯಾವುದೇ ಗೊಂದಲಕ್ಕೆ ಸಿಲುಕಿಸಲಿಲ್ಲ. ಶ್ರೀರಾಮನು ಲಂಕೆಯನ್ನು ಬಿಟ್ಟು ಸೀತೆಯನ್ನು ಕರೆದುಕೊಂಡು ಅಯೋಧ್ಯೆಗೆ ಹೊರಟಾಗ, ಲಕ್ಷ್ಮಣ 'ವಿಭೀಷಣನಿಗೆ ನಿನ್ನ ಮೇಲೆ ಅಪಾರ ಗೌರವವಿದೆ. ಲಂಕೆಯೂ ಸಂಪತ್ಸಮೃದ್ಧವಾದ ನಗರ. ಇಲ್ಲಿಯೇ ಇರಲು ನೀನು ಮನಸು ಮಾಡಿದರೆ ನಾವು ಇರಬಹುದು. ಇವರೆಲ್ಲರೂ ನಿನಗೆ ಸಕಲವಿಧ ಅನುಕೂಲಗಳನ್ನೂ ಮಾಡಿಕೊಟ್ಟು ಉನ್ನತ ಸ್ಥಾನವನ್ನೂ ಕೊಟ್ಟು, ಗೌರವದಿಂದ ನೋಡಿಕೊಳ್ಳುವುದರಲ್ಲಿ ಸಂಶಯವಿಲ್ಲ.' ಎಂದಾಗ ಶ್ರೀರಾಮ ಉತ್ತರಾಭಿಮುಖವಾಗಿ ನಿಂತು ,

ತಾಯಿ ಭಾರತಾಂಬೆಯ ಕಡೆಗೆ ನೋಡುತ್ತಾ, 'ಸೌಮಿತ್ರಿ,

ಅಪಿ ಸ್ವರ್ಣಮಯೀ ಲಂಕಾ ನ ಮೇ ಲಕ್ಷ್ಮಣ ರೋಚತೇ |
ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ ||'

ಎನ್ನುತ್ತಾನೆ ! ಶ್ರೀರಾಮನ ಈ ಮಾತು ನೆನಪಾಗಿ ನನಗೆ ಗಂಟಲು ಬಿಗಿಯಿತು. ಸ್ವದೇಶಕ್ಕೆ ವಾಪಸ್ಸಾಗುತ್ತಿರುವ ನನ್ನ ನಿರ್ಧಾರ ಸರಿಯೆನಿಸಿತು.

೨೩ ವರ್ಷಗಳ ಕಾಲ ಕಷ್ಟ-ಸುಖದಲ್ಲಿ ಸಲಹಿದ ಆ ಬ್ರಿಟನ್ ನೆಲ ಆಗ ನನಗೆ ಪರದೇಶದ್ದಾಗಿ ಕಾಣಲಿಲ್ಲ. ಅಷ್ಟು ವರ್ಷಗಳ ಕಾಲ ನನಗೆ ಅಲ್ಲಿನ ಮಣ್ಣಿನ-ನೀರಿನ ಋಣವಿದ್ದು, ಅಲ್ಲಿ ತನ್ನ ಮಡಿಲಲ್ಲಿ ಆಶ್ರಯಕೊಟ್ಟು ಕಾಪಾಡಿದ ಆ ನೆಲಕ್ಕೆ ನಮಿಸಿ, ನನ್ನ ದೇಶ-ನನ್ನಜನ-ನನ್ನ ಮಾತೃಭೂಮಿಯತ್ತ ಹೊರಟೆ!

೨೯. ವಿದ್ಯಾಭವನದ ಕಾರ್ಯವೈಖರಿ

ಪ್ರಪಂಚದಾದ್ಯಂತ ಎಲ್ಲ ಹಿರಿಯ ಪ್ರತಿಷ್ಠಿತರ, ಅನುಭವಿಗಳ, ಘನತೆವೆತ್ತವರ ಮೆಚ್ಚುಗೆಗೆ ಪಾತ್ರವಾಗಿರುವುದು ಲಂಡನ್ ವಿದ್ಯಾಭವನದ ಕೇಂದ್ರದ ಕಾರ್ಯವೈಖರಿ. ಯಾವುದೇ ಸಂಸ್ಥೆಯ ಯಶಸ್ಸಿಗೆ ಅದರ ಹಿಂದಿರುವ ಕಾರ್ಯಕಾರಿ ಸಮಿತಿಯ ವ್ಯವಸ್ಥಿತ ಕಾರ್ಯಜಾಲಸಂಸ್ಥೆಯು ಯಾವುದೇ ರೀತಿಯಲ್ಲೂ ತೊಂದರೆಗೆ ಒಳಗಾಗದಂತೆ, ಸದೈವ ಪ್ರಗತಿಯತ್ತ ನಡೆಯುವಂತೆ ಕೆಲಸ ಮಾಡುತ್ತದೆ. ಲಂಡನ್ ಕೇಂದ್ರದ ಈ ಕಾರ್ಯವೈಖರಿಯು ಯಾವುದೇ ಸಂಸ್ಥೆಯನ್ನು ಯಶಸ್ವಿಯಾಗಿ ನಡೆಸುವುದಕ್ಕೆ ಒಂದು ಮಾದರಿಯಂತಿದೆ ಎನ್ನುವುದು ಅನೇಕರ ಅಭಿಪ್ರಾಯ. ಅದಕ್ಕಾಗಿಯೇ ವಿದ್ಯಾಭವನದ, ಲಂಡನ್ ಕೇಂದ್ರದ ಕಾರ್ಯವೈಖರಿಯ ಪರಿಚಯವನ್ನು ಇಲ್ಲಿ ಕೊಡಲಾಗಿದೆ.

ವಿದ್ಯಾಭವನದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಕಾರಿ ಸಮಿತಿಯ ರಚನೆಯಾಗಿ, ಆ ಸಮಿತಿಯು ಇತರ ಹತ್ತು ಉಪಸಮಿತಿಗಳನ್ನು ಒಳಗೊಂಡಿರುತ್ತದೆ. ಈ ಒಂದೊಂದು ಉಪಸಮಿತಿಗೂ ಕಾರ್ಯಕಾರಿ ಸಮಿತಿಯ ಒಬ್ಬೊಬ್ಬ ಸದಸ್ಯರು ಅಧ್ಯಕ್ಷರಾಗಿರುತ್ತಾರೆ.

ಹೀಗೆ ಉಪಸಮಿತಿಗಳ ರಚನೆ ಮಾಡುವುದರ ಮೂಲ ಉದ್ದೇಶ ಏನೆಂದರೆ, ಪ್ರತಿಯೊಂದು ಉಪಸಮಿತಿಯೂ ಒಂದೊಂದು ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಎಂದು. ಹೀಗೆ ಜವಾಬ್ದಾರಿಗಳ ವಿಂಗಡಣೆಯಾಗಿ, ಅವುಗಳ ಹಂಚಿಕೊಳ್ಳುವಿಕೆಯಿಂದಾಗಿ ಭವನದ ಕೆಲಸ ಕಾರ್ಯಗಳು ಸಾಕಷ್ಟು ಸಲೀಸಾಗಿ, ಹೆಚ್ಚು ಅಡೆತಡೆ ಇಲ್ಲದೆ ನಡೆದು, ಯಾರೇ ಒಬ್ಬ ವ್ಯಕ್ತಿಯ ಮೇಲಾಗಲೀ, ಯಾವುದೇ ಉಪಸಮಿತಿಯ ಮೇಲಾಗಲೀ ಹೆಚ್ಚಿನ ಜವಾಬ್ದಾರಿಯ ಹೊರೆ ಬೀಳದೆ ಇರುವಂತಾಗುತ್ತದೆ.

ಪ್ರತಿಯೊಂದು ಉಪಸಮಿತಿಯ ಅಧ್ಯಕ್ಷರೂ, ಯಾರು ತಾವಾಗಿಯೇ ಬಂದು ಸೇವೆ ಸಲ್ಲಿಸಲು ಇಚ್ಛಿಸುವರೋ, ಅಂತಹ ಎಷ್ಟು ಮಂದಿ ಸದಸ್ಯರನ್ನು ಬೇಕಾದರೂ ಉಪಸಮಿತಿಗೆ ಸೇರಿಸಿಕೊಳ್ಳಬಹುದು. ಒಟ್ಟು ಅಂಥ ೯೦ ಜನ ಸದಸ್ಯರನ್ನು ಭವನವು ಹೊಂದಿದೆ. ಅವರಲ್ಲಿ ಅನೇಕರು ಇತರ ಉಪಸಮಿತಿಗಳ ಕೆಲಸ-ಕಾರ್ಯಗಳಲ್ಲಿಯೂ ಸಹಕರಿಸಲು ತಮ್ಮ ಸಹಾಯಹಸ್ತ ನೀಡುತ್ತಾರೆ. ಅಧ್ಯಕ್ಷರು, ಕಾರ್ಯಕಾರಿ ನಿರ್ದೇಶಕರು ಹಾಗೂ ಗೌರವ ಕಾರ್ಯದರ್ಶಿಗಳು- ಈ ಮೂವರೂ ಎಲ್ಲ ಉಪಸಮಿತಿಗಳಲ್ಲಿಯೂ ಅಧಿಕಾರಯುತ ಸದಸ್ಯರುಗಳಾಗಿರುತ್ತಾರೆ.

ಹಾಗೆ ರಚಿಸಲಾಗಿರುವ ಉಪಸಮಿತಿಗಳು ಇವು :

ಸದಸ್ಯತ್ವದ ಉಪಸಮಿತಿ, ಶಿಕ್ಷಣ ಉಪಸಮಿತಿ, ಕಾರ್ಯಕ್ರಮ ಉಪಸಮಿತಿ, ಕಟ್ಟಡದ ಉಪಸಮಿತಿ, ನಾಟಕ ಉಪಸಮಿತಿ, ವಿಶೇಷ ಯೋಜನಾ ಉಪಸಮಿತಿ, ಭವನವನ್ನು ವಿಸ್ತರಿಸುವ ಯೋಜನಾ ಉಪಸಮಿತಿ, ನಿಧಿ ಸಂಗ್ರಹಣೆ ಮತ್ತು ಹಣಕಾಸು ಉಪಸಮಿತಿ, ಪುಸ್ತಕ ಮಳಿಗೆ ಉಪಸಮಿತಿ, ಹಾಗೂ ಚಾಲನಾ ಸಮಿತಿ.

ಹಿಂದಿನ ಕಾರ್ಯನಿರ್ವಹಣಾ ರೀತಿಯನ್ನು ಪರಾಮರ್ಶೆ ಮಾಡಲು, ಹಾಗೆಯೇ ಮುಂದೆ ಮಾಡುವುದರ ಬಗೆಗೆ ಸರಿಯಾದ ಯೋಜನೆಗಳನ್ನು ರೂಪಿಸಲು, ಪ್ರತಿಯೊಂದು ಉಪಸಮಿತಿಯೂ ತಿಂಗಳಿಗೊಮ್ಮೆ ಸಭೆ ಸೇರುವುದು. ಕಾರ್ಯಕಾರಿ ಸಮಿತಿಯ ಸಭೆ ಸೇರುವುದು ಸಹ ಇದೇ ಉದ್ದೇಶದಿಂದಲೇ. ಪ್ರತಿಯೊಂದು ಉಪಸಮಿತಿಯ ಅಧ್ಯಕ್ಷರೂ ಆ ತಿಂಗಳ ಕೊನೆಯ ಸೋಮವಾರದಂದು ಸೇರುವ ಕಾರ್ಯಕಾರಿ ಸಮಿತಿಯ ಸಭೆಗೆ ಇದರ ವರದಿಯನ್ನು ಕೊಡಬೇಕು. ಅದಕ್ಕಾಗಿಯೇ, ಈ ಸಭೆ ಸೇರುವ ಮೊದಲೇ, ಎಲ್ಲ ಉಪಸಮಿತಿಗಳೂ ತಮ್ಮ ಸಭೆಯನ್ನು ನಡೆಸುತ್ತವೆ.

ಚಾಲನ ಸಮಿತಿಯು ಇತರ ಎಲ್ಲಾ ಉಪಸಮಿತಿಗಳ ಅಧ್ಯಕ್ಷರುಗಳನ್ನು ಒಳಗೊಂಡಿದ್ದು, ಭವನದ ಅಧ್ಯಕ್ಷರೇ ಈ ಸಮಿತಿಯ ಅಧ್ಯಕ್ಷರೂ ಆಗಿರುತ್ತಾರೆ. ಈ ಸಮಿತಿಯೇ ಇತರ ಉಪಸಮಿತಿಗಳಿಗೆ ಮಾರ್ಗದರ್ಶನ ನೀಡುವ ಸಮಿತಿ. ಎರಡು ತಿಂಗಳಿಗೊಮ್ಮೆ ಸಭೆ ಸೇರುವ ಈ ಸಮಿತಿಯಲ್ಲಿ ಭವನದ ಹಲವು ಹತ್ತಾರು ಯೋಜನೆಗಳ ಬಗೆಗೆ ಚರ್ಚಿಸಲಾಗುತ್ತದೆ. ಜತೆಗೆ ಸಾಧಿಸಿದ ಪ್ರಗತಿಯನ್ನು ಕಾಯ್ದುಕೊಳ್ಳುವ ರೀತಿಯಲ್ಲಿ ಭವನದ ಚಟುವಟಿಕೆಗಳ ರೂಪರೇಖೆಗಳನ್ನು ಈ ಸಮಿತಿಯು ಹಾಕಿಕೊಳ್ಳುತ್ತದೆ.

ಕೆಲಸ-ಕಾರ್ಯಗಳ ಪ್ರಗತಿಯನ್ನು ಪುನರ್ವಿಮರ್ಶಿಸಿ, ಇತರ ಆವಶ್ಯಕತೆಗಳತ್ತ ಗಮನ ಹರಿಸಲು ಪ್ರತಿಶನಿವಾರದಂದು, ಅಧ್ಯಕ್ಷರು,

ಖಜಾಂಚಿಗಳು ಹಾಗೂ ಕಾರ್ಯಕಾರಿ ನಿರ್ದೇಶಕರು ಪರಸ್ಪರ ಭೇಟಿಯಾಗುತ್ತಾರೆ. ಆವಶ್ಯಕತೆ ಇದ್ದಲ್ಲಿ ಸಂಬಂಧಪಟ್ಟ ಇತರ ಸದಸ್ಯರೂ ಚರ್ಚೆಯಲ್ಲಿ ಭಾಗವಹಿಸುತ್ತಾರೆ. ಅಗತ್ಯವಿದ್ದಲ್ಲಿ ಸಂದರ್ಭಕ್ಕನುಗುಣವಾಗಿ, ಅಧ್ಯಕ್ಷರು ಸಹ ಎರಡು - ಮೂರು ದಿನಗಳಿಗೊಮ್ಮೆ ಭವನದ ಕೆಲಸಗಳಿಗೆ ಆದ್ಯತೆ ಕೊಟ್ಟು ಸಭೆ ನಡೆಸುತ್ತಾರೆ.

ಹಲವು ಸಮಿತಿಗಳ ಅಧ್ಯಕ್ಷರುಗಳ ಜತೆಗೆ ಸಮಾಲೋಚಿಸಿ, ಉಪಖಜಾಂಚಿಯ ಸಹಾಯದೊಡನೆ, ಖಜಾಂಚಿಯು ವಾರ್ಷಿಕ ಬಜೆಟನ್ನು ತಯಾರಿಸುತ್ತಾರೆ. ಚಾಲನ ಸಮಿತಿಯಲ್ಲಿ ತಮ್ಮ ಪ್ರಸ್ತಾಪಗಳನ್ನೂ, ಯೋಜನೆಗಳನ್ನೂ ವಿವರವಾಗಿ ಚರ್ಚಿಸಿ, ಎಲ್ಲ ಉಪಸಮಿತಿಗಳ ಅಧ್ಯಕ್ಷರುಗಳ ಅನುಮತಿ ಪಡೆದ ಅನಂತರವೇ ಖಜಾಂಚಿಯು ಬಜೆಟನ್ನು ತಯಾರಿಸುವುದು.

ಬರುವ ಹಣಕಾಸಿನ ವರ್ಷಕ್ಕೆ ಒಂದು ಅಂದಾಜು ಬಜೆಟನ್ನು ತಯಾರಿಸಿ, ಅದರ ಅಂಗೀಕಾರಕ್ಕಾಗಿ ಅದನ್ನು ಕಾರ್ಯಕಾರಿ ಸಮಿತಿಯ ಮುಂದಿಡಲಾಗುತ್ತದೆ. ಇದಾದ ಅನಂತರ, ಮುಂದಿನ ಗುರಿ ಸಾಧನೆಗಾಗಿ ತಮ್ಮದೇ ಆದ ಒಂದು ವೇಳಾಪಟ್ಟಿಯನ್ನು ಹಾಕಿಕೊಳ್ಳುವ ಯೋಜನೆ ಮಾಡುವುದು ಪ್ರತಿಯೊಂದು ಉಪಸಮಿತಿಯ ಕರ್ತವ್ಯ ಆಗಿರುತ್ತದೆ.

ಉದಾಹರಣೆಗೆ, ಉಪಸಮಿತಿಯ ಸದಸ್ಯತ್ವಕ್ಕೆ ಒಂದು ಹಣಕಾಸಿನ ವರ್ಷದಲ್ಲಿ ಆರು ಜನ ಕಾರ್ಪೊರೇಟ್ ಸದಸ್ಯರನ್ನೂ (ತಲಾ £೧,೦೦೦), ೧೫ ಮಂದಿ ಅಜೀವ ಸದಸ್ಯರನ್ನೂ (ತಲಾ £೫೦೦), ೬೦ ಮಂದಿ ಸಹ ಸದಸ್ಯರನ್ನೂ (ತಲಾ £೧೫೦) ಹಾಗೂ ೨೦೦ ಮಂದಿ ಒಡನಾಡಿ ಸದಸ್ಯರನ್ನೂ (ತಲಾ £೨೫) ನೊಂದಾಯಿಸುವ ಜವಾಬ್ದಾರಿ ಇರುತ್ತದೆ. ಇದು ಸುಮಾರು £ ೨೭,೫೦೦ಗಳ ಆದಾಯವನ್ನು ತರುತ್ತದೆ.

ಅದೇ ರೀತಿ ಹಳೆಯ ಅನುಭವಗಳ ಹಾಗೂ ಭವಿಷ್ಯದ ನಿರೀಕ್ಷೆಗಳ ಆಧಾರದ ಮೇಲೆ ಶಿಕ್ಷಣ ಉಪಸಮಿತಿಯು £೧೦೦,೦೦೦ ದಿಂದ £೧,೨೦,೦೦೦ಗಳ ವರೆಗೆ ಆದಾಯಗಳಿಸುವುದಾಗಿ ಹೇಳುತ್ತದೆ (ಅಂಗೀಕರಿಸುತ್ತದೆ).

ಆದಾಯಗಳಿಸುವ ಮುಖ್ಯ ವಿಭಾಗಗಳಾದ ನಾಟಕ, ವಿಶೇಷ ಯೋಜನೆ ಹಾಗೂ ಕಾರ್ಯಕ್ರಮಗಳ ಉಪಸಮಿತಿಗಳು ಇದೇ ರೀತಿ ತಮ್ಮ ಅಂದಾಜು ಆದಾಯವನ್ನು ಮಂಡಿಸುತ್ತವೆ.

ವೆಚ್ಚಗಳನ್ನು ಸರಿಯಾಗಿ ಲೆಕ್ಕಾಚಾರ ಹಾಕಲಾಗುತ್ತದೆ. ಆದಾಯ-ವೆಚ್ಚಗಳ ಬಾಕಿಯನ್ನು ಬಜೆಟ್ಟಿನಲ್ಲಿ ಲೆಕ್ಕ ಹಾಕಲಾಗಿರುತ್ತದೆ.

ಮೂಲನಿಧಿಯಲ್ಲಿ ಉಂಟಾಗುವ ಖೋತಾವನ್ನು (ಇಳಿತವನ್ನು) ನಿಧಿ ಸಂಗ್ರಹಣೆ, ಹಾಗೂ ಆರ್ಥಿಕ ಉಪ ಸಮಿತಿಗಳು ಅವಶ್ಯವಿರುವಷ್ಟು ನಿಧಿ ಸಂಗ್ರಹಿಸಿ ತುಂಬ ಬೇಕಾಗುತ್ತದೆ.

ಮುಖ್ಯವಾಗಿ ಕಾರ್ಯಕ್ರಮ, ನಾಟಕ ಹಾಗೂ ಸದಸ್ಯತ್ವ ಉಪಸಮಿತಿಗಳು ಆರೇಳು ತಿಂಗಳುಗಳ ಅನಂತರ ಪ್ರಗತಿಯನ್ನು ಪುನಃ ಪರಿಶೀಲಿಸುತ್ತವೆ. ಒಂದು ವೇಳೆ ನಿಧಿ ಸಂಗ್ರಹಣೆಯು ನಿರೀಕ್ಷಿತ ಗುರಿ ಮುಟ್ಟರದಿದ್ದರೆ, ಅವಶ್ಯವಿರುವಷ್ಟು ಆದಾಯ ಗಳಿಸಲು, ಆ ಉಪಸಮಿತಿಗಳು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತವೆ.

ಉದಾಹರಣೆಗೆ ಪ್ರತಿವರ್ಷವೂ ಸದಸ್ಯತ್ವದ ಸಂಖ್ಯೆಯನ್ನೇರಿಸುವ ಸಲುವಾಗಿ ಅಕ್ಟೋಬರ್-ನವಂಬರ್ ತಿಂಗಳಿನಲ್ಲಿ ಎಲ್ಲ ಸದಸ್ಯರುಗಳಿಗೂ ಒಂದು ಭೋಜನ ಕೂಟವನ್ನು ಏರ್ಪಡಿಸಲಾಗುತ್ತದೆ. ಪ್ರತಿಯೊಬ್ಬ ಸದಸ್ಯರೂ, ಭವನದ ಸದಸ್ಯರಾಗಿಲ್ಲದ, ಅವರ ೧೦-೧೫ ಮಂದಿ ಮಿತ್ರರನ್ನು ಈ ಔತಣಕೂಟಕ್ಕೆ ಆಹ್ವಾನಿಸುತ್ತಾರೆ. ಆ ದಿನ ಒಂದು ಸಾಂಸ್ಕೃತಿಕ ಕಾರ್ಯಕ್ರಮವನ್ನು ಕೊಡಲಾಗುತ್ತದೆ. ಭೋಜನಕೂಟದ ಅನಂತರ ಎಲ್ಲ ಆಹ್ವಾನಿತರಲ್ಲೂ ಒಂದು ಮನವಿಯನ್ನು ಮಾಡಿಕೊಳ್ಳಲಾಗುತ್ತದೆ. ಈ ವಿಧಾನ ಈವರೆಗೆ ಬಹಳ ಪ್ರಯೋಜನಕಾರಿಯಾಗಿ ಕಂಡುಬಂದಿದೆ. ಇದೇ ರೀತಿ ಕಾರ್ಯಕ್ರಮ ಹಾಗೂ ನಾಟಕ ಉಪಸಮಿತಿಗಳೂ ನಿಧಿ ಸಂಗ್ರಹಿಸಲು ಕೆಲವು ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸುತ್ತವೆ.

ಕೊನೆಯಲ್ಲಿ ನಿಧಿ ಸಂಗ್ರಹಣೆ ಹಾಗೂ ಹಣಕಾಸು ಉಪಸಮಿತಿಗಳು ದೀಪಾವಳಿ ವಿಶೇಷ ಔತಣಕೂಟವನ್ನು ಏರ್ಪಡಿಸುತ್ತವೆ. ಈ ಕಾರ್ಯಕ್ರಮಕ್ಕೆ ಸಮಾಜದ ಪ್ರತಿಷ್ಠಿತ, ಘನತೆವೆತ್ತ ಮುಖ್ಯ ವ್ಯಕ್ತಿಗಳನ್ನು ಆಹ್ವಾನಿಸಿ ಅವರಿಂದ ವಂತಿಕೆಯನ್ನು ಪಡೆದು, ಅನೇಕ ಜಾಹಿರಾತುಗಳನ್ನು ಒಳಗೊಂಡ ಒಂದು ವಿಶೇಷ ವರ್ಣರಂಜಿತ ನೆನಪಿನ ಸಂಚಿಕೆಯನ್ನು ಪ್ರಕಟಿಸಲಾಗುತ್ತದೆ. ಈವರೆಗೆ ಈ ಕಾರ್ಯಕ್ರಮವೂ ಯಶಸ್ಸನ್ನು ಸಾಧಿಸಿದೆ.

ತಾನು ಬೆಳೆದಂತೆ, ತನ್ನ ಕಾರ್ಯಕ್ಷೇತ್ರ ವಿಸ್ತೃತವಾದಂತೆ ಸ್ವಾಭಾವಿಕವಾಗಿಯೇ ಒಂದು ಸಂಸ್ಥೆಯ ಖರ್ಚುಗಳೂ ಬೆಳೆಯುತ್ತಾ ಹೋಗುತ್ತವೆ. ಆದ್ದರಿಂದ ಯಾವಾಗಲೂ ಖೋತಾ ಬಜೆಟ್ ಇರುತ್ತದೆ. ಭವನವು ಈ ಖೋತಾ ಬಜೆಟಿನ ಅಂಕಿ- ಅಂಶಗಳನ್ನು ಸಾಧ್ಯವಾದಷ್ಟೂ ಕಡಮೆಗೆ ಇಳಿಸಲು ಯತ್ನಿಸುತ್ತದೆ. ಈ ಕೆಲವು ವರ್ಷಗಳಿಂದ ಈ ಯೋಜನೆಯೂ ಬಹಳ ತೃಪ್ತಿಕರವಾಗಿ ಕೆಲಸ ಮಾಡುತ್ತಿದೆ.

೩೦. ಜನ್ಮಭೂಮಿಯು ಸ್ವರ್ಗಕ್ಕಿಂತ ಮಿಗಿಲು

ಮೊದಲಿನಿಂದಲೂ ನನಗೆ ನಮ್ಮ ದೇಶದ ಕಡೆಯ ಸೆಳೆತವೇ ಹೆಚ್ಚು. ಹೊರದೇಶಕ್ಕೆ ಹೋದನಂತರ ಅದು ಮತ್ತೂ ಹೆಚ್ಚಾಯಿತು. ‘ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ’ ಎಂದು ಸುಮ್ಮನೇ ಹೇಳಿದ್ದಾರೆಯೇ? ನಮ್ಮ ದೇಶದ ವೈಶಿಷ್ಟ್ಯವೇ ಬೇರೆ! ಕಾಶ್ಮೀರದಿಂದ

ಕನ್ಯಾಕುಮಾರಿಯವರೆಗೆ, ಅಸ್ಸಾಂನಿಂದ ದ್ವಾರಕೆಯವರೆಗೆ, ಎಲ್ಲಿಗೆ ಹೋದರೂ ನಮ್ಮ ಜನರ ಪ್ರೀತಿ ಒಂದೇ ರೀತಿ! ನಮ್ಮ ಎಲ್ಲರ ಒಳಗೂ ಹರಿಯುವ ಆ 'ಪ್ರೇಮನದಿ'ಯ ಒರತೆ ಎಂದೂ ಬತ್ತದಂಥದು. ಅದೇ ನಮ್ಮ ಭಾರತೀಯರ ವಿಶೇಷ ! ಯಾವುದೇ ದೌರ್ಬಲ್ಯ, ಸಣ್ಣತನ ಎನ್ನವುದು ಎಲ್ಲ ದೇಶದ ಜನರಲ್ಲೂ ಇದ್ದದ್ದೇ. ಅದು ಮನುಷ್ಯನ ಸಹಜ ಸ್ವಭಾವ. ಆದರೆ ಪರಸ್ಪರರ ಬಗೆಗಿನ ಕಳಕಳಿ, ಕಾಳಜಿ, ನಂಬಿಕೆ, ವಿಶ್ವಾಸ ನಮ್ಮವರಲ್ಲಿ ಇರುವಂತೆ ಮತ್ತಾರಲ್ಲೂ ಇಲ್ಲ. ಅಲ್ಲವೇ ಮತ್ತೆ? ಎಂತಹ ನಾಡು ನಮ್ಮದು ? ಎಂಥ ಪರಂಪರೆ ನಮ್ಮದು? ಎಂಥ ಉನ್ನತ ವಿಚಾರದ ಚರಿತ್ರೆ ನಮ್ಮದು ? ಚಿನ್ನ-ಬೆಳ್ಳಿಗಳನ್ನು, ಮುತ್ತು ರತ್ನಗಳನ್ನು ರಸ್ತೆಯಲ್ಲಿ ರಾಶಿ ಹಾಕಿಕೊಂಡು ಮಾರುತ್ತಿದ್ದ ಜನರು ನಮ್ಮವರು. ಮನೆ ಬಾಗಿಲುಗಳನ್ನು ತೆಗೆದು ರಾತ್ರಿ ಹೊರಗೆ ಮಲಗುತ್ತಿದ್ದ ನಿಶ್ಚಿಂತೆಯ ನಮ್ಮ ಜನಕ್ಕೆ ಇತರರ ಮೇಲಿನ ನಂಬಿಕೆಯೂ ಅಪಾರ.

ಏರ್ ಇಂಡಿಯಾ ವಿಮಾನವು ಸ್ವದೇಶದ ಕಡೆ ಹೊರಟಿತು. ತಮ್ಮ ಪಾಲಿನ ಕರ್ತವ್ಯವನ್ನು ನಿಷ್ಠೆಯಿಂದ ನಡೆಸಿ ಕೃತಕೃತ್ಯರಾಗಿ ಮಗನು ಪ್ರಾಪ್ತ ವಯಸ್ಸಿಗೆ ಬಂದನಂತರ ಆತನಿಗೆ ಜವಾಬ್ದಾರಿಯನ್ನು ವಹಿಸಿ ವಾನಪ್ರಸ್ಥಾಶ್ರಮವನ್ನು ಕೈಕೊಳ್ಳುವ ಗೃಹಸ್ಥರಿಗೆ ಆಗುವ ಅನುಭವ, ನೆಮ್ಮದಿ ನಮಗಾಯಿತು ಎಂದರೆ ಅತ್ಯುಕ್ತಿ ಅಲ್ಲ!

ಬ್ರಿಟನ್ನಿನಲ್ಲಿ ಭವನದ ಕೆಲಸವು ಜಯಪ್ರದವಾಗಲು ನೆರವಾದ ದಲಾಲ್‌ಜೀ, ಜೊಗಿಂದರ್‌ಜೀ, ಶಾಂತೂಜಿ ಕಿಶೋರ್‌ಭಾಯಿ, ಜಾನ್‌ಮಾರ್, ದಾಮೋದರ ಚನ್ರಾಯ್, ಭಗವಾನ್ ಮೀರ್‌ಚಂದಾನಿ, ಛತ್ರೂ-ದುರುಮಲ್ ದಂಪತಿಗಳು, ಸರಳಾ-ಮೋಹನ್ ತಡಾನಿ ದಂಪತಿಗಳು, ಜನಕ್-ಛತ್ರು ಖಿಲ್ನಾನಿ ದಂಪತಿಗಳು, ಮದನ್ ಅರೋರಾ, ದುಲಾರಿ, ರಾಮಹಿತ್, ಪಮಾರಿ, ಫೀರಾವೋ, ಹರಿಣಿ, ರಘುವೀರ್, ಡಾ.ಕೋಯಾ, ಡಾ. ದೊರೆರಾಜ್, ಡಾ. ನಟರಾಜನ್ ಮೈತ್ರೇಯಿ, ಡಾ. ಗಣೇಶ, ಬಿ.ಬಿ. ಕೊಣ್ಣೂರ್, ರಾಜ್ ಖಿಪ್ಪರಿಯಾ, ಜೇನಿನ್ ಮಿಲ್ಲರ್, ರೋಣ್, ಜಗದೀಶ್‌ಲಾಲ್ ಶರ್ಮ, ರಾಣೀ ಶರ್ಮ, ಪ್ರಫುಲ್ಲಾ, ರಮಣಿ, ಸಿ.ಬಿ. ಪಟೇಲ್, ದಲಾಲ್ ಸೋಲಂಕಿ, ಪಂಕಜ್‌ವೋರಾ, ಭಾರತೀ ವೋರಾ ಮೊದಲಾದ ನೂರಾರು ಮಿತ್ರರು "ಹೋಗಿಬರುವಿರಾ, ಹೋಗಿಬರುವಿರಾ!" ಎಂದು ಹೇಳಿ ಕೈ ಬೀಸುವಂತೆ ಕಂಡಿತು.

ಲಂಡನ್ನಿಗೆ ಹೋದ ಅನಂತರ ಮೂರು-ನಾಲ್ಕು ವರ್ಷಗಳಿಗೆ ಒಮ್ಮೆ ಹೊಸ ಹೊಸ ರಾಯಭಾರಿಗಳು ಬರುತ್ತಿದ್ದರು. ಇವರುಗಳಲ್ಲಿ ಅತ್ಯಂತ ಪ್ರೀತಿ ವಿಶ್ವಾಸವನ್ನು ತೋರಿಸಿದವರಲ್ಲಿ ಡಾ. ಎಲ್.ಎಮ್. ಸಿಂಘ್ವಿ ಒಬ್ಬರು.ಇವರ ಬಗೆಗೆ ಈ ಹಿಂದೆಯೇ ಹೇಳಿದ್ದಾಗಿದೆ. ಅತಿ ಹೆಚ್ಚಿನ ಪ್ರೀತಿ ತೋರಿಸಿದ ಮತ್ತೊಬ್ಬ ರಾಯಭಾರಿ ಡಾ.ಪಿ.ಸಿ. ಅಲೆಕ್ಸಾಂಡರ್. ಅವರು ಕ್ರಿಸ್ತಮತದವರಾದರೂ ಸನಾತನ ಧರ್ಮದ ಬಗೆಗೆ ಬಹಳಷ್ಟು ಅಧ್ಯಯನ ಮಾಡಿದವರು, ಸುಸಂಸ್ಕೃತರು ಮತ್ತು ಸದ್ವಿಚಾರವಂತರು; ಉಜ್ವಲ ಭಾಷಣಕಾರರು. ಅವರು ಹೈಕಮಿಷನರ್ ಆಗಿ ಬಂದ ಮೇಲೆ ಭವನದಲ್ಲಿ ಗಾಂಧೀಜಿ ಹಾಗೂ ನೆಹರೂರನ್ನು ಕುರಿತ ಎರಡು ಉಪನ್ಯಾಸಗಳನ್ನು ಮಾಡಿ ಬಹುಜನರ ಮೆಚ್ಚುಗೆ ಗಳಿಸಿದರು. ಸ್ನೇಹಪರರು, ಸರಕಾರೀ ಅಧಿಕಾರಿ ಆಗಿ ಎಲ್ಲ ರಾಜಕೀಯ ಪಕ್ಷಗಳ ಮೈತ್ರಿಯನ್ನೂ ಹೊಂದಿ ಖ್ಯಾತಿಗಳಿಸಿದವರು.

ಒಮ್ಮೆ ಅವರು ಭಾಷಣ ಮಾಡುವ ಸಂದರ್ಭದಲ್ಲಿ ಅವರು ಹಿಡಿದಿದ್ದ ಪತ್ರ ಒಂದರ ಹಿಂದೆ ಇಟ್ಟುಕೊಳ್ಳಲು ಪ್ಯಾಡ್‌ಗಾಗಿ ಅತ್ತಿತ್ತ ಕಣ್ಣು ಆಡಿಸುತ್ತಿದ್ದುದನ್ನು ಗಮನಿಸಿದ ನಾನು, ಕೂಡಲೇ ಪ್ಯಾಡ್ ಒಂದನ್ನು ತೆಗೆದುಕೊಂಡು ಅವರ ಕೈಗಿಟ್ಟೆ. ನನ್ನತ್ತ ಮೆಚ್ಚುಗೆಯಿಂದ ನೋಡಿದ ಅವರು, 'ಓ.... ನೀವು ಗ್ರಹಿಸಿದಿರಿ! ಗ್ರೇಟ್ ಮೆನ್ ಥಿಂಕ್ ಅಲೈಕ್' ಎಂದರು ನಗುತ್ತಾ. ನಾನು ಕೂಡಲೇ, 'ಛೇ...ಛೇ... ನಾನು ನಿಮ್ಮಷ್ಟು ಗ್ರೇಟ್ ಅಲ್ಲ ಸಾರ್, ಬಟ್ ಎ ಸರ್ವೆಂಟ್. ಯಜಮಾನನಿಗೆ ಆವಶ್ಯಕತೆ ಇರುವುದನ್ನು ನೋಡಿ, ಗ್ರಹಿಸಿ ಅದನ್ನು ಒದಗಿಸುವ ಸೇವಕ' ಎಂದೆ ವಿನಯವಾಗಿ. ಅದಕ್ಕೆ ಅವರು 'ಓ... ಮತ್ತೂರ್... ಎಷ್ಟು ವಿನಯವಾಗಿ ಹಾಗೆ ಹೇಳುತ್ತೀರಿ. ನನಗೆ ನಿಮ್ಮ ಈ ರೀತಿ ನಿಜಕ್ಕೂ ಬಹಳ ಇಷ್ಟವಾಯಿತು' ಎಂದರು.

ಡಾ.ಪಿ.ಸಿ. ಅಲೆಕ್ಸಾಂಡರ್ ಅವರಿಗೆ ಈಗಲೂ ನನ್ನ ಮೇಲೆ ಅದೇ ಪ್ರೀತಿ-ವಿಶ್ವಾಸ ಇದೆ ಎಂದು ನಿಮ್ಮಲ್ಲಿ ಹೇಳಲು ನನಗೆ ಹೆಮ್ಮೆ ಎನಿಸುತ್ತದೆ. ಇವರ ನಂತರ ಹೈಕಮಿಷನರ್ ಆಗಿ ಇವರ ಸ್ಥಾನವನ್ನು ತುಂಬಿದವರು ಡಾ.ಎಲ್.ಎಂ. ಸಿಂಘ್ವಿಯವರು.

ಭಾರತೀಯ ವಿದ್ಯಾಭವನದ ಸ್ವಂತ ಕಟ್ಟಡವನ್ನು ಜುಲೈ ೧೯, ೧೯೭೮ರಂದು ಉದ್ಘಾಟಿಸಿದವರು ದಿ ರೈಟ್ ಆನರಬಲ್ ಜೇಮ್ಸ್ ಕಲಹನ್. ಆಗ ಅವರು ಪ್ರಧಾನಮಂತ್ರಿಗಳಾಗಿದ್ದರು. ಅವರು ಲೇಬರ್ ಪಕ್ಷದವರು. ಅವರನಂತರ ಪ್ರಧಾನಮಂತ್ರಿ ಕನ್ಸರ್ವೇಟಿವ್ ಪಕ್ಷದ ಶ್ರೀಮತಿ ಮಾರ್ಗರೇಟ್ ಥ್ಯಾಚರ್. ನಿವೃತ್ತರಾದನಂತರ ಕಲಹನ್ ಅವರು ಹೌಸ್ ಆಫ್ ಲಾರ್ಡ್ಸ್ ಸದಸ್ಯರಾಗಿ ಲಾರ್ಡ್ ಕಲಹನ್ ಆದರು. ಅನಂತರವೂ ಭವನದ ಬಗೆಗೆ ಹೆಚ್ಚಿನ ಆಸಕ್ತಿ ವಹಿಸಿದರು.

ನಾನು ನಿವೃತ್ತನಾಗಿ, ಭಾರತಕ್ಕೆ ಮರಳುತ್ತೇನೆ ಎಂದು ತಿಳಿಸಿದಾಗ ಅತ್ಯಂತ ಆದರದಿಂದ ಬರಮಾಡಿಕೊಂಡು, "Mr. Mathoor, so you are retiring; you want to go back to India. I am sure you will continue the Bhavan's work in India too. You are too young to retire! My wife and myself would like to invite you for a farewell lunch. Could you please accept ? We also will invite Mr. Maneck Dalal, the Bhavan's chairman and his wife" ಎಂದರು.

ನಾನು ತಬ್ಬಿಬ್ಬಾದೆ. 'ಸಾಮಾನ್ಯನಾದ ನನ್ನಂಥವನನ್ನು ಬ್ರಿಟನ್ನಿನ ಪ್ರಧಾನಮಂತ್ರಿ ಆಗಿದ್ದ ಈ ಮಹನೀಯರು ಇಷ್ಟು ವಿಶ್ವಾಸದಿಂದ ಕರೆಯುತ್ತಿದ್ದಾರೆ' ಎಂದು. 'Sir I am deeply touched. My wife and myself are very fortunate indeed' ಎಂದೆ. ನಮ್ಮ ಗೌರವಾರ್ಥವಾಗಿ ಬಹಳ ಆತ್ಮೀಯತೆಯಿಂದ ಸಸ್ಯಾಹಾರಿ ಭೋಜನಕೂಟವನ್ನು ಏರ್ಪಡಿಸಿದ್ದು, ನಮ್ಮೆಲ್ಲರ ಜತೆ ತಾವು ಸಹ ಸಸ್ಯಾಹಾರವನ್ನೇ ಸೇವಿಸಿದ್ದುದನ್ನು ನಾನು ಮರೆಯಲಾಗದು.

'ವಿಮಾನವು ಆಲ್ಪ್ಸ್ ಪರ್ವತವನ್ನು ದಾಟುತ್ತಿದೆ' ಎಂದು ವಿಮಾನ ಚಾಲಕರು ತಿಳಿಸಿದಾಗ, ಘಂಟೆ ೧೨. ಪಕ್ಕಕ್ಕೆ ತಿರುಗಿ ಗಾಜಿನ ಕಿಟಕಿಯಿಂದ ಇಣಕಿ ಕೆಳಗೆ ನೋಡಿದೆ. ಹಿಮಾಚ್ಛಾದಿತ ಆಲ್ಪ್ಸ್! ಇವಳಿಗೂ ತೋರಿಸಿದೆ.

"ಎಷ್ಟು ಚೆನ್ನಾಗಿದೆ. ಇಷ್ಟು ಹತ್ತಿರ ಇದ್ದರೂ ಒಮ್ಮೆಯಾದರೂ ಬಂದು ನೋಡಲಿಲ್ಲವಲ್ಲಾ!" ಎಂದಳು.

"ಭವನವೇ ಎಲ್ಲವೂ ನಮಗೆ... ಇಂತಹ ಜಾಗಗಳನ್ನು ನೋಡಲು ನಾವು ಬರಲಿಲ್ಲ.... ಇದರಲ್ಲಿ ಆಸಕ್ತರಾಗಿದ್ದರೆ ಭವನದ ಕೆಲಸ ನಡೆಯುತ್ತಿರಲಿಲ್ಲ... ಚಿಂತಿಸಬೇಡ. ಪರ್ವತಗಳ ರಾಜ ಹಿಮಾಲಯಕ್ಕೆ ಹೋಗಿ ಬರೋಣ. ನಿವೃತ್ತರಾಗಿದ್ದೇವೆ, ಬಿಡುವು ಇರುತ್ತದೆ..." ಎಂದು ಸಮಾಧಾನಪಡಿಸಿದೆ.

ಸ್ವದೇಶದ ಕಡೆ ಮರಳುತ್ತ ಇದ್ದಂತೆ ಹುಟ್ಟಿದ ಊರು ಮತ್ತೂರು, ಹೊಸಹಳ್ಳಿ, ಶಿವಮೊಗ್ಗ, ಬೆಂಗಳೂರು ನೆನಪಾಯಿತು.

ಬಾಲ್ಯದಲ್ಲಿ ನನ್ನ ಮೇಲೆ ಅಗಾಧ ಪರಿಣಾಮ ಬೀರಿದವರ ಹಲವರ ನೆನಪಾಯಿತು.

ಅ ಆ ಇ ಈ ಅಕ್ಷರಮಾಲೆಯಿಂದ ಪ್ರೈಮರಿಶಾಲೆಯಲ್ಲಿ ಪಾಠ ಹೇಳಿದ ಶ್ರೀಮಾನ್ ಚಿಂತಾಮಣಿ ಅವಧಾನಿಗಳು, ನಮ್ಮ ಊರಿನ ನೂರಾರು ಮಂದಿಗೆ ಮೇಷ್ಟ್ರು. ವಯೋಧಿಕರೂ ಹೌದು. 'ಭೆರಿ ಮೇಷ್ಟ್ರು' ಎಂದೇ ಖ್ಯಾತರು (ಭೆರಿ ಎಂದರೆ ನಮ್ಮ ಸಂಕೇತಿ ಭಾಷೆಯಲ್ಲಿ ದೊಡ್ಡವರು ಎಂದು ಅರ್ಥ. ಪಿರಿಯದು ಎಂಬ ಹಳಗನ್ನಡ ಶಬ್ದ 'ಭೆರಿ' ಆಗಿದೆ.)

ರಾತ್ರಿ ಊಟ ಆದ ಮೇಲೆ ಲಾಟೀನು ಕೈಲಿ ಹಿಡಿದು ಒಂದು ಮನೆಯಲ್ಲಿ ಪುರಾಣ ಶ್ರವಣ ನಡೆಯುವಂತೆ ಮಾಡುತ್ತಿದ್ದ ಸೂರ್ಯ ನಾರಾಯಣ ಅವಧಾನಿಗಳು, ಯಾರ ಮನೆಯಲ್ಲಿ ಸಂತರ್ಪಣೆಯಾದರೂ ಬಡಿಸುವುದರಲ್ಲಿ ಮುಂದಾಗುತ್ತಿದ್ದ ಕವಳದ ನಾರಾಯಣ ಮಾವ (ಎಲೆ, ಅಡಿಕೆ, ಹೊಗೆಯಸೊಪ್ಪು-ಅವರ ಬಾಯಿಯಲ್ಲಿ ಇಲ್ಲದೆ ಇದ್ದ ಸಮಯ ಎಂದರೆ ಊಟ ಮಾಡುವಾಗ ಮತ್ತು ದೇವರ ಪೂಜೆ ಮಾಡುತ್ತಿದ್ದಾಗ!)

ಗಮಕ ವಿದ್ವಾನ್ ಹೊಸಹಳ್ಳಿ ಕೇಶವಮೂರ್ತಿಯ ತಂದೆ ಶ್ರೀ ರಾಮಸ್ವಾಮಿಶಾಸ್ತ್ರಿಗಳು, ಅವರ ಅಣ್ಣ ಚನ್ನಗಿರಿ ಅವಧಾನಿಗಳು. ಇವರನ್ನು ಅಪೂರ್ವ ಸಹೋದರರು ಎನ್ನುತ್ತಿದ್ದೆವು. ಇವರ ಭ್ರಾತೃವಾತ್ಸಲ್ಯ ಸಂಪಾತಿ-ಜಟಾಯು ಭ್ರಾತೃಪ್ರೇಮ.

ಮದುವೆಯಾಗುತ್ತಿದ್ದ ಯುವಕ - ಯುವತಿಯರಿಗೆ ಸುಖಮಯ ದಾಂಪತ್ಯದ ಗುಟ್ಟನ್ನು ತಿಳಿಸುತ್ತಿದ್ದ ಮಹಾರಸಿಕರೂ, ಶಾಸ್ತ್ರವೇತ್ತರೂ ಆಗಿದ್ದ ಕ್ರಮಾಂತ, ಘನಾಂತ ಮಾಡಿದ್ದ ಶ್ರೀನಿವಾಸ ಅವಧಾನಿಗಳು.

ನಮ್ಮ ಊರಿನಲ್ಲಿ ವೇದಾಧ್ಯಯನ ಮುಗಿಸಿ, ವೃದ್ಧತಾಯಿ ಯೊಂದಿಗೆ ಕಾಶಿಗೆ ಹೋಗಿ ಅಲ್ಲಿ ಹೆಚ್ಚಿನ ಶಾಸ್ತ್ರ ಕಲಿತು ಬಂದ, ಮಹಾವ್ರತಿ ಲಕ್ಷ್ಮೀರಮಣ ಅವಧಾನಿಗಳು, ಸತ್ಯನಿಷ್ಠರು, ಪ್ರಾಮಾಣಿಕರು, ಧೀರರು ಎನಿಸಿಕೊಂಡ ಮಹಾನುಭಾವ. ನನ್ನಾಕೆಯ ಸೋದರಮಾವ ಇವರು. ಎರಡು ಊರಿಗೂ ಧನಿಕರು ಎನಿಸಿಕೊಂಡಿದ್ದ, ವಿಶೇಷ ಶಕ್ತಿಯನ್ನು ಹೊಂದಿದ್ದ ನಂಜುಂಡ ಅವಧಾನಿಗಳು! ಮಹಾನ್ ಜ್ಯೋತಿಷಿ ಇವರು. ಇವರನ್ನು ಅಯಸ್ಕಾಂತ ಅವಧಾನಿಗಳು ಎನ್ನುತ್ತಿದ್ದರು. ಇವರಿಂದ ಆಕರ್ಷಿತರಾಗದವರು ಇಲ್ಲವೇ ಇಲ್ಲ ಎಂದರೆ ಅತ್ಯುಕ್ತಿ ಅಲ್ಲ.

ನಾನು ಲಂಡನ್ನಿಗೆ ಹೋದ ಹೊಸತರಲ್ಲಿ ವಾರ-ಎರಡು ವಾರಕ್ಕೆ ಒಮ್ಮೆ ಪತ್ರ ಬರೆದು ಸ್ವದೇಶ ಬಿಟ್ಟು ಬಂದಿದ್ದ ನನ್ನ ವಿರಹ ವೇದನೆಯನ್ನು ಹೋಗಿಸುತ್ತಿದ್ದರು.

ಗಾಂಧೀ ಶತಾಬ್ದಿಯಲ್ಲಿ ಒಂದುವರ್ಷ ಕಾಲ ಜೊತೆ ಜೊತೆಯಲ್ಲಿ ಇದ್ದ ಹೊಸಹಳ್ಳಿ ರಾಮಶಾಸ್ತ್ರಿ, ಗಾಂಧೀಜಿಯ ಬಗೆಗೆ 'ಮೋಹನ ತರಂಗಿಣಿ' ಎಂಬ ಕಾವ್ಯವನ್ನೇ ರಚಿಸಿಕೊಟ್ಟ ಚಿದಂಬರ ಜೋಯಿಸರು, 'ಒಂದು ಜೀವ, ಎರಡು ದೇಹ' ಎಂಬಂತಿದ್ದ ಅಶ್ವತ್ಥ-ಮಾರ್ಕಂಡೇಯ ಅವಧಾನಿಗಳು-ಇವರೆಲ್ಲ ನನಗೆ ಪ್ರಾತಃಸ್ಮರಣೀಯರು, ಪುಣ್ಯಶ್ಲೋಕರು-ಇವರನ್ನೆಲ್ಲ ಕಾಣುವ ತವಕ.... ಮಾತಿನಲ್ಲಿ ತಿಳಿಸಲಾಗದ ಆನಂದ... ಅಬ್ಬಾ! ಹುಟ್ಟಿದ ನೆಲ, ನೀರು, ಗಾಳಿ, ಬಂಧುಗಳು, ಮಿತ್ರರು ಎಂಥ ವ್ಯಾಮೋಹ... ಎನಿಸಿತು.

ಬೆಂಗಳೂರಿಗೆ

ಕೌಟುಂಬಿಕ ಹಿನ್ನೆಲೆಯಲ್ಲಿ ನನ್ನ ಬಂಧುಗಳು ಎಲ್ಲರಿಗೂ ನನ್ನ ಬರುವಿಕೆ ಬಹಳ ಸಂಭ್ರಮ ತಂದಿದ್ದರೂ, ನಿವೃತ್ತನಾಗಿ ಬರುತ್ತಿರುವ ನನಗೆ ನನ್ನ ಮುಂದಿನ ಕಾರ್ಯಕ್ಷೇತ್ರ ಯಾವುದು ಎಂದು ಸ್ಪಷ್ಟವಾಗಿಲ್ಲದೆ, ಮನಸ್ಸು ಸ್ವದೇಶದಲ್ಲಿನ ನನ್ನ ಮುಂದಿನ ಜೀವನದ ರೂಪುರೇಖೆಗಳನ್ನು ಚಿತ್ರಿಸಿಕೊಳ್ಳಲು ಯತ್ನಿಸುತ್ತಿತ್ತು. ಒಂದು ಚಿಂತೆ ಆಗಾಗ ಇಣುಕುತ್ತಿತ್ತು...

ನನ್ನ ಬರುವಿಕೆಯನ್ನು ಹೇಗೆ ತೆಗೆದುಕೊಳ್ಳಲು ಆಗುವುದೋ, ನನ್ನನ್ನು ಹೇಗೆ ಬರಮಾಡಿಕೊಳ್ಳುವರೋ, ಎನ್ನುವ ಒಂದು ಯೋಚನೆ ಮನಸ್ಸನ್ನು ಕೊರೆಯುತ್ತಿದ್ದುದು ಸುಳ್ಳಲ್ಲ. ಲಂಡನ್ ವಿದ್ಯಾಭವನದ ಕೇಂದ್ರದ ಪ್ರಗತಿಯ ವರದಿ ಹೆಜ್ಜೆ ಹೆಜ್ಜೆಗೂ ಇಲ್ಲಿ ಪ್ರಕಟವಾಗಿ, ನಾನು

ಒಂದಲ್ಲ ಒಂದು ರೀತಿಯಲ್ಲಿ ಒಂದೆರಡು ವರ್ಷಗಳಿಗೊಮ್ಮೆ ಯಾದರೂ ಸುದ್ದಿಯಲ್ಲಿ ಇರುತ್ತಿದ್ದೆನಾದ್ದರಿಂದ ಜನ ನನ್ನನ್ನು ಮರೆತಿರ ಲಾರರು ಎನ್ನುವ ನಂಬಿಕೆ ಇತ್ತು. ಭಾರತೀಯರ ಹೆಮ್ಮೆಯ ಸಂಸ್ಕೃತಿಯನ್ನು ಪ್ರಚಾರ ಮಾಡುವುದನ್ನೇ ಧ್ಯೇಯವಾಗಿಟ್ಟು ಕೊಂಡಿರುವ ಏಕೈಕ, ರಾಷ್ಟ್ರೀಯ ಮಟ್ಟದ ಸಂಸ್ಥೆ ಭಾರತೀಯ ವಿದ್ಯಾಭವನ. ಇದರ ಸೇವೆಯಲ್ಲಿದ್ದು ಲಂಡನ್ ಕೇಂದ್ರಕ್ಕಾಗಿ ದುಡಿದವರು, ದುಡಿಯುತ್ತಿರುವವರು, ಸಾಗರದಾಚೆಯ ಈ ಕೇಂದ್ರದ ಪ್ರಗತಿ-ಉನ್ನತಿ ದೇಶ ವಿದೇಶಗಳಿಗೂ ತಿಳಿಯುವಂತೆ ಮಾಡಿರುವವರು ನಮ್ಮ ಕನ್ನಡಿಗರಾದ 'ಮತ್ತೂರ್ ಕೃಷ್ಣಮೂರ್ತಿಯವರು' ಎನ್ನುವ ಅಭಿಮಾನ ಕನ್ನಡದವರಿಗೆಲ್ಲ ಇದ್ದುದು ನನ್ನ ಪತ್ರಿಕಾ ಮಿತ್ರರ ಆಗೀಗಿನ ವರದಿ ಮೂಲಕ ತಿಳಿದಿತ್ತು. ಆದರೂ... ಆದರೂ ಮುಂದೆ ಹೇಗೋ ಏನೋ ಎನ್ನುವ ಅಳುಕು ಇಲ್ಲದೆ ಇರಲಿಲ್ಲ.

ಲಂಡನ್‌ನಿಂದ ಬಂದು ಬಾಂಬೆಯಲ್ಲಿ ಇಳಿದಾಗ ಶ್ರೀ ರಾಮಕೃಷ್ಣನ್‌ಜಿಯವರನ್ನು ಕಾಣಲು ಹೋದೆ. ನಾನು ಬಂದ ವಿಷಯ ಅವರಿಗೆ ತಿಳಿಸಬೇಕಿತ್ತಷ್ಟೆ , ಅದಕ್ಕೆ. ನಾನು ಇನ್ನೂ ಈ ಯೋಚನೆಗಳಿರುವಾಗಲೇ ಅಲ್ಲಿ ಅವರು, “ನೀವು ಬಾಂಬೆಯ ಭವನಕ್ಕೆ ಏಕೆ ಬರಬಾರದು? ಇಲ್ಲಿಯೂ ನಿಮ್ಮ ಆವಶ್ಯಕತೆ ಇದೆ. ಇಲ್ಲಿಯೇ ಇದ್ದುಬಿಡಿ...” ಎಂದರು. ಅವರು ನನ್ನ ಹಿರಿಯರು, ಶ್ರೇಯೋಕಾಂಕ್ಷಿಗಳು, ನನ್ನ ಮೇಲಿನ ಅಧಿಕಾರಿಗಳು, ಅವರ ಮಾತಿಗೆ ನಾನು ಒಲ್ಲೆ ಎನ್ನುವುದು ಕಷ್ಟವಾಗಿತ್ತು. ನನಗೆ ಅವರ ಮಾತು ಒಂದು ರೀತಿಯಲ್ಲಿ ಆಘಾತವನ್ನೇ ಉಂಟು ಮಾಡಿತ್ತು. ನಿವೃತ್ತನಾಗಿ ನಾನು ಓದಿ-ಬರೆದುಕೊಂಡು ಇರಬೇಕೆಂದು ಬಂದವನು.... ನನಗೆ ಮತ್ತೆ ಆಡಳಿತದ ಕೆಲಸ... ಯೋಚಿಸಲು ಸಮಯ ಬೇಕಿತ್ತು. ಅವರಿಗೆ ನನ್ನ ಅಭಿಪ್ರಾಯವನ್ನು ಅನಂತರ ತಿಳಿಸುವುದಾಗಿ ಹೇಳಿ ಬಂದೆ.

ಎಷ್ಟು ಯೋಚಿಸಿದರೂ ಬಾಂಬೆಯಲ್ಲಿರುವುದು ಮನಸ್ಸಿಗೆ ಒಗ್ಗದ ವಿಷಯವಾಯಿತು. ಮೊದಲನೆಯದಾಗಿ ಬಾಂಬೆಯ ಹವಾಗುಣ ನನ್ನ ಆರೋಗ್ಯಕ್ಕೆ-ಮೈಗೆ ಒಗ್ಗುವುದಿಲ್ಲ. ಎರಡನೆಯದು ನಾನು ವಿದೇಶದಿಂದ ನಿವೃತ್ತನಾಗಿ ಬಂದಿರುವುದೇ ನನ್ನೂರಿನ, ನನ್ನ ಜನ-ಮನದ ಹತ್ತಿರ ಇರಬೇಕು ಎಂದು. ಬೇರೆಡೆ ೨೩ ವರ್ಷಗಳ ಕಾಲ ಸವೆಸಿದ್ದುದಾಗಿತ್ತು. ಈಗ ಮನಸ್ಸು ಒಂದು ನೆಲೆಯನ್ನು ಬಯಸಿತ್ತು! 'ನೆಲೆ'ಯಲ್ಲಿ ಕೆಲಸ ಇದ್ದರೂ ನೆಮ್ಮದಿ ಇರುತ್ತದೆ. ಇಲ್ಲದಿದ್ದರೂ 'ನೆಲೆ' ಎನ್ನುವುದೇ ಒಂದು ರೀತಿಯ ನೆಮ್ಮದಿ ತರುತ್ತದೆ! ಮೂರನೆಯದಾಗಿ ಬಾಂಬೆಯ ಆಫೀಸು ನಮ್ಮ ಮಾತೃಸಂಸ್ಥೆ. ಅಲ್ಲಿ ನನ್ನ ವಯಸ್ಸಿನವರೂ, ನನಗಿಂತ ಹಿರಿಯರೂ ಸಾಕಷ್ಟು ದೀರ್ಘಕಾಲ ತಮ್ಮ ನಿಃಸ್ಪೃಹ ಸೇವೆಯನ್ನು ಸಲ್ಲಿಸಿದ್ದಾರೆ. ನಿರ್ಧಾರಕ್ಕೆ ಬಂದುದಾಗಿತ್ತು. ನಾನು ಶ್ರೀ ರಾಮಕೃಷ್ಣನ್‌ಜೀಗೆ “ಸರ್, ದಯವಿಟ್ಟು ನನ್ನನ್ನು ಈ ವಿಷಯದಲ್ಲಿ ಹೆಚ್ಚು ಬಲವಂತ ಮಾಡಬೇಡಿ, ನನಗೆ ಹವಾಮಾನ ಒಗ್ಗದು, ಬೆಂಗಳೂರಿನಲ್ಲಿ ಇರಲು...” ನನ್ನ ಮಾತಿನ್ನೂ ಪೂರ್ತಿಯಾಗಿರಲಿಲ್ಲ. “ಗುಡ್. ಅದಕ್ಕೇನಂತೆ? ಬೆಂಗಳೂರು ಕೇಂದ್ರದ ಜವಾಬ್ದಾರಿ ಯನ್ನಾದರೂ ನೀವು ತೆಗೆದುಕೊಳ್ಳಬೇಕಾಗುತ್ತದೆ, ಅದನ್ನು ನೀವು ಹೇಗೂ ಬೇಡ ಎನ್ನಲಾಗದು” ಎಂದರು!! ನಾನು ಈಗ ಅವಾಕ್ಕಾದೆ! “ಮತ್ತೂರ್, ಭವನ ನಿಮ್ಮನ್ನು ಇಷ್ಟು ಬೇಗ ನಿವೃತ್ತಿ ಮಾಡಲು ಇಷ್ಟಪಡುವುದಿಲ್ಲ! ನಿಮ್ಮ ಸೇವೆ ಭವನಕ್ಕೆ ಬೇಕು. ಬೆಂಗಳೂರಿನ ಕೇಂದ್ರಕ್ಕಂತೂ ಈಗ ನಿಮ್ಮ ನಾಯಕತ್ವದ ಆವಶ್ಯಕತೆ ಬಹಳವಿದೆ...” ಎಂದರು ನನ್ನ ಕೈ ಹಿಡಿದುಕೊಂಡು. ಭವನದ ಕೆಲಸವನ್ನು ಬೇಡ ಎನ್ನುವುದನ್ನು ನನ್ನ ಮನಸ್ಸು, ಮೈ ಎಂದೂ ಕಲಿಸಿರಲಿಲ್ಲ, “ಸರಿ!” ಎಂದು ಒಪ್ಪಿಗೆ ಸೂಚಿಸಿ, ಮತ್ತೊಮ್ಮೆ ಬೆಂಗಳೂರು ಭವನದ ಸ್ಥಿತಿ-ಗತಿ ಹೇಗಿದೆಯೋ ಎಂದು ಯೋಚಿಸುತ್ತಲೇ ಬೆಂಗಳೂರಿನತ್ತ ನನ್ನ ಪಯಣ ಮುಂದುವರೆಸಿದೆ.

ಲಂಡನ್‌ನಿಂದ ಆಗೀಗ ಬರುತ್ತಿದ್ದಾಗ ಬೆಂಗಳೂರು ಕೇಂದ್ರಕ್ಕೆ ಒಮ್ಮೊಮ್ಮೆ ಭೇಟಿ ಕೊಟ್ಟಿದ್ದೆನಾದರೂ, ಅದರ ಚಟುವಟಿಕೆಗಳ ಬಗ್ಗೆ ವಿವರವಾಗಿ ನನಗೆ ತಿಳಿದಿರಲಿಲ್ಲ. ಬೆಂಗಳೂರಿಗೆ ಬಂದನಂತರ ತಿಳಿಯಿತು, ಅಲ್ಲಿ ಯಾವುದೇ ಕಮಿಟಿ ಇಲ್ಲ ಎನ್ನುವುದು! ಕರ್ನಾಟಕದ ಹಿಂದಿನ ಚೀಫ್ ಸೆಕ್ರೆಟರಿಯಾಗಿದ್ದ (ಮುಖ್ಯಕಾರ್ಯದರ್ಶಿ) ಶ್ರೀ ಜಿ.ವಿ.ಕೆ. ರಾವ್‌ರವರು ಭವನದ ಅಧ್ಯಕ್ಷರಾಗಿದ್ದರು. 'ಮಾಸ್ ಕಮ್ಯೂನಿಕೇಷನ್'ನ ಸಂಜೆ ಕಾಲೇಜು ಮಾತ್ರ ನಡೆಯುತ್ತಿದ್ದಿತು. ಸುಮಾರು ೧೫೦ ಜನ ವಿದ್ಯಾರ್ಥಿಗಳು ಇದ್ದರು. ಲಲಿತಕಲೆಗಳ ಯಾವುದೇ ತರಗತಿಗಳು ನಡೆಯುತ್ತಿರಲಿಲ್ಲ. ಶ್ರೀ ಜಿ.ವಿ.ಕೆ.ರಾವ್‌ರವರು ತಮ್ಮ ಆರೋಗ್ಯ ಸರಿ ಇಲ್ಲದ ಕಾರಣ ತಾವು ಇನ್ನು ಅಧ್ಯಕ್ಷರಾಗಿ ಮುಂದುವರೆಯಲು ಸಾಧ್ಯವಿಲ್ಲ ಎಂದು ಹೇಳಿದ್ದರು. ಅದರಿಂದಾಗಿ ಈಗ ಹೊಸದಾಗಿ ಅಧ್ಯಕ್ಷರು ನೇಮಕ ಆಗಬೇಕಿತ್ತು. ಶ್ರೀ ಇ.ಎಸ್. ವೆಂಕಟರಾಮಯ್ಯನವರ ಪ್ರಸ್ತಾಪವಾಗಿ, ಅವರು ಅಧ್ಯಕ್ಷರಾದರೆ ಸರ್ವ ವಿಧದಲ್ಲಿಯೂ ಸೂಕ್ತ ಎಂದು ತೀರ್ಮಾನವಾಯಿತು. ಜತೆಗೆ ಅಲ್ಲಿ ಕಾರ್ಯ ನಿರ್ವಾಹಕ ನಿರ್ದೇಶಕರ ಹುದ್ದೆಗೂ ಯಾರೂ ಇರಲಿಲ್ಲ. ಶ್ರೀ ಇ.ಎಸ್.ವಿ. ಯವರು ಈ ಪ್ರಸ್ತಾಪ ಬಂದ ಕೂಡಲೆ, “ನೀವು ಕಾರ್ಯನಿರ್ವಾಹಕ ನಿರ್ದೇಶಕರಾದರೆ, ನಾನು ಅಧ್ಯಕ್ಷನಾಗಲು ಸಿದ್ಧ!” ಎನ್ನುವ ಒಂದು ಷರತ್ತು ಹಾಕಿದರು. ಶ್ರೀ ಇ.ಎಸ್.ವಿ. ಯವರು ಬೆಂಗಳೂರು ಭವನ ಕೇಂದ್ರದ ಆಜೀವ ಸದಸ್ಯರಾಗಿದ್ದರು. ಅವರ ಸಂಸ್ಕೃತಿಯ ಪ್ರೇಮ, ಭವನದ ಬಗೆಗಿನ ಅಭಿಮಾನ - ಅವರು ಅಧ್ಯಕ್ಷರಾದರೆ ಸೊರಗಿದ್ದ ಬೆಂಗಳೂರು ಕೇಂದ್ರಕ್ಕೆ ಪುಷ್ಟಿ ಸಿಗುತ್ತದೆ ಎನ್ನುವುದು ಭವನದ ವರಿಷ್ಠರ ಅಭಿಪ್ರಾಯವೂ ಆಗಿತ್ತು. ನನ್ನ ಮನಸ್ಸಿನಲ್ಲಿ ಇದ್ದದ್ದು ಅದೇ ವಿಚಾರ.

ಅಧ್ಯಕ್ಷರೂ-ಕಾರ್ಯನಿರ್ವಾಹಕ ನಿರ್ದೇಶಕರೂ 'ಏಕದೇಹ ನ್ಯಾಯ' ಎನ್ನುವಂತಿರಬೇಕು. ಇದು ದಲಾಲ್‌ಜೀ ಜತೆಯಲ್ಲಿ ಕೆಲಸ

ಮಾಡಿ ಪಳಗಿದ ನನ್ನ ಖಚಿತ ಅಭಿಪ್ರಾಯ ಆಗಿತ್ತು. ಅದೇ ಲಂಡನ್ ಕೇಂದ್ರದ ಯಶಸ್ಸಿನ ಒಳಗುಟ್ಟು!! ಒಮ್ಮೆ ಒಂದು ಸಾಹಸದಲ್ಲಿ ಯಶಸ್ಸು ಸಾಧಿಸಿದಾಗ ಆ ಯಶಸ್ಸು ಇನ್ನೊಂದು ಸಾಹಸ ಕೈಗೊಳ್ಳಲು ಉತ್ಸಾಹ, ಸ್ಫೂರ್ತಿ ಕೊಡುತ್ತದೆ. ಇಲ್ಲಿ ಆದದ್ದು ಹಾಗೆಯೇ.

ನಾನು ಇಲ್ಲಿನ ಭವನದ ಕೆಲಸ ವಹಿಸಿಕೊಂಡಾಗ ಬಡೀಮಾ ಆಶಯದಂತೆ ಎಂ.ಪಿ. ಬಿರ್ಲಾ ಫೌಂಡೇಷನ್‌ನ ಕೆಲಸವನ್ನೂ ವಹಿಸಿಕೊಂಡೆ. ಮೊದಲಿನಿಂದಲೂ ಬಡಿಮಾ ಅವರಿಗೆ ಎಂ.ಪಿ. ಬಿರ್ಲಾ ಫೌಂಡೇಷನ್ ಬೆಂಗಳೂರಿನಲ್ಲಿ ಚೆನ್ನಾಗಿ ಕಾರ್ಯ ನಿರ್ವಹಿಸಬೇಕು ಎನ್ನುವ ಹಂಬಲವಿತ್ತು. ಪುಸ್ತಕ ಪ್ರಕಟಣೆ, ಪುಸ್ತಕ ಮುದ್ರಣ, ಮಾರಾಟ, ಇತ್ಯಾದಿಗಳಲ್ಲಿ ಎಂ.ಪಿ. ಬಿರ್ಲಾ ಫೌಂಡೇಷನ್ ತೊಡಗಿಸಿಕೊಳ್ಳಬೇಕು ಎನ್ನುವ ಅವರ ಆಸೆಯನ್ನು ನೆರವೇರಿಸುವುದು ಈಗ ನನ್ನ ಪಾಲಿನ ಕರ್ತವ್ಯ ಆಗಿದ್ದಿತು. ಅದಾಗಲೇ ಇದ್ದ ಸಣ್ಣ ಕಮಿಟಿ ಯಾವುದೇ ಜವಾಬ್ದಾರಿಯನ್ನೂ ಹೊತ್ತಿರಲಿಲ್ಲ. ಎಲ್ಲವೂ ಯಥಾಪ್ರಕಾರ ಮೊದಲಿನಿಂದಲೇ ಪ್ರಾರಂಭ ಆಗಬೇಕಿತ್ತು. ಅನೇಕ ಪತ್ರಗಳು ಉತ್ತರಕ್ಕಾಗಿ ಕಾಯುತ್ತಿದ್ದವು. ಬೆಂಗಳೂರಿನ ಭವನಕ್ಕೆ ಅನೇಕ ಪತ್ರಗಳು ಬರಬೇಕಾಗಿದ್ದವು. ಸರಿಯಾದ ನಿರ್ವಹಣೆ ಇಲ್ಲದೆ ಎಲ್ಲ ಕೆಲಸಗಳೂ ಬಹಳವಾಗಿ ಬಾಕಿ ಉಳಿದಿದ್ದವು.

ಹಿಂದೊಮ್ಮೆ ಕಾರಂತರು ಲಂಡನ್‌ಗೆ ಬಂದಿದ್ದಾಗ ನಾನು ನನ್ನ ಅನುಭವ ಒಂದನ್ನು ಅವರಿಗೆ ಹೇಳಿದೆ... ನನಗೆ ಚಿಕ್ಕಂದಿನಿಂದಲೇ ಬೈಬಲ್‌ನ ಕತೆಗಳು ಬಹಳ ಇಷ್ಟವಾಗುತ್ತಿದ್ದವು ಎಂದು ಹೇಳಿದ್ದೇನಷ್ಟೆ? ಲಂಡನ್‌ಗೆ ಹೋದ ಮೇಲೆ ಒಂದು ಸಾರಿ ಬೈಬಲ್ ಸೊಸೈಟಿಗೆ ಹೋಗುವ ಸಂದರ್ಭ ಒದಗಿತು. ಅದಾದದ್ದು ಹೀಗೆ...

ಭಾರತೀಯ ವಿದ್ಯಾಭವನ ಕಾರ್ಯಕ್ರಮಕ್ಕೆ ಬೈಬಲ್ ಸೊಸೈಟಿಯ ಗೌರವಾನ್ವಿತ ಸದಸ್ಯರೊಬ್ಬರನ್ನು ನಾವು ಆಹ್ವಾನಿಸಿದ್ದೆವು. ಅವರು ಭವನಕ್ಕೆ ಬಂದು, ಎಲ್ಲವನ್ನೂ ನೋಡಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿ, ಕಾರ್ಯಕ್ರಮದಲ್ಲಿಯೂ ಸಹ ಭವನದ ಚಟುವಟಿಕೆಗಳ ಬಗೆಗೆ ಒಳ್ಳೆಯ ಮಾತುಗಳನ್ನು ಹೇಳಿದರು. ಅವರನಂತರ ಆ ಸಮಯದಲ್ಲಿ ನಾನು ಮಾತನಾಡಿದುದನ್ನು ಕೇಳಿ, ಬಹಳ ಸಂತಸಪಟ್ಟ ಅವರಿಗೆ ನನ್ನ ಮೇಲೆ ಬಹಳ ಸ್ನೇಹಭಾವ ಬೆಳೆಯಿತು. ಅದೇ ವಿಶ್ವಾಸದಿಂದ ನಾನೂ ಅವರ ಬೈಬಲ್ ಸೊಸೈಟಿಗೊಮ್ಮೆ ಭೇಟಿ ಕೊಡಬೇಕೆಂದು ಅವರು ನನಗೆ ಆಹ್ವಾನ ಕೊಟ್ಟರು.

ಆ ದಿನ ಬೈಬಲ್ ಸೊಸೈಟಿಗೆ ಹೋದಾಗ, ಆ ಇಪ್ಪತ್ತು-ಮುವತ್ತು ಅಂತಸ್ತಿನ ಭವ್ಯವಾದ ಕಟ್ಟಡ ನೋಡಿ ಬೆರಗಾದೆ! ಒಳಗೆ ಹೋಗಿ ಮೇಲೆ ಅವರ ಆಫೀಸಿಗೆ ಹೋದಾಗ ಅಲ್ಲಿ ದೊಡ್ಡದಾದ ಸಭಾಂಗಣ, ಅಲ್ಲಿ ಸುಮಾರು ನೂರಾರು ಜನ ಟೈಪಿಸ್ಟ್‌ಗಳು ಕುಳಿತು 'ಟಕ ಟಕ ಟಕ ಟಕ ಟಕ' ಎಂದು ಟೈಪು ಮಾಡುತ್ತಿದ್ದುದು ನನ್ನ ಆಶ್ಚರ್ಯವನ್ನು ಮತ್ತೂ ಹೆಚ್ಚಿಸಿತು. ಇದೇತಕ್ಕೆ ಇಷ್ಟು ಮಂದಿ ಟೈಪಿಸ್ಟುಗಳು? ನನ್ನ ಮುಖದಲ್ಲಿ ಮೂಡಿದ ಪ್ರಶ್ನೆಗೆ ಉತ್ತರ ಹೇಳುವವರಂತೆ, ನನ್ನ ಜತೆಯಲ್ಲಿದ್ದ ಅವರು, "ಮಿಸ್ಟರ್, ಮಾಥೂರ್... ನಮಗೆ ದೇಶ ವಿದೇಶಗಳಿಂದ ಒಂದು ಪೌಂಡ್‌ನ ಕಾಣಿಕೆಯಿಂದ ಪ್ರಾರಂಭವಾಗಿ ಲಕ್ಷಾಂತರ ಪೌಂಡುಗಳ ಕಾಣಿಕೆಯವರೆಗೂ ಬರುತ್ತದೆ. ಹಾಗೆ ನಮ್ಮ ಬೈಬಲ್ ಸೊಸೈಟಿಗೆ ಕಾಣಿಕೆ ಕಳಿಸಿದವರಿಗೆ ನಾವು ನಮ್ಮ ವಂದನೆಗಳನ್ನು ಸಲ್ಲಿಸಬೇಡವೇ? ಕಾಣಿಕೆಯ ಮೊತ್ತ ಮುಖ್ಯವಲ್ಲ. ಯಾರ್ಯಾರಿಗೆ ಎಷ್ಟು ಅನುಕೂಲವಿದೆಯೋ, ಅಷ್ಟನ್ನು ಅವರು ಪ್ರೀತಿಯಿಂದ ಇಲ್ಲಿಗೆ ಕಳುಹಿಸುತ್ತಾರೆ. ದೇವರಿಗೆ ಎಲ್ಲರ ಕಾಣಿಕೆಯೂ ಒಂದೇ ಸಮ ಅಲ್ಲವೇ? ಹಾಗೆ ಪ್ರೀತಿಯಿಂದ ಕಳುಹಿಸುವ ಕಾಣಿಕೆಗೆ ನಾವು ಬೆಲೆಕಟ್ಟಲಾಗದಿದ್ದರೂ ಕಡಮೆ ಎಂದರೆ, ನಮ್ಮ ಹೃದಯ ಪೂರ್ವಕ ವಂದನೆಗಳನ್ನು ತಿಳಿಸುವ ಪತ್ರ ಒಂದನ್ನಾದರೂ ಕಳುಹಿಸಬೇಡವೇ? ಅದಕ್ಕೆ ಜನಬೇಕಲ್ಲ... ಈ ಟೈಪಿಸ್ಟುಗಳು ಮಾಡುವ ಕೆಲಸ ಅದೇ ಈಗ! ನಮಗೆ ತಲುಪಿದ ಕಾಣಿಕೆಗೆ ನಾವು ಒಂದು ರಸೀದಿ ಕೊಟ್ಟು ಪತ್ರ ಬರೆದು ಅವರಿಗೆ ಕಳುಹಿಸುತ್ತೇವೆ. ಇಷ್ಟೇ ನಮ್ಮಿಂದಾಗುವುದು ಸಹ!!" ಎಂದರು.

ಅವರ ಮಾತುಗಳನ್ನು ಕೇಳಿ ಮುಂದಕ್ಕೆ ನನಗೆ ಮಾತುಗಳೇ ಹೊರಡಲಿಲ್ಲ! ಎಷ್ಟು ಕಾಳಜಿ, ಜನರು ಕಳುಹಿಸುವ ಕಾಣಿಕೆಗೆ ಅದೆಷ್ಟು ಜವಾಬ್ದಾರಿ ತೋರಿಸುವ ಮನೋಭಾವ... ಅಬ್ಬಾ!! ಎಷ್ಟು ನಿಃಸ್ಪೃಹತೆ!!

ಕೆಲಸದ ಹೊರೆ ಇಷ್ಟಿದ್ದರೂ ನಾನು ಹಿಮ್ಮೆಟ್ಟುವಂತಿರಲಿಲ್ಲ. ಇಲ್ಲಿನ ಜನ ನನಗೆ ನಿರಾಸೆ ಮಾಡಲಿಲ್ಲ! ಲಂಡನ್ ಕೇಂದ್ರದ 'ಯಶೋಗಾಥೆ' ಜನದಿಂದ ಜನಕ್ಕೆ ಮುಟ್ಟಿ, ನಾನು ಇಲ್ಲಿಗೆ ಬಂದ ಕೂಡಲೆ ಬೆಂಗಳೂರು ಭವನಕ್ಕೆ ಜನ ಬರಲು ಪ್ರಾರಂಭಿಸಿದರು. ನಾನೂ ಶ್ರೀ ಇ.ಎಸ್.ವಿ.ಯವರೂ ಇಬ್ಬರೂ ಒಟ್ಟಿಗೆ ಭವನದ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಂಡೆವು. ನಾನೂ-ಅವರೂ ಇಬ್ಬರೂ ಕುಳಿತು ಕಮಿಟಿಯ ರಚನೆ ಮಾಡಿದೆವು. ಶ್ರೀ ಜಿ. ನಾರಾಯಣರಂತಹ ಸಜ್ಜನರನ್ನೊಳಗೊಂಡ ಒಂದು ಒಳ್ಳೆಯ ಕಮಿಟಿ ಬೆಂಗಳೂರು ಭವನದ್ದಾಯಿತು. ಆಫೀಸಿನ ಕೆಲಸ ನಿರ್ವಹಣೆಗೆ ಇತರ ಸಿಬ್ಬಂದಿಯನ್ನೂ ನೇಮಕ ಮಾಡಿಕೊಂಡೆವು. ಮೊದಲು ಸಬ್‌ಕಮಿಟಿಯಲ್ಲಿ ಎಕ್ಸಿಕ್ಯೂಟಿವ್ ಕಮಿಟಿಯವರೊಬ್ಬರು ಇರುತ್ತಾರೆ, ಮಿಕ್ಕವರೆಲ್ಲ ಹೊಸಬರಾಗಿರುತ್ತಾರೆ. ಸಬ್‌ಕಮಿಟಿಯಲ್ಲಿ ತಮ್ಮ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸಿ, ಪ್ರೀತಿಯಿಂದ ಭವನದ ಕೆಲಸ ಮಾಡಿದವನನ್ನು ಎಕ್ಸಿಕ್ಯುಟಿವ್ ಕಮಿಟಿಗೆ ತೆಗೆದುಕೊಳ್ಳುವುದು ಭವನದ ಪದ್ಧತಿ. ಎಲ್ಲೇ ಆದರೂ, ಯಾವ ಸಂಸ್ಥೆಗೇ ಆದರೂ, ಕೆಲಸಗಾರರ ನೇಮಕ ಆದ ಮೇಲೆ ಅವರು ಕೆಲಸ ಬಿಡುವುದೋ, ಬೇರೆ ಕೆಲಸಕ್ಕೆ ಸೇರಿಕೊಳ್ಳುವುದೋ ಮಾಡಿದಾಗ ಇವೆಲ್ಲವನ್ನೂ ಎದುರಿಸಲೇ ಬೇಕಾಗುತ್ತದೆ. ಒಂದು ಸಂಸ್ಥೆಯನ್ನು ಸೇರಿ ಚೆನ್ನಾಗಿ ಕೆಲಸ ಕಲಿತವರು,

ಇನ್ನೊಂದೆಡೆ ಇಲ್ಲಿಗಿಂತ ಅಲ್ಲಿ ಸಂಬಳ ಹೆಚ್ಚು ಸಿಗುತ್ತದೆ ಎಂದು ಹೊರಟುಹೋಗುತ್ತಾರೆ. ಮತ್ತೆ ಇನ್ನೊಬ್ಬರನ್ನು ನೇಮಕ ಮಾಡಿಕೊಂಡು ಆ ಕೆಲಸ ಮುಂದುವರೆಸಬೇಕು. ಅದು ಸರ್ವಸಾಮಾನ್ಯ. ಈಗಲೂ ಹಾಗೆಯೇ, ಎಲ್ಲ ಸಿಬ್ಬಂದಿಯೂ ಹೊಸಬರೇ ಆಗಿದ್ದು, ಎಲ್ಲರ ಮುಖದಲ್ಲಿಯೂ ಭವನ ಸೇರಿದ ಸಂಭ್ರಮ, ಅಲ್ಲಿ ಕೆಲಸ ಮಾಡುವ ಉತ್ಸಾಹ ಕಾಣುತ್ತಿತ್ತು. ೧೯೬೫, ಮೇ ೧೫ ರಂದು ನಾನು ಬೆಂಗಳೂರು ವಿದ್ಯಾಭವನ ಕೇಂದ್ರದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕನಾಗಿ ಅಧಿಕಾರ ವಹಿಸಿಕೊಂಡೆ. ಭವನದಲ್ಲಿ ಜರ್ನಲಿಸಂ, ಬಿಸಿನೆಸ್ ಕಮ್ಯುನಿಕೇಷನ್, ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್‌ನ ಸಂಜೆಯ ತರಗತಿಗಳು ನಡೆಯುತ್ತಿದ್ದವು. ಅದು ಹೊರತಾಗಿ ಮತ್ತೆ ಯಾವುದೇ ಚಟುವಟಿಕೆಗಳೂ ನಡೆಯುತ್ತಿರಲಿಲ್ಲ. ನಾನೂ ಶ್ರೀ ಇ.ಎಸ್.ವಿ. ಯವರೂ ಮತ್ತು ಕಮಿಟಿಯ ಇತರ ಸದಸ್ಯರೂ ಸೇರಿ ನಮ್ಮ ಇತಿಹಾಸದ ಪುಸ್ತಕಗಳ ಅನುವಾದ ಕಾರ್ಯವನ್ನು, ಜತೆಗೆ 'ಗಾಂಧೀಜಿಯ ನೂರು ಸಂಪುಟಗಳ' ಅನುವಾದ ಕಾರ್ಯವನ್ನು ಮೊದಲಿಗೆ ಪ್ರಾರಂಭಿಸುವುದಾಗಿ ಯೋಚಿಸಿದೆವು. ಅಂತೆಯೇ ಹಿರಿಯ ಅನುವಾದಕರನ್ನು ಸಂಪರ್ಕಿಸಿ ಕೆಲಸ ಪ್ರಾರಂಭಿಸಲು ಅವೆರಡೂ ಕೆಲಸಗಳ ಮುಖ್ಯ ಸಂಪಾದಕತ್ವಕ್ಕೆ ಅರ್ಹವಾದ ಮಹನೀಯರು ಬೇಕಾಗಿದ್ದರು. ಇತಿಹಾಸದ ನಿವೃತ್ತ ಪ್ರೊಫೆಸರರಾದ ಮೈಸೂರಿನ ಡಾ. ಎ.ವಿ. ನರಸಿಂಹಮೂರ್ತಿಯವರು ಇತಿಹಾಸ ಸಂಪುಟಗಳ ಅನುವಾದ ಕಾರ್ಯದ ಜವಾಬ್ದಾರಿ ನಿರ್ವಹಿಸಲು ಸರ್ವವಿಧದಲ್ಲಿಯೂ ಸಮರ್ಥರಾಗಿದ್ದು, ನಿರಾತಂಕವಾಗಿ ಆ ಕೆಲಸವನ್ನು ಅವರಿಗೆ ವಹಿಸಿಕೊಟ್ಟೆವು. ಅಂತೆಯೇ ಗಾಂಧೀ ಸಂಪುಟಗಳ ಅನುವಾದ ಕಾರ್ಯದ ಮುಖ್ಯ ಸಂಪಾದಕತ್ವದ ಜವಾಬ್ದಾರಿಯನ್ನೂ ವಹಿಸಿ ಕೊಡಲಾಯಿತು.

೩೧. ಮತ್ತೆ ಇರುವೆಯ ಗೂಡು

ಶ್ರೀ ಸುಂದರರಾಮಶೆಟ್ಟಿ

ಈಗ ಭವನಕ್ಕೆ ಜನರು ಬರಬೇಕಾಗಿದ್ದಿತು. ಅದಕ್ಕೆ ಇಲ್ಲಿ ಆಕರ್ಷಣೀಯವಾಗಿರುವಂಥ'ದು ಯಾವುದೂ ಇರಲಿಲ್ಲ. ಯಾವುದಾದರೂ ಕಾರ್ಯಕ್ರಮ ನಡೆಸುವ ಅಗತ್ಯ ಬಹಳವಾಗಿದ್ದಿತು. ಸೆಪ್ಟೆಂಬರ್‌ನಲ್ಲಿ ಒಂದು ವಾರ ಕಾಲ ಕುಮಾರವ್ಯಾಸ ಭಾರತ, ವಾಚನ ವ್ಯಾಖ್ಯಾನ ಕಾರ್ಯಕ್ರಮ ಮಾಡುವುದು ಎಂದು ನಿರ್ಧರಿಸಿದೆ. ಈ ಬಗ್ಗೆ ಗಮಕ ವಿದ್ವಾನರಾದ, ಸನ್ಮಿತ್ರ ಶ್ರೀ ಹೊಸಹಳ್ಳಿ ಕೇಶವಮೂರ್ತಿ ಯವರಿಗೂ ತಿಳಿಸಿದೆ. ಅವರು ಆ ಕಾರ್ಯಕ್ರಮಕ್ಕೆ ಬರಲು ಬಹಳ ಸಂತೋಷದಿಂದ ಒಪ್ಪಿದರು.

ಈ ಮಧ್ಯೆ ಲಲಿತಕಲೆಗಳ ತರಗತಿಗಳನ್ನು ಪ್ರಾರಂಭಿಸಿದೆವು. ಲಂಡನ್ ಭವನ ಕೇಂದ್ರದ ಸಫಲತೆಯ ಬಗ್ಗೆ ಸುಮಾರು ಜನ ತಿಳಿದಿದ್ದುದರಿಂದ ಸಂಗೀತ, ನೃತ್ಯ, ಚಿತ್ರಕಲೆ, ವಾದ್ಯಸಂಗೀತ, ವೇದ ಇತ್ಯಾದಿ ತರಗತಿಗಳಿಗೆ ಬಹಳವಾಗಿ ಪ್ರೀತಿ ಪಟ್ಟು, ಅನೇಕ ವಿದ್ಯಾರ್ಥಿಗಳು ಬಂದು ಪ್ರವೇಶ ಪಡೆದರು. ಅದಕ್ಕೆ ತಕ್ಕಂತೆ ಬಹಳ ಅರ್ಹರಾದ, ಸಾಕಷ್ಟು ಪ್ರಸಿದ್ಧರೂ ಆದ, ಕಲಾವಿದರನ್ನು ಪ್ರತಿ ಪ್ರತ್ಯೇಕ ಕಲೆಯ ತರಗತಿಗೆ ಗುರುಗಳಾಗಿ ನೇಮಕವನ್ನು ಮಾಡಿದೆವು. ನಾನು ನಿಧಾನವಾಗಿ ದಾನಿಗಳನ್ನು ಹುಡುಕಿ ಡೊನೇಷನ್ ಅಥವಾ ನಿಧಿ ಸಂಗ್ರಹ ಕಾರ್ಯದಲ್ಲಿ ತೊಡಗಿದೆ. ನನ್ನ ಈ ಯೋಜನೆಗಳನ್ನು ಕಂಡು ಮೆಚ್ಚಿದ ಬಡೀಮಾ ತಮ್ಮ ಎಂ.ಪಿ. ಬಿರ್ಲಾ ಫೌಂಡೇಶನ್ ವತಿಯಿಂದ ಎಂ.ಬಿ.ಎ. ಕಾಲೇಜು ತೆರೆಯಲು ಸೂಚಿಸಿ, ಅದನ್ನು ಭವನದಲ್ಲಿ ನಡೆಸಲು ಅನುಮತಿ ಕೊಟ್ಟರು! ಇದು ಬೆಂಗಳೂರು ಕೇಂದ್ರದ ಪಾಲಿಗೆ 'ವರ'ವಾಗಿ ಪರಿಣಮಿಸಿತು. ಎಂ.ಬಿ.ಎ. ತರಗತಿಗಳಿಗೂ ಸಾಕಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆದರು. ಹೇಗಿದ್ದರೂ ಭವನ ನಡೆಸುವ ಯಾವುದೇ ತರಗತಿಗೆ, ಕೋರ್ಸಿಗೆ, ಪದವಿಗೆ ಭಾರತ ಸರ್ಕಾರದ ಮನ್ನಣೆ ಇದೆಯಾದ್ದರಿಂದ, ಆ ಅರಿವು ಜನರಲ್ಲೂ ಇದ್ದಿತ್ತಾದ್ದರಿಂದ ನಮ್ಮ ನಿರೀಕ್ಷೆಗೂ ಮೀರಿ ಎಂ.ಬಿ.ಎ. ತರಗತಿಗಳು ತುಂಬಿದವು! ಇದಲ್ಲದೆ ಅಲ್ಲಿನ ಕೆಲಸ ಬಹಳಷ್ಟು ಬಾಕಿ ಇರುವುದನ್ನರಿತ ಬಡೀಮಾ, ಹಿಂದೆ ಲಂಡನ್‌ನಲ್ಲಿ ನಡೆದಂತೆ, ಈಗಲೂ ಬೆಂಗಳೂರು ಕೇಂದ್ರದ ಕಾರ್ಯಚಟುವಟಿಕೆಗಳ ವ್ಯಾಪ್ತಿ ವಿಸ್ತಾರವಾಗುತ್ತಿರುವುದರ ಸೂಕ್ಷ್ಮವನ್ನರಿತು ಈಗಿನ ಭವನದ ಮುಂದೆ ಇದ್ದ ಖಾಲಿ ಜಾಗದಲ್ಲಿ ಒಂದು ಸುಂದರವಾದ ಕಟ್ಟಡ ನಿರ್ಮಿಸಿ ಕೊಡುವುದಾಗಿ ಹೇಳಿದರು!

ಈಗ ಭವನ ಕೆಲಸ ನಿರ್ವಹಿಸುತ್ತಿರುವ ಕಟ್ಟಡದ್ದೂ ಒಂದು ಕಥೆಯೇ. ಶ್ರೀ ಸುಂದರರಾಮಶೆಟ್ಟರು ವಿಜಯ ಬ್ಯಾಂಕಿನ ಅಧ್ಯಕ್ಷರು (ಇವರಿಂದಲೇ ಲಾರ್ಡ್ ಥಾಮ್ಸನ್ ಆಫ್ ಫ್ಲೀಟ್‌ನ ಪರಿಚಯ ಭವನಕ್ಕೆ ಆದುದು.) ಶ್ರೀ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದ ಸಮಯದಲ್ಲಿ ರೇಸ್‌ಕೋರ್ಸ್ ರಸ್ತೆಯಲ್ಲಿ ದೊಡ್ಡದಾದ ನಿವೇಶನವೊಂದು ಸಿಕ್ಕಿತ್ತು. ಆಗ ಶ್ರೀ ಸುಂದರರಾಮಶೆಟ್ಟಿ ಅವರು ಈ '೧೪,೦೦೦ ಚದರಡಿ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡುತ್ತೇನೆ. ಇಡೀ ಕಟ್ಟಡದಲ್ಲಿನ ಅರ್ಧಭಾಗವನ್ನು ನಾನೇ ಬಾಡಿಗೆಗೆ ತೆಗೆದು ಕೊಳ್ಳುತ್ತೇನೆ. ಆ ಭಾಗದ ಬಾಡಿಗೆಯನ್ನು ನಿಮಗೆ ಕೊಟ್ಟು ಕಟ್ಟಡದ ಖರ್ಚನ್ನು ಕಳೆಯುತ್ತೇನೆ' ಎಂದು ವಿದ್ಯಾಭವನಕ್ಕೆ ಲಾಭದಾಯಕವಾದ ಪ್ರಸ್ತಾಪವೊಂದನ್ನು ಇಟ್ಟರು. ಹೀಗೆ ಸುಮಾರು ೨೦ ವರ್ಷಗಳಲ್ಲಿ ಭವನದ ಸಾಲವು ತೀರಿ, ಖರ್ಚಿಲ್ಲದೆ ಭವನವು ನಮ್ಮದಾಯಿತು. ಅವರ ಈ ಉಪಕಾರಕ್ಕೆ ಬೆಂಗಳೂರು ಭವನ ಕೇಂದ್ರ ಸದೈವ ಋಣಿ.

ಬಡೀಮಾ

ಈಗ ಇದ್ದ ಹಳೆಯ ಕಟ್ಟಡದ ಜೊತೆಗೆ ಹೊಸದಾಗಿ ಕಟ್ಟಡ ಕಟ್ಟಿಸಿಕೊಡುವುದಾಗಿ ಬಡೀಮಾ ಅವರು ಹೇಳಿದರು. ಅವರು ಹೇಳಿದಂತೆಯೇ ಆ ಕಟ್ಟಡ ನಿರ್ಮಾಣಕ್ಕಾಗಿ ಸುಮಾರು ಒಂದೂವರೆ ಕೋಟಿ ರೂಪಾಯಿಗಳನ್ನು ಉದಾರವಾಗಿ ಕೊಟ್ಟ ಬಡೀಮಾರ 'ಮಾತೃಛಾಯೆ' ಎಂದರೆ ಎಂಥದು, ಏನು ಎಂದು ಈಗಾಗಲೇ ನನ್ನ ಓದುಗರಿಗೇ ಅರ್ಥವಾಗಿದ್ದೀತು!! ಬಡೀಮಾ ಹಾಗೆಲ್ಲ ಸುಮ್ಮನೆ ದಾನ ಕೊಡುವುದಿಲ್ಲ. ಅವರದು ಬಹಳ ಲೆಕ್ಕಾಚಾರ, ಕರಾರುವಾಕ್ಕಾದ ಕೆಲಸ. ಕೆಲಸದಲ್ಲಿ ನಿಃಸ್ಪೃಹತೆ, ತಾದಾತ್ಮ್ಯ, ವಿಶ್ವಾಸಾರ್ಹತೆಯನ್ನು ರೂಢಿಸಿಕೊಂಡು ಕೆಲಸ ಮಾಡುವುದು ಎಂದರೆ ಅವರಿಗೆ ಪ್ರಿಯ. ಅಂಥವರಿಗಾಗಿ ಅವರು ಎಷ್ಟೇ ಆದರೂ ಉದಾರವಾಗಿ ದಾನ ಮಾಡುವರು. ಆದರೆ ಕೆಲಸದ ಫಲಿತಾಂಶ ತೋರಿಸಬೇಕು ಅವರಿಗೆ! ಅಲ್ಲವೇ ಮತ್ತೆ! ಇಂಥ ಸಮರ್ಥತೆ ಇರುವುದರಿಂದಲ್ಲವೇ ಅಷ್ಟು ದೊಡ್ಡ ಬಿರ್ಲಾ ಕುಟುಂಬದ ಹಿರಿಯರಾಗಿ ಅಷ್ಟೆಲ್ಲ ವ್ಯವಹಾರಗಳನ್ನು ದಕ್ಷವಾಗಿ ನಿರ್ವಹಿಸುತ್ತಿರುವುದು ! ಸಾಮಾನ್ಯರಿಂದ ಸಾಧ್ಯವೇ ಇಂಥ ಕೆಲಸಗಳು!? ಬಡೀಮಾ ಬರೀ ದಕ್ಷ ಆಡಳಿತಗಾರ್ತಿಯಲ್ಲ, ಬಹಳ ಒಳ್ಳೆಯ ಪಾಕಶಾಸ್ತ್ರ ಪ್ರವೀಣೆ, ಕಸೂತಿ ಕೆಲಸದಲ್ಲಿ ಕುಶಲೆ, ಒಳ್ಳೆಯ ಉತ್ತಮ ಚಿತ್ರಕಲಾವಿದೆ, ಅವರು ಚಿತ್ರಿಸಿರುವ 'ರಾಧಾಕೃಷ್ಣ'ನ ಚಿತ್ರದ ಚಿಕ್ಕ ಚಿಕ್ಕ ಫೋಟೋಗಳನ್ನೇ ಅವರು ಇತರರಿಗೆ ನೆನಪಿನ ಕಾಣಿಕೆಯಾಗಿ ಕೊಡಿಸುವುದು, ಆ ರಾಧಾಕೃಷ್ಣರ ಚಿತ್ರ ಮನಮೋಹಕ, ಬಹಳ ಸುಂದರ!! ಬಡೀಮಾರ ಔದಾರ್ಯದ ಬಗೆಗೇ ಒಂದು ಪುಸ್ತಕ ಬರೆದರೂ ಆದೀತು... ನಾನು ಇಲ್ಲಿಗೆ ಬಂದ ಮೇಲೆ ಕೆಲವು ಭವನಾಸಕ್ತರು ಮತ್ತು ಸ್ವಯಂಸೇವಕರಾಗಿ ಭವನಕ್ಕೆ ತಮ್ಮ ಕೈಲಾದ ಸೇವೆ ಸಲ್ಲಿಸುವವರನ್ನು, ಒಮ್ಮೆ ಹಿಮಾಲಯ ಪರ್ವತದ ವ್ಯಾಸ ಗುಹೆಗೆ, ಮತ್ತೊಮ್ಮೆ ತ್ರಿಸ್ಥಲಿ ಯಾತ್ರೆಗೆ ಎಂದು ಯಾತ್ರಾ ಪ್ರವಾಸ ಕಾರ್ಯಕ್ರಮವನ್ನು ಹಾಕಿಕೊಂಡು ಸುಮಾರು ೩೫-೪೦ ಜನರನ್ನು ನನ್ನ ಸಂಗಡ ಕರೆದೊಯ್ದಿದ್ದೆ. ಆಗ ಬಡೀಮಾ, ಮಕ್ಕಳು ಮನೆಗೆ ಬಂದಾಗ ಪ್ರೀತಿಯಿಂದ ನೋಡಿಕೊಳ್ಳುವ ತಾಯಿಯಂತೆ, ಬಹಳ ಅಕ್ಕರೆಯಿಂದ ಪ್ರವಾಸಿಗಳಾದ ನಮ್ಮನ್ನೆಲ್ಲ ತಮ್ಮ ವಿಶ್ರಾಂತಿಧಾಮ 'ಆನಂದ ಕಾನನ'ದಲ್ಲಿ ಒಂದೆರಡು ದಿನ ಇರಲು ಒಪ್ಪಿಗೆ ಇತ್ತು, ಉಪಚರಿಸಿ ನಮ್ಮ ಪ್ರಯಾಣ-ಪ್ರವಾಸ ಸುಖಕರವಾಗಿ ನಡೆದು ಮುಗಿಯಲು ಬೇಕಾದ ಏರ್ಪಾಡುಗಳನ್ನೆಲ್ಲ ಸಮರ್ಪಕವಾಗಿ ಮಾಡಿ, ಎಲ್ಲ ಯಾತ್ರಾರ್ಥಿಗಳ ಯಾತ್ರೆಯ ಖರ್ಚನ್ನೂ ತಾವೇ ಕೊಟ್ಟಂತಹ ಮಹಾದಾನಿ!!! ಇಂತಹ ಬಡೀಮಾರನ್ನು ಹೊಗಳಲು, ಅವರ ಉದಾರತೆಯನ್ನು ವರ್ಣಿಸಲು ಯಾವುದೇ ಭಾಷೆಯ ಶ್ರೀಮಂತ ಶಬ್ದಗಳೂ ಶುಷ್ಕ ಎನಿಸುವುವು ಎಂದೇ ನನ್ನ ಭಾವನೆ. ನನ್ನನ್ನು ಇಂದಿಗೂ ತಮ್ಮ ಪುತ್ರನಂತೆ ಕಂಡು ವಾತ್ಸಲ್ಯ ತೋರುವ ಬಡೀಮಾ ಆರ್ಥಿಕವಾಗಿ ಸದೃಢವಾಗಿ ನಾವು ಇರಬೇಕಾದುದು ಹೇಗೆ ಎನ್ನುವುದನ್ನು ನನಗೆ ಕಲಿಸಿಕೊಟ್ಟ ಗುರು! ಆರ್ಥಿಕ ಸದೃಢತೆ ಇಲ್ಲದಿದ್ದರೆ ನಾವು ಏನನ್ನೂ ಸೃಜನಾತ್ಮಕವಾಗಿ ಮಾಡಲಾಗದು ಎನ್ನುವ ಖಚಿತ ಅಭಿಪ್ರಾಯ ಹೊಂದಿರುವ ಬಡೀಮಾ ನನ್ನ ಆರ್ಥಿಕ ಪರಿಸ್ಥಿತಿ ಎಂದಿಗೂ ನನ್ನ ಕೆಲಸದಲ್ಲಿ ತೊಂದರೆ ಕೊಡುವುದಾಗಬಾರದು ಎಂದು ಅನನ್ಯ ಕಾಳಜಿ ವಹಿಸುತ್ತಾರೆ... ಅವರು ನನಗೆ ತಂದೆ-ತಾಯಿ-ಗುರು ಸಕಲವೂ ಆಗಿದ್ದಾರೆ ಎಂದು ನಿಮ್ಮಲ್ಲಿ ಹೇಳಲು ನನಗೆ ಬಹಳ ಸಂತೋಷ ಹಾಗೂ ಹೆಮ್ಮೆ ಎನಿಸುತ್ತದೆ! ಸಂಸ್ಕೃತಿಯ ಪ್ರಚಾರಕಾರ್ಯದಲ್ಲಿ ವಿದ್ಯಾಭವನದ ಮೂಲಕ ತೊಡಗಿಕೊಂಡಿರುವ ನನ್ನ ಬಗೆಗೆ ಅವರಿಗೂ ಅಷ್ಟೇ ಅಭಿಮಾನ-ಹೆಮ್ಮೆ ಇದೆ. 'ಇದಕ್ಕಿಂತ ಪುಣ್ಯದ ಕೆಲಸ ಮತ್ತೆ ಯಾವುದಿದೆ?' ಎನ್ನುತ್ತಾರೆ ಅವರು. ಅವರ ಈ ಮಾತುಗಳು ಆಶೀರ್ವಾದವಾಗಿ ಸದೈವ ನನ್ನನ್ನು ಕಾದಿವೆ. ನನ್ನ ಕೆಲಸದಲ್ಲಿ ಸಾರ್ಥಕತೆಯನ್ನೂ, ಧನ್ಯತೆಯನ್ನೂ ಕಂಡುಕೊಳ್ಳುವಂತೆ ಮಾಡಿವೆ!

ಬಡೀಮಾರ ನೆನಪೇ ಹಾಗೆ...! ನಾನು ನನ್ನ ಓದುಗರನ್ನು ಅವರ ವ್ಯಕ್ತಿತ್ವದ ಹಿಂದೆ ಬರುವಂತೆ ಮಾಡಿದೆ... ಇದಕ್ಕಾಗಿ ನಾನು ನಿಮ್ಮನ್ನು 'ಕ್ಷಮಿಸಿ' ಎನ್ನುವುದಿಲ್ಲ. ಓದುಗರೇ! ಇಂತಹ ಸ್ತ್ರೀಯರ ಬಗೆಗೆ ನಾವು ಇತಿಹಾಸದಲ್ಲಿ ಕೇಳಿದ್ದೇವೆ, ಓದಿದ್ದೇವೆ, ಮಹಾರಾಣಿಯರಾಗಿ ಅವರು ಸಾಧಿಸಿದ ಕೆಲಸಗಳ ಬಗ್ಗೆ. ಮಕ್ಕಳನ್ನು ಬೆನ್ನಿಗೆ ಕಟ್ಟಿಕೊಂಡು ಕತ್ತಿಹಿಡಿದು ಮುತ್ತಿಗೆ ಹಾಕಿದ ಶತ್ರುಗಳ ವಿರುದ್ಧ ಹೋರಾಡಿದ ವೀರಗಾಥೆಗಳನ್ನು ಕೇಳಿ "ಹೇಗಿರುತ್ತಾರೆಯೇ ಮಹಿಳೆಯರು?" ಎಂದು ಅಚ್ಚರಿ ಪಟ್ಟಿದ್ದೇವೆ. ಈಗ ಯಾವುದೇ ಯುದ್ಧ ಮಾಡಬೇಕಿಲ್ಲ. ಆದರೆ ಒಂದು ದೊಡ್ಡ ಮನೆತನಕ್ಕೆ ಸೇರಿರುವ, ರಾಷ್ಟ್ರದಲ್ಲಿರುವ ನಾಲ್ಕಾರು ಅತ್ಯಂತ ಸಿರಿವಂತ ಕುಟುಂಬಗಳಲ್ಲಿ ಒಂದಾದ ಬಿರ್ಲಾ ಕುಟುಂಬದ ವ್ಯವಹಾರ-ವಹಿವಾಟು ಸಹ ಯಾವುದೇ ರಾಜ್ಯ ನಡೆಸುವುದಕ್ಕಿಂತ ಕಡಮೆಯ ಕೆಲಸವೇನಲ್ಲ! ಅವರ ಪ್ರಕಾರ ಭ್ರಷ್ಟಾಚಾರ, ಲಂಚ ಇವುಗಳ ವಿರುದ್ಧ ಯುದ್ಧವನ್ನೇ ಮಾಡಬೇಕಾಗಿದೆ. ಅದು ಅವರ ಅಭಿಮತ... ತಮ್ಮ ಕೈಲಾದಷ್ಟು ನಿರ್ವಂಚನೆಯಿಂದ ವ್ಯವಹಾರ ನಡೆಸುತ್ತಾ, ದಾನ-ಧರ್ಮಗಳಲ್ಲಿ ಯಾವಾಗಲೂ ಒಂದು ಕೈ ಮುಂದಾಗಿರುವ ಬಡೀಮಾ ಅಪ್ಪಟ ಭಾರತೀಯ ನಾರಿ, ಸ್ತ್ರೀಶಕ್ತಿ ಸ್ವರೂಪ!! ಇಂತಹವರ ಪರಿಚಯ ನನ್ನ ಸಮಸ್ತ ಓದುಗರಿಗೂ ಆಗಬೇಕು ಎನ್ನುವುದೇ ನನ್ನ ಆಶಯವು ಸಹ!

ನಾನು ಅಧಿಕಾರ ವಹಿಸಿಕೊಂಡದ್ದು ಮೇಯಲ್ಲಿ ತಾನೆ? ಸೆಪ್ಟೆಂಬರ್‌ವರೆಗೆ ಮೂರು ತಿಂಗಳ ಕಾಲಾವಕಾಶವಿತ್ತಲ್ಲ, ಅಲ್ಲಿಯವರೆಗೆ ನಿಮ್ಮಲ್ಲಿ ಈ ವಿಷಯಗಳನ್ನು ಹಂಚಿಕೊಳ್ಳುವುದು ನನ್ನ ಉದ್ದೇಶವಾಗಿತ್ತು!!

ನಾನು ಕಾತುರದಿಂದ ಕಾದಿದ್ದ ಸೆಪ್ಟೆಂಬರ್ ತಿಂಗಳು ಬಂದಿತು. 'ಮತ್ತೂರು' ಎನ್ನುವ ಹೆಸರು ಕೇಳಿಯೇ ಮೊದಲ ದಿನವೇ ಸಮಾರಂಭದ ಸಮಯಕ್ಕೆ ಸಾಕಷ್ಟು ಜನ ಬಂದಿದ್ದರು. ಕಾರ್ಯಕ್ರಮ ಪ್ರಾರಂಭವಾದಂತೆ ರಾಜಸಭಾಂಗಣ ಕಿಕ್ಕಿರಿದು ತುಂಬಿತು... ಎಲ್ಲರಿಗೂ ಸಾಕಷ್ಟು ಕುತೂಹಲ...೨೩ ವರ್ಷಗಳ ಕಾಲ ಇಂಗ್ಲೆಂಡಿನಲ್ಲಿ ಇದ್ದು ಬಂದ ಇವರು ವ್ಯಾಖ್ಯಾನ ಹೇಗೆ ಮಾಡುತ್ತಾರೆ ನೋಡೋಣ ಎನ್ನುವ ಆಸಕ್ತಿ, ನನಗೂ ೨೩ ವರ್ಷಗಳ 'ಬ್ರೇಕ್' ಅನಂತರ ಮಾಡುತ್ತಿರುವ ಮೊದಲ ಕಾರ್ಯಕ್ರಮ ಹೇಗಾಗುವುದೋ ಎನ್ನುವ ಆತಂಕ ಇತ್ತು ಎಂದರೆ ತಪ್ಪಿಲ್ಲ! ಇಲ್ಲಿಯೂ ನಾನು ನಿಮಗೆ ಒಂದು ವಿಷಯವನ್ನು ನೆನಪಿಸಬೇಕಿದೆ. ಲಂಡನ್‌ನಲ್ಲಿ ನಾನು ಅನೇಕ ಭಾಷಣಗಳನ್ನು ಕೊಟ್ಟಿದ್ದರೂ, ಅವು ಇಂಗ್ಲಿಷಿನಲ್ಲಿರುತ್ತಿದ್ದವು. ಅಲ್ಲದೆ ಅಲ್ಲಿ ಕಾವ್ಯವಾಚನ ಎನ್ನುವುದು ಇರಲೇ ಇಲ್ಲ. ನಾನು ಪುಸ್ತಕವನ್ನು (ಕಾವ್ಯವನ್ನು) ಮುಂದಿಟ್ಟುಕೊಂಡು ಪದ್ಯಗಳನ್ನು ಹಾಡಿಸಿ, ವ್ಯಾಖ್ಯಾನ ಅಥವಾ ಪ್ರವಚನ ಮಾಡುತ್ತಿರುವುದು ೨೩-೨೪ ವರ್ಷಗಳ ದೀರ್ಘಕಾಲದ ಅನಂತರ ಇದೇ ಮೊದಲು. 'ಶ್ರೀ ಕೃಷ್ಣರಾಯಭಾರ' ನನ್ನ ನಿರೀಕ್ಷೆಗೂ ಮೀರಿ ಮೊದಲನೆಯ ದಿನವೇ ಬಹಳ ಮಂದಿಗೆ ಮೋಡಿ ಮಾಡಿತ್ತು! ನಾನು ಹಿಂದಿನ ದಿನಗಳಲ್ಲಿ ಪ್ರವಚನ ನಡೆಸುತ್ತಿದ್ದ ರೀತಿಯನ್ನು-ಶೈಲಿಯನ್ನು ಮರೆತಿರಲಿಲ್ಲ. ಅದಕ್ಕೆ ಬಹಳ ಜನ ತುಂಬ ಆಶ್ಚರ್ಯ ವ್ಯಕ್ತಪಡಿಸಿದರು. ತಡೆಯಲಾರದೆ ನನ್ನನ್ನು ಕೇಳಿದರೂ ಸಹ! "ಏನು ಮತ್ತೂರರೇ, ನೀವು ಏನನ್ನೂ ಮರೆತಿಲ್ಲವಲ್ಲ? ಎಲ್ಲವೂ ಮೊದಲಿನ ಶೈಲಿಯಲ್ಲೇ ಇದೆ...! ೨೪ ವರ್ಷಗಳನಂತರ ನೀವು ಈ ಕಾರ್ಯಕ್ರಮ ಮಾಡುತ್ತಿದ್ದೀರಿ ಎನಿಸುವುದೇ ಇಲ್ಲವಲ್ಲ! ನಿಮ್ಮ ಕನ್ನಡವೂ ಅಂದಿನಂತೆಯೇ, ಇಂದಿಗೂ ಅಷ್ಟೇ ಸೊಗಸಾಗಿದೆ" ಎಂದು. ಅವರೆಲ್ಲ ಹಿಂದೆ ನನ್ನ ಪ್ರವಚನಗಳನ್ನು ಕೇಳಿ ಸಂತೋಷಿಸಿದ್ದವರು. ಅವರೆಲ್ಲರ ಈ ಅಭಿಮಾನದ ಮಾತುಗಳು, ಮೆಚ್ಚುಗೆ ಅಂದಿನ ನನ್ನ ಕಾರ್ಯಕ್ರಮಕ್ಕೆ ಪ್ರೋತ್ಸಾಹದ ಪಾರಿತೋಷಕವಾಗಿದ್ದು ನನ್ನ ಉತ್ಸಾಹ ಹೆಚ್ಚಿಸಿತು!

ಯಾವುದೇ ಕಾರ್ಯಕ್ರಮ ಬಹಳ ಚೆನ್ನಾಗಿ ಆದಾಗ ನನಗೆ ಬಹಳವಾಗಿ ನೆನಪು ಬರುವುದು ಲಂಡನ್‌ನಲ್ಲಿನ ನನ್ನ ಪ್ರೀತಿಯ ಗೆಳೆಯ ಮದನ್ ಅರೋರನದು. ಹೇಗೋ ಇಲ್ಲಿಯವರೆಗೆ ಅವನು ನನ್ನ ನಿರೂಪಣೆಯಿಂದ ದೂರವಿದ್ದ. ಆದರೆ, ನನ್ನ ಈ ಕಾರ್ಯಕ್ರಮದ ಯಶಸ್ಸು ಅವನ ಬಗ್ಗೆ ನಿಮಗೆಲ್ಲರಿಗೂ ಹೇಳಬೇಕು ಎನ್ನುವಂತೆ ಮಾಡಿದೆ.

೧೯೭೨ ಆಗಸ್ಟ್ ೫ರಂದು ನಾನು ಲಂಡನ್‌ಗೆ ಹೋದದ್ದು, ಆಗಸ್ಟ್ ೧೨ರಂದು ಭವನದಲ್ಲಿ ಒಂದು ಸಣ್ಣ ಸಮಾರಂಭವಿತ್ತು. ಆಗ ಆ ಕಾರ್ಯಕ್ರಮಕ್ಕೆ ಫೋಟೋಗ್ರಾಫರ್ ಆಗಿ ಬಂದಿದ್ದ ಮದನ್ ಅರೋರಾ ನನಗೆ ಪರಿಚಯವಾದರು. ದಿನಕಳೆದಂತೆ ಈ ಪರಿಚಯ ಗೆಳೆತನಕ್ಕೆ ತಿರುಗಿತು. ಮದನ್ ನನ್ನ ಒಳ್ಳೆಯ ಗೆಳೆಯನಾದ. ಅವನು ನಿಜಕ್ಕೂ ಪ್ರತಿಭಾವಂತ ಫೋಟೋ ಗ್ರಾಫರ್. ಆಗಿನ ಪ್ರಧಾನಿ ಇಂದಿರಾ ಗಾಂಧಿಯವರು ಲಂಡನ್‌ಗೆ ಬರುವವರಿದ್ದರೆ, 'ಮದನ್‌ರಿಗೆ ತಿಳಿಸಿ, ಅವರು ಬಂದು ಕಾರ್ಯಕ್ರಮದ ಫೋಟೋಗಳನ್ನು ತೆಗೆಯಲಿ' ಎನ್ನುತ್ತಿದ್ದರಂತೆ. ಸ್ವತಂತ್ರ ಭಾರತದ ಪ್ರಥಮ ಪ್ರಧಾನಿ ನೆಹರೂರವರ ಲಂಡನ್ ಪ್ರವಾಸದಲ್ಲಿಯೂ ಮದನ್ ಅರೋರನೇ ಫೋಟೋಗಳನ್ನು ತೆಗೆದಿದ್ದುದು. ಅಂತೆಯೇ ಗ್ರೇಟ್ ಬ್ರಿಟನ್ನಿನಲ್ಲಿರುವ ಬಹಳ ಹೆಸರಾಂತ ಶ್ರೀಮಂತರೆಲ್ಲರ ಮದುವೆ, ಇನ್ನಿತರ ಸಮಾರಂಭಗಳಿಗೆ ಮದನ್‌ನದೇ ಫೋಟೋ ತೆಗೆಯುವ ಕೆಲಸ. ಅವನು ತೆಗೆಯುತ್ತಿದ್ದ ಫೋಟೋಗಳು ಅಷ್ಟು ಜೀವಂತವಾಗಿರುತ್ತಿದ್ದವು.

ಎಷ್ಟೋ ಮಂದಿ ಇತರ ಫೋಟೋಗ್ರಾಫರ್‌ಗಳು ಬಂದರೂ ಮದನ್‌ನಿಗೆ ಕಿರಿಕಿರಿಯಾಗುತ್ತಿರಲಿಲ್ಲ. 'ಅವರಿಗೆ ಅವರದ್ದು, ನನಗೆ ನನ್ನ ವಿದ್ಯೆ, ಇದು ಒಂದು ಕಲೆ. ನನಗೆ ಇದು ತಿಳಿದಿದೆ. ಯಾರು ಎಲ್ಲೇ ಹೋದರೂ ಒಂದು ದಿನ ಅವರು ನನ್ನಲ್ಲಿಗೆ ಬರುವುದಂತೂ ತಪ್ಪುವುದಿಲ್ಲ' ಎನ್ನುವ ಆತ್ಮವಿಶ್ವಾಸ ಮದನನಿಗೆ! ಅಷ್ಟು ಶಾಂತನಾಗಿ, ತಣ್ಣಗೆ ಅವನು ಇತರರ ಸ್ಪರ್ಧೆಯನ್ನು ಸ್ವೀಕರಿಸುತ್ತಿದ್ದುದು. ನಾನು ಹೋದನಂತರ ಭವನದಲ್ಲಾದ ಮೊಟ್ಟಮೊದಲನೆಯ ಸಮಾರಂಭ ದಿಂದ ಮೊದಲಾಗಿ, ನಾನು ಭವನದಿಂದ ನಿವೃತ್ತನಾಗಿ ವಾಪಸ್ಸು ಭಾರತಕ್ಕೆ ಬರುವವರೆಗೆ ನಡೆದ ಸಮಾರಂಭಗಳ ತನಕ, ಆ ಸಮಾರಂಭಗಳು, ಆ ಕಾರ್ಯಕ್ರಮಗಳು ಹೇಗೆ ನಡೆದವು, ಹೇಗೆ ಯಶ ಸಿಕ್ಕಿತು, ಜನತೆ ಹೇಗೆ ಪ್ರತಿಕ್ರಿಯಿಸಿದರು ಇದನ್ನೆಲ್ಲಾ ಕೇವಲ ಒಂದೆರಡೇ ಮಾತುಗಳಲ್ಲಿ ಮದನ್ ನನಗೆ ಹೇಳುವುದಿತ್ತು. ನಾನು ಅವನನ್ನು 'ಬರೋಮೀಟರ್ (ಮಾಪನ ಯಂತ್ರ) ಎಂದು ಕರೆಯುವುದಿತ್ತು! 'ಮದನ್, ಕಾರ್ಯಕ್ರಮ ಹೇಗಿತ್ತು?' ಎಂದರೆ, 'ಹಾಂ...ಚೆನ್ನಾಗಿ ಆಯ್ತು ! (ಠೀಕ್ ಥಾ)' ಎಂದರೆ ನನಗೆ ಬಹಳ ಸಮಾಧಾನ. ಅವನ ಅಭಿಪ್ರಾಯ ಅಷ್ಟು ನಿಖರವಾಗಿ, ಖಚಿತವಾಗಿರುತ್ತಿತ್ತು. ನನಗೆ ಅದಕ್ಕೇ ಅವನ ಮೇಲೆ ಬಹಳ ಭರವಸೆ. ವಿಶ್ವಾಮಿತ್ರ 'ಬ್ರಹ್ಮರ್ಷಿ' ಪದವಿಗೆ ಸಾಧನೆ ಮಾಡುವಾಗ ವಸಿಷ್ಠರ ಬಾಯಲ್ಲಿ 'ಬ್ರಹ್ಮರ್ಷಿ' ಎನ್ನಿಸಿಕೊಳ್ಳ ಬೇಕು ಎಂದೇ ತೊಡಗಿದ್ದುದು. ನನ್ನ ಪ್ರಯತ್ನಗಳು ಹಾಗೇ ಇದ್ದುವು ಎಂದರೆ ತಪ್ಪಲ್ಲ!

ಹೀಗೆ ಕಾರ್ಯಕ್ರಮ ಯಶಸ್ವಿಯಾದ್ದಕ್ಕೂ ಕಾರಣರು ಯಾರು ಗೊತ್ತೇ? ಓದುಗರೇ, ಇಲ್ಲಿಯೂ ನಾನು ಬಡೀಮಾರನ್ನು ನೆನೆಯದೆ, ಅವರಿಗೆ ಕೃತಜ್ಞತೆ ಹೇಳದೆ ಮುಂದುವರೆಯಲಾರೆ. ಈ ದಂಪತಿಗಳು ತಮ್ಮ 'ಪುಣ್ಯ ಶ್ರವಣ'ಕ್ಕಾಗಿ ನಾನು ಅವರಿಗೆ ಕಥೆಗಳನ್ನು ನಡೆಸಿಕೊಡಬೇಕೆಂದು ಕೇಳಿದ್ದರಷ್ಟೆ. ನಾನು ಅವರಿಗಾಗಿ ಈ ಕಥೆಗಳ ಪ್ರತಿಯೊಂದು ಅಂಶವನ್ನೂ ಸರಿಯಾಗಿ ಹೇಳಲು, ಸದೈವ ಸಿದ್ಧನಾಗಿಯೂ ಇರಬೇಕಿತ್ತು. ಆ ಸಿದ್ಧತೆಗಳು ನನ್ನನ್ನು ಹೀಗೆ ಪ್ರವಚನ

ಮಾಡಲು ಸಿದ್ಧನನ್ನಾಗಿಯೇ ಇರಿಸಿದ್ದವು. ವರಕವಿ ಕುಮಾರವ್ಯಾಸನ ಅಮರ ಕಾವ್ಯವಾದ 'ಮಹಾಭಾರತ'ವನ್ನು ನಾನು ಮುಟ್ಟಿ ನೋಡಿ ೨೩ ವರ್ಷಗಳು ಕಳೆದಿದ್ದರೂ, ಈ ದಿನ ಅದೇ ಸಿದ್ಧತೆ ನೂರಾರು ಜನ ಶ್ರೋತೃಗಳಿಗೆ ಆನಂದವನ್ನು ಕೊಟ್ಟಿತ್ತು. ಆದ್ದರಿಂದ ಈ ಕಾರ್ಯಕ್ರಮದ ಯಶಸ್ಸಿನ ಶ್ರೇಯವೂ ಸಹ ಬಡೀಮಾ ಅವರಿಗೇ ಸೇರುತ್ತದೆ!!

ಕಥೆಯ ಎರಡನೆಯ ದಿನ ಸಾಯಂಕಾಲ ಕಥೆ ಮುಗಿದ ಅನಂತರ ಸಾಯಿಪ್ರಸಾದ್ ಎನ್ನುವವರು ನನ್ನನ್ನು ಮಾತನಾಡಿಸಲು ಬಂದರು. "ನಾನು ಸಾಯಿಪ್ರಸಾದ್, ಎಚ್.ಎಂ.ಟಿ.ಯಲ್ಲಿ ವಾಚ್ ಡಿವಿಜನ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಡೈರೆಕ್ಟರರು ಎನ್. ರಾಮಾನುಜ ಎಂದು. ಅವರಿಗೆ ಈ ರೀತಿಯ ಕಾರ್ಯಕ್ರಮ ಬಹಳ ಇಷ್ಟ. ನಾಳೆ ಅವರನ್ನು ಈ ಕಾರ್ಯಕ್ರಮಕ್ಕೆ ನಾನೇ ಕರೆದುಕೊಂಡು ಬರುತ್ತೇನೆ" ಎಂದು ಹೇಳಿ, ನನ್ನ ಕೈ ಕುಲುಕಿದರು. ನಾನು "ಯಾರು? ಡಾ. ಪಿ.ಎಸ್. ರಾಮಾನುಜಂ ಎನ್ನುವವರೇ?" ಎಂದೆ. ಅದಕ್ಕೆ ಆತ, "ಇಲ್ಲ... ಇಲ್ಲ.. ಅವರಲ್ಲ... ಅವರು ಐ.ಪಿ.ಎಸ್. ಅಧಿಕಾರಿ. ಇವರು ಬೇರೆ" ಎಂದರು. "ಹೌದೇ? ಖಂಡಿತ ನಾಳೆ ಕರೆದುಕೊಂಡು ಬನ್ನಿ" ಎಂದೆ. ನಾನು ಅಷ್ಟು ವರ್ಷಗಳು ಇಲ್ಲಿಲ್ಲದಿದ್ದುದರಿಂದ, ನನಗೆ ಇಲ್ಲಿ ಪ್ರಸಿದ್ಧರೂ, ಜನಪ್ರಿಯರೂ ಆದ ಹಲವರ ಪರಿಚಯ ಅಷ್ಟಾಗಿ ಇರಲಿಲ್ಲ. ಅದಕ್ಕೆ ಒಂದು ಉದಾಹರಣೆ ಎಂದರೆ ನಾನು ಒಮ್ಮೆ ಬಾಂಬೆಗೆ ಹೋಗಿದ್ದೆ. ಆಗ ಏರ್‌ಪೋರ್ಟಿನಲ್ಲಿ ಲಕ್ಷಣವಾಗಿದ್ದ ಒಬ್ಬಾಕೆ ತಮ್ಮ ಸಾಮಾನುಗಳ ಜತೆ ಯಾರಿಗಾಗಿಯೋ ಕಾಯುತ್ತಿದ್ದರು. ನಾನೂ ಅಲ್ಲಿಯೇ ಕಾಯುತ್ತ ನಿಂತಿದ್ದೆ.

ನಾನೂ-ಆಕೆಯೂ ಇಬ್ಬರೂ ಒಟ್ಟಿಗೆ ಕಾರಿನಲ್ಲಿ ಹೋಗುವಾಗ ನಾನು ಆಕೆಯನ್ನು ಕೆಲಸ ಮಾಡುತ್ತಾರೆಯೇ ಎಂದು ವಿಚಾರಿಸಿದೆ. ಅದಕ್ಕೆ 'ಹೌದು' ಎಂದ ಆಕೆ , "ನಾನು ಸಿನಿಮಾದಲ್ಲಿ ಕೆಲಸ ಮಾಡುತ್ತೇನೆ" ಎಂದರು. "ಹೌದೇನು?" ಎಂದೆ. ಅಲ್ಲಿ ಆಕೆ ಇಳಿದು ನನಗೆ ವಂದಿಸಿ ಹೊರಟರು. ನಾನೂ ಆಕೆಗೆ ವಂದಿಸಿ ಹೊರಟು ಬಂದೆ. ನಾನು ಲಂಡನ್‌ಗೆ ಹಿಂದಿರುಗಿದ ಮೇಲೆ ನಂದನಿಗೆ ಹೀಗೆ ನಡೆದುದೆಲ್ಲವನ್ನೂ ಹೇಳಿ ಆಕೆ ಹೇಳಿದ ಸಿನಿಮಾಗಳ ಹೆಸರನ್ನೂ ಹೇಳಿದೆ. ನಂದನಿಗಾದ ಸಂತೋಷ -ಒಂದೆಡೆ ನಿರಾಸೆ ಅಷ್ಟಿಷ್ಟಲ್ಲ. ಆಕೆ ಮತ್ತಾರೂ ಆಗಿರದೇ ಹಿಂದಿ ಸಿನಿಮಾಗಳ ಶ್ರೇಷ್ಠ, ಪ್ರತಿಭಾವಂತ ಅಭಿನೇತ್ರಿ ಸ್ಮಿತಾಪಾಟೀಲ್ ಆಗಿದ್ದರು! ಒಂದೆಡೆ ನನಗೆ ಅವರು ಸಿಕ್ಕಿದ್ದರಲ್ಲಾ ಎಂದು ಸಂತೋಷ ಪಟ್ಟ ನಂದ, ಮತ್ತೊಂದೆಡೆ ನಾನು ಅಂಥ ಪ್ರತಿಭಾವಂತ ನಟಿಯನ್ನು ಗುರ್ತಿಸಲಾಗದೆ, ಆಕೆಯ ಬಗೆಗೆ ತಿಳಿದುಕೊಳ್ಳದೇ ಸುಮ್ಮನೇ ಔಪಚಾರಿಕವಾಗಿ ನಾಲ್ಕು ಮಾತುಗಳನ್ನಾಡಿ ಬಂದೆ ಎಂದು ನಿರಾಸೆಯಾಗಿ ಬೇಸರಗೊಂಡ. ಅದನ್ನು ಅವನು ನೇರವಾಗಿ ಹೇಳಿಯೂ ಬಿಟ್ಟ. "ಏನು ನೀವು, ಅಂತಹಾ ಅಭಿನೇತ್ರಿ ಸಿಕ್ಕಿದರೂ ಆಕೆಯನ್ನು ಗುರ್ತಿಸದೆ, ಆಕೆಯ ಪ್ರತಿಭೆಯ ಬಗ್ಗೆ ಏನೂ ಹೇಳದೆ, ಸುಮ್ಮನೆ ಮಾತನಾಡಿಸಿ ಬಂದಿರಲ್ಲಾ?" ಎಂದು ಹೊಟ್ಟೆಯುರಿದುಕೊಂಡ ! ನಂದನ ಈ ಸಂಕಟ ನೋಡಿ ನನಗೆ ಸಹಿಸಲಾಗಲಿಲ್ಲ. ನಿಜ, ಪ್ರತಿಭಾವಂತರು ಪ್ರತಿಭಾವಂತರೆಂದು ತಿಳಿದ ಮೇಲೂ, ಅವಕಾಶ ಸಿಕ್ಕಿದಾಗ ಅವರ ಪ್ರತಿಭೆಯ ಬಗ್ಗೆ ನಾಲ್ಕು ಮಾತು ಹೇಳದೆ ಇರುವುದು ಸರಿಯಲ್ಲ ಎನಿಸಿತು ನನಗೂ ಸಹ! ಸರಿ... ಆಕೆಯ ಫೋನ್ ನಂಬರ್ ಇತ್ತಲ್ಲಾ ನನ್ನ ಬಳಿ, ಫೋನು ತಿರುಗಿಸಿದೆ, ಆಕೆಯೇ ಫೋನಿನಲ್ಲಿ ಸಿಕ್ಕಿದರು. ನಾನು ನನ್ನ ಪರಿಚಯ ಹೇಳಿ, ಆಕೆ ಅಷ್ಟು ಸುಪ್ರಸಿದ್ಧ ಅಭಿನೇತ್ರಿಯಾದರೂ ನನಗೆ ಅದು ತಿಳಿಯದೇ ಹೋದುದಕ್ಕಾಗಿ ವಿಷಾದಿಸಿ , ಅದಕ್ಕೆ ಕಾರಣ ನಾನು ಬಹಳ ವರ್ಷಗಳಿಂದ ಲಂಡನ್‌ನಲ್ಲಿರುವುದು, ಅಲ್ಲದೆ ನಾನು ಚಲನ ಚಿತ್ರಗಳನ್ನು ನೋಡಿಯೇ ಹಲವಾರು ವರ್ಷಗಳಾಗಿರುವುದು ಎಂದು ತಿಳಿಸಿ, ಅದಕ್ಕೇ ನನಗೆ ಆಕೆಯನ್ನು ಗುರುತಿಸಲಾಗಲಿಲ್ಲ ಎಂದು ಹೇಳಿದೆ. ಆಕೆಯ ಅಭಿಮಾನಿಯಾದ ನಂದನ ಬಗೆಗೂ ಹೇಳಿ, ನಂದನೇ ನನಗೆ ಆಕೆಯ ವಿಷಯವಾಗಿ ಸಾಕಷ್ಟು ಹೇಳಿದನೆಂದು ಹೇಳಿ, ಆಕೆಯ ಪ್ರತಿಭೆಯನ್ನು ಅಭಿನಂದಿಸಿ, ನನಗೆ ಅದು ತಿಳಿಯದೇ ಇದ್ದುದಕ್ಕಾಗಿ ಕ್ಷಮೆ ಕೇಳಿದೆ. ಬಹಳ ಪ್ರಸನ್ನಳಾಗಿ ನಾನು ಹೇಳಿದ ಎಲ್ಲವನ್ನೂ ಕೇಳಿದ ಆಕೆ, ನನ್ನ ಪರಿಚಯ ಹೀಗಾದರೂ ಆಕೆಗಾದದ್ದು ಆಕೆಗೂ ಸಂತೋಷ ಆಗಿದೆಯೆಂದು ತಿಳಿಸಿ, ಲಂಡನ್‌ಗೆ ಬಂದಾಗ ನಮ್ಮಲ್ಲಿಗೆ ಬರುವುದಾಗಿ ಹೇಳಿ, ನನಗೆ ತನ್ನ ಕೃತಜ್ಞತೆಗಳನ್ನು ತಿಳಿಸಿ ತನ್ನ ಮಾತು ಮುಗಿಸಿದಳು. ಹೀಗೆ ನನಗೆ ಗೊತ್ತಾಗದೇ ಹೋದದ್ದು ಅದೇ ಮೊದಲನೆಯ ಸಾರಿ, ಆಮೇಲೆ ನಾನು ಕಂಡವರನ್ನು ಸಾಕಷ್ಟು ನೆನಪಿನಲ್ಲಿಟ್ಟುಕೊಳ್ಳುತ್ತಿದ್ದೆ!

ಎನ್. ರಾಮಾನುಜರ ರೂಪದಲ್ಲಿ ಕುಮಾರವ್ಯಾಸ

ಮೂರನೆಯ ದಿನ ರಾಮಾನುಜ ಅವರು ಕಾರ್ಯಕ್ರಮಕ್ಕೆ ಬಂದಿದ್ದರು. ಆದರೆ ನನಗೆ ಅವರು ತಿಳಿದಿರಲಿಲ್ಲ. ಅವರನ್ನು ಸಾಯಿಪ್ರಸಾದ್ ಕರೆ ತಂದು ನನಗೆ ಪರಿಚಯ ಮಾಡಿಸಿದರು. ನನ್ನಷ್ಟೇ ಎತ್ತರ, ಸ್ವಲ್ಪ ಸ್ಥೂಲಕಾಯದ ಹಸನ್ಮುಖಿ ವ್ಯಕ್ತಿಯ ಮುಖಭಾವವೇ ಬಹಳ ಸ್ನೇಹಮಯವಾಗಿತ್ತು. "ನಾನು ರಾಮಾನುಜ, ಸಾಯಿಪ್ರಸಾದ್ ನನ್ನನ್ನು ಈ ಕಾರ್ಯಕ್ರಮಕ್ಕೆ ಕರೆತಂದರು. ನೀವೀಗ ತಾನೇ ಲಂಡನ್‌ನಿಂದ ಬಂದಿದ್ದೀರಿ ಎಂದು ಕೇಳಿದೆ. ಅದೆಷ್ಟು ಚೆನ್ನಾಗಿ ಕನ್ನಡ ಮಾತನಾಡುತ್ತೀರಿ! ಇಷ್ಟು ಚೆನ್ನಾಗಿ ನೀವು ಕಥೆ ಮಾಡಬಹುದೆಂದು ನಾನು ನಿರೀಕ್ಷಿಸಿರಲಿಲ್ಲ..." "ಓ... ರಾಮಾನುಜ ಅವರು ! ಎಚ್.ಎಂ.ಟಿ. ಯಲ್ಲಿರುವವರು...! ನಿಮ್ಮ ಪರಿಚಯವಾದದ್ದು ಸಂತೋಷ. ನಿಮಗೆ ಕಥೆ ಹಿಡಿಸಿತೇ?" ಎಂದೆ ನಾನು. "ಹಿಡಿಸುವುದೇ? ನಮ್ಮನ್ನೆಲ್ಲ ದ್ವಾಪರಯುಗಕ್ಕೆ ಕರೆದೊಯ್ದಿರಿ ನೀವು... ನಾವು ಇಷ್ಟು ಹೊತ್ತೂ ಶ್ರೀಕೃಷ್ಣನ ಜೊತೆಯಲ್ಲೇ ಇದ್ದಂತೆ ಭಾಸವಾಗಿತ್ತು. ನಮಗೆಲ್ಲಾ...! ಹಸ್ತಿನಾಪುರ ದೂರ ಎನ್ನಿಸಲಿಲ್ಲ..." ಎಂದರು ನಗುತ್ತಾ. ನನಗೆ ಏಕೋ ಇವರು ಬಹಳ ದಿನಗಳಿಂದ ನನಗೆ

ಆತ್ಮೀಯರು ಎನ್ನುವ ಭಾವನೆ ಮನಸಿನಲ್ಲಿ! "ನೀವು ಈ ಕಾರ್ಯಕ್ರಮದ ಟೇಪು ಮಾಡಿದ್ದೀರಾ?" ಎಂದರು ಶ್ರೀ ರಾಮಾನುಜ. "ಹೌದು. ಭಾರತೀಯ ವಿದ್ಯಾಭವನ ಟೇಪು ಮಾಡಿಸಿದೆ" ಎಂದೆ. "ಆ ಟೇಪು ಕೊಡಿ ನನಗೆ" ಎಂದರು. ನಾನು ಆ ಟೇಪು ಮಾಡಿದುದನ್ನು ತರಿಸಿಕೊಟ್ಟೆ. ನನಗೆ ವಂದಿಸಿ, ಆ ಟೇಪು ತೆಗೆದುಕೊಂಡು ಶ್ರೀರಾಮಾನುಜರು ಹೊರಟರು. ಎಂಥದೋ ದುಗುಡ, ಆತಂಕ ನಿವಾರಣೆಯಾಗಿ ಹಗುರವಾದಂತೆ ನನಗೆ. ಕಥೆ ಎಲ್ಲರಿಗೂ ಹಿಡಿಸಿದೆ, ಎಲ್ಲರೂ ಕಥೆ ಕೇಳಿ ಸಂತೋಷ ಪಟ್ಟಿದ್ದಾರೆ ಎನ್ನುವ ಅಪರಿಮಿತ ಸಮಾಧಾನ.

ಯಾವುದನ್ನೇ ಆಗಲಿ ವ್ಯವಸ್ಥಿತವಾಗಿ ಓದಿ ಪದವೀಧರ ಎನಿಸಿದವನಿಗೂ, ಎಲ್ಲವನ್ನೂ ತನಗೆ ತಿಳಿದ ರೀತಿಯಲ್ಲಿ ಓದಿಕೊಂಡು ತನ್ನ ಜ್ಞಾನವನ್ನೂ ತಿಳುವಳಿಕೆಯ ಮಟ್ಟವನ್ನೂ ಹೆಚ್ಚಿಸಿಕೊಂಡವನಿಗೂ ಬಹಳ ವ್ಯತ್ಯಾಸ ಇರುತ್ತದೆ. ನಾನು ಆ ರೀತಿಯಲ್ಲಿ ಎರಡನೆಯ ಗುಂಪಿಗೆ ಸೇರಿದವನು! ಆದರೂ ಒಂದನ್ನು ಕೊಡಲಾಗದ ದೇವರು ಮತ್ತೊಂದನ್ನು ಧಾರಾಳವಾಗಿ ಕೊಟ್ಟಿದ್ದ. ನಾನು ಚೆನ್ನಾಗಿ ಉನ್ನತ ಮಟ್ಟದ ವ್ಯಾಸಂಗ ಮಾಡಲು ಅವಕಾಶ ಕೊಡದಿದ್ದರೂ, ಆ ಪುಣ್ಯಾತ್ಮ ನನ್ನದೇ ಆಸಕ್ತಿಯಿಂದ ಓದಿ ತಿಳಿದುಕೊಂಡದ್ದನ್ನು, ಸರಿಯಾಗಿ ಶ್ರೋತೃಗಳಿಗೆ ಹೇಳಿ ತಿಳಿಸುವ ಸಾಮರ್ಥ್ಯ, ಸಾವಿರ ಜನರ ಎದುರಿಗೇ ಆದರೂ ಸರಿ, ವೇದಿಕೆಯ ಮೇಲೆ ನಿಂತು ಮಾತನಾಡಬಲ್ಲೆನೆಂಬ ಆತ್ಮವಿಶ್ವಾಸ-ಧೈರ್ಯ, ಭಾಷಣದಲ್ಲಿ ವಿಷಯದ ಓಘ ತಪ್ಪದಂತೆ ವಹಿಸುವ ಜಾಗರೂಕತೆ ಇವೆಲ್ಲವನ್ನೂ ತುಸು ಧಾರಾಳವಾಗಿಯೇ ನನಗೆ ಕೊಟ್ಟಿದ್ದ! ಹಾಗೆ ತಿಳಿದುಕೊಂಡುದರಲ್ಲಿ ಬಂಕಿಮರು, ಮುನ್ಷಿಜೀಯವರು ಕೃಷ್ಣನ ಪಾತ್ರದ ಪ್ರಾಮುಖ್ಯದ ಬಗೆಗೆ ವಿಶ್ಲೇಷಿಸಿದ್ದುದು ಹೃದಯಕ್ಕೆ ಇಳಿದಿತ್ತು. ಜತೆಗೆ ೨೩ ವರ್ಷಗಳ ಲಂಡನ್‌ನಲ್ಲಿನ ಲೋಕಾನುಭವ, ವಯಸ್ಸಿನ ಹಿರಿತನ-ಇದೆಲ್ಲವೂ ಆ ವಾಚನ-ವ್ಯಾಖ್ಯಾನ ಸಪ್ತಾಹ ಕಾರ್ಯಕ್ರಮ ಯಶಸ್ವಿಯಾಗುವಂತೆ ಮಾಡಿದ್ದವು. ಹಿಂದೆ ನಾನು ಕಥೆ ಮಾಡುತ್ತಿದ್ದಾಗ, ನನ್ನ ಮನೋಭಾವವನ್ನೂ ಶೈಲಿಯನ್ನೂ ಚೆನ್ನಾಗಿ ಅರ್ಥ ಮಾಡಿಕೊಂಡು ಪದ್ಯಗಳನ್ನು ಹಾಡುತ್ತಿದ್ದ ಶ್ರೀ ಕೇಶವಮೂರ್ತಿಯವರೂ ನನ್ನ ಪ್ರವಚನದ ರೀತಿಯನ್ನು ಮರೆತಿರಲಿಲ್ಲ! ಪದ್ಯಗಳನ್ನು ಓದುವಾಗ ಮಧ್ಯೆ ಮಧ್ಯೆ ನಿಲ್ಲಿಸುವುದು, ಒಂದೊಂದೇ ಸಾಲನ್ನು ಹಾಡಿಸುವುದು, ಹಾಗೆ ಹಾಡುವಾಗ ಒಂದೊಂದು ಸಾಲಿಗೂ ಬೇರೆ ಬೇರೆ ರಾಗಗಳನ್ನೇ ಅಳವಡಿಸಿಕೊಂಡು ಹಾಡುವಂತೆ ಹೇಳುವುದು, ಒಂದೊಂದು ಶಬ್ದವನ್ನೇ ರಾಗಕ್ಕೆ ಸೇರಿಸಿಕೊಂಡು ಹಾಡಿಸಿ ಪದ್ಯ ಪೂರ್ತಿ ಮಾಡಿಸುವುದು, ಒಂದೊಂದು ಪದ್ಯದ ಉತ್ತರಾರ್ಧ, ಒಂದೊಂದು ಪದ್ಯದ ಪೂರ್ವಾರ್ಧ ಮಾತ್ರ ಹಾಡುವುದು, ಹಾಗೆ ಹಾಡುವಾಗ ಯಾವ ದೇವತೆಯದಾದರೂ ಸ್ತುತಿಪದ್ಯ ಬೇಕೆಂದಾಗ ಆ ಪ್ರಸಂಗದಿಂದ ಪ್ರಾರಂಭದ ತೋರಣ ನಾಂದಿ ಸ್ತುತಿ ಪದ್ಯಗಳಿಗೆ ಹಾರಿ ಹಿಂದೆ ಬರುವುದು, ಮತ್ತೆ ಕಥಾ ಪ್ರಸಂಗಕ್ಕೆ ಹೋಗುವುದು... ಈ ಸರ್ಕಸ್ಸುಗಳನ್ನೆಲ್ಲಾ ಗಮಕದಲ್ಲಿ ಅತ್ಯಂತ ದಕ್ಷತೆಯಿಂದ, ಬಹಳ ಪ್ರತಿಭೆಯಿಂದ ಮಾಡಿ ಯಶಸ್ವಿಯಾಗಿ ನಿರ್ವಹಿಸಬಲ್ಲ ಶಕ್ತಿ ಇದ್ದುದು, ಅಭ್ಯಾಸವಿದ್ದುದು ಗಮಕ ಕಲೆಯ ಅನುಪಮ ಕಲಾವಿದ ಶ್ರೀ ಕೇಶವಮೂರ್ತಿಯವರಿಗೆ ಮಾತ್ರ! ಹಾಗೆ ಗಮಕದಲ್ಲಿ ಸರ್ಕಸ್ಸು ಮಾಡಿಸಿ ಪ್ರವಚನ ಮಾಡುವ ಶೈಲಿಯನ್ನು ನಾನೂ ರೂಢಿಸಿಕೊಂಡಿದ್ದೆ. ಇದು ನಮ್ಮಿಬ್ಬರನ್ನೂ ಈ ವಾಚನ-ವ್ಯಾಖ್ಯಾನದಲ್ಲಿ 'ಎರಡು ದೇಹ - ಒಂದು ಮನಸ್ಸು' ಎನ್ನುವಷ್ಟು ಬೆಸೆದಿದ್ದಿತು. ಅಷ್ಟು ನಮ್ಮಲ್ಲಿ ಪರಸ್ಪರ ಹೊಂದಾಣಿಕೆ, ಅರ್ಥ ಮಾಡಿಕೊಳ್ಳುವ ಭಾವ! ಅದಕ್ಕೆ ನಮ್ಮ ಕಾರ್ಯಕ್ರಮಗಳು ಎಲ್ಲರಿಗೂ ಪ್ರಿಯ ಎನಿಸುತ್ತಿದ್ದವು!

ನಮ್ಮ ಈ ಕಾರ್ಯಕ್ರಮದ ಟೇಪು ಕೇಳಿದ ಶ್ರೀರಾಮಾನುಜ ಆಗಲೇ ಮತ್ತೆ ನನ್ನನ್ನು ಸಂಪರ್ಕಿಸಿ, "ಮತ್ತೂರರೇ, ನಿಮ್ಮ ಬಳಿ ಒಂದು ಮುಖ್ಯವಾದ ವಿಷಯ ಮಾತನಾಡುವುದಿದೆ, ನೀವು ಬರುತ್ತೀರೋ, ನಾನೇ ಬರಲೋ?" ಎಂದರು. ನಾನು "ಹೇಗಾದರೂ ಸರಿ ಸರ್, ನನಗೇನೂ ತೊಂದರೆ ಇಲ್ಲ, ನೀವೇ ಬಂದರೂ ಸರಿ, ನನ್ನನ್ನು ಬನ್ನಿ ಎಂದರೂ ಸರಿ, ಬರುತ್ತೇನೆ" ಎಂದೆ. "ನಾನೇ ಬರುತ್ತೇನೆ... ಬಂದು ನಿಮ್ಮ ಆಫೀಸಿನಲ್ಲಿ ನಿಮ್ಮನ್ನು ನೋಡುತ್ತೇನೆ" ಎಂದರು. ಹೇಳಿದಂತೆ ಸಮಯಕ್ಕೆ ಬಂದೇ ಬಂದರು ಶ್ರೀ ಎನ್. ರಾಮಾನುಜ ಅವರು!!

"ಮತ್ತೂರರೇ, ಈ ಕುಮಾರವ್ಯಾಸ ಭಾರತದ ಟೇಪು ಕೇಳಿದೆ; ಬಹಳ ಚೆನ್ನಾಗಿದೆ. ಇದನ್ನು ಎಂದರೆ, ಈ ಕಾವ್ಯವನ್ನು ಪೂರ್ತಿಯಾಗಿ ಮಾಡಲು ಸಾಧ್ಯವೇ?"ಎಂದರು. ನನಗೆ ಅವರ ಮಾತು ಅರ್ಥವಾಗಲಿಲ್ಲ. ಅರ್ಥವಾದಷ್ಟು ನಂಬಲಾಗಲಿಲ್ಲ!! ಕುಮಾರವ್ಯಾಸ ಭಾರತ ಪೂರ್ತಿ ಕಾವ್ಯ ? ವಾಚನ-ವ್ಯಾಖ್ಯಾನ ? ಏನು, ಏಕೆ ಎಂದು ಕೇಳದೆ ನಾನು ಕೂಡಲೆ, "ಓಹೋ, ಅದಕ್ಕೇನು? ಧಾರಾಳವಾಗಿ ಮಾಡಬಹುದು!" ಎಂದೆ. ನನಗೇ ಆಶ್ಚರ್ಯ ನಾನೇ 'ಹೂಂ' ಎಂದೆನೇ! ಅದು ನನ್ನ ಸ್ವಭಾವ, ಮೊಂಡು ಸಾಹಸದ ಪ್ರವೃತ್ತಿ. ಸದಾ ನಾವು ಬಾಧಕವನ್ನೇ ಯೋಚಿಸಿದರೆ ಸಾಧಿಸುವುದು ಏನನ್ನು ಎನ್ನುವ ಮನೋಭಾವ! "ಹಾಗಾದರೆ, ನಾನು ಒಂದು ಚೆನ್ನಾಗಿರುವ ಯೋಜನೆಯನ್ನು ಹಾಕಿದ್ದೇನೆ. ನಾನು ನಮ್ಮಲ್ಲಿನ ಹಿರಿಯ ಅಧಿಕಾರಿಗಳಿಗೆಲ್ಲ ಈ ಟೇಪು ಕೊಟ್ಟು ಕೇಳಿಸಿದೆ. ಅವರಿಗೆಲ್ಲ ಈ ಕಾರ್ಯಕ್ರಮ ಬಹಳ ಮೆಚ್ಚುಗೆಯಾಗಿದೆ. ನೀವೂ, ಶ್ರೀ ಕೇಶವಮೂರ್ತಿಯವರೂ ಸೇರಿ ಈ ಮಹಾಭಾರತವನ್ನು ಪೂರ್ತಿಯಾಗಿ ನಡೆಸಿಕೊಡಿ. ಇದನ್ನು ಪೂರ್ತಿ ಕ್ಯಾಸೆಟ್ಟುಗಳಲ್ಲಿ ರೆಕಾರ್ಡು ಮಾಡಿಸೋಣ. ಅದರ ಅಂದಾಜು ಖರ್ಚನ್ನು ನೀವು ವಿಚಾರಿಸಿ ನನಗೆ ಹೇಳಿದರೆ, ನಾನು ಅದಕ್ಕೆ ಎಚ್.ಎಂ.ಟಿ. ಯಿಂದ ಆರ್ಥಿಕ ಸಹಾಯ ದೊರೆಯುವ ಹಾಗೆ ಮಾಡುತ್ತೇನೆ. ಈ ಬಗ್ಗೆ ನಮ್ಮ ಡೈರೆಕ್ಟರುಗಳ ಜತೆ ನಾನು ಮಾತನಾಡಿದ್ದೇನೆ" ಎಂದರು ಶ್ರೀ ಎನ್. ರಾಮಾನುಜ. ನನಗೆ ನಂಬಲೇ ಸಾಧ್ಯವಾಗಲಿಲ್ಲ. ಇದೇನಿದು? ಹಿಂದೆ

ವಾಮನನಾಗಿ ಬಂದು ಆಕಾಶವನ್ನೆಲ್ಲ ವ್ಯಾಪಿಸಿ 'ನಾ ಹೇಗಿದ್ದೇನೆ ನೋಡು!' ಎಂದು ಬಲಿಗೆ ತೋರಿಸಿದಂತೆ, ಆ ಕೃಷ್ಣನೇ ಈಗ ಈ ರಾಮಾನುಜರ ರೂಪದಲ್ಲಿ ಬಂದು "ನನ್ನ ಕಥೆಯನ್ನು ಪೂರ್ತಿಯಾಗಿ ಮಾಡಿದರೆ ಅದರ ಸೊಗಸು-ಸೊಗಡು ಎಲ್ಲರಿಗೂ ತಿಳಿಯುತ್ತದೆ. ಹಾಗೆ ಮಾಡಬೇಕು ನೀನೀಗ!" ಎಂದು ಹೇಳುತ್ತಿರುವನೇ ಎನ್ನಿಸಿತು. ಅವರ ಅದೇ ಹಸನ್ಮುಖ ನನ್ನಲ್ಲಿ ವಿಶ್ವಾಸ ತುಂಬಿ, ಆ ಮಾತುಗಳು ಅನನ್ಯ ಭರವಸೆ ನೀಡಿದವು. ಆಗ ನನ್ನ ಮೈಯಲ್ಲಿ ಮಿಂಚು ಸಂಚರಿಸಿದಂತಾಗಿ, ನಾನು ಭದ್ರವಾಗಿ ಅವರ ಕೈ ಹಿಡಿದುಕೊಂಡು, ಒಮ್ಮೆ ಕಣ್ಣುಮುಚ್ಚಿ 'ಸರಿ'ಎನ್ನುವಂತೆ ಸುಮ್ಮನೆ ತಲೆ ಅಲ್ಲಾಡಿಸಿದೆ. ಮಾತುಗಳು ಆಗಬೇಕಿಲ್ಲ ಎನ್ನಿಸಿದ್ದಿತು ನಮ್ಮಿಬ್ಬರಿಗೂ !! ಹನುಮಂತ ನಗರದಲ್ಲಿರುವ ಅರವಿಂದ ಸ್ಟುಡಿಯೋಗೆ ಹೋದೆ. ಅಲ್ಲಿನ ಯಜಮಾನರು ಶ್ರೀ ಅರವಿಂದರು ನಗೆಮುಖದ ಸಮರ್ಥ ಕೆಲಸಗಾರ. ಅವರ ಪತ್ನಿ ಶ್ರೀಮತಿ ಜಯಶ್ರೀ ಅರವಿಂದ್ ಪ್ರತಿಭಾವಂತ ಸಂಗೀತ ಕಲಾವಿದೆ, ಹಲವು ಚಲನಚಿತ್ರಗಳಿಗೆ, ಕ್ಯಾಸೆಟ್ಟುಗಳಿಗೆ ಸಂಗೀತ ನಿರ್ದೇಶನ ಮಾಡಿ ಸಾಕಷ್ಟು ಹೆಸರುಗಳಿಸಿದ್ದ ಆಕೆ ಪ್ರಖ್ಯಾತ ಕವಿ ಪು.ತಿ.ನ.ರ ಮೊಮ್ಮಗಳು. ಆ ದಂಪತಿಗಳಿಗೆ ನನ್ನನ್ನು ಕಂಡರೆ ಬಹಳ ವಿಶ್ವಾಸ-ಗೌರವ. ನಾನು ಅವರಲ್ಲಿಗೆ ಹೋದಾಗ ಬಹಳ ಆತ್ಮೀಯತೆ ಯಿಂದ ನನ್ನನ್ನು ಬರಮಾಡಿಕೊಂಡ ಆ ದಂಪತಿಗಳಿಗೆ ನಮ್ಮ ಈ 'ಕುಮಾರವ್ಯಾಸ ಭಾರತ'ದ ವಾಚನ-ವ್ಯಾಖ್ಯಾನವನ್ನು ಟೇಪು ಮಾಡಿಸುವ ಬೃಹತ್ ಯೋಜನೆಯ ಬಗ್ಗೆ ಹೇಳಿದೆ. ಅವರು ತಮ್ಮ ಸ್ಟುಡಿಯೋದಲ್ಲಿ ಅದನ್ನು ಚೆನ್ನಾಗಿ ರೆಕಾರ್ಡು ಮಾಡಿಕೊಡುವುದಾಗಿ ಹೇಳಿ, ಈ ಬೃಹತ್ ಯೋಜನೆಯಲ್ಲಿ ತಾವು ಸರ್ವವಿಧದಲ್ಲಿಯೂ ನಮಗೆ ತಮ್ಮ ಸಹಾಯ-ಸಹಕಾರ ಕೊಡುವುದಾಗಿ ಹೇಳಿ ಭರವಸೆ ನೀಡಿದರು. ಒಟ್ಟಾರೆ ಈ ಯೋಜನೆ ಬಹಳ ಚೆನ್ನಾಗಿ ಆಗಬೇಕು. ಇದಕ್ಕಾಗಿ ನಾವೆಲ್ಲ ಒಟ್ಟಿಗೆ ಕೆಲಸ ಮಾಡಿ ಇದನ್ನು ಯಶಸ್ವಿ ಗೊಳಿಸೋಣ ಎಂದು ನಾವೆಲ್ಲ ಆ ದಿನ ಅವರ ಮನೆಯಲ್ಲಿ ಕುಳಿತು ಚರ್ಚಿಸಿ, ತೀರ್ಮಾನಿಸಿದೆವು. ಸುಮಾರು ಲಕ್ಷಗಳ ಬೃಹತ್ ಯೋಜನೆ ಯಾಗಿತ್ತು ಅದು. ಶ್ರೀ ರಾಮಾನುಜರು ನಾನು ಅದರ ಅಂದಾಜು ವೆಚ್ಚ ಹೇಳಿದಾಗಲೂ "ಸರಿ... ಮುಂದುವರೆಯಿರಿ, ಕೆಲಸ ಚೆನ್ನಾಗಿ ಆಗಲಿ ಮತ್ತೂರರೇ!" ಎಂದು ಮನದುಂಬಿ ಶುಭ ಹಾರೈಸಿ ನನ್ನನ್ನು ಕಳುಹಿಸಿಕೊಟ್ಟರು. ಭವನದ ಅಧ್ಯಕ್ಷರಾದ ಶ್ರೀ ಇ.ಎಸ್.ವಿ. ಯವರಿಗೆ ಈ ವಿಷಯ ತಿಳಿದು ಖುಷಿಯೋ ಖುಷಿ! "ದೇವರಿದ್ದಾನೆ ಮಾಡಿ ಮತ್ತೂರ್... ನಡೆಸುತ್ತಾನೆ" ಎಂದು ಪ್ರೋತ್ಸಾಹಿಸಿದ್ದೇ ಅಲ್ಲದೆ, ದಿನವೂ ಕೇಳುತ್ತಿದ್ದರು, "ಮತ್ತೂರ್, ಬರೆದಿರಾ? ಸ್ಕ್ರಿಪ್ಟ್ ತಯಾರು ಮಾಡಿದಿರಾ?" ಎಂದು. "ಸರ್... ಒಪ್ಪಿಕೊಂಡು ಬಿಟ್ಟೆ. ಈಗ ಹೇಗೆ ಮಾಡುವುದೋ ತಿಳಿಯುತ್ತಿಲ್ಲ" ಎಂದೆ ನಾನು. ಅದಕ್ಕೆ ಅವರು "ರೀ... ಲಂಡನ್ ಕೇಂದ್ರವನ್ನೇ ಮಾಡಿದವರಿಗೆ ಇದು ಯಾವ ಮಹಾ...? ಮಾಡಿ ಮಾಡಿ!" ಎನ್ನುವುದೇ?

ವಹಿಸಿಕೊಂಡ ಜವಾಬ್ದಾರಿ ಬಹಳ ದೊಡ್ಡದಾಗಿತ್ತು. ಅದನ್ನು ನಿರ್ವಹಿಸಲು ಸಹಾಯ ಮಾಡುವವರು ಈಗ ಯಾರು? ಎನ್ನುವ ಪ್ರಶ್ನೆ ನನ್ನ ಮುಂದಿತ್ತು. ಸಾಮಾನ್ಯವಾಗಿ ಹೀಗೆ ಸಾಹಿತ್ಯ, ಸಂಗೀತಗಳ ಯಾವುದೇ ಯೋಜನೆಯನ್ನು ನಾನು ಕೈಗೆ ತೆಗೆದುಕೊಂಡಾಗ ನಮ್ಮ ಅಣ್ಣ ಶ್ರೀ ಶಂಕರಮೂರ್ತಿಯವರ ಸಲಹೆ, ಸೂಚನೆಗಳು ನನಗೆ ಅಮೂಲ್ಯವಾಗಿರುತ್ತಿದ್ದವು. ಅಣ್ಣನವರ ಸಂಗೀತಜ್ಞಾನ ಅಸಾಧ್ಯ ವಾಗಿತ್ತು. ಅವರಿಗೆ ಹೊಸ ಪ್ರಯೋಗಗಳನ್ನು ಮಾಡುವುದೆಂದರೆ ಬಹಳ ಇಷ್ಟವೂ ಆಗಿತ್ತು. ಅಲ್ಲಿ ಲಂಡನ್‌ನಲ್ಲಿ ಇಂಗ್ಲಿಷ್ ಮಕ್ಕಳು ಸಂಗೀತ ಕಲಿಯಲು ಭವನಕ್ಕೆ ಬರಲು ಆರಂಭಿಸಿದಾಗ, ಅವರಿಗೆ ತಮ್ಮ ರಾಗವನ್ನನುಸರಿಸಿ ಹಾಡುವುದು ಕಷ್ಟವಾಗುತ್ತಿತ್ತು. ಆಗ ನಾನು ಅಣ್ಣನವರಿಗೆ, ಹೇಗಾದರೂ ನಮ್ಮ ರಾಗಗಳನ್ನು ಪಾಶ್ಚಾತ್ಯ ಸಂಗೀತದ 'ನೋಟ್'(Musical notes)ಗಳಿಗೆ ಅಳವಡಿಸಿಕೊಳ್ಳಲು ಆಗುತ್ತದೆಯೆ ಎಂದು ಕೇಳಿದೆ. ಹಾಗೆ ಸಾಧ್ಯವಾಗುವುದಾದರೆ ಅದನ್ನು ಕ್ಯಾಸೆಟ್‌ನಲ್ಲಿ ರೆಕಾರ್ಡು ಮಾಡಿ ಆದಷ್ಟು ಬೇಗ ಲಂಡನ್‌ಗೆ ಕಳುಹಿಸಿ ಕೊಡಬೇಕೆಂದು ಕೇಳಿದೆ. ಅದಕ್ಕೆ ಅಣ್ಣನವರು ಅದು ಸಾಧ್ಯವೆಂದು ಹೇಳಿ ನನಗೆ, ಕೆಳಗೆ ತಿಳಿಸಿರುವ ಮಾಹಿತಿಯನ್ನುಕೊಟ್ಟರು.

ಕರ್ನಾಟಕ ಸಂಗೀತದ ಘನ ವಿದ್ವಾಂಸರೂ ಕೀರ್ತನೆ ರಚನಕಾರರೂ ಆಗಿದ್ದ ಮುತ್ತುಸ್ವಾಮಿ ದೀಕ್ಷಿತರು ಬನಾರಸಿಗೆ ಹೋಗಿ ಹಿಂದೂಸ್ತಾನಿ ಸಂಗೀತ ಕಲಿತು ಬಂದಾಗ ಮದ್ರಾಸಿನಲ್ಲಿ ಇಂಗ್ಲಿಷರ ಸರ್ಕಾರ ಇದ್ದಿತು. ಆಗ ಅವರ ಅಣ್ಣನವರಾದ ರಾಮಸ್ವಾಮಿ ದೀಕ್ಷಿತರು ತಮ್ಮ ತಮ್ಮನಿಗೆ ಇಂಗ್ಲಿಷ್ ನೋಟ್‌ಗೆ ರಾಗ ಹಾಕಿ ಪ್ರಯೋಗ ಮಾಡು ಎಂದು ಹೇಳಿದರಂತೆ. ಶಂಕರಾಭರಣ ರಾಗ ಹೀಗೆ ಪಾಶ್ಚಾತ್ಯರ ಇಂಗ್ಲಿಷ್ ನೋಟ್‌ಗೆ ಬಹಳ ಚೆನ್ನಾಗಿ ಸರಿ ಹೊಂದುವುದಂತೆ. ಅದಕ್ಕೇ ಅವರು ಸಣ್ಣ ಸಣ್ಣ ಶ್ಲೋಕಗಳನ್ನು ಸಹ ರಾಗಕ್ಕೆ ಅಳವಡಿಸಿ ಆ ರಾಗದಲ್ಲಿ ಶ್ಲೋಕ ಹೇಳಿದರೆ ಅದು ತಾಳಕ್ಕೆ ಸಿಗುವಂತೆ ಮಾಡಿದರು. ಅವರ ಈ ಪ್ರಯೋಗ ಎಲ್ಲರಿಗೂ ಮೆಚ್ಚುಗೆಯಾಯಿತು. ನಮ್ಮ ಅಣ್ಣನವರು ಆ 'ನೋಟ್ಸ್'ನ್ನು ತೆಗೆದುಕೊಂಡು ಕನ್ನಡ, ಸಂಸ್ಕೃತ, ತಮಿಳು, ತೆಲುಗು, ಮಲಯಾಳಿ ಭಾಷೆಗಳಲ್ಲಿ ತಂದರು. ಆ ನೋಟ್‌ಗಳ ಏರಿಳಿತದ ಅರ್ಥವನ್ನು ಬರೆದು ಪುಸ್ತಕದ ರೂಪ ಕೊಟ್ಟರು. ಈ ಶ್ಲೋಕಗಳನ್ನು, ಸಣ್ಣ ಗೀತೆಗಳನ್ನು ಮಕ್ಕಳಿಂದ ಹಾಡಿಸಿ, ಕ್ಯಾಸೆಟ್ ಮಾಡಿ ಲಂಡನ್‌ಗೆ ಕಳುಹಿಸಿಕೊಟ್ಟರು. ಲಂಡನ್‌ನಲ್ಲಿ ಪ್ರೊ. ಜಾನ್‌ಮಾರ್‌ರು ಅದಕ್ಕೊಂದು ಪರಿಚಯವನ್ನು ಕೊಟ್ಟು, ತಾವೇ ಬಿಡುಗಡೆ ಮಾಡಿದರು. ಅವರಿಗೆ ಈ ಕ್ಯಾಸೆಟ್ ಬಹಳ ಇಷ್ಟವಾಯಿತು. ಇದು ಅಲ್ಲಿ ಸಂಗೀತ ಕಲಿಯಲು ಬರುವ ಮಕ್ಕಳು ಸರಿಯಾದ ಸ್ವರಸ್ಥಾನ ಹಿಡಿಯಲು ಬಹಳ ಸಹಾಯಮಾಡಿತು. ಹೀಗೆ ಅಣ್ಣನವರು ನನ್ನ ಕೆಲಸದಲ್ಲಿ ತಮಗಾದ ಸಹಾಯವನ್ನು ತಪ್ಪದೆ ಮಾಡುತ್ತಿದ್ದರು.

ಅಣ್ಣನವರ ವಿಷಯದಲ್ಲಿ ನೆನಪಿಗೆ ಬರುತ್ತಿರುವ ಒಂದು ಪ್ರಸಂಗವನ್ನು ನಿಮಗೆ ಹೇಳಬೇಕಿದೆ. ನಾನು ಮೊದಲಬಾರಿಗೆ ಲಂಡನ್‌ನಿಂದ ಬಂದಾಗ ನಮ್ಮಣ್ಣ ಶ್ರೀ ಶಂಕರಮೂರ್ತಿಯವರಿಗೆ ಒಂದು ಸೇಬು ಕತ್ತರಿಸುವ ಕತ್ತರಿಯನ್ನು ತಂದುಕೊಟ್ಟೆ. ಅದರಲ್ಲಿ ಸೇಬು ಇಟ್ಟು ಅಮುಕಿದರೆ, ಅದು ಕಮಲದ ರೀತಿಯಲ್ಲಿ ಅರಳಿ ನಿಲ್ಲುತ್ತಿತ್ತು. ಅದನ್ನು ನೋಡಿದ ಅಣ್ಣನವರು, "ನೀನೇನೋ ಸೇಬು ಕತ್ತರಿಸುವುದಕ್ಕಾಗಿ ಈ ಕತ್ತರಿ ಕೊಟ್ಟೆ. ಆದರೆ ಕತ್ತರಿಸುವುದಕ್ಕೆ ಸೇಬು ಬೇಕಲ್ಲ...?" ಎಂದರು. ನಾನು ಲಂಡನ್‌ಗೆ ಹೊರಟಾಗಲೂ, ಎಂದರೆ ಎಪ್ಪತ್ತರ ದಶಕದ ಪ್ರಾರಂಭದಲ್ಲೂ ನಮ್ಮ ಸ್ಥಿತಿ ಅಂತಹುದೇನೂ ಉತ್ತಮವಾಗಿರಲಿಲ್ಲ. ಅಣ್ಣನವರ ಧ್ವನಿಯಲ್ಲಿ ಆ ವಿಷಣ್ಣತೆ ಕಾಣುತ್ತಿತ್ತು. ನನಗೇ ತುಂಬ ಬೇಸರವಾಗಿ, "ಅದೇಕೆ ಚಿನ್ನಾ... ಹಾಗೆನ್ನುತ್ತೀ? ಸೇಬೂ ಬರುತ್ತದೆ ಸುಮ್ಮನಿರು" ಎಂದೆ. ಅಂದಿನಿಂದ ನನ್ನ ಕೈಲಾದಷ್ಟು ಸಹಾಯವನ್ನು ನಾನೂ ಮಾಡಲು ನಿರ್ಧರಿಸಿದೆ. ಹೀಗೆ ತೆಗೆದುಕೊಂಡ ವ್ರತವನ್ನು ನನ್ನ ಜೀವವಿರುವ ತನಕವೂ ಉಳಿಸಿ ಕೊಳ್ಳುತ್ತೇನೆ ಎಂದು ಸಂಕಲ್ಪವನ್ನೂ ಮಾಡಿದೆ. ಅದರಂತೆ ನಡೆದುಕೊಳ್ಳಲು ದೇವರು ಇಂದಿಗೂ ನನಗೆ ಸಹಾಯ ಮಾಡುತ್ತಿದ್ದಾನೆ.

ಅಂತೆಯೇ ಅಣ್ಣನವರ ನೆನಪು ಸಹ ನನ್ನನ್ನು ಸದಾ ಸುತ್ತುವರಿದಿರುತ್ತದೆ. ಎರಡು ಬಾರಿ ಸಾವಿನ ದವಡೆಯಿಂದ ನನ್ನನ್ನು ತಪ್ಪಿಸಿದ ನನ್ನ ಅಣ್ಣನವರು ಸಾವಿನ ಅಂಚಿಗೆ ಹೋಗಿ ನನಗಾಗಿ ಕೆಲವು ದಿನಗಳಿಗಾದರೂ ಇರಲು ವಾಪಸಾದರು. ಅಣ್ಣನವರಿಗೆ ಎದೆನೋವು ಬಂದು ಆಸ್ಪತ್ರೆ ಸೇರಿದಾಗ ಅತ್ತಿಗೆಯವರು, ನನಗೆ ವಿಷಯ ತಿಳಿಸಿದರು. ನಾನು ವಿಷಯ ತಿಳಿದು ಕೂಡಲೇ ಹೊರಟುಬಂದೆ. ಓಕ್ಹಾರ್ಡ್ ಆಸ್ಪತ್ರೆಗೆ ಸೇರಿಸಲಾಗಿತ್ತು. ಮೂರ್ನಾಲ್ಕು ದಿನಗಳಿಂದ ಜ್ಞಾನವಿಲ್ಲದಿದ್ದ ಅಣ್ಣನವರು ಅಸಹಾಯಕರಾಗಿ ಮೂಗಿಗೆ ಆಕ್ಸಿಜನ್ ಮಾಸ್ಕ್, ಕೈಯಲ್ಲಿ ಟ್ಯೂಬ್‌ಗಳನ್ನು ಹಾಕಿಸಿಕೊಂಡು ಮಲಗಿದ್ದ ಸ್ಥಿತಿ ನೋಡಿ ನನಗೆ ದುಃಖ ಒತ್ತರಿಸಿ ಬಂತು. ಅಣ್ಣನವರನ್ನು ನೋಡಿಕೊಳ್ಳುತ್ತಿದ್ದ ಡಾ.ಖನೋಲ್‌ಕರ್‌ರನ್ನು ನಾನು, "ಅಣ್ಣ ಹೇಗಿದ್ದಾರೆ ಈಗ?" ಎಂದೆ "ಓ... ನೀವು ಅವರ ತಮ್ಮನೇನೂ? ನೋಡೋಣ, ಏನೂ ಹೇಳಲಾಗದು... ನೀವು ಅವರ ಕಿವಿಯಲ್ಲಿ ಕೂಗಿ. ಅವರು ನಿಮ್ಮನ್ನು ಬಹಳ ನೆನೆಯುವಂತೆ ಕಾಣುತ್ತದೆ" ಎಂದರು. ನಾನು ಅಣ್ಣನವರ ಕಿವಿಯಲ್ಲಿ "ಚಿನ್ನಾ... ಚಿನ್ನಾ..." ಎಂದು ಸ್ವಲ್ಪ ಜೋರಾಗಿಯೇ ಕರೆದೆ. ಅಲ್ಲಿಯವರೆಗೆ, ಚಲನೆಯೇ ಇಲ್ಲದಿದ್ದ ಅಣ್ಣನವರು, "ಹೂಂ... ಹೂಂ..." ಎಂದರು. ನನಗೂ ಬಹಳ ಸಂತೋಷವಾಯಿತು. ಅಣ್ಣಾ ಇದ್ದಾರಲ್ಲಾ, ನಾನು ಬಂದದ್ದು ತಡವಾಗಲಿಲ್ಲ... ಅಣ್ಣನನ್ನು ಹೇಗಾದರೂ ಉಳಿಸಿಕೊಳ್ಳಬೇಕು ಎಂದುಕೊಂಡೆ. ಅವರಿಗೆ ನಿಧಾನವಾಗಿ ಜ್ಞಾನವಾಯಿತು. ಮಾತನ್ನು ಆಡಲೂ ಪ್ರಾರಂಭಿಸಿದರು. ಆದರೆ, ಅವರನ್ನು ಸೂಕ್ಷ್ಮ ಚಿಕಿತ್ಸಾ ವಿಭಾಗದಲ್ಲಿಯೇ ಇಡಲಾಗಿದ್ದಿತು. ನಾನು ಅಲ್ಲಿಯೇ ಇದ್ದು ಅಣ್ಣನವರ ಬೇಕು - ಬೇಡಗಳನ್ನು ಗಮನಿಸಿಕೊಂಡು ನೋಡಿಕೊಳ್ಳುತ್ತಿದ್ದೆ. ಹೀಗೆಯೇ ಹದಿನೈದು ದಿನಗಳು ಕಳೆದವು. ಅಣ್ಣನವರು "ಇಲ್ಲಿ ಇದ್ದದ್ದು ಸಾಕು, ಮನೆಗೆ ಹೋಗೋಣ" ಎನ್ನಲು ಪ್ರಾರಂಭಿಸಿದರು. ನನಗೂ ಕಾರ್ಯಭಾರದ ಹೊರೆ, ಲಂಡನ್‌ಗೆ ಹೊರಡುವಂತೆ ಮಾಡಿತ್ತು. ನಾನು "ಚಿನ್ನಾ, ನನಗೂ ಬಹಳ ಕೆಲಸ ಇದೆ. ನಂದ ಇವಳನ್ನು ಕಳುಹಿಸುತ್ತಿದ್ದಾನೆ. ಇವಳು ಬಂದು ನಿಮ್ಮ ಸೇವೆ ಮಾಡಿ, ಅತ್ತಿಗೆಗೂ ಜೊತೆಯಾಗಿದ್ದು ಇಲ್ಲಿ ನಿಮ್ಮ ಆರೋಗ್ಯ ನೋಡಿಕೊಳ್ಳುತ್ತಾಳೆ" ಎಂದೆ. "ಇಲ್ಲಾ... ಇಲ್ಲಾ... ನೀನು ಹೋಗಬೇಡ, ಇಲ್ಲೇ ಇರು... ಇಲ್ಲೇ ಇರು" ಎಂದು ಹೇಳಿದರು. ಅವರಿಗೆ ನಾನು ಲಂಡನ್‌ಗೆ ಹೋದರೆ ಮತ್ತೆ ಅವರನ್ನು ನೋಡಲು ಬರಲು ಸಾಧ್ಯವಾಗುವುದೋ ಇಲ್ಲವೋ, ಈ ಮಧ್ಯೆ ತನಗೇನಾದರೂ ಆದರೆ ಎನ್ನುವ ಆತಂಕ ಬಹಳ ಇತ್ತು. ಅದಕ್ಕೇ ನಾನು ಅವರಿಗೆ ಧೈರ್ಯ ಹೇಳಿದೆ. "ಇಲ್ಲಾ ಚಿನ್ನಾ... ನೀವು ಈಗ ಹುಷಾರಾಗಿದ್ದೀರಲ್ಲಾ... ನಾನು ಹೋಗಿ ಮುಖ್ಯವಾದ ಕೆಲಸಗಳನ್ನು ಮುಗಿಸಿ ಮತ್ತೆ ಬರುತ್ತೇನೆ. ನೀವು ಯೋಚನೆ ಮಾಡಬೇಡಿ... ಈ ಸೋಮವಾರ ಹೊರಡುತ್ತೇನೆ. ನೀವು ಬೇಡ ಎನ್ನಬೇಡಿ"ಎಂದೆ. ಅದಕ್ಕೆ ಕೂಡಲೇ ಅವರು "ಸೋಮವಾರ ತಾನೇ, ಸೋಮವಾರ ಬರಲಿ ನೋಡೋಣ ಮೊದಲು" ಎಂದು ಹೇಳಿ, ಅಷ್ಟು ಮಾತನಾಡಿದುದೇ ಬಹಳ ಆಯಾಸ ವಾಯಿತೇನೋ ಎನ್ನುವಂತೆ ದೀರ್ಘವಾಗಿ ಉಸಿರೆಳೆದು ಕಣ್ಮುಚ್ಚಿ ಮಲಗಿದರು.

ನಿಜ... ಅವರ ಆತಂಕದಂತೆಯೇ ಆಯಿತು. ನಾನು ಅವರಿದ್ದಾಗಲೇ ಹೊರಡುವ ಸೋಮವಾರ ಬರಲೇ ಇಲ್ಲ... ಭಾನುವಾರ ರಾತ್ರಿಯೇ ಅವರು ನಮ್ಮನ್ನೆಲ್ಲಾ ಅಗಲಿ, ತಮ್ಮ ಇಹಲೋಕ ಯಾತ್ರೆ ಮುಗಿಸಿ ಹೊರಟು ಹೋದರು! ಇವಳಿಗೆ ವಿಷಯ ತಿಳಿಸಿದರೂ, ಸಕಾಲಕ್ಕೆ ವಿಮಾನ ಸಿಕ್ಕದೆ ಇವಳು ಕೂಡಲೇ ಹೊರಟುಬರಲಾಗಲಿಲ್ಲ. ಅವರ ಅಂತಿಮ ದರ್ಶನ ತನಗೆ ಆಗಲಿಲ್ಲ ಎನ್ನುವ ಕೊರಗು ಈಗಲೂ ಇವಳ ಮನಸ್ಸಿನಲ್ಲಿ ಉಳಿದಿದೆ....

ಈ ಸಾವು ಎನ್ನುವುದು ಎಂತಹವರನ್ನೂ ಎದೆಗುಂದಿಸು ವಂತಹುದು.

೧೯೮೪-೮೫. ಲಂಡನ್ನಿಗೆ ಹೋಗಿ ೧೪-೧೫ ವರ್ಷಗಳಾಗಿದ್ದವು. ಸಿಂಧಿ, ಗುಜರಾತಿ, ಬಂಗಾಳಿ, ಮಾರ್ವಾಡಿ, ಪಂಜಾಬಿ, ತಮಿಳು, ಇಂಗ್ಲಿಷ್ ಮಿತ್ರರಾದಷ್ಟು ಸಂಖ್ಯೆಯಲ್ಲಿ ಕನ್ನಡಿಗರು ಆಗಿರಲಿಲ್ಲ. ಕಾರಣ, ಲಂಡನ್ ನಗರದಲ್ಲಿ ನೆಲೆಸಿರುವ ಕನ್ನಡಿಗರ ಸಂಖ್ಯೆ ಕಡಿಮೆ. ಮ್ಯಾಂಚೆಸ್ಟರ್, ಬರ್ಮಿಂಗ್‌ಹ್ಯಾಂ, ಲೆಸ್ಟರ್, ಎಡಿನ್ಬರಾ, ವೇಲ್ಸ್ ಮೊದಲಾದ ಕಡೆ ಸುಮಾರು ೩೦೦-೩೫೦ ಕುಟುಂಬಗಳು ಇದ್ದವು. ಆದರೆ ನಾನು ಅಲ್ಲೆಲ್ಲಾ ಅಷ್ಟಾಗಿ ಓಡಾಡಲು ಅವಕಾಶವಾಗುತ್ತಿರಲಿಲ್ಲ. ಭವನದಲ್ಲಿಯೇ ಕೆಲಸ ಜಾಸ್ತಿ ಇರುತ್ತಿತ್ತು. ಪ್ರಾರಂಭದ ದಿನಗಳಲ್ಲಿ

ನನ್ನಾಕೆ ನಾನು ಇಬ್ಬರೇ. ಅನಂತರ ಮಗಳು-ಅಳಿಯ: ಜಾನಕೀ-ನಂದಕುಮಾರರು ಇದ್ದರು. ಸ್ನೇಹಸಂಪತ್ತು ಸಾಕಷ್ಟು ಇದ್ದರೂ, ಆಳುಕಾಳುಗಳು ಎಂದು ಯಾರೂ ಇರಲಿಲ್ಲ. ಹೀಗಾಗಿ ನಗರದ ಹೊರಗೆ ಹೆಚ್ಚಾಗಿ ಪ್ರವಾಸ ಮಾಡುತ್ತಿರಲಿಲ್ಲ.

ಹೀಗೆ ಇದ್ದಾಗ ಒಂದು ದಿನ ಅರ್ಧರಾತ್ರಿಯ ಸಮಯ. ಕೆಲಸದಲ್ಲಿ ಮಗ್ನನಾಗಿದ್ದೆ. ಟೆಲಿಫೋನ್ ಬಾರಿಸಿತು. ಕನ್ನಡದಲ್ಲಿ ಒಬ್ಬಾಕೆ ಮಾತನಾಡಿದರು. ಧ್ವನಿ ಶೋಕತಪ್ತವಾಗಿದ್ದಿತು. ಅಪರಿಚಿತ ಧ್ವನಿ. ಆದರೂ ಅನೇಕ ವರ್ಷಗಳ ಪರಿಚಯ ಇದ್ದವರಂತೆ ಮಾತನಾಡಿದರು. ಸ್ವಚ್ಛವಾದ ಕನ್ನಡ.

"ನೀವು ಮತ್ತೂರು ಕೃಷ್ಣಮೂರ್ತಿಯವರಲ್ಲವೆ?"

"ಹೌದು..."

"ನಿಮ್ಮಿಂದ ಒಂದು ಉಪಕಾರವಾಗಬೇಕಾಗಿದೆ. ನನ್ನ ಹೆಸರು ಹರಿಣಿ, ನನ್ನ ಹಸ್ಬೆಂಡ್ ರಘುವೀರ್. ಒಂದು ದುರಂತ ಸಂಭವಿಸಿದೆ. ನನ್ನ ಮೈದುನ ಜಯರಾಮ್ ಇದ್ದಕ್ಕಿದ್ದಂತೆ ಕಣ್ಣು ಮುಚ್ಚಿದರು... ಏನು ಮಾಡಬೇಕೆಂದೇ ತೋಚುತ್ತಿಲ್ಲ. ನೀವು ಬಂದು..."

"ಚಿಂತಿಸಬೇಡೀಮ್ಮ ಕೇಳಿ ದುಃಖವಾಗುತ್ತದೆ... ಎಷ್ಟು ವಯಸ್ಸು?"

"ಇಪ್ಪತ್ತೆರಡು ಇಪ್ಪತ್ಮೂರು. ಮದುವೆ ಆಗಿಲ್ಲ. ತುಂಬಾ ಬುದ್ಧಿಶಾಲಿ..." ಮುಂದೆ ಮಾತನಾಡಲು ಆಗಲಿಲ್ಲ.

"ಪ್ಲೀಸ್, ತಡೆದುಕೊಳ್ಳಿ, ತಡೆದುಕೊಳ್ಳುವುದು ಕಷ್ಟ. ಆದರೂ ಹೀಗಾಗುವುದು ನಮ್ಮ ಕೈಯಲ್ಲಿ ಇಲ್ಲ... ಬರುತ್ತೇನೆ. ಈಗಲೇ ಬರಲೆ ?" ಎಂದು ಕೇಳಿದೆ.

"ಬೆಳಗ್ಗೆ ಬೇಗ ಬಂದರೂ ಸಾಕು" ಎಂದರು.

ಬೆಳಗ್ಗೆ ಬೇಗನೆ ಹೋದೆ. ಈ ಸುದ್ದಿ ಕೇಳಿದಾಕ್ಷಣ ಚಿಕ್ಕಂದಿನಲ್ಲಿ ನಡೆದ ಘಟನೆ, ನಮ್ಮ ರಾಮಣ್ಣನ ಅನಿರೀಕ್ಷಿತ ಮರಣದ ನೆನಪಾಯಿತು.

ಬೆಳಕು ಹರಿಯುವ ತನಕ, ಈ ಘಟನೆ ತೆರೆಯಮೇಲೆ ಮೂಡಿದಂತೆ ಆಗಿ ಈ ಅಪರಿಚಿತ ಕುಟುಂಬದಲ್ಲಿ ಜರುಗಿದ ದುರಂತದ ಬಗೆಗೆ ಕೇಳಿ ಕಂಬನಿಗರೆದೆ....

ಅನಂತರ ಅವರ ಮನೆಗೆ ಹೋದೆ. ಬೆಂಗಳೂರಿನ ಕುಟುಂಬ-ತಾಯಿ, ನಾಲ್ವರು ಗಂಡುಮಕ್ಕಳು-ಶ್ರೀನಿವಾಸನ್, ನಾರಾಯಣ, ರಘುವೀರ್, ಜಯರಾಮ್. ಮೊದಲ ಮೂವರೂ ಇಂಜಿನಿಯರ್‌ಗಳು, ದೊಡ್ಡ ಕೆಲಸದಲ್ಲಿ ಇದ್ದರು. ಜಯರಾಮ್ ಸಾಫ್ಟ್‌ವೇರ್ ತಜ್ಞರು. ಬಂಕಿಮಚಂದ್ರರ ಕಾದಂಬರಿಗಳನ್ನು ಕನ್ನಡಿಸಿರುವ ಸುಪ್ರಸಿದ್ಧ ಬಿ. ವೆಂಕಟಾಚಾರ್ಯರ ಕುಟುಂಬದವರು. ಮೂವರು ಮಕ್ಕಳಿಗೂ ಮದುವೆಯಾಗಿ ಮಕ್ಕಳಿದ್ದರು. ನಾಲ್ಕನೆಯವರೇ ಜಯರಾಮ್. ಮಹಾಬುದ್ಧಿಶಾಲಿ. ಮದುವೆ ಆಗಬೇಕಿತ್ತು. ಮೂರನೆಯವರಾದ ರಘುವೀರ್ ಎಂಬುವರ ಮಡದಿ ಹರಿಣಿ ; ಈಕೆಯೇ ಫೋನ್ ಮಾಡಿದ್ದು.

ವೇದವಿಧಿಯಂತೆ ಅಪರಕರ್ಮಗಳು ಆಗಬೇಕು ಎಂದು ಅಪೇಕ್ಷಿಸಿದರು. "ಈ ಅನಿರೀಕ್ಷಿತ ವಿಯೋಗವು ಸಂಭವಿಸಿತು. ಇರುವುದು ವಿದೇಶ. ನಮ್ಮವರು ಎಂಬುವರು ಅತಿವಿರಳ. ಹೇಗೆ ಏನು ಮಾಡುವುದು?" ಎಂದು ತಬ್ಬಿಬ್ಬಾಗುವುದು ಸಹಜ.

ವಿದೇಶದಲ್ಲಿ ಇದ್ದರೂ ನಮ್ಮ ಶಾಸ್ತ್ರ-ಸಂಪ್ರದಾಯಗಳಲ್ಲಿ ಆಸಕ್ತಿ ಇರುವವರೆಂದರೆ ನನಗೆ ಹೆಚ್ಚು ಗೌರವ, ಅಭಿಮಾನ. ದೈವವೇ ಇಂಥ ಸಂದರ್ಭಗಳಲ್ಲಿ ನನ್ನ ಸೇವೆಗೆ ನನಗೆ ಅವಕಾಶ ಮಾಡಿಕೊಡುತ್ತದೆ ಎಂಬುದು ನನ್ನ ಭಾವನೆ, ಅನುಭವಕ್ಕೆ ಬಂದಿರುವ ಸಂಗತಿ.

ಹನ್ನೆರಡು ದಿನಗಳ ವಿಧಿಯನ್ನು ಮಾಡಿಸಿದೆ. ೧೩ನೆಯ ದಿನದ ವೈಕುಂಠ ಸಮಾರಾಧನೆಯನ್ನು ಆಚರಿಸಿದರು. ಮಾಡಬೇಕಾದ ವಿಧಿಯನ್ನು ಶ್ರದ್ಧಾಭಕ್ತಿಯಿಂದ ನೆರವೇರಿಸಿದರು.

ಮೂವರು ಹಿರಿಯ ಸೋದರರು ಕಿರಿಯವನಿಗೆ ಮಾಡಿದ ವಿಧಿ, ಅವರಲ್ಲಿದ್ದ ಭ್ರಾತೃಪ್ರೇಮ, ಅತ್ತಿಗೆಯರಿಗೆ ಮೈದುನನ ಮೇಲೆ ಇದ್ದ ವಾತ್ಸಲ್ಯ, ಎಲ್ಲವನ್ನೂ ಕಣ್ಣಾರೆ ಕಂಡು ನನಗೇ ತಿಳಿಯದೇ ಆನಂದಬಾಷ್ಪಗರೆದೆ !

"ಭ್ರಾತೃಪ್ರೇಮ ಎಂದರೆ ಇದು" ಎಂಬುದನ್ನು ಕಂಡೆ...

ಧರ್ಮಕರ್ಮಸಂಯೋಗ. ಈ ಕುಟುಂಬದೊಂದಿಗೆ ಸ್ನೇಹವು ದಿನೇ ದಿನೇ ವರ್ಧಿಸುತ್ತ ಹೋಯಿತು.

"ಚಿಂತಿಸಬೇಡಿ. ಜಯರಾಮನ ಆತ್ಮವು ನಿಮ್ಮನ್ನು ಅಗಲಿ ಬಹುಕಾಲ ಇರುವುದಿಲ್ಲ. ಬೇಗನೆ ಬರುತ್ತಾನೆ..." ಎಂದು ಸಾಂತ್ವನ ಗೊಳಿಸಿದೆ.

ಆರೆಂಟು ವರ್ಷಗಳಾದವು. ಅಚ್ಚರಿ. ಈ ವಿಯೋಗವಾದಾಗ ಅತ್ತಿಗೆ ಹರಿಣಿಗೆ ಇಬ್ಬರು ಮಕ್ಕಳಿದ್ದರು – ಕೇಶವ, ಶೋಭನಾ. ವರ್ಷೇ, ವರ್ಷೇ, ಮೈದುನನ ಶ್ರಾದ್ಧದ ದಿನ ಹರಿಣಿ-ರಘುವೀರ್ ನಾಕು ಜನಕ್ಕೆ ಊಟ ಹಾಕಿ ದಕ್ಷಿಣೆ-ವಸ್ತ್ರಕೊಡುತ್ತ ಇದ್ದರು. ಆಗಾಗ್ಗೆ ಜಯರಾಮನ ಬುದ್ಧಿಶಕ್ತಿ ಸಾಮರ್ಥ್ಯದ ಬಗೆಗೆ ಮಾತಾಡುತ್ತಿದ್ದರು. ಫೋಟೋಆಲ್ಬಂ ನೋಡುತ್ತ ಇದ್ದರು.

ಇದ್ದಕ್ಕಿದ್ದಂತೆ ಒಂದು ದಿನ ಹರಿಣಿ ಟೆಲಿಫೋನ್ ಮಾಡಿದರು.

"ಮತ್ತೂರ್‌ಜೀ ! ನೀವು ಹೇಳಿದ್ದು ಫಲಿಸುವ ಸೂಚನೆ ಗೋಚರಿಸುತ್ತಿದೆ" ಎಂದರು.

ನನಗೆ ಅರ್ಥವಾಗಲಿಲ್ಲ. "ಏನು ಸಮಾಚಾರ. ನಾ ಏನಂದಿದ್ದೆ?" ಎಂದು ಕೇಳಿದೆ. "ಜಯರಾಮ್ ಬೇಗ ಬರುತ್ತಾನೆ ಎಂದಿದ್ದಿರಿ ಅಲ್ಲವೆ?" ಎಂದು ಕೇಳಿ ತಿಳಿಯಾಗಿ ನಕ್ಕರು.

"ಏನು ಹೇಳುತ್ತೀರಿ ಹರಿಣಿ... ರಘುವೀರ್ ಇದಾರೆಯ?" ಎಂದು ಅಚ್ಚರಿಗೊಂಡು ಕೇಳಿದೆ.

"ನಾಮಕರಣ ಮಾಡಿಸಲು ನೀವೇ ಬರಬೇಕು...."ಎಂದರು.

ಇದಾಗಿ ಐದಾರು ತಿಂಗಳು ಕಳೆಯಿತು.

"ಮತ್ತೂರ್‌ಜೀ, ಹರಿಣಿಗೆ ಗಂಡು ಮಗು... ಮಾಮಿ, ನೀವೂ ಬನ್ನಿ, ಹಾಸ್ಪಿಟಲ್‌ನಿಂದ ನಾಳೆ ಬರುತ್ತಾಳೆ ಹರಿಣಿ" ಎಂದರು ರಘುವೀರ್!!

ಅಣ್ಣನವರ ಮರಣದ ನೆನಪು ಮತ್ತೆ ನನ್ನನ್ನು ಲಂಡನ್ನಿಗೆ ಕರೆದೊಯ್ದಿತ್ತು! ಅಣ್ಣನವರು ತೀರಿಕೊಂಡ ಎರಡು ವರ್ಷಗಳಲ್ಲೇ ನಾನು ನಿವೃತ್ತನಾಗಿ ಭಾರತಕ್ಕೆ ವಾಪಸ್ಸು ಬಂದೆ. ಈಗ ಅಣ್ಣನವರಿಗೆ ಸೇವೆ ಮಾಡುವ ಅದೃಷ್ಟ ನನಗಿಲ್ಲದಿದ್ದರೂ, ನಮ್ಮ ಅತ್ತಿಗೆಗೆ ನನ್ನ ಕೈಲಾದ ಸೇವೆ ಮಾಡುವ ಭಾಗ್ಯವಂತೂ ಇದೆ. ಇಂತಹ ಅಣ್ಣ-ಅತ್ತಿಗೆಯರ ಸ್ಮರಣೆ ಮಾಡಿ, ಕುಮಾರವ್ಯಾಸ ಭಾರತದ ಟೇಪಿನ ಧ್ವನಿಮುದ್ರಣದ ಸಾಹಸಕ್ಕೆ ಹೊರಟಿದ್ದೆ !

'ಕುಮಾರವ್ಯಾಸ ಭಾರತ'ದ ಟೇಪಿನ ಧ್ವನಿಮುದ್ರಣ ಶ್ರೀ ಅರವಿಂದ ಸ್ಟುಡಿಯೋದಲ್ಲಿ ಪ್ರಾರಂಭವಾಗಿಯೇ ಹೋಯಿತು!! ಶ್ರೀ ಕೇಶವಮೂರ್ತಿಗಳು ಸಂಭ್ರಮದಿಂದ ಹೊಸಹಳ್ಳಿಯಿಂದ ಬಂದರು. ರೆಕಾರ್ಡಿಂಗ್ ಎನ್ನುವುದು ಅವರಿಗೆ ಹೊಸದು, ಆದ್ದರಿಂದ ಪ್ರಾರಂಭದಲ್ಲಿ ಕೆಲವು ದಿನಗಳು ಅವರಿಗೆ ಅವರ ಹಾಡುಗಾರಿಕೆಯನ್ನು ಸರಿಹೊಂದಿಸಿಕೊಳ್ಳುವುದು ಸ್ವಲ್ಪ ಕಷ್ಟವಾಯಿತು. ಸಾಲದ್ದಕ್ಕೆ ಅಲ್ಲಿ ಯಾರೂ ಶ್ರೋತೃಗಳೂ ಇರುತ್ತಿರಲಿಲ್ಲ. ನಾನು, ಕೇಶವಮೂರ್ತಿ, ರೆಕಾರ್ಡು ಮಾಡುವ ಹುಡುಗರು, ಅರವಿಂದರು ಇಷ್ಟೇ ಜನ ನಾವು ಸ್ಟುಡಿಯೋದಲ್ಲಿ ಇರುತ್ತಿದ್ದುದು. ಸಾಮಾನ್ಯವಾಗಿ ಹಾಡುವವರಿಗೆ ಪ್ರೇಕ್ಷಕ-ಶ್ರೋತೃಗಳಿಲ್ಲದಿದ್ದರೆ ಹಾಡಲು ಸ್ಫೂರ್ತಿ ಎನಿಸದು! ಅದು ಎಲ್ಲಾ ಕಲಾವಿದರಲ್ಲೂ ಇರುವ ಗುಣ. ಅದು ಕೇಶವ ಮೂರ್ತಿಯವರಲ್ಲೂ ಇದ್ದು ಅವರು ಈ ಹೊಸ ರೀತಿಯ ಹಾಡುಗಾರಿಕೆಗೆ ತಮ್ಮನ್ನು ತಾವು ಹೊಂದಿಸಿಕೊಳ್ಳಬೇಕಿತ್ತು. ಆದರೆ ಅವರು ನಾನು ನಿರೀಕ್ಷಿಸಿದುದಕ್ಕಿಂತಲೂ ಬಹಳ ಬೇಗ ಬದಲಾದ ವಾತಾವರಣಕ್ಕೆ ರೆಕಾರ್ಡಿಂಗ್ ರೀತಿಗೆ ಹೊಂದಿಕೊಂಡು ತಮ್ಮ ಉದ್ದಾಮ ಪಾಂಡಿತ್ಯವನ್ನು ಪ್ರದರ್ಶಿಸಲೂ ಪ್ರಾರಂಭಿಸಿದರು!! ನನಗೆ ಈ ವಿಷಯದಲ್ಲಿ ಅಷ್ಟು ಕಷ್ಟ ಎನಿಸಲಿಲ್ಲ. ಬಿ.ಬಿ.ಸಿ.ಯಲ್ಲಿ ಭಾಷಣಗಳನ್ನು ರೆಕಾರ್ಡು ಮಾಡುವಾಗ ನನಗೆ ಹೀಗೆ ಸ್ಟುಡಿಯೋದಲ್ಲಿ ಕುಳಿತು ಮಾತನಾಡುವುದು ಅಭ್ಯಾಸವಾಗಿತ್ತು. ಸ್ಟುಡಿಯೋದಲ್ಲಿ ನಾಲ್ಕಾರು ಜನ ಮಾತ್ರವೇ ಇದ್ದರೂ, ನಾವು ರೆಕಾರ್ಡು ಮಾಡಿದ್ದು ಪ್ರಪಂಚದಾದ್ಯಂತ ನೋಡುವವರು ಇರುತ್ತಾರೆ ಎನ್ನುವ ಅರಿವು, ಹಾಗೆ ಭಾಷಣ ಮಾಡುವಾಗ ಯಾವ ಭಾವವೂ ತಪ್ಪಿ ಹೋಗದಂತೆ, ಎದುರಿಗೆ ಸಾವಿರಾರು ಮಂದಿ ಕುಳಿತು ಕೇಳುತ್ತಿರುವಂತೆ ಭಾವಿಸಿಯೇ ಮಾತನಾಡುವುದು ನನಗೆ ರೂಢಿಯಾಗಿತ್ತು. ಅಂತೂ ನಾವಿಬ್ಬರೂ ಬಹಳ ಉತ್ಸಾಹದಿಂದ ಕುಮಾರವ್ಯಾಸನ ಕಾವ್ಯದ ಯಾವ ಸ್ವಾರಸ್ಯವೂ ಬಿಟ್ಟು ಹೋಗದಂತೆ ಎಚ್ಚರವಹಿಸಿ, ಸಾಕಷ್ಟು ಸಿದ್ಧತೆ ನಡೆಸಿ ಧ್ವನಿಮುದ್ರಣ ಕಾರ್ಯದಲ್ಲಿ ನಮ್ಮನ್ನು ತೊಡಗಿಸಿಕೊಂಡೆವು. ನಾನು ಹಗಲು-ರಾತ್ರಿ ಎನ್ನದೆ ಪ್ರತಿ ಸನ್ನಿವೇಶಕ್ಕೂ ಸೂಕ್ತವಾದ, ಸಮಂಜಸವಾದ ವಿವರಣೆಗಳನ್ನು ಬರೆದುಕೊಳ್ಳುವುದು, ಅದರ ಪ್ರಕಾರ, ಅದಕ್ಕೆ ಪೂರಕವಾಗಿ ಪದ್ಯಗಳನ್ನು ಆರಿಸಿಕೊಳ್ಳುವುದು, ಶ್ರೀ ಕೇಶವಮೂರ್ತಿಯವರು ಅದಕ್ಕೆ ತಕ್ಕ ರಾಗ ಹಾಕಿ ಹೃದಯಂಗಮ ವಾಗಿ ಹಾಡುವುದು... ಈ ಕೆಲಸ ಬಿಡುವಿಲ್ಲದೆ ಆಗಿ, ವಾರಕ್ಕೆ ಐದು - ಆರು ದಿನಗಳಂತೆ ರೆಕಾರ್ಡಿಂಗ್ ನಡೆದು ಸುಮಾರು ಮೂರು ವರ್ಷ, ಒಂಬತ್ತು ತಿಂಗಳ ಕಾಲ ಅವಿರತವಾಗಿ ಈ ಸ್ಟುಡಿಯೋ ಕಾರ್ಯಕ್ರಮ ನಡೆಯಿತು!! ನಿಜಕ್ಕೂ ಆಗ ದಿನಗಳು ಉರುಳಿದುದೇ ತಿಳಿಯುತ್ತಿರಲಿಲ್ಲ! ಬೆಳಗು ಆದದ್ದೇ ತಿಳಿಯುತ್ತಿದ್ದುದು, ರಾತ್ರಿ ಬಂದದ್ದೇ ತಿಳಿಯುತ್ತಿರಲಿಲ್ಲ! ಭವನದ ಕೆಲಸದ ಜೊತೆ ಜೊತೆಗೆ ಸಾಗುತ್ತಿದ್ದ ಈ ಕೆಲಸ ನನ್ನ ವಯಸ್ಸು, ಶರೀರಕ್ಕಾಗುವ ದಣಿವು ಎಲ್ಲವನ್ನೂ ಮರೆಸಿತ್ತು. ವಿದ್ಯಾಭವನವೂ ಪ್ರವರ್ಧಮಾನಕ್ಕೆ ಬರುತ್ತಿದ್ದ ಕಾಲವಷ್ಟೇ ಅದು. ಅದರಿಂದಾಗಿ ಸಾಕಷ್ಟು ಭವನದ ಕೆಲಸಗಳು ನನಗಾಗಿ ಕಾದಿರುತ್ತಿದ್ದವು. ಬೆಳಗ್ಗೆ ಒಂಬತ್ತರಿಂದ ಮಧ್ಯಾಹ್ನ ಒಂದು-ಎರಡು ಘಂಟೆಯ ತನಕ ರೆಕಾರ್ಡಿಂಗ್ ಮುಗಿಸಿ, ಮನೆಗೆ ಬಂದು ಸೇರಿದುದಷ್ಟನ್ನು ತಿಂದ ಶಾಸ್ತ್ರ ಮಾಡಿ ಅರ್ಧಘಂಟೆ ವಿರಾಮ ತೆಗೆದುಕೊಂಡು ಮೂರರ ವೇಳೆಗೆ ಭವನಕ್ಕೆ ಹೋದರೆ, ಸಂಜೆ ಏಳರ ತನಕ ಅಲ್ಲಿನ ಕೆಲಸ ! ಮತ್ತೆ ಅಲ್ಲಿಂದ ಬಂದು ಮನೆಯಲ್ಲಿ ಕುಳಿತು ಮಾರನೆಯ ದಿನದ ರೆಕಾರ್ಡಿಂಗ್‌ಗೆ ಬರೆದುಕೊಳ್ಳುವುದು... ರಾತ್ರಿ ೧೧ರ ವೇಳೆಗೆ ಶರೀರ "ಇನ್ನು ನಾ ತಾಳಲಾರೆ"ಎಂದೂ ಕೈ "ನಾನಿನ್ನು ಮುಂದಕ್ಕೆ ಬರೆಯಲಾರೆ" ಎಂದೂ ಮುಷ್ಕರ ಹೂಡಿದಾಗಲೇ ದಿಂಬಿಗೆ ತಲೆಯಾನಿಸಿದರೆ ನಿದ್ರಾದೇವಿ ಕ್ಷಣಮಾತ್ರದಲ್ಲಿ ನನ್ನನ್ನು ತನ್ನ ಮಡಿಲಿಗೆ ಹಾಕಿಕೊಳ್ಳುತ್ತಿದ್ದಳು.... ಆ ತಾಯಿಯ ಕರುಣೆಯಿಂದ ದಿನದ ಆಯಾಸವೆಲ್ಲ ಪರಿಹಾರವಾದಂತಾಗಿ, ಬೆಳಗ್ಗೆ ನಾಲ್ಕಕ್ಕೇ ಮತ್ತೆ ಎಚ್ಚರ, ಮತ್ತೆ ಕಾವ್ಯ ಓದಿಕೊಳ್ಳುವುದು, ಪದ್ಯ ಆರಿಸುವುದು, ಸಂದರ್ಭಕ್ಕೆ ತಕ್ಕ ಮಾತುಗಳನ್ನು ಸೇರಿಸಿ ಒಂದೆಡೆ ಇಟ್ಟುಕೊಳ್ಳುವುದು... ಒಂದೇ ಎರಡೇ!! ರೆಕಾರ್ಡಿಂಗ್ ಆಗುವಾಗ ಮಧ್ಯೆ ಎಲ್ಲೂ ತಪ್ಪುವಂತಿಲ್ಲ. ತಪ್ಪಿದರೆ ಮತ್ತೆ ಅದನ್ನು ಅಳಿಸಿ, ಹಿಂದೆ ಹೋಗಬೇಕು, ತಪ್ಪಾದ ಹಿಂದಿನ ಭಾಗದಿಂದಲೇ ಪ್ರಾರಂಭಿಸಬೇಕು. ಹಾಗೆ ತಪ್ಪಾಗಿ ಅಳಿಸುವಾಗ ಟೇಪು ನಷ್ಟ. ಅದರಿಂದ ದುಡ್ಡು ನಷ್ಟ. ಸ್ಟುಡಿಯೋದಲ್ಲಿ ಘಂಟೆಗೆ ಎಷ್ಟು ಎಂದು ನಿಗದಿ ಮಾಡುವ ಹಣದ ಮೊತ್ತ ಏರುತ್ತಿತ್ತು. ಹೀಗಾಗಿ ತಪ್ಪು ಮಾಡುವುದು 'ದುಬಾರಿ'ಯಾಗುತ್ತಿತ್ತು! ಅದಕ್ಕೇ ಸಾಧ್ಯವಾದಷ್ಟೂ ತಪ್ಪಿಲ್ಲದೆ ಮಾಡಬೇಕಾದದ್ದು ಆವಶ್ಯಕವಾಗಿದ್ದಿತು.

ಅಂತೂ ಟೇಪುಗಳ ಧ್ವನಿಮುದ್ರಣ ಮುಗಿಯಿತು. ೬೦ ನಿಮಿಷಗಳ ೨೦೦ ಕ್ಯಾಸೆಟ್ಟುಗಳು-ಸಭಾಪರ್ವದಿಂದ ಮೊದಲಾಗಿ ಶಾಂತಿ ಪರ್ವದ ತನಕ ಎಲ್ಲ ಕಥಾಭಾಗವನ್ನೂ ಒಳಗೊಂಡಿದ್ದಿತು. ಒಂದು ಬೃಹತ್, ಮಹಾಕಾವ್ಯದ ಕ್ಯಾಸೆಟ್ ರೂಪ ಇದೇ ಮೊದಲ ಬಾರಿಗೆ ಮಾರುಕಟ್ಟೆಗೆ

ಬಂದಿತ್ತು. ಇದು ಪ್ರಪ್ರಥಮ ಪ್ರಯೋಗವಾಗಿದ್ದು ಸಾಕಷ್ಟು ಕಾವ್ಯಪ್ರಿಯರ, ಕಥಾಶ್ರವಣ ಪ್ರಿಯರ, ಸಜ್ಜನರ ಕುತೂಹಲ ಕೆರಳಿಸಿತ್ತು. ಈ ಕ್ಯಾಸೆಟ್ಟುಗಳ ಬಿಡುಗಡೆ ಮಾಡಬೇಕೆನ್ನುವ ಉದ್ದೇಶದಿಂದ, ಈ ಸಮಾರಂಭವನ್ನು ಗದುಗಿನ ವೀರನಾರಾಯಣನ ದಿವ್ಯ ಸನ್ನಿಧಿಯಲ್ಲಿ (ಕೋಳಿವಾಡ) ಏರ್ಪಡಿಸಲಾಯಿತು. ಅಲ್ಲಿ ಸುಪ್ರಸಿದ್ಧ ಚಲನಚಿತ್ರ ನಿರ್ದೇಶಕ ಶ್ರೀ ಜಿ.ವಿ. ಅಯ್ಯರ್ ಅವರು, ನಾನು-ಶ್ರೀ ಕೇಶವಮೂರ್ತಿ ಇಬ್ಬರಿಗೂ ವಾಚನಕಾರ-ವ್ಯಾಖ್ಯಾನಕಾರರ ವೇಷ ಹಾಕಿಸಿ ಒಂದು ಧಾರಾವಾಹಿ ಮಾಡುವ ಉದ್ದೇಶದಿಂದ, ಮೊದಲ ಒಂದು ಭಾಗವನ್ನು ಚಿತ್ರಿಸಿಕೊಂಡರು. ಆದರೆ ಅದೇಕೋ ಆರ್ಥಿಕ ಮುಗ್ಗಟ್ಟಿನಿಂದಾಗಿ ಅವರ ಆ ಪ್ರಯತ್ನ ಅಲ್ಲಿಗೇ ನಿಂತಿತು. ಅಂತೂ ಆ ದಿನ ಬಹಳ ಸಂಭ್ರಮದಿಂದ ಎಲ್ಲಾ ಕಾರ್ಯಕ್ರಮಗಳೂ ನಡೆದವು. ಕ್ಯಾಸೆಟ್ಟುಗಳಿದ್ದ ಡಬ್ಬವನ್ನು ಗದುಗಿನ ನಾರಣಪ್ಪನ ಆರಾಧ್ಯದೈವ ವೀರ ನಾರಯಣನ ಪಾದದಲ್ಲಿಟ್ಟು, ಅವನ ಆಶೀರ್ವಾದ ಪಡೆದು ಬಿಡುಗಡೆ ಮಾಡಲಾಯಿತು.

ಈ ಎಲ್ಲರ ಹಾರೈಕೆ ಆಶೀರ್ವಾದಗಳನ್ನು ಪಡೆದ ಈ ಕ್ಯಾಸೆಟ್ಟುಗಳು ನಾವು ಕಥೆ ಮಾಡುವ ಸ್ಥಳಗಳಲ್ಲೆಲ್ಲ ಬಹಳ ಬೇಡಿಕೆ ಇದ್ದುವಾಗಿದ್ದು, ಬೇಗ ಬೇಗನೆ ಸಾಕಷ್ಟು ಮಾರಾಟವೂ ಆದವು. ಇನ್‌ಫೋಸಿಸ್‌ನ ಶ್ರೀ ನಾರಾಯಣಮೂರ್ತಿ ಹಾಗೂ ಸುಧಾಮೂರ್ತಿಯವರು ತುಂಬು ಅಭಿಮಾನದಿಂದ ನಮ್ಮ ಮನೆಗೆ ಬಂದರು. ಸುಮಾರು ನೂರು ಹಳ್ಳಿಗಳಿಗೆ, ಆಯಾ ಹಳ್ಳಿಗಳ ದೇವಸ್ಥಾನಗಳಲ್ಲಿ ಈ ಕ್ಯಾಸೆಟ್ಟುಗಳನ್ನು ಹಾಕಲು ಸಹಾಯವಾಗುವಂತೆ ಒಂದೊಂದು ಟೇಪ್‌ರೆಕಾರ್ಡರ್ ಸಹಿತ ತಾವು ಈ ಕ್ಯಾಸೆಟ್‌ಗಳ ನೂರು ಸೆಟ್ಟನ್ನು ಕೊಂಡು ಕಳುಹಿಸುವುದಾಗಿ ಅವರ ದೊಡ್ಡ ಯೋಜನೆಯನ್ನು ನಮಗೆ ತಿಳಿಸಿದಾಗ ನಮಗಾದ ಸಂತೋಷ ಅಷ್ಟಿಷ್ಟಲ್ಲ! ಅಲ್ಲವೇ ಮತ್ತೆ? ಅದೊಂದು ತಪಸ್ಸಾಗಿತ್ತು. ಶ್ರೀ ಕೇಶವಮೂರ್ತಿಯವರು ಹೆಚ್ಚು ಕಡಿಮೆ ನಾಲ್ಕು ವರ್ಷಗಳ ತನಕ ತಮ್ಮ ಊರು-ಮನೆ ಬಿಟ್ಟು ಈ ಕೆಲಸಕ್ಕಾಗಿಯೇ ಬೆಂಗಳೂರಿನಲ್ಲಿ ವಾಸ್ತವ್ಯ ಹೂಡಿದ್ದರು. ಅವರಿಗೂ ಸಾಕಷ್ಟು ಶ್ರಮವಾಗಿತ್ತು. ನನ್ನ ಕಾರ್ಯಕ್ರಮಗಳ ವಿವರದ ಬಗ್ಗೆ ನಾನು ಈಗಾಗಲೇ ನಿಮಗೆ ಹೇಳಿದ್ದೇನಷ್ಟೆ? ನಾವಿಬ್ಬರೂ ಹೀಗೆ ಅವಿರತವಾಗಿ ಶ್ರಮವಹಿಸಿ ಮಾಡಿದ ಈ ಅಸಾಧ್ಯದ ಕೆಲಸದ ಸಾರ್ಥಕತೆಯನ್ನು ನಾವು ಕಾಣುವುದು ಬೇಡವೇ? ಅದು ಈಗ, ಹೀಗೆ ಸುಧಾಮೂರ್ತಿಯವರ ಯೋಜನೆಯಂತೆ ಹಳ್ಳಿ ಹಳ್ಳಿಗಳಲ್ಲಿ ಅದನ್ನು ಕೇಳಿದಾಗ, ಹಳ್ಳಿಯಲ್ಲಿ ಜನ ಎಲ್ಲರನ್ನೂ ಅದು ಮುಟ್ಟಿದಾಗ ಅದರ ಸಾರ್ಥಕತೆ ಆಗುವುದಿತ್ತು. ಅಂತೂ ಅವರ ಈ ಯೋಜನೆ ನಮ್ಮ ಆಸೆಗೆ ಪೂರಕವಾಗಿದ್ದದು ನಮಗೇ ಹೆಚ್ಚಿನ ಸಮಾಧಾನ ತಂದಿತ್ತು.

ಶ್ರೀ ಎನ್. ರಾಮಾನುಜ ಅವರು, ತಾವು ನುಡಿದು ಮಾತುಕೊಟ್ಟಂತೆ ಈ ಕ್ಯಾಸೆಟ್ಟುಗಳ ಧ್ವನಿಮುದ್ರಣಕ್ಕಾದ ಒಟ್ಟಾರೆ ವೆಚ್ಚವನ್ನು ನಮಗೆ ತಮ್ಮ ಕಂಪನಿಯಾದ ಎಚ್.ಎಂ.ಟಿ.ಯ ವತಿಯಿಂದ ಕೊಡಿಸಿಯೇ ಬಿಟ್ಟರು! ಅವರ ಈ ಮಹಾನ್ ಸಹಾಯಕ್ಕೆ ನಾವು ವಂದಿಸಿದೆವು. ಈಗ ಅವರ ಆಪ್ತಗೆಳೆಯರ ಬಳಗದಲ್ಲಿ ನಾವೂ ಸೇರಿದುದಕ್ಕೆ ನಮಗೆ ಹೆಮ್ಮೆ ಎನಿಸಿತು.

ಇ.ಎಸ್. ವೆಂಕಟರಾಮಯ್ಯ

ಹೀಗೆ ಕ್ಯಾಸೆಟ್ಟುಗಳ ರೆಕಾರ್ಡಿಂಗ್ ನಡೆಯುತ್ತಿರವಾಗಲೇ ನಮ್ಮ ಇತಿಹಾಸ ಸಂಪುಟಗಳ, ಗಾಂಧೀ ಸಂಪುಟಗಳ ಅನುವಾದ ಕಾರ್ಯವೂ ಪೂರ್ಣ ಪ್ರಮಾಣದಲ್ಲಿ ಪ್ರಾರಂಭವಾಯಿತು. ನಮ್ಮ ಅಧ್ಯಕ್ಷರಾಗಿದ್ದ ಶ್ರೀ ಇ.ಎಸ್.ವಿ. ಯವರು ನಮ್ಮ ಈ ಚಟುವಟಿಕೆಗಳನ್ನು ಬಹಳ ಪ್ರೋತ್ಸಾಹಿಸಿದರು. ಲಂಡನ್‌ನಲ್ಲಿದ್ದಾಗ ಲಾರ್ಡ್ ಜೇಮ್ಸ್ ಕಲಹನರು ನಮಗೆ ಗಾಂಧೀಜಿಯ ೧೦೦ ಸಂಪುಟಗಳನ್ನೂ ಭವನಕ್ಕಾಗಿ ಕೊಟ್ಟಿದ್ದರು. ಅದನ್ನು ಓದಿದಾಗಲೇ, ಅದನ್ನು ಹೇಗಾದರೂ ಕನ್ನಡಕ್ಕೆ ತರಬೇಕು ಎನ್ನುವ ಚಡಪಡಿಕೆ ನನಗೆ ಪ್ರಾರಂಭವಾಗಿತ್ತು. ಅಂತೂ ಆ ಆಸೆಯೂ ಕೈಗೂಡಿತ್ತು. ಈ ಯೋಜನೆಯೂ ಸಾಕಷ್ಟು ದೊಡ್ಡ ಪ್ರಮಾಣದ್ದೇ ಆಗಿದ್ದು, ಭವನಕ್ಕೆ ಅನುವಾದ ಕಾರ್ಯಕ್ಕಾಗುವ ವೆಚ್ಚವನ್ನು ಭರಿಸಲು ಕಷ್ಟ ಎನ್ನುವ ಪರಿಸ್ಥಿತಿ ಇದ್ದಾಗ, ನಾವು ಮಾಜಿ ಪ್ರಧಾನಿಗಳಾದ ಶ್ರೀ ದೇವೇಗೌಡರನ್ನು ಕೇಳಿದಾಗ ಅವರು ''ಇಂತಹ ಪುಣ್ಯದ ಕೆಲಸಕ್ಕೆ ತಾನೆ ಸರ್ಕಾರದ ಹಣ ವಿನಿಯೋಗವಾಗಬೇಕು. ನಮ್ಮ ಜನ ಗಾಂಧೀಜಿಯ ವಿಚಾರಧಾರೆಯನ್ನು ಕನ್ನಡದಲ್ಲಿ ಓದುವಂತಾದರೆ ಅದೇ ಒಂದು ಮಹತ್ಸಾಧನೆ. ಖಂಡಿತ ಈ ಕೆಲಸ ಮಧ್ಯೆ ಕೈ ಬಿಡದೆ ಮುಂದುವರೆಸಿ'' ಎಂದು ಹೇಳಿ, ''ನಾನು ನಿಮಗೆ ಸರ್ಕಾರದ ವತಿಯಿಂದ ಸಹಾಯ ಮಾಡಿಸುತ್ತೇನೆ'' ಎಂದರು. ಅಂತೆಯೇ ಸರ್ಕಾರದಿಂದ ಈ ಕೆಲಸಕ್ಕೆ ಸಾಕಷ್ಟು ಪ್ರಮಾಣದಲ್ಲಿ ಅನುದಾನವನ್ನು ಕೊಡಿಸಿದರು. ಆ ಕೆಲಸವೂ ಭರದಿಂದ ಪ್ರಾರಂಭವಾಗಿಯೇ ಹೋಯಿತು.

ಕ್ಯಾಸೆಟ್ಟುಗಳ ಧ್ವನಿಮುದ್ರಣ ನಡೆಯುತ್ತಿತ್ತು. ಆಗ ಶ್ರೀ ಇ.ಎಸ್.ವಿ.ಯವರಿಗೆ ಹುಷಾರು ತಪ್ಪಿತು. ನಮ್ಮ ಕಾರ್ಯಕ್ರಮದ ಪ್ರಕಾರ ಅವರು ಇಂಗ್ಲೆಂಡಿಗೆ ಬರಬೇಕಾಗಿತ್ತು. ಅವರಿಗಿಂತಲೂ ನಾನು ಮುಂಚೆ ಲಂಡನ್‌ಗೆ ಹೋಗಿ ಅವರನ್ನು ಅಲ್ಲಿ ಸ್ವಾಗತಿಸುವುದು ಎಂದು ತೀರ್ಮಾನವಾಗಿತ್ತು. ಆಗ ನಾನು ನಮ್ಮ ಯೋಜನೆಯಂತೆಯೇ ಮುಂಚಿತವಾಗಿ ಲಂಡನ್‌ಗೆ ಹೊರಟುಹೋದೆ. ಇವರು (ಶ್ರೀ ಇ.ಎಸ್.ವಿ.) ಅಲ್ಲಿಗೆ ಬರುವ ದಿನವನ್ನು ಎದುರು ನೋಡುತ್ತಿದ್ದೆ. ಇಲ್ಲಿ ಭಾರತದಲ್ಲಿದ್ದ ಶ್ರೀ ಇ.ಎಸ್.ವಿ. ಯವರು ಯಾವುದೋ ಭಾಷಣ ಮಾಡುತ್ತಿದ್ದಾಗ ಲಘು ಹೃದಯಾಘಾತವಾಗಿ, ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ನನಗೆ ತಕ್ಷಣವೇ ಶ್ರೀ ಇ.ಎಸ್.ವಿ.ಯವರ ಅನಾರೋಗ್ಯದ ಸುದ್ದಿ ತಿಳಿಯಿತು. ನನಗೆ ಎರಡು ದಿನ ಬಿಟ್ಟು ಟಿಕೆಟ್ಟು ಮುಂಗಡವಾಗಿ ಕಾದಿಡಲಾಗಿತ್ತು. ಆ ದಿನ ರಾತ್ರಿ ಶ್ರೀ ಇ.ಎಸ್.ವಿ. ಯವರೇ ನನ್ನ ಕನಸಿನಲ್ಲಿ ಬಂದು, ''ಮತ್ತೂರ್, ನಾಡಿದ್ದು ಏಕೆ?

ಎಷ್ಟು ಬೇಗ ಸಾಧ್ಯವಾದರೆ ಅಷ್ಟು ಬೇಗ ಬರಬಾರದೆ?'' ಎಂದಂತಾಯಿತು. ನನಗೆ ಗರ ಬಡಿದು ಹೋಯಿತು. 'ಭಗವಂತಾ, ಇದು ಯಾವುದರ ಮುನ್ಸೂಚನೆ ?' ತಿಳಿಯದೆ ಒದ್ದಾಡಿದೆ. ರಾತ್ರಿ ಎಲ್ಲ ಹೊರಳಾಡಿದೆ. ಸಾಮಾನ್ಯವಾಗಿ ಕನಸಾಗದು, ಹಾಗೆ ಕನಸಾದಾಗ ನಾನು ಅದನ್ನು ಸಾಕಷ್ಟು ಗಂಭೀರವಾಗಿಯೇ ತೆಗೆದುಕೊಳ್ಳುತ್ತೇನೆ. ಅದಕ್ಕೆ ``ಏನಾದರೂ ಸರಿ, ಮಾರನೆಯ ದಿನವೇ ಭಾರತಕ್ಕೆ ವಾಪಸಾಗುವುದು ಸರಿ, ಮುಂದಿನದು ಹೇಗೋ ಏನೋ?'' ಎನಿಸಿ ೧೬ ರಂದು ಹೊರಟಿದ್ದ ನಾನು ೧೪ರ ಬೆಳಗ್ಗೆಯೇ ನಮ್ಮ ಭವನದ ಕಮಿಟಿ ಸದಸ್ಯರಾದ ಜೋಗಿಂದರ್ ಸ್ಯಾಂಗರ್ ಅವರಿಗೆ ಫೋನು ಮಾಡಿದೆ. ಅವರು ಏರ್‌ಇಂಡಿಯಾದ ಸೋಲ್ ಏಜೆಂಟ್. ೮.೪೫ಕ್ಕೆ ಒಂದು ವಿಮಾನವಿತ್ತು. ನಾನು ೭.೩೦ಕ್ಕೆ ಏರ್‌ಪೋರ್ಟಿನಲ್ಲಿ ಇರಬೇಕಿತ್ತು. ``ಸ್ಯಾಂಗರ್, ನಾನು ನಾಳೆ ಹೊರಡುವುದಿತ್ತು. ಆದರೆ ಈ ದಿನವೇ ನಾನು ತುರ್ತಾಗಿ ಹೋಗಬೇಕಿದೆ. ಹೇಗಾದರೂ ಮಾಡಿ ನನಗೆ ಈ ದಿನದ ಫ್ಲೈಟ್‌ಗೆ ಟಿಕೆಟ್ ಮಾಡಿಸಲಾಗುತ್ತದೆಯೇ?'' ಎಂದೆ. ನನ್ನ ಧ್ವನಿಯಲ್ಲಿದ್ದ ಆತಂಕ ಅವರಿಗೆ ನಾನು ತುರ್ತಾಗಿ ಹೋಗಬೇಕು ಎನ್ನುತ್ತಿರುವುದರ ತೀವ್ರತೆಯನ್ನು ಅರ್ಥಮಾಡಿಸಿತ್ತು. ``ಏನಾದರೂ ಗಂಭೀರ ವಿಷಯವೇ ಮಿ. ಮಾಥೂರ್‌ಜೀ?'' ಎಂದ ಅವರು ನನ್ನ ಉತ್ತರಕ್ಕೆ ಕಾಯದೆ, ``ನಿಮಗೆ ಟಿಕೆಟ್ ತಯಾರು ಇರುತ್ತದೆ. ನೀವು ಕೂಡಲೆ ಏರ್‌ಪೋರ್ಟಿಗೆ ಹೊರಟು ಬನ್ನಿ'' ಎಂದರು. ಅವರಿಗೆ ವಂದಿಸಿ ನಾನು ತಡಮಾಡದೆ ಹೊರಟೆ... ಆ ವಿಮಾನದಲ್ಲಿ ಭಾರತಕ್ಕೆ ವಾಪಸಾದೆ. ಏರ್‌ಪೋರ್ಟಿನಿಂದ ನೇರವಾಗಿ ಅವರ ಮನೆಗೆ (ಶ್ರೀ ಇ.ಎಸ್.ವಿ.) ಹೋದೆ. ಅವರು ಬಹಳ ಸುಸ್ತಾಗಿದ್ದರು. ಜೀವಕ್ಕೆ ಅಪಾಯವಿದೆ ಎಂದು ಡಾಕ್ಟರರು ಹೇಳಿದ್ದರು. ಅಷ್ಟಾಗಿಯೂ ನನ್ನನ್ನು ನೋಡಿ ನಸುನಕ್ಕ ಶ್ರೀ ಇ.ಎಸ್.ವಿ. ಎಂಥದೋ ಯೋಚನೆ ಎನ್ನುವಂತೆ ದೀರ್ಘವಾಗಿ ಉಸಿರೆಳೆದು ಕಣ್ಣುಗಳನ್ನು ಮುಚ್ಚಿಕೊಂಡು ನಿದ್ರಿಸಿದರು. ನನಗೆ ಅವರನ್ನು ಆ ಸ್ಥಿತಿಯಲ್ಲಿ ನೋಡಿ ಬಹಳ ಸಂಕಟವಾಯಿತು... ಎಷ್ಟು ಉತ್ಸಾಹ ಅವರಲ್ಲಿ? ನಾನು ಮಾಡುವ ಪ್ರತಿಯೊಂದು ಕೆಲಸದ ಬಗೆಗೂ ಅದೆಷ್ಟು ಪ್ರೀತಿ, ಅಂತೆಯೇ ಪ್ರೋತ್ಸಾಹ, ಬೆಂಬಲ? ``ನಿಮಗೇನು? ಎಲ್ಲ ಸಾಧ್ಯವಾಗುತ್ತದೆ ಮಾಡಿರಿ ಮತ್ತೂರ್, ಯೋಚಿಸ ಬೇಡಿ...'' ಎನ್ನುವ ಅವರ ಮಾತುಗಳು, ಆ ನಗು ನನ್ನಲ್ಲಿ ಅಸೀಮ ಬಲವನ್ನೂ ಅದಮ್ಯ ವಿಶ್ವಾಸವನ್ನೂ ತುಂಬುತ್ತಿತ್ತು... ನಿಜ... ಇದೇ ರೀತಿ, ಇದಕ್ಕಿಂತಲೂ ಹೆಚ್ಚಿಗೆ ಶ್ರಮವಹಿಸಿ ನಾನು ಲಂಡನ್‌ನಲ್ಲಿ ಕೆಲಸ ಮಾಡಿದ್ದೆ. ಆಗ ವಯಸ್ಸು ಚಿಕ್ಕದು, ಪರದೇಶದಲ್ಲಿ ನಮ್ಮ ದೇಶದ ಸಂಸ್ಕೃತಿಯ ವೈಭವದ ಕೀರ್ತಿಪತಾಕೆಯನ್ನು ಹಾರಿಸಬೇಕೆಂಬ ಉತ್ಸಾಹ ನನ್ನನ್ನು ಆ ರೀತಿ ಕೆಲಸ ಮಾಡುವಂತೆ ಪ್ರೇರೇಪಿಸಿತ್ತು. ಆದರೆ ಈಗ...? ಈಗ ನಾನೂ ೬೫-೬೬ರ ಹರೆಯದವನಾಗಿದ್ದೆ. ಮೊದಲಿನಷ್ಟು ಕೆಲಸ ಮಾಡಲಾಗದೇನೋ ಎನ್ನುವ ಅಳುಕು, ಜತೆಗೆ ನಾ ಬರೆಯುವುದು- ಓದುವುದು ನನಗೆ ಬಹಳ ಇಷ್ಟವಾಗಿದ್ದುದರಿಂದ ಅದೂ ನಡೆಯ ಬೇಕಿತ್ತು. ಭವನದ ಕೆಲಸ ಸಾಮಾನ್ಯದ್ದಾಗಿರಲಿಲ್ಲ. ಅಧ್ಯಕ್ಷ ಪದವಿಯಲ್ಲಿದ್ದವರು ಕಾರ್ಯನಿರ್ವಾಹಕ ನಿರ್ದೇಶಕರಿಗೆ ಸ್ಫೂರ್ತಿಯ ಚಿಲುಮೆಯಂತಿರಬೇಕು.

ನನ್ನ ಕೆಲಸವೂ ಹಾಗೆಯೇ ಇದ್ದಿತು. ಅಲ್ಲಿ ಲಂಡನ್‌ನಲ್ಲಿ ದಲಾಲ್‌ಜೀಗೆ ಜೊತೆಯಾಗಿ ಕೆಲಸ ಮಾಡಿದುದು, ನನ್ನಲ್ಲಿ ಅಧ್ಯಕ್ಷರು ಎಂದರೆ ಹೇಗಿರಬೇಕು ಎನ್ನುವುದರ ಸ್ಪಷ್ಟ ಚಿತ್ರ ಮೂಡಿಸಿಬಿಟ್ಟಿತ್ತು. ಆ ಚಿತ್ರಕ್ಕೆ ತದ್ವತ್ತಾಗಿ ಇದ್ದವರು ಶ್ರೀ ಇ.ಎಸ್.ವಿ. ಯವರು. ಈಗ ನನಗೆ ಶ್ರೀ ಇ.ಎಸ್.ವಿ. ಯವರು ಹಾಸಿಗೆಯಲ್ಲಿ ಅಸಹಾಯಕರಾಗಿ ಮಲಗಿದ್ದುದು ನೋಡಿ ಕರುಳು ಚುರ್ರೆಂದಿತು. ಹೃದಯ ಹಿಂಡಿತು. 'ನನ್ನ ಸ್ಫೂರ್ತಿಯ ಚಿಲುಮೆ ಬತ್ತಿ ಹೋಗುತ್ತಿರುವುದೇ' ಎನಿಸಿ ಭೀತಿ ಮೂಡಿತು.

ಎಷ್ಟು ದಿನಗಳ ಸ್ನೇಹ, ವಿಶ್ವಾಸ, ಪ್ರೀತಿ ನನ್ನದು- ಶ್ರೀ ಇ.ಎಸ್.ವಿ. ಯವರದು!! ಅವರಿಲ್ಲದೆ ಮುಂದೆ ಹೇಗೆ? ಪ್ರಶ್ನೆ ಭೂತಾಕಾರವಾಗಿ ಬೆಳೆದು ನಿಂತಿತ್ತು. ನನಗೆ ಅವರ ಆರೋಗ್ಯ ಇಷ್ಟು ಇಳಿಮುಖ ವಾಗಿರುವುದರ ಕಲ್ಪನೆ ಇರಲಿಲ್ಲ. ಈಗ ಏಕೋ ಆಸೆ ಬಿಡಬೇಕಾಗುವು ದೇನೋ ಎನ್ನುವ ಅನುಮಾನ ಬಂದಿತು... ಏನು ಮಾಡುವುದು?

ಶ್ರೀ ಇ.ಎಸ್.ವಿ. ಯವರು ತಮಗೆ ಹುಷಾರಿಲ್ಲದ ಆ ಪರಿಸ್ಥಿತಿಯಲ್ಲಿಯೂ ತಮ್ಮ ಜವಾಬ್ದಾರಿಯನ್ನು ಮರೆಯದೆ, 'ನನಗೆ ಆರೋಗ್ಯ ಸರಿ ಇಲ್ಲದಿರುವುದರಿಂದ ಶ್ರೀ ಎನ್. ರಾಮಾನುಜರು ಹಂಗಾಮಿ ಅಧ್ಯಕ್ಷರಾಗಿ ಭವನದ ಕೆಲಸ ಕಾರ್ಯಗಳನ್ನು ನೋಡಿ ಕೊಳ್ಳುತ್ತಿರಲಿ' ಎಂದು ಹೇಳಿ ಶ್ರೀ ಎನ್. ರಾಮಾನುಜರಿಗೆ ಅರ್ಧ ಜವಾಬ್ದಾರಿ ವಹಿಸಿದ್ದರು. ತಮಗೆ ಆರೋಗ್ಯ ಸರಿ ಇಲ್ಲದಿದ್ದಾಗ್ಯೂ ಭವನದ ಕೆಲಸದ ಬಗೆಗಿದ್ದ ಅವರ ಕಾಳಜಿ, ಆ ದೂರದೃಷ್ಟಿ, ಆ ಹಿರಿತನ, ಸ್ವಭಾವತಃ ಬಂದ ಹೃದಯವೈಶಾಲ್ಯ ಅಧ್ಯಕ್ಷ ಪದವಿಗೆ ಅರ್ಹರೊಬ್ಬರನ್ನು ಅವರೇ ಆಯ್ಕೆ ಮಾಡಿದಂತಿತ್ತು. ಅಲ್ಲವೇ? ಎಂಥ ಮಹಾನ್ ವ್ಯಕ್ತಿತ್ವದ ಸ್ನೇಹಪರರು ಅವರು! ಅವರಿಂದಲ್ಲದೆ ಇಂತಹ ಕೆಲಸ ಸಾಮಾನ್ಯರಿಂದ ಸಾಧ್ಯವಿತ್ತೆ? ತಾವು ಹಾಸಿಗೆಯನ್ನು ಹಿಡಿದು ಆಸ್ಪತ್ರೆಯಲ್ಲಿ ಕೊನೆಯುಸಿರನ್ನೇ ಎಳೆಯುತ್ತಿರಲಿ ತಾವು ನಿಧನರಾಗದ ಹೊರತು ಅಧಿಕಾರ ಬಿಟ್ಟು ಕೊಡದ ಎಷ್ಟು ಮಂದಿಯನ್ನು ನಾವು ನೋಡಿಲ್ಲ? ಅಂಥವರಲ್ಲಿ ಶ್ರೀ ಇ.ಎಸ್.ವಿ.ಯವರ ಈ ದೂರದೃಷ್ಟಿಯನ್ನು ಮೆಚ್ಚದೆ ಇರಲಾಗಲಿಲ್ಲ! ಕುಮಾರವ್ಯಾಸ ಭಾರತ ಕ್ಯಾಸೆಟ್‌ನ ಯೋಜನೆಯಾದ ಮೇಲೆ ಸ್ವತಃ ಶ್ರೀ ಇ.ಎಸ್.ವಿ.ಯವರೇ ಶ್ರೀ ಎನ್.ರಾಮಾನುಜರನ್ನು ಕಮಿಟಿಗೆ ಆಹ್ವಾನಿಸಿದ್ದರು. ಅವರು ಆಹ್ವಾನಿಸಿದ್ದಕ್ಕೆ ತಕ್ಕಂತೆ ಶ್ರೀ ಎನ್. ರಾಮಾನುಜರು ಸಹ ವಿದ್ಯಾಭವನದ ಚಟುವಟಿಕೆಗಳಲ್ಲಿ ಭಾಗವಹಿಸಿದರು. ಹೀಗೇ ಕೆಲವು

ದಿನಗಳು ಕಳೆಯುವುದರಲ್ಲಿ ಶ್ರೀ ಇ.ಎಸ್.ವಿ.ಯವರು ಬಹಳ ಆರೋಗ್ಯ ತಪ್ಪಿ ಮಲಗಿದರು. ಮುಂದಿನ ಸ್ವಲ್ಪ ದಿನಗಳಲ್ಲೇ ಅವರು ನಮ್ಮೆಲ್ಲರನ್ನೆಲ್ಲ ಅಗಲಿ ಆ ದೇವರನ್ನು ಸೇರಿದರು. ಅವರು ಕಣ್ಮರೆಯಾದರೂ, ಅವರ ಚೇತನ ಇಂದು ಭಾರತೀಯ ವಿದ್ಯಾ ಭವನದ ಬೆಂಗಳೂರು ಕೇಂದ್ರದ ಉನ್ನತಿಯನ್ನು ನೋಡಿ ಸಂತೋಷಿಸುತ್ತಿದೆ ಎಂದೇ ನನ್ನ ನಂಬಿಕೆ! ಶ್ರೀ ಇ.ಎಸ್.ವಿ. ಯವರ ಗಂಭೀರ ಸ್ವಭಾವ, ಮೃದುಮಾತು, ಮಂದಸ್ಮಿತ, ಉತ್ಸಾಹ, ನನಗೆ ಎಂದಿಗೂ ಮರೆಯದು! ಆ ಹಿರಿಯ ಚೇತನಕ್ಕೆ ನನ್ನ ನಮ್ರ ನಮನ!!

ನೂತನ ಅಧ್ಯಕ್ಷ ಶ್ರೀ ಎನ್. ರಾಮಾನುಜ

ಅನಂತರ ಶ್ರೀ ಎನ್. ರಾಮಾನುಜರು ಭಾರತೀಯ ವಿದ್ಯಾಭವನದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು. ಶ್ರೀ ಎನ್.ರಾಮಾನುಜರು ನಿಜಕ್ಕೂ ಶ್ರೀ ಇ.ಎಸ್.ವಿ.ಯವರ ಸ್ಥಾನವನ್ನು ತುಂಬಬಲ್ಲ ಸಮರ್ಥರಾಗಿದ್ದವರು. ಆ ಪದವಿಗೆ ಬಹಳ ಅರ್ಹರಾಗಿದ್ದವರು. ಶ್ರೀ ಇ.ಎಸ್.ವಿ. ಯವರೇ ಪ್ರೀತಿಯಿಂದ ಆರಿಸಿದ ಅವರ ಉತ್ತರಾಧಿಕಾರಿ ಶ್ರೀ ಎನ್. ರಾಮಾನುಜ. ಭಾರತೀಯ ವಿದ್ಯಾಭವನಕ್ಕೆ ಶ್ರೀ ರಾಮಾನುಜರ ಸೇವೆ ಸಿಕ್ಕಿರುವುದು ಸಹ ಭವನದ ಅದೃಷ್ಟ ಎಂದೇ ನನ್ನ ಭಾವನೆ. ಅವರಿಗೆ ಚೆನ್ನಾಗಿ ಆಡಳಿತ ಗೊತ್ತಿತ್ತು. ಅವರೇ ಸ್ವತಃ ಎಚ್.ಎಂ.ಟಿ.ಯ ಅಧ್ಯಕ್ಷ ಪದವಿಯನ್ನೂ ಸಹ ಅಲಂಕರಿಸಿ, ದಕ್ಷತೆಯಿಂದ ಅಲ್ಲಿನ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಸಾಹಿತ್ಯಾಸಕ್ತರು, ಉತ್ಸಾಹಶಾಲಿಗಳು, ಸ್ವತಃ ತಾವೇ ಪ್ರೀತಿಯಿಂದ ಬರೆಯುವ ಬರಹಗಾರರು. ಸ್ವಭಾವತಃ ಬಹಳ ಒಳ್ಳೆಯ ವ್ಯಕ್ತಿ. ವಿನಯ, ಸ್ನೇಹಪರತೆ ಇರುವ ಶ್ರೀ ರಾಮಾನುಜರು ಇಷ್ಟು ದೊಡ್ಡ ಪದವಿಯಲ್ಲಿದ್ದರೂ, ಅಹಂಕಾರವೋ, ದೊಡ್ಡಸ್ತಿಕೆಯೋ ತಮ್ಮ ಹತ್ತಿರವೂ ಸುಳಿಯದಂತೆ ಜಾಗ್ರತೆ ವಹಿಸಿದ್ದರು. "ಅಪರಂಜಿ"ಯಂಥ ಗುಣ ಅವರದು! ನಿಜಕ್ಕೂ ಅವರ ಸಂಪರ್ಕದಲ್ಲಿದ್ದು ಭವನದ ಕೆಲಸ ಮಾಡುತ್ತಿರುವುದು ನನಗೂ ಹೆಮ್ಮೆ-ಸಮಾಧಾನ!

"ನಿನ್ನ ಆಶೀರ್ವಾದ ಪರಿವೇಷ ಮುತ್ತಿರಲಿ ನನ್ನನ್ನು ಸದಾ" ಕವಿಯೊಬ್ಬರ ಕವನದ ಸಾಲುಗಳು ನನ್ನ ಒಳಮನಸ್ಸಿನಲ್ಲಿ ಯಾವಾಗಲೂ ಗುಂಯ್‌ಗುಡುತ್ತಿರುತ್ತವೆ. ಅದಕ್ಕೇ ಈ ಕ್ಯಾಸೆಟ್‌ಗಳ ಯೋಜನೆಯು ನಡೆಯುತ್ತಿರುವಾಗ ದೇವರು ನನ್ನನ್ನು , ಎರಡು ಅಪಘಾತಗಳಿಂದ ಬಹಳ ಆಶ್ಚರ್ಯಕರ ರೀತಿಯಲ್ಲಿ ಪಾರು ಮಾಡಿದ ಎಂದೇ ನನ್ನ ನಂಬಿಕೆ.

ಹೀಗೆ ಅಪಘಾತಕ್ಕೆ ಒಳಗಾಗಿಯೇ ನನ್ನ ಕಿವಿಗಳ ಶ್ರವಣ ಶಕ್ತಿಯೂ ಹೋದದ್ದು.

ನಾನು 'ಸಂಯುಕ್ತ ಕರ್ನಾಟಕ'ದಲ್ಲಿ ಕೆಲಸ ಮಾಡುತ್ತಿದ್ದಾಗ, ಇದ್ದಕ್ಕಿದ್ದಂತೆ ನನ್ನ ಎರಡೂ ಕಿವಿಗಳಲ್ಲೂ ಕೀವು ತುಂಬಿ ಬಹಳ ತೊಂದರೆ ಕೊಡುತ್ತಿತ್ತು. ಆಗಾಗ ನಾನು ಕಿವಿಗಳನ್ನು ಶುಚಿ ಮಾಡಿಸಿ ಕೊಳ್ಳುವುದಿತ್ತು. ಒಮ್ಮೆ ತೊಂದರೆ ಹೆಚ್ಚಾದಾಗ ಡಾಕ್ಟರು ಪರೀಕ್ಷೆ ಮಾಡಿ, 'ನೀವು ಬದುಕಿರುವ ತನಕ ನೀರಿನಲ್ಲಿ ಮುಳುಗಿ ಸ್ನಾನ ಮಾಡುವಂತಿಲ್ಲ. ಹಾಗೆ ಮಾಡಿದರೆ ನಿಮ್ಮ ಕಿವಿಗಳು ಪೂರ್ಣವಾಗಿ ಹೋಗಿಬಿಡುವುವು. ನಿಮಗೆ ಯಾವುದು ಮುಖ್ಯ? ಕಿವಿಗಳೋ, ಸ್ನಾನವೋ?' ಎಂದರು. ನಾನು ಕಿವಿಗಳೇ ಮುಖ್ಯ ಎಂದು ಚಿಕಿತ್ಸೆ ಮಾಡಿಸಿಕೊಂಡೆ.

ಹೀಗೆ ನನಗೆ ಸ್ಕೂಟರಿನ ಅಪಘಾತ ಆದ ಎರಡು ವರ್ಷಗಳನಂತರ 'ಕುಮಾರವ್ಯಾಸ'ಭಾರತದ ಕ್ಯಾಸೆಟ್ಟುಗಳ ಧ್ವನಿಮುದ್ರಣ ಮುಗಿಯುವ ಹಂತಕ್ಕೆ ಬಂದಿತ್ತು. ಕುಮಾರವ್ಯಾಸನು ಬರೆದಿಲ್ಲದಿದ್ದ 'ಶಾಂತಿಪರ್ವ' ವನ್ನು ಮೂಲಭಾರತದಿಂದ ಸಂದರ್ಭಕ್ಕೆ ತಕ್ಕಷ್ಟು ಆಯ್ದುಕೊಂಡು ಕೊನೆಯ ಕೆಲವು ಕ್ಯಾಸೆಟ್ಟುಗಳನ್ನು ಸಿದ್ಧಪಡಿಸುವುದು ಬಾಕಿ ಇತ್ತು. ಆಗ ನಾನೂ, ಶ್ರೀ ಎನ್.ರಾಮಾನುಜರೂ ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಯವರನ್ನು ಕಾಣಲು ಹೋದೆವು. ಯಾವುದೋ ಸಮಾರಂಭ ನಡೆಯುತ್ತಿತ್ತು, ಅಲ್ಲಿ. ಬಹುಶಃ ಶ್ರೀ ಗಣಪತಿ ಸಚ್ಚಿದಾನಂದಸ್ವಾಮಿಯವರ ಜನ್ಮದಿನದ ಆಚರಣೆಯ ಸಂಭ್ರಮ ಎಂದು ನನ್ನ ನೆನಪು. ಶ್ರೀಯವರನ್ನು ನೋಡಿ ನಮಸ್ಕರಿಸಿ ಅವರ ಆಶೀರ್ವಾದ ಪಡೆದು ನಾನೂ ಶ್ರೀ ರಾಮಾನುಜರೂ ಅವರ ಮರ್ಸಿಡಿಸ್ ಬೆಂಜ್ ಕಾರಿನಲ್ಲಿ ಬೆಂಗಳೂರಿಗೆ ವಾಪಸಾಗುತ್ತಿದ್ದೆವು. ಅವರಿಗೆ ಬಹಳ ವರ್ಷಗಳಿಂದ ಡ್ರೈವರ್‌ನಾಗಿ ಸೇವೆ ಸಲ್ಲಿಸುತ್ತಿದ್ದ ಪಾರ್ಥಸಾರಥಿಯೇ ಆ ದಿನವೂ ಕಾರನ್ನು ನಡೆಸುತ್ತಿದ್ದ. ಪಾರ್ಥಸಾರಥಿ ನಿಜಕ್ಕೂ ಬಹಳ ಒಳ್ಳೆಯ ಡ್ರೈವರು, ಜಾಗರೂಕತೆಯಿಂದ ಚಾಕಚಕ್ಯತೆಯಿಂದ, ಅತಿವೇಗವೂ ಅಲ್ಲದೆ, ಅತಿ ನಿಧಾನವೂ ಅಲ್ಲದೆ ಸಮವೇಗದಲ್ಲಿ ಕಾರನ್ನು ನಡೆಸುತ್ತಿದ್ದ. ಮಂಡ್ಯ ದಾಟಿದನಂತರ ಬಂದ ಯಾವುದೋ ಸೇತುವೆಯ ಮೇಲೆ ಎಲ್ಲ ವಾಹನಗಳೂ ಹೋಗುತ್ತಿದ್ದವು. ನಮ್ಮ ಮುಂದೆ ಒಂದು ಕೆಂಪು ಬಸ್ಸಿತ್ತು. ಒಂದೇ ವೇಗದಲ್ಲಿ ಎಲ್ಲರೂ ಚಲಿಸುತ್ತಿದ್ದೆವಷ್ಟೆ ? ಇದ್ದಕ್ಕಿದ್ದಂತೆ ಒಂದು ಕೆಂಪು ದೀಪವನ್ನು ಸಹ ಹಾಕದೆ ನಮ್ಮ ಮುಂದಿದ್ದ ಬಸ್ಸಿನವನು ಬಸ್ಸನ್ನು ನಿಲ್ಲಿಸಿದ. ಪಾರ್ಥಸಾರಥಿ ಇದನ್ನು ನಿರೀಕ್ಷಿಸಿರಲಿಲ್ಲವಾಗಿ ಬೇಗನೇ ಬ್ರೇಕ್ ಹಾಕಿದರೂ ಕಾರು ಹಿಡಿತಕ್ಕೆ ಬರದೆ ಬಸ್ಸಿನ ಹಿಂಭಾಗಕ್ಕೆ ಹೋಗಿ ಡಿಕ್ಕಿ ಹೊಡೆಯಿತು. ಆಗ ಆದ ಅಪಘಾತದಲ್ಲಿ ಪಾರ್ಥಸಾರಥಿಯೂ, ನಾವಿಬ್ಬರೂ ಹೋಗಿಯೇಬಿಡಬೇಕಿತ್ತು. ಆದರೆ ಕಾರು ಗುದ್ದಿದ ಬಲಕ್ಕೆ ಆಶ್ಚರ್ಯಕರವಾಗಿ ಪಾರ್ಥಸಾರಥಿ ಪಕ್ಕಕ್ಕೆ ಹೊರಳಿದ. ಕಾರಿನ ಮುಂದಿನ ಎರಡು ಸೀಟುಗಳೂ ಹಿಂದೆ ಕುಳಿತಿದ್ದ ನಮ್ಮಿಬ್ಬರ ತೊಡೆಯ ಮೇಲೇರಿ ಗಲ್ಲಕ್ಕೆ ಬಡಿದು ಕುತ್ತಿಗೆಯವರೆಗೂ ಒತ್ತಿ ನಿಂತವು!! ಯಾರು ನಮ್ಮನ್ನು ಹೀಗೆ ರಕ್ಷಿಸಿದವರು??

ನಾನು, ಶ್ರೀ ಎನ್. ರಾಮಾನುಜ - ಇಬ್ಬರೂ ಕುಮಾರವ್ಯಾಸ ಭಾರತದ ಕೆಲಸದಲ್ಲಿ ತೊಡಗಿದ್ದವರು. ಕ್ಯಾಸೆಟ್ಟುಗಳನ್ನು ಎಲ್ಲಿ-ಹೇಗೆ ಬಿಡುಗಡೆ ಮಾಡಬೇಕೆಂದು ಚರ್ಚಿಸುತ್ತಿದ್ದ ನಮಗೆ ಹೀಗಾದುದರ ಅರಿವೇ ಇರಲಿಲ್ಲ. ಇದ್ದಕ್ಕಿದ್ದಂತೆ ಹೀಗಾದಾಗ ನನಗೆ, 'ಭಗವಂತಾ, ನೀನೇಕೆ ಹೀಗೆ ನಮ್ಮನ್ನು ಪರೀಕ್ಷೆ ಮಾಡುತ್ತಿದ್ದೀಯೇ ? ನಿನ್ನ ಕೆಲಸವನ್ನೇ ಮಾಡುತ್ತಿರುವ ನಮ್ಮನ್ನು ಆಪತ್ತಿಗೆ ಸಿಲುಕಿಸುವುದೇಕೆ ? ಅನಂತರ ಪಾರು ಮಾಡುವ ಕಷ್ಟವೂ ನಿನಗೇಕೆ ?' ಎಂದುಕೊಂಡೆ ! ಆ ದಿನ ಹೀಗೆ ನಾವು ಮೂವರೂ ಆ ಅಪಘಾತದಿಂದ ಪಾರಾದುದು ಪರಮಾಶ್ಚರ್ಯವೇ ಸರಿ ! ಹೀಗೆ ಗಂಡಾಂತರಕ್ಕೆ ಸಿಕ್ಕಿಸಿದರೆ ಅವನೇ ಪಾರು ಮಾಡಬೇಕಷ್ಟೆ?

೩.೨. ದಿವ್ಯಶಕ್ತಿಯ ಪ್ರಭಾವಲಯ

೧೧೩. ವಯಸ್ಸಿನ ಗಂಗೇಶ್ವರಾನಂದಜಿ

ಶ್ರೀ ಗಣಪತಿ ಸಚ್ಚಿದಾನಂದರ ಮಾತು ಬಂದಾಗಲೇ ನನಗೆ ನನ್ನ ಪರಿಚಯದ, ನನ್ನನ್ನು ಬಹಳ ವಿಶ್ವಾಸದಿಂದ, ಪ್ರೀತಿಯಿಂದ ಕಾಣುತ್ತಿದ್ದ ಸಂನ್ಯಾಸಿಗಳಲ್ಲಿ ಕೆಲವರ ಬಗೆಗಾದರೂ ನಿಮಗೆಲ್ಲ ಹೇಳಬೇಕು ಎಂದು ನನ್ನಾಸೆ. ನಾನು ಸಂಪರ್ಕಕ್ಕೆ ಬಂದ ಮಾನ್ಯ ಸ್ವಾಮಿಗಳು ಬಹಳ ಜನ. ಶ್ರೀ ರಂಗನಾಥಾನಂದರು, ಚಿನ್ಮಯಾನಂದರು, ದಯಾನಂದ ಸರಸ್ವತಿಯವರು, ಚಿದಾನಂದ ಸರಸ್ವತಿಯವರು, ಸ್ವಾಮಿ ಓಂಕಾರಾನಂದರು, ಸ್ವಾಮಿ ಗಂಗೇಶ್ವರಾನಂದರು...

ಈ ಪ್ರಪಂಚದಲ್ಲಿ ನಾವು ಎಷ್ಟು ಆಶ್ಚರ್ಯಗಳನ್ನು ನೋಡುತ್ತೇವೆ ಎಂದರೆ, ಆ ಆಶ್ಚರ್ಯಗಳು ಕಾಲ ಕಳೆದಂತೆ ದಂತಕಥೆಗಳಾಗಿ ಬಿಡುತ್ತವೆ, ನಂಬಲಸಾಧ್ಯ ಎನಿಸುವಂತಾಗಿ ಬಿಡುತ್ತವೆ.ಆದರೂ ಸತ್ಯವಾದದ್ದು ಎಂದಿಗೂ ಸತ್ಯವಾದದ್ದೇ! ಅಂಥ ವ್ಯಕ್ತಿತ್ವದವರು ಸ್ವಾಮಿ ಗಂಗೇಶ್ವರಾನಂದರು. ಹಿಂದೆ ೧೯೭೦ರಲ್ಲಿ ಈ ಸ್ವಾಮಿಗಳು ಬೆಂಗಳೂರಿಗೆ ಬಂದಿದ್ದಾಗ ನಾನು ವಿದ್ಯಾಭವನಕ್ಕೆ ಸೇರಿ ಕೇವಲ ಎರಡು ವರ್ಷಗಳಾಗಿದ್ದವು . ನಾನು ಅಲ್ಲಿನ ರೆಜಿಸ್ಟ್ರಾರ್ ಆಗಿದ್ದೆ. ಆಗ ಈ ಸ್ವಾಮಿಗಳಿಗೆ ಭವನದ ವತಿಯಿಂದ ಒಂದು ಸ್ವಾಗತ ಕಾರ್ಯಕ್ರಮ ಕೊಟ್ಟೆವು. ಆ ದಿನ ನಾನು ಅವರು ಅಲ್ಲಿಗೆ ಬಂದಾಗ ಪೂರ್ಣಕುಂಭ ಹಿಡಿದು ಸ್ವಾಗತ ಕೋರುವಾಗ ವೇದದ ಪ್ರಾರ್ಥನೆ "ಭದ್ರಂಕರ್ಣೇ" ಯನ್ನು ಹೇಳಿ ಸ್ವಾಗತಿಸಿದ್ದೆ. ನಿಮಗೆ ಮುಖ್ಯವಾದ ವಿಷಯ ಒಂದನ್ನು ಹೇಳಿಲ್ಲ. ಈ ಸ್ವಾಮೀಜಿ ಅಂಧರು! ಹುಟ್ಟು ಕುರುಡರಲ್ಲದ ಇವರು ಚಿಕ್ಕಂದಿನಲ್ಲಿ ದೃಷ್ಟಿ ಚೆನ್ನಾಗಿಯೇ ಇದ್ದವರು. ಐದು ವರ್ಷದ ಬಾಲಕನಾಗಿದ್ದಾಗ, ಒಮ್ಮೆ ತಂದೆತಾಯಿಗಳ ಜತೆ ಬೃಂದಾವನಕ್ಕೆ ಹೋದರು. ಬೃಂದಾವನದಲ್ಲಿ ಜನ್ಮಾಷ್ಟಮಿಯ ದಿನ ಬಹಳ ಜನ ಸೇರುವುದು ಸಹಜ. ಬಡತನದ ಕುಟುಂಬ... ಬಹಳ ಜನಗಳ ನಡುವೆ ಹೇಗೋ ಈ ಮಗು ತಂದೆ-ತಾಯಿಗಳನ್ನಗಲಿ ಬೇರೆಯಾಯಿತು. ಬಡ ಕುಟುಂಬದಲ್ಲಿ ಒಬ್ಬನು ಕಡಮೆಯಾದರೆ ನಷ್ಟವಿಲ್ಲ ಎಂದುಕೊಂಡ ತಂದೆ-ತಾಯಿ, ಸ್ವಲ್ಪ ಹುಡುಕಿದರೂ ಸಿಗದ ಮಗನನ್ನು ಬಿಟ್ಟು ತಮ್ಮ ಸ್ಥಳಕ್ಕೆ ವಾಪಸಾದರು. ಬೃಂದಾವನ ಅದು... ಬಹುಶಃ ಕೃಷ್ಣನೇ ಕಾಪಾಡುತ್ತಾನೆ ಎನ್ನುವ ಭರವಸೆ ಇದ್ದೀತು ಅವರಿಗೆ!!

ಅಲ್ಲಿ ಇಲ್ಲಿ ಅಲೆದ ಮಗು ಒಂದು ಮರದಡಿ ಆಶ್ರಯ ಪಡೆದಿತ್ತು. ಆ ರಾತ್ರಿ ಭಾರೀ ಮಿಂಚು, ಗುಡುಗು, ಮಳೆ. ಮಳೆಗೆ ಎಚ್ಚರಾದ ಮಗು ಎದ್ದು ಕುಳಿತಿದ್ದಾಗ ಸಿಡಿಲು ಬಡಿದು ಮಗುವಿನ ಎರಡು ಕಣ್ಣುಗಳನ್ನೂ ದೃಷ್ಟಿಹೀನವಾಗಿ ಮಾಡಿತು. ಹುಡುಗನನ್ನು ಕರೆದೊಯ್ದು ಯಾರೋ ಚಿಕಿತ್ಸೆ ಮಾಡಿಸಿದರು. ಮನೆಯಲ್ಲಿ ಕೃಷ್ಣಧ್ಯಾನ ಮಾಡುವುದು ಹುಡುಗನಿಗೆ ತಿಳಿದಿದ್ದು, ತಾನು ಬಂದಿರುವುದೂ ಬೃಂದಾವನಕ್ಕೆ ಎಂದು ಗೊತ್ತಿತ್ತು. "ಕೃಷ್ಣಾ, ನನಗೇಕೆ ಹೀಗೆ ಮಾಡಿದೆ?" ಎಂದು ಐದು ವರ್ಷದ ಬಾಲಕ ಕಣ್ಣು ಕಳೆದುಕೊಂಡ ದುಃಖದಲ್ಲಿ ಅತ್ತಾಗ, ಕಣ್ಣ ಮುಂದೆ ಒಂದು ದಿವ್ಯವಾದ ಬೆಳಕು ಸರಿದು ಹೋದ ಹಾಗೆ ಕಾಣಿಸಿ ಕೃಷ್ಣ, ತಮ್ಮಂತೆಯೇ ಚಿಕ್ಕ ಹುಡುಗನಂತೆ ಕೊಳಲು ಊದುತ್ತಿರುವವನ ಹಾಗೆ ಕಾಣಿಸಿತಂತೆ! ಅದು ಕಾಣಿಸಿದ ಮರುಕ್ಷಣದಿಂದಲೇ ಹುಡುಗನಲ್ಲಿ ಎಂಥದೋ ಪರಿವರ್ತನೆ, ಏನೋ ಧೈರ್ಯ-ಆತ್ಮವಿಶ್ವಾಸ. ಹುಡುಗ ಬೃಂದಾವನದಲ್ಲಿಯೇ ಓಡಾಡಿಕೊಂಡಿದ್ದ. ಕುರುಡನಾಗಿದ್ದರೂ ಬಲು ಚುರುಕಾಗಿದ್ದವನ ಮೇಲೆ ಎಲ್ಲರಿಗೂ ವಾತ್ಸಲ್ಯ, ಬೃಂದಾವನದಲ್ಲಿ ವೇದ ಪಠಣ ನಿರಂತರವಾಗಿ ನಡೆಯುತ್ತಿತ್ತು ಆಗ. ಈ ಹುಡುಗ ಅಲ್ಲಿ ಕುಳಿತು ಒಂದು ಸಲ ಕೇಳಿದರೆ ಸಾಕು ತಲೆಯಲ್ಲಿ ಎಲ್ಲವೂ ಮುದ್ರಿತವಾಗಿ ಬಿಡುತ್ತಿತ್ತು!! ಓದುಗರೇ, ಇದು ಸುಳ್ಳಲ್ಲ, ನಾನು ಕಣ್ಣಾರೆ ಕಂಡದ್ದು! ಅವರ ನೆನಪಿನ ಶಕ್ತಿಯ ಪ್ರಭುತ್ವ ಮತ್ತಾರಲ್ಲೂ ನಾನು ಕಂಡಿಲ್ಲ. ನಾಲ್ಕು ವೇದಗಳು ಅವರಿಗೆ ಬಾಯಿಗೇ ಬರುತ್ತಿತ್ತು!

ಕಣ್ಣುಗಳು ಅದೆಷ್ಟೇ ಚುರುಕಾಗಿದ್ದರೂ, ಅದು ತಾನೇ ಏನನ್ನೂ ನೋಡಲಾಗದು, ಏನನ್ನೂ ಕಾಣಲಾಗದು. ಕಣ್ಣು ನೋಡುವಾಗ ಮನಸ್ಸು ಜಾಗೃತವಾಗಿದ್ದರೆ ಮಾತ್ರ ಅದು ನೋಡುತ್ತದೆ, ಕಾಣುತ್ತದೆ! ಅದಕ್ಕೇ ಎಷ್ಟೋ ಬಾರಿ ನಮ್ಮ ಎದುರಿಗೆ ಏನಾದರೂ ನಡೆದಿದ್ದರೆ, ಯಾರಾದರೂ ಬಂದು ಹೋಗಿದ್ದರೆ ನಾವು ಜಾಗೃತರಾಗಿದ್ದರೆ ಮಾತ್ರ ಗಮನಿಸಿರುತ್ತೇವೆ. ನಾವು ಅನ್ಯಮನಸ್ಕರಾಗಿದ್ದಾಗ ನಾವು ಕಂಡಿದ್ದರೂ ಅದು ನಮಗೆ ಕಾಣದಂತೆಯೇ ಭಾವನೆ ತರಿಸುತ್ತದೆ.

ಅದಕ್ಕೇ ಬಹುಶಃ ಬಾಲಕನ ಮನಸ್ಸು ಸದೈವ ಜಾಗೃತ ವಾಗಿದ್ದುದರಿಂದ ಕಣ್ಣಿಗೆ ಕಾಣದುದೆಲ್ಲವೂ ಕಂಡಂತೆ ಭಾಸ ವಾಗುತ್ತಿತ್ತೇನೋ ಎಂದುಕೊಳ್ಳಬಹುದು ನಾವು!ಆದರೂ... ಆದರೂ...

ಆ ನೆನಪಿನ ಅಗಾಧ ಶಕ್ತಿಯನ್ನು ವರ್ಣಿಸಲಾಗದು, ಒಂದನ್ನು ಕಸಿದುಕೊಂಡ ಆ ಭಗವಂತ ಮತ್ತೊಂದನ್ನು ಉದಾರವಾಗಿ ಕೊಟ್ಟಿದ್ದ ಎಂದುಕೊಳ್ಳದೆ ಇರಲಾಗದು!

ಇಂಥ ಸ್ವಾಮಿ ಗಂಗೇಶ್ವರಾನಂದರನ್ನು ನಾನು ೧೯೭೧ರಲ್ಲಿ ವಿದ್ಯಾಭವನದಲ್ಲಿ ವೇದದ ಪ್ರಾರ್ಥನೆ ಹೇಳಿ ಸ್ವಾಗತಿಸಿದ್ದೆನಷ್ಟೆ. ಅನಂತರ ನಾನು ಅವರ ಬಗ್ಗೆ ಹೆಚ್ಚಾಗಿ ಕೇಳಲಿಲ್ಲ. ನನ್ನ ಕೆಲಸ ಕಾರ್ಯಗಳ ಒತ್ತಡದಲ್ಲಿ ಮುಳುಗಿದೆ. ೧೯೮೧, ಹತ್ತು ವರ್ಷಗಳ ನಂತರ... ಲಂಡನ್ ವಿದ್ಯಾಭವನ ಕೇಂದ್ರದಲ್ಲಿ ಕೆಲಸ ನಿರ್ವಹಿಸುತ್ತಿದ್ದೆ. ಇದೇ ಗಂಗೇಶ್ವರಾನಂದ ಸ್ವಾಮಿಯವರು ಲಂಡನ್ ನಗರಕ್ಕೆ ದಯ ಮಾಡಿಸಿದ್ದರು. ಭವನದ ಕಮಿಟಿಯ ಸದಸ್ಯರುಗಳಲ್ಲಿ ಒಬ್ಬರಾದ ಶ್ರೀ ದಾಮೋದರ ಚನ್ರಾಯ್ ಅವರ ಮನೆಯಲ್ಲಿ ಸ್ವಾಮೀಜಿಯವರಿಗೆ ವಾಸ್ತವ್ಯ. ನಾನೂ ಸ್ವಾಮೀಜಿಗಳೂ ಒಮ್ಮೆ ಸಂಧಿಸಿದ್ದೆವು ಎಂದು ಚನ್ರಾಯ್ ಅವರಿಗೆ ತಿಳಿದಿರಲಿಲ್ಲ. ಈ ಸ್ವಾಮಿಗಳನ್ನು ಭವನಕ್ಕೆ ಭೇಟಿಕೊಡುವಂತೆ ಚನ್ರಾಯ್‌ರನ್ನು ಕೇಳಿ, ಅವರಿಗೆ ನಾವು ಒಂದು ಸ್ವಾಗತ ಸಮಾರಂಭ ಏರ್ಪಡಿಸಿದೆವು. ಸಮಾರಂಭಕ್ಕೆ ಸಿದ್ಧತೆಗಳು ನಡೆದವು. ನಾನು ಮಹಾನಾರಾಯಣ ಉಪನಿಷತ್ತಿನಲ್ಲಿ ಸಂನ್ಯಾಸಿಗಳಿಗೆ ನಮಿಸುವಾಗ ಒಂದು ಮಂತ್ರವನ್ನು ಹೇಳಬೇಕೆಂದು ಹೇಳಿದೆ.

ನ ಕರ್ಮಣಾ, ನ ಪ್ರಜಯಾ ಧನೇನ
ತ್ಯಾಗೇನೈಕೇ ಅಮೃತತ್ವಮಾನಷುಃ ||

ಎಂದು, ಅರ್ಥಾತ್ 'ಮನುಷ್ಯನಿಗೆ ತನ್ನ ಕೆಲಸದಿಂದ ಆಗಲಿ, ಬಹಳ ಜನ ಶಿಷ್ಯ ವೃಂದದವರು ಹಿಂಬಾಲಕರಾಗಿದ್ದರೆಂದಾಗಲೀ ಅಥವಾ ತುಂಬ ಧನದಿಂದಾಗಲೀ ಮೋಕ್ಷ ಸಿಗುವುದಿಲ್ಲ. ಆದರೆ ತ್ಯಾಗದಿಂದ ಮಾತ್ರ ಅಮೃತತ್ವ ಸಿಗುತ್ತದೆ'. ಈ ಮಂತ್ರವನ್ನು ಆ ದಿನ ಅವರಿಗೆ ಹೇಳಿ ನಮಸ್ಕರಿಸಬೇಕು ಎಂದು ಉದ್ದೇಶಿದ್ದ ನಾನು ಅವರು ಭವನಕ್ಕೆ ಆಗಮಿಸಿದಾಗ ಅವರನ್ನೆದುರುಗೊಂಡು 'ನಕರ್ಮಣಾ...'ಎಂದಿರಲಿಲ್ಲ ಇನ್ನೂ "ನಕರ್ಮ..." ಎನ್ನುವಾಗಲೇ, ಸ್ವಾಮಿ ಗಂಗೇಶ್ವರಾನಂದರು "ಮತ್ತೂರ್‌ಜೀ, ನೀವು?... ಇಲ್ಲಿ?" ಎಂದರು!!! ನನ್ನ ನಾಲಿಗೆ ಮರಗಟ್ಟಿ ಹೋಯಿತು. ಕೈಕಾಲುಗಳು ಥರಥರ ನಡುಗಲು ಪ್ರಾರಂಭಿಸಿದವು. ಅವರ ಕಾಲ ಬಳಿ ಕುಸಿದು ಕುಳಿತ ನನ್ನ ಕಣ್ಣುಗಳಲ್ಲಿ ನೀರು... "ಸ್ವಾಮೀಜಿ, ನಿಮಗೆ ನಾನು ನೆನಪಿದ್ದೇನೆಯೆ? ನೀವು ನನ್ನನ್ನು ಗುರುತಿಸಿದಿರಾ?" ಎಂದು ಗದ್ಗದವಾಗಿದ್ದ ನನ್ನ ಧ್ವನಿಯಲ್ಲಿ ಬಹಳ ಕಷ್ಟಪಟ್ಟನಂತರ, ಮಾತುಗಳು ತಡೆ ತಡೆದು ಹೊರ ಬಂದಿದ್ದವು! ಅವರ ಅಗಾಧ ನೆನಪಿನ ಶಕ್ತಿಗೆ ನಾನು ಆಶ್ಚರ್ಯದಿಂದ ಮೂಕನಾಗಿದ್ದೆ. ಅದಕ್ಕೆ ಅವರು ತಡವರಿಸಿಕೊಂಡು ನನ್ನನ್ನು ಮುಟ್ಟಿ ಮೇಲೇಳಿಸುತ್ತ, "ಮತ್ತೂರ್‌ಜೀ, ಹಾಗೆಂದರೇನು? ನಿಮ್ಮನ್ನು ನಾನು ಮರೆಯುವುದು ಸಾಧ್ಯವೇ? ಆ ದಿನ ಅದೆಷ್ಟು ಚೆನ್ನಾಗಿ ವೇದದ ಪ್ರಾರ್ಥನೆ ಹೇಳಿ ಬೆಂಗಳೂರಿನಲ್ಲಿ ನನ್ನನ್ನು ಬರಮಾಡಿಕೊಂಡಿದ್ದಿರಿ? ನನಗೆ ಆಶ್ಚರ್ಯ ವಾದದ್ದು ನೀವು ಇಲ್ಲಿ, ಲಂಡನ್‌ನಲ್ಲಿ ಹೇಗೆ ಎಂದು?" ಎಂದರು. ಅವರ ಅಭಿಮಾನ-ಪ್ರೀತಿಗೆ ನಾನು ಮಾತು ಬಾರದವನಾಗಿದ್ದೆ. ಅಲ್ಲಿ ಬಂದವರಿಗೆಲ್ಲ ಆ ದಿನ ನಾನು ಹತ್ತುವರ್ಷಗಳ ಹಿಂದೆ ನಡೆದಿದ್ದನ್ನೂ, ಈಗಾದುದನ್ನೂ ಹೇಳಿ ದಣಿಯದವನಾದೆ!! ಎಲ್ಲರೂ ದಂಗು ಬಡಿದು ಹೋದರು.

ಇದಾದ ಮೇಲೆಯೂ ಸ್ವಾಮಿಗಳು ಎರಡು-ಮೂರು ಸಾರಿ ಭವನಕ್ಕೆ ಬಂದಿದ್ದರು. ಈಗ ಅವರ ಹೆಸರಿನಲ್ಲಿ ಸಂಸ್ಕೃತ ವಿದ್ವಾಂಸರಿಗೆ ವರ್ಷಕ್ಕೆ ಒಬ್ಬರಂತೆ ಒಂದು ಪ್ರಶಸ್ತಿ ಕೊಡಲಾಗುತ್ತಿದೆ. ಪ್ರಶಸ್ತಿಪತ್ರ, ಪ್ರಶಸ್ತಿಯ ಧನ ಒಂದು ಲಕ್ಷ ರೂಪಾಯಿಗಳನ್ನು ಭವನವು ಅವರ ಹೆಸರಿನಲ್ಲಿ ಕೊಡುವಾಗ ಅವರನ್ನು ನೆನೆದು ನನ್ನ ಹೃದಯ ತುಂಬಿ ಬರುತ್ತದೆ! 'ಉದಾಸೀನ ಸಂಪ್ರದಾಯ'ದವರಾದ ಈ ಸ್ವಾಮೀಜಿ, ೧೧೩ ವರ್ಷಗಳು ತುಂಬುವವರೆಗೂ ಬದುಕಿದ್ದು, ಸಮಾಧಿಸ್ಥರಾದರು. ಏಕೋ, ಈ ಸ್ವಾಮೀಜಿಗೆ ನಾನು ಬಹಳ ಪ್ರಿಯನಾಗಿದ್ದೆ. ಆಗಾಗ ಅವರು ನನ್ನನ್ನು ವಿಚಾರಿಸಿಕೊಳ್ಳುವುದಿತ್ತು. ಲಂಡನ್‌ಗೆ ಬಂದಾಗಲೆಲ್ಲಾ ನನ್ನನ್ನು ಕರೆದು ತುಳಸೀ ಮಾಲೆ ಕೊಟ್ಟು, ಅಪ್ಪಿಕೊಂಡು ಆಶೀರ್ವಾದ ಮಾಡುತ್ತಿದ್ದ ಅವರ ವಾತ್ಸಲ್ಯ-ಪ್ರೀತಿಯ ಛಾಯೆ ಎಂದಿಗೂ ನನ್ನ ಮೇಲಿರುವಂಥದು ಎಂದೇ ನನ್ನ ನಂಬಿಕೆ !

ಸ್ವಾಮಿಜಿಗಳಾಗಿ ಅವರ ಅನನ್ಯ ಶಕ್ತಿ ಇನ್ನೂ ಏನೇನು ಇದ್ದಿತೋ, ನನಗೆ ತಿಳಿಯದು. ನನಗೆ ತಿಳಿದಿದ್ದನ್ನು, ನಾನು ಅನುಭವಿಸಿ ಅಚ್ಚರಿ ಪಟ್ಟಿದ್ದನ್ನು ನನ್ನ ಓದುಗರಲ್ಲಿ ಹಂಚಿಕೊಂಡಿದ್ದೇನಷ್ಟೆ. ಹೀಗೆ ಸ್ವಾಮೀಜಿಗಳಾಗಿ ಪವಾಡಗಳನ್ನು ಮಾಡಿದವರು ಹಲವಾರು ಮಂದಿ ಇರಬಹುದು, ಅದೊಂದು ಶಕ್ತಿ ಇದ್ದೀತು ಅವರಲ್ಲಿ. ನಾವು ಏನನ್ನೂ ಅಲ್ಲಗಳೆಯಲಾಗದು ಎಂದೇ ನನ್ನ ಭಾವನೆ. ಆದರೂ 'ಸ್ವಾಮೀಜಿ' ಎನಿಸಿಕೊಂಡು ಸರ್ವಸಂಗ ಪರಿತ್ಯಾಗಿಗಳಾದವರಿಗೆ ಮನಸ್ಸು-ಹೃದಯವನ್ನು ಭಗವಂತನಿಗೆ ಅರ್ಪಿಸುವ ದೃಢತೆ ಬೇಕು. ಬಹುಶಃ ಆಗಲೇ ಸ್ವಾಮಿ ಗಂಗೇಶ್ವರಾನಂದರಂತೆ ಒಂದು ಶಕ್ತಿಯನ್ನು ಸಿದ್ಧಿಸಿ ಕೊಳ್ಳಲು ಸಾಧ್ಯ ಎನಿಸುತ್ತದೆ.

ಗಿಡುವಳುಕೆ ಹೂ ಪತ್ರೆಗೋಸುಗ,
ಮಡು ನಡುಗೆಯುಗ್ಗವಣೆಗೋಸುಗ,
ನುಡಿದು ಉಪಹಾರಕ್ಕೆ ಸಕಲೌಷಧಿ ವನಸ್ಪತಿಯು,
ಕೆಡಿಸುತೀ ಪರಿ ಹೆರರುಗಳ ತ
ನ್ನೊಡಲ ಪಂಚಿಸಿ, ಬಾಹ್ಯಭಕ್ತಿಯ
ನಡೆವವರ ನಾ ಮೆಚ್ಚೆನೈ||

ಎನ್ನುತ್ತಾನೆ ಚಾಮರಸ. 'ಪ್ರಭುಲಿಂಗಲೀಲೆ'ಯಲ್ಲಿ ಅಲ್ಲಮಪ್ರಭು ಹೇಳುವ ಮಾತು ಇದು. ಇದರರ್ಥ "ಭಕ್ತನು ದೇವರ ಪೂಜೆಗೆ ಹೂ ಪತ್ರೆ ಕೀಳಹೋದಾಗ ತಮಗೆ ಅವನು ಮಾಡುವ ಹಿಂಸೆ ನೆನೆದು ಗಿಡ

ಮರಗಳು ಹೆದರಿ ನಡುಗುವುವಂತೆ, ದೇವರಿಗೆ ಅಭಿಷೇಕ ಮಾಡಲು ಅವನು ನೀರನ್ನು ತರ ಹೋದರೆ, ಇವನಿಂದ ತಮ್ಮ ಶಾಂತಿಯ ಭಂಗ ಆಗುವುದು ಎಂದು ನೀರಿನ ಮಡು ನಡುಗುವುದಂತೆ, ತನ್ನ ಹೊಟ್ಟೆ ತುಂಬಿಸಿಕೊಳ್ಳುವ ಉದ್ದೇಶದಿಂದ 'ದೇವರ ನೈವೇದ್ಯಕ್ಕೆ' ಎಂದು ಹೇಳಿ ಕಾಳು, ಕಾಯಿ, ಹಣ್ಣುಗಳನ್ನು ಕಿತ್ತು ತರುವುದಲ್ಲದೆ, ಅದರಿಂದ ತನ್ನ ಹೊಟ್ಟೆ ಹೊರೆದುಕೊಳ್ಳುತ್ತಾನೆ. ಹೀಗೆಲ್ಲಾ ಮಾಡಿದಾಗ, ಅದರ ಭಾವ ಏನಾಗುತ್ತದೆ ಎಂದರೆ, ಬೇರೆಯವರನ್ನು ಹೆದರಿಸಿ, ಅವರದನ್ನು ಕಿತ್ತುಕೊಂಡು 'ನಾನು ದೇವರಿಗೆ ಅರ್ಪಿಸಿ ಅವನ ಕೃಪೆ ಪಡೆಯುತ್ತೇನೆ' ಎನ್ನುವವ, ಕಂಡವರದನ್ನು ಕಾಣಿಕೆಯಾಗಿ ಕೊಟ್ಟರೆ ಬರುವ ಭಾಗ್ಯವೇನು? ಅವನು ನಿಜಕ್ಕೂ ಭಕ್ತನಾದಾನೇ? ಇವೆಲ್ಲ ಕೇವಲ ಭಕ್ತಿಯ ಬಾಹ್ಯಾಡಂಬರ ಅಷ್ಟೇ ! ಹಾಗೆ ಕೊಡುವವನು ತನ್ನ ಕಣ್ಣು, ಕೈ, ಕಾಲು, ಇತ್ಯಾದಿಗಳನ್ನು ಅರ್ಪಿಸಲಿ ನೋಡುವಾ? ಇಲ್ಲ... ಹಾಗೆ ಮಾಡುವುದಿಲ್ಲ! ಅದಕ್ಕೆ ಆ ದೇವರಾದರೂ 'ಈ ಬಾಹ್ಯಭಕ್ತಿಯ ಆಡಂಬರವು ನನಗೂ ಬೇಕಿಲ್ಲ' ಎನ್ನುವನು. ಅವನು ಭಕ್ತನಾದವನನ್ನು ಇದನ್ನೆಲ್ಲ ಕೇಳುತ್ತಾನೆಯೇ? ಇಲ್ಲ... ಅವನು ಇದನ್ನೆಲ್ಲ ಕೇಳುವುದಿಲ್ಲ. ಅವನು ಕೇಳುವುದು 'ನಿನ್ನನ್ನು ನನಗೆ ಅರ್ಪಿಸು ಎಂದು, ಎಂದರೆ ನಿನ್ನ ಅಂತರಾತ್ಮವನ್ನೂ ಮನಸ್ಸನ್ನೂ ಹೃದಯವನ್ನೂ ನನಗೆ ಅರ್ಪಿಸು' ಎಂದು. ಹಾಗೆ ಅರ್ಪಿಸಿ ಬದುಕಿದವರು ಪುಣ್ಯಾತ್ಮರಾಗುತ್ತಾರೆ... ಸ್ವಾಮಿ ಗಂಗೇಶ್ವರಾನಂದರಂತೆ. ಅವರನ್ನು ನೆನೆದಂತೆ ನನಗೆ ನಮ್ಮ ಕಂಚಿ ಕಾಮಕೋಟಿ ಪೀಠಾಧಿಪತಿಗಳಾಗಿದ್ದ ಜಗದ್ಗುರು ಶ್ರೀ ಚಂದ್ರಶೇಖರ ಸ್ವಾಮಿಗಳು - ಪರಮಾಚಾರ್ಯರ - ಬಗ್ಗೆ ನನ್ನ ಓದುಗರಿಗೆ ಹೇಳಬೇಕೆನಿಸುತ್ತದೆ, ತೀವ್ರವಾಗಿ!

ಪರಮಾಚಾರ್ಯರು

ಪರಮಾಚಾರ್ಯರು ನನ್ನ ಮೇಲೆ ಅಗಾಧವಾಗಿ ಪ್ರಭಾವ ಬೀರಿದ ಮಹನೀಯರು. ಮುಖ್ಯವಾಗಿ, ಸಾಧುಸಂತರೆಂದರೆ ಅಷ್ಟೇನೂ ಆಸಕ್ತಿ ಇಲ್ಲದಿದ್ದ ನನ್ನಲ್ಲಿ, ಅವರುಗಳ ಬಗ್ಗೆ ಒಂದು ಆಸಕ್ತಿಯನ್ನು ಹುಟ್ಟು ಹಾಕಿದವರು ಪರಮಾಚಾರ್ಯರು. 'ನಿಜ ಸಂನ್ಯಾಸಿಯೆನಿಸಿದವರು ಪ್ರಾಪಂಚಿಕ ಮೋಹವನ್ನು ಮೀರಿ, ವೈರಾಗ್ಯದಲ್ಲಿ ಮನಸ್ಸು ತೊಡಗಿಸಿ ಸದಾಕಾಲ ಜಪತಪಗಳಲ್ಲಿ ನಿರತರಾಗಿರುತ್ತಾರೆ, ಅಂತಹವರಲ್ಲಿ ದಿವ್ಯವಾದ ಒಂದು ಶಕ್ತಿ ಇರಲು ಸಾಧ್ಯವಿದೆ' ಎಂದು ತಿಳಿಸಿ ಹೇಳಿದವರು ಪರಮಾಚಾರ್ಯರು. ಹೀಗೆ ಪರಮಾಚಾರ್ಯರಿಂದ ಪ್ರಭಾವಿತನಾದ ನಾನು ಅವರ ಮಾತುಗಳನ್ನು ಯಾವಾಗಲೂ ಗಂಭೀರವಾಗಿಯೇ ತೆಗೆದುಕೊಳ್ಳುತ್ತಿದ್ದೆ.

ಕಂಚಿ ಪರಮಾಚಾರ್ಯರ ಸಂಪರ್ಕದಲ್ಲಿದ್ದು 'ಮೂಢಭಕ್ತಿ' ಎನ್ನುವುದಕ್ಕೆ ಅರ್ಥವಿಲ್ಲ ಎಂದು ಅರಿತ ನಾನು, ವಿಚಾರ-ಆಚಾರಗಳಲ್ಲಿ ಮೂಢತನ ಇರಬಾರದೆಂದು ಸಾಕಷ್ಟು ಜಾಗ್ರತೆ ವಹಿಸುತ್ತಿದ್ದೆ. ನನ್ನ ಮನಸ್ಸಿನಲ್ಲೂ ಮೂಢತನಕ್ಕೆ ಅವಕಾಶ ಕೊಡಬಾರದು ಎನ್ನುವ ಸಂಕಲ್ಪ ಮಾಡಿದೆ. ಇಲ್ಲಿ ಒಂದು ವಿಷಯದ ಬಗ್ಗೆ ನಿಮಗೆ ಹೇಳಬೇಕು ನಾನು... ಮೂಢತನ ಎಂದಾಗ ನೆನಪಿಗೆ ಬಂದಿರುವುದು ಇದು. ನಾನು ಲಂಡನ್‌ಗೆ ಹೋದ ಹೊಸದು. ಆಗಸ್ಟ್ ಐದರಂದು ಲಂಡನ್‌ಗೆ ಹೋದೆ. ಅಲ್ಲಿ ೩೫, ಗ್ರೇಟ್ ರೆಸೆಲ್ ಬೀದಿಯಲ್ಲಿ ೧೦'x೧೦'ರ ರೂಮಿನಲ್ಲಿ ಭವನ ಮೊಟ್ಟ ಮೊದಲಿಗೆ ಪ್ರಾರಂಭವಾಯಿತು ಎಂದು ಹೇಳಿದ್ದೇನಷ್ಟೆ? ನಾನು ಅಲ್ಲಿದ್ದಾಗ ಅದೇ ಕಟ್ಟಡದ ಇನ್ನೊಂದು ರೂಮಿನಲ್ಲಿ ಜಾರ್ಜ್ ಎನ್ನುವ ಇಂಗ್ಲಿಷಿನವನೊಬ್ಬನಿದ್ದ. ಅವನು ಯೋಗಾಭ್ಯಾಸ ಮಾಡುತ್ತಿದ್ದ. ಅವನಿಗೆ ಭಾರತೀಯರ ರೀತಿ-ನೀತಿ, ವ್ಯವಸ್ಥೆಗಳು ಬಹಳ ಇಷ್ಟವಾಗಿದ್ದವು. ಆಗಾಗ ಅವನನ್ನು ನೋಡಿ ನಕ್ಕು ಮಾತನಾಡಿಸುತ್ತಿದ್ದ ನನಗೆ ಅವನ ಬಗ್ಗೆ ಇಷ್ಟು ಮಾತ್ರ ಗೊತ್ತಿದ್ದುದು.

ಆಗಸ್ಟ್ ೨೮ರಂದು ನನ್ನ ಹುಟ್ಟಿದ ದಿನ, ನಮ್ಮ ತಾಯಿಯ ಶ್ರಾದ್ಧ... ನನ್ನ ಜನ್ಮದಿನದಂದೇ ನಮ್ಮಮ್ಮನೂ ತೀರಿ ಕೊಂಡದ್ದು... ಆ ದಿನ ನಾನು ಶ್ರಾದ್ಧ ಮಾಡಬೇಕಿತ್ತು. ನಾನು ಅಲ್ಲಿಗೆ ಹೋದ ಹೊಸದು. ಯಾರಿಗೆ ಹೇಳಲಿ ಈ ವಿಷಯವನ್ನು, ಯಾರಲ್ಲಿ ಕೇಳಲಿ, ತಿಳಿಯಲಿಲ್ಲ. ಗೊಂದಲದಲ್ಲಿದ್ದ ಮನಸ್ಸಿಗೆ ಏನೋ ಒಂದು ದಾರಿ ತೋರಿ ಒಂದು ನಿರ್ಧಾರಕ್ಕೆ ಬಂದೆ. ಆ ದಿನದಂದು ಜಾರ್ಜ್‌ಗೆ ಬರ ಹೇಳಿದೆ. "ಜಾರ್ಜ್, ನಾಳೆ ನೀವು ನನ್ನ ರೂಮಿಗೆ ಬರಬೇಕಲ್ಲ? ನೀವು ಬರುವ ಮೊದಲು ಏನನ್ನೂ ತಿನ್ನದೇ ಬನ್ನಿ"ಎಂದೆ. "ಖಂಡಿತ ಬರುತ್ತೇನೆ ಮಿಸ್ಟರ್ ಮಾಥೂರ್, ನಾನು ಸಾಮಾನ್ಯವಾಗಿ ಬೆಳಗಿನ ವೇಳೆ ಏನನ್ನೂ ತಿನ್ನುವುದೇ ಇಲ್ಲ. ಯೋಗಾಭ್ಯಾಸ ಮುಗಿಸಿ ಸುಮಾರು ೧೧ರ ವೇಳೆಗೆ ನಿಮ್ಮಲ್ಲಿಗೆ ಬರಲೇ?" ಎಂದ, ನಾನು 'ಆಗಬಹುದು' ಎಂದೆ. ಹೇಳಿದಂತೆ ಅವನು ಹನ್ನೊಂದು ಘಂಟೆಗೆ ಸರಿಯಾಗಿ ಬಂದ. ನಾನು ಅವನಿಗೆ ಸ್ವಲ್ಪ ಹಣ್ಣುಗಳನ್ನು ಒಂದು ತಟ್ಟೆಯಲ್ಲಿಟ್ಟು ಕೊಟ್ಟು, ಹಾಲು ಕೊಟ್ಟು 'ನಮಸ್ಕಾರ'ಮಾಡಿದೆ. ಅವನು "ಏನು ವಿಶೇಷ ಈ ದಿನ?" ಎಂದ. ಅದಕ್ಕೆ ನಾನು "ಈ ದಿನ ನಮ್ಮ ತಾಯಿಯ ಶ್ರಾದ್ಧ, ಅವರ ನೆನಪಿಗಾಗಿ ನಾನು ಯಾರನ್ನಾದರೂ ಅತಿಥಿಗಳನ್ನು ಕರೆದು, ಅವರಿಗೆ ಊಟ ಕೊಟ್ಟು ಸತ್ಕಾರ ಮಾಡಬೇಕು. ಈ ಊರಿನಲ್ಲಿ ನನಗೆ ತಿಳಿದವರು ಯಾರೂ ಇಲ್ಲ. ನೀವೇ ಈ ದಿನ ನನ್ನ ಅತಿಥಿಗಳು!" ಎಂದೆ. ಅವನಿಗೆ ಎಂಥದೋ ಖುಷಿಯಾಯಿತು. "ಓ.. ಅದಕ್ಕೇನು? ನಾನು ನಿಮಗೆ ವಂದನೆಗಳನ್ನು ಹೇಗೆ ಹೇಳುವುದು?" ಎಂದು ಸ್ವಲ್ಪ ಯೋಚಿಸಿ "ಮಿಸ್ಟರ್ ಮಾಥೂರ್, ಸ್ವರ್ಗದಲ್ಲಿರುವ ನಿಮ್ಮ ತಾಯಿ ಈ ದಿನ ಬಹಳ ಸಂತೋಷಪಟ್ಟಿರುತ್ತಾರೆ. ನನಗೆ ನಿಜವಾಗಿಯೂ ಹಾಗೆನ್ನಿಸುತ್ತಿದೆ. ನೆನಪಿಡಿ, ನೀವು ಸಹ ! ಖಂಡಿತ ಅವರಿಗೆ ತುಂಬ ಸಂತೋಷವಾಗಿರುತ್ತದೆ!" ಎಂದ. ನಾನು ಅವನ ಮಾತುಕೇಳಿ ಸ್ತಂಭೀಭೂತನಾದೆ!! ಇದನ್ನೇ ಅಲ್ಲವೇ ನಮ್ಮ ಮಂತ್ರಗಳೂ ಹೇಳುವುದು? ಕೂಡಲೆ, "ಜಾರ್ಜ್, ನಿಮಗೆ ತಿಳಿಯದೇ ನಿಮ್ಮ ಬಾಯಲ್ಲಿ ಈ ಮಾತುಗಳು ಬಂದಿವೆ! ನಮ್ಮಲ್ಲಿ ಹೇಳುವುದೂ

ಹೀಗೆಯೇ... ನಮ್ಮ ಹಿರಿಯರ ಶ್ರಾದ್ಧದ ದಿನ ನಾವು ಕರೆದು ಸತ್ಕರಿಸುವ ಅತಿಥಿಗಳ ರೂಪದಲ್ಲಿ ಆ ಹಿರಿಯರು ನಮ್ಮಲ್ಲಿಗೆ ಬಂದಿರುತ್ತಾರೆ ಎಂದು ನಮ್ಮ ನಂಬಿಕೆ! ನಮ್ಮ ಸತ್ಕಾರ ಸ್ವೀಕರಿಸಿದ ಮೇಲೆ ಅವರೂ ಹಾಗೆಯೇ ಹೇಳಿ, ನಮ್ಮನ್ನು ಹರಸಿ ಹೋಗುತ್ತಾರೆ.! ನೀವು ಅದೆಷ್ಟು ಚೆನ್ನಾಗಿ ಅದೇ ಮಾತುಗಳನ್ನು ಹೇಳಿದ್ದೀರಿ!!" ಎಂದು ಅವನ ಕೈಯನ್ನು ಹಿಡಿದುಕೊಂಡೆ. ನಾನು ಬಹಳ ಭಾವುಕನಾಗಿದ್ದೆ. ನನ್ನ ಭಾವನೆಗಳು 'ತನಗೆ ಅರ್ಥವಾದವು' ಎನ್ನುವ ರೀತಿಯಲ್ಲಿ ಜಾರ್ಜ್ ತನ್ನ ನೀಲನೇತ್ರಗಳಿಂದ ಒಮ್ಮೆ ನನ್ನನ್ನೇ ಆಳವಾಗಿ ನೋಡಿ, ವಂದಿಸಿ ಹೊರಟ... ನಿಜಕ್ಕೂ ನಮ್ಮಮ್ಮನಿಗೆ ಆ ದಿನ ಬಹಳ ಸಂತೋಷವಾಗಿರುತ್ತದೆ ಎಂದೇ ನನಗೂ ನಂಬಿಕೆ!!

ಎಲ್ಲರಲ್ಲೂ ವಾಸವಾಗಿರುವವನೂ ಒಬ್ಬನೇ ತಾನೆ ? ಭೇದ ಭಾವ ಎನ್ನುವುದು ಬಂದಿತಾದರೂ ಎಲ್ಲಿಂದ ? ಈ ವಿಷಯವನ್ನು ನನಗೆ ಮನದಟ್ಟಾಗುವಂತೆ ತಿಳಿಸಿದವರು ಕಂಚಿ ಪರಮಾಚಾರ್ಯರು. ಆದಿಶಂಕರರ ಅದ್ವೈತ ತತ್ತ್ವವನ್ನು-ಎಂದರೆ ಸಮಸ್ತ ಜೀವರಾಶಿಗಳಲ್ಲಿ ಇರುವವನು ಒಬ್ಬನೇ, ಆತನೇ ಪರಮಾತ್ಮ ಎಂದು ವಿವರಿಸಿದ್ದಾರೆ. ಇದು ನನ್ನ ಮೇಲೆ ಅಗಾಧ ಪರಿಣಾಮ ಬೀರಿದೆ.

ನೆನ್ನೆ ನಡೆದ ಹಾಗಿದೆ. ಕಂಚಿ ಪರಮಾಚಾರ್ಯ ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಯವರಿಗೆ ನನ್ನನ್ನು ಕಂಡರೆ ಬಹಳ ವಿಶ್ವಾಸ. ೧೯೫೦ಳರಲ್ಲಿ ವೇದರಕ್ಷಣ ಸಮಿತಿಗೆ ಭೇಟಿ ಕೊಡಲು ಪರಮಾಚಾರ್ಯರು ಬೆಂಗಳೂರಿಗೆ ಬಂದಾಗ, ಅವರು ಮಾಡಿದ ಭಾಷಣವನ್ನು ಅನುವಾದ ಮಾಡಿ ಹೇಳಲು ನನಗೆ ಹೇಳಲಾಗಿತ್ತು. ಸ್ವಾಮಿಗಳ ತಮಿಳಿನ ಭಾಷಣವನ್ನು ನಾನು ಕನ್ನಡಕ್ಕೆ ಅನುವಾದ ಮಾಡಿ ಹೇಳಿದುದು ಸ್ವಾಮಿಗಳಿಗೆ ಬಹಳ ಸಂಪ್ರೀತಿಯಾಯಿತು. ಇದು ನಮ್ಮ ಮೊದಲ ಭೇಟಿಯಾಗಿತ್ತು. ಅವರ ಮಾತು-ಕತೆ ಅವರಲ್ಲಿ ಎಂಥದೋ ಶಕ್ತಿ ಇದೆಯೆಂದು ಭಾಸವಾಗುವಂತೆ ಮಾಡುತ್ತಿತ್ತು. ಹಾಗೆಂದು ಅವರು ಸುಲಭವಲ್ಲ ಎನಿಸುತ್ತಲೂ ಇರಲಿಲ್ಲ. ಅವರು ಬಹಳ ಸುಲಭರು, ಇಲ್ಲಿ ನನ್ನ ಅರ್ಥ 'ಪರಮಾಚಾರ್ಯರು ಸಾಮಾನ್ಯರಿಗೆ ಎಟುಕುವಂತಹವರಲ್ಲ' ಎನ್ನುವಂತಿರಲಿಲ್ಲ. ಅವರಲ್ಲಿ ಅಗಾಧವಾದ ಜ್ಞಾನವಿದ್ದರೂ ಜೊತೆಗೆ ಮಗುವಿನ ಮುಗ್ಧತೆಯನ್ನೂ ನಾವು ಕಾಣಬಹುದಿತ್ತು!! ಇದೇ ಅವರ ವ್ಯಕ್ತಿತ್ವದ ವೈಶಿಷ್ಟ್ಯ! ನಾವು ಮಗುವನ್ನು, ಅದರಲ್ಲಿ ಮುಗ್ಧತೆ ಇರುವುದರಿಂದ ಜ್ಞಾನಿ ಎನ್ನಲಾಗದು. ಆದರೆ ಜ್ಞಾನಿಗಳಲ್ಲಿ ಮಗುವಿನ ಮುಗ್ಧತೆ ಇರಲು ಸಾಧ್ಯ ಎಂದು ಪರಮಾಚಾರ್ಯರನ್ನು ಭೇಟಿ ಮಾಡಿದವರಿಗೆ, ಅವರ ಸಂಪರ್ಕದಲ್ಲಿದ್ದವರಿಗೆ ತಿಳಿಯುತ್ತಿತ್ತು. ಅವರಲ್ಲಿನ ಈ ಮೇಳವನ್ನು ನೋಡಿ ನಾನು ಆಶ್ಚರ್ಯಪಡುತ್ತಿದ್ದೆ. ಪರಮಾಚಾರ್ಯರು ಅದೆಷ್ಟು ಸರಳರು ಎನಿಸುತ್ತಿತ್ತು.

ಅನಂತರ ನಾನು ವೇದರಕ್ಷಣ ಸಮಿತಿಯ ಕಾರ್ಯದರ್ಶಿಯೂ ಆದೆ. ಪರಮಾಚಾರ್ಯರು 'ಕಾಮಕೋಟಿ ಪ್ರಭಾ' ಎನ್ನುವ ಆಧ್ಯಾತ್ಮಿಕ ವಿಷಯಗಳನ್ನು ಪ್ರಕಟಿಸುವ ಪುಟ್ಟ ಮಾಸಪತ್ರಿಕೆಯೊಂದನ್ನು ಕಂಚಿಯಿಂದ ಪ್ರಕಟಿಸುತ್ತಿದ್ದರು. ಅದು ತಮಿಳಿನ ಪತ್ರಿಕೆ. ಸ್ವತಃ ಕನ್ನಡ ಭಾಷೆಯನ್ನೂ ಚೆನ್ನಾಗಿ ತಿಳಿದಿದ್ದ ಪರಮಾಚಾರ್ಯರು ನನಗೆ ಈ 'ಕಾಮಕೋಟಿಪ್ರಭಾ' ಪತ್ರಿಕೆಯನ್ನು ಕನ್ನಡದಲ್ಲಿಯೂ ತರಲು ನನಗೆ ಅವಕಾಶ ಕೊಟ್ಟರು. ಅವರಿಗೆ ನನ್ನ ಮೇಲೆ ಬಹಳ ಅಭಿಮಾನ. ಆದರೆ ಆರ್ಥಿಕ ಸಹಾಯ? ಕೆನರಾ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವೆಂಕಟರಾಮನ್‌ರು, ಈ ಪತ್ರಿಕೆ ಕನ್ನಡದಲ್ಲಿ ಬರಲು ತಾವು ಆರ್ಥಿಕ ಸಹಾಯ ನೀಡುವುದಾಗಿ ಭರವಸೆ ನೀಡಿದರು. ಹೀಗೆ ಕನ್ನಡದಲ್ಲಿಯೂ 'ಕಾಮಕೋಟಿ ಪ್ರಭಾ'ದ ಕೆಲಸ ನಿರ್ವಹಿಸಲು ಶುರು ಮಾಡಿದ ಮೇಲೆ ಪರಮಾಚಾರ್ಯರನ್ನು ಆಗಾಗ ಸಂಧಿಸುವುದು ಅನಿವಾರ್ಯವಾಯಿತು. ಹೀಗೆ ನನಗೆ ಬಹಳ ಬೇಗ ಪರಮಾಚಾರ್ಯರ ದರ್ಶನ ಆಗುತ್ತಿತ್ತು. ಪರಮಾಚಾರ್ಯರ ವ್ಯಕ್ತಿತ್ವ, ಸ್ವಭಾವ, ಜ್ಞಾನ ಇವುಗಳು ನನ್ನೆದುರು ಬೃಹದಾಕಾರವಾಗಿ ಬೆಳೆದು ನಿಂತವು. ಅಷ್ಟು ಪುಟ್ಟ ಶರೀರದಲ್ಲಿ ಇಷ್ಟೊಂದು ಗುಣಗಳಿಗೆ ಅದೆಲ್ಲಿ ಸ್ಥಳ ಇದೆಯೋ ಎನಿಸುತ್ತಿತ್ತು. ದಿನದಿಂದ ದಿನಕ್ಕೆ ಅವರ ಬಗೆಗಿನ ಮೆಚ್ಚುಗೆ ಹೆಚ್ಚಾಗುತ್ತಲೇ ಹೋಯಿತು. ಅವರು ಯಾವ ರೀತಿಯಲ್ಲೂ ಭಕ್ತರಿಗೆ ಚಮತ್ಕಾರಗಳನ್ನು ಮಾಡಿ ತೋರಿಸುತ್ತಿರಲಿಲ್ಲ. ಆದರೆ ಅವರ ದರ್ಶನಕ್ಕೆ ಹೋಗಿ, ಅವರಿಗೆ ಸ್ವಲ್ಪ ದೂರದಲ್ಲಿ ಅವರೆದುರು ಕುಳಿತಾಗ ಎಂಥದೋ ಶಕ್ತಿಯ ಪ್ರಭಾ ಮಂಡಲದ ಪರಿಧಿಯ ಒಳಗೆ ನಾವು ಕುಳಿತಿದ್ದೇವೆ ಎನಿಸುತ್ತಿದ್ದುದಂತೂ ನೂರಕ್ಕೆ ನೂರರಷ್ಟು ನಿಜ! ಅದು ನಮ್ಮ ಅನುಭವಕ್ಕೂ ಬರುತ್ತಿತ್ತು. ಸ್ವಾಮೀಜಿಗಳಾದರೂ ಅವರ ಸಾಮಾಜಿಕ ಕಳಕಳಿ ಕಂಡರೆ, ಪರಮಾಚಾರ್ಯರು ಹೊರಗಿನ ಪ್ರಪಂಚದ ಆಗು ಹೋಗುಗಳನ್ನು ಅದೆಷ್ಟು ಚೆನ್ನಾಗಿ ಗಮನಿಸುತ್ತಾರೆ, ಸಮಾಜದಲ್ಲಿ ಬಾಳುವ ಮನುಷ್ಯ ತಮ್ಮ ಸಹಜೀವಿ ಎಂದು ಅದೆಷ್ಟು ಅಕ್ಕರೆ ತೋರಿ ಕಾಳಜಿ ವಹಿಸುತ್ತಾರೆ ಎನಿಸುತ್ತಿತ್ತು. ಹಾಗೆಂದು 'ತಾವು ಸ್ವಾಮೀಜಿ ; ತಮಗೇಕೆ ಈ ಪ್ರಪಂಚದ ಗೊಡವೆ?' ಎಂದು ಹೊರಗಿನದನ್ನು ಗಮನಿಸಿಯೂ ಅವರು ಸುಮ್ಮನಾಗುತ್ತಿರಲಿಲ್ಲ. ಆ ರೀತಿಯದನ್ನು ಸರಿಪಡಿಸಲು ತಮ್ಮ ಜಪ-ತಪ ಶಕ್ತಿಯಿಂದ ಸಾಧ್ಯವಾಗುವುದಾದರೆ, ಅದಕ್ಕೆಂದೇ ತಪಸ್ಸನ್ನು ಮಾಡುತ್ತಿದ್ದರು! ಅದಕ್ಕೇ ಕಂಚಿ ಪರಮಾಚಾರ್ಯರ ಸುತ್ತಲೂ ಅವರಲ್ಲಿದ್ದ ಶಕ್ತಿಯ ಬಗೆಗೆ ಅನೇಕ ಕತೆಗಳು ಪ್ರಚಾರದಲ್ಲಿವೆ. ಅದರ ಸತ್ಯಾಸತ್ಯತೆಗಳು ಅದನ್ನು ಹೇಳುವವರಿಗೆ ಗೊತ್ತು. ಆದರೆ, ಪರಮಾಚಾರ್ಯರಲ್ಲಿ ಒಂದು 'ಅಲೌಕಿಕ ಶಕ್ತಿ' ಇದ್ದುದಂತೂ ನಿಜ ಎಂದೇ ನನ್ನ ಭಾವನೆಯು ಸಹ! ಆದರೆ ಅವರು ಅದನ್ನು ಕಡಮೆ ದರ್ಜೆಯ ಪವಾಡ-ಚಮತ್ಕಾರಗಳಿಗಾಗಿ ಉಪಯೋಗಿಸಿ ತಮ್ಮ ಶಕ್ತಿ ನಷ್ಟ ಮಾಡಿಕೊಳ್ಳುತ್ತಿರಲಿಲ್ಲ. ಅದಕ್ಕೇ ಪರಮಾಚಾರ್ಯರು ಪ್ರಯೋಗಶೀಲರಾಗಿದ್ದುದು. ಮಾಡಿ ತೋರಿಸುವುದರಲ್ಲಿ ಯಶ ಅಡಗಿರುತ್ತದೆ ಎನ್ನುತ್ತಿದ್ದರು.

ಅವರ ಈ ಪ್ರಯೋಗಶೀಲತೆಗೆ ಒಂದು ಸೊಗಸಾದ ಉದಾಹರಣೆ ಎಂದರೆ, ಬೆಂಗಳೂರಿನ 'ಬಡ ಬ್ರಾಹ್ಮಣ ವಿದ್ಯಾರ್ಥಿಗಳ ಸಂಘ' ಮಲ್ಲೇಶ್ವರಂನಲ್ಲಿತ್ತು. ಸಂಘದಲ್ಲಿದ್ದ ವಿದ್ಯಾರ್ಥಿಗಳಿಗೆ ಒಂದು ಹೊತ್ತು ಊಟಕ್ಕೂ ಕಷ್ಟ. ಭಿಕ್ಷಾನ್ನದ ಅಭ್ಯಾಸ ಸಂಪೂರ್ಣವಾಗಿ ಹೊರಟು ಹೋಗಿತ್ತು. ವಾರಾನ್ನವನ್ನು ಯಾರೂ ಮಾಡುತ್ತಿರಲಿಲ್ಲ. ಅವರ ಈ ಬವಣೆ ಪರಮಾಚಾರ್ಯರ ಕಿವಿಗೆ ಬಿದ್ದಿತು. ಆಗ ಅವರು ಮಲ್ಲೇಶ್ವರಂನಲ್ಲಿರುವ ಮನೆಗಳಲ್ಲಿನ ಗೃಹಿಣಿಯರಿಗೆ ಒಂದು ಕರೆ ಕೊಟ್ಟರು. "ಪ್ರತಿದಿನವೂ ನೀವು ಅಡುಗೆ ಮಾಡುವಾಗ, ಇದು ವೇದರಕ್ಷಣ ಸಮಿತಿಗೆ ಅಥವಾ ನಮ್ಮ 'ವೇದರಕ್ಷಣೆ'ಗೆ ಎಂದು ಹೇಳಿಕೊಂಡು ಒಂದು ಹಿಡಿ (ಒಂದು ಮುಷ್ಟಿ) ಅಕ್ಕಿಯನ್ನು ಪ್ರತ್ಯೇಕವಾಗಿಟ್ಟು ಅನಂತರ ಅಡುಗೆ ಪ್ರಾರಂಭಿಸಿ; ಅಷ್ಟೇ ಸಾಕು... ಅಷ್ಟನ್ನೇ ವೇದರಕ್ಷಣ ಸಮಿತಿಗೆ ತಂದುಕೊಡಿ. ಸಮಿತಿಯು ಈ ಬಡಬ್ರಾಹ್ಮಣ ವಿದ್ಯಾರ್ಥಿಗಳ ಊಟ-ತಿಂಡಿಗಳ ವ್ಯವಸ್ಥೆಯನ್ನು ನೋಡಿಕೊಳ್ಳುತ್ತದೆ" ಎಂದು ಹೇಳಿದರು. ಪರಮಾಚಾರ್ಯರ ಈ ಕರೆಗೆ ಪ್ರತಿಯೊಬ್ಬ ಗೃಹಿಣಿಯೂ ಸ್ಪಂದಿಸಿದರು. ತಿಂಗಳೊಂದರಲ್ಲಿ ಸುಮಾರು ೫೦ ಮೂಟೆ ಅಕ್ಕಿ ಬಂದು ಉಗ್ರಾಣ ತುಂಬಿತು!! ವಿದ್ಯಾರ್ಥಿಗಳಿಗೆ ಊಟಕ್ಕೆ ಬೇಕಾದಷ್ಟು ಅಕ್ಕಿಯನ್ನು ಇಟ್ಟುಕೊಂಡು, ಮಿಕ್ಕ ಅಕ್ಕಿ ಮೂಟೆಗಳನ್ನು ಮಾರಿ, ಉಳಿದ ದಿನಸಿ ಸಾಮಾನುಗಳನ್ನು ತಂದು ವಿದ್ಯಾರ್ಥಿಗಳ ಎರಡು ಹೊತ್ತು ಊಟಕ್ಕೆ ಯಾವುದೇ ಕಷ್ಟವಿಲ್ಲದಂತೆ ಮಾಡಲಾಯಿತು! ಇದು...! ಇಂಥದೇ ಪರಮಾಚಾರ್ಯರು ಮಾಡುತ್ತಿದ್ದ ಚಮತ್ಕಾರಗಳು! ಆದರೆ ಅವರೆಂದೂ ಯಾವ ಪ್ರಚಾರವನ್ನೂ ಬಯಸಿದವರಲ್ಲ.

ನಾನು ಲಂಡನ್‌ಗೆ ಹೋಗುವ ಮೊದಲು, 'ಕಲವೈ' ಎನ್ನುವ ಅವರು ಹುಟ್ಟಿದೂರಿಗೆ ನನ್ನನ್ನು ಕರೆಸಿಕೊಂಡರು. ಅವರು ಅಲ್ಲೇ ತಮ್ಮ ಚಾತುರ್ಮಾಸವನ್ನು ಮಾಡುತ್ತಿದ್ದುದು. ಅಲ್ಲಿಗೆ ನಾನು ಹೋದಾಗ ಕುಮಾರವ್ಯಾಸಭಾರತದ ಕಥೆ ಮಾಡಲು ಹೇಳಿದರು. ನಾನು "ಯಾವ ಭಾಗವನ್ನು ಮಾಡುವುದು? ನೀವೇ ಹೇಳಿ ಸ್ವಾಮೀಜಿ" ಎಂದೆ. ಒಂದು ಗಳಿಗೆ ಸುಮ್ಮನಿದ್ದು, "ನೀನು ಈಗ ನಮ್ಮ ಸಂಸ್ಕೃತಿ ಪ್ರಚಾರಕ್ಕೆಂದೇ ಲಂಡನ್‌ಗೆ ಹೋಗುತ್ತಿದ್ದೀಯೆ. ಆದ್ದರಿಂದ ಈಗ 'ಶ್ರೀ ಕೃಷ್ಣರಾಯ ಭಾರ' ಕಥಾಭಾಗವನ್ನೇ ಮಾಡು" ಎಂದು ಹೇಳಿದರು. ಹಾಗೆ ಅವರು ಯೋಚಿಸುತ್ತಿದ್ದುದು!

ನಾನು ಲಂಡನ್‌ನಿಂದ ಬಂದಾಗಲೆಲ್ಲ ತಪ್ಪದೇ ಪರಮಾಚಾರ್ಯರ ದರ್ಶನ ಮಾಡಿ ಬರುತ್ತಿದ್ದೆ. ಹೀಗೆ ಒಮ್ಮೆ ಭೇಟಿಯಾದಾಗ ಅವರು ಲಂಡನ್ ಕೇಂದ್ರದ ಯಶಸ್ಸನ್ನೂ, ಉನ್ನತ ಸಾಧನೆಯನ್ನೂ ಕೇಳಿ ಸಂತೋಷಗೊಂಡವರಾದರೂ, ತುಸು ಯೋಚಿಸಿ, "ಅಲ್ಲಿ ಯಶ ಕಂಡೆ ಎಂದು ಅಲ್ಲಿಯೇ ಇದ್ದುಬಿಡಬೇಡ! ಇಲ್ಲಿ ನಿನಗೆ ಮಾಡಲು ಬೇಕಾದಷ್ಟು ಕೆಲಸಗಳಿವೆ. ನೀನು ನಿವೃತ್ತನಾಗಿ ಬಂದು ನಿನ್ನನ್ನು ನಿರೀಕ್ಷಿಸುತ್ತಿರುವ ಕೆಲಸಗಳನ್ನು ಕೈಗೆತ್ತಿಕೋ... ನಿವೃತ್ತಿಯ ನಂತರ ಶರೀರಕ್ಕೆ ವಯಸ್ಸಾಗಿರುತ್ತದೆ. ಮನಸ್ಸು - ಹೃದಯದಲ್ಲಿ ಉತ್ಸಾಹವಿದ್ದರೂ, ವಯಸ್ಸಿನ ಪ್ರಭಾವದಿಂದ ಬುದ್ಧಿಶಕ್ತಿಯ ತೀಕ್ಷ್ಣತೆ ಕಡಮೆಯಾಗಬಹುದು. ಇದು ಹೀಗೇ ಎಂದು ಯಾರೂ ಹೇಳಲು ಸಾಧ್ಯವಿಲ್ಲ. ಒಟ್ಟಾರೆ ಎಲ್ಲಿಗೇ ಹೋಗಿ ನಿನ್ನ ಕೆಲಸ ಮಾಡಿದರೂ ಭಾರತಕ್ಕೇ ವಾಪಸಾಗಿ, ಇಲ್ಲಿ ನೆಲೆಸುವುದನ್ನು ಮಾತ್ರ ಮರೆಯಬೇಡ!!" ಎಂದರು.

ನನ್ನ ಆಶ್ಚರ್ಯಕ್ಕೆ ಪಾರವಿಲ್ಲ! ಇಂದು ನಾನು ಕೈಗೆತ್ತಿಕೊಂಡಿರುವ ಹಲವಾರು ಯೋಜನೆಗಳು, ಕೆಲಸ ಕಾರ್ಯಗಳನ್ನು ಗಮನಿಸಿದರೆ, ಇಂದಾಗುತ್ತಿರುವುದನ್ನು ಪರಮಾಚಾರ್ಯರು ಹಲವು ವರ್ಷಗಳ ಮುಂಚೆಯೇ ನಿರೀಕ್ಷಿಸಿ ಭವಿಷ್ಯ ಕಂಡವರಂತೆ ಹೇಳಿದ್ದರು!!

ಈ ಎಪ್ಪತ್ತೈದರ ಇಳಿವಯಸ್ಸಿನಲ್ಲಿಯೂ ನನ್ನ ಕೆಲಸ ಕಾರ್ಯಗಳು, ಹೊತ್ತಿರುವ ಅನೇಕ ಜವಾಬ್ದಾರಿಗಳನ್ನು ನೆನೆದರೆ, ಅದಕ್ಕೆ ತಕ್ಕಂತೆ ಮನಸ್ಸು-ಬುದ್ಧಿಗಳು ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡಿ ಕೈಗೊಂಡ ಕಾರ್ಯನಿರ್ವಹಣೆಗೆ ಸಹಾಯ ಮಾಡುತ್ತಿರುವುದನ್ನು ನೋಡಿದರೆ, 'ಇದರಲ್ಲಿ ನನ್ನ ಪಾಲು ಏನೂ ಇಲ್ಲ, ಇದೆಲ್ಲವೂ ಆ ಪರಮಾಚಾರ್ಯರ ಪ್ರೀತಿಯ ಆಶೀರ್ವಾದ ಹಾಗೂ ನನ್ನ ಮೇಲೆ ಅವರು ಇಟ್ಟಿದ್ದ ಅಭಿಮಾನ, ಅವರದೇ ಕೃಪೆಯ ಫಲ' ಎನಿಸುತ್ತದೆ ನಿಜಕ್ಕೂ... ಇದು ಅವರು ನನಗೆ ಕೊಟ್ಟಿರುವ 'ಶಕ್ತಿ' ಎಂದೇ ನನ್ನ ನಂಬಿಕೆ. ಹಿಂದೆ ಬ್ರಹ್ಮರ್ಷಿಗಳ ಪಟ್ಟಕ್ಕೇರಿದ ವಿಶ್ವಾಮಿತ್ರರನ್ನು ವಸಿಷ್ಠರು ಜಗತ್ತಿಗೆಲ್ಲ ಬೇಕಾಗುವ ಜ್ಞಾನಸಂಪಾದನೆಗೆ ದಾರಿಯಾಗುವ ಶಕ್ತಿಯುತ ಮಂತ್ರವೊಂದನ್ನು ಕಂಡು ಹಿಡಿಯಿರಿ ಎಂದು ಹೇಳಿದಾಗ, ವಿಶ್ವಾಮಿತ್ರರು ತಮ್ಮ ತಪಶ್ಶಕ್ತಿಯನ್ನೆಲ್ಲ ಸೇರಿಸಿ ಧ್ಯಾನ ಮಾಡಿದಾಗ, ಅವರ ಶಕ್ತಿ ಆ ದಿವ್ಯಮಂತ್ರವನ್ನು ಕಾಣುವುದಕ್ಕೆ ಸಾಲದಾಗಿಹೋಯಿತು. ಆಗ ಮಹರ್ಷಿ ವಿಶ್ವಾಮಿತ್ರರು ಎಲ್ಲ ಋಷಿಗಳನ್ನೂ ಅವರವರ ತಪಶ್ಶಕ್ತಿಯನ್ನೆಲ್ಲ ತಮಗೆ ಧಾರೆ ಎರೆದು ಕೊಡಲು ಕೇಳಿದರು. ತಪಸ್ಸು ಮಾಡಿ ಶಕ್ತಿಯನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದೇ ಋಷಿಗಳ ಕೆಲಸ. ಆಗ ಎಲ್ಲ ಋಷಿಗಳೂ ವಿಶ್ವಾಮಿತ್ರರ ಈ ಬೇಡಿಕೆಯನ್ನು ಮನ್ನಿಸಿ ತಮ್ಮ ತಮ್ಮ ತಪಶ್ಶಕ್ತಿಯನ್ನೆಲ್ಲ ವಿಶ್ವಾಮಿತ್ರರಿಗೆ ಧಾರೆ ಎರೆದು ಕೊಟ್ಟರು.

ಆಗ ಆ ತಪಶ್ಶಕ್ತಿಯನ್ನೆಲ್ಲ ಕೂಡಿಸಿಕೊಂಡ ವಿಶ್ವಾಮಿತ್ರರು ದಿವ್ಯವಾದ 'ಗಾಯತ್ರೀ ಮಂತ್ರ'ವನ್ನು ಕಂಡ ಭಾಗ್ಯಶಾಲಿ ದ್ರಷ್ಟಾರರಾದರು. ಅದನ್ನು ಪ್ರಪಂಚಕ್ಕೆ ಕೊಟ್ಟರು! ದೇವರನ್ನು "ಕೇವಲ ಜ್ಞಾನವನ್ನು ಮಾತ್ರ ಕೊಟ್ಟು, (ಮತ್ತೇನೂ ಬೇಕಿಲ್ಲ) ನನ್ನನ್ನು ಕಾಪಾಡು, ನನ್ನಲ್ಲಿ ಜ್ಞಾನಜ್ಯೋತಿ ಬೆಳಗುವಂತೆ ಮಾಡು" ಎಂದು ಕೇಳುವ ಏಕೈಕ ಮಂತ್ರ ಎಂದರೆ ಗಾಯತ್ರೀ ಮಂತ್ರ ಮಾತ್ರ !! "ನೀನು ಕೊಡುವ ಜ್ಞಾನದಿಂದ ನಾನು ಸಾಧಿಸಿಕೊಳ್ಳುತ್ತೇನೆ. ಆದ್ದರಿಂದ ಜ್ಞಾನದ ವಿನಾ ಮತ್ತೇನೂ ಬೇಡ" ಎನ್ನುವ ಅರ್ಥ ಹೇಳುವ ಈ ಮಂತ್ರ ಎಲ್ಲ

ಮಹಾತ್ಮರ ತಪಶ್ಯಕ್ತಿಯನ್ನು ಹೊಂದಿರುವ ಪರಮ ಪುಣ್ಯ ಮಂತ್ರ ! ಇಲ್ಲಿ ಗಾಯತ್ರೀ ಮಂತ್ರ ನಮಗೆ ಹೇಗೆ ಸಿಕ್ಕಿತು ಎನ್ನುವುದರ ಬಗ್ಗೆ ನಿಮಗೆ ಹೇಳಿರುವ ಉದ್ದೇಶ ಇಷ್ಟೇ - ಹೀಗೆ ತಪಶ್ಯಕ್ತಿಯನ್ನು ಹೊಂದಿದಾಗ ಅದೆಷ್ಟು ಪ್ರಭಾವಶಾಲಿಯೂ ಶಕ್ತಿಶಾಲಿಯೂ ಆಗಬಹುದು ಎನ್ನುವುದನ್ನು ನಿರೂಪಿಸುವ ಈ ದೃಷ್ಟಾಂತವನ್ನು ನಾನು ಸದಾ ನೆನೆಯುತ್ತಿರುತ್ತೇನೆ. ಏಕೆಂದರೆ ಕಂಚಿ ಪರಮಾಚಾರ್ಯರ ದಿವ್ಯ ತಪಶ್ಯಕ್ತಿ ನನ್ನನ್ನು ಹೀಗೆ ಕೆಲಸ ಮಾಡುವಂತೆ ಮಾಡಿದೆ ಎಂದೇ ನನ್ನ ನಂಬಿಕೆ. ಇದರಲ್ಲಿ ಬೇರೆ ಮಾತಿಲ್ಲ. ಅವರ ಕೃಪಾಪೋಷಿತ ನನ್ನ ಈ ಶಕ್ತಿ . ಅವರ ಭೌತಿಕ ದೇಹ ಈ ಪ್ರಪಂಚದಲ್ಲಿ ಈಗ ಇಲ್ಲದಿದ್ದರೂ, ಅವರ ದಿವ್ಯಾತ್ಮ ನನ್ನನ್ನು ಸದೈವ ಕಾಪಾಡುತ್ತದೆ... ಆ ಭರವಸೆ ಯಿಂದಲೇ ನನ್ನ ಬದುಕೂ ನಡೆಯುತ್ತಿದೆ!!

ದಿವ್ಯಶಕ್ತಿಯ ಕೃಪೆ

ಯಾರಲ್ಲಿ ಯಾವ ಶಕ್ತಿ ಇರುತ್ತದೆಯೋ ತಿಳಿಯದು ಎಂದು ನಾನು ಹೇಳಿದುದು ನಿಮ್ಮ ನೆನಪಿನಲ್ಲಿದ್ದೀತು. ಹೀಗೆ ಅದು ನನ್ನ ಅನುಭವಕ್ಕೆ ಇನ್ನೊಂದು ರೀತಿಯಲ್ಲಿ ಬಂದದ್ದು. ನಾನು ಎರಡು ವರ್ಷಗಳ ಹಿಂದೆ ಅಲಹಾಬಾದಿನಲ್ಲಿ ನಡೆದ ಕುಂಭಮೇಳಕ್ಕೆ ಹೋಗಿದ್ದಾಗ, ಲಕ್ಷಾಂತರ ಜನ, ಎಲ್ಲೆಲ್ಲಿ ತಿರುಗಿ ನೋಡಿದರೂ ಅಲ್ಲಿ ಜನ, ಜನ, ಜನ! ಆಗ ಬಡೀಮಾ ಅವರು ನನ್ನನ್ನು ಅಲ್ಲಿಗೆ ಕರೆಸಿಕೊಂಡಿದ್ದರು. ಪ್ರತಿದಿನ ಸಂಜೆ ವಾಯುವಿಹಾರಕ್ಕೆ ಹೋಗುತ್ತಿದ್ದ ನಾನು ಅಲ್ಲೇ ಹತ್ತಿರದಲ್ಲಿದ್ದ ಸಂಗಮದ ಬಳಿ ಹೋಗಿ ಕುಳಿತುಕೊಳ್ಳುವುದಿತ್ತು. ಅಲ್ಲಿ ಬಹಳ ಮಂದಿ ಸಂನ್ಯಾಸಿಗಳನ್ನೂ, ಸಾಧು ಸಂತರನ್ನೂ ನೋಡಿದೆ. ಒಂದು ದಿನ ಒಬ್ಬ ಸಂನ್ಯಾಸಿ ಕೈ ಎತ್ತಿಕೊಂಡಿರುವವ, ಎಷ್ಟು ಹೊತ್ತಾದರೂ ಕೈ ಇಳಿಸದೇ ಇದ್ದ. ನಾನೂ ಬಹಳ ಹೊತ್ತು ಗಮನಿಸಿ ಅಲ್ಲೇ ಹತ್ತಿರದಲ್ಲಿದ್ದವರನ್ನು ಕೇಳಿದಾಗ ತಿಳಿಯಿತು. ಆ ಸಂನ್ಯಾಸಿ ಅದೆಷ್ಟೋ ವರ್ಷಗಳಿಂದ ತನ್ನ ಬಲಗೈಯನ್ನು ನೇರವಾಗಿ ಆಕಾಶದತ್ತ ಎತ್ತಿಕೊಂಡೇ ಇದ್ದಾನಂತೆ. ಆ ಕೈ ಹಾಗೆಯೇ ನಿಂತು ಹೋಗಿದೆ!! ಇದನ್ನು ಯಾವ ಶಕ್ತಿ ಎನ್ನಬೇಕು? ಹಾಗೆಯೇ ಮತ್ತೊಂದು ದಿನ ಇನ್ನೊಬ್ಬ ಸಂನ್ಯಾಸಿ ಬೊಗಸೆ ಹಿಡಿದು ಭಿಕ್ಷೆ ಬೇಡುವವ, ಯಾರ ಮನೆಯಲ್ಲಿ ಏನು ಕೈಗೆ ಹಾಕಿದರೂ ಆ ಬೊಗಸೆ ಎಷ್ಟು ಹಿಡಿಸುವುದೋ ಅಷ್ಟೇ ಪ್ರಮಾಣವನ್ನು ಹಾಗೆಯೇ ತೆಗೆದುಕೊಂಡು ಹೋಗಿ ನದಿಯಲ್ಲಿ ಆ ಕೈ ಮುಳುಗಿಸುವುದು, ಎರಡು ಮೂರು ಬಾರಿ ಹೀಗೆ ಮಾಡಿದಾಗ ಆ ಆಹಾರದಲ್ಲಿನ ಉಪ್ಪು, ಹುಳಿ, ಖಾರಗಳ ಅಂಶ ಹೊರಟು ಹೋಗುತ್ತದೆ. ಅನಂತರ ಕೈಯಲ್ಲಿ ಶುಚಿಯಾಗಿ ಮಿಕ್ಕದ್ದನ್ನು ಹಾಗೆಯೇ ತಿನ್ನುವುದು. ಅಂದಿಗೆ ಅಷ್ಟೇ ಆಹಾರ. ಮತ್ತು ಇನ್ನು ನಾಳೆಗೇ ಅವನ ಆಹಾರ! ಇಂತಹ ಸಂನ್ಯಾಸಿಗಳಿಗೆ 'ಕರಪಾತ್ರ ಸಂನ್ಯಾಸಿ' ಎನ್ನುತ್ತಾರಂತೆ. ಅಷ್ಟೇ ಆಹಾರ ಸೇವಿಸಿ ಅವನು ಅದೆಷ್ಟೋ ವರ್ಷಗಳನ್ನು ಸವೆಸಿದ್ದಾನೆ! ಹೀಗೆ ಕೆಲವರಿಗೆ ಕೆಲವು ಶಕ್ತಿಗಳು ಸಿದ್ಧಿಸಿರುತ್ತವೆ.

ನಾನು ಸಂಯುಕ್ತ ಕರ್ನಾಟಕದಲ್ಲಿ ಕೆಲಸ ಮಾಡುತ್ತಿದ್ದಾಗ ಶ್ರೀ ಆರ್. ಆರ್. ದಿವಾಕರರು ಅಲ್ಲಿನ ಪ್ರಧಾನ ಸಂಪಾದಕರು. ಅವರ ಮಗ ಶ್ರೀ ಅನಂತ್ ; ಅವರ ಸೊಸೆ ಶ್ರೀಮತಿ ಶಾಂತಾ ಅವರು ಶ್ರೀ ಜಿ.ಎ. ಆಚಾರ್ಯ ಅವರ ಮಗಳು. ಆಚಾರ್ಯರು ಎಂ.ಇ.ಎಸ್. ಕಾಲೇಜನ್ನು ಸ್ಥಾಪನೆ ಮಾಡಿದವರು ; 'ಬೆಂಗಾಲ್ ಲ್ಯಾಂಪ್ಸ್'ನ ಅಧ್ಯಕ್ಷರಾಗಿದ್ದವರು, ಬಹಳ ಗಣ್ಯವ್ಯಕ್ತಿ. ಆತ ಬಹಳ ಉದಾರಿ, ಗಾಂಧೀವಾದಿ. ಅವರಿಗೆ ತಕ್ಕ ಮಗಳು ಶಾಂತಾ. ಶಾಂತಾ ಶ್ರೀ ಸತ್ಯಸಾಯಿ ಬಾಬಾರ ಭಕ್ತೆ. ಅವರು ಭಜನೆಗೆ, ಉಪನ್ಯಾಸಕ್ಕೆ ಆಗಾಗ ವೈಟ್‌ಫೀಲ್ಡ್‌ಗೆ ಹೋಗುವುದಿತ್ತು. ಅವರಿಗೆ ನನ್ನನ್ನೂ ಒಮ್ಮೆ ಬಾಬಾರ ಬಳಿಗೆ ಕರೆದೊಯ್ಯಬೇಕು ಎಂದು ಆಸೆ. ಆಗಾಗ 'ಬನ್ನಿ' ಎಂದು ನನ್ನನ್ನು ಕರೆಯುತ್ತಿದ್ದರು. ನಾನೂ ಅದನ್ನು ಮುಂದಕ್ಕೆ ಹಾಕುತ್ತಲೇ ಹೋದೆ. ಹೋಗಬಾರದು ಎಂದು ನನ್ನ ಅಭಿಪ್ರಾಯ ಆಗಿರಲಿಲ್ಲ. ಆದರೆ ಅದರ ಬಗ್ಗೆ ವಿಶೇಷವಾಗಿ ಅಂಥ ಆಸಕ್ತಿಯೂ ಇರಲಿಲ್ಲ. ಅಲ್ಲಿಗೆ ಹೋಗುವವರು ಏನಾದರೂ ಕೇಳಿಕೊಳ್ಳಲು , ಮನದ ಬೇಡಿಕೆ ಹೇಳಿಕೊಳ್ಳಲು ಹೋಗುತ್ತಾರೆ ಎಂದೇ ನನ್ನ ಭಾವನೆ. ನನಗೆ ಅಂತಹುದೇನೂ ಇಲ್ಲದ ಕಾರಣ ಎಂದಾದರೂ ಒಮ್ಮೆ ಹೋದರಾಯಿತು ಎನ್ನುವ ಅಭಿಪ್ರಾಯ ಅಷ್ಟೇ. ಅಂತೂ ಒಂದು ಭಾನುವಾರ ಶಾಂತಮ್ಮನ ಒತ್ತಾಯಕ್ಕೆ ಮಣಿದು ಅವರ ಜತೆ ಬಾಬಾರ ದರ್ಶನಕ್ಕೆ ನಾನೂ ಹೋಗಲೇಬೇಕಾಯಿತು! ಪ್ರತಿ ಬೇಸಿಗೆಯಲ್ಲೂ ಬಾಬಾ ಬೆಂಗಳೂರಿನ ವೈಟ್‌ಫೀಲ್ಡ್‌ಗೆ ಬರುತ್ತಿದ್ದರು. ನಾನೂ ಆಗಾಗ ಅಲ್ಲಿಗೆ ಹೋಗಿ ಸುದ್ದಿ ಬರೆಯುವುದಿತ್ತು. ಕನ್ನಡದ ರತ್ನ ಶ್ರೀ ಜಿ.ಪಿ.ರಾಜರತ್ನಂರವರು ಒಮ್ಮೆ ಅಲ್ಲಿನ ಒಂದು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದಾಗ ನಾನೂ ಹೋಗಿದ್ದೆ. ಬಾಬಾರದು ಬಹಳ ಸಾರ್ವಜನಿಕ ಸೇವಾ ಮನೋಭಾವ. ಅವರು ಸಾಕಷ್ಟು ಸೇವೆಯನ್ನು ಮಾಡಿರುವುದು ಸ್ವತಃ ಪತ್ರಿಕಾ ವರದಿಗಾರನಾಗಿದ್ದ ನನಗೆ ಚೆನ್ನಾಗಿಯೇ ತಿಳಿದಿತ್ತು.

ಅಲ್ಲಿ ನಾವು ಬಾಬಾರ ಬರುವಿಕೆಗೆ ಕಾಯುತ್ತಾ ಕುಳಿತೆವು. ಎಷ್ಟು ಹೊತ್ತಾದರೂ ಬಾಬಾರ ಸುಳಿವಿಲ್ಲ. ನಾನು ಚಡಪಡಿಸಲಾರಂಭಿಸಿದೆ. ಇಷ್ಟು ಹೊತ್ತು ಇಲ್ಲಿ ಸುಮ್ಮನಿರುವ ಬದಲು ಏನಾದರೂ ಕೆಲಸ ಮಾಡಬಹುದಿತ್ತು ಎಂದು ನನ್ನ ಭಾವನೆ! 'ನಾನು ಹೊರಡುತ್ತೇನೆ ಶಾಂತಮ್ಮ' ಎಂದು ಸನ್ನೆ ಮಾಡಿದೆ. ಮಹಿಳೆಯರ ಗುಂಪಿನಲ್ಲಿ ಕುಳಿತಿದ್ದ ಶಾಂತಮ್ಮ 'ಬರುತ್ತಾರೆ ಸುಮ್ಮನಿರಿ' ಎನ್ನುವಂತೆ ಕಣ್ಣರಳಿಸಿದರು. ಅಂತೂ ಬಾಬಾ ಬಂದರು, ನನ್ನ ಕಣ್ಣಿಗೆ ವಿಶೇಷವಾಗಿ ಕಾಣಿಸಿದರು. ಪರಮಸಾತ್ತ್ವಿಕತೆ ಅವರ ಮುಖದಲ್ಲಿ. ಪ್ರಶಾಂತ ಮುಖಭಾವ. ಅಷ್ಟೇನೂ ಎತ್ತರವಲ್ಲದ ತೆಳ್ಳನೆಯ ಶರೀರ, ಉದ್ದವಾದ ಕಾವಿ ಬಣ್ಣದ ನಿಲುವಂಗಿ, ತಲೆಯ ತುಂಬಾ ತಂತಿಯಂತಹಾ ಗುಂಗುರು ಕೂದಲು, ಹಸನ್ಮುಖಿ, ಮೆಲು ಮಾತು, ಬಾಬಾ ನಿಜಕ್ಕೂ ಮಹಾನುಭಾವರು

ಎನಿಸಿತು ಏಕೋ ನನಗೆ! ಅವರು ಬಂದವರೇ ಒಂದು ಕಡೆಯಿಂದ ಎಲ್ಲರನ್ನೂ ಮಾತನಾಡಿಸುತ್ತಾ ಬಂದರು. ಕೆಲವರು ಪತ್ರಕೊಟ್ಟರು. ಎಲ್ಲರೂ ಒಬ್ಬರನಂತರ ಒಬ್ಬರು ಕಾಲಿಗೆ ನಮಸ್ಕರಿಸಿದರು. ಭಕ್ತಾದಿಗಳ ಬಳಿ ಮೆಲುದನಿಯ ಮಾತುಕತೆ ಮುಂದುವರೆಯಿತು.

ಎಲ್ಲರ ಸರದಿ ಮುಗಿದು ನನ್ನ ಬಳಿ ಬರುವವರೆಗೆ ೨೫ ನಿಮಿಷಗಳಾದವು. ಭಕ್ತರಿಗೆಲ್ಲಾ ವಿಭೂತಿ ಕೊಟ್ಟರು ಬಾಬಾ. ನನ್ನ ಬಳಿಗೆ ಬಂದಾಗ ನಾನು ಬಗ್ಗಿ ಅವರ ಕಾಲಿಗೆ ನಮಸ್ಕರಿಸಿದೆ. ನಾನು ಎದ್ದ ಕೂಡಲೆ "ಪತ್ರಿಕೋದ್ಯಮಿಗಳಿಗೆ ಬಹಳ ಸಹನೆ ಇರಬೇಕು" ಎಂದರು. ಅವರು ಹಾಗೆ ಹೇಳಿದ ಕೂಡಲೆ ನನಗೆ ಮೈ ಝುಂ ಎಂದಿತು! ನನ್ನ ಚಡಪಡಿಕೆ, ನನ್ನ ಅಸಹನೆ ಅವರಿಗೆ ಹೇಗೋ ತಿಳಿದಿತ್ತು. ಅದನ್ನು 'ಸಿಕ್ಸ್ತ್‌ಸೆನ್ಸ್' ಎನ್ನೋಣವೇ? ತಿಳಿಯಲಿಲ್ಲ. ಹೆಚ್ಚಿಗೆ ತರ್ಕ ಮಾಡುವುದು ಬೇಡ ಎನಿಸಿತು... 'ಯಾವುದೋ ಶಕ್ತಿ, ಇತರರ ಮನದಿಂಗಿತವನ್ನೇ ಅವರಿಗೆ ಬೇಕೆನಿಸಿದರೆ ಅರ್ಥ ಮಾಡಿಸುತ್ತದೆ' ಎಂದುಕೊಂಡೆ! ನನ್ನನ್ನು ನೋಡಿ 'ಒಳಗೆ ಬಾ' ಎಂದು ಸನ್ನೆ ಮಾಡಿದರು. ಇದನ್ನೆಲ್ಲಾ ನೋಡುತ್ತಿದ್ದ ಶಾಂತಮ್ಮನ ಮುಖದಲ್ಲಿ ಕುತೂಹಲ, 'ಇಷ್ಟು ದಿನ ಈ ದಾರಿ ತುಳಿದ ನನ್ನನ್ನು ನೋಡಲಿಲ್ಲ ಬಾಬಾ' ಎನ್ನುವ ಭಾವ ಅವರ ಮುಖದಲ್ಲಿ! 'ಒಳಗೆ ಹೋಗಿ' ಎಂದು ಆಕೆಯೂ ಸನ್ನೆ ಮಾಡಿದರು. ನಾನು ಒಳಗೆ ಹೋದನಂತರ ಬಂದ ಬಾಬಾ, "ನೀನು ಮಕ್ಕಳಿಗೆ ಚೆನ್ನಾಗಿ ಕತೆ ಹೇಳುತ್ತೀಯೆ ಎಂದು ಕೇಳಿದೆ. ನಮ್ಮ 'ಬಾಲವಿಕಾಸ'ಕ್ಕೆ ಬಂದು 'ಮಹಾಭಾರತ'ದ ಕತೆ ಹೇಳು. ಅಲ್ಲಿ ಈಗಾಗಲೇ ತರಬೇತಿ ಪಡೆದ ಶಿಕ್ಷಕರು ಇದ್ದಾರೆ, ಅವರನ್ನು ನೀನು ಮೊದಲು ಭೇಟಿ ಮಾಡು" ಎಂದು ವಿಭೂತಿ ಕೊಟ್ಟು ಆಶೀರ್ವದಿಸಿದರು. 'ಸರಿ'ಎಂದು ಹೇಳಿದ ನಾನು, ಆನಂತರವೇ ಬಾಲವಿಕಾಸ ತರಗತಿಗಳಿಗೆ ಹೋಗಿ ಕತೆ ಹೇಳಲು ಪ್ರಾರಂಭಿಸಿದುದು. ಅಲ್ಲಿ ಮೊದಲು ಶ್ರೀಮತಿ ಶಾಂತಾರ ಮನೆಯಲ್ಲಿ ೨೫ ಮಕ್ಕಳನ್ನು ಸೇರಿಸಿ ಮೊದಲು ಕತೆ ಪ್ರಾರಂಭ ಮಾಡಿದೆವು. ಅನಂತರ ಪ್ರತಿ ಭಾನುವಾರ ನಾನು ಅಲ್ಲಿಗೆ ಕತೆ ಹೇಳಲು ಹೋಗುತ್ತಿದ್ದೆ. ಆಗಲೇ ಬಾಬಾ ನನಗೆ ಒಂದು ಭಾನುವಾರ ಮೂರು ನಿಮಿಷ ತರಗತಿಗೆ ತಡವಾಗಿ ಬಂದುದಕ್ಕೆ ಸಮಯದ ಬೆಲೆಯ ಬಗೆಗೆ ಪಾಠ ಹೇಳಿದುದು! ನಮ್ಮ ಶ್ರೀ ರಾಮಕೃಷ್ಣನ್‌ಜೀ ಸಹ ಬಾಬಾರನ್ನು ಬಹಳ ತಿಳಿದವರಾಗಿದ್ದರು. ಲಂಡನ್‌ಗೆ ಹೋಗುವಾಗ ಬಾಬಾ ನನ್ನನ್ನು ಕರೆದು ಆಶೀರ್ವಾದ ಮಾಡಿದರು.

ಲಂಡನ್‌ನಲ್ಲಿಯು ಸಹ ಸಾಯಿಬಾಬ ಭಕ್ತರ ಒಂದು ಸಂಘ ಇತ್ತು. ಅಲ್ಲಿ ಶ್ರೀಮತಿ ದಮಯಂತಿ ಪೂರಿಯವರು ಹಾಡುತ್ತಿದ್ದರು. ಅಲ್ಲಿಗೆ ನಾನು ಉಪನ್ಯಾಸಕ್ಕೆಂದು ಆಗಾಗ ಹೋಗುತ್ತಿದ್ದೆ. ಹೀಗೆ ಬಾಬಾರ ಭಕ್ತಪಂಥದವರ ಪರಿಚಯ, ಸಂಪರ್ಕವೂ ಆಯಿತು. ನಾನು ಭಾರತಕ್ಕೆ ಬಂದಾಗ ಆಗೀಗ ಒಮ್ಮೆ ಬಾಬಾರನ್ನು ಹೋಗಿ ನೋಡಿ ಲಂಡನ್ ಕೇಂದ್ರದ ಬೆಳವಣಿಗೆಯ ಬಗೆಗೆ ಹೇಳುತ್ತಿದ್ದೆ. ಅವರು ನನ್ನನ್ನು ಮೆಚ್ಚಿಕೊಳ್ಳುತ್ತಿದ್ದರು. ಹೀಗೆ ನಾನು ಸಹ ಬಾಬಾರ ಸಂಪರ್ಕಕ್ಕೆ ಬಂದುದು!

ಮತ್ತೆ ರಾಮಕೃಷ್ಣಾಶ್ರಮ ಸಂಪರ್ಕ

ಲಂಡನ್‌ನಲ್ಲಿ ಒಂದು ಮುರುಗನ ದೇವಸ್ಥಾನ. ಮೊದಲು ಅಲ್ಲಿ ಗುಡಿ ಇರಲಿಲ್ಲ. ಪಂಚಲೋಹದ ಮುರುಗನ ಮೂರ್ತಿ ಮಾತ್ರ ಇದ್ದುದು. ಗ್ರೇಟ್ ಬ್ರಿಟನ್‌ನಲ್ಲಿ ತಮಿಳರು ಬಹಳ ಹೆಚ್ಚು. 'ಮುರುಗ', 'ಷಣ್ಮುಖ' ಅವರ ಆರಾಧ್ಯದೈವ. ನಾನು ಲಂಡನ್‌ಗೆ ಹೋದ ಐದಾರು ವಾರಗಳಲ್ಲೇ ಅವರು, ಆ ದೇವರ ಭಕ್ತರು ಅಲ್ಲಿ ಉಪನ್ಯಾಸ ಮಾಡಲು ನನ್ನನ್ನೇ ಕರೆದರು. ಸೀತಾರಾಂ ಅಯ್ಯರ್ ಎನ್ನುವವರೂ ಅಲ್ಲಿದ್ದರು. ಸಿಲೋನ್ ತಮಿಳರು, ಮದ್ರಾಸ್ ತಮಿಳರು ಹೆಚ್ಚಿಗೆ ಇದ್ದುದರಿಂದ ನಾನು ಅಲ್ಲಿ ತಮಿಳಿನಲ್ಲಿಯೇ ಉಪನ್ಯಾಸ ಮಾಡುತ್ತಿದ್ದೆ. ಮುರುಗನಿಗೆ ಷಷ್ಠಿ ಪೂಜೆ ಆಗಬೇಕು. 'ಮೊದಲ ಆರು ತಿಂಗಳ ಕಾಲ ನೀವೇ ಬಂದು ಪೂಜೆ ಮಾಡಿ' ಎಂದು ಕೇಳಿದ ಅವರ ಬೇಡಿಕೆಯನ್ನು ನಿರಾಕರಿಸದೆ ನಾನು ಒಪ್ಪಿಕೊಂಡೆ, ಅಲ್ಲಿ ಹೋಗಿ ಪೂಜೆ ಮಾಡಲು ಪ್ರಾರಂಭಿಸಿದೆ. ಇಲ್ಲಿಯೂ ಅಷ್ಟೆ. ಭವನದ ಹೆಸರು ನಾಲ್ಕು ಮಂದಿಯ ಕಿವಿಗೆ ಬೀಳಬೇಕಷ್ಟೆ? ನಾನು ಭವನಕ್ಕೆ ಸೇರಿದವನು ಎನ್ನುವುದು ಅವರಿಗೆ ತಿಳಿಯಬೇಕಷ್ಟೇ? ಅದೇ ನನ್ನ ಉದ್ದೇಶವೂ ಆಗಿತ್ತು. ಸ್ಕಾಂದಪುರಾಣದಿಂದ ಕೆಲವನ್ನು ಆರಿಸಿಕೊಂಡು ಉಪನ್ಯಾಸ ಮಾಡುತ್ತಿದ್ದೆ. ಅವರಿಗೆಲ್ಲ ಅದು ಬಹಳ ಇಷ್ಟ ಆಗುತ್ತಿತ್ತು. ಈ ಸ್ಥಳ ನಮ್ಮ ವಿದ್ಯಾಭವನದ ೩೭, ನ್ಯೂ ಆಕ್ಸ್‌ಫರ್ಡ್ ಬೀದಿಗೆ ಹತ್ತಿರವಾಗಿತ್ತು. ನಿಧಾನವಾಗಿ ಬಹಳ ಜನರ ಪರಿಚಯ ಆಯಿತು. ನಾನು, 'ಅವರು ಗುಡಿ ಕಟ್ಟಲು ದುಡ್ಡು ಕೊಡಿ' ಎಂದು ಅವರಿಗೇ ಹೇಳುತ್ತಿದ್ದೆ (ಭವನಕ್ಕಾಗಿ ಕೊಡಿ ಎಂದು ಮೊದಮೊದಲು ಕೇಳುತ್ತಿರಲಿಲ್ಲ!) ನನ್ನ ಮಾತುಗಳು, ಉಪನ್ಯಾಸದಿಂದ ಪ್ರಭಾವಿತರಾದ ಅವರು ದೇವಸ್ಥಾನಕ್ಕೆ ಬಹಳ ಬೇಗನೇ ದುಡ್ಡು ಕೊಟ್ಟರು. ಶೀಘ್ರದಿಂದಲೇ ದೇವಸ್ಥಾನವನ್ನು ಕಟ್ಟಿ ಪೂರೈಸಿದರು. ಅಲ್ಲಿ ಮೊದಲಿನ ಮುರುಗನ ಮೂರ್ತಿಯನ್ನೇ ಪ್ರತಿಷ್ಠಾಪಿಸಿದರು. ನಾನೇ ನಿಂತು ಅದನ್ನೆಲ್ಲಾ ಮಾಡಿಸಿದೆ. ಆಗ ಅಲ್ಲಿ ಸುಮಾರು ಎಂಟು-ಹತ್ತು ತಿಂಗಳ ಕಾಲ ಪ್ರತಿ ಭಾನುವಾರ, ನಾರಾಯಣ ಭಟ್ಟಾದಿರಿ ಎನ್ನುವ ಕೇರಳದ ವಿಷ್ಣುಭಕ್ತ ಸಂಸ್ಕೃತದಲ್ಲಿ ಬರೆದಿರುವ 'ನಾರಾಯಣೀಯಂ' ಎನ್ನುವ ಕಾವ್ಯವನ್ನು ಅವರಿಗೆ ಹೇಳಿದೆ. ಕೃಷ್ಣನ ಕತೆಯಾದ ನಾರಾಯಣೀಯಂ ಅಲ್ಲಿನ ಭಕ್ತರಿಗೆಲ್ಲಾ ಬಹಳ ಸಂತೋಷ ಕೊಟ್ಟಿತು. ದಿನೇ ದಿನೇ ಹೆಚ್ಚು ಜನ ಅಲ್ಲಿಗೆ ಬರಲು ಪ್ರಾರಂಭಿಸಿದರು. ನಾನು ಅಲ್ಲಿರುವವರೆಗೂ ಆಗಾಗ ಅಲ್ಲಿಗೆ ಹೋಗಿ ಮಾತನಾಡುವುದಿತ್ತು... ಅಂತೂ ಇದೊಂದು ವಿಶೇಷ ಅನುಭವ ನನಗೆ!

ಹೀಗೆಯೇ ನಾನು ಅಲ್ಲಿರುವ ಅನೇಕ 'ಹಿಂದೂ ಸಂಘ'ಗಳಿಗೆ ಹೋಗುವುದು, 'ಗುರುದ್ವಾರ'ಗಳಿಗೆ ಹೋಗುವುದು, ಅಲ್ಲಿ ಉಪನ್ಯಾಸಗಳನ್ನು ಕೊಡುವುದು, ನಮ್ಮ ಧರ್ಮದ ಬಗೆಗೂ, ಸಂಸ್ಕೃತಿಯ ಬಗೆಗೂ ಹೇಳುವುದು, ವಿದ್ಯಾಭವನದ ಧ್ಯೇಯೋದ್ದೇಶಗಳನನ್ನು ಹೇಳುವುದು ನಡೆದಿತ್ತು. ಒಮ್ಮೆ ಅಲ್ಲಿನ ಮಸೀದಿಗೂ ಹೋಗಿ ಅಲ್ಲಿ ಪೈಗಂಬರರ ಬಗ್ಗೆ ಒಂದು ಉಪನ್ಯಾಸ ಕೊಟ್ಟೆ. ನಮ್ಮ ವಿದ್ಯಾಭವನದ 'ಸರ್ವಧರ್ಮ ಪ್ರಾರ್ಥನಾ ಮಂದಿರ'ದಲ್ಲಿ ಪ್ರತಿದಿನವೂ ಒಬ್ಬ ಮುಸ್ಲಿಮರು ೧೨ ಘಂಟೆಗೆ ಸರಿಯಾಗಿ ಬಂದು ಪ್ರಾರ್ಥನೆ ಮಾಡಿ ಹೋಗುತ್ತಿದ್ದರು. ಅವರ ಹೆಸರು ಮಹಮ್ಮದಾಲಿ. ಅವರಿಗೆ ವಿದ್ಯಾಭವನ ಎಂದರೆ ಬಹಳ ಅಭಿಮಾನ, ಭವನದ ಚಟುವಟಿಕೆಗಳ ಬಗ್ಗೆ ಪ್ರೀತಿ. ನನ್ನ ಉಪನ್ಯಾಸಗಳನ್ನು ತಪ್ಪದೇ ಕೇಳುತ್ತಿದ್ದ ಅವರು ನನ್ನ ಬಗೆಗೂ ಬಹಳ ಗೌರವ ಭಾವನೆ ಹೊಂದಿದ್ದರು. ಶ್ರೀ ಕರಣ್‌ಸಿಂಗರು ಒಮ್ಮೆ ಭವನಕ್ಕೆ ಭೇಟಿ ಕೊಟ್ಟಾಗ ಶ್ರೀ ಮಹಮ್ಮದಾಲಿಯವರೂ ಬಂದಿದ್ದು, ''ನಾನು ಒಂದು ಪುಟ್ಟ ಕಾಣಿಕೆಯನ್ನು ಭವನಕ್ಕಾಗಿ ಕೊಡಬೇಕೆಂದಿದ್ದೇನೆ. ನೀವು ಅದನ್ನು ತೆಗೆದುಕೊಳ್ಳುತ್ತೀರಾ?'' ಎಂದರು ವಿನಯವಾಗಿ. ನನಗೆ ಆಶ್ಚರ್ಯ ಆಯಿತು, ''ಹಾಗೆಂದರೇನು? ನೀವು ಕಾಣಿಕೆ ಕೊಟ್ಟರೆ ನಾವು ತೆಗೆದುಕೊಳ್ಳದೆ ಇರುತ್ತೇವೆಯೇ? ಖಂಡಿತಾ ಕೊಡಿ. ನಿಮ್ಮ ಕೈಲಾದಷ್ಟು ಕೊಡಿ ಸಾಕು...''ಎಂದೆ ನಾನು. ನನಗೆ ವಂದಿಸಿದ ಅವರು ಆಗ ಭವನಕ್ಕೆಂದು ೨೦೦£ಗಳನ್ನು ದಾನವಾಗಿ ಕೊಟ್ಟರು! ಹೀಗೆ ಅಲ್ಲಿ ಭವನ ಎಲ್ಲರನ್ನೂ ಸೆಳೆಯುತ್ತಿದ್ದುದು!

ನಾನು ಲಂಡನ್‌ಗೆ ಹೊರಟಾಗ ಕನ್ನಡಿಗರು ಅಲ್ಲಿ ಯಾರಾದರೂ ಇದ್ದಾರೆಯೇ ಕೇಳಿ ತಿಳಿದುಕೊಳ್ಳಬೇಕೆನ್ನುವ ಕುತೂಹಲ. ರಾಮಕೃಷ್ಣಾಶ್ರಮಕ್ಕೆ ಹೋಗಿ, ಸ್ವಾಮೀಜಿಯವರಿಗೆ ವಂದಿಸಿ ಆಶೀರ್ವಾದ ತೆಗೆದುಕೊಳ್ಳಲು ಸ್ವಾಮೀಜಿಯವರನ್ನು ಭೇಟಿಯಾದಾಗ ''ಸ್ವಾಮೀಜಿ, ಲಂಡನ್‌ನಲ್ಲಿ ಕನ್ನಡದವರು ಇದ್ದಾರೆಯೇ?'' ಎಂದು ಕೇಳಿದೆ. ಅದಕ್ಕೆ ಸ್ವಾಮೀಜಿಯವರು, ''ಹೌದು, ಅಲ್ಲಿ ಸ್ವಾಮಿ ಭವ್ಯಾನಂದರು ಎನ್ನುವವರಿದ್ದಾರೆ. ಅವರು ಸಣ್ಣ ವಯಸ್ಸಿನಲ್ಲೇ ಸಂನ್ಯಾಸ ತೆಗೆದುಕೊಂಡವರು. ನೀವು ಹೋಗಿ ಅವರನ್ನೇ ಭೇಟಿಯಾಗಿ'' ಎಂದರು. ಅವರು ಹೇಳಿದಂತೆಯೇ ನಾನು ಆಗಸ್ಟ್ 5ನೇ ತಾರೀಖು, ೧೯೭೨ರಲ್ಲಿ ಲಂಡನ್‌ಗೆ ಹೋದೆ. ಹೋದ ನಾಲ್ಕೈದು ದಿನಗಳಲ್ಲೇ ಸ್ವಾಮಿಭವ್ಯಾನಂದರನ್ನು ಭೇಟಿಯಾಗಲು ಹೋದೆ. ಸ್ವಾಮಿ ಭವ್ಯಾನಂದರಿದ್ದ ಜಾಗ 'ಹಾಲೆಂಡ್ ಪಾರ್ಕ್', ನಾನು ವೈ.ಎಂ.ಸಿ.ಎ. ದಲ್ಲಿದ್ದೆ. ನಾನಿದ್ದ ಜಾಗದಿಂದ ಸುಮಾರು ಹದಿನೈದು ನಿಷಗಳ ಪ್ರಯಾಣ. ಸ್ವಾಮಿ ಭವ್ಯಾನಂದರನ್ನು ನೋಡಲು ಹೋದೆ. ಅವರು ನನ್ನ ಪರಿಚಯವಿರುವವರಂತೆ, ''ರಾಮಕೃಷ್ಣನ್‌ಜೀ, ಹಾಥೀಜೀ, ಮಾಧವನ್ ಜೀ, ಎಲ್ಲರೂ ನಮ್ಮಲ್ಲಿಯೂ ಉಳಿದುಕೊಳ್ಳುವುದಿದೆ'' ಎಂದರು. ಪರದೇಶದಲ್ಲಿ ಸ್ವಚ್ಛ ಕನ್ನಡ ಮಾತನಾಡುವ ಸ್ವಾಮಿ ಭವ್ಯಾನಂದರನ್ನು ಕಂಡು ನನಗೆ 'ಭವ್ಯಾನಂದ'ವೇ ಆಯಿತು ಎಂದರೆ ಉತ್ಪ್ರೇಕ್ಷೆಯಲ್ಲ. ಹೀಗೆ ಭವ್ಯಾನಂದರು ಅದೆಷ್ಟು ಹತ್ತಿರದವರಾದರು ಎಂದರೆ ಹದಿನೈದು ದಿನಗಳಿಗೊಮ್ಮೆಯಾದರೂ ಅವರನ್ನು ನೋಡದಿದ್ದರೆ ನನಗೆ ಬೇಸರವಾಗುವಂತಾಗುತ್ತಿತ್ತು. ಅಲ್ಲಿ ಅವರಿಗೆ ಬಹಳ ಸ್ನೇಹಿತರು.

ಸ್ವಾಮಿ ಭವ್ಯಾನಂದರು ಅವರ ಕಟ್ಟಡವನ್ನು ಕೊಡುತ್ತೇವೆ ಎಂದಾಗ, ಭವನದ ಬೆಳವಣಿಗೆಯ ದೃಷ್ಟಿಯಿಂದ ನೋಡಿದಾಗ ಅದು ನಮ್ಮ ನಿರೀಕ್ಷೆಯಷ್ಟು ದೊಡ್ಡದಾಗಿರಲಿಲ್ಲ. ಬಾಡಿಗೆಗಾದರೂ ತೆಗೆದು ಕೊಳ್ಳೋಣ ಎಂದರೆ ಅದರ ಬಾಡಿಗೆ ಹೆಚ್ಚು. ಹೀಗಾಗಿ ಭವನಕ್ಕೆ ಜಾಗದ ಆವಶ್ಯಕತೆ ಇದ್ದರೂ, ಸ್ವಾಮಿ ಭವ್ಯಾನಂದರ ಜಾಗವನ್ನು ತೆಗೆದು ಕೊಳ್ಳಲು ಸಾಧ್ಯವಾಗಲಿಲ್ಲ.

ಸ್ವಾಮಿ ಭವ್ಯಾನಂದರು ಪ್ರತಿ ಭಾನುವಾರ ಉಪನ್ಯಾಸಗಳನ್ನು ಕೊಡುತ್ತಿದ್ದರು - ಎರಡು ಭಾನುವಾರ ಆಶ್ರಮದಲ್ಲಿ, ಎರಡು ಭಾನುವಾರ ವೆಸ್ಟ್‌ಕೆನ್ಸಿಂಗ್‌ಟನ್‌ನ ವಿದ್ಯಾಭವನದಲ್ಲಿ. ನಮ್ಮ ವಿದ್ಯಾಭವನದ ವೆಸ್ಟ್ ಕೆನ್ಸಿಂಗ್‌ಟನ್‌ನಲ್ಲಿ ಕೆಲಸ ಪ್ರಾರಂಭಿಸಿದಾಗ ಆ ಪ್ರಾರಂಭೋತ್ಸವಕ್ಕೆ ಸ್ವಾಮೀಜಿಯವರೇ ಬಂದು ಪ್ರಾರ್ಥನೆಯನ್ನು ಮಾಡಿದರು. ಅಧ್ಯಾತ್ಮದ ಬಗೆ ಬಹಳ ಜ್ಞಾನವನ್ನು ಹೊಂದಿದ್ದ ಸ್ವಾಮಿ ಭವ್ಯಾನಂದರ ಉಪನ್ಯಾಸಕ್ಕೆ, ಅವರ ಶಿಷ್ಯವೃಂದದ ೬೦-೭೦ ಮಂದಿಯೂ ಬರುವುದಿತ್ತು. ಅವರಿಗೆ ತಿಳಿದವರ ಮನೆಗಳಲ್ಲಿ ಯಾವುದಾದರೂ ಧಾರ್ಮಿಕ ವಿಧಿಗಳನ್ನು ಮಾಡಬೇಕಾದಾಗ, ''ಮತ್ತೂರ್‌ಜೀಯವರನ್ನು ಕರೆಯಿರಿ'' ಎಂದು ಹೇಳುತ್ತಿದ್ದ ಸ್ವಾಮಿ ಭವ್ಯಾನಂದರ ಈ ಮಾತಿನಿಂದ ಪ್ರಭಾವಿತರಾಗಿಯೇ ನಾನು ಹಿಂದೆ ಹೇಳಿರುವ ಖಿಲ್ನಾನಿ ದಂಪತಿಗಳು ತಮ್ಮ ಮಕ್ಕಳಿಬ್ಬರಿಗೂ ನನ್ನಿಂದಲೇ ಉಪನಯನ ಮಾಡಿಸಿದುದು. ಹೀಗೆ ನಾನು ಕಂಡ ಸಾಧು-ಸಂನ್ಯಾಸಿಗಳಲ್ಲಿ, ಸ್ವಾಮಿ ಭವ್ಯಾನಂದರು ಒಬ್ಬ ವಿಶಿಷ್ಟ ವ್ಯಕ್ತಿತ್ವದ ಸಂನ್ಯಾಸಿಗಳು.

ಲಂಡನ್‌ನಲ್ಲಿದ್ದಾಗ ನನಗೆ ಶ್ರೀ ಮಹೇಶ್‌ಯೋಗಿ ಅವರ ಪರಿಚಯವೂ ಆಯಿತು. ಮಹೇಶ್‌ಯೋಗಿಯವರ ಹಲವಾರು ಧ್ಯಾನಕೇಂದ್ರಗಳು ಅಲ್ಲಿವೆ. ಅವರು ನನಗೆ ಪತ್ರ ಬರೆದು, ''ನೀವು ಹಿಂದೂ ವಿವಾಹ ಪದ್ಧತಿಯಲ್ಲಿ ಅದನ್ನು ಇಷ್ಟಪಡುವ ಆಂಗ್ಲರಿಗೆ, ಮತ್ತಿತರರಿಗೆ ವಿವಾಹ ಮಾಡಿಸುತ್ತಿದ್ದೀರಿ ಎಂದು ತಿಳಿಯಿತು. ನಾನೂ ಇಲ್ಲಿ ನಮ್ಮ ಧರ್ಮದ ತಿರುಳನ್ನು ಹೇಳುತ್ತಾ ಕಾಲ ಕಳೆದಿದ್ದೇನೆ. ಸದ್ವಿಚಾರಗಳಿಂದ ಕೂಡಿದ ನಮ್ಮ ಧರ್ಮದ ಬಗ್ಗೆ ನಾವು ಆದಷ್ಟು ಚೆನ್ನಾಗಿ ತಿಳಿದುಕೊಂಡು ತಿಳಿಯದವರಿಗೆ ಸರಿಯಾಗಿ ತಿಳಿಸಿ ಹೇಳಬೇಕು'' ಎಂದು ತಮ್ಮ ಸಂತೋಷ ವ್ಯಕ್ತಪಡಿಸಿದರು. ಅಷ್ಟೇ ಅಲ್ಲದೆ ಅವರ ಬಳಿಗೆ ಬರುತ್ತಿದ್ದ ಹಲವು ಜೋಡಿಗಳನ್ನು ನನ್ನ ಉಪಸ್ಥಿತಿಯಲ್ಲಿ, ನಾನು ವಿವಾಹ ಮಾಡಿಸುವಂತೆ ವಿವಾಹ ಮಾಡಿಕೊಳ್ಳಲು ಹೇಳಿ

ಕಳುಹಿಸುತ್ತಿದ್ದರು. ಹಾಗೆ ಅವರು ಸುಮಾರು ಜೋಡಿಗಳನ್ನು ನನ್ನ ಬಳಿಗೆ ಕಳುಹಿಸಿದ್ದಾರೆ. ಅವರಿಗೆಲ್ಲ ನಾನು ಮದುವೆ ಮಾಡಿಸಿದ್ದೇನೆ. ಭಗವಂತನ ದಯೆ, ಆ ದಂಪತಿಗಳೆಲ್ಲಾ ಸುಖದಿಂದ ಚೆನ್ನಾಗಿ ಸಂಸಾರ ನಡೆಸುತ್ತಿದ್ದಾರೆ.

ಹೀಗೆಯೇ ಅಲ್ಲಿದ್ದಾಗ ಚಿನ್ಮಯಾ ಮಿಷನ್‌ನ ಸ್ವಾಮಿ ಚಿನ್ಮಯಾನಂದರನ್ನು ಭೇಟಿ ಮಾಡಿದೆ. ಬಹಳ ಆಕರ್ಷಕವಾದ ವ್ಯಕ್ತಿತ್ವ ಅವರದು. ಅವರ ಕಣ್ಣುಗಳಲ್ಲಿ ಅದೇನು ತೀಕ್ಷ್ಣತೆ? ಅಬ್ಬಾ...! ಸೂಜಿಗಲ್ಲಿನ ಸೆಳೆತ ಮಾತು-ಕತೆಯಲ್ಲಿ! ಅವರನ್ನು ಭೇಟಿಯಾದ ಒಂದು ಸಂದರ್ಭದಲ್ಲಿ ಅವರ ಭಕ್ತರೊಬ್ಬರು ಅವರಲ್ಲಿ, "ಸ್ವಾಮೀಜಿ, ನಾನು ಎಲ್ಲವನ್ನೂ ಪಡೆದಿದ್ದೇನೆ. ಸಿರಿವಂತಿಕೆಗೆ, ಸಮಾಜದಲ್ಲಿರುವ ಸ್ಥಾನಮಾನಕ್ಕೆ ಏನೂ ಕೊರತೆ ಇಲ್ಲ. ಆದರೆ ನನ್ನ ಮಕ್ಕಳು ಮಾತ್ರ ನನ್ನನ್ನು ಅನುಸರಿಸುತ್ತಿಲ್ಲ, ನನ್ನ ಮಾತು ಕೇಳುವುದಿಲ್ಲ... ಹೀಗಾದರೆ ಹೇಗೆ?" ಎಂದರು. "ಇದಕ್ಕೆ ಏನಾದರೂ ಪರಿಹಾರವಿದೆಯೇ?" ಎಂದರು. ಅದಕ್ಕೆ ನಸು ನಕ್ಕು ಚಿನ್ಮಯಾನಂದರು "ನಿಮ್ಮ ಮಕ್ಕಳು ನಿಮಗೆ ಹುಟ್ಟಿದ್ದಾರೆ... ಅಷ್ಟೇ! ನಿಮಗಾಗಿ ಹುಟ್ಟಿಲ್ಲ ಅವರು!" (Your children are born to you, not born for you) ಎಂದರು. ಅದರರ್ಥ "ನೀವು ಹೇಗಿರುತ್ತೀರೋ ಹಾಗಿದ್ದಾರೆ ನಿಮ್ಮ ಮಕ್ಕಳು, ನೀವು ಹೇಳಿದ ಮಾತು ಕೇಳಿಕೊಂಡಿರುವುದಕ್ಕಲ್ಲ... ನೀವು ಹೇಗಿದ್ದೀರಿ? ಅವರೂ ಹಾಗೆ!!" ಎಂದರು! ನನಗೆ ಚಿನ್ಮಯಾನಂದರ ಮಾತು ಕೇಳಿ ಒಂದು ನಿಮಿಷ ಮಾತೇ ಹೊರಡಲಿಲ್ಲ. ಮೂಕ ವಿಸ್ಮಿತನಾಗಿದ್ದೆ. ಅಷ್ಟು ಪ್ರಭಾವಶಾಲಿ ಅವರ ಮಾತುಗಳು!!

ಮಾರ್ಕಂಡೇಯರ ಸ್ಮರಣಶಕ್ತಿ

ವ್ಯಕ್ತಿಗಳಲ್ಲಿರುವ ಶಕ್ತಿಗಳಿಗೆ ಇವರು ಸಂನ್ಯಾಸಿ-ಇವರು ಸಂಸಾರಿ ಎನ್ನುವ ಭೇದ ಇರುವುದಿಲ್ಲ. ನನ್ನ ಗೌರವಾನ್ವಿತ ಮಿತ್ರ ಶ್ರೀ ಮತ್ತೂರು ಮಾರ್ಕಂಡೇಯ ಅವಧಾನಿಯವರಿಗೆ ನಾನು ಯಾವುದನ್ನೂ ಅಲ್ಲಲ್ಲಿಯೇ ಅನುವಾದ ಮಾಡಿ ಹೇಳುವುದು ಬಹಳ ಆಶ್ಚರ್ಯದ ಸಂಗತಿ. ಚಿಕ್ಕಮಗಳೂರಿನ 'ಗೀತಾಸತ್ಸಂಗ'ದವರು ಆಹ್ವಾನಿಸಲಾಗಿ ಒಮ್ಮೆ ಹಿಮಾಲಯ ದಿಂದ ಒಬ್ಬರು ಸ್ವಾಮಿಗಳು ಅಲ್ಲಿಗೆ ಬಂದಿದ್ದರು. ಹಿಂದೀ ಜನ ಅವರು. ಜೈಪುರ ಅವರ ಊರು ಎಂದು ನನ್ನ ನೆನಪು. ಆ ಸ್ವಾಮೀಜಿ ಭಗವದ್ಗೀತೆಯ ಮೇಲೆ ಮಾತನಾಡುವುದಿತ್ತು. ಶ್ರೀ ಕೋದಂಡರಾಮಶೆಟ್ಟಿ ಎನ್ನುವ ಸಜ್ಜನರು ಈ ಕಾರ್ಯಕ್ರಮ ವನ್ನೇರ್ಪಡಿಸಿದ್ದವರು. ಅವರು ನನ್ನನ್ನು ಬಹಳ ಚೆನ್ನಾಗಿ ಬಲ್ಲವರು, ನಾನು ಅನೇಕರ ಭಾಷಣಗಳನ್ನು ಅಲ್ಲಲ್ಲಿಯೇ ಅನುವಾದ ಮಾಡಿ ಹೇಳುವುದನ್ನು ಕೇಳಿದ್ದ ಅವರು ನನ್ನನ್ನೂ ಆ ಕಾರ್ಯಕ್ರಮಕ್ಕೆ ಆಹ್ವಾನಿಸಿ ನನಗೆ, "ಸರ್, ಸ್ವಾಮೀಜಿ ಗೀತೆಯ ಮೇಲೆ ಹಿಂದಿಯಲ್ಲಿ ಮಾತನಾಡಲಿದ್ದಾರೆ. ನೀವು ಅದನ್ನು ಅಲ್ಲಿಯೇ ಅನುವಾದ ಮಾಡಿ ಹೇಳುವಿರಾ? ಅದು ಜನರಿಗೆ ಅರ್ಥ ಮಾಡಿಕೊಳ್ಳಲು ಸುಲಭ ವಾಗುತ್ತದೆ" ಎಂದರು. ನಾನು ಒಪ್ಪಿದೆ. ನನಗೆ ಮೊದಲು ಸ್ವಲ್ಪ ಭಯವೇ ಆಯಿತು. ನನಗೆ ಹಿಂದಿ ಇನ್ನೂ ಅಷ್ಟಾಗಿ ಬರುತ್ತಿರಲಿಲ್ಲ. ಮಾತನಾಡಿದುದು ಅರ್ಥವಾಗುತ್ತಿತ್ತು. ಆದರೂ 'ನೋಡೋಣ, ಪ್ರಯತ್ನಿಸೋಣ' ಎನಿಸಿತು. ಆ ದಿನ ಸ್ವಾಮೀಜಿಯ ಭಾಷಣಕ್ಕೆ ಬಹಳ ಜನ ಸೇರಿದ್ದರು. ಪ್ರವಚನ ಪ್ರಾರಂಭವಾಯಿತು. ಆಗ ಅಲ್ಲಿಯೇ ನನ್ನ ಸನ್ಮಿತ್ರರಾದ ಶ್ರೀ ಮಾರ್ಕಂಡೇಯ ಅವಧಾನಿಗಳೂ ಇದ್ದರು. ಸ್ವಾಮಿಜಿಯ ಮಾತುಗಳನ್ನು ಅನುವಾದಿಸಲು ಸಿದ್ಧನಾದೆ. ಸ್ವಾಮೀಜಿ ಮೊದಲು ಒಂದು ವಾಕ್ಯ ಹೇಳಿದರು. ಅದನ್ನು ಕನ್ನಡಕ್ಕೆ ಅನುವಾದಿಸಿ ಹೇಳಿದೆ. ಅನಂತರ ಐದಾರು ವಾಕ್ಯಗಳನ್ನು ಹೇಳಿ, ಒಂದು ಶ್ಲೋಕವನ್ನೂ ಹೇಳಿ ನಿಲ್ಲಿಸಿದರು. ಅದನ್ನು ಕನ್ನಡದಲ್ಲಿ ಹೇಳಿದೆ... ಇದು ತತ್ತ್ವವಿಚಾರ. ಹಾಗೆ ಹೇಳುವುದು ಅಷ್ಟು ಸುಲಭದ ಕೆಲಸವಲ್ಲ ಎಂದು ಮೊದಲೇ ನನಗೆ ಸ್ವಲ್ಪ ಭಯವಿತ್ತು. ಆದರೂ ಹೇಗೋ ನಿಭಾಯಿಸಿದೆ. ಆದರೆ ಈ ಬಾರಿ ಸ್ವಾಮೀಜಿ ತಮ್ಮ ಮಾತು ಪ್ರಾರಂಭಿಸಿದವರು, ಮೂರ್‍ನಾಲ್ಕು ನಿಮಿಷಗಳಾದರೂ ನಿಲ್ಲಿಸುವ ಸೂಚನೆಯೇ ಕಾಣಲಿಲ್ಲ. ನನಗೋ ಗಾಬರಿಯಾಯಿತು. ಕೂಡಲೇ "ಸ್ವಾಮೀಜಿ... ಸ್ವಾಮೀಜಿ... ಕೃಪಾಕರ್ ಕೆ ಆಪ್ ಠಹರಿಯೆ ತೋ ಸಹೀ..." (ಸ್ವಾಮೀಜಿ ದಯಮಾಡಿ ತಾವು ಸ್ವಲ್ಪ ನಿಲ್ಲಿಸಿ!) ಎಂದೆ. ಅದಕ್ಕೆ ಸ್ವಾಮೀಜಿ ಹಿಂದಿಯಲ್ಲಿ "ಅದರ ಆವಶ್ಯಕತೆ ಇಲ್ಲ. ನಮಗೆ ಈಗ ತಿಳಿದಿದೆ. ನಾವು ಪೂರ್ತಿ ಪ್ರವಚನ ಮಾಡಿದರೂ, ಅದರಲ್ಲಿನ ಒಂದಂಶವನ್ನೂ ಬಿಡದೆ ನೀವು ಜನರಿಗೆ ಕನ್ನಡದಲ್ಲಿ ಸೊಗಸಾಗಿ ಹೇಳುತ್ತೀರಿ ಎಂದು ನಮಗೆ ಗೊತ್ತಾಗಿದೆ. ಆದ್ದರಿಂದ ಪೂರ್ತಿ ಮಾತನಾಡಿದ ಮೇಲೆಯೇ ನೀವು ಕನ್ನಡದಲ್ಲಿ ಹೇಳಿ... ನಮಗೆ ನಿಮ್ಮ ಸಾಮರ್ಥ್ಯ ಏನೆಂದು ತಿಳಿಯಿತು, ನೀವೇನೂ ಚಿಂತಿಸಬೇಡಿ" ಎಂದವರೇ ತಮ್ಮ ಮಾತು ಮುಂದುವರೆಸಿದರು. ನನಗೆ ಸ್ವಾಮೀಜಿಯ ಮಾತು ಕೇಳಿ ಬೆವರಿಟ್ಟಿತು. ಆದರೂ ಸಾವರಿಸಿಕೊಂಡು ಆ ದಿನ ಕೊನೆಯಲ್ಲಿ ನಾನು ಗುರುತು ಹಾಕಿಕೊಂಡುದರ ಸಂದರ್ಭಗಳನ್ನೆಲ್ಲ ನೆನೆದು ಸ್ವಾಮೀಜಿ ಹೇಳಿದ ಮಾತುಗಳೆಲ್ಲವನ್ನೂ ಹೇಳಿದೆ. ಇದು ಅಲ್ಲಿ ಎಲ್ಲರ ಮೆಚ್ಚುಗೆಗಳಿಸಿತು. ಮಿತ್ರ ಶ್ರೀ ಮಾರ್ಕಂಡೇಯ ಅವಧಾನಿಯ ವರಿಗಂತೂ ಈ ಸಾಹಸ ಅಚ್ಚರಿಯಿಂದ ಮೂಗಿನ ಮೇಲೆ ಬೆರಳಿಟ್ಟು ಕೊಳ್ಳುವಂತಾಯಿತು!

ಇದಾದನಂತರ ನಮ್ಮ ಊರಿನಲ್ಲಿ ಒಂದು ಮದುವೆ ಸಮಾರಂಭ... ನನ್ನ ಪತ್ನಿಯ ಸೋದರಮಾವನ ಮನೆಯ ಮದುವೆಯದು. ಆ ದಿನ ರಾತ್ರಿ ಎಲ್ಲರೂ ಮಲಗಿದ್ದಾಗ, ನಾನೂ, ಅವಧಾನಿಗಳೂ ಕತ್ತಲೆಯಲ್ಲಿ ತಡವುತ್ತ ಒಳ ಬಂದಾಗ, ಮಲಗಿದ್ದ ಯಾರದೋ ಕಾಲು ಅವರ ಕಾಲಿಗೆ ತಾಕಿತು. ಆ ಕಾಲನ್ನೇ ನೋಡಿದ ಅವರು, "ಓಹೋ... ಇದು ನಮ್ಮ ಹುಡುಗಿಯದೆ ಕಾಲು !! ಇವಳು ಇಲ್ಲಿ ಮಲಗಿದ್ದಾಳೆಯೇ!" ಎಂದರು

ತಮ್ಮ ತಮ್ಮನ ಮಗನ ಮಗಳ ಕಾಲು ಎಂದು ಗುರ್ತಿಸಿ! ನನಗೋ ಅತ್ಯಾಶ್ಚರ್ಯ!! "ಏನು? ನಿನಗೆ ಒಬ್ಬರ ಕಾಲು ಒಮ್ಮೆ ನೋಡಿದರೆ, ಅದು ಇಂಥವರದೇ ಎಂದು ತಿಳಿಯುತ್ತದೆಯೇ? ಅದು ಹೇಗೆ?" ಎಂದೆ. "ಹೌದು, ಅದರಲ್ಲೇನು ಕಷ್ಟ! ನೋಡಿದರೆ ನೆನಪಿಟ್ಟುಕೊಳ್ಳುವುದು ಕಷ್ಟವೇ?" ಎಂದರು, ಅದು ಬಹಳ ಸುಲಭದ ಕೆಲಸ ಎನ್ನುವಂತೆ! ಮಾರನೆಯ ದಿನ ನಾನು ಮದುವೆಯ ಮನೆಯ ಎಲ್ಲರನ್ನೂ ಒಂದೆಡೆ ಸೇರಿಸಿ, ಒಂದು ಪರದೆಯನ್ನು ಉದ್ದಕ್ಕೆ ಇಳಿಬಿಟ್ಟು ಅವಧಾನಿಯವರನ್ನು ಒಂದೆಡೆ ಕೂರಿಸಿ, ಮನೆ ಮಂದಿಯನ್ನೆಲ್ಲ ಬಂದು ಪರದೆಯ ಹಿಂದೆ ನಿಲ್ಲಲು ಹೇಳಿದೆ. ಅವಧಾನಿಯವರಿಗೆ ಬಂದು ನಿಂತವರ ಮುಖ ಕಾಣದೆ, ಬರೀ ಪಾದಗಳು ಮಾತ್ರ ಕಾಣುತ್ತಿದ್ದವು. ಅಲ್ಲಿಗೆ ಬಂದ ಒಬ್ಬೊಬ್ಬರ ಪಾದಗಳನ್ನೂ ನೋಡಿದ ಅವಧಾನಿಯವರು 'ಇದು ಇವರದೇ ಪಾದಗಳು'ಎಂದು ಹೇಳಿ, ಎಲ್ಲವನ್ನೂ ಗುರ್ತಿಸಿದರು! ಕೊನೆಯದಾಗಿ ಒಬ್ಬ ಹೆಂಗಸರು ಬಂದು ನಿಂತಾಗ "ಓ...." ಎಂದು ಅವಧಾನಿಗಳು ನಕ್ಕು ನಾಚಿದರು! ಅವರು ಯಾರಿರಬಹುದು ಹೇಳಿ? ಅವರು... ಅವರು ಅವಧಾನಿಗಳ ಪತ್ನಿಯೇ ಆಗಿದ್ದರು!! ಅವಧಾನಿಗಳ ಈ ಅಗಾಧ ನೆನಪಿನ ಶಕ್ತಿಯನ್ನು ನೋಡಿ ಬೆರಗುಪಡುವ ಸರದಿ ಈಗ ನನ್ನದಾಗಿತ್ತು!

ಅವರು ಬೆಂಗಳೂರಿಗೆ ಬಂದಾಗಲೂ ಅಷ್ಟೆ. ನಾನು ನನ್ನ ಸ್ಕೂಟರಿನಲ್ಲಿ ಅವರನ್ನೂ ಕೂರಿಸಿಕೊಂಡು ಕರೆದೊಯ್ಯುವಾಗ ಎಲ್ಲವನ್ನು ಗಮನಿಸುತ್ತಿದ್ದ ಅವರು ತಾವು ಊರಿಗೆ ಹೋಗಿ, ಮತ್ತೊಮ್ಮೆ ಬೆಂಗಳೂರಿಗೆ ಬಂದಾಗ, ಮತ್ತೆ ನನ್ನ ಜತೆ ಸ್ಕೂಟರಿನಲ್ಲಿ ಕುಳಿತು ಬಂದರೆ ನಾವು ಓಡಾಡಿದ ಬೀದಿಗಳಲ್ಲಿ ಏನೇನು ಬದಲಾವಣೆಗಳಾಗಿವೆ, ಯಾವ ಕಟ್ಟಡ ಹೊಸದಾಗಿ ಎದ್ದಿದೆ, ಯಾವ ಕಟ್ಟಡ ನೆಲಸಮವಾಗಿದೆ, ಯಾವ ಅಂಗಡಿ ಈಗ ಅಲ್ಲಿಲ್ಲ, ಹೊಸದಾಗಿ ಯಾವುದು ಬಂದಿದೆ ಎಂದು ಎಲ್ಲವನ್ನೂ ಹೇಳುತ್ತಾ ಹೋಗುವುದಿತ್ತು! ಅಲ್ಲಿಯೇ ದಿನವೂ ಓಡಾಡುವ ನನಗೆ ಈ ಬದಲಾವಣೆಗಳು ಗೋಚರವೇ ಆಗುತ್ತಿರಲಿಲ್ಲ! ಇದು ಅವರ ನೆನಪಿಗೆ ಇದ್ದಂಥ ಶಕ್ತಿ.

ಇಂತಹ ಮಾರ್ಕಂಡೇಯ ಅವಧಾನಿಗಳು, ನನ್ನ ಹುಟ್ಟೂರಿನಲ್ಲಿ ನನಗೆ ಮನೆ ಇಲ್ಲ ಎಂದು, ತಮಗೆ ಸೇರಿದ್ದ ಒಂದು ಜಾಗದಲ್ಲಿ ನನಗೆ ಮನೆ ಕಟ್ಟಿಸಿಕೊಳ್ಳಲು ಹೇಳಿದರು. ಅಣ್ಣ-ತಮ್ಮಂದಿರಿಗೆಲ್ಲ ಸೇರಿದ ಜಾಗ ಅದಾಗಿದ್ದುದರಿಂದ, ನನ್ನಿಂದ ಆ ಜಾಗಕ್ಕೆ ಸ್ವಲ್ಪ ಹಣವನ್ನು ತೆಗೆದುಕೊಂಡ ಅವರು, "ಈ ಜಾಗದಲ್ಲಿ ಮೇಲೆ ನೀನು ಮನೆ ಕಟ್ಟಿಕೋ, ಕೆಳಗೆ ನಾನು ಒಂದು ದೊಡ್ಡದಾದ ಸಭಾಂಗಣದ ರೀತಿಯಲ್ಲಿ, ಯಜ್ಞ-ಯಾಗ ಮಾಡಲು ಸುಲಭವಾಗುವಂತೆ ಒಂದು ವಿಶಾಲವಾದ ಹಜಾರವನ್ನು ಮಾಡಿಕೊಳ್ಳುತ್ತೇನೆ... ನನಗೆ ಅಷ್ಟು ಸಾಕು!" ಎಂದು ಉದಾರವಾಗಿ ಹೇಳಿ, ನಮ್ಮ ಮತ್ತೂರಿನಲ್ಲಿ ನಾನೂ ಮನೆ ಕಟ್ಟಿಕೊಂಡು, ಜೀವನದಲ್ಲಿ ಹುಟ್ಟಿದ ಊರಿನಲ್ಲಿ ಒಂದು ನೆಲೆ ಕಾಣುವ ಹಾಗೆ ಮಾಡಿದಂತಹ ಸಹೃದಯ! ಇವರಿಗೆ ನಾನು ಯಾವಾಗಲೂ ಋಣಿಯಾಗಿರಬೇಕು. ಇವರು ನನ್ನ ಪ್ರೀತಿಯ ಮಿತ್ರರಾಗಿರುವುದು ನನಗೆ ನಿಜಕ್ಕೂ ಬಹಳ ಹೆಮ್ಮೆಯ ವಿಷಯ!!

೩೩. ವಿಶ್ವಮಾನವತೆ

ವಸುಧೈವ ಕುಟುಂಬಕಂ

ಸಿಲೆಯೊಳ್ಸುವರ್ಣಂ, ಅರಲೊಳ್ ಸೌರಭ್ಯಂ, ಕ್ಷೀರದೊಳನರುನ್ನೈ,
ಕಾಷ್ಠದೊಳಗ್ನಿಯಿರ್ಪ ತೆರದಿಂದ ಈ ಮೈಯೊಳೊಂದಾಗಿರ್ಪನು||

ಎಂದಿದ್ದಾನೆ ರತ್ನಾಕರವರ್ಣಿ. ಯಾರು ಹಾಗೆ ಒಂದಾಗಿರುವವರು? 'ಅರಿವಿಂದೀಕ್ಷಿಸಲಕ್ಕುಮಾತ್ಮನಿರವಂ' ಎನ್ನುತ್ತಾನೆ. ಎಲ್ಲರಲ್ಲಿ ಇರುವ ದೇವರ ಆತ್ಮಸ್ವರೂಪಿ ಒಬ್ಬನೇ, ನಮ್ಮ ತಿಳಿವಿನಿಂದ ಅವನ ಇರವನ್ನು ಅರಿತುಕೊಳ್ಳಬೇಕಷ್ಟೇ ನಾವು. ಇದು ನನ್ನ ನಂಬಿಕೆ. ದೇವರು ಎಲ್ಲರಲ್ಲಿ ಇದ್ದಾನೆ ಎಂದು ತಾನೆ ನಮ್ಮ ಧರ್ಮ ಹೇಳುವುದು...!'ನಾನು ಸನಾತನೀ ಹಿಂದೂ ; ಹಾಗೆ ಹೇಳಲು ನನಗೆ ಹೆಮ್ಮೆ' ಎಂದಿದ್ದಾರೆ ಗಾಂಧೀಜಿ! ಓದುಗರೇ, ಈ ಮಾತನ್ನು ನಾನು ಈ ಹಿಂದೆಯೂ ನಿಮಗೆ ಹೇಳಿರಬಹುದು. ನನ್ನ ಹೃದಯ-ಬುದ್ಧಿ-ಮನಸ್ಸಿನಲ್ಲಿ ಈ ಮಾತು ಸದೈವ ಜಾಗೃತವಾಗಿರುತ್ತದೆ, ಅದಕ್ಕೇ ಬಹುಶಃ ಅದು ಪದೇ ಪದೇ ನನ್ನ ಬಾಯಲ್ಲಿ ಬರುವುದು. ಈ ಭಾವನೆ, ಈ ಮನೋಭಾವ ನಾವು ವಿದೇಶಕ್ಕೆ ಹೋದಾಗ ನಮ್ಮಲ್ಲಿ ಇನ್ನೂ ಆಳವಾಗಿ ಬೇರೂರುತ್ತದೆ. ನಾವು ಪ್ರತಿನಿಧಿಸುವ ಧರ್ಮ ಎಂಥದು? ಅದರ ಮಹತ್ತ್ವ ಏನು? ಅನ್ನುವುದರ ಅರಿವು, ನಾವು ಸಣ್ಣವರಾಗಲು ಬಿಡದು...

ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ

ಎನ್ನುವ ಧರ್ಮ ನಮ್ಮದು! ಅರ್ಥಾತ್ 'ನಾಯಿಯನ್ನೂ ನಾಯಿ ಮಾಂಸ ತಿನ್ನುವವನನ್ನೂ ಪಂಡಿತನನ್ನೂ ಹಸುವನ್ನೂ ಒಂದೇ ಸಮನಾಗಿ ನೋಡುವವನು ಸನಾತನೀ ಹಿಂದೂ' ಎಂದೇ ಹೇಳಿದೆ.

ಅಲ್ಲದೆ ನಾನು ಮಾಡುತ್ತಿದ್ದ ವಿದ್ಯಾಭವನದ ಕೆಲಸವೂ ಅದಕ್ಕೆ ಪೂರಕವಾಗಿಯೇ ಇತ್ತಷ್ಟೇ?

ಆನೋ ಭದ್ರಾಃ ಕ್ರತವೋ ಯಂತು ವಿಶ್ವತಃ

ಸದ್ವಿಚಾರಗಳು ಎಲ್ಲ ಕಡೆಯಿಂದ ಬಂದು ನಮ್ಮನ್ನು ಸೇರಲಿ, 'Let the noble thoughts come from all sides' ಎನ್ನುವುದೇ ವಿದ್ಯಾಭವನದ ಧ್ಯೇಯ! ಅದನ್ನು ಋಗ್ವೇದದಿಂದ ಆರಿಸಿ,

ಶ್ರೀ ಮುನ್ಷಿಯವರು ವಿದ್ಯಾಭವನವು ಆ ಮಾತನ್ನು ಪ್ರತಿನಿಧಿಸುವಂತಿರಬೇಕು ಎಂದೇ ಸ್ಥಾಪನೆ ಮಾಡಿದುದು! ಹೀಗಾಗಿ ಭವನವು ನನ್ನ ಕಾರ್ಯಕ್ಷೇತ್ರವಾದುದು, ನಾನು ಭವನಕ್ಕೆ ಸೇವೆ ಸಲ್ಲಿಸುವಂತಾದುದು ನನ್ನ ಸುಕೃತ, ಪೂರ್ವಜನ್ಮ ಪುಣ್ಯವಿಶೇಷ ! ಇದರಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ!

ಅಲ್ಲಿ ಪರದೇಶಕ್ಕೆ ಹೋದಾಗಲೂ, ನಾನೂ ಅಲ್ಲಿ ಎಲ್ಲರ ಸಂಪರ್ಕದಲ್ಲಿರುವಾಗ ಇದನ್ನೆಲ್ಲ ಗಮನದಲ್ಲಿಟ್ಟುಕೊಂಡೇ ನಡೆದುಕೊಳ್ಳಬೇಕಿತ್ತು. ಅಲ್ಲಿ ಎಲ್ಲ ಮತ-ಧರ್ಮಗಳ ಜನರ ಬರು-ಹೋಗುವಿಕೆ ಇತ್ತು. ಎಲ್ಲರೂ ನನ್ನನ್ನು ಬಹಳ ಆದರ-ಪ್ರೀತಿಯಿಂದ ಕಾಣುತ್ತಿದ್ದರು. ವಿದ್ಯಾಭವನದ ಮೂಲಕ ಭಾರತದ ಸಂಸ್ಕೃತಿಯ ಪ್ರಚಾರ ಆಗುತ್ತಿತ್ತು. ಹಾಗಿರುವಾಗ ನಾನು ಯಾರಲ್ಲೂ ಭೇದ ಭಾವ ಎಣಿಸುವುದು ಕನಸಿನಲ್ಲೂ ಸಾಧ್ಯವಿಲ್ಲದ ಮಾತಾಗಿತ್ತು. ಇಂಥ ಭಾವನೆ ನನ್ನಲ್ಲಿ ಮನೆ ಮಾಡಲು ಸಹಾಯ ಮಾಡಿದುದು ಗಾಂಧೀಜಿಯ ಜೀವನ ದರ್ಶನ, ರಾಮಕೃಷ್ಣಾಶ್ರಮದ ಧ್ಯೇಯೋದ್ದೇಶ, ಸಂಸ್ಕೃತ ಕಲಿಕೆಯ ಪರಿಣಾಮ. ಮೊದಲನೆಯ ಎರಡರ ಪ್ರಭಾವದ ಬಗೆಗೆ ಸುಮಾರು ಮಂದಿಗೆ ತಿಳಿದಿರುತ್ತದೆ. ಅವರೂ ಹಾಗೆ ಗಾಂಧೀಜಿಯ, ಪರಮಹಂಸರ ಪ್ರಭಾವಕ್ಕೆ ಒಳಗಾಗಿರುವವರಾಗಿರುತ್ತಾರೆ. ಮೂರನೆಯದರಲ್ಲಿ ಇರುವ ವಿಶೇಷ, ಅದೂ ಸಂಸ್ಕೃತ ಕಲಿಕೆಯ ಪರಿಣಾಮ ಎಂದರೆ, "ಸಂಸ್ಕೃತ ಹಾಗೂ ಘನತೆ ಇವೆರಡೂ ಭಾರತದಲ್ಲಿ ಒಂದರೊಡನೊಂದು ಮೇಳೈಸಿಕೊಂಡಿರುವಂಥವು" (Sanskrit and prestige go together in India) ಎಂದಿದ್ದಾರೆ ಸ್ವಾಮಿ ವಿವೇಕಾನಂದರು. "ನಮ್ಮ ಎಲ್ಲರ ಸಮಾನಭೂಮಿಕೆ ನಮ್ಮ ಸಂಪ್ರದಾಯ, ನಮ್ಮ ಆರ್ಷೇಯ ಮತ. ಇವೆರಡೂ ನಮಗೆ ಪರಮ ಪವಿತ್ರವಾದವು. ನಮ್ಮ ಸನಾತನ ಧರ್ಮದ ಸಂಸ್ಕೃತಿಯನ್ನು ನಮ್ಮ ಸಂಪ್ರದಾಯಗಳು ಪ್ರತಿನಿಧಿಸುತ್ತವೆ. ನಮ್ಮ ಧರ್ಮದ ಸಾರವೇ ನಮ್ಮ ಗ್ರಂಥಗಳಲ್ಲಿ ಶೇಖರವಾಗಿದೆ. ಸಂಸ್ಕೃತ ಭಾಷೆಯ ಪದಗಳಲ್ಲಿ ಅದು ಶತಶತಮಾನಗಳಿಂದ ಸುರಕ್ಷಿತವಾಗಿ ಉಳಿದು ಬಂದಿದೆ. ಅವುಗಳನ್ನು ಸಾಮಾನ್ಯರೂ ಪಡೆಯುವಂತಗಾಬೇಕು ಎಂದು ಬಹಳ ಹಿಂದಿನಿಂದಲೂ ಧರ್ಮವನ್ನರಿತ ಮಹನೀಯರುಗಳು ಹೇಳುತ್ತಾ ಬಂದಿದ್ದಾರೆ. ಇದನ್ನು ಸರಳ ಮಾಡಿ ಜನರಿಗೆ ಪರಿಚಯಿಸಿ ಎಂದಿದ್ದಾರೆ. ಸಂಸ್ಕೃತಿಯ ಸಂಪಾದನೆಯಿಂದ ಹೊರತು ಅವರು ಮೇಲ್ಮಟ್ಟದಲ್ಲಿ ಉಳಿಯಲಾರರು. ಆದ್ದರಿಂದ ಸಂಸ್ಕೃತವನ್ನು ತಿಳಿದವರು ಆ ಕೆಲಸ ಮಾಡಿ. ತಿಳಿದವರು ತಿಳಿದವರ ನಡುವೆಯೇ ಇರುವುದರಿಂದ ಸಂಸ್ಕೃತಿಯ ಪ್ರಚಾರವಾಗದು..." ಎಂದಿದ್ದಾರೆ ಸ್ವಾಮಿ ವಿವೇಕಾನಂದರು! ಈ ಮಾತುಗಳು ನನ್ನ ಮನಸ್ಸಿನಲ್ಲಿ ಯಾವಾಗಲೂ ಪ್ರತಿಧ್ವನಿಸುತ್ತಿದ್ದವು. ನಾನು ಹುಟ್ಟಿ-ಬೆಳೆದುದು ಸಂಸ್ಕೃತ ಗ್ರಾಮ ಎನಿಸಿದ ಮತ್ತೂರಿನಲ್ಲಿ. ನನಗೆ ಸಂಸ್ಕೃತವೂ ಗೊತ್ತಿದ್ದು, ಯಾವ ಯಾವ ಗ್ರಂಥಗಳಲ್ಲಿ ಏನೇನು ಸಾಮಗ್ರಿ ಇದೆ ಎನ್ನುವುದೂ ತಿಳಿದಿದ್ದಿತು. ನಮ್ಮ ತಾಯಿಯ ಎದೆಯ ಮೇಲೆ ಬೆಂಕಿ ಇಡುವಾಗ ನಾನು ಹೇಳುವ ಪ್ರತಿಯೊಂದು ಮಂತ್ರದ ಅರ್ಥವನ್ನೂ ತಿಳಿದುಕೊಂಡು ಕಣ್ಣೀರಿಡುತ್ತಾ ಹೇಳಿದುದು ನನಗೆ ನೆನಪಿದೆ! ಅಂಥ ಪ್ರಭಾವಶಾಲಿ ಮಂತ್ರಗಳು ನಮ್ಮವು... ಜನನ-ಮರಣ ಎನ್ನುವುದು ಪ್ರಪಂಚದ ಜೀವಿಗಳಿಗೆಲ್ಲ ಇರುವಂಥದೇ. ನಮ್ಮಲ್ಲಿಯೂ ಪರದೇಶದವರಲ್ಲಿಯೂ ಇದು ಒಂದೇ!! ನಾನು ಲಂಡನ್‌ಗೆ ಹೋದಾಗ ಶ್ರೀ ಆರ್.ಆರ್. ದಿವಾಕರ ರಾಯರು "ಹಿಂದೂ ಸಂಸ್ಕಾರಗಳು" ಎನ್ನುವ ಶ್ರೀ ಪಾಂಡೆಯವರು ಬರೆದಿದ್ದ ಪುಸ್ತಕ ಒಂದನ್ನು ನನಗೆ ಕಳುಹಿಸಿಕೊಟ್ಟರು. ಆ ಪುಸ್ತಕ ಬಹಳ ಚೆನ್ನಾಗಿತ್ತು. ಅದರ ಜತೆಗೆ, ನಾನು ಇತರ ಎಲ್ಲಾ ಧಾರ್ಮಿಕ ವಿಧಿಗಳ ಆಚರಣೆಯ ಅರ್ಥ, ಆ ಆಚರಣೆ ಆವಶ್ಯಕತೆ-ಅಗತ್ಯದ ಬಗೆಗೆ ಚೆನ್ನಾಗಿ ಓದಿಯೂ ತಿಳಿದುಕೊಂಡೆ.

"ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ", ಅರ್ಥಾತ್ ಆತ್ಮ ಎನ್ನುವುದು ಅವಿಚ್ಛಿನ್ನ, ಅದಕ್ಕೆ ಯಾವುದೂ ಅಂಟುವುದೂ ಇಲ್ಲ, ಅದು ಭಿನ್ನವಾಗುವಂತಹದೂ ಅಲ್ಲ. ಈ ಆತ್ಮ ಎಲ್ಲರಲ್ಲೂ ಇರುವುದೇ, ಅದೇ ನಮಗೆ ಪರಮಾತ್ಮ ಸ್ವರೂಪಿ. ಹಾಗೆಂದುಕೊಂಡಿರುವಾಗ ಅಲ್ಲಿ, ಲಂಡನ್‌ನಲ್ಲಿ ಭವನವನ್ನು ಪ್ರೀತಿಸುವ ದಾನಿಗಳು ನನಗೆ ಯಾವುದೇ ಧಾರ್ಮಿಕ ವಿಧಿಗಳನ್ನು ಮಾಡಿಸಿಕೊಡಿ ಎಂದು ಕರೆದಾಗ ನಾನು 'ಒಲ್ಲೆ' ಎನ್ನದೆ ಹೋಗಿ ಮಾಡಿಸುತ್ತಿದ್ದೆ. ಓದುಗರೇ, ಒಂದು ವಿಷಯ ನಿಮ್ಮಲ್ಲಿ ನಾನು ಹೇಳಲಿದ್ದೇನೆ. ಯಾರೇ ಕರೆದರೂ ಹೋಗಿ ಮಾಡಿಸುವುದು ನನ್ನ ಕೆಲಸವಾಗಿರಲಿಲ್ಲ. ನನ್ನ ಕೆಲಸ ಭವನದ ಕೆಲಸ. ಭವನಕ್ಕೆ ಸಹಾಯ ಮಾಡಿದ ಸಿರಿವಂತರು ನಮ್ಮ ಸಂಪ್ರದಾಯಗಳ ಮೇಲೆ ನಂಬಿಕೆ ಇಟ್ಟು 'ಮಾಡಿಸಿಕೊಡಿ' ಎಂದು ಕರೆದಾಗ ಮಾತ್ರ ಹೋಗುತ್ತಿದ್ದೆ. ಹಾಗೆಂದು ಅದನ್ನೇ ವೃತ್ತಿಯಾಗಿ ಮಾಡಿಕೊಂಡಿರಲಿಲ್ಲ! ಹಾಗೆ 'ಬಿಡುವಿನ ವೇಳೆಯಲ್ಲಿ ಪೌರೋಹಿತ್ಯ ಮಾಡಿಸುತ್ತೇನೆ' ಎಂದು ಪ್ರಯತ್ನ ಮಾಡಿದ್ದರೆ, ಈವರೆಗೆ ನಾನು ಹಲವು ಕೋಟಿಗಳನ್ನೇ ಸಂಪಾದಿಸಿಕೊಳ್ಳಬಹುದಿತ್ತು. ಅಲ್ಲಿ ಹಾಗೆ ಧಾರ್ಮಿಕ ವಿಧಿಗಳನ್ನು ಮಾಡಿಸುವವರಿಗೆ ('ಮಹಾರಾಜ್'ಎನ್ನುತ್ತಾರೆ ಅವರು!) ಬಹಳ ಬೇಡಿಕೆ ಇದೆ. ಆದರೆ ಅದು ನನ್ನ ಉದ್ದೇಶವಾಗಿರಲಿಲ್ಲ, ಅದು ನನ್ನದಲ್ಲದ ಕೆಲಸ! ಅದು ನನಗೆ ಸ್ವಲ್ಪವೂ ಸೇರದ ರೀತಿ-ವಿಷಯ. ನನ್ನ ದೃಷ್ಟಿಯಲ್ಲಿ ಭವನಕ್ಕೆ ಅವರಿಂದ ಉಪಕಾರವಾಗುತ್ತದೆ ಎನ್ನುವುದಾದರೆ ಅವರಿಗೆ ನಾನು ಮಾಡಿಸಿಕೊಡಲು ಸಿದ್ಧನಿರುತ್ತಿದ್ದೆ. ಅಂತೆಯೇ ಅವರೂ ನನ್ನನ್ನೂ-ಭವನವನ್ನೂ ಎಂದೂ ಬೇರೆ ಬೇರೆಯಾಗಿ ನೋಡಿದ್ದಿಲ್ಲ!ನಾನು ಭವನಕ್ಕೆ ಸೇರಿದವನು, ಭವನವನ್ನು ನಾನು ಹೇಗೂ ನನ್ನ ಕೆಲಸಗಳಿಗೆ ಬಳಸಿಕೊಳ್ಳುವಂತಿಲ್ಲ... ಅಲ್ಲದೆ ಅಲ್ಲಿ ನಾನೊಬ್ಬನೇ ಅಲ್ಲ... ನನ್ನ ಹಿಂದಿರುವುದು ನನ್ನ ದೇಶದ ಸಂಸ್ಕೃತಿ, ನಮ್ಮ ದಲಾಲ್‌ಜೀ, ನನ್ನನ್ನು ಆರಿಸಿ ಅಲ್ಲಿಗೆ ಕಳುಹಿಸಿದ ಶ್ರೀ ರಾಮಕೃಷ್ಣನ್‌ಜೀ, ಇನ್ನೂ ಹಲವು ಗಣ್ಯರು. ಯಾವ ಕ್ಷಣದಲ್ಲೂ

ನಾನು ಹೇಗೂ ಜವಾಬ್ದಾರಿ ಇಲ್ಲದವನಂತೆ ವರ್ತಿಸುವುದು, ನಾನು ಭವನದಿಂದ ಬೇರೆ ಎಂದು ನಡೆದುಕೊಳ್ಳುವುದು ಸಾಧ್ಯವಿರಲಿಲ್ಲ. ಏನಾದರೂ ವ್ಯತ್ಯಾಸವಾದರೆ? ದೇಶಕ್ಕೆ ಅಪಕೀರ್ತಿ ಬರುವ ಸಾಧ್ಯತೆ. ಆಗ ಅದನ್ನು ನೆನೆಯುವುದೂ ನನ್ನಿಂದ ಆಗದು. ಅದಕ್ಕೇ ನಮ್ಮ ಸಂಸ್ಕೃತಿಯ ಒಂದು ಅಂಗವಾದ ಈ ವಿಧಿಗಳನ್ನು ನಡೆಸುವುದು ನನಗೆ ತಪ್ಪು ಎನಿಸಲಿಲ್ಲ.

ಮಹಾಭಾರತ ಸಾವಿತ್ರೀ

ನಾನು ಹಾಗೆ ಪ್ರಾರಂಭಿಸಿದುದೇ ಅಂತ್ಯೇಷ್ಟಿ ಮಾಡಿಸುವುದರಿಂದ! ಗರ್ಭಾಧಾನದಿಂದ ಅಂತ್ಯೇಷ್ಟಿಯವರೆಗೆ ಮಾಡಿಸುವ ಹದಿನಾರು ಸಂಸ್ಕಾರಗಳು (ಷೋಡಶ ಸಂಸ್ಕಾರಗಳನ್ನು) ಎಲ್ಲವನ್ನೂ ಸರಿಯಾಗಿ ತಿಳಿದುಕೊಂಡು ಅರ್ಥವತ್ತಾಗಿ ಮಾಡಿಸುವುದು ನನ್ನ ಉದ್ದೇಶವಾಗಿತ್ತು. ಹಾಗೆಯೇ ಅವರು ನನ್ನನ್ನು ಕರೆದಾಗ ಐದು ಸಾವಿರ, ಹತ್ತು ಸಾವಿರ ಪೌಂಡುಗಳನ್ನು ಉದಾರವಾಗಿ ಸಂಭಾವನೆ ಎಂದು ಕೊಡುತ್ತಿದ್ದರು. ಅದನ್ನು ನಾನು ನನ್ನ ಪಾಲಿನ ಶೇಕಡ ಮೂವತ್ತರಷ್ಟನ್ನು ಮಾತ್ರ ಇಟ್ಟುಕೊಂಡು ಮಿಕ್ಕ ಎಪ್ಪತ್ತರಷ್ಟನ್ನು ಭವನಕ್ಕೆ ಕೊಟ್ಟುಬಿಡುತ್ತಿದ್ದೆ. ಆ ಸಿರಿವಂತರು ತಮ್ಮ ಪರಿಚಯದವರ ನಿಕಟವರ್ತಿಗಳಿಗೆ ನನ್ನ ಬಗೆಗೆ ಹೇಳಿ 'ಇವರು ವಿದ್ಯಾಭವನದಿಂದ ಬಂದಿದ್ದಾರೆ' ಎಂದು ಪರಿಚಯಿಸಿ ಕೊಡುತ್ತಿದ್ದರು. ಅವರು ಹಾಗೆ ನನಗೆ ಪರಿಚಯ ಮಾಡಿಕೊಡುವವರೂ ಬಹಳ ಸಿರಿವಂತರೇ ಆಗಿರುತ್ತಿದ್ದು, ಅವರು ಕರೆದಾಗಲೂ ನಾನು ಇಲ್ಲ ಎನ್ನಲಾಗುತ್ತಿರಲಿಲ್ಲ... ನಿಜ... ಅವರು ಭವನಕ್ಕೆ ಸಹಾಯ ಮಾಡಬೇಕು, ಇದು ನನ್ನ ಒಂದೇ ಉದ್ದೇಶವಾಗಿರುತ್ತಿತ್ತು. ನಾನು ಅವರಲ್ಲಿಗೆ ಹೋಗುತ್ತಿದ್ದೆ. ನನ್ನ ಈ ಮನೋಭಾವಕ್ಕೆ ಪುಷ್ಟಿಕೊಡುವಂತೆ, ಲಾರ್ಡ್ ಫೆನ್ನರ್ ಬ್ರಾಕ್ವೆಯವರು "ಭವನವೇ ನನ್ನ ಚರ್ಚು!" ಎಂದರು !! ಮಾಜಿ ಪ್ರಧಾನಿಗಳಾದ ಶ್ರೀಮತಿ ಮಾರ್ಗರೇಟ್ ಥ್ಯಾಚರ್ ಎರಡು ಮೂರು ಭಾರಿ ಭವನಕ್ಕೆ ಭೇಟಿಕೊಟ್ಟು "ಶಾಂತಿ ಸಿಗಬೇಕಾದರೆ ಭವನಕ್ಕೆ ಭೇಟಿ ನೀಡಿ" ಎಂದು ಹೇಳಿದರು!! ಈ ಮಾತುಗಳನ್ನು ನಾವು ಯಾರಿಂದಲೂ ಒತ್ತಾಯ ಪೂರ್ವಕವಾಗಿ ಹೇಳಿಸಲಾಗದು. ಆ ಪರಿಸರಕ್ಕೆ ಬಂದ ಕೂಡಲೆ ಈ ಮಹನೀಯರ ಬಾಯಿಂದ ಉದ್ಗಾರ ರೂಪದಲ್ಲಿ ಹೊರಟ ಮಾತುಗಳಿವು!! ಈ ಶರೀರ ಸಂಬಂಧದ ಬಾಂಧವ್ಯಗಳು ಸಾವಿರಾರು. ಎಷ್ಟೋ ವರ್ಷಗಳಿಂದ ಇರುವ ಈ ಪ್ರಪಂಚದಲ್ಲಿ ನಮಗೆ ಆಗಿಹೋಗಿರುವ ತಾಯಿತಂದೆಯರು, ಹೆಂಡತಿ ಮಕ್ಕಳು ಅಸಂಖ್ಯ, ಈವರೆಗೆ ಇಷ್ಟು, ಮುಂದೆ ಎಷ್ಟೋ...

ಮಾತಾಪಿತೃಸಹಸ್ರಾಣಿ ಪುತ್ರದಾರಶತಾನಿ ಚ
ಸಂಸಾರೇಷ್ವನುಭೂತಾನಿ ಯಾಂತಿ ಯಾಸ್ಯಂತಿ ಚಾಪರೇ ||

ಎಂದು. ಹಾಗೆಂದರೆ ಈ ಯಾವುದೂ ಯಾರೂ ಶಾಶ್ವತವಲ್ಲ, ಯಾವುದರ ಮೇಲೆಯೂ ಅತಿಯಾದ ಮೋಹ ಇಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ ಎಂದು ವೇದವ್ಯಾಸರು ಹೇಳುತ್ತಾರೆ.

ವೇದವ್ಯಾಸರು ಮಹಾಭಾರತವನ್ನು ಬರೆದು ಮುಗಿಸಿದ ನಂತರ ಈ ಭಾರತದ ಸಾರವನ್ನೆಲ್ಲ ಕೇವಲ ಐದು ಶ್ಲೋಕಗಳಲ್ಲಿ ಸಂಗ್ರಾಹ್ಯವಾಗಿ ಹೇಳಿದ್ದಾರೆ. ಆ ನಾಲ್ಕಾರು ಮಾತುಗಳಿಗೆ 'ಭಾರತ ಸಾವಿತ್ರೀ' ಎಂದು ಹೆಸರಿಟ್ಟಿದ್ದಾರೆ. ಆ ನಾಲ್ಕಾರು ಮಾತುಗಳಲ್ಲಿ ಮೇಲೆ ಹೇಳಿರುವ ಶ್ಲೋಕವೂ ಒಂದು. ಅದರಿಂದ ಯಾವುದೂ ಶಾಶ್ವತವಲ್ಲದಾಗ ಏನು ಮಾಡಬೇಕು? ಅದನ್ನು ಮುಂದಿನ ಶ್ಲೋಕ ಹೇಳುತ್ತದೆ:

ಸ್ವಧರ್ಮಕರ್ಮವಿಮುಖಾಃ ಕೃಷ್ಣ ಕೃಷ್ಣೇತಿ ರಾವಿಣಃ |
ತೇ ಹರೇರ್ದ್ವೇಷಿಣೋ ಮೂಢಾಃ ಧರ್ಮಾರ್ಥಂ ಜನ್ಮ ಯದ್ಧರೇ ||

ಎಂದು. ಹಾಗೆಂದರೆ ಪ್ರತಿಯೊಬ್ಬರೂ ಧರ್ಮಮಾರ್ಗದಲ್ಲಿ ನಡೆದು, ಒಳ್ಳೆಯ ಕೆಲಸಗಳನ್ನು ಮಾಡಿ, ಲೋಕಸಂಗ್ರಹ ಕಾರ್ಯದಲ್ಲಿ ತೊಡಗಿದರೆ, ಅವರವರ ಪಾಲಿನ ಕರ್ತವ್ಯಗಳನ್ನು ನಿಷ್ಠೆಯಿಂದ ಮಾಡಿದರೆ ಸುಖವಾಗಿ ಬಾಳಲು ಬೇಕಾದದ್ದೆಲ್ಲವೂ ಸಿಗುತ್ತದೆ. ಅದಕ್ಕಾಗಿ ಬೇರೆ ರೀತಿಯಲ್ಲಿ ಕಷ್ಟಪಡುವುದು ಬೇಕಿಲ್ಲ... ಅಧರ್ಮ ಮಾರ್ಗದಲ್ಲಿ ನಡೆದು ಸಿರಿಸಂಪತ್ತು ಗಳಿಸುವುದರಿಂದ ದುಃಖ, ನಷ್ಟ-ಕಷ್ಟಗಳೇ ಸಿಗುವುದು ಎಂದು ಹೇಳಿದೆ. ಹೀಗೆ ಹೇಳುವ ವೇದವ್ಯಾಸರು ಮತ್ತೂ ಮುಂದುವರೆದು

ಹರ್ಷಸ್ಥಾನಸಹಸ್ರಾಣಿ ಭಯಸ್ಥಾನಶತಾನಿ ಚ
ದಿವಸೇ ದಿವಸೇ ಮೂಢಮಾವಿಶಂತಿ ನ ಪಂಡಿತಮ್ ||

ಎನ್ನುತ್ತಾರೆ. ಹಾಗೆಂದರೆ ಮನುಷ್ಯನ ಜೀವನದಲ್ಲಿ ಸಂತೋಷದ ಸಂದರ್ಭಗಳು ಸಾವಿರಾರು, ಕಷ್ಟ-ದುಃಖದ ಸಂದರ್ಭಗಳೂ ಹಲವಾರು. ಅವು ಬರು-ಹೋಗುವಂಥವು . ಅಷ್ಟಾದರೂ ಅವುಗಳಿಂದ ಜನ ಪಾಠ ಕಲಿಯುವುದಿಲ್ಲ. ಮೂರ್ಖತನದಿಂದ ಕಷ್ಟಗಳನ್ನು ಹೆಚ್ಚಿಸಿಕೊಂಡು ಮೈ ಮೇಲೆ ತಂದುಕೊಳ್ಳುತ್ತಾರೆ... ಹೀಗೇಕೆ ಆಗಬೇಕು? ಕೂಡದು, ಬದಲಾಗಿ ವೈರಾಗ್ಯ ಮೂಡಬೇಕು... ಹೀಗೆ ಹೇಳಿ –

ಊರ್ಧ್ವಬಾಹುರ್ವಿರೌಮ್ಯೇಷ ನ ಚ ಕಶ್ಚಿತ್ ಶೃಣೋತಿ ಮಾ
ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೇ ||

ಅಧರ್ಮದಿಂದ, ಅಸತ್ಯ ಮಾರ್ಗದಿಂದ ಗಳಿಸಿದ ಅರ್ಥವು ಅನರ್ಥಕಾರಿ, ಇಷ್ಟಪೂರ್ತಿಯೂ ಅವಮಾನಕರ... ಹೀಗೆ ಮಾಡ ಬೇಡಿ. ಕೈಗಳೆರಡನ್ನೂ ಮೇಲಕ್ಕೆತ್ತಿ ಜೋಡಿಸಿ ನಾನು ನಿಮ್ಮನ್ನು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ನನ್ನ ಮಾತನ್ನು ಯಾರೂ ಕಿವಿಯ ಮೇಲೆ ಹಾಕಿಕೊಳ್ಳುವುದಿಲ್ಲ... ಎಂದು - ಈ ಮಹರ್ಷಿ ವೇದವ್ಯಾಸರ ಈ ಮಾತುಗಳು ನನ್ನಲ್ಲಿ ಚಿರಸ್ಥಾಯಿಯಾಗಿಬಿಟ್ಟಿವೆ ! ಇದನ್ನು ನಾನು ಅಕ್ಷರಶಃ ಪಾಲಿಸುವುದಕ್ಕೆ ಪ್ರಯತ್ನಿಸುತ್ತಿದ್ದೆ. ನನ್ನ ದೃಷ್ಟಿಯಲ್ಲಿ

'ಧರ್ಮ' ಎನಿಸುವಂತಹ ಕೆಲಸಗಳನ್ನು ಹಿಂಜರಿಯದೆ ಮಾಡಿಸುತ್ತಿದ್ದೆ. ಇದೆಲ್ಲವೂ ನನ್ನನ್ನು ನಾನು ಸಮರ್ಥಿಸಿಕೊಳ್ಳಲು ನಿಮ್ಮಲ್ಲಿ ಹೇಳುತ್ತಿರುವ ಮಾತುಗಳಲ್ಲ. ನನ್ನ ಜತೆ ನನ್ನ ಓದುಗರಾದ ನೀವು ಇಷ್ಟು ದೂರ ಸಾಗಿ ಬಂದಿದ್ದೀರಿ, ನಿಮ್ಮಲ್ಲಿ ನನಗೆ ಏನು ಮುಚ್ಚು ಮರೆ? ನಿಮ್ಮೆದುರಿಗೆ ನನ್ನನ್ನು ಸಮರ್ಥಿಸಿಕೊಳ್ಳುವ ಆವಶ್ಯಕತೆಯೂ ಇಲ್ಲ... ಜೀವನದಲ್ಲಿ ನಾನು ಸಾಗಿ ಬಂದ ದಾರಿಯನ್ನು, ದಾರಿಯಲ್ಲಿ ಭೇಟಿಯಾದುದನ್ನು ನಾನು ನಿಮಗೆ ಪರಿಚಯ ಮಾಡಿಸಿದ್ದೇನೆ. ನೀವು ನನ್ನ ಈ ಮಾತುಗಳಿಗೆ, ನಂಬಿಕೆಗಳಿಗೆ ಸ್ಪಂದಿಸುತ್ತೀರಿ ಎನ್ನುವ ಭರವಸೆ-ನಂಬಿಕೆ ನನಗೆ ಅಪಾರವಾಗಿದೆ. ಆದರೂ ಈ ವಿಷಯಗಳನ್ನು ಅಷ್ಟು ಸುಲಭವಾಗಿ ತೆಗೆದುಕೊಳ್ಳುವಷ್ಟು 'ಹಗುರ'ಅಲ್ಲ ಅವು! ಅದಕ್ಕಾಗಿ ನನ್ನ ನಂಬಿಕೆಗಳ ಬಗೆಗೆ ನಿಮಗೆ ವಿವರಣೆ ಕೊಟ್ಟಿರುವುದು. ಅದಕ್ಕೆ ಬಹಳ ಮಟ್ಟಿಗೆ ಪೋಷಕಾಂಶ ಒದಗಿಸಿದುದು 'ಮಹಾಭಾರತ'ದ ಅನಂತರ ವೇದವ್ಯಾಸರು ಬರೆದ ಈ 'ಭಾರತ ಸಾವಿತ್ರೀ' ಶ್ಲೋಕಗಳು! ಅವುಗಳಲ್ಲಿ ಅದೆಷ್ಟು ಸೊಗಸಿದೆ, ಎಂಥ ತಥ್ಯವಿದೆ ಎನ್ನುವುದನ್ನು ನಿಮಗೆ ತಿಳಿಸುವುದು ನನ್ನ ಉದ್ದೇಶ, ಆಶಯ ಆಗಿತ್ತು. ಅದಕ್ಕಾಗಿ ಸ್ವಲ್ಪ ವಿವರವಾಗಿಯೇ ಬರೆದಿರುವುದು.

ಗಾಂಧೀಜಿಯ ಫಿನಿಕ್ಸ್ ಆಶ್ರಮ

ಅಲ್ಲಿ ಕಳೆದ ಮೊದಲ ಒಂದೆರಡು ವರ್ಷಗಳು: ಹೊಸದಾಗಿ ಮದುವೆಯಾದ ಹೆಣ್ಣುಮಗಳೊಬ್ಬಳು ಹೊಸಬರಾದ ಗಂಡನ ಮನೆಯವರ ನಡುವೆ ಇರುವಾಗ ಅದೆಷ್ಟು ಚಡಪಡಿಸುತ್ತಾಳೆ, ಅವಳಿಗೆ ತವರು ಮನೆಯ ನೆನಪು ಎಷ್ಟು ಇರುತ್ತದೆ ಎನ್ನುವುದನ್ನು ಅನುಭವಿಸಿದವರೇ ತಿಳಿಯಲು ಸಾಧ್ಯ! ನನ್ನ ಪರಿಸ್ಥಿತಿ ಹಾಗೆಯೇ ಇದ್ದುದು. ಆದರೆ ದೇಶ-ವಿದೇಶಗಳ ಪ್ರಯಾಣ, ಅಲ್ಲಿನ ಹಿರಿಯರ - ತಿಳಿದವರ ಭೇಟಿ ನಮ್ಮ ದೃಷ್ಟಿಯನ್ನು ವಿಶಾಲಗೊಳಿಸಿ ವಿಚಾರ ವ್ಯಾಪ್ತಿಯನ್ನು ಹೆಚ್ಚಿಸುತ್ತವೆ. ದಕ್ಷಿಣ ಆಫ್ರಿಕಾಕ್ಕೆ ಹೋಗಿ ಬಂದೆ. ಆಗ ಅಲ್ಲಿನ ಜನ ನನಗೆ ತೋರಿಸಿದ ಪ್ರೀತಿ ಕಂಡು ಮೂಕನಾದೆ! ಅಲ್ಲಿ ಗಾಂಧೀಜಿಯ ಫಿನಿಕ್ಸ್ ಆಶ್ರಮವನ್ನು ನೋಡಿ ಪುಳಕಿತನಾದೆ! 'ನೇಟಾಲ್ ವೇದಿಕ್ ಸೊಸೈಟಿ'ಯವರು ನನ್ನನ್ನು ಆಹ್ವಾನಿಸಿದ್ದರು. ಅಲ್ಲಿ ನಾನು ಸುಮಾರು ೪೨ ಉಪನ್ಯಾಸಗಳನ್ನು ಕೊಟ್ಟೆ. ಪೀಟರ್ ಮಾರಿಸ್ ಬರ್ಗ್‌ಗೆ ನಾನು ಹೋದಾಗ, ಅಲ್ಲಿ ಗಾಂಧೀಜಿಯವರನ್ನು ರೈಲಿನಿಂದ ಹೊರದಬ್ಬಿದ ಜಾಗವನ್ನು ನೋಡಿ ಮಾತೇ ಹೊರಡದೆ ಕಣ್ಣುಗಳಲ್ಲಿ ಒಂದೇ ಸಮನೆ ನೀರು ಉಕ್ಕಿ ಉಕ್ಕಿ ಬಂದಿತು! ಅಲ್ಲಿ ಆ ಮಹಾ ಪುರುಷನು ಬಿದ್ದ ಸ್ಥಳದ ಮಣ್ಣನ್ನು ಕೈಯಲ್ಲಿ ಹಿಡಿದು, ಅದನ್ನು ಕಣ್ಣಿಗೆ ಒತ್ತಿಕೊಂಡು, ಹಣೆಗೆ ವಿಭೂತಿಯಂತೆ ಸವರಿಕೊಂಡೆ, ಆಗ ನಾನು ಅತ್ಯಂತ ಭಾವುಕನಾಗಿದ್ದೆ. ಆಗ ಆದ ಅನುಭವವನ್ನು ವರ್ಣಿಸಲಸಾಧ್ಯ!

ಆ ಊರಿನಲ್ಲಿ ಒಂದು ಶಾಲೆ ಇದೆ. ಆ ಶಾಲೆಯ ಸಮೀಪದಲ್ಲಿಯೇ ಗಾಂಧೀಜಿಯ ಮೂರ್ತಿಯೊಂದನ್ನು ಇಟ್ಟಿದ್ದಾರೆ. ಆ ಜಾಗದಲ್ಲಿ ನಾವು ನೋಡುವ ಮತ್ತೊಂದು ವಿಶೇಷ ಎಂದರೆ, ಅಲ್ಲಿರುವ ಒಂದು ಬಾವಿಯಿಂದ ಪತ್ನಿ ಕಸ್ತೂರಬಾ ಅವರಿಗೆ ನೀರು ತರಲು ಕಷ್ಟ ವಾಗುವುದೆಂದು ಗಾಂಧೀಜಿ, ತಾವೇ ಒಂದು ಪಂಪನ್ನು ಅಳವಡಿಸಿದ್ದಾರೆ. ಆ ಬಾವಿಯಲ್ಲಿ ಕಸ ತುಂಬಿದ್ದುದನ್ನು ಕಂಡು ನನಗೆ ಕರುಳು ಕಿವುಚಿದಂತಾಯಿತು. ಕೂಡಲೆ ಸಂಬಂಧಪಟ್ಟವರನ್ನು ಸಂಪರ್ಕಿಸಿ ನನ್ನ ಸ್ವಂತ ಹಣದಲ್ಲಿ ಸಾವಿರ ಪೌಂಡುಗಳನ್ನು ಕೊಟ್ಟು, ಆ ಬಾವಿಯ ಕಸ ತೆಗೆಸಿ, ಶುಚಿ ಮಾಡಿಸಿ, ಆ ಜಾಗವನ್ನು ನಿರ್ಮಲವಾಗಿ ಇಡಬೇಕೆಂದು ಹೇಳಿ ಪ್ರಾರ್ಥಿಸಿಕೊಂಡೆ.

ಆಗ, ಅಲ್ಲಿ ತುಂಬಿದ ಕಸಕಡ್ಡಿಗಳನ್ನು ನೋಡಿ ನನಗೆ, 'ಗಾಂಧೀ ಸಾಹಿತ್ಯ ಸಂಘ'ದಲ್ಲಿ ನಮ್ಮೊಡನೆ ಬೆರೆತು ಶ್ರೀ ಶರ್ಮರ ಮಾರ್ಗ ದರ್ಶನದಲ್ಲಿ ತಯಾರಾಗುತ್ತಿದ್ದ ನಮ್ಮೆಲ್ಲರಿಗೂ ಹಿರಿಯ ಅಣ್ಣನಂತಿರುವ ಶ್ರೀ ಹೊ. ಶ್ರೀನಿವಾಸಯ್ಯನವರ ನೆನಪಾಯಿತು. ಅವರು ಯಾವಾಗಲೂ ನೈರ್ಮಲ್ಯಕ್ಕೆ ಪ್ರಾಶಸ್ತ್ಯ ಕೊಡುತ್ತಿದ್ದವರು. ನಾವು ಆಗಾಗ 'ಗ್ರಾಮಶುಚಿ' ಕಾರ್ಯಕ್ರಮವನ್ನು ಹಾಕಿಕೊಂಡಾಗ ನಮಗೆಲ್ಲಾ ಸರಿಯಾದ ಸಲಹೆ, ಸೂಚನೆಗಳನ್ನು ಕೊಟ್ಟು, ನಾವು ಯಾವುದೇ ಮುಜುಗರವಿಲ್ಲದೇ ಎಲ್ಲವನ್ನೂ ಶುಚಿಗೊಳಿಸುವ ಕಾರ್ಯದಲ್ಲಿ ಮನಸಾ ತೊಡಗಿಕೊಳ್ಳುವಂತೆ ಮಾಡುತ್ತಿದ್ದವರು. ಅವರು ಲಂಡನ್ನಿಗೂ ಬಂದಿದ್ದರು.

ಅಲ್ಲಿಯೇ ಗಾಂಧೀಜಿ ಆಗಿನ ವರ್ತಮಾನಗಳನ್ನು ತಾವೇ ಮುದ್ರಿಸುತ್ತಿದ್ದ ಮುದ್ರಣಾಲಯ ಒಂದು ಇದೆ. ಅದನ್ನು ನೋಡುವಾಗಲೂ ನನ್ನ ಕಣ್ಣುಗಳು ತೇವವಾದವು... ಎಂತೆಂಥ ವಿಚಾರಗಳು ಈ ಮುದ್ರಣಾಲಯದಲ್ಲಿ ಮುದ್ರಿತವಾಗಿವೆಯೋ? ಎನಿಸಿ ರೋಮಾಂಚನವಾಯಿತು. ಆ ಮುದ್ರಣಾಲಯವನ್ನು ಹಾಳುಗೆಡವದೇ ಹಾಗೆಯೇ ರಕ್ಷಿಸಿಟ್ಟಿದ್ದಾರೆ... ಹೀಗೆ ನನ್ನ ದಕ್ಷಿಣಾ ಆಫ್ರಿಕಾ ಭೇಟಿ ಒಂದು ಅನಿರ್ವಚನೀಯ ಅನುಭವವಾಯಿತು.

ಲಾರ್ಡ್ ಫೆನರ್ ಬ್ರಾಕ್ವೆ, ಬ್ರಿಟನ್ನಿನ ಲೇಬರ್ ಪಕ್ಷದ ಸದಸ್ಯರು. ಲಂಡನ್‌ನಲ್ಲಿ 'ಕ್ವೇಕರ್ಸ್' ಎಂಬ ಸಂಘವಿದೆ. ಅಲ್ಲಿನ ಸದಸ್ಯರು ಅಹಿಂಸಾ ವ್ರತ ತೊಟ್ಟವರು. ಮಹಾತ್ಮಾಗಾಂಧೀಜಿಯು ಸಹ ಆ ಸಂಘದ ಸದಸ್ಯರಾದರು. ಬ್ರಾಕ್ವೆ ಅವರು ಗಾಂಧೀಜಿಯ ಭಕ್ತರು, ಅಭಿಮಾನಿಗಳು. ಅದರ ಪರಿಣಾಮವಾಗಿಯೇ, ಅವರು ಗಾಂಧೀ ಟೋಪಿಯನ್ನು ಹಾಕಿಕೊಂಡೇ ಬ್ರಿಟನ್ ಪಾರ್ಲಿಮೆಂಟ್‌ನಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಕೊಡಲೇಬೇಕೆಂದು ವಾದಿಸಿದರು! ಆ ಟೋಪಿಯ ಮೇಲೆ ಅವರಿಗೆ ಒಂದು ರೀತಿಯ ಭಾವನಾತ್ಮಕ ಸಂಬಂಧ ಉಂಟಾಯಿತು. ಈ ಘಟನೆಯ ಅನಂತರ, ಗಾಂಧೀಜಿಗೆ ಅವರ ಮೇಲಿನ ಪ್ರೀತಿ, ವಿಶ್ವಾಸ ಮತ್ತೂ ಹೆಚ್ಚಿತು. ಬಹಳ ಸ್ನೇಹವೂ ಆಯಿತು. ಗಾಂಧೀಜಿ ಹೇಳುವಂತೆ

"ನನ್ನ ಮಿತ್ರರು ಹಲವಾರು ಮಂದಿ ಬ್ರಿಟನ್ನಿನಲ್ಲಿದ್ದಾರೆ" ಎನ್ನುವ ಮಾತು ಫೆನರ್ ಬ್ರಾಕ್ವೆ, ನೋಯಲ್ ಬೇಕರ್ ಇಂತಹವರನ್ನು ಕುರಿತೇ ಆಗಿದೆ. ಫೆನರ್ ಬ್ರಾಕ್ವೆ ಅವರು ಐತಿಹಾಸಿಕ ಮಹತ್ತ್ವವಿದ್ದ ತಮ್ಮ ಪ್ರೀತಿಪಾತ್ರ ಗಾಂಧಿ ಟೋಪಿಯನ್ನು ಭಾರತೀಯ ವಿದ್ಯಾಭವನ, ಲಂಡನ್ ಕೇಂದ್ರಕ್ಕಾಗಿ ಕೊಟ್ಟರು ಎಂದು ನನ್ನ ಓದುಗರಲ್ಲಿ ಹೇಳಿಕೊಳ್ಳಲು ನನಗೂ ಬಹಳ ಹೆಮ್ಮೆ ಎನಿಸುತ್ತದೆ. ಈಗಲೂ ಗಾಜಿನ ಪೆಟ್ಟಿಗೆಯಲ್ಲಿ ಸುರಕ್ಷಿತವಾಗಿಟ್ಟು ಈ ಟೋಪಿಯನ್ನು ಸಾರ್ವಜನಿಕರ ಪ್ರದರ್ಶನಕ್ಕಾಗಿಯೇ ಲಂಡನ್ ಕೇಂದ್ರದಲ್ಲಿ ಇರಿಸಲಾಗಿದೆ.

ಮಂತ್ರಶಕ್ತಿ

ಇದಲ್ಲದೆ ನಾನು ಇಟಲಿಗೆ ಹೋಗಿ, ಅಲ್ಲಿ ವ್ಯಾಟಿಕನ್ ಸಿಟಿಯಲ್ಲಿ ಪೋಪ್ ಜಾನ್ ಪಾಲರನ್ನು ಭೇಟಿಯಾಗಿ ಬಂದೆ. ಇಡೀ ಯೂರೋಪಿನ ಪ್ರವಾಸ ಮಾಡಿದೆ. ಸ್ವಾಮಿ ಓಂಕಾರಾನಂದರ ಆಹ್ವಾನದ ಮೇರೆಗೆ ಜ್ಯೂರಿಕ್‌ಗೆ ಹೋಗುತ್ತಿದ್ದೆ. ಇಲ್ಲಿ ನಿಮಗೆ ಹೇಳಲೇಬೇಕಾದುದು ನನ್ನ ಸ್ಪೇನ್ ಭೇಟಿಯ ಅನುಭವ...

'ಪ್ರಿನ್ಸೆಸ್ ಐರೀನ್ ಆಫ್ ಗ್ರೀಸ್' ಎನ್ನುವ ರಾಜಕುಮಾರಿಗೆ ಮತ-ಧರ್ಮ, ಸಂಪ್ರದಾಯ-ನಂಬಿಕೆಗಳ ಮೇಲೆ ಬಹಳ ಆಸಕ್ತಿ. ಅವೆಲ್ಲವೂ ಅರ್ಥವಿಲ್ಲದವುಗಳಲ್ಲ, ಅನಾದಿಕಾಲದಿಂದಲೂ ನಡೆದು ಬಂದಿರುವಂಥವು ಎನ್ನುವ ಅಭಿಪ್ರಾಯವಿದ್ದ ಆಕೆ ನಮ್ಮ ಕಂಚಿಯ ಪರಮಾಚಾರ್ಯರ ಶಿಷ್ಯೆ!! ಆಶ್ಚರ್ಯ ಎನಿಸುವುದು ಅಲ್ಲಾ?? ಆಕೆ ಒಂದು ಕಾರ್ಯಕ್ರಮವನ್ನು ಪ್ರಾಯೋಜಿಸಿದ್ದರು. ಸ್ಪೇನಿನ ರಾಜಧಾನಿಯ ಸಮೀಪದ ಕಾಡಿನಲ್ಲಿ 'ಮಲ್ಟಿಫೇಥ್ ಕಾನ್ಫರೆನ್ಸ್' (ವಿವಿಧ ನಂಬಿಕೆಗಳ ಸಮಾವೇಶ) ನಡೆಸಿ, ವೇದದ ಮೇಲೆ ವಿಚಾರ ಗೋಷ್ಠಿಯನ್ನು ಏರ್ಪಡಿಸಿದ್ದರು. ಅಲ್ಲಿಗೆ ನನ್ನನ್ನು ಆಹ್ವಾನಿಸಿದ್ದರು. ಅವರಿಗೆ ಅಲ್ಲಿ ನಾನು ಹೇಳಿದ ಶಾಂತಿಮಂತ್ರ ಬಹಳ ಇಷ್ಟವಾಯಿತು. ಯಜುರ್ವೇದದ ಮಂತ್ರಗಳನ್ನು ಆರಿಸಿಕೊಂಡು ಹೇಳಿ, ಜತೆಗೆ ನನಗೆ ಬಹಳ ಪ್ರಿಯವಾದ ರುದ್ರ ಮಂತ್ರವನ್ನು ಹೇಳಿ, ನಾನು ಅಲ್ಲಿ ಪಠಿಸಿದ ಮಂತ್ರಗಳಿಗೆಲ್ಲಾ ಅರ್ಥವನ್ನು ಹೇಳಿದೆ. ಅವೆಲ್ಲವೂ ಅವರಿಗೆಲ್ಲಾ ಬಹಳ ಇಷ್ಟವಾಯಿತು. ಅಲ್ಲವೇ ಮತ್ತೆ? ಇಷ್ಟವಾಗದೇ? 'ಎಲ್ಲವನ್ನೂ ಎಲ್ಲರನ್ನೂ ಸಮಾನವಾಗಿ ಕಾಣು, ಎಲ್ಲರಲ್ಲೂ ಅವನಿದ್ದಾನೆ, ಯಾರಲ್ಲೂ ಜುಗುಪ್ಸೆ, ಅಸಹ್ಯ ಬೇಡ' ಎಂದು ಹೇಳುವ ಮಂತ್ರಗಳು ಯಾರಿಗೆ ತಾನೆ ಇಷ್ಟವಾಗದು!! ಹೀಗೆ ಅವರೆಲ್ಲರ ಪ್ರೀತಿಗೆದ್ದ, ಅವರ ಹೃದಯದಲ್ಲಿ ನೆಲೆಸಿದ ಮಂತ್ರಗಳು ಅವು!

ಮತ್ತೊಮ್ಮೆ 'ವಿವಾಹ ವಾಗ್ದಾನ'

ಹೀಗೆ ಹಲವಾರು ದೇಶಗಳನ್ನು ಸುತ್ತಿದ ನಾನು ಇತ್ತೀಚೆಗೆ ಬರ್ಮುಡಾಗೂ ಹೋಗಿ ಬಂದೆ! ಹಿಂದೆ ನಾನು ನಮ್ಮ ಹಿಂದೂ ವಿವಾಹದ ಧಾರ್ಮಿಕ ವಿಧಿಗಳನ್ನೂ ಅದರ ಮಹತ್ತ್ವವನ್ನೂ ಹೇಳಿದ್ದುದು ಅಮೆರಿಕಾದ ಹುಡುಗ-ಹುಡುಗಿಯರಿಗೆ ಬಹಳ ಹಿಡಿಸಿ, ಅವರು ಆ ರೀತಿಯಲ್ಲಿಯೇ ತಮ್ಮ ವಿವಾಹ ಮಾಡಿಸಿಕೊಂಡರು. ನಾನೇ ಮಾಡಿಸಿದ ವಿವಾಹದಲ್ಲಿ ನಾನು ವಿವಾಹದಲ್ಲಿ ಹೇಳುವ ಮಂತ್ರಗಳಿಗೆ, ತೆಗೆದುಕೊಳ್ಳುವ ಪ್ರಮಾಣಗಳಿಗೆ ಅರ್ಥ ಹೇಳಿದ್ದೆ. ಆ ದಂಪತಿಗಳು ವಿವಾಹಾನಂತರ ಬಹಳ ಸುಖವಾಗಿದ್ದರು... ಇಬ್ಬರು ಮಕ್ಕಳ ತಂದೆ ತಾಯಿ ಎನಿಸಿದರು. ಇದಾಗಿ ೧೨ ವರ್ಷಗಳು ಕಳೆದಿದ್ದವು! ಮೇ ಮೊದಲವಾರದಂದು ಆ ದಂಪತಿಗಳು ನನಗೆ ಒಂದು ಕಾಗದ ಬರೆದು, 'ಮತ್ತೂರ್‌ಜೀ, ನೀವು ಮಾಡಿಸಿದ ಮದುವೆಯಿಂದ ನಾವು ಈವರೆಗೂ ಸುಖವಾಗಿ ಬಾಳಿದ್ದೇವೆ. ನಾವು ಅಂದು ತೆಗೆದುಕೊಂಡ ಪ್ರಮಾಣಗಳಿಗೆ ೧೨ ವರ್ಷಗಳು ತುಂಬಿದವು. ಈಗ ನಾವು ಆ ವಿವಾಹ ವಿಧಿಗಳನ್ನು ಮತ್ತೆ ನಿಮ್ಮಿಂದಲೇ ಮಾಡಿಸಿಕೊಂಡು, ನಮ್ಮ ಪ್ರಮಾಣಗಳನ್ನು ಮತ್ತೊಮ್ಮೆ ಹೊಸದಾಗಿ ಹೇಳಿಕೊಳ್ಳಲು ನೀವು ಅವಕಾಶ ಮಾಡಿಕೊಡಿ...!! ಏಕೆಂದರೆ ಅದು ನಮ್ಮಲ್ಲಿಯೇ ಎಂದಿಗೂ ಒಂದು ಬಂಧನವಾಗಿ ಇರಬೇಕು!' ಹೀಗೆ ಕೇಳಿದ್ದರು... ಅಷ್ಟು ಆಸೆಯಿಂದ ಅವರು ನನಗೆ ಬರೆದುಕೊಂಡಿರುವಾಗ ನಾನು ಇಲ್ಲ ಎನ್ನುವುದೇ? ಅದು ನನ್ನಿಂದ ಸಾಧ್ಯವಿರಲಿಲ್ಲ. ಕೂಡಲೇ ನನ್ನ ಒಪ್ಪಿಗೆ ತಿಳಿಸಿ ನಾನು ಅವರಲ್ಲಿಗೆ ಬರುವುದಾಗಿ ಹೇಳಿದೆ... ಬಹಳ ಪ್ರೀತಿಯಿಂದ ನನ್ನನ್ನೂ ನನ್ನವಳನ್ನೂ ಅವರಲ್ಲಿಗೆ ಬರಮಾಡಿಕೊಂಡ ಆ ದಂಪತಿಗಳು, ಹೊಸದಾಗಿ ಮತ್ತೊಮ್ಮೆ ವಿವಾಹ ಮಾಡಿಸಿಕೊಂಡರು! ನಾನು ಆ ವಿವಾಹವನ್ನು ನಡೆಸುವಾಗ ನನ್ನ ಹೃದಯ ತುಂಬಿ ಬಂದಿತ್ತು... ಆ ನಂಬಿಕೆಯ ಬೇರುಗಳು ಅದೆಷ್ಟು ಆಳಕ್ಕೆ ಇಳಿದಿವೆ ? ತಾವು ಪರಸ್ಪರ ಮಾಡುವ ವಾಗ್ದಾನಗಳಿಂದಲೇ ತಾವು ಇಂದಿಗೂ ಸುಖವಾಗಿರುವುದು ಎಂದು ತಿಳಿದಿರುವ ಅವರು, ಅದೆಷ್ಟು ಶ್ರದ್ಧೆಯಿಂದ ಆ ವಾಗ್ದಾನಗಳನ್ನು ಈವರೆಗೆ ಪಾಲಿಸುತ್ತಾ ಬಂದಿದ್ದಾರೆ, ನನಗೆ ಅಚ್ಚರಿಯಾಯಿತು. ಆ ವಾಗ್ದಾನಗಳನ್ನು ಮತ್ತೊಮ್ಮೆ ಮಾಡಿಸಲು ಬಹಳ ಸಂತೋಷವೂ ಆಯಿತು... ಆ ದಿನ ಮತ್ತೊಮ್ಮೆ ವಿವಾಹ ಮಾಡಿಕೊಂಡ ಆ ದಂಪತಿಗಳ ಮುಖದಲ್ಲಿ ಹನ್ನೆರಡು ವರ್ಷಗಳ ಹಿಂದೆ ಕಂಡ ಎಳೆತನವಿಲ್ಲದಿದ್ದರೂ, ನಿರ್ಮಲ ಪ್ರೇಮದ, ಶುದ್ಧ ಅಂತಃಕರಣದ ಭಾವ ಪ್ರತಿಬಿಂಬಿಸುತ್ತಿದೆ ಎನಿಸಿತು ನನಗೆ ತೀವ್ರವಾಗಿ!

೩೪. ಹರಡಿದ ಹೆಜ್ಜೆಗಳು

ಸಿನಿಮಾ ಪ್ರಚೋದನೆ

ಲಂಡನ್‌ನಲ್ಲಿದ್ದಾಗ ನಾನು ನಮ್ಮ ವಿವಾಹ ಪದ್ಧತಿಯನ್ನು ಜನರಿಗೆ ತೋರಿಸುವ ಸಲುವಾಗಿ ಒಬ್ಬ ಹುಡುಗ-ಹುಡುಗಿಯನ್ನು ಕರೆಸಿ, ಒಂದು ಮದುವೆ ಮಾಡಿಸಿ ಅದನ್ನು ವಿಡಿಯೋದಲ್ಲಿ ಟೇಪು ಮಾಡಿ ಟಿ.ವಿ.ಯಲ್ಲಿ ತೋರಿಸುವ ಏರ್ಪಾಡು ಮಾಡಿದ್ದೆ. ಈ ಮದುವೆಯನ್ನು ಶೂಟಿಂಗ್ ಮಾಡುವಾಗ ನನಗೆ ನೆನಪಾದದ್ದು ನಾನು ಮದ್ರಾಸಿನಲ್ಲಿದ್ದಾಗ ಜೆಮಿನಿ ಸ್ಟುಡಿಯೋದಲ್ಲಿ ಸಿನಿಮಾಗೆ ಸೇರಿಕೊಳ್ಳಲು ಆಸೆಪಟ್ಟು ಶೂಟಿಂಗ್ ಗೆಂದು ಹೋದದ್ದು.

ಮೊದಲಿನಿಂದಲೂ ನನಗೆ ನಾಟಕ, ನಟನೆಯ ಬಗ್ಗೆ ವಿಶೇಷ ಆಸಕ್ತಿ. ಮದ್ರಾಸಿನಲ್ಲಿದ್ದಾಗ ೧೮-೧೯ರ ತರುಣನಾಗಿದ್ದ ನಾನು ನೋಡಲು ಸಹ ಕೆಂಪಗೆ ಇದ್ದೆ. ಎತ್ತರ ಸ್ವಲ್ಪ ಕಡಮೆಯಾದರೂ ಅದು ನನ್ನ ನಟನಾ ಸಾಮರ್ಥ್ಯವನ್ನು ಕುಂದಿಸಿರಲಿಲ್ಲ! ಆಗ ಹಲವು ತಮಿಳು ನಾಟಕಗಳಲ್ಲಿ ಅಭಿನಯಿಸಿದೆ. ನಾನು ಹಿಂದೆಯೇ ನಿಮಗೆ ಹೇಳಿರುವಂತೆ ಮದ್ರಾಸ್‌ನಲ್ಲಿನ 'ಸುಗುಣವಿಲಾಸ ಕ್ಲಬ್'ನ ಸದಸ್ಯನಾಗಿದ್ದೆ. ಆಗ ಶ್ರೀ ಜೆಮಿನಿಗಣೇಶನ್‌ರು ಉದಯೋನ್ಮುಖ ನಾಯಕ ನಟ. ಅವರು ಒಳ್ಳೆಯ ನಟರೆಂದು ಹೆಸರು ಮಾಡಿದ್ದರು! ಅವರು ಸಹ ಆ ಕ್ಲಬ್‌ನ ಸದಸ್ಯರಾಗಿದ್ದರು. ಜೆಮಿನಿ ಸ್ಟುಡಿಯೋದಲ್ಲಿ ಅವರದೊಂದು ಸಿನೆಮಾ ಚಿತ್ರೀಕರಣವಾಗುತ್ತಿತ್ತು. ನಾನೂ ನಾಟಕಗಳಲ್ಲಿ ಅಭಿನಯಿಸುವುದರ ಬಗ್ಗೆ ತಿಳಿದಿದ್ದ ಅವರು ನನಗೆ ಸಿನೆಮಾದಲ್ಲಿ ಒಂದು ಅವಕಾಶ ಕೊಡಿಸುವುದಾಗಿ ಹೇಳಿ, ನನ್ನನ್ನು ಸ್ಟುಡಿಯೋಗೆ ಬರಹೇಳಿದರು. 'ನೀವು ಬಂದರೆ ನಾನೂ ಬರುತ್ತೇನೆ' ಎಂದೆ ನಾನು. ತಾವೂ ಬರುವುದಾಗಿ ಭರವಸೆಕೊಟ್ಟ ಅವರು, ಮರುದಿನ ನಾನು ಅಲ್ಲಿಗೆ ಹೋದಾಗ ಬರಲೇ ಇಲ್ಲ. ನಾನು ಬರುವುದರ ಸೂಚನೆಯನ್ನು ಅವರು ಕೊಟ್ಟಿದ್ದುದರಿಂದ, ನನ್ನನ್ನು ಗುರ್ತಿಸಿದ ಸ್ಟುಡಿಯೋದ ಜನ ನನ್ನನ್ನು ಪ್ರಸಾಧನದ ಕೋಣೆಗೆ ಕರೆದೊಯ್ದು, ನನಗೆ ದೇವೇಂದ್ರನ ಪಾತ್ರ ಕೊಡಲಾಗಿದೆ ಎಂದೂ, ಮಾತೇನೂ ಇಲ್ಲದೆ ಸುಮ್ಮನೆ ಕುಳಿತಿರುವುದಷ್ಟೇ ಕೆಲಸವೆಂದೂ ಹೇಳಿ ಮೇಕಪ್ಪು ಮಾಡಿದರು.

ಆ ಬಣ್ಣ ಮೆತ್ತಿಸಿಕೊಳ್ಳುವುದೊಂದು ಹಿಂಸೆಯ ಕೆಲಸ! ಮೇಕಪ್ಪು ಮುಗಿದನಂತರ ಕುಳಿತ ನಾನು ಕಾದೆ, ಕಾದೆ, ಕಾದೆ, ಮಧ್ಯಾಹ್ನ ನಾಲ್ಕು ಘಂಟೆಯ ತನಕವೂ ಕಾದೆ... ಏನೂ ಆಗಲಿಲ್ಲ. ಮೇಕಪ್ಪು ತೆಗೆದು ಮನೆಗೆ ಬಂದೆ. ಮಾರನೆಯ ದಿನ ಬರಲು ಹೇಳಿದರು. ನನ್ನ ಉತ್ಸಾಹ ಈಗ ಅರ್ಧಕ್ಕೆ ಇಳಿದಿತ್ತು. ಏಕೋ ಅಲ್ಲಿನ ಪರಿಸರ, ಆ ಜನ ನನಗೆ ಹಿಡಿಸಲಿಲ್ಲ. ಆದರೂ ಜೆಮಿನಿ ಹೇಳಿದ್ದಾರಲ್ಲ ಎಂದು ಹೋದೆ. ಮತ್ತೆ ಅದೇ ಪುನರಾವರ್ತನೆಯಾಯಿತು. ಆ ದಿನ, 'ಬರುತ್ತೇನೆ', ಎಂದಿದ್ದ ಜೆಮಿನಿಯವರಿಗಾಗಿ ಕಾದೆ. ಅವರು ಶೂಟಿಂಗ್‌ನಲ್ಲಿದ್ದಾರೆ, ಬರುವುದಿಲ್ಲ ಎಂದರು ಯಾರೋ. "ಶೂಟಿಂಗ್...??" ಚಲನಚಿತ್ರದ ಚಿತ್ರೀಕರಣಕ್ಕೆ ಶೂಟಿಂಗ್ ಎನ್ನುತ್ತಾರೆ ಎಂದು ತಿಳಿಯದಿದ್ದ ನಾನು "ಶೂಟಿಂಗ್ ಅಂದ್ರೇ? ಜೆಮಿನಿಯವರು ಬೇಟೆಗೆ ಹೋಗುತ್ತಾರೆಯೇ?" ಎಂದೆ. ಅದಕ್ಕೆ ನಕ್ಕ ಅಲ್ಲಿದ್ದವನೊಬ್ಬ "ಆ ಶೂಟಿಂಗ್ ಅಲ್ಲ, ಇದು ಚಿತ್ರೀಕರಣ!" ಎಂದ.

ಮಾರನೆಯ ದಿನ ಜೆಮಿನಿಯವರಿಗೆ 'ನಾನು ಇನ್ನು ಬರುವುದಿಲ್ಲ' ಎಂದು ಹೇಳಿದೆ. ಆಗಲೂ ಅವರು ಒತ್ತಾಯ ಮಾಡಿ, ಆ ಸಮಯಕ್ಕೆ ಸರಿಯಾಗಿ ತಾವೇ ಬಂದು ನನ್ನ ಜತೆ ಸೇರಿದರು. ನಾವಿಬ್ಬರೂ ಒಳಗೆ ಹೋದಾಗ ನನಗೆ ಇನ್ನೇನು ಮೇಕಪ್ ಮಾಡಬೇಕು ಎನ್ನುವಾಗ ನಾನು, ಜೆಮಿನಿಯವರಲ್ಲಿ "ನನಗೆ ಏಕೋ ಇದರಲ್ಲಿ ಮನಸ್ಸಿಲ್ಲ, ನೀವು ದಯವಿಟ್ಟು ನನ್ನನ್ನು ಬಿಡಿ. ಏನೂ ತಪ್ಪು ತಿಳಿದುಕೊಳ್ಳಬೇಡಿ" ಎಂದೆ. ಅವರಿಗೂ ಅದೇನು ಅನ್ನಿಸಿತೋ ತಿಳಿಯದು, ಒಮ್ಮೆ ನಕ್ಕು, "ಸರಿ, ಹೋಗಿ ಬಾ, ಒಳ್ಳೆಯದಾಗಲಿ" ಎಂದು ಹೇಳಿ ಕೈಕುಲುಕಿ ನನ್ನನ್ನು ಕಳುಹಿಸಿಕೊಟ್ಟರು. ಅಲ್ಲಿಗೆ ಆ ಅಧ್ಯಾಯ ಮುಗಿದಿತ್ತು!

ಅಷ್ಟಾದರೂ ನಾಟಕದ ಗೀಳು ನನ್ನನ್ನು ಬಿಟ್ಟಿರಲಿಲ್ಲ. ಮದ್ರಾಸಿನಲ್ಲಿದ್ದಾಗಲೇ ಒಮ್ಮೆ ಲಂಡನ್‌ನಿಂದ ಷೇಕ್ಸ್‌ಪಿಯರ್ ನಾಟಕದ ತಂಡವೊಂದು ಬಂದಿದ್ದಿತು. ಆಗ ಅಲ್ಲಿ ಅವರು ಅಭಿನಯಿಸಿದ ನಾಟಕಗಳನ್ನು ನೋಡಿ ಬಹಳ ಪ್ರಭಾವಿತನಾಗಿದ್ದೆ. ಲಂಡನ್‌ಗೆ ಹೋಗಿ, ಅಲ್ಲಿ ಇದ್ದಾಗಲೂ ಷೇಕ್ಸ್‌ಪಿಯರ್ ಥಿಯೇಟರ್‌ನವರು ಆಡುವ ನಾಟಕಗಳಿಗೆ ಮುಂಗಡವಾಗಿಯೇ ಟಿಕೆಟ್ಟು ಕಾದಿರಿಸಿ, ತಪ್ಪದೇ ಹೋಗಿ ನಾಟಕ ನೋಡುತ್ತಿದ್ದೆ, ಎಂತಹ ಅಭಿನಯ ಅವರದ್ದು?!! ಅಬ್ಬಾ! ೫೦೦ ವರ್ಷಗಳ ಹಿಂದೆ ಹೇಗೆ ನಾಟಕವಾಡುತ್ತಿದ್ದರೋ ಅದೇ ಸಾಂಪ್ರದಾಯಿಕ ಶೈಲಿಯನ್ನೇ ಅನುಸರಿಸಿ ಅವರು ನಾಟಕವಾಡುತ್ತಿದ್ದರೆ, ಆ ಕಾಲದ ಸನ್ನಿವೇಶಗಳು ಪ್ರೇಕ್ಷಕರ ಕಣ್ಣಿಗೆ ಕಟ್ಟುವಂತಿದ್ದು ಅದೇ ಲೋಕಕ್ಕೆ ಆಗಿನ ಕಾಲಕ್ಕೆ ನಮ್ಮನ್ನು ಕರೆದೊಯ್ದಂತೆ ಭಾಸವಾಗುತ್ತದೆ! ಅಂಥ ಪ್ರತಿಭಾವಂತ ಕಲಾಕಾರರು ಅವರು...

ಭವನದಲ್ಲಿ ನಮ್ಮ ಸಾಹಿತಿಗಳು

ಕಲಾಕಾರರು ಎಂದಾಗ ನೆನಪಿಗೆ ಬರುವುದು, ಎಲ್ಲ ರೀತಿಯ ಕಲೆಗಳಲ್ಲೂ ಸಿದ್ಧಹಸ್ತರೆನಿಸಿರುವ ಹಲವು ಮಂದಿ. ಬರವಣಿಗೆ ಎನ್ನುವುದು ಒಂದು ವಿಶಿಷ್ಟ ಕಲೆ. ಅದು ಎಲ್ಲರಿಗೂ ಒಲಿಯು ವಂತಹುದಲ್ಲ. ಸಾಹಿತ್ಯ ಸರಸ್ವತಿಯ ಸಾಕ್ಷಾತ್ಕಾರವಾದವರು ಬಹಳ ಕಡಮೆ. ಆದರೂ, ಆ ದಿಶೆಯಲ್ಲಿ ತಮ್ಮ ಪ್ರಯತ್ನ ನಡೆಸಿದವರನ್ನು, ನಾವು ಕಡಮೆಯೆನ್ನುವಂತಿಲ್ಲ. ವಿಪುಲವಾದ ಕನ್ನಡ ಸಾಹಿತ್ಯದಲ್ಲಿ ಇರುವ ಸಾಹಿತಿಗಳು ಅನೇಕ ಮಂದಿ. ಅಂತಹವರಲ್ಲಿ, ನಾನು

ಲಂಡನ್‌ನಲ್ಲಿದ್ದಾಗ ನಮ್ಮಲ್ಲಿಗೆ ಬಂದು ಭಾರತೀಯ ವಿದ್ಯಾಭವನಕ್ಕೆ ಭೇಟಿಕೊಟ್ಟು, ಭವನದಲ್ಲಿ ಉಪನ್ಯಾಸ ಮಾಡಿ ಉಪಕರಿಸಿದವರು, ಡಾ. ಎಸ್.ಎಲ್. ಭೈರಪ್ಪ, ಡಾ. ಪ್ರಭುಶಂಕರ, ಶ್ರೀ ಶ್ರೀರಂಗ, ಶ್ರೀ ಜಿ.ಎಸ್. ಶಿವರುದ್ರಪ್ಪ, ಶ್ರೀ ಸಿ.ಕೆ. ನಾಗರಾಜರಾವ್, ಶ್ರೀ ಸಂತೋಷ ಕುಮಾರ್ ಗುಲ್ವಾಡಿ, ನಿವೃತ್ತ ನ್ಯಾಯಾಧೀಶ ಶ್ರೀ ನಿಟ್ಟೂರು ಶ್ರೀನಿವಾಸರಾವ್ ಹಾಗೂ ಡಾ. ಹಾ.ಮಾ. ನಾಯಕ. ಬಹಳ ಹಿಂದೆಯೇ ನಮ್ಮಲ್ಲಿಗೆ ಬಂದಿದ್ದ ಶ್ರೀ ವಿ.ಸೀ.ಯವರ ಬಗ್ಗೆ, ಶ್ರೀ ಕಾರಂತರ ಬಗ್ಗೆ ಈಗಾಗಲೇ ನಿಮಗೆ ಹೇಳಿದ್ದೇನೆ.

'ಸನಾತನೀ' ವಿವಾಹಗಳು

ಮಾತು ಎಲ್ಲಿಂದ ಎಲ್ಲಿಗೋ ಹಾರಿತು ಎನ್ನುವುದು ಇದಕ್ಕೇ ! ಲಂಡನ್‌ನಲ್ಲಿ ಮದುವೆ ಮಾಡಿಸಿದ ವಿಡಿಯೋಟೇಪಿನ ಬಗ್ಗೆ ಹೇಳುತ್ತಿದ್ದ ನಾನು, ಆ ನಾಟಕದ ಮದುವೆಗೆ ಸಂಬಂಧಪಟ್ಟಂತೆ ಈ ವಿಷಯಗಳನ್ನೆಲ್ಲ ಹೇಳುವಂತಾಯಿತು. ನಾಟಕದ ಮದುವೆ ಅದೊಂದೇ!! ಮಿಕ್ಕ ಮದುವೆಗಳೆಲ್ಲ ನಿಜದ ಮದುವೆಗಳೇ ನಡೆದವು. ಪಾಶ್ಚಾತ್ಯರು ಬಹಳ ಮಂದಿ ನಮ್ಮ ಹಿಂದೂ ವಿವಾಹ ಪದ್ಧತಿಯ ಮದುವೆ ಮಾಡಿಕೊಂಡರು. ನಾನು ಹಿಂದೆ ಹೇಳಿರುವ ಜರ್ಮನ್‌ಡಾ ದಂಪತಿಗಳಲ್ಲಿ - ಆತನ ತಮ್ಮ ತರುಣ. 'ಅವನಿಗೆ ಇದರಲ್ಲಿ ಆಸಕ್ತಿ ಇಲ್ಲ, ನೀವು ಅವನಿಗೆ ನಾಲ್ಕು ಮಾತು ಹೇಳಿ' ಎಂದಿದ್ದರು ಆತ. ಆದರೆ ನಾನು ಮದುವೆ ಮಂಟಪದಲ್ಲಿ ಮಾಡಿಸಿದುದನ್ನೆಲ್ಲ ತದೇಕಚಿತ್ತನಾಗಿ ನೋಡುತ್ತ ಕುಳಿತಿದ್ದ ಆತನ ತಮ್ಮ. ಎಲ್ಲ ಮುಗಿದ ಮೇಲೆ ನಾನು, "ತಮಗೆ ಈ ಹಿಂದೂರೀತ್ಯಾ ವಿವಾಹ ಇಷ್ಟವಾಯಿತೇ?" ಎಂದೆ. ಅದಕ್ಕೆ ಅವನು "ಹೌದು...ಹೌದು...ಮತ್ತೂರ್‌ಜೀ, ಇದು ಬಹಳ ಕುತೂಹಲಕಾರಿಯಾಗಿದೆ. ಎಷ್ಟು ಅರ್ಥಪೂರ್ಣ ಆಗಿದೆ. ಅದಕ್ಕೇ ನಾನು ಸುಮ್ಮನೆ ನೋಡುತ್ತಾ ಕುಳಿತಿದ್ದುದು..." ಎಂದ. ಆರೇಳು ತಿಂಗಳನಂತರ ನನ್ನ ಬಳಿಗೆ ಬಂದ ಅವನು ತಾನು ಒಬ್ಬ ಹುಡುಗಿಯನ್ನು ವಿವಾಹವಾಗುತ್ತಿರುವುದಾಗಿಯೂ, ತನ್ನ ವಿವಾಹವನ್ನು ವೆನಿಜೂಯೆಲಾದಲ್ಲಿ ಏರ್ಪಡಿಸಲಾಗಿದೆಯೆಂದೂ ತಿಳಿಸಿದವ, ಆ ಮದುವೆಯನ್ನು ನಾನೇ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳಲು ಬಂದೆ ಎಂದು ಹೇಳಿದ. ನನಗೆ ಬಹಳ ಆಶ್ಚರ್ಯವಾಯಿತು. 'ನಮ್ಮ ಈ ಪದ್ಧತಿಯಲ್ಲಿ ಅದೇನು ಆಕರ್ಷಣೆ ಇದೆ, ಹೀಗೆ ಯುವಜನಾಂಗವನ್ನು ಸೆಳೆಯುತ್ತಿದೆಯಲ್ಲಾ ಇದು? ಓಹ್...!!' ಎನಿಸಿತು.

ಗೌರಿ ಎನ್ನುವ ಒಬ್ಬ ಸಿಲೋನ್‌ನ ಹೆಣ್ಣುಮಗಳು. ಅವಳು ತಮಿಳು ಹುಡುಗಿ. ಅವಳ ಗೆಳೆಯ ಜಾನ್. ಅವರಿಬ್ಬರೂ ಹೀಗೆ ಮದುವೆ ಮಾಡಿಕೊಳ್ಳಬೇಕೆಂದು ಬಯಸಿ ನನ್ನ ಬಳಿ ಬಂದರು. ನಾನು ಅವರಿಬ್ಬರನ್ನೂ ಸೇರಿಸಿ ಮದುವೆಗೆ ಒಂದು ವಾರದ ಮೊದಲೇ ಆ ಧಾರ್ಮಿಕ ವಿಧಿಗಳ ಬಗೆಗೆ ಹೇಳಿ, ಅಲ್ಲಿ ಮಾಡಬೇಕಾಗಿರುವುದನ್ನೆಲ್ಲ ಹೇಳಿ ತೋರಿಸಿ, ಅವರೂ ಹಾಗೆಯೇ ಮಾಡುವಂತೆ ಮಾಡಿಸಿ ಆ ಮಂತ್ರಗಳನ್ನು ಹೇಳಿಸಿ ಹಾಗೆ ಮಾಡುವುದರ ಅರ್ಥವನ್ನು ವಿವರಿಸಿದೆ. ಗೌರಿಗೆ ಬಹಳ ಆಸಕ್ತಿ, ಪ್ರತಿಯೊಂದರ ಬಗೆಗೂ ಬಹಳ ಕುತೂಹಲ. ಎಲ್ಲವನ್ನೂ ಕೇಳಿ ಕೇಳಿ ತಿಳಿದುಕೊಳ್ಳುತ್ತಿದ್ದಳು ಅವಳು. ಜಾನ್ ಸುಮ್ಮನೆ ಕುಳಿತಿರುತ್ತಿದ್ದ. ಅವನ ಮುಖದಲ್ಲಿ ಯಾವ ಭಾವಗಳೂ ಇರುತ್ತಿರಲಿಲ್ಲ. ಒಂದು ರೀತಿಯ ಶಿಲೆಯಂತೆ ಕುಳಿತ ಅವನ ಪ್ರತಿಕ್ರಿಯೆ ಏನು ಎನ್ನುವುದನ್ನು ತಿಳಿಯಬೇಕೆಂದು ನನಗೆ ಕಾತರ. "ಜಾನ್, ನಿನಗೆ ಇದೆಲ್ಲ ತಿಳಿಯುತ್ತಿದೆಯಲ್ಲವೆ ? ಇದು ನಿನಗೆ ಇಷ್ಟವಾಯಿತೆ?" ಎಂದೆ. ಅದಕ್ಕೆ ಅವನು "ಮಾಥೂರ್‌ಜೀ, ನಾನು ಇದನ್ನೆಲ್ಲ ಬಹಳ ಗಂಭೀರವಾಗಿ ಗಮನಿಸುತ್ತಿದ್ದೇನೆ. ನೀವು ಮಾಡಿಸುವುದೆಲ್ಲಾ ಬಹಳ ಅರ್ಥಪೂರ್ಣವಾಗಿದೆ. ಬಹಳ ಚೆನ್ನಾಗಿದೆ. ಮಾಥೂರ್‌ಜೀ, ನಾನು ನಿಮ್ಮನ್ನೊಂದು ಪ್ರಶ್ನೆ ಕೇಳಬಹುದೆ?" ಎಂದ. "ಓಹೋ... ಧಾರಾಳವಾಗಿ! ಕೇಳು" ಎಂದೆ ನಾನು. "ಮಾಥೂರ್‌ಜೀ, ನೀವು ಈಗ ಹೇಳುತ್ತಿರುವುದನ್ನೆಲ್ಲ ನಾನು ತಪ್ಪದೇ ಪಾಲಿಸಿದರೆ ನಾನು-ಗೌರಿ ಇಬ್ಬರೂ ಸುಖವಾಗಿರುತ್ತೇವೆ ಅಲ್ಲವೇ? ಡೈವೋರ್ಸ್ ಮಾಡುವ ಸಂದರ್ಭವೇ ಬರುವುದಿಲ್ಲ, ಅಲ್ಲವೇ?" ಎಂದ. ಅವನ ಪ್ರಶ್ನೆ ಕೇಳಿ ನನಗೆ ದಂಗಾಯಿತು. ನಾನು ಸ್ವಲ್ಪ ವಿವರಿಸಿ ಹೇಳಬೇಕಾಯಿತು. "ಜಾನ್, ನಮ್ಮಲ್ಲಿರುವುದೆಲ್ಲ ಪತಿ-ಪತ್ನಿಯರು ಬದುಕಿರುವ ತನಕವೂ ಸುಖವಾಗಿ ಸಂತೋಷದಿಂದ ಬಾಳಲಿ ಎಂದು ಹೇಳುವ ಮಂತ್ರಗಳು, ಅದಕ್ಕೆ ತಕ್ಕ ಹಾಗೆ ಆ ವಿಧಿಗಳು. ನಮ್ಮಲ್ಲಿ ಡೈವೋರ್ಸ್ (ವಿವಾಹ ವಿಚ್ಛೇದನ) ಎನ್ನುವುದೇ ಇಲ್ಲ, ಅದು ನಮಗೆ ತಿಳಿಯದೇ ಇದ್ದ ವಿಚಾರ! ಪಾಶ್ಚಾತ್ಯರೇ ಅದನ್ನು ನಮಗೆ ಪರಿಚಯಿಸಿದವರು!!" ಎಂದೆ.

ಈ ದಂಪತಿಗಳ ವಿವಾಹವಾಗಿ ಇಂದಿಗೂ ಅವರು ಜೊತೆಯಾಗಿ ಸಂತೋಷದಿಂದಿದ್ದಾರೆ! ಜರ್ಮನಿಯ ಹುಡುಗನೊಬ್ಬ ಭಾರತೀಯ ಹುಡುಗಿಯನ್ನು ಮದುವೆಯಾದ. ನಾನು ಮಾಡಿಸಿದ ಆ ಮದುವೆಯಿಂದ ಬಹಳ ತೃಪ್ತಿಪಟ್ಟ ಆ ದಂಪತಿಗಳಿಗೆ ಈಗ ಎರಡು ಮಕ್ಕಳು. ನನಗೆ ಪತ್ರ ಬರೆದಾಗಲೆಲ್ಲ "ಮತ್ತೂರ್‌ಜೀ, ನೀವು ನಮ್ಮಲ್ಲಿಗೆ ಬನ್ನಿ ಒಮ್ಮೆ, ನಮ್ಮ ಮಕ್ಕಳು ನಿಮ್ಮನ್ನು ನೋಡಬೇಡವೇ? ನೀವು ಅವರನ್ನೂ ನೋಡಬೇಕು! ನೀವು ನಿಂತು ಪ್ರೀತಿಯಿಂದ ಮಾಡಿಸಿದ ಮದುವೆಯಿಂದ ನಾವು ಎಷ್ಟು ಸುಖದಿಂದ ಇದ್ದೇವೆ ಎಂದು ನೀವು ನೋಡಬೇಕು...!! ನಮ್ಮಲ್ಲಿಗೆ ಒಮ್ಮೆ ಬನ್ನಿ!" ಈ ಸಾಲನ್ನು ಬರೆಯದೆ ಅವರು ಪತ್ರ ಮುಗಿಸುವುದಿಲ್ಲ! ಅಷ್ಟು ವಿಶ್ವಾಸವಿಟ್ಟಿದ್ದಾರೆ ನನ್ನಲ್ಲಿ!

ಹೀಗೆ ನಾನು ಮದುವೆ ಮಾಡಿಸಿದ ಅನೇಕ ಜೋಡಿಗಳು ಇಂದಿಗೂ ನನ್ನನ್ನು ಸ್ಮರಿಸಿಕೊಳ್ಳುತ್ತಾರೆ. ಆಗಾಗ ಪತ್ರ ಬರೆಯುತ್ತಾರೆ. ಇವರಿಂದ ನಾನು ಮತ್ತೇನು ನಿರೀಕ್ಷಿಸಲಿ? ಅವರು ಸಂತೋಷದಿಂದ ಇರುವುದೇ ನನಗೆ ದೊಡ್ಡ ಉಡುಗೊರೆ. ಸಾಮಾನ್ಯವಾಗಿ ಅವರೆಲ್ಲರೂ ಸಾಕಷ್ಟು ಸಿರಿವಂತರು. ಅವರು ಬಹಳ ಇಷ್ಟಪಟ್ಟು ನಾನು ಅವರಿಗೆ ಮಾಡಿದ

ಸೇವೆಗೆ ಬದಲಾಗಿ, ಭವನಕ್ಕೆ ಏನಾದರೂ ಮಾಡುತ್ತಿದ್ದರು. ನನಗೆ ಅಷ್ಟೇ ಸಾಕಾಗಿತ್ತು. ಭಗವಂತ ನನ್ನನ್ನು ಸಾಕಷ್ಟು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದಾನೆ. ಬೇರೆ ಆಸೆ ನನಗೂ ಇಲ್ಲ! ಎಷ್ಟು ಕಷ್ಟ ಕಂಡು ಬಂದವರು ನಾವು...

ಎಷ್ಟು ಬಾರಿ ಎಣಿಸಿದರೂ ಅಷ್ಟೇ !

ಮನಸ್ಸು ಎಷ್ಟೋ ವರ್ಷಗಳ ಹಿಂದಕ್ಕೋಡುತ್ತಿದೆ. ಮನೆಯಲ್ಲಿ ನಾನು, ಇವಳು, ಅಣ್ಣ ಶ್ರೀ ಶಂಕರಮೂರ್ತಿ, ಅತ್ತಿಗೆ, ಜತೆಗೆ ನಮ್ಮ ತಾಯಿ. ಬಹಳ ಕಷ್ಟ. ನಾನು ಆಗಾಗ ಅಲ್ಲಿ ಇಲ್ಲಿ ಕಥೆ ಮಾಡಲು ಹೋಗುತ್ತಿದ್ದೆನಷ್ಟೆ. ಕಥೆಗಳು ದೇವಸ್ಥಾನದಲ್ಲಿ ಆಗುತ್ತಿದ್ದುದು. ಅಲ್ಲಿ ಕಥೆ ಮುಗಿದಾಗ ದೇವರಿಗೆ ಮಂಗಳಾರತಿ ಮಾಡುತ್ತಿದ್ದರು. ಆಗ ಆರತಿ ತಟ್ಟೆಗೆ ಬಿದ್ದ ಕಾಸುಗಳೇ ನಮಗೆ ಸಂಭಾವನೆ! ಬೇರೆ ಏನೂ ಇಲ್ಲ. ಹಾಗೆ ಬಂದ ಚಿಲ್ಲರೆ ಕಾಸನ್ನು ನಾನೂ-ರಾಮಶಾಸ್ತ್ರಿಗಳೂ ಸಮನಾಗಿ ಹಂಚಿಕೊಳ್ಳುತ್ತಿದ್ದೆವು. ಒಮ್ಮೆ ಚನ್ನಪಟ್ಟಣದಲ್ಲಿ ಅಭಿಮಾನಿಗಳು ಮುತ್ತಿಕೊಳ್ಳುವುದನ್ನು ನೋಡಿ ನಮಗೂ ಖುಷಿಯಾಯಿತು. ಎಷ್ಟು ಕಾಸುಗಳು ಬಿದ್ದರೂ ಆಗಿನ ಸಂಭಾವನೆಯು ಹತ್ತು ರೂಪಾಯಿಗಳನ್ನು ಮುಟ್ಟುತ್ತಿರಲಿಲ್ಲ. ಅಂತೂ ಕಾರ್ಯಕ್ರಮ ಮುಗಿಸಿ ಬಸ್ಸಿಗೆ ವಾಪಸ್ಸು ಹೊರಟಾಗ, ಬಸ್ಸಿನಲ್ಲೇ ಎಣಿಸಿದೆವು. ಒಟ್ಟಾರೆ ಹದಿನೈದು ರೂಪಾಯಿ, ಹತ್ತು ಪೈಸೆ ಇದ್ದಿತು. ನನಗೆ ಏಳು ರೂಪಾಯಿ ಐವತ್ತೈದು ಪೈಸೆ, ರಾಮಶಾಸ್ತ್ರಿಗೂ ಅಷ್ಟೇ ಹಣ. ಆ ರಾತ್ರಿ ದುಡ್ಡನ್ನು ತೆಗೆದುಕೊಂಡು ಹೋಗಿ ನಮ್ಮಮ್ಮನ ಕೈಲಿ ಕೊಟ್ಟೆ. ನಾನು ಎಣಿಸಿದರೂ ಅವರೊಮ್ಮೆ ಎಣಿಸಲಿ ಎಂದು ನನ್ನ ಆಸೆ... ಅಮ್ಮ ಪಾಪ! ದುಡ್ಡನ್ನೇ ಕಂಡವರಲ್ಲ. ಕಡುಬಡತನದ ಬೇಗೆಯಲ್ಲಿ ನೊಂದವರು. ನೋಟುಗಳನ್ನು ಮುಟ್ಟಿದರೂ ಸಂತೋಷ ಪಡುತ್ತಿದ್ದರು! ಆದರೆ ಎಂದಿಗೂ 'ನಮಗೆ ಇಲ್ಲವಲ್ಲಾ' ಎಂದೂ ಕೊರಗಿದ್ದಿಲ್ಲ. ಇದ್ದುದರಲ್ಲೇ ತೃಪ್ತಿ ಪಟ್ಟು ಸಂತೋಷದಿಂದ ಇರುತ್ತಿದ್ದ ಜೀವ ಅಮ್ಮನದು.

ಅಮ್ಮ ರಾತ್ರಿ ಚಿಲ್ಲರೆ ಎಣಿಸುತ್ತಿದ್ದರು. ನಾನು ಮಧ್ಯರಾತ್ರಿ ಎದ್ದು ಬಂದಾಗಲೂ ಅಮ್ಮನ ಎಣಿಕೆ ನಡೆದೇ ಇತ್ತು. "ಅಮ್ಮ, ಇದೇನು? ಇನ್ನೂ ಕುಳಿತಿದ್ದೀಯೆ? ಇನ್ನೂ ಎಣಿಸಿಡಲಿಲ್ಲವೇ?" ಎಂದೆ ನಾನು. "ಇಲ್ಲ, ಕಣೋ, ನಾನೂ ಎಣಿಸುತ್ತಲೇ ಇದ್ದೀನಿ. ಪ್ರತಿಸಾರಿ ಎಣಿಸಿದಾಗಲೂ ಅಷ್ಟೇ ಇರುತ್ತದೆ. ಒಂದು ಸಾರಿಯಾದರೂ ಜಾಸ್ತಿಯಾಗಲೊಲ್ಲದು!!" ಎಂದರು ಸ್ವಲ್ಪವೇ ನಗುತ್ತ!! ನಿಜಕ್ಕೂ ನನಗೂ ನಗು ತಡೆಯಲಾಗಲಿಲ್ಲ. ಅಮ್ಮನ ಈ ಮಾತು ಕೇಳಿ ನಕ್ಕ ನಾನು, ನಗು ನಿಲ್ಲಿಸಿದಾಗ ನನ್ನ ಕಣ್ಣುಗಳಲ್ಲಿ ನೀರು ತುಂಬಿತ್ತು! ಅಂಥ ಕಷ್ಟ ಅನುಭವಿಸಿದವರು ನಾವು!

ಇಂಥ ಅಮ್ಮ ಮನೆಯಲ್ಲಿ ಕಷ್ಟ ಎಂದು, ಬಡತನ ಎಂದು ನೊಂದುಕೊಂಡರೂ, ತಮ್ಮ ಮಕ್ಕಳಿಗೆ ಕಲಿಸುವುದರಲ್ಲಿ ಮಾತ್ರ ಎಂದೂ ದಾಕ್ಷಿಣ್ಯ ತೋರುತ್ತಿರಲಿಲ್ಲ. ಕಲಿಸಬೇಕಾದುದನ್ನು ಮಾರ್ಮಿಕವಾಗಿಯಾದರೂ ಹೇಳಿ ನಮಗೆ ಕಲಿಸುವುದಿತ್ತು. ಹೀಗೆಯೇ ಒಮ್ಮೆ ನಾವೆಲ್ಲರೂ ಮನೆಯಲ್ಲಿ ಕುಳಿತು ಮಾತನಾಡುತ್ತಿದ್ದಾಗ, ಆ ಮಾತು ಈ ಮಾತು ಹೇಳುತ್ತ ನಾನು, "ಈ ಅಮ್ಮ ಯಾವಾಗಲೂ ನನ್ನನ್ನು ಮಾತ್ರ ಗೋಳು ಹಾಕಿಕೊಳ್ಳುವುದಿತ್ತು. ನಾನು ಆಟ ಆಡಬೇಕೆಂದರೂ ಬಿಡದೆ ಕಾಫಿಪುಡಿ ತಾ, ಉಪ್ಪು ತಾ, ಕಡಲೆ ತಾ ಎಂದು ಗಳಿಗೆ ಗಳಿಗೆಗೂ ಅಂಗಡಿಗೆ ಕಳುಹಿಸುವುದಿತ್ತು – ನಾನು ಚಿಕ್ಕವನು ಎಂದು", ಎಂದೆ. ಅಲ್ಲಿಯವರೆಗೆ ನಗು ನಗುತ್ತಾ ಮಾತನಾಡುತ್ತಿದ್ದ ಅಮ್ಮ ಈಗ ಇದ್ದಕ್ಕಿದ್ದಂತೆ ಗಂಭೀರ ಆಗಿಬಿಟ್ಟರು. "ಏಕಮ್ಮಾ, ಏನಾಯಿತು? ನಾನು ಏನಾದರೂ ತಪ್ಪು ಮಾತಾಡಿದೆನೇ?" ಎಂದೆ. ಆ ಮಾತು ನಾನು ಹೇಳಿದುದಕ್ಕೆ ಅಮ್ಮ ಗಂಭೀರ ಆದರು ಎಂದು ನನಗೆ ಪೆಚ್ಚಾಗಿತ್ತು. ಅದಕ್ಕೆ ಅಮ್ಮ, "ಅಲ್ಲ ಕಣೋ... ಅದಕ್ಕಲ್ಲ, ನಾನು ನಿನ್ನನ್ನು ಏಕೆ ಗೋಳು ಹಾಕಿಕೊಳ್ಳಲಿ ? ನೀನೂ ನನ್ನ ಮಗನೇ ಅಲ್ಲವೇ ? ಒಮ್ಮೊಮ್ಮೆ ನಾನು - ನಿಮ್ಮ ತಂದೆ ಮನೆಯಲ್ಲಿನ ಕಷ್ಟ - ಬಡತನಕ್ಕೆ ರೋಸಿ ಹೋಗಿ ಬಿಸಿ ಬಿಸಿ ಮಾತು-ಕತೆಗೆ ಷುರು ಮಾಡುತ್ತಿದ್ದೆವು. ನಾವು ಹಾಗೆ ಮಾತನಾಡುವಾಗ ಮನೆಯಲ್ಲಿ ಚಿಕ್ಕವನಾದ ನೀನು ಅಲ್ಲೇ ಇರುತ್ತಿದ್ದೆ. ನೀನು ಮಾತುಗಳನ್ನು ಕೇಳಿಸಿಕೊಂಡರೆ, ನಿನ್ನ ಮೇಲೆ ಅದು ಎಂತಹಾ ಪರಿಣಾಮ ಬೀರಬಹುದು? ಎಂದು ಯೋಚಿಸಿ ನಿನ್ನನ್ನು ಹೊರಗೆ ಕಳುಹಿಸುವ ನೆಪ ಮಾಡಿ, ಅಂಗಡಿಗೆ ಹೋಗಿ ಬಾ ಎನ್ನುತ್ತಿದ್ದೆ ಅಷ್ಟೆ..." ಎಂದರು. ಇಷ್ಟು ಹೇಳುವುದರಲ್ಲಿ ಅಮ್ಮನ ಧ್ವನಿ ಗದ್ಗದವಾಗಿ ಅಳು ಬಂದಿತ್ತು. ಮಾತನಾಡುತ್ತಿದ್ದ ನಮ್ಮೆಲ್ಲರ ಕಣ್ಣುಗಳಲ್ಲಿ ನೀರು ಇಳಿಯಿತು. ತಕ್ಷಣವೇ ಎದ್ದು ನಾನು ಅಮ್ಮನಿಗೆ ನಮಸ್ಕಾರ ಮಾಡಿ, "ಅಮ್ಮಾ, ತಪ್ಪಾಯಿತು, ನಿನ್ನನ್ನು ನಾನು ಹಾಗೆ ಅನ್ನಬಾರದಿತ್ತು, ಕ್ಷಮಿಸು..." ಎಂದೆ. ಅಮ್ಮನ ಕೈ ನನ್ನ ತಲೆಯ ಮೇಲಾಡಿತು!

ಮನೆಯಲ್ಲಿ ಕಡುಬಡತನವಿದ್ದರೂ, ಯಾವಾಗಲೋ ಕೈಗೆ ಬಂದ ನಾಲ್ಕು ಕಾಸನ್ನು ಸೇರಿಸಿ ನನ್ನವಳಿಗೆ, ನನ್ನ ಅತ್ತಿಗೆಗೆ ಬಹಳ ನಾಜೂಕಾದ ಒಂದೊಂದು ಎಳೆ ಚಿನ್ನದ ಸರವನ್ನು ಮಾಡಿಸಿ ಹಾಕಿದಾಗ ನಮ್ಮಮ್ಮನಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಇವರಿಬ್ಬರೂ ಅದನ್ನು ಒಂದೇ ಬಾರಿ ಹಾಕಿಕೊಂಡಿದ್ದುದು. ನಮ್ಮ ದೊಡ್ಡಣ್ಣನವರಿಗೆ ಸ್ವಲ್ಪ ತೊಂದರೆಯಾಗಿ, ಅವರ ಮಕ್ಕಳನ್ನು ನಮ್ಮಲ್ಲಿಗೆ ಕಳುಹಿಸಿ ಸ್ವಲ್ಪ ದಿನ ಅವರನ್ನೆಲ್ಲ ನೋಡಿಕೊಳ್ಳಲು ನಮಗೆ ಹೇಳಿದಾಗ ಹೆಚ್ಚುವ ಖರ್ಚಿನ ಭಾರ ಸಹಿಸುವ ಶಕ್ತಿ ನಮಗಿರಲಿಲ್ಲ. ಆಗ ಆ ಸರಗಳನ್ನು ಮಾರಬೇಕಾಯಿತು. ಹಾಗೆ ಮಾರಿದಾಗ ಅಮ್ಮ ಮನೆಯಲ್ಲಿ ಯಾರೋ ಸತ್ತು ಹೋದರೋ ಎನ್ನುವಂತೆ ಅತ್ತು ಹೊರಳಾಡಿದರು.

ನಾನು 'ಸಂಯುಕ್ತ ಕರ್ನಾಟಕ'ದಲ್ಲಿದ್ದಾಗ ಸಾಮಾನ್ಯವಾಗಿ ಪ್ರತಿ ಭಾನುವಾರದಂದು ನನ್ನ ಗೆಳೆಯರು ನನ್ನ ಮನೆಗೆ ಬರುವುದಿತ್ತು.

ಬರುವ ಅವರನ್ನು ಸುಮ್ಮನೆ ಬಂದು ಹೋಗುವುದೇನು, 'ತಿಂಡಿ ತಿನ್ನಲು ಬನ್ನಿ' ಎಂದು ಅಮ್ಮ, ನಮ್ಮ ಅತ್ತಿಗೆ ಹೇಳಿದ್ದರು. ಹೀಗಾಗಿ ಅವರೆಲ್ಲ ಪ್ರತಿ ಭಾನುವಾರ ಬೆಳಗಿನ ತಿಂಡಿಗೆ ನಮ್ಮ ಮನೆಗೆ ಬರುವುದಿತ್ತು... ಒಂದು ಭಾನುವಾರ ನನಗೆ ಬಹಳ ಕೆಲಸವಿತ್ತು. ಬರೆಯುವುದರಲ್ಲಿ ಮುಳುಗಿ ಹೋದ ನಾನು, ಹಿಂದಿನ ದಿನವೇ ನನ್ನ ಗೆಳೆಯರಿಗೆ ಮಾರನೆಯ ಬೆಳಗ್ಗೆ ನನಗೆ ಬಹಳ ಕೆಲಸವಿರುವುದಾಗಿಯೂ, ಆದ್ದರಿಂದ ಅವರು ಆ ಒಂದು ದಿನ ನಮ್ಮ ಮನೆಗೆ ಬರುವುದು ಬೇಡವೆಂದೂ ಹೇಳಿರುವುದನ್ನು ಮನೆಯಲ್ಲಿ ಅಮ್ಮ ಅತ್ತಿಗೆಯರಿಗೆ ಹೇಳಲು ಮರೆತೆ. ಬೆಳಗಿನ ಜಾವದಿಂದಲೇ ಬರೆಯಲು ಕುಳಿತ ನಾನು, ತಲೆ ಎತ್ತಿ ನೋಡುತ್ತಲೇ ಇಲ್ಲ! ಅತ್ತ ಅಡುಗೆ ಮನೆಯಲ್ಲಿ ಅಮ್ಮ-ಅತ್ತಿಗೆ ಇಬ್ಬರೂ ಬಹಳ ತರಾತುರಿಯಾಗಿ ತಿಂಡಿಯ ಸಿದ್ಧತೆಗೆ ತೊಡಗಿದುದು ನನಗೆ ತಿಳಿಯಲೇ ಇಲ್ಲ. ಹಿಂದಿನ ದಿನವೇ ದೋಸೆ ಹಿಟ್ಟು ಮಾಡಿಟ್ಟ ಇಬ್ಬರೂ, ಬೆಳಗ್ಗೆ ಘಂ ಎನ್ನುವ ಕಾಯಿ ಚಟ್ನಿ ಮಾಡಿ, ದೋಸೆಗಳನ್ನು ಎರೆದೆರೆದು ರಾಶಿ ಹಾಕಿ ಮುಚ್ಚಿಟ್ಟಿದ್ದಾರೆ. ನನಗೆ ಅದು ತಿಳಿಯದು. ಅತ್ತಿಗೆ ನನ್ನ ಮುಂದೆ ಸುಳಿದಾಡಿದರು. ಹತ್ತು ಘಂಟೆಯ ಹತ್ತಿರವಾದರೂ ಒಬ್ಬ ಗೆಳೆಯನ ಸುಳಿವೂ ಇಲ್ಲ.

ಪ್ರತಿ ಭಾನುವಾರ ಒಂಬತ್ತಕ್ಕೆ ನಮ್ಮ ಮನೆಯ ಮುಂದೆ ಹಾಜರಾಗುತ್ತಿದ್ದವನು ಒಬ್ಬನೂ ಈ ದಿನ ಬರಲಿಲ್ಲ. ಹತ್ತೂವರೆಯ ಸಮಯಕ್ಕೆ ತಡೆಯಲಾರದೆ ಅಮ್ಮ, "ಕೃಷ್ಣಾ, ಈ ದಿನ ನಿನ್ನ ಗೆಳೆಯರು ಆ ಹುಡುಗರು ಯಾರೂ ಬರಲಿಲ್ಲ ಇಷ್ಟು ಹೊತ್ತಾದರೂ... ??" ಎಂದರು. ಅದಕ್ಕೆ ನಾನು ಯಾವುದೇ ಭಾವದ ಬದಲಾವಣೆ ಇಲ್ಲದೆ, "ಅಮ್ಮಾ, ಈ ದಿನ ಅವರು ಯಾರೂ ನಮ್ಮ ಮನೆಗೆ ಬರುವುದಿಲ್ಲ. ನಿನ್ನೆ ನಾನೇ ಅವರಿಗೆಲ್ಲ ಹೇಳಿದ್ದೇನೆ, 'ಈ ದಿನ ನನಗೆ ತುಂಬಾ ಕೆಲಸವಿದೆ. ನೀವು ಯಾರೂ ಬರಬೇಡಿ' ಎಂದು, ನಿಮಗೆ ಹೇಳಲು ಮರೆತಿದ್ದೆ ಅಷ್ಟೆ" ಎಂದವನೇ ಏನೂ ಆಗದವನಂತೆ ಮತ್ತೆ ಬರೆಯಲು ಪ್ರಾರಂಭಿಸಿದೆ. ಅಮ್ಮ ಈಗ ರೌದ್ರಾವತಾರ ತಾಳಿದ್ದರು. ಅಮ್ಮನ ಗಂಟಲು ಜೋರಾಯಿತು, ಧ್ವನಿ ನಡುಗುತ್ತಿತ್ತು, "ಏನೆಂದೇ? ಆ ಹುಡುಗರನ್ನು ಈ ದಿನ ಬರಬೇಡಿ ಅಂದೆಯಾ ನೀನು? ನಮ್ಮ ಮನೆಗೆ ಅವರನ್ನು ಬರಬೇಡ ಎನ್ನಲು ನೀನು ಯಾರು? ನೋಡೋ, ನೋಡಿಲ್ಲಿ... ನನ್ನೆದೆ ಹಾಲನ್ನೇ ಕೊಟ್ಟು, ನಿಮ್ಮನ್ನು ಬೆಳೆಸಿದ್ದಲ್ಲದೆ ಹಾಲಿಲ್ಲದ ಇತರ ಮಕ್ಕಳಿಗೂ ನನ್ನೆದೆ ಹಾಲನ್ನು ಕೊಟ್ಟು ಅದಕ್ಕೆ ಬದಲಾಗಿ ಅವರ ಮನೆಯಿಂದ ಏನಾದರೂ ತಿನ್ನಲು ತಂದು, ಅದನ್ನು ನಿಮಗೆ ಕೊಟ್ಟು, ನಿಮ್ಮನ್ನು ಸಾಕಿರುವುದು ನಾನು! ಈ ದಿನ ನಾಲ್ಕು ಜನಕ್ಕೆ ಅನ್ನ ಹಾಕುವಷ್ಟು ಶಕ್ತಿ, ಪುಣ್ಯ ಕೊಟ್ಟಿದ್ದಾನೆ ದೇವರು... ಕಂಡವರಲ್ಲಿ ಪಡೆದದ್ದು ಸಾಕು, ಇನ್ನಾದರೂ ನಾಲ್ಕು ಮಂದಿಗೆ ನಾವು ಅನ್ನ ಹಾಕೋಣ ಎಂದು ನಾನು ಆಸೆ ಪಟ್ಟರೆ, ಮನೆಗೆ ಬರುತ್ತಿದ್ದವರನ್ನು ನೀನೇ ಬರಬೇಡಿ ಎಂದೆಯಾ?? ಹಾಗೆ ಹೇಳಲು ನಿನಗೆ ಮನಸ್ಸಾದರೂ ಹೇಗೆ ಬಂತು??"

ಅಮ್ಮನ ವಾಗ್ಬರಿಗೆ ನಾನು ಬೆರಗಾಗಿ ನಡುಗಿ ಹೋದೆ. ಇಷ್ಟು ವರ್ಷಗಳಲ್ಲಿ ಅಮ್ಮ ಜೋರಾಗಿ ಒಂದು ಮಾತನ್ನೂ ಆಡಿದ್ದಿರಲಿಲ್ಲ. ಈ ದಿನ ಅದೆಷ್ಟು ಆವೇಶ, ಅದೆಷ್ಟು ಉದ್ವೇಗ ಅಮ್ಮನಿಗೆ. ಮಾತು ಮುಂದುವರಿಸಲಾಗದೆ ನಡುಗುತ್ತಿದ್ದ ಅಮ್ಮನ ಕಾಲುಗಳನ್ನು ಓಡಿ ಬಂದು ಹಿಡಿದುಕೊಂಡೆ! ನನಗೂ ಬಹಳ ಅಳು ಬಂದಿತ್ತು... ಮಾತನಾಡದೇ ಶಕ್ತಿ ಉಡುಗಿ ಹೋದಂತಾಗಿತ್ತು. ಅಡುಗೆ ಮನೆಯಲ್ಲಿ ಆರಿ ಹೋದ ದೋಸೆಗಳ ರಾಶಿ ನನ್ನನ್ನು ಕುಸಿದುಕುಳಿತುಕೊಳ್ಳುವಂತೆ ಮಾಡಿತು. ಅಮ್ಮನ ಈ ಹಿರಿಯಾಸೆಗೆ ಹೀಗೆ ನೀರು ಸುರಿಯಲು ನಾನೂ ಬಯಸಿರಲಿಲ್ಲ. ನನಗೇ ತಿಳಿಯದೆ ನಾನು ಬಹಳ ದೊಡ್ಡ ತಪ್ಪು ಮಾಡಿದ್ದೆ. ಅಮ್ಮನ ಮನಸ್ಸಿನಲ್ಲಿ ಇಂತಹದೊಂದು ಬಯಕೆ ಇದ್ದಿತ್ತೆಂದು ತಿಳಿಯದೇ ಮಾಡಿದ ತಪ್ಪಿಗೆ ಅಮ್ಮನಲ್ಲಿ ಕ್ಷಮೆ ಬೇಡಿದೆ. "ನಿಜಕ್ಕೂ ನನಗೆ ಗೊತ್ತಿರಲಿಲ್ಲ ಅಮ್ಮಾ... ನಿನ್ನ ಆಸೆ ಹೀಗಿದೆ ಎಂದು ನನಗೆ ತಿಳಿಯದೇ ಮಾಡಿದ ತಪ್ಪು ಇದು, ನನ್ನನ್ನು ಕ್ಷಮಿಸು, ಇದೇ ಕೊನೆ. ಇನ್ನು ಮೇಲೆ ನಮ್ಮ ಮನೆಗೆ ಯಾರೇ ಬರುತ್ತೇನೆ ಎಂದರೂ ಬರಬೇಡಿ ಎಂದು ಮಾತ್ರ ಹೇಳುವುದಿಲ್ಲ. ನಿನ್ನ ಮನಸ್ಸು ನೋಯಿಸುವುದಿಲ್ಲ. ನಿನಗೆ ಮಾತು ಕೊಡುತ್ತೇನೆ ನಾನು !!" ಎಂದು ಹೇಳಿದೆ. ಕಣ್ಣೀರು ಹಾಕಿದೆ. ಅಮ್ಮ ನನ್ನನ್ನು ಕ್ಷಮಿಸಿದರು. ಈಗ ನನ್ನೆದುರಿಗೆ ತ್ರಿವಿಕ್ರಮನಂತೆ ಬೆಳೆದು ನಿಂತಿದ್ದರು! ನನ್ನ ಹತ್ತಿರದಲ್ಲೇ ಸುಳಿದಾಡುತ್ತಿದ್ದ ಅಮ್ಮನನ್ನು ನಾನು ಇಷ್ಟು ಅರ್ಥ ಮಾಡಿಕೊಳ್ಳದೇ ಹೋದೆನೇ ಎಂದು ಸಂಕಟವಾಯಿತು. ಅಮ್ಮನನ್ನು ನಾವು ಚೆನ್ನಾಗಿ ನೋಡಿಕೊಳ್ಳುತ್ತಿದ್ದೇವೆ ಎಂದು ಕೊಂಡಿದ್ದರೂ, ಅಮ್ಮನ ಮನಸ್ಸನ್ನು ತಿಳಿಯುವುದರಲ್ಲಿ ತಪ್ಪಿದ್ದು ಹೇಗೆ ಎಂದು ತಿಳಿಯಲಿಲ್ಲ. ಹೀಗೆ ಅಮ್ಮ ನಮಗೆ ಬುದ್ಧಿ ಹೇಳುತ್ತಿದ್ದುದು !

ಇನ್ನೆರಡು ತಿಂಗಳಿಗೆ ನನ್ನ ಜನ್ಮದಿನ ಬರುತ್ತದೆ... ನಲವತ್ತು ವರ್ಷಗಳ ಹಿಂದೆ ನಡೆದದ್ದು ಇದು! ೧೯೭೨... ಅಮ್ಮ ತಮ್ಮ ಇಹಲೋಕದ ಯಾತ್ರೆಯನ್ನು ಮುಗಿಸುವುದರಲ್ಲಿ ಇದ್ದರು. ಎರಡು ದಿನಗಳ ಹಿಂದೆಯೇ ಡಾಕ್ಟರು 'ಆಗಲೋ, ಈಗಲೋ' ಎಂದಿದ್ದರು. ನಾಡಿದ್ದು ಹುಟ್ಟುಹಬ್ಬ ಎಂದು, ಇಂದು ನಾನು, "ಅಮ್ಮಾ! ನೀನು ನಾಳೆ ನಾಡಿದ್ದೊರಳಗೇ ಹೊರಟು ಹೋದರೆ ನನಗೆ ಹುಟ್ಟುಹಬ್ಬದ ಸಂಭ್ರಮವು ನಿಂತೇ ಹೋಗುತ್ತದೆ" ಎಂದೆ. ಹೇಗಾದರೂ, ಆದಷ್ಟು ದಿನ ಅಮ್ಮನನ್ನು ಉಳಿಸಿಕೊಳ್ಳಬೇಕು ಎಂದು ನನ್ನಾಸೆ. ನನಗೇ ದುಃಖ ಉಕ್ಕಿದರೂ ಅಮ್ಮನಿಗೆ ಆಸೆ ತೋರಿಸಿ, ನನ್ನ "ಹುಟ್ಟುಹಬ್ಬಕ್ಕೆ ನೀನು ಇರು... ಇರಬೇಕು ನೀನು" ಎಂದು ಹೇಳಿ, ಕೇಳಿ, ಕಾಡಿ-ಬೇಡಿ ಅಮ್ಮನನ್ನು ಉಳಿಸಿಕೊಳ್ಳಬೇಕು ಎಂದು ನನ್ನ ಪ್ರಯತ್ನ ! ನನ್ನ ಮಾತು ಕೇಳಿದ ಅಮ್ಮ "ಯಾವತ್ತು ಕಂದ ಅಷ್ಟಮೀ?" ಎಂದರು. "ನಾಡಿದ್ದು ಅಮ್ಮ" ಎಂದೆ. "ಹಾಗಾದರೆ ನಿನಗೆ ಹುಟ್ಟುಹಬ್ಬವನ್ನು ತಪ್ಪಿಸುವುದಿಲ್ಲ. ಎಣ್ಣೆ ನೀರು ಹಾಕಲು ಸೀತಾಗೆ ಹೇಳು" ಎಂದರು.

ನನ್ನಾಕೆಯನ್ನು 'ಕರಿ'ಎಂದರು. ಅವಳು ಒಳಗಿರಲಿಲ್ಲ. ಅದನ್ನು ಅತ್ತಿಗೆ ತಿಳಿಸಿದರು. "ಯಾವತ್ತು ನೀರು?" ಎಂದು ಅಮ್ಮ ಕೇಳಿದರು. "ನಾಳೆ" ಎಂದರು ಅತ್ತಿಗೆ. "ಸರಿ" ಎಂದ ಅಮ್ಮ ಕಣ್ಣು ಮುಚ್ಚಿ ಮಲಗಿದರು.

ಅಷ್ಟಮಿಯ ದಿನ ಬೆಳಗ್ಗೆ ನಮ್ಮ ಅಣ್ಣ ಶ್ರೀ ಕೇಶವ ಮೂರ್ತಿಯವರನ್ನು ಅಮ್ಮ "ಅಷ್ಟಮಿ ಎಷ್ಟು ಹೊತ್ತು ಇರುತ್ತದೆಯಪ್ಪಾ?" ಎಂದು ಕೇಳಿದರು. "ರಾತ್ರಿ ೧೨-೪೫ರ ವರೆಗೆ" ಎಂದರು ಅಣ್ಣನವರು. ಆ ದಿನ ಶ್ರೀ ಕೃಷ್ಣಜನ್ಮಾಷ್ಟಮಿ. ಆ ದಿನ ನನ್ನ ಹುಟ್ಟು ಹಬ್ಬ. ಹೆಚ್ಚಿಗೆ ಉತ್ಸಾಹ ಇರಲಿಲ್ಲ. ಹಾಸಿಗೆ ಹತ್ತಿದ್ದ ಅಮ್ಮನನ್ನು ನೋಡಿದರೆ ಅಳು ಬರುತ್ತಿತ್ತು. ಯಾವ ಗಳಿಗೆಯಲ್ಲೋ ಏನೋ ಎಂದು ಆತಂಕದಿಂದ ಬೆಳಗಿನಿಂದಲೇ ಕಣ್ಣೀರು ಹಾಕುತ್ತಿದ್ದೆವು. ಬಡತನದ ಬವಣೆಯಲ್ಲಿ ಬೆಂದು ನಮ್ಮನ್ನೆಲ್ಲ ಬೆಳೆಸಿದ ಜೀವ ಅವರದು. ನಾನು ಹುಟ್ಟಿದ ದಿನವೇ ಹುಟ್ಟಿದ ಮೂವರು ಮಕ್ಕಳಿಗೆ ಅವರವರ ತಾಯಂದಿರ ಎದೆ ಹಾಲು ಸಾಲದು ಎಂದು, ತಾವು ಹಾಲುಣಿಸಿ, ಪ್ರತಿಯಾಗಿ ಅವರುಗಳು ಕೊಡುತ್ತಿದ್ದ ಅನ್ನ, ಸಾರು, ಪಲ್ಯ ತೆಗೆದುಕೊಂಡು ಬಂದು ಅದನ್ನೇ ನಮಗೆ ಕೊಟ್ಟು ನಮ್ಮನ್ನು ಸಾಕಿದರು!!

ಅರ್ಧರಾತ್ರಿ ೧೨.೨೫ರ ಸಮಯ... "ಕೃಷ್ಣನಿಗೆ ಎಣ್ಣೆ ನೀರು ಆಯಿತೆ ? ಪೂಜೆ ಆಯಿತೆ ? ಫಲಾಹಾರ ಆಯಿತೆ ?" ಎಂದು ಕೇಳಿದರು. ಹತ್ತಿರಕ್ಕೆ ಕರೆದರು. "ದಿಂಬಿನಡಿಯಲ್ಲಿ ಸ್ವಲ್ಪ ಹಣವಿದೆ. ಇದಿಷ್ಟೇ ನಾ ನಿಮಗೆ ಕೊಡುವುದು. ಐದು ಜನರೂ (ನಾಲ್ಕು ಗಂಡು ಮಕ್ಕಳು, ಒಬ್ಬ ಹೆಣ್ಣು ಮಗಳು)ಹಂಚಿಕೊಳ್ಳಿ" ಎಂದರು, ಕ್ಷೀಣ ಧ್ವನಿಯಲ್ಲಿ..."ನಾ ಇನ್ನು ಬರುತ್ತೇನೆ" ಎಂದರು! ೧೨.೫೫ರ ಸಮಯ ರಾತ್ರಿ. "ನವಮಿ ಬಂದಿತೇ ಅಣ್ಣಯ್ಯಾ?" ಎಂದು ಕೇಳಿದರು. "ಬಂದಿತು ಅಕ್ಕಾ" ಅಂದರು ಅಣ್ಣನವರು. (ನಮ್ಮ ಅಣ್ಣಂದಿರು ವೇದಾಧ್ಯಯನ ಮಾಡಿದ್ದರು. ಅವರನ್ನು ಅಮ್ಮ 'ಅಣ್ಣಯ್ಯ' ಎನ್ನುತ್ತಿದ್ದರು. ನಮ್ಮ ದೊಡ್ಡಣ್ಣಂದಿರು, ಇವರು ಹುಟ್ಟಿದಾಗ ನಮ್ಮ ಮನೆಯಲ್ಲಿ ನಮ್ಮ ಅಮ್ಮನ ತಮ್ಮ ಒಬ್ಬರು ಇದ್ದು ಅವರು ಅಮ್ಮನನ್ನು 'ಅಕ್ಕ' ಎನ್ನುತ್ತಿದ್ದುದರಿಂದ, ಆ ಇಬ್ಬರು ಅಣ್ಣಂದಿರೂ 'ಅಕ್ಕಾ' ಎಂದೇ ಕರೆಯುತ್ತಿದ್ದರು, ಅಮ್ಮನನ್ನು!! ಅವರನಂತರ ನಾವು ಹುಟ್ಟುವ ಹೊತ್ತಿಗೆ ನಮ್ಮ ಸೋದರಮಾವ ತೀರಿಕೊಂಡಿದ್ದರು. ನಾವು ಅಮ್ಮನನ್ನು 'ಅಮ್ಮಾ' ಎಂದೇ ಕರೆದೆವು. (ನಾವು ಚಿಕ್ಕವರಾಗಿದ್ದಾಗ ಮೂರು ನಾಲ್ಕು ವರ್ಷಗಳ ಕಾಲ, ಸರಿಯಾಗಿ ತಿಳುವಳಿಕೆ ಬರುವವರೆಗೆ ನಮ್ಮ ಇಬ್ಬರು ಅಣ್ಣಂದಿರನ್ನೂ ನಾವು ನಮ್ಮ ಅಮ್ಮನಿಗೆ ತಮ್ಮಂದಿರೆಂದೇ ಭಾವಿಸಿದ್ದೆವು!) ಅಣ್ಣನವರು ಹಾಗೆಂದಾಗ 'ಅಷ್ಟಮಿ-ಕೃಷ್ಣನ ಹುಟ್ಟುಹಬ್ಬದ ದಿನ ಕಳೆಯಿತಲ್ಲಾ' ಎನಿಸಿ ನೆಮ್ಮದಿಯಾಗಿರ ಬೇಕು. ಆ ನೆಮ್ಮದಿಯಲ್ಲೇ ಸುಮಾರು ೧.೧೫ರ ವೇಳೆಗೆ ಅಮ್ಮ ಕಣ್ಣು ಮುಚ್ಚಿದರು. ಅಷ್ಟಮಿಯಂದು ನಾನು ಹುಟ್ಟುಹಬ್ಬ ಆಚರಿಸಿ ಕೊಂಡಿರುವೆನೋ ಎಂದು ನೋಡಲು ಅಮ್ಮ, ಮಾರನೆಯ ದಿನ ನವಮಿಯಂದೇ ಬಂದು ನನ್ನನ್ನು ಹರಸುತ್ತಾರೆ !!

ದಿಂಬಿನಡಿಯಲ್ಲಿ ಅವರು ಸೇರಿಸಿ ಇಟ್ಟಿದ್ದ ಆಸ್ತಿ ೪೮ ರೂಪಾಯಿ, ೧೨ ಆಣೆಗಳು! ಅವರ 'ವೈಕುಂಠ ಸಮಾರಾಧನೆ' ಯಂದು ನಾವು ಐವರೂ ಅದನ್ನು ಹಂಚಿಕೊಂಡೆವು. ಅದೇ ನಮಗೆ ದೊಡ್ಡ ಆಸ್ತಿ. ಅಮ್ಮ ಕಷ್ಟಪಟ್ಟು ಸೇರಿಸಿ ಇಟ್ಟಿದ್ದ ಆ ಹಣಕ್ಕೆ ಎಂದಿಗೂ ಬಹುಶಃ ಬೆಲೆ ಕಟ್ಟಲಾಗದು ಈಗ. ಈಗ ಇಷ್ಟು ಜನರ ಪರಿಚಯ, ಸಹವಾಸ, ಸಂಪರ್ಕ... ನೋಡಿದಾಗ, ನನ್ನ ಬಗೆಗೆ ಅವರ ಅಭಿಮಾನ ಕಂಡಾಗ 'ಅಮ್ಮ... ನಮ್ಮಮ್ಮ ಈಗ ಇರಬಾರದಿತ್ತೇ?' ಎನಿಸುತ್ತದೆ ತೀವ್ರವಾಗಿ. ಆ ತಾಯಿ ಹೃದಯ ಅದೆಷ್ಟು ಸಂತಸ ಪಡುತ್ತಿತ್ತು ಎಂದು ಮನ ಅವರಿಗಾಗಿ ಹಂಬಲಿಸುತ್ತದೆ.

ನಮ್ಮಮ್ಮ ಹೀಗೆಲ್ಲಾ ಕಷ್ಟಪಟ್ಟು ಬೆಳೆಸಿದ ಜೀವ ನನ್ನದು. ನಾನು ಮಾಡುವ ಕೆಲಸವೆಲ್ಲಾ ಅಮ್ಮನಿಗೆ ಕಾಣುತ್ತದೆ, ಗೊತ್ತಾಗುತ್ತದೆ ಎಂದೇ ನನ್ನ ಭಾವನೆ! ಅದಕ್ಕೆ ನಾನು ಯಾರಲ್ಲೂ ಬಹಳ ಜಾಗರೂಕತೆಯಿಂದ ನಡೆದುಕೊಳ್ಳುತ್ತೇನೆ. ಯಾರನ್ನೂ ನೋಯಿಸುವುದು ನನ್ನಿಂದ ಆಗದು. ಆಕಸ್ಮಿಕವಾಗಿ ನೋಯಿಸಿದರೆ ಅವರಲ್ಲಿ ಕ್ಷಮೆ ಕೇಳುವ ತನಕ ನಾನು ಅರ್ಧಜೀವ ಆಗಿರುತ್ತೇನೆ... ಸಂಗೀತ ನನಗೆ ಬಹಳ ಪ್ರಿಯ. ನನ್ನ ಜತೆ ಶ್ರೀ ರಾಮಶಾಸ್ತ್ರಿಯವರು, ಶ್ರೀ ಕೇಶವಮೂರ್ತಿಯವರು ಹಾಡುವಾಗ ಬಹಳ ಆನಂದಿಸಿ, ಅದರ ಮಾಧುರ್ಯ, ಸೊಬಗನ್ನು ಅನುಭವಿಸುವ ನನಗೆ ಹೇಗೂ ಹಾಡಲು ಬರದು. "ಮಾತು ಅಷ್ಟು ಚೆನ್ನಾಗಿ ಬರುವುದಲ್ಲಾ, ಹಾಡಲು ಏಕೆ ಸಾಧ್ಯವಾಗದು? ಮಾತನ್ನೇ ರಾಗವಾಗಿ ಹೇಳಿದರೆ ಹಾಡಾಗದೇ? ಅದು ನನಗೆ ಬರದಲ್ಲಾ" ಎಂದು ನಾನು ತುಂಬಾ ಹಲುಬುವುದಿತ್ತು! ನನ್ನ ಈ ಒರಲು ಅಮ್ಮನಿಗೂ ಆಗಾಗ ಕಿವಿಗೆ ಬೀಳುತ್ತಿತ್ತು, ಅಮ್ಮನನ್ನೇ ಬಹಳ ಸಾರಿ ಕೇಳುತ್ತಿದ್ದೆ, "ಅಮ್ಮ, ನೀನೇಕೆ ನನಗೆ ಸಂಗೀತ ಹೇಳಿಸಲಿಲ್ಲ? ಪಾಠ ಹೇಳಿಸ ಬಾರದಿತ್ತೆ ನೀನು? ನನಗೆ ಸಂಗೀತ ಎಂದರೆ ಎಷ್ಟು ಆಸೆ, ಆದರೆ ಹಾಡಲು ಬರದು" ಎಂದು, ನನ್ನ ದುಃಖ, ಅಸಹಾಯಕತೆ ತೋಡಿ ಕೊಂಡಾಗ, ನಗುತಿದ್ದ ಅಮ್ಮ, "ನಿನಗೆ ಸಂಗೀತ ಅಷ್ಟು ಇಷ್ಟ, ಆದರೂ ಹಾಡಲು ಬರದು. ನಿಜ ಕಣೋ, ನೀನು ಎಲ್ಲೋ ಹೋದ ಜನುಮದಲ್ಲಿ ಗಂಡ-ಹೆಂಡಿರ ಮಧ್ಯೆ ಜಗಳ ತಂದಿಟ್ಟಿದ್ದೀಯೆ ಎಂದು ಕಾಣುತ್ತದೆ! ಅದಕ್ಕೇ ಈಗ ನಿನಗೆ ಹಾಡಲು ಬರದು!" ಎನ್ನುತ್ತಿದ್ದರು ವಿನೋದಕ್ಕಾಗಿ. ಗಂಡ-ಹೆಂಡಿರ ಮಧ್ಯೆ ಜಗಳ ತಂದಿಟ್ಟು ಸಾಮರಸ್ಯ ಕೆಡಿಸಿದವರಿಗೆ ಸಂಗೀತ ಬರದು ಎನ್ನುವ ನಂಬಿಕೆ, ಅದಕ್ಕೆ ಏನು ಆಧಾರವೋ ಆ ದೇವರೇ ಬಲ್ಲ! ಅಂತೂ ನನ್ನ ಅಮ್ಮ ಹಾಗೆನ್ನುವುದಿತ್ತು. ಈಗ ನಾನು ಮಾಡಿಸಿರುವ ನೂರಾರು ಮದುವೆ ಗಳನ್ನು ಮೇಲೆ ಕುಳಿತು ನೋಡಿರುವ ಅಮ್ಮ, "ಕೃಷ್ಣಾ, ಮುಂದಿನ ಜನ್ಮಕ್ಕೆ ನೀನು ನಿಜವಾಗಿಯೂ ದೊಡ್ಡ ಸಂಗೀತಗಾರನಾಗುತ್ತೀ!

ಹೋದ ಜನ್ಮದಲ್ಲಿ ಗಂಡ-ಹೆಂಡಿರ ಮಧ್ಯೆ ಜಗಳ ತಂದಿಟ್ಟೆ, ಅದಕ್ಕೇ ಸಂಗೀತ ನಿನಗೆ ಬರದು ಎಂದೆ ನಾನು. ಈಗ ಅದೆಷ್ಟು ಮಂದಿಯನ್ನು ಮದುವೆಯ ಬಂಧನದಲ್ಲಿ ಸೇರಿಸಿ ಗಂಡ-ಹೆಂಡಿರಾಗಿ ಕೂಡಿಸಿದ್ದೀಯೆ! ಖಂಡಿತವಾಗಿಯೂ ನಿನಗೆ ಸಂಗೀತ ಬರುತ್ತದೆ ಕಂದಾ...!" ಎನ್ನುತ್ತಾರೆ ಎಂದೇ ನನ್ನ ನಂಬಿಕೆ.

ಕಾಲೇಜುಗಳಲ್ಲಿ ಉಪನ್ಯಾಸ

ಒಂದು ವಿಶೇಷವಾದ ಮದುವೆಯ ಬಗ್ಗೆ ನಿಮಗೆಲ್ಲಾ ನಾನು ಹೇಳಬೇಕಿದೆ.

ಹೆರಾಲ್ಡ್ ಮ್ಯಾಕ್‌ಮಿಲನ್ ಎನ್ನುವ, ಕನ್ಸರ್ವೇಟಿವ್ ಪಕ್ಷದ ಪ್ರಧಾನಮಂತ್ರಿ – ೧೯೬೦ರಲ್ಲಿ ನಡೆದ ಯುದ್ಧದ ಸಮಯದಲ್ಲಿ ಇದ್ದಂಥ ಬಹಳ ಜನಪ್ರಿಯ ಪ್ರಧಾನಮಂತ್ರಿ ಅವರು. ಅವರು ವಿದ್ಯಾಭವನದ ಪೋಷಕರಲ್ಲಿ ಒಬ್ಬರು. 'ಮ್ಯಾಕ್‌ಮಿಲನ್ ಪ್ರೆಸ್' ಎಂದು ಖ್ಯಾತಿಗಳಿಸಿರುವ ಪ್ರೆಸ್ಸನ್ನು ಇವರ ಕುಟುಂಬದವರೇ ನಡೆಸುತ್ತಿರುವುದು. ಹೆರಾಲ್ಡ್ ಮ್ಯಾಕ್‌ಮಿಲನ್‌ರು ವಿದ್ಯಾಭವನಕ್ಕೆ ಎರಡು ಸಲ ಬಂದಿದ್ದರು. ಅವರು ಬಂದಿದ್ದಾಗ ದಲಾಲ್‌ಜೀ ನನ್ನ ಪರಿಚಯವನ್ನು ಅವರಿಗೆ ಮಾಡಿಕೊಟ್ಟರು. ನಾನು ಅವರನ್ನು ಮಾತನಾಡಿಸಿದೆ. ನನ್ನ ಮಾತುಕತೆಯಿಂದ, ದಲಾಲ್‌ಜೀ ನನ್ನ ಪರಿಚಯವನ್ನು ಹೇಳಿದುದರಿಂದ ಅವರಿಗೆ ನನ್ನ ಬಗೆಗೆ ಒಂದು ಸದಭಿಪ್ರಾಯ ಮೂಡಿ, "ನಿಮ್ಮ ಪರಿಚಯದ ಪತ್ರವೊಂದನ್ನು (ಕರಿಕ್ಯುಲಂ ವೀಟೆ ಎನ್ನುತ್ತಾರೆ ಇಂಗ್ಲಿಷಿನಲ್ಲಿ) ನನಗೆ ಕೊಡಿ. ನಾನು ಇಂಗ್ಲೆಂಡಿನಲ್ಲಿ ಶೇಕಡಾ ಐವತ್ತು ಭಾಗದ ಕಾಲೇಜುಗಳು ಎಲ್ಲಕ್ಕೂ ಕುಲಪತಿಯಾಗಿದ್ದೇನೆ (ಛಾನ್ಸಲರ್) ; ನಿಮ್ಮ ವಿಷಯವಾಗಿ ಎಲ್ಲ ಕಾಲೇಜುಗಳಿಗೂ ಒಂದು ಮಾಹಿತಿ ಕೊಡೋಣ..." ಎಂದರು. ಕೂಡಲೇ ನಾನು ವಿವರಗಳ ಒಡನೆ ನನ್ನ ಪರಿಚಯಪತ್ರವೊಂದನ್ನು ಸಿದ್ಧಪಡಿಸಿ ಅವರ ಕೈಗಿತ್ತೆ. ಅವರು ತಾವು ಕೊಟ್ಟ ಮಾತನ್ನು ಮರೆಯಲಿಲ್ಲ! ನನ್ನ ಪರಿಚಯ ಪತ್ರದ ಪ್ರತಿಗಳನ್ನು ಮಾಡಿಸಿ, ಅದರ ಜತೆಗೆ ಒಂದು ಕಾಗದ ಎಂದರೆ ಸುತ್ತೋಲೆಯನ್ನು ಬರೆಸಿ ಎಲ್ಲ (ಶಿಕ್ಷಣ ಸಂಸ್ಥೆಗಳು) ಕಾಲೇಜುಗಳಿಗೂ ಅದನ್ನು ಕಳುಹಿಸಿಕೊಟ್ಟರು. ಅವರು ಹಾಗೆ ಕಳುಹಿಸಿದ ಪತ್ರದ ಪ್ರತಿಯೊಂದನ್ನು ನನಗೂ ಕಳುಹಿಸಿದ್ದರು. ಅದರಲ್ಲಿ ನನ್ನ ಬಗೆಗೆ ಹೇಳುತ್ತಾ "ವಿದ್ಯಾಭವನದಲ್ಲಿ ಕಾರ್ಯಕಾರಿ ನಿರ್ದೇಶಕರಾಗಿರುವ ಶ್ರೀ ಮತ್ತೂರು ಕೃಷ್ಣಮೂರ್ತಿಯವರು ಹಿಂದೂ ಧರ್ಮದ ಬಗೆಗೆ ಸಾಕಷ್ಟು ಜ್ಞಾನವುಳ್ಳವರು. ಭಾರತೀಯ ಸಂಸ್ಕೃತಿಯನ್ನು ಬಹಳ ಚೆನ್ನಾಗಿ ತಿಳಿದುಕೊಂಡಿರುವವರು, ಸಂಸ್ಕೃತ ವಿದ್ವಾಂಸರು. ಇತರ ಧರ್ಮಗಳ ಬಗೆಗೂ ಸಾಕಷ್ಟು ತಿಳಿದುಕೊಂಡಿರುವ ಇವರ ಸೇವೆಯನ್ನು ನೀವು ಬಯಸಿದಲ್ಲಿ ಅವರನ್ನು ನಿಮ್ಮ ಕಾಲೇಜುಗಳಿಗೆ ಬರಮಾಡಿಕೊಂಡು, ಅವರ ಪಾಂಡಿತ್ಯದ ಲಾಭ ಪಡೆಯಬಹುದು" ಎಂದು ಬರೆದಿದ್ದಿತು!

ಇದು ನಡೆದದ್ದು ೧೯೮೨-೮೩. ಆಗ ಶ್ರೀಮತಿ ಮಾರ್ಗರೇಟ್ ಥ್ಯಾಚರ್ ಬ್ರಿಟನ್‌ನ ಪ್ರಧಾನಮಂತ್ರಿಯಾಗಿದ್ದರು.

ಅವರು ಹಾಗೆ ಕಳುಹಿಸಿದ ಸುತ್ತೋಲೆ ನೋಡಿ ನನಗೂ ಬಹಳ ಸಂತೋಷ ಆಗಿದ್ದಿತು. ಈ ಸುತ್ತೋಲೆ ನೋಡಿ ನಿಜಕ್ಕೂ ಕಾಲೇಜುಗಳವರು ನನ್ನನ್ನು ಉಪನ್ಯಾಸಕ್ಕೆ ಆಹ್ವಾನಿಸಿದರೆ 'ಹೇಗಪ್ಪಾ ದೇವರೇ, ನಿಭಾಯಿಸುವುದು?' ಎಂದು ಸ್ವಲ್ಪ ಭಯವೂ ಆಯಿತು. ನಾನು ಸರಳವಾದ ಇಂಗ್ಲಿಷಿನಲ್ಲಿ ಕೆಲಸ ಸಾಗಿಸುತ್ತಿದ್ದವನು. ಶಬ್ದಾಡಂಬರವಾದ ಭಾಷೆ ನನಗೆ ತಿಳಿಯದು. ನನಗೆ ತಿಳಿದಿರುವಷ್ಟರಿಂದ ನನ್ನ ಉಪನ್ಯಾಸಗಳು, ನನ್ನ ಆಫೀಸು ಕೆಲಸ ಕಾರ್ಯಗಳು ಸಲೀಸಾಗಿ ಸಾಗುತ್ತಿದ್ದು, ಆ ಜ್ಞಾನವು ಭವನದ ಅಭಿಮಾನಿಗಳು-ಬಂಧುಗಳೊಡನೆ ಮಾತುಕತೆಗೆ, ಭವನಕ್ಕೆ ಆಗಾಗ ಭೇಟಿ ನೀಡುತ್ತಿದ್ದ ಘನತೆವೆತ್ತ ಮಾನ್ಯರುಗಳ ಜತೆಗಿನ ಸಂಭಾಷಣೆಗೆ ಬಹಳಷ್ಟು ಸಾಕಾಗಿದ್ದಿತು. ಆದರೂ ನಾನು ಎಂದೂ ಕಾಲೇಜುಗಳಿಗೆ ಹೋಗಿ ಉಪನ್ಯಾಸ ಕೊಟ್ಟವನಲ್ಲ, ಅದರಿಂದ ಸ್ವಲ್ಪ ಅಧೀರನಾಗಿದ್ದೆ. ಇದನ್ನು ದಲಾಲ್‌ಜೀಯಲ್ಲಿಯೂ ಹೇಳಿಕೊಂಡೆ. ಅದಕ್ಕೆ ಅವರು "ಮಾಥೂರ್‌ಜೀ, ನಿಮಗೆ ಏಕೆ ಭಯ ಆಗಬೇಕು? ನೀವು ಎಂತೆಂತಹಾ ಕಡೆಗಳಲ್ಲಿ ಉಪನ್ಯಾಸ ಕೊಟ್ಟಿದ್ದೀರಿ. ಅದಕ್ಕಿಂತ ಏನೂ ಇದು ಬಹಳ ಹೆಚ್ಚಿನ ಮಟ್ಟದ್ದು ಆಗಿರುವುದಿಲ್ಲ. ಒಂದಂತೂ ನಿಜ, ಕಾಲೇಜುಗಳಿಂದ ಹಾಗೆ ಆಹ್ವಾನ ಬರುವುದು ಸುಲಭವಲ್ಲ. ಆದರೆ ಅಲ್ಲಿನ ಮಕ್ಕಳನ್ನು ವಿದ್ಯಾರ್ಥಿಗಳನ್ನು ಕುರಿತು ಮಾತನಾಡುವುದು ನಿಮಗಂತೂ ಕಷ್ಟವೆನಿಸುವುದಿಲ್ಲ. ಒಮ್ಮೆ ಹೋಗಿ ಬನ್ನಿ. ಆಗ ನಿಮಗೇ ತಿಳಿಯುತ್ತದೆ, ಅದರ ಸ್ವಾರಸ್ಯ ಏನು ಎಂದು. ಇಲ್ಲಿನ ಪದ್ಧತಿ ಎಂದರೆ, ಕಾಲೇಜುಗಳಲ್ಲಿ ಯಾವುದೇ ಉಪನ್ಯಾಸ ಏರ್ಪಡಿಸಿದರೂ ಕೇವಲ ಒಂದು ಘಂಟೆ ಮಾತ್ರ. ೪೦ ನಿಮಿಷಗಳು ಉಪನ್ಯಾಸಕಾರರು ಭಾಷಣ ಮಾಡುವುದು, ಉಳಿದ ಇಪ್ಪತ್ತು ನಿಮಿಷಗಳಲ್ಲಿ ವಿದ್ಯಾರ್ಥಿಗಳ ಪ್ರಶ್ನೋತ್ತರ ಕಾರ್ಯಕ್ರಮ. ವಿದ್ಯಾರ್ಥಿಗಳು ತಮಗೆ ತಿಳಿಯದ, ಅರ್ಥವಾಗದಿದ್ದ ವಿಷಯದ ಬಗ್ಗೆ, ತಮಗೆ ಸಂಶಯ ಬಂದ ಭಾಗದ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಾರೆ. ಅದಕ್ಕೆ ಉಪನ್ಯಾಸಕಾರರು ಉತ್ತರಿಸಬೇಕು. ಅದು ಇಲ್ಲಿನ ರೂಢಿ. ನೀವು ಉಪನ್ಯಾಸಕ್ಕೆ ತಯಾರಾಗುವಾಗಲೇ ಯಾವ ರೀತಿಯ ಪ್ರಶ್ನೆಗಳು ಬರಬಹುದು ಎಂದು ಅಂದಾಜು ಹಾಕಿಕೊಂಡು, ಅದಕ್ಕೂ ತಯಾರಾಗಿಯೇ ಹೊರಟುಬಿಡಿ. ಆಗ ನಿಮಗೆ ಹೆಚ್ಚಿಗೆ ಕಷ್ಟ ಎನಿಸದು. ಆದರೆ ಮಾಥೂರ್‌ಜೀ, ಯಾವ ಕಾರಣಕ್ಕೂ ಇಂತಹ ಅವಕಾಶಗಳನ್ನು ಬಿಡಬೇಡಿ. ಎಲ್ಲರಿಗೂ ಇಂತಹ ಅವಕಾಶಗಳು ಲಭ್ಯವಾಗದು!" ಎಂದರು. ನನ್ನ ಉತ್ಸಾಹ ಹೆಚ್ಚಿಸುವುದು ಅವರ ಮಾತಿನ ಉದ್ದೇಶ ಆಗಿತ್ತು. ಅದು ನನಗೂ ತಿಳಿಯಿತು. ನಮ್ಮ ದಲಾಲ್‌ಜೀಯ

ಸ್ವಭಾವವೇ ಹಾಗೆ. ಸಾಧ್ಯವಾದಷ್ಟೂ ಪ್ರೋತ್ಸಾಹಿಸುತ್ತಾರೆ ಅವರು. ಅವರೇ ಸ್ವತಃ ಬಹಳ ಒಳ್ಳೆಯ ಭಾಷಣಕಾರರು. ಸಭೆಗಳಲ್ಲಿ ಅವರು ಮಾತನಾಡಲು ನಿಂತರೆ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿ ಮಾಡುವ ಸಾಮರ್ಥ್ಯ ಅವರ ಮಾತಿಗಿದೆ. ಅಂತೆಯೇ ಅವರು ಅಲ್ಲಿ ಬಹಳ ರೂಢಿ ಬಳಕೆಯಲ್ಲಿರುವ ಹಾಸ್ಯ ಪ್ರಸಂಗಗಳನ್ನು ಹೇಳಿ ಪ್ರೇಕ್ಷಕರನ್ನು ಮೊದಲು ನಗಿಸಿ ತಮ್ಮ ಕಡೆಗೆ ಸೆಳೆದುಕೊಂಡು ಬಿಡುತ್ತಾರೆ. ಅದು ಅವರ ಮಾತಿನ ಕಲೆ!

"ಪರಿಸ್ಥಿತಿ ಅದೆಷ್ಟೇ ಗಂಭೀರವಾಗಿದ್ದರೂ, ಏನೇ ಸಂದರ್ಭ ಒದಗಿದ್ದರೂ ನನ್ನ ಪತಿಯಾದ ದಲಾಲ್‌ರ ಹಾಗೆ ಹಾಸ್ಯ ಪ್ರಸಂಗವನ್ನು ಹೇಳಿ ವಾತಾವರಣವನ್ನು ತಿಳಿ ಮಾಡುವವರಿಲ್ಲ...! ಅಂತೆಯೇ ಅವರು ಹೇಳುವ ಆ ಪ್ರಸಂಗದ ವಿನೋದವನ್ನು ಕೇಳಿ ತಿಳಿದು ಘೊಳ್ಳನೆ ನಗುತ್ತಾ ಶ್ರೀ ಮಾಥೂರರ ಹಾಗೆ ಸುಸ್ತಾಗುವವರಿಲ್ಲ!" ಎಂದು ನಮ್ಮ ದಲಾಲ್‌ಜೀಯವರ ಪತ್ನಿ ಕೇ ದಲಾಲ್‌ಜೀ ಹೇಳುತ್ತಿದ್ದರು! ಹಾಗೆಯೇ ದಲಾಲ್‌ಜೀಯೂ ನಾನೂ ಇದ್ದದ್ದೂ ಸಹ!

ಅಲ್ಲದೆ ಇಂಗ್ಲಿಷ್ ಜನದ ವಿಶೇಷತೆ ಸಹ ಇಲ್ಲಿ ಸಾಕಷ್ಟು ಪಾತ್ರ ವಹಿಸುತ್ತದೆ. ಆ ಜನ ಯಾರನ್ನೂ ನೋಯಿಸುವುದಿಲ್ಲ. ಭಾಷಣ ಕೇಳುವಾಗ ತುಟಿಪಿಟಿಕ್ಕೆನ್ನದೆ ಗಂಭೀರವಾಗಿ ಕೇಳುತ್ತಾರೆ, ನಮ್ಮಂತೆ ಮಧ್ಯೆ ಮಧ್ಯೆ ತಲೆ ತೂಗಿಸುವುದಿಲ್ಲ. ಭಾಷಣವಷ್ಟೇ ಅಲ್ಲ, ಯಾವ ಕಾರ್ಯಕ್ರಮವಾದರೂ ಸರಿ, ಅವರ ಅಭ್ಯಾಸವೇ ಹಾಗೆ, ಗಂಭೀರವಾಗಿ ಕುಳಿತು ಗಮನಿಸುವುದು. ಕಾರ್ಯಕ್ರಮ ಸೊಗಸಾಗಿದ್ದರೆ ಕೊನೆಯಲ್ಲಿ ಎಲ್ಲರೂ ಎದ್ದು ನಿಂತು ಎರಡು - ಮೂರು ನಿಮಿಷಗಳ ಕಾಲ ಬಿಡದೆ ಚಪ್ಪಾಳೆ ತಟ್ಟಿ ತಮ್ಮ ಸಂತೋಷ ವ್ಯಕ್ತಪಡಿಸುತ್ತಾರೆ. ಒಂದು ವೇಳೆ ಅವರಿಗೆ ಇಷ್ಟವಾಗದೆ ಹೋದರೆ ಮತ್ತೆಂದೂ ಅಂತಹಾ ಕಾರ್ಯಕ್ರಮಗಳಿಗೆ ಅವರು ಬರುವುದೇ ಇಲ್ಲ. ಏಕೆ ಬರಲಿಲ್ಲ ಎಂದು ಕೇಳಿದರೂ 'ಏನೋ ಕೆಲಸವಿತ್ತು, ಬರಲಾಗಲಿಲ್ಲ. ಬರಬೇಕೆಂದಿದ್ದೆ ಆದರೆ... ಕ್ಷಮಿಸಿ' ಎನ್ನುತ್ತಾರೆ. ಅವರಿಗೆ ಅದು ಇಷ್ಟವಾಗಿಲ್ಲ ಎಂದು ಸ್ವಲ್ಪವೂ ತೋರಿಸಿಕೊಳ್ಳುವವರಲ್ಲ ಅವರು ! ಅಂಥ ಪ್ರೇಕ್ಷಕರು ಅವರು! ಅಂಥವರ ಸಮೂಹದಲ್ಲಿ ಮಾತನಾಡುವುದೆಂದರೆ ಸುಲಭವೇ?

ಹೀಗಿರಬೇಕಾದರೆ, ಒಂದು ದಿನ ಎಡಿನ್‌ಬರಾ ಕಾಲೇಜಿನಿಂದ ಒಂದು ಪತ್ರ ಬಂದಿತು. ಭಾರತೀಯ ಸಂಸ್ಕೃತಿ ಬಗೆಗೆ ಹೇಳಿ, ಭಾರತದಲ್ಲಿನ ಲೈಂಗಿಕ ಶಿಕ್ಷಣದ ಬಗ್ಗೆ ಮಾತನಾಡುವಿರಾ? ಎಂದು ಆ ಪತ್ರದಲ್ಲಿ ಕೇಳಲಾಗಿತ್ತು. ಅದಕ್ಕೆ ನಾನು 'ಭಾರತದಲ್ಲಿ ಲೈಂಗಿಕ ಶಿಕ್ಷಣ ಎನ್ನುವ ಪ್ರತ್ಯೇಕ ವಿಭಾಗವಿಲ್ಲ. ಅದರ ಬಗೆಗೆ ನಾನು ಮಾತನಾಡುವುದು ಕಷ್ಟ. ಆದರೆ ನಮ್ಮ ಹಿಂದೂ ವಿವಾಹದ ಬಗೆಗೆ ಮಾತನಾಡಬಲ್ಲೆ' ಎಂದು ಪ್ರತಿ ಉತ್ತರ ಬರೆದು ಕಳುಹಿಸಿದೆ. ಅವರು ಅದಕ್ಕೆ ಸಮ್ಮತಿಸಿ ನನ್ನನ್ನು 'ಹಿಂದೂ ವಿವಾಹ - ಭಾರತೀಯ ಸಂಸ್ಕೃತಿ' ವಿಷಯವನ್ನು ಕುರಿತು ಉಪನ್ಯಾಸ ಮಾಡಲು ಆಹ್ವಾನಿಸಿದರು.

ಆ ದಿನ ಸುಮಾರು ೬೦೦ ಜನ ವಿದ್ಯಾರ್ಥಿಗಳು ಅಲ್ಲಿ ಸೇರಿದ್ದರು. ಅದು ಹುಡುಗಿಯರ ಕಾಲೇಜು. ಎಲ್ಲರೂ ಅಲ್ಲಿ ಹುಡುಗಿಯರೇ. ಬಿಳಿ ಬಿಳೀ ಮುಖಗಳು, ಆ ಮುಗ್ಧತೆ, ಗಂಭೀರತೆ ನೋಡಿ ನನಗೂ ಒಂದು ಕ್ಷಣ ಗಲಿಬಿಲಿಯಾದರೂ, ಹಾಗೇನೂ ತೋರಿಸಿಕೊಳ್ಳದೆ ನನ್ನ ಉಪನ್ಯಾಸ ಪ್ರಾರಂಭಿಸಿದೆ. ಎಲ್ಲವನ್ನೂ ನಿಧಾನವಾಗಿ ಹೇಳುತ್ತಾ ಬಂದೆ. ಮಧ್ಯದಲ್ಲಿ 'ನಾನು ಬಹಳ ವೇಗವಾಗಿ ಹೇಳುತ್ತಿದ್ದೇನೆಯೇ? ನಿಮಗೆ ನನ್ನ ಮಾತುಗಳು ಅರ್ಥ ಆಗುತ್ತಿವೆಯೇ?' ಎಂದು ಕೇಳಿದೆ. ಅವರೆಲ್ಲ 'ಇಲ್ಲ... ಇಲ್ಲ, ನೀವು ಹೇಳುತ್ತಿರುವುದು ಸರಿಯಾಗಿದೆ, ನಮಗೆ ನಿಮ್ಮ ಮಾತುಗಳನ್ನು ಅನುಸರಿಸಲು ಕಷ್ಟ ಎನಿಸುತ್ತಿಲ್ಲ' ಎಂದರು. ಈಗ ಮತ್ತೂ ಸ್ವಲ್ಪ ಧೈರ್ಯ ಹೆಚ್ಚಿತು. ಎಲ್ಲ ಧರ್ಮಗಳ ಉದ್ದೇಶವೂ ಅದೇ, ಎಲ್ಲ ಧರ್ಮಗಳೂ ಸತಿ-ಪತಿಯರು ಸಂತೋಷದಿಂದ ಇರಲಿ ಎಂದು ಹಾರೈಸುವುದು. ನಮ್ಮಲ್ಲಿ ಅದು ಈ ರೀತಿ ಇದೆ - ಎಂದು ಅಲ್ಲಿದ್ದ ಬೋರ್ಡಿನ ಮೇಲೆ ಯಜ್ಞ ಕುಂಡದ ಚಿತ್ರ ಬರೆದು, ಅಗ್ನಿ ಸಾಕ್ಷಿಯ ವಿಷಯವನ್ನು ಹೇಳಿ, ಸಪ್ತಪದಿಯ ಅರ್ಥ ಹೇಳಿ 'ಧರ್ಮೇ ಚ, ಅರ್ಥೇ ಚ, ಕಾಮೇ ಚ ನಾತಿಚರಾಮಿ' ಎನ್ನುವ ಪತಿ-ಪತ್ನಿಯರ ಪ್ರಮಾಣದ ಬಗೆಗೆ ಹೇಳಿ ಅದೆಲ್ಲದರ ಅರ್ಥ ವಿವರಿಸಿ, ಅದರ ಮಹತ್ವದ ಬಗೆಗೆ ತಿಳಿಸಿ ನಿಲ್ಲಿಸಿದೆ. ೪೦ ನಿಮಿಷಗಳು ಮುಗಿದಿದ್ದವು. ಆಗ ವಿದ್ಯಾರ್ಥಿಗಳಿಂದ ಪ್ರಶ್ನೆಗಳನ್ನು ಆಹ್ವಾನಿಸಿದೆ. ೪೦ ನಿಮಿಷಗಳೂ ಅಲ್ಲಾಡದೆ ಕಲ್ಲಿನಂತೆ ಕುಳಿತು ಕೇಳಿದ ಆ ಹುಡುಗಿಯರು ಒಬ್ಬೊಬ್ಬರಾಗಿ ಕೈ ಮೇಲಕ್ಕೆ ಎತ್ತಿ "ನಾನು ಪ್ರಶ್ನೆ ಕೇಳಲೇ? ನಾನು ಕೇಳಬಹುದೇ?" ಎಂದು ಕೇಳುತ್ತಾ ಹಲವಾರು ಪ್ರಶ್ನೆಗಳನ್ನು ಕೇಳಿದರು. 'ನಿಮ್ಮಲ್ಲಿ ವಯಸ್ಸಿನ ಮಿತಿ ಇದೆಯೇ?' 'ಯಾವ ವಯಸ್ಸು?' 'ಆ ದಿನ ಧರಿಸುವ ವಸ್ತ್ರಗಳು ಯಾವುವು?' 'ಅದನ್ನೇಕೆ ಹಾಗೆ ಧರಿಸಬೇಕು?' 'ಮದುವೆಗೆ ಮುನ್ನ ವರ-ವಧುಗಳನ್ನು ಕೇಳುತ್ತೀರಾ?' ಇತ್ಯಾದಿ ಇತ್ಯಾದಿ... ಒಂದೇ ಎರಡೇ ಅವರ ಪ್ರಶ್ನೆಗಳು! ಅದೆಷ್ಟು ಕುತೂಹಲ, ಅದೇನು ಆಸಕ್ತಿ ಅವರಿಗೆ! ನಾನು ಉತ್ತರಗಳನ್ನು ಹೇಳಹೇಳುತ್ತ, ಅವರ ಪ್ರಶ್ನೆಗಳನ್ನು ಕೇಳ ಕೇಳುತ್ತಾ ಬೆರಗಾಗಿ ಹೋದೆ!

ಕೊನೆಯಲ್ಲಿ ಕೈ ಎತ್ತಿದ ಒಬ್ಬ ಹುಡುಗಿ, "ನಾನು ಹಿಂದೂ ರೀತಿಯಲ್ಲಿ ವಿವಾಹ ಮಾಡಿಕೊಳ್ಳಬಹುದೇ?" ಎಂದಳು! ತಕ್ಷಣವೇ ನಾನು "ಏಕಿಲ್ಲ? ಖಂಡಿತವಾಗಿ ಮಾಡಿಕೊಳ್ಳಬಹುದು" ಎಂದೆ. ಕೂಡಲೆ ನನ್ನ ಮನಸ್ಸು ಮಿಂಚಿನ ವೇಗದಲ್ಲಿ ಯೋಚಿಸಿತು. 'ಈ ಹುಡುಗಿಗೆ ನಾನು ಹೀಗೆ ಹೇಳುತ್ತಿದ್ದೇನೆ.ಇವಳು ನಿಜಕ್ಕೂ ಮದುವೆ ಮಾಡಿಸಿ ಎಂದು ಬಂದರೆ ನಾನು ಮಾಡಿಸಲಾಗುವುದೇ? ಹೇಗೆ ಮಾಡಿಸುವುದು? ಅದರ ಪರಿಣಾಮ ಏನಾದೀತು?' ಎಂದು ಹಾಯ್ದು ಯೋಚನೆಗಳಿಗೆ ಅಲ್ಲಿಯೇ ವಿರಾಮ ಹಾಕಿದೆ. ನನ್ನ ಮಾತು ಮುಂದುವರೆಸಿದೆ, "ಹಿಂದೂ ಜೀವನ ರೀತಿ, ಪ್ರಪಂಚದಲ್ಲಿರುವ ಎಲ್ಲರಿಗೂ ಅನುಕೂಲಕರವಾಗಿಯೇ ಇರುವುದು! ಇಲ್ಲಿ ಮತಧರ್ಮದ

ಭೇದ ಭಾವವೇ ಇಲ್ಲ. ಮಂತ್ರಗಳು ಹೇಳುವಂತೆ, ಸತಿ ಪತಿಯರು ಪರಸ್ಪರರನ್ನು ಗೌರವಿಸುವುದರಿಂದ, ನಡವಳಿಕೆಯ ನಿಯಮಾವಳಿಗಳನ್ನು ತಪ್ಪದೇ ಅನುಸರಿಸುವುದರಿಂದ ಅವರು ಪರಸ್ಪರರಿಗೆ ಬಂಧಿತ ರಾಗುತ್ತಾರೆ. ಎಲ್ಲ ವಿವಾಹದ ಉದ್ದೇಶವೂ ಅದೇ ತಾನೇ? ಹಾಗೆ ಬಂಧಿಸಿಕೊಂಡೇ ಜೀವನ ಪೂರ್ತಿ ಸಂತೋಷದಿಂದ ಇರಬೇಕು ಎಂದೇ ಎಲ್ಲ ಧರ್ಮಗಳೂ ಹೇಳುವುವು. ಒಬ್ಬರನ್ನೊಬ್ಬರು ಸಹಿಸಿಕೊಳ್ಳಬೇಕು, ಒಬ್ಬರ ಬಗ್ಗೆ ಒಬ್ಬರು ತಾಳ್ಮೆ ವಹಿಸಬೇಕು, ಒಬ್ಬರಿಂದೊಬ್ಬರು ಕೊಡು-ತೆಗೆದುಕೊಳ್ಳುವುದರಲ್ಲಿ ಪೂರ್ಣ ಸಂತೋಷ ಸಮ್ಮತಿ ಇರಬೇಕು, ಹಾಗಾದರೆ ಸತಿ-ಪತಿಯರ ಬದುಕು ಚಂದ-ಸುಂದರ ಆಗುತ್ತದೆ...

ಧರ್ಮಪ್ರಜಾಸಂಪತ್ಯರ್ಥಮ್ ಇಮಾಂ ಕನ್ಯಾಂ ವೃಣೀಧ್ವಮ್

ಎನ್ನುತ್ತಾನೆ, ವಧುವಿನ ತಂದೆ, ವಧುವನ್ನು ವರನ ಕೈಗೆ ಒಪ್ಪಿಸುವಾಗ ! 'ಧರ್ಮದಿಂದ (ಕಾಮದಿಂದಲ್ಲ) ನನ್ನ ಮಗಳಲ್ಲಿ ನೀನು ನಿನ್ನ ಮಕ್ಕಳನ್ನು ಪಡೆ ಎಂದು ಅನುಮತಿಸಿ, ನಾನು ನಿನಗೆ ನನ್ನ ಮಗಳನ್ನು ಒಪ್ಪಿಸುತ್ತೇನೆ' ಎನ್ನುವುದನ್ನು ನಾವು ನೆನಪಿಡಬೇಕು. ಇಲ್ಲಿ ಕಾಮ ಎನ್ನುವುದು ಕ್ಷಣಿಕವಾದದ್ದು. ಪ್ರೀತಿಯ - ನಂಬಿಕೆಯ ಬಂಧನ ಬಲವಾಗಿದ್ದಾಗ ಅದರ ಪಾತ್ರ ಇಲ್ಲಿ ಬಹಳ ಕಡಮೆ. ಏಕೆಂದರೆ ನಮ್ಮಲ್ಲಿ ಒಂದು ಮಾತಿದೆ.

ಆಹಾರನಿದ್ರಾಭಯ ಮೈಥುನಾನಿ
ಸಾಮಾನ್ಯಮೇತತ್ ಪಶುಭಿರ್ನರಾಣಾಮ್
ಧರ್ಮೋ ಹಿ ತೇಷಾಮ್ ಅಧಿಕೋ ವಿಶೇಷಃ
ಧರ್ಮೇಣ ಹೀನಾಃ ಪಶುಭಿಃ ಸಮಾನಾಃ ||

ಎಂದು. ಹಾಗೆಂದರೆ ಆಹಾರ, ನಿದ್ರೆ, ಭಯ, ಮೈಥುನಗಳು ಮನುಷ್ಯನಿಗೂ, ಪ್ರಾಣಿಗೂ ಸಮಾನವಾದದ್ದು. ಆದರೆ ಮನುಷ್ಯನಲ್ಲಿ ಧರ್ಮಪ್ರಜ್ಞೆ ಎನ್ನುವುದು ಇರುತ್ತದೆ. ಹಾಗೆ ಧರ್ಮಪ್ರಜ್ಞೆ ಇರುವುದೇ ಅವನ ವಿಶೇಷ, ಅವನಿಗೆ ಸರಿ-ತಪ್ಪುಗಳು ತಿಳಿಯುತ್ತವೆ, ಕೆಟ್ಟದ್ದು-ಅನೀತಿ ಏನು ಎನ್ನುವುದು ತಿಳಿಯುತ್ತದೆ. ಹಾಗೆ ಧರ್ಮಪ್ರಜ್ಞೆ ಇಲ್ಲದಿದ್ದವನು ಪಶುವಿನ ಸಮಾನ, ಅವನು ಮೃಗದಂತೆ ಎಂದು ಹೇಳುವ ಈ ಶ್ಲೋಕದಲ್ಲಿ ಮನುಷ್ಯನು ಹೇಗೆ ನಡೆದುಕೊಳ್ಳಬೇಕು ಎಂದು ಮಾರ್ಮಿಕವಾಗಿ ಹೇಳಿದೆ... ನಾವು ಮನುಷ್ಯರು ನಮ್ಮ ಸಹಜೀವಿಗಳ ಜತೆಗೆ ಹೇಗೆ ನಡೆದುಕೊಳ್ಳಬೇಕೆಂದು ಹೇಳಿರುವಾಗ, ನಮ್ಮ ಜೀವನ ಸಂಗಾತಿಯ ಜತೆಗೆ ಜೀವನಪರ್ಯಂತ ಇರಬೇಕೆನ್ನುವ ಹಂಬಲ, ಆಸೆ, ಆಸಕ್ತಿ, ಪ್ರೀತಿ ಇದ್ದರೆ, ನಾವು ಇನ್ನು ಹೇಗೆ ನಡೆದು ಕೊಳ್ಳಬೇಕು? ಅದನ್ನೇ ಹಿಂದೂ ಧರ್ಮದ ವಿವಾಹ ಸಂಪ್ರದಾಯ ಹೇಳುವುದು, ಸುಖೀ ಸಂಸಾರದ ಸೂತ್ರಗಳಂತೆ ಇವೆ ಅಲ್ಲಿರುವ ಮಂತ್ರಗಳು. ಪರಂಪರಾನುಗತವಾಗಿ ಬಂದ ಅವುಗಳನ್ನು ಅನುಸರಿಸಿ, ತಪ್ಪದೇ ಆಚರಿಸಿದಲ್ಲಿ ವಿವಾಹವಾದ ಸತಿ-ಪತಿಯರು ಸುಖವಾಗಿ ಇರುವುದರಲ್ಲಿ ಸಂಶಯವೇ ಇಲ್ಲ..." ಎಂದೆ ನಾನು. ನನ್ನ ಮಾತು ಮುಗಿದ ಮೇಲೆ ಸುಮಾರು ಮೂರು ನಿಮಿಷಗಳ ಕಾಲ ಚಪ್ಪಾಳೆ ಹೊಡೆದ ಆ ವಿದ್ಯಾರ್ಥಿಗಳೂ, ಅವರ ಉಪನ್ಯಾಸಕರೂ ನನ್ನ ಮಾತು ಅವರಿಗೆ ಮೆಚ್ಚುಗೆಯಾಯಿತು ಎಂದು ಸೂಚಿಸಿದರು! ಹೀಗೆ ನಾನು ಈಟನ್‌ಗೆ, ಕೇಂಬ್ರಿಡ್ಜ್‌ಗೆ ಉಪನ್ಯಾಸಗಳನ್ನು ಕೊಡಲು ಹೋಗಿದ್ದುದು. ಎಲ್ಲ ಕಡೆಯೂ ವಿದ್ಯಾರ್ಥಿಗಳು ನನ್ನ ಮಾತು ಕೇಳಿ ಹಿಂದೂ ಧರ್ಮದ ವಿವಾಹದ ಬಗ್ಗೆ ಹೆಚ್ಚು ಕುತೂಹಲ ತಾಳಿದ್ದರು, ಅದನ್ನು ಮೆಚ್ಚಿಕೊಂಡಿದ್ದರು.

ಥೇಮ್ಸ್ ನದಿಯ ಮೇಲೆ ಅಗ್ನಿಸಾಕ್ಷಿ ವಿವಾಹ !

ಇದಾದ ನಾಲ್ಕಾರು ತಿಂಗಳ ನಂತರ ಒಂದು ಬೆಳಗ್ಗೆ ನಾನು ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದಾಗ ಇಬ್ಬರು ಇಂಗ್ಲಿಷ್ ಹುಡುಗಿಯರು, ಇಬ್ಬರು ಹುಡುಗರು ಬಂದರು. ನನಗೆ ವಂದಿಸಿದರು, "ನಾವು ನಿಮಗೆ ನೆನಪಿದೆಯೇ?" ಎಂದು ಒಬ್ಬಾಕೆ ಕೇಳಿದಾಗ ನಾನು ಒಂದು ನಿಮಿಷ ಅವಾಕ್ಕಾದೆ. ಆದರೆ ಕೂಡಲೆ ಏನೂ ಹೇಳಲಿಲ್ಲ. ಅದಕ್ಕೆ ಅವಳೇ "ನೀವು ಆ ದಿನ ಎಡಿನ್‌ಬರಾ ಕಾಲೇಜಿಗೆ ಹಿಂದೂ ವಿವಾಹದ ಬಗ್ಗೆ ಮಾತನಾಡಲು ಬಂದಿದ್ದಿರಲ್ಲ, ಆಗ ನಾವು ಅಲ್ಲಿದ್ದೆವು. ನಾವು ನಿಮ್ಮನ್ನು ಕೇಳಿದೆವು, 'ನಾವು ಹಾಗೆ ವಿವಾಹ ಆಗಬಯಸಿದರೆ, ಅದು ಸಾಧ್ಯವಾಗುತ್ತದೆಯೇ' ಎಂದು. ನೀವು 'ಆಗುತ್ತದೆ' ಎಂದಿದ್ದಿರಿ" ಎಂದಳು.

ನಿಜಕ್ಕೂ ನನಗೆ ಅವರು ಯಾರೆಂದು ಮೊದಲು ತಿಳಿದಿರಲಿಲ್ಲ! ದಿನವೂ ಅಸಂಖ್ಯ ಮುಖಗಳನ್ನು ನೋಡುತ್ತಿದ್ದ ನನಗೆ, ಆ ಕಾಲೇಜು ಗಳಲ್ಲಂತೂ ನೂರಾರು ಬಿಳಿ ಮುಖಗಳು, ನೆನಪಿಟ್ಟುಕೊಳ್ಳುವುದು ಕಷ್ಟವಾಗುತ್ತಿತ್ತು. ಪ್ರತಿದಿನವೋ, ವಾರಕ್ಕೆ ಒಮ್ಮೆಯೋ ಸಂಧಿಸಿದರೆ ಕಡಮೆ ಎಂದರೆ ಹೆಸರು ಮರೆತಿರುತ್ತದೆ, ಆದರೆ ಮುಖ-ಚಹರೆ ಮರೆತಿರುವುದಿಲ್ಲ! ಅಂತೂ ಆ ಹುಡುಗಿಯರು ಬಂದಿದ್ದರು... ಅವರಿಗೆ ನಾನು ನಿರಾಸೆ ಮಾಡದೆ, ಕಣ್ಣರಳಿಸಿ "ಓ...!ನೆನಪಿದೆ. ನೀವು ಅಲ್ಲಿ ಓದುತ್ತಿದ್ದ ವಿದ್ಯಾರ್ಥಿನಿಯರು, ಆ ದಿನ ನನ್ನನ್ನು ಪ್ರಶ್ನೆ ಕೇಳಿದ್ದಿರಿ" ಎಂದೆ. ಅದಕ್ಕೆ ಅವರು, "ನೋಡಿ, ನಾವು ಹೇಳಿದಂತೆ ಈಗ ನಿಮ್ಮಲ್ಲಿಗೆ ಬಂದಿದ್ದೇವೆ. ಇವರಿಬ್ಬರೂ ನಮ್ಮಿಬ್ಬರ ಗೆಳೆಯರು. ನಾವು ವಿವಾಹ ಆಗಲಿದ್ದೇವೆ. ನಿಮ್ಮ ಹಿಂದೂ ಪದ್ಧತಿಯ ವಿವಾಹವನ್ನು ನಮಗೆ ಮಾಡಿಸಿಕೊಡುತ್ತೀರಾ?" ಎಂದು ಕೇಳಿದರು. ನಾನು, "ಓಹೋ...!! ಅದಕ್ಕೇನು? ಧಾರಾಳವಾಗಿ ಆಗಬಹುದು" ಎಂದೆ. "ನೀವು ಆ ದಿನ ಹೇಳಿದಂತೆ ಹುಡುಗಿಯ ತಂದೆಯ ಮನೆಯಲ್ಲಿ, ದೇವಾಲಯ, ದೇವ ಮಂದಿರದಲ್ಲಿ ಅಥವಾ ಸಮುದ್ರ ತೀರದಲ್ಲಿ ಮದುವೆ ಆಗಬಹುದು. ಆದರೆ ನಮ್ಮ ಮನೆಗಳು ಚಿಕ್ಕವು, ಅಲ್ಲಿ ಸಾಧ್ಯವಿಲ್ಲ. ದೇವಸ್ಥಾನ,

ಚರ್ಚುಗಳಲ್ಲಿ ಜಾತಿ ಪದ್ಧತಿಯ ಕಾರಣದಿಂದ ಸಾಧ್ಯವಿಲ್ಲ. ಸಮುದ್ರ ತೀರವೂ ಬೇಡ. ಇಲ್ಲಿ ಥೇಮ್ಸ್ ನದಿಯ ಮೇಲೇಕೆ ಆಗಬಾರದು?'' ಎಂದರು ಆ ಹುಡುಗಿಯರು. ''ಥೇಮ್ಸ್ ನದಿಯ ಮೇಲೆ??'' ಎಂದೆ. ನನಗೆ ಬಹಳ ಆಶ್ಚರ್ಯವಾಯಿತು... ''ಹೇಗೆ'' ಎಂದೆ. ''ನಾವು ಒಂದು ದೊಡ್ಡ ದೋಣಿಯನ್ನು ಬಾಡಿಗೆಗೆ ತೆಗೆದುಕೊಳ್ಳುತ್ತೇವೆ.. ಅದು ಬಹಳ ಚೆನ್ನಾಗಿರುತ್ತದೆ'' ಎಂದರು. ''ಅಲ್ಲಿ ಅಗ್ನಿ ಇಡಲು ಸಾಧ್ಯವೇ? ಜನರನ್ನು ಅದು ತಡೆದೀತೆ?'' ಎಂದೆ ನಾನು. ''ಓಹೋ...!! ಅದು ಬಹಳ ದೊಡ್ಡದಾಗಿರುತ್ತದೆ. ನಮಗೆ ಯಾವ ರೀತಿಯ ತೊಂದರೆ ಯಾಗುವುದಿಲ್ಲ. ಎಲ್ಲ ಧಾರ್ಮಿಕ ವಿಧಿಗಳನ್ನೂ ಅಲ್ಲಿ ನಿರಾತಂಕವಾಗಿ ಮಾಡಿಕೊಳ್ಳಬಹುದು. ಸುಮಾರು ಒಂದೆರಡು ಸಾವಿರ ಮಂದಿಯನ್ನು ಹಿಡಿಸುವಂತಹಾ ದೊಡ್ಡ, ವಿಶಾಲವಾದ ದೋಣಿಯಾಗಿರುತ್ತದೆ ಅದು!'' ಎಂದರು. ''ಓಹೋ! ಅದ್ಭುತ ಹಾಗಾದರೆ... ಆಗಲಿ... ಗೊತ್ತು ಮಾಡಿಕೊಂಡು ಬಂದು ಹೇಳಿ, ಮದುವೆ ಮಾಡಿಸಿಕೊಡುತ್ತೇನೆ'' ಎಂದೆ. ನನ್ನ ಉತ್ಸಾಹವೂ ಹೆಚ್ಚಿತ್ತು. ಹಿಂದೆ ನನಗೂ ಈ ಅನುಭವ ವಾಗಿರಲಿಲ್ಲ. ''ನೋಡೇ ಬಿಡುವ, ಒಂದು ಕೈ!!'' ಎಂದು ಹುಮ್ಮಸ್ಸು ಬಂದಿತ್ತು.

ಅವರು ಹೇಳಿದಂತೆಯೇ ಮಾಡಿದರು. ನಾನೂ ಹೋದೆ. ಅವರ ಗೆಳೆಯ-ಗೆಳತಿಯರು, ಬಂಧು ವರ್ಗದವರು, ಅವರು ಹೇಳಿದಂತೆ-ಸಾವಿರಾರು ಜನ ಸೇರಿದ್ದರು. ಥೇಮ್ಸ್ ನದಿಯ ಮೇಲೆ ಅಗ್ನಿಯನ್ನು ಬರಮಾಡಿಕೊಂಡು ಅವನ ಸಮ್ಮುಖದಲ್ಲಿ ಮದುವೆ ಮಾಡಿಸಿದೆ. ಎರಡು ಅಗ್ನಿಕುಂಡಗಳು, ಒಂದೊಂದು ಜೋಡಿಯ ತಂದೆ ತಾಯಿಯರು ಒಂದೊಂದೆಡೆ ಕುರ್ಚಿಯ ಮೇಲೆ ಕುಳಿತುಕೊಳ್ಳುವಂತೆ ಮಾಡಿ, ಮಂತ್ರಗಳನ್ನು ಹೇಳಿ, ಮಾಂಗಲ್ಯಧಾರಣೆಯನ್ನೂ ಮಾಡಿಸಿದೆ. ಅವರೆಲ್ಲರಿಗೂ ಆ ದಿನ ಖುಷಿಯೋ ಖುಷಿ! ಅವರ ಸಂತೋಷವನ್ನು ನೋಡುವುದೇ ನನಗೊಂದು ಸಂತೋಷ ಆಗಿತ್ತು! 'ನ ಭೂತೋ ನ ಭವಿಷ್ಯತಿ' ಎನ್ನುವಂತೆ, ನನ್ನ ಜೀವನದಲ್ಲಿಯೂ ಅಂತಹದ್ದೊಂದು ಅನುಭವ ಆಗಿರಲಿಲ್ಲ. ಬಹುಶಃ ಮುಂದೆ ಆಗುವುದೋ ಇಲ್ಲವೋ ಅದು ಹೇಳಲು ಬರದು. ಹೀಗೆ.. ಅಲ್ಲಿ ನಡೆದ ಇದೊಂದು ಅಪೂರ್ವ ವಿವಾಹ!

'ಹಿಂದೂವಿವಾಹ ಪದ್ಧತಿಯನ್ನು ಅನುಸರಿಸಿ ನಡೆದ ಕ್ರೈಸ್ತ ಜೋಡಿಯ ವಿವಾಹಗಳು' ಎಂದು ಈ ವಿವಾಹದ ವೈಖರಿಯನ್ನು ಅಲ್ಲಿನ ಪೇಪರುಗಳಲ್ಲಿ ವರ್ಣರಂಜಿತ ಸುದ್ದಿಯನ್ನಾಗಿ ಪ್ರಕಟಿಸಿದರು. ಟಿ.ವಿ.ಯಲ್ಲಿ ಪ್ರಸಾರವಾಯಿತು. ಎಲ್ಲರ ಮೆಚ್ಚುಗೆ ಗಳಿಸಿದ ಜೋಡಿ ಮದುವೆಗಳು ಇವು ಆಗಿದ್ದವು! ನನಗೂ ಬಹಳ ಹೆಮ್ಮೆ ಎನಿಸಿತು. ನಮ್ಮ ಪದ್ಧತಿ ಎಷ್ಟು ಮಂದಿಯ ಮೆಚ್ಚುಗೆಗೆ, ಮನ್ನಣೆಗೆ, ಪಾತ್ರವಾಗುತ್ತಿದೆ ಎನ್ನುವ ಭಾವನೆ ನನ್ನ ಎದೆಯುಬ್ಬಿಸಿತು!

ಹೀಗೆ ಹಲವು ಜನರ ಸಹಾಯ, ಸಹಕಾರ, ಪ್ರೀತಿ, ವಿಶ್ವಾಸದಿಂದ ಲಂಡನ್ ಕೇಂದ್ರ ಅದ್ಭುತ ಯಶಸ್ಸನ್ನು ಸಾಧಿಸಿದುದು, ನನ್ನ ಹೃದಯದಲ್ಲಿ ಅದರ ಬಗೆಗೆ ಬಹಳ ಪ್ರೀತಿ ಸದೈವ ಉಳಿಯುವಂತೆ ಮಾಡಿತು... ಎಲ್ಲೇ ಇದ್ದರೂ ನನಗೆ ಅಲ್ಲೇ ಇದ್ದೇನೆ ಎನ್ನುವ ಭಾವನೆಯೇ!! ಅಷ್ಟು ಹತ್ತಿರ ನನ್ನ ಹೃದಯ-ಮನಸ್ಸುಗಳಿಗೆ, ನಮ್ಮ ಲಂಡನ್ ವಿದ್ಯಾಭವನ ಕೇಂದ್ರ!

ಇದೇ ಯಶಸ್ಸಿನ ಸೂತ್ರವನ್ನೇ ನಾನು ಬೆಂಗಳೂರಿನಲ್ಲಿಯೂ ಅಳವಡಿಸಿಕೊಂಡುದು.

ಮೈಸೂರು ರಾಮಕೃಷ್ಣಾಶ್ರಮದಲ್ಲಿ

ಮೈಸೂರಿನ ರಾಮಕೃಷ್ಣಾಶ್ರಮದ ಸ್ವಾಮೀಜಿ ಶ್ರೀ ಕುಮಾರ ಸ್ವಾಮಿಯನ್ನೂ, ನನ್ನನ್ನೂ ರಾಮಕೃಷ್ಣ ಆಶ್ರಮದಲ್ಲಿ ಐದು ದಿನಗಳ ಕಾಲ, ರಾಜಸೂಯಯಾಗ ಕಥಾಭಾಗವನ್ನು ನಡೆಸಿಕೊಡಲು ಕೇಳಿ, ಆಹ್ವಾನಿಸಿದರು. ಅದೇಕೋ 'ಕಲೆಗಳ ತವರೂರು' ಎನಿಸಿರುವ ಮೈಸೂರಿನಲ್ಲಿಯೂ ವಿದ್ಯಾಭವನದ ಕೇಂದ್ರವೊಂದು ತಲೆ ಎತ್ತಬೇಕು ಎನ್ನುವುದು ನನ್ನ ಮನದಲ್ಲಿಯೂ ಅದೇ ಸಮಯದಲ್ಲಿ ಮೂಡಿತ್ತು. ಅದಕ್ಕೆ ನನ್ನ ಜತೆ ಕೆಲಸ ಮಾಡುವವರ ಪ್ರೋತ್ಸಾಹವೂ ಸಿಕ್ಕಿತು. ಹಿಂದೆ, ಈಗಾಗಲೇ ಅಲ್ಲಿ ಒಂದು ವಿದ್ಯಾಭವನ ಕೇಂದ್ರವಿದ್ದು, ಶ್ರೀ ಮನ್ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ ಸುಪುತ್ರರಾದ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರು ಅದರ ಅಧ್ಯಕ್ಷರೂ ಆಗಿದ್ದರು. ಆದರೆ ಕೆಲ ಕಾಲಾನಂತರ ಏಕೋ ಅಲ್ಲಿ ಯಾವ ಚಟುವಟಿಕೆಯೂ ನಡೆಯದೆ, ಅದು ಮುಂದುವರೆಯದೆ ಮುಚ್ಚಿ ಹೋಗಿತ್ತು. ಈಗ ಮತ್ತೆ ಹೊಸದಾಗಿ ಅಲ್ಲಿ ಕೆಲಸ ಪ್ರಾರಂಭಿಸಬೇಕಿತ್ತು. ಅದೇ ಸಮಯಕ್ಕೆ ಬಡೀಮಾ ಅವರೂ ಬೆಂಗಳೂರಿಗೆ ಬಂದಿದ್ದರು. 'ನಾವೇಕೆ ಅಲ್ಲಿ ಈಗ ಸಾಂಕೇತಿಕವಾಗಿಯಾದರೂ ಪ್ರಾರಂಭೋತ್ಸವ ಮಾಡಬಾರದು?' ಎನಿಸಿತು.

ಈಗಾಗಲೇ ಭವನದಲ್ಲಿ ಇತಿಹಾಸದ ಸಂಪುಟಗಳ ಅನುವಾದದ ಜವಾಬ್ದಾರಿ ಹೊತ್ತು, ಪ್ರಧಾನ ಸಂಪಾದಕರಾಗಿ ಕೆಲಸ ಮಾಡುತ್ತಿದ್ದ, ವಿದ್ವಾಂಸರೂ, ಸಜ್ಜನರೂ, ಸ್ನೇಹಶೀಲರೂ ಆಗಿದ್ದ ಶ್ರೀ ಎ.ವಿ. ನರಸಿಂಹಮೂರ್ತಿಯವರನ್ನೇ ಅಧ್ಯಕ್ಷರಾಗುವಂತೆ ಕೇಳಿದೆವು. ಅವರು ಒಪ್ಪಿಕೊಂಡರು. ಹಾಗಾಗಿ ಮೈಸೂರಿನಲ್ಲಿ ಶ್ರೀ ಎ.ವಿ. ನರಸಿಂಹ ಮೂರ್ತಿಯವರ ಮನೆಯಲ್ಲಿ ಬಡೀಮಾ ಅವರು ದೀಪ ಬೆಳಗಿಸುವುದರ ಮೂಲಕ, ಸಾಂಕೇತಿಕವಾಗಿ ವಿದ್ಯಾಭವನದ ಕೇಂದ್ರವನ್ನು ಪ್ರಾರಂಭ ಮಾಡಿದರು. ಅನಂತರ ಅಲ್ಲಿನ ಶ್ರೀ ರಾಮಕೃಷ್ಣಾಶ್ರಮದಲ್ಲಿ ಸ್ವಾಮೀಜಿಯ ದಿವ್ಯ ಸಮ್ಮುಖದಲ್ಲಿ ಐದು ದಿನ ರಾಜಸೂಯಯಾಗ ಕಥಾ ಭಾಗವೂ ನಡೆಯಿತು... ಅದ್ಭುತವಾದ ಪ್ರತಿಕ್ರಿಯೆ ಮೈಸೂರಿನವರದು!! ಮೊದಲು ಸಭಾಂಗಣ ತುಂಬಿದ್ದಿತು... ಅದು ದಿನೇ ದಿನೇ ಹೆಚ್ಚಿ ಕೊನೆಯ ದಿನ ಸಭಾಂಗಣದಿಂದಾಚೆಗೆ ಹಾಕಿದ್ದ ನೂರಾರು ಕುರ್ಚಿಗಳು, ಬಂದಿದ್ದ ಪ್ರೇಕ್ಷಕರಿಗೆ ಸಾಲದಾಗಿ, ಎಲ್ಲರೂ

ನಿಂತುಕೊಂಡೇ ಕೇಳಿ ತಮ್ಮ ಸಂತೋಷ ವ್ಯಕ್ತಪಡಿಸಿದರು.

ಇದು ನಮ್ಮ ಉತ್ಸಾಹ ಹೆಚ್ಚಿಸಿ, ಮುಂದಿನ ಎರಡು ತಿಂಗಳಲ್ಲಿಯೇ ಜಗನ್ಮೋಹನ ಅರಮನೆಯಲ್ಲಿ ಜೂನ್ ನಾಲ್ಕನೇ ತಾರೀಖಿನಿಂದ ಇಪ್ಪತ್ನಾಲ್ಕನೆಯ ತಾರೀಖಿನ ತನಕ ಸುಮಾರು ಮೂರು ವಾರಗಳ ಕಾಲ ರಾಜಸೂಯಯಾಗದ ವಿಸ್ತೃತ ರೂಪದ ಪ್ರವಚನದ ಕಾರ್ಯಕ್ರಮ ಹಾಕಿಕೊಂಡೆವು. ಆಗ ನನ್ನ ಜತೆ ಗಮಕ ಹಾಡಲು ಮೈಸೂರಿನವರೇ ಆದ ಶ್ರೀ ರಾಮಕೃಷ್ಣಾಶ್ರಮ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾಗಿದ್ದ ಶ್ರೀ ಮತ್ತೂರು ಕುಮಾರಸ್ವಾಮಿಯವರು ಬಂದರು. ಅವರು ಶ್ರೀ ಕೇಶವಮೂರ್ತಿಯವರ ಶಿಷ್ಯರು. ಉದಯೋನ್ಮುಖ ಗಮಕ ಕಲಾವಿದರು. ಬಹಳ ಚೆನ್ನಾಗಿ ಕಾರ್ಯಕ್ರಮ ನಿರ್ವಹಿಸಲು ಸಹಕಾರ ಕೊಟ್ಟರು. ಮೈಸೂರಿನ ಜನತೆಯ ಉತ್ಸಾಹವನ್ನಂತೂ ನೋಡಲು ಎರಡು ಕಣ್ಣುಗಳೂ ಸಾಲದಾಗಿದ್ದವು! ಪ್ರಾರಂಭೋತ್ಸವದ ದಿನ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರು ಜಗನ್ಮೋಹನ ಅರಮನೆಯಲ್ಲಿ ವಿಧ್ಯುಕ್ತವಾಗಿ ವಿದ್ಯಾಭವನದ ಪ್ರಾರಂಭೋತ್ಸವವನ್ನು ನೆರವೇರಿಸಿ, ಪ್ರವಚನ ಕಾರ್ಯಕ್ರಮಕ್ಕೂ ಶ್ರೀಗಣೇಶ ಹೇಳಿದರು.

ಇದಾದನಂತರ ಮೈಸೂರಿನ ಜನರ ಸ್ಪಂದನ ನೋಡಿಕೊಂಡು, ದಿ. ೪-೧೧-೨೦೦೦ದಲ್ಲಿ ವಿದ್ಯಾಭವನದ ಲಲಿತಕಲೆಗಳ ತರಗತಿಗಳನ್ನು ಪ್ರಾರಂಭಿಸಲಾಯಿತು. ವಿದ್ಯಾಭವನಕ್ಕೆ ನೆಲೆ ನಿಲ್ಲಲು ಸ್ಥಳ ಒಂದರ ಆವಶ್ಯಕತೆ ಇದ್ದಿತ್ತಾಗಿ, ಮೈಸೂರಿನಲ್ಲಿ ಗೀತಾ ಶಿಶು ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳೂ, ಘನತೆವೆತ್ತವರೂ ಆದ ಶ್ರೀ ಬಿ.ಎಸ್. ಪಂಡಿತರು ತಮ್ಮ ಶಾಲೆಯ ಆವರಣದಲ್ಲಿ ಭವನದ ತರಗತಿಗಳನ್ನು ನಡೆಸಲು ಅನುಮತಿ ಕೊಟ್ಟರು. ಅಲ್ಲಿ ವಾರಾಂತ್ಯದಲ್ಲಿ ತರಗತಿಗಳಿಗಾಗಿ ನಾಲ್ಕಾರು ರೂಮುಗಳನ್ನು ಉಪಯೋಗಿಸಿಕೊಂಡು, ಭವನದ ಆಫೀಸು ರೂಮಾಗಿ ಒಂದು ರೂಮನ್ನು ಉಪಯೋಗಿಸಿಕೊಳ್ಳಲು ಉದಾರತೆಯಿಂದ ಹೇಳಿದರು. ಅಲ್ಲಿಯೇ ಭವನದ ಈ ಚಟುವಟಿಕೆಗಳ 'ಕಲಾಭಾರತಿ' ಪ್ರಾರಂಭವಾಯಿತು. ಭವನ ಅವರಿಗೆ ಸದೈವ ಋಣಿ! ಅಲ್ಲಿಯೇ ತರಗತಿಗಳು ಪ್ರಾರಂಭವಾದವು. ಈ ತರಗತಿಗಳು ಪ್ರಾರಂಭವಾದ ಎರಡು - ಮೂರು ತಿಂಗಳುಗಳಲ್ಲೇ ಬಡೀವಾ ಅವರು ಮೈಸೂರಿಗೆ ಭೇಟಿಕೊಟ್ಟಾಗ ಭವನದ ತರಗತಿಗಳ ವಿದ್ಯಾರ್ಥಿಗಳು ಅವರಿಗೆ ತಮ್ಮ ಕಲೆಯನ್ನು ಪ್ರದರ್ಶಿಸಿದರು... ಬಡೀವಾರ ಸಂತಸ ಆಗ ಹೇಳತೀರದು!

ಕೆ.ಬಿ. ಗಣಪತಿ

ಮೈಸೂರಿನಲ್ಲಾಗುವ ಪ್ರವಚನ ಕಾರ್ಯಕ್ರಮಕ್ಕೆ ಜನರ ಪ್ರೋತ್ಸಾಹ ಕಂಡು ಮೈಸೂರಿನಲ್ಲೇಕೆ ಭವನ ತನ್ನ ಸ್ವಂತದ ಕಟ್ಟಡ ಒಂದನ್ನು ಹೊಂದಬಾರದು ಎನಿಸಿತು. ಮೈಸೂರಿನ ಪ್ರಖ್ಯಾತ ದಿನಪತ್ರಿಕೆ 'ಸ್ಟಾರ್ ಆಫ್ ಮೈಸೂರು', 'ಮೈಸೂರು ಮಿತ್ರ'ಗಳ ಸಂಪಾದಕರಾದ ಕೆ.ಬಿ. ಗಣಪತಿಯವರು ನನ್ನ ಸನ್ಮಿತ್ರ ವರ್ಗದವರಲ್ಲಿ ಒಬ್ಬರಾದುದು ಭವನದ ಅದೃಷ್ಟ! ಅಲ್ಲಿ ನಡೆಯುವ ಪ್ರವಚನದ ಸಂಕ್ಷಿಪ್ತ ಕಥಾರೂಪವನ್ನು ನಾನು ಬರೆದುಕೊಟ್ಟರೆ ಅದನ್ನು ತಾವು ತಮ್ಮ ಪತ್ರಿಕೆಯಲ್ಲಿ ಹಾಕುವುದಾಗಿ ಹೇಳಿ ಉಚಿತವಾಗಿ ಮೊದಲು ಭವನಕ್ಕೆ ತಮ್ಮ ಪತ್ರಿಕೆಯ 'ಕಾಲಂದಾನ'ವನ್ನು ಮಾಡಿದರು. ಅದರಂತೆಯೇ ನಾನು ಪ್ರತಿದಿನವೂ ದಿನದ ಕಥಾಭಾಗವನ್ನು ಬರೆದು 'ಮೈಸೂರು ಮಿತ್ರನಿಗೆ' ಕೊಡುತ್ತಿದ್ದೆ. ಹೀಗೆ ಶ್ರೀ ಗಣಪತಿಯವರ ಜನಪ್ರಿಯತೆ, ಅವರೇ ಕಟ್ಟಡದ ಸಮಿತಿಯ ಅಧ್ಯಕ್ಷರೂ ಆಗುವಂತೆ ಮಾಡಿತು. ಅಂತೆಯೇ ಶ್ರೀ ಗಣಪತಿಯವರ ಆ ಸಹಾಯದಿಂದಾಗಿ ಮೈಸೂರಿನ ಹೆಚ್ಚಿನ ಓದುಗರಿಗೆ ನಾನು ಬಹಳಷ್ಟು ಪರಿಚಿತನಾದೆ. ಭವನದ ಮೈಸೂರು ಕೇಂದ್ರದ ಪದಾಧಿಕಾರಿಗಳೂ, ತಾವೂ ಆದಷ್ಟೂ ಸಹಕರಿಸುತ್ತೇವೆ ಎಂದು ಹೇಳಿದರು. ಸರಿ... ಮೂರು ಅಂತಸ್ತಿನ ಕಟ್ಟಡ ಒಂದನ್ನು ನಿರ್ಮಾಣ ಮಾಡಿಯೇ ಬಿಡೋಣ ಎಂದು ನಿರ್ಧರಿಸಿ ಜಾಗಕ್ಕಾಗಿ ಅರ್ಜಿ ಹಾಕಿದೆವು. ಈ ಭವನದ ಖರ್ಚೂ ಭಾರಿಯಾಗಿಯೇ ಇದ್ದಿತು! ಇದು ಸುಮಾರು ಒಂದೂ ಕಾಲು ಕೋಟಿ ರೂಪಾಯಿಯ ಯೋಜನೆ!! ಮಾನ್ಯ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರು ಸುಮಾರು ಎರಡು ಎಕರೆಯಷ್ಟು ಜಾಗವನ್ನು ವಿಜಯನಗರ ಬಡಾವಣೆಯಲ್ಲಿ ಸುಂದರವಾದ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರು ಮಾಡಿದರು. ಅದು ಮುಖ್ಯರಸ್ತೆಗೆ ಬಹಳ ಹತ್ತಿರವೂ ಆಗಿತ್ತು.

ಮತ್ತೆ ಮೇ ತಿಂಗಳಲ್ಲಿ ೨೫ ದಿನಗಳ ಪ್ರವಚನ ನಡೆದು ಜೂನ್ ಒಂದರಂದು, ಅಲ್ಲಿ, ವಿದ್ಯಾಭವನದ ನಿವೇಶನದಲ್ಲಿ ವಿದ್ಯಾಭವನದ ಕಟ್ಟಡದ ಶಂಕುಸ್ಥಾಪನೆಯನ್ನು ಮಾನ್ಯ ಮಾಜಿ ರಾಷ್ಟ್ರಪತಿಗಳೂ, ವಿದ್ಯಾಭವನ, ಭಾರತದ ಕೇಂದ್ರಗಳ ಅಧ್ಯಕ್ಷರೂ ಆದ ಆರ್. ವೆಂಕಟ ರಾಮನ್‌ರವರು ತಮ್ಮ ಅಮೃತಹಸ್ತದಿಂದ ನೆರವೇರಿಸಿಕೊಟ್ಟರು! ಆ ದಿನ ನನಗೆ ಏನನ್ನೋ ಸಾಧಿಸಿದ ಅನುಭವ. ಏನೂ ಕೆಲಸ ಆಗಿರಲಿಲ್ಲ ಅಲ್ಲಿ. ಆದರೂ ಕಟ್ಟಡ ನಿರ್ಮಾಣಕ್ಕೆ ಕೈ ಹಾಕಿದುದು ಒಂದು ಹೊಸ ಸಾಹಸಕ್ಕೆ ಕೈ ಹಾಕಿದಂತಾಗಿತ್ತು. ಕಟ್ಟಡ ನಿಧಿ ಸಂಗ್ರಹಣೆ ಬಹಳ ದೊಡ್ಡ ಜವಾಬ್ದಾರಿಯಾಗಿತ್ತಷ್ಟೆ. ಮೈಸೂರು ಕೇಂದ್ರದ ಗೌರವ ಕಾರ್ಯದರ್ಶಿಗಳಾದ ಶ್ರೀ ಶ್ರೀನಿವಾಸಗುಪ್ತರು ಅವರ ಸನ್ಮಿತ್ರರು ಹಾಗೂ, ಮೈಸೂರಿನ ಖ್ಯಾತ ಚಾರ್ಟರ್ಡ್ ಅಕೌಂಟೆಂಟ್ (ಲೆಕ್ಕ ಪರಿಶೋಧಕರು) ಆದ ಶ್ರೀ ಷಣ್ಮುಗಯ್ಯನವರನ್ನು ನಮಗೆ ಪರಿಚಯ ಮಾಡಿಸಿ, ನಿಧಿ ಸಂಗ್ರಹಿಸುವುದರಲ್ಲಿ ಅವರಿಗೆ ಇರುವ ದಕ್ಷತೆ, ಚಾಣಾಕ್ಷತೆಯನ್ನು ವಿವರಿಸಿದರು. ಹೀಗೆ ಈಗ ಶ್ರೀ ಷಣ್ಮುಗಯ್ಯನವರು ಕಟ್ಟಡ ನಿಧಿ ಸಂಗ್ರಹಣಾ ಸಮಿತಿಯ ಅಧ್ಯಕ್ಷರಾಗಿ ನನ್ನ ಕೈಗೆ ಕೈ ಸೇರಿಸಿದರು.

ಮಾಧುರೀ ತಾತಾಚಾರಿ

ಪ್ರವಚನಕ್ಕೆ ಪ್ರತಿಕ್ರಿಯೆ ಬಹಳ ಚೆನ್ನಾಗಿದ್ದರೂ, ಅದಕ್ಕಾಗಿ ಅಲ್ಲಿ ನಿಧಿ ಸಂಗ್ರಹಿಸುವುದು ಸುಲಭವಾಗಿರಲಿಲ್ಲ. ನಿಧಾನವಾಗಿ ಒಬ್ಬೊಬ್ಬರೇ

ದಾನಿಗಳ ಮನೆಗಳನ್ನು ಹುಡುಕಲು ಪ್ರಾರಂಭಿಸಿದೆವು. ಹಲವು ಮಂದಿ ಭವನಕ್ಕಾಗಿ ಒಂದೊಂದು ತರಗತಿಯ ರೂಮುಗಳನ್ನು ಕಟ್ಟಿಸಿ ಕೊಡುತ್ತೇವೆ ಎಂದರು. ಹತ್ತು, ಇಪ್ಪತ್ತು ಸಾವಿರಗಳೂ ಆಗೀಗ ಬಂದವು. ಶ್ರೀಮತಿ ಮಾಧುರಿ ತಾತಾಚಾರಿ ಎನ್ನುವ ಮಹಿಳೆ ವಿದೇಶದಲ್ಲಿ ಸುಮಾರು ೩೫ ವರ್ಷಗಳು ಇದ್ದವರು. ಆಕೆಯ ಪತಿ ದಿವಂಗತ ತಾತಾಚಾರಿಯವರು ವಿಜ್ಞಾನಿಗಳಾಗಿದ್ದವರು. ಭಾರತಕ್ಕೆ ೧೯೬೦ರ ದಶಕದಲ್ಲಿ ಬಂದ ಆಕೆ ತಮ್ಮ ತಾಯಿಯೊಡನೆ, ಮೈಸೂರಿನಲ್ಲಿ ನೆಲೆ ನಿಂತರು. ತಮ್ಮದೇ ಆದ 'ಭ್ರಮರ ಟ್ರಸ್ಟ್'ನ ಮೂಲಕ ಪ್ರತಿಭಾವಂತ ವಿಜ್ಞಾನಿಗಳಿಗೆ, ಸಂಗೀತಗಾರರಿಗೆ, ಸಾಹಿತಿಗಳಿಗೆ, ಪ್ರಶಸ್ತಿ ಕೊಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದರು ಶ್ರೀಮತಿ ಮಾಧುರಿ. ಡಾ|| ಜಾನ್‌ಮಾರ್‌ರು ಭಾರತಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ, ಮೈಸೂರಿಗೂ ಬಂದು ಅಲ್ಲಿ ಒಂದು ವಾರ ವಿದ್ಯಾಭವನವು ಕರ್ನಾಟಕ ಸಂಗೀತದ ಮೇಲೆ ನಡೆಸಿದ ಕಮ್ಮಟದಲ್ಲಿ ಪ್ರೇಕ್ಷಕರಾಗಿ ಬಂದರು. ವಿದ್ಯಾಭವನದ ಉನ್ನತ ಧ್ಯೇಯೋದ್ದೇಶಗಳಿಗೆ ಮಾರುಹೋದ ಶ್ರೀಮತಿ ಮಾಧುರಿ ತಾತಾಚಾರಿ, ನನ್ನನ್ನು ಭೇಟಿಯಾಗಿ ವಿದ್ಯಾಭವನದಲ್ಲಿ ಅವರ ಪತಿಯ ಹೆಸರಿನಲ್ಲಿ ಒಂದು ಸಭಾಂಗಣ ನಿರ್ಮಿಸಲು ಉದಾರವಾಗಿ ಐದು ಲಕ್ಷ ರೂಪಾಯಿಗಳನ್ನು ಕಟ್ಟಡ ನಿಧಿಗೆ ಸಮರ್ಪಿಸಿದರು. ಆಕೆಯ ಸರಳತೆ-ಉದಾರತೆ ಕಂಡು ನಾನು ಮೂಕನಾದೆ.

ನಿಧಿ ಸಂಗ್ರಹಣೆಯ ನಮ್ಮ ಪ್ರಯತ್ನ ಮುಂದುವರೆದು ಮತ್ತೆ ೨೦೦೧ರ ಮೇ ತಿಂಗಳಲ್ಲಿ ೨೧ ದಿನಗಳ ಪ್ರವಚನ ಕಾರ್ಯಕ್ರಮ ನಡೆಸಿದೆ. ಅಭಿಮಾನಿಗಳು ಹೆಚ್ಚಿದರು, ಪ್ರವಚನಕ್ಕೆ ಬರು ಹೋಗುವವರೂ ಹೆಚ್ಚಿದರು. ಆದರೆ ನಾನು ನಿರೀಕ್ಷಿಸಿದಷ್ಟು ಹಣ ಸಂಗ್ರಹಿಸಲು ಸಾಧ್ಯವಾಗಲಿಲ್ಲ. ನನಗೂ ಬಹಳ ಕೆಲಸಗಳ ಒತ್ತಡ. ಪ್ರತಿದಿನ ಬೆಳಗ್ಗೆ ಭವನದ ಕೆಲಸಗಳ ಕಡೆ ಗಮನ ಕೊಡಲು ಬೆಂಗಳೂರಿನಲ್ಲಿ ಇರಲೇಬೇಕಿತ್ತು. ಬೆಳಗ್ಗೆ ಒಂಬತ್ತರಿಂದ ಮಧ್ಯಾಹ್ನ ಒಂದರ ತನಕ ಭವನದ ಕೆಲಸ ಮುಗಿಸಿ ಮನೆಗೆ ಬಂದು, ಸೇರಿದುದಷ್ಟನ್ನು ತಿಂದು, ಮಧ್ಯಾಹ್ನ ೨-೨೦ರ ರೈಲಿಗೆ ಮೈಸೂರಿಗೆ ಹೊರಡುತ್ತಿದ್ದೆ. ರೈಲಿನಲ್ಲಿಯೇ ಪ್ರವಚನದ ಸಿದ್ಧತೆಯನ್ನು ಮುಗಿಸಿಕೊಳ್ಳುತ್ತಿದ್ದೆ... ಮತ್ತೇನು ಮಾಡುವುದು, ಮೂರು ಘಂಟೆಯ ಪ್ರಯಾಣ ಅಲ್ಲಿಗೆ! ನನಗೋ... ನಿದ್ದೆಯೂ ಬಾರದು, ಅಲ್ಲದೆ ಕೆಲಸದ ಹೊರೆ ತಲೆಯ ಮೇಲಿದ್ದಾಗ ನಿದ್ದೆ ಬರುವುದಾದರೂ ಹೇಗಾದೀತು? ಸಂಜೆ ಐದರ ವೇಳೆಗೆ ಮೈಸೂರು ತಲುಪಿ, ನನ್ನ ಜತೆ ಹಾಡುತ್ತಿದ್ದ ಗಮಕ ಕಲಾವಿದರೂ, ನನ್ನ ದೂರದ ಬಂಧುಗಳೂ, ನಮ್ಮ ಊರಿನವರೂ ಆದ ಶ್ರೀ ಮತ್ತೂರು ಕುಮಾರಸ್ವಾಮಿಯವರ ಮನೆಗೆ ಹೋಗಿ, ಅಲ್ಲಿ ಸಂಜೆ ಸ್ನಾನ-ಸಂಧ್ಯಾವಂದನೆಗಳನ್ನು ಮುಗಿಸಿ ೬-೧೫ರ ವೇಳೆಗೆ ಜಗನ್ಮೋಹನ ಅರಮನೆ ತಲುಪುತ್ತಿದ್ದೆ. ಸಂಜೆ ೬.೩೦ ರಿಂದ ೮ರ ತನಕ ಪ್ರವಚನ. ಮಧ್ಯೆ ಮಧ್ಯೆ ಒಂದೊಂದು ದಿನ ೮.೩೦ರ ವೇಳೆಯೂ ಆಗುತ್ತಿತ್ತು. ಆಗ ಪ್ರತಿದಿನ ಶ್ರೀ ಕುಮಾರಸ್ವಾಮಿಯವರ ಪತ್ನಿಯೂ, ನನ್ನ ಪ್ರಿಯ ಗೌರವಾನ್ವಿತ ಮಿತ್ರ ಶ್ರೀ ಮತ್ತೂರು ಮಾರ್ಕಂಡೇಯ ಅವಧಾನಿಗಳ ತಮ್ಮನ ಪುತ್ರಿಯೂ ಆದ ಶ್ರೀಮತಿ ರತ್ನಾಳು ನನಗಾಗಿ ಊಟ ಕಟ್ಟಿಕೊಡುತ್ತಿದ್ದಳು. ಆ ಊಟ ತೆಗೆದುಕೊಂಡು ಮತ್ತೆ ಬೆಂಗಳೂರಿನ ಬಸ್ಸಿಗೆ. ಹೀಗೆ ಹೊರಡುತ್ತಿದ್ದ ನನ್ನನ್ನು ಪ್ರತಿದಿನವೂ ಆ ರಾತ್ರಿಯ ವೇಳೆಯಲ್ಲಿ ತಮ್ಮ 'ಚೈತನ್ಯರಥ' ಸ್ಯಾಂಟ್ರೋಕಾರಿನಲ್ಲಿ ಕರೆದೊಯ್ದು ಬಸ್ ನಿಲ್ದಾಣಕ್ಕೆ ತಲುಪಿಸಿ, ಬೆಂಗಳೂರಿನ ಬಸ್ಸಿಗೆ ಟಿಕೆಟ್ಟು ತೆಗೆದುಕೊಟ್ಟು ನಮಸ್ಕರಿಸಿ ಹೊರಡುತ್ತಿದ್ದ, ನನ್ನನ್ನು ಬಹಳವಾಗಿ ಪ್ರೀತಿಸಿ 'ಸ್ವಾಮೀಜಿ' ಎಂದು ಭಕ್ತಿಯಿಂದ ಕರೆದು ದಣಿಯುದಿದ್ದವರು ಡಾ|| ಎಸ್. ಕೃಷ್ಣಮೂರ್ತಿಯವರು! ಅವರ ಪ್ರೀತಿ-ಅಭಿಮಾನ, ವಿಶ್ವಾಸ ನಾನು ಎಂದಿಗೂ ಮರೆಯುವಂತಿಲ್ಲ. ಹೀಗೆ ಡಾ|| ಕೃಷ್ಣಮೂರ್ತಿಯವರಿಂದ ಬೀಳ್ಕೊಂಡು ಬಸ್ ಹತ್ತುವ ವೇಳೆಗೆ ಘಂಟೆ ಒಂಬತ್ತು. ಬೆಂಗಳೂರು ತಲುಪುವ ತನಕ ರಾತ್ರಿ ೧೨ ಅಥವಾ ಒಂದು ಘಂಟೆಯಾಗುತ್ತಿತ್ತು. ಮತ್ತೆ ಬೆಳಗಿನ ಜಾವ ಐದು ಘಂಟೆಗೇ ಏಳುವುದು. ಉದಯ ಟಿ.ವಿ.ಯ ಮಹಾಭಾರತದ ಚಿತ್ರೀಕರಣಕ್ಕಾಗಿ ಪದ್ಯಗಳನ್ನು ಗುರುತು ಹಾಕಿಕೊಂಡು ಟಿಪ್ಪಣಿಗಳನ್ನು ಬರೆದು ಕೊಳ್ಳುವುದು. ೭.೩೦ಕ್ಕೆ ಸ್ನಾನ, ಪೂಜೆ, ತಿಂಡಿ, ಮುಗಿಸಿ ಒಂಬತ್ತಕ್ಕೆ ಆಫೀಸು ಸೇರುವುದು. ಇವಿಷ್ಟು ನನ್ನ ಒಂದು ದಿನದ ಕಾರ್ಯಕ್ರಮವಾಗಿದ್ದಿತು!

ಉದಯ ಟಿ.ವಿ.

ಓ... ಇಲ್ಲಿ ನಿಮಗೆ ಒಂದು ವಿಷಯ ಹೇಳಲು ಬಹುಶಃ ನಾನು ಮರೆತಿದ್ದೆ. ಉದಯ ಟಿ.ವಿ.ಯ ಕಾರ್ಯಕ್ರಮ... ಇದನ್ನು ಈಗಾಗಲೇ ಬಹಳ ಮಂದಿ ಕಳೆದ ಮೂರು ವರ್ಷಗಳಿಂದಲೂ ನೋಡುತ್ತಿರುವುದರಿಂದ ಆ ಕಾರ್ಯಕ್ರಮ ನಡೆಯುತ್ತಿದೆ ಎಂದು ಎಲ್ಲರಿಗೂ ಗೊತ್ತಿದೆ. ಆದರೆ ಅದರ ಪ್ರಾರಂಭ ಹೇಗಾಯಿತು ಎಂದು ನಿಮಗೆ ತಿಳಿದಿರಲಾರದು. ಅಷ್ಟನ್ನು ಮಾತ್ರ ಹೇಳಿ ಮತ್ತೆ ಮೈಸೂರಿನ ಭವನ ಕಟ್ಟಡದ ನಿಧಿ ಸಂಗ್ರಹಣೆಗೆ ಹೊರಡೋಣ!

ಶ್ರೀ ಎನ್. ರಾಮಾನುಜರ ಸಾಹಸದಿಂದ ಕುಮಾರವ್ಯಾಸ ಭಾರತದ ೨೦೦ ಧ್ವನಿಸುರುಳಿಗಳು ಹೊರಬಂದುವಷ್ಟೆ? ಆ ಟೇಪನ್ನು ಕೇಳಿದ ನನ್ನ ಅಭಿಮಾನಿಗಳೂ, ಗೆಳೆಯರೂ, ಹಿರಿಯರೂ ಆದ ಶ್ರೀ ನಾರಾಯಣಸ್ವಾಮಿಯವರು ಒಮ್ಮೆ ಬಂದು, "ಮತ್ತೂರ್‌ಜೀ, ಇದನ್ನು ನೀವೇಕೆ ಟಿ.ವಿ.ಯಲ್ಲಿ ಕಾರ್ಯಕ್ರಮವಾಗಿ ಮಾಡಬಾರದು. ನನ್ನ ಪ್ರಿಯ ಗೆಳೆಯ ಸುಪ್ರಸಿದ್ಧ ಚಲನಚಿತ್ರ ನಟ ಶ್ರೀನಾಥ್‌ರು ಸುಸಂಸ್ಕೃತರು, ಸಜ್ಜನರು, ದೈವಭಕ್ತರು, ಮಹಾಕಾವ್ಯಗಳಲ್ಲಿ ಪೂಜ್ಯಭಾವನೆ ಇದ್ದು ಅದನ್ನು ಕೇಳಲು ಆಶಿಸುವಂತಹವರು. ಅವರು ಸುಪ್ರಸಿದ್ಧ ಉದಯ ಟಿ.ವಿ.ಯನ್ನು ನಡೆಸುವವರು. ನಾನು ಅವರಲ್ಲಿ

ಈ ವಿಷಯ ಮಾತನಾಡಿ ನಿಮಗೆ ತಿಳಿಸುತ್ತೇನೆ. ನೀವು ಮತ್ತು ಶ್ರೀ ಕೇಶವಮೂರ್ತಿಯವರು ನಿರಾಕರಿಸದೆ, ಈ ಕಾರ್ಯಕ್ರಮ ನಡೆಸಿಕೊಡಬೇಕು!" ಎಂದರು. ನೋಡೋಣ ದೇವರಿದ್ದಾನೆ. ಹಾಗೇನಾದರೂ ಆ ಕಾರ್ಯಕ್ರಮ ನಡೆದರೆ ಹಿಂದೆ ೨೦೦ ಕ್ಯಾಸೆಟ್ಟು ಗಳಿಗಾಗಿ ಬರೆದ ಟಿಪ್ಪಣಿಗಳಿವೆ. ಅವುಗಳಷ್ಟೇ ಸಾಲದು. ಟಿ.ವಿ.ಯಾದ್ದರಿಂದ ಅಲ್ಲಿ ನಾನು ಸಾಕಷ್ಟು ಉಪಕತೆಗಳನ್ನೂ ಸಂದರ್ಭಕ್ಕೆ ತಕ್ಕಂತೆ ವರ್ತಮಾನದ ವಿದ್ಯಮಾನಗಳನ್ನೂ ನನ್ನ ಜೀವನಾನುಭವವನ್ನೂ ಆಗಾಗ ಹೇಳಬೇಕಾಗುತ್ತದೆ. ಧ್ವನಿಸುರುಳಿಗಿಂತ ಇಲ್ಲಿ ನಮಗೆ ಸಮಯಾವಕಾಶ ಹೆಚ್ಚಾಗಿರುತ್ತದೆ. ಹಾಗೆಂದು ಅದನ್ನು ವ್ಯರ್ಥ ಮಾಡಿ ಫಿಲ್ಮನ್ನು ವ್ಯಯ ಮಾಡುವಂತಿಲ್ಲ. ವಿವರವಾಗಿ ಯಾದರೂ ಚೊಕ್ಕವಾಗಿರುವಂತೆ ಕಾರ್ಯಕ್ರಮ ನಡೆಸಿಕೊಡಬೇಕೆಂದು ಸಿದ್ಧತೆ ಮಾಡಿಕೊಳ್ಳಲಾರಂಭಿಸಿದೆ. ಶ್ರೀ ನಾರಾಯಣಸ್ವಾಮಿಯವರು ತಾವು ಹೇಳಿದಂತೆಯೇ ಶ್ರೀ ಶ್ರೀನಾಥರ ಒಪ್ಪಿಗೆ ಪಡೆದೇ ಬಂದು ನನ್ನನ್ನು ಭೇಟಿಯಾದರು. ನನ್ನನ್ನೂ ಶ್ರೀ ಶ್ರೀನಾಥರ ಬಳಿಗೆ ಕರೆದೊಯ್ದರು. ನಗೆಮುಖದ ಮಧ್ಯವಯಸ್ಸಿನ ಶ್ರೀ ಶ್ರೀನಾಥ್‌ರ ಮಾತು-ಕತೆ ಪರಮ ಸಾತ್ತ್ವಿಕ! ನನ್ನೊಡನೆ ಬಹಳ ಸ್ನೇಹದಿಂದ ನಗು ನಗುತ್ತಾ ಮಾತನಾಡಿದ ಶ್ರೀ ಶ್ರೀನಾಥ್, ವಿದ್ಯಾಭವನ ಲಂಡನ್ ಕೇಂದ್ರದ ಯಶಸ್ಸನ್ನು ಕೇಳಿ, ತಾವೂ ನನ್ನನ್ನು ಭೇಟಿಯಾಗಲು ಬಹಳ ಉತ್ಸುಕರಾಗಿದ್ದುದನ್ನು ಹೇಳಿ, ಬಹಳ ಪ್ರೀತಿಯಿಂದ ಪ್ರತಿದಿನವೂ ಮಹಾಭಾರತವನ್ನು ಹತ್ತು ನಿಮಿಷಗಳ ಕಾಲ ಟಿ.ವಿ.ಯಲ್ಲಿ ಪ್ರಸಾರ ಮಾಡುವುದಾಗಿ ಹೇಳಿದರು. ಚಿತ್ರೀಕರಣಕ್ಕೆ ಸಿದ್ಧತೆ ಮಾಡಿಕೊಳ್ಳಲು ತಿಳಿಸಿದರು. ಅಂದೇ ಉದಯ ಟಿ.ವಿ.ಯಲ್ಲಿ ಕುಮಾರವ್ಯಾಸನ 'ಮಹಾಭಾರತ' ವ್ಯಾಖ್ಯಾನ-ವಾಚನ ಕಾರ್ಯಕ್ರಮ ಪ್ರಾರಂಭವಾಯಿತು! ಬಹಳ ಜನರ ಬೇಡಿಕೆ ಹಾಗೂ ಇಷ್ಟದ ಮೇರೆಗೆ ಶ್ರೀ ಶ್ರೀನಾಥರು ಕಾರ್ಯಕ್ರಮದ ವೇಳೆಯನ್ನು ೧೫ ನಿಮಿಷಗಳಿಗೆ ಏರಿಸಿದರು. ಇಂದಿಗೂ ಆ ಕಾರ್ಯಕ್ರಮ ನಡೆಯುತ್ತಿದೆ. ವಾರಕ್ಕೊಮ್ಮೆ ಚಿತ್ರೀಕರಣ ನಡೆಯುತ್ತದೆ. ಅದಕ್ಕಾಗಿ ನಾನು ಸಾಕಷ್ಟು ತಯಾರಿ ಮಾಡಿಕೊಳ್ಳುತ್ತೇನೆ. ಇಲ್ಲಿಯೂ ಗಮಕ ವಿದ್ವಾನ್ ಶ್ರೀ ಎಚ್. ಆರ್. ಕೇಶವಮೂರ್ತಿಯವರ ಜತೆ ವ್ಯಾಖ್ಯಾನ ಮಾಡುವುದು ನನ್ನ ಮನಸ್ಸಿಗೆ ಮುದ ನೀಡುವ ಅನುಭವ! ಶ್ರೀ ಶ್ರೀನಾಥರ ಅಭಿಪ್ರಾಯದಂತೆ "ಪ್ರಪಂಚದಲ್ಲಿರುವ ಬೇಕಾದದ್ದು, ಬೇಡವಾದದ್ದು ಎಲ್ಲ ಕಾರ್ಯಕ್ರಮಗಳನ್ನೂ ಕೊಡುವ ನಾವು, ಅದರಲ್ಲಿರುವ ದೋಷಗಳ ಪರಿಹಾರ ಆಗಲಿ ಎಂದು ಉದಯ ಟಿ.ವಿ.ಯಲ್ಲಿ ಪರಮ ಪುಣ್ಯತಮವಾದ ಮಹಾಭಾರತ ಕಾರ್ಯ ಕ್ರಮವನ್ನು ನಾವೇ ಪ್ರಾಯೋಜಿಸುತ್ತಿದ್ದೇವೆ. ಶ್ರಮ ಶ್ರೀ ಮತ್ತೂರರದು, ಶ್ರೀ ಕೇಶವಮೂರ್ತಿಯವರದಾದರೂ, ಪುಣ್ಯ ಮಾತ್ರ ನನಗೇ ಸಿಗುವುದು ಎನ್ನುವ ಭರವಸೆ ನನಗೆ !! ನಿಜಕ್ಕೂ ಉದಯ ಟಿ.ವಿ. ತನ್ನದೇ ಆದ, ತಾನೇ ಪ್ರಾಯೋಜಿಸುತ್ತಿರುವ ಈ ೧೫ ನಿಮಿಷಗಳ ಕಾರ್ಯಕ್ರಮದ ಬಗ್ಗೆ ಬಹಳ ಹೆಮ್ಮೆ ಪಡುತ್ತದೆ, ಸಂತಸದಿಂದ ಬೀಗುತ್ತದೆ!!" ನಮ್ಮ ಈ ಕಾರ್ಯಕ್ರಮವನ್ನು ಪ್ರಾಯೋಜಿಸುವವರ ಇಂತಹ ಮಾತು ಯಾವ ಪ್ರಶಸ್ತಿಗೆ ಏನು ಕಡಮೆ? ಶ್ರೀ ಶ್ರೀನಾಥ್‌ರವರಿಗೆ ನಾನು ಎಂದಿಗೂ ಋಣಿಯಾಗಿದ್ದೇನೆ.

ಈಗ ಮೈಸೂರಿಗೆ ಹೊರಡೋಣ... ನಾವೆಲ್ಲ ನಿರೀಕ್ಷಿಸಿದಷ್ಟು ಹಗುರದಲ್ಲಿ ಕೆಲಸವಾಗಲಿಲ್ಲ. ಮತ್ತೆ ಅಕ್ಟೋಬರ್ ೧೫ರಿಂದ ನವಂಬರ್ ೩೦ರ ತನಕ, ಮಧ್ಯೆ ನಾಲ್ಕೈದು ದಿನಗಳನ್ನು ಬಿಟ್ಟು ಸುಮಾರು ೪೦ ದಿನಗಳ ಕಾಲ ಮೈಸೂರಿನಲ್ಲಿ ವಾಚನ ವ್ಯಾಖ್ಯಾನ ಕಾರ್ಯಕ್ರಮ ನಡೆಸುವುದೆಂದು ಯೋಜನೆ ಹಾಕಿದೆವು. ಅಲ್ಲಿಯವರೆಗೆ ಮೈಸೂರು ಕೇಂದ್ರದ ಗೌರವ ಖಜಾಂಚಿಗಳಾದ ಶ್ರೀ ಪಿ.ಎಸ್. ಗಣಪತಿಯವರೂ, ಅಧ್ಯಕ್ಷರಾದ ಶ್ರೀ. ಎ.ವಿ. ನರಸಿಂಹಮೂರ್ತಿ ಯವರೂ ಬಹಳ ಶ್ರಮವಹಿಸಿ ಸುಮಾರು ೩೫೦ ಜನರನ್ನು ವಿದ್ಯಾಭವನದ ಆಜೀವ ಸದಸ್ಯರನ್ನಾಗಿ ಮಾಡಿದ್ದರು. ಶಂಕು ಸ್ಥಾಪನೆಯಾಗಿದೆ. ಕಟ್ಟಡ ಮೇಲೇಳಲೇಬೇಕಿತ್ತು. ಆಗ ಆ ನಿವೇಶನವನ್ನು ಒಮ್ಮೆ ನೋಡಲು ಬಂದ ಬಡೀಮಾ ಅವರು ನಿವೇಶನ ನೋಡಿ, ಕಟ್ಟಡದ ನಕಾಶೆ ನೋಡಿ ಸಂತಸಪಟ್ಟು ಉದಾರವಾಗಿ ಐದು ಲಕ್ಷ ರೂಪಾಯಿಗಳನ್ನು ಕಟ್ಟಡದ ನಿಧಿಗಾಗಿ ಸಮರ್ಪಿಸಿದರು!

ಮೈಸೂರಿನಲ್ಲಿ ೪೦ ದಿನಗಳ ಸುದೀರ್ಘ ಕಾರ್ಯಕ್ರಮ ಪ್ರಾರಂಭ ವಾಯಿತು. ಈ ಬಾರಿ ನಾನು ಹೆಚ್ಚು ಬೆಂಗಳೂರಿಗೆ ಹೋಗದೆ ಮೈಸೂರಿನಲ್ಲಿಯೇ ಇದ್ದು ಆದಷ್ಟು ದಾನಿಗಳನ್ನು ಭೇಟಿ ಮಾಡಿ ನಿಧಿ ಸಂಗ್ರಹಿಸುವುದೆಂದು ತೀರ್ಮಾನ ಮಾಡಿದೆ. ಉದಯ ಟಿ.ವಿ.ಯ ಚಿತ್ರೀಕರಣಕ್ಕೆ ಮಧ್ಯೆ ಮಧ್ಯೆ ಒಮ್ಮೊಮ್ಮೆ ಹೋಗಿ ಬರುತ್ತಿದ್ದೆ... ಅಂತೂ ಈ ಬಾರಿ ಸುಮಾರು ೫೦ ಲಕ್ಷ ರೂಪಾಯಿಗಳನ್ನು ಸಂಗ್ರಹಿಸುವುದು ಸಾಧ್ಯವಾಯಿತು.

ಈ ಮಧ್ಯೆ ಬಾಗಲಕೋಟೆ, ಮಂಗಳೂರು, ಬಳ್ಳಾರಿ, ಮಡಿಕೇರಿ ಗಳಲ್ಲಿ ಭಾರತೀಯ ವಿದ್ಯಾಭವನದ ಕೇಂದ್ರದ ಉದ್ಘಾಟನೆಗಳೂ ಆದವು. ಭವನಕ್ಕೆ ಆಗ ಮೂರು ಸ್ಥಳಗಳಲ್ಲಿ ಮೂರು ಹೊಸ ಕೇಂದ್ರ ಗಳಾಗಿದ್ದವು. ಆ ಊರುಗಳಿಗೂ ನಾನೂ, ಶ್ರೀ ಕೇಶವಮೂರ್ತಿಯವರೂ ಹೋಗಿ ಒಂದೊಂದು ವಾರ ವಾಚನ ವ್ಯಾಖ್ಯಾನ ಕಾರ್ಯಕ್ರಮಗಳನ್ನು ನಡೆಸಿ ಬಂದೆವು. ಜನ ಈಗ ವಿದ್ಯಾಭವನವನ್ನು ಪ್ರೀತಿಯಿಂದ ಕಂಡು ಆದರಿಸುವಂತಾಗಿತ್ತು!

ಕಾಶೀಯಾತ್ರೆ

೨೦೦೨ನೆಯ ಜನವರಿಯಲ್ಲಿ ಮೈಸೂರಿನ ಹಾಗೂ ಬೆಂಗಳೂರಿನ ಕೆಲವು ಮಂದಿ ಅಭಿಮಾನಿ-ಆಪ್ತರುಗಳ ಜತೆ ನಾನು ಕಾಶಿ, ಪ್ರಯಾಗ, ಗಯಾ, ಅಯೋಧ್ಯಾ, ಚಿತ್ರಕೂಟದ ಪ್ರವಾಸವನ್ನು ಯೋಜಿಸಿದೆ. ಸುಮಾರು ೪೦ ಜನರು ನಮ್ಮ ಈ ೧೨ ದಿವಸಗಳ ಪ್ರವಾಸದಲ್ಲಿ

ಸೇರಿಕೊಂಡರು. ನಮ್ಮ ಪ್ರವಾಸ ಬಹಳ ಚೆನ್ನಾಗಿ ನಡೆಯಿತು. ಅಲಹಾಬಾದ್‌ಗೆ ನಾವು ಹೋದಾಗ ನಮ್ಮನ್ನು ಬಡೀಮಾ ಅವರು ತಾಯಿಯಂತೆ ಆದರಿಸಿ, ನಮ್ಮೆಲ್ಲರ ಪ್ರವಾಸದ ವೆಚ್ಚವನ್ನು ಭರಿಸಿದುದರ ಬಗೆಗೆ ನಾನು ನಿಮಗೆ ಮೊದಲೇ ಹೇಳಿದ್ದೇನಷ್ಟೆ! ನನ್ನ ಜತೆ ಬಂದ ಭವನದ ಅಭಿಮಾನಿಗಳಾದ ಈ ಎಲ್ಲ ಪ್ರವಾಸಿಗಳೂ ತಮ್ಮ ಒಬ್ಬೊಬ್ಬರ ಖರ್ಚು ಸುಮಾರು ಆರು ಸಾವಿರ ರೂ.ಗಳಂತೆ ಬಡೀಮಾ ಕೊಟ್ಟ ಎಲ್ಲ ಹಣವನ್ನೂ ತಾವು ಬಳಸಿಕೊಳ್ಳದೆ ಮೈಸೂರಿನ ವಿದ್ಯಾಭವನದ ಕಟ್ಟಡದ ನಿಧಿಗಾಗಿ ಬಹಳ ಪ್ರೀತಿಯಿಂದ ಸಮರ್ಪಿಸಿದರು. ಇದೆಲ್ಲ ಹಣ ಸುಮಾರು ಒಂದೂವರೆ ಲಕ್ಷ ರೂಪಾಯಿಗಳ ನಿಧಿಯಾಯಿತು.

ಅಂತೂ ಈಗಲೂ ಪ್ರಯತ್ನ ಮುಂದುವರೆಯುತ್ತಲೇ ಇದೆ. ನಾನು ನಂಬಿರುವ ಶ್ರೀಕೃಷ್ಣ ಹಿಂದಿನಿಂದ ನನ್ನನ್ನು ನಡೆಸಿಕೊಂಡು ಬಂದಿದ್ದಾನೆ, ನಡೆಸುತ್ತಿದ್ದಾನೆ, ಮುಂದೆಯೂ ನಡೆಸುತ್ತಾನೆ ಎನ್ನುವ ಭರವಸೆ ನನಗಿದೆ. ಮೈಸೂರಿನಲ್ಲಿ ವಿದ್ಯಾಭವನದ ಕಟ್ಟಡದ ಅಡಿಪಾಯದ ಕೆಲಸ ಮುಗಿದು, ಕಂಭಗಳು ಮೇಲೇರಿ ಮುಂದೆ ನಿರ್ಮಾಣವಾಗಲಿರುವ ಕಟ್ಟಡದ ಭವ್ಯತೆಯನ್ನು ಮುಂಚೆಯೇ ಹೇಳುತ್ತಿರುವಂತೆ ತೋರುತ್ತದೆ. ಮೈಸೂರಿನಲ್ಲಿ ಇರುವ ಹಲವಾರು ಅರಮನೆಗಳ ಮಾದರಿಯಲ್ಲಿಯೇ ನಿರ್ಮಾಣಗೊಳ್ಳುತ್ತಿರುವ ಈ ಭವ್ಯ ಕಟ್ಟಡದ ವಾಸ್ತು ಶಿಲ್ಪಿಗಳು, ಬಹಳ ಸಣ್ಣ ವಯಸ್ಸಿನವರಾದ ಹೆಣ್ಣುಮಕ್ಕಳು ಶ್ರೀಮತಿ ಅನು ಮತ್ತು ತಾರಾ.

*ಟೆಕ್ನೋ ಆರ್ಟ್ಸ್ ನಾಗರಾಜ್ ಎನ್ನುವ ಸಜ್ಜನರು ಕಟ್ಟಡದ ನಿರ್ಮಾಣದ ಕೆಲಸವನ್ನು ಪೂರ್ಣವಾಗಿ ವಹಿಸಿಕೊಂಡರು. ಕಟ್ಟಡ ಮೇಲೇಳುತ್ತಿದ್ದಂತೆ ಖರ್ಚುಗಳನ್ನು ಭರಿಸುವುದು ಆಗಬೇಕಿತ್ತಷ್ಟೆ. ಈ ಬಾರಿ ನಾನು ಪ್ರವಚನ ಮಾಡುತ್ತ ದಾನಿಗಳನ್ನು ಕಾಯುವಂತಿರಲಿಲ್ಲ. ನಾನು ನಿಧಿ ಸಂಗ್ರಹಕ್ಕಾಗಿ ಮನೆಮನೆಗಳಿಗೆ ಹೋಗಲೇ ಬೇಕಿತ್ತು. ಈ ಮಧ್ಯೆ ನಮ್ಮ ಐವತ್ತನೇ ವರ್ಷದ ವಿವಾಹ ವಾರ್ಷಿಕೋತ್ಸವ ಸಂದರ್ಭದಲ್ಲಿ ನಾವು ಊರಿಗೆ ಹೋಗಿದ್ದಾಗ, ಅನಿರೀಕ್ಷಿತವಾಗಿ ರಾಜಲಕ್ಷ್ಮಿಗೆ ಹುಷಾರು ತಪ್ಪಿತು. ಅವಳನ್ನು ಭದ್ರಾವತಿಯ ಆಸ್ಪತ್ರೆಗೆ ಸೇರಿಸಿ, ಸ್ವಲ್ಪ ಸುಧಾರಿಸಿಕೊಂಡ ನಂತರ ಬೆಂಗಳೂರಿಗೆ ಕರೆತಂದೆ. ನನ್ನ ಶ್ರೀಮತಿ ರಾಜಲಕ್ಷ್ಮಿಗೆ ಆರೋಗ್ಯ ಪದೇಪದೇ ತಪ್ಪುತ್ತಿತ್ತು. ಕೊನೆಗೊಮ್ಮೆ ಸಾಗರ್ ಅಪೋಲೋ ಆಸ್ಪತ್ರೆಗೆ ಸೇರಿಸಿದಾಗ, ಆಪರೇಷನ್ ಮಾಡಬೇಕು ಎಂದು ತಿಳಿಯಿತು. ನನಗೆ ಚೆನ್ನಾಗಿ ತಿಳಿದಿದ್ದ, ನಮ್ಮನ್ನು ಚೆನ್ನಾಗಿ ತಿಳಿದು ನಾವು ಬೆಂಗಳೂರಿಗೆ ಬಂದಂದಿನಿಂದಲೂ ನಮ್ಮ ಆರೋಗ್ಯವನ್ನು ನೋಡಿಕೊಳ್ಳುತ್ತಿದ್ದ (ಕೆಲ ವರ್ಷಗಳ ಹಿಂದೆಯಷ್ಟೆ ರಾಜಮ್ಮನಿಗೆ ಬೈಪಾಸ್ ಸರ್ಜರಿಯಾಗಿ ಆಗ ಪರಿಚಯವಾಗಿದ್ದ) ತರುಣ ವೈದ್ಯ ಸಹೃದಯಿ ಮಿತ್ರರುಗಳಾದ ಡಾ. ಸತೀಶರು, ಡಾ. ಲಕ್ಷ್ಮಣರು, ಡಾ.ಮಹೇಂದ್ರನಾಥರು, ಡಾ. ನಳಿನಿಯವರು- ಇವರೆಲ್ಲರ ಸಲಹೆ-ಸೂಚನೆಗಳಂತೆಯೇ ಅಲ್ಲಿ ರಾಜಮ್ಮನಿಗೆ ಚಿಕಿತ್ಸೆ ನಡೆಯಿತು. ಆದರೆ ದಿನಗಳೆದಂತೆ ಕಾಯಿಲೆ ತೀವ್ರಸ್ವರೂಪ ಪಡೆಯಿತು. ಅದು ಪಿತ್ತ ಕ್ಯಾನ್ಸರ್ ಎಂದು ತಿಳಿದು ಸ್ವಲ್ಪ ನಿರಾಸೆಯೇ ಆಯಿತು. ಬಂಧು-ಬಳಗದವರ ಸಹಕಾರ, ಶ್ರೀಮತಿ ಗೀತಾಪಾರ್ಥಸಾರಥಿ, ಶ್ರೀಮತಿ ಮೀನಾಕ್ಷಿ ಪದ್ಮನಾಭನ್ ಇಂತಹ ಹಿತೈಷಿ ಮಿತ್ರರ ನಿರಂತರ ಭೇಟಿಗಳು, ಎಲ್ಲರ ಆರೈಕೆ-ಹರಕೆಗಳಿದ್ದರೂ ನನ್ನ ಶ್ರೀಮತಿ ರಾಜಲಕ್ಷ್ಮಿ ದಿ. ೨೭-೦೭-೨೦೦೩ ರಂದು ವಿಧಿವಶಳಾದಳು. ಐವತ್ತು ವರ್ಷಗಳ ಜತೆಗಿನ ಬದುಕು ಕಷ್ಟ-ಸುಖ, ಸಂತೋಷ-ದುಃಖಗಳ ಪರಂಪರೆಯಲ್ಲಿ ಏಳು ಬೀಳುಗಳ ನಡುವೆಯಲ್ಲಿಯೂ ನಾವು ಒಮ್ಮನಸ್ಕರಾಗಿದ್ದು ಎಲ್ಲವನ್ನೂ ಎದುರಿಸಿದ್ದರೂ ಈಗ ಮಾತ್ರ ನಾನು ನಿಸ್ಸಹಾಯಕನಾದೆ. ರಾಜಮ್ಮನನ್ನು ಹೇಗೂ ಉಳಿಸಿಕೊಳ್ಳಲಾಗಲಿಲ್ಲ. ಬದುಕಿನ ಪಯಣದಲ್ಲಿ ಒಂಟಿಯಾದೆ! ಆ ದುಃಖ ಕಡಿಮೆಯಾದರೂ, ಆ ಶೂನ್ಯತೆಯನ್ನು ಹೇಗೂ ತುಂಬಲು ಸಾಧ್ಯವಿರಲಿಲ್ಲ. ಮತ್ತೂರಿನಲ್ಲಿ ರಾಜಮ್ಮನ ಭೌತಿಕ ದೇಹವು ತುಂಗಾನದೀ ತೀರದಲ್ಲಿ ಪ್ರಕೃತಿಯಲ್ಲಿ ವಿಲೀನವಾಯಿತು. ಅಲ್ಲಿ ಅಂತ್ಯೇಷ್ಟಿ ಮುಗಿದು ಹದಿನೈದನೆಯ ದಿನ ಬೆಂಗಳೂರಿನಲ್ಲಿ ನಡೆದ ಸಂತಾಪ ಸಭೆಗೆ ನಮ್ಮ ಅನೇಕ ಮಿತ್ರರು ಬಂದಿದ್ದು ರಾಜಮ್ಮನನ್ನು ನೆನೆದುಕೊಂಡದ್ದು ನಿಜಕ್ಕೂ ರಾಜಮ್ಮನ ಆತ್ಮಕ್ಕೂ ತುಂಬ ಸಮಾಧಾನ-ಶಾಂತಿಯನ್ನು ತಂದಿರಲೇಬೇಕು... ಇನ್ನು ಮುಂದೆ ರಾಜಮ್ಮನಿಲ್ಲದ ಬದುಕನ್ನು ನಾನು ನಡೆಸಬೇಕು ಎಂದು ಕೊಂಡಾಗ ಮನಸ್ಸು ಬಲು ಭಾರವಾಗುತ್ತಿದ್ದಿತು. ಆದರೆ ಭವನ? ಭವನವೂ-ಭವನದ ಕೆಲಸಗಳೂ ನನ್ನನ್ನು ಕ್ರಮೇಣ ಪೂರ್ಣವಾಗಿ ಆಕ್ರಮಿಸಿಕೊಂಡವು.

ಭವನದ ಕೆಲಸದ ಒತ್ತಡಗಳು, ನಾನು ತೆಗೆದುಕೊಂಡಿದ್ದ ಜವಾಬ್ದಾರಿಗಳು ನನ್ನನ್ನು ಸುಮ್ಮನೆ ಕೂರಲು ಬಿಡುವಂತಿರಲಿಲ್ಲ. ಮೈಸೂರಿನಲ್ಲಿ ನನ್ನ ಹಿತೈಷಿ–ಮಿತ್ರ ದಂಪತಿಗಳಾದ ವಿಶ್ವನಾಥ - ಸುಮನಾ ವಿಶ್ವನಾಥರು ಈ ಕೆಲಸದಲ್ಲಿ ನನಗೆ ಸಹಾಯ ಮಾಡುವುದಾಗಿ ಹೇಳಿದರು. ಪ್ರತಿ ಬುಧವಾರ ನಾನು ರಾತ್ರಿಯ ರೈಲಿಗೆ ಮೈಸೂರಿಗೆ ಬರುವುದು. ಗುರುವಾರ ಬೆಳಿಗ್ಗೆ ನಿಧಿ ಸಂಗ್ರಹಕ್ಕೆಂದು ಹೊರಟು ಭವನದ ಅಭಿಮಾನಿಗಳ ಮನೆಗಳಿಗೆ ಭೇಟಿ ನೀಡಿ ಅವರು ಒಪ್ಪಿಸಿದಷ್ಟನ್ನು ಕೃತಜ್ಞತೆಯಿಂದ ಪಡೆದು ಬರುವುದು ಎಂದಾಯಿತು.

ಸೆಪ್ಟೆಂಬರ್ ಮೊದಲವಾರದಿಂದ ಈ ಕಾರ್ಯಕ್ರಮ ಪ್ರಾರಂಭ ವಾದುದು ಮುಂದಿನ ಫೆಬ್ರವರಿಯ ತನಕ ತಪ್ಪದೆ ನಡೆಯಿತು. ಮೈಸೂರಿನ ಜನರ ಪ್ರೀತಿವಿಶ್ವಾಸದ ಕಾಣಿಕೆ ಹಾರೈಕೆಯಿಂದ ಭವನದ ಕಟ್ಟಡವು ಭರದಿಂದ ಮೇಲೇಳತೊಡಗಿತು. ಶ್ರೀಯುತರಾದ ಪ್ರೊ.ಎ. ವಿ. ನರಸಿಂಹಮೂರ್ತಿ, ಪಿ. ಎಸ್. ಗಣಪತಿಯವರ

*ಹೊಸದಾಗಿ ಸೇರಿಸಿದ ಭಾಗ

ಸಹಕಾರವೂ ದೊರೆತು ನಿಧಿ ಸಂಗ್ರಹಣೆಯೂ ತ್ವರಿತಗತಿಯಲ್ಲಿ ಸಾಗಿತು.

ಪುಟ್ಟದೊಂದು ಅರಮನೆಯ ಶೈಲಿಯಲ್ಲಿಯೇ ಇದ್ದ ಭವನದ ಸ್ವಂತ ಕಟ್ಟಡದ ಉದ್ಘಾಟನೆ ತಾ ೨೯.೦೬.೨೦೦೩ ರಂದು ವಿಜೃಂಭಣೆಯಿಂದ ನಡೆಯಿತು. ಕರ್ನಾಟಕದ ಖ್ಯಾತ ಶಿಲ್ಪಿ ಶ್ರೀಮತಿ ಕನಕಮೂರ್ತಿಯವರು ರೂಪಿಸಿದ ಭವನದ ಡೈರೆಕ್ಟರ್ ಜನರಲ್ ದಿ. ರಾಮಕೃಷ್ಣನ್‌ಜೀಯವರ ಎದೆಮಟ್ಟದ ಮೂರ್ತಿಯೊಂದನ್ನು ಭವನದ ಒಳಪ್ರಾಂಗಣದಲ್ಲಿ ಸ್ಥಾಪಿಸಲಾಯಿತು. ಶ್ರೀಮತಿ ಮೂರ್ತಿಯವರೇ ರೂಪಿಸಿದ ಗಾಂಧೀಜಿಯ ಪ್ರತಿಮೆಯನ್ನು ಪ್ರಮುಖದಾನಿಗಳಿಗೆ ನೀಡಿ ಗೌರವಿಸಲಾಯಿತು.

ಆ ವರ್ಷವೇ ಭವನದ ಶಾಲೆಯನ್ನು ಪ್ರಾರಂಭಿಸಬೇಕೆಂದಿರುವಾಗ, ಬೆಳ್ಳೂರಿನ ಹಿರಿಯ ದಂಪತಿಗಳಾದ ಶ್ರೀಮತಿ ಕಮಲಮ್ಮ-ಶ್ರೀಸುಬ್ಬಣ್ಣನವರ ಹೆಸರಿನಲ್ಲಿ ಭವನದ ಶಾಲೆಗೆಂದೇ ಸುಮಾರು ೧೨ಲಕ್ಷ ರೂ. ಗಳನ್ನು ದಾನಮಾಡಲು ಅವರ ಮಕ್ಕಳು-ಕುಟುಂಬ ವರ್ಗದವರು ಹೇಳಿದರು. 'ಬೆಳ್ಳೂರು ಕಮಲಮ್ಮ ಸುಬ್ಬಣ್ಣ ಭಾರತೀಯ ವಿದ್ಯಾಭವನ ಶಾಲೆ'ಯು ಪ್ರಾರಂಭವಾಗಿಯೇ ಬಿಟ್ಟಿತು. ಪುಟ್ಟಮಕ್ಕಳ ಮಾತು-ನಗು ಮರದಲ್ಲಿ ನೆಲಸಿದ ಪುಟ್ಟಹಕ್ಕಿಗಳ ಚಿಲಿಪಿಲಿಯ ಕಲರವದಂತೆ ಹಿತವಾಗಿ ಭವನದಲ್ಲಿ ಕೇಳಿಬರತೊಡಗಿತು. ಅಲ್ಲಿಯೇ ವಾರಾಂತ್ಯದ ಚಿತ್ರ, ಸಂಗೀತ, ನೃತ್ಯದ ತರಗತಿಗಳೂ ಪ್ರಾರಂಭವಾದವು... ಭವನದ ಸೇವೆಯಲ್ಲಿ ಇದೊಂದು ಮೈಲಿಗಲ್ಲು. ಬಹಳ ವರ್ಷಗಳಿಂದ ನನ್ನ ಸೇವಾವಧಿಯಲ್ಲಿ ಭವನದ ಶಾಲೆಯೊಂದನ್ನು ತೆರೆಯಬೇಕೆಂದು ಹಂಬಲಿಸಿದ್ದ ಕನವರಿಕೆ ಇದೀಗ ಪೂರ್ತಿಯಾಗಿತ್ತು! ಜೀವನ ಸಾರ್ಥಕವಾದಂಥ ಅನುಭವ ನಿಜಕ್ಕೂ ಆದಿನ ನನ್ನದಾಗಿತ್ತು.

ಭವನದ ಎಡಪಾರ್ಶ್ವಕ್ಕೆ ಇಂಡಿಯನ್ ಓವರಸೀಸ್ ಬ್ಯಾಂಕು ತನ್ನ ಶಾಖೆಯನ್ನು ತೆರೆದು ಭವನದ ವಹಿವಾಟಿಗೂ ಬೆಂಬಲವಾಯಿತು. ಅತ್ತ ಬೆಂಗಳೂರಿನಲ್ಲಿ ಎಂ.ಪಿ. ಬಿರ್ಲಾ ಫೌಂಡೇಷನ್‌ನ ಎಂ.ಬಿ.ಎ. ತರಗತಿಗಳು ಪ್ರಾರಂಭವಾಗಿದ್ದುವಷ್ಟೇ? ಜತೆಗೇ ಅಮೆರಿಕನ್ ಕಾರ್ನರ್ ಸಹ ಪ್ರಾರಂಭವಾಯಿತು. ಅದರೊಟ್ಟಿಗೆ ಅಮೆರಿಕದ ಮಾರ್ಷಲ್ ಯೂನಿವರ್ಸಿಟಿಯ ಸಹಯೋಗದೊಂದಿಗೆ ಹೊಸದಾಗಿ ಎಂ.ಬಿ.ಎ. ತರಗತಿಗಳನ್ನೂ ಪ್ರಾರಂಭಿಸಿದೆವು. ಅಮೆರಿಕದಲ್ಲಿ ಸಾಕಷ್ಟು ಅನುಭವ ಪಡೆದಿದ್ದ ನಮ್ಮ ಧಾರವಾಡದ ಪ್ರೊ. ಅಕ್ಕಿಹಾಲ್‌ರು ಇವುಗಳ ಜವಾಬ್ದಾರಿಯನ್ನು ಹೊತ್ತರು. ಭವನದ ಕೆಲಸಗಳು ಹೆಚ್ಚುತ್ತಿರುವಂತೆಯೇ, ಕುದುರೆಮುಖದ ಮೈನಿಂಗ್ ಯೋಜನೆಯಲ್ಲಿ ಕೆಲಸ ಮಾಡಿ ದಕ್ಷತೆಗೆ ಹೆಸರಾಗಿದ್ದ, ಅನುಭವಿಗಳಾದ ಶ್ರೀಕೃಷ್ಣಮೂರ್ತಿಯವರೂ ಭವನದ ಬಳಗಕ್ಕೆ ಕಾರ್ಯದರ್ಶಿಗಳಾಗಿ ಸೇರಿ ತಾವೂ ನಮ್ಮ ಕೈಗೆಕೈ ಸೇರಿಸಿದರು.

ಮೈಸೂರು ಭವನದ ಕಟ್ಟಡದ ವಿಸ್ತರಣೆಯ ಕೆಲಸವೂ ಪ್ರಾರಂಭವಾಗಿ ಅಲ್ಲಿಯೂ ಎಂ.ಬಿ.ಎ. ತರಗತಿಗಳನ್ನು ಪ್ರಾರಂಭಿಸುವ ಯೋಜನೆಯು ರೂಪುಗೊಂಡು ಶೀಘ್ರದಲ್ಲೇ ಅದೂ ಆಯಿತು. ಮೈಸೂರು-ಬೆಂಗಳೂರು ಕೇಂದ್ರಗಳು ಈಗ ಅನೇಕ ಚಟುವಟಿಕೆಗಳ ಕೇಂದ್ರಗಳಾಗಿರುವುದನ್ನು ಕಂಡರೆ ಹೃದಯ ತುಂಬಿಬರುತ್ತದೆ!

ಮೈಸೂರಿನ ಓಡಾಟದಲ್ಲಿ ಮಡಿಕೇರಿಯ ಅನೇಕ ಜನರ ಪರಿಚಯವಾಗಿ ಅಲ್ಲಿಯೂ ಒಂದು ಶಾಲೆಯನ್ನು ಭವನವು ವಹಿಸಿಕೊಳ್ಳುವಹಾಗಾದುದು ಈ ಎಲ್ಲ ಸಂತೋಷಗಳ ಜತೆಗೆ ಸೇರಿಕೊಂಡಿತು.

ಈ ಸಂತೋಷಗಳೆಲ್ಲದರ ಜತೆಗೆ, ಅದೊಂದು ದಿನ ನನಗೆ ಬಹುಶಃ ನನ್ನ ಜೀವನದಲ್ಲೇ ಎಲ್ಲಕ್ಕಿಂತಲೂ ಹಿರಿದಾದ ಆನಂದದ ಗಳಿಗೆಯೊಂದೂ ಬಂದಿತು! ಆದಿನ ನಾನು ಆಫೀಸಿಗೆ ಹೋದಾಗ ನನ್ನೂರು ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾನಿಲಯದಿಂದ ಪತ್ರವೊಂದು ಫ್ಯಾಕ್ಸ್‌ನಲ್ಲಿ ಬಂದಿದ್ದಿತು. ಅದನ್ನು ಓದಿ ನನ್ನ ಕಣ್ಣುಗಳನ್ನೇ ನಾನು ಅರೆಗಳಿಗೆ ನಂಬದಾದೆ! ಮತ್ತೆ ಮತ್ತೆ ಓದಿದೆ. ನಿಜಕ್ಕೂ ಅದು ನಿಜವಾದುದೇ ಆಗಿದ್ದಿತು... ಅದೇನಿರಬಹುದೆಂದು ನಿಮಗೂ ಕುತೂಹಲವಿರಬೇಕು ಅಲ್ಲವೇ? ಹಲವಾರು ಕಷ್ಟಗಳ ನಡುವೆ ಹಾಗೂ ಹೀಗೂ ಹತ್ತನೆ ತರಗತಿಯ ಓದಿಗೇ ನನ್ನ ವಿದ್ಯಾಭ್ಯಾಸವು ನಿಂತು ಹೋಗಿದ್ದಿತಷ್ಟೆ? ಕಾಲೇಜು ಮೆಟ್ಟಲು ಹತ್ತಲಾಗಲಿಲ್ಲವಲ್ಲ ಎನ್ನುವ ಕೊರಗು ಭವನದ ಎಂ.ಬಿ.ಎ. ತರಗತಿಗಳಿಗೆ ಬರುವ ಮಕ್ಕಳನ್ನು ಕಾಣುತ್ತ ಮರೆಯುತ್ತಿತ್ತು. ಆದರೆ ಈದಿನ ನನ್ನ ಜೀವನದಲ್ಲಿ ಅದಕ್ಕಿಂತಲೂ ಹೆಚ್ಚಾದ ಸಂತೋಷಕ್ಕೆ ನಾನು ಅರ್ಹನೆಂದು ದೈವ ನೆನಸಿದ್ದಿತೋ ಏನೋ... ಕುವೆಂಪು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ಡಾ. ಚಿದಾನಂದಗೌಡರು ಸಹಿ ಮಾಡಿದ್ದ ಪತ್ರದಲ್ಲಿ ಆ ವರ್ಷದ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ನನಗೆ 'ಡಿ.ಲಿಟ್.,' ಎಂದರೆ 'ಗೌರವ ಡಾಕ್ಟರೇಟ್' ಪದವಿ ನೀಡುತ್ತಿರುವುದಾಗಿಯೂ, ಅದಕ್ಕೆ ನನ್ನ ಒಪ್ಪಿಗೆಯನ್ನು ಸೂಚಿಸಬೇಕೆಂದೂ ಕೇಳಲಾಗಿದ್ದಿತು! ನನ್ನ ವಿನಯಪೂರ್ವಕವಾದ ಸಾಹಿತ್ಯ ಸೇವೆಗಾಗಿ ಈ ಗೌರವ ಎಂದು ಹೇಳಲಾಗಿದ್ದಿತು! ಹತ್ತನೇ ತರಗತಿಯಿಂದ ಆನರರಿ ಡಾಕ್ಟರೇಟ್ ಪದವಿಗೆ ಒಂದೇ ಬಾರಿಗೆ ಜಿಗಿದಂತೆ! ಕಣ್ಣುಗಳಲ್ಲಿ ನೀರು ತುಂಬಿ ದೈವಕ್ಕೆ ಮನವು ನಮಿಸಿತು. ಹುಟ್ಟಿದೂರಿನ ವಿಶ್ವವಿದ್ಯಾನಿಲಯವೇ ನನ್ನನ್ನು ಹೀಗೆ ಗುರುತಿಸಿದ್ದು ನನ್ನನ್ನು ಮತ್ತೂ ಭಾವೋದ್ವೇಗಕ್ಕೆ ಒಳಪಡಿಸಿತ್ತು!

೨೦೦೪ರ ಡಿಸೆಂಬರ್ ೨೫ರಂದು ನಾನು ನನ್ನ ಕಿರುಸೇವೆಗಾಗಿ ದಯಪಾಲಿಸಿದ ಆ ಗೌರವವನ್ನು ಶಿರಬಾಗಿ, ವಿನಮ್ರವಾಗಿ, ಗೌರವಪೂರ್ವಕವಾಗಿ ಸ್ವೀಕರಿಸಿದೆ. ಅದರ ಶ್ರೇಯಸ್ಸೆಲ್ಲವನ್ನೂ ತಾಯಿ-ತಂದೆ, ಅಣ್ಣಂದಿರಿಗೆ, ಗುರುವರ್ಯರಿಗೆ ಅರ್ಪಿಸಿದೆ. ನನ್ನ ಶ್ರೀಮತಿಯ ನೆನಪಾಗಿ ಕಣ್ತುಂಬಿ ಬಂದಿತು! ಇದಾದ ಹದಿನೈದು ದಿವಸಗಳಲ್ಲಿ ಒಂದು ಆತಂಕವೂ ಆಯಿತು.

ಆ ಸಮಯದಲ್ಲೇ ನನ್ನ ಆರೋಗ್ಯವೂ ಸ್ವಲ್ಪ ಏರುಪೇರಾಗಿ

ಒಕ್‌ಹಾರ್ಡ್ಟ್ ಆಸ್ಪತ್ರೆಗೆ ಸೇರಬೇಕಾಯಿತು. ಆಗ ಪೇಸ್ ಮೇಕರ್ ಅಳವಡಿಸಿದರೆ ನನ್ನ ಆರೋಗ್ಯ ಹೆಚ್ಚು ಸುಧಾರಿಸುವುದೆಂದು ತಿಳಿಯಿತು. ನುರಿತ ತರುಣ ವೈದ್ಯಮಿತ್ರ ಡಾ|| ಜಯಪ್ರಕಾಶ್‌ರು ಪೇಸ್‌ಮೇಕರನ್ನು ಯಶಸ್ವಿಯಾಗಿ ಅಳವಡಿಸಿದರು. ನನ್ನೊಳಗೆ ಬಂದು ಹೊಸದಾಗಿ ಸೇರಿಕೊಂಡಿರುವ ಈ ಪುಟಾಣಿ ಯಂತ್ರವು ನನ್ನ ಚಟುವಟಿಕೆಗಳಿಗೆ ತನ್ನ ಸಮರ್ಥ ಬೆಂಬಲ ನೀಡುತ್ತ ನನ್ನಲ್ಲಿ ಹೊಸಶಕ್ತಿಯನ್ನೇ ತುಂಬಿದೆ ಎನ್ನಬೇಕು! ಡಾ. ಜಯಪ್ರಕಾಶರಿಗೆ ನನ್ನ ವಂದನೆಗಳು.

೨೦೦೪-೨೦೦೫ರ ಸಮಯದಲ್ಲಿ ಯೋಗಾಯೋಗವೋ ಎಂಬಂತೆ ಶ್ರೀಮತಿ ಸುಶೀಲಾ ಅಯ್ಯಂಗಾರ್ ಎಂಬುವರ ಪರಿಚಯವಾಯಿತು. ಅವರು ಭವನದ ಅಭಿಮಾನಿಗಳು. ಪೆಟ್ರೋಲ್‌ಬಂಕ್‌ವೊಂದರ ಮಾಲೀಕರಾದ ಅವರು ಬೆಂಗಳೂರು ದಕ್ಷಿಣದ ಬಸವನಗುಡಿಯಲ್ಲಿದ್ದ ತಮ್ಮ ಕಟ್ಟಡದಲ್ಲಿನ ಒಂದು ಮಹಡಿಯನ್ನು ಭವನಕ್ಕೆ ಕೊಡುವುದಾಗಿಯೂ, ಭವನವೂ ಅವರು ಎಂ.ಬಿ.ಎ. ತರಗತಿಗಳನ್ನು ನಡೆಸಲು ಸಹಾಯ ಮಾಡುವುದಾಗಿಯೂ ಮಾತುಕತೆ ನಡೆದು ಗೃಹಪ್ರವೇಶವೂ ಆಯಿತು. ಈಗ ತರಗತಿಗಳು ಅಲ್ಲಿ ನಡೆಯುತ್ತಿದ್ದು ಬೆಂಗಳೂರು ದಕ್ಷಿಣ ಕೇಂದ್ರವು ಸಾಕಷ್ಟು ಜನರ ಗಮನ ಸೆಳೆದಿದೆ. ಸುತ್ತಮುತ್ತಲಿನ ಜನಗಳ ಪ್ರೀತಿಗಳಿಸಿದೆ. ಇದೇ ರೀತಿ ಬೆಂಗಳೂರಿನಲ್ಲಿ ಇನ್ನುಳಿದ ಮೂರು ದಿಕ್ಕುಗಳಲ್ಲೂ ಭವನದ ಶಾಖೆಗಳನ್ನು ತೆರೆಯಬೇಕೆನ್ನುವ ಆಸೆ ಇದೆ. ಶ್ರೀಕೃಷ್ಣನು ಸಹಾಯ ಮಾಡಬೇಕು!

ದಿನಗಳು ನಿಮಿಷಗಳಂತೆ ಹಾರಿಹೋಗುತ್ತಿದ್ದವು. ಬಳ್ಳಾರಿಯಲ್ಲಿನ ಭವನದ ಅಭಿಮಾನಿಗಳ ಜತೆ ಮಾತು ನಡೆದು ಅಲ್ಲಿಯವರು ಭವನಕ್ಕಾಗಿ ಮೂರು ಎಕರೆ ಭೂಮಿಯನ್ನು ದಾನ ಮಾಡಿದರು. ಈಗ ಅಲ್ಲಿ ಆ ನಿವೇಶನವನ್ನು ದೊಡ್ಡದಾದ ಕಾಂಪೌಂಡ್ ಸುತ್ತುವರೆದಿದೆ. ಕಟ್ಟಡವು ಏಳಬೇಕಿದೆ. ಅಂತೆಯೇ ನಮ್ಮ ಭವನದ ಡಾ. ಅಕ್ಕಿಹಾಲ್‌ರೇ ಮೂರು ಎಕರೆ ಭೂಮಿಯನ್ನು ಭವನಕ್ಕಾಗಿ ಅವರೂರಾದ ಧಾರವಾಡದಲ್ಲಿ ನೀಡಿದ್ದಾರೆ. ಅಲ್ಲಿಯೂ ಕೆಲಸ ಪ್ರಾರಂಭವಾಗಬೇಕು. ಶಿವಮೊಗ್ಗದಲ್ಲಿ ಕೇಂದ್ರ ತೆರೆಯಲು ಮಾತುಕತೆಗಳು ಜಾರಿಯಾಗಿವೆ. ಹಾಗೆಯೇ ಹಾಸನದಲ್ಲಿಯು ಸಹ. ಅಂತೂ ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಭವನದ ಕೇಂದ್ರಗಳು ನೆಲೆಯಾಗಬೇಕು ಎನ್ನುವ ಕನಸು ನನಸಾಗುವ ದಾರಿಯಲ್ಲಿದೆ! ಎಲ್ಲವೂ ಭವನದ ಅಭಿಮಾನಿಗಳ ಮತ್ತು ದೇವರ ಕೃಪೆ.

ಭವನದ ಪುಸ್ತಕ ವಿಭಾಗದ ಕೆಲಸಗಳೂ ಚೆನ್ನಾಗಿ ನಡೆದು ಬೆಂಗಳೂರಿನಲ್ಲಿ ಒಂದು ಪುಸ್ತಕ ಮಳಿಗೆಯೂ ಪ್ರಾರಂಭವಾಯಿತು. ಭವನದ ನಿರಂತರ ಹಿತೈಷಿಗಳೂ, ನಮ್ಮ ಬಡೀಮಾರಂತೆ ಔದಾರ್ಯದ ಮೂರ್ತಿಯೂ ಆಗಿರುವ ಶ್ರೀ ಹರ್‌ಕಿಶೋರ್ ಕೇಜ್ರೀವಾಲ್‌ರು ಕನ್ನಡದ ಸಾಹಿತಿಗಳ ಜೀವನಚರಿತ್ರೆಯನ್ನು ಪುಟಾಣಿ ಪುಸ್ತಕದ ರೂಪದಲ್ಲಿ ಅವರ ಫೌಂಡೇಶನ್ ವತಿಯಿಂದ ತರಬೇಕೆಂದು ಬಯಸಲಾಗಿ ಆ ಯೋಜನೆ ಜಾರಿಯಾಯಿತು. ಈವರೆಗೆ ಆ ಮಾಲಿಕೆಯಲ್ಲಿ ಎಂಟು ಮಂದಿ ಸಾಹಿತಿಗಳ ಪುಸ್ತಕಗಳು ಬಂದಿವೆ. ಶ್ರೀ ಕೇಜ್ರೀವಾಲ್‌ರಿಗೆ ಭವನವು ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಪ್ರಿಯ ಓದುಗರೇ, ಇವು ಇಷ್ಟು, ನಾನು ವಿದ್ಯಾಭವನದ ನಮ್ರ ಸೇವಕನಾಗಿ ಸೇವೆ ಸಲ್ಲಿಸಿದುದು, ಅದಕ್ಕೆ ಜನರು ತಮ್ಮ ಸಹಾಯ-ಸಹಕಾರ ನೀಡಿದುದು, ಕೈಗೆ ತೆಗೆದುಕೊಂಡ ಕೆಲಸಗಳು, ಮನಸ್ಸಿನ ಸಂಕಲ್ಪಗಳು, ಮಾಡಿದ ಸಾಹಸಗಳ ವಿವರ ಆಯಿತು... ನಿಜ... ನನ್ನ ಉಸಿರು 'ವಿದ್ಯಾಭವನ',

'ಅನ್ಯಥಾ ಶರಣಂ ನಾಸ್ತಿ, ತ್ವಮೇವ ಶರಣಂ ಮಮ'

ಎಂದು ನಾನು ಮಣಿದು, ಸೇವೆ ಮಾಡಿದುದು ವಿದ್ಯಾಭವನಕ್ಕೆ.

ತಮಿಳು ಕೃತಿಗಳ ಅನುವಾದ

ಮೊದಲಿನಿಂದಲೂ ನಾನು ಬರಹಗಾರನಾಗಬೇಕು ಎನ್ನುವುದು ಮನಸ್ಸಿನ ಆಸೆಯಾಗಿತ್ತು ಎಂದು ಹೇಳಿರುವನಷ್ಟೇ? ಅದಕ್ಕೆ ಕಲ್ಕಿಯವರ ಕೃತಿಯನ್ನು 'ಅಲೆಯೊಸಗೆ'ಎಂದು ಅನುವಾದಿಸಿದುದೇ ಅಂಕುರಾರ್ಪಣ! ಅನಂತರ, ನಾನು ಮದ್ರಾಸಿನಲ್ಲಿದ್ದಾಗಲೇ 'ಸುಗುಣವಿಲಾಸ ಕ್ಲಬ್' ಸದಸ್ಯನಾಗಿದ್ದುದರಿಂದ ಅಲ್ಲಿನ ನನ್ನ ಕೆಲವು ಮಿತ್ರರು ನನಗೆ ಕನ್ನಡ-ತಮಿಳು ಎರಡೂ ಭಾಷೆಗಳೂ ಚೆನ್ನಾಗಿ ಬರುವುದೆಂದು ತಿಳಿದು ತಮಿಳಿನ 'ಪ್ರತಾಪ ಮುದಲಿಯಾರ್ ಚರಿತ್ರಂ' ಎನ್ನುವ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸಲು ಹೇಳಿ ಪ್ರೋತ್ಸಾಹಿಸಿದರು. ಅದನ್ನು ಅನುವಾದಿಸಿದಾಗ, ಅಲ್ಲಿ ಸರ್ಕಾರದ 'ಸದರ್ನ್ ಲ್ಯಾಂಗ್ವೇಜ್ ಬುಕ್ ಟ್ರಸ್ಟ್ ಪಬ್ಲಿಕೇಷನ್' ಪುಸ್ತಕಗಳನ್ನು ಪ್ರಕಟಿಸುತ್ತಿದ್ದು, 'ಪ್ರತಾಪ ಮುದಲಿಯಾರ್ ಚರಿತ್ರೆ'ಯನ್ನೂ ಅವರೇ ಪ್ರಕಟಿಸಿದರು. ಅದನ್ನು ಬಹಳ ಜನ ಮೆಚ್ಚಿಕೊಂಡರು.

ಅನಂತರ ಏಕೋ ಸ್ವಲ್ಪ ಬೇರೆಯೇ ರೀತಿಯ ಸಾಹಿತ್ಯ ರಚನೆ ಮಾಡಬೇಕೆನ್ನಿಸಿ 'ಪಾತಾಳದಲ್ಲಿ ಪಾಪಚ್ಚಿ' ಎನ್ನುವ, ಸಣ್ಣ ಮಗುವೊಂದು ಹಕ್ಕಿಯ ರೀತಿ, ಹಾರಾಡುವ ಕನಸು ಕಾಣುವ ಕಥಾ ವಿಷಯ ಇರುವ ಪುಸ್ತಕ ಬರೆದೆ. ಅನಂತರ 'ಸಂಯುಕ್ತ ಕರ್ನಾಟಕ' ಪತ್ರಿಕೆ ಸೇರಿದನಂತರ ಬರವಣಿಗೆ ಸ್ವಲ್ಪ ಸುಲಭ ಎನಿಸಿತು. ದಿನನಿತ್ಯ ಬರೆಯುವುದೇ ಕೆಲಸವಾದಾಗ ವಿವಿಧ ವಿಷಯಾವಳಿಗಳಿದ್ದರೆ ಬರೆಯುವುದಕ್ಕೆ ಕಷ್ಟವೆನಿಸದು ಅಲ್ಲವೇ? ಆಗಲೇ ನಾನು ಅನುವಾದಿಸಿದ 'ಅಲೆಯೊಸಗೆ' ಧಾರಾವಾಹಿಯಾಗಿ ಬಂದು ಬಹಳ ಜನಪ್ರಿಯವಾಯಿತು. ಅದರ ನಂತರ ತಮಿಳಿನಿಂದ ಅನುವಾದಿಸಿದ ಕೃತಿ 'ಡಾ|| ಅಖಿಲಾ', ಅದು'ಅವಳಿ ಸೋದರಿಯರು' ಎಂಬ ಧಾರಾವಾಹಿಯಾಗಿ ಬಂದು ಬಹಳ ಜನಪ್ರಿಯವಾಯಿತು. ಅಂತೂ ಒಟ್ಟಾರೆ ಈವರೆಗೆ ಬರಹಗಾರನಾಗಿ ಸುಮಾರು ನಲವತ್ತು ಪುಸ್ತಕಗಳನ್ನು ರಚಿಸಿದ್ದೇನೆ.

ಅದು ಅನುವಾದ, ಸ್ವಂತ ರಚನೆ, (ಅವುಗಳಲ್ಲಿ ಇಂಗ್ಲಿಷ್ ಪುಸ್ತಕಗಳೂ ಸೇರಿ) ಮಹಾಕಾವ್ಯಗಳ ಮೇಲೆ, ಇತ್ಯಾದಿಯಾಗಿ ಇವೆ. ಅಷ್ಟಾದರೂ ನಾನು ಬರೆದ ಒಂದು ಕಥೆಯ ಬಗ್ಗೆ ನನ್ನ ಓದುಗರಿಗೆ ಹೇಳಬೇಕೆಂದು ನನ್ನ ಆಸೆ.

ಡಾ. ಮಾಸ್ತಿಯವರ ಸನ್ನಿಧಿ

ಒಮ್ಮೆ ಆಗಿನ ವಾರಪತ್ರಿಕೆ 'ಪ್ರಜಾಮತ'ಕ್ಕೆ ದೀಪಾವಳಿ ವಿಶೇಷಾಂಕಕ್ಕೆ ಒಂದು ಕಥೆ ಬರೆದು ಕಳುಹಿಸಿದೆ. ಅದು ಸತ್ಯ ಘಟನೆ ಯೊಂದರ ಆಧಾರಿತ ಕತೆ.

ಮೊದಲಿನಿಂದಲೂ ಮಾಸ್ತಿಯವರ ಕತೆಗಳು ನನಗೆ ಇಷ್ಟ. ಅವರ ಶೈಲಿ ಬಲು ಚೆನ್ನ. ಅವರು ಯಾವ ಕತೆಯನ್ನೇ ಬರೆಯಲಿ, ಆ ಪಾತ್ರಗಳು ನಮ್ಮ ಮನೆಯಲ್ಲಿ... ಒಳಗಡೆ... ಅಲ್ಲಿ... ಅಡುಗೆ ಮನೆಯಲ್ಲಿ ಹಜಾರದಲ್ಲಿ, ರೂಮಿನಲ್ಲಿ ಇರುವವೋ ಎಂದೇ ಭಾಸವಾಗುತ್ತದೆ! ಆ ಕತೆಗಳು ಓದುಗರಲ್ಲಿ ಅಷ್ಟು ಒಂದಾಗಿ ಹೋಗುತ್ತವೆ. ಅದಕ್ಕೇ ನನಗೆ ಅವರ ಬರಹ ಬಹಳ ಇಷ್ಟವಾಗುತ್ತಿದ್ದುದು.

ಲಂಡನ್‌ನಲ್ಲಿದ್ದಾಗ ಒಮ್ಮೆ ಅವರ ಮೊಮ್ಮಗಳು ವಸಂತಶ್ರೀ ಯವರ ಮನೆಗೆ ಹೋಗಿದ್ದೆ. ಅವರು ಮಾಸ್ತಿಯವರ 'ಶೇಷಮ್ಮ' ಪುಸ್ತಕವನ್ನು ಓದಲು ಕೊಟ್ಟರು. ಅವರ ಮನೆಯಲ್ಲಿ ಆ ದಿನ ರಾತ್ರಿ ಊಟ ಮಾಡಿಕೊಂಡು ಲಂಡನ್‌ಗೆ ವಾಪಸು ಹೊರಟೆ. ದಾರಿಯಲ್ಲಿ, ರೈಲಿನಲ್ಲಿ ಓದುತ್ತ ಬಂದು ಮನೆ ಸೇರಿದೆ. ಮಲಗಲು ಹೋದೆ. ದಿನವಿಡೀ ಕಾರ್ಯಕ್ರಮಗಳು ಇದ್ದುದರಿಂದ ಬಹಳ ದಣಿವಾಗಿತ್ತು. ಆದರೆ ಆ ದಿನ ಮಲಗಿದರೂ ಕಣ್ಣು ಮುಚ್ಚಲೊಲ್ಲದು. ಕೂಡಲೆ ಪುಸ್ತಕ ತೆಗೆದುಕೊಂಡು ಓದಲು ಪ್ರಾರಂಭಿಸಿದೆ. ಓದುತ್ತ ಓದುತ್ತ ಹೋದಂತೆ ಕಣ್ಣಿನಿಂದ ನೀರು ಧಾರಾಕಾರವಾಗಿ ಹರಿದು, ತಲೆ ದಿಂಬು ಒದ್ದೆಯಾಯಿತು! ರಾತ್ರಿ ಸುಮಾರು ಎರಡೂ ಮುಕ್ಕಾಲರ ವೇಳೆಗೆ ಓದಿ ಮುಗಿಸಿದನಂತರವೇ ನನಗೂ ಒಂದು ರೀತಿ ಸಮಾಧಾನ ಎನಿಸಿದುದು. ಅಂಥ ಶೈಲಿ, ಮನೋಜ್ಞ ನಿರೂಪಣೆ ! ಅದರಲ್ಲಿ ಆ ಕಥಾವಸ್ತು ಅಬ್ಬಾ! ಅದೇನು ಶಕ್ತಿ ಅವರ ಬರಹಕ್ಕೆ...! ಹೀಗೆ ಕತೆ ಬರೆದರೆ ಮನ ಮುಟ್ಟುವಂತಿರ ಬೇಕು, ಎನಿಸಿತು. ಆದರೆ ನನ್ನ ಈ ಕತೆಯಲ್ಲಿ ಅದೇ ಛಾಯೆ ಇದ್ದುದನ್ನು ನಾನೇ ಗಮನಿಸಿರಲಿಲ್ಲ. ಅದು ಹೇಗೋ ಮಾಸ್ತಿಯವರ ಶೈಲಿಯಿಂದ ನಾನು ಪ್ರಭಾವಿತನಾದುದು ಅದೇ ಭಾವ, ಅದೇ ಸೊಗಡು ನನ್ನ ಈ ಕತೆಯಲ್ಲಿಯೂ ಇದ್ದುದೂ ಒಂದು ಸಂಯೋಗ ಎಂದೇ ಹೇಳಬೇಕು!

ನಾನು ಲಂಡನ್‌ನಿಂದ ಬಂದಾಗಲೆಲ್ಲ ಮಾಸ್ತಿಯವರಲ್ಲಿಗೆ ಹೋಗಿ ಮಾತನಾಡಿ, ನಮಸ್ಕರಿಸಿ ಬರುವುದಿತ್ತು. ಆ ಸಾರಿ ನಾನು ಬಂದಾಗ ಮಾಸ್ತಿಯವರು ಹಾಸಿಗೆ ಹಿಡಿದಿದ್ದಾರೆ ಎಂದು ತಿಳಿಯಿತು. ಕೂಡಲೇ ಅವರ ಮನೆಗೆ ಹೋದ ನಾನು, ನೇರವಾಗಿ ಮಾಸ್ತಿಯವರು ಮಲಗಿದ್ದಲ್ಲಿಗೇ ಹೋದೆ, "ಸರ್...ಸರ್, ನಾನು ಮತ್ತೂರು ಕೃಷ್ಣಮೂರ್ತಿ... ಬಂದಿದ್ದೇನೆ, ಹೇಗಿದ್ದೀರಿ ನೀವು?" ಎಂದು ಸ್ವಲ್ಪ ಜೋರಾಗಿಯೇ ಅವರ ಕಿವಿಯ ಬಳಿ ಹೇಳಿದೆ. ಕಣ್ಣು ತೆರೆದು ನನ್ನನ್ನು ನೋಡಿದ ಅವರು, ಏನೋ ಹೇಳಲು ಬಹಳವಾಗಿ ಪ್ರಯತ್ನಿಸಿದರು, ಮಾತು ಹೊರಬರಲಿಲ್ಲ. ಅವರಿಗೆ ನಾನು ಗುರುತಾದೆ ಎಂದು ತಿಳಿದು ನನಗೆ ಬಹಳ ಸಮಾಧಾನವಾಯಿತು. ಆ ಹಿರಿಯ ಜೀವ ನಮ್ಮನ್ನಗಲುವ ಮುನ್ನ ನೋಡಿ ಮಾತನಾಡಿಸಿದ ತೃಪ್ತಿ, ಸಮಾಧಾನ ನನಗೂ ಸಿಕ್ಕಿತ್ತು... ಮಾಸ್ತಿಯವರು ಮತ್ತೆ ಏನನ್ನೋ ಹೇಳಲು ಪ್ರಯತ್ನಿಸಿದರು, ಆಗಲೂ ಸಾಧ್ಯವಾಗಲಿಲ್ಲ. ಕೊನೆಗೆ ಬಹಳ ಸಣ್ಣಗಾಗಿ ಕೃಶವಾಗಿದ್ದ ತಮ್ಮ ಕೈಯನ್ನೆತ್ತಿ ತಮ್ಮೆಡೆಗೆ ಸೋಕಿಸಿಕೊಂಡು, ಕೈ ತೆಗೆದು ಗಾಳಿಯಲ್ಲಿ ಅಲ್ಲಾಡಿಸಿ ಮತ್ತೆ ಕೈಯನ್ನು ಎದೆಗೆ ಸೋಕಿಸಿಕೊಂಡು ಆಶೀರ್ವಾದ ಮಾಡುವವರಂತೆ ಸನ್ನೆ ಮಾಡಿದರು. ಮೊದಲು ನನಗೆ ಏನು ಹೇಳುತ್ತಿದ್ದಾರೆ ಎಂದು ತಿಳಿಯಲಿಲ್ಲ. ಮತ್ತೊಮ್ಮೆ ಅವರು ಹಾಗೆಯೇ ಮಾಡಿದಾಗ ಥಟ್ಟನೆ ಹೊಳೆಯಿತು. ಅದರ ಅರ್ಥ, "ಕೃಷ್ಣಮೂರ್ತಿ, ಈ ಜೀವ ಹೋದ ಮೇಲೆ ಜನ, ಇವನು ಇದ್ದ, ಪರವಾಗಿಲ್ಲ, ಒಳ್ಳೆಯ ಬದುಕು ನಡಸಿಹೋದ ಎನ್ನುತ್ತಾರೆಯೇ?" ಎಂದು... ಹೀಗೆ ಅವರು ಸನ್ನೆ ಮಾಡಿ ನನ್ನನ್ನು ಕೇಳಿದ್ದರು. ನನಗೆ ಕಣ್ಣಲ್ಲಿ ನೀರು ತುಂಬಿತು. ಮೊದಲೇ ಸಪೂರವಾಗಿದ್ದ ಶರೀರ ಕಾಯಿಲೆಯಿಂದ ಮತ್ತೂ ಕೃಶವಾಗಿ ಹೋಗಿ, ಹತ್ತಿಯಂತೆ ಹಗುರವಾಗಿ ಹಾಸಿಗೆಗೆ ಹತ್ತಿಕೊಂಡಂತಿತ್ತು. ಆ ನಡುಗುವ ಸಣ್ಣ ಕೈಯನ್ನು ಹಿಡಿದುಕೊಂಡ ನಾನು ಗದ್ಗದಿತನಾಗಿಯೇ "ಏನು ಸರ್, ಹೀಗೆ ಹೇಳುತ್ತೀರಿ ನೀವು? ನೀವು ನಮ್ಮ ಮಧ್ಯೆ ಇದ್ದುದೇ ಒಂದು ಮಹಾಭಾಗ್ಯ ಅಲ್ಲವೇ? ನಿಮ್ಮನ್ನು 'ಪರವಾಗಿಲ್ಲ, ನಾಲ್ಕು ಜನಕ್ಕೆ ಉಪಕಾರಿಯಾಗಿ ಒಳ್ಳೆಯ ಬದುಕು ನಡೆಸಿದರು' ಎನ್ನದೆ ಮತ್ತಾರನ್ನು ಹೇಳಲು ಸಾಧ್ಯ? ನಿಮ್ಮ ಸಾಹಿತ್ಯ ನಮಗೆಲ್ಲ ಎಂತಹಾ ಅಮೂಲ್ಯ ಆಸ್ತಿಯಾಗಿದೆ ಸರ್... ಅದು ಸಾಲದೇ? ಮತ್ತೇನು ಬೇಕು?" ಎಂದೆ. ಆವಶ್ಯಕತೆಗಿಂತಲೂ ಹೆಚ್ಚಾಗಿಯೇ ಮಾತನಾಡಿದ್ದೆ, ನನಗೂ ಹಾಗೆನ್ನಿಸಿತು, ಆದರೆ ಆ ಮಾತುಗಳನ್ನಾಡಿ ನನಗೆ ತೃಪ್ತಿಯಾಗಿತ್ತು! ಈಗ ಮಾಸ್ತಿಯವರನ್ನು ನೆನೆಯುತ್ತಲೇ ನನ್ನ ಕತೆಯ ಸಾರಾಂಶ ನಿಮಗೆ ಹೇಳುತ್ತೇನೆ!

ಕೃಷ್ಣಶಾಸ್ತ್ರಿಯ ಗೃಹತ್ಯಾಗ

ಆ ಕತೆಯ ಹೆಸರು 'ಕೃಷ್ಣಶಾಸ್ತ್ರಿಯ ಗೃಹತ್ಯಾಗ'. ಅದರ ಸಾರಾಂಶವನ್ನು ಕೆಲವೇ ಸಾಲುಗಳಲ್ಲಿ ನಿಮಗಾಗಿ ಹೇಳಬೇಕಿದೆ. ಏಕೆಂದರೆ ಆ ಕತೆ ಎಷ್ಟು ಸ್ವಾರಸ್ಯಕರ! ಅದರ ಅಂತರಾರ್ಥ, ಮನುಷ್ಯನು 'ತ್ಯಾಗ ಮಾಡುವೆ' ಎಂದುಕೊಂಡಷ್ಟು ಸುಲಭವಾಗಿ ಏನನ್ನೂ ತ್ಯಾಗ ಮಾಡಲಾಗದು. ವೈರಾಗ್ಯವಾಗಲೀ, ಅದು ಪ್ರೇರೇಪಿಸಿದ ತ್ಯಾಗವಾಗಲೀ ಆತ್ಮಸಂಯಮದ ಪ್ರತಿಫಲ. ಸಂಯಮ ಸಾಧಿಸುವುದು ಎಲ್ಲರಿಂದಲೂ

ಸಾಧ್ಯವಿಲ್ಲ ಅಲ್ಲವೇ?

ಕೃಷ್ಣಶಾಸ್ತ್ರಿ ಬ್ರಾಹ್ಮಣ ಕುಟುಂಬದ ಮಧ್ಯಮವರ್ಗದ ಸಂಸಾರಿ. ನಾಲ್ಕು ಮಕ್ಕಳ ತಂದೆ. ಮನಸ್ಸಿಗೆ ವೈರಾಗ್ಯ ಬಂದಿದೆ ಎಂದು ಭ್ರಮಿಸಿ ಮನೆ ಬಿಟ್ಟು ಹಿಮಾಲಯಕ್ಕೆ ಹೊರಡುತ್ತಾನೆ. ಹಾಗೆ ಹೊರಡುವ ಮುಂಚೆ ಒಂದು ವಿಶೇಷ ಸಂಸ್ಕಾರವಿದೆ. ಅದು 'ಘಟಶ್ರಾದ್ಧ'. ಹಾಗೆ ಸಂಸಾರ ಬಿಟ್ಟು ಸಂನ್ಯಾಸಿಯಾಗುವವನು, ತನ್ನ ಶರೀರಕ್ಕೆ ತಾನೇ ಶ್ರಾದ್ಧ ಮಾಡಿಕೊಂಡು 'ಪ್ರೇತ' ಎನಿಸುತ್ತಾನೆ. ಅನಂತರವೇ ಅವನು ಸಂಸಾರ ಬಿಟ್ಟು ಸಂನ್ಯಾಸಿಯಾಗಲು ಅರ್ಹತೆ ಪಡೆಯುವುದು. ಅಲ್ಲಿಗೆ, ಶರೀರಕ್ಕೆ ಸಂಬಂಧಿಸಿದ ಮೋಹ, ಆಸೆ, ಕಾಮಗಳು ಅವನನ್ನು ಬಾಧಿಸುವಂತಿಲ್ಲ, ಅದಕ್ಕೆ ಕೊನೆ ಎಂದರ್ಥ. ಹೀಗೆ ಘಟಶ್ರಾದ್ಧ ಮಾಡಿಕೊಂಡ ಕೃಷ್ಣಶಾಸ್ತ್ರಿ ಹಿಮಾಲಯಕ್ಕೆ ನಡೆದ. ಮಡದಿ-ಮಕ್ಕಳು ಮೂಕಪ್ರೇಕ್ಷಕರಾಗಿ ಅವನನ್ನು ಬೀಳ್ಕೊಡುತ್ತಾರೆ.

ಇತ್ತ ಹಿಮಾಲಯಕ್ಕೆ ಹೋದ ಕೃಷ್ಣಶಾಸ್ತ್ರಿಗೆ ಮೂರ್‍ನಾಲ್ಕು ವರ್ಷಗಳನಂತರ ಮಡದಿ-ಮಕ್ಕಳ ನೆನಪಾಗುತ್ತದೆ. ಯಾವುದೂ ಅವನ ಮನಸ್ಸನ್ನೇ ಸಮಾಧಾನಗೊಳಿಸದೆ ಮನೆಯ ದಾರಿ ಹಿಡಿದು, ಹಳ್ಳಿಗೆ ಬರುತ್ತಾನೆ. ಊರೆಲ್ಲ ಮಲಗಿದೆ. ಮಧ್ಯರಾತ್ರಿಗೆ ಬಂದ ಅವನಿಗೆ ಹೆಂಡತಿಯ ರೂಮು ಯಾವುದೆಂದು ತಿಳಿದಿದೆ. ಬಾಗಿಲು ಬಡಿದ, 'ನಾನು ಬಂದಿದ್ದೇನೆ' ಎಂದ. ಪತ್ನಿ ಬಾಗಿಲು ತೆರೆದಳು. ಪತಿಯನ್ನು ಕಂಡು ಅವಾಕ್ಕಾದಳು! ಮನಸ್ಸಿನ ಚಂಚಲತೆಯನ್ನು ತಿಳಿಸಿದ, ಆಸೆಯನ್ನು ಹೇಳಿಕೊಂಡ. ಆ ಸಾಧ್ವಿ ಪತಿಯನ್ನು ನಿರಾಕರಿಸುವಳಾದರೂ ಹೇಗೆ? ಸಮ್ಮತಿಸಿದಳು.

ರಾತ್ರಿ ಮೂರರ ಸಮಯ. ತಪ್ಪು ಮಾಡಿದ್ದಾಗಿದೆ. ಈಗ ಕೃಷ್ಣಶಾಸ್ತ್ರಿ ಘಟಶ್ರಾದ್ಧ ಮಾಡಿಕೊಂಡಿರುವವ ಪ್ರೇತ, ಅವನ ಜತೆ ಪತ್ನಿ ಸೇರುವಂತಿರಲಿಲ್ಲ. ಹಾಗೆ ಸೇರಿದರೆ ಮಹಾಪಾಪ, ಭೀಕರ ಕರ್ಮ ಅದು! ಸತಿ - ಪತಿಯರು ಕುಳಿತು ಆಲೋಚಿಸುತ್ತಾರೆ. ಬೆಳಕು ಹರಿದರೆ ಊರು ಎಚ್ಚರಗೊಳ್ಳುತ್ತದೆ. 'ಬಯಕೆ' ಬಯಲಾಗಿ, ಪರಿಣಾಮ ಭಯಂಕರ ವಾಗುತ್ತದೆ. ಇಬ್ಬರೂ ಏನನ್ನೋ ನಿರ್ಧರಿಸಿದವರಂತೆ ಮನೆ ಬಿಟ್ಟು ಹೊರ ನಡೆದು ಗಂಗಾನದಿಯ ದಡಕ್ಕೆ ಹೋಗಿ ತಮ್ಮ ಪಂಚೆ-ಸೀರೆಯನ್ನು ಗಂಟು ಹಾಕಿಕೊಂಡು ಪ್ರೀತಿ ಶಾಶ್ವತವಾಗಿದ್ದರೆ ಮುಂದಿನ ಜನ್ಮದಲ್ಲಿ ಮತ್ತೆ ಸೇರೋಣ ಎಂದು ದೇವರಲ್ಲಿ ಪ್ರಾರ್ಥಿಸಿ ಗಂಗಾಮಾತೆಯ ಮಡಿಲಿನಲ್ಲಿ ಲೀನವಾಗುತ್ತಾರೆ!

ಇದು ಆ ಕತೆಯ ಸಾರಾಂಶ. ಈ ಕತೆ ಆಗ ಬಹಳ ಜನರ ಮೆಚ್ಚುಗೆ ಗಳಿಸಿ 'ಓದುಗರು ಮೆಚ್ಚಿದ ಕತೆ' ಎಂದು ನನಗೆ ನೂರು ರೂಪಾಯಿಗಳ ಬಹುಮಾನ ಬಂದಿತು. ಬಹಳ ಜನ ನನಗೆ ಪತ್ರ ಬರೆದು ತಮ್ಮ ಮೆಚ್ಚುಗೆಯನ್ನು ತಿಳಿಸಿದರು. ಹಲವಾರು ಪತ್ರಿಕೆಗಳು ಹೀಗೆಯೇ ಸಣ್ಣ ಕತೆಗಳನ್ನು ಬರೆದುಕೊಡಿ ಎಂದು ಕೇಳಿದವು. ಆಗ ಮತ್ತೊಂದು ಪುಟ್ಟ ಪುಸ್ತಕ 'ಢಣಾಯಕನ ಕೋಟೆ'ಯನ್ನು ಬರೆದೆ. ಅನಂತರ ನಾನು ಮೊದಲಿನಿಂದಲೂ ಆಸೆ ಪಡುತ್ತಿದ್ದ ಸಂಗೀತ ಕಲೆಯ ಮೇಲೆ ಒಂದು ಪುಸ್ತಕ ಬರೆಯೋಣ ಅನಿಸಿತು. ಹಾಗೆ ಆ ಪುಸ್ತಕಕ್ಕೆ ವಿಷಯ ಹುಡುಕಲು ಹೊರಟಾಗ, ಕರ್ನಾಟಕದಲ್ಲಿರುವ ಕರ್ನಾಟಕ ಸಂಗೀತ ವಿದ್ವಾಂಸರು ಎಷ್ಟು ಮಂದಿ ಇದ್ದಾರೆ ಎಂದು ತಿಳಿದು ಅಚ್ಚರಿಯಾಗಿ ಮೊದಲು ಅವರ ಮೇಲೆಯೇ ಒಂದು ಪುಸ್ತಕ ಬರೆಯೋಣ ಎನಿಸಿ 'ಕರ್ನಾಟಕ ಸಂಗೀತ ವಿದ್ವನ್ಮಣಿಗಳು' ಎನ್ನುವ ಕೃತಿಯೊಂದನ್ನು ರಚಿಸಿದೆ. ಲಂಡನ್‌ನಿಂದ ಬಂದ ಮೇಲೆ ಶ್ರೀ ಚಿರಂಜೀವಿಯವರು ನನ್ನನ್ನು ಭೇಟಿ ಮಾಡಿದರು. 'ತರಂಗ' ವಾರಪತ್ರಿಕೆಯಲ್ಲಿ ಶ್ರೀ ಗುಲ್ವಾಡಿಯವರು ೧೯೯೯ರಲ್ಲಿ ತಾವು ಲಂಡನ್‌ಗೆ ಬಂದಿದ್ದಾಗ ನಮ್ಮಲ್ಲಿ ಉಳಿದುಕೊಂಡು ಭವನದ ಲಂಡನ್ ಕೇಂದ್ರದ ಬಗೆಗೆ, ನನ್ನ-ದಲಾಲ್‌ಜೀಯ ಪರಿಚಯದ ಬಗೆಗೆ ಸಾಕಷ್ಟು ದೊಡ್ಡದಾದ ಲೇಖನವನ್ನೇ ಬರೆದಿದ್ದರು. ಅದನ್ನು ಓದಿದ ಶ್ರೀ ಚಿರಂಜೀವಿಯವರು 'ತುಷಾರ'ಕ್ಕೆ ಯಾವುದಾದರೂ ಲೇಖನಗಳನ್ನು ಕೊಡಲು ಕೇಳಿದರು. ಹೀಗೆ... ಮಾಸಪತ್ರಿಕೆ ತುಷಾರದವರು, ಏನನ್ನಾದರೂ ಬರೆದು ಕೊಡಲು ಕೇಳಿದಾಗ, ನಾನು ಆಗಾಗ ಲಂಡನ್‌ನಲ್ಲಿ ಹೇಳುತ್ತಿದ್ದ, ವ್ಯಾಖ್ಯಾನ ಮಾಡುತ್ತಿದ್ದ ಭಗವದ್ಗೀತೆಯನ್ನು ಬಹಳ ಸರಳೀಕರಿಸಿ ಬರೆಯ ಬಾರದೇಕೆ ಎನಿಸಿತು. ಲಂಡನ್‌ನಲ್ಲಿ ನಾನು ಹಲವಾರು ಉಪನ್ಯಾಸ ಗಳನ್ನು ಗೀತೆಯ ಮೇಲೆ ಮಾಡಿದುದು, ನನ್ನಲ್ಲಿ ಅದರ ಮಹತ್ತ್ವ ಪೂರ್ಣ ಸಾರಸಂಗ್ರಹವು ತಾಜಾವಾಗಿ ಇರುವಂತೆ ಮಾಡಿತ್ತು. ಜತೆಗೆ ಇಲ್ಲಿ ಅದಕ್ಕಾಗಿ ಗೀತೆಯ ಮೇಲಿರುವ ಹಲವಾರು ಪುಸ್ತಕಗಳನ್ನು ಓದಿ ತುಷಾರಕ್ಕಾಗಿ 'ಯೋಗಕ್ಷೇಮಂ ವಹಾಮ್ಯಹಮ್' ಎಂಬ ಶೀರ್ಷಿಕೆಯಲ್ಲಿ ೩೬ ಲೇಖನಗಳ ಮಾಲೆಯೊಂದನ್ನು ರಚಿಸಿದೆ. ಆಗ ಅದು ೩೬ ತಿಂಗಳುಗಳು ಎಂದರೆ ಮೂರು ವರ್ಷಗಳ ಕಾಲ ತುಷಾರದಲ್ಲಿ ಪ್ರಕಟವಾಗಿ ಬಹಳ ಜನ ಮೆಚ್ಚುಗೆ ಗಳಿಸಿತು.

ಈ ಲೇಖನಮಾಲೆಯನ್ನು ಓದಿದ ಪುಸ್ತಕಶಕ್ತಿ ಪ್ರಕಾಶನದ ಶ್ರೀ ವೈ.ಕೆ. ಮೋಹನರು ಆ ಲೇಖನಗಳನ್ನು ಸಂಗ್ರಹಿಸಿ ಒಂದು ಪುಸ್ತಕ ರೂಪದಲ್ಲಿಯೇ ಪ್ರಕಟಿಸೋಣ ಎಂದು ತಮ್ಮ ಆಸೆ, ಉತ್ಸಾಹ ವ್ಯಕ್ತಪಡಿಸಿದರು. ಆ ಲೇಖನಗಳನ್ನು ಅಲ್ಲಲ್ಲಿ ತಿದ್ದಿ, ಹೊಸದಾದ ಕೆಲವು ದೃಷ್ಟಾಂತಗಳನ್ನು ಅದರ ಜತೆಗೆ ಸೇರಿಸಿ, ಶ್ರೀ ಟಿ. ಕೆ. ರಾಮರಾಯರ ರೇಖಾಚಿತ್ರವನ್ನೂ ಅರ್ಥಪೂರ್ಣವಾಗಿ ಅಲ್ಲಲ್ಲಿ ಸೇರಿಸಿ 'ಯೋಗಕ್ಷೇಮಂ ವಹಾಮ್ಯಹಮ್' ಎನ್ನುವ ಸುಂದರವಾದ ಕೃತಿಯೊಂದನ್ನಾಗಿ ನನ್ನಿಂದಲೇ ಸಿದ್ಧ ಮಾಡಿಸಿದರು ಶ್ರೀ ವೈ.ಕೆ. ಮೋಹನರು. ಆ ಕೃತಿಯನ್ನು ಮೆಚ್ಚಿ ಗೊರೂರು ಪ್ರತಿಷ್ಠಾನವು 'ವರ್ಷದ ಅತ್ಯುತ್ತಮ ಪುಸ್ತಕ'ಎಂದು ಪ್ರಕಟಿಸಿ, ವರ್ಷದ ಲೇಖನವೆಂದು ಗುರುತಿಸಿ, ನನಗೆ 'ಗೊರೂರು ಪ್ರಶಸ್ತಿ'ಯನ್ನು ಪ್ರದಾನಮಾಡಿತು.

ಗಾಂಧೀ ಉಪನಿಷತ್

ಹಾಗೆ ದಿನವೂ ಬರೆಯುವುದಾದರೆ ಅದು ಹೇಗಿರಬೇಕು ಎನ್ನುವ ಯೋಚನೆ ಬಂದಿತು. ಚಿಕ್ಕದಾಗಿದ್ದು ಗಾಂಧೀಜಿಯ ಜೀವನದ ತುಣುಕೊಂದರ ಚಿತ್ರಣವಾಗಿದ್ದು, ಅವರ ಸಂದೇಶವೊಂದು ಅದರಲ್ಲಿದ್ದರೆ ಅದು ಅರ್ಥಪೂರ್ಣವಾಗುತ್ತದೆ ಎನಿಸಿತು. ಅದಕ್ಕೆ 'ಗಾಂಧೀ ಉಪನಿಷತ್ತು' ಎಂದು ಹೆಸರು ಕೊಡಲೇ? ಎಂದು ಹಿರಿಯ ಗಾಂಧೀವಾದಿಗಳೂ, ನಿವೃತ್ತ ನ್ಯಾಯಾಧೀಶರೂ ಆದ ಶ್ರೀ ನಿಟ್ಟೂರು ಶ್ರೀನಿವಾಸರಾಯರನ್ನು ಕೇಳಿದಾಗ, ಅವರು ಆ ಹೆಸರನ್ನು ಮೆಚ್ಚಿ ತಲೆ ತೂಗಿದರು!

ಅಷ್ಟರಲ್ಲೇ ಉದಯ ಟಿ.ವಿ.ಯಲ್ಲಿ ಕುಮಾರವ್ಯಾಸ ಭಾರತದ ಸಾವಿರ ಉಪಾಖ್ಯಾನಗಳು ಪ್ರಸಾರವಾದ ದಾಖಲೆಯಾಗಿ ಭಾರತೀಯ ವಿದ್ಯಾಭವನವು ನನ್ನನ್ನೂ- ಶ್ರೀ ಕೇಶವಮೂರ್ತಿಯವರನ್ನೂ ಅಭಿನಂದಿಸಿ ಸನ್ಮಾನಿಸಲು ಒಂದು ಸುಂದರವಾದ ಕಾರ್ಯ ಕ್ರಮವನ್ನೇರ್ಪಡಿಸಿತು. ಆ ದಿನಕ್ಕೆ ವಿಶೇಷವಾಗಿ 'ಕುಮಾರವ್ಯಾಸ'ನ ಚಿತ್ರ ಬರೆದುಕೊಡಲು ಕಲಾವಿದರಾದ ಶ್ರೀ ಹಡಪದ ಅವರನ್ನು ಕೇಳಲಾಗಿ, ಅವರು ಬಹಳ ಮನೋಹರವಾದ ಚಿತ್ರವೊಂದನ್ನು ಮೂರು ದಿನಗಳಲ್ಲಿ ವಿದ್ಯಾಭವನಕ್ಕಾಗಿ ರಚಿಸಿಕೊಟ್ಟು, ಆ ಸಮಾರಂಭಕ್ಕೆ ಬಹಳ ಕಳೆ ಬರುವಂತೆ ಮಾಡಿದರು. ಆ ದಿನ ಮಾನ್ಯ ಮಾಜಿ ಪ್ರಧಾನಮಂತ್ರಿ ಗಳಾದ ಶ್ರೀ ಎಚ್.ಡಿ. ದೇವೇಗೌಡರು ಸಮಾರಂಭದ ಅಧ್ಯಕ್ಷತೆವಹಿಸಿ ನಮ್ಮಿಬ್ಬರನ್ನೂ ಸನ್ಮಾನಿಸಿ 'ಈ ಕಾರ್ಯಕ್ರಮ ಟಿ.ವಿ.ಯಲ್ಲಿ ಯಶಸ್ವಿಯಾಗಿ ಮುಗಿಯುವಂತಾಗಲಿ' ಎಂದು ಹಾರೈಸಿದರು.

ಲಂಡನ್‌ನಲ್ಲಿದ್ದಾಗಲೇ 'ಸಂಯುಕ್ತ ಕರ್ನಾಟಕ'ದ ಪ್ರತಿನಿಧಿಯಾಗಿ ಅಲ್ಲಿನ ಸುದ್ದಿಗಳನ್ನು ಆ ಪತ್ರಿಕೆಗೆ ಆಗಾಗ ಬರೆದು ಕಳುಹಿಸುತ್ತಿದ್ದ ನನಗೆ, ನಾನು ಬೆಂಗಳೂರಿಗೆ ಬಂದ ಮೇಲೆ 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಸಂಪರ್ಕ ಮತ್ತೂ ಹೆಚ್ಚಾಯಿತು. ಶ್ರೀ ಎಸ್. ಸುಬ್ಬರಾವ್, ಶ್ರೀ ಹಾರ್ನಹಳ್ಳಿ ರಾಮಸ್ವಾಮಿಯವರು ನನ್ನ ಸಮವಯಸ್ಸಿನ ಸನ್ಮಿತ್ರರು. ನನ್ನ ಗಾಂಧೀ ಪ್ರೇಮವನ್ನು ನೋಡಿ, 'ಸಂಯುಕ್ತ ಕರ್ನಾಟಕ' ಪತ್ರಿಕೆಗಾಗಿ ಪ್ರತಿದಿನವೂ ಗಾಂಧೀಜಿಯ ಮೇಲೆ ಚಿಕ್ಕದಾದ ಲೇಖನವನ್ನು ಬರೆದು ಕೊಡಲು ಕೇಳಿದರು. ನನ್ನ ಕೆಲಸಗಳ ಹೊರೆಯಲ್ಲಿ ನನಗೆ ಬಹಳ ಇಷ್ಟವಾದುದನ್ನು ಬರೆಯುವುದಕ್ಕೆ ಸಮಯವೇ ಸಿಗದಾಗಿದ್ದರೂ, ಅವರು 'ಗಾಂಧೀಜಿಯ ಮೇಲೆ ಬರೆದುಕೊಡಿ' ಎಂದು ಕೇಳಿದಾಗ 'ಇಲ್ಲ' ಎನ್ನಲಾಗಲಿಲ್ಲ. ಈ ಹೆಸರಿಗೆ ರಾಮಕೃಷ್ಣಾಶ್ರಮ ದವರು ಶ್ರೀರಾಮಕೃಷ್ಣರ ಸಂದೇಶಗಳನ್ನು 'ರಾಮಕೃಷ್ಣೋಪನಿಷತ್' ಎಂದು ಹೆಸರಿಸಿರುವುದೇ ಸ್ಫೂರ್ತಿಯಾಗಿತ್ತು!

ವಿಪುಲವಾದ ಗಾಂಧೀಸಾಹಿತ್ಯವನ್ನು ಅಧ್ಯಯನಮಾಡಿ ಲೇಖನಗಳನ್ನು ಸಂಪಾದಿಸುವುದು ಸುಲಭವಲ್ಲ. ನಮ್ಮ ಮಿತ್ರ ಕುಟುಂಬದ ಶ್ರೀಮತಿ ಸುಮನಾ ವಿಶ್ವನಾಥ್ ಈ ಕೆಲಸದಲ್ಲಿ ಮೊದಲ ದಿನದಿಂದಲೂ ನನಗೆ ಸಹಾಯಮಾಡುವುದಾಗಿ ಮಾತು ಕೊಟ್ಟರು. ಅಂತೆಯೇ ಕೆಲಸ ಪ್ರಾರಂಭಿಸಿದರು.

ಅಕ್ಟೋಬರ್ ಎರಡನೇ ತಾರೀಖು, ೨೦೦೧ನೇ ಇಸವಿಯಿಂದ ಗಾಂಧೀಜಿಯ ಮೇಲೆ ಪುಟ್ಟ ಪುಟ್ಟ ಲೇಖನಗಳನ್ನು ಬರೆಯಲು ಪ್ರಾರಂಭ ಮಾಡಿಯೇಬಿಟ್ಟೆ. ಆ ಪುಟ್ಟ ಲೇಖನಗಳೂ ಬಹಳ ಜನಪ್ರಿಯವಾಗಿ 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಬೇಡಿಕೆಯೂ ಹೆಚ್ಚಿತು. ಅದರ ಜನಪ್ರಿಯತೆ ಗಮನಿಸಿದ ಅಭಿಮಾನಿಗಳೂ, ಸನ್ಮಿತ್ರರೂ, 'ಈ ಲೇಖನಗಳನ್ನು ಎಲ್ಲರೂ ಓದಲು ಸಾಧ್ಯವಾಗುವಂತೆ ನೂರು-ನೂರಿಪ್ಪತ್ತೈದು ಲೇಖನಗಳನ್ನು ಒಟ್ಟು ಸೇರಿಸಿ ಒಂದು ಪುಸ್ತಕದ ರೂಪದಲ್ಲೇಕೆ ಬಿಡುಗಡೆ ಮಾಡಬಾರದು ?' ಎಂದು ಬಹಳ ಉಪಯುಕ್ತವಾದ ಸಲಹೆ ಕೊಟ್ಟರು. ಹೇಗಿದ್ದರೂ 'ಯೋಗಕ್ಷೇಮಂ ವಹಾಮ್ಯಹಮ್' ಸಹ ಲೇಖನಗಳ ಮಾಲೆಯನ್ನು ಮಾಡಿದಂಥ ಪುಸ್ತಕವಾಗಿತ್ತಷ್ಟೆ? ಅದರ ಜನಪ್ರಿಯತೆ ಇದಕ್ಕೆ ಸ್ಫೂರ್ತಿ, ಪ್ರೋತ್ಸಾಹ ಕೊಟ್ಟಿತು. ಈ ಬಾರಿ ಬೆಂಗಳೂರುಪ್ರೆಸ್ಸಿನವರು ಅಂದವಾಗಿ ಮುದ್ರಿಸಿ, ಎಂ.ಪಿ. ಬಿರ್ಲಾ ಪ್ರತಿಷ್ಠಾನವು ಹೆಮ್ಮೆಯಿಂದ ಹೊರತಂದ 'ಗಾಂಧೀ ಉಪನಿಷತ್ತು', ಮೊದಲ ಮುನ್ನೂರ ಮೂವತ್ತೈದು ಲೇಖನಗಳ ಸಂಗ್ರಹ ರೂಪದ ಪುಸ್ತಕವನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರು ಬಿಡುಗಡೆ ಮಾಡಿ, ಆ ಪುಸ್ತಕವನ್ನು ಬಹಳ ಮೆಚ್ಚಿಕೊಂಡು, ಸಾಧ್ಯವಾದರೆ ಅದನ್ನು ಇಂಗ್ಲಿಷಿಗೆ ಅನುವಾದ ಮಾಡಿಸುವಂತೆಯೂ ಸಲಹೆ ಮಾಡಿದರು. ಗಾಂಧೀಜಿಯ ಸಂದೇಶಗಳು ಎಂದಿಗೂ ಬೇಕಾಗುವಂಥವು. ಯಾವ ಕಾಲಕ್ಕೂ ಸರಿ ಹೊಂದುವಂಥವು. ಇದು ಕನ್ನಡದಲ್ಲಿರುವುದು ಕನ್ನಡಿಗನಾದ ನನಗೆ ಸಂತೋಷವಾದರೂ, ದೇಶ ವಿದೇಶಗಳಲ್ಲಿ ನಮ್ಮ ದೇಶದ ಮಹಾತ್ಮರನ್ನು ಬಲ್ಲವರೂ ಇದನ್ನು ಓದಿ, ಅದರ ಮಹತ್ತ್ವ ಅರಿಯಬೇಕಾದರೆ ಈ ಪುಸ್ತಕ ಇಂಗ್ಲಿಷಿನಲ್ಲಿದ್ದರೆ ಈ ಸಂದೇಶಗಳ ಪ್ರಸಾರ ಸುಲಭ ಆಗುತ್ತದೆ ಎಂದು ಬಹಳ ಒಳ್ಳೆಯ ಸೂಚನೆ ಕೊಟ್ಟರು. ಈ ಕೆಲಸವೂ ಈಗಾಗಲೇ ಪ್ರಾರಂಭವಾಗಿ ೩ ಸಂಪುಟ ಇಂಗ್ಲಿಷದು ಬಿಡುಗಡೆಯಾಗಿ 'ಗಾಂಧೀ ಉಪನಿಷತ್'ನ ಏಳನೇ ಸಂಪುಟ ಬಿಡುಗಡೆಗಾಗಿ ಕಾದಿದೆ. ಇದೆಲ್ಲದರ ಜತೆಗೆ 'ಕುಮಾರವ್ಯಾಸ ಭಾರತ ರಸಾಯನ' ಎಂದು ಒಂದೊಂದು ಪದ್ಯವನ್ನು ಪದ್ಯಗಳ ಸಹಿತ ವಿಶ್ಲೇಷಿಸಿ, ಕಾವ್ಯದ ಸೊಬಗನ್ನೂ ತಿಳಿಸಿ ಹೇಳುವ ಪುಸ್ತಕಗಳನ್ನು ಬರೆಯುವ ಯೋಜನೆ ಹಾಕಿದೆ. ಅದರಲ್ಲಿ ಈಗಾಗಲೇ 'ಸಭಾಪರ್ವ', 'ಅರಣ್ಯಪರ್ವ'ಗಳು ಬಿಡುಗಡೆಯಾಗಿವೆ.

ಹೀಗೆ ಬರವಣಿಗೆ ಒಂದಲ್ಲ ಒಂದು ರೀತಿಯಲ್ಲಿ ಸಾಗುತ್ತಿದೆ. ನನಗೆ ಓದಿ-ಬರೆದುಕೊಂಡಿರಲು ಬಹಳ ಆಸೆ, ಆದರೆ 'ವಿದ್ಯಾಭವನ'ಕ್ಕೆ ಸೇವೆ ನನ್ನ ಮೊದಲ ಆದ್ಯತೆಯಾದುದರಿಂದ ನನ್ನ ಕೈಲಾಗುವ ತನಕವೂ ಭವನದ ಸೇವೆ ಮಾಡಬೇಕೆಂದೇ ನಾನು ಬಯಸುವುದು. ಈ ಎಲ್ಲದರ ಮಧ್ಯೆ ಸಂಧ್ಯಾವಂದನೆ-ಸಮಿದಾಧಾನ, ಪುರುಷಸೂಕ್ತ, ಶ್ರೀಸೂಕ್ತ-ಧ್ವನಿಸುರುಳಿಗಳೂ ಸಿದ್ಧವಾಗಿ, ಭಾರತೀಯ ವಿದ್ಯಾಭವನ ಅದನ್ನು

ನಿರ್ಮಾಣ ಮಾಡಿಸಿದೆ. ಅದರ ಜತೆಗೆ ಆ ವಿಷಯಗಳಿಗೆ ಸಂಬಂಧಿಸಿದಂತೆ ಪುಟ್ಟ ಪುಟ್ಟ ಪುಸ್ತಕಗಳನ್ನೂ ಬರೆದೆ – ಕ್ಯಾಸೆಟನ್ನು ಕೊಳ್ಳುವವರು ಪುಸ್ತಕವನ್ನು ಕೊಂಡರೆ ಅದು ಹೆಚ್ಚುಉಪಯುಕ್ತವಾದೀತು ಎಂದು. ಈಗಾಗಾಲೇ ಲಂಡನ್‌ನಲ್ಲಿ 'ಪೀಸ್ ಇನ್ವೋಕೇಷನ್ಸ್ ಎಂಡ್ ಶಾಂತಿ ಮಂತ್ರಾಸ್' (ಬೇರೆ ಬೇರೆ ಮತಗಳ ಪ್ರಾರ್ಥನೆಗಳು ಮತ್ತು ಶಾಂತಿ ಮಂತ್ರಗಳು) ಎನ್ನುವ ಕ್ಯಾಸೆಟನ್ನು ಹೊರತಂದ ಅನುಭವ ನನಗಿದ್ದುದರಿಂದ ಈ ಕ್ಯಾಸೆಟ್ಟುಗಳನ್ನು ತರುವುದು ಕಷ್ಟವೆನಿಸಲಿಲ್ಲ.

ನನ್ನ ಮಿತ್ರ ಶ್ರೀ ಕೇಶವಮೂರ್ತಿಯವರು, ಪಂಡಿತ ಶ್ರೀ ಬೀರೂರು ಚಿದಂಬರ ಜೋಯಿಸರ 'ಭಜನ ಮಣಿಮಾಲೆ' ಪುಸ್ತಕದಲ್ಲಿನ ಬಹಳ ಸುಂದರವಾದ ಭಜನೆಗಳನ್ನು, ಸೊಗಸಾದ ರಾಗಗಳನ್ನು ಹಾಕಿ ಸಭೆಯಲ್ಲಿ ಆಗಾಗ ಹೇಳುತ್ತಿದ್ದರು. ಆ ಭಜನೆಗಳ ಕ್ಯಾಸೆಟ್ಟನ್ನೇಕೆ ಮಾಡಬಾರದು ಎಂದು ನನ್ನ ಮನಸ್ಸಿನಲ್ಲಿ ಒಂದು ಯೋಚನೆ ಬಂದಿತು. ಚೆನ್ನಾದ ಹನ್ನೆರಡು ಭಜನೆಗಳನ್ನು ಆಯ್ದುಕೊಂಡು , ಅದಕ್ಕೆ ಚಿಕ್ಕದಾದ ಒಂದು ಪರಿಚಯವನ್ನು ಕೊಟ್ಟು, ಅವರು ಬರೀ ತಂಬೂರಿ ಶ್ರುತಿಯಲ್ಲಿ ಆ ಭಜನೆಗಳನ್ನು ಹಾಡಿರುವ ಕ್ಯಾಸೆಟ್ಟನ್ನು ಹೊರ ತಂದೆ. ಈ ಕ್ಯಾಸೆಟ್ ಎಲ್ಲರಿಗೂ ಬಹಳ ಪ್ರಿಯವಾಯಿತು. ಪಕ್ಕವಾದ್ಯಗಳಿಲ್ಲದಿರುವುದೇ ಇದರ ವಿಶೇಷ ಆಕರ್ಷಣೆ! ಮನೆಯಲ್ಲಿ ಹಾಡಿಕೊಳ್ಳುವಾಗ ಪಕ್ಕವಾದ್ಯಗಳಿರುವುದಿಲ್ಲವಷ್ಟೆ? ಆದ್ದರಿಂದ ಹೆಂಗಸರು-ಮಕ್ಕಳು ಮನೆಯಲ್ಲಿ ಕುಳಿತು ಹಾಡಿಕೊಳ್ಳಲು ಸುಲಭವಾಗಿರುವ ಕ್ಯಾಸೆಟ್ ಇದೆಂದು ಜನಪ್ರಿಯ ಆಯಿತು.

ಹೀಗೆ ನಡೆಯುತ್ತಿದೆ.

ಶ್ರೀರಾಮ-ಶ್ರೀಕೃಷ್ಣ-ಗಾಂಧೀಜಿ

ಜೀವನದಲ್ಲಿ ಕಷ್ಟ, ದುಃಖ, ಕಹಿ ಎಲ್ಲವನ್ನೂ ಸಾಕಷ್ಟು ಅನುಭವಿಸಿದನಂತರ ಧನ್ಯತೆಯನ್ನು ಪಡೆದು ತೃಪ್ತಿಯ ನಗುವನ್ನೂ ಕಾಣುವಂತೆ ಮಾಡಿದ ಆ ಭಗವಂತ! ಮನುಷ್ಯನಾಗಿ ಹುಟ್ಟಿ ಇಷ್ಟರ ಮಟ್ಟಕ್ಕೆ ಬದುಕಲು ಒಂದು ಅವಕಾಶ ಕೊಟ್ಟ! ನನ್ನ ಮನಸ್ಸಿನಲ್ಲಿ ವಿಶೇಷವಾಗಿ ಆಸೆ ಎನ್ನುವುದೇನೂ ಇಲ್ಲದಿದ್ದರೂ 'ನನ್ನ ಬದುಕು ಸಾರ್ಥಕವಾಯಿತು' ಎನ್ನುವ ಒಂದು ದೊಡ್ಡ ಕೆಲಸವನ್ನು ನಾನಿನ್ನೂ ಮಾಡಿ ಮುಗಿಸಿಲ್ಲ ಎಂದೇ ನನ್ನ ಭಾವನೆ. ನನ್ನ ದೃಷ್ಟಿಯಲ್ಲಿ ನನಗೆ ಇನ್ನೂ ಮೂರು ಮಹತ್ತರ ಜವಾಬ್ದಾರಿಗಳಿವೆ. ಒಂದು, ಉದಯ ಟಿ.ವಿ.ಯಲ್ಲಿ 'ಮಹಾಭಾರತ'ವನ್ನು ಪೂರ್ತಿಮಾಡಬೇಕು, ಎರಡನೆಯದು, ಕರ್ನಾಟಕದ ಪ್ರತಿ ಜಿಲ್ಲೆಯಲ್ಲಿಯೂ ನಮ್ಮ ಭವನದ ಕೇಂದ್ರವೊಂದು ನೆಲೆಯಾಗಬೇಕು. ಮೂರನೆಯದು ನಮ್ಮ ಮಾಧವ ಪ್ರಸಾದ್ ಬಿರ್ಲಾರ ಕನಸನ್ನು ಪೂರ್ತಿ ಮಾಡಬೇಕು. ಅದೆಂದರೆ ಲಂಡನ್ನಿನಲ್ಲಿ ಹನ್ನೆರಡು ವರ್ಷಗಳ ಕಾಲ ಅವರು ತಮ್ಮ ಪತ್ನಿ ಶ್ರೀಮತಿ ಪ್ರಿಯಂವದಾ ದೇವಿ (ಬಡೀಮಾ) ಅವರೊಂದಿಗೆ ಬಂದು ಒಂದೆರಡು ತಿಂಗಳು ತಂಗುತಿದ್ದರಷ್ಟೆ. ಆಗ ಸಂಜೆ ಸುಮಾರು ೯೦ ನಿಮಿಷ ಕಾಲ ಅವರಿಗೆ ರಾಮಾಯಣ, ಮಹಾಭಾರತ ಕಥೆ ಹೇಳುತ್ತಿದ್ದೆ. ಶ್ರೀರಾಮ-ಶ್ರೀಕೃಷ್ಣ-ಮಹಾತ್ಮಾ ಗಾಂಧಿ ಇವರುಗಳ ಮೇಲೆ ನಾ ಹೇಳುತ್ತಿದ್ದುದು ಅವರಿಗೆ ತುಂಬಾ ಇಷ್ಟ ಆಗುತ್ತಿತ್ತು. "ನನ್ನದೊಂದು ಆಸೆ. ಶ್ರೀರಾಮ, ಶ್ರೀಕೃಷ್ಣ, ಮಹಾತ್ಮಾಗಾಂಧಿ-ಈ ಮೂವರನ್ನೂ ಕುರಿತ ಒಂದು ಪುಸ್ತಕ ಬರೆಯಬೇಕು" ಎಂದು ಹೇಳಿದೆ. ಮಾಧವಪ್ರಸಾದರಿಗೂ ಈ ಮೂವರು ಮಹನೀಯರ ಮೇಲೆ ಅಮಿತ ಗೌರವ. ಅವರಿಗೆ ಸಂತೋಷವಾಗಿ ೧೯೮೮ರಲ್ಲಿ ೨೨ ಸಹಸ್ರ ರೂಪಾಯಿಗಳನ್ನು ಆಶೀರ್ವದಿಸಿ ಕೊಟ್ಟು "ಮಾಥೂರ್‌ಜೀ, ಇದನ್ನು ಬ್ಯಾಂಕಿನಲ್ಲಿ ಇಡಿ. ಪುಸ್ತಕ ಬರೆದ ಮೇಲೆ ಅಚ್ಚು ಮಾಡಿಸಿರಿ. ಬಡ್ಡಿ ಸೇರಿ, 'ಸಾಕಷ್ಟು' ಆಗಬಹುದು. ಕಡಮೆಯಾದರೆ ಟ್ರಸ್ಟಿನಿಂದ ಭರ್ತಿಮಾಡಿದರಾಯಿತು" ಎಂದರು. 'ಧನ್ಯೋಽಸ್ಮಿ, ಅನುಗ್ರಹೀತೋಽಸ್ಮಿ' ಎಂದು ಹೇಳಿ ನಮಿಸಿದೆ.

ಸದ್ಯ, ದೇವರ ದಯೆಯಿಂದ ಆಗುತ್ತಿದೆ.

'ಒಂದಲ್ಲ ಒಂದು ನೆಲೆಯಲ್ಲಿ ಈ ಮೂವರೂ ಒಂದೇ ಎತ್ತರಕ್ಕೆ ಏರಿನಿಂತಿದ್ದಾರೆ, ಅದನ್ನು ಕಾಣುವ ಕಣ್ಣುಗಳು ಬೇಕು, ಕಂಡು ಅರ್ಥ ಮಾಡಿಕೊಳ್ಳುವ ಹೃದಯಗಳು ಬೇಕು, ಅರ್ಥ ಮಾಡಿಕೊಂಡು ಅನುಷ್ಠಾನಕ್ಕೆ ತರುವ, ಆಚರಿಸುವ ಸಜ್ಜನರು ಬೇಕು' ಎನ್ನುವುದು ಅವರ ಅಭಿಪ್ರಾಯವಾಗಿತ್ತು. ನಾವು ಯಾವಾಗ ಮಾತಿಗೆ ಕುಳಿತರೂ ನಮ್ಮ ಮಾತು ಒಂದಲ್ಲಾ ಒಂದು ರೀತಿಯಲ್ಲಿ ಹೇಗೋ ಈ ಮೂವರ ಕಡೆಗೇ ಹೊರಳುತ್ತಿತ್ತು. ಸಾಮ್ಯತೆಯನ್ನು ಗುರುತಿಸುವುದರಲ್ಲಿ ಮನಸು-ಬುದ್ಧಿ ತೊಡಗುತ್ತಿತ್ತು. ಅದಕ್ಕೆ ಅವರು 'ಈ ನಿಲುವನ್ನು ಸಮರ್ಥಿಸಿ ಒಂದು ಕೃತಿಯನ್ನು ರಚಿಸಿಕೊಡಿ ಮತ್ತೂರ್‌ಜೀ' ಎನ್ನುತ್ತಿದ್ದರು ಯಾವಾಗಲೂ. ಅವರ ಈ ಅಭಿಪ್ರಾಯದ ರೂಪುರೇಖೆಗಳನ್ನು ಸರಿಯಾಗಿ ಸಂಯೋಜಿಸಿ 'ರಾಮ-ಕೃಷ್ಣ-ಗಾಂಧೀಜಿ'ಈ ಮೂವರ ಸಾಧನಾ ಸಾಮ್ಯತೆಯ ಬಗೆಗೆ ಬೃಹತ್ ಕೃತಿಯೊಂದನ್ನು ರಚಿಸುವ ಹಂಬಲ ಬಹಳ ತೀವ್ರವಾಗಿದೆ.

ನನ್ನ ಈ ಕೃತಿ ರಚನೆ ಮಾಧವಬಾಬೂರ ಆತ್ಮಕ್ಕೆ ಶಾಂತಿಯನ್ನೂ ಸಂತಸವನ್ನೂ ತಂದು ಕೊಡುವುದೆಂದೇ ನನ್ನ ನಂಬಿಕೆ ! ಆದ್ದರಿಂದ ಈ ಕೃತಿಯ ರಚನೆಗೂ ಆದ್ಯತೆ. ಮೂರನೆಯದಾಗಿ, ನಾನು ಬದುಕಿರುವವರೆಗೂ ನನ್ನ ಕೊನೆಯುಸಿರಿರುವ ತನಕವೂ 'ಸಂಯುಕ್ತ ಕರ್ನಾಟಕ' ದಿನ ಪತ್ರಿಕೆಯಲ್ಲಿ ಗಾಂಧಿ ಉಪನಿಷತ್ತನ್ನು ಬರೆಯುತ್ತಲೇ ಇರಬೇಕು ಎನ್ನುವುದು.

ಇವೆಲ್ಲದರ ನಡುವೆ ಬಹಳ ದಿನಗಳಿಂದ ರಾಮಾಯಣವನ್ನು ಸರಳವಾಗಿ ಬರೆಯಬೇಕು ಎನ್ನುವ ನನ್ನ ಅಭಿಲಾಷೆಯೂ ಕೈಗೂಡಿತು. ಮಾಸ್ತಿಯವರ ವಿಶೇಷದೃಷ್ಟಿಯ ಪ್ರಭಾವದಿಂದ ನಾನು ಅರ್ಥ ಮಾಡಿಕೊಂಡಿದ್ದ ರಾಮನನ್ನು ಚಿತ್ರಿಸಿ ಬರೆಯುವುದೂ ಸಾಧ್ಯವಾಯಿತು. 'ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ'

ಎಂದಿದ್ದರೂ, ‘ನಮ್ಮೆಲ್ಲರ ಶ್ರೀರಾಮ’ ಕೃತಿಯೂ ಅದರ ಜತೆ ಸೇರಿತು. ಹಾಗೆಯೇ, ಮಹಾಭಾರತದ ‘ಯಕ್ಷಪ್ರಶ್ನೆ’ಯ ವಿವರವಾದ ಲೇಖನ ಮಾಲೆಯು ಪುಸ್ತಕದ ರೂಪದಲ್ಲಿ ಹೊರಬಂದಿತು. ‘ನಮ್ಮೆಲ್ಲರ ಶ್ರೀರಾಮ’ ಕೃತಿಯನ್ನು ಸನ್ಮಾನ್ಯ ಮಿತ್ರರಾದ ಪ್ರೊ. ಎಲ್. ಎಸ್. ಶೇಷಗಿರಿರಾಯರು ಇಂಗ್ಲಿಷಿಗೂ ಭಾಷಾಂತರಿಸಿಕೊಟ್ಟರು. ಸನ್ಮಾನ್ಯ ಘನತೆವೆತ್ತ ರಾಜ್ಯಪಾಲರು ಆ ಪುಸ್ತಕವನ್ನು ಲೋಕಾರ್ಪಣೆ ಮಾಡಿದರು.

ನನ್ನ ಜೀವನದಲ್ಲಿ ನನ್ನ ಅದೃಷ್ಟ... ಎಷ್ಟೋ ಜನ್ಮದ ಪುಣ್ಯ ವಿಶೇಷದಿಂದ ಅನೇಕ ಸಜ್ಜನರ ಪರಿಚಯವಾಗಿದೆ. ಅದರಲ್ಲಿ ಶ್ರೀಗುರುಮೂರ್ತಿರೆಡ್ಡಿಯವರೊಬ್ಬರ ಪರಿಚಯವೂ ಒಂದು. ಶ್ರೀರೆಡ್ಡಿಯವರು ಇಟ್ಟಿಗೆಯನ್ನು ಮಾಡುವ, ಮಾರುವ ವ್ಯಾಪಾರದವರು. ಬಹಳ ದೊಡ್ಡ ಪ್ರಮಾಣದ ವ್ಯವಹಾರವೇ ಅದು. ಆದರೆ ಅವರ ದಾನಬುದ್ಧಿ ಮಾತ್ರ ವಿಶೇಷವಾಗಿ ನಾ ಹೇಳಬೇಕಾದಂಥದು... ನಾನು ಮಾಡುವ, ಹೇಳುವ ಪ್ರತಿಯೊಂದು ಯೋಜನೆಗೂ ಅವರು ಮೊದಲು ಧನಸಹಾಯ ಮಾಡುವವರು! ಅವರ ಆಸೆಯಂತೆ ‘ಭಗವದ್ಗೀತೆ’ಯನ್ನು ಕಲಿಸುವ ದೃಷ್ಟಿಯಿಂದ ಧ್ವನಿ ಮುದ್ರಿಸಬೇಕು ಎನ್ನುವ ಒಂದು ಆಲೋಚನೆ ಬಂದಿತು. ಎಂ.ಪಿ.ಬಿರ್ಲಾ ಫೌಂಡೇಷನ್ ಸಹಯೋಗದಿಂದ ಅದೂ ಕಾರ್ಯಗತವಾಗಿ, ಸುಲಭವಾಗಿ ಕಲಿಸುವ ಕ್ಯಾಸೆಟ್-ಸಿಡಿ ಪಾಠವು ಸಿದ್ಧವಾಗಿ ಅದನ್ನು ಘನತೆವೆತ್ತ ರಾಜ್ಯಪಾಲರು ಲೋಕಾರ್ಪಣೆ ಮಾಡಿದ್ದಾರೆ. ಇದೊಂದು ಮನಸ್ಸಿಗೆ ಬಹಳ ತೃಪ್ತಿ ಕೊಟ್ಟಂಥ ಕೆಲಸವೆಂದರೆ ಉತ್ಪ್ರೇಕ್ಷೆಯಲ್ಲ!

ಹೀಗೆ ಕೆಲಸಗಳು ಸಾಗುತ್ತಿವೆ....

ನನ್ನ ಕೈ ಬಿಡಲಾರ...

ಈಗ ಎಂ.ಪಿ. ಬಿರ್ಲಾ ಫೌಂಡೇಶನ್, ಭಾರತೀಯ ವಿದ್ಯಾಭವನ ಕೂಡಿಕೊಂಡು ಅನೇಕ ಯೋಜನೆಗಳನ್ನು ರೂಪಿಸುತ್ತಿವೆ. ಅವೆರಡೂ ಸಂಸ್ಥೆಗಳ ಜವಾಬ್ದಾರಿ ಹೊತ್ತ ನಾನು, ಅವುಗಳ ಸೇವೆ ಮಾಡುತ್ತಲೇ, ಬಾಕಿ ಇರುವ ನನ್ನ ಈ ಮೂರು ಜವಾಬ್ದಾರಿಗಳನ್ನೂ ನಿರ್ವಹಿಸಬೇಕಿದೆ! ಇಲ್ಲಿಯವರೆಗೆ ನನ್ನ ಕೈಹಿಡಿದು ನಡೆಸಿದ ಆ ಪರಮಾತ್ಮ, ನಾನು ಈ ಜವಾಬ್ದಾರಿಗಳನ್ನೂ ಯಶಸ್ವಿಯಾಗಿ ನಿರ್ವಹಿಸುವವರೆಗೆ ನನ್ನ ಕೈ ಬಿಡುವುದಿಲ್ಲ ಎಂದು ನನ್ನ ನಂಬಿಕೆ!

ಜೀವನದಲ್ಲಿ ಸಾಧ್ಯಾಸಾಧ್ಯತೆಗಳನ್ನು ನಿರ್ಧರಿಸುವುದು ಕಾಣದ ಕೈ. ಆದರೆ ನನ್ನ ಜೀವನದ ಸಾಧನೆಗಳನ್ನು ಹೀಗೆ ನಿರ್ಧರಿಸಿ, ಅಷ್ಟೆಲ್ಲ ಆಗುವಂತೆ ಮಾಡಿದವರು ಮಹಾಪೋಷಕರಾಗಿ ನಿಂತು ನನ್ನ ಕೈ ಹಿಡಿದು ನಡೆಸಿದ ಶ್ರೀಮತಿ ಪ್ರಿಯಂವದಾ ದೇವಿ ಬಿರ್ಲಾ ಹಾಗೂ ಶ್ರೀ ಮಾಧವ ಪ್ರಸಾದ ಬಿರ್ಲಾ.

ಉಳಿಯುವ ಭರವಸೆಯೇ ಇಲ್ಲದಂತಹ ಅನಾರೋಗ್ಯದ ಅಪಾಯಕ್ಕೆ ಸಿಕ್ಕಾಗ ನನ್ನನ್ನು ಮತ್ತೆ ಬದುಕಿಸಿಕೊಂಡು ಪುನರ್ಜನ್ಮ ನೀಡಿ ಈ ಸಾಧನೆಗಳಿಗೆ ಬೀಜಾಂಕುರ ಮಾಡಿದುದು ನಮ್ಮ ಅಣ್ಣಂದಿರು ಶ್ರೀ ಶಂಕರಮೂರ್ತಿ ಹಾಗೂ ನಮ್ಮ ಅತ್ತಿಗೆ ಶ್ರೀಮತಿ ಸೀತಾಲಕ್ಷ್ಮಿಯವರ ಆರೈಕೆ - ಹಾರೈಕೆ. ಆದುದರಿಂದ ನನ್ನ ಕಿಂಚಿತ್ ಸಾಧನೆಗಳು ಈ ಇಬ್ಬರು ದಂಪತಿಗಳ ಕೃಪೆಯಿಂದಲೇ ಎಂಬುದು ನನ್ನ ನಂಬಿಕೆ.

ಈ ಸಾಧನೆಗಳ ಶ್ರೇಯವೂ ಇವರುಗಳಿಗೇ ಸಲ್ಲುತ್ತದೆ!

ಓದುಗರೆ,

ಇಲ್ಲಿಯವರೆಗೆ ಅಪರಿಮಿತ ತಾಳ್ಮೆ ತೋರಿ, ಪ್ರೀತಿಯಿಂದ ನನ್ನ ಜೀವನವನ್ನು ಓದಿದಿರಿ. ನನ್ನ ಬದುಕು-ಕಾಯಕ-ಬರಹಗಳ ಸಮಗ್ರ ವಿವರಗಳನ್ನು ಇಲ್ಲಿ ದಾಖಲಿಸಿ ನಿಮ್ಮ ಮುಂದೆ ಇಟ್ಟಿದ್ದೇನೆ. ಇದು ನಿಮಗೆ ಇಷ್ಟವಾಗುತ್ತದೆ ಎನ್ನುವ ಭರವಸೆಯನ್ನೂ ಹೊಂದಿದ್ದೇನೆ ! ನಿಮ್ಮೆಲ್ಲರ ಹಾರೈಕೆ, ಪರಮಾಚಾರ್ಯರ ಆಶೀರ್ವಾದ ಹಾಗೂ ಆ ಭಗವಂತನ ಕೃಪೆ ನನ್ನನ್ನು ಸದೈವ ಕಾಯುತ್ತದೆ ಎಂದು ನನ್ನ ಅನನ್ಯ ನಂಬಿಕೆ...!

ನಮಸ್ಕಾರ.

||ಭದ್ರಂ ಶುಭಂ ಮಂಗಳಮ್||

ಆತ್ಮಕಥನಕಾರರು – ನಿರೂಪಕರು

ಅ. ಸಂಗೀತಗಾರನ ಮೆಲುಕುಗಳು

ಬಿ. ಸುಬ್ಬರಾಯರು

ಸಂಗೀತದ ಹುಚ್ಚು ಆವರಿಸಿದ ಕ್ಷಣಗಳೇ ತಮ್ಮ ಜೀವನದ ಅತ್ಯಂತ ಆನಂದದ ಕ್ಷಣಗಳೆಂದು ತಿಳಿದಿದ್ದವರು ಸುಬ್ಬರಾಯರು. ಹಾಸನ ಜಿಲ್ಲೆ, ಬಸವಾಪಟ್ಟಣ ಅವರ ಊರು; ಹಾಗಾಗಿ 'ಬಸವಾಪಟ್ಟಣದ ಸುಬ್ಬರಾಯ'ರೆನಿಸಿದರು. ಮುಂದೆ ನಾಗಪುರದಲ್ಲಿ ನೆಲೆಸಿದ್ದರಿಂದ 'ನಾಗಪುರ ಸುಬ್ಬರಾಯ'ರೆನಿಸಿದರು. 'ರಾಗನಿಧಿ'ಯನ್ನು ರಚಿಸಿದ ಮೇಲೆ ಅವರೇ 'ರಾಗನಿಧಿ ಸುಬ್ಬರಾಯ'ರಾದರು. ಮನೆಯಲ್ಲಿ ಅವರನ್ನು ತಂದೆತಾಯಿಗಳು ಪ್ರೀತಿಯಿಂದ ಕರೆದದ್ದು 'ಶ್ಯಾಮಣ್ಣಿ' ಎಂದು. ಅವರ ತಂದೆ ಬಿ. ರಾಮಸ್ವಾಮಯ್ಯರ್. ಅವರು ಸಂಕೇತಿ ಜನಾಂಗಕ್ಕೇ ಮೊದಲ ಪದವೀಧರರಾದ್ದರಿಂದ ಜನರು ಅವರನ್ನು 'ಬಿ.ಎ. ರಾಮಸ್ವಾಮಯ್ಯ' ಎಂದೇ ಕರೆಯುತ್ತಿದ್ದರು. 'ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್' ಹುದ್ದೆಯನ್ನಲಂಕರಿಸಿದ್ದ ರಾಮಸ್ವಾಮಯ್ಯನವರಿಗಿದ್ದ ಅಪಾರವಾದ ಸಂಗೀತಪ್ರೀತಿಯಿಂದಾಗಿ ಅವರು ನಿರ್ಮಾಣ ಮಾಡುತ್ತಿದ್ದ ಸಂಗೀತಪರಿಸರವು ಸಾಮಾಜಿಕರಿಗೆ ವರದಾನವಾಗಿತ್ತು, ಮಕ್ಕಳಿಗೆ ಶಿಕ್ಷಣವಾಗಿತ್ತು. ಸುಬ್ಬರಾಯರು ಹಾಡುಗಾರಿಕೆ ಮಾತ್ರವಲ್ಲದೆ ಪಿಟೀಲುವಾದನ, ಗೋಟುವಾದ್ಯ ಇವುಗಳಲ್ಲಿ ಪರಿಣತಿ ಹೊಂದಿ ವೇದಿಕೆಯ ಕಲಾವಿದರೂ, ಆಕಾಶವಾಣಿ ಕಲಾವಿದರೂ ಆಗಿದ್ದರು. ಆಕಾಶವಾಣಿಯೂ ಸೇರಿದಂತೆ ಹಲವಾರು ತಜ್ಞರ ಸಮಿತಿಗಳ ಸದಸ್ಯರಾಗಿದ್ದರು. ವಿದ್ವಾಂಸರ ಸಂಪರ್ಕಕ್ಕೆ ಬಂದಾಗ ಕಲಿಕೆಯ ಯಾವ ಅವಕಾಶವನ್ನೂ ಕಳೆದುಕೊಳ್ಳದ ಅವರು ಉತ್ತರಾದಿ–ದಕ್ಷಿಣಾದಿ ಎರಡು ಸಂಗೀತ ಪದ್ಧತಿಗಳಲ್ಲೂ ಪರಿಣತರಾಗಿದ್ದರು; (ಹಿಂದಿ, ಸಂಸ್ಕೃತ ಮತ್ತು ತೆಲುಗು ಭಾಷೆಗಳಲ್ಲಿ) ಎರಡೂ ಪದ್ದತಿಗಳಲ್ಲಿ ಕೃತಿಗಳನ್ನು ರಚಿಸಿದರು, ಭಾರತೀಯ ಸಂಗೀತದ ಅಪರೂಪದ ಕಲಾವಿದ ಎನಿಸಿದರು. ಕ್ರಿಕೆಟ್, ಫುಟ್ಬಾಲ್, ಟೆನ್ನಿಸ್ ಆಟಗಳಲ್ಲಿ ನಿಪುಣರಾಗಿ ಸಾಂಸ್ಕೃತಿಕ ಸ್ಪರ್ಧೆಗಳಲ್ಲೂ ಬಹುಮುಖ ಪ್ರತಿಭೆಯನ್ನು ಪ್ರದರ್ಶಿಸುತ್ತಿದ್ದ ಅವರಿಗೆ ಕಾಲೇಜಿನ 'ಕಾರೊನೇಷನ್ ಮೆಡಲ್' ಪ್ರಾಪ್ತವಾಗಿತ್ತು. ಅಗ್ರಾನಮಿಯಲ್ಲಿ ನಿಪುಣರಾಗಿದ್ದ ಅವರು ಹೊಗೆಸೊಪ್ಪು ಬೆಳೆ ಸಂಶೋಧಕರಾಗಿದ್ದರು; ಕೃಷಿ ಇಲಾಖೆಯ ಡೆಪ್ಯೂಟಿ ಡೈರೆಕ್ಟರ್ ಹುದ್ದೆಯನ್ನು ಅಲಂಕರಿಸಿದ್ದರು. ಪತ್ನಿ ರಾಜಮ್ಮನವರೂ ವೀಣೆ, ಹಾರ್ಮೋನಿಯಂ ಮತ್ತು ತಬಲ ವಾದನ ಕಲಾವಿದರಾಗಿದ್ದರು. ಸುಬ್ಬರಾಯರು ತಾವೇ ಸಿದ್ಧಪಡಿಸಿಕೊಂಡ 'ಚಿತ್ರವತೀವೀಣಾ' 'ವೀಣಾಸ್ಕೋಪ್' ತಾವೇ ಸೃಜಿಸಿದ 'ದ್ವಿಗಾಂಧಾರ ಭೂಷಿಣಿರಾಗ' ಇವುಗಳಿಗಲ್ಲದೆ ನಾಗಪುರ ವಿಶ್ವವಿದ್ಯಾಲಯದಲ್ಲಿ ಸಂಗೀತವನ್ನು ಅಧ್ಯಯನದ ವಿಷಯವಾಗಿ ಮಾಡಿದ್ದಕ್ಕಾಗಿಯೂ ಶ್ಲಾಘ್ಯರಾಗಿದ್ದಾರೆ. ಇವೆಲ್ಲಕ್ಕೂ ಕಿರೀಟಪ್ರಾಯವಾಗಿ 'ಭಾರತೀಯ ಸಂಗೀತ ಪದ್ಧತಿಗಳ ತುಲನಾತ್ಮಕ ಅಧ್ಯಯನದ ಮೊಟ್ಟಮೊದಲ ಗಂಭೀರ ಪ್ರಯತ್ನ' ಎಂಬ ಕೀರ್ತಿಗೆ ಪಾತ್ರವಾದ ಅವರ 'ರಾಗನಿಧಿ' ಸಂಪುಟಗಳಿವೆ. ಒಟ್ಟು 905 ರಾಗಗಳ ತೌಲನಿಕ ವಿಮರ್ಶೆ ಇರುವ ಈ ಕೃತಿ ಅವರ ಮಹಾವಿದ್ವತ್ತಿನ ದ್ಯೋತಕವಾಗಿದೆ. ಮದರಾಸಿನ ಸಂಗೀತ ಅಕಾಡಮಿ ಅವರಿಗೆ 'ಪ್ರಾವೀಣ್ಯ ಪ್ರಮಾಣಪತ್ರ' ನೀಡಿ, ತನ್ನನ್ನೇ ಗೌರವಿಸಿಕೊಂಡಿದೆ. ಸುಬ್ಬರಾಯರು 'ಬಿಡುವಿನ ವೇಳೆಯಲ್ಲಿ' 'ಆತ್ಮಸಂತೋಷಕ್ಕಾಗಿ' ಮಾಡಿಕೊಂಡ ಟಿಪ್ಪಣಿ ಒಞುಟಿಠ ರಜಿ ಚಿ ಒಞುಖಿಚಿಟಿ. ಈ ಟಿಪ್ಪಣಿಗಳ ಹಸ್ತಪ್ರತಿಯನ್ನು ಡಾ.ಮೀರಾಮೂರ್ತಿ 'ಸಂಗೀತಗಾರನ ಮೆಲುಕುಗಳು', ಎಂಬ ಹೆಸರಿನಲ್ಲಿ ಅನುವಾದಿಸಿಕೊಟ್ಟಿದ್ದಾರೆ.

ಬಿ. ಸುಬ್ಬರಾಯರ ಜೀವನ ವಿವರ

ಜನನ	:	1894, ಬಸವಾಪಟ್ಟಣ, ಹಾಸನ ಜಿಲ್ಲೆ. ಪ್ರೀತಿಯ ಹೆಸರು : ಶ್ಯಾಮಣ್ಣಿ, 'ನಾಗಪುರ ಸುಬ್ಬರಾಯರು', 'ರಾಗನಿಧಿ ಸುಬ್ಬರಾಯರು'.
ತಂದೆ	:	ಬಿ. ರಾಮಸ್ವಾಮಯ್ಯರ್, ಕೌಶಿಕ ಸಂಕೇತಿ ಸಮುದಾಯದ ಮೊದಲ ಬಿ.ಎ. ಪದವೀಧರ, 'ಬಿ.ಎ.' ರಾಮಸ್ವಾಮಯ್ಯ ಎಂದೇ ಖ್ಯಾತ. ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಸಂಗೀತಾಭಿರುಚಿ.
ತಾಯಿ	:	ವೆಂಕಟಲಕ್ಷ್ಮಮ್ಮ (ಅಮ್ಮಾಡಿ). ಇಬ್ಬರು ಗಂಡುಮಕ್ಕಳು, ನಾಲ್ವರು ಹೆಣ್ಣುಮಕ್ಕಳು.
1907	:	ಫೋರ್ತ್ ಫಾರಂ ವಿದ್ಯಾರ್ಥಿ, ಚಿತ್ರದುರ್ಗ
1911	:	ಮೆಟ್ರಿಕ್ಯುಲೇಷನ್
1914	:	ನಾಗಪುರದ 'ದಿ ಅಗ್ರಿಕಲ್ಚರಲ್ ಕಾಲೇಜ್'ನಲ್ಲಿ ವಿದ್ಯಾಭ್ಯಾಸ
1917	:	ಟೆನಿಸ್, ಕ್ರಿಕೆಟ್, ಫುಟ್‌ಬಾಲ್ ಆಟಗಾರ. ಕಾಲೇಜಿನ ಕಾರೊನೇಷನ್ ಮೆಡಲ್
1920	:	ನಾಗಪುರದ 'ದಿ ಅಗ್ರಿಕಲ್ಚರಲ್ ಕಾಲೇಜ್'ನಲ್ಲಿ ಉಪನ್ಯಾಸಕ, ವಿವಾಹ. ನಾಗಪುರ ಕೃಷಿ ಇಲಾಖೆಯ ಡೆಪ್ಯೂಟಿ ಡೈರೆಕ್ಟರ್. ಸಂಗೀತ ಗುರುಗಳು : ವೈಣಿಕ ವಿದ್ವಾನ್ ವಿಶ್ವನಾಥಶಾಸ್ತ್ರಿ, ವಿದ್ವಾನ್ ಗೋಪಾಲಯ್ಯ, ಪೆನುಕೊಂಡ ನರಸಿಂಹಾಚಾರಿ, ಪಂಡಿತ ದಿನಕರರಾವ್ ಪಟವರ್ಧನ್, ವಾಮನರಾವ್ ಜೋಷಿ, ಪಂಡಿತ್ ಖಾಂಡ್ಕರ್. ಗಾಯಕ, ಪಿಟೀಲು ಮತ್ತು ವಿಚಿತ್ರ ವೀಣಾ ವಾದಕ; ಸಂಗೀತಶಾಸ್ತ್ರಜ್ಞ; ಆಕಾಶವಾಣಿ ತಜ್ಞರ ಸಮಿತಿಗಳ ಸದಸ್ಯ; ವಾಗ್ಗೇಯಕಾರ, ಕರ್ನಾಟಕ ಮತ್ತು ಹಿಂದುಸ್ತಾನಿ ಸಂಗೀತ ಪದ್ಧತಿಗಳ ತಜ್ಞ, ತೌಲನಿಕ ಅಧ್ಯಯನಕಾರ, 'ಆಗ್ರೋನೇಮಿ'ಯಲ್ಲಿ ನಿಪುಣ, 'ಪೂಸಾ'ದ ಹೊಗೆಸೊಪ್ಪು ಸಂಶೋಧನೆಯಲ್ಲಿ ನಿರತ. 'ರಾಗನಿಧಿ' ನಾಲ್ಕು ಭಾಗಗಳಲ್ಲಿ ಪ್ರಕಟ.
ಪತ್ನಿ	:	ರಾಜಮ್ಮ ; ವೀಣೆ, ಹಾರ್ಮೋನಿಯಂ, ತಬಲಾ ವಾದಕಿ
1960	:	ಮೈಸೂರಿಗೆ
1965	:	ಮದ್ರಾಸ್ ಮ್ಯೂಸಿಕ್ ಆಕಾಡೆಮಿಯ ತಜ್ಞರ ಸಮಿತಿಯ ಸದಸ್ಯ
1967	:	ಮದ್ರಾಸ್ ಮ್ಯೂಸಿಕ್ ಅಕಾಡೆಮಿಯ 40ನೆಯ ಸಮ್ಮೇಳನದಲ್ಲಿ ವಿಶೇಷ ಪ್ರತಿಭಾ ಪ್ರಮಾಣಪತ್ರ.
1966–1970	:	Musings of a Musician

ಅನುವಾದಕಿ : ಡಾ. ಮೀರಾಮೂರ್ತಿ

ಮೈಸೂರು ವಿಶ್ವವಿದ್ಯಾನಿಲಯದ ಲಲಿತ ಕಲೆಗಳ ಕಾಲೇಜಿನಲ್ಲಿ ನಾಟಕಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಡಾ. ಮೀರಾ ಮೂರ್ತಿ ಸಂಗೀತದಲ್ಲೂ ಪರಿಶ್ರಮ ಇರುವಂಥವರು. ಇಂಗ್ಲಿಷ್ ಮತ್ತು ಕನ್ನಡ ಸಾಹಿತ್ಯಗಳ ಆಳವಾದ ಅಧ್ಯಯನದ ಜೊತೆಗೆ ನಾಟಕಶಾಸ್ತ್ರದಲ್ಲಿನ ಅವರ ವಿಶೇಷ ಪರಿಣತಿ ಅವರನ್ನು ಇತರ ಸಾಹಿತ್ಯಾಭ್ಯಾಸಿಗಳಿಗಿಂತ ಭಿನ್ನವಾಗಿಸಿದೆ. ಈ ಹಿನ್ನೆಲೆಯಲ್ಲಿಯೇ ಅವರು ರಚಿಸಿರುವ 'ಗಿರೀಶ್ ಕಾರ್ನಾಡ್' ಕೃತಿ ವಿಶಿಷ್ಟವೆನಿಸಿರುವಂಥದು. ಹೆನ್ರಿಕ್ ಇಬ್ಸನ್ನನ 'ಎ ಡಾಲ್ ಹೌಸ್' ನಂಥ ವಿಶಿಷ್ಟ ನಾಟಕವನ್ನು ಅತ್ಯಂತ ಸಹಜ ರೀತಿಯಲ್ಲಿ ಕನ್ನಡಕ್ಕೆ ತಂದಿದ್ದಾರೆ. ನಾಟಕಸಾಹಿತ್ಯದ ವಿಶಿಷ್ಟ ಪ್ರಕಾರಗಳನ್ನು ಕುರಿತಂತೆ ಮೌಲಿಕ ಲೇಖನಗಳನ್ನೂ ಬರೆದಿದ್ದಾರೆ. ಅವರ ಪಿಎಚ್.ಡಿ. ಸಂಶೋಧನ ಪ್ರಬಂಧವು 'ಸಂಸ'ರ ನಾಟಕಗಳನ್ನು ಕುರಿತದ್ದೇ ಆಗಿದೆ. ನಾಟಕಶಾಸ್ತ್ರದಲ್ಲಿನ ಹೊಸ ಬೆಳವಣಿಗೆಗಳ ಅಧ್ಯಯನಕ್ಕಾಗಿ ವಿದೇಶಗಳಿಗೂ ಹೋಗಿ ಬಂದಿದ್ದಾರೆ ಎಂಬುದು ಅವರ ಸಂಶೋಧನಾಸಕ್ತಿಯ ಕುರುಹಾಗಿದೆ. ರಂಗಚಟುವಟಿಕೆಗಳೊಂದಿಗೆ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಮೀರಾಮೂರ್ತಿಯವರು 'ರಾಗನಿಧಿ' ಯಂಥ ಅಮೂಲ್ಯಕೃತಿಯ ಕರ್ತೃವಿನ ಆತ್ಮಕಥೆಯನ್ನು ಸಂಗ್ರಹಿಸಿ, ಕಾಪಾಡಿ ಪ್ರಕಾಶನಕ್ಕೆ ಒದಗಿಸಿರುವುದೂ ಮತ್ತೊಂದು ಮಹತ್ತ್ವದ ಕೆಲಸವೇ ಆಗಿದೆ.

ಆ. ಪಂಡಿತರೊಡನೆ

ವೇ॥ ಬ್ರ॥ ಶ್ರೀ ನರಸಿಂಹಮೂರ್ತಿಶಾಸ್ತ್ರಿಗಳು

ವಿದ್ವಾನ್ ನರಸಿಂಹಮೂರ್ತಿಶಾಸ್ತ್ರಿಗಳು ಹುಟ್ಟಿದ್ದು (1912) ಚಿಕ್ಕಮಗಳೂರು ಜಿಲ್ಲೆಯ ಲಿಂಗದಹಳ್ಳಿಯಲ್ಲಿ, ವೇದಪಂಡಿತರ ವಂಶದಲ್ಲಿ. ಆ ಕಾಲಕ್ಕೆ ಕನ್ನಡ ಮತ್ತು ಇಂಗ್ಲಿಷ್ ಎಲ್.ಎಸ್. ಮಾಡಿದ್ದು ಗಣನೀಯವಾದ ಲೌಕಿಕ ಶಿಕ್ಷಣವೇ ಆಗಿತ್ತು. ಅಲ್ಲಿಂದ ಮುಂದೆ ಅವರು ನಾಟಕಾಂತ ಸಾಹಿತ್ಯ, ವೇದಶಾಸ್ತ್ರ, ವ್ಯಾಕರಣ ವಿದ್ವತ್; ಸಾಹಿತ್ಯ ಶಿರೋಮಣಿ, ಸಾಹಿತ್ಯ ವಿದ್ವತ್; ವೇದಾಂತ–ಮೀಮಾಂಸಾ ವಿದ್ವತ್, ಜ್ಯೌತಿಷ ವಿದ್ವತ್ ಮಾಡಿ ಆರ್ಷವಿದ್ಯೆಯ ಮಹಾಪಂಡಿತರಾದರು. 1927 ರಿಂದ 1952ರ ವರೆಗಿನ 25 ವರ್ಷಗಳ ದೀರ್ಘಾವಧಿಯ ಅಧ್ಯಯನ ಅದಾಗಿತ್ತು. ಶೃಂಗೇರಿಯ ಸಂಸ್ಕೃತ ಕಾಲೇಜಿನಲ್ಲಿಯೂ, ಲಿಂಗದಹಳ್ಳಿಯ ಪಾಠಶಾಲೆಯಲ್ಲೂ ವೇದ ಮತ್ತು ಸಂಸ್ಕೃತವನ್ನು ಕಲಿಸಿದರು. ಅನೇಕ ಪೀಠಾಧಿಪತಿಗಳಿಗೂ ವಿದ್ಯಾಗುರುಗಳಾದರು. ರುದ್ರ ಚಮಕದ ಕನ್ನಡಾನುವಾದ, ಏಕಾಗ್ನಿಕಾಂಡದ ವ್ಯಾಖ್ಯಾನ, ರುದ್ರಾಧ್ಯಾಯದ ಅನುವಾದ, ವೇದಸಂದೇಶಗಳು ಎಂಬ ಹೊತ್ತಗೆ ಅವರ ಪ್ರಕಟಿತ ಕೃತಿಗಳಲ್ಲಿ ಕೆಲವು. ಪ್ರಕಟಣೆಗೆ ಕಾದಿರುವ ಕೃತಿಗಳು ಇನ್ನೂ ಹೆಚ್ಚಾಗಿಯೇ ಇವೆ. ಅಧ್ಯಯನ ಮತ್ತು ಅಧ್ಯಾಪನದಲ್ಲಿಯೇ ಒಂಬತ್ತು ದಶಕಗಳು ಸಂದಿವೆ. ಈಗಲೂ ಕ್ರಿಯಾಶೀಲರೇ ಆಗಿರುವ ಅವರಿಗೆ 2001 ರ 'ಶ್ರೀ ಗುರು ಗಂಗೇಶ್ವರಾನಂದಜಿ ವೇದರತ್ನ ಪುರಸ್ಕಾರ'ವು ಲಭ್ಯವಾಗಿದೆ.

ವಿದ್ಯಾಸಾಗರ ವೇ.ಬ್ರ.ಶ್ರೀ ನರಸಿಂಹಮೂರ್ತಿಶಾಸ್ತ್ರಿಗಳ ಸಂಕ್ಷಿಪ್ತ ಪರಿಚಯ

ತಂದೆ	:	ವೇ॥ಬ್ರ॥ಶ್ರೀ ಶ್ಯಾಮಾಶಾಸ್ತ್ರಿಗಳು
ತಾಯಿ	:	ಶ್ರೀಮತಿ ಫಣಿಯಮ್ಮ
ಜನನ	:	1912 (ಲಿಂಗದಹಳ್ಳಿ)
ಪತ್ನಿ	:	ಶ್ರೀಮತಿ ಸೀತಮ್ಮ
ಮಕ್ಕಳು		
		ಶ್ರೀಮತಿ ಸುಂದರಮ್ಮ ವೆಂಕಟರಮಣಶಾಸ್ತ್ರಿ
		ಶ್ರೀಮತಿ ಗೌರಿ ಸುಬ್ರಹ್ಮಣ್ಯ
		ಶ್ರೀಮತಿ ರಾಜೇಶ್ವರಿ ಶ್ರೀಧರ್

ವಿದ್ಯಾಭ್ಯಾಸ :
1925 – ಕನ್ನಡ ಎಲ್.ಎಸ್. (ಲಿಂಗದಹಳ್ಳಿ)
1927 – ಇಂಗ್ಲಿಷ್ ಎಲ್.ಎಸ್. (ಚಿಕ್ಕಮಗಳೂರು)
1927–1932 ನಾಟಕಾಂತ ಸಾಹಿತ್ಯ ಮತ್ತು ವೇದಶಾಸ್ತ್ರ (ಶೃಂಗೇರಿ)
1933–1934 ವ್ಯಾಕರಣ ವಿದ್ವತ್ (ಧಾರವಾಡ)
1934–1939 ಸಾಹಿತ್ಯ ಶಿರೋಮಣಿ (ವಿದ್ವತ್), ತರ್ಕವಿದ್ವತ್ (ಧಾರವಾಡ)
1939–40 ಸಾಹಿತ್ಯ ವಿದ್ವತ್, ಅಲಂಕಾರ ವಿದ್ವತ್ (ಮದ್ರಾಸ್)
1940–46 ವೇದಾಂತ ವಿದ್ವತ್, ಮೀಮಾಂಸಾ ವಿದ್ವತ್ (ಮದ್ರಾಸು)
1946–1952 ಜ್ಯೋತಿಷ್ಯ ವಿದ್ವತ್ (ಶೃಂಗೇರಿ)
1952–1956 ಬಂಡಿಗಡಿ ಸ್ವಾಮಿಗಳ ಜೊತೆಯಲ್ಲಿ ದಕ್ಷಿಣ ಭಾರತ ಪ್ರವಾಸ.
ಪ್ರಯಾಣದುದ್ದಕ್ಕೂ ವೇದಾಂತ ಪ್ರವಚನ ಮತ್ತು ಮಠದ ಸ್ವಾಮಿಗಳಿಗೆ ಪಾಠ ಪ್ರವಚನ.

ವೃತ್ತಿ :
1956–1967 ಲಿಂಗದಹಳ್ಳಿಯಲ್ಲಿ ಶಾರದಾವಿಲಾಸ ಸಂಸ್ಕೃತ ಪಾಠಶಾಲೆ ಪ್ರಾರಂಭಿಸಿ, ಅಧ್ಯಾಪಕ ವೃತ್ತಿ. ಪೌರೋಹಿತ್ಯ
1967–1971 ಶೃಂಗೇರಿ ಕಾಲೇಜಿನಲ್ಲಿ (ಸಂಸ್ಕೃತ ಕಾಲೇಜು) ಅಲಂಕಾರಶಾಸ್ತ್ರ ಪ್ರಾಧ್ಯಾಪಕ
1971–1975 ಭೀಮನಕಟ್ಟೆ (ಶಿವಮೊಗ್ಗ ಜಿಲ್ಲೆ) ಮಠದ ಸ್ವಾಮಿಗಳವರಿಗೆ ಪಾಠ ಪ್ರವಚನ, ಉತ್ತರ ಭಾರತ ಪ್ರವಾಸ.
1975–1980 ಹೆಗ್ಗೋಡಿನ ಕೇಡಲಸರ ಸಂಸ್ಕೃತ ವೇದ ಪಾಠಶಾಲೆಯಲ್ಲಿ ಅಧ್ಯಾಪಕರ ವೃತ್ತಿ (ಸಂಸ್ಕೃತ ಮತ್ತು ವೇದ)
1980–1982 ಮುಳಬಾಗಿಲು ಮಠದ (ಕೋಲಾರ) ಸ್ವಾಮಿಗಳಿಗೆ ಪಾಠಪ್ರವಚನ
1988–1991 ಕೂಡ್ಲಿ ಮಠದ ಸ್ವಾಮಿಗಳಿಗೆ ವೇದ, ಸಂಸ್ಕೃತ ಪಾಠ ಪ್ರವಚನ
1991ರಿಂದ ಇಲ್ಲಿಯವರೆಗೆ ಲಿಂಗದಹಳ್ಳಿಯಲ್ಲೇ ವಾಸ್ತವ್ಯ , ಪೌರೋಹಿತ್ಯ, ಸಾಹಿತ್ಯರಚನೆ, ಸಂಕೇತಿ ಸಮಾಜ ಬಾಂಧವರಿಗೇ ಅಲ್ಲದೇ ವಿವಿಧ ಸಮಜ ಬಾಂಧವರಿಗೂ ಹತ್ತು ಹಲವು ರೀತಿಯ ಸೇವೆ; 1991 ಕ್ಕೆ ಮೊದಲು ಬಿಡುವಿನ ವೇಳೆಯಲ್ಲೆಲ್ಲಾ ಲಿಂಗದಹಳ್ಳಿಯಲ್ಲಿ ವಾಸ್ತವ್ಯ ಮತ್ತು ನಿರಂತರ ಸಮಾಜಸೇವೆ.

ಮುದ್ರಣ ಕಂಡ ಕೃತಿಗಳು :
1) ವಿಷ್ಣುಸೂರಿ ವಿರಚಿತ ರುದ್ರ ಚಮಕಾಧ್ಯಾಯ ಟೀಕೆಯ ಕನ್ನಡ ಅನುವಾದ.
2) 'ಏಕಾಗ್ನಿ ಕಾಂಡ' (ವೇದ ಪ್ರಶ್ನೆ) ಕನ್ನಡದಲ್ಲಿ ಅರ್ಥ, ತಾತ್ಪರ್ಯ ವಿವರಣೆ
3) 'ರುದ್ರಾಧ್ಯಾಯ' ಕನ್ನಡ ಅನುವಾದ
4) ವೇದ ಸಂದೇಶಗಳು
5) ಅಶ್ವಮೇಧಯಾಗವನ್ನು ಕುರಿತು ತಾತ್ಪರ್ಯ ವಿವರಣೆ
6) ಯಜ್ಞ ಸ್ವರೂಪ
7) ಸಮುದಾಯ ಅಧ್ಯಯನ ಕೇಂದ್ರವು ಪ್ರಕಾಶಪಡಿಸಿದ 'ಸಂಭೃತಿ'ಯಲ್ಲಿ ದಾನ, ಧರ್ಮ, ಸಂಸ್ಕೃತಿ, ಆಚಾರ ವಿಚಾರಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಒಂದು ನೂರು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಮಾಲೆ.

ಮುದ್ರಣ ಕಾಣದ ಕೈ ಬರಹ ಕೃತಿಗಳು :
೧) ಏಕಾಗ್ನಿಕಾಂಡದ ಅರ್ಥ, ತಾತ್ಪರ್ಯ ವಿವರಣೆ (ಮುಂದುವರೆದ ಭಾಗ)
೨) ವೇದಸಂದೇಶಗಳು (ಮುಂದುವರೆದ ಭಾಗ)
೩) ಸಂಸ್ಕೃತ ಕವಿತೆಗಳು, ಕವಿತಾಗುಚ್ಛಗಳು (ಸುಮಾರು 500 ಕ್ಕೂ ಹೆಚ್ಚು)
೪) ಮಸೀದಿ–ಮಂದಿರ, ಬೆತ್ತಲೆ ಸೇವೆ, ಬಲಿದಾನ ಇತ್ಯಾದಿ ಹಲವಾರು ಸಣ್ಣ ಸಣ್ಣ ಲೇಖನಗಳು.

ಬೀ.ಚಿ. ಜಗನ್ನಾಥ ಜೋಯಿಸ್

ಬೀರೂರಿನ ಖ್ಯಾತ ಪಂಡಿತರೂ ಕವಿಯೂ ಆದ ಚಿದಂಬರ ಜೋಯಿಸ್ ಮತ್ತು ಸಾವಿತ್ರಿ ದಂಪತಿಗಳ ಹತ್ತು ಮಕ್ಕಳಲ್ಲಿ ಜಗನ್ನಾಥ ಜೋಯಿಸ್ ಒಬ್ಬರು. 17.7.1956ರಲ್ಲಿ ಜನಿಸಿದ ಜಗನ್ನಾಥ್ ಅವರು ಬಿ.ಕಾಂ. ಪದವೀಧರರು. 1982ರಲ್ಲಿ ಕೆನರಾಬ್ಯಾಂಕಿನ ಸೇವೆಗೆ ಸೇರಿದ ಅವರು ಇದೀಗ ಬೆಂಗಳೂರಿನ ಪದ್ಮನಾಭನಗರದ ಶಾಖೆಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಹಜವಾಗಿಯೇ ಅವರಿಗೆ ಸಂಗೀತ ಮತ್ತು ಸಾಹಿತ್ಯದಲ್ಲಿ ಅಭಿರುಚಿ ಇದೆ. ಹಾಡು ಹೇಳುವುದರಲ್ಲೂ ಪರಿಶ್ರಮ ಇರುವ ಅವರು ಕವನಗಳನ್ನೂ ಚುಟುಕುಗಳನ್ನೂ ರಚಿಸಿ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ವ್ಯಕ್ತಿಪರಿಚಯ ಮತ್ತು ಸಂದರ್ಶನ ಲೇಖನಗಳನ್ನೂ ಪ್ರಕಟಿಸಿದ್ದಾರೆ. ಹೊಸಹಳ್ಳಿಯಲ್ಲಿ ಜಮೀನ್ದಾರರಾಗಿದ್ದ ವೆಂಕಟೇಶ್ ಮತ್ತು ಸಾವಿತ್ರಿ ದಂಪತಿಗಳ ಪುತ್ರಿ ತಾರಾ ಅವರು ಅವರ ಪತ್ನಿ. ವೇಬ್ರಶ್ರೀ ನರಸಿಂಹಮೂರ್ತಿಶಾಸ್ತ್ರಿಗಳ ಕೋಮಲ ವ್ಯಕ್ತಿತ್ವವನ್ನೂ ನಾಚಿಕೆಯ ಸ್ವಭಾವವನ್ನೂ ಸಾತ್ತ್ವಿಕ ಗುಣವನ್ನೂ ಗಮನಿಸಿದ ಜೋಯಿಸರು ಬಹು ಜಾಣ್ಮೆಯಿಂದ ಶಾಸ್ತ್ರಿಗಳ ಬಗೆಗೆ ಹಲವು ಮಾಹಿತಿಯನ್ನು ಸಂಗ್ರಹಿಸಿಕೊಟ್ಟಿದ್ದಾರೆ.

ಇ. ನನ್ನ ಬದುಕು

ಆತ್ಮನಿವೇದನ

(ಪ್ರಾಧ್ಯಾಪಕ ಶ್ರೀ ಆರ್. ಎನ್. ದೊರೆಸ್ವಾಮಿ ಅವರು 80 ವಸಂತಗಳನ್ನು ಕಂಡ ಹೊತ್ತು ತಮ್ಮ ಜೀವಿತದ ಬಗೆಗೆ ಹರಿಸಿದ ವಿಹಂಗಮ ನೋಟ)

ಎಲ್ಲಿಂದಲೋ ಬುವಿಗೆ ಬಂದು ನಾ ಕಣ್ ತೆರೆದು ।
ಎಲ್ಲವನು ಕಂಡಾಗ ಸಂಭ್ರಮವೊ ಸಂಭ್ರಮ ।
ಎಲ್ಲೆಲ್ಲು ಸಂತಸ ಎಲ್ಲೆಲ್ಲು ಸಡಗರ ।
ಎಲ್ಲವೂ ಸುಂದರ ಸುಮಧುರ ಸುಖಕರ ॥

ಪುತ್ರರತ್ನನ ಜನನವಾಯಿತೆಂದೆಲ್ಲರೂ ।
ಆತ್ರೇಯ ಗೋತ್ರಸಂಭವ ಎನ್ನ ಹರಸಿದರು ।
ಪಿತೃಕುಲವನುದ್ಧರಿಪ ಮಗನೆಂಬ ಹೆಗ್ಗಳಿಕೆ ।
ಮಾತೃಪ್ರೇಮದ ಮಮತೆಗಳಲಿ ನಾ ನಲಿನಲಿದೆ ॥

ಪುಟ್ಟಿಸಿದ ತಾಯ್ತಂದೆ ಇಷ್ಟಕುಲಬಾಂಧವರು ।
ಇಟ್ಟು ಪೆಸರೊಂದೆನಗೆ ಕೂಗಿದರು ದೊರೆಯೆಂದು ।
ಪುಟ್ಟ ಹೆಜ್ಜೆಗಳಿಡುತ ನಡೆದೆ ನಾನಲ್ಲಿಂದ ।
ಇಷ್ಟು ಕಾಲವು ಸತತ ದಿಟ್ಟ ಸಾಹಸದಿಂದ ॥

ದೊರೆ ನಾನು ಪೆಸರಿನಲಿ ಎನಗೊಬ್ಬ ದೊರೆಯಿಹನು ।
ದೊರೆಗಳೆಲ್ಲರ ದೊರೆಯು ದೊರೆಯನವ ಸುಲಭದಲಿ ।
ದೊರೆತನಕೆ ಸಿರಿತನಕೆ ಸರಿಯುಂಟೆ ಆ ದೊರೆಗೆ।
ದೊರೆಯದಿರೆ ಬಿಡೆ ನಾನು ಆ ದೊರೆಯು ದೊರೆವನಕ ॥

ಕಲಿಸಿದರು ಶಾಲೆಯಲಿ ಕಲಿತೆ ನಾ ಸಂತಸದಿ ।
ಒಲಿಯಿತೆನ್ನಯ ಮನವು ಗಾನವಾದನ ಕಲೆಗೆ।
ಸುಲಭದಲಿ ಒದಗದಿಹ ವೀಣೆವಾದ್ಯದ ಕಲಿಕೆ।
ಛಲದಿಂದ ವಶವಾಯಿತೆನ್ನ ಗುರುಕೃಪೆಯಿಂದ ॥

ಪಡೆದೆ ನಾ ಭಾರ್ಯೆಯನು ಪುಟ್ಟ ಬಾಲಿಕೆ ಲಕ್ಷ್ಮಿ ।
ನಡೆದಳೆನ್ನಯ ಜತೆಗೆ ಎಡಬಿಡದೆ ಹಗಲಿರುಳು ।
ಮಡದಿ ಮಕ್ಕಳ ಪ್ರೀತಿ ವಾತ್ಸಲ್ಯ ಸ್ನೇಹಗಳ ।
ಕಡಲಿನಲಿ ಮಿಂದು ನಾ ಕಂಡೆ ಜೀವನದ ಸವಿ ॥

ನಾನೆಂದು ಬಯಸದಿಹ ಬಿರುದು ಬಾವಲಿಗಳನು ।
ಮನತಣಿಯೆ ನೀಡಿದರು ಗೌರವಿಸಿ ಸಜ್ಜನರು ।
ನಾನದನು ಧನ್ಯತೆಯ ಭಾವದಲಿ ಸ್ವೀಕರಿಸಿ ।
ಮನಸಾರೆ ಅರ್ಪಿಸಿದೆ ತಾಯ್ತಂದೆ ಗುರುಪದಕೆ ॥

ಸಂಸಾರದಲಿ ಸುಖವು ಕ್ಷಣಿಕವೆಂದರಿತಿರಲು ।
ವಾಸುದೇವನ ಧ್ಯಾನ ಒದಗಿಹುದು ಕಷ್ಟದಲಿ ।
ಏಸುಜನ್ಮದ ಪುಣ್ಯದಿಂದೆನಗೆ ಲಭಿಸಿಹುದು ।
ದಾಸನಾಗುವ ಭಾಗ್ಯ ಹರಿಕೀರ್ತನೆಯ ಪಾಡಿ ॥

ಹರಿಕೃಪೆಯು ಗುರುಕೃಪೆಯು ಸತತ ಎನಗಿಹುದೆಂದು ।
ನಿರುತ ನಂಬಿಹ ನಾನು ಸಾಗಿಹೆನು ಶಾರದೆಯ ।
ಕರಚರಣ ಪೂಜೆಯಲಿ ವೀಣೆ ಇಂಚರದಿಂದೆ ।
ಸ್ವರರಾಗಲಯಗಳಲಿ ದೇವಿಯನು ನೆರೆ ಸ್ತುತಿಸಿ ॥

ನಿನ್ನ ಕೃಪೆಯಿಂದೆ ನಾ ಕಂಡೆ ದಶಕಗಳೆಂಟು ।
ಘನ್ನ ಶ್ರೀಹರಿ ನಿನಗೆ ನಮನಗಳು ನೂರೆಂಟು ।
ನಾನಿನ್ನು ಎಂದೆಂದು ನಿನ್ನ ಧ್ಯಾನದೊಳಿರುವೆ ।
ಎನ್ನ ವೀಣೆಯ ಮಧುರ ನಾದದಲಿ ಮೈಮರೆವೆ ॥

ಎನಗೆಲ್ಲವನು ನೀಡಿ ಎನ್ನ ನೀ ಸಲಹುತಿರೆ ।
ಎನ್ನ ತನುಮನವೆಲ್ಲ ನಿನಗೆ ಅರ್ಪಿತವಹುದು।
ಇನ್ನು ನಾ ನಿನ್ನನೇನನು ಬೇಡಲೋ ಹರಿಯೆ ।
ನಿನ್ನ ನಾಮಸ್ಮರಣೆಯೊಂದಿದ್ದರೇ ಸಾಕೊ ॥

ತ್ರಿಕರಣದ ಶುದ್ಧಿಯೇ ಭಾಗೀರಥಿಯ ಸ್ನಾನ ।
ನಿಷ್ಕಾಮಕರ್ಮವೇ ಹೋಮ ಜಪತಪಂಗಳು ।
ಭಕುತಿಯೇ ಭೂಷಣವು ನಿಜಭಕ್ತನಾದವಗೆ ।
ಮುಕ್ತಿಮಾರ್ಗಕೆ ಭಕ್ತಿಯೇ ಪರಮಸಾಧನವು ॥

ಈ ಜಗವು ನಶ್ವರವು ಎಂದಿಹರು ಜ್ಞಾನಿಗಳು ।
ಈ ಜಗದ ಆದ್ಯಂತಗಳ ಬಲ್ಲವರು ಇಹರೆ ।
ಈ ಜಗದೊಡೆಯ ನೀನು ಎಲ್ಲೆಡೆಯು ಇರುತಿರಲು ।
ಈ ಜಗವೆ ಸ್ವರ್ಗವಲ್ಲದೆ ಸ್ವರ್ಗಬೇರುಂಟೆ ॥

ಸತ್ಯಶಿವಸುಂದರನೆ ನಿತ್ಯ ಮಂಗಳಕರನೆ ।
ನಿತ್ಯಸತ್ಯನೆ ನಿನ್ನ ಮಹಿಮೆಗಳಿಗೆಣೆಯುಂಟೆ ।
ನಿತ್ಯಸತ್ಯವನರಿತು ನಿತ್ಯಧ್ಯಾನದಲಿ ನಾ ।
ಸತ್ಯ ಧರ್ಮವ ಬಿಡದೆ ನಿನ್ನನೇ ನಂಬಿರುವೆ ॥

ವೇದ ಇತಿಹಾಸಗಳು ಪಾಡಿಪೊಗಳಿಹ ದಿವ್ಯ ।
ನಾದಮಯ ಮೋದಮಯ ವೀಣೆ ಎನಗೊಲಿದಿಹುದು ।
ಮೃದುಮಧುರ ಗಮಕಗಳ ವೈಭವದ ವಾದ್ಯವಿದು ।
ಇಂದೆನ್ನ ಜೀವನದ ಪರಮಾರ್ಥ ಸಾಧನವು ॥

ಮುಪ್ಪುಂಟು ಎಲ್ಲರಿಗು ಮುಪ್ಪಿನಲು ಸುಖವುಂಟು ।
ಮುಪ್ಪಿನಲು ನೆಮ್ಮದಿಯ ಕಾಣುವವನೇ ಧನ್ಯ ।
ಮುಪ್ಪಿಲ್ಲ ಆತ್ಮನಿಗೆ ಮುಪ್ಪಿಲ್ಲ ಚೇತನಕೆ ।
ಮುಪ್ಪೆ ಜೀವನವೆಲ್ಲದರ ಸಾರಸರ್ವಸ್ವ ॥

ಮುಪ್ಪಿನಲಿ ಇರಬೇಕು ಎಲ್ಲರಲಿ ಸಮರಸವು ।
ಮುಪ್ಪಿನಲು ಜೀವನದ ಸಿಹಿಕಹಿಗಳಿರಬೇಕು ।
ಮುಪ್ಪುಬಾರದ ಮುನ್ನ ನಮಗಾದ ಅನುಭವವು ।
ಮುಪ್ಪುಬಂದಾಗ ನಮಗೀಯುವುದು ಸಾಂತ್ವನವ ॥

ಆನಂದವೇ ಯೋಗ ಭೋಗತ್ಯಾಗಗಳ ಫಲ ।
ಆನಂದವೇ ಜೀವನದ ಪರಮ ಗುರಿಯಹುದು ।
ಆನಂದವಿಹುದೆಮ್ಮ ಹೃದಯಾಂತರಾಳದಲಿ ।
ಆನಂದವೇ ಪರಮ ಬ್ರಹ್ಮಸ್ವರೂಪವು ॥

ಆನಂದವಾನಂದವೆಂದು ಕುಣಿದಾಡಿದರು ।
ಆನಂದದಲಿ ಮುಳುಗಿ ಸಕಲ ಹರಿದಾಸರು ।
ಆನಂದವಿಹುದು ಶ್ರೀ ಹರಿಭಕ್ತಿಸುಧೆಯಲ್ಲಿ ।
ಆನಂದವಿಲ್ಲದಿಹ ಜೀವನವು ನಿಷ್ಫಲವು ॥

ಎನ್ನ ಶ್ರೀಹರಿ ನೀನು ಕರೆದೊಡನೆ ನಾ ಬರುವೆ ।
ನಿನ್ನ ಕರೆ ಬರುವನಕ ನಾನಿಲ್ಲಿಯೇ ಇರುವೆ ।
ಎನ್ನ ಜೀವನದ ಸವಿನೆನಪುಗಳ ನಾ ಮೆಲುವೆ ।
ಎನ್ನನೆಲ್ಲಿಯವರೆಗೆ ನಡೆಸುವೆಯೊ ನಾ ನಡೆವೆ ॥

ಸಂಗೀತ ಸಾಹಿತ್ಯಗಳ ತವರು ನಮ್ಮೂರು।
ಸಂಕೇತಿಗಳ ಬೀಡು ವೇದಘೋಷದ ನಾಡು।
ಸಂಕೇತಿ ನಾನೆಂಬ ಹೆಮ್ಮೆಯೆನಗಿಹುದಿಂದು।
ಸಂಸ್ಕೃತಿಯ ನೆಲೆರುದ್ರಪಟ್ಣದವ ನಾನೆಂದು ॥

ಪರಮಭಾಗವತೋತ್ತಮರ ದಿವ್ಯಚರಿತೆಗಳ ।
ಪರತತ್ತ್ವಸಾರಸಂಪದವೆಲ್ಲವನೆ ಅರಿತು ।
ವರಗೀತಗಾಯನದ ರಚನೆಗಳ ಕಾರ್ಯದಲಿ ।
ನಿರತನಾಗಿಹ ಎನ್ನ ಸಲಹೊ ಲಕುಮೀರಮಣ ॥

ಪ್ರೊ.ಆರ್. ಎನ್. ದೊರೆಸ್ವಾಮಿ

ಪವಿತ್ರ ಕಾವೇರಿ ತೀರದಲ್ಲಿರುವ ರುದ್ರಪಟ್ಟಣ ಒಂದು ಕಾಲದಲ್ಲಿ ಮೈಸೂರಿನ ತಂಜಾವೂರೆಂದು ಪ್ರಸಿದ್ಧವಾಗಿದ್ದ ಸ್ಥಳ. ಅನೇಕ ಶ್ರೇಷ್ಠ ವೈಣಿಕರು ಮತ್ತು ಗಾಯಕರುಗಳಿಂದ ತುಂಬಿ ಕಲಾವೈಭವದಿಂದ ಮೆರೆದ ಊರು. ಇಂತಹ ರುದ್ರಪಟ್ಟಣದಲ್ಲಿ ಸಂಗೀತ, ಸಾಹಿತ್ಯ, ವೇದಾಧ್ಯಯನಗಳಿಗೆ ಹೆಸರಾದ ಸಂಕೇತಿ ಜನಾಂಗದಲ್ಲಿ ಜನಿಸಿ, ಒಳ್ಳೆಯ

ಸಾಂಸ್ಕೃತಿಕ ಪರಿಸರದಲ್ಲಿ ಬೆಳೆದು, ಸ್ವಯಾರ್ಜಿತವಾದ ಪುಣ್ಯವಿಶೇಷದಿಂದಲೂ, ಪ್ರತಿಭೆ ಪರಿಶ್ರಮಗಳಿಂದಲೂ ಒಬ್ಬ ಶ್ರೇಷ್ಠ ವೈಣಿಕರಾಗಿ, ವಾಗ್ಗೇಯಕಾರರಾಗಿ ವಿಕಾಸಗೊಂಡು ತಮ್ಮ ವೀಣಾವಾದನದ, ಹಾಗೂ ಸ್ವಂತ ರಚನೆಗಳ ಇಂಪು, ಕಂಪುಗಳನ್ನು ನಮ್ಮ ನಾಡಿನ ಉದ್ದಗಲಕ್ಕೂ ಹರಡುತ್ತಿದ್ದಾರೆ ಕರ್ನಾಟಕ ಕಲಾತಿಲಕ ಶ್ರೀ ಆರ್. ಎನ್. ದೊರೆಸ್ವಾಮಿಯವರು. ಒಂದು ಕಡೆ ಶ್ರೀ ತ್ಯಾಗರಾಜರ ಪರಂಪರೆಗೆ ಸೇರಿದ ರಾಮನಾಡ್ ಶ್ರೀನಿವಾಸಯ್ಯಂಗಾರ್ ಅವರ ಶಿಷ್ಯರಾಗಿದ್ದ ಸೇಲಂ ದೊರೆಸ್ವಾಮಿ ಅಯ್ಯಂಗಾರ್ ಅವರಲ್ಲಿ ಸಂಗೀತ ಶಿಕ್ಷಣ, ಇನ್ನೊಂದು ಕಡೆ ಮೈಸೂರು ವೀಣಾ ಶೈಲಿಯ ಆದ್ಯ ಪ್ರವರ್ತಕರೆನಿಸಿದ ವೀಣಾ ಶೇಷಣ್ಣನವರ ಶಿಷ್ಯರಾಗಿದ್ದ ವೀಣಾ ವೆಂಕಟಗಿರಿಯಪ್ಪನವರಲ್ಲಿ ವೀಣಾ ಶಿಕ್ಷಣ. ಹೀಗೆ, ಈ ಎರಡು ಭವ್ಯ ಪರಂಪರೆಗಳನ್ನು ಪ್ರತಿನಿಧಿಸುವ ಅಪೂರ್ವ ಸುಯೋಗ ದೊರೆಸ್ವಾಮಿಗಳಿಗೆ ಲಭಿಸಿದೆ. ಗಾಯನ, ವಾದನಗಳೆರಡರಲ್ಲಿನ ಉತ್ತಮಾಂಶಗಳನ್ನು ಮೈಗೂಡಿಸಿಕೊಂಡ ಇವರ ಶ್ರೇಷ್ಠ ಮಟ್ಟದ ರಚನೆಗಳು ಕರ್ನಾಟಕ ಸಂಗೀತ ಪ್ರಪಂಚಕ್ಕೆ ಇವರು ನೀಡಿರುವ ಒಂದು ಅಮೂಲ್ಯವಾದ ಕೊಡುಗೆಯಾಗಿದೆ. ಸರಳವಾದ, ರಾಗರಸಯುಕ್ತವಾದ, ಭಾವಪೂರ್ಣವಾದ, ಧಾತು ಮಾತುಗಳಿಂದ ಕೂಡಿದ ಇವರ ರಚನೆಗಳು ಪಂಡಿತ ಪಾಮರರಾದಿಯಾಗಿ ಎಲ್ಲರೂ ಕಲಿತು ಕೇಳಿ ಆನಂದಿಸಬಹುದಾದ ರಚೆನೆಗಳಾಗಿವೆ.

ಪ್ರೊ. ಆರ್. ಎನ್. ದೊರೆಸ್ವಾಮಿ ಜೀವನ ವಿವರ

ಜನನ	:	೧೨.೧೨.೧೯೧೬; ರುದ್ರಪಟ್ಟಣ, ಅರಕಲಗೂಡು ತಾಲ್ಲೂಕು, ಹಾಸನಜಿಲ್ಲೆ, ಕರ್ನಾಟಕ : ನಾಲಾಮನೆತನ : ತಂದೆ : ನಾಲಾ ವೆಂಕಟರಾಮಯ್ಯ, ತಾಯಿ : ಸಾವಿತ್ರಮ್ಮ
ಬಾಲ್ಯ, ವಿದ್ಯಾಭ್ಯಾಸ	:	ಲೋವರ್ ಸೆಕೆಂಡರಿ, ಬಸವಾಪಟ್ಟಣ (೧೯೨೯); ಹೊಳೆನರಸೀಪುರ, ಬಾಣಾವರ, ಸಾಲಿಗ್ರಾಮಗಳಲ್ಲಿ ಪ್ರೌಢಶಾಲಾಶಿಕ್ಷಣ (೧೯೩೦) ; ಹಿಂದಿ ವಿಶಾರದ, ಮೈಸೂರು ಸಂಸ್ಥಾನಕ್ಕೆ ಪ್ರಥಮ (ಮದರಾಸಿನಲ್ಲಿ ನಡೆದ ಘಟಿಕೋತ್ಸವದಲ್ಲಿ ಮಹಾತ್ಮಾ ಗಾಂಧೀಜಿಯವರ ಹಸ್ತದಿಂದ ಪದವಿಪತ್ರ, ೧೯೪೬).
ಸಂಗೀತ ಶಿಕ್ಷಣ, ಪ್ರಗತಿ, ಪ್ರೇರಣೆ	:	ಸಂಗೀತ ವಿದ್ವಾಂಸ ರುದ್ರಪಟ್ಟಣದ ವೀಣಾ ವೆಂಕಟರಾಯರಿಂದ.
ಪ್ರಾರಂಭಿಕ ಶಿಕ್ಷಣ	:	ರುದ್ರಪಟ್ಟಣದ ಶತಾವಧಾನಿ ವೆಂಕಟರಾಮಯ್ಯ ಹಾಗೂ ಬೆಟ್ಟದಪುರದ ಸೂರ್ಯನಾರಾಯಣಪ್ಪನವರಿಂದ.
ಚಿದಂಬರಂ	:	ಪಿಟೀಲು ವಿದ್ವಾಂಸ ಶ್ರೀನಿವಾಸ ಅಯ್ಯರ್ ಅವರಲ್ಲಿ ಗಾಯನ ಶಿಕ್ಷಣ.

ಸೇಲಂ	:	ಸೇಲಂ ದೊರೆಸ್ವಾಮಿ ಅಯ್ಯಂಗಾರ್ (ಶ್ರೀ ತ್ಯಾಗರಾಜರ ಶಿಷ್ಯ ಪರಂಪರೆ) ಅವರಲ್ಲಿ ಗಾಯನಶಿಕ್ಷಣ.
ಮೈಸೂರು, ೧೯೩೫	:	ಮರಳಿ ಸಾಲಿಗ್ರಾಮಕ್ಕೆ, ಮೈಸೂರಿನಲ್ಲಿದ್ದ ವೀಣೆ ಚೆನ್ನಕೇಶವಯ್ಯನವರಲ್ಲಿ ವೀಣಾಭ್ಯಾಸ.
ಎಸಳೂರು ಪೇಟೆ	:	ವ್ಯವಸಾಯ ನಿರತ; ಜೊತೆಗೆ ಸಂಗೀತ ಸಾಧನೆ.
ಮೈಸೂರು, ೧೯೩೯	:	ಆಸ್ಥಾನ ವಿದ್ವಾನ್ ಚಿಕ್ಕರಾಮರಾಯರಲ್ಲಿ ಗಾನಕಲಾಭ್ಯಾಸ. ವೀಣಾವೆಂಕಟಗಿರಿಯಪ್ಪನವರಲ್ಲಿ ಶಿಷ್ಯತ್ವ.
೧೯೪೨ ರಿಂದ	:	ಗುರುಗಳ ಜೊತೆಯಲ್ಲಿ ಕಛೇರಿ ಪ್ರವಾಸಗಳು
೧೯೪೫	:	ಮದರಾಸು ಆಕಾಶವಾಣಿ ಕಲಾವಿದರು.
೧೯೪೬	:	ವೀಣಾ, ಗಾಯನ ಶಿಕ್ಷಕ
೧೯೫೦	:	ಮದರಾಸು ಮ್ಯೂಸಿಕ್ ಅಕಾಡಮಿಯ ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಿದ್ದು.
೧೯೫೨–೧೯೬೩	:	ಮೈಸೂರು ಮಹಾರಾಣಿಯವರ ಕಾಲೇಜಿನಲ್ಲಿ ವೀಣಾ ಅಧ್ಯಾಪಕರಾಗಿ ನೇಮಕ.
		ಮೈಸೂರಿನ ಸಂಗೀತ ಕಲಾಭಿವರ್ಧಿನೀ ಸಭಾದ ಸ್ಥಾಪಕ ಕಾರ್ಯದರ್ಶಿಗಳು.
೧೯೬೫		ಮೈಸೂರು ವಿಶ್ವವಿದ್ಯಾನಿಲಯದ ಸಂಗೀತ ಮತ್ತು ನೃತ್ಯ ಕಲಾ ಕಾಲೇಜು (ಮುಂದೆ ಲಲಿತಕಲಾ ಕಾಲೇಜು) ವೀಣಾ ಅಧ್ಯಾಪಕರಾಗಿ ನೇಮಕ, ಹಲವು ಮುಂಚೂಣಿಯ ವೈಣಿಕರ ತರಬೇತಿ.
೧೯೭೭	:	ನಿವೃತ್ತಿ.
೧೯೯೦ – ೯೯	:	ಜೆ.ಎಸ್.ಎಸ್. ಸಂಗೀತಸಭಾದ ಸ್ಥಾಯಿ ಸಮಿತಿಯ ಸದಸ್ಯರು ಮತ್ತು ಉಪಾಧ್ಯಕ್ಷರು; ವಾಗ್ಗೇಯಕಾರರಾಗಿ ಸ್ವತಂತ್ರ ಕೃತಿಗಳ ರಚನೆ.

ಮನ್ನಣೆ :

೧೯೪೫ – ೧೯೬೫	:	ಮೈಸೂರು ಅರಮನೆಯಲ್ಲಿ ಆಸ್ಥಾನವಿದ್ವಾಂಸರಾಗಿ ಜಯಚಾಮರಾಜೇಂದ್ರ ಒಡೆಯರ್ ಅವರ ಆಶ್ರಯ.
೧೯೭೪	:	ದೆಹಲಿ ಮ್ಯೂಸಿಕ್ ಕ್ಲಬ್‌ನಿಂದ ಸನ್ಮಾನ, ನಿಧಿ ಸಮರ್ಪಣೆ.
೧೯೮೩	:	ರಾಜ್ಯ ಸರ್ಕಾರದ ಮಾಸಿಕ ಗೌರವಧನ.
	:	ಸಂಗೀತ ಕಲಾಭಿವರ್ಧಿನೀ ಸಭೆಯ ತೃತೀಯ ಸಂಗೀತ ಸಮ್ಮೇಳನದ ಅಧ್ಯಕ್ಷತೆ.
	:	ಬೆಂಗಳೂರಿನ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ 'ಕರ್ನಾಟಕ ಕಲಾತಿಲಕ' ಪ್ರಶಸ್ತಿ.
೧೯೮೫	:	ಮೈಸೂರಿನ ಸಂಗೀತ ಕಲಾಭಿವರ್ಧಿನೀ ಸಭಾದಿಂದ 'ಗಾನರತ್ನಾಕರ' ಬಿರುದು; ಮೈಸೂರು ವಾಸುದೇವಾಚಾರ್ಯ ಸ್ಮಾರಕ ಮೂರನೆಯ ಸಂಗೀತ ಸಮ್ಮೇಳನದ ಅಧ್ಯಕ್ಷತೆ.
೧೯೮೭	:	ಬೆಂಗಳೂರಿನ ಗಾಯನ ಸಮಾಜದ ಹತ್ತೊಂಬತ್ತನೆಯ ಸಂಗೀತ ಸಮ್ಮೇಳನದ ಅಧ್ಯಕ್ಷತೆ, 'ಸಂಗೀತ ಕಲಾರತ್ನ' ಬಿರುದು. ಶ್ರೀ ವಿ.ಟಿ. ಶ್ರೀನಿವಾಸನ್ ಸ್ಮಾರಕ ನಗದು ಬಹುಮಾನ. ಡಾ. ಬಿ. ದೇವೇಂದ್ರಪ್ಪನವರ ಹನುಮಜ್ಜಯಂತಿ ಕಾರ್ಯಕ್ರಮಗಳ ಅಂಗವಾಗಿ 'ವೈಣಿಕ ಪ್ರವೀಣ' ಬಿರುದು. ಶ್ರೀ ಸರಸ್ವತಿ ಗಾನಕಲಾ ಮಂದಿರದ 'ವೀಣಾವಿದ್ಯಾವಾರಿಧಿ' ಬಿರುದು ಮತ್ತು ಚಿನ್ನದ ಪದಕ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ದತ್ತಪೀಠದಿಂದ 'ವೈಣಿಕ ಕಲ್ಪತರು' ಪ್ರಶಸ್ತಿ.
೧೯೮೯	:	ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ.
೧೯೯೪	:	'ಅಕಾಡೆಮಿ ಆಫ್ ಮ್ಯೂಸಿಕ್'ನಿಂದ ಚೌಡಯ್ಯ ಸ್ಮಾರಕ ರಾಜ್ಯಪ್ರಶಸ್ತಿ.
೧೯೯೬	:	ಸಹಸ್ರ ಚಂದ್ರದರ್ಶನ, ಮೈಸೂರಿನ ಗಾನಭಾರತೀ ಸಭಾದ ಆಶ್ರಯದಲ್ಲಿ ಸಾರ್ವಜನಿಕ ಅಭಿನಂದನ ಸಮಾರಂಭ.

೧೯೯೮	:	ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ದತ್ತಪೀಠದಿಂದ 'ನಾದನಿಧಿ' ಬಿರುದು, ಚಿನ್ನದ ಪದಕ.
೧೯.೩.೨೦೦೦ದಿಂದ ೨೪.೩.೨೦೦೦ದವರೆಗೆ	:	ಸಂಗೀತಕಲಾರತ್ನ ಪ್ರೊ. ಆರ್. ಎನ್. ದೊರೆಸ್ವಾಮಿ ಅಭಿನಂದನ ಸಮಿತಿ ಮತ್ತು ಮೈಸೂರಿನ ಶ್ರೀ ತ್ಯಾಗರಾಜ ಸಂಗೀತ ಸಭಾ (ರಿ.) ಆಶ್ರಯದಲ್ಲಿ ಅಭಿನಂದನ ಸಮಾರಂಭಗಳು: ಕರ್ನಾಟಕ ವಾಗ್ಗೇಯವಾಹಿನಿ – ೮ ಪ್ರೊ. ಆರ್.ಎನ್.ಡಿ. ಯವರ ಕೃತಿಗಳನ್ನಾಧರಿಸಿದ ವಾದನ, ನರ್ತನ, ಗಾಯನ ಕಛೇರಿಗಳು.
೦೧.೦೬.೨೦೦೦	:	ಅಭಿನಂದನ ಸಮಿತಿ, ಗಾನಭಾರತಿ, ಶ್ರೀ ತ್ಯಾಗರಾಜ ಸಂಗೀತ ಸಭಾ ಸಂಯುಕ್ತ ಆಶ್ರಯದಲ್ಲಿ ಅಭಿನಂದನ ಸಮಾರಂಭ, 'ಮಹತೀ' ಅಭಿನಂದನಗ್ರಂಥದ ಸಮರ್ಪಣೆ.

ಸ್ವತಂತ್ರ ಕೃತಿಗಳು :

೧) ಕರ್ನಾಟಕ ಸಂಗೀತದ ಗೇಯರಚನೆಗಳು; ಸಾಹಿತ್ಯವಾಹಿನಿ–8, ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು–4, ಮೊದಲ ಮುದ್ರಣ: 1970; ಪು. 28

೨) ಲಕ್ಷ್ಮೀರಮಣ ಕೃತಿಮಂಜರಿ ; (ಗೇಯರಚನೆಗಳ ಸಂಗ್ರಹ, ಸಂಗೀತ ಸ್ವರಲಿಪಿಯೊಡನೆ) ಶ್ರೀ ಲಕ್ಷ್ಮೀರಮಣ ಪ್ರಕಾಶನ, ಜಯನಗರ, ಮೈಸೂರು – 14; 1989; ಪು.238

೩) ವೀಣಾ ವೆಂಕಟಗಿರಿಯಪ್ಪ (ಕನ್ನಡ ಮತ್ತು ಇಂಗ್ಲಿಷ್); ನಾದನೃತ್ಯ ಕಲಾವಿದ ಮಾಲಿಕೆ–2, ಸಾಮಾನ್ಯ ಸಂಪಾದಕ : ಎಸ್.ಎನ್. ಚಂದ್ರಶೇಖರ್; ಕರ್ನಾಟಕ ಸಂಗೀತ ನೃತ್ಯ ಅಕಾಡಮಿ, ನೃಪತುಂಗ ರಸ್ತೆ, ಬೆಂಗಳೂರು – 560 002; 1993, ಪುಟ. 136.

ಸಹಕರ್ತೃತ್ವದ ಕೃತಿಗಳು:

೧) ಶ್ರೀ ತ್ಯಾಗರಾಜರ ನೌಕಾಚಾರಿತ್ರೆ. ಅನುವಾದಕರು : ವಿ. ರಾಮರತ್ನಂ, ಆರ್. ಎನ್. ದೊರೆಸ್ವಾಮಿ; ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು; 1969, ಪು. ಥಿು + 87

೨) ಸಂಗೀತಶಾಸ್ತ್ರ ಪರಿಚಯ (ಭಾಗ 1–2), ಮೊದಲ ಮತ್ತು ಎರಡನೆಯ ವರ್ಷದ ಪ್ರೀ ಯೂನಿವರ್ಸಿಟಿ ಪಠ್ಯಪುಸ್ತಕ: ವಿ. ರಾಮರತ್ನಂ, ಆರ್.ಎನ್. ದೊರೆಸ್ವಾಮಿ; ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಣೆ–187, ಪಠ್ಯಪುಸ್ತಕ ಮಾಲೆ 111, ಪ್ರ.ಸಂ: ಡಾ.ಹಾಮಾ. ನಾಯಕ; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು; 1973; ಪು. ತುು + 135.

೩) ವೀಣಾ ವೆಂಕಟಗಿರಿಯಪ್ಪ ಅವರ ಕೃತಿಗಳು. ಸಂಪಾದಕರು : ಆರ್.ಎನ್. ದೊರೆಸ್ವಾಮಿ, ವಿ. ಅಮೃತ; ಕನ್ನಡ ಗ್ರಂಥಮಾಲೆ–87, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು; 1980; ಪು. viii+120.

೪) ಮೈಸೂರು ಸದಾಶಿವರಾಯರ ರಚನೆಗಳು. ಸಂಗೀತ ಕಲಾಭಿವರ್ಧಿನಿ ಸಭಾ ಮಾಲೆ–1 ಸಂಪಾದಕರು : ಆಸ್ಥಾನ ವಿದ್ವಾನ್ ಎನ್. ಚೆನ್ನಕೇಶವಯ್ಯ, ಸಂಗೀತ ವಿದ್ವಾನ್ ಬಿ.ಕೆ. ಪದ್ಮನಾಭರಾವ್. ಎಚ್. ಯೋಗನರಸಿಂಹಂ (ಅಧ್ಯಕ್ಷರು), ಆರ್. ಎನ್. ದೊರೆಸ್ವಾಮಿ (ಸಂಪಾದಕ ಮಂಡಲಿಯ ಸದಸ್ಯರು) ಪ್ರ : ಸಂಗೀತಕಲಾಭಿವರ್ಧಿನೀ ಸಭಾ (ರಿ.), ಮೈಸೂರು; 1954.

೫) ವೈಣಿಕಶಿಖಾಮಣಿ ವೀಣಾ ಶೇಷಣ್ಣನವರ ರಚನೆಗಳು. ಸಂಗೀತಕಲಾಭಿವರ್ಧಿನೀ ಸಭಾ ಮಾಲೆ–2, ಸಂಪಾದಕರು : ಗಾನಕಲಾಸಿಂಧು, ಸಂಗೀತ ಚೂಡಾಮಣಿ ಬಿ.ಕೆ. ಪದ್ಮನಾಭರಾವ್, ಹೆಚ್. ಯೋಗನರಸಿಂಹಂ, ಆಸ್ಥಾನ ವಿದ್ವಾನ್ ಆರ್. ಎನ್. ದೊರೆಸ್ವಾಮಿ, ಪ್ರ. : ಸಂಗೀತ ಕಲಾಭಿವರ್ಧಿನೀ ಸಭಾ (ರಿ.), ಮೈಸೂರು; 1965.

ಈ. ನೆನಪು ಕೆದರಿದಾಗ

ಮೇಜರ್ ಎಚ್. ಸಿ. ವೇಣುಗೋಪಾಲ

ಹಾಸನಜಿಲ್ಲೆಯ ಹಂದನಹಾಲು ಎಂಬ ಗ್ರಾಮದಲ್ಲಿದ್ದ ವೈದಿಕ ವಂಶವೊಂದರಲ್ಲಿ ಬಂದವರು ಮೇಜರ್ ಎಚ್.ಸಿ. ವೇಣುಗೋಪಾಲ್. ಅವರ ತಂದೆ ಚನ್ನಕೇಶವಯ್ಯನವರು ಶಾಲಾ ಅಧ್ಯಾಪಕರಾಗಿದ್ದವರು; ಅವರ ಪೂರ್ವಿಕರು ಜೋಡಿದಾರರಾಗಿದ್ದವರು. ವೇಣುಗೋಪಾಲರ ತಾಯಿ ಸುಂದರಮ್ಮನವರು ಮೈಸೂರು ಸಂಸ್ಥಾನದಲ್ಲಿ ಖ್ಯಾತರಾಗಿದ್ದ ಅಂಚೆಬಕ್ಷಿ ತಿಪ್ಪಯ್ಯನವರ ವಂಶಸ್ಥರು. ಸುಂದರಮ್ಮನವರ ತಂದೆ ಸುಬ್ಬರಾವ್ ಅವರೂ ಹಾಸನ ಜಿಲ್ಲೆಯಲ್ಲಿ ಶೇಕ್‌ದಾರರಾಗಿದ್ದರು. ವೇಣುಗೋಪಾಲರ ಮುಂದಿನ ಸಾಧನೆಗಳಿಗೆ ಇದೊಂದು ಸಮರ್ಥ ಹಿನ್ನೆಲೆಯಾಗಿತ್ತು.

ವೇಣುಗೋಪಾಲರ ಇಡೀ ವಂಶದಲ್ಲಿ ಎದ್ದು ಕಾಣುವ ಗುಣವೆಂದರೆ ಸಾಹಸ, ಉದಾರಭಾವ, ಸಾಮಾಜಿಕಪ್ರಜ್ಞೆ, ಶಿಸ್ತು, ಸೇವಾಪ್ರವೃತ್ತಿ, ಸಹಬಾಳ್ವೆ, ರಾಷ್ಟ್ರಭಕ್ತಿ. ಒಂದೇ ಕುಟುಂಬದ ಮೂವರು ಸೇನಾ ಸೇವೆಯಲ್ಲಿ ಸ್ವಪ್ರೇರಣೆಯಿಂದಲೂ ರಾಷ್ಟ್ರಭಕ್ತಿಯಿಂದಲೂ ಸೇರಿದ್ದನ್ನು ಇಲ್ಲಿ ಕಾಣಬಹುದು. ಇದು ಸಂಕೇತಿ ಸಮುದಾಯದಲ್ಲಿ ಕಾಣುವ ಅಪರೂಪದ ಸಂಗತಿ.

ವೇಣುಗೋಪಾಲರ ಸಾಹಸಗಾಥೆಯ ಈ ಗ್ರಂಥವು ಈ ರೂಪ ತಾಳಿ ಹೊರಬರಲು ಅವರ ಮಕ್ಕಳು ಡಾ.ರವೀಂದ್ರ ಮತ್ತು ಡಾ.ಎಚ್.ವಿ.ಹೇಮಾ ಕಾರಣಕರ್ತರು. ಡಾ.ರವೀಂದ್ರ ಅಮೆರಿಕೆಯ ಆಲ್ಬುಕರ್ಕಿಯ ನ್ಯೂ ಮೆಕ್ಸಿಕೋ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು. ಅವರು ಆಪರೇಷನ್ ರಿಸರ್ಚ್‌ನ ಟೆನ್ಯೂರ್ ಪ್ರೊಫೆಸರ್ ಆಗಿದ್ದಾರೆ. 17 ವರ್ಷ ಅಮೆರಿಕೆಯಲ್ಲಿ ಸೇವೆ ಸಲ್ಲಿಸಿದ ಡಾ. ಹೇಮಾ ಈಗ ಭಾರತದಲ್ಲಿಯೇ ನೆಲೆಸಿದ್ದಾರೆ; ಮಕ್ಕಳಿಗೆ ಭಾರತೀಯ ಸಂಸ್ಕಾರ ದೊರೆಯಲಿ ಎಂಬುದು ಅವರ ಇರಾದೆ.

ಅವು ಡಾ. ಹೇಮಾ ಅವರು ಅಮೆರಿಕೆಯಲ್ಲಿದ್ದ ದಿನಗಳು. ಅವರಿಗೆ ತಂದೆಯ ಸಾಹಸದ ಸಾಧನೆಗಳ ಸ್ಥೂಲ ಪರಿಚಯ ಇತ್ತು, ಆದರೆ ವಿವರಗಳು ತಿಳಿದಿರಲಿಲ್ಲ. ದೂರದ ಅಮೆರಿಕದಲ್ಲಿ ನೆಲೆಸಿದ್ದರಿಂದಂತೂ ಈ ವಿವರಗಳನ್ನು ಹೆಚ್ಚು ಹೆಚ್ಚು ತಿಳಿಯುವ ಆಸೆ ಮೂಡಿತು. ಅವರ ಅಪೇಕ್ಷೆಯಂತೆ ವೇಣುಗೋಪಾಲರು ಪತ್ರಗಳ ಮೂಲಕ ಆ ವಿವರವಾದ ಚರಿತ್ರೆ ತಿಳಿಸತೊಡಗಿದರು. ವಿಶ್ರಾಂತ ಜೀವನ ನಡೆಸುತ್ತಿದ್ದ ವೇಣುಗೋಪಾಲ್ ಅವರಿಗೆ ಇದಕ್ಕೆ ಸಮಯವಿತ್ತು, ಮಗಳ

ಕೋರಿಕೆಗೆ ಮಣಿಯಬೇಕಾದ ಅಕ್ಕರೆಯೂ ಇತ್ತು. ಅನಾರೋಗ್ಯದ ಕಾರಣದಿಂದ ತಾವೇ ಬರೆಯಲು ಸಾಧ್ಯವಾಗದಾಗ ಪತ್ನಿಯೋ ಮೊಮ್ಮಗಳು ಸುಮಾ ಅವರೋ ಬರೆದುಕೊಟ್ಟರು. ಹೇಮಾ ಅವರು ಪ್ರಶ್ನೆ ಕೇಳಿಯೋ ಸಲಹೆ ಸೂಚನೆ ಕೊಟ್ಟೋ ವಿಷಯ ತುಂಬಿ ಬರುವಂತೆ ನೋಡಿಕೊಂಡರು. ಅವುಗಳ ಒಂದು ಟಿಪ್ಪಣಿಯನ್ನು ತಯಾರಿಸಿ ಅಣ್ಣ ರವೀಂದರ್‌ಗೆ ಕೊಟ್ಟರು. ರವೀಂದರ್‌ಗೆ ಇಂಗ್ಲಿಷ್ ಭಾಷೆಯ ಮೇಲೆ ಒಳ್ಳೆಯ ಹಿಡಿತವಿತ್ತು. ಕಂಪ್ಯೂಟರ್ ತೆರೆಯ ಮೇಲೆ ಈ ಟಿಪ್ಪಣಿಗಳನ್ನು ಗ್ರಂಥರೂಪದಲ್ಲಿ ಮೂಡಿಸಿದರು. ಈ ಗ್ರಂಥವು ಕ್ಯಾಪ್ಟನ್ ಕೃಷ್ಣಪ್ರಸಾದರ ಮೂಲಕ ಸಮುದಾಯ ಅಧ್ಯಯನ ಕೇಂದ್ರದ ಅವಗಾಹನೆಗೆ ಬಂತು.

1922 ರಲ್ಲಿ ಕರ್ನಾಟಕದ ಹಾಸನ ಜಿಲ್ಲೆಯಲ್ಲಿ ಜನಿಸಿದ ಎಚ್. ಸಿ. ವೇಣುಗೋಪಾಲ್, ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಸಕ್ರಿಯವಾಗಿ ಪಾಲುಗೊಂಡರು. ಕೆಲವರ್ಷಗಳ ಅನಂತರ ಇಟಗಿ ಮತ್ತು ಸುತ್ತುಮುತ್ತಿನ ಹಳ್ಳಿಗಳಲ್ಲಿ ಹೈದರಾಬಾದ್ ಸೈನ್ಯಕ್ಕೆದುರಾಗಿ ಆತ್ಮರಕ್ಷಣ ಪಡೆಗಳನ್ನು ಕಟ್ಟಿ ಸೇವೆ ಸಲ್ಲಿಸಿದರು. 1949 ರಲ್ಲಿ ಭಾರತೀಯ ಸೇನೆಯನ್ನು ಸೇರಿಕೊಂಡರು. ಮಣಿಪುರ ಮತ್ತು ನಾಗಾಲ್ಯಾಂಡ್‌ಗಳಲ್ಲಿ ಕಂಡುಬಂದಿದ್ದ ಗಲಭೆಗಳನ್ನು ಹತ್ತಿಕ್ಕುವ ಸಲುವಾಗಿ ಅವರನ್ನು 1967 ರಲ್ಲಿ ಗಡಿಭದ್ರತಾ ಪಡೆಗೆ ನಿಯೋಜಿಸಲಾಯಿತು. 1973 ರಲ್ಲಿ ಅವರಿಗೆ ವಿಶಿಷ್ಟ ಸೇವಾ ಪದಕವನ್ನು ನೀಡಿ ಪುರಸ್ಕರಿಸಲಾಯಿತು. 1980 ರಲ್ಲಿ ಸೇವೆಯಿಂದ ನಿವೃತ್ತರಾಗಿ ಬೆಂಗಳೂರಿನಲ್ಲಿ ವಾಸ ಮಾಡುತಿದ್ದ ಅವರು 03.09.2003ರಂದು ಸ್ವರ್ಗಸ್ಥರಾದರು.

ಸ್ವಾತಂತ್ರ್ಯ ಹೋರಾಟ ಕಾಲದ ಅವರ ಕೆಲವು ಚಟುವಟಿಕೆಗಳನ್ನು ಕುರಿತ ವಿವರಗಳು ಮಿಥಿಕ್ ಸೊಸೈಟಿಯ ತ್ರೈಮಾಸಿಕ ಪತ್ರಿಕೆಯಲ್ಲಿ (ಏಪ್ರಿಲ್, ಜೂನ್ 1993) ಒಂದು ಲೇಖನವಾಗಿಯೂ, 'ಶುದ್ಧ ಸೇವೆಯ ಸಿದ್ಧಲಿಂಗಯ್ಯ' ಕೃತಿಯಲ್ಲಿನ ಲೇಖನವಾಗಿಯೂ ಪ್ರಕಟವಾಗಿವೆ. ಇಟಗಿಯಲ್ಲಿನ ಚಟುವಟಿಕೆಗಳನ್ನು ಕುರಿತ ಒಂದು ನಿರೂಪಣೆಯನ್ನು 'ಸ್ವಾತಂತ್ರ್ಯ ಆಂದೋಲನ' ಪುಸ್ತಕದಲ್ಲಿ ನೋಡಬಹುದು.

ಮೇಜರ್ ಎಚ್. ಸಿ. ವೇಣುಗೋಪಾಲ್ ಜೀವನ ವಿವರ

ಜನನ	:	ಸೆಪ್ಟಂಬರ್ 23, 1922; ಹಂದನಹಾಳು, ಹಾಸನಜಿಲ್ಲೆ
ತಂದೆ	:	ಚೆನ್ನಕೇಶವಯ್ಯ, ಅಪ್ಪರ್ ಸೆಕೆಂಡರಿ, ಕನ್ನಡ ಉಪಾಧ್ಯಾಯ, ಮಾಧ್ಯಮಿಕ ಶಾಲೆ.
ತಾಯಿ	:	ಸುಂದರಮ್ಮ; 6 ಗಂಡು ಮಕ್ಕಳು, 3 ಹೆಣ್ಣು ಮಕ್ಕಳು
ತಂದೆಯ ತಂದೆ, ತಾಯಿ	:	ಸುಬ್ಬಾವಧಾನಿ (ವೇದವಿದ್ವಾಂಸ)+ ಗೌರಮ್ಮ
ಬಾಲ್ಯ	:	ಬೇಲೂರು, ಹಾಸನ, ಹೊಳೆನರಸೀಪುರ, ಗೊರೂರು; ರಾಷ್ಟ್ರೀಯ ಪ್ರಜ್ಞೆ ಮೂಡಿಸಿದ ಪರಿಸರ.
1936	:	ಎಲ್. ಎಸ್.
1940	:	ಇಂಟರ್, ಸ್ವಾತಂತ್ರ್ಯ ಚಳವಳಿ: ಎಂ.ಎನ್. ಜೋಯಿಸರ ನಿಕಟ ಸಂಪರ್ಕ, ಯಶೋಧರಮ್ಮ, ಎಚ್. ಸಿ. ದಾಸಪ್ಪ, ಪೈಲ್ವಾನ್ ಶಿವಣ್ಣ ಅವರ ಮಾರ್ಗದರ್ಶನ.

1942	:	ಎಚ್. ಎ. ಎಲ್. ನಲ್ಲಿ ಟ್ರೈನಿ, ಎಂ.ಎಚ್. ಷಹಾ ಮಂದಾಳತ್ವದಲ್ಲಿ ಮುಷ್ಕರ, ಔಪಚಾರಿಕ ಶಿಕ್ಷಣಕ್ಕೆ ಕೊನೆ. ಭೂಗತ ಚಟುವಟಿಕೆ, ಬಂಧನ, ಶಿಕ್ಷೆ. ಟಿ.ಸಿದ್ಧಲಿಂಗಯ್ಯ, ಕೆ.ಟಿ. ಭಾಷ್ಯಂ, ಎಸ್. ನಿಜಲಿಂಗಪ್ಪ, ಕೆ. ಹನುಮಂತಯ್ಯ ಮೊದಲಾದವರ ನಿಕಟ ಸಂಪರ್ಕ.
1943	:	ವಯಸ್ಕರ ಶಿಕ್ಷಣದ ಮ್ಯಾನೇಜರ್. ಸ್ವಾತಂತ್ರ್ಯ ಹೋರಾಟಗಾರರ ಶೋಧ
1945	:	ವಿವಾಹ, ಮೆಡಿಕಲ್ ರೆಪ್ರೆಸೆಂಟಟಿವ್
1947	:	ಹೈದರಾಬಾದ್ ಹೋರಾಟ; ಮತ್ತೆ ಇಟಗಿಗಾಗಿ ಹೋರಾಟ; ವರದಿ, ಹೈದರಾಬಾದ್ ಪೊಲೀಸ್ ಕಾರ್ಯಾಚರಣೆಗೆ ಪ್ರೇರಣೆ, ಭಾರತೀಯ ಸೇವೆಯಲ್ಲಿ ಕಮಿಷನ್ಡ್ ಅಧಿಕಾರಿ, ಮರಾಠಾ ಇನ್‌ಫೆಂಟ್ರಿ, ಬಿ.ಎಸ್. ಎಫ್.
1973	:	ವಿಶಿಷ್ಟ ಸೇವಾ ಪದಕ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಅವರಿಂದ
1981	:	ನಿವೃತ್ತಿ
2003	:	ಮರಣ

ಆರ್. ಎಲ್. ಅನಂತರಾಮಯ್ಯ

ರುದ್ರಪಟ್ಟಣ ಲಕ್ಷ್ಮೀಕಾಂತಯ್ಯ ಅನಂತರಾಮಯ್ಯ ಅವರು ಹುಟ್ಟಿದ್ದು ಮೇ. 10, 1937 ರಲ್ಲಿ, ರುದ್ರಪಟ್ಟಣದಲ್ಲಿ. ತಂದೆಯವರು ಮಾಧ್ಯಮಿಕ ಶಾಲಾ ಉಪಾಧ್ಯಾಯರಾಗಿದ್ದರು. ಕನ್ನಡ ಎಂ.ಎ. ಪದವಿಯನ್ನು ಪಡೆದು (1960) ಎರಡು ವರ್ಷಗಳ ಕಾಲ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಆ ಮೇಲೆ ಪ್ರವೇಶಿಸಿದ್ದು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವನ್ನು. ಅದರ ನಿರ್ದೇಶಕರಾಗಿಯೂ ಅವರು ಸೇವೆಸಲ್ಲಿಸಿದ್ದುಂಟು. ಸುಮಾರು ಕಾಲು ಶತಮಾನ ಅದರ ಉಪನಿರ್ದೇಶಕರಾಗಿದ್ದರು. 1995 ರಲ್ಲಿ ನಿವೃತ್ತರಾದರು. ಅನಂತರಾಮಯ್ಯ ಅವರದು ಬಹುಮುಖ ಪ್ರತಿಭೆ. ಅವರು ಸಂಗೀತಪ್ರಿಯರೂ ಹೌದು, ಸಮರ್ಥ ಅನುವಾದಕರೂ ಹೌದು. ಅವರು ನೂರಕ್ಕೂ ಹೆಚ್ಚು ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. **"ಮುದ್ದುಕನ್ನಡ"** ಅವರ ವಿಶಿಷ್ಟ ಕೃತಿ. 16 ವರ್ಷಗಳ ಕಾಲ ಕನ್ನಡ ಪುಸ್ತಕಮಾಹಿತಿಗೆ ಮೀಸಲಾದ **"**ಗ್ರಂಥಲೋಕ**"** ಮಾಸಪತ್ರಿಕೆಯನ್ನು ಯಶಸ್ವಿಯಾಗಿ ನಡೆಸಿದ ಕೀರ್ತಿ ಅವರದು. ಅವರ 'ಟಾಲ್‌ಸ್ಟಾಯ್ ಸಂಕ್ಷಿಪ್ತ ಜೀವನ' ಕೃತಿಗೆ ಕರ್ನಾಟಕ ಸಾಹಿತ್ಯ ಆಕ್ಯಾಡಮಿಯ ಪುರಸ್ಕಾರ ದೊರೆತಿದೆ. ಭಾರತೀಯ ವಿದ್ಯಾಭವನ ಮತ್ತು ಕೇಂದ್ರ ಸಾಹಿತ್ಯ ಅಕಾಡಮಿಯ ಪ್ರತಿಷ್ಠಿತ ಅನುವಾದ ಯೋಜನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಅವರು. ರಾಜ್ಯ ಮತ್ತು ರಾಷ್ಟ್ರೀಯ ಸಾಹಿತ್ಯಗೋಷ್ಠಿಗಳಲ್ಲಿ ಪಾಲ್ಗೊಂಡ ಅವರು ಹಲವಾರು ಸಂಘ ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಮಾಜಸೇವೆಯನ್ನು ಮಾಡಿದವರು. ಕನ್ನಡ ಸಾಹಿತ್ಯಕ್ಕೆ ಅವರು ಸಲ್ಲಿಸಿದ ಸೇವೆಗೆ ಸಂದ ಗೌರವವೆಂಬಂತೆ ಅವರು ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕು ಎರಡನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದರು.

ಉ. ಮತ್ತೂರಿನಿಂದ ಬ್ರಿಟನ್‌ಗೆ

ಶ್ರೀಮತಿ ರಾಜಲಕ್ಷ್ಮಿ, ಡಾ॥ ಮತ್ತೂರು ಕೃಷ್ಣಮೂರ್ತಿ

ಡಾ॥ ಮತ್ತೂರು ಕೃಷ್ಣಮೂರ್ತಿ ಡಿ.ಲಿಟ್., (ಜ: 08.08.1929) ಮಹಾ ಸಂಘಟಕ, ಆಡಳಿತಗಾರ, ಪ್ರವನಚಕಾರ, ಲೇಖಕ, ಕನಸುಗಾರ ಮತ್ತು ಸಾಧಕ. ವಿಜಯನಗರದ ಅರಸರಿಂದ ಸನ್ಮಾನಿತರಾಗಿ ಜೋಡಿಗ್ರಾಮಗಳನ್ನು ಪಡೆದವರ ವಂಶ. ತಾಯಿ: ಶ್ರೀಮತಿ ನಂಜಮ್ಮ, ತಂದೆ : ಶ್ರೀ ಎಂ. ರಾಮಕೃಷ್ಣಯ್ಯ; ಮೂಲ : ಹಾಸನ ಜಿಲ್ಲೆಯ ಮುದಲಾಪುರ, ನೆಲೆ : ಶಿವಮೊಗ್ಗ ಜಿಲ್ಲೆಯ ಮತ್ತೂರು. ಬಡತನದ ಬಾಲ್ಯ. ವೇದ, ಸಂಸ್ಕೃತ ಕಲಿಕೆ; ಸಾರ್ವಜನಿಕ ಭಾಷಣ, ಗಮಕ ವ್ಯಾಖ್ಯಾನ, ಗಣ್ಯರ ಭಾಷಣಾನುವಾದ, ಸಾಹಿತ್ಯ, ಭಾಷಾಂತರ, ಪೌರೋಹಿತ್ಯ, ರಂಗಭೂಮಿ, ಪತ್ರಿಕೋದ್ಯಮ– ಹೀಗೆ ವೈವಿಧ್ಯಪೂರ್ಣ ಸಾಧನೆ. ಸಂಯುಕ್ತ ಕರ್ನಾಟಕ ಮತ್ತು ಆಕಾಶವಾಣಿಯ ನಂಟು; 1970 ರಿಂದ ಭಾರತೀಯ ವಿದ್ಯಾಭವನದಲ್ಲಿ ಸೇವೆ; ಲಂಡನ್ ಕೇಂದ್ರದ ರೂವಾರಿ, ಬೆಂಗಳೂರು ಕೇಂದ್ರಕ್ಕೆ ಕಾಯಕಲ್ಪ ನೀಡಿದ ಸಾಹಸಿ. ಬಿಬಿಸಿಯಲ್ಲಿ ಹಿಂದೂಧರ್ಮದ ಬಗೆಗೆ ವ್ಯಾಪಕವಾಗಿ ಪ್ರವಚನ ನೀಡಿದ ಮೊದಲಿಗ, ಗಾಂಧಿ ಕೃತಿಗಳು ಮತ್ತು ಭಾರತೀಯ ಇತಿಹಾಸ ಮಾಲೆಯಂಥ ಮಹಾಯೋಜನೆಗಳ ನಿರ್ವಹಣೆ, ಸಂಪೂರ್ಣ ಕುಮಾರವ್ಯಾಸ ಭಾರತದ ಧ್ವನಿಸುರುಳಿಗಳ ನಿರ್ಮಾಣ, ಇಳಿವಯಸ್ಸಿನಲ್ಲೂ ಹೊಸ ಕೇಂದ್ರಗಳ ಸ್ಥಾಪನೆಯ ಛಲ. ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಒಟ್ಟು 31 ಕೃತಿ ನಿರ್ವಹಣೆ. ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಸದಸ್ಯತ್ವ, ಪ್ರತಿಷ್ಠಿತ ಸನ್ಮಾನಗಳಿಗೆ ಭಾಗಿ, ಸರ್ವಜನ ಸುಖಕ್ಕಾಗಿ ನಿರಂತರ ಶ್ರಮ. ಮಗಳು: ಜಾನಕಿ (+ನಂದಕುಮಾರ); ಮೊಮ್ಮಕ್ಕಳು: ರಘುನಂದನ, ಸೀತಾಲಕ್ಷ್ಮಿ.

ಪ್ರೊ. ಎ.ವಿ. ನರಸಿಂಹಮೂರ್ತಿ ಅವರು ಹೇಳುವಂತೆ "ಡಾ. ಮತ್ತೂರ್‌ಜಿ ವೈವಿಧ್ಯಮಯ ಅಸಾಧಾರಣ ಬಹುಮುಖ ಪ್ರತಿಭೆಯ ವ್ಯಕ್ತಿ. ಲಂಡನ್ ಮತ್ತು ಮೈಸೂರು ಭವನಗಳ ಶಿಲ್ಪಿ, ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿಯೂ ಭವನಗಳನ್ನು ಸ್ಥಾಪಿಸುವ ಇವರ ಸಂಕಲ್ಪ ಸದ್ಯದಲ್ಲೇ ಕಾರ್ಯಗತಗೊಳ್ಳುತ್ತದೆ. ಇವರ ಜೊತೆ ಕೆಲಸಮಾಡುವುದೇ ಒಂದು ಸುಯೋಗ, ಮತ್ತೂರರಿಗೆ ಮತ್ತೂರರೇ ಸಾಟಿ."

ಮತ್ತೂರು ಕೃಷ್ಣಮೂರ್ತಿ ಅವರ ಬದುಕಿನ ಪ್ರಮುಖ ಘಟನೆಗಳು

1929	:	ಜನನ: ಮತ್ತೂರು, ಶಿವಮೊಗ್ಗ ಜಿಲ್ಲೆ
1946	:	ಮೆಟ್ರಿಕ್ಯುಲೇಷನ್ : ಮದ್ರಾಸ್ ಕ್ರಿಶ್ಚಿಯನ್ ಕಾಲೇಜು ಹೈಸ್ಕೂಲ್
1954	:	ಬೆಂಗಳೂರು ಸಾರಿಗೆ ಸಂಸ್ಥೆಯಲ್ಲಿ ಸೇವೆ.
1955	:	ಬೆಂಗಳೂರಿನ ಮೈಸೂರು ಮಿನರ್ವ ಮಿಲ್‌ಗಳಲ್ಲಿ ಕಛೇರಿ ಸಹಾಯಕರಾಗಿ ಸೇವೆ.
1958	:	ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಬೆಂಗಳೂರು ಕಛೇರಿಯಲ್ಲಿ ಪತ್ರಿಕಾ ವರದಿಗಾರರಾಗಿ ನೇಮಕ
1968–69	:	ಬೆಂಗಳೂರು ಆಕಾಶವಾಣಿಯಲ್ಲಿ ಮಕ್ಕಳ ರಂಗಭೂಮಿ ವಿಭಾಗದಲ್ಲಿ ಸೇವೆ.
1969–70	:	ಸಂಯುಕ್ತ ಕರ್ನಾಟಕ ಪತ್ರಿಕೆಯ ಉಪಸಂಪಾದಕರಾಗಿ ಬಡ್ತಿ
1970–72	:	ಭಾರತೀಯ ವಿದ್ಯಾಭವನ, ಬೆಂಗಳೂರು ಕೇಂದ್ರದ ರಿಜಿಸ್ಟ್ರಾರ್ ಆಗಿ ನೇಮಕ. ಭಾರತೀಯ ವಿದ್ಯಾಭವನದಲ್ಲಿ ಅನೇಕ ದತ್ತಿ ನಿಧಿಗಳ ಸ್ಥಾಪನೆ, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಭಾರತೀಯ ವಿದ್ಯಾಭವನಕ್ಕೆ ಹೊಸ ಆಯಾಮ.

1966–1972	:	ಕರ್ನಾಟಕದ ಅನೇಕ ಶಾಲಾ ಕಾಲೇಜುಗಳಲ್ಲಿ ಸಂಘ ಸಂಸ್ಥೆಗಳಲ್ಲಿ, ವಿಶೇಷ ಉಪನ್ಯಾಸ.
	:	ಕುಮಾರವ್ಯಾಸ ಭಾರತವನ್ನು ಕುರಿತು ವಿಶೇಷ ವ್ಯಾಖ್ಯಾನ, ಪ್ರವಚನ, ಉಪನ್ಯಾಸ.
	:	ಗಾಂಧಿ ಜನ್ಮ ಶತಮಾನೋತ್ಸವ ವರ್ಷದ ಸಂದರ್ಭದಲ್ಲಿ ಕರ್ನಾಟಕ ಸರಕಾರದ ಕೋರಿಕೆಯಂತೆ ಗಾಂಧೀಜಿ ಅವರ ಜೀವನ ಸಾಧನೆಯ ಹಿನ್ನೆಲೆಯಲ್ಲಿ ನಾಡಿನಾದ್ಯಂತ ಒಂದು ವರ್ಷ ವಿಶೇಷ ಉಪನ್ಯಾಸ ಕಾರ್ಯಕ್ರಮ.
	:	ಕರ್ನಾಟಕಕ್ಕೆ ಆಗಮಿಸಿದ ಕೇಂದ್ರ ಸರಕಾರದ ಪ್ರಮುಖ ರಾಷ್ಟ್ರ ನಾಯಕರ ಭಾಷಣಗಳ ಅನುವಾದ, ಮೈಸೂರು ದಸರಾ ಮೊದಲಾದ ಕಾರ್ಯಕ್ರಮಗಳ ವೀಕ್ಷಕ ವಿವರಣೆ.
1972–1995	:	ಭಾರತೀಯ ವಿದ್ಯಾಭವನ, ಲಂಡನ್: ಭಾರತದ ಹೊರಗೆ ಮೊದಲ ಬಾರಿಗೆ ಲಂಡನ್‌ದಲ್ಲಿ ಭಾರತೀಯ ವಿದ್ಯಾಭವನದ ಕೇಂದ್ರವನ್ನು ತೆರೆದು ಅದರ ಜವಾಬ್ದಾರಿಯನ್ನು ವಹಿಸಿದ್ದು.
	:	ಲಂಡನ್ ಭಾರತೀಯ ವಿದ್ಯಾಭವನದ ರೂವಾರಿ ಎನಿಸಿದ್ದು.
	:	ಲಂಡನ್‌ನಲ್ಲಿ ಕನ್ನಡಿಗರನ್ನು ಒಟ್ಟುಗೂಡಿಸಿ ಕನ್ನಡ ಸಂಘದ ಸ್ಥಾಪನೆ
	:	ಬಿಬಿಸಿಯಲ್ಲಿ ಭಾರತೀಯ ಧರ್ಮ ಪರಂಪರೆ ಸಂಸ್ಕೃತಿಯ ಹಿನ್ನೆಲೆಯಲ್ಲಿ 120 ಭಾಷಣ/ಉಪನ್ಯಾಸ
	:	ಲಂಡನ್‌ನ ಥೇಮ್ಸ್ ಟೆಲಿವಿಜನ್‌ದಲ್ಲಿ ಭಾರತೀಯ ಹಬ್ಬಗಳ ಕುರಿತು ಧಾರವಾಹಿ ಕಾರ್ಯಕ್ರಮ ನಡೆಸಿಕೊಟ್ಟ ಹೆಗ್ಗಳಿಕೆ
1995 ರಿಂದ	:	ಮರಳಿ ಭಾರತಕ್ಕೆ. ಭಾರತೀಯ ವಿದ್ಯಾಭವನ ಬೆಂಗಳೂರು ಕೇಂದ್ರದ ಕಾರ್ಯನಿರ್ವಾಹ ನಿರ್ದೇಶಕರಾಗಿ ಸೇವೆ.
	:	ಬೆಂಗಳೂರು ಭಾರತೀಯ ವಿದ್ಯಾಭವನಕ್ಕೆ ಹೊಸಕಳೆ
	:	ಭವನದಲ್ಲಿ ಪ್ರಕಟಣೆ ಕಾರ್ಯ ಆರಂಭ; ಸಂಗೀತ, ಲಲಿತ ಕಲೆಗಳ ಕುರಿತಾದ ತರಬೇತಿ ಶಾಲೆ.
	:	ಗಾಂಧಿ ಉಪನಿಷತ್ ಬಿಡುಗಡೆ (ಏಳು ಸಂಪುಟಗಳಲ್ಲಿ)
	:	ಭಾರತೀಯ ವಿದ್ಯಾಭವನದ ಮೈಸೂರು, ಕೊಡಗು, ಕೇಂದ್ರಗಳ ಸ್ಥಾಪನೆ. ಭಾರತೀಯ ಧರ್ಮ, ಕಲೆ, ಸಾಹಿತ್ಯ, ಸಂಸ್ಕೃತಿ ಪುರೋಭಿವೃದ್ಧಿಗೆ ಅಹರ್ನಿಶಿ ಪ್ರಯತ್ನ.

ಮತ್ತೂರು ಕೃಷ್ಣಮೂರ್ತಿ ಅವರ ಕೃತಿಗಳು

ಕನ್ನಡದಲ್ಲಿ

೧) ಅಲ್ಲೈ ಓಶ್ಯೈ (ಅನುವಾದ)
೨) ಬಾಳಿನ ಹಾದಿ (ಅನುವಾದ)
೩) ಭಾನು (ಅನುವಾದ)
೪) ದೀಪಧಾರಿಣಿ (ಅನುವಾದ)
೫) ಡಾಕ್ಟರ್ ಅಖಿಲಾ (ಅನುವಾದ)
೬) ಶಿಕ್ಷಣ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ (ಅನುವಾದ)
೭) ಭಾರತದಲ್ಲಿ ಶೈಕ್ಷಣಿಕ ಪುನರುಜ್ಜೀವನ (ಅನುವಾದ)
೮) ಗೋತ್ರ ಋಷಿಗಳು
೯) ದಕ್ಷಿಣ ಭಾರತದ ಪ್ರಸಿದ್ಧ ಸಂಗೀತಗಾರರು
೧೦) ಹಿಮಾಲಯದ ವೀರರು
೧೧) ಜವಾಹರಲಾಲ ನೆಹರು: ಜೀವನ ಸಾಧನೆ
೧೨) ಕೆನಡಿ ಜೀವನ ಸಾಧನೆ
೧೩) ಮಹಾತ್ಮಾ ಗಾಂಧಿ
೧೪) ಒಂದೇ ಒಂದು ಮಾತು
೧೫) ಪಂಡಿತ ಬಟ್ಕಂಡೆ
೧೬) ರಾಜೇಂದ್ರ ಪ್ರಸಾದ್
೧೭) ರಾಮಾಯಣ (ಎರಡು ಸಂಪುಟಗಳಲ್ಲಿ)
೧೮) ವಿನೋಬಾ ಅವರ ಉಪದೇಶಗಳು
೧೯) ವೀರ ಪಾಂಡ್ಯ ಕಟ್ಟಬೊಮ್ಮ
20) ವೀರ ಸಾವರ್ಕರ್
21) ಜಾಕೀರ್ ಹುಸೇನ್
22) ಯೋಗಕ್ಷೇಮಂ ವಹಾಮ್ಯಹಂ
23) ಗಾಂಧಿ ಉಪನಿಷತ್ (ಏಳು ಸಂಪುಟಗಳಲ್ಲಿ)
24) ಕುಮಾರವ್ಯಾಸ ಭಾರತ (ಆದಿಪರ್ವ)
25) ಅಂತರ್ದೃಷ್ಟಿ (ಪಿ.ವಿ. ನರಸಿಂಹರಾವ್ ಅವರ ಆತ್ಮಕಥೆಯ ಅನುವಾದ)
26) ನಮ್ಮೆಲ್ಲರ ಶ್ರೀರಾಮ
27) ಯಕ್ಷಪ್ರಶ್ನೆ
28) ಪಾಣಿಗ್ರಹಣ

ಇಂಗ್ಲಿಷ್ ಕೃತಿಗಳು

29) Sandhya Upasana
30) Indrakshi Stotra
31) Pooja Vidhi
32) Havana Vidhi
33) Daily Prayers
34) Panigrahana

ಕ್ಯಾಸೆಟ್‌ಗಳು

35) Festivals of India
36) Night Thoughts (London)
37) Kumaravyasa Bharata 200 Audio cassettes
38) Panigrahana
39) Ramayana (CDs)

ಮತ್ತೂರ್‌ಜಿ ಅವರನ್ನು ಕುರಿತು ಬಂದ ಕೃತಿಗಳು

1) ಮತ್ತೂರ್‌ಜಿ ಜೀವನ ಗಾಥೆ : ನಿರೂಪಣೆ: ಸುಮನಾ ವಿಶ್ವನಾಥ್, ಗಮಕ ಕಲಾ ಪರಿಷತ್, ಹೊಸಹಳ್ಳಿ, ಶಿವಮೊಗ್ಗ : 2002

೧) Mathoor in Britain : K. Sundara Raju, M.P. Birla Foundation, Bharatiya Vidya Bhavan, Race Course Road, Bangalore – 2004.

೨) ವ್ಯಾಖ್ಯಾನ ಭಾಸ್ಕರ ಮತ್ತೂರು ಕೃಷ್ಣಮೂರ್ತಿ– ಡಾ. ಜಿ. ಎನ್. ಉಪಾಧ್ಯ

ಈಗ ಸಲ್ಲಿಸುತ್ತಿರುವ ಸೇವೆಗಳು :

೧) ನಿರ್ದೇಶಕರು, ಭಾರತೀಯ ವಿದ್ಯಾಭವನ, ಬೆಂಗಳೂರು ಕೇಂದ್ರ.

೨) ಪ್ರಾದೇಶಿಕ ನಿರ್ದೇಶಕರು– ಎಂ.ಪಿ. ಬಿರ್ಲಾ ಫೌಂಡೇಶನ್ ಹಾಗೂ ಸಂಸ್ಕೃತ ಶಾಲೆ

೩) ಬ್ರಿಟಿಷ್ ರಾಜ್ಯದ ಫೆಲೋ ಆಫ್ ರಾಯಲ್ ಏಷ್ಯಾಟಿಕ್ ಸೊಸೈಟಿ.

೪) ಬ್ರಿಟಿಷ್ ಮಹಾರಾಣಿಯವರ ಬಂದೀಖಾನೆಯ ಸುವ್ಯವಸ್ಥೆ ಸಮಿತಿ ಸದಸ್ಯರು

೫) ಬ್ರಿಟನ್ ಪ್ರಾಥಮಿಕ ಶಾಲಾ ಸಮಿತಿಯ ಸದಸ್ಯರು,

ಮತ್ತೂರು ಅವರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳು

೧) ಗಾಂಧಿ ಶತಮಾನೋತ್ಸವ ವರ್ಷದ ಚಿನ್ನದ ಪದಕ
೨) ತಮಿಳುನಾಡಿನ ಸಾಹಿತ್ಯ ಸಮ್ಮೇಳನದ ಚಿನ್ನದ ಪದಕ
೩) ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ
೪) ಭಾರತ ಸೇವಾರತ್ನ ಪ್ರಶಸ್ತಿ, ಲಂಡನ್
೫) ಕುಮಾರವ್ಯಾಸ ಭಾರತ ವ್ಯಾಖ್ಯಾನಕ್ಕೆ ಚಿನ್ನದ ಪದಕ
೬) ಧರ್ಮಸ್ಥಳ ಸರ್ವಧರ್ಮ ಸಮ್ಮೇಳನದ ಗೌರವ.
೭) 'ಪ್ರವಚನ ವೈಶಂಪಾಯನ', 'ವ್ಯಾಖ್ಯಾನಭೀಮ', ಹಾಗೂ 'ವ್ಯಾಖ್ಯಾನ ಕೋಕಿಲ' ಬಿರುದು (ಕಾಂಚಿ

ಕಾಮಕೋಟಿ ಪೀಠಾಧಿಪತಿಗಳಿಂದ)

೮) ರಾಮ ಕಥಾಸಾರ–ರಾಮಾಯಣ ಅನುವಾದಕ್ಕೆ ವಿಶೇಷ ಪ್ರಶಸ್ತಿ

೯) 'ಯೋಗಕ್ಷೇಮಂ ವಹಾಮ್ಯಹಮ್'ಗೆ ಗೊರೂರು ಪ್ರತಿಷ್ಠಾನ ಪ್ರಶಸ್ತಿ

೧೦) ವರ್ಷದ ಶ್ರೇಷ್ಠ ಕಲಾವಿದ– ಗಾಯನ ಸುಮಾಜ ಪ್ರಶಸ್ತಿ

೧೧) ಅತ್ತಿಮಬ್ಬೆ ಪ್ರತಿಷ್ಠಾನದಿಂದ ವ್ಯಾಖ್ಯಾನ ಭಾಸ್ಕರ ಪ್ರಶಸ್ತಿ.

೧೨) 'ಗಾಂಧೀ ಉಪನಿಷತ್' ಕೃತಿಗೆ ಜಯಶ್ರೀ ಪ್ರಶಸ್ತಿ ಹಾಗೂ ಗಾಂಧಿ ಸಾಹಿತ್ಯ ಸಂಘದ ಗೌರವ.

೧೩) ಶ್ರೀ ವಜ್ರಕುಮಾರ ಪ್ರಶಸ್ತಿ

೧೪) ದಿ ರಾಯಲ್ ಏಷಿಯಾಟಿಕ್ ಸೊಸೈಟಿ ಪ್ರಶಸ್ತಿ

೧೫) ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ

೧೬) ಎಂ.ಎಂ. ಪಾಟೀಲ್ 'ಜನಸೇವಕ' ಪ್ರಶಸ್ತಿ

೧೭) ಲಲಿತ ಕಲಾಶ್ರಯ ಸುಬ್ಬರಾಮಯ್ಯ ಫೈನ್ ಆರ್ಟ್ಸ್ ಟ್ರಸ್ಟ್ ಬಿರುದು

೧೮) ನೆಲ್ಸನ್ ಮಂಡೇಲಾ ಮಹಾಮಾನವ ಪ್ರಶಸ್ತಿ.

೧೯) ಕುವೆಂಪು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ

***

೨. ಗ್ರಂಥದ ಬಗೆಗೆ

ಅ. ಸಂಕೇತಿ : ಆತ್ಮಕಥೆಗಳು

ಮೈಸೂರು
೧.೧.೨೦೦೮

ಕೆ. ಅನಂತರಾಮು
ಕನ್ನಡ ಪ್ರಾಧ್ಯಾಪಕ(ನಿವೃತ್ತ)
ಮೈಸೂರು ವಿಶ್ವವಿದ್ಯಾನಿಲಯ

ಆತ್ಮಕಥೆಯೆಂಬ ಸಾಹಿತ್ಯ ಪ್ರಕಾರ

ಹೊಸಗನ್ನಡದ ಸಾಹಿತ್ಯಪ್ರಕಾರಗಳಲ್ಲಿ ಜೀವನಚರಿತ್ರೆ ಮತ್ತು ಆತ್ಮಕಥೆ ಎಂಬಿವು ಅವಳಿಮಕ್ಕಳಿದ್ದಂತೆ, ಅಶ್ವಿನೀದೇವತೆಗಳಿದ್ದಂತೆ. ಮಹಾಪುರುಷನೊಬ್ಬನು ಹುಟ್ಟಿಬಂದ ಸನ್ನಿವೇಶಗಳು, ಅವನ ಬಾಲ್ಯಜೀವನ, ವಿದ್ಯೆ ಕಲಿತದ್ದು, ಬದುಕನ್ನು ಎದುರಿಸಿದ ಬಗೆ, ಮಾಡಿದ ಸಾಧನೆಗಳು, ಪಡೆದುಕೊಂಡ ಸಿದ್ಧಿಗಳು, ಎತ್ತಿಹಿಡಿದ ಜೀವನಮೌಲ್ಯಗಳು, ಬಿಟ್ಟುಹೋದ ಗುರುತುಗಳು, ಲೋಕಜೀವನದ ಒಳಿತಿಗಾಗಿ ನೀಡಿದ ಕಾಣಿಕೆಗಳು ಮೊದಲಾದ ವಿವರಗಳನ್ನು ಸಾಹಿತಿಯೊಬ್ಬನು ರಸಾತ್ಮಕವಾಗಿ ಬಣ್ಣಿಸಿದರೆ ಅದು ಜೀವನಚರಿತ್ರೆಯೆನಿಸುತ್ತದೆ. ಈ ಸಂಗತಿಗಳನ್ನು ಆ ಮಹಾಪುರುಷನೇ ಪ್ರಾಮಾಣಿಕವಾಗಿ, ಹೃದ್ಯವಾಗಿ ಬರೆದಿಟ್ಟರೆ ಅಥವಾ ತಾನೇ ಹೇಳಿದಂತೆ ಅನ್ಯರಿಂದ ಬರೆಯಿಸಿದರೆ ಅದು ಆತ್ಮಕಥೆಯೆನಿಸುತ್ತದೆ. ಜೀವನಚರಿತ್ರೆಗಿರುವ ಪರಿಪೂರ್ಣತೆ ಆತ್ಮಕಥೆಗಿರುವುದಿಲ್ಲ. ತನ್ನ ಕಥೆಯನ್ನು ಬರೆದಮೇಲೂ ಮಹಾಪುರುಷನು ಒಂದಷ್ಟು ಸಾಧನೆ ಮಾಡಬಹುದೇನೋ, 'ಶರಣರ ಗುಣವನ್ನು ಮರಣದಲ್ಲಿ ನೋಡು' ಎಂಬ ಲೋಕೋಕ್ತಿಯಂತೆ ಆತನ ಅಂತಕಾಲ ಹೇಗಾಗುವುದೋ ಎಂಬಿತ್ಯಾದಿ ಕೆಲವು ವಿವರಗಳು ಆತ್ಮಕಥೆಯಲ್ಲಿ ನಮಗೆ ಲಭ್ಯವಾಗುವುದಿಲ್ಲ. ಇಷ್ಟೆಲ್ಲ ಸಾಧನೆ ಮಾಡಿದ ಆ ಮಹಾಪುರುಷನು ಮುಂದಕ್ಕೇನಾದನು ಎಂಬುದನ್ನು ತಿಳಿಯಬಯಸುವ ವಾಚಕರ ಕುತೂಹಲವನ್ನು ಆತ್ಮಕಥೆಯು ಕಾಯ್ದಿಟ್ಟುಕೊಂಡಿರುತ್ತದೆ. ಮುಂದೆ ಆ ಮಹಾಪುರುಷನ ಜೀವನಚರಿತ್ರೆಯನ್ನು ಬರೆಯಬಯಸುವ ಲೇಖಕವೃಂದಕ್ಕೆ ಅವನ ಆತ್ಮಕಥೆಯು ಸಾಕ್ಷಾತ್ತಾದ, ನೇರವಾದ ವಿಷಯಸಾಮಗ್ರಿಯನ್ನು ದೊರಕಿಸಿಕೊಡುತ್ತದೆ.

ಕನ್ನಡ ಸಾಹಿತ್ಯದಲ್ಲಿ ಅಭಿನಂದನಗ್ರಂಥಗಳ ಸಮೃದ್ಧವಾದೊಂದು ಪರಂಪರೆಯಿದೆ. ಅಲ್ಲಿ ಅಭಿನಂದನೆಗೆ ಪಾತ್ರರಾಗುವ ಪುಣ್ಯಪುರುಷರೇ ತಮ್ಮ ಬದುಕಿನ ಪ್ರಮುಖ ಘಟನೆಗಳನ್ನು ಆ ಗ್ರಂಥಗಳಲ್ಲಿ ಮೆಲುಕುಹಾಕುವ ಪರಂಪರೆಯೂ ಇತ್ತೀಚೆಗೆ ಬೆಳೆದುಬಂದಿದೆ. ಆ ಪುಣ್ಯಪುರುಷರನ್ನು ಕುರಿತಂತೆ ಹಲವರು ಸಾಂದ್ರವಾದ ವ್ಯಕ್ತಿಚಿತ್ರಗಳನ್ನು ಆ ಗ್ರಂಥಗಳಿಗೆ ಬರೆದಿರುತ್ತಾರೆ. ಅವೆಲ್ಲವೂ ಜೀವನಚರಿತ್ರಕಾರರಿಗೆ ಕಾಮಧೇನುವಿದ್ದಂತೆ.

ವ್ಯುತ್ಪತ್ತಿಯೆಂದರೇನು ಎಂಬುದನ್ನು ವಿವರಿಸುವಾಗ ನಮ್ಮ ಲಾಕ್ಷಣಿಕರು 'ಉಚಿತಾನುಚಿತ ವಿವೇಕವೇ ವ್ಯುತ್ಪತ್ತಿ' ಎಂದು ಹೇಳಿದ್ದಾರೆ. ಕಾವ್ಯಮೀಮಾಂಸೆಯ ಪ್ರಸ್ಥಾನಗಳಲ್ಲಿ 'ಔಚಿತ್ಯ' ಎಂಬುದೂ ಸ್ಥಾನಪಡೆದುಕೊಂಡಿದೆ. ಹೀಗಿರುವಾಗ ಆತ್ಮಕಥನಕಾರನು ತನ್ನ ನಿರೂಪಣೆಯಲ್ಲಿ ತುಂಬು ಎಚ್ಚರವನ್ನು ಕಾಯ್ದುಕೊಳ್ಳಬೇಕು. ತನ್ನ ಜೀವನಗಾಥೆಯಲ್ಲಿ ಯಾವುದನ್ನು ಹೇಳಬೇಕು, ಯಾವುದನ್ನು ಸಮಾಜದ ಹಿತದೃಷ್ಟಿಯಿಂದ ಹೇಳಬಾರದು, ತನ್ನ ದೋಷ ದೌರ್ಬಲ್ಯಗಳ ಅನಾವರಣ ಯಾವ ಹದದಲ್ಲಿ ಆಗಬೇಕು ಎಂಬುದನ್ನೆಲ್ಲ ಸಾವಧಾನವಾಗಿ ಚಿಂತಿಸಬೇಕು. ತನ್ನ ಸಂಪರ್ಕಕ್ಕೆ ಬಂದವರನ್ನು ಕುರಿತು ಹೇಳುವಲ್ಲಿಯಾಗಲಿ, ಅವರುಗಳ ದೋಷಗಳನ್ನು ಬಹಿರಂಗಪಡಿಸುವುದೇನಾದರೂ ಇದ್ದರಾಗಲಿ, ಅವನು ಎಷ್ಟು ಸಂಯಮದಿಂದಿದ್ದರೂ ಸಾಕಾಗುವುದಿಲ್ಲ. ಈ ವಿಚಾರಗಳನ್ನೆಲ್ಲ ನೆನೆದರೇ ಸಾಕು, ಆತ್ಮಕಥೆ ಬರೆಯುವುದು ಎಂತಹ ಅಗ್ನಿಪರೀಕ್ಷೆಯಪ್ಪಾ ಎನ್ನಿಸದಿರದು.

ಜೀವನಚರಿತ್ರಕಾರನೊಬ್ಬನು ತನ್ನ ಕಥಾನಾಯಕನನ್ನು ಮುಕ್ತಕಂಠದಿಂದ ಕೊಂಡಾಡಿದರೆ, ಲೋಕವು ಸಹಿಸಿಕೊಳ್ಳುತ್ತದೆ, ತಪ್ಪು ತಿಳಿಯುವುದಿಲ್ಲ. ಆದರೆ ಆತ್ಮಕಥನಕಾರನು ತನ್ನನ್ನು ಆ ಮಟ್ಟದಲ್ಲಿ ಕೊಂಡಾಡಿಕೊಂಡರೆ ಆತ್ಮಪ್ರಶಂಸೆ ಹೆಚ್ಚಾಯಿತು ಎಂದು ಭಾವಿಸುವ ಭಯವಿದೆ. 'ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ' ಎಂಬ ಬಸವಣ್ಣನವರ ಸೂತ್ರಕ್ಕೆ ಕಟ್ಟು ಬಿದ್ದವನಾದರಂತೂ ತನ್ನ ಹೆಗ್ಗಳಿಕೆಯನ್ನು ಹೇಳಿಕೊಳ್ಳಲು ಸಂಕೋಚಪಟ್ಟುಕೊಳ್ಳುತ್ತಾನೆ. ಆದರೆ ಇದಿರನ್ನು ಹಳಿಯದೆ ತನ್ನನ್ನು ಒಂದಿಷ್ಟು ಬಣ್ಣಿಸಿಕೊಂಡರೂ ಆತ್ಮಕಥೆಗೆ ಕುಂದಿಲ್ಲ. ವಸ್ತುನಿಷ್ಠತೆ, ವ್ಯಕ್ತಿನಿಷ್ಠತೆಗಳು ಅಲ್ಲಿ ಸದಾ ಜಾಗೃತವಾಗಿರಬೇಕು. ಆತ್ಮಕಥೆಯು ವ್ಯಕ್ತಿನಿಷ್ಠವೆನಿಸಿದರೂ ಅದು ವೈಯಕ್ತಿಕತೆಯ ಸೀಮಿತ ವಲಯದಿಂದ ಮೇಲೆದ್ದು, ಸಾಧಾರಣೀಕರಣದ ಸೀಮಾತೀತ ವಲಯವನ್ನು ಹೊಕ್ಕು, ಸರ್ವರಿಗೂ ಸಮಾನವಾಗಿ ಆಸ್ವಾದನೆಗೆ ಯೋಗ್ಯವಾಗುವಂತಿರಬೇಕು.

ಇತ್ತೀಚೆಗೆ ಡಾ॥ ಚಂದ್ರಮತಿಸೋಂದಾ ಅವರು ಬರೆದಿರುವ 'ಆತ್ಮಕಥೆಯ ಸುತ್ತಮುತ್ತ' ಎಂಬ ಲೇಖನದ ಕೆಲವು ವಾಕ್ಯಗಳನ್ನು (ಮೈಸೂರು ಮಿತ್ರ, 5.2.2008) ಈ ಸಂದರ್ಭದಲ್ಲಿ ಮನನ ಮಾಡಬೇಕು: "ಆತ್ಮಕಥೆಯಲ್ಲಿ ಅನಾವರಣಗೊಳ್ಳುವ ನೋವು, ನಲಿವು, ರೋಚಕತೆ, ನಿಷ್ಠುರತೆ, ಅಭಿವ್ಯಕ್ತವಾಗುವ ಭಾವನೆಗಳು, ಎಲ್ಲವೂ ಆ ವ್ಯಕ್ತಿಯ ಅನುಭವಕ್ಕೆ ದಕ್ಕಿದ್ದು. ಅದು ಇತರರ ದೃಷ್ಟಿಯಲ್ಲಿ 'ಇಷ್ಟೇನಾ' ಆಗಿರಬಹುದು. 'ರೋಮಾಂಚನ'ದ್ದು ಆಗಿರಬಹುದು. ಸಮಾಜ 'ಬೆಚ್ಚಿಬೀಳುವ' ಸಂಗತಿಯೂ ಇರಬಹುದು. ಅವನ್ನೆಲ್ಲ ಅವೇ 'ಬಣ್ಣ'ಗಳಲ್ಲಿ ಗ್ರಹಿಸಲು ಪ್ರಯತ್ನಿಸಬೇಕೇ ವಿನಾ ಅವುಗಳಿಗೆ ನಮ್ಮ ಬಣ್ಣ ಕೊಡಬೇಕಿಲ್ಲ*** ಪ್ರಾಮಾಣಿಕತೆಯ ಅಳತೆಗೋಲಾಗಿ ತನ್ನೆಲ್ಲಾ ಖಾಸಗಿ ವಿಷಯವನ್ನು ಸಮಾಜದೆದುರು ತೆರೆದಿಡುವುದು 'ಹುಚ್ಚುತನ' ಎನಿಸಬಹುದು; ಕೆಲವೊಮ್ಮೆ ಹೀಗೆ ಮಾಡಿದ ವ್ಯಕ್ತಿ 'ಮಹಾತ್ಮ' ಕೂಡ ಆಗಬಹುದು. ಇದರಿಂದ ಸಮಾಜಕ್ಕೆ ಉಪಯೋಗವಿದೆ ಎಂದರೆ ಇದರಲ್ಲಿ ತಪ್ಪೇನೂ ಇಲ್ಲ *** ಹಲವರ ಆತ್ಮಕಥೆ ಆತ್ಮರತಿಯಲ್ಲಿ ಬಳಲುತ್ತಿರುವುದು ಕಂಡುಬರುತ್ತದೆ. ಆತ್ಮಕಥೆಯ ತುಂಬ 'ನಾನು' ಪ್ರಧಾನವಾಗಿ ಕುಟುಂಬ, ಸಮಾಜ, ಪರಿಸರ ಎಲ್ಲ ನಗಣ್ಯವಾಗಿಬಿಟ್ಟಿರುತ್ತದೆ. ಆತ್ಮಕಥೆ ಬರೆಯುವುದು ಇನ್ನೊಬ್ಬರ ಅವಹೇಳನಕ್ಕಾಗಲಿ, ತನ್ನ ಹಿರಿಮೆಯನ್ನು ಕಾಣಿಸಲಿಕ್ಕಾಗಲಿ ಆಗದೆ ಇತಿಹಾಸದ ಒಂದು ಘಟ್ಟದಲ್ಲಿನ ಸಾಮಾಜಿಕ ಬದುಕಿನ ಸಂದರ್ಭವನ್ನು ಅನಾವರಣಗೊಳಿಸುವಂತಿದ್ದರೆ ಅದೊಂದು ಉಪಯುಕ್ತ ದಾಖಲೆ *** ಸಾಹಿತ್ಯಕವಾಗಿ, ಸಾಮಾಜಿಕವಾಗಿ ಆತ್ಮಕಥೆಗಳಿಗೆ ಒಂದು ಮಹತ್ವದ ಸ್ಥಾನವಿದೆ. ವ್ಯಕ್ತಿಯ ಖಾಸಗಿ ಬದುಕನ್ನು ತೆರೆದಿಡದ ಆತ್ಮಕಥೆಗೆ ಜೀವಂತಿಕೆ ಇರುವುದಿಲ್ಲ; ಸಾಮಾಜಿಕ ಪರಿಸರ ಅಲ್ಲಿ ಅನಾವರಣಗೊಳ್ಳದಿದ್ದಲ್ಲಿ ಸಾರ್ವಕಾಲಿಕತೆಗೆ ಇಂಬು ದೊರೆತಿರುವುದಿಲ್ಲ. ಯಾವುದೇ ಆತ್ಮಕಥೆಯಲ್ಲಿ ಇವೆರಡೂ ಅಂಶಗಳು ಒಂದು ಹದದಲ್ಲಿ ಬೆರೆತಾಗ ಮಾತ್ರ ಅದಕ್ಕೊಂದು ಸಾಮಾಜಿಕಮುಖ ಪ್ರಾಪ್ತವಾಗುತ್ತದೆ; ಸಮಾಜದ ದೃಷ್ಟಿಯಿಂದ ಗಮನಾರ್ಹ ಎನಿಸಿಕೊಳ್ಳುತ್ತದೆ."

ಆತ್ಮಕಥೆಗಳ ಅಧ್ಯಯನದಿಂದ ಆಗುವ ಪ್ರಯೋಜನವೇನು ಎಂದು ಪ್ರಶ್ನಿಸುವುದು ಸಹಜವೇ. ನಾನು ಅನುಭವಿಸಿದ ಕಷ್ಟ ಹೇಳಿತೀರದು, ಈ ಲೋಕದಲ್ಲಿ ನನ್ನಷ್ಟು ಸಂಕಟವನ್ನು ಬೇರಾರೂ ಅನುಭವಿಸಿಲ್ಲ ಎಂದು ನಾವು ಭಾವಿಸಿರಬಹುದು; 'ನಾನು ಮಾಡಿದ ಸಾಧನೆ ಸಾಕು, ಎಷ್ಟು ಮಾಡಿದರೂ ಇಷ್ಟೆ, ನಮ್ಮನ್ನು ಕೇಳುವವರಾರೂ ಇಲ್ಲ, ಮೆಚ್ಚುವವರಾರೂ ಇಲ್ಲ, ಊರು ಉಪಕಾರ ಅರಿಯದು, ಹೆಣ ಸಿಂಗಾರ ಅರಿಯದು' ಎಂದು ಮುದುರಿ ಕುಳಿತಿರಬಹುದು; ಸಾಧನೆ ಮಾಡುತ್ತ ಮಾಡುತ್ತ ಸೋತುಕುಳಿತಿರಬಹುದು, 'ಮರಳಿ ಯತ್ನವ ಮಾಡು, ಮರಳಿ ಯತ್ನವ ಮಾಡು' ಎಂಬ ನೀತಿವಾಕ್ಯ ಉಸಿರಿಗಿಳಿಯದೇ ಹೋಗಿರಬಹುದು; ನನ್ನಂತೆ ಸಾಧನೆ ಮಾಡಬಲ್ಲವರಾರು, ನನ್ನ ಸಮಕ್ಕೆ ಬರಬಲ್ಲವರಾರು, ನನ್ನನ್ನು ಮೀರುವವರಾರು ಎಂಬ ಅಹಂಕಾರವೋ ಅತ್ಯಭಿಮಾನವೋ ನಮ್ಮನ್ನು ಮುತ್ತಿಕೊಂಡಿರಬಹುದು. ಈ ಪರಿಯ ದೌರ್ಬಲ್ಯಗಳನ್ನೆಲ್ಲ ನೀಗಿಕೊಳ್ಳಲು ಮಹಾಪುರುಷರ ಆತ್ಮಕಥೆಗಳ ಅವಲೋಕನವೇ ದಿವ್ಯೌಷಧ. ಮನಸ್ಸನ್ನು ಕಲಕಲಕಿ, ಕೊನೆಗೆ ನಿರ್ಮಲಗೊಳಿಸುವ, ಶಾಂತಗೊಳಿಸುವ 'ವಿರೇಚನಕ್ರಿಯೆ'ಯನ್ನು ಆತ್ಮಕಥೆಗಳು ನೆರವೇರಿಸುತ್ತವೆ. ಅದೇ ಆನಂದದ ಗಣಿಯಾಗಿ, ಸಾಹಿತ್ಯದ ಪ್ರಯೋಜನದ ಮೂಲಮಂತ್ರವಾದ 'ಕಾವ್ಯಮ್ ಆನಂದಾಯ' ಎಂಬ ಸ್ಥಿತಿಯಲ್ಲಿ ನಮ್ಮನ್ನು ನೆಲೆಗೊಳಿಸುತ್ತವೆ; ಉಪದೇಶಕ್ಕೂ ಕೊರತೆಯಾಗದಂತೆ ಅವು ನೋಡಿಕೊಳ್ಳುತ್ತವೆ.

ಸಾಹಿತ್ಯವು ಕಾಲದೇಶಗಳ ಎಲ್ಲೆಕಟ್ಟನ್ನು ಮೀರಿ ಉಪಾದೇಯವಾಗುತ್ತದೆ ಎಂದು ನಾವು ನಂಬಿಕೊಂಡಿದ್ದೇವೆ. ಆ ನಂಬುಗೆಯನ್ನು ಆತ್ಮಕಥೆ, ಜೀವನಚರಿತ್ರೆಗಳು ಮತ್ತಷ್ಟು ಗಟ್ಟಿಗೊಳಿಸುತ್ತವೆ. ಸಾಹಿತ್ಯ, ವಿಜ್ಞಾನ, ಅಧ್ಯಾತ್ಮ, ಲಲಿತಕಲೆಗಳು, ರಾಷ್ಟ್ರಕಾರಣ, ಸಮಾಜಸೇವೆ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಾಪುರುಷರ ಆತ್ಮಕಥೆಗಳು ಸಹೃದಯರಿಗೆ ಸ್ಫೂರ್ತಿಯ ಚಿಲುಮೆಯಾಗುತ್ತವೆಂಬುದರಲ್ಲಿ ಸಂಶಯವಿಲ್ಲ.

ಕೃತಿಗಳ ಅವಲೋಕನ

'ಸಂಕೇತಿ : ಆತ್ಮಕಥೆಗಳು' ಎಂಬೀ ಹೆಬ್ಬೊತ್ತಗೆಯಲ್ಲಿ ಬಿ. ಸುಬ್ಬರಾವ್ ಅವರ 'ಸಂಗೀತಗಾರನ ಮೆಲುಕುಗಳು'; ನರಸಿಂಹಮೂರ್ತಿಶಾಸ್ತ್ರಿಗಳ 'ಪಂಡಿತರೊಡನೆ' ಆರ್. ಎನ್. ದೊರೆಸ್ವಾಮಿಯವರ 'ನನ್ನ ಬದುಕು'; ಎಚ್.ಸಿ. ವೇಣುಗೋಪಾಲ್ ಅವರ 'ನೆನಪು ಕೆದರಿದಾಗ' ಮತ್ತೂರು ಕೃಷ್ಣಮೂರ್ತಿಗಳ 'ಮತ್ತೂರಿನಿಂದ ಬ್ರಿಟನ್‌ಗೆ' ಎಂಬ ಐದು ವೈವಿಧ್ಯಮಯವಾದ ಕೃತಿಗಳಿವೆ. 'ಪಂಡಿತರೊಡನೆ' ಅತ್ಯಂತ ಚಿಕ್ಕದಾದರೆ, 'ಮತ್ತೂರಿನಿಂದ ಬ್ರಿಟನ್‌ಗೆ' ಅತ್ಯಂತ ದೊಡ್ಡದಾಗಿದೆ. 'ಸಂಗೀತಗಾರನ ಮೆಲುಕುಗಳು', 'ನೆನಪು ಕೆದರಿದಾಗ' ಎಂಬೆರಡು ಆತ್ಮಕಥನಕಾರರೇ ಬರೆದ ಆಂಗ್ಲಮೂಲದಿಂದ ಕನ್ನಡಕ್ಕೆ ಭಾಷಾಂತರಗೊಂಡು ಬಂದಿವೆ. 'ಪಂಡಿತರೊಡನೆ', 'ಮತ್ತೂರಿನಿಂದ ಬ್ರಿಟನ್‌ಗೆ' ಹೇಳಿ ಬರೆಯಿಸಿದ ಕೃತಿಗಳಾಗಿವೆ. 'ನನ್ನ ಬದುಕು' ಮಾತ್ರ ಆತ್ಮಕಥನಕಾರರೇ, ಕನ್ನಡದಲ್ಲೇ, ಬರೆದ ಕೃತಿಯಾಗಿದೆ. ಇಲ್ಲಿ ಒಬ್ಬ ವೀರ ಯೋಧರು, ಒಬ್ಬ ವೇದಬ್ರಹ್ಮರು, ಇಬ್ಬರು ಸಂಗೀತಸರಸ್ವತಿಯ ಸುಪುತ್ರರು, ಒಬ್ಬ ಬಹುಮುಖಪ್ರತಿಭಾಸಂಪನ್ನರಾದ ವಿದ್ವನ್ಮಣಿಗಳು ಇದ್ದಾರೆ.

ಸಂಗೀತಗಾರನ ಮೆಲುಕುಗಳು : ಬಿ.ಸುಬ್ಬರಾವ್ (1894–1975)ಅವರ 'ಸಂಗೀತಗಾರನ ಮೆಲುಕುಗಳು' ಅವರ ಬಾಲ್ಯಕಾಲದ ಅದಮ್ಯ ಸಂಗೀತಾಸಕ್ತಿಯ ಅಪೂರ್ವ ಘಟನೆಯೊಂದರೊಡನೆ ಪ್ರಾರಂಭವಾಗಿದೆ. ಅವರು ಮಧ್ಯಪ್ರದೇಶದ ಕೃಷಿಕಾಲೇಜಿನ ಅಧ್ಯಾಪಕರಾಗಿದ್ದುಕೊಂಡೇ ಸಂಗೀತ ಕೃಷಿಯನ್ನೂ ನಡೆಸಿದ ಮಹಾನುಭಾವರು. ಅವರು ಕೃಷಿ ಇಲಾಖೆಯ ನಿರ್ದೇಶಕ ಪದವಿಯನ್ನೂ ಅಲಂಕರಿಸಿದ್ದರು. ನಿವೃತ್ತರಾದಮೇಲೆ ಮೈಸೂರಿನಲ್ಲಿ ನೆಲೆಸಿ ತಮ್ಮ ಸಂಗೀತಾರಾಧನೆಯನ್ನು ಮುಂದುವರಿಸಿದರು. ಕರ್ನಾಟಕಸಂಗೀತ ಮತ್ತು ಉತ್ತರಾದಿಗಳೆಂಬೆರಡೂ ಪ್ರಕಾರಗಳಲ್ಲಿ ಪಂಡಿತರಾಗಿದ್ದ ಅವರು ಸ್ವಂತ ಬಲ್ಮೆಯಿಂದ ಪಿಟೀಲು ಮತ್ತು ವಿಚಿತ್ರವೀಣಾ ಎಂದೂ ಕರೆಯುವ ಗೊಟ್ಟುವಾದ್ಯಗಳನ್ನು ನುಡಿಸಬಲ್ಲವರಾಗಿದ್ದರು. ಸಂಗೀತ ಜಗತ್ತಿನ ಬಾಲಗಂಧರ್ವ, ಬಿಡಾರಂ ಕೃಷ್ಣಪ್ಪ, ಮೈಸೂರು ವಾಸುದೇವಾಚಾರ್ಯ, ವೀಣೆಶೇಷಣ್ಣ, ಸವಾಯಿಗಂಧರ್ವ ಮುಂತಾದ ಅಪೂರ್ವ ಸಂಗೀತ ಪ್ರತಿಭೆಗಳಿಗೆ ಅವರು ಸಮಕಾಲೀನರಾಗಿದ್ದರು. ವಿದ್ವಾನ್ ಚಿಕ್ಕರಾಮರಾಯರು ಮೈಸೂರಿನ ವೆಸ್ಲಿಯನ್ ಮಿಷನ್ ಸ್ಕೂಲಿನಲ್ಲಿ ಅವರಿಗೆ ಸಹಪಾಠಿಯಾಗಿದ್ದರು. 1900ರಿಂದ 1970ರವರೆಗಿನ ಭಾರತೀಯ ಸಂಗೀತ ಜಗತ್ತು ಸಾಧಿಸಿದ್ದ ಮಹೋನ್ನತಿಯ ಅಪರೂಪದ ಚಿತ್ರಗಳು ಈ ಕೃತಿಯಲ್ಲಿವೆ. ನಲವತ್ತು ಕಿರು ಅಧ್ಯಾಯಗಳಲ್ಲಿ ಅಂದಿನ ಸಂಗೀತ ಸಾಮ್ರಾಜ್ಯದ ಹಾಸುಬೀಸುಗಳನ್ನೆಲ್ಲ ರಸಪ್ರಪೂರ್ಣವಾದ ಮಾತುಗಳಲ್ಲಿ ಭಟ್ಟಿಯಿಳಿಸಿ ಕೊಟ್ಟಿದ್ದಾರೆ. ತಮ್ಮನ್ನು ಕುರಿತು ಹೇಳಿರುವುದಕ್ಕಿಂತ ಹೆಚ್ಚಾಗಿ ಸುಬ್ಬರಾಯರು ಸಮಕಾಲೀನ ಸಂಗೀತ ದಿಗ್ಗಜಗಳ ಮಹಿಮಾವಿಶೇಷಗಳಿಗೇ ಹೆಚ್ಚು ಒತ್ತು ನೀಡಿದ್ದಾರೆ. ಹೀಗಾಗಿ ಇದೊಂದು ಅಪೂರ್ವ ವ್ಯಕ್ತಿಚಿತ್ರಮಂಜರಿಯಾಗಿಯೂ ಉಪಾದೇಯವಾಗಿದೆ. "ನಾನು ನಿದ್ರೆಯಲ್ಲಿಯೇ ಖರಹರಪ್ರಿಯರಾಗದ 'ಚಕ್ಕನಿರಾಜ' ಕೃತಿಯನ್ನು ಎಷ್ಟು ನಿಖರವಾಗಿ ಹಾಡುತ್ತಿದ್ದೆನೆಂದರೆ, ನಾನು ಎಚ್ಚರವಾಗಿದ್ದು ಪ್ರಜ್ಞಾಪೂರ್ವಕವಾಗಿಯೇ ಹಾಡುತ್ತಿದ್ದೆನೆಂದು ಭಾವಿಸಿದರು" ಎಂಬ ವಾಕ್ಯವು ಸುಬ್ಬರಾಯರ ಅಸೀಮ ಸಂಗೀತಾಸಕ್ತಿಗೆ ಹಿಡಿದ ಕೈಗನ್ನಡಿಯಾಗಿದೆ.

ಸವಾಯಿಗಂಧರ್ವರನ್ನು ಕುರಿತು ಸುಬ್ಬರಾಯರು ಎಷ್ಟು ಸೊಗಸಾಗಿ ಬರೆದಿದ್ದಾರೆ ನೋಡಿ; "ಸವಾಯಿಗಂಧರ್ವ ಅವರು ನಟ ಎನ್ನುವುದಕ್ಕಿಂತ ಸಂಗೀತಗಾರ ಎನ್ನುವುದೇ ಸರಿ. ಅವರಿಗೆ ಕನ್ನಡ ತಕ್ಕಮಟ್ಟಿಗೆ ಗೊತ್ತಿದ್ದು ನನ್ನಲ್ಲಿಗೆ ಬಂದಾಗಲೆಲ್ಲಾ ನನ್ನೊಡನೆ ಕನ್ನಡದಲ್ಲೇ ಮಾತನಾಡುವುದು ಅವರಿಗೆ ಪ್ರಿಯವಾಗಿತ್ತು. ನಗೆ ಹುಟ್ಟಿಸುತ್ತಿದ್ದ ವಿಷಯವೆಂದರೆ ಅವರ ಗುಂಡುಮುಖ, ಬೋಳುತಲೆಗಳಿಂದಾಗಿ ಹಾಡುವಾಗ ಇನ್ನೇನು ಅತ್ತೇ ಬಿಡುತ್ತಾರೋ

ಎನ್ನುವಂತೆ ಕಾಣುತ್ತಿದ್ದ ಅವರ ಮುಖಚಹರೆ. ಅನೇಕ ಸಂಗೀತಗಾರರು ಹೀಗೆಯೇ, ಅವರನ್ನು ನೋಡುವುದಕ್ಕಿಂತ ಕೇವಲ ಆಲಿಸುವುದೇ ಒಳ್ಳೆಯದು. ಒಂದು ರಾತ್ರಿ ಅವರು ಹಾಡುತ್ತಿದ್ದರು. ಕೆಲವು ಗಮಕತಾನಗಳನ್ನು ಹಾಡುತ್ತಿದ್ದಾಗ ನನ್ನ ಕರುಳು ಅದುರುವಂತೆ ಭಾಸವಾಯಿತು. ನನ್ನ ಪಕ್ಕ ಕುಳಿತಿದ್ದ ಗೆಳೆಯರೊಬ್ಬರನ್ನು ಕೇಳಿದೆ. ಅವರೊಬ್ಬ ವೈದ್ಯರು. ಅವರಿಗೂ ಹಾಗೆಯೇ ಅನುಭವವಾಯಿತಂತೆ, ಸವಾಯಿ ಗಂಧರ್ವರ ಗಮಕತಾನಗಳಿಂದ ಇತರ ಕೆಲವರಿಗೂ ಇದೇ ಅನುಭವವಾಯಿತು." ತರುಣ ಕಾಬೂಲಿಯ ಸಂಗೀತವನ್ನು ಈ ಘನವಿದ್ವಾಂಸ ಮೆಚ್ಚಿಕೊಳ್ಳುವ ಔದಾರ್ಯವನ್ನು ನೋಡಿ: "ಈ ಕಾಬೂಲಿ ಅಲೆಮಾರಿಯಿಂದ ಸಂಗೀತವೇ! ಅದೂ ಇಷ್ಟು ಒಳ್ಳೆಯ ಸಂಗೀತ! ಅವನ ಶಾರೀರ, ಅದರ ಮಾಧುರ್ಯ, ಇಂಪಿಗೆ ನನ್ನ ಮೆಚ್ಚುಗೆಯನ್ನು ಮುಚ್ಚಿಡಲಾಗಲಿಲ್ಲ. ನನ್ನ ಮೆಚ್ಚುಗೆ ಹೇಳಿದೆ. ಅವರು ಅಲೆಮಾರಿ ಬದುಕು ಬದುಕುತ್ತಿದ್ದರಾದರೂ ಅವರೆಷ್ಟು ಆನಂದವಾಗಿದ್ದರು, ಸಂಗೀತ ಅವರೊಡನೆ ಎಷ್ಟು ಆನಂದವಾಗಿತ್ತು! ದೇವಿಸರಸ್ವತಿ ಐಶ್ವರ್ಯಕ್ಕಿಂತಲೂ ಕಾರ್ಪಣ್ಯವನ್ನೇ ತನ್ನ ನಿವಾಸಕ್ಕೆ ಇಷ್ಟ ಪಡುವಳೋ ಏನೋ!" ಈ ಇನ್ನೊಂದು ರಸನಿಮಿಷವನ್ನು ಸವಿಯಿರಿ: "ಶಂಕರಾ ಮತ್ತು ಶಂಕರಾಭರಣಗಳ ಚರ್ಚೆ ಆರಂಭವಾಗಿ ನಾನು ಟಿಕೆಟ್ ಖರೀದಿಸಲು ಮರೆತಿದ್ದೆ. ಇದನ್ನು ನಾನು ವಿವರಿಸಿದೆ. ನನ್ನ ಪ್ರಾತ್ಯಕ್ಷಿಕೆಗೆ ಸಾಕ್ಷಿಯಾಗಿದ್ದ ಇತರ ಪ್ರಯಾಣಿಕರು ನನ್ನ ಹೇಳಿಕೆಯನ್ನು ಬೆಂಬಲಿಸಿದರು. ಅಷ್ಟೇ ಅಲ್ಲಾ, ಕಂಡಕ್ಟರ್ ಕೂಡ ನನ್ನ ಸಂಗೀತದಲ್ಲಿ ಮುಳುಗಿ ಟಿಕೆಟ್ ಕೊಡಲು ಮರೆತಿದ್ದ. ಇದನ್ನೆಲ್ಲಾ ಕೇಳಿದ ಟಿಕೆಟ್ ತನಿಖಾಧಿಕಾರಿ ಕೂಡ ನಾನು ಟಿಕೆಟ್ ಖರೀದಿಸಬೇಕೆಂದು ಒತ್ತಾಯಿಸಲು ಮರೆತೇಬಿಟ್ಟರು."

ಲೇಖಕರು ಆಗಾಗ ನಡೆಸಿದ 'ಸಂಗೀತಯಾತ್ರೆ'ಯ ರಸನಿಮಿಷಗಳೂ ಇಲ್ಲಿವೆ. ಹೀಗಾಗಿ ಕೃತಿಗೆ ಅಲ್ಲಲ್ಲಿ ಪ್ರವಾಸಕಥನದ ಹಿತಮಿತವಾದ ಸ್ಪರ್ಶವೊಂದು ದಕ್ಕಿದಂತಾಗಿದೆ. "ಯಾವುದೇ ಪ್ರಕಾರದಲ್ಲಾದರೂ ಯಶಸ್ಸು ಸಾಧಿಸಲು ಅತಿಮುಖ್ಯವಾದ ಸದ್ಗುಣಗಳು ಗುರುಭಕ್ತಿ, ಆಸಕ್ತಿ ಹಾಗೂ ಶಕ್ತಿ ಎಂದು ನಾನು ಭಾವಿಸುತ್ತೇನೆ"; "ಯುವಜನತೆಯಲ್ಲಿ ಉತ್ತಮ ಮೌಲ್ಯಗಳನ್ನು ಬೆಳೆಸಲು ಖ್ಯಾತ ಸಂಗೀತಗಾರರ ಪ್ರವಚನ ಮತ್ತು ಹರಿಕಥೆಗಳು ಬಹಳ ಸಹಕಾರಿಯಾಗಬಲ್ಲವು" ಎಂಬಂತಹ ವಾಕ್ಯಗಳನ್ನು ಮತ್ತೆ ಮತ್ತೆ ಜಪಿಸಬೇಕು. ಅಲೆಮಾರಿ ಗಾಯಕನೊಬ್ಬನು ಹೆಗಲಿಗೆ ಹಾರ್ಮೋನಿಯಂ ನೇತು ಹಾಕಿಕೊಂಡು ಮಹಾತ್ಮಗಾಂಧೀಜಿಯವರ ಮುಂದೆ ಭಜನೆಯೊಂದನ್ನು ಹಾಡಿದಾಗ ಅವರು ಮೆಚ್ಚಿಕೊಂಡಾಡಿದ ಪರಿಯನ್ನು ಸುಬ್ಬರಾಯರು ದಾಖಲಿಸಿರುವುದು ಅರ್ಥಪೂರ್ಣವಾಗಿದೆ: "ನೋಡಿ, ಭಜನ್ ಎಷ್ಟು ಉತ್ತೇಜನಕಾರಿಯಾಗಿದೆ! ಎಂತಹ ಭವ್ಯ ಶಾರೀರ! ಅವನ ಶಾರೀರ ಹಾಗೂ ಹಾರ್ಮೋನಿಯಂ ನಡುವೆ ಎಂತಹ ಹೊಂದಾಣಿಕೆ! ನೀವೆಲ್ಲರೂ ಇದನ್ನು ಕೇಳಿ ಆನಂದಿಸಿದ್ದೀರೆಂದು ಆಶಿಸುತ್ತೇನೆ. ನೀವೂ ಇದೇ ರೀತಿ ಹಾಡಬೇಕು".

ಅನುವಾದವು ಅತ್ಯಂತ ಮನೋಜ್ಞವಾಗಿದೆ. ಸುಬ್ಬರಾಯರು ಕನ್ನಡದಲ್ಲೇ ತಾವು ಬರೆದಿದ್ದರೆ ಹೇಗಿರಬಹುದಿತ್ತೋ ಅಷ್ಟೇ ಸಹಜವಾಗಿದೆ ಇಲ್ಲಿನ ಶೈಲಿ. ಅದಕ್ಕಾಗಿ ಡಾ. ಮೀರಾ ಮೂರ್ತಿಯವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಬೇಕು.

ಪಂಡಿತರೊಡನೆ : ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕು, ಲಿಂಗದಹಳ್ಳಿಯ ನರಸಿಂಹಮೂರ್ತಿಶಾಸ್ತ್ರಿಗಳ (1912) ಆತ್ಮಕಥೆ 'ಪಂಡಿತರೊಡನೆ' ಅತ್ಯಂತ ಬೋಧಪ್ರದವೂ ರಸಮಯವೂ ಆಗಿದೆ. 'ವಾಕ್ಯಂ ರಸಾತ್ಮಕಮ್ ಕಾವ್ಯಂ'– ರಸಭರಿತವಾದ ವಾಕ್ಯವೇ ಕಾವ್ಯ ಎಂಬ ಸೂತ್ರಕ್ಕೆ ಅನುಸಾರವಾಗಿ ಇಲ್ಲಿನ ವಾಕ್ಯವಾಕ್ಯವೂ ಮನೋಹಾರಿಯಾಗಿದೆ. "It is better to produce one image in a life time than to produce voluminous works" ಎಂದು ಪಾಶ್ಚಾತ್ಯ ಚಿಂತಕನೊಬ್ಬನು ಹೇಳಿದ್ದಾನೆ. ಅಂತಹ ಅನೇಕ ಇಮೇಜುಗಳು ಅಂದರೆ ಶಬ್ದಚಿತ್ರಗಳು ಈ ಕಿರುಹೊತ್ತಗೆಯಲ್ಲಿವೆ. ಕಿರಿದರಲ್ಲಿ ಪಿರಿದರ್ಥವನ್ನು ಶಾಸ್ತ್ರಿಗಳು ಹಿಡಿದುಕೊಟ್ಟಿದ್ದಾರೆ. ಅವರು ವೇದಶಾಸ್ತ್ರಗಳ ವಿದ್ಯಾವ್ಯಾಸಂಗಕ್ಕಾಗಿ ಶೃಂಗೇರಿ, ಧಾರವಾಡ, ಮತ್ತೆ ಶೃಂಗೇರಿ ಹೀಗೆ ಸುತ್ತಾಡಿ ತರ್ಕ, ಅಲಂಕಾರ, ಮೀಮಾಂಸೆ, ವ್ಯಾಕರಣ ಮುಂತಾದ ಶಾಸ್ತ್ರಗಳನ್ನು ಕರತಲಾಮಲಕ ಮಾಡಿಕೊಂಡರು; 'ಸಾಹಿತ್ಯ ಶಿರೋಮಣಿ'ಯಾದರು; ಹಲವು ಶಿಷ್ಯರಿಗೆ, ಮಠಗಳ ಯತಿವರ್ಯರಿಗೆ ಪಾಠಹೇಳಿ ಗುರುಪದವಿಗೇರಿದರು. ಹಾಗೆ ಶಾಸ್ತ್ರಜಗತ್ತನ್ನು ಬೆಳಗಿಸಿದ ಕಥೆಯೆಲ್ಲ ಅತ್ಯಂತ ಹೃದಯಸ್ಪರ್ಶಿಯಾಗಿದೆ. ಮುತ್ತಜ್ಜಿ ಮಹಾಲಕ್ಷ್ಮಮ್ಮ ಪಂಜುಗಳ್ಳರಿಂದ ಪಾರಾದ ಪರಿ ಕುತೂಹಲಕಾರಿಯಾಗಿದೆ. ಕಲಿಯುವ ಛಲದ ರಾಮಕೃಷ್ಣಶರ್ಮನ ಕಥೆ ಕರುಳುಕರಗಿಸುತ್ತದೆ. ಆಶುಕವಿತ್ವ, ಚಿತ್ರಕವಿತ್ವಗಳ ವೈಖರಿ ಚಿರಕಾಲ ನೆನಪಿನಲ್ಲಿ ಉಳಿಯುತ್ತದೆ.

ಈ ಆತ್ಮಚರಿತ್ರೆಯನ್ನು ರಸಾವೇಶ ತಗ್ಗದಂತೆ ನಿರೂಪಣೆ ಮಾಡಿಕೊಟ್ಟಿರುವ ಬೀ.ಚಿ. ಜಗನ್ನಾಥ ಜೋಯಿಸರ ಕೌಶಲವನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ!

ನನ್ನ ಬದುಕು : ಹಾಸನ ಜಿಲ್ಲೆಯ, ಅರಕಲಗೂಡು ತಾಲ್ಲೂಕು, ರುದ್ರಪಟ್ಟಣದಲ್ಲಿ ಜನಿಸಿದ ಆರ್.ಎನ್. ದೊರೆಸ್ವಾಮಿಯವರು (1916–2002) ಕರ್ನಾಟಕ ಸಂಗೀತರಂಗದ ಸಿದ್ಧಪುರುಷರಲ್ಲೊಬ್ಬರು. ಅವರೊಬ್ಬ ವಾಗ್ಗೇಯಕಾರರು. 'ಲಕ್ಷ್ಮೀರಮಣಕೃತಿಮಂಜರಿ' ಎಂಬುದು ಅವರ ಮಹತ್ತ್ವದ ಕೃತಿ. ಕರ್ನಾಟಕ ಸರ್ಕಾರದ 'ರಾಜ್ಯೋತ್ಸವಪ್ರಶಸ್ತಿ'ಯೇ ಮೊದಲಾದ ಹಲವಾರು ಗೌರವಗಳಿಗೆ ಅವರು ಪಾತ್ರರಾಗಿದಾರ್ರೆ, ಮೈಸೂರು ವಿಶ್ವವಿದ್ಯಾನಿಲಯದ ಲಲಿತ ಕಲೆಗಳ ಕಾಲೇಜಿನಲ್ಲಿ ಅವರು ಉನ್ನತ ಪದವಿಯನ್ನು ಅಲಂಕರಿಸಿ ನಿವೃತ್ತರಾಗಿದ್ದಾರೆ. ಹದಿನೈದನೆಯ ವಯಸ್ಸಿಗೇ ಸಂಗೀತ ಕಲಿಯಬೇಕೆಂದು ತಮಿಳುನಾಡಿನ ಚಿದಂಬರಂ ಪಟ್ಟಣಕ್ಕೆ ಹೋಗಿ ಅವರು ಪಟ್ಟಪಾಡು ಹೇಳಿತೀರದು. ಪೂರ್ಣ ಯೌವನಿಗರಾದಾಗ ಗೊಗ್ಗರುದನಿಗೆ ತುತ್ತಾಗಿ ವೀಣೆಯತ್ತ ಹೊರಳಿಕೊಂಡರು. ಮೈಸೂರಿನ ವೀಣಾ ವೆಂಕಟಗಿರಿಯಪ್ಪನವರ ಶಿಷ್ಯರಾಗಲು ಅವರು ಎಷ್ಟು ಶ್ರಮಪಟ್ಟರೋ! "ನನ್ನನ್ನು ತಾವು ಶಿಷ್ಯನನ್ನಾಗಿ ಸ್ವೀಕರಿಸಿದರೆ ಅಷ್ಟೇ ಸಾಕು. ತಮ್ಮ ಸೇವೆಮಾಡಿಕೊಂಡು , ತಮ್ಮ ವೀಣಾಗಾನವನ್ನು ಕೇಳುತ್ತಾ ಇರುತ್ತೇನೆ. ತಮ್ಮಿಂದ ನನಗೆ ಎರಡಕ್ಷರ ಅನುಗ್ರಹವಾದರೂ ಸಾಕು, ಅದೇ ನನ್ನ ಭಾಗ್ಯ ಎಂದು ಹೇಳಿ ಅವರ ಪಾದಗಳನ್ನು ಹಿಡಿದೆ. ನನ್ನ ನಯ, ವಿನಯ, ಗುರುಭಕ್ತಿಗಳನ್ನು ಕಂಡು ಅವರಿಗೂ ಮನಸ್ಸು ಕರಗಿರಬೇಕು" ಎಂದು ಆ ಸುಮುಹೂರ್ತವನ್ನು ದೊರೆಸ್ವಾಮಿಯವರು ಕಣ್ಣಿಗೆ ಕಟ್ಟುವಂತೆ ಬರೆದಿಟ್ಟಿದ್ದಾರೆ.

ಗುರುಕೃಪೆ ಮತ್ತು ಕಟ್ಟುನಿಟ್ಟಾದ ಸಾಧನೆಯಿಂದ ದೊರೆಸ್ವಾಮಿಯವರು ಮೈಸೂರು ಅರಮನೆಯ ಆಸ್ಥಾನ ವಿದ್ವಾಂಸರಾಗಿ ನೇಮಕಗೊಂಡರು. ಅಂದಿನ ಮಾಸಿಕ ಸಂಭಾವನೆ ಮೂವತ್ತು ರೂಪಾಯಿಗಳಾದರೂ ಪದವಿ ಮಾತ್ರ ಬಹು ದೊಡ್ಡದಾಗಿತ್ತು. ಸಂತಸದ ಆ ಕ್ಷಣಗಳನ್ನು ಅವರ ಮಾತುಗಳಲ್ಲಿಯೇ ಓದಿ ಆನಂದಿಸಬೇಕು: "ನವರಾತ್ರಿ ರಾಜದರ್ಬಾರಿಗೆ ನಾನು ಆಸ್ಥಾನವಿದ್ವಾಂಸನಾಗಿ ಹೋದ ಮೊದಲದಿನ ನಮ್ಮ ಮನೆಯಲ್ಲೆಲ್ಲಾ ಸಂಭ್ರಮವೋ ಸಂಭ್ರಮ. ದರ್ಬಾರಿಗೆ ಬೇಕಾದ ಕರಿನಿಲುವಂಗಿ, ಬಿಳಿಷರಾಯಿ, ಜರತಾರಿಪೇಟ, ಮಡಿಸಿ ಇಸ್ತ್ರಿ ಮಾಡಿದ ಜರತಾರಿವಲ್ಲಿ ಇವುಗಳನ್ನೆಲ್ಲಾ ಸಿದ್ಧಪಡಿಸಿಕೊಂಡಿದ್ದೆ. ಈ ದರ್ಬಾರ್ ಉಡುಪನ್ನು ಧರಿಸಿದ ನನ್ನನ್ನು ನೋಡಿ ನನ್ನ ತಂದೆತಾಯಿಯವರ ಪ್ರೀತಿಯ ಕಣ್ಣುಗಳಿಗೆ ನಾನೊಬ್ಬ ರಾಜಕುಮಾರನಂತೆಯೇ ಕಂಡಿರಬೇಕು"

"ನಾನು ಮುಪ್ಪನ್ನು ಸಂತೋಷದಿಂದಲೇ ಸ್ವೀಕರಿಸಿದ್ದೇನೆ, ಸ್ವಾಗತಿಸಿದ್ದೇನೆ. ಅದರಿಂದ ಯಾರೂ ತಪ್ಪಿಸಿಕೊಳ್ಳುವಂತಿಲ್ಲ. ಆದರೆ ಮುಪ್ಪಿನಲ್ಲಿಯೂ ಒಂದು ಆನಂದವಿದೆ, ನೆಮ್ಮದಿ ಇದೆ, ತೃಪ್ತಿ ಇದೆ ಎನ್ನುವುದನ್ನು ಕಂಡುಕೊಂಡಿದ್ದೇನೆ. ಹಾಗೆ ನೋಡಿದರೆ ಅರುವತ್ತು ದಾಟಿದ ಅನಂತರವೇ ನನ್ನ ಜೀವನದ ಮಹತ್ತರ ಸಾಧನೆಗಳೆಲ್ಲವೂ ಕೈಗೂಡಿವೆ ಎಂಬುದು ಗಮನಾರ್ಹ" ಎಂದು ಅವರು ಸಮಾರೋಪದಲ್ಲಿ ಹೇಳಿರುವ ಮಾತುಗಳು ಹಿರಿಯನಾಗರೀಕರಿಗೊಂದು ಆಶಾಕಿರಣ. ದೊರೆಸ್ವಾಮಿಯವರ 'ನನ್ನ ಬದುಕು', ಸಾಧಕರೆಲ್ಲರ ಬದುಕಾದರೆ ಎಷ್ಟು ಚೆನ್ನ!

ಮೈಸೂರು ನಗರದ ಅಂದಿನ ಸಂಗೀತಪರಿಸರದ ಮೃದುಮಧುರ ಚಿತ್ರಗಳು ಈ ಕೃತಿಯಲ್ಲಿ ಹರಡಿಕೊಂಡಿವೆ. ಅವುಗಳನ್ನು ಓದುತ್ತಿದ್ದರೆ ಸಹೃದಯರ ಮನಸ್ಸು ಗತಕಾಲದ ರಸಾನಂದದಲ್ಲಿ ನಿಮಗ್ನವಾಗಿಬಿಡುತ್ತದೆ. ನಾನೀಗ ಸಂತೋಷವಾಗಿದ್ದೇನೆ, ಯಾವ ಈತಿಬಾಧೆಯೂ ಇಲ್ಲ ಎಂದುಕೊಳ್ಳುತ್ತಿರುವಾಗಲೇ ದುಃಖದ ಅಲೆಗಳು ಅಪ್ಪಳಿಸಿ ಹೇಗೆ ನಮ್ಮನ್ನು ಕಂಗೆಡಿಸುತ್ತವೆ ಎಂಬುದನ್ನು ಇಲ್ಲಿ ಓದಿಯೇ ಅರಿಯಬೇಕು.

ನೆನಪು ಕೆದರಿದಾಗ : 'ನೆನಪು ಕೆದರಿದಾಗ' ಎಂಬುದು ಮೇಜರ್ ಎಚ್. ಸಿ. ವೇಣುಗೋಪಾಲ್ ಅವರ ವಿಶಿಷ್ಟವಾದ ಆತ್ಮಕಥೆ. ಈ ಗೊಂಚಲಿನಲ್ಲಿ ತನ್ನ ಪ್ರತ್ಯೇಕತೆಯನ್ನು ಸ್ಥಾಪಿಸಿಕೊಳ್ಳುವ ಶಕ್ತಿ ಅದರಲ್ಲಿ ತುಂಬಿಕೊಂಡಿದೆ. ವೇಣುಗೋಪಾಲರು ಹಾಸನಜಿಲ್ಲೆಯ ಬೇಲೂರುತಾಲ್ಲೂಕು ಹಂದನಹಾಳು ಗ್ರಾಮದಲ್ಲಿ (1922–2003) ಜನಿಸಿ, ತಮ್ಮ ಬಾಲ್ಯದ ದಿನಗಳನ್ನು

ಬೇಲೂರು, ಹಾಸನ, ಗೊರೂರು, ಹೊಳೆನರಸೀಪುರಗಳಲ್ಲಿ ಕಳೆದರು. ಸೀನಿಯರ್ ಇಂಟರ್‌ಮೀಡಿಯಟ್‌ವರೆಗೆ ಓದಿ, ದೇಶಭಕ್ತಿಯನ್ನು ಎದೆಯಲ್ಲಿ ತುಂಬಿಕೊಂಡು, ಮೈಸೂರು ನಗರದಲ್ಲಿ ಸ್ವಾತಂತ್ರ್ಯಚಳವಳಿಗೆ ಧುಮುಕಿದರು. ಸ್ವಾತಂತ್ರ್ಯಯೋಧ ಎಂ.ಎಸ್. ಜೋಯಿಸ್ ಅವರ ಗಾಂಧೀಮಾರ್ಗದಿಂದ ಪ್ರಭಾವಿತರಾದರು. ಶಿವಮೊಗ್ಗ ಜಿಲ್ಲೆಯ ಮತ್ತೂರಿನಲ್ಲಿ ತಮ್ಮ ಬದುಕಿನ ಕೆಲವು ರಮ್ಯ ವರ್ಷಗಳನ್ನು ಕಳೆದರು.

ವೇಣುಗೋಪಾಲ್ ಅನನ್ಯ ರಾಷ್ಟ್ರಪ್ರೇಮಿ. ಅವರಂಥವರು ಲಕ್ಷಕ್ಕೊಬ್ಬರು ಸಿಗುವುದೂ ದುರ್ಲಭ. ಸ್ವಾತಂತ್ರ್ಯಸಂಗ್ರಾಮದಲ್ಲಿ ಪಾಲ್ಗೊಂಡುದರ ಫಲವೋ ಎಂಬಂತೆ ಈ ರಾಷ್ಟ್ರರಕ್ಷಕರಾಗಿ ದುಡಿಯುವ ಸುಯೋಗ ಅವರಿಗೆ ಭಾರತೀಯ ಸೇನೆಯನ್ನು ಸೇರುವುದರ ಮೂಲಕ ಲಭಿಸಿತು. ಅವರು ಯುದ್ಧಭೂಮಿಯಲ್ಲಿ ನಿಂತುದಕ್ಕಿಂತ ಹೆಚ್ಚಾಗಿ ಮಿಲಿಟರಿಯು ಕೈಗೊಂಡ ಸುಧಾರಣಾಕಾರ್ಯಗಳಲ್ಲಿ, ಸೇವಾ ಕಾರ್ಯಗಳಲ್ಲಿ ನಿಯುಕ್ತರಾಗಿ, ಕರ್ಮಯೋಗಿಯಾಗಿ ತಮ್ಮನ್ನು ಆ ಸತ್ಕಾರ್ಯಗಳಿಗೆ ಸಮರ್ಪಿಸಿಕೊಂಡರು. ತಾವು ತೋರಿದ ಅಪೂರ್ವ ಕಾರ್ಯಕ್ಷಮತೆಗಾಗಿ ವಿಶಿಷ್ಟ ಸೇವಾಪದಕವನ್ನು ಪಡೆದ ಕೀರ್ತಿಗೆ ಅವರು ಪಾತ್ರರಾದರು. ಸೈನಿಕರು, ಸಹೋದ್ಯೋಗಿಗಳು, ಮೇಲಧಿಕಾರಿಗಳು, ಜನಸಾಮಾನ್ಯರು ಮೊದಲಾದ ಸರ್ವರ ಆದರಾಭಿಮಾನಗಳಿಗೆ ಅವರು ಪಾತ್ರರಾದರು.

ಈ ಕೃತಿಯಲ್ಲಿ ಬಂದಿರುವ ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಗ್ರಾಮವಾಸದ ನೋವುನಲಿವುಗಳು, ವಿರಾಮವಾಗಿ ನಡೆಯುತ್ತಿದ್ದ ವಿವಾಹಕಾರ್ಯಗಳು ಮೊದಲಾದುವೆಲ್ಲ ಜೀವದುಂಬಿ ವರ್ಣಿತವಾಗಿವೆ. ಕ್ಷಣಕ್ಷಣಕ್ಕೂ ನಮ್ಮ ಹೃದಯ ತಾದಾತ್ಮ್ಯದಿಂದ ಮಿಡಿಯುತ್ತದೆ. 'ಚಿರತೆ ಮತ್ತು ಪೊರಕೆ', 'ಎತ್ತು ಮತ್ತು ನನ್ನ ಅತ್ತೆ' ಎಂಬೆರಡು ಅಧ್ಯಾಯಗಳಲ್ಲಿ ವೇಣುಗೋಪಾಲರ ಸಾಹಸಗುಣ, ಸಕಾಲಕ್ಕೆ ಕಾರ್ಯೋನ್ಮುಖರಾಗುವ ಪ್ರವೃತ್ತಿಗಳು ನಿಚ್ಚಳವಾಗಿ ಮೂಡಿಬಂದಿವೆ. ಚಿರತೆಯೊಂದನ್ನು ಪೊರಕೆ ಮುಂಡಿಯಿಂದ ಹೊಡೆದುರುಳಿಸಿದ ಕಥೆ ರೋಮಾಂಚಕಾರಿಯಾಗಿದೆ. ಅದರ ಮುಕ್ತಾಯ ಎಷ್ಟು ಸಹಜವಾಗಿದೆ ನೋಡಿ : "ನನ್ನ ಗಾಯಗಳು ಬೇಗನೆ ಮಾಯ್ದವು. ಬೇಗ ಚೇತರಿಸಿಕೊಂಡೆ. ಆದರೆ ಆ ಕಸಗುಡಿಸುವವನು ಹೆಚ್ಚುಕಾಲ ಆಸ್ಪತ್ರೆಯಲ್ಲಿರಬೇಕಾಯಿತು. ಕಾಲಕ್ರಮದಲ್ಲಿ ಆತನೂ ಗುಣಹೊಂದಿದನು. ಚಿರತೆಯ ಚರ್ಮವನ್ನು ಸುಲಿಸಿ, ಶುದ್ಧಪಡಿಸಿ ಅದನ್ನು ನನ್ನ ತಂದೆಯವರಿಗೆ ಉಡುಗೊರೆಯಾಗಿ ಕೊಟ್ಟೆ. ಪ್ರಾಚೀನ ಋಷಿಗಳಂತೆ ಅದರ ಮೇಲೆ ಅವರು ಕುಳಿತುಕೊಳ್ಳುತ್ತಿದ್ದರು. ಪೊರಕೆಯ ಹಿಡಿಕೆ ಬಹಳ ಕಾಲ ನಮ್ಮ ಮನೆಯಲ್ಲಿತ್ತು. ಬಟ್ಟೆ ಹರವಲು ನನ್ನ ಅತ್ತಿಗೆ ಅದನ್ನು ಉಪಯೋಗಿಸುತ್ತಿದ್ದರು. ಕಾಲಕ್ರಮದಲ್ಲಿ ಚರ್ಮವು ಸವೆಯಿತು, ಹಿಡಿಕೆ ಮುರಿಯಿತು, ನನ್ನ ಬಳಿ ನೆನಪು ಮಾತ್ರ ಉಳಿಯಿತು" ಎಂಬ ವರ್ಣನೆಯನ್ನು ಮತ್ತೆ ಮತ್ತೆ ಓದಬೇಕೆನಿಸುತ್ತದೆ. ಇಂದು ವೇಣುಗೋಪಾಲರೂ ಇಲ್ಲ. ಆದರೆ ಅವರು ಬಿಟ್ಟುಹೋಗಿರುವ ನೆನಪುಗಳು ಮಾತ್ರ ಸಹೃದಯ ಬಳಗವನ್ನು ಚಿರಕಾಲ ರಂಜಿಸುತ್ತವೆಯೆಂಬುದರಲ್ಲಿ ಸಂದೇಹವಿಲ್ಲ.

ವೇಣುಗೋಪಾಲರು ಪರಮವಿಶಿಷ್ಟ ಸೇವಾಪದಕಕ್ಕೆ ಅರ್ಹರಾಗಲು ಏನು ಮಾಡಿದರು ಎಂಬುದನ್ನು ಹಿರಿಯ ಸೇನಾಧಿಕಾರಿಗಳು ಹದಿನೈದು ಅಂಶಗಳಲ್ಲಿ ನಿರೂಪಿಸಿರುವ ವಿವರಗಳು ಈ ಕೃತಿಯಲ್ಲಿವೆ. ಕೊನೆಯ ಅಂಶವನ್ನು ಓದಿದರೂ ಸಾಕು, ವೇಣುಗೋಪಾಲರ ಸಾಧನೆಯ ಮಹೋನ್ನತಿಯ ಪೂರ್ಣಚಿತ್ರ ನಮಗೆ ಲಭ್ಯವಾಗುತ್ತದೆ: "ಆತ್ಮಸಾಕ್ಷಿಯುಳ್ಳ, ಪ್ರಾಮಾಣಿಕರಾದ ಕಾರ್ಯಶೀಲರಾದ, ಧೈರ್ಯವಂತ ಅಧಿಕಾರಿಯಾದ ಮೇಜರ್ ವೇಣುಗೋಪಾಲ್ ತಮ್ಮ ಬೆಟಾಲಿಯನ್ನಿನ ಹಲವು ವಿಭಾಗಗಳ ಕಾರ್ಯವಿಧಾನದಲ್ಲಿ ಅಪಾರವಾದ ಸುಧಾರಣೆಗಳನ್ನು ಮಾಡಿದ್ದಾರೆ. ಬಹು ದೂರಸ್ಪರ್ಶಿಯಾದ ಕಾರ್ಯಾಚರಣೆಗಳನ್ನು ಸಾಧಿಸಿದ್ದಾರೆ. ತಮ್ಮ ಮಿಷನರಿ ಉತ್ಸಾಹ ಮತ್ತು ಬಹು ಉನ್ನತವರ್ಗದ ಅರ್ಪಣಾ ಮನೋಭಾವದಿಂದ ತಮ್ಮ ಯೂನಿಟ್ಟಿನ ವ್ಯಾಪ್ತಿಯಲ್ಲಿ ಬರುವ ಸ್ಥಳೀಯರ ವಿಶ್ವಾಸವನ್ನೂ ಸದ್ಭಾವನೆಯನ್ನೂ ಸಂಪಾದಿಸಿದ್ದಾರೆ. ಅವರು ಗೈದಿರುವ ಸೇವೆಯು 'ಪರಮವಿಶಿಷ್ಟಸೇವಾಪದಕ'ವನ್ನು ನೀಡಿ ಪುರಸ್ಕರಿಸಲು ಅತ್ಯಂತ ಅರ್ಹವಾಗಿದೆ" ಎಂಬ ಮಾತುಗಳನ್ನು ಪಠಿಸುತ್ತಿದ್ದರೆ ಯಾವ ಕನ್ನಡಿಗನು ತಾನೆ ಹೆಮ್ಮೆಯಿಂದ ಬೀಗುವುದಿಲ್ಲ! 'ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ'– ನಿನಗೆ ಕರ್ಮದಲ್ಲಿಯೇ ಅಧಿಕಾರವು, ಫಲದಲ್ಲಿ ಎಂದಿಗೂ ಅಲ್ಲ ಎಂಬ ಭಗವದ್ಗೀತೆಯ ವಾಣಿಯು ಅಂತರಂಗಕ್ಕಿಳಿಯಬೇಕಾದರೆ ವೇಣುಗೋಪಾಲರ ಈ ಆತ್ಮಕಥೆಯನ್ನು ಓದಿದರೆ ಸಾಕು!

ಅನುವಾದಕಾರ್ಯದಲ್ಲಿ ನಿಷ್ಣಾತರಾಗಿದ್ದ ಆರ್. ಎಲ್. ಅನಂತರಾಮಯ್ಯನವರು ಈ ಕೃತಿಯನ್ನು ಕನ್ನಡಕ್ಕೆ ತಂದುಕೊಟ್ಟಿದ್ದಾರೆ. ಭಾಷಾಶೈಲಿಗಳು ಅತ್ಯಂತ ರೋಚಕವಾಗಿವೆ. ಅನಂತರಾಮಯ್ಯನವರೂ ಇಂದು ನಮ್ಮೊಡನಿಲ್ಲ.

ಮತ್ತೂರಿನಿಂದ ಬ್ರಿಟನ್‌ಗೆ : ಈ ಸಂಪುಟದ ಐದು ಆತ್ಮಕಥೆಗಳಲ್ಲಿ ಮೊದಲ ನಾಲ್ಕರ ವಿಸ್ತಾರವನ್ನು ಮತ್ತೂರು ಕೃಷ್ಣಮೂರ್ತಿಗಳ(ಜ: 08–08–1929) 'ಮತ್ತೂರಿನಿಂದ ಬ್ರಿಟನ್‌ಗೆ' ಒಂದೇ ಆವರಿಸಿಕೊಂಡಿದೆ. ಕೃಷ್ಣಮೂರ್ತಿಗಳ ಬದುಕೂ ದೊಡ್ಡದು, ಕಥೆಯೂ ದೊಡ್ಡದು. 'ಸಂಸ್ಕೃತ ಗ್ರಾಮ'ವೆಂಬ ಕೀರ್ತಿಗೆ ಪಾತ್ರವಾಗಿರುವ ಶಿವಮೊಗ್ಗ ಜಿಲ್ಲೆಯ ಮತ್ತೂರಿನಲ್ಲಿ ಜನಿಸಿದ ಕೃಷ್ಣಮೂರ್ತಿಗಳು ತಮ್ಮ ಸ್ವಂತ ಸಾಧನೆಯಿಂದ, ಪರಿಶ್ರಮದಿಂದ, ಪ್ರತಿಭಾವಿಲಾಸದಿಂದ, ನಯವಿನಯ ಸಂಪನ್ನತೆಯಿಂದ, ಹಿತಮಿತಮೃದುವಚನದಿಂದ ಎತ್ತರೆತ್ತರಕ್ಕೇರಿದ ಮಹಾನುಭಾವರು. ಭಿಕ್ಷಾನ್ನ ವಾರಾನ್ನಗಳಿಂದ ವಿದ್ಯೆ ಕಲಿತ ಅವರು ಶಿವಮೊಗ್ಗೆಯಲ್ಲಿ ಪ್ರಾಥಮಿಕವಿದ್ಯೆ ಕಲಿತು ಆಮೇಲೆ ಮದರಾಸು ನಗರವನ್ನು ಸೇರಿ ಎಸ್.ಎಸ್.ಎಲ್.ಸಿ. ಪಾಸಾದರು. ತಮ್ಮ ಬದುಕಿನ ಮೇಲಾದ ಶ್ರೀರಾಮಕೃಷ್ಣಾಶ್ರಮದ ಪ್ರಭಾವ, ಮಹಾತ್ಮಾಗಾಂಧೀಜೀಯವರ ಪ್ರಭಾವ, ತಮಿಳು ಭಾಷೆಯನ್ನು ಓದಲು ಬರೆಯಲು ಕಲಿತದ್ದು, ಪರಮಾಚಾರ್ಯರ ಆಶೀರ್ವಾದಕ್ಕೆ ಪಾತ್ರರಾದುದು ಮೊದಲಾದುವುಗಳನ್ನೆಲ್ಲ ಹಾಸುಹೊಕ್ಕಾಗಿ ಈ ಕಥೆಯಲ್ಲಿ ನೆಯ್ದುಕೊಟ್ಟಿದ್ದಾರೆ.

ಬೆಂಗಳೂರಿನ ರಾಜಾಮಿಲ್ಲಿನಲ್ಲಿ ಕೆಲಸಕ್ಕಿದ್ದವರು, 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಮೂಲಕ ಪತ್ರಿಕೋದ್ಯಮವನ್ನು ಹೊಕ್ಕರು. ಬಾಲ್ಯದಿಂದಲೇ ಸುಪ್ತವಾಗಿದ್ದ ಕನ್ನಡಪ್ರೇಮವು ಮುಂದುಮುಂದಕ್ಕೆ ಹೆಮ್ಮರವಾಗಿ ಬೆಳೆಯಿತು. ಸಾಹಿತ್ಯಕ್ಷೇತ್ರವೂ ಅವರಿಗೆ ಒಲಿದು ಹಲವು ಕೃತಿಗಳನ್ನು ಅವರು ಪ್ರಕಟಿಸಿದರು. ಜನ್ಮಜಾತಗುಣವಾಗಿ ಬಂದಿದ್ದ ಅಪೂರ್ವವಾದ ವಾಗ್ಮಿತೆಯು ಗಮಕವ್ಯಾಖ್ಯಾನದ ಕ್ಷೇತ್ರದಲ್ಲಿ ಅವರನ್ನು ಅಜರಾಮರರನ್ನಾಗಿಸಿತು. ನಾಟಕರಚನೆ ಮತ್ತು ನಿರ್ದೇಶನಗಳಲ್ಲಿಯೂ ಅವರು ಸಫಲರಾದರು.

ಲಂಡನ್ನಿನಲ್ಲಿ ತೆರೆಯಲಾದ ಭಾರತೀಯ ವಿದ್ಯಾಭವನದ ಮುಖ್ಯಸ್ಥರಾಗಿ, ಭಾರತದ ಸಾಂಸ್ಕೃತಿಕ ರಾಯಭಾರಿಯಾಗಿ, ಭಾರತದ ಕೀರ್ತಿಧ್ವಜವನ್ನು ಆ ದೇಶದಲ್ಲಿ ಏರಿಸಿದ ಕೀರ್ತಿ ಕೃಷ್ಣಮೂರ್ತಿಯವರಿಗೆ ಸಲ್ಲುತ್ತದೆ. ಲಂಡನ್ನಿನಲ್ಲಿದ್ದ ಕಾಲಾವಧಿಯ ಸ್ಮೃತಿಗಳೆಲ್ಲ ಪ್ರವಾಸಕಥನದ ಹೊಳಪಿನಿಂದ ಸಹೃದಯರನ್ನು ಸಂತೋಷಸಾಗರದಲ್ಲಿ ಮುಳುಗಿಸುತ್ತವೆ. ತಮ್ಮ ಸಂಪರ್ಕಕ್ಕೆ ಬಂದವರನ್ನೆಲ್ಲ ತಾವು ಕೈಗೊಂಡ ಭಾರತೀಯ ಸಂಸ್ಕೃತಿಯ ಪ್ರಸಾರದ ಮಹಾಯಜ್ಞಕ್ಕೆ ಒಲಿಸಿಕೊಂಡ ವೃತ್ತಾಂತಗಳೆಲ್ಲ ಅತ್ಯಂತ ಮನೋಹಾರಿಯಾಗಿವೆ.

'ಪಂಡಿತರೊಡನೆ' ಎಂಬ ಕೃತಿಯಲ್ಲಿ ವೇದಮೂರ್ತಿ ನರಸಿಂಹಮೂರ್ತಿಶಾಸ್ತ್ರಿಗಳಿಂದ ಮತ್ತೂರರು ಹೇಗೆ ಕೊಂಡಾಟಕ್ಕೆ ಪಾತ್ರರಾಗಿದ್ದಾರೆಂಬುದನ್ನು ಪರಿಭಾವಿಸಿರಿ : "ಶ್ರೀಮಾನ್ ಮತ್ತೂರು ಕೃಷ್ಣಮೂರ್ತಿಗಳು ಅಪಾರ ಪಾಂಡಿತ್ಯ, ಲೋಕಸೇವಾತುರತೆ, ಸೌಜನ್ಯ, ಅಭೂತಪೂರ್ವ ವಾಗ್ಮಿತ್ವ, ಸಂಸ್ಕೃತ ಆಂಗ್ಲ ಕನ್ನಡ ಇತ್ಯಾದಿ ಅನೇಕ ಭಾಷೆಗಳಲ್ಲಿ ಪ್ರಭುತ್ವ, ಇನ್ನೂ ಅನೇಕ ಹಿರಿಯ ಗುಣಗಳಿಂದ ಭಾರತದಲ್ಲೇ– ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಅತಿ ಗೌರವಾನ್ವಿತರು. ಅವರು ನನ್ನ ಮೇಲೆ ಅಕಾರಣ ಪ್ರೀತಿಯನ್ನಿಟ್ಟಿರುವರೆಂಬುದು ನನಗೆ ಹಿಡಿಸಲಾರದಷ್ಟು ಸಂತೋಷ ತಂದಿದೆ. ಅವರ ಮುಂದೆ ಮೌನವಾಗಿ ತಲೆತಗ್ಗಿಸಿ ನಿಂತಿರುವುದೇ ಅವರಿಗೆ ಸಲ್ಲಿಸುವ ಕಾಣಿಕೆಯೆಂದು ಭಾವಿಸಿದ್ದೇನೆ." ಈ ಪ್ರಶಂಸೆಯು ಮತ್ತೂರರ ವ್ಯಕ್ತಿತ್ವಕ್ಕಿಟ್ಟ ರತ್ನ ಕಿರೀಟವಾಗಿದೆಯೆಂದರೆ ತಪ್ಪಿಲ್ಲ.

"ನೆನಪಿನ ಮಾಲೆ ಕಟ್ಟುವಾಗ ಯಾವೊಂದು ಹೂವು ಕೆಳಗೆ ಬಿದ್ದರೂ ಅಥವಾ ಬಿಟ್ಟುಹೋದರೂ ಅದಕ್ಕೆ ಅನ್ಯಾಯವಾದಂತೆ" ಎಂದು ಹೇಳಿರುವ ಮತ್ತೂರರು ಯಾವ ಹೂವೂ ಕೊರಗದ ಹಾಗೆ, ಸೊರಗದ ಹಾಗೆ ಪರಿಮಳಭರಿತವಾದ ಆತ್ಮಕಥಾಮಾಲಿಕೆಯನ್ನು ಸಿದ್ಧಪಡಿಸಿದ್ದಾರೆ. ಹೂವೆಲ್ಲ ಮತ್ತೂರರದು. ಅದನ್ನು ಆಕರ್ಷಕವಾಗುವಂತೆ, ಮುಡಿಯಲು ಯೋಗ್ಯವಾಗುವಂತೆ ಕಟ್ಟಿಕೊಟ್ಟಿರುವ ಮಾಲೆಗಾರ್ತಿ, ಹೂವನ್ನೇ ಹೆಸರಾಗಿರಿಸಿಕೊಂಡಿರುವ ಸುಮನಾ ವಿಶ್ವನಾಥ್ ಅವರು. ಈ ಕಾಯಕವೇನೂ ಅವರಿಗೆ ಸುಲಭದಲ್ಲಿ ದಕ್ಕಿಲ್ಲ. ಈ ರೂಪಕ್ಕೆ ತರಲು ಅವರು ಏಳು ಕೆರೆ ನೀರು ಕುಡಿದಿದ್ದಾರೆ. 'ಕಟ್ಟಿಯುಮೇನೋ ಮಾಲೆಗಾರನ ಪೊಸಬಾಸಿಗಂ, ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೇ'

ಎಂದು ಕೊರಗುವ ಪ್ರಮೇಯ ಇಲ್ಲಿಲ್ಲ. ಅಂತಾರಾಷ್ಟ್ರೀಯ ಖ್ಯಾತಿಗೆ ಪಾತ್ರರಾಗಿರುವ ಮತ್ತೂರರ ಅಭಿಮಾನಿಗಳು ಎಲ್ಲೆಡೆ ಚೆಲ್ಲಿಕೊಂಡಿದ್ದಾರೆ. ಈಗಾಗಲೇ ಅದೆಷ್ಟೋ ಸಜ್ಜನರು ಈ ಆತ್ಮಕಥೆಯನ್ನೋದಿ ಆನಂದಪಟ್ಟಿದ್ದಾರೆ. ಇನ್ನೂ ಓದಿಲ್ಲವೆನ್ನುವವರಿಗೆ ಈ ಸಂಪುಟವೊಂದು ತವನಿಧಿಯಾಗಿದೆ. ಸುಮನಾವಿಶ್ವನಾಥ್‌ಅವರ ಶ್ರಮ ಸಾರ್ಥಕವಾಗಿದೆ. ಈ ಒಟ್ಟು ಸಂಪುಟಕ್ಕೂ ಸುಮನಾ ಅವರೇ ಸಂಪಾದಕರು. ಅವರಿಗೆ ಸಂಕೇತಿಗಳೆಲ್ಲರ, ಕನ್ನಡಿಗರೆಲ್ಲರ ಕೃತಜ್ಞತೆಗಳು ಸಲ್ಲಬೇಕು.

ಈ ಆತ್ಮಕಥಾಸಂಪುಟದ ನಾಯಕಮಣಿಗಳಲ್ಲಿ ಈಗ ಮತ್ತೂರರು ಮತ್ತು ನರಸಿಂಹಮೂರ್ತಿಶಾಸ್ತ್ರಿಗಳು ನಮ್ಮೊಡನೆ ಇರುವಂಥವರು. "ಈ ದಿನ (2002) ಎಪ್ಪತ್ತೈದರ 'ಹರೆಯ'ಕ್ಕೆ ಕಾಲಿಡುತ್ತಿರುವ ಶ್ರೀ ಮತ್ತೂರರ ಜನ್ಮಶತಾಬ್ದಿಯನ್ನು ನಾವೆಲ್ಲರೂ ಹೀಗೆಯೇ ಸಂಭ್ರಮ, ಸಂತೋಷದಿಂದ ಆಚರಿಸುವಂತಾಗಿ, ಇನ್ನುಳಿದ ಇಪ್ಪತ್ತೈದು ವರ್ಷಗಳ ಅವರ ಅನುಭವಗಳ ಅಮೂಲ್ಯ ಹೂಗಳ ಮತ್ತೊಂದು ಮಾಲೆಯನ್ನೂ ನಾನೇ ಕಟ್ಟುವಂಥ ಸದವಕಾಶವನ್ನೂ ದೇವರು ನನಗೆ ಕರುಣಿಸಲಿ ಎಂದು ಬೇಡುತ್ತೇನೆ" ಎಂದು ಸುಮನಾ ಅವರು ಸರ್ವೇಶ್ವರನನ್ನು ಪ್ರಾರ್ಥಿಸಿದ್ದಾರೆ. ಅವರ ಪ್ರಾರ್ಥನೆಗೆ ನಾವೂ ದನಿಗೂಡಿಸೋಣ, ಮತ್ತೂರರು ಶತಾಯುಷಿಗಳಾಗಿ ನಮ್ಮ ನಾಡುನುಡಿಗಳನ್ನು ಬೆಳಗಿಸಲೆಂದು ಹಾರೈಸೋಣ!

ಪಂಚರತ್ನ ಕೃತಿಗಳು : ಈ ಸಂಪುಟದಲ್ಲಿರುವ ಐದೂ ಕೃತಿಗಳು ಆತ್ಮಕಥೆಯ ಲಕ್ಷಣ–ಸ್ವರೂಪಾದಿಗಳನ್ನು ಸಹಜವಾಗಿಯೇ ತಮ್ಮೊಳಗೆ ತುಂಬಿಕೊಂಡಿದ್ದು ಅತ್ಯಂತ ಯಶಸ್ವಿಯಾಗಿವೆ. 'ನನ್ನ ಬದುಕು' ಎಂಬ ಕೃತಿಯಲ್ಲಿ ದೊರೆಸ್ವಾಮಿಯವರು ಅಂತ್ಯದಲ್ಲಿ ಹೇಳಿರುವ ಕೆಲವು ಮಾತುಗಳು ಆತ್ಮಕಥೆಯ ಹೂರಣ ಹೇಗಿರಬೇಕು ಎಂಬುದನ್ನು ಪರೋಕ್ಷವಾಗಿ ವಿವರಿಸುವಂತಿವೆ. "ಹೀಗೆ ನನ್ನ ಈ ಎಂಬತ್ತೂರು ವರ್ಷಗಳ ಸುದೀರ್ಘ ಜೀವನದ ವಿವಿಧ ಘಟನಾವಳಿಗಳು ಹಾಗೂ ನನ್ನ ಅನುಭವಗಳನ್ನು ಇಲ್ಲಿ ಯಥಾವತ್ತಾಗಿ ಚಿತ್ರಿಸಲು ಪ್ರಯತ್ನಿಸಿದ್ದೇನೆ. ಇದರಲ್ಲಿ ಯಾವ ಉತ್ಪ್ರೇಕ್ಷೆಗೂ ಆತ್ಮಶ್ಲಾಘನೆಗೂ ಸಲ್ಲದ ವೈಭವೀಕರಣಕ್ಕೂ ಅವಕಾಶ ಕೊಟ್ಟಿಲ್ಲವೆಂದು ದೃಢವಾಗಿ ನಂಬಿದ್ದೇನೆ. ಆತ್ಮಚರಿತ್ರೆ ಬರೆಯುವಾಗ ಬೇರೆಯವರು ನಮ್ಮ ಬಗ್ಗೆ ಆಡುವ ಶ್ಲಾಘನೆಯ, ಹೊಗಳಿಕೆಯ ಮಾತುಗಳನ್ನು, ಅದರಿಂದ ನಮಗಾಗುವ ಸಂತೋಷವನ್ನು ಹೇಳಲೇಬೇಕಾಗುತ್ತದೆ. ಆದರೆ, ಅದನ್ನು ಆತ್ಮಪ್ರಶಂಸೆ ಅಥವಾ ವೈಭವೀಕರಣವೆಂದು ಖಂಡಿತ ಯಾರೂ ಭಾವಿಸಬಾರದು. ಜೀವನದ ಉದ್ದಕ್ಕೂ ನಡೆದುಬಂದ ದಾರಿಯಲ್ಲಿ ಕಂಡ ಸುಖ–ದುಃಖ, ಆಸೆ–ನಿರಾಸೆ, ತೃಪ್ತಿ–ಅತೃಪ್ತಿ, ಸೋಲು–ಗೆಲುವು, ನೋವು–ನಲಿವು ಇಂತಹ ದ್ವಂದ್ವ ಸನ್ನಿವೇಶಗಳನ್ನು ಹೇಗೆ ಎದುರಿಸಬೇಕಾಯಿತು, ಆಯಾ ಸನ್ನಿವೇಶಗಳಲ್ಲಿ ನನ್ನ ಮನಃಸ್ಥಿತಿ ಹಾಗೂ ಪ್ರತಿಕ್ರಿಯೆಗಳು ಹೇಗಿದ್ದುವು ಎಂಬುದನ್ನೆಲ್ಲಾ ಯಾವ ಲೋಪವೂ ಇಲ್ಲದಂತೆ ಬಣ್ಣಿಸಿದ್ದೇನೆ." ದೊರೆಸ್ವಾಮಿಯವರ ಈ ಮಾತುಗಳು ಆತ್ಮಕಥೆಯ 'ರಸಸೂತ್ರ'ವೆಂದೇ ಹೇಳಬೇಕು. ಈ ಸೂತ್ರಾನುಸಾರಿಯಾಗಿಯೇ ಇಲ್ಲಿನ ಎಲ್ಲ ಕೃತಿಗಳೂ ಚೆಲ್ಲುವರಿದಿವೆಯೆಂದೇ ಹೇಳಬೇಕು.

'ಸಂಕೇತಿ: ಆತ್ಮಕಥೆಗಳು' ಎಂಬ ಶೀರ್ಷಿಕೆಯ ಈ ಸಂಪುಟದಲ್ಲಂತೂ ಸಂಕೇತಿ ಎಂಬ ಶಬ್ದವು ತನ್ನ ಪ್ರತ್ಯೇಕತೆಯನ್ನು ನಿರಸನಗೊಳಿಸಿಕೊಂಡುಬಿಡುತ್ತದೆ. ಬಿ. ಸುಬ್ಬರಾವ್, ನರಸಿಂಹಮೂರ್ತಿಶಾಸ್ತ್ರಿ, ಆರ್.ಎನ್. ದೊರೆಸ್ವಾಮಿ, ಎಚ್. ಸಿ. ವೇಣುಗೋಪಾಲ್, ಮತ್ತೂರು ಕೃಷ್ಣಮೂರ್ತಿ ಎಂಬೀ ಪಂಚಪರಮೇಶ್ವರರು ನಾಡಿಗೇ ಮಾದರಿಯಾಗಬಲ್ಲವರು; ಅಷ್ಟೇ ಏಕೆ ಭರತಖಂಡಕ್ಕೇ ಮಾದರಿಯಾಗ ಬಲ್ಲವರು. ಎಲ್ಲರೂ ಭಾರತಾಂಬೆಯ ಸುಪುತ್ರರು; ಹೆಚ್ಚಿನ ನಿಗಾವಣೆಗಾಗಿ ಅವಳು ಈ ಸುಪುತ್ರರನ್ನು ತನ್ನ ಕನ್ನಡ ತನುಜಾತೆಯ ಮಡಿಲಿಗೆ ಒಪ್ಪಿಸಿದ್ದಾಳಷ್ಟೆ! ಸಂಕೇತಿಗಳೆಂದರೆ ಅವರು ಕನ್ನಡವನ್ನೇ ಹಾಸಿ, ಕನ್ನಡವನ್ನೇ ಹೊದ್ದು, ಕನ್ನಡವನ್ನೇ ಉಸಿರಾಡಿ, ಕನ್ನಡಮಯರಾದ ಜನಾಂಗ. ಅಂತಹ ಅಪೂರ್ವ ಕನ್ನಡಿಗರ ಚರಿತೆಗಳು ಕನ್ನಡಿಗರೆಲ್ಲರ ಸ್ಫೂರ್ತಿಯ ಆಗರವಾಗಿ ಚಿರಕಾಲ ಉಳಿಯುವುದರಲ್ಲಿ ಸಂದೇಹವಿಲ್ಲ. ನಾಟಿ, ಗೌಳ, ವರಾಳಿ, ಆರಭಿ, ಶ್ರೀ ಎಂಬ ಐದು ಘನರಾಗಗಳಲ್ಲಿ ತ್ಯಾಗರಾಜರು ರಚಿಸಿರುವ ಐದು ಕೀರ್ತನೆಗಳನ್ನು 'ಪಂಚರತ್ನ ಕೃತಿಗಳು' ಎನ್ನುತ್ತಾರೆ. ಇಲ್ಲಿನ ಐದು ಆತ್ಮಕಥೆಗಳೂ ಅಷ್ಟೆ; ಆತ್ಮಕಥಾಕ್ಷೇತ್ರದ 'ಪಂಚರತ್ನ ಕೃತಿಗಳು'. ಇಲ್ಲಿನ ಎಲ್ಲ ಕೃತಿಗಳೂ ಸಂಕೇತಿಯೆಂಬ ಶೀರ್ಷಿಕೆಯ ಸಂಕೇತವನ್ನು ತೊರೆದು ಬಿಡಿಬಿಡಿ ಕೃತಿಗಳಾಗಿ ಮತ್ತೆ ಮತ್ತೆ ಪ್ರಕಟಗೊಂಡರೆ, ಕನ್ನಡ ಆತ್ಮಕಥಾಶಾರದೆಯು ಚತುರ್ಭುಜೆಯಾಗಿ ಸಂಭ್ರಮಿಸುವುದರಲ್ಲಿ ಸಂಶಯವಿಲ್ಲ.

ಪ್ರಣತಾರ್ತಿಹರನ್ ಸಾಹಸೋದ್ಯಮ

ಈ ಸಂಪುಟಕ್ಕೆ ಡಾ॥ ಪ್ರಣತಾರ್ತಿಹರನ್ ಪ್ರಧಾನಸಂಪಾದಕರಾಗಿದ್ದಾರೆ. ಸಂಕೇತಿ ಜನಾಂಗದ ಭಾಷೆ, ಸಂಸ್ಕೃತಿ, ಸಾಹಿತ್ಯ, ಸಾಧನೆ, ಸಾಧಕರು, ಮುಂತಾದ ಎಲ್ಲ ವಿವರಗಳನ್ನೂ ದಾಖಲಿಸಿ ಕೃತಕೃತ್ಯರಾಗುವ ದೀಕ್ಷೆತೊಟ್ಟು ಅವರು ಹತ್ತಾರು ವರ್ಷಗಳಿಂದ 'ಹುಚ್ಚರಾಗಿ' ಅಲೆದಾಡುತ್ತಲೇ ಇದ್ದಾರೆ. ಅವರ ಹುಚ್ಚಿನ ಫಲವಾಗಿ ಅಚ್ಚು ಮೆಚ್ಚಾದ ಐದು ಸಂಪುಟಗಳು ಈಗಾಗಲೇ ಲೋಕಾರ್ಪಣಗೊಂಡಿವೆ. ಆ ಸಂಪುಟಗಳೆಲ್ಲ ಕೈತೊಳೆದುಕೊಂಡು ಮುಟ್ಟಬೇಕಾದಷ್ಟು ಮುದ್ದಾಗಿ ಎದ್ದುಬಂದಿವೆ. ಅದಕ್ಕಾಗಿ ಪ್ರಣತಾರ್ತಿಹರನ್ ಅವರಿಗೆ ಸಮಸ್ತ ಸಂಕೇತಿ ಬಳಗದ ಪರವಾಗಿ, ಕನ್ನಡಿಗರೆಲ್ಲರ ಪರವಾಗಿ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

"ಮಾಡಿಮಾಡಿ ಕೆಟ್ಟರು ಮನವಿಲ್ಲದೆ । ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ । ಮಾಡುವ ನೀಡುವ ನಿಜಗುಣವುಳ್ಳೊಡೆ । ಕೂಡಿಕೊಂಬ ನಮ್ಮ ಕೂಡಲಸಂಗಮದೇವ" ಎಂದು ಬಸವಣ್ಣನವರು ಹಾಡಿದ್ದಾರೆ. ಈ ಸಂಪುಟಗಳ ನಿರ್ಮಾಣಕಾರ್ಯ ಚೆನ್ನಾಗಿ ನೆರವೇರಲೆಂದು ಸತ್ಪುರುಷರು 'ನಿಜಗುಣ'ದಿಂದ ನೀಡಿದ್ದಾರೆ. ಅದರ ಬಲದಿಂದ 'ಮಾಡುವ ನಿಜಗುಣ'ದಿಂದ ಕೂಡಿದ ಪ್ರಣತಾರ್ತಿಹರನ್ ಈ ಸಂಪುಟಗಳನ್ನು ಹೊರತರುತ್ತ ವರ್ಷದಿಂದ ವರ್ಷಕ್ಕೆ ಘನವಂತರಾಗಿ ಬೆಳೆದುಬಿಡುತ್ತಿದ್ದಾರೆ. ಅವರು ಸಂತೋಷವನ್ನೇ ಬಿತ್ತಿ, ಸಂತೋಷವನ್ನೇ ಬೆಳೆದು, ಸಂತೋಷವನ್ನೇ ಸಂತರ್ಪಣೆಮಾಡಿ ಎಲ್ಲರಿಗೂ ಉಣಬಡಿಸುತ್ತಿದ್ದಾರೆ. ಅದೇ ನಿಜವಾದ ಅರ್ಥದಲ್ಲಿ ಈಶ್ವರಪೂಜೆಯಾಗಿದೆ. ಅವರ ಈ ಪೂಜೆಗೆ ಬೆಲೆಕಟ್ಟಲುಂಟೇ!

ಮಹತ್ವದ ಸಾಧನೆ ಮಾಡಿಯೂ ಮೌನವಾಗಿ, ಆತ್ಮಾರಾಮರಾಗಿ ಕುಳಿತವರನ್ನು ಬಡಿದೆಬ್ಬಿಸಿ ಅವರಿಂದ ಕೃತಿರಚನೆಯೆಂಬ 'ಲೋಕಸಂಗ್ರಹ' ಕಾರ್ಯವನ್ನು ಮಾಡಿಸುತ್ತಿರುವ ಕೀರ್ತಿಯೂ ಪ್ರಣತಾರ್ತಿಹರನ್ ಅವರಿಗೆ ಸಲ್ಲಬೇಕಾಗಿದೆ. ದೊರೆಸ್ವಾಮಿಯವರು 'ನನ್ನ ಬದುಕು' ವಿನಲ್ಲಿ ಹೇಳಿರುವುದು ಒಂದು ಉದಾಹರಣೆ ಮಾತ್ರ: "ಪ್ರಸ್ತುತ ಈ 'ನನ್ನ ಬದುಕು' ಪುಸ್ತಕವನ್ನು ಮತ್ತೆ ನಾನು ಬರೆಯಲು ಡಾ॥ ಪ್ರಣತಾರ್ತಿಹರನ್ ಅವರ ಪ್ರೇರಣೆ ಪ್ರೋತ್ಸಾಹಗಳೇ ಮುಖ್ಯ ಕಾರಣ. ಸಂಕೇತಿ ಜನಾಂಗದ ಬಗೆಗೆ ಆಳವಾದ ಅಧ್ಯಯನ, ಸಂಶೋಧನೆ ನಡೆಸಿರುವ ಅವರು ನನ್ನ ಬದುಕಿನ ಹೆಚ್ಚಿನ ವಿವರಗಳು, ಆಗಿನ ಜನಜೀವನ, ಸಂಸ್ಕೃತಿ, ಸಾಮಾಜಿಕ ಪರಿಸರ ಇತ್ಯಾದಿ ವಿಷಯಗಳನ್ನು ಇನ್ನೂ ಸವಿಸ್ತಾರವಾಗಿ ಬರೆಯುವಂತೆ ನನ್ನನ್ನು ಪ್ರೇರೇಪಿಸಿದುದರ ಫಲವಾಗಿ ಈ ಪುಸ್ತಕ ಸಿದ್ಧವಾಗಿದೆ" ಎಂದು ಕೊಂಡಾಡಿದ್ದಾರೆ.

ಪ್ರಣತಾರ್ತಿಹರನ್ ಸಂಯೋಜಿಸಿಕೊಂಡಿರುವಂತೆ ಸಂಕೇತಿ ಅಧ್ಯಯನದ ಮಿಕ್ಕ ಸಂಪುಟಗಳೂ ಕ್ರಮಕ್ರಮವಾಗಿ ಬೆಳಕು ಕಾಣುವಂತಾಗಲಿ, ಸಂಕೇತಿ ಬಂಧುಗಳ ಪ್ರೋತ್ಸಾಹ ಅದಕ್ಕೆ ಪೂರಕವಾಗಲಿ ಎಂದು ಹಾರೈಸುತ್ತೇನೆ. ಮತ್ತೊಮ್ಮೆ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

****

ದೇಶೀಯ ವಿದ್ಯಾಶಾಲೆ ಕಾಲೇಜು
ಶಿವಮೊಗ್ಗ

ಪ್ರೊ ಎಲ್.ಎಂ.ಎಲ್.ಶಾಸ್ತ್ರೀ
ಕನ್ನಡ ಪ್ರಾಧ್ಯಾಪಕರು (ನಿವೃತ್ತ)

ಸಂಕೇತಿ ಜನಾಂಗದ ಹಿರಿಯರ ಆತ್ಮಕಥೆಗಳನ್ನು ಪುನರ್ಮುದ್ರಿಸುವ ಸಾಹಸದ ಕೆಲಸವನ್ನು ಸಮುದಾಯ ಅಧ್ಯಯನ ಕೇಂದ್ರದವರು ಹಮ್ಮಿಕೊಂಡಿದ್ದಾರೆ. ನಮ್ಮ ಜನಾಂಗಕ್ಕೆ ಮಾರ್ಗದರ್ಶಕವಾಗಿರುವ ಇಲ್ಲಿನ ಹಿರಿದಾದ ಬದುಕುಗಳ ವಿವರಗಳನ್ನು ಶಾಶ್ವತಗೊಳಿಸುವ ಹರನ್ ಅವರ ಈ ಪ್ರಯತ್ನ ಶ್ಲಾಘನೀಯವಾದುದಾಗಿದೆ. ಲೇಖಕರುಗಳು

ಆತ್ಮಕಥೆಯಲ್ಲಿ ತಮ್ಮ ಬದುಕಿನ ಘಟನೆಗಳನ್ನು ಹೇಳುವಾಗ, ತಮ್ಮನ್ನು ತಾವು ವಿಮರ್ಶಿಸಿಕೊಳ್ಳಬೇಕಾದ ಸಂದರ್ಭ ಬರುವುದರಿಂದ, ವಿವರಗಳು ಸತ್ಯಕ್ಕೆ ಸ್ವಲ್ಪ ದೂರವಾಗುವ ಸಾಧ್ಯತೆ ಇದ್ದೇ ಇರುತ್ತದೆ. ಇದರಿಂದ ಆಗಬಹುದಾದ ಹಾನಿ ಏನೂ ಇಲ್ಲ. ಅಲ್ಲದೆ ಇಂಥ ಅತ್ಯುಕ್ತಿಗಳನ್ನು ಓದುಗರು ಸರಿಯಾಗಿ ಗುರ್ತಿಸಬಲ್ಲರಾದ್ದರಿಂದ ಬಾಧಕವಿಲ್ಲ.

1

ಸಂಕೇತಿ ಜನಾಂಗದಲ್ಲಿ ಇಂದು ಕಡುಬಡವರೆಂಬುವರಿಲ್ಲ. ಆದರೆ ಎರಡು ಮೂರು ತಲೆಮಾರು ಹಿಂದಿನವರ ಇತಿವೃತ್ತ ಹೀಗಿಲ್ಲ, ಕಡು ಬಡತನದ ಬದುಕು. ಬಡತನದ ಅಪಾರ ಬವಣೆಯ ನಡುವೆಯೂ ಅದ್ಭುತವಾದ ಸಿದ್ಧಿಯನ್ನವರು ಸಾಧಿಸಿದರು. ಈ ಸಂಗ್ರಹದ ಐದು ಜನರಲ್ಲಿ ನಾಲ್ವರು ಈ ಗುಂಪಿಗೆ ಸೇರಿದವರು. ಮೊದಲ ಲೇಖಕ, ಶ್ರೇಷ್ಠ ಸಂಗೀತಜ್ಞ , ಶ್ರೀ ಬಿ. ಸುಬ್ಬರಾವ್ ಅವರು ಮಾತ್ರ ಈ ಮಾತಿಗೆ ಅಪವಾದ. ಅವರು ಜಿಲ್ಲಾ ವ್ಯವಸಾಯಾಧಿಕಾರಿಯಾಗಿದ್ದವರು. ಅವರ ತಂದೆ ಜಿಲ್ಲಾ ಅರಣ್ಯಾಧಿಕಾರಿಯಾಗಿದ್ದವರು.

ಕರ್ನಾಟಕ ಬಿಟ್ಟು ಹೊರರಾಜ್ಯದಲ್ಲಿ ಅಧಿಕಾರಿಯಾಗಿದ್ದವರು ಸಂಗೀತದಲ್ಲಿ ತಲಸ್ಪರ್ಶಿಜ್ಞಾನ ಪಡೆದಿರುವುದು ಸಾಧಾರಣ ಸಂಗತಿಯಲ್ಲ. ಆದರೂ ಕಲೆಗಾಗಿ ಹೆಚ್ಚು ಕಾಲ ವಿನಿಯೋಗಿಸಲು ಸಾಧ್ಯವಾದದ್ದು ನಿವೃತ್ತಿಯ ನಂತರವೇ. ಶ್ರೀ ಸುಬ್ಬರಾಯರು ರಚಿಸಿದ ಕೃತಿ 'ರಾಗನಿಧಿ' ನೂರ್ಕಾಲ ಸಂಗೀತಕ್ಷೇತ್ರದಲ್ಲಿ ಶಾಶ್ವತವಾಗಿ ಉಳಿಯುವ ಗ್ರಂಥ. 1894 ರಲ್ಲಿ ಜನಿಸಿದ ಶ್ರೀ ಸುಬ್ಬರಾಯರು 72 ವರ್ಷಗಳ ನಂತರ ತಮ್ಮ ಬದುಕಿನ ಮಹದಾಶಯವನ್ನು ಈಡೇರಿಸಿಕೊಂಡರು. 1966 ರಲ್ಲಿ ಅವರ ಮಹತ್ವದ ಕೃತಿಯಾದ 'ರಾಗನಿಧಿಯ' ನಾಲ್ಕನೆಯ ಹಾಗೂ ಕೊನೆಯ ಭಾಗ ಪ್ರಕಟವಾಯಿತು. ಈ ಕೃತಿಯು ದಕ್ಷಿಣಾದಿ ಹಾಗೂ ಉತ್ತರಾದಿ ರಾಗಗಳ ಭಂಡಾರವಾಗಿದ್ದು ಅತ್ಯಂತ ಮೌಲಿಕ ಗ್ರಂಥವಾಗಿದೆ. ಇದರ ಮುಂದಿನ ವರ್ಷ (1967) ಮದ್ರಾಸಿನ ಮ್ಯೂಸಿಕ್ ಅಕೆಡಮಿಯವರು ಕೊಡಮಾಡಿದ ಸನ್ಮಾನಪತ್ರ ಸುಬ್ಬರಾಯರ ಸುದೀರ್ಘ ಬದುಕಿನ ಸಾಧನೆಗೆ ಸಂದ ನಿಜವಾದ ಗೌರವವಾಗಿದೆ.

ಲೇಖನದ ಶೀರ್ಷಿಕೆಯು 'ಆತ್ಮಕಥೆ' ಎಂದಿಲ್ಲ, 'ಮೆಲುಕುಗಳು' ಎಂದಿದೆ. ಅವರ ಸಹವಾಸಕ್ಕೆ ಬಂದ, ಗೆಳೆತನಕ್ಕೆ ಸಂದ ಹಲವು ವಿದ್ವಾಂಸರ ಒಡನಾಟದ ರೋಚಕ ಸಂಗತಿಗಳು ಇಲ್ಲಿವೆ. ಹಾಗೆ ಆತ್ಮೀಯರಾದ ಮಹಾಚೇತನಗಳು : ಎ.ವಿ. ವರದಾಚಾರ್, ಟೈಗರ್ ವರದಾಚಾರ್, ಬಿ. ವಾಸುದೇವಾಚಾರ್, ಬಾಲಗಂಧರ್ವ, ಬಿಡಾರಂ ಕೃಷ್ಣಪ್ಪ, ಸೋಸಲೆ ರಾಮದಾಸ್, ವೀಣೆ ಶೇಷಣ್ಣ, ಕೃಷ್ಣ ರತನ್ ಜಂಕರ್, ಉಸ್ತಾದ್ ಲಾಲ್ ಖಾನ್, ಡಿ.ವಿ.ಪಲುಸ್ಕರ್, ಜೆ.ಎಲ್. ರಾನಡೆ, ಗುರುರಾವ್ ದೇಶಪಾಂಡೆ, ಸವಾಯಿ ಗಂಧರ್ವ, ಪಿಟೀಲು ಟಿ. ಚೌಡಯ್ಯ, ಇತ್ಯಾದಿ. ಇಪ್ಪತ್ತನೆಯ ಶತಮಾನದ ಮೊದಲ ದಶಕಗಳ ಶ್ರೇಷ್ಠ ವಿದ್ವಾಂಸರ ಪರಿಚಯ ನೀಡುವ ಈ ಲೇಖನಕ್ಕೆ ಶಾಶ್ವತತೆಯಿದೆ.

ಸುಬ್ಬರಾಯರು ಮಹೋನ್ನತ ಸಾಧನೆ ಮಾಡಲು ಸಾಧಕವಾದ ಅಂಶ ಯಾವುದು? ಅವರೇ ಹೇಳುತ್ತಾರೆ – 'ಸಂಗೀತಗಾರನಿಗೆ ಬೇಕಾದದ್ದು ಭಕ್ತಿ, ಆಸಕ್ತಿ, ಮತ್ತು ಆರೋಗ್ಯ', 'ಸಂಗೀತವೇ ನನಗೆ ಆಹಾರವಾಗಿತ್ತು' ಎಂದೊಂದು ಕಡೆ ಹೇಳಿದ್ದಾರೆ. ಹಾಡಿನ ಗುಂಗು ಎಷ್ಟಿರುತ್ತಿತ್ತೆಂದರೆ ನಿದ್ರೆಯಲ್ಲಿಯೂ ನಿಖರವಾಗಿ ರಾಗಾಲಾಪನೆ ಮಾಡುತ್ತಿದ್ದಂತೆ ಅವರ ಕನವರಿಕೆ ಕೇಳಿದವರು ಹೇಳಿದ್ದಾರೆ.

ಸಂಗೀತಗಾರರ ಬಗ್ಗೆ ನಮಗೆ ಬೇರೆಲ್ಲೂ ಸಿಗಲಾರದ ಕೆಲವು ಅಪರೂಪದ ಸಂಗತಿಗಳು ಇಲ್ಲಿವೆ. ಉದಾಹರಣೆಗೆ (ಪುಟ 17ರಲ್ಲಿ) : "ಎ.ವಿ. ವರದಾಚಾರ್ಯರು ರಂಗಭೂಮಿಯ ಮೇಲೆ ಹಾಡುವ ಚೇತೋಹಾರಿ ರೂಪ–ಪದ್ಯಗಳಿಗೆ ಹೋಲಿಸಿದಾಗ ಬಿಡಾರಂ ಕೃಷ್ಣಪ್ಪನವರ ಸಂಗೀತ ನೀರಸವಾಗಿತ್ತು." ಕೆಲವು ಅನಿಸಿಕೆಗಳು ಇಂದಿಗೂ ಗಮನಾರ್ಹವೂ ಆದರ್ಶವೂ ಆಗಿವೆ. ಉದಾಹರಣೆಗೆ (ಪುಟ 29) ಮುಂಬೈನಲ್ಲಿ ನಡೆದ ತುಳಸಿ ರಾಮಾಯಣದ ಪ್ರವಚನ (ಸಂಗೀತಾತ್ಮಕ ವಾಚನ / ಪಠನ). ಇಂಥ ಪ್ರವಚನ, ಹರಿಕಥೆಗಳು ಯುವಜನತೆಯಲ್ಲಿ ಉತ್ತಮ ಮೌಲ್ಯ ಬೆಳೆಸಲು ಸಹಕಾರಿ.

2

ಲಿಂಗದಹಳ್ಳಿಯ ಶ್ರೀ ಎಸ್. ನರಸಿಂಹಮೂರ್ತಿಯವರಿಗೆ 96 ತುಂಬಿ 97 ನಡೆಯುತ್ತಿದೆ. ಅವರು ಕರ್ನಾಟಕ ಅಲ್ಲ, ರಾಷ್ಟ್ರಮಟ್ಟದ ಸಂಸ್ಕೃತ ಪಂಡಿತರಲ್ಲಿ ಅಗ್ರಗಣ್ಯರು. ವಿದ್ಯಾರತ್ನ ಮತ್ತು ವಿದ್ಯಾಸಾಗರ ಪ್ರಶಸ್ತಿ ಪುರಸ್ಕೃತರು. ಓದುವ ಕಾಲಕ್ಕೆ ಏಕಸಂಧಿಗ್ರಾಹಿಗಳು. ನಾಲ್ಕೂ ವೇದಗಳನ್ನು ಸಹಾಧ್ಯಾಯಿಗಳು ಗಟ್ಟಿಯಾಗಿ ಪಠನ ಮಾಡುವಾಗ ಕೇಳಿಯೇ ಕಲಿತವರು. 1927 ರಿಂದ 32ರ ಅವಧಿಯಲ್ಲಿ ಶೃಂಗೇರಿಯಲ್ಲಿ ನಾಟಕಾಂತ ಸಾಹಿತ್ಯ ಮತ್ತು ವೇದಶಾಸ್ತ್ರ ವಿಭಾಗಗಳಲ್ಲಿ ಪದವಿ ಪಡೆದರು. ಮುಂದಿನ ವರ್ಷಗಳಲ್ಲಿ ಏಳು ವಿಷಯಗಳಲ್ಲಿ ವಿದ್ವತ್ ಪದವಿ ಪಡೆದರು [1934 : ವ್ಯಾಕರಣ (ಧಾರವಾಡ); 1939 : ತರ್ಕ (ಧಾರವಾಡ); 1940 : ಸಾಹಿತ್ಯ/ಅಲಂಕಾರ (ಮದ್ರಾಸು); 1946 : ವೇದಾಂತ, ಮೀಮಾಂಸಾ (ಮದ್ರಾಸು); 1952 : ಜ್ಯೌತಿಷ (ಶೃಂಗೇರಿ)] ಅವರು ಜ್ಯೌತಿಷ ಹಾಗೂ ಸ್ಮಾರ್ತ ಪ್ರಯೋಗಗಳಲ್ಲಿ ಪರಿಣತಿ ಪಡೆದವರು.

ನಾಲ್ಕಾರು ಸಂಸ್ಕೃತ ಕಾಲೇಜುಗಳಲ್ಲಿ ಅಧ್ಯಾಪನಕಾರ್ಯ ಮಾಡಿದ್ದಾರೆ. ಭೀಮನಕೋಣೆ, ಕೂಡಲಿ ಇತ್ಯಾದಿ ಊರುಗಳ ನಾಲ್ಕಾರು ಪೀಠಾಧಿಪತಿಗಳಿಗೆ ಪಾಠ ಹೇಳಿದ್ದಾರೆ. ಏಳು ಕೃತಿಗಳು ಪ್ರಕಟವಾಗಿವೆ. ನಾಲ್ಕು ಕೃತಿಗಳು ಪ್ರಕಟವಾಗಬೇಕಿದೆ –ಕೈ ಬರಹದಲ್ಲಿವೆ.

ಶ್ರೀ ಎಸ್.ನರಸಿಂಹಮೂರ್ತಿಯವರ ಆತ್ಮಕಥೆಯು, ಮೂರು ತಲೆಮಾರುಗಳಷ್ಟು ಹಿಂದಿನ ಲಿಂಗದಹಳ್ಳಿಯ ಬದುಕಿಗೆ ಹಿಡಿದ ಕೈಗನ್ನಡಿಯಾಗಿದೆ. ಲಿಂಗದಹಳ್ಳಿ ಅರೆಮಲೆನಾಡು, ಸುತ್ತ ಗುಡ್ಡಗಳು, ಪ್ರಕೃತಿರಮ್ಯ ಸ್ಥಳ. ಎಸ್. ನರಸಿಂಹಮೂರ್ತಿಯವರು ತಮ್ಮ ಬಾಲ್ಯದ ಸ್ಮರಣೆ ಮಾಡುತ್ತ 'ತುಂಬಾ ಆರೋಗ್ಯಕರ ವಾತಾವರಣ ಇಲ್ಲಿಯದು' ಎಂದು ನೆನೆಸಿಕೊಳ್ಳುತ್ತಾರೆ. ಆಗಿದ್ದ ಶತಾಯುಷಿಗಳನ್ನು ಜ್ಞಾಪಿಸಿಕೊಳ್ಳುತ್ತಾರೆ. ಕಷ್ಟಪಟ್ಟು ದುಡಿಯುವ ಕಟ್ಟುಮಸ್ತಾದ ದೇಹದ ಜನ. ಎಲ್ಲರೂ ವೇದಾಧ್ಯಯನ ಸಂಪನ್ನರೇ.

ಶೃಂಗೇರಿಯ ಪಾಠಶಾಲೆಯಲ್ಲಿ ಸಂಸ್ಕೃತಾಧ್ಯಯನ, ವಿರಾಮ ಕಾಲದಲ್ಲಿ ಅಂತ್ಯಾಕ್ಷರಿ, ಆಶುಕವಿತ್ವ! ಸಂದೇಹ ಪರಿಹಾರಕ್ಕೆ ಸಹಾಧ್ಯಾಯಿಗಳು ಇವರನ್ನೇ ಆಶ್ರಯಿಸುತ್ತಿದ್ದರಂತೆ. 'ನೈಷಧ ವಿದ್ವದೌಷಧ' ಎಂಬ ಮಾತಿದೆ. ಆದರೆ ನರಸಿಂಹಮೂರ್ತಿಯವರಿಗೆ ಅದು ಸುಲಿದ ಬಾಳೆ. ನೈಷಧ ಪರೀಕ್ಷೆಗಾಗಿ ಸ್ವತಃ ಶೃಂಗೇರಿಯ ಶ್ರೀಗಳೇ ಬಂದು ಕುಳಿತಿದ್ದರಂತೆ. ಎಸ್. ಎನ್. ರಿಗೆ ಮೊದಲ ಸ್ಥಾನ ಸಿಕ್ಕಿತು. ವ್ಯಾಕರಣ ಪರೀಕ್ಷೆಗೆ ಪೂನಾದಿಂದ ಬಂದಿದ್ದ ಗಜೇಂದ್ರಗಡಕರ್ ಅವರು ನರಸಿಂಹಮೂರ್ತಿಯವರನ್ನು ಸೋಲಿಸಲು ಹಟಪಟ್ಟು ವಿಫಲರಾಗಿ ಬಾಯ್ತುಂಬ ಶ್ಲಾಘಿಸಿದರಂತೆ! ಈಗ 97ರ ವೃದ್ಧ. ನೆನಪು ಮಾಸಿಲ್ಲ, ಸಂಪ್ರದಾಯವಾದಿಯಾಗಿಯೂ ವಿಚಾರವಾದಿ, ಕಂದಾಚಾರ ವಿರೋಧಿ. ಆದರೆ "ತರ್ಕಮಾಡಿ, ವಿಚಾರಮಾಡಿ, ಆದರೆ ಕೊನೆಗೆ ಕಂದಾಚಾರದ ಪ್ರವಾಹಕ್ಕೆ ಧಕ್ಕೆ ಮಾಡುವ ಕಾರ್ಯಕ್ಕೆ ಹೋಗಬೇಡಿ" ಎಂದು ವಿಷಾದದ ಕಿವಿಮಾತು ಹೇಳುತ್ತಾರೆ.

3

ಸಂಕೇತಿ ಜನಾಂಗ ಹೆಮ್ಮೆಪಡುವಂಥ ಶ್ರೇಷ್ಠ ಸಂಗೀತ ವಿದ್ವಾಂಸರು– ಆಸ್ಥಾನ ವಿದ್ವಾನ್ ಆರ್.ಎನ್. ದೊರೆಸ್ವಾಮಿಯವರು. ಅವರ ಬದುಕಿನ ಕಥೆ ರೋಚಕವಾದದ್ದು. ಏಕಾಗ್ರತೆ, ಸಂಯಮ, ಹಟ, ಇತ್ಯಾದಿ ಗುಣಗಳ ಜೊತೆಗೆ ತಂದೆಯವರ ಕಠಿಣಸಂಕಲ್ಪ ಕೂಡ ಅವರ ಭವಿಷ್ಯ ರೂಪಿಸಲು ಕಾರಣವಾದ ಅಂಶವಾಗಿದೆ. ಶಾಲಾಶಿಕ್ಷಣವಿಲ್ಲದುದು, ಬಡತನ ಇತ್ಯಾದಿ ಯಾವ ಕಾರಣಗಳೂ ಅವರ ಮುನ್ನಡೆಗೆ ಅಡ್ಡಿಯಾಗಲಿಲ್ಲ. ತಂದೆಯವರು ಮಗನ ಶಾಲಾ ಶಿಕ್ಷಣ ತಪ್ಪಿಸಿ ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಸಂಗೀತ ಕಲಿಯಲೆಂದು ಕಳಿಸಿದ್ದು ಸರಿ. ಆದರೆ ಅಲ್ಲಿ ಹುಡುಗನಿಗೆ ಪ್ರವೇಶ ಸಿಗಲೇ ಇಲ್ಲ! ಮುಂದೇನು? ಅಲ್ಲಿಯೇ ತಾವಾಗಿ ಗುರುತ್ವ ಒಪ್ಪಿ ಕಲಿಸತೊಡಗಿದ ಶ್ರೀನಿವಾಸ ಐಯ್ಯರ್ ಕಲಿಸಲಿಲ್ಲ. ಆದರೆ ತೊಂದರೆಮಾಡಿದ್ದೇ ಹೆಚ್ಚು. ಕಾಲಾಂತರದಲ್ಲಿ ಸೇಲಂ ದೊರೆಸ್ವಾಮೈಯ್ಯಂಗಾರ‍್ಯರಲ್ಲಿ ಶಿಷ್ಯ

ವೃತ್ತಿ. ಮೂರು ವರ್ಷ ಕಠಿಣ ಸಾಧನೆ. 18 ತುಂಬಿದಾಗ ಸ್ವರವ್ಯತ್ಯಯವಾಗಿ ಕಲಿಕೆ ನಿಂತದ್ದು ವಿಧಿ ನಡೆಸಿದಂತೆ ನಡೆವ ಸ್ಥಿತಿ. ಮತ್ತೆ ಗೃಹಾಭಿಮುಖಿ. ಮನೆಯಲ್ಲಿದ್ದೇ ಸಂಸ್ಕೃತ, ಇಂಗ್ಲಿಷ್ ಕಲಿಕೆ. ಎಸಳೂರು ಕಾಡಿನ ನಡುವೆ ವ್ಯವಸಾಯ ವೃತ್ತಿ, ಜೊತೆಗೆ ಆ ಏಕಾಂತವು ಆತ್ಮವಿಶ್ವಾಸದ ಪ್ರಯೋಗಶಾಲೆಯಾದದ್ದು. ಹಾಡಿಕೆ ಬಿಟ್ಟಿಲ್ಲ. ನೂರು ಕೃತಿಗಳು ಕರಗತ. ವಿಧಿ ದೊರೆಸ್ವಾಮಿಯವರನ್ನು ಮೈಸೂರಿಗೆ ತಂದದ್ದು ಸಂಕೇತಿಗಳ ಮಹಾಭಾಗ್ಯ. ಈಗ ಆಸ್ಥಾನ ವಿದ್ವಾನ್ ವೆಂಕಟಗಿರಿಯಪ್ಪನವರಲ್ಲಿ ವೀಣೆಯ ಕಲಿಕೆ. ಅವರಿಂದ ಆರ್.ಎನ್. ದೊರೆಸ್ವಾಮಿಯವರ ಬಾಳು ಹಸನಾದದ್ದು. ಮನೆಯಲ್ಲಿ ಸಂಗೀತ ಕಲಿಸುತ್ತಲೆ (ಹಾಡುಗಾರಿಕೆ ಮತ್ತು ವೀಣಾವಾದನ ವಿಷಯದಲ್ಲಿ) ಸುಮೇರುಶಿಖರವನ್ನೇರಿದ ಕಥೆ. ಗುರುಗಳ ಜೊತೆ ನಾಲ್ಕುಬಾರಿ ಉತ್ತರ ಭಾರತ ಪ್ರವಾಸ, ಮುಂದೆ ತಾವು ಪ್ರಾಧ್ಯಾಪಕರಾದಾಗ ದಕ್ಷಿಣ ಭಾರತ ಪ್ರವಾಸ ಮಾಡಿದ್ದು ಬಹಳಷ್ಟು ಶಿಕ್ಷಣ, ಅನುಭವ ಮತ್ತು ಕೀರ್ತಿಯನ್ನು ತಂದುಕೊಟ್ಟಿದೆ.

ನಾವು ಅಭಿಮಾನಪಡುವಂಥ ಆದರ್ಶಪ್ರಾಯವಾದ, ಅಪರೂಪದ ಶ್ರೀಮಂತ ಬದುಕು ದೊರೆಸ್ವಾಮಿಯವರದು. ಸಹವಿದ್ವಾಂಸರಲ್ಲಿ ಅಸಹನೆ, ದ್ವೇಷವಿಲ್ಲ. "ವೈಣಿಕ ಕಲ್ಪತರು" "ನಾದನಿಧಿ" ಎಂಬ ಅರ್ಥವತ್ತಾದ, ಅನುರೂಪವೇ ಆದ ಬಿರುದು ಪಡೆದಿದ್ದಾರೆ. ಮುಂದೆ ಕೃತಿರಚನಕಾರರಾಗಿ 66 ಗೇಯ ಕೃತಿಗಳ ಸಂಪುಟವನ್ನು ಪ್ರಕಟಿಸಿ 'ವಾಗ್ಗೇಯಕಾರ'ರೂ ಆಗಿ ನಮ್ಮ ಸಮಾಜಕ್ಕೆ ಹೆಮ್ಮೆ ತಂದಿದ್ದಾರೆ.

4

ಸಂಕೇತಿ ಜನಾಂಗವು ವಿಶೇಷವಾಗಿ ರೈತ ಸಮುದಾಯ. ಸಂಗೀತ ಮತ್ತು ವೇದ ಶಾಸ್ತ್ರಗಳ ಜ್ಞಾನದ ಗುತ್ತಿಗೆ ಪಡೆದವರು. ಆದರೆ ಉಳಿದ ಕ್ಷೇತ್ರಗಳ ಸ್ಪರ್ಶವಿಲ್ಲದೆ ಇಲ್ಲ. ಹಾಗೆ ಸ್ಪರ್ಶವಾದೊಡನೆ ತಲಸ್ಪರ್ಶಿ ಜ್ಞಾನ ಪಡೆದೇ ಸಿದ್ಧ!

ನಮ್ಮ ಜನಾಂಗದಲ್ಲಿ ಸಾಹಸಪ್ರವೃತ್ತಿ ಎಷ್ಟೇ ವಿಪುಲವಾಗಿದ್ದರೂ ರಾಷ್ಟ್ರರಕ್ಷಣೆಗಾಗಿ ಸೈನ್ಯಕ್ಕೆ ಸೇರಿದವರು ವಿರಳ. ಅವರಲ್ಲೂ ಕಮೀಷನ್ಡ್ ಆಫೀಸರ್‌ಗಳಾದವರು ಇನ್ನೂ ವಿರಳ. ಹಾಗೆ ಆದವರಲ್ಲಿ ಒಬ್ಬರು ಶ್ರೀ ವೇಣುಗೋಪಾಲ್. ಸಮಾಜ ಸೇವಾ ಕೆಲಸಗಳನ್ನು ಮಾಡಿ ಮಹೋನ್ನತ ಸೈನ್ಯ ಪದಕ ಮತ್ತು ಪ್ರಶಸ್ತಿಯನ್ನು ಪಡೆದವರು, ಮುಖ್ಯಮಂತ್ರಿಗಳಿಂದಲೂ ರಾಷ್ಟ್ರಪತಿಗಳಿಂದಲೂ ಮೆಚ್ಚುಗೆ ಪಡೆದವರು ವೇಣುಗೋಪಾಲ್. ಅವರ 'ನೆನಪು ಕೆದರಿದಾಗ' ಕೃತಿಯನ್ನು ಓದುತ್ತಾ ಹೋದಂತೆ ಮೆಚ್ಚುಗೆ ವಿಸ್ಮಯದಿಂದ ಕಣ್ಣೀರು ಧಾರೆಯಾಗಿ ಹರಿಯುತ್ತದೆ. 40 ವರ್ಷಗಳ ತರುವಾಯ ತಾನು ಕೆಲಸ ಮಾಡಿದ ಇಟಗಿ ಹಳ್ಳಿಗೆ ಭೇಟಿಮಾಡಿದಾಗ ಸಿಕ್ಕಿದ ಸ್ವಾಗತ ಮತ್ತು ಆ ಹಿಂದಿನ ಕಾರ್ಯಗಳ ನೆನಪಿಗಾಗಿ ಅವರ ಪತ್ನಿಯಿಂದ ಸ್ಮಾರಕಕ್ಕಾಗಿ ಗುದ್ದಲಿಪೂಜೆ ಮಾಡಿಸಿದ ಅನುಭವ ಸಾಧಾರಣವೇ? ರೋಮಾಂಚನ, ಕಣ್ಣೀರು ಬಾರದೆ?

[ಕೋಣನೂರು ಕೇಶವಮೂರ್ತಿ ಮತ್ತು ಲಲಿತಮ್ಮನವರ ಮಗ ಏರ್ ವೈಸ್ ಮಾರ್ಷಲ್ ಶ್ರೀ ಕೆ. ರಾಮಸುಂದರ ಅವರು ನಮ್ಮ ಜನಾಂಗದ ಹೆಮ್ಮೆ. ಹಲವು ಹನ್ನೊಂದು ಪುರಸ್ಕಾರ ಪಡೆದವರು. 2006 ರಲ್ಲಿ ರಾಷ್ಟ್ರಪತಿಗಳಿಂದ ವಿಶಿಷ್ಟ ಸೇವಾ ಪದಕ ಪಡೆದಾಗ ಹೆಮ್ಮೆಯಾಯಿತು. ಈ ಸುದ್ದಿ ಕೇಳಿದಾಗ, 'ಸೈನ್ಯದಲ್ಲಿದ್ದು ಪವಾಡಸದೃಶ ಸೇವಾಕಾರ್ಯ ಮಾಡಿದ' ನಮ್ಮವರೇ ಆದ ವೇಣುಗೋಪಾಲ್ ಅವರ ನೆನಪು ಬಂದಿತು. ಈಗ ವೇಣುಗೋಪಾಲ್ ಅವರ 'ನೆನಪು ಕೆದರಿದಾಗ' ಕೃತಿಯನ್ನು ಮತ್ತೊಮ್ಮೆ ವಿವರವಾಗಿ ಓದುವ ಭಾಗ್ಯ ಸಿಕ್ಕಿದೆ.]

ಆರ್. ಎನ್. ದೊರೆಸ್ವಾಮಿಯವರು ಸಂಗೀತಗಾರರಾಗಬೇಕೆಂದು ಹೊರಟವರು. ವಿಧಿ ಸರಿದಾರಿ ರೂಪಿಸಿತೆಂಬುದು ನಿಜ. ಆದರೆ ವೇಣುಗೋಪಾಲ್ ಅವರು ಸೈನ್ಯಕ್ಕೆ ಸೇರುವ ಕನಸನ್ನೆಂದೂ ಕಂಡವರಲ್ಲ. ಅಷ್ಟೇಕೆ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ ಆಗಿನ ಬ್ರಿಟಿಷ್ ಸೈನಿಕರ ವಿರುದ್ಧ ಕಾರ್ಯಾಚರಣೆ ಮಾಡಿದವರು. ಆದ್ದರಿಂದ ಇವರದು ವಿಧಿ ರೂಪಿಸಿದ ಬದುಕು. ತಂದೆಯಿಂದಾಗಲಿ, ತಾನೇ ಆಗಲಿ ರೂಪಿಸಿಕೊಂಡದ್ದಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಮುಳುಗಿ, ಎಸ್. ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ ಮುಂತಾದವರ ಒಡನಾಟ, ಸಹಜೈಲುವಾಸ ಅನುಭವಿಸಿದ ಹುಟ್ಟು ಹೋರಾಟಗಾರ ವೇಣುಗೋಪಾಲ್. ಕಾಲೇಜನ್ನೂ, ತನ್ನ

ಭವಿಷ್ಯವನ್ನೂ ಜಲಾರ್ಪಣಮಾಡಿ, ಬ್ರಿಟಿಷರ ವಿರುದ್ಧ ಮದ್ದುಗುಂಡು ಸಿಡಿಸಿ, ಅವರ ಕೈನ ಪಿಸ್ತೂಲ್ ಕಸಿದವನು ಮುಂದೆ ಪಿಸ್ತೂಲ್ ಹಿಡಿವ ಯೋಧನಾದದ್ದು ಶಿವನಿಚ್ಛೆಯಲ್ಲವೆ?

ವೇಣುಗೋಪಾಲ್ ಅವರ ಬದುಕಿನ ಕೆಲವಾದರೂ ಸಾಹಸದ ಘಟನೆಗಳನ್ನು ಇಲ್ಲಿ ಸ್ಮರಿಸುತ್ತೇನೆ. ಕೇಳಿದ ನೀವು ಆತ್ಮಕಥನದ ಪೂರ್ತ ಓದಿ ಹೆಮ್ಮೆ ಪಡದೆ ಇರಲಾರಿರಿ.

ನಿಜಾಮನ ಆಡಳಿತ ಕಾಲದಲ್ಲಿ ರಾಯಚೂರು ಜಿಲ್ಲೆ ಇಟಗಿಯಲ್ಲಿ ರಜಾಕರರ ಹಾವಳಿಯ ವಿರುದ್ಧ ಸಂಘಟನೆ ಮಾಡಿದ್ದು, ಬರಿಗೈಲಿ ಚಿರತೆ ಎದುರು ಹೋರಾಡಿ ಸಾಯಿಸಿದ್ದು, ಸೈನ್ಯದ ಕಮೀಷನ್ಡ್ ಹುದ್ದೆಗೆ ಆಯ್ಕೆಯಾಗಲು ಕಾರಣವಾದ ಸಾಹಸದ ಕೆಲಸಗಳು, ಮತ್ತೂರಿನಲ್ಲಿ ತನ್ನ ಅತ್ತೆಯವರ ಹೊಟ್ಟೆಗೆ ಕೋಡಿನಿಂದ ಚುಚ್ಚಿ ಮೇಲೆತ್ತಿದ ಎತ್ತಿನ ಮೂಗುದಾರ ಹಿಡಿದು ಮಣಿಸಿ ಅತ್ತೆಯವರನ್ನು ಬದುಕಿಸಿಕೊಂಡದ್ದು, ಮಣಿಪುರ ರೈಫಲ್ಸ್ ಪುನರ್ನಿರ್ಮಾಣ, ಅಲ್ಲಿ ಅಡುಗೆಮನೆ ದುರಸ್ತಿ, ಉತ್ತಮ ಊಟದ ವ್ಯವಸ್ಥೆ, ಕ್ವಾರ್ಟರ್ಸ್‌ಗಳ ನಿರ್ಮಾಣ, ಡ್ರಿಲ್‌ನ ಸುವ್ಯವಸ್ಥೆ, ಮೇಲ್ಮಟ್ಟದ ಬ್ಯಾಡ್‌ಮಿನ್ಟನ್ ಕೋರ್ಟ್ ನಿರ್ಮಾಣ ಇತ್ಯಾದಿ ವಿಷಯಗಳಲ್ಲಿ ಪವಾಡ ಸದೃಶ ಕೆಲಸಗಳು. ಶತ್ರು ನಾಶದ ರಕ್ಷಣೆಯ ವ್ಯವಸ್ಥೆ, ಹಳ್ಳಿಗರ ಸಹಕಾರದಿಂದ ಹಳ್ಳಿಗಳಿಗೆ ರಸ್ತೆ ನಿರ್ಮಾಣ, ಬೆಟ್ಟದ ಮೇಲೆ ಟ್ಯಾಂಕ್ ಕಟ್ಟಿ (ಬೊಂಬುಗಳ ಪೈಪ್ ಸಹಾಯದಿಂದ) ದೂರದೂರಿಗೆ ನೀರು ಸರಬರಾಜು ಮಾಡಿದ್ದು! ಕುಯಿವೈ ನದಿಗೆ ನಾಲ್ಕು ಅಡ್ಡ ಸೇತುವೆಗಳನ್ನು (ಅವುಗಳಲ್ಲಿ ಒಂದು ಸೇತುವೆಯ ಅಳತೆ 4 ಅಡಿ ಅಗಲ 240 ಅಡಿ ಉದ್ದ) ನಿರ್ಮಿಸಿದ್ದು, ಆದಿವಾಸಿಗಳಿಗೆ ಹೊಲಿಗೆ ಮಿಷನ್ ಮತ್ತು ಮಗ್ಗಗಳನ್ನು ಒದಗಿಸಿ ಬಡತನ ನಿರ್ಮೂಲನ ಕಾರ್ಯಕ್ಕೆ ಕೈಹಾಕಿದ್ದು, ನಾಗಾಲ್ಯಾಂಡ್ ತರುಣರ ಪಡೆಯೊಂದನ್ನು ಕಟ್ಟಿ ಯೋಗ್ಯ ಸೈನಿಕ ತರಬೇತಿ ನೀಡಿದ್ದು, ಇತ್ಯಾದಿ ಒಂದಲ್ಲ ಎರಡಲ್ಲ ನೂರಾರು ಸಾಹಸದ ಕಾರ್ಯಗಳನ್ನು ಮಾಡಿದ್ದಾರೆ.

ರಾಷ್ಟ್ರಪತಿಗಳಿಂದ ವಿಶಿಷ್ಟ ಸೇವಾ ಪದಕ ಬಂದಿತು. ಆಗ ಪೊಲೀಸ್ ವರಿಷ್ಠಧಿಕಾರಿಗಳು ಪಟ್ಟಿ ಮಾಡಿದ ವೇಣುಗೋಪಾಲ್ ಅವರ ಸಾಧನೆಗಳನ್ನು ಪುಟ 169–170 ರಲ್ಲಿ ಗಮನಿಸಬಹುದು.

5

ಮತ್ತೂರು ಕೃಷ್ಣಮೂರ್ತಿಯವರು ಬಾಲ್ಯವನ್ನು ಕಡು ಬಡತನದಲ್ಲಿಯೂ, ಮತ್ತು ಯೌವ್ವನದ ಬಹುಭಾಗವನ್ನು ಬಡತನದಲ್ಲಿಯೂ ಕಳೆದವರು. ಒಂದೊಂದು ರೂಪಾಯಿಗೂ ಹರಸಾಹಸ ಮಾಡಿದವರು. ಇಂಥ ವ್ಯಕ್ತಿಯ ಕೈಲಿ ಇಂದು ಜನ, ಸಾಮಾಜಿಕ ಕಾರ್ಯಗಳಿಗಾಗಿ ಲಕ್ಷ ಲಕ್ಷ ಹಣವನ್ನು ದಾನವಾಗಿ ನೀಡುವರೆಂದರೆ ಎಂಥ ಪವಾಡ! ಇದಕ್ಕೆ ಕಾರಣವಾದದ್ದು ಅವರ ಆಕರ್ಷಕ ವ್ಯಕ್ತಿತ್ವ., ವಿನಮ್ರ ನಡವಳಿಕೆ, ಮೃದು ಮಧುರ ವಾಕ್ಚಾತುರ್ಯ. ತನ್ನ ಮಾತುಗಾರಿಕೆಯಿಂದ ಎಂಥವರನ್ನೂ ತನ್ನ ಕಡೆ ಸೆಳೆಯುವ ಅದ್ಭುತ ಶಕ್ತಿ ಅವರಿಗಿದೆ.

ಭಾರತದ ಬಹುತೇಕ ಎಲ್ಲ ಪ್ರಧಾನಿಗಳು ಮತ್ತು ರಾಷ್ಟ್ರಪತಿಗಳ ಸಂಪರ್ಕ ಇವರಿಗಿತ್ತು. ಇಂಗ್ಲೆಂಡಿನ ಪ್ರಧಾನಿ ಲಂಡನ್ನಿನ ಇವರ ಮನೆಗೆ ಬಂದು ಕೃತಾರ್ಥರಾಗಿದ್ದಾರೆ. ಇವರ ಕಾರ್ಯಕ್ಷೇತ್ರವಾದ ಅಲ್ಲಿನ 'ಭಾರತೀಯ ವಿದ್ಯಾಭವನ'ಕ್ಕೆ ಭೇಟಿ ನೀಡಿ ಅಪಾರ ವಂತಿಗೆ ಕೊಟ್ಟಿದ್ದಾರೆ.

ವಿದ್ಯಾಭವನದ ಮೂಲಕ ಮತ್ತು ಗಮಕ ವ್ಯಾಖ್ಯಾನದ ಮೂಲಕ ಭಾರತೀಯ ಸಂಸ್ಕೃತಿಯನ್ನು ಹರಡುವ ಪವಿತ್ರ ಕಾರ್ಯವನ್ನು ಕಳೆದ ಅರ್ಧಶತಕದಿಂದ ಮಾಡುತ್ತ ಬಂದಿದ್ದಾರೆ. ನಮ್ಮ ಗಮಕ ಕಾರ್ಯಕ್ರಮಗಳಲ್ಲಿ ಸಭಾಸದರ ಸಂಖ್ಯೆ ನೂರರ ಗಡಿ ದಾಟಿದರೆ ಅಜ್ಜಿ ಪುಣ್ಯ. ಆದರೆ ಮತ್ತೂರರ ವ್ಯಾಖ್ಯಾನ ಕಾರ್ಯಕ್ರಮವಿದ್ದಲ್ಲಿ ಸಂಖ್ಯೆ ಸಾವಿರಕ್ಕೆ ಕಡಿಮೆ ಇದ್ದುದೇ ಇಲ್ಲ! ನಿರಂತರ ಒಂದು ವರ್ಷಕ್ಕೆ ಮಿಕ್ಕಿ ಟಿ.ವಿಯಲ್ಲಿಯೂ ಮತ್ತು ಬಹಿರಂಗವಾಗಿಯೂ ಕಾರ್ಯಕ್ರಮವನ್ನು ನೀಡಿರುವ ದಾಖಲೆ ಇವರ ಹೆಸರಲ್ಲಿದೆ.

ದೂರದ ವಿದೇಶದಲ್ಲಿ (ಲಂಡನ್ನಿನಲ್ಲಿ) ಸಂಸ್ಥೆ ಕಟ್ಟಿ, ಕೋಟಿಗಟ್ಟಲೆ ಹಣ ಸಂಗ್ರಹಿಸಿ ಭಾರತೀಯ ಸಂಸ್ಕೃತಿ ಪ್ರಚಾರ ಕಾರ್ಯವನ್ನು ಸುಮಾರು 25 ವರ್ಷ ನಡೆಸಿ, ಈಗ ಈ ಕಾರ್ಯ ಅಲ್ಲಿ ನಿರಂತರ ನಡೆಯುವಂತೆ ವ್ಯವಸ್ಥೆ ಮಾಡಿ, ಬೆಂಗಳೂರಿಗೆ ಬಂದು ನೆಲೆಸಿದ್ದಾರೆ. ಈ ಇಳಿವಯಸ್ಸಿನಲ್ಲೂ ಬೆಂಗಳೂರಿನ ವಿದ್ಯಾಭವನದ ಕೆಲಸ ನೋಡಿಕೊಳ್ಳುತ್ತಿದ್ದಾರೆ. ಶಿವಮೊಗ್ಗೆಯಲ್ಲಿ ಭವನದ ಶಾಖೆ ತೆರೆದಿದ್ದಾರೆ. ಕಳೆದ ಜನವರಿ ತಿಂಗಳಲ್ಲಿ ಇಲ್ಲೊಂದು ಸಂಸ್ಕೃತಿ ಶಾಲೆ ತೆರೆಯುವ ಯೋಜನೆ ಅವರ ತಲೆಗೆ ಹೊಕ್ಕಿತು. ಹೊಕ್ಕ ತಿಂಗಳೊಳಗೆ ಪೂರ್ಣ ಯೋಜನೆ ಸಿದ್ಧವಾಯಿತು. [ಪ್ರೈಮರಿಯಿಂದ ಪಿ.ಯು.ವರೆಗಿನ ಶಿಕ್ಷಣ ಮತ್ತು ಎಂ.ಬಿ.ಎ. ಕಾಲೇಜು ಸ್ಥಾಪನೆ] ವರ್ಷದೊಳಗೆ ಕೆಲಸ ಮುಗಿಸಲು ನಿರ್ಧಾರ. ಮೂರುಕೋಟಿ ಗುರಿ. ಒಂದೂವರೆ ಕೋಟಿ ತಿಂಗಳೊಪ್ಪತ್ತಿನಲ್ಲಿ ಸಂಗ್ರಹವಾಗಿ ಆಗಿದೆ! 80ರ ಈ ವೃದ್ಧ ಮುವತ್ತರ ಪ್ರಾಯದವನಂತೆ ಉತ್ಸಾಹದಲ್ಲಿ ಕೆಲಸ ಮಾಡುವುದು ನೋಡಿದರೆ ವಿಸ್ಮಯವಾಗದೆ ಇರದು.

ರಾಮಕೃಷ್ಣಾಶ್ರಮದಲ್ಲಿ ಮತ್ತು ಗಾಂಧೀಜಿಯವರ ವಾರ್ಧಾಶ್ರಮದಲ್ಲಿ ವಾಸಮಾಡಿದ್ದು ಇವರ ಮೇಲೆ ಅಪಾರ ಪ್ರಭಾವ ಬೀರಿದೆ. ಇದು ಇವರ ಬದುಕನ್ನು ಮೃದುವೂ, ನೇರವೂ, ಪವಿತ್ರವೂ, ಆಗಿಸಿ ಒಳ್ಳೆಯ ಸ್ನೇಹಜೀವಿಯನ್ನಾಗಿ ರೂಪಿಸಿದೆ. ಅನಿವಾರ್ಯತೆ ಬಂದಾಗ ಮನುಷ್ಯ ಏನನ್ನಾದರೂ ಸಾಧಿಸಬಲ್ಲ ಎಂಬುದಕ್ಕೆ ಇವರ ಬದುಕೇ ಒಂದು ನಿದರ್ಶನವಾಗಿದೆ. ಉದಾಹರಣೆಗೆ ಮದ್ರಾಸಿನಲ್ಲಿ ಗಾಂಧೀಜಿಯವರು ಸುಮಾರು ಮೂರುವಾರ ಕಾಲ ವಾಸ್ತವ್ಯ ಮಾಡುವ ಕಾರ್ಯಕ್ರಮವಿತ್ತು. ಅವರ ಅಂತರಂಗದ ಸೇವೆಗಾಗಿ ಆಯ್ಕೆಯಾದ ನಾಲ್ವರು ಶಿಸ್ತಿನ ಯುವಕರಲ್ಲಿ ಕೃಷ್ಣಮೂರ್ತಿ ಒಬ್ಬರು. ಆದರೆ ಮತ್ತೂರರಿಗೆ ಹಿಂದಿಯಲ್ಲಿ ಮಾತನಾಡಲು ಬಾರದು. ಆದ್ದರಿಂದ ಸಿಕ್ಕಿದ ಅವಕಾಶದಿಂದ ವಂಚಿತರಾಗಬೇಕಾದ ದುಸ್ಥಿತಿ. ಹಿಂದಿ ಬರಲೇಬೇಕೆಂಬ ಬದ್ಧತೆ. ಹಟ ಮಾಡಿ 15 ದಿನದಲ್ಲಿ ಕಲಿತೇಬಿಟ್ಟರಲ್ಲ! ಹಿಂದಿ ಭಾಷೆಯಲ್ಲಿ ನಡೆದ ಆಯ್ಕೆ ಸಮಿತಿಯ ಪ್ರಶ್ನಾವಳಿಗೆಲ್ಲ ಚೊಕ್ಕನಾಗಿ ಉತ್ತರಿಸಿ ಭೇಷ್ ಎನಿಸಿಕೊಂಡರಲ್ಲಾ!

ತಮಿಳಿನ ಬಹು ದೊಡ್ಡ ಕಾದಂಬರಿಕಾರ ಕಲ್ಕಿ ಕೃಷ್ಣಮೂರ್ತಿಯವರ ಪರಿಚಯ, ಮಾರ್ಗದರ್ಶನ ಸಿಕ್ಕಿದ್ದು, ಇವರು ಒಳ್ಳೆಯ ಬರಹಗಾರರಾಗಲು ಸಾಧ್ಯವಾಯಿತು. ಇದರಿಂದ ಮುಂದೆ ಹತ್ತಾರು ವರ್ಷಗಳ ಕಾಲ 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಉಪಸಂಪಾದಕನಾಗಿ ಕೆಲಸಮಾಡಲು, ಸಂಪಾದಕರಾಗಿದ್ದ ಆರ್. ಆರ್. ದಿವಾಕರರಲ್ಲಿ ಭೇಷ್ ಎನಿಸಿಕೊಳ್ಳಲು ಸಾಧ್ಯವಾಯಿತು. ಆ ಕಾಲಕ್ಕೆ ಪ್ರೊ. ವಿ. ಸೀ. ಯವರಿಂದ, ಸಿದ್ಧವನ ಹಳ್ಳಿ ಕೃಷ್ಣಶರ್ಮ ಅವರಿಂದ ದೊರೆತ ಮಾರ್ಗದರ್ಶನ ಹಿರಿದಾದದ್ದು. ಬಸ್ ಕಂಡಕ್ಟರನಾಗಿದ್ದಾಗ, ಕ್ಯಾಂಟೀನಿನಲ್ಲಿ ಕೆಲಸ ಮಾಡುತ್ತಿದ್ದಾಗ, ರಾಜಾಮಿಲ್‌ನಲ್ಲಿ ಗುಮಾಸ್ತನಾಗಿದ್ದಾಗ ಹೇಗೋ ಉಪಸಂಪಾದಕನಾಗಿದ್ದಾಗಲೂ ಅದೇ ಸರಳತೆ, ಲಂಡನ್ನಿನಲ್ಲಿ ವಿದ್ಯಾಭವನದ ರಿಜಿಸ್ಟ್ರಾರ್ ಆಗಿದ್ದಾಗಲೂ ಅದೇ ಸರಳತೆ.

ಲಂಡನ್ನಿನ ಭಾರತೀಯ ವಿದ್ಯಾ ಭವನದಲ್ಲಿನ ಅದ್ಭುತವಾದ ಸಾಧನೆಗೆ ಕಾರಣವಾದದ್ದು, ಕರ್ನಾಟಕದ ಬಹಳಷ್ಟು ಹಿರಿಯರ ಒಡನಾಟ ದೊರೆತದ್ದು, ಆಕಾಶವಾಣಿಯಲ್ಲಿ ನಾಟಕ ವಿಭಾಗದಲ್ಲಿ ಕೆಲಸಮಾಡುವಾಗ್ಗೆ ಡಾ. ಹೆಚ್. ಕೆ. ರಂಗನಾಥ ಅವರ ಸಹಾಯಕರಾಗಿದ್ದುದರಿಂದ ಅವರ ಸ್ನೇಹ, ಮಾರ್ಗದರ್ಶನ ದೊರೆತದ್ದು. ಇವರ ಹೆಸರು ಎಂ. ಆರ್. ಕೃಷ್ಣಮೂರ್ತಿ ಎಂದಿದ್ದುದನ್ನು ಮತ್ತೂರು ಕೃಷ್ಣಮೂರ್ತಿ ಎಂದು ಪುನರ್ನಾಮಕರಣ ಮಾಡಿದವರು ಮಾಸ್ತಿಯವರು! ಡಾ.ವಿ.ಕೆ.ಆರ್.ವಿ. ರಾವ್ ಅವರ ಕೃತಿಯೊಂದನ್ನು ಅನುವಾದಮಾಡಿದ್ದುದರಿಂದ ದೊರೆತ ಅವರ ಸ್ನೇಹ ಲಾಭ, ಸಿದ್ಧವನಹಳ್ಳಿ ಕೃಷ್ಣಶರ್ಮರಿಂದ ಗಾಂಧಿ ಸಾಹಿತ್ಯ ಪರಿಚಯ ಇತ್ಯಾದಿ. ಮಲ್ಲೇಶ್ವರಂ ಟ್ಯುಟೋರಿಯಲ್ಸ್ ಅನ್ನು 'ನೋಪಾಸ್ ನೋ ಫೀಸ್' ಸಿಸ್ಟಂನಲ್ಲಿ ಸ್ಥಾಪಿಸಿದ್ದರಿಂದಾದ ಅನುಭವಗಳು.

ಇಂಗ್ಲೆಂಡ್‌ಗೆ ಭಾರತೀಯ ವಿದ್ಯಾ ಭವನದ ರಿಜಿಸ್ಟ್ರಾರ್ ಆಗಿ ನೇಮಕಗೊಂಡು ವಿದೇಶ ಪ್ರಯಾಣ ಮಾಡಿದ್ದಾಯಿತು. ಸಂಬಳ ಎಷ್ಟು? ಶೂನ್ಯ! ಊಟದ ಖರ್ಚು ಮತ್ತು ಪಾಕೆಟ್ ಮನಿ ಎಂದು 10 ಪೌಂಡ್‌ಗಳು ಮಾತ್ರ. ಧನ, ಜನ ಎರಡನ್ನೂ ಅಲ್ಲಿ ಸಂಪಾದಿಸಬೇಕಾದ ಹೊಣೆಗಾರಿಕೆ. ಸಾಧ್ಯವಾದದ್ದು ಪವಾಡ. ಧಾರ್ಮಿಕ ಕಾರ್ಯಗಳ ಹೆಚ್ಚು ಭಾರ ವಹಿಸಿಕೊಂಡವರು ಗುಜರಾಥಿಗಳು. ಕರ್ನಾಟಕದ ಮಿತ್ರರ ಕೊಡುಗೆ ಸಾಮಾನ್ಯವಲ್ಲ. ಉದಾಹರಣೆಗೆ

ಇವರಿಗೆ ಅಲ್ಸರ್ ಆಪರೇಷನ್ ಆದಾಗ ಎಸ್. ನಿಜಲಿಂಗಪ್ಪರವರ ಅಳಿಯ ಮುದ್ದಪ್ಪ ಅವರು ಸೇವೆ ಮಾಡಿದ್ದು ಮಾತ್ರವಲ್ಲ, ತಮ್ಮ ಮನೆಯಲ್ಲಿ ಎರಡು ವಾರ ಇಟ್ಟುಕೊಂಡು ಉಪಚರಿಸಿದ್ದಾರೆ. ಇವರಿಗೆ ಮುಜಗರವಾಗಬಾರದೆಂದು ಮುದ್ದಪ್ಪನವರ ಮನೆಯವರು ತಾವೂ 15 ದಿನ ಬೆಳ್ಳುಳ್ಳಿ, ಈರುಳ್ಳಿ ಮುಟ್ಟಲ್ಲ!

ವಿದ್ಯಾಭವನಕ್ಕೆ ಭೇಟಿ ನೀಡಿದ, ದಾನಕೊಟ್ಟ ಗಣ್ಯರ ಸಂಖ್ಯೆ ಅಸಂಖ್ಯ. ಉದಾಹರಣೆಗೆ ರಾಜಕುಮಾರ ಚಾರ್ಲ್ಸ್, ಮಾರ್ಗರೇಟ್ ಥ್ಯಾಚರ್, ರಿಚರ್ಡ್ ಅಟೆನ್ ಬರೋ, ಲಾರ್ಡ್ ಮೌಂಟ್ ಬ್ಯಾಟನ್, ಇತ್ಯಾದಿ. ಹಣ ಸಂಗ್ರಹಣೆಗೆ ಸಹಾಯಮಾಡಿದವರು ಲಕ್ಷ್ಮೀಶಂಕರ್, ಲತಾ ಮಂಗೇಷ್ಕರ್, ಪಂಡಿತ ರವಿಶಂಕರ್, ಎಂ.ಎಸ್. ಸುಬ್ಬುಲಕ್ಷ್ಮೀ ಇತ್ಯಾದಿ. ಕಟ್ಟಡದ ಕಾರ್ಯ ಪೂರ್ಣವಾದದ್ದು ಬಿರ್ಲಾ ಕುಟುಂಬದವರಿಂದ.

ಮತ್ತೂರರ ಬದುಕಿನ ನೂರಾರು ಅನುಭವಗಳು ನಮಗೆ ದಾರಿದೀಪವಾಗಬಲ್ಲವು. ಒಂದೆರಡು ಉದಾಹರಣೆ : ಪುಟ 299–302 ರಲ್ಲಿ ಬರುವ 'ಸಮಯ ಪಾಲನೆ' ಕುರಿತ ಮಾತುಗಳು, ಆತ್ಮಸಾಕ್ಷಿ ಕುರಿತ ವಿವರಣೆ 308–309ರಲ್ಲಿ, ಇತ್ಯಾದಿ. ಮತ್ತೂರರಿಗೆ ಪ್ರಸಿದ್ಧಿ ದೊರಕಿಸಿದ್ದು– ಬಿಬಿಸಿಯಲ್ಲಿ ನಿರಂತರ ಒಂದೂವರೆ ವರ್ಷ ಮಾಡಿದ ಹಿಂದೂಧರ್ಮ ಕುರಿತ ವಿಶೇಷ ಉಪನ್ಯಾಸ ಮಾಲಿಕೆ ಹಾಗೂ ಭಾರತೀಯ ಹಬ್ಬಗಳನ್ನು ಕುರಿತು ಮಾಡಿದ ಉಪನ್ಯಾಸಗಳು. ಈ ಕೃತಿಯ ಹೆಚ್ಚು ಪುಟಗಳನ್ನು ಮತ್ತೂರರ ಲೇಖನ ಆವರಿಸಿದೆ. ಆದರೆ ಓದುತ್ತ ಹೋದಂತೆ ಅದರ ಔಚಿತ್ಯ ನಿಮಗಾಗದೆ ಇರದು. ಇಡೀ ಕೃತಿಯನ್ನು ಪೂರ್ತ ಓದಿದ ಮೇಲೆ ಒಂದು ರೀತಿಯ ಧನ್ಯತಾಭಾವ ಮೂಡುತ್ತದೆ. ಮಾಡಲೇಬೇಕಾದ ಕರ್ತವ್ಯವೊಂದನ್ನು ನಿರ್ವಹಿಸಿದಾಗ ಉಂಟಾಗುವ ಸಂತೃಪ್ತಿ ನಿಮಗೆ ಕಾದಿದೆ.

***

ಬೆಂಗಳೂರು

ಡಾ. ಬಿ.ಎಸ್. ನರಹರಿ
ಭೌತಶಾಸ್ತ್ರದ ನಿವೃತ್ತ ಪ್ರಾಧ್ಯಾಪಕರು

'ಸಂಕೇತಿ ಅಧ್ಯಯನ ಮಾಲೆ'ಯಲ್ಲಿ, ಎಲ್ಲ ಆಯಾಮಗಳಿಂದಲೂ ಸಂಕೇತಿ ಸಮುದಾಯವನ್ನು ಅಧ್ಯಯನ ಮಾಡಲು ಅನುಕೂಲವಾಗುವಂತೆ ಮಾಹಿತಿಯನ್ನು ಕ್ರಮಬದ್ಧವಾಗಿ ಕ್ರೋಡೀಕರಿಸುತ್ತಿರುವುದು ಶ್ಲಾಘ್ಯವಾಗಿದೆ. ಇಂಥ ಪುಟ್ಟ ಸಮುದಾಯದಲ್ಲಿ ಸಾಹಿತ್ಯದ ಒಂದೊಂದು ಪ್ರಕಾರದಲ್ಲೂ ಒಂದೊಂದು ಬೃಹತ್ ಸಂಪುಟಕ್ಕಾಗುವಷ್ಟು ಮಾಹಿತಿಯನ್ನು ನಿರೀಕ್ಷಿಸಲಾರೆವು. ಅಂಥ ಸಂದರ್ಭಗಳಲ್ಲಿ ಲೇಖಕರಿಂದ ಬರೆಸಿ ಅಧ್ಯಯನದ ಆಕರವನ್ನು ಸಮೃದ್ಧವಾಗಿಸುತ್ತಿರುವುದು ಎಷ್ಟು ಶ್ರಮವನ್ನು ನಿರೀಕ್ಷಿಸುತ್ತದೆನ್ನುವುದು ಅರ್ಥವಾಗುವಂಥದು; ಅದು ಕಾಲವನ್ನೂ ದೀರ್ಘವಾಗಿಯೇ ಬೇಡುವಂಥದು. ನಿಸ್ಸಂಶಯವಾಗಿ ಒಂದು ರೀತಿಯ ಆಧ್ಯಾತ್ಮಿಕವಾದ ನಿರ್ಲಿಪ್ತತೆಯ ಸ್ತರದಲ್ಲಿ ಬದುಕುತ್ತಿರುವ ಈ ಸಮುದಾಯವು ಲೌಕಿಕದಲ್ಲಿ ಅಷ್ಟು ಆಸಕ್ತವಾಗಿಲ್ಲದಿರುವುದೂ ಈ ಕೆಲಸದ ಭಾರವನ್ನು ಹೆಚ್ಚಿಸುತ್ತದೆ. ಇಷ್ಟು ಅಸಹಾಯಕ ಸ್ಥಿತಿಯಲ್ಲಿಯೂ ಈ ಯೋಜನೆಯನ್ನು ಅಚ್ಚುಕಟ್ಟಾಗಿಯೂ ಆಕರ್ಷಕವಾಗಿಯೂ ಶಾಸ್ತ್ರೀಯವಾಗಿಯೂ ಮುಂದುವರಿಸಿಕೊಂಡು ಹೋಗುತ್ತಿರುವ ಕೆಲಸವು ಪ್ರೋತ್ಸಾಹಕ್ಕೆ ಅರ್ಹವಾದುದಾಗಿದೆ. ಮುಂಬರುವ ಪೀಳಿಗೆಗಳು ಇದನ್ನು ಮಹಾ ಆಸ್ತಿಯಂತೆ ಹೆಮ್ಮೆಯಿಂದ ಸ್ವೀಕರಿಸುವುದರಲ್ಲಿ ಸಂಶಯವಿಲ್ಲ. ಸಾರ್ವತ್ರಿಕ ಸಮಾಜಕ್ಕೂ ಇದರ ಪ್ರಯೋಜನ ದೊರಕಿಯೇ ದೊರಕುತ್ತದೆ. ಜನಾಂಗ ಅಧ್ಯಯನ ಕ್ಷೇತ್ರದ ದಾಪುಗಾಲು ಇದು.

***

ಆಕಾಶವಾಣಿ, ಮೈಸೂರು ಕೇಂದ್ರ **ಡಾ. ಎಂ.ಎಸ್. ವಿಜಯಾಹರನ್**
ನಿರ್ದೇಶಕರು

'ಸಂಕೇತಿ ಆತ್ಮಕಥೆಗಳು' ಸಂಕೇತಿ ಸಮುದಾಯದ ಬದುಕು ಮತ್ತು ಸಹಜಸ್ವಭಾವದ ರೀತಿಯ ಮೇಲೆ ಬೆಳಕು ಚೆಲ್ಲುತ್ತದೆ. ಸಂಕೇತಿಗಳ ಆಸಕ್ತಿ, ಚಿಂತನ ವಿಧಾನ, ಕಾರ್ಯವಿಧಾನ, ಜೀವನದೃಷ್ಟಿ ಇವೆಲ್ಲವೂ ಇಲ್ಲಿ ಕಾಣಿಸಿಕೊಳ್ಳುತ್ತವೆ. ಒಟ್ಟು ಭಾರತೀಯ ಜೀವನ ಚಿತ್ರದ ಭಾಗವಾಗಿಯೇ ಸಂಕೇತಿಗಳ ವೈಶಿಷ್ಟ್ಯವೂ ಇಲ್ಲಿ ಮೂಡಿಬಂದಿದೆ. ಈ ಸಂಕಲನದಲ್ಲಿ ಸೇರಿರುವ ಆತ್ಮಕಥೆಗಳೆಲ್ಲವೂ ಹಿರಿಯ ಚೇತನಗಳ ವೈವಿಧ್ಯಪೂರ್ಣ ಪ್ರಪಂಚವನ್ನೇ ಪ್ರತಿನಿಧಿಸುತ್ತವೆ. ಸಾಮಾನ್ಯ ಸ್ತರಗಳಿಂದ ಬಿಡಿಸಿಕೊಂಡು ಎತ್ತರೆತ್ತರದ ನೆಲೆಗಳಲ್ಲಿ ಕಾರ್ಯಶೀಲವಾದ ಜೀವಗಳು ಇವು. ಐದೂ ಸಂಪುಟಗಳನ್ನು ಒಂದೆಡೆ ತಂದು ಕೊಟ್ಟಿರುವುದರಿಂದಾಗಿ ಆಸಕ್ತರಿಗೆ ಸುಲಭವಾಗಿ ಈ ಪ್ರಕಾರದ ಸಂಕೇತಿ ಸಾಹಿತ್ಯವು ಲಭಿಸುವಂತಾಗಿದೆ. ಸಂಕೇತಿಗಳ ಈವರೆಗಿನ ಸಮಗ್ರ ಆತ್ಮಕಥೆಗಳು ಇಲ್ಲಿವೆ. ಸಂಕೇತಿಗಳ ಬದುಕಿನ ದಟ್ಟವಾದ ಮಾಹಿತಿಯು ಒಂದೇ ಓದಿಗೆ ವಿಶಿಷ್ಟ ಅನುಭವದೊಡನೆ ಇಲ್ಲಿ ದಕ್ಕುತ್ತದೆ. ಇದು ಇಡೀ ಇಪ್ಪತ್ತನೆಯ ಶತಮಾನದ ಬದುಕನ್ನು ಆವರಿಸಿಕೊಳ್ಳುವುದರಿಂದಾಗಿ ಆ ಶತಮಾನದ ನೇರ ಚಿತ್ರವೂ, ಅದರಲ್ಲಿಯೇ ಆಗಿರುವ ಅನೇಕ ಸ್ಥಿತ್ಯಂತರಗಳೂ, ಪೂರ್ವದ ಶತಮಾನಗಳ ಜಾಡಿನ ಸೂಚನೆಯೂ ದೊರೆಯುತ್ತದೆ. ದಾಖಲೀಕರಣದ ಒಳ್ಳೆಯ ಪ್ರಯತ್ನ ಇದು.

***

ನನ್ನ ಬದುಕು

'ಅರಿಕೆ' **ಪ್ರೊ. ಆರ್. ಎನ್. ದೊರೆಸ್ವಾಮಿ**

ಲಕ್ಷ್ಮೀರಮಣ ಕೃತಿ ಮಂಜರಿ
1989

ಈ ಪುಸ್ತಕದಲ್ಲಿ ನನ್ನ ಸ್ವಂತ ರಚನೆಗಳ ಜತೆಗೆ ನನ್ನ ಒಂದು ಸಂಕ್ಷಿಪ್ತ ಆತ್ಮಕಥೆಯನ್ನೂ ಸೇರಿಸಿದ್ದೇನೆ. ಇದರ ಉದ್ದೇಶ ನನ್ನ ದೊಡ್ಡಸ್ತಿಕೆಯನ್ನು ಮೆರೆಯುವುದು ಖಂಡಿತ ಅಲ್ಲ. ನಾನು ಆತ್ಮಚರಿತ್ರೆಯನ್ನು ಬರೆದುಕೊಳ್ಳುವಂತಹ ದೊಡ್ಡ ವ್ಯಕ್ತಿ ಎಂಬ ಭ್ರಮೆಯೂ ನನಗಿಲ್ಲ. ಹಿಂದಿನ ಮತ್ತು ಇಂದಿನ ಎರಡು ತಲೆಮಾರುಗಳನ್ನು ಹಾಗೂ ಸಂಪೂರ್ಣವಾಗಿ ಬದಲಾದ ಈಗಿನ ಕಾಲದ ಆಗುಹೋಗುಗಳನ್ನು ಕಣ್ಣಾರೆ ಕಂಡಿರುವ ನನಗೆ ಒಂದು ತುಲನಾತ್ಮಕವಾದ ಅಧ್ಯಯನ ಮಾಡುವ ಹಂಬಲವುಂಟಾಯಿತು. ಬರೆಯುವುದು ನನ್ನ ವೃತ್ತಿಯಲ್ಲವಾದರೂ, ಬರವಣಿಗೆಯಲ್ಲಿ ಸಾಕಷ್ಟು ಆಸಕ್ತಿ ಹೊಂದಿರುವ ನಾನು ಹೇಗೋ ಧೈರ್ಯವಾಗಿ ಬರೆಯಲು ಪ್ರಾರಂಭಿಸಿದೆ. ನಾನೇಕೆ ಬರೆಯುತ್ತೇನೆ ಎಂದು ಪ್ರತಿಯೊಬ್ಬ ಬರಹಗಾರನೂ ಪ್ರಶ್ನಿಸಿಕೊಳ್ಳುವಂತೆ ನಾನೂ ಈ ಪ್ರಶ್ನೆಯನ್ನು ಹಾಕಿಕೊಂಡಿದ್ದೇನೆ. ಇದರ ಬಗ್ಗೆ ಚಿಂತಿಸಿದ್ದೇನೆ. ಎಲ್ಲರೂ ಕೇವಲ ತಮ್ಮ ಆತ್ಮತೃಪ್ತಿಗಾಗಿಯೇ ಬರೆಯುತ್ತಾರೆ, ಕೃತಿರಚನೆ ಮಾಡುತ್ತಾರೆ ಎಂಬುದು ಎಲ್ಲರಿಗೂ ತಿಳಿದ ವಿಷಯವೇ. ನಮಗೆ ಜೀವನದಲ್ಲಿ ಲಭಿಸುವ ಅನುಭವಗಳನ್ನು, ಮಧುರ ಸ್ಮೃತಿಗಳನ್ನು ಇನ್ನೊಬ್ಬರಲ್ಲಿ ಹೇಳಿಕೊಂಡಾಗ, ಅವನ್ನು ಸುಂದರವಾದ ಮಾತುಗಳಲ್ಲಿ ಬರೆದು ಸೆರೆ ಹಿಡಿದಾಗ ನಮಗಾಗುವ ಆನಂದ ಅಷ್ಟಿಷ್ಟಲ್ಲ. ಈ ದೃಷ್ಟಿ ಯಿಂದ, ಸುಮಾರು ಐದಾರು ದಶಕಗಳ ಹಿಂದಿನ ನಮ್ಮ ಜನಜೀವನದ, ಸಂಗೀತ ಪ್ರಪಂಚದ ಒಂದು ಚಿತ್ರ ನನ್ನ ಅನುಭವದ ಮೂಸೆಯಲ್ಲಿ ಮೂಡಿ ಬಂದು ಈ ಬರಹಕ್ಕೆ ಸ್ಫೂರ್ತಿ ಮತ್ತು ಮೂಲ ಕಾರಣವಾಯಿತು. ಈ ನನ್ನ ಅನುಭವಗಳನ್ನು ಅಲ್ಲಿಂದ ಇಲ್ಲಿಯವರೆಗೆ ನಾನು ಕಂಡಂತೆ ನನ್ನ ತಾಯ್ನುಡಿ ಕನ್ನಡದಲ್ಲಿ ಯಥಾವತ್ತಾಗಿ ಚಿತ್ರಿಸಲು ಪ್ರಯತ್ನಿಸಿದ್ದೇನೆ. ನನ್ನ ಕೆಲವು ರಚನೆಗಳೂ ಕನ್ನಡ ಭಾಷೆಯಲ್ಲಿ ರಚಿತವಾಗಿವೆ. ಇದು ನನ್ನ ಮಾತೃಭಾಷೆಗೆ ನಾನು ಸಲ್ಲಿಸಿರುವ ಯತ್ಕಿಂಚಿತ್ ಕೈಂಕರ್ಯ, ಅಳಿಲು ಭಕ್ತಿ ಮಳಲು ಸೇವೆ. ಈ ನನ್ನ ಬರಹದಿಂದ, ನನ್ನ ರಚನೆಗಳಿಂದ ರಸಿಕವೃಂದಕ್ಕೆ ಏನಾದರೂ ಅಲ್ಪಸ್ವಲ್ಪ ರಸಾನುಭವವುಂಟಾದರೆ ಅಲ್ಲಿಗೆ ನನ್ನ ಉದ್ದೇಶ, ಶ್ರಮ, ಸಾರ್ಥಕ.

****

ಸಂಪಾದಕರ ಮಾತು
'ಮಹತೀ'
2000

"ಆರ್.ಎನ್.ಡಿ. ಅವರ ಆತ್ಮಕಥೆಯ ಈ ಪ್ರಪಂಚದಲ್ಲಿ ಕಾಣುವುದೆಲ್ಲ ಸದ್ಭಾವವೇ. ಅಹಂಕಾರ, ಅಸೂಯೆ, ದೂಷಣೆ ಮೊದಲಾದವು ಸುಳಿಯುವುದೂ ಇಲ್ಲ ಎಂದು ಹೇಳುವುದಕ್ಕಾಗಿಯೇ ಈ ಶಬ್ದಗಳನ್ನು ಬಳಸಬೇಕಾಗಿದೆ. ನಿಜಜೀವನದ ಇಲ್ಲಿನ ಪಾತ್ರಗಳೆಲ್ಲವೂ ಒಂದು ಪ್ರಸನ್ನವೂ ಸಾತ್ತ್ವಿಕವೂ ಆದ ಪ್ರಭೆಯನ್ನೇ ಕಟ್ಟಿಕೊಡುತ್ತವೆ. ದೊರೆಸ್ವಾಮಿಯವರಿಗೆ ಸಂಗೀತವೇ ಈ ಪಕ್ವತೆಯನ್ನು ಕೊಟ್ಟಿದೆಯೋ, ಅವರು ಉಂಡ ಕಷ್ಟಗಳು ಈ ದೃಷ್ಟಿಯನ್ನು ಮೂಡಿಸಿವೆಯೋ, ಇಲ್ಲ ಆ ಚೇತನವು ಪಡೆದ ಸ್ವಾಭಾವಿಕಸಂಸ್ಕಾರವೇ ಅಂಥದೋ? ಅಂತೂ, ಇಲ್ಲಿ ನಾವು ಒಂದು ಸುಂದರವಾದ ಉದ್ಯಾನವನದಲ್ಲಿ ಓಡಾಡಿದ ಅನುಭವವನ್ನೇ ಪಡೆಯುತ್ತೇವೆ. ಅವರ ಸಂಗೀತ 'ಕೃತಿ'ಗಳು ಇಂಥ ಮನೋಭೂಮಿಕೆಯಲ್ಲಿ ಅರಳಿದ ಪುಷ್ಪಗಳೆಂದ ಮೇಲೆ ಅವುಗಳಲ್ಲೂ ಸ್ವಾಭಾವಿಕವಾದ ಕಂಪು ಇರಲೇಬೇಕು."

ಇದು, ಆರ್.ಎನ್.ಡಿ. ಅವರ 'ಲಕ್ಷ್ಮೀರಮಣ ಕೃತಿಮಂಜರಿ' ಎಂಬ ಗ್ರಂಥದ ಮೊದಲ ಭಾಗದಲ್ಲಿರುವ ಅವರ ಆತ್ಮಕಥೆಗೆ ಸಂಬಂಧಿಸಿದ ಪ್ರತಿಕ್ರಿಯೆ. ಹೆಜ್ಜೆಹೆಜ್ಜೆಗೂ ವಿನಯ, ಪ್ರಾಮಾಣಿಕತೆ ಎದ್ದು ಕಾಣುವ ಲೇಖನ ಅದು. ನೇರ ಸರಳ ನಿರೂಪಣೆ, ಹೃದ್ಯವಾದ ಭಾಷೆ, ನಿರ್ಲಿಪ್ತ ಅಭಿವ್ಯಕ್ತಿ ಅದರ ಗುಣ. ಮಗನನ್ನು ಸಂಗೀತಕಲಾವಿದನಾಗಿ ಮಾಡಬೇಕೆಂಬ ತಂದೆಯ ಛಲ, ಕಲಾವಿದನಾಗಿ ಬೆಳೆದು ಉದಾತ್ತತೆಯನ್ನು ಬೆಳೆಸಿಕೊಂಡ ಮಗನ ಸಾತ್ತ್ವಿಕ ಪಕ್ವತೆ– ಇವು ಎಲ್ಲರ ಗಮನ ಸೆಳೆದಿವೆ.

***

ನೆನಪು ಕೆದರಿದಾಗ

ಆರ್. ಎಲ್. ಅನಂತರಾಮಯ್ಯ
ಭೂತಪೂರ್ವ ಉಪನಿರ್ದೇಶಕರು
ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಇದು ಯೋಧನೊಬ್ಬನ ಆತ್ಮಕಥೆ ಮಾತ್ರವಲ್ಲ; ಅನೇಕ ಕಷ್ಟಗಳನ್ನೆದುರಿಸಿ, ತನ್ನ ಕಾಲ ಮೇಲೆ ನಿಂತು ತನ್ನ ವ್ಯಕ್ತಿತ್ವವನ್ನು ತಾನೇ ರೂಪಿಸಿಕೊಂಡ ಸಾಹಸಿಯೊಬ್ಬನ ವ್ಯಕ್ತಿಚಿತ್ರ. ಹಾಗೆಯೇ ಇದು ಮರಾಠಾ ರೆಜಿಮೆಂಟಿನ ಹಾಗೂ ಗಡಿ ಭದ್ರತಾ ಪಡೆಯ ಒಬ್ಬ ನೇರ್ಮೆಯುಳ್ಳ ಅಧಿಕಾರಿಯು ತನ್ನ ಕರ್ತವ್ಯಗಳನ್ನು ದಕ್ಷತೆಯಿಂದ ನಿರ್ವಹಿಸಿ, ಇತರರಿಗೆ ಮಾದರಿಯಾಗಿ ನಡೆದು ವೃತ್ತಿಜೀವನವನ್ನು ಸಾರ್ಥಕ ಪಡಿಸಿಕೊಂಡ ಕಥೆಯೂ ಆಗಿದೆ. ಮೇಜರ್ ವೇಣುಗೋಪಾಲ್ ತಮ್ಮ ಏಳ್ಗೆಗೆ ತಾವೇ ಶಿಲ್ಪಿಯಾಗಿ ಅದನ್ನು ರೂಪಿಸಿಕೊಂಡರು, ಸೈನಿಕರು ಶುಷ್ಕ ಜೀವಿಗಳಲ್ಲ, ಶಿಸ್ತಿನ ಹೆಸರಿನಲ್ಲಿ ಬದುಕನ್ನು ಯಾಂತ್ರಿಕ ಕಠೋರತೆಯನ್ನಾಗಿಸಿಕೊಂಡವರಲ್ಲ ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಅಸ್ಸಾಂ ಗಡಿಯ ಮೂಲೆಮೊಡಕುಗಳ ಗ್ರಾಮಗಳಿಗೆ ರಸ್ತೆ ಮಾಡಿಕೊಡುವಾಗ, ಭಗೀರಥ ಸಾಹಸ ಮಾಡಿ ಕುಡಿಯುವ ನೀರನ್ನು ಅವರ ಬಾಗಿಲಿಗೆ ಹರಿಸಿ ತರುವಾಗ ಅವರ ಮನೋಧರ್ಮದ ಈ ಆರ್ದ್ರತೆ, ಅನುಕಂಪೆ, ಸುವ್ಯಕ್ತವಾಗಿದೆ. ನೆನಪು ಕೆದರಿದಾಗ ಒಳ್ಳೆಯ ಓದಿಕೆ ನೀಡುವ ರಸವತ್ತಾದ ಕೃತಿ.

ಮೊದಲ ಮಾತು
21.10.1998

ಡಾ. ಬಿ.ಎಸ್. ಪ್ರಣತಾರ್ತಿಹರನ್
ಕನ್ನಡ ಪ್ರಾಧ್ಯಾಪಕರು

ಆತ್ಮಕಥೆಯ ಮೂಲಭೂತ ಲಕ್ಷಣವೆಂದರೆ ತನ್ನದೇ ಕಣ್ಣಳತೆಗೆ ಸಿಕ್ಕಿದ್ದನ್ನು ತನ್ನನ್ನೇ ಕೇಂದ್ರದಲ್ಲಿಟ್ಟುಕೊಂಡು ಅಳೆಯುವುದು. ಅಲ್ಲದೆ, ಸಾಮಾನ್ಯವಾಗಿ ಅದು 'ತನ್ನ' ಪರವಾಗಿಯೇ ಕೆಲಸಮಾಡುತ್ತದೆ. ಈ ದೌರ್ಬಲ್ಯವನ್ನು ಮೀರುವುದು ಕಷ್ಟದ

ಕೆಲಸ. ಶ್ರೀ ವೇಣುಗೋಪಾಲ್ ಅವರು ಇದನ್ನು ಮೀರಿರುವುದರಲ್ಲಿಯೇ ಈ ಕೃತಿಯ ವೈಶಿಷ್ಟ್ಯವಿದೆ. ಇಲ್ಲಿ ಒಬ್ಬ ಗಾಂಧೀವಾದಿ ಇದ್ದಾನೆ; ಮಾನತಾವಾದಿ ಇದ್ದಾನೆ ಎಂದೂ ಹೇಳಿದರೆ ಅದು ಪುನರುಕ್ತಿಯಾಗುತ್ತದೆ.

ಇಲ್ಲಿನ ಯೋಧ ಒಬ್ಬ ಉದಾತ್ತ ನಾಯಕ. ಅವನ ದೃಷ್ಟಿ ಶುದ್ಧವಾದುದು. ತನ್ನ ಪರಿಸರವನ್ನು ಮೇಲೆತ್ತಿ ಉದಾತ್ತಗೊಳಿಸುವುದೇ ಅವನ ತಪಸ್ಸು. ಈ ತಪಸ್ಸು ಏಕಾಂತದಲ್ಲಿ ಕಾಡಿನಲ್ಲಿ ನಡೆದಾಗ ಅದಕ್ಕೊಂದು ರಮ್ಯತೆ ಪ್ರಾಪ್ತವಾದೀತು. ಆದರೆ ಜನರ ನಡುವೆ ಇದ್ದುಕೊಂಡು ಅವರೊಡನೆ ಬೆಳ್ಳಂಬೆಳಕಿನಲ್ಲಿ ಓಡಾಡಿ ಲೋಕಕುಟುಂಬಿಯಾಗುವುದು ಕಠಿಣತಮ ತಪಸ್ಸು. ಲೇಖಕರು ಇಂಥ ತಪಸ್ಸಿನಲ್ಲಿ ಯಶಸ್ಸು ಪಡೆದಿದ್ದಾರೆ. ಆದ್ದರಿಂದಲೇ ಇಲ್ಲಿ ಉದ್ದಕ್ಕೂ ಇರುವ ವಿವರಗಳು ಸಾಹಸಯಾತ್ರೆಯ ವಿವರಗಳಷ್ಟೇ ಅಲ್ಲ, ಜನತಾಸೇವೆಯ ತೀರ್ಥಯಾತ್ರೆಯ ಪಾವಿತ್ರ್ಯವನ್ನೂ ಮೇಳೈಸಿಕೊಂಡಿವೆ. ಆದ್ದರಿಂದಲೇ ಇರಬಹುದು, ಇಲ್ಲಿ ಉದ್ದಕ್ಕೂ ಕೇಳುವುದು ಲೇಖಕನ ಸಾಕ್ಷೀಧ್ವನಿ ಮಾತ್ರ.

ಅಗಾಧ ನೆನಪಿನ ಶಕ್ತಿ, ಅದಮ್ಯ ಜೀವನೋತ್ಸಾಹ, ಕಣ್ಣಿಗೆ ಕಟ್ಟುವಂತೆ ಸುಂದರವಾಗಿ ನಿರೂಪಿಸುವ ಶಕ್ತಿ ಇಲ್ಲಿ ಎದ್ದು ಕಾಣುತ್ತದೆ.

***

ಮತ್ತೂರಿನಿಂದ ಬ್ರಿಟನ್‌ಗೆ

ಕ.ನಾ. ಮಾರ್ಕಂಡೇಯ ಅವಧಾನಿ
ಮತ್ತೂರು

25 ವರ್ಷಗಳ ಕಾಲ ಇಂಗ್ಲೆಂಡಿನಲ್ಲಿ 'ಭಾರತದ ಸಾಂಸ್ಕೃತಿಕ ರಾಯಭಾರಿ' ಎನಿಸಿಕೊಂಡು, ಲಂಡನ್ ವಿದ್ಯಾಭವನವನ್ನು ಕಟ್ಟಿ ಬೆಳೆಸಿ, ಹಿಂದೂಧರ್ಮದ ವಿಜಯ ಪತಾಕೆಯನ್ನು ಹಾರಿಸಿ ಬೆಂಗಳೂರಿಗೆ ಬಂದು, ಈ ನಿವೃತ್ತಿಯ ವಯಸ್ಸಿನಲ್ಲೂ ಅಹರ್ನಿಶಿ ಶ್ರಮಿಸುತ್ತ ಬಳ್ಳಾರಿ, ಬಾಗಲಕೋಟೆ, ಮಡಿಕೇರಿ, ಮೈಸೂರು ಮೊದಲಾದ ಕಡೆಗಳಲ್ಲೂ ಭವನದ ಚಟುವಟಿಕೆಗಳನ್ನು ವಿಸ್ತರಿಸುತ್ತಿರುವ ಶ್ರೀ ಮತ್ತೂರು ಕೃಷ್ಣಮೂರ್ತಿಗಳ ಸಾಧನೆಗೆ, ಈಗ ನಾವು ಅರ್ಪಿಸುತ್ತಿರುವ ಸಂಭಾವನಾ ಗ್ರಂಥವು, ಸೂರ್ಯನಿಗೆ ಸೊಡರು ತೋರಿದಂತೆ ಕೇವಲ ಔಪಚಾರಿಕ. ಈತನ ಪುಣ್ಯಕರ್ಮಗಳ ಸುಗಂಧವು ವಿಶ್ವದ ಎಲ್ಲೆಡೆ ಹರಡಲಿ.

ಸಂಪಾದಕರ ನುಡಿ, **ರಾಜಾರಾಮಮೂರ್ತಿ**
2002 ಪ್ರಧಾನ ಸಂಪಾದಕ

ಗಮಕ, ಸಾಹಿತ್ಯ, ಪತ್ರಿಕೋದ್ಯಮ, ನಾಟಕ, ಭಾರತೀಯ ಸಂಸ್ಕೃತಿಯ ಪ್ರಸರಣ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ದಶಕಗಳ ಕಾಲ ಅನುಪಮ ಸೇವೆ ಸಲ್ಲಿಸಿರುವ "ಭಾರತೀಯ ಸಾಂಸ್ಕೃತಿಕ ರಾಯಭಾರಿ" ಎಂದೇ ಖ್ಯಾತನಾಮರಾದ ಶ್ರೀ ಮತ್ತೂರ್‌ಜೀ ಅವರಿಗೆ ಈ ಗ್ರಂಥವು ಅಭಿನಂದನಾಪೂರ್ವಕವಾಗಿ ಹೊರಬರುತ್ತಿದೆ.

ಅಭಿನಂದನಾ ಗ್ರಂಥವು ಎರಡು ಭಾಗಗಳಲ್ಲಿ ಹೊರಬರುತ್ತಿದ್ದು, ಮೊದಲ ಭಾಗದಲ್ಲಿ ಮತ್ತೂರ್‌ಜೀ ಅವರ ಜೀವನಗಾಥೆಯೂ, ಇನ್ನೊಂದು ಭಾಗದಲ್ಲಿ ಅನೇಕ ಅಭಿಮಾನೀ ಸಜ್ಜನರು ಅವರ ಬಗೆಗೆ ಬರೆದ ಲೇಖನಗಳೂ ಇವೆ. ಮತ್ತೂರರ ಈ ಯಶೋಗಾಥೆ ಉತ್ತಮ ಸಂಸ್ಥೆಯೊಂದರ ಚರಿತ್ರೆಯೂ ಆಗಿ ಸಂಸ್ಥೆಯನ್ನು ಕಟ್ಟುವ ಭಾವೀ ಯೋಜಕರಿಗೆ ಉತ್ತಮ ಮಾರ್ಗದರ್ಶೀ ಕೈಪಿಡಿಯಾಗಿ ಎಲ್ಲ ಕಾಲಕ್ಕೂ ಪ್ರಸ್ತುತವೆನಿಸುವಂತಿದೆ.

ಆ. ಸಂಕೇತಿ: ಇತಿವೃತ್ತಗಳು

ಡಾ. ಎಸ್. ಕೆ. ಸುಶೀಲಾಬಾಯಿ

ಹಾಸನ ವೈದ್ಯೆ

ಸಂಕೇತಿ ಅಧ್ಯಯನದ ಐದನೇ ಸಂಪುಟ ಓದುತ್ತಿದ್ದೇನೆ. ಅತೀವ ಸಂತೋಷವಾಗುತ್ತಿದೆ. ಆಯಾ ಬರಹಗಾರರ ಹಸ್ತಲಿಪಿ ಮತ್ತು ಹಸ್ತಾಕ್ಷರ ಎರಡೂ ಇದ್ದರೆ ಬಹಳ ಚೆನ್ನಾಗಿರುತ್ತಿತ್ತು ಎನ್ನಿಸುತ್ತಿದೆ... ಏಕೆಂದರೆ ಹಸ್ತಾಕ್ಷರ ಮತ್ತು ಲಿಪಿ ಶಾಶ್ವತವಾಗಿ ಇರುತ್ತವೆ. ಫೋಟೋಗಳಿಗಿಂತಲೂ ಹೆಚ್ಚಾಗಿ ವ್ಯಕ್ತಿತ್ವವನ್ನು ಬಿಂಬಿಸುತ್ತವೆ.

ಇ.ಸಂಕೇತಿ : ಭಾಷಾಧ್ಯಯನ

ಮೈಸೂರು ಕಿಕ್ಕೇರಿ ನಾರಾಯಣ
ಭಾರತೀಯ ಭಾಷಾ ಸಂಸ್ಥೆ

.... a marvellous work

***

ಮೈಸೂರು ಡಾ. ರಾಮಮೂರ್ತಿ
ಭಾರತೀಯ ಭಾಷಾ ಸಂಸ್ಥೆ

A production of international standard – contents as well as the form....

***

ಬೆಂಗಳೂರು **ಪ್ರೊ. ಕೆ. ಎಸ್. ಕೃಷ್ಣಮೂರ್ತಿ**
ಕನ್ನಡ ಪ್ರಾಧ್ಯಪಕರು (ನಿ)

ಪುಸ್ತಕವು ಅತ್ಯಂತ ಸುಂದರವಾಗಿ ಬಂದಿದೆ; ಪ್ರಿಂಟಿಂಗ್ ತುಂಬ ಚೆನ್ನಾಗಿದೆ. ಸ್ವಲ್ಪ ಹೆಚ್ಚೂ ಕಡಮೆ ಅಂತರರಾಷ್ಟ್ರೀಯ ಗುಣಮಟ್ಟ (International Standards) ತಲುಪಿದೆ ಎಂದು ಹೇಳಬಹುದು. ನಾನು ಪುಸ್ತಕವನ್ನು ಸ್ವಲ್ಪ ತಿರುವಿಹಾಕಿದೆ. ಲೇಖನಗಳೆಲ್ಲ ಉಚ್ಚಮಟ್ಟದ್ದಾಗಿವೆ. ಸಂಪುಟಾಧ್ಯಕ್ಷರಾದ ಡಾ. ಆರ್. ಎಸ್. ಎಸ್. ಕೃಷ್ಣಮೂರ್ತಿ ಮತ್ತು ಡಾ. ಎಸ್. ಶ್ರೀಧರ್ ಇವರ ವ್ಯಕ್ತಿತ್ವ ವಿವರವನ್ನು ನೋಡಿ ನನಗೆ ಆನಂದಾಶ್ಚರ್ಯಗಳು ಒಮ್ಮೆಗೇ ಉಂಟಾದವು. ಇಂಥ ಉನ್ನತ ಅಂತರರಾಷ್ಟ್ರೀಯ ಖ್ಯಾತಿಯ ವೈದ್ಯರೂ ಸಂಶೋಧಕರೂ ನಮ್ಮಲ್ಲಿದ್ದಾರಲ್ಲ ಎಂದು ಹೆಮ್ಮೆಯಾಯಿತು. ನಮ್ಮ ಸಂಕೇತಿ ಸಮುದಾಯಕ್ಕೆ ಕಿರೀಟಪ್ರಾಯರಾದವರು ಇಂಥವರನ್ನು ನಾವು ಎಷ್ಟೋ ಜನ ತಿಳಿದೇ ಇಲ್ಲ. ಈ ಗ್ರಂಥದಮೂಲಕ ಪರಿಚಯವಾದುದು ತುಂಬ ಸಂತೋಷ. ಭಾಷಾತಜ್ಞರಾದ ಎಚ್. ಎಸ್. ಅನಂತನಾರಾಯಣ ಅವರೂ ನೀವೂ ಈ ಸಂಪುಟಕ್ಕಾಗಿ ಎಷ್ಟು ಶ್ರಮಿಸಿದ್ದೀರಿ ಎಂಬುದನ್ನು ಹೇಳಬೇಕಾದುದೇ ಇಲ್ಲ.

***

ಈ. ಸಂಕೇತಿ ಅಧ್ಯಯನ ಮಾಲೆ: ಪ್ರತಿಕ್ರಿಯೆ

ಮೈಸೂರು

ಕೆ. ರಾಘವೇಂದ್ರರಾವ್
ಸಂಗೀತ ವಿಮರ್ಶಕರು

ಇಂಥ ಕೆಲಸ ಮಾಡುವವರಲ್ಲಿ ಈಗ Sincerityಯೂ ಇಲ್ಲ, involvement ಕೂಡ ಇಲ್ಲ; ಸುಮ್ಮನೆ ಮಾಡಬೇಕೆಂದು ಮಾಡುತ್ತಾರೆ. But, you are an exception.

***

ಬೆಂಗಳೂರು

ಚಕ್ರಗಿರಿ ನಾಗೇಶ್
ಭಾರತೀಯ ಆಹಾರ ನಿಗಮ

ಸಣ್ಣದಾಗಿ ಪ್ರಾರಂಭಿಸಿ, ಅದ್ಭುತವನ್ನು ಸಾಧಿಸುತ್ತಿದ್ದೀರಿ. Yours is a perennial achievement.

***

ಮೈಸೂರು

ದೊರೆಸ್ವಾಮಿ
ಶಿಕ್ಷಣತಜ್ಞರು

..... it is a monumental work

***

ಮೈಸೂರು

ಡಾ. ಕೆ. ಕೆಂಪೇಗೌಡ
ಖ್ಯಾತ ಭಾಷಾಶಾಸ್ತ್ರಜ್ಞರು

ಹತ್ತು ಕಡೆ ಕೈಹಾಕಿ ಚದುರಿದ ಕೆಲಸ ಮಾಡುವ ಪರಿಪಾಠ ಈಗ ನಿಂತಿದೆ; ಏಕಮುಖವಾದ ಆಳ ಅಧ್ಯಯನ ಮತ್ತು ಬರವಣಿಗೆ ಈಗಿನ ರೀತಿ. ಅದರಿಂದಲೇ ಏನಾದರೂ ಕೊಡುಗೆ ಸಾಧ್ಯವಾಗುವಂಥದು. ನನ್ನ ದೃಷ್ಟಿಯಲ್ಲಿ ಅದೇ ಶ್ಲಾಘ್ಯವಾದುದು ಕೂಡ.

3. ಸಾಮಾಜಿಕಪ್ರಜ್ಞೆಗೆ ನಮಸ್ಕಾರ

ಅದಮ್ಯ ಸಮಾಜ ಸೇವಾವ್ರತಿ
ಡಾ. ಮತ್ತೂರು ಕೃಷ್ಣಮೂರ್ತಿ

"ಏನಾನುಮಂ ಮಾಡು ಕೈಗೆ ದೊರೆತುಜ್ಜುಗವ ।
ನಾನೇನು ಹುಲುಕಡ್ಡಿಯೆಂಬ ನುಡಿ ಬೇಡ ॥
ಹೀನಮಾವುದುಮಿಲ್ಲ ಜಗದಗುಡಿಯೊಳಿಗದಿ ।
ತಾಣ ನಿನಗಿಹುದಿಲ್ಲಿ–ಮಂಕುತಿಮ್ಮ" ॥

ಪೂಜ್ಯ ಡಿ.ವಿ.ಜಿ. ಯವರು ಹೇಳಿರುವುದು ಸತ್ಯ ಎಂದು ತೋರಿಸಿರುವಂಥದು ಶ್ರೀ ಮತ್ತೂರು ಕೃಷ್ಣಮೂರ್ತಿಯವರ ಬದುಕು. 08.08.1929ರಂದು ಶಿವಮೊಗ್ಗ ಜಿಲ್ಲೆಯ ಸಂಸ್ಕೃತಗ್ರಾಮ ಮತ್ತೂರಿನಲ್ಲಿ ಜನಿಸಿದ ಕೃಷ್ಣಮೂರ್ತಿಯವರು ಕಡುಬಡತನದಲ್ಲೇ ಹಲವು ವರ್ಷಗಳ ಕಾಲ ಬದುಕು ಸವೆಸಿ, ಒಳ್ಳೆಯ ಅಂಕಗಳು ಬಂದರೂ ಕಾಲೇಜು ಮೆಟ್ಟಿಲು ತುಳಿಯಲಾರದೇ ಹತ್ತನೆಯ ತರಗತಿಗೇ ಓದು ನಿಲ್ಲಿಸಿ, ದಿನನಿರ್ವಹಣೆಗಾಗಿ ಕೆಲಸಕ್ಕೆ ಸೇರಿದರು. ಮೊದಲು ಬಸ್ ಕಂಡಕ್ಟರು, ನಂತರ ಟಿಕೆಟ್ ಇನ್ಸ್‌ಪೆಕ್ಟರ್‌ರಾದರೂ ಕೆಲಸಬಿಟ್ಟು ರಾಜಾಮಿಲ್–ಮಿನರ್ವಮಿಲ್ಲುಗಳಲ್ಲಿ ಕ್ಲರ್ಕ್ ಆದರು. ಆಗಲೇ ಟ್ಯುಟೋರಿಯಲ್ಸ್ ಶಿಕ್ಷಕನಾಗಿ ಸಾಹಿತ್ಯಸೇವೆ ಪ್ರಾರಂಭಿಸಿ ತಮಿಳುಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡುವುದರಲ್ಲಿ ಸಫಲರಾದರು, ಅದೇ ಬರಹದ ಗೀಳು ಸಂಯುಕ್ತ ಕರ್ನಾಟಕ ಪತ್ರಿಕೆಯ ರಿಪೋರ್ಟರಾಗಲು ಪ್ರೋತ್ಸಾಹಿಸಿತು. ನಂತರ ಆ ಪತ್ರಿಕೆಯ ಉಪಸಂಪಾದಕತ್ವ. ಚಿಕ್ಕಂದಿನಿಂದಲೂ ಆಕಾಶವಾಣಿಯ ಬಗೆಗಿದ್ದ ಕುತೂಹಲ, ನಾಟಕಗಳ ಮೇಲಿನ ಆಸಕ್ತಿ, ಒಮ್ಮೆ ಸಿನಿಮಾ ಸೇರಿಕೊಳ್ಳಲು ಕರೆ ಬಂದಿದ್ದುದು – ಎಲ್ಲವೂ ಸೇರಿ ಆಕಾಶವಾಣಿ ನಾಟಕವಿಭಾಗಕ್ಕೆ ಆಯ್ಕೆಯಾಗುವಂತಾಯಿತು. ಅದೂ ಕೆಲವು ವರ್ಷಗಳವರೆಗೆ ನಡೆದು ಮುಂದೆ ಮಹತ್ತಾದದ್ದೊಂದನ್ನು ಸಾಧಿಸಲು ದೈವವೇ ಆಯ್ಕೆ ಮಾಡಿತೋ ಎಂಬಂತೆ ಮತ್ತೆ ಸಂಯುಕ್ತ ಕರ್ನಾಟಕ ಪತ್ರಿಕೆಗೆ ವಾಪಸು. ಆದರೆ ಈ ಎಲ್ಲಾ ರೀತಿಯ ಕೆಲಸಗಳಲ್ಲಿಯೂ ಅವರಿಗೆ ಇದ್ದ ತಾದಾತ್ಮ್ಯ ಮತ್ತು ನಿಷ್ಠೆ ದೊಡ್ಡದು. ಅದನ್ನು ನೋಡಿ ಮೆಚ್ಚಿದ ಆ ದೇವರು ತನ್ನ ಪರೀಕ್ಷೆಯ ಮೂಸೆಯಿಂದ ಪುಟಕ್ಕಿಟ್ಟ ಚಿನ್ನವಾಗಿ ಹೊರಹೊಮ್ಮಿಸಿ ಮತ್ತೂರರನ್ನು ಕೊನೆಗೆ ಭಾರತೀಯ ವಿದ್ಯಾಭವನದ ಹೊಸ್ತಿಲಿಗೆ ಕರೆತಂದು ನಿಲ್ಲಿಸಿದ. ನಿಜಕ್ಕೂ ಮೆಟ್ಟಿಲು ಮೆಟ್ಟಿಲಾಗಿ ಅವರು ಏರಿ ಮಾಡಿದ ಸಾಧನೆ ಎಂಥವರಿಗೂ ಆಶ್ಚರ್ಯ ತರುವಂಥದು. "ಅದಕ್ಕೆ ದೈವಸಹಾಯವೇ ಕಾರಣ. ನಮಗೆ ಕಾಣದ ಕೈಯೊಂದು ಕೆಲಸ ಮಾಡುತ್ತದೆ. ಅದು ತಾನು ನಿಯಮಿಸಿದ ಗುರಿಯತ್ತ ನಮ್ಮನ್ನು ಒಯ್ಯುತ್ತದೆ" ಎಂದು ವಿನಮ್ರವಾಗಿ ಮತ್ತೂರರು ಹೇಳುವ ಮಾತು ಅವರ ದೈವಶ್ರದ್ಧೆ, ಕರ್ತವ್ಯನಿಷ್ಠೆಗೆ ಸಾಕ್ಷಿ. ಅವರ ಜೀವನದ ಸಾಧನೆ ಅಸಾಮಾನ್ಯ ಎನಿಸಿದೆ. ಭಾರತೀಯರಾದ ನಾವು ಅವರನ್ನು ಪ್ರೀತಿ ಹಾಗೂ ಹೆಮ್ಮೆಯಿಂದ ಭಾರತದ 'ಸಾಂಸ್ಕೃತಿಕ ರಾಯಭಾರಿ' ಎಂದು ಕರೆಯುವ ಹಾಗೆ ಮಾಡಿದೆ. ವಿದೇಶದಲ್ಲಿ ಎಂದಿಗೂ ಬೆಳಗುವ 'ಕನ್ನಡದ ದೀಪ' ಹಚ್ಚಿಟ್ಟು ಬಂದವರು ಅವರು ಎಂದು ಕನ್ನಡಿಗರು ಹೆಮ್ಮೆಯಿಂದ ಬೀಗುವಂತೆ ಮಾಡಿದೆ.

ಮತ್ತೂರರ ಸಮಾಜಸೇವೆಯ ಬಗೆಗೆ ಹೇಳಲಾಗಲಿ, ಪುಟಗಳ ಮಿತಿಯಲ್ಲಿ ವಿವರಿಸಲಾಗಲಿ ಬಹುಶಃ ಸಾಧ್ಯವಿಲ್ಲ. ಅವರು ರಾಜಕೀಯ ಪ್ರವೇಶಿಸಿ ಯಾವುದೇ ಕ್ಷೇತ್ರಕ್ಕೆ ಆಯ್ಕೆಯಾಗಿ ಅಲ್ಲಿನ ನೆಲ – ಜನರಿಗೆಂದೇ ಸೇವೆ ಮಾಡಿ, 'ಸಮಾಜಸೇವೆ' ಮಾಡುತ್ತಿರುವವರಲ್ಲ. ರಾಜಕೀಯದಲ್ಲಿರುವ ಅನೇಕ ಗಣ್ಯರು ಅವರಿಗೆ ನಿಕಟ ಪರಿಚಯವಿದ್ದರೂ, ಮತ್ತೂರರ ಬಗೆಗೆ ಬಹಳ ಗೌರವ ಹೊಂದಿದ್ದರೂ, ಆ ವಲಯದಲ್ಲಿ ಅವರಿಗೆ ಸಾಕಷ್ಟು ಪ್ರಭಾವವಿದ್ದರೂ, ಅದನ್ನೆಂದೂ ಅವರು ಹೊರಗೆ ತೋರಿಸಿಕೊಳ್ಳುವುದಿಲ್ಲ. ಬದಲಾಗಿ ಸಮಾಜಮುಖಿ ಕೆಲಸಕಾರ್ಯಗಳಿಗೆ ಪಟ್ಟುಹಿಡಿದು, ತಮ್ಮ ಪರಿಣಾಮಕಾರೀ ಮಾತುಕತೆಗಳಿಂದ ರಾಜಕಾರಣಿಗಳು ಹಾಗೂ ಅಧಿಕಾರೀ ವರ್ಗದವರ ಮನವೊಲಿಸಿ ಸಾಧಿಸುವ ಕುಶಲತೆಯನ್ನು ನಾವು ಅವರಲ್ಲಿ ಕಾಣಬಹುದು. ಈ ಅಭ್ಯಾಸ ನಿನ್ನೆ ಇಂದಿನದಲ್ಲ. 14–15ರ ಹರೆಯದ ಹುಡುಗನಾಗಿದ್ದಾಗಲೇ ಸ್ವಾತಂತ್ರ್ಯಪೂರ್ವಕಾಲದಲ್ಲಿ ಹತ್ತಾರು ಜನರನ್ನು ಸೇರಿಸಿ ತಮ್ಮೂರಿಗೆ ಬರುತ್ತಿದ್ದ ಪತ್ರಿಕೆಗಳನ್ನು ಜೋರಾಗಿ ಓದುವುದು, ಪ್ರಪಂಚದ ವಿದ್ಯಮಾನಗಳು ಮತ್ತು ದೇಶದ ಸ್ಥಿತಿಗತಿಗಳ ಬಗ್ಗೆ ಊರಿನ ಹಿರಿ–ಕಿರಿಯರಿಗೆ

ಹೇಳುವುದು ಅವರಿಗೆ ಮುಂಚಿನಿಂದಲೂ ಬಂದಿದ್ದ ಅಭ್ಯಾಸ. ಹೀಗೆ ಚಿಕ್ಕದಾಗಿ ಪ್ರಾರಂಭವಾದ ಸಮಾಜಮುಖಿ ಕೆಲಸಗಳು ಅವರು ಬೆಳೆದಂತೆ ಅವರು ಕೆಲಸ ಮಾಡಿದ ಕ್ಷೇತ್ರಗಳ ಬಗೆಗಿನ ಜ್ಞಾನವನ್ನು ಹೆಚ್ಚಿಸಿ, ಆ ವಲಯವನ್ನು ವಿಸ್ತರಿಸಿತು. ವೇದಮಯ ವಾತಾವರಣದಲ್ಲಿ ಬೆಳೆದುದು, ಸಂಸ್ಕೃತದ ಬಗೆಗೆ ವಿಶೇಷ ಒಲವನ್ನೂ, ಪ್ರೀತಿಯನ್ನೂ ಮೂಡಿಸಿತು. ಸಂಸ್ಕೃತಕಾವ್ಯಗಳ, ಕನ್ನಡಕಾವ್ಯಗಳ ವ್ಯಾಖ್ಯಾನದ ಅಭ್ಯಾಸವು ರಾಮಾಯಣ–ಮಹಾಭಾರತಗಳ ಸಾರದ ಬಗೆಗಿನ ಅರಿವನ್ನು ಹೆಚ್ಚಿಸಿ, ಅದರಲ್ಲಿನ ಸಂದೇಶವನ್ನು ತಮ್ಮ ಪ್ರವಚನಗಳ ಮೂಲಕ ಸಾರುವಂತೆ ಮಾಡಿತು. ಕನ್ನಡಸಾಹಿತ್ಯ ಮತ್ತು ತಮಿಳು ಭಾಷೆಯ ಜ್ಞಾನ ಇವೆರೆಡೂ ಅನೇಕ ತಮಿಳು ಕೃತಿಗಳನ್ನು ಕನ್ನಡಸಾಹಿತ್ಯಕ್ಕೆ ಅನುವಾದ ಮಾಡುವಂತೆ ಪ್ರೇರೇಪಿಸಿತು. ಹೀಗೆ ಪ್ರವಚನಾ ಮತ್ತು ಸಾಹಿತ್ಯದ ಸೇವೆಯೇ ಅವರನ್ನು ಭಾರತೀಯ ವಿದ್ಯಾಭವನಕ್ಕೆ ಆಯ್ಕೆಯಾಗುವಂತೆ ಮಾಡಿದುದು. ವಿದ್ಯಾಭವನ ಸೇರಿದನಂತರ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತರಿಸಿತು. ಭಾರತೀಯ ಸಂಸ್ಕೃತಿಯ ಬಗೆಗೆ ಅವರಿಗಿದ್ದ ಜ್ಞಾನ, ಸನಾತನ ಪರಂಪರೆಯ ಬಗೆಗಿದ್ದ ಗೌರವ ಇವೆರಡನ್ನೂ ಸಮಯ ಸಿಕ್ಕಾಗಲೆಲ್ಲ ತುಂಬಿದ ಸಭೆಗಳಲ್ಲಿ ಮೋಡಿ ಮಾಡುವಂತೆ ಹೇಳುತ್ತಿದ್ದ ಮಾತಿನ ಕ್ಷಮತೆ ಹಾಗೂ ಭಾಷಣ ಕಲೆ, ಅವರು ವಿದೇಶದಲ್ಲಿನ ಪ್ರಪ್ರಥಮ ವಿದ್ಯಾಭವನದ ಕೇಂದ್ರದ ರಿಜಿಸ್ಟ್ರಾರ್ ಆಗುವಂತೆ ಮಾಡಿತು. 42ನೇ ವಯಸ್ಸಿನಲ್ಲಿ ಅವರು ಪ್ರಥಮ ಬಾರಿಗೆ ದೇಶಬಿಟ್ಟು ಬ್ರಿಟಿಷ್ ದ್ವೀಪಗಳ ಸಮೂಹದ ರಾಜಧಾನಿ ಲಂಡನ್ನಿಗೆ ಹೋಗಿ, ಕಾರ್ಯಸಾಧನೆಗಾಗಿ ಕಟಿಬದ್ಧರಾಗಿ ನಿಂತರು. ಭಾರತೀಯ ವಿದ್ಯಾಭವನದ ಉದ್ದೇಶವೇ ಭಾರತೀಯ ಸಂಸ್ಕೃತಿಯ ಪ್ರಚಾರ ಮತ್ತು ಪೋಷಣೆ. ಋಗ್ವೇದದ ಮಂತ್ರದ 'ಸದ್ವಿಚಾರಗಳು ಎಲ್ಲ ಕಡೆಯಿಂದಲೂ ಬರಲಿ' ಎನ್ನುವುದನ್ನೇ ವಿದ್ಯಾಭವನದ ಮೂಲಮಂತ್ರವನ್ನಾಗಿಸಿದರು ಅದರ ಸ್ಥಾಪಕ ಶ್ರೀ ಕೆ.ಎಂ. ಮುನ್ಷಿಯವರು. ಮತ್ತೂರರು ಅದನ್ನು ಯಾವ ಕ್ಷಣದಲ್ಲೂ ಮರೆಯದೆ ಅನವರತ ಅದಕ್ಕಾಗಿ ಶ್ರಮಿಸುತ್ತ ಕೆಲಸ ಮಾಡುತ್ತಲೇ ಇದ್ದಾರೆ. ಸದ್ವಿಚಾರಗಳಿಗಾಗಿ ಸದೈವ ತನ್ನನ್ನು ತೆರೆದುಕೊಂಡಿರುವ ಭಾರತೀಯ ವಿದ್ಯಾಭವನದ ಅನೇಕ ಯೋಜನೆಗಳು ಅವರ ಪ್ರಯತ್ನಗಳಿಗೆಲ್ಲ ಬೆನ್ನೆಲುಬಾಗಿ ನಿಂತಿವೆ.

ಹಾಗೆ ಅವರು ಮಾಡಿರುವ ಸಮಾಜ ಮುಖಿ ಸೇವೆಗಳನ್ನು ಹೀಗೆ ಗುರ್ತಿಸಬಹುದು:

೧. ಲಂಡನ್ನಿನಲ್ಲಿದ್ದಾಗ ರಾಖಿ ಹಬ್ಬದ ಆಚರಣೆಯ ಬಗೆಗೆ ಕುತೂಹಲ ತಳೆದು ಥೇಮ್ಸ್ ಟಿವಿಯವರೊಬ್ಬರು ಮತ್ತೂರರಿಂದ ವಿಷಯ ಸಂಗ್ರಹಿಸಿ, ವಿಶೇಷ ಭಾರತೀಯ ಹಬ್ಬಗಳ ಆಚರಣೆಯ ಮೇಲೆಯೇ ಹತ್ತಾರು ಕಂತುಗಳ ಉಪನ್ಯಾಸವನ್ನು ಅವರಿಂದ ಮಾಡಿಸಿದ್ದು.

೨. ಪ್ಯಾರಿಸ್‌ನಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಸನಾತನಧರ್ಮವನ್ನು ಕುರಿತು ನೀಡಿದ ಉಪನ್ಯಾಸವು ಎಲ್ಲರ ಮೆಚ್ಚುಗೆ ಗಳಿಸಿದ್ದು, ಸರ್ವಧರ್ಮ ಸಮನ್ವಯ, ಹಿಂದೂಧರ್ಮ, ಹಾಗೂ ಹಿಂದೂ ಪರಂಪರೆಯ ವಿಷಯದ ಮೇಲೆ ಬಿಬಿಸಿಯಲ್ಲಿ ಸುಮಾರು 104 ಕ್ಕೂ ಹೆಚ್ಚು ಉಪನ್ಯಾಸಗಳನ್ನು ನೀಡುವಂತಾದುದು.

೩. ಬಿಬಿಸಿಯ ವಜ್ರಮಹೋತ್ಸವದ ಸಂದರ್ಭದಲ್ಲಿ, ಸರ್ವಧರ್ಮ ಪ್ರಾರ್ಥನಾ ಕಾರ್ಯಕ್ರಮದಲ್ಲಿ ಮತ್ತೂರರು ಹೇಳಿದ ಋಗ್ವೇದದ ಪ್ರಾರ್ಥನೆ 'ಸಂಘಚ್ಛಧ್ವಂ ಸಂವದಧ್ವಂ'. ಅದು ಬ್ರಿಟನ್ ರಾಣಿ ಎಲಿಜಬೆತ್‌ರ ವಿಶೇಷ ಮೆಚ್ಚುಗೆಗೆ ಪಾತ್ರವಾಯಿತು, ತಾವಾಗಿ ಕರೆ ಕಳುಹಿಸಿ ಆ ಪ್ರಾರ್ಥನೆಯ ಪ್ರತಿಯೊಂದನ್ನು ಮತ್ತೂರರಿಂದ ಕೇಳಿ ತೆಗೆದುಕೊಂಡರು. ಅದು ಲಂಡನ್ನಿನಲ್ಲಿನ ಜನರಲ್ಲಿ ಭಾರತೀಯ ಸಂಸ್ಕೃತಿಯ ಬಗೆಗೆ ಗೌರವವನ್ನೂ ಆಸಕ್ತಿಯನ್ನೂ ಹೆಚ್ಚಿಸಿತು. ಅದರಿಂದಾದ ಸಾಧನೆ ಎಂದರೆ ವಿದ್ಯಾಭವನದ ಸಂಗೀತ, ನೃತ್ಯ, ನಾಟಕ, ಸಂಸ್ಕೃತ, ವೇದದ ವಾರಾಂತ್ಯದ ತರಗತಿಗಳಿಗೆ ವಿದೇಶೀಯ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗುವಂತೆ ಆದದ್ದು.

೪. ವಿದೇಶದಲ್ಲಿ ನೆಲೆಯಾಗಿ ನಿಂತಿದ್ದ ಅನೇಕ ಭಾರತೀಯರಲ್ಲಿ ಸ್ವದೇಶ ಪ್ರೇಮ, ಸಂಸ್ಕೃತಿಯ ಬಗೆಗಿನ ಆದರ ಮೂಡಿಸಿ ಲಂಡನ್ ಭವನದ ಅನೇಕ ವಿಸ್ತರಣಾ ಯೋಜನೆಗಳಿಗೆ ಕೈಬಿಚ್ಚಿ ಅತಿ ಉದಾರವಾಗಿ ಧನಸಹಾಯ ಮಾಡುವಂತೆ ಮಾಡಿದುದು. ಆಂಸ್ಟರ್‌ಡ್ಯಾಂನಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧಿಸಿ ಸನಾತನ ಹಿಂದೂಧರ್ಮದ ಮೇಲೆ ಉಪನ್ಯಾಸ ನೀಡಿದುದು; ಅಮೆರಿಕ, ಯುರೋಪ್, ಹಾಂಗ್‌ಕಾಂಗ್, ದಕ್ಷಿಣ

ಆಫ್ರಿಕಾ, ಸಿಂಗಪೂರ್ ಇನ್ನೂ ಅನೇಕ ಕಡೆಗಳಿಗೆ ವಿಶೇಷ ಆಹ್ವಾನಿತರಾಗಿ ಉಪನ್ಯಾಸಗಳನ್ನು ನೀಡಿದುದು; ಭಾರತೀಯತೆಯ, ಹಿಂದೂಧರ್ಮದ ಬಗೆಗೆ ವಿದೇಶೀಯರು ಅನನ್ಯ ಆಸಕ್ತಿ ತಳೆದು ಭಾರತೀಯ ಹುಡುಗ–ಹುಡುಗಿಯರನ್ನು ವಿವಾಹವಾಗಿರುವುದು; ವಿದೇಶೀಯರೇ ವಿವಾಹವಾಗುವಾಗ ಹಿಂದೂ ಪದ್ಧತಿಯ ರೀತ್ಯ ವಿವಾಹವಾಗುವುದಾಗಿ ಬಯಸಿ ಮತ್ತೂರರನ್ನು ಭೇಟಿ ಮಾಡಿ, ವಿನಂತಿಸಿಕೊಂಡು ಅವರಿಂದಲೇ ವಿಧಿಬದ್ಧ ಆಚರಣೆಗಳ ಅರ್ಥ ತಿಳಿದುಕೊಂಡು ವಿವಾಹವಾಗಿರುವುದು! (ಈವರೆಗೆ ಮತ್ತೂರರು 63ಕ್ಕೂ ಹೆಚ್ಚು ಜೋಡಿಗಳ ವಿವಾಹ ಮಾಡಿಸಿದ್ದಾರೆ).

೫. ಭಾರತದ ಸಾಧುಸಂತರು, ಭಾರತೀಯ ಸಂಸ್ಕೃತಿ, ಕಲೆ, ಮಹಾಕಾವ್ಯಗಳು, ಮಹಾಪುರುಷರು, ಹಬ್ಬಗಳು, ಅಧ್ಯಾತ್ಮ, ಸಂಸ್ಕೃತ, ವೇದ, ಉಪನಿಷತ್ತು – ಈ ಎಲ್ಲ ವಿಷಯಗಳ ಮೇಲೆ ಅವರು ನೀಡಿರುವ ಸಾವಿರಾರು ಉಪನ್ಯಾಸಗಳು ವಿದೇಶೀ ನೆಲದಲ್ಲಿ ವಾಸ ಮಾಡುತ್ತಿರುವ ಸರಿಸುಮಾರು ಭಾರತೀಯರನ್ನೆಲ್ಲ ಸಮಾನ ಭಾವದಿಂದ ಒಂದುಗೂಡುವ ಹಾಗೆ ಮಾಡಿರುವುದು.

೬. ಈ ಹಲವು ವಿಷಯಗಳ ಮೇಲೆ ಸಣ್ಣ ಸಣ್ಣ ಪುಸ್ತಕಗಳನ್ನು ಸರಳವಾಗಿ ಇಂಗ್ಲಿಷಿನಲ್ಲಿ ಬರೆದು ಸಂಸ್ಕೃತಿ ಪ್ರಚಾರಕ್ಕೆ ಹೊಸದೊಂದು ದಾರಿಯಾಗುವ ಹಾಗೆ ಮಾಡಿದುದು. ಬ್ರಿಟನ್ ಸರ್ಕಾರದ ಪ್ರಧಾನಿಗಳು ಜೇಮ್ಸ್‌ಕಲೆಹನ್, ಮಾರ್ಗರೆಟ್ ಥ್ಯಾಚರ್, ರಾಜಮನೆತನದ ಪ್ರತಿನಿಧಿಗಳಾಗಿ ಲಾರ್ಡ್ ಮೌಂಟ್‌ಬ್ಯಾಟನ್, ರಾಜಕುಮಾರ ಚಾರ್ಲ್ಸ್, ಖ್ಯಾತನಾಮರಾದ ಹೆರಾಲ್ಡ್ ಮ್ಯಾಕ್‌ಮಿಲನ್, ರಿಚರ್ಡ್ ಅಟೆನ್‌ಬರೋ, ಲಾರ್ಡ್ ಫೆನ್ನರ್ ಬ್ರಾಕ್ವೆ, ಲಾರ್ಡ್ ಥಾಮ್ಸನ್ ಆಫ್ ಫ್ಲೀಟ್, ಫಿಲಿಪ್ ನೋಯಲ್ ಬೇಕರ್ ಇವರೆಲ್ಲರೂ ವಿದ್ಯಾಭವನದ ಲಂಡನ್ ಕೇಂದ್ರಕ್ಕೆ ಭೇಟಿ ನೀಡಿ ಭಾರತೀಯ ಸಂಸ್ಕೃತಿಗೆ ಗೌರವ ನೀಡಿದುದು. (25 ವರ್ಷಗಳ ಕಾಲ ಲಂಡನ್ನಿನಲ್ಲಿ ಭಾರತೀಯ ಸಂಸ್ಕೃತಿ ಪ್ರಚಾರಕ್ಕೆಂದೇ ವಿದ್ಯಾಭವನನ್ನು ಭದ್ರವಾಗಿ ನಿಲ್ಲುವಂತೆ ಮಾಡಲು ಶ್ರಮಿಸಿದ ಮತ್ತೂರರ ಈ ಭಾರತೀಯ ಸಮಾಜ ಸೇವೆಗೆ ಗೌರವ ಸಲ್ಲಿಸುತ್ತ ಇಂದಿಗೂ ಬ್ರಿಟನ್ ಸರ್ಕಾರ ಅವರಿಗೆ ವಿಶ್ರಾಂತಿವೇತನವನ್ನು ನೀಡುತ್ತಿದೆ!)

೭. ಸ್ವದೇಶಕ್ಕೆ 1995ರಲ್ಲಿ ವಾಪಸಾದ ಮೇಲೂ ಅವರು ಈ ರೀತಿ ಸಾಕಷ್ಟು ಕೆಲಸ ಕಾರ್ಯಗಳಲ್ಲಿ ವ್ಯಸ್ತರಾಗಿದ್ದಾರೆ. ಅವರು ಗಮಕವಿದ್ವಾನ್ ಶ್ರೀ ಹೊಸಹಳ್ಳಿ ಕೇಶಮೂರ್ತಿಯವರ ಗಮಕ ವಾಚನಕ್ಕೆ ವ್ಯಾಖ್ಯಾನಿಸಿರುವ 'ಕುಮಾರವ್ಯಾಸ ಭಾರತ'ದ ಸುಮಾರು 220 ಕ್ಯಾಸೆಟ್ಟುಗಳು ಕರ್ನಾಟಕ ಹಾಗೂ ವಿದೇಶಗಳಲ್ಲಿ ನೆಲೆಸಿರುವ ಕನ್ನಡಿಗರು ಸದೈವ 'ಮಹಾಭಾರತ'ವನ್ನೂ ಅದರ ಅಂತಸ್ಸಾರವನ್ನೂ ಅರಿಯುವ ಹಾಗೆ ಮಾಡಿದೆ. ಉದಯ ಟಿವಿಯಲ್ಲಿ ಅವರು ಮಾಡಿರುವ 'ಮಹಾಭಾರತದ ಪಾತ್ರ ಪರಿಚಯ' ಕೋಟ್ಯಂತರ ಟಿವಿ. ನೋಡುಗರ ಮೆಚ್ಚುಗೆ ಗಳಿಸಿ, ನಮ್ಮ ಮಹಾಕಾವ್ಯಗಳ ಬಗೆಗಿನ ಅರಿವು ಮೂಡಿಸಿದೆ, ಪ್ರೀತಿಹೆಚ್ಚಿಸಿದೆ, ನಿಷ್ಠೆ ನಿರಂತರವಾಗುವ ಹಾಗೆ ಮಾಡುತ್ತಿದೆ.

೮. ತಾವು ಜನರಿಗೆ ಹೇಳಬೇಕೆಂದಿರುವ ಸಕಾರಾತ್ಮಕ ವಿಚಾರಗಳನ್ನು ತಮ್ಮ ಪ್ರವಚನಗಳ ಮೂಲಕ ಬಹಳ ಸುಲಭವಾಗಿ ತಿಳಿಸಿ ಹೇಳುವ ಮತ್ತೂರರು 'ಸತ್ತುಹೋಗಿರುವ ಭಾಷೆ' ಎಂದು ಜನರು ತಿಳಿದಿದ್ದ ಸಂಸ್ಕೃತ ಭಾಷೆಯ ಬಗೆಗೆ ವಿಶೇಷ ಒಲವನ್ನು ಮೂಡಿಸಿದ್ದಾರೆ. ಹೋದೆಡೆಯಲ್ಲೆಲ್ಲಾ ಸಂಸ್ಕೃತಭಾಷೆಯ ಸೊಗಸಿನ ಬಗೆಗೆ ತಮಗೆ ತಿಳಿದಿರುವುದನ್ನು ಹೇಳುತ್ತಾ ಸ್ವತಃ 'ಸಂಸ್ಕೃತ ಭಾಷಾ ವಿದ್ವಾಂಸನಲ್ಲ' ಎಂದು ಹೇಳಿಕೊಂಡರೂ ಸಂಸ್ಕೃತ ಭಾಷಾ ಪ್ರಚಾರಕಾರ್ಯವನ್ನಂತೂ ಶ್ಲಾಘನೀಯವಾಗಿ ಮಾಡುತ್ತಿದ್ದಾರೆ. ಉಪನ್ಯಾಸಗಳಲ್ಲಿ ಸಂಸ್ಕೃತ, ಸುಭಾಷಿತ, ರಾಮಾಯಣ–ಮಹಾಭಾರತ, ವೇದ–ಉಪನಿಷತ್ತುಗಳ ಸಂಸ್ಕೃತ ಶ್ಲೋಕಗಳನ್ನು ಬಹಳ ದಕ್ಷತೆಯಿಂದ ಉದ್ಧರಿಸಿ ಜನರು ತಾವೂ ಅದನ್ನು ಕಲಿಯಬೇಕು ಎಂದುಕೊಳ್ಳುವಂತೆ ಮಾಡುತ್ತಿದ್ದಾರೆ. ಈಗ 'ಪೂರ್ಣ ಭಗವದ್ಗೀತೆ'ಯನ್ನು ಸಾಮಾನ್ಯರೂ ಕಲಿಯಲೆಂದೇ ದಾನಿಯೊಬ್ಬರ ಸಹಾಯದಿಂದ 9 ಸಿಡಿಗಳನ್ನು ಮಾಡಿಸಿದ್ದಾರೆ.

೯. ಭಾರತೀಯ ವಿದ್ಯಾಭವನ ಹಮ್ಮಿಕೊಂಡಿರುವ 'ಶಾಲಾ – ಕಾಲೇಜುಗಳ ಕಾರ್ಯಾರಂಭ ಯೋಜನೆ'ಯಡಿಯಲ್ಲಿ ತೆರೆದಿರುವ ಶಾಲೆ–ಕಾಲೇಜುಗಳಲ್ಲಿ ಯೋಗ, ಪ್ರಾರ್ಥನೆ, ಧ್ಯಾನ, ಸಂಸ್ಕೃತ ಕಲಿಕೆ ಇತ್ಯಾದಿಗಳಿಗೆ ಆದ್ಯತೆ

ಕೊಟ್ಟಿರುವುದು; ಪುಸ್ತಕ ಪ್ರಕಟಣೆಯ ಯೋಜನೆಯಡಿಯಲ್ಲಿ ಪ್ರಕಟಿಸಿರುವ ಪುಸ್ತಕಗಳ ಮಾರಾಟಕ್ಕೆ ಪ್ರೋತ್ಸಾಹವಾಗುವಂತಷ್ಟೇ ಅಲ್ಲದೆ ಇತರ ಪ್ರಕಟಣೆಯ ಪುಸ್ತಕಗಳ ಸಾರ –ವಿಚಾರಗಳ ಬಗೆಗೂ ಕೇಳುಗರ ಮನಮುಟ್ಟುವಂತೆ ಹೇಳಿ, ತಮ್ಮ ಉಪನ್ಯಾಸ – ಪ್ರವಚನಗಳು ನಡೆಯುವೆಡೆಯಲ್ಲೆಲ್ಲ ಅನೇಕ ಪುಸ್ತಕಗಳು ಜನರ ಕೈ – ಮನೆ – ಮನಗಳನ್ನು ತಲುಪುವಂತೆ ಮಾಡಿರುವುದು. ಪುಸ್ತಕವನ್ನು ಕೊಂಡು ಓದುವ ಅಭಿರುಚಿ ಇರುವ ಬಳಗಕ್ಕೆ ಸಾವಿರಾರು ಮಂದಿಯನ್ನು ಹೊಸದಾಗಿ ಸೇರಿಸುತ್ತಿರುವುದು.

೧೦. ಮೊದಲಿನಿಂದಲೂ ವಾಕ್ಚಾತುರ್ಯಕ್ಕೆ ಹೆಸರಾಗಿ, ಈಗೀಗ ಟಿವಿ ಮಾಧ್ಯಮದ ಮೂಲಕವೂ ಬಹಳ ಜನಪ್ರಿಯತೆ ಗಳಿಸಿರುವ ಇವರು ಭವನ ನಿರ್ಮಾಣಕ್ಕೆಂದು ನಿಧಿ ಸಂಗ್ರಹಿಸುವುದರಲ್ಲಿಯೂ ಅಗ್ರಗಣ್ಯರು. ದಾನಿಗಳನ್ನು ಪ್ರೋತ್ಸಾಹಿಸುವುದು, ಸಾಮಾನ್ಯರೂ ದಾನಶೀಲರಾಗುವಂತೆ ಪ್ರೇರೇಪಿಸುವುದು, ನಿಧಿಸಂಗ್ರಹಿಸುವುದು – ಇವುಗಳ ವಿಷಯದಲ್ಲಿ ಅವರಿಗೆ ಅವರೇ ಸಾಟಿ. ಅಷ್ಟೇ ಅಲ್ಲದೆ ಬಡವಿದ್ಯಾರ್ಥಿ – ವಿದ್ಯಾರ್ಥಿನಿಯರಿಗೆ ಉದಾರವಾಗಿ ಧನಸಹಾಯ ನೀಡುವುದೂ ಸಹ ಅವರ ಪ್ರವೃತ್ತಿ. 'ಸಹೃದಯಿಗಳು ಪ್ರಪಂಚದಾದ್ಯಂತ ಇದ್ದಾರೆ. ಸತ್ಕಾರ್ಯಗಳಿಗೆ, ಸಂಸ್ಕೃತಿಪ್ರಚಾರ ಮತ್ತು ಪ್ರಸಾರಕ್ಕೆ ಧನಸಹಾಯ ಮಾಡಲು ಸದೈವ ಅವರ ಕೈ ಮುಂದಾಗಿರುತ್ತದೆ. ಇದು ನನ್ನ ಅನುಭವ' ಎನ್ನುವ ಮತ್ತೂರರು ಲಂಡನ್, ಚಿಕಾಗೋ, ಹಾಂಗ್‌ಕಾಂಗ್‌ಗಳಲ್ಲಿ ಅಲ್ಲದೆ ಕರ್ನಾಟಕದಲ್ಲೇ 8–10 ಭವನದ ಕೇಂದ್ರಗಳನ್ನು ಪ್ರಾರಂಭಿಸಿ ಯಶಸ್ವಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಿದ್ದಾರೆ.

ಹೀಗೆ ಸಮಾಜಮುಖಿ ಸೇವೆಗಳಲ್ಲಿ ತೊಡಗಿಕೊಂಡಿರುವುದನ್ನು ಗುರ್ತಿಸಿಯೇ ಅವರಿಗೆ ಬ್ರಿಟಿಷ್ ರಾಜ್ಯದ ಫೆಲೋ ಆಫ್ ರಾಯಲ್ ಏಷಿಯಾಟಿಕ್ ಸೊಸೈಟಿಯಾಗುವ, ಬ್ರಿಟಿಷ್ ಮಹಾರಾಣಿಯವರ ಬಂದೀಖಾನೆಯ ಸುವ್ಯವಸ್ಥೆ ಸಮಿತಿಯ ಸದಸ್ಯರಾಗುವ, ಬ್ರಿಟಿಷ್ ಪ್ರಾಥಮಿಕ ಶಾಲಾ ಸಮಿತಿಯ ಸದಸ್ಯರಾಗುವ, ಅತ್ಯಂತ ಗೌರವದ ಸ್ಥಾನಗಳು ಅರಸಿ ಬಂದಿರುವುದು.

"ಮಹಾಭಾರತದಲ್ಲಿ ಒಂದು ಶ್ಲೋಕವಿದೆ. ವೇದವ್ಯಾಸರು ಹೀಗೆನ್ನುತ್ತಾರೆ – 'ಜಗತ್ತಿನ ಎಲ್ಲ ಸಮಸ್ಯೆಗಳಿಗೂ (ಪ್ರಾಪಂಚಿಕ ವ್ಯವಹಾರಕ್ಕೆ) ಮಹಾಭಾರತದಲ್ಲಿ ಪರಿಹಾರವಿದೆ. ಇಲ್ಲಿ ನಮಗೆ ಪರಿಹಾರ ಸಿಗದಿದ್ದರೆ ಇನ್ನೆಲ್ಲಿಯೂ ನೀವು ಹುಡುಕುವುದು ವ್ಯರ್ಥ ಪ್ರಯತ್ನ ಅಷ್ಟೆ' ಎಂದು. ಅಂತೆಯೇ ಹದಿನಾರು ಸರ್ವಶ್ರೇಷ್ಠ ಗುಣಗಳನ್ನು ಹೊಂದಿದ್ದ ಮರ್ಯಾದಾ ಪುರುಷೋತ್ತಮ ಶ್ರೀರಾಮನನ್ನು ಸಂಪೂರ್ಣವಾಗಿ ಚಿತ್ರಿಸಿರುವ ರಾಮಾಯಣವು ನಮ್ಮಲ್ಲಿದೆ. ವಿದೇಶೀಯರಿಂದ 'ಧರ್ಮರಾಜನು ಮತ್ತೆ ವಾಪಸಾಗಿದ್ದಾನೆ – ಗಾಂಧೀಜಿಯ ರೂಪದಲ್ಲಿ' ಎಂದೇ ಮೆಚ್ಚುಗೆ ಗಳಿಸಿರುವ ಮಹಾತ್ಮ ಗಾಂಧೀಜಿಯ ವಿಚಾರಧಾರೆ ನಮ್ಮಲ್ಲಿದೆ. ನಮಗೆ ಇನ್ನೇನು ಬೇಕು? ನಮ್ಮ ಸನಾತನ ಸಂಸ್ಕೃತಿ – ಧರ್ಮದಲ್ಲಿ ಇಲ್ಲದಿರುವುದಾದರೂ ಯಾವುದು? ಎಲ್ಲವೂ ಇಲ್ಲಿಯೇ ಇದೆ. ಅದನ್ನು ನಾವು ಕಂಡುಕೊಂಡು, ಅರಿತು – ಮನನ ಮಾಡಿಕೊಂಡು, ಅನುಷ್ಠಾನಕ್ಕೆ ಅಂದರೆ ಆಚರಣೆಗೆ ತಂದು ನಡೆದುಕೊಂಡರೆ ಮಾನವರಾಗಿ ಹುಟ್ಟಿದ್ದು ನಿಜಕ್ಕೂ ಸಾರ್ಥಕವಾಗುತ್ತದೆ. ಆದರಿಂದಲೇ ಸಂಸ್ಕೃತಿ ಪ್ರಸಾರವೇ ನನ್ನ ಎಲ್ಲ ಕೆಲಸಕಾರ್ಯಗಳ ಮೂಲ ಉದ್ದೇಶ" ಎನ್ನುವ ಮತ್ತೂರರ ಸಮಾಜಮುಖಿ ಸೇವೆಗಳು ಅನೇಕರಲ್ಲಿ ಭಾರತೀಯ ಪ್ರಜ್ಞೆಯನ್ನು ಜಾಗೃತಗೊಳಿಸುವಲ್ಲಿ, ಜಾಗೃತವಾಗಿಯೇ ಇಟ್ಟಿರುವಲ್ಲಿ ಸಾಕಷ್ಟು ಕೆಲಸ ಮಾಡಿವೆ ಎಂದರೆ ಅತಿಶಯೋಕ್ತಿ ಅಲ್ಲ. ಅವರ ವೈಯಕ್ತಿಕ ವ್ಯಕ್ತಿತ್ವದ ವೈಶಿಷ್ಟ್ಯದಿಂದ ಈ ಕಾರ್ಯಗಳ ಸಾಧನೆಯಾಗಿದ್ದರೂ, ಅವರ ಉದ್ದೇಶ ಮಾತ್ರ ಭವನದ ಸೇವೆ, ಸಮಾಜ ಸೇವೆಯೇ ಎಂದು ಯಾರಿಗಾದರೂ ತಿಳಿಯುತ್ತದೆ.

–ಸುಮನಾ ವಿಶ್ವನಾಥ್

ಮತ್ತೂರು ಶ್ರೀ ಕೃಷ್ಣಮೂರ್ತಿ ಅವರ ವಂಶವೃಕ್ಷ

ನಾರ್ಶಿಭಟ್ಟರು (ಮುದಲಾಪುರ) (ಜ : ೧೬೮೦)

↓

ಕೇಶವಭಟ್ಟರು (ಜ : ೧೭೧೦)

↓

ಚನ್ನೇದೇವರು (ಜ

↓

- ತಿರುಮಲಾವಧಾನಿಗಳ
- ಕೇಶವಭಟ್ಟರು (ಜ:ಕ್ರಿ.ಶ.೧೭೭೦)
- ಅಯಂಣ ಹೆಬ್ಬಾರು (ಅಪುತ್ರವಂತರು)

ಕೇಶವಭಟ್ಟರು (ಜ:ಕ್ರಿ.ಶ.೧೭೭೦) ↓

- ನಾರ್ಶಿಭಟ್ಟರು (ಜ : ೧೮೦೦
- ನಾರಾಯಣಭಟ್ಟರು
- ಸೀತಾರಾಮಭಟ್ಟರು
- ಚನ್ನಾವಧಾನಿ
- ಎಂಕಣ್ಣಶಾಸ್ತ್ರಿಗಳು
- ರಾಮಾವಧಾನೀ

ನಾರ್ಶಿಭಟ್ಟರು ↓

- ಅನಂತರಾಮಯ್ಯ
- ಕೇಶವಯ್ಯ (ಜ : ೧೮೨೦)+ ನರ್ಸಮ್ಮ

↓

ಸೀತಾರಾಮಯ್ಯ (ಜ: ೧೮೪೦)= ತಿಮ್ಮಮ್ಮ

↓

- ಅನಂತರಾಮ (ಅನಂತಯ್ಯ) +ಸುಬ್ಬಮ್ಮ
  ↓
  ರಾಮಕೃಷ್ಣಯ್ಯ + ನಂಜಮ್ಮ
- ಹಿರಿಯಂಣ (ಕೇಶವಯ್ಯ) (ಜ.೧೮೬೦)
  ↓
  ಜೋಡಿದಾರ್ ಸೀತಾರಾಮಯ್ಯ (ಜ.೧೮೮೦) ಲಕ್ಷ್ಮಿದೇವಮ್ಮ (ಪುಟ್ಟಮ್ಮ)
  (ಮುದಲಾಪುರ)

↓

- ಅನಂತಯ್ಯ + ಜಾನಕಿ, ಜ್ಞಾನಾಂಬ
  - –ಸರೋಜ
  - –ಸೌಮಿತ್ರಿ
  - –ಶಿವಕುಮಾರ
  - –ಸಂಧ್ಯಾ
  - –ಗಾಯಿತ್ರಿ
- ಕೇಶವಮೂರ್ತಿ +ಲಕ್ಷ್ಮಿದೇವಿ
- ದೊರೆಸ್ವಾಮಿ + ಸುಬ್ಬಲಕ್ಷ್ಮಿ
  - –ಕೃಷ್ಣಮೂರ್ತಿ
  - –ಸುಂದರ
  - –ಚಂದ್ರಶೇಖರ
  - –ಶ್ರೀನಿವಾಸ
- ಶಂಕರಮೂರ್ತಿ + ಸೀತಾಲಕ್ಷ್ಮಿ
- ರಾಮಸ್ವಾಮಿ
- ಮತ್ತೂರು ಕೃಷ್ಣಮೂರ್ತಿ+ ರಾಜಲಕ್ಷ್ಮಿ ಜ:೧೯೨೯
  ↓
  ಜಾನಕಿ+ನಂದಕುಮಾರ
  ↓
  - –ರಘುನಂದನ
  - –ಸೀತಾಲಕ್ಷ್ಮಿ

ಸಮಾಜ ಸೇವಾಪರಂಪರೆಯ

ಹನ್ಯಾಳು ಮನೆತನ

ಹಾಸನಜಿಲ್ಲೆಯ ರುದ್ರಪಟ್ಟಣದ ಪಕ್ಕದಲ್ಲಿರುವುದು ಹನ್ಯಾಳು ಗ್ರಾಮ. ರುದ್ರಪಟ್ಟಣವು ಸಂಗೀತಕ್ಕೆ ಪ್ರಸಿದ್ಧವಾಗಿದ್ದರೆ ಹನ್ಯಾಳು ವೇದವಿದ್ಯೆಗೆ ಪ್ರಸಿದ್ಧವಾಗಿತ್ತು. ಸಂಕೇತಿಗಳ ಪ್ರತಿಷ್ಠೆಯ ಪ್ರಾಚೀನ ವೇದವಿದ್ಯಾಕೇಂದ್ರ ಅದು. ಅಲ್ಲಿ ಈಗ ಸಂಕೇತಿಗಳು ನೆಲೆಸಿಲ್ಲ, ಅಲ್ಲಿಂದ ವಲಸೆಹೋಗಿ ಬೇರೆಡೆ ಚೆದುರಿಹೋಗಿರುವ ವಂಶಸ್ಥರು ತಮ್ಮನ್ನು 'ಹನ್ಯಾಳು ಮನೆತನದವರು' (ಊಚಿಟಿಥಿಚಿಟ ಈಚಿಟುಟಥಿ) ಎಂದು ಗುರುತಿಸಿಕೊಂಡು ತಮ್ಮದೇ ಆದ ಒಂದು ಸಂಘವನ್ನು ಕಟ್ಟಿಕೊಂಡಿದ್ದಾರೆ. ಅದರ ಉದ್ದೇಶವಾದರೂ ಈ ವಂಶದ ವಿಕಾಸ; ಜತೆಗೆ ಸಾರ್ವತ್ರಿಕ ಸೇವೆ, ಬಡವರ ಮತ್ತು ದೀನರ ಉದ್ಧಾರ. ಈ ಉದ್ದೇಶವು ಈ ಮನೆತನದಲ್ಲಿ ತಲೆತಲಾಂತರದಿಂದ ಬಂದಿರುವ ಸೇವಾಮನೋಧರ್ಮಕ್ಕೆ ಅನುಗುಣವಾಗಿಯೇ ಇದೆ.

ವಾಸ್ತವವಾಗಿ, ಏಳು ತಲೆಮಾರುಗಳ ಹಿಂದೆ ಅಂದರೆ ಸು. 250 ವರ್ಷಗಳ ಹಿಂದೆ ಚಿಲ್ಕುಂದ ಗ್ರಾಮದಲ್ಲಿದ್ದ ಗಂಗಾಧರ ಎಂಬುವವರು (ಈಗ ತಿಳಿದಿರುವಂತೆ) ಈ ವಂಶದ ಮೂಲಪುರುಷರು. ಅವರ ಕಾಲದಲ್ಲಿ ಆದ ಒಂದು ಸಂಗತಿ ಉಲ್ಲೇಖಾರ್ಹವಾಗಿದೆ. ಅವರಾದರೂ ಈಶ್ವರನ (ಶಿವನ) ಒಕ್ಕಲಿನವರು. ಅವರಿಗೆ ಸಂತಾನಭಾಗ್ಯ ಉಂಟಾಗಿರಲಿಲ್ಲ. ತಿರುಪತಿಯ ವೆಂಕಟೇಶ್ವರನಿಗೆ ಹರಸಿಕೊಂಡರು. ಆ ದೇವರ ದಯೆಯಿಂದ ಒಬ್ಬ ಮಗ ಹುಟ್ಟಿದ. ಅವನಿಗೆ 'ಕೇಶವ' ಎಂದೇ ಹೆಸರಿಟ್ಟರು. ತಿರುಪತಿಯ ದೈವದ ಒಕ್ಕಲೂ ಆದರು.

ಮುಂದೆ, ಆ ಮನೆತನದವರು ಯಾವ ಕಾರಣಕ್ಕೋ ಅರಕಲಗೂಡು ತಾಲ್ಲೂಕಿನ ಬರಗೂರಿಗೆ ವಲಸೆ ಹೋದರು. ಅಲ್ಲಿಂದ ಮುಂದಿನವರು ಹನ್ಯಾಳಿಗೆ ವಲಸೆ ಹೋಗಿ ನೆಲೆಸಿದರು. ಈ ವಲಸೆಗಳು ಯಾವಾಗ ನಡೆದುವು ಎಂಬುದರ ಬಗ್ಗೆಯಾಗಲಿ, ಯಾಕಾಗಿ ನಡೆದುವು ಎಂಬ ಬಗ್ಗೆಯಾಗಲಿ ಯಾವ ದಾಖಲಾತಿಯೂ ಇಲ್ಲ.

ಈ ವಂಶದಲ್ಲಿ ಬಂದ ಸುಬ್ರಹ್ಮಣ್ಯ ಅವಧಾನಿಗಳು ಹನ್ಯಾಳಿನಲ್ಲಿ ಗುರುಕುಲ ನಡೆಸಿಕೊಂಡು, ವ್ಯವಸಾಯ ಮಾಡಿಕೊಂಡು ಜೀವನಮಾಡುತ್ತಿದ್ದರು. ಅವರಿಗೆ ಅಲ್ಲಿ ಬಾಗಾಯಿತು, ಖುಷ್ಕಿ ಎರಡೂ ಇದ್ದವು, ಮನೆಯೂ ಇತ್ತು. ಅವರ ಮಗ ವೆಂಕಟನಾರಾಯಣ. ಅವರು ತಮ್ಮ 25 ನೆಯ ವರ್ಷದಲ್ಲಿ (ಕ್ರಿ.ಶ. 1902–03) ಬಸವಾಪಟ್ಟಣಕ್ಕೆ ವಲಸೆ ಬಂದರು, 'ಹನ್ಯಾಳ್ ಸೋಮಿ' ಎಂದೇ ಖ್ಯಾತರಾದರು.

ವೆಂಕಟನಾರಾಯಣ ಅವರು ಹನ್ಯಾಳು ಗ್ರಾಮವನ್ನು ತೊರೆದುದಕ್ಕೆ ಏನು ಕಾರಣ ಎಂಬುದು ಈಗಲೂ ಆ ವಂಶದವರ ಸ್ಮೃತಿಯಲ್ಲಿದೆ. ಅವರು ಕಷ್ಟಪಟ್ಟು ಬೆಳೆದ ಬೆಳೆ ಕಂಡವರ ಪಾಲಾಗುತ್ತಿತ್ತು, ಅಥವಾ ಯಾರೋ ದುಷ್ಕರ್ಮಿಗಳು ಅದಕ್ಕೆ ಬೆಂಕಿ ಹಾಕುತ್ತಿದ್ದರು. ಹೊಸದಾಗಿ ಬಂದು ನೆಲೆಸಿ ಪ್ರವರ್ಧಮಾನಕ್ಕೆ ಬರುವವರಿಗೆ ಕೆಲವು ವೇಳೆ ಇಂಥ ಉಪಟಳಗಳು ಆಗುವುದುಂಟು. ಅದೇ ಇವರಿಗೂ ಆಗಿತ್ತು. ಅಸೂಯಾಪರರಿಂದ ದೂರ ಹೋಗುವ ನಿರ್ಧಾರವನ್ನೇ ವೆಂಕಟನಾರಾಯಣ ಅವರು ಕೈಗೊಂಡಿದ್ದರು. ಅವರಿಗೆ ಆಗ ಇದ್ದ ಗಂಡು ಮಗುವಿಗೆ (ಹನ್ಯಾಳ್ ವೆಂಕಟಸುಬ್ಬಯ್ಯ) ಕೇವಲ ಎರಡು ವರ್ಷ. ಆ ಮಗುವನ್ನೂ ಎತ್ತಿಕೊಂಡು ಆ ನತದೃಷ್ಟ ತಂದೆ ತಾಯಿಗಳು ಬಸವಾಪಟ್ಟಣಕ್ಕೆ ವಲಸೆ ಹೊರಟರು. ಮನೆಮಾರು ಕಳೆದುಕೊಂಡು ಅನ್ಯಗ್ರಾಮಕ್ಕೆ ಬಂದ ಅವರು ಕೂಲಿ ಮಾಡಿಯೇ ಬದುಕು ಸಾಗಿಸಬೇಕಾಯಿತು. ಕೃಷ್ಣಾವಧಾನಿಗಳೆಂಬ ಪುಣ್ಯಾತ್ಮರೊಬ್ಬರು ಅವರಿಗೆ ಆಶ್ರಯವಿತ್ತರು. ಅವರ ತೋಟದಲ್ಲಿ ಕೂಲಿ ಮಾಡುತ್ತ ವೆಂಕಟನಾರಾಯಣ ಅವರು ಬದುಕು ಸಾಗಿಸತೊಡಗಿದರು.

ಬಡತನವನ್ನು ಅಣಕಿಸುವ ಕ್ರೂರಿಗಳೂ ನಮ್ಮ ನಡುವೆ ಇರುವುದು ಆಶ್ಚರ್ಯದ ಸಂಗತಿ. ಒಂದು ರಾತ್ರಿ ತಲೆಗೆ ಗೋಣಿಚೀಲದ ಗೊಪ್ಪೆ ಕವಚಿಕೊಂಡು ಒಬ್ಬಾತನು ಭಿಕ್ಷೆ ಬೇಡಿಕೊಂಡು ಬಂದ. ಆತನು ನೇರವಾಗಿ ವೆಂಕಟನಾರಾಯಣ ಅವರ ಮನೆ ಬಾಗಿಲಿಗೆ ಬಂದು ನಿಂತ. "ಅಮ್ಮಾ, ತಾಯೀ, ಭಿಕ್ಷಾ" ಎಂದು ವಿಕಾರಸ್ವರದಲ್ಲಿ ಭಿಕ್ಷೆ ಬೇಡಿದ. ಆ ದಿನಗಳಲ್ಲಿ ಬೀದಿಯ ದೀಪಗಳಿರುತ್ತಿರಲಿಲ್ಲ. ಬಂದಾತನು ಯಾರೆಂಬುದು ಯಾರಿಗೂ ತಿಳಿಯುವಂತಿರಲಿಲ್ಲ.

ಮನೆಯ ಯಜಮಾನ ವೆಂಕಟನಾರಾಯಣ ಅವರ ಮನಸ್ಸು ಕರಗಿತು. ಮನೆಯಲ್ಲಿ ಪುಟ್ಟ ಮಗುವಿಗೆಂದು ಮೀಸಲಾಗಿ ಇಟ್ಟಿದ್ದ ಒಂದೇ ಒಂದು ಪುಟ್ಟ ಲೋಟದಲ್ಲಿ ಅನ್ನವಿತ್ತು. ಅದನ್ನು ಆ ಭಿಕ್ಷುಕನಿಗೆ ಹಾಕಲು ಹೋದರು.

ತತ್‌ಕ್ಷಣವೇ ಆ ಭಿಕ್ಷುಕನು ಅಟ್ಟಹಾಸದಿಂದ ಕೇಕೆ ಹಾಕಿ ಕೂಗಿದ, 'ಅಯ್ಯೋ ಸೋಮಿ! ನಾನು ಕಣಯ್ಯ, ನಿನಗೆ ಗೊತ್ತೇ ಆಗಲಿಲ್ಲವೆ?' ಎಂದು. ಆತ ಪರಿಚಿತರೇ ಆಗಿದ್ದರು ಎಂಬುದನ್ನು ಕಂಡು ವೆಂಕಟನಾರಾಯಣ ಅವರು ಬೆಚ್ಚಿದರು; ಅಭಿಮಾನ ಭಂಗವಾಯಿತು ಅವರಿಗೆ.

ವಾಸ್ತವವಾಗಿ ವೆಂಕಟನಾರಾಯಣ ಅವರ ಬಡತನ ಎಷ್ಟಿತ್ತೆಂದರೆ, ಅವರ ಕುಟುಂಬದವರು ಕೂಲಿ ಮಾಡಿ ತಂದುದರಲ್ಲಿ ಒಪ್ಪತ್ತು ಮಾತ್ರ ತಿನ್ನುತ್ತಿದ್ದರು. ಪುಟ್ಟ ಮಗುವಿಗಾಗಿ ರಾತ್ರಿಗೆಂದು ಒಂದು ಬಟ್ಟಲು ಅನ್ನ ಇಟ್ಟಿರುತ್ತಿದ್ದರು. ಇಂಥ ಹೀನಸ್ಥಿತಿ ಅವರದು. ಆದರೂ ಆ ಭಿಕ್ಷುಕನ ಆರ್ತನಾದ ಕೇಳಿ ಮನಕರಗಿ ಮಗುವಿಗಾಗಿ ಇಟ್ಟಿದ್ದ ಅನ್ನವನ್ನೇ ಅವನಿಗೆ ಕೊಡಲು ಹೊರಟಿದ್ದರು. ಇದೀಗ ಇದ್ದಕ್ಕಿದ್ದಂತೆ ಬಂದ ಭಿಕ್ಷುಕನ ಕೇಕೆ ಅವರು ಬೆವರುವಂತೆ ಮಾಡಿತು. ಸಾತ್ವಿಕರಾದರೂ ಅಂಥ ಹೊತ್ತು ಛಲವೊಂದು ಬೆಳೆದೇ ಬೆಳೆಯುತ್ತದೆ. ವೆಂಕಟನಾರಾಯಣ ಅವರು ಅದನ್ನೊಂದು ಸವಾಲಾಗಿ ಸ್ವೀಕರಿಸಿದರು. ಇನ್ನೊಂದು ವರ್ಷದೊಳಗಾಗಿ ಬಡತನದ ಬೆಂಕಿಯಿಂದ ಮೇಲೆದ್ದು ಬಂದು ಸಮಾಜದಲ್ಲಿ ಮರ್ಯಾದೆ ಸಂಪಾದಿಸುತ್ತೇನೆಂದು ದೃಢಸಂಕಲ್ಪ ಮಾಡಿದರು. ಸರಿಯಾಗಿ 900 ವರ್ಷಗಳ ಹಿಂದೆ ವೀರವನಿತೆ ಶ್ರೀನಾಚಾರಮ್ಮನೂ ಇಂಥದೇ ಸಂಕಲ್ಪ ಮಾಡಿದ್ದರೆಂಬುದನ್ನು ನೆನೆದರೆ ಇತಿಹಾಸವು ಮರುಕಳಿಸುವ ರೀತಿಯು ಬೆರಗನ್ನುಂಟುಮಾಡುತ್ತದೆ.

ಮಾರನೆಯದಿನ ವೆಂಕಟನಾರಾಯಣ ಅವರು ತೋಟದಲ್ಲಿ ಕೆಲಸಮಾಡುವಾಗ ಇದೇ ಚಿಂತೆಯಲ್ಲಿದ್ದರು. ತಮ್ಮ ಸ್ನೇಹಿತರೇ ಅಪಹಾಸ್ಯಮಾಡುವಂಥ ಹೀನ ಬಡತನ ತಮ್ಮನ್ನು ಆವರಿಸಿರುವುದಕ್ಕೆ ಅವರು ಹೇಸುತ್ತಿದ್ದರು. ಮುಂದಿನ ದಾರಿಗಾಗಿ ಹುಡುಕುತ್ತಿದ್ದರು. ಅವರು ಹೀಗೆ ಆಘಾತಗೊಂಡಿರುವುದು ತೋಟದ ಮಾಲೀಕರಾದ ಕೃಷ್ಣಾವಧಾನಿಗಳಿಗೆ ಕಂಡಿತು. ಕಾರಣವನ್ನು ತಿಳಿಸಲು ಕೇಳಿದರು. ಅಂಥ ದುಃಖದಲ್ಲಿಯೂ ವೆಂಕಟನಾರಾಯಣ ಅವರು ಸಂಯಮದಿಂದಲೇ ಇದ್ದರು. ತಮಗೆ ತನ್ನ ಪರಿಚಿತರೇ ಮಾಡಿದ ಅಪಮಾನದ ಬಗೆಗೆ ತಿಳಿಸಲಿಲ್ಲ. ಬದಲಿಗೆ, ತನ್ನ ಕಾಲಿನ ಮೇಲೆ ತಾನು ನಿಲ್ಲುವಂತಾಗಲು ಕೊಂಚ ಸಾಲಬೇಕೆಂದು ಕೇಳಿಕೊಂಡರು, ಕೃಷ್ಣಾವಧಾನಿಗಳು ಉದಾರವಾಗಿಯೇ ಸಾಲವನ್ನು ಕೊಟ್ಟರು.

ಆ ಹಣದಲ್ಲಿ ವೆಂಕಟನಾರಾಯಣ ಅವರು ಸಮೀಪದ ತಟ್ಟವಾಳು ಗ್ರಾಮದ ಆಗ್ರದಲ್ಲಿ ಒಂದು ಅಡಕೆ ತೋಟವನ್ನು ಖರೀದಿಸಿದರು. ಎಡೆಬಿಡದೆ ದುಡಿದು ಅದನ್ನು ಅಭಿವೃದ್ಧಿಪಡಿಸಿದರು. ಆರ್ಥಿಕವಾಗಿ ಸುಧಾರಣೆ ಕಂಡರು. ಸಮಾಜವು ಗೌರವಿಸತೊಡಗಿತು. ವೆಂಕಟನಾರಾಯಣರು, ತನ್ನನ್ನು ಪಾತಾಳದಿಂದ ಮೇಲೆತ್ತಿದ ಆ ಗೆಳೆಯನಿಗೆ ಧನ್ಯವಾದಗಳನ್ನರ್ಪಿಸಿದರು; ಆತನು ಇವರಲ್ಲಿ ಕ್ಷಮೆ ಯಾಚಿಸಿದರು. ಎಂಥ ಸನ್ನಿವೇಶವನ್ನೂ ತಮ್ಮ ಉದ್ಧಾರಕ್ಕೆ ಬಳಸಿಕೊಳ್ಳಬಹುದೆಂಬ ತತ್ತ್ವಕ್ಕೆ ಆ ಘಟನೆ ಸಾಕ್ಷಿಯಾಯಿತು.

ವೆಂಕಟನಾರಾಯಣ ಅವರ ಸಂಸಾರ ಬೆಳೆಯಿತು. ಒಟ್ಟು ನಾಲ್ಕು ಗಂಡು ಮಕ್ಕಳೂ, ಒಂದು ಹೆಣ್ಣು ಮಗುವೂ ಅವರ ಕುಟುಂಬದ ಸದಸ್ಯರಾದರು. ವೆಂಕಟಸುಬ್ಬಯ್ಯ, ಚಿನ್ನಪ್ಪ, ಅಮ್ಮಣ್ಣಮ್ಮ, ರಾಮಕೃಷ್ಣ, ನಾಗಪ್ಪ – ಇವು ಅನುಕ್ರಮವಾಗಿ ಅವರ ಹೆಸರುಗಳು.

ರಾಮಕೃಷ್ಣ ಅವರಿಗೆ ಆಗ 18 ವರ್ಷ. ಕಟ್ಟೆಪುರದ ಕನ್ಯೆಯೊಂದಿಗೆ ಅವರ ವಿವಾಹವು ನಿಷ್ಕರ್ಷೆಯಾಗಿತ್ತು. ಆದರೆ ವಿಧಿವಿಪರ್ಯಾಸ, ಅವರು ವಿವಾಹಕ್ಕೆ ಮುನ್ನವೇ ಪ್ಲೇಗಿಗೆ ತುತ್ತಾದರು.

ವೆಂಕಟನಾರಾಯಣ ಅವರ ಜೀವನಕ್ಕೆ ಆಧಾರವಾಗಿ ಅವರ ತೋಟವು ಅಡಕೆ, ಬಾಳೆ, ವೀಳೆಯಿಂದ ತುಂಬಿತ್ತು. ನಸುಕಿನಲ್ಲೇ ತೋಟಕ್ಕೆ ಹೋಗಿ ನೀರು ಹಾಕಿ ತೋಟದ ವ್ಯವಸಾಯ ಮಾಡುತ್ತಿದ್ದರು. ದೂರದೂರದ ಸಂತೆಗಳಿಗೆ ಎಲೆಪಿಂಡಿಗಳನ್ನು ಹೊತ್ತುಕೊಂಡು ಹೋಗಿ ಮಾರಿ ಜೀವನ ಸಾಗಿಸುತ್ತಿದ್ದರು.

ಬಸವಾಪಟ್ಟಣದಲ್ಲಿ ಮೊದಲಿನಿಂದಲೂ ಪ್ರತಿ ಶುಕ್ರವಾರ ಸಂತೆ ನಡೆದುಕೊಂಡು ಬರುತ್ತಿದೆ. ಬೇಸಗೆಯಲ್ಲಿ ಜನರು ನೆರಳಿನಲ್ಲಿ ಕೂರಲು ಅನುಕೂಲವಾಗುವಂತೆ ವೆಂಕಟನಾರಾಯಣ ಅವರು ಅಲ್ಲಿ ಮರಗಳನ್ನು ಬೆಳೆಸಿದರು. ಕಾವೇರಿ ನದಿಯಿಂದ ಅಡ್ಡೆಯಲ್ಲಿ ಕುಡಿಯುವ ನೀರನ್ನು ಹೊತ್ತು ತಂದು ಸಂತೆಗೆ ಬಂದ ನೂರಾರು ಜನಕ್ಕೆ ದಾಹ ಆರಿಸುತ್ತಿದ್ದರು. ನೀರುಮಜ್ಜಿಗೆ ಹಂಚುತ್ತಿದ್ದರು. ಇತರ ಅಗತ್ಯಗಳಿಗಾಗಿ ಪಕ್ಕದಲ್ಲಿದ್ದ ಬಾವಿಯಿಂದ ನೀರು ಸೇದಿಕೊಡುತ್ತಿದ್ದರು. ಅವರನ್ನು 'ಹನ್ಯಾಳ್ ಸೋಮಿ' ಎಂದು ಜನರು ಪ್ರೀತಿ ಗೌರವಗಳಿಂದ ಕೊಂಡಾಡುತ್ತಿದ್ದರು. ಬಸವಾಪಟ್ಟಣದ ಕಾವೇರಿತಟದಲ್ಲಿನ ಸಣ್ಣ ಮಂಟಪವು 'ಹನ್ಯಾಳ್ ಸೋಮಿ ಜಪದ ಮಂಟಪ' ಎಂದೇ ಖ್ಯಾತವಾಗಿದೆ. ಆ ಮಂಟಪವನ್ನು ಕಟ್ಟಿಸಿದ್ದರಿಂದ ಅವರಿಗೆ ಆ ಹೆಸರು ಬಂತೋ, ಅಲ್ಲಿ ಕೂತು ಜಪಾನುಷ್ಠಾನ ಮಾಡುತ್ತಿದ್ದ ರೀತಿಯ ಅತಿಶಯತೆಗಾಗಿ ಹಾಗೆ ಅದು ಹೆಸರಾಯಿತೋ ತಿಳಿದುಬಂದಿಲ್ಲ. ಅದೇ ತಟದಲ್ಲಿರುವ ದೊಡ್ಡ ಮಂಟಪವನ್ನು ಪ್ರಸಿದ್ಧ ವೈದ್ಯ ಡಾ.ಬಿ.ಕೆ. ನಾರಾಯಣರಾಯರ ಸ್ಮರಣಾರ್ಥ ಕಟ್ಟಲಾಗಿದೆ. ಸಂಕೇತಿಗಳಲ್ಲಿ ಇಂಥದೊಂದು ಪರಂಪರೆ ಇತ್ತು ಎಂಬುದನ್ನು ಗಮನಿಸಿದರೆ ಸಣ್ಣಮಂಟಪವನ್ನು ಹನ್ಯಾಳ್ ಸೋಮಿಯವರೇ ಕಟ್ಟಿಸಿದ್ದಿರಬಹುದು ಎನಿಸುತ್ತದೆ. ಸೋಮಿಯವರ ಧರ್ಮಬುದ್ಧಿ ಮಿತಿಯಿಲ್ಲದ್ದಾಗಿತ್ತು. ಬಸವಾಪಟ್ಟಣದಿಂದ ಅಗ್ರಹಾರಕ್ಕೆ ಹೋಗುವ ದಾರಿಯಲ್ಲಿ ಬೋರೆಯ ಮೇಲೆ ಒಂದು ಕಟ್ಟೆಯನ್ನು ಕಟ್ಟಿಸಿದರು. ಅದರಲ್ಲಿ ಯಾವಾಗಲೂ ಯಥೇಚ್ಛವಾಗಿ ನೀರು ತುಂಬಿರುತ್ತಿತ್ತು. ದನಗಳು ಕುಡಿಯಲು ಅದರಿಂದಾದ ಪ್ರಯೋಜನ ಅಷ್ಟಿಷ್ಟಲ್ಲ. ಅದಕ್ಕೆ 'ಹನ್ಯಾಳ್ ಸೋಮಿ ಕೊಳ' ಎಂದೇ ಹೆಸರು ಬಂದಿದೆ. ಅದು ಈಗಲೂ ಇದೆ.

ಸೋಮಿ ಅವರ ಪತ್ನಿ ರಾಮಕ್ಕಮ್ಮನವರು ದೊಡ್ಡಮಗ್ಗೆಯ 'ಒಂಟಿಮನೆ' ಕುಟುಂಬಕ್ಕೆ ಸೇರಿದವರು. ಈಗ ಖ್ಯಾತರಾಗಿರುವ ವೈದ್ಯ ಡಾ. ಫಣೀಶ್ ಈ ಮನೆತನಕ್ಕೆ ಸೇರಿದವರು.

ನಸುಕಿನಿಂದಲೇ ತೋಟದಲ್ಲಿ ದುಡಿಮೆ, ನದಿಸ್ನಾನ, ಜಪ, ಅಪರಾಹ್ನದ ಹೊತ್ತಿಗೆ ಒಂದೇ ಊಟ – ಇದು ಸೋಮಿ ಅವರ ದಿನಚರಿಯಾಗಿತ್ತು. ದೈನಂದಿನ ಕರ್ಮಗಳು, ದೇವತಾರ್ಚನೆ, ಶ್ರಾದ್ಧ ಮೊದಲಾದ ಸಂದರ್ಭಕ್ಕೆ ಬೇಕಾದ ಮಂತ್ರಗಳು ಅವರಿಗೆ ರೂಢಿಯಾಗಿದ್ದವು. ಕಾಲಕ್ರಮದಲ್ಲಿ ದೊಡ್ಡದಾದ ಮನೆಯನ್ನು ಕಟ್ಟಿದರು. ಅವರ ಮಕ್ಕಳೆಲ್ಲರೂ ತಂದೆಯವರಂತೆಯೇ ಧರ್ಮಮಾರ್ಗದಲ್ಲಿ ಬೆಳೆದರು. ಸಂತೆಯ ಜನರಿಗೆ ಕುಡಿಯುವ ನೀರು ಒದಗಿಸುವುದೇ ಮೊದಲಾದ ಕಾಯಕವನ್ನು ಮುಂದುವರಿಸಿದರು. ಪ್ರತಿನಿತ್ಯವೂ ಊಟಕ್ಕೆ ಮೊದಲು ಅಕ್ಕಿನುಚ್ಚನ್ನು ಇರುವೆ ಗೂಡುಗಳಿಗೆ ಊಡಿಸಿ ಬರುತ್ತಿದ್ದ ಸೋಮಿ ಅವರ ನಡೆಯೇ ಅವರಿಗೆ ಆದರ್ಶವಾಗಿತ್ತು.

ಸೋಮಿ ಅವರ ಜೇಷ್ಠಪುತ್ರ ಹನ್ಯಾಳ್ ವೆಂಕಟಸುಬ್ಬಯ್ಯನವರು(ಅಯ್ಯು). ಸೋಮಿ ಅವರು ಮನೆಕಟ್ಟುವಾಗ ಇವರೂ ಜತೆಜತೆಗೆ ದುಡಿದರು. ಯಾವುದೋ ಸೋಂಕಿನಿಂದ ಅವರ ಕಾಲು ಊನವಾಯಿತು. ಆದರೂ ದುಡಿಮೆಯಲ್ಲಿ ಹಿಂದೆ ಬೀಳಲಿಲ್ಲ. ದೊನ್ನೆ ಕಟ್ಟುವುದು, ಯಜ್ಞೋಪವೀತ ಮಾಡುವುದು ಅವರ ಹವ್ಯಾಸವಾಗಿತ್ತು. ತೋಟವನ್ನೂ ಚೆನ್ನಾಗಿ ಬೆಳೆಸಿದರು. ತಕ್ಕಮಟ್ಟಿಗೆ ವೇದಾಭ್ಯಾಸವನ್ನೂ ಮಾಡಿ ಹನ್ಯಾಳ್ ಪರಂಪರೆಯನ್ನು ಮುಂದುವರಿಸಿದ್ದರು.

ಸಮಾಜವು ಯಾವುದನ್ನು ಹೇಗೆ ವ್ಯಾಖ್ಯಾನಿಸುತ್ತದೆ ಎನ್ನುವುದೂ ಒಂದು ಸೋಜಿಗದ ಸಂಗತಿಯೇ ಸರಿ. ಸೋಮಿ ಅವರು ಭಾರಿ ಮನೆಯನ್ನು ಕಟ್ಟಿಕೊಂಡು, ದನಕರುಗಳನ್ನು ಇಟ್ಟುಕೊಂಡು ನೆಮ್ಮದಿಯಿಂದ ಇರತೊಡಗಿದರೇನೋ ಹೌದು. ಆ ನೆಮ್ಮದಿಗೆ ಹಿನ್ನೆಲೆಯಾಗಿ ಅವರು ತೋಟದಲ್ಲಿ ಮಾಡುತ್ತಿದ್ದ ಕಠಿಣ ಗೆಯ್ಮೆ ಇತ್ತು. ಆದರೆ, ಜನರು, 'ಮನೆಯ ತಳಪಾಯ ತೆಗೆಯುವಾಗ ದೊರೆತ ಹಣದ ಕೊಪ್ಪರಿಗೆಯೇ ಅವರ ಇಂದಿನ ಸುಸ್ಥಿತಿಗೆ ಕಾರಣ' ಎಂದು ತರ್ಕಿಸಿದರು. ವೆಂಕಟಸುಬ್ಬಯ್ಯನವರ ಕಾಲು ಊನವಾದುದಕ್ಕೂ ಅದೇ ಕಾರಣ ಎಂದು ಕಥೆ ಕಟ್ಟಿದರು.

ವೆಂಕಟಸುಬ್ಬಯ್ಯನವರ ಮೊದಲ ಪತ್ನಿ ವೆಂಕಟಲಕ್ಷ್ಮಮ್ಮನವರು, ಅವರು ಸಂತಾನವಿಲ್ಲದೆ ಜ್ವರಕ್ಕೆ ತುತ್ತಾದರು. ಕೌಶಿಕದ ಗೌರಮ್ಮನವರು ಎರಡನೆಯ ಪತ್ನಿ; ಸುಬ್ಬರಾಮಯ್ಯ, ರಾಮಕೃಷ್ಣಯ್ಯ ಎಂಬ ಮಕ್ಕಳನ್ನು ಹೆತ್ತು ಪ್ಲೇಗಿಗೆ ಗುರಿಯಾದರು. ಸೋಮನಹಳ್ಳಿಯ ನಾಗಲಕ್ಷ್ಮಮ್ಮನವರು ಮೂರನೆಯ ಪತ್ನಿ; ಸುಬ್ಬಲಕ್ಷ್ಮಿ, ರುಕ್ಮಿಣಿ, ವೆಂಕಟನಾರಾಯಣ,

ರಾಮಚಂದ್ರ ಅವರಿಗೆ ಜನಿಸಿದ ಮಕ್ಕಳು; ರಾಮಚಂದ್ರನು ಮೂರು ವರ್ಷದವನಾಗಿದ್ದಾಗಲೇ ಮೃತನಾಗಿಬಿಟ್ಟ.

1990ರಲ್ಲಿ ವೆಂಕಟಸುಬ್ಬಯ್ಯನವರು ಸ್ವರ್ಗಸ್ಥರಾದರು. ಅವರು ಕೊನೆಯುಸಿರೆಳೆದ ಘಳಿಗೆಯಲ್ಲಿ ವಿಶೇಷ ಸಂಗತಿ ನಡೆಯಿತು. ಅವರು ಮೃತರಾದದ್ದು ಮಧ್ಯಾಹ್ನ 12 ಘಂಟೆಯ ಹೊತ್ತಿನಲ್ಲಿ. ಆಗ ಅವರ ಮಗ ಕಿರಿಯ ವೆಂಕಟನಾರಾಯಣ ದೂರದ ಹೈದರಾಬಾದಿನಲ್ಲಿದ್ದರು. ಅವರು ಬ್ಯಾಂಕ್ ಉದ್ಯೋಗಿ. ಬ್ಯಾಂಕಿನ ವ್ಯವಹಾರ ನಡೆಯುತ್ತಿದ್ದ ಹೊತ್ತು. ವೆಂಕಟನಾರಾಯಣ ಅವರು ತಲೆತಗ್ಗಿಸಿಕೊಂಡು ಗಂಭೀರವಾಗಿ ತಮ್ಮ ಕೆಲಸದಲ್ಲಿ ಮಗ್ನರಾಗಿದ್ದರು. ಯಾರೋ ಹೆಸರು ಹಿಡಿದು ಕೂಗಿದಹಾಗಾಯಿತು. 'ಯಾರೋ' ಅಲ್ಲ, ಸ್ವಂತ ತಂದೆ. ವೆಂಕಟನಾರಾಯಣ ತಲೆ ಎತ್ತಿದರು. ಅವರ ತಂದೆ ಅಲ್ಲಿ ಬಂದು ಕೂಗುವ ಸಾಧ್ಯತೆ ಎಳ್ಳಷ್ಟೂ ಇರಲಿಲ್ಲ. ಆಶ್ಚರ್ಯಾಘಾತದಿಂದ ನೋಡಿದರು. ನಿಜಕ್ಕೂ, ಮುಚ್ಚಿದ ಗಾಜಿನ ಬಾಗಿಲನ್ನು ತಳ್ಳಿಕೊಂಡು ಕೋಲೂರಿಕೊಂಡು ಅವರ ತಂದೆ ವೆಂಕಟಸುಬ್ಬಯ್ಯನವರೇ ಬಂದಿದ್ದರು. ಅವರು ಬರುವ ಸಾಧ್ಯತೆಯಾಗಲಿ, ಸಂದರ್ಭವಾಗಲಿ, ನಿರೀಕ್ಷೆಯಾಗಲಿ, ಲವಲೇಶವೂ ಇರಲಿಲ್ಲ. ವೆಂಕಟನಾರಾಯಣ ಅವರಿಗೆ ತಮ್ಮ ಮುಂದೆ ಕಾಣುತ್ತಿರುವ ದೃಶ್ಯವು ಅನಿಷ್ಟವನ್ನು ಸೂಚಿಸುತ್ತಿದೆ ಎನಿಸಿತು. ಅದನ್ನು ನಿವಾರಿಸುವಂತೆ ತಮ್ಮ ಕೈನಿಂದ ಆ ದೃಶ್ಯವನ್ನು ಒತ್ತರಿಸಿದರು. ತತ್‌ಕ್ಷಣ ಆ ದೃಶ್ಯವೂ ಮಾಯವಾಯಿತು. ಮರುಕ್ಷಣವೇ ತಂದೆಯವರ ನಿಧನದ ವಾರ್ತೆ ಹೊತ್ತ ತಂತಿ ಸಂದೇಶ ಬಂತು.

ಹಿರಿಯ ವೆಂಕಟನಾರಾಯಣ (ಸೋಮಿ) ಅವರ ಎರಡನೆಯ ಮಗ ಶ್ರೀನಿವಾಸಯ್ಯನವರು. ಗಂಗಮ್ಮನವರು ಶ್ರೀನಿವಾಸಯ್ಯನವರ ಪತ್ನಿ. ಅವರು ಬಸವಾಪಟ್ಟಣದಲ್ಲಿ ಹನ್ಯಾಳ್ ಸೋಮಿಯವರಿಗೆ ಆಶ್ರಯಕೊಟ್ಟಿದ್ದ ಕೃಷ್ಣಾವಧಾನಿಗಳ ಮಗಳು. ವಿಶೇಷವೆಂದರೆ ಸೋಮಿಯವರು ಕೃಷ್ಣಾವಧಾನಿಗಳಿಂದ ಮಂತ್ರಗಳನ್ನೂ ಕಲಿತಿದ್ದರು. ಗಂಗಮ್ಮನವರು ಗಂಡಿಸೀರೆ ಉಡುವ ಕೊನೆಯ ಹಂತದ ಸಂಕೇತಿ ಸ್ತ್ರೀಯರ ಖ್ಯಾತ ಪ್ರತಿನಿಧಿ ಆಗಿದ್ದರು.

ಶ್ರೀನಿವಾಸಯ್ಯನವರು ಕೂಡ ತಮ್ಮ ವಂಶಕ್ಕೆ ಅನುಗುಣವಾಗಿ ಧಾರ್ಮಿಕ ಪ್ರವೃತ್ತಿಯವರೇ ಆಗಿದ್ದರು. ಆದರೂ ತಮ್ಮ ಮಕ್ಕಳ (ವೆಂಕಟಕೃಷ್ಣಯ್ಯ, ಸತ್ಯನಾರಾಯಣ, ಸುಬ್ರಹ್ಮಣ್ಯ, ಹಿರಿಯಣ್ಣ, ಭಾಗ್ಯಲಕ್ಷ್ಮಿ) ವಿದ್ಯಾಭ್ಯಾಸಕ್ಕೆಂದೇ ಮೈಸೂರಿನಲ್ಲಿ (1947ರಲ್ಲಿ) ಮನೆ ಮಾಡಿದರು, ಆ ಮೂಲಕ ಆಧುನಿಕ ವಿದ್ಯಾಭ್ಯಾಸದ ಆವಶ್ಯಕತೆಯನ್ನು ಮನಗಂಡ ಸಂಕೇತಿ ಸಮುದಾಯದ ಪ್ರಾರಂಭಿಕ ಸಾಹಸಿಗಳಲ್ಲಿ ಒಬ್ಬರೆನಿಸಿದರು. ಮೈಸೂರಿನಲ್ಲಿ ಜೀವನಕ್ಕಾಗಿ ಅಂಗಡಿಯನ್ನೇನೋ ಇಟ್ಟರು. ಆದರೆ ಮನೆಯ ಮುಂದೆ ನೀರಿನ ತೊಟ್ಟಿಯೊಂದನ್ನು ಕಟ್ಟಿಸಿ ದನಕರುಗಳಿಗೂ ಪಕ್ಷಿಗಳಿಗೂ ದಾರಿಹೋಕರಿಗೂ ನೀರನ್ನೊದಗಿಸಿದರು. ಅವರದು ನಗರದಲ್ಲಿ ಆ ಮಾದರಿಯ ಮೊದಲ ಪ್ರಯತ್ನವಾಗಿತ್ತು. ಆ ತೊಟ್ಟಿಯ ಕಾರಣದಿಂದಲೇ ನಗರದ ಆ ಭಾಗದಲ್ಲಿ ಅವರು ಪ್ರಸಿದ್ಧರಾಗಿದ್ದರು.

ಮಕ್ಕಳ ವಿದ್ಯಾಭ್ಯಾಸ ಮುಗಿಯುತ್ತಲೇ ಹಳ್ಳಿಯನ್ನೂ ತಮ್ಮ ಜಮೀನನ್ನೂ ನೆನೆದು ಬಸವಾಪಟ್ಟಣಕ್ಕೆ ಹಿಂದಿರುಗಿದರು (1960). ಅವರ ವ್ಯವಸಾಯದ ರೀತಿಯು ದುಡಿಮೆಯ ಪ್ರೀತಿಯ ದ್ಯೋತಕವಾಗಿತ್ತು. ರಾಸುಗಳನ್ನು ಉಪಚರಿಸಿ ಅವನ್ನು ಸಾಕುತ್ತಿದ್ದ ರೀತಿಯು 'ಗೋಸೇವೆ' ಎನ್ನುವ ಮಾತಿಗೆ ವ್ಯಾಖ್ಯಾನದಂತಿತ್ತು. ಬ್ರಾಹ್ಮಣ್ಯಕ್ಕೆ ಕುಂದುಬರಬಾರದೆಂಬ ಘನೋದ್ದೇಶದಿಂದ ಶ್ರಾದ್ಧ ಕರ್ಮಗಳಲ್ಲಿ ವೃದ್ಧಾಪ್ಯದಲ್ಲೂ ಭಾಗವಹಿಸುತ್ತಿದ್ದ ಅವರ ರೀತಿಯು ಒಂದು ಆದರ್ಶವಾಗಿತ್ತು. ತಮ್ಮ ತೊಂಬತ್ತಾರರ ವೃದ್ಧಾಪ್ಯದಲ್ಲಿ ಅವರು ನಿಧನರಾಗುವವರೆಗೂ ಸಣ್ಣ ಜ್ವರವನ್ನೂ ಕಾಣದಂತೆ ಬದುಕಿದರು; 'ದುಡಿಮೆಮಾಡುವಾತನಿಗೆ ಜ್ವರ ಬರೋಣ ಎಂದರೇನು?' ಎಂದು ಅವರು ಪ್ರಶ್ನಿಸುತ್ತಿದ್ದ ರೀತಿಯು ದುಡಿಮೆಯ ಬಗೆಗಿನ ಗೌರವದ ಮಾತಾಗಿರುತ್ತಿತ್ತು.

(ಹಿರಿಯ) ವೆಂಕಟನಾರಾಯಣ (ಸೋಮಿ) ಅವರ ಮಗಳು 'ಅಮ್ಮಣ್ಣಮ್ಮ' ಎಂದೇ ಪರಿಚಿತರಾಗಿದ್ದ ಚನ್ನಮ್ಮನವರು. ಅವರ ಪತಿ ಒಡ್ರಳ್ಳಿಯ 'ಹೋರಿ' ಚಿನ್ನಪ್ಪನವರು. ಅವರ ಹೆಸರಿನ ಹಿಂದಿನ ವಿಶೇಷಣವೇ ಹೇಳುವಂತೆ ಅವರು ಪಶುಪಾಲನೆಯಲ್ಲಿ ಪರಿಣತರಾಗಿದ್ದರು. ಚೆನ್ನಾಗಿ ಉಪಚಾರಮಾಡಿ ಹೋರಿಗಳನ್ನು ಸಾಕುತ್ತಿದ್ದರು. ಪತಿಯು ಗತಿಸಿದ ಮೇಲೆ ಅಮ್ಮಣ್ಣಮ್ಮನವರು ವಿಧವೆಯಾಗಿಯೇ ದೀರ್ಘಕಾಲವನ್ನು ತಳ್ಳಿದರು. ಅವರ ಪತಿಯು ಪಶುಪಾಲನೆಯಲ್ಲಿ ವಿಶೇಷರೆನಿಸಿದ್ದರೆ, ಅಳಿಯ ವಿಶ್ವೇಶ್ವರಾವಧಾನಿಗಳು ವೈದಿಕರಾಗಿದ್ದರು. ಸಾಧುಸ್ವಭಾವಕ್ಕೆ ಅವರು

ಹೆಸರಾಗಿದ್ದರು. ಸ್ವತಃ ಅಮ್ಮಣ್ಣಮ್ಮನವರಂತೂ ಹಾಡಿನ ಕಣಜವೇ ಆಗಿದ್ದರು. ಅವರಿಗೆ ಅಕ್ಷರಶಃ ಸಹಸ್ರಾರು ಹಸೆಹಾಡುಗಳು ಬರುತ್ತಿದ್ದವು. ಎಲ್ಲ ಸಂದರ್ಭಗಳಿಗೂ ಅವರು ಪ್ರತಿಕ್ರಿಯಿಸುತ್ತಿದ್ದುದು ಹಾಡುಗಳ ಮೂಲಕವೇ. ಅವು ಮೆಚ್ಚುಗೆ, ಟೀಕೆ, ವಿಮರ್ಶೆ, ಎಚ್ಚರಿಕೆ, ಎಲ್ಲಕ್ಕೂ ಬಹು ಸೂಕ್ತವಾಗಿ ಅನ್ವಯವಾಗಿ ಬಳಕೆಯಾಗುತ್ತಿದ್ದವು.

ಹಿರಿಯ ವೆಂಕಟನಾರಾಯಣ ಅವರ ಕೊನೆಯ ಮಗ ನಾಗಪ್ಪನವರು (ಜ. 1919). ಅವರ ಪತ್ನಿ ಬಸವಾಪಟ್ಟಣದ ಅಣ್ಣಪ್ಪಶಾಸ್ತ್ರಿಗಳ ಮಗಳು ನಾಗರತ್ನಮ್ಮನವರು. ವಿವಾಹವಾದಾಗ ನಾಗಪ್ಪನವರ ವಯಸ್ಸು ಬರೀ 15. ಅವರೂ ಸೇರಿದಂತೆ ಅವರ ಮುಂದಿನ ಸಂತತಿಯಲ್ಲಿ ಬಹುಪಾಲು ಜನರಿಗೆ ಆರು ಬೆರಳಿರುವುದು ಒಂದು ವಿಶೇಷ. ಅವರಾದರೂ 'ಆರು ಬೆರಳು ನಾಗಪ್ಪನವರು' ಎಂದೇ ಪ್ರಸಿದ್ಧರು. 89 ವಸಂತಗಳನ್ನು ಕಂಡ ನಾಗಪ್ಪನವರು ಇಂದಿಗೂ ದೃಢಕಾಯರಾಗಿರುವುದಕ್ಕೆ ಆ ವಂಶದಲ್ಲಿ ಬಂದ ಸದಭ್ಯಾಸಗಳೂ, ಸದಾಲೋಚನೆಯ ಪ್ರವೃತ್ತಿಯೂ, ಪರೋಪಕಾರ ಮನೋಧರ್ಮವೂ, ದುಡಿಮೆಯ ಪ್ರೀತಿಯೂ ಕಾರಣವೆಂದರೆ ಆಶ್ಚರ್ಯವೇನಿಲ್ಲ. ನಾಗರಾಜ್, ಸೂರ್ಯನಾರಾಯಣ, ಶಂಕರಮೂರ್ತಿ, ಶ್ರೀನಿವಾಸಮೂರ್ತಿ, ಗುರುಮೂರ್ತಿ, ವಸುಂಧರ, ವಾಣಿ, ಸುಭದ್ರ ಇವರು ಅವರ ಮಕ್ಕಳಾಗಿ ಮನೆತನದ ಗೌರವಕ್ಕೆ ತಕ್ಕಂತೆ ಬಾಳುತ್ತಿರುವುದೂ ಸ್ತುತ್ಯವಾದ ಸಂಗತಿ. ಸೋಮಿಯವರ ನಾಲ್ವರು ಸೊಸೆಯರೂ 'ಮುತ್ತೈದೆ ಸಾವಿಗೆ' ಪಾತ್ರರಾದರು ಎಂಬುದೂ ವಿಶೇಷವಾಗಿ ಕಾಣುತ್ತಿದೆ.

ಹೀಗೆ ಬೆಳೆದ ಹನ್ಯಾಳ್ ವಂಶದಲ್ಲಿ ಈಗ 70 ಕ್ಕೂ ಹೆಚ್ಚು ಕುಟುಂಬಗಳಿವೆ, 225 ಕ್ಕೂ ಹೆಚ್ಚು ಸದಸ್ಯರಿದ್ದಾರೆ. ಉತ್ತಮ ವಿದ್ಯಾಭ್ಯಾಸ ಪಡೆದು, ನೌಕರಿಹೊಂದಿ ಸಾರ್ಥಕ ಜೀವನ ನಡೆಸುತ್ತಿರುವವರು ಇಲ್ಲಿದ್ದಾರೆ. 'ಹನ್ಯಾಳ್' ಎಂದರೆ 'ವಿಳ್ಳೇದೆಲೆ ಬೆಳೆಯುವ ಪ್ರದೇಶ' ಎಂಬ ಅರ್ಥ ಇದೆ ಎನ್ನುತ್ತಾರೆ. ಅಡಕೆ, ವೀಳ್ಳೇದೆಲೆಯನ್ನು ಮಾರಿ ಪುಡಿಗಾಸು ಗಳಿಸಿ ಸಂಸಾರ ನೀಸಿ ಮೇಲೆ ಬಂದ ಇತಿಹಾಸ ಈ ಮನೆತನಕ್ಕಿದೆ. ಅದು ಬಸವಾಪಟ್ಟಣಕ್ಕೆ ಬಂದಮೇಲೂ ಮುಂದುವರಿದಿರುವುದು ಕಂಡುಬರುತ್ತದೆ.

ಈ ವಂಶದ ಸದಸ್ಯರು ಹಳ್ಳಿಯಲ್ಲಿದ್ದಾಗ ಅನ್ಯೋನ್ಯವಾಗಿ ಬಾಳಿ ಸಮಾಜಸೇವೆಯಲ್ಲಿ ವಿವಿಧ ರೀತಿಯಲ್ಲಿ ಪಾಲ್ಗೊಂಡುದುಂಟು. ಕಾಲದ ಕರೆಗೆ ಓಗೊಟ್ಟು ಉದ್ಯೋಗಾರ್ಥವಾಗಿ ಈಗ ದೂರದ ಹತ್ತಾರು ಊರುಗಳಲ್ಲಿ ಇವರು ಚದುರಿಹೋಗಿದ್ದಾರೆ. ಇವತ್ತಿನ ಸನ್ನಿವೇಶದಲ್ಲಿ ಹತ್ತಿರದ ಬಂಧುಗಳೇ ಪರಸ್ಪರ ಅಪರಿಚಿತರಂತಾಗುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. 'ವಿಶ್ವ' ಆಗುವುದು 'ವ್ಯಕ್ತಿ'ಯ ಮೂಲಕ, 'ಕುಟುಂಬ'ದ ಮೂಲಕ, 'ವಂಶ' ದ ಮೂಲಕ; ರಾಷ್ಟ್ರವೆಂಬ ಘಟಕವೂ ಇಲ್ಲಿ ತಪ್ಪಿದ್ದಲ್ಲ. ಇಂಥ ಸಣ್ಣದಾದ ಉಪಘಟಕಗಳು ಅಭಿಮಾನದಿಂದ ಒಂದಾಗ ಬಲ್ಲವು, ಒಟ್ಟಾಗಿ ದುಡಿಯಬಲ್ಲವು, ವಿಶ್ವಸಮೃದ್ಧಿಗೂ ವಿಶ್ವಶಾಂತಿಗೂ ಕಾಣಿಕೆ ಸಲ್ಲಿಸಬಲ್ಲವು. ಅಭಿಮಾನ ಮತ್ತು ಪ್ರೀತಿಯ ಸಂಪತ್ತು ವಿಕಾಸಕ್ಕೆ ಅತ್ಯಗತ್ಯ. ಇದನ್ನು ಮನಗಂಡು, 'ಹನ್ಯಾಳ್‌ಕುಟುಂಬ'ದ ಸಂಘಟನೆ ಮಾಡುವ ಶ್ಲಾಘ್ಯ ಕೆಲಸಕ್ಕೆ ಲಕ್ಷ್ಮೀಶ (ಲಕ್ಷ್ಮೀನಾರಾಯಣ), ಮಂಜುನಾಥ, ಕೃಷ್ಣಮೂರ್ತಿ ಇವರು ಕೈಹಾಕಿದ್ದಾರೆ. ಈ ಮನೆತನದ ಘೋಷವಾಕ್ಯವೇ ಸಮಾಜಸೇವೆಯಾಗಿದೆ. ಇದನ್ನು ಸಾಧ್ಯವಾಗಿಸಲು, ಪರಂಪರೆಯನ್ನು ಉಳಿಸಿಕೊಳ್ಳಲು ಈ ಕುಟುಂಬದ ಸಮಸ್ತರೂ ಒಗ್ಗೂಡಿ ಸಂಘವೊಂದನ್ನು ಕಟ್ಟಿಕೊಳ್ಳುವ ಪ್ರಯತ್ನ ಮುನ್ನಡೆದಿದೆ. (H-Honesty, A- All, N – Nested, Y – Youths, A – Affectionately, L – Live Long)

ಮಹಾದಾನಿಗಳು

ಶ್ರೀಮತಿ ಆರ್.ಎಸ್.ಸಾವಿತ್ರಿ–ಶ್ರೀ ಬಿ.ವಿ.ವೆಂಕಟನಾರಾಯಣ

ಹನ್ಯಾಳ್ ವೆಂಕಟಸುಬ್ಬಯ್ಯನವರ ಪುತ್ರ ಬಿ.ವಿ. ವೆಂಕಟನಾರಾಯಣ (ಜ. 11.8.1950) (+ಆರ್.ಎಸ್. ಸಾವಿತ್ರಿ) ಅವರು ಸಮುದಾಯ ಅಧ್ಯಯನ ಕೇಂದ್ರದ ಮಹಾದಾನಿಗಳಾಗಿ ಪ್ರೋತ್ಸಾಹವಿತ್ತಿದ್ದಾರೆ. ವಿಜ್ಞಾನ ಪದವೀಧರರಾದ ಅವರು ಸಿಂಡಿಕೇಟ್ ಬ್ಯಾಂಕಿನಲ್ಲಿ ಅಧಿಕಾರಿಯಾಗಿ, ವ್ಯವಸ್ಥಾಪಕರಾಗಿ ಹಾಸನ, ಮೈಸೂರು, ಹೈದರಾಬಾದ್, ಸಿಕಂದರಾಬಾದ್, ಬೆಂಗಳೂರು, ಕೊಡಗಿನಲ್ಲಿ 29 ವರ್ಷ ಸೇವೆಸಲ್ಲಿಸಿದ್ದಾರೆ. ದಕ್ಷ ಸೇವೆಗೆ ಹೆಸರಾದ

ವೆಂಕಟನಾರಾಯಣ 2001ರಲ್ಲಿ ಸೇವಾಸ್ವಯಂನಿವೃತ್ತಿ ಅವಕಾಶವನ್ನು ಬಳಸಿಕೊಂಡರು. ಸೇವೆಯಲ್ಲಿದ್ದಾಗ ಬ್ಯಾಂಕ್ ನೌಕರರ ಸಂಘದ ಲೋಕಲ್ ಸೆಕ್ರೆಟರಿಯಾಗಿದ್ದುದರ ಜೊತೆಗೆ ಸ್ಟೇಟ್ ಕಮಿಟಿ ಸದಸ್ಯರೂ ಆಗಿದ್ದರು. ನಿವೃತ್ತರಾದಮೇಲೆ ಬ್ಯಾಂಕ್ ರಿಟೈರ್ಡ್ ಅಫಿಷಿಯಲ್ಸ್ ಫೋರಂನ ಕಾರ್ಯದರ್ಶಿಯಾದರು. ಯಾವಾಗಲೂ ನ್ಯಾಯದ ಪರವಾಗಿ ನಿಂತು ಹೋರಾಡುವ ಪ್ರವೃತ್ತಿಯಿಂದಾಗಿ ಇದು ಸಾಧ್ಯವಾಯಿತು. ನಿವೃತ್ತರಾದ ಮೇಲೆ ಜೀವ ವಿಮಾ ನಿಗಮದ ಏಜೆನ್ಸಿಯ ತರಬೇತಿ ಪಡೆದು ಪರೀಕ್ಷೆ ಮಾಡಿಕೊಂಡರು. ತಮ್ಮ ವಿಶೇಷ ಸಾಧನೆಗಳಿಗಾಗಿ ಹಲವು ಬಾರಿ ಪುರಸ್ಕೃತರಾದರು. ಅಸೋಸಿಯೇಷನ್ ಆಫ್ ಮ್ಯೂಚುವಲ್ ಫಂಡ್ಸ್ ಇನ್ ಇಂಡಿಯಾದ ಪರೀಕ್ಷೆ ಮಾಡಿಕೊಂಡು ಮ್ಯೂಚುವಲ್ ಫಂಡ್ಸ್ ವಿತರಕರಾದರು, ಸಣ್ಣ ಉಳಿತಾಯದ ಪ್ರತಿನಿಧಿಯಾದರು. ಬ್ಯಾಂಕಿನ ಸೇವೆಯ ಅನುಭವ, ಶಿಸ್ತು, ವಿಷಯವನ್ನು ಖಚಿತವಾಗಿ ತಿಳಿದುಕೊಂಡು ವಿವರಿಸುವ ಶಕ್ತಿ ಇವುಗಳಿಂದಾಗಿ ಬಹುಬೇಗ ಖ್ಯಾತರೂ ಜನಪ್ರಿಯರೂ ಆದರು. ಈಗ ಆರ್ಥಿಕ ಸಲಹೆಗಾರರಾಗಿದ್ದಾರೆ. ಮೈಸೂರಿನ ಜಯನಗರದ ಶಾರದಾ ಸೌಹಾರ್ದ ಸಹಕಾರಿ (ನಿ.) ದ ನಿರ್ದೇಶಕರೂ ಆಗಿದ್ದಾರೆ. ಸದಾ ಚಟುವಟಿಕೆಯಿಂದಿರುವ ವೆಂಕಟನಾರಾಯಣ ಅವರು ವ್ಯವಹಾರವನ್ನೂ ಅಧ್ಯಾತ್ಮವನ್ನೂ ಉಚಿತವರಿತು ಬಳಸಿ ಸಮತೋಲನವನ್ನು ಸಾಧಿಸಿದ್ದಾರೆ. ನಿತ್ಯ ದೇವತಾರ್ಚನೆಯನ್ನೂ, ತ್ರಿಕಾಲ ಸಂಧ್ಯಾವಂದನೆಯನ್ನೂ ಅವರು ನೆರವೇರಿಸುತ್ತಾರೆಂಬುದನ್ನು 'ಸಮಯವಿಲ್ಲ' ಎನ್ನುವವರು ಗಮನಿಸಬೇಕು. ಯಾವುದೇ ಸಾರ್ವತ್ರಿಕ ಧಾರ್ಮಿಕ ಸಮಾರಂಭಗಳಲ್ಲಿ ಸ್ವಯಂಸೇವಕರಾಗಿಯೂ ಕೆಲಸಮಾಡುತ್ತಿದ್ದಾರೆ. ಸ್ನೇಹಪರರೂ, ಪರೋಪಕಾರಿಯೂ ಆಗಿ ಜನಾನುರಾಗಿಯಾಗಿದ್ದಾರೆ. ವೇದಾಂತದಲ್ಲಿ ವಿಶೇಷ ಆಸಕ್ತಿ ತಳೆದು ಆರ್ಷ ವಿದ್ಯಾಕೇಂದ್ರದಲ್ಲಿ ಕಳೆದ ಐದು ವರ್ಷಗಳಿಂದ ವಿದ್ಯಾರ್ಥಿಯಾಗಿದ್ದಾರೆ. ಋಷಿಕೇಶದಲ್ಲಿ ನಡೆಯುವ ತರಗತಿಗಳಲ್ಲೂ ಭಾಗಿಗಳಾಗುತ್ತಿದ್ದಾರೆ. ಯಾವುದೇ ಧಾರ್ಮಿಕ ಪ್ರವಚನಗಳನ್ನು ಕೇಳಲು, ಇಷ್ಟು ಚಟುವಟಿಕೆಯ ನಡುವೆಯೂ, ಸಮಯವನ್ನು ಹೊಂದಿಸಿಕೊಳ್ಳಬಲ್ಲಷ್ಟು ಶ್ರದ್ಧೆ ಅವರಿಗಿದೆ. ಅವರದು ವಾದೂಲಸ ಗೋತ್ರ, ಯಜುರ್ವೇದ, ಆಪಸ್ತಂಬಸೂತ್ರ. ಪತ್ನಿ ರುದ್ರಪಟ್ಟಣದ ಮಾಸ್ತರ್ ವಿ.ಎ. ಸುಬ್ಬರಾಯರ (+ಎ.ವಿ. ಗೌರಮ್ಮ) ಮಗಳು ಆರ್. ಎಸ್. ಸಾವಿತ್ರಿ. ಮಕ್ಕಳು; ಕುಮುದ (ಬಯೋಕೆಮಿಸ್ಟ್ರಿ) ಎಂ.ಎಸ್ಸಿ., (+ ಬಿ.ಎಸ್. ನಾಗೇಂದ್ರಪ್ರಸಾದ್, ಸ್ಕಂದ ಕನ್ಸಲ್ಟೆನ್ಸಿ), ಮುಕುಂದಕುಮಾರ, ಹೆಚ್.ಸಿ.ಎಲ್. ನಲ್ಲಿ ಸಾಫ್ಟ್‌ವೇರ್ ಇಂಜನಿಯರ್, ಚೆನ್ನೈ. ವಿಳಾಸ : ಬಿ.ವಿ. ವೆಂಕಟನಾರಾಯಣ, ಆರ್ಥಿಕ ಸಲಹೆಗಾರರು, **"ಶೌರಿ"**, 273, 4 ನೇ ಮುಖ್ಯ ರಸ್ತೆ, 4 ನೇ ಹಂತ, ಟಿ.ಕೆ. ಬಡಾವಣೆ, ಮೈಸೂರು – 570 023, ದೂರವಾಣಿ. 2542245, 9448257233

ಮಹಾಪೋಷಕರು

ಶ್ರೀಮತಿ ಕುಮುದ ಎನ್. ಪ್ರಸಾದ್ – ಶ್ರೀ ಬಿ.ಎಸ್. ನಾಗೇಂದ್ರ ಪ್ರಸಾದ್

ಹನ್ಯಾಳ್ ವೆಂಕಟಸುಬ್ಬಯ್ಯನವರ ಪುತ್ರರಾದ ಬಿ.ವಿ. ವೆಂಕಟನಾರಾಯಣ (ಆರ್.ಎಸ್. ಸಾವಿತ್ರಿ) ಅವರ ಮಗಳು ಕುಮುದ ಬಿ.ಎಸ್ಸಿ., ಯಲ್ಲಿ ಎರಡನೆಯ ರ್‍ಯಾಂಕ್, (ಬಯೋಕೆಮಿಸ್ಟ್ರಿ) ಎಂ.ಎಸ್ಸಿ.,ಯಲ್ಲಿ ಪ್ರಥಮ ರ್‍ಯಾಂಕ್ ಪಡೆದ ಪ್ರತಿಭಾವಂತೆ. ಮೈಸೂರು ವಿಶ್ವವಿದ್ಯಾಲಯವು ಈ ಸಾಧನೆಗಾಗಿ ಅವರಿಗೆ ಮೂರು ಚಿನ್ನದ ಪದಕಗಳನ್ನು ನೀಡಿ ಗೌರವಿಸಿದೆ. ಕಾಲೇಜಿನಲ್ಲಿ ಅಧ್ಯಾಪಕರಾಗಿಯೂ ಅವರು ಸೇವೆಸಲ್ಲಿಸಿದ್ದಾರೆ. ಅವರ ಪತಿ ಬಿ.ಎಸ್. ನಾಗೇಂದ್ರಪ್ರಸಾದ್, ಬಿ.ಇ. ಅವರು ಕೆ. ಆರ್. ಶೇಷಾದ್ರಿ ಅವರ ಪುತ್ರ. ಕುಪ್ಪಹಳ್ಳಿಯ ರಾಮಚಂದ್ರಯ್ಯ (+ ಲಕ್ಷ್ಮೀದೇವಮ್ಮ) ಅವರ ಪುತ್ರರಾದ ಶೇಷಾದ್ರಿ ಅವರು ನಿವೃತ್ತ ಛಾಪಾಕಾಗದ ಮಾರಾಟಗಾರರು, ಈಗ ಬೆಂಗಳೂರಿನಲ್ಲಿಯೇ ನೆಲೆಸಿದ್ದಾರೆ. ನಾಗೇಂದ್ರ ಪ್ರಸಾದ್ ಅವರ ತಾಯಿ ಎಸ್. ಸರಸ್ವತಮ್ಮ ಅವರೂ ರುದ್ರಪಟ್ಟಣ ಮೂಲದವರು ಎಂಬುದು ಕಾಕತಾಳೀಯವಾದ ವಿಶೇಷವಾಗಿದೆ. ಸರಸ್ವತಮ್ಮನವರ ತಂದೆ 'ಮುತ್ತು' ಎಂದೇ ಖ್ಯಾತರಾಗಿದ್ದ ಎಚ್.ಎಸ್. ಸುಬ್ರಹ್ಮಣ್ಯ (+ ಸಾವಿತ್ರಮ್ಮ) ಅವರು. ಮುತ್ತು ಅವರ ಕಥೆಗಳನ್ನೂ ಕವನಗಳನ್ನೂ ಸಮುದಾಯ ಅಧ್ಯಯನ ಕೇಂದ್ರವು ಪ್ರಕಟಿಸಿದೆ. ನಾಗೇಂದ್ರಪ್ರಸಾದ್ ಅವರು ಬೆಂಗಳೂರಿನ 'ಬ್ಲೂಸ್ಟಾರ್ ಏರ್‌ಕಂಡೀಶನರ್ಸ್' ಸಂಸ್ಥೆಯಲ್ಲಿ ಇಂಜಿನಿಯರಾಗಿ ಅನೇಕ ವರ್ಷಗಳು ಸೇವೆಸಲ್ಲಿಸಿ ಈಗ ಸ್ವಂತ ಉದ್ದಿಮೆದಾರರಾಗಿದ್ದಾರೆ. ಸಂಕೇತಿಗಳು ಸ್ವಂತ ಉದ್ದಿಮೆದಾರರಾಗಿ ಪ್ರವರ್ಧಮಾನಕ್ಕೆ ಬರುತ್ತಿರುವುದು ಒಳ್ಳೆಯ ಬೆಳವಣಿಗೆಯೇ ಸರಿ. ಸ್ಕಂದ ಕನ್ಸಲ್ಟೆಂಟ್ಸ್‌ನ (Air conditioning design & project management) ಡೈರೆಕ್ಟರ್ ಆದ ನಾಗೇಂದ್ರ ಪ್ರಸಾದ್ ಅವರ ಈ ಸಾಹಸಕ್ಕೆ

ಪತ್ನಿ ಕುಮುದ ಕೈಜೋಡಿಸಿದ್ದಾರೆ. ಚಿ॥ ಮಹತೀ ಅವರ ಮಗಳು. ವಿಳಾಸ : 198, ಸ್ಕಂದ, 6 ನೇ ಅಡ್ಡರಸ್ತೆ, 1 ನೇ ಮುಖ್ಯರಸ್ತೆ, ಶಿರಡಿಸಾಯಿ ಸೌತ್ ಅವೆನ್ಯೂ, ಆಫ್ ಬನ್ನೇರುಘಟ್ಟ ರೋಡ್, ಗೊಟ್ಟಿಗೆರೆ ಪೋಸ್ಟ್, ಬೆಂಗಳೂರು – 560 083, ದೂ.ಸಂಖ್ಯೆ 9972093222.

ಶ್ರೀಮತಿ ಎಸ್. ನಾಗಲಕ್ಷ್ಮಿ – ಶ್ರೀ ಬಿ.ವಿ. ಸುಬ್ಬರಾಮಯ್ಯ

ಹನ್ಯಾಳ್ ವೆಂಕಟಸುಬ್ಬಯ್ಯ (ಅಯ್ಯು) ಅವರ ಮಗ ಬಿ.ವಿ. ಸುಬ್ಬರಾಮಯ್ಯ ಕೂಡ ಸಮಾಜದ ಅಗತ್ಯಗಳಿಗೆ ಸ್ಪಂದಿಸುವ ಮನೋಧರ್ಮದವರು. 1953 ರಷ್ಟು ಹಿಂದೆಯೇ ಅವರು ಎಲ್.ಎಂ.ಇ. ವಿದ್ಯಾಭ್ಯಾಸದಲ್ಲಿ ತೊಡಗಿಕೊಂಡಿದ್ದರು. ಆದರೆ ಆಗ ಒಟ್ಟು ಸಮುದಾಯವು ಆಧುನಿಕ ವಿದ್ಯಾಭ್ಯಾಸಕ್ಕಿಂತಲೂ ಪಾರಂಪರಿಕ ಕೃಷಿಆಧಾರಿತ ಜೀವನ ವಿಧಾನಕ್ಕೆ ಹೆಚ್ಚು ಅಂಟಿಕೊಂಡಿತ್ತು. ಹಾಗಾಗಿ ಹಿರಿಯರ ಒತ್ತಾಯಕ್ಕೆ ಮಣಿದು ಹಳ್ಳಿಗೆ ಹಿಂದಿರುಗಿದರು, ಕೃಷಿಯನ್ನವಲಂಬಿಸಿದರು. ಅನೂಚಾನವಾಗಿ ಬಂದ ಧಾರ್ಮಿಕ ಆಚರಣೆಗಳಲ್ಲಿ ತೊಡಗಿಕೊಂಡರು. ಅವರಿಗೆ ಈಗ ಅರ್ಧಶತಮಾನಕ್ಕೂ ಮೀರಿದ ಕೃಷಿಯ (ಭತ್ತ, ಅಡಕೆ, ತೆಂಗು, ವಿಳ್ಳೆದೆಲೆ ಹಾಗೂ ಮಿಶ್ರ ಬೆಳೆಗಳು) ಯಶಸ್ವೀ ಅನುಭವವಿದೆ. ರಾಮನಾಥಪುರದಲ್ಲಿ ತ್ರಿಮತಸ್ಥ ಬ್ರಾಹ್ಮಣಸಭಾ ನಿರ್ಮಿಸಿರುವ 'ಶ್ರೀ ಪ್ರಸನ್ನ ಸುಬ್ರಹ್ಮಣ್ಯೇಶ್ವರ ಕಲ್ಯಾಣಮಂಟಪ'ವನ್ನು ನಿರ್ಮಿಸುವಲ್ಲಿ ಸಕ್ರಿಯವಾಗಿ ಭಾಗವಹಿಸಿದವರು ಅವರು. ಈಗ ಅವರೇ ಅದರ ಅಧ್ಯಕ್ಷರೂ ಆಗಿದ್ದಾರೆ. ಸಮಾಜಸೇವಾ ಕಾರ್ಯಗಳಲ್ಲಿ ಯಾವಾಗಲೂ ಮುಂದೆ ನಿಲ್ಲುವ ಸುಬ್ಬರಾಮಯ್ಯನವರು ಬಸವಾಪಟ್ಟಣದ ಗಣ್ಯರಲ್ಲಿ ಒಬ್ಬರು. ಅವರ ಪತ್ನಿ ನಾಗಲಕ್ಷ್ಮೀ (ನಾಗವೇಣಿ) ಪಿರಿಯಾಪಟ್ಟಣದ ವೆಂಕಟಲಕ್ಷ್ಮೀ ಮತ್ತು ಕೇಶವಮೂರ್ತಿ (ಭೋಜಯ್ಯ)ಅವರ ಮಗಳು. ನಾಗಲಕ್ಷ್ಮೀ – ಸುಬ್ಬರಾಮಯ್ಯ ಅವರ ಪರವಾಗಿ ಬಿ.ಎಸ್. ಲಕ್ಷ್ಮೀನಾರಾಯಣ, ಬಿ.ಎಸ್ಸಿ., – ಉಷಾನಾರಾಯಣ ಎಂ.ಎ., ಅವರು ಸಮುದಾಯ ಅಧ್ಯಯನದ ಕೇಂದ್ರದ ಮಹಾಪೋಷಕರಾಗಿ ಬೆಂಬಲಿಸಿದ್ದಾರೆ. ಸುಬ್ಬರಾಮಯ್ಯ ಅವರ ಜ್ಯೇಷ್ಠ ಪುತ್ರರಾದ ಬಿ.ಎಸ್. ಲಕ್ಷ್ಮೀನಾರಾಯಣ ಅವರು ಸಿವಿಲ್ ಕಂಟ್ರಾಕ್ಟಿಂಗ್ ಕಂಪನಿಯ ನಿರ್ವಾಹಕ ಪ್ರಬಂಧಕರಾಗಿ ದೇಶದ ಅನೇಕ ಸ್ಥಳಗಳಲ್ಲಿ ಸೇವೆ ಸಲ್ಲಿಸಿ ಇದೀಗ ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬಸವಾಪಟ್ಟಣದ ವೆಂಕಟಲಕ್ಷ್ಮಮ್ಮ ಮತ್ತು ಅಯ್ಯಂಭಟ್ಟರ ಬಿ.ಎನ್. ಕೇಶವಮೂರ್ತಿ ಅವರ ಪುತ್ರಿ ಉಷಾ ಅವರು ಲಕ್ಷ್ಮೀನಾರಾಯಣ ಅವರ ಪತ್ನಿ. ಉಷಾನಾರಾಯಣ್ ಅವರು ಉದಯ ಟಿ.ವಿ.ಯಲ್ಲಿ ವಾರ್ತಾ ಓದುಗರಾಗಿ ಅನೇಕ ವರ್ಷಗಳು ಸೇವೆಸಲ್ಲಿಸಿದ್ದಾರೆ. ಸ್ಪಷ್ಟವಾದ ಉಚ್ಚಾರ, ಭಾವಸಂಚಾರವಿದ್ದೂ ಧ್ವನಿಸಮತೆ ದೃಢತೆ, ಆತ್ಮವಿಶ್ವಾಸ, ಕೇಳುಗರಿಗೆ ಆಗುವ ಶ್ರವಣಸುಖ ಇವು ಅವರ ಓದುವಿಕೆಯ ಲಕ್ಷಣಗಳು. ಅದರಿಂದಾಗಿ ಕನ್ನಡ ಕೇಳುಗರ ಮನಸ್ಸನ್ನು ಅವರು ಗೆದ್ದಿದ್ದಾರೆ. ಓಂಖ (ಓಜಕ್ಷಿ ಕಚಿರಿಜಡಿ ೦ಿಥಿಬಿಚಿಣಬಂಟಿ ಠಜಿ ಖಟಿಜುಚಿ) 'ಉತ್ತಮ ಜರ್ನಲಿಸ್ಟ್' ಎಂದು ಅವರನ್ನು ಗುರುತಿಸಿ 2007 ರಲ್ಲಿ ಪುರಸ್ಕರಿಸಿದೆ. ಅವರೀಗ ಇನ್ನೂ ದೊಡ್ಡ ಸಾಧನೆ ಮಾಡುತ್ತಿದ್ದಾರೆ. ಸಿಟಿ ಬೆಂಗಳೂರು ಟಿವಿ ವಾಹಿನಿಯ ನಿರ್ದೇಶಕರೂ ಆಗಿದ್ದಾರೆ. ಹಳ್ಳಿಯಲ್ಲಿ 'ನಗಣ್ಯ' ರೆನಿಸಿಬಿಡುವ ಸ್ತ್ರೀಯರಲ್ಲಿ ಅದೆಂಥ ಅದ್ಭುತ ಶಕ್ತಿ ಇರುತ್ತದೆ ಎಂಬುದಕ್ಕೆ ಅವರೂ ಒಬ್ಬ ನಿಚ್ಚಳ ಸಾಕ್ಷಿಯಾಗಿದ್ದಾರೆ. ವಿಳಾಸ : ಬಿ.ಎಸ್. ಲಕ್ಷ್ಮೀನಾರಾಯಣ, 472, 3 ನೇ ಅಡ್ಡ ರಸ್ತೆ, 2 ನೇ ಬ್ಲಾಕ್, 3ನೇ ಫೇಸ್, ಬಿ.ಎಸ್.ಕೆ. 3 ನೇ ಹಂತ, ಬೆಂಗಳೂರು – 560 085, ದೂರವಾಣಿ ಸಂಖ್ಯೆ – 26797585.

ಶ್ರೀಮತಿ ಸುಮನ್ ಸುಬ್ರಹ್ಮಣ್ಯ – ಶ್ರೀ ಬಿ.ಎಸ್. ಸುಬ್ರಹ್ಮಣ್ಯ (ಫಣೀಶ್)

ಎಸ್. ನಾಗಲಕ್ಷ್ಮೀ – ಬಿ.ವಿ. ಸುಬ್ಬರಾಮಯ್ಯ ಅವರ ದ್ವಿತೀಯ ಪುತ್ರ ಬಿ.ಎಸ್. ಸುಬ್ರಹ್ಮಣ್ಯ (ಫಣೀಶ್), ಬಿ.ಇ. (ಡೆಪ್ಯುಟಿ ಜನರಲ್ ಮ್ಯಾನೇಜರ್, ಜೆ.ಎಸ್.ಡಬ್ಲ್ಯೂ, ಬಳ್ಳಾರಿ) ಸಂಕೇತಿಗಳು ಹೆಮ್ಮೆಪಡುವಂತೆ ಉನ್ನತ ಜವಾಬ್ದಾರಿಗಳನ್ನು ನಿರ್ವಹಿಸುತ್ತಿರುವ ಇಂಜಿನಿಯರಾಗಿದ್ದಾರೆ. ಮೈಸೂರಿನ ಪ್ರತಿಷ್ಠಿತ ಎನ್.ಐ.ಇ. ಕಾಲೇಜಿನಲ್ಲಿ ಬಿ.ಇ. ಪದವಿ ಪಡೆದು, ವಿದೇಶದಲ್ಲಿಯೂ ಸೇರಿದಂತೆ ನಾನಾ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸದ ಅನುಭವ ಅವರಿಗಿದೆ. ಕುದುರೆಮುಖ ಕಬ್ಬಿಣದ ಅದಿರು ಸಂಸ್ಥೆಯಲ್ಲಿಯೂ ಹತ್ತಾರು ವರ್ಷಗಳು ಸೇವೆಸಲ್ಲಿಸಿದ್ದಾರೆ. ನಗುಮೊಗದ, ಕ್ರಿಯಾಶೀಲರಾದ ಫಣೀಶ್‌ರವರು ಸೇವೆಯ ಹೊಸ ಹೊಸ ಸಾಧ್ಯತೆಗಳತ್ತ ಮುಖಮಾಡುತ್ತಿರುವ ನಿಪುಣ ಇಂಜಿನಿಯರಾಗಿದ್ದಾರೆ. ಸದ್ಯ ಅವರು ಬಳ್ಳಾರಿಯ ಜಿಂದಾಲ್ ಸ್ಟೀಲ್ಸ್ ವರ್ಕ್ಸ್ ಕಂಪನಿಯಲ್ಲಿ ಡೆಪ್ಯುಟಿ ಜನರಲ್

ಮ್ಯಾನೇಜರ್ ಹುದ್ದೆಯನ್ನೇರಿದ್ದಾರೆ. ಅವರ ಪತ್ನಿ ಸುಮನ್ ಬಿ.ಎಸ್‌ಸಿ., ಅವರು ಪಿರಿಯಾಪಟ್ಟಣದ ಪ್ರಭಾರಾವ್ – ಪಿ.ವಿ. ನಾಗೇಶ್‌ರಾವ್ ಅವರ ಮಗಳು. ಮಕ್ಕಳು ಚಿ॥ ಸುಪ್ರೀತ್, ಚಿ॥ ಸುಮಂತ್. ದೂ.ವಾ. 94482 86217.

ಶ್ರೀಮತಿ ಬಿ.ಎಸ್. ನಾಗರತ್ನ– ಶ್ರೀ. ಎ.ವಿ. ಶಂಕರಮೂರ್ತಿ

ಬಿ.ಎಸ್. ನಾಗರತ್ನ ಹಾಸನಜಿಲ್ಲೆ, ಬಸವಾಪಟ್ಟಣದಲ್ಲಿ ವಾಸವಾಗಿದ್ದ ವ್ಯಾಕರಣ ವಿದ್ವಾನ್ ವೇ॥ಬ್ರ॥ಶ್ರೀ ಬಿ.ಎಸ್. ಸುಬ್ಬರಾಯಶಾಸ್ತ್ರಿಗಳ ಮಗಳು. ವಿವಾಹವಾದದ್ದು ಅದೇ ಜಿಲ್ಲೆಯ ಅಗ್ರಹಾರ ಗ್ರಾಮದ ವೇ॥ಬ್ರ॥ಶ್ರೀ ವಿಶ್ವೇಶ್ವರಾವಧಾನಿಗಳ ದತ್ತುಪುತ್ರ (ಹನ್ಯಾಳ್ ಮನೆತನದ) ಶ್ರೀ ಎ.ವಿ. ಶಂಕರಮೂರ್ತಿಯವರನ್ನು. ಸಂಸ್ಕೃತ ಪಂಡಿತರ ಮಗಳು ವೇದಪಂಡಿತರ ಮನೆಯನ್ನು ಸೇರಿದ್ದಳು. ಎರಡು ಮನೆಯಲ್ಲೂ ಕೃಷಿ ಇದ್ದೇ ಇತ್ತು. ಜತೆಗೆ ಪಶುಪಾಲನೆ. ನಾಗರತ್ನ ವಿವಾಹವಾದದ್ದು 14 ವರ್ಷಕ್ಕೆ. ಆ ವೇಳೆಗೆ ಶ್ರೀಮತಿ ಸುಬ್ಬಮ್ಮ ಎಂಬ ಸಂಗೀತಜ್ಞರಲ್ಲಿ ಬಾಲಪಾಠವಾಗಿತ್ತು. ಗಮಕಿ ಸೀತಮ್ಮನವರಿಂದ ಗಮಕವನ್ನು ಕಲಿತು ಗಮಕ ಪರೀಕ್ಷೆಗಳನ್ನು ಮಾಡಿಕೊಂಡು ರೂಢಿಸಿಕೊಂಡಿದ್ದರು. ವಿವಾಹವಾಗಿ, ನಾಲ್ಕು ಮಕ್ಕಳ ತಾಯಿಯಾಗಿ, ಕೃಷಿ ಪಶುಪಾಲನೆಯ ಜತೆಗೆ ಸಂಸಾರನಿರ್ವಹಣೆಯ ಹೊಣೆ ಹೊತ್ತು ಬಿಡುವಿಲ್ಲದಂತೆ ಇರುವಾಗಲೂ ಚಿಲಕುಂದದ ವಿದ್ವಾನ್ 'ಕೊಳಲುಮೂರ್ತಿ' ಅವರ ಮಗಳು ಸಂಗೀತ ವಿದುಷಿ ಶ್ರೀಮತಿ ಕಮಲಮ್ಮ ಕೇಶವಮೂರ್ತಿ ಅವರಲ್ಲಿ ಸಂಗೀತಾಭ್ಯಾಸ ಮುಂದುವರಿಯಿತು. ಹಾಡುಗಾರಿಕೆಯಲ್ಲಿ 'ವಿದ್ವತ್' ಆಯಿತು. ಸಂಗೀತ ವಿದುಷಿಯಾಗಿ ಕಛೇರಿಗಳನ್ನು ನೀಡಿದರು, ಶಿಷ್ಯರನ್ನು ರೂಪಿಸಿದರು. ಅವರ ಗಾಯನದ ಧ್ವನಿಮುದ್ರಿಕೆಗಳು ಅವರ ಭಾವಪೂರ್ಣಗಾಯನದಿಂದಾಗಿ ಪರಿಣಾಮಕಾರಿಯಾಗಿವೆ. ಭಾವಗೀತೆಗಳಿಗೆ ಕ್ಷಣಮಾತ್ರದಲ್ಲಿ ಅಚ್ಚುಕಟ್ಟಾಗಿ ಸ್ವರಸಂಯೋಜನೆ ಮಾಡಿ ಹಾಡುತ್ತಿದ್ದ ಪ್ರತಿಭಾವಂತೆ. ಕರ್ನಾಟಕ ಶಾಸ್ತ್ರೀಯ ಸಂಗೀತ ಮಂಡಲಿಯು ನಡೆಸುವ ಜೂನಿಯರ್ ಮತ್ತು ಸೀನಿಯರ್ ಪರೀಕ್ಷೆಗಳಿಗೆ ಪರೀಕ್ಷಕಿಯಾಗಿ ನೇಮಕಗೊಳ್ಳುತ್ತಿದ್ದ ಅವರು, ಹಾಸನ ವಿಭಾಗದ ಮುಖ್ಯಸ್ಥರೂ ಆಗಿ ಸೇವೆಸಲ್ಲಿಸಿದ್ದರು. ಪುಟ್ಟ ಮಕ್ಕಳಿಗೂ ಸಂಗೀತ ಕಲಿಸಿದರು; ವಿಷ್ಣು ಸಹಸ್ರ ನಾಮ, ಲಲಿತಾ ಸಹಸ್ರನಾಮ, ಸೌಂದರ್ಯಲಹರಿ, ಆನಂದಲಹರಿಯನ್ನು ರೂಢಿಮಾಡಿಸಿದರು. ಪುಟ್ಟ ಮಕ್ಕಳಿಗೆ ಹಬ್ಬಗಳಲ್ಲಿ ಸೀರೆ ಉಡಿಸಲೂ ಮದುವಣಗಿತ್ತಿಯರಿಗೆ ಶೃಂಗರಿಸಲೂ ಕರಕುಶಲ ಕೆಲಸಗಳನ್ನು ಮಾಡಿಕೊಡಲೂ ಊರೊಟ್ಟಿನ ಭೋಜನಕೂಟಗಳಿಗೆ ಅಡುಗೆಮಾಡಲೂ ಮುಂದಾಗಿ ತಮ್ಮ ಬಹುಮುಖ ಪ್ರತಿಭೆಯ ಪ್ರಯೋಜನವನ್ನು ಮಾಡಿಕೊಡುತ್ತಿದ್ದರು, ಕ್ರಿಯಾಶೀಲತೆಯ ಸಂಚಲನವನ್ನುಂಟುಮಾಡುತ್ತಿದ್ದರು. ಸೌಂದರ್ಯಲಹರಿ ಮತ್ತು ಆನಂದಲಹರಿಯ ಪ್ರತಿಶ್ಲೋಕಕ್ಕೂ ರಾಗ ಸಂಯೋಜನೆ ಮಾಡಿ ಭಕ್ತಿ ಉಕ್ಕುವಂತೆ ಹಾಡಿದಾಕೆ. ಶ್ರೀಮಚ್ಛಂಕರರ ಸ್ತೋತ್ರಗಳೆಲ್ಲದರ ಅರ್ಥವನ್ನೂ ವಿದ್ವಾಂಸರಿಂದ ತಿಳಿದು ಊರಿನ ಸಮಸ್ತ ಆಸಕ್ತರಿಗೂ ಕಲಿಸಿ ಧಾರ್ಮಿಕ ಪರಿಸರವನ್ನು ನಿರ್ಮಿಸಿ ಸಾತ್ತ್ವಿಕ ಸಂಚಲನವನ್ನುಂಟು ಮಾಡಿದಾಕೆ. ಸಾಂಸ್ಕೃತಿಕ ಸಂಘವೊಂದು ಮಾಡುವಂತೆ ತಾವೇ ಒಂದು ಸಂಘವಾಗಿ ಮಹಿಳಾಮಂಡಲಿಯಿಂದ ನಾಟಕಗಳನ್ನಾಡಿಸಿ, ತಾನೂ ಪಾತ್ರ ವಹಿಸಿ ಹಬ್ಬಗಳಿಗೆ ಕಳೆತಂದು ಸಾಮಾನ್ಯರಂತಿದ್ದವರ ಪ್ರತಿಭೆಯನ್ನು ಪ್ರಕಾಶಕ್ಕೆ ತಂದಾಕೆ, ಮಾದರಿಯ ಸಂಸಾರ ನಿರ್ವಹಣೆಗಾಗಲಿ ಕ್ರಿಯಾಶೀಲತೆಗಾಗಲಿ ಬಡತನವು ಒಂದು ಮಿತಿಯಾಗದೆಂಬುದನ್ನು ಬಾಳಿ ತೋರಿಸಿದಾಕೆ. 56ರ ಮಧ್ಯವಯಸ್ಸಿನಲ್ಲಿ ಅವರನ್ನು (17.05.08) ವಿಧಿ ಸೆಳೆದುಕೊಂಡಿತು. ಜೀವನವನ್ನು ಸಾರ್ಥಕವಾಗಿ ಕಳೆದ ವಿಶ್ವಾಸದಿಂದ ಆಕೆ ಸಾವನ್ನು ಅವಿಚಲಿತರಾಗಿ ಸ್ವಾಗತಿಸಿದ್ದರು.

ಪೋಷಕರು

ಸಾವಿತ್ರಮ್ಮಜ್ಜಿ

ಇದು ನತದೃಷ್ಟ ಬಾಲವಿಧವೆಯರ ಸಂಕಷ್ಟ ಮತ್ತು ಛಲದ ಕಥೆ. ಶಾಲೆಗೆ ಕಾಲೇ ಇಡದಿದ್ದ ಸಾವಿತ್ರಮ್ಮನಿಗೆ ಎಂಟನೇ ವರ್ಷಕ್ಕೆ ವಿವಾಹವಾಯಿತು. ಗಂಡ ರುದ್ರಪಟ್ಟಣದ ಕೃಷ್ಣಪ್ಪ. ಆಟವಾಡುತ್ತಿದ್ದವಳನ್ನು ಎಳೆದು ತಂದು ಹಸೆಯಮೇಲೆ ಕೂರಿಸಿ ಎರಡನೆಯ ಹೆಂಡತಿಯಾಗಿಸಿದ್ದರು. ಅದಾಗಲೇ ಸಾವಿತ್ರಮ್ಮನ ತಾಯಿ ತೀರಿಹೋಗಿದ್ದರು. ತಂದೆ ದೇಶಾಂತರ ಹೋಗಿಯಾಗಿತ್ತು. ಮದುವೆಯಾದ ಒಂದು ವರ್ಷದೊಳಗೆ ಗಂಡನೂ ಸತ್ತ. ಗಂಡ ಸತ್ತು ಎರಡನೇ ವರ್ಷಕ್ಕೆ ದೊಡ್ಡವಳಾದಾಗ ಕೇಶಮುಂಡನ ಮಾಡಿಸಿ, ಕೆಂಪು ಸೀರೆ ಉಡಿಸಿದರು. ದಿನಕ್ಕೊಂದು ಊಟ,

ಆದರೆ ಮೈ ಮುರಿಯುವ ಕೆಲಸ; ಅಕ್ಕರೆ ಆದರ ಇಲ್ಲದ ಜೀವನ. ಹನ್ನಾಳಿನಲ್ಲಿ ತನ್ನ ತಾಯಿಯ ತಂದೆಯ ಆಶ್ರಯಕ್ಕೆ ಹೋದರು ಸಾವಿತ್ರಮ್ಮ. ಅಲ್ಲಿ ಅಜ್ಜನೂ ಸತ್ತಾಗ ಜೀವನ ಮತ್ತಷ್ಟು ಅತಂತ್ರವಾಯಿತು. ದನಕರು ನೋಡಿಕೊಂಡು, ಮನೆಗೆಲಸ ಮಾಡಿಕೊಂಡು ದಿನ ದೂಡಿದರು. ವಿದ್ಯೆಯಿಲ್ಲ, ವಿಶ್ರಾಂತಿಯಿಲ್ಲ. 13 ವರ್ಷವಾಗುವ ಹೊತ್ತಿಗೆ ಅಜ್ಜಿಯೂ ಹೋದಾಗ ಮಾವನ ಮನೆಗೆ ತಳ್ಳಿದರು. ಅಲ್ಲಿಯೂ ಆಕೆಗೆ ನೆಲೆಸಿಗಲಿಲ್ಲ. ಯಾರದೋ ಬಾಣಂತನ ಮಾಡಲೆಂದು ಚಂದಗಾಲಕ್ಕೆ ಹೋದರು, ಪ್ಲೇಗಿಗೆ ಸಿಲುಕಿ ಜೀವ ಉಳಿಸಿಕೊಂಡು ಹೊರಬಂದರು; ಅವರಿವರ ಮನೆಯಲ್ಲಿ ಅಡುಗೆ ಕೆಲಸಕ್ಕೆ ಸೇರಿಕೊಂಡರು. ರುದ್ರಪಟ್ಟಣದಲ್ಲಿದ್ದ ಬಲಮಗ ಎಚ್. ಎಸ್. ಸುಬ್ರಹ್ಮಣ್ಯ ಅವರ ಯೋಗಕ್ಷೇಮವನ್ನು (ಗಾಯತ್ರಮ್ಮನವರ ತಂದೆ) ಇಂಥ ಪರಿಸ್ಥಿತಿಯಲ್ಲೂ ಸಾವಿತ್ರಮ್ಮನವರು ಮರೆಯಲಿಲ್ಲ. ಅವರಿಗೆ ಆಸರೆಯಾಗಿ ನಿಂತರು, ಅವರ ಹೆಂಡತಿಗೆ (ಸೊಸೆ) ಬಾಣಂತನ ಮಾಡಿದರು, ತಾವು ಸಂಪಾದಿಸಿದ್ದ ಹಣದಲ್ಲಿ ಅವರಿಗಾಗಿ ನಾಲ್ಕು ಎಕರೆ ತೋಟವನ್ನೂ, ವಾಸಕ್ಕೆ ಮನೆಯನ್ನೂ ಮಾಡಿಕೊಟ್ಟರು. ಕಂಡವರ ಮನೆಯಲ್ಲಿ ಅಡುಗೆಯನ್ನೋ ಬಾಣಂತನವನ್ನೋ ಮಾಡಿ ಗಳಿಸಿದ್ದನ್ನೆಲ್ಲ ಬಲಮಗನಿಗೇ ಕೊಡುತ್ತಿದ್ದರು. ಜೀವನದಲ್ಲಿ ಬೆಂದು ಬಸವಳಿದು ಕೊನೆಗೆ ಡಾ. ಸುಶೀಲಾಬಾಯಿ ಅವರ ಬಳಿಗೆ 1954 ರಲ್ಲಿ ಬಂದರು, 1990 ರಲ್ಲಿ ಮರಣಹೊಂದುವವರೆಗೂ ಅವರಿಗೆ ಒತ್ತಾಸೆಯಾಗಿ ಯಾವ ಶುಲ್ಕವನ್ನೂ ಪಡೆಯದೆ 'ಅಜ್ಜಿ'ಯಾಗಿ ಇದ್ದುಬಿಟ್ಟರು ಸಾವಿತ್ರಮ್ಮಜ್ಜಿ.

ಶ್ರೀಮತಿ ಆರ್. ಎಸ್. ಗಾಯತ್ರಮ್ಮ

ಹಾಸನಜಿಲ್ಲೆ ಅರಕಲಗೂಡು ತಾಲ್ಲೂಕು ರುದ್ರಪಟ್ಟಣ ಗ್ರಾಮದ ಎಚ್. ಎಸ್. ಸುಬ್ರಹ್ಮಣ್ಯ (ಓಣಿ ಮುತ್ತು) ಸಾವಿತ್ರಮ್ಮ ದಂಪತಿಗಳ ಹನ್ನೆರೆಡು ಮಕ್ಕಳಲ್ಲಿ ಆರ್. ಎಸ್. ಗಾಯತ್ರಮ್ಮ ನವರು (10.1.1941) ಮೊದಲನೆಯವರು. ಪಿರಿಯಾಪಟ್ಟಣದ ಜವರಾಯಪ್ಪನವರ ಮಕ್ಕಳಾದ ಶ್ರೀನಿವಾಸಯ್ಯನವರ (+ಪದ್ಮಾವತಿ) ಮಗ ವೆಂಕಟಕೃಷ್ಣಯ್ಯನವರನ್ನು ವರಿಸಿದಾಗ ಗಾಯತ್ರಮ್ಮನವರಿಗೆ ವಯಸ್ಸು ಕೇವಲ 10 ವರ್ಷ: ಪತಿಯು ಅಕಾಲ ಮರಣಕ್ಕೆ ತುತ್ತಾದಾಗ ವಯಸ್ಸು 23. ಅವರಿಗೆ ಆಗ 3 ಮಕ್ಕಳು. 2 ವರ್ಷದ ಕೈಮಗು ಇದ್ದು ಎದೆಹಾಲು ಕುಡಿಯುತ್ತಿತ್ತು. ಆದರೆ ಪತಿಯ ಮನೆಯವರಾಗಲೀ ತಂದೆಯ ಮನೆಯವರಾಗಲೀ ಅವರ ಭಾರ ಹೊರಲು ಸಿದ್ಧರಿರಲಿಲ್ಲ. ಅದರಿಂದಾಗಿ ಆಶ್ರಯವಿಹೀನರಾದರು. ಆ ಸಮಯದಲ್ಲಿ ಗಾಯತ್ರಮ್ಮನವರ ಅಜ್ಜಿ ಸಾವಿತ್ರಮ್ಮನವರು ದೊಡ್ಡಬಳ್ಳಾಪುರದಲ್ಲಿ ಡಾ. ಸುಶೀಲಾಬಾಯಿ ಎಂಬುವವರ ಮನೆಯಲ್ಲಿ ಇದ್ದರು. ಆಕೆ ಸಾವಿತ್ರಮ್ಮನವರಿಗೆ ಮರುಗಿ ಒಂದು ಅನಾಥಾಲಯಕ್ಕೆ ಸೇರಿಸಿ ಜೀವನಕ್ಕೆ ದಾರಿ ಮಾಡಲು ಯತ್ನಿಸಿದರು. ಆದರೆ ಡಾ. ಸುಶೀಲಾಬಾಯಿ ಅವರು ಈ ಪರಿಸ್ಥಿತಿಯನ್ನು ಕಂಡು ಮರುಗಿದರು, ಅವರ ಅಂತಃಕರಣ ಮಿಡಿಯಿತು, ಅನಾಥಾಲಯದಲ್ಲಿ ಆ ಮಕ್ಕಳು ಬೆಳೆಯುವುದು ಬೇಡವೆಂದು ತೀರ್ಮಾನಿಸಿ ಮೂವರಿಗೂ ತಮ್ಮ ಮನೆಯಲ್ಲೇ ಆಶ್ರಯ ನೀಡಿದರು, ವಿದ್ಯಾಭ್ಯಾಸ ಮಾಡಿಸಿದರು. ಸಮಾಜಸೇವೆಯನ್ನು ಕೇವಲ ಉಪದೇಶಿಸುವುದಲ್ಲ, ಕಾರ್ಯತಃ ಮಾಡಿ ತೋರಿಸಿದರು. ಆ ಮಕ್ಕಳೆಲ್ಲಾ ಈಗ ಚೆನ್ನಾಗಿದ್ದಾರೆ. ಮೂರು ಸಂಸಾರಗಳನ್ನು ಉಳಿಸಿದ ಮಹಾನುಭಾವರು ಡಾ. ಸುಶೀಲಾಬಾಯಿ ಅವರು. ಗಾಯತ್ರಮ್ಮನವರು ಮುಂದೆ ಬೆಂಗಳೂರಿನ ಅಬಲಾಶ್ರಮಕ್ಕೆ ಸೇರಿ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾದರು, ಟಿ.ಸಿ.ಎಚ್. ಮಾಡಿ ಪ್ರೈಮರಿ ಶಾಲಾ ಉಪಾಧ್ಯಾಯಿನಿ ಆದರು, ಹಿಂದಿಯಲ್ಲಿ ರಾಷ್ಟ್ರಭಾಷಾ ವಿಶಾರದ ಆದರು, ಬಿ.ಎ., ಬಿ.ಇಡಿ. ಮಾಡಿಕೊಂಡರು. ಅವರ ಹಿರಿಯ ಮಗ ಡಾ. ಪಿ.ವಿ.ಶ್ರೀನಿವಾಸಯ್ಯ (+ಬಿ.ಎನ್. ಅನ್ನಪೂರ್ಣ) ಪಶುವೈದ್ಯದಲ್ಲಿ ಪಿಎಚ್.ಡಿ. ಮಾಡಿ ಈಗ ಪಾಂಡಿಚೆರಿಯ ವೆಟರಿನರಿ ಕಾಲೇಜಿನಲ್ಲಿ ಡೀನ್ ಆಗಿದ್ದಾರೆ. ಎರಡನೆಯ ಮಗ ಪಿ.ವಿ. ವೆಂಕಟೇಶ (+ ಎಚ್. ಕೆ. ಶಾಂತಾಮಣಿ) ಆರ್. ಡಿ. ಮತ್ತು ಎನ್.ಎಸ್.ಸಿ. ಏಜೆಂಟರಾಗಿ ಹಾಸನದಲ್ಲಿದ್ದಾರೆ. ಮೂರನೆಯ ಮಗ ಪಿ.ವಿ. ನಾಗರಾಜ (+ ಸಿ. ಎನ್. ಹೇಮಲತ) ತುಮಕೂರಿನಲ್ಲಿ ಟುಟೋರಿಯಲ್ ಇನ್‌ಸ್ಟಿಟ್ಯೂಟ್ ಇಟ್ಟುಕೊಂಡಿದ್ದಾರೆ. ಮೊದಲ ಮಗನ ಮಗಳು ಚೈತ್ರ ಪಾಂಡಿಚೆರಿಯಲ್ಲಿರುವ ಜಿಪ್‌ಮರ್‌ನಲ್ಲಿ ಕಣ್ಣಿನ ಬಗ್ಗೆ ಎಂ.ಎಸ್. ಮಾಡುತ್ತಿದ್ದಾಳೆ. ಮಗ ಕಾರ್ತಿಕ್ ಬಿ.ಇ. ಮುಗಿಸಿ ಚನ್ನೈನಲ್ಲಿ ಎಂ.ಎಸ್. ಮಾಡುತ್ತಿದ್ದಾನೆ. ಎರಡನೆಯ ಮಗನ ಮಗ ವಿ. ಶ್ರೀವತ್ಸ ಎಸ್.ಎಸ್.ಎಲ್.ಸಿ., ಮತ್ತು ಮೂರನೇ ಮಗನ ಮಗ ಎನ್. ತುಷಾರ್ 9 ನೇ ತರಗತಿ ಓದುತ್ತಿದ್ದಾರೆ. ಅಸಾಧಾರಣ ಕ್ರಿಯಾಶೀಲೆಯಾದ ಗಾಯತ್ರಿ ಏಕಾಕಿಯಾಗಿ ತಾವೇ ನಿಂತು ಮಕ್ಕಳಿಗೆ ಮನೆ ಕಟ್ಟಿಸಿಕೊಟ್ಟಿದ್ದಾರೆ; ಮಕ್ಕಳ ಮುಂಜಿ, ಮದುವೆ ನೆರವೇರಿಸಿದ್ದಾರೆ. 1999 ರಲ್ಲಿ ನಿವೃತ್ತರಾಗಿ ಹಾಸನದ ವಿದ್ಯಾನಗರದಲ್ಲಿ ಡಾ. ಸುಶೀಲಾಬಾಯಿ ಅವರೊಡನೆ ನೆಲೆಸಿದ್ದಾರೆ. ಮಕ್ಕಳು ಪತ್ನಿ ಮತ್ತು

ಪಠ್ಯೇತರ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವರು ಉತ್ತೇಜಿಸಿದ್ದಾರೆ; ಈಗಲೂ ಕೇಳಿದವರಿಗೆ ಉಚಿತವಾಗಿ ಪಾಠ ಹೇಳಿಕೊಡುತ್ತಾರೆ; ಮಕ್ಕಳ ನಾಟಕ, ಪ್ರಾಜೆಕ್ಟ್ ವರ್ಕ್ ಮುಂತಾದುವಕ್ಕೆ ಮಾರ್ಗದರ್ಶನ ಮಾಡುತ್ತಾರೆ. ಮಣಿಯಲ್ಲಿ ಬೊಂಬೆಗಳನ್ನು ಮಾಡುವುದು ಮತ್ತು ಕಸೂತಿಯಲ್ಲಿ ನಿಪುಣೆ, ರಂಗೋಲಿ ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಪಡೆದಿದ್ದಾರೆ. 1978 ರಲ್ಲಿ 'ಬೆಸ್ಟ್ ಟೀಚರ್' ಅವಾರ್ಡ್ ಅವರಿಗೆ ದೊರೆತಿದೆ. ಈ ಇಡೀ ಸಂಸಾರದ ವಿಕಾಸದ ಮೂಲದಲ್ಲಿ ಡಾ. ಸುಶೀಲಾಬಾಯಿ ಅವರ ಮಾನವೀಯ ಮಿಡಿತ ಮತ್ತು ಸಕಾಲಿಕ ನೆರವು, ಪ್ರೋತ್ಸಾಹ ಕೆಲಸ ಮಾಡಿದೆ. ಗಾಯತ್ರಮ್ಮನವರೂ ಈ ಉಪಕಾರವನ್ನು ಸ್ಮರಿಸಿ ಡಾ॥ ಸುಶೀಲಾಬಾಯಿ ಅವರಿಗೆ ಸಂಗಾತಿಯಾಗಿ ಅವರ ಜತೆಯಲ್ಲಿಯೇ ನೆಲೆಸಿದ್ದಾರೆ.

ಡಾ॥ ಎಸ್. ಕೆ. ಸುಶೀಲಾ ಬಾಯಿ ಎಂ.ಡಿ., ಗೈನಕಾಲಜಿಸ್ಟ್, ರಾಷ್ಟ್ರಭಾಷಾವಿಶಾರದೆ

ಒಡ್ಡರಹಳ್ಳಿಯ ಎ. ಪಿ. ರಾವ್ ಮತ್ತು (ಹಾಸನದ ಎಚ್. ರಾಮಸ್ವಾಮಿಶಾಸ್ತ್ರಿಗಳ ಮಗಳು) ಅಚ್ಚಮ್ಮ ದಂಪತಿಗಳ ಎಂಟು ಮಕ್ಕಳಲ್ಲಿ ಡಾ. ಎಸ್. ಆರ್. ಸುಶೀಲಾಬಾಯಿ (ಜ. 5.10.1930) ಒಬ್ಬರು. ಏಳನೇ ತರಗತಿಯಲ್ಲಿ ಓದುತ್ತಿದ್ದಾಗಲೇ ತಮ್ಮ 12 ನೆಯ ವಯಸ್ಸಿಗೇ ಮೈಸೂರು ಮನೆತನದ (ಮಿರ್ಲೆ ಮೇಷ್ಟರು ಶ್ರೀನಿವಾಸಯ್ಯ ಮತ್ತು ವೆಂಕಟಲಕ್ಷ್ಮಮ್ಮ ಅವರ ಮಗ) ಎಸ್. ಕೆ. ಮೂರ್ತಿ ಅವರೊಂದಿಗೆ ವಿವಾಹವಾಯಿತು. ವೈಧವ್ಯ ಪ್ರಾಪ್ತವಾದದ್ದು ಕೇವಲ 17 ನೆಯ ವಯಸ್ಸಿಗೆ. ಸುಶೀಲಾಬಾಯಿ ಧೃತಿಗೆಡಲಿಲ್ಲ. ಎಲ್. ಎಸ್. ಗೆ ನಿಂತಿದ್ದ ವಿದ್ಯಾಭ್ಯಾಸವನ್ನು ಮುಂದುವರಿಸಿ ಎಸ್.ಎಸ್.ಎಲ್.ಸಿ. ಮಾಡಿಕೊಂಡರು. ಎಲ್.ಎಂ.ಪಿ. ಸೇರಿದರು. ತಮ್ಮ 21 ನೆಯ ವಯಸ್ಸಿಗೆ ವೈದ್ಯೆಯಾಗಿ ಕೆಲಸಕ್ಕೆ ಸೇರಿದರು. 1955 ರಲ್ಲಿ ಕಲ್ಕತ್ತಾದಲ್ಲಿ ಮಹಿಳಾ ಮತ್ತು ಮಕ್ಕಳ ವಿಷಯದಲ್ಲಿ ತರಬೇತಿ ಪಡೆದರು. 1961–62 ರಲ್ಲಿ ಮೈಸೂರಿನಲ್ಲಿ ಎಂ.ಬಿ.ಬಿ.ಎಸ್. ಪೂರೈಸಿದರು; 67–68 ರಲ್ಲಿ ಮದ್ರಾಸಿನಲ್ಲಿ ಡಿ.ಜಿ.ಓ. ಮತ್ತು 68–69 ರಲ್ಲಿ ಮಂಗಳೂರಿನಲ್ಲಿ ಎಂ.ಡಿ. ಮಾಡಿಕೊಂಡರು. ಕರ್ನಾಟಕದ ವಿವಿಧೆಡೆ ವೈದ್ಯೆಯಾಗಿ ಸೇವೆ ಸಲ್ಲಿಸಿ 1988 ರಲ್ಲಿ ನಿವೃತ್ತರಾದರು. ಅನಂತರವೂ ಹಾಸನದ ಮಿಷನ್ ಆಸ್ಪತ್ರೆಯಲ್ಲಿ ನಾಲ್ಕು ವರ್ಷ ಸೇವೆ ಸಲ್ಲಿಸಿದರು. ಮುಸ್ಲಿಂ ಸಂಘಟನೆಯ ಆಸ್ಪತ್ರೆಯೊಂದರಲ್ಲಿ ಎರಡು ವರ್ಷ ಉಚಿತ ಸೇವೆ ಸಲ್ಲಿಸಿದರು. ಸಾಕುಮಗಳು, ಪತಿ ಮೋಹನ ಪ್ರಸಾದ್ ಎಸ್.ಬಿ.ಐ. ಅವರೊಂದಿಗೆ ತುಮಕೂರಿನಲ್ಲಿದ್ದಾರೆ. ಸಾವಿತ್ರಮ್ಮಜ್ಜಿಯ ಮೊಮ್ಮಗಳು ಗಾಯತ್ರಮ್ಮ ಈಗ ಸುಶೀಲಾಬಾಯಿ ಅವರಿಗೆ ಒತ್ತಾಸೆಯಾಗಿದ್ದಾರೆ. ತಮ್ಮ ಮೂವರು ಗಂಡುಮಕ್ಕಳ ಜತೆ ಇರದೆ ಗೆಳತಿಯಾಗಿ, ತಂಗಿಯಾಗಿ ಕಳೆದ 45 ವರ್ಷಗಳಿಂದ ಅವರೊಡನಿದ್ದಾರೆ. ಇಬ್ಬರೂ ಪರಸ್ಪರರಿಗೆ ಆಗಿಬಂದಿದ್ದಾರೆ. ಇಬ್ಬರೂ ತಮಗೆ 'ಮಕ್ಕಳು ನಾಲ್ವರು' ಎಂದೇ ಹೇಳುತ್ತಾರೆ. ಹಾಸನದಲ್ಲೇ ಇರುವ ಗಾಯತ್ರಮ್ಮನವರ ಮಗ ವೆಂಕಟೇಶ ಮತ್ತು ಅವರ ಕುಟುಂಬವು ಇವರಿಬ್ಬರಿಗೂ ಜೀವನದಲ್ಲಿ ಉತ್ಸಾಹ ತುಂಬುತ್ತಾ ಒಡನಾಟದಲ್ಲಿದ್ದಾರೆ.

***

ಇಪ್ಪತ್ತನೆಯ ಶತಮಾನದಲ್ಲಿಯೂ ಮಹಿಳೆಯರು ಎಂಥ ಕ್ರೌರ್ಯಕ್ಕೆ ಬಲಿಯಾಗುತ್ತಿದ್ದರು ಎಂಬುದರ ಚಿತ್ರ ಇಲ್ಲಿದೆ. ಹಾಗಿದ್ದರೂ ಪರಿಸ್ಥಿತಿಯು ಅನ್ಯಾಯವಾಗಿ ಒಡ್ಡಿದ ಸವಾಲುಗಳನ್ನು ದಿಟ್ಟತನದಿಂದ ಎದುರಿಸಿದ ಸಾಧನೆಯ ಮತ್ತು ಸಾಹಸದ ಕಥೆ ಇಲ್ಲಿನದು. ಈಗಲೂ, ಸ್ತ್ರೀಯರು ವಿದ್ಯಾವತಿಯರೇ ಆಗಿದ್ದರೂ, ಉದ್ಯೋಗಸ್ಥರೇ ಆಗಿದ್ದರೂ, ಹೊಸ ಸವಾಲುಗಳನ್ನು ಎದುರಿಸುತ್ತಲೇ ಇದ್ದಾರೆ. ಎಂಥ ಪರಿಸ್ಥಿತಿಯಲ್ಲೂ ಛಲದಿಂದ ಮುಂದುವರಿಯಬೇಕೆಂಬುದೇ ಈ ಮೂವರು ಧೀರ ಮಹಿಳೆಯರ ಕಳಕಳಿಯ ಸಂದೇಶವಾಗಿದೆ.

ಶ್ರೀಮತಿ ಎನ್. ಎಸ್. ಸರಸ್ವತಿ – ಶ್ರೀ ಎಂ. ನಾಗರಾಜ್

'ಎಂ' ಎಂದರೆ ಕೋಲಾರ ಜಿಲ್ಲೆಯ ಪ್ರಸಿದ್ಧವಾದ ಮಾಸ್ತಿ; ಶ್ರೀ ಎಂ. ನಾಗರಾಜ್ ಅವರು ಮಾಸ್ತಿಯ ಶ್ರೀ ಗೋಪಾಲಯ್ಯನವರ ಪುತ್ರ; ತಾಯಿ ಮಳವಳ್ಳಿಯ ಶ್ರೀಮತಿ ಶೇಷಮ್ಮನವರು. ನಾಗರಾಜ್ ಅವರ ತಂದೆಯ ತಂದೆ ರೆವಿನ್ಯೂ ಇನ್‌ಸ್ಪೆಕ್ಟರ್ ಆಗಿದ್ದರು. ತಂದೆ ಗೋಪಾಲಯ್ಯನವರು ಇದ್ದುದೂ ಅದೇ ಇಲಾಖೆಯಲ್ಲಿಯೇ. ಎಂ. ನಾಗರಾಜ್ ಅವರೂ ಪದವಿ ಪಡೆದ ನಂತರ ಪ್ರೌಢಶಾಲಾ ಅಧ್ಯಾಪಕರಾಗಿಯೇ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು; ಒಂದು

ವರ್ಷದ ನಂತರ ಹೈದರಾಬಾದಿನ ಇಂಜಿನಿಯರಿಂಗ್ ಕಂಪನಿಯೊಂದರಲ್ಲಿ ಸೇರಿ ಎಂಟುವರ್ಷ ದುಡಿದರು; ಅನಂತರ ಅವರು ರಾಯಚೂರು ಜಿಲ್ಲೆಯಲ್ಲಿ ಸಿವಿಲ್ ಇಂಜಿನಿಯರಿಂಗ್ ಕಂಟ್ರಾಕ್ಟರ್ ಆಗಿ ತಮಗೆ ಇಷ್ಟವಾದ ಹೊಸವೃತ್ತಿಯನ್ನು ಪ್ರಾರಂಭಿಸಿದರು; 1973 ರಲ್ಲಿ ಮೈಸೂರಿನಲ್ಲಿ ನೆಲಸಿ 2001ರವರೆಗೆ ಆ ವೃತ್ತಿಯನ್ನು ಮುಂದುವರಿಸಿ ವಿಶ್ರಾಂತರಾದರು. ತಮ್ಮ ಗುಣಾತ್ಮಕ ಕೆಲಸಗಳಿಗಾಗಿ ಎಲ್ಲೆಡೆ ಹೆಸರಾದ ನಾಗರಾಜ್ ಪ್ರಸಿದ್ಧ ವೈದ್ಯ ಡಾ. ಎ. ಶಂಕರ್ ಮತ್ತು ಇತರರ ಸಹಕಾರದಿಂದ ರಾಯಚೂರಿನಲ್ಲಿ ನಿರ್ಮಿಸಿದ ಶ್ರೀರಾಮ ದೇವಾಲಯವು ಖ್ಯಾತವಾದಂಥದು. ಬಿಳಿಗಿರಿ ರಂಗನ ಬೆಟ್ಟದ ಶ್ರೀರಾಘವೇಂದ್ರ ಸ್ವಾಮಿಯ ಮಠದ ಅಭಿವೃದ್ಧಿ ಕಾರ್ಯವೂ ಸೇರಿದಂತೆ ಅನೇಕ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದು ಅವರ ಧಾರ್ಮಿಕತೆಯನ್ನೇ ಸಾರುತ್ತದೆ. ಮುಲಕನಾಡು ಬ್ರಾಹ್ಮಣರ ಸಂಘಕ್ಕೂ ಅವರ ಸೇವೆ ಸಂದಿದೆ. ಶ್ರೀ ನಾಗರಾಜ್ ಅವರ ಪತ್ನಿ ಶ್ರೀಮತಿ ಎನ್. ಎಸ್. ಸರಸ್ವತಿ. ಬೆಂಗಳೂರು, ಮೈಸೂರು ವಿಶ್ವವಿದ್ಯಾಲಯಗಳಲ್ಲಿ ಇಂಗ್ಲಿಷ್ ವಿಭಾಗಗಳಲ್ಲಿ ಉಪಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಶ್ರೀ ಎನ್. ಎಸ್. ಸೂರ್ಯನಾರಾಯಣರಾವ್ ಅವರು ಸರಸ್ವತಿ ಅವರ ತಂದೆ. ಡಿ.ಎಲ್.ಎನ್., ರಾಳ್ಲಪಲ್ಲಿ ಅನಂತಕೃಷ್ಣ ಶರ್ಮ, ಎಸ್. ವಿ.ಪಿ. ಮೊದಲಾದ ವಿದ್ವಾಂಸರ ಶಿಷ್ಯೆಯಾಗಿ ಎಂ.ಎ. ಪದವಿ ಪಡೆದ ಸರಸ್ವತಿಯವರು ವಿಶೇಷವಾಗಿ ತೆಲುಗು ಭಾಷೆಯನ್ನು ಕಲಿತರು, ವೀಣಾಭ್ಯಾಸವನ್ನೂ ಮಾಡಿದರು. ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕಿಯಾಗಿ ದುಡಿದು ಅಂತಿಮವಾಗಿ ಮೈಸೂರಿನ ಡೆಮಾನ್‌ಸ್ಟ್ರೇಷನ್ ಶಾಲೆಯಲ್ಲಿ ಉಪಾಧ್ಯಾಯಿನಿಯಾಗಿ ಒಟ್ಟು 30 ವರ್ಷ ಸೇವೆ ಸಲ್ಲಿಸಿ ನಿವೃತ್ತರಾದರು. ಮೊದಲಿನಿಂದಲೂ ಸಾಹಿತ್ಯಕೃಷಿಯಲ್ಲಿ ಅಭಿರುಚಿ ತಳೆದ ಅವರು ಅನೇಕ ಕಥೆಗಳನ್ನೂ, ಲೇಖನಗಳನ್ನೂ ಕನ್ನಡ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಅವರ ಚೊಚ್ಚಲ ಕೃತಿ "ನಾವು ನೋಡಿದ ಪಶ್ಚಿಮ ದೇಶಗಳ ಒಂದು ಇಣುಕು ನೋಟ" ಅವರೊಬ್ಬ ನುರಿತ ಬರಹಗಾರ್ತಿ ಎಂಬುದನ್ನೇ ತೋರಿಸುತ್ತದೆ. ಕಣ್ಣಿಗೆ ಕಟ್ಟಿದಂತೆ ವಿವರವಿವರವಾಗಿ ತಮ್ಮ ಅನುಭವಗಳನ್ನು ಕಟ್ಟಿಕೊಟ್ಟಿರುವ ಅವರು ಅದರಲ್ಲಿ ಹಲವು ಹೊಸ ಸಂಗತಿಗಳನ್ನೂ ತಿಳಿಯಪಡಿಸಿದ್ದಾರೆ. ಖ್ಯಾತ ವಿದ್ವಾಂಸರಾದ ಡಾ.ಟಿ.ವಿ. ವೆಂಕಟಾಚಲಶಾಸ್ತ್ರೀ ಅವರು ಹೇಳಿರುವಂತೆ, 'ಪುಸ್ತಕ ಒಂದು ಪ್ರಾಮಾಣಿಕ ದಾಖಲೆಯಾಗಿದೆ... ಪ್ರಕೃತಿಪ್ರಿಯರಾದ ಅವರು ಕೊಡುವ ಪ್ರಕೃತಿಸೌಂದರ್ಯದ ಚಿತ್ರಣಗಳು ಸಾಹಿತ್ಯಿಕವಾಗಿ ಸೊಗಸಾಗಿವೆ, ಉತ್ಸಾಹಜನಕವಾಗಿವೆ.' ಬಹುಮುಖ ಪ್ರತಿಭೆಯ ಸರಸ್ವತಿ ಅವರು ಉತ್ತಮ ಶಿಕ್ಷಕಿ ಎಂದು ಹೆಸರಾದವರು. ಅವರ ಶಿಷ್ಯರಲ್ಲಿ ಹೆಚ್ಚಿನವರು ಉನ್ನತ ಹುದ್ದೆಗಳನ್ನಲಂಕರಿಸಿ ದೇಶವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮಕ್ಕಳಾದ ಎಂ.ಎನ್. ಬಾಲಸುಬ್ರಹ್ಮಣ್ಯ, ಎಂ.ಎನ್. ರಾಘವೇಂದ್ರ ಅವರು ಸಾಫ್ಟ್ ವೇರ್ ಇಂಜಿನಿಯರುಗಳಾಗಿ ಸೇವೆಸಲ್ಲಿಸುತ್ತಿದ್ದಾರೆ.

ಶ್ರೀಮತಿ ಸುಮನಾ ವಿಶ್ವನಾಥ್

ಇಂಗ್ಲಿಷಿನಲ್ಲಿ ಸ್ನಾತಕೋತ್ತರ ಪದವಿ, ಹಿಂದಿ ಭಾಷೆಯಲ್ಲಿ ರಾಷ್ಟ್ರ ಭಾಷಾ ನಿಷ್ಣಾತ್ ಪದವೀಧರೆ. 'ಕ್ಷೇತ್ರದರ್ಶನ" ಎಂಬ ಪ್ರವಾಸಕಥನದಿಂದ ಪ್ರಾರಂಭವಾಗಿರುವ ಇವರ ಸಾಹಿತ್ಯದ ಕೆಲಸ ಡಾ. ಮತ್ತೂರು ಕೃಷ್ಣಮೂರ್ತಿ, ವೇ.ಬ್ರ. ಶ್ರೀ ಮಾರ್ಕಂಡೇಯ ಅವಧಾನಿ, ಶ್ರೀ ಎಚ್. ಆರ್. ಕೇಶವಮೂರ್ತಿ, ಡಾ. ದೇ. ಜವರೇಗೌಡ, ಪ್ರೊ. ಸುಜನಾ ಈ ಎಲ್ಲಾ ಹಿರಿಯರು ತಮ್ಮ ತಮ್ಮ ಕ್ಷೇತ್ರದಲ್ಲಿ ಮಾಡಿರುವ ಸಾಧನೆಗಳು ಸೇರಿದಂತೆ ಮಾಡಲಾಗಿರುವ 'ಜೀವನಚಿತ್ರಣ'ದವರೆಗೆ ಮುಂದುವರೆದಿದೆ. 'ಗಮಕಕಲಾಭೂಷಣ' ಎಂಬುದು ಗಮಕತಪಸ್ವಿ ಶ್ರೀ ಎಚ್. ಕೆ. ರಾಮಸ್ವಾಮಿಯವರ ಜೀವನ ಚಿತ್ರಣ. ಪ್ರಸ್ತುತ ಸುಮನಾ ವಿಶ್ವನಾಥರು ಶ್ರೀ ವಿಶ್ವಕವಿ ಕುವೆಂಪು ಪ್ರಥಮದರ್ಜೆ ಕಾಲೇಜು, ಮೈಸೂರು ಇಲ್ಲಿ ಇಂಗ್ಲಿಷ್ ಭಾಷಾ ಉಪನ್ಯಾಸಕಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಮಹಾತ್ಮಾಗಾಂಧೀ ಸಾಹಿತ್ಯದ ಬಗ್ಗೆ ವಿಶೇಷ ಅಧ್ಯಯನ ನಡೆಸುತ್ತಿದ್ದಾರೆ. ಅನುವಾದಕರೂ, ಲೇಖಕರೂ ಆದ ಶ್ರೀ ಕೆ.ಸುಂದರರಾಜ್ ಮತ್ತು ಸಂಗೀತ ಸಾಹಿತ್ಯಗಳ ಬಗ್ಗೆ ಪ್ರೀತಿ ಇದ್ದ ಶ್ರೀಮತಿ ವಿಜಯಲಕ್ಷ್ಮಿ ಅವರ ಮಗಳು ಸುಮನಾ, ಇವರ ಪತಿ ಶ್ರೀ ಟಿ.ಎಸ್. ವಿಶ್ವನಾಥ್ ಕೈಗಾರಿಕೋದ್ಯಮಿ; ಪುತ್ರ: ಶಶಾಂಕ್ ವಿ. ಶ್ರೀವತ್ಸ.

*****

ಸಮುದಾಯ ಅಧ್ಯಯನ ಕೇಂದ್ರ
ಪೋಷಕರ ವಿವರ

ಸಂಪುಟಾಧ್ಯಕ್ಷರು

ಶ್ರೀಮತಿ ಕೆ.ಕೆ. ವಿಜಯಲಕ್ಷ್ಮಿ, ಡಾ. ಆರ್.ಎಸ್. ಚಂದ್ರಶೇಖರಮೂರ್ತಿ, ಯು.ಎಸ್.ಎ.
ಶ್ರೀಮತಿ ರೋಸಿಲಿ, ಡಾ. ಆರ್.ಎಸ್.ಎಸ್. ಕೃಷ್ಣಮೂರ್ತಿ, ಯು.ಕೆ.
ಶ್ರೀಮತಿ ರಾಜಲಕ್ಷ್ಮಿ, ಡಾ॥ ಮತ್ತೂರು ಕೃಷ್ಣಮೂರ್ತಿ, ಬೆಂಗಳೂರು
ಶ್ರೀಮತಿ ಬಿ.ವಿ. ಸೀತಾ, ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ, ಬೆಂಗಳೂರು
ಶ್ರೀಮತಿ ನಾಗರತ್ನ (ಪಾಪು), ಶ್ರೀ ಆರ್.ವಿ. ಕೃಷ್ಣಮೂರ್ತಿ, ಮೈಸೂರು
ಯೋಜನೆಯ ಅಭಿಮಾನಿಗಳು, ಯು.ಕೆ.
ಡಾ॥ ಎಂ.ಎಸ್. ವಿಜಯಾಹರನ್, ಡಾ॥ ಬಿ.ಎಸ್. ಪ್ರಣತಾರ್ತಿಹರನ್, ಮೈಸೂರು
(ಇವರ ಪರವಾಗಿ : ಶ್ರೀಮತಿ ಪಾರ್ವತಮ್ಮ, ವ್ಯಾಕರಣ ವಿದ್ವಾನ್ ಶ್ರೀ ಬಿ.ಎಸ್. ಸುಬ್ಬರಾಯಶಾಸ್ತ್ರಿ, ಬಸವಾಪಟ್ಟಣ)

ಸಂಪುಟ ಉಪಾಧ್ಯಕ್ಷರು

ಭಾರತೀಯ ವಿದ್ಯಾಭವನ ಶಾಖೆಯ ಅಭಿಮಾನಿಗಳು, ಲಂಡನ್
ಶ್ರೀಮತಿ ಸುಂದರಮಣಿ, ಶ್ರೀ ನಟೇಶ್ ಮಗ್ಗೆ, ಯು.ಎಸ್.ಎ.
ಡಾ. ಸುಪ್ರಿಯಾ, ಡಾ. ಎಸ್. ಶ್ರೀಧರ್, ಯು.ಎಸ್.ಎ.
ಶ್ರೀಮತಿ ವಿನಯ, ಡಾ. ಜಯ್. ಕೆ. ರಂಗಪ್ಪ, ಯು.ಎಸ್.ಎ.

ಮಹಾದಾನಿಗಳು

ಶ್ರೀಮತಿ ಶಾರದಾಬಾಯಿ, ಶ್ರೀ ಹರಿ ಆಚಾರ್ಯ, ಮಂಡ್ಯ
ಶ್ರೀಮತಿ ಆರ್.ಎಸ್. ಸಾವಿತ್ರಿ, ಶ್ರೀ ಬಿ.ವಿ. ವೆಂಕಟನಾರಾಯಣ, ಮೈಸೂರು

ಮಹಾಪೋಷಕರು

ಶ್ರೀಮತಿ ಕಮಲಮ್ಮ, ಶ್ರೀ ಕೆ. ನಾಗರಾಜ್, ಬೆಂಗಳೂರು
ಶ್ರೀಮತಿ ಜಯಲಕ್ಷ್ಮಿ, ಶ್ರೀ ಕೆ. ಸುಬ್ಬರಾಯನ್, ಬೆಂಗಳೂರು
ಶ್ರೀಮತಿ ಸಾವಿತ್ರಮ್ಮ, ಶ್ರೀ ವೈ.ಎನ್. ನರಸಿಂಗರಾವ್, ಮೈಸೂರು
ಶ್ರೀಮತಿ ಎಂ.ವಿ. ವೆಂಕಟಲಕ್ಷ್ಮಿ, ಶ್ರೀ ಎಂ.ಎಸ್. ರಾಮರಾವ್, ಮೈಸೂರು
ಶ್ರೀಮತಿ ಲಕ್ಷ್ಮಿ, ಶ್ರೀ ಎಚ್.ಕೆ. ವೆಂಕಟರಾಮಯ್ಯ, ಮೈಸೂರು
ಶ್ರೀಮತಿ ಎಚ್.ಎನ್. ಅನಸೂಯಮ್ಮ, ಶ್ರೀ ವೈ.ಎನ್. ಸತ್ಯನಾರಾಯಣ, ಹಾಸನ
ಶ್ರೀಮತಿ ಎಂ.ಎಸ್. ರುಕ್ಮಿಣಿ, ಶ್ರೀ ಎಚ್.ಆರ್. ಸೂರ್ಯನಾರಾಯಣ, ಮೈಸೂರು
ಶ್ರೀಮತಿ ಪಂಕಜ, ಪ್ರೊ॥ ಕೆ.ಎಸ್. ಕೃಷ್ಣಮೂರ್ತಿ, ಬೆಂಗಳೂರು
ಶ್ರೀಮತಿ ನಿರಂಜಿನಿ, ಶ್ರೀ ಕೆ.ಎಸ್. ಬಾಲಚಂದ್ರ, ಮೈಸೂರು
ಶ್ರೀಮತಿ ಆರ್. ಶಾರದಮ್ಮ, ಶ್ರೀ ರು.ಗೋ. ರಾಮಸ್ವಾಮಿ, ಮೈಸೂರು
ಶ್ರೀಮತಿ ಎಚ್.ಎಸ್. ಸೌದಾಮಿನಿ, ಶ್ರೀ ಆರ್.ವಿ. ಅಶ್ವತ್ಥನಾರಾಯಣ, ಮೈಸೂರು
ಶ್ರೀಮತಿ ಕುಮುದ ಎನ್. ಪ್ರಸಾದ್, ಶ್ರೀ ಬಿ.ಎಸ್. ನಾಗೇಂದ್ರ ಪ್ರಸಾದ್, ಬೆಂಗಳೂರು
ಶ್ರೀಮತಿ ಎಸ್. ನಾಗಲಕ್ಷ್ಮಿ, ಶ್ರೀ ಬಿ.ವಿ. ಸುಬ್ಬರಾಮಯ್ಯ, ಬಸವಾಪಟ್ಟಣ
(ಪರವಾಗಿ : ಶ್ರೀಮತಿ ಉಷಾ ನಾರಾಯಣ್, ಶ್ರೀ ಬಿ.ಎಸ್. ಲಕ್ಷ್ಮೀನಾರಾಯಣ)
ಶ್ರೀಮತಿ ಸುಮನ್ ಸುಬ್ರಹ್ಮಣ್ಯ, ಶ್ರೀ ಬಿ.ಎಸ್. ಸುಬ್ರಹ್ಮಣ್ಯ (ಫಣೀಶ್), ಬಳ್ಳಾರಿ
ಶ್ರೀಮತಿ ಬಿ.ಎಸ್. ನಾಗರತ್ನ, ಶ್ರೀ ಎ.ವಿ. ಶಂಕರಮೂರ್ತಿ, ಅಗ್ರಹಾರ

ಪೋಷಕರು

ಶ್ರೀಮತಿ ಶಾಂತಾ, ಶ್ರೀ ಕೆ. ಲಕ್ಷ್ಮಣರಾವ್, ಮೈಸೂರು
ಶ್ರೀಮತಿ ಲಕ್ಷ್ಮೀಕಿರಣ, ಶ್ರೀ ಜಿ. ಆನಂದಕುಮಾರ್, ಮೈಸೂರು
ಶ್ರೀಮತಿ ಕೆ.ಎನ್. ಸುಶೀಲಮ್ಮ, ಶ್ರೀ ಆರ್.ಎಸ್. ವಾಸುದೇವಮೂರ್ತಿ, ಮೈಸೂರು
ಶ್ರೀಮತಿ ಎಂ. ಗಾಯತ್ರಿ, ಶ್ರೀ ದೇವರಾಜು, ಮಂಡ್ಯ
ಶ್ರೀಮತಿ ಸಾವಿತ್ರಮ್ಮ, ಶ್ರೀ ಎಸ್. ಸತ್ಯನಾರಾಯಣರಾವ್, ಮಂಡ್ಯ
ಶ್ರೀಮತಿ ಲಲಿತಮ್ಮ, ಶ್ರೀ ಎಚ್.ಕೆ. ಸುಬ್ಬಣ್ಣ, ಹಾಸನ
ಶ್ರೀಮತಿ ಎಂ.ಎನ್. ರಾಜಲಕ್ಷ್ಮಿ, ಶ್ರೀ ಎನ್. ಕೃಷ್ಣಮೂರ್ತಿ, ಹಾಸನ
ಶ್ರೀಮತಿ ಸುಬ್ಬಲಕ್ಷ್ಮಿ, ಶ್ರೀ ಎಚ್. ರಾಮನಾಥನ್, ಹಾಸನ
ಡಾ. ಎಸ್.ಕೆ. ಸುಶೀಲಾಬಾಯಿ, ಶ್ರೀ ಎಸ್. ಕೃಷ್ಣಮೂರ್ತಿ, ಹಾಸನ
ಶ್ರೀ ಆರ್. ಪ್ರಕಾಶ್ ಇ/ಮ ರು. ಗೋ. ರಾಮಸ್ವಾಮಿ, ಮೈಸೂರು
ಶ್ರೀಮತಿ ಪ್ರಫುಲ್ಲ, ಶ್ರೀ ಕೆ.ಎಸ್. ಕೃಷ್ಣಮೂರ್ತಿ, ಬೆಂಗಳೂರು
ಶ್ರೀಮತಿ ಜಯಶ್ರೀ, ಡಾ|| ಬಿ. ಚನ್ನಕೇಶವ, ಮೈಸೂರು
ಶ್ರೀಮತಿ ಸರಸ್ವತಿರಾವ್, ಮೈಸೂರುಮನೆ ಶ್ರೀ ಎನ್. ಸುಬ್ಬರಾವ್, ಬೆಂಗಳೂರು
ಶ್ರೀಮತಿ ಸುಕನ್ಯಾ, ಶ್ರೀ ಲಕ್ಷ್ಮೀಶ, ಹಾಸನ
ಶ್ರೀಮತಿ ಭಾಗ್ಯ, ಶ್ರೀ ಸೂರ್ಯನಾರಾಯಣ, ಹಾಸನ
ಶ್ರೀಮತಿ ಸತ್ಯವತಿ, ಶ್ರೀ ಹರವೆ ಕೇಶವಮೂರ್ತಿ, ಮೈಸೂರು
ಡಾ|| ಆರ್. ಇಂದಿರಾ, ಶ್ರೀ ಎಸ್.ಕೆ. ಲಕ್ಷ್ಮೀನಾರಾಯಣ (ಬಾಬು), ಮೈಸೂರು
ಶ್ರೀಮತಿ ಕೆ.ಎಸ್. ನಾಗಮ್ಮ, ಶ್ರೀ ಬಿ.ಕೆ. ವಿಶ್ವನಾಥರಾವ್, ಬೆಂಗಳೂರು
ಶ್ರೀಮತಿ ಸರಳ, ಶ್ರೀ ಬಿ.ಕೆ. ರಾಮಚಂದ್ರ, ಬಸವಾಪಟ್ಟಣ
ಶ್ರೀಮತಿ ವಾಣಿ, ಪ್ರೊ|| ಎಂ.ಎನ್. ಚಂದ್ರಶೇಖರ್, ಬೆಂಗಳೂರು
ಶ್ರೀಮತಿ ಎಸ್. ಮೀರಾ, ಶ್ರೀ ಶ್ರೀಧರ್, ಯು.ಎಸ್.ಎ.
ಶ್ರೀಮತಿ ಸುಬ್ಬಲಕ್ಷ್ಮಿ, ಶ್ರೀ ಕೆ.ವಿ. ನಾಗರಾಜ್, ಮೈಸೂರು
ಶ್ರೀಮತಿ ಸಂಪತ್‌ಲಕ್ಷ್ಮಿ, ಶ್ರೀ ಸಿ.ಆರ್. ನಾಗರಾಜ್, ಮೈಸೂರು
ಶ್ರೀಮತಿ ವೀಣಾ ಎನ್, ಶ್ರೀ ನಾರಾಯಣ ಸುಬ್ಬರಾವ್, ಯು.ಎಸ್.ಎ.
ಶ್ರೀಮತಿ ಪೂರ್ಣಿಮಾ, ಶ್ರೀ ಐ.ಎನ್. ವೆಂಕಟಸುಬ್ಬರಾವ್, ಐಚನಹಳ್ಳಿ
ಶ್ರೀಮತಿ ಎಚ್.ಎಂ. ಜಯಶ್ರೀ ಶಾಸ್ತ್ರಿ, ಶ್ರೀ ಹನಸೋಗೆ ಎಸ್. ಶಾಸ್ತ್ರಿ, ಯು.ಎಸ್.ಎ.
ಶ್ರೀಮತಿ ವಾಸಂತಿ, ಶ್ರೀ ಜಿ. ಮಯೂರಸಿಂಹ, ಯು.ಎಸ್.ಎ
ಶ್ರೀಮತಿ ಗೀತಾ, ಶ್ರೀ ಕೆ.ವಿ. ನಟೇಶ್, ಚನ್ನರಾಯಪಟ್ಟಣ
ಟಿ.ಬಿ.ಎಸ್. ವಠಾರ ಟ್ರಸ್ಟ್ (ರಿ.), ಬಸವಾಪಟ್ಟಣ
ಶ್ರೀಮತಿ ಐ.ವಿ. ರಮಾಮಣಿ, ಶ್ರೀ ಕೆ.ಎಸ್. ನಾಗರಾಜ, ಪಿರಿಯಾಪಟ್ಟಣ
ಶ್ರೀಮತಿ ಕೆ. ಶಾಂತ, ಶ್ರೀ ಕೇಶವ, ಬೆಂಗಳೂರು
ಶ್ರೀಮತಿ ಎಂ.ಆರ್. ಪ್ರಭಾವತಿ, ಶ್ರೀ ಎಂ.ಕೆ. ಚೆನ್ನಕೇಶವ, ಮುದ್ದಾಪುರ
ಶ್ರೀಮತಿ ಎನ್. ಜಯಲಕ್ಷ್ಮಿ, ಶ್ರೀ ಪಿ.ಎನ್. ನರಸಿಂಹಮೂರ್ತಿ, ಹಾಸನ
ಶ್ರೀಮತಿ ಪಿ.ಕೆ. ವಸಂತಲಕ್ಷ್ಮಿ, ಶ್ರೀ ಬಿ.ಎನ್. ರಘುನಾಥ, ಹಾಸನ
ಶ್ರೀಮತಿ ಎಚ್.ಕೆ. ನಾಗಲಕ್ಷ್ಮಿ, ಮೈಸೂರು
ಸಾವಿತ್ರಮ್ಮಜ್ಜಿ, ಶ್ರೀಮತಿ ಆರ್.ಎಸ್. ಗಾಯತ್ರಮ್ಮ, ಹಾಸನ
ಶ್ರೀಮತಿ ಎನ್.ಎಸ್. ಸರಸ್ವತಿ, ಶ್ರೀ ಎಂ. ನಾಗರಾಜ್, ಮೈಸೂರು

ದಾನಿಗಳು

ಶ್ರೀಮತಿ ಪ್ರಭಾಮೂರ್ತಿ, ಶ್ರೀ ಬಿ.ಕೆ. ಕೇಶವಮೂರ್ತಿ, ಮೈಸೂರು
ಶ್ರೀಮತಿ ಸರೋಜ, ಶ್ರೀ ಎಚ್.ಆರ್. ಹಿರಿಯಣ್ಣ, ಮೈಸೂರು
ಶ್ರೀಮತಿ ಸುಬ್ಬಲಕ್ಷ್ಮಿ, ಶ್ರೀ ನಾಗೇಶ್, ಬೆಂಗಳೂರು
ಶ್ರೀಮತಿ ಕೆ.ಎಸ್. ಲೀಲಾವತಿ, ಶ್ರೀ ಕೆ.ಎಸ್. ಶಾಮಣ್ಣ, ಮೈಸೂರು
ಶ್ರೀಮತಿ ಲಕ್ಷ್ಮೀ, ಶ್ರೀ ಎಚ್.ಕೆ. ಸತ್ಯನಾರಾಯಣ, ಮೈಸೂರು
ಶ್ರೀಮತಿ ಪಾರ್ವತಿ, ಶ್ರೀ ಪಿ.ಆರ್. ಹರಿಹರನ್, ಮೈಸೂರು
ಶ್ರೀಮತಿ ರಾಧಾ, ಶ್ರೀ ಆರ್.ಎಸ್. ಅನಂತನಾರಾಯಣ, ಬೆಂಗಳೂರು
ಶ್ರೀಮತಿ ಶಶಿಕಲಾ, ಶ್ರೀ ವೆಂಕಟೇಶಮೂರ್ತಿ, ಮೈಸೂರು
ಶ್ರೀಮತಿ ಲೀಲಾವತಿ, ಶ್ರೀ ಜಿ.ಕೆ. ನರಸಿಂಹಮೂರ್ತಿ, ಮಂಡ್ಯ
ಶ್ರೀಮತಿ ಸುಧಾ, ಶ್ರೀ ಎ.ಎಸ್. ಅರುಣಕುಮಾರ್, ಮಂಡ್ಯ
ಶ್ರೀಮತಿ ಪ್ರೇಮಲತಾ, ಶ್ರೀ ಎಂ.ಆರ್. ರಾಮಶೇಷ, ಮಾದಾಪುರ
ಶ್ರೀಮತಿ ಲಲಿತಮ್ಮ, ಶ್ರೀ ಕೇಶವಮೂರ್ತಿ, ಕೊಣನೂರು

ಸಮುದಾಯ ಅಧ್ಯಯನ ಕೇಂದ್ರ

ಗೌರವಾಧ್ಯಕ್ಷರು

ಬಿ.ಎನ್.ವಿ. ಸುಬ್ರಹ್ಮಣ್ಯ

ಅಧ್ಯಕ್ಷರು

ಆರ್.ವಿ. ಶ್ರೀನಿವಾಸಯ್ಯ

ಸಂಚಾಲಕರು

ನಾಗರತ್ನ (ಪಾಪು)

ಆರ್.ವಿ. ಕೃಷ್ಣಮೂರ್ತಿ

ಕಾರ್ಯದರ್ಶಿ

ಡಾ॥ ಬಿ.ಎಸ್. ಪ್ರಣತಾರ್ತಿಹರನ್

ಖಜಾಂಚಿ

ಎಚ್.ಎನ್. ರಘುನಾಥ್

ಪುಸ್ತಕ ಸಲಹಾ ಸಮಿತಿ

ಪ್ರೊ॥ ಎ.ವಿ. ನರಸಿಂಹಮೂರ್ತಿ

ಪ್ರೊ॥ ಜಿ. ಅಶ್ವತ್ಥನಾರಾಯಣ

ಡಾ. ಎಂ.ಎಲ್. ಲಲಿತಮ್ಮ

ಎನ್.ಎಸ್. ಶಾರದಾ ಪ್ರಸಾದ್

ವಿದ್ವಾನ್ ಡಾ॥ ಟಿ.ವಿ. ಸತ್ಯನಾರಾಯಣ

ವಿದ್ವಾನ್ ಎಚ್.ವಿ. ನಾಗರಾಜರಾವ್

ವಿದ್ವಾನ್ ಡಾ॥ ಆನಂದತೀರ್ಥ ನಾಗಸಂಪಿಗೆ

ಡಾ॥ ಮೀರಾಮೂರ್ತಿ

ಡಾ॥ ಕೆ. ಅನಂತರಾಮು

ಕೆ. ರಾಘವೇಂದ್ರರಾವ್

ಸಂಚಾಲನ ಸಮಿತಿ

ಬಿ.ವಿ. ವೆಂಕಟನಾರಾಯಣ

ಎಸ್.ಕೆ. ಲಕ್ಷ್ಮೀನಾರಾಯಣ (ಬಾಬು)

ಡಾ. ಎ.ಎಸ್. ಚಂದ್ರಶೇಖರ್

ಎಂ.ಕೆ. ವಿಜಯಲಕ್ಷ್ಮಿ

ಡಾ॥ ಬಿ.ವಿ. ಸುಧಾಮಣಿ

ಡಾ॥ ವಿಜಯಾಹರನ್

ಎಸ್. ನಾಗೇಶ್ (ಪೂಮಗಾಮೆ ಗೋಪಿ)

'ಸಂಕೇತಿ ಅಧ್ಯಯನ'ದ ಸಂಪುಟ ಸರಣಿಯು ವಿವೇಕಾನುಸಂಧಾನದ ಮುಕ್ತಪಥವಾಗಿ ಬರುತ್ತಿದೆ. ಅದರ ನಡಿಗೆಯಲ್ಲಿ ವಾಸ್ತವದ ವಿವರವಿದೆ. ಅಂತರಂಗದಲ್ಲಿ ಆದರ್ಶದ ಹುಡುಕಾಟವಿದೆ. ಒಂದು ಪುಟ್ಟ ಸಮುದಾಯದ ದೀರ್ಘಕಾಲೀನ ತುಡಿತಗಳನ್ನು ಮಾಧ್ಯಮವಾಗಿ ಮಾಡಿಕೊಂಡು ವಿಶ್ವಪಥವನ್ನು ಹುಡುಕಿಕೊಳ್ಳುವ ಸಾಧನವಾಗಿ ಈ ಸಂಪುಟಸರಣಿ ಪ್ರಕಾಶಗೊಳ್ಳುತ್ತಿದೆ.

ಇದೀಗ ಓದುಗರ ಮುಂದಿರುವ 'ಸಂಕೇತಿ : ಆತ್ಮಕಥೆಗಳು' ಎಂಬ ಸಂಪುಟವು ಸಂಕೇತಿ ಸಮುದಾಯದಿಂದ ಬಂದ ಐದು ಆತ್ಮಕಥೆಗಳ ಸಂಕಲನವಾಗಿದೆ. ಏಕೋದ್ದೇಶದ ಪ್ರಖರ ತಪಸ್ಸು ಇಲ್ಲಿನ ಆತ್ಮಕಥೆಗಳ ನಿಚ್ಚಳ ಲಕ್ಷಣವಾಗಿದೆ. ಇಲ್ಲಿ ಕಾಣುವುದು ಸಂಗೀತದ – ಸಮಾಜಸೇವೆಯ – ರಾಷ್ಟ್ರಭಕ್ತಿಯ – ಪಾಂಡಿತ್ಯದ ತಪಸ್ಸು.

ಈ ಆತ್ಮಕಥಾಸಂಕಲನವು ಸಂಕೇತಿ ಸಮುದಾಯದ ಲಕ್ಷಣೀಕರಣಕ್ಕೂ, ಈ ಸಮುದಾಯವನ್ನು ಕುರಿತ ಹೆಚ್ಚಿನ ಸಂಶೋಧನೆಗೂ, ಸತ್ಪ್ರೇರಣೆಗೂ ಆಕರವಾಗುವುದಾದರೆ ನಮ್ಮ ಶ್ರಮವು ಸಾರ್ಥಕವಾದಂತೆ.

ಡಾ॥ ಬಿ.ಎಸ್. ಪ್ರಣತಾರ್ತಿಹರನ್
ಪ್ರಧಾನ ಸಂಪಾದಕ

ಸಮುದಾಯ ಅಧ್ಯಯನ ಕೇಂದ್ರ
ಮೈಸೂರು